ನವಯುಗ

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೪೪. 7-7-1960 Vol. 39. No. 44.

ಪ್ರಚಲಿತ ಪ್ರಸಂಗ

ಚೀನೀಯರಿಂದ ಧಾಳಿಯ ಮುನ್ಸೂಚನೆ(?)

ದೇಶದ ಸ್ವಾತಂತ್ರ್ಯ ರಕ್ಷಣೆಗಾಗಿ ವೈಯಕ್ತಿಕ ಹಿತಾಸಕ್ತಿಗಳನ್ನು ಬದಿಗಿಟ್ಟು ಹೋರಾಡುವ ನವಶಕ್ತಿ ನವಚೇತನ ನಮ್ಮಲ್ಲಿ ಉದಿಸಬೇಕು.

ಆಕಾಶಗಮನದಲ್ಲಿ ನಿರತರಾದ ಮಾನವಯಾತ್ರಿಕರಿಗೆ ಕುಡಿಯುವ ನೀರನ್ನು ಒದಗಿಸುವ ಸಹ ಮುಟ್ಟದ ಯಂತ್ರವಿದು.

ಟಿಬೇಟಿನಲ್ಲಿ ತಮ್ಮ ಶಾಶ್ವತ ಪ್ರಭುತ್ವವನ್ನು ಸಂಸ್ಥಾಪಿಸ ಬಯಸಿ ಅದನ್ನು ತಮ್ಮ ಪಾದಾಘಾತದಿಂದ ನೋಯಿಸಿದ ಕಮ್ಯುನಿಸ್ಟ ಚೀನೀಯರು ಭಾರತದ ಒಂದು ವಿಶಾಲ ಭಾಗವನ್ನೂ ಪದದಲಿತಗೊಳಿಸಿದರು. ಭಾರತ ಸರಕಾರವು ತನ್ನ ಹಿತಶತ್ರುವೆಂದೆನ್ನಬಹುದಾದ ಆ ಚೀನದೊಡನೆ ಮಾತುಕತೆಗಳ ಮತ್ತು ವಿಚಾರವಿನಿಮಯಗಳ ಮೂಲಕವೇ ಪ್ರಶ್ನೆಗೆ ಸರಿಯಾದ ಉತ್ತರವನ್ನರಸಬಹುದೆಂಬ ತನ್ನ ಅಚಲ ವಿಶ್ವಾಸದಂತೆ ಚೀನೀಯ ಪ್ರಧಾನಿ ಚೌರನ್ನು ಭಾರತಕ್ಕೆ ಸ್ವಾಗತಿಸಿ, ಅವರೊಡನೆ ಬಿಚ್ಚುಮಾತಿನಿಂದ ಆಡಿಕೊಂಡರು. ಆದರೆ, ಯಾವುದೇ ವಿಷಯದ ಬಗ್ಗೆ ಒಮ್ಮತಕ್ಕೆ ಬರುವುದು ಪ್ರಧಾನಿದ್ವಯರಿಂದ ಅಂದು ಅಸಾಧ್ಯವಾಯಿತೆಂಬುದನ್ನು ನಾವು ಗಮನಿಸದೆ ಬಿಡುವುದು ಅಸಾಧ್ಯ. ಎರಡೂ ಸರಕಾರಗಳ ತಜ್ಞರು ಸೀಮಾ ವಿವಾದದ ಬಗ್ಗೆ ಎದ್ದಿರುವ ಗೊಂದಲದ ಪರಿಹಾರಕ್ಕೆ ಸೀಮಾ ನಿರ್ಧಾರದ ಬಗ್ಗೆ ಇಕ್ಕಡೆಯ ಸರಕಾರಗಳಲ್ಲಿರುವ ವಿವಿಧ ದಾಖಲೆಗಳನ್ನು ಪರಿಶೀಲಿಸಿ, 'ವರದಿ'ಯೊಪ್ಪಿಸಬೇಕಾಗಿದೆ. ಆದರೆ, ಈ ಮಾದರಿಯ 'ವರದಿ'ಯ ಸ್ವರೂಪ ಯಾವುದೇ ರೂಪದಲ್ಲಿದ್ದರೂ ಅದು ಸಮಸ್ಯೆಗೆ ಪರಿಹಾರವನ್ನು ಸೂಚಿಸುವಂತಿಲ್ಲ; ಅದರ ಪರಿಶೀಲನೆಗಳಿಂದ ವಿವಾದ ಬಗೆಹರಿಯುವಂತೆಯೂ ಇಲ್ಲ.

ಇಲ್ಲಿ ಮೊದಲನೆಯ ಸಮಸ್ಯೆಯೆಂದರೆ, ಚೀನೀಯರು ಈಗ ತಮ್ಮದೆಂದು ಹೇಳಿಕೊಳ್ಳುತ್ತಿರುವ ಭೂಭಾಗವು ಯಾರಿಗೆ ಸೇರಿದುದು? ಎಂಬುದು ಬೇರೆ ಮಾತುಗಳಲ್ಲಿ ಹೇಳಬಹುದಾದರೆ, ಚೀನೀಯರು ಗೈದುದು ಆಕ್ರಮಣವೆ? ಅವರ ಉದ್ದೇಶ ಭಾರತದ ಮೇಲೆ ಧಾಳಿ ನಡೆಸುವುದೆ? ಅಥವಾ ಈ ಉಭಯರಾಷ್ಟ್ರಗಳ ನಡುವೆಯಿರುವುದು 'ಆಕ್ರಮಣ'ದ ಪ್ರಶ್ನೆಯೇ ಅಲ್ಲ ಸೀಮಾ ವಿವಾದವೆ?— ಎಂಬುದು. ಯಾರು ಏನೇ ಹೇಳಿದರೂ ಚೀನೀಯರು ಭಾರತವನ್ನು ಆಕ್ರಮಿಸಿರುವುದೇ ನಿಜವಾದುದರಿಂದ, ಅದನ್ನು "ಸೀಮಾವಿವಾದ"ವೆಂಬುದಾಗಿ ಸಾಮ್ಯಭಾಷೆಯಿಂದ ಹೆಸರಿಸುವುದು ಸರಿಯೆನಿಸಲಾರದು. ಇದೇ ಚೀನೀಯರು ಅದೇ ಸಮಯದಲ್ಲಿ ನೇಪಾಲದ ಕೆಲವೊಂದು ಭಾಗಗಳನ್ನೂ ಆಕ್ರಮಿಸಿರುವರೆಂಬ ಆರೋಪವಿದ್ದಿತ್ತು. ಆದರೆ, ಈ ಆರೋಪವನ್ನು ನೇಪಾಳೀ ಸರಕಾರವು ಅಂದು ಪುಷ್ಟೀಕರಿಸಲಿಲ್ಲ ಅಲ್ಲವೇ ನೇಪಾಳೀಯ. ಪ್ರಧಾನಿ ಶ್ರೀ ಬಿ. ಪಿ. ಕೊಯಿರಾಲಾರವರು ಆಗ ಚೀನಾ ದೇಶದಲ್ಲಿ ಸಂದರ್ಶಿಸುತ್ತಿದ್ದರು. ಈ ಆಕ್ರಮಣದ ಬಗ್ಗೆ ವಿಚಾರವಿನಿಮಯವೂ ಆ ಕಾಲದಲ್ಲಿ ನಡೆಯಿತೆನ್ನಲಾಗುತಿತ್ತು. ಆಗಲೇ ಹಿಮಾಲಯದ ಅತ್ಯುನ್ನತ ಶಿಖರ ಗೌರೀಶಂಕರವು ತನ್ನದೆಂಬ ವಿಚಿತ್ರ ವಾದವನ್ನು ಚೀನವು ಮುಂದೂಡಿ ನೇಪಾಲದ ಮನಸ್ಸನ್ನು ನೋಯಿಸತೊಡಗಿತ್ತು. ಇದೇ ಚೀನೀಯ ಸೈನಿಕರು ಈಗ ನೇಪಾಳದೊಳಗೆ ನುಗ್ಗಿ ಕೆಲವೊಂದು ಸೈನಿಕರನ್ನು ಕೊಂದು, ಅವರ ಶವಗಳನ್ನೂ ಒಯ್ದಿರುವರೆಂದೂ ಸೀಮೆಯೊಳಗಿನ ಒಂದು ವಿಶಾಲ ಮೈದಾನದಲ್ಲಿ ಈ ಶತ್ರು ಸೈನಿಕರು ಬೀಡು ಬಿಟ್ಟಿರುವರೆಂದೂ ತಿಳಿದುಬಂದಿದೆ. ಈ ಬಗ್ಗೆ ಚೀನಕ್ಕೆ ಕಳುಹಿಸಲಾದ ಪ್ರತಿಭಟನಾ ಪತ್ರಕ್ಕೆ ಚೌರವರಿಂದ ಬಹು ಶೀಘ್ರದಲ್ಲಿಯೇ ಉತ್ತರ ಬಂದಿದೆ. ಈ ಪತ್ರದಲ್ಲಿ ಘಟನೆಯ ಬಗ್ಗೆ ವಿಮಂಚನೆಯನ್ನು ವ್ಯಕ್ತಪಡಿಸಿ, ಸಹಾನುಭೂತಿಪರರಾಗಿ ಪರಿಶೀಲಿಸುವುದಾಗಿ ಬರೆದಿರುವರಂತೆ. ಇಂತಹುದೇ ಉತ್ತರವು ಈ ಹಿಂದೆ ಭಾರತವು ಕಳಿಸಿದ್ದ ಪ್ರತಿಭಟನೆಗೂ ಬಂದಿತ್ತು. ಆದರೆ, ಚೀನೀಯರು ತೋರಿಸಿದ ಸಹಾನುಭೂತಿಯಿಂದ ಭಾರತಕ್ಕೆ ನ್ಯಾಯವೊದಗುವ ಬದಲು ಚೀನಕ್ಕೆ ಲಾಭವಾಗುವ ಪ್ರಮೇಯ ಒಂದೊದಗಿತು. ಇದೇ ರೀತಿ ನೇಪಾಳೀಯ ಸರಕಾರವಾದರೂ ಈ ಉತ್ತರದ ಭಾಷೆಯಿಂದಲೇ ಮರುಳುಹೋಗಿ, ಚೀನಾದಿಂದ ತಮಗೆ ನ್ಯಾಯವೊದಗೀತು ಎಂದು ಹಾರೈಸಿದರೆ, ಅದು ಕೇವಲ ಹಾರೈಕೆಯಾಗಿಯೇ ಉಳಿಯುತ್ತದೆ ಎಂಬುದು ಖಡಾ ಖಂಡಿತ.

ಇಂದು ನೇಪಾಳದ ಜನತೆಯು ದಂಗು ಬಡಿದಿದೆ. ಆಕ್ರಮಣ ಮಾಡಿದ ಚೀನೀಯ ಸೈನಿಕರ ಪರಿಮಾಣವೇನೇ ಇದ್ದರೂ, ಚೀನೀಯ ಬಲ ಅತಿ ಶಕ್ತಿಯುತವಾದುದೆಂಬುದನ್ನೂ ಅದನ್ನೆದುರಿಸುವುದು ನೇಪಾಳಕ್ಕೆ ಅಸಾಧ್ಯವೆಂಬುದೂ ಸಂಸ್ಮರಣೀಯ. ಹಾಗಿರುವಾಗ, ನೇಪಾಳದ ಭದ್ರತೆಯನ್ನುಳಿಸುವ ಬಗ್ಗೆ ಅದು ತೀವ್ರ ತಳಮಳಪಡಲೇಬೇಕಾಗಿದೆ. ನೇಪಾಳವು ರಾಜ ಮಹೇಂದ್ರರ ಉದಾರತೆಯಿಂದ ಸ್ವಾಯತ್ತಾಧಿಕಾರದ ಮಾದರಿಯಲ್ಲಿ ಪ್ರಗತಿಪಥದಲ್ಲಿ ಮುನ್ನಡೆಯುತ್ತಿರುವ ದೇಶ. ತೀರ ಎಳೆಯ, ಅಲ್ಪ ಜನಸಂಖ್ಯೆಯ ಪರ್ವತ ರಾಜ್ಯ. ಆದರೂ 'ಸ್ವಾತಂತ್ರ್ಯ' ಎಂಬುದು ಎಂತಹ ಜಡನಲ್ಲೂ ನವೋತ್ಸಾಹವನ್ನು ಮೂಡಿಸಲು ಸಮರ್ಥವಾಗುವುದಾದುದರಿಂದ ಚೀನೀಯರ ಆಕ್ರಮಣವನ್ನು ಎದುರಿಸುವುದಕ್ಕೆ ನೇಪಾಳವು ಹಿಂಜರಿಯದಾದರೂ, ಅದು ಇತರರ ಸಹಾಯವನ್ನು ಯಾಚಿಸಲೇ ಬೇಕಾಗುವುದು. ಹೀಗೆ ನೇಪಾಳದಲ್ಲಿ ನೂತನವೆನಿಸುವ ಚೀನೀಯ ಆಕ್ರಮಣದಿಂದಾಗಿ ಗೊಂದಲವೆದ್ದಿದೆ; ಪ್ರಜೆಗಳೂ ಸರಕಾರವೂ ವಿಚಿಂತಿತರಾಗಿದ್ದಾರೆ. ಚೀನಾದಿಂದ ಅವರಿಗೆ ನ್ಯಾಯ ದೊರೆಯುವ ಆಸೆ ಅತಿದೂರ, ವಾಸ್ತವಿಕತೆಗಿಂತ ಬಹುದೂರದ ಮಾತು.

"ತಾಳಸಿಗೆ ಬಡಿದ ಬಡಿಗೆ ಬೊಳ್ಳನಿಗೂ ಬಡಿಯುತ್ತದೆ" ಎಂದು ಹಳೆಯ ಗಾದೆಯೊಂದಿದೆ. ಈ ಮಾತನ್ನು ತಥ್ಯವಾಗಿಸಿ ತೋರಿಸಿದೆ, ಚೀನಾ. ಟಿಬೇಟಿನ ದಲಾಯ್ ಲಾಮಾರ ಎದುರು ಪಂಚನ್ ಲಾಮಾರನ್ನು ಎತ್ತಿಕಟ್ಟಿ ಅದನ್ನು ತಮ್ಮ ಧೂಸರಿತ ಕ್ಷೇತ್ರವಾಗಿಸಿಕೊಂಡ ಚೀನೀಯರು ಭಾರತ, ನೇಪಾಳಗಳನ್ನೂ ಆಹುತಿ ತೆಗೆದುಕೊಂಡರು. ಬರ್ಮಾದ ಉತ್ತರ ಸೀಮೆಯ ಗತಿಯೂ ಇಷ್ಟರಲ್ಲೇ ಇದೇ ಆಗಿರಬಹುದು; ಪರ್ವತ ಕಂದರಗಳ ದುರ್ಗಮ ಮಾರ್ಗದಿಂದ ವರದಿಗಳು ಬರುವಾಗ ತಡವಾಗುತ್ತಿದೆಯೆಂಬುದು ಅನುಭವವೇದ್ಯವೇ ಆಗಿದೆ.

ಇತ್ತೀಚೆಗೆ ಹಿಮಾಚಲ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಡಾ. ವೈ. ಎಸ್. ಪರಮಾರರು ಸೀಮಾಂತ ಪ್ರದೇಶವನ್ನು ಸಂದರ್ಶಿಸಿ ಬಂದು ಒಪ್ಪಿಸಿನ ವರದಿಯ ಸಾರವನ್ನು ಕೇಳುವಾಗ, ಎದೆಗೆ ಶೂಲ ಇಕ್ಕಿದಂತಾಗುತ್ತದೆ: ಟಿಬೇಟಿನಲ್ಲಿ ಸ್ಥಾಪಿತವಾದ ಚೀನೀಯ ನಿಯಂತ್ರಿತ ಸರಕಾರವು ಟಿಬೇಟಿಯನ್ನರ ವಿಶ್ವಾಸವನ್ನು ಕಳೆದುಕೊಂಡಿದೆ. ಅಧಿಕ ಸಂಖ್ಯೆಯ ಟಿಬೇಟಿಯನ್ನರು ಭಾರತಕ್ಕೆ ಓಡಿಬರತೊಡಗಿದ್ದಾರೆ. ಈಗಿನ ಸರಕಾರವು ಟಿಬೇಟಿಯನ್ನರ ಅನುಮತಿ ಮತ್ತು ಇಚ್ಛೆಗೆ ವಿರೋಧವಾಗಿ ಆಡಳಿತೆ ನಡೆಸುತ್ತಿರುವುದು. ಮೊದಮೊದಲು ನೂತನವಾಗಿ ಸಂಸ್ಥಾಪಿತವಾದ ಸರಕಾರಕ್ಕೆ ಜನಬೆಂಬಲವಿದ್ದಿತ್ತಾದರೂ ಆ ಮೇಲಿನ ಘಟನೆಗಳಿಂದಾಗಿ

(೧೨ ನೇ ಪುಟನೋಡಿರಿ)

ಕಥಾವಿಹಾರ

ಇದುವೇ ಜೀವನಾ....

ಎಲ್ಲರೂ ಒಂದು ವಿಧದ ಜೀವನ ಬದುಕುತ್ತಾರೆ; ನಾವೂ ಮಾಡುತ್ತೇವೆ. ನಮ್ಮದೂ ಒಂದು ಬಗೆಯ ವಿಚಿತ್ರ ಜೀವನಾ.......

ನಾನೊಬ್ಬ ಸರಕಾರಿ ಉದ್ಯೋಗಸ್ಥ; ನನ್ಹೆಸ್ರು ಗೋಪಾಲ್. ವಾಸಸ್ಥಾನ:— ಪೇಟೆ ಕಡೆ. ಜೀವನ: ಸಾದಾ. ಹೆಂಡತಿ: ಒಬ್ಬಳೇ. ಮಕ್ಕಳು:— 9 (ಒಂಬತ್ತು ಮಾತ್ರ.) ಸಾರಿ). ಭೂಮಿಗ್ಬಿದ್ದಿರೋದು ಎಂಟೇ). ನನ್ಹೆಂಡ್ತಿ: ಜಾಣೆ ಮಾತ್ರನಲ್ಲ ಬ್ಯೂಟಿಫುಲ್! ನಾನು: ಒಳ್ಳೇ ಮನುಷ್ಯ (ನನ್ಮಟ್ಟಿಗೆ.) ನೋಡೋರಿಗೆ ಬರೀ ಜಂಗ್ಲೀ.

ನನ್ಹೆಂಡ್ತಿ ಜಾಣೆ ಅಂದೆನಲ್ಲಾ ಯಾಕಂದ್ರೆ ಈ ತನಕ ಎಂಟನ್ನು ಹೆತ್ತು, ಒಂಬತ್ನೇದ್ಕೆ ಒಂಬತ್ತು ತಿಂಗಳು ತುಂಬುತ್ತಲೂ "ಇಲ್ಲಿ ಕೇಳೀಂದ್ರೆ, ಮೂರು ಮಕ್ಕಳಿಗಿಂತ ಹೆಚ್ಚಾದ್ರೆ ಟ್ಯಾಕ್ಸ್ ಹಾಕ್ತಾರಂತಲ್ಲಾ. ಹಾಗಾದ್ರೆ ನಮ್ಮೇಲೆ ಎಷ್ಟು ಟ್ಯಾಕ್ಸ್ ಬಿದ್ದೀತು?" ಎಂದು ಲೆಕ್ಕ ಮಾಡ್ತಿದ್ದಾಳೆ. ಈ ಮಕ್ಕಳು ಮತ್ತು ಟ್ಯಾಕ್ಸ್‌ಗಳ ಅಲ್‌ಜೀಬ್ರಾ ಅವಳಷ್ಟು ಚೆನ್ನಾಗಿ ನನಗೆ ಬರುವಂತಿಲ್ಲ. ಈ ಅಲ್‌ಜಿಬ್ರಾ ಅಂಕೆಗಳಿಗೆ ಸರಿಯಾಗಿ ಮಕ್ಳ ಹೆಸರೂನೂ ಇಟ್ಟಿದ್ದೀಂತ ಮೊದ್ಲೋಳಿಗೆ ಅಂಬಾ, ನಂತ್ರ ಬೋನಿಗೆ ಭಾಸ್ಕರ, ಆ ಮೇಲಿನೋಳಿಗೆ ಚಂದ್ರಮ್ಮ ಹೀಗೆ.... A, B, C ಪ್ರಕಾರಾನೇ ಹೇರಿಡ್ತಾ ಬಂದಿದ್ದೇವೆ. ತನ್ಮಧ್ಯೆ ಆರ್ನೇ ಮಗು ಹುಟ್ಟಿದಾಗ ಸರದಿಪ್ರಕಾರ F ಬಂತು. ಹೆಸರೇ ಸಿಕ್ಲಿಲ್ಲ. ಫಕೀರ್ ಟವರ್ ಆಗ್ಬಹುದು ಎಂದೆ. ನನ್ನಾಕೆ ಸಿಟ್ಟುಗೊಂಡು "ನಿಮ್ಗೇ ಶೇಮ್!" ಅಂದ್ಲು. ಫೂಲಿಶ್ ಆಗ್ಬೋದೆಂದೆ. ಅದು ಸರಿಯಾಗ್ದ ಕಡೆಗೆ F ನ ಬದ್ಲು P ಆರಿಸ್ಕೊಂಡು ಪಾಂಡುರಂಗ ಅಂತ ಹೆಸರಿಟ್ವಿ.

ಕೆಲವೊಮ್ಮೆ ಈ ಹೆಂಡ್ತಿ ಮಕ್ಕಳ ಜಂಜಾಟದಲ್ಲೂ ನನ್ಗೇ ಬೇಸರವಾಗುತ್ತೆ. 'ವರ್ಷವೂ ಹೆರ್ತಾಳಲ್ಲಾ, ಇವಳ ಕರ್ಮ!' ಎಂದು ರೇಗುತ್ತಿದ್ದೆ. ಸಾರಿ. ಆದರೆ ಇದಕ್ಕೆ ಹೊಣೆ ನಾನೇ ಅನ್ನಿ. (ಆದ್ರೆ....ಏನೂ ಮಾಡ್ಲಿ?) ಈ ಮಕ್ಕಳ ಕಿರಿಕಿರಿ ನೋಡಿದ್ರೆ ನನ್ನೆದುರು ಕೂತ್ಕೊಳ್ಳೋ ಟೈಪಿಸ್ಟಿನ ಟೈಪ್‌ರೈಟರಿನ ನೆನಪಾಗುತ್ತೆ. ಅದಕ್ಕಾದರೂ ಒಂದೇ ಸ್ವರ. ಇವುಗಳಿಗೋ ನಿಮಿಷಕ್ಕೇ ನೂರಾರು ಸ್ವರ! ಮರದ ಕಾರ್ಖಾನೆಯೂ ಇದಕ್ಕಿಂತ ಮೇಲು.

ಸರಕಾರೀ ಉದ್ಯೋಗಸ್ಥ ಅಂದೆನಲ್ಲಾ ನನಗೂ ಆಫೀಸು ಇದೆ. ಆಫೀಸು ಇದೆ ಅಂದ ಮೇಲೆ ಆಫೀಸರೂ ಬೇಕು ತಾನೆ? ಇದ್ದಾರೆ; ಇದ್ದಾರೆ. ಕಳೆದವರ್ಷ ಬೇರೆ ಆಫೀಸಿನಲ್ಲಿದ್ದೆ; ಈ ವರ್ಷ ಇಲ್ಲಿಗೆ ವರ್ಗಾಯಿಸಿದ್ರು. ಅಲ್ಲೂ ಇಲ್ಲೂ ವ್ಯತ್ಯಾಸವೆಂದರೆ ಇಷ್ಟೇ. ಅಲ್ಲಿ ಸ್ವಲ್ಪ ಸ್ವಲ್ಪ ಆ....ಫೀಸು ಸಿಕ್ತಿತ್ತು. ಅದು ಇಲ್ಲಿ ಇಲ್ಲ.

ಈ ಆಫೀಸು ವರ್ಕ್ .... ಓವರ್ ವರ್ಕ್‌ನ ಬದಲು ಲೋವರ್ ಗ್ರೇಡು ಮಾಸ್ಟ್ರಾಗಿರುವುದು ಮೇಲು ಅಂತ ನನ್ನಗೆಳೆಯ ರಾಘವ ಮಾಸ್ಟ್ರೊಡನೆ ನಾನು ಹೇಳಿದ್ದುಂಟು. ಕೆಲವೊಮ್ಮೆ ಅಸಹನೆಯಿಂದ ಆಫೀಸ್ನಲ್ಲೇ ಕಿರುಚಿದ್ದೂ ಉಂಟು. ಆದರೆ ದೇವರ ದಯದಿಂದ ಇದು "ಆಫೀಸಪ್ನೋರ" ಕಿವಿಗೆ ಬೀಳ್ಲಿಲ್ಲ. ನನ್ನೆದುರಿನ ಟೈಪಿಸ್ಟ್ ಅಷ್ಟು ಉಪಕಾರ ಮಾಡ್ತಾಳೆ ನನ್ಗೆ. ಅವಳ ಟೈಪ್‌ರೈಟರೇ ನನ್ನ ಸೈಲೆನ್ಸರ್. ಸರ್ಕಾರೀ ಉದ್ಯೋಗ ಅಂದ್ರೆ ಎಲ್ಲಾ ಹೀಗೆ ನೋಡಿ. ಆಫೀಸಾದ್ರೆ 'ಆಫೀಸರಪ್ನೋರು' ಆಗ್ಬೇಕು.

ಎಲ್ಲಾ ಒಂದೇ. ಮೊನ್ನೆ ನನ್ನ ಹಳೇ ಫ್ರೆಂಡ್ ರಾಘವ ಮಾಸ್ತ್ರು (ಎಲ್ಲೋ ಒಂದು ಹಳ್ಳಿ ಶಾಲೆಯಲ್ಲಿ ಹೆಡ್ಮಾಸ್ಟ್ರಾಗಿದ್ದಾರೆ) ಬಂದಿದ್ರು. 'ಹೇಗ್ರಿ ಜೀವನ?' ಎಂದೆ. ಅಷ್ಟು ಹೇಳಿದ್ದೇ ಸ್ಟೇಶನ್ ಸಿಲೋನ್ ಇಟ್ಟಾಗಾಯ್ತು.

'ನೋಡಿ ಗೋಪಾಲ್. ಈಗ ಇನ್ಸ್‌ಪೆಕ್ಟ ಆಫೀಸಿಗೆ ಹೊಂಟಿದ್ದೇನೆ. ನೋಡಿ. ತಿಂಗ್ಳಿಗೆ ಎರಡು ಮೂರು ಬಾರಿಯಾದ್ರೂ ಹೋಗ್ಬೇಕಾಗುತ್ತೆ. 15 ಮೈಲು ದೂರ. ಬಸ್ ಚಾರ್ಜು ಕೈಯಿಂದ. T. A. ಇಲ್ಲ. D. A. ಇಲ್ಲ ಸಂಬ್ಳ ಅಷ್ಟಕ್ಕಷ್ಟೇ. ಎರಡು ರೂಪಾಯಿ 'ಹೆಡ್ಮಾಸ್ಟ್ರಿಲವನ್ಸ್', 2 ರೂಪಾಯಿ ಕಂಟಿಜನ್ಸಿ ಎಲ್ಲಿ ಸಾಕು ಸ್ವಾಮಿ, ಶಾಯಿ, ಕಾಗದ ಚಾಕು, ಅದೂ ಇದೂ ಎಲ್ಲಾ ಸೇರಿ ನೋಡಿ, ಈ ಹೆಡ್ಮಾಸ್ಟ್ರ ಕೆಲ್ಸಕ್ಕೇಂತಲೇ ತಿಂಗ್ಳಿಗೆ ಹದಿನೈದು ರೂಪಾಯಿ ದಂಡ! ಸಿಕ್ಕೋದು ಹೆಡ್ಮಾಸ್ಟ್ರಾಗೇಂತ ನಾಲ್ಕು ರೂಪಾಯಿ' ನಾನು ಬೇರೆ ಸಂಗ್ತಿ ತೆಗೆದಿದ್ರೆ ಇನ್ನೂ ಅವರ ಪ್ಲೇಟ್ ನಿಲ್ಲುವಂತಿರ್ಲಿಲ್ಲ.

ಇಷ್ಟು ಮಾತ್ರವೇ ಸಾಕೆ? ಈ ಪಾಪ ಹೆಡ್ಮಾಸ್ಟ್ರ ಮೇಲೆ ಗಾಯ ಇಡೋ ಬದ್ಲು. ಯಾರೋ ಏನೋ ನಮಸ್ಕಾರ ಗಿಮಸ್ಕಾರ ಕೊಡ್ಲಿಲ್ಲಾಂತ, ಕೊಡೋದಿಲ್ಲಾಂತ ಸಿಟ್ಟಿನಿಂದ ಏನೆಲ್ಲಾ ಆರೋಪ ಹಾಕಿ ಮಾಸ್ತ್ರ ಮೇಲೆ ಊರಿನೋರು ಕೆಲವರು ಪಿಟಿಶನ್ ಹಾಕಿದ್ದಾರಂತೆ.

ಹೋಗ್ಲಿ ಬಿಡಿ. ಈ N. G. O.ಗಳ ಜೀವನಾನೇ ಹೀಗೆ, ಜಂಗ್ಲೀ ಜೀವನ,

'ಓಯ್. ಇಲ್ಲಿ ಕೇಳೀಂದ್ರೆ (ಇದು ನನ್ಹೆಂಡ್ತೀ ಸ್ವರ!) ನಾವು ಇರೋದು ದಕ್ಷಿಣ ಕನ್ನಡದಲ್ಲಾದ್ರು ಕಾದಂಬರಿ ಗೀದಂಬರಿಗಳನ್ನೆಲ್ಲಾ ಓದಿ, ನಮ್ಮ ಕನ್ನಡ ಮಾತ್ರ ಮೈಸೂರಿನದ್ದೂ ಅಲ್ಲ, ಮದ್ರಾಸಿಯದೂ ಅಲ್ಲಾ ಅಂತಾಗಿದೆ.

'ಏನು ರಮಾ....'ತುಂಬಾ ಲಲ್ಲೆಯಿಂದ ಕೇಳಿದೆ. ಅವಳಿನ್ನೂ ಒಂಬತ್ತು ಮಕ್ಕಳ ತಾಯಾದ್ರೂ ನಾನವಳನ್ನ ಕರೆಯೋದರಲ್ಲಿ ಏನೂ ಪ್ರೇಮಕ್ಕೆ ಕಡಿಮೆ ಮಾಡ್ಲಿಲ್ಲ. ಮೊದ ಮೊದಲು 'ರಮಾ' ಅಂತ ರಾಗವಾಗಿ ಕರೆದರೆ ವಯ್ಯಾರದಿಂದ ಎದುರು ಬಂದು ನಿಲ್ಲುವವಳು, ಈಗ ಮಾತ್ರ ಏನ್ರೀ ಇನ್ನೂ ನಿಮ್ಮ ರಾಗ?' ಎನ್ನುವಳು!

ಈಗ ಮಾತ್ರ ನಾನು ರಾಗವಾಗಿ ಕರೆದದ್ದಕ್ಕೆ ಮಧುರವಾಗಿಯೇ ನಗುತ್ತಾ ಬಂದಳೆನ್ನಿ. 'ಈವತ್ತು ಪೂರ್ಣಿಮಾ ಥಿಯೇಟರ್ನಲ್ಲಿ ಒಳ್ಳೇ ಹಿಂದಿ ಪಿಕ್ಚರ್ ಇದೆ. ನಿಮ್ಗೂ ರಜೆ ತಾನೆ? ಸಂಜೆ ಹೋಗೋಣ್ವೆ ಅಂತ...'

'ತಿಂಗ್ಳಿನುದ್ದಕ್ಕೆಲ್ಲಾ ಹೀಗೆ ಪಿಕ್ಚರಿಗೆ ಹೋದ್ರೆ, ಆ ಪಿಕ್ಚರಿನ ತುಂಡು ತಂದು ಹೊಟ್ಟೆಗೆ ಅಂಟಿಸಿ ಮಲ್ಕೊಳ್ಳಬೇಕಾಗಿತಲ್ಲಾ ರಮಾ'

'ಹೋಗೀಂದ್ರೆ, ಮೂರು ತಿಂಗಳಾಯಿತು ಝುನಕ್ ಝುನಕ್ ಪಾಯಲ್ ಬಾಜೆ ನೋಡಿ. ಆಗ್ಲಿ ಇವತ್ತು ಹೋಗೋಣಾಂ'.

ನನ್ನ ಮನಸ್ಸೂ ಸ್ವಲ್ಪ ಹಸಿದೇ ಆಗಿತ್ತು. ಈವತ್ತು ಒಂದು ಪಿಕ್ಚರ್ ನೋಡಿದ್ರೆ ಕೊಳ್ಳೆಹೋಗೋದೇನು? ಆದರೂ ನಾನೆಂದೆ.

"ಅಲ್ಲಾ ರಮಾ ಈ ಅಷ್ಟನಂದರ ಕೀಟಲೇಲಿ ಈ ಫಿಲ್ಮ್ ಗಿಲ್ಮ್..."

"ಯಾವ ಅಷ್ಟನಂದನಾಂದ್ರೆ'

"ಅದೇ ಅಷ್ಟನಂದರೂ, ನೀನೊಂದು ಹೆತ್ತುಬಿಟ್ರೆ ನವನಂದರೂ ಭರ್ತಿಯಾಗಿ...'

"ಥೂ ಬಾಯಿ ಮುಚ್ಚೀಂದ್ರೆ. ತಮಾಷೆ ಎಲ್ಲಿ ವರೇಗೂಂದ್ರೆ. ಸ್ವಲ್ಪ ಸುಮ್ನಿರೀಂದ್ರೆ'.

ಇನ್ನು ಇಂದ್ರೆಗಳ ಕಾಟದಲ್ಲಿ ನಾನಂತೂ ಬದುಕುವಂತಿಲ್ಲ.

"ನೋಡು ರಮಾ ಸಿಟ್ಟು ಮಾಡ್ಕೋಬೇಡ. ನಾನು ಹೇಳಿದ್ರಲ್ಲಿ ಸುಳ್ಳಿಲ್ಲ ನೋಡು, ಇವರೊಂಬತ್ತು ಅಲ್ಲಲ್ಲ. ಎಂಟು ಮಂದಿಯನ್ನು ಹೇಗೆ ಆ ಸಿನಿಮಾ ಥಿಯೇಟರಿನೊಳಗೆ ಹೊಕ್ಕಿಸೋದೂ ಅಂತ.'

"ಯಾಕೆ ನಾವಿಬ್ರೂ ಮಾತ್ರ ಸಾಲದೆ?'

' ಚಿಕ್ಕ ಮಗೂ?'

"ಅದ್ನೋತ್ತು ಅಂಬಾ ನೋಡ್ಕೊಳ್ತಾಳೆ.'

ಅಂಬಾನೆ 'ಅಂಬಾ' ಅಂದ್ರೇನು ಮಾಡ್ತಿ?'

"ಇನ್ನೊಮ್ಮೆ 'ಸೀಪೆಲ್ಲ ಹೋಗಿ' ಅಂತ ಸಮಜಾಯಿಸ್ತೀನಿ. ಹೋಗೀಂದ್ರೆ ಅದೆಲ್ಲಾ ನಾನ್ನೋಡ್ಕೋತೀನಿ.'

"ಅಂತೂ ಲೆಸ್ ಲಗ್ಗೇಜ್ ಮೋರ್ ಕಂಫೋರ್ಟ್ ಮೇಕ್ ಟ್ರಾವೆಲ್ ಎ ಪ್ಲೆಜರ್ (Less luggage more comfort, make travel a pleasure) ಅಂತ ರೈಲಿನಲ್ಲೂ ಹಾಕಿದ್ದು ಯೂಸ್‌ಲೆಸ್ ಆದ್ರೂನು. ನಮ್ಮ ಲೈಫ್‌ನಲ್ಲಿ ಅದನ್ನೇ ಸಾಧಿಸ್ಕೊಳ್ಬೇಕೂಂತ ನೀನೂ...'

"ಹೋಗಿಂದ್ರೆ, ಸಾಕು ನಿಮ್ಮ ವ್ಯಾಖ್ಯಾನ.'

"ಆಯ್ತು ನನ್ರಾಣಿ. ಗಂಟೆ ಐದಾಗ್ತಾ ಬಂತು. ಸ್ವಲ್ಪ ಕಾಫಿ ಕೊಟ್ಬಿಡು. ಆ ಮೇಲೆ ನಿನ್ನ ಶೃಂಗಾರ ಎಲ್ಲಾ ಆಗಿ ಹೋಗುವಾಗ ಗಂಟೆ...'

"ಅಗ್ಲಿ ಬೇಗ ಹೊರಡ್ತೀನಿ.'

"ಬೇಗ ಬೇಡ. ಹೊತ್ತಿಗೇ ಹೊರಟ್ರೆ ಸಾಕು ರಮಾ ಹೋಗು, ಹೋಗು."

ಅಂತೂ ರಮಾ ಸಿದ್ಧಳಾದಳು. ನೀಲಿ ಪತ್ತಲವುಟ್ಟು, ಯೆಲ್ಲೊ ರವಕೆ ತೊಟ್ಟು, ಮುಖಕ್ಕೆ ತೆಳ್ಳನೆ ಪೌಡರ್ ಹಾಕಿ, ತಲೆ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4¼%
5 ,, 12 ,, 4½%
13 ,, 24 ,, 4¾%
ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ರಾಮತೀರ್ಥ (ಮಾಸಿಕ ಪತ್ರ)
(ಹಿಂದಿ ಭಾಷೆಯಲ್ಲಿ)

ಸಂಪಾದಕರು:- ಯೋಗಿರಾಜ ಶ್ರೀ ಉಮೇಶಚಂದ್ರರು.

ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೧೪.

PHONE 203  ESTD 1926

FOUNDATION STONE
Engraved
MARBLE TABLETS
(GOLD FILLED & LEAD FILLED)
BOOK AT
...RUBBER STAMP... BALMATTA ... MANGALORE

ಗೃಹವಿಜ್ಞಾನ

ಮನೆಯ ಸಿರಿ - ನಗುವ ಮಕ್ಕಳು

(ಲೇಖಾಂಕ ೧)

ಮಕ್ಕಳಿಲ್ಲದ ಮನೆಯು ಹಕ್ಕಿಯಿಲ್ಲದ ಗೂಡು. ಆದುದರಿಂದ, ಮನೆಯ ಸಿರಿಯೆಂದರೆ ಎಳೆಯ ನಗುಮೊಗದ ಮಕ್ಕಳು. ಅವರನ್ನು ಹೇಗೆ ಬೆಳೆಸಿಕೊಂಡು ಬರಬೇಕು ಎಂಬುದನ್ನು ಈ ಧಾರಾವಾಹೀ ಲೇಖದಲ್ಲಿ ವಿವರಿಸಿದ್ದಾರೆ, ಲೇಖಕರು,

ಲೇಖಕರು: ಶ್ರೀ ಎಂ. ರಂಗ ರಾವ್.

ಮನೆಯ ಸಿರಿ ಅಂದರೇನು?

'ಮನೆಯ ಸಿರಿ' ಅಂದರೆ ಮನೆಯ ಐಶ್ವರ್ಯ. ಈ ಐಶ್ವರ್ಯಕ್ಕೆ 'ಗೃಹಲಕ್ಷ್ಮಿ'ಯೇ ಅಧಿನಾಯಿಕೆ. ಗೃಹಲಕ್ಷ್ಮಿ ಅಂದರೆ ಬೇರೆಯಾರೂ ಅಲ್ಲ, ಗೃಹಿಣಿ; ನಮ್ಮ ಮನೆಯ ಯಜಮಾನಿಸಿ; ಹೆಂಗುಸು. ಸರ್ವಸಾಮಾನ್ಯಳಾದ ಕೇವಲ ಹೆಂಗುಸು.

ಆದರೆ ಹೆಂಗುಸರೆಲ್ಲಾ ಗೃಹಲಕ್ಷ್ಮಿಯರೆಂದು ತಿಳಿದ ಬಿಡಬಾರದು. ಗೃಹಲಕ್ಷ್ಮಿಯಾದವಳಿಗೆ ಅಭಿಮಾನಪಾದ ಮುಖ್ಯ ಐಶ್ವರ್ಯವೊಂದಿದೆ; ಅದುವೇ ಗೃಹದ ಐಶ್ವರ್ಯ. ಈ ಐಶ್ವರ್ಯವು ಮನೆಯೊಳಗಿನ ಧನಕನಕ ವಸ್ತುಗಳಲ್ಲ. ಧನಕನಕ ವಸ್ತುಗಳು ಎಲ್ಲರಿಗೂ ಇರುವಂಥವಲ್ಲ.

ಎಲ್ಲರಿಗೂ ಇರತಕ್ಕಂತಹ ಮನೆಯ ಐಶ್ವರ್ಯವೆಂದರೆ ಮಕ್ಕಳು. ಮನೆಗೆ ಮಕ್ಕಳೇ ಐಶ್ವರ್ಯ. ಮಕ್ಕಳ ಅಭಿಮಾನೀ ದೇವತೆಯೇ ತಾಯಿ. ತಾಯಿಯೇ ಗೃಹಲಕ್ಷ್ಮಿ.

ತಾಯಿಯರು ಸರಿಯಾದ ರೀತಿಯಲ್ಲಿ ತಮ್ಮ ಮನೆಯ ಸಿರಿಯಾದ ಮಕ್ಕಳನ್ನು ಬೆಳೆಸಬೇಕು. "ಮಕ್ಕಳನ್ನು ಬೆಳೆಸುವುದೇನು ಮಹಾ? ಅವುಗಳಷ್ಟಕ್ಕೆ ಅವು ಬೆಳೆದುಹೋಗುತ್ತವೆ. ಅದಕ್ಕೊಂದು ಪ್ರತ್ಯೇಕ ತಿಳಿವಳಿಕೆ ಯೇನಿದೆ ಮಹಾ!" ಅಂದುಕೊಂಡೀರಿ! ಹಾಗನ್ನುವ ಮೊದಲು ಇದನ್ನು ಸ್ವಲ್ಪ ಓದಿಕೊಂಡ ಹೋಗಿ. ಅನಂತರ ನಿಮಗೆ ನೀವೇ ಆ ಪ್ರಶ್ನೆಯನ್ನು ಕೇಳಿಕೊಳ್ಳಿ. ಆಗ ತಿಳಿಯುತ್ತದೆ-ಮಕ್ಕಳ ಪೋಷಣೆಯ ವಿಷಯವಾಗಿ ತಿಳಿಯತಕ್ಕಂತಹುದು ಇದೆಯೋ ಇಲ್ಲವೋ ಎಂಬುದು.

ಇದು ತಾಯಂದಿರಿಗೆ ಮಾತ್ರವಲ್ಲ; ತಾಯಂದಿರ ಜೊತೆ ಜೊತೆ ತಂದೆಯರೂ ತಿಳಿದುಕೊಳ್ಳಬೇಕಾದ ವಿಷಯ.

ಮಕ್ಕಳ ಮಹತ್ವ

"ವನಕ್ಕೆ ಕೊಳವೇ ಚೆಂದ, ಮನೆಗೆ ಮಕ್ಕಳೇ ಚೆಂದ" ಎಂದು ಹಿರಿಯರು ಬಗೆ ಬಗೆಯಾಗಿ ಹಾಡಿದ್ದಾರೆ. "ಇಂದಿನ ಮಕ್ಕಳೇ ಮುಂದಿನ ಜನಾಂಗ" ಎಂಬ ಮಾತನ್ನೂ ನೀವು ಕೇಳಿದ್ದೀರಿ. ಮಕ್ಕಳನ್ನು ಬಯಸದವರೂ ಮಕ್ಕಳ ಮೇಲೆ ಪ್ರೀತಿ ಇಲ್ಲದವರೂ ಯಾರಿದ್ದಾರೆ?

"ನಮ್ಮ ಮಗುವಿಗೆ ಬಹಳ ಬುದ್ಧಿ" ಎಂದು ಹೇಳಿಕೊಳ್ಳಲು ಎಲ್ಲಾ ತಂದೆ ತಾಯಂದಿರೂ ಹೆಮ್ಮೆ ಪಡುತ್ತಾರೆ. ತಮಗಿಂತಲೂ ತಮ್ಮ ಮಕ್ಕಳು ಮೇಲಾಗಬೇಕೆಂದು ಎಲ್ಲ ಹೆತ್ತವರೂ ಭಾವಿಸುತ್ತಾರೆ. ಹೊರಗಿನವರು ಯಾರಾದರೂ ಬಂದು ನಮ್ಮ ಮಕ್ಕಳನ್ನು ಹೊಗಳಿದರೆ ನಮಗಾಗುವ ಸಂತೋಷ ಅಷ್ಟಿಷ್ಟಲ್ಲ.

ನಿಜಕ್ಕೂ ನಮ್ಮ ಮಕ್ಕಳು ಅಂತಹ ಹೊಗಳಿಕೆಗೆ ತಕ್ಕವರಾಗಿದ್ದಾರೆಯೆ?—ಇದನ್ನು ನಾವು ಯೋಚನೆ ಮಾಡುವುದಿಲ್ಲ. ಮಕ್ಕಳಲ್ಲಿರುವ ಕೆಡುಕನ್ನು ತಿಳಿದರೂ ನಾವು ಅಲಕ್ಷ್ಯಮಾಡಿ ಬಿಡುತ್ತೇವೆ. ಇದಕ್ಕೆ ಕಾರಣವೇನೆಂದು ಕೊಂಡಿದ್ದೀರಿ?

ನಾಕಷ್ಟು ಸಹನೆ ಇಲ್ಲದ್ದೇ ಕಾರಣ. 'ಮನೆಯ ಸಿರಿ'ಯಾದ ಮಕ್ಕಳನ್ನು ಚೆನ್ನಾಗಿ ಬೆಳೆಸಬೇಕಾದರೆ ಮೊದಲು ನಿಮಗೆ ತಾಳ್ಮೆಯೂ ಸಮಾಧಾನವೂ ತುಂಬಾ ಇರಬೇಕು.

"ನಿಮ್ಮ ಮಗು ತುಂಬಾ ಬುದ್ಧಿಯುಳ್ಳದ್ದು" ಎಂದರೆ ನಿಮಗೆ ಸಂತೋಷವಾಗಿ ಬಿಟ್ಟರೆ ಸಾಲದು. ಈ ಮಾತು ಸಫಲವಾಗಬೇಕು. ಅದಕ್ಕೇನು ಮಾಡಬೇಕು? ಇದೇನೂ ಅಲ್ಪ ವಿಷಯವಲ್ಲ.

ದೊಡ್ಡವರು ಆಡುವ ಮಾತುಗಳೂ, ಮಾಡುವ ಕೆಲಸಗಳೂ ಮಕ್ಕಳ ಮನಸ್ಸಿನಲ್ಲಿ ತುಂಬಾ ಪರಿಣಾಮ ಮಾಡುವಂಥವು. ಬೆಳೆದ ಮೇಲೆ ಮನುಷ್ಯರು ಒಳ್ಳೆಯವರಾಗಲಿಕ್ಕೂ, ಕೆಟ್ಟವರಾಗಲಿಕ್ಕೂ ಚಿಕ್ಕಂದಿನ ಆಟಪಾಟ ಅಭ್ಯಾಸಗಳೇ ಕಾರಣಗಳಾಗುತ್ತವೆ. ಮಕ್ಕಳನ್ನು ಪ್ರೇಮದಿಂದಲೂ ದಯೆಯಿಂದಲೂ ನೋಡಬೇಕೆನ್ನುತ್ತಾರೆ. ಇದು ಯಾರಿಗೆ ತಾನೇ ಗೊತ್ತಿಲ್ಲ? "ಹೆತ್ತವರಿಗೆ ಹೆಗ್ಗಣವಾದರೂ ಮುದ್ದು" ತಾನೆ? ಆದುದರಿಂದ ಮಕ್ಕಳ ಮೇಲೆ ಪ್ರೀತಿಬೇಕೆಂದು ಹೆತ್ತವರಿಗೆ ಹೇಳಿಕೊಡಬೇಕಾದ ಅಗತ್ಯವೇ ಇಲ್ಲ. ಅದು ಸಹಜವಾಗಿಯೇ ಇರುತ್ತದೆ. ಆ ಪ್ರೀತಿಯನ್ನು ಯಾವ ರೀತಿ ಹೇಗೆ ಹೇಗೆ ಚೊಟ್ಟುಚೊಟ್ಟಾಗಿ ತುಂಬಿಸಬೇಕೆಂಬುದನ್ನೇ ನೀವು ತಿಳಿದುಕೊಳ್ಳಬೇಕು. ವಿವೇಕದ ಪ್ರೀತಿಯಲ್ಲಿಯೇ ಮಕ್ಕಳ ಉನ್ನತಿ ಅಡಗಿದೆ; ಕುರುಡು ಪ್ರೀತಿಯಲ್ಲಿ ಅಲ್ಲ.

ಮಕ್ಕಳಿಗೆ ತುಂಬ ಇಷ್ಟವಾದುದು, ಒಂದು ಆಟ; ಇನ್ನೊಂದು ತಿಂಡಿ. "ಮಕ್ಕಳಿರುವ ಮನೆಗೆ ಬರಿಗೈಯಿಂದ ಹೋಗಬಾರದೆ"ಂದು ರೂಢಿಯೇ ಇದೆ. ಇದು ಒಳ್ಳೆಯದೇ. "ನನಗಾಗಿ ತಿಂಡಿ ಕೊಡುತ್ತಾರೆ. ನಾನೂ ಇನ್ನೊಬ್ಬರಿಗೆ ಕೊಡಬೇಕು" ಎಂಬ ಜ್ಞಾನ ಇದರಿಂದ ಮಕ್ಕಳಿಗೆ ಹುಟ್ಟಬಹುದು.

ಪಾಪ, ಮಕ್ಕಳು ದೊಡ್ಡವರನ್ನಲ್ಲದೆ ಮತ್ತೆ ಯಾರನ್ನು ನೋಡಿ ಕಲಿತುಕೊಳ್ಳಬೇಕು? ಮನೆಯಲ್ಲಿ ಅವರಿಗೆ ತಂದೆ ತಾಯಿಗಳೇ ದೊಡ್ಡವರು. ಶಾಲೆಯಲ್ಲಿಯೋ ಮತ್ತೆಲ್ಲಿಯೋ ಹೊರಗೆ ಏನೇ ಕಲಿಯಲಿ; ಮಕ್ಕಳ ಅಂತಃಕರಣದ ಸಂಸ್ಕಾರಕ್ಕೆ ಮನೆಯೇ ವಿದ್ಯಾಲಯವಾಗಿರುತ್ತದೆ. ತಂದೆ ತಾಯಿ ಮೊದಲಾದ ದೊಡ್ಡವರೇ ಮಕ್ಕಳ ಅಚ್ಚು ಮೆಚ್ಚಿನ ಮೊದಲನೇ ಗುರುಗಳು. ಈ ಗೃಹವಿದ್ಯಾಲಯವನ್ನು ತಪ್ಪಿಸಲು ಸಾಧ್ಯವೇ ಇಲ್ಲ.

ಆದಕ್ಕಾಗಿಯೇ ಮಕ್ಕಳು ತಮಗೆ ಬರುವ ಪ್ರತಿಯೊಂದು ಸಂದೇಹವನ್ನೂ ಹೆತ್ತವರೊಂದಿಗೆ "ಇದು ಏನು?" "ಅದು ಏನು?" ಎಂದು ಕೇಳುತ್ತಾ ಇರುತ್ತಾರೆ. ದೊಡ್ಡವರು ಸಹನೆ ಕಳೆದುಕೊಳ್ಳಬಾರದು. ಅವರ ಕುತೂಹಲಕ್ಕೆ ತಕ್ಕ ಉತ್ತರವನ್ನು ಹೇಳಬೇಕು. ಆ ಉತ್ತರಗಳು ಚುಟುಕಾಗಿರಬೇಕು; ರುಚಿಯಾಗಿರಬೇಕು; ಮಕ್ಕಳ ಎಳೆಯ ಮಿದುಳಿಗೆ ಸೇರುವ ಹಾಗೆ ಸೌಮ್ಯವಾಗಿರಬೇಕು. ಅವರ ಹೃದಯ ಮೆಚ್ಚುವಂತಹ ಮಾತಾಗಿರಬೇಕು.

ಹೀಗೆಲ್ಲಾ ಮಕ್ಕಳ ಮನೋಭಾವಕ್ಕೆ ಸಮಾಧಾನವಾಗುವ ಹಾಗೆ ಉತ್ತರ ಹೇಳಬಲ್ಲವಳು ಮನೆಯ ಹಿರಿಯಳಾದ ಅಜ್ಜಿ. ಅಜ್ಜಿ ತನ್ನ ಮನೆಯ ಕಿರಿಗಳಿಗೆ ಹೇಳಿದ ಮಾತುಗಳೇ ಸಾವಿರಾರು 'ಅಜ್ಜಿ ಕತೆ'ಗಳಾಗಿವೆ. ಅವುಗಳಿಗೇ 'ಜಾನಪದ ಕಥೆ'ಗಳೆಂದೂ ಹೇಳುತ್ತಾರೆ. ಇಂಥ ಮಕ್ಕಳ ಕಥೆಗಳು ಬಹಳ ಹೃದ್ಯವಾಗಿರುವುದರಿಂದ ದೊಡ್ಡವರಿಗೂ ಅವು ರುಚಿಯಾದ ಸಾಹಿತ್ಯವಾಗಿವೆ. ಲಡ್ಡು ಮಕ್ಕಳಿಗೆ ಮಾತ್ರವೇ ಇಷ್ಟವೆ? ದೊಡ್ಡವರಿಗಿಲ್ಲವೆ?

ನಮ್ಮ ಹಬ್ಬಹಾಡಿಗಳೆಲ್ಲಾ ಯಾರಿಗೋಸ್ಕರ? ಮಕ್ಕಳಿಗೋಸ್ಕರವೇ! ಮಕ್ಕಳೇ ಹಬ್ಬಗಳ ರಸಜ್ಞರು. ವಿವಿಧ ತಿಂಡಿಗಳನ್ನು ನೋಡಿ ಅವರು ಪಡುವಂತಹ ನಿರ್ಮಲ ಆನಂದವನ್ನು ಮತ್ತಾರೂ ಪಡುವುದಿಲ್ಲ. ಅದಕ್ಕೇ ದೇವರೂ ಮಕ್ಕಳೂ ಸಮಾನರೆನ್ನುತ್ತಾರೆ. "ಮಕ್ಕಳ ಹೆಳೆ, ದೊಡ್ಡವರ ಬೆಳೆ."

ದೇವರ ಹಾಗೆಯೇ ನೋಡಬೇಕು ಮಕ್ಕಳನ್ನು. ದೇವರನ್ನು ಆಗಾಗ ಕ್ರಮದಂತೆ ತೊಳೆದು ನಿರ್ಮಾಲ್ಯ ವಿಸರ್ಜನೆ ಮಾಡಿ ಸೇವೆ ಮಾಡುವ ಹಾಗೆಯೇ ಮಕ್ಕಳನ್ನೂ ನೋಡಿಕೊಳ್ಳಬೇಕು. ಅವರ ಶರೀರವೂ ಮನಸ್ಸೂ ಪರಿಶುದ್ಧವಾಗಿರುವ ಹಾಗೆ ದೊಡ್ಡವರು ಅನುಸರಿಸಬೇಕಾದ ವಿಧಿಗಳು ತುಂಬಾ ಇವೆ.

ಮನೆ ಹೇಗಿರಬೇಕು?

ಎಲ್ಲಕ್ಕೂ ಮೊದಲು ಮನೆಯ ವಿಷಯ ನೋಡೋಣ. ಮಕ್ಕಳಿರುವ ಮನೆ ಹೇಗಿರಬೇಕೆಂಬುದು ಒಂದು ಮುಖ್ಯವಾದ ಪ್ರಶ್ನೆ.

ಗುಡಿಸಲೋ, ಛಾವಣಿಯೋ, ಮಾಳಿಗೆಯೋ, ಅರಮನೆಯೋ ಎಂಬುದು ಧನಿಕರ-ಬಡವರ ಪ್ರಶ್ನೆಯಾಗಿದೆ. ಅದು ಮುಖ್ಯವಲ್ಲ. ಮಕ್ಕಳೆಂದರೆ ಧನಿಕರಿಗೂ ಒಂದೇ, ಬಡವರಿಗೂ ಒಂದೇ.

ಗುಡಿಸಲಲ್ಲಿ ವಾಸ ಮಾಡುವವರು ದುಃಖ ಪಡುತ್ತಾರೆಂದೂ, ಮಾಳಿಗೆಯ ಮನೆಯಲ್ಲಿರುವವರೇ ಸುಖ ಪಡುತ್ತಾರೆಂದೂ ಒಂದು ತಿಳುವಳಿಕೆಯಿದೆ. ಇದು ಸುಳ್ಳು. ಅರ್ಥವೇ ಇಲ್ಲದ್ದು. ದೊಡ್ಡ ಮನೆಗಳು ನೋಡಲಿಕ್ಕೆ ಆಡಂಬರವಾಗಿ ಕಂಡರೇನಾಯಿತು? ರೋಗರುಜಿನೆಗಳು ಅಲ್ಲಿಯೂ ಉಂಟು; ರೋಗರುಜಿನೆಗಳಿಗೆ ಧನಿಕ ಬಡವರೆಂಬ ಭೇದವೇನೂ ಇಲ್ಲ. ತಿರುಗಿ ಕೇಳುತ್ತೀರಾದರೆ ಸುಲಭವಾಗಿ ದೇಹಕ್ಕೆ ಹಿತವಾಗುವುದು ಓಲೆಯದೋ ಹುಲ್ಲಿನದೋ ಆದ ಸಾಮಾನ್ಯ ಮನೆಗಳಲ್ಲಿಯೇ ಹೊರತು ಸಿಮೆಂಟು ಸುಣ್ಣ ಹೆಂಚುಗಳ ದೊಡ್ಡ ಮಾಳಿಗೆಯ ಮನೆಯಲ್ಲಿ ಅಲ್ಲ. ಇದು ಅನುಭವಿಕರು ಕಂಡ ಸತ್ಯ. ಹುಲ್ಲು ಓಲೆಯ ಗರಿಗಳು ಶೀತ-ಉಷ್ಣಗಳ ಸಮತೆಯನ್ನು ತನ್ನಂತಾನೇ ಕಾಪಾಡಿಕೊಳ್ಳುತ್ತವೆ. ಸಿಮೆಂಟು ಮನೆಗಳಲ್ಲಿ ಅದಕ್ಕೆ ಬೇರೆ ಏರ್ಪಾಡುಗಳು ಬೇಕು.

ಆದುದರಿಂದ ಮನೆ ಹೇಗಿದ್ದರೂ ನೀವೇನೂ ಚಿಂತಿಸಬೇಡಿ. ಚಿಕ್ಕದಾದರೂ ಚೊಕ್ಕವಾಗಿರಲಿ. ಆರೋಗ್ಯಕ್ಕೆ ಬಾಧಕವಾಗದ ಹಾಗೆ ಗಾಳಿ ಬೆಳಕುಗಳು ಸರಿಯಾಗಿ ಒಳಗೆ ಪ್ರವೇಶಿಸುವ ಹಾಗೆ ನೋಡಿಕೊಳ್ಳಿ. ಆಗಲೇ ಗುಡಿಸಲಾದರೂ ಉಲ್ಲಾಸವಾಗಿರುತ್ತದೆ.

ಮನೆಗೆ ಕಸಬರಿಕೆ ಬಹಳ ಮುಖ್ಯ. ಕಸಕಪ್ಪುಗಳಿಲ್ಲದೆ ಒಳಗೂ ಹೊರಗೂ ಶುದ್ಧವಾಗಿರಲಿ. ಗಲೀಜು ಗುಂಡಿಗಳು ಮನೆಗೆ ದೂರವಾಗಿರಲಿ. ಉಗುಳುವುದಕ್ಕೂ ಕಸಗಪ್ಪು ಹಾಕುವುದಕ್ಕೂ ಗೊತ್ತಾದ ಸ್ಥಳವನ್ನು ಏರ್ಪಡಿಸಿಕೊಳ್ಳಿ. ಏಕೆಂದರೆ ನಿಮ್ಮ ಮಕ್ಕಳು ಅವುಗಳನ್ನು ಮುಟ್ಟಿ ಅಪವಿತ್ರರಾಗಬಾರದಷ್ಟೆ?

ಹೀಗೆ ಪ್ರತಿಮನೆಯವರೂ ತಮ್ಮ ತಮ್ಮ ಆವರಣಗಳನ್ನು ಶುಚಿಯಾಗಿಟ್ಟರೆ ಇಡಿಯ ಊರೇ ಶುಚಿಯಾಗಿರುತ್ತದೆ.

ಮನೆಯ ಸುತ್ತಲೂ ಹೂವಿನ ಗಿಡಗಳು, ತರಕಾರಿಗಳು, ಬಾಳೆ, ತೆಂಗು ಮೊದಲಾದ ಗಿಡಮರಗಳನ್ನು ಬೆಳೆಸುವುದರಿಂ

(೧೧ನೇ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಬ್ಯಾಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬ್ಯಾಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇವರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ವಿಚಾರವರ್ಷ

ಸ್ವಾತಂತ್ರ್ಯಕ್ಕೂ ಒಂದು ಮಿತಿಯಿದೆ

ಸುಪ್ರಸಿದ್ಧ ರಾಜನೀತಿಜ್ಞ ಜಾನ್ ಸ್ಟುಅರ್ಟ್ ಮಿಲ್ಲರ ವಿಚಾರಧಾರೆಯ ಮೇಲೆ ಕ್ಷ-ಕಿರಣ.

“ಸಂಖ್ಯಾನುಸಂಧಾನವು ಪ್ರತಿಯೊಬ್ಬನ ಪರಂಪರಾಗತ ಮೌಲಿಕ ಅಧಿಕಾರವಾಗಿದೆ; ಆದರೆ, ಒಬ್ಬನ ಸುಖವು ಇನ್ನೊಬ್ಬನ ಸ್ವಾತಂತ್ರ್ಯದಲ್ಲಿ ಬಾಧಕವೆನಿಸುತ್ತದೆ” ಎಂಬ ಮಾತಿನಲ್ಲಿ ಎಲ್ಡುಯಸ್ ಹಕ್ಸ್ಲೆಯು ಹೇಳಿಕೆಯಲ್ಲಿ ಸಾಂಕೇತಿಕ ವ್ಯಕ್ತಿ-ಸ್ವಾತಂತ್ರ್ಯ ಮತ್ತು ಸಾಮಾಜಿಕ ಮರ್ಯಾದೆಯ ಸಂಘರ್ಷಣೆಯನ್ನು ಜಾನ್ ಸ್ಟುಅರ್ಟ್ ಮಿಲ್ಲನು “ನಿನಗೆ ಮಾರ್ಗದಲ್ಲಿ ಬೆತ್ತ ಬೀಸುತ್ತ ತಿರುಗುವ ಸ್ವಾತಂತ್ರ್ಯವಿದೆ; ಆದರೆ, ಬೇರೆಯವರಿಗೆ ಅಪಾಯ ಮಾತ್ರ ಆಗಬಾರದು” ಎಂದು ಪರಿಹರಿಸಿದ್ದಾನೆ. ಮಿಲ್ಲನ ಸ್ವಾಧೀನತೆಯ ವ್ಯಾಖ್ಯೆಯನ್ನು ನೋಯೇಲ್ ಎಲನ್‌ರು ಪ್ರಚಲಿತ ಪರಿಸ್ಥಿತಿಗಳ ಒರೆಗಲ್ಲಿನ ಮೇಲೆ ಉಜ್ಜಿದ್ದಾರೆ. ಆ ಲೇಖನ ಸಾರವನ್ನಿಲ್ಲಿ ಸಂಗ್ರಹಿಸಿಕೊಡಲಾಗಿದೆ.

ಜಾನ್ ಸ್ಟುವರ್ಟ್ ಮಿಲ್ಲನು ‘ಆನ್ ಲಿಬರ್ಟಿ’ ಎಂಬ ಸ್ವಾತಂತ್ರ್ಯದ ಮೇಲಿನ ಪುಸ್ತಕವನ್ನು ಬರೆದು ೧೯೫೯ಕ್ಕೆ ನೂರು ವರ್ಷಗಳು ಗತಿಸಿದುವು. ರಾಜನೈತಿಕ ದರ್ಶನದ ದೃಷ್ಟಿಯಿಂದ ಕಳೆದೊಂದು ಶತಮಾನದಲ್ಲಿ ಬೇರಾವ ಆಂಗ್ಲೇಯನೂ ಇಷ್ಟೊಂದು ಮಹತ್ವಪೂರ್ಣವಾದ ಗ್ರಂಥವನ್ನು ಬರೆದಿಲ್ಲ. ಮಿಲ್ಲರ ಈ ಗ್ರಂಥವು ಒಂದು ವಿಶಿಷ್ಟ ಜೀವನ ದರ್ಶನವಾದ ಉದಾರತಾ ವಾದದ ಕೀರ್ತಿ ಸ್ತಂಭವೆನಿಸಿದೆ. ಮಿಲ್ಲನು ‘ಸ್ವಾತಂತ್ರ್ಯ’ವೆಂಬುದು ದಾರ್ಶನಿಕ ದೃಷ್ಟಿಯಿಂದ ಮಹತ್ವದ್ದೆನಿಸಿಲ್ಲವಾದರೂ ಅದೊಂದು ಜೀವಂತ ಆಸ್ಥೆಯ ಉದ್ಘೋಷಣೆಯಾದುದರಿಂದ ಇಂದಿಗೂ ಅಮರವಾಗಿ ಉಳಿದಿದೆ.

ಮಿಲ್ಲನು ‘ಸ್ವಾತಂತ್ರ್ಯ’ದ ಬಗ್ಗೆ ಒಂದು ವಿಶಿಷ್ಟ ಕಲ್ಪನೆಯನ್ನು ಮಾಡಿದ್ದಾರೆ. ಈ ಕಲ್ಪನೆಯು ಟಾಮ್ ಪೇನ ಕಲ್ಪನೆಗಿಂತ ಬೇರೆಯಾಗಿದೆ. ಟಾಮ್ ಪೇನ್‌ನು ಫ್ರೆಂಚ ವಿಪ್ಲವದ ಜನಕ ರೂಸ್ಸೋವಿನ ವಿಚಾರ ಧಾರೆಯಿಂದ ಪ್ರಭಾವಿತನಾಗಿದ್ದಾನೆ. ಅವನು ಮಾನವನು ಸ್ವತಂತ್ರನಾಗಿರಬೇಕೆಂದು ಬಯಸುತ್ತಾನೆ. ವ್ಯಕ್ತಿಯು ಪರತಂತ್ರನಾಗಿರಲು ಆತನ ಮೇಲಿರುವ ಅತ್ಯಾಚಾರಿಗಳ ಶಾಸನವೇ ಕಾರಣವೆಂದವನ ದೃಢಾಭಿಪ್ರಾಯ. ಪೇನರು ತಮ್ಮ ಈ ಮನೋಭಾವಗಳ ಆಧಾರದಿಂದಲೇ ಇತಿಹಾಸವನ್ನು ವಿಮರ್ಶಿಸಿದರು. ಇಂಗ್ಲೆಂಡಿನ ಮೇಲೆ ನಾರ್ಮನ್ ವಿಜೇತರ ಆಡಳಿತೆಯು ಪ್ರಾರಂಭವಾದೊಡನೆಯೇ ಆಂಗ್ಲೇಯರ ಸ್ವಾತಂತ್ರ್ಯವು ದೂರವುಳಿಯಿತು; ಮತ್ತು ಅವರು ರಾಜ, ಶ್ರೀಮಂತರ ಜೀಲರಾಗಿ ದಿನದೂಡಬೇಕಾಯಿತು ಎಂದು ಶ್ರೀ ಪೇನ್ ಬರೆದಿದ್ದಾರೆ.

ಈ ರೀತಿಯ ದುಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ವಯಸ್ಕ ಮತಾಧಿಕಾರವೀಯಬೇಕು, ಲಿಖಿತ ಸಂವಿಧಾನವನ್ನು ತಯಾರಿಸಬೇಕು, ಸಮಾಜದ ರಚನೆಯು ಆಮೂಲಾಗ್ರ ಬದಲಾಗಬೇಕು; ಆಗ ಸ್ವಾತಂತ್ರ್ಯವು ಲಭಿಸುವುದು ಎಂದು ಪೇನರು ಹೇಳುತ್ತಾರೆ.

ಕ್ರಾಂತಿಕಾರಿಗಳ ಈ ದೃಷ್ಟಿಯನ್ನು ಮಿಲ್ಲನು ಸ್ವೀಕರಿಸುವುದಿಲ್ಲ. ಇಂಗ್ಲೆಂಡು ಒಂದು ಸ್ವತಂತ್ರ ರಾಷ್ಟ್ರ. ಅದರ ಮೇಲೆ ನಿರಂಕುಶ ಅಧಿನಾಯಕ ತಂತ್ರದ ಶಾಸನವಿರುವುದಿಲ್ಲ. ನ್ಯಾಯಾಂಗ ಮತ್ತು ಪ್ರಶಾಸನಾಂಗಗಳು ಬೇರೆಯಾಗಿದ್ದು ಸ್ವತಂತ್ರವಾಗಿರುವ ಸತ್ತೆಯಿದು. ಇಂತಹ ಆಡಳಿತೆಯಲ್ಲಿ ಸರಕಾರವು ತನಗಿಷ್ಟ ಬಂದವನಿಗೆ ಶಿಕ್ಷೆಯನ್ನು ನೀಡಲಾರದು. ಇಷ್ಟಿದ್ದರೂ ಮಿಲ್ಲನು ಇಂಗ್ಲೆಂಡಿನ ಜನತೆಗೆ ಈಗಿರುವುದಕ್ಕಿಂತಲೂ ಹೆಚ್ಚು ಸ್ವಾತಂತ್ರ್ಯ ಬೇಕೆಂದು ವಾದಿಸುತ್ತಾನೆ. ಇದು ಏಕೆ?

ಮಿಲ್ಲನು ಮಹಾನ್ ಫ್ರೆಂಚ ವಿಚಾರಕ ದತಾಕವಿಲರ ವಿಚಾರಗಳನ್ನು ಅಭ್ಯಸಿಸಿದುದೇ ಇದಕ್ಕೆ ಕಾರಣವಾಗಿದೆ. ಮಿಲ್ ಮತ್ತು ದತಾಕವಿಲರಿಬ್ಬರೂ ವಯಸ್ಕ ಮತದಾನ ಮತ್ತು ಪ್ರಾತಿನಿಧಿಕ ಸಭಾಸತ್ತೆಯನ್ನು ಆದರದಿಂದ ಸ್ವಾಗತಿಸಿದರು. ಆದರೂ ಇವರಿಬ್ಬರೂ ಪ್ರಜಾಪ್ರಭುತ್ವವು ಅನಿವಾರ್ಯ ಮತ್ತು ಯುಕ್ತಿಯುಕ್ತವಾಗಿರುವುದು ಅವಶ್ಯವೇ; ಆದರೆ, ಇದರಿಂದ ಕೆಲವೊಂದು ಕೆಡುಕುಗಳೂ ಉತ್ಪನ್ನವಾಗುವುವು. ಎಂದು ಜನತೆಗೆ ಎಚ್ಚರಿಕೆಯಿತ್ತರು. ಈ ಪದ್ಧತಿಯಿಂದ ಬಹು ಮತದ ಬಲದಿಂದ ಯೋಗ್ಯತಾಹೀನ ವ್ಯಕ್ತಿಗಳೇ ಆಡಳಿತದಾರರಾಗಿ ಆರಿಸಲ್ಪಡುವ ಸಂಭವವಿದ್ದು ಪ್ರತಿಭೆ ಸ್ವಾತಂತ್ರ್ಯ, ಚೇತನ ಮತ್ತು ಮೌಲಿಕತೆಗಳನ್ನು ಉಪೇಕ್ಷಿಸುವುದು ಮಾತ್ರವಲ್ಲ, ಅವುಗಳನ್ನೆಲ್ಲಾ ದೂರೀಕರಿಸುವ ಸಂಭವವೂ ತಲೆದೋರಬಹುದು. ಈ ವಿಧದ ಪೆನ್‌ನ ವಿಚಾರ ಧಾರೆಯು ತಾಕವಿಲನ ಗ್ರಂಥಗಳ ಪ್ರಭಾವದಿಂದ ಮಾತ್ರ ಬಂದಿರುವುದಲ್ಲದೇ ವಿಕ್ಟೋರಿಯಾ-ಕಾಲೀನ ಆಂಗ್ಲ ಸಮಾಜದ ಪ್ರತ್ಯಕ್ಷ ಅನುಭವದ ಆಧಾರವೂ ಇದಕ್ಕಿದೆ.

ಇದರಿಂದಾಗಿ ಮಿಲ್ಲನು ಸಮಸ್ತ ಮಾನವೀಯ ಕಾರ್ಯಗಳನ್ನು ಎರಡು ಪಂಗಡಗಳಲ್ಲಿ ವಿಭಜಿಸಿದ್ದಾನೆ. ಪರರ ಮೇಲೆ ಪ್ರಭಾವಬೀರುವ ಬಗೆಯ ಕೆಲಸಗಳು ಒಂದಾದರೆ, ಇನ್ನೊಂದು ಕೆಲಸಗಾರನ ಖಾಸಗಿ ಜೀವನ ಮತ್ತು ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ಕಾರ್ಯಗಳು. ಮೊದಲನೆಯ ವರ್ಗದ ಕೆಲಸ ಕಾರ್ಯಗಳನ್ನು ನಿಯಂತ್ರಿಸುವ ಸಂಪೂರ್ಣ ಅಧಿಕಾರವು ಸರಕಾರಕ್ಕಿರಬೇಕು, ಎರಡನೆಯ ವಿಧದವುಗಳ ಮೇಲೆ ಸಮಾಜಕ್ಕೆ ಯಾವುದೇ ಪ್ರಕಾರದ ನಿಯಂತ್ರಣವಿರಲೇ ಬಾರದು ಎಂದು ಮಿಲ್ಲನ ಅಭಿಪ್ರಾಯವಾಗಿದೆ. “ಸ್ವಾತಂತ್ರ್ಯ’ ಎಂಬ ತನ್ನ ಪುಸ್ತಕದ ಬಹುದೊಡ್ಡ ಭಾಗವೊಂದು ವ್ಯಕ್ತಿಯ ವಿಚಾರ ಮತ್ತು ವಿಶ್ವಾಸಗಳಲ್ಲಿ ರಾಜ್ಯದ ಮೂಲಕ ಯಾವುದೇ ವಿಧದ ಹಸ್ತಕ್ಷೇಪ ನಡೆಸಬಾರದು ಮತ್ತು ಧರ್ಮಸಂಸ್ಥೆಗಳು, ಕೂಲಿಗಾರ ಸಂಘಗಳು ಮೊದಲಾದ ಸಂಸ್ಥೆಗಳಿಗೆ ಇಂತಹ ಸಂಘ ಸಂಸ್ಥೆಗಳಿಂದ ವ್ಯಕ್ತಿಯ ಸ್ವತಂತ್ರ ವಿಚಾರಗಳಿಗೆ ಭಂಗ ತಂದೊಡ್ಡಿದರೆ, ಮನ್ನಣೆ ದೊರೆಯಬಾರದು ಎಂಬ ವಿಚಾರವನ್ನು ಪ್ರತಿಪಾದಿಸುವ ಸಲುವಾಗಿಯೇ ಮೀಸಲಾಗಿಟ್ಟಿದೆ. ಬೇರೆ ಬೇರೆ ವಿಚಾರಗಳನ್ನು ಅಬಾಧಿತರೂಪದಲ್ಲಿ ಜನತೆಯು ಮುಂದಿರಿಸಬೇಕು; ಅವುಗಳನ್ನು ಮುಕ್ತದ್ವಾರದಲ್ಲಿ ವಿಚಾರ ವಿಮರ್ಶಿಸಬೇಕು; ಆಗ ಮಾತ್ರ ಸತ್ಯಶೋಧನೆ ನಡೆಯುವುದು ಎಂದು ಮಿಲ್ಲನ ಖಚಿತಾಭಿಪ್ರಾಯವಿತ್ತು.

ಈ ಪ್ರಕಾರದ ಮಾನವೀಯ ಕಾರ್ಯ ವಿಭಜನೆಯಲ್ಲಿ ಕೆಲವೊಂದು ವಿವಾದಗಳು ತಲೆದೋರುತ್ತ ಬಂದಿವೆ. ವೈಯಕ್ತಿಕ ಕಾರ್ಯಗಳು ಯಾವುವು, ಯಾವುವಲ್ಲ—ಎಂಬುದನ್ನು ನಾವು ಹೇಗೆ ನಿಶ್ಚಯಿಸಬಹುದು? ಈ ವಿಷಯದಲ್ಲಿ ಮಿಲ್ಲನಿಗಿಂತ ಪೇನನು ಸತ್ಯಕ್ಕೆ ನಿಕಟನಾಗಿದ್ದನು. ‘ಮತ ಭೇದವಿರುವ ಒಬ್ಬನೇ ವ್ಯಕ್ತಿಯ ಬಾಯನ್ನು ಮುಚ್ಚುವ ಅಧಿಕಾರ ಸಂಪೂರ್ಣ ಮಾನವ ಸಮಾಜಕ್ಕಿಲ್ಲ’ ಎಂದು ಮಿಲ್ ಹೇಳಿದ್ದನು. ವಿಚಾರವೇನೋ ಭವ್ಯವಾಗಿದೆ; ಆದರೆ, ಈ ಮಾತಿನಲ್ಲಿ ಅಪಥ್ಯವೂ ಹುದುಗಿದೆಯೆನಿಸುವುದಿಲ್ಲವೆ? ಮತಭೇದವಿರುವವನ ಬಾಯಿ ಮುಚ್ಚಿಸುವುದೇ ಉಚಿತವೆಂದೆನಿಸುವ ಕೆಲವೊಂದು ಸಂದರ್ಭಗಳನ್ನು ನಾವು ಕಾಣುವುದಿಲ್ಲವೆ? ವಿಚಾರಗಳನ್ನು ದಮನಿಸುವುದು ಬಹುಮತದಿಂದ ಅಸಾಧ್ಯ; ಅಲ್ಪ ಮತದಿಂದಲೇ ಸಂಭವನೀಯವಾಗಬಹುದು.

ಇನ್ನೊಂದು ದೃಷ್ಟಿಯಿಂದಲೂ ಮಿಲ್ಲನ ವಿಚಾರಗಳು ಹಳೆಯ ಕಾಲದವುಗಳಾಗಿವೆ. ಮಿಲ್ಲನು ತನ್ನ ಎಲ್ಲ ಗ್ರಂಥಗಳಲ್ಲಿ ವ್ಯಕ್ತಿ ಮತ್ತು ಸಮಾಜಗಳೆಂಬ ಎರಡೇ ತತ್ವಗಳನ್ನು ಅಂಗೀಕರಿಸಿದ್ದಾನೆ. ಆದರೆ, ಇವುಗಳಲ್ಲದೆ ಪ್ರತಿಯೊಂದು ರಾಷ್ಟ್ರಕ್ಕೂ ಒಂದೊಂದು ಸಂಸ್ಕೃತಿಯಿದೆ; ಅದರ ಸದಸ ನಾಗರಿಕರ ವಿಚಾರ ವ್ಯವಹಾರಗಳು ಪರಸ್ಪರ ಬೇರೆಯಾಗಿವೆ ಎಂಬುದನ್ನು ನಾವು ನೋಡುತ್ತೇವೆ. ವರ್ಗ, ಶಿಕ್ಷಣ, ಆಯು, ಧರ್ಮ, ಸಂಪತ್ತು ಮೊದಲಾದುವುಗಳಿಂದ ನಾಗರಿಕನ ವಿಚಾರ ವೈವಿಧ್ಯ, ವಿಚಾರ ವೈಷಮ್ಯಗಳು ತಲೆದೋರುತ್ತವೆ. ಸುಸಂಘಟಿತ ಮತ್ತು ಸುಸಂಶ್ಲಿಷ್ಟ ಸಮಾಜದಲ್ಲಾದರೂ ವರ್ಗೀಯ ಹಾಗೂ ಭೌಗೋಲಿಕ ತತ್ವಗಳಿಂದಾಗಿ ವ್ಯಕ್ತಿ-ವ್ಯಕ್ತಿಗಳ ಆಚಾರ—ವಿಚಾರಗಳಲ್ಲಿ ಅಂತರವು ಎದ್ದು ತೋರುತ್ತದೆ.

ಇವೆಲ್ಲ ಭಿನ್ನಾಭಿಪ್ರಾಯದ ವಿಷಯಗಳನ್ನು ನಾವು ಬಿಟ್ಟುಕೊಟ್ಟರೆ, ಮಿಲ್ಲನ ಗ್ರಂಥಗಳಲ್ಲಿ ಸಮಾಜವನ್ನು ಕುಶಲಿಯಾಗಿಡುವುದಕ್ಕೆ ಆವಶ್ಯಕವಾದ ಎರಡು ತತ್ತ್ವಗಳ ಪ್ರತಿಪಾದನೆಯನ್ನು ನಾವು ಕಾಣುತ್ತೇವೆ. ಮೊದಲನೆಯದಾಗಿ, ಸಮಾಜದಲ್ಲಿ ನಿರ್ಭಯತಾಪೂರ್ವಕವಾಗಿ ತಮ್ಮ ಸ್ವತಂತ್ರ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಕೆಲವಾದರೂ ವ್ಯಕ್ತಿಗಳಿರಬೇಕೆಂದು ಮಿಲ್ ಅಭಿಪ್ರಾಯಪಡುತ್ತಾನೆ. ಮತ್ತು, ಎರಡನೆಯದಾಗಿ, ಜನರು ಈ ನಿರ್ಭೀತ ವಿಚಾರಕರ ವಿಚಾರಧಾರೆಯನ್ನು ಒಪ್ಪಲಿ, ಒಪ್ಪದಿರಲಿ, ಈ ವಿಚಾರಗಳ ಪ್ರಕಾಶನ ಮತ್ತು ಪ್ರಚಾರ ಕಾರ್ಯಗಳಿಗೆ ಯಾವುದೇ ಪ್ರತಿಬಂಧವಿರಬಾರದು ಎಂದು ಆತ ಹೇಳುತ್ತಾನೆ.

ಇದರಿಂದ ನಮಗೆ ಮಿಲ್ಲನ ಅಂತರ್ದೃಷ್ಟಿಯ ಪರಿಚಯವಾಗುವುದು. ನಮಗೆ ಘಾತಕವೆನಿಸುವುದಾದರೂ ಎಲ್ಲ ವಿಧದ ವಿಚಾರಗಳನ್ನು ನಾವು ಸಹಿಸಿಕೊಳ್ಳಬೇಕು ಎಂಬುದನ್ನು ಮಿಲ್ಲನಲ್ಲದೆ ಬೇರಾವ ವಿಚಾರಕನೂ ಸ್ಪಷ್ಟವಾದ ಮಾತುಗಳಿಂದ ಹೇಳಿರುವುದಿಲ್ಲ. ಮಿಲ್ಲನು ನೈತಿಕತಾವಾದಿಯಾಗಿದ್ದನೇನೋ ನಿಜವೇ; ಆದರೆ, ಬೇರೆಯವರ ಜೂಜಾಡುವ ಸ್ವಾತಂತ್ರ್ಯವನ್ನಾತ ಅಪಹರಿಸಲು ಸಿದ್ಧನಿಲ್ಲ. ಯುಕ್ತಿ ಮತ್ತು ತರ್ಕಗಳೆಂಡೇ ವಿಚಾರ ಪರಿವರ್ತನೆಯ ಸಾಧನಗಳಾಗಬೇಕು; ನಿಸ್ಸಹಾಯಕ ಪರಿಸ್ಥಿತಿಯಲ್ಲಿ ಅಂತಿಮ ಉಪಾಯವಾಗಿ ಮಾತ್ರ ಕಾನೂನಿನ ಬಲಪ್ರಯೋಗವನ್ನು ಸಾಧನವಾಗಿ ಅವಲಂಬಿಸಬೇಕು. ಅಲ್ಲಕಲ್ಲೋಲಗೊಳಿಸುತ್ತ ಹಲವಾರು ವರ್ಷಗಳು ಗತಿಸುತ್ತ ಬಂದಿವೆಯಾದರೂ ಅಂತಃಕರಣವನ್ನು ಪ್ರಭಾವಿತಗೊಳಿಸುವುದು ಮತ್ತು ತನ್ಮೂಲಕ ಅಭಿಪ್ರಾಯಗಳನ್ನು ಪರಿವರ್ತಿಸಗೊಳಿಸುವುದು ಪ್ರಶಸ್ತ ಮಾರ್ಗವಾಗಿದೆ.

ರಾಷ್ಟ್ರದ ಉಜ್ವಲ ಭವಿಷ್ಯ ಮತ್ತು ಮುಂದಿನ ಪೀಳಿಗೆಗಳ ಹಿತದ ಹೆಸರಿನಲ್ಲಿ ಸ್ವಾತಂತ್ರ್ಯದ ಮೇಲೆ ಬಂಧನ ಹೇರುವುದು ಸಾಮ್ಯವಾದಿಗಳ ರೀತಿನೀತಿಯಾಗಿದೆ. ಆದರೆ, ನಮ್ಮ ಮುಂದಿರುವ ತಾತ್ಕಾಲಿಕ ಪ್ರಶ್ನೆಯೆಂದರೆ, ನಾವು ಸ್ವಾತಂತ್ರ್ಯವನ್ನುಳಿಸಿಕೊಂಡು ನಮ್ಮ ಅರ್ಥತಂತ್ರವನ್ನು ಸಾಮ್ಯವಾದೀ ಅರ್ಥತಂತ್ರದಷ್ಟು ಅಥವಾ ಮತ್ತೂ ಹೆಚ್ಚು ‘ಶ್ರಮ’ವೆನ್ನಿಸಿಕೊಳ್ಳಬೇಕೆ? ಅಥವಾ ನಮ್ಮ ಆಂತರಿಕ ಸ್ವಾತಂತ್ರ್ಯ ರಕ್ಷಣೆಯಲ್ಲಿ ಅತ್ಯಂತ ತತ್ಪರರಾಗಿ ಸ್ವಾತಂತ್ರ್ಯ ಪ್ರೇಮಿಗಳಾಗಿದ್ದ ಯೂನಾನ್ ಸುಸಂಘಟಿತ ರೋಮಿನೆದುರು ಪರಾಜಿತವಾದಂತೆ ನಾವೂ ಅರ್ಥತಂತ್ರದಲ್ಲಿ ಅಪಜಯಗಳಿಸಬೇಕೆ? ಎಂಬುದು. ಈ ಪ್ರಶ್ನೆಗೆ ಉತ್ತರವೀಯುವುದು ಅಷ್ಟು ಸುಲಭವೆನಿಸುವುದೆ?

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ನ್ಮನಿಗೆ ಓಲೆ– ೯

ಪದ್ಯಗದ್ಯಗಳ ಸಾಪೇಕ್ಷಿಕ ಮಹತ್ವ

ಪ್ರಾಸ ಜೋಡಿಸುವುದು ಪದ್ಯವಾಗದು, ಶಬ್ದ ಜೋಡಣೆ ಗದ್ಯವೆನಿಸದು. ಪದ್ಯ ಗದ್ಯಗಳೆರಡರಲ್ಲೂ ಭಾವವ್ಯಂಜಕ ಶಕ್ತಿಯಿರದೆ ಹೋದರೆ, ಅವು ನೀರಸವಾಗುವುದು.

ಸಾಹಿತ್ಯವನ್ನು ಮುಖ್ಯವಾಗಿ ಇಬ್ಬಗೆಲ್ಲಿ ವಿಂಗಡಿಸಬಹುದು. ಮೊದಲನೆದು ಪದ್ಯಾತ್ಮಕವಾದರೆ, ಎರಡನೆಯ ಗದ್ಯಾತ್ಮಕ. ಜನ ಸಾಮಾನ್ಯರು ಆವ ಭಾಷೆಯಲ್ಲಿ ಬರೆಯಲ್ಪಟ್ಟ ವಾಕ್ಯಲ್ಲಿ ಯಾವುದೇ ಪ್ರಮಾಣವಿಲ್ಲದ, ಪದವಾ ವಾಕ್ಯಗಳ ನಿರ್ಧಾರಿತ ಕ್ರಮವಿ ಲೇಖವನ್ನು ಗದ್ಯವೆಂದೂ ವರ್ಣಗ ಯಾವುದಾದರೊಂದು ನಿಯಮಿತ ಕ್ರದಲ್ಲಿದ್ದು ಒಂದು ವಿಶಿಷ್ಟ ರೂಪದಲ್ಲಿ ಹ ಬರುವುದನ್ನು ಪದ್ಯವೆಂದೂ ಹೇಳುರೆ. ಸಾಮಾನ್ಯವಾಗಿ ಎಲ್ಲ ದೇಶಗಳ ಮುಖ್ಯತಃ ಭಾರತದಲ್ಲಿ ಪದ್ಯರೂಪದಲ್ಲೇ ಮೊದ ಮೊದಲಿಗೆ ಸಾಹಿತ್ಯ ಕೃತಿ ಹುಟ್ಟಿಕೊಂಡುವು. ಮೊತ್ತ ಮೊದ ಹೃದಯದ ಹರ್ಷೋಲ್ಲಾಸ ಅಥವಾ ಶೋಕೋದ್ವೇಗಗಳು ಸಂಗೀತಮಯವೆನಿ ಭಾಷೆಯಲ್ಲಿ ಪ್ರಸ್ಫುಟಿತವಾಗುತ್ತಿದ್ದು ವೇದಗಳನ್ನುಳಿದ ಭಾರತ ವರ್ಷದ ವ್ಯಗಳ ಉದಯವು ಶೋಕೋದ್ವೇಗ ಕಾರಣದಿಂದಲೇ ಆಯಿತು. ಕ್ರೌಂಚ ಥುನದಲ್ಲಿ ಒಂದು ಮೃತವಾದುದನ್ನು ಡ ಮಹರ್ಷಿ ವಾಲ್ಮೀಕಿಯು ತನ್ನ ಹೃದಂತರಾಳದಲ್ಲಿ ಹುದುಗಿದ್ದ ಭಾವವನ್ನು

ಮಾ ನಿಷಾದ ಪ್ರತಿಷ್ಠಾಂ
ತ್ವಮಗಮಃ ಶಾಶ್ವತೀಃ ಸಮಾಃ
ಯತ್ಕ್ರೌಂಚ ಮಿಥುನಾದೇಕಂ
ಅವಧೀಃ ಕಾಮಮೋಹಿತಂ ॥

ಬುದಾಗಿ ಪದ್ಯರೂಪದಲ್ಲಿಯೇ ಉದ್ಗ ಬಿಟ್ಟನು.

ಮಾನವನ ಮಾನಸಿಕ ವಿಕಾಸವಾಗುಗ, ಭಾವೋದಯವು ಮೊದಲಿಗಾಗುದೆ; ಅದರನಂತರ ವಿವೇಚನೆಯು ಹೊರಡುವುದು. ಇಂದು ಜೀವನದಲ್ಲಿನ ಏರುಪೇರುಗಳ ಪ್ರಾಬಲ್ಯದಿಂದಾಗಿ, ಭಾವಪ್ರಾಬಲ್ಯವು ಕಡಿಮೆಯಾಗುತ್ತ ಬರುತ್ತಿ. ಎಂದರೆ, ಹೊಟ್ಟೆ ಹೊರೆಯುವ ಚಿಂತೆ ಮೊದಲಿಗೆ, ಉಳಿದವು ಆ ಮೇಲೆ. ಪ್ರತಿಯೊಂದು ವಸ್ತುವಿನ ಬೆಲೆಯೂ ಇಂದು ರೂಪಾಯಿ ನಯೇ ಪೈಸೆಗಳಲ್ಲಿ ಅಂಕಿತವಾಗಿದೆ. ಭಾವ ತುಷ್ಟಿಗಾಗಿ ಮತ್ತು ಮನ ಮರ್ಯಾದೆಯ ರಕ್ಷಣೆಗಾಗಿ ಇಂ ಜನರು ಜೀವನವನ್ನು ಮುಡಿಡುವಷ್ಟು ಮುಂದುವರಿಯುವುದಿಲ್ಲ. ದಯಿಸ ಭಾವಗಳತ್ತ ಗಮನಹರಿಸುಷ್ಟು ಅವಕಾಶವೂ ಇಂದು ದೊರೆಯುಲ್ಲ. ಆದುದರಿಂದ ಇಂದು ಪದ್ಯದ ಸ್ಥಾನವನ್ನು ಗದ್ಯವು ಆಪಹರಿಸಿ ತನ್ನ ಆಧಿಪತ್ಯವನ್ನು ಚಲಾಯಿಸತೊಡಗಿದೆ.

ಇಂದಿನ ಪರಿಸ್ಥಿತಿಯಲ್ಲಿ ಮತ್ತೊಂದು ಮಹದಂತರ ನಮಗೆ ಗೋಚರಿಸುತ್ತಿ. ಹಿಂದಿನ ಕಾಲದಲ್ಲಿ ಲೇಖನ ಸಾಮಗ್ರಿಗಳ ಅಭಾವವಿದ್ದುದರಿಂದ ಮತ್ತು ಮುದ್ರಣಾಲಯಗಳು ಅಮೂರ್ತವಾಗಿದ್ದುದರಿಂದ, ಸಾಹಿತ್ಯವು ಕಂಠಸ್ಥವಾಗಿಯೇ ಉಳಿದು ಬಂದಿತ್ತು. ಭಾರತದಲ್ಲಂತೂ ಸೂತ್ರಗಳ ರೂಪದಲ್ಲಿ ಛಂದೋಬದ್ಧ ಪದ್ಯಗಳ ರೂಪದಲ್ಲಿ ಅವನ್ನು ರಚಿಸಿ ಕಂಠಸ್ಥ ಮಾಡುವ ಕ್ರಮ ಅನಾದಿ ಕಾಲದಿಂದಲೂ ಬಂದುದಾಗಿದೆ. ಜ್ಯೋತಿಷ, ವೈದ್ಯಕ, ದರ್ಶನ, ಇತಿಹಾಸ, ಮೊದಲಾದ ಗ್ರಂಥಗಳೆಲ್ಲವೂ ಪದ್ಯರೂಪದಲ್ಲಿಯೇ ಲಿಖಿಸಲ್ಪಡುತ್ತಿದ್ದುವು. ವರ್ಣಗಳ ನಿಯಮಿತ ಆವೃತ್ತಿ, ಮತ್ತು ಶಬ್ದಗಳ ಗತಿಮಯ ಪ್ರವಾಹಗಳಿಂದಾಗಿ ಅವನ್ನು ಕಂಠಪಾಠ ಮಾಡಿಕೊಳ್ಳುವುದು ಸುಲಭವಾಗಿತ್ತು. ಪದ್ಯಗಳಲ್ಲಿ ಶಬ್ದಗಳು ಅವಿಕಲರೂಪದಲ್ಲಿ ರಕ್ಷಿಸಲ್ಪಡುತ್ತಿದ್ದುವು. ಇವುಗಳಲ್ಲಿನ ಶಬ್ದಗಳು ಇರುವಲ್ಲಿಯೇ ಇರಬೇಕೇ ಹೊರತು ಅವು ಸ್ಥಾನಾಂತರಗೊಂಡರೆ ಅದರ ಗತಿಯು ಕೆಡುವುದು. ಕೆಲವೆಡೆ ಆ ಶಬ್ದದ ಪರ್ಯಾಯ ಪದಗಳು ಪ್ರಯೋಗಿಸಲ್ಪಟ್ಟರೆ, ಛಂದಸ್ಸು ಕೆಡದೆ ಹೋಗಬಹುದಾದರೂ ಸಾಮಾನ್ಯವಾಗಿ ಅವುಗಳಿಂದಲೂ ಉದ್ದೇಶ ಭಂಗವಾಗದಿರದು. ಪ್ರಾಚೀನ ಕಾಲದಲ್ಲಿನ ಈ ಕಂಠಸ್ಥ ಪದ್ಧತಿಯಿಂದ ಜನರಿಗೆ ಪಠನ–ಪಾಠನ; ವಾದ–ವಿವಾದಗಳಲ್ಲಿ ವಿಶೇಷ ಸಹಾಯ ಲಭಿಸುತ್ತಿತ್ತು. ಮತ್ತು ತಮ್ಮ ಜ್ಞಾನ—ಅನುಭವಗಳ ಬಗ್ಗೆ ವಿಶೇಷ ವಿಶ್ವಾಸವನ್ನಿಡುವುದೂ ಸಾಧ್ಯವೆನಿಸುತ್ತಿತ್ತು. ಆದರೆ, ಪುಸ್ತಕಗಳು ನಮ್ಮ ಅವಶ್ಯಕತೆಗಳಿಗನುಸಾರವಾಗಿ ಉಪಯೋಗಿಸಲು ಲಭ್ಯವಿಲ್ಲದಿರುವ ಸಂದರ್ಭಗಳೇ ಹೆಚ್ಚಿರುವುದರಿಂದ, ಪುಸ್ತಕದ ವಿದ್ಯೆಗೆ ಅಷ್ಟೊಂದು ಮಹತ್ವವಿರುತ್ತಿದ್ದಿಲ್ಲ. ಇದನ್ನೇ

ಪುಸ್ತಕ ಸ್ಥಾತು ಯಾ ವಿದ್ಯಾ
ಪರಹಸ್ತೇ ಗತಂ ಧನಂ
ಕಾರ್ಯಕಾಲೇ ಸಮುತ್ಪನ್ನೇ
ನ ಸಾ ವಿದ್ಯಾ ನ ತದ್ಧನಮ್ ॥

ಎಂಬ ಶ್ಲೋಕದಲ್ಲಿ ಉಲ್ಲೇಖಿಸಿದ್ದಾರೆ.

ಆದರೆ, ಇಂದು ಕಾಲ ಬದಲಾಗಿದೆ. ಕೇವಲ ಪದ್ಯಕ್ಕಾಗಿ ಪದ್ಯವನ್ನು ಬರೆಯುವ ಆವಶ್ಯಕತೆಯಿಂದುಳಿದಿಲ್ಲ. ಇಂದಿನ ಯುಗವನ್ನು 'ಗದ್ಯಯುಗ'ವೆಂಬುದಾಗಿ ಕರೆಯಲಾಗುವುದಾದರೂ ಗದ್ಯ ಮತ್ತು ಪದ್ಯಗಳೆರಡೂ ನಿರಾತಂಕವಾಗಿ ಮುಂದೆ ಸಾಗುತ್ತಿವೆ. ಕೇವಲ ಗದ್ಯ ಇಲ್ಲವೇ ಬರೇ ಪದ್ಯ ಮಾತ್ರ ಬೇಕೆಂದರೆ ಅದು ಅನುಚಿತವೆನಿಸುವುದು; ಏಕೆಂದರೆ, ಎರಡು ಪ್ರಕಾರಗಳಲ್ಲಿಯೂ ತಮ್ಮದೇ ಆದ ವೈಶಿಷ್ಟ್ಯಗಳು ಇವೆಯೆಂಬುದನ್ನು ನಾವು ಮರೆಯುವಂತಿಲ್ಲ. ಎರಡಕ್ಕೂ ಸಮಾನ ಮಹತ್ತಿಕೆಯಿರುವುದು

ಗದ್ಯವು ಯುಕ್ತಿವಾದ ಮತ್ತು ವ್ಯಾಪಾರೀ ಭಾಷೆಯಾಗಿದೆ. ಗದ್ಯದಲ್ಲಿಯೂ ಭಾಷಾಸೌಷ್ಠವದತ್ತ ಲಕ್ಷ್ಯ ವಿಡುವರಾದರೂ ಭಾಷೆಯ ವಿಚಾರದ ಆವಶ್ಯಕತೆಯನ್ನು ಅನುಲಕ್ಷಿಸಿಕೊಂಡಿರುವುದೇ ಹೊರತು ಭಾಷೆಗೋಸ್ಕರ ವಿಚಾರಗಳನ್ನು ನಾವು ಸಂಕುಚಿತಗೊಳಿಸುವ ಅಗತ್ಯವಿರುವುದಿಲ್ಲ. ಗದ್ಯದಲ್ಲಿ ಭಾಷೆಗೆ ಮಿತಿಯಿರುವುದಿಲ್ಲ; ವ್ಯಕ್ತಪಡಿಸುವ ವಿಚಾರಗಳನ್ನು ಅವುಗಳ ಆವಶ್ಯಕತೆಗಳಿಗನುಸಾರವಾಗಿ ಭಾಷೆಯಲ್ಲಿ ಸಂಕೋಚ ಅಥವಾ ವಿಕೋಚಗಳು ಆಗುವುದು ಸಾಧ್ಯ. ಆಕಾರಕ್ಕಾಗಿ ಶಬ್ದರೂಪಗಳನ್ನು ಬದಲಿಸಬೇಕಾಗಿಲ್ಲ; ಉತ್ತಮ ಮತ್ತು ಸುಯೋಗ್ಯವೆಂದು ತಾನು ಚುನಾಯಿಸಿದ ಪದಗಳನ್ನು ಹೊಂದಿಕೊಳ್ಳುವುದಿಲ್ಲವೆಂಬ ಏಕಕಾರಣದಿಂದ ಪರಿತ್ಯಜಿಸಬೇಕಾದ ಸಂಭವವೂ ಬರುವುದಿಲ್ಲ. ಭಾವಗಳ ಅಭಿವ್ಯಕ್ತಿಗಾಗಿ ನಮಗೆ ಉಚಿತವೆನಿಸಿದಂತೆ ಪದಗಳನ್ನು ಬಳಸಬಲ್ಲೆವು.

ಮೇಲೆ ಹೇಳಿದವುಗಳಲ್ಲದೇ ಗದ್ಯಕ್ಕೆ ಉಪಯುಕ್ತವಾದ ಕೆಲವೊಂದು ವಿಷಯಗಳಿವೆ. ಭಾಷೆಯು ಭಾವಗಳಿಗೆ ಉಡುಗೆಯಾಗಿದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಒಂದೇ ವಿಧದ ಉಡುಗೆ ಉಪಯುಕ್ತವೆನಿಸಲಾರದು. ಆಟದ ಸಮಯ ತೊಡುವ ಬಟ್ಟೆ ಊಟದ ವೇಳೆ ಸಮಂಜಸವೆನಿಸದು ತಾನೆ? ಮನುಷ್ಯನ ಕಾರ್ಯ ಮತ್ತು ಉದ್ಯೋಗಗಳು ಪರಿವರ್ತನೆಗೊಂಡಂತೆ ಆತನ ಪೋಷಾಕಿನಲ್ಲಿಯೂ ಬದಲಾವಣೆಯಾಗುತ್ತಿರುವುದು. ನ್ಯಾಯಾಧೀಶನ ಬಟ್ಟೆಬರೆಗಳನ್ನು ತೊಟ್ಟುಕೊಂಡು ಕಮ್ಮಾರನು ಕಾದ ಕಬ್ಬಿಣವನ್ನು ಬಡಿಯ ತೊಡಗಿದರೆ ಅಪಹಾಸ್ಯವೆನಿಸೀತು. ಹಾಗೆಯೇ ಕಮ್ಮಾರನ ಉಡುಗೆ ನ್ಯಾಯಾಧೀಶನಿಗೂ ಸರಿ ಹೊಂದಲಾರದು. ನಾವಿಕನ ಬಟ್ಟೆ ಪ್ರೊಫೆಸರಿಗೂ, ಪ್ರೊಫೆಸರನ ತೊಡುಗೆ ನಾವಿಕನಿಗೂ ಶೋಭೆ ತರುವುದಿಲ್ಲ. ಅಂತೆಯೇ ಬೇರೆ ಬೇರೆ ಕಾರ್ಯಗಳಿಗೆ ಗದ್ಯ ಮತ್ತು ಪದ್ಯಗಳ ಭಾಷೆಯನ್ನು ಪ್ರಯೋಗಿಸುತ್ತಾರೆ. ಪದ್ಯಗಳಲ್ಲಿ ಶುಷ್ಕನೀರಸ ವಿಷಯಗಳನ್ನು ವಿವರಿಸುವುದು ಸರಿಯೆನಿಸುವುದಿಲ್ಲ; ಪ್ರಾಸಗಳನ್ನು ಹೊಂದಿಸುವುದೇ ಪದ್ಯವಲ್ಲ. ಸಾಧಾರಣ ವಿಷಯಗಳನ್ನು ಪದ್ಯರೂಪದಲ್ಲಿ ಬರೆಯುವುದಾಗಲೀ ಹೇಳುವುದಾಗಲೀ ಹಾಸ್ಯಾಸ್ಪದವೆನಿಸುವುದು. ತನ್ನ ರಾಜ್ಯದಲ್ಲಿ ಎಲ್ಲರೂ ಪದ್ಯರೂಪದಲ್ಲೇ ಮಾತಾಡಬೇಕೆಂದು ಒಬ್ಬ ರಾಜ ಆಜ್ಞಾಪಿಸಿದನಂತೆ ಪ್ರಜಾಜನರಿಗೆ ಇದರಿಂದಾದ ಹಾನಿಯನ್ನೂ ಕಷ್ಟವನ್ನೂ ಆತ ಗಮನಿಸಲಿಲ್ಲವಂತೆ. ಒಂದು ದಿನ ಅರಮನೆಯ ಲಾಯಕ್ಕೆ ಬೆಂಕಿಬಿದ್ದಿತಂತೆ. ಈ ವರ್ತಮಾನವನ್ನು ತಂದ ಚಾರಕ ಪದ್ಯರೂಪದಲ್ಲಿ ಅದನ್ನು ತಿಳಿಸುವುದಕ್ಕೆ ಪ್ರಯತ್ನಿಸುತ್ತಿದ್ದಂತೆಯೇ ಲಾಯ ಸುಟ್ಟು ಬೂದಿಯಾಗಿ ಹೋಗಿತ್ತಂತೆ. ಹಾಗೆಯೇ "ಕ್ಷುಲ್ಲಕ" ಸಂಗತಿಗಳನ್ನು ಪದ್ಯರೂಪದಲ್ಲಿ ಕಥಿಸುವುದೂ ಲಿಖಿಸುವುದೂ ಅಸಮಂಜಸವೇ ಸರಿ.

ರಾಜಕೀಯ ಕ್ಷೇತ್ರದಲ್ಲಿ ಉತ್ತೇಜನವೀಯುವ ಎಡೆಗಳಲ್ಲಿ ಪದ್ಯವನ್ನು ಬಳಸಬಹುದು. ಆದರೆ, ಯಾವುದೇ ಒಂದು ವಿಷಯವನ್ನು ಪ್ರಮಾಣಿತಗೊಳಿಸುವಾಗ ಚಿತ್ರದ ಮೂಲಕ ಒಂದು ಗ್ರಾಮದ ನಕ್ಷೆಯನ್ನು ರಚಿಸುವಾಗ, ಯಾರಿಗಾದರೂ ಏನಾದರೂ ಶಿಕ್ಷೆಯನ್ನು ವಿಧಿಸುವ ಆಜ್ಞೆಯೀಯುವಾಗ ಪದ್ಯವನ್ನು ಬಳಸಿಕೊಂಡರೆ, ಅದು ಕುಚೋದ್ಯವೆನಿಸುವುದು. ಆದುದರಿಂದಲೇ ಇಂದು ನಾಟಕಗಳಲ್ಲಿ ಪದ್ಯಗಳ ಪ್ರಭಾವ ಇಳಿಮುಖವಾಗತೊಡಗಿದೆ. ಪದ್ಯವು ರಾಜ ಮತ್ತು ಮಂತ್ರಿಗಳ ಸ್ವಾಭಾವಿಕ ಭಾಷೆಯಾಗಿ ಇಂದು ಉಳಿದಿಲ್ಲ. ಸಭೆ ಸಮಾರಂಭಗಳಲ್ಲಿ ಇಂದು ಗದ್ಯವನ್ನೇ ಬಳಸುವರು; ಅವಶ್ಯವಿದ್ದಲ್ಲಿ ಪದ್ಯಗಳನ್ನು ಉದ್ಧರಿಸುವರು. ಪದ್ಯಕ್ಕಿಂತ ಗದ್ಯವೇ ನಿಶ್ಚಿತ ಭಾಷೆಯೆಂಬ ತಿಳುವಳಿಕೆಯಿರುವುದರಿಂದ ಕಾನೂನಿನ ಗ್ರಂಥಗಳೆಲ್ಲವೂ ಗದ್ಯರೂಪದಲ್ಲಿಯೇ ಲಿಖಿಸಲ್ಪಟ್ಟಿವೆ. ಇದರಲ್ಲಿ ಪ್ರಯುಕ್ತವಾದ ಪದಗಳು ವಿಚಾರಪೂರ್ವಕವಾಗಿ ಬರೆಯಲ್ಪಟ್ಟವೇ ಹೊರತು ಛಂದಸ್ಸಿನ ಗತಿ ಅಥವಾ ಲಯವನ್ನು ಹೊಂದಿಕೊಂಡಿರುವುದಿಲ್ಲ. ವ್ಯಾಕರಣದ ನಿಯಮಗಳನ್ನು ಗದ್ಯದಲ್ಲಿ ಸಂಪೂರ್ಣ ರೂಪದಲ್ಲಿ ಪಾಲಿಸಬಹುದು; ಪದ್ಯದಲ್ಲಿದು ಅಸಾಧ್ಯ. ಎಂದರೆ, ಪದ್ಯದಲ್ಲಿ ವ್ಯಾಕರಣದ ಕೊಲೆ ನಡೆಯುತ್ತಿದೆಯೆಂದು ಅರ್ಥವಲ್ಲ; ವ್ಯಾಕರಣ ವಿರುದ್ಧವಾಗಿರುವ ಪ್ರಯೋಗಗಳು 'ಚ್ಯುತ ಸಂಸ್ಕೃತಿ' ಎಂಬ ದೋಷಕ್ಕೆ ಗುರಿಯಾಗುತ್ತವೆ. ಆಧುನಿಕ ಕನ್ನಡ ಭಾಷೆಯಲ್ಲಿ ಸಂಸ್ಕೃತ ಪದಗಳನ್ನಾದರೂ ತದ್ಭವರೂಪಗಳನ್ನಾಗಿ ಪರಿವರ್ತಿಸುವ ಹವ್ಯಾಸ ವಿರಳವೆನಿಸಿದೆ.

ವೈಜ್ಞಾನಿಕ ವಿಷಯ ಪ್ರತಿಪಾದನೆಗೂ ಗದ್ಯವೇ ಉಪಯುಕ್ತವಾಗಿದೆ; ಏಕೆಂದರೆ ವಿಜ್ಞಾನದಲ್ಲಿ ಅಲಂಕಾರಗಳ ಆವಶ್ಯಕತೆಯಿರುವುದಿಲ್ಲ. ವೈಜ್ಞಾನಿಕನು ಧ್ರುವ ಸತ್ಯ—ಘೋರ ಕಠೋರ ಸತ್ಯವನ್ನು ಬಯಸುತ್ತಾನೆ. ಅವನಿಗೆ ಪ್ರಿಯ—ಅಪ್ರಿಯವೆಂಬ ಪ್ರಶ್ನೆಗಳ ಆಗತ್ಯವಿಲ್ಲ. ಆತನಿಗೆ ಒಂದು ಪದ ಹೆಚ್ಚೂ ಬೇಡ ಕಡಿಮೆಯೂ ಆಗದು. ವಿಜ್ಞಾನಕ್ಕೆ ಸರಸತೆಯಿಂದ ಶೋಭೆ ಬರುವುದಿಲ್ಲ. ಯಥಾರ್ಥತೆಯಿಂದ ಬರುತ್ತದೆ. ಯಥಾರ್ಥತೆಯನ್ನು ನಾವು ಪದ್ಯಕ್ಕಿಂತ ಗದ್ಯದಲ್ಲಿ ಉಳಿಸಿಕೊಳ್ಳುವುದು ಸಾಧ್ಯ ಮತ್ತು ಅದು ಬಹು ಸುಲಭವಾಗಿದೆ.

—ಗೋರಾ.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

ಅಪಹರಿಸುವ ಮನೋವೃತ್ತಿ ನಮ್ಮಲ್ಲಿರುವುದಾದರೆ, ಸಜ್ಜನರಿಂದ ಸದ್ಗುಣಗಳನ್ನೇ ಅಪಹರಿಸಬೇಕು.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೭-೭-'೬೦	೪೪

ಬೆಂಬಲವಿಲ್ಲದ ಸಂಪು

ಕೇಂದ್ರ ಸರಕಾರದ ಸುಮಾರು ೨೨ ಲಕ್ಷ ನೌಕರರು ಜುಲೈ ೧೧ರ ಮಧ್ಯರಾತ್ರೆಯಿಂದ ಸಂಪನ್ನು ಹೂಡುವ ದೃಢ ನಿರ್ಧಾರವನ್ನೇ ಮಾಡಿರುವುದರಿಂದ ದೇಶದಲ್ಲಿ ಗಂಭೀರ ಪರಿಸ್ಥಿತಿ ತಲೆದೋರಿದಂತಾಗಿದೆ. ನೌಕರ ಸಂಘಗಳ ಕ್ರಿಯಾ ಸಮಿತಿಯ ನಾಯಕರು ಮತ್ತು ಕೇಂದ್ರ ಸರಕಾರದ ಕೂಲಿಕಾಲ ಕ್ಷೇಮಮಂತ್ರಿ ಶ್ರೀ ಗುಲ್ಜಾರೀಲಾಲ ನಂದರ ನಡುವೆ ಮಾತುಕತೆ ನಡೆಯುವುದೆಂಬ ವಾರ್ತೆ ಬಂದಾಗ ಒಂದು ವಿಧದ ಸಮಾಧಾನಕ್ಕೆ ಪರಿಸ್ಥಿತಿ ಬಂದೀತೆಂದು ಆಶಿಸಿದ್ದರೆ, ಸಂಧಾನ ಪ್ರಯತ್ನ ಮುರಿಯಿತೆನ್ನುವಾಗ ಆಕಾಶವೇ ಕಳಚಿ ಬಿದ್ದಂತಾಯಿತು. ನೌಕರರು ಕನಿಷ್ಠ ವೇತನವು ಮಾಸಿಕ ರೂ. ೧೨೫ ಆಗಬೇಕು; ಪ್ರಥಮ ವೇತನಾ ಆಯೋಗವು ಸಿಫಾರಸು ಮಾಡಿದಂತೆ ತುಟ್ಟಿಭತ್ತೆ ಜೀವನ ಸೂಚಿಯನ್ನು ಹೊಂದಿಕೊಂಡಿರಬೇಕು ಎಂಬ ಮುಖ್ಯ ಬೇಡಿಕೆಗಳನ್ನು ಮುಂದಿಟ್ಟಿರುವರು. ಈ ಎರಡು ಬೇಡಿಕೆಗಳನ್ನು ಈಡೇರಿಸುವುದಾದರೆ, ಸರಕಾರವು ವಾರ್ಷಿಕ ರೂ. ೧೦೦ ಕೋಟಿಯನ್ನು ಹೆಚ್ಚಾಗಿ ವ್ಯಯಿಸಬೇಕಾಗುತ್ತದೆ ಎಂದು ತಿಳಿಯುತ್ತದೆ. ಇಷ್ಟೊಂದು ಅಧಿಕ ವೆಚ್ಚ ಮಾಡಲು ಆವಶ್ಯಕ ಸಂಪನ್ಮೂಲವೆಲ್ಲಿಂದ ಬರಬೇಕು ಎಂಬುದಕ್ಕೆ ಸರಿಯಾದ ಉತ್ತರವನ್ನು ನೌಕರರು ಕೊಡುವುದಿಲ್ಲ; ಇತರರು ಕೊಡುವುದೂ ಸಾಧ್ಯವಿಲ್ಲ.

ಸರಕಾರವು ದ್ವಿತೀಯ ವೇತನಾ ಆಯೋಗದ ಸಿಫಾರಸುಗಳನ್ನು ಹೊಂದಿಕೊಂಡು ನೌಕರರೊಡನೆ ಯಾವುದೇ ಒಪ್ಪಂದಕ್ಕೆ ಬರಲು ದ್ವಾರವನ್ನು ತೆರೆದಿಟ್ಟಿದೆ. ಈ ಆಯೋಗವು ಕನಿಷ್ಠ ವೇತನವನ್ನು ಮಾಸಿಕ ರೂ. ೮೦ ಎಂದು ನಿರ್ಧರಿಸಿದ್ದರೂ ಅದು ನೌಕರರಿಗೆ ಸ್ವೀಕೃತವಲ್ಲ. ಸಾಮಾನ್ಯವಾಗಿ, ಕೇಂದ್ರ ಸರಕಾರದ ನೌಕರರಷ್ಟು ವೇತನ ಪಡೆಯುವವರು ಭಾರತದಲ್ಲಿ ವಿರಳರೆಂದೇ ಹೇಳಬೇಕು. ಹಾಗಿರುವಾಗ, ಈಗತಾನೇ ಬಹು ಪರಿಶ್ರಮದಿಂದ ತಯಾರಿಸಿ ಪ್ರಕಟಿಸಿದ ದ್ವಿತೀಯ ವೇತನಾ ಆಯೋಗದ ವರದಿಯನ್ನು ಮೂಲೆಗೆ ತಳ್ಳಬೇಕೆಂಬರ್ಥದ ನೌಕರರ ವಾದವನ್ನು ಯಾರೂ ಒಪ್ಪುವಂತಿಲ್ಲ. ಮೊದಲೇ ಸರಕಾರಿ ನೌಕರರು ಜನತೆಯ ಕ್ರೂರ ದೃಷ್ಟಿಗೆ ಪಕ್ಕಾದವರು. ಇದಕ್ಕೆ ನೌಕರರ ದೋಷಗಳೂ ಕಾರಣವಿರಬಹುದು; ಅಥವಾ ಜನತೆಯೂ ನೌಕರರನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದಿರಬಹುದು. ಆದರೆ, ಒಂದು ಮಾತು ಮಾತ್ರ ಧ್ರುವಸತ್ಯ: ಅಧಿಕ ವೇತನವನ್ನು ಕೇಳಿ ಮುಂದಿಟ್ಟ ಈ ಸಂಪಿಗೆ ಸಾರ್ವಜನಿಕರ ಬೆಂಬಲವೂ ಸಹಾನುಭೂತಿಯೂ ಸರ್ವಥಾ ಲಭಿಸಲಾರದು. ಈ ನಿಯೋಜಿತ ಸಂಪು ಕಾರ್ಯರೂಪಕ್ಕಿಳಿದರೆ, ಭಾರತದ ೪೦ ಕೋಟಿ ಜನತೆಯು ೨೨ ಲಕ್ಷ ನೌಕರರು ತಮಗೆ ದ್ರೋಹವೆಸಗಿದಂತೆ ಎಂದು ತಿಳಿಯುತ್ತದೆ. ಸಾರ್ವಜನಿಕರ ಸಹಾನುಭೂತಿಯನ್ನು ಸಂಪೂರ್ಣವಾಗಿ ನೌಕರರು ಕಳೆದುಕೊಳ್ಳುತ್ತಾರೆ. ಜನತೆಯ ಬೆಂಬಲವಿಲ್ಲದ ಯಾವುದೇ ಕಾರ್ಯಚರಣೆಯೂ ಸಫಲವಾಗುವುದಿಲ್ಲವೆಂಬುದು ಅನುಭವವೇದ್ಯವೇ ಆಗಿದೆ. ದ್ವಿತೀಯ ವೇತನಾ ಆಯೋಗದ ವರದಿಯ ಪರಧಿಯೊಳಗೆ ಸಾಧ್ಯವೆನಿಸಿದಷ್ಟು ಸೌಲಭ್ಯಗಳನ್ನು ಪಡೆಯುವುದನ್ನು ಬಿಟ್ಟು ರೂ. ೧೨೫ರ ಸ್ವಪ್ನವನ್ನು ಈ ನೌಕರರು ಕಾಣುತಿದ್ದರೆ, ಅದು ಭಗ್ನವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಸಂಪು ನಡೆದುದೇ ಆದರೆ, ಅದನ್ನು ನಿಲ್ಲಿಸುವ ಬಗ್ಗೆ ಮತ್ತು ಎದುರಿಸುವ ಬಗ್ಗೆ ತ್ವರಿತ ಗತಿಯಲ್ಲಿ ಎಲ್ಲೆಲ್ಲೂ ವ್ಯವಸ್ಥೆಗಳು ನಡೆಯತೊಡಗಿವೆ. ಅವಶ್ಯವೆನಿಸಿದರೆ ಸ್ವಯಂಸೇವಕರನ್ನು ಸೇರಿಸಿಕೊಳ್ಳಲಾಗುವುದಲ್ಲದೇ ಸೇನೆಯನ್ನೂ ಕರೆಯುವ ಬಗ್ಗೆ ನಿರ್ಧಾರವಾಗಿರುತ್ತದೆ. ಈ ನೌಕರರ ಬೇಡಿಕೆಗಳು ಅನುಚಿತವೆನ್ನುವುದು ಸರಿಯಲ್ಲವಾದರೂ ಸದ್ಯದ ಪರಿಸ್ಥಿತಿಯಲ್ಲಿ ಅದು ಅಯೋಗ್ಯ ಮತ್ತು ಅಕಾಲಿಕವಾದುದಾಗಿದೆ. ಆದುದರಿಂದ ಕೇಂದ್ರ ನೌಕರರು ತಮ್ಮ ಹಿತಾಹಿತಗಳನ್ನು ಅವಶ್ಯ ಗಮನಿಸಿ, ಸಂಪು ನಡೆಯದಂತೆ ನೋಡಿಕೊಳ್ಳುವ ಅವಶ್ಯಕತೆಯಿದೆ. ಸಾರ್ವಜನಿಕರಾದರೂ ಬರಬಹುದಾದ ಗಂಡಾಂತರ ಪರಿಸ್ಥಿತಿಯನ್ನೆದುರಿಸಲು ಉತ್ಸಾಹದಿಂದಲೇ ಮುಂದೆ ಬರಬೇಕು. ದಾರಿತಪ್ಪಿದ ಈ ಕೇಂದ್ರ ನೌಕರರಿಗೆ ಅವಶ್ಯ ಬುದ್ಧಿ ಕಲಿಸಲೇಬೇಕು

ಕಲಂಕ ಕರ್ಚಿ ತೆಗೆಯಲಿ

ನೇಕಡಾ ೭೫ರಷ್ಟು ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುವ ಮೈಸೂರು ವಿಶ್ವವಿದ್ಯಾಲಯದಂತಹ ಬೇರೊಂದು ವಿಶ್ವವಿದ್ಯಾಲಯ ಪ್ರಾಯಃ ಭಾರತದಲ್ಲಿ ಅಂತೂ ಇಲ್ಲವೇ ಇಲ್ಲವೆನ್ನಬಹುದು. ಈ ಬಾರಿ ವಿಶ್ವವಿದ್ಯಾಲಯದ ಫಲಿತಾಂಶವನ್ನು ನೋಡುವಾಗ, ಅಳಬೇಕೋ ನಗಬೇಕೋ ಹೊಳೆಯುವುದಿಲ್ಲ. ಸಾವಿರಗಟ್ಟಲೆಯಲ್ಲಿ ಹಣವನ್ನು ನೀರಿನಂತೆ ಸುರಿದ ಮಕ್ಕಳ ಹೆತ್ತವರು ಈ ಬಗ್ಗೆ ದಿಗ್ಭ್ರಮೆಗೊಂಡರೆ ಅದು ಸ್ವಾಭಾವಿಕವೇ. ವಿಶ್ವವಿದ್ಯಾಲಯದ ಆಂತರಿಕ ವ್ಯವಹಾರದಲ್ಲಿ ಯಾರಾದರೂ ಹಸ್ತಕ್ಷೇಪ ಮಾಡಬಯಸಿದರೆ ಅದು ಅಸಂಭಧವಾಗಬಹುದಾದರೂ ತಮ್ಮ ಮಕ್ಕಳ ಭವಿಷ್ಯವು ಮಣ್ಣುಗೂಡಿರುವುದನ್ನು ಕಾಣುವಾಗ ಅವರು ವಿಮಂಚಿತರಾಗಲೇಬೇಕು. ವಿಶ್ವವಿದ್ಯಾಲಯವು ಪ್ರತೀಕಾರ ಮತ್ತು ಪಕ್ಷಪಾತ ನೀತಿಯನ್ನು ಅನುಸರಿಸಿದೆ ಎಂಬ ವಾದವು ಕೇಳಿ ಬರುವುದಾದರೂ ಅಪೆಸ್ಟರ ಮಟ್ಟಿಗೆ ನಿಜವೆಂದು ಹೇಳುವಂತಿಲ್ಲ. ಆದರೂ ಉತ್ತರ ಪತ್ರಗಳ ಪರಿಶೀಲನಾ ವ್ಯವಸ್ಥೆಯು ಉತ್ತಮವಾಗಿರಲಿಲ್ಲ ಎಂಬುದಕ್ಕೆ ಯೋಗ್ಯರೆಂದು ಹೇಳಲಾದ ಹಲವಾರು ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅನುತ್ತೀರ್ಣರಾದುದೇ ಸಾಕ್ಷಿಯಾಗಿದೆ. ಇಂತಹ ದೂರು ಹಲವೆಡೆಗಳಿಂದಲೂ ಕೇಳಿಬರುತ್ತಿರುವುದರಿಂದ ಈ ಒಂದು ಮಾತನ್ನು ಒಪ್ಪಬಹುದು. ವಿಶ್ವವಿದ್ಯಾನಿಲಯದ ನಿಯಂತ್ರಣ ಮಂಡಳಿಯು ಪರೀಕ್ಷಾ ಗುಣಗಳನ್ನು ಪುನರ್ಪರಿಶೀಲಿಸಿ, "ಗ್ರೇಸ್ ಮಾರ್ಕ್" ಕೊಡುವ ಕ್ರಮವೊಂದಿದ್ದು, ಅದನ್ನು ಈ ಬಾರಿ ಅನುಸರಿಸಲಾಗಿಲ್ಲವೆಂದು ತಿಳಿಯುತ್ತದೆ. ಮತ್ತು ಈಗ ಬಂದೊಗಿದ ದುರಂತಕ್ಕೆ ಇದೂ ಒಂದು ಕಾರಣವೆಂದು ಹೇಳಲಾಗುತ್ತಿದೆ. 'ಗ್ರೇಸ್ ಮಾರ್ಕ್'ಗಳನ್ನು ಕೊಡುವ ಪದ್ಧತಿಯು ಪ್ರೋತ್ಸಾಹನೀಯವೆಂದು ಹೇಳುವುದು ಸರಿಯೆನಿಸದಾದರೂ ಕೇವಲ ಬೆರಳೆಣಿಕೆಯ ಅಂಕಗಳ ಕೊರತೆಯಿಂದ ಹಲವಾರು ವಿದ್ಯಾರ್ಥಿಗಳ ಭವಿಷ್ಯವನ್ನು ಅಂಧಕಾರಮಯವಾಗಿಸಿ, ಅವರಲ್ಲಿ ನಿರುತ್ಸಾಹದ ಬೀಜ ಬಿತ್ತುವುದೂ ಸಮಂಜಸವೆನ್ನುವಂತಿಲ್ಲ. ಆದುದರಿಂದಲೇ ಹೆಚ್ಚಿನ ವಿಶ್ವವಿದ್ಯಾಲಯಗಳು ಈ ಒಂದು ರೂಢಿಯನ್ನಿಟ್ಟುಕೊಂಡು ಅದರಂತೆ ಕಾರ್ಯವೆಸಗುತ್ತಬರುತ್ತಿವೆ. ಮೈಸೂರು ವಿಶ್ವವಿದ್ಯಾಲಯವೂ ಹಿಂದಿನ ವರ್ಷದ ವರೆಗೆ ಈ ಪದ್ಧತಿಯನ್ನು ಅನುಸರಿಸಿದ್ದರೂ ಏಕಾಏಕಿಯಾಗಿ ಅದನ್ನು ಬಿಟ್ಟುಕೊಟ್ಟುದಕ್ಕೆ ಪ್ರಬಲ ಕಾರಣವಾವುದೂ ಗೋಚರಿಸುವುದಿಲ್ಲ. ಅಂತೂ ಪಾಠ್ಯಕ್ರಮದ ನಿಗುಪು, ಶಿಕ್ಷಣ ಮಾಧ್ಯಮದ ಕಾಯ್ಪು, ವಿದ್ಯಾರ್ಥಿಗಳ ಅನಭ್ಯಾಸ ಹೆತ್ತವರ ಅನಾಸಕ್ತಿ, ಪಾಠಪ್ರವಚನಗಳಲ್ಲಿ ಎಡತಾಕುವ ವಿಘ್ನವಿಡ್ಡೂರಗಳು—ಮೊದಲಾದ ಒಂದಲ್ಲ ಹಲವಾರು ಕಾರಣಗಳಿಂದ ಈ ಪ್ರಕಾರದ ಅನಾಹುತ ಸಂಭವಿಸಿತೆಂದು ಅನ್ನಬಹುದು. ಅಂತಹುದರಲ್ಲಿ ವಿಶ್ವವಿದ್ಯಾನಿಲಯವು ಏನು ಮಾಡಬೇಕು?—ಎಂಬ ಪ್ರಶ್ನೆಯೀಗ ಎದ್ದು ನಿಂತಿದೆ. ಈ ಅನಾಹುತದ ಹೊಣೆಯನ್ನು ಯಾರ ತಲೆಯ ಮೇಲೆ ಹೊರಿಸಬೇಕು? ಮುಂದಿನ ವ್ಯವಸ್ಥೆಯನ್ನು ಮಾಡುವ ವರೆಗೆ ಇಂದಿನ ಬಿಕ್ಕಟ್ಟನ್ನು ಬಿಡಿಸ ಹವಣಿಸಬೇಕಾಗಿದೆ. ವಿಶ್ವವಿದ್ಯಾಲಯದ ಮೇಲೆ ಆರೋಪವನ್ನು ಹೊರಿಸಿ, ಅದನ್ನೇ ವಿಚಾರಣೆಗೆ ಗುರಿಪಡಿಸಬೇಕೆಂದು ಹೇಳುವುದು ಪಾಷ್ಟ್ಯವಾದೀತು ಮತ್ತು ಇದರ ಪ್ರಭಾವವು ಇತರ ಶೈಕ್ಷಣಿಕ ಸಂಸ್ಥೆಗಳ ಮೇಲೂ ಬಿದ್ದು ಪರಿಣಾಮ ರಮಣೀಯತೆಗೆ ಭಂಗ ತಂದೀತು. ಆದುದರಿಂದ, ಸದ್ಯ ವಿಶ್ವವಿದ್ಯಾಲಯದ ಫಲಿತಾಂಶ ಇಷ್ಟೊಂದು ನಿಕೃಷ್ಟವಾಗಿ ಹೊರಬೀಳಲು ಕಾರಣವೇನೆಂದು ವಿಶ್ವವಿದ್ಯಾಲಯವೇ ಯೋಚಿಸಿ, ತಾನು ಮಾಡಿದುದೂ ಮಾಡುತ್ತಿರುವುದೂ ಎಲ್ಲಾ ಸರಿಯೆಂಬ ಅಹಂಕಾರವನ್ನು ಬಿಟ್ಟುಗೊಟ್ಟು, ವಿವೇಕವನ್ನು ಪ್ರದರ್ಶಿಸುವುದು ಅವಶ್ಯವಾಗಿದೆ. ಈಗ ಹೊರಪಟ್ಟಿರುವ ಈ ಫಲಿತಾಂಶವನ್ನು ಸದ್ವಿವೇಕಯುತವಾಗಿ ಪರಿಶೀಲಿಸಬೇಕಾಗಿದೆ ಎಂದು ಅನ್ನಬಹುದು. ಹಾಗೆ ಮಾಡಿದರೆ, ವಿಶ್ವವಿದ್ಯಾಲಯಕ್ಕೆ ಈಗ ತಟ್ಟಿದ, ತಟ್ಟುತ್ತಿರುವ, ಕಟ್ಟಲಿರುವ ಕಲಂಕವೂ ದೂರವಾಗಬಹುದು.

— —

ಅಲ್ಲಲ್ಲಿಯ ಸುದ್ದಿಸಾರ

ಯುನಿವರ್ಸಿಟಿಯು ಪುನರ್ವಿಮರ್ಶಿಸಬೇಕು— ತಾ. ೨೨-೬-೬೦ರಂದು ಮಾಜಿ ನಗರಾಧಿಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಮೈನ್ ಶಾಲೆಯಲ್ಲಿ ಜರಗಿ ಈ ಬಾರಿ ಮೈಸೂರು ಯುನಿವರ್ಸಿಟಿಯ ಪಿ. ಯು. ಸಿ. ಮತ್ತು ಡಿಗ್ರಿ ಪರೀಕ್ಷೆಗಳಲ್ಲಿಯ ಕಡಿಮೆ ಪರೀಕ್ಷಾ ಫಲಿತಾಂಶಕ್ಕಾಗಿ ವ್ಯಸನವನ್ನು ಸೂಚಿಸಲಾಯಿತು. ಶ್ರೀ ಎ. ಜೆ. ಅಲ್ಸೆಯವರು ಆರಂಭದಲ್ಲಿ ಸ್ವಾಗತಿಸಿ ಯುನಿವರ್ಸಿಟಿಯು ಪರೀಕ್ಷಾ ಪತ್ರಗಳ ತಿದ್ದಿಕೆಯಲ್ಲಿ ಮಾಡಿರಬಹುದಾದ ಅನ್ಯಾಯವನ್ನು ವಿವರಿಸಿ ಈ ಅನ್ಯಾಯದ ಪರಿಹಾರಕ್ಕಾಗಿ ಯೋಗ್ಯ ಪರಿಹಾರಕ್ರಮ ಕೈಕೊಳ್ಳಬೇಕೆಂದರು. ಬಳಿಕ ಜನಾಬ್ ರಫೀದ್ದೀನ್ ಸಾಹೇಬ್, ಡಾ| ಸಿ. ಜಿ. ಆಚಾರ್, ಶ್ರೀ ಪಿ. ಶೀನ ಶೆಟ್ಟಿ, ಶ್ರೀ ಎನ್. ವಿ. ಕಾಮತ್, ಶ್ರೀ ಕೃಷ್ಣ ಭಟ್ಟ, ಶ್ರೀ ಬಿ. ಎಸ್. ಲೂವಿಸ್ ಮೊದಲಾದವರು ಯುನಿವರ್ಸಿಟಿಯ ಅನುಚಿತ ಧೋರಣೆಯನ್ನು ಖಂಡಿಸಿ ಮಾತನಾಡಿದರು. ಅಧ್ಯಕ್ಷ ಶ್ರೀ ಕೆ. ಕೆ. ಪೈಗಳು ನಮ್ಮ ಜನತಾ ಪ್ರತಿನಿಧಿಗಳು ಇನ್ನಾದರೂ ಈ ಲೋಪದೋಷಗಳನ್ನು ಸರಿಪಡಿಸುವಂತಾಗಬೇಕೆಂದರು. ಕೊನೆಗೆ ಈ ಕುರಿತು ನಿರ್ಣಯವಾಗಿ ಯೋಗ್ಯ ಕ್ರಮ ಕೈಕೊಳ್ಳಲು ಶ್ರೀ ಕೆ. ಕೆ. ಪೈಗಳು ಅಧ್ಯಕ್ಷರಾಗುಳ್ಳ ಕ್ರಿಯಾ ಸಮಿತಿಯೊಂದು ರಚಿಸಲ್ಪಟ್ಟಿತು.

ನಗರಸಭೆಯ ನಿರ್ಣಯ— ಪಿ. ಯು. ಸಿ. ಮತ್ತು ಡಿಗ್ರಿ ಪರೀಕ್ಷೆಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ತಳೆದ ಧೋರಣೆಯ ಕುರಿತು ಉಡುಪಿ ನಗರಸಭೆಯು ವಿಷಾದ ವ್ಯಕ್ತಪಡಿಸಿರುವುದಲ್ಲದೆ ಈ ವಿಷಯವನ್ನು ಪುನಃ ಪರಿಶೀಲಿಸಿ ಅನುಬಂಧ ಪಟ್ಟಿಯೊಂದನ್ನು ಪ್ರಕಟಿಸಬೇಕೆಂದು ಠರಾಯಿಸಿದೆ. ಈ ಗೊತ್ತುವಳಿಯನ್ನು ಶ್ರೀಮತಿ ಎಲ್. ಎಮ್. ಫೆರ್ನಾಂಡಿಸರು ಕಳೆದ ತಾ. 27ರಲ್ಲಿ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಜರಗಿದ ಪೌರಸಭೆಯ ಸಭೆಯಲ್ಲಿ ಮಂಡಿಸಿ ಒಮ್ಮತದ ನಿರ್ಣಯವಾಗಿದೆ.

ಮೋಟಾರು ಕೆಲಸಗಾರರ ಮಹಾಸಭೆ— ಕರ್ನಾಟಕ ಒಟೊಮೊಬೈಲ್ ಮತ್ತು ಇಂಜಿನಿಯರಿಂಗ್ ಕೆಲಸಗಾರರ ಸಂಘದ ಮಹಾಸಭೆಯು ಮಂಗಳೂರಲ್ಲಿ ಕಳೆದ ತಾ. 26 ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿ ವರದಿ ಸ್ವೀಕಾರ, ಕಾರ್ಯಕಾರೀ ಸಮಿತಿಯ ಆಯ್ಕೆ ಮೊದಲಾದ ಕಾರ್ಯಕ್ರಮಗಳಾದುವು.

ಡಾ| ಯು. ಬಿ. ನಾರಾಯಣ ರಾಯರ ನಿಧನಕ್ಕಾಗಿ ಸಂತಾಪ ಸೂಚಕ ಸಭೆ: ಮುಂಬಯಿಯ ದ. ಕ. ಬ್ರಾಹ್ಮಣರ ಸಂಘದ ಸಭೆಯೊಂದು ೧೯-೬-೬೦ರಲ್ಲಿ ಸಂಘದ ಗೋಕುಲ ಕಟ್ಟಡದಲ್ಲಿ ಶ್ರೀ ಯು. ರಾಮಚಂದ್ರ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಡಾ| ಯು. ಬಿ. ನಾರಾಯಣ ರಾಯರ ಆಕಸ್ಮಿಕ ನಿಧನಕ್ಕಾಗಿ ದುಃಖ ಸೂಚಿಸಲಾಯಿತು. ಅಧ್ಯಕ್ಷರು ಭಾಷಣ ಮಾಡುತ್ತ ಡಾ| ನಾರಾಯಣ ರಾಯರು ಈ ಸಂಘದ ಮೊದಲ ಅಧ್ಯಕ್ಷರಾಗಿದ್ದರೆಂದೂ ೩೫ ವರ್ಷಗಳಿಂದ ಈ ಸಂಘದ ಅಭಿವೃದ್ಧಿಗಾಗಿ ಶ್ರಮಿಸಿದ್ದರೆಂದೂ ಅವರು ಸಹೃದಯಿಗಳಾಗಿಯೂ, ಉದಾರಿಗಳಾಗಿಯೂ ಇದ್ದು ಸಮಾಜದ ಹಿತವನ್ನೇ ಬಯಸುತ್ತಿದ್ದರೆಂದೂ ಇಂಥಾ ವ್ಯಕ್ತಿಯ ಮರಣದಿಂದ ಅಪಾರ ನಷ್ಟ ಉಂಟಾಗಿದೆ ಎಂದೂ ಅವರು ತೊಡಗಿದ್ದ ಕೆಲಸಗಳನ್ನು ನಾವೆಲ್ಲರೂ ಮುಂದುವರಿಸಿಕೊಂಡು ಹೋಗುವುದು ನಮ್ಮ ಕರ್ತವ್ಯವೆಂದೂ ಹೇಳಿದರು. ಅನಂತರ ಶ್ರೀಗಳಾದ ಎಂ. ಎಸ್. ಶಾಸ್ತ್ರಿ, ಎಂ. ವಿ. ರತ್ನಂ, ಡಾ| ಲಲಿತಾ ರಾವ್, ಶ್ರೀ ರಾಮ ರಾವ್, ಮೊದಲಾದವರು ಡಾ| ರಾಯರ ಸೇವಾ ಜೀವನದ ಕುರಿತು ಮಾತನಾಡಿದರು. ಕೊನೆಗೆ ದುಃಖಸೂಚಕ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಬುಡ್ನಾರು ಜೇಜಪ್ಪ ಶೆಟ್ಟರ ನಿಧನ

ಅಸಹಕಾರ ಚಳವಳದಲ್ಲಿ ಭಾಗವಹಿಸಿ ಲಾಠೀಚಾರ್ಜು, ಕಾರಾಗ್ರಹವಾಸ ಅನುಭವಿಸಿ ರಾ

ಕೀಯ ಸಂತ್ರಸ್ತರಾಗಿ, ಉಡುಪಿ ನಿವಾಸಿಕ ಗೆ ಚಿರಪರಿಚಿತರಾಗಿದ್ದ ಶ್ರೀ ಬುಡ್ನಾರು ಜಪ್ಪ ಶೆಟ್ಟರು ತಾ. 28.6.60ನೇ ರಾತ್ರಿ ಮ್ಮ 65ನೇ ವಯಸ್ಸಿನಲ್ಲಿ ಆಕಸ್ಮಿಕ ನಿಧನ ಹೊಂದಿದರೆಂಬುದು ವಿಷಾದಕರವಿದೆ. ಇವರು ಉತ್ಸಾಹಿ ಕೆಲಸಗಾರರಾಗಿದ್ದು ಜನಾನುರಾಗ ಗಳಿಸಿದ್ದರು.

ಕಾಪು— ಸ್ಥಳೀಯ ಮಂಡಲ ಕಾಂಗ್ರೆಸ್ ಮಿಟಿಯ ಸಭೆಯು ತಾ. 25.6.60ರಂದು ಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ . ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ರ್ಯದರ್ಶಿಯವರು ಸ್ವಾಗತಿಸಿದ ಬಳಿಕ ಅಧ್ಯಕ್ಷ ಶ್ರೀ ಪೈಗಳು ಕಾಂಗ್ರೆಸ್ ಸಂಘಟನೆ, ಜನಾತ್ಮಕ ಕೆಲಸಗಳ ಮೂಲಕ ಜನ ಸಂಪರ್ಕವನ್ನು ಬೆಳ್ಚಿಸಿಕೊಳ್ಳುವ ಕುರಿತು ಭಾಷಣವಿತ್ತರು.

ವಾರ್ಷಿಕ ಮಹಾ ಸಭೆ— ದ. ಕ. ಲ್ಲಾ ಗೇರು ಬೀಜ ಮತ್ತು ಕಾಫೀ ಕೆಲಸಗಾರರ ಸಂಘದ ಮಹಾ ಸಭೆಯು ಮಂಗಳೂರು ಮಿಲಾಗ್ರಿಸ್ ಹೈಸ್ಕೂಲಿನ ವಠಾರದಲ್ಲಿ ಕಳೆದ ತಾ. 26ರಂದು ಎಡ್ವಕೇಟ್ ಎ. ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿ ವರದಿ ಸ್ವೀಕಾರ, ಹೊಸ ಕಾರ್ಯಕಾರೀ ಸಮಿತಿಯ ರಚನೆ ಮೊದಲಾದ ಕಾರ್ಯಕ್ರಮಗಳಾದುವು.

ಕುಂದಾಪುರ ಕಾಲೇಜು ಸಮಿತಿ— ದೇ ತಾ. 26—6—60ರಂದು ಕುಂದಾಪುರದ ರೋಟರಿ ಕ್ಲಬ್ಬಿನ ಸಭೆಯು ಸ್ಥಳೀಯ ಪ್ರಸ್ಥ ನಿವಾಸದಲ್ಲಿ ಶ್ರೀ ಎಸ್. ಎಸ್. ಕೊಳ್ಕೆಬೈಲ್ ಇವರ ಅಧ್ಯಕ್ಷತೆಯಲ್ಲಿ ಜರಗಿ ಕುಂದಾಪುರದಲ್ಲಿ ಪ್ರಾರಂಭವಾಗಲಿರುವ 'ಆರ್ಟ್ಸ್ ಮತ್ತು ಸಾಯನ್ಸ್' ಕಾಲೇಜಿನ ಕಾರ್ಯಾಚರಣೆಗಾಗಿ 40 ಜನ ಸದಸ್ಯರ ಕ್ರಿಯಾಸಮಿತಿಯೊಂದು ರಚಿಸಲ್ಪಟ್ಟಿತು. ಮೇಲಿನ ಸಮಿತಿಗೆ ರುಗಳಾದ ವೈ. ಮಂಜಯ್ಯ ಶೆಟ್ಟಿ ಎಂ. ಲ್. ಎ. (ಅಧ್ಯಕ್ಷ) ಥಿಯೋಡರ್ ಸೋಜ್, ಡಾ. ಯಚ್. ವೆಂಕಟ್ರಮಣಯ್ಯ, ಕೆ. ರಲ ಮಂಜುನಾಥ ಕಾಮತ್, ಮತ್ತು ಸ್. ಜಿ. ಹೊಸಕೋಟೆ (ಉಪಾಧ್ಯಕ್ಷರು) ರೀ ಕೆ. ರಘುನಾಥ ಶೆಣೈ (ಕಾರ್ಯದರ್ಶಿ ಗೂ ಕರೆಸ್ಪೊಂಡೆಂಟ್) ಎಸ್. ಟಿ. ತೋನ್ಸೆ, ರ್, ಎಂ. ಎಂ. ಹೆಗ್ಡೆ, ಎಸ್. ಎಸ್. ಪರಮೇಶ್ವರಯ್ಯ ಮತ್ತು ಡಾ. ಬಿ. ಬಿ. ಹೆಗ್ಡೆ (ಸಮಿತಿಯ ಜೊತೆ ಕಾರ್ಯದರ್ಶಿಗಳು) ಕೆ. ವೆಂಕಪ್ಪ ಶೆಟ್ಟಿ, ವಕೀಲ್, (ಕೋಶಾಧಿಕಾರಿ) ಳಾಗಿ ಆರಿಸಲ್ಪಟ್ಟಿದ್ದಾರೆ.

ಗಾಂಧೀ ಮೈದಾನಿನಲ್ಲಿ ಹನ್ನೆರಡು ಎಕ್ರೆ ಳವನ್ನು ಕಾಲೇಜಿಗಾಗಿ ಪಡೆಯಬೇಕೆಂದೂ, ಸಂಬಂಧ ಮಣಿಪಾಲದ ಎಕೆಡಮಿ ಓಫ್ ನರಲ್ ಎಜ್ಯುಕೇಶನಿನ ರಿಜಿಸ್ಟ್ರಾರರಾದ ಾ. ಟಿ. ಮಾಧವ ಪೈಗಳೊಡನೆ ವಿಚಾರವಿನಿಮಯ ಮಾಡಲು ಸಮಿತಿಗೆ ಅಧಿಕಾರವನ್ನೂ ಾಡಲಾಯಿತು.

'**ಆಜ್ರಿ**— ಕುಂದಾಪುರ ತಾಲೂಕು ಆಜ್ರಿ ಪಂಚಾಯತ, ಅಧ್ಯಕ್ಷ ಚುನಾವಣೆಯು ಜೂನ್ 29ರಂದು ಚುನಾವಣಾಧಿಕಾರಿಗಳಾದ ಶ್ರೀ ಗಣಪತಿ ಭಂಡಾರ್, ಸಮ್ಮುಖದಲ್ಲಿ ಮತದಾನ ನಡೆದು ಶ್ರೀ ವಿ. ಎಸ್. ವಿಟ್ಟಲ ಸೆಟ್ಟಿ ಅಧಿಕ ಬಹುಮತದಿಂದ ಆರಿಸಲ್ಪಟ್ಟಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ಇಳಂ ಮಹದೇವ ಹೆಗ್ಗಡೆಯವರು ಅವಿರೋಧವಾಗಿ ಆರಿಸಿ ಬಂದಿರುತ್ತಾರೆ.

ಶಿರ್ತಾಡಿ ಸೇತುವೆಯ ಉದ್ಘಾಟನಾ ಸಮಾರಂಭ— ಮೂಡಬಿದ್ರೆ ಹೊಸಮಾರು ರಸ್ತೆಯಲ್ಲಿ ಶಿರ್ತಾಡಿ ಸೇತುವೆಯ ಉದ್ಘಾಟನಾ ಕಾರ್ಯವನ್ನು ಕಳೆದ ತಾ. 27 ರಂದು ಮೈಸೂರು ಸರಕಾರದ ಕಾಮಗಾರಿ ಸಚಿವರಾದ ಶ್ರೀ ಚೆನ್ನ ಬಸಪ್ಪನವರು ಮಾಡಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಇವರು ವಹಿಸಿದ್ದರು.

ಈ ಸಂಕಕ್ಕೆ ರೂ. 1,45,000 ವೆಚ್ಚವಾಗಿ ಇದರ ನಿರ್ಮಾಣದಲ್ಲಿ ತನಗೆ ಸಹಕಾರವಿತ್ತವರೆಲ್ಲರನ್ನೂ ಅಭಿನಂದಿಸಿ ಸುಪರಿಂಟೆಂಡಿಗ್ ಇಂಜಿನಿಯರರಾದ ಶ್ರೀ ಎ. ಎಸ್. ಅಡ್ಯೆಯವರು ಸ್ವಾಗತ ಭಾಷಣ ಮಾಡಿದರು.

ಈ ಸಂದರ್ಭದಲ್ಲಿ ಶಿರ್ತಾಡಿ ಪಂಚಾಯತ್ ಅಧ್ಯಕ್ಷ ಶ್ರೀ ಎಸ್. ಡಿ. ಸಾಮ್ರಾಜ್ಯರೂ ಮೂಡಬಿದ್ರೆ ಮಂಡಲ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಾಸುದೇವ ಪೈಗಳವರೂ ಒಂದೊಂದು ಮನವಿಯನ್ನರ್ಪಿಸಿದರು. ಶ್ರೀ ವಾಸುದೇವ ಪೈಗಳವರ ಮನವಿಯಲ್ಲಿ ಮೂಡಬಿದ್ರೆ ಮತ್ತು ವೇಣೂರು ಫಿರ್ಕಾಗಳನ್ನು ಸೇರಿಸಿ ಒಂದು ಪ್ರತ್ಯೇಕ ತಾಲೂಕು ರಚನೆಯಾಗಬೇಕೆಂಬ ಸೂಚನೆಯೂ ಇತ್ತು.

ನಾಡ— ಕುಂದಾಪುರ ತಾಲೂಕು ನಾಡ ಗ್ರಾಮದ ಗುಡ್ಡೆಯಂಗಡಿ ಹೊಸ ಪಂಚಾಯಿತಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ತಾ. 28—6—60ರಂದು ಶ್ರೀಗಳಾದ ಸಿ. ರಾಮಕೃಷ್ಣ ಹೆಬ್ಬಾರ್, ಸೈಲಾಡಿ ಸೂರಪ್ಪ ಶೆಟ್ಟಿ ಇವರು ಅನುಕ್ರಮವಾಗಿ ಅವಿರೋಧವಾಗಿ ಆರಿಸಿ ಬಂದಿರುತ್ತಾರೆ.

ಇದೇ ಸಂದರ್ಭದಲ್ಲಿ ಸ್ಥಳೀಯ ತರುಣ ಸಂಘದವರು ಇವರಿಗೂ ಹೊಸ ಸದಸ್ಯರಿಗೂ ಶ್ರೀ ಡಿ. ಮೋಹನ್ ರಾವ್ ಆರ್. ಐ., ಇವರ ನೇತೃತ್ವದಲ್ಲಿ ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು. ಡಾ. ಶೇಷಗಿರಿ ರಾಯರು ಸ್ವಾಗತಿಸಿದ ಮೇಲೆ ಗ್ರಾಮಸೇವಕ ಶ್ರೀ ವಿ. ಯಮ್. ಪುರಕಡ್ರಿಯವರೂ ಶ್ರೀ ತೆಂಕಬೈಲು ಮಂಜಯ್ಯ ಶೆಟ್ಟರೂ ಸಂದರ್ಭೋಚಿತ ಭಾಷಣಮಾಡಿದರು.

ದಿ| ಎ. ಬಿ. ಶೆಟ್ಟರಿಗೆ ಕಂಚಿನ ಸ್ಮಾರಕ ಪ್ರತಿಮೆ— ಎ. ಬಿ. ಶೆಟ್ಟರ ಸ್ಮಾರಕ ಸಮಿತಿಯವರು ಇತ್ತೀಚೆಗೆ ಸೇರಿದ ಸಭೆಯಲ್ಲಿ ಹತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ಮಂಗಳೂರಲ್ಲಿ ಕಂಚಿನ ಪ್ರತಿಮೆಯೊಂದನ್ನು ಸ್ಮಾರಕವಾಗಿ ರಚಿಸುವ ಗೊತ್ತುವಳಿ ಮಾಡಿರುತ್ತಾರೆ.

ವಾರ್ಷಿಕ ಮಹಾಧಿವೇಶನ— ಉಡುಪಿ ಶ್ರೀ ಬ್ರಹ್ಮ ಬೈದರ್ಕಳ ಧೂಮಾವತಿ ಯಕ್ಷಗಾನ ಸಂಘದ ಮಹಾಧಿವೇಶನವು ದಿನಾಂಕ 3 ರಂದು ಜರಗಿತು. ಚಾಲ್ತಿ ವರ್ಷದಲ್ಲಿ ಶ್ರೀ ಕೆ. ಕೆ. ಪೈ ಬಿ. ಕಾಂ. ರವರ ಅಧ್ಯಕ್ಷತೆಯಿಂದ ಅಭಿನಯಿಸಲ್ಪಟ್ಟ ಯಕ್ಷಗಾನ ಬಯಲಾಟದ ಲೆಕ್ಕ ಪತ್ರಗಳನ್ನು ಅಂಗೀಕರಿಸಲಾಯ್ತು. ವಾರ್ಷಿಕೋತ್ಸವ ಸಮಾರಂಭದ ವೇಳೆ ದ. ಕ. ಜಿಲ್ಲಾ ಕಾಂಗ್ರೇಸಿನ ಅಧ್ಯಕ್ಷರಾಗಿ ಆಯ್ಕೆಗೊಂಡಿರುವ ಶ್ರೀ ಟಿ. ಎ. ಪೈ ಬಿ ಕಾಂ ರವರಿಗೆ ಮಾನಪತ್ರ ಸಮರ್ಪಿಸುವ ಕಾರ್ಯದಲ್ಲಿ ಸಹಕರಿಸಿದ ಮಹನೀಯರುಗಳನ್ನು ಗೌರವಿಸಲಾಯಿತು ನಂತರ ಹೊಸವರ್ಷದ ಆಡಳಿತ ಮಂಡಳಿಯ ಚುನಾವಣೆ ನಡೆದು ಶ್ರೀ ಪ. ಲ. ನಾ. ಉಪಾಧ್ಯಾಯರು ಅಧ್ಯಕ್ಷರಾಗಿಯೂ ಶ್ರೀ ಬೋಜ ಸುವರ್ಣರು ಕಾರ್ಯದರ್ಶಿಗಳಾಗಿಯೂ, ಶ್ರೀ ಸುಂದರ ಅಮೀನರು ಕಲಾಕಾರ್ಯದರ್ಶಿಗಳಾಗಿಯೂ ಶ್ರೀ ಮಾಧವ ಸುವರ್ಣರು ಲೆಕ್ಕ ಪತ್ರ ಪರಿಶೋಧಕರಾಗಿಯೂ ಆಯ್ಕೆಗೊಂಡರು ಕಾರ್ಯಕಾರಿಸಮಿತಿಯ ಆಯ್ಕೆಯಾದ ಬಳಿಕ ಯಕ್ಷಗಾನ ಮಂಗಲಾಚರಣೆಗಳೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಸಂಕ್ಷಿಪ್ತ ಸುದ್ದಿಗಳು

ಆಫ್ರಿಕೆಯಲ್ಲಿ ಹೊಸ ಬೆಳಕು

ಅಜ್ಞಾನಾಂಧಕಾರದಲ್ಲಿ ತೊಳಲಾಡುತ್ತಿದ್ದ ಕತ್ತಲೆಯ ಮಹಾದ್ವೀಪ ಆಫ್ರಿಕೆಯಲ್ಲಿ ಈಗೀಗ ಹೊಸ ಬೆಳಕು ಹರಿಯತೊಡಗಿದೆ. ಕಳೆದ ೮೦ ವರ್ಷಗಳ ಕಾಲ ಬ್ರಿಟಿಷರ ಪಾದದಲಿತವಾದ ಬ್ರಿಟಿಷ ಸೋಮಾಲೀ ಲೇಂಡ್ ಜೂನ್ ೨೬ರಂದು ಅವರ ಮುಷ್ಟಿಯಿಂದ ಪಾರಾಗಿ ಸ್ವತಂತ್ರವೆನಿಸಿತು. ಜುಲೈ ೨ನೆ ತಾರೀಕಿನಂದು ಇಟೆಲಿಯ ವಸಾಹತುವಾಗಿದ್ದ ಸೋಮಾಲಿಯಾವು ಸ್ವಾತಂತ್ರ್ಯದ ಉಸಿರನ್ನು ಮೊತ್ತಮೊದಲಿಗೆ ಎಳೆಯಿತು. ಈ ಎರಡೂ ರಾಜ್ಯಗಳು ವಿಲೀನಗೊಂಡು ಏಕ ಘಟಕ ರಾಜ್ಯವಾಗಿ ರೂಪಾಂತರ ಹೊಂದಿದುವು. ಜೂನ್ ೨೬ರಂದೇ ಹಿಂದೂ ಸಾಗರದ ದ್ವೀಪ ಮಡಗಾಸ್ಕರವೂ ಫ್ರೆಂಚ ರಾಷ್ಟ್ರ ಸಮೂಹಕ್ಕೊಳಪಟ್ಟ ಸ್ವಾತಂತ್ರ್ಯವನ್ನು ಪಡೆಯಿತು. ಇತ್ತೀಚೆಗೆ ಅಲ್ಲಿ ನಡೆದ ಚುನಾವಣೆಯಲ್ಲಿ ಈ ಅಭಿಪ್ರಾಯಕ್ಕೆ ಜನಬಲ ದೊರೆತಿತ್ತು. ಕಗ್ಗತ್ತಲೆಯ ಬೆಲ್ಜಿಯಂ ಕಾಂಗೋವಿಗೆ ಜೂನ್ ೩೦ರಿಂದ ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವು ದೊರೆಯಿತು. ಒಂದೇ ವಾರದಲ್ಲಿ ಆಫ್ರಿಕೆಯ ಇತಿಹಾಸದಲ್ಲಿ ಹಲವಾರ ಚಿರಸ್ಮರಣೀಯ ಘಟನೆಗಳು ನಡೆದು ಬಿಟ್ಟುವು.

ಪ್ರಳಯ ಇಂದಲ್ಲ, ನಾಳೆ.

ಜುಲೈ ತಾ. ೧೪ರಂದು ಭಾರತದ ರಾಷ್ಟ್ರೀಯ ವೇಳೆ ಸಾಯಂ. ೭ ಗಂಟೆಕ್ಕೆ ಸರಿಯಾಗಿ ಪರಮಾಣು ಸ್ಫೋಟನ, ಭೂಕಂಪ, ಬಿರುಗಾಳಿ, ಸಮುದ್ರದ ಉಬ್ಬರ ಮೊದಲಾದ ಪ್ರಕೃತಿಯಿಂದ ಪ್ರಪಂಚವು ನಾಶವಾಗುವುದೆಂದೂ ಇದರಿಂದ ಕೆಲವೇ ಮಿಲಿಯ ಜನರು ಬದುಕಿ ಉಳಿಯುವರೆಂದೂ ಇಟೆಲಿಯ ಆಧ್ಯಾತ್ಮ್ಯವಾದಿಗಳ ತಂಡವೊಂದು ಭವಿಷ್ಯ ನುಡಿದಿರುವುದು ವರದಿಯಾಗಿದ್ದು, ಇದು ಎಲ್ಲರಲ್ಲಿಯೂ ಕುತೂಹಲ ವಿಸ್ಮಯಾತಿರೇಕವನ್ನು ಹುಟ್ಟಿಸಿದೆ. ಆದರೆ, ಮುಂದೆ, ಭಾರತೀಯ ಖಗೋಲಶಾಸ್ತ್ರ ಸಂಸ್ಥೆಯ ಅಧ್ಯಕ್ಷರಾದ ಪಂಡಿತ ರಮೇಶಚಂದ್ರಭಟ್ಟಾಚಾರ್ಯರ ಹೇಳಿಕೆ ಮತ್ತು ದಿಗಿಲು ಗೊಳಿಸುವಂತಿದೆ. ಗ್ರಹನಕ್ಷತ್ರಗಳ ಮಾನಗಳಿಂದ ಪರಿಶೀಲನೆ ನಡೆಸಿದಾಗ, ಇದೇ ಜುಲೈ ೧೪ರಂದು ಪ್ರಳಯದ ಭಯವಿಲ್ಲವೆಂದು ಅವರಿಗೆ ತಿಳಿದು ಬಂದಿದೆಯಂತೆ ಆದರೆ, ೧೯೬೨ರ ವರೆಗೆ ಮತ್ತು ಆ ಮುಂದಿನ ೧೨ ವರ್ಷಗಳ ತನಕ ಜಗತ್ತಿನಲ್ಲಿ ಬರಗಾಲ, ನೆರೆ, ಭೂಕಂಪ ಸಾಂಕ್ರಾಮಿಕ ರೋಗಗಳು ಮತ್ತು ಅಶಾಂತಿಗಳಿಂದ ಪ್ರಪಂಚಕ್ಕೆ ಹಾನಿತಟ್ಟುವುದು ಮಾತ್ರ ಖಂಡಿತ ಎಂದವರು ಹೇಳಿದ್ದಾರೆ. ಹಿಂದಿನ ಕಾಲದಲ್ಲಿ ದ್ವಾದಶ ವರ್ಷ ಕ್ಷಾಮವು ಬರುತಿತ್ತೆಂದು ಪುರಾಣೇತಿ ಹಾಸಗಳಲ್ಲಿ ನಾವು ಓದಿದುದು ಈ ಭವಿಷ್ಯ ಸರಿಯಾದರೆ, ಸತ್ಯವೆಂದು ನಂಬಬಹುದು.

ಜನಪ್ರಿಯ ವಿದೇಶ ನೀತಿ

ಮೈಸೂರಿನ ರಾಜ್ಯಪಾಲ ಶ್ರೀ ಜಯಚಾಮರಾಜರು ಆಫ್ರಿಕಾ, ಯುರೋಪ ಮತ್ತು ಅಮೇರಿಕಾ ಖಂಡಗಳ ವಿವಿಧ ದೇಶಗಳಲ್ಲಿ ಎರಡು ತಿಂಗಳುಗಳ ವರೆಗೆ ಸಂಚರಿಸಿ, ಈಗ ಮರಳಿ ಬಂದು ತಾತ್ಕಾಲಿಕ ರಾಜ್ಯಪಾಲ ಶ್ರೀ ಮಂಗಳದಾಸ ಪಕ್ವಾಸರಿಂದ ಅಧಿಕಾರ ವಹಿಸಿಕೊಂಡರು. ಭಾರತವು ರೂಪಿಸಿರುವ ವಿದೇಶ ನೀತಿಯು ಐರೋಪ್ಯರ ಮೆಚ್ಚುಗೆಗೆ ಪಾತ್ರವಾಗಿರುವುದೆಂದೂ ಶಿಖರ ಪರಿಷತ್ತು ಮುರಿದು ಹೋದುದರಿಂದ ಎಲ್ಲೆಡೆಯೂ ನಿರಾಶೆ ಕವಿದಿರುವುದೆಂದೂ, ದಕ್ಷಿಣ ಆಫ್ರಿಕೆಯ ವರ್ಣವಿದ್ವೇಷ ನೀತಿಯು ಎಲ್ಲಿಯೂ ಖಂಡಿಸಲ್ಪಡುತ್ತಿದೆಯೆಂದೂ ತಮ್ಮ ವಿದೇಶ ಪ್ರವಾಸಾನುಭವವನು ವಿವರಿಸಿರುವರು.

ಮೈಸೂರಿಗೆ ಲಲಿತಕಲಾ ಶಾಲೆ

ಮೈಸೂರು ರಾಜ್ಯದಲ್ಲಿ ಮುಂಬಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ನ ಮಾದರಿಯ ಲಲಿತಕಲಾ ಶಾಲೆಯೊಂದನ್ನು ಸ್ಥಾಪಿಸುವತ್ತ ಸರಕಾರದ ಆಸಕ್ತಿ ತೀವ್ರವಾಗಿ ಹರಿದಿದೆ. ಶಿಕ್ಷಣ ಸಚಿವ ಶ್ರೀ ಅಣ್ಣಾರಾವ ಗಣಮುಖಿ ಮತ್ತು ಮೈಸೂರು ಸರಕಾರದ ಲಲಿತಕಲಾ ಪರಿಶೀಲನಾಧಿಕಾರಿಗಳಾದ ಶ್ರೀ ಸಿ. ವಿ. ಕಾರಡಗಿಯವರು ಮುಂಬಯಿ ಶಾಲೆಯ ಕಾರ್ಯಪದ್ಧತಿಯನ್ನು ಅಭ್ಯಸಿಸುವ ವಾಸಲುಗ ಅಲ್ಲಿಗೆತೆರಳಿದರು. ಹುಬ್ಬಳ್ಳಿಯಲ್ಲಿರು ಲಲಿತಕಲಾಶಿಕ್ಷಣಸಂಸ್ಥೆಯನ್ನೇ ಕಾಲೇಜನ್ನಾಗಿ ಪರಿವರ್ತಿಸಬೇಕು ಎಂಬುದಾಗಿ ಈ ಸಂಸ್ಥೆಯ ಆಡಳಿತೆದಾರರ ಇಂಗಿತವಿರುತ್ತದೆ.

ಆಶಾದಾಯಕ ಉತ್ತರ

ನೇಪಾಳದ ಉತ್ತರ ಗಡಿಯನ್ನು ಮೀರಿ ಚೀನೀಯ ಸೈನ್ಯವು ಕೆಲವು ನೇಪಾಳೀಯರನ್ನು ಕೊಂದು, ಹಲವರನ್ನು ಸೆರೆದುಕೊಂಡ ವರ್ತನೆಯನ್ನು ವಿರೋಧಿಸಿದ ನೇಪಾಳೀ ಸರಕಾರವು ಗಡಿಯನ್ನು ಬಲಪಡಿಸುವ ಸಲುವಾಗಿ ಸೈನ್ಯವನ್ನು ಕಳಿಸಿದೆಯೆಂದು ತಿಳಿಯುತ್ತದೆ. ನೇಪಾಲ— ಚೀನಾ ಸೀಮಾ ಒಡಂಬಡಿಕೆಯ ನ್ವಯ ಚೀನೀ ಸೈನ್ಯವು ಗಡಿಯಿಂದ ೧೨ ಮೈಲು ದೂರದಲ್ಲಿ ಟಿಬೇಟದ ಬಂಡಾಯವನ್ನು ಹತ್ತಿಕ್ಕಿದ ನಂತರ ನಿಲ್ಲಬೇಕಾಗಿದೆ. ಆದರೆ, ಸದ್ಯ ಈ ಬಂಡಾಯವನ್ನು ಸಂಪೂರ್ಣವಾಗಿ ತಡೆದಿಲ್ಲವಾದುದರಿಂದ ಕೇವಲ ಆರು ಮೈಲು ಹಿಂದೆ ಸರಿಯಲು ಚೀನೀ ಪ್ರಧಾನಿ ಸಮ್ಮತಿಸಿದ್ದಾರೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 62/58, R.E.P. 35/60.

ಲಜಾಕ್ಷಿ ಅಮ್ಮ ಕೂಡಾ— ಅರ್ಜಿದಾರರು.

ಮತ್ತು

3. ಸುರೇಶ, 4. ಸತೀಶ, 5. ದಿನೇಶ, . ರಮೇಶ.— ಶೀತಮ್ಮ ಸಡ್ತಿರ ಮ್ಯಾನರ್ ಮಕ್ಕಳು— ಗಾರ್ಡಿಯನ್— ತಾಯಿ ಶೀತಮ್ಮ ಡ್ತಿ. — ಎದ್ರಿರು.

ಉಡುಪಿ ತಾಲೂಕು ಶಿವಳ್ಳಿ ಗ್ರಾಮ— ಯವರೊಳಗೆ

ದ್ರಿ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದರಿ ಅನುಲ್ಹಾರಿಯಲ್ಲಿ ಅರ್ಜಿದಾರ ಕಡೆಯಿಂದ ದಾಖಲಾದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವರೇ ಸದ್ರಿ ಅಮಲ್ದಾರಿಯನ್ನು ತಾರೀಕು, 15—7—1960ಕ್ಕೆ ಇಟ್ಟಿರುತ್ತದೆ. ಆಕ್ಷೇಪಣೆ ಯೇನಾದರೂ ಯಿದ್ದರೆ ದಿವ್ಸ ಪೂರ್ವಾಹ್ನ 10ಘಂಟೆಗೆ ಸದ್ರಿ ಕೋರ್ಟ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳ ಬಹುದು.

K. Ramakrishna Rao.
Vakil for petitioners.

Udipi Dated 4—7—1960.

ಉಡುಪಿ. ಡಿ. ಮು. ಕೋರ್ಟಿನಲ್ಲಿ

S. C. No. 218/1960.

ಮಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ಮಧ್ಯಸ್ತ ವಿಷ್ಣುಮೂರ್ತಿಯ್ಯ — ವಾದಿ.

ಮತ್ತು

ಜೆ. ಪದ್ಮನಾಭನ್ ಪೋತಿ ಕೂಡಾ— —ಪ್ರತಿವಾದಿರು.

ಯಿವರೊಳಗೆ

ಸದ್ರಿ ವ್ಯಾಜ್ಯದ 3ನೇ ಪ್ರತಿವಾದಿ, ಉಡುಪಿ ತಾಲೂಕು ಮಟ್ಟು ಗ್ರಾಮದ ಜನಾರ್ಧನನ್ ಪೋತಿರ ಮಗ, ಜೆ. ವೆಂಕಟಾಚಲನ್ ಪೋತಿರಿಗೆ ಈ ಮೂಲಕ ತಿಳಿಸುವುದೇನಂದರೆ:—

ವಾದಿ ದೇವಸ್ಥಾನಕ್ಕೆ ನೀವು ಕೂಡಾ ಪ್ರತಿವಾದಿರಿಂದ ಕಳದ ವಿಕಾರಿ ಸಂ|ರಕ್ಕೆ ಸಲತಕ್ಕ ವಳತೀರ್ವೆ ಗೇಣಿ ಬಾಬ್ತು ಅಸಲು ಬಡ್ಡಿ ಕೂಡಾ ರೂಪಾಯಿ 815.54ಕ್ಕೆ ವಾದಿಯು ದಾಖಲು ಮಾಡಿರುವ ಮೇಲ್ಕಂಡ ವ್ಯಾಜ್ಯವನ್ನು ತಾ. 15—7—1960ಕ್ಕೆ ನಿನ್ನ ಅಕ್ಕೇರಿ ನೋಟೀಸು ಬಗ್ಗೆ ಯಿಟ್ಟಿರುವುದ್ರಿಂದ ನಿಮಗೆ ಸದ್ರಿ ವ್ಯಾಜ್ಯದಲ್ಲಿ ಉದಯರಿಸುವುದಿದ್ದಲ್ಲಿ ಆ ದಿವ್ಸ ನೀವು ಸ್ವತಹಾ ವ ವಕೀಲರ ಮುಖಾಂತ್ರ ಮೇಲ್ಕಂಡ ಕೋರ್ಟ ಮುಂದೆ ಬೆಳಿಗ್ಗೆ 11 ಘಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ಯಾಮಾಡಿ ಸದ್ರಿ ವ್ಯಾಜ್ಯವು ಫೈಸಲು ಮಾಡಲ್ಪಡುವುದು.

P. V. Acharya,
Vakil for Plaintiff.

ಮೊಕ್ಕಾಂ: ಉಡುಪಿ. ತಾ. 28-6-60.

ದೇಶ ಪರಿಚಯ

ನೂತನ ಗಣರಾಜ್ಯ — ಸೋಮಾಲಿಯಾ

ಗಾಢಾಂಧಕಾರ ಕವಿದಿದ್ದ ಆಫ್ರಿಕೆಯಲ್ಲಿ ಜ್ಞಾನ ದೀಪಿಕೆಯು ಉರಿದು ಅಜ್ಞಾನಿ ಜನತೆಯನ್ನು ಸರಿದಾರಿಯಲ್ಲಿ ಮುನ್ನಡೆಸುತ್ತಿದೆ.

ಕಳೆದ ಜುಲಾಯಿ ೧ರಂದು ಆಫ್ರಿಕದ ಕ್ಷಿತಿಜದಲ್ಲಿ 'ಸೋಮಾಲಿಯಾ' ಎಂಬ ಒಂದು ಹೊಸ ರಾಷ್ಟ್ರ ಗಣರಾಜ್ಯವಾಗಿ ಜನಿಸಿತು. ಈ ರಾಷ್ಟ್ರದಲ್ಲಿ ಗತ ಜೂನ ೨೬ರಂದು ಬ್ರಿಟಿಷರ ದಾಸ್ಯ ಶೃಂಖಲೆಯಿಂದ ಸ್ವತಂತ್ರವಾದ ಸೋಮಾಲೀ ಲೇಂಡ್ ಮತ್ತು ಜುಲೈ ೧ರಂದು ಇಟೆಲಿಯನರ ಕೈಯಿಂದ ಬಿಡುಗಡೆಹೊಂದಿದ ಸೋಮಾಲಿಯಾ ಎಂಬೆರಡು ಭಾಗಗಳು ಒಂದುಸೇರಿವೆ. ಈ ಎರಡು ಪ್ರತ್ಯೇಕ ರಾಷ್ಟ್ರಗಳ ಸಮ್ಮಿಳನವು ಆಫ್ರಿಕೆಯಲ್ಲಿ ಹರಿಯುತ್ತಿರುವ ನವಚೇತನ ಮತ್ತು ಐಕ್ಯಭಾವದ ಪ್ರತೀಕವಾಗಿದೆ. ತಮ್ಮ ಸ್ವಾರ್ಥಸಾಧನೆಗಾಗಿ ಯುರೋಪಿಯನರು ರಚಿಸಿದ್ದ ಕೃತ್ರಿಮ ಸೀಮೆಗಳನ್ನೂ ಕಡಿದೊಗೆದು ಜನತೆಯನ್ನು ಅಸ್ವಾಭಾವಿಕವಾಗಿ ವಿಂಗಡಿಸಿದುದನ್ನು ಸರಿಹೊಂದಿಸಿಕೊಂಡು ಈ ರಾಜ್ಯ ಉದಯಿಸಿತು. ಯುಗಯುಗಗಳಿಂದ ಗಾಢನಿದ್ರೆಯಲ್ಲಿ ಓಲಾಡುತ್ತಿದ್ದ ಆಫ್ರಿಕಾ ಭೂಖಂಡದ ಜನತೆಯು ಇದೀಗ ಎಚ್ಚರವಾಂತು ತನ್ನ ಮಹತ್ವವನ್ನು ಅರಿತುಕೊಳ್ಳಲು ಸೊಂಟಕಟ್ಟಿ ತೊಡಗಿದೆ.

ಸೋಮಾಲೀಯ ಭೂ ಭಾಗವನ್ನು ವಿದೇಶೀಯರು ಮೂರು ಭಾಗಗಳಲ್ಲಿ ವಿಂಗಡಿಸಿದ್ದರು. ಮೊದಲನೆಯದು ಇಟೇಲಿಯದು. ಇದರ ಕ್ಷೇತ್ರಫಲ ೧ ಲಕ್ಷ ೯೦ ಸಾವಿರ ವರ್ಗ ಮೈಲುಗಳು. ೧೨ ಲಕ್ಷ ೧೦ ಸಾವಿರ ಜನ ಸಂಖ್ಯೆಯುಳ್ಳದ್ದು. ೬೮ ಸಾವಿರ ವರ್ಗ ಮೈಲು ವಿಸ್ತಾರದಲ್ಲಿ ೬॥ ಲಕ್ಷ ಜನರು ವಾಸಿಸುವ ಎರಡನೆಯ ಭಾಗ ಬ್ರಿಟಿಷ ಸೋಮಾಲೀ ಲೇಂಡ್. ಜೂನ್ ೨೬ರಂದು ಇದು ಸ್ವತಂತ್ರವೆನಿಸಿತು. ಬ್ರಿಟಿಷ ಸೋಮಾಲೀ ಲೇಂಡಿನ ಪಶ್ಚಿಮದಲ್ಲಿರುವ ಫ್ರೆಂಚ ಸೋಮಾಲೀ ಲೇಂಡ್ ಮೂರನೆಯ ತುಂಡು. ಇದು ೯೦೭೧ ವರ್ಗ ಮೈಲು ವಿಸ್ತಾರದ್ದಿದ್ದು ಇಲ್ಲಿ ೬೩,೭೦೦ ಜನರಿರುವರು. ಈ ಭಾಗವು ಇನ್ನೂ ಫ್ರೆಂಚರ ಕೈಕೆಳಗೆ ಇರುವುದು; ಅವರ ವಸಾಹತಾಗಿರುವುದು.

೧೯೫೮ರಲ್ಲಿ ಡಿಗಾಲೆಯವರು ಸಂವಿಧಾನದ ಮೇಲೆ ಮತದಾನ ನಡೆಸಿದಾಗ, ಈ ಜನರು ಗಿನಿಯಾದಂತೆ ಪೂರ್ಣ ಸ್ವತಂತ್ರವಾಗುವುದಕ್ಕಾಗಲೀ ಅರ್ಧ ಸ್ವತಂತ್ರವಾಗಿ ಫ್ರೆಂಚ ಪಶ್ಚಿಮ ಆಫ್ರಿಕಾ ಅಥವಾ ಭೂಮಧ್ಯ ಸಾಗರ ಪ್ರದೇಶಗಳಂತೆ ಕಮ್ಯೂನಿಟಿಯ ಸದಸ್ಯವಾಗಿರುವುದಕ್ಕಾಗಲೀ ಇಷ್ಟಪಡಲಿಲ್ಲ. ಅದರಿಂದ ದೇಶದ ಇತರ ಎರಡು ಭಾಗಗಳು ಸ್ವಾತಂತ್ರ್ಯದ ಉಸಿರೆಳೆಯುತ್ತಿರುವಾಗ, ಈ ಭಾಗ ಮಾತ್ರ ತನ್ನ ಸ್ವೇಚ್ಛಾವರ್ತನೆಯಿಂದಾಗಿ ಗುಲಾಮತನದಲ್ಲಿಯೇ ದಿನ ದೂಡಬೇಕಾಗಿದೆ.

ಈ ಸಮ್ಮಿಲಿತ ಸೋಮಾಲೀ ಗಣರಾಜ್ಯದ ಒಟ್ಟು ವಿಸ್ತಾರವು ನಮ್ಮ ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶಗಳಷ್ಟು, ಎಂದರೆ, ೨ ಲಕ್ಷ ೪೬ ಸಾವಿರ ಚದರ ಮೈಲು ವಿಸ್ತಾರವಿದೆ. ಇಲ್ಲಿನ ಜನಸಂಖ್ಯೆ ಒಟ್ಟು ೧೮ ಲಕ್ಷ ೬೦ ಸಾವಿರ ಮಾತ್ರ. ನಮ್ಮ ದೆಹಲಿಯಲ್ಲಿಯೇ ಸುಮಾರು ಇಷ್ಟು ಜನರು ವಾಸಿಸುತ್ತಿರುವರು.

ಸೋಮಾಲಿಯು ಒಂದು ಪ್ರಾಚೀನ ಭೂಭಾಗವಾಗಿದೆ. ಐಗುಪ್ತದ ಕೆಲವು ಗ್ರಂಥಗಳಲ್ಲಿ ಇದರ ವರ್ಣನೆಯು ನಮಗೆ ದೊರೆಯುತ್ತದೆ. ಸೋಮಾಲೀ ಜನರ ಪೂರ್ವಜರು ೧೩ ಮತ್ತು ೧೪ನೆಯ ಶತಮಾನಗಳಲ್ಲಿ ದಕ್ಷಿಣ ಅರಬ ದೇಶದಿಂದ ಬಂದರು ಎಂದು ಹೇಳಲಾಗಿದೆ. ಇಲ್ಲಿ ಮೊದಲು 'ಗಾಲಾ' ಎಂಬವರು ವಾಸಿಸುತಿದ್ದರಂತೆ ೧೮೨೭ರಲ್ಲಿ ಬ್ರಿಟಿಷ ಈಸ್ಟ್ ಇಂಡಿಯಾ ಕಂಪೆನಿಯು ಇಲ್ಲಿನ ಪ್ರಜೆಗಳೊಡನೆ ಒಡಂಬಡಿಕೆಯನ್ನು ಮಾಡಿಕೊಂಡು ವ್ಯಾಪಾರಕ್ಕಾಗಿ ಇಲ್ಲಿನ ಬಂದರ ಸ್ಥಳಗಳನ್ನು ಉಪಯೋಗಿಸುವ ಸೌಲಭ್ಯ ಪಡೆಯಿತು. ಆದರೆ, ೧೮೮೪ರ ವರೆಗೆ ಐಗುಪ್ತ ಸೇನೆಗಳು ಇಲ್ಲಿದ್ದುವು. ಅನಂತರ ಸುಡಾನದಲ್ಲಿ ವಿದ್ರೋಹವೆದ್ದುದರಿಂದ ಈ ಸೇನೆಗಳು ತೊಲಗಿದುವು ಆಗ ಏಡನ್ ಆಖಾತದ ಎದುರಲ್ಲಿ ಬ್ರಿಟಿಷರು ತಮ್ಮ ಸಂರಕ್ಷಣಾ ದಳವನ್ನಿಸಿದರು.

ಅತ್ತ ಅತ್ಲಾಂತಿಕ ಮಹಾಸಾಗರದ ತಟದ ಎದುರಲ್ಲಿ ಇಟೆಲಿಯು ಬಂದು ನೆಲಸಿತು. ೧೮೮೯ರಲ್ಲಿ ಜಂಜೀಬಾರದ ಸುಲ್ತಾನನಿಂದ ಇಟೆಲಿಯು ಬೆನಾದಿರ ತಟವನ್ನು ಕೊಂಡುಕೊಂಡಿತು. ಬ್ರಿಟಿಷ ಭಾಗದ ಪಶ್ಚಿಮದಲ್ಲಿ ಫ್ರಾನ್ಸು ಅಧಿಕಾರ ಚಲಾಯಿಸಿತು. ೧೮೮೭ರಲ್ಲಿ ವಿಧಿವತ್ತಾಗಿ ಬ್ರಿಟನ್ನು ತನ್ನ ರಕ್ಷಣೆಗೆ ತೊಡಗಿತು. ೧೮೯೭ರ ವರೆಗೆ ಬ್ರಿಟನ್, ಫ್ರಾನ್ಸ್ ಮತ್ತು ಇಟೆಲಿಗಳು ತಮ್ಮ ಅನುಕೂಲತೆಗೆ ಸರಿಯಾಗಿ ತಂತಮ್ಮ ಭಾಗಗಳ ಸೀಮೆಗಳನ್ನು ಗುರುತಿಸುತಿದ್ದುವು. ೨೦ನೆ ಶತಮಾನದ ಆದಿಮ ವರ್ಷಗಳಲ್ಲಿ ಬ್ರಿಟಿಷ ಸೋಮಾಲೀ ಲೇಂಡಿನಲ್ಲಿ ವಿದ್ರೋಹದ ಬೆಂಕಿ ಉರಿದೆದ್ದಿತು, ಮುಹಮ್ಮದ ಬಿನ್ ಅಬ್ದುಲ್ಲಾ ಎಂಬವನಿದರ ನಾಯಕತ್ವ ವಹಿಸಿದ್ದನು. ಆದರೆ, ವಿದ್ರೋಹವನ್ನು ಸದೆ ಬಡಿಯುವುದರಲ್ಲಿ ಬ್ರಿಟಿಷರು ಸುಸಫಲರಾದರು. ಇದಾದ ನಂತರ ಇದರ ಪ್ರಶಾಸನವನ್ನು ನೇರವಾಗಿ ಬ್ರಿಟನ್ ಸರಕಾರವೇ ನಡೆಸ ತೊಡಗಿತು. ೧೯೪೦ ಬ್ರಿಟಿಷ ಭಾಗದ ಮೇಲೆ ಇಟೆಲಿಯ ಸೇನೆಯು ಧಾಳಿ ಮಾಡಿ ವಶಪಡಿಸಿತು. ಆದರೆ ಒಂದೇ ವರ್ಷದಲ್ಲಿ ಬ್ರಿಟಿಷರು ಮರಳಿ ಸೇನೆಯನ್ನು ತಂದು ತಮ್ಮ ವಸಾಹತವನ್ನು ಪುನಃ ಸ್ವಾಧೀನಕ್ಕೆ ತಂದು ಕೊಂಡರು.

ದ್ವಿತೀಯ ಜಾಗತಿಕ ಸಮರಾವಧಿಯಲ್ಲಿ ಆಂಗ್ಲ ಸೇನೆಯು ಇಟೇಲಿಯನ್ ಸೋಮಾಲಿಯಾದ ಮೇಲೆ ದಾಳಿಯಿಟ್ಟಿತು. ೧೯೪೯ರ ವರೆಗೆ ಅದರ ಮೇಲೆ ಅಧಿಕಾರ ನಡೆಸಿತು. ೧೯೫೦ರಲ್ಲಿ ಸಂಯುಕ್ತ ರಾಷ್ಟ್ರಸಂಘವು ಸುರಕ್ಷಿತ ಪ್ರದೇಶದ ರೂಪದಲ್ಲಿ ಸೋಮಾಲಿಯಾವನ್ನು ಇಟೆಲಿಗೆ ಮರಳಿಸಿತು. ಹತ್ತು ವರ್ಷಗಳ ಒಳಗೆ ಅದನ್ನು ಸ್ವಶಾಸನಾಧಿಕಾರ ಯೋಗ್ಯವಾಗಿಸುವಂತೆ ನಿರ್ದೇಶಿಸಿತು.

ಸ್ವಾಯತ್ತಾಧಿಕಾರದ ಪ್ರಗತಿಯು ಇಟೆಲಿಯ ಭಾಗದಲ್ಲಿ ದ್ರುತಗತಿಯಿಂದ ಮುನ್ನಡೆಯಿತು. ಇಲ್ಲಿ ೧೯೫೬ರಲ್ಲಿಯೇ ಸಾರ್ವತ್ರಿಕ ಚುನಾವಣೆಗಳು ನಡೆದುವು. ವಿಧಾನ ಸಭೆಯು ೭೦ ಸ್ಥಾನಗಳಲ್ಲಿ ೬೦ ಸೋಮಾಲೀ ಜನರಾಗಿದ್ದರು. ಸೋಮಾಲೀ ಯುವಕರು ೪೩ ಸ್ಥಾನಗಳನ್ನು ಗೆದ್ದಿದ್ದರು. ಅಂದಿನಿಂದಲೂ ಸೋಮಾಲೀಗಳೇ ಮಂತ್ರಿಮಂಡಳವನ್ನು ರಚಿಸಿರುವರು. ಸೋಮಾಲಿಯನರನ್ನು ಇಟೆಲಿಯ ರಾಜಧಾನಿ ಕಛೇರಿಯಲ್ಲಿ ಮಹತ್ವಪೂರ್ಣ ಪದಗಳಲ್ಲಿ ನಿಯೋಜಿಸಲಾಗುತ್ತಿದೆ ಅಲ್ಲದೇ ದೇಶದೊಳಗೂ ಪ್ರಶಾಸನದಲ್ಲಿ ಪ್ರಶಿಕ್ಷಣವನ್ನು ಪಡೆಯುತಿದ್ದಾರೆ. ಹೀಗೆ ಇಟೇಲಿಯನ್ ಸೋಮಾಲಿಯಾವು ಸಾಕಷ್ಟು ಮುಂದುವರಿದಿದೆ.

ಬ್ರಿಟಿಷ ಭಾಗದಲ್ಲಿ ೧೯೫೭ರಲ್ಲಿ ನಾಮಮಾತ್ರಕ್ಕೆ ವಿಧಾನ ಪರಿಷತ್ತು ಸ್ಥಾಪನೆಯಾಯಿತು. ಇದರಲ್ಲಿ ಗವರ್ನರರು ಸರ್ವಾಧಿಕಾರಿಯಾಗಿದ್ದು, ಸರಕಾರೇತರ ಕೆಲ ಸದಸ್ಯರಿದ್ದರು. ಸರಕಾರದ ಇಚ್ಛೆಯಂತೆಯೇ ಈ ಸದಸ್ಯರ ನಿಯುಕ್ತಿ ನಡೆಯುತಿತ್ತು. ಫೆಬ್ರುವರಿ ೧೯೬೦ರಲ್ಲಿ ವಿಧಾನ ಪರಿಷತ್ತಿನ ೩೩ ಸ್ಥಾನಗಳಿಗೆ ಸಾರ್ವತ್ರಿಕ ಚುನಾವಣೆಗಳು ನಡೆದುವು. ಇವುಗಳಲ್ಲಿ ೨೦ ಸ್ಥಾನಗಳನ್ನು ಸೋಮಾಲೀ ರಾಷ್ಟ್ರೀಯ ಲೀಗು ಜಯಿಸಿತು.

ಎರಡೂ ಭಾಗಗಳ ವಿಧಾನ ಸಭೆಗಳು ಏಕೀಕರಣದ ಗೊತ್ತುವಳಿಯನ್ನು ಮಂಜೂರು ಮಾಡಿದುವು. ಇದರ ಪರಿಣಾಮವಾಗಿಯೇ ಈ ಏಕೀಕರಣಕ್ಕೆ ಐತಿಹಾಸಿಕ ಸ್ವರೂಪವು ಬಂದಿತು.

ಸೋಮಾಲಿಯಾದ ಭೂಮಿಯು ಹೆಚ್ಚಾಗಿ ಮರುಭೂಮಿ ಸದೃಶವಾಗಿದೆ. ಇಲ್ಲಿ ಜೂಬಾ ಮತ್ತು ಶೇಬೇಲೀ ಎಂಬೆರಡು ಪ್ರಮುಖ ನದಿಗಳಿವೆ. ಇವು ದೇಶದ ದಕ್ಷಿಣ ಭಾಗದಲ್ಲಿವೆ. ನದಿಗಳ ಆಸುಪಾಸಿನಲ್ಲಿ ಕೃಷಿ ವ್ಯವಸಾಯ ನಡೆಯುತ್ತದೆ. ಹೆಚ್ಚಾಗಿ, ಜೋಳ, ಮೆಕ್ಕೆಜೋಳ ಮೊದಲಾದ ಹಿರೇ ಧಾನ್ಯಗಳು ಬೆಳೆಯುತ್ತವೆ. ದೇಶದ ಪೂರ್ವಭಾಗದಲ್ಲಿ ವಿಸ್ತಾರವಾದ ಮೈದಾನವು ಹರಡಿದೆ. ಇದು ೨೦೦ ಮೈಲು ಅಗಲವಿದೆ. ಉತ್ತರಕ್ಕೆ ಸರಿದಂತೆ ಸಂಕುಚಿತವಾಗುತ್ತ ಬರುತ್ತಿದೆ. ಅಷ್ಟು ಭೂಭಾಗವನ್ನುಳಿದರೆ ಉಳಿದುದೆಲ್ಲಾ ಪರ್ವತ ಪ್ರದೇಶವಾಗಿದೆ; ದಕ್ಷಿಣಕ್ಕೆ ಸರಿದಂತೆ ಇಳಿಜಾರಾಗಿದೆ. ಇಲ್ಲಿ ಹೆಚ್ಚಾಗಿ ಪಶುಪಾಲನೆಯು ನಡೆಯುತ್ತಿದೆ. ಹೆಚ್ಚಿನ ಸೋಮಾಲೀ ಜನರು ಈ ಪ್ರದೇಶದಲ್ಲಿ ನೆಲಸಿರುತ್ತಾರೆ; ಇವರ ಮುಖ್ಯ ಧರ್ಮ ಇಸ್ಲಾಂ. ಸೋಮಾಲಿಗಳಿಗೆ ಸ್ವತಂತ್ರ ಭಾಷೆಯೊಂದಿರುವುದಾದರೂ ಅದು ವಿಕಸಿತವಾಗಿರುವುದಿಲ್ಲ.

ಸೋಮಾಲಿಯಾವು ಆರ್ಥಿಕ ದೃಷ್ಟಿಯಿಂದ ಇಂದು ಹಿಂದುಳಿದುದಾದರೂ ಅದು ವಿಕಸಿತವಾಗುವ ಸಾಧ್ಯತೆಯಿದೆ. ಒಂದು ದಿನ ತನ್ನ ಮಹತ್ತ್ವವನ್ನು ಅದು ಪಡೆಯುವುದು. ಸ್ವಾತಂತ್ರ್ಯಾನಂತರದಲ್ಲಿ ಆದ ಎರಡೂ ಭಾಗಗಳ ಪುನರ್ಮಿಲನವು ಈ ಪ್ರಗತಿಪಥದಲ್ಲಿ ಇನ್ನೂ ಮುಂದುವರಿಯುವುದಕ್ಕೆ ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ.

(ಮೂಲ—ನವಭಾರತ ಟಾಯಿಮ್ಸ್)

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು

(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಪ್ರತಿಗಳು ಸಿಗುವ ಮುಖ್ಯ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ, ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ, ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: **ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.**

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೋ, ಉಡುಪಿ.

ಸುದ್ದಿ ಹರಟೆ

ಕಾಫಿ ಕುಡಿಯಬೇಡಿರಿ....!

ಎಳೆಯ ಬಾಲಕರಿಗೆ ಜೀವನ ಭದ್ರತೆಯ ದೃಷ್ಟಿಯಿಂದ ವ್ಯವಹಾರ್ಯವಾದೊಂದು ಸೂಚನೆ.

ಕಾಫಿಯನ್ನು ಕುಡಿದು ಸುಮಾರು ೨೦ ನಿಮಿಷಗಳ ವರೆಗೆ ಅದರ ಮಾದಕತೆಯು ಶಿಖರಕ್ಕೇರುತ್ತದೆ. ಅನಂತರ ಎರಡುವರೆ ತಾಸುಗಳ ವರೆಗೆ ಉಳಿದು ಆ ಬಳಿಕ ಕೂಡಲೆ ಮಾಯವಾಗುತ್ತದೆಯೆಂದು ಕಲ್ಕತ್ತ ವಿಶ್ವವಿದ್ಯಾಲಯದ ಕಾಫಿ ಸಂಶೋಧಕರು ಸಂಶೋಧಿಸಿರುವರಂತೆ. ಕಾಫಿಯಲ್ಲಿರುವ ಕ್ಯಾಫೀನ್ ಮಿದುಳಿನ ಮೇಲೆ ತೀವ್ರ ಪರಿಣಾಮವನ್ನು ಮಾಡುವುದೆಂದೂ, ಸಾಮಾನ್ಯ ಏಳು ಗಂಟೆಗೆ ಕಾಫಿ ಕುಡಿದರೆ, ಆ ಬಳಿಕ ಹತ್ತು ಗಂಟೆಗಳ ವರೆಗೆ ಕುಡಿದ ಕಾಫಿಯಿಂದ ಆಗುವ ಉತ್ತೇಜಕ ಪರಿಣಾಮವು ಬಹು ಸ್ವಲ್ಪವಾಗಿದೆಯೆಂದು ಸಂಶೋಧಕರು ವಿವರಿಸಿರುವರಂತೆ.

ಈ ಸಂಶೋಧನೆಯಿಂದಾಗಿ ಈಗ ಗಂಭೀರ ಪರಿಸ್ಥಿತಿ ನೆಲೆಗೊಳ್ಳುವಂತಾಗಿದೆ. ಮಾದಕ ಪದಾರ್ಥಗಳನ್ನು, ಅದರಲ್ಲೂ ಮದ್ಯಪಾನವನ್ನು ನಿಷೇಧಿಸಿದ ನಮ್ಮ ಸರಕಾರಕ್ಕೆ ಈ ವಿಚಾರ ತಿಳಿಯದಿರಲಿ ಎಂದು ಕಾಫೀ ಪ್ರಿಯರಾದ ನಾವೆಲ್ಲಾ (ನಿಮ್ಮನ್ನು ನಮ್ಮೊಂದಿಗೆ ಸೇರಿಸಿಕೊಳ್ಳಲಡ್ಡಿಯಿಲ್ಲ.) ಭಗವಂತನನ್ನು ಪ್ರಾರ್ಥಿಸುತ್ತೇವೆ. ನಾವು ಹೇಳಿದಂತೆ ಕೇಳುವ ಭಗವಂತನು ನಮ್ಮ ಪ್ರಾರ್ಥನೆಯನ್ನು ಮನ್ನಿಸುತ್ತಾನೆಂಬ ಅಚಲ ವಿಶ್ವಾಸ ನಮ್ಮಲ್ಲಿದೆ. ಒಂದು ಪಕ್ಷಕ್ಕೆ ಪ್ರಾರ್ಥನೆಗೆ ಮನ್ನಣೆ ದೊರಕದೆ ಹೋದರೂ ಲಂಚ (ಹರಕೆ) ವಿತ್ತಾದರೂ ಮನ್ನಣೆಯನ್ನು ದೊರಕಿಸಿಕೊಳ್ಳುವೆವೆಂಬ ಧೈರ್ಯನಮ್ಮ ಎದೆಯ ಒಂದೆಡೆ ಹುದುಗಿರದಿದ್ದೀತೆ?

ಪ್ರಾಚೀನ ಕಾಲದಲ್ಲಿ ಮದ್ಯವನ್ನು ಬ್ರಾಹ್ಮಣರೂ ಸೇವಿಸುತ್ತಿದ್ದರೆಂದು ನಮ್ಮ ಮಿತ್ರ ನೋಣ ಬ್ರಾಹ್ಮಣರು (None Brahmins) ಹೇಳುವುದನ್ನು ನಾನು ಕೇಳಿದ್ದೇನೆ. ಅವರು ತಮ್ಮ ಮಾತಿಗೆ ಸಂಸ್ಕೃತ ಶ್ಲೋಕದ ಆಧಾರಗಳನ್ನು ಕೊಡುತ್ತಾರೆ. ನಮ್ಮ ಮನೆಯಲ್ಲಿರುವ ತೊಂಬತ್ತು ವರ್ಷದ ಮುದಿ ಅಜ್ಜ ಹೇಳುವುದನ್ನು ನಾನು ಕೇಳಿದ್ದೇನೆ—ಅವರ ಕಾಲದಲ್ಲಿ ಮದ್ಯದ ಅಂಗಡಿ ಅಲ್ಲಲ್ಲಿ ತೆರೆದುಕೊಂಡಿದ್ದುವಂತೆ. ಜನರೆಲ್ಲ ಅಲ್ಲಿಗೆ ಹೋಗಿ ಮದ್ಯ ಕುಡಿಯುತ್ತಿದ್ದರಂತೆ. ನಮ್ಮ ಚರಿತ್ರೆ ಓದಿದ್ದ ಮಿತ್ರರೊಬ್ಬರು— "ಹಿಂದೆ ಮದ್ಯ ಕುಡಿಯುವವರಿಗಾಗಿ ಪ್ರತ್ಯೇಕ ಅಂಗಡಿ ತೆರೆದಿದ್ದುವು. ಅಲ್ಲಿಗೆ ಹೋಗಿ ಮದ್ಯ ಕುಡಿದವರು ಅಲ್ಲೇ ರಾತ್ರಿ ಕಳೆಯಬೇಕೆಂಬ ನಿಯಮವಿತ್ತು." ಎಂದು ಹೇಳಿದರು.

ಮೇಲಿನ ಮಾತುಗಳು ನನ್ನಲ್ಲಿ ಒಂದು ವಿಚಾರವನ್ನು ಹೊಡೆದೆಬ್ಬಿಸಿವೆ. ಇಂದು ನಾವು ಕಾಣುವ ಕಾಫಿ ಕ್ಲಬ್‌ಗಳಂತೆ ಹಿಂದೆ ಮದ್ಯ ಕ್ಲಬ್‌ಗಳು ಇದ್ದಿರಬಹುದೆ ಎಂಬ ಸಂದೇಹಕ್ಕೆಡೆಯಾಗಿದೆ. ಚಾ (Tea) ಪಾಯಸ, ಕಷಾಯ ಮೊದಲಾದ ಪಾನೀಯಗಳನ್ನು ಅಲ್ಲಿ ಮಾರುತ್ತಿದ್ದರೂ ಕಾಫಿ ಕ್ಲಬ್ ಎಂಬ ಹೆಸರು ಅದೇಕೆ ಬಂತೆಂದು ಹೇಳುವುದು ಈಗ ಸ್ವಲ್ಪ ಕಠಿಣವೇ ಆಗಿದೆಯೆನ್ನಬಹುದು. ಮದ್ಯ ಕ್ಲಬ್‌ಗಳಲ್ಲಿ ಅದಕ್ಕೆ ತೀರಾ ಹತ್ತಿರದ ಸಂಬಂಧಿಯಾದ ಮಾಂಸಾದಿಗಳನ್ನು ಮಾರುತ್ತಿದ್ದರೆನ್ನುವುದಕ್ಕೆ "ಮಧು ಮಾಂಸ" ಎಂಬ ಶಬ್ದವೇ ಸಾಕ್ಷಿ. ಮದ್ಯ ಕುಡಿದವರು ಮನೆಗೆ ರಾತ್ರಿಗೆ ಹೋಗುತ್ತಿರಲಿಲ್ಲವಂತೆ. ಈಗಲೂ ಹೋಟೇಲಲ್ಲಿ ಕಾಫಿ ಕುಡಿದವರು ರಾತ್ರಿ ಮನೆಗೆ ಹೋಗದೆ ಅಲ್ಲೇ ರೂಮ್ ಮಾಡಿ ಉಳಕೊಳ್ಳುವ ವ್ಯವಸ್ಥೆ ಕೂಡಾ ಇದೆಯಲ್ಲವೆ? ಅಂತೂ ಈಗಿನ ಕಾಫಿ ಕ್ಲಬ್‌ಗಳು ಮದ್ಯ ಕ್ಲಬ್‌ಗಳ ರೂಪಾಂತರವೆಂದು ದೃಢವಾಗಿ ಊಹಿಸದೆ ಹೋದರೆ ತಪ್ಪಾದೀತೆನ್ನದೆ ವಿಧಿಯಿಲ್ಲ.

ಮಹಾತ್ಮಾ ಗಾಂಧೀಜಿಯವರಿಂದ ಆಶ್ರಯ ಪಡೆದುಕೊಂಡ ನಮ್ಮ ಕಾಂಗ್ರೇಸು ಸರಕಾರ ಮದ್ಯಪಾನ ನಿಷೇಧ ಕಾಯಿದೆಯನ್ನು ಅನ್ವಯಿಸಿ ಪುಣ್ಯವನ್ನು ಕಟ್ಟಿಕೊಂಡಿತು. ಆದರಿಂದಾಗಿ ಎಲ್ಲಾ ಪ್ರಾಂತಗಳಲ್ಲೂ ಒಂದೊಂದು ಮಂತ್ರಿಪದವಿ ಹೆಚ್ಚಿತು. ನಿರುದ್ಯೋಗದಿಂದ ನರಳುವವರಿಗೆ ಸಂಬಳ ಮತ್ತು ಕೈಬತ್ತೆ (ತುಟ್ಟಿಬತ್ತೆ ಅಲ್ಲ) ಸಿಗುವ ಸುಲಭದ ಉದ್ಯೋಗ ದೊರಕುವಂತಾಯಿತು. ಮದ್ಯದ ಅಂಗಡಿಗಳನ್ನು ಮುಚ್ಚಿದ್ದರಿಂದ ಹೊಲಸು ಸ್ಥಳಗಳಿಗೆ ಖಾಯಿಷಿ (ಡಿಮಂಡ?) ಬರುವಂತಾಯಿತು. ಇನ್ನು ಕೆಲವು ಅಯೋಗ್ಯರೂ ಅಲ್ಪಮತಿಗಳೂ ಲಕ್ಷಾಧೀಶರಾಗುವಂತಾಯಿತು.

೦೦ ೦೦ ೦೦

ಈ ಸಂಶೋಧಕರ ಸಂಶೋಧನೆ ಕಾಫಿ ಕುಡಿಯುವ ನನ್ನನ್ನು ಚಿಂತೆಗೀಡು ಮಾಡಿದೆ. ಮದ್ಯದಂಗಡಿಗಳ ಪರಿವರ್ತಿತ ರೂಪವೇ ಕಾಫಿ ಕ್ಲಬ್‌ಗಳೆಂದಾಗ ಜಗತ್ತಿನಲ್ಲಿ ಬದುಕುವ ಆಸೆಯು ನನಗೆ ಕಡಿಮೆಯಾಗುತ್ತಿದೆ. ಮುಂದೆ, ಇಂದೆ ಅಲ್ಲದೆ ಹೋದರೂ ಮುಂದೆ ಮುಂದೆ....ಸರಕಾರವು ಮದ್ಯಪಾನ ನಿಷೇಧವನ್ನು ಜ್ಯಾರಿಗೊಳಿಸಿದಂತೆ ಕಾಫಿಪಾನ ನಿರೋಧವನ್ನು ಮಾಡೀತೆ ಎಂಬ ಭಯ ನನ್ನಲ್ಲಿ ಮೂಡಿದೆ. ಮುಂದೆ ಹೀಗಾದಲ್ಲಿ ನನ್ನಂತೆ ನಿಮ್ಮಲ್ಲಿ ಅನೇಕರು ಜೀವನದಲ್ಲಿ ನಿರಾಶರಾಗದಿರಲಾರಿರಿ. ಹೋಟೇಲು ಸಾಹುಕಾರರು ಮದ್ಯ ಸಾಹುಕಾರರಂತೆ ಲಕ್ಷಾಧೀಶರಾಗುತ್ತಿದ್ದಾರೆ. ಮದ್ಯಕ್ಕೂ ಕಾಫಿಗೂ ನಿಕಟ ಸಂಬಂಧವಿದ್ದಂತೆ ನನಗೆ ಭಾಸವಾಗುತ್ತದೆ. ಆದ್ದರಿಂದ ಹಣ ಮಾಡುವವರು ಕಾಫಿ ಕ್ಲಬ್‌ಗಳಿಂದ ಬೇಗನೆ ಮಾಡುವುದು ಚಿತವೆಂದೇ ಹೇಳಬಹುದು. ಮುಂದೆ ಶಾಸನವಾದರೆ ಎಲ್ಲರಿಗೂ ತೊಂದರೆ. ಆದ್ದರಿಂದ ಬೇಗ ಬೇಗನೆ ಹಣ ಮಾಡುವವರು ಮಾಡಿದರೆ ಸಾಕಷ್ಟು ದಾನ ಮಾಡಿಯೊ ಇಲ್ಲವಾದರೆ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿಯೋ ಆ ಶಾಸನಬರುವುದರೊಳಗಾಗಿ ಪುಣ್ಯಕಟ್ಟಿಕೊಳ್ಳಬಹುದು. ಈ ಪುಣ್ಯದಿಂದಲಾದರೂ ಪಾಪರೂಪವಾದ ಶಾಸನ ಹಿಂದೆ ಬೀಳಬಹುದೆಂದು ನಿರೀಕ್ಷಿಸಬಹುದು.

ಇದುತನಕ ನಾನು ಬೆಳಗ್ಗೆ ಕಾಫಿ ಕುಡಿದರೆ ಸಾಯಂಕಾಲ ಪುನಃ ಕಾಫಿ ಕುಡಿಯುತ್ತಿದ್ದೆನು. ಸಾಮಾನ್ಯ ಎಂಟು ಹತ್ತು ಗಂಟೆಗಳ ವರೆಗೆ ಅದರ ಉತ್ತೇಜಿತ ಪರಿಣಾಮ ಉಳಿಯುತ್ತಿತ್ತು. ಆದರೆ ಈಗ ಈ ಶೋಧಕರ ಮಾತು ನನ್ನ ಕಿವಿಗೆ ತಲಪಿದ ನಂತರ ಕಾಫಿ ಕುಡಿದು ಎರಡೇ ಗಂಟೆಗಳಲ್ಲಿ ಅದರ ಉತ್ತೇಜಕತನವನ್ನು ಕಳೆದುಕೊಳ್ಳುವಂತಾಗಿದೆ. ಸರಾಸರಿ ಮೂರು ಗಂಟೆಗಳಿಗೊಮ್ಮೆ ಕಾಫಿ ಕುಡಿಯಬೇಕೆಂಬ ಅವರ ಮಾತು ಹೋಟೆಲು ಸಾಹುಕಾರರು ಗಮನಿಸಬೇಕಾದ್ದೆ ಆಗಿದೆ. ನಾವಂತೂ ಗಮನಹರಿಸಿಯೆ ತೀರುವೆವು. ನಮ್ಮ ಗಮನ ಅತ್ತ ತೆರಳಿದರೆ ಅವರೂ ಅತ್ತ ಗಮನಹರಿಯಿಸಿದರೆ ಸಮಸ್ಯೆ ಪರಿಹಾರವಾದಂತೆಯೇ.

ನಮ್ಮ ಎಳೆಯರಿಗೆ ನನ್ನದೊಂದು ಸೂಚನೆ. ನೀವು ಆದಷ್ಟು ಕಾಫಿ ಕುಡಿಯುವುದನ್ನು ಕಡಿಮೆ ಮಾಡಿಕೊಂಡು ಮುಂದೆ ಬರುವ ವಿಪತ್ತಿಗೆ ಸಿದ್ಧರಾಗಬೇಕು. ಕಾಫಿ ಬದಲು ಚಾ ಕುಡಿಯುತ್ತೇನೆಂದು ಹೇಳಬೇಡಿ. ಸಂಶೋಧಕರು ಅದನ್ನು ಸಂಶೋಧಿಸದೆ ಬಿಟ್ಟಾರೆಂದು ನಾನು ತಿಳಿಯುವುದಿಲ್ಲ. ಆದ್ದರಿಂದ ನೀವು ಒಂದೂ ಕಷಾಯ ಇಲ್ಲವೆ ಶುದ್ಧ ಹಾಲು ಇವುಗಳನ್ನೆ ಉಪಯೋಗಿಸಿಕೊಂಡು ಜೀವನವನ್ನು ಭದ್ರವಾಗಿರಿಸಿಕೊಳ್ಳಲು ಈಗಲೇ ಕಲಿಯಬೇಕು.

೦೦ ೦೦

ಎಪ್ಪತ್ತು ವರ್ಷ ವಯಸ್ಸುಮೀರಿದ ನಿರ್ಗತಿಕ ವೃದ್ಧರಿಗೆ ತಿಂಗಳೊಂದರ ಹದಿನೈದು ರೂಪಾಯಿಗಳನ್ನು ಕೊಡಲು ಕೇರಳ ಸರಕಾರವು ನಿರ್ಧರಿಸಿದೆಯೆಂದು ಕೇರಳದ ಉಪ ಮುಖ್ಯಮಂತ್ರಿ ಶ್ರೀ ಆರ್. ಶಂಕರ್ ಹೇಳಿರುವರೆಂದು ಸುದ್ದಿ.

— ... "ಗತಿವಿಹೀನರಿಗಕಟ ನೀನೆ ಗತಿಕಣಾಪತಿ ಕರಿಸಿಕೊಡು ಸದ್ಗತಿಯ...." ಎಂಬ ಕನಕದಾಸರ ಉಕ್ತಿಗೆ ಕೇರಳ ಸರಕಾರವು ಅಪವಾದವಾಗಿದೆ. ನಿರ್ಗತಿಕರಿಗೆ ಗತಿ ಕಾಣಿಸುವವನು ದೇವರೆಂದು ಮೇಲಿನ ಪದ್ಯದಲ್ಲಿ ಅಭಿಪ್ರಾಯಪಡಲಾಗಿದೆ. ದೇವರ ಹೊಣೆಯನ್ನು ಅಲ್ಲಿ ಸರಕಾರ ವಹಿಸಿಕೊಂಡಿದೆ. ಆದಷ್ಟು ದೇವರ ಹೊಣೆಯನ್ನು ಕಡಿಮೆಮಾಡಿ ಕೊನೆಗೆ ದೇವರೇ ಬೇಡವೆಂದು ತೀರ್ಮಾನಿಸಬೇಕೆಂದು ಸರಕಾರ ಬಯಸಿದಂತಿದೆ. ಆದರೆ ಮಾಜಿ ಸರಕಾರ ಹಾಗೆ ಬಯಸಿದ್ದರೆ ಯಾರೂ ಅಪಾರ್ಥ ಕಟ್ಟಿಕೊಳ್ಳಲು ಅವಕಾಶವೇ ಯಿರಲಿಲ್ಲವಲ್ಲವೆ?

—ಕುಂತಳಾಪ್ರಿಯ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನನಿತ್ಯ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕವನ್ನು ಬುಕ್‌ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

NAVAYUGA' WEEKLY is in the list of periodicals and Newspapers approved or use in Secondarys School as per proceedings Roc. No. 466 N/50 date 2-12-1950 of the Director of public Instruction Madras.

ಗೃಹವಿಜ್ಞಾನ

(೩ನೇ ಪುಟದಿಂದ)

ದ, ಕೈಕಾಲು ತೊಳೆದ ಬಚ್ಚಲು ನೀರು ಕೊಳೆತು ಕೊಚ್ಚೆಯಾಗಿ ವಾಸನೆ ಎಬ್ಬಿಸುವುದಿಲ್ಲ. ಗಿಡಮರಗಳ ಬೇರುಗಳು ದುರ್ವಾಸನೆಯನ್ನು ಜೀರ್ಣಿಸಿಕೊಳ್ಳುತ್ತವೆ. ಒಳ್ಳೆಯ ಗಾಳಿಗೂ ಅವಕಾಶ. ತೋಟವನ್ನು ಬೆಳೆಸಲು ಸ್ವಲ್ಪ ಪರಿಶ್ರಮ ಮಾಡಬೇಕಾಗುವುದರಿಂದ ಸಮಯಕ್ಕೂ ಬೆಲೆ ಬಂದ ಹಾಗಾಗುತ್ತದೆ. ದಾರಿದ್ರ್ಯಕಾರಕವಾದ ಉದಾಸೀನತೆಗೆ ಎಡೆಯೇ ಇರುವುದಿಲ್ಲ. ದೊಡ್ಡಸ್ತಿಗೆ ಬಡಸ್ತಿಕೆಗಳೂ] ಈ ಕೆಲಸಕ್ಕೆ ಅಡ್ಡ ಬರುವುದಿಲ್ಲ.

ಭೂ ಸೇವೆ, ಗೋ ಸೇವೆಗಳು ಯಾರಿಗೂ ಮಾಡಬಹುದಾದ ಮನೆಗೆಲಸಗಳು. ಬೆಳೆಯುವ ಮಕ್ಕಳನ್ನೂ ಅವುಗಳಲ್ಲಿ ಶರಬೇತಿಗೊಳಿಸಿ, ಅವರನ್ನು ಉದ್ಯೋಗಶೀಲರನ್ನಾಗಿ ಮಾಡಬೇಕಾದ್ದು ಪ್ರತೀ ಗೃಹಸ್ಥನ ಕರ್ತವ್ಯ.

ತೋಟಗಾರಿಕೆಯಿಂದ ಮನೆಗೆ ಅಂದ, ಮನಸ್ಸಿಗೆ ಆನಂದ, ದೇಹಕ್ಕೆ ಆರೋಗ್ಯ ಇವು ಒಂದೇ ಬಾರಿಗೆ ಸಿಕ್ಕುವಹಾಗಾಗುತ್ತವೆ. ತುಲಸಿ, ಪಚ್ಚೆಗೊನೆ, ಅಮೃತಬಳ್ಳಿ ಮೊದಲಾದ ಗಿಡಮೂಲಿಕೆಗಳು ಪ್ರತಿ ಮನೆಯಲ್ಲಿಯೂ ಇರಬೇಕು. ಅವುಗಳಿಂದ ಬರುವ ಗಾಳಿಗೆ ವಿಷ ಕ್ರಿಮಿಗಳನ್ನು ತಡೆಯುವ ಶಕ್ತಿಯುಂಟು.

ನಿಮ್ಮದು ಗುಡಿಸಲೇ ಆಗಿರಲಿ; ಅದು ಒಳಗೂ ಹೊರಗೂ ಶುಭ್ರವಾಗಿ ನಿಮ್ಮ ಕೆಲಸಕ್ಕೆ ಸಾಕ್ಷಿಯಾಗಿರಲಿ.

ಮಕ್ಕಳ ಕಣ್ಣುಗಳು

“ಸರ್ವೇಂದ್ರಿಯಾಣಾಂ ನಯನಂ ಪ್ರಧಾನಮ್” ಎಂದು ಹಿರಿಯರ ವಾಕ್ಯ. ಅಂದರೆ ನಮ್ಮ ದೇಹದ ಎಲ್ಲಾ ಅವಯವಗಳಿಗಿಂತ ಕಣ್ಣೇ ಮುಖ್ಯವಾದುದೆಂದು ಅರ್ಥ. ಆದ್ದರಿಂದ ಮಕ್ಕಳ ಕಣ್ಣಿನ ಬಗ್ಗೆ ನಾಲ್ಕು ಮಾತುಗಳನ್ನು ಮೊದಲು ಹೇಳುತ್ತೇನೆ.

ಮಕ್ಕಳ ಕಣ್ಣುಗಳನ್ನು ಕುರಿತು ಪ್ರತ್ಯೇಕ ಎಚ್ಚರಿಕೆ ತೆಗೆದುಕೊಳ್ಳಬೇಕಾದ್ದು ಅತ್ಯಾವಶ್ಯಕ. ಚಿಕ್ಕಂದಿನಲ್ಲೇ ಕಣ್ಣಿನ ಬಗ್ಗೆ ಎಚ್ಚರಿಕೆ ತೆಗೆದುಕೊಂಡರೆ ದೊಡ್ಡವರಾದಾಗ ಕಣ್ಣಿನ ಬಾಧೆಗೆ ತುತ್ತಾಗುವುದಿಲ್ಲ.

ಕಣ್ಣುಗಳ ರಚನೆ ಬಹಳ ಸೂಕ್ಷ್ಮವಾಗಿದೆ. ಪ್ರಕೃತಿಯೇ ಕಣ್ಣುಗಳ ಬಗ್ಗೆ ಜಾಗರೂಕತೆ ವಹಿಸಿಕೊಂಡು ರಚನೆ ಮಾಡಿದೆ. ಆ ಜಾಗರೂಕತೆಯನ್ನು ಸಂರಕ್ಷಿಸಿಕೊಂಡು ಬರಬೇಕಾದುದೇ ನಮ್ಮ ಕರ್ತವ್ಯ.

ಅತಿ ಬೆಳಕು ಕಣ್ಣಿಗೆ ಕೆಡುಕಾದ್ದರಿಂದಲೇ ಅದನ್ನು ನೋಡಲಿಕ್ಕಾಗುವುದಿಲ್ಲ. ಆಗ ಕಣ್ಣು ಮುಚ್ಚಿಕೊಳ್ಳುತ್ತದೆ, ಬಲವಂತದಿಂದ ನೋಡಲೆತ್ನಿಸುವುದು ಒಳ್ಳೆಯದಲ್ಲ. ಮಗು ಯಾವಾಗಲೂ ಹಸಿರು ದೃಶ್ಯಗಳನ್ನೂ ನೀಲಾಕಾಶವನ್ನೂ ನೋಡುವಂತಿರಬೇಕು. ಆದರೆ ಬಿಸಿಲಿನ ನೋಟ ಒಳ್ಳೆಯದಲ್ಲ. ಸೌಮ್ಯ ಪ್ರಕಾಶವೇ ಮಕ್ಕಳ ಕಣ್ಣಿಗೆ ಹಿತಕರ. ತೀಕ್ಷ್ಣ ಪ್ರಕಾಶದಲ್ಲಿ ಮಕ್ಕಳನ್ನು ಇಡುವುದರಿಂದ ಅವುಗಳ ಕಣ್ಣಿಗೆ ಒತ್ತಾಯ ಮಾಡಿದ ಹಾಗಾಗುತ್ತದೆ.

ತೀರ ಚಿಕ್ಕಂದಿನಲ್ಲಿಯೇ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಬೇಡಿ, ಓದಿಸಬೇಡಿ. ಸಾಮಾನ್ಯವಾಗಿ ಐದು ವರ್ಷ ತುಂಬಿದ ಮೇಲೆಯೇ ಮಕ್ಕಳ ಓದು ಬರೆಹ ಪ್ರಾರಂಭವಾದರೆ ಸಾಕು. ಚಿಕ್ಕ ಅಕ್ಷರಗಳು ಮಕ್ಕಳ ಕಣ್ಣಿಗೆ ಶ್ರಮನೀಯುತ್ತವೆ. ಆದ್ದರಿಂದ ದೊಡ್ಡ ಅಕ್ಷರಗಳನ್ನೇ ಮಕ್ಕಳಿಂದ ಬರೆಸಿ ತಿದ್ದಿಸಬೇಕೆಂದು ಹಿರಿಯರು ಹೇಳುತ್ತಾರೆ.

ಕಣ್ಣು ಕುಕ್ಕುವ ಪ್ರಕಾಶವು ಹೇಗೆ ಮಕ್ಕಳ ಕಣ್ಣಿಗೆ ಅಪಾಯವೋ ಹಾಗೆಯೇ ಬೇರೆಯವರು ಮಕ್ಕಳನ್ನು “ದೃಷ್ಟಿ ಬೀಳುವ” ಹಾಗೆ ನೋಡುವುದೂ ಅಪಾಯವೇ. ಕಣ್ಣುಗಳಲ್ಲಿರುವ ವಿದ್ಯುತ್ತು ಮಕ್ಕಳ ಮುಖವನ್ನು ಬಾಡಿಸುವಂತಹುದೆಂದು ವಿಜ್ಞಾನಿಗಳು ಹೇಳುತ್ತಾರೆ. ಇದನ್ನೆ ನಮ್ಮ ಹಿರಿಯರು “ಮಗುವಿಗೆ ದೃಷ್ಟಿಯಾಯಿತು” ಎಂದರು. ಅಲ್ಲದೆ ನಾವು ಮಕ್ಕಳ ಮುಖವನ್ನು ದೃಷ್ಟಿಯಿಟ್ಟು ನೋಡಿದರೆ ಆ ಮಕ್ಕಳೂ ನಮ್ಮ ಹಾಗೆಯೇ ನೋಡಲು ಅಭ್ಯಾಸ ಮಾಡುತ್ತವೆ. ಹಾಗೆ ಮಾಡಿದ ಮಕ್ಕಳು ಕ್ರಮೇಣ ‘ಪೋಲೀ ಕಣ್ಣ’ಗಳಾದಾವು. ಏನಾದರೂ ಹೇಳುವಾಗ ಆಶ್ಚರ್ಯದ ವಿಷಯ ಬಂದರೆ “ಕಣ್ಣು ಮುಚ್ಚಿಕೊಳ್ಳಿ” ಎಂದು ಮಕ್ಕಳಿಗೆ ಹೇಳುವುದುಂಟು.

ಬೆಳಗ್ಗಿನ ವೇಳೆ ಮಕ್ಕಳು ನಿದ್ದೆಯಿಂದ ಏಳುವಾಗ ಅವುಗಳ ಮುಖಕ್ಕೆ ಸೂರ್ಯಕಿರಣ ಬೀಳುತ್ತಿರಬಾರದು. ಮಕ್ಕಳ ಕಣ್ಣಿನ ರೆಪ್ಪೆಯಲ್ಲಿ ಏನಾದರೂ ಬಾವು ತೋರಿದರೆ, ಅಥವಾ ಕೆಂಪಾದರೆ ಅಲಕ್ಷ್ಯ ಮಾಡಬಾರದು. ಒಂದು ವೇಳೆ ಆಹಾರದಲ್ಲಿ ಏನಾದರೂ ವಿಟಮಿನ್ (ಜೀವಸತ್ವ) ಕಡಮೆಯಾದಾಗ ಹೀಗಾಗುವುದುಂಟು. ಹೀಗೆ ಆದಾಗ ಹದ ಬಿಸಿಯಾದ ಶಾಖವನ್ನು ಕೊಡಬಹುದು. ಹಾಗೆ ಅದು ಕಡಮೆಯಾಗದಿದ್ದರೆ ವೈದ್ಯರ ಸಲಹೆ ಪಡೆಯಬೇಕು.

ಆರೋಗ್ಯ ಶಾಲಿಯು ಕಣ್ಣಿಗೆ ಶುದ್ಧವಾದ ತಣ್ಣೀರನ್ನು ದೂರದಿಂದ ಬಡಿದುಕೊಳ್ಳುವುದೊಂದು ಒಳ್ಳೆಯ ಅಭ್ಯಾಸ ಆದರಿಂದ ಕಣ್ಣಿಗೆ ಸೊಗಸಾಗುತ್ತದೆ; ಬಲ ಕೂಡುತ್ತದೆ.

ವಾರಕ್ಕೊಂದಾವರ್ತಿ ಅಥವಾ ಎರಡಾವರ್ತಿ ಮಕ್ಕಳಿಗೆ ಎಣ್ಣೆ ಹಚ್ಚಿ ಸ್ನಾನ ಮಾಡಿಸುವುದರಿಂದ ಕಣ್ಣಿಗೆ ಹಿತವಿದೆಯೆಂದು ಹಿರಿಯರ ಮತ. ಆದರೆ ಇದರಲ್ಲಿ ಕ್ರಮ ತಪ್ಪಿಸಬಾರದು. ಇನ್ನೊಂದು ಮುಖ್ಯ ವಿಷಯವೇನೆಂದರೆ, ಯಾವ ಕಾರಣವೂ ಇಲ್ಲದೆ ಅಂಗಡಿಗಳಲ್ಲಿ ಸಿಕ್ಕುವ ಆಟದ ಕಣ್ಣಡಕಗಳನ್ನು ಮಕ್ಕಳ ಕಣ್ಣಿಗೆ ಹಾಕಿಸಬಾರದು. ಅದರಿಂದ ಕಣ್ಣಡಕವೇ ವ್ಯಥಾ ಅಭ್ಯಾಸವಾಗಿಬಿಡುವ ಸಂಭವವುಂಟು.

ಹಸುಗೂಸಿನ ತಾಯಿಯರು ರಾತ್ರಿ ನಿಸ್ತ್ರೆಕೆಡುವ ಆಟ ನೋಟಗಳಿಗೆ ಹೋಗಬಾರದು. ಹೋದರೂ ಮಕ್ಕಳನ್ನು ಕರೆದೊಯ್ಯಬಾರದು. ಮಕ್ಕಳ ಕಣ್ಣಿನ ಆರೋಗ್ಯಕ್ಕೆ ಸುಖನಿದ್ರೆಯೂ ಅತೀ ಆಗತ್ಯ.

(ಮುಂದುವರಿಯುವುದು)

ಮೂರು ಸಮ್ಮೇಳನಗಳು

ಮೇಲಿನ ನೋಟ— ನವದೆಹಲಿಯ ವಿಜ್ಞಾನ ಭವನದಲ್ಲಿ ರಾಷ್ಟ್ರಪತಿ ಡಾ। ರಾಜೇಂದ್ರ ಪ್ರಸಾದರು ೧೧ನೆಯ ಅಂತಾರಾಷ್ಟ್ರೀಯ ವ್ಯವಸಾಯ ಸಮ್ಮೇಳನವನ್ನು ಉದ್ಘಾಟಿಸುತ್ತಿದ್ದಾರೆ.

ನಡುವಣ ನೋಟ—ನವದೆಹಲಿಯಲ್ಲಿ ಎರಡನೆಯ ಅಸ್ಮನ್ ಯುವಕ ಮಂಡಳವನ್ನು ಉಪರಾಷ್ಟ್ರಪತಿ ಡಾ! ಎಸ್. ರಾಧಾಕೃಷ್ಣನರು ಉದ್ಘಾಟಿಸುತ್ತಿದ್ದಾರೆ.

ಕೆಳಗಿನ ದೃಶ್ಯ— ನವದೆಹಲಿಯ ವಿಜ್ಞಾನ ಭವನದಲ್ಲಿ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರುರವರು ದ್ವಿತೀಯ ಅಂತಾರಾಷ್ಟ್ರೀಯ ನ್ಯಾಯಶಾಸ್ತ್ರಜ್ಞರ ಅಧಿವೇಶನವನ್ನು ಕುರಿತು ಭಾಷಣ ಮಾಡುತ್ತಿದ್ದಾರೆ.



ಕುಮಾರಿ ಜಿಲ್ಲಿಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಥಾವಿಹಾರ

(೨ನೇ ಪುಟದಿಂದ)

ಗೆ ತೋಟದಲ್ಲೇ ಅರಳಿದ ಗುಲಾಬಿ ಮುಡಿದು ನನ್ನ ಕೋಣೆ ಬಾಗಿಲ್ನಲ್ಲಿ ಬಂದು ನಿಂತಳು.

ರಮಾ ಬ್ಯೂಟಿಫುಲ್ ಅಂತನಲ್ಲಾ. ನಾನು ಹೇಳಿದ್ದು ಸುಳ್ಳಲ್ಲ. ಅವಳ ಬ್ಯೂಟೀನ ಕಾಂಗ್ರೋಕೆ ಇಂಥದ್ದೆಲ್ಲಾ ಅಪರೂಪ ಸಂದರ್ಭ ಸಂದರ್ಭಗಳಲ್ಲಿ ಮಾತ್ರಾ ಛಾನ್ಸ್. ಬೇರೆ ದಿನಗಳಲ್ಲಿ ಥೇಟ್ ಕರಿ, ಮಸಿ, ಬೆವರೆಣ್ಣೆಗಳ ಮೂರ್ತಿ!

ಆದರೆ ಈಗ ಮಾತ್ರ ಯಾವ ನಟಿಗಿಂತಲೂ ಕಡಿಮೆ ನನ್ನ ರಮಾ, ಎಂದು ನನ್ನಲ್ಲೇ ಅಂದುಕೊಂಡೆ.

ಬಾಗಿಲಿಗೆ ಆನಿಸಿ ಹಿಡಿದ ಕೈಹಿಡಿದು ಒಳಗೆಳೆದು, ತುಟಿಗೆ ತೆಳ್ಳನೆ ಮುತ್ತಿಟ್ಟೆ.

'ನೀನು ಎಷ್ಟು ಸುಂದರಿ ರಮಾ' ಅಂದೆ.

'ಹೋಗೀಂದ್ರೆ ನಿಮ್ಗೆ ಯಾವಾಗ್ಲೂ ಹಾಸ್ಯ. (ಹೊಸದಾದ ಈ ವಾಕ್ಯ ನನ್ನೆಲ್ಲೋ ಕಾದಂಬರೀಲಿ ಓದಿದ್ದಾಗೆ ನೆನಪು. ಬಹುಶಃ ಅ. ನ. ಕೃ. ಅವರದ್ದರಲ್ಲೇ ಇರಬೇಕು.) ಇದರಲ್ಲೇನು ವಿಶೇಷವಿಲ್ಲ. ಕೆಲವೊಮ್ಮೆ ನಮ್ಮ ಸಂಭಾಷಣೆಯ ವಾಕ್ಯಗಳು, ನಮ್ಮ ವರ್ತನೆಯೆಲ್ಲಾ ಕಾದಂಬರಿಗಳಲ್ಲಿದ್ದಾಗೇ ಆಗೋದಿದೆ. ಅದೂ ವಾಸ್ತವಿಕ ಚಿತ್ರಣ ತಾನೆ?

ಅಂತೂ ಫಸ್ಟ್ ಶೋವಿಗೆ ಹೋದೆವು. ಸಿನಿಮಾ ಚೆನ್ನಾಗಿತ್ತು.

೦೦ ೦೦ ೦೦

'ಇಲ್ಲಿ ಕೇಳೀಂಪ್ರೆ...' ನಾನು ಹಳೇ ರಶೀದಿ, ಕಾಗದ, ಪಟ್ಟಿಗಳನ್ನೆಲ್ಲಾ ಪೆಟ್ಟಿಗೆಯಿಂದ ತೆಗೆದು ಒಮ್ಮೆ ಓದಿ, ಪರೀಕ್ಷಿಸಿ ಹೊರಗೆಸೆಯುತ್ತಿದ್ದೆ. ರಮಾ ಬಂದು ಅಲ್ಲೇ ಕುಳಿತುಕೊಂಡು.

'ನೋಡೀಂದ್ರೆ.........(ಅಯ್ಯೋ ಇವಳ ಇಂದ್ರೆಯೆ!) ನಿನ್ನೆ ಬಿಟ್ರು....ಅವ್ರೇ ನಿಮ್ಮ ಫೀಸು ಕ್ಲಾರ್ಕ್....'

'ಆಫೀಸು ಕ್ಲಾರ್ಕ್ sss....' ನಾನು ಟಂಗನೆದ್ದು ಕುಳಿತೆ.

'ಹೌದೂಂದ್ರೆ ನಿಮ್ಮ ಫೀಸು ಕ್ಲಾರ್ಕಂತ ಕಾಣುತ್ತೆ. ದಪ್ಪ ಕನ್ನಡ್ಕ, ಹಿಡಿಂಬಿಯ ಜುಟ್ಟಿನ ಹಾಗಿದ್ದ ತುರುಬು....'

'ಹಾಂ....ಕ್ಲಾರ್ಕಲ್ಲ. ಟೈಪಿಸ್ಟ್! ಏನು, ಏನು?'

'ಏನಿಲ್ಲಿ. ನಿನ್ನೆ ಪೇಟೆಗೆ ತರಕಾರಿ ತರೋಕೇಂತ ಹೋಗಿದ್ದೆ. ಆಗ ಎಂ. ಕೆ. ರೋಡ್ನಲ್ಲಿ ಡಬ್ಲ್ ಅಂತ ಬೈಕಿನ್ಮೇಲೆ ಬಂದಳೊಂದ್ರೆ...."

'ಬೈಕಿನ್ಮೇಲೆ...'

'ಹೌದೊಂದ್ರೆ....ಅವಳ ಗಂಡನೂ ಇದ್ದ. ಇಬ್ರೂ ಇಳ್ದು 'ರಂಭಾ ವಿಲಾಸಕ್ಕೆ' ಹತ್ತಿದರೂಂದ್ರೆ. ಆಗ ನಾನು ದಾರೀಲಿ ಎದುರ್ಬಿದ್ದೆ. ನನ್ನ ಗ್ರಹಚಾರಕ್ಕೆ..."

'ಏನು, ಏನಾಯಿತು?'

'ಆ ಅಂಚು ದಪ್ಪದ ಕನ್ನಡ್ಕದಡಿಯಿಂದ ನೋಡುತ್ತಾ ನೀವು ಮಿ| ಗೋಪಾಲರ ವೈಫೆ? ಅಂದ್ಲು"

'ಅಬ್ಬಾ ಭಾರೀ ಶಾರ್ಪ್, ಭಾರೀ ಶಾರ್ಪ್! ಅವಳೇ ಅರೀಂಚು ದಪ್ಪದ ಕನ್ನಡ್ಕದಲ್ಲಿ ನೂರಡಿ ಉದ್ದಕ್ಕೆ ಮೂಗಿನಿಮಿಷದಲ್ಲಿ ಹಾಂವ್ಯಳು, ಆಂ, ಆಂ ...ಮತ್ತೇನಾಯ್ತು?'

'ಹೌದು ಅಂದೆ".

'ಪೇಟೆಗ್ಹೊರಟಿದ್ದೀರಾ. ಇದೇನು ಬಾಗ್ನಲ್ಲಿ' ಅಂದ್ಲು.

'ಮನೆಗ್ಹೋಗ್ತಿದೀನಿ. ಇದು......ತರಕಾರೀ. ಮಕ್ಳಿಗೆ ಬೇಕಾದ್ದು ಬೇರೆ ಏನಿಲ್ಲಾ....' ಅಂದೆ.

"ಓ ಮಕ್ಳೀಗೆ. ಅಂದಹಾಗೆ ನಿಮ್ಗೆ ಮಕ್ಳು....ಎಷ್ಟು?" ಅಂದ್ಲು.

"ಅಯ್ಯೋ ಅದು ಹ್ಯಾಗೆ ಹೇಳ್ಳಿಂದ್ರೆ ಅವ್ಳಿಗೆ ಆ ಮರ್ಗದನಡುವಿನಲ್ಲಿ! ಅವ್ಳ ಗಂಡನೂ ಹತ್ತಿರಾನೆ ಇದ್ದ. ನನ್ಗೆ ಉತ್ತರಕೊಡಲು ನಾಲಗೆಯೇ ಬರ್ಲಿಲ್ಲ."

"ಬನ್ನೀಮ್ಮಾ ಮನೆಗೆ ಬನ್ನಿ. ಇಲ್ಲೇ ಏಕೆ ಪಂಚಾಯ್ತಿ ಎಲ್ಲಾ ಮುಗಿಸಿಬಿಡ್ತೀರಿ?' ಎಂದೆ ನಾನು; ಬಾರದ ನಗುವನ್ನು ಬರಿಸುತ್ತಾ.

"ಓ ಅದಕ್ಕೇನು ಬರೋಣ. ಯಾವಾಗ ಬರ್ಲಿ?"

"ಈ ದಿನ ಸಂಜೆಯೇ ಬನ್ನಿ" ಎಂದೆ ನಾನು. ಎಂಜಲು ನುಂಗುತ್ತಾ.

'ಬೇಡ. ನಾಡಿದ್ದು ಶನಿವಾರ ಸಂಜೆ ಬರ್ತೀವಿ' ಎಂದಳವಳು. ಮತ್ತೆ ಉಪಹಾರಕ್ಕಾಗಿ ನನ್ನನ್ನು ಒತ್ತಾಯಿಸಿದರು. ನಾನು 'ಒಲ್ಲೆ' ಎಂದೆ. ಅಂತೂ ಅಲ್ಲಿಂದ ಪಾರಾಗಿ ಬರ್ಬೇಕಾದ್ರೆ ಸಾಕಾಗಿ ಹೋಯ್ತು.

"ಅಂದ್ರೆ....ನೀನು ಅವಳಲ್ಲಿ ಸ್ವಲ್ಪ ರಫ್ ಆಗಿ ವರ್ತಿಸಿಲ್ಲ ತಾನೆ?" ಎಂದೆ ನಾನು ಶಂಕೆಯಿಂದ.

'ಯಾವ ರಫ್ರೀ'

'ರಫ್ಬಿಯಲ್ಲ. ಅವಳೊಡನೆ ಒರಟಾಗಿ ಮಾತಾಡಿಲ್ಲತಾನೆ?'

'ಒರಟೂ ಇಲ್ಲ ಗೊರಟೂ ಇಲ್ಲ. ಅದೇನೊಂದ್ರೆ ನಿಮಗೆ ಅಷ್ಟು ಭಯ?'

'ಭಯ ಏನೂ ಇಲ್ಲ ರಮಾ. ಆಫೀಸಿಗ್ಹೋದ್ರೆ ಗೊತ್ತಾಗುತ್ತೆ. ಅವರಿನ್ನೆಲ್ಲಿ 'ಇನ್ಸಲ್ಟ್' ಆರಂಭಿಸುತ್ತಾರೋ ಅಂತ. ಅಲ್ಲಿ ಇರೋದೂ ಮಜಾರಿಟಿ ಸ್ತ್ರೀಕಾರ ವಿನ್ಯಾಸತೀನೇ'

'ಹಾಗೇನೂ ಇಲ್ಲಾಂದ್ರೆ. ಅಲ್ಲಾ, ಕರೆದಾಗಿದೆ. ಅವೇನ್ನೆಲ್ಲಿ ಮನೆಗೆ ಬಂದ್ಬಿಡುತ್ತಾಳೋ ಅಂತ ನನಗ್ಭಯ'

'ಏನು ಮಕ್ಳ ವಿಷಯತಾನೆ?!'

'ಹೌದೂಂದೆ'



ಜೋನ್ಸನ್ ನಗರದ ಮೆಸಚುಸೆಟ್ಸ್ ಟೆಕ್ನೋಲಜಿ ಸಂಸ್ಥೆಯಲ್ಲಿ ಅಣುರಿಯಾಕ್ಟರಿನಿಂದ ಮೆದುಳುಪರೀಕ್ಷೆಯನ್ನೂ ಮಾಡಲಾಗುತ್ತದೆ.

'ಅದಕ್ಕೇನೂ, ಅಂಬಾನ್ನ ತುಂಗಕ್ಕನ ಮನೆಗೆ, ಭಾಸ್ಕರನ್ನ ಆಟಿದ್ದಯಲಿಗೆ ಚಂದ್ರನ್ನ ತೊಗ್ರೀಬೇಳೆಗೆ ದೇವರಾಜೂನ್ನ ಅಜ್ಜಿಮನೆಗೆ, ಗೀತಾನ್ನ ಅಜ್ಜಿಮನೆಗೆ ಕಳಿಯನ್ನ......'

'ಸಾಕೂಂದ್ರೆ ತಮಾಷೆ, ಅದೆಲ್ಲಾ ಬೇಡ. ಶನಿವಾರ ಸಂಜೆತಾನೇ ಅವ್ರು ಬರೋದು. 'ರಂಭಾ' ಮನೇಲಿರಲಿ. ಭಾಸ್ಕರನೊಟ್ಟಿಗೆ ಎಲ್ಲರನ್ನೂ ಸರ್ಕಸ್ ಕಂಪೆನಿ ಬಂದಿದೆಯಂತಲ್ಲಾ, ಸ್ವಲ್ಪ ಸ್ವಲ್ಪ ಹಣ ಕೊಟ್ಟು ಆನೆ, ಕುದುರೆ, ಹುಲಿ, ಕರಡಿ ಎಲ್ಲಾ ನೋಡಿ ಬನ್ನೀಂತ ಕಳಿಸಿಬಿಡೋದು.

'ಭೇಷ್ ಚೆನ್ನಾಗಿದೆ ಉಪಾಯ...'

೦ ೦ ೦

ಶನಿವಾರ ನಾಲ್ಕೂವರೆಗೆ ನಮ್ಮಫೀಸು ಟೈಪಿಸ್ಟ್ ಗೀತಾಕುಮಾರಿಯೂ ಅವಳ ಗಂಡ (ಇಂಜಿನಿಯರ್ ಆಫೀಸ್ನಲ್ಲಿ ಕ್ಲಾರ್ಕ್) ವಸಂತಕುಮಾರ್ ಇಬ್ಬರೂ ಆಗಮಿಸಿದರು.

ಉಪಹಾರವಾಯಿತು. ಮಾತುಕತೆಯಾಯಿತು. ಹೀಗೆ ಲೋಕಾಭಿರಾಮವಾಗಿ ಮಾತನಾಡುತ್ತಾ ಕುಳಿತೆವು. ಗಂಟೆ ಐದೂವರೆ ಅಂತೂ ಆರೂವರೆ ಮೊದ್ಲು ಮಕ್ಕಳು ಹಿಂತಿರುಗುವಂತಿಲ್ಲ.

ಐದ್ನಿಮಿಷದಲ್ಲಿ ಗೇಟಿನ ಬಳಿ ಏನೋ ಗಜಬಜವಾಯ್ತು. ಹೊರಗೆ ನೋಡ್ತೇನೆ, ಏನ್ಹೇಳೋದು. ಎಲ್ಲಾ ಓಡ್ಕೊಂಡು ಹಿಂದೇನೇ ಬರ್ತಿದ್ದಾರೆ. ಎಲ್ಲರೂ ಧಡ ಧಡ ಅಂತ ಒಮ್ಮೆಲೇ ಧಾಳಿಯಿಟ್ಟರು. ನಾವು ಕುಳಿತಿದ್ದೋರೆಲ್ಲಾ ಬೆಪ್ಪಾಗಿ ಕುಳಿತುಬಿಟ್ಟೆವು.

ಹೊಸ್ತಿಲಲ್ಲಿ ಹರಿ ಎಡವಿಬಿದ್ದು ರಾಗ ಎಳಕ್ಕೊಂಡೇ ಒಳಗ್ಬಂದ. ಉಳಿದಿಬ್ಬರೂ ಬಂದ ಅತಿಥಿಗಳ್ನ ಬೆಪ್ಪಾಗಿ ನೋಡುತ್ತಾ ಒಳನುಗ್ಗಿದರು. ಅವರಿಗಿಂತಲೂ ಬೆಪ್ಪು ನಾವಾಗಿದ್ದೆವು. ಆಗ ಗೀತಾ ಕುಮಾರಿಯೆಂದಳು:

"ಇವರೆಲ್ಲಾ 'ಯಾರು ಮಿ| ಗೋಪಾಲ್. ಅಕ್ಕಪಕ್ಕದ ಮನೆ...."

"ನಾರಿ. ಇವ್ರು ಅಕ್ಕಪಕ್ಕದ ಮನೆಯೋರೇನೂ ಇಲ್ಲ. ನಮ್ದೆ ಚಿಕ್ಕ ಚಿಕ್ಕ ಮಕ್ಳು. ಎಲೋ ಭಾಸ್ಕರಾ, ಏನೋ ಅರ್ಧದಿಂದ್ಲೆ ಹಿಂತಿರ್ಗ್ಬಂದ್ರಿ?" ಎಂದು

"ಅಪ್ಪಾ, ನಾವೆಲ್ಲ ಹೋದ್ವು. ಸನೊಟ್ಟಿಗೆ ಆ ಕಿಲಾಡಿ ಚಿಕ್ಕಣ್ಣ ಬಂದಿದ್ದ ನೋಡು. ಕೈಲಿ ನಶ್ಯ ತೆಕೊಂಡ್ಬಂದು, ಸರಳಿನೆಡೆಯಿಂದ ಹುಲಿಕಣ್ಣಿಗೆ ಊದಿದ. ಹುಲಿ ಆರ್ಭಟಿಸ್ತು. ಅಷ್ಟರಲ್ಲಿ ಸರ್ಕಸ್ನೋರು ಬಂದು ಎಲ್ರನ್ನೂ ಓಡಿಸ್ಬಿಟ್ರು".

"ಓಡುತ್ತಾ ಭಾಸ್ಕರ ಒಂದು ಕೋತಿಗೆ ಡೇಶ್ ಹೊಡ್ದ ಪಾಪ" ಎಂದಳು ಗೀತಾ.

ಅಳಬೇಕೋ ನಗಬೇಕೋ ತಿಳೀಲಿಲ್ಲ.

"ಅಂದ ಹಾಗೆ ಇವ್ರೆಲ್ಲಾ ನಿಮ್ಮಕ್ಳೇನ.? ನಾರಿ. ನಾವೆಲ್ಲಾ ಭಾಗ್ಯವಂತರೂನ್ನಿ" ಎಂದಳು ಗೀತಾಕುಮಾರಿ.

ಅವಳ 'ಭಾಗ್ಯವಂತರೂನ್ನಿ' ನನಗೆ ಸ್ವಲ್ಪ ಧೈರ್ಯಕೊಟ್ಟಿತು.

ನಾನು ಕೇಳಿದೆ. "ನಿಮಗೆ ಮಕಳ್ಳು ಮರಿ..."

"ಇದ್ದಾರೆ ಮಿ| ಗೋಪಾಲ್. ದೊಡ್ಡೋರಿಬ್ರು ಬೆಂಗ್ಳೂರ್ನಲ್ಲಿ ಅಜ್ಜಿಮನೇಲಿ ಶಾಲೆಗೆ ಹೋಗ್ತಿದ್ದಾರೆ. ಆ ಮೇಲಿನೋರಿಬ್ರೂ ಕಾಂಪುರದಲ್ಲಿ ಅತ್ತೆ ಬಳಿಯಿದ್ದಾರೆ. ನಂತರದ ಸುನಂದ, ಶಂಕರ, ವನಜ ನನ್ನಾಂಗಿ ಮನೇಲಿದ್ದಾರೆ. ಇನ್ನು ಚಿಕ್ಕವರು ನಾಲ್ವರೂ ಮನೇಲೇ ಇದ್ದಾರೆ."

"ಓ..." ನನಗೆ ತುಂಬಾ ಧೈರ್ಯ

"ಓ, ಹಾಗಿದ್ರೆ ಇವರೆಂಟು ಜನರೂ ನಿಮ್ಮಕ್ಕೆ ಅಲ್ವೆ?" ಎಂದಳವಳು ಪುನಃ.

"ಹೌದು, ಇವಳು ನನ್ಹೆಂಡ್ತಿ ರಮಾ, ನನ್ನ ವೈಫ್ ಹಾಗೂ ಒಂಬತ್ನೇ ಮಗೂ" ಎಂದು ಗಟ್ಟಿಯಾಗಿ ನಕ್ಕುಬಿಟ್ಟೆ.

ಉಳಿದವರೂ ನಕ್ಕರೋ ಇಲ್ಲವೋ.

ಲೇ: ಕೂಡ್ಲು ತಿಮ್ಮಪ್ಪ ಗಟ್ಟಿ
ಮಧೂರು.



ವಿಜ್ಞಾನ ವಿಸ್ಮಯ

ಭಾರತದಲ್ಲಿ ವಿಜ್ಞಾನಾಭಿವೃದ್ಧಿ

ದೇಶದ ವಿವಿಧ ವೈಜ್ಞಾನಿಕ ಸಂಸ್ಥೆಗಳಲ್ಲಿ ಹಲವಾರು ಸಂಶೋಧನೆಗಳು ನಡೆದು ಜನತೆಯ ಜೀವನವನ್ನು ಸುಗಮಗೊಳಿಸುತ್ತವೆ.

ಹಿತವಾಯುಗೃಹಗಳು

ಜಗತ್ತಿನ ಯಾವ ಪ್ರದೇಶದಲ್ಲಿಯೇ ಆಗಲಿ ಜನರಿಗೆ ವಾಯುಗುಣಕ್ಕೆ ಯೋಗ್ಯವಾದ ಮನೆಗಳನ್ನು ಒದಗಿಸುವುದು ಒಂದು ಮುಖ್ಯ ವಿಚಾರವೇ ಆಗಿದೆ. ವಾಯುಗುಣ ಸಮಶೀತೋಷ್ಣವಲಯದ್ದಾದರೂ ಆಗಬಹುದು, ಶೀತವಲಯದ್ದಾದರೂ ಆಗಬಹುದು ಇಲ್ಲವೇ ಉಷ್ಣವಲಯದ್ದಾದರೂ ಆಗಬಹುದು. ಪ್ರತಿಯೊಂದು ಹವಾಗುಣಕ್ಕೆ ಒಪ್ಪುವಂತಹ ಮತ್ತು ಜನರ ಕ್ರಿಯಾಶಕ್ತಿಗೆ ಧಕ್ಕೆ ತಾರದಂತಹ ತಾಪ-ಸುಖದಿಂದ ಕೂಡಿದ ಮನೆಗಳನ್ನು ಕಟ್ಟುವ ಸಲುವಾಗಿಯೇ ಈ ಸಂಬಂಧದ ಸಮಸ್ಯೆಗಳ ವಿಶೇಷ ಅಧ್ಯಯನ ಕಾರ್ಯ ಇದೀಗ ನಡೆಯುತ್ತಿದೆ. ಆದಷ್ಟು ಸುಖದಾಯಕ ನಮೂನೆ ಹಾಗೂ ನಿರ್ಮಾಣ ವಿಧಾನಗಳನ್ನು ಸಲಹೆ ಮಾಡುವುದೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಸೆಂಟ್ರಲ್ ಬಿಲ್ಡಿಂಗ್ ರಿಸರ್ಚ್ ಇನ್ಸ್ಟಿಟ್ಯೂಟ್ ಇತ್ತೀಚಿಗೆ ಪ್ರಕಟಿಸಿದ "ಕ್ಲೆಮಟಾಲಾಜಿಕಲ್ ಅಂಡ್ ಸೋಲಾರ್ ಡೇಟಾ ಫಾರ್ ಇಂಡಿಯಾ" ಎಂಬ ಪುಸ್ತಕದಲ್ಲಿ ಪ್ರಥಮತಃ ಕಟ್ಟಡಗಳಿಗೆ ಸಂಬಂಧಿಸಿದ ಎಂಜಿನಿಯರುಗಳಿಗೆ ಕೆಲವು ಸೂತ್ರಗಳನ್ನು ಒದಗಿಸಲಾಗಿದೆ; ಹಿತವಾದ ಹವಾಗುಣವನ್ನು ಒದಗಿಸುವ ರೀತಿಯಲ್ಲಿ ಕಟ್ಟಡಗಳನ್ನು ಸಿದ್ಧಗೊಳಿಸುವ ವಿಚಾರದಲ್ಲಿ ಈ ಸಿದ್ಧ ಸೂತ್ರಗಳು ತುಂಬಾ ಸಹಕಾರಿಯಾಗುತ್ತವೆ.

ಭಾರತದ ಒಟ್ಟು ೧೩೦ ಸ್ಥಳಗಳಲ್ಲಿ ಸಾಧಾರಣವಾಗಿರುವ ಹವಾಗುಣವೇನು ಆರ್ದ್ರತೆ ಹಾಗೂ ಮಳೆ ಪ್ರಮಾಣವೆಷ್ಟು ಎಂಬಿತ್ಯಾದಿ ಆಧಾರಗಳನ್ನು ಹಲವಾರು ವರ್ಷಗಳ ದಾಖಲೆಗಳನ್ನು ಗಮನಿಸಿ, ಈ ಪುಸ್ತಕದಲ್ಲಿ ಒದಗಿಸಲಾಗಿದೆ.

ಸೂರ್ಯ ಯಾವ ಕಡೆಗಿರುತ್ತಾನೆ ಮತ್ತು ಸೂರ್ಯರಶ್ಮಿ ಬೀಳುವುದರ ಪರಿಣಾಮವಾಗಿ ಯಾವುದೇ ಕೋಣೆಯ ಹವಾಗುಣ ಯಾವ ರೀತಿ ಇರುತ್ತದೆ ಇವುಗಳನ್ನೆಲ್ಲಾ ಗಮನಿಸಿ ಒಂದು ಕಟ್ಟಡದ ತಾಪ ಗುಣ ನಿರ್ಧಾರವಾಗಬೇಕಾಗುತ್ತದೆ. ಅಂತೆಯೇ "ನೆರಳನ್ನು ಹಾಯಿಸುವ" ಒಂದು ವಿಶಿಷ್ಟ ವಿಧಾನವೀಗ ರೂಪುಗೊಂಡಿದೆ. ಒಂದೊಂದು ಸಮಯಕ್ಕೂ ಉಪಯೋಗಕ್ಕೆ ಬರುವಂತಹ ಜೇರಿಗಿಂಡಿಗಳು ಉದ್ದುದ್ದವಾಗಿ ಇಲ್ಲವೇ ಅಡ್ಡಡ್ಡಲಾಗಿ ಆವಶ್ಯಕವೆನಿಸುತ್ತವೆ.

"ಭಾರತೀಯ ಮರಗಳು"

ಡೆಹರಾಡೂನಿನಲ್ಲಿರುವ ಅರಣ್ಯ ಸಂಶೋಧನಾ ಸಂಸ್ಥೆಯಲ್ಲಿ ಮರಗಳ ಲಕ್ಷಣಗಳನ್ನು ನಿರ್ಧರಿಸುವ ಶಾಖೆಯು ಇದೀಗ ಆರು ಸಂಪುಟಗಳಲ್ಲಿ "ಇಂಡಿಯನ್ ವುಡ್ಸ್" ಎಂಬ ವ್ಯಾಪಕ ಗ್ರಂಥವೊಂದನ್ನು ಪ್ರಕಟಿಸಲು ಉದ್ದೇಶಿಸಿದೆ. ಇದರಿಂದ ಸಂಬಂಧಪಟ್ಟವರಿಗಿದ್ದ ಒಂದು ಭಾರಿ ಕೊರತೆಯನ್ನು ನೀಗಿಸಿದಂತಾಗುತ್ತದೆ.

ಭಾರತದಲ್ಲಿ ಒಟ್ಟು ಸುಮಾರು ೨೦೦೦ ಜಾತಿಯ ಮರಗಳಿವೆ, ವಾಣಿಜ್ಯ ಹಾಗೂ ಕೈಗಾರಿಕಾ ಉದ್ಯಮಗಳಿಗೆ ಆವಶ್ಯಕವಾದ ಕಚ್ಚಾ ಮಾಲನ್ನು ಇವು ಒದಗಿಸುತ್ತವೆ ಮರಮುಟ್ಟು ಸಂಬಂಧವಾದ ಸಂಪತ್ತನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳಬೇಕಾದರೆ ವಿವಿಧ ಜಾತಿಯ ಮರಗಳ ಗುಣವಿಶೇಷಗಳನ್ನು ಚೆನ್ನಾಗಿ ತಿಳಿದುಕೊಂಡಿರಬೇಕಾಗುತ್ತದೆ. ಈ ದೃಷ್ಟಿಯಿಂದ 'ಇಂಡಿಯನ್ ವುಡ್ಸ್' ಗ್ರಂಥ ತುಂಬಾ ಪ್ರಯೋಜನಕಾರಿಯಾಗುವ ನಿರೀಕ್ಷೆ ಇದೆ. ಈ ಗ್ರಂಥದ ಮೊದಲನೆ ಸಂಪುಟ ಈಗಾಗಲೇ ಪ್ರಕಟವಾಗಿದ್ದು ಅದರಲ್ಲಿ ಒಟ್ಟು ೨೮೦ ಜಾತಿಯ ಮರಗಳ ಗುಣವಿಶೇಷಗಳು ಪ್ರಕಟವಾಗಿವೆ. ಎರಡನೆ ಸಂಪುಟವೂ ಈಗಾಗಲೇ ಅಚ್ಚಾಗಿದ್ದು ಸದ್ಯದಲ್ಲಿಯೇ ಪ್ರಕಟವಾಗಲಿದೆ. ಇದರಲ್ಲಿ ಮರಮುಟ್ಟುಗಳಿಗಾಗಿ ಉಪಯೋಗಕ್ಕೆ ಬರುವ ಒಟ್ಟು ೨೬೨ ಜಾತಿಯ ಮರಗಳ ಗುಣವಿಶೇಷಗಳು ಪ್ರಕಟವಾಗಿವೆ.

ಮೂರನೆಯ ಮತ್ತು ನಾಲ್ಕನೆಯ ಸಂಪುಟಗಳಲ್ಲಿ ಕ್ರಮವಾಗಿ ೨೬೦ ಮತ್ತು ೩೦೨ ಜಾತಿಯ ಮರಗಳ ಪರಿಚಯವನ್ನು ಒದಗಿಸಲಾಗುವುದು.

ಅಣುಶಕ್ತಿ ಬಳಕೆಯ ತೋಟ

ನವದೆಹಲಿಯಲ್ಲಿರುವ ಕೃಷಿ ವಿಜ್ಞಾನ ಸಂಸ್ಥೆಯ ಸಸ್ಯ ಶಾಸ್ತ್ರ ವಿಭಾಗವು ಇದೀಗ ಭಾರತದಲ್ಲಿಯೇ ಪ್ರಥಮತಃ ಅಣುಶಕ್ತಿ ಸಹಾಯಕ ತೋಟವೊಂದನ್ನು ಆರಂಭಿಸುವ ಕಾರ್ಯವನ್ನು ಪೂರೈಸಿದೆ. ಬೇಸಾಯ ಕಾರ್ಯಗಳಿಗೆ ಅಣುಶಕ್ತಿಯನ್ನು ಯಶಸ್ವಿಯಾಗಿ ಉಪಯೋಗಿಸುವ ಈ ಪ್ರಯತ್ನ ಪ್ರಥಮತಃ ಫೆಬ್ರುವರಿಯಲ್ಲಿ ಆರಂಭವಾಯಿತು. ಮೂರು ಎಕರೆಗಳಷ್ಟು ಭೂಮಿಯ ಸುತ್ತಲೂ ಗೋಳಾಕಾರದ ಒಂದು ಭಾರಿ ಗೋಡೆ—೧೨ ಅಡಿ ಎತ್ತರ ಮತ್ತು ೩ ಅಡಿ ದಪ್ಪ. ಈ ಭೂಮಿಯ ಮಧ್ಯದಲ್ಲಿ ಒಂದು ೨೦೦—ಕ್ಯೂರಿ ಸಂಪನ್ಮೂಲ ಶಕ್ತಿಯ ರೇಡಿಯೋ—ಆಕ್ಟಿವ್ ಕೋಬಾಲ್ಟ್—೬೦ ಇರುವುದು. ಇದು ಗಾಮಾ ಕಿರಣಗಳನ್ನು ಹೊರಸೂಸುತ್ತಿರುತ್ತದೆ. ಈ ಕಿರಣಗಳ ಸಹಾಯದಿಂದ ಈ ತೋಟದಲ್ಲಿ ಬೆಳೆಯುವ ಸಸ್ಯಗಳ ಸ್ವಾಭಾವಿಕ ಗುಣಗಳನ್ನು ವ್ಯತ್ಯಾಸಮಾಡುತ್ತಾ ಹೋಗಬಹುದು. ಅಂತೆಯೇ ಬೀಜಗಳು, ಸಸಿಗಳು ಇತ್ಯಾದಿಗಳ ಮೇಲೂ ಈ ಕಿರಣಗಳನ್ನು ಪ್ರಯೋಗಿಸಿ ಯಶಸ್ವೀ ಸಾಧನೆಗಳನ್ನು ಕೈಗೊಳ್ಳಬಹುದು.

ಗೋಧಿ, ಟೊಮ್ಯಾಟೊ, ಹತ್ತಿ, ಅಲಂಕಾರದ ಬಳಕೆಗೆ ಬರುವ ಹೂವುಗಳು ಇತ್ಯಾದಿಗಳ ಮೇಲೆ ಈಗಾಗಲೇ ನಡೆದಿರುವ ಪ್ರಯೋಗಗಳು ತುಂಬಾ ಆಶಾದಾಯಕ ಬದಲಾವಣೆಗಳನ್ನು ಸೂಚಿಸಿವೆ.

ಈ "ಗಾಮಾ ಗಾರ್ಡನ್"ನ ಪ್ರಯೋಜನವನ್ನು ದೇಶದ ಸಸ್ಯ ವಿಜ್ಞಾನಿಗಳು ವಿಶೇಷವಾಗಿ ಪಡೆಯಬಹುದಾಗಿದೆ.

ಕಳೆ ನಿವಾರಕ ರಸಾಯನಿಕ

ನವದೆಹಲಿಯಲ್ಲಿರುವ ಕೃಷಿ ವಿಜ್ಞಾನ ಸಂಸ್ಥೆಯ ಸಸ್ಯ ವಿಜ್ಞಾನ ವಿಭಾಗವು ಇದೀಗ ಕಳೆ ನಿವಾರಕ ರಸಾಯನಿಕವೊಂದನ್ನು ಕಂಡುಹಿಡಿದಿದೆ. 'ಪೊಹಲಿ' ಎಂಬ ಕಳೆ ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ಗೋಧಿ ಬೆಳೆ, ಸಾಸಿವೆ ಬೆಳೆಗಳಿಗೆ ಹಾನಿಕರವಾಗಿ ಬೆಳೆಯುತ್ತದೆ. ಇದರ ಪರಿಣಾಮವಾಗಿ ಫಸಲಿನ ಪ್ರಮಾಣ ಶೇ. ೧೦ರಿಂದ ೪೦ರಷ್ಟು ಕಡಿಮೆ ಬೀಳಬಹುದಾದ ಅಪಾಯವಿದೆ. ಸಾಮಾನ್ಯವಾಗಿ ಈ ಅಪಾಯದಿಂದ ಬೆಳೆಯನ್ನು ಪಾರುಮಾಡಲು ಕಳೆಯನ್ನೆಲ್ಲಾ ಕಿತ್ತು, ಒಂದು ಕಡೆ ರಾಶಿ ಹಾಕಿ ಅದನ್ನು ಸುಡುವ ಕ್ರಮ ಕೈಗೊಳ್ಳಲಾಗುವುದು. ಆದರೆ ಇದು ತುಂಬಾ ಕಷ್ಟದ ಕೆಲಸ. ಆದರೆ ಕೃಷಿ ವಿಜ್ಞಾನ ಸಂಸ್ಥೆ ತಯಾರಿಸಿರುವ ರಸಾಯನಿಕವನ್ನು ಎಕರೆಗೆ ಒಂದು ಪೌಂಡಿನಷ್ಟನ್ನು ಸಿಂಪಡಿಸುವುದರಿಂದ ಕಳೆಯ ಅಪಾಯದಿಂದ ಬೆಳೆಯನ್ನು ಪಾರುಮಾಡಬಹುದು.

ಸಿಂಡಿಕೇಟ್ ಬೇಂಕಿನ
138ನೇ ಶಾಖೆ
ಮುಲುಂದ್
542 — ಸುಭಾಸ್ ರೋಡ್
ಮುಲುಂದ್ ವೆಸ್ಟ್
ಬೊಂಬಾಯಿ 49
ಎಂಬಲ್ಲಿ
ಬೇಗನೆ ತೆರೆಯಲ್ಪಡುವುದು

ಟಿ. ಎ. ಪೈ,
ಜನರಲ್ ಮೆನೇಜರ್

ಡಾ: ಟಿ. ಎಂ. ಎ. ಪೈ.
ಮೆನೇಜಿಂಗ್ ಡೈರೆಕ್ಟರ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್
ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಸ್ಥಾಪನೆ: ೧೯೨೫

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಬೆಂಬಲವು ದೂರವಾಗುತ್ತಾ ಬರುತ್ತಿದ್ದ; ಇದರಿಂದ ಅವರು ಸುರಕ್ಷಿತತೆ ಮತ್ತು ಶಾಂತಿಯೊಡನೆ ಟಿಬೇಟಿನಲ್ಲಿ ಜೀವಿಸುವುದು ಅಸಾಧ್ಯವಾಗಿ ಪರಿಣಮಿಸಿದೆ. ಟಿಬೇಟಿಯನ್ನರ ಧರ್ಮ, ಸಂಸ್ಕೃತಿ, ಮರ್ಯಾದೆ ಮತ್ತು ಜೀವನವೆಲ್ಲವೂ ಅಪಾಯ ಬಿಂದುವಿನಲ್ಲಿ ನಿಂತಿವೆ; ಹಾಗಾಗಿ ಅವರು ಗೃಹತ್ಯಾಗಮಾಡಿ ಧಾವಿಸಬೇಕಾಗಿದೆ.

ತನ್ನ ಪ್ರಜೆಗಳಿಗೆ ಭದ್ರತೆಯೊದಗಿಸಲಾಗದ ಸರಕಾರವು ಅಧಿಕಾರದಲ್ಲಿರಲು ಸರ್ವಥಾ ಅಧಿಕಾರಿಯಲ್ಲವೆಂಬುದನ್ನು ಟಿಬೇಟು ಜಗತ್ತಿಗೆ ಸಾರಿ ಹೇಳುತ್ತಿದೆ. ಇಂದು ಟಿಬೇಟಿನಿಂದ ಓಡಿ ಬಂದ ನಿರ್ವಾಸಿತರನ್ನು ನೆಲೆನಿಲ್ಲುವಂತೆ ಮಾಡುವ ಮಹಾ ತಾಪವನ್ನು ಭಾರತ ಸಹಿಸಬೇಕಾಗಿದೆ. ಭಾರತ ಸರಕಾರದ ಕೈಕಟ್ಟಿದಂತಹ ಪರಿಸ್ಥಿತಿ ತಲೆದೋರಿದೆ. ಸ್ವದೇಶಕ್ಕೆ ಮರಳಲು ಟಿಬೇಟಿಯನ್ನರು ಅಂಜುತ್ತಾರೆ; ಅಲ್ಲಿ ಅಭದ್ರತೆಯೆಂದಿರಲು ಅವರು ನಿರಾಕರಿಸುತ್ತಾರೆ. ಭಾರತದ ಸೀಮಾ ಪ್ರದೇಶಗಳ ಜನರಲ್ಲಿ ವಿಶ್ವಾಸವಿಡಬಹುದು; ಅವರು ತುಂಬ ಧೈರ್ಯಶಾಲಿಯಾಗಿದ್ದಾರೆ ಎಂದು ಮುಂತಾಗಿ ಡಾ॥ ಪರಮಾರರು ವ್ಯಕ್ತಪಡಿಸಿದರು.

ಟಿಬೇಟಿನಲ್ಲಿ ಎದ್ದ 'ದಂಗೆ'ಯನ್ನು ಅಣಗಿಸುವುದಕ್ಕಾಗಿ ಬಂದಿದ್ದ ಚೀನೀಯರು ಅಲ್ಲಿ ಭದ್ರವಾಗಿ ತಳವೂರಿದರು; ಅಲ್ಲಿನ ಜನತೆಯನ್ನು ದಮನಿಸುವುದರಲ್ಲಿ ತತ್ಪರರಾದರು. ಅಂತೆಯೇ ಭಾರತ-ನೇಪಾಲ ಮೊದಲಾದ ದಕ್ಷಿಣದ ರಾಷ್ಟ್ರಗಳಲ್ಲೂ ಅಧಿಕಾರ ಜಮಾಯಿಸುವ ಸಂಚನ್ನು ಹೂಡುತಿದ್ದಾರೆ. ಕಮ್ಯುನಿಸ್ಟ ಚೀನದ ಈ ವರ್ತನೆಯು ಅದರ "ವಿಸ್ತಾರವಾದ"ದ ದ್ಯೋತಕವೆನ್ನಬೇಕಾಗಿದೆ. ಆದರೆ, ಆಧುನಿಕ ಯುಗದ ಸಮಾನತೆ, ಸಹೋದರತೆಯ ವಾಣಿಯನ್ನು ಅಲ್ಲಗಳೆಯುವ ದಾಷ್ಟ್ಯ್ರವನ್ನು ಚೀನವು ಇಂದು ಮಾಡುತಿದ್ದರೆ, ಅದನ್ನು ಸಂದಾರಿಗೆ ಹಚ್ಚುವ ಪ್ರಯಾಸವು ಅದೆಷ್ಟು ಫಲಕಾರಿಯಾಗುವುದೆಂದು ಹೇಳುವುದುದಕ್ಕೆ ಬಾರದು. ಚೀನಾವು ತನ್ನ ಮೊಂಡುತನಕ್ಕೆ ಚಂಡಿಹಿಡಿದು, ಕಾಲವ್ಯಾಪನೆ ಮಾಡುವ ಧೋರಣೆಯಿಂದ ತನ್ನ ಇಂಗಿತವನ್ನು ಈಡೇರಿಸಿಕೊಳ್ಳುವ ಸಂಚನ್ನು ಅವಶ್ಯ ಭೇದಿಸಲೇ ಬೇಕು; ಸ್ವದೇಶದ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲೇ ಬೇಕು; ಅದಕ್ಕಾಗಿ ಸರ್ವ ಶಕ್ತಿಯನ್ನೂ ನಾವು ಕೇಂದ್ರೀಕರಿಸಬೇಕು. —ರಾಶಿ.

ಈ ರಸಾಯನಿಕದ ಹೆಸರು ೨, ೪, ಡಿ.

ತೇವ ಅಳೆಯುವ ಯಂತ್ರ

ಯಾವುದೇ ವಸ್ತುವಿನಲ್ಲಿ ತೇವದ ಅಂಶ ಎಷ್ಟಿದೆಯೆಂಬುದನ್ನು ಅಳೆಯುವ ಒಂದು ಎಲೆಕ್ಟ್ರಾನಿಕ್ ಮೀಟರ್ ಇದೀಗ ದೆಹಲಿಯ "ಶ್ರೀರಾಮ್ ಇನ್ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ರಿಸರ್ಚ್" ಸಂಸ್ಥೆಯಲ್ಲಿ ಕಂಡು ಹಿಡಿಯಲ್ಪಟ್ಟಿದೆ.

ಎಲೆಕ್ಟ್ರೋಡ್‌ಗಳ ಅಲ್ಪ ಸ್ವಲ್ಪ ವ್ಯತ್ಯಾಸದ ಮೂಲಕ ಮರದ ತಿರುಳು, ಮಣ್ಣು, ಕಾಳು ಇತ್ಯಾದಿಗಳಲ್ಲಿನ ತೇವದ ಅಂಶವನ್ನು ಒಟ್ಟೊಟ್ಟಿಗೆ ತಿಳಿಯಬಹುದು. ಇದು ಈ ಮೀಟರಿನ ವೈಶಿಷ್ಟ್ಯವೆನ್ನಬಹುದು.

ಹೊರದೇಶಗಳಿಂದ ಆಯಾತವಾಗುವ ಮೀಟರುಗಳಿಗೆ ಹೋಲಿಸಬಹುದಾದಷ್ಟು ಉತ್ತಮ ಗುಣಗಳನ್ನು ಈ ಮೀಟರ್ ಹೊಂದಿರುತ್ತದೆ. ಬಟ್ಟೆ ಕೈಗಾರಿಕೆಯಲ್ಲಂತೂ ಇದರ ಉಪಯೋಗ ಬಹಳ ಇದೆ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೪೫. 14-7-1960 Vol. 39. No. 45

ಪ್ರಚಲಿತ ಪ್ರಸಂಗ

ಮದ್ರಾಸ ರಾಜ್ಯದ ಕೆಲವು ಸಮಸ್ಯೆಗಳು

ರಾಜ್ಯ ಪುನರ್ಘಟನಾನಂತರ ಮದ್ರಾಸ ರಾಜ್ಯದಲ್ಲಿ ಕೆಲವೊಂದು ನೂತನ ಸಮಸ್ಯೆಗಳು ತಲೆದೋರಿವೆ. ಅವನ್ನು ಎದುರಿಸಲು ಮುಖ್ಯಮಂತ್ರಿ ಕಾಮರಾಜರು ಏನು ಮಾಡುವರು?

ಮದ್ರಾಸ ರಾಜ್ಯದಲ್ಲಿ ಟ್ರೇಡ್ ಯೂನಿಯನ್, ಭಾಷೆ ಮತ್ತು ಸಾಂಪ್ರದಾಯಿಕ ಸಂಬಂಧಿ ಆಂದೋಲನವು ದಿನದಿಂದ ದಿನಕ್ಕೆ ಲೋಕಪ್ರಿಯವಾಗುತ್ತ ಬರುತ್ತಿರುವಂತೆ ತೋರುತ್ತದೆ. ಪ್ರತಿದಿನವೂ ಅಲ್ಲಿ ಈ ಸಂಬಂಧದ ಘಟನೆಗಳು ಒಂದಲ್ಲ ಒಂದು ಆಗುತ್ತಲೇ ಇರುತ್ತವೆ.

ಕಳೆದ ಮೇ ತಿಂಗಳಲ್ಲಿ ಶ್ರಮಿಕ ವರ್ಗದ ಆಂದೋಲನವು-ಚರಮ ಸೀಮೆಯನ್ನು ಮುಟ್ಟಿತ್ತು. ಆದರೆ, ಈಗೀಗ, ಅದರ ಕಾವು ಇಳಿಯ ಹತ್ತಿದೆ. ಈ ನಡುವೆ ಭಾಷಾ ಪ್ರೇಮಿಗಳು ನಮ್ಮ ರಾಜ್ಯದ ಹೆಸರನ್ನು "ತಮಿಡಗಮ್" (ತಮಿಳು ಭಾಷೆ ಮತ್ತು ಭಾಷಿಗಳ ಮನೆ) ಎಂಬುದಾಗಿ ಪರಿವರ್ತಿಸಬೇಕೆಂದು ಆಂದೋಲನವಾರಂಭಿಸುವ ನಿಶ್ಚಯ ಮಾಡಿದ್ದಾರೆ.

ಮದ್ರಾಸದಲ್ಲಿ ಕೆಲವು ವರ್ಗಗಳದ್ದು ಇವುಗಳು ಯಾವಾಗಲೂ ಏನಾದರೊಂದು ಕಿರುಕುಳ ವೆಬ್ಬಿಸುವುದನ್ನೇ ತಮ್ಮ ಮೂಲೋದ್ದೇಶವನ್ನಾಗಿಟ್ಟುಕೊಂಡಿದ್ದಾರೆ. ಮದ್ರಾಸಿನ ಒಂದು ಸಾಂಸ್ಕೃತಿಕ ಸಂಸ್ಥೆಯಾದ ತಮಿಳು ಅರಾಸೂ ಕಜಗಮ್ ಎಂಬುದು ರಾಜ್ಯ ಪುನರ್ಘಟನಾನಂತರ ಪದೇಪದೇ ರಾಜ್ಯದ ಹೆಸರನ್ನು 'ತಮಿಡಗಮ್' ಎಂಬುದಾಗಿಡಬೇಕೆಂದು ಒತ್ತಾಯಿಸುತ್ತ ಬಂದಿದೆ. ನೂತನ ಪರಿಸ್ಥಿತಿಯಲ್ಲಿ ರಾಜ್ಯಕ್ಕೆ ಮದ್ರಾಸ ಎಂಬುದು ಅನುಪಯುಕ್ತ ನಾಮಧೇಯವಾಗಿದೆ. ತಮಿಳು ಭಾಷಾಭಾಷಿಗಳ ಪ್ರದೇಶವನ್ನು ತಮಿಡಗಮ್ ಎಂಬ ಹೆಸರಿನಿಂದ ಕರೆಯುವುದೇ ಯುಕ್ತ ಮತ್ತು ಸುಸಂಗತವಾದುದು ಎಂದು ಈ ಸಂಸ್ಥೆಯ ವಾದವಿದೆ. ಈ ಬಗೆಯ ನಾಮ ಪರಿವರ್ತನಾ ಆಂದೋಲನವು ಅಂತಿಮ ಘಟ್ಟದಲ್ಲಿ ಯಾವ ರೂಪವನ್ನು ತಾಳಬಹುದೆಂದು ಈಗಾಗಲೇ ಅನ್ನುವುದು ಅಸಂಭವವಾದರೂ ಸದ್ಯ ಮದ್ರಾಸದ ಜನತೆಯಲ್ಲಿ ಈ ಆಂದೋಲನದ ಕಡೆಗೆ ಸಾಕಷ್ಟು ಒಲವು ಉದ್ಭವಿಸಿಲ್ಲವೆಂಬುದು ಸ್ಪಷ್ಟವಿದೆ

ಟೇಕ್ಸಿ ಮತ್ತು ಬೀಡಿ ಕಾರಖಾನೆಗಳ ಆಂದೋಲನವೀಗಲೂ ನಡೆಯುವಂತಿದೆ. ಸಣ್ಣ ಟೇಕ್ಸಿಗಳಲ್ಲಿ ಮೂರು ಜನರ ಬದಲು ನಾಲ್ವರನ್ನು ಒಯ್ಯುವುದಕ್ಕೆ ರಾಜ್ಯ ಸರಕಾರವು ಸಮ್ಮತಿಸಿ ಒಂದು ಆದೇಶವಿತ್ತಿತ್ತು. ಜುಲಾಯಿ ೧ರಿಂದ ಇದು ವ್ಯವಹೃತವಾಗುತ್ತದೆ. ಆದರೆ, ಟೇಕ್ಸಿವಾಲರು ಈ ಆದೇಶವನ್ನು ವಿರೋಧಿಸಿದರು ಮಾತ್ರವಲ್ಲ, ಆದೇಶಕ್ಕೆ ವಿರುದ್ಧವಾಗಿ ಹೈಕೋರ್ಟಿನಲ್ಲಿ ಮನವಿಮಾಡಿ, ಅದನ್ನು ಸ್ಥಗಿತಗೊಳಿಸುವ ಆದೇಶವನ್ನೂ ಪಡೆದುಕೊಂಡಿದ್ದಾರೆ.

ಬೀಡಿ ಕಾರಖಾನೆಗಳಲ್ಲಿ ಆರೋಗ್ಯವೇ ಮೊದಲಾದ ಕೆಲವು ಆವಶ್ಯಕ ವಿಷಯಗಳ ವ್ಯವಸ್ಥೆಯು ನಿರ್ಧಾರಿತ ಶರ್ತಗಳಿಗನುಗುಣವಾಗಿ ಪೂರ್ಣವಿಲ್ಲದೆ ಹೋದರೆ, ಅವುಗಳಿಗೆ ಲೈಸನ್ಸ್‌ಗಳನ್ನು ನೀಡಲಾಗದು ಎಂದು ರಾಜ್ಯ ಸರಕಾರವು ಒಂದು ಆದೇಶವಿತ್ತಿತ್ತು. ಸರಕಾರದ ಈ ನೀತಿಯನ್ನು ಒಪ್ಪದಿರುವ ಕಾರಖಾನೆಯ ಮಾಲಿಕರು ತಮ್ಮ ಕಾರಖಾನೆಗಳನ್ನೇ ಮುಚ್ಚಿಬಿಟ್ಟಿರುವರು. ಇದರ ಪರಿಣಾಮವಾಗಿ ಸುಮಾರು ೨ ಲಕ್ಷಕ್ಕೂ ಮಿಕ್ಕಿದ ಕೆಲಸಗಾರರು ನಿರುದ್ಯೋಗಿಗಳಾಗಿ ಹೋಗಿದ್ದಾರೆ. ಸರಕಾರದ ಆದೇಶವನ್ನು ಮನ್ನಿಸಿ ಅದರಂತೆ ನಡೆಯುವುದಾದರೆ, ತಮ್ಮ ಕೆಲಸವೇ ನಿಂತು ಹೋಗುವುದು ಎಂದು ಅವರು ಅನ್ನುತ್ತಾರೆ. ಸರಕಾರದ ಉದ್ಯೋಗ ಕ್ಷೇತ್ರದಲ್ಲಿ ಸರಕಾರವು ಅನುಸರಿಸಿದ ವಿವಿಧ ನೀತಿಗಳಿಂದಾಗಿ ಬಟ್ಟೆ ಗಿರಣಿಗಳ ಮತ್ತು ಸರಕಾರೇತರ ನೌಕರರಲ್ಲಿ ಅತೃಪ್ತಿಯು ಹರಡಿಕೊಳ್ಳುತ್ತಿದೆ ಎಂಬ ಮಾತೂ ಕೇಳಿಬರುತ್ತಿದೆ.

ಹಿಂದಿನ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ರಾಮುನಿ ಮೆನನ್ನರ ಅಧ್ಯಕ್ಷತೆಯಲ್ಲಿ ಮದ್ರಾಸ ವೇತನ ಆಯೋಗವು ಸರಕಾರಿ ನೌಕರರ ಬೇಡಿಕೆಗಳನ್ನು ಪರಾಮರ್ಶಿಸಿ, ಉಚಿತ ನಿರ್ಣಯಗಳನ್ನು ಕೈಗೊಂಡಿತು. ಅವರ ಅನುಚಿತ ಬೇಡಿಕೆಗಳನ್ನು ತಿರಸ್ಕರಿಸುವಂತೆಯೇ ಉಚಿತ



ಅಮೇರಿಕೆಯು ಹಾರಿಸಿದ್ದ ಪಯೋನೀರ್—೫ ಉಪಗ್ರಹ. ಇದು ಸೂರ್ಯ ಮತ್ತು ಭೂಮಿಗಳ ನಡುವೆ ಸುತ್ತುವುದು.

ಕೇಳಿಕೆಗಳನ್ನು ಒಪ್ಪಲೇ ಬೇಕಾಯಿತು. ಸರಕಾರವು ಈ ವೇತನ ಆಯೋಗದ ಮುಖ್ಯ ಸಿಫಾರಸುಗಳನ್ನು ಅಂಗೀಕರಿಸಿದೆ. ಇದರಿಂದ ರಾಜ್ಯ ಸರಕಾರಕ್ಕೆ ವಾರ್ಷಿಕ ರೂ. ಏಳು ಕೋಟಿ ಅಧಿಕ ವ್ಯಯಮಾಡಬೇಕಾಗುತ್ತದೆ. ಆಯೋಗದ ಸಿಫಾರಸುಗಳನ್ನು ಸರ್ವಸಾಮಾನ್ಯವಾಗಿ ಎಲ್ಲರೂ ಸ್ವಾಗತಿಸಿದ್ದಾರೆ.

ಹತ್ತಿ ಬಟ್ಟೆಯ ಗಿರಣಿಗಳ ಕೂಲಿಗಾರರ ಮತ್ತು ವ್ಯವಸ್ಥಾಪಕರ ನಡುವೆ ಸಂಧಾನವನ್ನು ಉದ್ಯೋಗ ಮಂತ್ರಿ ಶ್ರೀ ಆರ್. ವೆಂಕಟರಮಣರು ಬಹು ಪ್ರಯತ್ನದಿಂದ ನಡೆಸಿದರು. ವ್ಯವಸ್ಥಾಪಕರು ಹತ್ತಿಬಟ್ಟೆ ಉದ್ಯೋಗ ವೇತನ ಮಂಡಳದ ಸಿಫಾರಸುಗಳನ್ನು ತಮಗೆ ಅನ್ವಯಿಸದಿದ್ದರೆ, ತಾವು ಹರತಾಳ ಮಾಡುವುದಾಗಿ ಕೂಲಿಗಾರರು ಬೆದರಿಕೆ ಹಾಕಿದ್ದರು ಮೊದಲಿಗೆ ಸಂಧಾನದ ಮಾತುಕತೆಗಳು ವಿಫಲಗೊಂಡಂತೆ ತೋರಿಬಂದು ಹರತಾಳವು ಅನಿವಾರ್ಯವೆಂಬಂತಾಯಿತು. ಶ್ರೀ ವೆಂಕಟರಮಣರು ವ್ಯವಸ್ಥಾಪಕ—ಕರ್ಮಚರರ ಪ್ರತಿನಿಧಿಗಳನ್ನು ಒಂದೆಡೆ ಕರೆಸಿ, ವಿಚಾರ ವಿನಿಮಯ ನಡೆಸಿ, ವಿವಾದವನ್ನು ಸಂತೋಷಜನಕ ರೀತಿಯಲ್ಲಿ ಪರಿಹರಿಸಿದರು.

ಇಷ್ಟೇ ಅಲ್ಲದೇ ರಾಜ್ಯಸರಕಾರದ ತಲೆ ತಿನ್ನುವ ನೀರಿನ ಸಮಸ್ಯೆಯೊಂದು ಉಬ್ಬಣಾವಸ್ಥೆಗೇರಿದೆ. ಕುಡಿಯುವ ನೀರನ್ನು ಒದಗಿಸುವುದು ಮಾತ್ರವಲ್ಲ ನೀರಾವರಿಯ ಬಗ್ಗೆ ನೀರಿನ ಪೂರಯ್ಕೆಯಾಗುವುದೂ ಅತ್ಯವಶ್ಯವೆನಿಸಿದೆ. ರಾಜ್ಯದೊಳಗೆ ದೊರೆಯಬಹುದಾದ ಎಲ್ಲ ನೀರನ್ನೂ ಈಗಾಗಲೇ ಬಳಸಿಕೊಂಡಿದ್ದರೂ ಇನ್ನೂ ನೀರಿನ ಅಭಾವ ಎದ್ದುತೋರುತ್ತಿದೆ. ಇದರಿಂದಾಗಿ ತನ್ನ ಆವಶ್ಯಕತೆಯನ್ನು ಪೂರಯ್ಸಿಕೊಳ್ಳಬೇಕಾದರೆ, ಆಂಧ್ರ ಇಲ್ಲವೇ ಕೇರಳದತ್ತ ಕೈಚಾಚಬೇಕಾದ ಪ್ರಮೇಯವೊದಗಿದೆ. ಆಂಧ್ರದಿಂದ ತುಸು ನೀರು ದೊರೆಯಬಹುದೆಂದು ಹೇಳಲಾಗುತ್ತಿದೆ. ಕೇರಳದಿಂದಲೂ ಸಿಗಬಹುದು. ಆಂಧ್ರ ಪ್ರದೇಶ ಸರಕಾರವು ತನ್ನಲ್ಲಿ ನೀರು ಉಳಿಯುವುದೇ ಇಲ್ಲವೇ ಎಂಬುದನ್ನು ಕಂಡುಕೊಂಡು ಆ ಮೇಲೆ ಇದ್ದರೆ ಮಾತ್ರ ಮದ್ರಾಸಕ್ಕೆ ಕೊಡುವುದು ಎಂದು ಸ್ಪಷ್ಟವಾಗಿ ತಿಳಿಸಿದೆ. ಆದರೆ, ಈ ವಿಚಾರ ನಡೆದು ಮದ್ರಾಸದ ಆಶೆ ಕೈಗೂಡುವಾಗ, ಕೆಲವು ವರ್ಷಗಳೇ ಕಳೆಯಬಹುದು.

ಈ ಸಂಬಂಧದಲ್ಲಿ ಕೇರಳದ ಕೆಲವು ಯೋಜನೆಗಳದ್ದು ಮದ್ರಾಸಿನೊಡನೆ ನೀರನ್ನು ಹಂಚಿಕೊಳ್ಳುವ ಪ್ರಶ್ನೆಯೇ ಉಳಿಯುವುದಿಲ್ಲ ಎಂದು ಕೇರಳದ ಮುಖ್ಯಮಂತ್ರಿ ಶ್ರೀ ಪಿಳ್ಳೆಯವರು ಹೇಳಿದ್ದಾರೆ. ಈ ಸಂಬಂಧದಲ್ಲಿನ ಮಾತುಗತೆಗಳು ಇನ್ನೂ ನಡೆಯುತ್ತಿವೆ.

ಹೀಗೆ ರಾಜ್ಯ ಪುನರ್ಘಟನಾ ನಂತರ ಮದ್ರಾಸದಲ್ಲಿ ರಾಜ್ಯಸಂಬಂಧದ ಕೆಲವೊಂದು ವಿವಾದಗಳು ಏಳುತ್ತ ಬಂದಿವೆ. 'ದ್ರಾವಿಡ ಕಜಗಮ್"ನಂತಹ ಸಂಕುಚಿತ ಸಂಸ್ಥೆಗಳ ಅರ್ಥಹೀನ ಆಂದೋಲನವಲ್ಲ, ಹೊಣೆಗಾರ ವ್ಯಕ್ತಿಗಳಲ್ಲಿಯೇ ಒಂದಲ್ಲ ಒಂದು ಪ್ರಕಾರದ ಅಸಂತುಷ್ಟಿ ಹರಡುತ್ತಿದೆ; ರಾಜ್ಯದ ಅಭಿವೃದ್ಧಿ ಪಥದಲ್ಲಿ ಹೊಸ ಹೊಸ ಸಮಸ್ಯೆಗಳು ತಲೆದೋರುತ್ತಿವೆ...ಇವೆಲ್ಲವನ್ನೂ ಶ್ರೀ ಕಾಮರಾಜರ ಸರಕಾರ ಹೇಗೆ ಎದುರಿಸಬಲ್ಲುದು?

ಕಥಾ ವಿಹಾರ

ರಾಯರು ಹೂಡಿದ ಸಂಪು

ಜನತೆಯ ಉದ್ಧಾರದ ಹೆಸರಿನಲ್ಲಿ ಅಹರ್ನಿಶಿ ಸೇವೆ ಸಲ್ಲಿಸುತ್ತಿದ್ದ ಸಮಾಜ ನಾಯಕ ರಾಯರು ತನ್ನ ಒಕ್ಕಲ ಹುಡುಗನ ಪರೀಕ್ಷೆಗೆ ಎರವಲಾಗಿ ಹಣ ನೀಡಲು ನಿರಾಕರಿಸಿದರು. ಇದರ ಪರಿಣಾಮ..............!

ಕಥೆಗಾರರು: ಶ್ರೀ ಎಚ್. ರಾಮಕೃಷ್ಣ ಅಡಿಗ.

ದಿನವಿಡೀ ದುಡಿದು ಸಂಜೆಗೆ ಆ ದಿನದ ಪ್ರತಿಫಲ—ಸಂಬಳ—ಬಿದ್ದೊಡನೆ ಲೆಕ್ಕ ಮಾಡಿ ಪಂಜೆಯ ತುದಿಗೆ ಗಂಟಿಕ್ಕಲೆಂದು ತಲೆಗೆ ಸುತ್ತಿದ ರುಮಾಲೆಯನ್ನು ಬಿಚ್ಚುವ ಪದ್ಧತಿಯನ್ನು ಇಟ್ಟುಕೊಂಡಿದ್ದ ಧೀರ—ಅಂದು ಒಡೆಯನ ಮನೆಯ ಮೆಟ್ಟಿಲನ್ನೇರಿ ಹೊರ ಹೆಬ್ಬಾಗಿಲಿನಲ್ಲಿ ಕುಳಿತುಕೊಳ್ಳಲು ಕಂಬದ ಬುಡವನ್ನು ಸೇರಬಯಸಿದಾಗಲೇ 'ತಂದೆಯವರಿಲ್ಲ' ಎಂಬ ಒಳಗಿನ ಮಕ್ಕಳ ದನಿಯನ್ನು ಕೇಳಿದ ಬೇಸರವೋ ಏನೋ—ಕೈ ರುಮಾಲೆಯನ್ನು ಕೆಳಕ್ಕಿಳಿಸಿತು. ಎಂಟು ಮೊಳ ಉದ್ದದ ಬಟ್ಟೆಯನ್ನು ಬಿಚ್ಚಿ ಕುಡುಕಿದ; ಆದರೆ ಸೆರಗಿನ ತುದಿ ಕೈ ಸೇರುತ್ತಲೇ ಆತನಿಗೆ ನೆನಪಾಯಿತು: ಇಂದು ಒಂದು ದಿನ ಕೆಲಸದ ಪ್ರತಿಫಲವಲ್ಲ, ೧೦ ದಿನದ್ದು ಬೇಕು ಅಂತ. ಅಷ್ಟರಲ್ಲೇ ರಾಯರ ತಮ್ಮ ಬಂದು, ಅಂದ—'ಏನೋ ಧೀರಾ, ಗಚ್ಚು ಹೊಡೆದು ಕುಳಿತುಕೊಳ್ಳುವ ತಯಾರಿ! ಅಣ್ಣನವರು ಮನೆಯಲ್ಲಿಲ್ಲ. ಸಂಜೆ ಬರುತ್ತಾರೋ ನಾಳೆ ಬರುತ್ತಾರೋ—ಏನಿದ್ದರೂ ನಾಡದಿಗೆ ಆಯ್ತು. ನೀನು ಕೂತುಕೊಳ್ಳುವುದು ಸುಮ್ಮನೆ." ಧೀರ ಎಣಿಸಿದ್ದೊಂದು, ಆದದ್ದೊಂದು. ತನ್ನನ್ನು ಸುಖದಿಂದ ವಿಚಾರಿಸಬಹುದು; ರಾಯರನ್ನು ಚೆನ್ನಾಗಿ ಮಾತಾಡಿಸಿ, ತನ್ನ ಹುಡುಗ ಇಂಗ್ಲಿಷ್ ಪಾಸ್ ಮಾಡ್ತಾನೆಂತ ಹೇಳಿ, ಹಣ ಪಡ್ಕೊಂಡು ನಗುನಗುತ್ತಾ ಹೊರಡಬೇಕೆಂದಿದ್ದ ಧೀರನ ಆಸೆಗಳೆಲ್ಲಾ ತಿರುವು ಮುರುವು ಆಯ್ತು. ಉದ್ವೇಗವನ್ನು ತಡೆಯಲಾರದೆ ಧೀರ ತಲೆಯನ್ನೆತ್ತಿ ಮೇಲೆ ನೋಡಿದ—ಅದೇ ಅವನಿಗೆ ರಾಯರ ತಂದೆಯ ಫೋಟೋ ಕಂಡಿತು; ಧೀರ ಮನಸ್ಸಿನಲ್ಲೇ ನಕ್ಕ—"ಎಲ್ಲಾ ಸುಧಾರಿಸುತ್ತದೆ ಎನ್ನುತ್ತಾರೆ ಜನ. ಏನು ಸುಧಾರಿಸಿದ್ದಾರೆ!—ಆ ರಾಯರ ಕಾಲ ಸಂತಜ ಕಾಲ—ಇನ್ನು ಬರುವಂತಿಲ್ಲ.'' ಏನು ಬರಿಗೈಯಲ್ಲಿ ಬಂದವನನ್ನು ಅಂತೆಯೇ ಅವರು ಒಮ್ಮೆಯಾದರೂ ಕಳಿಸಿದ್ದಿದೆಯೇ? ಈಗ—ಧೀರ ಬಂದದಾರಿ ಹಿಡಿಯಬೇಕು... ಮಗನ ಪರೀಕ್ಷೆ ನಿಂತು ಹೋಗುತ್ತೆ. ಆತ ಊರುಬಿಟ್ಟು ದೇಶಾಂತರ ಹೋಗುತ್ತಾನೆ—ಧೀರನ ಸರ್ವಸ್ವ ಇದ್ದೂ ನಿಷ್ಫಲ—ಮುಂದೆ ಧೀರನ ಯೋಚನಾಲಹರಿ ಕತ್ತರಿಸಿ ಬಿತ್ತು.

"ಸಣ್ಣ ರಾಯರೇ....ದೊಡ್ಡ ರಾಯರು ಎಲ್ಲಿಗೆ ಹೋಗಿದ್ದಾರೆ?''

"ಅದೆಲ್ಲ ನಿನಗೆ ಬೇಡದ ಸುದ್ದಿ. ನಮ್ಮ ಊರವರ ಸುಖ ಸವಲತ್ತಿಗಾಗಿ ಪೆಟ್ಟುತಿಂದು ಜೇಲಿಗೆ ಹೋಗಲಿಕ್ಕೆ ಹೊರಟು ನಿಂತಿದ್ದಾರೆ".

"ಹಾಗೆಂದರೆ...'' ಅರ್ಥವಾಗದೆ ಧೀರನೆಂದ. ಆತ ತಿಳಿದಿದ್ದ—ಕಳ್ಳರಿಗೆ ಮಾತ್ರ ಜೈಲು ಎಂದು. ರಾಯರು ಅಷ್ಟು ಮುಂದುವರಿದಿರಲಿಕ್ಕಿಲ್ಲವೆಂದು ಅವನೆಣಿಕೆ.

"ಹಾಗೆಂದರೆ.... ಪುರಾಣ ಬಿಚ್ಚಲಿಕ್ಕೆ ನನಗೆ ಪುರುಸೊತ್ತಿಲ್ಲ. ನಮ್ಮೂರಿಂದ ಪ್ರಯಾಣಿಸುವವರಿಗೆ ಸ್ವಲ್ಪ ಸಮಯದಿಂದ ಅನನುಕೂಲವಿದೆ. ಅದಕ್ಕಾಗಿ ಬಸ್ ಮಾಲೀಕರೊಡನೆ ಅರ್ಜಿಮಾಡಿ, ಸಮಯ ಬದಲಾವಣೆಗೆ, ಹೆಚ್ಚಿನ ಒಂದೆರಡು ಗಾಡಿ ಇಡಲಿಕ್ಕೆ ಹಾಗೂ ಟಿಕೇಟಿನದರ ಇಳಿಸುವಂತೆ—ಕೇಳಿಕೊಂಡದ್ದಕ್ಕೆ ಇವತ್ತಿನಿಂದ ಒಂದೆರಡು ಗಾಡಿಗಳನ್ನು ನಿಲ್ಲಿಸಿ, ಅಳಿದುಳಿದ, ಬರಲೆಂದು ನಿಂತಿದ್ದ ಜನರಿಗೆ ಡಬ್ಬಲ್ ಚಾರ್ಜ್ ಮಾಡಿದರಂತೆ. ಅದನ್ನು ಕೇಳಿ ರಾಯರು ಅತ್ತ ನಡೆದರು; ಗಾಡಿಯ ಮುಂದೆ ಹೋಗಿ ಕುಳಿತರು—'

"ಹೂಂ...." ಧೀರ ಗಾಬರಿಯಾಗಿ ನಿಂತ. ಮೈನಡುಗುತಿತ್ತು.

"ಹೂಂ ಎಂದರೆ ಗಾಡಿ ಮುಂದೆ ಬಂತೆಂತ ಮಾಡುವೆಯೂ? ಅಲ್ಲಿಗೆ ಡ್ರೈವರ್ ನಿಲ್ಲಿಸಿದ. ಎಲ್ಲಾದರೂ ಮುಂದೆ ಬಂದರೆ ಗಾಡಿಗೆ ಬೆಂಕಿ ಇಟ್ಟು ಸುಟ್ಟು ಭಸ್ಮ ಮಾಡೋದಿಲ್ಲವೆ? ಅದಕ್ಕಾಗಿ ಡ್ರೈವರ ನಿಲ್ಲಿಸಿದ.''

'ಹೌದಪ್ಪಾ, ಅವನೂ ಸತ್ತು ಹೋದಾನು; ಮತ್ತವನ ಹೆಂಡತಿ ಮಕ್ಕಳ ಗತಿ....!'

'ನಿನಗದೇ ಚಿಂತೆ. ಹೆಂಡತಿ ಮಕ್ಕಳದ್ದು....' ಎಂದು ರಾಯರು ಬೀದಿಯ ಕಡೆಗೆ ದೃಷ್ಟಿ ಹರಿಸಿ ಯಾರೂ ಕಾಣದಿರಲು ಹೂಂ ಎಂತ ನಿಟ್ಟುಸಿರುಗರೆದು ಪುನಃ ಪೇಪರನ್ನು ಬಿಡಿಸಿ ಒಳಗಿನ ಚಾವಡಿಯತ್ತ ತಿರುಗಿದರು.

'ರಾಯರೇ....ನಾನು...ನಿಮ್ಮ ದೊಡ್ಡ ರಾಯರ ಹತ್ತಿರ...'

'ಹಾಂ, ಹೌದೌದು....ಹಣ ಕೇಳ್ಳಿಕ್ಕೆ ...ಬಂದಿದ್ದೇನೆ' ಎಂತ ರಾಯರೂ ಅದೇ ರಾಗದಲ್ಲಿ ನುಡಿದು ಅಣಕವಾಡಿದರು. ತಮ್ಮ ಜಾತಿಯ ಸಂನಾಟಕರು ಯಾರೂ ಅಂತಂದಿದ್ದರೂ ಧೀರ ಅವರ ನಾಲಿಗೆಯನ್ನು ಕತ್ತರಿಸಿ ಇಕ್ಕುತಿದ್ದ. ಆದರೆ....ರಾಯರು ತಮ್ಮ ಅಪ್ಪನ ಕಾಲದಿಂದಲೂ ನಮ್ಮನ್ನು ಸಾಕಿ ಸಲಹಿದವರು. ಅವರಿಗೇ ನಮ್ಮ ಜೀವ ಮೀಸಲೆಂತ ಅಂದು ಅಪ್ಪ ಸತ್ತಿದ್ದ. ಸತ್ತು ಹೋದ ದೊಡ್ಡ ರಾಯರಿದ್ದಾಗ, ಎಳವರೆಯದ ಧೀರ—ಅಂತೇ ನಡೆದು ಬಂದಿದ್ದ—ಈಗ, ಕೆಲವೊಮ್ಮೆ ಅವನಿಗೇಕೋ ಸರಿ ಹೊಂದುವಂತೆ ಕಾಣುವುದಿಲ್ಲ....ಹೀಗೇ ಬಂದಿದ್ದರೆ ಸಣ್ಣ ರಾಯರಿಗೆ ಆತ ಏನಾದರೂ ಅನ್ನದೆ ಹೋಗುತ್ತಿರಲಿಲ್ಲ. ಆದರೆ, ಆತನಿಂದು ಬಂದದ್ದು ತನ್ನ ಹುಡುಗ ೧೭ ವರ್ಷದ ಶಂಕರನ ಸಲುವಾಗಿ. "ಈ ಇಂಗ್ಲಿಷ್ ನಮಗೆ ಬೇಡ. ಈ ದುಡ್ಡುಕೊಟ್ಟು ಕಲಿಯುವ ವಿದ್ಯೆ ನಮಗೆ ಬೇಡ. ಅಷ್ಟು ಸಂಪಾದನೆ ಮಾಡಬೇಕೆಂದಿದ್ದರೆ ತನ್ನ ಕೆಲಸ ಕಲಿ—ಕಲಿವಾಗಲೇ ಕೈಗೆ ದುಡ್ಡು ಸಿಗುತ್ತೆ. ಹೀಗೆ ಪರೀಕ್ಷೆಗೆ ದುಡ್ಡು ಕೊಡೋದು ಬೇಡ. ನಮ್ಮ ಪರೀಕ್ಷೆ ನೋಡು—ಹೆಡಿಗೆ ಹೆಡಿಗೆಯಲ್ಲಿ ಸಿಗುತ್ತೆ—ಎಂದು ತುಂಬಿ ನಿಂತ ಗದ್ದೆಗಳನ್ನು ಧೀರ ಮಗನಿಗೆ ತೋರಿಸಿ ಅಂದದ್ದು ಅದೆಷ್ಟು ಬಾರಿಯೋ—ಆದರೂ ಶಂಕರ ಕೇಳಲಿಲ್ಲ. ಹಣಕ್ಕೆಂದು ಮನೆಗೆ ಬಂದಾಗಲೆಲ್ಲಾ ಉಪವಾಸ ಕೂತು ಅಳಿದುಳಿದ ಪುಡಿ ಚಿಕ್ಕಾಸುಗಳನ್ನು ಒಟ್ಟುಗೂಡಿಸಿ ಒಯ್ಯುತ್ತಿದ್ದ. ಅಲ್ಲದೆ ವಿದ್ಯಾಭ್ಯಾಸದಿಂದ ಆಗುವ ಲಾಭವನ್ನು ನೂರಾರು ಬಾರಿ ಹೇಳಿ, ಸಾವಿರಾರು ಕತೆ ಹೇಳಿ ತಂದೆಯನ್ನು ಒಂದುದಾರಿಗೆ ತಂದಿದ್ದ—ಆದರೂ ಕೆಲವೊಮ್ಮೆ ಧೀರನೆನ್ನುತಿದ್ದ—ನೋಡಪ್ಪಾ, ಶಂಕರಾ, ನಿನ್ನಂತೆ ಮಾತಾಡೋಕೆ ಬಾರದಿದ್ದರೂ ನಾನಂತೇನೆ—ನಮ್ಮ ಸತ್ತು ಹೋದ ದೊಡ್ಡರಾಯರು ಏನೂ ಕಲೀಲಿಲ್ಲ. ಹೇಗೆ ಅರಸುಮಗನ ಹಾಗೆ ಇದ್ದರಂತೀಯ? ಈಗ ಕಲಿತ ಅವರ ಮಕ್ಕಳು ನೋಡ್ಕೊ... ಏನೆಲ್ಲಾ ಕೆಲಸ ಮಾಡ್ತಾರೆ-ಒಕ್ಕಲುಮನೆ ಸುಟ್ಟಿ ಮಾಡ್ತಾರಂತೆ. ಗಟಾರ ಸ್ವಚ್ಛ ಮಾಡ್ತಾರಂತೆ. ರಸ್ತೆ ಮಾಡ್ಲಿಕ್ಕೆ ಗುದ್ದಲಿ ಹಿಡೀತಾರೆ. ಎಲ್ಲ ಕೆಲಸಕ್ಕೂ ಕೈ ಹಾಕ್ತಾರೆ.......ಯಾಕೆ ಬೇಕಿವರಿಗೆ? ನಮ್ಮಂತವರಿಲ್ವೇ ಅದಕ್ಕೆ ಲ್ಲಾ....' ಎಂದು ಸಂದೇಹಿಸುತಿದ್ದ ಧೀರ. "ಹೌದಪ್ಪ. ಇಂದು ಸರಕಾರ ಬಡವರ ಉದ್ಧಾರಕ್ಕಾಗಿ ಹೋರಾಡುತ್ತಿದೆ. ಅವರು ಕಾಂಗ್ರೆಸಿಗರು ನೋಡು, ಪುಕ್ಕಟೆಯಾಗಿ ದೇಗುಲವರೆಗೆ ರಸ್ತೆ ಆಗಿಲ್ಲವೆ?" ಮಗನ ಪ್ರಶ್ನೆ.

"ಏನು ಪುಕ್ಕಟೆಯೋ? ಸರಕಾರದಿಂದ ಅಂತಹ ಕೆಲಸಕ್ಕೆಂದು ರೂ. ೫೦೦ ಬಂದಿತ್ತಂತೆ. ನಮಗೆ ರೂ ೨೦ರಲ್ಲಿ ಅದು ನಡೀತ್ತಿತ್ತು. ಅಂದರೆ, ದೊಡ್ಡವರು ಆ ಕೆಲಸ ಮಾಡಿದ್ರೆ ಅವರಿಗೆ ಅಂತಹ ಸಂಬಳವೇ ಕೊಡಬೇಕು. ನಾವು ಮಾಡಿದ್ರೆ ಊಹೂಂ...." ಎಂತ ತನ್ನ ಕೈಯಿಂದ ಗಂಟೆ ಬಾರಿಸುವಂತೆ ಅಂದ ಧೀರ.

"ನಿನಗೆ ಆ ಕೆಳಮನೆ ಸುಬ್ಬು ಅಂದಿರಬೇಕು. ಅವನ ಮಾತನ್ನೇ ನಂಬಿ ಆಡಿಕೊಂಡಿರು. ಒಂದು ದಿನ ಅವನ ದಾರಿಯೇ ಹಿಡೀತಿ' ಎಂತ ಕೈಯ ಮೇಲೆ ಕೈಯಿಟ್ಟು ಜೈಲಿಗೆ ಒಯ್ಯುವ ಅಪರಾಧಿಯಂತೆ ತಂದೆಯನ್ನು ನಿಂದಿಸಿದ್ದ ಶಂಕರ. "ನೀನೇನೂ ಅನ್ನು, ನಮಗಿದು ಬೇಡ. ನೀನು ಈ ಕೆಲಸವನ್ನೇ ಕಲಿ.'' ತಂದೆ ಮಾತು ತಿರುಗಿಸಿದ್ದ.

"ನೀನು ನನ್ನ ಅಪ್ಪ. ನನ್ನ ಉದ್ಧಾರಕ್ಕೆ ಅಂತೀಯಲ್ಲಾ ಅಪ್ಪಾ. ಹಾಗಾದರೆ ಒಂದು ಕೆಲ್ಸಮಾಡು. ನೀನು ಹಾಗೇ ಇನ್ನೂ ಹೇಳ್ತಾ ಇದ್ರೆ ನಾನು ಈ ಮನೆಯಲ್ಲಿನಿಲ್ಲುವವನಲ್ಲ. ದೇಶಾಂತರ ಹೋಗ್ತೇನೆ. ಮಕ್ಕಳಿಲ್ಲ ಎಂತ ಸುಮ್ನಿರು. ನಾನು ನಿಮ್ಮಲ್ಲಿ ಉಳೀಬೇಕೂಂತಿದ್ರೆ ನೀನಿಂದು ಏನಾದ್ರೂ ಮಾಡಿ ರೂ. ೧೫ ತರಲೇಬೇಕು. ಒಡೆಯರಲ್ಲಿ ಹೋಗಿ ಅನ್ನು. ಈ ವರ್ಷ ಒಂದು ಮುಡಿ ಅಕ್ಕಿ ಗೇಣಿ ಹೆಚ್ಚಿಗೆ ಹಾಕ್ತೇನೆಂತ. ನಾನು ಬೇಕಾದ್ರೆ ದಿನಕ್ಕೆ ಒಂದೇ ಊಟ ಮಾಡ್ತೇನೆ. ನೀನು ಹಣ ಒಟ್ಟುಮಾಡಿ ಕೊಡದಿದ್ರೆ ನನ್ನ ಜೀವ ನಿಮಗೆ ಸಿಗುವದಾಗಿಲ್ಲ." ಎಂದು ದುಃಖದ ಭರದಿಂದ ಶಂಕರ ನುಡಿದಿದ್ದ.

ತಂದೆಗೆ ತಿಳಿದಿತ್ತು, ಒಡೆಯರಲ್ಲಿ ಕೇಳಿದ್ರೆ ತನ್ನ ಜೀವವೂ ಉಳಿಯಲಿಕ್ಕಿಲ್ಲವೆಂತ ಆದರೆ, ಹೆತ್ತ ಕರುಳಿನ ಉರಿಯನ್ನು ತಡೆಯಲಾರದೆ ಅದೇ ಬೆಳಿಗ್ಗೆ ತಲೆಗೆ ಸುತ್ತಿ ಕೆಲಸಕ್ಕೆಂದು ಹೊರಟವನು ಅಂತೇ ರಾಯರ ಮನೆಗೆ ಬಂದಿದ್ದ.

ಮಗ ಹೇಳಿದ್ದ—"ಮಧ್ಯಾಹ್ನ ಬೇಗ ಬಾ. ನಾನು ೧-೩೦ ಗಂಟೆಗೆ ಹತ್ತಿ ೮೦ ದಾಪುರಕ್ಕೆ ಹೋಗ ಬೇಕು. ಸಂಜೆ ೪-೩೦ಕ್ಕೆ ಅಲ್ಲಿ ಹಣ ತುಂಬ ಬೇಕು. ತಡವಾಗಿ ಹೋಯ್ತೆಂದರೆ ನಾನು ನನ್ನ ಹೆಣಾ ಇಲ್ಲಿ ತುಂಬುತ್ತೇನೆ." ಎಂದು.

ಆಗಲೇ ಧೀರನಿಗೆ ಹೊಳೆದಿತ್ತು: ಈ ಕಲಿತವರೇ ಹೀಗೆಂತ. ಒಂದು ಮಾತು ಕೇಳುವವರಲ್ಲ. ತಮ್ಮ ಹಟವೇ ತಮಗೆ ಎಂತ. ಏನೇ ಆಯಲಿ ತಗೊಂಡು ಬರುವುದೆಂತ ನಿಶ್ಚಯಿಸಿದ ಧೀರ ಮಗನಿಗಿಂತೆಂದಿದ್ದ—'ನೀನು ಗದ್ದೆಗೆ ಹೋಗಿ ನೀರಿದೆಯೂ ನೋಡಿ ಬಾ. ನಾನು ಈಗ ಹೊರಡುತ್ತೇನೆ.'

ಮಗ ಕೆಳಗಿಳಿದು ಹೊರಟ, ಗದ್ದೆಗಳ ಸಾಲಿನೆಡೆಗೆ. ತಂದೆ ಒಳಗೆ ದೇವರ ಕೋ

(೧೧ನೇ ಪುಟ ನೋಡಿರಿ)

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಗೃಹ ವಿಜ್ಞಾನ

ಮನೆಯ ಸಿರಿ — ನಗುವ ಮಕ್ಕಳು

(ಲೇಖಾಂಕ ೨)

ಬಾಲ್ಯಾವಸ್ಥೆಯಲ್ಲಿ ಮಕ್ಕಳು ತಮ್ಮ ಭಾವೀ ಜೀವನಕ್ಕೆ ಬುನಾದಿಯನ್ನು ಕಟ್ಟತೊಡಗುವರು. ಈ ಅವಧಿಯಲ್ಲಿ ಪಂಚಾಂಗ ಕಟ್ಟಿಸುವವರು ಕುಸು ಅಲಕ್ಷ್ಯ ವಹಿಸಿದರೆ, ಮುಂದೆ ಮಗುವಿನ ಜೀವನ ಭವನವೇ ಕುಸಿದು ಬಿಡಬಹುದು.

ಲೇಖಕರು: ಶ್ರೀ ಎಂ. ರಂಗರಾವ್.

ಹಲ್ಲು ಬರುವಾಗ

ನೋಡಿ, ಪ್ರಕೃತಿದೇವಿ ಎಷ್ಟು ಒಳ್ಳೆಯ ಕ್ರಮವಿಟ್ಟಿದ್ದಾಳೆ! ಉಪಯೋಗವಿಲ್ಲದ ಒಂದೇ ಒಂದು ಅವಯವವನ್ನೂ ನಮಗಿಟ್ಟಿರುವುದಿಲ್ಲ. ಚಿಕ್ಕಮಗುವಿಗೆ ಹಲ್ಲಿನಿಂದ ತಿನ್ನುವಂತಹ ಆಹಾರವು ಬೇಕಾಗುವುದಿಲ್ಲ. ಆದುದರಿಂದಲೇ ಹುಟ್ಟಿದ ಮಗುವಿಗೆ ಹಲ್ಲಿರುವುದಿಲ್ಲ. ಮಗುವಿನ ಹಲ್ಲುಗಳು ವಸಡುಗಳಲ್ಲೇ ಅಡಗಿರುತ್ತವೆ. ಮೇಲುವಸಡೆ ಕೆಳವಸಡೆಗಳಲ್ಲಿ ಹತ್ತು ಹತ್ತು ಹಲ್ಲುಗಳಿರುತ್ತವೆ ಮಗುವಿಗೆ.

ಮಕ್ಕಳ ಹಲ್ಲು ಯಾವಾಗ ಹೊರಗೆ ಕಾಣುತ್ತವೆಂದು ಖಂಡಿತ ಹೇಳಲು ಸಾಧ್ಯವಿಲ್ಲ. ಮಕ್ಕಳ ಶರೀರ ತತ್ವಕ್ಕೆ ತಕ್ಕ ಹಾಗೆ ಆರನೇ ತಿಂಗಳಿಂದ ಹದಿನೆಂಟನೇ ತಿಂಗಳವರೆಗೂ ಹಲ್ಲು ಬರುವ ಕಾಲವೇ ಆಗಿದೆ. ನಿಧಾನವಾಗಿಯೇ ಹಲ್ಲು ಬಂದರೂ ನೀವೇನೂ ಯೋಚನೆಮಾಡಬೇಕಾಗಿಲ್ಲ. ಹಲ್ಲು ಬರುವ ವರೆಗೂ ಜೀರ್ಣಕ್ಕೆ ತೊಂದರೆಯಾಗುವ ಆಹಾರ ಮಾತ್ರ ಮಗುವಿಗೆ ಕೊಡಬೇಡಿ.

ಮಗುವಿನ ಪೋಷಣೆಗೆ ಬೇಕಾಗುವಷ್ಟು ಜೀವಸತ್ವ ಲವಣಗಳು ಆಹಾರದಲ್ಲಿದ್ದರೆ, ಸರಿಯಾದ ವೇಳೆಯಲ್ಲಿ ಆಹಾರ ಕೊಡುತ್ತಿದ್ದರೆ ಎಳೆ ಹಲ್ಲು ಮೊಳೆಯುವಾಗ ಮಗುವಿಗೆ ಯಾವ ತೊಂದರೆಯೂ ಆಗುವುದಿಲ್ಲ. ಆದರೆ ಸಾಮಾನ್ಯವಾಗಿ ಮಗುವಿಗೆ ಹಲ್ಲು ಬರುವಾಗ ಏನೋ ಒಂದು ಕಾಯಿಲೆ ಬಂದಹಾಗೆ ಕಾಣುವುದುಂಟು. [illegible]ಸಿ, ವಸಡುಬಾವು, ಅಧಿಕವಾದ ಜೊಲ್ಲು, ಭೇದಿ ಹೀಗೆ ಏನೋ ಒಂದು. ಕೆಲವುವೇಳೆ ಮಗುವಿನ ಜೀರ್ಣಶಕ್ತಿ ತಗ್ಗಲೂಬಹುದು. ಆಗ ಸರಿಯಾಗಿ ಆಹಾರ ಸೇವಿಸಲಾರದು. ಅಂತಹ ಸಮಯದಲ್ಲಿ ಸ್ವಲ್ಪ ಮೂಸಂಬಿ ಹಣ್ಣಿನ ರಸಕ್ಕೆ ಬಿಸಿನೀರು ಸೇರಿಸಿ ಕುಡಿಸಬೇಕು. ಇದಕ್ಕೇನೂ ಗಾಬರಿ ಬೀಳಬೇಕಾಗಿಲ್ಲ. ಬೇರೆ ಬೇರೆ ಆಹಾರಗಳಿಗೆ ಮಗುವಿನ ದೇಹವನ್ನು ಪ್ರಕೃತಿ ದೇವಿ ಸರಿಮಾಡಿಕೊಳ್ಳುವ ಕಾಲವದು. ಸ್ವಲ್ಪ ಜಾಗರೂಕತೆಯಿಂದಿದ್ದರೇನೇ ಸಾಕು.

ಈ ಎಳೆಯ ಹಲ್ಲು ಆರೇಳನೇ ವಯಸ್ಸಿಗೇ ಬಿದ್ದು ಹೋಗಿ ಅನಂತರ ನಿಜವಾದ ಹಲ್ಲು ಬರಲು ಪ್ರಾರಂಭವಾಗುತ್ತದೆ. ಹಳೆಯ ಹಲ್ಲು ಅಲುಗಾಡಲು ಪ್ರಾರಂಭಿಸಿದಾಗಲೇ, ಆಗಾಗ ಅಲುಗಾಡಿಸಿ ಅವು ಬೇಗನೇ ಬಿದ್ದು ಹೋಗುವಂತೆ ಮಾಡಿಬಿಡಿ. ಆಗ ಹೊಸ ಹಲ್ಲು ಸಾಲು ತಪ್ಪದೆ ಚೆಂದಾಗಿ ಮೂಡಲು ಅವಕಾಶವಾಗುತ್ತದೆ.

ಮಕ್ಕಳ ಹಲ್ಲುಗಳ ಶುದ್ಧತೆಯ ವಿಷಯದಲ್ಲಿ ತುಂಬಾ ಎಚ್ಚರಿಕೆಬೇಕು. ಹಲ್ಲುಗಳ ಆರೋಗ್ಯಕ್ಕೆ ಸುಣ್ಣ (ಕಾಲ್ಸಿಯಂ) ಮತ್ತು ವಿಟಮಿನ್ ಡಿ. ಪುಷ್ಕಳವಾಗಿರುವಂತಹ ಆಹಾರ ವಸ್ತುಗಳನ್ನು ಸ್ವಲ್ಪ ಹೆಚ್ಚಾಗಿ ಮಕ್ಕಳಿಗೆ ಒದಗಿಸಬೇಕು.

'ಹಲ್ಲುಗಳೇ ದೇಹಾರೋಗ್ಯದ ಹೆಬ್ಬಾಗಿಲು" ಎಂದು ಹಿರಿಯರು ಹೇಳಿದ್ದಾರೆ. ಬೆಳಗ್ಗೆ ಎದ್ದ ಕೂಡಲೇ ಹಲ್ಲುಜ್ಜುವ ಪಾಠದಲ್ಲಿ ಮಕ್ಕಳನ್ನು ಚೆನ್ನಾಗಿ ಪಳಗಿಸಿರಿ. ಏನಾದರೂ ತಿಂದರೆ ಮೂರು ಬಾರಿಯಾದರೂ ಬಾಯಿ ಮುಕ್ಕುಳಿಸಲು ಕಲಿಸಿರಿ.

ನಡೆಯುವಾಗ

ಒಬ್ಬಳು ತಾಯಿಯೇ ಹೆತ್ತ ಮಕ್ಕಳಲ್ಲಿ ಎಲ್ಲವೂ ಒಂದೇ ರೀತಿಯಾಗಿರುವುದಿಲ್ಲ. ಹಾಗೆಯೇ ಮಕ್ಕಳ ಬೆಳವಣಿಗೆಯಲ್ಲಿ ಬರುವ ವ್ಯತ್ಯಾಸಗಳಿಗೂ ಏನೂ ಆಶ್ಚರ್ಯಪಡಬೇಕಾಗಿಲ್ಲ.

“ನನ್ನ ಕಿರಿಯ ಮಗುವಿಗೆ ನಾಲ್ಕನೇ ತಿಂಗಳಲ್ಲಿಯೇ ಹಲ್ಲು ಬಂತು” ಎಂದು ಹೇಳುವುದನ್ನು ಕೇಳಿದ್ದೇವೆ. ಅದೇ ತಾಯಿ “ಹಿರಿಯ ಮಗಳಿಗೆ ಎಂಟನೇ ತಿಂಗಳಲ್ಲಿ ಹಲ್ಲು ಬಂತು” ಎನ್ನುವುದನ್ನೂ ಕೇಳುತ್ತೇವೆ. ಹೀಗೆಯೇ ಕೆಲವರ ಮಗು ಹತ್ತನೇ ತಿಂಗಳಲ್ಲಿ ತಪ್ಪಡಿಯಿಟ್ಟು ನಡೆಯಬಹುದು. ಮತ್ತೆ ಕೆಲವು ಇನ್ನೂ ತಡವಾಗಬಹುದು. ಬೇರೆ ಬೇರೆ ವಿಧವಾದ ಶರೀರ ತತ್ವಗಳಿಗೆ ತಕ್ಕ ಹಾಗೆ ಮಕ್ಕಳ ಬೆಳವಣಿಗೆಯಲ್ಲಿ ವ್ಯತ್ಯಾಸವಿದೆ. ಇದರಲ್ಲಿ ಹೆಚ್ಚಳಿಸಿಕೊಳ್ಳುವಂಥಾದ್ದೋ ಯೋಚನೆ ಮಾಡಿಕೊಳ್ಳುವಂಥಾದ್ದೋ, ವಿಷಾದ ಪಡುವಂಥಾದ್ದೋ ಏನೂ ಇಲ್ಲ.

ಶರೀರದ ಭಾರವನ್ನು ಹೊರಲು ತಕ್ಕಷ್ಟು ಬಲವು ಕಾಲುಗಳಿಗೆ ಬಂದಾಗ ಮಗು ತನ್ನಂತಾನೇ ನಿಂತು ನಡೆಯಲು ಪ್ರಾರಂಭಿಸುತ್ತದೆ. ಕೆಲವು ಮಕ್ಕಳಿಗೆ ಆಹಾರದ ವಿಷಯದಲ್ಲಿ ಹೆತ್ತವರು ಜಾಗ್ರತೆಯಿಂದಿದ್ದರೂ ಕೊಬ್ಬು ಹೆಚ್ಚಾಗಿ ಸೇರಿಬಿಡುವುದುಂಟು. ಅಂತಹ ಮಕ್ಕಳು ಭಾರವಾಗಿ ಸ್ಥೂಲವಾಗಿರುತ್ತವೆ. ಆ ಮಕ್ಕಳು ಬೇಗನೇ ನಡೆಯುವುದಕ್ಕಿಂತ ಅಂಬೆಗಾಲಿಕ್ಕಿ ಓಡಾಡುವುದೇ ಲೇಸು. ಅಂಬೆಗಾಲು ಅಥವಾ ಹರಿದಾಡುವುದರಿಂದ ಮಕ್ಕಳ ಶರೀರದಲ್ಲಿರುವ ಹೆಚ್ಚಿನ ಕೊಬ್ಬು ಬಹಳ ಮಟ್ಟಿಗೆ ತಗ್ಗಿ ಹೋಗುತ್ತದೆ.

ನಡೆಯುವಾಗ ಮಕ್ಕಳ ಕೈಯನ್ನು ನಾವು ಹಿಡಿಯಬಾರದು. ಅಸಲು ಮಕ್ಕಳ ಬೆಳವಣಿಗೆಗೆ ಒತ್ತಾಯವೇ ಕೂಡದು. ಕೆಲವರು ಮಕ್ಕಳು ಬೇಗನೇ ನಡೆದಾಡಬೇಕೆಂದು ಬಲವಂತದಿಂದ ಕೂಡಿಸುವುದೋ ನಡೆಸುವುದೋ ಮಾಡುತ್ತಾರೆ. ಅದರಿಂದ ಮಕ್ಕಳ ಬೆನ್ನು ಬಾಗಿಹೋದೀತು; ತೊಡೆಗಳು ಅಬಲವಾದಾವು. ಮಕ್ಕಳ ಪ್ರತಿ ಉದ್ಯಮಕ್ಕೂ ದೊಡ್ಡವರ ಸಹಾಯ ಮಾತ್ರವೇ ಅಗತ್ಯವಷ್ಟೆ ಒತ್ತಾಯವಲ್ಲ. “ನನ್ನ ಬೆರಳು ಹಿಡಿದುಕೊಂಡು ನನ್ನೊಂದಿಗೆ ನಡೆ” ಎಂದು ಹೇಳಿ ನಡೆಯಲು ಕಲಿಸಬೇಕು. ನಮ್ಮ ಇಷ್ಟಪ್ರಕಾರವೇ ನಡೆಯಬೇಕೆಂದು ಮಕ್ಕಳನ್ನು ನಿರ್ಬಂಧಿಸಬಾರದು.

ಅನೇಕ ತಾಯಂದಿರು ಮಕ್ಕಳನ್ನು ತಳ್ಳುವ ಬಂಡಿಯಲ್ಲಿಯೇ ಸಾಗಿಸುವುದುಂಟು. ಇದು ಒಳ್ಳೆಯದಲ್ಲ. ನಡೆಯಲು ಕಲಿತ ಮಕ್ಕಳಿಗೆ ಹೆಚ್ಚು ಹೆಚ್ಚು ನಡೆಯಲು ಅವಕಾಶ ಮಾಡಿಕೊಡಬೇಕು. ಬೆಳೆಯುವ ಮಕ್ಕಳು ಚೆನ್ನಾಗಿ ನಡೆಯುತ್ತಾ ಓಡುತ್ತಾ ಇರಲಿ.

ಆಡುವ ಮಕ್ಕಳು

ಮಕ್ಕಳಿಗೆ ಸರ್ವಸ್ವವೂ ಆಟವೇ ಆಗಿದೆ. ಆಟವಾಡುತ್ತಿದ್ದರೆ ಊಟವನ್ನಾದರೂ ಮರೆತು ಬಿಡುತ್ತಾರೆ. ಮಕ್ಕಳು ಸರಿಯಾಗಿ ಆಟದಲ್ಲಿ ಲಯಿಸಿಕೊಂಡಿದ್ದರೆ ಅವರು ಆರೋಗ್ಯವಾಗಿದ್ದಾರೆಂಬುದಕ್ಕೆ ಅದು ಗುರುತು.

ಅದಕ್ಕೇ ಮಕ್ಕಳನ್ನು ಸಮೃದ್ಧಿಯಾಗಿ ಆಡಲಿಕ್ಕೆ ಬಿಡಿ. ಆದರೆ ಮಕ್ಕಳಿಗೆ ಕೊಡುವ ಆಟದ ವಸ್ತುಗಳು ಹೇಗಿರಬೇಕು? ಇದನ್ನು ಯಾರೂ ಹೆಚ್ಚಿಗೆ ಯೋಚನೆ ಮಾಡುವುದಿಲ್ಲ. ಅತ್ತು ರಂಪಮಾಡುವ ಮಕ್ಕಳು ಸುಮ್ಮನಿದ್ದರೆ ಸಾಕೆಂಬ ಕಾರಣದಿಂದ ಕೈಗೆ ಸಿಕ್ಕಿದ ಯಾವ ವಸ್ತುವನ್ನಾದರೂ ಮಕ್ಕಳಿಗೆ ಕೊಡುತ್ತಾರೆ ಕೆಲವರು. ಸಣ್ಣ ಮಗು ಏನು ಸಿಕ್ಕಿದರೂ ಬಾಯಿಗೆ ಹಾಕಿಕೊಳ್ಳುತ್ತದೆ. ಗೋಲಿ, ಕಡ್ಡಿಗಳಂತಹ ವಸ್ತುಗಳನ್ನು ಮೂಗು ಅಥವಾ ಕಿವಿಗಳೊಳಗೆ ಸೇರಿಸಿಕೊಳ್ಳುವ ಚೇಷ್ಟೆ ದೊಡ್ಡ ಮಕ್ಕಳಿಗುಂಟು. ಇದಕ್ಕೆಲ್ಲ ಸಾಧ್ಯವಾಗದಂತಹ, ಕೈಕಾಲುಗಳಿಗೆ ಗಾಯವಾಗದಂತಹ ವಸ್ತುಗಳೇ ಮಕ್ಕಳ ಆಟಕ್ಕೆ ತಕ್ಕವಾಗಿವೆ.

ಅಂಗಡಿಯಲ್ಲಿ ಸಿಕ್ಕುವ ಕೆಲವು ಬಣ್ಣದ ಬೊಂಬೆ ಮೊದಲಾದುವು ಈ ದೃಷ್ಟಿಯಲ್ಲಿ ಆರೋಗ್ಯದಾಯಕವಲ್ಲ. ಅವುಗಳಿಗೆ ಹಚ್ಚಿದ ಬಣ್ಣಗಳಲ್ಲಿ ಮಕ್ಕಳ ಆರೋಗ್ಯವನ್ನು ಕೆಡಿಸುವಂತಹ ವಿಷವಿದ್ದೀತು. ಎಲ್ಲಕ್ಕಿಂತಲೂ ಹಸುರು ಬಣ್ಣದಲ್ಲಿ ಮಕ್ಕಳ ಆರೋಗ್ಯಕ್ಕೆ ಬಾಧಕವಾದ ದುರ್ಗುಣ ಹೆಚ್ಚಾಗಿದೆಯೆಂದು ತಿಳಿದು ಬಂದಿದೆಯಂತೆ.

ದಬ್ಬೆ ತಗಡು ಮುಳ್ಳಿನಂಥವು, ಕಲ್ಲಿನಂಥವು ಮಕ್ಕಳ ಆಟಕ್ಕೆ ಎಷ್ಟು ಮಾತ್ರಕ್ಕೂ ಯೋಗ್ಯವಲ್ಲ. ಸೆಲ್ಯುಲಾಯಿಡ್ ಬೊಂಬೆಗಳಿಗೆ ಅಜಾಗ್ರತೆಯಿಂದಿದ್ದರೆ ಬೆಂಕಿಯ ಅಪಾಯವುಂಟು.

(೧೦ನೇ ಪುಟ ನೋಡಿರಿ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—
1ರಿಂದ 4 ತಿಂಗಳ ವರೆಗೆ 4%
5 ,, 12 ,, 4¼%
13 ,, 24 ,, 4½%
ರೂ. 8,000/- ಮತ್ತು ಮೇಲಣ
ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

A NEW BOOK WITHIN THE REACH OF EVERYBODY
“LETTER WRITING MADE EASY”
(75 EVERY DAY LETTERS)
(Written by An Experienced Teacher.)
Useful to one and all, the teacher, the student and the layman.
Price: Rs. 1 = 25. (Postage extra)
If Rs.1=50 is sent by M.O one copy will be sent by B.P.
Copies can be had from the Publishers:
Navayuga Enterprise Ltd. Udipi.
and also from:
M/s Indian Industrials & Agencies, Mangalore-1.
M/s Navabharat Book Depot, Udipi.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.
ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಚಾರವೀಚಿ

ಚಿತ್ರ ಕಲೆಯ ಮೇಲೆ ಪ್ರೇತಾತ್ಮಗಳ ಪ್ರಭಾವ

ಪ್ರೇತಗಳ ಅಸ್ತಿತ್ವದಲ್ಲಿ ಅಂಧವಿಶ್ವಾಸಪ್ರಿಯ ದೇಶಸ್ಥರು ಮಾತ್ರವಲ್ಲ, ಜಗತ್ತಿನ ಸುಸಂಸ್ಕೃತ ದೇಶವಾಸಿಗಳೂ ವಿಶ್ವಾಸವಿಟ್ಟಿದ್ದಾರೆ. ಈ ಕುರಿತಾದ ಹಲವು ಆಖ್ಯಾಯಿಕೆಗಳ ಆಧಾರದಿಂದ ಅನೇಕಾನೇಕ ರೋಚಕ ಚಿತ್ರಗಳು ನಿರ್ಮಾಣಗೊಂಡು ಜನಮನಕ್ಕೆ ಚೇತೋಹಾರಿಗಳಾಗಿವೆ.

(ವಿವಿಧ ಮೂಲಗಳಿಂದ ಲಿಖಿತ)

ಹಿಂದೀ ಸಾಹಿತ್ಯದ ಸಾಮ್ರಾಟರಾದ ತುಲಸೀದಾಸರು ಒಂದು ಪ್ರೇತದ ಸಹಾಯದಿಂದ ಹನುಮಂತನ ದರ್ಶನ ಪಡೆದರೆಂದು ಹೇಳುತ್ತಾರೆ. ಅವರು ಶೌಚಾಚಾರ ಮುಗಿಸಿ ಮರಳಿದೊಡನೆಯೇ ಅಳಿದುಳಿದ ನೀರನ್ನು ಒಂದು ಮರಕ್ಕೆ ಸುರಿಯುತಿದ್ದರಂತೆ. ಸಂಯೋಗವಶದಿಂದ ಅದೇ ಮರದಲ್ಲಿ ಒಂದು ಪ್ರೇತ ವಾಸಿಸುತಿತ್ತಂತೆ. ಅದು ತುಲಸೀದಾಸನ ಉಪಕಾರಕ್ಕೆ ಪ್ರಸನ್ನವಾಗಿ ವರ ಬೇಡಲು ಹೇಳಿತು. ಅವರು ರಾಮದರ್ಶನ ಮಾಡಿಸುವಂತೆ ಪ್ರಾರ್ಥಿಸಿದರು. ತಾನಾಗಿಯೇ ರಾಮನ ದರ್ಶನವನ್ನು ಮಾಡಿಸಲು ಅಸಮರ್ಥವಾದುದರಿಂದ, ರಾಮ ಕಥೆಯನ್ನು ಕೇಳಲು ಇಂತಹ ಒಂದು ಸ್ಥಳಕ್ಕೆ ಹನುಮಂತನು ಬರುವನೆಂದೂ ಆತನ ಸಹಾಯದಿಂದ ರಾಮದರ್ಶನವನ್ನು ಮಾಡುವುದೆಂದೂ ತಿಳಿಸಿತಂತೆ. ಕೊನೆಗೆ, ರಾಮನನ್ನು ತುಳಸೀದಾಸರು ಕಂಡರಂತೆ.

ಪ್ರೇತಾತ್ಮಗಳ ಅಭಿವ್ಯಕ್ತಿಗಾಗಿ ಕಲೆಯ ವಿಭಿನ್ನರೂಪಗಳ ಆಶ್ರಯವನ್ನು ಸಾಕಷ್ಟು ಪಡೆದಿದ್ದಾರೆ. ಉದಾಹರಣೆಗಾಗಿ, ಗರುಡ ಪುರಾಣವು ಪೂರ್ಣತಃ ಪ್ರೇತಯೋನಿಯ ಕುರಿತಾಗಿದೆ. ಮರಣಾನಂತರ ಯಾವ ಯಾವ ಪಾಪಗಳಿಂದ ಆತ್ಮವು ಎಂತಹ ಯಾತನೆಗಳನ್ನು ಅನುಭವಿಸಬೇಕು, ಅದು ಯಾವ ಯಾವ ಯೋನಿಗಳಲ್ಲಿ ಜನಿಸಬೇಕು ಎಂಬೆಲ್ಲ ವಿಚಾರಗಳನ್ನು ಆ ಪುರಾಣದಲ್ಲಿ ಹೇಳಿದೆ. ಯಾರಾದರೊಬ್ಬನು ತೀರಿ ಹೋದ ನಂತರ ಆತನ ದಹನ ಸಂಸ್ಕಾರ ಮಾಡುವವನು ಗರುಡ ಪುರಾಣವನ್ನು ಕೇಳಿದರೆ, ಮೃತಾತ್ಮಕ್ಕೆ ಮುಕ್ತಿ ದೊರೆಯುವುದು ಎಂಬ ವಿಶ್ವಾಸವು ಜನತೆಯಲ್ಲಿದೆ.

ಜನಪ್ರಿಯವಾದ "ಬೇತಾಳ ಪಂಚವಿಂಶತಿ ಕಥೆ"ಗಳಿಗೆ ರಾಜ ವಿಕ್ರಮಾದಿತ್ಯ ಮತ್ತು ಅವನ ಸೇವಕ ವೈತಾಳಿಕ ಎಂಬ ಪ್ರೇತವೇ ಆಧಾರವಾಗಿದ್ದಾರೆ. ಬಂಗಾಳಿ ಭಾಷೆಯಲ್ಲಿ "ಭ.ಶುಂಡಿಯ ಮೈದಾನ" ಎಂಬ ಒಂದು ಸುಂದರ ಕಥೆಯಲ್ಲಿ ಶಿಬು ಎಂಬವನ ಮೂರು ಜನ್ಮಗಳ ಮೂವರು ಪತ್ನಿಯರು ಒಂದೆಡೆ ಸೇರಿದ ಅತ್ಯಂತ ರೋಚಕ ವರ್ಣನೆಯನ್ನು ಮಾಡಲಾಗಿದೆ. ಪರ್ಲ್‌ಬಕ್‌ರವರು ಕೂಡ ತಮ್ಮ "ಗುಡ್ ಅರ್ಥ್" ಎಂಬ ಕಾದಂಬರಿಯಲ್ಲಿ ಚೀನದಲ್ಲಿ ಹರಡಿದ್ದ ಭೂತಪ್ರೇತಗಳ ಕಲ್ಪನೆಯ ಪರಿಚಯವನ್ನು ಮಾಡಿದ್ದಾರೆ. ಪತ್ತೇದಾರಿ ಕಾದಂಬರಿಗಳಲ್ಲಿ ದರೋಡೆಗೋರರು ಅಥವಾ ಹತ್ಯಾಕಾರರು ಭೂತಗಳಂತೆ ವರ್ತಿಸಿ ಆತಂಕವನ್ನು ತಂದೊಡ್ಡಿದ್ದ ಅನೇಕ ಪ್ರಸಂಗಗಳನ್ನು ವರ್ಣಿಸುತ್ತಾರೆ. ಸಂಸ್ಕೃತ ಸಾಹಿತ್ಯದಲ್ಲಿಯೂ ಯಕ್ಷ, ದಾನವ, ಬ್ರಹ್ಮರಾಕ್ಷಸ ಮತ್ತು ಪ್ರೇತ ಮೊದಲಾದುವುಗಳ ಅಸಂಖ್ಯ ಕಥೆಗಳು ತುಂಬಿ ಹೋಗಿವೆ.

ದೇವತೆಗಳ ಬಣ್ಣ ಬೆಳ್ಳಗೆಂದೂ ಪ್ರೇತಗಳ ಬಣ್ಣ ಕಪ್ಪಗೆಂದೂ ಗ್ರಾಮೀಣ ಜನರು ತಿಳಿದುಕೊಂಡಿದ್ದಾರೆ. ಹೆಣ್ಣು ಭೂತಗಳ ಬೆರಳು ಹಿಂಗಡೆ ಮತ್ತು ಪಾದ ಮುಂಗಡೆಯಿರುವುದಂತೆ. ಭೂತಾತ್ಮಗಳು ಮೂಗಿನಿಂದ ಮಾತಾಡುತ್ತವೆ: ಕಣ್ಣು ರೆಪ್ಪೆಗಳು ಮುಚ್ಚುವುದಿಲ್ಲ; ಪಾದದ ಚಿಹ್ನೆಗಳು ಬೀಳುವುದಿಲ್ಲ; ಮತ್ತು ಮಾನವಾಕೃತಿಯಲ್ಲಿ ನಮಗೆ ತೋರಿ ಬಂದರೂ ಅವು ಅಶರೀರಿಗಳಾಗಿವೆ ಎಂಬ ವಿಶ್ವಾಸ ಜನರಲ್ಲಿದೆ.

ಅಂಧ ವಿಶ್ವಾಸಿಗಳೆಂದು ಹೇಳಲಾಗುವ ಭಾರತೀಯರ ವಿಚಾರ ಸರಣಿ ಮೇಲಿನಂತಿರುವುದು. ಆದರೆ,ಪ್ರಗತಿ ಶೀಲರೆಂದು ಕರೆಯಲ್ಪಡುವ ಪಾಶ್ಚಾತ್ಯ ದೇಶಗಳೂ ಈ ಸಂಬಂಧದಲ್ಲಿ ಹಿಂದುಳಿದಿಲ್ಲ. ಅವೂ ತಮ್ಮ ಕಲೆಗಳಲ್ಲಿ,ಮುಖ್ಯವಾಗಿ ಚಿತ್ರಕಲೆಯಲ್ಲಿ, ಅಶರೀರೀ ಆತ್ಮಗಳ ಅಭಿವ್ಯಕ್ತಿಯನ್ನು ಮಾಡುವ ಪ್ರಯತ್ನ ನಡೆಸಿದ್ದಾರೆ.

ನಾಲ್ಕು ಅಂಗುಷ್ಠಗಳುಳ್ಳ ದೇವದೂತನ ಚಿತ್ರವನ್ನು ಬಿಡಿಸಿದ ಚಿತ್ರಕಾರನ ಕೃತಿ ಸಾಕಷ್ಟು ಪ್ರಸಿದ್ಧವಿದೆ. ಆ ಚಿತ್ರವನ್ನು ಕಂಡು ಒಬ್ಬ ವಿಮರ್ಶಕನು, "ನಾಲ್ಕು ಅಂಗುಷ್ಠಗಳಿರುವ ದೇವದೂತನನ್ನು ಯಾರು ಕಂಡಿದ್ದಾರೆ?" ಎಂದು ವಿನೋದವಾಡಿದನು. ಇದಕ್ಕೆ ಉತ್ತರವು ಆ ಚಿತ್ರಕಾರನಿಂದ ಪ್ರಶ್ನೆರೂಪದಲ್ಲಿಯೇ ಬಂದಿತ್ತು. "ಮೂರು ಅಂಗುಷ್ಟಗಳ ದೇವದೂತನನ್ನು ಯಾರು ನೋಡಿದ್ದಾರೆ?"

ಸರ್ ಜಾನ್ ಮಿಲಾಯಿಸ್‌ನು ಮೊತ್ತಮೊದಲಿಗೆ ತನ್ನ "ಅಡು ಅಡು' ಚಿತ್ರವನ್ನು ಕಲ್ಪಿಸಿದಾಗ, ತನ್ನೊಬ್ಬ ಮಿತ್ರನೊಡನೆ ಹೇಳಿದ್ದನು: 'ಬಾಲ್ಯಾವಸ್ಥೆಯಿಂದಲೇ ನಾನು ಯಾವುದಾದರೊಂದು ಮೃತಾತ್ಮದ ಚಿತ್ರ ರಚಿಸಲು ಆಶಿಸುತಿದ್ದೆ. ಆದರೆ, ಅದು ಇದುವರೆಗಿನ ವಿಧಾನಗಳಿಂದಸಂಪೂರ್ಣ ಭಿನ್ನವಾಗಿರಬೇಕು.

ಜಾನ್ ಮಿಲಾಯಸನ ಮರಣದ ಕೆಲ ದಿನ ಮೊದಲು ಟೇಟ್ ಗೆಲರಿಯಲ್ಲಿ 'ಅಡು, ಅಡು' ಚಿತ್ರವನ್ನು ಪ್ರದರ್ಶಿಸಿದಾಗ, ವಿಮರ್ಶಕರು ಮತ್ತು ಜನತೆಯು ಅವರ ಕಥೆಯ ಮೇಲೆ ವಿವಿಧ ಕಲ್ಪನೆಗಳನ್ನು ಮಾಡತೊಡಗಿದರು. ಆ ಚಿತ್ರದಲ್ಲಿ ಗಿಸೇಪಿ ಡಿ ಓರೆಜ್ಜೊ ಮತ್ತಾತನ ಸಂಕಟಗ್ರಸ್ತ ಪ್ರೇಮಿಕೆ ಫಿಯಾಮೇಟಳ ಸುಂದರ ಇಟೇಲಿಯನ್ ಕಥೆಯನ್ನು ಚಿತ್ರಿಸುವ ಪ್ರಯತ್ನ ಮಾಡಲಾಗಿತ್ತೆಂದು ಒರ್ವ ಪ್ರಮುಖ ವಿಮರ್ಶಕ ಹೇಳಿದ್ದನು. ಆ ದಿನಗಳಲ್ಲಿ ಪ್ರೇಮಿಗಳನ್ನು ಒಬ್ಬ ಸ್ವಾರ್ಥ ಲೋಲುಪ ಶ್ರೀಮಂತನು ಅಗಲಿಸುತಿದ್ದನಂತೆ. ಆತನ ನಾಯಿಕೆಯ ಕುಟುಂಬದವರಿಗೆ ಅತಿ ಆಮಿಷಗಳನ್ನು ತೋರಿಸಿ ಫಿಯಾಮೇಟಾಳ ಇಚ್ಛೆಗೆ ವಿರುದ್ಧವಾಗಿ, ಆತನೊಡನೆ ಮದುವೆ ಮಾಡಿಸಿದನೆಂದೂ ಅನಂತರ ಆಕೆಯನ್ನೊಂದು ಕೋಟೆಯಲ್ಲಿ ಬಂಧಿತಳಾಗಿಟ್ಟರೆಂದೂ ಕೊನೆಗೆ ಆಕೆಯ ಸಮಾಚಾರವೇ ದೊರೆಯಲಿಲ್ಲವೆಂದೂ ತಿಳಿಯುತ್ತದೆ.

ಬುದ್ಧಿಶೂನ್ಯನಾದ ಗಿಸೇಪಿಯು ಎರಡು ವರ್ಷಗಳ ವರೆಗೆ ಹೋಗದೆ ಇದ್ದು ಫಿಯಾಮೇಟಳನ್ನು ನಿರೀಕ್ಷಿಸುತಿದ್ದನು. ಆದರೆ, ಆತನಿಗಾಗಲೀ ಆಕೆಯ ಸಂಬಂಧಿಕರಿಗಾಗಲೀ ಫಿಯಮೇಟಳು ಜೀವದಿಂದಿರುವಳೇ ಮೃತ್ಯುಮುಖಳಾಗಿರುವಳೇ ಎಂಬುದಾವುದೂ ತಿಳಿಯಲಿಲ್ಲ. ಅಷ್ಟು ಹೊತ್ತಿನಲ್ಲಿ ಆಕೆಯ ಕುತ್ತಿಗೆ ಹಿಚುಕಿ ಬಾವಿಗೆ ಕೆಡಹಲಾಗಿದೆ ಎಂಬ ಸುದ್ದಿ ಹರಡಿತು. ಉನ್ಮತ್ತ ಪ್ರಾಯನಾದ ಗಿಸೇಪಿಯು ಇದರ ಸತ್ಯಾಸತ್ಯತೆಯನ್ನು ತಿಳಿಯಲು ಪ್ರಯತ್ನ ನಡೆಸಿದನು; ರಾತ್ರಿ ಹೊತ್ತು ಕೋಟೆಯೊಳಗಿಂದ ಒಬ್ಬ ಸ್ತ್ರೀಯ ಕೂಗನ್ನು ಕೇಳಿದ ಗಿಸೇಪಿಯು ತನ್ನ ಸಕಲ ಧೈರ್ಯವನ್ನೂ ಕೇಂದ್ರೀಕರಿಸಿ ಗೋಡೆಗಳನ್ನೇರ ತೊಡಗಿದನು. ಆದರೆ, ಅವನು ಜಾರಿ ಬಿದ್ದನು; ಭುಜ ಮುರಿಯಿತು. ಪೋಪನ ಗುಪ್ತಚರರು ಆತನನ್ನು ಬಂಧಿಸಿದರು. ಧರ್ಮ ವಿರೋಧದ ಆರೋಪವನ್ನು ಹೊರಿಸಿ, ಕಾರಾಗೃಹಕ್ಕೆ ಅಟ್ಟಿದರು. ಕೆಲ ದಿನಾನಂತರ ಧರ್ಮ ನ್ಯಾಯಾಲಯವು ಆತನಿಗೆ ಮೃತ್ಯು ದಂಡನೆಯನ್ನಿತ್ತಿತು. ಮಧ್ಯ ರಾತ್ರಿಯ ಹೊತ್ತಿನಲ್ಲಿ ಗಿಸೇಪಿಯು ಕೋಣೆ ತನಗೆ ತ

(೯ನೇ ಪುಟ ನೋಡಿ)

ಅಮೇರಿಕದ ತುಪಾಕಿ ಹಾರಿಸುವ ಸ್ಪರ್ಧೆಯಲ್ಲಿ ಗೆದ್ದ ಲಿನೋರಾ ಜೆನ್ಸನ್‌ಳು ವಾಲ್ಟರ್ ಕಮಿಲ್‌ನರೊಡನೆ ಮಾತನಾಡುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು

ನವೀನ ಕಾದಂಬರಿ ಹೊಸ ಪುಸ್ತಕ

ಮೋಹದ ಮಹಾಜಾಲ

ಅದ್ಭುತ ಸಾಹಸ–ಶೋಧದ ಕಾದಂಬರಿ

ಬರೆದವರು: ವೀರಪ್ಪ ಯಗಟಿ, ಬಿ. ಎ., ಎಲ್‌ಎಲ್. ಬಿ, ವಕೀಲ, ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಮಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು.

ಬಿಳಿ ಕಾಗದ. ಬೆಲೆ: ರೂ. 1—12—0 (1-75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ.
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಆರೋಗ್ಯ ರಕ್ಷಣೆ

ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ

ಶರೀರದ ಶ್ರೇಷ್ಠ ಅಂಗವಾದ ಕಣ್ಣಿನ ಆರೋಗ್ಯವನ್ನು ಉಳಿಸುವುದು ಎಲ್ಲರ ಕರ್ತವ್ಯ. ಶ್ರೀ ದೀನದಯಾಳ ಮಲಹೋತ್ರಿಯವರು ನಯನಾರೋಗ್ಯದ ಕೆಲವು ಸಾಮಾನ್ಯ ನಿಯಮಗಳನ್ನು ಈ ಲೇಖದಲ್ಲಿ ತಿಳಿಸಿದ್ದು, ಅವನ್ನು ನಾವು ಅವಶ್ಯ ಕಾರ್ಯಕೃತಗೊಳಿಸಬೇಕು.

'ಕುರುಡ ಸ್ವಾಮಿ, ಎರಡೂ ಕಣ್ಣ ಕುರುಡ ಸ್ವಾಮಿ'' ಎಂಬ ಉದ್ಗಾರವು ಕೇಳಿದೊಡನೆಯೇ ನಾನು ಮೊದಲು ಬೆಚ್ಚಿಬಿದ್ದೆ. ಈ ಒಂದು ಮಾತು ನನ್ನ ಕಿವಿಗೆ ವಿಸ್ಮಿತನನ್ನಾಗಿಸಿತೆಂದು ನಾನು ಯೋಚಿಸ ತೊಡಗಿದೆ. ಹಿಂದಿರುಗಿ ನೋಡಿದಾಗ, ಒಬ್ಬ ವೃದ್ಧ ಅಂಧನು ಹರಕು ಚೂರುಗಳು ಬಟ್ಟೆಯುಟ್ಟು ನನ್ನ ಮುಂದೆ ಹಾದುಹೋಗುತ್ತಿರುವುದನ್ನು ಕಂಡೆ. ನಾನು ಆ ಸಮಯದಲ್ಲಿ ಭಯಾನಕ ನೇತ್ರ ರೋಗಕ್ಕಾಗಿ ಆಪರೇಷನ್ ಮಾಡಿಸಿಕೊಂಡ ಮಿತ್ರನೊಬ್ಬನೊಡನೆ ಆಸ್ಪತ್ರೆಯತ್ತ ತೆರಳುತ್ತಿದ್ದುದರಿಂದ ಈ ಮಾತಿನ ಪ್ರಭಾವ ನನ್ನ ಮೇಲೆ ಬಹಳಷ್ಟು ಬಿದ್ದಿತು. ಆದೇ ಆಸ್ಪತ್ರೆಯಲ್ಲಿ ಅಂತಹ ನೇತ್ರ ರೋಗಕ್ಕೆ ಯೋಗ್ಯ ಆಪರೇಶನ್ ಭಾರತದಲ್ಲಿ ಆಗುತ್ತಿಲ್ಲ ಎಂದು ಹೇಳಿದ್ದರು. ರೋಗಿಗ ಇದಕ್ಕಾಗಿ ವಿಲಾಯತಿಗೆ ಹೋಗ ಬೇಕಾಗಿತ್ತಂತೆ. ಆಸ್ಪತ್ರೆಯ ಬಾಗಿಲಿಂದ ಹೊರ ಬೀಳುತ್ತಿರುವಂತೆಯೇ ನೇತ್ರರೋಗದಿಂದ ಕುರುಡರನ್ನು ಹೇಗೆ ರಕ್ಷಿಸಬಹುದು ಎಂದು ಯೋಚನಾ ಮಗ್ನನಾಗಿದ್ದೆ. ಈಗ ಕುರುಡುತನದಿಂದ ಕಣ್ಣುಗಳನ್ನು ಹೇಗೆ ಉಳಿಸಬಲ್ಲೆವು ಎಂಬ ಇನ್ನೊಂದು ಪ್ರಶ್ನೆ ನನ್ನೆದುರು ನಿಂತಿತು. ಎರಡೂ ಪ್ರಶ್ನೆಗಳು ಅನ್ಯೋನ್ಯಾಶ್ರಿತವಾಗಿರುವುವೆಂದು ಮುಂದೆ ನನ್ನ ಮನಸ್ಸಿಗೆ ತೋರಿತು.

ಈ ಪ್ರಪಂಚದಲ್ಲಿ ಒಂದು ಕೋಟಿ ಜನ ನೇತ್ರಹೀನರಾಗಿದ್ದು, ಇವರಲ್ಲಿ ೨೦ ಲಕ್ಷ ಜನರು ನಮ್ಮ ದೇಶದವರು. ಈ ೨೦ ಲಕ್ಷದಲ್ಲಿ ೧೨ ಲಕ್ಷ ಪುರುಷರು ಮತ್ತು ೮ ಲಕ್ಷ ಸ್ತ್ರೀಯರು. ಇವರಲ್ಲಿ ಜನ್ಮ ನೇತ್ರಹೀನರಾದವರ ಮತ್ತು ರೋಗಗಳಿಂದ ಕಣ್ಣು ಕಳೆದುಕೊಂಡವರ ಸಂಖ್ಯೆ ಎಷ್ಟು ಎಂದು ಸರಿಯಾಗಿ ಗೊತ್ತಿಲ್ಲ. ಆದರೆ, ಜನ್ಮಜಾತ ನೇತ್ರಹೀನರಿಂದ ರೋಗಜಾತ ನೇತ್ರಹೀನರ ಸಂಖ್ಯೆ ನಿಜವಾಗಿಯೂ ಹೆಚ್ಚಾಗಿದೆ.

'ಕಣ್ಣುಗಳೂ ಶರೀರದ ಭಾಗವಾಗಿದೆ' ಎಂಬ ಸತ್ಯವನ್ನು ನಾವು ಕಂಡುಕೊಂಡರೆ, ನಮ್ಮ ನಯನಗಳು ಬಹು ಕಾಲದವರೆಗೆ ಆರೋಗ್ಯವಂತವಾಗಿರುವುವು. ಕಣ್ಣುಗಳ ದುರುಪಯೋಗ ಮಾಡಿಕೊಳ್ಳುವಷ್ಟು ಪ್ರಾಯ ಬೇರಾವ ಅಂಗದಿಂದಲೂ ಮಾಡಿಸುವುದಿಲ್ಲ. ನನ್ನೊಬ್ಬ ನೇತ್ರ ರೋಗಿ ಮಿತ್ರನು ತಾನು ದಿನಕ್ಕೆ ೧೬ ತಾಸುಗಳ ಕಾಲವೂ ಕಣ್ಣುಗಳಿಗೆ ಕೆಲಸ ಕೊಟ್ಟುದರಿಂದ ಅದರ ಪರಿಣಾಮವಾಗಿ, ತನ್ನ ನೇತ್ರ ಜ್ಯೋತಿಯನ್ನೇ ಕಳೆದುಕೊಂಡುದಾಗಿ ಹೇಳಿದರು.

ಕಣ್ಣುಗಳಿಗೂ ವಿಶ್ರಾಂತಿ ಬೇಕೆಂಬ ಸತ್ಯಸಂಗತಿಯನ್ನು ಪ್ರಾಯಃ ನಾವು ಮರೆತುಬಿಡುತ್ತೇವೆ. ನಾವು ಆರೋಗ್ಯವನ್ನು ಕಳೆದುಕೊಂಡು ಹಾಸಿಗೆಯಲ್ಲಿ ಒರಗಿರುವಾಗ, ಉಳಿದ ಅಂಗಗಳಿಗೆ ವಿಶ್ರಾಂತಿಯನ್ನು ಒದಗಿಸುವೆವಾದರೂ ಮಲಗಿದಲ್ಲಿಯೇ ಸಮಯ ಕಳೆಯುವುದಕ್ಕಾಗಿ, ಓದತೊಡಗುತ್ತೇವೆ. ಅಖಂಡ ಶರೀರವೇ ರೋಗಗ್ರಸ್ತವಾಗಿ ನಿರ್ಬಲವಾಗಿರುವಾಗ, ಶರೀರದ ಇನ್ನೊಂದು ಅಂಗವಾದ ಕಣ್ಣುಗಳಿಗೂ ಅಧಿಕ ಆರಾಮ ಬೇಕೆಂಬುದನ್ನು ಮರೆತು ಬಿಡುತ್ತೇವೆ. ಅಶಕ್ತತೆಯ ಸಮಯದಲ್ಲಿ ನೇತ್ರಗಳ ಮೇಲೆ ಹೆಚ್ಚಿನ ಭಾರವನ್ನು ಹೇರಬಾರದೆಂದು ಸ್ಮರಣೆಯಲ್ಲಿಟ್ಟಿರಬೇಕು.

ಕಣ್ಣುಗಳನ್ನು ಸರ್ವಪ್ರಕಾರದ ಅವರೋಧದಿಂದ ಉಳಿಸಬೇಕಾದುದು ಇನ್ನೊಂದು ಮುಖ್ಯ ವಿಷಯವಾಗಿದೆ. ಆಯಾಸಗೊಳ್ಳುವುದಕ್ಕೆ ಮೊದಲೇ ಅವುಗಳಿಗೆ ವಿಶ್ರಾಂತಿ ಕೊಟ್ಟರೆ, ಅವು ಬಹು ಕಾಲ ನಿರೋಗಿಗಳಾಗಿ ಉಳಿಯಬಲ್ಲುವು. ನಮ್ಮ ಕಣ್ಣುಗಳು ನೋಡುವುದಲ್ಲ, ಮೆದುಳು ನೋಡುತ್ತದೆ ಎಂಬ ತಥ್ಯಾಂಶವನ್ನು ನಾವು ನೆನಪಿನಲ್ಲಿಟ್ಟರೆ, ಅದಕ್ಕೆ ಬಹು ಆಯಾಸವಾಗುವುದಿಲ್ಲ. ಕಣ್ಣುಗಳ ಮೇಲೆ ವಸ್ತುವಿನ ಪ್ರತಿಬಿಂಬವು ಬೀಳುತ್ತದೆ. ಇದರಿಂದ ಬುದ್ಧಿಯು ನೋಡದ ವಸ್ತುವಿನ ಕುರಿತಾದ ವಿಚಾರ ಅಥವಾ ವಿವೇಚನೆ ಮತ್ತು ನಿರ್ಣಯವನ್ನು ಮಾಡುತ್ತದೆ. ಯಾವುದಾದರೂ ವಸ್ತುವನ್ನು ನೋಡುವುದಕ್ಕೆ ಅದರ ಸಮೀಪಕ್ಕೆ ನಮ್ಮ ದೃಷ್ಟಿಯನ್ನು ಹರಿಸಬಾರದು; ಬದಲು, ಆ ವಸ್ತುವಿನ ಪ್ರತಿಬಿಂಬವನ್ನು ನಮ್ಮ ಕಣ್ಣುಗಳ ಮೂಲಕ ಮಸ್ತಿಷ್ಕದ ಮೇಲೆ ಬೀಳುವಂತೆ ಮಾಡುವುದು ನಯನ ರಕ್ಷಣೆಯ ಎರಡನೆಯ ನಿಯಮವಾಗಿದೆ. ರಾತ್ರಿ ಹೊತ್ತು ನಿಮಗೆ ಚಂದ್ರನನ್ನು ಅಥವಾ ನಕ್ಷತ್ರಗಳನ್ನು ನೋಡಬೇಕೆಂದಿದ್ದರೆ, ನೇರವಾಗಿ ಅವನ್ನು ವೀಕ್ಷಿಸುವ ಬದಲು ಅವುಗಳ ಪ್ರತಿಬಿಂಬವು ಕಣ್ಣ ಪಾಪೆಗಳಲ್ಲಿ ತೋರುವಂತೆ ಮಾಡಬೇಕು. ಆಗ ನಯನಗಳ ಮೇಲೆ ವಿಶೇಷ ಪ್ರಯಾಸ ಬೀಳುವುದಿಲ್ಲ; ಅಲ್ಲದೇ ನೋಡಬೇಕಾದ ವಸ್ತುವು ಬಹು ಸ್ಪಷ್ಟ ರೂಪದಲ್ಲಿ ತೋರುವುದು. ಕಷ್ಟಪಟ್ಟು ಓದುವುದರಿಂದ ಮತ್ತು ನಿರಂತರ ನೋಡುವುದರಿಂದ ಕಣ್ಣುಗಳು ಆಯಾಸ ಹೊಂದುವುವು. ಓದುವ ಸಮಯದಲ್ಲಿ ಪ್ರಾಕೃತಿಕ ವಿಧಾನದಿಂದ ಕಣ್ಣುಗಳಿಗೆ ಆರಾಮವೀಯುವುದರಿಂದ ಮತ್ತು ತುಸು ಹೊತ್ತು ಓದಿದ ನಂತರ ಒಂದೆರಡು ಮಿನಿಟುಗಳ ಕಾಲ ಅವುಗಳನ್ನು ಮುಚ್ಚಿ ವಿಶ್ರಾಂತಿ ನೀಡುವುದು ಅಪೇಕ್ಷಣೀಯವಾಗಿದೆ.

ಕಣ್ಣುಗಳಿಗಾದ ಆಯಾಸವನ್ನು ಕಣ್ಣುರೆಪ್ಪೆಗಳ ಮೇಲೆ ಭಾರ ಬೀಳದಂತೆ ಕೈಗಳ ಮೂಲಕ ಕಣ್ಣನ್ನು ಮುಚ್ಚುವುದರಿಂದ ಹೋಗಲಾಡಿಸಬಹುದು. ಹೊರಗಿನ ಪ್ರಕಾಶವು ಕಣ್ಣಿಗೆ ಬೀಳದಂತೆ ಮಾಡುವುದೂ ಉತ್ತಮವಾಗಿದೆ. ಕಪ್ಪಾದ ವಸ್ತುಗಳಿಂದ ನೇತ್ರಗಳನ್ನು ಆವರಿಸುವುದರಿಂದ ತುಂಬ ಪರಿಣಾಮ ಒದಗುವುದು. ಕರಿಯ ಕತ್ತಲೆ, ಕಪ್ಪು ರೇಷ್ಮೆ ಮೊದಲಾದುವು ಇವಕ್ಕೆ ಉಪಯುಕ್ತವಾಗಿವೆ.

ನೇತ್ರಾಯಾಸವನ್ನು ದೂರೀಕರಿಸಲು ತಣ್ಣೀರು ಬಹಳ ಉಪಯೋಗಿಯಾಗಿದೆ. ತಂಪು ನೀರಿನಿಂದ ಕಣ್ಣುಗಳನ್ನು ಹಲವು ಬಾರಿ ತೊಳೆದುಕೊಳ್ಳುವುದು ಆರೋಗ್ಯ ದೃಷ್ಟಿಯಿಂದ ಉತ್ತಮ.

ಶರೀರದ ಅಂಗಾಂಗಗಳಂತೆಯೇ ಕಣ್ಣುಗಳ ರಕ್ಷಣೆ ಹಾಗೂ ಆರೋಗ್ಯಕ್ಕೆ ಜೀವಾಣುಗಳು ಆವಶ್ಯಕವಾಗಿವೆ ಎಂಬುದನ್ನು ನಾವು ಮರೆಯಬಾರದು. ಹಸುರು ತರಕಾರಿ, ಧಾನ್ಯ, ಹಾಲು, ತುಪ್ಪ ಮೊದಲಾದ ಪದಾರ್ಥಗಳಲ್ಲಿ ಈ ಆವಶ್ಯಕ ಜೀವಸತ್ವಗಳು ನಮಗೆ ದೊರೆಯುತ್ತವೆ.

ನಯನಗಳನ್ನು ಪದೇಪದೇ ಮೆಲ್ಲಮೆಲ್ಲನೆ ಮೇಲೆ-ಕೆಳಗೆ, ಎಡಕ್ಕೆ–ಬಲಕ್ಕೆ, ಚಕ್ರಾಕಾರವಾಗಿ ತಿರುಗಿಸುವುದರಿಂದ ಅವಕ್ಕೆ ಉನ್ನತಸ್ತರದ ವ್ಯಾಯಾಮವಾಗುತ್ತದೆ. ದೂರದ ಪರ್ವತ, ಚಂದ್ರ, ಅಥವಾ ಹಸುರು ತುಂಬಿದ ಕಾಡುಗಳನ್ನು ನೋಡುವುದರಿಂದ ಕಣ್ಣುಗಳು ಉಲ್ಲಾಸಭರಿತವಾಗುತ್ತವೆ

ಮೇಲೆ ಹೇಳಿದುವು ಪರಮಾತ್ಮನು ನಮಗಿತ್ತಿರುವ ಅತ್ಯಮೂಲ್ಯ ನಿಧಿಯಾದ ನೇತ್ರ ಜ್ಯೋತಿಯನ್ನುಳಿಸುವ ಸರಳವಾದ ಮತ್ತು ದೈನಂದಿನ ನಿಯಮಗಳಲ್ಲಿ ಸೇರಿಸಿಕೊಳ್ಳಬಹುದಾದ ಕೆಲವೊಂದು ನಿಯಮಗಳಾಗಿವೆ. ಕಿಂಚಿತ್ ಅಲಕ್ಷ್ಯವೂ ಮುಂದೆ ಮಹಾ ವಿಪತ್ತಿಗೆ ನಮ್ಮನ್ನು ಪಕ್ಕಾಗಿಸಬಹುದಾದುದರಿಂದ, ಆಗ ಪಶ್ಚಾತ್ತಾಪ ಪಡುವುದಲ್ಲದೆ ಮತ್ತೇನನ್ನೂ ಮಾಡಲು ನಾವು ಅಸಮರ್ಥರಾಗುವುದರಿಂದ, ನಾವು ನಮ್ಮ ನೇತ್ರ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕಾಗಿದೆ. "ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ" ಎಂಬ ಪ್ರಾಚೀನೋಕ್ತಿಯು ಕಣ್ಣುಗಳು ಶರೀರದ ವಿವಿಧ ಅಂಗಾಂಗಗಳಲ್ಲಿ ಯಾವ ಮಹತ್ವದ ಸ್ಥಾನ ಪಡೆದಿವೆ ಎಂಬುದನ್ನು ಅವಶ್ಯ ತಿಳಿಸಿ ಹೇಳುವುದಿಲ್ಲವೆ?



ಲೋಥಲ್‌ನಲ್ಲಿ ದೊರೆತಿರುವ ಪ್ರಾಚೀನಾವಶೇಷಗಳಾದ ಕಲ್ಲಿನ ಮುದ್ರೆಗಳನ್ನಿಲ್ಲಿ ಕಾಣಬಹುದು. ಇವು ಕ್ರಿ. ಶ. ೨,೫೦೦ರಿಂದ ಕ್ರಿ. ಶ. ೧,೦೦೦ ವರ್ಷಗಳಷ್ಟು ಪ್ರಾಚೀನತೆಯುಳ್ಳ ದ್ರಾವಿಡ ಸಂಸ್ಕೃತಿಯ ಕುರುಹುಗಳಾಗಿವೆ.

ಚಂದಾದಾರರು

ತಮ್ಮ ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ವರ್ಗ—ಖಾಡಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆ ಕಾದಂಬರಿ ಇತ್ಯಾದಿ ಪುಸ್ತಕಗಳೂ
ಸಿಗುತ್ತವೆ.
ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

> ಮಾನವನು ಮಾಡುವ ಪ್ರತಿಯೊಂದು ಕೆಲಸಕ್ಕೂ ಉಚಿತ ಸಮಯವೊಂದಿದೆ; ಮತ್ತು ಪ್ರತಿ ಸಮಯಕ್ಕೆ ಆತನು ಮಾಡಬೇಕಾದ ಉಚಿತ ಕೆಲಸವೂ ಒಂದಿದೆ.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೧೪-೭-'೬೦	೪೫

ಗಂಭೀರ ಭಯಾನಕತೆ

ಸಾರ್ವಜನಿಕರ ಸಹಾನುಭೂತಿಗೆ ಎರವಾದ ಕೇಂದ್ರ ಸರಕಾರಿ ನೌಕರರ ಸಂಪು ಪೂರ್ವನಿಯೋಜಿತ ನಿರ್ಧಾರದಂತೆ ಪ್ರಾರಂಭವಾಗಿದ್ದು ಇದರ ಪರಿಣಾಮವೇನೆಂಬುದನ್ನು ಜನತೆ ಇಷ್ಟರಲ್ಲೇ ಅನುಭವಿಸಿದೆ. ಪ್ರಧಾನಿ ನೆಹರು ಮೊದಲಾದ ಕೇಂದ್ರ ಮಂತ್ರಿವರ್ಯರು ನೌಕರರು ಸಾರ್ವತ್ರಿಕ ಸಂಪು ಹೂಡುವುದರಿಂದ ರಾಷ್ಟ್ರದ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಯ ಮೇಲೆ ಕ್ರೂರ ಪರಿಣಾಮ ಬೀರುವುದೆಂದೂ ನೌಕರರ ಈ ವರ್ತನೆಯು ದೇಶದ್ರೋಹತನದ್ದಾಗುವುದೆಂದೂ ಹೇಳಿ, ದ್ವಿತೀಯ ವೇತನಾ ಆಯೋಗದ ವರದಿಯ ಸೀಮೆಯೊಳಗೆ ನೌಕರರ ಬೇಡಿಕೆಗಳ ಬಗ್ಗೆ ಪರ್ಯಾಲೋಚನೆ ನಡೆಸಲು ಸರಕಾರವು ಸಿದ್ಧವಿರುವುದೆಂದೂ ತಿಳಿಸಿದ್ದರು. ಶ್ರೀ ಫಿರೋಜ ಗಾಂಧಿಯವರು ಉಭಯಪಕ್ಷಗಳ ನಡುವೆ ಸಂಧಾನದ ಮಾತುಕತೆ ನಡೆಸುವ ಪ್ರಯತ್ನವನ್ನು ಕೈಗೊಂಡಿದ್ದರೂ ಅದು ಸಂಪೂರ್ಣ ಅಯಶಸ್ವಿಯಾದುದರೊಡನೆ ಕೊನೆಯ ಗಳಿಗೆಯಲ್ಲಿ ಸಂಪು ನಿಲ್ಲಬಹುದೆಂದು ಆಶಿಸಿದ್ದ ನಾಗರಿಕರಿಗೆ ನೌಕರರ ಅಚಲ ನಿರ್ಧಾರದಿಂದಾಗಿ ನಿರಾಶೆಯುದ್ಭವಿಸಿದಂತಾಗಿದೆ; ಜತೆಗೆ ಬರಲಿರುವ ಗಂಭೀರ ಪರಿಸ್ಥಿತಿಯನ್ನೆದುರಿಸಲು ಸಿದ್ಧವಾಗುತ್ತಿರುವ ಸರಕಾರದೊಂದಿಗೆ ಅವರೂ ಅಣಿಯಾಗಿದ್ದಾರೆ. ಕೇಂದ್ರ ನೌಕರರು ಹೂಡಿದ ಸಂಪು ಅಲ್ಲಲ್ಲಿ ಯಶಸ್ವಿಯಾದಂತೆ ಕಂಡು ಬಂದರೂ ಹೆಚ್ಚಿನ ನೌಕರರು ಈ ಸಂಪಿನಿಂದ ದೂರವುಳಿದಿರುವರೆಂಬ ವರದಿಗಳು ಸರಿಯಾದರೆ, ನೌಕರರ ನಾಯಕರಲ್ಲಿ ತಮ್ಮವರನ್ನು ನಿಯಂತ್ರಿಸುವ ಶಕ್ತಿಯಿಲ್ಲವೆಂಬುದರ ಅರಿವಾಗುವುದು. ಅದರೊಡನೆ ದೇಶದ ಪರಿಸ್ಥಿತಿಯನ್ನೂ ಸಂಪಿನ ಪರಿಣಾಮವನ್ನೂ ತಿಳಿದುಕೊಳ್ಳುವಷ್ಟು ಶಕ್ತಿ ಈ ನಾಯಕರಿಗಿಲ್ಲವಲ್ಲ ಎಂದು ವಿಷಾದಿಸಬೇಕಾಗಿದೆ.

ಚೀನೀಸರಕಾರ ನಿಯಂತ್ರಿತ ನವಚೀನಾ ಸುದ್ದಿಸಂಸ್ಥೆಯು ಭಾರತದಲ್ಲಿ ತೊಡಗಿರುವ ಕೇಂದ್ರ ಸರಕಾರಿ ನೌಕರರ ಮುಷ್ಕರದಲ್ಲಿ ತೀವ್ರ ಆಸಕ್ತಿಯನ್ನು ತೋರಿಸುವಂತೆ ಕಂಡುಬರುತ್ತಿದೆ. ಪ್ರಧಾನಿ ನೆಹರೂ ತನ್ನ ನೌಕರರನ್ನು ಅವಹೇಳನ ಮಾಡಿರುವರೆಂದೂ ನೌಕರರ ನಿಯೋಜಿತ ಸಂಪನ್ನು ಉಗ್ರವಾಗಿ ಖಂಡಿಸಿದ್ದಾರೆಂದೂ ಅದು ವರದಿ ಮಾಡುತ್ತಿರುವುದಾಗಿ ತಿಳಿಯುತ್ತದೆ. ಭಾರತದ ಆಂತರಿಕ ಸಂಬಂಧದಲ್ಲಿ ಈ ರೀತಿಯಾಗಿ ಚೀನವು ವಿಶೇಷ ಆಸಕ್ತಿಯನ್ನು ತೋರಿಸುವುದರ ಔಚಿತ್ಯ ಮತ್ತು ಕಾರಣಗಳನ್ನು ನಾವು ಊಹಿಸಿಯೇ ಹೇಳಬಹುದು. ಭಾರತದಲ್ಲಿ ಈಗ ನಡೆಯುತ್ತಿರುವ ಈ ಸಂಪು 'ಬಾಹ್ಯ ಪ್ರಚೋದಿತ'ವೆಂಬ ಅಭಿಪ್ರಾಯದ ಬಗ್ಗೆ ಖಚಿತವಾಗಿ ಏನನ್ನೂ ಹೇಳುವುದು ಅಸಾಧ್ಯವಾದರೂ, ಸಂಪಿನ ಯೋಜಕರು ತಮ್ಮ ಕುದುರೆಗೆ ಮೂರೇ ಕಾಲ ಎಂಬ ತಮ್ಮ ಧೋರಣೆಯಿಂದ ಹಾಚೂ ಅಲುಗಾಡಲು ಸಿದ್ಧರಾಗದಿರುವುದು ಸರ್ವಥಾ ದುಃಖನೀಯವಾಗಿದೆ. ಸರಕಾರದ ನೌಕರರು ತಾವು ನಾಗರಿಕ ಸೇವಕರೆಂಬ ಭಾವನೆಯನ್ನಿಟ್ಟುಕೊಂಡು, ನಾಗರಿಕರ ಜೀವನವನ್ನು ಮಾನವತಾ ದೃಷ್ಟಿಯಿಂದ ತುಸು ನೋಡಿರುತ್ತಿದ್ದರೆ, ಇಂತಹ ಪ್ರಜಾಹಿತಭಂಜಕವಾದ ಸಂಪಿಗೆ, ರಾಷ್ಟ್ರಾಧ್ಯಕ್ಷರ ಸುಗ್ರೀವಾಜ್ಞೆಯನ್ನು ಉಲ್ಲಂಘಿಸಿ ಮುಂದುವರಿಯುವ ಸಾಹಸ ಮಾಡುತ್ತಿರಲಿಲ್ಲ. ಹಿಂದೆ ಕಾಂಗ್ರೆಸ್ಸು ದೇಶದ ಸ್ವಾತಂತ್ರ್ಯ ಸಂಗ್ರಾಮದ ವೇಳೆಯಲ್ಲಿ 'ಮಾಡು ಇಲ್ಲವೇ ಮಡಿ'ಯೆಂಬ ಘೋಷಣೆಗೆ ಸ್ಥಿರವಾಗಿ ನಿಂತಂತೆಯೇ ಇಂದು ಸರಕಾರಿ ನೌಕರರು ತಮ್ಮ ನಿಲುಮೆಗೆ ಭದ್ರವಾಗಿ ಅಂಟಿ ಕೂತಿದ್ದಾರಂತೆ. ಆದರೆ, ಅಂದು ವಿದೇಶ ಆಡಳಿತೆಯ ಕಾಯದೆ ಭಂಗ ದೇಶ ಪ್ರಜೆಗಳಿಂದಾಗಿದ್ದರೆ ಇಂದು ಸ್ವದೇಶದ ಕಾಯದೆಭಂಗ ಸ್ವದೇಶೀ ಸರಕಾರದ ನೌಕರರಿಂದಲೇ ಆದಂತಾಯಿತು. ಒಂದು ರಾಷ್ಟ್ರದ ಸರಕಾರಿ ನೌಕರರು ತಮ್ಮ ರಾಷ್ಟ್ರದ ಕಾನೂನನ್ನು ಮೀರುವುದಾದರೆ, ಅವರಲ್ಲಿ ರಾಷ್ಟ್ರದ ಮತ್ತು ರಾಷ್ಟ್ರೀಯತೆಯ ಕಡೆಗೆಷ್ಟು ಆದರವಿರಬಹುದು ಎಂಬ ಪ್ರಶ್ನೆ ಏಳುತ್ತದೆ. ಎಂತಲೇ ಇದು ಸರಕಾರ ಉರುಳಿಸುವ ಒಳಸಂಚು ಎಂದು ಪ್ರಧಾನಿ ಪ್ರಾಮಾಣಿಕವಾಗಿ ನುಡಿದರು.

ಅಂತೂ ನಡೆಯಬಾರದ ಸಂಪು ನಡೆಯಲಾರಂಭವಾಯಿತು; ಅನಪೇಕ್ಷಣೀಯ ಗೊಂದಲ, ಸಂಕಷ್ಟ, ಗಲಿಬಿಲಿಗಳಿಗೆ ಕಾರಣವಾಯಿತು; ಅನಾವಶ್ಯಕವಾಗಿ ದೇಶದ ಸುವ್ಯವಸ್ಥೆಯನ್ನು ಹದಗೆಡಿಸಿತು. ಇದರ ಪರಿಣಾಮವೆಲ್ಲಿ ಬಂದು ನಿಲ್ಲಬಹುದು ಎಂಬುದನ್ನು ಮುಂದೆ ನೋಡಿ ತಿಳಿಯಬೇಕಾಗಿದೆ. ಸರಕಾರದವರೂ ಸಾರ್ವಜನಿಕರ ಮನಃಪೂರ್ವಕ ಸಹಕಾರದಿಂದ ಒದಗಿ ಬಂದ ಗಂಡಾಂತರ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸುವ ದೃಢನಿರ್ಧಾರ ಮಾಡಿದುದು ಸರ್ವಥಾ ಸ್ವಾಗತಾರ್ಹ. ಈ ಸಂಪು ಸರಕಾರದ ಮತ್ತು ಸರಕಾರೀ ನೌಕರರ ಸಂಪಿನ ಭವಿಷ್ಯವನ್ನು ಬರೆಯುವಲ್ಲಿ ಪ್ರಬಲ ಪಾತ್ರ ವಹಿಸುತ್ತದೆ. ಈ ಸಂಪು ಯಶಸ್ವಿಯಾದರೆ, ಭಾರತ ಸರಕಾರದ ಅಶಕ್ತತೆಯನ್ನು ವಿಶ್ವಕ್ಕೆ ಸಾರಿಹೇಳುವಂತಾಗುತ್ತದೆ; ಸಂಪು ಅಯಶಸ್ವಿಗೊಂಡರೆ, ನೌಕರ ವರ್ಗದ ಬಿಕ್ಕಟ್ಟನ್ನು ಪ್ರದರ್ಶಿಸಿ, ಇನ್ನು ಮುಂದೆ ಸಂಪು ನಡೆಸುವುದೇ ಪ್ರಯಾಸವೆನಿಸಬಹುದು. ದೇಶದ ಕೋಟಿಗಟ್ಟಲೆ ಬಡ ಜನತೆಯನ್ನು ಬಿಟ್ಟು, ಉತ್ತಮ ವೇತನ ಪಡೆಯುವ ಈ ನೌಕರರ ಮೇಲೆ ಕರುಣೆಯು ಯಾವ ಭಾರತೀಯನಿಗೂ ಮೂಡಬಾರದು. ಜನತೆಯಾದರೂ ತಮಗಾಗುವ ಅನಿವಾರ್ಯ ಅಡಚಣೆಗಳನ್ನು ಸಹನೆಯಿಂದ ತಡೆದುಕೊಂಡು, ದಾರಿತಪ್ಪಿದ ನೌಕರರು ಸರಿದಾರಿಯಲ್ಲಿ ನಡೆಯುವುದರಲ್ಲಿ ಇನ್ನೂ ವಿಳಂಬ ಮಾಡದಿರಲೆಂದು ಬಯಸುತ್ತದೆ. ಸರಕಾರವು ಈ ಸಂಪನ್ನೆದುರಿಸಲು ಕೈಗೊಂಡ ಯೋಜನೆಗಳಲ್ಲಿ ತನ್ನ ಸಹಾಯಹಸ್ತವನ್ನು ನೀಡಲು ಮುಂದಾಗಿದೆ. ನೌಕರರು ಕೇವಲ ಸಂಪಿನಿಂದಲೇ ತಮ್ಮ ಕೋರಿಕೆಗಳೆಲ್ಲವೂ ಮಾನ್ಯವಾಗುವುವು ಎಂದು ತಿಳಿದುಕೊಂಡಿದ್ದರೆ, ಅದು ದೊಡ್ಡ ತಪ್ಪೆನಿಸುವುದು. ಕೊಟ್ಟಷ್ಟೂ ತೃಪ್ತಿ ಕಾಣದ ಈ ವರ್ಗವನ್ನು ಸಮಾಧಾನ ಪಡಿಸುವ ಶಕ್ತಿ ಯಾರಿಗೂ ಇರಲಾರದು. ಇಂದು ಸರಕಾರದ ಮುಂದಿರುವುದು ತನ್ನ ಅಳಿವು ಉಳಿವುಗಳ ಪ್ರಶ್ನೆ. ಸಂಪಿಗೆ ಸರಕಾರವು ಮಣಿಯಿತೆಂದರೆ, ಅದು ಲಾಂಛನಾಸ್ಪದ. ಈ ಬೃಹತ್ ಪ್ರಮಾಣದ ಸಂಪಿನಿಂದ ಸರಕಾರವಾದರೂ ತುಸು ಪಾಠ ಕಲಿಯಬೇಕು; ತನ್ನ ನೌಕರರ ಬಗ್ಗೆ ಇರಿಸಿಕೊಂಡಿರುವ ನೀತಿಯ ಲೋಪದೋಷಗಳೇನು ಎಂಬುದನ್ನದು ಅವಶ್ಯ ಮನಗಂಡು, ಮುಂದಕ್ಕಾದರೂ ಈ ಮಾದರಿಯ ಸಂಪನ್ನು ನಡೆಯಗೊಡುವ ಅವಕಾಶವೇ ಬಾರದಂತೆ ಈಗಿಂದೀಗಲೇ ಎಚ್ಚರ ವಹಿಸುವುದು ಮುಖ್ಯ.

ಗೌರವಕ್ಕೆ ಕುಂದಲ್ಲವೆ?

ಮೈಸೂರು ರಾಜ್ಯದಲ್ಲಿರುವ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ನೀಡಲು ಸರಕಾರವು ಅನುಸರಿಸಿದ ಧೋರಣೆಗೆ ಕೇಂದ್ರ ಸರಕಾರವು ವಿರೋಧಾಭಿಪ್ರಾಯ ವ್ಯಕ್ತಪಡಿಸಿದೆ. ಕೆಲವು ಸ್ಥಾನಗಳಿಗೆ ಸರಕಾರದಿಂದ ನೇಮಿತವಾದ ಸಮಿತಿಯಿಂದ, ಉಳಿದುದಕ್ಕೆ ಕಾಲೇಜಿನ ಆಡಳಿತೆ ವರ್ಗದಿಂದ ಸೇರ್ಪಡೆ ಮಾಡಿಕೊಳ್ಳುವುದು; ಹಾಗೂ ಹಿಂದುಳಿದ ವರ್ಗ ಮತ್ತು ಜಾತಿಗಳವರಿಗೆ ಒಟ್ಟು ನೂರಕ್ಕೆ ಅರವತ್ತು ಸ್ಥಾನಗಳನ್ನು ಕಾಯ್ದಿರಿಸುವುದು ರಾಜ್ಯಸರಕಾರವು ಅನುಸರಿಸಿದ ನೀತಿಯಾಗಿದೆ. ಆದರೆ ಇಬ್ಬಗೆಯಾಗಿ ಪ್ರವೇಶವನ್ನು ನೀಡುವುದು ಸರಿಯಲ್ಲವೆಂದೂ ಕಾಯ್ದಿರಿಸುವಿಕೆಯು ಸೇ. ೫೦ನ್ನು ಮೀರಬಾರದೆಂದೂ ಕೇಂದ್ರ ಸರಕಾರದ ಅಭಿಪ್ರಾಯವಿದೆ. ಯೋಗ್ಯತಾಸಂಪನ್ನರು ಮಾತ್ರ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶಪಡೆಯುವ ಸಲುವಾಗಿ ಪ್ರವೇಶವನ್ನು ಈ ರೀತಿಯಿಂದ ನೀಡುವುದು ಸಂದೇಹಕ್ಕೆ ಆಸ್ಪದ ಎಂದೂ ಅದು ಅವರ ಪತ್ರವೊಂದರಲ್ಲಿ ರಾಜ್ಯ ಸರಕಾರಕ್ಕೆ ಹೇಳಿದೆ. ಮೇ ತಿಂಗಳ ಅಂತ್ಯದಿಂದ ರಾಜ್ಯದ ತಾಂತ್ರಿಕ ಕಾಲೇಜುಗಳ ಪ್ರವೇಶದ ನಿಯಮಗಳನ್ನು ಸರಕಾರವು ಹೊರಗೆಡಹತೊಡಗಿರುತ್ತದೆ; ಕೆಲವೇ ದಿನಗಳಲ್ಲಿ ಆ ನಿಯಮಗಳಿಗೆ ತಿದ್ದುಪಡಿ, ಮರಳಿ ತಿದ್ದುಪಡಿಗೆ ತಿದ್ದುಪಡಿ — ಇದೇ ಪ್ರಕಾರ ನಿಯಮಗಳು ಅನಿಯಮಿತ ರೂಪದಲ್ಲಿ ನಿರೂಪಿಸುತ್ತ ಬರುತ್ತಿವೆ. ಇಂತಹ ಅನಿಶ್ಚಿತ ನಿಯಮಗಳನ್ನು ಸರಕಾರ ಮಾಡುವುದಕ್ಕಿಂತ ತುಸು ವಿವೇಚನಾಶೀಲವಾಗಿ ಉಚಿತಾನುಚಿತತೆಯನ್ನು ಕಂಡುಕೊಂಡು ಮೊದಲ ಬಾರಿಗೇನೇ ಸರಿಯಾದ ನಿಯಮಗಳನ್ನು ರಚಿಸುವುದರಿಂದ ಸರಕಾರದ ಗೌರವವೂ ಹೆಚ್ಚುವುದು; ಜನತೆಯಲ್ಲೂ ಒಂದು ನಿಶ್ಚಿತ ಧೋರಣೆ ಸರಕಾರಕ್ಕಿದೆ ಎಂಬ ಭಾವನೆಯು ಕಂಡು ಬರುವುದು. ನಮ್ಮ ರಾಜ್ಯ ಸರಕಾರದ 'ಕುಂಭಕೋಣಂ' ನೀತಿಯಿಂದಾಗಿ ಸರಕಾರದ ಬಗ್ಗೆ ನಾಗರಿಕರಲ್ಲಿ ಜುಗುಪ್ಸೆ ಮೂಡಿದ್ದರೆ ನಾಗರಿಕರ ಗೌರವಕ್ಕೆ ಮಾತ್ರ ಅದು ಬಾಧಿಸಿರಬೇಕು!

ಅಲ್ಲಲ್ಲಿಯ ಸುದ್ದಿಸಾರ

ಕುಟುಂಬ ಯೋಜನಾ ಸಮಿತಿಯ ಸಭೆ— ಅಖಿಲ ಭಾರತ ಕುಟುಂಬ ಯೋಜನಾ ಸಂಘದ ಮಣಿಪಾಲ ಕೇಂದ್ರದ ಸಭೆಯೊಂದು ಉಡುಪಿಯ ಮುಕುಂದ ನಿವಾಸದಲ್ಲಿ ಡಾ. ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಇದೇ ತಾ. ೬ರಂದು ಜರಗಿತು. ಡಾ. ಪದ್ಮಾರಾಯರು ಮಣಿಪಾಲ ಕೇಂದ್ರದಲ್ಲಿ ಮೂರು ತಿಂಗಳುಗಳಲ್ಲಿ ನಡೆದ ಪ್ರಗತಿಪರ ವರದಿಯನ್ನಿತ್ತರು. ನೂತನ ದಂಪತಿಗಳಿಗೆ ಪತ್ರ ಬರೆದು ಅವರ ವಿವಾಹಿತ ಜೀವನವು ಸುಗಮವಾಗುವಂತೆ ತಕ್ಕ ಪರೀಕ್ಷೆ ನಡೆಸಿ ಸೂಕ್ತ ಸಲಹೆಯನ್ನೀಯುವ ನವ ವಿಧಾನವೊಂದನ್ನು ಅನುಸರಿಸಲಾಗಿದೆಯೆಂದೂ ಅವರು ತಿಳಿಸಿದರು. ಶ್ರೀಗಳಾದ ಕೆ. ಕೆ. ಪೈ, ಎಂ. ಡಿ. ಕಾಮತ್, ಎ. ಜೆ. ಅಲ್ಸೆ, ಡಾ|ಗಳಾದ ಕೆ. ಎಲ್. ಐತಾಳ, ಬಿ. ಅನಂತ ರಾವ್, ಟಿ. ಆರ್. ನಾಯಕ್, ಶ್ರೀಮತಿ ಪ್ರೇಮಾ ಪೈ, ಮೊದಲಾದವರು ಸಂದರ್ಭೋಚಿತವಾಗಿ ಮಾತನಾಡಿದ ಮೇಲೆ ಡಾ. ಮಾಧವ ಪೈಗಳು ಮಕ್ಕಳ ನಿಯಂತ್ರಣ ಮಾತ್ರವೇ ಕುಟುಂಬ ಯೋಜನೆಯ ಉದ್ದೇಶವಾಗಿರದೆ ಹುಟ್ಟಿದ ಮಕ್ಕಳನ್ನು ಒಳ್ಳೆಯ ರೀತಿಯಲ್ಲಿ ಸಂರಕ್ಷಿಸಿ ಉತ್ತಮ ಗುಣ ನಡತೆಯುಳ್ಳವರಾಗುವಂತೆ ವಿದ್ಯಾವಂತರನ್ನಾಗಿ ಬೆಳೆಸುವುದೂ ಪ್ರಮುಖವಾಗಿದೆ. ಆದ್ದರಿಂದ ಸರಕಾರದ ಈ ಯೋಜನೆಯನ್ನು ನಾವೆಲ್ಲ ಜಯಶೀಲಗೊಳಿಸಲು ಪ್ರಯತ್ನಿಸಬೇಕೆಂದರು.

ಸಾಹಿತ್ಯ ಪರಿಷತ್ತಿನ ಸ್ವಾಗತ ಸಮಿತಿಯ ಸಭೆ— ಇದೇ ಬರುವ ಡಿಸೆಂಬರದಲ್ಲಿ ಮಣಿಪಾಲದಲ್ಲಿ ಜರಗಲಿರುವ ೪೨ನೇ ಸಾಹಿತ್ಯ ಸಮ್ಮೇಳನದ ವ್ಯವಸ್ಥೆಗಾಗಿ ಈ ಮೊದಲೇ ರಚಿತವಾಗಿರುವ ಸ್ವಾಗತ ಸಮಿತಿಯ ಸಭೆಯೊಂದು ಇದೇ ತಾ. ೬ರಲ್ಲಿ ಉಡುಪಿ ಮುಕುಂದ ನಿವಾಸದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷ ಡಾ. ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಸಾಹಿತಿಗಳೆಲ್ಲರೂ ಭಿನ್ನಭಾವವನ್ನು ಮರೆತು ವಿಶಾಲ ಮನಸ್ಸಿನಿಂದ ಒಂದಾಗಿ ಸಮ್ಮೇಳನವು ಯಶಸ್ವಿಯಾಗುವಂತೆ ಸಹಕರಿಸಬೇಕೆಂದೂ ಸದಸ್ಯರು ಯಾವೊಂದೂ ಸಂಕೋಚವಿಲ್ಲದೆ ಸಮ್ಮೇಳನಾಧ್ಯಕ್ಷರು ಯಾರಾಗಬಹುದೆಂದು ಸೂಚಿಸಬೇಕೆಂದೂ ಡಾ. ಪೈಗಳು ಹೇಳಿದರು. ಈ ಕುರಿತು ಬೆಂಗಳೂರಿನ ಪರಿಷತ್ತಿನ ಅಧ್ಯಕ್ಷರಿಂದ ಬಂದ ಪತ್ರವನ್ನು ಕಾರ್ಯದರ್ಶಿ ಶ್ರೀ ಕು. ಶಿ. ಹರಿದಾಸ ಭಟ್ಟರು ಓದಿದರು. ಸದಸ್ಯರ ಸೂಚನೆ ಸಲಹೆಗಳಾದ ಮೇಲೆ ಡಾ. ಕೆ. ಎಲ್. ಐತಾಳರು ಅಧ್ಯಕ್ಷ ಪದಕ್ಕೆ ಅ. ನ. ಕೃಷ್ಣರಾಯರ ಹೆಸರನ್ನು ಸೂಚಿಸಿದ್ದನ್ನು ಶ್ರೀ ಎಸ್. ಎಲ್. ಭಟ್ಟರು ಅನುಮೋದಿಸಲಾಗಿ ಅವರೊಬ್ಬರ ಹೆಸರನ್ನೇ ಪರಿಷತ್ತಿಗೆ ಬರೆಯಬೇಕೆಂದಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಲ್ಲಿ ನಿಯೋಗ — ದ. ಕ. ಜಿಲ್ಲಾ ಹಿಂದುಳಿದ ವರ್ಗಗಳ ಸಂಘದ ವತಿಯಿಂದ ಸಂಘದ ಅಧ್ಯಕ್ಷ ಶ್ರೀ ಬಿ. ಕೊರಗಪ್ಪನವರ ಮುಂದಾಳುತನದಲ್ಲಿ ನಿಯೋಗವೊಂದು ತಾ. ೮ರಂದು ಮಂಗಳೂರಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಅಧ್ಯಕ್ಷ ಶ್ರೀ ಟಿ. ಎ. ಪೈಗಳನ್ನು ಭೇಟಿ ಮಾಡಿ ಎರಡು ವರ್ಷಗಳಿಂದ ಜಿಲ್ಲೆಯ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸರಕಾರದಿಂದ ದೊರೆಯತಕ್ಕ [illegible], ಪ್ರವೇಶಗಳ ಕುರಿತು ಉದ್ಭವಿಸಿರುವ ಸಂಕಷ್ಟಗಳೇ ಮೊದಲಾದ ವಿಚಾರಗಳನ್ನು ನಿವೇದಿಸಿತು. ಶ್ರೀ ಪೈಗಳು ಈ ವಿಚಾರಗಳ ಕುರಿತು ಪ್ರಯತ್ನಿಸುವುದಾಗಿ ಭರವಸೆಯಿತ್ತರು.

ಲಯನ್ಸ್ ಕ್ಲಬ್ಬಿನ ಸಭೆ— ಉಡುಪಿ ಲಯನ್ಸ್ ಕ್ಲಬ್ಬಿನ ಸಭೆಯೊಂದು ತಾ. ೬ರಂದು ಕ್ಲಬ್ಬಿನ ಅಧ್ಯಕ್ಷ ಲಯನ್ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಕೇಂದ್ರ ಸರಕಾರದ ನೌಕರರು ಮುಷ್ಕರ ಹೂಡಿದರೆ ಸರಕಾರಕ್ಕೆ ಕ್ಲಬ್ಬಿನ ಸದಸ್ಯರೆಲ್ಲ ಸರ್ವ ಸಹಕಾರವನ್ನು ಕೊಡಬೇಕೆಂದು ನಿರ್ಣಯಿಸಲಾಯಿತು. ಅದೇ ಸಭೆಯಲ್ಲಿ ವಕೀಲರಾದ ಲಯನ್ ಎನ್. ವಿ. ಕಾಮತರು ಅಪರಾಧ ಮತ್ತು ಅದರ ಹೇತು ಹಾಗೂ ಅದರ ಪರಿಣಾಮ ಈ ಕುರಿತು ಉಪನ್ಯಾಸವಿತ್ತರು. ವಿದ್ಯಾರ್ಥಿ ವೇತನ ವಿದ್ಯಾರ್ಥಿಗಳಿಗಾಗಿ ಒಂದು ಬುಕ್ ಬ್ಯಾಂಕ್ ಸ್ಥಾಪನೆ ಮೊದಲಾದ ವಿದ್ಯಾರ್ಥಿ ಹಿತಚಿಂತನಾ ಕಾರ್ಯಗಳಿಗಾಗಿ ಸ್ಟುಡೆಂಟ್ಸ್ ವೆಲ್‌ಫೇರ್ ಕೇಂದ್ರವೊಂದನ್ನು ತೆರೆಯಬೇಕೆಂದಾಯಿತು. ಆದಕ್ಕೆ ಶ್ರೀಗಳಾದ ಕು. ಶಿ. ಹರಿದಾಸ ಭಟ್ (ಅಧ್ಯಕ್ಷ) ಟಿ. ಎ. ಪೈ, ಬಿ. ಜೆ. ಹೆಗ್ಡೆ, ಎ. ಕೃಷ್ಣರಾವ್, ಕೆ. ಎಸ್. ಕಾಮತ್, ಇವರನ್ನೊಳಗೊಂಡ ಕ್ಲಬ್ ಕಮಿಟಿಯೊಂದನ್ನು ರಚಿಸಲಾಯಿತು. ಅಲ್ಲದೆ ಶ್ರೀಗಳಾದ ಎನ್. ವಿ. ಕಾಮತ್ (ಅಧ್ಯಕ್ಷ) ಜಿ. ಎಸ್. ನಾಗಮೋತಿ, ಯು. ಕೆ. ಕಿಣಿ, ಬಿ. ಜಗನ್ನಾಥ ಹೆಗ್ಡೆ, ವಾಸುದೇವ ಕಿಣಿ ಇವರನ್ನೊಳಗೊಂಡ ಒಂದು ಕ್ರೀಡಾ ಕಮಿಟಿಯನ್ನೂ ರಚಿಸಲಾಯಿತು. ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಭಾಷಣವಿತ್ತ ಮೇಲೆ ಸೆಕ್ರೆಟರಿ ಬಿ. ಜಗನ್ನಾಥ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಪೂರ್ಣಪ್ರಜ್ಞ ಕಾಲೇಜು— ಉಡುಪಿ ಸಂಸ್ಕೃತ ಕಾಲೇಜು ಪರಿವರ್ತನೆ ಹೊಂದಿ ಆರಂಭವಾಗಲಿರುವ ಪೂರ್ಣಪ್ರಜ್ಞ ಕಾಲೇಜು ಇದೇ ತಿಂಗಳ ಮಧ್ಯದಲ್ಲಿ ರಾಜ್ಯದ ವಿದ್ಯಾಮಂತ್ರಿಗಳಾದ ಶ್ರೀ ಅಣ್ಣಾರಾವ್ ಗಣಮುಖಿ ಅವರಿಂದ ಉದ್ಘಾಟಿಸಲ್ಪಡಲಿರುವುದೆಂದೂ ಈ ಕಾಲೇಜಿಗೆ ಮಂಗಳೂರು ಸರಕಾರೀ ಕಾಲೇಜಿನ ಶ್ರೀ ಸಿ. ಯಮ್. ಇನಾಮ್ದಾರ ಇವರನ್ನು ಪ್ರಿನ್ಸಿಪಾಲರನ್ನಾಗಿ ಆರಿಸಲಾಗಿದೆಯೆಂದೂ ಇದೇ ತಾ. ೮ರಂದು ಶ್ರೀ ಅದಮಾರು ಮಠದ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂಗಳವರು ಪತ್ರಿಕಾ ಗೋಷ್ಠಿಯೊಂದರಲ್ಲಿ ಬಹಿರಂಗ ಪಡಿಸಿದ್ದರು.

ಜಿಲ್ಲೆಯ ಹೆಚ್ಚಿನ ಅಂಚೆ ಕಚೇರಿ ಕೆಲಸ ಮಾಡುತ್ತಿವೆ.... ಕೇಂದ್ರ ಸರಕಾರದ ನೌಕರರ ಮುಷ್ಕರದಲ್ಲಿ ಅಂಚೆ ಖಾತೆಯ ಕ್ಲಾರ್ಕರೂ, ಜವಾನರೂ ಭಾಗವಹಿಸಿದ್ದರೂ ಸ್ವಯಂ ಸೇವಕರ ಮತ್ತು ಸಾರ್ವಜನಿಕರ ಸಹಾಯದಿಂದ ಅಂಚೆ ಕಾರ್ಯ ಕಲಾಪಗಳು ಸುಸೂತ್ರವಾಗಿ ನಡೆಯುತ್ತಿವೆ. ಉಡುಪಿ ಅಂಚೆ ಕಚೇರಿಯಲ್ಲಿ ಹೆಚ್ಚಿನ ಕೆಲಸಗಾರರು ಗೈರುಹಾಜರಿ ಆದರೂ ಸ್ವಯಂಸೇವಕರ ಸಹಕಾರದಿಂದ ಟಪ್ಪಾಲು ಕೆಲಸವು ಸುಗಮವಾಗಿ ನಡೆಯುತ್ತಿದೆ ನಗರ ಸಭಾ ಸದಸ್ಯರು ತಮ್ಮ ತಮ್ಮ ವಾರ್ಡುಗಳ ಅಂಚೆ ಬಟವಾಡೆಯ ವ್ಯವಸ್ಥೆಯನ್ನು ಏರ್ಪಡಿಸಿರುತ್ತಾರೆ. ಉಡುಪಿ ಟೆಲಿಫೋನ್ ಎಕ್ಸ್‌ಚೇಂಜಿನಲ್ಲಿ ಹೆಚ್ಚಿನ ನೌಕರರು ಗೈರುಹಾಜರಾದುದರಿಂದ ಸಿಂಡಿಕೇಟುಬ್ಯಾಂಕ್ ನೌಕರರು ಸ್ವಯಂಸೇವಕರಾಗಿ ಕೆಲಸ ಮಾಡುತ್ತಿದ್ದಾರೆ. ಅದಲ್ಲದೆ ಸಿಂಡಿಕೇಟು ಬ್ಯಾಂಕಿನವರು ಟಪ್ಪಾಲು ಖಾತೆಯವರ ಉಪಯೋಗಕ್ಕೆ ವಾಹನ ವೊಂದನ್ನೂ ಬಿಟ್ಟುಕೊಟ್ಟಿರುತ್ತಾರೆ. ಒಟ್ಟಾರೆ ಮುಷ್ಕರದಿಂದ ಜನತೆಗೆ ಹೆಚ್ಚಿನಯಾವ ಅನಾನುಕೂಲತೆಯೂ ಆದಂತೆ ತೋರುವುದಿಲ್ಲ,

ಉದ್ಯಾವರ —ಇದೇ ತಾ. ೧೦ರಂದು ಉದ್ಯಾವರ ಗ್ರಾಮ ಪಂಚಾಯಿತಿನ ಅಧ್ಯಕ್ಷರೂ ಮೆಂಬರರೂ ತಾವು ಆರಿಸಿ ಬಂದುದರ ಸಂತೋಷಾರ್ಥವಾಗಿ ಡಾ| ಶ್ಯಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ಸಭೆಯಲ್ಲಿ ಶ್ರೀಗಳಾದ ವಾಸುದೇವ ಶಾನುಭಾಗ, ಮಾಜಿ ಅಧ್ಯಕ್ಷ ನರಸಿಂಹ ಕಾಮಾತ್, ರೆ. ಫಾ. ಸೈಮನ್ಸ್, ಮತ್ತು ಸ್ಥಳೀಯ ಖಾಜಿ ಸಾಹೇಬರು ಭಾಷಣಮಾಡಿದರು. ಅಧ್ಯಕ್ಷರ ಭಾಷಣದ ತರುವಾಯ ಪಂಚಾಯಿತಿನ ಅಧ್ಯಕ್ಷರಾದ ಆರಾಧ್ಯ ವೆಂಕಟಯ್ಯನವರುಧನ್ಯವಾದ ಸಮರ್ಪಿಸಿದರು. ಕೊನೆಗೆ ನೆರೆದ ನೂರಾರು ಮಂದಿಗೆ ಉಪಾಹಾರ ನಡೆಯಿತು.

ಪಡುಬಿದ್ರೆ— ಇದೇ ತಾ. ೪ರಂದು ರಾಜ್ಯದ ಸಚಿವ ಶ್ರೀ ರಾಚಯ್ಯನವರು ಶ್ರೀ ಎಫ್. ಎಕ್ಸ್. ಡಿ. ಪಿಂಟೋ ಇವರ ಅಧ್ಯಕ್ಷತೆಯಲ್ಲಿ ಹೊಸತಾಗಿ ಮಂಜೂರಾತಿ ಪಡೆದ ಫಿಶ್ಶರೀಸ್ ಟೆಕ್ನಿಕಲ್ ಹೈಸ್ಕೂಲನ್ನು ಉದ್ಘಾಟಿಸಿದರು. ಮುಖ್ಯೋಪಾಧ್ಯಾಯ ಶ್ರೀ ರಘುರಾಮ ರಾಯರು ಸ್ವಾಗತಿಸಿದರು. ಶ್ರೀಗಳಾದ ಟಿ. ಎ. ಪೈ, ಎಸ್. ಮುಕುಂದ ರಾವ್ ಎಂ. ಎಲ್. ಸಿ, ಶ್ರೀ ಮಂಜಪ್ಪಉಲ್ಲಾಳ್ ಎಂ. ಎಲ್. ಸಿ. ಇವರು ಭಾಷಣವಿತ್ತರು. ಅಂತ್ಯದಲ್ಲಿ ಶ್ರೀ ಟಿ. ಸುವರ್ಣ ಹೆಗ್ಡೆಯವರು ಕೃತಜ್ಞತೆಗಳನ್ನರ್ಪಿಸಿದರು

ಕೆಮ್ಮಣ್ಣು—ಇದೇ ತಾ. ೪ರಂದು ಮೈಸೂರಿನ ಮಂತ್ರಿ ಶ್ರೀ ಎಲ್. ರಾಚಯ್ಯನವರು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಮಂಜೂರಾದ ಫಿಶರೀಸ್ ಹೈಸ್ಕೂಲನ್ನು ಉದ್ಘಾಟಿಸಿದರು.

ಸಂಕ್ಷಿಪ್ತ ಸುದ್ದಿಗಳು

ಬಾದರಾಯಣ ಸಂಬಂಧ

ಸಂವಿಧಾನ ತನಗೆ ಕೊಡಮಾಡಿರುವ ರೂ. ೧೦ ಸಾವಿರ ಮಾಸಿಕ ವೇತನದಲ್ಲಿ ಅಧ್ಯಕ್ಷ ಡಾ| ರಾಜೇಂದ್ರ ಪ್ರಸಾದರು ಆಗಸ್ಟ್ ಒಂದನೆಯ ದಿನಾಂಕದಿಂದ ಕೇವಲ ರೂ. ೨,೫೦೦ನ್ನು ಮಾತ್ರ ಪಡೆದುಕೊಳ್ಳಲು ನಿರ್ಧರಿಸಿರುವರಾಗಿ ತಿಳಿಯುತ್ತದೆ ಡಾ| ಪ್ರಸಾದರು ಈ ಮೊದಲೇ ರೂ. ೫,೦೦೦ವನ್ನು ೧೯೫೨ ಮತ್ತು ೫೫ ರಲ್ಲಿ ಕಡಿತಮಾಡಿಕೊಂಡಿದ್ದರು.

ರಾಷ್ಟ್ರಪತಿಯವರ ಈ ತ್ಯಾಗಶೀಲತೆಯಿಂದ ಸ್ಫೂರ್ತಿಗೊಂಡ ಗುಜರಾಥದ ರಾಜ್ಯಪಾಲ ನವಾಬ ಮೆಹದಿ ನವಾಬ ಜಂಗರು ತಮ್ಮ ವೇತನದಲ್ಲಿ ಪುನಃ ೫೦೦ ರೂಪಾಯಿಗಳನ್ನು ಕಡಿದುಕೊಂಡಿದ್ದಾರೆ. ತಮಗೆ ಕೊಡಮಾಡಿರುವ ರೂ. ೫,೫೦೦ ಮಾಸಿಕ ವೇತನದಲ್ಲಿ ಈ ಮೊದಲೇ ಇವರು ರೂ. ೧,೦೦೦ನ್ನು ಕಡಿತ ಮಾಡಿಕೊಂಡಿರುತ್ತಾರೆ. ಕೇಂದ್ರ ಸರಕಾರಿ ನೌಕರರು ಅಧಿಕ ವೇತನವನ್ನು ಮುಂದಿಟ್ಟು ಹೂಡಿದ ಸಂಪಿಗೂ ಈ ಕಡಿತಕ್ಕೂ ಪೂರ್ವಾಪರ ಸಂಬಂಧ ಜೋಡಿಸುವುದು ಸರಿಯಾಗಲಾರದು.

ಕಾಂಗೋ ಗಲಭೆ ಅಣಗಿತು

ಇತ್ತೀಚೆಗೆ ಸ್ವಾತಂತ್ರ್ಯವಾದ ಆಫ್ರಿಕೆಯ ಕಾಂಗೋವಿನಲ್ಲಿ ಸೈನಿಕ ಗೊಂದಲವೆದ್ದಿತ್ತು. ಇದಕ್ಕೆ ಕಾಂಗೋವಿನ ಸ್ವಾತಂತ್ರ್ಯವನ್ನು ಅಪಹರಿಸ ಬಯಸಿದ ಕೆಲ ಫ್ಯಾಸಿಸ್ಟ ವರ್ಗಗಳ ಒಳಸಂಚೇ ಕಾರಣವೆಂದು ಕೇಳಲಾಗುತ್ತಿದೆ ಮಾತ್ರವಲ್ಲ, ಗೊಂದಲವನ್ನು ಈಗ ಸಂಪೂರ್ಣ ಹತ್ತಿಕ್ಕಲಾಗಿದೆ. ಸ್ವಾತಂತ್ರ್ಯ ಪ್ರಾಪ್ತಿಯ ಕೆಲವೇ ದಿನಗಳಲ್ಲಿ ಈ ಮಾದರಿಯ ವಿದ್ರೋಹ ನಡೆದುದು ಎಲ್ಲರಲ್ಲಿಯೂ ವಿಸ್ಮಯ ಹುಟ್ಟಿಸಿದೆ.

ದ. ಆಫ್ರಿಕೆಗೆ ದಿಗ್ಬಂಧನ

ದಕ್ಷಿಣ ಆಫ್ರಿಕೆಯ ವರ್ಣ ವಿರೋಧ ನೀತಿಯನ್ನು ಪ್ರತಿಭಟಿಸಲು ಅಲ್ಲಿನ ಸರಕುಗಳೆಲ್ಲವನ್ನೂ ಬಹಿಷ್ಕರಿಸಬೇಕೆಂದು ಘಾನಾದ ಪ್ರಧಾನಿ ಕ್ವಾಮೆ ನ್ಕ್ರುಮಾ ಆಫ್ರಿಕನ್ ಸ್ವತಂತ್ರ ರಾಷ್ಟ್ರಗಳಿಗೆ ಕರೆಯುತ್ತಿದ್ದಾರೆ. ಈ ರಾಷ್ಟ್ರಗಳ ಬಂದರು, ವಿಮಾನ ನಿಲ್ದಾಣಗಳ ಪ್ರಯೋಜನವು ದಕ್ಷಿಣ ಆಫ್ರಿಕೆಗೆ ದೊರೆಯದಂತೆ ನೋಡಿಕೊಳ್ಳಬೇಕಾಗಿಯೂ ಅವರು ವಿನಂತಿಸಿ, ಈ ಬಹಿಷ್ಕಾರವನ್ನು ಯಾವ ದಿನದಿಂದ ಜಾರಿಗೆ ತರಬೇಕೆಂಬ ಬಗ್ಗೆ ಘಾನಾದಲ್ಲಿಯೇ ನಿಶ್ಚಯಿಸಬೇಕೆಂದೂ ಹೇಳಿದರು.

ಆಸ್ಸಾಮಿನಲ್ಲಿ ಭಾಷಾಗೊಂದಲ

ಆಸ್ಸಾಮು ರಾಜ್ಯದಲ್ಲಿ ಎದ್ದಿರುವ ಭಾಷಾ ವಿವಾದವು ವಿಕೋಪಕ್ಕೆ ಹೋಗಿ, ಅದು ಪ್ರಬಲವಾದ ಅಶಾಂತಿಗೆ ಕಾರಣವಾಗಿದೆ. ಅದರೊಡನೆ ಅಲ್ಲಿನ ಯಥಾಸ್ಥಿತಿಯನ್ನು ಕಾಪಾಡುವ ಸಲುವಾಗಿ ರಾಜ್ಯ ಸರಕಾರಕ್ಕೆ ಸಹಾಯನೀಡಲು ಕೇಂದ್ರವು ಸೈನ್ಯದ ಸಹಾಯವನ್ನು ಒದಗಿಸಿದೆ ಅಲ್ಲಿನ ಪರಿಸ್ಥಿತಿಯು ಶಾಂತವಾಗಿ ಮೂಲರೂಪಕ್ಕೆ ಬರುತ್ತಿದೆ ಎಂಬುದಾಗಿ ವರದಿಗಳು ಬರುತ್ತಿವೆ.

ಏಶ್ಯನರು ಯಾರಿಗೆ ಹೆದರುವರು?

ಸದ್ಯ ಅಮೇರಿಕೆಯಲ್ಲಿ ಸಂಚರಿಸುತ್ತಿರುವ ಭಾರತೀಯ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷ ಶ್ರೀ ಅಶೋಕ ಮೆಹತರು ಚೀನದ ಒತ್ತಡದಿಂದ ಏಶ್ಯದ ಕಮ್ಯುನಿಸ್ಟೇತರ ರಾಷ್ಟ್ರಗಳ ನಡುವೆ ಆರ್ಥಿಕ ಹಾಗೂ ಸಾಂಸ್ಕೃತಿಕ ಸಹಕಾರವು ಅತಿ ನಿಕಟಗೊಳ್ಳುವ ಸಂಭವವಿದೆಯೆಂದೂ ಇದರಿಂದ ರಾಜಕೀಯ ಸಹಕಾರವು ಉತ್ತಮಗೊಳ್ಳುತ್ತ ನಡೆಯುವುದೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಚೀನಾದ ವಿಸ್ತಾರವಾದ ಬುದ್ಧಿಯನ್ನು ದ್ವಿತೀಯ ಲೋಕ ಯುದ್ಧದ ವೇಳೆಯ ಜಪಾನದ ನೀತಿಗೆ ಹೋಲಿಸಿದ ಮೆಹತಾ ಪಾಶ್ಚಾತ್ಯರ ವಿಸ್ತಾರವಾದಕ್ಕಿಂದಲೂ ಚೀನಾದ ವಾದಕ್ಕೆ ಏಶ್ಯನ್ ರಾಷ್ಟ್ರಗಳು ಹೆದರುವಂತಾಗಿದೆ ಎಂದು ತಿಳಿಸಿದರು.

ಭಾರತ— ಚೀನಾ ವಿವಾದ

ಭಾರತೀಯ ಹಾಗೂ ಚೀನೀಯ ಅಧಿಕಾರಿಗಳು ಈಗ ತಮ್ಮ ವಾದಗ್ರಸ್ಥವಾದ ಗಡಿ ಸಂಬಂಧದಲ್ಲಿ ತಾಂತ್ರಿಕ ವಿವರಗಳ ಅಭ್ಯಾಸದಲ್ಲಿ ತೊಡಗಿರುವರೆಂದೂ ಚೀನೀಯ ವಿದೇಶಿ ಶಾಖೆಯಿಂದ ಪ್ರಕಟಣೆ ಹೊರಟಿದೆ ತಜ್ಞರು ಜೂನ್ ೧೫ರಿಂದ ಈ ಮಾತುಕತೆಗಳಿಗೆ ಆರಂಭಿಸಿದ್ದು ವಿಷಯ ಪತ್ರಿಕೆಗೆ ಒಪ್ಪಿಗೆಯನ್ನು ನೀಡಿ ಈಗ ಸೀಮೆಯ ಸ್ಥಾನ ಹಾಗೂ ನೈಸರ್ಗಿಕ ವೈಶಿಷ್ಟ್ಯಗಳ ಕುರಿತು ವಿಚಾರ ನಡೆಸಿರುವರು. ಅವರು ಪರಸ್ಪರ ಖಾಸಗಿಯಾಗಿ ಮಾತಾಡಿಕೊಂಡಿರುವರೆಂದೂ ಬೇಸಗೆ ಮುಗಿಯುವುದರೊಳಗೆ ಈ ಮಾತುಕತೆ ಮುಗಿಸಿ ಭಾರತೀಯ ತಜ್ಞರು ಡಿಲ್ಲಿಗೆ ಮರಳಿ ತಮ್ಮ ಸರಕಾರಕ್ಕೆ ವರದಿ ಮಾಡಲಿರುವರೆಂದೂ ಗೊತ್ತಾಗಿದೆ.

'ನವಯುಗ'ದ ಚಂದಾಹಣ ಬಾಕಿ ಇರುವವರೆಲ್ಲರೂ ಕೂಡಲೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸಲಾಗುತ್ತದೆ.

—ಮೆನೇಜರ್

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು.ಶಿ.ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ.ಬಿ.ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು ,,	1	12
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟೆಮಾರಾ (ಅನು: ಕು. ಶಿ. ಹರಿದಾಸ ಭಟ್)	2	0
ಮೋಹದ ಮಹಾಜಾಲ (ವೀರಪ್ಪ ಯಗಟಿ)	1	12
ದೇಶಭಕ್ತ (ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ ,,	1	8
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭಾವಾರ್ಚನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0

ನವಯುಗ ಪ್ರೆಸ್, ಉಡುಪಿ.
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜೆನ್ಸೀಸ್, ಮಂಗಳೂರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. 209/1960.

ರುಕ್ಮಿಣಿ ಅಮ್ಮ —ವಾದಿ.

ಮತ್ತು

ರಾಮ ಭಟ್ಟ ಪ್ರ. ವಾದಿ.

ಇವರೊಳಗೆ—

ಸದ್ರಿ ಪ್ರತಿವಾದಿ ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಕರಂಬಳ್ಳಿಯಲ್ಲಿರುವ ಕೃಷ್ಣ ಭಟ್ರ ಮಗ ರಾಮ ಭಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ.

ತಾರೀಕು 0 . 12 — 1924ನೇ ರಿ. ಸಿ. ಮೂಲಗೇಣಿ ಎದುರ್ಗಡಿಗೆ ಕಾರಣವಾದ ಆಸ್ತಿಗಳನ್ನು ನೀವು ಸ್ವಾಧೀನಗಾರರಾಗಿ ಅನುಭವಿಸುವುದರಬಾಬ್ತು ಕಳೆದುಹೋದ ಹೇವಿಳಂಬಿ, ವಿಳಂಬಿ. ಮತ್ತು ವಿಕಾರಿ ಸಂ| ರಗಳ ಮೂಲಗೇಣಿ ಬಾಕಿ ಬಗ್ಗೆ ವಾದಿಯು ಮಾಡಿದ ಮೇಲ್ಕಂಡ ದಾವೆಯು ಇದೇ ತಾರೀಕು 22—7—60ಕ್ಕೆ ಇಟ್ಟಿರುವುದರಿಂದ, ಆ ಕುರಿತು ನಿಮಗೆ ಉದಾಸ್ರ್ಸುವುದಿದ್ದರೆ ಆ ದಿವಸ ಪೂರ್ವಾಹ್ನ ಗಂಟೆ 10ಕ್ಕೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾರಿ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

K. Ramakrishna Rao.
Vakil for plaintiff.

Udipi. Dated 12—7—1960.

ತಮ್ಮನಿಗೆ ಓಲೆ—೧೦

ಪದ್ಯಂ ಸಮಸ್ತ ಜನತಾ ಹೃದ್ಯಂ

ವಿಚಾರ ವ್ಯಂಜನೆಗೆ ಗದ್ಯ ಅನುಕೂಲವಾದರೆ, ಭಾವ ವ್ಯಂಜನೆಗೆ ಪದ್ಯವೇ ಆಧಾರಭೂತವಾಗಿದೆ. ಭಾವ ಪ್ರಧಾನ ಪಕ್ಷದವರು ಪದ್ಯಗಳಿಗೇನೇ ಆದ್ಯ ಸ್ಥಾನವೀಯುತ್ತಾರೆ; ಎಂತಲೇ ಅದು ಇನ್ನೂ ತನ್ನ ಸ್ಥಾನವನ್ನುಳಿಸಿಕೊಂಡು ಬಂದಿದೆ.

ಬರೆದವರು: ಶ್ರೀ ಗೋರಾ.

ಮಾನವನ ಸಾಧಾರಣ ಜೀವನದ ಆವಶ್ಯಕತೆಗಳೆಲ್ಲವೂ ಗದ್ಯದ ಮೂಲಕವೇ ಪೂರ್ಣಗೊಳ್ಳುತ್ತವೆ. ಆದರೆ, ಆತನ ಜೀವನೋದ್ದೇಶವು ಕೇವಲ ಭೋಜನ ಸಾಮಗ್ರಿಗಳನ್ನಷ್ಟೇ ಕೂಡಿ ಹಾಕುವುದಲ್ಲ; ಮಾನವನೆಂದಾದ ಮೇಲೆ, ಆತನ ಜೀವನದಲ್ಲಿ ಕಲೆ ಮತ್ತು ಸೌಂದರ್ಯಗಳಿಗೂ ಯತ್‌ಕಿಂಚಿತ್ ಅವಕಾಶವಿದ್ದೇ ತೀರಬೇಕು. ಇಂದು ಗದ್ಯಯುಗವು ಪ್ರಗಲ್ಭಮಾನವಾಗಿ ಬೆಳೆದು ಬರುತ್ತಿರುವುದಾದರೂ ಭಾವಗಳು ಸಂಪೂರ್ಣವಾಗಿ ಹ್ರಾಸಗೊಳ್ಳುವ ದುಃಸ್ಥಿತಿ ಬಂದೊದಗಿರುವುದಿಲ್ಲ. ನಮ್ಮ ಜೀವನ ಬಹುಭಾಗ ಅನ್ನ ಬ್ರಹ್ಮನನ್ನು ಒಲಿಸುವುದರಲ್ಲಿಯೇ ಕಳೆಯುವುದು ನಿಜವಾದರೂ ಅದರಲ್ಲಿ ಎಳ್ಳಷ್ಟಾದರೂ ಸರಸತೆಯಿಲ್ಲದಿದ್ದರೆ, ಅದು ಶುಷ್ಕ ರಸಹೀನ ವೃಕ್ಷದಂತಾಗುವುದು. ಇಂತಹ ನೀರಸ ಜೀವನವು ಅಸಹ್ಯವೆನಿಸುವುದು. ಸೌಂದರ್ಯ ಹಾಗೂ ಸರಸತಾ ಪ್ರದರ್ಶನಕ್ಕೆ ನಾವು ಪದ್ಯವನ್ನೇ ಮರೆಹೋಗಬೇಕಾಗುತ್ತದೆ. ಗೀತೆಯನ್ನು ವೈಜ್ಞಾನಿಕ ಗದ್ಯದ ಸಾಲಿನಲ್ಲಿ ಸೇರಿಸುವುದು ಸಾಧ್ಯವಿಲ್ಲ, ರಾತ್ರಿಯ ನಿಶ್ಶಬ್ದತೆಯಲ್ಲಿ ನದೀತಟದಲ್ಲಿ ಹಾಡುವ ಮಧುರ ಸಂಗೀತ ಇಂದಿಗೂ ಜನರ ಹೃದಯದಲ್ಲಿ ಪ್ರಭಾವ ಬೀರಬಲ್ಲುದು; ಅವರನ್ನು ತನ್ನತ್ತ ಸೆಳೆದುಕೊಳ್ಳಬಲ್ಲುದು. ಕೆಲವೆಡೆ ವಿವಾಹಾದಿ ಮಂಗಳ ಕಾರ್ಯಗಳ ಆಹ್ವಾನ ಪತ್ರಿಕೆಗಳನ್ನು ಪದ್ಯರೂಪದಲ್ಲಿಯೇ ಬರೆಯುವುದು ಗೌರವಾಸ್ಪದ ಎಂಬ ಭಾವನೆ ಇಂದಿಗೂ ಇದೆ. ಪದ್ಯವಿಲ್ಲದೆ ಹೋದರೆ, ಧರ್ಮದ ಬಹು ಸಾಮಾಜಿಕ ಭಾಗವು ಅಪೂರ್ಣವಾಗಿಯೇ ಉಳಿಯುತ್ತದೆ. ಪದ್ಯದ ತೂಕ ಅಳತೆ ಮಾಡಿ ಬಳಸಿದ ವಾಕ್ಯ, ವೃತ್ತಗಳ ಸರಸ ಪ್ರವಾಹಗಳು ನಮ್ಮ ಮನಸ್ಸಿನಲ್ಲಿ ಒಂದು ಅಪೂರ್ವ ಆನಂದಾಹ್ಲಾದ ಲಹರಿಯನ್ನೆಬ್ಬಿಸುವುವು; ಆದರೆ ಈ ಆನಂದೋನ್ಮಾದವು ಗದ್ಯದಿಂದ ಪ್ರೇರಿತವಾಗುವುದು ಬಹು ಕಷ್ಟ. ಪದ್ಯದಲ್ಲಿ ಭಾವ ಮತ್ತು ಭಾಷೆಗಳು ಪರಸ್ಪರ ಸಾಮಂಜಸ್ಯದಿಂದ ದಿಮಿತಕವಾಡುತ್ತಿರುವುದನ್ನು ನಾವು ಕಾಣಬಹುದು. ನಮ್ಮ ಭಾವವು ಯಾವ ರೀತಿಯಲ್ಲಿ ಉಕ್ಕಿ ಹೊರಬರಲು ಬಯಸುವುದೋ ಅದೇ ರೀತಿಯಲ್ಲಿ ನದೀಪ್ರವಾಹದಂತೆ ನಮ್ಮ ಭಾಷೆಯೂ ಪ್ರವಹಿಸ ತೊಡಗುವುದು. ಗೀತ—ಲಹರಿಯಲ್ಲಿ ಹೃದಯ ಗತಿಯ ಸ್ಪಂದನವು ಪ್ರತಿ ಬಿಂಬಿತವಾಗ ತೊಡಗುತ್ತದೆ. ಕೋಮಲ ಭಾವ ಪ್ರದರ್ಶನಕ್ಕೆ ಕೋಮಲ ಕಾಂತ ಪದಗಳೇ ಸಹಾಯಕವಾಗಿ ನಿಲ್ಲುತ್ತವೆ. ಶಬ್ದಗಳ ಧ್ವನಿಯೇ, ಅರ್ಥಬೋಧೆಯಾಗದೆ ಹೋದರೂ ಪರಿಸ್ಥಿತಿಗೆ ಅನುಕೂಲವಾದ ಭಾವವನ್ನು ನಮ್ಮ ಮನಸ್ಸಿನಲ್ಲಿ ಉತ್ಪಾದಿಸಲು ಸಮರ್ಥವಾಗಿದೆ. ಮೊಮಳಿನ ಭಾರವು ಹಗುರವಾಗಿ ಕಾಣುತ್ತದೆ. ವೀರ ರಸದ ಭಾವಗಳ ಭಾಷೆಯು ಓಜೋಪೂರ್ಣವಾಗಿರುವುದು. ಶೃಂಗಾರದ ಭಾಷೆಯು ಮಾಧುರ್ಯಗುಣೋಪೇತವಾದುದು. ರಸ ಮತ್ತು ಭಾವಗಳಿಗೆ ಅನುಕೂಲವಾದ ಗುಣಗಳಿರುವ ಪದಗಳಷ್ಟೇ ಮುಂದೆ ಬಂದಲ್ಲಿ ಮನಸ್ಸು ಅಂತಹ ಪದ್ಯದಲ್ಲಿಯೇ ನಿಮಗ್ನವಾಗಿ ಹೋಗುವುದು.



ಅಮೇರಿಕೆಯ ಅಣುಚಾಲಿತ ಸಬ್‌ಮೆರೀನ್.

ಕವಿತೆಯ ವೃತ್ತಗಳಲ್ಲಿ ಒಂದು ಅಪೂರ್ವ ಸಾಮ್ಯವಿರುವುದು. ಅದು ನಮ್ಮ ಮನಸ್ಸಿನಲ್ಲಿ ತದನುಕೂಲ ಸಾಮ್ಯವನ್ನು ಜಾಗ್ರತಗೊಳಿಸುವುದು. ವೃತ್ತಗಳ ಮೂಲಕ ಅನೇಕತೆಯಲ್ಲಿ ಏಕತೆಯು ಸ್ಥಾಪಿತವಾಗುತ್ತದೆ. ಏಕೆಂದರೆ, ಅಕ್ಷರ ಭೇದವಿದ್ದರೂ ಅವುಗಳ ಸಂಖ್ಯೆ, ಅವುಗಳ ಮಾತ್ರೆ, ಅವುಗಳ ಗುರು ಲಘು ವಿನ್ಯಾಸ ಕ್ರಮ ವಿಶೇಷವಾಗಿ ಆದಿಪ್ರಾಸ ಇವೆಲ್ಲವೂ ಏಕಸಮಾನವಾಗಿರುವುದನ್ನು ನಾವು ಕಾಣುತ್ತೇವೆ. ಆಧುನಿಕ ಕವಿತೆಗಳ ವಿಷಯ ಮಾತ್ರ ಇದರಿಂದ ಬೇರೆ ಎಂದು ಹೇಳಬಹುದಾದರೂ ಅವುಗಳ ಪಂಕ್ತಿಗಳಲ್ಲೂ ಒಂದು ಬಗೆಯ ಸಾಮ್ಯವಿಲ್ಲದಿಲ್ಲ. ಕೆಲವು ಪದ್ಯಗಳಲ್ಲಿ ಸಂಗೀತದ ತಾಳ ಮತ್ತು ಲಯಗಳಿರುವುದನ್ನು ನಾವು ಅಲ್ಲಗಳೆಯುವುದು ಸಾಧ್ಯವಿಲ್ಲ. ಪದ್ಯೋಚ್ಚಾರಣೆಯಿಂದ ನಮ್ಮ ಮುಖಕ್ಕೆ ಮತ್ತು ಪದ್ಯಶ್ರವಣದಿಂದ ಕಿವಿಗಳಿಗೆ ಒಂದು ವಿಶೇಷ ಸುಖ ದೊರೆಯುತ್ತದೆ. ನಮ್ಮ ಮನಸ್ಸೂ ಪದ್ಯ ಪ್ರವಾಹದಲ್ಲಿಯೇ ಲೀನವಾಗಿ ಮುಂದುವರಿಯುತ್ತದೆ; ಆ ಪ್ರವಾಹಕ್ಕನುಕೂಲವಾದ ಶಬ್ದಾವೃತ್ತಿಯಿಂದ ಒಂದು ಬಗೆಯ ಅಪೂರ್ವಾನಂದಾನುಭವವಾಗುವುದು. ಪದ್ಯಗಳನ್ನು ಓದುತ್ತಿದ್ದಂತೆ ಅಥವಾ ಕೇಳುತ್ತಿದ್ದಂತೆಯೇ ನಾವು ಒಂದು ಕ್ಷಣ ಅದರಲ್ಲಿಯೇ ತಲ್ಲೀನರಾಗಿ ಹೋಗಿ ಈ ಪ್ರಪಂಚವನ್ನೇ ಮರೆತು ಬಿಡುತ್ತೇವೆ. ಕವಿತೆಯ ಬಾಹ್ಯ ಮತ್ತು ಆಂತರಿಕ ಸೌಂದರ್ಯ ಸ್ವಾದನೆಯಿಂದ, ನಮ್ಮ ಮನಸ್ಸಿನಲ್ಲಿಯೂ ಸೌಂದರ್ಯ ಭಾವನೆಯು ಜಾಗ್ರತವಾಗಿ, ರಸೋತ್ಪತ್ತಿಯನ್ನು ಉಂಟು ಮಾಡುತ್ತದೆ. ಅದು ಒಂದು ಲೋಕೋತ್ತರ ಆನಂದದ ಕಾರ್ಯವಾಗಿದ್ದುಕೊಂಡು, ನಮ್ಮ ಜೀವನದ ಸಂಕುಚಿತ ಬಂಧನಗಳನ್ನು ಕಡಿದೊಗೆದು ಶಿಥಿಲಗೊಳಿಸುತ್ತದೆ. ಆಗ, ನಾವು ಕಾವ್ಯಸ್ವರ್ಗದಲ್ಲಿ ವಿಹರಿಸ ತೊಡಗುತ್ತೇವೆ ತಮ್ಮ ಜೀವನವನ್ನು ಸರಸ ಮತ್ತು ಜೀವನ ಯೋಗ್ಯವಾಗಿ ಮಾಡಿಕೊಳ್ಳಲು ಬಯಸುವವರು ಕವಿತೆಯ ಅನುಶೀಲತೆ ಕೈಗೊಳ್ಳುವುದು ಅವಶ್ಯಕವಾಗಿದೆ.

ಭೌತಿಕ ಅವಶ್ಯಕತೆಗಳ ಮತ್ತು ಶುಷ್ಕ ವೈಜ್ಞಾನಿಕ ವಿಷಯಗಳ ವಿಚಾರಗಳನ್ನು ಗದ್ಯದ ಮೂಲಕ ನಾವು ಪ್ರಕಾಶಪಡಿಸಬಹುದು. ಆದರೆ, ಮಾನಸಿಕ ಲೋಕೋತ್ತರಾನಂದ ಮತ್ತು ಜೀವನದ ಸರಸತೆಯು ಪದ್ಯಗಳ ರೂಪದಲ್ಲಿಯೇ ಸುಲಭವಾಗಿ ದೊರೆಯಬಲ್ಲುದು. ಗದ್ಯವು ಯಥಾರ್ಥವಾದಕ್ಕೆ ಅಧಿಕ ಉಪಯುಕ್ತವಾಗಿದೆ; ಪದ್ಯವು ಆದರ್ಶವಾದಕ್ಕೆ ಸರಿಯಾಗಿದೆ. ವಿಚಾರಗಳ ಭಾಷೆ ಗದ್ಯವಾದರೆ, ಭಾವಗಳ ಭಾಷೆ ಪದ್ಯ. ನಮ್ಮ ವ್ಯಕ್ತಿಗತ ಉನ್ನತಿಯಲ್ಲಿ ವಿಚಾರ ಮತ್ತು ಭಾವಗಳು ಪಡೆದಿರುವ ಸ್ಥಾನವನ್ನೇ ಸಾಹಿತ್ಯದಲ್ಲಿ ಗದ್ಯ ಮತ್ತು ಪದ್ಯಗಳೂ ಪಡೆದಿವೆಯೆನ್ನಬಹುದು.

"ಪದ್ಯಂ ಸಮಸ್ತ ಜನತಾ ಹೃದ್ಯಂ" ಎಂಬುದಾಗಿ ಕವಿರಾಜ ಮಾರ್ಗಕಾರ ನೃಪತುಂಗನ ಘೋಷಿಸಿದ್ದಾನೆ ಮತ್ತು ಆ ಕಾಲದ ಪದ್ಯವಾದರೂ ಹೃದ್ಯವಾಗಿಯೇ ಉಳಿದಿದೆ. ಮುಂದೆ, ಮುದ್ದಣನ ರಾಮಾಶ್ವಮೇಧದಲ್ಲಿ ಇದೇ ಪದ್ಯವನ್ನು ವಧ್ಯ ಎಂಬುದಾಗಿ ಹೇಳುವುದಕ್ಕೆ ಸ್ವಚ್ಛಂದ ಆಧುನಿಕ ಪದ್ಯಗಳ ಹಾಗೂ ಕ್ಲಿಷ್ಟಪ್ರದವಾದ ಭಾವಾಭಾವ ರೂಪದ ಕವಿತೆಗಳೇ ಕಾರಣವಾಗಿವೆ. ಅದೇನಿದ್ದರೂ, ಇಂದಿಗೂ ಸಾಹಿತ್ಯ ಪ್ರಪಂಚದಲ್ಲಿ ಗದ್ಯವು ಇಂದು ಅಧಿಕಾಧಿಕ ಜನಪ್ರಿಯವಾಗುತ್ತ ಬರುವುದಾದರೂ ಪದ್ಯವು ತನ್ನ ಸ್ಥಾನದಿಂದ ಇದುವರೆಗೆ ಉರುಳಿ ಹೋಗಿರುವುದಿಲ್ಲ; ಅದು ತನ್ನದೇ ಪ್ರರೂಪದಲ್ಲಿ ವಿರಾಜಮಾನವಾಗುತ್ತದೆ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. I=75; ಬಿಳಿ ಕಾಗದ.
ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.
ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ವಿಚಾರವೀಚಿ

(೪ನೇ ಪುಟದಿಂದ)

ನಾಗಿಯೇ ಬೆಳಗಿತು. ತನ್ನನ್ನು ಕೊಲೆಗೆಯ್ಯುವ ವಧಿಕ ಬರುತ್ತಿರಬಹುದೆಂದಾತ ಎದ್ದು ಕುಳಿತನು. ಆದರೆ, ಆತನ ಕಂಗಳಿಗೆ ವಧಿಕನ ಬದಲು ಆತನ ಪ್ರೇಮಿಕೆ ಫಿಯಮೇಟಾಳು ತೋರಿಬಂದಳು!

ಈ ಕಥೆಯಿಂದ ಆ ಅತ್ಯಾಚಾರಿಯು ಸೆರೆತಪ್ಪಿಸಿ ಸ್ವಯಂ ಫಿಯಮೇಟಾಳು ತನ್ನ ಪ್ರೇಮಿಯಲ್ಲಿಗೆ ಬಂದಿದ್ದಳೇ ಅಥವಾ ಆಕೆಯ ಆತ್ಮ ಮಾತ್ರ ಗೋಚರಿಸಿತೇ ಎಂಬುದು ಸರಿಯಾಗಿ ತಿಳಿಯುವುದಿಲ್ಲ. ವಧಿಕನು ಅಲ್ಲಿಗೆ ಬಂದೊಡನೆಯೇ ಆ ಜ್ಯೋತಿ ನಂದಿಹೋಯಿತು. ಗಿಸೇಪನು ಈ ನಿಸ್ಸಾರ ಪ್ರಪಂಚದಿಂದ ದೂರವುಳಿದ ಎಂದು ಹೇಳಿ ಆ ಕಥೆ ಮುಗಿಯುತ್ತದೆ.

ಜಾನ್ ಮಿಲಾಯಿಸನಂತೆಯೇ ಅಧಿಕಾಂಶ ಆಧುನಿಕಚಿತ್ರಕಾರರು ತಮ್ಮ ಜೀವನ ಕಾಲದಲ್ಲಿ ಕಡಿಮೆಯೆಂದರೆ ಒಂದು ಬಾರಿಯಾದರೂ ಮೃತಾತ್ಮರನ್ನು ಚಿತ್ರಿಸಲು ಪ್ರಯತ್ನ ನಡೆಸಿದ್ದಾರೆ. ಆದರೆ, 'ದಿ ಮಾರ್ಟಯರ್ಸ್ ವೆಲ್' ಎಂಬುದರಲ್ಲಿ ಶ್ರೀ ಬೋಪ್ಪನರು ಈ ಬಗ್ಗೆ ಪಡೆದಷ್ಟು ಸಿದ್ಧಿಯನ್ನೂ ಯಶಸ್ವಿಯನ್ನೂ ಯಾರೂ ಪಡೆದಿರಲಿಲ್ಲ. "ನಾನು ಚಿತ್ರಿಸಿದ 'ದಿ ಮಾರ್ಟಯರ್ಸ್ ವೆಲ್' ಎಂಬುದು ಕೆಳಗಿನ ಬ್ರಿಟನ್ನಿನಲ್ಲಿ "ದಿ ವೆಲ್ ಆಫ್ ದಿ ಮಾರ್ಟಯರ್ಸ್ ಬ್ಲಡ್" ಎಂಬ ಹೆಸರಿನಿಂದ ವಿಖ್ಯಾತವಾಗಿದೆ. ಇಲ್ಲಿ ಮೊದಲಿಗೆ, ಅನ್ಯದೇಶೀಯರು ಆದಿ ಕ್ರಿಸ್ತರನ್ನು ವಧಿಸಿದ್ದರು. ಆನಂತರ ಅದೇ ಬಾವಿಯಲ್ಲಿ ಮೃತರ ಆತ್ಮಗಳು ತೋರಿ ಬರುತಿದ್ದವು. ಈ ಪ್ರೇತಾತ್ಮಗಳು ಮೊದಲು ಅಲ್ಲಿಯೇ ಕುರಿಗಾಹಿ ಹುಡುಗನು ನೀರನ್ನರಸುತ್ತ ಬಂದಾಗ ಆತನಿಗೆ ತೋರಿದುವು. ಆನಂತರ ಈ ಬಾವಿಯು ರೋಗಮೋಚನೆಗಾಗಿ ಪ್ರಸಿದ್ಧವಾಯಿತು.

ಮೃತಾತ್ಮಗಳು, ವಿಶೇಷವಾಗಿ ಸುಂದರ ರಮಣೀಯರ ಮೃತಾತ್ಮಗಳು, ತಮ್ಮ ಹಳೆಯ ಪ್ರೇಮಿಯರೊಡನೆ ಸೇರುವ ಘಟನೆಗಳು ಯುರೋಪಿನ ಅನೇಕ ಆಖ್ಯಾಯಿಕೆಗಳಲ್ಲಿ ವರ್ಣಿತವಾಗಿವೆ. ಇವುಗಳಲ್ಲಿ ಬಹಳಷ್ಟನ್ನು ಚಿತ್ರಕಾರರು ತಮ್ಮ ಕಲಾಕೃತಿಗಳಿಗೆ ಮಾತೃಕೆಯನ್ನಾಗಿ ಮಾಡಿಕೊಂಡಿದ್ದಾರೆ 'ಅವಿಶ್ವಾಸಿ ಅನ್ನಾ' ಎಂಬ ಗೋಥ್‌ಲೇಂಡ್ ದ್ವೀಪದ ಕಥೆಯು ಸುವಿಖ್ಯಾತವಾಗಿದೆ. ಆಕೆಯ ಪ್ರೇಮಿಯು ಆಕೆಯೊಡನೆ ಕಪಟಾಚರಣೆಯನ್ನು ತೋರಿಸಿ, ಆಕೆಯನ್ನು ತಿರಸ್ಕರಿಸಿದಾಗ ಆಕೆಯು ಪರ್ವತದ ಒಂದು ಉನ್ನತ ಶಿಬಿಂದಲ್ಲಿ ಪ್ರೇಮಿ ಮತ್ತು ಆತನ ಪ್ರತಿಧ್ವಂದ್ವಿಯರ ನಡುವೆ ಮಲ್ಲಯುದ್ಧವನ್ನು ನಡೆಸುವ ವ್ಯವಸ್ಥೆ ಮಾಡಿದರು. ಇದರ ಪರಿಣಾಮವಾಗಿ ಇರ್ವರೂ ಸಮುದ್ರದಲ್ಲಿ ಮುಳುಗಿ ಹೋದರು; ತನ್ನ ಅವಿವೇಕಕ್ಕಾಗಿ ಪಶ್ಚಾತ್ತಾಪಗೊಂಡ ಅನ್ನಾಳು ಅವರ ಹಿಂದೆಯೇ ಅಪಾರ ಸಾಗರಕ್ಕೆ ನೆಗೆದಳು. ಅಂದಿನಿಂದ ಆಕೆಯ ಆತ್ಮವು ಯಾವಾಗಲೂ ಅದೇ ಶಿಖರದ ಆಕ್ಕಪಕ್ಕಗಳಲ್ಲಿ ತಿರುಗುತಿತ್ತು. ಆಕೆ ಎಲ್ಲರನ್ನೂ, ಮುಖ್ಯವಾಗಿ ಪ್ರೇಮಾಭಿಭೂತ ತರುಣರು ಆತ್ಮಹತ್ಯೆ ನಡೆಸುವ ಹವಣಿಕೆಯಲ್ಲಿರುವಾಗ ಅವರನ್ನು ಎಚ್ಚರಿಸುತ್ತಿದ್ದಳು.



ಸೆಣಬಿನ ಉತ್ಪಾದನೆಗಳು. ಹಣ ಗಳಿಸುವ ಬೆಳೆಗಳಲ್ಲಿ ಸೆಣಬು ಅಗ್ರಸ್ಥಾನ ಪಡೆದಿದೆ.

ಫೆಡರಿಕ್ ರೆಮಿಂಗ್ಟನ್‌ನು ತನ್ನೊಂದು ಚಿತ್ರದಲ್ಲಿ ಭಾರತೀಯ ಸುಂದರಿಯ ಪ್ರೇತಾತ್ಮವನ್ನು ಸುದೂರ ಪಶ್ಚಿಮದ ನಿರ್ಜನ ಮತ್ತು ಹಿಮಭರಿತ ಪ್ರದೇಶದಲ್ಲ ಒಂದು ಅಶಕ್ತ ನಿರಾಶಾ ವ್ಯಕ್ತಿಯ ಎದುರು ಪ್ರಕಟವಾಗುತ್ತಿರುವುದನ್ನು ಉಲ್ಲೇಖಿಸಿದ್ದಾನೆ. ವಿಪದಾವಸ್ಥೆಯಲ್ಲಿ ಆತನ ಮೊದಲಿನ ಪ್ರೇಮಿಕೆ ಆಕಾಶದಿಂದ ಕೆಳಗೆ ನೆಗೆಯುತ್ತಾಳೆ; ಮುಂದೆ ಮುಂದೆ ಓಸರಿಸುತ್ತ ಆತನಿಗೆ ಪಥ ಪ್ರದರ್ಶನ ಮಾಡುತ್ತಾಳೆ. ಚಳಿ, ಅಂಧಕಾರ, ಬಿರುಗಾಳಿ—ಮತ್ತು ಶತ್ರುಗಳಿಂದ ತನ್ನ ಪ್ರೇಮಿಯನ್ನು ರಕ್ಷಿಸುವುದಕ್ಕೆ ಭಾರತೀಯ ಸುಂದರಿಯರ ಮೃತಾತ್ಮಗಳು ಆಕಾಶದಿಂದ ಇಳಿಯುವ ನೂರಾರು ಜಾನಪದ ಕಥೆಗಳು ಪ್ರಚಲಿತವಿವೆ. ಈ ಚಿತ್ರದಲ್ಲಿ ಕಲಾವಿದ ರೆಮಿಂಗ್ಟನ್ನನು ಬಹಳ ಕೌಶಲದಿಂದ ಪ್ರೇತಾತ್ಮವು ಗಾಳಿಯಲ್ಲಿ ಓಸರಿಸಿ ಅಲೆದಾಡುವುದನ್ನು ರೂಪಿಸಿದ್ದಾರೆ.

ಈ ಪ್ರೇತಗಳಲ್ಲಿ ರಕ್ತವು ಕೂಡಿರುವುದಾದರೂ ತಲೆ ಕೂದಲು ಮುಳ್ಳಿನಂತಿರಿಸುವ ವೈಚಿತ್ರ್ಯ ಯಾವುದು? ಇದು ವರೆಗೆ ಯಾವನೇ ಕಲಾಕಾರ ಈ ಪ್ರಭಾವವನ್ನು ಉತ್ಪಾದಿಸುವುದರಲ್ಲಿ ಸಮರ್ಥನಾಗಿರುವನೇ ಇಲ್ಲವೇ ಅಸಮರ್ಥನಾಗಿರುವನೇ ಎಂಬುದು ಸಂದೇಹಾಸ್ಪದ ಲಾರ್ಡ್ ಲೋವಾಟನ ಭೂತಾತ್ಮವಿರುವ ಚಿತ್ರವನ್ನು ಕಂಡ ಮೂರನೆಯ ಜಾರ್ಜನು ಹೆದರಿ ಮುದುಡಿ ಬಿಟ್ಟನು. ಆ ಚಿತ್ರವನ್ನು ತನ್ನ ಮುಂದಿರಿಸಿದ ದರಬಾರಿಯನ್ನು ಕರೆದು ಅದನ್ನು ದೂರ ಒಯ್ಯುವಂತೆ ಕೇಳಿಕೊಂಡನು ಚಿತ್ರವು ಮೋಹಕವಾಗಿದ್ದರೂ ಅದು ರುದ್ರವಾಗಿತ್ತು.

ತಮ್ಮ ತಲೆಯನ್ನು ಕೈಯಲ್ಲಿ ಹಿಡಿದುಕೊಂಡು ನಡೆಯುವುದೂ ಭೂತಗಳ ಸಾಮಾನ್ಯ ಅಭ್ಯಾಸವಾಗಿದೆ. ಇಂತಹವುಗಳ, ಸೈಂಟ್ ಡೇನಿಸನ ಕಥೆಯೊಂದು ಹೆಸರುವಾಸಿಯಾಗಿದೆ. ಸೈಂಟ್ ಡೇನಿಸನ ಶಿರಚ್ಛೇದನವಾದಾಗ, ಆತನ ಆತ್ಮ ಎದ್ದು ನಿಂತಿತಂತೆ. ಅದು ರಕ್ತಾಚ್ಛಾದಿತ ರುಂಡವನ್ನು ಕೈಯಲ್ಲಿ ಎತ್ತಿಕೊಂಡು ದೀರ್ಘ ಶ್ವಾಸವೆಳೆಯುತ್ತ ಇಂದು ಸೈಂಟ್ ಡೇನಿಸ್ ಎಂದು ಕರೆಯುವ ಸ್ಥಳದಲ್ಲಿಗೆ ಬಂತಂತೆ. ಇದನ್ನು ಕಂಡವರು ವಿಸ್ಮಯ ಚಕಿತರಾದರು. ಎಂ. ಡೇಲೇಂಸರು ಇದನ್ನೇ ಚಿತ್ರಾಂಕಿತಗೊಳಿಸಿದರು, ಈ ಚಿತ್ರವನ್ನು ೧೮೯೩ರಲ್ಲಿನ ಕಲಾ ಪ್ರದರ್ಶನದಲ್ಲಿ ಪ್ರದರ್ಶಿಸಲಾಗಿತ್ತು.

ವೇನಿಸ್‌ನಲ್ಲಿ ಶತಮಾನಾಂತರಗಳಿಂದ ಕುಮಾರಿಯೊರ್ವಳ ಕಥೆ ಪ್ರಚಲಿತವಿದೆ. ಈ ಕುಮಾರಿ ಜ್ಯೋತಿ ರೂಪದಲ್ಲಿರುವಳು. ರಾತ್ರಿ ಹೊತ್ತು ಮನೆಗೆ ಮರಳುವ ಅನೇಕ ಬೆಸ್ತರು ಈ ಜ್ಯೋತಿಪುಂಜದ ಪ್ರಕಾಶವನ್ನು ಕಂಡಿದ್ದರು; ಅದರ ನಡುವೆ ಚಂದ್ರಿಕೆಗೆ ಸಮಾನಳಾದ ಒಬ್ಬಳೆ ಅಪೂರ್ವ ಸುಂದರಿಯು ನೀರಿನ ಮೇಲೆ ಮೌನವಾಗಿ ತಿರುಗಾಡುತ್ತಿರುವುದನ್ನು ಅಥವಾ ವೆನಿಸಿನ ಮಂದಿರಗಳಿಗೆ ಹೋಗುತ್ತಿರುವುದನ್ನು ಅವರು ಆಗಾಗ ಕಾಣುತಿದ್ದರು. ಕೆಲವು ಜನರು ಆಕೆಯನ್ನು "ಬ್ಲೆಸೆಡ್ ವರ್ಜಿನ್" ಅಥವಾ 'ಮೇರಿಯಮ್ಮ' ಎಂದು ಹೇಳುತ್ತಾರೆ; ಆದರೆ, ಇನ್ನು ಕೆಲವರು ಸಮುದ್ರದಲ್ಲಿ ಮುಳುಗಿ ಮಡಿದ ಒಬ್ಬಾಕೆ ಮಹಿಳೆಯ ಭೂತಾತ್ಮವೆಂದೂ ಅನ್ನುತ್ತಾರೆ. ಈ ಕಥೆಯನ್ನು ಸಿನ್ಯೋರ್ ಡಿ ಅಸುನ್ನಿಯೋನು ಹೇಳಿದ್ದನು. ಪಾಲ್ ಡಿ ಫಿಕ್ಸ್‌ನ "ವೇನಿಸಿನ ಕೊಲ್ಲಿ" ಎಂಬ ಹೆಸರಿನ ಚಿತ್ರವು ಈ ಕಥೆಯನ್ನು ಅನುಲಕ್ಷಿಸಿಕೊಂಡಿದೆ.

ಮೃತಾತ್ಮರ ಚಿತ್ರಣವು ಇದು ವರೆಗೂ ಚಿತ್ರ ಕಲೆಯಲ್ಲಿಯೇ ಪರಿಮಿತವಾಗಿದೆ. ಆದುದರಿಂದಲೇ ವೇಲ್ಸಿನಲ್ಲಿ ಅಶರೀರೀ ಆತ್ಮದ ಮೂರ್ತಿ ನಿರ್ಮಿಸಲು ಒರ್ವ ಮೂರ್ತಿಕಾರರನ್ನು ಆಮಂತ್ರಿಸಿದಾಗ, ಈ ವರ್ತಮಾನವು ತುಸು ವಿಚಿತ್ರವೆನಿಸಿತು.

ಇದೇ ರೀತಿಯ ಆಖ್ಯಾಯಿಕೆಯನ್ನು ಆಧರಿಸಿದ ಒಂದು ರಶ್ಯನ್ ಚಿತ್ರವೂ ಇರುತ್ತದೆ. ಒಬ್ಬ ನಾರಿಯು ಸನ್ಯಾಸಿಯಾಗಿ ತನ್ನ ಪತಿ ಅಥವಾ ಪ್ರೇಮಿಯನ್ನು ನಿರಾಶೆಗಾಗಿಸಿದ್ದಳು. ಕೊನೆಗೆ ಆತನು ಮೃತ್ಯುಮುಖನಾದನು. ಕೊನೆಯಲ್ಲಿ ಸನ್ಯಾಸಿನಿಗೆ ರಾತ್ರಿಯಲ್ಲಿ ಆ ವ್ಯಕ್ತಿಯ ಆಕೃತಿಯು ತೋರಿ ಬರತೊಡಗಿತು. ಆಕೆಯು ಆತನ ಪ್ರೇಮವನ್ನು ತನ್ನ ಉನ್ನತಾದರ್ಶದೆದುರು ತೃಣಸಮಾನವಾಗಿ ಕಂಡಿದ್ದಳು. ಆದರೆ, ಆಕೆಯು ಬರಬರುತ್ತ ಹುಚ್ಚಿಯಾದಳಂತೆ, ಈ ಕಥೆಯ ಆಧಾರದಿಂದ ಎಂ. ಶಾ ಹೋಪಗ್ಯೋವರು 'ದಿವಿಜನ್' ಎಂಬ ಹೆಸರಿನ ಒಂದು ಚಿತ್ರವನ್ನು ಬರೆದಿದ್ದು, ಇದು ಒಂದು ಕಾಲದಲ್ಲಿ ಬೇಕಷ್ಟು ಜನರ ಮನವನ್ನು ಆಕರ್ಷಿಸಿತ್ತು.

NAVAYUGA WEEKLY
(Estd in 1921)
ADVERTISEMENT RATES
Display Advertisements:— Rs. 2-8/ per column inch for contracts of 100" or more and Rs. 3/-per column inch for casual advertisements.
Classified Advertisements:— As. 8/- per line (minimum 8 lines)
For rates for advertising in colours and special positions please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಗೃಹ ವಿಜ್ಞಾನ

(೪ನೇ ಪುಟದಿಂದ)

ಎಷ್ಟೋ ಕಡೆಯಲ್ಲಿ ಮಕ್ಕಳು ಬೀದಿಯಲ್ಲಿ ಆಡುವುದನ್ನು ನೋಡಿದ್ದೇವೆ. ಇದನ್ನು ಎಲ್ಲರೂ ಖಂಡಿಸಬೇಕು. ಬೀದಿಯಲ್ಲಿ ನಡೆಯುವುದೇ ಒಂದು ಪ್ರತ್ಯೇಕ ಪಾಠ. ಅಂದ ಮೇಲೆ ಆಡುವುದುಂಟೇ? ಬೀದಿಯ ಬದಿಯಲ್ಲಿರುವವರು ಈ ವಿಷಯವಾಗಿ ಮೂರನೇ ಕಣ್ಣನ್ನೇ ಇಟ್ಟುಕೊಂಡು ಮಕ್ಕಳನ್ನು ಕಾಪಾಡಬೇಕಾದೀತು. ಮುಖ್ಯವಾಗಿ, ನಿಮ್ಮ ಮಕ್ಕಳ ಪ್ರತಿಯೊಂದು ಚಲನ ವಲನಗಳಲ್ಲಿಯೂ ನಿಮ್ಮ ಲಕ್ಷ್ಯ ಯಾವಾಗಲೂ ಇರಲಿ.

ಮಾತಾಡುವಾಗ

ಮಕ್ಕಳಿಗೆ ಮಾತುಬರುವ ವಯಸ್ಸು ಇಂತಹುದೇ ಎಂದು ನಿಶ್ಚಯವಾಗಿ ಹೇಳಲಾಗುವುದಿಲ್ಲ. ಕೆಲವು ಮಕ್ಕಳಿಗೆ ಮೂರು ವಯಸ್ಸಿಗೆ ಮುಂಚೆ ಸರಿಯಾಗಿ ಮಾತು ಬಾರದು. ಆ ಮಾತ್ರಕ್ಕೆ ಅವು ಚುರುಕಿಲ್ಲದ ಮಕ್ಕಳೆಂದು ಹೇಳಲು ಬರುವುದಿಲ್ಲ.

ಆದರೂ ಸಾಮಾನ್ಯವಾಗಿ ಹೀಗೆ ಹೇಳಬಹುದು: ಮಗು ನೋಡುವ ಪ್ರತಿ ವಸ್ತುವನ್ನೂ ಇಂಥಾದ್ದೆಂದು ಗುರುತಿಸಿ ಪ್ರಾರಂಭದಲ್ಲಿ ಹೇಳತೊಡಗಬೇಕು. ಎಲ್ಲಕ್ಕೂ ಮೊದಲು ಮಗು ಉಚ್ಚರಿಸುವ ಮಾತು "ಅಮ್ಮ". "ಅಮ್ಮ"ನಲ್ಲಿರುವ ಎರಡು ಅಕ್ಷರಗಳೂ ಆಕಾರಗಳಾಗಿವೆ. "ಅಕ್ಷರಾಣಾಂ ಅಕಾರೋಸ್ಮಿ" ಅಂದರೆ "ಅಕ್ಷರಗಳಲ್ಲಿ ಆಕಾರವು ನಾನಾಗಿದ್ದೇನೆ" ಎಂದು ಶ್ರೀಕೃಷ್ಣನು ಹೇಳಿದ್ದಾನೆ. ಆಕಾರ ತುಂಬಿದ "ಅಮ್ಮ" ಪದದಲ್ಲಿ ದೇವರಿದ್ದಾನೆ. ಆದುದರಿಂದ "ತಾಯಿಗಿಂತ ಮೊದಲನೇ ದೇವರಿಲ್ಲ" ಎಂದು ಹಿರಿಯರು ಹೇಳುತ್ತಾರೆ. ಮಗು ಉಚ್ಚರಿಸುವುದು ಕೂಡ ಮೊದಲು "ಅಮ್ಮ" ಅನಂತರ "ಅಪ್ಪ" "ಅಣ್ಣ" ಇತ್ಯಾದಿ. ಹೀಗೆ ಒಂದೊಂದಾಗಿ ಕುರ್ಚಿ ಮೇಜು, ಚಾಪೆ, ವಸ್ತ್ರ ಮೊದಲಾದ ನಿತ್ಯನೋಡುವ ವಸ್ತುಗಳನ್ನು ಹೇಳಲಾರಂಭಿಸುತ್ತವೆ. ಒಂದೂವರೆ ವಯಸ್ಸಾಗುವಾಗ ಆ ಮಾತು ಈ ಮಾತು ಕೂಡಿಸಿ "ಚಂದಕ್ಕಿ ಮಾಮಾ ಬಾ ಬಾ ಬಾ" ಎಂದು ಹೇಳಲು ಕಲಿತುಕೊಳ್ಳುತ್ತವೆ. ಎರಡು ವಯಸ್ಸು ತುಂಬುವಾಗ ತಪ್ಪಿಲ್ಲದೆ ವಾಕ್ಯಮಾಡಲು ಕಲಿಯುತ್ತವೆ. ಏನಾದರೂ ತಾಯಿಹೇಳುವ ಕೆಲಸ, ಅಂದರೆ "ಪುಟ್ಟಾ, ಅದನ್ನಿತ್ತ ತಾ," "ಇದನ್ನು ಅಪ್ಪನಿಗೆ ಕೊಡು" ಎಂದು ಹೇಳಿದರೆ, ಅದರ ಅರ್ಥವನ್ನು ಗ್ರಹಿಸಿ ಆ ಕೆಲಸ ನಿರ್ವಹಿಸಲು ಸಮರ್ಥವಾಗುತ್ತವೆ.

ಮೂರನೇ ವಯಸ್ಸು ಬಂದಾಗ ಹೇಳುವ ಮಾತನ್ನೂ ಕೆಲಸವನ್ನೂ ತಕ್ಕಷ್ಟು ನೆನಪಿಟ್ಟುಕೊಳ್ಳಲು ಮಕ್ಕಳು ಶಕ್ತಿಪಡೆದಿರುತ್ತಾರೆ. ಸಾಮಾನ್ಯವಾಗಿ ಮಕ್ಕಳೊಂದಿಗೆ ಮಾತಾಡುವಾಗ, ಮುದ್ದಿಗಾಗಿ ಅವರು ಮಾತಾಡುವ ರೀತಿಯಲ್ಲೇ ತಪ್ಪುನುಡಿಗಳನ್ನು ದೊಡ್ಡವರೂ ಉಚ್ಚರಿಸುತ್ತಾರೆ. ಇವು ಕೇಳಲು ರಸವಾಗಿಯೂ ಹಾಸ್ಯವಾಗಿಯೂ ಇರುತ್ತವೆ ನಿಜ. ಆದರೆ ಮಕ್ಕಳಿಗೆ ಅಂತಹ ಮಾತಿಗೆ ಪ್ರೋತ್ಸಾಹ ಕೊಟ್ಟು ಹಾಗಾಗಿ ಅಶುದ್ಧ ಮಾತುಗಳೇ ನಾಲಗೆಯಿಂದ ಹೊರಟೀತು. ಹೆಚ್ಚಾಗಿ ಶುದ್ಧ ಉಚ್ಚಾರಣೆಗೇ ಮಕ್ಕಳ ಅಭ್ಯಾಸವನ್ನು ಸಾವಕಾಶವಾಗಿ ಎಳೆಯುತ್ತಿರಬೇಕು.

ಇನ್ನೊಂದು ಮುಖ್ಯ ಮಾತು; ಮಕ್ಕಳ ಇದಿರಿನಲ್ಲಿ ಕೆಟ್ಟ ಮಾತುಗಳನ್ನಾಡಬೇಡಿ. ಮಕ್ಕಳ ನಾಲಗೆ ನೀವು ಹೇಳಿದ್ದನ್ನು ಮಾಡಿಸುವಂತಹ ಗ್ರಾಮಾಫೋನ್ ತಟ್ಟೆಯಂತಹುದು.

ಮಕ್ಕಳ ಪ್ರಶ್ನೆಗಳು

ಹಸು ಮಕ್ಕಳ ಮನಸ್ಸು ಕನ್ನಡಿಯ ಹಾಗೆ ಶುಭ್ರವಾಗಿರುತ್ತದೆ. ಇದಿರಿನಲ್ಲಿರುವದನ್ನೆಲ್ಲಾ ಪ್ರತಿಫಲಿಸುತ್ತದೆ. ಸ್ವಾಭಾವಿಕವಾಗಿ ಮಕ್ಕಳ ಬುದ್ಧಿ ತಪ್ಪುದಾರಿಗೆ ಹತ್ತುವುದಿಲ್ಲ. ಆದುದರಿಂದ ಬುದ್ಧಿ ಬೆಳೆಯದ ಮಕ್ಕಳ ಮಾತುಗಳು ಸತ್ಯವಾಗಿರುತ್ತವೆ. ಒಂದು ವೇಳೆ ಮಕ್ಕಳು ಸುಳ್ಳಾಡಿದರೆ ಅದಕ್ಕೆ ಕಾರಣವಿರಬೇಕು. ಮತ್ತು ಅದು ಅವರಿಗೆ ಯೋಚನೆಯ ಶಕ್ತಿ ಬಂತು ಎಂಬುದಕ್ಕೆ ಗುರುತು. ಈ ಸಮಯದಲ್ಲಿಯೇ ಜಾಗರೂಕತೆಯಿಂದಿರ ಬೇಕಾದ್ದು.

ಮಕ್ಕಳು ಸುಳ್ಳಾಡಲು ಕಾರಣ, ಒಂದೋ ಅವರ ಊಹೆಗೆ ನಿಲುಕದ ವಿಷಯಕ್ಕೆ; ಇಲ್ಲವೇ ಇನ್ನೊಬ್ಬರ ಮನಸ್ಸಿಗೆ ನೋವಾಗಬಾರದೆಂದು; ಅಥವಾ ತನಗೆ ಶಿಕ್ಷೆಯಾದೀತೆಂಬ ಭಯ. ಈ ಮೂರು ಕಾರಣಗಳಲ್ಲಿ ಮೂರನೆಯದೇ ಪ್ರಬಲವಾದದ್ದು ಮತ್ತು ಹೆಚ್ಚು ಕಡೆ ನಡೆಯುವಂಥಾದ್ದು.

ನಾವು ತಮಾಷೆಗಾದರೂ ಮಕ್ಕಳ ಮುಂದೆ ಸುಳ್ಳಾಡಬಾರದು. ಸಾಧಾರಣವಾಗಿ ತಾಯಿ ಮಕ್ಕಳೊಂದಿಗೆ ಸುಳ್ಳಾಡುವುದಿಲ್ಲ. ಅದು ಸಾಲದು. ಮಕ್ಕಳಿಗೆ ಹೇಳುವ ಕಥೆಗಳಲ್ಲಿಯೂ ಬೇರೆ ಸಮಾಚಾರಗಳಲ್ಲಿಯೂ ಯಥಾರ್ಥವೇ ತುಂಬಿರಬೇಕು. ನಮಗೇ ಸಂಶಯಾಸ್ಪದವಾಗಿರುವ ವಿಷಯಗಳನ್ನು ಸಣ್ಣವರಿಗೆ ಹೇಳಬಾರದು. ಮಕ್ಕಳಿಗೆ ಪ್ರತಿಯೊಂದನ್ನೂ ನಿಃಸಂಶಯವಾಗಿ ತಿಳಿದುಕೊಳ್ಳಬೇಕೆಂಬ ಕುತೂಹಲ ತುಳುಕುತ್ತಿರುತ್ತದೆ. ಆದುದರಿಂದ ಅವರು ಕೇಳುವ ಪ್ರಶ್ನೆಗಳಿಗೆ ಉತ್ತರ ಹೇಳಲು ನಮಗೆ ಗೊತ್ತಿಲ್ಲವೆಂದು ಜಾರಿಸಬಾರದು. ಬೆದರಿಸಬಾರದು. ಒಂದು ವೇಳೆ ಉಚಿತವಲ್ಲದ ಪ್ರಶ್ನೆಗಳಾದರೆ "ಕಂದಾ ಈ ಮಾತು ನೀನು ದೊಡ್ಡವನಾದ ಮೇಲೆ ತಿಳಿಯುತ್ತದೆ" ಎಂದು ಮಗು ಒಪ್ಪಿಕೊಳ್ಳುವಂತೆ ಹೇಳಬೇಕು.

ಮಕ್ಕಳು ಮಾಡುವ ಕೆಲವು ಪ್ರಶ್ನೆಗಳಂತೂ ಉತ್ತರ ಹೇಳಲು ದೊಡ್ಡವರಿಗೇ ಗೊತ್ತಾಗುವುದಿಲ್ಲ. ಆಗ ಅವರಿಗೆ ನಂಬುಗೆ ಯಾಗುವ ಉತ್ತರ ಹೇಳಲಿಕ್ಕೆ ನಾವು ತುಂಬಾ ಎಚ್ಚರ ವಹಿಸಿಕೊಳ್ಳಬೇಕು. ಏನಾದರೂ ಸುಳ್ಳು ಹೇಳಿ ತಪ್ಪಿಸಿಕೊಳ್ಳಲು ನೋಡಬಾರದು. ಸಿಟ್ಟುಮಾಡಿ ಅವುಗಳ ಬಾಯಿ ಮುಚ್ಚಿಸಲೆತ್ನಿಸುವುದರಿಂದ ದೊಡ್ಡವರ ಮೇಲೆ ಮಕ್ಕಳ ವಿಶ್ವಾಸ ಕಡಿಮೆಯಾಗುತ್ತದೆ. ಅವರ ಲಕ್ಷ್ಯ ಬೇರೆಯವರ ಮೇಲೆ ಹರಿಯುತ್ತದೆ.

ಮಗು ಸುಳ್ಳು ಹೇಳಿದರೆ ಅಲಕ್ಷ್ಯ ಮಾಡದೆ, ಎಂತಹ ಪರಿಸ್ಥಿತಿಯಲ್ಲಿ ಸುಳ್ಳು ಹೇಳಿದ್ದೆಂದು ವಿಚಾರ ಮಾಡಿಕೊಳ್ಳಬೇಕು. ಇದನ್ನು ಯೋಚನೆ ಮಾಡುವಾಗ ಮಕ್ಕಳ ಹೊಣೆಗಾರಿಕೆಯೆಂದರೆ ಸುಲಿದ ಬಾಳೆಯ ಹಣ್ಣಲ್ಲವೆಂದು ತಿಳಿಯುತ್ತದಲ್ಲವೆ? ಇಷ್ಟೇ ಅಲ್ಲ, ಇನ್ನೂ ಅನೇಕ ವಿಷಯಗಳಿವೆ.

(ಮುಂದುವರಿಯುವುದು.)

ಉಡುಪಿ. ಡಿ. ಮು. ಕೋರ್ಟಿನಲ್ಲಿ

O. P. No 56/59.

ಮಿಸಿಸ್. ಸಿಸಿಲಿಯಾ ಫೆರ್ನಾಂಡಿಸ್ — ಕೂಡಾ— ಅರ್ಜಿದಾರರು,

ಮತ್ತು

ಚಾರ್ಲ್ಸ ಫೆರ್ನಾಂಡಿಸ್ ಕೂಡಾ—ರೆಸ್ಪಾಂಡೆಂಟರರು,

ರೆಸ್ಪಾಂಡೆಂಟರರು: — 1. ಚಾರ್ಲ್ಸ ಫೆರ್ನಾಂಡಿಸ್. 2. ಸೆಲಿನ್ ಫೆರ್ನಾಂಡೀಸ್. 3. ಸ್ಟೇಸೀ ಜೇಮ್ಸ್ ಫೆರ್ನಾಂಡಿಸ್. 4. ಅವಿತ್ ವಿಸಿಫ್ರೆಡ್ ಫೆರ್ನಾಂಡಿಸ್. ಅಂತೋನ ಜೋನ್ ಫೆರ್ನಾಂಡೀಸರ ಮಕ್ಕಳು, ಉಡುಪಿ ಕಸ್ಬಾ ಅಜ್ಜರಕಾಡಿನಲ್ಲಿರುವವರು—ಇವರಿಗೆ. ನ ಯಿತರ ಸಮ್ಮಂದ ಪಟ್ಟವರಿಗೆ—

ಮೇಲ್ಕಂಡ ಅರ್ಜಿಯ A1 ಮತ್ತು A2 ನೇ ಶೆಡ್ಯೂಲಿನಲ್ಲಿ ವಿವರಿಸಿದಂತೆ ಮೃತ ಅಂತೋನಿಜೋನ್ ಫೆರ್ನಾಂಡೀಸರಿಗೆ ಬರಾಲ್ಯವೇಜುಗಳನ್ನು ವಸೂಲು ಮಾಡುವ ಬಗ್ಗೆ ಅರ್ಜಿದಾರರು ವಾರೀಸು ಸರ್ಟಿಫಿಕೇಟು ಕೇಳಿದಾಕ್ಕೆ ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 23—7—60ಕ್ಕೆ ತನಿಖೆಗೆ ಇಟ್ಟಿದೆ. ಆ ದಿವಸ ನೀವು ಬರಪ ಮೂಲಕವ ಆಕ್ಷೇಪಣೆ ದ್ದಲ್ಲಿ ಕೋರ್ಟಿನ ಮುಂದೆ ಬೆಳಿಗ್ಗೆ 10 ಗಂಟೆಗೆ ಹಾಜರಾಗಿ ದಾಖಲು ಮಾಡುವರೆ ತಪ್ಪಿದಲ್ಲಿ ನಿಮ್ಮ ಗೈರ್ ಹಾಜರಿಯಲ್ಲಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾಗುವುದು.

By order of corut'

Sd. V. G. Kedlaya,
M. A. LL. B.
Advocate for petitioners.

Udipi Dated 6—7—1960.

ಹಾರ್ಮೋನಿಯಮ್
ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಅತ್ಯುಪಯುಕ್ತ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2: 50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಕಥಾ ವಿಹಾರ

(೨ನೇ ಪುಟದಿಂದ)

ಣೆಗೆ ಬಂದು ಹಿತ್ತಾಳೆಯ ಕರಡಿಗೆಯಿಂದ ತಾನು ತನ್ನ ಮಡದಿಗೆ ಪ್ರೀತಿಯಿಂದ ಗಳಿಸಿ ತಂದ ಚಿನ್ನದ ಮಾಂಗಲ್ಯವನ್ನು ಕೈಗೆತ್ತಿಕೊಂಡ. ಅವನ ಮೋಹದ ಮಡದಿ ಸುಬ್ಬು ಅದನ್ನು ಕಟ್ಟಿಕೊಂಡು ತಿರುಗಲಿಕ್ಕೆ ಹೆದರಿ—ಎಲ್ಲಾದರೂ ಕಳೆದು ಹೋದೀತೆಂದು ಬೆದರಿ—ತಾನು ಬರೇ ಕರಿಮಣಿಯನ್ನು ಪೋಣಿಸಿ ಕಟ್ಟಿಕೊಂಡು ಅದನ್ನು ದೇವರ ಪೀಠದಡಿಯಲ್ಲಿರಿಸಿ ಇಪ್ಪತ್ತು ವರುಷವಾಗಿತ್ತು. ತಾನು ಕೇಳಿದಾಗಲೆಲ್ಲಾ ಅದನ್ನು ತಂದು ಕೈಮುಟ್ಟಿ ನಮಸ್ಕರಿಸಿ, ಆತನಿಗೆ ತೋರಿಸುತ್ತಿದ್ದಳು. ಅವರ ಜೀವಮಾನದಲ್ಲಿ ಧೀರ ಗಳಿಸಿದ್ದದೊಂದೇ. ಅದೂ ಮದುವೆಯಾಗುವ ಮುನ್ನದ ಹುರುಪು, ಉತ್ಸಾಹಗಳಲ್ಲಿ ಈಗ ಸುಧಾರಿಸಿದ ಜಗತ್ತಿನಲ್ಲಿ ಆತನ ಬಲವಾದ ತೋಳುಗಳಿಗೆ ಸ್ಥಾನವಿಲ್ಲ. ಎಲ್ಲ ಯಂತ್ರಗಳು ಆವರಿಸಿಕೊಂಡಿವೆ. ಒಮ್ಮೆ ಎಲ್ಲಾದರೂ ಕೆಲಸ ಬಂದರೆ, ಅವನಿಗೂ ಸಾಕಾಗಿಹೋಗುತ್ತೆ. ಕೇಳಿದರೆ, "ಅಷ್ಟು ಕೆಲಸಮಾಡ್ದೆ ಮಾಡ್ದೆ ಕೈಗೆಲ್ಲಾ ಬಡ್ಡು ಹೇಳಿ ಹೋಗಿದೆ.' ಎನ್ನುತ್ತ ಮುರಿ ತೆಗೆಯುತ್ತಿದ್ದ.

ಅಂತೂ ಬೆವರುವ ಕೈಗಳಿಂದ ಕೊನೆಯುಗಳಿಗೆಯಲ್ಲಿ ಔಷಧಿಗಾದರೂ ಉಪಯೋಗಕ್ಕೆ ಬಿದ್ದೀತೆಂದು ಬಯಸಿದ ಧೀರ ಅಂದು ಕಳ್ಳನಂತೆ ನಡುಗುವ ಕೈಗಳಿಂದ ಯಾಂತ್ರಿಕವಾಗಿ ಅಲ್ಲಿಂದ ಎತ್ತಿ ಪಂಚೆ ತುದಿಗೆ ಸುತ್ತಿ ಮನೆಯ ಹೊರಗೆ ಬಂದು, ಸುಬ್ಬಿಯೊಡನೆ ಹೇಳಿ ಹೊರಟಿದ್ದ—

ಈಗ ರಾಯರು, "ಹಣ ಕೇಳಲಿಕ್ಕೆ ಬಂದಿದ್ಯಾ" ಎಂತ ಅಣಕವಾಡಿದಾಗ ಅವನಿಗೆ ನೆನಪಾಯ್ತು ತಾನು ಬಂಗ್ಲೆಯಿಂದ ಬಂದಿಲ್ಲ ರಾಯರೇ, ಇದು ನೋಡಿ' ಎಂದು ಎದ್ದು ಪಂಚೆಯ ತುದಿಗೆ ಕೈ ಹರಡಿಸಿ ಗಂಟುಗಳನ್ನು ಬಿಚ್ಚತೊಡಗಿದ.

"ಓಹೋ, ವಜ್ರ ವೈಡೂರ್ಯದ ಹೊರೆ ತಂದಿರ ಬೇಕು. ನನಗೆ ಅದೆಲ್ಲಾ ಗೊತ್ತಿಲ್ಲ. ನಿನ್ನ ಕೆಲಸ ಇವತ್ತು ಆಗುವಂತಿಲ್ಲ. ನನಗೆ ಅಣ್ಣ ಯಾವಾಗ ಬರುತಾನೆಂತ ಚಿಂತೆ. ಏನು ಗಲಾಟೆಯಾಯ್ತೊ ....ಏನೋ".

"ಅಲ್ಲಾ ರಾಯರೇ, ಚಿನ್ನ ತಂದಿದ್ದೇನೆ ಇಟ್ಟುಕೊಂಡು ರೂ ೧೫ ಕೊಡ್ರಿ.' ಧೀರ ಧೈರ್ಯದಿಂದ ಹೋಗಿ, ರಾಯರ ಮುಂದೆ ಕೈನೀಡಿದ. ಅವನಿಗೆ ಗೊತ್ತು; ಅಷ್ಟು ಮಾಡದಿದ್ದರೆ, ಅವರು ಸೀದಾ ಒಳಗೆ ಹೋಗುತ್ತಾರೆ, ತಾನು ಮತ್ತೆ ಮನೆಯ ದಾರಿ ಹಿಡಿಯಬೇಕಾಗುತ್ತೆ ಎಂತ.

"ಓಹೋ ಚಿನ್ನದ ಮಾಂಗಲ್ಯವಲ್ಲಾ ...ಅಂದರೆ ಯಾರ ಕುತ್ತಿಗೆಗೊ ಕಕ್ಕಿ ಕೊಟ್ಟು ನಿನ್ನ ಜೊತೆಗೆ ನಮ್ಮನ್ನು ರಾಗಿ ಮುದ್ದೆ ತಿನ್ನಿಸಲು ಒಯ್ಯುವೆಯೆಂತ ಮನಸ್ಸು ಮಾಡಿರಬೇಕು, ಅಣ್ಣ ಮನೆಗೆ ಬರುವಾಗ ಇತ್ತಲಾಗೆ ತಮ್ಮ ಹೊರಟು ನಿಲ್ಲಲಿ ಅಲ್ವಾ?'

ಧೀರನಿಗೆ ಸಿಟ್ಟು ಬಂತು. ಮನಸ್ಸಿನೊಳಗೆ 'ಥೂ' ಎಂದುಕೊಂಡ. ಅಲ್ಲ, ಇಷ್ಟು ಕಷ್ಟದಲ್ಲಿ ಯಾರಾದರೂ ಆತನ ಬಳಿ ಬಂದು ಮರೆ ಹೋಗಿದ್ದರೆ, ಧೀರ ಜೀವಕ್ಕೆ ಜೀವ ಕೊಡುತ್ತಿದ್ದ. ಅಂತಹ ಸಂದರ್ಭವನ್ನು ಧೀರ ಎದೆಗುಂದದೆ ಎದುರಿಸುತ್ತಿದ್ದ. ಈ ಓದುವ, ಓದಿದವರೇ ಹೀಗೆ—ಪ್ರತಿಯೊಂದಕ್ಕೂ ಸಂದೇಹ ಪ್ರತಿಯೊಂದಕ್ಕೂ ಹಠವಾದ, ಪ್ರತಿಯೊಂದಕ್ಕೂ ಬೆದರಿಕೆ—ಇವೇ ಅವನಿಗೆ ತನ್ನ ಹುಡುಗನನ್ನು ಶಾಲೆಗೇ ಹಾಕಬಾರದಿತ್ತೆಂದು ತೋರಿತು. ಮತ್ತೆ ಉತ್ತರವಿಲ್ಲದ ಪ್ರಶ್ನಾವಳಿಗಳು ಅವನ ತಲೆಯನ್ನು ಸುತ್ತಿದುವು. ಧೀರ ಅಲ್ಲೇ ಕುಳಿತ. ಅವನ ಪುಣ್ಯಕ್ಕೆ ಏನೋ ರಾಯರು ಒಳಗೆ ಬಂದರು. ಧೀರ ಎದ್ದುನಿಂತು ತಲೆ ತಗ್ಗಿಸಿ ನಮಸ್ಕರಿಸಿದ.

"ಹೂಂ" ಬಂದವರು ಒಳಗೇ ಸೀದಾ ಹೊಕ್ಕರು.

"ಏನಾಯ್ತಣ್ಣ?" ತಮ್ಮ ಓಡುತ್ತ ಹೊರಬಂದು ಕೇಳಿದ.

"ತಾಲೋಕು ಕಾಂಗ್ರೆಸ್ ಅಧ್ಯಕ್ಷರು ಬಂದರು. ಅವರೊಡನೆ ಹೀಗೆ ಹೀಗೆ ಎಂತ ಹೇಳಿದರೆ, ಈ ಚಳವಳಿಯನ್ನು ಹಿಂತೆಗೆದುಕೊಳ್ಳಿ ಎಂದರು. ನಾನಾಗ ಎಂದೆ, ಹಾಗಿದ್ದರೆ, ನೀವಿಲ್ಲಿತನಕ ಬರೋದೇ ಬೇಡಿತ್ತು. ನಿಮ್ಮ ದಾರಿ ನಿಮಗೆ ಎಂತ. ಆ ಮೇಲೆ ಮತ್ತೆ ನಾಲ್ಕು ಬಸ್ಸು ಬಂದುವು. ಅವುಗಳನ್ನೆಲ್ಲಾ ಎದುರುನಿಂತು ನಿಲ್ಲಿಸಿಯಾಯ್ತು. ಸಾವ್ಕಾರೆಷ್ಟು ಬಂದಿದ್ರೆ ಅವನಿಗೆ ಚಿಮಿಣಿ ಎಣ್ಣೆ ಸುರಿದು ಬೆಂಕಿ ಹಾಕ್ತಿದ್ರು ನೋಡು. ಜನರಿಗೆ ಅಷ್ಟು ರೊಚ್ಚಿಗೆದ್ದು ಹೋಗಿದೆ. ಮೈಲಿಗೆ ಒಂದು ನ.ಪೈ. ಹೆಚ್ಚಿಗೆ ಮಾಡ್ತಾರಂತೆ ಇವರು. ಲಾಭದ್ದೊಂದೇ ನೋಡ್ತಾರೆ, ನಮ್ಮ ಸಂಬಳ ಸವಲತ್ತು ಒಂದೂ ಅವರ ಕಣ್ಣಿಗೆ ಕಾಣುತ್ತಿಲ್ಲ. ತಡೆ. ಅವರು ಹೀಗೆ ಮಧ್ಯಾಹ್ನದ ಒಳಗೆ ನಿತ್ಯದ ಚಾರ್ಜನ್ನೇ ತಗೊಂಡು ಗಾಡಿ ಬಿಟ್ಟರೆ ಆಯ್ತು. ಇಲ್ಲದಿದ್ದರೆ ನಾಲ್ಕೂ ಬಸ್ಸುಗಳ ಭಸ್ಮವನ್ನು ಸಾವ್ಕಾರ್ರ ಮನೆಗೆ ಒಯ್ತೀವೆ."

ಧೀರ ತುಟಿ ಕಚ್ಚಿಕೊಂಡ. ರಾಯರ ತಲೆಯೂ ತನ್ನ ಹುಡುಗನಂತೆಯೇ ಕೆಟ್ಟಿದೆ ಎಂಬುದು ಅವನಿಗಾಗ ತಿಳಿಯಿತು. ಇಷ್ಟರಲ್ಲಿ ರಾಯರು ಪಾನೀಯ ಕುಡಿದು ಹೊರ ಬಂದು ಕಾಲಿಗೆ ಚಪ್ಪಲಿಗಳನ್ನು ಅಣಿಯಾಗಿಸುವಷ್ಟರಲ್ಲಿ ಧೀರ ಗಂಟಲು ಸರಿಮಾಡಿಕೊಂಡ.

'ರಾಯರೇ, ನನ್ನ ಮಗ ಇಂಗ್ಲಿಷ್ ಪರೀಕ್ಷೆಗೆ ಕೂತುಕೊಳ್ತಾನಂತೆ. ಹದಿನೈದು ರೂಪಾಯಿ ಇವತ್ತು ಸಂಜೆಯೊಳಗೆ ಹೈಸ್ಕೂಲಿಗೆ ತುಂಬ ಬೇಕಂತೆ. ಒಂದುಸಾರಿ ಸಹಾಯಮಾಡಿ. ಈ ವರ್ಷ ಒಂದು ಮಾಸಿಗೆ ಅಕ್ಕಿ ಜಾಸ್ತಿ ಹಾಕ್ತೇನೆ' ಎಂದ.

'ನೋಡು, ಕಿಸೆಯೆಲ್ಲಾ ಖಾಲಿಯಾದಾಗಲೇ ಬಂದೆ ಧೀರ. ನಾನೀಗ ದೊಡ್ಡ ಕೆಲಸಕ್ಕೆ ಹೊರಟು ನಿಂತಿದ್ದೇನೆ. ಮತ್ತೆ ನಿತ್ಯದಂತೆ ಪಿರಿ ಪಿರಿ ಎನ್ನ ಬೇಡ. ನಾಳೆ ನಾಡಿದು ಬಾ. ಎಲ್ಲ ನೋಡುವ.'

'ಇವತ್ತೇ ಕೊಂಡು ಬಾ. ನಾಳೆಗೆ ಎಂದರೆ ನಾ ಹೊರಟು ಹೋಗ್ತೇನೆ, ಪರೀಕ್ಷೆ ಆಗೋಲ್ಲ...ಮತ್ತೆ' ಎಂದಿದ್ದಾನೆ. ರಾಯರ ಹಿಂದೆಯೇ ತಾನೂ ಮೆಟ್ಟಿಲನ್ನಿಳಿಯುತ್ತ ಪದ್ಧತಿಯಂತೆ ಕೈ ತಿಕ್ಕುತ್ತ ಮೆಲ್ಲನೆಂದ ಧೀರ.

'ಹೂಂ....ನಿನಗೆ ನಿನ್ನದೇ ಕಥೆ. ನನಗೆ ನನ್ನದೇ ಚಿಂತೆ. ನೀನು ಸುಮ್ಮನೆ ಮನೆ ದಾರಿ ಹಿಡಿ. ನನಗೆ ಒಂದು ನಿಮಿಷ ಪುರುಸೊತ್ತಿಲ್ಲ, ಇವತ್ತು.' ಎಂದವರೇ ರಸ್ತೆಗೆ ಹಾರಿ, ಬೀಸುಗಾಲಿಂದ ನಡೆಯ ಹತ್ತಿದರು.

"ನಾನು ಬೇಕಾದ್ರೆ ಬಸ್ಸಿಗೆ ಬೆಂಕಿ ಹಾಕ್ತೇನೆ. ನೀವು ಇಷ್ಟೊಂದು ಉಪಕಾರ ಮಾಡಿ........" ಧೀರ ಜೀವಬಿಟ್ಟವನಾಗಿ ನುಡಿದ.

ರಾಯರಿಗೆ ಕೇಳಿಸಿತೋ ಇಲ್ಲವೋ...

ಕಲ್ಲಿನಂತೆ ನಿಂತ ಧೀರ, ರಾಯರನ್ನು ನೋಡುತ್ತಲೇ ಇದ್ದ. ಅವರ ಹಿಂದೆಯೇ ಲೋಕವೂ ಮರೆಯಾದಂತಾಗಿ, ಆತ ತಿರುಗಿ ಮನೆಯದಾರಿ ಹಿಡಿದ. ಹಸಿದ ಹೊಟ್ಟೆ, ನೊಂದ ಮನ, ಚೆದರಿದ ಮನಸ್ಸು; ಮಗನ ಚಿಂತೆ—ಇವೇ ಅವನನ್ನು ತುಸು ಬೇಗನೇ ಮನೆಯತನಕ ತಂದುವು.

ಅಂಗಿಯನ್ನು ಹಾಕಿನಿಂತ ಶಂಕರ "ಸಿಕ್ಕಿತೂ?" ಎಂದ. ಸುಬ್ಬಿಯೂ ಒಳಗಿನಿಂದ ಹೊರ ಬಂದಳು. ಅಲ್ಲದಿದ್ದರೆ ಪಂಚೆಯ ಗಂಟಿನಲ್ಲಿದ್ದ ಮಾಂಗಲ್ಯವನ್ನು ಬಿಚ್ಚಿಕೊಟ್ಟು ಏನಾದರೂ ಆಗಲಿ ಎಂದು ಆಸೆ ತೊರೆದು ಮಗನನ್ನು ಕಳಿಸುತ್ತಿದ್ದನೋ ಏನೋ, ಆದರೆ ಆಕೆಯ ಮುಂದೆ ಗಂಟು ಬಿಚ್ಚುವ ಧೈರ್ಯ ಕಠಿಣ ಮನ ಧೀರನದ್ದಲ್ಲ. ಕಲ್ಲಾಗಿ ನಿಂತ ಧೀರನನ್ನು ಕಂಡ ಶಂಕರ ತನ್ನ ಪ್ರಶ್ನೆಗೆ ತಾನೇ ಉತ್ತರಿಸಿಕೊಂಡ," ಇವತ್ತು ಪುರುಸೊತ್ತಿಲ್ಲ. ನಾಳೆ ಬಾ" ಎಂದ್ರು, ಎಂತ. ಇವರಿಗೆ ಹದಿನೈದು ರೂಪಾಯಿ ಒಳಗಿನಿಂದ ಎಣಿಸಿಕೊಡಲೂ ಪುರುಸೊತ್ತಿಲ್ಲ. ಕಲಿತು ಡಿಗ್ರಿ ಪಾಸಾಗಿ ಚೆನ್ನಾಗಿ ದುಡಿದವರು ನಮ್ಮವರ ಉದ್ಧಾರಕ್ಕಾಗಿ ಎಂತ ಸರಕಾರಕ್ಕೆ ಟೊಪ್ಪಿಹಾಕುವವರು. ಎಲ್ಲ ಗೊತ್ತಿದೆ. ನಾನಿವರ ಮನೆ ಮುಂದೆ ಹೋಗಿ ಸತ್ಯಾಗ್ರಹ ಮಾಡಿ ಹುಳುಕುಗಳನ್ನೆಲ್ಲಾ ಹೊರಗೆ ಹಾಕಬೇಕು. ನಮಗೆ ಕೊಟ್ಟ ಉಪದ್ರವವನ್ನು ಪ್ರಚಾರ ಮಾಡಬೇಕು. ಆಗ ತಿಳಿಯುತ್ತೆ—ಇವರ ಬಿಳಿ ಬಟ್ಟೆಯ ಒಳಗಿನ ಶುದ್ಧತೆ— ಇವರನ್ನೆಲ್ಲಾ ಹಸಿ ಹಸಿಯಾಗಿ ತುಂಡುಮಾಡಿ....! ಹಲ್ಲುಕಚ್ಚಿಕೊಂಡು ಸಿಟ್ಟು ನೋವುಗಳಿಂದ ಕಂಗೆಟ್ಟಿದ್ದ ಶಂಕರ ನೆರಮನೆ ಸುಬ್ಬ ಬಂದುದನ್ನು ಕಂಡು ಸ್ವಲ್ಪ ಉಗುಳು ನುಂಗಿಕೊಂಡ.

"ನೋಡು ಶಂಕರ, ನಾಲ್ಕು ಬಸ್ಸುಗಳಿಗೆ ಲಂಕಾದಹನ ಹಾಗೆ ಉರೀತ್ತಂತೆ....'

"ಹಾಂ, ಅಂದ್ರೆ, ಈಗ ಶಾಲೆಯತ್ತ ಹೋಗಲೂ ಸಾಧ್ಯವಿಲ್ಲ. ಯಾರನ್ನಾದರೂ ಸುಲಿಗೆ ಮಾಡಿಯಾದರೂ ಕಳ್ಳತನ ಮಾಡಿಯಾದರೂ ಹಣ ತುಂಬಲಿಕ್ಕೆ ಸಾಧ್ಯವಿಲ್ಲ... ಬಂದ್ಮೇಲು ಓಡಿ ಹೋಗುವನೆಂದ್ರೆ ಅಷ್ಟರಲ್ಲಿ ಸಮಯ ಮೀರಿ ಹೋಗುತ್ತೆ—ಇವರಿಗೆಲ್ಲಾ ಪುರಸ್ಕಾರ, ಸತ್ಯಾಗ್ರಹ ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ. ಒಂದು ಲಕ್ಷ ರೂಪಾಯಿ ಬೆಲೆಯ ಬಸ್ಸುಗಳಿಗೆ ಬೆಂಕಿ ಹಾಕಿ ಸುಟ್ಟ ಉದಾರ ಹೃದಯದ ಇವರು ಬಡ ರೈತನಿಗೆ ೧೫ ರೂಪಾಯಿ ಕಿಸಾಲು ಕೊಡಲಿಕ್ಕೆ ಹಿಂಜರೀತಾರೆ—ಕೊಡುಗೈ ಶೂರರು! ಅದೇ ಬೆಂಕಿಯನ್ನು ತಂದು ಇವರ ಶಾಂತಿ ನಿಲಯಕ್ಕೆ ಇಟ್ಟರೆ, ಉಳಿದ ಮುಂದಿನ ಯುವಕರಿಗೆ ಶಾಂತಿ ಸಿಕ್ಕೀತು"

ಏನೋ ಹೀಗೆಯೇ ತಲೆಗೆಟ್ಟ ಹುಚ್ಚರಂತೆ ಅರಚುತ್ತ ರೌದ್ರಾವತಾರ ತಾಳಿದ ಹುಲಿಯಂತೆ ಶಂಕರ ಕೆಳಗಿಳಿದು ರಾಯರ ಮನೆಯತ್ತ ಓಡಹತ್ತಿದ.

ಕಣ್ಣು ಕತ್ತಲೆ ಬಂದ ಧೀರ ಅಂತೇ ಕಲ್ಲಾಗಿ ನಿಂತಿದ್ದ. ಲೋಕವೇ ಅವನ ಕಣ್ಣಿಗೆ ಶೂನ್ಯವಾಗಿತ್ತು. ತನ್ನ ಹರಕು ಗುಡಿಸಲನ್ನಾದರೂ ನೋಡುವೆನೆಂದರೆ ಅವನಿಗೆ ಏಳಲಿಕ್ಕೇ ಆಗಲಿಲ್ಲ. ನೋವನ್ನೆಲ್ಲಾ ಹೊರಗೆಡಹುವಂತೆ ಭೋರೆಂದು ನಿಟ್ಟುಸಿರ್ಗರೆದು ಅಲ್ಲೇ ಕಲ್ಲಕಂಬಕ್ಕೊರಗಿ ಮಲಗಿದ.

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜವಿನಾಸ್ಯಾರ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಮದುವೆ ಸೀರೆ	1	0

ಅಪೂರ್ವ ಸಂದರ್ಭ !

ರೂ38-6-0ಯ ಈ ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ.30-0-0ಕ್ಕೆ ಕೊಡಲಾಗುವುದು.

ಬರೆಯಿರಿ:—

ನವಭಾರತ ಪುಸ್ತಕ ಭಂಡಾರ, ಉಡುಪಿ



ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸಾಟ್ರ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಕನ್ನಡ ಪುಸ್ತಕಗಳಿಗೆ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

NAVAYUGA
REGD. NO. M. 3619

UDIPI, THURSDAY
14-7-1960

LICENSE NO. 31
Licensed to Post without Prepayment

ವ್ಯಕ್ತಿ ಪರಿಚಯ

ಶ್ರೀ ವಿಮಲಪ್ರಸಾದ ಚಾಲಿಹ

ಅಸ್ಸಾಮದಲ್ಲಿ ಎದ್ದಿರುವ ಅಸ್ಸಾಮಿ—ಬಂಗಾಳಿ ಭಾಷಾ ವಿವಾದವನ್ನು ದಂಡೋಪಾಯದಿಂದಲೇ ಎದುರಿಸಬೇಕಾಗಿ ಬಂದ ಮುಖ್ಯಮಂತ್ರಿ ಚಾಲಿಹ ಉನ್ನತ ರಚನಾತ್ಮಕ ಕಾರ್ಯಕರ್ತರಾಗಿದ್ದಾರೆ.

ಭಾಷಾ ವಿವಾದದ ದೆಸೆಯಿಂದಾಗಿ ಕೆಲವು ಪ್ರಕಾರದ ಉಪದ್ರವಗಳನ್ನು ಎದುರಿಸಬೇಕಾಗಿ ಬಂದಿರುವ ಭಾರತದ ವಿವಿಧ ರಾಜ್ಯಗಳ ಮುಖ್ಯ ಮಂತ್ರಿಗಳಲ್ಲಿ ಅಸಾಮಿನ ಮುಖ್ಯ ಮಂತ್ರಿ ಶ್ರೀ ವಿಮಲ ಪ್ರಸಾದ ಚಾಲಿಹರೂ ಒಬ್ಬರು. ಶ್ರೀ ಚಾಲಿಹರು ೧೯೫೭ನೆ ದಶಂಬರದಿಂದ ಈ ಮುಖ್ಯ ನೂತನ ಪದವಿಯಲ್ಲಿ ರಾರಾಜಿಸುತ್ತಿದ್ದಾರೆ

ಅಸ್ಸಾಮದಲ್ಲಿರುವ ಭಾಷಾ ವಿವಾದವನ್ನು ಅಸಾಮಿ ಮತ್ತು ಬಂಗಾಳಿ ಭಾಷಾ ಭ್ಯಾಸಿಗಳ ವಿವಾದವೆಂದು ಕರೆದರೆ ತಪ್ಪಿಲ್ಲ. ಅಸಾಮದಲ್ಲಿ ಬಂದು ನೆಲೆಸಿಂತ ಬಂಗಾಳಿಗಳು ಬಂಗಾಳೀ ಭಾಷೆಯನ್ನೂ ರಾಜ್ಯ ಭಾಷೆಯಾಗಿ ಸ್ವೀಕರಿಸಬೇಕೆಂದು ವತ್ತಾಯ ತರುತಿದ್ದಾರೆ; ತಮ್ಮ ಜನಸಂಖ್ಯೆ ರಾಜ್ಯದ ಕೆಲವೆಡೆ ಸಾಕಷ್ಟು ಇದೆಯೆಂಬುದನ್ನು ಬಲವಾದ ಕಾರಣವನ್ನಾಗಿ ಮುಂದೊಡುತ್ತಾರೆ. ಆದರೆ, ಬಂಗಾಳಿಯರು ಅಲ್ಪ ಸಂಖ್ಯಾಕರೆಂದುಕೊಂಡು ಅವರ ಈ ಕೇಳಿಕೆಯು ಅನುಚಿತವೆಂದು ಅಸಾಮಿಯರು ತಿಳಿಯುತ್ತಾರೆ. ಈ ವಿವಾದವೇ ಬೆಳೆದು ಬಂದು ಈಗ 'ಉಪದ್ರವ' ಎನಿಸುವಷ್ಟು ಮುಂದುವರಿದಿದೆ. ಶ್ರೀ ಚಾಲಿಹರ ಸರಕಾರಕ್ಕೆ ಇದನ್ನಡಗಿಸಲು ಉಗ್ರೋಪಾಯಗಳನ್ನೇ ಕೈಗೊಳ್ಳಬೇಕಾಗಿ ಬಂದಿದೆ.

ಅಸಾಮದ ಮುಖ್ಯಮಂತ್ರಿಯಾಗಿದ್ದು ೧೯೫೭ರಲ್ಲಿ ಶ್ರೀ ವಿಷ್ಣುರಾಮ ಮೇಧಿಯವರು ನಿವೃತ್ತರಾದನಂತರ, ದಶಂಬರದಲ್ಲಿ ಶ್ರೀ ಚಾಲಿಹರು ಅಸಾಮ ಕಾಂಗ್ರೆಸ್ ವಿಧಾನ ಸಭೆಯ ನಾಯಕರಾಗಿ ಚುನಾಯಿಸಲ್ಪಟ್ಟರು. ಇದಕ್ಕೆ ಮೊದಲವರು ಅಸಾಮು ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಶ್ರೀ ಚಾಲಿಹರು ವಿಧಾನ ಸಭೆಯ ನಾಯಕರಾಗಿ ಚುನಾಯಿತರಾಗುವ ವೇಳೆ, ಸಭೆಯ ಸದಸ್ಯರಾಗಿರಲಿಲ್ಲ; ಅಲ್ಲದೇ ದ್ವಿತೀಯ ಸಾರ್ವತ್ರಿಕ ಚುನಾವಣೆಗಳಲ್ಲಿ ಇವರು ಪರಾಜಿತರಾಗಿದ್ದರು, ಆದರೂ ಕಾಂಗ್ರೆಸ್ ಪರಿಷ್ಕರ ವಿಶ್ವಾಸದಿಂದಾಗಿ ಮಾತ್ರ ಇವರು ನಾಯಕ ಪದವಿಯನ್ನಲಂಕರಿಸಿದ್ದರು. ಮುಂದೆ, ಮೂರು ಮಾಸಾನಂತರ, ಒಂದು ಉಪ ಚುನಾವಣೆಯಲ್ಲಿ ಸದಸ್ಯತ್ವವನ್ನು ಗಳಿಸಿಕೊಂಡರು.

ಶ್ರೀ ಚಾಲಿಹರವರು ರಾಜಕೀಯ ಕ್ಷೇತ್ರದಲ್ಲಿ ಸಂಘರ್ಷಣೆಗಿಂತ ರಚನಾತ್ಮಕ ಕಾರ್ಯಗಳಿಗೆ ಪ್ರಾಧಾನ್ಯವೀಯುತ್ತಾರೆ. ೧೯೧೨ರಲ್ಲಿ ಅಸಾಮದ ಶಿವಸಾಗರದಲ್ಲಿ ಜನಿಸಿದ ಶ್ರೀ ಚಾಲಿಹಾ ಪ್ರಾರಂಭಿಕ ವಿದ್ಯಾರ್ಜನಾನಂತರ, ಉಚ್ಚ ವಿದ್ಯಾಪ್ರಾಪ್ತಿಗಾಗಿ ಕಲಕತ್ತೆಗೆ ತೆರಳಿದರು. ಅಲ್ಲಿನ ಸಿಟಿ ಕಾಲೇಜಿನಲ್ಲಿ ಇಂಟರ್ ಸಾಯನ್ಸ್ ಓದುತ್ತಿರುವಾಗ, ೧೯೩೦ರ ರಾಷ್ಟ್ರೀಯ ಆಂದೋಲನವು ಭರದಿಂದ ಪ್ರಾರಂಭವಾಯಿತು; ಹೀಗಾಗಿ, ೧೯೩೦ರಲ್ಲಿ ಇದರಿಂದ ಆಕರ್ಷಿತರಾದ ಶ್ರೀ ಚಾಲಿಹರು ರಾಷ್ಟ್ರವಾಣಿಗೆ ಓಗೊಟ್ಟು ಕಾಲೇಜ ಮೆಟ್ಟಲಿಳಿದರು.

ಆಂದೋಲನದಲ್ಲಿ ಭಾಗವಹಿಸಿದ ಅಪರಾಧಕ್ಕಾಗಿ ವಿಧಿಸಲ್ಪಟ್ಟ ಆರು ತಿಂಗಳ ಶಿಕ್ಷೆಯನ್ನು ಅನುಭವಿಸಿ ಹೊರಬಂದ ಚಾಲಿಹರು ತಮ್ಮ ಸ್ವಬುದ್ಧಿಯಿಂದ ಸ್ವಯಂಚಾಲಿತ ಯಾಂತ್ರಿಕ ಚರಕವೊಂದನ್ನು ತಯಾರಿಸಿ, ಗಾಂಧೀಜಿಯವರಿಗಿತ್ತರು. ಇದರಿಂದ ಪ್ರಭಾವಿತರಾದ ಮಹಾತ್ಮರು ಶ್ರೀಯುತರ ರಚನಾತ್ಮಕ ಪ್ರವೃತ್ತಿಗೆ ತಲೆದೂಗಿ ಖಾದಿ ನಿರ್ಮಾಣದಲ್ಲಿ ವಿಶೇಷ ಅಧ್ಯಯನ ನಡೆಸುವ ಸಲುವಾಗಿ ಅವರನ್ನು ಬಿಹಾರಿಗೆ ಕಳಿಸಿದರು. ೧೯೩೨ರಲ್ಲಿ ಶ್ರೀಯುತರು ಅಖಿಲ ಭಾರತೀಯ ನೇಯ್ಗಾರರ ಸಂಘದ ಅಸಾಮ ಶಾಖೆಯ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು. ಅಸಾಮು ಸರಕಾರದ ಪ್ರಾದೇಶಿಕ ಗ್ರಾಮೀಣ ವಿಕಾಸ ಕಾರ್ಯದ ವೇತನ ಪಡೆಯದ ಸಂಘಟಕರಾಗಿಯೂ ದುಡಿದಿದ್ದರು. ಅಸಾಮ ಕೋ-ಅಪರೇಟಿವ್ ಬೇಂಕ್ ಮತ್ತು ಅಸಾಮು ಸಹಕಾರಿ ಕುಟೀರೋದ್ಯೋಗ ಸಂಘದ ಪ್ರಥಮ ಅಧ್ಯಕ್ಷರೂ ಆಗಿದ್ದರು.

೧೯೪೬ರಲ್ಲಿ ಅಸಾಮು ಪ್ರಾದೇಶಿಕ ಕಾಂಗ್ರೆಸಿನ ಕಾರ್ಯದರ್ಶಿಯಾದ ಶ್ರೀ ಚಾಲಿಹರು ಎರಡು ವರ್ಷಾನಂತರ ಅದರ ಅಧ್ಯಕ್ಷರಾದರು. ೧೯೫೨ರಲ್ಲಿ ನಡೆದಿದ್ದ ಒಂದು ಉಪ ಚುನಾವಣೆಯಲ್ಲಿ ಗದ್ದು ಲೋಕ ಸಭಾ ಸದಸ್ಯರೂ ಆದರು. ೧೯೫೩ರಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯು ಇವರನ್ನು ದೇಶದ ಪೂರ್ವ ಭಾಗದಲ್ಲಿ ರಚನಾತ್ಮಕಕಾರ್ಯಸಂಯೋಜಕರನ್ನಾಗಿ ನೇಮಿಸಿತು. ಕಾಂಗ್ರೆಸಿನ ೬೩ನೆಯ ಅಧಿವೇಶನದ ಸ್ವಾಗತಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಇಂದಿಗೂ ಶ್ರೀ ಚಾಲಿಹರು ನೂಲುವಿಕೆಯನ್ನು ಮನಃಪೂರ್ವಕವಾಗಿ ಮೆಚ್ಚುತ್ತಾರೆ; ಆದರಿಸುತ್ತಾರೆ. ಆಡಳಿತೆಯ ಕಾರ್ಯ ಭರದಿಂದ ಬಿಡುಗಡೆ ಹೊಂದಿದ ನಂತರ ಇವರು ಓದುತ್ತಾರೆ; ಇಲ್ಲವೇ ನೂಲುವುದರಲ್ಲೇ ತತ್ಪರರಾಗುತ್ತಾರೆ.

ಶ್ರೀ ಚಾಲಿಹರು ಮುಖ್ಯ ಮಂತ್ರಿಯಾಗಿ ಕಳೆದ ದಶಂಬರದಲ್ಲಿ ಮಂತ್ರಿ ಮಂಡಳಿಯ ವರಿಷ್ಠ ಸದಸ್ಯರಾಗಿದ್ದ ಶ್ರೀ ದೇವೇಶ್ವರ ಶರ್ಮಾರಿಂದ ಅವರ ಎಲ್ಲಾ ಖಾತೆಗಳನ್ನು ತಮ್ಮ ಕೈಗೆ ತೆಗೆದುಕೊಂಡಾಗ ಸುಮ ಕಠೋರರಾಗಿಯೇ ವರ್ತಿಸಿದರು. ಇದರಿಂದಾಗಿ ಶ್ರೀ ಶರ್ಮಾ ಪದತ್ಯಾಗವನ್ನೇ ಮಾಡಬೇಕಾಯಿತು. ಶ್ರೀ ಶರ್ಮಾರ ಮೇಲೆ ಒಂದು ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಹುರಿಯಾಳುವಿಗೆ ವಿರುದ್ಧವಾಗಿ ಕಾರ್ಯವೆಸಗಿದರು ಎಂಬ ಆರೋಪವನ್ನು ಹೊರಿಸಲಾಗಿತ್ತು. ಕಳೆದ ವರ್ಷವೇ ನವದೆಹಲಿಯಲ್ಲಾದ ಭಾರತ—ಪಾಕಿಸ್ತಾನ ಸೀಮಾ ಸಂಬಂಧಿತ ಸಮ್ಮೇಳನದಲ್ಲಿ ಶ್ರೀ ಚಾಲಿಹರೂ ಭಾಗ ವಹಿಸಿದ್ದರು.

ಶ್ರೀ ಚಾಲಿಹರು ಬದಪುರ ಮತದಾರ ಕ್ಷೇತ್ರದಿಂದ ಆರಿಸಿ ಬಂದಿದ್ದಾರೆ. ಈ ಕ್ಷೇತ್ರದಲ್ಲಿ ಬಂಗಾಳಿ ಮತದಾರರ ಸಂಖ್ಯೆಯು ಬಹಳವಿರುವುದು. ಅಸಾಮಿ ಭಾಷೆಯಾಡುವ ಶ್ರೀ ಚಾಲಿಹರು ಈ ಕ್ಷೇತ್ರದಲ್ಲಿ ಆರಿಸಲ್ಪಟ್ಟಿರುವುದು ಬಂಗಾಳಿಗಳಿಗೆ ಇವರ ಮೇಲಿನ ವಿಶ್ವಾಸವನ್ನು ಪ್ರದರ್ಶಿಸುತ್ತದೆ. ಆದರೆ, ಈಗ ಅಲ್ಲಿ ಎದ್ದಿರುವ ಗೊಂದಲಗಳನ್ನು ಅಡಗಿಸುವ ಸಲುವಾಗಿ ದಂಡೋಪಾಯವನ್ನೇ ಅವರು ಅಧರಿಸಬೇಕಾಗಿ ಬಂದಿದೆ.

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘ

ಬಂಟರ ಯಾನೆ ನಾಡವರ ಸಂಘದ ೧೯೬೦ನೆ ವರ್ಷದ ವಾರ್ಷಿಕ ಮಹಾ ಸಭೆಯು ತಾ. ೨೨—೫—೬೦ ರಂದು ಪುತ್ತೂರಿನಲ್ಲಿ ಶ್ರೀ ಸಿ. ಎಸ್ ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಆ ಸಭೆಯಲ್ಲಿ ಶ್ರೀ ಶೆಟ್ಟರು ಮಾಡಿದ ಅಧ್ಯಕ್ಷ ಭಾಷಣವು ಪ್ರಕಟಣೆಯ ಬಗ್ಗೆ ನಮಗೆ ಬಂದಿರುತ್ತದೆ. ಆದರೆ ಈ ಭಾಷಣವು ನಮ್ಮ ಕೈಸೇರುವಾಗ ತೀರ ತಡವಾದುದರಿಂದ ಆ ಭಾಷಣದಲ್ಲಿ ಉಲ್ಲೇಖಿತವಾದ ಮುಖ್ಯ ವಿಷಯಗಳನ್ನು ಮಾತ್ರ ಪ್ರಕಟಿಸುತ್ತೇವೆ. ಸಂ ನ

ಕೆಲವು ಮುಖ್ಯ ವಿಷಯಗಳು

೧. ಗ್ರಾಮ ಗ್ರಾಮಗಳಲ್ಲಿ ಯುವಕ ನಾಯಕರನ್ನು ತರಬೇತಿಗೊಳಿಸಿ ಸಮಾಜದಲ್ಲಿ ಒಗ್ಗಟ್ಟನ್ನು ಬಲಪಡಿಸಬೇಕು.

೨. ವಿದ್ಯಾ ಕ್ಷೇತ್ರದಲ್ಲಿ ಸಂಘವು ದುಡಿದಂತೆ ಸಾಮಾಜಿಕ ಕ್ಷೇತ್ರದಲ್ಲಿಯೂ ದುಡಿಯಬೇಕು.

೩. ಕೇರಳದ ನಾಯರ್ ಸಂಸ್ಥೆಯನ್ನು ಬಲಪಡಿಸಿದ ವಿಧಾನ ಹೇಗೆಂಬುದನ್ನು ಅರಿತುಕೊಳ್ಳಲು ಒಂದು ಸಮಿತಿಯನ್ನು ಕಳಿಸಬೇಕು.

೪. ಸಂಘದ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿ, ಸಂಘದ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು.

೫. ಗ್ರಾಮಗಳಿಂದಲೂ ಪ್ರತಿನಿಧಿಗಳು ಬರುವಂತೆ ಮಾಡಿ, ಗ್ರಾಮಾಭಿವೃದ್ಧಿಯತ್ತಲೂ ಸಂಘವು ಗಮನಹರಿಸಬೇಕು.

೬. ವಿಜಯಾ ಬೇಂಕ್ ತನ್ನ ಕಾರ್ಯ ಕ್ಷೇತ್ರವನ್ನು ವಿಸ್ತರಿಸಬೇಕು.

೭. ಕೈಗಾರಿಕಾ ಯೋಜನೆಯಲ್ಲಿ ಸಮಾಜವು ದುಡಿಯಬೇಕು.

೮. ಅಳಿಯ ಸಂತಾನ ಮಸೂದೆಯಿಂದಾಗುವ ಕಷ್ಟನಷ್ಟಗಳನ್ನು ಒಂದು ಸಮಿತಿಯ ಮೂಲಕ ತೀರ್ಮಾನಿಸಬೇಕು.

೯. ಅಧಿಕ ಆಹಾರೋತ್ಪತ್ತಿಗಾಗಿ ದುಡಿಯಬೇಕು.

೧೦. ಜಿಲ್ಲೆಗೊಂದರಂತೆ ಅನಾಥಾಲಯವನ್ನು ತೆರೆಯಬೇಕು.

೧೧. ಸಂಘದ ಆಶ್ರಯದಲ್ಲಿ ಸಂಘದ ಕಾರ್ಯಕಲಾಪಗಳ ವಿವರವುಳ್ಳ ಪತ್ರಿಕೆಯೊಂದನ್ನು ಹೊರಡಿಸಬೇಕು.

೧೨. ಮಹಿಳೆಯರಿಗೆ ಸೇವಾವಕಾಶ ಒದಗಿಸಬೇಕು.

೧೩. ದಿ| ಎ. ಬಿ. ಶೆಟ್ಟರ ಸ್ಮಾರಕ ನಿಧಿಗೆ ಮುಕ್ತಹಸ್ತದಿಂದ ಸಹಾಯ ಮಾಡಬೇಕು.

೧೪. ಸಂಘವು ನಡೆಸಿಕೊಂಡು ಬರುತ್ತಿರುವ ಶಿರ್ವಾದ ಹೈಸ್ಕೂಲು ಹಾಗೂ ಪ್ರಾಥಮಿಕ ಶಾಲೆಗಳ ಆಡಳಿತೆಯ ಬಗ್ಗೆ ಸಹಕಾರ ನೀಡಬೇಕು.

ಹೇಗೆ . . . . . ?

ಮಾವಿನ ಕಾಯಿಯೊಂದು ಇಂದು ಕಾಯಿಯಾಗಿರಬಹುದು; ಅದನ್ನು ಕೆಲವು ದಿನಗಳ ವರೆಗೆ ಇರಗೊಡಿರಿ. ಅದರಲ್ಲೊಂದು ವಿಚಿತ್ರ ಬದಲಾವಣೆಯಾಗಿ ಅದು ಬಣ್ಣ ರುಚಿಗಳಿಂದ ಕೂಡಿದ ಹಣ್ಣಾಗುವುದು.

ಹಣವೂ ಹಾಗೆಯೇ

ಹಣವನ್ನು ಉತ್ತಮ ಉದ್ಯಮಗಳಲ್ಲಿ ತೊಡಗಿರಿ. ಬಡ್ಡಿಗೆ ಬಡ್ಡಿ ಕೂಡಿ ಅದು ವೃದ್ಧಿಯಾಗುತ್ತಿರಲಿ. ಹೀಗೆ ೧೦೦೦ ರೂಪಾಯಿಗಳಂತೆ ೩೫ ವರುಷಗಳಲ್ಲಿ ವಿನಿಯೋಗಿಸಿದಿರೆನ್ನೋಣ. ಆಗ ಅದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿ ವೃದ್ಧಿಯಾಗಬಲ್ಲುದು.

ಹೀಗೆ ಅಧಿಕ ಪ್ರತಿಫಲ ಬರುವಂತೆ ಹೇಗೆ ತೊಡಗಬೇಕು?

. . . . ಇದಕ್ಕಾಗಿಯೇ

ಇನ್ವೆಸ್ಟರ್ಸ್ ಏಜನ್ಸಿ

(ರೂ. ೨೫ರಿಂದಲೂ ನೀವು ಪ್ರಾರಂಭಿಸಬಹುದು)

ವಿವರಗಳಿಗೆ:

ಇನ್ವೆಸ್ಟರ್ಸ್ ಏಜನ್ಸಿ ಡಿಪಾರ್ಟ್‌ಮೆಂಟ್

ಸಿಂಡಿಕೇಟ್ ಬೇಂಕ್

NAVAYUGA' WEEKLY is in the list of periodicals and Newspapers approved or use in Secondarys School as per proceedings Roc. No. 466 N/50 date 2-12-1950 of the Director of public Instruction Madras.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೪೬. 21-7-1960 Vol. 39. No. 46

ಕ್ಷ-ಕಿರಣ

ಹರಿತಾಳ, ಪ್ರತಿಭಟನೆ ಮತ್ತು ಸಭಾತ್ಯಾಗಗಳು

ಅನಾದಿಕಾಲದಿಂದಲೂ ತನ್ನ ಪರಂಪರೆಯನ್ನು ಕಾಯ್ದುಕೊಂಡು ಬಂದ ಹರಿತಾಳ, ಪ್ರತಿಭಟನೆ ಮತ್ತು ಸಭಾತ್ಯಾಗಗಳು ದಿನೇದಿನೇ ಬೆಳೆದು ಹರಡುವ ರೋಗಗಳು. ಇವಕ್ಕೆ ಉಪಶಮನರೂಪವಾದ ಚುಚ್ಚುಮದ್ದನ್ನು ಯಾವ ವೈಜ್ಞಾನಿಕನು ಸಂಶೋಧಿಸಿದ್ದಾನೆ?

ಆಧಾರ: "ನವಭಾರತ ಟೈಮ್ಸ್"

ವಿಜ್ಞಾನವು ದೊಡ್ಡ ದೊಡ್ಡ ಬಾಂಬು ಮತ್ತು ರಾಕೆಟುಗಳನ್ನು ನಿರ್ಮಿಸಿದೆ; ಅಸಾಧ್ಯವೆಂದು ತಿಳಿಯಲಾದ ರೋಗಗಳಿಗೆ ಚಿಕಿತ್ಸೆಯನ್ನು ಸಂಶೋಧಿಸಿದೆ; ಕೆಲವೊಂದು ಸಂದರ್ಭಗಳಲ್ಲಿ ಮೃತರಾದವರನ್ನೂ ಸಜೀವಗೊಳಿಸಿದೆ ಅಲ್ಲದೇ ಸಜೀವಿಗಳನ್ನೂ ಕೊಂದುಹಾಕಿದೆ. ವೈಜ್ಞಾನಿಕನು ಅಂತರಿಕ್ಷದಲ್ಲಿ ವಿಹರಿಸತೊಡಗಿದ್ದಾನೆ; ಪಾತಾಳದ ಒಂದು ಮೂಲೆಯಿಂದ ಇನ್ನೊಂದು ಮೂಲೆಯವರೆಗೆ ತಿರುಗಾಡಿದ್ದಾನೆ; ಹೀಗಿದ್ದರೂ ಹರಿತಾಳಕ್ಕೆ ತಕ್ಕುದಾದ ಒಂದೇ ಒಂದು ಸಿದ್ಧೌಷಧ ಅಥವಾ ಇಂಜೆಕ್ಷನ್ ಇದುವರೆಗೂ ಸಂಶೋಧಿಸಲ್ಪಡಲಿಲ್ಲವೆಂಬುದು ಬಹಳ ಆಶ್ಚರ್ಯದ ಸಂಗತಿ.

ಹರಿತಾಳ ರೋಗವು ಮೊತ್ತಮೊದಲು ಕೆಲವು ಮುಖಂಡರ ಮೇಲೆ ಆಕ್ರಮಣ ನಡೆಸುತ್ತದೆ. ಯಾವನೇ ಒಬ್ಬ ನಾಯಕನ ಮುಂದಾಳುತನದ ಬಗ್ಗೆ ಅಸಮಾಧಾನ ನಡೆಯಿತೆಂದರೆ, ಅವನು ಮಣ್ಣಿನಿಂದ ಎಣ್ಣೆಯನ್ನು ಹೊರಡಿಸಿ ಹರಿತಾಳವಾಚರಿಸುವತ್ತ ಒಲಿದು, ತನ್ನ ನಾಯಕತ್ವದತ್ತ ನವ ಪ್ರಕಾಶ ಬೀರುವಂತೆ ಮಾಡುವ ಪ್ರಯತ್ನದಲ್ಲಿ ತೊಡಗುತ್ತಾನೆ. ಧಾನ್ಯ ತುಟ್ಟಿಯಾಯಿತು, ಪದಾರ್ಥಗಳ ಬೆಲೆಯೇರಿತು ಮೊದಲಾದ ಕಾರಣಗಳನ್ನು, ಹಾಲು—ಮಜ್ಜಿಗೆಗಳ ಗುಣ ವರ್ಣನೆಯನ್ನು ಮಾಡಲೇನೇ, ಆತ ಮುಂದೂಡುತ್ತಾನೆ.

ನಾಯಕರಲ್ಲವಾದರೂ ನೀವು ಈ ರೋಗದ ಹಿಡಿತದಲ್ಲಿ ಸಿಕ್ಕಿ ಬೀಳುತ್ತೀರಿ. ನೀವು ವರ್ಷದಲ್ಲಿ ನೂರಒಂದು ದಿನ (ಒರ್ವ ಸರಕಾರಿ ಕೆಲಸಗಾರ ಒಂದು ವರ್ಷದಲ್ಲಿ ಇಷ್ಟೇ ದಿನ ಕೆಲಸ ಮಾಡುತ್ತಾನೆ) ಅವೇ ಫೈಲುಗಳನ್ನು ಮಗುಚುತ್ತಾ ಇರಬಹುದು; ಮುಂಜಾವಿನಿಂದ ಸಂಜಾವದ ವರೆಗೆ ಅದೇ ಪತ್ನಿಯ ಮುಖದಿಂದ ಹೊರಬೀಳುವ ಏಕರಾಗ ಸಂಗೀತವನ್ನೇ ಕೇಳುತ್ತ ಇರಬಹುದು; ಮಕ್ಕಳ ಅನಾರೋಗ್ಯ ಮತ್ತು ಆಳುಗಳ ಹಳೆಯ ಕರ್ಣ ಕಠೋರವೆನಿಸುವ ಕೂಗುಗಳನ್ನು ಸಹಿಸಲು ಅಸಾಧ್ಯರಾಗಿರಬಹುದು; ಇಂದಿಗೆ ಹದಿನೈದು ವರ್ಷ ಮೊದಲು ಕೊಂಡುಕೊಂಡಿದ್ದ ಸೈಕಲು ಆಗ ಈಗ ಕೆಟ್ಟು ಹೋಗುತ್ತಿರುವುದರಿಂದ ನೀವು ತಲೆ ಕೆಡಿಸಿಕೊಂಡಿರಬಹುದು. ಹೀಗೆ, ಇವೆಲ್ಲವುಗಳ ಅಥವಾ ಒಂದೊಂದರ ಪ್ರಭಾವದಿಂದ ನೀವು ಒಂದು ದಿನ ಮಧ್ಯ ರಾತ್ರಿಯಿಂದ ಹರಿತಾಳನಾಚರಿಸುವ ದೃಢ ನಿರ್ಧಾರವನ್ನು ಮಾಡಿಯೇ ಮಾಡುತ್ತೀರಿ. ನೀವು ಹರಿತಾಳಕ್ಕೆ ತೊಡಗುವ ಮೂಲೋದ್ದೇಶ ಇತರರಿಗೆ ತೊಂದರೆಯಾಗಬೇಕೆಂದಿರುವುದಿಲ್ಲ, ಆದರೆ, ನಿಮ್ಮ ಎಲ್ಲ ಚಿಂತೆಗಳೂ ಕೆಲವು ದಿನಗಳ ಮಟ್ಟಿಗಾದರೂ ದೂರ ಓಡಿ ಹೋಗಿ ನೆಮ್ಮದಿಯಿಂದ ಬಾಳುವ ಆಶಯವನ್ನು ನೀವು ಇಟ್ಟುಕೊಳ್ಳುತ್ತೀರಿ. ಇಂತಹ ಪರಿಸ್ಥಿತಿಯಲ್ಲಿಯೇ (ಸಂಧಿಗ್ಧ) ನಿಮ್ಮನ್ನು ಹರಿತಾಳದ ಕೀಟಾಣು ಕಚ್ಚಿ ಬಿಡುವ ಸಾಹಸ ನಡೆಸುವುದು.

ರೋಗವು ಬಲವಂತವಾಗುತ್ತ ಬರುತ್ತಿದೆ. ಪ್ರತಿಯೊರ್ವನೂ ಹರಿತಾಳ, ಪ್ರದರ್ಶನ ಮತ್ತು ಸಭಾತ್ಯಾಗಗಳಿಗೆ ಬಲಿ ಬೀಳುತ್ತಾನೆ. ಕೆಲಸಗಾರನಿಗೆ ಕೆಲಸದ ಕೋಣೆಯಲ್ಲಿ ಸೆಖೆಯಾಯಿತೆಂದರೆ, ಆತ ಹರಿತಾಳದ ಬೆದರಿಕೆ ಹಾಕುತ್ತಾನೆ. ಸರಿಯಾದ ವಾತಾಯನ ವ್ಯವಸ್ಥೆಯಿದ್ದು ಗಾಳಿ ಬರುವ ಕೋಣೆಯಲ್ಲಿ ಆತನನ್ನು ಹಾಕಿದರೆ, ಅವನು ತನ್ನ ಸಹಚರರನ್ನು ಏಕತ್ರಗೊಳಿಸಿ, ಮಾಲಿಕನ "ಪ್ರಚ್ಛನ್ನ ಷಡ್ಯಂತ್ರ"ದ ಬಗ್ಗೆ ಎಚ್ಚರಿಕೆ ನೀಡುತ್ತಾನೆ. ಹೊತ್ತಿಗೆ ಸರಿಯಾಗಿ, ಪತ್ನಿಯಾದವಳಿಗೆ ಸೀರೆಯನ್ನು ತಂದ ಕೊಡದೆ ಹೋದರೆ, ಆಕೆಯ ಪ್ರತಿಭಟನಾ ಭಂಗಿಯನ್ನು ಹೇಗೆ ವರ್ಣಿಸಬೇಕು? ಒಬ್ಬ ಹುಡುಗ (ನಿಮ್ಮ ಮಗನೆಂದೇ ತಿಳಿದುಕೊಳ್ಳಿ; ಇಲ್ಲವೇ ಮಗಳೂ ಆಗಬಹುದು) ನಿಗೆ ಪಾಠ ಓದುವುದಿಲ್ಲವೇ ಕೆಂದು ಎಳ್ಳಷ್ಟು ಗದರಿಸಿ ನೋಡಿರಿ, ಆತನೂ—ಹರಿತಾಳಕ್ಕೆ ತೊಡಗುತ್ತಾನೆ. ಅವನು ಮಾತಾಡದೆ [ಮೌನವ್ರತಾಚರಣೆಯಲ್ಲಿ ನಿಮಗ್ನನಾಗುತ್ತಾನೆ; ಅನ್ನ ಸತ್ಯಾಗ್ರಹಿಯಾಗುತ್ತಾನೆ; ಶಾಲೆಗೆ ಹೊರಡದೆ ಅದಕ್ಕೆ ಬಹಿಷ್ಕಾರ ಹಾಕುತ್ತಾನೆ. ಇಲ್ಲಿಗೇ ಮುಗಿಯಲಿಲ್ಲ, ಯಾವುದೇ ನಾಯಿ — ಈಗಿನ ಕಾಲ ಬಹು ಕೆಟ್ಟು ಹೋಗಿದೆ....ಯನ್ನು ದುರುಗುಟ್ಟಿ ನೋಡಿರಿ— ಒಂದೇ ಕ್ಷಣದಲ್ಲಿ ನಿಮ್ಮ ಮೇಲೆ ಸೇಡು ತೀರಿಸುವ ಸಲುವಾಗಿ ತನ್ನ ಸಂಗಾತಿಗಳನ್ನೆಲ್ಲಾ ಕರೆಕರೆದು, ನಿಮ್ಮ ಮುಂದೆ "ನಿಮ್ಮ ಸರ್ವಸ್ವ ಮಣ್ಣುಪಾಲಾಗಲಿ, ಇನ್ಕಿಲಾಬ್ ಜಿಂದಾಬಾದ್" ಎಂದು ಬೊಗಳುತ್ತ ವಿರತೊಡಗುತ್ತದೆ. ಜತೆಗಾರರು ಅದನ್ನೇ ಮರುಘೋಷಿಸುತ್ತಾರೆ— ಇದನ್ನು ಅರ್ಥಮಾಡಿಕೊಳ್ಳುವುದು, ಅಥವಾ ಮಾಡದಿರುವುದು ಮಾತ್ರ ನಿಮ್ಮ ಪಾಲಿಗೆ ಸೇರಿದುದು.

ಪ್ರತಿಯೊಂದು ಹರಿತಾಳ ಮತ್ತು ಪ್ರದರ್ಶನಗಳಿಗೆ ತಮ್ಮದೇ ಆದ ಒಂದು ಗೌರವವಿಧಾನವಿದೆ. ಇಪ್ಪತ್ತನೆಯ ಶತಮಾನದಲ್ಲಿ ಹಲವಾರು ಮಾದರಿಯ ಹರಿತಾಳಗಳನ್ನು ಬಹು ಸುಲಭದಲ್ಲಿ ಸಂಶೋಧಿಸಿ ಕಂಡುಕೊಂಡಿದ್ದಾರೆ. ಗಡ್ಡ ಬೋಳಿಸದೆ ಬೆಳೆಸುವುದು, (ತನ್ನನ್ನು ಅಥವಾ ಇತರರನ್ನು) ಬೋಳಿಸುವುದು, ಚೆನ್ನಾಗಿ ತಿಂದು ಕುಡಿಯುವುದು, ಲೇಖನಿ ಬಿಸುಟು, ಹೃದಯ ತೊರೆದು ಕಿವಿ ಮುಚ್ಚಿಕೊಳ್ಳುವುದು ಇತ್ಯಾದಿ ಇತ್ಯಾದಿಗಳನ್ನು ಇಲ್ಲಿ ಉದಾಹರಿಸಬಹುದು.

ಹರಿತಾಳ ಮತ್ತು ಪ್ರದರ್ಶನಗಳು ಭಾರತಕ್ಕೆ ಮಹಾತ್ಮಾ ಗಾಂಧಿಯವರಿತ್ತ ಕಾಣಿಕೆಯೆಂದು ಕೆಲವು ಅಲ್ಪಜ್ಞರು ಹೇಳುತ್ತಾರೆ. ಆದರೆ, ಇವರು ಮೂಲದಲ್ಲಿಯೇ ತಪ್ಪಿ ನಿದ್ದಿದ್ದಾರೆಂದು ವಿಷಾದಪೂರ್ವಕ ಅನ್ನಬೇಕಾಗಿದೆ. ಪ್ರತಿಯೊಂದು ಆಧುನಿಕ ಮತ್ತು ವೈಜ್ಞಾನಿಕ ವಸ್ತುಗಳು ವೇದ ಮತ್ತು ಶಾಸ್ತ್ರಗಳಲ್ಲಿಯೇ ದೊರೆಯುವುದೆಂಬುದು ಸಂಶೋಧನೆಯಿಂದ ವ್ಯಕ್ತವಾಗಿರುವಂತೆ ಹರಿತಾಳ ಮತ್ತು ಪ್ರತಿಭಟನೆಗಳು ಮೊದಲಾದುವು ಉಲ್ಲೇಖಗಳೂ ಪುರಾಣ,ಧರ್ಮಗ್ರಂಥ ಹಾಗೂ ಇತಿಹಾಸಗಳಲ್ಲಿ ಅಲ್ಲಲ್ಲಿ ಹಲವು ಬಾರಿ ಬಂದಿವೆ. ಇವುಗಳಿಗೆ ಆ ಕಾಲದಲ್ಲಿ ಹರಿತಾಳ ಅಥವಾ ಪ್ರತಿಭಟನೆ ಎಂಬ ನಾಮಕರಣ ಮಾಡದೆ ಇದ್ದಿದ್ದರೆ,ಅದಕ್ಕೆ ನಾವು ಜವಾಬ್ದಾರರಾಗುವುದರಲ್ಲಿ ತಿಲಾಂಶ ನ್ಯಾಯವಿರುವುದಿಲ್ಲ.

ರಾಮಾಯಣವು ಪವಿತ್ರ ಇತಿಹಾಸ ಕಾವ್ಯವಾಗಿದೆ ತಾನೆ? ಅದನ್ನೇ ತೆಗೆದುಕೊಳ್ಳಿರಿ. ಕೈಕೇಯಿಯು ಅನಶನವ್ರತ ಕೈಗೊಂಡು ರಾಮ ಪಟ್ಟಾಭಿಷೇಕಕ್ಕೆ ತನ್ನ ಪ್ರತಿಭಟನೆಯನ್ನು ಸೂಚಿಸಲಿಲ್ಲವೇ? "ಅರಸುಗಳಿಗಿದು ವೀರ, ದ್ವಿಜರಿಗೆ ಪರಮ ವೇದದ ಸಾರ, ಯೋಗೀಶ್ವರರ ತತ್ವ ವಿಚಾರ, ಮಂತ್ರಿಜನಕ್ಕೆ ಬುದ್ಧಿಗುಣ...." ಇತ್ಯಾದಿ ಇತ್ಯಾದಿಯಾಗಿ ಪ್ರಶಂಸಾಪಾತ್ರವಾದ ಮಹಾಭಾರತದಲ್ಲಿಯೂ ಈ ಬಗ್ಗೆ ಉಲ್ಲೇಖಗಳು ಇವೆಯೆಂದರೆ ನೀವು ತೋರ್ಬೆರಳನ್ನು ಮೂಗಿಗೇರಿಸಬಹುದು. ದ್ರೌಪದಿಯನ್ನು ದುರ್ಯೋಧನನು ತುಂಬಿದ ಸಭೆಗೆ ಎಳೆತರಿಸಿ ಆಕೆಗೆ ಅಪಮಾನ ಮಾಡಿದಾಗ, ದುರ್ಯೋಧನನ ಸೋದರರಲ್ಲೊಬ್ಬನಾದ ಪ್ರಶಾಂತನು ಆ ಬಗ್ಗೆ ತನ್ನ ಪ್ರತಿಭಟನೆಯನ್ನು ಸೂಚಿಸಿ ಕಿಂಚಿತ್ ಮುಹೂರ್ತದಲ್ಲಿಯೇ ಸಭಾತ್ಯಾಗವನ್ನೂ ಮಾಡಲಿಲ್ಲವೆ? ಅದೇ ಸಮಯದಲ್ಲಿ ಸತಿವ್ರತಾ ಶಿರೋಮಣಿ ದ್ರೌಪದಿ ಕೂಡ 'ಸತ್ಯಾಗ್ರಹ'ಕ್ಕೆ ತೊಡಗಿದ್ದಳು — ತನ್ನ ತಲೆಕೂದಲನ್ನು ಕೆದರಿ ಹಾಕಿ, ದುರ್ಯೋಧನನ ರಕ್ತದಿಂದ ಕೇಶ ಪಾಶವನ್ನು ತೊಳೆಯಬೇಕು; ಆ ಮೇಲೆ ತಲೆ ಬಾಚಬೇಕು—ಇದೇ ಅವಳ (ವೀರ ಪ್ರತಿಜ್ಞೆ) ಬೇಡಿಕೆ ಅಥವಾ ಕೇಳಿಕೆಯಾಗಿತ್ತು. ತನ್ನ ಬೇಡಿಕೆಯನ್ನಾಕೆ ಪರಮಾತ್ಮಾವತಾರನೆನಿಸಿದ ಶ್ರೀಕೃಷ್ಣನ ಮುಂದೆಯೇ ಇಟ್ಟು ಬಿಟ್ಟಳು. ಮುದಿಯ ಭೀಷ್ಮನಿಗೆ ಸೇನಾಧಿಪತ್ಯವನ್ನು ದುರ್ಯೋಧನನು ಕಟ್ಟಲು ಅದರ ಪ್ರತಿಭಟನಾರ್ಥವಾಗಿ ಕರ್ಣನೂ, ಕರ್ಣನಿಗೆ ಸೇನಾಧಿಕಾರವಿತ್ತುದರ ವಿರೋಧವಾಗಿ ಅಶ್ವತ್ಥಾಮನೂ ಯುದ್ಧರಂಗಕ್ಕೆ ಕಾಲಿರಿಸಲಾರೆವೆಂದು ಪ್ರತಿಭಟನಾರ್ಥವಾಗಿ ಹೊರ ಜಾರಿದುದನ್ನು ಮರೆಯುವುದು ಸಾಧ್ಯವಿಲ್ಲ. ಚಾಣಕ್ಯನಾದರೂ ನವನಂದರ ವಧೆಯ ಆಕಾಂಕ್ಷೆಯಿಂದ ತನ್ನ ಜುಟ್ಟನ್ನೇ ಬಿಚ್ಚಿ ಬಿಟ್ಟಿದ್ದಾನೆ. ವಿಭೀಷಣ ಮತ್ತು ಮಹಾರಾಣಾ ಪ್ರತಾಪಸಿಂಹರ ವಿರೋಧ ಪ್ರದರ್ಶನವನ್ನು ಕ್ಷುಲ್ಲಕವೆನ್ನುವುದು ಸಾಧ್ಯವಿಲ್ಲ. ಇದೇ ಮಾದರಿ ಇಂದಿಗೂ ತನ್ನ ಭವ್ಯವಾದ ಪರಂಪರೆಯನ್ನು ಕ್ರಮಪ್ರಾಪ್ತವಾಗಿ ಉಳಿಸಿಕೊಂಡು ಬಂದಿವೆಯಲ್ಲವೆ?

ಆದರೆ, ಇಂದು ಕೆಲವು ಸಂದರ್ಭಗಳು ವಿಚಿತ್ರವಿವೆ. ಇವಕ್ಕೆ ಹರಿತಾಳ ಮಾಡುವುದಾಗಲೀ, ಪ್ರತಿ ಭಟನೆ ಸೂಚಿಸುವು

(೧೩ನೇ ಪುಟ ನೋಡಿರಿ)

ವಿನೋದ ಕಥೆ

ಹೋಟೇಲು ಮಾಣಿಯ ತರ್ಕಶಾಸ್ತ್ರ

ಬಸ್ಸು ಹೊರಡುವ ಹದಿನೈದು ನಿಮಿಷದಲ್ಲಿ ಕಾಫಿಯಾದರೂ ಕುಡಿಯೋಣ ವೆಂದು "ಬಿ. ಎಸ್. ಎಚ್.' ಗೆ ತೆರಳಿದರೆ, ಅಲ್ಲಿ "ಎಚ್. ಎಮ್." ನೊಡನೆ ತರ್ಕಶಾಸ್ತ್ರ ವಿವೇಚನೆಗೆ ನಿರುಪಾಯನಾಗಿ ಕೈಹಾಕಲೇ ಬೇಕಾಯಿತು. ಇದರ ಪರಿಣಾಮವಾಗಿ ಇತ್ತ ಕಿಸೆಯೂ ಖಾಲಿಯಾಯಿತು; ಅತ್ತ ಬಸ್ಸೂ ಮಿಸ್ಸಾಯಿತು!

ಬರೆದವರು: ಶ್ರೀ ಪಾ| ಚಂದ್ರಶೇಖರ ಚಡಗ.

ಕೈಗಡಿಯಾರದ ಕಡೆಗೊಮ್ಮೆ ನೋಡಿಕೊಂಡೆ. ಆಗಲೇ ಗಂಟೆ ೬-೩೫ ಆಗಿತ್ತು. ಬಸ್ಸು ಹೊರಡುವುದು ೬-೪೫ಕ್ಕೆ ಎಂದು ನನಗೆ ಖಚಿತವಾಗಿ ಗೊತ್ತಿತ್ತು. ಇನ್ನೂ ಹತ್ತು ನಿಮಿಷಗಳಿವೆ. ಕಾರ್ಯಭಾರದಿಂದಾಗಿ ಮಧ್ಯಾಹ್ನ ಊಟ ಮಾಡಲೂ ಆಗಿರಲಿಲ್ಲ. ಹೊಟ್ಟೆ ಚುಂಯ್ ಚುಂಯ್ ಎನ್ನುತಿತ್ತು. ಆದುದರಿಂದ ಹೊಟ್ಟೆಗಿಷ್ಟು ಕಾಫಿ ಹೊಯ್ದುಕೊಳ್ಳೋಣವೆಂದು ಬಸ್ ಸ್ಟೇಂಡಿನ ಎದುರಿನಲ್ಲೇ ಇದ್ದ ಏಕಮೇವ ಹೋಟೇಲಿಗೆ ಧಾವಿಸಿದೆನು. "ಉಡುಪಿ ಬ್ರಾಹ್ಮಣರ ಕಾಫೀ ಕ್ಲಬ್" ಎಂಬ ಬೋರ್ಡು ಹೋಟೇಲಿನ ಎದುರು ತೂಗಾಡುತಿತ್ತು. (ಹೋಟೇಲಿನಿಂದ ಹೊರಬಂದ ವೇಳೆ ನನ್ನಲ್ಲಿ ಪ್ರಾಯಶಃ 'ಉಡಾಪಿ ಬ್ರಾಹ್ಮಣರ ಕಾಫೀ ಕ್ಲಬ್" ಎಂದು ಬರೆಯುವಾಗ ತಪ್ಪಾಗಿ ಹೀಗೆ ಬರೆದಿರಬೇಕು ಎಂಬ ಬಲವಾದ ಸಂದೇಹ ಹುಟ್ಟಿತ್ತು.) ಮೊದಲಿನಿಂದಲೂ ಸ್ವದೇಶ, ಸ್ವಗ್ರಾಮ, ಸ್ವರಾಜ್ಯ ಪ್ರೇಮಿಯಾದ ನಾನು "ಉಡುಪಿ ಬ್ರಾಹ್ಮಣರ ಕಾಫೀ ಕ್ಲಬ್" ಎಂಬುದನ್ನು ಓದಿ ಸಂತೋಷದಿಂದ ಹೋಟೇಲಿನೊಳಗೆ ಕಾಲಿರಿಸಿದೆ. ಖಾಲಿಯಾಗಿದ್ದ ಬೆಂಚೊಂದರ ಮೇಲೆ ಕುಳಿತು. ಎಚ್. ಎಂ. ಯನ್ನೇ ಎದುರುಗಾಣುತ್ತಾ ಕುಳಿತೆ. ಎಚ್. ಎಂ. ಎಂದೊಡನೆ ಹೆಡ್ ಮಾಸ್ಟರ್ ಎಂದು ಯೋಚಿಸಿ, "ಅರೇ! ಹೋಟೇಲಿನಲ್ಲಿ ಹೆಡ್‌ಮಾಸ್ಟರರನ್ನು ಕಾಯುವುದೆಂದರೇನು" ಎಂದೆನ್ನಬೇಡಿ. ಎಚ್. ಎಂ. ಎಂದರೆ ಹೋಟೇಲು ಮಾಣಿ ಎಂದರ್ಥ.

ನಾನು ಈ ಸಂಕ್ಷಿಪ್ತ ರೂಪವನ್ನು ತಿಳಿದುಕೊಂಡುದು ಹೇಗೆಂದು ಬಲ್ಲಿರಾ? ಒಮ್ಮೆ ಅಕಸ್ಮಾತ್ ನನ್ನ ಹಳೆಯ ಸಹಪಾಠಿ ವೆಂಕಟರಮಣ ಬಹುಕಾಲದ ಅನಂತರ ನನಗೆ ನೋಡಸಿಕ್ಕಿದನು. "ಈಗೇನು ಮಾಡುತ್ತಿರುವಿ?" ಎಂದು ನಾನು ವಾಡಿಕೆಯಂತೆ ಆವನನ್ನು ಕೇಳಿದೆ. ಅದಕ್ಕೆ, "ನಾನು ಈಗ ಎಚ್. ಎಂ. ಕಣೋ" ಎಂದು ಅವನು ಹೇಳಿದನು.

"ಅರೇ, ನೀನು ನಿಜವಾಗಿಯೂ lucky fellow ಕಣೋ, ಎಷ್ಟು ವರ್ಷದ service ನಂತರ ನಿನಗೆ ಈ ಕೆಲಸ ಸಿಕ್ಕಿತೋ?" ಎಂದು ನಾನು ಕೇಳಿದೆ.

"ಸರ್ವೀಸೇನು ಬಂತೋ ಅದರಲ್ಲಿ? ಎಚ್. ಎಂ. ಅಂದರೆ ಹೆಡ್‌ಮಾಸ್ಟರಲ್ಲ ಕಣೋ, ಹೋಟೇಲ್ ಮಾಣಿ ಅಂತಾ. ಹೋಟೇಲ್ ಮೇನೇಜರ್ ಆದರೂ ಎಚ್. ಎಂ. ಎಂದೇ ಹೇಳುವುದು" ಎಂದು ವೆಂಕಟರಮಣ ಹೇಳಿದಾಗ ನಾನು ಹೊಟ್ಟೆ ಹುಣ್ಣಾಗುವಂತೆ ನಕ್ಕೆ. (ನಿಜವಾಗಿಯೂ ಹೊಟ್ಟೆಯಲ್ಲಿ ಹುಣ್ಣಾಗಲಿಲ್ಲವೆನ್ನಿ. ಹಾಗೇನಾದರೂ ಆಗಿದ್ದರೆ ಡಾಕ್ಟರರಿಗೆ ಶರಣು ಹೊಡೆಯುವ ಪ್ರಸಂಗ ಬರುತಿತ್ತು)

ಆಗಲೇ ಮೂರು ನಿಮಿಷಗಳು ಕಳೆದು ಹೋದುವು. ಅಷ್ಟಾದರೂ ನಮ್ಮ ಮಾಣಿಯ ಆಗಮನವೇ ಇಲ್ಲ. ಗಟ್ಟಿಯಾಗಿ ಎದುರಿನ ಮೇಜನ್ನು ಗುದ್ದಿದೆನು. ಊಹುಂ, ಯಾರೂ ಬರಲಿಲ್ಲ. ನನ್ನ ಎದುರಿನ ಬೆಂಚಿನಲ್ಲಿ ಕುಳಿತು ಕಾಫಿ ಹೀರುತಿದ್ದ ಗಿರಾಕಿಯೊಡನೆ ಹೋಟೇಲ್ ಮಾಣಿಯ ಸಂವಾದ ಸಾಗುತಿದ್ದುದು ಕಂಡುಬಂದುದರಿಂದ ನಾನೂ ಆ ಸಂವಾದಕ್ಕೆ ಕಿವಿಯೊಡ್ಡಿದೆ.

'ತಿನ್ನಲಿಕ್ಕೆ ಏನು ಕೊಡಲಿ?'



ಬ್ರಿಟಿಷ್ ಸೇನೆಯ 'ಕಾರ್ಪೋರಲ್', ನ್ನು ಉರಿಸುವಾಗಿನ ದೃಶ್ಯ. ಈ ಕಾರ್ಪೋರಲ್‌ನ ತುದಿಯಲ್ಲಿ ಅಣು ಶಸ್ತ್ರವು ಸಜ್ಜಾಗಿರುವುದು.

'ಬಿಸಿ ಬಿಸಿ ಏನುಂಟು?'

'ಬಿಸಿ ಮಸಾಲೆ ದೋಸೆ, ತುಪ್ಪದ ದೋಸೆ, ಖಾಲಿ ದೋಸೆ, ಇಡ್ಲಿ, ಹಲ್ವಾ, ಬಟಾಟೆ ಅಂಬೊಡೆ, ಹೋಳಿಗೆ—ಏನು ಕೊಡಲಿ?'

'ಅದಾವುದೂ ಬೇಡ, ಬಾಳೆಹಣ್ಣು ಇಲ್ಲವೇ?'

'ಎಸ್ರೀ, ಬಿಸಿ ಬಾಳೆಹಣ್ಣು ಇರುವುದುಂಟೇ?'

ಮಾಣಿಯ ಪ್ರಶ್ನೆ ಕೇಳಿ ಕಕ್ಕಾಬಿಕ್ಕಿಯಾದ ಗಿರಾಕಿ ಮೇಲೆ ಕೆಳಗೆ ನೋಡತೊಡಗಿದನು, ತುಸು ಹೊತ್ತಿನ ಮೇಲೆ, 'ಹಾಗೆಂದರೇನು? ನಾನು ಇನ್ನು ಹೇಗೆ ಕೇಳಬೇಕಿತ್ತು?' ಎಂದು ಕೇಳಿದನು.

'ನೀವು ಬಿಸಿ ಬಿಸಿ ಏನುಂಟು ಎಂದು ಕೇಳಿದಿರಿ. ಬಿಸಿ ಬಿಸಿ ತಿಂಡಿಗಳ ಹೆಸರು ಹೇಳಿದೆ. ಆ ಮೇಲೆ ಬಾಳೆಹಣ್ಣು ಉಂಟೇ ಎಂದು ಕೇಳಿದಿರಿ. ಬಿಸಿ ಬಾಳೆಹಣ್ಣು ಎಲ್ಲಿಯಾದರೂ ಇರುವುದುಂಟೇ?' ಎಂದು ಕೇಳಿ ಪುನಃ 'ಆಂ! ಒಂದರ ಹೆಸರು ಮರೆತು ಬಿಟ್ಟೆ! ಅದೂ ಬಿಸಿಯಾದುದೇ!' ಎಂದನು.

'ಅದೇನು?'

ಮಾಣಿ, 'ಬೆಂಕಿಕೆಂಡ!' ಎಂದು ಹೇಳಿ ಮಾಣಿ ಮೂವತ್ತೆರಡು ಹಲ್ಲು ಬಿಟ್ಟು ನಕ್ಕನು.

ಗಿರಾಕಿಯ ಮುಖ ಕ್ರೋಧದಿಂದ ಕೆಂಪಾಯಿತು. ಆದರೆ ಆ ಮಾಣಿಯ ಚಾಟಿಯೇಟಿನಂತಹ ಮಾತಿನಿಂದ ಗಾಯಗೊಂಡಿದ್ದ ಗಿರಾಕಿ ಏನೂ ಉತ್ತರಿಸದೆ ಕಾಫಿ ಕುಡಿದು ಹಣಕೊಟ್ಟು ಹೊರಟು ಹೋದನು.

ಇದನ್ನೆಲ್ಲಾ ನೋಡುತಿದ್ದ ಅಲ್ಲೇ ಕುಳಿತಿದ್ದ ಇನ್ನೊಬ್ಬ ಮಹಾಶಯರಿಗೆ ಕೊಂಚ ಸಿಟ್ಟು ಬಂದಿತು. ಈ ಮಾಣಿಗೆ ಬುದ್ಧಿ ಕಲಿಸದೆ ಇರೆನೆಂದು ಮನಸ್ಸಿನಲ್ಲೇ ಯೋಚಿಸಿ ಹುಬ್ಬು ಗಂಟಿಕ್ಕಿ ಕುಳಿತು ಕೊಂಡರು. ಅಷ್ಟರಲ್ಲಿ ಮಾಣಿಯ ಸವಾರಿ ಆ ಮಹಾಶಯರ ಬಳಿಗೇ ಚಿತ್ತೈಸಿತು.

'ಏನು ಕೊಡಲಿ?'

'ಕೋಲ್ಡ್' ಏನುಂಟು?

'ಫ್ರುಟ್ ಸಾಲಿಡ್, ಕೋಲ್ಡ್ ಡ್ರಿಂಕ್, ಥೂವ್ ಕೋಲ್ಡ್, ಲಿಂಬೆ ಹಣ್ಣಿನ ಪಾನಕ.'

'ಇಷ್ಟೇನಾ? ಬೇರೇನಿಲ್ಲವಾ?'

'ಛೇ! ಇಲ್ಲವುಂಟೇ?'

'ಏನಿದೆ ಹಾಗಾದರೆ?'

'ನಿನ್ನೆಯ ತಣಿದ ಇಡ್ಲಿ ಹಾಗೂ ನಳ್ಳಿ ನೀರು!'

ಮಹಾಶಯರು ಸುಸ್ತು! ಮಾಣಿಯನ್ನು ತರಾಟೆಗೆ ತೆಗೆದುಕೊಳ್ಳಬೇಕೆಂದು ಯೋಚಿಸಿದ್ದ ಮಹಾಶಯರ ಮುಖ ಲಜ್ಜೆಯಿಂದ ಕಪ್ಪಿಟ್ಟಿತು. ಅವರು ನಿರುತ್ತರರಾದರು. ಆ ಮೇಲೆ ಮಾಣಿ ನನ್ನ ಎದುರು ಬಂದು ನಿಂತನು. ಕೈಗಡಿಯಾರದ ಕಡೆಗೊಮ್ಮೆ ದೃಷ್ಟಿ ಹಾಯಿಸಿದೆ. ಬಸ್ಸು ಹೊರಡಲು ಇನ್ನು ಮೂರೇ ನಿಮಿಷಗಳಿವೆ.

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ	4%
5 ,, 12 ,,	4¼%
13 ,, 24 ,,	4½%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1939

ರಾಮತೀರ್ಥ (ಮಾಸಿಕ ಪತ್ರ)
(ಹಿಂದಿ ಭಾಷೆಯಲ್ಲಿ)

ಸಂಪಾದಕರು:- ಯೋಗಿರಾಜ ಶ್ರೀ ಉಮೇಶಚಂದ್ರರು.

ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೧೪.

ಗೃಹ ವಿಜ್ಞಾನ

ಮನೆಯ ಸಿರಿ – ನಗುವ ಮಕ್ಕಳು

(ಲೇಖಾಂಕ ೩)

ಮಾನವನ ಶಕ್ತಿಶೀಲಗಳಿಗೆ ಆತನ ಆಹಾರಾಭ್ಯಾಸವೇ ಕಾರಣವಾಗುತ್ತದೆ. ಎಳವೆಯಲ್ಲಿ ಸಮುಚಿತ ಸದಾಹಾರವನ್ನು ಮಕ್ಕಳಿಗೆ ಒದಗಿಸಿದರೆ, ಮುಂದೆ ಅವರು ದೃಢಕಾಯರೂ ಪರಿಶ್ರಮಶೀಲರೂ ಆಗುವುದು ಸಾಧ್ಯ.

ಲೇಖಕರು: ಶ್ರೀ ಎಂ. ರಂಗರಾವ್.

ಹಾಲು

ಆಟದ ತರುವಾಯ ಮಕ್ಕಳಿಗೆ ಇಷ್ಟವಾದುದು ತಿಂಡಿ. ತಿಂಡಿಯ ಮೇಲೆ ಮಕ್ಕಳಿಗೆ ತುಂಬಾ ಇಷ್ಟವಿರುತ್ತದೆ. ಅತಿ ತಿಂಡಿಯಿಂದಲೂ, ಆಗದ ತಿಂಡಿಯಿಂದಲೂ ಅವರ ಜೀರ್ಣ ಕೋಶವು ಕೆಟ್ಟು ಹೋದರೆ, ಅವುಗಳ ತಿಂಡಿಯ ಆಶೆಯೂ ತಗ್ಗಿ ಹೋಗುತ್ತದೆ. ಇದು ಅವರ ಆರೋಗ್ಯ ಕೆಟ್ಟಿತೆಂಬುದಕ್ಕೆ ಗುರುತು. ಆದುದರಿಂದ ಮಕ್ಕಳ ತಿಂಡಿಯ ಆಸೆಯನ್ನು ಮಹಾ ನಿಧಿಯ ಹಾಗೆ ಕಾಪಾಡಿಕೊಳ್ಳುತ್ತಾ ಬರಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ ಹಿತವಾದ ಆಹಾರವನ್ನು ಮಿತವಾಗಿ ಒದಗಿಸುತ್ತಿರಬೇಕು ಮಕ್ಕಳಿಗೆ.

ವಯಸ್ಸಿಗೆ ತಕ್ಕ ಹಾಗೆ ಮಕ್ಕಳ ಆಹಾರದಲ್ಲಿ ಭೇದಗಳುಂಟು. ಕೈಕಾಲಾಡಿಸಿಕೊಂಡು ತನಗೆ ತಾನೇ ನಗುತ್ತ ಆಡುವ ಚಿಕ್ಕ ಮಗುವಿಗೆ ತಾಯಿಯ ಹಾಲಿಗಿಂತ ಹೆಚ್ಚಿನದಾದ ಜೀವ ಸತ್ವ ಬೇಕಾಗಿಲ್ಲ.

ಬೆಳೆಯುತ್ತಾ ಬಂದಂತೆ ಮನುಷ್ಯರ ಆಹಾರವು ಅನೇಕ ವಿಧವಾಗಿ ಬದಲಾಯಿಸುವುದು ಸಹಜ. ಎಲ್ಲಕ್ಕಿಂತಲೂ ಮೊದಲು ಜೀವಶಕ್ತಿ ಕೊಡುವಂಥ ಆಹಾರವೆಂದರೆ ಹಾಲೇ. ಹಾಲಿನಲ್ಲೆಲ್ಲಾ ಶ್ರೇಷ್ಠವಾದುದು ತಾಯಿಯ ಹಾಲೇ. ತಾಯಿಯ ಹಾಲು ಮಕ್ಕಳ ಪಾಲಿಗೆ ಕಲ್ಪ ತರುವಾಗಿದೆ. ಮಕ್ಕಳ ಮುಂದಿನ ಒಳ್ಳೆಯತನವೆಲ್ಲಾ ಈ ಹಾಲಿನಲ್ಲೇ ಅಡಗಿದೆ. ಒಳ್ಳೆಯ ಪೋಷಕ ಶಕ್ತಿಯುಳ್ಳ ತಾಯಿಯ ಹಾಲನ್ನೇ ಮಗುವಿಗೆ ಊಡಿಸಬೇಕು. ಯಾರಾದರೂ ಹೆಚ್ಚು ಬಲಿಷ್ಠರನ್ನು ಕಂಡರೆ "ಈತ ಐದು ವಯಸ್ಸಿನ ವರೆಗೆ ತಾಯಿ ಹಾಲು ಕುಡಿದಿರಬೇಕು" ಎಂದು ಹೇಳುವ ಮಾತುಂಟು.

ಅಸಲು ನಮ್ಮ ಪುರಾಣದಲ್ಲೇ ಕಥೆಯುಂಟಲ್ಲ? ಆಂಜನೇಯನು ಹುಟ್ಟಿದ ಕೂಡಲೇ ಸೂರ್ಯನನ್ನು ನೋಡಿದ. ಅದೊಂದು ಹಣ್ಣೆಂದು ಭ್ರಮಿಸಿದ. ಅದನ್ನು ಹಿಡಿಯಲು ಆಕಾಶಕ್ಕೆ ಹಾರಿದ. "ಅಯ್ಯೋ! ಈ ಮಗು ಸೂರ್ಯನನ್ನು ಮುಟ್ಟಿ ಸುಟ್ಟುಹೋಗುತ್ತದಲ್ಲಾ" ಎಂದುಕೊಂಡು ದೇವೇಂದ್ರ ತನ್ನ ವಜ್ರಾಯುಧವನ್ನು ಆ ಮಗುವಿಗೆ ಅಡ್ಡ ಹಿಡಿದ. ಅದಕ್ಕೆ ತಾಗಿ ಮಗು ಆಂಜನೇಯ ತಿರುಗಿ ಭೂಮಿಗೇ ಬಿದ್ದುಬಿಟ್ಟ. ಬಿದ್ದ ಆಯಾಸದಿಂದ ಮಲಗಿದ ಆಂಜನೇಯನನ್ನು ನೋಡಿ ತಾಯಿ ಅಂಜನಾದೇವಿಗೆ ದುಃಖ ಬಂತು. ದುಃಖದೊಂದಿಗೆ ಮಾತೃಪ್ರೇಮವು ಉಕ್ಕಿತು. ಎದೆಯಲ್ಲಿ ಹಾಲು ತೊಟ್ಟಿಕ್ಕಿತು. ಅದರ ಕೆಲವು ಬಿಂದುಗಳು ನೆಲಕ್ಕೆ ಬಿದ್ದುವು. ಆ ಹಾಲಬಿಂದುಗಳ ಶಕ್ತಿಗೆ ನೆಲವು ಬಿರಿಯಿತು. ಬಿರಿದ ಸ್ಥಳದಲ್ಲಿ ಪಾತಾಳದ ವರೆಗೂ ಒಂದು ಬಿಲದಾರಿಯಾಯಿತು. ಇಷ್ಟೊಂದು ಶಕ್ತಿ ತಾಯಿಯ ಹಾಲಿಗಿದೆ.

ಪ್ರಕೃತಿದತ್ತವಾದ ತಾಯಿಯ ಹಾಲಿಗೆ ಅನೇಕ ಬಗೆಯ ಔಷಧಿಗಳ ಗುಣಗಳುಂಟೆಂದು ಕೂಡಾ ವೈದ್ಯಶಾಸ್ತ್ರಜ್ಞರು ನಿರ್ಣಯಿಸಿರುತ್ತಾರೆ. ಇಷ್ಟು ಮಹತ್ವವುಳ್ಳ ತಮ್ಮ ಹಾಲನ್ನು, ಬೆಲೆಯಿಲ್ಲದ ಅಮೃತವನ್ನು, ತನ್ನ ಮಗುವಿಗೇ ಕೊಡದೇ ತಪ್ಪಿಸುವ ಆ ತಾಯಿ ಆ ಮಗುವಿನ ಬಾಯಿಯ ಅನ್ನವನ್ನೇ ಕಸಿದುಬಿಸುಟ ಹಾಗೆ! ಆದುದರಿಂದ ಓ ತಾಯಂದಿರೇ, ನಿಮ್ಮಲ್ಲಿರುವ ಆ ಮೂಲ್ಯ ನಿಧಿಯನ್ನು ಅರಿತುಕೊಳ್ಳಿರಿ. ನಿಮ್ಮ ಮಕ್ಕಳನ್ನು ನಿಮ್ಮ ಕೈಯಲ್ಲೇ, ನಿಮ್ಮ ಮಡಿಲಲ್ಲೇ ನಿಮ್ಮ ಹಾಲೂಡಿಯೇ ಬೆಳೆಸಿರಿ.

ಹಾಲುಣ್ಣುವ ಎಳೆಮಗುವಿನ ತಾಯಂದಿರು ತಮ್ಮ ಹಾಲು ಸಮೃದ್ಧವಾಗಿರುವಂತೆ ನೋಡಿಕೊಳ್ಳಬೇಕು. ತಾನು ಯೋಗ್ಯವಾದ ಪುಷ್ಟಿಕರವಾದ ಸತ್ವವುಳ್ಳ ಆಹಾರವನ್ನೇ ತೆಗೆದುಕೊಳ್ಳಬೇಕು. ತನ್ನ ಮಗುವಿಗೆ ತನ್ನ ಎದೆಯಲ್ಲಿ ಅಮೃತವನ್ನು ತುಂಬಿಕೊಡುವ ಅವಕಾಶವನ್ನು ವೃಥಾ ಕಳೆದುಕೊಳ್ಳುವ ತಾಯಿಗಿಂತ ಹೆಚ್ಚಿನವಳು ಮತ್ತಾರೂ ಇಲ್ಲ. ಹಾಲೂಡುವುದರಿಂದಲೇ ಸ್ತ್ರೀಯರು ಮಾನವ ಜಾತಿಯಲ್ಲೇ ಮೇಲಾದ ತರಗತಿಯನ್ನು ಮುಟ್ಟುತ್ತಾರೆ. ಮಾತೆಯ ಸ್ಥಾನಕ್ಕೆ ಮಹಾರಾಣಿಯ ಸ್ಥಾನವೂ ಈಡಾಗುವುದಿಲ್ಲ.

ಈಗ ನಾಗರಿಕತೆ ಎಲ್ಲಾ ಕಡೆಗೂ ತಲೆ ಹಾಕಿದೆ. ಸ್ತ್ರೀಯರ ಆಹಾರ ವಿಹಾರಗಳಲ್ಲಿಯೂ ನಾಗರಿಕತೆ ತಲೆಹಾಕಿದೆ. ನಾಗರಿಕತೆಯ ಹೆಸರಿನಲ್ಲಿ ಬಂದಿರುವ ಹೊಸ ಭ್ರಾಂತಿಗಿಂತಲೂ ಹಳೆಯ ಮೂಢಾಚಾರ ನೂರು ಪಾಲಿಗೆ ಒಳ್ಳೆಯದು. ಏಕೆಂದರೆ ಮೂಢಾಚಾರಗಳಲ್ಲಿ ಅರ್ಥವು ಅಡಗಿಕೊಂಡಿದೆ. ತತ್ವವು ತುಂಬಿಕೊಂಡಿದೆ. ಹೊಸ ನಾಗರಿಕತೆಯ ಭ್ರಮೆಯಲ್ಲಿ ಸ್ತ್ರೀಯರು ಬಲಹೀನರಾಗುವಂತೆ ನಾವು ಕಾಣುತ್ತೇವೆ.



ಬ್ರಿಟನ್ನಿನ ಸರ್ರೇಯೊಂದರಲ್ಲಿನ ಕಿಂಗ್ಸನ್ ಆಸ್ಪತ್ರೆಯಲ್ಲಿ ಕೊಲೊಂಬೋ ಯೋಜನೆಯಂತೆ ಚಿಕಿತ್ಸಾಲಯ ತಂತ್ರದಲ್ಲಿ ತರಬೇತಿ ಪಡೆಯುವ ನರ್ಸ್ ಅಭ್ಯಾಸದಲ್ಲಿ ಲೀನಳಾಗಿದ್ದಾಳೆ.

ಎಲ್ಲಿ ನೋಡಿದರೂ ಈಗ ಮಗುವಿಗೆ ತಾಯಿಯ ಹಾಲನ್ನು ಬೇಗನೇ ನಿಲ್ಲಿಸಿಬಿಡುವ ರೂಢಿ ಹೆಚ್ಚುತ್ತಿದೆ. ಅಂದಚಂದದ ಡಬ್ಬಿಗಳಲ್ಲಿ ಬರುವ ವಿದೇಶೀ ಹಾಲು ಪುಡಿಗಳನ್ನು ಕರಡಿಸಿ ಮಗುವಿಗೆ ಕೊಡುವ ವಾಡಿಕೆ ತುಂಬಿಹೋಗಿದೆ. ಇದು ಮಕ್ಕಳಿಗೆ ಕೊಬ್ಬಿನಂಶವನ್ನು ಹೆಚ್ಚಿಸಿ, ಬುದ್ಧಿಮಾಂದ್ಯವನ್ನುಂಟು ಮಾಡುತ್ತದೆ. ಯಾವ ಕಾರಣದಿಂದಲೋ ತಾಯಿಯ ಹಾಲು ಕೊಡಲಾಗದಿದ್ದರೆ ಶುದ್ಧವಾದ ಆಕಳ ಹಾಲೇ ಸಾವಿರ ಪಾಲಿಗೆ ಮೇಲಾದುದು. ಹಸುವೇ ಮಗುವಿನ ಎರಡನೆಯ ತಾಯಿಯೆಂದು ತಿಳಿಯಿರಿ. ದನದ ಹಾಲಿನಲ್ಲಿ ಮಕ್ಕಳ ಶರೀರ ಪೋಷಣೆಗೆ ಬೇಕಾದ ವಸ್ತುಗಳೆಲ್ಲಾ ಕ್ರಮವಾಗಿ ಸೇರಿರುವುವೆಂದು ಬಲ್ಲವರು ಗೊತ್ತುಪಡಿಸಿರುತ್ತಾರೆ. ಅನೇಕ ಕೈಗಳ ಕೆಲಸಗಳಿಂದ ಡಬ್ಬಿಗಳಲ್ಲಿ ತುಂಬಿಕೊಂಡು ಬರುವ ಯಾಂತ್ರಿಕವಾದ ಪುಡಿ ಹಾಲಿಗಿಂತಲೂ ಅಪ್ಪಟವಾದ ಆಕಳ ಹಾಲನ್ನೇ ಮಕ್ಕಳಿಗೆ ಒದಗಿಸಿರಿ.

ಮಕ್ಕಳ ವಯಸ್ಸಿಗೆ ತಕ್ಕಹಾಗೆ ಹಸುವಿನ ಹಾಲಿಗೆ ಧಾರಾಳ ನೀರು ಸೇರಿಸಿಯೇ ಕೊಡಬೇಕು. ಮಕ್ಕಳು ಬೆಳೆಯುತ್ತಾ ಬಂದ ಹಾಗೆ ನೀರಿನ ಅಂಶ ಕಡಮೆ ಮಾಡಬೇಕು. ಸಾಧಾರಣವಾಗಿ ಎರಡೂವರೆ ವಯಸ್ಸಿನ ವರೆಗೆ ತಾಯಿಯ ಹಾಲೂ ಅನಂತರ ಹಸುವಿನ ಹಾಲೂ ಮಕ್ಕಳಿಗೆ ಮುಖ್ಯ ಆಹಾರವೆನಿಸಿವೆ. ಮೂರನೆಯ ವಯಸ್ಸಿನಲ್ಲಿ ಅನ್ನಪ್ರಾಶನವಾಗಿ ಕ್ರಮೇಣ ಗಟ್ಟಿ ಆಹಾರ ಕೊಡಬಹುದಾದರೂ, ಹಾಲನ್ನು ಮಾತ್ರ ನಿಲ್ಲಿಸಬಾರದು.

ಆಹಾರಕ್ರಮ

ಮನುಷ್ಯರ ಆಹಾರದಲ್ಲಿ ಒಳ್ಳೆಯದೂ ಕೆಟ್ಟದೂ ಸೇರಿಕೊಂಡೇ ಇರುತ್ತದೆ. ದೊಡ್ಡವರ ಕೆಡುಕು ಆಹಾರಗಳನ್ನು ಮಕ್ಕಳಿಗೂ ಕೊಡುವುದು ದೊಡ್ಡ ಕೇಡು. ಚಿಕ್ಕಂದಿನಲ್ಲಿ ಒಳ್ಳೆಯ ಆಹಾರದಲ್ಲಿ ಬೆಳೆದವರು ದೊಡ್ಡವರಾದ ಮೇಲೆ ಕೆಡುಕು ಆಹಾರ ಸೇವಿಸಿದರೂ ಕೆಡುಕಾಗಲಾರದು.

ಏಳು ವಯಸ್ಸಿನೊಳಗಿನ ಮಕ್ಕಳಿಗೆ ಕಾಫಿ ಮತ್ತು ಚಹಾ ಕೊಡಬಾರದು. ಕಾಫಿ ಚಹಾಗಳು ದೊಡ್ಡವರಿಗೆ ಅಂಟಿಕೊಳ್ಳುವ ಒಂದು ಚಟವೇ ಹೊರತು ಅದೊಂದು ಆಹಾರ ವಸ್ತುವಲ್ಲ. ಮಕ್ಕಳ ಆಹಾರವಂತೂ ಅಲ್ಲವೇ ಅಲ್ಲ. ಅವು ಮಕ್ಕಳ ಜೀರ್ಣಶಕ್ತಿಯನ್ನು ಕೆಡಿಸುವಂಥವು. ಚಿಕ್ಕಂದಿನಿಂದಲೂ ಕಾಫೀ ಚಹಾ ಕುಡಿಯದವರು ದೊಡ್ಡವರಾದ ಮೇಲೆ ಕೂಡಾ ಮುಟ್ಟುವುದಿಲ್ಲ. ಇಂಥವರು ಬಹಳ ಮಂದಿ ಈಗಲೂ ಇದ್ದಾರೆ.

ಒಳ್ಳೆಯ ಪೋಷಕ ಆಹಾರವಾದರೂ ದೊಡ್ಡವರ ಹಾಗೆ ಒಂದೇ ಬಾರಿ ತಿನ್ನುವವರಲ್ಲ ಮಕ್ಕಳು; ಆಗಾಗ ಸ್ವಲ್ಪ ಸ್ವಲ್ಪವಾಗಿಯೇ ತಿನ್ನುವರು. ಅತ್ಯಂತ ಅಕ್ಕರೆಯಿಂದ ಮಕ್ಕಳಿಗೆ ಬೆಣ್ಣೆ ತುಪ್ಪ, ಬಿಸ್ಕೆಟ್ಟು ಮೊದಲಾದ ಕೊಬ್ಬು ಪದಾರ್ಥಗಳನ್ನು ಅತಿಯಾಗಿ ಕೊಟ್ಟರೂ ಅಪಾಯವಾಗುತ್ತದೆ. ಅವರು ಕೇಳಿದಾಗಲೆಲ್ಲಾ ಅದೂ ಇದೂ ಕೊಡುವುದರಿಂದ ಮಕ್ಕಳು ಬೀದಿತಿಂಡಿಬಾಕರಾಗಿ ಬಿಡುವ ಭಯವುಂಟು. ಆದುದರಿಂದ ಮಕ್ಕಳ ಬಾಯಿ ಚಾಪಲ್ಯಕ್ಕೆ ಒಂದು ಕ್ರಮವನ್ನು ಗೊತ್ತುಪಡಿಸಿಕೊಳ್ಳಿ. ಆಹಾರದ ಕ್ರಮವೇ ಒಳ್ಳೆಯ ಮೊದಲನೇ ಅಭ್ಯಾಸ. ತಮ್ಮ ಹೊಟ್ಟೆಯ ಅಳತೆ ತಮಗೇ ಗೊತ್ತಿರುವುದಿಲ್ಲ ಮಕ್ಕಳಿಗೆ ಇದು ಗೊತ್ತಿರಬೇಕಾದ್ದು ಕೂಡಾ ದೊಡ್ಡವರಿಗೇ.

ಮಗುವಿಗೆ ಕತೆ ಹೇಳುತ್ತಾ ಊಟ ಮಾಡಿಸುವುದೊಂದು ಒಳ್ಳೆಯ ಅಭ್ಯಾಸವೆನ್ನಬಹುದು. ಅಜ್ಜಿ ಹೀಗೆಯೇ ಮೊಮ್ಮಗುವಿಗೆ ಉಣಿಸುತ್ತಾಳೆ. ಆದರೆ "ಗುಮ್ಮ ಬಂದ" "ಬೂಚಿ ಬಂತು" ಮೊದಲಾದ ಮಾತುಗಳಿಂದ ಭಯಂಕರತೆಗಳನ್ನು ಮಗುವಿನ ಮುಂದೆ ಚಿತ್ರಿಸಬಾರದು. ಶಿವಾಜಿಯ ತಾಯಿ ಊಟ ಮಾಡಿಸುತ್ತಾ ವೀರರ ಕಥೆಗಳನ್ನು ಹೇಳಿದ ಕಾರಣವೇ ಶಿವಾಜಿ ಮಹಾ ಧೈರ್ಯಶಾಲಿಯಾಗಿ ಬೆಳೆ

(೧೩ನೇ ಪುಟ ನೋಡಿರಿ)

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು
ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ
ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ
ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಶುದ್ಧ ಹರಟೆ

ಭಾಗ್ಯಲಕ್ಷ್ಮಿಯ ಗೃಹದ್ವಾರಪಥ

ಭಾಗ್ಯಲಕ್ಷ್ಮಿಯೇನೂ ಅಪ್ರಾಪ್ಯಳಲ್ಲ; ಆಕೆಯ ಗೃಹದ್ವಾರಪಥವರಿಸಿ ತೆರಳಿದರೆ ಆಕೆ ನಿಮ್ಮ ಕೈ ಹಿಡಿಯದೆ ಸುಮ್ಮನಿರಳು. ನೀವೂ ಭಾಗ್ಯಲಕ್ಷ್ಮಿಯನ್ನು ವರಿಸಬಯಸುವಿರಾದರೆ, ಆಕೆಯ ಗೃಹದ್ವಾರಪಥ ಪ್ರದರ್ಶನವಿಲ್ಲಿ ನೋಡಿದೆ; ಈ ದಾರಿಯಲ್ಲೇ ಮುನ್ನಡೆಯಿರಿ.

ಹರಟೆಗಾರರು: ಶ್ರೀ "ಕುಂತಳಾಪ್ರಿಯ"

'ಭಾಷಣವನ್ನು ಮಾಡಿ ಭಾಗ್ಯಶಾಲಿಗಳಾಗಿರಿ' ಎಂಬ ಮಾತು ಈಗ ನೂರಕ್ಕೆ ನೂರು ಸತ್ಯವಾಗಿದೆ. ಭಾಗ್ಯಶಾಲಿಗಳು ಭಾಷಣ ಮಾಡುವರೆಂದು ಮೇಲಿನ ವಾಕ್ಯದ ಅಭಿಪ್ರಾಯವೆಂದು ತಪ್ಪು ತಿಳಿಯಬೇಡಿ. ಭಾಷಣವನ್ನು ಮಾಡುವುದರಿಂದಲೆ ಭಾಗ್ಯಶಾಲಿಗಳಾಗುತ್ತಾರೆಂಬುದಾಗಿ ಅಂದುಕೊಂಡರೆ ಆಗ ನೀವು ಜಾಣರಾಗುತ್ತೀರಿ.

ಪಟಾಕಿ ಹೊಡೆಯುವ ಮಹಾನುಭಾವರನ್ನು ನಾವು ಸುತ್ತುಮುತ್ತಲಲ್ಲಿ ಇರಿಸಿಕೊಂಡಿದ್ದೇವೆ. ಕಂಬಿಯಿಲ್ಲದ ರೈಲು ಬಿಟ್ಟು ಕೊನೆಗಾಲಕ್ಕೆ ತಮ್ಮ ಗುಟ್ಟು ರಟ್ಟಾಗಿ ಮರ್ಯಾದೆಯನ್ನು ಕಳಕೊಂಡರೂ ಮರ್ಯಾದೆ ಹೆಚ್ಚಿತೆಂದು ತಿಳಿಯುವ ಸಜ್ಜನರು ನಮ್ಮಲ್ಲಿದ್ದಾರೆ.

ರಾಮಯ್ಯನವರು ಮಾತಾಡಲು ಆರಂಭಿಸಿದರೆಂದರೆ ಅವರನ್ನು ಇದಿರಿಸುವವರು ಯಾರೂ ಇಲ್ಲ. ಯಾವ ವಿಚಾರದಲ್ಲಿ ಬೇಕಾದರೂ ಅವರು ಅಧಿಕೃತವಾಗಿ ಮಾತಾಡಬಲ್ಲರು. ಹಿಡಿಸೂಡಿ, ಕಸಬುಟ್ಟಿಯಿಂದ ಹಿಡಿದು ನಮ್ಮ ದೇಶದ ರಾಜಕೀಯ, ಪ್ರಧಾನಿ ಮೊದಲಾದವರ ವಿಚಾರದಲ್ಲೂ ಅವರು ನಿರರ್ಗಳವಾಗಿ ಸರಿಯಾಗಲಿ ತಪ್ಪಾಗಲಿ ಪಟಾಕಿ ಹೊಡೆಯುವುದರಲ್ಲಿ ನಿಸ್ಸೀಮರಾಗಿದ್ದರು.

ಈಗಿನ ಕಾಲದಲ್ಲಿ ಇಂಥವರೆ ಸುಲಭವಾಗಿ ಜೀವಿಸಲು ಸಾಧ್ಯವಿದೆ. ಇಲ್ಲಿ ನಾವು ಕೆಲ ಭಾಷಣಕಾರರ ಕೆಲ ಮಾದರಿಯನ್ನು ಸಂಗ್ರಹಿಸುವ ಕಾರ್ಯವನ್ನು ಮಾಡೋಣ.

ೲ ೲ

ರಾಮಯ್ಯನವರು ಉಗ್ಗುವ ಮಹಾನುಭಾವರು. ಶಾಲೆಯಲ್ಲಿ ವಾಗ್ವರ್ಧಿನಿ ಸಭೆಗಳನ್ನು ತಪ್ಪಿಸುತ್ತಿದ್ದ ಇವರು ಮುಂದೆ ಬಹುದೊಡ್ಡ ಭಾಷಣಕಾರರಾದಾರೆಂದು ಇವರ ಶಾಲಾ ಅಧ್ಯಾಪಕ ವರ್ಗದವರು ಕನಸಿನಲ್ಲೂ ನಿರೀಕ್ಷಿಸಿರಲಿಲ್ಲ. ಮೊದಲು ಇವರು ಭಾಷಣವನ್ನು ಮಾಡಿದುದು ಚುನಾವಣಾ ಪ್ರಚಾರ ಸಭೆಯೊಂದರಲ್ಲಿ. ಜನರನ್ನು ಕೂಡಿಸಿಕೊಂಡು ಕೂಡಿದ ಐವತ್ತು ಜನರ ಮುಂದೆ ಮಾತಾಡಬೇಕಾಗಿದ್ದ ನಮ್ಮ ಮಹಾನುಭಾವ ರಾಮಯ್ಯನವರು ಆರಂಭಿಸಿದರು—'ಸಸಸನ್ಮಾನ್ಯನ್ಯ ಸಸಭಾಸಭಾಧ್ಯಧ್ಯಕ್ಷಧ್ಯಕ್ಷರ್‌ರ್‌ರೇ", ಎಂದು ಐದುಮಿನಿಟುಗಳ ಶ್ರುತಿ ಹಿಡಿದು ಆಲಾಪನೆಗೆ ತೊಡಗಿ ತಮ್ಮ ಭಾಷಣ ಯಾನೆ ಸಂಗೀತ ಕಚೇರಿಯನ್ನು ಪೂರೈಸಿದರು. ಅಂತೂ ಅವರ ಕಾರ್ಯಕ್ರಮ ೪೫ ಮಿನಿಟುಗಳವರೆಗೆ ಸಾಗಿತ್ತು. ಜನರೇಕೆ ಕುಳಿತಿದ್ದರೊ ನಾ ತಿಳಿದಿಲ್ಲ. ಅಂತೂ ಭಾಷಣದ ಮಧ್ಯೆ ಜನರು ತಂಬಾ ನಗುತ್ತಿದ್ದರು ನಗುವುದಕ್ಕಾಗಿಯೇ ಜನರು ಕುಳಿತಿದ್ದಿರಬೇಕೆಂದು ನಾನು ಊಹಿಸುತ್ತೇನೆ.

ಭಾಷಣ ಮುಗಿಸಿಬಂದ ಅವರು ನನ್ನ ಕೈ ಕುಲುಕುತ್ತ, "ನನನನನ....ನ್ನ ಭಾಭಾಷ....ಣ ಹೆ...ಹೇ ಹೇಗಿತ್ತು?" ಎಂದು ಪ್ರಶ್ನಿಸಿದರು. ನಾನು "ಬಬಬ ಬಹಳ ಚೆಚೆಚೆನ್ನಾಗಿತ್ತು" ಎಂದು ತಮಾಷೆಯಾಗಿ ಹೇಳಿದೆನು. ಅವರು ನಾನು ಹಾಗೆ ಹೇಳಿದುದನ್ನು ಕೇಳಿ ಸಿಟ್ಟು ಮುನಿಸಿನಿಂದಲೇ ನನ್ನಲ್ಲಿ ಮಾತಾಡುವುದನ್ನು ಬಿಟ್ಟರು.

ದುರದೃಷ್ಟವಶಾತ್ ಏನು ಮಾಡೋಣ, ನನ್ನನ್ನು ವಿರೋಧಿ ಪಂಗಡಕ್ಕೆ ಅವರು ಸೇರಿಸಿಕೊಂಡರು. ಈಗಂತೂ ಅವರು ಭಾಷಣಕಾರರೆ ಆಗಿ ಹೋಗಿದ್ದಾರೆ. ಈಗ ಉಗ್ಗು ಅವರಿಂದ ಮಾಯವಾಗಿದೆ. ಅದಕ್ಕೇನನ್ನು ಅವರು ಮಾಡಿಕೊಂಡರೆಂಬ ವಿಚಾರ ನನಗೆ ತಿಳಿದಿಲ್ಲ.

ೲ ೲ

ಕಳೆದ ಕೆಲ ದಿನಗಳ ಹಿಂದೆ ಅವರು ಸಂಸ್ಕೃತ ಪ್ರಚಾರಕಾರ್ಯ ನಿರ್ವಾಹಕ ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡುತ್ತಾ ಈ ರೀತಿಯಾಗಿ ಹೇಳಿದರು—ಮಹಾ ಜನರೇ! ಇಂದು ನೀವೆಲ್ಲಾ (ಮೂವತ್ತಕ್ಕಿಂತ ಹೆಚ್ಚು ಜನ ಸಭೆಯಲ್ಲಿರಲಿಲ್ಲ) ಅದೇಕೆ ಕೂಡಿರುವಿರೆಂಬ ವಿಚಾರ ತಮಗೆ ತಿಳಿದಿದೆ. ದೇವಭಾಷೆಯಾದ ಸಂಸ್ಕೃತ ಇಂದು ದಿನದಿಂದ ದಿನಕ್ಕೆ ಅವನತಿಯ ಹಾದಿಯನ್ನೆ ಅನುಸರಿಸುತ್ತಿದೆ. ಪ್ರತಿಯೊಂದು ಭಾಷೆ ಜೀವಂತವಾಗಿದ್ದರೆ ನಮ್ಮ ಸಂಸ್ಕೃತ ಭಾಷೆ ನಿರ್ಜೀವವಾಗಿದೆ. (ನಮ್ಮ ಮಹಾನುಭಾವರಿಗೆ ದೇವನಾಗರಿ ಲಿಪಿ ಬರೆಯಲೂ ತಿಳಿದಿಲ್ಲವೆಂಬುದು ವಾಚಕರಿಗೂ ತಿಳಿದಿರಲಿ.) ಕನ್ನಡ, ಹಿಂದಿ ಮೊದಲಾದ ಭಾಷೆಗಳಿಗೂ ಸಂಸ್ಕೃತ ಭಾಷೆಯೆ ಮೂಲವಾಗಿದೆ. ಪಿತೃ Father ಈ ರೀತಿಯಾಗಿರುವ ಶಬ್ದಗಳನ್ನು ನೋಡಿದರೆ ಇಂಗ್ಲೀಷು ನಮ್ಮ ದೇವ ಭಾಷೆಯಿಂದಲೆ ಹುಟ್ಟಿ ಬೆಳೆದಿದೆಯೆಂಬುದು ಸ್ಪಷ್ಟವಾಗುತ್ತದೆ. (ಅದೇಕೆ ಇಂಗ್ಲಿಷಿನಿಂದಲೆ ಸಂಸ್ಕೃತ ಹುಟ್ಟಿತೆಂದು ಕೇಳಿದರೆ ಉತ್ತರ ಕೊಡಲಾರರೆಂದು ತೋರುತ್ತದೆ.) ಭಾರತೀಯ ಸಂಸ್ಕೃತಿಯ ಉಚ್ಚ ಆದರ್ಶಗಳನ್ನು ಉಳಿಸಿಕೊಂಡು ಬಂದ ಸಂಸ್ಕೃತ ಭಾಷೆಯನ್ನು ಕಡ್ಡಾಯವಾಗಿ ಕಲಿಸುವ ಏರ್ಪಾಡನ್ನು ಸರಕಾರ ಮಾಡಬೇಕು. ನಾವು ಎಲ್ಲರೂ ಒಂದಾಗಿ ನಮ್ಮ ಮಕ್ಕಳನ್ನು ಸಂಸ್ಕೃತ ಭಾಷೆ ಕಲಿಸುವ ಸ್ಥಳಗಳಿಗೆ ಹಾಕಬೇಕೆ'ಂದು ಮುಂತಾಗಿ ಹೇಳಿ ಭಾಷಣ ಮುಗಿಸಿದರು, ಪ್ರಚಂಡ ಕರತಾಡನಗಳಾದುವು.

ೲ ೲ

ಹೀಗೆ ನಾಲ್ಕಾರು ತಿಂಗಳನಂತರ ಅವರೇ ಹಿಂದಿ ಪ್ರಚಾರ ಪರಿಷತ್ತಿನ ಉದ್ಘಾಟನೆಯನ್ನು ಮಾಡುವಾಗ ಈ ರೀತಿಯಾಗಿ ನುಡಿದರು— "ಹಿಂದಿ ಪ್ರೇಮಿಗಳೆ! ನಾನು ನಿಮ್ಮಂತೆ ಬಹುದೊಡ್ಡ ಹಿಂದೀಪ್ರೇಮಿ. ನನಗೆ ಹಿಂದಿ ಭಾಷೆಯ ಸೌಮ್ಯ ಗುಣ ಮಾಧುರ್ಯಗಳನ್ನು ಎಷ್ಟು ಹೊಗಳಿದರೂ ಕಡಿಮೆಯೆಂದೇ ತೋರುವುದು. ನಾನೊಂದು ಹಿಂದಿ ಭಾಷೆಯ ಸಿನೆಮಾ ಬಂದರೆ ನೋಡದಿರುವುದಿಲ್ಲ. ಹಿಂದಿ ರಿಕಾರ್ಡುಗಳು ರೇಡಿಯೋದಲ್ಲಿ ಬಂದಲ್ಲಿ ನಾನು ಅಲ್ಲಿಗೆ ಮನಸ್ಸು ಕೊಡದಿರುವುದಿಲ್ಲ. ಅಷ್ಟು ಪ್ರೇಮ ನನಗೆ ಹಿಂದಿ ಭಾಷೆಯ ಮೇಲೆ. ಈಗ ನನಗೆ ಹಿಂದಿಯಲ್ಲೇ ಮಾತಾಡಬೇಕೆಂಬ ಬಯಕೆಯಿದೆ. ಆದರೆ ನಿಮಗೆ ತೊಂದರೆಯಾಗಬಾರದೆಂದು ಕನ್ನಡದಲ್ಲಿ ಮಾತಾಡುತ್ತಿದ್ದೇನೆ. ಸರಳ ಭಾಷೆ ಹಿಂದಿ. ರಾಷ್ಟ್ರಭಾಷೆಯಾಗುವ ಯೋಗ್ಯತೆಯನ್ನು ಅದು ಸರಳತೆಯೆಂಬ ತನ್ನ ಸದ್ಗುಣದಿಂದಲೇ ಪಡೆಸುಕೊಂಡಿದೆ. ಸರಕಾರಕ್ಕೆ ಈ ವಿಚಾರದಲ್ಲಿ ನೀವೆಲ್ಲರೂ ಸಹಕಾರರಾಗಿ ನಿಂತು ನಿಮ್ಮ ಮಕ್ಕಳಿಗೆ ಹಿಂದಿ ಭಾಷೆಯನ್ನು ಕಡ್ಡಾಯವಾಗಿ ಕಲಿಸಿ ದೇಶರಕ್ಷಕರಾಗಬೇಕಾಗಿ ವಿನಂತಿಸುತ್ತೇನೆಂದು ಹೇಳಿ ಮುಗಿಸಿದರು. ಕರತಾಡನ ಕೂಡಾಯಿತ್ತು.

ೲ ೲ

ಪಾನನಿರೋಧ ಸಪ್ತಾಹವನ್ನು ಉದ್ಘಾಟಿಸಿದ ಇವರು ಈ ರೀತಿಯಾಗಿ ಭಾಷಣವನ್ನಿತ್ತರು—"ಗಾಂಧಿಜಿಯವರ ಮಾತನ್ನು ಅನುಸರಿಸುವ ಜನರೇ! ನಾವಿಂದು ಪಾನನಿರೋಧ ಸಪ್ತಾಹದ ಉದ್ಘಾಟನೆಗಾಗಿ ಸೇರಿದ್ದೇವೆ. ಗಾಂಧಿಜಿಯವರು ಕನಸು ಕಂಡ ವಿಚಾರಗಳನ್ನು ನಾವಿಂದು ನನಸಾಗಿಸುತ್ತಿದ್ದೇವೆ. ನಮಗೂ ಬಾಪೂಜಿಯವರಿಗೂ (ಸ್ವರ್ಗಸ್ಥರಾದರೂ) ಇದು ಅಭಿಮಾನಾಸ್ಪದವಾಗಿದೆ. ಈ ಪಾನ ನಿರೋಧದಲ್ಲಿ ಸರಕಾರಕ್ಕೆ ಬೆಂಗಾವಲಾಗಿ ನಿಂತು ನೀವುಗಳು ಈ ಶಾಸನವನ್ನು ಯಶಸ್ವಿಗೊಳಿಸಬೇಕು" ಎಂದು ಮುಕ್ತಾಯಗೊಳಿಸಿ ಕರತಾಡನವನ್ನು ಪಡೆದರು.

ೲ ೲ

ಇವಿಷ್ಟು ರಾಮಯ್ಯನವರ ಭಾಷಣದ ಮಾದರಿಗಳು. ಅವರ ಪರೋಪದೇಶ ಪಾಂಡಿತ್ಯವೆಷ್ಟೆಂಬುದನ್ನು ನೋಡಿರಿ.

ೲ ೲ

ರಾಮಯ್ಯನವರು ಸಂಸ್ಕೃತ ಕಲಿತವರೆ ಅಲ್ಲ. 'Father ಪಿತೃ' ಇವಿಷ್ಟೆ ಅವರಿಗೆ ಗೊತ್ತಿರುವ ವಿಚಾರಗಳು ಸಂಸ್ಕೃತವನ್ನು ಕಡ್ಡಾಯವಾಗಿ ಕಲಿಸಬೇಕೆನ್ನುವ ಮಾತನ್ನು ಸರಕಾರ ಅನುಸರಿಸಿದಲ್ಲಿ ಅದನ್ನು ವಿರೋಧಿಸುವವರಲ್ಲಿ ನಮ್ಮ ರಾಮಯ್ಯನವರೇ ಅಗ್ರಸ್ಥಾನವನ್ನೆ ಪಡೆಯುತ್ತಾರೆ. ನಿಮ್ಮ ಮನೆಯ ಮಕ್ಕಳನ್ನು ಬೇಕಾದರೆ ಕಳುಹಿಸಿ ಸಂಸ್ಕೃತಕ್ಕೆ. ಅವರ ಮನೆಯ ಮಕ್ಕಳನ್ನು ಮಾತ್ರ ಅವರು ಇಂಗ್ಲೀಷು ಕಲಿಯುವುದಕ್ಕಾಗಿಯೆ ಹಾಕಿದ್ದಾರೆ.

ೲ ೲ

ಹಿಂದಿ ಪ್ರೇಮ ರಾಮಯ್ಯನವರಿಗೆಷ್ಟೆಂದರೆ ಸಿನೇಮ ನೋಡುವಷ್ಟು ಮಾತ್ರ. ಪುಸ್ತಕ ಓದುವಷ್ಟು ಅಲ್ಲ. ಹಿಂದಿ ಓದುವುದನ್ನೆ ಅವರು ಕಲಿತಿಲ್ಲ. ಅಕ್ಷರ ಮಾಲೆಯ ಗುರುತೇ ಅವರಿಗಿಲ್ಲ. ಅವರ ಹಿಂದಿ ಭಾಷೆ ಎಂತಹದೆಂದರೆ ಅವರಾಡಿದ ಒಂದು ಮಾತಿನಿಂದಲೇ ನಿಮಗೆ ವ್ಯಕ್ತವಾಗುತ್ತದೆ. 'ಮೈಕೊ ನಮಸ್ಕಾರ್ ಕರ್ನಾ ಹೈ' ಈ ವಾಕ್ಯವೇ ಅವರ ಹಿಂದಿ ಪಾಂಡಿತ್ಯವನ್ನೆತ್ತಿ ಸಾರುತ್ತದೆ. ಅವರು ತನ್ನ ಮಕ್ಕಳಿಗೆ ಹಿಂದಿ ಪುಸ್ತಕಗಳನ್ನು ತೆಗೆಸಿಕೊಟ್ಟಿಲ್ಲ. ಹಿಂದಿ ಓದಬಾರದೆಂದು ತನ್ನ ಮಕ್ಕಳಿಗೆ ಬೋಧಿಸುತ್ತಾರೆ.

ೲ ೲ

ಒಂದು ದಿನ ದಾರಿಯಲ್ಲಿ ಅವರು ಬರುತ್ತಿದ್ದಾಗ ನಾವು ಭೇಟಿಯಾದೆ. ಆಗ ಅವರು ಯಾ....ರು....ನೀ....ನು....? ಎಂದರು ತಡವರಿಸುತ್ತ. ಜೋಕಾಲಿ ಯಾಡುತ್ತಾ ಕೇಳಿದರು. ಹತ್ತಿರ ಬಂದವನೆ ಅವರ ಮುಖವನ್ನು ಆಘ್ರಾಣಿಸಿದೆ. ವಾಸನೆ ಬರುತಿತ್ತು. ಇವರ ಪಾನನಿರೋಧ ನೀತಿ ಯಶಸ್ವಿಯಾಗಿದೆಯೆಂದು ನಾನು ತಿಳಿದೆ.

———

ಕರ್ನಾಟಕ ಸಂಘ (ಉಡುಪಿ)ದ ಮೂರು ಪ್ರಕಟಣೆಗಳು
ಓದಲೇಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ ೩-೦-೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ತಮ್ಮನಿಗೆ ಓಲೆ—೧೧

ಸತ್ಯಂ ಶಿವಂ ಸುಂದರಂ

ವೈಜ್ಞಾನಿಕ ಸತ್ಯದರ್ಶನಪ್ರಿಯನಾದರೆ, ಧಾರ್ಮಿಕ ಶಿವದರ್ಶನಾಕಾಂಕ್ಷಿಯಾಗಿದ್ದಾನೆ. ಆದರೆ, ಸಾಹಿತ್ಯಕಾರನು ಸತ್ಯ, ಶಿವ ಮತ್ತು ಸುಂದರ— ಈ ಮೂರರ ಉಪಾಸಕನೂ ಆಗಿದ್ದು ಸರ್ವತಂತ್ರ ಸ್ವತಂತ್ರನೆನಿಸಿದ್ದಾನೆ.

ಬರೆದವರು: ಶ್ರೀ ಗೋರಾ.

ಒಂದು ವಸ್ತುವು ಪ್ರಚಾರವಾಯಿತೆಂದರೆ, ಆ ಮೇಲೆ ಅದರ ಉತ್ಪತ್ತಿಯಾದುದು ಹೇಗೆ ಎಂಬುದನ್ನು ಯಾರೂ ಗಮನಿಸುವುದಿಲ್ಲ. ದಿನದಿನವೂ ಹೊಸಹೊಸ ವಿಚಾರಗಳನ್ನು ತಿಳಿದುಕೊಳ್ಳಲು ನಾವು ಬಯಸುತ್ತೇವೆ. ಒಂದು ಬಾರಿ ವೈವಾಹಿಕ ಸಂಬಂಧವು ಕೂಡಿ ಬಂದಿತೆಂದರೆ, ಅನಂತರ ಕುಲ, ಜಾತಿಗಳತ್ತ ಯಾರೂ ಮನಸ್ಸು ಹರಿಸುವುದಿಲ್ಲ. ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ "ಸತ್ಯಂ ಶಿವಂ ಸುಂದರಂ" ಎಂಬುದು ಆದರ್ಶ ವಾಕ್ಯ ಎಂಬ ಗೌರವ ಸ್ಥಾನವನ್ನಿಂದು ಪಡೆದಿದೆ. ಈ ಉಕ್ತಿಯನ್ನು ಎಲ್ಲ ಸಾಹಿತ್ಯಕಾರರೂ ಕಲಾವಿದರೂ ಆಗಾಗ ಉದ್ಗರಿಸುತ್ತಾರೆ; ಇದನ್ನು ವೇದವಾಕ್ಯವಲ್ಲವಾದರೂ ಉಪನಿಷತ್ ವಾಕ್ಯವೆಂಬಷ್ಟು ಉಚ್ಚ ಭಾವನೆಯಿಂದ ಕಾಣುತ್ತಾರೆ. 'ಸತ್ಯಂ ಶಿವಂ ಸುಂದರಂ' ಎಂಬ ವಾದವನ್ನು ನಮ್ಮ ದೇಶದಲ್ಲಿ ಮೊತ್ತಮೊದಲು ಬ್ರಾಹ್ಮ ಸಮಾಜದವರು ತೊಡಗಿಸಿದರೆಂದೆನ್ನುತ್ತಾರೆ. ಆದರೆ, ನಿಜವಾಗಿ ಇದು "The Truth, The God, The Beautiful" ಎಂಬ ಯೂನಾನೀ ದಾರ್ಶನಿಕ ಅಫ್ಲಾತೂನ, (ಪ್ಲೇಟೊ)ವಿನ ವಾದ ಸರಣಿಯ ಅನುವಾದವಾಗಿದೆ. ಆ ನುವಾದನ ಕಾರ್ಯದ ಚತುರತೆಯಿಂದ ಈ ಉಕ್ತಿಯು ಭಾರತೀಯವೇ ಎಂಬಷ್ಟು ನೈಜವಾಯಿತು. ವಿಚಾರ ಕ್ಷೇತ್ರದಲ್ಲಿ ದೇಶೀಯ—ವಿದೇಶೀಯವೆಂಬ ಭೇದ ಭಾವನೆಗಳಿಲ್ಲದೆ ಅದರಲ್ಲಿ ವಿಶ್ವಾತ್ಮಕತೆಯಿರುವುದೆಂಬುದಕ್ಕೆ ಇದೇ ಬಲವಾದ ಆಧಾರವಾಗಿದೆ.

ಈ ಉಕ್ತಿಯು ತೋರಿಕೆಯ ಮಟ್ಟಿಗೆ ಭಾರತಕ್ಕೆ ನೂತನವೆನಿಸಿದ್ದರೂ ಇದು ಇಲ್ಲಿ ಹಳೆಯ ಕಾಲದಿಂದಲೂ ಉಳಿದುಕೊಂಡಿತ್ತು. ಸತ್ಯ ಮತ್ತು ಆನಂದಗಳ ಸಂಬಂಧವನ್ನು 'ಸಚ್ಚಿದಾನಂದ' ಎಂಬುದರಲ್ಲಿ ನಾವು ಕಾಣಬಹುದು. 'ಶಿವಂ ಸುಂದರಂ' ಎಂಬುದರ ಭಾವವನ್ನು ನಾವು "ಹಿತಂ ಮನೋಹರಿ ಚ ದುರ್ಲಭಂ ವಚಃ" ಎಂಬಿತ್ಯಾದಿಯಾದ ಪ್ರಾಚೀನ ಕಾವ್ಯಗಳ ಉಕ್ತಿಗಳಲ್ಲಿ ಕಾಣುತ್ತೇವೆ. ಮಾತಿಗೆ ಸತ್ಯಂ, ಪ್ರಿಯಂ ಮತ್ತು ಹಿತಂ ಎಂಬ ಮೂರು ವಿಶೇಷಣ ಪದಗಳನ್ನು ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಉಲ್ಲೇಖಿಸಿದ್ದಾನೆ:—"ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯ ಹಿತಂ ಚ ಯತ್" ಎಂದು. "ಸತ್ಯಂ ಶಿವಂ ಸುಂದರಂ" ಎಂಬುದರ ಭಾರತೀಯ ಮೂಲವೇ ಇದು. ಹಿತಂ ಎಂಬುದು ಶಿವಂ ಎಂಬುದರ ಮತ್ತು ಪ್ರಿಯಂ ಎಂಬುದು ಸುಂದರಂ ಎಂಬ ಪದದ ಪರ್ಯಾಯ ಪದಗಳಾಗುತ್ತವೆ.

"ಹಿತೇನ ಸಹ ಸಹಿತಂ; ತಸ್ಯಭಾವಃ ಸಾಹಿತ್ಯಂ" (ಹಿತದಿಂದ ಕೂಡಿರುವುದು ಸಹಿತ; ಅದರ ಭಾವ ಸಾಹಿತ್ಯ) ಎಂದು ಸಾಹಿತ್ಯ ಪದದ ವ್ಯುತ್ಪತ್ತಿ ಮಾಡುತ್ತಾರೆ. ಕಾವ್ಯದಲ್ಲಿ ವರ್ಣಿತವಾಗುವ ರಸ ಅಥವಾ ಆನಂದವೇ 'ಸುಂದರ'ದ ರೂಪಾಂತರವಾಗಿದೆ. ಸತ್ಯ ಮತ್ತು ಸೌಂದರ್ಯಗಳನ್ನು ಸಮನ್ವಯಿಸುತ್ತ ವಿಶ್ವಕವಿ ರವೀಂದ್ರನಾಥ ಟಾಗೋರರು "ಸೌಂದರ್ಯದಲ್ಲಿ ಸತ್ಯದ ಪೂಜೆ ನಡೆಯುತ್ತದೆ; ವಿಷ್ಣುವಿನ ಆರಾಧನೆಯು ನಾರದನ ವೀಣೆಯಿಂದಾಗುತ್ತದೆ" ಎಂದು ಒಂದೆಡೆ ಬರೆದಿದ್ದಾರೆ. ಸಾಹಿತ್ಯ ಮತ್ತು ಕಲೆಗಳ ಅಧಿದೇವತೆಯಾದ ಹಂಸವಾಹಿನೀ ಸರಸ್ವತಿಯು "ವೀಣಾ ಪುಸ್ತಕ ಧಾರಿಣಿ"ಯಾಗಿ ಅಲಂಕರಿಸಲ್ಪಡುತ್ತಾಳೆ. ನೀರಕ್ಷೀರಗಳನ್ನು ವಿವೇಕಯುತವಾಗಿ ಪರಿಶೀಲಿಸುವ ಹಂಸವು ಸತ್ಯದ ಪ್ರತೀಕವಾಗಿದೆ. ಸೌಂದರ್ಯಭಾವನೆಯು ಆಕೆಯ ಕರಗಳಲ್ಲಿ ಸುಶೋಭಿತವಾಗಿರುವ ವೀಣೆಯಲ್ಲಿದೆ. ಕಾವ್ಯದ ಉದ್ದೇಶಗಳಲ್ಲಿ "ಸದ್ಯಃ ಪರನಿರ್ವೃತ್ತಯೇ" (ಶೀಘ್ರದಲ್ಲಿ ಉತ್ಕೃಷ್ಟ ಆನಂದ ಕೊಡುವುದು) ಎಂಬುದರೊಡನೆ "ಶಿವೇತರಕ್ಷತಯೇ" (ಅಮಂಗಳಗಳ ನಾಶ) ಮತ್ತು "ಕಾಂತಾ ಸಮ್ಮಿತಯೋಪದೇಶಯುಜೇ" (ಮಡದಿಯದಂತಹ ಮಧುರ ಉಪದೇಶ) ಸೇರಿದ್ದು ಇವುಗಳಲ್ಲಿ ಹಿತ ಮತ್ತು ಸೌಂದರ್ಯವೆರಡನ್ನೂ ಉಲ್ಲೇಖಿಸಲಾಗಿದೆ. 'ಸತ್ಯಂ ಶಿವಂ ಸುಂದರಂ' ಎಂಬ ಉಕ್ತಿಯಲ್ಲಿಯೇ ಉಗಮಿಸಿದಲ್ಲಿ, ಅದರಲ್ಲಿ ನಮಗೊಂದು ಸತ್ಯದ ದರ್ಶನವಾಗುತ್ತದೆಯೆಂಬುದರಲ್ಲಿ ಸಂದೇಹವಿಲ್ಲ.

ವಿಜ್ಞಾನ, ಧರ್ಮ ಮತ್ತು ಕಾವ್ಯಗಳ ಪರಸ್ಪರ ಸಂಬಂಧ ಸೂಚಕ ಸೂತ್ರವೇ ಸತ್ಯಂ ಶಿವಂ ಸುಂದರಂ ಎಂಬುದು. ವಿಜ್ಞಾನವು ಕೇವಲ ಸತ್ಯವನ್ನರಸುತ್ತ ಧಾವಿಸುತ್ತದೆ; ಶಿವಂ (ಮಂಗಳ)ನ್ನು ಅದು ಗೌಣವಾಗಿ ತಿಳಿಯುತ್ತದೆ; ಆದರೆ, ಸುಂದರಂ ಎಂಬುದನ್ನು ದೂರೀಕರಿಸುತ್ತದೆ. ವಿಜ್ಞಾನ ಕ್ಷೇತ್ರದಲ್ಲಿ ಸತ್ಯಂನ ಮುಂದೆ ಶಿವಂ ಮತ್ತು ಸುಂದರಂಗಳು ಹಿಂದೂಡಲ್ಪಡುತ್ತವೆ. ವೈಜ್ಞಾನಿಕನು ಕೇವಲ ನಗ್ನ ಸತ್ಯದ ಉಪಾಸಕನಾಗಿದ್ದಾನೆ; ಆ ಸತ್ಯವು ಅದೆಷ್ಟು ಭಯಾವಹವೆನಿಸಿದರೂ ಆತನದನ್ನು ಗಮನಿಸುವುದಿಲ್ಲ. ರೂಪಾಯಿಗೆ ನೂರು ನಯೇ ಪೈಸೆಯ ಸತ್ಯವನ್ನು ಮಾತ್ರವೇ ಅವನು ಬಯಸುತ್ತಾನೆ. ಭೀಭತ್ಸತೆಯನ್ನಾತನೆಂದಿಗೂ ಗಮನಿಸುವುದಿಲ್ಲ ಆತನ್ನು ಕೇವಲ ಸತ್ಯಂ ಬ್ರೂಯಾತ್ (ಸತ್ಯವನ್ನಾಡು) ಎಂಬುದನ್ನು ತಿಳಿದು ಅದರಂತೆ ಆಚರಿಸುತ್ತಾನೆಯೇ ಹೊರತು 'ಪ್ರಿಯಂ ಬ್ರೂಯಾತ್' ಎಂಬ ಮಾತನ್ನಾತ ಕೇಳಿರುವುದೇ ಇಲ್ಲ. ಈ ಸತ್ಯವನ್ನು ಯಾರಾದರೂ ಅಲಂಕಾರ ಪ್ರಿಯತೆಯಿಂದ ಎಳ್ಳಷ್ಟು ಬದಲಾಯಿಸಿದರೆಂದರೆ, ವೈಜ್ಞಾನಿಕನ ದೃಷ್ಟಿಯಲ್ಲಿ ಆತನು ಮಹಾಪರಾಧಿಯಾಗಿ ನಿಲ್ಲುತ್ತಾನೆ. ಆತ ತನ್ನ ಪ್ರಾಣ ಮತ್ತು ಸತ್ಯಗಳನ್ನು ಏಕಸಮವೆಂದು ತಿಳಿದು ಎರಡರ ರಕ್ಷಣೆಗೂ ಏಕರೀತಿಯಾಗಿ ಬದ್ಧಕಂಕಣನಾಗಿರುತ್ತಾನೆ.

ಧಾರ್ಮಿಕನು 'ಶಿವಂ'ದತ್ತ ಆಸಕ್ತಿ ವಹಿಸುತ್ತಾನೆ. ಇದರಲ್ಲಿಯೇ ಆತ ಸತ್ಯವನ್ನು ಕಾಣುತ್ತಾನೆ. ಮಾಂಗಲಿಕ ಘಟಗಳಿಂದ ಆತ ಲಕ್ಷ್ಮಿಗೆ ಅಭಿಷೇಕ ನಡೆಸುತ್ತಾನೆ; ಏಕೆಂದರೆ, ನೀರು ಜೀವನವಾಗಿದೆ; (ಜೀವನ=ನೀರು) ಕೃಷಿಗೆ ಆಧಾರವಾಗಿದೆ, ಮಾನವ ಮಾಂಗಲ್ಯದ ಸಂಕೇತವಾಗಿದೆ. ಸರಸ್ವತಿಯಲ್ಲಿ ಸತ್ಯ ಮತ್ತು ಸುಂದರಗಳು ಒಂದಾಗಿ ಸೇರಿಕೊಂಡಿರುವಂತೆ ಶಿವ ಮತ್ತು ಸುಂದರಗಳು ಲಕ್ಷ್ಮಿಯಲ್ಲಿ ಮಿಲನಗೊಂಡಿವೆ. ಶಿವನು ಕಲ್ಯಾಣ ಅಥವಾ ಜನಹಿತ ಮಾಡುವುದರಿಂದಲೇ ಆತನನ್ನು ಮಹಾದೇವ ಎಂಬುದಾಗಿ ಕರೆಯುತ್ತಾರೆ. ವೇದಗಳಲ್ಲಿಯೂ "ಶಿವಸಂಕಲ್ಪಮಸ್ತು" ಎಂಬ ಉಲ್ಲೇಖ ನಮಗೆ ಸಿಗುತ್ತದೆ. ಧಾರ್ಮಿಕನು ಸತ್ಯವನ್ನು ಇದ್ದಕ್ಕಿದ್ದಂತೆ ಎಂದಿಗೂ ಪೂಜಿಸಲಾರನು; ಆತನಿಗೆ ಸತ್ಯವು ಮಾಂಗಲಿಕ ರೂಪವನ್ನು ತಾಳಿಕೊಂಡಿರುತ್ತದೆ. ಇಹಲೋಕವನ್ನು ಮಾತ್ರ ಆತ ಗಮನಿಸುವುದಿಲ್ಲ; ಪರಲೋಕದ ಚಿಂತೆಯನ್ನೂ ಅವನು ಮಾಡುತ್ತಾನೆ. ತನ್ನಾತ್ಮವನ್ನು ಆತ ಪರಮ ಶ್ರೇಯಸ್ಸಿನತ್ತ ಕೊಂಡೊಯ್ಯುವ ಪ್ರಯತ್ನವನ್ನು ಗೆಯ್ಯುತ್ತಾನೆ.

ಸಾಹಿತಿಯು ಈ ಇಬ್ಬರಿಂದಲೂ ಭಿನ್ನನಾಗಿದ್ದಾನೆ; ಶ್ರೇಷ್ಠನಾಗಿದ್ದಾನೆ. ಆತ ಸತ್ಯ, ಶಿವ ಮತ್ತು ಸುಂದರ ಮೂರಕ್ಕೂ ಮನ್ನಣೆಯೀಯುತ್ತಾನೆ; ಸುಂದರದ ಕಡೆಗೆ ವಿಶೇಷ ಲಕ್ಷ್ಯವಿಡುತ್ತಾನೆ. "ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನಬ್ರೂಯಾತ್ ಸತ್ಯಮಪ್ರಿಯಂ" (ಪ್ರಿಯವಾದ ಸತ್ಯವನ್ನು ಹೇಳಬೇಕು; ಅಪ್ರಿಯವೆನಿಸುವುದನ್ನು ಸತ್ಯವಾದರೂ ಹೊರಗೆಡಹಬೇಡ) ಎಂಬುದನ್ನು ಆತ ಅಕ್ಷರಶಃ ಪಾಲಿಸಿಕೊಂಡು ಬರುತ್ತಿರುತ್ತಾನೆ. ಹಿತವನ್ನು ಮನೋಹರವಾಗಿ ಅಲಂಕರಿಸಿ, ಸತ್, ಚಿತ್ ಮತ್ತು ಆನಂದಗಳನ್ನು 'ಸಚ್ಚಿದಾನಂದ'ದ ರೂಪದಲ್ಲಿ ಒಂದಾಗಿಸಿ ಅವನ್ನು ಗೌರವಿಸುತ್ತಾನೆ. ಈ ಆನಂದವನ್ನು ಅಥವಾ ರಸವನ್ನೇ ತನ್ನ ಜೀವನವೆಂದು ತಿಳಿಯುತ್ತಾನೆ. ಆತನ ಹೃದಯದಲ್ಲಿ ರಸವೇ ತುಂಬಿಕೊಂಡಿರುತ್ತವೆ.

ಸತ್ಯಂ, ಶಿವಂ, ಸುಂದರಂಗಳು ಸಾಹಿತಿಗಾಗುವಾಗ ಒಂದಕ್ಕಿಂತ ಇನ್ನೊಂದು ಮಹತ್ವದಲ್ಲಿ ಹೆಚ್ಚಿನವಾಗುತ್ತವೆ. ಸಾಹಿತಿಯು ಇವನ್ನು ಯಾವ ರೀತಿಯಲ್ಲಿ ಆದರಿಸುತ್ತಾನೆ? ವೈಜ್ಞಾನಿಕನಂತೆ ಕವಿ ಸತ್ಯವನ್ನೇ ಧರ್ಮವೆಂದು ತಿಳಿಯುವುದಿಲ್ಲ. ಸತ್ಯದ ಬಾಹ್ಯರೂಪವನ್ನು ಕಡೆಗಣಿಸಿ, ಅದರ ಆತ್ಮ ರಕ್ಷಣೆಯತ್ತ ಮಾತ್ರ ಸಾಹಿತಿ ಮನಗೊಡುತ್ತಾನೆ. ಘಟ್ಟಿಕ ಸತ್ಯ ದರ್ಶನವನ್ನಾತ ಅಪೇಕ್ಷಿಸುವುದಿಲ್ಲ; ಘಟನೆಯ ಸತ್ಯತೆಯನ್ನಾತ ಸ್ವೀಕರಿಸುತ್ತಾನೆ. ಆದರೆ, ಇದನ್ನು "ಸುಂದರಂ"ನ ಕುಲುಮೆಯಲ್ಲಿ ಹಾಕಿ ಆನಂದದ ರೂಪಗೊಟ್ಟು ಹೊರಗೆಡಹುತ್ತಾನೆ. ಸಾಹಿತ್ಯ ಕೃತಿಗಳು ಇತಿಹಾಸವಲ್ಲ; ಸತ್ಯ ವರ್ಣನೆಯು ಅವುಗಳ ಉದ್ದೇಶವೂ ಅಲ್ಲ.

ಕೆಲವೊಮ್ಮೆ ಕಾವ್ಯಗಳಲ್ಲಿ ಸತ್ಯವು ಮಿಥ್ಯದ ರೂಪಹೊಂದಿ, 'ಸುಂದರಂ' ಆಗಿ ರೂಪಾಂತರ ಹೊಂದುವುದೂ ಇದೆ. ರಾಮನಲ್ಲಿಯೂ ಕೃಷ್ಣನ ರೂಪವನ್ನು ಕಾಣ ಬಯಸುವ ಕವಿಗಳಂತೆಯೇ ಸತ್ಯದಲ್ಲೂ ಸುಂದರವನ್ನರಸುವ ಬಗ್ಗೆ ಕವಿಗಳು ಮುಂದಾಗುತ್ತಾರೆ. ಇದರಿಂದ ಸತ್ಯದ ಗೌರವಕ್ಕೆ ಕುಂದುಂಟಾದಂತಾಗಲಿಲ್ಲ. ಕವಿಯು ಸ

(೬ನೇ ಪುಟ ನೋಡಿರಿ)

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ.

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 250/60

ಕೆ. ಆನಂದನ್ —ವಾದಿ.

ಮತ್ತು

ಸರ್ಸಿ ಬಾಯಿ, ಗಂಗೆ ಪೂಜಾರ್ತಿ ಮಗಳು, ವ, ಸಿಜನ ಪೂಜಾರಿ ಮೊಮ್ಮಗಳು, ಉಡ್ಪಿ ತಾಲ್ಲೂಕು ಕೊಡವೂರು ಗ್ರಾಮದ ಮಲ್ಪೆಯಲ್ಲಿರುವುದು —ಪ್ರತಿವಾದಿ.

ಇವರೊಳಗೆ—

ಮೇಲಿನ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ.—

ಮೇಲಿನ ವಾದಿಯು ನಿಮ್ಮ ಮೇಲೆ ಈವಿನ ಆಸ್ತಿ ವಸೂಲಿ ಬಗ್ಗೆ ದಾಖಲು ಮಾಡಿದ ಮೇಲಿನ ದಾವೆಯು ತಾ. ೬-೮-೬೦ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ದಿನ್ನ ನೀವು ಖುದ್ದಾಗಿಯಾಗಲೀ ವ, ವಕೀಲ್ ಮುಖಾಂತರವಾಗಿಯಾಗಲೀ ಸದ್ರಿ ಕೋರ್ಟು ಮುಂದೆ ಬೆಳಗ್ಗೆ 10 ಗಂಟೆಗೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಿಂದ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(By the order of the Court)

Perody Vittal Shetty,
B. A., LL. B.
Advocate for Plaintiff.

ಉಡ್ಪಿ, ತಾ. 16-7 60

> ಮಾನವನು ಮರಣಗೊಳ್ಳುವುದು ಹೇಗೆ ಎಂಬುದು ವಿಶೇಷ ಮಹತ್ವದ ಸಂಗತಿಯಲ್ಲ; ಆದರೆ, ಆತ ಬದುಕಿರುವುದು ಹೇಗೆ ಎಂಬುದು ಮಾತ್ರ ಅತಿ ಮಹತ್ವದ ವಿಚಾರ.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೧-೭-'೬೦	೪೬

ಕಾಂಗೋವಿನಲ್ಲಿ ಗೊಂದಲ

ವಸಾಹತು ವಾದವು ಕೊನೆಗೊಂಡು ಪ್ರಜಾಸತ್ತೆಯ ಸ್ವತಂತ್ರ ವಾತಾವರಣದಲ್ಲಿ ವಿಹರಿಸಬೇಕೆಂಬ ತಹತಹವಿಂದು ವಿಶ್ವದಾದ್ಯಂತದಲ್ಲೂ ಪ್ರಬಲವಾಗತೊಡಗಿದೆ. ಈ ತಿಳಿವಿನ ಬೆಳಕು ಏಶ್ಯದಲ್ಲಿ ಮೊದಲು ತೋರಿದರೆ, ಇತ್ತೀಚೆಗಿನ ಕೆಲ ವರ್ಷಗಳಿಂದ ಕತ್ತಲೆಯ ಭೂಖಂಡವಾದ ಆಫ್ರಿಕೆಯುತ್ತ ಈ ಬೆಳಕು ಪಸರಿಸುತ್ತಿರುವುದು ಗೋಚರವಾಗುತ್ತಿದೆ. ಆಫ್ರಿಕೆಯ ಹೆಚ್ಚಿನ ಭೂಭಾಗವು ಪಾಶ್ಚಾತ್ಯರ, ಮುಖ್ಯವಾಗಿ ಐರೋಪ್ಯರ, ವಸಾಹತುಗಳಾಗಿ ಸ್ವಾತಂತ್ರ್ಯವಿಹೀನವಾಗಿ ಪರಾಡಳಿತೆಯ ಕಪಿಮುಷ್ಟಿಯಲ್ಲಿ ಯಾತನೆ ಪಡುತಿದ್ದರೂ ಈಗೀಗ ಅಲ್ಲಿ ನವಚೇತನ ಹಾಗೂ ಹೊಸ ಹುಮ್ಮಸ್ಸು ಕೋಡಿ ಹರಿಯತೊಡಗಿದುದರ ಪರಿಣಾಮವಾಗಿ ಒಂದೊಂದೇ ವಸಾಹತು ಸ್ವತಂತ್ರವಾಗತೊಡಗಿತು. ಪಾಶ್ಚಾತ್ಯ ರಾಷ್ಟ್ರಗಳು ಈ ಬಗ್ಗೆ ಉದಾರ ವರ್ತನೆ ತೋರಿಸತೊಡಗಿದುದೂ ಇವುಗಳು ಇಷ್ಟೊಂದು ಶೀಘ್ರವಾಗಿ ಬಿಡುಗಡೆಹೊಂದಲು ಕಾರಣವಾಯಿತು. ಇದೇ ರೀತಿಯಲ್ಲಿ ಇನ್ನೂ ಪರತಂತ್ರವಲ್ಲಿರುವ ಕೆಲವು ದೇಶಗಳೂ ಸ್ವತಂತ್ರನಾಗಲು ಹೆಚ್ಚು ಸಮಯ ತಗಲದೆಂದು ಹಾರಯ್ಸಬಹುದು.

ಅಂಧಕಾರ—ಅದರಲ್ಲೂ ಗಾಢಾಂಧಕಾರ—ದ ಆಫ್ರಿಕನ್ ದೇಶವಾದ ಬೆಲ್ಜಿಯಂ ಕಾಂಗೋವು ಮೊನ್ನೆ ಮೊನ್ನೆ ಸ್ವತಂತ್ರವಾಯಿತು. ಬೆಲ್ಜಿಯನರು ತಮ್ಮ ವಸಾಹತು ಕಾಂಗೋವಿಗೆ ಸ್ವಾತಂತ್ರ್ಯವನ್ನು ಪ್ರದಾನಮಾಡಿದರೂ ಅವರಿಗೆ ಈ ದೇಶವನ್ನು ಕೈಬಿಟ್ಟುಕೊಳ್ಳಲು ಎಳ್ಳಷ್ಟೂ ಮನಸ್ಸಿಲ್ಲವೆಂಬುದಕ್ಕೆ ಸಾಕಷ್ಟು ಆಧಾರಗಳು ಈಗ ದೊರೆಯುತ್ತಿವೆ. ಕಾಂಗೋದಲ್ಲಿರುವ ಬೆಲ್ಜಿಯನರ ರಕ್ಷಣೆಯ ನೆಪವನ್ನು ಮುಂದಿಟ್ಟು ಕಾಂಗೋ ದೇಶವಾಸಿಗಳನ್ನು ಮತ್ತೂ ತಮ್ಮ ಅಂಕಿತದಲ್ಲಿರಿಸುವ ಹವಣಿಕೆ ಮಾಡಿದರು. ಕಾಂಗೋ ಜನರ ಮೇಲೆ ತಮ್ಮ ದರ್ಪ ಹಾಗೂ ದುರ್ವರ್ತನೆಯನ್ನು ಹೇರ ತೊಡಗಿದರು. ಇದರ ಮರ್ಮವನ್ನರಿತ ಕಾಂಗೋ ಜನತೆಯು ಅವರ ವಿರುದ್ಧವಾಗಿ ದಂಗೆಯೆದ್ದಿತು. ದೇಶದಲ್ಲಿನ ಯುರೋಪಿಯನ್ನರು ಈ ಸ್ಥಿತಿಯಲ್ಲಿ ಸಂಕಷ್ಟಕ್ಕೀಡಾದರು. ಇದೇ ಸಂದರ್ಭದಲ್ಲಿ ಕಾಂಗೋವಿನ ಸಂಪತ್ಸಮೃದ್ಧ ರಾಜ್ಯವಾದ ಕಟಾಂಗಾದ ಮುಖ್ಯ ಮಂತ್ರಿಗಳು ಕೇಂದ್ರದೊಡನಿರುವ ತನ್ನ ಸಂಪರ್ಕವನ್ನು ಕಳೆದುಕೊಂಡು, ಅದನ್ನು ಸ್ವತಂತ್ರ ರಾಜ್ಯವೆಂದೂ ಅದರ ಸ್ವಾತಂತ್ರ್ಯವನ್ನು ವಿಶ್ವದ ಇತರ ರಾಷ್ಟ್ರಗಳು ಮನ್ನಿಸಬೇಕೆಂದೂ ಘೋಷಣೆಯಿತ್ತರು. ಈ ರೀತಿಯಾಗಿ ಕಾಂಗೋ ರಾಷ್ಟ್ರ ಸ್ವಾತಂತ್ರ್ಯ ಪ್ರಾಪ್ತಿಯ ಕೆಲವೇ ದಿನಗಳಲ್ಲಿ ಬಹುದೊಡ್ಡ ಗಂಡಾಂತರವನ್ನಿದಿರಿಸಬೇಕಾಯಿತು.

ಕಾಂಗೋವಿನಲ್ಲಿನ ಗೊಂದಲವನ್ನು ಅಣಗಿಸಿ, ಬೆಲ್ಜಿಯನ್ ಸೈನಿಕರನ್ನು ಹಿಂದಕ್ಕಟ್ಟುವ ಮಹಾ ಕಾರ್ಯವನ್ನು ಪೂರಯ್ಸಲು ಸಂಯುಕ್ತ ರಾಷ್ಟ್ರ ಸಂಸ್ಥೆಯ ಸೈನ್ಯವನ್ನು ಈಗ ಕಳಿಸಲಾಗಿದೆ, ಈ ಸೈನ್ಯವು ಅಲ್ಲಿ ಆವಶ್ಯಕ ಶಾಂತಿಯನ್ನು ಸ್ಥಾಪಿಸುವುದೆಂದು ಹಾರಯ್ಸಬಹುದು. ಆದರೆ, ಸಂಯುಕ್ತ ರಾಷ್ಟ್ರ ಸಂಸ್ಥೆಯು ಸ್ಥಾಪನೆಯಾದಂದಿನಿಂದ ಇದುವರೆಗಿನ ತನ್ನ ಇತಿಹಾಸದಲ್ಲಿ ಈ ರೀತಿಯಲ್ಲಿ ಒಂದು ದೇಶದ ಆಂತರಿಕ ಶಾಂತಿಯನ್ನು ಕಾಯ್ದುಕೊಳ್ಳುವ ಸಲುವಾಗಿ ತನ್ನ ಸೇನೆಯನ್ನು ಕಳಿಸಿದ ಘಟನೆಗಳಿಲ್ಲ, ರಾಷ್ಟ್ರಗಳ ಸೀಮಾರೇಖೆಯ ರಕ್ಷಣೆ, ಯುದ್ಧ ತಾಟಸ್ಥ್ಯ ವೀಕ್ಷಣೆಗಳಿಗಾಗಿ ಕೋರಿಯಾ ಸ್ವೇ ಮೊದಲಾದ ದೇಶಗಳಲ್ಲಿ ಈ ಸೇನೆಗಳು ಕಾರ್ಯ ಪ್ರವೃತ್ತವಾಗಿವೆಯೇ ಹೊರತು ಒಂದು ದೇಶದ ಆಂತರಿಕ ಸುವ್ಯವಸ್ಥೆ ಹಾಗೂ ಐಕ್ಯಸಾಧನೆಗಾಗಿ ದುಡಿದಿರುವುದಿಲ್ಲ. ಇದರಿಂದಾಗಿ ವಿಶ್ವಸಂಸ್ಥೆಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಈಗ ತೆರೆದಂತಾಗಿದೆ. ಈ ಸೇನೆಯು ತನ್ನ ಉದ್ದೇಶವನ್ನು ಎಷ್ಟರ ಮಟ್ಟಿಗೆ ನಿರ್ವಹಿಸುವುದು ಎಂಬುದು ಮುಂದೆ ನೋಡಬೇಕಾಗಿದೆ.

ಈ ನಡುವೆ ಮತ್ತೊಂದು ಮಾತು ಕೇಳಿಬರುತ್ತಿದೆ. ಕಾಂಗೋದಿಂದ ಸಿಡಿದು ಸ್ವಾತಂತ್ರ್ಯ ಘೋಷಣೆ ಮಾಡಿದ ಕಟಾಂಗಾ ಪ್ರಾಂತ್ಯವು ಇದೇ ದಂಗೆಯ ಲಾಭವನ್ನೆತ್ತಿಕೊಂಡು ಈ ರೀತಿ ಮಾಡಿರುವುದಕ್ಕೆ ಬೆಲ್ಜಿಯಮೇ ಕಾರಣವೆಂದು ಹೇಳಲಾಗುತ್ತಿದೆ. ಸುಮಾರು ಯುರೋಪಿನಷ್ಟು ವಿಸ್ತಾರವಿರುವ ಕಾಂಗೋ ಘೋರಾರಣ್ಯಗಳಿಂದ ತುಂಬಿಹೋಗಿದೆ. ಕಟಾಂಗದಲ್ಲಿ ಹೇರಳ ಪ್ರಮಾಣದಲ್ಲಿ ತಾಮ್ರ ಮತ್ತು ರಬ್ಬರುಗಳು ದೊರೆಯುತ್ತಿದ್ದು, ಕಾಂಗೋವಿನ ಔದ್ಯಮಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಿದೆ. ಇದರಿಂದಾಗಿ, ಬೆಲ್ಜಿಯನರು ಕಟಾಂಗವನ್ನು ಉಳಿದ ಸಂಯುಕ್ತ ಕಾಂಗೋವಿಗೆ ಎದುರಾಗಿ ಎತ್ತಿಕಟ್ಟಿ, ತಮ್ಮ ಬೇಳೆ ಬೇಯಿಸಿಕೊಳ್ಳಲು ಷಡ್ಯಂತ್ರವನ್ನು ಹೂಡುತ್ತಿರುವರೆಂದೂ ನಾವು ತಿಳಿಯಬಹುದು. ಒಂದು ಕೈಯಲ್ಲಿ ಸ್ವಾತಂತ್ರ್ಯವನ್ನು ಕೊಟ್ಟು ಇನ್ನೊಂದರಿಂದ ಅದನ್ನು ಅಪಹರಿಸುತ್ತಿರುವ ಬೆಲ್ಜಿಯಮದ ಈ ವರ್ತನೆಯು ಸರ್ವಥಾ ಖಂಡನಾರ್ಹ. ಇಷ್ಟು ಮಾತ್ರವಲ್ಲದೇ ಬೆಲ್ಜಿಯನರು ಅದರೊಳಗಿನ ವಾರ್ತೆಗಳಿಗೆ ಉಪ್ಪು ಖಾರ ಹಚ್ಚಿ ಅತಿಶಯೋಕ್ತಿಯೊಡನೆ ಪ್ರಸಾರ ಮಾಡುವ ಅಭ್ಯಾಸವಿಟ್ಟಿರುವರೆಂದೂ ತನ್ಮೂಲಕ ಸ್ವಾತಂತ್ರ್ಯ ಪಡೆಯಲು ಈ ಮಾದರಿಯ ದೇಶಗಳು ಅಶಕ್ತವಾಗಿರುವುವೆಂದು ಪ್ರಚಾರಗೊಳಿಸುವ ಪ್ರಯತ್ನ ನಡೆಸುವರೆಂದೂ ದೂರು ಕೇಳಿಬರುತ್ತದೆ. ಈ ಮಾತನ್ನು ಅದೆಷ್ಟರ ಮಟ್ಟಿಗೆ ನಂಬಬಹುದೆಂದು ತಿಳಿಯಲಾರೆವಾದರೂ ಸಂಪೂರ್ಣವಾಗಿ ಅಲ್ಲಗಳೆಯುವುದು ಅಸಾಧ್ಯ. ಕಾಂಗೋವು ಸ್ವಾತಂತ್ರ್ಯದ ನಂತರ ಅನಿರೀಕ್ಷಿತವಾಗಿ ಬೀಸುವ ಬಿರುಗಾಳಿಯ ಹೊಡೆತದಿಂದ ಉಳಿದುಕೊಂಡು, ಸ್ವಾತಂತ್ರ್ಯದ ಸುಖಭೋಗವನ್ನು ಅನುಭವಿಸಲಿಯೆಂದು ಎಲ್ಲ ಸಭ್ಯ ಸ್ವತಂತ್ರ ರಾಷ್ಟ್ರಗಳ ಪ್ರಜೆಗಳು ಆಶಿಸುತ್ತಾರೆ. ಸಂಯುಕ್ತ ರಾಷ್ಟ್ರ ಸಂಸ್ಥೆಯ ಸೈನ್ಯದ ಸಹಾಯದಿಂದ ದೇಶದ ಆಂತರಿಕ ಐಕ್ಯ ಮತ್ತು ಶಾಂತಿಗಳನ್ನು ಉಳಿಸಿಕೊಂಡು ಘಾನದಂತೆಯೇ ಪ್ರಗತಿ ಪಥದಲ್ಲಿ ಕಾಂಗೊ ನಡೆಯಲು ಪ್ರಯತ್ನಿಸಲೆಂದು ಹಾರಯ್ಸುತ್ತೇವೆ.

ಬೆಲೆ ಇಳಿಯಬೇಕು

“ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ” ಎಂಬ ದಾಸರ ಉಕ್ತಿಯು ಕೇಳಿಕೆಯ ಬಗ್ಗೆ ಹಳೆಯದೆನಿಸಿದರೂ ಅದರಲ್ಲಿ ಅಡಕವಾಗಿರುವ ಸತ್ಯದರ್ಶನವು ಎಂದೆಂದಿಗೂ ಹಳೆಯದಾಗದು. ಮರ್ಯಾದೆಯಿಂದ ಉಂಡುತಿಂದು ಬದುಕಬೇಕಾದರೆ, ಇಂದಿನ ಕಾಲದಲ್ಲಿ ಹಣವು ಮುಖ್ಯವಾಗಿದೆ. ಹಣವೆಷ್ಟು ಬಂದರೂ ಅದು ಕಡಿಮೆಯೆನಿಸುವ ಯುಗವಿದು. ಜೀವನದ ವೆಚ್ಚವು ದಿನದಿಂದ ದಿನಕ್ಕೆ ಏರುತ್ತ ಬರುತ್ತಿರುವುದರಿಂದ ಕೈಗೆಷ್ಟುಗಳಿಕೆ ಬಂದರೂ ಅದು ಸಾಲದೆನಿಸುತ್ತದೆ. ಆದುದರಿಂದಲೇ ಆದಾಯ ಹೆಚ್ಚಬೇಕೆಂಬ ಕೂಗು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಅನಿಶ್ಚಿತ ವರಮಾನವಿರುವ ಕೃಷಿಕರನ್ನುಳಿದರೆ ಉಳಿದವರೆಲ್ಲರೂ—ಕೂಲಿಗಳು, ಸರಕಾರಿ ನೌಕರರು, ಅಧ್ಯಾಪಕರು, ಖಾಸಗಿ ಸಂಘ ಸಂಸ್ಥೆಗಳ ದುಡಿಮೆಗಾರರು ಮೊದಲಾದವರು—ತಮಗೆ ಹೆಚ್ಚಿನ ವೇತನ ಬೇಕೆಂಬ ಬೇಡಿಕೆಯನ್ನು ಈ ಕಾರಣವನ್ನು ಮುಂದಿಟ್ಟು ಇರಿಸಿದ್ದಾರೆ; ಇರಿಸುತಿದ್ದಾರೆ. ಕೇಂದ್ರ ಸರಕಾರದ ವಿವಿಧ ವಿಭಾಗಗಳ ನೌಕರರು ಸಾರ್ವತ್ರಿಕವಾಗಿ ಹೂಡಿದ ಸಂಪಿನ ಮುಖ್ಯ ಕಾರಣವಾದರೂ ಇದೇ ಆಗಿತ್ತು. ಆದರೆ, ಜೀವನದ ವೆಚ್ಚವೇರಿದುದು ತಮಗೆ ಮಾತ್ರವಲ್ಲ, ತಮಗೆ ವೇತನವೀಯುವ ಸರಕಾರದ ಬೊಕ್ಕಸಕ್ಕೆ ಕರಗಳ ಮೂಲಕ ರೊಕ್ಕ ತುಂಬಿಸುವ ಜನಸಾಮಾನ್ಯರಿಗೂ ತಮ್ಮಂತೆಯೇ ಜೀವನ ನಿರ್ವಹಿಸುವುದು ಕಷ್ಟಪ್ರದವಾಗಿದೆ ಎಂಬುದನ್ನವರು ಮರೆತು ಬಿಟ್ಟಿದ್ದರು. ಅದನ್ನು ಈ ಬಾರಿ ಜನತೆ ನೆನಪಿಗೆ ತಂದುಕೊಟ್ಟಿತು. ತತ್ಪರಿಣಾಮವಾಗಿ ಸಂಪು ವಿಫಲವಾಯಿತು.

ಸಂಪು ವಿಫಲವಾಯಿತೆಂದೂ ಕೇಂದ್ರ ನೌಕರರ ಸೊಕ್ಕು ಅಣಗಿತೆಂದೂ ನಾವು ತೃಪ್ತಿಪಟ್ಟುಕೊಂಡರೆ ಅದು ತಪ್ಪೆನಿಸುವುದು. ಜೀವನದ ವೆಚ್ಚದ ಮಟ್ಟವನ್ನಿಳಿಸಲು ವೇತನ ಹೆಚ್ಚಿಗೆ ಈಯುವುದೇ ಪರಿಹಾರವೆನಿಸುವುದೆಂದು ಹೇಳಿದರೆ, ಅದು ತಪ್ಪಾಗುವುದು. ನಿತ್ಯಜೀವನಕ್ಕೆ ಅತ್ಯಂತಾವಶ್ಯಕ ಪದಾರ್ಥಗಳ ಬೆಲೆಯು ಏರದಂತೆ ಸ್ಥಿಮಿತದಲ್ಲಿಟ್ಟುಕೊಳ್ಳುವುದರಿಂದ ತುಂಬ ಪ್ರಯೋಜನವಾದೀತು. ದೇಶದೊಳಗೆ ಆಹಾರ ಪದಾರ್ಥದಿಗಳ ಸಾಗಾಣಿಕೆಗೆ ನಿರ್ಬಂಧವನ್ನು ಹೇರುವುದರಿಂದ ಕೃತ್ರಿಮ ಅಭಾವವು ಗೋಚರಿಸಿ ಅವುಗಳ ಬೆಲೆಯೇರಲು ಕಾರಣವಾಗುತ್ತದೆ. ಆದುದರಿಂದ ದೇಶದೊಳಗೆ ಅನಿರ್ಬಂಧ ಸಾಗಾಣಿಕೆಯ ವ್ಯವಸ್ಥೆಯಾಯಿತೆಂದರೆ, ಈ ಕೃತ್ರಿಮ ಅಭಾವವು ಬಹಳಷ್ಟು ಮಾಯವಾಗಿ, ಪೇಟೆಗಳಲ್ಲಿ ಪರ್ಯಾಪ್ತ ಪ್ರಮಾಣದಲ್ಲಿ ನ್ಯಾಯವಾದ ದರದಲ್ಲಿ ಆಹಾರ ಧಾನ್ಯಗಳೂ ಇನ್ನಿತರ ಆಹಾರ ಪದಾರ್ಥಗಳೂ ದೊರೆಯುವುದು ಸಾಧ್ಯವಿದೆ. ಜೀವನದ ವೆಚ್ಚವನ್ನೇ ಈ ರೀತಿಯಾಗಿ ಇಳುವರಿಯಲ್ಲಿರಿಸಲು ಸರಕಾರವು ಪ್ರಯತ್ನ ನಡೆಸಿ ಅದರಲ್ಲಿ ಅದು ಯಶಸ್ವಿಯಾಯಿತೆಂದರೆ, ಆಗ, ಕೇವಲ ಕೇಂದ್ರ ನೌಕರರಿಗೆ ಮಾತ್ರವಲ್ಲ; ದೇಶದ ಸಮಸ್ತ ಪ್ರಜೆಗಳಿಗೂ ಇದರ ಲಾಭವು ದೊರೆಯುವುದು. ಇದರಿಂದ ದೇಶವಾಸಿಗಳಲ್ಲಿಯೂ ತೃಪ್ತಿಯ ನಿಟ್ಟುಸಿರು ಬಿಡುವುದು ಸಾಧ್ಯ. ಕೇಂದ್ರ ಸರಕಾರಿ ನೌಕರರು ಹೂಡಿ ನಿಲ್ಲಿಸಿದ ಸಂಪು ಮತ್ತೇನನ್ನು ಮಾಡದೆ ಹೋದರೂ ಸರಕಾರದ ಗಮನವನ್ನು ಇತ್ತ ಹರಿಯುವಂತೆ ಕೇಳಿಕೊಂಡಿದೆ. ಈ ಬಗ್ಗೆ ಸರಕಾರ ತೀವ್ರಗತಿಯಲ್ಲಿ ಆವಶ್ಯಕ ಕೆಲಸಗಳನ್ನು ಮಾಡಿ, ಜನತೆಯ ವಿಶ್ವಾಸಕ್ಕೆ ಪಾತ್ರವಾಗುವುದೆಂದು ಆಶಿಸಬಹುದು.

ಅಲ್ಲಲ್ಲಿಯ ಸುದ್ದಿ ಸಾರ

ಜಿಲ್ಲಾ ಕಾಂಗ್ರೆಸಿನ ಪರವಾಗಿ ಕೃತಜ್ಞತೆಗಳು—ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಟಿ. ಎ. ಪೈಗಳವರು ಕೆಳಗಿನಂತೆ ಪ್ರಕಟನೆ ಹೊರಡಿಸಿದ್ದಾರೆ:—ಕೇಂದ್ರ ಸರಕಾರೀ ನೌಕರರ ಸಂಪು ಹಿಂತೆಗೆಯಲ್ಪಟ್ಟಿತು ಎಂಬುದನ್ನು ಕೇಳಿ ತುಂಬ ಸಂತೋಷವಾಯಿತು. ನಮ್ಮ ಗಡಿಗಳಲ್ಲಿಯ ಅನಿಶ್ಚಿತತೆಯ ಸಮಯದಲ್ಲಿ ಹಾಗೂ ದೇಶದ ಏಳಿಗೆಗಾಗಿ ಪಂಚವಾರ್ಷಿಕ ಯೋಜನೆಗಳ ಯಶಸ್ಸಿಗಾಗಿ ದುಡಿಯಬೇಕಾದ ಸಮಯದಲ್ಲಿ ಸಂಪಿನ ಸಂದರ್ಭವುಂಟಾದುದು ದುರದೃಷ್ಟಕರವಾಗಿದ್ದರೂ ಸಾರ್ವಜನಿಕರ ಬೆಂಬಲವನ್ನು ಕಳಕೊಂಡು ಬೇಗನೆ ಮುಕ್ತಾಯವಾದುದು ಸಂತೋಷಕರವಾಗಿದೆ.

ಈ ಮುಷ್ಕರದ ಕಾಲದಲ್ಲಿ ಸಾರ್ವಜನಿಕರು ಸ್ವಯಂ ಸೇವಾಸ್ಫೂರ್ತಿಯಿಂದ ಸರಕಾರಕ್ಕೆ ಬೆಂಬಲವಾಗಿ ನಿಂತು ಸಾರ್ವಜನಿಕ ಜೀವನಕ್ಕೆ ಯಾವ ಅನಾನುಕೂಲತೆಯೂ ಆಗದಂತೆ ನೋಡಿಕೊಂಡದ್ದನ್ನು ನಿಜವಾಗಿಯೂ ಕೊಂಡಾಡಬೇಕಾಗಿದೆ.

ನಮ್ಮ ಜಿಲ್ಲೆಯ ಅನೇಕ ಮಹಾಜನರೂ ಮಹಿಳೆಯರೂ ಈ ರಾಷ್ಟ್ರೀಯ ಸಮಸ್ಯಾ ಕಾಲದಲ್ಲಿ ಅಂಚೆ ತಾರೆಯ ಕಾರ್ಯಕಲಾಪ ಮೊದಲಾದುವುಗಳ ನಿರ್ವಹಣೆಯಲ್ಲಿ ಸ್ವತಃ ಸಹಕಾರ ನೀಡಿ ದುಡಿದಿದ್ದಾರೆ. ಅವರೆಲ್ಲರಿಗೂ ದ. ಕ. ಜಿಲ್ಲಾ ಕಾಂಗ್ರೆಸಿನ ಪತಿಯಿಂದ ಹೃತ್ಪೂರ್ವಕ ಕೃತಜ್ಞತೆಗಳನ್ನರ್ಪಿಸುತ್ತಿದ್ದೇನೆ.

ಇಡಿಯ ದೇಶದ ಜನತೆ ಈ ಮುಷ್ಕರದ ವೇಳೆ ಸರಕಾರಕ್ಕೆ ತನ್ನ ನೈತಿಕ ಬೆಂಬಲ ತೋರಿ ವಿಕೃತ ಸಮಸ್ಯೆಗಳು ದೇಶವನ್ನು ಕಂಗೆಡಿಸುವಾಗ ಜನತೆಯೇ ಒಂದಾಗಿ ನಿಂತು ಅವನ್ನು ಪರಿಹರಿಸಿಕೊಳ್ಳಲು ಸಾಧ್ಯವುಂಟು ಎಂಬುದನ್ನು ತೋರಿಸಿಕೊಟ್ಟಿದೆ. ಜನತೆ ಈ ಉನ್ನತಾದರ್ಶವನ್ನೇ ಮುಂದುವರಿಸಿಕೊಂಡು ಹೋಗುವುದಾಗಿ ನಾನು ಆಶಿಸುತ್ತೇನೆ.

ಸರಕಾರದೊಡನೆ ಸಹಕರಿಸಿದ ಜನರಿಗೆಲ್ಲ ಜಿಲ್ಲಾ ಕಾಂಗ್ರೆಸ್ ಪರವಾಗಿ ಇನ್ನೊಮ್ಮೆ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

ಕೆಥೊಲಿಕ್ ವಿದ್ಯಾರ್ಥಿ ಸಂಘದ ಮಹಾ ಸಭೆಯು ಉಡುಪಿಯ ಡೋನ್ ಬೊಸ್ಕೊ ಹಾಲಿನಲ್ಲಿ ತಾ. 13ರಲ್ಲು ಜೆ. ಸುವಾರಿಸ್ ಇವರ ಅಧ್ಯಕ್ಷತೆಯಲ್ಲಿ ಜರಗಿ ಮುಂ

ನ ವರ್ಷದ ಬಗ್ಗೆ ಕಾರ್ಯಕಾರಿ ಸಮಿತಿಯನ್ನು ಆರಿಸಿತು. ಅಧ್ಯಕ್ಷರಾಗಿ ಶಿಕ್ಷಕಿ ವಿಯಂ ಪಿಂಟೊ, ಉಪಾಧ್ಯಕ್ಷರಾಗಿ ಕುಮಾರಿ ಲೋರಾ ಡಿಸೋಜ, ಪ್ರಧಾನ ಕಾರ್ಯದರ್ಶಿಗಳಾಗಿ ಜೆರೊಮ್ ಲುವಿಸ್ ಮತ್ತು ಕುಮಾರಿ ಹೆಜಿಲ್ ರೇಗೊ, ಖಜಾಂಜಿಯಾಗಿ ಗ್ರಿಗರಿ ಅಂಧ್ರಾದೆಯವರು ಆಯ್ಕೆಗೊಂಡರು.

ರೆ. ಫಾ. ಸಿಲ್ವೆಸ್ಟರ್ ಡಿಸೋಜರವರು ಸಂಘದ ಅಭಿವೃದ್ಧಿಗಾಗಿ ಹಲವು ಉಪಯುಕ್ತ ಯೋಜನೆಗಳನ್ನಿತ್ತು, ಬಳಿಕ ಅಧ್ಯಕ್ಷರು ಸಂಘದ ಉದ್ದೇಶಗಳನ್ನು ಸಾಧಿಸಲು ಸರ್ವ ಸದಸ್ಯರು ಪ್ರಾಮಾಣಿಕತೆಯಿಂದ ದುಡಿಯಬೇಕೆಂದರು.

ವಿದ್ಯಾರ್ಥಿವೇತನ—ಕುಲಾಲ ವಿದ್ಯಾರ್ಥಿಗಳಲ್ಲಿ ಫಾರ್ಮ್ IV, V ಮತ್ತು VI ವರೆಗೆ ಕಲಿಯುವವರಿಗೆ ವಿದ್ಯಾರ್ಥಿವೇತನ ಕೊಡಲಾಗುವುದೆಂದೂ, ಅಂತಹ ವಿದ್ಯಾರ್ಥಿಗಳು ಇದೇ ಜುಲೈ 31ನೇ ತಾರೀಕಿನ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಬೇಕೆಂದೂ ದ. ಕ. ಜಿಲ್ಲಾ ಮೂಲ್ಯರ ಯಾನೆ ಕುಲಾಲರ ಶ್ರೀ ರಾಮಸೇವಾ ಜಾತ್ಯಾಭ್ಯುದಯ ಸಂಘ, ಮಂಗಳೂರಿನ ಕಾರ್ಯದರ್ಶಿಯವರು ವಿನಂತಿಸುತ್ತಾರೆ.

ವಿಳಾಸ:—ಪಿ. ನಾರ್ಣಪ್ಪ, ಶ್ರೀಕೃಷ್ಣಾ ಸ್ಟೀಲ್ ವರ್ಕ್ಸ್, ಹಂಪನಕಟ್ಟೆ, ಮಂಗಳೂರು—1.

ಕರ್ನಾಟಕ ಲೇಖಕರ ಸಂಘ, ಬೆಂಗಳೂರು—(ತಾ. 2—7—1960ರಲ್ಲಿ ಸಂಘದ 'ಕಾವ್ಯಾರಾಮ' ಕಾರ್ಯಕ್ರಮವು ಚಾಮರಾಜ ಪೇಟೆಯಲ್ಲಿ ಭಾರತೀಯ ವಿದ್ಯಾ ಸಂಸ್ಕೃತಿ ಸಂಘದ ಆಶ್ರಯದಲ್ಲಿ, ಮಲೆನಾಡು ಪತ್ರಿಕೆಯ ಸಂಪಾದಕರಾದ ಮಾನ್ಯ ಶ್ರೀ ಎಂ. ವಿ. ಗುರು ಬಸಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಸರ್ವಶ್ರೀಗಳಾದ, ವಿ. ಎಂ. ಶರ್ಮಾ, ಲೋಮ ಶಾಸ್ತ್ರಿ, ಕೆ. ಎಸ್. ಸೂಲಿಬೇರೆ, ನರಸಿಂಹ ಅಯ್ಯಂಗಾರ್, ಜೋಡಿದಾರ್ ಜಯರಾಮಯ್ಯ, ಎಂ. ವಿ. ಗುರು ಬಸಪ್ಪ ಶೆಟ್ಟಿ, ತಿರುಮಲೆ ಶ್ರೀನಿವಾಸನ್, ರಾಜೀವ ಲೋಚನ, ಶಿವತೀರ್ಥನ್, ವಸಂತ ದೇಸಾಯಿ, ಟಿ. ಜಿ. ಸುಬ್ರಮಣ್ಯಂ, ಎಸ್. ಕೃಷ್ಣಪ್ಪ, ನಾಗೇಶ ಹತ್ವಾರ್, ಇವರುಗಳು ತಮ್ಮ ಕೃತಿಗಳನ್ನು ವಾಚಿಸಿದರು. ಶ್ರೀ ನಾಗೇಶ ಹತ್ವಾರರ ಸ್ವಾಗತ ಭಾಷಣದಿಂದ ಪ್ರಾರಂಭವಾದ ಈ ಕಾರ್ಯಕ್ರಮವು ಅಧ್ಯಕ್ಷ ಭಾಷಣ, ಮತ್ತು ಲೇಖಕರ ಸಂಘದ ಅಧ್ಯಕ್ಷ ಶ್ರೀ ಸಿ. ಕೆ. ನಾಗರಾಜಾ ರಾಯರ ಭಾಷಣವಾದ ಮೇಲೆ ಶ್ರೀ ಶಿವತೀರ್ಥನ್‌ರವರ ವಂದನಾರ್ಪಣೆಯೊಡನೆ ಮುಕ್ತಾಯವಾಯ್ತು.

ಭರತನಾಟ್ಯ—ಮಲ್ಲಾಡ ಹಳ್ಳಿಯ ಅನಾಥಾಶ್ರಮದ ಸಹಾಯಾರ್ಥವಾಗಿ ನೃತ್ಯಪಟು ಪಿ. ಎಸ್. ಆನಂದರಾವ್ ಮತ್ತು ಗೆಳೆಯರಿಂದ ಇದೇ ತಾ. 17ರಂದು ಗದಗದ ಸಂ. ಪಂ. ಗವಾಯಿಗಳ ಥಿಯೇಟರಿನಲ್ಲಿ ಭರತನಾಟ್ಯ ಏಕಾಂಕ ನಾಟಕ ಹಾಸ್ಯ ಸನ್ನಿವೇಶಗಳು ಪ್ರದರ್ಶಿಸಲ್ಪಟ್ಟವು.

ಅಕಾಸ್ಮಾತ್ ಅಗ್ನಿ—ಉಡುಪಿ ವೀವರ್ಸ್ ಕೊ-ಓಪರೇಟಿವ್ ಪ್ರೊಡಕ್ಷನ್ ಮತ್ತು ಸೇಲ್ಸ್ ಸೊಸೈಟಿಯವರು ಹೊಸತಾಗಿ ಕಟ್ಟಿಸಿದ ಮತ್ತು ಇತ್ತೀಚೆಗೆ ಉದ್ಘಾಟಿಸಲ್ಪಟ್ಟ ಭವ್ಯ ಕಟ್ಟಡದಲ್ಲಿ ಇದೇ ತಾ. 14ನೇ ರಾತ್ರಿ ಸುಮಾರು ಮುಂಜಾನೆ ಹೊತ್ತಿಗೆ ಬೆಂಕಿ ಉರಿಯುವುದು ಗೋಚರಿಸಿದಾಗ ಸ್ಥಳೀಯ ಅಗ್ನಿಶಾಮಕ ದಳದವರು ಧಾವಿಸಿ ಬಂದು ಅದನ್ನು ನೊಂದಿಸಿರುತ್ತಾರೆ. ಬೆಂಕಿ ಯಾವಾಗ, ಹೇಗೆ ಹಿಡಿಯಿತೆಂಬುದರ ಸೋವು ತಿಳಿದು ಬಂದಿರುವುದಿಲ್ಲ. ಬೆಂಕಿಯಿಂದಾಗಿ ಹೆಚ್ಚಿನ ಹಾನಿ ಒದಗಲಿಲ್ಲವೆಂದೂ ತಿಳಿದು ಬರುತ್ತದೆ.

ಕಾಮ ವಿಜ್ಞಾನದ ಮಾಹಿತಿಗಾಗಿ ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ
ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ
ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50.
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಂಕ್ಷಿಪ್ತ ಸುದ್ದಿಗಳು

ನಿಲುಮೆ ಅನಿಶ್ಚಿತವಿದೆ

ಕೇಂದ್ರ ಸರಕಾರಿ ನೌಕರರ ಸಂಪಿನಲ್ಲಿ ಭಾಗವಹಿಸಿದವರ ಬಗ್ಗೆ ರಾಜ್ಯಸರಕಾರಗಳು ತಮಗೆ ಸರಿಕಂಡ ರೀತಿಯಲ್ಲಿ ವರ್ತಿಸಬಹುದೆಂದು ಕೇಂದ್ರವು ಸೂಚನೆಯಿತ್ತಿದೆ ಕೇವಲ ಸಂಪಿನಲ್ಲಿ ಭಾಗವಹಿಸಿದವರ ಬಗ್ಗೆ ಉದಾರತೆಯಿಂದ ವರ್ತಿಸಿ ವಿಧ್ವಂಸಕ ಕೃತಿಗಳಲ್ಲಿ ತೊಡಗಿರುವುದರ ಹಾಗೂ ಅಯೋಗ್ಯ ನಡತೆಗಳಿಂದಾಗಿ ಬಂಧಿತರಾದವರನ್ನು ಇವರಿಂದ ಬೇರೆಯಾಗಿ ಪರಿಗಣಿಸುವುದಕ್ಕೂ ಅದು ತನ್ನ ಒಪ್ಪಿಗೆ ಸೂಚಿಸಿದೆ. ಆದರೂ ಈ ನೌಕರರಿಗೆ ತೋರಿಸಬೇಕಾದ ಉದಾರತೆಯ ಪ್ರಮಾಣವೆಷ್ಟು ಎಂದು ಇನ್ನೂ ತಿಳಿದುಬಂದಿಲ್ಲ. ಸರಕಾರದ ಕೆಲವರು ತುಸು ಉಗ್ರೋಪಾಯ ಕೈಕೊಳ್ಳಬೇಕೆಂದೂ ಇನ್ನು ಕೆಲವರು ಸೌಮ್ಯ ಕ್ರಮ ಕೈಗೊಂಡರೆ ಸಾಕೆಂದೂ ಅಭಿಪ್ರಾಯ ಪಡುತ್ತಿರುವರಂತೆ. ಶ್ರೀ ನೆಹರೂ ತಾ. ೨೦ರಂದು ಅಸ್ಸಾಮ ಸಂಚಾರದಿಂದ ಮರಳಿದನಂತರ ಈ ಕುರಿತಾದ ಅಂತಿಮ ನಿರ್ಧಾರವಾಗುವುದೆಂದು ಹೇಳಲಾಗುತ್ತಿದೆ.

ಒಂದು ಅಸಫಲವಾದರೆ ಇನ್ನೊಂದು

ಕಾಂಗೋದ ಪ್ರಧಾನಿ ಶ್ರೀ ಪೆಟ್ರೀಸ್ ಲುಮುಂಬಾರವರು ಸಂಯುಕ್ತ ರಾಷ್ಟ್ರ ಸಂಘದ ಸೇನೆಯು ಬೆಲ್ಜಿಯಂ ಸೇನೆಯನ್ನು ತನ್ನ ದೇಶದಿಂದ ಹಿಂದಕ್ಕೆ ಮರಳಿಸಲು ಅಸಮರ್ಥವಾದರೆ, ತಾನು ರಶ್ಯದಿಂದ ಆವಶ್ಯಕ ಸೈನ್ಯಸಹಾಯವನ್ನು ಪಡೆಯಲು ನಿರ್ಧರಿಸಿದ್ದಾರೆ. ತಮ್ಮ ಈ ಅಭಿಪ್ರಾಯವನ್ನು ಸಂ. ರಾ. ಸಂಘದ ಉಪ ಪ್ರಧಾನ ಕಾರ್ಯದರ್ಶಿ ಶ್ರೀ ಲಾಲ್ಫ ಬಂಚಾಗೆ ಪತ್ರ ಮೂಲಕ ತಿಳಿಸಿದ್ದಾರೆ. ಸಂ. ರಾ. ಸಂಘದ ಸೈನ್ಯವು ಈಗಾಗಲೇ ಕಾಂಗೋವಿನಲ್ಲಿ ಬಂದು ಇಳಿಯತೊಡಗಿವೆ.

ಶಕ್ತಿಶಾಲಿ ಕ್ಷಿಪಣಿ

ಅಮೆರಿಕೆಯ ವ್ಯಾಂಡನ್‌ಬರ್ಗದ ಸೈನಠಾಣೆಯಲ್ಲಿರುವ ಗುಬ್ಬಿಯೊಂದನ್ನು ಒತ್ತಿದೊಡನೆಯೇ ಕ್ಷಿಪಣಿಯೊಂದು ರಶ್ಯದ ಮಾಸ್ಕೋದ ಮೇಲೆ ಎರಗುವಂತೆ ಮಾಡಲು ಅಮೆರಿಕೆಯು ಈಗ ಸನ್ನದ್ಧವಾಗಿದೆ. ಇಷ್ಟು ಪ್ರಬಲವಾದ ಅಸ್ತ್ರಗಳು ಅದರೊಡನಿವೆಯೆಂದು ವರದಿಯಾಗಿದೆ.

ವಿಮಂಚನಾತ್ಮಕ ಘಟನೆ

ಹೊಡೆದಾಡಿಕೊಳ್ಳುವುದರಿಂದ ಭಾಷಾ ಸಮಸ್ಯೆ ಪರಿಹಾರ ಗೊಳ್ಳುವುದಿಲ್ಲವೆಂದೂ ಅಸ್ಸಾಮಿಯು ರಾಜ್ಯ ಸರಕಾರದ ಭಾಷೆಯಾಗಬೇಕಾದುದು ಸರಿಯಾದರೂ ಅಲ್ಪಸಂಖ್ಯಾತರದೆಂದೂ ಪ್ರಜಾ ಪ್ರಭುತ್ವದ ಆದರ್ಶ ನೀತಿಗನುಗುಣವಾಗಿ ತನ್ನ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಪಡೆಯಬೇಕಲ್ಲದೆ ವಿಧ್ವಂಸಕ ಕ್ರಿಯೆಗಳಲ್ಲಿ ತೊಡಗಿದರೆ ಸರ್ವನಾಶವಾಗುವುದೆಂದೂ ಗೌಹತಿಯಲ್ಲಿ ಪ್ರಧಾನಿನೆಹರೂ ಅಸ್ಸಾಮಿಗರಿಗೆ ತಿಳಿಸಿದರು. ಭಾರತದ ಹಿಂದುಳಿದ ರಾಜ್ಯಗಳಲ್ಲಿ ಅಸ್ಸಾಮವೊಂದೆಂದು ಹೇಳಿ, ಅದು ಭಾರತದಿಂದ ಪ್ರತ್ಯೇಕವಾಗಿ ಇರುವುದು ಅಸಾಧ್ಯವೆಂದವರು ಅಭಿಪ್ರಾಯಿಸಿ ರಾಜ್ಯದ ಪುನಾರಚನಾ ಕಾರ್ಯದಲ್ಲಿ ಸಹಕರಿಸಬೇಕೆಂದೂ ರಾಷ್ಟ್ರೀಯ ದೃಷ್ಟಿಯಿಂದ ದೇಶ ಕಲ್ಯಾಣವನ್ನು ಚಿಂತಿಸಬೇಕು; ನಮ್ಮವರನ್ನು ನಮ್ಮವರೇ ನೋಯಿಸುವುದು ಪರರಿತ್ತ ಏಟಿಸಿಂದಲೂ ವಿಮಂಚನಾಕಾರಿಯಾಗಿದೆ ಎಂದರವರು.

ಜಪಾನದ ನವ ಪ್ರಧಾನಿ

ಜಪಾನದ ಪ್ರಧಾನ ಮಂತ್ರಿ ಶ್ರೀ ನುಬುಸುಕೆ ಕಿಶಿಯವರು ತಮ್ಮ ಹುದ್ದೆಗೆ ರಾಜಿನಾಮೆಯಿತ್ತಿರುವುದರಿಂದ, ಅಧಿಕಾರಾರೂಢ ಲಿಬರಲ್ ಡೆಮೊಕ್ರೆಟಿಕ್ ಪಕ್ಷದ ಶ್ರೀ ಹಯಾತೋ ಇಕೆಡಾ ಅವರು ನೂತನ ಪ್ರಧಾನಿಯಾಗಿ ಚುನಾಯಿತರಾಗಿದ್ದಾರೆ. ಶ್ರೀ ಇಕೆಡಾ ಕಿಶಿ ಮಂತ್ರಿ ಮಂಡಳಿಯಲ್ಲಿ ಅಂತರಾಷ್ಟ್ರೀಯ ವ್ಯಾಪಾರ ಮತ್ತು ಉದ್ದಿಮೆ ಮಂತ್ರಿಗಳಾಗಿದ್ದರು. ಇವರಿಗೆ ಈಗ ೬೧ ವರ್ಷ ಪ್ರಾಯ.

ಶ್ರೀ ಕಿಶಿಯವರನ್ನು ತಾ. ೧೪ರಂದು ವಾಮಪಕ್ಷೀಯನೊಬ್ಬನು ಚೂರಿಯಿಂದ ಇರಿದಿದ್ದು, ಆದ ಗಾಯಗಳು ಸೌಮ್ಯಸ್ವರೂಪದವಾಗಿದ್ದು ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತಿದ್ದಾರೆ; ಅವರ ಪ್ರಕೃತಿ ದಿನದಿನಕ್ಕೆ ಸುಧಾರಿಸುತ್ತಿದೆಯೆಂದೂ ತಿಳಿಯುತ್ತದೆ.

ಭಾವಿ ಉಚ್ಚಾಧಿಕಾರಿಗಳು (?)

ಮುಂಬರುವ ಅಮೆರಿಕೆಯ ಅಧ್ಯಕ್ಷರ ಚುನಾವಣೆಯ ಬಗ್ಗೆ ಡೆಮೊಕ್ರೆಟಿಕ್ ಪಕ್ಷದ ಹುರಿಯಾಳಾಗಿ ಶ್ರೀ ಜಾನ್ ಕೆನ್ನೆಡಿಯವರು ಚುನಾಯಿತರಾಗಿದ್ದಾರೆ. ರಿಪಬ್ಲಿಕನ್ ಪಕ್ಷದ ಉಮೇದ್ವಾರಿ ಯಾರೆಂದು ತಿಳಿದಿಲ್ಲ. ಈಗ ಉಪಾಧ್ಯಕ್ಷರಾಗಿರುವ ಶ್ರೀ ರಿಚರ್ಡ ನಿಕ್ಸನರನ್ನು ಆರಿಸಿದರೆ, ತಾನದನ್ನು ಬೆಂಬಲಿಸಲಾರೆನೆಂದೂ ತನಗೇ ಆ ಸ್ಥಾನವನ್ನು ಕೊಡಮಾಡಿದರೆ, ಸ್ವೀಕರಿಸುವೆನೆಂದೂ ರಿಪಬ್ಲಿಕನ್ ನಾಯಕ ಶ್ರೀ ರಾಕ್ ಫೆಲರು ಹೇಳಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಡೆಮೊಕ್ರೆಟಿಕ್ ಪಕ್ಷದಿಂದ ಶ್ರೀ ಲಿಂಡೆನ್ ಜಾನ್ಸನ್‌ರವರನ್ನು ಆರಿಸಲಾಗಿದೆ.

ಭಜನೆ ಸಪ್ತಾಹ ಮಹೋತ್ಸವ—ಉಡುಪಿಯ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನದಲ್ಲಿ ವಾಡಿಕೆಯಂತೆ ನಡೆಯುವ ಭಜನೆ ಸಪ್ತಾಹವು ಇದೇ 28—7—60ಕ್ಕೆ ಪ್ರಾರಂಭವಾಗಿ ತಾ 4—8—60ರ ವರೆಗೆ ಜರಗಲಿರುವುದೆಂದೂ ಸರ್ವರೂ ಬಂದು ಸಹಕರಿಸಿ ಶ್ರೀ ದೇವರ ಶ್ರೀಮುಡಿ ಗಂಧ ಪ್ರಸಾದವನ್ನು ಸ್ವೀಕರಿಸ ಬೇಕೆಂದೂ ಆಡಳ್ತೆ ಮೊಕ್ತೇಸರ್ ಡಾ| ಪಿ. ರಾಘವೇಂದ್ರ ನಾಯ್ಕರು ಅಪೇಕ್ಷಿಸುತ್ತಾರೆ.

ಆಕಾಶವಾಣಿ ಸಲಹಾಸಮಿತಿ—ಅಂಕೋಲದ ಶ್ರೀ ಹರಿ ಅನಂತ ಪೈ, ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಎಂ. ಎಲ್. ಸಿ. ಬಳ್ಳಾರಿ ಜಿಲ್ಲೆಯ ಚಿಲ್ಲಗುಂಕಿಯ ಶ್ರೀ ಕೆ. ದೊಡ್ಡಣ್ಣ ಗೌಡ, ಬೆಂಗಳೂರಿನ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ ಮತ್ತು ಹುಬ್ಬಳ್ಳಿಯ ಶ್ರೀ ವಿ. ವಿ. ಪಾಟೀಲ್ ಇವರುಗಳನ್ನು ಆಕಾಶವಾಣಿ ಬೆಂಗಳೂರು ಮತ್ತು ಧಾರವಾಡ ಕೇಂದ್ರಗಳಿಗೆ ಸಂಬಂಧಪಟ್ಟ ಸಂಯುಕ್ತ ಗ್ರಾಮಾಂತರ ಸಲಹಾ ಸಮಿತಿಯ ಸದಸ್ಯರುಗಳನ್ನಾಗಿ ತಿರುಗಿ ಎರಡು ವರ್ಷಗಳ ಕಾಲ ನೇಮಕ ಮಾಡಲಾಗಿದೆ. ಆಕಾಶವಾಣಿ ಕೇಂದ್ರದಿಂದ ಪ್ರಸಾರವಾಗುವ ಗ್ರಾಮಾಂತರ ಕಾರ್ಯಕ್ರಮಗಳ ಬಗ್ಗೆ ಸಲಹೆ ನೀಡುವುದೇ ಈ ಸಮಿತಿಯ ಮುಖ್ಯ ಕೆಲಸವಾಗಿದೆ.

ಮಳೆಯ ಅಭಾವ—ಈ ವರ್ಷ ಮಳೆಯು ಮೇಯಿಂದಲೇ ಪ್ರಾರಂಭವಾಗಿದ್ದರೂ ವಿಶೇಷ ಮಳೆ ಬೀಳಬೇಕಾದ ಸಮಯದಲ್ಲಿಯೇ ಅದು ಬಂದಿರುವುದಿಲ್ಲ. ಬೆಟ್ಟು ಗದ್ದೆಗಳು ನೀರಿಲ್ಲದೆ ವ್ಯವಸಾಯವಾಗದೆ ಉಳಿದಿವೆ. ನೆಟ್ಟ ಮಜಲು, ಬಯಲು ಗದ್ದೆಗಳು ಕೂಡಾ ನೀರಿಲ್ಲದೆ ಒಣಗಿಹೋದುದುಂಟು. ಸೆಕೆಕಾಲದಂತೆ ವಿಶೇಷ ಉರಿಬಿಸಿಲು ಇರುತ್ತದೆ. ತಾ. 19ರಲ್ಲಿ ಅಲ್ಪಸ್ವಲ್ಪ ಮಳೆ ಬಿದ್ದಿರುತ್ತದೆ.

ಗ್ರಾಮ ವಿಶ್ವವಿದ್ಯಾಲಯ ಯೋಜನೆ

ಮೈಸೂರು ರಾಜ್ಯದಲ್ಲಿ ಒಂದು ಗ್ರಾಮ ವಿಶ್ವವಿದ್ಯಾಲಯವನ್ನು ಆರಂಭಿಸುವ ಬಗ್ಗೆ ವಿವರಗಳನ್ನು ಕಲೆ ಹಾಕಲಾಗುತ್ತಿದೆ. ಈ ಬಗ್ಗೆ ಒಂದು ಸಮಿತಿಯನ್ನು ಸಂಕಾರವು ನೇಮಿಸಿದೆ. ವಿದೇಶೀ ವಿಶ್ವವಿದ್ಯಾಲಯಗಳ ಸಹಕಾರದಿಂದ ಈ ಗ್ರಾಮ ವಿದ್ಯಾಲಯವನ್ನು ಸ್ಥಾಪಿಸುವ ಆಲೋಚನೆಯಿದೆ. ರಾಜ್ಯದ ವ್ಯವಸಾಯ ಮತ್ತು ಅರಣ್ಯ ಶಾಖೆಯ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುವ ಈ ಸಮಿತಿಯು ಮೂರು ತಿಂಗಳ ಅವಧಿಯಲ್ಲಿ ತನ್ನ ವರದಿ ಒಪ್ಪಿಸಲಿದೆ. ಬೇಸಾಯ ಗಾರರಿಗೆ ಬೇಕಾದ ಎಲ್ಲ ವಿಷಯಗಳನ್ನು ತಿಳಿಸುವುದಕ್ಕೂ, ಈ ಬಗ್ಗೆ ಉಚ್ಚ ಶಿಕ್ಷಣಕ್ಕೂ ಸಂಬಂಧಪಟ್ಟಂತೆ ಪಾಶ್ಚಾತ್ಯ ಮಾದರಿಯ ವಿಶ್ವವಿದ್ಯಾಲಯ ನಿರ್ಮಾಣವೇ ಈ ಯೋಜನೆಯ ಉದ್ದೇಶವೆಂದು ಹೇಳಲಾಗಿದೆ.

ಪ್ರಳಯದ ಬದಲಿಗೆ......

ಇಟೆಲಿಯ ಕೆಲವು ಅಧ್ಯಾತ್ಮವಾದಿಗಳು ಭವಿಷ್ಯ ನುಡಿದಂತೆ ತಾ. ೧೪ರಂದು ಜಗತ್ ಪ್ರಳಯವಾಗಲಿಲ್ಲ. ಆದರೂ ರೋಮದ ಸಮೀಪದಲ್ಲಿಯೇ ತಾ. ೧೭ರಂದು ಭೂಕಂಪಗಳು ನಡೆದ ವಾರ್ತೆಗಳು ಬಂದಿವೆ. ಈ ಕಂಪನವು ಪ್ರಬಲವಾಗಿದ್ದರೂ ಯಾವುದೇ ಪ್ರಾಣನಷ್ಟವಾದ ಸುದ್ದಿ ಬಂದಿಲ್ಲ. ಅಂತೆಯೇ ಭೂಮಧ್ಯಸಾಗರದ ಏಟ್ನಾ ಪರ್ವತ ಶಿಖರದ ಜ್ವಾಲಾಮುಖಿಯಲ್ಲಿ ಮಹತ್ತರ ಸ್ಫೋಟ ನಡೆದು ಸುಮಾರು ೩೦,೦೦೦ ಅಡಿಗಳಿಗೂ ಎತ್ತರದವರೆಗೆ ಧೂಮ್ರ ಆವರಿಸಿತ್ತೆಂದೂ ಉಗ್ರವಾದ ಶ್ವೇತವರ್ಣದ ಲಾವಾರಸವು ಬಹಳ ಪ್ರಮಾಣದಲ್ಲಿ ಹರಿಯತೊಡಗಿದ್ದು ಸುತ್ತಲಿನ ೧೦೦ ಚದರ ಮೈಲು ವಿಸ್ತಾರದಲ್ಲಿ ಪಸರಿಸಿರುವುದೆಂದೂ ಇಷ್ಟು ದೊಡ್ಡ ಪ್ರಮಾಣದ ಸ್ಫೋಟನವು ಇದುವರೆಗೆ ನಡೆದಿಲ್ಲವೆಂದೂ ತಿಳಿಯುತ್ತದೆ.

ಪರ್ಯಾಲೋಚನೆಗೆ ಶ್ರೀ ರೆಡ್ಡಿ

ಕಾಂಗ್ರೆಸ್ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ತಾ. ೨೨ರಂದು ಬೆಂಗಳೂರಿಗೆ ಬರುವರು. ನಗರದಲ್ಲಿ ಮೂರು ದಿನಗಳ ಕಾಲ ತಂಗಲಿರುವ ಶ್ರೀ ರೆಡ್ಡಿಯವರು ಮುಂದಿನ ಸಾರ್ವತ್ರಿಕ ಚುನಾವಣೆಗಳ ಕುರಿತಾಗಿ ವಿಚಾರವಿನಿಮಯ ನಡೆಸುವರೆಂದೂ ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ಶಾಸನಸಭಾ ಸದಸ್ಯರು ಮತ್ತು ಕಾಂಗ್ರೆಸ್‌ಗಳ ನಡುವಿರುವ ಸಂಬಂಧದ ಬಗ್ಗೆ ಚರ್ಚಿಸುವರೆಂದೂ ತಿಳಿಯುತ್ತದೆ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ತಮ್ಮನಿಗೆ ಓಲೆ

(೩ನೇ ಪುಟದಿಂದ)

ತ್ಯಕ್ಕೆ ಅವಹೇಳನೆ ಮಾಡಲಿಲ್ಲ; ಅವನು ಗ್ರಾಹ್ಯರೂಪದಲ್ಲಿ ದ್ರಷ್ಟಿಸಲು ಆತ ಆಸೆಪಡುತ್ತಾನೆ. ಸತ್ಯವನ್ನು 'ಗ್ರಾಹ್ಯರೂಪ'ಕ್ಕೆ ತರುವಲ್ಲಿ ಅದರ ಮೂಲರೂಪದಲ್ಲಿ ಏನಾದರೂ ಅಲ್ಪಸ್ವಲ್ಪ ಪರಿವರ್ತನೆಯಾಯಿತೆಂದರೆ, ಅದು ಮಾನ್ಯವೆಂದಾತ ತಿಳಿಯುತ್ತಾನೆ. ಕವಿಯೇ ಸರ್ವತಂತ್ರ ಸ್ವತಂತ್ರ ಹೌದು; ಹೀಗೆಂದ ಮಾತ್ರಕ್ಕೆ ಆತ ಸತ್ಯವನ್ನು ಬದಿಗಿಟ್ಟು ಸ್ವೇಚ್ಛೆಯಿಂದ ಮಿಥ್ಯಾಮಾಲೆಯನ್ನೇ ಪೋಣಿಸುತ್ತಾನೆಂದು ತಿಳಿಯಬಾರದು. ಕವಿಯು ಕಟ್ಟುವ 'ಕಾವ್ಯ ಭವನ'ವನ್ನು 'ಆಕಾಶಗೋಪುರ' ಎಂಬ ಸಾಮಾನ್ಯ ಹೆಸರಿನಿಂದ ಕರೆಯುವುದು ಸಂಪ್ರದಾಯವಾದರೂ ಈ ಭವನದ ಪಂಚಾಂಗ ಮಾತ್ರ ಭದ್ರವಾದ ಬಂಡೆಕಲ್ಲಿನ ಮೇಲೆ ನಿಂತಿದೆ. ಸತ್ಯವನ್ನು ಸುಂದರರೂಪಕ್ಕೆ ತರುವಾಗ ಅವನು ಎಲ್ಲೆಯನ್ನು ಮೀರಿ ಮುಂದುವರಿಯುವುದಿಲ್ಲ. ಮೂಲ ಘಟನೆಯೊಂದು ಆಧಾರಮಾತ್ರವಾಗಿದ್ದು, ಅದರ ಕಾರಣ ಪರಿಣಾಮಗಳ ವ್ಯಾಖ್ಯೆ ಕವಿಕಲ್ಪಿತವಾಗಿರಬಹುದು. ಈ ವ್ಯಾಖ್ಯೆಗಳಿಂದಲೇ ಸೈದ್ಧಾಂತಿಕ ಸತ್ಯ ಪ್ರಕಟವಾಗಬೇಕಾದುದರಿಂದ ಕವಿಗೆ ಹೀಗೆ ಮಾಡುವುದು ಅನಿವಾರ್ಯವೆನಿಸುತ್ತದೆ.

ಉದಾಹರಣೆಗಾಗಿ, ಶಾಕುಂತಲಾ ನಾಟಕವನ್ನೇ ಎತ್ತಿಕೊಳ್ಳಬಹುದು. ದುಷ್ಯಂತನು ಗಾಂಧರ್ವ ಪದ್ಧತಿಯಿಂದ ಶಕುಂತಲೆಯನ್ನು ವರಿಸಿದನೇನೋ ಸರಿಯೇ; ಆದರೆ, ಮೂಲಕಥೆಯಲ್ಲಿ ಆಕೆ ಆತನಲ್ಲಿ ಬಂದಾಗ ಯಾವ ಪ್ರಬಲ ಕಾರಣವೂ ಇಲ್ಲದೆ ತಿರಸ್ಕರಿಸುತ್ತಾನೆ. ಇದರಿಂದ ದುಷ್ಯಂತನ ಚರಿತ್ರಕ್ಕೆ ಕಳೆಯಲಾಗದ ಕರೆ ಅಂಟುವುದನ್ನು ಕಂಡ ಕವಿಕುಲಗುರು ಕಾಳಿದಾಸ ಉಂಗುರ ಮತ್ತು ದುರ್ವಾಸ ಶಾಪಗಳ ಪ್ರಕರಣವನ್ನು ತಂದು ಶಕುಂತಳೆಯ ಅವಹೇಳನದ ಮೇಲೆ ವಿಧಿಯ ಮಾಯೆಯೆಂಬ ಪರದೆಯನ್ನು ಎಳೆದುಬಿಟ್ಟನು. ಈ ಕಾರಣ ಪರಿವರ್ತನೆಯಿಂದಾಗಿ ಶಕುಂತಳೆ-ದುಷ್ಯಂತರ ಪ್ರೇಮ ಜೀವನದಲ್ಲಿ ಹುಳಿಯು ಬದಲು ಜೇನು ಹಿಂಡಿದಂತಾಯಿತು. ಕವಿಗಳು ಬಾಯಲ್ಲಿ ಅಕ್ಕಿಕಾಳು ಹಾಕಿಕೊಂಡು ಸುಮ್ಮನೆ ಕೂರುವುದಿಲ್ಲ; ವಿಶ್ವಾಮಿತ್ರನಂತೆ ನೂತನ ಸೃಷ್ಟಿ ಮಾಡುವುದಕ್ಕೂ ಮುಂದುವರಿಯಲು ಹಿಂಜರಿಯುವುದಿಲ್ಲ. ಆದರೆ, ಸಂಗತಿ ಮತ್ತು ಸಂಭಾವ್ಯಗಳತ್ತ ಮಾತ್ರ ಲಕ್ಷ್ಯವಿಡುತ್ತಾರೆ. ಇವುಗಳನ್ನು ಹೊಂದಿಸಿಕೊಂಡು, ಮುಖ್ಯ ಘಟನೆಯನ್ನು ಅಲ್ಪ ಸ್ವಲ್ಪ ಪರಿವರ್ತಿಸಿ ಕವಿಯು ತನ್ನ ಕೃತಿಯನ್ನು ಬರೆಯುತ್ತಾನೆ; ಆನಂದದ ವಿಶ್ವರೂಪ ಪ್ರದರ್ಶಿಸುತ್ತಾನೆ.

ಸತ್ಯವನ್ನು ಮರೆಯದೆ, ಅದರಲ್ಲಿಯೇ ಶಿವವನ್ನು ಪ್ರತಿಷ್ಠಾಪಿಸಿ, ಸುಂದರದ ಮೆರುಗನ್ನು ಅದಕ್ಕೆ ಕೊಟ್ಟು ಭದ್ರವಾದ ಬಂಡೆಗಲ್ಲಿನ ಮೇಲೆ ಕವಿಯು ತನ್ನ 'ಆನಂದ ಭವನ'ವನ್ನು ನಿರ್ಮಿಸುತ್ತಾನೆ. ಅದರ ಸಮೀಪಕ್ಕೆ ತೆರಳುವ ಯಾರೇ ಆಗಲೀ ಆನಂದಾಂಬುಧಿಸ್ನಾತರಾಗಿ ಬ್ರಹ್ಮಾನಂದ ಸಹೋದರ ವಾದ ಕಾವ್ಯಾನಂದವನ್ನು ಸವಿಯುತ್ತಾರೆ.

ವ್ಯಕ್ತಿ ಪರಿಚಯ

ಚುಚ್ಚು ಹಾಸ್ಯಪ್ರಿಯ—ಫಿರೋಜ ಗಾಂಧಿ

ಕೇಂದ್ರ ಸರಕಾರಿ ನೌಕರರ ಮುಷ್ಕರವನ್ನು ನಿಲ್ಲಿಸುವ ಸಲುವಾಗಿ ಸರಕಾರ ಮತ್ತದರ ನೌಕರರ ನಡುವೆ ಸಂಧಾನ ನಡೆಸಲೊಪ್ಪಿ ಪ್ರಯತ್ನಿಸಿದ ಶ್ರೀ ಫಿರೋಜ ಗಾಂಧಿಯವರು ಸರಕಾರಿ ಪಕ್ಷದ ಸದಸ್ಯರಾದರೂ ತಪ್ಪಿದಲ್ಲಿ ಅದಕ್ಕೆ ಬುದ್ಧಿ ಹೇಳುವ ಅಭ್ಯಾಸವಿರುವವರು.

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿವಾದಗಳಲ್ಲಿ ಮಧ್ಯಸ್ಥಿಕೆಯು ಒಂದು ವಿಶಿಷ್ಟ ಮಹತ್ವವನ್ನು ಪಡೆದಿದೆ. ವಿವಾದಗಳನ್ನು ಶಾಂತಿಪೂರ್ಣ ವಿಧಾನಗಳಿಂದ ಬಗೆಹರಿಸುವ ಪ್ರಯತ್ನಗಳಲ್ಲಿ ಮಧ್ಯಸ್ಥಿಕೆಯೂ ಒಂದು. ಆದರೆ, ಈ ಮಧ್ಯಸ್ಥಿಕೆಯ ಕೆಲಸವು ವಿವಾದಗ್ರಸ್ತ ಪಕ್ಷಗಳು ಪರಸ್ಪರ ವಿಚಾರವಿನಿಮಯ ಮಾಡಿಕೊಳ್ಳುವುದಕ್ಕಿಂತಲೂ ಜಟಿಲವಾದುದೆಂದು ಹೇಳಬಹುದು. ಇದರಿಂದಾಗಿಯೇ ಸಾಮಾನ್ಯವಾಗಿ ಹೆಚ್ಚಿನ ಮಧ್ಯಸ್ಥಿಕೆಗಾರರು ಕೊನೆಯಲ್ಲಿ ಸೋಲುಣ್ಣಲೇಬೇಕಾಗುತ್ತದೆ. ವಿವಾದಗ್ರಸ್ತ ಪಕ್ಷಗಳು ಇವರ ಅಭಿಪ್ರಾಯಕ್ಕೆ ಒಪ್ಪದಿರುವುದು ಕೆಲವೊಮ್ಮೆ ಇದಕ್ಕೆ ಕಾರಣವಾದರೆ, ಬೇರೆ ಕೆಲವೊಮ್ಮೆ ಇವರೇ ಪಕ್ಷಗಳ ಅಭಿಪ್ರಾಯವನ್ನು ಮಾನ್ಯಮಾಡದಿರುವುದೂ ಕಾರಣವಾಗುತ್ತದೆ.

ಇತ್ತೀಚೆಗೆ ಕೇಂದ್ರ ಸರಕಾರಿ ನೌಕರರ ಸಾರ್ವತ್ರಿಕ ಮುಷ್ಕರದ ಬಗ್ಗೆ ಸಂಧಾನ ಕಾರ್ಯ ನಡೆಸಲು ಮುಂದೆ ಹೋಗಿದ್ದ ಶ್ರೀ ಫಿರೋಜ ಗಾಂಧಿ ಮತ್ತು ಶ್ರೀ ರಘುನಾಥ ಖಾಡಿಲ್ಕರರ ಅವಸ್ಥೆಯೂ ಇದೇ ರೀತಿಯಾಗಿರಬಹುದು. ಕೇಂದ್ರೀಯ ಮಂತ್ರಿಗಳು ಮತ್ತು ಮುಷ್ಕರ ಸಮಿತಿಯ ನಡುವಿನ ಪ್ರತ್ಯಕ್ಷ ಸಂಧಾನದ ಮಾತುಕತೆಗಳು ವಿಫಲಗೊಂಡ ಮೇಲೆ, ಸಂಸತ್ ಸದಸ್ಯರಾದ ಬೇರೆ ಬೇರೆ ವಿಷಯಗಳ ಮೇಲೆ ಸ್ವತಂತ್ರ ವಿಚಾರ ಹೊರಗೆಡಹುವ ಈ ಇಬ್ಬರು ಮಧ್ಯಸ್ಥಿಕೆಯ ಕಾರ್ಯಕ್ಕೆ ತೊಡಗಿದಾಗ, ಕೆಲವರು ಇವರ ರಾಯಭಾರವು ಯಶಸ್ವಿಯಾಗುವುದೆಂದರೆ, ಬೇರೆ ಕೆಲವರು ಮಾತುಕತೆಯು ನಿಷ್ಪ್ರಯೋಜಕವೆಂದು ಹೇಳಿದರು. ಮತ್ತೆ ಕೆಲವರು ಇವರಿಬ್ಬರ ಮೇಲೆ ಕಟು ಟೀಕೆಗೂ ತೊಡಗಿದರು. ವಿಶ್ವಾಸಯುತ ಪ್ರಯತ್ನದ ನಂತರ ಶ್ರೀ ಗಾಂಧಿ ಮತ್ತು ಶ್ರೀ ಖಾಡಿಲ್ಕರರು ಇಕ್ಕಡೆಯವರ ಮುಂದೆ ತ್ರಿಸೂತ್ರೀಯ ಸಂಧಾನ ಸಾಧನವನ್ನು ಇಟ್ಟರೂ ಅದು ಸ್ವೀಕೃತವಾಗಲಿಲ್ಲ. ಇದರಿಂದಾಗಿ, ಸ್ವಾತಂತ್ರ್ಯ ಹೋರಾಟದ ವೇಳೆ ಡಾ| ಸಪ್ರೂ, ಡಾ| ಜಯಕರ ಮುತ್ತಿತರ ಮಧ್ಯಸ್ಥಗಾರರು ಸೋಲುಂಡಂತೆಯೇ ಶ್ರೀಗಳಾದ ಗಾಂಧಿ ಮತ್ತು ಖಾಡಿಲ್ಕರರು ಪರಾಜಿತರಾಗಬೇಕಾಯಿತು.

ಸರಕಾರಿ ಪಕ್ಷದ ಸದಸ್ಯರಾದ ಶ್ರೀ ಫಿರೋಜ ಗಾಂಧಿಯವರು ಮಧ್ಯಸ್ಥಿಕೆಗೆ ಸಿದ್ಧರಾದುದು ಸಾಹಸದ ಸಂಗತಿಯಾಗಿದೆ. ಶ್ರೀ ಗಾಂಧಿಯವರು ತನ್ನ ಈ ರೀತಿಯ ವಿಶೇಷತೆಯನ್ನು ಇದಕ್ಕೆ ಮೊದಲೂ ಹಲವು ಬಾರಿ ಪ್ರದರ್ಶಿಸಿದ್ದಾರೆ. ಇದಕ್ಕೆ ಕಾಂಗ್ರೆಸಿನಲ್ಲಿದ್ದರೂ ಅವರು ತಮ್ಮ ರಾಜಕೀಯ ವ್ಯಕ್ತಿತ್ವವನ್ನು ವಿಕಸಿತಗೊಳಿಸುವುದರಲ್ಲಿ ಸಮರ್ಥ ರೀತಿಯಲ್ಲಿ ಸಫಲರಾದುದೇ ಪ್ರಬಲ ಕಾರಣವಾಗಿದೆ.

ಕಾಂಗ್ರೆಸಿನ ಎಡಪಕ್ಷದ ನಾಯಕ ಶ್ರೀ ಫಿರೋಜ ಗಾಂಧಿ ಎನ್ನಲಾಗುತ್ತಿದೆ. ಜೀವವಿಮಾ ಕಾರ್ಪೋರೇಶನಿನ ಮುಂಧ್ರಾಪ್ರಕರಣವೇ ಮೊದಲಾದ ರಾಷ್ಟ್ರೀಯ ಮಹಾಪ್ರಶ್ನೆಗಳನ್ನು ಸಾಹಸಪೂರ್ವಕವಾಗಿ ಹೊರಗೆಡಹಿ, ಸರಕಾರದ ದೃಷ್ಟಿಯನ್ನತ್ತ ಸೆಳೆದ ಇವರ ಕಾರ್ಯದಿಂದ ಪ್ರತಿ ಪಕ್ಷದ ನಾಯಕರು ಈರ್ಷ್ಯಾಯುಕ್ತರಾಗುವಂತಾಗಿದೆ. ರಾಷ್ಟ್ರೀಯ ಹಿತಕ್ಕಾಗಿ ಪಕ್ಷೀಯ ಹಿತವನ್ನು ಕಡೆಗಣಿಸುವ ನಾಯಕರಲ್ಲಿ ಶ್ರೀ ಗಾಂಧಿಯವರು ಅಗ್ರಗಣ್ಯರಾಗಿದ್ದಾರೆ. ರಾಜಕೀಯ ವಿರೋಧೀ ಪಕ್ಷಗಳಲ್ಲಿ ಇವರು ಪ್ರಿಯರಾಗಿರುವುದಕ್ಕೆ ಇದೇ ಬಲವಾದ ಕಾರಣವಾಗಿದೆ.

ಲೋಕಸಭೆಯ ಅಧ್ಯಯನಶೀಲ ಸದಸ್ಯರಲ್ಲಿ ಶ್ರೀ ಗಾಂಧಿಯವರೊಬ್ಬರು. ಅವರು ಆಡುವುದು ಕಡಿಮೆ. ಆದರೆ, ಯಾವುದಾದರೊಂದು ವಿಷಯದ ಮೇಲೆ ಅವರು ದುಡಿದರೆಂದರೆ, ಅದನ್ನು ತರ್ಕಶುದ್ಧವಾಗಿ, ಸಪ್ರಮಾಣವಾಗಿ ಸಮರ್ಥಿಸುತ್ತಾರೆ. ಸತ್ಯತೆ ಮತ್ತು ಅಂಕೆಗಳ ಆಧಾರದಿಂದಲೇ ಇವರು ಭಾಷಣ ಮಾಡುತ್ತಾರೆ. ಪ್ರತಿವರ್ಷವೂ ಇವರು ಅಂಕೆ ಸಂಖ್ಯೆಗಳ ಆಧಾರದಿಂದ ರೇಲ್ವೆ ಮಂತ್ರಿಗಳ ಬಾಯಿ ಮುಚ್ಚಿಸಿ ಬಿಡುವುದು ವಾಡಿಕೆಯಾಗಿ ಬಂದಿದೆ.

ವಿಶಿಷ್ಟ ಘಟನೆಗಳ ಸಂಬಂಧದಲ್ಲಿ ಅಧಿಕಾಧಿಕ ಜ್ಞಾನ ಸಾಮಗ್ರಿಗಳನ್ನು ಪಡೆಯಲು ಪ್ರಯತ್ನ ನಡೆಸುವುದು ಮತ್ತು ಆದರತ್ತ ಸರಕಾರದ ಗಮನ ಹರಿಯುವಂತೆ ಮಾಡುವುದು ತಮ್ಮ ಕರ್ತವ್ಯವೆಂದು ಶ್ರೀ ಫಿರೋಜ ಗಾಂಧಿ ತಿಳಿಯುತ್ತಾರೆ. ಕಳೆದ ವರ್ಷ ಇವರು ಪಂಜಾಬದ ವಿಷಯವಾಗಿ ಹಾಗೂ ಅಲ್ಲಿನ ಅಪರಾಧ ಸ್ಥಿತಿಯ ಬಗ್ಗಾಗಿ ವಿರೋಧೀ ದಳದವರು ಸರಕಾರದ ಮೇಲೆ ಹೊರಿಸಿದ್ದ ಆರೋಪಗಳನ್ನು ಸಮರ್ಥಿಸಿದ್ದರು. ಉತ್ತರ ಪ್ರದೇಶದ ರಾಯಬರೇಲಿ ಮತದಾರ ಕ್ಷೇತ್ರದಿಂದ ಆರಿಸಿ ಬಂದ ಇವರು ಜಹಾಂಗೀರ ಗಾಂಧಿಯವರ ಪುತ್ರರು, ಇವರ ಜನ್ಮವು ೧೯೧೨ನೆ ಸಪ್ಟಂಬರ ೧೨ನೇ ದಿನಾಂಕ ರಂದು ಬೊಂಬಾಯಿಯಲ್ಲಾಯಿತು. ಶ್ರೀ ಗಾಂಧಿಯವರು ಲಂಡನ್ ಸ್ಕೂಲ್ ಆಫ್ ಇಕಾನಾಮಿಕ್ಸ್‌ನಲ್ಲಿ ಶಿಕ್ಷಣ ಪಡೆದರು. ೧೯೪೨ನೇ ಮಾರ್ಚ ೨೬ರಂದು ಇಂದಿರಾ ನೆಹರುರವರೊಡನೆ ಶ್ರೀ ಗಾಂಧಿಯವರ ವಿವಾಹವಾಯಿತು.

೧೯೪೨ರ ರಾಷ್ಟ್ರೀಯ ಆಂದೋಲನದಲ್ಲಿ ಶ್ರೀ ಗಾಂಧಿ ಸೆರೆಹಿಡಿಯಲ್ಪಟ್ಟಿದ್ದರು. ತತ್ಪರಿಣಾಮವಾಗಿ ಆಗ ಅವರು ಒಂದು ವರ್ಷ ಕಾರಾಗೃಹವಾಸದ ಶಿಕ್ಷೆಯನ್ನೂ ಅನುಭವಿಸಬೇಕಾಯಿತು. ಇವರು ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್, ದಿ ನೇಶನಲ್ ಹೆರಾಲ್ಡ್, ಮತ್ತು ದಿ ನವಜೀವನ್‌ಗಳ ವ್ಯವಸ್ಥಾ ಸಂಚಾಲಕರಾಗಿದ್ದರು. ೧೯೫೦ರಿಂದ ಭಾರತದ ಸಂಸತ್ತಿನ ಸದಸ್ಯರಾಗಿದ್ದಾರೆ. ಎರಡು ವರ್ಷಗಳಿಗೆ ಮೊದಲು ಭಾರತ ಸರಕಾರವು ಇವರನ್ನು ಆಯಿಲ್ ರಿಫ್ಯಾನರೀಸ್ ಇಂಡಿಯಾ (ಪ್ರೈವೇಟ್) ಲಿಮಿಟೆಡ್‌ನ ಅಧ್ಯಕ್ಷರನ್ನಾಗಿ ನೇಮಿಸಿತು.

ಚುಚ್ಚು ಹಾಸ್ಯಪ್ರಿಯ ಶ್ರೀ ಫಿರೋಜ ಗಾಂಧಿಯವರು ಮುದ್ರಣ ಕಲೆಯಲ್ಲಿ ವಿಶೇಷ ಅಭಿರುಚಿವುಳ್ಳವರು.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 57/1960.

ಮಹಾರಾಷ್ಟ್ರ ಎಪೆಕ್ಸ್ ಕೊರ್ಪರೇಶನ್ ಲಿಮಿಟೆಡ್, ಉಡುಪಿ —ವಾದಿ

ಮತ್ತು

1. ಯು. ವಾಸುದೇವ ಭಟ್ಟ, ಕೃಷ್ಣ ಭಟ್ಟರ ಮಗ. 2 ಯು. ಪ್ರಭಾಕರ ಭಟ್ಟ — 1ನೇ ಪ್ರತಿವಾದಿಯ ಮಗ ಉಡುಪಿ ಕಸಬಾ ತೆಂಕಪೇಟೆ — ಪ್ರತಿವಾದಿಗಳು ಎದ್ರುರು.

ಸದರಿ ಪ್ರತಿವಾದಿಗೆ—

ಪ್ರತಿವಾದಿಗಳು ವಾದಿಗೆ ತಾ 3-4-57ರಲ್ಲಿ ರೂ. 400/-ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ಕೂಡಾ ರೂಪಾಯಿ 510-46ಕ್ಕೆ ವಾದಿಯು ಪ್ರತಿವಾದಿಗಳ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 29-7-60ಕ್ಕೆ ತನಿಖೆಗೆ ಇಟ್ಟಿದೆ ಆ ದಿವ್ಸ ಸದರಿ ಪ್ರತಿವಾದಿಗಳು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಪರಿಸದೆ ಇದ್ರೆ ಅವರ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದರಿ ಪ್ರತಿವಾದಿಗೆ ತಿಳಿಯಪಡಿಸಲಾಗಿಯದೆ.

M. Damoder Kamath,
Advocate for Plaintiff.

ಉಡುಪಿ, 12.7.60

'ನವಯುಗ'ದ ಚಂದಾಹಣ ಬಾಕಿ ಇರುವವರೆಲ್ಲರೂ ಕೂಡಲೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸಲಾಗುತ್ತದೆ.

—ಮೆನೇಜರ್

ಜೀವನದಲ್ಲಿ ಯಶಸ್ಸು

ಪ್ರಾಯದೊಡನೆ ಬುದ್ಧಿಯೂ ಬೆಳೆಯಬೇಕು

ಮಾನವನ ಪ್ರಾಯವು ಹೆಚ್ಚಿದೊಡನೆ ಆತನ ಬುದ್ಧಿಶಕ್ತಿಯು ಬೆಳೆಯುವುದಿಲ್ಲ. ಇವೆರಡೂ ಪರಸ್ಪರ ಹೊಂದಾಣಿಕೆಯಿಂದ ಮುಂದಡಿಯಿಟ್ಟರೆ ಮಾತ್ರ ಆತನ ಜೀವನವು ಯಶಸ್ವಿಯಾಗುವುದು.

ಪ್ರಾಯವೇರಿದಂತೆ ಮಾನವನ ಬುದ್ಧಿಶಕ್ತಿಯು ಬೆಳೆಯುವುದೆಂದು ಸಾಮಾನ್ಯವಾಗಿ ಎಲ್ಲರೂ ತಿಳಿದುಕೊಳ್ಳುತ್ತಾರೆ. ಆದರೆ, ತಮ್ಮ ಈ ತಿಳುವಳಿಕೆಯು ತಪ್ಪೆಂದು ಅವರರಿಯರು. ತನ್ನ ಪ್ರಾಯಕ್ಕನುಗುಣವಾದ ಒಳಿತು—ಕೆಡುಕುಗಳನ್ನು ಉನ್ನತಿ—ಅವನತಿಗಳನ್ನು ತಿಳಿಯುತ್ತ ಬರುವ ಮತ್ತು ಇತರರ ಉದಾಹರಣೆ ಅಥವಾ ಅನುಭವದಿಂದ ತುಸು ಕಲಿಯುವ ಅಭಿಲಾಷೆಯನ್ನಿಟ್ಟುಕೊಂಡಿರುವ ಮಗುವೇ ನಿಜವಾದ ತಿಳುವಳಿಕೆದಾರವಾಗಿದೆ. ವಿವೇಕ ಬುದ್ಧಿಹೀನನಾದ ಓದು ಬರಹ ಬಲ್ಲ ವ್ಯಕ್ತಿಯಾದರೂ, ಪೂರ್ವಾಪರ ವಿವೇಚನಾಹೀನನಾದ ಮತ್ತು ಸುಯೋಜಿತ ನಿರ್ಧಾರವನ್ನು ಮಾಡುವ ಶಕ್ತಿಹೀನನಾದ ವಯಸ್ಕನಾದರೂ ನಿರುಪಯುಕ್ತನು; ಹಾಗೂ ಆತನು ಬುದ್ಧಿಯಿಂದ ಅಪರಿಪಕ್ವನಾಗಿರುತ್ತಾನೆ.

ಇಂತಹ ಬುದ್ಧಿಹೀನನಾದ ವ್ಯಕ್ತಿಯೊಡನೆ ಮೈತ್ರಿ ಬೆಳೆಸುವುದು ಅಥವಾ ಜೀವನ ನಿರ್ವಹಿಸುವುದು ವಸ್ತುತಃ ಬಹು ದೊಡ್ಡ ಸಮಸ್ಯೆಯಾಗಿರುವುದು. ನಮ್ಮ ದೇಶದಲ್ಲಿ ಹೆಚ್ಚಾಗಿ ಬಾಲಕ ಬಾಲಿಕೆಯರ ವಿವಾಹವು ಯುವಾವಸ್ಥೆ ಪ್ರಾರಂಭಿಸುತ್ತಲೇ ನಡೆದು ಹೋಗುವುದು. ಇದರಿಂದ ಶಾರೀರಿಕ ಆಕರ್ಷಣವು ಕಡಿಮೆಯಾದೊಡನೆಯೇ ಪತಿ ಪತ್ನಿಯ ನಡುವೆ ವಿರಸ ಹುಟ್ಟಬಹುದು; ದಾಂಪತ್ಯ ಜೀವನದಲ್ಲಿ ಸಮಸ್ಯೆಗಳು ಎದ್ದು ತೋರಬಹುದು; ಇವುಗಳನ್ನು ಬಗೆಹರಿಸುವ ಬದಲು ಒಬ್ಬರಿನ್ನೊಬ್ಬರನ್ನು ದೋಷಿಯೆಂದು ಪ್ರಮಾಣೀಕರಿಸುವ ಪ್ರಯತ್ನವನ್ನು ಮಾಡಬಹುದು. ಇದರಿಂದಾಗಿ ಭಯಂಕರ ಪರಿಣಾಮ ಕಾಣಿಸಿಕೊಳ್ಳಬಹುದು; ಮತ್ತು ಪಾರಸ್ಪರಿಕ ಸಂಬಂಧವೂ ಕೆಟ್ಟು ಹೋಗಬಹುದು.

ಪತ್ನಿಯಾದವಳು ತನ್ನ ವ್ಯವಹಾರಗಳಲ್ಲಿ ಅವಾಸ್ತವಿಕತೆಯನ್ನು ತಂದುಕೊಂಡಲ್ಲಿ ಗುರುಜನರ ದೃಷ್ಟಿಯಲ್ಲಿ ಹಾಸ್ಯಾಸ್ಪದಳಾಗುವಳು; ಕಿರಿಯರ ಆದರ ಸಮ್ಮಾನಗಳನ್ನು ಕಳೆದುಕೊಳ್ಳುವಳು. ಪುರುಷನಿಗಾದರೋ ಒಂದು ಮಿತಿಯವರೆಗೆ ನಾರಿಯು ಚಂಚಲತೆಯಲ್ಲಿ ಚೆಲ್ಲಾಟವಾಡುವುದು, ಕುಪಿತಳಾಗುವುದು ಒಳ್ಳೆಯದೆಂದೇ ತೋರಬಹುದು; ಆದರೆ, ಆಕೆಯು ಯಾವಾಗಲೂ ಮಗುವಿನಂತೆ ಮಾತಾಡುವುದು; ಹಠ ಮಾಡುವುದು, ಅಳುವುದು ಮೊದಲಾದುವುಗಳಲ್ಲಿ ತೊಡಗಿದರೆ, ಇದರಿಂದ ಪತಿಯು ಕಳೆಯನ್ನು ಭಾರಿಯ ಹುಳವೊಂದು ಕುಕ್ಕುತ್ತಿರುವಂತಾಗುವುದು. ಆತನು ತನ್ನ ಮಿತ್ರರು ಮತ್ತು ಪರಿಜನರ ನಡುವೆ ಮೊದ್ದಾಗಿಯೋ ಅಪರಾಧಿಯಾಗಿಯೋ ಇರಬೇಕಾಗುವುದು. ವಿವೇಕಯುತಳಾದ ಸಂಗಾತಿಯೊಡನೆ ಜೀವಿಸುವುದರಿಂದ, ಆಕೆಯೊಡನೆ ಮಾತಾಡುವುದರಿಂದ, ಸಮಸ್ಯೆಗಳನ್ನು ಬಗೆಹರಿಸುವುದರಿಂದ, ಕಠಿನತೆಗಳನ್ನು ಜತೆಯಾಗಿ ಇದಿರಿಸುವುದರಿಂದ ಪತಿಯು ಸಂತುಷ್ಟನೆನಿಸುತ್ತಾನೆ. ಇದಕ್ಕೆ ನೆರವಾಗುವ ಸತಿಯಾದರೂ ಆತನ ಜೀವನದ ನಿಜವಾದ ಸಹಚರಿಯೆನಿಸುತ್ತಾರೆ.

ಇದೇ ರೀತಿಯಲ್ಲಿ ಪತಿಯು ಅಸಹಿಷ್ಣು ಮತ್ತು ಗೊಂದಲಗಾರನಾದರೆ, ಆತನೂ ಪರಿಜನರ ಸನ್ಮಾನಕ್ಕೆ ಎರವಾಗುತ್ತಾನೆ. ಮನೆಯೊಡೆಯನಾದುದರಿಂದ ಆತನ ಪತ್ನಿ ಹಾಗೂ ಮಕ್ಕಳು ಆತನ ಬಗ್ಗೆ ತುಟಿಬಿಚ್ಚಲಾರರಾದರೂ ಒಳಗಿಂದೊಳಗೆ ಅವರು ಆತನಿಗೆ ವಿರೋಧವಾದ ಭಾವವನ್ನು ತಳೆಯುವರು; ತನ್ನ ಹೃದಯ ಮನಗಳನ್ನು ಅಡಗಿಸಿಕೊಂಡು ಪತ್ನಿಯು ಬೂದಿ ಮುಚ್ಚಿದ ಕೆಂಡದಂತೆ ಬುಸುಗುಟ್ಟುತ್ತಿರುತ್ತಾಳೆ. ಮಕ್ಕಳಾದರೂ ದೊಡ್ಡವರಾದ ಮೇಲೆ ತಮ್ಮ ತಂದೆಗೆ ಎದುರು ಮಾತಾಡುತ್ತಾರೆ. ಇಂತಹ ಮನುಷ್ಯ ವೃದ್ಧನಾದ ಮೇಲೆ ಮತ್ತಷ್ಟು ಅಪ್ರಿಯನಾಗುತ್ತಾನೆ. ಮನೆಯವರಾಗಲೀ ಹೊರಗಿನವರಾಗಲೀ ಆತನ ಸಮೀಪಕ್ಕೂ ಸುಳಿಯಲಾರರು. ಇತರರೊಡನೆ ಬೆರೆಯಬೇಕೆಂಬ ಆಸೆ ಮೂಗಿನ ತನಕವಿದ್ದರೂ ಆತ ತನ್ನ ಸ್ವಭಾವದ ಕಾರಣದಿಂದಾಗಿ ಹಾಗೆ ಮಾಡಲಾರನು. ಹಾಗಾಗಿ ಕಂಡವರ ಮೇಲೆಲ್ಲಾ ಉರಿ ಕಾರುವುದರಲ್ಲಿ, ನಂಜು ಸೂಸುವುದರಲ್ಲಿ ಆತನಿಗೆ ತೃಪ್ತಿಯೆನಿಸುವುದು. ಆದರೆ ಇದಕ್ಕೆ ಅನುಕೂಲ ವಾತಾವರಣ ದೊರೆಯುವುದೇ ಕಷ್ಟಸಾಧ್ಯವಾಗುವುದು. ಕೈಗೆ ದೊರೆತ ಸಂದರ್ಭವನ್ನಾತನೆಂದೂ ವ್ಯರ್ಥ ಬಿಟ್ಟುಬಿಡಲಾರನು.

ಜೀವನವು ಶಾರೀರಿಕ ಬಲಮಾತ್ರದಿಂದಲೇ ನಡೆಯುವುದಿಲ್ಲ. ಬುದ್ಧಿಶಕ್ತಿ ಹಾಗೂ ಜ್ಞಾನಗಳೂ ಜೀವನರಥ ಸುಸೂತ್ರ ಸಾಗಲು ಆವಶ್ಯಕ. ಶರೀರದಲ್ಲಿ ಯುವಕನಾಗಿದ್ದರೂ ಮಾನಸಿಕವಾಗಿ ಅಬೋಧ, ಅಜ್ಞಾನಿ, ಮತ್ತು ಅಪರಿಪಕ್ವನೆನಿಸಿದ್ದರೆ, ಆತನು ಅಹಂಕಾರ, ಅಂಧವಿಶ್ವಾಸ, ಮೌಢ್ಯ ಮತ್ತು ಜಾಡ್ಯಗಳ ದಾಸನಾಗಿಬಿಡುತ್ತಾನೆ.

ಮಾನಸಿಕ ಪರಿಪಕ್ವತೆಯು ಪ್ರಾಯದೊಡನೆ ಬರುವುದಿಲ್ಲ; ಇದು ಮಾನವನ ನಿರ್ಣಯಾತ್ಮಕ ಬುದ್ಧಿವಂತಿಕೆಯೊಡನೆ ಕಾಣಿಸಿಕೊಳ್ಳುವುದು. ಬುದ್ಧಿಶಾಲಿ ವ್ಯಕ್ತಿಯು ತನ್ನ ತಪ್ಪಿನ ಬಗ್ಗೆ ತಾನೇ ನಗುತ್ತಾನೆ; ಸಣ್ಣ ಮಗುವಿನಿಂದಲೂ ಏನಾದರೂ ತಿಳಿದುಕೊಳ್ಳಬಹುದೆಂದು ತಿಳಿಯುತ್ತಾನೆ; ತನ್ನ ಮನಸ್ಸಿನ ವೇಗವನ್ನು ನಿಯಂತ್ರಿಸಬಲ್ಲವನಾಗುತ್ತಾನೆ; ತನ್ನ ಪ್ರೇಮ, ಪ್ರಶಂಸೆ, ಮಮತೆ, ಈರ್ಷ್ಯೆ ಮೊದಲಾದುವನ್ನು ಉಚಿತ ಸಂದರ್ಭ ಸನ್ನಿವೇಶಗಳನ್ನು ಕಂಡುಕೊಂಡು ಪ್ರಕಟಿಸುವ ಸಾಮರ್ಥ್ಯವಂತನಾಗುತ್ತಾನೆ.

೧೭ ವರ್ಷದ ಹುಡುಗಿಯೊಬ್ಬಳು ವಿವಾಹಾನಂತರ ಅಂದಿದ್ದಳು—'ಓ, ಲಗ್ನ ಪೂರ್ವದಲ್ಲಿ ನಾನು ಎಷ್ಟೊಂದು ಮುಗ್ಧೆ ಮತ್ತು ಬೇಜವಾಬ್ದಾರಳಾಗಿದ್ದೆನು!' ಎಂದು! ಮದುವೆಯಾದ ಮೇಲೆ, ಆಕೆಗೆ ಗೃಹಿಣಿಯ ಪದವಿ ದೊರೆಯಿತು; ಆಗ ಆಕೆ ತನ್ನ ಹೊಣೆಯೇನೆಂಬುದನ್ನು ಅರಿತುಕೊಂಡಳು.

ಒಬ್ಬ ಯುವಕ ತನ್ನ ೩೫ನೆಯ ವಯಸ್ಸಿನಲ್ಲಿ ವಿವಾಹಿತನಾದನು. ಆತನ ಉಳಿದಿಬ್ಬರು ಸಹೋದರರ ಮದುವೆ ಅವರ ೨೦ನೆಯ ವರ್ಷದಲ್ಲೇ ನಡೆದಿತ್ತು. ಈಗ, ಈ ೩೫ ವರ್ಷದ ಯುವಕನ ವೈವಾಹಿಕ ಜೀವನ ಸಾಕಷ್ಟು ಸಫಲವೆನಿಸಿದೆ. ಆತ ತನ್ನ ಮಿತ್ರನೊಡನೆ ಒಂದುಬಾರಿ ಹೇಳಿದ—"ನಾನು ಮೊದಲೇ ಮದುವೆ ಮಾಡಿಕೊಳ್ಳದಿದ್ದುದು ಒಳ್ಳೆಯದೇ ಆಯಿತು. ಒಂದುವೇಳೆ ಮೊದಲೇ ನಾನು ಒಬ್ಬಾಕೆಯ ಕೈಹಿಡಿದಿರುತ್ತಿದ್ದರೆ, ಆಗ, ಮನೆಯೊಡೆಯನ ಕರ್ತವ್ಯವನ್ನು ಒಳ್ಳೆಯ ರೀತಿಯಲ್ಲಿ ನಿಭಾಯಿಸುವುದರಲ್ಲಿ ಅಸಮರ್ಥನಾಗಿರುತ್ತಿದ್ದೆ."

ಮಾನಸಿಕ ರೂಪದಲ್ಲಿ ಪರಿಪಕ್ವನಾದ ವ್ಯಕ್ತಿ ತನ್ನ ಪರಿಸ್ಥಿತಿಗಳಿಂದ ಸಮಾಧಾನ ಪಟ್ಟುಕೊಳ್ಳಬಲ್ಲನು. ಆತನು ದುಃಖದಿಂದ ಕುಗ್ಗುವುದಿಲ್ಲ; ಸುಖದಿಂದ ಹಿಗ್ಗುವುದೂ ಇಲ್ಲ. ತನ್ನ ನ್ಯೂನತೆಗಳನ್ನು ಆತ ತಿಳಿದುಕೊಳ್ಳುತ್ತಾನೆ; ತನ್ನ ಯೋಗ್ಯತೆಯ ಮೇಲೆ ಅಚಲ ವಿಶ್ವಾಸವಿಡುತ್ತಾನೆ. ಆತನಲ್ಲಿ ವ್ಯಾವಹಾರಿಕ ಜ್ಞಾನವಿರುತ್ತದೆ; ಇತರರನ್ನು ಆತ ಪರೀಕ್ಷಿಸುವಷ್ಟು ಶಕ್ತಿವಂತನಾಗುತ್ತಾನೆ. ತನ್ನ ಮತ್ತು ಪರರ ಶಕ್ತಿಯೆಷ್ಟೆಂದಾತ ತಿಳಿದುಕೊಳ್ಳುತ್ತಾನೆ. ಎದುರಾಗುವ ಸಂಕಟಗಳು ಆತನ ಧೈರ್ಯವನ್ನು ಹಿಮ್ಮೆಟ್ಟಿಸಲಾರವು; ಬದಲು ಅವುಗಳಿಂದ ಆತನು ನವೋತ್ಸಾಹ, ನವ ಆಶೆ ಮತ್ತು ನವ ಚೇತನವನ್ನು ಪಡೆದು ತನ್ನ ಭವಿಷ್ಯ ನಿರ್ಮಾಣದಲ್ಲಿ ವಿಶ್ವಾಸವಾದಿಯಾಗುತ್ತಾನೆ.

ತನ್ನ ಸಾಮರ್ಥ್ಯ, ಶಕ್ತಿ ಮತ್ತು ಮುಂದಿನ ಪರಿಣಾಮಗಳನ್ನು ಮೊತ್ತಮೊದಲಿಗೆ ಗಮನಿಸಿ, ಮಾನವನು ಮುಂದಡಿಯಿಡಬೇಕಾಗುವುದರಿಂದ ಆತನು ಯಾವಾಗಲೂ ಮನಶ್ಚಂಚಲತೆಯನ್ನು ಅಂಕಿತದಲ್ಲಿಟ್ಟುಕೊಳ್ಳಬೇಕು; ಇದರಲ್ಲಿಯೇ ಆತನ ಚತುರತೆ ವ್ಯಾವಹಾರಿಕ ಕೌಶಲ ಮತ್ತು ಬುದ್ಧಿಪರಿಪಕ್ವತೆಯೆಷ್ಟೆಂದು ಸಿದ್ಧವಾಗುತ್ತದೆ.

NAVAYUGA' WEEKLY is in the list of periodicals and Newspapers approved or use in Secondarys School as per proceedings Roc· No· 466 N/50 date 2-12-1950 of the Director of public Instruction Madras·

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ·
ಬೆಲೆ ರೂ· 1-4-0 (1=25)·

ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್·ಐ·ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ· ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ನಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N·P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕವನ್ನು ಬುಕ್‌ಪೋಸ್ಟ್ ಮಾಡಬಹುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ವಿಚಾರವೀಚಿ

ಕೇರಳದ ನಾಯರ ಸಮಾಜ

ಬ್ರಾಹ್ಮಣರ ವಿಲಕ್ಷಣ ಸಾಂಸ್ಕೃತಿಕ ಪ್ರಸಾರ ಕಾರ್ಯದ ಪ್ರಭಾವದಿಂದ ಕೇರಳದ ನಾಯರ ಸಮಾಜವು ರೂಪುಗೊಂಡು ಒಂದು ಬಲವಾದ ಸಮಾಜ ಘಟಕವಾಯಿತು. ಈ ಸಾಂಸ್ಕೃತಿಕ ಕಾರ್ಯಕಲ್ಪವನ್ನು ನಿಗ್ದರ್ಶಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

(ವಿವಿಧ ಮೂಲಗಳಿಂದ)

ಆಧುನಿಕ ಕೇರಳವು ಬ್ರಾಹ್ಮಣ ಸಂಸ್ಕೃತಿಯ ವಿಚಾರ ಧಾರೆ ಮತ್ತು ಜಾತಿ ವ್ಯವಸ್ಥೆಯ ಬಲವಾದ ಕೋಟೆಯೆಂದು ತಿಳಿಯಲಾಗುತ್ತಿದೆ. ಇದಕ್ಕೆ ಕಳೆದ ಒಂದು ಸಾವಿರದ ಇನ್ನೂರು ವರ್ಷಗಳಿಂದಲೂ ಕ್ರಿಯಾಶೀಲವಾಗಿ ಬಂದಿರುವ ಐತಿಹಾಸಿಕ ಪ್ರಸಾರದ ಪರಿಣಾಮವೇ ಕಾರಣವಾಗಿದೆ.

ಹಿಂದೆ ಸಮಸ್ತ ಕೇರಳದಲ್ಲಿ ಬೌದ್ಧ ಧರ್ಮಾವಲಂಬಿಗಳು ಮಾತ್ರ ಇದ್ದರೆಂದೂ ಆದರೂ ಆ ಕಾಲದಲ್ಲಿ ಇದ್ದ 'ನಂಬೂದರಿ' ಎಂಬ ಒಂದು ಬ್ರಾಹ್ಮಣ ಶಾಖೆಯು ಪ್ರತಿಷ್ಠಿತವಾಗುತ್ತ ಬಂದಿದ್ದುದರಿಂದ, ಬ್ರಾಹ್ಮಣ ಧರ್ಮವು ವಾಸ್ತವಿಕವಾಗಿ ಪ್ರಸಾರವಾಯಿತು ಎಂಬುದಕ್ಕೆ ಐತಿಹಾಸಿಕ ದಾಖಲೆಗಳು ದೊರೆಯುತ್ತವೆ. ಕೇರಳದಲ್ಲಿ ಬ್ರಾಹ್ಮಣರ ಪ್ರಭುತ್ವವು ಕ್ರಿ. ಶ. ಮೊದಲನೆಯ ಶತಮಾನದಲ್ಲಿ ಪ್ರಾರಂಭವಾಯಿತು ಎಂದು ತಿಳಿಯಲು ಆಧಾರಗಳಿವೆ. ನಂಬೂದರಿ ಬ್ರಾಹ್ಮಣರು ಕೇರಳದಲ್ಲಿ ಕಾಲಿರಿಸಿದೊಡನೆಯೇ ಅಲ್ಲಿನ ಆ ಕಾಲದ ಕೇರಳೀಯ ಸಮಾಜದವರು ಸುಸಂಘಟಿತರಾಗಿ, ಸಾಂಸ್ಕೃತಿಕ ರಕ್ತಮಿಶ್ರಣವನ್ನು ಎದುರಿಸಿದ್ದರು. ಇದರಿಂದಾಗಿ ನಂಬೂದರಿಗಳಿಗೆ ಮೊದಲಿಗೇ ತಮ್ಮ ಪ್ರಭುತ್ವವನ್ನಲ್ಲಿ ಜಮಾಯಿಸುವುದು ಅಸಾಧ್ಯವಾಗಿತ್ತು. ಈ ರೀತಿ ನಂಬೂದರಿ ವಿರೋಧಿಗಳಲ್ಲಿ ತನ್ನ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯಿಟ್ಟುಕೊಂಡಿರುವ ನಾಯರ ಸಮಾಜವು ಬಹು ಪ್ರಮುಖವಾಗಿದೆ.

ಇಂದಿನ ಕೇರಳವು ಹಿಂದೆ ಚೇರೀ ರಾಜ್ಯದ ಒಂದು ಭಾಗವಾಗಿತ್ತು. ಸಂಸ್ಕೃತದ 'ನಾಗ' ಎಂಬ ಶಬ್ದದ ತಮಿಳು ಪರ್ಯಾಯ ಪದವು 'ಚೇರ' ಎಂದಾಗುವುದು. ಆರ್ಯರ ಆಕ್ರಮಣದ ವೇಳೆ ನಾಗರು ಭಾರತದ ಅತಿಪ್ರಾಚೀನ ಜಾತಿಗಳಲ್ಲಿ ಒಂದಾಗಿದ್ದರೆಂದೂ ಆರ್ಯರು ಇವರೊಡನೆ ಹೋರಾಡಿ ವ್ಯವಹರಿಸಿದರೆಂದೂ ವೈದಿಕ ಸಾಹಿತ್ಯದಲ್ಲಿ ಹಲವಾರು ಉಲ್ಲೇಖಗಳು ದೊರೆಯುತ್ತವೆ. 'ನಾಗ' ಜಾತಿಯ ಜನರನ್ನು 'ನಾಗರ' ಎಂದೂ ಕರೆಯುತಿದ್ದರು. ಈ ವರ್ಗದ ಒಂದು ಪಂಗಡವು ಮಲಬಾರಿಗೆ ಬಂದು ವಾಸಿಸಿದ್ದು, ಇವರೇ 'ನಾಯರ್' ಎಂಬ ಹೆಸರಿನಿಂದ ಕರೆಯಲ್ಪಡತೊಡಗಿದರು. ನಾಗರ ಇನ್ನೊಂದು ಪಂಗಡವು ನೇಪಾಳದ ಸೋಪಾನಕ್ಕೆ ತೆರಳಿ, ಅಲ್ಲಿ 'ನೇವಾರ್' ಎಂಬುದಾಗಿ ಹೆಸರಿಸಲ್ಪಟ್ಟರು. 'ನೇವಾರ್' ವರ್ಗದವರು ಮಾತೃವಂಶಿಗಳೆಂದೂ ಅವರ ಸಾಮಾಜಿಕ ಸಂಘಟನೆಯ ಆರ್ತ, ಬಹಿಕ ಮತ್ತು ತಕ್ಷ ಜಾತಿಯವರಂತಿದ್ದಿತೆಂದೂ ಮಹಾಭಾರತದ ಕರ್ಣ ಪರ್ವದಲ್ಲಿ ಉಲ್ಲೇಖವಿದೆ. ಈ ಸಮಾಜದಲ್ಲಿ ತಾಯಿಯೇ ಆಸ್ತಿಪಾಸ್ತಿಗಳ ಆಡಳಿತ ನೋಡಿಕೊಳ್ಳುತಿದ್ದಳೆಂದೂ ಹೆಣ್ಣು ಮಕ್ಕಳಿಗೆ ಮಾತ್ರ ಉತ್ತರಾಧಿಕಾರವಿದ್ದಿತೆಂದೂ ತಿಳಿಯುತ್ತದೆ.

ಬ್ರಾಹ್ಮಣರು ತಮ್ಮ ಧರ್ಮ ಮತ್ತು ಸಂಸ್ಕೃತಿಯನ್ನು ಪಸರಿಸಲು ಕೆಲವು ವಿಶಿಷ್ಟ ಸಮುದಾಯಗಳನ್ನು ಆರಿಸಿದರು. ಸಮಾಜ ಶಾಸ್ತ್ರದ ದೃಷ್ಟಿಯಿಂದ ಕೇರಳದಲ್ಲಿ ಸಾಂಸ್ಕೃತಿಕ ಸಂಬಂಧ ಸ್ಥಾಪನೆಯ ಮಾಧ್ಯಮವೆನಿಸುವ ಒಂದೇ ಒಂದು ನಾಯರ ಜಾತಿಯಿತ್ತೆಂದು ತಿಳಿಯುತ್ತದೆ. ಆ ಪ್ರದೇಶದಲ್ಲಿ ನಾಯರರು ಮಹತ್ವಪೂರ್ಣ ಸಮಾಜದವರಾಗಿದ್ದು ಶಾರೀರಿಕ ಶಕ್ತಿಯಿಂದಲೂ ಪರಿಪೂರ್ಣರಾಗಿದ್ದರು. ಶ್ರೀ ಇ. ಎಂ. ಎಸ್. ನಂಬೂದರಿ ಪಾದರು ತಮ್ಮ 'ಕೇರಳದ ರಾಷ್ಟ್ರೀಯ ಪ್ರಶ್ನೆ' ಎಂಬ ಪುಸ್ತಕದಲ್ಲಿ ನಾಯರ ಸಮಾಜದ ಕೆಲವು ಸದಸ್ಯರು ವಿಶೇಷ ಪರಿಸ್ಥಿತಿಗೊಳಪಟ್ಟು ನಂಬೂದರಿಗಳಾದರೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರು ಪ್ರಾಯಃ ಪ್ರಾಣಿ ವಿಜ್ಞಾನ ಮಾರ್ಗವನ್ನು ಅನುಸರಿಸಿರಬೇಕೆಂದು ತೋರುವುದು. ನಂಬೂದರಿಗಳು ಅಲ್ಪ ಸಂಖ್ಯಾಕರಾಗಿದ್ದರು. ಅವರು ಸಂತಾನೋತ್ಪಾದನೆಯ ಮೂಲಕ ಒಂದು ಉಪಜಾತಿಯನ್ನು ನಿರ್ಮಿಸಿದರು. ಗಂಗಾತಟದಲ್ಲಿ ಆರ್ಯರ ಆಗಮನ ಮತ್ತು ವಿಸ್ತಾರದ ಹಿಂದೆ ಸಾಂಸ್ಕೃತಿಕ ವಿಜಯದ ಉದ್ದೇಶವು ತನ್ನ ಕಾರ್ಯ ನಡೆಸುತಿತ್ತು. ಕೇರಳದಲ್ಲಿ ನಂಬೂದರಿ ಬ್ರಾಹ್ಮಣರ ಉದ್ದೇಶವು ಆದರ್ಶವಾದಿ ಮತ್ತು ಸ್ವಾರ್ಥಪೂರ್ಣವಾಗಿರಬೇಕು. ಇದರಿಂದ ತಮ್ಮ ಪ್ರಮುಖ ಅನುಗಮನವನ್ನವರು ಬೆಳೆಸಿರಬೇಕು.

ಬ್ರಾಹ್ಮಣ ಧರ್ಮದ ವಿಸ್ತಾರದ ಈ ವಿಧಾನವು ವಿಶ್ವದ ಇತಿಹಾಸದಲ್ಲಿಯೇ ಅದ್ವಿತೀಯವಾಗಿದೆ. ರೋಮನರು ತಮ್ಮ ಉಪನಿವೇಶನಗಳನ್ನು ಸ್ಥಾಪಿಸಲು, ಸ್ಪೇನಿಶರು ಲ್ಯಾಟಿನ್ ಅಮೇರಿಕೆಯನ್ನು ನಿರ್ಮಿಸಲು ಮತ್ತು ಯುರೋಪಿಯನರು ಸಾಮ್ರಾಜ್ಯ ವಿಸ್ತರಿಸಲು ಸೈನಿಕ ವಿಜಯದ ದಾರಿಯನ್ನು ಅವಲಂಬಿಸಬೇಕಾಗಿತ್ತು. ಆದರೆ, ಬ್ರಾಹ್ಮಣರು ಈ ವಿಧಾನವನ್ನು ಸ್ವೀಕರಿಸಲಿಲ್ಲ. ದೇಶವಿದೇಶಗಳಲ್ಲಿ ಅವರೊಂದು ಅನುಪಮ ಕ್ರಮವನ್ನು ಅನುಸರಿಸಿದರು; ಅದರಂತೆಯೇ ಕೇರಳದಲ್ಲಿಯೂ ಆಯಿತು. ಇವರು ಹೋದಲ್ಲೆಲ್ಲಾ ಕ್ಷತ್ರಿಯ ರಾಜರನ್ನು ತಮ್ಮ ಮಾಧ್ಯಮವನ್ನಾಗಿರಿಸಿಕೊಂಡು ಅವರನ್ನು ಅಶ್ವಮೇಧವೇ ಮೊದಲಾದ ಯಜ್ಞಗಳನ್ನು ಮಾಡುವಂತೆ ಪ್ರೋತ್ಸಾಹಿಸಿದರು; ಅವರ ಸಹಾಯದಿಂದಲೇ ದೇವಾಲಯಗಳಲ್ಲಿ ತಮ್ಮ ಶಕ್ತಿಯನ್ನು ಕೇಂದ್ರೀಕರಿಸಿ; ತಮ್ಮ ಮಹತ್ವವನ್ನು ಹೆಚ್ಚಿಸಿಕೊಂಡರು.

ಕೇರಳ ಪ್ರದೇಶದಲ್ಲಿ ಬ್ರಾಹ್ಮಣರು ತಮ್ಮ ಮಾಧ್ಯಮದ ರೂಪದಲ್ಲಿ ನಾಯರ-ಸಮಾಜವನ್ನೇ ಏಕೆ ಆರಿಸಿಕೊಂಡರು ಎಂಬುದಕ್ಕೂ ಒಂದು ಪ್ರಬಲ ಕಾರಣವಿದೆ. 'ನಾಯರ'ರು ಒಂದು ಸೈನಿಕ ಜಾತಿಯವರಾಗಿದ್ದರು. ಇವರು ಚೇರ, ಚೋಳ ಮತ್ತು ಪಾಂಡ್ಯ ಅರಸರಲ್ಲಿ ಸೈನಿಕರಾಗಿ ಸೇವೆ ಸಲ್ಲಿಸಿದ್ದರು. ಆಗ ಕೇರಳದಲ್ಲಿ ಬಹಳಷ್ಟು ಚಿಕ್ಕಪುಟ್ಟ ರಾಜ್ಯಗಳಿದ್ದು ಇವುಗಳು ಪರಸ್ಪರ ಹೊಡೆದಾಡಿಕೊಳ್ಳುತ್ತಿದ್ದವು. ಈ ಹೋರಾಟಗಳಲ್ಲಿ ಬಹಳಷ್ಟು ಜನರು ಸಾಯುತಿದ್ದರು. ಇಂತಹ ಸಂದರ್ಭದಲ್ಲಿ ಯುದ್ಧದ ಬಗ್ಗೆ ಅಸಂತುಷ್ಟವಾದ ಒಂದು ಪಂಗಡ ತಲೆಯೆತ್ತಿರಬಹುದು. ನಾಯರ ಸಮಾಜವು ತಮ್ಮೀನ ಒಂದು ಉಪಶಾಖೆಯನ್ನಾಡುತಿದ್ದರೆಂದೂ ಧರ್ಮದಲ್ಲಿ ಯೂ ಪುದೇ ಪ್ರಗತಿಯನ್ನವರು ಕಂಡದ್ದಿಲ್ಲವೆಂದೂ ನಮಗೆ ತಿಳಿಯುತ್ತದೆ.

ಇಂತಹ ಪರಿಸ್ಥಿತಿಯ ಲಾಭವನ್ನು ನೂತನವಾಗಿ ಪಾದಾರ್ಪಣಗೆಯ್ದ ಬ್ರಾಹ್ಮಣರು ಪಡೆದುಕೊಂಡರು. ನಂಬೂದರಿ ಬ್ರಾಹ್ಮಣರು ವೇದ ಶಾಸ್ತ್ರಗಳನ್ನು ತಿಳಿದವರಾಗಿದ್ದರು. ಶಾರೀರಿಕ ದೃಷ್ಟಿಯಿಂದ ಇವರು ನಾಯರ ಮಹಿಳೆಯರಿಗೆ ಆಕರ್ಷಕರಾಗಿ ತೋರಿದರು. ತಮ್ಮ ತಂತ್ರ ಮಂತ್ರ ಮತ್ತು ಆಯುರ್ವೇದ ಜ್ಞಾನದಿಂದ ಅವರು ಆದರ್ಶ ಸಾಂಸ್ಕೃತಿಕ ವಿಜೇತರ ರೂಪಧಾರಣೆ ಮಾಡಿದ್ದರು. ಅವರು ಅಸಂತುಷ್ಟ ನಾಯರ ಸಮಾಜದೊಡನೆ ಸ್ನೇಹಸಂಬಂಧ ಸ್ಥಾಪಿಸುವುದು ಉಪಯುಕ್ತವೆಂದುಕೊಂಡು ಅವರೊಡನೆ ಬಹಳ ಸಹಾನುಭೂತಿಯಿಂದ ವರ್ತಿಸತೊಡಗಿದರು. ಬ್ರಾಹ್ಮಣರು ತಮ್ಮ ಅನುಯಾಯಿಗಳನ್ನು ನಾಯರ ಸಮಾಜದಲ್ಲಿ ಉಚ್ಚ ವರ್ಗದವರೆಂದು ಹೇಳಿದರು. ಇದರಿಂದ ವಿಕಸಂಯುಕ್ತ ಸಮಾಜವು ಭಿನ್ನ ಭಿನ್ನವಾಗಿ ಹೋಗಿ, ಬ್ರಾಹ್ಮಣರ ಸಾಮಾಜಿಕ ನಿಯಮಗಳು ಶಾಶ್ವತಗೊಂಡುವು. ಮುಂದೆ ನಂಬೂದರಿ ಬ್ರಾಹ್ಮಣರು ಪುರಾಣಗಳನ್ನು ಬರೆದರು. 'ಕೇರಳೋತ್ಪತ್ತಿ' ಎಂಬ ಗ್ರಂಥದಲ್ಲಿ ನಾಯರರ ಹಲವಾರು ವರ್ಗಗಳನ್ನು ಸಮಾವೇಶಗೊಳಿಸಿದರು.

ಆದರೆ ಕೆಲವೊಂದು ಕಾರಣಗಳಿಂದ ಬ್ರಾಹ್ಮಣರ ಮಹತ್ವ ಹಾಗೂ ಪ್ರಭಾವವು ಕ್ರಮಶಃ ಶಿಥಿಲವಾಗುತ್ತ ಬರುತ್ತಿದೆ. ಕಳೆದ ಕೆಲವು ದಶಕಗಳಿಂದ ಕೇರಳೀಯ ಸಮಾಜವು ತೀವ್ರ ಆರ್ಥಿಕ ಪರಿವರ್ತನೆಗಳಿಗೆ ಗುರಿಯಾಗಿದೆ. ಆದರೆ, ಈ ಪರಿವರ್ತನೆಯ ವೇಗದೆದುರು ಬ್ರಾಹ್ಮಣರು ಕಂಪಿಸದೆ ಇರುವುದ ಸಾಧ್ಯವಾಗಲಿಲ್ಲ. ಸಂಯುಕ್ತ ಕುಟುಂಬ ವ್ಯವಸ್ಥೆಯು ಮುರಿಯುತ್ತಿದೆ; ಆಧುನಿಕ ವಿದ್ಯಾಭ್ಯಾಸ ಮತ್ತು ರಾಜಕೀಯ ನಿಯಮಗಳೂ ಕೇರಳದಲ್ಲಿ ಕ್ರಾಂತಿಕಾರಿ ಪ್ರಭಾವ ಬೀರಿವೆ. ಇದರೊಡನೆ ನಂಬೂದರಿ ಸಮಾಜವೂ ಹ್ರಾಸೋನ್ಮುಖವಾಗಿದೆ. ತಮ್ಮ ಉಚ್ಚತೆ ಮತ್ತು ಸಾಮಾಜಿಕ ವಿಶಿಷ್ಟತೆಗಳ ಭಾವನೆಯಿಂದ ನಂಬೂದರಿ ಸ್ತ್ರೀಯರು ಅವಿವಾಹಿತರಾಗಿಯೇ ಉಳಿಯುತ್ತಾರೆ. ಇದರಿಂದಾಗಿಯೇ ಸೇ. ೬೦ರ ಪುರುಷರು ಮತ್ತು ೪೦-೩ ಸ್ತ್ರೀಯರು ಕೇರಳದಲ್ಲಿ ಅವಿವಾಹಿತರಾಗಿದ್ದಾರೆ. ಹೊಸ ರಕ್ತ ಸಂಚಾರವನ್ನು ತಡೆಯುವ ಸಮಾಜವು ತನ್ನನ್ನು ತಾನಾಗಿಯೇ ಅಶಕ್ತಗೊಳಿಸುತ್ತದೆ ಎಂಬುದು ಸಮಾಜ ಶಾಸ್ತ್ರೀಯ ತಥ್ಯವಾಗಿದೆ. ಆದರೂ ಆರ್ಯ ಮತ್ತು ನಾಯರ ಸಂಸ್ಕೃತಿಯ ಸಂಗಮದಿಂದಾಗಿ ಬಹಳಷ್ಟು ಒಳಿತುಗಳಾದುವು. ಇತಿಹಾಸ ಮತ್ತು ಸಮಾಜ ಶಾಸ್ತ್ರಗಳ ದೃಷ್ಟಿಯಿಂದ ಇದು ಅತ್ಯಮೂಲ್ಯವಾಗಿರುವುದು.

ಕೇರಳದಲ್ಲಿ ಬ್ರಾಹ್ಮಣರು ಸಾಂಸ್ಕೃತಿಕ ವಿಜೇತರಾಗಿ ಪಾದಾರ್ಪಣ ಮಾಡಿದ್ದರು; ಅವರ ಉದಾತ್ತ ವ್ಯಕ್ತಿತ್ವದಿಂದಾಗಿಯೇ ಸಾಮಾಜಿಕವಾಗಿ ಸುಸಂಘಟಿತರಾದರು. ಅವರು ಕೇರಳ ಸಮಾಜವನ್ನು ಸಾಂಸ್ಕೃತಿಕವಾಗಿ ಉದ್ಧರಿಸಿದರು; ಮಲಯಾಳಂ ಅನ್ನು ಒಂದು ಸಮೃದ್ಧ ಭಾಷೆಯನ್ನಾಗಿಸಿದರು.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೋ, ಉಡುಪಿ.


ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ
ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: (1). ಷಾ ಕಂಪೆನಿ, ಮಂಗಳೂರು—1.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.
ಕಥೆಕಾದಂಬರಿ ಇತ್ಯಾದಿ ಪುಸ್ತಕಗಳೂ
ಸಿಗುತ್ತವೆ.
ವಿಚಾರಿಸಿರಿ—
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್, ಉಡುಪಿ

ವಿನೋದ ಕಥೆ

(೨ನೇ ಪುಟದಿಂದ)

"Urgent coffee ಒಂದು ತಾ" ಎಂದು ಎದುರುಗಡೆ ನಿಂತಿದ್ದ ಮಾಣಿಯೊಡನೆ ಗೇಳಿದೆ. ತಟ್ಟನೆ ಅವನು, "ಮಿಸ್ಟರ್, ನಮ್ಮಲ್ಲಿ ಸ್ಪೆಶಲ್ ಕಾಫಿ ಮತ್ತು ಆರ್ಡಿನರಿ ಕಾಫಿ ಎಂಬ ಎರಡೇ ವಿಧದ ಕಾಫಿ ಇದೆ. Urgent coffee ಇಲ್ಲಿ ಇಲ್ಲ" ಎನ್ನಬೇಕೆ? ಅಬ್ಬಾ ಇವನ ಸೊಕ್ಕೇ? Urgent ಆಗಿ ಒಂದು ಕಾಫಿ ತಾ ಎಂದರೆ ಹೀಗೆಲ್ಲಾ ಹೇಳಬೇಕೆ? ಆಗಲಿ, ನಡೆಯುವುದೆಲ್ಲಾ ನಡೆಯಲಿ "Each dog has a time" ಎಂಬ ಗಾದೆಯೇ ಇದೆಯಲ್ಲಾ? ಇವನಿಗೂ ಪ್ರಸಂಗ ಬಂದಾಗ ಬುದ್ಧಿ ಕಲಿಸದೆ ಇರೆನು ಎಂದು ಮನಸ್ಸಿನಲ್ಲೇ ಅಂದುಕೊಂಡೆ.

"ಹಾಗಲ್ಲ ಕಣೋ ನಾನು ಹೇಳಿದ್ದು. ತಡವಾದರೆ ಬಸ್ಸು ಹೊರಟು ಹೋಗುತ್ತದೆ," ಎಂದು ನಾನು ಹೇಳುವಷ್ಟರಲ್ಲಿಯೇ

"ಹೋಗಲಿ, ಹೋಗುವ ಹೊತ್ತಿಗೆ ಹೋಗದೇ ಇರುವುದೇ ಬಸ್ಸು?" ಎಂದು ಹೇಳಿದನು.

"ಬಸ್ಸು ಹೋದರೆ ನಿನಗೇನು ಮಹರಾಯಾ, ನನಗೆ ಬಸ್ಸಿನಲ್ಲಿ ಊರಿಗೆ ಹೋಗಲಿಕ್ಕುಂಟಲ್ಲಾ" ಎಂದು ನಾನು ನನ್ನ ಕಷ್ಟ ಹೇಳಿಕೊಂಡೆ,

"ಹೋಗಿ, ಬಸ್ಸಿನಲ್ಲಿಯೇ ಹೋಗಿ. ನಿಮ್ಮೊಡನೆ ಹೋಗಕೂಡದೆಂದು ಯಾರು ಹೇಳಿದ್ದಾರೆ?"— ಮಾಣಿಯ ಸವಾಲು. ಅವನ ತರ್ಕಶಾಸ್ತ್ರ ಕೌಶಲ್ಯವನ್ನು ನೋಡಿ ಅಪ್ರತಿಭನಾದ ನನ್ನ ಸರ್ವಾಂಗವೂ ಬೆವರಿತು. "ಹೇ ದೇವರೇ, ಈ ಮಾಣಿಯ ವಾಗ್ಧಾರೆಗೆ ಸಿಕ್ಕಿ ಸಂಕಟಪಡುವಂತಾಯಿತಲ್ಲಾ" ಎಂದುಕೊಂಡೆ.

ನೋಡಿ, ಸ್ಥಳ ಮತ್ತು ಸಮಯ ಮಹಾತ್ಮ್ಯೆಯೆಂದರೆ ಇದುವೇ. ಸಾಮಾನ್ಯವಾಗಿ ಹೋಟೇಲು ಮಾಣಿಗಳೇ ಗಿರಾಕಿಗಳನ್ನು ನಾನಾ ತರವಾಗಿ ಉಪಚರಿಸಿ "ಏನು ಕೊಡಲಿ?" ಎಂದು ಕೇಳುವುದು ಎಲ್ಲೆಡೆಯ ವಾಡಿಕೆ. ಆದರೆ ಇಲ್ಲಿ ಮಾತ್ರ ಬಸ್ ಸ್ಟೇಂಡಿನ ಬಳಿ ಈ ಒಂದೇ ಒಂದು ಹೋಟೆಲು ಇರುವುದರಿಂದ ಇಲ್ಲಿ ಏನು ಮಾಡಿದರೂ ಹೊಟ್ಟೆಯ ಸಂಕಟ ನೀಗಿಸಿಕೊಳ್ಳಲು ಜನ ಬರತ್ತಾರೆ ಎಂದು ಇವರು ಚೆನ್ನಾಗಿ ಅರಿತಿದ್ದಾರೆ ನೋಡಿ, ಸ್ಥಳ ಮತ್ತು ಸಮಯ ಮಹಾತ್ಮ್ಯೆಯ ಕುರಿತು ಹೇಳುವಾಗ ಇನ್ನೆರಡು ಉದಾಹರಣೆಗಳನ್ನು ಕೊಡಬೇಕೆನಿಸುತ್ತದೆ. ಬೇರೆಲ್ಲಾ ಸಂದರ್ಭಗಳಲ್ಲಿ ಇತರರಿಗೆ ತಲೆ ಬಾಗಿಸದ ಕ್ಷೌರಿಕನಿಗೇ ಕೆಲವೊಮ್ಮೆ ರಾಜಾಧಿ ಮಹಾರಾಜರು ಕೂಡಾ ತಲೆಬಾಗಿಸಬೇಕಾಗುತ್ತದೆ ಅದು ಯಾವಾಗ ಗೊತ್ತೇ? ಕ್ಷೌರ ಮಾಡಿಸಿಕೊಳ್ಳುವಾಗ! ಕೆಲವೊಮ್ಮೆ ಪರಮ ಪತಿವ್ರತಾ ಸ್ತ್ರೀಯರು ಕೂಡಾ ಪರಪುರುಷನಿಗೆ ಕೈಕೊಡಬೇಕಾದ ಪ್ರಸಂಗ ಬರುವುದುಂಟು. ಅದಾವಾಗ ಬಲ್ಲಿರಾ? ಬಳೆತೊಡಿಸಲು ಬಳೆಗಾರನಿಗೆ ಕೈನೀಡುವಾಗ!

ಹೋದ ಹೋಟೇಲು ಮಾಣಿ ಎರಡು ನಿಮಿಷಗಳ ವರೆಗೂ ಬರಲೇ ಇಲ್ಲ. ನನ್ನ ಅಸಹನೆ ಕ್ಷಣಕ್ಷಣಕ್ಕೂ ಮಿತಿಮೀರುತಿತ್ತು. ಕೊನೆಗೆ ಟೇಬಲಿನ ಒಂದು ಬದಿಯಲ್ಲಿ ಬಿದ್ದುಕೊಂಡಿದ್ದ ವರ್ತಮಾನ ಪತ್ರಿಕೆಯೊಂದನ್ನು ಕೈಗೆತ್ತಿಕೊಂಡು ಓದತೊಡಗಿದೆನು. ಮಾಣಿ ಬಂದು ಕಾಫಿಯ ಗ್ಲಾಸನ್ನು ಇಟ್ಟು ಹೊರಟು ಹೋದನು. ಎಡಗೈಯಲ್ಲಿ ಹಿಡಿದುಕೊಂಡ ವರ್ತಮಾನ ಪತ್ರಿಕೆಯನ್ನು ನೋಡುತ್ತಾ ಬಲಗೈಯಲ್ಲಿ ಕಾಫಿಯ ಗ್ಲಾಸನ್ನು ಎತ್ತಿ ತುಟಿಗಿಟ್ಟುಕೊಂಡೆ. (ಇದು ಈ ಯುಗದ ಫೇಶನ್‌ಗಳಲ್ಲಿ ಒಂದಂತೆ!) ಒಂದು ಗುಟುಕು ಕಾಫಿ ಗಂಟಲೊಳಗೆ ಇಳಿದಿಕ್ಕೋ—ಇಲ್ಲವೋ—'ಅಯ್ಯೋ ಇದೇನು?' ಎಂದು ಕೊಂಡು ಪತ್ರಿಕೆಯನ್ನು ಅಲ್ಲೇ ಮೇಜಿನ ಮೇಲೆ ಸೆದು ಕಾಫಿಯ ಗ್ಲಾಸನ್ನು ಕೆಳಗಿರಿಸಿ ನೋಡುತ್ತೇನೆ—ಕಡು ಕಪ್ಪು ಬಣ್ಣದ ಕಾಫಿಯನ್ನು ಮಾಣಿ ತಂದಿರಿಸಿದ್ದಾನೆ. ಕಾಫಿಗೆ ಹಾಲೂ ಹಾಕಿರಲಿಲ್ಲ, ಸಕ್ಕರೆಯೂ ಕಡಿಮೆಯಾಗಿತ್ತು.

ಮಾಣಿಯನ್ನು ಕರೆದು, 'ಏನೋ ಇದು, ಕಾಫಿಗೆ ಹಾಲೂ ಇಲ್ಲ, ಸಕ್ಕರೆಯೂ ಕಡಿಮೆ. ಇದು ಕಾಫಿಯೋ, ಕಷಾಯವೋ?' ನಾನು ರೇಗಿ ಕೇಳಿದೆ,

'ಕಾಫಿಯೂ ಹೌದು, ಕಷಾಯವೂ ಹೌದು' ಮಾಣಿ ಹಾಗೆಂದು ಹಲ್ಲು ಕಿರಿದನು ನನ್ನ ಸಿಟ್ಟು ನೆತ್ತಿಗೇರಿತು. ಎದುರಿನ ಮೇಜನ್ನು ಬಲವಾಗಿ ಗುದ್ದಿ, 'ಹಾಗೆಂದರೇನು?' ಎಂದು ಕೇಳಿದೆ.

'ನಿನ್ನೆಯ ದಿನ ಹರಿದಾಸರು ಹರಿಕಥೆಯಲ್ಲಿ ಕಾಫಿ ಅಂದರೆ ಕುಟುಂಬ ಕಷಾಯ ಎಂದಿದ್ದಾರೆ ನೋಡಿ' ಎಂದು ಆತ ಹೇಳಬೇಕೆ?

'ನಿನ್ನ ಪುರಾಣ ಸಾಕು. ಮೊದಲು ಕಾಫಿ ಈ ರೀತಿ ಏಕೆ ಮಾಡಿಸಿದೆ ಹೇಳು?' ಎಂದು ನಾನು ಅಬ್ಬರಿಸಿದೆ.

'ಇಲ್ಲಿ ನೋಡಿ ಮಿಸ್ಟರ್, ನೀವು ಕಪ್ಪು ಕಾಫಿ ಬೇಕು ಎಂದು ಹೇಳಿದಿರಿ. ಆದುದರಿಂದ ಕಾಫಿ ಬಿಳಿ ಆಗಬಾರದೆಂದು ಹಾಲು ಹಾಕ ಕೂಡದೆಂದು ನಾನು ಹೇಳಿದೆ. ಇನ್ನು ಸಕ್ಕರೆಯ ವಿಷಯ. ಈಗ ನೋಡಿ ಸಕ್ಕರೆಯ ಕ್ರಯ ಬಹಳ ಏರಿದೆ, ಅದೂ ಸರಿಯಾಗಿ ಸಕ್ಕರೆ ಸಿಗುವುದಿಲ್ಲ. ಆದರೂ ಕಾಫಿಯ ಕ್ರಯ ಏರಿಸುವುದು ಸರಿಯಲ್ಲವೆಂದು ಕಾಫಿಗೆ ಹಾಕುವ ಸಕ್ಕರೆಯ ಪರಿಮಾಣವನ್ನೇ ಕಡಿಮೆ ಮಾಡಿದ್ದೇವೆ' ಎಂದು ಮುಖದಲ್ಲಿ ಏನೊಂದೂ ವಿಕಾರ ತಂದುಕೊಳ್ಳದೇ ಆತ ಹೇಳಬೇಕೆ? ಅವನ ಕನ್ನಡ ಪ್ರೇಮವನ್ನು ಕಂಡು ನಾನು ನಿಬ್ಬೆರಗಾಗಬೇಕಾಯಿತು.

'ಸಾಕು ಮಹರಾಯಾ, ಸಾಕು. ನಿನ್ನ ಕಾಫಿಯೂ ಸಾಕು, ಎಲ್ಲವೂ ಸಾಕು. ಬೇಗ ಒಂದು ಬಿಸಿ ಇಡ್ಲಿ ತಾ ಮಹರಾಯಾ', ಎಂದು ನಾನು ಗಟ್ಟಿಯಾಗಿ ಒದರಿದೆ. ಮಾಣಿ ಹೊರಟು ಹೋದ. ಹೋಗಿ ಬಹಳ ಹೊತ್ತಾದರೂ ಅವನ ಪತ್ತೆಯೇ ಇಲ್ಲ. ಕೊನೆಗೆ ನಾನು ಹೊರಟು ಹೋಗಬೇಕು ಎನ್ನುವಷ್ಟರಲ್ಲಿ ಮಾಣಿಯ ಸವಾರಿ ಇಡ್ಲಿಯೊಂದಿಗೆ ಬಂದಿತು.

"ಏನೋ, ಇಷ್ಟು ಲೇಟು ಮಾಡಿದಿ' ನಾನು ಅಸಮಾಧಾನವನ್ನು ಪ್ರದರ್ಶಿಸುತ್ತಾ ಕೇಳಿದೆ.

'ನೋಡಿ, ಕೊಂಚ ತಾಳಬೇಕು. ತಾಳಿದವನು ಬಾಳಿಯಾನು' ಎಂಬ ಗಾದೆ ನೀವು ಕೇಳಿಲ್ಲವೇ?' ಎಂದು ಆತ ನನಗೆ ಉಪದೇಶ ಮಾಡಲು ಹೊರಡಬೇಕೇ? ಅವನ ಮಾತಿಗೆ ಉತ್ತರವೀಯುವ ಇಡ್ಲಿಯ ಚೂರೊಂದನ್ನು ಬಾಯಿಯಲ್ಲಿ ಇರಿಸಿದೆ. ಅಬ್ಬಬ್ಬಾ, ಬರಿಯ ಉಪ್ಪು. ಇಡ್ಲಿಗೆ ಉಪ್ಪು ಬಹಳ ಹೆಚ್ಚಾಗಿತ್ತು. ನನಗೆ ತಡೆಯಲಾರದಷ್ಟು ಸಿಟ್ಟು ಬಂತು.

'ಏನೋ, ಇಡ್ಲಿಗೆ ಇಷ್ಟು ಉಪ್ಪೇಕೆ ಹಾಕಿದ್ದೀರಿ' ಎಂದು ನಾನು ಕೇಳಿದೆ,

'ನೋಡಿ, "ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ", "ಲವಣಂ ಬಲವರ್ಧನಂ" ಎಂಬ ಗಾದೆಗಳನ್ನು ನೀವು ಕೇಳಲೇ ಇಲ್ಲವೇ?" ಎಂದು ಹೇಳಿ ಆತ ಹೊರಟು ಹೋದನು. "ಥೂ, ಇವನ ಮನೆ ಹಾಳಾಗಿ ಹೋಗಲಿ" ಎಂದು ಅವನನ್ನು ಶಪಿಸುತ್ತಾ ಇಡ್ಲಿಯನ್ನು ಅಲ್ಲೇ ಬಿಟ್ಟು ಕೈತೊಳೆದುಕೊಂಡು ಬಂದು, ಹಣ ಕೊಟ್ಟು ಹೋಟೇಲಿನಿಂದ ಹೊರಟು ಹೋದೆ. ಕೈಗಡಿಯಾರವನ್ನು ನೋಡುತ್ತೇನೆ. ಆಗಲೇ ಬಸ್ಸು ಹೊರಟು ಹೋಗುವ ಸಮಯವಾಗಿ ಬಿಟ್ಟಿತ್ತು. ಅದು ಆ ದಿನದ ಕಡೆಯ ಬಸ್ಸು. ಇನ್ನು ನಮ್ಮೂರಿಗೆ ಬಸ್ಸು ಇರಲಿಲ್ಲ. ಅಯ್ಯೋ ದೇವರೇ, ಆ ಹೋಟೇಲು ಮಾಣಿಯ ತರ್ಕ ಶಾಸ್ತ್ರದಿಂದ ಈ ರಾತ್ರಿಯೂ ಇದೇ ಕೊಂಪೆಯಲ್ಲಿ ಕೊಳೆಯ ಬೇಕಾಯಿತಲ್ಲಾ ಎಂದು ನಿಟ್ಟುಸಿರು ಬಿಟ್ಟೆ. ಬೆಕ್ಕಿಗೆ ಆಟ, ಇಲಿಗೆ ಪ್ರಾಣ ಸಂಕಟ!



ಪರೀಕ್ಷೆಗೆ ಒಳಪಟ್ಟ ಉತ್ತಮ ಮಾದರಿಯ ಬ್ರಿಟಿಷರ ಜೆಟ್ ಫೈಟರ್ ವಿಮಾನ.

ಚಂದಾದಾರರು

ತಮ್ಮ ಚಂದಾ ಹಣವನ್ನು ಸಿಂಡಿಕೇಟ್, ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರುಗಳು, ಜಾಹೀರಾತುದಾರರುಗಳು ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಬಿಡುವಿನ ವೇಳೆಗೆಂದು ಒಮ್ಮೆ ಎಸ್. ಆರ್. ಬೀಡಿಯನ್ನು ಸೇದಿ ನೋಡಿರಿ, ಅಂದರೆ ನೀವು ತಪ್ಪದೆ ಅದನ್ನೇ ಎಂದೆಂದಿಗೂ ಕೊಂಡುಕೊಳ್ಳುವಿರಿ.

S.R. BEEDI WORKS,
UDIPI, S.K.
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

NAVAYUGA
REGD. NO. M. 3619

UDIPI, THURSDAY
21–7–1960

LICENSE NO. 31
Licensed to Post without Prepayment

ಗೃಹ ವಿಜ್ಞಾನ

(೩ನೇ ಪುಟದಿಂದ)

ದು ಮಹಾ ರಾಷ್ಟ್ರದ ಸಂಸ್ಥಾಪಕನಾದ ಅದಕ್ಕೇ ಹಿರಿಯರು ಹೇಳಿದ್ದಾರೆ. "ಮಕ್ಕಳ ಶಿಕ್ಷಣ ಮನೆಯಲ್ಲೇ" ಎಂದು.

ಮನುಷ್ಯರಿಗೆ ಎಲ್ಲಕ್ಕೂ ಮುಖ್ಯವಾಗಿ ಬೇಕಾದ್ದು ಆರೋಗ್ಯ. ಆರೋಗ್ಯವು ಆಹಾರವನ್ನೆ ಮುಖ್ಯವಾಗಿ ಅವಲಂಬಿಸಿರುವಂಥಾದ್ದು. ಆಹಾರದಲ್ಲಿ ಒಳ್ಳೆಯ ಕ್ರಮವನ್ನು ಗೊತ್ತುಪಡಿಸಿ ಅದರಂತೆ ಮಕ್ಕಳನ್ನು ಆಳವಡಿಸಿಕೊಳ್ಳುವುದು ಪ್ರತಿ ತಂದೆತಾಯಿಂದಿರ ಮುಖ್ಯ ಕೆಲಸವಾಗಿದೆ.

ಆಹಾರವು ಶ್ರೀಮಂತಿಕೆಯದಾದರೂ ಸರಿ, ಬಡತನದ್ದಾದರೂ ಸರಿ. ಕ್ರಮ ತಪ್ಪಬಾರದು. ಶ್ರೀಮಂತಿಕೆಯ ಆಹಾರಗಳಿಂದ ಪುಷ್ಟಿಕರವಾದ ಮಕ್ಕಳಿಗಿಂತಲೂ, ಬಡತನದ ಆಹಾರದಲ್ಲಿ ಹಗುರಾಗಿ ಬೆಳೆದ ಮಕ್ಕಳೇ ಹೆಚ್ಚು ಕಷ್ಟ ಸಹಿಷ್ಣುಗಳಾಗಿ ಬಾಳಬಲ್ಲವರೆಂಬುದು, ಅನುಭವ ವೇದ್ಯ ವಿಷಯವಾಗಿದೆ.

ಹಣ್ಣುಹಂಪಲುಗಳು

ಹಾಲಿನ ತರುವಾಯ ಮುಖ್ಯ ಆಹಾರವಾಗಿ ಹಣ್ಣುಹಂಪಲುಗಳನ್ನೆ ಹೇಳಬಹುದು. ನಿಜಕ್ಕೂ ಹಣ್ಣುಹಂಪಲುಗಳ ಬೆಲೆ ಇಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ಅವುಗಳ ಬೆಲೆಗಿಂತ ಅವುಗಳ ಗುಣ ಎಷ್ಟೋ ಪಾಲು ಹೆಚ್ಚು.

ಹಣ್ಣುಗಳು ಹೊಟ್ಟೆಯೊಳಗೆ ಹೋದ ಮೇಲೆ ಜೀರ್ಣ ಶಕ್ತಿಗೆ ಸಹಕಾರುವಂತಹ ಒಂದು ವಿಧ ಜೀವಿಗಳು ಹೊರಡುತ್ತವೆಯಂತೆ. ಈ ಜೀವಿಗಳಿಂದ ಶರೀರಕ್ಕೆ ಒಳ್ಳೆಯದುಂಟು. ನಿಂಬೆಯ ಜಾತಿಯ ಹಣ್ಣುಗಳು, ಅಂದರೆ ಕಮಲಾ, ಕಿತ್ತಳೆ, ಮುಸಂಬಿ ಮೊದಲಾದುವು ರಕ್ತವನ್ನು ಸರಿಯಾದ ಕ್ರಮದಲ್ಲಿ ನಡೆಯಲು ಸಹಕರಿಸುತ್ತವೆ. ಮಸಾಲೆ ಮುಂತಾದ ಘಾಟು ಪದಾರ್ಥಗಳಿಂದ ಜೀರ್ಣಕೋಶಕ್ಕೆ ಉಂಟಾಗುವ ತಿಕ್ಕಾಟವನ್ನು ತಗ್ಗಿಸಿ ಶಾಮ್ಯ ಮಾಡುವ ಗುಣ ಹಣ್ಣಿನ ರಸಗಳಿಗುಂಟು. ಆದುದರಿಂದ ಮಕ್ಕಳಿಗೆ ಪರಿಮಿತವಾಗಿ ಹಣ್ಣುಗಳನ್ನು ಕೊಡುತ್ತಿರಬೇಕು.

ಹಣ್ಣುಗಳು ಹಣವಂತರ ವಸ್ತುಗಳೆಂದೂ ಮುಖ್ಯಾಹಾರವಲ್ಲವೆಂದೂ ಹೇಳುವುದುಂಟು. ಇದು ತಪ್ಪು. ಇದರಿಂದಲೇ ಹಣ್ಣುಗಳಿಗೆ ಖರ್ಚು ಜಾಸ್ತಿ ಎಂಬ ಭಾವನೆ ಬರುವಂತಾಯಿತು. ಒಂದು ವೇಳೆ ಜಾಸ್ತಿ ಖರ್ಚೇ ಆದರೂ ಕೂಡಾ ಅವಕಾಶವಾದಾಗವೆಲ್ಲಾ ಹಣ್ಣುಗಳನ್ನು ತಿನ್ನಬೇಕು. ದ್ರಾಕ್ಷಿ, ದಾಳಿಂಬ, ಮಾವಿನ ಹಣ್ಣು, ಅನಾನಸು, ಪಪ್ಪಾಯಿ ಮೊದಲಾದ ಹಣ್ಣುಗಳು ದೊರಕಿದಷ್ಟು ತಿನ್ನಬೇಕಾದ್ದೇ. ಒಂದೊಂದು ಹಣ್ಣಿನಲ್ಲಿ ದೇಹ ರಕ್ಷಣೆಗೆ ಅಗತ್ಯವಾದ ಒಂದೊಂದು ಗುಣ ವಿಶೇಷವುಂಟೇವುಂಟು. ಪುಷ್ಕಳವಾಗಿ ಹಣ್ಣುಗಳ ಆಹಾರ ಸಿಕ್ಕುವ ಮನುಷ್ಯರು ತುಂಬಾ ಪುಣ್ಯವಂತರು.

ಫಲಾಹಾರಗಳಲ್ಲಿ ಇಷ್ಟು ಮಹತ್ವವಿರುವುದರಿಂದಲೇ ಹಿಂದೆ ಮಹರ್ಷಿಗಳು ಫಲಮೂಲಗಳನ್ನು ತಿಂದು ಚಿರಂಜೀವಿಗಳಾದರು. ಆರೋಗ್ಯಶಾಲಿಗಳಾದರು. ಹಣ್ಣುಗಳಲ್ಲಿರುವ ಜೀವಸತ್ವಗಳನ್ನರಿತು ಅದು ನಮ್ಮ ದೇಹಕ್ಕೆ ತಪ್ಪಬಾರದೆಂತಲೇ ವ್ರತ ಉಪವಾಸಗಳನ್ನು ನಿರ್ಣಯಿಸಿ ಫಲಾಹಾರಗಳನ್ನು ಹೇಳಿದ್ದಾರೆ. ಈಗ ಫಲಾಹಾರವೆಂದರೆ ಇಡ್ಲೀ ದೋಸೆ ಮುಂತಾದ ಮಂಡಾಹಾರಗಳೆಂದು, ತಿಳಿಯಲಾಗುತ್ತದೆ. ಅದು ತಪ್ಪು.

ಮಕ್ಕಳಿರುವ ಮನೆಗೆ ಹಣ್ಣುಗಳ ಕೈಯಿಂದಲೇ ಹೋಗಬೇಕೆಂದು ಹಿರಿಯರ ರೂಢಿ. ಈಗ ಮಿಠಾಯಿ, ಬಿಸ್ಕೆಟ್ಟು, ಚಾಕಲೆಟ್ಟುಗಳಾಗಿವೆ. ಪ್ರಕೃತಿ ದತ್ತವಾದ ಹಣ್ಣುಗಳಿಗೆ ಇವಾವುದೂ ಸಮನಲ್ಲ. ಯಾವ ಕಾಲಕ್ಕಾದರೂ ಎಲ್ಲಾ ಕಡೆಯಲ್ಲಿಯೂ ಸಿಗುವ ಬಾಳೇಹಣ್ಣಿನಲ್ಲಿಯೂ ಅನೇಕ ಸುಗುಣಗಳುಂಟು. ಅಂತೆಯೇ ಅದು ದೇವರಿಗೆ ಕೂಡಾ ಪ್ರೀತಿಯ ಹಣ್ಣಾಗಿದೆ. ಮಕ್ಕಳೂ ದೇವರಿಗೆ ಸಮಾನ ತಾನೆ?

ಮಕ್ಕಳ ಶರೀರ ಪುಷ್ಟಿಗೆ ಲೋಹಗಳು ಕೂಡಿದ ಆಹಾರವಸ್ತುಗಳು ಅತೀ ಆಗತ್ಯವೆಂದು ವೈದ್ಯಶಾಸ್ತ್ರಜ್ಞರು ಹೇಳುತ್ತಾರೆ. ರಕ್ತವೃದ್ಧಿಗೆ 'ಲಿವರ್' ಕೊಟ್ಟರೆ ಒಳ್ಳೆಯದೆಂದೂ, ಹಾಲಿನಿಂದ ಎಲುಬಿಗೆ ಬಲ ಬರುತ್ತದೆಂದೂ ಬಹಳಮಂದಿಗೆ ಗೊತ್ತಿದ್ದೀತು. ಆದರೆ ಖರ್ಜೂರದಲ್ಲಿಯೂ ಹುಣಸೇ ಹಣ್ಣಿನಲ್ಲಿಯೂ ಕಬ್ಬಿಣಸತ್ವ ಹೆಚ್ಚಾಗಿರುವುದೆಂದು ಬಹುಮಂದಿಗೆ ಗೊತ್ತಿರಲಿಕ್ಕಿಲ್ಲ. ಮಾವಿನ ಹಣ್ಣು, ಆಪಿಲ್ಸ್, ಅತ್ತಿ ಹಣ್ಣು, ನೇರಳೆ ಇವುಗಳಲ್ಲಿ ಕೂಡಾ ಕಬ್ಬಿಣ ಸತ್ವ ತುಂಬಿದೆ. ಕಪಿತ್ಥ (ಬೆಲ್ಲದ ಹಣ್ಣು) ಕಿತ್ತಳೆ, ಹಲಸಿನ ಹಣ್ಣು ಇವುಗಳಲ್ಲಿ ಸುಣ್ಣ (ಕಾಲ್ಸಿಯಂ) ಹೆಚ್ಚಾಗಿದೆ. ಇವೆಲ್ಲಾ ಮಕ್ಕಳಿಗೆ ಅಗತ್ಯವಸ್ತುಗಳೇ. ಮರದಲ್ಲಿ ಹಣ್ಣಾದ ಹಣ್ಣುಗಳು ಎಲ್ಲಕ್ಕೂ ಮೇಲು. ಅಪಕ್ವ ಮತ್ತು ಅತಿಪಕ್ವ ಹಣ್ಣುಗಳು ಆರೋಗ್ಯವನ್ನು ಕೆಡಿಸಿ ಬಿಡುತ್ತವೆ.

ಹಣ್ಣುಗಳಲ್ಲಿ ದೇಹಕ್ಕೆ ಪೋಷಕವಾದ ವಸ್ತುಗಳು ಒಳಗಿನ ತಿರುಳಿನಲ್ಲಿ ಮಾತ್ರವಲ್ಲ, ಮೇಲೆ ಸಿಪ್ಪೆಯ ಬದಿಯಲ್ಲಿಯೂ ಹೆಚ್ಚಾಗಿರುತ್ತವೆ. ಆದುದರಿಂದ ಸಿಪ್ಪೆಯೊಂದಿಗೆ ತಿನ್ನಲಾಗುವಂತಹ ಟೊಮಾಟೋ, ಆಪಿಲ್ಸ್ ಮೊದಲಾದುವುಗಳನ್ನು ಹಾಗೆಯೇ ತಿನ್ನುವುದೊಳ್ಳೆಯದು.

ರುಚಿಯು ಹೆಚ್ಚಿಗಾಗಿ ಹಣ್ಣಿನೊಡನೆ ಸಕ್ಕರೆ ಬೆರೆಸಿಕೊಳ್ಳುವವರು ಬಹಳ ಮಂದಿ ಇದ್ದಾರೆ. ಅದು ಪ್ರಕೃತಿದೇವಿ ಮಾಡಿಕೊಟ್ಟ ಒಳ್ಳೆಯ ಪಾಕವನ್ನು ಕೆಡಿಸಿಕೊಂಡ ಹಾಗೆ. ನಾವು ಉಪಯೋಗಿಸುವ ಸಕ್ಕರೆಯಲ್ಲಿ ರಾಸಾಯನಿಕ ದ್ರಾವಕಗಳು ಸೇರಿರುವುದರಿಂದ ಅದನ್ನು ಹಣ್ಣಿಗೆ ಬೆರೆಸಿದರೆ ಹಣ್ಣಿನ ಸುಗುಣವೇ ಹೋಗಿ ಬಿಡುತ್ತದೆ. ಮಾತ್ರವಲ್ಲ ಕೆಲವು ವೇಳೆ ವಿಪರೀತ ಗುಣವೂ ಉಂಟಾಗಿ ಬಿಟ್ಟೀತು.

ಇಷ್ಟೆಲ್ಲಾ ಹೇಳಿದ್ದರಿಂದ ಎಲ್ಲಾ ಬಿಟ್ಟು ಬರಿಯ ಹಣ್ಣಿನಿಂದಲೇ ಜೀವಿಸಲು ಸಾಧ್ಯವೆಂಬ ಅರ್ಥವಲ್ಲ. ಮಾನವ ದೇಹಕ್ಕೆ ಮಾಂಸಕೃತ್ತುಗಳು, ಕೊಬ್ಬು, ಲೋಹ, ಲವಣ ವಿಟಮಿನ್ಸ್ ಹೀಗೆ ವಿವಿಧ ಪದಾರ್ಥಗಳು ಬೇಕು. ಇವೆಲ್ಲಾ ಮಿಶ್ರವಾಗಿರುವ ಆಹಾರಗಳನ್ನು ಬೆಳೆಯುವ ಮಕ್ಕಳಿಗೆ ಒದಗಿಸಬೇಕು. ಊಟವಾದ ಮೇಲೆ ಸುಮಾರು ಎರಡು ಔನ್ಸ್, ಯಾವುದಾದರೂ ಹಣ್ಣನ್ನು ತಪ್ಪದೆ ಕೊಡುತ್ತಿದ್ದರೂ ಸಾಕು.

ಕ್ಷ-ಕಿರಣ

(೧ನೇ ಪುಟದಿಂದ)

ದಾಗಲೀ ಪ್ರದರ್ಶನ ನಡೆಸುವುದಾಗಲೀ ಫಲದಾಯಕ ಪರಿಣಾಮ ಪಡೆಯಲು ಭಾದಕಗಳಾಗುತ್ತವೆ. ನಿಮ್ಮ ಪತ್ನಿಯ ಕೋಳಕು ಅಥವಾ ಕೆಟ್ಟ ಭೋಜನವನ್ನು ಪ್ರತಿದಿನವೂ ನಿಮಗೆ ಬಡಿಸ ತೊಡಗಿದರೆ, ನೀವೇನು ಮಾಡುವಿರಿ? ಹಸಿವೆಯಿಂದ ಹರಿತಾಳವಾಚರಿಸುತ್ತೀರಾ? ಹಾಗೆ ಆಚರಿಸಿವಿರೆಂದೇ ಹೇಳೋಣ. ಅದರಿಂದ ನಷ್ಟ ಯಾರಿಗೆ? ನಿಮಗೆ, ಅಥವಾ ನಿಮ್ಮವಳಿಗೆ?

ಒಬ್ಬ ನವಲೇಖಕ ತನ್ನ ಕವಿತೆಯನ್ನೋ ಕಥೆಯನ್ನೋ ಬರೆದು ನಿಮ್ಮ ಬಳಿಗೆ ಬಂದು, "ರಾಯರೇ, ಒಂದು ನಿಮಿಷ ಕೇಳಿ. ಒಂದು ಹೊಸ ವಿಷಯದ ಮೇಲೆ ವೈಜ್ಞಾನಿಕ ಸ್ವರೂಪದ ಕಥೆ ಕವಿತೆ ಲೇಖನ ಬರೆದಿದ್ದೇನೆ (ಬೇಡಾದುದನ್ನು ಹೊಡೆದುಕೊಳ್ಳಿರಿ) ಇದು ಬೆಳಕು ಕಂಡಿತೆಂದರೆ ತತ್‌ಕ್ಷಣ ಸಮಾಜದಲ್ಲಿ ಅಲ್ಲಕಲ್ಲೋಲ ನಡೆದು ಕ್ರಾಂತಿಯ ಕಿಡಿ ಹರಿದು ವಿಪ್ಲವ ಗಾಯನದ ಹಿನ್ನೆಲೆಯಲ್ಲಿ ಕ್ರಾಂತಿಯೇ ನಡೆದು ಹೋಗುವುದು..." ಎಂದು ಅನ್ನುವ ಮಿತ್ರನ ವಿರೋಧವಾಗಿ ನೀವು ಹರಿತಾಳ—ಪ್ರತಿಭಟನೆ—ಸಭಾತ್ಯಾಗಗಳ ಅಸ್ತ್ರವನ್ನು ಹೂಡುವುದು ಸಾಧ್ಯವೆ?

ನಮ್ಮ ಮನೆಗೆ ನಸುಮುಂಜಾನೆಯ ಹೊತ್ತಿನಲ್ಲೇ ಅತಿಥಿಯಾಗಿ ಬಂದು, ನಮ್ಮ ಕಾಫೀ ಲೋಟೆಯನ್ನೇ ಎತ್ತಿ ಕುಡಿದು, ಹರಿತಾಳದಿಂದ ಹರಪ್ಪಾ ಸಂಸ್ಕೃತಿಯ ವರೆಗೆ ಕ್ಯೂಬಾದಿಂದ ಕಾಂಗೋವಿನ ವರೆಗೆ, ಬಂಡವಳ ಶಾಹಿಯಿಂದ ಸಾಮ್ಯವಾದದ ವರೆಗೆ, ಎಲ್ಲೆಲ್ಲಿಂದಲೋ ಎತ್ತೆಲ್ಲೆಲ್ಲಿಯ ವರೆಗೋ (!) ತನ್ನ ಬುರುಡೆ ಬಿಚ್ಚುವ ನೆರೆಮನೆಯ ಸ್ನೇಹಿತನ ಮೇಲೆ ಎಸೆಯಲು ನಮ್ಮಲ್ಲಿಯೂ ಬ್ರಹ್ಮಾಸ್ತ್ರ ತಾನೇ ಉಳಿದಿದೆ? ತನ್ನ ಊರುದಂಟೆಯಿಂದ ಬೀದಿಯುದ್ದದ ಎಲ್ಲರನ್ನೂ ಗದರಿಸುತ್ತ ಬೆದರಿಸುತ್ತ ಮುಂದುವರಿಯುವ ಮುದಿಯನ ವಿರುದ್ಧವಾಗಿ ಹರಿತಾಳ, ಪ್ರದರ್ಶನ, ಪ್ರತಿಭಟನೆಗಳನ್ನು ಅಥವಾ ಸಭಾ (ಬೀದಿ) ತ್ಯಾಗವನ್ನು ಮಾಡಲು ಯಾರು ತಾನೇ ಸಮರ್ಥರು?

ಲಂಚ ಸ್ವೀಕರಿಸದೆ ಕೆಲಸ ಮಾಡದವರ ಮೇಲೆ ಇದುವರೆಗೂ ಹರಿತಾಳ ನಡೆಯಲಿಲ್ಲ. ತುಪ್ಪ = ಡಾಲ್ಡ + ಎಣ್ಣೆ ಎಂಬ ಅಥವಾ ಅಕ್ಕಿ = ಭತ್ತ + ಕೀಟ + ಅರೆ ಮಿಡಿದ ಅಕ್ಕಿ ಎಂಬಿತ್ಯಾದಿಯಾದ ಸೂತ್ರಾಧಾರದಿಂದ ವ್ಯಾಪಾರ ಮಾಡಿದ ಅಂಗಡಿಗಾರನ ಪ್ರತಿಭಟನಾರ್ಥ ಅನ್ನ ಸತ್ಯಾಗ್ರಹವಿನ್ನೂ ನಡೆದಿಲ್ಲ. ಬಡ ಸಾಹುಕಾರ ಸಕ್ಕರೆ ಹಾಗೂ ಅಕ್ಕಿಯನ್ನು ಧಾರಾಳವಾಗಿ ಶೇಖರಿಸಿಡುತ್ತಿದ್ದಾನೆ ಎಂದು ಊರಿಗೆ ಊರೇ ತಿಳಿದಿದೆಯೆಂದಿಟ್ಟುಕೊಳ್ಳಿ. ಆಗ ನೀವೇನು ತಾನೇ ಮಾಡಲಾಪಿರಿ? ಸುಮ್ಮನಿರುವಿರಾ? ಪ್ರತಿಭಟನೆ ಸೂಚಿಸುತ್ತೀರಾ? ಅಥವಾ ಅವನ ಗೋದಾಮಿನೆದುರು ಧರಣಿ ಮುಷ್ಕರ ಹೂಡುವಿರಾ? ಸತ್ಯಾಗ್ರಹ— ಪ್ರದರ್ಶನ ನಡೆಸಿದಿರೆಂದರೆ, ಶಾಂತಿಭಂಗವಾದೀತು ಎಂಬ ಸಂದೇಹದ ಆರೋಪದಿಂದ ನಿಮ್ಮನ್ನು ಕೈದು ಮಾಡಲು ಕೈಸೀಡಿಯಾರು, ಎಚ್ಚರಿಕೆ!

ರಹಸ್ಯ ಎಲ್ಲಿದೆ?

ಅಂದು ಮಧ್ಯರಾತ್ರಿಯ ಸಮಯ. ಅಕ್ಬರ ಬಾದಶಾಹನಿಗೆ ಹಠಾತ್ತಾಗಿ ಒಂದು ಯೋಚನೆ ಹೊಳೆಯಿತು. ಎಂದೂ ಸೋಲರಿಯದ ಬೀರಬಲನನ್ನು ಸೋಲಿಸಲು ಇದೇ ತಕ್ಕ ಸಮಯವೆಂದೆಣಿಸಿ ಬೀರಬಲನನ್ನೆಬ್ಬಿಸಿ ಬಾದಶಹಾ ಕೇಳಿದ—

"ಬೀರಬಲ್, ಈಗ ಜಗತ್ತಿನಾದ್ಯಂತ ಏನು ನಡೆಯುತ್ತಿದೆ"

ಬೀರಬಲ ನಿದ್ದೆಯಿಂದೆದ್ದು ಕುಳಿತು ಸುತ್ತ ನೋಡಿದ. ನಟ್ಟಿರುಳು; ಕಗ್ಗತ್ತಲೆ. ಜಗತ್ತಿನ ಒಂದು ಭಾಗ ಗಾಢ ನಿದ್ರೆಯಲ್ಲಿದೆ. ಈ ಸಂದರ್ಭದಲ್ಲಿ ಚಕ್ರವರ್ತಿ ಕೇಳುತ್ತಿದ್ದಾನೆ "ಈಗೇನು ನಡೆಯುತ್ತಿದೆ" ಎಂದು

ಬೀರಬಲನ ತುಟಿಗಳಲ್ಲಿ ಮಿಂಚು ನಗುವೊಂದು ಮೂಡಿ ಮಾಯವಾಯಿತು. ತಕ್ಷಣ ಅತ ಉತ್ತರಿಸಿದ—

"ಬಾದಶಹಾ, ಹಣಕ್ಕೆ ಬಡ್ಡಿ ನಡೆಯುತ್ತಿದೆ"

ದಿನರಾತ್ರಿಗಳ ಭೇದವಿಲ್ಲದೆ ನಿರಾತಂಕವಾಗಿ ಎಡೆಬಿಡದೆ ನಡೆಯುತ್ತಿರುವುದು— ಬಂಡವಾಳದ ಮೇಲಣ ಬಡ್ಡಿ. ಬಡ್ಡಿಗೆ ಬಡ್ಡಿ ಸೇರಿ ಸಂಪತ್ತು ಸಮೃದ್ಧಿಯೆಡೆಗೆ ಸಾಗುತ್ತಿದೆ. ಈ ಸತ್ಯವನ್ನು ವಿದ್ವಾಂಸನಾದ ಬೀರಬಲ ತಿಳಿದಿದ್ದ. ಮತ್ತು ನಿತ್ಯಸತ್ಯವಾದ ತನ್ನ ಈ ಉತ್ತರದಿಂದ ಮೊಗಲ ಸಾಮ್ರಾಟನನ್ನು ಬೆರಗುಗೊಳಿಸಿದ.

ಚಕ್ರ ಬಡ್ಡಿಯಲ್ಲಿ ನೂರು ಸಾವಿರವಾಗಿ, ಸಾವಿರ ಲಕ್ಷವಾಗಿ ವೃದ್ಧಿಯಾಗುವುದು. ಇದು ಸಂಪದಭಿವೃದ್ಧಿಯ ರಹಸ್ಯಗಳಲ್ಲೊಂದು.

ನಿಮ್ಮ ಹಣವನ್ನು ಉತ್ತಮ ಉದ್ಯಮಗಳಲ್ಲಿ ಅಧಿಕ ಬಡ್ಡಿ ಬರುವಂತೆ ತೊಡಗಿ ಹೆಚ್ಚು ಪ್ರತಿಫಲ ಗಳಿಸಲು:

ಇನ್ವೆಸ್ಟರ್ಸ್ ಏಜನ್ಸಿ

ವಿವರಗಳಿಗೆ:

ಇನ್ವೆಸ್ಟರ್ಸ್ ಏಜನ್ಸಿ ಡಿಪಾರ್ಟ್‌ಮೆಂಟ್

ಸಿಂಡಿಕೇಟ್ ಬೇಂಕ್

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ಸ.

Edited. Printed & Published by K. H. Shetty. at the Navayuga Press. Udipi. S. India.

NAVAYUGA

ವಾ. ಚಂದಾ ರೂ. 6–25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೪೭. 28–7–1960 Vol. 39. No. 47

ಪ್ರಚಲಿತ ಪ್ರಸಂಗ

ಪ್ರಥಮ ಮಹಿಳಾಪ್ರಧಾನಿ--ಭಂಡಾರನಾಯಕೆ

ಸಿಂಹಳದ ಸಾರ್ವತ್ರಿಕ ಚುನಾವಣೆಗಳಲ್ಲಿ ಬಹುಮತ ಗಳಿಸಿದ ಶ್ರೀ ಲಂಕಾ ಸ್ವಾತಂತ್ರ್ಯಪಕ್ಷವು ಶ್ರೀಮತಿ ಸಿರಿಮಾವೋರನ್ನು ನಾಯಿಕೆಯನ್ನಾಗಿ ಆರಿಸಿ ವಿಶ್ವದಾಖಲೆಯನ್ನು ಸ್ಥಾಪಿಸಿತು.

ನೆರೆಯ ರಾಷ್ಟ್ರ, ಬ್ರಿಟಿಷ ಕಾಮನ್ ವೆಲ್ತ್‌ನ ಸದಸ್ಯ ರಾಷ್ಟ್ರ ಸಿಂಹಳದಲ್ಲಿ ಸಾರ್ವತ್ರಿಕ ಚುನಾವಣೆಗಳು ಮುಕ್ತಾಯಗೊಂಡು, ಶ್ರೀಲಂಕಾ ಫ್ರೀಡಂ ಪಾರ್ಟಿಯು ನಿಚ್ಚಳ ಬಹುಮತವನ್ನು ಪಡೆದು ಸರಕಾರವನ್ನು ರಚಿಸಲು ಸಮರ್ಥವಾದುದರಿಂದ ಕಳೆದ ಹತ್ತು ತಿಂಗಳುಗಳಿಂದ ಅಲ್ಲಿದ್ದ ರಾಜಕೀಯ ಅಭದ್ರತೆಯೀಗ ದೂರವಾಯಿತು ಎನ್ನಬಹುದು. ದಿವಂಗತ ಪ್ರಧಾನಿ ಭಂಡಾರನಾಯಕೆಯವರ ಪತ್ನಿ ಶ್ರೀಮತಿ ಸಿರಿಮಾವೋ ಭಂಡಾರ ನಾಯಕೆಯವರೇ ಅಲ್ಲಿನ 'ಪ್ರಧಾನ ಮಂತ್ರಿ'ಯಾಗಿ ಅಧಿಕಾರವನ್ನು ಸ್ವೀಕರಿಸಿ, ಸಿಂಹಳದಲ್ಲಿ ಮಾತ್ರವಲ್ಲ, ಅಖಂಡ ಜಗತ್ತಿನಲ್ಲೇ ಒಂದು ದಾಖಲೆಯನ್ನು ಸ್ಥಾಪಿಸಿದ್ದಾರೆ. ಮಹಿಳೆಯರು ಮಹಾರಾಣಿಯರಾಗಿ ದುಡಿದ ಇತಿಹಾಸಗಳಿವೆಯಾದರೂ ಆಧುನಿಕ ಪದ್ಧತಿಯ ರಾಜಕಾರಣದಲ್ಲಿ ರಾಷ್ಟ್ರ ಮಹಾ ಪ್ರಧಾನಿಯಾಗಿ ನಾರಿಯರು ದುಡಿದ ಉದಾಹರಣೆಗಳಿಲ್ಲದಿರುವುದರಿಂದ 'ಜಗತ್ತಿನ ಪ್ರಪ್ರಥಮ ಮಹಿಳಾ ಪ್ರಧಾನಿ' ಎಂಬ ಬಿರುದನ್ನಿವರು ಗಳಿಸಿದ್ದಾರೆ. ಅಲ್ಲದೇ ಎಲ್ಲ ರಾಷ್ಟ್ರಗಳ ದೃಷ್ಟಿಯನ್ನೂ ತಮ್ಮ ದೇಶದತ್ತ ಹರಿಯುವಂತೆಸಗಿದ್ದಾರೆ.

೧೫೭ ಜನ ಸದಸ್ಯರಿರುವ ಸಿಂಹಳೀಯ ಪಾರ್ಲಿಮೆಂಟಿನಲ್ಲಿ ೭೫ ಸ್ಥಾನಗಳನ್ನು ನೇರ ಚುನಾವಣೆಯಲ್ಲಿಯೇ ಗಳಿಸಿದ ಈ ಪಕ್ಷವು ಸರಕಾರವನ್ನು ರಚಿಸಲು ಮುಂದಾದುದರಿಂದ ನಾಮಕರಣದ ಮೂಲಕವೂ ಆರು ಸ್ಥಾನಗಳನ್ನು ಪಡೆಯುವುದು. ಅಗ್ಯ ೮೧ ಸ್ಥಾನವನ್ನು ಗಳಿಸುವ ಪಕ್ಷವು ಬಹುಮತವನ್ನು ಪಡೆದಂತಾಗುವುದು. ಅಲ್ಲದೇ ಇತರ ಕೆಲವು ಪಕ್ಷೀಯರೂ ಲಂಕಾ ಫ್ರೀಡಂ ಪಕ್ಷಕ್ಕೆ ಬೆಂಬಲವನ್ನು ನೀಡುವುದಾಗಿ ವಾಗ್ದಾನ ಮಾಡಿದ್ದಾರೆ. ಹನ್ನೊಂದು ಜನ ಸದಸ್ಯರಿರುವ ಶ್ರೀಮತಿ ಭಂಡಾರನಾಯಕೆಯವರ ಮಂತ್ರಿ ಮಂಡಳಿಯು ಅಧಿಕಾರವನ್ನು ವಹಿಸಿಕೊಂಡುದರೊಡನೆ ಶ್ರೀ ಡಡ್ಲಿ ಸೇನಾನಾಯಕೆಯವರು ತಮ್ಮಿತರ ಮಂತ್ರಿಗಳೊಡನೆ ಅಧಿಕಾರವನ್ನು ಬಿಟ್ಟು ಕೊಟ್ಟರು.

ದಿವಂಗತ ಪ್ರಧಾನಿ ಭಂಡಾರನಾಯಿಕೆಯವರು ಮಾಡಬೇಕೆಂದು ಯೋಚಿಸಿದ್ದ, ಹಲವಾರು ಯೋಜನೆಗಳನ್ನು ಈಗ ಶ್ರೀಮತಿಯವರ ಮಂತ್ರಿ ಮಂಡಳಿಯು ಮುಂದೊತ್ತುವುದೆಂದು ತಿಳಿದು ಬಂದಿದೆ. ಮುಖ್ಯವಾಗಿ, ಸಿಂಹಳದಲ್ಲಿ ನೆಲಸಿರುವ ಭಾರತೀಯರನಾಗರಿಕತನದಪ್ರಶ್ನೆಯನ್ನು ದಿವಂಗತ ಭಂಡಾರನಾಯಕೆ ಮತ್ತು ಶ್ರೀ ನೆಹರುರವರ ನಡುವಾದ ಮಾತುಕತೆಗಳ ಆಧಾರದಲ್ಲಿಯೇ ಮುಂದುವರಿದು, ಅದು ಬಗೆಹರಿಯುವಂತೆ ಮಾಡುವ ಯೋಚನೆಯೊಂದಿದೆ. ಕಾಮನ್ ವೆಲ್ತ್‌ನ ಸಂಬಂಧವನ್ನು ಕಡಿದುಕೊಳ್ಳದೇನೇ ಡೊಮಿನಿಯನ್ ಸಿಂಹಳವನ್ನು ಪ್ರಜಾಸತ್ತೆಯಾಗಿ ಘೋಷಿಸುವ ಆಲೋಚನೆಯೂ ಶ್ರೀಮತಿಯವರ ಸರಕಾರಕ್ಕಿದೆ. ದಿವಂಗತ ಭಂಡಾರ ನಾಯಕೆಯವರು ರೂಪಿಸಿದ್ದ ಸಿಂಹಳದ ಪ್ರಗತಿಗೆ ಸಹಾಯಕವಾಗಬಹುದಾದ ದಶವಾರ್ಷಿಕ ಯೋಜನೆಯನ್ನು ಸದ್ಯದ ಸರಕಾರವು ಕಾರ್ಯಕ್ಕೆ ತಗೊಳಿಸಲು ನಿಶ್ಚಯಿಸಿರುತ್ತದೆ. ದಿವಂಗತ ಪ್ರಧಾನಿಯವರು ಕೊನೆಯ ಗಳಿಗೆಯಲ್ಲಿ ಯೋಚಿಸಿದಂತೆ ಇಂದಿನ ಆರ್ಥಿಕ ಪರಿಸ್ಥಿತಿಯ ಬಿಕ್ಕಟ್ಟಿನಲ್ಲಿ ಆಫ್ರೋ-ಏಷ್ಯ ರಾಷ್ಟ್ರಗಳಪರಿಷತ್ತೊಂದನ್ನು ಕರೆಯುವ ಯೋಚನೆಯನ್ನೂ ಈಗಿನ ಸರಕಾರವು ಇಟ್ಟುಕೊಂಡಿದೆ. ಜೀವವಿಮಾ ವಿಭಾಗವನ್ನು ರಾಷ್ಟ್ರೀಕರಣಗೊಳಿಸುವುದು, ಯಾವ ಬಣಕ್ಕೂ ಸೇರದ ವಿದೇಶ ನೀತಿಯನ್ನಿಟ್ಟುಕೊಳ್ಳುವುದು, ಸಿಸ್ನು ಮತ್ತು ಮಧ್ಯಮ ವರ್ಗದ ಜನತೆಗೆ ಹಾನಿಯಾಗದಂತೆ ಕರಾಕರಣೆಯ ಪದ್ಧತಿಯನ್ನು ಪುನರ್ವಿಮರ್ಶಿಸುವುದು ಮೊದಲಾದ ಧೋರಣೆಗಳನ್ನೂ ಸರಕಾರ ವಹಿಸುವುದೆಂದು ತಿಳದಿದೆ.

ಶ್ರೀಮತಿ ಸಿರಿಮಾವೊ ಭಂಡಾರ ನಾಯಕೆಯವರು ಹೊಸತಾಗಿ ನೇರ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದವರು. ತಮ್ಮ ಪತಿ ದಿವಂಗತ ಸೋಲಮನ್ ಭಂಡಾರ ನಾಯಕೆಯವರಿಗೆ ಹಿನ್ನೆಲೆಯಲ್ಲಿ ಅವರ ಶಾಸನಿಯ ಕಾರ್ಯಕಲಾಪಗಳಲ್ಲಿ ಸಹಾಯ ನೀಡ ತಿದ್ದ ಇವರು ರಾಜಕಾರಣದಲ್ಲಿ ಪ್ರಧಾನ ಪಾತ್ರವನ್ನು ವಹಿಸಲು ಅಂದು ಹಿಂಜರಿಯುತ್ತಿದ್ದರು. ತಮ್ಮ ಪತಿಯ ಮರಣಾನಂತರ ಪಕ್ಷಕ್ಕೆ ಸಮರ್ಥ ನಾಯಕತ್ವದೊರೆಯದೆ ಅನುಹರಿಹಂಚಾಗಿ ಹೋಗತೊಡಗಿದುದನ್ನು ಕಂಡ ಅವರು ನೇರವಾಗಿ ರಾಜಕಾರಣಕ್ಕೆ ಕಾಲಿಟ್ಟರು. ಕಳೆದ ಮಾರ್ಚ ತಿಂಗಳಲ್ಲಾದ ಸಾರ್ವತ್ರಿಕ ಚುನಾವಣೆಯ ವೇಳೆ ಮುಂದವರಿದ್ದ ಶ್ರೀ ಲಂಕಾ ಫ್ರೀಡಂ ಪಕ್ಷವು ಈಕೆಯ ಮಾರ್ಗ ದರ್ಶನದಲ್ಲಿ ತೀವ್ರಗತಿಯಿಂದ ಬೆಳೆದು ಬಂದು ಇಂದು ಸರಕಾರವನ್ನು ಸ್ಥಾಪಿಸಲು ಸಮರ್ಥವಾಯಿತು.

ರತ್ನಗಳಿಂದಾಗಿ ವಿಶ್ವವಿದಿತವಾಗಿರುವ ಸಿಂಹಳದ ರತ್ನಪುರದಲ್ಲಿ ಶ್ರೀಮತಿಯವರು ಕಾಂಡ್ಯನ್ ಕುಟುಂಬವೊಂದರಲ್ಲಿ ೧೯೧೬ನೆ ಎಪ್ರಿಲ್ ೧೭ರಂದು ಜನಿಸಿದರು. ಅವರ ಕುಟುಂಬದವರಿಗೆ ಸಿಂಹಳದ ಹಳೆಯ ರಾಜರಲ್ಲಿ ಪರಂಪರಾಪ್ರಾಪ್ತವಾದ ರಾಜಸೇವೆಯಿತ್ತು. ಬ್ರಿಟಿಷರ ಆಡಳಿತೆಯ ವೇಳೆ ಈ ಕುಲವು ಶ್ರೀಮಂತವೂ ಗೌರವಪೂರ್ಣವೂ ಆಗಿತ್ತು. ಮೂರು ವರ್ಷಗಳಿಗೆ ಮೊದಲು ಮೃತ್ಯುಮುಖರಾದ ಇವರ ತಂದೆ ಬಿ. ಬರ್ನೆಸ್ ರತ್ವತೆ ಡಿಸ್ಸಾವೆಯವರು ಸಿಲೋನ್ ಸಿನೇಟಿನ ಮತ್ತು ಪಾರ್ಲಿಮೆಂಟಿನ ಸದಸ್ಯರಾಗಿ ೧೯೪೭ರಿಂದ ಆರು ವರ್ಷದವರೆಗಿದ್ದರು. ಬೌದ್ಧಧರ್ಮದ ಭಕ್ತೆಯಾದ ಶ್ರೀಮತಿ ಭಂಡಾರ ನಾಯಕೆಯವರು ಸಿಲೋನಿನ ಸುವಿಖ್ಯಾತ ರೋಮನ್ ಕೆಥೋಲಿಕರ ಸೈಂಟ್ ಬ್ರಿಡ್ ಗೆಟ್ಸ್ ಕಾನ್ವೆಂಟಿನಲ್ಲಿ ವಿದ್ಯಾಭ್ಯಾಸವನ್ನು ಪಡೆದರು.

೧೯೪೦ರಲ್ಲಿ ಆಗ ಸಿಲೋನಿನ ಸ್ವಾಯತ್ತ ಆಡಳಿತೆ ಖಾತೆಯ ಮಂತ್ರಿಯಾಗಿದ್ದ ಸೋಲಮನ್ ಭಂಡಾರ ನಾಯಕೆಯವರೊಡನೆ ಇವರ ವಿವಾಹವಾಯಿತು. ಇದಕ್ಕೆ ಮೊದಲು ಶ್ರೀಮತಿಯವರು ಸಾಮಾಜಿಕ ಚಟುವಟಿಕೆಗಳಲ್ಲಿ ತೀವ್ರಾಭಿರುಚಿಯನ್ನು ತೋರಿಸುತ್ತಿದ್ದರು. ಪಿಯಾನೋ ಬಾರಿಸುವುದರಲ್ಲಿ ಮತ್ತು ಟೆನ್ನಿಸ್ ಆಡುವುದರಲ್ಲಿ ಶ್ರೀಮತಿಯವರದು ಎತ್ತಿದ ಕೈ.

ವಿವಾಹವು ಈಕೆಯು ರಾಜಕೀಯರಂಗದೊಡನೆಯೂ ಸಂಬಂಧವಿಟ್ಟುಕೊಳ್ಳುವಂತೆಸಗಿತು. ಕೊಲಂಬೊವಿನಲ್ಲಿ ಶ್ರೀಮತಿ ಭಂಡಾರ ನಾಯಕೆಯವರು ಲಂಕಾ ಮಹಿಳಾ ಸಮಿತಿಯೊಂದನ್ನು ನಡೆಸಿಕೊಂಡು ಬಂದರು. ಇದೇ ರೀತಿಯಲ್ಲಿ ಸಾಮಾಜಿಕ ಚಟುವಟಿಕೆಗಳನ್ನು ವಿಸ್ತರಿಸುತ್ತ ಶ್ರೀ ಲಂಕಾ ಬೌದ್ಧ ಮಹಿಳಾ ಸಂಘ ಮತ್ತು ಶ್ರೀ ಲಂಕಾ ಸಾಂಸ್ಕೃತಿಕ ಸಂಸ್ಥೆಗಳನ್ನೂ ಸ್ಥಾಪಿಸಿ ಅವನ್ನು ಮುನ್ನಡೆಸುತ್ತ ಬರತೊಡಗಿದರು.

(೯ನೇ ಪುಟ ನೋಡಿರಿ)





ಅಮೇರಿಕೆಯ ಆಕಾಶಬಾಣ ಎಟ್ಲಾಸನ್ನು ಹಾರಿಸಲು ಸಿದ್ಧವಾಗಿಸಿರುವುದನ್ನು ಮೇಲ್ಗಡೆಯ ಚಿತ್ರದಲ್ಲಿ, ೧೭೫ ಮೈಲು ತಾಸಿಗೆ ಓಡಬಲ್ಲ ಟ್ರಕ್ಕೊಂದನ್ನು ಕೆಳಗಡೆಯ ಚಿತ್ರದಲ್ಲಿ ನೋಡಬಹುದು.

ಕಥಾವಿಹಾರ

ಅಂತಿಮ ಚಿತ್ರದ ಚರಮ ಸಂದೇಶ

ನಾನೆಷ್ಟು ಹೃದಯಹೀನನಾಗಿದ್ದೆ! ನನ್ನ ಪತ್ನಿ ಮೃತ್ಯುಶಯ್ಯೆಯಲ್ಲಿ ಅಂತಿಮ ಶ್ವಾಸವನ್ನೆಳೆಯುತಿದ್ದಳು— ನಾನು ಅದರ ರಚನೆಯಿಂದ ನನ್ನ ಚಿತ್ರದಲ್ಲಿ ಪ್ರಾಣವಾಯು ತುಂಬಿಸ ಬಯಸುತಿದ್ದೆ— ಕಲಾವಿದನ ಈ ಅಕ್ಷಮ್ಯ ಅಪರಾಧ ಮತ್ತು ಪಶ್ಚಾತ್ತಾಪವನ್ನು ಇಲ್ಲಿ ಮಾರ್ಮಿಕವಾಗಿ ಚಿತ್ರಿಸಲಾಗಿದೆ.

ಮೂಲ: (ತೆಲುಗು ಭಾಷೆಯಲ್ಲಿ) ಶ್ರೀ ಎಸ್. ಕೃಷ್ಣಮೂರ್ತಿ.
ಕನ್ನಡಿಸಿದವರು: ಎಸ್. ಗೋಪೀಚಂದ ರಾವ್.

ಆಗ ನಾನು ಚಿಂತಾರಹಿತ ನವಯುವಕನಾಗಿದ್ದೆ. ಅಧ್ಯಯನಕ್ಕಿಂತ ಆಮೋದ ಪ್ರಮೋದವನ್ನೇ ಬಹುವಾಗಿ ಮೆಚ್ಚುವಂತಹ ಕಾಲೇಜಿನ ವಿದ್ಯಾರ್ಥಿಯಾಗಿದ್ದೆ. ಆ ಸಮಯದಲ್ಲೇ ಕಲಾವಿದರೊಡನೆ ಪರಿಚಯಮಾಡಿಕೊಳ್ಳುವ ಅವಕಾಶಗಳೂ ಬಂದೊದಗಿದುವು. ಅವರ ಸ್ವಚ್ಛಂದ ಜೀವನದಲ್ಲಿ ನನ್ನನ್ನು ಆಕರ್ಷಿಸಬಲ್ಲ ಇದೊಂದು ಅವ್ಯಕ್ತ ಶಕ್ತಿ ನನಗೆ ಗೋಚರಿಸಿತ್ತು. ಆದರೆ, ಮುಂದೆ ನಾನು ದೊಡ್ಡ ಸಂಸಾರವೊಂದರ ಭಾರವನ್ನು ಹೊರಬೇಕಾಗಿ ಬಂದಾಗ, ಎಲ್ಲವೂ ಮನಸಿನ ಮಂಡಿಗೆಯಾಗಿಯೇ ಉಳಿಯಿತು.

ಈ ನಡುವೆ ರವಿ ನನ್ನ ಅಂತರಂಗದ ಮಿತ್ರನಾಗಿದ್ದ. ಆತನು ಕಲಾವಿದನೆಂದಾಗಿ ಸಾಕಷ್ಟು ಪ್ರಸಿದ್ಧಿಯನ್ನೂ ಪಡೆದಿದ್ದ. ಇದರಿಂದಾಗಿ ಭಾರತ ಸರಕಾರವು ವಿಶೇಷ ಅಧ್ಯಯನಕ್ಕಾಗಿ ಅವನನ್ನು ಯುರೋಪಿಗೆ ಕಳಿಸಿಕೊಟ್ಟಿತ್ತು. ನಾವಿಬ್ಬರು ಕೆಲವರ್ಷಗಳವರೆಗೆ ಒಬ್ಬರನ್ನೊಬ್ಬರು ಭೇಟಿಯಾಗಲಿಲ್ಲ; ಕಾರಣ, ಬಹಳಷ್ಟು ಆಡಲು ಕೇಳಲು ಹೃದಯ ಬಯಸುತಿತ್ತು. ಆದುದರಿಂದ ನಾನು ಹಳ್ಳಿಯಿಂದ ನಗರಕ್ಕೆ ತೆರಳಿದೆ.

ಇಲ್ಲಿ ಸ್ವಚ್ಛಂದ ಪ್ರಕೃತಿಯ ಜನರು ಮಾತ್ರ ಗುಂಪು ಸೇರಿದ್ದರು. ಮಾತುಕತೆಯಲ್ಲಿ ಯಾವುದೇ ಪ್ರಕಾರದ ದಯೆ-ದಾಕ್ಷಿಣ್ಯಗಳೂ ಇರಲಿಲ್ಲ.

“ನಿನಗೆ ಕೈಲಾಸ ಬಾಬುವಿನ ನೆನಪಿದೆಯೆ?” ಯಾವನೋ ಒಬ್ಬ ಮೇಜಿನ ಇನ್ನೊಂದು ಮೂಲೆಯಿಂದ ಪ್ರಶ್ನಿಸಿದ.

“ಆಹುದಹುದು. ಅವನ ಕಥೆಯೇನು? ಅವನು ಏಕೆ ಬರಲಿಲ್ಲ?” ರವಿಯು ಉತ್ಸಾಹದಿಂದಲೇ ಕೇಳಿದ.

ಆ ವ್ಯಕ್ತಿ ತುಸು ಅಹಂಕಾರದಿಂದಲೇ ಹೇಳಿತು—“ಕೈಲಾಸ ಬಾಬು ಈಗ ನಮ್ಮ ಸಮಾಜದ ಸದಸ್ಯರಾಗಿಲ್ಲ. ಅವರು ಶಾಲೆಯೊಂದರಲ್ಲಿ ಅಧ್ಯಾಪಕರಾಗಿದ್ದಾರೆ.’

“ಏನೆಂದೆ?” ರವಿ ಮತ್ತು ನಾನು ಒಮ್ಮೆಯೇ ಕೇಳಿದೆವು: “ಕೈಲಾಸ ಬಾಬು ಶಾಲಾಧ್ಯಾಪಕನಾದನೆ?’

‘ಹೌದು, ನಿಜಕ್ಕೂ ಹೌದು.’—ಬೇರೆಯವರೂ ಸಂಗತಿ ಸಮರ್ಥನೆಗಾಗಿ ತಲೆದೂಗಿದರು. ಅವರಲ್ಲಿ ಒಬ್ಬನೆಂದ—‘ಆದರೆ, ಹಾಗೇಕಾಯಿತೆಂದು ಮಾತ್ರ ನಮ್ಮೊಡನೆ ಕೇಳಬೇಡಿ. ಅವರೊಡನೆಯೇ ಭೆಟ್ಟಿಯಾಗಿ ಪ್ರಶ್ನಿಸಿದರೆ ಫಲೋದಾಗಿರುತ್ತದೆ. ಹರಿಜನ ವಸತಿಯ ಹೊಸ ಶಾಲೆಯಲ್ಲಿ ಅವರು ನಿಮಗೆ ಸಿಗಬಹುದು.’

೦೦ ೦೦ ೦೦

ಕಲಾವಿದರು ಸ್ವಭಾವತಃ ದುಂದುವೆಚ್ಚಗಾರರು ಪ್ರತಿ ಮಾಸವನ್ನೂ ಅವರು ಬಡತನದಿಂದಲೇ ಕಳೆಯಬೇಕಾಗುತ್ತದೆ. ಸಂಪತ್ತಿನ ಸುಖವುಣ್ಣುವ ದಿನಗಳು ಅವರಿಗೆ ಬರುವುದೇ ಅಪರೂಪ. ಆದುದರಿಂದಲೇ ಅವರ ಜೀವನದಲ್ಲಿ ಕಲ್ಪನೆಯು ಅಧಿಕವಾಗಿ, ಯಥಾರ್ಥತೆಯು ಕಡಿಮೆಯಾಗಿರುತ್ತದೆ. ಪ್ರತಿಭಾ ಸಂಪನ್ನ ಕಲಾವಿದರೂ ಇದಕ್ಕೆ ಅಪವಾದವಲ್ಲ. ಒಂದು ಉತ್ಕೃಷ್ಟ ಕಲೆಯ ಮಾದರಿ ಬರೆಯುವುದರಲ್ಲೇ ಅವರು ವರ್ಷಗಳನ್ನು ಕಳೆಯುತ್ತಾರೆ — ಅದರ ಕಲ್ಪನೆಯಲ್ಲಿ ಮತ್ತಷ್ಟು ಸಮಯ! ಕೈಲಾಸ ಬಾಬು ಕೂಡ, ತನ್ನ ಉತ್ತಮ ಕೃತಿಯ ವಿಮರ್ಶೆಯನ್ನು ಮಾಡುತಿದ್ದ; ಆ ವೇಳೆ, ಆತನ ಕಣ್ಣುಗಳಲ್ಲಿ ಆದರ್ಶ ಕಲಾವಿದನಾಗಿ ತನ್ನ ಸ್ವಪ್ನವನ್ನು ಜಾಗ್ರತಾವಸ್ಥೆಗೆ ತರಬಲ್ಲವನೆಂದು ನಂಬಲು ಆಧಾರಭೂತವಾದ ಅಪೂರ್ವ ಪ್ರಕಾಶವೊಂದು ಗೋಚರಿಸುತಿತ್ತು.

ಈಗ, ಕೈಲಾಸ ಬಾಬು ಅಧ್ಯಾಪಕನಾಗಿ ಬಿಟ್ಟ ಎಂದು ತಿಳಿದು ನನಗೆ ಮತ್ತಷ್ಟು ಜಿಜ್ಞಾಸೆ ಅಂಕುರಿಸಿತು: ‘ಆತನ ಪತನ ಹೇಗಾಯಿತು?”—ಎಂಬ ಪ್ರಶ್ನೆ ನನಗರಿವಿಲ್ಲದಂತೆಯೇ ಹೊರಬಂದಿತು. ಈ ಪ್ರಶ್ನೆಯನ್ನು ಆಮೂಲಾಗ್ರ ವಿವೇಚಿಸಿ ಕಾರಣ ತಿಳಿಯಬಯಸಿದೆ. ಆದುದರಿಂದ, ರವಿ ಅವನಲ್ಲಿಗೆ ಹೊರಟ ಸಂದರ್ಭ ನೋಡಿ, ನಾನೂ ಅವನನ್ನು ಹಿಂಬಾಲಿಸಿದೆ.

ಹರಿಜನ ವಸತಿಯಲ್ಲಿ ಒಂದು ಶಾಲೆಯ ಪುಟ್ಟ ಕಟ್ಟಡದ ಮೇಲೆ ‘ಚಪ್ಪರ’ ಹಾಕಲಾಗಿತ್ತು! ಅದರ ಒಂದು ಭಾಗದಲ್ಲಿ ಅಧ್ಯಾಪಕರ ನಿವಾಸಕ್ಕೆ ವ್ಯವಸ್ಥೆಯಿತ್ತು. ಬಾಗಿಲಲ್ಲಿಯೇ ನಮ್ಮನ್ನೊಬ್ಬನು ಸ್ವಾಗತಿಸಿದನು. ಅವನು ಕೈಲಾಸ ಬಾಬುವೇ ಆಗಿದ್ದ; ಆದರೆ, ಆತನೆಂದು ಅರಿಯಲು ನನಗೆ ತುಂಬ ಸಮಯ ಬೇಕಾಯಿತು. ಆತನ ನಯನಗಳಲ್ಲಿ ಅನೇ ಹಳೆಯ ಮಿಂಚೊಂದಿರಲಿಲ್ಲವಾದರೆ, ಆ ಅಕಾಲ ವೃದ್ಧನನ್ನು ಕೈಲಾಸನೆಂದು ತಿಳಿಯುವುದೇ ಅಸಾಧ್ಯವಾಗಿರುತಿತ್ತು! ಆತ ಯಾವಾಗಲೂ ಪ್ರಫುಲ್ಲಿತರಾಗಿರುವವನು ಮತ್ತು ಕಲೆಯ ಶ್ರೇಷ್ಠತೆಯ ಬಗ್ಗೆ ತಾಸುಗಟ್ಟಲೆ ವಿಮರ್ಶೆ ಮಾಡುವ ಕಲಾವಿದನಾಗಿದ್ದನು.

ನಮ್ಮನ್ನು ಒಂದು ಸಣ್ಣ ಕೋಣೆಗೆ ಕರೆದೊಯ್ದನವನು. ಮಣ್ಣಿನ ಗೋಡೆಯಿಂದ ಪ್ರತ್ಯೇಕಿತವಾದ ಕಟ್ಟಡದ ಒಂದು ಭಾಗವಾಗಿತ್ತದು. ಅದರೊಳಗೊಂದು ಸಣ್ಣ ಕಿಟಕಿಯಿತ್ತು. ಇದರ ಮೂಲಕ ಸೂರ್ಯನ ಮಂದ ಕಿರಣಗಳು ನಿರಾತಂಕವಾಗಿ ಪ್ರವೇಶಿಸುವಂತಿದ್ದುವು.

ಆಗ ನಮ್ಮ ದೃಷ್ಟಿ ಗೋಡೆಯ ಮೇಲೆ ತೂಗು ಹಾಕಲ್ಪಟ್ಟ ಒಂದು ಬೃಹದಾಕಾರದ ಚಿತ್ರದ ಮೇಲೆ ಒಂದು ಗೂಡಿತು. ಅದನ್ನು ವೀಕ್ಷಿಸುವ ಸಲುವಾಗಿ ನಾವೂ ಮತ್ತೂ ಮುಂದುವರಿದೆವು. ನಾನು ಸ್ವಯಂ ಕಲಾವಿದನಾಗಿರದಿದ್ದರೂ ಅಂತಹರ ಸಂಸರ್ಗದಲ್ಲಿದ್ದುದರಿಂದ, ಕಲಾಕೃತಿಗಳನ್ನು ಪರೀಕ್ಷಿಸುವ ಶಕ್ತಿ ತುಸು ನನ್ನಲ್ಲಿ ಹುಟ್ಟಿಕೊಂಡಿತ್ತು. ಆದರೆ, ಕತ್ತಲೆಯ ಕಾರಣದಿಂದ ಚಿತ್ರದ ರೇಖೆಗಳು ಕಾಣುವಂತಿರಲಿಲ್ಲ; ಆದರೂ ಮೊದಲ ನೋಟದಲ್ಲಿಯೇ ಕಲಾವಿದನು ಅಭಿಮಾನ ಪಡಬೇಕಾದ ಕೃತಿಯಿದೆಂದು ಕಂಡುಕೊಂಡೆ. ಚಿತ್ರದಲ್ಲಿ ಸುಮಾರು ೨೦ ವಯಸ್ಸಿನ ಒಬ್ಬಾಕೆ ರೋಗಿಣಿಯ ದೃಶ್ಯ ಗುರುತಿಸಲಾಗಿತ್ತು. ಆಕೆಯ ಅಂಗಾಂಗಗಳಲ್ಲಿ ಹೂವಿನ ಸುಕುಮಾರತೆ ಮತ್ತು ಸೌಂದರ್ಯಗಳು ಹೊಳೆಯುತಿದ್ದುವು. ಅವಳು ಒಂದು ಮಂಚದ ಮೇಲೆ ಮಲಗಿದ್ದಳು. ಸುತ್ತ ಮುತ್ತ ಮದ್ದಿನ ಸೀಸೆಗಳು ಚೆಲ್ಲಾಡಿದ್ದುವು. ನಿರಾಶೆ ಮತ್ತು ಪರಾಜಯದ ಭಾವನೆಗಳನ್ನು ಕೈಲಾಸ ಆ ಚಿತ್ರದಲ್ಲಿ ರೂಪಿಸಿದ್ದ. ಇದು ಕೈಲಾಸನ ಅತ್ಯುತ್ಕೃಷ್ಟ ಕೃತಿಯೆನ್ನಲು ಯಾವ ಅಭ್ಯಂತರವೂ ಇರಲಿಲ್ಲ.

ನಮ್ಮ ನಯನಗಳಲ್ಲಿ ಮೂಡಿದ ಭಾವವನ್ನವರು ಕಂಡುಕೊಂಡಿರಬೇಕು. ಎಂತಲೇ ಗದ್ಗದ ವದನರಾಗಿ ಹೇಳಿದರು— “ಹೌದು, ಇದು ನನ್ನ ಉತ್ಕೃಷ್ಟ ಕೃತಿಯಾಗಿದೆ.” ಅವರ ಈ ಮಾತುಗಳು ನಮ್ಮ ಮೇಲೆ ಹರಡಿದ್ದ ಮಂಕುಬೂದಿಯನ್ನು ಜಾಡಿಸಿಬಿಟ್ಟುವು. ನಾನು ನುಡಿದೆ— “ಕೈಲಾಸ ಬಾಬು, ಇದು ಅಸಾಧಾರಣ ಚಿತ್ರವಾಗಿದೆ. ನೀನು ಇದರ ಪ್ರದರ್ಶನ ವ್ಯವಸ್ಥೆಯನ್ನೇಕೆ ಮಾಡಲಿಲ್ಲ? ನಿನ್ನ ಕೀರ್ತಿ ನಿಜವಾಗಿಯೂ…”

“ಕೀರ್ತಿ……! ನನಗೆ ಕೀರ್ತಿಯ ಆವಶ್ಯಕತೆಯಿಲ್ಲ!” ಕೈಲಾಸನು ವಿಕಟವಾಗಿ ನಗುತ್ತ ನನ್ನ ಮಾತನ್ನು ಅರ್ಧದಲ್ಲಿಯೇ ತಡೆದುಬಿಟ್ಟ. ಆತನು ಬಹಳ ಉತ್ತೇಜಿತನಾಗಿದ್ದನು. “ನೀನು ಯಾವುದನ್ನು ಕೀರ್ತಿ ಎನ್ನುತ್ತೀಯೋ ಅದು ನನಗೆ ಲಜ್ಜೆಗೆ ಸಮಾನವಾಗಿದೆ. ಈ ಚಿತ್ರದ ಪ್ರದರ್ಶನದಿಂದ ನಾನು ನನ್ನ ನೃಶಂಸತೆ ಮತ್ತು ಹೃದಯ ಹೀನತೆಯ ಪ್ರದರ್ಶನ ಮಾಡುವಂತಾಗುವುದು. ಈ ಚಿತ್ರವು ನನ್ನೊಡನೆಯೇ ಮಣ್ಣುಸೇರುವುದು.”

ನಮ್ಮ ಮುಖಗಳಲ್ಲಿ ಮೂಡಿದ ಭಯ ಮತ್ತು ಅಶಾಂತತೆಯ ಭಾವಗಳನ್ನು ಗುರುತಿಸಿದ ಆತ ಪುನಃ ಹೇಳಿದ, ‘ನನ್ನನ್ನು ಕ್ಷಮಿಸಬೇಕು.” ತನ್ನ ಮಾತಿನ ಬಗ್ಗೆ ತಾನೇ ನಾಚಿಕೊಂಡಂತೆ ಮುಂದುವರಿಸಿದ —“ನನ್ನ ಕಥೆ ನಿಮಗೆ ತಿಳಿದಿಲ್ಲವೆಂದರಿಯದೆ ತಪ್ಪು ಮಾಡಿದೆ; ನಿಮಗೆ ಬೇಕಾದರೆ……”

ನಾವೂ ಅದನ್ನೇ ಬಯಸುತಿದ್ದೆವು. ಆದುದರಿಂದ ಆ ಕೂಡಲೇ ಅವನ ಕತೆಕೇ

(೧೧ನೇ ಪುಟ ನೋಡಿರಿ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 3,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ, ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1929

ಕರ್ನಾಟಕ ಸಂಘ (ಉಡುಪಿ)ದ ಮೂರು ಪ್ರಕಟಣೆಗಳು
ಓದಲೇಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ
ಲೇಖಕರು: ಬಿ. ರಾಘವೇಂದ್ರ ಆಚಾರ್ಯ, ಎಂ. ಎ.
ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು
ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ
ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.
ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.
ರೂ. ೩=೨೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಗೃಹ ವಿಜ್ಞಾನ

ಮನೆಯ ಸಿರಿ — ನಗುವ ಮಕ್ಕಳು

(ಲೇಖಾಂಕ ೪)

> ಬೆಳೆಯ ಸಿರಿ ಮೊಳಕೆಯಲ್ಲೇ ಕಾಣುತ್ತದೆ, ಎಳೆಯ ಮಕ್ಕಳಲ್ಲಿರುವ ಉತ್ಸಾಹ ಆಶೆಗಳನ್ನು ಕಂಡುಕೊಂಡು ಅವಕ್ಕೆ ಸರಿಯಾಗಿ ಮಕ್ಕಳನ್ನು ಬೆಳೆಸಿಕೊಂಡು ಬರುವ ಜೋಪಾನಿಕೆ ಹಿರಿಯರಿಗೆ ಸೇರಿದುದು. ತಮ್ಮ ಕರ್ತವ್ಯದಲ್ಲಿ ಹಿರಿಯರು ತಪ್ಪಿದರೆ, ಮುಂದೆ ಮಕ್ಕಳು ಮನೆಮುರುಕರಾದಾರು, ಎಚ್ಚರಿಕೆ!

ಲೇಖಕರು: ಶ್ರೀ ಎಂ. ರಂಗರಾವ್.

ಉಡುಗೆ ತೊಡುಗೆಗಳು

ಹೊಟ್ಟೆಯ ವಿಷಯವಾಗಿ ಹೇಳುವಾಗ ಅದರೊಂದಿಗೇ ಎದ್ದು ನಿಲ್ಲುವಂಥಾದ್ದು ಬಟ್ಟೆಯ ಮಾತು. ಮಾನವರಿಗೆ ಆಹಾರವು ಎಷ್ಟು ಮುಖ್ಯವೋ ಬಟ್ಟೆಯೂ ಅಷ್ಟು ಮುಖ್ಯ.

ಬಟ್ಟೆಗಳಿಂದ ವಿಧ ವಿಧವಾದ ಉಡುಗೆಗಳನ್ನು ಹೊಲಿಸಿ ತೊಟ್ಟುಕೊಳ್ಳುವುದರಿಂದ ನೋಡುವವರಿಗೆ ಸೌಂದರ್ಯವೂ ಸ್ವತಃ ಆಹ್ಲಾದವೂ ಉಂಟಾಗುತ್ತದೆ. ಮಾತ್ರವಲ್ಲ ಸ್ವತಃ ಆರೋಗ್ಯಕ್ಕೂ ಅದರಿಂದ ಸಾಧಕ ಬಾಧಕಗಳುಂಟು. ಉಡುಗೆಗಳಿಂದ ಕಾಲಕ್ಕೆ ತಕ್ಕಂತೆ ನಮ್ಮ ಶರೀರ ಪೋಷಣೆಗೆ ಅಗತ್ಯವಾದ ಶೀತೋಷ್ಣ ಸ್ಥಿತಿಗಳು ಸಮತೋಲಕ್ಕೆ ಬರುತ್ತವೆ. ಸಾಮಾನ್ಯವಾಗಿ ಉಷ್ಣಕಾಲದಲ್ಲಿ ಹಗುರಾದ ಬಿಳೀ ಬಟ್ಟೆಗಳೂ, ಶೀತಕಾಲದಲ್ಲಿ ದಪ್ಪವಾದ ಇತರ ಬಟ್ಟೆಗಳೂ ಉಪಕರಿಸುವಂತಹವಾಗಿವೆ.

"ಹಕ್ಕಿಗೂ ಮಕ್ಕಳಿಗೂ ಚಳಿಯಿಲ್ಲ" ಎಂದೊಂದು ನಾಣ್ಣುಡಿಯುಂಟು. ಮಕ್ಕಳ ನರನಾಡಿಗಳು ಬಹಳ ಚುರುಕಾಗಿ ಅಭಿವೃದ್ಧಿಗೆ ಮುಂದುವರಿದುಕೊಂಡೇ ಇರುತ್ತವೆ. ಅದುದರಿಂದಲೇ ಮಕ್ಕಳು ಹಿರಿಯರಿಗಿಂತಲೂ ಬೇಗನಲ್ಲೇ ಪ್ರಕೃತಿಯೊಂದಿಗೆ ಹೊಂದಿಕೊಳ್ಳುತ್ತಾರೆ. ಚಳಿಗೆ ದೊಡ್ಡವರು ಪಡುವಷ್ಟು ಬಾಧೆಯನ್ನು ಮಕ್ಕಳು ಪಡುವುದಿಲ್ಲ. ಕೇಳುವವರಿಲ್ಲದ ಭಿಕ್ಷುಕರ ಮಕ್ಕಳು ಪ್ರಕೃತಿಪುತ್ರರಾಗಿ ಆರೋಗ್ಯದಿಂದಿರುವುದನ್ನು ನಾವು ನೋಡುತ್ತೇವಷ್ಟೆ? ಕಾಡಿನಲ್ಲಿರುವ ಮರಗಳು ಕೂಡ ಯಾರೂ ಗಮನಿಸದೆಯೇ ನಾಡಿನ ಮರಗಳಿಗಿಂತಲೂ ಚೆನ್ನಾಗಿ ಬೆಳೆಯುತ್ತವೆ. ಆ ಮಾತು ಬೇರೆ.

ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಬಗೆ ಬಗೆಯ ಉಡುಗೆ ತೊಡುಗೆಗಳನ್ನು ತೊಡಿಸುವುದು ಸಹಜ. ಮುಖ್ಯವಾಗಿ ಮಕ್ಕಳ ಉಡುಗೆಗಳು ಸಡಿಲಾಗಿಯೂ, ಹಗುರಾಗಿಯೂ ಇರಬೇಕು. ಮಕ್ಕಳ ಆಟಪಾಟಗಳಿಗೆ ಅವುಗಳಿಂದ ಏನೂ ಬಾಧೆಯಾಗಬಾರದು. ಮೈಯ ಬೆವರು ಹೊರಗೆ ಹೋಗಲಿಕ್ಕೂ ಹೊರಗಿನ ಗಾಳಿ ಮೈಗೆ ತಾಗಲಿಕ್ಕೂ ಅನುಕೂಲವಿರುವ ಉಡುಗೆಗಳನ್ನೇ ನಿಮ್ಮ ಮಕ್ಕಳಿಗೆ ಹಾಕಿರಿ. ಹೊಟ್ಟೆಯಲ್ಲಿ ಬಿಗಿಯುವಂತಹ ಇಜಾರ ಮಕ್ಕಳಿಗೆ ಹಿತವಲ್ಲ. ಇದರಿಂದ ಅವುಗಳ ಅನ್ನಕೋಶವು ಸಂಕೋಚಗೊಳ್ಳುವ ಸಂಭವವುಂಟು. ಸೊಂಟದಲ್ಲಿ ಬೆವರು ಕಜ್ಜಿಯುಂಟಾದೀತು. ಮಕ್ಕಳ ಚರ್ಮವು ಎಳೆಯದಾದುದರಿಂದ ಬಿಗಿಯಾದ ತೊಡುಗೆಗಳಿಂದ ಅವುಗಳ ರಕ್ತಸಂಚಾರಕ್ಕೆ ತೊಂದರೆಯಾಗಬಲ್ಲುದು.

ಎರಡು ವರ್ಷದೊಳಗಿನ ಹಸುಮಗುವಿಗೆ ಉಡುಗೆತೊಡುಗೆಗಳು ಬಹಳ ಉಪದ್ರವನ್ನೀಯುತ್ತವೆ. ನೀವೇನಾದರೂ ವಸ್ತ್ರ ಹೊದಿಸಿದರೆ ಮಗು ತನ್ನ ಕೈಕಾಲುಗಳಿಂದ ಬಟ್ಟೆಯನ್ನು ಒಡಿಸಿಬಿಡುತ್ತದೆ. ಹೆಚ್ಚು ಬಟ್ಟೆಯ ಭಾರವನ್ನು ಮಗುವಿನ ಮೇಲೆ ಹೊದಿಸಿದರೆ ರಕ್ತದ ಮೇಲೆ ಭಾರ ಬಿದ್ದು ಮಗು ಸಂಕಟಪಡುತ್ತದೆ. ಅಂಗಿ, ಚಡ್ಡಿ, ಟೋಪಿಗಳೂ ಮಕ್ಕಳಿಗೆ ಉಪದ್ರಕಾರಿ. ಹಾಗೆಂತ ಬತ್ತಲೆಬಿಡಲೂ ಸಾಧ್ಯವಿಲ್ಲವಷ್ಟೆ?

ಮಕ್ಕಳು ಮಣ್ಣಿನೊಂದಿಗೆ ಆಟವಾಡಲು ತುಂಬಾ ಇಷ್ಟಪಡುತ್ತವೆ. ಇದು ತೀರಾ ಸಹಜ. ಮಣ್ಣಿನಾಟದಿಂದ ಮಕ್ಕಳನ್ನು ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ. ಮಣ್ಣಿನಲ್ಲಿ ಆಡಿಸುವುದರಿಂದ ಮಕ್ಕಳ ಆರೋಗ್ಯ ಹಾಳಾಗುವುದೆಂದು ತಿಳಿಯುವುದು ತಪ್ಪು. ಒಳ್ಳೆಯ ಮಣ್ಣಿನಲ್ಲಿ ಆಡುವುದರಿಂದ ಗುಣವೇ ಹೊರತು ದೋಷವೇನಿಲ್ಲ.

ಮಣ್ಣಿನಲ್ಲಿ ಆಡಿ ಮೈ ಕೊಳೆ ಮಾಡಿ ಬಂದ ಮಕ್ಕಳನ್ನು ಹೊಡೆಯುವುದೋ ಬೈಯುವುದೋ ಶುದ್ಧ ತಪ್ಪು. ಹಾಗೆ ಮಾಡಿದರೆ ತಂದೆ ತಾಯಿಗಳಿಗೆ ತಿಳಿಯದಂತೆ ಆಡಬೇಕೆಂಬ ಕಳ್ಳ ಬಯಕೆಯುಂಟಾಗುವ ಸಂಭವವುಂಟು. ಆಗ ದುಷ್ಟ ಸಹವಾಸಗಳೂ ದುರಭ್ಯಾಸಗಳೂ ಅವರಿಗೆ ಅಂಟಿಕೊಳ್ಳಬಹುದು.

ಅವರು ಆಡಿ ಬಂದುದಕ್ಕೆ ಸಂತೋಷಪಡಿರಿ. ಅವರ ಮೈಕೈಗಳನ್ನು ತೊಳೆದು ಶುದ್ಧ ಮಾಡಿರಿ. ಉಡುಗೆಯನ್ನು ತೆಗೆದು ಬೇರೆ ಉಡುಗೆ ತೊಡಿಸಿರಿ—ಈ ಬಗೆಯ ಅಭ್ಯಾಸಕ್ಕೆ ಅವರನ್ನು ಪಳಗಿಸಿದರೆ ಕೊಳೆಯಾದ ಕೂಡಲೇ ತೊಳೆದುಕೊಳ್ಳಬೇಕೆಂಬ ಎಚ್ಚರಿಗೆ ಅವರಿಗೆ ಬಂದೇ ಬರುತ್ತೆ.

ಹಾಗೆ ತೊಳೆದು ಶುದ್ಧ ಮಾಡದಿದ್ದರೆ ಮಾತ್ರ ದೇಹಕ್ಕೆ ಅಂಟಿಕೊಂಡ ಕೊಳೆಗೆ ಬೆವರು ಸೇರಿಕೊಂಡು, ಗಾಳಿಯಲ್ಲಿ ಹಾರುವ ವಿಷ ಕ್ರಿಮಿಗಳು ಅಂಟಿಕೊಂಡು ನಾನಾವಿಧ ಚರ್ಮವ್ಯಾಧಿಗಳು ಮಕ್ಕಳಿಗೆ ಉಂಟಾಗಲು ಕಾರಣವಾಗುತ್ತದೆ.

ಹಣವಂತರು ತಮ್ಮ ಮಕ್ಕಳಿಗೆ ಗೌರವಕ್ಕಾಗಿ ಬೆಲೆ ಬಾಳುವ ವಿಧವಿಧವಾದ ಬಟ್ಟೆಗಳನ್ನು ತೊಡಿಸುತ್ತಾರೆ. ಅದರಿಂದ ಅವರ ಆರೋಗ್ಯ ಭಾಗ್ಯದ ಮೇಲೆ ಬಡವರ ಮಕ್ಕಳಿಗಿಂತ ಹೆಚ್ಚಿನ ಪರಿಣಾಮವೇನೂ ಇಲ್ಲ. ಮಕ್ಕಳಿಗೆ ಬಣ್ಣಬಣ್ಣದ ಬಟ್ಟೆಗಳಾದರೂ ವಿಶೇಷ ಪ್ರಯೋಜನಕಾರಿಯೇನಲ್ಲ. ತಿರುಗಿ ಕೇಳಿದರೆ ಬಟ್ಟೆಗಳ ಆವರಣದೊಳಗೆ ಬಳೆಯುವ ಹಣವಂತರ ಮಕ್ಕಳಿಗಿಂತಲೂ ಆಡಂಬರವೇನೂ ಇಲ್ಲದ ದುಡಿಯುವ ಬಡವರ ಮಕ್ಕಳೇ ಎಷ್ಟೋ ಉತ್ಸಾಹ ಶಾಲಿಗಳಾಗಿರುತ್ತಾರೆ.

ಒಂದೇ ಮಾತಿನಲ್ಲಿ ಹೇಳುವುದಾದರೆ ಮಕ್ಕಳ ಬಟ್ಟೆಗಳು ಸಡಿಲಾಗಿ ಹಗುರಾಗಿ ಶುಚಿಯಾಗಿ ಇರಲಿ. ನಮ್ಮ ಭಾರತದಂತಹ ಉಷ್ಣದೇಶದ ಮಕ್ಕಳಿಗೆ ಬಟ್ಟೆಬರೆಗಳ ದೊಡ್ಡ ದೊಡ್ಡ ಕೋಟೆಗಳೇನೂ ಬೇಡ!

ಆಟ

ಆಟ! ಮಕ್ಕಳಿಗೆ ಮುಖ್ಯ ಲಕ್ಷ್ಯವಿರುವುದೇ ಆಟದಲ್ಲಿ. ಆಡುವುದು ಮಕ್ಕಳ ಜನ್ಮಸಿದ್ಧ ಹಕ್ಕು. ಮಕ್ಕಳಿಗೆ ಮಾತ್ರವೇ ಅಲ್ಲ; ನಾಯಿ, ಬೆಕ್ಕು, ಹಸು, ಆಡು ಮೊದಲಾದ ಪ್ರಾಣಿಗಳ ಮರಿ ಕರುಗಳೂ ಆಡುತ್ತವೆ.

ಹನ್ನೆರಡು ಹದಿನೈದು ವಯಸ್ಸಿನ ವರೆಗಿನ ಮಕ್ಕಳಿಗೆ ಆಟವೇ ಮುಖ್ಯ ಗುರಿ. ಅಂದರೆ ಅವರ ಬೆಳವಣಿಗೆ ಪಕ್ವತೆಯನ್ನು ಮುಟ್ಟುವ ವರೆಗೂ ಅವರ ಮನಸ್ಸು ಆಟಕ್ಕೆ ಹಾತೊರೆಯುತ್ತಿರುತ್ತದೆ.

ಇದು ಪ್ರಕೃತಿದೇವಿಯೇ ಅವರಿಗೆ ಕೊಡುವ ಬಯಕೆ. ಆಟದ ಗೊಡವೆಯಲ್ಲಿ ಮಕ್ಕಳು ಊಟವನ್ನೂ ಮರೆತುಬಿಡುವುದುಂಟು. ಅವರೇನು ಸುಮ್ಮನೆ ಆಡಿ ಹೊತ್ತು ಕಳೆಯುವರೆಂದು ತಿಳಿಯಬಾರದು. ಆಟದಿಂದ ಬಹಳ ಪ್ರಯೋಜನವಿದೆ. ಶರೀರವು ವ್ಯಾಯಾಮಗೊಳ್ಳುತ್ತದೆ. ಹಸಿವೆ ವೃದ್ಧಿಯಾಗುತ್ತದೆ. ಬುದ್ಧಿ ಅರಳುತ್ತದೆ. ಗೆಳೆಯರ ಒಡನಾಟದಿಂದ ಭವಿಷ್ಯತ್ತಿನಲ್ಲಿ ಸಮಾಜದೊಂದಿಗೆ ಕೂಡಿ ಬಾಳುವ ನಡೆಸಲಿಕ್ಕೂ ಈ ಆಟವು ಪಾಠ ಕಲಿಸುತ್ತದೆ.

ತೊಟ್ಟಿಲಲ್ಲಿ ಮಲಗಿರುವ ಹಸು ಕಂದನೂ ಕೈಕಾಲಾಡಿಸಿ ಎಷ್ಟೋ ಆಟ ಆಡುತ್ತಾನೆ. ಮೇಲೆ ಕಟ್ಟಿದ ಬಣ್ಣದ ಬೊಂಬೆಯನ್ನು ನೋಡಿ ಹಿಡಿಯಲೆತ್ನಿಸುತ್ತಾನೆ. ಏನೂ ಇಲ್ಲದಿದ್ದರೆ ಬೆಳಕಿನ ಬಿಂಬಗಳೂ, ಕಡೆಗೆ ಬರಿಯ ಗಾಳಿಯೂ ಮಗುವನ್ನು ಆಟವಾಡಿಸಿಬಿಡುತ್ತವೆ. ಕೈಗೆ ಸಿಕ್ಕುವ ಒಂದುಚೂರು ಕೆರಳು ಕಾಗದವೂ ಮಕ್ಕಳನ್ನು ಆಡಿಸಬಲ್ಲುದು.

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.
ಕೊರ್ಪೊರೇಶನ್ ಬೇಂಕು
ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು
ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ
ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.
ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನೋಡದೆನ್ನದೆ
ಇಂದೇ ಸಂದರ್ಶಿಸಿರಿ!
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಮಗು ಬೆಳೆಯುತ್ತಾ ಬಂದಂತೆ ಆಟದ ವಿಧಾನವೂ ಬದಲಾಯಿಸುತ್ತದೆ. ಚಿಕ್ಕ ಮಕ್ಕಳು ಬೊಂಬೆಗಳನ್ನಿಟ್ಟುಕೊಂಡು ಆಡುತ್ತವೆ. ದೊಡ್ಡ ಮಕ್ಕಳು ಚೆಂಡುಗಳೊಂದಿಗೆ ಆಡುತ್ತಾರೆ. ಓಡಿ ಹಿಡಿಯುವುದೂ ಒಂದು ಆಟ. ಇನ್ನಿರುವ ವಿಧವಿಧವಾದ ಆಟಗಳು ಎಲ್ಲರಿಗೂ ಗೊತ್ತಿವೆ. ದೊಡ್ಡವರ ಜೀವನವೇ ಮಕ್ಕಳ ಆಟದಲ್ಲಿ ಅಣಕವಾಗಿರುತ್ತದೆ.

ಮಕ್ಕಳ ಆಟಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿ. ಅದರಲ್ಲಿ ಅವರ ಮುಂದಿನ ಜೀವನದ ರೀತಿಯೂ ಸೂಕ್ಷ್ಮವಾಗಿ ಕಾಣಿಸುವುದುಂಟು. ಆಟದ ಬೊಂಬೆಗಳನ್ನು ಕೆಡಿಸಿ ಮತ್ತೆ ಸರಿಮಾಡಲೆತ್ನಿಸುವ ಮಗು ಮುಂದೆ ಇಂಜನಿಯರಾದಾನು. ಸ್ಲೇಟಿನಲ್ಲಿ ಆಡ್ಡಾದಿಡ್ಡ ಗೆರೆ ಹಾಕುವವನು ಚಿತ್ರಕಾರನಾದಾನು. ಹೀಗೆ ಮಕ್ಕಳ ಮನೋಧರ್ಮವನ್ನು ಕಂಡುಹಿಡಿದು ಅದಕ್ಕೆ ತಕ್ಕ ದಾರಿಯಲ್ಲಿ ಅವರನ್ನು ಹಾಕಿದರೆ ಅವರು ಆದರ್ಶ ಪ್ರಜೆಗಳಾಗಬಲ್ಲರು. ತಮ್ಮ ಮನೋಧರ್ಮಕ್ಕೆ ವಿರೋಧವಾಗಿ ಬೆಳೆದವರು ತಮಗಿಷ್ಟವಿಲ್ಲದ ಯಾವುದೋ ಕೆಲಸ ಮಾಡಿಕೊಂಡು ಕಷ್ಟಪಡಬೇಕಾಗುತ್ತದೆ ಇವನ್ನೆಲ್ಲ ಆಟದ ವಯಸ್ಸಿನಲ್ಲಿಯೇ ಕಂಡುಹಿಡಿಯುವಂತಹ ಸೂಕ್ಷ್ಮದೃಷ್ಟಿ ಹಿರಿಯರಿಗಿರಬೇಕು

ವಿದ್ಯೆ ಕಲಿಯಲಿಕ್ಕೆ ಮಕ್ಕಳನ್ನು ಶಾಲೆಗೆ ಸೇರಿಸಬೇಕಾದುದು ಅತ್ಯಗತ್ಯ. ಅಲ್ಲಿಯೂ ಮಕ್ಕಳ ಆಟಕ್ಕೂ ಪಾಟಕ್ಕೂ ತಕ್ಕ ಏರ್ಪಾಡುಗಳಿವೆ. ಆಟದ ಮೈದಾನವಿಲ್ಲದ ಶಾಲೆಯೊಂದು ಶಾಲೆಯಾಗಲಾರದು. ಯಾವ ವಿದ್ಯೆಯನ್ನಾದರೂ ಆಟದ ಉಪಾಯದಲ್ಲಿ ಸೇರಿಸಿಕೊಂಡೇ ಮಕ್ಕಳಿಗೆ ಕಲಿಸಬೇಕಾಗುತ್ತದೆ. ಶಾಲೆಯಲ್ಲಿ ಪಾಠಗಳು ಒಂದು ಅಂಗವಾದರೆ ಆಟಗಳೂ ಅದಕ್ಕೇನೂ ಕಡಮೆಯಿಲ್ಲದ ಇನ್ನೊಂದು ಅಂಗವಾಗಿದೆ.

ನೂರಾರು ಬಗೆಯ ಆಟಗಳಿವೆ. ಹುಡುಗರಿಗೂ ಹುಡುಗಿಯರಿಗೂ ಬೇರೆ ಬೇರೆ ಬಗೆಯ ಆಟಗಳಿವೆ. ಗೋಲಿ, ಹುಲಿಯಾಟ, ಚಡುಗುಡು, ಕಾಲ್ಚೆಂಡು, ಕೈಚೆಂಡು ಮೊದಲಾದುವು ಹುಡುಗರ ಆಟಗಳು; ಕಲ್ಲಾಟ, ಕೋಲಾಟ, ಕುಮ್ಮಿ ಕುಣಿತ, ಜಡೆಹೆಣೆಯುವಾಟ ಮೊದಲಾದುವು ಹುಡುಗಿಯರದು.

ಮಕ್ಕಳನ್ನು ಕೇವಲ ಅವುಗಳ ಪಾಡಿಗೆ ಬಿಟ್ಟುಬಿಟ್ಟರೆ ಆಟವು ಹುಚ್ಚಾಟವಾಗಿ ಜಗಳದಲ್ಲಿಯೂ ಅಳುವಿನಲ್ಲಿಯೂ ಕೊನೆಗಂಡೀತು. ಅವರಿಗೆ ದೊಡ್ಡವರೂ ತಕ್ಕ ಸೌಕರ್ಯ, ಕ್ರಮ, ಶಿಸ್ತುಗಳನ್ನೇರ್ಪಡಿಸಿಕೊಡಬೇಕು. ಆಗ ತಮ್ಮ ಆಟಕ್ಕೆ ದೊಡ್ಡವರ ಮೆಚ್ಚುಗೆಯೂ ಇದೆ ಎಂದುಕೊಂಡು ಅವರಿಗೆ ಆತ್ಮಸಂತೋಷವಾಗುತ್ತದೆ ಉತ್ಸಾಹದಿಂದ ಆಡುತ್ತಾರೆ. ಅವರು ಸಂತೋಷಪಟ್ಟರೆ ನನಗೂ ಸಂತೋಷವಲ್ಲವೆ?

ಮಕ್ಕಳ ಆರೋಗ್ಯಕ್ಕೂ ಉತ್ಸಾಹಕ್ಕೂ ಆಟವು ಅಗತ್ಯವೆಂದು ಪೂರ್ವದಿಂದಲೇ ಬಲ್ಲರು. ಆಟದಿಂದ ಮಕ್ಕಳನ್ನು ತಪ್ಪಿಸುವುದು ಘಾತುಕತನವಾಗುತ್ತದೆ. ಆಟದ ಮಕ್ಕಳು ಅಳು ಮರೆಯುವರಾಗುತ್ತಾರೆ

(೧೦ನೇ ಪುಟ ನೋಡಿರಿ)

ಶುದ್ಧ ಹರಟೆ

ಯಾರೂ ಮಾಡದ್ದನ್ನು ಮಂತ್ರಿ ಮಾಡುತ್ತಾನೆ!

ಪ್ರಜಾಸತ್ತೆಯಲ್ಲಿ ಮಂತ್ರಿಯ ಕಾರುಬಾರು ಭಾರಿ. ಸ್ವಯಂ ದೇವರಿಗೂ ಅಸಾಧ್ಯವಾದ ಕೆಲಸವೊಂದಿದ್ದರೂ ಮಂತ್ರಿಯಾದವನು ಅದನ್ನು ಮಾಡಿ ತೋರಿಸುವನಂತೆ!

ಹರಟಿದವರು: ಶ್ರೀ "ಕುಂತಳಾಪ್ರಿಯ"

ಬ್ರಹ್ಮನು ಲೋಕವನ್ನು ಸೃಷ್ಟಿಮಾಡುವಾಗ ಮಂತ್ರಿಯನ್ನು ಸೃಷ್ಟಿಮಾಡಲಿಲ್ಲ. ಆದುದರಿಂದ ಮನುಷ್ಯನೆ ಮಂತ್ರಿಯ ಸೃಷ್ಟಿಕರ್ತನಾಗಿದ್ದಾನೆ. ಪ್ರಜಾಸತ್ತೆಯಲ್ಲಂತೂ ಮಂತ್ರಿ ಜನಕರೆಂದರೆ ಪ್ರಜೆಗಳೇ ಆಗಿದ್ದಾರೆ. ಈ ಪ್ರಜಾಪ್ರಭುತ್ವದಲ್ಲಂತೂ ಪ್ರಜೆ ಮಂತ್ರಿಯನ್ನು ಆರಿಸಿದನಂತರ, "ಪ್ರಜಾ! ನೀನೇಕೆ ಹೀಗೆ ಮಾಡಿ ಸತ್ತೆ?" ಎಂದು ಜೀರಿಯುವಂತೆ ಅನ್ನಿಸಿಕೊಳ್ಳುವನು.

ಚುನಾವಣೆಗೆ ನಿಂತಾಗಲೆ ಮನುಷ್ಯನು ಯಂ. ಎಲ್. ಎ. ಆಗುವುದರ ಕನಸನ್ನು ಕಾಣುತ್ತಾನೆ. ಯಂ. ಎಲ್. ಎ. ಆದೊಡನೆ ಮಂತ್ರಿಪಟ್ಟದ ಬಗ್ಗೆ ಸ್ವಪ್ನವನು ನೋಡುತ್ತಾನೆ. ಅದು ತಪ್ಪಿಹೋದಲ್ಲಿ ಕಮಿಟಿಯ (ಯಾವುದಾದರೂ ಆಗಬಹುದು) ಸದಸ್ಯನಾಗಲು ಬಯಸುತ್ತಾನೆ. ಮಂತ್ರಿಪಟ್ಟ ದೊರೆತರೆ ಆಶ್ವಾಸನೆಗಳ ಕನಸು ಕಾಣುತ್ತಾನೆ. ಐದು ವರ್ಷಗಳು ಉಳಿವ ವರೆಗೂ ತನ್ನ ಪಟ್ಟದ ಭದ್ರತೆಯ ಬಗ್ಗೆ ಆತನು ಯೋಚನಾಮಗ್ನನಾಗುತ್ತಾನೆ. ಮಂತ್ರಿಪಟ್ಟದ ರುಚಿ ಮನುಷ್ಯನಿಗೆ ಹಿಡಿಯಿತೆಂದರೆ ಹುಲಿಗೆ ಮನುಷ್ಯರ ರಕ್ತದ ರುಚಿ ಹಿಡಿದಂತೆಯೆ ಆಗುತ್ತದೆಯಂತೆ.

ಯಂ. ಎಲ್. ಎ. ಆಗುವುದು ಬಹು ಕಷ್ಟ. ಮಂತ್ರಿಗಳಾಗುವುದು ಬಹು ಸುಲಭ. ಯಂ. ಎಲ್. ಎ. ಆಗುವವನು ಸಾವಿರಾರು ಜನರ ಮತವನ್ನು ಗಳಿಸಬೇಕಾಗುತ್ತದೆ. ಮಂತ್ರಿಯಾಗುವವನು ಹತ್ತಾರು ಜನರ ಮತವನ್ನು ಪಡೆದರೆ ಸಾಕು. ಮನುಷ್ಯ, ಎಂ. ಎಲ್. ಎ. ಆಗಲು ಸಾವಿರಾರು ಜನರನ್ನು ಹಣಕೊಟ್ಟು ತನ್ನೆಡೆಗ ಸೆಳೆದುಕೊಳ್ಳುವನಾದರೆ ಮಂತ್ರಿಯಾಗಲು ಯಂ. ಎಲ್. ಎ ಗಳನ್ನು ಆಶ್ವಾಸನೆಗಳ ಮೂಲಕವೆ ತನ್ನೆಡೆಗೆ ಆಕರ್ಷಿಸಿಕೊಂಡರೆ ಸಾಕಾಗುತ್ತದೆ; ಯಾವಕೋಮಿನ ಅಥವಾ ಪಂಗಡದ ಯಂ. ಎಲ್. ಎ.ಗಳು ಹೆಚ್ಚಿರುವರೊ ಆ ಪಂಗಡದವರಿಗೆ ಒಳ್ಳೆಯದನ್ನು ಮಾಡುತ್ತೇನೆಂದು ಹೇಳಿ ಮಂತ್ರಿಯಾಗುವ ಯಂ. ಎಲ್. ಎ.ಗಳು ಈಗ ಇಲ್ಲದಿಲ್ಲ.

ಮಂತ್ರಿಯಾಗುವ ಮೊದಲು ಯಂ. ಎಲ್. ಎ. ಜನರ ಹಿತಕ್ಕಾಗಿ ಯೋಚಿಸುತ್ತಾನೆ. ಮಂತ್ರಿಯಾದೊಡನೆ ಅದನ್ನು ಮರೆತು ಬಿಡುವ ಒಳ್ಳೆಯ ಗುಣ ಅವನಲ್ಲಿದೆ. ಆಗ ಆತನ ಯೋಚನೆಗೆ ಅವಕಾಶವೇ ಇರುವುದಿಲ್ಲ. ಭಾಷಣ ಪ್ರಿಯನಲ್ಲದವನು ಅಧಿಕಾರಕ್ಕೆ ಏರಿದ ನಂತರ ಭಾಷಣ ಬಿಗಿಯುವುದರಲ್ಲಿ ನಿಸ್ಸೀಮನಾಗುತ್ತಾನೆ. ಜನರ ಹಿತವನ್ನು ಬಯಸುವವನು, ಜನರ ಹಿತಕ್ಕಾಗಿ ದುಡಿಯುವವನು ಎಂದೆಂದೂ ಮಂತ್ರಿಯಾಗಲಾರನು. ಗಾಂಧಿಜಿಯವರು ಮಂತ್ರಿಗಳಾಗಿದ್ದರೆ?

ಮಂತ್ರಿಯಾದೊಡನೆ ಮನುಷ್ಯನಿಗೆ ಮರೆವೆ ಅಂಟಿಕೊಳ್ಳುತ್ತದೆ. ಒಂದು ಗಂಟೆ ಹಿಂದೆ ಹೇಳಿದ್ದನ್ನು ಆತನು ಮತ್ತೆ ನೆನೆಪಿಸಿಕೊಳ್ಳಲು ಅಸಮರ್ಥನಾಗುತ್ತಾನೆ. ವಿಷಯ ಮತ್ತು ವಿಚಾರ ಬಾಹುಳ್ಯತೆಯೆ ಇದಕ್ಕೆ ಕಾರಣವೆಂದು ನೀವೆಂದೂ ಊಹಿಸಬೇಡಿ. ಬಿಡಿ ಬಿಡಿ ವಿಚಾರಿಸುವವರಲ್ಲಿ ಬಾಹುಳ್ಯವೆಲ್ಲಿಂದ ತಾನೆ ಬಂದೀತು?

ಮಂತ್ರಿಗಳಿಗೆ ವಿಧಾನಸೌಧವೆಂದರೆ ಮಾವನ ಮನೆಯಿದ್ದಂತೆಯೆ ಎಂದು ಕಿಂವದಂತಿ. ಮಂತ್ರಿಗಳ ಉಪಚಾರದಿಂದಲೆ ವಿಧಾನ ಸೌಧ ಅಪವಿತ್ರವಾಗಿದೆಯೆಂದು ಹೇಳಿದರೆ ತಪ್ಪಾಯಿತೆಂದು ಯಾರೂ ಹೇಳಲಾರರು. ಪತ್ರಿಕಾಪ್ರತಿನಿಧಿಗಳಿಗೆ ಮಂತ್ರಿಗಳೊಂದಿಗೆ ಮಾತನಾಡುವುದೆಂದರೆ ಬಹು ಚೋದ್ಯ. "ಊಟವಾಯಿತೆ?" ಎಂದು ಪ್ರಶ್ನಿಸಿದರೆ, "ಮುಂದಿನ ಮೂವತ್ತು ವರ್ಷ" ಎನ್ನುವವರ ಜೊತೆ ಮಾತಾಡಲು ನಮಗೂ ಚೋದ್ಯವಾಗುವುದಿಲ್ಲವೆ? "ಸ್ವಾಮಿ, ಮಂತ್ರಿಗಳೆ, ನಿಮ್ಮ ಖಾತೆಯ ವಿಚಾರ ನಿಮಗೇನಾದರೂ ಹೇಳುವುದಿದೆಯೆ?" ಎಂದರೆ "ಇದೆ" ಎಂದು ಉತ್ತರಿಸಿ ಇನ್ನೊಂದು ಮಂತ್ರಿಗಳ ಖಾತೆಗೆ ಕೈ ಹಾಕುವ ಮಂತ್ರಿಗಳು ಈಗ ಇಲ್ಲವೆಂದು ನೀವ್ಯಾರೂ ತಿಳಿಯಬೇಡಿ. ಹಾಗಿದ್ದರೆ ಆಂಧ್ರದಲ್ಲಿ ಸುಬ್ಬಾರೆಡ್ಡಿ ಪ್ರಕರಣವೇ ಏಳುತ್ತಿರಲಿಲ್ಲವಲ್ಲವೆ?

ಸಾಮಾನ್ಯ ಜ್ಞಾನ (Common sense) ಇಲ್ಲದವನೆ ಯಾವಾಗಲೂ ಮಂತ್ರಿಯಾಗುವನೆಂಬುದು ತ್ರಿಕಾಲಾಬಾಧಿತವಾದ ಮಾತೇನೂ ಅಲ್ಲ. ಒಂದು ಬಾರಿ ಒಬ್ಬ ಮಂತ್ರಿಗಳು ನಡುಗುಡ್ಡೆಯಲ್ಲಿ ಪೆಟ್ರೋಲ್ ಖರ್ಚಾಯಿತೆಂದು ಡ್ರೈವರ ಹೇಳಿದ್ದಕ್ಕೆ ಹಿಂದಕ್ಕೆ ಹೋಗಿ ಕಾರಿಗೆ ಪೆಟ್ರೋಲ್ ಹಾಕಿಸೋಣವೆಂದು ಉತ್ತರಿಸಿದರಂತೆ. ಮಂತ್ರಿಗಳ ಆಜ್ಞೆಯಿಂದ ಚಕ್ಕಪಬೆರಗಾದ ಡ್ರೈವರ ಮುಖ ಮುಖ ಮಿಕಿ ಮಿಕಿ ನೋಡಿರಬೇಕು ಅಷ್ಟೆ.

ಸರ್ವವನ್ನು ಬಿಟ್ಟವನೆ ಸನ್ಯಾಸಿಯಂತೆ. ಮಂತ್ರಿಯು ಹಾಗೆಯೆ. ಆದರೆ ಮಂತ್ರಿಯು ಎಲ್ಲದರೊಂದಿಗೆ ಮಾನಮರ್ಯಾದೆಯನ್ನು ಬಿಡದಿರುವುದಿಲ್ಲ. ಬಿಡದಿರುವಂತಾದರೆ ಮಂತ್ರಿ ಪದವಿಯಲ್ಲಿ ಮುಂದುವರಿಯುವುದೂ ಸಾಧ್ಯವಿಲ್ಲವೆಂದು ಹೇಳಲಾಗುತ್ತದೆ. ಪತ್ರಿಕೆಗಳು ಬೈಯಲಿ. ಕಟುವಾಗಿ ಟೀಕಿಸಲಿ, ತಮ್ಮ ಮರ್ಯಾದೆಯನ್ನು ಜನತೆ ತೆಗೆದವೆಂದು ಬೊಬ್ಬಿಡಲಿ, ಅದಕ್ಕಾಗಿ ವ್ಯಥಿಸುವ ವ್ಯವದಾನ ಮಂತ್ರಿಗಳಲ್ಲಿರಬಾರದು. ಇದ್ದರೆ, ಅತ 'ಸೇವೆ' ಮಾಡುವುದಾದರೂ ಹೇಗೆ?

ಯಾವಾಗಲೂ ಮಂತ್ರಿಯು ಧೈರ್ಯಶಾಲಿಯಾಗಿರುತ್ತಾನೆ. ಕಟು ಟೀಕೆಯನ್ನು ಇದಿರಿಸುವ ಶಕ್ತಿ ಧೈರ್ಯ ಆತನಲ್ಲಿರುತ್ತದೆ. ಆದನೆ ಒಬ್ಬಂಟಿಗನಾಗಿ ತಿರುಗುವ ಧೈರ್ಯವನ್ನು ಎಂದೂ ಮಂತ್ರಿಗಳು ತಂದು ಕೊಂಡದ್ದಿಲ್ಲ. ಪ್ರಜಾಪ್ರಭುತ್ವದಲ್ಲಿ ಜನ ಪ್ರಿಯತೆಯನ್ನು ಗಳಿಸಿಕೊಂಡ(?) ಈ ಮಂತ್ರಿಗಳು ತಮ್ಮನ್ನು ಜನರು ಮುತ್ತಿಯಾರೆಂದು ಒಬ್ಬಂಟಿಗರಾಗಿ ತಿರುಗುವುದಿಲ್ಲ. ಪೋಲೀಸು ಪಹರೆ ಮುಂದಿಲ್ಲದಿದ್ದರೆ ಈಗಿನ ಮಂತ್ರಿಗಳು ಮನೆಯಿಂದ ಹೊರಗೆ ಹೊರಡಲಾರರು. ಪ್ರಯಾಣವೂ ಮಾಡಲಾರರು.

ಸರಕಾರಿ ಅಧಿಕಾರಿಗಳು ತೆಗೆದುಕೊಳ್ಳುವುದು ಲಂಚ. ಆದರೆ ಮಂತ್ರಿಗಳಿಗೆ ಸಿಗುವುದು ಬಹುಮಾನ. ಆ ಬಹುಮಾನದಿಂದಲೆ ತನ್ನ ಪಟ್ಟವನ್ನು ಕಳಕೊಂಡರೂ ಅವರು ಮುಂದೆ ಬದುಕುವಷ್ಟು ಸಮರ್ಥರಾಗುತ್ತಾರೆ.

ನಮಗೆಲ್ಲರಿಗೂ ದುರ್ಲಭವಾದುದು ಮಂತ್ರಿಗಳಿಗೆ ಸುಲಭವಾಗಿದೆ. ನಿಮ್ಮ ಬುದ್ಧಿವಂತ ಮಗನಿಗೆ ಇಂಜನಿಯರಿಂಗ್ ಯಾ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಗುವುದು ದುರ್ಲಭವಾಗಬಹುದು ಆದರೆ ಮಂತ್ರಿಗಳಿಗೆ ಇದೆಲ್ಲಾ ಬಹು ಸುಲಭ ವಿಚಾರವಾಗಿದೆ.

ನಾಮಗೆ ಒಂದು ದಿನ ಪ್ರಯಾಣಿಸಿದೆವೆಂದರೆ ಆಯಾಸ ಕಳೆಯಲು ಹತ್ತು ದಿನ ಬೇಕಾಗುತ್ತವೆ. ಆದರೆ ಮಂತ್ರಿ ಪ್ರಯಾಣಿಸದಿರುವನೆಂದರೆ ರೋಗಿಯಾಗುತ್ತಾನೆ. ಪ್ರಯಾಣಮಾಡುವುದರೊಂದಿಗೆ ತೀರ್ಥಯಾತ್ರ ಸಂದರ್ಶನವನ್ನು ಮಾಡಿ ಪುಣ್ಯ ಕಟ್ಟಿಕೊಳ್ಳುವ ಮಂತ್ರಿಗಳು ಈಗೀಗ ಪ್ರತ್ಯಕ್ಷರಾಗುತಿದ್ದಾರೆ. ಸಪತ್ನೀಕರಾಗಿ ಯಾತ್ರೆಮಾಡಬೇಕೆಂದು ಹಳೆಬರು ಹೇಳುವ ಮಾತನ್ನು ಚಾಚು ತಪ್ಪದೆ ನಡೆಸುವವರಲ್ಲ. ಮಂತ್ರಿಗಳು ಅಗ್ರಗಣ್ಯ ಸ್ಥಾನ ಪಡೆಯುತ್ತಾರೆ

ಶ್ರವಣಶಕ್ತಿ, ದೃಷ್ಟಿಶಕ್ತಿ ಮತ್ತು ಕರುಣೆಗಳು ಮಂತ್ರಿಗಳಲ್ಲಿ ಸದಾ ಜಾಗ್ರತವಾಗಿರುತ್ತವೆ. ಇವು ಉಚಿತಾನುಚಿತಗಳನ್ನು ಅರಿತುಕೊಂಡು ಕಾರ್ಯರೂಪಕ್ಕೆ ಬರುತ್ತವೆ. ತಮ್ಮ ಪ್ರಶಂಸೆ ಕೇಳುವಲ್ಲಿ ತಮಗೆ ಬೇಕಾದವರನ್ನು ನೋಡುವುದರಲ್ಲಿ ಮತ್ತು ತಮ್ಮವರ ಮೇಲೆ ಕರುಣೆ ಬೀರುವಲ್ಲಿ ಮಂತ್ರಿಗೆ ಸಮಾನರಾದವರು ಬೇರಾರೂ ಇಲ್ಲ.

ಮಂತ್ರಿಗಳು ಹೆದರುವುದಿದ್ದರೆ ಜಗತ್ತಿನಲ್ಲಿ ದೇವರಿಗೂ ಅಲ್ಲ. ಜನರಿಗೂ ಅಲ್ಲ. ಪತ್ರಿಕೆಗಳಿಗೂ ಅಲ್ಲ. ಕೇವಲ ವಿಧಾನ ಸಭೆಗಳಿಗೆ ಮಾತ್ರ. ಅದರಲ್ಲೂ ವಿಧಾನ ಸಭೆಗಳಲ್ಲಿ ಪ್ರತಿಪಕ್ಷದ ನಾಯಕರ ಬಲ ಹೆಚ್ಚಾಗಿದೆಯೆಂದರೆ ಅವರು ತುಂಬಾ ಹೆದರುತ್ತಾರೆ.

ಪ್ರಜಾಸತ್ತೆಯಲ್ಲಿ ಮನುಷ್ಯನ ಬಯಕೆಗಳಲ್ಲಿ ಅತ್ಯಂತ ದೊಡ್ಡ ಬಯಕೆಯೆಂದರೆ ಮಂತ್ರಿಯಾಗುವುದು. ಮಂತ್ರಿಯಾದವನ ದೊಡ್ಡ ಆಸೆಯೆಂದರೆ ಈ ಪಟ್ಟ ಶಾಶ್ವತವಾಗುಳಿಯುವುದು.

ಂಂ ಂಂ

ಸಿಂಹಳದಲ್ಲಿ ಚುನಾವಣಾ ಪ್ರಚಾ[ರ] ಸಭೆಗಳಲ್ಲಿ ಶ್ರೀಮತಿ ಸಿರಿಮಾವೊ ಬಂಡಾ[ರ]ರೆ ನಾಯಕೆಯವರು ತನ್ನಪತಿಯ ಬಗ್ಗೆ ವಿಲಾಪಿಸುತ್ತಾ ಭಾಷಣ ಮಾಡಿದರೆಂದು ಸುದ್ದಿ.

೧೯೬೦ರ ಸೆಶನ್ ಇದು. ೬೧ರ ಇಸವಿಗೆ ಈ ಸೆಶನ್ ಇನ್ನೂ ಪ್ರಗತಿಪ[ರ] ವಾಗಬಹುದು. ೬೨ರ ಸೆಶನ್ ಏನಾಗ[ಬಹು]ವುದೆಂಬುದನ್ನು ನಾವು ಕಾದು ನೋ[ಡ] ಬೇಕಾಗಿದೆ.

ಹೆತ್ತವರಿಗೆ ಆಹಾರ ಕೊಂಡೊಯ್ಯಲು ಕಾತರನಾಗಿ ನಿಂತಿರುವ ಬುಡಾಪೆಸ್ಟಿನ ಕಿರು ಹುಡುಗನಿವ.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1=25. (Postage extra)

If Rs.1=50 is sent by M.O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

ಚಂದಾದಾರರು

ತಮ್ಮ ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರಾಗಲಿ, ಜಾಹೀರಾತುದಾರರಾಗಲಿ ಕೂ[ಡಾ] ಇದೇ ರೀತಿ ಹಣ ಪಾವತಿ ಮಾಡಬಹುದು

ಮೆನೇಜರ್, ನವಯುಗ, ಉಡುಪಿ

ತಮ್ಮನಿಗೆ ಓಲೆ—೧೨

ಕಾವ್ಯಂ ಜಾಹ್ನವೀತೋಯಂ

ಕಲೆಯು ಕಲೆಗಾಗಿ ಅಲ್ಲ; ಜೀವನಕ್ಕಾಗಿ. ಸಾಹಿತ್ಯ ಕಲೆಯೂ ಜೀವನಕ್ಕಾಗಿರುವುದು. ಕಾವ್ಯ ಜಾಹ್ನವೀತೋಯದಂತೆ, ಗುಲಾಬಿಯ ಹೂವಿನಂತೆ ಬಹುಮುಖ ಪ್ರಯೋಜನಕಾರಿಯಾಗಬಹುದು; ಆದರೆ ಇದೇ ಅದರ ಚರಮ ಲಕ್ಷ್ಯವಲ್ಲ.

ಬರೆದವರು: ಶ್ರೀ ಗೋರಾ.

ಸತ್ಯ, ಶಿವ ಮತ್ತು ಸುಂದರಗಳು ಕವಿಯ ಆರಾಧ್ಯ ತತ್ತ್ವಗಳಾಗಿದ್ದರೂ ಇಂದಿನ ಕಾಲದಲ್ಲಿ ಒಂದು ಹೊಸ ಬಗೆಯ ಪಂಗಡ ತಲೆದೋರಿದೆ. "ಕಲೆಯು ಕಲೆಗಾಗಿ" ಎಂಬುದೇ ಈ ಪಕ್ಷದವರ ಘೋಷಣೆಯಾಗಿದೆ. ಇವರನ್ನು ಕಲಾ ಪಕ್ಷದವರು ಎನ್ನಬಹುದು. ಇವರ ವಾದವನ್ನು 'ಕಲಾವಾದ' ಎನ್ನುತ್ತಾರೆ. ಕಲಾಪಕ್ಷೀಯರು ತಮ್ಮ ಸಿದ್ಧಾಂತವನ್ನು ಉದ್ಘೋಷಿಸುತ್ತ ಕಾವ್ಯಗಳಲ್ಲಿ ನೀತಿಗೆ ಯಾವ ಸ್ಥಾನವೂ ಇಲ್ಲ ಎಂದು ಪ್ರತಿಪಾದಿಸ ಹೊರಡುತ್ತಾರೆ. ಆದರೆ, ಜನತೆಯಿಂದ ಇವರ ವಾದಕ್ಕೆ ಯೋಗ್ಯ ಪುರಸ್ಕಾರ ದೊರೆಯುವುದಿಲ್ಲ. ಜನತೆಗೆ ಬೇಕಾದುದು ಸುಂದರ ಅಥವಾ ಆನಂದ. ಅದರಲ್ಲೂ, ಸತ್ಯ ಮತ್ತು ಶಿವ ಮಿಶ್ರಿತವಾದ ಸುಂದರವದು. ಕೇವಲ ಸೌಂದರ್ಯವನ್ನೂ ಜನರು ತಿರಸ್ಕರಿಸುತ್ತಾರೆ. ಈ ಸೌಂದರ್ಯದ ಸತ್ಯ ಮತ್ತು ಶಿವಗಳಿಂದ ಅಲಂಕೃತ ಮೂರ್ತಿಯನ್ನು ಅವರು ಆಶಿಸುತ್ತಾರೆ, ಬೇಡುತ್ತಾರೆ. ಸುಂದರವು ಯಾವನೇ ಒಬ್ಬನ ಅಂಕಿತದಲ್ಲಿ ನಿಲ್ಲಲಾರದು; ಅದು ಸರ್ವವ್ಯಾಪಿಯಾದುದು. ಅದು ಸ್ವೇಚ್ಛೆಯಿಂದಲೇ ಇರಬಲ್ಲುದು. ಆದರೂ ಸುಂದರವೆಂಬುದು ಮಾನವ ಮನೋವೃತ್ತಿಯ ಮೇಲೆ ಕದನ ಹೂಡುವ ಗೋಜಿಗೆ ಹೋಗುವುದಿಲ್ಲ. ಮಾನವ ಮನದಲ್ಲಿ ಕ್ರಾಂತಿಯನ್ನುಂಟು ಮಾಡುವುದಿಲ್ಲ; ಅದರಲ್ಲಿ ವಿದ್ರೋಹವೇಳುವಂತೆ ಸಗುವುದಿಲ್ಲ. ಸುಂದರದ ಮುಖ್ಯ ಲಕ್ಷಣವೆಂದರೆ, ಸಾಮ್ಯ ನೀತಿಯ ರಕ್ಷಣೆಯಲ್ಲಿಯೇ ಸುಂದರದ ರಕ್ಷಣೆಯಾಗುತ್ತದೆ.

ಕಾವ್ಯವೆನ್ನುವುದು ಗಂಗಾನದಿಯ ನೀರಿನಂತೆ. "ಔಷಧಿಂ ಜಾಹ್ನವೀತೋಯಂ" ಎಂಬ ಉಕ್ತಿಯನ್ನು ನಾವೆಲ್ಲರೂ ಕೇಳಿದ್ದೇವೆ. ಗಂಗಾ ನದಿಯ ನೀರು ಔಷಧಿಯಾಗಿ ರೋಗ ನಿವಾರಣೆ ಮಾಡುತ್ತದೆ; ಅದರಲ್ಲಿ ಸ್ನಾನ ಮಾಡಿದರೆ, ಪಾಪಿಗಳ ಪಾಪವು ದೂರವಾಗುತ್ತದೆ. "ಪಾಪಿಗಳ ಪಾಪಮಂ ತೊಳೆವ ಗಂಗೆ" ಎಂಬ ಉಲ್ಲೇಖವಿದೆ ತಾನೆ? ಮತ್ತು ನೀರಿನ ಸಾಮಾನ್ಯ ಗುಣವಾದ ತೃಷಾ ನಿವಾರಣೆಯನ್ನೂ ಗಂಗಾಜಲ ಮಾಡುವುದು ಅಲ್ಲವೆ? ಮನೆಗೆ ಬಂದ ಅತಿಥಿಗಳ ಸತ್ಕಾರ "ತುಸು ಗಂಗೋದಕ" ಕೊಡುವುದರಿಂದಲೇ ಆರಂಭವಾಗುವುದು. ಉದಕ ಅದಾವ ಊರಿನ, ಅದಾವ ಬಾವಿಯ ಇಲ್ಲವೇ ನಳ್ಳಿಯದಿರಬಹುದು; ಆದರೂ ಅದರ ಹೆಸರು ಮಾತ್ರ ಗಂಗೋದಕ! ಗಂಗಾಜಲಕ್ಕೆ ಅಷ್ಟೊಂದು ಮಹಿಮೆಯಿರುವುದರಿಂದಲೇ ಎಲ್ಲ ನೀರೂ ಗಂಗೆಯಾಗಿರಲಿ ಎಂಬ ಶುಭ ಶಂಸೆಯು ಜನತೆಯಲ್ಲಿದೆ. ಅಂತೆಯೇ ಕಾವ್ಯದಲ್ಲಿಯೂ ಪಾವಿತ್ರ್ಯವಿರಬೇಕು; ವಾಚಕನ ಮನಸ್ಸು ಸತ್‌ಪಥಕ್ಕೆ ಒಯ್ಯಲು ನೆರವಾಗುವ ಗುಣಗಳಿರಬೇಕು; ಆತನ ಜ್ಞಾನ ತೃಷೆಯನ್ನು ನೀಗಿಸುವ ಶಕ್ತಿಯಿತ್ತು ಚಿತ್ತ ಮೂಡುವಂತೆ ಗೈಯ್ಯಬೇಕು ಮಾತ್ರವಲ್ಲ ಮನಸ್ಸಿನಕ್ಕ ಕಳವಳ ಚಿಂತೆಗಳೆಲ್ಲವನ್ನೂ ದೂರೀಕರಿಸಿ, ಆನಂದವನ್ನು ತಂದೀಯಬೇಕು. ಅಥವಾ ಕಾವ್ಯಗಳು 'ಸಚ್ಚಿದಾನಂದ' ಕರವಾಗಿರುವಂತೆ 'ಸತ್ಯಂ ಶಿವಂ ಸುಂದರಂ' ಆಗಿರಬೇಕು. ಹೀಗಿದ್ದರೆ ಮಾತ್ರ ಅದು ಅಮರಕಾವ್ಯ; ಜಗತ್ತಿಗೆ ಮಾರ್ಗದರ್ಶನ ನೀಡಬಲ್ಲ ಮಹತ್ತಮ ಕಾವ್ಯ.

ಕಾವ್ಯವು ನೀತಿಯುಕ್ತ (ಉಪದೇಶಾತ್ಮಕ)ವಾಗಿರಬೇಕೇ ಬೇಡವೇ ಎಂಬುದೊಂದು ಮಹಾ ಪ್ರಶ್ನೆಯಾಗುತ್ತದೆ. 'ಕಾಂತಾಸಮ್ಮಿತ ಉಪದೇಶಯುತ' ವಾಗಿರಬೇಕು ಕಾವ್ಯ ಎಂದು ಆಲಂಕಾರಿಕ ಆಚಾರ್ಯರ ಅಭಿಪ್ರಾಯ. ಉಪದೇಶಗಳಲ್ಲಿ ಪ್ರಭುಸಮ್ಮಿತ, ಮಿತ್ರ ಸಮ್ಮಿತ ಮತ್ತು ಕಾಂತಾ ಸಮ್ಮಿತವೆಂದು ಮೂರು ಪ್ರಕಾರಗಳಿವೆ. ರಾಜನು ಸೇವಕನಿಗೆ ಆಜ್ಞಾಪಿಸುವಂತೆ 'ಸುಳ್ಳು ಹೇಳಬಾರದು' ಎಂದು ಮುಂತಾಗಿ ಅಪ್ಪಣೆ ಹೊರಡಿಸಿ ಕಾವ್ಯ ಬರೆದರೆ, ಅದು ಪ್ರಭು ಸಮ್ಮಿತವೆನಿಸುವುದು. ಇಂದಿನ ಕಾಲದಲ್ಲಿ ಇದು ಉದ್ದಂಡತನದ ಪರಮಾವಧಿಯೆನಿಸಲೂ ಬಹುದು. 'ಹಾಗಲ್ಲ ಹೀಗೆ' ಎಂದೆಂದರೆ, ಮಿತ್ರ ಸಮ್ಮಿತವಾಗುವುದು. ಇದರಲ್ಲಿ ಭಿನ್ನಾಭಿಪ್ರಾಯಗಳೂ ಹುಟ್ಟಿಕೊಳ್ಳುವುದು ಸಾಧ್ಯ. ಆದರೆ, ಮಮತೆಯ ಮಡದಿಗೆ ಮೆತ್ತಗಾಗಿ ಕೆನ್ನೆ ಹಿಂಡಿ ಹಾಗೆ ಮಾಡಿದರೆ ಹೀಗೆ ಆಗಲೂ ಬಹುದು, ಬದಲು ಹೀಗೆ ಮಾಡಿದರೆ ಸರಿಯಾಗಬಹುದು ಎಂದು ಮುಂತಾಗಿ ವಿವರವಾಗಿ ಸ್ಮಿತ ಮೃದು ವಾಣಿಗಳಿಂದ ನುಡಿದರೆ ಅದು ಕಾಂತಾಸಮ್ಮಿತವಾಗುವುದು. ಕಾವ್ಯವು ಮಾಧುರ್ಯಗಳು ಮೃದು ಪದಪುಂಜಗಳಿಂದ ಜನತೆಯನ್ನು ಉಪದೇಶಿಸುವ ಕ್ರಮವು ಪಂಡಿತಸಮ್ಮತವಾದುದು. ಆದರೆ, ಕಾವ್ಯದ ಮೂಲೋದ್ದೇಶ ಆನಂದ ಪ್ರಾಪ್ತಿಯೇ ಹೊರತು ಉಪದೇಶವಲ್ಲವೆಂಬುದನ್ನು ನೆನೆದುಕೊಳ್ಳಬೇಕು. ನಾವು ಕಾವ್ಯವನ್ನು ಹೂವಿಗೆ ಹೋಲಿಸುವುದಾದರೆ, ಅದು ಯಾವ ಹೂವಾಗಿರಬೇಕು? ಗುಲಾಬಿಯ ಹೂವು ಔಷಧಕ್ಕೆ ಉಪಯೋಗವಾಗಬಹುದು; ಅದು ಪ್ರೇಕ್ಷಕನಿಗೆ ಆನಂದವನ್ನೂ ಆಘ್ರಾಣಕನಿಗೆ ಕಂಪನ್ನೂ ತಂದೀಯಬಲ್ಲುದು. ಆದರೆ, ಪ್ರಪಂಚದಲ್ಲಿರುವ ಎಲ್ಲ ಹೂಗಳೂ ಗುಲಾಬಿಯಂತೆಯೇ ಬಹುಮುಖ ಪ್ರಯೋಜನಕಾರಿಯಾಗಿಯೇ ಇರಬೇಕೆಂದರೆ, ಅದು ಸಾಧ್ಯವೆ? ಅಂತೆಯೇ ಕಾವ್ಯವೂ ಉಪದೇಶಾತ್ಮಕವಾಗಿಯೇ ಇರಬೇಕೆಂಬುದು ಹುರುಳಿಲ್ಲದ ವಾದ. ಆನಂದೋತ್ಪಾದಕ ಗುಣಗಳೊಡನೆ ಅದರಲ್ಲಿ ಉಪದೇಶಾತ್ಮಕ ಗುಣಗಳೂ ಸೇರಿಕೊಂಡರೆ, ಆಗ ಹೊನ್ನಿಗೆ ಕಂಪು ಜತೆಗೂಡಿದಂತೆ; ಹಾಲಿಗೆ ಜೇನು ಬೆರೆತಂತೆ; ವಸಂತನೊಡನೆ ಮುದ ಬಂದು ಸೇರಿಕೊಂಡಂತೆ.

ಸಾಹಿತ್ಯವು ಸುಂದರಂಗೆ ಪ್ರಧಾನ ಸ್ಥಾನವನ್ನೀಯುತ್ತದೆ; ಉಪದೇಶಕ್ಕೆ ಕಲೆಯಲ್ಲಿ ವಿಚಾರದೊಡನೆ ಪ್ರೇಷಣೀಯತೆಯ ಭಾವವೂ ಪ್ರತಿಭಿಂಬಿತವಾಗುತ್ತದೆ. ಕವಿಯು ತನ್ನ ಭಾವವನ್ನು ವಿಶದವಿಡಿ ಪಸರಿಸ ಬಯಸುತ್ತಾನೆ. ಆತನ ದೃಷ್ಟಿ ಸುವಿಶಾಲವಾಗಿದೆ. ತನ್ನ ಸುತ್ತಮುತ್ತಲಿನ ಜನರ ಹೃದಯದ್ವಾರವನ್ನು ತೆರೆಯಲು ಸೌಂದರ್ಯವೇ ತಕ್ಕ ಕೀಲಿಕೈಯೆಂದಾತ ಅರಿತುಕೊಂಡಿದ್ದಾನೆ. ಇದರಿಂದಾಗಿಯೇ ಆತ ಕಟು ಸತ್ಯವನ್ನಾದರೂ ಗ್ರಹಿಸಬಲ್ಲನು. ಕವಿ ಸೌಂದರ್ಯದ ಉಪಾಸಕನು. ಸೌಂದರ್ಯದಲ್ಲಿ ಸಮ್ಯ ಮತ್ತು ಸಮನ್ವಯದ ಭಾವನೆಯು ಕೂಡಿಕೊಂಡಿರುತ್ತದೆ. ಸೌಂದರ್ಯ ಕಾವ್ಯದಲ್ಲಿ ಸತ್ಯ ಮತ್ತು ಶಿವಗಳೆರಡ ಮಿಲನವಿರುವುದು. ಇದರಿಂದಾಗಿ ಪವಿತ್ರ ತ್ರಿವೇಣೀ ಸಂಗಮವಾಗುವುದು. ಸೌಂದರ್ಯವು ಅಧಿಕಾಧಿಕ ಸತ್ಯಾಶ್ರಿತವಾದಂತೆ ಮಂಗಲಮಯವಾಗುತ್ತಾ ಬರುವುದು ದಿವ್ಯವಾಗುತ್ತ ಹೋಗುವುದು. ಸತ್ಯಂ ಶಿವಂ ಸುಂದರಂ ಎಂಬ ತ್ರಿಗುಣ ಪರಿಪೂರ್ಣವಾಗಿರುವುದರಿಂದಲೇ ಕಾವ್ಯವು ಬ್ರಹ್ಮಾನಂದ ಸಹೋದರವಾದ ಕಾವ್ಯಾನಂದಕ್ಕೆ ಬೀಜವಾದ ರಸೋತ್ಪತ್ತಿಗೆ ಕಾರಣೀಭೂತವಾಗುವುದು. ಕಾವ್ಯಾನಂದಕ್ಕೆ ಸಮಾನವಾದ ಬೇರೊಂದು ಆನಂದವು ಇಹದಲ್ಲಿ ಲಭಿಸಲಾರದು.



ಆಬೂ ಪರ್ವತ ನಾಯಕರ ತರಬೇತಿ ಕೇಂದ್ರದಲ್ಲಿ ಎನ್. ಸಿ. ಸಿ. ಕೆಡೆಟ್‌ಗಳಿಗೆ ಸೂಕ್ತ ತರಬೇತಿ ಕೊಡಲಾಗುವುದು ಮೇಲ್ಗಡೆಯ ಚಿತ್ರದಲ್ಲಿ, ಪಥಚಲನ ಪ್ರಾರಂಭವಾಗುವುದಕ್ಕೆ ಮೊದಲು ಪರಿಶೀಲನೆ ನಡೆಸುತ್ತಿರುವುದನ್ನೂ ಕೆಳಗಡೆಯದು ಕೆಡೆಟ್‌ಗಳು ಅಭ್ಯಾಸ ಮಾಡುತ್ತಿರುವುದನ್ನೂ ತೋರಿಸುತ್ತವೆ.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA WEEKLY
(Estd in 1921)
ADVERTISEMENT RATES
Display Advertisements:— Rs. 2-8/ per column inch for contracts of 100" or more and Rs. 3/-per column inch for casual advertisements.
Classified Advertisements:— As. 8/- per line (minimum 8 lines)
For rates for advertising in colours and special positions please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

> ಕಡಿವಾಣ ಬಳುಕಿದತ್ತ ಕುದುರೆಯೋಡುವುದು; ದಾರಿ ನಿಷ್ಕಂಟಕವಾಗಿರಲಿ, ಕಂಟಕಾಕೀರ್ಣವಾಗಿರಲಿ, ಅದು ಗಮನಿಸುವುದಿಲ್ಲ. ಸನ್ಮಾರ್ಗದಲ್ಲಿ ಕುದುರೆಯೋಡಿಸಿ ಸ್ವರಕ್ಷಣೆ ಮಾಡಿಕೊಳ್ಳುವುದು ಮಾನವ ಕರ್ತವ್ಯ.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೮-೭-'೬೦	೪೭

ವಿಶ್ವಾಸ ಬೆಳೆಯಬೇಕು

ವಿಧಾನ ಮಂಡಳಗಳು ಸಭೆಸೇರುವುದಕ್ಕೆ ಕೆಲದಿನ ಪೂರ್ವದಿಂದಲೇ 'ಖಾದಿ' ಯಂತೆ ಮಂತ್ರಿಮಂಡಳಿಯನ್ನುರುಳಿಸುವ ಬಗ್ಗೆ ತೀವ್ರವಾಗಿ ಸಹಿ ಸಂಗ್ರಹವೇ ಮೊದಲಾದ ಕಾರ್ಯಕ್ರಮಗಳಲ್ಲಿ ತತ್ಪರರಾಗುವ ಮೈಸೂರು ಕಾಂಗ್ರೆಸ್ ಎಂ. ಎಲ್. ಎ. ಗಳು ಈ ಬಾರಿಯೂ ತಮ್ಮ ಹವ್ಯಾಸವನ್ನು ಬಿಡಲಿಲ್ಲ. ಅದನ್ನು ಸಂಪ್ರದಾಯವೆಂಬಂತೆ ಅನುಸರಿಸಿಕೊಂಡು ಬಂದವರು ಆ ಕಾರ್ಯವನ್ನು ಮಾಡಲಾರಂಭಿಸಿದ್ದರು. ಆದರೆ, ಇದೇ ಕ್ಷಣದಲ್ಲಿ ಅಖಿಲ ಭಾರತೀಯ ಕಾಂಗ್ರೆಸ್‌ನ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ಬೆಂಗಳೂರಿಗೆ ದಯಮಾಡಿಸಿ ಅದೇನೋ ಒಂದು ತೆರದ 'ಮಂತ್ರವಾದ' ಮಾಡಿದಂತೆ. ಸಚಿವ ಸಂಪುಟದ ಮೇಲೆ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸುವಷ್ಟು ಸಾಹಸವನ್ನು ಮೈಸೂರು ಕಾಂಗ್ರೆಸ್ ಎಂ. ಎಲ್. ಎ. ಗಳು ಇನ್ನಾದರೂ ಮಾಡಲಾರರೆಂದು ಭಾವಿಸುತ್ತೇವೆ.

ದೇಶಕ್ಕೆ, ರಾಜ್ಯಕ್ಕೆ ಇಂದು ಬೇಕಾದುದು ದಕ್ಷ ಆಡಳಿತವೆಂಬುದಕ್ಕೆ ಪ್ರತಿಪಾದಿಸಬೇಕಾಗಿಲ್ಲ. ಸದ್ಯದ ಜತ್ತಿ ಮಂತ್ರಿಮಂಡಳವು ಸಮರ್ಥ ಪ್ರಶಾಸನ ಕಾರ್ಯದಲ್ಲಿ ಕೃತಕೃತ್ಯವಾಗಿದೆ ಎಂಬುದರಲ್ಲೂ ಸತ್ಯಾಂಶ ಕಡಮೆಯೇ. ಆದರೀಗ ಕಾಂಗ್ರೆಸಿನ ವಿಶ್ವಾಸಕ್ಕೆ ಎರವಾಗಿದ್ದಾರೆಂದೂ ಬಹು ಸಂಖ್ಯೆಯ ಎಂ. ಎಲ್. ಎ.ಗಳು ಅವರನ್ನು ಉರುಳಿಸಿ ಹೊಸ ನಾಯಕನನ್ನು ಆರಿಸಲು ತಹತಹಿಸಿರುವರೆಂದೂ ಕೇಳಿಬರುತ್ತಿದೆ. ಇದಕ್ಕೆ ಈ ಅಸಂತುಷ್ಟರು ಪುರಾವೆಯಾಗಿ ನಲ್ವತ್ತಕ್ಕೂ ಮೀರಿದ ಆರೋಪಗಳನ್ನು ಮಂತ್ರಿ ಮಂಡಳಿಯ ಮೇಲೆ ಹೇರಿ, ಅವನ್ನು ಶ್ರೀ ರೆಡ್ಡಿಯವರ ಮುಂದಿಟ್ಟರಂತೆ. ಎಲ್ಲರಿಗೂ ಮನಮೆಚ್ಚುವಂತೆ ಆಡಳಿತೆಯನ್ನು ಸಾಗಿಸುವುದು ಅಸಾಧ್ಯವಾದುದೆಂಬುದಕ್ಕೆ ಗತೇತಿಹಾಸವೇ ಹೆಗ್ಗುರುತಾಗಿರುವಾಗ, ಅದನ್ನು ಮತ್ತೂ ಒತ್ತಿ ಹೇಳಬೇಕಾದ ಅವಶ್ಯಕತೆಯಿಲ್ಲ. ಇದರಿಂದಾಗಿ ಹೆಚ್ಚಾಗಿ ಕಾರ್ಯ ಮಾಡುವವರು ಪ್ರತಿಸ್ಪರ್ಧಿಗಳನ್ನು ಎದುರಿಸಬೇಕಾದ ಸಂದರ್ಭಗಳು ಪದೇ ಪದೇ ಬರುತ್ತವೆ. ಆದರೂ ಮೈಸೂರು ಕಾಂಗ್ರೆಸ್ಸಿನ ರಾಜಕಾರಣವು ಸುವ್ಯವಸ್ಥಿತ ನಿಲುವೆಯಿಲ್ಲದ ಮೂಗುದಾರವಿಲ್ಲದ ಗೂಳಿಯಂತೆಯೇ ಆರಂಭಾವದಿಂದ ವರ್ತಿಸುತ್ತಿರುವ ರಕ್ತಗುಣದಿಂದಾಗಿ, ಮಂತ್ರಿಮಂಡಳಿ ರಚಿಸುವುದರಲ್ಲಿ ಮತ್ತದನ್ನು ಉರುಳಿಸುವುದರಲ್ಲಿಯೇ ತನ್ನ ಶ್ರೇಯಸ್ಸಡಗಿದೆಯೆಂದು ತಿಳಿದಂತಿದೆ. ಕಾಂಗ್ರೆಸ್ಸಿನಲ್ಲಿಯೇ ಒಳ ಪಂಗಡಗಳು ಹಲವಾರು ಹುಟ್ಟಿಕೊಂಡಿದ್ದು ಇವು ಪರಸ್ಪರ ಕಚ್ಚಾಟದ ಯಾವ ಬಲ ಮೇಲೆಂದು ಪರೀಕ್ಷೆ ಕೊಡುವುದರಲ್ಲಿ ನಿಸ್ಸೀಮರಾಗಿರುವಷ್ಟು ರಚನಾತ್ಮಕ ಕಾರ್ಯಕಲಾಪಗಳಲ್ಲಿ ಆಸಕ್ತಿ ತೋರಿಸಿರುವುದಿಲ್ಲ. ಆಡಳಿತೆಯನ್ನು ನಡೆಸಿಕೊಂಡು ಹೋಗುವವರೂ ಮಾನವ ವ್ಯಕ್ತಿಗಳೇ; ಅವರಲ್ಲಿಯೂ ಹಲವಾರು ಲೋಪದೋಷಗಳಿರಬಹುದು; ಇವೆಯೆಂದಿಟ್ಟುಕೊಳ್ಳೋಣ. ಇದರಿಂದ ಆಡಳಿತೆಯ ಮೇಲೆಯೂ ತುಸು ದುಷ್ಪರಿಣಾಮ ಬೀಳಬಹುದು; ಆದರೆ, ಇದನ್ನು ದೂರೀಕರಿಸುವುದಕ್ಕೆ ಸಚಿವ ಸಂಪುಟವನ್ನು ಮನೆಗೆ ಕಳಿಸುವುದೇ ಏಕಮೇವ ಉಪಾಯವೆಂದು ತಿಳಿದರೆ, ಅದು ಮಹಾ ದೋಷವಾಗುವುದು.

ಮೈಸೂರು ಕಾಂಗ್ರೆಸ್ಸಿನಲ್ಲಿ ಅಖಿಲ ಮೈಸೂರು ಖ್ಯಾತಿಪಡೆದವರು, ನಿಜವಾಗಿ ಬುದ್ಧಿವಂತರು, ಯೋಗ್ಯ ಮಾರ್ಗದರ್ಶಕರು ಮತ್ತು ಅನುಭವಗಳಿಸಿದ ಮಹಾ ವ್ಯಕ್ತಿಗಳಿದ್ದಾರೆ. ಇವರೆಲ್ಲರೂ ಒಂದುಗೂಡಿ ಮಂತ್ರಿಮಂಡಳಿಯು ತಪ್ಪಿನಲ್ಲಿ ಇದನ್ನು ಸರಿಪಡಿಸಿಕೊಳ್ಳುವಂತೆ ಸಹಾಯ ಮಾಡುವುದನ್ನುಳಿದು, ಮಂಡಳಿಯ ತಪ್ಪುಗಳ ಮಾಲೆ ಕೋಯುವುದರಲ್ಲೇ ಹೊತ್ತುಗಳೆಯುವುದೆಂದರೆ, ಅದು ಅವಿವೇಕವೆನ್ನಬೇಕು. ರಾಜ್ಯದ ಮುಂದಿರುವುದು ಸಚಿವರು ಯಾರಾಗಬೇಕೆಂಬ ಪ್ರಶ್ನೆಯಲ್ಲ; ಆಡಳಿತೆಗೆ ಮಾರ್ಗದರ್ಶನ ಹೇಗಾಗಬೇಕೆಂಬುದಾಗಿದೆ. ಮಂತ್ರಿಗಳು ತಪ್ಪಿದಲ್ಲಿ ನಿಳಿದವರಾದರೂ ಅವರನ್ನು ಸರಿದಾರಿಗೆ ತರಲು ಪ್ರಯತ್ನ ನಡೆಸುವುದರಿಂದ, ಮಂತ್ರಿಗಳು ಮತ್ತು ಕಾಂಗ್ರೆಸಿಗರು ಒಂದುಸೇರಿ, ಆಡಳಿತೆಯ ಬಗ್ಗೆ ಕೂಲಂಕಷ ಮತ್ತು ನಿಷ್ಪಕ್ಷಪಾತದಿಂದ ಚರ್ಚಿಸುವುದರಿಂದ, ಮಂತ್ರಿಗಳು ತಪ್ಪಿದರೆ ಬಾಗ ಅವರಿಗೆ ಸುಯೋಗ್ಯ ಮಾರ್ಗದರ್ಶನ ಮಾಡಿ ಸರಿದಾರಿಯಲ್ಲಿ ಕೊಂಡೊಯ್ಯುವುದರಿಂದ ಬಹಳಷ್ಟು ಪ್ರಯೋಜನ ದೊರೆಯಬಹುದು. ಇದೇ ಮಾತುಗಳನ್ನು ಭಾರತೀಯ ಕಾಂಗ್ರೆಸ್ ಅಧ್ಯಕ್ಷರೂ ಉದ್ಗರಿಸಿದ್ದರು. ಇತರ ಕೆಲರಾಜ್ಯಗಳಲ್ಲಿರುವಂತೆ ಮೈಸೂರಲ್ಲಿಯೂ ಕಾಂಗ್ರೆಸಿನೊಳಗೆ ಮತಭೇದವಿರಬಹುದು. ಅದನ್ನೇ ಮುಖ್ಯಾಧಾರವಾಗಿಟ್ಟು ಮಂತ್ರಿ ಮಂಡಳಿಯ ಮೇಲೆ ಆಪಾದನೆ ಹೊರಿಸುತ್ತ ಬರುವುದು ವಿವೇಕವಲ್ಲ. ಆದ, ಆಗಬಹುದಾದ ತಪ್ಪುಗಳನ್ನು ಸರಿಪಡಿಸಲು ಕಾಂಗ್ರೆಸಿಗರು ಮುಂದೆ ಬರಬೇಕು. ಮಂತ್ರಿಮಂಡಳಿ ಬದಲಾಗುತ್ತ ಬರುವುದರಿಂದ ಪ್ರಶಾಸನದ ಮೇಲೆ ದುಷ್ಪರಿಣಾಮವು ಬೀಳುವುದು ಖಂಡಿತ. ಇದರಿಂದ ಆಡಳಿತೆಯು ಮತ್ತಷ್ಟು ಶಿಥಿಲಗೊಂಡು, ಕಾಂಗ್ರೆಸ್ ಪಕ್ಷವೇ ನಿರ್ನಾಮವಾಗಿ ಹೋಗಬಹುದು. ಸರಕಾರ ಮತ್ತು ಪಕ್ಷದ ನಾಯಕರಿಬ್ಬರೂ ಜತೆಯಾಗಿ ವಿಚಾರವಿನಿಮಯಗಳನ್ನು ಮಾಡಿ ಬರಬಹುದಾದ ತೊಂದರೆಗಳನ್ನು ದೂರೀಕರಿಸುವತ್ತ ಮನಹರಿಸಬೇಕು. ಕಾಂಗ್ರೆಸ್ ಸಮರ್ಥ ಸೇವೆಯನ್ನು ಜನತೆಗೆ ಅರ್ಪಿಸಬೇಕು; ಇದರಿಂದ ಜನತೆಯಲ್ಲೂ ಕಾಂಗ್ರೆಸಿನ ಬಗ್ಗೆ ಅಭಿಮಾನ ಹುಟ್ಟುವುದು. ಪದೇ ಪದೇ ಅನವಶ್ಯಕವಾಗಿ, ಭೂಪಣಕ್ಕೋಸ್ಕರ ನಾಯಕತನದಲ್ಲಿ ಬದಲಾವಣೆಯಾಗಬೇಕೆಂದು ಸಾಧಿಸುವುದನ್ನು ತೊರೆದು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದರೆ ಅದರಿಂದ ಮಂತ್ರಿಮಂಡಳಿಯು ಮಾತ್ರವಲ್ಲ, ಅವರ ಗೌರವವೂ ಹೆಚ್ಚುವುದು. ಜನತೆಗೂ ಭದ್ರವಾದ ಪ್ರಶಾಸನ ಲಭಿಸುವುದು. ಇನ್ನಾದರೂ ಮೈಸೂರು ಕಾಂಗ್ರೆಸಿಗರು ತಮ್ಮ ದುರಾಲೋಚನೆಯನ್ನು ಬದಿಗಿಟ್ಟು ನ್ಯಾಯೋಚಿತ ವಿಧಾನದಲ್ಲಿ ಸರಕಾರದೊಡನೆ ಸಹಕರಿಸುವರೆಂದು ವಿಶ್ವಾಸವಿಡುತ್ತೇವೆ.

ಚೀನಾದ ಮಹಾರೋಗ

ಕೆಂಪು ಚೀನದ ಸಾಮ್ರಾಜ್ಯಶಾಹಿತನವು ದಿನದಿಂದ ದಿನಕ್ಕೆ ಬಲಿಯುತ್ತ ಬರುತ್ತಿರುವಾಗ, ಇದಕ್ಕೊಂದು ಬಲವಾದ ತಡೆ ಹಾಕದೆ ಹೋದರೆ, ಕೊನೆಯಲ್ಲಿ ಎಂಬ ಪ್ರಶ್ನೆ ಸಮಸ್ಯೆಯೆನಿಸುತ್ತದೆ, ಟಿಬೇಟಿನ ಬಗ್ಗೆ ಯುಕ್ತರಾಷ್ಟ್ರ ಸಂಘಕ್ಕೆ ದೂರು ಕೊಂಡೊಯ್ಯಲಾಗುವುದೆಂಬ ಮಾತು ಪುನಃ ಕೇಳಿಬರುತ್ತಿದೆ. ಆದರೆ, ಯುಕ್ತರಾಷ್ಟ್ರ ಸಂಘವು ತನ್ನ ಸದಸ್ಯವಲ್ಲದ ಒಂದು ರಾಷ್ಟ್ರದ ಮೇಲೆ ಆದಾವ ಕಾರ್ಯಕ್ರಮ ಕೈಗೊಳ್ಳುವುದರಿಂದ ಯಾವುದೇ ಪರಿಣಾಮವಾಗದು. ೬೦ಕೋಟಿ ಪ್ರಜೆಗಳದೇಶವಾದ ಕೆಂಪುಚೀನಕ್ಕೆ ಪ್ರಾತಿನಿಧ್ಯವೀಯದೆ ಸಂಯುಕ್ತರಾಷ್ಟ್ರ ಸಂಸ್ಥೆಯು ಅಪೂರ್ಣವಾಗಿಯೇ ಉಳಿಯುವುದು. ಜಾಗತಿಕ ಶಾಂತಿ, ಸಹಜೀವನವನ್ನು ಬಯಸುವ ಸಂಸ್ಥೆಯು ಈ ಒಂದು ಬಹು ಸಂಖ್ಯೆಯ ಪ್ರಜೆಗಳಿಗೆ ತನ್ನಲ್ಲಿ ಸೇರಲು ಅವಕಾಶ ಕೊಡದೆ ಹೋದರೆ, ನಿಜವಾಗಿ ತಿರಸ್ಕರಿಸಿದಂತಾಗುವುದು. ಹಾಗಾಗಿ ಕೆಂಪು ಚೀನವು ತನ್ನದೇ ಒಂದು ದಾರಿಯನ್ನು ಹಿಡಿದು ಅಲ್ಲಸಲ್ಲದ ದುರಾಲೋಚನೆಯನ್ನು ಮಾಡಿ ಆಕ್ರಮಣವೇ ಮೊದಲಾದ ದುಷ್ಕರ್ಮಗಳಲ್ಲಿ ನಿರತವಾಗಿ ಜಾಗತಿಕ ಶಾಂತಿಯನ್ನು ಕೆದಕಿರಣ ನಿಮಂತ್ರಣವೀಯುತ್ತಿದೆ. ಈ ಕರೆಯನ್ನು ಯಾರಾದರೂ ಮನ್ನಿಸಿದರೆಂದರೆ, ಅದು ಲೋಕನಾಶಕ್ಕೆ ನಾಂದಿಯಾಗುವುದು ಖಂಡಿತವೇ. ಎಂತಲೇ ಭಾರತದಂತೆ, ಶಾಂತಿ, ಸೌಹಾರ್ದವೆಂಬ ಒಳ್ಳೆಯ ಮಾತುಗಳನ್ನಾಡಿ ಚೀನದ ಮನಸ್ಸನ್ನೊಲಿಸಿ, ಅದು ಸುಮ್ಮನಿರುವಂತೆ ಪ್ರಯತ್ನಿಸಲಾಗುತ್ತಿದೆ. ಆದರೆ, ಕೊಬ್ಬಿದ ಹೋರಿಗೆ ಉನ್ಮಾದದೆಡೆ ಅದಾವುದೂ ಕೇಳುತ್ತಿರುವಂತೆ ಭಾಸವಾಗುವುದಿಲ್ಲ; ತನ್ನ ವಕ್ರ ಮಾರ್ಗವನ್ನು ಬಿಡುವುದಿಲ್ಲ. ಆದುದರಿಂದ ಕೆಂಪು ಚೀನದ ಈ ರೋಗಕ್ಕೆ ಅದಕ್ಕೆ ಯುಕ್ತರಾಷ್ಟ್ರಸಂಘದಲ್ಲಿ ಪ್ರಾತಿನಿಧ್ಯ ದೊರಿಯುವುದೇ ಯೋಗ್ಯ ಔಷಧವಾಗಿದೆ. ಪಾಶ್ಚಾತ್ಯ ರಾಷ್ಟ್ರಗಳು, ಮುಖ್ಯವಾಗಿ ಅಮೇರಿಕೆಯು, ತನ್ನ ಛಲವಾದವನ್ನು ಬಿಟ್ಟು, ಜಾಗತಿಕ ಶಾಂತಿಯ ನಿಜವಾದ ಪುರಸ್ಕರ್ತರೆಂದು ತೋರಿಸಿಕೊಳ್ಳಬೇಕಾಗಿದೆ. ಇದರಿಂದ, ಚೀನಾದ ದುರ್ವರ್ತನೆಗೂ ಕೊನೆಯೊದಗುವುದು.

ಸಂಕ್ಷಿಪ್ತ ಸುದ್ದಿಗಳು

ಭಾರತ ಸರಕಾರದವರು ಪುನರ್ಘಟಿಸಿರುವ ಕಾಫಿ ಬೋರ್ಡಿಗೆ ಕರ್ನಾಟಕದಿಂದ ನೇಮಕಗೊಂಡಿರುವ

ಶ್ರೀ ಟಿ. ಎ. ಪೈಗಳು.

ಮೂವತ್ತಮೂರು ಜನ ಸದಸ್ಯರಿರುವ ಈ ನೂತನ ಸಮಿತಿಯು ಮೂರು ವರ್ಷಗಳ ವರೆಗೆ ಅಸ್ತಿತ್ವದಲ್ಲಿರುವುದು.

ವರಿಷ್ಠರಿಗೆ ಚಿಂತೆ

ಕೇಂದ್ರ ಸರಕಾರಿ ನೌಕರರು ಸಂಪನ್ನು ಹೂಡದಂತೆ ನಿರ್ಬಂಧಿಸುವ ಶಾಸನವೊಂದನ್ನು ಸಿದ್ಧಪಡಿಸುವ ಉಚಿತಾನುಚಿತತೆಗಳತ್ತ ನವದೆಹಲಿಯ ವರಿಷ್ಠರ ಗಮನ ಹರಿಯುತ್ತಿದೆ. ಒಂದುವೇಳೆ ಸಂಪನ್ನು ಪ್ರತಿಬಂಧಿಸಿದರೂ ಈ ನೌಕರರ ದೂರು ಮತ್ತು ತೊಂದರೆಗಳನ್ನು ಕೇಳಿಕೊಳ್ಳುವುದಕ್ಕೆ ಯಾವ ಕ್ರಮ ಕೈಗೊಳ್ಳಬೇಕು ಎಂಬುದನ್ನೂ ಆಲೋಚಿಸಲಾಗುತ್ತದೆ. ಅಮೆರಿಕೆ, ಇಂಗ್ಲೆಂಡ ಜಪಾನ ಮೊದಲಾದ ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಾಷ್ಟ್ರಗಳಲ್ಲಿ ಸರಕಾರಿ ನೌಕರರು ಸಂಪು ಹೂಡಬಾರದೆಂಬ ನಿಯಮವಿರುವುದಲ್ಲದೆ, ಶಾಸನವೂ ಕೆಲವೆಡೆ ಇರುವುದು.

ನೌಕರರ ಕುರಿತು

ಕೇಂದ್ರ ಸರಕಾರವು ದ್ವಿತೀಯವೇತನ ಆಯೋಗದ ವರದಿಯನ್ನು ಸಂಪೂರ್ಣವಾಗಿ ಪರಿಶೀಲಿಸಿ ಮಹತ್ವದ ಎಲ್ಲ ಶಿಫಾರಸುಗಳನ್ನೂ ಒಪ್ಪಿಕೊಂಡಿದೆ. ವೇತನ ಪ್ರಮಾಣ ಮತ್ತು ತುಟ್ಟಿಭತ್ತೆಯ ದರಗಳನ್ನು ಆಯೋಗದ ವರದಿಯಂತೆ ಸರಕಾರವು ಸ್ವೀಕರಿಸಿದ್ದು ಇವನ್ನು ಮುಂದಿನ

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 151/60.

ಯಂ. ಶ್ರೀಧರ ಶೆಟ್ಟಿ —ವಾದಿ.
ಅಮ್ಮಣ್ಣಿ ಪೂಜಾರಿ ಕೂಡಾ 3ಜನರು —
—ಪ್ರತಿವಾದಿರು.

2ನೇ ಪ್ರತಿವಾದಿ—ಬಾಬು ಪೂಜಾರಿ, ಸುಬ್ಬ ಪೂಜಾರಿ ಮಗ, ಹಿರೆಬಂಡಾಡಿ ಗ್ರಾಮದ ಕೆದುಮೂಲೆ, ಪೋಸ್ಟ್: ಉಪ್ಪಿನಂಗಡಿ ಇವರಿಗೆ

ದಾವಾಗೆಣೆ ರೂ 350-42ಕ್ಕೆ ವಾದಿಯು ಮಾಡಿದ ಮೇಲಿನ ದಾವೆಯು ತಾ 12-8-60ಕ್ಕೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪಣೆ ಮುಷ್ಠರೆ ಆ ದಿನ ಬೆಳಗ್ಗೆ ಘಂಟೆ 11ಕ್ಕೆ ಈ ಕೋರ್ಟಿನ ಮುಂದೆ ನೀವು ಹಾಜರಾಗಿ ಇರದ ಪಕ್ಷದಲ್ಲಿ ನಿಮ್ಮನ್ನು ಏಕಪಕ್ಷೀಯ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

(Sd.) K. Veerasimha,
Advocate for Plaintiff.

ಪುತ್ತೂರು 21-7-60.

ವಾರ ಲೋಕ ಸಭೆಯಲ್ಲಿ ದೃಢಪಡಿಸುವ ನಿರೀಕ್ಷೆಯಿದೆ. ಸರಕಾರಿನೌಕರರನ್ನು ಔದ್ಯಮಿಕ ಮತ್ತು ಆಡಳಿತ ಎಂದೆರಡು ವಿಂಗಡಿಸಿ ಔದ್ಯಮಿಕ ವಿಭಾಗದವರಿಗೆ ಕಾರ್ಮಿಕ ಅಧಿಕಾರವನ್ನು ನಿರಾಕರಿಸಲಾಗುವುದಿಲ್ಲವೆಂದೂ ಹೇಳಲಾಗುತ್ತಿದೆ.

ಕಾಂಗೋದಿಂದ ಹಿಂಜರಿಯುತು

ಕಾಂಗೋವನ್ನು ಆಕ್ರಮಿಸಿಕೊಂಡಿದ್ದ ಬೆಲ್ಜಿಯಮ್ ಸೈನ್ಯವನ್ನು ಸಂಯುಕ್ತ ರಾಷ್ಟ್ರ ಸಂಸ್ಥೆಯ ಸೇನೆಯು ಇದೀಗ ಸಂಪೂರ್ಣ ರಾಜಧಾನಿಯಿಂದ ಹೊರಹಾಕಿದೆ. ಕಾಂಗೊ ಪ್ರಧಾನಿ ಶ್ರೀ ಲುಮುಂಬಾರವರು ಸಂಯುಕ್ತರಾಷ್ಟ್ರಸಂಘವು ಬೆಲ್ಜಿಯಂ ಸೇನೆಯನ್ನು ಹೊರಗೆ ಹಾಕಲು ಅಸಮರ್ಥವಿರುವುದಾದರೆ, ರಷ್ಯದ ಸಹಾಯ ಪಡೆದೇನು ಎಂಬುದಾಗಿ ಬೆದರಿಕೆ ಹಾಕಿದ್ದುದನ್ನು ಗಮನಿಸಬೇಕು.

ಡಾ| ಪ್ರಸಾದರ ದ. ಭಾ. ಸಂದರ್ಶನ

ರಾಷ್ಟ್ರಪತಿ ಡಾ। ಪ್ರಸಾದರು ದಕ್ಷಿಣ ಭಾರತದ ಸಂಚಾರವನ್ನು ಕೈಗೊಂಡಿದ್ದು ಹೈದರಬಾದಕ್ಕೆ ಆಗಮಿಸಿರುವರು. ಇಲ್ಲಿ ಆಗಸ್ಟ್ ೩೦ ವರೆಗೆ ಇದ್ದು ಅನಂತರ ಮದ್ರಾಸಕ್ಕೆ ತೆರಳುವರು. ಈ ವರ್ಷದ ಸ್ವಾತಂತ್ರ್ಯೋತ್ಸವವನ್ನು ಇವರು ಮದ್ರಾಸದಲ್ಲಿಯೇ ಆಚರಿಸುವರು.

ಮೈಸೂರು ಕಾಂಗ್ರೆಸ್‌ಗೆ ಹಿತೋಕ್ತಿ

ಕಾಂಗ್ರೆಸ್ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ಬೆಂಗಳೂರಿನಲ್ಲಿ ಮೈಸೂರು ಕಾಂಗ್ರೆಸ್‌ನ ವಿದ್ಯಮಾನಗಳನ್ನು ಪರಿಶೀಲಿಸಿದರು. ಒಳ ಜಗಳಗಳನ್ನು ಪ್ರಾರಂಭಿಸಿದವರೇ ಅವನ್ನು ಸೌಹಾರ್ದಮಯ ವಾತಾವರಣದಲ್ಲಿ ಕೊನೆಗೊಳಿಸಬೇಕೆಂದವರು ತಿಳಿಸಿ, ಪರಿಸ್ಥಿತಿಯು ಹೇಳುವಷ್ಟು ಉದ್ರೇಕಗೊಂಡಿಲ್ಲವೆಂದೂ ಮಂತ್ರಿ ಮಂಡಳ ಉರುಳಿಸುವ ಪ್ರಯತ್ನ ನಲ್ಲದೆಂದೂ ಹೇಳಿದರು. ಅನಂತರ ಸುದ್ದಿಗಾರರ ಸಭೆಯಲ್ಲಿ ಮಾತಾಡಿದ ಶ್ರೀ ರೆಡ್ಡಿಯವರು ಮಂತ್ರಿ ಮಂಡಳದ ವಿರುದ್ಧ ಯಾವುದೇ ದೂರುಗಳನ್ನು ತನಗೆ ಒಪ್ಪಿಸಲಾಗಿಲ್ಲವೆಂದೂ ಪತ್ರಿಕೆಗಳಲ್ಲಿ ಕೆಲವೊಂದು ದೂರುಗಳು ಪ್ರಕಟಗೊಂಡಿವೆಯೆಂದೂ ತಿಳಿಸಿದರು. ಪ್ರಬಲವಾದ ವಿರೋಧ ಪಕ್ಷವೊಂದು ಮೈಸೂರಲ್ಲಿ ಕಾಂಗ್ರೆಸಿಗಿಲ್ಲದಿರುವುದರಿಂದಲೇ ಪಕ್ಷದೊಳಗೇ ಕೃತಕ ಜಗಳವೆಬ್ಬಿಸಲು ಕಾಂಗ್ರೆಸ್ ತೊಡಗಿರಬೇಕೆಂದು ಕಾಂಗ್ರೆಸಿಗರಿಗೆ ನಗೆಯಾಡಿದರು.

ಬೆಲೆಯೇರಿಕೆ ವಾಸ್ತವಿಕ

ಬೆಲೆಯ ಮಟ್ಟವನ್ನು ಕಾಯ್ದುಕೊಳ್ಳುವುದು ಅಗತ್ಯವೆಂಬುದನ್ನು ತಜ್ಞರೇ ಹೇಳಬೇಕಾಗಿಲ್ಲ. ಅದನ್ನು ಅವಶ್ಯ ಕಾಯ್ದುಕೊಳ್ಳಲೇ ಬೇಕು. ಸರಕಾರವಾದರೂ ಈ ಬಗ್ಗೆ ಕಾರ್ಯಕ್ರಮ ಕೈಗೊಳ್ಳುತ್ತಿದೆ. ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಆದಾಯವು ಹೆಚ್ಚಿ ಸಮಾಜದಲ್ಲಿ ಹಂಚಿಹೋಗುವುದಾದರೂ ಉತ್ಪಾದನೆಯು ಅದೇ ಪ್ರಮಾಣದಲ್ಲಿ ಏರದಿರುವುದರಿಂದ ಕೆಲಮಟ್ಟಿಗೆ ಬೆಲೆಗಳು ಏರಿದರೆ, ಅದರಿಂದ ಹಿಮ್ಮೆಟ್ಟಬೇಕೆಂದೂ ಬೆಲೆಯೇರಿಕೆಯು ದೇಶದ ಎಲ್ಲ ಪ್ರಗತಿ ಸಾಧನೆಗಳನ್ನು ಮೀರಿ ನಿಲ್ಲುವುದಾದರೆ, ಆಗ ಅದನ್ನು ನಿಯಂತ್ರಿಸಬೇಕೆಂದೂ ಅರ್ಥಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ಅಭಿಪ್ರಾಯ ಪಟ್ಟಿದ್ದಾರೆ.

ಸಾರಿಗೆ ದರದಲ್ಲಿ ಯಥಾಸ್ಥಾಪನೆ

ಕಳೆದ ಫೆಬ್ರವರಿ ತಿಂಗಳಲ್ಲಿ ಸರಕಾರಿ ಬಸ್ಸುಗಳ ಸಾರಿಗೆ ದರಗಳನ್ನು ಮೈಲಿಗೆ ೫ ನಯೇ ಪೈಸೆಗೆ ಏರಿಸಿದ ಮೈಸೂರು ಸರಕಾರವು ಆಗ ಜನತೆಯ ಹಾಗೂ ವಿಧಾನ ಮಂಡಳದ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಈ ಸಂಬಂಧದಲ್ಲಿ ಯಾವ ಧೋರಣೆ ವಹಿಸಬೇಕೆಂದು ಶಿಫಾರಸು ಮಾಡಲು ನೇಮಿಸಲಾದ ಕಾಂಗ್ರೆಸ್ ಪಕ್ಷದ ಸಮಿತಿಯೂ ದರಗಳನ್ನು ಇಳಿಸಲು ಸಲಹೆಯಿತ್ತಿದೆ. ಇದರನ್ವಯ ಸರಕಾರವು ಮೊದಲಿನ ೨೫ ಮೈಲುಗಳಿಗೆ ಮೈಲಿಗೆ ೫ ನಯೇ ಪೈಸೆಯಂತೆಯೂ ಮುಂದಿನ ಪ್ರತಿ ಮೈಲಿಗೆ ೪ ನಯೇ ಪೈಸೆಯಂತೆಯೂ ದರಗಳನ್ನು ಪುನರ್ನಿರೂಪಿಸಿವೆ. ನವೀಕೃತ ದರಗಳು ಆಗೋಸ್ತು ೧ನೆ ದಿನಾಂಕದಿಂದ ವ್ಯವಹಾರದಲ್ಲಿ ಬರುವುವು. ರಸ್ತೆಸಾರಿಗೆ ಮಹಾಮಂಡಳವೊಂದನ್ನು ರಾಜ್ಯ ಸರಕಾರವು ಸ್ಥಾಪಿಸಲಿದ್ದು ಅದು ಈ ದರಗಳನ್ನು ಪುನರ್ವಿಮರ್ಶಿಸಲೂ ಬಹುದೆಂದು ಮುಖ್ಯಮಂತ್ರಿ ಜತ್ತಿಯವರು ಅಂದಿದ್ದಾರೆ.

ತಪ್ಪು ಆದರೆ, ಅಪರಾಧವಲ್ಲ

ಚೀನೀ ನೇಪಾಲಗಳ ನಿಸ್ಸೈನ್ಯೀಕೃತ ಸೀಮೆಯೊಳಗೆ ತನ್ನ ಸೇನೆಯು ದಾಟಿದುದು ಒಂದು ರೀತಿಯಲ್ಲಿ ತಪ್ಪಾಗಿದೆ; ಆದರೆ ಇದರಿಂದ ತಾನು ನಿಸ್ಸೈನೀಕರಣ ಒಪ್ಪಂದವನ್ನು ಮುರಿದಂತಾಗಲಿಲ್ಲ. ಎಂದು ಚೀನೀಯ ಪ್ರಧಾನಿ ಶ್ರೀ ಚೌ ಒಂದು ಪತ್ರದಲ್ಲಿ ನೇಪಾಳೀಯ ಪ್ರಧಾನಿಯವರಿಗೆ ತಿಳಿಸಿದ್ದಾರೆ. ಅಲ್ಲದೇ ಚೀನವು ನೇಪಾಳಕ್ಕೆ ಮಾಡಿದ ಹಾನಿಗಾಗಿ ರೂ. ೫೦,೦೦೦ ವನ್ನು ಪರಿಹಾರವಾಗಿ ನೀಡುವುದಕ್ಕೆ ಸಮ್ಮತಿಯಿತ್ತಿದ್ದಾರೆ.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ಲಯೊನ್ಸ್ ಕ್ಲಬ್ಬಿನ ಸಭೆಯು—ತಾ. ೨೨ರಲ್ಲಿ ಡಿ| ಮು| ಶ್ರೀ ಜಿ. ಎಸ್. ನಾಗಮೋತಿಯವರ ಅಧ್ಯಕ್ಷತೆಯಲ್ಲಿ ಜರಗಿ ಲೈಫ್ ಇನ್ಶೂರೆನ್ಸ್ ಕೊರ್ಪರೇಶನಿನ ಉಡುಪಿ ವಿಭಾಗದ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಗಳು ಉತ್ತಮ ವ್ಯಕ್ತಿತ್ವದ ಕುರಿತು ಭಾಷಣವಿತ್ತರು. ಆರಂಭದಲ್ಲಿ ಶ್ರೀ ಎನ್. ವಿ. ಕಾಮತರು ಪರಿಚಯ ಭಾಷಣ ಮಾಡಿದರು. ಅಂತ್ಯದಲ್ಲಿ ಶ್ರೀ ಬಿ ಜಗನ್ನಾಥ ಹೆಗ್ಡೇರು ಆಭಾರಮನ್ನಿಸಿದರು

ಎ. ಬಿ. ಶೆಟ್ಟಿ ಮೆಮೋರಿಯಲ್ ಹಾಸ್ಟೆಲ್—ಮೈಸೂರು ನಗರದಲ್ಲಿ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯವೊಂದನ್ನು ಸ್ಥಾಪಿಸಬೇಕೆಂದು ತಾ. 16—7—60ರಂದು ಶ್ರೀ ಕೆ. ದೇಜು ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ತೀರ್ಮಾನಿಸಿ ಆದಕ್ಕಾಗಿ ಈ ಕೆಳಗೆ ಕಂಡ ಸಮಿತಿಯೊಂದನ್ನು ನೇಮಿಸಿತು.

ಶ್ರೀ ಕೆ. ದೇಜು ಶೆಟ್ಟಿ (ಅಧ್ಯಕ್ಷರು. ಪ್ರೊ॥ ಕೆ. ನಾರಾಯಣರಾವ್ (ಉಪಾಧ್ಯಕ್ಷರು) ಶ್ರೀಗಳಾದ ಎ. ರಾಮಣ್ಣ (ಕಾರ್ಯದರ್ಶಿ) ಎಸ್. ಬಾಲಕೃಷ್ಣ ಶೆಟ್ಟಿ (ಖಜಾನ್ಚಿ) ಕೆ. ಓಬಯ್ಯಣ್ಣ ಶೆಟ್ಟಿ, ಕೆ. ಶಂಭು ಶೆಟ್ಟಿ, ಎಸ್. ಜೈರಪ್ಪ, ಕೆ. ಪ್ರೇಮಾನಂದ ಶೆಟ್ಟಿ, ಕೆ. ವಾಸು ಶೆಟ್ಟಿ (ಸದಸ್ಯರು.

ವಿದ್ಯಾರ್ಥಿನಿಲಯ ವಾಣಿವಿಲಾಸ ಮೊಹಲ್ಲಾದ ಮಾದವಗಿರಿ ಬಡಾವಣೆಯಲ್ಲಿ ಪ್ರಾರಂಭವಾಗಿದೆ.

ನಿಲಯಕ್ಕೆ ಯುವರಾಜ ಕಾಲೇಜಿನ ಬಾಟನಿ ವಿಭಾಗ ಮುಖ್ಯಸ್ಥರಾದ ಶ್ರೀ ಎಮ್. ಎಸ್. ಶ್ರೀಕಂಠಯ್ಯನವರನ್ನು ವಾರ್ಡನ್‌ರನ್ನಾಗಿ ನೇಮಿಸಲು ಅನುಮತಿ ಕೊಡುವಂತೆ ವಿಶ್ವವಿದ್ಯಾನಿಲಯವನ್ನು ಕೋರುವ ನಿರ್ಣಯ ಮಾಡಲಾಯಿತು.

ವಿದ್ಯಾರ್ಥಿವೇತನ— ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣ ಶಿಕ್ಷಣ ಸಂಘದ ವತಿಯಿಂದ ಚಾಲ್ತಿ 1960—61ನೇ ವರ್ಷದ ಬಾಬ್ತು ರೂಪಾಯಿ 200/-ಕ್ಕೆ ಮೀರದಂತೆ ಬಡ ಹಾಗೂ ಯೋಗ್ಯ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಕೊಡಲಾಗುವುದೆಂದು ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ. ಈ ಬಗ್ಗೆ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ತಾ. 10.8-1960ರ ವರೆಗೆ ಸ್ವೀಕರಿಸಲಾಗುವುದು.

ವಿಳಾಸ— ಕಾರ್ಯದರ್ಶಿ, ದ. ಕ. ಜಿಲ್ಲಾ ದ್ರಾವಿಡ ಬ್ರಾಹ್ಮಣರ ಶಿಕ್ಷಣ ಸಂಘ, ಉಡುಪಿ.

ಉಡುಪಿ ರೋಟರೀ ಕ್ಲಬ್ಬಿನ ಸಭೆಯು ಇದೇ ತಾ. 19ರಲ್ಲಿ ಮಣಿಪಾಲದಲ್ಲಿ ಕ್ಲಬ್ಬಿನ ಅಧ್ಯಕ್ಷ ಶ್ರೀ ಅದೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಂದಿನ ಮುಖ್ಯ ಭಾಷಣಕರ್ತರಾದ ಡಾ। ಎಂ. ಕೃಷ್ಣಸ್ವಾಮಿ, ಎಂ ಆರ್. ಸಿ.ಪಿ. ಅವರ ಪರಿಚಯವನ್ನು ಶ್ರೀ ಟಿ. ರಮೇಶ ಪೈಗಳು ಮಾಡಿಕೊಟ್ಟರು. ಡಾ. ಕೃಷ್ಣಸ್ವಾಮಿಯವರು ವೈದ್ಯಕೀಯ ಸಾಫಲ್ಯಕ್ಕೆ ಕಾರಣವೇನೆಂಬುದನ್ನು ವಿವರಿಸಿ ಭಾಷಣವಿತ್ತರು. ಡಾ. ಎ. ಕೃಷ್ಣರಾಯರು ಧನ್ಯವಾದಗಳನ್ನರ್ಪಿಸಿದರು.

ಜಿಲ್ಲೆಯ ಸಂಸ್ಕೃತ ಕಾಲೇಜುಗಳು- ರಾಜ್ಯ ಅಭಿವೃದ್ಧಿ ಕೌನ್ಸಿಲಿನ ಸದಸ್ಯರಾದ ಶ್ರೀ ಬಿ. ಬಿ. ಶೆಟ್ಟರು ಮೈಸೂರು ವೈಸ್‌ಚಾನ್ಸಲರರಿಗೊಂದು ಪತ್ರ ಬರೆದು ಜಿಲ್ಲೆಯ ಸಂಸ್ಕೃತ ಕಾಲೇಜುಗಳ ಕುರಿತು ಗಮನ ಸೆಳೆದಿದ್ದಾರೆ. ಕೇರಳ ವಿಶ್ವವಿದ್ಯಾನಿಲಯವು ಪೆರ್ಡೂರಿನ ಸಂಸ್ಕೃತ ಕಾಲೇಜನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಲು ಅಸ್ಪದಮಾಡಿಕೊಟ್ಟರು ಹಾಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅವಮಾನ ತೊಂದರೆಯೂ ಯಾತೆಂದು ಶ್ರೀ ಶೆಟ್ಟರು ತಮ್ಮ ಪತ್ರದಲ್ಲಿ ಕೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಈಗ ಈ ಕಾಲೇಜುಗಳನ್ನು ರೂಪಾಂತರಿಸುತ್ತಿರುವುದು ಉಕ್ತ ಉದ್ದೇಶಗಳಿಗಾಗಿ ನಿಯಮಿತವಾದ ಸಾರ್ವಜನಿಕ ಹಣದ ಅಪವ್ಯಯವಾಗುವುದೆಂಬುದನ್ನು ಅರಿತಿರಬೇಕೆಂದೂ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಈ ಸಂಸ್ಥೆಗಳನ್ನು ಹಿಂದಿನಂತೆ ನಡೆಸಲು ಇಷ್ಟಕ್ಕೂ ಮನಸ್ಸಿಲ್ಲವಾದರೆ ಆ ಸಂಸ್ಥೆಗಳು ಮದ್ರಾಸ್ ಯೂನಿವರ್ಸಿಟಿಗೇ ಸೇರಿಕೊಳ್ಳಲು ಅವಕಾಶ ಕೊಡುವುದು ವಿಹಿತವೆಂದೂ ಸೂಚಿಸಿದ್ದಾರೆ. ಭಾರತೀಯ ಸಂಸ್ಕೃತಿಯ ವಾಹಕವೆನಿಸಿದ ಈ ಪ್ರಾಚೀನ ಭಾಷೆಯ ರಕ್ಷಣೆಗೆ ಸಂಬಂಧಿಸಿದ ಈ ಪ್ರಶ್ನೆಯನ್ನು ತುಂಬ ಆಸಕ್ತಿ ಮತ್ತು ಜಾಗ್ರತೆಯಿಂದ ಪರಿಶೀಲಿಸಬೇಕಾಗಿದೆ ಎಂಬುದಾಗಿಯೂ ಶ್ರೀ ಶೆಟ್ಟರು ವಿನಂತಿಸಿಕೊಂಡಿದ್ದಾರೆ.

ಬೀಳ್ಕೊಡುವ ಸಮಾರಂಭ—ಮಂಗಳೂರಿನ ಎಸ್. ಆಲ್. ಎಸ್. ಹೋಮಿನ ಸುಪರಿಂಟೆಂಡೆಂಟರಾಗಿದ್ದ ಡಾ| ಬಿ. ಆರ್. ಹೆಗ್ಡೆಯವರು ರಾಜೀನಾಮೆಯಿತ್ತುದರಿಂದ ಅವರನ್ನು ಬೀಳ್ಕೊಡುವ ಸಮಾರಂಭವೊಂದು ಇದೇ ತಾ. 24ರಂದು ಡಾ| ಕೆ. ನೇಮಿರಾಜ ಅಳ್ವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕೆ. ಸುಂದರ್‌ರಾಮ ಶೆಟ್ಟಿ ಹಾಗೂ ಡಾ। ಬಾಳಪ್ಪ ಶೆಟ್ಟರು ಭವನಕ್ಕೆ 5 ವರ್ಷ ಸೇವೆ ಸಲ್ಲಿಸಿದ ಡಾ. ಬಿ. ಆರ್. ಹೆಗ್ಡೆಯವರ ಗುಣಕಥನ ಮಾಡಿದರು. ಹೊಸ ಸುಪರಿಂಟೆಂಡೆಂಟರಾದ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ಭವನದ ಸೇವೆಯ ಕುರಿತು ಮಾತನಾಡಿದರು. ಡಾ| ಬಿ. ಆರ್. ಹೆಗ್ಡೆಯವರು ಸಂದರ್ಭೋಚಿತ ಮಾತುಗಳನ್ನಾಡಿದ ಮೇಲೆ ಅಧ್ಯಕ್ಷರ ಭಾಷಣವಾಯಿತು.

ಉಡುಪಿ ಡಿ. ಮು. ಕೋರ್ಟಿನಲ್ಲಿ

S C 257/1960

ಎಡ್ವರ್ಡ್ ಬೆಲ್ಲರ್ಮಿನ್ ಲುವಿಸ್—ವಾದಿ

ಮತ್ತು

ಚಿನ್ನಯ್ಯ ಸೇರ್ವೆಗಾರ—ಕೊರಗ ಸೇರ್ವೆಗಾರ್ರ ಮಗ—ಉಪ್ಪೂರು ಗ್ರಾಮದ ಹೆಂಪ್ಪಬೆಟ್ಟು— ಪ್ರತಿವಾದಿ.

ಸದ್ರಿ ಪ್ರತಿವಾದಿಗೆ —

ಪ್ರತಿವಾದಿಯು ವಾದಿಯ ವಶಗೆ ಚಾಲಗೇಣಿಗೆ ಅನುಭವಿಸಿ ಬರುವ ಆಸ್ತಿಯ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರಾ ಕಳದ ವಿಳಂಬಿ ಮತ್ತು ವಿಕಾರಿ ಸಂ|ರಗಳ ಗೇಣಿವ ಬಡ್ಡಿ ಕೂಡಾ ರೂ. 241—86ಕ್ಕೆ ವಾದಿ ಪ್ರತಿವಾದಿಯ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 8-8-1960ಕ್ಕೆ ತನ್ನಿಗೆ ಯಿಟ್ಟಿದೆ. ಆ ದಿವ್ಸ ಸದರಿ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉಠಹಂಸದೆಯಿದ್ರೆ ಆತನ ಗೈರ್‌ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದೆಂದು ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damoder Kamath,
Advocate for Plff.

ತಾ. 26—7—60,

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ। ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ-

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦ ೬.೦ (ಟಿ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 628/1959 O. S. 411/58

H. ಸೀತಾರಾಮ ಕದಿಲಾಯ—ಅರ್ಜಿದಾರ

ಮತ್ತು

ಹೆರ್ರಿ ಜೋನ್ ರೇಗೊ – ಎದ್ರಿ

ಸದ್ರಿ ಎದ್ರಿ—ಹೆರ್ರಿ ಜೋನ್ ರೇಗೊ, C. S. ರೇಗರ ಮಗ, ಪುತ್ತೂರು ತಾಲೂಕು, ಪುತ್ತೂರು ಕಸಬಾ ಗ್ರಾಮದಲ್ಲಿ ಇವರಿಗೆ,

ಮೇಲ್ಕಂಡ ಡಿಕ್ರಿ ಅಮಲ್ದಾರಿಯಲ್ಲಿ ನಿಮ್ಮ ಪಕ್ಕಿನ ಸ್ಥಿರಾಸ್ತಿ ಯೇಲಂಪಡಿಸಬೇಕಾಗಿ ಮಾಡಿದ ಅರ್ಜಿಯು ಯಿಸ್ತಿಹಾರಿನ ಶರ್ತಗಳನ್ನು ನಿಶ್ಚೈಸಲಿಕ್ಕೆ ತಾ. 6—8—1960ಕ್ಕೆ ವ್ಯಾಧಯಿರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದರೆ ಆ ದಿವ್ಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರ್‍ಆಗಿ ಉಜರುಪಡಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಮ್ಮನ್ನು ಶಿಮ್ಮಾ ಮಾಡಿ ಮುಂದರಿಸಲಾಗುವುನೆಂತಲೂ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲ್ಕ ತಿಳಿಸೋಣಾಗಿಯದೆ.

(Sd.) K. T. Bhat,
Advocate for Petr.

ಮೊಕ್ಕಾಂ: ಪುತ್ತೂರು.
ತಾ. 16—7—1960.

ಭಾರತದ ರಾಷ್ಟ್ರಾಧ್ಯಕ್ಷ ಡಾ। ರಾಜೇಂದ್ರ ಪ್ರಸಾದರು ಇತ್ತೀಚೆಗೆ ಮಾಸ್ಕೋವಿಗೆ ಭೆಟ್ಟಿ ಇತ್ತಾಗ ನಾಗರಿಕರು ಅವರನ್ನು ಗೌರವದಿಂದ ಸ್ವಾಗತಿಸಿದರು. ಡಾ। ಪ್ರಸಾದರೊಂದಿಗೆ ಸೋವಿಯತ್ ಅಧ್ಯಕ್ಷ ಲಿಯೊನಿಡ್ ಬ್ರೆಜನೋವರು ಕಾರಿನಲ್ಲಿ ಆಸೀನರಾಗಿರುವುದನ್ನು ಕಾಣಬಹುದು.

<u>ಪುಣ್ಯದಾನ</u>

ಯಮನಗರಿಯಲ್ಲಿ ಜನಕ ಮಹಾರಾಜ

ಧರ್ಮ ಪ್ರವರ ರಾಜರ್ಷಿ ಮಹೋದಾರ ಮಹಾರಾಜ ಜನಕನು ಸ್ವರ್ಧಾಮ ಪ್ರಯಾಣ ಮಧ್ಯೆ ಯಮನಗರಿಯನ್ನು ಪ್ರವೇಶಿಸಿದಾಗ, ಅಲ್ಲಿ ಪಾಪಿಗಳ ದುಃಸ್ಥಿತಿಯನ್ನು ಕಂಡು ಸ್ವಾರ್ಜಿತ ಪುಣ್ಯದಾನ ಗೆಯ್ದು ಅವರ ಪಾಪಲೇಪವನ್ನು ತೊಳೆದು ತನ್ನೊಡನೆ ಸ್ವರ್ಗಕ್ಕೆ ಕರೆದೊಯ್ದನು.

ರಾಜರ್ಷಿ ಜನಕ ಮಹಾರಾಜನು ಯೋಗಬಲದಿಂದ ಶರೀರತ್ಯಾಗ ಗೆಯ್ದೊಡನೆಯೇ ಕಿಂಕಿಣೀ ಜಾಲ ಭೂಷಿತವಾದ ಅದ್ವಿತೀಯ ವಿಮಾನವೊಂದು ಅವನನ್ನು ಸ್ವರ್ಗಧಾಮಕ್ಕೆ ಕರೆದೊಯ್ಯಲು ಸಿದ್ಧವಾಯಿತು. ದಿವ್ಯ ದೇಹಧಾರಿ ಮಹಾರಾಜನು ಆ ವಿಮಾನವನ್ನೇರಿ, ದಿವ್ಯಲೋಕದತ್ತ ಪಯಣ ಹೊರಟನು. ಮಾರ್ಗದಲ್ಲಿ ಯಮನಗರಿಯ ಸಮೀಪದಲ್ಲಿ ಆ ವಿಮಾನ ವಿರಮಿಸಿತು. ಈ ಸನ್ನಿವೇಶದಲ್ಲಿ, ಪುಣ್ಯಾತ್ಮ ರಾಜನ ದೇಹಸ್ಪರ್ಶಿತ ವಾಯುವಿನ ಸ್ಪರ್ಶಮಾತ್ರದಿಂದ ನರಕಲೋಕದಲ್ಲಿ ತೊಳಲುತ್ತಿದ್ದವರ ಪೀಡೆಗಳು ದೂರವಾದುವು; ಮರಣಾಂತಕ ಕ್ಲೇಶಗಳು ಉಪಶಮನಗೊಂಡುವು. ಯಮನಗರಿಯಿಂದ ವಿಮಾನ ಮುಂದುವರಿಯತೊಡಗಿದಾಗ, ಪಾಪಪೀಡಿತ ನರಾದವರು ಭಯಭೀತರಾಗಿ ಉಚ್ಚ ಸ್ವರದಿಂದ ಪ್ರಾರ್ಥಿಸತೊಡಗಿದರು—“ಎಲೆ ಪುಣ್ಯಾತ್ಮನೇ, ನೀನಿಲ್ಲಿಂದ ಹೋಗಬೇಡ, ನಮ್ಮನ್ನು ಕೈಬಿಡಬೇಡ. ನಾವು ಹಗಲಿರುಳು ನರಕವೇದನೆಯನ್ನನುಭವಿಸಬೇಕಾಗುತ್ತದೆ. ನಿನ್ನ ವಾಯುಸ್ಪರ್ಶ ಮಾತ್ರದಿಂದ ನಮ್ಮ ಸಂಕಷ್ಟಗಳು ದೂರವಾಗುತ್ತವೆ. ನೀನು ನಮ್ಮನ್ನಗಲಿ ಮುಂದುವರಿದರೆ, ಪುನಃ ನಾವು ಕಷ್ಟಕ್ಕೀಡಾಗುವೆವು. ನಮ್ಮ ಮೇಲೆ ಕೃಪೆದೋರು.”

ಇವರ ಈ ದಯನೀಯ ಪರಿಸ್ಥಿತಿ ಹಾಗೂ ಕರುಣಾಪೂರ್ಣ ಪ್ರಾರ್ಥನೆಯನ್ನು ಕೇಳಿದ ರಾಜನ ಹೃದಯದಲ್ಲಿ ಸಹಾನುಭೂತಿ ತುಂಬಿ ಬಂದಿತು. ‘ನಾನಿಲ್ಲಿರುವುದರಿಂದ ಇವರ ಕಷ್ಟ ಕಾರ್ಪಣ್ಯಗಳು ಕ್ಷಣವಾದರೂ ಕಡಿಮೆಯಾಗುವುದಾದರೆ, ಅದೇ ಒಳ್ಳೆಯದು. ನನಗೆ ಸ್ವರ್ಗದಿಂದೇನಾಗಬೇಕು? ಈ ಯಮಾಲಯವೇ ನನ್ನ ಪಾಲಿಗೆ ಸ್ವರ್ಗಸುಖ ನೀಡಬಹುದೆ? ಅಲ್ಲದೆ ಇಹಪರಗಳೆರಡರಲ್ಲೂ ಮಾನವ ಸೇವೆಯೇ ನನ್ನ ಧ್ಯೇಯವಾಗಿದೆ.” ಎಂದು ಯೋಚಿಸಿದನಾ ಜನಕ. ದುಃಖಾರ್ತ ಮಾನವರ ಸುಖಕ್ಕಾಗಿ ನೃಪಶ್ರೇಷ್ಠ ಜನಕ ನರಕದಲ್ಲಿಯೇ ನೆಲೆನಿಂತನು.

ಕೆಲದಿನಾನಂತರ ಪಾಪಿಗಳ ಪಾಪಕರ್ಮಾನುಸಾರವಾಗಿ ದಂಡನೆ ನೀಡಲು ಯಮರಾಜ ಹೊರಬಂದನು. ಬಾಗಿಲ ಬಳಿಯಲ್ಲಿದ್ದ ಪುಣ್ಯಾತ್ಮ ಜನಕನನ್ನು ಕಂಡ ಅವನು ವಿಸ್ಮಿತನಾಗಿ ಹೇಳಿದನು:—“ಮಹಾಭಾಗ, ನಿನಗೆ ಸ್ವಾಗತ. ನಿನಗೆ ಪ್ರೇತಲೋಕ ಕಾಣುವ ಕುತೂಹಲವಿದೆಯೆ? ಇದು ದರ್ಶನೀಯ ದೃಶ್ಯವಲ್ಲ. ನೀನು ಧರ್ಮ ಶಿರೋಮಣಿಯಾಗಿದ್ದೀಯೆ. ಈ ನರಕಕ್ಕೆ ಬರುವುದು ಮತ್ತದನ್ನು ನೋಡುವುದು ತುಂಬ ಕಷ್ಟಮಯವಾದುದು. ಆದುದರಿಂದ ನೀನು ಇಲ್ಲಿಂದಲೇ ಮರಳುವುದೊಳ್ಳೆಯದು.”

ರಾಜರ್ಷಿಗೆ ತುಸು ಕುತೂಹಲ ಎದ್ದಿತು. “ಯಾವ ರೀತಿಯ ದುಷ್ಕರ್ಮಗಳಿಂದ ಮಾನವನಿಗೆ ನರಕವಾಸ ಬರುವುದು?” ಅವನು ಕೇಳಿದನು. ಕೃತಾಂತನು ಉತ್ತರವಿತ್ತನು—“ರಾಜ, ಪ್ರಾಣಘಾತಕ ದುಷ್ಟ ಪ್ರಾಣಿಗಳು ಇಲ್ಲಿ ಭಯಾನಕ ನರಕ ಕಷ್ಟವನ್ನನುಭವಿಸಬೇಕಾಗಿದೆ. ಪರದ್ರವ್ಯಾಪಹರಣ ಮಾಡುವವರು, ಧನಲೋಭದಿಂದ ಮಿತ್ರದ್ರೋಹ ಗೆಯ್ದವರು, ನಿರಪರಾಧಿನಿ, ಧರ್ಮ ಪರಾಯಣೆ, ಪತಿವ್ರತೆ ಭಾರ್ಯೆಯನ್ನು ತ್ಯಜಿಸಿದವರು, ದಂಭ, ದ್ವೇಷ, ಮಾತ್ಸರ್ಯಗಳಿಂದ ಪರಬ್ರಹ್ಮಸ್ಮರಣೆಯನ್ನು ಮಾಡದಿರುವವರು ಈ ನರಕದಲ್ಲಿ ಕೋಟಿಕಲ್ಪ ಕಾಲ ಅತಿಕಷ್ಟಪಡಬೇಕಾಗುವುದು.”

ಧರ್ಮರಾಜನ ವಚನಗಳನ್ನು ಕೇಳಿ ಕರಮ ವ್ಯಾಕುಲನಾದ ಜನಕನೆಂದನು—“ಈ ಮಾಧವನು ಪಾಪಿಗಳ ನಾನಾ ದುಷ್ಕರ್ಮಗಳ ಕಥೆಯನ್ನು ತಿಳಿದು ನನ್ನ ಮನಸ್ಸು ಆಘಾತಿತವಾಯಿತು. ಆದರೆ, ಧರ್ಮರಾಜ, ಇವರು ಶಿಕ್ಷಾರ್ಹರಲ್ಲ; ಪರಂತು ದಯಾರ್ಹರಾಗಿರುವರು.”

ಆಗ ಯಮರಾಜನೆಂದನು—“ಮಹಾರಾಜ, ಇವರು ಅತ್ಯಂತ ಪಾಪಿಗಳು. ಇವರು ಮಾಡಿದಂಥ ಪಾಪಕರ್ಮ ಪ್ರಸಂಚದಲ್ಲಿ ಇನ್ನು ಬೇರೆ ಉಳಿದಿಲ್ಲ. ಇದರಿಂದಾಗಿಯೇ ತಂತಮ್ಮ ಪಾಪ ಫಲವನ್ನನುಭವಿಸಬೇಕಾಗಿದೆ. ನಿನ್ನ ಪುಣ್ಯ ಸಂಚಯವೇನೋ ಅಪಾರವಿದೆ. ಆದುದರಿಂದ ನೀನು ದಿವ್ಯಲೋಕ ಪ್ರಸ್ಥಾನ ಮಾಡುತ್ತಿದ್ದೀಯೆ.”

ಮಹಾರಾಜನು ಮೌನಿಯಾದನು. ರಾಜರ್ಷಿಯು ಅಶ್ರುಪೂರ್ಣ ನೇತ್ರಗಳಿಂದ ಹೇಳಿದನು—“ದೇವ, ಈ ಪಾಪಿಷ್ಠರು ಯಾವ ವಿಧದಲ್ಲಾದರೂ ಉದ್ಧರವಾಗಲಾರರೆ? ನಾನು ಸ್ವಾರ್ಜಿತ ಪುಣ್ಯಫಲವನ್ನನುಭವಿಸುವುದಕ್ಕೆ ಮೊದಲೇ ಇವರೆಲ್ಲರ ದುಃಖವನ್ನು ಪರಿಹರಿಸಲಿಚ್ಛಿಸುತ್ತೇನೆ. ಉಪಾಯವಿರುವುದಾದರೆ, ದಯಮಾಡಿ ಸೂಚಿಸು.”

ಮಹಾರಾಜನ ಕಾತರ ಸ್ವರದಿಂದ ದ್ರವಿತನಾಗಿ ಯಮರಾಜ ಉತ್ತರಿಸಿದನು—“ಧರ್ಮಪ್ರವರ, ನೀನು ಕರುಣಾಸಾಗರನೆಂಬುದು ವಿಶ್ವವಿದಿತವಾಯಿತು. ನೀನು ದಯಾಭರಿತನಾಗಿ ಇವರ ಪಾಪಲೇಪವನ್ನು ತೊಳೆಯಬಯಸುವೆಯಾದರೆ, ನೀನು ಆರ್ಜಿಸಿದ ಪುಣ್ಯದಲ್ಲಿ ಒಂದು ಅಲ್ಪಾಂಶವನ್ನು ಇವರಿಗಾಗಿ ದಯಪಾಲಿಸು. ಇವರಿಗೆ ದೇವರ ನಾಮವನ್ನು ಕಲಿಸಿಕೊಡು.

ರಾಜರ್ಷಿ ಜನಕನೀ ಮಾತಿಗೆ ಒಪ್ಪಿದನು. ಅವನು ತನ್ನ ಜನ್ಮಜನ್ಮಾರ್ಜಿತ ಪುಣ್ಯ ಸಂಚಯವನ್ನು ಪತಿತ ಮಾನವತೆಯ ಉದ್ಧಾರಕ್ಕಾಗಿ ಅರ್ಪಿಸಿದನು. ನರಕದಲ್ಲಿದ್ದ ಎಲ್ಲ ಪಾಪಿಗಳೂ ಮಹೋದಾರ ಜನಕನ ಸೇವೆ, ಮತ್ತು ಶಿಕ್ಷಣದಿಂದಾಗಿ ತಮ್ಮ ದುಷ್ಕರ್ಮ ಫಲಗಳಿಂದ ಮುಕ್ತರಾಗಿ ದಿವ್ಯಧಾಮವಾಸಿಗಳಾದರು.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟು ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪ್ಪೊ, ಉಡುಪಿ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ
O. S. 127/1960.

ಶ್ರೀಮತಿ — ವಾದಿಳು
ಬಾಬುರಾಯ ಆಚಾರಿ ಕೂಡಾ—ಪ್ರತಿವಾದಿರು.

5ನೇ ಪ್ರತಿವಾದಿ — ಬಾಬುಯಾನೆ ಭುಜಬಲಿಬಂಗ ಪದ್ಮಾವತಿಯವರ ಮಗ, ಕಾರ್ಕಳ ತಾಲೂಕು ಪುತ್ತಿಗೆ ಗ್ರಾಮದ ಗೋವಿಂದ ಬೆಟ್ಟು. ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ,

ಈ ಕೋರ್ಟು R E P 397/1959 (O S 391/55.) ಆದ ವಾದಿಳ ವ 2ರಿಂದ 6ನೇ ವರೇಗಿನ ಪ್ರತಿವಾದಿರ ಕುಟುಂಬದ ಪಕ್ಷಿನ ಸ್ಥಿರಾಸ್ತಿ ಜಪ್ತಿ ಏಲಂ ನ ಮೇಲಿನ ವಾದಿಳ ವ 2ರಿಂದ 6ನೇ ವರೇಗಿನ ಪ್ರತಿವಾದಿರ ಕುಟುಂಬದ ಮೇಲೆ ಸಿಂದಾಚ್ಚಲ್ಲ ಬ್ಯಾಂಡಿಂಗ್ ಆಗತಕ್ಕದ್ದಲ್ಲ ಮತ್ತು ಸದ್ರಿ ಆಸ್ತಿ ವಾದಿಯ 2ರಿಂದ 6ನೇ ವರೇಗಿನ ಪ್ರತಿವಾದಿರ ಕುಟುಂಬಕ್ಕೆ ವಾಪಾಸು ಸಿಕ್ಕಬೇಕಾಗಿಯೂ ಮುಟ್ಟುವಳಿ ವಗೈರೆ ಕೊಡಿಸಬೇಕಾಗಿ ವಗೈರೆ ಡಿಕ್ಲೇರೇಶನ್ ವ ಸ್ವಾಧೀನತೆ ವಗೈರೆ ಕೇಳಿ ವಾದಿಳು ನೀವು ವಗೈರೆರ ಮೇಲೆ ದಾಖಲ್ಲ ಮಾಡಿದ ದಾವೆಯು ತಾ 28—7—1960ಕ್ಕೆ ನಿಮ್ಮ ಹಾಜ್ರಾತಿ ಬಗ್ಗೆ ಇಟ್ಟಿದೆ ಆ ಕುರಿತು ನಿಮಗೆ ಆಕ್ಷೇಪಣೆಗಳಿದ್ದರೆ ಸದ್ರಿ ತಾರೀಕು 28—7—60ಕ್ಕೆ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ನೀವು ಖುದ್ದಾಗಲೀ ವಕೀಲರ ಮೂಲಕವಾಗಲೀ ಹಾಜರಾಗಿ ಉಜರಿಸತಕ್ಕದ್ದು ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು. ಕೋರ್ಟು ಹುಕುಂ ಪ್ರಕಾರ ಈ ನೋಟಿಸು ಪ್ರಕಟಿಸಿಯದೆ.

D. Venkatesh Bhat.
ವಾದಿಳ ಕಡೆ ವಕೀಲ.

ಕಾರ್ಕಳ 20—7. 60.

ಭೂಸುಧಾರಣೆ

ಭಾರತದಲ್ಲಿ ಭೂಸುಧಾರಣಾ ಪ್ರಗತಿ

ದೇಶದ ಆಹಾರೋತ್ಪಾದನೆಯನ್ನು ಹೆಚ್ಚಿಸುವ ಮತ್ತು ಕೃಷಿಕನಿಗೆ ಅಧಿಕ ಭದ್ರತೆ ನೀಡುವ ಸದುದ್ದೇಶದಿಂದ ತೊಡಗಿದ ಈ ಸುಧಾರಣೆಯು ದೇಶದ ಎಲ್ಲ ರಾಜ್ಯಗಳಲ್ಲಿಯೂ ಪ್ರಗತಿ ಕಾಣುತ್ತಿದೆ.

ಸ್ವಾತಂತ್ರ್ಯ ಪ್ರಾಪ್ತಿ ಸಮಯದಿಂದ ವಿಶೇಷ ಪ್ರಾಮುಖ್ಯ ಪಡೆದಿರುವ ಭೂಸುಧಾರಣೆಗಳಿಗೆ ಮುಖ್ಯವಾಗಿ ಎರಡು ಉದ್ದೇಶಗಳಿವೆ. ಬೇಸಾಯ ಕಾರ್ಯಕ್ಕೆ ಇರುವ ಅಡಚಣೆಗಳನ್ನು ತೆಗೆದುಹಾಕಿ ದಕ್ಷತೆಯಿಂದ ಬೇಸಾಯ ಕೈಗೊಳ್ಳಲು ಸಾಧ್ಯವಾಗುವಂತಹ ಒಂದು ಪರಿಸ್ಥಿತಿಯನ್ನು ಉಂಟು ಮಾಡುವುದು ಒಂದು ಉದ್ದೇಶ. ಎಲ್ಲಾ ರೀತಿಯ ಸುಲಿಗೆ ಹಾಗೂ ಸಾಮಾಜಿಕ ಅನ್ಯಾಯಗಳನ್ನು ತೊಡೆದು ಹಾಕಿ ಭೂಮಿಯನ್ನು ಉಳುವ ರೈತನಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವುದು ಇನ್ನೊಂದು ಉದ್ದೇಶ.

ಇದನ್ನೇ ಸಂಕ್ಷಿಪ್ತವಾಗಿ ಹೇಳುವುದಾದರೆ, ಬೇಸಾಯೋತ್ಪನ್ನದಲ್ಲಿ ಹೆಚ್ಚಳ, ಸಾಮಾಜಿಕ ಅಂತರವನ್ನು ಕಡಿಮೆ ಮಾಡುವುದು ಇವೆರಡೂ ಮುಖ್ಯ ಉದ್ದೇಶಗಳಾಗಿವೆ. ಭಾರತದಲ್ಲಿ ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ರೈತನ ಸುಲಿಗೆ ಹಲವು ರೀತಿಯಲ್ಲಿ ನಡೆಯುತ್ತಿದ್ದಿತು. ಆ ಸ್ಥಿತಿಗತಿಗಳನ್ನು ಹೋಗಲಾಡಿಸಿ ಕೈಗೊಳ್ಳುವ ಪರಿವರ್ತನೆ ಹಂತ ಹಂತವಾಗಿ ನಡೆಯಬೇಕು ಎಂಬ ಅಂಶವನ್ನು ಮಾನ್ಯಮಾಡಲಾಗಿದೆ.

ಜಮೀನದಾರಿ ಪದ್ಧತಿಯ ನಿರ್ಮೂಲನ

ದಲ್ಲಾಳಿಗಳ ವರ್ಗವನ್ನು ತೆಗೆದು ಹಾಕುವುದು, ಸಾಗುವಳಿ ಕರಾರಿನ ಪದ್ಧತಿಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತರುವುದು, ಹಿಡುವಳಿಯ ಮಿತಿಯನ್ನು ಗೊತ್ತುಮಾಡುವುದು ಸಹಕಾರಿ ಬೇಸಾಯ ಪದ್ಧತಿಯನ್ನು ಸಂಘಟಿಸುವುದು ಹೀಗೆ ವಿವಿಧ ಹಂತಗಳ ಮೂಲಕ ಭೂಸುಧಾರಣೆಗಳನ್ನು ತರುವುದುಚಿತವೆಂದು ಭಾವಿಸಲಾಗಿದೆ.

ಜಮೀನದಾರಿ, ಜಹಗೀರಿ ಮತ್ತು ಇನಾಂದಾರಿ ಪದ್ಧತಿಗಳನ್ನು ರದ್ದುಗೊಳಿಸುವಂತಹ ಭೂಸುಧಾರಣಾ ಶಾಸನಗಳನ್ನು ಈಗಾಗಲೇ ಅನೇಕ ರಾಜ್ಯಗಳಲ್ಲಿ ಮಾಡಿದ್ದು ಅವುಗಳನ್ನು ಜಾರಿಗೆ ತರಲಾಗಿದೆ. ದೇಶದಲ್ಲಿ ಅರ್ಧಕ್ಕರ್ಧ ಜಮೀನುಗಳು ಜಮೀನದಾರಿ ಬೇಸಾಯ ಪದ್ಧತಿಗೊಳಪಟ್ಟಿದ್ದು ಮಾಲೀಕರೇ ಒಬ್ಬರು, ಸಾಗುವಳಿ ಮಾಡುತ್ತಿದ್ದವರು ಇನ್ನೊಬ್ಬರು ಹೀಗಿತ್ತು. ಇನ್ನರ್ಧದಷ್ಟು ಜಮೀನುಗಳನ್ನು ಮಾತ್ರ ರೈತರೇ ಸ್ವತಃ ಹೊಂದಿದ್ದು ಸಾಗುವಳಿ ಮಾಡುತ್ತಿದ್ದರು. ಜಮೀನದಾರಿ ಪದ್ಧತಿ ಈಗ ಮಾಯವಾಗಿರುವುದರಿಂದ ರೈತರು ಈಗ ಸರಕಾರದೊಡನೆ ನೇರವಾದ ಸಂಪರ್ಕವನ್ನು ಹೊಂದಿರುತ್ತಾರೆ ಮತ್ತು ತಮ್ಮ ಜಮೀನುಗಳ ಬಗ್ಗೆ ನಿಜವಾದ ಒಂದು ಆಸಕ್ತಿಯನ್ನು ಹೊಂದಿದ್ದಾರೆ. ಹಿಂದಿನ ನಾನಾ ರೀತಿಯ ಸುಲಿಗೆ ಈಗಿಲ್ಲ. ಕೆಲವು ರಾಜ್ಯಗಳಲ್ಲಿ ಜಾರಿಗೆ ಬಂದಿರುವ ಶಾಸನದಿಂದಾಗಿ ತಾವು ಬೇಸಾಯ ಮಾಡುವ ಜಮೀನ ಮೇಲೆ ರೈತರು ಸರ್ವ ಸ್ವಾಮ್ಯವನ್ನೂ ಪಡೆಯುತ್ತಾರೆ.

ಈ ಸುಧಾರಣೆಯಿಂದಾಗಿ ದಳ್ಳಾಳಿ ವರ್ಗ ಅಥವಾ ಜಮೀನದಾರಿ ವರ್ಗ ವಿಸರ್ಜಿತಗೊಂಡಿದೆ ಮತ್ತು ಅವರಿಗೆ ಪರಿಹಾರವನ್ನೂ ಒದಗಿಸಲಾಗಿದೆ. ಈ ಪರಿಹಾರ ಮೌಲ್ಯದ ಅಂದಾಜು ೪೫೫ ಕೋಟಿ ರೂಗಳು ಅಂದ ಮೇಲೆ ಜಮೀನದಾರಿ ಪದ್ಧತಿಯ ನಿರ್ಮೂಲನ ಕಾರ್ಯ ಸ್ಪಷ್ಟವಾಗುತ್ತದೆ. ೧೯೫೮—೫೯ರ ಹೊತ್ತಿಗೆ ಒಟ್ಟು ೧೩೫ ಕೋಟಿ ರೂ.ಗಳ ಪರಿಹಾರ ಪಾವತಿಯಾಗಿದ್ದಿತು.

ಸಾಗುವಳಿ ಕರಾರಿನ ನಿಯಮಗಳು

ಸಾಗುವಳಿ ಕರಾರಿನ ನಿಯಮಗಳನ್ನು ಇದೀಗ ಅನೇಕ ರಾಜ್ಯಗಳಲ್ಲಿ ಸಡಲಿಸಲಾಗಿದೆ. ಸಾಮಾನ್ಯವಾಗಿ ಹೇಳುವುದಾದರೆ, ಒಬ್ಬ ರೈತ ವರ್ಷಕ್ಕೆ ಬರುವ ಒಟ್ಟು ಫಸಲಿನ ಮೌಲ್ಯದಲ್ಲಿ ಕಾಲು ಭಾಗಕ್ಕಿಂತ ಹೆಚ್ಚು ಭಾಗವನ್ನು ಭೂಮಾಲೀಕನಿಗೆ ಕೊಡಬೇಕಾಗಿಲ್ಲ.

ಸಾಮಾನ್ಯವಾಗಿ ಎಲ್ಲ ರಾಜ್ಯಗಳಲ್ಲಿಯೂ ಸಾಗುವಳಿಯ ಹಕ್ಕನ್ನು ರೈತರಿಗೆ ಭದ್ರಮಾಡಿಕೊಡುವ ಶಾಸನಗಳನ್ನು ಅಂಗೀಕರಿಸಲಾಗಿದೆ. ಇನ್ನು ಕೆಲವು ರಾಜ್ಯಗಳಲ್ಲಿ ಈ ಸಂಬಂಧದ ಶಾಸನಗಳು ಜಾರಿಯಾಗುವುದಕ್ಕೆ ಪೂರ್ವಭಾವಿಯಾಗಿ ರೈತರನ್ನು ತೆಗೆದುಹಾಕುವ ಯಾವುದೇ ಕ್ರಮಕ್ಕೆ ತಡೆಹಾಕುವ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಸಾಗುವಳಿ ಮಾಡುತ್ತಿರುವ ರೈತ 'ತಾನಾಗಿಯೇ' ಜಮೀನದಾರನಿಗೆ ಜಮೀನನ್ನು ಬಿಟ್ಟುಕೊಡುವಂತೆ ಮಾಡುವುದರ ವಿರುದ್ಧ ರೈತನಿಗೆ ರಕ್ಷಣೆ ಕೊಡುವ ಕ್ರಮವನ್ನೂ ಕೈಗೊಳ್ಳಲಾಗಿದೆ.

ಪರಿಹಾರದ ಹಣವನ್ನು ಕೊಟ್ಟು ಬಿಡುವ ರೈತರು ಭೂಮಾಲೀಕರಾಗಬಹುದಾದ ಅವಕಾಶವನ್ನು ದ್ವಿತೀಯ ಯೋಜನೆಯಲ್ಲಿ ಒದಗಿಸಲಾಯಿತು. ಈ ಉದ್ದೇಶಕ್ಕಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ದಿಶೆಯಲ್ಲಿ ಸಾಧಿಸಬೇಕಾದ ಪ್ರಗತಿಗೆ ತೃತೀಯ ಯೋಜನೆ ಕರಡಿನಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಈ ತನಕ ಈ ದಿಶೆಯಲ್ಲಿ ಸಾಧ್ಯವಾಗದೇ ಹೋಗಿರುವ ಪ್ರಗತಿಯ ಬಗ್ಗೆ ಕಾತರತೆಯನ್ನು ವ್ಯಕ್ತಪಡಿಸಲಾಗಿದೆ. ಇಷ್ಟು ಕಾಲದೊಳಗಾಗಿ ರೈತರು ಮಾಲೀಕರಾಗುವಂತೆ ಮಾಡಬೇಕಾದ ಅಗತ್ಯವನ್ನು ಒತ್ತಿ ಹೇಳಲಾಗಿದೆ.

ಹಿಡುವಳಿಗಳ ಮಿತಿ, ಆದಾಯದ ಮೇಲಿಲ್ಲ

ಎಲ್ಲ ರಾಜ್ಯಗಳಲ್ಲಿ ಭೂ ಹಿಡುವಳಿಗಳ ಮೇಲೆ ಮಿತಿ ಗೊತ್ತುಮಾಡುವ ಶಾಸನಗಳನ್ನು ಜಾರಿಗೆ ತರಲಾಗಿದೆ ಇಲ್ಲವೇ ಸಿದ್ಧಗೊಳಿಸಲಾಗಿದೆ ಎನ್ನಬಹುದು.

ಭೂಮಿಯನ್ನು ಗೊತ್ತುಮಾಡುವುದರಿಂದ ಕೃಷಿಯಿಂದ ಬರುವ ಆದಾಯದ ಮೇಲೆ ಮಿತಿ ಹೇರಿದಂತಾಗುವುದಿಲ್ಲ. ಒಮ್ಮೆ ಭೂಮಿತಿ ಗೊತ್ತಾದ ಮೇಲೆ ಅದರ ಮೇಲಿನ ಆದಾಯ ಪ್ರಮಾಣವನ್ನು ಹೆಚ್ಚಿಸುತ್ತಾ ಹೋಗುವ ಕ್ರಮ ರೈತನ ವಿವೇಚನೆಗೆ ಬಿಟ್ಟಿದ್ದಾಗಿರುತ್ತದೆ. ಅವನು ಕೈಗೊಳ್ಳುವ ಸುಧಾರಣೆಗಳಿಂದಾಗಿ ಆದಾಯ ಹೆಚ್ಚುವುದಾದರೆ ಒಂದಿಷ್ಟು ಭೂಮಿಯನ್ನು ಆತ ಬಿಟ್ಟುಕೊಡಬೇಕಾಗುತ್ತದೆ ಎಂಬುದು ಅದರ ಅರ್ಥವಲ್ಲ.

ಭೂರಹಿತ ರೈತನಿಗೆ ಭೂಮಿ

ಭೂಸುಧಾರಣೆಗಳ ಕಾರ್ಯಕ್ರಮದ ಪ್ರಕಾರ ಭೂವಿಹೀನ ರೈತರ ಏಳಿಗೆ ಸಾಧಿಸಲು ವಿಶೇಷ ಗಮನ ಕೊಡಬೇಕಾದುದು ಅವಶ್ಯಕವಾಗುತ್ತದೆ. ಭೂರಹಿತ ರೈತರಿಗೆ ಭೂಮಿಯನ್ನು ಹಂಚುವ ಕಾರ್ಯಕ್ರಮ ಈ ದಿಶೆಯಲ್ಲಿ ಒಂದು ಮುಖ್ಯ ಹೆಜ್ಜೆಯಾಗಿದೆ. ಬೇಸಾಯ ಸಾಧ್ಯವಿರುವಂತಹ ಪಾಳುಬಿದ್ದಿರುವ ಸುಮಾರು ೩೦ ಲಕ್ಷ ಎಕರೆಗಳಷ್ಟು ಭೂಮಿಯನ್ನು ಈ ವರ್ಗದ ರೈತರಿಗೆ ಈ ಕೆಲವು ವರ್ಷಗಳಲ್ಲಿ ಹಂಚಲಾಗಿದೆ. ಭೂದಾನ ಚಳವಳಿ ಅಂಗವಾಗಿ ದೊರೆತ ೧೦ ಲಕ್ಷ ಎಕರೆಗಳಷ್ಟು ಭೂಮಿ ಈ ವರ್ಗದ ರೈತರಿಗೆ ದೊರೆತಿದೆ.

ಭೂಸುಧಾರಣೆಗಳ ಫಲವಾಗಿ ಭಾರತದಲ್ಲಿ ಇಂದು ಭೂಸ್ವಾಮ್ಯ ಪಡೆದಿರುವ ರೈತರ ಸಂಖ್ಯೆ ಹೆಚ್ಚಾಗಿದೆ. ಅವರಿಗೆ ಸಾಲ ಸೌಲಭ್ಯ, ಮಾರುಕಟ್ಟೆ ಸೌಲಭ್ಯ, ಪಂಚಿಕೆ ವ್ಯವಸ್ಥೆ, ಇವುಗಳನ್ನು ಪಡೆಯಲು ಅನುಕೂಲವಾಗುವಂತೆ ಇನ್ನು ಅವರನ್ನು ಸಹಕಾರ ಚಳುವಳಿ ಮೂಲಕ ಸಂಘಟಿಸಬೇಕಾಗಿದೆ. ಅಂತೆಯೇ ಅವರು ಸ್ವೇಚ್ಛೆಯಿಂದ ಸಹಕಾರಿ ಬೇಸಾಯ ಕಾರ್ಯಕ್ಕೆ ಇಳಿಯುವಂತೆ ಪ್ರೋತ್ಸಾಹನ ನೀಡಬಹುದಾಗಿದೆ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ದಿ| ಭಂಡಾರ ನಾಯಕೆಯವರು ಸಂಯುಕ್ತ ರಾಷ್ಟ್ರೀಯ ಪಕ್ಷದಿಂದ ಹೊರಬಂದು, ಶ್ರೀಲಂಕಾ ಸ್ವಾತಂತ್ರ್ಯ ಪಕ್ಷವನ್ನು ಸ್ಥಾಪಿಸಿದನಂತರ, ಶ್ರೀಮತಿಯವರು ತಮ್ಮ ಪತಿಯ ಪಕ್ಷದ ಪರವಾಗಿ ಪ್ರತಿ ಚುನಾವಣೆಯ ವೇಳೆಯೂ ಪ್ರಚಾರ ಮಾಡುತಿದ್ದರು. ಇದರಿಂದಾಗಿ ಸಿಂಹಳದ ಕೆಲವೇ ಮಂದಿ ಉತ್ತಮ ಭಾಷಣಕರ್ತೆಯರಲ್ಲೂ ಇವರು ಒಬ್ಬರೆನಿಸಿಕೊಂಡರು. ೧೯೫೬ರಲ್ಲಿ ಪ್ರಧಾನ ಮಂತ್ರಿಯಾದ ಮೇಲೆ ಶ್ರೀ ಭಂಡಾರ ನಾಯಕೆಯವರೊಡನೆ ಶ್ರೀಮತಿಯವರೂ ಎಲ್ಲ ವಿದೇಶ ಸಂಚಾರ ಕಾರ್ಯಕ್ರಮಗಳಲ್ಲಿ ಜತೆಗೂಡುತಿದ್ದರು. ಅಮೇರಿಕೆ, ಕೆನೆಡ, ಇಂಗ್ಲೆಂಡ್ ಮತ್ತು ಭಾರತಗಳನ್ನು ಶ್ರೀಮತಿ ಸಿರಿಮಾವೋ ಭಂಡಾರನಾಯಕೆಯವರು ಸಂದರ್ಶಿಸಿದ್ದಾರೆ.

ಶ್ರೀಮತಿಯವರಿಗೆ ಸುನೇತ್ರ (೧೮ ವರ್ಷ) ಮತ್ತು ಚಂದ್ರಿಕಾ (೧೬ ವರ್ಷ) ಎಂಬ ಹೆಸರಿನ ಇಬ್ಬರು ಹೆಮ್ಮಕ್ಕಳೂ ೧೧ ವರ್ಷದ ಅರುಣ ಎಂಬ ಮಗನೂ ಇರುವರು. ತಮ್ಮ ಪತಿಯ ಮರಣಾನಂತರ, ಅದರಿಂದ ತೆರವಾದ ಪಾರ್ಲಿಮೆಂಟ್ ಸ್ಥಾನಕ್ಕೆ ತಾನು ಸ್ವತಂತ್ರಳಾಗಿ ಸ್ಪರ್ಧಿಸುವುದಾಗಿ ಘೋಷಿಸಿದ್ದರೂ, ತನ್ಮಧ್ಯೆ ಮರುಚುನಾವಣೆಯು ಘೋಷಿಸಲ್ಪಟ್ಟಿತು. ಈಗ ನಡೆದ ಚುನಾವಣೆಯಲ್ಲಿ ಶ್ರೀಮತಿಯವರು ಶ್ರೀಲಂಕಾ ಸ್ವಾತಂತ್ರ್ಯ ಪಕ್ಷದ ನಾಯಕಿಯಾಗಿ ಆರಿಸಲ್ಪಟ್ಟು, ಪ್ರಧಾನಿಯಾಗುವ ಭಾಗ್ಯವನ್ನು ಪಡೆದರು.

ಸಿಂಹಳದ ಈ ಹೊಸ ಸರಕಾರದ ಧ್ಯೇಯ ಹಾಗೂ ನೀತಿಗಳು ದಿವಂಗತ ಭಂಡಾರ ನಾಯಕೆಯವರದೇ ಆಗಿರುತ್ತವೆಂದು ಡಣಾಡಂಗುರವಾಗಿ ಹೇಳಲಾಗುತ್ತಿದೆ. ಆದುದರಿಂದ, ಭಾರತದ ಮಟ್ಟಿಗೆ ವಿಶೇಷ ಹಾನಿಯೇನೂ ಸಂಭವಿಸದು. ಅಲ್ಲದೇ ಉತ್ತರ ಸಿಂಹಳದಲ್ಲಿನ ಭಾರತೀಯ ಕೆಲಸಗಾರರ ನಾಗರಿಕತೆಯ ಪ್ರಶ್ನೆಯೊಂದ. ಬಹು ವರ್ಷದಿಂದಲೂ ಉಭಯ ರಾಷ್ಟ್ರಗಳನ್ನು ಕಾಡುತ್ತಿದ್ದು, ಶ್ರೀಮತಿ ಭಂಡಾರ ನಾಯಕೆಯವರು ಅದನ್ನು ಉಭಯ ನ್ಯಾಯ ವಿಧಾನದಿಂದ ಉತ್ತರಿಸುವರೆಂದು ಹಾರೈಸಬಹುದು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ನವಭಾರತ ಪುಸ್ತಕ ಭಂಡಾರ ಉಡುಪಿ.

(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಗೃಹ ವಿಜ್ಞಾನ

(೩ನೇ ಪುಟ ನೋಡಿರಿ)

ಅನೇಕ ಬಗೆಯ ಮನೋವ್ಯಾಧಿಗಳಿಗೂ ತುತ್ತಾಗಿ ಬಿಡುತ್ತಾರೆ.

ಅಂತೆಯೇ ಮಕ್ಕಳು ಆಟದಲ್ಲಿ ಉತ್ಸಾಹ ತೋರಿಸದಿದ್ದರೆ ಅವರ ಆರೋಗ್ಯವು ಸರಿಯಾಗಿಲ್ಲವೆಂದು ತಿಳಿಯಬಹುದು.

ಪ್ರತಿ ಗ್ರಾಮದಲ್ಲಿಯೂ ಮಕ್ಕಳಾಟಕ್ಕಾಗಿ ಒಂದು ವಿಶಾಲ ಸ್ಥಳವಿರುವುದು ಒಳ್ಳೆಯದು. ಇದು ಗ್ರಾಮದ ಒಗ್ಗಟ್ಟಿಗೇ ಬುನಾದಿಯಾದೀತು.

ಬೀದಿಯಲ್ಲಿ ಮಾತ್ರ ಮಕ್ಕಳನ್ನೆಂದಿಗೂ ಆಡಲು ಬಿಡಬೇಡಿ.

ವಿದ್ಯೆ—ಅಭ್ಯಾಸ

ಮಕ್ಕಳು ಆಡುತ್ತಾ ಬಳೆಯುವಾಗ ಅವುಗಳ ಮಾತವೂ ನಡತೆಯೂ ರೂಪಿಸಲ್ಪಡುತ್ತವೆ. ಈ ಸಮಯದಲ್ಲಿ ಮಕ್ಕಳೊಂದಿಗೆ ಎಂತೆಂತಹ ಒಡನಾಡಿಗಳು ಕೂಡಿಕೊಳ್ಳುತ್ತಾರೋ ಅದಕ್ಕೆ ತಕ್ಕಹಾಗೆ ಅವರ ನಡತೆ ಒಳ್ಳೆಯದೋ ಕೆಟ್ಟದೋ ಆಗಿ ಏರ್ಪಡುತ್ತದೆ. "ಸಹವಾಸಯಾ ಸರ್ವ ಗುಣಾ ಭವಂತಿ" ಎಂಬುದು ಹಿರಿಯರ ವಾಕ್ಯ.

ನಿಮ್ಮ ಮಕ್ಕಳು ಒಳ್ಳೆಯವರಾಗಬೇಕೆಂದಿದ್ದರೆ ಅವರಿಗೆ ದೊರೆಯುವ ಸಹವಾಸ ಒಳ್ಳೆಯದಿರಬೇಕು. ಸ್ವಭಾವತಃ ಮನುಷ್ಯರು ಅನುಕರಣಶೀಲರು. ಮಕ್ಕಳಿಗಂತೂ ಅನುಕರಣೆಯ ಹೊರತು ಬೇರೇನೂ ಗೊತ್ತಿರುವುದಿಲ್ಲ. ಸ್ವತಃ ವಿಚಾರಮಾಡಿ ನಡೆಯಲಿಕ್ಕೆ ಹದಿನಾರು, ಇಪ್ಪತ್ತು ವಯಸ್ಸಾಗಬೇಕು. ಅಷ್ಟರೊಳಗೆ ಅವರು ದುಷ್ಟ ಸಹವಾಸಗಳಿಂದ ಕೆಟ್ಟ ನಡತೆಗಳನ್ನು ಅಭ್ಯಾಸಮಾಡಿಬಿಟ್ಟರೆ, ಮತ್ತೆ ವಿಚಾರಶಕ್ತಿ ಬೆಳೆದು ತನ್ನದು ಕೆಟ್ಟ ನಡತೆ ಎಂದು ತಿಳಿದರೂ ಅಭ್ಯಾಸವನ್ನು ಬಿಡಲು ಸಾಧ್ಯವಾಗುವುದಿಲ್ಲ. ಹೀಗೆ ತಮ್ಮ ತಪ್ಪು ಕೆಲಸವನ್ನು ಬಿಡಲು ಸಾಧ್ಯವಿಲ್ಲದೆ ತಮ್ಮೊಳಗೇ ವ್ಯಸನಪಡುವ ದೊಡ್ಡವರು ಎಷ್ಟೋ ಮಂದಿ ಇದ್ದಾರೆ. ತಮ್ಮ ಮಕ್ಕಳು ತಮ್ಮಹಾಗೆ ಕೆಡಬಾರದೆಂದೇ ಎಲ್ಲರೂ ಬಯಸುತ್ತಾರೆ. ಹಾಗಾದರೆ, ಮೊದಲು ಮಕ್ಕಳಿಗೆ ಒಳ್ಳೆಯ ಸಹವಾಸವಿರುವಂತೆ ನೋಡಿಕೊಳ್ಳಿ. ನಿಮ್ಮ ದುರಭ್ಯಾಸಗಳನ್ನು ಮಕ್ಕಳ ಇದಿರಿನಲ್ಲಿಯೇ ಮಾಡಿ ತೋರಿಸಬೇಡಿ. ಮಕ್ಕಳ ಇದಿರಿನಲ್ಲಿ ಬೀಡಿ ಸಿಗರೇಟುಗಳನ್ನು ಸೇದುತ್ತ "ನೀವು ಸೇದಬಾರದು"ಎಂದು ಅವರಿಗೆ ಹೇಳುವುದರಿಂದ ಯಾವ ಪ್ರಯೋಜನವೂ ಇಲ್ಲ. ಬಯ್ಯುವವರ ಭಯದಿಂದ ಮಕ್ಕಳು ಮರೆಮಾಚಿಕೊಂಡು ಸೇದಿ ನೋಡುವ ಸಂಭವವೇ ಹೆಚ್ಚು.

ತಂದೆ ತಾಯಿಗಳು ತಮ್ಮ ದುರಭ್ಯಾಸಗಳನ್ನು ಮಾಡುವಾಗ ಮಕ್ಕಳನ್ನು ಮನೆಗೆಬಂದ ಹಿರಿಯ ಅತಿಥಿಗಳೆಂದು ಭಾವಿಸಿ ಅವರಿದಿರು ಜಾಗರೂಕರಾಗಿರಬೇಕು. ಮಕ್ಕಳ ಅಭ್ಯಾಸಗಳು ಅವರ ಶಾರೀರಿಕ ಮಾನಸಿಕ ಶಿಕ್ಷಣಕ್ಕೆ ತಕ್ಕ ಹಾಗೆ ಏರ್ಪಡುತ್ತವೆ. ಆದುದರಿಂದ ಮಕ್ಕಳು ಒಳ್ಳೆಯ ಅಭ್ಯಾಸವನ್ನು ಹಿಡಿಯುವಂತೆ ನೋಡಿಕೊಳ್ಳುವ ಬಾಧ್ಯತೆ ತಂದೆ-ತಾಯಿಗಳ ಮೇಲಿದೆ.

ಮಕ್ಕಳ ಅಭಿವೃದ್ಧಿಗೂ ಅಭ್ಯಾಸಕ್ಕೂ ಸಹಾಯವಾಗುವ ವಿಷಯಗಳು ಹೇರಳವಾಗಿವೆ. ಆಟ, ಆಹಾರಗಳಷ್ಟೇ ಹೆತ್ತವರ ಪ್ರೇಮವಾತ್ಸಲ್ಯಗಳು ಬಹು ಮುಖ್ಯ. ಪ್ರೇಮವಾತ್ಸಲ್ಯಗಳಿಲ್ಲದೆ ಯಾವಾಗಲೂ ಗದರಿಸಿ ಬೆದರಿಸುವ ತಂದೆ ತಾಯಿಗಳ ಮೇಲೆ ಮಕ್ಕಳು ವಿಶ್ವಾಸಿಗಳಾಗಿರುವುದಿಲ್ಲ. ಅದಕ್ಕಾಗಿ ಬೇರೆ ಹಾದಿ ಹಿಡಿದು, ತಪ್ಪು ದಾರಿಗೆ ಇಳಿದು ಬಿಡುವ ಭೀತಿಯುಂಟು. ಅಂತಹ ಮಕ್ಕಳು ಮನೆಯನ್ನು ಒಂದು ಜೈಲಿನಂತೆ ಭಾವಿಸಬಹುದು. ಸುಲಭವಾಗಿ ದುಷ್ಟ ಸಹವಾಸಕ್ಕೆ ಬೀಳಬಹುದು. ಮೋಸ, ತಂತ್ರ, ಕಪಟಗಳನ್ನು ಕಲಿಯಬಹುದು

ಚಿಕ್ಕ ಮಕ್ಕಳ ಗ್ರಹಣಶಕ್ತಿ ದೊಡ್ಡವರಿಗಿಂತಲೂ ಹೆಚ್ಚು. "ಅದು ಏನು?" "ಅದು ಏಕೆ?" "ಅದು ಹೇಗೆ!" ಇತ್ಯಾದಿ ಪ್ರಶ್ನೆಗಳು ಸದಾ ಅವರ ಮನಸ್ಸಿನಲ್ಲಿ ಏಳುತ್ತಿರುತ್ತದೆ. ತಾವು ಹೊಸದಾಗಿ ಅಡಿಯಿಡುವ ಈ ಪ್ರಪಂಚವನ್ನು ತಿಳಿಯಬೇಕೆಂಬ ಕುತೂಹಲವೇ ಅದಾಗಿದೆ. ಅದು ಸಹಜವಾಗಿ ಪ್ರಕೃತಿಯೇ ಅವರಲ್ಲಿ ಮೂಡಿಸುವ ಪ್ರಶ್ನೆ. ಅವರ ಹೊಸ ಮಿದುಳು ಆಯಾ ಪ್ರಶ್ನೆಗೆ ಸಿಕ್ಕುವ ಉತ್ತರಗಳನ್ನೆಲ್ಲಾ ಭದ್ರವಾಗಿ ಹಿಡಿದಿಟ್ಟು ಕೊಳ್ಳುತ್ತದೆ. ಈ ಬಗೆಯ ಗ್ರಹಣಶಕ್ತಿ ಹಿರಿಯರಿಗಿರಲು ಸಾಧ್ಯವಿಲ್ಲ. ಅದಕ್ಕೇ ಬಾಲ್ಯವೇ ವಿದ್ಯಾಭ್ಯಾಸದ ಕಾಲವೆಂದು ಹೇಳುವುದು.

ಮಕ್ಕಳ ವಿದ್ಯಾಭ್ಯಾಸ ಕ್ರಮವು ಮಕ್ಕಳ ಮನಸ್ಸಿನಲ್ಲೇಳುವ ಪ್ರಶ್ನೆಗಳಿಗೆ ಉತ್ತರ ರೂಪವಾಗಿರಬೇಕು, ಅರ್ಥಾತ್ ಪ್ರಶ್ನೆಗಳನ್ನು ಹುಟ್ಟಿಸಿ ಉತ್ತರ ಸಿಗುವ ಕ್ರಮದಲ್ಲಿ ಸಾಗಬೇಕು. ಒಂದು ಪ್ರಶ್ನೆಯಿಂದ ಹಲವು ಪ್ರಶ್ನೆಗಳು ಹುಟ್ಟುತ್ತಾ ಇರುವಾಗಲೇ ಅವರಿಗೆ ತಕ್ಕ ಪಾಠ ಪ್ರವಚನಗಳು ನಡೆದು ವಿದ್ಯಾಭ್ಯಾಸ ಸಾಗಬೇಕು. ಗಿಡಕ್ಕೆ ನೀರು ಹೇಗೆ ಅವಶ್ಯಕವೋ ಹಾಗೆ ಮಕ್ಕಳಿಗೆ ವಿದ್ಯೆ ಅವಶ್ಯಕ—"ಮಕ್ಕಳಿಗೆ ತಂದೆ ಬಾಲ್ಯದೊಳ್ ಅಕ್ಕರ ವಿದ್ಯೆಗಳನರಿಪದಿರ್ಪೊಡೆ ಕೊಂದಂ" ಎಂದು ಹಿರಿಯರು ಕಠಿನವಾಗಿ ಹೇಳುತ್ತಾರೆ.

ಚಿಕ್ಕಂದಿನಲ್ಲಿ ವಿದ್ಯೆ ಕಲಿಯದ ಹಿರಿಯರು ಇಂದು ಪಶ್ಚಾತ್ತಾಪಪಡುತ್ತಾರೆ. ಬೆಳೆದ ಮೇಲೆ ಅಕ್ಷರಗಳನ್ನೂ ಭಾಷೆಗಳನ್ನೂ ಹೇಗೋ ಕಷ್ಟಪಟ್ಟು ಕಲಿಯಬಹುದಾದರೂ ಅಭ್ಯಾಸವನ್ನು ಮತ್ತೆ ಕಲಿಯಲು ಸಾಧ್ಯವಾಗುವುದಿಲ್ಲ. ಚಿಕ್ಕಂದಿನಲ್ಲಿ ಮನಸ್ಸು ಕೂಡಿ ಮಾಡಿದ ಅಭ್ಯಾಸಗಳೇ ಮುಂದಿನ ನಡತೆಯ ತಳಪಾಯವಾಗುತ್ತದೆ.

ಇದನ್ನು ದೊಡ್ಡವರೆಲ್ಲಾ ತಿಳಿದಿರಬೇಕು. ನಮ್ಮ ಮನೆಯ ಸಿರಿಯನ್ನು ನಾವು ಪ್ರೇಮ ಮಾಡುವುದು ಸಹಜ. ನೀವು ನಿಜಕ್ಕೂ ನಿಮ್ಮ ಮಕ್ಕಳ ಮೇಲ್ಮೆಯನ್ನು ಕೋರುವಿರಾದರೆ ಈ ಮೇಲಿನ ವಿಷಯಗಳನ್ನು ಮರೆಯಬಾರದು.

ಕರ್ತೃತ್ವ ಶಕ್ತಿ

ಮನುಷ್ಯರಿಗಿರುವ ಎಲ್ಲಾ ಶಕ್ತಿಗಳಲ್ಲಿ ಧೈರ್ಯಕ್ಕಿಂತ ಹೆಚ್ಚಿನದು ಯಾವುದೂ ಇಲ್ಲ. ಧೈರ್ಯವೂ ಸ್ವಾತಂತ್ರ್ಯವೂ ಮನುಷ್ಯನ ಎರಡು ಬದಿಗಳಿದ್ದಹಾಗೆ. ಇವೆರಡೂ ಮಕ್ಕಳಲ್ಲಿರುವಂಥವು. ಬೇಕಾದರೆ ನೋಡಿಕೊಳ್ಳಿ. ಸ್ವಾತಂತ್ರ್ಯದಲ್ಲಿ ಮಕ್ಕಳೇ ನಿಮ್ಮ ಮನೆಯ ರಾಜರು. ಅವರಿಗಿರುವ ದಂಡನಾಶಕ್ತಿ ಏನು ಗೊತ್ತೆ? ಅಳು. ಈ ಅಳುವಿನಾಯುಧದಿಂದ ಮಕ್ಕಳು ತಮಗೆ ಬೇಕಾದುದನ್ನೆಲ್ಲಾ ಸಾಧಿಸಿಕೊಂಡುಬಿಡುತ್ತಾರೆ.

ಇನ್ನು ಧೈರ್ಯ. ಮಕ್ಕಳು ಜನ್ಮತಃ ಭೀರುಗಳಲ್ಲ. ಭಯವು ಬುದ್ಧಿ ವಿಕಾಸವಾದಂತೆ ಉಂಟಾಗುವ ರೋಗವಲ್ಲದ ಒಂದು ರೋಗ. ಚಿಕ್ಕ ಮಗುವಿಗೆ ಅದುಂಟೆ? ಹಸುಮಗುವಿನ ಮೇಲೆ ಕತ್ತಿಯೆತ್ತಿದರೂ ಅದು ಕಿಚಕಿಚನೆ ಮುದ್ದಾಗಿ ನಗುತ್ತದೆ.

ಮಗುವಿಗಿರುವ ಈ ಧೈರ್ಯವನ್ನು ತಂದೆತಾಯಿಗಳು ಅಡಗಿಸಲಿಕ್ಕೆ ಪ್ರಯತ್ನಿಸುತ್ತಾರೆ. 'ಗುಮ್ಮ'ನಿಂದ ಪ್ರಾರಂಭವಾಗುವ ಇದು ಕಡೆಗೆ ಭಯಂಕರವಾದ ಮಾನಸಿಕ ವ್ಯಾಧಿಯಾಗಿ ಪರಿಣಮಿಸುತ್ತದೆ.

ಮಕ್ಕಳು ತಮ್ಮ ಆಟಗಳಲ್ಲಿ, ಚೇಷ್ಟೆಗಳಲ್ಲಿ ತಮಗಿರುವ ಧೈರ್ಯ ಸಾಹಸಗಳನ್ನು ವ್ಯಕ್ತಪಡಿಸುತ್ತಾ ಇರುತ್ತಾರೆ. ಬೀಳುವುದೂ, ಏಳುವುದೂ, ಗಾಯಮಾಡಿಕೊಳ್ಳುವುದೂ ಮಕ್ಕಳ ನಿತ್ಯ ಪರಿಪಾಟಿ. ಅವುಗಳು ಬೀಳದಂತೆ, ಬಿದ್ದರೆ ಪೆಟ್ಟಾಗದಂತೆ, ಆಗಿದರೆ ಗಾಯವಾಗದಂತೆ, ಗಾಯವಾದರೆ ತಾಳ್ಮೆಯಿಂದ ಚಿಕಿತ್ಸೆಮಾಡುವಂತೆ ತಂದೆ ತಾಯಿಗಳು ಎಚ್ಚರವಹಿಸಿಕೊಂಡಿರಬೇಕೇ ಹೊರತು "ಅಯ್ಯೋ! ಬಿದ್ದೀಯೇ! ಹಾಗೆ ಮಾಡಬೇಡ! ಹೀಗೆ ಮಾಡಬೇಡ" ಎಂದು ಭಯಂಕರ ಚಿತ್ರಗಳನ್ನು ಬಣ್ಣಿಸಿ ಹೇಳಿ ಅವರ ಧೈರ್ಯ ಸಾಹಸಗಳನ್ನು ಹಿಮ್ಮೆಟ್ಟಿಸಬಾರದು. ಹಾಗೆ ಮಾಡುವುದರಿಂದ ಮಕ್ಕಳ ಮಾನಸಿಕ ಬೆಳವಣಿಗೆ ಕುಂಠಿತವಾಗುತ್ತದೆ. ಅವರು ಮುಂದೆ ಏತಕ್ಕೂ ಬಾರದ ಮೂಲೆ ಗುಂಪಿನ ಮನುಷ್ಯರಾದಾರು. "ಹೂಂ ಮಾಡು; ಮುಂದೆ ಹೋಗು; ಇನ್ನೊಮ್ಮೆ ಸಾಧನೆ ಮಾಡು" ಎಂದು ಹಿರಿಯರು ಪ್ರೋತ್ಸಾಹಿಸುತ್ತಿರುವುದೇ ಮಕ್ಕಳಿಗೊಳ್ಳೆಯದು.

"ಎಲ್ಲರಿಗಿಂತ ನಾನು ಮೇಲಿನವನಾಗಿರಬೇಕು" ಎಂಬ ಸ್ಪರ್ಧೆಯ ಬುದ್ಧಿ ಎಲ್ಲಾ ಮಕ್ಕಳಿಗೂ ಇರುತ್ತದೆ. ಇದರಿಂದ ಅಸೂಯೆಯುಂಟಾಗದ ಹಾಗೆ ಎಚ್ಚರ ವಹಿಸಿಕೊಂಡಿರಬೇಕು. ಹಾಗೆ ಮಾಡಿದರೆ ಆ ಸ್ಪರ್ಧೆಯ ಪರಿಣಾಮ ಒಳ್ಳೆಯದೇ ಆಗುತ್ತದೆ.

ಒಂದು ವಿಷಯ ಹಿರಿಯರು ಮರೆಯಬಾರದು. ಮಕ್ಕಳನ್ನು ಸಾಹಸಿಗಳನ್ನಾಗಿಯೂ, ಹೇಡಿಗಳನ್ನಾಗಿಯೂ ಮಾಡುವ ಹೊಣೆ ಹಿರಿಯರ ಮೇಲೆಯೇ ಇದೆ.

ಮಕ್ಕಳಿಂದಾಗದು ಎಂದುಕೊಂಡು ಅವರ ಪ್ರತಿಯೊಂದು ಕೆಲಸವನ್ನೂ ಹಿರಿಯರೇ ಮಾಡುತ್ತಾ ಬಂದರೆ ಅವರು ದೊಡ್ಡವರಾದಾಗಲೂ ಪ್ರತಿಯೊಂದಕ್ಕೂ ಸೇವಕರ ಅಥವಾ ಇನ್ನೊಬ್ಬರ ಮುಖವನ್ನೇ ನೋಡುವವರಾಗುತ್ತಾರೆ. ಮಕ್ಕಳಾಗಿರುವಾಗ ಅವರಿಗೆ ಎಲ್ಲವನ್ನೂ ಸ್ವತಃ ಮಾಡಿಕೊಳ್ಳಬೇಕೆಂಬ ಆಶೆಯಿತ್ತು. ಉತ್ಸಾಹವಿತ್ತು. ಆಗಲೆಲ್ಲಾ ಹಿರಿಯರು ಅಡ್ಡಬಂದು ತಾವೇ ಮಾಡಿ ಕೊಟ್ಟಿದ್ದರಿಂದ ಮಕ್ಕಳಲ್ಲಿ ಉದಾಸೀನತೆ ತಲೆ ಹಾಕಿತು. ಬೆಳೆದಾಗ ಕೂಡಾ ಅವರು ತಮ್ಮ ಕಾಲ ಮೇಲೆ ತಾವು ನಿಲ್ಲಲಾರದಂತಾದರು.

ಹಲ್ಲು ಉಜ್ಜುವುದು, ಕೈಕಾಲು ತೊಳೆಯುವುದು, ತನ್ನ ಸ್ಲೇಟು ಪುಸ್ತಕಗಳನ್ನು ಓರಣವಾಗಿಡುವುದು, ನೀರು ಕುಡಿಯುವುದು, ಲೋಟಾ ಪಾತ್ರೆಗಳನ್ನು ಇಡುವಲ್ಲೇ ಇಡುವುದು, ಚೆಲ್ಲಿದ ಕಸವನ್ನು ಹೆಕ್ಕುವುದು, ಕಾಣದ ಆಟದ ಸಾಮಗ್ರಿಗಳನ್ನು ಹುಡುಕುವುದು ಇವೇ ಮೊದಲಾದ ಸಣ್ಣ ಸಣ್ಣ ಕಾರ್ಯಗಳನ್ನು ಮಕ್ಕಳಿಂದಲೇ ಮಾಡಿಸಿ ಆ ಮಕ್ಕಳಲ್ಲಿ ಸ್ವಯಂ ಕರ್ತೃತ್ವಶಕ್ತಿ ಉಂಟಾಗುವಂತೆ ಮಾಡುವ ಹೊಣೆ ಹಿರಿಯರ ಕೈಯಲ್ಲಿದೆ. ಮಕ್ಕಳು ಬಳೆಯುತ್ತಾ ಬಂದಹಾಗೆ ಸ್ವಲ್ಪ ಸ್ವಲ್ಪ ಮನೆಗೆಲಸಗಳನ್ನೂ ಅವರು ಕೈ ಕೊಳ್ಳುವ ಹಾಗೆ ಆಟದ ಮೂಲಕವಾಗಿಯೇ ಮಾಡಿಬಿಡಬೇಕು ದೊಡ್ಡವರು

ಆತ್ಮಸ್ಥೈರ್ಯವಿಲ್ಲದ ಮನುಷ್ಯರಿಗೆ ಸ್ವಾತಂತ್ರ್ಯವಿದ್ದರೂ ಇಲ್ಲದಹಾಗೆ. ಸ್ವಯಂಕರ್ತೃತ್ವಶಕ್ತಿಯಿಲ್ಲದವರಿಗೆ ಸ್ವಾತಂತ್ರ್ಯವೂ ಇಲ್ಲ ಧೈರ್ಯವೂ ಇಲ್ಲ. ಆಗ ಉದಾಸೀನತೆಯು ತಲೆದೋರುತ್ತದೆ. ಹೊತ್ತು ಹಾಳಾಗುತ್ತದೆ. ದಾರಿದ್ರ್ಯ ಬರುತ್ತದೆ. ನಿಮ್ಮ ಮಕ್ಕಳನ್ನು ಧೈರ್ಯಶಾಲಿಗಳಾಗುವಂತೆ ಬೆಳೆಸಿರಿ. ಆಗ ನಿಮ್ಮ ಮನೆಯೂ ಊರೂ ದೇಶವೂ ಬೆಳಗುತ್ತದೆ.


ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತವೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಕಥಾವಿಹಾರ

(೨ನೇ ಪುಟದಿಂದ)

ಳುವ ನಮ್ಮ ಅಭಿಲಾಷೆಯನ್ನು ಪ್ರಕಟಗೊಳಿಸಿದೆವು.

೦೦ ೦೧

ನೀವು ಈ ಚಿತ್ರದಲ್ಲಿ ಕಾಣುವಾಕೆ ನನ್ನ ಪತ್ನಿ ಕಮಲಾ. ನೀವು ನಗರ ಬಿಟ್ಟು ತೆರಳಿದ ಸಮಯದಲ್ಲೇ ಆಕೆಯು ಇಲ್ಲಿಗೆ ಬಂದಿದ್ದಳು; ಆದುದರಿಂದ ನಿಮಗೀಕೆಯ ಪರಿಚಯವಿರಲಾರದು. ಅನಿರೀಕ್ಷಿತವಾಗಿ ನನ್ನಲ್ಲಿಗಾಗಮಿಸಿದ ಈಕೆಯಿಂದಾಗಿ ನಾನು ಬಹು ಸಂತುಷ್ಟನಾದೆ. ಈಕೆ ಅನಾಥೆಯಾಗಿದ್ದು ನಗರದಲ್ಲಿ ಕಲಾವಿದರ ರಚನೆಗಳಿಗೆ 'ಮಾದರಿ'ಯಾಗಿ ನಿಂತು ಹೊಟ್ಟೆ ಹೊರೆಯುತಿದ್ದಳು. ಆಕೆಯ ಭಾವಪೂರ್ಣ ನೇತ್ರಗಳಲ್ಲಿ ಒಂದು ಬಗೆಯ ವಿಶೇಷ ಆಕರ್ಷಣೆಯಿತ್ತು. ಮುಂದಿನದನ್ನು ಊಹಿಸಿ, ನನ್ನ ಕೆಲಸಕ್ಕಿರಿಸಿಕೊಂಡೆ. ಕ್ರಮೇಣ ಆಕೆ ನನಗೆ ಪ್ರೇರಣೆಯನ್ನೂ ನೀಡ ತೊಡಗಿದಳು. ನಮ್ಮಿಬ್ಬರನ್ನೂ ಕಲಾಪ್ರೇಮವು ಬಂಧಿಸಿದುದರಿಂದ ನಾವು ವಿವಾಹಿತರೂ ಆದೆವು.

ಆದರೆ, ನಮ್ಮ ವೈವಾಹಿಕ ಸುಖ ಜೀವನ ಬಹುಕಾಲ ಸಾಗಲಿಲ್ಲ. ಬಡತನದೊಡನೆ ಕಮಲಾ ಹೋರಾಡಿದ್ದಳು. ಅದರ ಪ್ರಭಾವವು ಆಕೆಯ ಮೇಲೆ ಬೀಳುವುದು ಸ್ವಾಭಾವಿಕ. ಇದರಿಂದಾಗಿ ಕ್ಷಯ ರೋಗಕ್ಕಾಹುತಿಯಾದಳು. ನನ್ನ ಶಕ್ತ್ಯನುಸಾರವಾಗಿ ಚಿಕಿತ್ಸೆ ನಡೆಸಿದೆ; ಆದರೆ, ರೋಗ ದಿನೇ ದಿನೇ ಬಲಿಯುತ್ತ ಬಂತು.

ಇದೇ ಸಮಯದಲ್ಲಿ ನನ್ನ ಮನಸ್ಸಿನಲ್ಲೊಂದು ವಿಚಾರ ಹೊಳೆಯಿತು—ಅಲ್ಲ, ಸೈತಾನನು ನನ್ನ ಮೇಲೆ ಆಧಿಪತ್ಯ ಸ್ಥಾಪಿಸಿದ—ಏಕೆಂದರೆ, ಮಾನವನ ಮನದಲ್ಲಿ ಅಮಾನವೀಯ ವಿಚಾರ ಮೂಡಬಾರದಾಗಿತ್ತು. ಆಕೆಯ ರೋಗಗ್ರಸ್ತ ಶರೀರವನ್ನು ನಾನು ಪರಮಾತ್ಮನ ವರವೆಂದುಕೊಂಡೆ. ಆಕೆಯ ಜೀರ್ಣಾವಸ್ಥೆಯನ್ನು ಮಾನವನ ಆತ್ಮ ಸಂಘರ್ಷಣೆಯ ಚಿತ್ರಕ್ಕೆ ಉಪಯುಕ್ತ ಮಾದರಿಯೆಂದು ತಿಳಿದೆ. ಆದುದರಿಂದಲೇ ಆಕೆಯ ಕೋಣೆ ಸಮೀಪದಲ್ಲಿನ ಇನ್ನೊಂದು ಕೊಠಡಿಯಲ್ಲಿ ಕುಳಿತು ನನ್ನ ಕೆಲಸಕ್ಕೆ ತೊಡಗಿದೆ

ಕಮಲೆಯ ಆರೋಗ್ಯ ಕೆಡುತ್ತ ಬಂದಂತೆ ನನ್ನ ಚಿತ್ರವು ಪೂರ್ಣವಾಗುತ್ತ ಹೋಯಿತು. ಕಮಲಾ ಕೇವಲ 'ಮಾದರಿ' ಎಂಬಷ್ಟು ಭ್ರಮೆ ನನ್ನಲ್ಲಿ ಹುಟ್ಟಿಕೊಳ್ಳುವಂತಾಯಿತು, ನನ್ನ ಸ್ಥಿತಿ! ಆಕೆಯೂ ಮಾನವಿ, ನನ್ನೊಡನೆ ಜೀವಿಸಲು ಬಂದಿದ್ದಾಳೆ ಎಂಬುದನ್ನು ಮರೆತು ಉತ್ಕೃಷ್ಟ ಕೃತಿಯ ನಡುವೆಯೇ ತಿರುಗಾಡತೊಡಗಿದೆ. ಆಕೆಯ ಪಾಲನೆಗಾಗಿ ಒಬ್ಬಾಕೆ ನರ್ಸನ್ನು ನೇಮಿಸಿ ನನ್ನ ಸಮಯವನ್ನೆಲ್ಲಾ ಚಿತ್ರಕ್ಕಾಗಿ ಮೀಸಲಿಟ್ಟೆ. ದಿನದಲ್ಲಿ ಒಂದೆರಡು ಬಾರಿ ಅತ್ತ ನಾನು ತೆರಳಿ ನೋಡಿಬರುತಿದ್ದೆ—ಅದೂ ಚಿತ್ರರಚನೆಗೆ ಸಹಾಯಕವಾಗುವಂತೆ. ಆಕೆ ಮೃತ್ಯುವನ್ನು ಆಲಿಂಗಿಸುತಿದ್ದಳು. ಇದು ನನಗೆ ತಿಳಿಯದಿರಲಿಲ್ಲ. ಈ ಅನುಭೂತಿ ನನ್ನಲ್ಲಿ ಸಹಾನುಭೂತಿಯನ್ನು ಹುಟ್ಟಿಸಲಿಲ್ಲ. ಬದಲು, ನನ್ನ ಕೆಲಸವನ್ನು ಮತ್ತಷ್ಟು ಭರದಿಂದ ಮುಂದುವರಿಸಿತು. ಈ ಶ್ರೇಷ್ಠ ಕಲಾಕೃತಿ ಪೂರ್ಣಗೊಳ್ಳುವುದಕ್ಕೆ ಮೊದಲೇ ಆಕೆ ತನ್ನ ಜೀವನ ಲೀಲೆಯನ್ನು ಪೂರ್ತಿಗೊಳಿಸಬಹುದೆಂಬ ಅಂಜಿಕೆಯು ನನ್ನಲ್ಲಿ ಬೇರೂರಿತ್ತು; ಎಂತಲೇ ಅಷ್ಟು ಸಡಗರ-ಅವಸರ!

ಆಗ ಬಡ ಮತ್ತು ನಿರಪರಾಧಿ ಹುಡುಗಿಯನ್ನು ನೋಯಿಸಿದ್ದೆ—ಈ ತಪ್ಪನ್ನೆಂದೂ ಮರೆಯಲಾರೆ. ಆಕೆ ನನ್ನ ಕಲೆಯೆಂದರೇನೆಂದರಿಯಳೆಂದೂಹಿಸಿದ್ದೆ. ಆಕೆಯೂ ತನ್ನ ಹೃದಯವನ್ನೆಂದೂ ಪ್ರಕಟಿಸಲಿಲ್ಲ. ಆದರೆ, ಕಮಲಾ ಯಮಸದನ ಸೇರಿದ ಮೇಲೆ ನರ್ಸ್ ಹೇಳಿದಳು—ನಾನು ಆಕೆಯ ಚಿತ್ರ ಬರೆಯುತ್ತಿರುವುದು ಗೊತ್ತಂತೆ. ಆದರೆ, ನನ್ನ ಉತ್ಸಾಹಕ್ಕೆ ತಡೆ ತರಬಾರದೆಂಬ ಇರಾದೆಯಿಂದ ತಿಳಿದೂ ತಿಳಿಯದವಳಂತೆ ವರ್ತಿಸಿದಳಂತೆ!

ಆಕೆಯ ಆ ಕೊನೆಯ ದಿನವನ್ನು ಜೀವನವಿಡಿ ನಾನು ಮರೆಯುವಂತಿಲ್ಲ. ಇನ್ನು ಕೆಲವೇ ತಾಸುಗಳ ಲೀಲೆಯೆಂದು ನಾನು ಆ ದಿನ ಮುಂಜಾನೆಯೇ ತಿಳಿದುಕೊಂಡಿದ್ದೆ. ಮೃತ್ಯುವೂ ನಿಕಟವಾಗುತ್ತ ಬಂದಿತು. ಆಕೆಯ ಪ್ರಾಣವು ಶರೀರದಲ್ಲಿರಲು ಬಯಸದೆ ಅನಂತದಲ್ಲಿ ಲೀನವಾಗುವುದರಲ್ಲಿತ್ತು.

ಈ ದೃಶ್ಯ ನನ್ನ ಮೇಲೆ ಬಹಳ ಪರಿಣಾಮ ಬೀರಿತು. ಜೀವನ—ಮರಣಗಳ ಸಂಘರ್ಷಣೆಯಲ್ಲಿ ಯಾತನೆ ಪಡುವವರನ್ನು ನಾನದುವರೆಗೆ ಕಂಡಿಲ್ಲ; ನನ್ನ ಕಲಾವಿದತನ ಕೈ ತೋರಿಸಲು ಹಿಂಜರಿಯಿತು. ಜೀವನ ಮತ್ತು ಮೃತ್ಯುಗಳ ನಡುವೆ ಹೊಡೆದಾಡುತಿದ್ದ ಪತ್ನಿಯ ಬಗ್ಗೆ ರವದಷ್ಟೂ ಚಿಂತಿಸಲಿಲ್ಲ. ತತ್‌ಕ್ಷಣ ನನ್ನ ಕೋಣೆಗೆ ಧಾವಿಸಿ, ನಾನು ಕಂಡುದನ್ನು ಕೆನ್‌ವಾಸಿನ ಮೇಲೆ ಅಂಕಿಸುವುದರಲ್ಲಿಯೇ ತಲ್ಲೀನನಾಗಿ ಬಿಟ್ಟೆ.

ನಾನೆಷ್ಟು ಹೊತ್ತು ಕಾರ್ಯನಿಮಗ್ನನಾಗಿದ್ದೆನೆಂದೀಗ ನೆನಪಿಲ್ಲ. ನರ್ಸ್ ಕೂಗಲಾರಂಭಿಸಿದಾಗಲೇ ನನಗಾದುದು ಎಚ್ಚರ. ಆ ಕೂಡಲೇ ಕಮಲೆ ಪವಡಿಸಿದ ಕೋಣೆಗೆ ತೆರಳಿದೆ. ಆಕೆಯ ಪ್ರಾಣಪಕ್ಷಿ ಹಾರಿ ಹೋಗಿತ್ತು; ನರ್ಸ್ ಆ ಮೃತ ಶರೀರವನ್ನಪ್ಪಿಕೊಂಡು ರೋದಿಸುತಿದ್ದಳು.

ಕಮಲೆಯ ಶರೀರದ ಸಮೀಪಕ್ಕೆ ತೆರಳಿದ ನಾನು ಆಕೆಯ ಮುಖವನ್ನವಲೋಕಿಸ ತೊಡಗಿದೆ. ನನ್ನಲ್ಲಿ ರೋಮಾಂಚವಾಯಿತು. ಸದಾ ಪ್ರಶಾಂತವಾಗಿರುತಿದ್ದ ಅದರಲ್ಲಿ ಈಗ ತಿರಸ್ಕಾರದ ಭಾವ ದೃಗ್ಗೋಚರವಾಗುತಿತ್ತು. ನಾನು ಭಯಭೀತನಾಗಿ ಬಿಟ್ಟೆ.

. ಕಮಲ ಅಂತಿಮಕ್ಷಣದಲ್ಲಿ ನನ್ನ ಕರೆದಿದ್ದಳೆಂದು ನರ್ಸ್ ತಿಳಿಸಿದಳು. ಆದರೆ, ನಾನು ಕಾರ್ಯದಲ್ಲಿಯೇ ತತ್ಪರನಾಗಿದ್ದುದರಿಂದ ನನಗಾಕೆಯ ಕ್ಷೀಣ ಧ್ವನಿ(?) ಕೇಳಿಸಲಿಲ್ಲ. ನರ್ಸ್ ನನ್ನನ್ನ ಕರೆತರುವೆನೆಂದಳಂತೆ; ಪರಂತು, ಕಮಲ ಅದಕ್ಕೆ ಒಪ್ಪಲಿಲ್ಲವಂತೆ. ಪ್ರಪಂಚದ ಒಬ್ಬ ವ್ಯಕ್ತಿ ಅತ್ಯಧಿಕವಾಗಿ ಪ್ರೀತಿಸುತಿದ್ದ ಒಂದು ವಸ್ತು ತನ್ನ ಕೊನೆಯ ಗಳಿಗೆಯಲ್ಲಿ ಆತನನ್ನು ಕಂಡು ವ್ಯಂಗ್ಯವಾಗಿ ನಗುತಿತ್ತು! ನನ್ನ ಶೂನ್ಯ ಹೃದಯವನ್ನು ಕಂಡೇ ಕಮಲೆ ಅಷ್ಟೊಂದು ಅವಹೇಳನೆಯಿಂದ ನೋಡುತಿದ್ದಿರಬೇಕು—"ಓ, ಆ ಚಿತ್ರ ...." ಎಂದಾಕೆ ಅಂತಿಮ ಗಳಿಗೆಯಲ್ಲಿ ಉದ್ಗರಿಸಿರಬೇಕು.

ಬಹು ತಡವಾಗಿ ಬಹು ಬೆಲೆ ತೆತ್ತು ನಾನೊಂದು ಪಾಠವನ್ನು ಕಲಿತೆ. ಒಂದು ಕೆನ್‌ವಾಸಿನ ತುಂಡಿಗೆ ಮಾನವ ಜೀವನಕ್ಕಿಂತ ಅಧಿಕ ಮಹತ್ವವಿತ್ತು ನಾನೊಂದು ಮಹಾಪರಾಧ ಮಾಡಿದೆ. ಮನೋರಂಜನೆಯ ವಿಷಯದಲ್ಲಿ ಕಲೆಯ ಪ್ರವೇಶ ಅನುಚಿತವಲ್ಲ; ಆದರೆ ಯಾರೊಬ್ಬರ ಜೀವನವನ್ನೂ ನಾಶಮಾಡುವ ಅಧಿಕಾರ ಕಲೆಗಿಲ್ಲ. ಕಲೆಯು ಹೀಗೆ ಮಾಡುವುದಾದರೆ, ಅದು ಕಲೆಯಲ್ಲ; ಹೃದಯಹೀನ ಪಿಶಾಚಿಯಾಗುವುದು. ಕಲಾವಿದ ಕಲಾಸಾಧನೆಯಲ್ಲಿ ತನ್ನನ್ನೇ ತಾನು ಮರೆತು ಬಿಡುವಾಗ, ಒಬ್ಬ ಮಾನವಿ ತನ್ನ ಸಂಗಾತಿಯಾಗಿರುವಳೆಂಬುದನ್ನೂ ಮರೆಯುತ್ತಾನೆ. ಆಕೆ ಆತನಿಗೆ ತನ್ನ ಕಲೆಯ ಸಾಧನ ಮಾತ್ರವಾಗಿ ಗೋಚರಿಸುತ್ತಾಳೆ. ಯಾವುದರ ಹೃದಯದಲ್ಲಿ ಏನಡಗಿದೆ ಎಂಬುದನ್ನು ಪ್ರದರ್ಶಿಸುವ ಪ್ರಯತ್ನದಲ್ಲಿ ಆತ ಕಣ್ಣು ಮುಚ್ಚಿಕೊಳ್ಳುತ್ತಾನೆ. ಇಲ್ಲಿಯೇ ಕಲೆಯ ಕೊಲೆಯಾಗುವುದು.

ಆ ಮೇಲೆ ಎಂದೂ ಕಲಾ ಸಾಧನೆ ಮಾಡಲಾರೆನೆಂದು ನಿಶ್ಚಯಿಸಿ ಬಿಟ್ಟೆ. ಕಮಲೆಗೆ ನಾನೆಸಗಿದ ಅಪರಾಧಕ್ಕಿದೇ ಪ್ರಾಯಶ್ಚಿತ್ತ. ನಮ್ಮ ನಿಶ್ಚಯಗಳು ನಾವು ಕೀರ್ತಿಕಾಮಿಗಳಾದುದರಿಂದ ಸುದೃಢವಿರುವುದಿಲ್ಲ. ಆದುದರಿಂದಲೇ ಈ ಚಿತ್ರವನ್ನಿಲ್ಲಿಗೆ ತಂದೆ. ಮೊದಲಿನ ಚಿತ್ರದಲ್ಲಿ ಪರಿವರ್ತನೆ ಮಾಡಿ ವ್ಯಕ್ತಪಡಿಸಲಸಾಧ್ಯವಾದ ತಿರಸ್ಕಾರವನ್ನು ಆದರ ಮುಖದಲ್ಲಿ ಚಿತ್ರಿಸಿದೆ.

ಯಾರಾದರೂ ನನ್ನ ಕಲಾವಿದ ಜೀವನದ ಸ್ಮರಣೆ ತಂದುಕೊಟ್ಟು, ಪುನಃ ಅದಕ್ಕೆ ತೊಡಗಬೇಕೆಂದು ಹೇಳಿದರೆ, ನಾನು ಈ ಕೋಣೆಗೆ ಬಂದು ಈ ಚಿತ್ರವನ್ನೇ ನೋಡುತ್ತೇನೆ. ಆಗ ನನ್ನ ಹೃದಯದಲ್ಲಿ ಕಲೆಯ ಬಗ್ಗೆ ತಿರಸ್ಕಾರ ಭಾವನೆಯು ಹುಟ್ಟುವುದು; ಕಲಾಧ್ಯಾಪಕನಾಗಿರುವುದೇ ಉಚಿತವೆಂದು ನನಗಾಗ ಕಾಣುತ್ತದೆ.

೦೦ ೦೦

ಇಷ್ಟರಲ್ಲಿಯೇ ಸಾಕಷ್ಟು ಕತ್ತಲು ಹರಡಿತ್ತು. ಕೈಲಾಸ ಬಾಬು ದೀರ್ಘಶ್ವಾಸವೊಂದನ್ನು ಬಿಟ್ಟು, ಒಂದು ದೀಪ ಉರಿಸಿತಂದ. ನಮಗೂ ತುಸು ಅಂಜಿಕೆಯೆನಿಸಿತ್ತು. ಕಮಲೆಯ ಮುಖದಲ್ಲಿ ಭಯಾನಕ ಜುಗುಪ್ಸೆ ವ್ಯಕ್ತಪಡುತಿತ್ತು. ನಮ್ಮ ಶರೀರವೂ ಕಂಪಿಸದೆ ಉಳಿಯಲಿಲ್ಲ. ನಿಜವಾಗಿಯೂ ಅದು ಕೈಲಾಸನ ಅತ್ಯುತ್ಕೃಷ್ಟ ಕೃತಿಯಾಗಿತ್ತು; ಆದರೆ, ಅದೆಷ್ಟು ರುದ್ರ ಭಯಾನಕ!

'ನವಯುಗ'ದ ಚಂದಾಹಣ ಬಾಕಿ ಇರುವವರೆಲ್ಲರೂ ಕೂಡಲೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸಲಾಗುತ್ತದೆ.

—ಮೆನೇಜರ್

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭವಾಗಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಅತ್ಯುಪಯುಕ್ತ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2·00. ಉತ್ತಮ ಪ್ರತಿ 2·50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

NAVAYUGA
REGD. NO. M. 3619

UDIPI, THURSDAY
28-7-1960

LICENSE NO. 31
Licensed to Post without Prepayment

ಅಭಿಲಾಷೆ

ಚಂದ್ರನನ್ನು ಅವಶ್ಯ ಗೆಲ್ಲಬೇಕು

ಮಾನವ—ಚಂದ್ರರ ನಡುವೆ ಸಂಬಂಧ ನಿಕಟವಿದೆ. ಚಂದ್ರನಿಂದ ಈ ಪೃಥ್ವಿಯೂ ಪ್ರಭಾವಿತಗೊಳ್ಳುತ್ತಿದೆ. ಆದುದರಿಂದ, ಮಾನವನು ಸುಖಮಯ ಜೀವನ ಬಾಳುವಂತೆ ಚಂದ್ರಲೋಕದ ಉಪಯೋಗ ಪಡೆಯಬೇಕು.

ಚಂದ್ರನಲ್ಲಿ ಮಾನವನು ಜೀವಂತನಾಗಿರಬಹುದಾದ ರಹಸ್ಯಮಯವಾದ ಶಕ್ತಿಯಿದೆಯೆಂದೂ ಆದರ ಪ್ರಭಾವದಿಂದ ವಿಮೋಚನೆಗೊಳ್ಳಲು ಮತ್ತು ಸ್ವಾಪೇಕ್ಷಿಯಾಗಲು ಮನುಷ್ಯನು ಚಂದ್ರಲೋಕವನ್ನಡರಬೇಕೆಂದೂ ಇಂದು ವಿಜ್ಞಾನವು ಒಪ್ಪುತ್ತದೆ.

ಅನಾದಿಕಾಲದಿಂದಲೂ ಚಂದ್ರನ ಸೌಂದರ್ಯ ಮತ್ತದರ ಪ್ರಭಾವವನ್ನು ಮಾನವನು ತಿಳಿದಿದ್ದಾನೆ. ವಿಶ್ವದ ಎಲ್ಲ ಸಮಾಜದ ಪುರಾಣಗಳಲ್ಲಿಯೂ ಚಂದ್ರನನ್ನು ಒಬ್ಬ ಶಕ್ತಿಶಾಲಿಯಾದ ದೇವತೆಯೆಂದು ಉಲ್ಲೇಖಿಸಲಾಗಿದೆ. ಭಾರತದ ಆದಿ ಗ್ರಂಥಗಳಾದ ವೇದಗಳಲ್ಲಿ ಅವನನ್ನು ವನಸ್ಪತಿಗಳ ರಾಜನೆಂದು ಕರೆದಿದೆ. ಭಾರತೀಯ ಜ್ಯೋತಿಷ್ಯ ಶಾಸ್ತ್ರದಲ್ಲಿ ಆತನನ್ನು ಮಾನವರ ಮನಸ್ಸಿನ ನಿಯಾಮಕನೆಂದು ತಿಳಿಯಲಾಗಿದೆ. ಪ್ರಾಚೀನ ಯುರೋಪಿನ ಚಿಕಿತ್ಸಾ ಶಾಸ್ತ್ರಗಳಲ್ಲಿ ಮಾನಸಿಕ ರೋಗಗಳ ಜನಕ ಚಂದ್ರ ಎಂಬುದಾಗಿ ಹೇಳಲಾಗಿದೆ. ಹುಚ್ಚನೆಂಬರ್ಥದ ಲುನಟಿಕ್ (Lunatic), ಮೂನ್‌ಸ್ಟ್ರಕ್ (Moonstruck) ಎಂಬ ಆಂಗ್ಲ ಪದಗಳಿಗೂ ಚಂದ್ರನಿಗೂ ನಿಕಟ ಸಂಬಂಧವಿದೆ.

ಖಗೋಳ ಶಾಸ್ತ್ರಿಗಳು ಚಂದ್ರನನ್ನು ಉನ್ನತ ಹಾಗೂ ಮಹತ್ವಪೂರ್ಣ ಆಸನದಿಂದ ಕೆಳಗುರುಳಿಸಿದರು. ದೇವತೆಯೆಂಬ ಗೌರವ ಪಾತ್ರನಾದ ಚಂದ್ರಮನಿಗೆ ಕುಜನೆಂಬ ಹೆಸರಿತ್ತು ಆದ ಭೂಮಿಯ ಉಪಗ್ರಹ (ಕು = ಭೂಮಿ; ಜ = ಜನಿಸಿದವ) ವೆಂದು ಸಿದ್ಧಮಾಡಿ ತೋರಿಸಿದರು. ಭೂಮಿಯು ಚಂದ್ರನಿಗಿಂತ ೮೦ ಪಾಲಷ್ಟು ದೊಡ್ಡದಾಗಿದೆ. ಚಂದ್ರನು ಭೂಮಿಗೆ ನೀಡುವ ಬೆಳಕಿಗಿಂತ ೮೦ ಪಾಲಿನಷ್ಟು ಪ್ರಕಾಶವನ್ನು ಭೂಮಿಯೇ ಚಂದ್ರನಿಗೆ ಕೊಡುವುದು. ಸೂರ್ಯನ ರಶ್ಮಿಯ ಒಂದು ಲಕ್ಷದಲ್ಲಿ ಆರು ಪಾಲು ಜ್ಯೋತಿ ಮಾತ್ರ ಚಂದ್ರನಲ್ಲಿದೆ ಎಂದು ಮುಂತಾಗಿ ಅವರು ತೋರಿಸಿಕೊಟ್ಟರು. ಚಂದ್ರಗರ್ಭದಲ್ಲಿ ಯಾವ ಯಾವ ಬಹುಮೂಲ್ಯ ಲೋಹಗಳಿವೆಯೆಂಬುದರ ಕಲ್ಪನೆಯಿದುವರೆಗೂ ಆಗಿರದಿದ್ದರೂ ಆತನಲ್ಲಿ ನೀರು ಅಥವಾ ಗಾಳಿಯಿಲ್ಲವೆಂಬುದು ನಿಶ್ಚಿತವಾಗಿದೆ. ಭಾರದಲ್ಲಿ ಭೂಮಿಯದಕ್ಕಿಂತ ಬಹಳಷ್ಟು ಕಡಿಮೆಯಿದ್ದಾನೆ. ಅಲ್ಲದೇ ಆತನ ಗುರುತ್ವಾಕರ್ಷಣ ಶಕ್ತಿಯು ಅತ್ಯಲ್ಪವಾಗಿದೆ.

ಚಂದ್ರನು ಸುಂದರ ಮತ್ತು ಆಹ್ಲಾದಕಾರಕನಾಗಲು ಕಾರಣವೇನು? ಚಂದ್ರನ ಉಷ್ಣತೆಯು ತೀರ ವೈಪರೀತ್ಯವೆಂದು ವೈಜ್ಞಾನಿಗಳು ಕಂಡುಹಿಡಿದಿದ್ದಾರೆ. ಹಗಲಿನಲ್ಲಿ ಕುದಿಯುವ ನೀರಿಗಿಂತಲೂ ಅಧಿಕ ಉಷ್ಣತೆಯಿದ್ದರೆ, ರಾತ್ರಿ ಹೊತ್ತು ಶೂನ್ಯಕ್ಕಿಂತಲೂ ೨೮೦ ಡಿಗ್ರಿಗಳಷ್ಟು ಕಡಿಮೆ! ಅವನ ಒಂದು ಗೋಳಾರ್ಧ ಸದಾ ಅಂಧಕಾರಮಯವಾಗಿರುವುದು; ಇನ್ನೊಂದರ್ಧ ಕುಲುಮೆಯಂತೆ ಉರಿಯುತ್ತ ಇರುವುದು. ಉಷ್ಣತೆಯ ಈ ವೈಪರೀತ್ಯದಿಂದಾಗಿ ಅಸಹಾಯಕನಾದ ಚಂದ್ರನ ಶರೀರ ನಿಷ್ಪ್ರಯೋಜಕವೆನಿಸಿದೆ. ಇಂದಿಗೆ ನಾಲ್ಕು ಅರಬ ವರ್ಷಗಳಿಗೆ ಹಿಂದೆ ಆದ ಭಯಂಕರ ಜ್ವಾಲಾಮುಖಿ ವಿಸ್ಫೋಟಗಳಿಂದ ಮತ್ತು ಇಂದಿಗೂ ಆಗಾಗ ನಡೆಯುತ್ತಿರುವ ಉಲ್ಕಾಪ್ರಹಾರಗಳಿಂದ ಚಂದ್ರನ ಮುಖ ತೀರ ಅವಲಕ್ಷಣಯುಕ್ತವಾಗಿದೆ. ಅದರಲ್ಲಿ ಮೂರು ಸಾವಿರ ಹೊಂಡಗಳಿವೆ; ಇವುಗಳಲ್ಲಿ ಕೆಲವು ನೂರಾರು ಮೈಲು ಉದ್ದದ ಮತ್ತು ನಾಲ್ಕಾರು ಮೈಲು ಆಳದವೂ ಇರುತ್ತವೆ. ಇಂತಹ ಕಣಿವೆಗಳಿರುವಾಗ, ಗೌರೀಶಂಕರದಂತಹ ಉನ್ನತೋನ್ನತ ಶಿಖರಗಳೂ ಇರಬೇಕು ತಾನೆ? ಈ ಚಂದ್ರನನ್ನು ಕವಿ ಹೇಗೆ ವರ್ಣಿಸುತ್ತಾನೆ! ಚಂದನದಂತೆ ಶೀತಲ ಮತ್ತು ಪ್ರಿಯೆಯ ಮುಖದಂತೆ ಕಮನೀಯವಾಗಿದೆಯಂತೆ! ಚಂದ್ರಮುಖಿ, ಚಂದ್ರಬಿಂಬಾನನೆ ಮೊದಲಾದ ಹೆಸರುಗಳಿಗೆ ಮಿತಿಯೆಲ್ಲಿ?

ವೈಜ್ಞಾನಿಕರು ತಮ್ಮ ಸಂಶೋಧನೆಯನ್ನು ಮುಂದುವರಿಸುತ್ತ ಹೋದಂತೆ ಚಂದ್ರನ ರಹಸ್ಯಗಳು ಒಂದೊಂದಾಗಿ ಹೊರಬೀಳತೊಡಗಿದುವು. ಚಂದ್ರನು ಸರ್ವಥಾ ಪ್ರಭಾವಹೀನನಲ್ಲ ಎಂಬ ಸತ್ಯವು ಬಹಿರಂಗವಾಯಿತು. ಚಂದ್ರನು ಕೇವಲ ತರಳವಾದ ಸಮುದ್ರದ ಜಲವನ್ನು ಆಕರ್ಷಿಸಿ, ಅದರಲ್ಲಿ ತೆರೆಗಳನ್ನು ಹುಟ್ಟಿಸುವುದು ಮಾತ್ರವಲ್ಲ; ಅವನು ಗಟ್ಟಿಯಾದ ಭೂಮಿಯನ್ನೂ ತನ್ನತ್ತ ಸೆಳೆಯುತ್ತಾನೆಂದು ಈಗ ವ್ಯಕ್ತಪಟ್ಟಿದೆ. ಹುಣ್ಣಿಮೆಯ ದಿನ ಚಂದ್ರನಿಂದ ನೇರ ಕೆಳಗಿರುವ ಭೂಮಿಯು ಮುಕ್ಕಾಲಿಂಚು ಉಬ್ಬುವುದೆಂದು ತಿಳಿದುಬಂದಿದೆ. ಹುಣ್ಣಿಮೆಯೆದುರು ಉನ್ಮತ್ತರಿಗೆ ಹುಚ್ಚು ಪ್ರಬಲಿಸುವುದಿನ್ನೂ ಏಕೆಂದು ಸಿದ್ಧವಾಗಿಲ್ಲ. ಆದರೂ ವನಸ್ಪತಿಗಳ ವೃದ್ಧಿಯ ಮೇಲೆ ಚಂದ್ರನ ಪ್ರಭಾವ ಅವಶ್ಯ ಬೀಳುವುದು ಎಂಬುದು ಖಂಡಿತವಾಗಿದೆ.

ಮೀನು ಅಥವಾ ಮೀನಿನಂತಹ ರೂಪದಲ್ಲಿ ಮಾನವನು ಮೊದಲು ಸಮುದ್ರದಲ್ಲಿ ಹುಟ್ಟಿದನೆಂದು ಡಾರ್ವಿನನು ಪ್ರತಿಪಾದಿಸಿದ್ದನು. ಅನಂತರ ಸಮುದ್ರದ ನೀರಿನಿಂದ ಬೇರೆಯಾಗಿ ತಟದಲ್ಲಿ ತೆರೆಗಳ ಹೊಡೆತವನ್ನು ತಿನ್ನುತ್ತ ಕೋಟಿಗಟ್ಟಲೆಯ ವರ್ಷಗಳ ಕಾಲ ಬಿದ್ದುಕೊಂಡಿರತೊಡಗಿದನು. ಮುಂದೆ ಕಾಲಕ್ರಮದಲ್ಲಿ ಇಂದಿನ ಮಾನವನ ರೂಪವನ್ನು ಪಡೆದನು.

ಸಮುದ್ರದ ದಡದಲ್ಲಿಯೇ ಬಹುಕಾಲ ಚಂದ್ರನ ಆಕರ್ಷಣ ಶಕ್ತಿಯ ಪ್ರಭಾವಕ್ಕೆ ಬಿದ್ದುದರಿಂದ, ಚಂದ್ರನ ಕಲೆಗಳ ವೃದ್ಧಿ ಮತ್ತು ಕ್ಷಯಗಳೊಡನೆ ಮಾನವನ ಶಾರೀರಿಕ ಹಾಗೂ ಮಾನಸಿಕ ಸ್ಥಿತಿಯಲ್ಲಿ ಏರಿಳಿತಗಳಾಗುತ್ತಿವೆಯೆನ್ನಬಹುದು. ಇದು ಬಹುದೂರದ ಕಲ್ಪನೆ ಮಾತ್ರ ಏಕೆಂದರೆ, ಇದುವರೆಗೂ ವೈಜ್ಞಾನಿಕರ ಸಂಶೋಧನೆಗೆ ಈ ವಿಚಾರ ಸತ್ಯ ಅಥವಾ ಮಿಥ್ಯವೆಂಬುದು ಸಿದ್ಧವಾಗಿ ಕಂಡಿಲ್ಲ.

ವಿದ್ಯುತ್ ಪ್ರಭಾವಿತ ಕಣವು ಪ್ರತ್ಯೇಕ ಪ್ರಾಣಿಯಲ್ಲೂ ಇದೆಯೆಂಬುದು ವಿಜ್ಞಾನ ಸಮ್ಮತವಾದ ಸಿದ್ಧಾಂತವಾಗಿದೆ. ಯಾವುದಾದರೂ ವಿದ್ಯುತ್ ಕ್ಷೇತ್ರದ ಸಂಪರ್ಕ ದೊರೆತೊಡನೆಯೇ ಪ್ರಾಣಿಯಲ್ಲಿರುವ ಕಣಗಳು ಪ್ರಭಾವಿತಗೊಳ್ಳುತ್ತವೆ, ಅಥವಾ ಆ ಪ್ರದೇಶವನ್ನು ಪ್ರಭಾವಿತಗೊಳಿಸುತ್ತವೆ. ಪ್ರಾಣಿಗಳಲ್ಲಿ ಮಾತ್ರವಲ್ಲ ಗಿಡಮರಗಳ ಮೇಲೆಯೂ ವಿದ್ಯುತ್ ಸಂಪರ್ಕ ಪ್ರಯೋಗವನ್ನು ಮಾಡಿದಾಗ, ಅವುಗಳಲ್ಲಿ ಪ್ರತಿಪದೆಯಿಂದ ಪೂರ್ಣಿಮೆಯವರೆಗೆ ಕ್ರಮವಾಗಿ ಏರಿಳಿತಗಳಾಗುತ್ತಿರುವುದು ವ್ಯಕ್ತಪಟ್ಟಿದೆ. ಸ್ತ್ರೀ ಪುರುಷರ ಶರೀರದಲ್ಲಿಯೂ ವಿದ್ಯುತ್—ಪ್ರಭಾವಿತ ಪಾಕ್ಷಿಕ ಲಯವು ಲಭಿಸಿದೆ. ಚಂದ್ರನ ಹ್ರಾಸ—ವೃದ್ಧಿ ಮತ್ತು ಮಾನವ ಶರೀರಗಳ ನಡುವೆಯೂ ಸಂಬಂಧವಿದೆಯೆಂದು ತಿಳಿದುಬಂದಿದೆ. ಚಂದ್ರ ಮತ್ತು ನರನಾರಿಯರ ಚರಿತ್ರವ್ಯವಹಾರಗಳ ಆಳವಾದ ಸಂಬಂಧವು ಜೋಡಿಸಲ್ಪಟ್ಟ ಪ್ರಾಚೀನ ದಂತಕಥೆಗಳು ಮತ್ತು ಇಟ್ಟಿರುವ ವಿಶ್ವಾಸಗಳ ಸತ್ಯಾಸತ್ಯತೆಗಳ ಅರಿವಾಗಬೇಕಾದರೆ, ಈ ಬಗ್ಗೆ ಇನ್ನೂ ಸಂಶೋಧನೆಗಳು ನಡೆಯಬೇಕು.

ಮನುಷ್ಯನ ಮೇಲೆ ಚಂದ್ರ ಮತ್ತು ಬೇರೆ ಬೇರೆ ಗ್ರಹನಕ್ಷತ್ರಗಳ ಪ್ರಭಾವವನ್ನು ವಿಜ್ಞಾನವು ತಿಳಿದುಕೊಂಡರೆ, ಭಾರತದ ವಿಲಕ್ಷಣ ಫಲಿತ ಜ್ಯೋತಿಷದ ಬಾಗಿಲು ತೆರೆಯಲಾರದೆ?

ಚಂದ್ರ ಮತ್ತಿತರ ಗ್ರಹಗಳಲ್ಲಿ ಜಲ ವಾಯುಗಳಿಲ್ಲದಿರಬಹುದು; ಅವುಗಳ ಗರ್ಭದಲ್ಲಿ ಬಂಗಾರ—ಬೆಳ್ಳಿಗಳಿಲ್ಲದಿರಬಹುದು. ಆದರೂ ಮನುಷ್ಯ ಜೀವನಕ್ಕೆ ಅನುಕೂಲವಾದ ಅಜ್ಞಾತ ಶಕ್ತಿಯಿರುವುದಾದರೆ, ಆತನು ಅವಶ್ಯ ಚಂದ್ರ ಲೋಕವನ್ನು ಗೆಲ್ಲಬೇಕು. ಆದರೆ, ಅಲ್ಲಿಗೆ ಮಾನವನು ಸಶರೀರವಾಗಿ ತೆರಳಿ, ಅಲ್ಲಿನ ಕಷ್ಟಗಳ ಬದಲು, ಚಂದ್ರನ ಪ್ರಭಾವ-ಶಕ್ತಿಗಳನ್ನು ಕರಗತಗೊಳಿಸಿ, ಜನಜನದ ಜೀವನವು ಸುಖಮಯವಾಗುವಂತೆ ಉಪಯೋಗಿಸಿಕೊಂಡಾಗಲೇ ನಾವು ಚಂದ್ರಲೋಕವನ್ನು ನಿಜವಾಗಿ ಗೆದ್ದಂತಾಗುವುದು. ಇಂದಿಗೆ ಆ ಸುದಿನವು ಬಹುದೂರವಿರಲಾರದು ಎಂದು ಆಶಿಸಬಹುದು.

ನಿಮಗೆ ಯಾವುದು?

ದಿನ.................. ನಿಮ್ಮ ಸಂಪಾದನೆ ದಿನಂಪ್ರತಿ
ನಿಮ್ಮ ಕೈಗೆ ಬರುವುದಾದರೆ..........ಪಿಗ್ಮಿ
'ಪಿಗ್ಮಿ' ನಿಮಗೆ ಅನುಕೂಲವಾಗಿದೆ.
ಪಿಗ್ಮಿ ಸಂಗ್ರಾಹಕನು ನಿಮ್ಮಲ್ಲಿಗೆ
ಬಂದು ನಿಮ್ಮ ಚಿಲ್ಲರೆ ಕಾಸುಗಳನ್ನು
ಸಿಂಡಿಕೇಟ್ ಬೇಂಕಿನಲ್ಲಿ ನಿಮಗಾಗಿ
ಸಂಗ್ರಹಿಸಿಡುವನು.

ತಿಂಗಳು..........ನೀವು ತಿಂಗಳು ತಿಂಗಳು ವೇತನ
ಪಡೆಯುವವರಾದರೆ.................. ಕ್ಯುಮುಲೇಟಿವ್
'ಕ್ಯುಮುಲೇಟಿವ್' ನಿಮಗೆ ತಕ್ಕದಾಗಿದೆ.
ಸಿಂಡಿಕೇಟ್ ಬೇಂಕಿನಲ್ಲಿ ಹತ್ತೋ,
ನೂರೋ ನೀವು ಉಳಿಸುತ್ತಿರಬಹುದು.

ವರುಷ....ನಿಮ್ಮ ಆದಾಯ ವರುಷಂಪ್ರತಿ
ಬರುವಂತಹದಾದರೆ......................ಇನ್ವೆಸ್ಟರ್ಸ್ ಏಜನ್ಸಿ
'ಇನ್ವೆಸ್ಟರ್ಸ್ ಏಜನ್ಸಿ' ನಿಮಗೆ
ಯೋಗ್ಯವಾಗಿದೆ. ಸಿಂಡಿಕೇಟ್
ಬೇಂಕಿನ ಸಮರ್ಥ ಅಧಿಕಾರಿಗಳಿರುವ
ಈ ವಿಭಾಗ ನಿಮ್ಮ ಉಳಿತಾಯವನ್ನು
ಅಭಿವೃದ್ಧಿಗೊಳಿಸಲು ನೆರವಾಗುತ್ತದೆ.

ಸಿಂಡಿಕೇಟ್ ಬೇಂಕ್

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ; ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೪೮ 4-8-1960 Vol. 39. No. 48.

ಪ್ರಚಲಿತ ಪ್ರಸಂಗ

ಭಾರತ ಒಕ್ಕೂಟದಲ್ಲಿ ಒಂದು ಹೊಸ ರಾಜ್ಯ

ನಾಗಾ ಬಂಡುಗಾರರನ್ನು ಅಂಕಿತದಲ್ಲಿರಿಸುವುದು ಕಷ್ಟಸಾಧ್ಯವಾಗಿ ಬಂದುದರಿಂದ ಪ್ರತ್ಯೇಕ ನಾಗಾ ಲೇಂಡ್‌ನ್ನು ಸ್ಥಾಪಿಸುವುದಕ್ಕೀಗ ಭಾರತ ಸರಕಾರ ತಾತ್ವಿಕವಾಗಿ ಒಪ್ಪಿಗೆಯಿತ್ತಿದೆ. ಈ ಬಗ್ಗೆ ಅವಶ್ಯಕ ಶಾಸನಗಳ ರಚನೆ ಶೀಘ್ರದಲ್ಲಿಯೇ ಆಗುವ ಸಂಭವವಿದೆ.

ನಾಗಾ ವಿದ್ರೋಹಿಗಳ ನಾಯಕ ಫಿಜೋ ಲಂಡನ್ ಮಹಾನಗರದಲ್ಲಿ ಕಾನೂನುತಜ್ಞರ ಸಲಹೆಯನ್ನು ಪಡೆಯುತ್ತಿರುವಾಗ, ಇತ್ತ ಭಾರತದಲ್ಲಿ ನಾಗಾ ಜನತೆಯ ಪ್ರತಿನಿಧಿ ಮಂಡಳವು ಭಾರತ ಸರಕಾರದೊಡನೆ ತಮ್ಮ ಬೇಡಿಕೆಯನ್ನು ಮುಂದಿಟ್ಟಿತು. ಭಾರತ ಸರಕಾರವಾದರೂ ಈ ನಿಯೋಗದ ಮನವಿಯನ್ನು ಸಮಾಧಾನರೀತಿಯಿಂದ ಪರಿಶೀಲಿಸಿ, ಭಾರತ ಒಕ್ಕೂಟದಲ್ಲಿ ಅಂತರ್ಗತವಾಗಿರುವ ಪ್ರತ್ಯೇಕ ನಾಗಾ ರಾಜ್ಯವೊಂದನ್ನು ರಚಿಸಲು ತಾತ್ವಿಕವಾಗಿ ಒಪ್ಪಿಕೊಂಡಿತು. ಡಾ. ಇಮುಕೋಟಿಲಬಾ ಆವೋರವರು, ಭಾರತೀಯ ಪ್ರಧಾನಿ ಪಂಡಿತ ನೆಹರೂರವರೊಡನೆ ಬಹುಹೊತ್ತು ಮಾತನಾಡಿ ತಮ್ಮ ಅಭಿಲಾಷೆಯನ್ನು ತೋಡಿಕೊಂಡರು. ಇದರ ಪ್ರಭಾವದಿಂದಾಗಿ ಪ್ರತ್ಯೇಕ ನಾಗಾ ರಾಜ್ಯವು ನಿರ್ಮಾಣವಾಗುವುದು ಸುನಿಶ್ಚಿತವೆಂಬಂತಾಗಿದೆ.

ನಾಗಾ ಪರ್ವತಗಳ ಪ್ರದೇಶ ಮತ್ತು ತುಯೆನ್‌ಸಾಂಗ್ ಕ್ಷೇತ್ರಗಳನ್ನು ಒಂದುಗೂಡಿಸಿ ನಿಯೋಜಿತ ನಾಗಾಲೇಂಡ್ ರಾಜ್ಯವು ರೂಪಗೊಳ್ಳುವುದು. ಆರು ಸಾವಿರ ಚದರಮೈಲು ವಿಸ್ತಾರವುಳ್ಳ ಈ ಪ್ರದೇಶವು ಸುಮಾರು ಮೂರೂವರೆ ಲಕ್ಷ ಜನಸಂಖ್ಯೆಯಿರುತ್ತದೆ. ಅಸ್ಸಾಮದ ರಾಜ್ಯಪಾಲರ ಅಂಕಿತದಲ್ಲಿರುವ ನಾಗಾ ರಾಜ್ಯ ೧೯೫೭ರ ದಶಂಬರ ಮೊದಲನೆಯ ದಿನ ಸ್ಥಾಪನೆಯಾಗಿತ್ತು. ಈ ನಾಗಾರಾಜ್ಯದಲ್ಲಿ ಹಿಂದೆ ಅಸ್ಸಾಮದಲ್ಲಿ ಸೇರಿದ್ದ ನಾಗಾ ಬೆಟ್ಟದ ಜಿಲ್ಲೆ ಮತ್ತು ಉಪಾಸಿಯ ತುಏನ್‌ಸಾಂಗ್ ಗಡಿಪ್ರದೇಶಗಳು ಅಡಕವಾಗಿವೆ

ನಾಗಾ ಜನತೆಯ ನಿಯೋಗವು ಮುಂದಿರಿಸಿದ ಪ್ರಸ್ತಾವದ ಮುಖ್ಯಾಂಶಗಳನ್ನು ಭಾರತ ಸರಕಾರವು ಸ್ವೀಕರಿಸಿದೆ. ನಿಯೋಜಿತ ನಾಗಾಲೇಂಡ್ ರಾಜ್ಯವು ಭಾರತ ಒಕ್ಕೂಟದ ಒಂದು ಅಂಗವಾಗಿರುವುದು. ಇದಕ್ಕೆ ಒಬ್ಬ ರಾಜ್ಯಪಾಲರಿರುವರು. ಒಂದು ಮಂತ್ರಿ ಮಂಡಳ ಮತ್ತು ವಿಧಾನ ಸಭೆಯೊಂದಿರುವುದು. ಭಾರತೀಯ ಸಂಸತ್ತಿನಲ್ಲಿ ಅದಕ್ಕೆ ಪ್ರಾತಿನಿಧ್ಯವಿರುವುದು. ಭಾರತ ಸರಕಾರದಿಂದ ಆರ್ಥಿಕ ಸಹಾಯವೂ ದೊರೆಯುವುದು; ಆಡಳಿತೆಯಲ್ಲಿ ರಾಜ್ಯಪಾಲರಿಗೆ ಸಹಾಯ ನೀಡಲು ಬೇರೆ ಬೇರೆ ನಾಗಾ ಉಪಜಾತಿಗಳ ಪ್ರತಿನಿಧಿಗಳ ಒಂದು ಮಧ್ಯವರ್ತಿ ಮಂಡಳವಿರುವುದು.

ಹೊಸ ನಾಗಾ ರಾಜ್ಯದ ಉದ್ಘಾಟನೆಯು ಎಂದು ಆಗುವುದೆಂದು ಇದು ವರೆಗೆ ಸುನಿಶ್ಚಿತವಾಗಿಲ್ಲ. ಆದರೂ ಈ ಬಗ್ಗೆ ಆವಶ್ಯಕ ಶಾಸನವನ್ನು ಅತಿ ಶೀಘ್ರದಲ್ಲಿಯೇ ರಚಿಸುವ ಯೋಜನೆಯು ಭಾರತ ಸರಕಾರಕ್ಕಿರುವುದು. ದೆಹಲಿಗೆ ಆಗಮಿಸಿದ ನಾಗಾ ನಿಯೋಗದವರು ಮರಳಿಹೋದೊಡನೆಯೇ ಮಧ್ಯವರ್ತಿ ಮಂಡಳದ ರಚನೆಯಲ್ಲಿ ಕಾರ್ಯತತ್ಪರರಾಗುವರೆಂದು ತಿಳಿಯುತ್ತದೆ. ಪ್ರಧಾನಿ ನೆಹರೂರವರು ನಾಗಾ ಪ್ರತಿನಿಧಿಗಳೊಡನೆ ನಡಸಿದ ಮಾತುಕತೆಗಳ ಕುರಿತಾದ ಹೇಳಿಕೆಯೊಂದನ್ನು ಸಂಸತ್ತಿನಲ್ಲಿ ನೀಡುವವೆಂದು ಹೇಳಲಾಗಿದೆ. ನಾಗಾ ಗುಡ್ಡಕಾಡು—ತುಏನಸಾಂಗ್ ಕ್ಷೇತ್ರದಲ್ಲಿ ರಾಜಕೀಯ ಸುಧಾರಣೆಯ ಯೋಜನೆಗೆ ವೈಧಾನಿಕ ರೂಪನೀಯುವ ಸಲುವಾಗಿ ಆಗೋಸ್ತು ೧ರಂದು ಪ್ರಾರಂಭವಾದ ಸಂಸದಧಿವೇಶನದಲ್ಲಿಯೇ—ಒಂದು ಬಿಲ್ಲನ್ನು ಮಂಡಿಸಲಾಗುವುದು.

ನಾಗಾ ನಿಯೋಗದ ನಾಯಕ ಶ್ರೀ ಆವೋರವರು ತಮ್ಮ ಮಾತುಕತೆಗಳು ಯಶಸ್ವಿಯಾಗಿವೆಯೆಂದೂ ತಮ್ಮ ಬೇಡಿಕೆಗಳಿಗೆ ಸಂಸತ್ತು ಅವಶ್ಯ ಮನ್ನಣೆ ನೀಡುವುದೆಂದೂ ಆಶೆ ವ್ಯಕ್ತಪಡಿಸಿದರು. ಹೊಸ ರಾಜ್ಯದ ವಿಧಾನ ಸಭೆ ಮತ್ತು ಮಂತ್ರಿಮಂಡಳಿಯ ರಚನೆಯು ಈಗಿರುವ ನಾಗಾರಾಜ್ಯದ ಪ್ರಗತಿಯನ್ನು ಹೊಂದಿಕೊಂಡಿವೆಯೆಂದು ಹೇಳಿದರು.

ಮೃತಗೊಂಡ ಸೈನಿಕರಿಗೆ ಅಮೇರಿಕನ್ ಅಧ್ಯಕ್ಷ ಶ್ರೀ ಐಸನ್ ಹಾವರ್ ಗೌರವಾರ್ಪಣೆ ಮಾಡುತ್ತಿರುವುದು.

ನಾಗಾ ಲೇಂಡನ್ನು ಪೂರ್ಣ ಜವಾಬ್ದಾರಿಯ ಸರಕಾರದ ರಚನೆಗಾಗಿ ತರಬೇತಿಗೊಳಿಸಲು ಈ ಪ್ರದೇಶದ ಸದ್ಯದ ಶಾಸನಾಧಿಕಾರಿಗಳು ತಮ್ಮ ತಮ್ಮ ಹುದ್ದೆಗಳಲ್ಲಿಯೇ ಉಳಿಯುವರು; ಪ್ರತಿಜ್ಞಾಬದ್ಧರಾದ ವನ್ಯ ಪ್ರತಿನಿಧಿಗಳ ಮಧ್ಯವರ್ತಿ ಮಂಡಳವು ರಾಜ್ಯಪಾಲರಿಗೆ ಸಲಹೆ ನೀಡುವುದು. ಅಸ್ಸಾಮದ ರಾಜ್ಯಪಾಲರು ಈಗ ಓರ್ವ ಸಲಹೆಗಾರ ಮತ್ತು ಓರ್ವ ಕಮಿಶನರರ ಸಹಾಯದಿಂದ ಈ ಪ್ರದೇಶದ ಆಡಳಿತೆಯನ್ನು ನಿರ್ವಹಿಸುತ್ತಿದ್ದಾರೆ.

ನಾಗಾ ಜನರು ಮೊದಲು ತಮ್ಮ ರಾಜ್ಯಕ್ಕೆ ಪ್ರತ್ಯೇಕ ರಾಜ್ಯಪಾಲರಿರಬೇಕೆಂದು ಕೇಳಿಕೊಂಡಿದ್ದರು. ಆದರೆ, ವಿದೇಶೀಯ ಮಂತ್ರಿಶಾಖೆಯ ಅಧಿಕಾರಿಗಳೊಡನೆ ಮಾತುಕತೆ ನಡೆದ ಬಳಿಕ, ಈ ಸಂಬಂಧದಲ್ಲಿ ರಾಷ್ಟ್ರಪತಿಯವರು ನೀಡುವ ನಿರ್ಣಯವನ್ನು ಅಂಗೀಕರಿಸಲು ಒಪ್ಪಿದರು. ಸದ್ಯ ನಾಗಾ ಪ್ರದೇಶದಲ್ಲಿ ರಾಷ್ಟ್ರಪತಿಗಳ ಪ್ರತಿನಿಧಿಯಾಗಿ ಆಡಳಿತೆ ನಿರ್ವಹಿಸುತ್ತಿರುವ ಅಸ್ಸಾಮದ ರಾಜ್ಯಪಾಲರೇ ಮುಂದೆಯೂ ಈ ಕಾರ್ಯವನ್ನು ನಡೆಸುವರೆಂಬುದಾಗಿ ವಿಶ್ವಾಸ ಪಡಲಾಗಿದೆ.

ಇನ್ನೊಂದು ಮುಖ್ಯವಾದ ಭಿನ್ನಾಭಿಪ್ರಾಯವೆಂದರೆ, ನಾಗಾ ರಾಜ್ಯಕ್ಕೆ ಭಾರತೀಯ ಸಂಸತ್ತಿನಲ್ಲಿ ಎಷ್ಟು ಪ್ರಾತಿನಿಧ್ಯ ನೀಡಬೇಕು ಎಂಬುದಾಗಿತ್ತು. ನಾಗಾ ನಿಯೋಗವು ಲೋಕ ಸಭೆಯಲ್ಲಿ ಎರಡು ಮತ್ತು ರಾಜ್ಯ ಸಭೆಯಲ್ಲಿ ಒಂದು ಸ್ಥಾನವನ್ನು ಕೇಳಿಕೊಂಡಿತ್ತು. ಆದರೆ, ಮಾತುಕತೆಯ ಪರಿಣಾಮವಾಗಿ ಎರಡೂ ಮನೆಗಳಲ್ಲಿ ಒಂದೊಂದು ಸದಸ್ಯ ಸ್ಥಾನವನ್ನು ಹೊಸ ರಾಜ್ಯಕ್ಕೆ ಒದಗಿಸಲು ನಿರ್ಧರಿಸಲಾಯಿತು.

ಈ ನೂತನ ಏರ್ಪಾಡಿನ ಮಾತುಕತೆಗಳ ಬಗ್ಗೆ ನಾಗಾ ಬಂಡುಗಾರರ ಪ್ರತಿಕ್ರಿಯೆಗಳು ಹೇಗಿರಬಹುದೆಂದು ಈಗಲೇ ಹೇಳುವಂತಿಲ್ಲ. ನಾಗಾ ಜನತೆಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಮತ್ತು ಸದ್ಯದ ನಿಯೋಗದ ಸದಸ್ಯರಾಗಿರುವ ಶ್ರೀ ಜಸೋಕಿಯವರು 'ನಿಷ್ಠಾವಂತ ವಿದ್ರೋಹಿ'ಗಳು ತಮ್ಮ ಶಸ್ತ್ರಗಳನ್ನು ಬಗ್ಗಿಸುವರೆಂಬ ವಿಶ್ವಾಸವಿಡುವುದು ಅಸಾಧ್ಯವಾದರೂ ನಾವಿನ್ನು ವಿದ್ರೋಹಿಗಳ ಮೇಲೆ ಪ್ರಬಲ ಪ್ರಭಾವ ಬೀರುವುದು ಎಂಬುದಾಗಿ ಹಾರೈಸಿದ್ದಾರೆ.

ನಾಗಾ ಪ್ರತಿನಿಧಿಗಳು ಪ್ರಧಾನಿ ನೆಹರೂರವರನ್ನು ನಾಗಾ ರಾಜ್ಯದ ಸಂದರ್ಶ

(೨ನೇ ಪುಟ ನೋಡಿರಿ)

ಕಥಾವಿಹಾರ

ಕರಗಿ ಹರಿದ ವಜ್ರ

ರಾಯರ ಜೀತದಾಳು ಕರಿಯು ದುಡಿಯಲು ಬಾರದಿರಲು ಅವನನ್ನು ಅರಸಿಕೊಂಡು ಬಂದ ರಾಯರು ಆತನ ಮನೆಯಲ್ಲಿ ಕಂಡುದೇನು? ಅವರ ವಜ್ರಕಠೋರ ಹೃದಯವೂ ಕರಗಿ ನೀರಾಗುವ ಸನ್ನಿವೇಶವನ್ನು!

ಕಥೆಗಾರರು: ಶ್ರೀ ಎಚ್. ಆನಂದರಾಮ ಅಡಿಗ.

"ಒಡೆಯಾ...." ದೀನವದನನಾಗಿ ಕರಿಯ ಕರೆದ.

"ಹ್ಞಾಂ ..." ಎಂದು ಅರ್ಭಟಿಸಿದರು. ರಾಯರು. ಅವರ ಹೂಂಕಾರಕ್ಕೆ ಇಡಿ ಮನೆಯೇ ಮಾರ್ದನಿಗೊಟ್ಟಿತ್ತು. ನಡುನಡುಗಿ ಕೂತು ಕಂಬನಿ ಸೂಸಲು ತೊಡಗಿದ್ದ ಕರಿಯ!

"ಏನು ಬಂದೆ ಕರಿಯಾ?" ಎಂದರು ರಾಯರು ಮೂಗು ಮುರಿದು.

"ದೇವರೆ, ನನ್ನ ಮಗಳ ಮದುವೆಎಂತ ಆಲೋಚನೆ ಮಾಡಿದ್ದೇನೆ. ನೀವು ಉದಾರ ಮನಸ್ಸಿನಿಂದ ಏನಾದರೂ ಸಹಾಯ ಮಾಡಬೇಕು..."

"ಓಹೋ, ನೀನು ಕೇಳುವುದು ಹಣ ತಾನೆ? ಅದೇ ಈಗ ನನ್ನಲ್ಲಿಲ್ಲವಾಗಿದೆ! ಅದಕ್ಕಾಗಿ ನೀನಿತ್ತ ಬರಬೇಕಾಗಿರಲಿಲ್ಲ ನೋಡು!"

"ಒಡೆಯರೇ, ಸಮುದ್ರವೇ ನೀರು ಇಲ್ಲ ಎಂದರೆ, ಮತ್ತೆಲ್ಲಿಗೆ ಹೋಗಬೇಕು ಬಡವ!"

"ಅದೊಂದೂ ನಾನರಿಯೆ," ರಾಯರು ಗುಡುಗಿದರು.

"ಒಡೆಯರೇ, ನನ್ನಲ್ಲಿ ನಂಬುಗೆಯಿಲ್ಲವೇ? ಹಣದ ಬದಲಾಗಿ ನಿಮ್ಮಲ್ಲಿಯೇ ದುಡಿಯುತ್ತೇನೆ ಇಷ್ಟು, ನಿಮ್ಮ ಹಣವನ್ನು ಎಲ್ಲಾದರೂ ದುಡಿದು ತಂದೊಪ್ಪಿಸುತ್ತೇನೆ' ಎಂದ ಕರಿಯ ಧನಿಯರ ಕಾಲು ಹಿಡಿದ.

'ನೀನು ಕೊಡುವ ಮನುಷ್ಯನಲ್ಲವೆಂದು ನಾನು ಹೇಳಿದ್ದಲ್ಲ. ಆದರೆ....'

"ನೀವು ಹಾಗೆ ಹೇಳಬೇಡಿ ಒಡೆಯರೇ, ಆದರೆ.... ಎಂದರೆ, ನನಗೆ ಹೇಗೆ ತಿಳಿಯಬೇಕು ಸ್ವಾಮಿ...'

"ಮತ್ತೇನಲ್ಲ.... ನೀನು ಸಾಯುವವರೆಗೆ ದುಡಿಯಬೇಕು. ಹೆಂಡತಿ ಮಕ್ಕಳನ್ನು ಬೇರೆ ಕೆಲಸಗಳಿಗೆ ನಮ್ಮಲ್ಲಿಗೆ ಕಳಿಸಬೇಕು. ನಾನು ಹೇಳಿದ ಮಾತಿಗೆ ಒಪ್ಪುವುದಾದರೆ, ನಿನ್ನ ಮಗಳ ಮದುವೆಯ ಖರ್ಚನ್ನು ವಹಿಸುವೆ" ಎಂದು ನಗುತ್ತ ನುಡಿದರು ರಾಯರು.

"ಮಕ್ಕಳ ಗತಿ....!"— ವಿಸ್ಮಯ ಭಯಭೀತನಾಗಿ ಕರಿಯ ಕಂಗಾಲಾದ.

'ಉಂಡುಡಲು ಕೆಲಸ ಮಾಡಲಿ. ಅವಕ್ಕೇನು ಪಾಡಿ?'

ಕರಿಯ ಒಂದು ನಿಮಿಷ ಯೋಚಿಸಿದ. ಏನೂ ಮಾಡುವುದಕ್ಕೂ ತೋಚದ ಆತ ಮರುಮಾತಿಲ್ಲದಂತೆ ಹೇಳಿದ--'ಒಡೆಯರೇ, ನೀವು ಹೇಳಿದಂತೆ ಮಾಡುತ್ತೇನೆ. ಹೆಂಡತಿ ಮಕ್ಕಳ ವಿಚಾರ ಬಿಟ್ಟುಬಿಡಿ. ನಾನು ಸಾಯೋವರೆಗೆ ಗೇಯುತ್ತೇನೆ.'

'...ಹ್ಞಾಂ...ಆಗಲಿ. ಮತ್ತೆ........ ಐದೋ ಹತ್ತೋ?'

'ಹತ್ತೈದು ಎಷ್ಟಲಿಕ್ಕೆ ಕೋಳಿ ಜೂಜೇಯಜಮಾನರೇ? ಐವತ್ತು ರೂಪಾಯಿಯಾದರೂ ಬೇಕು'—ತುಸು ಗೆಲುವಿನ ಮುಖದಿಂದ ಕರಿಯನೆಂದ.

ಅಂತೂ ಕೊನೆಗೆ ನಲುವತ್ತಕ್ಕೆ ಇಕ್ಕಡೆಯಿಂದಲೂ ಒಪ್ಪಿಗೆ ದೊರೆಯಿತು ರಾಯರು ನಗುಮೊಗದಿಂದ ಮೇಜಿನ ಬಳಿ ಮಂಡಿಸಿದರು. ಕರಿಯ ಮೌನವಾಗಿ ನೋಡುತ್ತಲೇ ಇದ್ದ. ರಾಯರು ಕದಲದಿರಲು ಆತ ಕಳವಳಗೊಂಡ. ಇನ್ನೇನು ಗಂಡಾಂತರ ಬರಬಹುದೆಂದು ಆತನ ಹೃದಯ ನಡುಗಿತು; ಮೈ ಬೆವರಿ ಹೋಯಿತು.

ಢಣ್.... ಢಣ್.... ಗೋಡೆಗೆ ತೂಗು ಹಾಕಿದ್ದ ಗಡಿಯಾರ ಎಂಟು ಬಡೆಯಿತು. ಇನ್ನೂ ಕಾದು ಕುಳಿತರೆ, ಪ್ರಯೋಜನವಿಲ್ಲ ಎಂದುಕೊಂಡ ಕರಿಯ, ಕ್ಷೀಣವಾಣಿಯಿಂದ, 'ಯಜಮಾನರೇ...' ಎಂದು ಕರೆದ

"ಕರಿಯಾ.... ಅದೇ ಯೋಚಿಸುತ್ತಿದ್ದೆ. ಇಂದು ಶುಕ್ರವಾರ, ಹಾಗೂ ರಾತ್ರಿ ಹೊತ್ತು. ನಾಡಿದು ಭಾನುವಾರ ಬಾ. ಎಲ್ಲಾ ಸಂದಾಯ ಮಾಡುವ.'

ಕರಿಯ ಮೌನವಾಗಿರದೆ ಮತ್ತೇನು ಮಾಡಬಲ್ಲ. 'ಆಯಿತು ಒಡೆಯಾ, ಎಂದು ಉದ್ದನೆಯ ನಮಸ್ಕಾರ ಹೊಡೆದು ಮರಳಿದ.

ಒಳಮನೆಯ ಬಾಗಿಲ ಬಳಿ ಕಾದಿದ್ದ ರಾಯರ ಮಡದಿ 'ಒಳಗೆ ಬನ್ನಿ' ಎಂದವರನ್ನು ಕರೆದೊಯ್ದರು.

೨

ಮಕ್ಕಳ ಕಿರುಕುಳವನ್ನು ಅದೆಂತೋ ಬಹು ಪ್ರಯಾಸದಿಂದ ತಡೆದುಕೊಂಡು ಅವನ್ನು ಮಲಗಿಸುವ ಪ್ರಯತ್ನ ಮಾಡಿದಳು ನಿಂಗಿ. ತಮ್ಮ ಸುಖ ದುಃಖಗಳನ್ನು ಬೇರೆಯವರೊಡನೆ ಹಂಚಿಕೊಳ್ಳುವುದರಿಂದ ಆತ್ಮಕ್ಕೆ ಶಾಂತಿ ಸಿಗುವುದಂತೆ. ಹಳ್ಳಿಯ ಜನತೆಗೆ ಈ ಮಾತಿನಲ್ಲಿ ತುಂಬ ವಿಶ್ವಾಸ. ಎಲ್ಲರಿಗೂ ಬೇಕಾಗಿದ್ದ ನಿಂಗಿಯ ಮನೆಗೆ ನೆರೆಮನೆ ವೆಂಕಜ್ಜಿಯು ಬಂದಿದ್ದಳು. ನಿಂಗಿ—ಅಜ್ಜಿಯರ ಸುಖ ದುಃಖಗಳ ಮಾತುಕತೆ ಅಂಗಳದಲ್ಲಿ ಸಾಗುತಿತ್ತು. ನೆಲವನ್ನು ಕಾರಿರುಳು ಕವಿದಿತ್ತು. ಅವರ ಮಾತು ದುಃಖವನ್ನು ನುಂಗಿಕೊಂಡು ಸುಖದತ್ತ ಹೊರಳಿತ್ತು.

ದಿನವಿಡಿ ನಡೆಯುತಿದ್ದ ಆ ದಾರಿಯಲ್ಲೇ ಅಡಿಯಿಡುತ್ತ ಮುಂಬಂದ ಕರಿಯ. ಮನೆಗೆ ಸಮೀಪಿಸುತಿದ್ದಂತೆಯೇ ವೆಂಕಜ್ಜಿ—ನಿಂಗಿಯ ಸಂವಾದ ಕಿವಿದೆರೆಗೆ ಬಡಿಯಿತು. ತಾನು ತಂದಿರುವ ಬಸಗೆಯನ್ನು ಯಾವ ಮುಖದಲ್ಲಿ ಅವರ ಮುಂದೆ ಬಿಚ್ಚಿಡುವುದೆಂದಾತ ತಲ್ಲಣಗೊಂಡ. ಅವನ ಹೃದಯ ನಡುಗುತಿತ್ತು; ಗುಂಡಿಗೆ ಜೋರಾಗಿ ಬಡೆಯುತಿತ್ತು. ಅಂಗಳದ ನಡುವೆ ಅಗ್ಗಿಷ್ಟಿಕೆಯೊಂದು ಉರಿಯುತಿತ್ತು. ಮೈಕೊರೆಯುವ ಚಳಿಗೆ ಆಸರೆಯಾಗಲಿ ಎಂದು ಮೈಕಾಸುತಿದ್ದ ಆ ಇಬ್ಬರ ನಡುವೆ ತಾನೆಂತು ಕಾಣಿಸಿಕೊಳ್ಳಲೆಂದಾತ ವಿಚಿಂತಿತನಾದ.

ಕಾಲ ಸಪ್ಪಳದಿಂದಲೇ ಕರಿಯ ಬಂದುದನ್ನು ಕಂಡುಕೊಂಡ ನಿಂಗಿ, 'ವೆಂಕಜ್ಜಿ, ಅವರು ಬಂದರೆಂದು ಕಾಣುತ್ತದೆ. ನೀನೂ ಇಂದು ಇಲ್ಲೇ ಮಲಗು. ಊಟ ಆಗಿದೆ ಎನ್ನುತ್ತಿಯಲ್ಲ? ರಾಯರು ಏನುತ್ತರವಿತ್ತರೆಂದೂ ತಿಳಿದ ಹಾಗಾಯಿತು'. ಎನ್ನುವಾಗಲೇ ಕರಿಯ ಕಪ್ಪುಮೊಗದಿಂದ ಅಗ್ಗಿಷ್ಟಿಕೆಯ ಮುಂದೆ ನಿಂತ.

ಬಂದ ಪತಿಗೆ ಕೈಗೆ ಕಾಲಿಗೆ ನೀರುಕೊಟ್ಟು, ಮಣೆ ಹಾಕಿ ಕುಳ್ಳಿರಿಸಿ, ಉಳಿಸಿದ್ದ ಗಂಜಿಯನ್ನು ಉಣ ಬಡಿಸಿದಳು ನಿಂಗಿ. ಕರಿಯ ಮೌನವಾಗಿ ಉಂಡು ಮಲಗಿದ. ಹದಿನಾರರ ಹರೆಯದ ಮಗಳು ಆಶ್ಚರ್ಯದಿಂದ ಅಪ್ಪನ ಮುಖ ನೋಡತೊಡಗಿದಳು. ಆಕೆಯನ್ನೂ ಸಂತೈಸಿ ಕಾಣದುಳಿಯಲಿಲ್ಲ. ನಿಂಗಿಯೂ ಕಳವಳದ ಮುದ್ರೆಯನ್ನು ತಾಳಿ, ಪತಿದೇವರ ಕಾಲೊತ್ತುವುದರಲ್ಲಿಯೇ ತತ್ಪರಳಾಗಿದ್ದಳು.

"ನಿಂಗಿ, ಹಣೇಲಿ ಏನು ಬರದಿದೆ ಎಂದು ಯಾರಿಗೆ ಗೊತ್ತು? ಅಂತೂ ಆಜೀವ ರಾಯರ ಜೀತದಾಳಾಗಿ ದುಡಿಯಬೇಕಾಯ್ತು. ಅವರ ಒಪ್ಪಿಗೆ ಪಡೆಯಲು .... ನಿಂಗೀ, ಏಕೆ ಅಳುತ್ತೀಯೋ? ನೀನಲ್ಲ ದುಃಖಿಸಬೇಕು, ನಾನು, ನಾನು! ನಿನ್ನ ಕೈ ಹಿಡಿದ ನನಗೆ ಒಂದೇ ಒಂದು ದಿನ ನಿನ್ನನ್ನ ಸುಖದಲ್ಲಿರಿಸಲು ಸಾಧ್ಯವಾಗಲಿಲ್ಲ. ಅಪ್ರೇನು ಮಾಡುವ? ಪ್ರಾಯಕ್ಕೆ ಬಂದ ಮಗಳನ್ನು ಇಟ್ಟುಕೊಳ್ಳುವುದಕ್ಕಾಗುತ್ತದೆಯೆ?...'

ನಿಂಗಿ ತಲೆಬಾಗಿ ಸಮ್ಮತಿ ವ್ಯಕ್ತಪಡಿಸಿದಳು.

"ಒಳ್ಳೇ ಗಂಡು ಸಿಕ್ಕಾಗ ಬರಿದೆ ಚಿಂತಿಸಿದರೆ ಫಲವೇನು? ಬಂದದ್ದನ್ನು ಧೈರ್ಯದಿಂದ ಎದುರಿಸುವುದೇ" ಎಂದು ಸಮಾಧಾನ ಹೇಳಿದಳು ವೆಂಕಜ್ಜಿ, ಹೊರಗಿನಿಂದಲೇ.

ವೆಂಕಜ್ಜಿಯ ಕಂಗಳಿಗೆ ಅದೇನೋ ಬೆಳಕು ತೋರಿತು. ಆಕೆ ವೀಕ್ಷಿಸಿದಳು. "ಕರಿಯಾ ನಸು ಇಲ್ಲಿ ಬಾ. ಅಲ್ಲಿ ಪೊದರಿನೆಡೆಯೇನೋ ಕೆಂಡ ಹೊಳೆಯುವಂತಿದೆ..."

ಕರಿಯ ಹೊರಬಂದು ನೋಡಿದ. ಕಾಡಿನ ವೀರಹುಲಿರಾಯ ಬೇಟೆಯಾಸೆಯಿಂದ ಕಾದುಕೊಂಡಿದ್ದ.

"ಅಬ್ಬಾ, ಬಡವರೆಂದರೆ ಹೀಗೆಯೇ. ಎಲ್ಲರೂ ಅವರನ್ನು ಹೊಂಚುಹಾಕುತ್ತಿರುವವರೇ'' ಕರಿಯ ಉದ್ಗರಿಸಿ ಕೈದೀವಿಗೆಯನ್ನು ದೊಡ್ಡದುಮಾಡಿ ಡಬ್ಬಿ ಬಡೆದ. ತನ್ನ ರಹಸ್ಯ ಬಯಲಾಯಿತೆಂದು ತಿಳಿದ ಹುಲಿ 'ಗುರ್ರೆಂ'ದು ಲಘುವಾಗಿ ಅರ್ಭಟಿಸಿ ದೂರವೋಡಿತು.

ಕರಿಯನ ಹೃದಯಕ್ಕೆ ಯಾರೋ ಹೊಡೆದಂತಾಯಿತು. ಇದೇ ರೀತಿಯ 'ಗುರ್ರಾಟ'ವನ್ನು ಆದಾಗ ತಾನೇ ಆತ ರಾಯರ ಮನೆಯಲ್ಲಿ ಕಂಡು ಕೇಳಿ ಬಂದಿದ್ದನಾತ. ಅಧೈರ್ಯದಲ್ಲೂ ಧೈರ್ಯ ತಂದುಕೊಂಡು ಮಡದಿಗೆ ನುಡಿದನಾತ: "ನೋಡಿದೆಯಾ ನಿಂಗಿ....ಕಾಡರಾಜ ನೀತ!'

ಮಾತು ಮರಳಿ ರಾಯರತ್ತ ತಿರುಗಿತು. ಎಲ್ಲವನ್ನೂ ತಿಳಿಸಿ, "ಮಾಡುವುದೇನು? ಬೆಳೆಯುವ ಮಗನಿದ್ದಾನೆ. ಸಾಧ್ಯವಾದರೆ ತೀರಿಸುತ್ತಾನೆ" ಎಂದುಕೊಂಡು ಚರ್ಚೆಗೆ ಪೂರ್ಣ ವಿರಾಮವಿಕ್ಕಿ ಚಾಪೆಹಾಸಿ ಮಲಗಿಕೊಂಡರು ದಂಪತಿಗಳೀರ್ವರು.

೩

ರಾಯರ ಉದಾರತೆ ಮತ್ತು ಕರಿಯನ ಸಾಹಸಗಳಿಂದಾಗಿ ಲಿಂಗಿಗೊಬ್ಬ ಅಳಿಯ ದೊರೆತ. ದಂಪತಿಗಳ ಮೈಕರ್ಚೆ ತೊಳೆದಂತಾಯಿತು. ಆದರೆ....

ಕರಿಯ ನಿತ್ಯ ದುಡಿಯಲು ಧಣಿಯರಲ್ಲಿಗೆ ಹೋಗಬೇಕು. ಊಟ—ಉಡುಗೆಯೇನೋ ತೊಂದರೆಯಿಲ್ಲದೆ ಬರುತಿದ್ದವು. ವೇತನವೆಂಬುದು ಇಲ್ಲವೇ ಇಲ್ಲವಾಯಿತು. ನಿಂಗಿಯು ಸೊಪ್ಪುಸೌದೆ, ನಟ್ಟಿ ಕ್ರೊಯಿಲು ಅಂತ ಅಲ್ಲಲ್ಲಿ—ರಾಯರಲ್ಲಿ ಕೂಡ ದುಡಿದು ಪ್ರತಿದಿನ ಸಂಜೆ ಏನಾದರೂ ತರುತ್ತಾಳೆ. ಅದರಲ್ಲಿಯೇ ಮನೆ ಮಕ್ಕಳ ಹಾಗೂ ತನ್ನ ಹೊಟ್ಟೆಯುರಿಯನ್ನು ತಣ್ಣಗಿರಿಸುವ ಪ್ರಯತ್ನ ಮಾಡುತ್ತಾಳೆ. ಅರೆಹೊಟ್ಟೆ, ಅರೆಬಟ್ಟೆಯಿಂದ ಕಂಗೆಟ್ಟ ಆ ಕಿರುಮಕ್ಕಳು ಆ ಹಂಚು ಗುಡಿಸಲಿನಲ್ಲಿ ಬರಿನೆಲದಲ್ಲಿ ಒರಗುತ್ತಿರುವುದನ್ನು ಕಂಡು ಕಾಂಬವರ ಕಣ್ಣು ಮುಚ್ಚುತ್ತದೆ.

ಮಗ, ಸಾಗನೀಗ ದೊಡ್ಡವನಾಗುತಿದ್ದಾನೆ. ಅವನೂ ದುಡಿಯುತ್ತಾನೆ. ದಿನವಿಡಿ ಗೆಯ್ದರೆ, ಸಂಜೆ ಕೈಗೆ ಬೀಳುವುದು ಕೇವಲ ಎಂಟೇ ಆಣೆ. ಇದನ್ನೂ ತಾಯಿಗೆ ಕೊಡುತ್ತಾನೆ

ದಿನದಿನಕ್ಕೆ ಕರಿಯನ ಮುಖ ಸಪ್ಪೆಯಾಗುತ್ತ ಬರುತಿತ್ತು. ಆತನಲ್ಲಿ ಪ್ರಾಯದ ಮುಪ್ಪಿಗಿಂತಲೂ ಚಿಂತೆಯ ಕಾಟನೇ ಅತಿಯಾಗಿತ್ತು. ಹಿಂದಿನ ಉತ್ಸಾ

(೧೧ನೇ ಪುಟ ನೋಡಿ)

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಗೃಹ ವಿಜ್ಞಾನ

ಮನೆಯ ಸಿರಿ — ನಗುವ ಮಕ್ಕಳು

(ಲೇಖಾಂಕ ೫)

> ಮಕ್ಕಳ ಸಮಯ ಸಮಯಕ್ಕೆ ಸರಿಯಾದ ಸ್ನಾನ, ಅಳು-ನಗುಗಳ ಅರ್ಥ ಜ್ಞಾನ, ಶೀಲಸಂವರ್ಧನೆಯ ಮಾರ್ಗದರ್ಶನ ಹಿತವಿಶವಾದ ಸುಷುಪ್ತಿಗಳತ್ತ ಹೆತ್ತವರು ಅವಶ್ಯ ಗಮನವೀಯಬೇಕು; ಅಂತೆಯೇ ಮಾತೃಪಿತೃ ಗುರುಭಕ್ತಿಯನ್ನು ಪ್ರದರ್ಶಿಸಿ ತಮ್ಮ ಗೌರವಾಭಿಮಾನವನ್ನು ತೋರಿಸಬೇಕು.

ಲೇಖಕರು: ಶ್ರೀ ಎಂ. ರಂಗ ರಾವ್.

ಸ್ನಾನ

ಒಳ್ಳೆಯ ಅಭ್ಯಾಸಗಳಲ್ಲಿ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದೂ ಒಂದಾಗಿದೆ. ದೇಹದ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವುದೇ ಮೊದಲನೆಯ ಅಭ್ಯಾಸ. ಒಂದು ಪಾತ್ರವು ಹೊರಗೆ ಶುಭ್ರವಾಗಿದ್ದರೆ ಒಳಗೆ ಕೂಡಾ ಶುದ್ಧವಾಗಿಡಬೇಕು ಎನಿಸುತ್ತದೆ. ಮೈ ಶುದ್ಧವಾಗಿದ್ದರೇನೇ ಮನಸ್ಸೂ ಶುದ್ಧವಾಗುತ್ತದೆ. ನಿರ್ಮಲವಾದ ಮನಸ್ಸಿನಲ್ಲಿಯೇ ಒಳ್ಳೊಳ್ಳೆಯ ಭಾವನೆಗಳು ಮೂಡಬಲ್ಲುವು. ಹಾಗದವು ಶುದ್ಧವಾಗಿದ್ದರೆ ಅಕ್ಷರಗಳೂ ಶುದ್ಧವಾಗಿರುತ್ತವೆ.

ದೇಹದ ಶುದ್ಧತೆಗೆ ಸ್ನಾನವು ಬಲು ಮುಖ್ಯ. ನಮ್ಮ ದೇಶದಲ್ಲಿ ಪ್ರತಿ ದಿನಾ ಸ್ನಾನಮಾಡುವುದು ಅಗತ್ಯ. ಸ್ನಾನದಿಂದ ದೇಹದಲ್ಲಿ ಚುರುಕುತನ ಹುಟ್ಟುತ್ತದೆ. ಮಾಂದ್ಯ ತೊಲಗುತ್ತದೆ.

ಆರೋಗ್ಯಶಾಲಿಗಳಾದ ಮಕ್ಕಳು ತಣ್ಣೀರು ಸ್ನಾನಮಾಡುವುದೇ ಉತ್ತಮ. ತಣ್ಣೀರು ಸ್ನಾನದಿಂದ ಶೀತವಾಗುವುದೆಂದು ನಂಬುವುದರಲ್ಲಿ ಸತ್ಯವಿಲ್ಲ. ಅಭ್ಯಾಸವಾದರೆ ಅದೇ ಒಗ್ಗುತ್ತದೆ. ಸೊಗಸಿಗೆ ಬೇಕಾದರೆ ಉಗುರುಬೆಚ್ಚಗಿನ ನೀರು ಉಪಯೋಗಿಸಬಹುದು. ಈ ವಿಷಯದಲ್ಲಿ ಒಂದೇ ವಿಧವಾದ ಕ್ರಮವಿರಲಿ.

ಮಕ್ಕಳ ಸ್ನಾನದ ವೇಳೆಯನ್ನು ನಿಯಮಿತಪಡಿಸಿಕೊಳ್ಳಬೇಕು. ಪ್ರತಿದಿನವೂ ಆ ವೇಳೆಗೆ ಸ್ನಾನಮಾಡಿಸಲು ತಪ್ಪಿಸಲೇ ಬಾರದು. ವಾರಕ್ಕೊಮ್ಮೆ ಅಥವಾ ಎರಡು ಸಲ ಮಕ್ಕಳಿಗೆ ಎಣ್ಣೆ ಹಚ್ಚಿ ಸ್ನಾನಮಾಡಿಸಬೇಕು. ಎಣ್ಣೆ ಹಚ್ಚಿ ಸ್ನಾನಮಾಡಿಸುವುದರಿಂದ ಮಕ್ಕಳ ಚರ್ಮವು ಹೆಚ್ಚು ಶುಭ್ರವಾಗಿ ರೋಮ ರಂಧ್ರಗಳು ತಮ್ಮ ಕಾರ್ಯವನ್ನು ಸುಲಭವಾಗಿ ಮಾಡುತ್ತವೆ.

ಅನೇಕರು ಸ್ನಾನದ ವಿಷಯವಾಗಿ ತುಂಬಾ ಅಲಕ್ಷ್ಯಮಾಡುತ್ತಾರೆ. ಅನೇಕ ದಿನ ಮಕ್ಕಳಿಗೆ ಸ್ನಾನವನ್ನೆ ಮಾಡಿಸುವುದಿಲ್ಲ. ಎಂದೋ ಒಮ್ಮೆ ಎಣ್ಣೆಹಚಿ ಅಭ್ಯಂಜನ ಮಾತ್ರ ಮಾಡಿಸುತ್ತಾರೆ. ನಿತ್ಯ ಸ್ನಾನವಿಲ್ಲದ ಬರಿಯ ಅಭ್ಯಂಜನದಿಂದ ರೋಮರಂಧ್ರಗಳು ಮುಚ್ಚಿಕೊಳ್ಳುವುದೇ ಹೊರತು ತೆರೆಯುವುದಿಲ್ಲ.

ಪ್ರಾತಃಕಾಲದ ಅಭ್ಯಂಜನ ದೇಹಕ್ಕೆ ಒಳ್ಳೆಯದು. ಸಂಜೆಯ ಅಭ್ಯಂಜನ ನಿದ್ರೆಗೆ ಒಳ್ಳೆಯದು. ಮಧ್ಯಾಹ್ನದ ಅಭ್ಯಂಜನದಿಂದ ಯಾವ ಪ್ರಯೋಜನವೂ ಇಲ್ಲ.

ನಾಯಿ ಹಸುಗಳನ್ನು ಕೂಡಾ ಸ್ನಾನ ಮಾಡಿಸುವ ಮನುಷ್ಯರು ತಮ್ಮ ಮಕ್ಕಳ ಸ್ನಾನದಲ್ಲಿ ಅಲಕ್ಷ್ಯವಾಗಿರುವುದು ನಾಚುಗೆಯಲ್ಲವೆ? ಹಾಗೆಗಳು ಕೂಡಾ ಸ್ನಾನ ಮಾಡುವುದನ್ನು ನೋಡಿದ್ದೀರಷ್ಟೆ?

ಏನೋ ಕಾಟಾಚಾರಕ್ಕಾಗಿ ಅವಸರದಿಂದ ಮಕ್ಕಳಿಗೆ ಸ್ನಾನ ಮಾಡಿಸಬಾರದು. ವಿಧವಿಧವಾದ ಸೋಪುಗಳಿಗಿಂತಲೂ, ನೊರೆಕಾಯಿ, ಸೀಗೆಕಾಯಿ, ಹೆಸರುಹಿಟ್ಟನಂತಹ ಪುಡಿಗಳೇ ಉತ್ತಮ. ಇವುಗಳಿಗೆ ರೋಮರಂಧ್ರಗಳನ್ನು ಸಡಲಿಸುವ ಶಕ್ತಿಯಿದೆ. ಸ್ನಾನಮಾಡಿಸಿದ ಮೇಲೆ ದೊರಗು ಬಟ್ಟೆಯಿಂದ ದೇಹವನ್ನು ಒತ್ತಿ ಒರೆಸುವುದೂ ಒಂದು ಮುಖ್ಯ ಕೆಲಸ.

ಸ್ನಾನದಿಂದ ಹೃದಯವು ಶುದ್ಧವಾಗಿ ದೇವರಧ್ಯಾನಕ್ಕೆ ಯೋಗ್ಯ ಸ್ಥಳವಾಗುತ್ತದೆ. ನಮ್ಮ ಹಿರಿಯರು ಸ್ನಾನಕ್ಕೆ ಎಷ್ಟು ಮಹತ್ವ ಕೊಟ್ಟಿದ್ದಾರೆಂದರೆ ಸ್ನಾನ ಶಾಸ್ತ್ರವನ್ನೆ ಬರೆದಿದ್ದಾರೆ. ವಾರ, ವೇಳೆ, ನಕ್ಷತ್ರಗಳನ್ನು ಹೇಳಿದ್ದಾರೆ. ಸ್ನಾನದ ಹಬ್ಬ ನಿರ್ಮಿಸಿದ್ದಾರೆ. ಗಂಡು—ಹೆಣ್ಣುಗಳಿಗೆ ಬೇರೆ ಬೇರೆ ಕಾಲಗಳನ್ನು ಗೊತ್ತುಪಡಿಸಿದ್ದಾರೆ. ಬಗೆ ಬಗೆಯ ಪರಿಮಳ ದ್ರವ್ಯಗಳ ಕ್ರಮಗಳನ್ನು ಹೇಳಿದ್ದಾರೆ. ಹಿಂದಿನ ಕಾಲದ ಅಂತಃಪುರಗಳಲ್ಲಿ ರಾಣಿಯರಿಗಾಗಿ ಪ್ರತ್ಯೇಕ ಸ್ನಾನ ಸರೋವರಗಳೇ ಇದ್ದುವು.

ಜಲಾಶಯವು ಹೆಚ್ಚಾಗಿರುವ ಮಲಬಾರಿನಲ್ಲಿ ಬೆಳಗ್ಗೆಯೂ ಸಾಯಂಕಾಲವೂ ಸ್ನಾನ ಮಾಡುವ ಅಭ್ಯಾಸವುಂಟು. ಅಲ್ಲಿ ಕೆರೆಯಲ್ಲಿ ಮುಳುಗಿ ಸ್ನಾನ ಮಾಡುವುದರಿಂದಲೇ ಮಹಿಳೆಯರ ಕೂದಲು ಸೊಂಪಾಗಿದೆಯೆಂದು ಹೇಳುತ್ತಾರೆ.

ಬಚ್ಚಲು ಮನೆಯಲ್ಲಿ ತಂಬಿಗೆಯಿಂದ ಸುರಿದುಕೊಳ್ಳುವುದು ಸಾಮಾನ್ಯ ಸ್ನಾನ. ಬಾವಿಯಿಂದೆತ್ತಿ ತಲೆಗೆ ಹೊಯಿದುಕೊಳ್ಳುವುದು ಒಳ್ಳೆಯ ಸ್ನಾನ. ಎತ್ತರದಿಂದ ತಲೆಯ ಮೇಲೆ ತಣ್ಣಗಿನ ನೀರು ಬೀಳುವುದರಿಂದ ತಲೆಗೆ ಸಂಬಂಧಪಟ್ಟ ಅನೇಕ ರೋಗಗಳು ವಾಸಿಯಾಗುತ್ತವೆ. ಎತ್ತರದಿಂದ ನೀರು ಬೀಳುವಾಗ ವಿದ್ಯುಚ್ಛಕ್ತಿಯುಂಟಾಗಿ, ಹೊಸತೊಂದು ಉತ್ಸಾಹವನ್ನು ಪ್ರವೇಶಗೊಳಿಸುತ್ತದೆ, ಹರಿಯುವ ನದಿಯಲ್ಲಿ ಸ್ನಾನಮಾಡುವುದು ಸರ್ವೋತ್ಕೃಷ್ಟವೆನ್ನುತ್ತಾರೆ.

ನಮ್ಮ ದೇಶದಲ್ಲಿ ಒಳ್ಳೆಯ ನೀರಿಗೂ ಕಷ್ಟವಿರುವ ಪ್ರದೇಶಗಳುಂಟು. ಅಂತಹದಲ್ಲಿ ಕೂಡಾ ಆಹಾರಕ್ಕೆ ನೀರು ಹೇಗೆ ಆವಶ್ಯಕವೋ ಸ್ನಾನಕ್ಕೂ ಹಾಗೆಯೇ ಆವಶ್ಯಕವೆಂದು ತಿಳಿಯಬೇಕು. ಮಕ್ಕಳಿಂದಲೂ ನೀರು ತರಲು ಅಭ್ಯಾಸ ಮಾಡಿಸುವುದರಿಂದ ಒಳ್ಳೆಯ ವ್ಯಾಯಾಮವೂ ಆಯಿತು. ನೀರೂ ಆಯಿತು.

ಈಗ ಭಾರತ ಸರಕಾರವು ಕೈಕೊಂಡಿರುವ ಪಂಚ-ಪಂಚವಾರ್ಷಿಕ ಪ್ರಣಾಳಿಕೆಗಳಲ್ಲಿ ನೀರಾವರಿ ಯೋಜನೆಗಳ ಬಹಳ ಮಹತ್ವವಾಗಿವೆ. ಇನ್ನು ಸ್ನಾನಕ್ಕೆ ನೀರಿಲ್ಲವೆಂದು ಗೊಣಗುವುದು ನಿಂತೀತು. 'ಮನೆ ಕಟ್ಟುವ ಮೊದಲು ಬಾವಿ ತೋಡಬೇಕು' ಎಂಬ ನಮ್ಮ ಹಿರಿಯರ ವಾಕ್ಯ ಅಮರ ವಾಕ್ಯವಾಗಿದೆ. ಅದು ಊರ್ಜಿತವಾಗಲಿ!

ಅಳು — ನಗು

ಮಕ್ಕಳಿಗೆ ತಮ್ಮ ಇಷ್ಟವನ್ನು ಸಾಧಿಸಿಕೊಳ್ಳಲಿಕ್ಕೆ ಅಳುವೆಂಬುದೊಂದು ದೊಡ್ಡ ಅಸ್ತ್ರವಿದೆ. ಮಕ್ಕಳು ಬೆಳೆಯುತ್ತಾ ಬರುವ ಹಾಗೆ ಅಳುವಿನ ಉಪಯೋಗ ಕಡಿಮೆಯಾಗುತ್ತದೆ.

ಆದರೆ ಮಕ್ಕಳು ಅಳುತ್ತಾ ಇರುವುದು ನಮಗಾರಿಗೂ ಇಷ್ಟವಿಲ್ಲ. ಮಕ್ಕಳು ನಗುನಗುತ್ತಾ ಇರಬೇಕೆಂಬುದೇ ನಮ್ಮೆಲ್ಲರ ಬಯಕೆ. ಹೌದು. ನಗು! ಅದೆಷ್ಟು ಚೆಂದ! ಮನುಷ್ಯರಿಗೆ ಮಾತ್ರವೇ ದೇವರು ಪ್ರಸಾದಿಸಿದ ವರವೇ ನಗು.

ನಗುವಿಗೂ ಆರೋಗ್ಯಕ್ಕೂ ನಿಕಟ ಸಂಬಂಧವಿದೆ. ಆರೋಗ್ಯವಾಗಿರುವ ಮಕ್ಕಳ ಮುಖದಲ್ಲೇ ನಗು ತಾಂಡವಿಸಬಲ್ಲುದು.

ಮಕ್ಕಳು ಅಳುತ್ತಾ ಇದ್ದರೆ ಏನಾಗುತ್ತದೆ? ದೊಡ್ಡವರಿಗೆ ಏನೂ ತೋರುವುದಿಲ್ಲ. ಮಕ್ಕಳನ್ನೆತ್ತಿ ಕೊಂಡಾಡಲಿಕ್ಕೂ ಬುದ್ಧಿ ಹುಟ್ಟುವುದಿಲ್ಲ. ಇಲ್ಲಿಯೇ ಹಿರಿಯರಿಗೆ ಬಹಳ ತಾಳ್ಮೆ ಬೇಕಾದ್ದು. ಸಿಟ್ಟು ಮಾಡದೆ ಹೇಗೋ ಮಕ್ಕಳನ್ನು ನಗಿಸಲೆತ್ನಿಸಬೇಕು. ಎಷ್ಟು ಕೆಲಸವಿದ್ದರೂ ವಿನಾ ಸ್ವಲ್ಪ ಹೊತ್ತು ಮಕ್ಕಳೊಂದಿಗೆ ಆಡಿ ಅವರನ್ನು ನಗಿಸಿ ತಾನೂ ನಗುವುದರಿಂದ ಇಬ್ಬರಿಗೂ ಒಳ್ಳೆಯದುಂಟು. ಮಕ್ಕಳ ನಗುವೆಂಬುದು ದಿವ್ಯಾಮೃತ.

ನೋಡಿ. ಮಕ್ಕಳ ನಗುವಿಗಾಗಿಯೇ ವಿಧವಿಧವಾದ ಆಟದ ವಸ್ತುಗಳಿವೆ. ಕೆಲವರು, ಮಕ್ಕಳಿಗೆ ಆಟದ ವಸ್ತುಗಳನ್ನು ಕೊಡುವುದರಿಂದ ದುಂದುವ್ಯಯವಾಗುವುದೆಂದು ಹೇಳುತ್ತಾರೆ. ಇದು ಸರಿಯಲ್ಲ. ಮಕ್ಕಳಿಗೆ ಅನ್ನ ಬಟ್ಟೆ ಕೊಡುವುದು, ವಿದ್ಯೆ ಕಲಿಸುವುದು ಇವೆಲ್ಲಾ ಹೇಗೆ ದುಂದು ವ್ಯಯವಲ್ಲವೋ, ಹಾಗೆಯೇ ಅವರಿಗೆ ಸಾಧ್ಯವಿದ್ದಷ್ಟು ಆಟದ ವಸ್ತುಗಳನ್ನು ಒದಗಿಸುವುದೂ ದುಂದು ವ್ಯಯವಲ್ಲ. ಪ್ರಪಂಚ ಖ್ಯಾತಿಯನ್ನು ಗಳಿಸಿದ ನಮ್ಮ ಪ್ರಧಾನಮಂತ್ರಿ ಜವಾಹರಲಾಲ ನೆಹರುಗಳು ಕೂಡ, ಯಾರೂ ಅಗದ ಮಕ್ಕಳನ್ನು ಮಹಾನಿಧಿಯ ಹಾಗೆ ನೋಡುವವರು. ಅವರು ವಿದೇಶದ ಮಕ್ಕಳಿಗೆ ನಮ್ಮ ದೇಶದ ಮರಿಯಾನೆಗಳನ್ನು ಕಳುಹಿಸಿಕೊಟ್ಟಿದ್ದಾರೆ. 'ಶಂಕರ್ಸ್ ವೀಕ್ಲಿ' ಸಂಸ್ಥೆಯವರು ಮಕ್ಕಳ ಚಿತ್ರ ಸ್ಪರ್ಧೆಯನ್ನು ಏರ್ಪಡಿಸಿ ಬಹುಮಾನ ಕೊಡುತ್ತಾರೆ. ಭಾರತದಲ್ಲಿ ತಯಾರಾಗುವ ಮಕ್ಕಳ ಆಟದ ಸಾಮಾನುಗಳನ್ನು ಹೊರದೇಶಗಳಿಗೆ ಕೂಡ ಕಳುಹಿಸಬೇಕೆಂದು ನಮ್ಮ ಪ್ರಧಾನ ಮಂತ್ರಿಗಳು ಪ್ರೋತ್ಸಾಹದ ಮಾತುಗಳನ್ನು ಹೇಳಿದ್ದಾರೆ, ಮಕ್ಕಳ ಮುಂದಿನ ಜೀವನವನ್ನೆ ಬೆಳಗಿಸುವಂಥ ಸಾಧನಗಳಲ್ಲಿ ಆಟದ ಸಾಮಾನುಗಳೂ ಒಂ

(೧೦ನೇ ಪುಟ ನೋಡಿ)

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ರಾಮತೀರ್ಥ (ಮಾಸಿಕ ಪತ್ರ)

(ಹಿಂದಿ ಭಾಷೆಯಲ್ಲಿ)

ಸಂಪಾದಕರು:- **ಯೋಗಿರಾಜ ಶ್ರೀ ಉಮೇಶಚಂದ್ರರು.**

ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೮೦ ಇದೆ. ಅವಶ್ಯ ಚಂದಾದಾರರಾಗಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,

ಮುಂಬಯಿ-೧೪.

ಶುದ್ಧ ಹರಟೆ

ರಾಜಕಾರಣ ಪ್ರಶಾಂತವಿರ ಬೇಕಾದರೆ....

ರಾವಣನ ರಾಜ್ಯ ಲಂಕೆಯಲ್ಲಿ ಮಹಿಳಾ ಪ್ರಧಾನಿ ಆರಿಸಲ್ಪಟ್ಟಿದ್ದಾರೆ; ಇದು ಅಲ್ಲಿನ ರಾಜಕೀಯ ಸುಸ್ಥಿತಿಗೆ ಅನುಕೂಲವೆನ್ನಲಾಗುತ್ತಿದೆ. ಹಾಗಾದರೆ ರಾಜಕಾರಣ ಪ್ರಶಾಂತವಿರಬೇಕಾದರೆ ಸಿದ್ಧಾಂತದ ಸಂಶೋಧನೆ ಆದಂತಾಯಿತಲ್ಲವೆ?

ಲಂಕೆಯಲ್ಲಿ ಶ್ರೀಮತಿ ಸಿರಿಮಾವೊ ಬಂಡಾರನಾಯಕೆಯವರು ಪ್ರಧಾನಿಗಳಾಗಿ ಆರಿಸಲ್ಪಟ್ಟಿರುವರೆಂಬ ವಿಚಾರ ನಮ್ಮಲ್ಲಿಯ ಹೆಂಗಸರಿಗೆ ಆತ್ಮವಿಶ್ವಾಸವನ್ನು ತುಂಬುವಷ್ಟು ಸಮರ್ಥವಾಗಿದೆ. ರಾಜಕೀಯ ಅಸ್ಥಿರತೆಯು ಇದರಿಂದಾಗಿ ಮಾಯವಾಗಬಹುದೆಂದು ಅಲ್ಲಿಯ ರಾಜಕೀಯ ನಿರೀಕ್ಷಕರು ಅಭಿಪ್ರಾಯಪಟ್ಟಿರುವರು. ರಾವಣನ ರಾಜ್ಯವಾಗಿದ್ದ ಲಂಕೆಯಲ್ಲಿ ಇದೀಗ ಜಗತ್ತಿನಲ್ಲೇ ಆಗದ ಒಂದು ದೊಡ್ಡ ಬದಲಾವಣೆಯೇ ಆಗಿದೆ. ರಾವಣನ ಕಾಲದಲ್ಲೂ ಈ ಚುನಾವಣೆ ನಡೆದಿದ್ದರೆ ಆತನು ಖಂಡಿತವಾಗಿಯೂ ಸೀತೆಗೆ ತನ್ನ ಓಟನ್ನು ಕೊಡುತಿದ್ದನೆಂದು ನಾವು ಊಹಿಸಬಹುದಾಗಿದೆ. ಪ್ರಾಯಃ ರಾವಣನ ಕುಲದವರೆಲ್ಲರೂ (?) ಒಂದಾಗಿ ಈಗ ಶ್ರೀಮತಿ ಸಿರಿಮಾವೊರವರಿಗೆ ಓಟು ಕೊಟ್ಟಿರಬಹುದಲ್ಲವೆ?

ಪರರ ಕಷ್ಟದಲ್ಲಿ ಸಹಾನುಭೂತಿಯನ್ನು ತೋರಿಸುವ, ಕನಿಕರವನ್ನು ತಂದುಕೊಳ್ಳುವ ವಿಭೀಷಣನು ಅಲ್ಲಿಯವನೆ ಆಗಿದ್ದನು. ತನ್ನ ಗಂಡ ಶ್ರೀ ಸೊಲಮನ್ ಬಂಡಾರನಾಯಕೆಯವರ ನಿಧನದ ಬಗ್ಗೆ ದುಃಖಿಸುತ್ತಾ, ಮರುಗುತ್ತಾ ಭಾಷಣ ಮಾಡಿದುದನ್ನು ನೋಡಿ ಅಲ್ಲಿನ ವಿಭೀಷಣನಂತಹ ಜನರು ಕನಿಕರಪಟ್ಟು ಶ್ರೀಮತಿ ಬಂಡಾರನಾಯಕೆಯವರಿಗೆ ಓಟನ್ನು ಕೊಟ್ಟಿರಬಹುದೆ?

ಹೆಂಗಸರಿಂದ ಕಿವಿ ಹಿಂಡಿಸಿಕೊಳ್ಳುವ ಗಂಡಸರು ಲಂಕೆಯಲ್ಲಿ ಲಂಕಾ ಫ್ರೀಡಂ ಪಾರ್ಟಿಗೆ ತಮ್ಮ ಅಮೂಲ್ಯವಾದ ಮತಗಳನ್ನು ಕೊಟ್ಟಿರಬಹುದು. ಗಂಡಸರಿಗಿಂತಲೂ ಹೆಂಗಸರು ಹೆಚ್ಚು ಉತ್ಸಾಹಿತರಾಗಿ ಲಂಕಾ ಫ್ರೀಡಂ ಪಾರ್ಟಿಗೆ ತಮ್ಮ ಮತವನ್ನಿತ್ತಿರುವರೆಂಬುದಕ್ಕೆ ಪ್ರತ್ಯಕ್ಷ ಸಾಕ್ಷ್ಯವೇ ನಮ್ಮ ಮುಂದಿದೆ.

ಜಗತ್ತಿನ ಯಾವುದೇ ಭಾಗದ ಚರಿತ್ರೆಯನ್ನು ನಾವು ಪರಿಶೀಲಿಸಿದರೂ ಗಂಡಸರ ರಾಜ್ಯದಲ್ಲಿ ಮಹಿಳಾ ಪ್ರಧಾನಿಯಾದುದು ಇದೇ ಮೊದಲ ಬಾರಿಯಾಗಿದೆಯೆಂದು ತಿಳಿದು ಬರುತ್ತದೆ. ಇದರಿಂದಾಗಿ ಡಡ್ಲಿ ಸೇನಾ ನಾಯಕೆಯವರಿಗೆ (ಪರಾಭವಗೊಂಡು) ಏನೆಲ್ಲಾ ಭಾವನೆಗಳು ಮನಸ್ಸಿನಲ್ಲಿ ಉಂಟಾಗಿರಬಹುದೆಂದು ನಾವು ಊಹಿಸುವುದೇ ಕಠಿಣವಾಗಿದೆ. ಇದಕ್ಕಿಂತಲೂ ಹೆಚ್ಚಾಗಿ ಆ ಪರಾಭವಗೊಂಡ ರಾತ್ರಿ ಅವರ ಪತ್ನಿಯು ಮಡದಿ ಯಾವ ರೀತಿಯಲ್ಲಿ ಅವರನ್ನು ನಿಂದಿಸಿರಬಹುದೆಂದು ಹೇಳುವುದು ತೀರಾ ಅಸಾಧ್ಯವಾಗಿದೆಯಲ್ಲವೆ?

ಮಹಿಳಾ ಪ್ರಧಾನಿಯ ನೇತೃತ್ವದಲ್ಲಿ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದ ಗಂಡಸು ಮಂತ್ರಿಗಳು ತಮ್ಮ ಮಂತ್ರಿ ಖಾತೆಯನ್ನು ದಕ್ಷತೆಯಿಂದ ನಡೆಸಬಹುದು. ಹೆಂಗಸಿನಿಂದ ಅವಮಾನಿತನಾಗಲೂ ಯಾರಾದರೂ ಬಯಸಿಯಾರೆ? ಆದ್ದರಿಂದ ಅಲ್ಲಿಯ ಮಂತ್ರಿ ಮಂಡಲದ ದಕ್ಷತೆ ಹೆಚ್ಚಬಹುದು. ತಾವು ಮಾಡಿದ ಕಾರ್ಯ ಸಾರ್ಥಕವಾಯಿತೆಂದು ಹೇಳುತ್ತಾ ಅಲ್ಲಿಯ ಜನರು ಸಫಲತೆಯ ನಿಟ್ಟುಸಿರನ್ನು ಬಿಡುವ ಸಮಯ ಸಧ್ಯವೆ ಬರಲಿದೆಯೆನ್ನಬಹುದು.

ಅಹಿಂಸಾ ತತ್ವದ ಸ್ಥಾಪಕನಾದ ಬುದ್ಧನ ಅನುಯಾಯಿಯಾದ ಶ್ರೀಮತಿ ಬಂಡಾರ ನಾಯಕೆಯವರು ಶ್ವೇತ ವಸನ ಧಾರಿಗಳಾಗಿಯೆ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರಂತೆ. ಶಾಂತತೆಯ ಗುರುತಾಗಿರುವ ಬಿಳಿ ಬಟ್ಟೆಯನ್ನು ಇವರು ಧರಿಸಿದ್ದರಿಂದ ಸಿಂಹಳದ ಒಳಗೂ ಶಾಂತತೆ ನೆಲೆಗೊಳ್ಳಬಹುದು. ಅಂತಾರಾಷ್ಟ್ರೀಯ ಶಾಂತಿಯ ಬಗ್ಗೆ ಶ್ರೀಮತಿಯವರು ಕಾರ್ಯವೆಸಗಿದರೆ ಹೆಚ್ಚು ಫಲ ಪ್ರದವಾಗಬಹುದೋ ಏನೋ?

ಹೆಂಗಸು ಎಂದರೆ ಕೋಮಲ ಹೃದಯಿಯೆಂದು ನಮ್ಮ ಹಿರಿಯರು ಹೇಳುತ್ತಾರೆ. ಆದರೆ ಇನ್ನು ಶ್ರೀಮತಿ ಬಂಡಾರನಾಯಕೆಯವರು ಕೋಮಲ ಹೃದಯಿಯಾಗಿಯೆ ಉಳಿವರೊ ಇಲ್ಲವೆ ಕಠಿಣ ಹೃದಯಿಗಳಾಗುವರೊ ಎಂಬ ವಿಚಾರವನ್ನು ನಾವು ಕಾದುನೋಡಿ ಹೇಳಬೇಕಾಗಿದೆ. ಅಬಲೆ ಸಬಲೆಯಾದ ಉದಾಹರಣೆ ನಮಗೀಗ ದೊರೆತಿದೆ. ಇದರಿಂದ ಸಬಲರು ಅಬಲರಾಗಿ ಪರಿವರ್ತನೆಯನ್ನು ಹೊಂದಬಹುದೆ ಎಂಬ ಸಂದೇಹಕ್ಕೆಡೆಯುಂಟು.

ಬ್ರಿಟನಿನ ಸೇನೆಯಲ್ಲಿ ಕಾಮನ್‌ವೆಲ್ತಿನ ತರುಣಿಯರು.

೦೦ ೦೦

ಈ ಸುದ್ದಿ ನಮ್ಮೂರ ಹೆಂಗಸರಿಗೆ ಹೇಗೆ ತಿಳಿಯಿತೆಂದು ನನ್ನನ್ನು ಕೇಳಬೇಡಿ. ಹಿಂದೆ ಗಂಡನನ್ನು ಗದರಿಸುತ್ತಿದ್ದ ಹೆಂಗಸರು ಈಗ ಹೆದರಿಸಲಾರಂಭಿಸಿದ್ದಾರೆ. ನೀವು ಮನೆಯಲ್ಲಿ ಕುಳಿತುಕೊಳ್ಳಿ, ನಾನು ಪೇಟೆಗೆ ಹೋಗಿ ಕೆಲಸಮಾಡುತ್ತೇನೆಂದು ಹೇಳುತ್ತಿದ್ದಾರೆ.

ನಾನು ಮನೆಗೆ ಹೋದೊಡನೆ ನನ್ನ ಪಟ್ಟದ ರಾಣಿಯು– "ನಿಮ್ಮನ್ನು ನಾನಿನ್ನು 'ಏನ್ರೀ' ಎಂದು ಕರೆಯಲಾರೆ." ಎಂದು ಹೇಳಿದಳು.

"ಅದೇಕೆ ಹಾಗೆ?" ಎಂದು ವಿಸ್ಮಿತನಾಗಿ ಪ್ರಶ್ನಿಸಿದೆ.

"ಸಿಂಹಳದಲ್ಲಿ ಹೆಂಗಸೇ ಪ್ರಧಾನಿಗಳಾಗಿದ್ದಾರಲ್ಲವೆ?" ಎಂದಳು. ನನ್ನನ್ನು ಕರೆಯುವುದಕ್ಕೂ ಸಿಂಹಳ ಪ್ರಧಾನಿಗೂ ಏನು ಸಂಬಂಧವಿದೆಯೆಂದು ನನಗೆ ಗೊತ್ತಾಗಲಿಲ್ಲ. ನಾನು ಅವಳಿಂದ ಕೇಳಿ ತಿಳಿದುಕೊಳ್ಳುವ ಶ್ರಮವನ್ನೂ ವಹಿಸಲಿಲ್ಲ.

ಹೆಸರೆತ್ತಿ ಕರೆಯಲಾರಂಭಿಸಿದ ನನ್ನಾಕೆ ನಾನು ನನ್ನ ಕಾರ್ಯಕ್ಕಾಗಿ ಮನೆಯಿಂದ ಹೊರಬಿದ್ದೊಡನೆ ಮಹಿಳಾ ಗೋಷ್ಠಿಯನ್ನು ಏರ್ಪಡಿಸುತ್ತಿದ್ದಳು.

ಅಂತೂ ನಮ್ಮೂರ ಮಹಿಳೆಯರಿಗೆ ಈ ಸುದ್ದಿ ತಿಳಿದಿತ್ತು. ನಮ್ಮೂರ ಮಹಿಳಾ ಪರಿಷತ್ತಿಗೆ ಈ ಸುದ್ದಿ ಬಲವನ್ನು ತಂದಿತ್ತು. ಇಲ್ಲಿ ಶ್ರೀಮತಿ ಸಿರಿಮಾವೊರವರನ್ನು ಅಭಿನಂದಿಸುವ ಠರಾವನ್ನು ಮಂಡಿಸಲಾಗಿತ್ತು. ನಮ್ಮೂರ ಮಹಿಳೆಯರಿಗೆ ಅವರಂತಾಗಲು ಕರೆಯನ್ನೀಯಲಾಗಿತ್ತು. ಇದೆಲ್ಲದಕ್ಕೂ ಸೂತ್ರಧಾರಿಣಿ ನನ್ನವಳೇ ಆಗಿದ್ದಳೆಂದು ಹೇಳಲು ನನಗೆ ತುಂಬಾ ಅಭಿಮಾನವುಂಟಾಗುತ್ತದೆ. ಆದರೆ ನನ್ನ ಮಡದಿ ಪ್ರಖ್ಯಾತಳಾಗುವುದನ್ನು ಕಣ್ಣಾಗಳಿಂದ ಕಾಣುವ ಭಾಗ್ಯ ನನಗಿದೆಯೊ ಇಲ್ಲವೊ ಎಂಬ ಸಂದೇಹ ನನ್ನಲುಂಟಾಗಿದೆ. ಶ್ರೀ ಸೊಲಮನ್ ಬಂಡಾರನಾಯಕೆಯವರಿಗೆ ಆ ಭಾಗ್ಯವಿರಲಿಲ್ಲವಲ್ಲವೆ?

೦೦ ೦೦

ನಮ್ಮೂರ ಪ್ರಖ್ಯಾತ ಟೀಕಾಕಾರರೊಬ್ಬರು ಈ ರೀತಿ ಅಭಿಪ್ರಾಯಪಡುತ್ತಾರೆ—ಹೆಂಗಸರಲ್ಲಿರುವ ಸಕಲ ಶಕ್ತಿಯನ್ನು ಗಂಡಂದಿರು ಹತ್ತಿಕ್ಕುತ್ತಾರೆ. ಅವ

(೯ನೇ ಪುಟ ನೋಡಿರಿ)

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ
LETTER WRITING MADE EASY
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).
ಮನೆಯೊಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ
ಮನೆ ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.
ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕವನ್ನು ಬುಕ್‌ಪೋಸ್ಟ್ ಮಾಡಬಹುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ತಮ್ಮನಿಗೆ ಓಲೆ—೧೩

ಕಲೆಯು ಕಲೆಗಾಗಿ ಮಾತ್ರವೆ?

ಮಾನವನ ಅಭಿವ್ಯಕ್ತಿ ಮೂಲಕ ರೂಪ ಪಡೆಯುವ ಕಲೆಯ ಪ್ರಯೋಜನ ಯಾವುದು? ಕಲೆಯನ್ನು ಕಲಾದೃಷ್ಟಿಯಿಂದಲೇ ಅಳೆಯಬೇಕೆ? ಅಥವಾ ನಾಗರಿಕ ದೃಷ್ಟಿಯಿಂದಲೂ ಅಳೆಯಬಹುದೇ?

ಬರೆದವರು: ಶ್ರೀ ಗೋರಾ.

ಭಾರತದಲ್ಲಿ ಯಾವುದೇ ಕಾರ್ಯವನ್ನು ಕರ್ತವ್ಯಬುದ್ಧಿಯಿಂದ ಮಾತ್ರ ಮಾಡಬೇಕಲ್ಲದೇ ಸ್ವಾರ್ಥದೃಷ್ಟಿಯಿಂದಲ್ಲವೆಂಬುದಾಗಿ ಅನಾದಿ ಕಾಲದಿಂದಲೂ ತಿಳಿಯಲಾಗುತ್ತಿದೆ. ಆದರೂ ವ್ಯಾವಹಾರಿಕ ದೃಷ್ಟಿಯಲ್ಲಿ ಯಾವುದೇ ಒಂದು ಕೆಲಸದಿಂದ ಪ್ರಯೋಜನವಿಲ್ಲವೆನ್ನಲಾಗುವುದಿಲ್ಲ. "ಪ್ರಯೋಜನ ಮನುದ್ದಿಶ್ಯ ಮೂರ್ಖೋಪಿನ ಪ್ರವರ್ತತೇ" ಎಂಬ (ಪ್ರಯೋಜನವಿಲ್ಲದೆ ಮೂಢನೂ ಉದ್ಯೋಗಕ್ಕೆ ತೊಡಗುವುದಿಲ್ಲ) ಉಕ್ತಿಯು ನಮ್ಮಲ್ಲೇ ಹುಟ್ಟಿಕೊಂಡಿದೆ. ಭಾರತದ ಸುಪ್ರಸಿದ್ಧ ಅಲಂಕಾರಿಕರಾದ ಮಮ್ಮಟನೇ ಮೊದಲಾದವರು ಕಾವ್ಯದ ಹೇತುವೇನೆಂಬುದನ್ನು ಚರ್ಚಿಸಿದ್ದಾರೆ; ಪಾಶ್ಚಾತ್ಯ ವಿದ್ವಾಂಸರೂ ಕಲೆಯ ಪ್ರಯೋಜನವನ್ನು ವಿಮರ್ಶಿಸಿದ್ದಾರೆ. ಕೆಲವು ವಿಮರ್ಶಕರು ನೀತಿ, ಉಪಯೋಗಿತೆ ಮೊದಲಾದ ಪ್ರಯೋಜನಗಳಿಂದ ಕಲೆಯನ್ನು ದೂರವಿರಿಸಿ 'ಕಲೆಯು ಕಲೆಗಾಗಿ' ಎಂಬ ವಾದವನ್ನು ಬೆಂಬಲಿಸಿದರೆ, ಮತ್ತೆ ಕೆಲವರು 'ಕಲೆಯು ಜೀವನಕ್ಕಾಗಿ' ಎಂಬುದಾಗಿ ಪ್ರತಿಪಾದಿಸುತ್ತಾರೆ. ಇವಲ್ಲದೇ ಇನ್ನೂ ಕೆಲವು ಪಂಗಡಗಳಿವೆ. ಕಲೆಯು ಜೀವನ್ಮುಕ್ತಿಗಾಗಿ, ಕಲೆಯು ಜೀವನ ಪ್ರವೇಶಕ್ಕಾಗಿ, ಕಲೆಯು ಮನೋರಂಜನೆಗಾಗಿ, ಕಲೆಯು ಸೃಷ್ಟಿಯ ಆದಮ್ಯ ಆವಶ್ಯಕತೆಗಳ ಪೂರ್ತಿಗಾಗಿ, ಕಲೆಯು ಆತ್ಮಸಂತೋಷಕ್ಕಾಗಿ ಮೊದಲಾದುವು ಈ ವರ್ಗಕ್ಕೆ ಸೇರುತ್ತವೆ. ಆದರೆ, ಈ ವಾದಗಳೆಲ್ಲವನ್ನು ಮೊದಲ ಎರಡರಲ್ಲಿ ಅಂತರ್ಗತಗೊಳಿಸಬಹುದು.

ಮೊದಲೇ ಸೂಚಿಸಿದ್ದಂತೆ 'ಕಲೆಯು ಕಲೆಗಾಗಿ' ಎಂಬ ವಾದವು ಮೊತ್ತಮೊದಲು ಫ್ರಾನ್ಸಿನಲ್ಲಿ ತಲೆಯೆತ್ತಿತು. ಈ ವಾದದ ಪುರಸ್ಕರ್ತರಲ್ಲಿ ವಾಲ್ಟರ್ ಪೇಟರ್, ಓಸ್ಕರ್ ವಾಯಿಲ್ಡ್ ಮೊದಲಾದವರು ಅಗ್ರಗಣ್ಯರು. ಇಂಗ್ಲೆಂಡಿನ ಬ್ರೋಡ್ಲೆ ಮಹನೀಯರೂ ಈ ವಾದವನ್ನು ಬೆಂಬಲಿಸುತ್ತಾರೆ. ಕಲೆಯ ಉಪಯೋಗಿತೆಯಲ್ಲಿ ಅದರ ಪ್ರಯೋಜನವಡಗಿಲ್ಲ; ಆರ್ಥಿಕ ಅಥವಾ ನೈತಿಕ ಮೂಲಕ ಯಾ ಅಳತೆಯಿಂದ ಕಲೆಯ ಬೆಲೆಯನ್ನು ಅಳೆಯುವುದರಿಂದ ಅದಕ್ಕೆ ಅನ್ಯಾಯವೆಸಗಿದಂತಾಗುವುದು. ಕಲೆಗಿಂತಲೂ ಪರದಲ್ಲಿ ಯಾವುದಾದರೂ ಒಂದು ವಸ್ತುವಿದೆಯೆಂದು, ಅದೇ ಕಲೆಯ ಪ್ರಯೋಜನವೆಂದು ಹೇಳುವುದರಿಂದ ಕಲೆಯ ಸ್ವಾಯತ್ತ ಅಧಿಕಾರದಲ್ಲಿ ನಾವು ಅವಿಶ್ವಾಸ ತೋರಿಸಿದಂತಾಗುತ್ತದೆ; ಸ್ವತಂತ್ರವಾದ ಕಲೆಯನ್ನು ಪಾರತಂತ್ರ್ಯದ ಸಂಕಲೆಯಿಂದ ನಾವೇ ಬಿಗಿದಂತಾಗುತ್ತದೆ. "ನಿರಂಕುಶಾ ಹಿ ಕವಯಃ" ಎಂಬ ಮಾತಿನಂತೆ ಕಲಾವಿದರು ನಿರಂಕುಶರು. ಮನೋಮುಗ್ಧಕಾರಿಣಿಯಾದ ಸುಂದರತೆಯೇ ಕಲೆಯ ಚರಮ ಗುರಿಯೆಂದು ಈ ವಾದ ಸಮರ್ಥಕರನ್ನುತ್ತಾರೆ.

ಇದೇ ವಾದವನ್ನು ಬೆಂಬಲಿಸುತ್ತ ತನ್ನ ಕೃತಿಗಳಲ್ಲಿ ಸದಾಚಾರವನ್ನು ಅವಹೇಳನೆ ಮಾಡಿದ ಆಸ್ಕರ್ ವೈಲ್ಡ್ ಎಂಬವರು 'ಕಲೆ ಮತ್ತು ಆಚಾರಗಳ ಕ್ಷೇತ್ರಗಳು ಬೇರೆ ಬೇರೆಯೆಂದು ತಿಳಿದು ಸಮಾಲೋಚಕನು ತನ್ನ ವಿಮರ್ಶೆಗೆ ತೊಡಗಬೇಕೆಂದು' ಹೇಳಿದ್ದಾರೆ. ಜೆ. ಇ. ಸ್ಪಿನ್‌ಗಾರ್ಡ್‌ರು ಇದಕ್ಕೆ ತುಸು ಹಾಸ್ಯೋತ್ತೇಜಕ ರೂಪವಿತ್ತರು. "ರೇಖಾಗಣಿತದಲ್ಲಿ ಸಮತ್ರಿಭುಜವನ್ನು ಸದಾಚಾರ ಪೂರ್ಣವೆಂದು ಸಮದ್ವಿಬಾಹು ತ್ರಿಭುಜವನ್ನು ದುರಾಚಾರ ಪೂರ್ಣವೆಂದು ಹೇಳುವಂತೆ ಕಾವ್ಯಗಳಲ್ಲಿಯೂ ಸದಾಚಾರ ಮತ್ತು ದುರಾಚಾರಂಗಳನ್ನು ಅರಸುವುದು ಒಂದು ಕೆಟ್ಟ ಪದ್ಧತಿ" ಎಂದಿವರನ್ನುತ್ತಾರೆ. ಸಂಕವನ್ನು ಕಟ್ಟಲು ಬರುವ ಇಂಜಿನಿಯರು ಸಾಹೇಬನಿಗೆ ಯಾವುದೋ ಒಂದು ಭಾಷೆಯು ಬರಬೇಕು, ಅಡಿಗೆಯವನು ಗೇರುಬೀಜದ ಬಜೆ ಕಾಯಿಸುವುದರೊಡನೆ ತ್ರಿಕೋಣಮಿತಿಯ ಪ್ರಶ್ನೆಗಳನ್ನೂ ಉತ್ತರಿಸಬೇಕು; ಅಥವಾ ಭೌತಿಕ ಶಾಸ್ತ್ರಿಯು ರೇಖಾ ಗಣಿತದಲ್ಲಿಯೂ ಪ್ರವೀಣನಿರಬೇಕು ಎಂಬ ಅಸಂಗತ ವಾದಗಳಂತೆ ಕಲಾವಿದನು ಸದಾಚಾರ ಮತ್ತು ನೀತಿಗಳ ಪ್ರಚಾರವನ್ನೂ ಮಾಡಬೇಕೆನ್ನುವುದೂ ಅಸಂಗತ ಮತ್ತು ತರ್ಕವಿರುದ್ಧವಾಗಿರುವುದು ಎಂದಿವರನ್ನುತ್ತಾರೆ.

ಕಲಾವಾದದ ಬಗ್ಗೆ ಈ ರೀತಿಯ ವಾದಗಳನ್ನು ಮುಂದೂಡುವವರು ಇಂಜಿನಿಯರ ಹಾಗೂ ಅಡುಗೆಗಾರರ ಕ್ಷೇತ್ರಗಳು ಸೀಮಿತವಿರುತ್ತವೆಂಬ ಕಟು ಸತ್ಯವನ್ನು ಮರೆತು ಬಿಟ್ಟಂತೆ ತೋರುತ್ತದೆ. ಮಾನವನ ಜೀವನದೊಡನೆ ಕಲೆಯು ಪರಿಪೂರ್ಣ ಸಂಬಂಧವಿರಿಸಿಕೊಂಡಿದೆ. ಒಬ್ಬ ಮನುಷ್ಯ, ಸಂಸ್ಥೆ ಅಥವಾ ಒಂದು ಸಿದ್ಧಾಂತವು ವ್ಯಾಪಕವಾಗಿ ಹರಡಿರುವಷ್ಟೆ ಅನ್ಯರೊಡನೆ ಸಾಮ್ಯ ಸಮನ್ವಯಗಳ ಭಾವನೆ ಹೆಚ್ಚಾಗಿ ಇಟ್ಟುಕೊಳ್ಳಬೇಕು. ಬಹುದೂರ ನಡೆಯುವವನು ಎಡಹದಂತೆ ತುಂಬ ಎಚ್ಚರಿಕೆ ವಹಿಸಿಕೊಳ್ಳಬೇಕಾಗುತ್ತದೆ. "ಸರ್ವೇ ಪದಾ ಹಸ್ತಿಪದೇ ನಿಮಗ್ನಾಃ" (ಆನೆಯ ಹೆಜ್ಜೆಯಲ್ಲಿ ಎಲ್ಲರ ಹೆಜ್ಜೆಯೂ ಹುಂಬುತ್ತದೆ) 'ಕಲೆಯು ಕಲೆಗಾಗಿ' ಎಂಬ ವಾದವನ್ನು ಮುಂದೂಡುವವರು ಕಲೆಯ ಕ್ಷೇತ್ರವನ್ನು ಸಂಕುಚಿತಗೊಳಿಸಿ, ಅದು ಮುಂಡಿಸಿರುವ ಉಚ್ಚ ಸಿಂಹಾಸನದಿಂದ ಅದನ್ನು ಕೆಳಗಿಳಿಯುವ ದುಸ್ಸಾಹಸವನ್ನು ಮಾಡುತ್ತಿರುವರೆಂದು ಹೇಳಿದರೆ, ಅತಿಶಯೋಕ್ತಿಯಾಗಲಾರದು. ಮನುಷ್ಯ ಜೀವನದ ಸರ್ವತ್ರ ಕಲೆಯು ಹರಡಿದ್ದು ಸುಸಂಬದ್ಧವಾಗಿರುವಾಗ, ಅದು ನೀತಿ, ಸದಾಚಾರ, ಮತ್ತು ಉಪಯೋಗಿತೆಗಳನ್ನು ಎಂದಿಗಾದರೂ ಅವಹೇಳನಕ್ಕೆ ಗುರಿಮಾಡುವುದು ಸಾಧ್ಯವಿಲ್ಲ.

ಕಲಾವಾದದ ಪುರಸ್ಕರ್ತರು ಭಾರತದಲ್ಲಿಲ್ಲವೆನ್ನುವಂತಿಲ್ಲ. ಇತ್ತೀಚೆಗೆ ಈ ವಾದವಾದರೂ ದಿನದಿನಕ್ಕೆ ಬೆಳೆಯುತ್ತಿದೆ. ಶ್ರೀ ಇಲಾಚಂದ್ರ ಜೋಶಿ ಎಂಬ ಹಿಂದೀ ಲೇಖಕರು ಒಂದು ಕಡೆ ಈ ರೀತಿ ಬರೆದಿದ್ದಾರೆ: "ವಿಶ್ವದ ಈ ಅನಂತ ಸೃಷ್ಟಿಯಂತೆಯೇ ಕಲೆಯೂ ಆನಂದದ ಒಂದು ಪ್ರಕಾಶ. ಆ ಪ್ರಕಾಶದಲ್ಲಿ ನೀತಿ ಅಥವಾ ಶಿಕ್ಷಣಗಳಿಗೆ ಸ್ಥಾನವಿಲ್ಲ. ಅದರ ಮಾಯಾ ಚಕ್ರದಿಂದ ನಮ್ಮ ಹೃದಯ ವೀಣೆಯ ತಂತಿಯು ಆನಂದದ ಝೇಂಕಾರದೊಡನೆ ಬಾರಿಸುತ್ತದೆ. ಅದೇ ನಮಗೆ ಪರಮ ಲಾಭ. ಉಚ್ಚ ಕೋಟಿಯ ಕಲೆಯಲ್ಲಿ ಯಾವುದೇ ತತ್ವವನ್ನರಸುವುದರಿಂದ ಸೌಂದರ್ಯದೇವಿಯ ಪವಿತ್ರ ಮಂದಿರವನ್ನು ಕಲುಷಿತಗೊಳಿಸಿದಂತಾಗುವುದು".

ವಿಶ್ವಕವಿ ರವೀಂದ್ರನಾಥ ಠಾಕೂರರೂ ಇದೇ ಕಲಾಪಕ್ಷಕ್ಕೆ ಸೇರಿದವರು. ಕಲೆಯು ಪ್ರಯೋಜನದಿಂದ ದೂರವಾದುದು ಎಂದು ತಿಳಿಯುವುದರೊಡನೆ ಅದನ್ನು ಮಂಗಲಮಯರೂಪದಲ್ಲಿ ನೋಡಬಯಸುತ್ತಾರೆ. 'ಸೌಂದರ್ಯ ಮೂರ್ತಿಯೇ ಮಂಗಳದ ಪೂರ್ಣಮೂರ್ತಿ; ಮಂಗಳ ಮೂರ್ತಿಯೇ ಸೌಂದರ್ಯದ ಪೂರ್ಣ ಸ್ವರೂಪ' ಎಂದವರ ಅಭಿಪ್ರಾಯ.

'ಕಲೆಯು ಕಲೆಗಾಗಿ' ಎನ್ನುವವರು ಈ ಪ್ರಪಂಚದಲ್ಲಿಯೇ ಇದ್ದುಕೊಂಡು, ಯಾವುದೋ ಒಂದು ಕಾಲ್ಪನಿಕ ಜಗತ್ತಿನಲ್ಲಿ ವಿಹರಿಸುತ್ತ ಇರಬೇಕೇ ಅಥವಾ, ನಿತ್ಯ ಸಂಘರ್ಷಮಯ ವಿಶ್ವದಲ್ಲಿದ್ದು ನಾಗರಿಕರಾಗಿ ನಾಗರಿಕ ಕರ್ತವ್ಯಪೂರ್ತಿಯನ್ನು ಮಾಡಬೇಕೆ? ಎಂಬ ಪ್ರಶ್ನೆಯೇಳುತ್ತದೆ. ಪ್ರೊಫೆಸರ ಎ. ಸಿ. ಬ್ರಾಡ್ಲಿಯೆಂಬವರು 'ಕಾವ್ಯ ಕಾವ್ಯಕ್ಕಾಗಿ' ಎಂಬ ತನ್ನೊಂದು ಲೇಖದಲ್ಲಿ ಈ ಪ್ರಶ್ನೆಯನ್ನು ಚರ್ಚಿಸಿದ್ದಾರೆ. ವಿಶುದ್ಧ ಕಲೆಯ ದೃಷ್ಟಿಕೋಣದಿಂದ ಕಲೆಯ ಮೌಲ್ಯವನ್ನು ನಾವು ಸೌಂದರ್ಯ ಮಾಪದಂಡದಿಂದ ನಿರ್ಧರಿಸಬೇಕು ಆದರೆ, ನಾಗರಿಕರ ದೃಷ್ಟಿಕೋಣದಲ್ಲಿ ಕಲಾಕಾರನ ಎಲ್ಲ ಕೃತಿಗಳ ಪ್ರಕಾಶಕ್ಕೆ ಬರಬೇಕಾದ ಆಗತ್ಯವಿಲ್ಲ. ಈ ವಾದವನ್ನವರು ಪುರಸ್ಕರಿಸುತ್ತ ರೊಸೆಟ್ಟಿ ಎಂಬೊಬ್ಬ ಕವಿ ತನ್ನೊಂದು ಕವಿತೆಯನ್ನು ಉಚ್ಚ ವರ್ಗದ ಕವಿತಾ ಲೇಖಕನಾದ ಟೆನ್ನಿಸನ್ ಮೆಚ್ಚಿದ್ದರೂ ಲೋಕ ಮರ್ಯಾದೆಗೆ ಭಂಗವಾದೀತು ಎಂದು ಅಂಜಿ ಪ್ರಕಟಿಸಲು ಹಿಂಜರಿದನೆಂದು ಹೇಳುತ್ತಾರೆ. ಕ್ರೋಚೆ ಎಂಬವರ ಅಭಿಪ್ರಾಯವೂ ಇದೇ ರೀತಿಯಲ್ಲಿದೆ. ಅಭಿವ್ಯಕ್ತಿಯಲ್ಲಿ ಮೂಲಭೂತವಾಗಿರುವ ಕಲೆಯು ಕಲಾಕಾರನ ಮನಸ್ಸಿನಲ್ಲಿಯೇ ರೂಪಧಾರಣೆ ಮಾಡುತ್ತದೆ. ಕಲಾಕಾರನ ಮನಸ್ಸಿನಲ್ಲಿ ಉತ್ಪನ್ನವಾಗುವ ರೂಪವೇ ನಿಜವಾದ ಕಲೆಯಾಗಿದೆ. ಅದು ನೀತಿ, ಸದಾಚಾರ ಮು

(ಆನೇ ಪುಟ ನೋಡಿರಿ)

ಕರ್ನಾಟಕ ಸಂಘ (ಉಡುಪಿ)ದ ಮೂರು ಪ್ರಕಟಣೆಗಳು
ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ
ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.
ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು
ಲೇಖಕರು: ಡಾ| ಕೆ. ಎಲ್. ಪತಾಳೆ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ
ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.
ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.
ರೂ. ೩ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೋ, ಉಡುಪಿ.

> ವಿಚಾರಶೀಲನಾಗುವುದರಿಂದ ಮಾನವ ಮಾನವನಾಗುತ್ತಾನೆ; ನಿಸ್ವಾರ್ಥ ಕರ್ಮದಿಂದಾತ ದೇವತೆಯೆನಿಸುತ್ತಾನೆ.

NAVAYUGA

Founder:—

Late Sri. **A. B. SHETTY**,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೪-೮-'೬೦	೪೨

ನೂತನ ಮಾರ್ಗದರ್ಶನ!

ಭಾರತೀಯ ರಾಜಕಾರಣದ ಹಿರಿಯ ನಾಯಕರಾದ ಶ್ರೀ ರಾಜಗೋಪಾಲಾಚಾರಿಯವರು ಕಾಂಗ್ರೆಸ್ಸನ್ನು ತ್ಯಜಿಸಿ 'ಸ್ವತಂತ್ರ ಪಕ್ಷ'ದ ಸ್ಥಾಪನೆಗೆ ಮೂಲಾಧಾರವಾದಾಗ ಕಾಂಗ್ರೆಸ್ಸು ತುಸು ಚಿಂತೆಗೀಡಾಗಿರಬಹುದಾದರೂ ಪ್ರಜಾಸತ್ತೆಯು ಯಶಸ್ವಿಯಾಗಬೇಕಾದರೆ ಪ್ರಬಲವಾದ ವಿರೋಧ ಪಕ್ಷವು ಬೇಕಾಗಿರುವುದು ಅತ್ಯವಶ್ಯವಾದುದರಿಂದ, ಇವರ ಪಕ್ಷವನ್ನು ಸ್ವಾಗತಿಸಿರುವವರೂ ಇದ್ದಾರೆ. ನುರಿತ ಮುತ್ಸದ್ದಿಯ ಹಿರಿತನದಲ್ಲಿ ತೊಡಗಿದ ಈ ಪಕ್ಷವು ಉಳಿದ ಕೆಲವೊಂದು ಪಕ್ಷಗಳಿಗಿಂತ ತೀವ್ರವಾಗಿ ಜನಬಲ ಗಳಿಸುತ್ತ ಹೋದುದರಿಂದ ಇದು ಶೀಘ್ರದಲ್ಲಿಯೇ ಬೆಳೆದು ಬರುವ ಸೂಚನೆಗಳೂ ತೋರಿದ್ದುವು. 'ಭಿನ್ನಾಭಿಪ್ರಾಯ'ವು ಪ್ರಜಾಸತ್ತೆಯಲ್ಲಿ 'ಉತ್ತಮ ಪರಿಣಾಮ' ಬೀರಬಹುದು; ಇದನ್ನು ಅಲ್ಲಗಳೆಯುವುದು ಪ್ರಯಾಸವೇ. ಆದರೆ, ಯಾವಾಗಲೂ ಯೋಚಿಸಿ, ಸಾಧುವಾದ ಮಾತುಗಳನ್ನೇ ಉದ್ಗರಿಸುತ್ತಿದ್ದ ರಾಜಾಜಿ ಈಗೀಗ ತಮ್ಮ ಶಕ್ತಿಯನ್ನು ಸ್ವಚ್ಛಂದವಾಗಿ ಹರಿಯಗೊಡುತ್ತಿದ್ದಾರೆಂಬುದು ವಿಷಾದನೆಗೆ ಕಾರಣವಾಗಿದೆ. ರಾಜಾಜಿಯವರ ಪಾಂಡಿತ್ಯ, ಕಾರ್ಯಪಟುತ್ವ, ರಾಜಕೀಯ ಮುತ್ಸದ್ದಿತನ ಹಾಗೂ ಧೈರ್ಯ ಸಾಹಸಗಳ ಬಗೆಗೆ ಎರಡು ಹೇಳುವಂತಿಲ್ಲ. ಇವುಗಳಿಂದಲೇ ಅವರನ್ನು ಭಾರತೀಯರು ಮಾತ್ರವಲ್ಲ, ವಿದೇಶೀಯರು ಕೂಡಾ ಆದರಿಸುತ್ತಾರೆ.

ಮೊನ್ನೆ ಮೊನ್ನೆ ಬೊಂಬಾಯಿಯಲ್ಲಿ ಸೇರಿದ್ದ ಸ್ವತಂತ್ರ ಪಕ್ಷದ ಸಭೆಯೊಂದರಲ್ಲಿ ಭಾಷಣ ಮಾಡುತ್ತ ಶ್ರೀ ರಾಜಾಜಿಯವರು ಮುಂದಿನ ಸಾರ್ವತ್ರಿಕ ಚುನಾವಣೆಗಳು ನಡೆಯುವುದಕ್ಕೆ ಆರು ತಿಂಗಳ ಮೊದಲು ಪ್ರಧಾನಿ ಪಂಡಿತ ನೆಹರು ಅವರು ಅಧಿಕಾರ ತ್ಯಾಗಮಾಡಬೇಕೆಂದು ಕೇಳಿಕೊಂಡಿದ್ದಾರೆ. ಇದಕ್ಕೆ ಅವರು ಕಾರಣಗಳನ್ನೂ ಕೊಟ್ಟಿದ್ದಾರೆ. ಹೀಗೆ ಅಧಿಕಾರ ತ್ಯಾಗ ಮಾಡುವುದರಿಂದ ದೇಶದಲ್ಲಿ ಸ್ವತಂತ್ರ ಹಾಗೂ ನಿಷ್ಪಕ್ಷಪಾತ ರೀತಿಯಲ್ಲಿ ಚುನಾವಣೆಗಳು ನಡೆಯುವುವಂತೆ. ಅಧಿಕಾರಾರೂಢ ಪಕ್ಷವು ಜನರನ್ನು ಲಂಚ ಕೊಟ್ಟು ವಶಪಡಿಸಿಕೊಳ್ಳುವುದು ತಪ್ಪುವುದಂತೆ. ನೆಹರುರವರು ಅಧಿಕಾರದಲ್ಲಿದ್ದರೆ, ಆಗ ಚುನಾವಣೆಗಳು ಮುಕ್ತರೀತಿಯಲ್ಲಿ ನಡೆಯುವುದಿಲ್ಲವೆಂಬುದು ತೋರಿಕೆಯ ಮಟ್ಟಿಗೆ ಲಘುವಾದವೆಂಬಂತೆ ಕಂಡುಬಂದರೂ ರಾಜಾಜಿ ಹೊರಿಸಿದ ಆರೋಪವಿದು ಬಹು ಗಂಭೀರವಾದುದು. ರಾಜಾಜಿ ಹಲವಾರು ಬಾರಿ ಮಥಿಸಿ ಆಡಿದ ಮಾತು ಇದಾದರೆ ಇಲ್ಲಿ ಅವರು ತುಸು ತಪ್ಪಿದ್ದಾರೆಂದೇ ಹೇಳಬೇಕಾಗುತ್ತದೆ. ಭಾರತದಲ್ಲಿ ಹಾಗೂ ವಿದೇಶಗಳಲ್ಲಿಯೂ ಜನಪ್ರಿಯತೆ ಗಳಿಸಿಕೊಂಡಿರುವ ನೆಹರು ಅಧಿಕಾರವನ್ನು ಮತ್ತೂ ಮತ್ತೂ ಸ್ವೀಕರಿಸಲೇಬೇಕಾದ ಸಂಭವ ಬಂದರೆ, ಅದವರ ಜನಪ್ರಿಯತೆಯ ದ್ಯೋತಕವೇ ಹೊರತು ಚುನಾವಣೆಯು ಪಕ್ಷಪಾತತನದಲ್ಲಿ ನಡೆದಿದೆ ಎನ್ನುವುದು ಸಮಂಜಸವೆನಿಸದು. ವಿಶ್ವದ ಪ್ರಜಾಸತ್ತೆಗಳಲ್ಲಿ ಅತ್ಯಂತ ಹಿರಿಯವಾದ ಮತ್ತು ಹಳೆಯವಾದ, ಪ್ರಜಾಪ್ರಭುತ್ವ ಆಡಳಿತ ಪದ್ಧತಿಗೆ ಹೆಸರಾದ ಅಮೇರಿಕೆ ಅಥವಾ ಇಂಗ್ಲೆಂಡುಗಳನ್ನೇ ನಾವು ಗಮನಿಸುವುದಾದರೂ ಅಲ್ಲಿ ಈ ರೀತಿ ಪದತ್ಯಾಗ ಮಾಡುವ ಕ್ರಮವೂ ಇಲ್ಲ; ವಿರೋಧೀ ಪಕ್ಷವಾದರೂ ರಾಜಾಜೀ ಮಂಡಿಸಿದಂತಹ ಕೇಳಿಕೆಗಳನ್ನು ಮುಂದೆ ತರುವುದೂ ಇಲ್ಲ. ಹಾಗಿರುವಾಗ, ಕೇವಲ ಭಾರತದಲ್ಲಿ ಮಾತ್ರ ಇಂತಹ ಒಂದು ನವೀನ ಕ್ರಮವನ್ನು ಪ್ರಾರಂಭಿಸಬೇಕೆಂಬುದು ವಿಚಿತ್ರ ವಾದವಾಗಿ ತೋರುತ್ತದೆ. ವಿದೇಶಗಳಲ್ಲಿಲ್ಲದ ಮಾದರಿಯನ್ನು ನಾವು ಅನುಸರಿಸಲು ಸ್ವತಂತ್ರರಿದ್ದೇವೆ; ಮತ್ತು ಅದು ಉಚಿತ ಮತ್ತು ಅವಶ್ಯವೆಂದು ಕಂಡರೆ, ಪರಿಪಾಠ ಹಾಕಿ ಕೊಡುವುದೂ ನ್ಯಾಯವೇ. ಆದರೆ, ನಮ್ಮ ದೇಶದಲ್ಲಿ ಅಂತಹ ಪರಿಸ್ಥಿತಿಯು ಹೇಗೆ ತಲೆದೋರಿತು, ತಲೆದೋರಿದೆಯೋ ಎಂಬುದನ್ನು ನಾವು ಆಗತ್ಯವಾಗಿ ಗಮನಿಸಬೇಕು.

ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿರುವಾಗ ಅದು ತನಗೆ ಬೇಕಾದಂತೆ ಚುನಾವಣೆಯನ್ನು ಸ್ವತಂತ್ರವಾಗಿ ನಡೆಸಿ, ತಾನು ಜಯಗಳಿಸುವುದಕ್ಕೆ ಅನುಕೂಲವಾಗುವ ಹಂಚಿಕೆಗಳನ್ನು ನಡೆಸಬಲ್ಲುದು ಎಂಬ ಆರೋಪ ಹೊರಿಸುವುದಾದರೆ, ಇದು ಒಪ್ಪತಕ್ಕದ್ದಲ್ಲ. ಎರಡನೆಯ ಸಾರ್ವತ್ರಿಕ ಚುನಾವಣೆಯಲ್ಲಿ ಕೇರಳದಲ್ಲಿ ಕಾಂಗ್ರೆಸ್ಸು ಸೋಲುಂಡುದನ್ನು ನಾವು ಮರೆಯುವಂತಿಲ್ಲ. ಇತರ ಕೆಲವೆಡೆಯಲ್ಲೂ ಕಾಂಗ್ರೆಸ್ ಅಧಿಕ ಬಹುಮತಗಳನ್ನೂ ಪಡೆದಿಲ್ಲವೆಂಬುದನ್ನು ಅಲ್ಲಗಳೆಯುವಂತಿಲ್ಲ. ಅಲ್ಲದೇ ಚುನಾವಣೆಗಳ ಏರ್ಪಾಡನ್ನು ಚುನಾವಣಾ ಮಂಡಳದ ಆದೇಶಕ್ಕನುಸಾರವಾಗಿ ನಡೆಸಲಾಗುವುದಲ್ಲದೆ ನೆಹರೂರವರ ಇಚ್ಛೆಯಂತಲ್ಲ. ಇವೆಲ್ಲವನ್ನೂ ನಾವು ಪರಿಶೀಲಿಸುವುದಾದರೆ, ರಾಜಾಜಿಯವರ ಕರೆಯೊಂದು ಬೆಲೆಯಿಲ್ಲದ ವಿವೇಕಶೂನ್ಯವಾದ ಕೇಳಿಕೆಯೊಂದು ಹೇಳಲೇ ಬೇಕಾಗುತ್ತದೆ. ಸಾಮಾನ್ಯ ನಾಗರಿಕನ ಅಥವಾ ಸಾಮಾನ್ಯ ಪಕ್ಷದ ನಾಯಕರ ಮುಖದಿಂದ ಈ ಮಾತುಗಳು ಉದುರುತ್ತಿದ್ದರೆ, ಅದನ್ನು ಅಲ್ಲಗಳೆಯಬೇಕಾದ ಆಗತ್ಯವೇ ಇರುವುದಿಲ್ಲ. ಆದರೆ, ರಾಜಕಾರಣದ ರಹಸ್ಯೋದ್ಘಾಟಕರಾದ ರಾಜಾಜೀಯವರ ಈ ಉದ್ಗಾರವು ನಿಜವಾಗಿಯೂ ಆಶ್ಚರ್ಯಕಾರಕವಿರುತ್ತದೆ. ಅವರು ಒಂದು ಬೇರೆಯೇ ಮಾರ್ಗದಲ್ಲಿ ಸಂಚರಿಸುವ ಉಪದೇಶ ಮಾಡುವ ವ್ಯಾಜದಲ್ಲಿ ಅನುಚಿತ ಮಾರ್ಗದರ್ಶನ ಮಾಡುತ್ತಿರುವರೆಂದು ತಿಳಿಯಬೇಕಾಗುತ್ತದೆ.

ಹನುಮಂತ ರಾಯರು

ಕರ್ನಾಟಕದ ಪತ್ರಿಕಾಪ್ರಪಂಚದಲ್ಲಿ ಅದ್ವಿತೀಯ ಸ್ಥಾನವನ್ನು ಪಡೆದ ಸಮರ್ಥ ಪತ್ರಿಕೋದ್ಯಮಿಗಳಾಗಿದ್ದ ಮೊಹರೆ ಹನುಮಂತರಾಯರು ತಮ್ಮ ೬೮ನೆಯ ವಯಸ್ಸಿನಲ್ಲಿ ಇಹಲೋಕತ್ಯಾಗ ಮಾಡಿದುದರಿಂದ ಕನ್ನಡವು ತನ್ನೊಬ್ಬ ಸುಪುತ್ರನನ್ನು ಕಳೆದುಕೊಂಡು ದುಃಖಕ್ಕೆ ಪಾತ್ರವಾಯಿತು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಯಥೋಚಿತ ಸೇವೆ ಸಲ್ಲಿಸಿದ್ದ ಮೊಹರೆಯವರ ಅಗಲಿಕೆಯಿಂದಾಗಿ ದೇಶಕ್ಕೆ ಅಪಾರ ನಷ್ಟವಾದಂತಾಯಿತು. ದಿವಂಗತರು ಉಜ್ವಲ ದೇಶಪ್ರೇಮಿಗಳೂ, ಸ್ವಾತಂತ್ರ್ಯ ಯೋಧರೂ ಆಗಿದ್ದರು. ಪತ್ರಿಕೋದ್ಯಮವೆಂದರೇನೆಂದು ಅರಿಯದ ಕನ್ನಡಿಗರಿಗೆ ಆದರ್ಶ ಪತ್ರಿಕಾ ವ್ಯವಸಾಯದ ಪಾಠವನ್ನು ಕಲಿಸಿದ ಪತ್ರಿಕಾಕರ್ತರ ಗುರುಗಳಿವರು. ಪ್ರಾರಂಭದಲ್ಲಿ 'ಕರ್ನಾಟಕ ವೈಭವ' ವೆಂಬ ವಾರಪತ್ರಿಕೆಯನ್ನು ನಡೆಸುತ್ತಿದ್ದ ಹನುಮಂತರಾಯರು ಶ್ರೀಗಳಾದ ರಂ. ರಾ. ದಿವಾಕರ ಮತ್ತು ಬಿ. ಎನ್. ದಾತಾರರೊಡನೆ ಸೇರಿಕೊಂಡು 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿ ೩೬ ವರ್ಷಗಳ ಕಾಲ ಆ ಪತ್ರಿಕೆಯ ಸರ್ವಾಂಗೀಣ ಅಭಿವೃದ್ಧಿಯನ್ನು ಹಾರೈಸಿ, ಅಹೋರಾತ್ರಿ ದುಡಿದು ಪತ್ರಿಕಾಪ್ರಪಂಚದಲ್ಲಿ ಅದಕ್ಕೆ ಗಣನೀಯ ಸ್ಥಾನವನ್ನು ಗಳಿಸಿಕೊಟ್ಟರು. ಇಂಡಿಯನ್ ಮತ್ತು ಈಸ್ಟರ್ನ್ ನ್ಯೂಸ್ ಪೇಪರ್ಸ್ ಸೊಸಾಯಿಟಿಯ ಅಧ್ಯಕ್ಷರಾಗಿ, ಪಿ. ಟಿ. ಐ. ಸುದ್ದಿ ಸಂಸ್ಥೆಯ ಡೈರೆಕ್ಟರಾಗಿ, ಅಖಿಲ ಭಾರತ ಪತ್ರಿಕಾ ಸಂಪಾದಕರ ಪರಿಷತ್ತಿನ ಸ್ಥಾಯೀ ಸಮಿತಿಯ ಸದಸ್ಯರಾಗಿ ಅವರು ಸೇವೆಸಲ್ಲಿಸಿದ್ದರು. ಉತ್ತರ ಕರ್ನಾಟಕದ ಬೇಂಕ್ ಆಫ್ ಕರ್ನಾಟಕದ ಸ್ಥಾಪನೆಯಲ್ಲೂ ಇವರ ಕೈವಾಡವಿತ್ತು. ರಾಜಕಾರಣದಂತೆಯೇ ಧಾರ್ಮಿಕ ಕ್ಷೇತ್ರದಲ್ಲೂ ಮೊಹರೆಯವರದು ಎತ್ತಿದ ಕೈಯಾಗಿತ್ತು. ಮಾಧ್ವ ಸಂಪ್ರದಾಯಕ್ಕೆ ಸೇರಿದ್ದ ಇವರು ಮಾಧ್ವ ತತ್ವ ಶಾಸ್ತ್ರಗಳಲ್ಲಿ ಪರಿಣತಿಯನ್ನು ಪಡೆದಿದ್ದರು. ಅಖಿಲ ಭಾರತ ಮಾಧ್ವ ಮಹಾಮಂಡಳದ ಉಪಾಧ್ಯಕ್ಷರಾಗಿದ್ದರಿವರು. ದಕ್ಷ ಆಡಳಿತೆಗಾರರೆಂದು ಹೆಸರು ಪಡೆದ ಹನುಮಂತರಾಯರು ಎಲ್ಲರನ್ನೂ ಪ್ರಸನ್ನಗೊಳಿಸುವುದರಲ್ಲಿ ಪ್ರವೀಣರಿದ್ದರು. ಬಿಜಾಪುರದ ಸಾಧಾರಣ ಸ್ಥಿತಿಗತಿಯ ಕುಟುಂಬವೊಂದರಲ್ಲಿ ಜನಿಸಿದ ಮೊಹರೆಯವರು ಸ್ವಪರಿಶ್ರಮ, ಸ್ವಪ್ರತಿಭೆಗಳಿಂದಲೇ ಉನ್ನತವಾದ ಸ್ಥಾನಗಳನ್ನು ಪಡೆದು ಜನಾದರಣೀಯರಾಗಿದ್ದಾರೆ. ಇವರ ನಿಧನದಿಂದ ಕನ್ನಡ ಪತ್ರಿಕಾಪ್ರಪಂಚದ ಅನರ್ಘ್ಯ ಮಣಿಯೊಂದು ಇನ್ನಿಲ್ಲದಂತಾಯಿತು. ದಿವಂಗತರಿಗೆ ಸದ್ಗತಿಯನ್ನು ಕರುಣಿಸುವನೆಂಬ ವಿಶ್ವಾಸದೊಡನೆ ಅವರ ಕುಟುಂಬಿಕರ ಹಾಗೂ ಬಂಧುಬಾಂಧವ ಇಷ್ಟಮಿತ್ರರ ಶೋಕದಲ್ಲಿ ನಾವೂ ಸಹಭಾಗಿಗಳಾಗುತ್ತೇವೆ.

ಅಲ್ಲಲ್ಲಿಯ ಸುದ್ದಿಸಾರ

ಧರ್ಮಾರ್ಥ ಉಡುಪು ವಿತರಣೆ— ತಾ. 27—7—60ರಂದು ಉಡುಪಿ ಮೋಡರ್ನ್ ಹಾಯರ್ ಎಲಿ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಕುಂದಾಪುರ ಡಿವಿಜನಿನ ಆಸಿಸ್ಟೆಂಟ್ ಕಮಿಶನರ್ ಶ್ರೀ ನರಸಿಂಹ ಮೂರ್ತಿಯವರು ಉಚಿತ ಉಡುಪು ಮತ್ತು ಪುಸ್ತಕಗಳನ್ನು ವಿತರಣೆ ಮಾಡಿದರು. ಆರಂಭದಲ್ಲಿ ಮೆನೇಜರ್ ಕೆ. ಜಗನ್ನಾಥ ನಾಯ್ಕರು ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಶ್ರೀ ಎಚ್. ಎಲ್. ಭಟ್ಟರು ವರದಿಯನ್ನೊಪ್ಪಿಸಿದರು. ಇಂತಹ ಸಹಾಯ ಸೌಕರ್ಯಗಳನ್ನು ಸಾರ್ವಜನಿಕರು ಕೈಗೊಂಡುದನ್ನು ಶ್ರೀ ನರಸಿಂಹ ಮೂರ್ತಿಯವರು ಪ್ರಶಂಸಿಸಿದರು. ಸರಕಾರವು ಪ್ರಾಥಮಿಕ ಶಾಲೆಗಳಿಗೆ ಸಾಕಷ್ಟು ಗಮನ ಕೊಡುವುದಿಲ್ಲವೆಂದು ಮುಂತಾಗಿ ಅಧ್ಯಕ್ಷ ಶ್ರೀ ಪೈಗಳು ನುಡಿದರು.

ಶಾಲಾ ನಾಯಕ ಚುನಾವಣೆ— ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲಾ ನಾಯಕನ ಮತ್ತು ಮಕ್ಕಳ ಕೂಟದ ಕಾರ್ಯದರ್ಶಿಯ ಚುನಾವಣೆಯು ಕಳೆದ ತಾ. 19ರಂದು ಗುಪ್ತ ಮತದಾನ ಪದ್ಧತಿಯ ಪ್ರಕಾರ ನಡೆದು ಮಾನಂಜೆ ಸುರೇಶ ಕುಮಾರ್ ಇವರು ನಾಯಕರಾಗಿಯೂ, ಕುಮಾರಿ ಎಸ್. ಪದ್ಮಾವತಿ ಇವರು ಉಪನಾಯಕಿಯಾಗಿಯೂ, ಕೆ. ಮೋಹನ ಭಟ್ಟರು ಕಾರ್ಯದರ್ಶಿಯಾಗಿಯೂ, ಕುಮಾರಿ ಅತ್ರಿಮಾ ಬ್ಯಾಯವರು ಉಪಕಾರ್ಯದರ್ಶಿಯಾಗಿಯೂ ಆಯ್ಕೆ ಹೊಂದಿದರು.

ಶ್ರೀ ಎಸ್. ರಾಮಪ್ಪನವರ ನಿಧನ— ಬಿಲ್ಲವ ಸಮಾಜದ ಅಗ್ರ ಮುಖಂಡರಲ್ಲೊಬ್ಬರೂ ಕಾಫಿ ಪ್ಲಾಂಟರರೂ ಆಗಿದ್ದ ಶ್ರೀ ಸಟ್ಟಿ ರಾಮಪ್ಪನವರು ತಾ. 22—7—60ರಂದು ತಮ್ಮ 66ನೇ ವಯಸ್ಸಿನಲ್ಲಿ ಕಾರ್ಕಳದ ತಮ್ಮ ನಿವಾಸದಲ್ಲಿ ನಿಧನರಾದುದು ವಿಷಾದಕರವಿದೆ. ದಿವಂಗತರು ಉದಾರಿಗಳೂ ಸಾರ್ವಜನಿಕ ಕೆಲಸಗಾರರೂ ಜನಪ್ರಿಯರೂ ಆಗಿದ್ದರು.

ಸತ್ಕಾರ ಸಮಾರಂಭ— ಮೂಲೂರು ಪಂಚಾಯತದ ಚುನಾವಣೆಯಲ್ಲಿ ಸರ್ವಾನುಮತದಿಂದ ಆರಿಸಲ್ಪಟ್ಟಿರುವ ನೂತನ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ಸದಸ್ಯರನ್ನು ಅಭಿನಂದಿಸಿ ಸತ್ಕರಿಸುವ ಬಗ್ಗೆ ಸಾರ್ವಜನಿಕ ಸಭೆಯೊಂದು ತಾ. 26—7—60ರಂದು ಉಚ್ಚಿಲ ಬಾಸೆಲ್ ಮಿಶನ್ ಶಾಲಾ ವಠಾರದಲ್ಲಿ ಉಡುಪಿಯ ಜನಪ್ರಿಯ ಶ್ರೀ ಟಿ. ರಮೇಶ ಯು. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಮಿಶನ್ ಶಾಲಾ ಮುಖ್ಯ ಅಧ್ಯಾಪಕಿ ಶ್ರೀಮತಿ ಡಿ. ಆರ್. ಸಾಲಿನ್ಸ್ ಇವರು ಸ್ವಾಗತಿಸಿದರು. ಪಂಚಾಯತ ಉಪಾಧ್ಯಕ್ಷರಾದ ಶ್ರೀ ಕಾಂತಪ್ಪ ಎಲ್. ಕಾಂಚನ್ ಪಂಚಾಯತದ ಪರವಾಗಿ ಕೃತಜ್ಞತೆಯನ್ನು ಸೂಚಿಸಿದರು. ಸಭಿಕರಲ್ಲಿ ಶ್ರೀ ಎ. ಜಿ. ಆಳ್ವ; ಉ

ಕುಂದಾಪುರ ಅಸಿಸ್ಟೆಂಟ್ ಕಮಿಶನರ್ ಕೋರ್ಟಿನಲ್ಲಿ

O. P. 489/60.

ಜಲಜಾಕ್ಷಿ ಹೆಗ್ಗಡ್ತಿ —ಅರ್ಜಿದಾರಳು.

ಮತ್ತು

ದೇವಪ್ಪ ಶೆಟ್ಟಿ ಕೂಡ —ಎದ್ರಿರು.

ಮೇಲ್ಕಾಣಿಸಿದ ಅರ್ಜಿಯ 2ನೇ ಎದ್ರಿ ಗೋಪ ಶೆಟ್ಟಿ 1ನೇ ಎದ್ರಿ ದೇವಪ್ಪ ಸೆಟ್ರ ಮಗ ಕಾರ್ಕಳ ತಾಲೂಕಿನ ನೀರೆ ಗ್ರಾಮದಲ್ಲಿರುವವ ಸದ್ರಿ ಎದ್ರಿಗೆ ತಿಳಿಯಪಡಿಸುವುದೇನೆಂದರೆ—

ನಿಮ್ಮಿಂದ ಅರ್ಜಿಯಲ್ಲಿ ಕಾಣ್ಬಿಸ ನೇಣಬಾಕಿ ಬಗ್ಗೆ ಅರ್ಜಿದಾರಳು ನಿಮ್ಮ ಮೇಲೆ ಮಾಡಿದ ಈ ಅರ್ಜಿಯು ತಾ. 12-8-60ಕ್ಕೆ ಕಾರ್ಕಳ ಕ್ಯಾಂಪಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ನೀವು ಆ ದಿವಸ ಪೂರ್ವಾಹ್ನ ಗಂಟೆ10ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜರಾಗತಕ್ಕದ್ದು.

(Sd) K. Narayana Rao.
Advocate for Petitioner.

Udipi 1—8—60.

ಡುಪಿ ಮುನಿಸಿಪಲ್ ಕಮಿಶನರವರಾದ ಶ್ರೀ ಐ. ಜೋಶುವ, ಶ್ರೀ ಆರ್. ಆರ್ ಕುಂಜೂರ್ ಇವರೂ ಮಾತನಾಡಿದರು. ಅಧ್ಯಕ್ಷರ ಬೋಧಪ್ರದವಾದ ಭಾಷಣವಾದ ಮೇಲೆ ಪಂಚಾಯತದ ಹಿಂದಿನ ಮುಂದಿನ ಕಾರ್ಯಕಲಾಪಗಳ ಪರಿಚಯವನ್ನು ಮಾಡಿ ಪಂಚಾಯತದ ಅಧ್ಯಕ್ಷ ಶ್ರೀ ಎಂ. ಭೋಜ ಹೆಗ್ಡೆಯವರು ಊರವರ ಸಹಕಾರವನ್ನು ಯಾಚಿಸಿ, ಧನ್ಯವಾದ ಸಮರ್ಪಿಸಿದರು.

ಬಂಟರ ಯಾನೆ ನಾಡವರ ಸಂಘ

ಮುಂಬಯಿ—ಇದರ ಮೂವತ್ತೆರಡನೇಯ ವಾರ್ಷಿಕ ಮಹಾ ಸಭೆಯು ಶ್ರೀ ಕೆ. ಕೆ; ಅಜಿಲ B. Sc. (Hons) M. Sc. Chem. E.) ಇವರ ಅಧ್ಯಕ್ಷತೆಯಲ್ಲಿ ಬಜಾರ್ ಗೇಟ್ ಹೈಸ್ಕೂಲಿನ ಹಾಲ್‌ನಲ್ಲಿ ಬಹು ವಿಜೃಂಭಣೆಯಿಂದ ತಾ. 24—7—60 ರಲ್ಲು ಜರಗಿತು. ಅನೇಕ ಸದಸ್ಯರಿಗೆ ಪೋಸ್ಟಲ್ ಮುಷ್ಕರದಿಂದಲೋ ಪರಮೋಶದಿಂದಲೋ ಸಕಾಲದಲ್ಲಿ ಆಮಂತ್ರಣ ಮುಟ್ಟಿಲ್ಲವೆಂದು ತಿಳಿಯಲೂ ಆಜೀವ ಸದಸ್ಯರೊಬ್ಬರ ಭಾವಚಿತ್ರವನ್ನು ಪ್ರಕಟಿಸಲೂ ತಪ್ಪಿ ಹೋದುದಕ್ಕೂ ಆಡಳಿತ ಸಮಿತಿಯು ವಿಷಾದ ಪಡುತ್ತದೆ.

1960ನೇ ಆಡಳಿತ ಸಮಿತಿಗೆ ಈ ಕೆಳಗಿನ ಮಹನೀಯರು ಚುನಾಯಿಸಲ್ಪಟ್ಟರು.

ಶ್ರೀಗಳಾದ ಕೆ. ವಿಟ್ಠಲ ಶೆಟ್ಟಿ, ಅಧ್ಯಕ್ಷ. ಸತ್ರಾರು ಭೋಜ ಶೆಟ್ಟಿ, ಉಪಾಧ್ಯಕ್ಷ. ಮುಲ್ಕಿ ಗಂಗಯ ಶೆಟ್ಟಿ, ಗೌ. ಕಾರ್ಯದರ್ಶಿ. ಜಗನ್ನಾಥ ಶೆಟ್ಟಿ, ಗೌ. ಉ. ಕಾರ್ಯದರ್ಶಿ. ವಿ. ಗೋಪಾಲ ಕೃಷ್ಣ ರೈ B. Com. ಗೌ. ಕೋಶಾಧಿಕಾರಿ. ಕುಟ್ಟಿ ಬಿ. ಶೆಟ್ಟಿ, ಗೌ. ಉ. ಕೋಶಾಧಿಕಾರಿ. ಕೆ. ರಾಮರಾಯ ಶೆಟ್ಟಿ, ಶಾಲಾ ಅಧ್ಯಕ್ಷ. ಆರ್. ಕೆ. ಶೆಟ್ಟಿ. ಎಂ. ಎ. ಎಲ್‌ಎಲ್. ಬಿ. ಶಾಲಾ ಕಾರ್ಯದರ್ಶಿ. ಆರ್. ಸಿ. ಶೆಟ್ಟಿ, ಎಂ. ಎ. ಎಲ್. ಎಲ್. ಬಿ. ಶಾಲಾ ಉ. ಕಾರ್ಯದರ್ಶಿ. ಸುಂದರ ಬಿ. ಶೆಟ್ಟಿ. ಶಾಲಾ ಕೋಶಾಧಿಕಾರಿ. ಕೆ. ಬಡಿಯ ಶೆಟ್ಟಿ, ಶಾಲಾ ಪುಸ್ತಕ ಭಂಡಾರಾಧಿಕಾರಿ, ವೈ. ಆರ್. ಶೆಟ್ಟಿ ಮತ್ತು ಕೊ. ಲೆಕ್ಕ ಪರಿಶೋಧಕರು.

ಈ ಕೆಳಗಿನವರನ್ನು ಕಟ್ಟಡ ಉಪ ಸಮಿತಿಗೆ ನೇಮಕ ಮಾಡಲಾಯಿತು.

ಶ್ರೀ ಕೆ. ವಿಟ್ಠಲ ಶೆಟ್ಟಿ: ಕಾರ್ಯದರ್ಶಿ.

ಡಾ. ಯನ್. ವಿ. ಅಡ್ಯಂತಾಯ.

ಶ್ರೀಗಳಾದ ಯಮ್. ಯನ್. ಹೆಗ್ಡೆ ಮದನ್ ಶೆಟ್ಟಿ, ಕೆ. ಕೆ. ಅಜಿಲ, B. Sc. (Hons) M. Sc. (Chem E)

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 218/1958;
R. E. P. 259/1960.

ಶೀನಪ್ಪ ಶೆಟ್ಟಿ —ಅರ್ಜಿದಾರ,

ಮತ್ತು

ಪದ್ಮಾವತಿ ಶೆಡ್ತಿ ಯಾನೆ ಪದ್ದಕ್ಕ ಶೆಡ್ತಿ - (ಮೃತ) ವಾರೀಸುದಾರರು — 1. ಸುಖಾನಂದ, 2. ಸುಮಿತ್ರ, 3. ಸುಭಾಸು, 4. ದಯಾನಂದ, 5. ಚಂದ್ರ, 6. ಜಯಾನಂದ— ಪದ್ಮಾವತಿ ಯಾನೆ ಪದ್ದಕ್ಕ ಶೆಡ್ತಿರ ಮೈನರ್ ಮಕ್ಕಳು— ಗಾರ್ಡಿಯನ್ ತಂದೆ ಶಿವರಾಮ ಶೆಟ್ಟಿ ದುಗ್ಗಪ್ಪ ಶೆಟ್ರ ಅಳಿಯ ಉಡುಪಿ ತಾಲೂಕು ಶೀರೂರು ಗ್ರಾಮದ ಗುಂಡಾಳ-ಎದ್ರಿರು

ಇವರೊಳಗೆ

ಸದ್ರಿ ಎದ್ರಿಂಗೆ ಈ ಮೂಲಕ ತಿಳಿಯಪಡಿಸುವದೇನಂದರೆ—

ಹಾಲಿ ಮೃತಪಟ್ಟಿರುವ ಡಿಕ್ರಿ ಪ್ರತಿವಾದಿಯಾದ ನಿಮ್ಮ ತಾಯಿಯ ವಾರೀಸುದಾರರಾಗಿ ನಿಮ್ಮನ್ನು ಕಕ್ಷಿಯಲ್ಲಿ ಸೇರಿಸಿ ಡಿಕ್ರಿಯ ನಿವೃತ್ತಿಗಳನ್ನು ಕೊಡಿಸಬೇಕೆಂತ ವಗೈರೆ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅಮಲ್ದಾರಿಯು ತಾರೀಕು 12 8—1960ಕ್ಕೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪಣೆ ಏನಾದರೂ ಇದ್ದರೆ ಸದ್ರಿ ದಿವಸ ಪೂರ್ವಾಹ್ನ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಬಹುದು.

K. Ramakrishna Rao,
Vakil for Petitioner.

Udipi, 3—8—1960.

ಧರ್ಮಾರ್ಥ ಕನ್ನಡಕ ವಿತರಣೆ— ಮಂಗಳೂರು ಲಯನ್ಸ್ ಕ್ಲಬ್ಬಿನವರು ಸರಿಯಾದ ನೇತ್ರಪರೀಕ್ಷೆ ನಡೆಸಿ ಬಡವರಿಗೆ ಧರ್ಮಾರ್ಥ ವಿತರಣೆ ಮಾಡುವ ಸಲುವಾಗಿ ನಾವಿರ ಕನ್ನಡಕಗಳನ್ನು ತರಿಸುತ್ತಾರೆ. ದೃಷ್ಟಿ ದೋಷವಿರುವವರ ಗುರುತಿಗಾಗಿ ಬಿಳಿ ಬೆತ್ತಗಳನ್ನೂ ಬಡವರಿಗೆ ಹಂಚುವ ವ್ಯವಸ್ಥೆಯನ್ನೂ ಅವರು ಕೈಗೊಂಡಿರುವರು. ಇದರ ಪ್ರಯೋಜನ ಪಡೆಯಲಪೇಕ್ಷಿಸುವವರು ಲಯನ್ಸ್ ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಬಿ. ಎಸ್. ಭಾಸ್ಕರ ರೈಗಳೊಡನೆ ವಿಚಾರಿಸಬಹುದು.

ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ಉಡುಪಿಯಲ್ಲಿ ತಾ. 31ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಮಂಡಲ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಸದಸ್ಯರುಗಳೂ ಕಾಂಗ್ರೆಸ್ ಕಾರ್ಯಕರ್ತರುಗಳಲ್ಲದೆ ಶಾಸಕರೂ,ಎಂ ಪಿ. ಸಿ. ಸಿ.ಹಾಗೂ ಡಿ ಸಿ. ಸಿ. ಸದಸ್ಯರೂ ಉಪಸ್ಥಿತರಿದ್ದರು.

ಆರಂಭದಲ್ಲಿ ಅಧ್ಯಕ್ಷರು ಜಿಲ್ಲಾ ಕಾಂಗ್ರೆಸ್ ಕಾರ್ಯವಾಹೀ ಸಮಿತಿಯ ಹಿಂದಿನ ನಿರ್ಣಯಗಳ ಮುನ್ನಡೆಯನ್ನು ಪ್ರಸ್ತಾಪಿಸಿ, ಪೆಕ್ಕೇಜ್ ಡೀಲಿನ ಕ್ಷೇತ್ರಕ್ಕೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಸೇರಿಸಬೇಕಿದ್ದಿತೆಂಬುದನ್ನು ಮೈಸೂರಿನ ಕೃಷಿ ಮಂತ್ರಿಗಳು ಮನಗಂಡಿರುವರೆಂದೂ, ರಾಜ್ಯದ ಅತೀ ಹೆಚ್ಚಿನ ಬತ್ತವು ಬೆಳೆಯುತ್ತಿರುವ ದ. ಕ. ಜಿಲ್ಲೆಗೆ ಈ ಸೌಕರ್ಯ ಸಿಗುವ ಸಂಭವವಿದೆ ಎಂದೂ ಹೇಳಿದರು. ಪಂಚವಾರ್ಷಿಕ ಯೋಜನೆಯ ಪ್ರಕಾರ ಬೆಳ್ತಂಗಡಿ, ಧರ್ಮಸ್ಥಳ ಮತ್ತು ಉಪ್ಪಿನಂಗಡಿಗೆ ವಿದ್ಯುತ್ ವಿಸ್ತರಣೆ ಬಗ್ಗೆ 3—4 ಲಕ್ಷ ರೂಪಾಯಿ ಮಂಜೂರಾಗಿದೆಯೆಂದೂ ಕೋಟೇಶ್ವರಕ್ಕೂ ವಿದ್ಯುತ್ ಪೂರೈಕೆಯಾಗುವ ಪ್ರಯತ್ನ ನಡೆದಿದೆ ಎಂದು ಪೈಗಳು ನುಡಿದರು.

ನಿರುದ್ಯೋಗ ನಿವಾರಣಾರ್ಥವಾಗಿ ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಯಾಗುವಂತೆ ಜನರು 'ಇಂಡಸ್ಟ್ರಿಯಲ್ ಎಸ್ಟೇಟ್'ಗೆ ಸಹಕಾರಿ ಸಂಘಗಳ ಮೂಲಕ ಒಂದು ಲಕ್ಷ ರೂಪಾಯಿ ಸಂಗ್ರಹಿಸಿದರೆ, ಹತ್ತು ಲಕ್ಷ ರೂಪಾಯಿ ಸರಕಾರದಿಂದ ಸಹಾಯ ದೊರೆಯುವುದೆಂದೂ ಜಿಲ್ಲೆಯಲ್ಲಿ ದೊರೆಯುವ 10—12 ಕಚ್ಚಾ ವಸ್ತುಗಳನ್ನು ಸೂಚಿಸಿದರೆ ಸರಕಾರವು ಒಂದು ಕಾರ್ಖಾನೆಯನ್ನು ಕಟ್ಟಿ ನಡೆಸಲು ಹಲಂ ಹಾಕಲು ಅಧಿಕಾರಿಗಳು ಒಪ್ಪಿರುವರೆಂದೂ ಹೇಳಿದರು. ಉಪಾಧ್ಯಾಯರ ಮಕ್ಕಳಿಗೆ ಉಚಿತ ಶಿಕ್ಷಣವೀಯುವ ಸೌಕರ್ಯವನ್ನು ವಿದ್ಯಾ ಇಲಾಖೆಯ ಡೈರೆಕ್ಟರ್ ಒಪ್ಪಿರುವರಲ್ಲದೆ 'ಗುಡ್ ಪ್ರೈವೇ'ಯನ್ನು ಪಾರ್ಶ್ವರಜೆಯಾಗಿ ಪರಿಗಣಿಸಲ್ಪಡುವುದೆಂದೂ ತಿಳಿಸಿದರು.

ಸುರತ್ಕಲ್ ಎಂಜಿನಿಯರಿಂಗ್ ಕಾಲೇಜು, ಶರಾವತಿ ಯೋಜನೆ, ಕುಂದಾಪುರದಿಂದ ಮಂಗಳೂರಿಗೆ 60 ಮೈಲುದ್ದದ ಜಲಮಾರ್ಗ, ಆಗುಂಬೆ ಘಾಟಿಯ ಬದಾವಣೆ ಕರಾವಳಿಯಲ್ಲಿ ಪಡುಬಿದ್ರೆಯಿಂದ ಹಿಡಿದು ತಾಲಾಪತಿಯತನಕ ಚಿಕ್ಕ ಮಾರ್ಗಗಳು, ಮಂಗಳೂರು ಬಂದರದ ಅಭಿವೃದ್ಧಿ, ಹಾಸನ ಮಂಗಳೂರು, ರೈಲ್ವೆ, ತಾಲೂಕು ಬೋರ್ಡ್ ಚುನಾವಣೆ, ತಾಲೂಕು ವಿಭಜನೆಗಳ ಬಗ್ಗೆ ಸೂಕ್ಷ್ಮವಾಗಿ ವಿವರಿಸಿದರು. ಈ ಸಾರಿ ಮೈಸೂರು ವಿಶ್ವವಿದ್ಯಾಲಯದ ಪರೀಕ್ಷಾ ಫಲಿತಾಂಶ ನೋಡಿ ಸಪ್ಟಂಬರಕ್ಕೆ ಪರೀಕ್ಷೆಯಾಗುವ ಹುಡುಗರಿಗೆ ಶಾಲೆಗೆ ಸೇರಿ ಓದುವ ಅವರಿಗೆ ಓದುವ ಸೌಕರ್ಯ ಒದಗಿಸಬೇಕು, ಹಾಜರಿಯನ್ನು ವಿಶ್ವವಿದ್ಯಾಲಯವು ಸರಿಪಡಿಸಬೇಕೆಂದೂ ಹೇಳಿದರು.

ಶ್ರೀಗಳಾದ ಕೆ. ಕೆ. ಶೆಟ್ಟಿ ಮತ್ತು ಸೂರ್ಯನಾರಾಯಣ ಅಡಿಗರು ತಾಲೂಕು ಪುನರ್ಘಟನೆಯ ಹಿನ್ನಲೆಯಿತ್ತು ಇವನ್ನು ಕಾರ್ಯರೂಪಕ್ಕೆ ತರುವಾಗ ಜಿಲ್ಲಾ ಕಾಂಗ್ರೆಸಿನ ಅಭಿಪ್ರಾಯ ಕೇಳಿ ಸರಕಾರ ಮುಂದುವರಿಯಬೇಕೆಂದರು ಮಂಡಲ ಕಾಂಗ್ರೆಸ್ ಸಮಿತಿಗಳು ಹಳ್ಳಿಗಳಲ್ಲಿ ಕೋಪರೇಟಿವ್ ಸೊಸೈಟಿಯನ್ನು ತೆರೆದು ಜನರಿಗೆ ಪ್ರಯೋಜನ ಲಭಿಸುವಂತೆ ಮಾಡಲು ಸಮಿತಿಯು ಒಪ್ಪಿತು. ಶ್ರೀ ಕೆ. ಕೆ. ಪೈಗಳು ಮೈಸೂರು ವಿಶ್ವವಿದ್ಯಾಲಯದ ಉಪಕುಲಗುರುಗಳನ್ನು ಭೆಟ್ಟಿಯಾಗಿ ತಿಳಿದ ವಿಷಯಗಳನ್ನು ವಿವರಿಸಿದರು.

ಶ್ರೀ ಕೆ. ಕೆ. ಶೆಟ್ಟರು ಮಾತನಾಡುತ್ತಾ ನಮ್ಮ ಜಿಲ್ಲೆಯ ಕಾಲೇಜುಗಳು ಮದರಾಸ ಕರ್ನಾಟಕ ವಿಶ್ವವಿದ್ಯಾಲಯವನ್ನು ಸೇರಬೇಕೆಂಬ ನಿರ್ಣಯವನ್ನು ನಾನು ಮಾಡಿಸಬೇಕೆಂದಿದ್ದರೂ ಅಧ್ಯಕ್ಷರು ತಡೆಹಿಡಿದಿದ್ದಾರೆ ಎಂದರು. ಅಧ್ಯಕ್ಷರು ಎರಡೂ ವಿಶ್ವವಿದ್ಯಾಲಯಗಳೂ ನಮ್ಮವೇ. ಮದ್ರಾಸಿನಲ್ಲಿರುವಂತೆ ಕಾಲೇಜು ಪ್ರಿನ್ಸಿಪಾಲರು, ವಿದ್ಯಾತಜ್ಞರು ಮತ್ತು ಸ್ಥಾನಿಕ ಸರಕಾರಗಳಿಗೆ ವಿಶ್ವವಿದ್ಯಾಲಯದಲ್ಲಿ ಪ್ರಾತಿನಿಧ್ಯ ದೊರೆಯಬೇಕು. ಸ್ನಾತಕೋತ್ತರ ಶಿಕ್ಷಣವು ಬೆಂಗಳೂರು—ಮೈಸೂರುಗಳಲ್ಲಿ ಆಗಬೇಕೆಂಬ ವಿಶ್ವವಿದ್ಯಾಲಯದ ನಿರ್ಣಯ ಬದಲಾಗಬೇಕೆಂದು ಸೂಚಿಸಿದರು. ಡಾ. ಸಂಸಿಗೆತ್ತಾಯರು ಸಂಸ್ಕೃತ ಶಿಕ್ಷಣಕ್ಕೆ ಅಂಗೀಕಾರ ಕೊಡಲು ತಮ್ಮಲ್ಲಿ ಬೇಕಾದ ವ್ಯವಸ್ಥೆ ಇಲ್ಲವೆಂದು ಮೈಸೂರು ವಿಶ್ವವಿದ್ಯಾಲಯ ಹೇಳುವುದು ತಪ್ಪೆಂದೂ, ಮದ್ರಾಸಿನಲ್ಲಿ ದೊರೆಕಿದ್ದ ಈ ಸೌಕರ್ಯವನ್ನು ಒದಗಿಸುವುದು ಮೈಸೂರು ವಿಶ್ವವಿದ್ಯಾಲಯದ ಕರ್ತವ್ಯವೆಂದೂ ನುಡಿದರು.

ಮಧ್ಯಾಹ್ನ ಸೇರಿದ ಕಾರ್ಯಕಾರೀ ಸಮಿತಿಯ ಸಭೆಯು ನ್ಯಾಯಬೆಲೆಯ ಅಂಗಡಿಗಳನ್ನು ಸಹಕಾರೀ ಸಂಘಗಳ ವಿಶಿಷ್ಟ ಹಕ್ಕಾಗಿರಿಸದೆ ಚೆನ್ನಾಗಿ ಇದನ್ನು ನಡೆಸಿಕೊಂಡು ಬರುವವರಿಗೆ ಕೊಡಬೇಕೆಂದು ನಿರ್ಣಯಿಸಿತು.

ಪುತ್ತೂರು ಮಂಡಲ ಕಾಂಗ್ರೆಸ್ ಚುನಾವಣೆಯ ವರದಿ ಮತ್ತು ಕೇಂದ್ರ ಸರಕಾರಿ ನೌಕರರ ಮುಷ್ಕರ ಕಾಲದಲ್ಲಿ ಕೆಲ ಕಾಂಗ್ರೆಸ್ ಪ್ರಭೃತಿಗಳ ಆಶಿಸ್ತು ಮೊದಲಾದುವನ್ನು ಪ್ರಾದೇಶಿಕ ಸಮಿತಿಯ ಮುಂದಿಡಲು ನಿರ್ಣಯಿಸಲಾಯಿತು.

ಪ್ರಾತಃಕಾಲ ಅಧಿವೇಶನವಾಗುತ್ತಿರುವಾಗ ಬಾದಿ ಬೋರ್ಡಿನ ಶ್ರೀ ಮಾಗಡಿಯವರು ಸೇರಾ ಮತ್ತು ತಾಳೆಜೆಲ್ಲ ಪರಿಶೀಲನಾ ಸದಸ್ಯರು ಮತ್ತು ಅಧಿಕಾರಿಗಳೊಂದಿಗೆ ಆಗಮಿಸಿದರು.

ದ. ಕ. ಜಿಲ್ಲೆಯಲ್ಲಿ ತಾಳೆ ಬೆಲ್ಲದ ಪ್ರಯೋಗವನ್ನು ಹೇಗೆ ತಡೆಹಿಡಿಯಬಹುದೆಂದೂ, ನೀರಾ ಮತ್ತು ತಾಳೆಬೆಲ್ಲ ಹೆಚ್ಚಿಚ್ಚು ಉತ್ಪಾದನೆಯಾಗಲು ಸರೇನು ಕಾರ್ಯಕ್ರಮ ಕೈಗೊಳ್ಳಬೇಕೆಂದು ತಿಳಿದುಕೊಳ್ಳಲು ಬಂದಿರುವುದಾಗಿ ಶ್ರೀ ಮಾಗಡಿಯವರು ವಿವರಿಸಿದರು. ಶ್ರೀಗಳಾದ ಪೈ, ಮಂಜಯ್ಯ ಶೆಟ್ಟಿ, ಗಂಗಾಧರವಾಸ, ಎಸ್. ಎಸ್. ಕೊಳ್ಕೆಬೈಲ್ ಮೊದಲಾದವರು ಹಲವು ಸಲಹೆಯಿತ್ತರು.

ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಬೇರೆ ಉದ್ಯೋಗ ಕೊಡುವ ಮೊದಲು ಮೂರ್ತೆದಾರರ ಇಂದಿನ ಉದ್ಯೋಗ ಕಸಿದುಕೊಳ್ಳಬಾರದು. ಇವರಲ್ಲಿ ಅನ್ಯಾಯ ಮಾಡಿದವರನ್ನು ಶಿಕ್ಷಿಸುವಾಗ ಕಾನೂನು ಬಿಗುಮಾಡುವಾಗ ನ್ಯಾಯಶೀಲರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಆರ್ಥಿಕ ಮುಗ್ಗಟ್ಟಿನಿಂದ ದಿನೇ ದಿನೇ ಜೀವನ ನಡೆಸಲು ಕಷ್ಟಪಡುತ್ತಿರುವ ಮೂರ್ತೆದಾರರಿಗೆ ಇನ್ನೂ ಹೆಚ್ಚಿನ ಅನುಕೂಲತೆಯಾಗುವಂತೆ ಈ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಬೇಕೆಂದು ಹೇಳಿದರು.

ನಿಯೋಗ ಮರಳಿ ಬಂದಿತು-ಮೈಸೂರು ವಿಶ್ವವಿದ್ಯಾಲಯದ ಪಿ. ಯು. ಸಿ. ಮತ್ತು ಪದವೀ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳಿಗಾದ ಅನ್ಯಾಯವನ್ನು ಸರಿಪಡಿಸಲು ಏರ್ಪಡಿಸಲ್ಪಟ್ಟಿದ್ದ ನಾಗರಿಕರ ಕ್ರಿಯಾಸಮಿತಿಯು ಶ್ರೀ ಕೆ. ಕೆ. ಪೈ ಅವರ ನಾಯಕತ್ವದಲ್ಲಿ ಉಪಕುಲಪತಿಗಳಲ್ಲಿಗೊಂದು ನಿಯೋಗವನ್ನು ಕೊಂಡುಹೋಯಿತು ಅಲ್ಲಿ ಪರೀಕ್ಷೆಗಳಲ್ಲಾದ ಲೋಪದೋಷಗಳನ್ನು ಉಪಕುಲಪತಿಗಳ ಮುಂದಿಟ್ಟು ಅಸಂಖ್ಯ ವಿದ್ಯಾರ್ಥಿಗಳಿಗಾದ ನಷ್ಟವನ್ನು ಸರಿಪಡಿಸಬೇಕೆಂದು ಕೇಳಿಕೊಂಡಿತು. ಸಹಾನುಭೂತಿಪರರಾಗಿ ವಿನಂತಿಯನ್ನು ಆಲಿಸಿದ ಉಪಕುಲಪತಿ ಪ್ರೊ. ನಿಕ್ಕಂ ಅವರು ಸದ್ಯ ಏನೂ ಮಾಡುವುದಾಗದೆಂದೂ ವೈಯಕ್ತಿಕವಾಗಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದ್ದರೆ, ಅದನ್ನು ಸರಿಪಡಿಸಬಹುದೆಂದೂ ಹೇಳಿ, ವಿಶ್ವವಿದ್ಯಾಲಯದ ಕಾನೂನು ಕಾಯಿದೆಗಳು, ಪರೀಕ್ಷಾ ಪದ್ಧತಿ ಮೊದಲಾದುವುಗಳ ಕುರಿತಾಗಿ ಬಹುಕಾಲ ಚರ್ಚಿಸಿದರು.

ಬೆಳ್ಮಣ್ಣು—ಇಲ್ಲಿಯ ಬೋರ್ಡ್ ಹೈಸ್ಕೂಲಿನ ವಿದ್ಯಾರ್ಥಿ ಮುಖಂಡ ಮತ್ತು ಉಪಮುಖಂಡರ ಚುನಾವಣೆಯು ತಾ. 20ರಂದು ಜರಗಿತು. ಮುಖಂಡರಾಗಿ ಶ್ರೀ ಯನ್: ಸದಾನಂದ ಶೆಟ್ಟಿಯವರೂ, ಉಪಮುಖಂಡರಾಗಿ ಶ್ರೀ ವಾರಿಷ್ ಲೋಬೋರವರೂ ಪ್ರಚಂಡ ಬಹುಮತಗಳಿಂದ ಆರಿಸಿ ಬಂದಿರುವರು.

ಬಂಡ್ಸಾರು—ಸ್ಥಳೀಯ ಹಿರಿಯ ಬುನಾದಿ ಶಾಲೆಯಲ್ಲಿ ಆರನೆಯ ತರಗತಿಯನ್ನು ಶ್ರೀ ಎಸ್. ವಿಶ್ವನಾಥರ ಅಧ್ಯಕ್ಷತೆಯಲ್ಲಿ ತಾ. ೨೩ರಂದು ಶ್ರೀ ಬಿ ಪಿಂಟೋರವರು ಉದ್ಘಾಟಿಸಿದರು. ಸಭ್ಯರ ಪರವಾಗಿ ಶ್ರೀ ಬಿ. ರಾಮ ಶೆಟ್ಟರು ಶಾಲೆಗೆ ಶುಭಕೋರಿ ಮಾತಾಡಿದರು. ಪ್ರಾಥಮಿಕ ಶಿಕ್ಷಣವು ಮುಗಿಸಿದ ಜೀವನದ ಬುನಾದಿಯೆಂದು ಅಧ್ಯಕ್ಷರು ಅಭಿಪ್ರಾಯಿಸಿದರು. ಮುಖ್ಯೋಪಾಧ್ಯಾಯ ಶ್ರೀ ಬಿ. ಶಂಕರ ಶೆಟ್ಟರು ಆರಂಭದಲ್ಲಿ ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದ್ದರು. ಕೊನೆಯಲ್ಲಿ ಶಾಲಾ ಬಾಲಕ ಬಾಲಿಕೆಯರಿಂದ ವಿವಿಧ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದುವು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 165/1960.

ರಾಮಕೃಷ್ಣ ಹೊಳ್ಳ ಕೊಡಾ —ವಾದಿರು.

ಶಂಕರನಾರಾಯಣಯ್ಯ. ಮಾಪಾಲ ಪಿಷ್ಣು ಹೊಳ್ಳರ ಮಗ, ಕುರಿಯ ಗ್ರಾಮದ್ದು ಮಾಪಾಲ

—ಪ್ರತಿವಾದಿ,

ಇವರೀಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವದೇನೆಂದ್ರೆ—

ವಾದಿರು ನಿಮ್ಮ ಮೇಲೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 12—8—60ಕ್ಕೆ ಇಟ್ಟಿರುವುದರಿಂದ ಅದ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉಪಸ್ಥಿತಿ ಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ.

(Sd.) C. V. Shastry,
Advocate for Plaintiff.

ಪುತ್ತೂರು, 29-7-60.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಂತ್ಯಕ್ಕೆ 'ನವಯುಗದ ಹನ್ನೆರಡನೆಯ ವರ್ಷವು ಅಂತ್ಯವಾಗಿ ಸಪ್ಟಂಬರ ಆದಿಯಿಂದ ೧೦ನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಈ ತಿಂಗಳಂತ್ಯದೊಳಗಾದರೂ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಚಂದಾ ಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವದೊಂದು ತರದ ಖರ್ಚು ಇಲ್ಲದೆ ಪಾವತಿ ಮಾಡಬಹುದಾಗಿದೆ.

—ಮೆನೇಜರ್

ಅಗೋಸ್ತು 15ರ ಸ್ವಾತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆಯು

ಪ್ರಯುಕ್ತ ನವಯುಗದ ಮುಂದಿನ (ತಾ. 11—8—60ರ) ಸಂಚಿಕೆಯು ಪ್ರಕಟವಾಗುವುದಿಲ್ಲ. ವಾಚಕರು ದಯಮಾಡಿ ಗಮನಿಸಬೇಕಾಗಿ ವಿನಂತಿ.

ಮೆನೇಜರ್.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿ ಬರೆದಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

ವಿಚಿತ್ರ ಸತ್ಯ

ಸುಸಜ್ಜಿತ ಸಮರ್ಥ ಮಹಿಳಾಸೇನೆ

ಆಫ್ರಿಕನ್ ರಾಜ್ಯ ದಹೋಮದಲ್ಲಿ ೧೮ ಮತ್ತು ೧೯ನೆ ಶತಮಾನಗಳಲ್ಲಿದ್ದ ಇತಿಹಾಸಪ್ರಸಿದ್ಧ ಮಹಿಳಾಸೇನೆಯ ಮುಂದೆ ಎಲ್ಲರೂ ಗಡಗಡ ನಡುಗುತಿದ್ದರು. ಈ ಸೇನೆಯಿಂದ ತಮಗೆ ಹಾನಿಯೆಂದು ಬಗೆದ ಫ್ರೆಂಚರು ಅದನ್ನು ನಾಮಾವಶೇಷಗೊಳಿಸಿದರು.

೧೯ನೆಯ ಶತಮಾನದ ಕೊನೆಯ ದಶಕ. ಶಕ್ತಿಶಾಲಿನಿಯಾದ ಫ್ರೆಂಚ ಸೇನೆಯು ಆಫ್ರಿಕನ್ ರಾಜರಲ್ಲಿ ಒಬ್ಬರ ಮೇಲೊಬ್ಬರನ್ನು ಸೋಲಿಸಿ, ಅಲ್ಲಿ ವಿಶಾಲ ಸಾಮ್ರಾಜ್ಯ ಸ್ಥಾಪಿಸುತಿತ್ತು. ಎಲ್ಲರೂ ಅಸ್ತ್ರ ಕೆಳಗಿಡಲೇಬೇಕಾಗಿತ್ತು. ದಹೋಮ ಎಂಬ ರಾಜ್ಯ ಮಾತ್ರ ಬಾಕಿಯುಳಿದಿತ್ತು. ದಹೋಮದ ಅರಸ ಗಿಲೇಲೆಯೊಡನೆ ದೊಡ್ಡ ಸೈನ್ಯವೂ ಇರಲಿಲ್ಲ; ಬಹಳ ಬಂದೂಕು ತುಪಾಕಿಗಳೂ ಇರಲಿಲ್ಲ. ಆದರೂ ದಹೋಮದ ಮೇಲೆ ತಮ್ಮ ಧ್ವಜ ಹಾರಾಡುವಂತೆಸಗುವುದು ಕಷ್ಟಸಾಧ್ಯವೆಂದು ಫ್ರೆಂಚರೂ ತಿಳಿದಿದ್ದರು. ದಹೋಮದಲ್ಲಿರುವ ಎರಡೂವರೆ ಸಾವಿರ ಸ್ತ್ರೀ ಸೈನಿಕರ ಸೇನೆಯು ಹೊರಟಿತ್ತೆಂದೊಡನೆಯೇ ಎಲ್ಲರೂ ದೂರವೋಡುತಿದ್ದರು. ಈ ಸುಸಜ್ಜಿತ ಸೈನ್ಯವು ನಾಲ್ಕೂ ಕಡೆಗಳಿಂದ ಫ್ರೆಂಚ ಸೇನೆಯನ್ನು ಮುತ್ತಿಬಿಟ್ಟು ಅವರನ್ನು ಪೀಡಿಸತೊಡಗಿತ್ತು.

ಈ ಸೇನೆ ಸೇರುವುದಾದರೂ ಹೆಂಗಸರಿಗೆ ಸರಳವಾಗಿರಲಿಲ್ಲ. ಬ್ರಿಟಿಷ 'ಕ್ವೀನ್ಸ್ ಗಾರ್ಡ್' ನವರಿಗಿರುವಂತೆಯೇ ಈ ಸೈನಿಕರಿಗೂ ಬಹು ಕಠಿಣ ನಿಯಮಗಳಿದ್ದುವು. ಕಡಿಮೆಯೆಂದರೆ ಆರಡಿ ಉದ್ದ, ಆರಡಿ ಉದ್ದದ ನೀಲಿ ಸಮವಸ್ತ್ರ, ಬಿಳಿ ಟೋಪಿಯ ಈ ಮಹಿಳೆಯರು ಇಳೆಯಲ್ಲಿ ಗಲಭೆಯೇಳುತಿತ್ತು. ಹೆಂಗಸರು, ಗಂಡಸರು ಮಕ್ಕಳು-ಮರಿಗಳೆಲ್ಲರೂ ಓಡ ತೊಡಗುತಿದ್ದರು. ಪೇಟೆಗೆ ಪೇಟೆಯೇ ಶೂನ್ಯವಾಗಿ ಬಿಡುತಿತ್ತು. ಯಾವನೇ ಪುರುಷನು ಇವರನ್ನು ಕಣ್ಣೆತ್ತಿ ನೋಡುವುದೂ ಸಾಧ್ಯವಿರಲಿಲ್ಲ. ಆ ಹಿಂದಿನ ಇನ್ನೂರು ವರ್ಷಗಳಲ್ಲಿ ಇಂತಹ ಮಹಿಳಾ ಸೇನೆಯು ದೇಶಕ್ಕೆ ಕಷ್ಟವನ್ನು ಕೊಟ್ಟಿತ್ತು.

ಈ ಹೆಂಗಸರಂತೆಯೇ ಅವರಿಗೆ ನೀಡಲಾಗುತಿದ್ದ ಶಿಕ್ಷಣವೂ ಅತಿ ಕಠೋರವಾಗಿತ್ತು. ಶಿಕ್ಷಣಾವಧಿಯಲ್ಲಿವರ ಶರೀರ ಕೆಂಪು ಕೆಂಪಾಗಿರುತಿತ್ತು. ಕೈಕಾಲುಗಳು ರಕ್ತಮಯವಾಗಿರುತಿದ್ದುವು. ಆದರೆ, ಅವರು ಈ ಬಗ್ಗೆ ತುಟಿ ಪಿಟಿಕ್ಕೆನ್ನುತ್ತಿರಲಿಲ್ಲ. ಇಂತಹ ಭೀಷಣ ಪ್ರಶಿಕ್ಷಣವನ್ನು ಆರು ವರ್ಷಗಳ ಕಾಲ ಪಡೆದ ನಂತರವೇ ಇವರು ಮಹಿಳಾಸೇನೆಗೆ ಸೇರಿಸಲ್ಪಡುತಿದ್ದರು. ಪ್ರತಿ ಯುದ್ಧದಲ್ಲಿಯೂ ಮಹಿಳಾಸೇನೆ ಮುಂಭಾಗದಲ್ಲೂ ಪುರುಷಸೇನೆಯು ಹಿಂಭಾಗದಲ್ಲೂ ಇರುತಿದ್ದುವು. ಹೆಚ್ಚಿನ ಕೊಲೆ ಹೊಡೆತಗಳನ್ನು ಮಾಡುತಿದ್ದವರೂ ಈ ಹೆಂಗಸರೇ. ಶತ್ರುಗಳ ಪುರುಷ ಸೇನೆ ಇವರನ್ನು ಕಂಡೊಡನೆಯೇ ಭಯದಿಂದ ಕಂಪಿತವಾಗುತಿತ್ತು.

ಈ ಮಾದರಿಯ ಮಹಿಳಾಸೇನೆಯು ೧೮ನೆ ಶತಾಬ್ದಿಯ ಆರಂಭದಲ್ಲಿ ನಿರ್ಮಾಣಗೊಂಡಿತ್ತು. ಆ ಕಾಲದಲ್ಲಿ ದಹೋಮದಲ್ಲಿ ತುರೂಡ ಎಂಬ ರಾಜನಿದ್ದನು. ಒಂದು ಕದನದಲ್ಲಿ ಆತನ ಸೈನ್ಯವೆಲ್ಲವೂ ನಷ್ಟವಾಯಿತು ಆತನು ಕೆಲವು ಹೆಂಗಸರನ್ನು ಆರಿಸಿ, ಅವರಿಗೆ ಸೈನಿಕರ ಉಡುಗೆ ತೊಡುಗೆಗಳನ್ನು ಕೊಡಿಸಿ, ಶತ್ರುಗಳನ್ನು ಮೋಸಗೊಳಿಸುವ ಹಂಚಿಕೆಯನ್ನು ಹೂಡಿ, ಉಳಿದುಳಿದ ಸೇನೆಯನ್ನೂ ಕೃತಕ ಸೇನೆಯನ್ನೂ ಒಂದುಗೂಡಿಸಿದನು. ಶತ್ರು ಸೈನ್ಯ ಅಸಂಖ್ಯವಿದ್ದುದರಿಂದ ಈ ಪುರುಷ ಸೈನಿಕರೂ ಗತಾಸುವಾದರು. ತಮ್ಮ ಪುರುಷರು ಮೃತರಾದುದನ್ನು ಕಂಡ ಮಹಿಳೆಯರ ಕೋಪ ಪಾರಗಾಣಲಿಲ್ಲ. ಅವರು ಹುಚ್ಚರಂತೆ ಶತ್ರುಗಳ ಮೇಲೆ ಬಿದ್ದರು. ನೋಡ ನೋಡುತಿದ್ದಂತೆಯೇ ಶತ್ರುಜನರ ಹೆಣ ರಾಶಿಬೀಳತೊಡಗಿತು ಉಳಿದುಳಿದವರು ಕಾಲಿಗೆ ಬುದ್ಧಿ ಹೇಳಿದರು. ಈ ಅಗಣ್ಯ ವಿಜಯದನಂತರ ದಹೋಮ ರಾಜ್ಯದಲ್ಲಿ ಮಹಿಳಾ ಸೇನೆಯೊಂದು ಅವಿಭಾಜ್ಯ ಅಂಗವಾಯಿತು.

ತುರೂದನು ಮೃತ್ಯುಮುಖನಾದ ತರುವಾಯ, ಅವನ ಮಗ ಬೋಸನಿಗೆ ಸಿಂಹಾಸನಾಧಿಕಾರ ದೊರಕಿಸುವುದರಲ್ಲಿ ಈ ಮಹಿಳಾ ಸೇನೆಯು ಕೈವಾಡ ನಡೆಸಿತು. ಬೋಸನ ಸಹೋದರರಲ್ಲಿ ರಾಜ್ಯಲಾಲಸೆಯು ಬೆಳೆಯಲು ತಮ್ಮ ಮನೋಭಿಲಾಷೆಯನ್ನು ಸಫಲವಾಗಿರಿಸಲು ಅವರೆಲ್ಲರೂ ಈ ಮಹಿಳಾಸೇನೆಯ ಮರೆಹೊಕ್ಕರಾದರೂ ಮಹಿಳೆಯರ ಕೃಪೆ ಬೋಸನ ಮೇಲೆ ಮಾತ್ರ ಬಿತ್ತು. ಮಹಿಳಾ ಸೇನೆಯ ಸಹಾಯ ಪಡೆಯಲು ಬೋಸನಿಗೆ ಕಠಿನವೆನಿಸಲಿಲ್ಲ. ಸೇನೆಯು ತುರೋದನ ಹಿರಿಯ ಮಗ ಹಾಗೂ ಸಿಂಹಾಸನದ ವಾಸ್ತವಿಕ ಉತ್ತರಾಧಿಕಾರಿಯಾದ ಜಿಗಾನನ್ನು ಸೆರೆಹಿಡಿದು ಸಜೀವವಾಗಿ ಸಮುದ್ರಕ್ಕೆ ಎಸೆದು ಬಿಟ್ಟಿತು.

ಬೋಸನಿಗೆ ಸರ್ವಪ್ರಕಾರದಲ್ಲಿ ಈ ಸೇನೆಯು ಎಲ್ಲ ಕಷ್ಟ ಪ್ರಸಂಗಗಳಲ್ಲಿ ಸಹಾಯ ಮಾಡಿತು. ಒಂದು ಬಾರಿ ಮೂವತ್ತು ತೋಪುಗಳಿಂದ ಕೋಟೆಯೊಳಗೆ ಸೇರಿಕೊಂಡಿದ್ದ ಒಂದು ಸೇನೆಯೊಡನೆ ಇವರು ಹೋರಾಡಬೇಕಾಯಿತು. ಬೋಸನಿಂದ ಆಜ್ಞೆ ಬಂದೊಡನೆಯೇ ಮಹಿಳೆಯರು ತಾವು ಹಿಡಿದ ಬಂದೂಕುಗಳೊಡನೆ ಶತ್ರು ಸೇನೆಯ ಮೇಲೆ ಹಸಿದ ಸಿಂಹಿನಿಗಳಂತೆ ಬಿದ್ದರು. ಇದರಲ್ಲಿ ಕೆಲವಾರು ಮಹಿಳೆಯರು ಮಡಿದು ಹೋದರಾದರೂ ಕೋಟೆಯು ಹಸ್ತಗತವಾಯಿತು.

ಈ ಸೇನೆಯ ಮಹಿಳೆಯರು ಶೂರರಿರುವಂತೆಯೇ ಚತುರರೂ ಇದ್ದರು. ಒಂದು ಬಾರಿ ಅವರು ಬಹು-ದೊಡ್ಡ ಸೇನೆಯೊಡನೆ ಹೋರಾಡಬೇಕಾಯಿತು. ಶತ್ರುಗಳು ಸಬಲರಾಗಿದ್ದುದರಿಂದ ಸೇನೆ ಹಿಂಜರಿಯಿತು. ಆಗ, ಮಹಿಳೆಯರು ಶರಾಬಿನ ಪೀಪಾಯಿಗಳನ್ನು ದಾರಿಯಲ್ಲಿ ಎಸೆಯುತ್ತ ಹಿಂದೆ ಸರಿದರು. ಶತ್ರುಜನರು ಮುಂದುವರಿದಂತೆ ಶರಾಬನ್ನು ಕಂಡು, ಸಾಕಷ್ಟು ಕುಡಿದು ನಶೆಯಿಂದ ಹೊರಳಾಡ ತೊಡಗಿದರು. ಆಗ ಮಹಿಳಾಸೇನೆಯು ಅವರನ್ನು ಹಿಸುಕಿದ ಹಣ್ಣಿನಂತೆ ತುಂಡರಿಸಿ ಸೋಲಿಸಿಬಿಟ್ಟರು.

ಬೋಸನು ಅಕಾಲಮೃತ್ಯುಹೊಂದಿದುದರಿಂದಾಗಿ ಕಾತರರಾಗಿದ್ದ ಹೆಂಗಸರನ್ನು ಅಂಕೆಯಲ್ಲಿರಿಸುವುದು ಕಷ್ಟವಾಗಿತ್ತು. ಸೈನಿಕರಲ್ಲಿ ಮುನ್ನೂರು ಜನರು ಬೋಸನ ದಹನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸದಾ ಅವನ ಸೇವೆಯಲ್ಲಿರುವಂತೆ ಆತ್ಮಹತ್ಯೆ ಮಾಡಿಕೊಂಡರು. ಉಳಿದವರು ಉನ್ಮತ್ತರಂತೆ ಅತ್ತಿಂದಿತ್ತ ತಿರುಗಾಡ ತೊಡಗಿದರು. ಎದುರು ಸಿಕ್ಕಿದವರನ್ನು ಕಡಿದು ಅವರ ರಕ್ತಪಾನದಿಂದ ತೃಪ್ತರಾಗುತಿದ್ದರು. ಕೊನೆ ಕೊನೆಗೆ ತಮ್ಮ ತಮ್ಮಲ್ಲಿಯೇ ಹೊಡೆದಾಡುವುದಕ್ಕೂ ಆರಂಭಿಸಿದರು.

ಫ್ರೆಂಚ ಸೇನೆಯು ೧೮೯೪ರಲ್ಲಿ ದಹೋಮ ರಾಜ್ಯವನ್ನು ಆಕ್ರಮಿಸಿದಾಗ, ಈ ಮಹಿಳಾ ಸೇನೆಯು ಅವರನ್ನು ಎದುರಿಸಿತು. ಆದರೆ, ಮಹಿಳಾ ಸೇನೆಯ ಎಲ್ಲ ಸೈನಿಕರೂ ಯುದ್ಧದಲ್ಲಿ ಮೃತರಾದರು. ಫ್ರೆಂಚರು ದಹೋಮವನ್ನು ವಶಪಡಿಸಿಕೊಂಡೊಡನೆಯೇ ಈ ಅದ್ಭುತ ಮಹಿಳಾ ಸೇನೆಯು ಇನ್ನು ಮುಂದೆ ತಲೆಯೆತ್ತದಂತೆ ಮಾಡುವ ಉಪಾಯಗಳನ್ನು ಕೈಗೊಂಡರು ಏಕೆಂದರೆ, ಸೇನೆಯಲ್ಲಿ ಮಹಿಳೆಯರಿದ್ದರೆ ಅಲ್ಲಿ ಒಂದೇ ಒಂದು ದಿನ ತಮ್ಮ ಅಧಿಕಾರ ಜಮಾಯಿಸುವುದೂ ಅಸಾಧ್ಯವೆಂದವರು ತಿಳಿದಿದ್ದರು. ಫ್ರೆಂಚರ ಸಾಹಸದಿಂದ ಇಂದು ದಹೋಮದಲ್ಲಿ ಮಹಿಳಾಸೇನೆಯ ಹೆಸರು ಉಳಿದಿಲ್ಲ. ಆದರೆ, ದಹೋಮದ ಇತಿಹಾಸದಲ್ಲಿ ಈ ಮಹಿಳಾಸೇನೆಯು ಪಡೆದಿರುವ ಕೀರ್ತಿಯನ್ನು ಯಾವ ಇತಿಹಾಸಕಾರನೂ ಒಪ್ಪದೆ ಬಿಡುವಂತಿಲ್ಲ.

(ನ. ಭಾ. ಟಾಯಿಮ್ಸ್‌ನ ಆಧಾರದಿಂದ)

ತಮ್ಮನಿಗೆ ಓಲೆ

(ಜನಪದದಿಂದ)

...ತ್ತು ಉಪಯೋಗಿತೆ ಮೊದಲಾದ ನಿಯಂತ್ರಣದಿಂದ ಹೊರಗಿದ್ದು ಕಲಾಕೃತಿಯ ರೂಪದಲ್ಲಿ ಕಲಾಕಾರನಿಗೋಸ್ಕರ ಸ್ಥೂಲ ರೂಪಧಾರಣೆ ಮಾಡುತ್ತಿರುವಾಗ, ಅದು ನೀತಿಯ ಅಂಕಿತದಲ್ಲಿ ಬಂದೇ ಬರುತ್ತದೆ —ಎಂದಿವರನ್ನುತ್ತಾರೆ.

ಸಾಮಾನ್ಯವಾಗಿ ಪಾಶ್ಚಾತ್ಯ ದೇಶಗಳಲ್ಲಿ ಕಲೆಯನ್ನು ಜನಾಭಿಪ್ರಾಯದಿಂದ ಬೇರ್ಪಡಿಸಿ, 'ಕಲೆಗಾಗಿ ಕಲೆ' ಎಂದು ತಿಳಿಯುವುದು ಸಂಪ್ರದಾಯವೆಂಬಷ್ಟು ಬೆಳೆದುಬಂದಿದೆ. ಭಾರತದಲ್ಲಿ ಪಾಶ್ಚಾತ್ಯ ಪ್ರಭಾವವು ಎಲ್ಲ ಕ್ಷೇತ್ರಗಳಲ್ಲಿಯೂ ಪರ್ಯಾಪ್ತ ಪ್ರಭಾವವನ್ನು ಬೀರಿರುವಂತೆಯೇ ಇದರ ಮೇಲೆಯೂ ಪರಿಣಾಮವೆಸಗಿದೆ. ಹಾಗಾಗಿ 'ಕಲಾಪಕ್ಷ'ದ ಸಮರ್ಥಕರ ಸಂಖ್ಯೆ ಹೆಚ್ಚುತ್ತ ಬರುತ್ತಿದೆ. ಆದರೆ, ನಿಜವಾಗಿ ಭಾರತೀಯ ಲೋಕಮತವು ಕಲೆಯಿಂದ ನೀತಿಯನ್ನು ಬೇರೆಯಾಗಿಸಲು ಎಂದಿಗೂ ಒಪ್ಪುವುದಿಲ್ಲ ಕಲೆ ಮತ್ತು ನೀತಿಗಳು ಒಂದೇ ನಾಣ್ಯದ ಎರಡು ಮುಖಗಳಂತಿದ್ದು ಅವು ಪರಸ್ಪರ ಸಂಬದ್ಧವೆಂಬ ಭಾವನೆ ಭಾರತದಲ್ಲಿದೆ; ಈ ವಿಚಾರವಾಗಿ ಮುಂದಿನ ಪತ್ರದಲ್ಲಿ ವಿವರವಾಗಿ ವಿವೇಚಿಸುವ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. ೨ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪಿಚಂದ್ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ವೈಜ್ಞಾನಿಕ ವಿಚಾರ

ಶ್ರೀ ರಾಮನ್ನರ ನೂತನ ಪ್ರಯೋಗ

ನಮ್ಮ ಕಣ್ಣು ಹೇಗೆ ಕೆಲಸ ಮಾಡುತ್ತದೆಯೆಂಬುದನ್ನು ಭಾರತದ ವಿಜ್ಞಾನಿ ಶ್ರೀ ಸಿ. ವಿ. ರಾಮನ್ನರು ಇತ್ತೀಚೆಗೆ ಬಹಿರಂಗಪಡಿಸಿದರು. ಆ ಪ್ರಯೋಗವನ್ನು ಪ್ರಚಲಿತ ಲೇಖನದಲ್ಲಿ ವಿವರಿಸಲಾಗಿದೆ.

ವಿವರಿಸಿದವರು: ಶ್ರೀ ಅ. ಕೃಷ್ಣ ಭಟ್ಟ, ಬಿ. ಎಸ್‌ಸಿ. (ಆನರ್ಸ್)

ಇತ್ತೀಚೆಗೆ ಅಖಿಲ ಭಾರತ ಬಾನುಲಿಯ ಮೂಲಕ ಮಾತನಾಡುತ್ತಾ ಶ್ರೀ ಸಿ. ವಿ. ರಾಮನರು ಬಣ್ಣ ಸಂವೇದನೆಯ ಸಂದರ್ಭದಲ್ಲಿ ಕಣ್ಣಿನ ಚಿತ್ರಪತ್ರ (Ratina)ದಲ್ಲಿ ಅದರ ವಿವಿಧಾಂಗಗಳು ತಮ್ಮ ಕಾರ್ಯಪ್ರವರ್ತನೆಗೊಳಗಾಗುವ ಬಗೆಯನ್ನು ನಮನಮಗೇ ತೋರಿಸುವ ಹೊಸ ರೀತಿಯ ಪ್ರಯೋಗ ವಿಧಾನವೊಂದನ್ನು ಬಹಿರಂಗಪಡಿಸಿದರು.

ಪ್ರಯೋಗ:

ರಾಮನ್ ಹೇಳುವಂತೆ ನಿರೀಕ್ಷಕನು ಬೆಳಕಿರುವ ಒಂದು ಸುಸಜ್ಜಿತ ಕೋಣೆಯಲ್ಲಿ ಬಿಳಿಯ ತೆರೆಗೆ ಮುಖ ಮಾಡಿ ಕುಳಿತುಕೊಳ್ಳಬೇಕು. ಸೂಚಿತ ಬಣ್ಣಗಳ ಶೋಧಕ (Filter) ಅಥವಾ ಬಣ್ಣ ಹಾಕಿರುವ ಅಂಟಿರುವ (Gilatine) ಚಿತ್ರ ಗ್ರಾಹಕ ಗಾಜಿನ ಹಾಳೆಗಳನ್ನು ನಿರೀಕ್ಷಕ ಮತ್ತು ತೆರೆಗಳ ಮಧ್ಯದಲ್ಲಿರಿಸಬೇಕು. ನಿರೀಕ್ಷಕನನೋಟವು ನವಸಂವಿಧಾನಕ್ಕೆ ಒಳಪಟ್ಟು, ಪರಿಚಿತವಾಗುವ ತನಕ ಸುಮ್ಮನಿದ್ದು, ಶೋಧಕಗಳನ್ನು ಒಮ್ಮೆಲೇ ತೆಗೆಯಬೇಕು.

ಆಗ ನಿರೀಕ್ಷಕನು ತನ್ನ ಚಿತ್ರಪಟದ, ಅದರಲ್ಲೂ ಮುಖ್ಯವಾದ ಕೇಂದ್ರ ಸ್ಥಾನದಪೀತಬಿಂದು (maculalutia) ಎಂಬ ಭಾಗದ ದೊಡ್ಡದಾದ ಪ್ರತಿಬಿಂಬವನ್ನು ತೆರೆಯಲ್ಲಿ ಕಾಣುವನು.

ಪ್ರತಿ ಬಿಂಬದ ಸ್ವಭಾವ ಗುಣ, ಹಾಗೂ ಬಣ್ಣಗಳು ಉಪಯೋಗಿಸುವ ಶೋಧಕಗಳ ಮೇಲೆಯೇ ಬಹುಮಟ್ಟಿಗೆ ಹೊಂದಿಕೊಂಡಿವೆ. ಮಾನವನ ಚಿತ್ರ ಪತ್ರದ ಫೋವಿಯ (fovea) ಎಂಬ ಅರಸಿನದ ಕಲೆಯು ಸೂಕ್ಷ್ಮಾಕ್ಷರಗಳನ್ನು ಓದುವ ಸುಮಾರು ನೂರು ಮಾರು ದೂರದಲ್ಲಿ ನಡೆಯುವ ವ್ಯಕ್ತಿಯ ಗುರುತು ಹಿಡಿಯುವ ಶಕ್ತಿಯನ್ನು ನಮಗೆ ಕೊಡುತ್ತದೆ. ಅದರ ಕೇಂದ್ರವಾದ ಫೋವಿಯೊಲ (foveola)ಕ್ಕೆ ಸಂಬಂಧಿಸಿ ಒಂದು ಪ್ರಕಾಶಮಾನವಾದ ಕಲೆಯು, ಅದರ ಸುತ್ತಾ ಬಣ್ಣದೊಂದು ವರ್ತುಲವೂ ಕಾಣಿಸುವುದು.

ವಿವರಣೆ:—

ಮೇಲಿನದವು ಪ್ರಯೋಗದ ರೂಪರೇಖೆಗಳು. ನಮ್ಮ ಕಣ್ಣಿನ ಚಿತ್ರ ಪತ್ರವನ್ನು ನಾವು ಕಾಣುವುದೆಂದರೇನು? ಈ ತತ್ವವನ್ನು ಪ್ರಾಣಿಗುಣ ವಿಜ್ಞಾನವು ಯಾವ ರೀತಿಯಲ್ಲಿ ವಿವರಿಸಲು ಶಕ್ತವಾಗಬಹುದು? ಅತಿ ತೀಕ್ಷ್ಣವಾದ ಸೂರ್ಯನನ್ನು ನೋಡಿ ಬೆಳಕಿರುವ ಗೋಡೆಯೆಡೆ ಮೊಗದಿರುಹಿದಾಗ ಕಾಣುವ ಕಪ್ಪು ಕಲೆಗಳಂತೆ ಇದೂ ಬೆಳಕಿನಿಂದುಂಟಾಗುವ ಭ್ರಾಂತಿಯಿರಬಹುದೇ? ಈ ಸಂಶಯಗಳನ್ನು ರಾಮನ್ ಅವರು ನಿವೃತ್ತಿ ಪಡಿಸಬೇಕಾಗಿತ್ತು. ಅವರಿಗೇ ಈ ವಿಚಾರದಲ್ಲಿ ಸಂಶೋಧಿಸಲಿಕ್ಕಿದೆಯೋ, ಅಥವಾ ವೈಯಕ್ತಿಕ ಕಾರಣಗಳಿಗಾಗಿ ತಮ್ಮ ಅಭಿಪ್ರಾಯವನ್ನು ಮುಚ್ಚಿರಿಸಿಕೊಂಡಿರುವರೋ ಅವರಿಗೇ ಗೊತ್ತು.

ಪ್ರಾಮುಖ್ಯ

ಹಿನ್ನೆಲೆಯನ್ನರಿಯಬೇಕಾದುದು ಅತಿ ಅಗತ್ಯವಾದುದು. ಪ್ರಯೋಗಕ್ಕೆ ತನ್ನದೇ ಆದ ಪ್ರಾಮುಖ್ಯವಿದೆ ಯೆಂಬುದನ್ನು ಅಲ್ಲಗಳೆಯುವಂತಿಲ್ಲ. ನಮ್ಮ ಚಿತ್ರ ಪತ್ರದಲ್ಲಿ ಮೂರು ಬಗೆಯ ಸೂಕ್ಷ್ಮ ವರ್ಣಗ್ರಾಹಿಗಳಿವೆ— (fignunts) ನಮಗೆ ತಿಳಿದಿರುವಂತೆ, ಮೊದಲನೆ ಜಾತಿಯವು ನೇರಳೆ ಮತ್ತು ನೀಲವರ್ಣಗಳನ್ನೂ, ಎರಡನೆಯದು ಹಸುರು, ಹಸುರರಸಿನಗಳನ್ನೂ, ಮೂರನೆಯದು ವರ್ಣ ಪುಂಜದ ಕೆಂಪು ಭಾಗವನ್ನೂ ಗ್ರಹಿಸಲು ಶಕ್ತವಾಗಿವೆ. ಜರ್ಮನ್ ವಿಜ್ಞಾನಿ ಪ್ಲೇಂಕನು ಸಾರಿದ ಹೊಸ ತತ್ವದ ಪ್ರಕಾರ ಸ್ವಾಭಾವಿಕವಾಗಿ ಹಾಗೂ ನಿಧಾನವಾಗಿ ನೆಲೆನಿಂದ ಸಿದ್ಧಾಂತ—ಬೆಳಕು ಶಕ್ತಿಯ ಅಲೆಗಳೆಂದಷ್ಟೇ ಹೇಳಲು ಸಾಧ್ಯವಿಲ್ಲ. ಅದು ಶಕ್ತಿಯ ರೇಣು ರೂಪವಾಗಿದೆ ವಿವಿಧ ಶಕ್ತಿ ಪರಿಮಾಣದ ಪ್ರಭಾಣುಗಳು (Photons) ಚಿತ್ರ ಪತ್ರದ ಸೂಕ್ಷ್ಮ ವರ್ಣ ಗ್ರಾಹಿಗಳ ಮೇಲೆ ಬಿದ್ದಾಗ ಪ್ರಾರಂಭವಾಗುವ ವ್ಯವಸ್ಥೆಯು ಮೆದುಳಿಗೆ ಸುದ್ದಿ ಸಾರುತ್ತದೆ. ಆದರೆ ನಮ್ಮ ಕಣ್ಣು ಎಷ್ಟು ಶಕ್ತಿ ವ್ಯತ್ಯಾಸವುಳ್ಳ ಪ್ರಭಾಣುಗಳನ್ನರಿಯಬಲ್ಲದು? ಎಂಬುದು ಇನ್ನು ಸಂಶೋಧಿಸಲಿಕ್ಕಿರುವ ವಿಚಾರವಾಗಿದೆ. ಅದುದರಿಂದಲೇ ತೆರೆಯ ಮೇಲಿನಿಂದ, ಸ್ಪಷ್ಟ ಬಣ್ಣಗಳಿಂದ ನಮ್ಮನ್ನೇ ದಿಟ್ಟಿಸಿ ನೋಡುವ ನಮ್ಮ ಫೋವಿಯವು ಸಂಶೋಧನೆಗೆ ಹೊಸ ಕ್ಷೇತ್ರ, ಹುರುಪುಗಳನ್ನೊದಗಿಸುವುದರಲ್ಲಿ ಸಂಶಯವಿಲ್ಲ.



ಹಿಂದುಸ್ತಾನ್ ಹಡಗು ರಚನಾ ಕೇಂದ್ರದಲ್ಲಿ ನಿರ್ಮಾಣಗೊಂಡ ಹದಿನಾರನೆಯ ಸಾಗರಗಾಮಿ ಹಡಗ
"ಸ್ಟೇಟ್ ಆಫ್ ಕಚ್"

ಶುದ್ಧ ಹರಟೆ

(೪ನೇ ಪುಟದಿಂದ)

ರಲ್ಲಿರುವ ಆ ಶಕ್ತಿಯು ವಿಕಾಸಹೊಂದಲಾರದು. ಆದರೆ ಗಂಡಂದಿರು ತೀರಿಕೊಂಡಲ್ಲಿ ಮಾತ್ರ ಅವುಗಳೆಲ್ಲವೂ ವಿಕಾಸಹೊಂದುವುವು. ಹಾಗಾದ್ದರಿಂದಲೆ ಸಿಂಹಳದಲ್ಲಿ ಹೀಗೆ ಆಯಿತು.. ಅದೂ ಅಲ್ಲದೆ ಲಂಕೆಯು ರಾವಣಾಸುರನ ರಾಜ್ಯವಾಗಿತ್ತಲ್ಲವೆ? ಹೆಣ್ಣು ಎಂದರೆ ಜೀವ ಬಿಡುತ್ತಿದ್ದ ರಕ್ಕಸರು. ಇಂದು ಹೀಗಾದುದೇನೂ ವಿಚಿತ್ರವಲ್ಲ" ಎಂದು.

೦೦ ೦೦

ಗಂಡ ಸತ್ತೊಡನೆ ಮುಂಡೆ ಬೋಳಿಸಿ, ಕೆಂಬಟ್ಟೆಯನ್ನುಟ್ಟುಕೊಳ್ಳುವವರು ಈ ಸುದ್ದಿಯನ್ನು ಸ್ವಾಗತಿಸುತ್ತಾರೆ. ತಮ್ಮಲ್ಲಿ ಆಶೀರ್ವಾದವನ್ನು ಕೇಳಬಂದ ಹೆಂಗಸರಿಗೆ, ತಮ್ಮಂತೆ ನೀವು ಕೂಡಾ ಆಗಬೇಕು. ಆದರೆ ನಮ್ಮಂತಹ ರೂಪನ್ನು ಮಾತ್ರ ಮಾಡಿಕೊಳ್ಳದೆ ನೀವು ಸಿಂಹಳದ ಪ್ರಧಾನ ಮಂತ್ರಿಣಿಯಂತಾಗಿರೆಂದು ಆಶೀರ್ವದಿಸುತ್ತಿದ್ದಾರೆಂದೂಹಿಸಬಹುದು.

೦೦ ೦೦

ಈಗಾಗಲೇ ವಾರ್ತಾಪತ್ರಿಕೆಗಳಿಗೆ ಬೇಡಿಕೆ ಹೆಚ್ಚಿದೆಯೆಂದು ನಾವು ಊಹಿಸಲೆಡೆಯಿದೆ. ಸಿಂಹಳದ ಸುದ್ದಿ ತಿಳಿಯಲು ಜನರು ವಿಶೇಷಾತುರವುಳ್ಳವರಾಗಿರಬಹುದು ಗಂಡಸರು ಹೆಂಗಸಿನ ರಾಜ್ಯಭಾರವನ್ನು ಮಾಡುವ ರೀತಿಯನ್ನು ತಿಳಿದುಕೊಳ್ಳುವ ಬಗ್ಗೆ ತೀವ್ರೋತ್ಸುಕರಾಗಿರಬಹುದು. ಹೆಂಗಸರು ನಮ್ಮ ಪೈಕಿಯಲ್ಲಿ ಒಬ್ಬಳು ಪ್ರಧಾನಿಯಾಗಿರುವಾಗ ಅವಳು ರಾಜ್ಯಭಾರವನ್ನು ಹೇಗೆ ನಡೆಸುವಳೆಂಬುದನ್ನು ತಿಳಿದುಕೊಳ್ಳಲು ಅಪೇಕ್ಷಿತರಾಗಬಹುದು. ನಮ್ಮಲ್ಲಿಯ ಈಗಿನ ಯಂ. ಎಲ್. ಎ. ಗಳ ಹೆಂಡಂದಿರು ಮುಂದಿನ ಚುನಾವಣೆಯಲ್ಲಿ ನಮ್ಮನ್ನೆ ಚುನಾವಣಾ ಸ್ಪರ್ಧಿಗಳಾಗಿ ಆರಿಸಬೇಕೆಂದು ಹಟ ಹಿಡಿದರೆ ಯಾರೂ ಆಶ್ಚರ್ಯಪಡಬೇಕಾದುದಿಲ್ಲ.

೦೦ ೦೦

ನಾನೊಂದು ದಿನ ಮನೆಗೆ ಹೋದಾಗ ನನ್ನವಳು—"ನೋಡಿದಿರ ಅವಳ ಭಕ್ತಿಯನ್ನು. ನಮ್ಮ ಕ್ಷೀಣ ಕಲಿಕಾಲದಲ್ಲಿ ಭಕ್ತಿ ಬಹಳ ಕಡಿಮೆಯಾಗಿದೆ ನೋಡಿ" ಎಂದಳು.

ಪೂರ್ವಾಪರ ವಿಚಾರಗಳನ್ನು ತಿಳಿಯದ ನಾನು 'ಹೌದೆಂ'ದು ಹೇಳಿದೆನು. ಇಲ್ಲವಾದರೆ ಹಸಿವೆಯಿಂದ ನರಳುವ ನಾನು ಬದುಕುವುದಾದರೂ ಹೇಗೆ?

"ಪ್ರಧಾನ ಮಂತ್ರಿಣಿಯಾದರೂ ಆಕೆ ನರ್ ಮಸ್ತರ್‌ಳಾಗಿದ್ದಾಳೆ." ಎಂದಳು ಬಹಳ ಸಂತೋಷದಿಂದ.

ನನಗಾಗ ತಿಳಿಯಿತು ಇದು ಸಿಂಹಳದ ಪ್ರಧಾನಿಯ ಸುದ್ದಿಯೆಂದು. ನಾನು ಮೌನತಾಳಿದೆ.

'ಇಂಗ್ಲಿಷ್ ಪತ್ರಿಕೆಯವರು ಅವಳ ಚಿತ್ರವನ್ನು ಪ್ರಕಟಿಸಿ ಪುಣ್ಯ ಕಟ್ಟಿಕೊಂಡಿದ್ದಾರೆ' ಎಂದಳು.

"ಹಾಂ, ಹೌದು" ಎಂದು ನಾನು ತಲೆದೂಗಿದೆನು. ಇಂಗ್ಲಿಷ್ ಓದಲು ಮತ್ತು ಬರೆಯಲು ಬಾರದ ನನ್ನಾಕೆಗೆ ಆ ಚಿತ್ರದ ವಿವರಣೆಯನ್ನು ಯಾರು ಹೇಳಿದರೊ ನನಗೆ ಗೊತ್ತಿಲ್ಲ. ಇನ್ನೊಬ್ಬ ಹೆಂಗಸೇ ಹೇಳಿದಳೆಂದು ಖಚಿತವಾಗಿ ಊಹಿಸಬಹುದು.

೦೦ ೦೦

ಮೈಸೂರು ಮಂತ್ರಿ ಮಂಡಲವನ್ನು ಉಳಿಸುವ ಪ್ರಯತ್ನ ಸಲ್ಲದೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿಯವರು ಬೆಂಗಳೂರಲ್ಲಿ ಹೇಳಿರುವರೆಂದು ಸುದ್ದಿ.

--ಮಹಿಳಾ ಮುಖ್ಯ ಮಂತ್ರಿಯಾಗುವುದೇ ಈ ಸಮಸ್ಯೆಯ ಪರಿಹಾರ ಮಾರ್ಗವಾಗಿದೆಯೆಂದು ಕುಂತಳಾ ಪ್ರಿಯರು ಸೂಚಿಸ ಬಯಸುತ್ತಾರೆ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಗೃಹ ವಿಜ್ಞಾನ

(೩ನೇ ಪುಟದಿಂದ)

ದಾಗಿವೆ. ತಂತಮ್ಮ ಶಕ್ತಿಗೆ ತಕ್ಕಹಾಗೆ ಮಕ್ಕಳಿಗೆ ಆಟದ ಸಾಮಗ್ರಿ ಒದಗಿಸುವುದರಲ್ಲಿ ಯಾರೂ ಹಿಂಜರಿಯಬಾರದು.

ಸಂತೋಷವಾದರೇನೇ ನಗು ಬರುತ್ತದೆ. 'ಸಂತೋಷವೇ ಅರ್ಧಬಲ'; 'ನಗುವುದರಿಂದ ಆಯುರ್ವೃದ್ಧಿ'; 'ನಗುವು ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ' ಎಂದು ಮುಂತಾಗಿ ನಗುವಿನ ಗುಣವರ್ಣನೆ ಎಷ್ಟೋ ಇವೆ. ರುಚಿಗಳನ್ನು ಇನ್ನಷ್ಟು ರುಚಿಗೊಳಿಸುತ್ತದೆ ನಗು. ಆರೋಗ್ಯ ಭಾಗ್ಯಕ್ಕೆ ನಗುವೊಂದು ಸಂಜೀವನ. ಯಂತ್ರಕ್ಕೆ ಎಣ್ಣೆ ಹೇಗೋ ಹಾಗೆ ಮಾನವ ಯಂತ್ರಕ್ಕೆ ನಗು. ಆದುದರಿಂದ ಮಕ್ಕಳ ಸಾಹಿತ್ಯದಲ್ಲಿ ನಗುವೇ ಪ್ರಧಾನಾಂಶ. ಮನೆಗೆ ಮಕ್ಕಳ ನಗುವೇ ಬೆಳಕು.

ಶೀಲ

"ಹಣ ಹೋದರೆ ಏನೂ ಹೋಗುವುದಿಲ್ಲ; ಆರೋಗ್ಯವು ಹೋದರೆ ಅರ್ಧಭಾಗ ಹೋಗುತ್ತೆ; ಶೀಲವು ಹೋಗಿಬಿಟ್ಟರೆ ಎಲ್ಲವೂ ಹೋಗಿಬಿಡುತ್ತದೆ." ಎಂದು ಹಳೆಯ ಮಾತಿದೆ. ಇದು ನಿಜ.

ಆರೋಗ್ಯವು ಹವೆ ಮತ್ತು ಆಹಾರ ವ್ಯತ್ಯಾಸಗಳಿಂದ ಮಾತ್ರವೇ ಹೋಗುವುದೆಂದು ತಿಳಿಯಬೇಡಿ. ಶೀಲವೂ ಕೂಡಿರಬೇಕು. ಹವೆ—ಆಹಾರಗಳು ಸರಿಯಾಗೇ ಇದ್ದು ಶೀಲವು ಮಾತ್ರ ಕೆಟ್ಟುಹೋದರೆ ಸಾಕು; ಆರೋಗ್ಯವೂ ತನ್ನಂತಾನೇ ಕೆಟ್ಟುಹೋಗುತ್ತದೆ.

ಆರೋಗ್ಯಕ್ಕೂ ಶೀಲಕ್ಕೂ ಸಂಬಂಧವೇನು? ಎನ್ನುವಿರಾ? ಕೆಟ್ಟ ಆಹಾರವು ಆರೋಗ್ಯವನ್ನು ಕೆಡಿಸುವ ಹಾಗೆಯೇ ಕೆಟ್ಟ ಶೀಲವೂ ಆರೋಗ್ಯವನ್ನು ಕೆಡಿಸುತ್ತದೆ. ಕೆಟ್ಟ ಶೀಲದಿಂದ ಮಾಡುವ ಕೆಲಸವೇ ಕೆಟ್ಟದಾಗುತ್ತದೆ. ಕೆಟ್ಟ ಕೆಲಸ ಮಾಡುವಾಗ ಭಯವು ತಲೆಹಾಕುತ್ತದೆ. ಭಯದಿಂದ ಧೈರ್ಯವು ಪಲಾಯನಮಾಡುತ್ತದೆ. ಧೈರ್ಯವಿಲ್ಲದಲ್ಲಿ ಪರಾಜಯ ಸಿದ್ಧ. ಆದಕ್ಕೇ 'ಎಲ್ಲಿ ಪಾಪವೋ ಅಲ್ಲಿ ಭಯ' ಎಂದು ಹಿರಿಯರು ಹೇಳಿದ್ದಾರೆ.

ಭಯದ ವಿಷಯವಾಗಿ ಇನ್ನೂ ಸ್ವಲ್ಪ ತಿಳಿಯಬೇಕು. ಆಗ ತಾನೇ ಮಕ್ಕಳಲ್ಲಿ ಅದು ಬಾರದಂತೆ ತಡೆಯಲು ಎಷ್ಟು ಎಚ್ಚರ ವಹಿಸಬೇಕೆಂದು ತಿಳಿಯುತ್ತದೆ. ಭಯವು ಎಲ್ಲ ರೋಗಗಳಿಗಿಂತಲೂ ವಿಚಿತ್ರವಾದ ಒಂದು ರೋಗ. ಇದಕ್ಕೆ ಔಷಧವಿಲ್ಲ. ಮನುಷ್ಯರು ಭಯದಿಂದ ತಪ್ಪಿಸಿಕೊಳ್ಳಲು ಮತ್ತಷ್ಟು ಕೆಟ್ಟ ಕೆಲಸವನ್ನೇ ಮಾಡುತ್ತಾರೆ. ಏನೋ ಮಾನಸಿಕ ರೋಗವು ಮೊದಲು ತೋರುತ್ತದೆ. ಆದರಿಂದ ಕ್ರಮೇಣ ಶರೀರಕ್ಕೆ ರೋಗ ತಗಲುತ್ತದೆ. ಆ ಮೇಲೆ ಕೇಳುವುದೇ ಬೇಡವಷ್ಟೆ?

ಒಳ್ಳೆಯ ನಡತೆಯಿಂದ ಒಳ್ಳೆಯ ಶೀಲವನ್ನು ಹಿಡಿದವರು ಒಳ್ಳೆಯ ಕೆಲಸಗಳನ್ನು ಮಾಡುತ್ತ ಸತ್ಯಸಂಧತೆಯಿಂದ ಧೈರ್ಯಶಾಲಿಗಳಾಗಿರುತ್ತಾರೆ. ಇಂಥವರಿಗೆ ಹವೆ ಮತ್ತು ಆಹಾರ ವ್ಯತ್ಯಾಸಗಳಿಂದ ಶರೀರಕ್ಕೆ ರೋಗ ತಗಲಿದರೂ ವೈದ್ಯರ ಚಿಕಿತ್ಸೆಯಿಂದ ಗುಣವಾಗಿ ಬಿಡುತ್ತದೆ. ಮನೋವ್ಯಾಧಿ ಸೇರಿದ್ದರೆ ಮಾತ್ರ ವೈದ್ಯರ ಕೈಮೀರಿದ ವಿಷಯ.

ಮಕ್ಕಳು ದೊಡ್ಡವರ ಹಾಗೆ ಕೆಟ್ಟ ಕೆಲಸ ಮಾಡಿ ಮನೋವ್ಯಾಧಿಯನ್ನು ಅಂಟಿಸಿ ಕೊಳ್ಳುವುದಿಲ್ಲ. ಆದುದರಿಂದಲೇ ಮಕ್ಕಳಿಗೆ ಬರುವ ಕಾಯಿಲೆಗಳು ದೊಡ್ಡವರಿಗೆ ಬರುವಷ್ಟು ಕಠಿನವಾಗುವುದಿಲ್ಲ. ಮಕ್ಕಳು ಬೆಳೆಯುತ್ತಾ ಬರುವಾಗ ಅವರ ಶೀಲವು ಕೆಟ್ಟು ಹೋಗದ ಹಾಗೆ ಹಿರಿಯರು ಎಚ್ಚರಿಕೆ ತೆಗೆದುಕೊಳ್ಳಬೇಕು. 'ಎಳೆಯ ಗಿಡವು ಬಾಗುವಂತೆ ಮರವಾದ ಮೇಲೆ ಬಾಗುವುದಿಲ್ಲ'.

ಮನುಷ್ಯರು ಯಾವ ಕಾರ್ಯ ಸಾಧಿಸಬೇಕಾದರೂ ಆತ್ಮಶಕ್ತಿ ಆಗತ್ಯ. ಸುಶೀಲತೆಯಿಂದ ಧೈರ್ಯ, ಧೈರ್ಯದಿಂದ ಆತ್ಮಶಕ್ತಿ, ಆತ್ಮಶಕ್ತಿಯಿಂದ ಕಾರ್ಯಸಿದ್ಧಿ—ಹೀಗಿದೆ ಕ್ರಮ. ಆತ್ಮಶಕ್ತಿಯನ್ನು ಸಾಧಿಸಿಕೊಂಡವರ ಸತ್ವದಿಂದಲೇ ಮಹತ್ಕಾರ್ಯಗಳಾಗಬೇಕೇ ಹೊರತು, ಇತರ ಉಪಕರಣಗಳಿಂದಲ್ಲ! ಎಂಬುದು ಆರ್ಯವಾಕ್ಯ.

ಶೀಲವು ಒಳ್ಳೆಯದಾದ ಕೂಡಲೇ ಭಯವು ಎಲ್ಲಿಗೂ ಓಡಿಹೋಗಿಬಿಡುವುದಿಲ್ಲ. ಅದು 'ನ್ಯಾಯಭಯ'ವಾಗಿ ಪರಿಣಮಿಸುತ್ತದೆ. ಅದು ಭಕ್ತಿಯೊಂದಿಗೆ ಬೆರೆತಿರುವ ಒಳ್ಳೆಯ ಭಯವಾಗಿದೆ. ಇದು ಪ್ರತಿಯೊಬ್ಬರಿಗೂ ಬೇಕು. ನೋಡಿ. ಮಕ್ಕಳಿಗೆ ತಾಯಿಯ ಭಯವಿರುವುದಿಲ್ಲ; ತಂದೆಯ ಭಯವಿದೆ. ಇದು ಗೌರವದ ಭಯ. ಈ ಗೌರವವನ್ನು ಉಳಿಸಿಕೊಳ್ಳಬೇಕಾದ್ದು ತಂದೆಯೇ. ತಂದೆಯು ಮಾತುಮಾತಿಗೂ ಮಕ್ಕಳನ್ನು ಬೆದರಿಸಹತ್ತಿದರೆ ಆ ಭಯವು ಗೌರವದ ಕೈಯಿಂದ ಸುಳ್ಳಿನ ಹಳ್ಳಕ್ಕೆ ಜಾರಿಕೊಳ್ಳುತ್ತದೆ. ಮಾತ್ರ ದುಶ್ಶೀಲನಾಗುತ್ತಾನೆ.

ವಿದ್ಯೆಗೆ ಶಿಕ್ಷಣವೆಂದು ಇನ್ನೊಂದು ಹೆಸರಿದೆ. ಶಿಕ್ಷೆಯಿಂದ ಭಯಪಡಿಸುವುದೇ ಆದರ ಅರ್ಥವೆಂದುಕೊಂಡು ಕೆಲವರು ಮಕ್ಕಳನ್ನು ಕಂಡಾಬಟ್ಟೆ ಶಿಕ್ಷಿಸುತ್ತಾರೆ. ಇದು ಸರಿಯಲ್ಲ. ನಾವು ದೇವರಲ್ಲಿ ಭಯವನ್ನೂ ಭಕ್ತಿಯನ್ನೂ ಇಟ್ಟಿರುವುದು ನಮ್ಮ ಒಳ್ಳೆಯತನಕ್ಕೆ ಹೇಗೆ ಸಹಕರಿಸುವುದೋ ಹಾಗೆಯೇ ಮಕ್ಕಳೂ ಒಳ್ಳೆಯ ನಡತೆಗೆ ಹತ್ತಿಕೊಳ್ಳಲು ಹಿರಿಯರ ಮೇಲೆ ಭಯ-ಭಕ್ತಿ-ಗೌರವಗಳಿಂದಿರಬೇಕು. ದೇವರು ಪ್ರೇಮ ಮತ್ತು ದಯೆಗಳಿಂದ ನಮ್ಮ ಭಯಭಕ್ತಿಗಳನ್ನು ಸಂಪಾದಿಸಿರುವ ಹಾಗೆಯೇ, ನಾವು ಪ್ರೇಮದಿಂದಲೇ ಭಯಭಕ್ತಿಯನ್ನು ಹುಟ್ಟಿಸಬೇಕು. ಇಂತಹ ಒಳ್ಳೆಯ ಭಯವು ಪ್ರಪಂಚದಲ್ಲಿಲ್ಲದಿದ್ದರೆ ಎಲ್ಲರೂ ಸ್ವಚ್ಛಂದ ವೃತ್ತಿಗಿಳಿದುಬಿಡುತ್ತಿದ್ದರು. 'ದೇವರ ಭಯವೇ ಜ್ಞಾನದ ಆರಂಭ' ಎಂದು ಹಿರಿಯರು ಅರ್ಥದಲ್ಲಿ ಹೇಳಿದ್ದಾರೆ. ಮನೆಯ ಹಿರಿಯರಾದರೂ ಸರಿ, ಶಾಲೆಯ ಗುರುಗಳಾದರೂ ಸರಿ, ಮಕ್ಕಳಲ್ಲಿ ಭಯ, ಭಕ್ತಿ, ಗೌರವಗಳು ಹುಟ್ಟುವಹಾಗೆ ಬುದ್ಧಿಯನ್ನುಪಯೋಗಿಸಿಕೊಂಡು ಶಿಕ್ಷೆಕೊಡುವುದೇ ಶಿಕ್ಷಣದ ನಿಜವಾದ ಅರ್ಥ. ಮಕ್ಕಳನ್ನು ಬೈಯುವುದಾದರೂ ಹೊಡೆಯುವುದಾದರೂ ಅದೊಂದು ನಟನೆಯಾಗಿಯೇ ಇರತಕ್ಕದ್ದು. ಈ ಸೂಕ್ಷ್ಮವನ್ನು ಹಿರಿಯರೆಲ್ಲಾ ತಿಳಿದು ನಡೆದರೆ ಮಕ್ಕಳು ಸುಶೀಲವಂತರಾಗುತ್ತಾರೆ.

ನಿದ್ರೆ

ನಿದ್ರೆಯೇ ಮನುಷ್ಯರಿಗಿರುವ ಅಮೃತಸಂಜೀವಿನಿಯಾಗಿದೆ. ಪವಿತ್ರವಾದ ಸುಖನಿದ್ರೆಯಲ್ಲಿ ಪ್ರತಿದಿನವೂ ಮನುಷ್ಯರು ಹೊಸ ಮನುಷ್ಯರಾಗಿ ಏಳುತ್ತಾರೆ. ನಿದ್ರೆಯನ್ನು ಸರಿಯಾಗಿ ಆಚರಿಸದೆ ಇರುವವರಿಗೆ ಈ ಭಾಗ್ಯ ಸಿಕ್ಕುವುದಿಲ್ಲ. ಅಂತಹರು ದಿನಹೋದಹಾಗೆ ಹಳಬರಾಗುತ್ತಾರೆ. ಅನೇಕ ವ್ಯಸನಗಳಿಂದ ಮಾದಕ ಸೇವನೆಗಳಿಂದ ನಿದ್ರೆಯನ್ನು ಕೆಡಿಸಿಕೊಂಡು ರಾತ್ರಿಯೆಲ್ಲಾ ನರಳುವ ನಿರ್ಭಾಗ್ಯರ ಪಾಡು ದೊಡ್ಡ ಕಥೆ. ನಮ್ಮ ಮಕ್ಕಳಿಗೆ ನಾವು ಅಂಥ ಅವಕಾಶ ಕಲ್ಪಿಸಲೇಬಾರದು.

ಚಿಕ್ಕ ಮಕ್ಕಳಿಗೆ ನಿದ್ರೆ ಅತೀ ಅಗತ್ಯ. ಬೆಳೆಯುವ ಅವುಗಳ ದೇಹದಲ್ಲಿ ನಿದ್ರೆಯಲ್ಲಿಯೇ ಎಷ್ಟೋ ಕೆಲಸಗಳು ಸಾಗಬೇಕಾಗಿದೆ. ಅಂತಹ ಮಕ್ಕಳನ್ನು ಸಿನಿಮಾ ನಾಟಕಗಳಿಗೆ ಕರೆದೊಯ್ಯುವುದೋ, ವೇಳೆ ತಪ್ಪಿ ವೇಳೆ ಉಣಿಸುವುದೋ, ಕುಡಿಸುವುದೋ ಮಾಡುವುದರಿಂದ ಅವುಗಳ ನಿದ್ರೆ ತುಂಡು ತುಂಡಾಗಿ ಅನಾರೋಗ್ಯವಾಗುತ್ತದೆ.

ಸಾಮಾನ್ಯವಾಗಿ ಮಕ್ಕಳಿಗೆ ಹುಟ್ಟಿದ ಮೊದಲು ನಾಲ್ಕು ತಿಂಗಳವರೆಗೆ ದಿನಕ್ಕೆ ೨೦ ಗಂಟೆ ನಿದ್ರೆ ಬೇಕು. ೪ರಿಂದ ೬ ತಿಂಗಳವರೆಗೆ ೧೮ ಗಂಟೆ, ೬ರಿಂದ ೧೨ ತಿಂಗಳವರೆಗೆ ೧೬ ಗಂಟೆ, ಒಂದು ವರ್ಷದಿಂದ ೩ ವರ್ಷದ ವರೆಗೆ ೧೫ ಗಂಟೆ, ೩ ವರ್ಷದಿಂದ ೫ ವರ್ಷದ ವರೆಗೆ ೧೪ ಗಂಟೆ, ಅನಂತರ ೧೨ ವಯಸ್ಸಿನ ವರೆಗೆ ಅವರು ಮಾಡುವ ಆಡುವ ಕಾರ್ಯಗಳಿಗೆ ತಕ್ಕ ಹಾಗೆ ೧೧ರಿಂದ ೧೨ ಗಂಟೆಯ ವರೆಗೆ ನಿದ್ರೆ ಬೇಕಾಗಿರುವುದೆಂದು ಅಂದಾಜು ಮಾಡಬಹುದು.

ವಯಸ್ಸು ಹೆಚ್ಚಿದಂತೆ ನಿದ್ದೆಯ ಕಾಲ ಕಡಮೆ ಸಾಕು. ಈ ಲೆಕ್ಕದಿಂದ ದೇಹದ ಬೆಳವಣಿಗೆ ಶಕ್ತಿ ಸಂಚಯಗಳು ನಿದ್ರೆಯ ವೇಳೆಯಲ್ಲಿ ಸಾಗುತ್ತದೆಂದು ತಿಳಿದು ಮಕ್ಕಳ ನಿದ್ದೆಯನ್ನು ಒಂದು ನಿಧಿಯಂತೆ ಕಾಪಾಡಿಕೊಳ್ಳಬೇಕು.

ಮಗುವಿಗೆ ಹಾಲೂಡುವಾಗ ಹೊರತು ಉಳಿದ ಸಮಯದಲ್ಲಿ ಮಗುವನ್ನು ಅಪ್ಪಿಕೊಂಡು ಮಲಗಬಾರದು. ಮಗುವಿನ ಹಾಸಿಗೆ ಬೆಚ್ಚಗಿರಲಿ. ಮಗುವಿನ ಮೈ ಮೇಲೆ ಗಾಳಿ ತಗಲದಂತೆ ಮೃದುವಾದ ತುಪ್ಪಳದ ಹೊದಿಕೆ ಬೇಕು. ಮಗು ನಿದ್ರಿಸುವ ಕೊಠಡಿಯಲ್ಲಿ ದೀಪವು ಚಿಕ್ಕದಾಗಿರಬೇಕು. ಎಲೆಕ್ಟ್ರಿಕ್ ದೀಪದ ಅಧಿಕವಾದ ಪ್ರಕಾಶವವು ಮಗುವಿನ ಕಣ್ಣಿಗೆ ಒಳ್ಳೆಯದಲ್ಲ. "ಹೊನ್ನೆಣ್ಣೆಯ ದೀಪ ಕಣ್ಣಿಗೆ ಹಿತ' ಎಂಬುದು ಹಳೆಯ ಮಾತು. ಈ ಕಾಲದಲ್ಲಿ ಇದನ್ನಾರೂ ಉಪಯೋಗಿಸುವುದಿಲ್ಲ. ಆದುದರಿಂದಲೇ ಯುವಕರಲ್ಲಿ ಕಣ್ಣಡಕದ ಬಳಕೆ ಹೆಚ್ಚಾಗುತ್ತಿದೆಯೋ ಏನೋ!

ಗಾಢ ನಿದ್ರೆಯಲ್ಲಿರುವ ಮಗು ಆಗಾಗ ಎದ್ದು ಅತ್ತೀತು. ಆಗ ಸ್ವಲ್ಪ ಹಾಲು ಕೊಟ್ಟರೆ ಕೂಡಲೇ ನಿದ್ರಿಸುತ್ತದೆಂದು ಪ್ರತಿ ತಾಯಿಗೂ ಗೊತ್ತಿದೆ. ಹೀಗಲ್ಲದೆ

(೧೨ನೇ ಪುಟ ನೋಡಿರಿ)

ಕಾಮ ವಿಜ್ಞಾನದ ಮಾಹಿತಿಗಾಗಿ ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50.
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಥಾವಿಹಾರ

(೨ನೇ ಪುಟದಿಂದ)

ಹ, ಹುರುಪು, ಆಸಕ್ತಿಯೊಂದೂ ಇಂದಿರುತ್ತಿರಲಿಲ್ಲ. ಮೈಲೆತ್ತರದ ತೆಂಗಿನ ಮರವೇರುವುದರಲ್ಲಿ ಕಪಿಯನ್ನೂ ಮೀರಿಸಿದ ಕರಿಯನಿಂದು ಆಳೆತ್ತರದ ಮರ ಹತ್ತಲು ಹಿಂಜರಿಯುತಿದ್ದ. ಧಣಿಯರು ಆತನಿಗೆ ಊಟಕ್ಕೇನೂ ಕಡಿಮೆ ಮಾಡಿರಲಿಲ್ಲ ಕರಿಯನಾದರೂ ಹೊಟ್ಟೆ ತುಂಬಿಸಲು ಸಂಕೋಚಪಟ್ಟವನೂ ಅಲ್ಲ. ಆದರೇನು? ಅವನ ಒಡಲಿಗೆ ತಿಂದ ಅನ್ನ ಮಾತ್ರ ಹಿಡಿಯುತ್ತಿರಲಿಲ್ಲ; ಒಗ್ಗುತ್ತಿರಲಿಲ್ಲ. ಒಮ್ಮೊಮ್ಮೆ ಆತ ಅಂದುಕೊಳ್ಳುತ್ತಿದ್ದ— "ನಲುವತ್ತು ರೂಪಾಯಿಗಳಿಗೆ ಎಷ್ಟು ವರ್ಷ ದುಡಿಯಬೇಕು? ಈಗಾಗಲೇ ಹತ್ತು ವರ್ಷ ಸಂದಿತು. ಇನ್ನೂ ಈ ಶರೀರವೇಕೆ ಬದುಕಿದೆ? ಆ ಜೀವ ದುಡಿಮೆಯ ವಿಶ್ವಾಸವಿತ್ತು ಅದನ್ನು ಮೀರುವುದು ಅಸಾಧ್ಯ. ಬೇಗನೇ ಮುಕ್ತಿ ತೋರಿಸುತಂಡೆ....' ಕರಿಯನ ವಿಚಾರಲಹರಿ ಹುಚ್ಚು ಹುಚ್ಚಾಗಿ ಅಲ್ಲೋಲಕಲ್ಲೋಲವಾಗಿ ಒಂದಕ್ಕೊಂದು ಹೊಡೆದಾಡತಿದ್ದುವು!

ದಿನಾ ಹೊತ್ತಾರೆ ಏಳುವ ಕರಿಯನಿಂದು ಏಳಲಿಲ್ಲ. ಕಾರಣ ತಿಳಿಯಲೂ ತಡವಾಗಲಿಲ್ಲ. ಅದೇನೋ ವೈ ಸೌಖ್ಯವಿಲ್ಲವಂತೆ. ಇದೇ ಬೆಳೆದು ಬಂದು, ಆರುದಿನಗಳಲ್ಲೇ ಕರಿಯ ಚಾಪೆಯನ್ನೇ ಹಿಡಿದುಬಿಟ್ಟ. ಡಾಕ್ಟರರ ವೈದ್ಯಕೀ ಪ್ರಯೋಗ ನಡೆಯ ತೊಡಗಿತು. ಸಿಂಗಿಗೆ ಮಾಂಗಲ್ಯ ವಳಿಯಬಹುದೆಂಬ ಭಯ ಅಂಕುರಿಸಿತು. 'ದೇವರೆ, ಅವರೆಲ್ಲಿಯೇ, ಯಾರಲ್ಲಿಯೇ ದುಡಿಯುತ್ತಿರಲಿ; ನನ್ನ ಮಾಂಗಲ್ಯವನ್ನು ಮಾತ್ರ ಉಳಿಸಿಕೊಡು' ಆಕೆ ಶ್ರದ್ಧಾವನತಳಾಗಿ ಬೇಡಿಕೊಳ್ಳುತಿದ್ದಳು. ಆಕೆಯ ಕಣ್ಣುಗಳು ತುಂಬಿಬರುತಿದ್ದುವು.

ಇದನ್ನು ಕಂಡುಕೊಂಡ ಕರಿಯ ನಿರುತ್ಸಾಹಗೊಳ್ಳುತಿದ್ದ. ತನ್ನ ಕೊನೆಗಾಲ ಬಹು ದೂರವಿದೆಯೆಂದಾತ ತಿಳಿದುಕೊಳ್ಳುತಿದ್ದಿಲ್ಲ. ಆತ ಬಯಸುತಿದ್ದುದೂ ಅದನ್ನೇ. ತನ್ನನ್ನೇ ತಾನು ಮಾರಿಕೊಂಡು ರಾಯರ ಗುಲಾಮನಾಗಿ ಈಗ ಅವರಿಗೆ ವಂಚನೆ ಮಾಡುವುದು ಸರಿಯಲ್ಲ ಎಂದಿತು ಅವನ ಆತ್ಮ. ಆದರೆ, ಹೃದಯ ಗುಡುಗಿತು—ಮತ್ತೆ? ಅವರಿತ್ತ ನಲುವತ್ತು ರೂಪಾಯಿಗಳಿಗೆ ಹತ್ತು ವರ್ಷ ದುಡಿದುದು ಸಾಲದೆ?" ಸಾಕು—ಸಾಲದು ಎಂಬ ವಾದಗಳು ಹೊಡೆದಾಡಿಕೊಂಡುವು. ಯಾರು ಗೆದ್ದರೊ ಕರಿಯನಿಗಂತೂ ಅರಿವಿಲ್ಲ. ಆದರೂ 'ಸಾಕು' ಎಂಬುದರದೇ ಮೇಲುಗೈಯಾಗಿರಬೇಕೆನಿಸಿತಾತನಿಗೆ.

ಕರಿಯನ ಆರೋಗ್ಯವು ಬಲಿಯುತ್ತ ಬಂದಿತು. ಯಥಾಯೋಗ್ಯ ಸಂಭಾವನೆ ಪಡೆಯುವ ಆಶೆಯಿಲ್ಲದ್ದರಿಂದ ಡಾಕ್ಟರರ ಸವಾರಿಯೂ ಅಪರೂಪವಾಗುತ್ತ ಬಂತು. ಅಂತೂ ಕರಿಯ ಮನೆಯವರ ಕಣ್ಣೀರ ಕಾಲುವೆಯ ನಡುವಿನ ನಾವೆಯಲ್ಲಿ ಮಂಡಿಸಿ ಮೃತ್ಯುವಿನ ಪ್ರತೀಕ್ಷೆ ನಡೆಸುತಿದ್ದ.

೪

ರಾಯರು....

ರಾಯರೆಂದರೆ ಸಾಮಾನ್ಯ ಆಸಾಮಿಯಲ್ಲ. ಇವರೊಡನೆ ನಾಲ್ಕು ಬಿರುವಾಡ ಬರುವವರೆಲ್ಲ ಇವರಿಂದ ಮಂಗಳಾರತಿಯೆತ್ತಿಸಿಕೊಂಡೇ ಹೋಗುವಂತಾಗಿದ್ದರು. ರಾಯರ ಗಂಭೀರತೆ– ಬಿಗುಮಾನಗಳನ್ನು ಕಂಡ ಮಕ್ಕಳಿರಲಿ, ದೊಡ್ಡವರೂ ಬೆದರರಬೇಕು!

ಹಣ್ಣು ಮೀಸೆ, ಅಗಲಗಲ ಮುಖ, ಅದಕ್ಕೊಪ್ಪುವ ಎದ್ದುತೋರುವ ಕಣ್ಣುಗಳು,ಕೆಂಪುಮೂಗು, ಮುಂದಿನಹಲ್ಲುದುರಿದ್ದ ಬಾಯಿ.ಬಿಡಾಕೋಪಸಾಗರದಲ್ಲಿ ತೇಲಾಡುವ ಮುಖಚರ್ಯೆ. ಎತ್ತರದ ಶರೀರ. ನೀಳವಾದ ಮೈಕಟ್ಟು, ೭ ಮೊಳ ಪಂಚೆಯ ಸುತ್ತುವಸ್ತು ಗುಡಾಣ ಹೊಟ್ಟೆ—ಅದಕ್ಕೆ ಸರಿಯಾದ ಕೈಕಾಲುಗಳು

ಕಚ್ಚೆ, ಕೋಟು ಧರಿಸಿ ಕೈಕೋಲೂರಿ ಹೊರಟರೆಂದರೆ, ಮದ್ದಾನೆಯ ಮರಿಯಂತೆ. ಎಲ್ಲಿ ಹೋದರೂ ಮನ್ನಣೆ ಮರ್ಯಾದೆಗಳು ಅವರನ್ನು ಇದಿರ್ಗೊಳ್ಳುತಿದ್ದುವು. 'ಒಡೆಯರೇ' ಎಂದು ದೈನ್ಯದಿಂದ ಯಾರಾದರೂ ಕರೆದರೆ, ಅದು ಅವರ ಅಗಲದಾದ ಕಿವಿಯನ್ನು ಹೊಕ್ಕು ಹೃದಯಕ್ಕಿಳಿದಾಗ ಆ ಕೆಂಪಗಿನ ಮುಖದಲ್ಲೂ ಒಂದು ತರದ ವಿಕಟ ಮಂದಹಾಸ ಮಿಂಚುತಿತ್ತು.

ಕೆಲದಿನಗಳಿಂದ ತಮ್ಮ ಜೀತದಾಳು ದುಡಿಯಲು ಬರಲಿಲ್ಲವೇಕೆಂದರಿಯದ ರಾಯರು ತಮ್ಮ ಭೂಷಣಗಳಿಂದ ಅಲಂಕೃತರಾಗಿ ಮುಂಜಾನೆಯ ಹೊತ್ತು ಕರಿಯನ ಮನೆಯತ್ತ ಹೊರಟರು. ಈತ ಮೋಸಮಾಡಿ ಎಲ್ಲಾದರೂ ಓಡಿಹೋದನೇ ಎಂಬ ಸಂದೇಹವೂ ಅವರನ್ನು ಭಾದಿಸದಿರಲಿಲ್ಲ. ಆದರೂ ಕರಿಯ ಉಳಿದೆಲ್ಲರಂತಲ್ಲ. ಸತ್ಯಸಂಧ. ಹಾಗೆಲ್ಲಾ ವಂಚಿಸುವನಾದರೆ, ಈ ಹತ್ತು ವರ್ಷ ಬರುತಿದ್ದನೆ? ಎಂದು ಸಮಾಧಾನಪಟ್ಟುಕೊಂಡು ಮೆಲ್ಲ ಮೆಲ್ಲನೆ ದೇಹವೆಳೆಯುತ್ತ ಮುನ್ನಡೆದರು.

— ೫ —

"ಸಿಂಗೀ...ಕ" —ಕರಿಯ ಕ್ಷೀಣ ಸ್ವರದಿಂದ ಕರೆದ. ಆಕೆ ಮೆಲ್ಲನೆ ಕಣ್ಣೊರಸಿಕೊಂಡು ಪತಿದೇವನ ನಿಕಟ ಬಂದು ಕುಳಿತಳು.

"ಸಿಂಗಿ, ನೀನು ಅಳುತ್ತಿರುವುದೇಕೆ? ನನಗೂ ಪ್ರಾಯವಾಯಿತು. ನನ್ನ ಮೈ ಕೈಗಳಲ್ಲಿ ಬಲವುಳಿದಿಲ್ಲ. ನಾನು ಬಹಳ ಮುದುಕನಾಗಿ ಹೋಗಿದ್ದೇನೆ. ಪ್ರಾಣನ್ನದ ಕಷ್ಟವನ್ನು ಇನ್ನು ಕರಗಿಸಿಕೊಳ್ಳುವ ಶಕ್ತಿ ನನ್ನಲ್ಲಿ ಉಳಿದಂತೆ ತೋರುವುದಿಲ್ಲ. ನೀನೇನೂ ದುಃಖಿಸಬೇಡ. ಬೇರೆಯವರಿಗೆ ಕಷ್ಟವಿತ್ತು ಬೇರೆಯವರ ಅನ್ನವನ್ನು ಹಾರಯಿಸಿಕೊಂಡಿದ್ದು ಬದುಕಬೇಕಾದರೂ ಯಾಕೆ? ತನ್ನ ಮಾತನ್ನು ಕೇಳುವವರು ತಾಳ್ಮೆಯ ಮೂರ್ತಿಯಲ್ಲವೆಂದರಿಯದ ಕರಿಯ ಉಪದೇಶಿಸ ತೊಡಗಿದ್ದ. ಸಿಂಗಿ ಗೋಳೆಂದು ಅಳುತಿದ್ದಳು. ನಾಗ ನೇನೋ ಸಮಾಧಾನಿಸುವ ಪ್ರಯತ್ನ ಮಾಡುತಿದ್ದ. ಆದರೆ, ಅದು ಆತನ ಕೈಮೀರಿ ಹೋಗಿತ್ತು.

ಸಿಂಗಿ—ನಾಗರಿಗೂ ಕರಿಯ ಇನ್ನು ಬದುಕಿರುವುದು ಅಸಂಭವವೆಂಬುದರ ಅರಿವಾಗ ತೊಡಗಿತು. ಮಾಡುವುದಾದರೂ ಏನೆಂದು ಅವರಿಗೆ ತಿಳಿಯಲಿಲ್ಲ. ತಂದಿರುವ ಔಷಧಿ ನೀರನ್ನು ಸಮಯಕ್ಕೆ ಸರಿಯಾಗಿ ಕುಡಿಸುತಿದ್ದರು. ದೈವ ದೇವತೆಗಳಿಗೆ ಹರಕೆ ಹೊರುತಿದ್ದರು. ಕೋಳಿಯನ್ನು ಮಂತ್ರಿಸಿ ತೆಗೆದಿರಿಸಿದುದೂ ಆಯಿತು. ಇದಕ್ಕಿಂದ ಹೆಚ್ಚಿಗೇನನ್ನು ತಾನೇ ಅವರು ಮಾಡಿಯಾರು!

ಕರಿಯನ ಒಡಲು ನಿಶ್ಚೇಷ್ಟಿತವಾಗ ಮಲಗಿತ್ತು. ಅವನ ಮಾತು ಬಿಟ್ಟು ಆರು ಗಂಟೆಗಳೇ ಸಂದಿದ್ದುವು. ಆ ರಾತ್ರೆಯಿಡಿ ಕಣ್ಣಿನಲ್ಲಿ ಎಣ್ಣೆ ಸುರಿದುಕೊಂಡು ಕಾದುದಾಗಿತ್ತು. ಆದರೆ.... ಮುಂದೇನು?

ನೇಸರು ಮೂಡಿತು. ಸೂರ್ಯನ ಹೊಂಬಿಸಿಲ ಸೇಕದಿಂದ ಜಗಜ್ಜೀವಗಳು ಎಚ್ಚರವಾಂತುವು. ಮನೆ ಮನೆಗಳಲ್ಲಿ ನವದಿನದ ನವೋತ್ಸಾಹದಿಂದ ತಮ್ಮ ದೈನಂದಿನ ಕಾರ್ಯಕ್ರಮಗಳಲ್ಲಿ ತೊಡಗಿದರು. ಹಕ್ಕಿಗಳ ಚಿಲಿಪಿಲಿ ಅಂತ್ಯಗೊಂಡುವು. ಸೂರ್ಯಕಿರಣಗಳು ಬಹುದೂರದವರೆಗೆ ಪ್ರಖರವಾಗಿ ಹರಿದಾಡುತಿದ್ದುವು!

ಈ ನಸು ಬಿಸಿಲಿನ ಜಳದಲ್ಲಿ ತಮ್ಮ ಆನೆಯ ದೇಹವನ್ನು ಹೊತ್ತು ನಡೆದು ಬರುತಿದ್ದ ರಾಯರು ಹಣೆಯಲ್ಲಿಳಿಯುತಿದ್ದ ಬೆವರನ್ನು ಕೈ ಬೆರಳು ಸೊಟ್ಟಗೆ ಮಾಡಿ ಒರಸಿಕೊಂಡು, ಕರಿಯನ ಅಂಗಳವಲ್ಲಿ ಕಾಲಿರಿಸಿದರು. ಮನೆಯಲ್ಲಿ ಸ್ಮಶಾನವ ನರ್ತನತಾಂಡವವಾಡುತಿದ್ದುದನ್ನು ರಾಗಮನಿಸದಿರಲಿಲ್ಲ. ಏನೋ ಅಸೌಖ್ಯವಿರಬೇಕು ಎಂದು ಕೊಂಡು ಅಂಗಳವನ್ನು ದಾಟಿ ಮೆಟ್ಟಿಲಲ್ಲಿ ನಿಂತು 'ಕರಿಯಾs' ಎಂದರು. ಸ್ವಭಾವ ಕರ್ಕಶವಾದ ಅವರ ಧ್ವನಿಯಿಂದು ಅದೇನೋ ತುಸು ಮೃದುವಾಗಿ ಪರಿಣಮಿಸಿತ್ತು. ಸನ್ನಿವೇಶವು ಅವರಿಗೂ ಪಾಠ ಕಲಿಸಿರಬೇಕು.

ಒಳಗಣಿಂದ ನಾಗ ಕಣ್ಣೊರಸಿಕೊಂಡು ಬಂದು ರಾಯರನ್ನು 'ಬನ್ನಿ ಒಡೆಯರೇ' ಎಂದು ಸ್ವಾಗತಿಸಿದ. ಮನೆಯ ವಾತಾವರಣದಿಂದ ಪರಿಸ್ಥಿತಿ ತಾನೆಣಿಸಿದಷ್ಟು ಲಘುವಾಗಿಲ್ಲವೆಂದು ಊಹಿಸಿದ ರಾಯರು ಮೆಲ್ಲ ಮೆಲ್ಲನೆ ಜಗಲಿಯೇರಿ ಒಳಮನೆಗೆ ಕಾಲಿಟ್ಟು ಅಲ್ಲಿ ಮೂಲೆಯಲ್ಲಿ ಹರಕು ಚಾಪೆಯಲ್ಲಿ ಎಲುಬಿನಗೂಡೊಂದು ಒರಗಿತ್ತು. ಅದು ಕರಿಯನೆಂದು ತಿಳಿಯುವುದೂ ಸಾಧ್ಯವಿರಲಿಲ್ಲ. ಆದರೂ ಆತನಲ್ಲದೆ ಅಲ್ಲಿ ಮತ್ತಾರು ಇರಬೇಕು?

ರಾಯರ ಆ ಕ್ರೂರ ನೇತ್ರಗಳಲ್ಲಿಯೂ ಎರಡು ಹನಿ ನೀರು ತೊಟ್ಟಿಕ್ಕದಿರಲಿಲ್ಲ. ಅವರು ಕರಿಯನ ಮುಖದತ್ತ ಕೈ ಚಾಚಿ, 'ಕರಿಯಾ', ಎಂದರು ಅತಿ ಮೃದುವಾಗಿ.

ಕರಿಯ ಕಣ್ದಾಲಿ ಹೊರಳಿಸಲಿಲ್ಲ. ಆಗ, ನಾಗ ಆತನ ಕಿವಿಯಲ್ಲಿ ಹೇಳಿದ: "ಅಪ್ಪಾ, ಧನಿಯರು ಬಂದಿದ್ದಾರೆ!"

ಕರಿಯನ ಶಬ್ದೇಂದ್ರಿಯ ಇದನ್ನು ಕೇಳಿಯೋ ಅಥವಾ ಸ್ವಾಭಾವಿಕ ಸಂಚಲನೆಯಿಂದಲೋ ಕರಿಯನ ಆ ತೇಜೋವಿಹೀನವಾದ ದೃಷ್ಟಿ ಧಣಿಯರತ್ತ ಹರಿಯಿತು. ರಾಯರೂ ನೋಡಿದರು. ನಾಲ್ಕು ಕ್ಷಣ ನಾಲ್ಕು ಕಣ್ಣುಗಳೂ ಒಂದಾಗಿದ್ದುವು ಇಬ್ಬರ ನಾಲಗೆಯೂ ತಿರುಗಲಿಲ್ಲವಾದುದರಿಂದ ನಯನಗಳೇ ಮಾತಾಡಿಕೊಂಡುವು ಕರಿಯ ನನ್ನ ಸಾಲವನ್ನು ತೀರಿಸಲು ಇನ್ನೂ ಬದುಕಿರುವುದು ಅಸಾಧ್ಯವೆಂದು ಹೇಳಿರಬಹುದು; ಮುಂದಿನ ಜನ್ಮದಲ್ಲಾದರೂ ಅದನ್ನು ಸಲ್ಲಿಸುವ ವಾಗ್ದಾನ ಮಾಡಿರಬಹುದು. ಆಭಾಸವನ್ನು ಕಂಡುಕೊಂಡ ರಾಯರು ಆತನ ಕಣ್ಣುಗಳನ್ನು ಒರಸಿ, 'ಕರಿಯಾ, ನಿನ್ನ ಸಾಲ ಅದೆಂದೋ ಸಂದಾಯವಾಗಿದೆ. ನಿನ್ನದಾಗಿ ನಿನ್ನ ಹತ್ತು ವರ್ಷದ ದುಡಿಮೆ ನನ್ನ ಬಳಿಯಿದೆ. ಅದರ ಸಹಾಯದಿಂದ ನಿನ್ನ ಸಂಸಾರ ನಿಶ್ಚಿಂತೆಯಿಂದ ಬಾಳುವುದು. ನೀನು ಯಾವ ಚಿಂತೆಯನ್ನೂ ಕಟ್ಟಿಕೊಳ್ಳದೆ ಸಂತೋಷದಿಂದ ಪರಮಾತ್ಮ ಸನ್ನಿಧಾನವನ್ನು ಸೇರು' ಎಂದು ಒತ್ತಿ ಬರುವ ಕಂಠದಿಂದ ಉದ್ಗರಿಸಿದರು.

ಕರಿಯನ ಆ ಮೃತ್ಯು ಸಮಾನವಾದ ಮುಖದಲ್ಲಿ ತೃಪ್ತಿಯ ಸೆಲೆಯೊಂದು ಮಿಂಚಿ ಮಾಯವಾಯಿತು, ಆ ಮುಖದಲ್ಲಿ ಮತ್ತೆ ಚೇತನ ಮೂಡಲಿಲ್ಲ. ರಾಯರು ಅಲ್ಲಿಯೇ ಚಾಪೆಯಲ್ಲೇ ಕುಳಿತು ಉಳಿದವರೊಡನೆ ಕೂಡಿ ಕಣ್ಣೀರು ಮಿಡಿಯುತಿದ್ದರು.

ಚಂದಾದಾರರು

ತಮ್ಮ ಚಂದಾ ಹಣವನ್ನು 'ಸಿಂಡಿಕೇಟ್' ಬ್ಯಾಂಕಿನ ಯಾವನೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವ ತರದ ಖರ್ಚೂ, ಇಲ್ಲದೆ ಪಾವತಿ ಮಾಡಬಹುದಾಗಿದೆ. ಏಜಂಟರುಗಳಿ ಜಾಹೀರಾತುದಾರರುಗಳಿ ಕೂಡ ಇದೇ ರೀತಿ ಹಣ ಪಾವತಿ ಮಾಡಬಹುದು.

ಮೆನೇಜರ್, ನವಯುಗ, ಉಡುಪಿ

ರೋಗಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ



ಕುಮಾರಿ ಬಿಳ್ಳಿಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & CO. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

NAVAYUGA' WEEKLY is in the list of periodicals and Newspapers approved for use in Secondarys School as per proceedings Roc· No 466 N/50 date 2-12-1950 of the Director of public Instruction Madras·

(೧೦ನೇ ಪುಟದಿಂದ)

ಸುಮ್ಮನೆ ಮಗು ಅತ್ತರೆ, ತಾಳ್ಮೆಯಿಂದ ಅದು ಅಳುವ ಕಾರಣ ಕಂಡು ಹಿಡಿದು ಸರಿಮಾಡಬೇಕು. ಇದೆಲ್ಲಾ ತಾಯಿಗೆ ಸ್ವಾಭಾವಿಕವಾಗಿರುವ ಸಹನೆಯಾಗಿದೆ. ನಾವು ಹೆಚ್ಚು ಹೇಳುವುದು ಬೇಡ. ಒಟ್ಟಾರೆ ನಿದ್ರೆ ಮಕ್ಕಳಿಗೆ ತಾನಾಗಿಯೇ ಬರುತ್ತದೆ. ನಾವಾಗಿ ಕೆಡಿಸುವ ಗೊಡವೆಗೆ ಮಾತ್ರ ಹೋಗಬಾರದು.

೦೦ ೦೦ ೦೦

ಮಾತೃ ಭಕ್ತಿ

ಇದುವರೆಗೆ ದೊಡ್ಡವರಿಗಾಗಿ ಮಕ್ಕಳ ವಿಷಯವನ್ನು ಸ್ವಲ್ಪ ಹೇಳಿದ್ದಾಯಿತು. ಇನ್ನು ಮಕ್ಕಳಿಗೆ ಮಾತ್ರವೇ ಹೇಳತಕ್ಕ ಚಿಕ್ಕ ಮೂರು ಮಾತುಗಳುಂಟು. ಇದು ಚಿಕ್ಕದಾದರೂ ಬಲು ಮುಖ್ಯ.

ದೊಡ್ಡವರಿಗಿರುವ ಮತ, ಆಚಾರ, ಧರ್ಮ, ನಿಷ್ಠೆಮೊದಲಾದ ಅನೇಕ ವಿಧಿನಿಯಮ ಗಳಂತೆ ಮಕ್ಕಳಿಗೂ ಕೆಲವು ವಿಧಿಗಳಿವೆ. ಇವುಗಳಲ್ಲಿ ತಂದೆತಾಯಿಗಳ ಸೇವೆ, ಗುರು ಭಕ್ತಿ ಇವೆರಡರಲ್ಲಿ ಉಳಿದ ಎಲ್ಲವೂ ತುಂಬಿವೆ.

ತಂದೆ ತಾಯಿಗಳ ಸೇವೆಯಲ್ಲಿ ಮಾತೃಭಕ್ತಿಗೆ ಮಿಂಚಿದ್ದು ಯಾವುದೂ ಇಲ್ಲ. ಮಗುವನ್ನು ಬೆಳೆಸಲಿಕ್ಕೆ ತಾಯಿ ಪಡುವ ಕಷ್ಟಕ್ಕೆ ಒಂದು ಅಳತೆಯಿದೆಯೆ? ತಾಯಿಯ ಅಂತಃಕರಣ, ಅನುರಾಗಗಳಿಗೆ ಯಾವುದು ತಾನೆ ಈಡಾದೀತು.

ಮಾತೃ ಸ್ಥಾನಕ್ಕಿಂತ ದೊಡ್ಡದೂ ಪವಿತ್ರವೂ ಆದ ಸ್ಥಾನ ಬೇರೊಂದಿಲ್ಲ. ತಾಯಿ ತನ್ನ ಮಗುವಿನ ಸುಖಕ್ಕಾಗಿ ತನ್ನ ಸಮಸ್ತ ಸುಖವನ್ನೂ ತ್ಯಾಗ ಮಾಡುತ್ತಾಳೆ. ಮಕ್ಕಳ ಕ್ಷೇಮಕ್ಕಿಂತ ಹೆಚ್ಚು ಆನಂದ ಕೊಡುವ ವಿಷಯ ಅವಳಿಗೆ ಬೇರೊಂದಿಲ್ಲ. ಮಕ್ಕಳ ಸುಖವೇ ತಾಯಿಯ ಸುಖ, ಮಕ್ಕಳ ವಿಚಾರವೇ ಅವಳ ವಿಚಾರ. ಹೀಗೆ ತಾಯಿ ಹಗಲೂ ರಾತ್ರಿಯೂ ಮಕ್ಕಳನ್ನು ಕಾಪಾಡುವುದರಲ್ಲೇ ತನ್ನ ಪೂರ್ಣಲಕ್ಷ್ಯ ಹರಿಸಿರುತ್ತಾಳೆ. ಅವಳ ಪ್ರೇಮಕ್ಕೆ ಅಳತೆಯೇ ಇಲ್ಲ. ಆದುದರಿಂದ ತಾಯಿಯ ಋಣವನ್ನು ತೀರಿಸಲು ಯಾರಿಗೂ ಸಾಧ್ಯವಿಲ್ಲವೆನ್ನುತ್ತಾರೆ ಹಿರಿಯರು.

ಆದ್ದರಿಂದ ಮಕ್ಕಳು ದೊಡ್ಡವರಾಗುತ್ತಾ ಬಂದ ಹಾಗೆ ತಾಯಿಯ ಮೇಲೆ ಕೃತಜ್ಞತೆಯುಳ್ಳವರಾಗಬೇಕು. ತಾಯಿಯ ಆಜ್ಞೆಯನ್ನು ರಾಜಾಜ್ಞೆಯಂತೆ ಶಿರಸಾವಹಿಸಬೇಕು. ತಾಯಿಯೂ ಯಾವಾಗಲೂ ಮಕ್ಕಳ ಕ್ಷೇಮವನ್ನೆ ಚಿಂತಿಸುತ್ತಿರುತ್ತಾಳೆ. ತಾನು ಕಷ್ಟದಲ್ಲಿದ್ದರೂ ಚಿಂತಿಲ್ಲ, 'ತನ್ನ ಮಕ್ಕಳು ಸುಖವಾಗಿರಬೇಕೆಂಬುದೇ ತಾಯಿಯ ಆಶೆ.

ಮಕ್ಕಳ ಮುಖ್ಯ ವಿಧಿಗಳಲ್ಲಿ ಮಾತೃಭಕ್ತಿಗೇ ಪ್ರಾಮುಖ್ಯ ಸ್ಥಾನ.

ಪಿತೃಭಕ್ತಿ

ಮಾತೃಭಕ್ತಿಯ ನಂತರ ಪಿತೃಭಕ್ತಿ. ಇದು ಭಯ ಗೌರವಗಳೊಂದಿಗೆ ಕೂಡಿದ ವಿಶ್ವಾಸವಾಗಿರಬೇಕು. ಮಕ್ಕಳನ್ನೆಲ್ಲಾ ಪೋಷಣೆಮಾಡಿ ರಕ್ಷಿಸುವ ಭಾರವನ್ನು ಹೊತ್ತವನು ತಂದೆ. ತಂದೆ ಮಕ್ಕಳಿಗೆ ಹೇಳುವ ಪ್ರತಿಮಾತಿನಲ್ಲಿಯೂ ಪ್ರತಿ ಕೆಲಸದಲ್ಲಿಯೂ ಒಂದು ವಿಧವಾದ ಮಂತ್ರಬಲವಿರುತ್ತದೆ. ಮಕ್ಕಳ ಪೋಷಣೆಯ ವಿಷಯದಲ್ಲಿ ತಂದೆಗೆ ಬಹಳ ಶ್ರದ್ಧೆಯಿದೆ. "ನನ್ನ ಮಗ ನನ್ನನ್ನೂ ಮೀರಿಸಿದವನಾಗಿರಬೇಕು. ನನ್ನ ಕುಟುಂಬದ ಗೌರವವನ್ನು ಉಳಿಸಬೇಕು.' ಎಂದು ಭಾವಿಸುತ್ತಾ ಅದಕ್ಕಾಗಿ ತಾಪತ್ರಯಪಡುತ್ತಾನೆ ತಂದೆ.

ತಂದೆಯ ಸತ್ಯ ಸಂಕಲ್ಪಗಳು ಮಕ್ಕಳಿಗೆ 'ಶ್ರೀರಾಮರಕ್ಷೆ'ಯಂತೆ. ತಂದೆಯ ಪ್ರೋತ್ಸಾಹ ಆಕಾಂಕ್ಷೆಗಳನ್ನು ಸರಿಯಾಗಿ [illegible] ಉಂಡ ಮಗ ತನಗೆ ತಿಳಿಯದಂತೆಯೇ ದೊಡ್ಡವನಾಗಬಲ್ಲನು.

ನಿರಾಧಾರವಾಗಿದ್ದ ಕಾಲದಿಂದಲೂ, ತಂದೆಯ ಪ್ರೇಮಾನುರಾಗಗಳಿಂದ, ಆತನ ಜಾಗರೂಕತೆಗಳಿಂದ, ಅತನ ದೂರಾಲೋಚನೆಗಳಿಂದ ಮಕ್ಕಳು ಎಂತೆಂತವರೋ ಆಗುತ್ತಾರೆ. ಮಕ್ಕಳನ್ನು ಕಣ್ಣಿನ ರೆಪ್ಪೆಯಹಾಗೆ ಕಾಪಾಡುವ ತಂದೆಯ ಮೇಲೆ ಮಕ್ಕಳಿಗೆ ತುಂಬಾ ಭಕ್ತಿ ಗೌರವವಿರಬೇಕಾದ್ದು ನ್ಯಾಯವಾಗಿದೆ. ತಂದೆಯ ಮನಸ್ಸಿಗೆ ಸಂತೋಷವಾಗುವ ಹಾಗೆ ಮಕ್ಕಳು ಬೆಳೆಯಬೇಕು. ಆಗ 'ಪಿತೃಋಣ' ಸ್ವಲ್ಪವಾದರೂ ಪರಿಹಾರವಾದೀತು. ಎಷ್ಟು ಕಷ್ಟಪಟ್ಟಾದರೂ ತಂದೆಯ ಕೋರಿಕೆಯನ್ನು ಈಡೇರಿಸಲು ಪ್ರಯತ್ನಪಡಬೇಕು. ಅನೇಕ ಸುಗುಣಗಳಲ್ಲಿ 'ಪಿತೃಭಕ್ತಿ' ಯೊಂದು ಗುಣರತ್ನ.

ಗುರುಭಕ್ತಿ

ಮೂರನೆಯದಾಗಿ 'ಗುರು ಭಕ್ತಿ'. ತಂದೆ ದೇಹ—ಅವಯವಗಳನ್ನು ಕೊಟ್ಟವನಾದರೆ ಗುರು ಅದಕ್ಕೆ ಜ್ಞಾನಭಿಕ್ಷೆಯನ್ನು ಹಾಕುತ್ತಾನೆ. ತಿಳುವಳಿಕೆಯ ಬೆಳಕನ್ನು ಬೆಳಗಿಸುತ್ತಾನೆ. ನಿಜಕ್ಕೂ ಮಕ್ಕಳು ಬೆಳೆದು ಬಲಿತ ಮೇಲೆ ಜೀವನ ನಡೆಸಲಿಕ್ಕೆ ಅಗತ್ಯವಾದ ಸಾಮರ್ಥ್ಯವೆಲ್ಲಾ ಗುರುವಿನಿಂದಲೇ ಬರುತ್ತದೆ. ಆದುದರಿಂದ ಗುರುವಿಗೆ ಸಮಸ್ತ ಉಪಚಾರಗಳನ್ನು ಮಾಡಿ ಗೌರವಿಸಬೇಕಾದ್ದು ಮಕ್ಕಳ ಮುಖ್ಯ ಧರ್ಮ.

ಒಳ್ಳೆಯ ಗುರು ತನ್ನ ಶಿಷ್ಯರನ್ನು ಹೆತ್ತ ಮಕ್ಕಳ ಹಾಗೆಯೇ ಕಾಪಾಡುತ್ತಾನೆ. ವಿದ್ಯೆಗಳಲ್ಲಿರುವ ಮರ್ಮ ರಹಸ್ಯಗಳನ್ನೆಲ್ಲ ಮರೆಮಾಡದೆ ತಿಳಿಸುತ್ತಾನೆ. ಗುರು ಏನೇ ಪ್ರತಿಫಲಾಪೇಕ್ಷೆಯಿಂದ ವಿದ್ಯೆ ಕಲಿಸುವನಾದರೂ ಅದರ ಪರಿಣಾಮವು ಮಹತ್ವವಾಗಿರುತ್ತದೆ. ಆದುದರಿಂದ ಗುರುವನ್ನು ನಿಂದಿಸುವುದು ಮಕ್ಕಳಿಗೆ ಏನೇನೂ ಭೂಷಣವಲ್ಲ. ಮೇಲಾಗಿ, ಕೃತಘ್ನತೆ.

ಗುರುಶಿಷ್ಯರ ಸಂಬಂಧವು ಬಹಳ ಪವಿತ್ರವಾದುದು. ಪೂರ್ವಕಾಲದಲ್ಲಿ ಗುರುಗಳು ಆಶ್ರಮಗಳನ್ನು ಏರ್ಪಡಿಸಿಕೊಂಡು, ಸಾವಿರಾರು ವಿದ್ಯಾರ್ಥಿಗಳನ್ನು ಎಲ್ಲಾ ವಿದ್ಯೆಗಳಲ್ಲಿಯೂ ಪ್ರವೀಣರನ್ನಾಗಿ ಮಾಡಿ ಕಳುಹಿಸುತ್ತಿದ್ದರು ಅಂತಹ ಆಶ್ರಮಗಳಿಗೆ 'ಗುರುಕುಲ'ಗಳೆಂದು ಹೆಸರು. ಗುರುಕುಲಗಳಲ್ಲಿ ಬಹಳ ಕಟ್ಟುದಿಟ್ಟಗಳಿದ್ದುವು. ಗುರುವಿನ ಆಜ್ಞೆಯಿಲ್ಲದೆ ಶಿಷ್ಯನು ಉಸಿರು ಕೂಡ ಬಿಡಬಾರದೆಂಬಷ್ಟು ಕಠಿಣ ನಿಯಮಗಳು ಆ ಕಾಲದಲ್ಲಿದ್ದುವು. ಶಿಷ್ಯರು ಪ್ರವೀಣರಾದ ಮೇಲೆ 'ನಿನ್ನ ವಿದ್ಯೆ ಮುಗಿಯಿತು, ಇನ್ನು ನೀನು ಹೋಗಬಹುದು' ಎಂದು ಆಶೀರ್ವದಿಸಿ ಕಳುಹಿಸುತ್ತಿದ್ದರು. ಗುರುವಿನ ಆಶೀರ್ವಾದ ಪಡೆದ ಶಿಷ್ಯ ಇಹಪರ ಸುಖಗಳೆರಡನ್ನೂ ಸಂಪಾದಿಸಿಕೊಳ್ಳುತ್ತಾನೆ.

ಈ ಪೂರ್ವಕಾಲ ಪದ್ಧತಿ, ಕಾಲಕ್ಕೆ ತಕ್ಕ ಹಾಗೆ ಈಗ ಲೋಪವಾಗಿದ್ದರೂ, ಅದರ ಬುನಾದಿಯಂತಿರುವ 'ಗುರುಭಕ್ತಿ' ಮಾತ್ರ ಲೋಪವಾಗಬಾರದು. ಇದು ಅಮರವಾಗಿರಬೇಕು.

(ಮುಗಿದುದು)



ಬ್ರುಸ್ಸೆಲ್ಸ್‌ನಲ್ಲಿ ನಡೆದ ಜಾಗತಿಕ ಪ್ರದರ್ಶನದಲ್ಲಿ ಬ್ರಿಟನ್ ಭಾಗವಹಿಸಿತು.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ನ ಮಾಡಬೇಕೆಂಬುದಾಗಿ ಕೇಳಿಕೊಂಡಿದ್ದು ಅವರ ಕೇಳಿಕೆಯನ್ನು ಪ್ರಧಾನಿಯವರು ಸ್ವೀಕರಿಸಿದ್ದಾರೆ. ಪ್ರಾಯಶಃ ಸಪ್ಟಂಬರದ ಕೊನೆಯವಾರದಲ್ಲಿ ಅವರು ನಾಗಾಲೇಂಡಿನ ರಾಜಧಾನಿ ಕೋಹಿಮಾ ಮತ್ತು ಇತರೆಡೆ ಭೆಟ್ಟಿ ನೀಡಲಿರುವರು.

ನಾಗಾ ಜನರು ಕ್ರೂರ ಹಿಂಸಕ ಮನೋವೃತ್ತಿಯನ್ನು ಪ್ರದರ್ಶಿಸಿ ಆ ಪ್ರದೇಶದಲ್ಲಿ ವಿವಂಚನೀಯ ಕೀಟಲೆಗಳನ್ನು ಎಬ್ಬಿಸುತ್ತಿದ್ದುದನ್ನು ಗಮನಿಸಿ, ಅವರ ಈ ವಿಧ್ವಂಸಕ ಕ್ರಿಯೆಯನ್ನು ತಡೆಯಲು ಅವರ ಕೇಳಿಕೆಯಂತೆಯೇ ಪ್ರತ್ಯೇಕ 'ನಾಗಾ ರಾಜ್ಯ'ವೊಂದನ್ನು ಮೊದಲೇ ನಿರ್ಮಿಸಿದರೂ ಅದೂ ಅವರಿಗೆ ಪಥ್ಯವಾದಂತೆ ತೋರಲಿಲ್ಲ. ಕಾರಣ ವಿದ್ರೋಹಿಗಳ ಪುಂಡಾಟಿಕೆಯು ನಿಲ್ಲಲಿಲ್ಲ. ಭಾರತ ಒಕ್ಕೂಟದಿಂದ ಸಿಡಿದು ಸ್ವತಂತ್ರ ನಾಗಾ ರಾಜ್ಯವನ್ನು ಸಂಸ್ಥಾಪಿಸುವ ಹುಚ್ಚು ಕಲ್ಪನೆಯನ್ನೂ ಕೆಲವು ವಿದ್ರೋಹಿಗಳು ಮಾಡಿದ್ದರು; ತಮ್ಮ ವಿಧ್ವಂಸಕ ಕಾರ್ಯಕ್ರಮಗಳನ್ನು ಮುಂದುವರಿಸಿದರು. ಇದನ್ನು ಸೌಹಾರ್ದಮಯ ವಾತಾವರಣದಲ್ಲಿಯೇ ಸಮಾಧಾನ ಪಡಿಸುವ ಇರಾದೆಯಿಂದ ಭಾರತ ಸರಕಾರವೀಗ ಅವರ ಬೇಡಿಕೆಯನ್ನು ಮನ್ನಿಸುವ ಮನಮಾಡಿರುತ್ತದೆ. ಈ ನೂತನ ವ್ಯವಸ್ಥೆಯಿಂದಾದರೂ ನಾಗಾ ಜನರು ತೃಪ್ತರಾಗಿ ತಮ್ಮ ದುಷ್ಕೃತ್ಯಗಳನ್ನು ಕೊನೆಗೊಳಿಸುವರೆಂದು ಬಯಸಿದರೆ ಅದು ಅನುಚಿತವೆನಿಸಲಾರದು. ಸಾಹಸಿಗಳಾದ ನಾಗರು ಮುಂದೆ ತೋರಿಸುವ ವರ್ತನೆ ಯಾವುದೆಂದು ತಿಳಿಯಬೇಕಷ್ಟೆ.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇನ್ನೆರಡು ಹೊಸ ಶಾಖೆಗಳು

ಮುಲುಂದ್
(ಮಹಾರಾಷ್ಟ್ರ ರಾಜ್ಯದಲ್ಲಿ ೧೧ನೇಯ ಶಾಖೆ)
೫೮೨, ಸುಭಾಸ್ ರೋಡ್
ಮುಲುಂದ್ ವೆಸ್ಟ್
ಬೊಂಬಾಯಿ—೮೯.

ಸುರತ್ಕಲ್
(ಮೈಸೂರು ರಾಜ್ಯದಲ್ಲಿ ೮೩ನೇಯ ಶಾಖೆ)
ಸುರತ್ಕಲ್ ಪೋಸ್ಟ್ ಆಫೀಸ್
ದಕ್ಷಿಣ ಕನ್ನಡ
ಮೈಸೂರು ರಾಜ್ಯ

ತಾ. ೧೧, ಅಗೋಸ್ತು ೧೯೬೦
(ಶಕ ೧೮೮೨, ಶ್ರಾವಣ, ೧೮ಟ್ರ) ರಂದು

ತೆರೆಯಲ್ಪಡುವುವು.

ಅಂದಿನಿಂದ ಸಿಂಡಿಕೇಟ್ ಬೇಂಕಿನ ೧೩೯ ಶಾಖೆಗಳ ವಿಸ್ತೃತ ಸೇವೆಯ ಸೌಲಭ್ಯಗಳನ್ನು ಅರ್ಪಿಸಲು ಹರ್ಷಿತರಾಗಿರುವೆವು.

ಸಿಂಡಿಕೇಟ್ ಬೇಂಕ್

ಟಿ. ಎ. ಪೈ
ಜನರಲ್ ಮೆನೇಜರ್.

ಡಾ. ಟಿ. ಯಂ. ಎ. ಪೈ
ಮೆನೇಜಿಂಗ್ ಡೈರೆಕ್ಟರ್.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಮುಕುಂದನಿವಾಸ, ಉಡುಪಿ
ಸ್ಥಾಪನೆ: ೧೯೨೫.

Edited, Printed & Published by K. H. Shetty, at the Navayuga Press, Udipi, S. India.

NAVAYUGA

INDEPENDENCE DAY SPECIAL 1960

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೬೦

ಪುಟ: ೩೨. ಬೆಲೆ: ೨೫ ನಯೇಪೈಸೆ.



“ ”

—ಸರ್ವಜ್ಞ.

“ನಮ್ಮ ಇಷ್ಟಾನುಕೂಲತೆಯ
ಯೋಚನೆಯ ಜೊತೆಗೆ ನಮ್ಮ ಕರ್ತವ್ಯದ
ಸ್ಮರಣೆ ಸೇರಿರುವುದೇ ಸ್ವಾತಂತ್ರ್ಯ.
ಕರ್ತವ್ಯಭಾಗ ಮರೆಯದಿರುವುದೇ ಸ್ವಾತಂತ್ರ್ಯಕ್ಕೆ
ಅವಶ್ಯವಾದ ರಕ್ಷಣೆ” ಅನ್ನುವ

ಕರ್ನಾಟಕದ ಮೇಧಾವಿ ಡಿ. ವಿ. ಜಿ. ಅವರೊಡನೆ
ನಾವೂ ದನಿಗೂಡುವೆವು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ಶಾಖೆಗಳು:

ಮಂಗಳೂರು—ಹಂಪನಕಟ್ಟೆ.	ಬೈಂದೂರು.	ಪಲಿಮಾರು.
ಮಂಗಳೂರು – ರಥಬೀದಿ.	ಗಂಗೊಳ್ಳಿ.	ಪಾಣೆಮಂಗಳೂರು
ಮಂಗಳೂರು — ಬಂದರ	ಗುರುಪುರ	ಪೆರ್ಡೂರು.
ಬ್ರಹ್ಮಾವರ	ಹೆಬ್ರಿ	ಪುತ್ತೂರು.
ಕುಂದಾಪುರ	ಕಡೆಕಾರ್	ಸಾಲಿಗ್ರಾಮ
ಕಾರ್ಕಳ.	ಕಾಪು	ಶಂಕರನಾರಾಯಣ
ಉಡುಪಿ—ಲೋಕಲ್ ಆಫೀಸು	ಕೆಮ್ಮಣ್ಣು	ಬಂಟ್ವಾಳ.
ಉಡುಪಿ—ರಥ ಬೀದಿ.	ಕಿನ್ನಿಗೋಳಿ.	ಪಡುಬಿದ್ರಿ
ಜೈಲೂರು.	ಮಲ್ಪೆ	ಸುಳ್ಯ.
ಬಾರ್ಕೂರು	ಮಣಿಪಾಲ	ಸುರತ್ಕಲ್.
ಬಸ್ರೂರು	ಮೂಡುಬಿದಿರೆ.	ಉಪ್ಪಿನಂಗಡಿ.
ಬೆಳ್ತಂಗಡಿ.	ಮೂಲ್ಕಿ	ವಿಟ್ಲ.
	ನಿಟ್ಟೆ	

ಪ್ರಧಾನ ಕಾರ್ಯಾಲಯ: **ಉಡುಪಿ**, ಮೈಸೂರು ರಾಜ್ಯ.

ಶಾಖೆಗಳು: ೧೪.

ಸ್ಥಾಪನೆ: ೧೯೨೫.

ಭುವನೇಂದ್ರ ಪ್ರೊಡಕ್ಟ್ಸ್ ಪ್ರೈವೇಟ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

Telegrams: "BUVANENDRA". Telephone No. 86.

ಹೆಡ್ ಆಫೀಸು ಮತ್ತು ಕಾರಖಾನೆ: ಕಟಪಾಡಿ, ದ.ಕನ್ನಡ.

ಡಿಪೋ: (1) ಉಡುಪಿ, ದ. ಕನ್ನಡ. (2) ಮರಾಠಾಗಲ್ಲಿ, ಹುಬ್ಬಳ್ಳಿ.

ಸರ್ವರಿಗೂ ಸ್ವಾತಂತ್ರ್ಯ ದಿನದ ಶುಭಾಶಯಗಳು

ತಾರುಣ್ಯದಲ್ಲಿಯೇ ನಿಮ್ಮ ಶಕ್ತಿಯನ್ನು ವರ್ಧಿಸಿ ಬಲಯುತರಾಗಿರಿ.

"ಭುವನೇಂದ್ರ" ಚ್ಯವನಪ್ರಾಶ

ನಿಮ್ಮನ್ನು ಚೇತನಭರಿತರನ್ನಾಗಿ ಮತ್ತು ಧೃಡಕಾಯರನ್ನಾಗಿ ಮಾಡುವುದು.

ಆದರ್ಶಪ್ರಾಯವಾದ ಮತ್ತು ಶಕ್ತಿವರ್ಧಕ ಟಾನಿಕ್.

ಮೈಸೂರು ಸಂಸ್ಥಾನದಲ್ಲಿ ಅತಿ ಪುರಾತನ ಮತ್ತು ಅತಿ ದೊಡ್ಡ ಆಯುರ್ವೇದಿಕ್ ಫಾರ್ಮಸಿ.

Bhuvanendra Products

Private Limited,

KATAPADI, S. Kanara.

Depot: (1) Udipi, S Kanara. (2) Maharata Galli, Hubli.

THE MYSORE SUGAR COMPANY, LIMITED

HEAD OFFICE:
Shree Jayachamaraja Wadiyar Road,
BANGALORE-2.

FACTORY AND DISTILLERY:
MANDYA (Mysore State)

MANUFACTURERS OF

PURE WHITE CRYSTAL SUGAR

Other products include:
Delicious Golden Syrup and a wide range of Alcohols— Absolute, Rectified, Denatured and Potable

---

15th AUGUST 1960

INDEPENDENCE DAY

Greetings and Good Wishes

To All Our Friends.

We are proud of the tremendous progress made by our country During the Thirteen Years of Independence And on this Happy Occasion We pledge anew for more Efficient Service

Chandarana Brothers,

(Established 1935)

MANGALORE.

ಮಕ್ಕಳ ಮಮತೆಯು

"ಬಿಕ್ಕೊ" ರವರ ಗ್ಲುಕೋಸ್ ಕೂಡಿದ

ಪೆಪ್ಪರ್ ಮಿಠಾಯಿಗಳು—ರುಚಿಕರ

ಸೇವನೆಗೆ ಪ್ರಸಿದ್ಧಿಪಟ್ಟಿವೆ.

"ಬಿಕ್ಕೊ" ರವರ

ಹಣ್ಣಿನ ಶರಬತ್ತುಗಳು

ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.

ತಯಾರಕರು:

ಭಾರತ್ ಇಂಡಸ್ಟ್ರಿಯಲ್ ಎಂಡ್ ಕ್ಯಾನಿಂಗ್ ಕಂಪೆನಿ ಲಿಮಿಟೆಡ್,

ಕಾಪು, ದ. ಕ.

THE MYSORE LAMP WORKS LTD. BANGALORE.12

Agents for Mysore State,
M/S. K. S. GOWDER & CO.
Subedar Chatram Road, BANGALORE-9.

ಭವ್ಯ ಶುದ್ಧ ಸೌರಭ

ಮೈಸೂರು ಗಂಧದ ಎಣ್ಣೆ ಜಗತ್ತಿನ ಅತ್ಯುತ್ತಮ ಗುಣದ
ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ
ಶುದ್ಧ ಮೂಲ ಶೀಷೆಗಳನ್ನು ಪಡೆಯುವ
ಭರವಸೆ ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,
ಮೈಸೂರು.

The Government Sandalwood Oil Factory,

MYSORE.

ತಮ್ಮ ಸರಕಾರವನ್ನಾಗಲೀ ರಾಜ್ಯವನ್ನಾಗಲೀ ಜನರು ತಮ್ಮ ಜೀವನಕ್ಕೆ ಅತ್ಯಗತ್ಯವೆನಿಸಿದ ವಸ್ತುಗಳಿಗಾಗಿ ಅವಲಂಬಿಸಿರುವವರೆಗೆ ಸ್ವತಂತ್ರರೂ ಪ್ರಗತಿಪರರೂ ಎಂದವರು ಭಾವಿಸಲ್ಪಡುವುದಿಲ್ಲ. ಏಕೆಂದರೆ, ಸ್ವಾವಲಂಬನೆಯೇ ಸ್ವಾತಂತ್ರ್ಯದ ಅಡಿಗಲ್ಲು.

ಮ| ಗಾಂಧೀಜಿ.

ನವ ಯುಗ

ಸಂಪುಟ ೩೯ ಸಂಚಿಕೆ ೪೯

Vol. 39 No. 49

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೬೦

ಸ್ವಾಭಿಪ್ರಾಯ ಪ್ರದರ್ಶನ ಹಾಗೂ ಜನಮತಕ್ಕೆ ಮನ್ನಣೆ— ಇವೇ ಧುರೀಣರ ಕೆಲಸವಲ್ಲ. ಜೀವಾಳದ ಪ್ರಶ್ನೆ ಉದ್ಭವಿಸಿದಾಗ ಮುಂದಾಳುಗಳು ತಮ್ಮ ಸದಸದ್ವಿವೇಕಕ್ಕೆ ಸರಿಹೊಂದದ ಸಾರ್ವಜನಿಕ ಮತವನ್ನು ಬದಿಗಿರಿಸಿ, ಅದನ್ನು ಲೆಕ್ಕಿಸದೆ ವರ್ತಿಸಬೇಕು.

ಮ| ಗಾಂಧೀಜಿ.

ತಾಯ್ನಾಡಿನ ಮೇಲ್ಮೆಗೆ ಹೋರಾಡುವ

ಆಗೋಸ್ತು ಹದಿನೈದು ಮರಳಿ ನಮ್ಮೆದುರು ಬಂದು ನಿಂತಿದೆ. ಪ್ರಜಾಶಕ್ತಿ ವಿಶ್ವದ ಬಹು ವಿಸ್ತಾರ ಮತ್ತು ಬಹುಜನ ಶಕ್ತಿಯ ಪ್ರತೀಕವಾದ ಭಾರತ ಪುನಃ ತನ್ನ ಸ್ವಾತಂತ್ರ್ಯದಿನವನ್ನು ಸುಸಂಭ್ರಮದಿಂದ ಆಚರಿಸುವುದರಲ್ಲಿ ತತ್ಪರವಾಗುವ ಸುದಿನ ಬಂದಿತು. ಅನೇಕಾನೇಕ ವೀರ ಪುರುಷ ಮತ್ತು ವೀರಾಂಗನೆಯರ ಧೈರ್ಯ ಸಾಹಸ ತ್ಯಾಗ ಬಲಿದಾನಗಳ ಫಲವಾಗಿ ಪಡೆದ ಸ್ವಾತಂತ್ರ್ಯದ ಶುಭ ದಿನವನ್ನು ಸ್ಮರಿಸಿ, ನಮ್ಮ ಸ್ವಾತಂತ್ರ್ಯದ ಸಿಹಿ ಕಹಿ ಅನುಭವಗಳನ್ನು ಮಾಡಿಕೊಳ್ಳುವ ಸದವಸರವೀಗ ಪುನಃ ಬಂದಿದೆ. ಗೂಡಿನಲ್ಲಿ ಸುಖವಾಗಿ ದಿನದೂಡುವ ರಾಜಶುಕವಾದರೂ ಸ್ವಚ್ಛಂದವಾಗಿ ಆಗಸದಲ್ಲಿ ಹಾರುವುದನ್ನೇ ಪ್ರೀತಿಸುವಂತೆ ದಾಸ್ಯತೆಯ ಪಾಪತ್ರಾಣಗಳನ್ನು ಹೊತ್ತುಕೊಂಡು ಬಂಗಾರವನ್ನು ತಿನ್ನುವುದಕ್ಕಿಂತ ಸ್ವತಂತ್ರರಾಗಿದ್ದು ಅಂಬಲಿ ಕುಡಿಯುವುದೇ ಶ್ರೇಯಸ್ಕರವೆಂಬ ದೃಢ ನಿರ್ಧಾರವನ್ನು ಮಾಡಿ ಅಂತಹ ಸ್ವಾತಂತ್ರ್ಯವನ್ನು ನಾವು ಪಡೆದ ಮಹಾಸುದಿನ ಆಗೋಸ್ತು ಹದಿನೈದು ನಮ್ಮ ಕಣ್ಮುಂದೆ ಮರಳಿ ಬಂದಿದೆ.

ಸ್ವಾತಂತ್ರ್ಯ ಪದದ ಅರ್ಥವನ್ನು ಸ್ವಚ್ಛಂದತೆಯೆಂದು ತಪ್ಪು ತಿಳಿದು, ತಮ್ಮ ಸ್ವಾತಂತ್ರ್ಯ ಹರಣವಾಯಿತು ಎಂದು ಕೂಗಾಡುವವರೂ ಇಂದು ನಮ್ಮಲ್ಲಿದ್ದಾರೆ. ಸ್ವತಂತ್ರ ಭಾರತದಲ್ಲಿ ಜನತೆಯ ಇಚ್ಛಾನುಸಾರ ಪ್ರಶಾಸನ ನಡೆಯುದೆಂದು, ಸರಕಾರವು ಜನತೆಯ ದೈನಂದಿನ ಜೀವನದಲ್ಲಿ ಹಸ್ತಕ್ಷೇಪ ನಡೆಸುತ್ತಿರುವಾಗ, ಸ್ವಾತಂತ್ರ್ಯವೆಲ್ಲಿ ಬಂತು ಎಂದೂ ಸವಾಲು ಹಾಕುವವರೂ ಇಲ್ಲದಿಲ್ಲ. ವಿಭಿನ್ನ ವಿಚಾರ ಧಾರೆಯು ಪ್ರಜಾಸತ್ತೆಯಲ್ಲಿ ಸ್ವಾಗತಾರ್ಹವಾದರೂ 'ಸ್ವಾತಂತ್ರ್ಯ' ಪದದ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳದಿರುವುದನ್ನು ಕಂಡು ನಾವು ವಿಚಿಂತಿಸಬೇಕಾಗಿದೆ. ಕಾಲುದಾರಿಯಿರುತ್ತ ಮಧ್ಯ ಮಾರ್ಗದಲ್ಲಿ ನಡೆಯುವ ಸ್ವಾತಂತ್ರ್ಯ ನಮಗಿರುವುದಾದರೆ, ಟ್ಯಾಕ್ಸಿ ಡ್ರೈವರನಿಗೆ ನಮ್ಮ ಮೇಲೆಯೇ ಟ್ಯಾಕ್ಸಿ ಓಡಿಸಿಕೊಂಡು ಹೋಗುವ ಸ್ವಾತಂತ್ರ್ಯವೂ ಇರುವುದೆಂಬುದನ್ನು ಅಲ್ಲಗಳೆಯುವಂತಿಲ್ಲ. ಹೀಗೆಯೇ ಪ್ರತಿಯೊಬ್ಬರೂ ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವಚ್ಛಂದತೆಯನ್ನು ಪ್ರದರ್ಶಿಸ ಹೊರಟರೆಂದರೆ, ಅದಕ್ಕೆ ಸ್ವಾತಂತ್ರ್ಯವೆನ್ನುವುದಿಲ್ಲ; ಅದರ ಪರಿಣಾಮ ಅರಾಜಕತೆಯಲ್ಲಿ ಕೊನೆಗೊಳ್ಳುವುದು. ಅರಾಜಕತೆಯು ನೆಲೆಯೂರಿದ ರಾಜ್ಯದಲ್ಲಿ ಜನತೆ ಸ್ವಯಂ ನಿರ್ನಾಮವಾಗುವುದು. ಆದುದರಿಂದ ನಮಗಿರುವ ಸ್ವಾತಂತ್ರ್ಯವನ್ನು ಉಚಿತ ರೀತಿಯಲ್ಲಿ ಬಳಸಿಕೊಂಡು, ಆದರಿಂದ ಪರರ ಸ್ವಾತಂತ್ರ್ಯಕ್ಕೆ ಯಾವುದೇ ಪ್ರಕಾರದ ವಿಘ್ನವಿಡ್ಡಾರಗಳು ಬಾರದಂತೆ ಎಚ್ಚರಿಕೆ ವಹಿಸುವುದು ಸ್ವತಂತ್ರ ದೇಶದ ನಾಗರಿಕರೆಲ್ಲರ ಆದ್ಯ ಕರ್ತವ್ಯವಾಗಿದೆ. ಇದನ್ನು ನಾವಿಂದು ಮತ್ತೊಮ್ಮೆ ಸ್ಮರಿಸಿಕೊಳ್ಳಬೇಕಾಗಿದೆ.

ಭಾರತವು ಸ್ವತಂತ್ರವಾಗಿ ಹದಿಮೂರು ವರ್ಷಗಳು ಸಂದವು. ಈ ವರ್ಷತ್ರಯೋದಶಗಳಲ್ಲಿ ಭಾರತವು ಗಣನೀಯ ಪ್ರಗತಿಯನ್ನು ಪಡೆದಿದೆ. ರಾಷ್ಟ್ರೀಯ ಆದಾಯ ಮಾತ್ರವಲ್ಲ, ವ್ಯಕ್ತಿಯ ಆದಾಯದ ಪ್ರಮಾಣವೂ ಏರಿದೆ. ಜನತೆಗೆ ಒಡನೆ ವಸ್ತುಗಳ ಬೆಲೆಯೂ ಹೆಚ್ಚಿದೆಯೆಂಬುದನ್ನು ಅಲ್ಲಗಳೆಯುವಂತಿಲ್ಲವಾದರೂ ಆರ್ಥಿಕ ಪುನಾರಚನೆಯತ್ತ ತೀವ್ರವಾಗಿ ಧಾವಿಸುವ ಒಂದು ರಾಷ್ಟ್ರದಲ್ಲಿ ಇದು ವಾಸ್ತವಿಕವೇ ಆಗಿದೆ. ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ, ಪಶ್ಚಿಮಸಮುದ್ರದಿಂದ ಪೂರ್ವಸಮುದ್ರದವರೆಗೆ ಅಖಂಡವಾಗಿರುವ ಭಾರತವು ದಿನದಿಂದ ದಿನಕ್ಕೆ ಸಮೃದ್ಧಿ ಪಥದಲ್ಲಿ ಧಾವಿಸುತ್ತಿರುವುದು ನಮಗಿಂದು ದೃಗ್ಗೋಚರವಾಗುತ್ತಿದೆ. ಯಂತ್ರೋಪಕರಣಗಳನ್ನು ತಯಾರಿಸುವ ಬಹುದೊಡ್ಡ ಕಾರಖಾನೆಗಳಿಂದ ಆರಂಭವಾಗಿ ದೇಶದ ಪ್ರತಿಯೊಂದು ಆವಶ್ಯಕತೆಯನ್ನೂ ಪೂರಯ್ಸಿಕೊಳ್ಳುವ ಸದವಸರವಿದೀಗ ನಮ್ಮಲ್ಲಿ ಕಾಣಿಸಿಕೊಳ್ಳತೊಡಗಿದೆ. ಈ ಬಗ್ಗೆ ಹಲವಾರು ವಿದೇಶೀ ಹಿತೈಷಿಗಳು ನಮಗೆ ಹೃತ್ಪೂರ್ವಕವಾಗಿ ನೆರವಾಗಿದ್ದಾರೆ; ಅವರೆಲ್ಲರೂ ಭವ್ಯ ಭಾರತದ ಅದೃಷ್ಟ ಲೇಖನದಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಇಂತಹವರಿಗೆ ನಾವು ಕೃತಜ್ಞರಾಗಲೇ ಬೇಕಾಗಿದೆ.

ದೇಶದ ಆರ್ಥಿಕಾಭಿವೃದ್ಧಿಯನ್ನು ಪ್ರಧಾನೋದ್ದೇಶವಾಗಿಟ್ಟುಕೊಂಡ ನಮ್ಮ ಪಂಚವಾರ್ಷಿಕ ಯೋಜನೆಗಳು ಯಶಸ್ವಿಯಾಗಿಯೇ ಮುಂದುವರಿದಿವೆ. ಯೋಜನೆಗಳಿಗೆ ವಿಫಲಾಗಿರಿಸಿದ ನೊತ್ತದಲ್ಲಿ ಒಂದಂಶ ಸೋರಿ ಹೋಗುತ್ತಿದೆ ಎಂಬ ಅಪವಾದ ಕೆಲವೊಂದು ನಾಯಕರ ನಾಲಿಗೆಯಿಂದ ಹೊರಬರುತ್ತಿದೆ. ಇದನ್ನು ಅಲ್ಲಗಳೆಯುವುದು ಕೆಟ್ಟಿನ ಮಾತಾದರೂ ಇಂತಹ ಲೋಪದೋಷಗಳು ಸಾಮಾನ್ಯವೇ. ಎಲ್ಲೋ ಒಂದಲ್ಪಾಂಶ ದುರ್ವ್ಯಯವಾಗುತ್ತಿರುವುದೆಂದು ತಿಳಿದು ಅಖಂಡ ಯೋಜನೆಯೇ ವ್ಯರ್ಥವೆಂಬ ಕೂಗೆಬ್ಬಿಸುವುದು ಜಾಣತನದ ಹೆಜ್ಜೆಯೆಂದು ಹೇಳುವುದು ಸಾಧ್ಯವಿಲ್ಲ. ಒಬ್ಬನ ಬೆರಳೊಂದು ಮುರಿಯಿತೆಂದು ಅವನನ್ನು ಮರಣ ದಂಡನೆಗೆ ಈಡು ಮಾಡುವುದು ನ್ಯಾಯವೆಂದು ಯಾರೂ ಅನ್ನಲಾರರು. ವಿಶಾಲ ತಳಹದಿಯಲ್ಲಿ ರೂಪಿಸಲ್ಪಟ್ಟು, ಹಲವಾರು ವ್ಯಕ್ತಿಗಳಿಂದ ಕಾರ್ಯಗತವಾಗುತ್ತಿರುವ ಮಹಾ ಯೋಜನೆಗಳಲ್ಲಿ ಇಂತಹ ಅಲ್ಪ ಸ್ವಲ್ಪ ಕುಂದು ಕೊರತೆಗಳೂ ತ್ರುಟಿಗಳೂ ಗೋಚರಿಸುವುದು ಸ್ವಾಭಾವಿಕವೇ. ನಾಗರಿಕರು ಇಂತಹ ಕೊರತೆ ಹಾನಿಗಳನ್ನು ಬಯಲಿಗೆ ತರುವ ಸಾಹಸಮಾಡುವುದರಿಂದ, ಅವನ್ನು ಸುಧಾರಿಸುವುದಕ್ಕೆ ಸಹಾಯವಾಗುವುದು. ಟೀಕೆಗಾಗಿ ಟೀಕಿಸುವುದರಲ್ಲೇ ತತ್ಪರರಾಗದೆ ರಚನಾತ್ಮಕ ಕಾರ್ಯಕ್ರಮಗಳನ್ನು ಮುಂದಿಟ್ಟು ಟೀಕಿಸುವುದು ಟೀಕಾಕಾರರಿಗೆ ಭೂಷಣ ಮತ್ತು ದೇಶದ ಪ್ರಗತಿಗೂ ಸಾಧನವೆಂಬುದನ್ನು ನಾವು ಮರೆಯಬಾರದು.

ವಿಶ್ವವು ರಾಜಕೀಯವಾಗಿ ಇಂದು ಅತೀವ ಪರಿವರ್ತನೆ ಹೊಂದುತ್ತಿದೆ. ಇದುವರೆಗೆ ದಾಸ್ಯ ಶೃಂಖಲೆಯಲ್ಲಿ ಬಂಧಿತವಾಗಿದ್ದ ಕೆಲವಾರು ಪರತಂತ್ರ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯದ ಬಗ್ಗೆ ಆಸಕ್ತಿ ಮೂಡಿ ಅವು ಸ್ವತಂತ್ರಗೊಳ್ಳುತ್ತ ಬರುತ್ತಿರುವುವು. ಅದೇ ರೀತಿಯಲ್ಲಿ ನಮ್ಮ ದೇಶದ ಸುತ್ತ ಮುತ್ತಲಲ್ಲಿ ಅಲ್ಲದೇ ಆಫ್ರಿಕ್ಯನ್ ರಾಷ್ಟ್ರಗಳಲ್ಲಿ ಮಹತ್ವದ ರಾಜಕೀಯ ಸ್ಥಿತ್ಯಂತರಗಳು ನಡೆಯತೊಡಗಿವೆ. ಸೈನಿಕ ಆಡಳಿತೆಯನ್ನು ಸಾರಿದ ದೇಶಗಳೂ ಕೆಲವಿರುವಾಗ, ಅಲ್ಲಿನ ರಾಜಕೀಯ ಎಂತಹ ವಿಷಮಾವಸ್ಥೆಯಲ್ಲಿದೆಯೆಂಬುದರ ಅರಿವು ನಮಗಾಗುವುದು. ನಮ್ಮ ಭಾರತದ ಉತ್ತರ ಸೀಮೆಯಲ್ಲಿ ಚೀನೀಯರು ಆಕ್ರಮಣ ನಡೆಸಿರುವುದನ್ನು ನಾವು ಮರೆಯುವಂತಿಲ್ಲ. ದೇಶದ ಭದ್ರತೆಗೇನೇ ಆಹ್ವಾನ ನೀಡುವಂತಿರುವ ಈ ಆಕ್ರಮಣವನ್ನು ಲಘುವೆಂದು ತಿಳಿಯುವಂತಿಲ್ಲ. ಇದೇ ಚೀನೀ ಕಮ್ಯುನಿಸ್ಟರ ಸ್ವಾಗತಕ್ಕಾಗಿ ಅಣಿ ಮಾಡುತ್ತಿರುವ ಕೆಲವು ದೇಶದ್ರೋಹಿಗಳೂ ನಮ್ಮಲ್ಲಿ ತುಂಬಿ ಕೊಂಡಿದ್ದಾರೆ. ಚೀನಾದ ಆಕ್ರಮಣ ನೀತಿಯನ್ನು ವಿರೋಧಿಸುವ ಸಂದರ್ಭ ಬಂದಾಗ ಇಂತಹ ದೇಶದ್ರೋಹೀ ಕಾಕ ಪಕ್ಷಿಗಳ ರಹಸ್ಯೋದ್ಘಾಟನೆಯಾಗುತ್ತದೆ. ರಾಷ್ಟ್ರ ಘಾತಕರ ಮೋಹದ ಮಾಯಾ ಜಾಲದಲ್ಲಿ ಸಿಕ್ಕಿ ಬೀಳದೆ ರಾಷ್ಟ್ರೀಯನಾಗಿ ರಾಷ್ಟ್ರದ ಭದ್ರತೆ, ರಕ್ಷಣೆ ಮತ್ತು ಉನ್ನತಿಗಾಗಿ ದುಡಿಯುವ ದೃಢ ಪ್ರತಿಜ್ಞೆಯನ್ನು ನಾವಿಂದು ಮಾಡಬೇಕಾಗಿದೆ; ತಾಯ್ನಾಡಿನ ಮೇಲ್ಮೆಗೆ ಕೊನೆಯುಸಿರಿರುವತನಕ ಹೋರಾಡುವ ವೀರ ಪ್ರತಿಜ್ಞೆ ಮಾಡಬೇಕಾಗಿದೆ.

ಜೈ ಹಿಂದ್.

ಆಭಾರ ಮನ್ನಣೆ

ಸ್ವಾತಂತ್ರ್ಯ ದಿನದ ಸವಿ ನೆನಪಿನ ದ್ಯೋತಕವಾಗಿ ನಾವು ಪೂರ್ವನಿಶ್ಚಿತ ಯೋಜನೆಯಂತೆ ಈ ವಿಶೇಷ ಸಂಚಿಕೆಯನ್ನು ವಾಚಕರ ಕೈಗಳಿಗಿಡುತಿದ್ದೇವೆ. ಸಂಚಿಕೆಯಲ್ಲಿ ಬೆಳಕುಕಂಡ, ದಿನದ ಮಹತ್ವಕ್ಕನುಗುಣವಾದ ವಿದ್ವಾಂಸರನೇಕರ ವಿದ್ವತ್ಪೂರ್ಣ ಲೇಖನಗಳು ವಾಚಕರ ಕುತೂಹಲವನ್ನು ಆವಶ್ಯ ಕೆರಳಿಸದಿರಲಾರವು. ನಾವು ಕೇಳಿಕೊಂಡೊಡನೆಯೇ ತಮ್ಮ ಅತ್ಯಮೂಲ್ಯವಾದ ಲೇಖನಗಳನ್ನು ಕಳಿಸಿ, ಈ ಸಂಚಿಕೆಯು ಸಂಗ್ರಾಹ್ಯವಾಗುವಂತೆ ಮಾಡುವುದರಲ್ಲಿ ನೆರವಾದ ಲೇಖಕ ಮಹಾಶಯರ ಉಪಕಾರವನ್ನು ಸದಾ ಸ್ಮರಿಸುತ್ತೇವೆ. ಕೆಲವೊಂದು ಉದ್ದಾಮ ಬರಹಗಾರರ ಬರಹಗಳು ಹೊತ್ತುಮೀರಿ ಕೈಸೇರಿದುದರಿಂದಾಗಿ, ಅವನ್ನು ಈ ಸಂಚಿಕೆಯಲ್ಲಿ ಪ್ರಕಟಿಸುವುದು ಅಸಾಧ್ಯವಾಗಿ ಪರಿಣಮಿಸಿದುದರ ಬಗ್ಗೆ ನಮಗೆ ವಿಷಾದವೆನಿಸುತ್ತದೆ. ವಿಶೇಷ ಸಂಚಿಕೆಯಲ್ಲಿ ತಂತಮ್ಮ ಜಾಹಿರಾತುಗಳನ್ನಿತ್ತು ಸಹಕರಿಸಿದ ವಿವಿಧ ಔದ್ಯಮಿಕ, ವ್ಯಾಪಾರಿಕ, ಶೈಕ್ಷಣಿಕ ಸಂಘ ಸಂಸ್ಥೆಗಳವರನ್ನು ಮರೆಯುವುದು ಸರ್ವಥಾ ಅಸಾಧ್ಯ. ಎಂದಿನಂತೆ ಮುದ್ರಣ ಕಾರ್ಯವನ್ನು ಸಕಾಲದಲ್ಲಿ ಸುಂದರವಾಗಿ ಪೂರೈಸಿದ ಮುದ್ರಣಾಲಯದ ನೌಕರವರ್ಗವನ್ನೂ ಇಲ್ಲಿ ಸ್ಮರಿಸಬೇಕು. ಸ್ವಾತಂತ್ರ್ಯದಿನೋತ್ಸವದ ಈ ಸದವಸರದಲ್ಲಿ ನಾಡುಗಳಿಸಿದ ಸ್ವಾತಂತ್ರ್ಯವನ್ನು ಉಳಿಸುವ ಭೀಷ್ಮ ಪ್ರತಿಜ್ಞೆಯನ್ನು ಮಾಡುವುದರ ಆಗತ್ಯವನ್ನು ನೆನಪಿಕೆ ಮಾಡಿಕೊಂಡು, ನಮ್ಮ ಲೇಖಕ ಬಂಧುಗಳು, ಜಾಹಿರಾತುದಾರರು, ಗ್ರಾಹಕ ಸಮೂಹ ಮತ್ತು ವಾಚಕ ವೃಂದಕ್ಕೆ ಸ್ವಾತಂತ್ರ್ಯ ದಿನದ ಶುಭಾಶಯಗಳನ್ನು ಅರ್ಪಿಸುತ್ತೇವೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 224/1960.

ಕೃಷ್ಣಯ್ಯ ಅರ್ಸ — ವಾದಿ.

ಮತ್ತು

ಕೃಷ್ಣಯ್ಯ ನಾವುಡ — ಪ್ರತಿವಾದಿ

ಕುಂದಾಪುರ ತಾಲೂಕು ಕಾಳಾವರ ಗ್ರಾಮದಲ್ಲಿರುವ ಲಾಳಿಂಗ ನಾವುಡರ ಮಗ, ಕೃಷ್ಣಯ್ಯ ನಾವುಡರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿಯು ವಾದಿಗೆ ತಾ. 12.5.52 ರಲ್ಲಿ ರೂ. 200 = 00ಕ್ಕೆ ಬರಕೊಟ್ಟ ದಿನಾಂಡು ನೋಟಿನ ಬಾಬ್ತು ಬರತಕ್ಕ ಹಣ ಬಡ್ಡಿ ಪೈಕಿ ಠರಾ ಪ್ರಕಾರ ವಸೂಲು ಬಂದದ್ದು ಹೋಗ್ವಾ ಸಿಕ್ಕ ಹಣ ಬಡ್ಡಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಕಲ್ಲ ಮಾಡಿದ ಮೇಲಿನ ದಾವೆಯು ತಾ. 22–8–1960ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗ ಇಟ್ಟಿರುತ್ತದೆ. ಆ ಕುರಿತು ವಿವಾದವೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

N. S. Parameshwariah,
Advocate for Plaintiff.

Coondapoor, 5-8-1960.

ಈ ಅಭಾವ ಅವಶ್ಯ ಅಳಿಯಬೇಕು

“ಮನೆಯಲ್ಲಿ ಮೊದಲು ದೀಪವುರಿಸಿ ಅನಂತರ ಮಂದಿರಲ್ಲಿ' ಎಂಬ ಮಾತಿನ ಮಹತ್ವವನ್ನು ನಾವಿನ್ನೂ ಸರಿಯಾಗಿ ಅರ್ಥವಿಸಿಕೊಂಡಿಲ್ಲ. ವಿಲವಾಗುತ್ತಿರುವ ರಾಷ್ಟ್ರೀಯ ಭಾವನೆ ಭಾರತೀಯರಲ್ಲಿ ಮರಳಿ ಜಾಗ್ರತಗೊಳ್ಳುವವರೆಗೆ ಭಾರತೀಯರಲ್ಲಿ ಏಕತೆ ಸಾಧ್ಯವಿರುವುದಿಲ್ಲ.

ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್.

ಮಾನವನ ಜೀವನಾಡಿಯಲ್ಲಿ ಹರಿಯುವ ರಕ್ತಗುಣದಂತೆಯೇ ಮನೋಭಾವವೂ ಅವನ ವ್ಯಕ್ತಿತ್ವ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಾನವನು ದೇಶ, ಭಾಷೆಗಳ ಸಂಬಂಧವನ್ನು ಮೀರಿ ಕಾರ್ಯತತ್ಪರನಾದಷ್ಟು, ಆತನ ವಿಶಾಲ ಮನೋಭಾವದ ಪರಿಚಯನವುಗಾಗಿ ಆತನ ಬಗ್ಗೆ ವಿಶ್ವದಲ್ಲಿಯೇ ಗೌರವ ಭಾವನೆಯು ಮೂಡಬಲ್ಲುದು.

ದೇಶ, ಭಾಷೆಗಳ ಬಗ್ಗೆ ನಮ್ಮ ಆದರವಿರಬೇಕು; ನಿಜವೆ. ಆದರೆ, ಅವೇ ನಮ್ಮ ಉಸಿರು ಎನ್ನುವ ಕಾಲವಿಂದು ದೂರವಾಗಿದೆ. ಭಾರತ ನಮ್ಮ ದೇಶ ನಾವು ಭಾರತದ ಐಕ್ಯವನ್ನು ಉಳಿಸಿಕೊಳ್ಳಲು ಭಾರತೀಯರೊಡನೆ ಏಕತೆಯ ಭಾವದೊಡನೆ ವರ್ತಿಸಬೇಕು. ಕೇವಲ ದೇಶದ ಆಂತರಿಕ ಏಕತೆಯನ್ನು ಉಳಿಸಿಕೊಂಡ ಮಾತ್ರಕ್ಕೆ ಈ ಅಣುಯುಗದಲ್ಲಿ ನಾವು ನೆಮ್ಮದಿಯಿಂದ ಬಾಳಿ ಉಳಿಯಬಹುದೆಂದು ಯಾರಾದರೂ ಅಂದರೆ, ಅದು ಭ್ರಮಾತ್ಮಕವೆನ್ನಲೇ ಬೇಕು. ಆಂತರಿಕ ಐಕ್ಯವನ್ನು ರಕ್ಷಿಸಿಕೊಂಡ ದೇಶದ ಮೇಲೆ ಪರಕೀಯರ ಆಕ್ರಮಣ ತುಸು ನಿಧಾನವಾಗಬಹುದು; ನಿಧಾನವಾದ ಮಾತ್ರಕ್ಕೆ ಸುಖ ಸಮೃದ್ಧಿಗಳು ತಾಂಡವವಾಡುವುವೆನ್ನುವಂತಿಲ್ಲ. ಇದಕ್ಕಾಗಿಯೇ ನಮ್ಮ ಭಾವನೆಯು ರಾಜ್ಯ ದೇಶಗಳಲ್ಲಿ ಮೊದಲು ಹರಿದು ಅನಂತರ ಅವುಗಳ ಎಲ್ಲೆಯನ್ನು ಮೀರಿ ವಿಶ್ವವ್ಯಾಪಿಯಾಗಬೇಕು; ವಿಶ್ವಸಂತತಿಯೆಲ್ಲ ನಮ್ಮವರೆಂಬ ಭಾವನೆ ಬಲವಾಗಿ ಬೇರೂರಬೇಕು; ದೇಶಶಾಂತಿಯನ್ನು ರಕ್ಷಿಸಿಕೊಂಡು ವಿಶ್ವಶಾಂತಿಗಾಗಿ ಪ್ರಯತ್ನಿಸಬೇಕು; ಹೀಗಾದರೆ, ನಮ್ಮೊಡನೆ ವಿಶ್ವಪ್ರಜೆಗಳೆಲ್ಲರನ್ನೂ ಸಮೃದ್ಧಿಪಥದಲ್ಲಿ ನಾವು ಕರೆದೊಯ್ಯುವಂತಾಗುವುದು.

ನಮ್ಮ ದೇಶದ ನಾಯಕರು, ಶಿರೋಮಣಿಗಳು ವಿಶ್ವಶಾಂತಿ, ಸಹಜೀವನದ ಉಪದೇಶವನ್ನು ಮಾಡುತ್ತ ಹೋದಂತೆ ನಮ್ಮ ಜನತೆಯ ಭಾವವು ಸಂಕುಚಿತವಾಗುತ್ತ ಬರುತ್ತಿರುವುದು ಶೋಚನೀಯ. ಜಾತಿ ಮತಗಳ ಹೊಯ್ದಾಟದಲ್ಲಿ ರಕ್ತದ ಕಾಲುವೆ ಹರಿಸಿದ ಸಮಯವೊಂದು ಭಾರತದಲ್ಲಿತ್ತು. ಇಂದು ಅದರ ಬದಲು ಭಾಷೆಗಳ ನೆಪವೆತ್ತಿ ಕ್ರಾಂತಿಯ ಕಹಳೆಯೂದುವ ಕುಹಕ ನಡೆಯುವ ಲಕ್ಷಣಗಳು ಗೋಚರಿಸುತ್ತಿದೆ. ಕಾಂಗ್ರೆಸ್ ಭಾಷಾ ತಳಹದಿಯ ಮೇಲೆ ರಾಜ್ಯಗಳನ್ನು ಪುನರ್ವಿಂಗಡಿಸಲು ಸಮ್ಮತಿಸಿದಾಗಲೇ ಈ ಕ್ರಾಂತಿಯ ಜ್ವಾಲೆ ಉರಿಯಲು ತೊಡಗಿತೆನ್ನಬೇಕು. ಆಂಧ್ರಕೇಸರಿ ಪೊಟ್ಟಿಲು ಶ್ರೀ ಪ್ರಕಾಶರವರು ಕೈಗೊಂಡ ಉಪವಾಸವ್ರತವು ಕಾಂಗ್ರೆಸ್ಸಿನ ಹೃದಯವನ್ನೇ ಕಂಪಿಸಿತು. ತತ್ಪರಿಣಾಮವಾಗಿ ಇಂದಿನ ರಾಜ್ಯ ವ್ಯವಸ್ಥೆಯಾಯಿತು. ಈ ವ್ಯವಸ್ಥೆಯಾದರೂ ಪರಿಪೂರ್ಣವಾಗಿದೆಯೆ? ಇಲ್ಲವೇ ಇಲ್ಲ. ಪ್ರತಿ ರಾಜ್ಯದಲ್ಲೂ ಕೆಲವೊಂದು ಸೀಮಾಪ್ರದೇಶದ ವಿವಾದಗಳು ಹಾಗೆಯೇ ಉಳಿದಿವೆ. ಅಂತೆಯೇ ಪಂಜಾಬ ಸುಬಾದ, ಪ್ರತ್ಯೇಕ ವಿದರ್ಭದ ಬೇಡಿಕೆಗಳೊಡನೆ ಅಸ್ಸಾಮದ ಅಸ್ಸಾಮಿ—ಬಂಗಾಳಿ ಭಾಷಿಗಳ ದ್ವೇಷ ಮನೋವೃತ್ತಿ, ಪ್ರತ್ಯೇಕ ನಾಗಾರಾಜ್ಯ ನಿರ್ಮಾಣಕ್ಕೆ ಸರಕಾರ ನೀಡಿದ ತಾತ್ವಿಕ ಒಪ್ಪಿಗೆ, ದ್ರಾವಿಡ ಕಜಗಂನ ಹಿಂದೀ ವಿರೋಧ ಚಳವಳಿ—ಇತ್ಯಾದಿ ಇತ್ಯಾದಿಗಳನ್ನೂ ನಾವು ಗಮನಿಸಿದರೆ, ಈ ಭಾಷಾ ಸಮಸ್ಯೆಯು ಹಗುರವಾಗುತ್ತ ಹೋಗುವುದಕ್ಕೆ ವ್ಯತಿರಿಕ್ತವಾಗಿ ಮತ್ತಷ್ಟು ಜಟಿಲವೆನಿಸುತ್ತಿರುವುದು ಗೋಚರಿಸುವುದು.

ಸೀಮಾ ಪ್ರದೇಶದ ಚಿಕ್ಕಪುಟ್ಟ ವಿವಾದಗಳನ್ನು ಈ ನಾಲ್ಕು ವರ್ಷಗಳಲ್ಲಿ ಸಮಾಧಾನಕರವಾಗಿ ತೀರ್ಮಾನಿಸಿಕೊಳ್ಳಲಾರದ ನಾವು ಸಾವಿರಾರು ಮೈಲುದ್ದದ ಭಾರತ—ಪಾಕ್; ಭಾರತ—ಚೀನಾಗಳ ಗಡಿ ಪ್ರಶ್ನೆಯನ್ನು ವಿಚಾರ ವಿನಿಮಯಗಳಿಂದ ಬಗೆಹರಿಸಿಕೊಳ್ಳುತ್ತೇವೆಂದು ಹೇಳುವುದು ತೀರ ಕುಚೋದ್ಯವೆನಿಸುವುದಿಲ್ಲವೆ? ದೇಶದ ಆಂತರಿಕ ಶಾಂತಿ ರಕ್ಷಣೆಯಲ್ಲಿ ಅಸಫಲರಾಗುತ್ತಿರುವ ನಾವು ವಿಶ್ವಶಾಂತಿಗಾಗಿ ಹೋರಾಡುತ್ತೇವೆಂದು ಜಂಭ ಕೊಚ್ಚಿಕೊಳ್ಳುವುದು ಅಪಹಾಸ್ಯವೇ ಸರಿ. ತನ್ನ ದೇಶದ ಜನತೆಯ ಮನಸ್ಸಿನಲ್ಲಿ ರಾಷ್ಟ್ರದ ಏಕತೆಯನ್ನು ಪ್ರತಿಬಿಂಬಿಸಿ, ಭಾಷೆ, ರಾಜ್ಯ, ಜಾತಿಮತಗಳ ಸಂಕುಚಿತ ಶೃಂಖಲೆಯಿಂದ ಅವರನ್ನು ಮುಕ್ತರನ್ನಾಗಿಸಿ, ರಾಷ್ಟ್ರೀಯ ಮನೋಭಾವನೆ ಮೊತ್ತಮೊದಲು ಭಾರತೀಯರಲ್ಲಿ ಮೂಡಬೇಕು. ಆಗಿ ಹೋದುದನ್ನೆಲ್ಲಾ ಮರೆತು ಬಿಟ್ಟು, ಆಗಲಿರುವುದರ ಬಗ್ಗೆ ನಾವು ವಿಚಿಂತಿಸಬೇಕು ನಮ್ಮ ಐಕ್ಯ, ರಾಷ್ಟ್ರೀಯತೆ, ಭಾರತೀಯತೆಗಳೆದುರು ನಮ್ಮ ವೈಯಕ್ತಿಕ ರಾಜ್ಯಿಕ ಸಂಕುಚಿತತೆಗಳನ್ನು ಮರೆಯಬೇಕು. ನಾವು 'ಕನ್ನಡಿಗರು' ಸರಿಯೇ. ಆದರೆ, ಅದರೊಡನೆ ಅದಕ್ಕೂ ಮುಖ್ಯವಾಗಿ ನಾವು ಭಾರತೀಯರು ಎಂಬುದನ್ನು ಮರೆಯಬಾರದು. ದೇಶವಿದ್ದರೆ ತಾನೇ ರಾಜ್ಯದ ಮಾತು?

ಭಿನ್ನತೆಯಲ್ಲಿ ಅಭಿನ್ನತೆಯನ್ನು, ಅಸಂಸ್ಕೃತಿಯಲ್ಲಿ ಸಂಸ್ಕೃತಿಯನ್ನು, ಅನೈಕ್ಯದಲ್ಲಿ ಐಕ್ಯವನ್ನು ಪ್ರತಿಬಿಂಬಿಸಬಲ್ಲ ಭಾರತೀಯ ಸಂಸ್ಕೃತಿಯನ್ನು ನಾವು ಉಳಿಸಿಕೊಂಡು ಭಾರತೀಯರಾಗಿ ಬಾಳಬೇಕು; ಭಾರತಕ್ಕಾಗಿ ದುಡಿಯಬೇಕು. “ತನು ಭಾರತ ಮನ ಭಾರತ” ಎಂಬ ದೇಶವಾಣಿಯನ್ನು ನಾವು ಅಲಕ್ಷಿಸಿದರೆ, ಮಹಾಪರಾಧವೆಸಗಿದಂತಾಗುವುದು.

ನಮ್ಮಲ್ಲಿ ಗೃಹಕೃತ್ಯಕ್ಕೆ ಬೇಕಾದ ಬೆಳ್ಳಿ, ತಾಮ್ರ, ಹಿತ್ತಾಳೆ, ಸ್ಟೀಲ್, ಕಂಚು ಹಾಗೂ ಎಲ್ಯೂಮಿನಿಯಮಿನ ತರವಾರು ಪಾತ್ರೆಗಳು ರಖಂ ವ ಚಿಲ್ಲರೆಯಾಗಿ ಮಿತಬೆಲೆಗೆ ದೊರೆಯುವವು.

ದೇವರ ಪೂಜೆಗೆ ಬೇಕಾದ ಅತ್ಯಾಧುನಿಕ ಮಾದರಿಯ ಪಾತ್ರೆಗಳೂ ಪಂಚಲೋಹದ ವಿಗ್ರಹಗಳೂ ಸದಾ ಮಾರಾಟಕ್ಕೆ ಸಿದ್ಧವಿರುವವು.

ಮೆಸರ್ಸ್ ಐರೋಡಿ ರಾಧಾಕೃಷ್ಣ ಪೈ

ಪಾತ್ರೆ ವ್ಯಾಪಾರಸ್ಥರು

ರಥಬೀದಿ - - - ಉಡುಪಿ

ಸಚಿತ್ರ ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ಎಲ್ಲಾ ತರದ ಫೋಟೋ ಮತ್ತು ಆರ್ಟ್ ಕೆಲಸಗಳಿಗೆ ಸಂದರ್ಶಿಸಿರಿ

ನಾಯಕ್ ಸ್ಟುಡಿಯೋ,

ಲೈಟ್ ಹೌಸ್ ಹಿಲ್ ರೋಡು, ಹಂಪನಕಟ್ಟೆ, ಮಂಗಳೂರು-1

ಹಂಚುಗಳನ್ನು ಆರಿಸುವಾಗ ಜಾಣ್ಮೆಯಿರಲಿ!

ನಿಮಗೆ ಹಂಚುಗಳು ಬೇಕಾದಾಗ ತಾಳಿಕೆ ಬಾಳಿಕೆಯಲ್ಲಿ ನಾಜೂಕಿನಲ್ಲಿ ಉತ್ತಮವಾದುದೆಂದು ಸರ್ವತ್ರ ಪ್ರಸಿದ್ಧವಾಗಿ ಪ್ರಚಾರದಲ್ಲಿರುವ ಕೋಮನ್‌ವೆಲ್ತ್‌ರವರ

ಬಾಸೆಲ್ ಮಿಶನ್ ಹಂಚುಗಳನ್ನೇ ಆರಿಸಿಕೊಳ್ಳಿರಿ.

ಬಾಸೆಲ್ ಮಿಶ್ಯನಿನ ಹಂಚು, ಎರಡು ಚಡಿಯ ಹಂಚು, ಡಂಬೆ ಇತ್ಯಾದಿಗಳಿಗೆ ನಮ್ಮೊಡನೆ ವಿಚಾರಿಸಿರಿ.

ಕಾರ್ಣಾಡು ಪಾಂಡುರಂಗ ರಾವ್,

ಕಮಿಶನ್ ಏಜಂಟ್, ಸರ್ವಿಸ್ ಬಸ್ ಸ್ಟ್ಯಾಂಡಿನ ಬಳಿ,

ಉಡುಪಿ.

ಮನೋರಂಜಕ ವೈವಿಧ್ಯಪೂರ್ಣ ಬಟ್ಟೆಗಳಿಗೆ—

ಗುಂಡುನಾಯಕ್ಸ್ ಫೇಶನ್ ಎಂಪೋರಿಯಮ್

ತೆಂಕಪೇಟೆ - - - ಉಡುಪಿ

ಹೊಸ ಅಂಗಡಿ! ನವನವೀನ ಉಡುಗೆ ತೊಡುಗೆಗಳು!!

ಎಲ್ಲ ಪ್ರಸಿದ್ಧ ಪಟ್ಟಣಗಳ ಪ್ರಖ್ಯಾತ ಬಟ್ಟೆಬರೆಗಳು ದೊರೆಯುತ್ತವೆ.

ಬೆಲೆ ಬಹಳ ಕಡಿಮೆ.

ಮದುವೆ ಜರತಾರಿ ಸೀರೆಗಳಿಗೆ ವಿಶೇಷ ರಿಯಾಯಿತಿ.

ಅತ್ಯಾಧುನಿಕ ಕಥಾನ್ ಮತ್ತು ನೈಲೋನ್ ಶೀರೆಗಳೂ ದೊರೆಯುತ್ತವೆ.

ದಯೆಮಾಡಿ ಒಮ್ಮೆ ಸಂದರ್ಶಿಸಿರಿ:—

ಗುಂಡು ನಾಯಕ್ಸ್ ಫೇಶನ್ ಎಂಪೋರಿಯಮ್

ಸಾಮಾನ್ಯ ಧರ್ಮಪಾಲನೆಯೇ ರಾಷ್ಟ್ರೀಯ ಭದ್ರತೆಯ ಬುನಾದಿ

ಅಹಿಂಸೆ, ಸತ್ಯ, ಅಸ್ತೇಯ, ಶೌಚ, ಮತ್ತು ಇಂದ್ರಿಯ ನಿಗ್ರಹಗಳು ಮಾನವ ಧರ್ಮದ ಪಂಚ ಲಕ್ಷಣಗಳು. ಈ ಲಕ್ಷಣ ಪಾಲನೆಯೇ ರಾಷ್ಟ್ರೀಯ ಭದ್ರತೆಯ ಬುನಾದಿಯೆನಿಸುವುದು.

ಶ್ರೀ ಬಿ. ಎಚ್. ಶ್ರೀಧರ, ಎಂ. ಎ.

ಬಾಲಕರು ಮತ್ತು ವಯಸ್ಕರು ಎಂದು ಮನುಷ್ಯರನ್ನು ಎರಡು ವಿಭಾಗಗಳನ್ನಾಗಿ ಮಾಡುವ ರೂಢಿ ಹೊಸದಲ್ಲ. (Grown-up) ಅಥವಾ ವಯಸ್ಕರ ವರ್ಗದಲ್ಲಿ ನೈಸರ್ಗಿಕ (ಪ್ರಾಕೃತ) ಮತ್ತು ಅನೈಸರ್ಗಿಕ (ಅಪ್ರಾಕೃತಿಕ) ಅಥವಾ ಸಾಮಾನ್ಯ ಮತ್ತು ವಿಶೇಷ ಎಂಬ ಉಪವಿಭಾಗಗಳೂ ಹೊಸವಲ್ಲ.

ನೈಸರ್ಗಿಕರು ಪಶುಶೀಲರು ಅಥವಾ ಸಾಮಾನ್ಯರು, ಅನೈಸರ್ಗಿಕರು ವಿಕಟರು ಅಥವಾ ಲೋಕೋತ್ತರ ವರ್ತನೆವುಳ್ಳವರು. ಲೋಕೋತ್ತರ ಸ್ವಭಾವವು ಮಾನವತ್ವದ ಪರಾಕಾಷ್ಠೆ ಅಥವಾ ದಿವ್ಯಸ್ಥಿತಿ. ಅದು ಆದರ್ಶ ವಿಶ್ವಕುಟುಂಬಿತ್ವ; ಸಾಮಾನ್ಯರಿಗೆ ನಿಲುಕದ ಉದಾತ್ತ ನೆಲೆಯದು.

ಪಶುಶೀಲರು ಅನಾಗರಿಕರು; ಸಾಮಾನ್ಯರು ನಾಗರಿಕರು; ಅಸಾಮಾನ್ಯರು ಪರಮ ನಾಗರಿಕರು. ಒಂದು ಸಮಾಜದಲ್ಲಿಂದು ಭಿನ್ನ ಪ್ರಮಾಣದಲ್ಲಿ ಈ ತ್ರಿವರ್ಗಗಳನ್ನು ಗುರುತಿಸಬಹುದು. ವಾಸ್ತವಿಕ ಜೀವನದಲ್ಲಿ ಮನುಷ್ಯನೊಬ್ಬನಲ್ಲಿ ಈ ಮೂರೂ ಗುಣಗಳು ಬೇರೆ ಬೇರೆ ಶತಾಂಶಗಳಲ್ಲಿರುತ್ತವೆ. ಸಾಮಾನ್ಯರು ಬಾಹ್ಯಜೀವನದಲ್ಲಿ ತಮ್ಮದೇ ಬಹುಸಂಖ್ಯೆ ಎಂದು ತಿಳಿದಿದ್ದಾರೆ. ಪಾಶವತೆ-ಸಾಮಾನ್ಯತೆಗಳುಳ್ಳವರಲ್ಲಿ ಹಲವರು ತಮ್ಮ ವಾಸ್ತವಿಕ ಗುಣವೊಂದರ ಪ್ರಾಧಾನ್ಯವನ್ನರಿಯದೆ ಒಂದರ ಬದಲು ಇನ್ನೊಂದನ್ನು ತಮ್ಮಲ್ಲಿ ಪ್ರಧಾನತಃ ಆರೋಪಿಸಿಕೊಂಡು ವರ್ತಿಸುವ ಭ್ರಮಾವಸ್ಥೆಯಲ್ಲಿರುತ್ತಾರೆ. ಅವರು ಮೂಢರು.

ಸಾಮಾನ್ಯರಿಗೆ ಗೌರೀಶಂಕರ ವೆನಿಸುವುದು ಪರಮನಾಗರಿಕತೆ ಅಥವಾ ಅತ್ಯುನ್ನತ ಆದರ್ಶದ ಸಿದ್ಧಿ. ಶುದ್ಧ ವಿಚಾರದ ಪ್ರಕಾರ ಪರಮನಾಗರಿಕನೇ (Perfect Man) ಪೂರ್ಣ ಮಾನವ ಅಥವಾ ದೇವ. ದೇವಸಹಜ ಆದರ್ಶಶೀಲವು ಬಹಳ ದುರಾರಾಧ್ಯ, ದುಃಸಾಧ್ಯ; ಆದರದು ಸದಾ ವಂದನೀಯ! ಸಂಪೂರ್ಣವಾಗಿ ಬೆಳೆದ ವಯಸ್ಕನೆಂದರೆ ದೇವಮಾನವ ಮಾತ್ರ. ಆತ (Ideal Grown-up) ಪರಮ ವೃದ್ಧ, (Ideal Adult) ಪರಮ ಪ್ರೌಢ.

ಪರಮ ಪ್ರೌಢನ ದೃಷ್ಟಿಯಲ್ಲಿ ಮಿಕ್ಕ ವರ್ಗಗಳವರೆಲ್ಲಾ ಮಕ್ಕಳು—ಆಚಾರ, ವಿಚಾರ, ಉಚ್ಚಾರಗಳೆಲ್ಲವುಗಳಲ್ಲೂ! ಆದುದರಿಂದ ಪರಮ ಪ್ರೌಢನು ಅಜಾತಶತ್ರು. 'ಗುಣಾಃ ಪೂಜಾಸ್ಥಾನಂ ಗುಣಿಷು ನಚ ಲಿಂಗಂ ನಚವಯಃ' ಎಂಬ ತತ್ವದಂತಿರುವವನಾತ. ಉಳಿದ ವರ್ಗಗಳಿಗೆ ಲಿಂಗಭೇದ, ವಯೋಭೇದ ಮುಂತಾದವು ಜ್ಞಾನಾನುಭವಗಳಿಗೆ ನಿಕಷಗಳಾಗುತ್ತವೆ. ಲಿಂಗ-ವಯಃ-ಸಂಸ್ಕಾರ ಮರ್ಯಾದೆಗಳಿಂದ ಪರಿಹಿತರಾದ ಈ ಮಿಕ್ಕವರ ನ್ಯಾಯ ಮಾನಗಳು ವಿಭಿನ್ನವಾಗಿರುತ್ತವೆ. ಇವರೆಲ್ಲರಿಗೂ ಸಾಮಾನ್ಯ ನ್ಯಾಯವೇ ವ್ಯಾವಹಾರಿಕ ನಿರ್ಣಾಯಕ. ಏಕೆಂದರೆ ಪಶುತ್ವವು ವಯಸ್ಕ ಸಾಮಾನ್ಯರಿಗೆ ಅಕ್ಷಮ್ಯವಾದುದು ಸಾಮಾನ್ಯನ ಜೀವನದಲ್ಲಿ ಮಿತ್ರ—ಶತ್ರುಗಳ ವರ್ಗೀಕರಣ ಸತತವಾಗಿರುವುದು ಸ್ವಾಭಾವಿಕ.

ಮಿತ್ರ—ಶತ್ರುವಿವೇಕವೇ ವಿದ್ಯಾಭ್ಯಾಸ, ಪ್ರಬೋಧ ಎನಿಸುತ್ತದೆ ಸಾಮಾನ್ಯನಿಗೆ ತನ್ನ ದೇಹ—ಮನಸ್ಸು—ದೇಶ—ಕಾಲ—ಸ್ಥಾನ—ಮಾನಗಳಿಗೆ ಪಥ್ಯವಾವುವು, ಅಪಥ್ಯವಾವುವು? ಎಂಬುದನ್ನು ಬಲ್ಲವನು ಆದರ್ಶ ಸಾಮಾನ್ಯಮಾನವ. ಪ್ರಿಯಜ್ಞತೆಯನ್ನು ಮೀರಿ ಹಿತಜ್ಞನಾದವನು ಪಥ್ಯಾಪಥ್ಯವಿವೇಕಿ.

ಮಾನವ ಜೀವನದ ಮೂಲಸೆಲೆ ಹೃದಯದಲ್ಲಿದೆ. ಬುದ್ಧೀಚ್ಛಾದಿ ಶಕ್ತಿಗಳೆಲ್ಲವೂ ಹೃದಯದ ತೃಪ್ತಿಯನ್ನು ಸಾಧಿಸಿ ಕೊಡುವ ಸಾಧನಗಳು. ಮಿತ್ರತ್ವ, ಪಥ್ಯತೆ ಅಥವಾ ಹಿತಕಾರಿತ್ವ ಯಾವ ಮೌಲ್ಯದ ಸಿದ್ಧಿಯಲ್ಲಿದೆ? ಎಂಬುದನ್ನು ಅರಿತವನು ಸಾಮಾನ್ಯ ಪ್ರೌಢ. ಪ್ರಿಯ—ಹಿತ, ಮಿತ್ರಾಮಿತ್ರ, ಲಘು-ಗುರುಗಳಲ್ಲಿ ಒಂದನ್ನು ಇನ್ನೊಂದನ್ನಾಗಿ ತಿಳಿದುಕೊಳ್ಳುವ ಸಾಮಾನ್ಯನು ಪಶುಸ್ಥಿತಿಗಿಳಿಯುತ್ತಾನೆ. ಆನನರೂಪ(External Appearance) ಎಂತಿದ್ದರೂ ಅರ್ಥ ಮಾತ್ರ ಪಾಶವ, ಅವಮಾನವ, ಅನ್ಯಾಯ.

ಅನ್ಯಾಯಿಗಳು ಅರ್ಥಾತ್ ಅನೀತಿವಂತರು ಎಂದೂ (Grown-up) ಬೆಳೆದವರು, ತಿಳಿದವರು ಎನ್ನಿಸಿಕೊಳ್ಳಲಾರರು. ಅವರು ಸಾಮಾನ್ಯನ ದೃಷ್ಟಿಯಲ್ಲಿ ಮಕ್ಕಳು, ಶಿಕ್ಷೆ-ರಕ್ಷೆಗಳಿಗೆ ಪಾತ್ರರು. ಅವರ ರಸ-ರುಚಿ, ಸುಖ-ದುಃಖ, ಲಾಭಾಲಾಭ ದೃಷ್ಟಿಗಳು ಅವಂದನೀಯ. ಸಾಮಾನ್ಯನ ಮಾನ್ಯತೆಗೆ ಅನ್ಯಾಯ ತಿರಸ್ಕಾರ—ನ್ಯಾಯ ಪುರಸ್ಕಾರಗಳೇ ಕಾರಣ. ಸಮಪಾತ್ರ ಸಂವಿಭಾಗ ಅಥವಾ ಸಹಜ ಸಹಕಾರವುಳ್ಳ ಜೀವನವೇ ನ್ಯಾಯವಾದ ಜೀವನ.

ಅನೇಕ ಸಲ ಅಧಿಕಾರ ಭೇದಗಳಿಂದ ಕುಂಠಿತವಾದ ವಿಚಾರ ಶಕ್ತಿಯಿಂದ ಸಾಮಾನ್ಯನು ಕೆಳ ಮಟ್ಟದ ಆಶೆಗಳಿಗೆ ಬಲಿಯಾಗಿ ಆಭಾಸಿಕ ನಾಗರಿಕ ಗೌರವವನ್ನು ಸಾಧಿಸಲು ಹೊರಟು ಪಾಶವಾನಂದ ಸ್ವಾಮಿಯಾಗುವನು! ಪಾಶವಾನಂದರ ಧ್ಯೇಯ ಹಾಗೂ ಸಿದ್ಧಿಗಳು ದುರಾದರ್ಶಗಳು. ಇಂದಿನ ಎಳೆಯರಿಗೆ ವಯಸ್ಸಾದ ಗಣ್ಯರು ಇಂಥ ದುರಾದರ್ಶಗಳನ್ನು ವರ್ತನೆಯಲ್ಲಿ ಪ್ರಕಟಿಸಿ ಎದುರಿಡುತ್ತಿರುವುದೇ ಎಳೆಯರ ಅಶಿಸ್ತಿಗೆ ಕಾರಣ. "Stolen fruits are sweet undeserving rewards are precious—ಕದ್ದು ತಿಂದ ಹಣ್ಣು ಅತಿ ರುಚಿ ಮತ್ತು ಅಪಾತ್ರನಾಗಿ ಪಡೆದ ಗೌರವ ಅತ್ಯಂತ ಅಮೂಲ್ಯ" ಎಂದು ತಿಳಿದು ಅಂಥ ಭಾವವನ್ನು ಪ್ರಕಟಿಸುವುದೇ ದುರಾದರ್ಶ.

ದುರಾದರ್ಶೋನ್ಮುಖತೆಯೇ ದುರ್ವಿದ್ಯೆ. ದುರ್ವಿದ್ಯರೆಂದೂ ರಾಷ್ಟ್ರ ನಿರ್ಮಾಪಕರಾಗಲಾರರು; ಅವರು ರಾಷ್ಟ್ರವಿನಾಶಕರು. ಸಹಕಾರಿ ಜೀವನವೇ ಸದಾದರ್ಶದ ಸಾಮಾನ್ಯ ಜೀವನ. ಪಂಚಪಾಂಡವರು ಅಂಥ ಜೀವನಕ್ಕೆ ಮಾದರಿಯಾಗಿದ್ದಾರೆ; ಸೌಭ್ರಾತ್ರಕ್ಕೆ ರಾಮಾದಿಗಳೂ ಉದಾಹರಣೆಗಳು. ಅಂಥ ಜೀವನ ಹೇಳುವಷ್ಟು ಧರ್ಮ ರಹಸ್ಯವನ್ನೂ ಸುಖ ಸಾಧನಗಳ ಔಚಿತ್ಯವನ್ನೂ ಉಪನ್ಯಾಸಗಳು ಹೇಳಲಾರವು. ಸಹಕಾರ ಸಿದ್ಧಾಂತದ ಇಂದಿನ ಯುಗಕ್ಕದು ಸ್ಫೂರ್ತಿಕೊಡಬಲ್ಲದು. ಭಾರತೀಯತೆಯನ್ನು ಭಿನ್ನವರ್ಗದವರು ಸಾಧಿಸಿಕೊಳ್ಳಲು ಅದು ಮಾದರಿ. ಆದರೆ ಹಿರಿಯಣ್ಣನ ಹಿರತನವನ್ನು ನನ್ನದು ತನ್ನದೆಂದು ಕಿರಿಯರುಸ್ಪರ್ಧಿಸ ತೊಡಗುತ್ತಿರುವುದೇ ಇಂದಿನ ಅರಾಜಕ ಸಾಮಾಜಕ ಜೀವನಕ್ಕೆ ಕಾರಣ.

ಮಕ್ಕಳಾರು? ಹೆಂಗಸರಾರು? ಗಂಡಸರಾರು ಎಂಬುದನ್ನು ಈಗೆ ಕೂಡ ಅರಿತುಕೊಳ್ಳಬಹುದು. ನಿಜವಾದ ಹಿರಿತನವೆಲ್ಲಿದೆ ಎಂಬುದನ್ನರಿಯಲು ಮನುಷ್ಯರು ಕಡೆತನಕ ಅಸಮರ್ಥರಾಗುವುದು ಅಸಂಭವ. ಆದರೆ ಅವರ ಆತ್ಮ ಸಾಕ್ಷಿಯು ಗುರುತಿಸಿ ಹೇಳುವ ಹಿರಿಯತನದ ಸ್ಥಾನನಿರ್ದೇಶಕ್ಕೆ ತಲೆಬಾಗುವ ಧೀರವೃತ್ತಿ ಕಾಗೆಗಿದ್ದಷ್ಟೂ ಮನುಷ್ಯರಿಗಿಲ್ಲವಾಗಿದೆ. ಎಂಬುದಿಂದು ವ್ಯಕ್ತವಾಗುತ್ತಿದೆ. (Saint and Sinner) ಸಂತ ಮತ್ತು ಪಾಪಾತ್ಮರನ್ನು ಗುರುತಿಸಬಲ್ಲ ಅನೇಕರು ಆ ವರವರಿಗೆ ತಕ್ಕ ಪುರಸ್ಕಾರವನ್ನು ವ್ಯವಹಾರತಃ ಕೊಡಲು ಅಂಜುವುದೇಕೆ ? ಸ್ವಾರ್ಥಹಾನಿ ಭಯದಿಂದ. ಈ ಸ್ವಾರ್ಥಹಾನಿ ಭಯವೆಂಬುದು ಅದೂರ ದೃಷ್ಟಿಯುಳ್ಳ ಪಶ್ವರಬುದ್ಧಿಯಿಂದಉಂಟಾದುದು.

"ನ ಭೀತೋ ಮರಣಾದಸ್ಮಿ ಕೇವಲಂ ದೂಷಿತಂ ಯಶಃ । ವಿಶುದ್ಧಸ್ಯಹಿಮೇ ಮೃತ್ಯುಃ ಪುತ್ರ ಜನ್ಮ ಸಮೋಭವೇತ್ ॥"

(೩೦ನೇ ಪುಟ ನೋಡಿರಿ)

ಸಿಲ್ಕು ಹತ್ತಿ ರೇಯಾನ್
ನೈಲೋನ್ ಶೀರೆಗಳಿಗೆ
ಹಾಗೂ ವೈವಿಧ್ಯಪೂರ್ಣ ಖಾತ್ರಿ
ಜವುಳಿಗಳಿಗೆ
ಪ್ರಖ್ಯಾತ ವಸ್ತ್ರ ಭಂಡಾರ
ಜಯಂತಿಲಾಲ್ ಬ್ರದರ್ಸ್
ಜವುಳಿ ವ್ಯಾಪಾರಸ್ಥರು.
ಪ್ರದರ್ಶನ ಶಾಖೆ: ಹಂಪನಕಟ್ಟೆ
ರಖಂ ಶಾಖೆ: ಮಿಶ್ಯನ್ ರಸ್ತೆ
ಮಂಗಳೂರು-1. (ದ. ಕನ್ನಡ)

ನಮ್ಮ ನಾಡು ನಿಜವಾಗಿ ಸ್ವತಂತ್ರವೆನಿಸಬೇಕಾದರೆ—

ರಾಜಕೀಯ ಸ್ವಾತಂತ್ರ್ಯ ಕೈಗೂಡಿದೊಡನೆ ದೇಶ ನಿಜವಾಗಿ ಸ್ವತಂತ್ರವೆನಿಸಲಿಲ್ಲ. ಪ್ರಜಾಪ್ರಭುತ್ವದಲ್ಲಿ ಇರಲೇಬೇಕಾದ ಶಿಸ್ತನ್ನು ಪ್ರಜೆಗಳು ಬೆಳೆಸಬೇಕು, ಪ್ರಜಾಧರ್ಮವನ್ನು ರಕ್ಷಿಸಿಕೊಂಡು ಬರಬೇಕು, ಆಗ ಮಾತ್ರ ರಾಷ್ಟ್ರ ನಿಜವಾದ ಸ್ವಾತಂತ್ರ್ಯವನ್ನು ಗಳಿಸಿದಂತಾಗುವುದು.

ಶ್ರೀ ಎ. ಎಸ್. ರಾಮಕೃಷ್ಣ.

ಸ್ವಾತಂತ್ರ್ಯ ದಿನದಂದು ನಾವು ಒಂದು ಸ್ವತಂತ್ರ ರಾಷ್ಟ್ರದ ಪ್ರಜೆಗಳೆಂಬುದನ್ನು ನೆನೆಸಿಕೊಂಡು ಸಂತೋಷ ಪಡುವುದು ಸಹಜವೇ. ಆದರೆ ವಿಚಾರಶೀಲರೆನಿಸುವವರು, ನಾವು ನಿಜವಾಗಿ ಎಲ್ಲ ವಿಧದಿಂದಲೂ ಸ್ವತಂತ್ರರೇ ಎಂದು ಪ್ರಶ್ನಿಸಿಕೊಳ್ಳುವ ಅಗತ್ಯವೂ ಇದೆ. ಇರುವಷ್ಟು ಸ್ವಾತಂತ್ರ್ಯವನ್ನಾದರೂ ಉಳಿಸಿಕೊಳ್ಳಬೇಕಾದರೆ ಆಗಾಗ ಹಾಗೆ ಪ್ರಶ್ನಿಸಿಕೊಳ್ಳುವುದು ಲೇಸು.

ಶ್ರೇಷ್ಠ ತತ್ವಜ್ಞಾನಿ ಹಾಗೂ ಭಾರತದ ಉಪಾಧ್ಯಕ್ಷರಾದ ಡಾ| ರಾಧಾಕೃಷ್ಣನ್‌ರವರು ನಮ್ಮ ರಾಷ್ಟ್ರದ ಸ್ವಾತಂತ್ರ್ಯದ ಕುರಿತು ಹರಿಸಿದ ವಿಚಾರ ಧಾರೆಯ ಕೆಲವಂಶಗಳನ್ನು ಪಂಜಾಬ್ ವಿಶ್ವವಿದ್ಯಾನಿಲಯದಲ್ಲಿ ಅವರು ಮಾಡಿದ ಭಾಷಣವೊಂದರಿಂದ ಇಲ್ಲಿ ಸಂಗ್ರಹಿಸಿಕೊಡಲಾಗಿದೆ. ಇತ್ತೀಚೆಗೆ ದಕ್ಷಿಣದಲ್ಲಿ ಅವರು ಮಾಡಿದ ಭಾಷಣಗಳಲ್ಲಿ ಇವೇ ಅಭಿಪ್ರಾಯಗಳನ್ನು ಒತ್ತಿ ಹೇಳಲಾಗಿದೆ.

೦೦ ೦೦

ಈ ಸಂಧಿಕಾಲದಲ್ಲಿ

ಮುಂದಿನ ಕೆಲವು ವರ್ಷಗಳ ಕಾಲ ನಮ್ಮ ರಾಷ್ಟ್ರಕ್ಕೆ ಪರೀಕ್ಷಾಸಮಯವಾಗಿದೆ. ಇದು ವರೆಗಿನ ಹಲವು ವರ್ಷಗಳಲ್ಲಿ ನಮ್ಮ ಅನುಭವಕ್ಕೆ ಬಾರದಂಥ ಕಠಿಣ ಸಮಸ್ಯೆಗಳನ್ನು ಮುಂದೆ ನಾವು ಎದುರಿಸಬೇಕಾಗಬಹುದು. ಬಹಳ ಕಷ್ಟಪಟ್ಟು ನಾವು ಸಂಪಾದಿಸಿದ ರಾಜಕೀಯ ಸ್ವಾತಂತ್ರ್ಯವೇನಿದೆಯೋ ಅದು ನಮಗೆ ಸಿಕ್ಕಿದ ಒಂದು ಸುಸಂದರ್ಭವೆಂದು ಮಾತ್ರ ಹೇಳಬಹುದು. ಅದೇ ಅಂತಿಮ ಗುರಿಯೆಂದು ತಿಳಿಯಬಾರದು. ಆರ್ಥಿಕ ಸಾಮಾಜಿಕ ಹಾಗೂ ರಾಜಕೀಯ—ಈ ಎಲ್ಲ ದೃಷ್ಟಿಗಳಿಂದಲೂ ಸತ್ವಶಾಲಿಯೆನಿಸುವ ಒಂದು ಪ್ರಜಾರಾಜ್ಯವನ್ನು ಕಟ್ಟಬೇಕಾದರೆ ಕಷ್ಟಪಟ್ಟು ದುಡಿಯಬೇಕಾಗುತ್ತದೆ ಒಗ್ಗಟ್ಟಿನಿಂದ ದುಡಿಯಬೇಕಾಗುತ್ತದೆ. ಈ ಆದರ್ಶ ನಮ್ಮ ಮೇಲೆ ಪವಿತ್ರವಾದ ಒಂದು ಉದ್ದೇಶವನ್ನು ಹೇರುತ್ತದೆ.

ನಮ್ಮ ರಾಜ್ಯಾಂಗ ಶಾಸನವೇನೋ ಆದರ್ಶಗಳಿಂದ ತುಂಬಿದೆ. ಆದರೆ ಅಷ್ಟರಿಂದಲೇ ಪ್ರಜಾಪ್ರಭುತ್ವ ಸ್ಥಾಪಿತವಾದಂತಾಗಲಿಲ್ಲ. ಪ್ರಜಾರಾಜ್ಯದಲ್ಲಿ ಜನರು ಹೀಗೆ ಹೀಗೆ ಇರಬೇಕು ಎಂದು ನಿರ್ದೇಶಿಸಿದ ಮಾತ್ರಕ್ಕೆ ದೊಡ್ಡದೇನನ್ನೂ ಸಾಧಿಸಿದಂತಾಗಲಿಲ್ಲ. ನ್ಯಾಯ, ಸಮತೆ, ಭ್ರಾತೃಭಾವ—ಇವೇ ಮೊದಲಾದ ರಾಜ್ಯಾಂಗದಲ್ಲಿ ಅಡಕವಾಗಿರುವ ಒಳ್ಳೆಯ ಆದರ್ಶಗಳು ಸಮಾಜದಲ್ಲಿ ಹಾಸುಹೊಕ್ಕಾಗಿ ಕಂಡುಬರಬೇಕು. ಆ ಆದರ್ಶಗಳು ದೈನಂದಿನ ಜೀವನದಲ್ಲಿ ಪ್ರಕಟವಾಗಬೇಕು.

ಆದರೆ ದುರ್ದೈವ—ವಶಾತ್—ನಮ್ಮಲ್ಲಿ ಒಂದು ಕೊರತೆ ಕಂಡುಬಂದಿದೆ. ರಾಜಕೀಯ ಸ್ವಾತಂತ್ರ್ಯ ಕೈಗೂಡುವ ಹೊತ್ತಿಗೆ ನಮ್ಮಲ್ಲಿ ಕ್ರಾಂತಿಯ ಅನಂತರ ಕಂಡುಬರಬೇಕಾದ ಹೊಸ ಸ್ಫುರಣ ಸಾಕಷ್ಟು ಇರಲಿಲ್ಲವೆಂದೇ ಹೇಳಬೇಕು. ಸ್ವಾತಂತ್ರ್ಯಪೂರ್ವದಲ್ಲಿ ತ್ಯಾಗ ಮನೋವೃತ್ತಿ ಪ್ರಬಲವಾಗಿತ್ತು. ಈಗ ಅದರ ಸ್ಥಾನದಲ್ಲಿ—ಸುಖಲಾಲಸತೆ ಬಂದಿದೆ. ಕೊಡುವುದಕ್ಕಿಂತ ಹೆಚ್ಚು ಪಡೆಯುವ ಮನೋವೃತ್ತಿ ಬಲಿಯುತ್ತಿದೆ. ನೈತಿಕ ಮಟ್ಟ ಕೆಳಗಿಳಿಯುತ್ತಿರುವುದು ಸ್ಪಷ್ಟವಾಗುತ್ತ ಬಂದಿದೆ. ಅಸಂತೃಪ್ತಿ ಹಬ್ಬುತ್ತಿದೆ. ಇವುಗಳ ಪರಿಣಾಮವಾಗಿ ತಾಮಸ ವೃತ್ತಿ ಸರ್ವವ್ಯಾಪಿಯಾಗಿದೆ ನಮ್ಮ ಸಮಾಜವನ್ನು ಬಲಹೀನಗೊಳಿಸುತ್ತಿರುವ. ಆತ್ಮಕ್ಕೆ ಅಂಟುವ ಈ ಜಾಡ್ಯವನ್ನು ಜಯಿಸಬೇಕು. ಈ ವಿಷಯದಲ್ಲಿ ಈಗ ನಮ್ಮ ಮನಸ್ಸನ್ನು ಬದಲಾಯಿಸಲಾರೆವಾದರೆ ಮುಂದೆ ಏನನ್ನೂ ನಾವು ಬದಲಾಯಿಸಲಾರೆವು.

ಐಕ್ಯಭಾವ

ಕುಲ, ಮತ, ಭಾಷೆ, ಭೌಗೋಳಿಕ ಲಕ್ಷಣ—ಇವೇ ಮೊದಲಾದ ವಿಷಯಗಳಲ್ಲಿ ಇಷ್ಟೊಂದು ವೈವಿಧ್ಯಗಳಿದ್ದರೂ ಈ ಭೂಖಂಡದವರನ್ನು ಒಂದು ಜನಾಂಗವಾಗಿ ಹೆಣೆದಿಡುವ ಶಕ್ತಿಯೊಂದಿದೆ. ಆ ಶಕ್ತಿಯನ್ನು ಗಮನಿಸದೆ ಹೋದರೆ ನಾವು ಒಂದಾಗಿ ಉಳಿಯುವಂತಿಲ್ಲ. ಇಂದು ನಾವು ಒಂದು ಜನಾಂಗದವರೆನಿಸಿಕೊಳ್ಳುವುದು ಕೇವಲ ಭೌಗೋಳಿಕತೆಯಿಂದಲ್ಲ. ಈ ಒಗ್ಗಟ್ಟಿನ ಬೇರು ಭಾವನೆಯಲ್ಲಿದೆ, ಐಕಮತ್ಯ ಹೃದಯ ಮನಸ್ಸುಗಳಿಗೆ ಸಂಬಂಧಿಸಿದುದು. ಈ ಐಕ್ಯಭಾವ ಮಸಕಾಗಿ ಆಂತರಿಕ ಭಿನ್ನಾಭಿಪ್ರಾಯಗಳದು ಮೇಲ್ಗೈಯಾದಾಗಲೆಲ್ಲ ಈ ನಾಡು ತುಂಬ ಕಷ್ಟವನ್ನನುಭವಿಸಿದೆ.

‘Divide and Rule’ ಎಂದರೆ ವಿಭಜಿಸಿ ಆಳು ಎಂಬ ನೀತಿಯಿಂದ ನಮ್ಮನ್ನಾಳಿದರು ಎಂದು ಮುಂತಾಗಿ ನಮ್ಮನ್ನು ಶತಮಾನಗಳ ಕಾಲ ಹಿಡಿತದಲ್ಲಿಟ್ಟು ಕೊಂಡಿದ್ದವರನ್ನು ನಾವು ದೂರಿಕೊಳ್ಳುವುದಿದೆ ಅದೇನೇ ಇರಲಿ, ನಮ್ಮಲ್ಲಿರುವ ಅನೈಕ್ಯದಿಂದಲೇ ನಾವು ಪರರ ತೊ

(೨೦ನೇ ಪುಟ ನೋಡಿರಿ)

QUALITY IN
PRINTING INKS
MEANS MANY THINGS . . . .

- Brilliance
- Depth of colour
- Covering power
- Drying capacity
- Workability
- Fastness to light etc.

in GANGES inks
the emphasis is on QUALITY
used and proved for 34 years

Factories at
HOWRAH — BOMBAY — MADRAS

ನಮ್ಮ ಹೊಸ ಸಮಸ್ಯೆ: ಗಡಿರಕ್ಷಣೆ

ಭಾರತದ ತೀರ ಆಂತರಿಕ ಪ್ರಶ್ನೆಗಳ ಬಗ್ಗೆ ತೀವ್ರ ದೃಷ್ಟಿಯಿರಿಸಿ ಅವಕ್ಕೆ ತನ್ನ ಒಗ್ಗರಣೆಯಿಕ್ಕುವ ಚೀನಾದ ಮನೋವೃತ್ತಿಗೆ ಮೂಲ ಹೇತುವಾದ ಭಾರತ—ಚೀನಾಗಳ ಸೀಮಾ ವಿವಾದದ ಬಗ್ಗೆ ಕೂಲಂಕಷ ವಿವೇಚನೆ ಮಾಡುವುದು ಸದ್ಯ ಪ್ರಸ್ತುತವೇ ಆಗಿದೆ.

ಶ್ರೀ ಸೇವನಮಿರಾಜ ಮಲ್ಲ, ಎಂ. ಎ., ಬಿ. ಎಲ್.

ನಮ್ಮ ದೇಶದ ಗಡಿಗಳನ್ನು ನಿರ್ಧರಿಸಿ ಸಾವಿರಾರು ವರ್ಷಗಳು ಕಳೆದಿವೆ. ಉತ್ತರದ ಕೈಲಾಸ ಪರ್ವತ, ಮಾನಸ ಸರೋವರ, ಗಂಗಾ, ಸಿಂಧೂ ಯಮುನಾ ಬ್ರಹ್ಮಪುತ್ರಾ ನದಿಗಳು ನಮ್ಮ ಪ್ರಾಚೀನ ಪುರಾಣಗಳಲ್ಲಿ ಕೂಡಾ ಉಲ್ಲೇಖವಾದವುಗಳು. ಪೂರ್ವದ ಮೂಲ ಜನಾಂಗದ ಕಾಲದಲ್ಲಿ ಆರ್ಯರು ಮಧ್ಯ ಏಸಿಯದಿಂದ ಭಾರತದೊಳಗೆ ಸೀಮೋಲ್ಲಂಘನ ಮಾಡಿ ಗಂಗಾ ಸಿಂಧೂ ನದೀ ಕಣಿವೆಗಳಲ್ಲಿ ನೆಲಸಿ ದೇಶವಾದ್ಯಂತ ಮೆಲ್ಲನೆ ಹರಡಿದರು. ಆ ಮೇಲೆ ಪಶ್ಚಿಮದಿಂದ ಅಲೆಕ್ಸಾಂಡರನು ಸೀಮೋಲ್ಲಂಘನ ಮಾಡಿದ. ಅವನ ಬಳಿಕ ಹೂಣರು ಮತ್ತು ಕುಶಾನರು ಬಂದರು. ಮತ್ತೆ ಉತ್ತಂಬ ಅಫಘಾನಿಸ್ಥಾನದ ಕಾಬೂಲಿನಿಂದ ಮೊಗಲರು ಕೆಳಗಿಳಿದರು. ಅವರ ಕಾಲದಲ್ಲೇ ಸಮರ್ಕಂಡದಿಂದ ನಾದಿರ್ ಷಹನೂ ಬಂದು ದೇಶವನ್ನು ಸೂರೆ ಮಾಡಿದ. ಬ್ರಿಟಿಷರು ಮತ್ತು ಇತರ ಪಾಶ್ಚಾತ್ಯರು ಪಶ್ಚಿಮದ ಸಮುದ್ರ ಕಣಿವೆಯ ಮೂಲಕ ಭಾರತಕ್ಕೆ ಬಂದವರು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಭಾರತದ ಗಡಿ ಪ್ರಶ್ನೆಯು ಸೇನಾಬಲದ ಮೂಲಕ ಪರಿಹರಿಸಲ್ಪಟ್ಟಿತು. ಅವರು ಟಿಬೇಟಿನ ಮೇಲೆ ಕೂಡಾ ಭಾರತದ ಹಕ್ಕನ್ನು ಸ್ಥಾಪಿಸಿದರು.

ಬ್ರಿಟಿಷರ ಕಾಲದಲ್ಲೇ ಪೂರ್ವದಲ್ಲಿ ಬರ್ಮಾ ಭಾರತದಿಂದ ಬೇರೆಯಾಯಿತು. ಅವರು ಭಾರತವನ್ನು ಅಗಲಿಹೋಗುವಾಗ ಪಶ್ಚಿಮದಲ್ಲೂ ಪೂರ್ವದಲ್ಲೂ ಪಾಕಿಸ್ತಾನವನ್ನು ನಿರ್ಮಿಸಿ ಭಾರತವನ್ನು ತುಂಡರಿಸಿದರು. ಪಾಕಿಸ್ತಾನ— ಭಾರತ ಗಡಿ ಪ್ರಶ್ನೆಯು ಕೆಲವು ವರ್ಷ ನನೆಗುದಿಗೆ ಬಿದ್ದು ಮತ್ತೆ ಪರಿಹಾರಗೊಂಡಿದೆ. ಈಗ ಭಾರತ—ಪಾಕಿಸ್ತಾನಗಳೊಳಗೆ ಪರಿಹಾರವಾಗದೆ ಉಳಿದಿರುವ ಭೌಗೋಲಿಕ ಸಮಸ್ಯೆ ಕಾಶ್ಮೀರದ್ದು ಮಾತ್ರವೆನ್ನಬಹುದು. ಅದು ತೀರ ಗಡಿಯ ಪ್ರಶ್ನೆಯಲ್ಲ. ಅದರಲ್ಲಿ ಭೂಮಿಯ ಪ್ರಶ್ನೆಯು ಮುಖ್ಯ.

ಆದರೆ ಇತ್ತೀಚೆಗೆ ಉಂಟಾಗಿರುವ ಭಾರತದ ಉತ್ತರ ಭಾಗದ ಗಡಿಯ ಪ್ರಶ್ನೆ ಬಹಳ ಮಹತ್ವದ್ದು ಎಂಬುದನ್ನು ನಾವು ಮನಗಂಡಿದ್ದೇವೆ. ಈ ಸಮಸ್ಯೆಯು ಪೂರ್ವ ಸೂಚನೆಯಿಲ್ಲದೆ ಆಕಸ್ಮಿಕವಾಗಿ ಉದ್ಭವವಾದಂತೆ ನಮಗೆ ಕಳೆದ ವರ್ಷ ತೋರಿತು.

೧೯೪೯ರಲ್ಲಿ ಚೀನಾದಲ್ಲಿ ಕಮ್ಯುನಿಸ್ಟ್ ಸರ್ಕಾರ ಆಡಳಿತಕ್ಕೆ ಬಂತು. ೧೯೫೦ರಲ್ಲಿ ಟಿಬೇಟನಲ್ಲಿ ತುಸು ಗೊಂದಲವಾದ ವಾರ್ತೆ ಹಬ್ಬಿತು. ಪ್ರಧಾನಿ ನೆಹ್ರೂರವರು ಆಗ ಟಿಬೇಟನಲ್ಲಿ ನಡೆದ ಚೀನೀಯರ ದಬ್ಬಾಳಿಕೆ ಆಂತರಿಕ ಸ್ವಭಾವದ್ದೆಂದು ಹೇಳುತ್ತ ಭಾರತಕ್ಕೆ ಟಿಬೇಟಿನೊಡನಿದ್ದ ರಾಜಕೀಯ ಸಂಬಂಧವನ್ನು ಕಡಿಸಿಕೊಂಡರು. ಟಿಬೇಟ್ ಚೀನಾ ದೇಶಕ್ಕೆ ಸಂಬಂಧಿಸಿದ ಸ್ವತಂತ್ರ ದೇಶನೆಂಬ ಧಾಟಿಯಲ್ಲಿ ಚೀನಾದೊಡನೆ ಒಪ್ಪಂದವನ್ನೂ ಮಾಡಿದರು. ಆದರೆ ಆ ಒಪ್ಪಂದದಲ್ಲಿ 'ಟಿಬೇಟು ಚೀನಾದ 'ಸಾರ್ವಭೌಮಾಧಿಕಾರಕ್ಕೆ' ಒಳಪಟ್ಟಿದು ಎಂದು ನಮ್ಮ ವಿದೇಶಖಾತೆಯು ಕಳಿಸಿದ ತಂತಿಯನ್ನು ಆಗ ಪೇಕಿಂಗ್‌ನಲ್ಲಿ ನಮ್ಮ ರಾಯಭಾರಿಯಾಗಿದ್ದ ಸರ್ದಾರ್ ಪಣಿಕ್ಕರರು ಟಿಬೇಟು ಚೀನಾದ 'ಸ್ವಾಮಿತ್ವಕ್ಕೆ' ಒಳಪಟ್ಟಿದು ಎಂದು ಅರ್ಥಮಾಡಿ ತಿದ್ದಿದರೆಂದು ಇತ್ತೀಚೆಗೆ ತಿಳಿದುಬಂದಿದೆ. ಅಂತೂ ಇಂತೂ ಅನೇಕ ವರ್ಷಗಳಿಂದ ಭಾರತ ಮತ್ತು ಚೀನಾದ ಮಧ್ಯೆ ಇದ್ದ ಈ ಟಿಬೇಟ್ ರಾಜ್ಯವು ಸಂಪೂರ್ಣ ಚೀನೀಯರಿಗೆ ಸೇರಿದ್ದು ಎಂದಾದೊಡನೆ ಚೀನಾದ ದಕ್ಷಿಣ ಗಡಿ ಭಾರತದ ಉತ್ತರಗಡಿಗೆ ವಿಸ್ತರಿಸಿತು.

ಈ ಹತ್ತು ವರ್ಷಗಳಲ್ಲಿ ಚೀನಾ ಟಿಬೇಟನ್ನು ಕ್ರಮಾಗತವಾಗಿ ಮರ್ದಿಸುತ್ತ ಬಂದು, ಕಳೆದ ವರ್ಷ ಮಾರ್ಚಿ ತಿಂಗಳಲ್ಲಿ ಅಲ್ಲಿನ ದಲಾಯಿಲಾಮರ ಸಿಂಹಾಸನವನ್ನು ಉರುಳಿಸಿತು. ಭಾರತಕ್ಕೆ ಟಿಬೇಟಿನ ಬಗ್ಗೆ ಚೀನಾ ಕೊಟ್ಟಿದ್ದ ಆಶ್ವಾಸನೆಗಳು ತೀರ ಪೊಳ್ಳೆಂದು ಆಗ ವಿದಿತವಾಯಿತು. ದಲಾಯಿಲಾಮಾ ಭಾರತಕ್ಕೆ ಓಡಿಬಂದರು. ಟಿಬೇಟಿನ ಸಮಾಜವನ್ನು ಚೀನಾ ಹಾಳುಗೆಡವಿದೆ. ಆದರೆ ಹಿಮಾಲಯ ಪರ್ವತಗಳ ಉತ್ತರ ತಪ್ಪಲ ಪ್ರದೇಶದ ಖಾಂಪಾ ಎಂಬ ಅಲೆದಾಡುವ ಧೈರ್ಯಯುತ ಜನರನ್ನು ಸಂಪೂರ್ಣ ಮರ್ದಿಸಲಿಕ್ಕೆ ಚೀನಾದಿಂದ ಈ ವರೆಗೂ ಆಗಿಲ್ಲ. ಈ ಜನರು ಹಿಂದೆ ದಲಾಯಿಲಾಮರ ಕಾಲದಲ್ಲೂ ಅಷ್ಟಾಗಿ ಅನುವರ್ತಿಗಳಾಗಿದ್ದರೆಂದು ಹೇಳಬರುವಂತಿಲ್ಲ. ರಸ್ತೆಗಳಿಲ್ಲದ ಗುಡ್ಡಕಾಡು ಪ್ರದೇಶಗಳಲ್ಲಿ ಅಲೆದಾಡಿಕೊಂಡು ದಾರಿಕೋರರಾದ ವ್ಯಾಪಾರಿ ತಂಡಗಳನ್ನು ಸೂರೆಗೈಯುತ್ತ ಜೀವಿಸುತ್ತಿದ್ದ ಈ ಜನರನ್ನು ಅಂಕೆಗೆ ತರುವುದು ಬಲಿಷ್ಠವಾದ ಸೇನಾಬಲವುಳ್ಳ ಚೀನಾಕ್ಕೂ ಪ್ರಯಾಸದಾಯಕವಾಗಿದೆ. ಈ ಖಾಂಪಾ ಜನರ ನಿಗ್ರಹಕ್ಕಾಗಿ ಚೀನಾ ನೇಪಾಲದ ಗಡಿಯನ್ನೂ ಇತ್ತೀಚೆಗೆ ಆಕ್ರಮಣಮಾಡತೊಡಗಿದೆ ಎಂಬುದು ಗಮನಾರ್ಹ.

ಭಾರತದ ವಿದೇಶ ನೀತಿ ಚೀನೀಯರ ಈ ವರ್ತನೆಯಿಂದಾಗಿ ಅಗ್ನಿ ಪರೀಕ್ಷೆಗೊಳಗಾಗಿದೆ. ಭಾರತ ಚೀನಾದೊಳಗೆ ೧೯೫೪ರಲ್ಲಿ ಆದ ಪಂಚಶೀಲ ಸಂಧಿ ಮೂಲೆಪಾಲಾಗಿದೆ. ಏಕೆಂದರೆ ಈ ಸಂಧಿಯಾದ ಸ್ವಲ್ಪ ಸಮಯದಲ್ಲೇ ಚೀನಾ ಭಾರತದ ಉತ್ತರ ಗಡಿಯ ಆಕ್ರಮಣವನ್ನು ಆರಂಭಿಸಿತು. ಆದರೂ ಭಾರತೀಯರಿಗೆ ಚೀನಾ ಮಾಡಿದ ಅನಾಹುತದ ನಿಜರೂಪ ಗೊತ್ತಾದುದು ಕಳೆದ ವರ್ಷ ಮಾತ್ರ. ಉತ್ತರ ಗಡಿಯಲ್ಲಿ ಈಗ ಚೀನಾ ಆಕ್ರಮಿಸಿರುವ ಭಾರತದ ಭೂಮಿಯ ವಿಸ್ತೀರ್ಣ ಸುಮಾರು ೧೨,೦೦೦ ಚದರ ಮೈಲಿ ಎಂದು ಅಂದಾಜು ಮಾಡಲಾಗಿದೆ.

ಭಾರತ ಸರ್ಕಾರದ ಧೋರಣೆ ಈ ವಿಷಯದಲ್ಲಿ ಅತ್ಯಂತ ರಹಸ್ಯಮಯವಾಗಿಯೇ ಉಳಿದಿವೆ. ೧೯೫೪ರಿಂದ ೧೯೫೯ರ ವರೆಗೆ ಚೀನೀಯರು ಆಕ್ರಮಿಸಿದ ಪ್ರದೇಶಗಳಲ್ಲಿ ರಸ್ತೆಗಳನ್ನು ವಿಮಾನ ನಿಲ್ದಾಣಗಳನ್ನು ನಿರ್ಮಿಸಿರುವರು. ಕಳೆದ ವರ್ಷ ಮೊದಮೊದಲು ನಮ್ಮ ಪ್ರಧಾನಿಯವರು 'ಏನೋ ಅಲ್ಲೊಂದು ಪರ್ವತ ಇಲ್ಲೊಂದು ಬಂಜರು ಭೂಮಿ' ಎನ್ನುತ್ತ ಈ ಸಮಸ್ಯೆಯ ಮಹತ್ವವನ್ನು ಅಲ್ಲಗಳೆಯಲು ಯತ್ನಿಸಿದರು. ಕೊನೆಗೆ ಕಾಶ್ಮೀರದ ಲಡಕ್ ಪ್ರದೇಶದಲ್ಲಿ ಚೀನೀಯರು ಭಾರತೀಯ ಮೇಲ್ವಿಚಾರಣಾ ದಳದ ಕೆಲವರನ್ನು ಕೊಂದು ಕೆಲವರನ್ನು ಸೆರೆ ಹಿಡಿದರು. ಸೆರೆ ಹಿಡಿದವರನ್ನು ಚಿತ್ರಹಿಂಸೆಗೊಳಪಡಿಸಿ, ಪಶ್ಚಾತ್ತಾಪದ ಹೇಳಿಕೆಗಳನ್ನು ಬರೆಸಿಕೊಂಡರು. ಅವರ ಚಿತ್ರಗಳನ್ನು ತೆಗೆದರು. ಸತ್ತವರ ಹೆಣಗಳನ್ನು ಒಂದು ತಿಂಗಳ ಕಾಲ ಬಚ್ಚಿಟ್ಟು ಕೊನೆಗೆ ನಮ್ಮ ಪ್ರಧಾನಿಯವರ ಹುಟ್ಟು ಹಬ್ಬದ ದಿನದಂದು ಬಿಟ್ಟು ಕೊಟ್ಟರು!

ಇಷ್ಟಾದ ಬಳಿಕ ಚೀನೀ ಪ್ರಧಾನಿ ಈ ವರ್ಷ ಸಂಧಾನಕ್ಕೆಂದು ದೆಹಲಿಗೆ ಬಂದರು. ಆ ಮೊದಲೇ ಅವರು ಬರ್ಮಾದೊಡನೆ ಗಡಿ ಸಂಧಾನ ಮಾಡಿದ್ದಲ್ಲದೆ, ನೇಪಾಲದೊಡನೆಯೂ ಸಂಧಾನದ ಮಾತುಕತೆಯನ್ನು ಪ್ರತ್ಯೇಕವಾಗಿ ನಡೆಸಿ ನೇಪಾಲವನ್ನು ಸಮಾಧಾನ ಪಡಿಸಿದ್ದರು. ದೆಹಲಿಯಲ್ಲಿ ಗಡಿ ಸಂಧಾನದ ಮಾತುಕತೆ ಎಂಟು ದಿನಗಳ ಕಾಲ ನಡೆಯಿತು. ಚೀನೀ ಪ್ರಧಾನಿ ಭಾರತದ ಬೇರೆ ಬೇರೆ ಕೇಂದ್ರ ಮಂತ್ರಿಗಳನ್ನು ಕಂಡು ಮಾತಾಡಿದರು. ಆದರೆ ಕೊನೆಗೆ ಅವರ ಮಾತುಕತೆ ಯಶಸ್ವಿಯಾಗಲಿಲ್ಲವೆಂದು ಪ್ರಕಟವಾಯಿತು. "ಚೀನಾ ಆಕ್ರಮಣ ಮಾಡಿದೆ ಎಂದು ಯಾರೂ ನನ್ನೊಡನೆ ಹೇಳಲಿಲ್ಲ"ವೆಂದು ಅವರು ದೆಹಲಿಯಿಂದ ಹೊರಡುವಾಗ ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು. ಗಡಿ ಉಲ್ಲಂಘನೆಯ ಬಗ್ಗೆ ಭಾರತ ಚೀನಾಗಳೊಳಗೆ ಕೆಲವು ಕಾಲ ಪತ್ರ ವ್ಯವಹಾರವಾಗಿ ಚೀನಾ ಭಾರತವನ್ನು ಆಕ್ರಮಿಸಿದೆ ಎಂಬ ಅಪವಾದನೆ ಮಾಡಿದ ಬಳಿಕವೂ ಚೀನೀ ಪ್ರಧಾನಿ ಈ ರೀತಿ ಹೇಳಿದುದು ಸೋಜಿಗವಾಗಿ ನಮ್ಮ ಪ್ರಧಾನಿಗೂ ಕಂಡಿತು.

ಭಾರತ—ಚೀನಾ ಗಡಿಯ ಕುರಿತು ಅಧಿಕಾರಿಗಳೊಳಗಿನ ಮಾತುಕತೆಯ ಕಾರ್ಯಕ್ರಮ ನಡೆಯುತ್ತಿದೆ. ಈ ಮಾತುಕತೆಯ ಘಟ್ಟ ಮುಗಿದ ಬಳಿಕ ಪುನಃ ಪ್ರಧಾನಿಗಳೊಳಗೆ ಮಾತುಕತೆಯಾಗಲಿದೆ ಈ ಮಧ್ಯೆ ಚೀನಾ ಆಕ್ರಮಿತ ಪ್ರದೇಶವನ್ನು ಬಿಟ್ಟು ಕೊಡುವ ಚಿಹ್ನೆಗಳೇನೂ ತೋರುವುದಿಲ್ಲ ಅದರ ಬದಲಾಗಿ ಅದು ತನ್ನ ನೆಲೆಗಳನ್ನು ಇನ್ನೂ ಹೆಚ್ಚಿಗೆ ವ್ಯವಸ್ಥಿತ ರೀತಿಯಲ್ಲಿ ಭದ್ರಗೊಳಿಸುತ್ತಿದೆ ಎಂದು ತಿಳಿದು ಬರುತ್ತಿದೆ.

(೨೦ನೇ ಪುಟ ನೋಡಿರಿ)

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,

ನಂಜನಗೂಡು. (ಮೈಸೂರು ಡಿಸ್ಟ್ರಿಕ್ಟ್)

48 ವರ್ಷಗಳಿಗೆ ಮೇಲ್ಪಟ್ಟು ಜನತಾ ಸೇವೆಯಲ್ಲಿ ತೊಡಗಿರುವ
ಈ ಔಷಧ ಕಾರ್ಖಾನೆಯಲ್ಲಿ

ರೋಗಗಳೆಲ್ಲಾ ನಾಶಗೊಳಿಸುವ
ಮತ್ತು
ಆರೋಗ್ಯವನ್ನು ಸಂರಕ್ಷಿಸುವ
ಚೂರ್ಣ, ಲೇಹ, ತೈಲ, ಘೃತ, ಆಸವ, ಅರಿಷ್ಟ,
ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ
ಮುಂತಾದ

ಸಿದ್ಧೌಷಧಗಳು

ಮತ್ತು
ಭಸ್ಮ, ಸಿಂದೂರ, ಕೂಪೀಪಕ್ವರಸಗಳೂ

ಆತ್ಯಾಧುನಿಕ ಕ್ರಮದಲ್ಲಿ ಪೂರ್ಣ ಸತ್ವಯುತವಾಗಿ
ಭಾರತೀಯ ಆಯುರ್ವೇದ ಶಾಸ್ತ್ರದ ಆಧಾರದಮೇಲೆ
ನಿತ್ಯವೂ ತಯಾರಾಗುತ್ತಲಿವೆ.

—: ಔಷಧ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ :—

ಶಾಖೆಗಳು:— ಮೈಸೂರು, ಬೆಂಗಳೂರು, ಮಂಗಳೂರು.

ಸೋಲ್ ಏಜೆಂಟರು: (ಕನ್ನಡಸೀಮೆ ಬಿಟ್ಟು)
ದಿ ಯುನೈಟೆಡ್ ಕನ್ಸರ್ನ್ಸ್, 54, ಬಂದರ್ ಸ್ಟ್ರೀಟ್, ಮದ್ರಾಸ್.

ನಮ್ಮ ಜಿಲ್ಲೆಯ ಉಪ್ಪಿನ ಸತ್ಯಾಗ್ರಹದ ಕೆಲನೆನಹುಗಳು

ಭಾರತೀಯ ಸ್ವಾತಂತ್ರ್ಯೇತಿಹಾಸದಲ್ಲಿ ಸ್ವರ್ಣಾಕ್ಷರಾಂಕಿತವಾದ ಉಪ್ಪಿನ ಸತ್ಯಾಗ್ರಹದಲ್ಲಿ ನಮ್ಮ ಜಿಲ್ಲೆಯೂ ಹಿಂದುಳಿಯದೆ ಭಾಗವಹಿಸಿ, ಅದನ್ನು ಯಶಸ್ವಿಯಾಗಿ ನಿರ್ವಹಿಸಿತು. ಮೂವತ್ತು ವರ್ಷಗಳ ಹಿಂದಿನ ಆ ನೆನಹನ್ನು ಇಂದು ಸ್ಮರಿಸಿ ಕೊಂಡಾಗ ಮೈ ನವಿರೇಳದಿರುವುದೆ?

ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.



ಲೇಖಕರು

* * *

"ಘೋರ ಗರ್ಜನೆಯಿರಲಿ, ದಾನವಾ
ರ್ಭಟವಿರಲಿ,
ಮಾರಿಮೃತ್ಯುವೆ ಮುಂದು ಗುಡು
ಗುಡಿಸಿ ನಿಂದಿರಲಿ!
ಮಂಗಲೋತ್ಸವದಂದು—ಸಂಗೀತ
ಸ್ವರವೆಂದು,
ಆದನಾಲಿಸುತ ನುಗ್ಗಿ ನುಗ್ಗಿ ನೆವು-
ಮುಂದು!"

—ಇಂತಹ ದಿವ್ಯ ಸ್ಫೂರ್ತಿ—ಸ್ವಾತಂತ್ರ್ಯ ಸ್ಫೂರ್ತಿ ಭಾರತದ ಸತ್ಯಾಗ್ರಹೀ ವೀರರದಾಗಿತ್ತು. ಬ್ರಿಟಿಷ್ ಭರಣದ ನೊಗದ ಭಾರಕ್ಕೆ ಕೊರಳು ಕುಸಿದು ಬಿಡುಗಡೆಗಾಗಿ ಹಾತೊರೆಯುತ್ತಿದ್ದ ಭಾರತ, ೧೯೩೦ರ ಕಾಲಕ್ಕೆ ಗಾಂಧೀಜಿಯವರ ಮುಂದಾಳುತನದಿಂದ ತೊಡಗಿದ ಅಹಿಂಸಾಮಯ ಅಸಹಕಾರದ ನೂತನ ರೋಮಾಂಚಕ ಸಮರತಂತ್ರದಿಂದ ಒಮ್ಮೆಲೇ ಅಭೂತಪೂರ್ವವಾದ ಜಾಗ್ರತಿಯನ್ನು ಹೊಂದಿ ಸ್ವಾತಂತ್ರ್ಯದ ಆವೇಶದಿಂದ ಕುದಿಯತೊಡಗಿತ್ತು. ಭಾಂತ ತಪಸ್ವಿನಿ ತನ್ನ ಮುಕ್ತಿಗಾಗಿ ಮಾಡಿದ ಉಗ್ರ ತಪಸ್ಸಿನ ಪ್ರಭಾವದ ಪ್ರಕಾಶ ಎಲ್ಲೆಡೆಯಲ್ಲೂ ಸ್ಪಷ್ಟ ರೇಖೆಯಿಂದ ಮೂಡತೊಡಗಿತ್ತು. ಅಖಿಲ ಭಾರತದಂತೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಅಂದು-ಸಿದ್ಧಾರ್ಥನ ಮಹಾತ್ಯಾಗದಂತೆ—ದೇಶಭಕ್ತ ಶ್ರೀ ಕಾರ್ನಾಡು ಸದಾಶಿವರಾಯರಂತಹ ಅಗ್ರಗಣ್ಯರ ತ್ಯಾಗಸೇವೆಗಳ ಫಲವಾಗಿ ಜನತೆ ಎಂತಹ ದಾನವಾರ್ಭಟವೇ ಇದಿರಿದ್ದರೂ ಮುನ್ನುಗ್ಗುತಿತ್ತು!

೧೯೩೦ರಲ್ಲಿ ಗಾಂಧೀಜಿ ಉಪ್ಪಿನ ಸತ್ಯಾಗ್ರಹಕ್ಕೆ ಕರೆಯಿತ್ತರು. ದೇವರ ಆಶೀರ್ವಾದದಿಂದ ನಮಗೆ ಕರಾವಳಿಯುದ್ದಕ್ಕೂ ಧಾರಾಳವಾಗಿ ಸಿಗುವ—ತೆಗೆದಷ್ಟು ಮುಗಿಯದ—ಜೀವನಕ್ಕೆ ತೀರಾ ದರಿದ್ರರಿಗೂ ಅತ್ಯಂತ ಆವಶ್ಯಕವಾದ ಉಪ್ಪಿಗೂ ನಾವು ಬ್ರಿಟಿಷರ ಕಾನೂನಿನಿಂದ ನಿರ್ಬಂಧಿತರಾಗಿ ದಾಸ್ಯಮಯ ಜೀವನ ನಡೆಸುತ್ತಿದ್ದೇವೆ; ಅಂತಿರಲು ಅದನ್ನು ಮುರಿದು ನಮ್ಮ ಹಕ್ಕಿಗಾಗಿ ಹೋರಾಡುವುದು ನಮ್ಮ ಕರ್ತವ್ಯವೆಂದು ಪ್ರಚೋದಿಸಲು ಗಾಂಧೀಜಿ ಉಪ್ಪಿನ ಸತ್ಯಾಗ್ರಹದ ಸಾಂಕೇತಿಕ ಸಮರ ಹೂಡಿದ್ದರು. ಕರಾವಳಿಯಲ್ಲಿರುವ ತುಳುನಾಡಿನ ಜನತೆ ಈ ಸಂದರ್ಭದಲ್ಲಿ ನಾಡಿನ ಬಿಡುಗಡೆಗಾಗಿ ತನ್ನ ಕರ್ತವ್ಯವನ್ನು ನೆರವೇರಿಸಲು ಸಿದ್ಧವಾಗಬೇಕಿತ್ತು.

ಗಾಂಧೀಜಿಯ ಆದೇಶವನ್ನು ಹೊತ್ತು ತಂದು ಶ್ರೀ ಸದಾಶಿವ ರಾಯರು ಶ್ರೀಗಳಾದ ದೇಶಪಾಂಡೆ ಕೌಜಲಗಿ ಮುಂತಾದ ಮುಂದಾಳುಗಳ ಜತೆಗೂಡಿ ಮಂಗಳೂರು, ಬಂಟ್ವಾಳ, ಪುತ್ತೂರು, ಉಡುಪಿ, ಕುಂದಾಪುರ ಮೊದಲಾದ ಕಡೆಗಳನ್ನು ಸಂದರ್ಶಿಸಿ, ಸತ್ಯಾಗ್ರಹ ಸಮರದ ಸುವಾರ್ತೆಯನ್ನು ಸಾರುತ್ತಾ ಜನತೆಯನ್ನು ಸಿದ್ಧಗೊಳಿಸಿದರು. ೧೯೩೦ನೇ ಎಪ್ರಿಲ್ ೧೩ನೇ ದಿನ ಮಂಗಳೂರಲ್ಲಿ ಉಪ್ಪಿನ ಕಾನೂನು ಮುರಿದು ಸತ್ಯಾಗ್ರಹವನ್ನು ಪ್ರಾರಂಭಿಸುವುದೆಂದು ನಿಶ್ಚಯವಾಯಿತು. ಅದೇ ದಿನ ಅಂಕೋಲೆಯಲ್ಲಿಯೂ ಸತ್ಯಾಗ್ರಹ ಹೂಡಬೇಕೆಂದೂ, ಆ ನಿಮಿತ್ತ ಸದಾಶಿವರಾಯರು ಅಲ್ಲಿಗೆ ಹೋಗಬೇಕೆಂದೂ ಆಜ್ಞೆಯಿದ್ದಂತೆ ಶ್ರೀ ಸದಾಶಿವರಾಯರು ಎಪ್ರಿಲ್ ೧೨ರಂದು ಅಂಕೋಲೆಗೆ ತೆರಳಿದರು. ೧೯೩೦ನೇ ಎಪ್ರಿಲ್ ೧೩ರಂದು ಮಂಗಳೂರಲ್ಲಿ ಉಪ್ಪಿನ ಕಾನೂನನ್ನು ಮುರಿವ ಸತ್ಯಾಗ್ರಹ ಯಜ್ಞ ಪ್ರಾರಂಭವಾಯಿತು.

ಸತ್ಯಾಗ್ರಹಿಗಳು ಸಮುದ್ರದತಡಿಗೆ ಹೋಗಿ ಅಲ್ಲಿಂದ ಉಪ್ಪಿನ ನೀರನ್ನು ತರುವುದು; ಅದನ್ನು ಗಡಿಗೆಯಲ್ಲಿ ಕುದಿಸಿ ಉಪ್ಪು ತಯಾರಿಸುವುದು; ಹಾಗೆ ತಯಾರಿಸಿದ ಉಪ್ಪನ್ನು ಸಾರ್ವಜನಿಕವಾಗಿ ಮಾರುವುದು—ಇದು ಸತ್ಯಾಗ್ರಹದ ವಿಧಾನವಾಗಿತ್ತು. ಇದಕ್ಕೆ ಸಂಬಂಧಪಟ್ಟ ಸಭೆ ಮೆರವಣಿಗೆ ಭಾಷಣ ಪ್ರದರ್ಶನಗಳೂ ನಡೆಯುತ್ತಿದ್ದವು. ಈ ರೀತಿ ಅಹಿಂಸಾಮಯ ಸತ್ಯಾಗ್ರಹವನ್ನು ಹೂಡುವ ಸ್ವಾತಂತ್ರ್ಯ ವೀರರನ್ನು—ಬ್ರಿಟಿಷ್ ಸರಕಾರವನ್ನು ಇಲ್ಲಿ ಭದ್ರವಾಗಿ ನೆಲೆಯೂರಿಸಲು ಬದ್ಧ ಕಂಕಣರಾದ ಅಧಿಕಾರಿಗಳು—ಹೆಜ್ಜೆ ಹೆಜ್ಜೆಗೂ ಮರ್ದನ ಬಂಧನಗಳನ್ನು ಮಾಡಿ ಸಾಗಿಸಲಾರದ ಸಂಕಷ್ಟಗಳಿಗೆ ಗುರಿಮಾಡುತ್ತಿದ್ದರು. ಇಂತು ಮಂಗಳೂರಲ್ಲಿ ಸತ್ಯಾಗ್ರಹ ಪ್ರಾರಂಭವಾದ ಎರಡನೆಯ ದಿನವೇ ಪ್ರಪ್ರಥಮವಾಗಿ ಶ್ರೀ ಮೂಡಬಿದ್ರೆ ಉಮೇಶ ರಾವ್, ಶ್ರೀ ಆರ್. ಕೆ. ಪ್ರಭು, ಶ್ರೀ ಎಸ್. ಜೆ. ಕೊಂಬ್ರಬೈಲ್, ಜ| ಶೇಕ್ ಈಸುಪ್ ಸಾಹೇಬ್, ಇವರನ್ನು ಇನ್ನೂ ಕೆಲವು ಸ್ವಯಂ ಸೇವಕರನ್ನು ಬಂಧಿಸಿ ಸೆರೆಮನೆಗೆ ತಳ್ಳಿದರು.

ಗಾಂಧೀಜಿ ದಂಡಿಯಾತ್ರೆಗೆ ಹೊರಟಿದ್ದರು! ಆ ಪವಿತ್ರ ಯಾತ್ರೆಯಲ್ಲಿ ದೇಶದ ನಾನಾ ಭಾಗದ ಸ್ವಯಂ ಸೇವಕರು ಸೇರಿದ್ದರು. ಸತ್ಯಾಗ್ರಹೀ ವೀರರ ಮುಂದೆ ಭೀಕರ ಶಸ್ತ್ರಗಳನ್ನು ಹಿಡಿದುನಿಂತು ಮರ್ದನ ಕರಾಳ ಪ್ರವೃತ್ತಿಗೆ ತೊಡಗಿದ್ದ ಬ್ರಿಟಿಷ್‌ಪ್ರಭುತ್ವವನ್ನು ಇದಿರಿಸಿದ ಗಾಂಧೀಜಿ ಅಂದು—ಸುಮಂಗಲೆಯರು ಹಣೆಗೆ ಕುಂಕುಮವಿಟ್ಟು ಕಳುಹಲು—ಕೈಯಲ್ಲಿ ಕೋಲುಹಿಡಿದು ಮೊಣಕಾಲ ಮೇಲೆ ವಸ್ತ್ರ ಧರಿಸಿ ಭಾರತದ ದರಿದ್ರ ನಾರಾಯಣನಾಗಿ ಹೊರಟ ಆ ದೃಶ್ಯ ನಮ್ಮನಾಡಿನ ಚರಿತ್ರೆಯಲ್ಲಿ ಅತ್ಯಂತ ರೋಮಾಂಚಕ ಸನ್ನಿವೇಶವಾಗಿದೆ. ಇಂತಹ ಸನ್ನಿವೇಶದ ಸ್ಫೂರ್ತಿಯಿಂದ ಭಾರತದ ಆದ್ಯಂತ ಜನತೆ ನವೋತ್ಸಾಹಗೊಂಡು ಉಪ್ಪಿನ ಶಾಸನ ಭಂಗಕ್ಕೆ ಬೆಂಬಲನೀಡಿತ್ತು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಈ ಚಳವಳಕ್ಕೆ ಜನತೆಯ ನೆರವು ದೊರಕಿತು.

ಮಹಾತ್ಮಾಜಿಯವರು ಬಂಧಿತರಾದರೆಂಬ ವಾರ್ತೆ ಕೇಳಿ ಭಾರತ ಕ್ಷುಬ್ಧವಾಯಿತು. ಅದೇ ಸಂದರ್ಭದಲ್ಲಿ ದಕ್ಷಿಣ ಕನ್ನಡದ ಜಿಲ್ಲೆಯಾದ್ಯಂತ ಗಾಂಧೀಜಿ ಬಂಧನದ ಸಲುವಾಗಿ ಮೇ ೧೧ರಂದು ಹರತಾಳವನ್ನಾಚರಿಸಬೇಕೆಂದು ಕೊಟ್ಟ ಕರೆಯು ಸಂಪೂರ್ಣ ಯಶಸ್ವಿಯಾಗಿ ಜಿಲ್ಲೆಯ ನಗರ ಗ್ರಾಮಗಳಲ್ಲಿ ಎಲ್ಲೆಲ್ಲೂ ಸ್ತ್ರೀ ಪುರುಷ ಬಾಲವೃದ್ಧರೀತಿಯಾಗಿ ಸಹಸ್ರ ಸಂಖ್ಯೆಯಿಂದ ಉಪ್ಪಿನ ಕಾನೂನು ಭಂಗವನ್ನು ಸಾಮುದಾಯಿಕವಾಗಿ ಜನತೆ ಮಾಡಿತು. ಇಂತು ಮಂಗಳೂರಲ್ಲಿ ಎಪ್ರಿಲ್ ೧೩ರಂದು ಪ್ರಾರಂಭವಾದ ಸತ್ಯಾಗ್ರಹ ಇಡೀ ಜಿಲ್ಲೆಯನ್ನು ವ್ಯಾಪಿಸಿಕೊಂಡಿತು. ಈ ಮಧ್ಯೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಸತ್ಯಾಗ್ರಹವನ್ನು ಸಂಘಟಿಸಲು ತೆರಳಿದ್ದ ಶ್ರೀ ಕಾರ್ನಾಡ ಸದಾಶಿವರಾಯರು ಅವರ ಮೇಲೆ ಹಲವಾರು ವಾರಾಂಟುಗಳು ಹೊರಟಿದ್ದರೂ—ದೈವವಶಾತ್ ಅವರು ಹೊರಗುಳಿದು—ಮಂಗಳೂರಲ್ಲಿ ಸತ್ಯಾಗ್ರಹದ ಕಾವು ಏರುತ್ತಿರುವುದನು ಗಮನಿಸಿ ತನ್ನ ಮಾತೃಜಿಲ್ಲೆಯಲ್ಲಿಯೇ ಆ ಯಜ್ಞಕ್ಕೆ ಬಲಿಯಾಗಬೇಕೆಂದು ಬಗೆದು ಎಪ್ರಿಲ್ ೧೭ಕ್ಕೆ ಮಂಗಳೂರಿಗೆ ತಲಪಿದಾಗ, ಅವರಿಗೆ ಮಂಗಳೂರಿನ ಪುರಜನರಿತ್ತ ಅಭೂತಪೂರ್ವ ಸ್ವಾಗತ, ಸತ್ಯಾಗ್ರಹದ ಸಲುವಾಗಿ ಅವರ ಕೈಯಲ್ಲಿ ಅರ್ಪಿಸಿದ ನಿಧಿಗಳು ಅವರ ನಾಯಕತ್ವದಲ್ಲಿ ಜನತೆಯಿಟ್ಟ ಪ್ರಬಲ ವಿಶ್ವಾಸವನ್ನು ಸೂಚಿಸುವಂತಿತ್ತು. ಶ್ರೀ ಸದಾಶಿವರಾಯರನ್ನು ಎಪ್ರಿಲ್ ತಾ. ೩೦ರಂದು ೧೦೬ನೇ ಸೆಕ್ಷನಿನಂತೆ, ೧೫ ತಿಂಗಳ ದೀರ್ಘಾವಧಿಯ ಶಿಕ್ಷೆಗೆ ಸರಕಾರ ಗುರಿಮಾಡಿ ಸೆರೆಮನೆಗಟ್ಟಿತು. ಅದೇ ದಿನ ಉಡುಪಿ ತಾಲೂಕಿನ ಮುಂದಾಳುಗಳೂ ವಿದ್ವಾಂಸರೂ ಆದ ಶ್ರೀ ಯಸ್. ಯು. ಪಣಿಯಾಡಿಯವರೂ, ಪುತ್ತೂರು ತಾಲೂಕಿನ ಪ್ರಮುಖ ಮನೆತನದ ಶ್ರೀ ಬೆಳ್ಳಿಪ್ಪಾಡಿ ತಿಮ್ಮಪ್ಪ ರೈಗಳೂ ಕಾರಾಗೃಹಕ್ಕೊಯ್ಯಲ್ಪಟ್ಟರು.

ಮಹಾತ್ಮರ ಸತ್ಯಾಗ್ರಹ ಮಂತ್ರದಿಂದ ಮುಗ್ಧರಾಗಿ ಭಾರತದ ಅನೇಕ ಸಿರಿವಂತ ಕುಟುಂಬಗಳು ಸ್ವಾತಂತ್ರ್ಯವೇದಿಕೆಯಲ್ಲಿ ಬಲಿಯಾದ ತ್ಯಾಗದ ಕಥೆ ನಮ್ಮ ಸ್ವಾತಂತ್ರ್ಯೇತಿಹಾಸವಾಗಿದೆ. ಬಜಾಜ್, ಮೋತೀಲಾಲ್ ಮೊದಲಾದವರಂತೆ ನಮ್ಮ ಜಿಲ್ಲೆಯಲ್ಲಿ ಕಾರ್ನಾಡು ಸದಾಶಿವರಾಯರು ಅಂತಹ ಹಿರಿಯ ಮಾದರಿಯನ್ನು ಮಾಡಿತೋರಿಸಿದರು. ಅಂತಹ ಪರಂಪರೆಯಲ್ಲಿ ನಮ್ಮ ಜಿಲ್ಲೆಯ ಅನೇಕ ಶ್ರೀಮಂತರು ಸುಖದ ಸುಪ್ಪತ್ತಿಗೆಯನ್ನು ಬಿಟ್ಟು ಸತ್ಯಾಗ್ರಹದ ಕಂಟಕ ಶಯ್ಯೆಯನ್ನು ಆರಿಸಿಕೊಂಡರು. ಇಂತಹ ದೇಶಭಕ್ತರ ಪಂಕ್ತಿಯಲ್ಲಿ ಅಂದಿನ ಉಪ್ಪಿನ ಸತ್ಯಾಗ್ರಹದಲ್ಲಿ ಸೆರೆಮನೆ ಸೇರಿದ ಕಾಸರಗೋಡು ತಾಲೂಕಿನ ಪೆರಡಾಲದ ಶ್ರೀ ಖಂಡಿಗೆ ಕೃಷ್ಣ ಭಟ್ಟರು, ಪುತ್ತೂರು ತಾಲೂಕಿನ ಶ್ರೀ ಬೆಳ್ಳಿಪ್ಪಾಡಿ ವೆಂಕಪ್ಪ ರೈಗಳು, ಕುಂದಾಪುರದ ಶ್ರೀ ಅಮಾವಾಸೆ ಬೈಲು ಕೃಷ್ಣರಾಯ ಕೊಡಗಿಯವರು, ಉಡುಪಿ ತಾಲೂಕಿನ ಪಾಂಗಾಳ ಮನೆತನದ ಶ್ರೀ ಮಂಜುನಾಥ ನಾಯಕರು ಹಾಗೂ ಶ್ರೀ ಸಾಂತ್ಯಾರು ಅನಂತಪದ್ಮನಾಭ ಭಟ್ಟರೇ ಮುಂತಾದವರು ಚಿರಸ್ಮರಣೀಯರಾಗಿದ್ದಾರೆ.

ಮಂಗಳೂರಿನ ಮೈದಾನು ಸತ್ಯಾಗ್ರಹ ಸಮರದ ಕುರುಕ್ಷೇತ್ರವಾಗಿತ್ತು; ದಿನಂಪ್ರತಿ ಬೆಳಗ್ಗೆ ಸ್ವಯಂಸೇವಕರು ಉಪ್ಪುನೀರನ್ನು ತರಲು ಬರುತ್ತಿದ್ದರು; ಆಷ್ಟುಹೊತ್ತಿಗೆ ಅಲ್ಲಿ ಸಹಸ್ರ ಸಂಖ್ಯೆಯಿಂದ ಜನರು ಸೇರಿ ಆ ದೃಶ್ಯವನ್ನು ನೋಡುತ್ತಿದ್ದರು. ಆ ಮೇಲೆ ಆ ನೀರನ್ನು ಕುದಿಸಿ ಉಪ್ಪು ತಯಾರಿಸುತ್ತಿರುವಾಗ ಪೋಲೀಸರು ಜಪ್ತಿಮಾಡುತ್ತಿದ್ದರು. ಪೋಲೀಸರ ಹದ್ದಿನ ಕಣ್ಣಿಗೂ ಕಾಣದೆ ತಯಾರಾದ ಉಪ್ಪನ್ನು ಮೈದಾನಿನಲ್ಲಿ ಮಾರಾಟ ಮಾಡುವಾಗ ಮೆರವಣಿಗೆ ಸಭೆ ಭಾಷಣಗಳಾಗುತ್ತಿದ್ದವು; ಹಾಗೆ ಕಾಯಿದೆ ಮುರಿದವರನ್ನು ಸೆರೆಮನೆಗಟ್ಟುವುದು ಮುಂದೆ ಸಾಧ್ಯವಿಲ್ಲದಾಗಲು ಅವರ ಮೇಲೆ ಬಲಾತ್ಕಾರ ಪ್ರಯೋಗ ಪ್ರಾರಂಭವಾಯಿತು. ಸ್ವಯಂ ಸೇವಕರ ಕೈಯಿಂದ ಉಪ್ಪನ್ನು ಪೋಲೀಸರು ಬಲಾತ್ಕಾರದಿಂದ ಸೆಳೆಯುತ್ತಿರಲು ಅವರ ಹೆಬ್ಬೆರಳು ಮುಂತಾದವು ಮುರಿದು ಹೋಗುತ್ತಿತ್ತು. ಇಂತಹ ಅಪ್ರತಿಮ ಧೀರತೆಯನ್ನು ತೋರಿಸಿದ ಸ್ವಯಂ ಸೇವಕರ ಪೈಕಿ ಶ್ರೀ ಪರಮೇಶ್ವರಯ್ಯನವರು ಮತ್ತು ಶ್ರೀ ಮಾರಪ್ಪ ಪಕ್ಕಳರೇ ಮುಂತಾದವರು ಗಣನೀಯರಾಗಿದ್ದಾರೆ. ಎಂಟು ಜನ ಪೋಲೀಸರು ತನ್ನ ಮಗನ ಕೈಯಿಂದ ಉಪ್ಪನ್ನು ಸೆಳೆಯುತ್ತಿರುವಾಗ ಉಪ್ಪನ್ನು ಅವರಿಗೆ ಬಿಟ್ಟುದಕ್ಕಾಗಿ ತನ್ನ ಮಗನನ್ನು ತಿರಸ್ಕರಿಸಿ ಶ್ರೀಮತಿ ಮುರ್ಡೇಶ್ವರ ರತ್ನಾಬಾಯಿಯವರು ಸ್ವತಃ ತಾನೇ ಸ್ವಯಂ ಸೇವಕಿಯಾಗಲು ಮುಂದೆ ಬಂದರು. ಈ ಸತ್ಯಾಗ್ರಹ ಸಮರದ ಸಂದರ್ಭದಲ್ಲಿ ಪರದೇಶಿ ಬಟ್ಟೆಯ ರಾಶಿಗೆ ಜರತಾರಿ ಸೀರೆಯನ್ನು ಹಾಕಿ ತನ್ನ ಕೈಗಳಿಂದಲೇ ಅದಕ್ಕೆ ಬೆಂಕಿ ಕೊಟ್ಟ ಶ್ರೀಮತಿ ಸುಂದರಿ ಬಾಯಿಯವರು, ಪೇಟೆಯಲ್ಲಿ ಖಾದಿ ಬಟ್ಟೆಯನ್ನು ವಿಕ್ರಯಿಸಿದ ಶ್ರೀ ಸದಾಶಿವರಾಯರ ಸುಪುತ್ರಿಯರಾದ ಸುಗುಣಾಬಾಯಿ ಮತ್ತು ರಾಧಾಬಾಯಿಯವರು, ಮತ್ತು ಶ್ರೀ ಆರ್. ಕೆ. ಪ್ರಭುಗಳ ಧರ್ಮಪತ್ನಿ ಕಾರ್ಕಳದ ಶ್ರೀಮತಿ

(೧೯ನೇ ಪುಟ ನೋಡಿರಿ)

ಗೋಪಾಲನ ಅದೃಷ್ಟ

ಮೂರು ಬಾರಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಜೇಲು ಸೇರಿದ್ದ ಶ್ರೀಮಂತ ದೇಶಭಕ್ತ ಶಂಕರ್‍ರಾಯರು ಸ್ವಾತಂತ್ರ್ಯ ಮಹೋತ್ಸವ ಸಮಾರಂಭದಲ್ಲಿ ಭಾಷಣ ಮಾಡಬೇಕಾದ ಸಂದರ್ಭವೊದಗಿತು. ಈ ಗಂಡಾಂತರದಿಂದ ಅವರು ಬಚಾವಾದರು ಎಂಬುದರಲ್ಲೇ ಸೋಜಿಗವಡಗಿದೆ!

ಶ್ರೀ "ನವಗಿರಿನಂದ"

ಊಟದ ಹೊತ್ತಾದರೂ ಗೋಪಾಲ ಕಾಣಲಿಲ್ಲ. "ಗೋಪಾಲಾ! ಹೊತ್ತಾದ್ದು ಕಾಣೋದಿಲ್ವಾ? ಇನ್ನೂ ಊಟದ ಚಿಂತೆಯಿಲ್ಲದೆ ಎಲ್ಲಿ ಆಡ್ತಾ ಇದ್ದಾನಪ್ಪ. ಲೋ ಸಿದ್ದಾ! ಕರಿಯೋ ಅವನ. ತುಂಟ ಹುಡುಗರ ಜತೇಲಿ ಎಲ್ಲಿ ಆಡ್ತಾ ಇದ್ದಾನೋ ನೋಡೋ!" ಎಂದು ಮನೆಯ ಯಜಮಾನತಿ ಶಾರದಮ್ಮ ಕೂಗಾಡುತಿದ್ದರು.

"ಇಲ್ಲವಮ್ಮಾ, ಚಿಕ್ಕಯ್ಯ ಎಲ್ಲಿಯೂ ಕಾಣಿಸೋದಿಲ್ಲಾ. ಒಂದು ಗಂಟೇ ಮೊದಲು ಮನೆಯೊಳಗೇ ಇದ್ರಲ್ಲಾ" ಎಂದ ಸಿದ್ದ.

"ಗೋಪಾಲಾ! ಗೋಪಾಲಾ!" ಎಂದು ಶಾರದಮ್ಮ ಮನೆ ಹಾರಾದದ್ದರಿಸಿ ಹೋಗುವ ಹಾಗೆ ಪುನಃ ಕೂಗಿದರು.

ಗೋಪಾಲನ ಸದ್ದಿಲ್ಲ. ಆಗ ಚಿಕ್ಕ ಹುಡುಗಿ ಲೀಲು ತಾಯಿಯ ಹತ್ತಿರ ಬಂದು– "ಅಣ್ಣನಿಗೆ ಏನಾಗಿದೋ ಗೊತ್ತಿಲ್ಲಾಮ್ಮ. ಉಪ್ಪರಿಗೇ ಮೂಲೇಲಿ ಸುಮ್ಮನೆ ಕೂತಿದ್ದಾನೆ." ಅಂದಳು.

"ಏಕಂತೆ? ಮತ್ತೆ ಇಷ್ಟು ಕರೆದರೂ ಮಾತಾಡೋದಿಲ್ಲ ಏಕವ?"

"ಗೊತ್ತಿಲ್ಲಮ್ಮ. ಎಷ್ಟು ಕೇಳಿದರೂ ಮಾತೇ ಆಡೋಲ್ಲ"

"ಏನಾಯಿತಪ್ಪ!" ಎಂದುಕೊಳ್ಳುತ್ತ ಶಾರದಮ್ಮ ಉಪ್ಪರಿಗೆಗೆ ಹೋದರು. ಅಲ್ಲೊಂದು ಕಿಟಕಿಯ ಬಳಿ ಗೋಪಾಲ ಸಣ್ಣ ಮೋರೆಮಾಡಿಕೊಂಡು ಕುಳಿತಿದ್ದ.

"ಏನೋ ಇದು ವೇಷಾ? ಮತ್ತೇನಾಯಿತು?"

ಗೋಪಾಲ ಮಾತಾಡಲಿಲ್ಲ.

"ಊಟಮಾಡು ಬಾ, ಎಲ್ಲಾ ಮತ್ತೆ ಹೇಳುವಿಯಂತೆ." ಎಂದು ಅವನ ಕೈ ಹಿಡಿದೆಳೆದಳು ತಾಯಿ.

ಮಧ್ಯಾಹ್ನದ ಹೊತ್ತು. ಅವನಿಗೂ ತುಂಬ ಹಸಿವೆಯಾಗಿದ್ದಿರಬೇಕು. ಕೇವಲ ಪರಾಧೀನನಂತೆ ಎದ್ದು ತಾಯಿಯೊಂದಿಗೆ ಕೆಳಗೆ ಹೋದ.

ಅವನು ಊಟ ಮಾಡುವಾಗ ತಾಯಿ ಕೇಳಿದಳು. 'ಏನಾಯಿತೊ? ಯಾವಾಗಲೂ ರಜೇದಿನ ಮನೆಯಲ್ಲೇ ಇರೋದಿಲ್ಲ ನೀನು. ಇವತ್ತೇನು ಮನೆಯೊಳಗೆ ಕೂತು ಬಿಟ್ಟೆ? ಮೈಸರಿಯಿಲ್ಲವೆ?'

ಶಾರದಮ್ಮ ಅವನ ಮೈಮುಟ್ಟಿ ನೋಡಿದರು. ಏನೂ ಇರಲಿಲ್ಲ. ಸರಿಯಾಗಿಯೇ ಇದ್ದ. ಅವನೇನೂ ಉತ್ತರ ಕೊಡಲಿಲ್ಲ. ಮಾತಾಡದೆ ಉಂಡು ಮುಗಿಸಿದ.

"ಸರಿ! ಏನೋ ಬಿಸಾಡಿ ಹಾಕಿದೀ ಅಂತ ಕಾಣುತ್ತೆ. ಅದೇ ಕಳ್ಳನ ಹಾಗೆ ನೋಡ್ತಾ ಇದ್ದೀ! ಹಾವೇನೋ?' ಅಂದಳು ತಾಯಿ ಅವನ ಊಟವಾದ ಮೇಲೆ.

ಗೋಪಾಲನಿಗೆ ೧೫ ವರ್ಷ ವಯಸ್ಸು. ೯ನೇ ತರಗತಿಯಲ್ಲಿ ಕಲಿಯುತ್ತಿದ್ದ. ಪಾಠದಲ್ಲಿ ದಡ್ಡನಲ್ಲದಿದ್ದರೂ ಆಟದಲ್ಲಿ ಬಲು ಗಟ್ಟಿಗ. ವಸ್ತುಗಳನ್ನು ಬಿಸಾಡಿ ಮನೆಗೆ ಬರುವುದರಲ್ಲಿ ಅದಕ್ಕಿಂತಲೂ ಗಟ್ಟಿಗ. ಪುಸ್ತಕ, ಪೆನ್ಸಿಲು, ಪೇನಾ ಮುಂತಾದುವನ್ನು ಕಳೆಕೊಳ್ಳುವುದರಲ್ಲಿ ಇಡೀ ಶಾಲೆಯೊಳಗೆ ಅವನೇ ಮೊದಲನೆಯವನಂತೆ. ಏನೋ ಶ್ರೀಮಂತ ದೇಶಸೇವಕ ಶಂಕರ್‍ರಾಯರ ಮಗನಾದುದರಿಂದ ಸರಿ ಹೋಯಿತು. ಸಾಮಾನ್ಯರಿಂದ ಇಂತಹ ಹುಡುಗನ ವಿದ್ಯೆಯನ್ನು ಸಮಾಳಿಸಿಕೊಳ್ಳಲಾದೀತೆ? ತಿಂಗಳಿಗೊಂದು ಫೌಂಟನ್ ಪೆನ್ನು, ಆಗಾಗ ಪೆನ್ಸಿಲು, ಪುಸ್ತಕ ಹೀಗೆ ಏನೋ ಒಂದು ಹೋಗಲಾಡಿಸಿಕೊಂಡು ಮನೆಗೆ ಬರುತ್ತಿದ್ದ. ಇವನ ಮರವೆ ಪರಧ್ಯಾನಗಳನ್ನು ಚೆನ್ನಾಗಿ ಅರಿತುಕೊಂಡ ಕಳ್ಳ ಹುಡುಗರು, ಅದನ್ನು ಸಮಯ ನೋಡಿ ಸರಿಯಾಗಿ ಉಪಯೋಗಿಸಿಕೊಳ್ಳುತ್ತಿದ್ದರು.

ಶಂಕರ್‍ರಾಯರು ಮಗನನ್ನು ಸುಮ್ಮನೆ ಬಿಡುವರೆಂದು ತಿಳಿಯಬಾರದು. ಒಂದು ನಯಾಪೈಸಾವನ್ನು ನೂರು ನಯಾ ಪೈಸೆಗಳಂತೆ ಭಾವಿಸುವರಾದುದರಿಂದಲೇ ಅಷ್ಟು ಶ್ರೀಮಂತರಾಗಿದ್ದಾರೆ. ಅಂತಹರು ಗೋಪಾಲನಿಂದಾಗುವ ನಷ್ಟಗಳನ್ನು ಸಹಿಸಿಕೊಳ್ಳುವುದುಂಟೆ? ಎಷ್ಟೋ ಬೈಗಳು, ಎಷ್ಟೋ ಪೆಟ್ಟುಗಳನ್ನು ತಿಂದಿದ್ದಾನೆ ಗೋಪಾಲ. ಇತ್ತೀಚೆಗೆ ತಾನೇ ಮೂರು ರೂಪಾಯಿಯ ಫೌಂಟನ್ ಪೆನ್ನನ್ನು ಬಿಸಾಡಿ ಬಂದುದಕ್ಕೆ ಅವನ ತೊಡೆಯಲ್ಲಿ ಅಷ್ಟು ಎಬ್ಬಿಸಿದ್ದರು ತಂದೆ.

ಮತ್ತೀಗ ಏನಾಯಿತೊ? ಅವನ ಗಾಢ ಮೌನವನ್ನು ನೋಡಿದರೆ ಏನೋ ಬೆಲೆಬಾಳುವ ವಸ್ತುವನ್ನೇ ಕಳೆದುಕೊಂಡಿದ್ದ ಹಾಗೆ ಕಾಣುತ್ತದೆ. ತಾಯಿ ನಯಭಯಗಳಿಂದ ಬಹಳವಾಗಿ ಕೇಳಿದ ಮೇಲೆ ಚರಿತ್ರೆ ಪುಸ್ತಕ ಕಾಣೋದಿಲ್ಲ ಎಂಬ ಗುಟ್ಟು ಹೊರಟಿತು. ಅಯ್ಯೋ! ಐದೂವರೆರೂಪಾಯಿ ಬೆಲೆಯ ವಿಶೇಷ ಪುಸ್ತಕವದು. ಮೊನ್ನೆ ಶಾಲೆಯಿಂದ ಮನೆಗೆಬರುವಾಗ ಚೀಲದಲ್ಲಿ ಇತ್ತೆನ್ನುತ್ತಾನೆ. ನಿನ್ನೆ ಬೆಳಗ್ಗೆ ಓದಲು ನೋಡಿದಾಗ ಕಾಣುವುದಿಲ್ಲವಂತೆ. ನಿನ್ನೆ ಶಾಲೆಯಲ್ಲಿಯೂ ನೋಡಿದನಂತೆ. ಇಲ್ಲವಂತೆ.

"ಸುಳ್ಳು. ಶಾಲೆಯಲ್ಲಿಯೇ ಯಾವನೋ ಕಳ್ಳ ಹುಡುಗನಿಗೆ ಕದಿಯುವ ಹಾಗೆ ಚಲ್ಲಿಕೊಟ್ಟು ಮನೆಗೆಬಂದಿದ್ದೀ! ಛೀ! ನಿನ್ನ ಈ ಹಣೇಬರ ನೋಡಿಯೇ ಇಟ್ಟಿದ್ದಾರೋ ಎಲ್ಲಾ ಹುಡುಗರೂ! ಶಾಲೆಗೆಹೋಗಿ ಮಾಸ್ತರಹತ್ರ ಹೇಳಿ ಆ ಕಳ್ಳನನ್ನು ಕಂಡುಹಿಡಿಸೀ ಅಂತ ಎಷ್ಟು ಹೇಳಿ

(೧೫ನೇ ಪುಟ ನೋಡಿರಿ)

ವೈದ್ಯರತ್ನಂ ಪಿ. ಎಸ್. ವಾರಿಯರ್‌ರ

ಆರ್ಯ ವೈದ್ಯ ಶಾಲಾ,

ಕೋಟ್ಟಕಲ್ (ಕೇರಳ ರಾಜ್ಯ)

ಸ್ಥಾಪನೆ: 1902.

ಹೆಡ್ ಆಫೀಸು: ಕೋಟ್ಟಕಲ್ ಫೋನ್ ನಂ. 44 (ತಿರೂರು)

ಶಾಖೆಗಳು:

1. ಕೋಝಿಕೋಡ್ (ಫೋನ್ ನಂ. 2155) ಕಲ್ಲಾಯಿ ರೋಡ್.
2. ತಿರೂರು (ಫೋನ್ ನಂ. 31) ಸ್ಟೇಶನ್ ರೋಡ್.
3. ಪಾಲ್ಘಾಟ್ (ಫೋನ್ ನಂ. 104) ವಡಕ್ಕಂತರ.
4 ,, ಸೇಲ್ಸ್ ಡಿಪೋ, ಜಿ. ಬಿ. ರೋಡ್.
5. ಎರ್ನಾಕುಳಂ (ಫೋನ್ ನಂ. 674) ಮಹಾತ್ಮಾ ಗಾಂಧೀ ರೋಡ್.
6. ತ್ರಿವೇಂಡ್ರಮ್ (ಫೋನ್ ನಂ. 3924) ಸ್ಟೇಚು ರೋಡ್.
7. ಈರೋಡು (ಫೋನ್ ನಂ. 172) ಮುನ್ಸಿಪಾಲ್ ಬಸ್ ಸ್ಟ್ಯಾಂಡಿನ ಎದುರು.

ಕೋಟ್ಟಕಲ್‌ನಲ್ಲಿರುವ ನಮ್ಮ ಹೆಡ್ ಆಫೀಸು ಮತ್ತು ಶಾಖೆಗಳಲ್ಲಿ ಶುದ್ಧ ಸ್ಟಾಂಡಾರ್ಡ್ ಆಯುರ್ವೇದಿಕ್ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯಾಧಿಕಾರಿಯವರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಝಿಚಿಲ್, ನವರಕಿಝಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳನ್ನು ನಮ್ಮ ಪ್ರಧಾನ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್

ಇಲ್ಲಿ ನಡೆಸಲಾಗುತ್ತದೆ.

ಮೆನೇಜಿಂಗ್ ಟ್ರಸ್ಟಿ.

ಅತ್ತ ಪ್ರಾಂತದ ಹೆಸರೂ ಕನ್ನಡವಾಗಲಿಲ್ಲ— ಇತ್ತ ಕನ್ನಡದ ಪೂರ್ತ ನೆಲವೂ ನಮಗುಳಿಯಲಿಲ್ಲ

ತನ್ನದೆಂಬ ರಾಜ್ಯವನ್ನು ಪಡೆಯುವುದಕ್ಕೆ ನಾನಾ ಪರಿಯ ವಿಘ್ನ ವಿಚ್ಛಿದ್ರಗಳನ್ನು ಧೈರ್ಯದಿಂದ ಎದುರಿಸಬೇಕಾದ ಕನ್ನಡಿಗರಿಗೆ ಪ್ರಶಾಸಕರ ರಾಜಕೀಯ ಚದುರಂಗದಾಟದಿಂದ ಸ್ವಾತಂತ್ರ್ಯದ ಫಲ ಕನಸಿನಲ್ಲಿ ಕಂಡ ಭತ್ತದ ಗೋಣಿಯಂತಾಗಿದೆ; ಕನ್ನಡಿಗರು ಆತ್ಮಾಭಿಮಾನಶೂನ್ಯರಾಗಿರುವುದೇ ಇದಕ್ಕೆ ಕಾರಣವಿರಬಹುದೆ?

ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯ.

ದೇಶವು ಸ್ವತಂತ್ರವಾಗಬೇಕೆನ್ನುವಷ್ಟೇ ಉತ್ಸಾಹದಲ್ಲಿ, ಅದೇ ಹಿರಿಯ ಆದರ್ಶದಿಂದ ಪ್ರಾಂತಗಳ ಪುನರ್‌ವರ್ಗೀಕರಣಕ್ಕೂ ಚಳವಳಿ ನಡೆಯಿತು. ದೇಶ ಸ್ವಾತಂತ್ರ್ಯದ ಹೋರಾಟ ವಿದೇಶೀಯ ರಾಜರೊಡನಾದರೆ ಪ್ರಾಂತೀಕರಣಕ್ಕಾಗಿ ಹೋರಾಟ ನಮ್ಮವರೇ ಆದ ಪ್ರಜಾಪಾಲಕರೊಡನೆ ನಡೆಯಬೇಕಾಯಿತು. ಪ್ರಾಂತಗಳ ಪುನರ್ ವರ್ಗೀಕರಣಕ್ಕೆ ಇರುವ ಮಾರ್ಗ ಒಂದೇ—ಅದೇ ಭಾಷಾವಾರು ರೀತ್ಯ ಎಂಬ ತತ್ವ ಸರ್ವ ಸಮ್ಮತವಾಗಿ ಒಪ್ಪಿಗೆಯಾಗಿದ್ದರೂ ಆಚರಣೆಗೆ ಬರುವುದು ತಡವಾಯಿತು. ಅಲ್ಲೂ ರಾಜಕೀಯದ ಪಗಡೆಯಾಟ ನಡೆಯಿತು. ದಾಕ್ಷಿಣಾತ್ಯರ ವಿಶ್ವಾಸಗಳಿಸಲು ಉತ್ತರದ ವರಿಷ್ಠ ಕಾಂಗ್ರೆಸ್ ನಾಯಕರು ಒಂದೊಮ್ಮೆ ಅವರ ಬೇಡಿಕೆಗಳನ್ನು ಪೂರೈಸಿಕೊಡುವುದಾಗಿ ಆಶ್ವಾಸನೆ ಇತ್ತಿದ್ದರೂ ಅಧಿಕಾರ ತಮ್ಮ ಕೈಗೆ ಬಂದಮೇಲೆ ಉತ್ತರೇಯರೇ ಬಹ್ವಂಶವಾಗಿರುವ ಅಖಿಲ ಭಾರತ ಕಾಂಗ್ರೆಸ್ಸು ಭಾಷಾಪ್ರಾಂತ ತತ್ವವನ್ನೇ ಹಳಿಯತೊಡಗಿತು.—ಒಂದೆರಡು ಕಡೆ ದೇಶೀಯ ಸಂಸ್ಥಾನಗಳನ್ನೇ ಪ್ರಾಂತಗಳ ಮೇಲೆ ಸವಾರಿಮಾಡಲೂ ಬಿಟ್ಟಿತು. ದೇಶೀಯ ಸಂಸ್ಥಾನಗಳಂತಹ ಸಣ್ಣ ಪುಟ್ಟ ಘಟಕಗಳ ಅಸ್ತಿತ್ವವನ್ನೇ ವಿರೋಧಿಸಿ—ರಾಜರನ್ನೆಲ್ಲ ಮನೆಗೆ ಕಳಿಸಿದ ಕಾಂಗ್ರೆಸ್ಸು ಕೆಲವೊಂದು ಸಂಸ್ಥಾನಗಳಿಗೆ—ಕೇವಲ ಭಾಷಾಪ್ರಾಂತ ತತ್ವವನ್ನು ಸದೆಬಡಿಯುವ ದೃಷ್ಟಿಯಿಂದ—ಜೀವದಾನ ನೀಡಿತು. ಅಂತಹವುಗಳಲ್ಲಿ ಹೈದರಾಬಾದೂ ಒಂದು. ದೇಶದ ನಡುಹೊಟ್ಟೆಯಲ್ಲಿ ಇದೊಂದು ಎಷ್ಟುದೊಡ್ಡ ವ್ರಣವಾಗಿ ಉಳಿದಿತ್ತು ಎಂಬುದು ತಿಳಿದೂ—ಆಂಧ್ರಕ್ಕೆ ಪ್ರಾಂತ ನೀಡಲು ಇಷ್ಟವಿಲ್ಲದೆ—ನಿಜಾಮರಿಗೆ ಅಲ್ಲಿನ ಪಟ್ಟಕಟ್ಟಿದರು.—ತಿರುಕೊಚ್ಚಿ, ಮೈಸೂರುಗಳು ಅಂತೆಯೇ ಉಳಿದುಕೊಂಡುವು.

ಬಲಇದ್ದವರು ಗೆದ್ದರು. ಆಂಧ್ರರು ಆದಿಯಿಂದಲೂ ಉಗ್ರಗಾಮಿಗಳು, ಸ್ವಚ್ಛಂದ ರಾಷ್ಟ್ರಪ್ರೇಮಿಗಳು. ರಾಷ್ಟ್ರಕ್ಕಾಗಿ ದೇಹತ್ಯಾಗಮಾಡಲೂ ಹಿಂಜರಿಯದ ಕಲಿಗಳು. ಗಣನೀಯರಾದ ಅಖಿಲ ಭಾರತ ರಾಷ್ಟ್ರನಾಯಕರನ್ನೂ, ಕಲಾವಿದರನ್ನೂ, ಸಾಹಿತಿಗಳನ್ನೂ, ತಜ್ಞರನ್ನೂ ದೇಶಕ್ಕೆ ಅರ್ಪಿಸಿದ ಕೀರ್ತಿ ಆಂಧ್ರಕ್ಕೆ ಸಲ್ಲುತ್ತದೆ. ಎಂದೂ ಅವರು ತಮ್ಮ ಆತ್ಮ ವಿಶ್ವಾಸ, ಆತ್ಮ ಗೌರವವನ್ನು ಬಿಟ್ಟುಕೊಟ್ಟವರಲ್ಲ. ಐತಿಹಾಸಿಕ ಅವಘಡದಿಂದಾಗಿ ಅವರು ತಮಿಳರ ಕೈಕೆಳಗಿರಬೇಕಾಗಿ ಬಂದರೂ, ಮದ್ರಾಸಿನಲ್ಲಿ ಅವರು ತಮಿಳರೊಡನೆ ಜತೆಯಾಗಿ ದುಡಿದು ಮಾಜಿ ಮದ್ರಾಸಿನ ಮೇಲ್ಮೆಗೆ ಕಾರಣರಾಗಿದ್ದರು—ದೇಶ ಸ್ವಾತಂತ್ರ್ಯ ಪಡೆದ ಮೇಲೂ ತಾವು ಮದ್ರಾಸಿನಲ್ಲಿಯೇ ಉಳಿಯಬೇಕೆ? ಹೋರಾಟ ನಡೆಯಿತು. ಕೇಂದ್ರದ ನಾಯಕರ ಅವಿಶ್ವಾಸಕ್ಕೆ ಪಾತ್ರರಾಗಿ ತಮ್ಮ ಸ್ಥಾನಕ್ಕೆ ಧಕ್ಕೆ ಬಂದೀತೆಂದಾದರೂ ಆಂಧ್ರ ನಾಯಕರಾರೂ, ಪ್ರಾಂತ್ಯ ಚಳವಳಿಯಲ್ಲಿ ಹಿಂದೇಟು ಹಾಕಲಿಲ್ಲ. ಸತ್ಯಾಗ್ರಹವೂ ನಡೆಯಿತು. ಧೀರರಾಗಿ ಪಾಷ್ಟ್ಯದಿಂದ ಹೋರಾಡಿದರು. ಪ್ರಾಣಾರ್ಪಣ ಗೈದಾದರೂ ಪ್ರಾಂತ್ಯ ಪಡೆದೇ ಬಿಟ್ಟರು. ಇಂದಿಗೂ ದೇಶದಲ್ಲಿ ಆಂಧ್ರ ಒಂದು ಗಣನೀಯ ಸ್ಥಾನವನ್ನು ಪಡೆದಿದೆ. ಇಂದಿನ ಕಾಂಗ್ರೆಸ್ ಅಧ್ಯಕ್ಷರೇ ಅದಕ್ಕೆ ಸಾಕ್ಷಿ. ತಮ್ಮ ಪ್ರಾಂತ್ಯವನ್ನು ಹೈದರಾಬಾದ್ ಎಂದು ಕರೆಯಲಿಲ್ಲ. ತೆಲಂಗಾಣ ಎಂದೂ ಕರೆಯಲಿಲ್ಲ—ಆಂಧ್ರ ಪ್ರಾಂತ ಎಂದೇ ಕರೆದರು.

ಇತ್ತ ಮೈಸೂರು—ಮೈಸೂರ ರಾಜಕೀಯ ಬಲ್ಲವರಿಗೆಲ್ಲರಿಗೂ ಇಲ್ಲಿನ ಸ್ಥಿತಿ ತಿಳಿದಿರಬೇಕು. ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೂ ಮೈಸೂರು ಆರ್ಕಾಟರ ದಬ್ಬಾಳಿಕೆಗೆ ಒಳಪಟ್ಟಿತ್ತು. ಆರ್ಕಾಟರು ಮೈಸೂರಿಗೆ ಪ್ರಜಾಪ್ರಭುತ್ವವನ್ನು ನಿರಾಕರಿಸಿದ್ದರು. ಚೆಂಗಲರಾಯ ರೆಡ್ಡಿ ಭಾಷ್ಯಂ ಅಯ್ಯಂಗಾರ ಮುಂತಾದ ಹಿರಿಯ ಕಾಂಗ್ರೆಸ್ ನಾಯಕರ ನೇತೃತ್ವದಲ್ಲಿ ಮೈಸೂರ ಸ್ವಾತಂತ್ರ್ಯ ಚಳವಳಿ ನಡೆಯಿತು—ಅಖಿಲ ಕರ್ಣಾಟಕದ ಜನತೆ ಈ ಚಳವಳಿಗೆ ಬೆಂಬಲ ನೀಡಿತು—ಧಾರವಾಡ, ಕಾರವಾರ, ಮಂಗಳೂರುಗಳಿಂದ ಸ್ವಯಂ ಸೇವಕರು ಮೈಸೂರಿಗೆ ಮುನ್ನುಗ್ಗಿದರು. ಮೈಸೂರು ಸ್ವತಂತ್ರವಾದರೆ ಕರ್ಣಾಟಕ ಏಕೀಕರಣವಾಗುತ್ತದೆ—ಆದಕ್ಕೆ ನಮ್ಮ ಬೆಂಬಲವಿದೆ. ಮೈಸೂರು ಸೇರಿದ ಅಖಂಡ ಕರ್ಣಾಟಕ ಪ್ರಾಂತ ನಿರ್ಮಾಣ ಆಗಬೇಕೆಂದೂ ಮೈಸೂರ ರಾಜಕಾರಣಿಗಳೂ, ಸಾಹಿತಿಗಳೂ ಈ ಅರ್ಧ ಶತಮಾನದಿಂದ ಹೋರಾಟ ನಡೆಸಿದ್ದರು—ಮೈಸೂರಿಗೂ ಪ್ರಜಾಪ್ರಭುತ್ವದ ಆಡಳಿತದ ಸೌಲಭ್ಯ ದೊರೆಯಿತು—ಏಕೀಕರಣವಾಗಬೇಕಲ್ಲವೆ?—ಮೈಸೂರು ಏಕೀಕರಣಕ್ಕೆ ಸಿದ್ಧವಾಗಿತ್ತು ಎಂದು ನಾನು ಖಂಡಿತವಾಗಿ ಹೇಳಬಲ್ಲೆ—ಆದರೆ? ಪ್ರತ್ಯೇಕ ಮೈಸೂರ, ಮೈಸೂರು ವೈಶಿಷ್ಟ್ಯ—ಮುಂತಾದ ಏಕೀಕರಣದ ವಿರುದ್ಧದ ಮಾತು ಎಲ್ಲಿಂದ ಬಂತು?—ಸ್ವಭಾವವಾಗಿ ಭಾಷಾ ಪ್ರಾಂತ್ಯವನ್ನು ವಿರೋಧಿಸಿದ ಕಾಂಗ್ರೆಸ್ಸು ಮೈಸೂರಿಗೆ ಪ್ರತ್ಯೇಕ ಸ್ಥಾನವನ್ನು ದೊರಕಿಸಿ ಕೊಟ್ಟಿತು. ಮೈಸೂರು ರಾಜಕಾರಣಿಗಳಿಗೆ ದೆಹಲಿಯಿಂದ ಕಿವಿ ಮಾತು ಬಂತು. ರಾಜಕೀಯದಲ್ಲಿ ಮತ್ತೆ ಚದುರಂಗದಾಟ ನಡೆಯಿತು. ನಾಲ್ಕು ಕಾರ್ಖಾನೆಗಳಿದ್ದ ಮಾತ್ರಕ್ಕೆ ಮೈಸೂರಿಗರು ತಮ್ಮ ವೈಶಿಷ್ಟ್ಯದ ಮಾತು ಆಡಿದರು.

ಆಂಧ್ರಕ್ಕೆ ಪ್ರಾಂತವಿತ್ತ ಮೇಲೆ, ಇತರ ಪ್ರಾಂತಗಳ ಚಳವಳಿಯ ಬಿಸಿ ದೆಹಲಿಗೆ ಮುಟ್ಟಿತು. ಎಂತಾದರೂ, ಏನಾದರೂ ಕಾಂಗ್ರೆಸ್ಸನ್ನೇ ಗೆಲ್ಲಿಸಲು ಸದಾ ಪಣತೊಟ್ಟ ನೆಹರುಗಳು ಐವತ್ತೇಳರ ಚುನಾವಣೆಗೆ ಪ್ರಾಂತಗಳ ವರ್ಗೀಕರಣದ ದಾಳ ಹೊಡಿದರು. ಆತ್ಮಸಾಕ್ಷಿಯಾಗಿ ಭಾಷಾ ಪ್ರಾಂತವನ್ನು ವಿರೋಧಿಸಿದ ನೆಹರುಗಳಿಗೆ ಈಗ ರಾಜಕೀಯದ ಗೆಲುವಿನ ದೃಷ್ಟಿಯಿಂದಲಾದರೂ, ತತ್ವವನ್ನು ಮತ್ತೆ ಒಪ್ಪಿಕೊಳ್ಳಲು ಘನತೆ ಬಿಡಲಿಲ್ಲ—ಅಂತೂ ಪ್ರಾಂತಗಳು ಪುನರ್ ವರ್ಗೀಕರಿಸಲ್ಪಟ್ಟವಾದರೂ ಹಲವು ಸಮಸ್ಯೆಗಳನ್ನು ಬಗೆಹರಿಸದೆ ಉಳಿಸಿದುವು.

ಕರ್ಣಾಟಕ ಪ್ರಾಂತವೆಂಬ ಹೆಸರಿನ ಹಳೆಯ ಮೈಸೂರಿನ ವಿಸ್ತರಣದ ಕಾರ್ಯ ನಡೆಯಿತು. ಐ. ಸಿ. ಎಸ್. ಅಧಿಕಾರಿಗಳಿಂದ ಸುವ್ಯವಸ್ಥಿತವಾದ ರೀತಿಯಲ್ಲಿ ಆಳಲ್ಪಟ್ಟ ರಾಜ್ಯಾಂಗದ A ವಿಭಾಗದ ಜಿಲ್ಲೆಗಳನ್ನು ರಾಜ್ಯಾಂಗದ B ವಿಭಾಗದೊಂದಿಗೆ ವಿಲಯನಗೊಳಿಸುವ ಕಾರ್ಯ ನಡೆಯಿತು. ಈ ಘಟನೆಯನ್ನು ನೆನಸಿಕೊಂಡಾಗಲೆಲ್ಲ ನನಗೆ ಕೌರವೇಶ್ವರನು ಪಾಂಡವರನ್ನು ಮೋಸಗೊಳಿಸಲು ವೈಶಂಪಾಯನ ಕೆರೆಗೆ ಅಡಿ ಹಿಂದಿಟ್ಟು ನಡೆದ ಸಂಗತಿ ನೆನಪಾಗುತ್ತದೆ—ಪ್ರಾಯಶಃ ರಾಜಕಾರ್ಯ ಎಂದರೆ ತಾತ್ಕಾಲಿಕ ಯಶಸ್ಸಿಗಾಗಿ ಮಾಡಿದ್ದೆಲ್ಲ ಧರ್ಮ ಎಂದು ತೋರುತ್ತದೆ.

ಸಂಸ್ಥಾನಗಳ ಮೇಲೆ ಸಂಸ್ಥಾನದ ಶಿಖರಗಳು ಸರದಾರರ ವಜ್ರಾಯುಧಕ್ಕೆ ಬಲಿಯಾಗುತ್ತಿದ್ದಾಗ ತನ್ನ ಸರದಿಗಾಗಿ ಕಾಯುತ್ತಿದ್ದ ಮೈಸೂರು—ಇತರ ಕನ್ನಡದ ಭಾಗಗಳೊಡನೆಯಾದರೂ ಸೇರಿಕೊಂಡರೆ ತನ್ನ ಅಸ್ತಿತ್ವ ಉಳಿದೀತೋ ಎಂದು ತಪಿಸುತ್ತಿದ್ದ ಮೈಸೂರಿಗೆ ತಾನಾಗಿಯೇ ಚಿರಂಜೀವಿ ಪಟ್ಟ ದೊರಕಿದಾಗ ತಮ್ಮ ಹೆಗ್ಗಳಿಕೆಯ ಕುರಿತು ಮೈಸೂರು ಆಡಿಕೊಳ್ಳದೇ ಉಳಿದೀತೇ—ತಪ್ಪು ಮೈಸೂರಿನವರದ್ದಲ್ಲ—ಭಾರತದ ರಾಜಕಾರಣಿಗಳದ್ದು—ಅರ್ಥಾತ್ ಕಾಂಗ್ರೆಸ್ಸಿನದ್ದು.

ಭಾರತದ ಚರಿತ್ರೆಯಲ್ಲೇ ಪ್ರಾಂತಗಳನ್ನು ಹೆಸರಿಸುವಾಗ ಒಂದು ತತ್ವವನ್ನು ಅನುಸರಿಸಿದ್ದುದು ಸ್ಪಷ್ಟವಾಗಿ ಕಾಣುತ್ತದೆ. ಅಂತಹ ತತ್ವ ವಿಶಾಲ ಮನೋಭಾವವನ್ನು ವ್ಯಕ್ತಪಡಿಸುತ್ತಿದೆಯಲ್ಲದೆ ಸಂಕುಚಿತ ಮನೋಭಾವಕ್ಕೆ ಎಡೆಕೊಡುವಂತಿಲ್ಲ. ಇತ್ತೀಚೆಗೆ ರಚಿತವಾದ ಮಹಾರಾಷ್ಟ್ರ—ಗುಜರಾತ ಪ್ರಾಂತಗಳು ತಮ್ಮ ನೆಲಕ್ಕೆ—ತಮ್ಮ ಕುಲಕ್ಕೆ ತಕ್ಕ ಹೆಸರಿನ್ನಿರಿಸಿಕೊಂಡಿವೆ—ನಮ್ಮದು ಹಾಗಲ್ಲ. ಕಾಲಿನ ಹೆಸರು ತಲೆಗೆ—ಭಾಷೆ ಕನ್ನಡ, ಸಂಸ್ಕೃತಿ ಕನ್ನಡ, ಇತಿಹಾಸ ಕನ್ನಡ— ಆದರೆ ಯಾವದೊ ರಾಜಕೀಯ ಒಪ್ಪಂದಕ್ಕಾಗಿ ಯಾರನ್ನೋ ಒಲಿಸಿಕೊಳ್ಳಲು— ಮೈಸೂರ ಹೆಸರನ್ನು ಒಪ್ಪಬೇಕು. ಅಂದು ರಾಜಕೀಯದ ದಾಳವಾಗಿ ಮೈಸೂರನ್ನು ಉಪಯೋಗಿಸಿಕೊಂಡ ವರಿಷ್ಠ ರಾಜಕಾರಣಿಗಳು ಇಂದು ಮೈಸೂರು ಬೇಡ ಕರ್ಣಾಟಕ ಎಂದು ಒಪ್ಪಿಕೊಳ್ಳಿ ಎನ್ನಲು ಧೈರ್ಯ ಸಾಲದಾಗಿದ್ದಾರೆ—ಶಿಷ್ಯ ಗುರುವಿಗೇ ತಿರುಮಂತ್ರ ಹೇಳಿದ ಕತೆ ಇದು. ಈ ದಿಟ್ಟತನದ ಹೆಜ್ಜೆ ಮಹಾರಾಷ್ಟ್ರದಲ್ಲಿ—ಆಂಧ್ರದಲ್ಲಿ ನಡೆಯಲಿಲ್ಲ. ಮುಂಬಯಿಯನ್ನು ಒಡೆಯಲಾರೆ ಎಂದವರು ಒಡೆದೇ ಬಿಟ್ಟರು. ಹಾಗೆಯೇ ದಬ್ಬಾಳಿಕೆಗೆ ಬಲಿಬಿದ್ದು ಬೆಳಗಾಂವಿಯೂ ಮಹಾರಾಷ್ಟ್ರಕ್ಕೆ ಕಾಣಿಕೆಯಾಗುವ ದಿನ ಬಂದೀತೆ ಎಂಬ ಭಯವಿದೆ.

ಲೇಖಕರು.

* * *

ಪ್ರಾಂತದ ಹೆಸರಿನ ಮಾತು ಹಾಗಿರಲಿ. ಪೂರ್ತ ಕನ್ನಡದ ಭಾಗವನ್ನಾದರೂ ನಾವು ಉಳಿಸಿಕೊಂಡಿವೆಯೆ? ಅದೂ ಇಲ್ಲ. ಕಾಸರಗೋಡು ಕೇರಳಕ್ಕೆ ಹೋಯಿತು. ಮೈಸೂರಿಗೆ ಕಾಸರಗೋಡಿನ ಕುರಿತು ಅಷ್ಟೇನೂ ಅಭಿಮಾನ ಇದ್ದಂತಿಲ್ಲ. ಕನ್ನಡಿಗರು ಎಂಬ ಸ್ವಾಭಿಮಾನಕ್ಕಿಂತ—ಮೈಸೂರು ಎಂಬ ಸಂಕುಚಿತಾಭಿಮಾನ ದೊಡ್ಡದಾದರೆ ಅಂತಹರಿಗೆ ಕಾಸರಗೋಡೂ ಬೇಡ—ಮತ್ತೊಂದೂ ಬೇಡ. ಕನ್ನಡಿಗರ ನಷ್ಟವೇನು ಸಣ್ಣದಲ್ಲ. ಅಂದು ಬಳ್ಳಾರಿಯನ್ನು ಮೈಸೂರಿಗೆ ಕೊಡುವಾಗ ಅದವಾನಿ, ಆಲೂರು, ರಾಯದುರ್ಗ ಬಿಟ್ಟೇ ಕೊಟ್ಟರು. ಶೋಲಾಪುರ, ಸೇಲಂ, ಅಕ್ಕಲಕೋಟೆ ಮುಂತಾದೆಡೆಗಳಲ್ಲಿ ಕನ್ನಡದ ಭಾಗಗಳು ಇನ್ನೂ ಇವೆ.—ಆದರೆ ಇಲ್ಲಿ ಮೈಸೂರಿನದೂ ತಪ್ಪಿದೆ. ನಮ್ಮದೂ ಕೊಂಚ ತಪ್ಪಿದೆ. ಮೈಸೂರು ತನ್ನ ಹಳೆಯ ಆಯಕಟ್ಟಿನಿಂದ ಹೊರಬರಲು ಇಚ್ಛಿಪಡಲಿಲ್ಲ. ಹೊಸತು ಎಷ್ಟು ಬಂದರೂ ಬರಲಿ. ನಮ್ಮಲ್ಲಿಂದ ಒಂದು ಇಂಚೂ ನೆಲವನ್ನು ನಾವು ಬಿಡಲಾರೆವು ಎಂದರು ಮೈಸೂರಿಗರು. ಕೋಲಾರದ ಚಿಂತಾಮಣಿಯ ಆಚಿನ ಭಾಗಗಳು ತೆಲುಗರಿಗೆ, ಬೆಳಗಾಂವಿಯ ಸ್ವಲ್ಪ ಭಾಗ ಮರಾಠಿಗರಿಗೆ ಒಪ್ಪಂದದಲ್ಲಿ ಬಿಡಬೇಕಾದೀತು—ಆದರೆ ಕಾಸರಗೋಡು ಹಾಗೂ ಬಳ್ಳಾರಿಯ ಉಳಿದ ತಾಲೂಕುಗಳು, ಇತ್ಯಾದಿ ಮತ್ತೆ ಕರ್ಣಾಟಕಕ್ಕೆ ಬರಬೇಕು. ಇದಕ್ಕೆ ಮೈಸೂರು ಒಪ್ಪೀತೆ? ನಾವು ಕಳಕೊಂಡ ಕಾಸರಗೋಡು—ಅದವಾನಿ, ಆಲೂರು, ರಾಯ

(೧೭ನೇ ಪುಟ ನೋಡಿರಿ)

ಗುಣಕ್ಕೆ! ರುಚಿಗೆ!! ತೃಪ್ತಿಗೆ!!!

ಭಾರತದ ಗೃಹಕೈಗಾರಿಕೋದ್ಯಮದಲ್ಲಿ ದಿನ ಒಂದಕ್ಕೆ

ಒಂದೂವರೆ ಕೋಟಿಗೂ

ಮೇಲ್ಪಟ್ಟು, ಬೀಡಿಗಳ ತಯಾರಿಕೆಯಿಂದ ರಾಷ್ಟ್ರದ

15,000

ದುಡಿಮೆಗಾರರಿಗೆ ಉದ್ಯೋಗವನ್ನೊದಗಿಸುತ್ತಿರುವ ಭಾರತದ ಬೃಹತ್ ಉದ್ಯಮದ ಉತ್ಪನ್ನಗಳು

—: ಪ್ರಧಾನ ಕಚೇರಿ :—

ಮಂಗಳೂರು ಗಣೇಶ ಬೀಡಿ ವರ್ಕ್ಸ್,

ಸಂತೇಪೇಟೆ, ಮೈಸೂರು.

Telegrams: **AROMA.** *Telephone:* **421.**

ರಾಜ್ಯದಲ್ಲಿ ಬೆಳೆಯುತ್ತಿರುವ ಸೇವೆ-ಸಂಘಗಳು

ಯಶಃಕಾಮಿಗಳು ತಮ್ಮ ಸ್ವಾರ್ಥಸಾಧನೆಗಾಗಿ ಸೇವಾಸಂಘಗಳ ಗುತ್ತೇದಾರಿಕೆಯನ್ನು ಪಡೆದುಕೊಂಡು ಸಮಾಜಸೇವಕರೆಂಬ ಗೌರವ ಪಡೆಯುತ್ತಾರೆ. ಆದರೆ, ವಾಸ್ತವಿಕ ಸೇವಕರು ಇವರಿಂದ ದೂರವಿದ್ದು ನಿಸ್ವಾರ್ಥ ದೃಷ್ಟಿಯಿಂದ ಆತ್ಮೋತ್ಸರ್ಗ ಮಾಡುತ್ತಾರೆ— ಇವರ ಹೆಸರು ಮಾತ್ರ ಗಾಳಿಯಲ್ಲಿ ಅಲೆದಾಡುವುದಿಲ್ಲ; ಅಷ್ಟೆ.

ಶ್ರೀ ತಡ್ಡಲಸೆ ವಿಶ್ವೇಶ್ವರ ಶರ್ಮಾ.

ನಮ್ಮ ರಾಜ್ಯದಲ್ಲಿಂದು ಪ್ರತಿಯೊಂದಕ್ಕೂ ಅನಿರ್ಬಂಧವಾಗಿ ಮಾಡಲಾಗುತ್ತಿರುವ ಸಂಘ, ಸಂಸ್ಥೆ, ಸಮಿತಿ, ಆಶ್ರಮ. ಗಳ ಚಟುವಟಿಕೆಗಳನ್ನು ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಸುದ್ದಿ ಅಥವಾ ವರದಿಗಳ ಮೇಲಿಂದ ನಿರೀಕ್ಷಿಸಿದಾಗ ನಮ್ಮಲ್ಲಿ ಯಾವುದಕ್ಕೂ ಕೊರತೆಯಿಲ್ಲವೆಂದು ಹೆಮ್ಮೆಪಡಬಹುದಾದರೂ ಇವುಗಳಲ್ಲಿ ಬಹಳಷ್ಟು ಸಂಘ ಸಂಸ್ಥೆಗಳೆಲ್ಲಾ ಸೇವೆಯ ಹೆಸರಿನಲ್ಲಿ ಅಧಿಕಾರಪಡೆಯುವುದಕ್ಕೋ, ಅಥವಾ ವೈಯ್ಯಕ್ತಿಕ ಇನ್ನಾವುದೋ ಕಾರಣಕ್ಕೋ ಇರಬೇಕೆಂದು ಊಹಿಸಿದರೆ ತಪ್ಪಾಗಲಾರದು. ಒಂದೊಂದು ಊರಿನಲ್ಲಿರುವ ಸಂಘ ಸಂಸ್ಥೆಗಳ ನಾಮಾವಳಿಗಳನ್ನು ಎಣಿಸಿದರೆ ತಲೆಗೊಂದು ಸಂಸ್ಥೆಗೇನೂ ಕಡಿಮೆಯಾಗಲಾರದು. ಇಷ್ಟು ಅಸಂಖ್ಯವಾಗಿ ಹುಲುಸಾಗಿ ಇವು ಬೆಳೆದು ನಿಂತಿವೆ.

ಸಂಖ್ಯೆಯಿಂದ ಇಷ್ಟು ಅಧಿಕವಾಗಿ ಬೆಳೆದುನಿಂತಂತೆ ಅವುಗಳ ಧ್ಯೇಯ—ಕಾರ್ಯಕ್ರಮಗಳ ವಿಸ್ತಾರದಲ್ಲೂ ಬೆಳೆದಿದ್ದರೆ--ನಮ್ಮ ರಾಜ್ಯಕ್ಕೆ ಯಾವ ಸಮಸ್ಯೆಯೂ ಯಾವ ಕೊರತೆಯೂ ಇರಲಿಲ್ಲವಾಗಿತ್ತು. ದೇಶವನ್ನು ಭದ್ರವಾಗಿ ಸಮೃದ್ಧವಾಗಿ ಇರಿಸಲು ಸಂಘ ಸಂಸ್ಥೆಗಳು ಬೆಳೆದಂತೆಲ್ಲಾ ದೇಶವು ಎದುರಿಸಬೇಕಾದ ಸಮಸ್ಯೆಗಳೂ ಅಧಿಕವಾಗುತ್ತ ಜಟಿಲವಾಗುತ್ತಲೇ ನಡೆದಿವೆ. ಹಲವು ಕಡೆಗಳಲ್ಲಂತೂ ಅವುಗಳ ಉಚ್ಚ ಉದ್ದೇಶಕ್ಕೆ ವ್ಯತಿರಿಕ್ತವಾಗಿ ತನ್ನ ಸ್ವಾರ್ಥಸಾಧನೆಗಾಗಿ ಅವನ್ನು ಗಾಳಯಲ್ಲಿ ತೂರಿಬಿಟ್ಟದ್ದೂ ಇದೆ. ಇನ್ನು ಕೆಲವು ಸಂಸ್ಥೆಗಳು ಬರೇ ವ್ಯಕ್ತಿಯ ಪ್ರತಿಷ್ಠೆ, ಪ್ರಭಾವ, ಪ್ರಚಾರಕ್ಕೆ ಉಪಯೋಗವಾಗುವುದೂ ಅಪರೂಪವೇನಲ್ಲ.

ಸಾಮಾನ್ಯ ಪ್ರತಿಯೊಂದು ಊರಿನಲ್ಲಿಯೂ ಸಂಘ ಸಂಸ್ಥೆಗಳ ಪಾತ್ರ ಹಿರಿದಾಗಿದೆ. ಪ್ರತಿಯೊಂದು ವಿಷಯಕ್ಕೂ ಸಂಘ ಕಟ್ಟಬೇಕು, ಸಂಸ್ಥೆ ಬೆಳೆಸಬೇಕು, ಎನ್ನುವ ಭಾವನೆ ಹಲವರಲ್ಲಿ ಬೆಳೆಯುತ್ತಿದೆ. ಹಾಗಾಗಿ ಒಂದು ಬದಿಯಲ್ಲಿ 'ಬ್ರಹ್ಮಚಾರಿಗಳ' ಸಂಸ್ಥೆ ಬೆಳೆಯುತ್ತಿದ್ದರೆ ಮತ್ತೊಂದು ಬದಿಯಲ್ಲಿ 'ವಿವಾಹ' ಸಂಸ್ಥೆ ತಲೆಯೆತ್ತುತ್ತಿದೆ ಇನ್ನೊಂದು ಬದಿಯಲ್ಲಿ 'ವಿಧವೆಯರ ಸಂಘ' ಸ್ಥಾಪನೆಯಾದರೆ ಮತ್ತೊಂದು ಊರಿನಲ್ಲಿ 'ವಿದುರರ ಬಳಗ' ಕಟ್ಟಲಾಗುತ್ತಿದೆ. ಅನಾಥಾ ಶ್ರಮದ ಬಗ್ಗೆ ಕೆಲವರು ಗಮನಕೊಟ್ಟರೆ ಕೆಲವರು ಸನಾತನಿಗಳಕುರಿತು ವಿಚಾರಿಸುತ್ತಿದ್ದಾರೆ. ಇನ್ನು ರಾಜಕೀಯ ಸಂಸ್ಥೆಯಂತೂ ಹೇಳತೀರದು. ಹೀಗೆ ಸಾಮಾಜಿಕ, ಧಾರ್ಮಿಕ, ರಾಜಕೀಯ ಮುಂತಾದ ನಮ್ಮ ದಿನಚರಿಯ ಎಲ್ಲ ಕಾರ್ಯಕಲಾಪಗಳಿಗೂ ಸಂಸ್ಥೆಯ ಹಾವಳಿ, ಸಂಪಿನ ಗದ್ದಲ, ಹೇಳ ತೀರದಷ್ಟು ಬೆಳೆದಿದೆ. ಆದರೂ ಈ ಸಂಸ್ಥೆಗಳಲ್ಲೆಲ್ಲಾ ಸೇವೆಯ ಹೆಸರಿನ ಗುತ್ತಿಗೇ ದಾರಿಕೆಯು ಗತ್ತುಗಾಂಕೆ ನಡೆದು ಸಂಘ ಸಂಸ್ಥೆಗಳೆಲ್ಲಾ ಕೆಲವರದೇ ಸೊತ್ತಾಗಿ ಸೇವೆಯ ಸ್ಥಾನವನ್ನು —'ಅಧಿಕಾರ' ಆಕ್ರಮಿಸಿ ಅವುಗಳ ಹೆಸರಿನ ಮೇಲೆಯೇ ಕಲಂಕ ಬರ ತೊಡಗಿದೆ. ಇವುಗಳ ಇತಿಹಾಸ ಹೀಗೆಯೇ ಬೆಳೆಯ ತೊಡಗಿದರೆ ಕೆಲ ದಿನಗಳಲ್ಲಿ ಸಂಘ ಸಂಸ್ಥೆಗಳೆಂದರೆ ಮೂಗು ಮುರಿಯುವ-ಅಸಹ್ಯ—ಜುಗುಪ್ಸೆ ಪಡುವ ಕಾಲ ಬರಬಹುದೆಂದು ಯಾರಿಗಾದರೂ ಅನ್ನಿಸುವಂತಿದೆ.

ಯಾಕೆಂದರೆ ಹತ್ತಿಪ್ಪತ್ತು ಸಾವಿರ ಜನ ಸಂಖ್ಯೆಯಿರುವ ಊರಿನಲ್ಲಿಯೂ ನೂರಾರು ಸಂಸ್ಥೆಗಳು ತಲೆಯೆತ್ತಿ ಆ ಸಂಸ್ಥೆಗಳಲ್ಲೆಲ್ಲಾ ಹತ್ತೆಂಟು ಜನರದೇ ಕೈವಾಡವಾಗಿ ಅವರದೇ ಅದು ಮಾಮೂಲು ಎನ್ನಿಸಿ ಸಂಸ್ಥೆಗಳ ಸತ್ವ-ಶಕ್ತಿಗಳೂ ಚಾರಿತ್ರ್ಯ ಶುದ್ಧಿಯೂ ಬೆಳೆಯದೇ ಇರುವಾಗ ಅದಕ್ಕೇನೆನ್ನಬೇಕು? ಪ್ರಜಾಪ್ರಭುತ್ವ ಆರಂಭವಾಗಿದ್ದರೂ ಸರ್ವಾಧಿಕಾರೀ ಮನೋಧರ್ಮ ಅಳಿದಿಲ್ಲವೆನ್ನುವದು ಇದರಿಂದ ಸ್ಪಷ್ಟವಾಗುತ್ತದೆ. ಪ್ರತಿಯೊಂದರಲ್ಲಿಯೂ ಸೇವೆ, ಅಧಿಕಾರಗಳ ಗುತ್ತಿಗೇ ದಾರಿಕೆಯೇ ನಡೆಯ ತೊಡಗಿದೆ.

ಈ ಹವ್ಯಾಸದಲ್ಲಿ ಯಾವ ಸಂಸ್ಥೆ ಯಾರಿಗೆ ಸಂಬಂಧ ಪಡುತ್ತದೆಂಬ ಭಾವನೆಯೂ ಅಳಿದು ಹೇಗಾದರೂ ಸಂಸ್ಥೆ ಕಟ್ಟಬೇಕು, ಸಂಸ್ಥೆಯಲ್ಲಿ ಸೇರಬೇಕು ಎನ್ನುವುದೊಂದೇ ಉದ್ದೇಶ ಇಟ್ಟುಕೊಂಡಿದ್ದು ಕಂಡು ಬರುತ್ತದೆ. ಕೆಲವು ಸಂಸ್ಥೆಯಲ್ಲಿ ಸೇರಿದ ಸೇರುತ್ತಿರುವ ಸದಸ್ಯರನ್ನೋ ಮುಖಂಡರನ್ನೋ ಕಂಡಾಗ ನಗು ಬರುವಷ್ಟು ವಿಚಿತ್ರವಾಗಿ ಬಿಟ್ಟಿದೆ. ವಿಧವೆಯರ ಸಂಸ್ಥೆಯಲ್ಲಿ ಬ್ರಹ್ಮಚಾರಿಗಳೂ,ಬ್ರಹ್ಮಚಾರೀ ಸಂಸ್ಥೆಯಲ್ಲಿ ವೇಶ್ಯೆಯರೂ ಅನಾಥರ ಸಂಸ್ಥೆಯಲ್ಲಿ ಸನಾಥರೂ ಸೇರಿ ವ್ಯವಹರಿಸುತ್ತಿರುವುದು ಅಪರೂಪವೇನೂ ಅಲ್ಲ.

ಇತ್ತೀಚೆ ಕೆಲವು ಗುತ್ತಿಗೇಪಡೆದ ಸಮಾಜ ಸೇವಕರನ್ನೂ—ಮುಖಂಡರನ್ನೂ ನಾವು ಕೇಳಬೇಕು,—"ಸ್ವಾಮೀ! ತಾವು ಯಾವ ಯಾವ ಸಂಸ್ಥೆಯಲ್ಲಿದ್ದೀರಿ?" ಎಂದು. ನಿಜವಾಗಿಯೂ ಅವರಿಗೆ ಸರಿಯಾಗಿ ನೆನಪೇ ಇರುವುದಿಲ್ಲ. ತಮ್ಮ ಕೆಲಸ ಮುಗಿದೊಡನೆ, ಅಥವಾ ಸಂಸ್ಥೆಯಲ್ಲಿ ಸೇರಿ

(೧೫ನೇ ಪುಟ ನೋಡಿರಿ)

ಸ್ವಾತಂತ್ರ್ಯ ದಿನದ ಶುಭಾಶಯಗಳು.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್

ಪ್ರಧಾನ ಕಚೇರಿ : ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣೆ ಮಾಡಿರಿ. ಬಡ್ಡಿ ಸೇಕಡಾ 5ರಂತೆ

ರೂ. **87-00** ಮೂರು ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ
ರೂ. **100-00** ಒದಗಿಸುವುದು.

ಕರೆ, ಚಿಕ್ಕ ಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಬಡ್ಡಿ ಸೇಕಡಾ 4¾ರ ವರೆಗೆ
ದೊಡ್ಡ ಠೇವಣೆಗಳ ಮೇಲೆ ಹೆಚ್ಚಿನ ಬಡ್ಡಿ.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ಸ್ಥಾಪನೆ : 1920.

ಕನ್ನಡದ "ಏಕಮಾತ್ರ" ಸಾಹಿತ್ಯಸಂಸ್ಥೆ

ಕನ್ನಡ ದೇಶದಲ್ಲಿ ಕನ್ನಡಕ್ಕೆ ಮನ್ನಣೆಯಿಲ್ಲದ ಕಾಲದಲ್ಲಿ ದುಃಖಿಸುತ್ತಿದ್ದ ವಿದ್ವಾಂಸರು ಸಾಹಿತ್ಯ ಸಂಸ್ಥೆಯನ್ನು ಕಟ್ಟಿ, ಅದನ್ನು ಸಾಹಿತ್ಯಾರಾಧಕರ ಗುಡಿಯಾಗಿಸಿದರು. ಮುಂದೆ ಸಾಹಿತ್ಯಕ್ಕೆ ಮೀಸಲಾದ ಪರಿಷತ್ತು ಕನ್ನಡನಾಡು, ನುಡಿಗಳ ಬರಿಯ ಒಂದು ಪ್ರಚಾರ ಸಂಸ್ಥೆಯಾಯಿತು. ಈಗದು ಅಧಿಕಾರದಲ್ಲಿರುವ ವ್ಯಕ್ತಿಗಳನ್ನು ಪ್ರಶಂಸಿಸುವ ಸಂಸ್ಥೆಯಾಗಿ ಪರಿಣಮಿಸಿದೆ— ಸಾಹಿತ್ಯ ಸಂಸ್ಥೆಯ ಲೋಪದೋಷಗಳನ್ನೂ ಮುಂದಿನ ಗಂಭೀರ ಸ್ಥಿತಿಯನ್ನೂ ಶ್ರೀ ಕಾರಂತರು ಪ್ರಕೃತ ಲೇಖದಲ್ಲಿ ಹೊರಗೆಡಹಿದ್ದಾರೆ.

ಶ್ರೀ ಶಿವರಾಮ ಕಾರಂತ.



ಲೇಖಕರು.

ನನ್ನೀ ಲೇಖನದಲ್ಲಿ ಸಾಹಿತ್ಯ ಪರಿಷತ್ತಿನ ಈಗಣ ಅಧ್ಯಕ್ಷರಾದ ಶ್ರೀಮಾನ್ ಶಿವಮೂರ್ತಿ ಶಾಸ್ತ್ರಿಗಳು ಆಗಾಗ ಉದ್ಗರಿಸುತ್ತಿರುವ 'ಕನ್ನಡದ ಏಕಮಾತ್ರ ಸಂಸ್ಥೆ'ಯಾದ ಪರಿಷತ್ತನ್ನೇ ಕುರಿತು, ನನಗೆ ತೋಚಿದ ನಾಲ್ಕು ವಿಚಾರಗಳನ್ನು ಹೇಳುತ್ತಿದ್ದೇನೆ. ಇದು 'ಏಕೈಕ ಸಂಸ್ಥೆ' ಎಂಬ ಕೂಗಿನಿಂದಲೇ ಶ್ರೀ ಶಾಸ್ತ್ರಿಗಳು ಸರಕಾರ ಸ್ಥಾಪಿಸಿದ ಅನೇಕ ಸಮಿತಿಗಳಲ್ಲಿ ಈ ಸಂಸ್ಥೆಯ ಏಕೈಕ ಪ್ರತಿನಿಧಿಗಳಾಗಿ ವಿರಾಜಿಸುವುದನ್ನು ಕಾಣಬಹುದು. ಈ ಏಕೈಕ ಸಂಸ್ಥೆ ಕನ್ನಡದಲ್ಲಿ ದುಡಿಯುವ ಸಾಹಿತಿಗಳ ಪಾಲಿಗೆ ಮಾತ್ರ ಒಂದು ಸಂತಾಪ ಸೂಚಕ' ಚಿಹ್ನೆಯೇ ಆಗಿದೆ ಹೊರತು, ಒಂದಿಷ್ಟೂ ಹೆಮ್ಮೆಗೆ ಕಾರಣವಾದ ಸಂಸ್ಥೆಯಾಗಿ ಉಳಿದಿಲ್ಲ. ಅದರ ಸಹವಾಸ ಸಾಹಿತಿಗಳೆನಿಸಿದವರಿಗೆ ಬೇಡವಾಗಿದೆ; 'ಸಂಸ್ಥೆ' ಬೇಕೆನ್ನುವ ಸಾಹಿತಿಗಳಿಗೂ ಶ್ರೀಯುತ ಶಾಸ್ತ್ರಿಗಳಂತಹ ಪ್ರಭೃತಿಗಳ ಸಮೀಪ ಹೋಗುವುದಕ್ಕೂ ಇಷ್ಟಬರಲಾರದು—ಎಂಬ ಸಂಗತಿ ಮಾತ್ರ ಅವರಿಗೆ ತಿಳಿಯುವಂತಿಲ್ಲ; ತಿಳಿಯುವುದು ಅವರಿಗೆ ಬೇಕಾಗಿಯೂ ಇಲ್ಲ. ಹಲವು ವರ್ಷಗಳ ಹಿಂದೆ ಈ ಸಂಸ್ಥೆಯನ್ನು ರೂಪಿಸಿ ಬೆಳೆಯಿಸಿ, ದೊಡ್ಡದು ಮಾಡಿ ಬಂದವರ ಧ್ಯೇಯಗಳಾಗಲಿ, ಅವರು ಸಲ್ಲಿಸಿದ ಸೇವೆಯ ರೂಪವಾಗಲಿ, ಅವರಲ್ಲಿದ್ದ ಸಾಹಿತ್ಯ ಶಕ್ತಿಯಾಗಲಿ ಈ ನಮ್ಮ ಪಂಡಿತೋತ್ತಮರಿಗೆ ಎಂದೆಂದೂ ಬರಲಾರದು. ಈ ಸಂಸ್ಥೆ ನನಗೆ ಸಲ್ಲಿಸಿದ ಮಾನಪತ್ರದಲ್ಲಿ ನಾನು ಬರೆಯದ ಪುಸ್ತಕಗಳನ್ನು ನನ್ನ ಹೆಸರಿಗೆ ತೊಡಿಸಬೇಕಾದರೆ, ಆ ವಿಚಾರವಾದ ಇವರ ಅಜ್ಞಾನ ಎಷ್ಟಿರಬೇಡ? 'ನಾನು ಬಾಲಪ್ರಪಂಚವನ್ನು ಶಿಶುಗಳಿಗಾಗಿಯೂ, ವಿಜ್ಞಾನ ಪ್ರಪಂಚವನ್ನು ಬಾಲಕರಿಗಾಗಿಯೂ ಬರೆದೆ'ನೆಂದು ಆ ಮಾನಪತ್ರದಲ್ಲಿ ಹೇಳಿದ್ದನ್ನು ಕಂಡರೆ, ಶಿಶು ಮತ್ತು ಬಾಲಕ ಎಂಬ ಸಾಮಾನ್ಯ ಶಬ್ದಗಳ ಅರ್ಥ ವ್ಯಾಪ್ತಿಯನ್ನು ತಿಳಿಯದಂಥವರು ಕನ್ನಡ ಸಾಹಿತ್ಯ ಪರಿಷತ್ತನ್ನೇ ನಡೆಯಿಸುತ್ತಾರೆಂದರೆ, ಕರ್ನಾಟಕದ ದುರ್ದೈವವೆಂದೇ ಹೇಳಬೇಕು. ಉಡುಪಿಯಲ್ಲಿ ಇತ್ತೀಚೆಗೆ ಇವರು, ಆ ಕ್ಷೇತ್ರಕ್ಕೆ ಉಪಮೆಯಾಗಿ 'ಧರ್ಮಕ್ಷೇತ್ರೇ ಕುರುಕ್ಷೇತ್ರೇ' ಎಂಬ ಗೀತಾ ವಾಕ್ಯವನ್ನು ಉದಹರಿಸಿ, ತಮ್ಮ ಪರಮ ಪಾಂಡಿತ್ಯದಿಂದ ಹಳ್ಳಿಯ ಜನಗಳಲ್ಲೂ ನಗು ಹುಟ್ಟಿಸಿದರು.

ಈ ಸಂಸ್ಥೆಯ ಇತಿಹಾಸ ಸಾಕಷ್ಟು ದುಃಖಪೂರಿತವಾದದ್ದು. 1916ರಲ್ಲಿ ಮತ್ತು ಅನಂತರ ನಂಗಪುರಂ ವೆಂಕಟೇಶ ಅಯ್ಯಂಗಾರ್, ಬೆಳ್ಳಾವೆ ವೆಂಕಟನಾರಣಪ್ಪಯ್ಯ, ಆಲೂರು ವೆಂಕಟರಾಯರು, ಕರ್ಪೂರ್ ಶ್ರೀನಿವಾಸರಾವ್ ಮೊದಲಾದ ಹಿರಿಯರು ಕನ್ನಡ ದೇಶದಲ್ಲಿ ಕನ್ನಡಕ್ಕೆ ಮನ್ನಣೆಯಿಲ್ಲದ ಸ್ಥಿತಿಯನ್ನು ಕಂಡು, ದುಃಖಿಸಿ, ಆ ಸ್ಥಿತಿಯನ್ನು ನಿವಾರಿಸಲು, ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿ ಬೆಳೆಯಿಸಿಕೊಂಡು ಬಂದರು. ದಿ| ವೆಂಕಟನಾರಣಪ್ಪನವರ ಕಾಲದ ತುಸುವಾದರೂ ಪರಿಚಯ ನನಗಿದೆ. ನಿಷ್ಠಾವಂತರಾದ ಅವರು, ಒಬ್ಬ ವ್ಯಕ್ತಿ ಎಷ್ಟೆಲ್ಲ ಕಷ್ಟಪಟ್ಟು ದುಡಿಯಬಹುದೋ ಅಷ್ಟೆಲ್ಲವನ್ನೂ ಇದಕ್ಕಾಗಿ ದುಡಿದರು. ಯಾರು ಬಳಿಗೆ ಬಾರದಿದ್ದರೂ, ತನ್ನ ಕೆಲಸ ಸಾಗಿಸಿಕೊಂಡು ಅದನ್ನು ನಡೆಯಿಸಿದರು. ಆಗ ಪರಿಷತ್ತಿಗೆ ಹೆಚ್ಚಿನ ರಾಜಾಶ್ರಯವಾಗಲಿ, ಜನಗಳ ಬೆಂಬಲವಾಗಲಿ ಇದ್ದಿರಲಿಲ್ಲ. ಆದರೂ, ಪರಿಷತ್ತು ಅನೇಕ ಕನ್ನಡ ಕಾವ್ಯಗಳನ್ನು ಬೆಳಕಿಗೆ ತರುವ ಪ್ರಯತ್ನ ಮಾಡಿತು. ಆ ಕಾಲದಲ್ಲಿಯೇ ಪ್ರತಿವರ್ಷವೂ ಸಮ್ಮೇಳನ ಜರಗಿಸುವ ಪ್ರಯತ್ನ ನಡೆಯಿತು. ಕನ್ನಡದಲ್ಲಿ ದುಡಿದ ಹಿರಿಯರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿ, ಅವರಿಗೆ ಗೌರವ ಸಲ್ಲಿಸುತ್ತ ಬಂದಿತು. ಸಾಹಿತ್ಯ ಪರಿಷತ್ ಪತ್ರಿಕೆಯನ್ನು ಹೊರಡಿಸಿ, ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಸಂಶೋಧನೆ ಮತ್ತು ವಿಮರ್ಶೆಗಳಿಗೆ ಪ್ರಧಾನಸ್ಥಾನ ಕೊಟ್ಟಿತು.

ಅಲ್ಲಿಂದ ಮುಂದೆ—ಪರಿಷತ್ತಿನ ಗೌರವವನ್ನು ಹೆಚ್ಚಿಸುವುದಕ್ಕೆ ಕಾರಣರಾದ ಇಬ್ಬರು ವ್ಯಕ್ತಿಗಳ ಹೆಸರನ್ನಷ್ಟೇ ನಾನಿಲ್ಲಿ ಹೇಳುತ್ತೇನೆ. ಅವರಲ್ಲೊಬ್ಬರು— ನಮಗೆ ಹಿರಿಯರಾಗಿರುವ ಶ್ರೀಮಾನ್ ಡಿ. ವಿ. ಗುಂಡಪ್ಪನವರು. ನಾನು ಪರಿಷತ್ತಿಗೆ ಕಾಲಿಟ್ಟದ್ದು ಅವರ ಕಾಲದಲ್ಲಿ. ಆಗ ಅವರ ಬೆಂಬಲಕ್ಕಿದ್ದ ವ್ಯಕ್ತಿಗಳನ್ನೆಲ್ಲ ನಾನು ನಿಕಟವಾಗಿ ಬಲ್ಲೆ. ಕನ್ನಡದ ಮೂಲಕ, ಕನ್ನಡದ ಜನರಲ್ಲಿ ಜ್ಞಾನಪ್ರಸಾರವಾಗಬೇಕು — ಎಂಬ ಉದ್ದೇಶದಿಂದ ಶ್ರೀ. ಡಿ. ವಿ. ಜಿಯವರು ಶ್ರದ್ಧೆಯಿಂದ ದುಡಿದರು. ಅವರಿಗೆ ಸರಕಾರದಲ್ಲಿದ್ದ ಪ್ರತಿಷ್ಠೆಯಿಂದಾಗಿ ಪರಿಷತ್ತು ನಡೆಯಿಸುತ್ತಿದ್ದ ಕೆಲಸಗಳಿಗೂ ಸರಕಾರದ ಪ್ರೋತ್ಸಾಹ ದೊರೆಯಿತು. ಈ ಕಾಲದ ಒಂದು ಮಹಾ ಪ್ರಯತ್ನ ಇಂಗ್ಲಿಷ್—ಕನ್ನಡ ಅರ್ಥಕೋಶ. ಈ ಕಾಲದಲ್ಲಿ ದುಡಿದ ಪರಿಷತ್ತಿನ ಜನರು ಆವೇಶ, ಪ್ರಚಾರಗಳ ಬೆಡಗಿಗೆ ತುತ್ತಾದವರಲ್ಲ. 'ಕೆಲಸ' 'ಕೆಲಸ' ಎಂದೇ ಕೂಗಿದವರು. ಅವರಲ್ಲಿ, ಕೆಲವರ ಮಾನಸಿಕ ಪ್ರತ್ಯೇಕತನ, ಮೈಸೂರೇತರ ಜನರಿಗೆ ಹಿಡಿಸದೆ ಹೋದರೂ, ಪರಿಷತ್ತಿನ ಗೌರವ ಕಡಿಮೆಯಾಗಲಿಲ್ಲ; ಸಾಹಿತಿಗಳಿಗೆ ಅದರಲ್ಲಿದ್ದ ಭರವಸೆಯೂ ಕಡಿಮೆಯಾಗಿರಲಿಲ್ಲ.

ಮುಂದಿನ ಪ್ರಭಾವಶಾಲಿ ಬದಲಾವಣೆಗೆ ಕಾರಣರಾದ ವ್ಯಕ್ತಿಗಳೆಂದರೆ ಶ್ರೀ ಬಿ. ಎಮ್. ಶ್ರೀಕಂಠಯ್ಯನವರು. ದಿವಂಗತ ಶ್ರೀಕಂಠಯ್ಯನವರು, ಉಜ್ವಲ ಕನ್ನಡದ ಅಭಿಮಾನಿಗಳು; ಸಾಹಿತಿಗಳು; ಅದಕ್ಕಿಂತಲೂ ಹೆಚ್ಚಾಗಿ ತಮ್ಮ ಅನೇಕ ಶಿಷ್ಯರಲ್ಲಿ ಅವರು ಸಾಹಿತ್ಯ ಸ್ಫೂರ್ತಿಯನ್ನು ಪ್ರೇರಿಸಿದವರು. ಅವರ ಬೆನ್ನಿಗೆ, ಈ ಎಲ್ಲ ಶಿಷ್ಯರೂ ಪರಿಷತ್ತಿನ ಬೆಂಬಲಿಗರಾದರು. ಶ್ರೀಕಂಠಯ್ಯನವರ ಕಾಲದಲ್ಲಿ ಪರಿಷತ್ತನ್ನು ಕುರಿತಾದ ಅಭಿಮಾನ ಬೆಳೆಯಿತೆಂಬುದು ನಿಜ. ಕನ್ನಡನಾಡನ್ನು ಒಂದುಗೂಡಿಸಬೇಕೆಂದು ಮೊದಲಿನಿಂದಲೂ ಬಯಸುತ್ತಿದ್ದ ಕನ್ನಡಿಗರ ಆಕಾಂಕ್ಷೆಯನ್ನು, ಅವರು ಪರಿಷತ್ತಿನ ಮೂಲಕ ಸಾಧಿಸಲೆತ್ನಿಸಿದ್ದೂ ನಿಜ. ಪರಿಷತ್ತು ಜನಸಾಮಾನ್ಯರ ಎಟುಕಿಗೂ ಸಿಗಬೇಕೆಂಬ ಪ್ರಯತ್ನವನ್ನು ಅವರೇ ಮಾಡಿದರು. ಪರಿಷತ್ತಿನ ಸದಸ್ಯತನಕ್ಕೆ ಒಬ್ಬನ ಸಾಹಿತ್ಯ ಕ್ಷೇತ್ರದ ಯೋಗ್ಯತೆ ಅವಶ್ಯವಲ್ಲ; ಕನ್ನಡದ 'ಅಭಿಮಾನ' ಬಲು ಮುಖ್ಯ—ಎಂಬ ಸುಲಭ ಹಾದಿಯನ್ನು ಅವರು ತೋರಿಸಿದರು. ಅವರ ಉಜ್ವಲ ಕನ್ನಡ ಅಭಿಮಾನದಿಂದ ಸಂಸ್ಕೃತ ಭಾಷೆಯ ಮೇಲೆ ಅಭಿಮಾನವುಳ್ಳವರನ್ನು ನೋಯಿಸಿದರು. ಮೈಸೂರು ಅರಮನೆಯ ಅತಿ ನೋಟದಿಂದ, ಮೈಸೂರೇತರ ಜನಗಳ ಮನಸ್ಸಿನಲ್ಲಿ ಜಿಗುಪ್ಸೆಯನ್ನೂ ಹುಟ್ಟಿಸಿದರು. ಸಾಹಿತ್ಯಕ್ಕೆ ಮೀಸಲಾದ ಪರಿಷತ್ತು ಕನ್ನಡನಾಡು, ನುಡಿಗಳ—ಬರಿಯ ಒಂದು ಪ್ರಚಾರ ಸಂಸ್ಥೆಯಾಯಿತು. ಕನ್ನಡ ಸಾಹಿತ್ಯ ಬೆಳೆಯಿಸುವುದಕ್ಕೆ ಬೇಕಾದ ಪರಿಶ್ರಮದ ಬದಲು, ಅನುರಕ್ತಿ ಆವೇಶಗಳಿಗೆ ಹೆಚ್ಚು ಬೆಲೆ ಬರತೊಡಗಿತು. ಪ್ರಜಾಪ್ರಭುತ್ವದಲ್ಲಿ ಒಳಿತು ಸಾಧನೆಯಾಗುವ ಮೊದಲೇ ಕೆಡುಕು ಬೆಳೆಯುವಂತೆ, ಈ ಸಂಸ್ಥೆ ಸಾಹಿತ್ಯ ಸೃಷ್ಟಿಕಾರರ, ವಿಮರ್ಶಕರ, ಸಂಶೋಧಕರ ಹಿಡಿತದಿಂದ ಆಗಲೇ ಜಾರುವುದಕ್ಕೆ ಆರಂಭವಾಯಿತು. ಜನಗಳನ್ನು ಕಟ್ಟುವ ಭರದಲ್ಲಿ, ಸಾಹಿತ್ಯದ ಪಾಲಿನ 'ದನ'ಗಳೂ ಗದ್ದುಗೆಯನ್ನೇರುವ ಕಾಲವೂ ಬಂದಿತು. ಸಂಸ್ಥೆ ದೊಡ್ಡದಾಯಿತು, ನಿಜ. ಅದರ ಸಾಹಿತ್ಯಶಕ್ತಿ ಕಳೆಗುಂದುತ್ತಲೂ ಹೋಯಿತು. ಅನೇಕ ನಿವೃತ್ತರಿಗೆ ಇದೊಂದು 'ಕನ್ನಡಮ್ಮನ' ಭಜನಾ ಮಂದಿರವೇ ಆಯಿತು.

ಮುಂದೆ ಈ ಸಂಸ್ಥೆಯು, ಅದರ ಆಡಳಿತ ಮಂಡಲದ ವ್ಯಕ್ತಿ ಪ್ರತಿಷ್ಠೆಯನ್ನು ಬೆಳೆಯಿಸಿತಾದರೂ, ವಿವಿಧ ರೂಪಗಳಲ್ಲಿ ಕನ್ನಡ ಸಾಹಿತ್ಯದ ಶಕ್ತಿಯನ್ನು ಬೆಳೆಯಿಸುವ ಮುಖ್ಯ ಕೆಲಸವನ್ನು ಮಾತ್ರ ಬದಿಗೊತ್ತಿತು. ಅನಂತರ – ಸಮ್ಮೇಳನಗಳೂ ಜರಗಿವೆ; ಉಪನ್ಯಾಸಗಳೂ ನಡೆದಿವೆ; ನಾಟಕಗಳೂ ಆಗಿವೆ; ಗಮಕ ಕಲೆಯೂ ಬಂದಿತು. ಸಂಸ್ಥೆಯಲ್ಲಿನ ಸತ್ವ ಮಾಯವಾಯಿತು; ಜೊಳ್ಳು, ಹೊಟ್ಟು ಮೇಲೆ ತೇಲ ತೊಡಗಿತು. ಅಂಥ ಸ್ಥಿತಿಯಲ್ಲಿ— ಸಾಹಿತ್ಯ ಸೃಷ್ಟಿ ಮಾಡುವವರಿಗೆ, ವಿಮರ್ಶಕರಿಗೆ, ಸಂಶೋಧಕರಿಗೆ — ಎಂತಹ ಪ್ರಾಧಾನ್ಯ, ನೆರವು, ಮಾರ್ಗದರ್ಶನ ಸಿಕ್ಕೀತೆಂದು ನೀವೇ ಎಣಿಸಬಹುದು.

ಮುಂದೆ, ನೀವೇ ಒಮ್ಮೆ ಸಮ್ಮೇಳನದ ಅಧ್ಯಕ್ಷತೆ ವಹಿಸಿರಲಿಲ್ಲವೇ'—ಎಂದು ನೀವು ನನ್ನನ್ನು ಕೇಳಬಹುದು. ಅದರಲ್ಲಿ ದುಡಿಯುತ್ತಿದ್ದ ಕೆಲವೇ ಸ್ನೇಹಿತರ ಆಗ್ರಹಕ್ಕೆ ಒಳಗಾಗಿ, ನಾನೂ ಸಮ್ಮೇಳನದ ಅಧ್ಯಕ್ಷನಾಗಿದ್ದೆ. ಅಧ್ಯಕ್ಷನಾಗಿ ಹೇಳಬಹುದಾಗಿದ್ದ ಮಾತುಗಳೆಲ್ಲವನ್ನೂ ಹೇಳಿದ್ದೇನೆ. ಸಮ್ಮೇಳನದ ಅಧ್ಯಕ್ಷತನವೆಂಬುದು, ಪರಿಷತ್ ಸಂಸ್ಥೆಯ ಮೇಲೆ ಪರಿಣಾಮವನ್ನೇ ಬೀರಲಾರದಂಥ, 'ಎರಡು ದಿನದ ಅರಸುಪಟ್ಟ.' ಸಮ್ಮೇಳನದ ಅಧ್ಯಕ್ಷನಾದ ನನ್ನ ಒಂದು ವಿನಂತಿಯನ್ನು, ಆಗಿನ ಪರಿಷತ್ತಿನ ಅಧ್ಯಕ್ಷರೇ ಬಹಿರಂಗವಾಗಿ ಅನಾದರದಿಂದ ತಳ್ಳಿಬಿಟ್ಟರು! ಇದಕ್ಕಿಂತ ಬಹಳ ಪೂರ್ವದಲ್ಲೇ– ರಾಜಕೀಯದ ಬೇರೊಂದು ಗಾಳಿಯೂ ಈ ಸಂಸ್ಥೆಗೆ ಅಂ

(೧೪ನೇ ಪುಟ ನೋಡಿರಿ)

THE MODERN SCHOOL OF COMMERCE,
UDIPI, SOUTH KANARA.
(Est: 1930)
HAPPY TO ANNOUNCE OUR RESULT AFTER THE STATE REORGANISATION.
First student to secure 1st Class in Shorthand
First Rank in April 1960 Examination in Shorthand Lower Grade in South Kanara.
First students to pass in Shorthand Higher Grade in Udipi.
First student to pass in Typewriting Proficiency Grade in UDIPI.
Enrolment throughout the Year.
Concession to poor students.
T. A. Vasudevan,
Headmaster.

ಕಾಂಗ್ರೆಸ್ ಸಂಸ್ಥೆ ಹಾಗೂ ಅದರ ಹೊಣೆ

ಕಾಂಗ್ರೆಸ್ ಗಂಗಾಪ್ರವಾಹದಂತಿದೆ. ಅದು ಬದಲಾಗುತ್ತಿರುವ ಸನ್ನಿವೇಶಕ್ಕೆ ತಕ್ಕಂತೆ ಹೊಸ ಹೊಸ ವಿಚಾರಧಾರೆಗಳಿಗೆ ಸ್ವಾಗತವಿತ್ತು ಜನತೆಯಲ್ಲಿ ಸಾಂಸ್ಕೃತಿಕ ಜಾಗ್ರತಿಯನ್ನುಂಟುಮಾಡಬೇಕು; ತನ್ನ ಬಗ್ಗೆ ಬರುತ್ತಿರುವ ಟೀಕೆಗಳನ್ನು ಜಾಗ್ರತಿಯ ಗಂಟೆ ಎಂದು ತಿಳಿದು ಅವನ್ನು ವಿಮರ್ಶಿಸಿ ತನ್ನ ಪಥ ನಿಶ್ಚಯ ಮಾಡಿಕೊಳ್ಳಬೇಕು.

ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ., ಎಲ್‌ಎಲ್. ಬಿ.

ಹರಿಯುವ ಪ್ರವಾಹವು ಕೊಳೆಯನ್ನು ಬದಿಗೆ ಚೆಲ್ಲಿ, ಹೊಸ ನೀರನ್ನೂ ಸೇರಿಸಿಕೊಂಡು ಮುಂದುವರಿಯುವದು. ಹೊಸ ನೀರೇ ತನಗೆ ಬೇಡ ಎಂದರೆ ಬರೀ ಹಳೆಯ ನೀರಿನಿಂದಲೇ ಪ್ರವಾಹವು ಬಹು ದಿವಸ ನಡೆಯದು. ಪ್ರವಾಹವು ಹರಿಗಡೆದು ಒಣಗಿ ಹೋಗುತ್ತಿದೆ. ವ್ಯಕ್ತಿಯ ಜೀವನದಲ್ಲಿಯೂ ಅಷ್ಟೇ, ಸಂಸ್ಥೆಯ ಜೀವನದಲ್ಲೂ ಅಷ್ಟೇ, ಕಾಲಕ್ಕನುಗುಣವಾಗಿ ಹೊಸ ವಿಚಾರಗಳನ್ನು ಅಳವಡಿಸಿಕೊಂಡು ಶಕ್ತಿಯನ್ನು ತಮ್ಮದನ್ನಾಗಿ ಮಾಡಿಕೊಳ್ಳದಿದ್ದರೆ ವ್ಯಕ್ತಿಯ ಅಸ್ತಿತ್ವವೇ ಆಗಲಿ, ಸಂಸ್ಥೆಯ ಅಸ್ತಿತ್ವವೇ ಆಗಲಿ ಬಹು ದಿವಸ ಬಾಳಲಿಕ್ಕಿಲ್ಲ. ಅದೂ ಅಲ್ಲದೆ ವ್ಯಕ್ತಿಯು ಅಥವಾ ಸಂಸ್ಥೆಯು ಬರೀ ಜೀವಿಸಿದ್ದರೆ ಆಗದು; ಒಳ್ಳೇ ರೀತಿಯಿಂದ ಬದುಕಬೇಕೆಂದು ಅಪೇಕ್ಷೆಪಟ್ಟಾಗ ಹೊಸ ವಿಚಾರಗಳನ್ನೂ ಕೃತಿಗಳನ್ನೂ ಅಳವಡಿಸಿಕೊಳ್ಳಬೇಕಾಗುತ್ತದೆ.

ಕಾಂಗ್ರೆಸ್ ಸಂಸ್ಥೆಯನ್ನು ಕುರಿತು ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ಸಾದಿಕ ಅಲಿಯವರು ಒಂದು ಮಾತನ್ನು ಹೇಳಿದರು: ಗಂಗಾ ನದಿಯು ಹಾಗಿದೆ ಕಾಂಗ್ರೆಸ್ ಸಂಸ್ಥೆಯೆಂದು; ತನ್ನಲ್ಲಿ ಸ್ನಾನ ಮಾಡಿದವರ ಪಾಪವನ್ನು ತೊಳೆದು ಪವಿತ್ರಗೊಳಿಸುವ ಶಕ್ತಿ ಗಂಗೆಗಿದೆ. ಹಾಗೆ ಕಾಂಗ್ರೆಸ್ ಸಂಸ್ಥೆಯೂ ಆ ಶಕ್ತಿ ವಿಶ್ವಾಸಗಳನ್ನು ಪಡೆಯಬೇಕು. ಯಾವ ಸಂಸ್ಥೆಯ ಇತಿಹಾಸದಲ್ಲಾದರೂ ಅದರ ಪ್ರಾರಂಭದ ದೆಸೆಯಲ್ಲಿ ಹಲವಾರು ವ್ಯಕ್ತಿಗಳಿಂದಲೇ ಸಂಸ್ಥೆ ಪ್ರಾಧಾನ್ಯವನ್ನು ಪಡೆಯುತ್ತದೆ. ಕಾಲ ಉರುಳಿದಂತೆ ಸಂಸ್ಥೆಯ ನಿಕಟ ಸಂಪರ್ಕ ಬಂದ ವ್ಯಕ್ತಿಗಳಿಗೆ, ಸಂಸ್ಥೆಯಿಂದಾಗಿ ಪ್ರಾಧಾನ್ಯ ದೊರೆಯುವ ಒಂದು ಕಾಲವೂ ಬರಬೇಕು. ಗಾಂಧೀ ನೆಹರೂರಿಂದ ಕಾಂಗ್ರೆಸ್ ಸಂಸ್ಥೆಗೆ ಪ್ರಾಧಾನ್ಯ ಬಂದಿದ್ದರೆ, ಇಂದು ಕಾಂಗ್ರೆಸ ಸಂಸ್ಥೆಯಿಂದಾಗಿ ವ್ಯಕ್ತಿಗೆ ಪ್ರಾಧಾನ್ಯದೊರೆಯುವ ಕಾಲ ಬರಬೇಕು. ಹೀಗೆ ಇತಿಹಾಸದ ಪುಟಗಳನ್ನು ಮುಗುಚಿಹಾಕಬೇಕಿದ್ದರೆ, ಸಂಸ್ಥೆ ತನ್ನ ಶಕ್ತಿಯನ್ನೂ, ಅಸ್ತಿತ್ವದ ಅವಶ್ಯಕತೆಯನ್ನೂ ಬೆಳೆಸಿರಬೇಕು; ಭೌತಿಕ ಪ್ರಗತಿಯ ಜೊತೆಗೆ ಆತ್ಮಿಕ ಪ್ರಗತಿಯೂ ಅವಶ್ಯ. ವಿಶಿಷ್ಟ ಮೊತ್ತದ ವರ್ಗಣಿಯನ್ನು ಕೊಟ್ಟವರೆಲ್ಲರೂ ಕ್ರಿಯಾಶೀಲ ಸದಸ್ಯರಾಗಬಲ್ಲರು ಎಂದರೆ, ಒಬ್ಬ ಕಳ್ಳನೂ ಅಷ್ಟು ಹಣವನ್ನು ಕೊಟ್ಟು ಕ್ರಿಯಾಶೀಲ ಸದಸ್ಯನಾಗಬಹುದು. ಸಂಸ್ಥೆಯ ಉದ್ದೇಶವನ್ನು ಸಾಧಿಸುವ ದೃಷ್ಟಿಯಿಂದ ಕಾರ್ಯತತ್ಪರರಾದವರೆಲ್ಲರೂ ಕ್ರಿಯಾಶೀಲ ಸದಸ್ಯರು; ಕ್ರಿಯಾಶೀಲ ಶಬ್ದದ ಅರ್ಥವೇ ಅದು! ಹಣಕೊಟ್ಟು ಕ್ರಿಯಾಶೀಲರಾಗಬಹುದೆಂಬ ನಿಯಮವನ್ನು ಮಾಡಿದ್ದು ಅನುಕೂಲಕ್ಕಾಗಿ! ಉದ್ದೇಶವನ್ನು ಮರೆತು ಹಣವನ್ನು ಕಟ್ಟುವದೇ ಉದ್ದೇಶವೆಂದಾದರೆ, ವಿಕೃತಿ ಯಾವ ಮಟ್ಟಕ್ಕೆ ಬಂದಿದೆಯೆಂಬುದು ಅರ್ಥವಾದೀತು!

ಕಾಂಗ್ರೆಸ್ ಸಂಸ್ಥೆ ರಾಷ್ಟ್ರದ ಇತಿಹಾಸದಲ್ಲಿಯೇ ಪುರಾತನವಾದ ಸಂಸ್ಥೆ: ರಾಜಕೀಯ ಸ್ವಾತಂತ್ರ್ಯಕ್ಕಾಗಿ ಅರ್ಧ ಶತಮಾನ ಹೋರಾಡಿದ ಸಂಸ್ಥೆ! ಪುರಾತನವೆಂದಮಾತ್ರಕ್ಕೇ ಅದರ ಪಾವಿತ್ರ್ಯ ಹೆಚ್ಚು ಎಂದರ್ಥವೂ ಅಲ್ಲ. ಮನೆಯ ಹಿರಿಯನನ್ನು ಮೊಮ್ಮಕ್ಕಳು ಕೇಳದ ಹಾಗೆ ಆಗಬಾರದು; ಚಿಕ್ಕವರು ತನ್ನನ್ನು ಅನಡ್ಡೆ ಮಾಡದಂತೆ ನೋಡಿಕೊಳ್ಳಬೇಕಾದರೆ, ಯಜಮಾನನೂ ಚಿಕ್ಕವರನ್ನು ತಿಳಕೊಂಡು, ಅವರ ಆಶೆ—ಆಕಾಂಕ್ಷೆ, ಶಕ್ತಿಯನ್ನು ಅರಿತು, ಅವರನ್ನು ಸಹಾನುಭೂತಿಯಿಂದ ಕಾಣಬೇಕಾಗುತ್ತದೆ. ಕಾಂಗ್ರೆಸ್ ಸಂಸ್ಥೆಯಲ್ಲಿಯೂ ಚಿಕ್ಕವರನ್ನು ಸೇರಿಸಿಕೊಳ್ಳುವದು, ಅವರನ್ನು ವಿಶ್ವಾಸದಿಂದ ಕಾಣುವದು ಬಹು ಮುಖ್ಯವಾಗಿರಬೇಕು. ತನಗಿಂತ ಹೆಚ್ಚು ಯೋಗ್ಯತಾವಂತರು ಬಂದರೆ ತಮ್ಮ ಸ್ಥಳಕ್ಕೆಲ್ಲಿ ಬಾಧೆಯೋ ಎಂಬ ಭಯ ದುರ್ಬಲರಲ್ಲಿಯೇ ಮೂಡುತ್ತದೆ. ಸ್ಥಳಕ್ಕೆ ಬರುವವರು ಹೆಚ್ಚಿನ ಯೋಗ್ಯತಾವಂತರಿದ್ದರೆ, ಇಂದಿಲ್ಲ ನಾಳೆ ಅವರು ಆ ಸ್ಥಳಕ್ಕೆ ಬಂದೇ ಬರುತ್ತಾರೆ. ಹಿರಿಯರನ್ನು ಸರಿಸಿ ಚಿಕ್ಕವರು ಸ್ಥಾನವನ್ನಾಕ್ರಮಿಸಬೇಕು ಎಂದು ಅಭಿಲಾಷೆಪಡುವದಕ್ಕಿಂತ ಹಿರಿಯರೇ ಅವಕಾಶವನ್ನೊದಗಿಸಿಕೊಟ್ಟರೆ, ಅವರು ಚಿಕ್ಕವರ ಹೃದಯದಲ್ಲಿ ಹಿರಿಯರ ಬಗ್ಗೆ ಒಂದು ಆದರದ ಭಾವನೆಗೂ ಸ್ಥಾನ ಕಲ್ಪಿಸಿಕೊಡುತ್ತಾರೆ. ಪೀಳಿಗೆಯಿಂದ ಪೀಳಿಗೆಗೆ ಇರಬೇಕಾದುದು ಆದರ ಹಾಗೂ ಕೃತಜ್ಞತೆಗಳ ಭಾವನೆಯೇ ಮುಖ್ಯವಾಗಿ!

ಪಾವಿತ್ರ್ಯದ ಸಂಕುಚಿತ ಕಲ್ಪನೆಯೂ ಸಂಸ್ಥೆಯ ಹಿತಕ್ಕೆ ವಿಘಾತಕ; ಸಂಸ್ಥೆಯಿಂದ ಜನ ಹೊರಗೆ ಹೋದಷ್ಟೂ, ಕೊಳೆ ಹೋಯಿತೆಂದು ಅಭಿಮಾನಪಟ್ಟುಕೊಳ್ಳುವದು ಆತ್ಮವಂಚನೆಯೇ! ಒಂದು ಹಿರಿಯ ತತ್ವಕ್ಕಾಗಿ ಕಟ್ಟಲ್ಪಟ್ಟಿದ್ದ ಸಂಸ್ಥೆ, ಅದನ್ನೇ ಮರೆತು ಹೋರಾಡ ತೊಡಗಿದರೆ, ಯಾವ ಪರಿಣಾಮವನ್ನು ತಾನೇ ಜನತೆಯ ಮೇಲೆ ಮಾಡಬಲ್ಲುದು? ದೊಡ್ಡ ದೊಡ್ಡವರು ತಮ್ಮ ಸ್ಥಾನಕ್ಕಾಗಿ ಹೋ

ಈ ದಿನದ ನಿಮ್ಮ ನಿರ್ಧಾರವು ಈ ತೆರನಿರಲಿ—

"ನಮ್ಮ ದೇಶವು ರಾಜಕೀಯ ಸ್ವಾತಂತ್ರ್ಯ ಗಳಿಸಿ 13 ವರುಷಗಳು ಸಂದುವು. ಒಂದರ ಹಿಂದೊಂದು ಬಂದ ಹಲವಾರು ಗೋಚರ ಹಾಗೂ ಅಗೋಚರ ಎಡರು-ತೊಡರುಗಳನ್ನು ಧೈರ್ಯದಿಂದ ಎದುರಿಸಿಯೂ, ಅದು ಅಭ್ಯುದಯದತ್ತಲೇ ಸಾಗಿದೆ; ಇನ್ನು ಮುಂದಕ್ಕೂ ಅದು ಅದೇ ದಾರಿಯಲ್ಲಿ ಸಾಗುವುದು ಖಂಡಿತ. ನಾನೂ ನನ್ನ ಸ್ವಂತ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಯಾವ ತೆರನಾದ ಅಡೆತಡೆಗಳು ನನ್ನ ದಾರಿಯಲ್ಲಿ ಬಂದರೂ ಕೊರ್ಪೊರೇಶನ್ ಬೇಂಕಿನಲ್ಲಿ ನನ್ನ ಮಾಸಿಕ ಉತ್ಪನ್ನದ ಸ್ವಲ್ಪಾಂಶವನ್ನಾದರೂ ಉಳಿಸುತ್ತಾ ಬರುತ್ತೇನೆ; ದೇಶದ ಮುನ್ನಡೆಯೊಂದಿಗೆ ಹೆಜ್ಜೆಗೆ ಹೆಜ್ಜೆ ಕೊಟ್ಟು ಮುಂದುವರಿಯುತ್ತೇನೆ!"

ನಿಮ್ಮೀ ನಿರ್ಧಾರದ ಫಲವಾಗಿ ಕೊರ್ಪೊರೇಶನ್ ಬೇಂಕಿನಲ್ಲಿ ಕೂಡಲೇ ಒಂದು ಸೇವಿಂಗ್ಸ್ ಖಾತೆಯನ್ನು ತೆರೆಯಿರಿ!

ಕೊರ್ಪೊರೇಶನ್ ಬೇಂಕು

ನಿಮ್ಮದಾಗಲೀ, ನಮ್ಮ ದೇಶದ್ದಾಗಲೀ, ಯಾವ ಅಭ್ಯುದಯದ ಯೋಜನೆಯಲ್ಲೂ ತನ್ನ ಶಕ್ತಿ-ಸಾಮರ್ಥ್ಯಗಳಿಗನುಸರಿಸಿ ಸಹಾಯ-ಸಹಕಾರಗಳನ್ನು ಸಲ್ಲಿಸುವ ಸದಭಿಲಾಷೆಯನ್ನು ಈ ಶುಭ ಸಂದರ್ಭದಲ್ಲಿ ಪ್ರಕಟಿಸುತ್ತಿದೆ!!

ದಿ

ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906

ಪ್ರಧಾನ ಕಚೇರಿ: ಉಡುಪಿ, ಮೈಸೂರು ರಾಜ್ಯ.

ರಾಡುವ ಸಂಸ್ಥೆಯೇನೊ ಇದು ಎಂದು ಭಾಸವಾಗಬಹುದಾಗಿದೆ! ಹಲವಾರು ವ್ಯಕ್ತಿಗಳ ಸ್ವತ್ತಾದರೆ, ಸಂಸ್ಥೆ ಸಾರ್ವಜನಿಕ ಸ್ವರೂಪವನ್ನೇ ಕಳೆದುಕೊಳ್ಳುತ್ತದೆ. ತಮ್ಮ ಸ್ವತ್ತನ್ನಾಗಿ ಮಾಡಿಕೊಂಡ ವ್ಯಕ್ತಿಗಳು ತಾವು ಬಡಿದಾಡಿದರೂ ಚೆಂದವೇ ಎಂಬ ಭಾವನೆಯನ್ನು ಜನಸಮಾನ್ಯರಲ್ಲಿ ಮೂಡಿಸಲೆಳಸುತ್ತಾರೆ. ಜನಸಾಮಾನ್ಯರಿಂದ ದೂರವಿದ್ದಷ್ಟೂ ಸಂಸ್ಥೆಯ ಪಾವಿತ್ರ್ಯ ಹೆಚ್ಚು ಎಂಬ ತಿಳುವಳಿಕೆ ಬೇರೆ: ದೂರದಿಂದ ಅಂಜಿಕೆಯಿಂದ ಜನಸಾಮಾನ್ಯರನ್ನು ದೂರದಲ್ಲಿಟ್ಟು, ನಮ್ಮ ಸ್ಥಾನದ ಮಹತಿಯನ್ನು ಹೆಚ್ಚಿಸಿಕೊಳ್ಳುತ್ತೇವೆನ್ನುವದು ಎಷ್ಟುಕಾಲ ನಡೆದೀತು! ಸಂಸ್ಥೆಯಲ್ಲಿ ಎಂತಹ ಕ್ರಾಂತಿಕಾರೀ ಘಟನೆಯಾದರೂ ಜನಸಾಮಾನ್ಯರಿಗೆ ಅದರಲ್ಲಿ ಆಸ್ಥೆಯಿಲ್ಲ; ಯಾಕೆಂದರೆ ಸಂಸ್ಥೆಯ ಬಗ್ಗೆ ಆತ್ಮೀಯತೆ ಹುಟ್ಟುವಂತಹ ಅವಕಾಶವೇ ಅವರಿಗೆ ಬಂದಿಲ್ಲ.

ಕ್ರಿಯಾಶೀಲ ಸದಸ್ಯರು ವಿಧಾಯಕ ಕಾರ್ಯವನ್ನು-ಗ್ರಾಮೋದ್ಧಾರವೋ, ಅಸ್ಪೃಶ್ಯತಾ ನಿವಾರಣೆಯೋ, ಕೈಗಾರಿಕೆ ಪ್ರಚಾರವೋ—ಏನೇ ಇರಲಿ,—ಮಾಡುತ್ತಿರಬೇಕು ಎಂಬುದೊಂದು ಅವಶ್ಯಕತೆಯಿದೆ ಆದರೆ ಹಣತುಂಬಿದ ಎಷ್ಟು ಜನ ಕ್ರಿಯಾಶೀಲಸದಸ್ಯರು ಇದನ್ನು ಬಲ್ಲವರಾಗಿದ್ದಾರೆ! ಹಣ ತುಂಬುವದೇ ಪ್ರಧಾನ ಕಾರ್ಯ; ಸ್ಥಾನಮಾನಗಳಿಗಾಗಿ ಹೋರಾಡುವದೇ ವಿಧಾಯಕ ಕಾರ್ಯವೆಂದು ತಿಳಿದರೆ ಸಾಮಾನ್ಯ ಜನ ಸಂಸ್ಥೆಯ ಸಮೀಪಕ್ಕೆ ಬರಲೂ ಹಿಂದು ಮುಂದು ನೋಡುತ್ತಾರೆ. ಸಂಸ್ಥೆಯ ಸದಸ್ಯರುಗಳ ನಡವಳಿಕೆಯ ಒಟ್ಟು ಪರಿಣಾಮವೇ ಸಂಸ್ಥೆಯ ಚಾರಿತ್ರ್ಯದ ಮೇಲೆ ಬೆಳಕನ್ನು ಚೆಲ್ಲುವದೆಂದ ಮೇಲೆ, ಸದಸ್ಯರು ಪ್ರಾಮಾಣಿಕ ಪರಿಶ್ರಮದಿಂದ ತಮ್ಮ ಯೋಗ್ಯತೆಯನ್ನೂ, ತನ್ಮೂಲಕ ಸಂಸ್ಥೆಯ ಯೋಗ್ಯತೆಯನ್ನೂ ಕಾಯ್ದುಕೊಳ್ಳುವದು, ಬೆಳೆಸಿಕೊಳ್ಳುವದು ಅವಶ್ಯವಾಗಿದೆ.

ಮಂಡಲ ಕಾಂಗ್ರೆಸ್ಸುಗಳನ್ನು ಮಾಡಿರುವದೇ ವ್ಯಕ್ತಿಯ ವಿಕಾಸದ ದೃಷ್ಟಿಯಿಂದ; ಸಂಘಟನೆಯನ್ನು ಬೇರಿನಿಂದಲೇ ಬಲಪಡಿಸುವ ದೃಷ್ಟಿಯಿಂದ! ಮಂಡಲ ಮಟ್ಟದಲ್ಲಿ ಸಾಂಸ್ಕೃತಿಕ ಜಾಗೃತಿಯನ್ನುಂಟುಮಾಡಿ ವಾಚನಾಲಯಗಳನ್ನು ನಡೆಸಿ, ಪತ್ರಿಕೆಯನ್ನು ಹೊರಡಿಸಿ, ಜನಸಾಮಾನ್ಯರನ್ನು ಆತ್ಮೀಯತೆಯಿಂದ ಕಾಣುವ ವಿಧಾಯಕ ದೃಷ್ಟಿ ಬರಬೇಕು. ಕಡೆಗಣಿಸಿ ಯಾರನ್ನಾದರೂ ಹೊರಗಿಟ್ಟರೆ, ಅವರಿಂದ ನಮ್ಮ ಸಂಘದ ಶಕ್ತಿ ಬೆಳೆಯುವುದೇ ಎಂದು ಯೋಚಿಸಿ, ಸಂಘವನ್ನು ಬಲಪಡಿಸಬೇಕು. ಮಹಿಳೆಯರ ಸಂಘಟನೆಯನ್ನು ಕುರಿತು ಈ ಮಾತನ್ನು ಹೇಳಬಹುದು. ತಾತ್ವಿಕ ನಿಷ್ಠೆ, ಕ್ರಿಯಾಶೀಲತೆ ಇವುಗಳು ಜನಸಾಮಾನ್ಯರ ಮೇಲೆ ಪ್ರಭಾವ ಬೀರಿದಷ್ಟು, ಇನ್ನುಳಿದ ಯಾವುದೇ ಗುಣವು ಪ್ರಭಾವಿಯಾಗಲಾರದು.

ಸಂಸ್ಥೆಯನ್ನು ಕುರಿತು ಅಲ್ಲಲ್ಲಿ ಟೀಕೆಗಳು ಬರುತ್ತಿವೆ ನಿಜ; ಸಂಸ್ಥೆಯ ಸಂಘಟನೆಯಲ್ಲಿ, ಎಲ್ಲ ಸಂಘಟನೆಗಳಲ್ಲಿಯೂ ಇರುವಂತೆ, ನೈಜವಾದ ಸಮಸ್ಯೆಗಳೆಷ್ಟೋ ಇವೆ. ಅರ್ಧಶತಮಾನದ ಹಿಂದೆ ಕಾಂಗ್ರೆಸ್ಸು ಎದರಿಸಬೇಕಾದ ಸಮಸ್ಯೆಗಳ ಸ್ವರೂಪ ಬೇರೆಯಾಗಿರಬೇಕು. ಇಂದಿನ ಸಮಸ್ಯೆಗಳ ರೂಪ ಬೇರೆಯಾಗಿದೆ. ಆದರೆ ಬದಲಾದ ಸಮಸ್ಯೆಗಳನ್ನು ಅರಿಯುವ ಶಕ್ತಿ ಇಂದಿನ ಸಂಸ್ಥೆಯಲ್ಲಿ ಬರಬೇಕು. ಸಂಸ್ಥೆ ಜೀವಂತವಾಗಬೇಕು, ಬದುಕ ಬೇಕು. ಬರುವ ಟೀಕೆ, ವಿಮರ್ಶೆಗಳು ಸಂಸ್ಥೆಯ ಬಲವನ್ನು ಹೆಚ್ಚಿಸಲು ಸಹಾಯಕವಾದ ಸೂಚನೆಗಳೆಂದೇ ತಿಳಿಯಬೇಕು. ವಿಧಾಯಕ ದೃಷ್ಟಿ, ವಿವರಣೆಯ ರೀತಿ ಉದಾರವಾಗಿರಬೇಕು; ಬರುವ ವಿಮರ್ಶೆ ಸಂಸ್ಥೆಗೊಂದು ಜಾಗೃತಿಯ ಗಂಟೆ.

ರಾಮತೀರ್ಥ (ಮಾಸಿಕ ಪತ್ರ)

(ಹಿಂದಿ ಭಾಷೆಯಲ್ಲಿ)

ಸಂಪಾದಕರು:- ಯೋಗಿರಾಜ ಶ್ರೀ ಉಮೇಶಚಂದ್ರರು.

ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೮೦ ಇದೆ. ಅವಶ್ಯ ಚಂದಾದಾರರಾಗಿರಿ

ಸ್ಪೆಶಲ್ ನಂ. ೧

ರಾಮತೀರ್ಥ ಬ್ರಾಹ್ಮೀ ತೈಲ

[ಆಯುರ್ವೇದಿಕ್ ಔಷಧ]

ಅನೇಕ ಔಷಧಗಳಿಂದ ತಯಾರಿಸಿದ ರಾಮತೀರ್ಥ ಬ್ರಾಹ್ಮೀ ತೈಲದಿಂದ ಎಲ್ಲಋತುಗಳಲ್ಲೂ ಎಲ್ಲರಿಗೂ ಲಾಭ ದೊರಕುತ್ತದೆ. ಶರೀರಕ್ಕೆ ಮಾಲೀಶ್ (ಅಭ್ಯಂಜನ) ಮಾಡಿದರೆ ಉತ್ತಮ.

ಚಿತ್ರಪಟದ ಬೆಲೆ ೫೦ ನ. ಪೈಸೆ.

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ, (ಸೆಂಟ್ರಲ್ ರೇಲ್ವೆ) ಮುಂಬಯಿ—೧೪

PHOTOGRAPHS

Remember

When Memory fails!!

and for a

Life-like Portrait

always remember

NUTAN PHOTO STUDIO

Opp: CHURCH

UDIPI

ಧೂಮ್ರಪಾನದ ಸಹಜವಾದ ಆನಂದಕ್ಕಾಗಿ

ಸೇದಿರಿ

ಎಸ್. ಆರ್ ಬೀಡಿಗಳನ್ನು

SR

ಎಲ್ಲಾ ಕಡೆಗಳಲ್ಲಿಯೂ ದೊರಕಲ್ಪಡುತ್ತವೆ

REGD.

S.R. BEEDI WORKS

UDIPI, S. K.

ಕನ್ನಡದ "ಏಕಮಾತ್ರ" ಸಾಹಿತ್ಯಸಂಸ್ಥೆ

(೧೧ನೇ ಪುಟದಿಂದ)

ಟಿಕೊಂಡಿತ್ತು. ಸಂಸ್ಥೆಗೆ ನಾಲ್ಕುಕಾಸು ದೊರೆಯುತ್ತದೆಂದು, ಅಧಿಕಾರದಲ್ಲಿರುವವರ ಪಾದಗಳನ್ನೂ ಪೂಜಿಸುವ ಅಭ್ಯಾಸವನ್ನೂ ಅದು ಚೆನ್ನಾಗಿ ಕಲಿತಿತ್ತು. ಕೆಲವು ಹಿರಿಯ ಸಾಹಿತಿಗಳು ತಮ್ಮ ಆತ್ಮಾಭಿಮಾನವನ್ನು ಅಂದೇ ಮಾರಿದ್ದರು. ಇದರ ಒಂದು ನಿದರ್ಶನವನ್ನು—ನನ್ನ ಅಧ್ಯಕ್ಷತೆಯ ಅನುಭವದಿಂದಲೇ ಹೇಳುತ್ತೇನೆ. ಸಮ್ಮೇಳನ ನಡೆಯುವಲ್ಲಿಗೆ ಬಂದ ನನ್ನನ್ನು ಆ ಮಹಾಸಭೆಯಲ್ಲಿ ಸ್ವಾಗತಿಸಲು ಪರಿಷತ್ತಿನ ಅಧ್ಯಕ್ಷರೇ ಇರಲಿಲ್ಲ! ಜನಗಳು ಹೇಗೂ ಮುಂದೆಬರಲಿಲ್ಲ. ವೇದಿಕೆಯಲ್ಲಿ, ಅಧ್ಯಕ್ಷನಾಗುವವನಿಗೆ ಪ್ರತ್ಯೇಕ ಸ್ಥಳವೂ ಇದ್ದಿರಲಿಲ್ಲ. ಸಮ್ಮೇಳನದ ಉದ್ಘಾಟಕರು ಉಚಿತಸ್ಥಾನದಲ್ಲಿ ಕುಳಿತರೆ ಸಾಕೆಂದು, ಆಗಿನ ಅಧಿಕಾರಪೂಜಕರಿಗೆ ಕಾಣಿಸಿತ್ತು. ಸಮ್ಮೇಳನದ ಅಧ್ಯಕ್ಷನಿಗೆ, ಬಂದ ತಂತಿಗಳನ್ನು ಕೂಡ ಪರಿಷತ್ತಿನ ಕಾರ್ಯದರ್ಶಿಗಳು ಕೊನೆಯತನಕವೂ ಕೊಡದಿದ್ದುದುಂಟು. ಸಮ್ಮೇಳನದ ನಿಯಮಾವಳಿಯನ್ನು ಮೀರಿ, ಕಾರ್ಯದರ್ಶಿ ವಿಷಯ ನಿಯಾಮಕ ಕಮಿಟಿಯ ಸದಸ್ಯರನ್ನು ತಾನೇ ನೇಮಿಸುವುದಕ್ಕೂ ಮುಂದುಕಿದ್ದುಂಟು. ಹಿಂದಿನ ಕೆಲವರು, ಸಮ್ಮೇಳನ, ಮಹಾಸಭೆಗಳಲ್ಲಿ ಗೊತ್ತಾದ ನಿರ್ಣಯಗಳನ್ನು ತಮಗೆ ಪಥ್ಯವಾಗದಾಗ, ಬರೆಯಲು ಮರೆತದ್ದುಂಟು.

ಹಿಂದೆ—ಸಾಹಿತ್ಯ ಉಳಿಯಬೇಕು ಎಂದು ಕೆಲವರಾದರೂ ಆಶಿಸಿದ್ದರೆ, ಇಂದು ಸಾಹಿತಿಗಳು ಸಮಾಸಬಾರದ ಹಾಗೆ ಪರಿಷತ್ತಿನ ನಿಯಮಾವಳಿಯೇ ಏರ್ಪಟ್ಟಿದೆ. ಮಹಾಜನರೆಲ್ಲರಿಗೂ ಅಧಿಕಾರಬಂದಿದೆ. ಮೊದಲು ಪರಿಷತ್ತಿನ ಕಾರ್ಯಸಮಿತಿಯನ್ನು ಆಯುವ ಹಕ್ಕು, ಸಮ್ಮೇಳನದ ಕಾಲದಲ್ಲಿ ಜರುಗುವ ಮಹಾಸಭೆಯಲ್ಲಿ ನಡೆಯುತ್ತಿತ್ತು. ಆಗ ಬೇರೆ ಊರುಗಳಲ್ಲಿ ಕಲೆತ ಸಾಹಿತ್ಯಪ್ರಿಯರು ಒಂದಿಷ್ಟಾದರೂ ಕಾರ್ಯಸಮಿತಿಯನ್ನು ಬದಲಿಸುವುದಕ್ಕೆ ಶಕ್ತರಾಗಿದ್ದರು. ಇದರಿಂದ ತಮ್ಮ ಸ್ಥಾನಕ್ಕೆ ಚ್ಯುತಿಬರಬಹುದೆಂದು ಭೀತಿಗೊಂಡ ಜನ, ಪರಿಷತ್ತಿನ ಸಾಮಾನ್ಯ ಸಭೆಯನ್ನು ಸಮ್ಮೇಳನದ ಕಾಲದಲ್ಲಿ ಕರೆಯುವುದನ್ನೇ ನಿಲ್ಲಿಸಿ, ಬೆಂಗಳೂರಲ್ಲಿ ಕರೆಯತೊಡಗಿದರು. ಕರ್ನಾಟಕದ ಈ ಏಕೈಕ ಸಂಸ್ಥೆಯನ್ನು ಯಾರು ನಡೆಯಿಸಬಹುದೆಂಬ ನಿರ್ಧಾರ, ಕೇವಲ ಬೆಂಗಳೂರು ಸದಸ್ಯರ ಕೈಯ್ಯಲ್ಲಿದೆ. ಆ ಸದಸ್ಯತನವನ್ನು ಚಲಾಯಿಸಲು ನೀವು ಬೆಂಗಳೂರಿಗೇ ಹೋಗಬೇಕು. ಸದಸ್ಯತನದ ರಶೀದಿ ಪುಸ್ತಕಗಳು ಯಾರ ಅಂಕಿತದಲ್ಲಿ ಇವೆಯೋ, ಅವರ ಔದಾರ್ಯದಿಂದ ನೀವು ಸದಸ್ಯರಾಗಿ ಬಾಳಬಹುದು. ಅಷ್ಟೇ ಅಲ್ಲ, ಪರಿಷತ್ತಿನ ಘಟನೆಯನ್ನು ತಿದ್ದುವ ಯಾವ ಸಲಹೆ ಬಂದರೂ, 'ಅಚಾತುರ್ಯದಿಂದ ಅದನ್ನು ಸೇರಿಸಲು ಮರೆಯುವ' ಒಂದು ಹಳೆಯರೋಗ ಮುಂದಕ್ಕೂ ಉಳಿಯಿತು. ಇಂದು ಕರ್ನಾಟಕ ಪರಿಷತ್ತಿನ ಆರ್ಥಿಕಸ್ಥಿತಿ ಮೊದಲಿಗಿಂತ ಉತ್ತಮವಾಗಿದೆ. ಸಾಹಿತ್ಯದ ಮುಖ್ಯ ಚೈತನ್ಯವನ್ನು ಬೆಳೆಯಿಸುವ ದಾರಿಗಳಲ್ಲಿ ಅದು ವಿನಿಯೋಗವಾಗದಿದ್ದರೂ ಕನ್ನಡದ ಅಭಿಮಾನವನ್ನೇ ಮೂಲಧನವಾಗಿಟ್ಟುಕೊಂಡು, ಅದರದೇ ವ್ಯಾಪಾರವನ್ನಾಗಿ ಮಾಡಿ, ದಿನಸಾಗಿಸುವ ಉದ್ಯಮ ಬೆಳೆದಿದೆ. ಅಧಿಕಾರದಲ್ಲಿರುವ ವ್ಯಕ್ತಿಗಳನ್ನು ಹೊಗಳಿ, ಅವರನ್ನು ಇಂದ್ರಚಂದ್ರರನ್ನಾಗಿ ಮಾಡಿ, ಪರಿಷತ್ತಿನ ಕೋಶ ತುಂಬುತ್ತಿದೆ. ಜನರ ವಂತಿಗೆಯಿಂದ ಹಣ ತುಂಬುವುದು ಅಷ್ಟಕ್ಕಷ್ಟೇ. ಹೊಗಳಿಯೇ ಹಣ ಬರುವುದಾದರೆ, ಕನ್ನಡಕ್ಕೆ ಸಂಬಂಧಿಸಿದ ಇತರ ಕೆಲಸ ಮಾಡುವುದಕ್ಕಿಂತಲೂ ಇದೇ ವೃತ್ತಿಯನ್ನು ಧ್ಯೇಯವಾಗಿಟ್ಟುಕೊಳ್ಳಬಹುದಲ್ಲ. ಇಂಥ ಸಿದ್ಧಾಂತದಲ್ಲಿ ವಿಶ್ವಾಸವುಳ್ಳವರು ಈಗಿನ ಅಧ್ಯಕ್ಷರು. ಅದಕ್ಕಿಂತ ಹೆಚ್ಚಿನ ಯೋಗ್ಯತೆಯನ್ನಾಗಲಿ, ಕೆಲಸವನ್ನಾಗಲಿ, ನಾವು ಅಪೇಕ್ಷಿಸಿದರೆ ನಮ್ಮದೇ ತಪ್ಪಾದೀತು.

ಹಾಗಲ್ಲ, ಕನ್ನಡ ಸಾಹಿತ್ಯ ಬೆಳೆಯಬೇಕು, ಸಾಹಿತ್ಯದಿಂದ ಸಾಹಿತಿಗಳು ಬದುಕಬೇಕು—ಒಳ್ಳೆಯ ಸಾಹಿತ್ಯ ಬೆಳೆಯಬೇಕು, ಹಳೆಯ ಕಾವ್ಯಗಳೆಲ್ಲವೂ ಪ್ರಕಟಗೊಳ್ಳಬೇಕು; ಪಾಶ್ಚಾತ್ಯ ಭಾಷೆಗಳಲ್ಲಿರುವಂತೆ ಕಾವ್ಯ ಜಿಜ್ಞಾಸೆ ಕನ್ನಡದಲ್ಲಿಯೂ ನಡೆಯಬೇಕು—ಎಂಬ ಹಂಬಲ ನಮ್ಮಲ್ಲಿದ್ದುದಾದರೆ, ಈಗಣ ಪರಿಷತ್ತಿನಿಂದ ಖಂಡಿತಕ್ಕೂ ಅದನ್ನು ಅಪೇಕ್ಷಿಸಬಾರದಂತಿಲ್ಲ. ಬೆಂಗಳೂರು ಸದಸ್ಯರಿಂದಲೇ ಆರಿಸಲ್ಪಡುವ ಅದರ ಅಧ್ಯಕ್ಷಪೀಠ—ದೂರದ ಕನ್ನಡಿಗರಿಗೆ, ಆ ದೂರದಿಂದಾಗಿಯೇ ಎಟುಕದ್ದಾಗಿದೆ.

ಶ್ರೀ ಬಸವರಾಜ ಕಟ್ಟೀಮನಿಯವರು 'ಇನ್ನೊಂದು ಸಾಹಿತ್ಯ ಸಂಸ್ಥೆಯನ್ನು ಕಟ್ಟಬೇಕು' ಎಂಬ ಬಯಕೆಯನ್ನು ಸೂಚಿಸಿದ್ದಾರೆ. ಈಗಿನ ಸಂಸ್ಥೆಯ ನೇತಾರರು ಸಾಹಿತ್ಯಕ್ಕೂ, ಟೀಕೆಗೂ ದಪ್ಪ ತೊಗಲಿನವರು. ಒಂದು ಮಠದ ಪಾರುಪತ್ಯವೇ ಅಗ್ಗಕ್ಕೆ ಕೈಗೆ ಬಂದಿರುವಾಗ, ನಾಲ್ಕು ಜನಗಳ ಮುಂದೆ ಮೆರೆಯುವ ಅಂಥ ಸ್ಥಾನವನ್ನು ಯಾರು ಬಿಟ್ಟುಕೊಟ್ಟಾರು? ಅಲ್ಲದೆ ಅವರು ಪರಿಷತ್ತಿಗಾಗಿ ಸದಾ ಬೆವರನ್ನು ಸುರಿಸುತ್ತಿದ್ದಾರೆ. ಆ ಬೆವರಿನ ಗಾಳಿ ಸಾಹಿತಿಗಳಿಗೆ ಬೇಡವಾಗಿದೆ. ಅದು ಬೇಡವಾದರೆ—ಇನ್ನೊಂದು ಸಂಸ್ಥೆಯನ್ನು ಕಟ್ಟಲೇಬೇಕು. ಸಂಸ್ಥೆಗಳಿಗೆ ಬರುವ ಕಾಯಿಲೆಗಳೆಲ್ಲವೂ ಅದಕ್ಕೂ ಬಂದೀತು. 'ನಮಗಾಗಿ ಸಂಸ್ಥೆ' ಎಂದು ತಿಳಿಯುವ ಸಾಹಿತಿಗಳೂ ಇದ್ದಾರೆ. 'ದುಡ್ಡಿಲ್ಲವಲ್ಲ' ಎಂದು ದುಡ್ಡಿಗಾಗಿ ತನ್ನ ಮಾನವನ್ನು ಮಾರಿಕೊಂಡು, ಸಾಹಿತಿ, ದುಡ್ಡಿದ್ದವರ ಮುಂದೆ ಜೋಳಿಗೆ ಹಿಡಿದು ನಿಂತರೆ ನಾಳೆ, ಆ ಸಂಸ್ಥೆ ಸಾಹಿತಿಗಳ ಸಂಸ್ಥೆಯಾಗಿ ಉಳಿಯುವುದಿಲ್ಲ. ಜೋಳಿಗೆ ತುಂಬಿಸಿದವರ ಸಂಸ್ಥೆಯಾಗುತ್ತದೆ. ಅಂಥ ಸಂಸ್ಥೆಯನ್ನು ಕಟ್ಟುವಾಗ, ಅದರ ಸದಸ್ಯರೂ ಅದನ್ನು ನಡೆಯಿಸುವವರೂ, ಸಾಹಿತ್ಯ ಕ್ಷೇತ್ರದ ವಿದ್ವಾಂಸರೋ ಸೃಷ್ಟಿಕಾರರೋ ಆದರೇನೆ ಒಂದಿಷ್ಟಾದರೂ ಪ್ರಯೋಜನ ಬಂದೀತು. ಬದಲು—ರೂಪಾಯಿ ತೆರಬಲ್ಲ ಮಹಾಜನರಿಗೆಲ್ಲ ಅದರಲ್ಲಿ ಅಧಿಕಾರವಿದ್ದರೆ, ಈಗಿರುವ ವಿದ್ಯಮಾನವೇ ಮರುಕಳಿಸೀತು. ಪಾಶ್ಚಾತ್ಯ ದೇಶದ ಅನೇಕ ಎಕೆಡೆಮಿಗಳಲ್ಲಿ ಸ್ಥಾನ ದೊರಕಿಸುವುದಕ್ಕೆ ವಿದ್ವತ್ಪ್ರಸಿದ್ಧಿ ಬೇಕಾಗುತ್ತದೆ; ಸಾಹಿತ್ಯಕ್ಷೇತ್ರದ ದುಡಿಮೆ ಬೇಕಾಗುತ್ತದೆ. ಪುಟ ತುಂಬಿಸಿದುದರ ಅಳತೆಗಿಂತ, ತೂಕವುಳ್ಳ ಸತ್ವ ಮುಂದೆಬಂದು ಮನ್ನಣೆಯನ್ನು ಪಡೆಯಬೇಕಾಗುತ್ತದೆ. ಅಲ್ಲಿಯತನಕ ಬರಹಗಾರ ಕಾಯಬೇಕಾಗುತ್ತದೆ.

ಸಾಹಿತಿಯಾದವನು ತನ್ನ ಪ್ರತಿಷ್ಠೆ, ರುಚಿಗಳನ್ನು ಕಾಯ್ದುಕೊಂಡು, ಆತ್ಮವಂಚನೆಯಿಲ್ಲದೆ, ಹೊಗಳಿಕೆಗೆ ತೆಗಳಿಕೆಗೆ ಬಾಯಿಬಿಡದೆ, ತುತ್ತಿನ ಚೀಲಕ್ಕಾಗಿ 'ಜೀಯಾ ಹಸಾದ' ಎನ್ನದೆ ಬಾಳಲು ಕಲಿಯಬೇಕು. ಕನ್ನಡದ ಏಕಮಾತ್ರ ಸಂಸ್ಥೆಯಾದ ಪರಿಷತ್ತು ಹೀಗೆಯೇ ಇರಲಿ. ಅದರ ಸುಧಾರಣೆ ಸಾಹಿತಿಯ ಕೈಮೀರಿದ್ದಿರಲಿ, ಈ ಸಮೂಹಜೀವನದಲ್ಲಿ ನಮ್ಮ ಆಶಯಗಳು ಸಂಸ್ಥೆಯ ಮೂಲಕ ಕೈಗೂಡದಿದ್ದರೂ, ನಾವು ವ್ಯಕ್ತಿಗಳಾಗಿ, ಧೀರರಾಗಿ, ಸತ್ಯಪ್ರಿಯರಾಗಿ ಸಲ್ಲಿಸಬಹುದಾದ ಸೇವೆಗೆ ಸದ್ಯಕ್ಕಂತು ಈ ದೇಶದಲ್ಲಿ ಯಾವ ತೊಡಕೂ ಇಲ್ಲ. ಅಂತಹ ಜನ ಹೆಚ್ಚಿದಂತೆ, ಅವರ ಮಾತುಗಳಿಗೆ ಸಮಾಜದಲ್ಲಿ ಬೆಲೆಬರತೊಡಗಿದಂತೆ, 'ನವಿಲು ಯಾವುದು? ಗರಿಗಳನ್ನು ತೊಟ್ಟ ಕಾಗೆ ಯಾವುದು' ಎಂಬುದನ್ನು ಜನ ತಾವಾಗಿಯೇ ಗುರುತಿಸಬಹುದು. ಸದ್ಯಕ್ಕೆ ಆ ಕಾಲ ಬಂದಿಲ್ಲ—ಎನ್ನೋಣ.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ 4%
5 ,, 12 ,, 4¼%
13 ,, 24 ,, 4½%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಸ್ಥಾಪನೆ: 1929

ದಿ ವಿಜಯ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ಪ್ರಧಾನ ಕಛೇರಿ:- ಸ್ಥಾಪನೆ:-
ಮಂಗಳೂರು-3. 1931.
ಫೋನ್: 240

ಖಾಯಂ ಠೇವಣಾತಿ ಬಡ್ಡಿ ದರಗಳು

1ರಿಂದ 5 ತಿಂಗಳುಗಳ ವರೆಗೆ 3½%
6ರಿಂದ 12 ತಿಂಗಳುಗಳ ವರೆಗೆ 4%
13ರಿಂದ 24 ತಿಂಗಳುಗಳ ವರೆಗೆ 4¼%

ರೂಪಾಯಿ 10,000/- ವ, ಹೆಚ್ಚಿನ ಠೇವಣಾತಿಗೆ ಮೇಲಿನ ದರಕ್ಕಿಂತ ¼% ಅಧಿಕ ಬಡ್ಡಿ ಕೊಡಲ್ಪಡುವುದು.

ರೂಪಾಯಿ 25,000/- ಮತ್ತು ಹೆಚ್ಚಿನ ಠೇವಣಾತಿಗೆ 13 ತಿಂಗಳು ಮತ್ತು ಹೆಚ್ಚಿನ ಅವಧಿಗೆ 4½% ಬಡ್ಡಿ ದೊರೆಯುತ್ತದೆ.

ಧರ್ಮ, ಮತ್ತು ವಿದ್ಯಾ ಸಂಸ್ಥೆಗಳ ಖಾಯಂ ಠೇವಣಾತಿಗಳನ್ನೂ ವಿಶಿಷ್ಟ ಉದ್ದೇಶಗಳಿಗಾಗಿ ಮೀಸಲಾಗಿಡುವ ನಿಧಿಗಳನ್ನೂ

4¾%ರ ಅತ್ಯಧಿಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುವುದು. ಆದರೆ ಅಂಥಾ ಠೇವಣಾತಿಗಳು 10,000/ ಕ್ಕಿಂತ ಕಡಿಮೆ ಇರದೆ 13 ತಿಂಗಳು ಮತ್ತು ಹೆಚ್ಚಿನ ಅವಧಿಯದ್ದಾಗಿರಬೇಕು.

THE VIJAYA BANK LTD.

(SCHEDULED BANK)

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗದ ೩೯ನೆಯ ವರ್ಷವು ಅಂತ್ಯವಾಗಿ ಸಪ್ಟಂಬರ ಆದಿಯಿಂದ ೪೦ನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಈ ತಿಂಗಳಾಂತ್ಯದೊಳಗಾದರೂ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಚಂದಾಹಣವನ್ನು ಸಿಂಡಿಕೇಟ್ ಬೇಂಕಿನ ಯಾವದೇ ಶಾಖೆಯಲ್ಲಿ 'ನವಯುಗ" ದ ಖಾತೆಗೆ ಯಾವದೊಂದುತರದ ಖರ್ಚು ಇಲ್ಲದೆ ಪಾವತಿಮಾಡಬಹುದಾಗಿದೆ.

—ಮೆನೇಜರ್.

ರಾಜ್ಯದಲ್ಲಿ ಬೆಳೆಯುತ್ತಿರುವ ಸೇವೆ-ಸಂಘಗಳು

(೧೦ನೇ ಪುಟದಿಂದ)

ದೊಡನೆ ಅವರಿಗೆ ಸಂಸ್ಥೆಯ ಹೆಸರೂ ಜ್ಞಾಪಕಕ್ಕೆ ಬರುವುದಿಲ್ಲ. "ಎಷ್ಟು ಸಂಸ್ಥೆಯಲ್ಲಿದ್ದೇನೆಂದು ನೆನಪಿಲ್ಲ" ಎಂದು ಹೇಳಿದ ಕೆಲವು ಮಹಾನುಭಾವರನ್ನೂ ಕಂಡಿದ್ದೇನೆ. ಹಾಗಾದರೆ ಅವರಿಂದ ಸಂಸ್ಥೆಗೆ ಯಾವ ಸೇವೆ, ಸಹಾಯ ಸಲ್ಲುತ್ತದೆ? ಎಷ್ಟು ಕೆಲಸ ಮಾಡಿದಂತಾಗುತ್ತದೆ? ಸಂಸ್ಥೆಯ ಹೆಸರೂ ನೆನಪಿರದಷ್ಟು ಕಾರ್ಯ ಬಾಹುಲ್ಯ ಬೆಳೆದಾಗ ಮತ್ತೂ ಈ ಸೇವೆಯ ಸೋಗನ್ನೇಕೆ ಹಾಕಬೇಕು? ಅಧಿಕಾರಕ್ಕೋ, ಅಥವಾ ಇನ್ನಾವುದೋ ಕಾರಣಕ್ಕಾಗಿ ಈ ಸಂಘ ಸೇವೆಯ ಮುಖವಾಡವೆಂದು ತಿಳಿದರೆ ತಪ್ಪೇನಿದೆ?

ಇನ್ನು ಸಮಾಜಕ್ಕೆ ನಿರುಪದ್ರವಿಯಾದ ಸಂಸ್ಥೆಗಳು ಹುಟ್ಟಿಕೊಂಡರೆ ಅದು ಯಾರ ಗಮನವನ್ನೂ ಸೆಳೆಯುವುದಿಲ್ಲ. ಅದರಿಂದ ಸಮಾಜಕ್ಕೇನೂ ನಷ್ಟವಿಲ್ಲ. ಆದರೆ ಬಹಳಷ್ಟು ಸಂಸ್ಥೆಗಳು, ಸೇವೆಗಳು, ಹಣಕ್ಕಾಗಿಯೇ ಹುಟ್ಟಿಕೊಳ್ಳುತ್ತವೆ. ಹಣವಿದ್ದರೆ ಮಾತ್ರ ಸಂಸ್ಥೆ! ಸಂಸ್ಥೆಯಿದ್ದರೆ ಮುಖಂಡತ್ವ! ಈ ರೀತಿಯಾಗಿ ಬೆಳೆಯುತ್ತಿದೆ. ಕೆಲವು ಸಾರೆ ಈ ಸಂಸ್ಥೆಗಳಿಲ್ಲದಿದ್ದರೆ ಈ ಮುಖಂಡರು ಬದುಕುವುದೂ ಕಷ್ಟವೆನ್ನುವಂತಾಗುತ್ತದೆ. ಹಣ ಕೂಡಿಸುವಾಗ ಮಾತ್ರ ಜನಕ್ಕೆ ಪ್ರಾತಿನಿಧ್ಯವೇ ಹೊರತು ಇನ್ನಿತರ ವೇಳೆಯಲ್ಲಿ ಜನತೆಯ ಕೂಗಿಗೆ ಯಾವ ಮನ್ನಣೆಯೂ ಸಿಗುವುದಿಲ್ಲ.

ಈ ಕಾರಣದಿಂದ ನಮ್ಮ ಸಮಾಜದ, ರಾಜ್ಯದ, ಬೇರೆ ಬೇರೆ ವ್ಯಕ್ತಿಗಳಲ್ಲಿರುವ ಕ್ರಿಯಾಶಕ್ತಿಯು ಪರೀಕ್ಷೆಯು ಕಾಲವಾಗಲೀ ಅದಕ್ಕೊಂದು ಚಾಲನೆಯಾಗಲೀ ಸಿಗುವುದೇ ಇಲ್ಲ. ಈ ವೇಷಧಾರೀಗುತ್ತಿಗೇದಾರರ ಹಾವಳಿಯಲ್ಲಿ ಅಂಥ ಪ್ರಾಮಾಣಿಕ ಸೇವಾ ಪ್ರಿಯರು ತಾವಾಗಿ ಮುನ್ನುಗ್ಗಿ ಹೋಗುವುದೂ ಇಲ್ಲ. ಗುಂಪುಕಟ್ಟಿ ತಮ್ಮ ಪ್ರತಿಷ್ಠೆ ಬೆಳೆಸುವದೂ ಇಲ್ಲ. ಆದರಿಂದ ಅನೇಕ ಕಡೆ 'ಇವರ ನಂತರ ಸಮಾಜ ಸೇವೆಗೆ ನಮ್ಮಲ್ಲಿ ಯಾರಿದ್ದಾರೆ' ಎಂದು. ಕೇಳುವುದು ಸ್ವಾಭಾವಿಕವಾಗಿದೆ.

ಒಂದೆರಡು ಕಡೆ ಪ್ರಯತ್ನ ಪೂರ್ವಕ ಪ್ರಯೋಗಾರ್ಥ ಈ ಗುತ್ತಿಗೇದಾರರನ್ನು ಹಿಂದೆ ಸರಿಸುವ ಸಾಹಸಮಾಡಬೇಕು. ಆಗ ಇವರ ಭಂಡವಲಿನ ಭಂಡಾಟ ಪ್ರಕಟವಾಗುತ್ತದೆ. ಸೇವೆಯ ಹೆಸರಿನಲ್ಲಿ ನಿರಾತಂಕವಾಗಿ ನಡೆಯುವ ಅವರ ಜೀವನದ ಇತಿಹಾಸ ಸಮಾಜಕ್ಕೆ ತಿಳಿಯುತ್ತದೆ ಬಹಳಷ್ಟು ಕಡೆ ಸಮಾಜಕ್ಕಾಗಿ ಈ ಸೇವೆ ಇರುವುದಿಲ್ಲ ಜೀವನಕ್ಕಾಗಿಯೇ ಇರುತ್ತದೆ.

ಪ್ರಾಮಾಣಿಕವಾಗಿ, ದಕ್ಷತೆಯಿಂದ ಸಮಾಜ ಸೇವೆ ಮಾಡುವವರನ್ನು ಸಮಾಜ ಪೋಷಿಸಬೇಕಾದದ್ದು ನ್ಯಾಯ. ಆದರೆ ಪೋಷಣೆಯ ಹೆಸರಿನಲ್ಲಿ ಸಮಾಜವನ್ನೇ ಪೋಷಣೆ ಮಾಡ ಹತ್ತಿದರೆ, ಅಂಥವರಿಗೂ ಸಮಾಜ ಸೇವಕರು—ಮುಖಂಡರು ಎಂಬ ಪವಿತ್ರವಾದ ಹೆಸರು ಸಲ್ಲುತ್ತದೆಯೇ?

ದಿನಕ್ಕೆ ಮೂರು ಸಂಸ್ಥೆ ಸ್ಥಾಪಿಸಿ, ಹತ್ತಿಪ್ಪತ್ತು ಸಂಸ್ಥೆಯಲ್ಲಿ ಹೆಸರು ಸೇರಿಸಿ, ಪತ್ರಿಕೆಗಳಲ್ಲಿ ಹೆಸರು ಪ್ರಕಟಿಸಿಕೊಳ್ಳುವುದೊಂದೇ ಕಾರ್ಯ ಮಾಡಿದರೆ ಇದು ಎಂಥ ಸಮಾಜ ಸೇವೆಯಾಗುತ್ತದೆ? ಯಾವ ಪುರುಷಾರ್ಥ ಸಾಧಿಸಿದಂತಾಗುತ್ತದೆ?

ಈ ರೀತಿಯ ಬರೇ ನಿಮಿತ್ತ ಮಾತ್ರವಾದ ಸೇವೆ, ಅಧಿಕಾರಗಳ ಕೇಂದ್ರೀಕರಣ ಸಮಾಜಕ್ಕಾಗಲೀ ರಾಜ್ಯಕ್ಕಾಗಲೀ ಹಿತಪ್ರದವಲ್ಲ. ಇಂಥ ಮುಖಂಡರ ವಶೀಲಿಗೆ ರಾಜ್ಯದ ಅಧಿಕಾರಿಗಳು ಮನ್ನಣೆ ಕೊಡುವದೂ ಸೂಕ್ತವಲ್ಲ. ಕೇವಲ ಹೆಸರಿನ ಸಂಸ್ಥೆ, ಸೇವೆಗಳು ಬೆಳೆದರೆ ರಾಜ್ಯ ಬೆಳೆಯುವದಿಲ್ಲ.

ಸಮಾಜಕ್ಕಾಗಲೀ, ರಾಜ್ಯಕ್ಕಾಗಲೀ ಸಂಘ, ಸಂಸ್ಥೆ, ಸೇವೆ, ಮುಖಂಡರು ಬೇಕು. ಆದರೆ ಬೇಕು ಎನ್ನುವುದರ ಒಂದಿ- ಎಂಥ ಸಂಸ್ಥೆ ಬೇಕು, ಯಾವ ಸೇವೆ ಬೇಕು, ಎಂಥ ಮುಖಂಡತ್ವಬೇಕು, ಅದು ಎಲ್ಲಿ, ಯಾಕೆ, ಎನ್ನುವ ವಿಚಾರವೂ ಬೇಕಾಗುತ್ತದೆ. ಇವನ್ನೆಲ್ಲ ಗಮನಿಸಿಯೇ ಸಂಘ ಸಂಸ್ಥೆಗಳು ನಿರ್ಮಾಣಗೊಳ್ಳುವುದು ಅವಶ್ಯ. ಸಮಾಜಸೇವೆ, ಮುಖಂಡತ್ವ ಇವನ್ನು ಎಲ್ಲರೂ ಪಡೆಯಬಹುದಾಗಿದ್ದರೂ ಉಜ್ವಲ ಕ್ರಿಯಾನಿಷ್ಠರೂ ಶುದ್ಧ ಚಾರಿತ್ರ್ಯವುಳ್ಳವರೂ ತ್ಯಾಗಿಗಳು ಪಡೆದರೇನೇ ಅದು ಹಿತಕಾರಿಯಾಗುತ್ತದೆ. ಅಂಥವರಿಂದ ಸ್ಥಾಪಿಸಿದ ಸಂಘ, ಸಂಸ್ಥೆ, ಸೇವೆ ತ್ಯಾಗಗಳಿಂದ ಕಲ್ಯಾಣ ರಾಜ್ಯಕ್ಕೆ ಸಹಾಯವಾಗುತ್ತದೆ.

ಯಾವ ಕ್ಷೇತ್ರದಲ್ಲೇ ಆಗಲಿ, ಜನತೆಯ ಶಕ್ತಿಯನ್ನು ಹತ್ತಿಕ್ಕಿ ಕೇವಲ ಗುತ್ತಿಗೇಪಡೆಯುವುದು ರಾಜ್ಯಕ್ಕೆ ಕ್ಷೇಮಕಾರಿಯಲ್ಲ. ನಾಡಿನ ನಾಡಿಯನ್ನು ಅರಿತು ಬೇರೆ ಬೇರೆ ವ್ಯಕ್ತಿಗಳಲ್ಲಿರುವ ಶಕ್ತಿಗೆ ಸರಿಯಾದ ಚಾಲನೆಯನ್ನು ಒದಗಿಸುವುದೇ ರಾಜ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿದಂತಾಗುತ್ತದೆ. ಶಾಂತಿ ಸಮೃದ್ಧಿಯನ್ನೂ ತರುತ್ತದೆ. ಅದಿಲ್ಲದೇ ಹೆಸರಿಗಾಗಿ, ಸ್ವಾರ್ಥಕ್ಕಾಗಿ, ಸಂಘ, ಸೇವೆಗಳು ಬೆಳೆದರೆ ರಾಜ್ಯ ಬೆಳೆದಂತಾಗುವುದಿಲ್ಲ.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಪಂಚಮುಖಿ (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪುರಾಣ—ಇಂದು—ನಾಳೆ	3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

Visit
for your requirements
in PAPER
BOOKS
STATIONERY

SRINIVAS BROTHERS
Paper Merchants, Book Sellers
and Stationers
Post Box No. 130. MANGALORE-1.
Grams: 'ACTIVE' Phone: 449

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ
LETTER WRITING MADE EASY
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ
ಮನೆ ಮದ್ದು
(HOME REMEDIES)
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕವನ್ನು ಬುಕ್‌ಪೋಸ್ಟ್ ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ
ನವಭಾರತ ಪುಸ್ತಕ ಭಂಡಾರ, ಉಡುಪಿ

ಆರ್ಯ ಸಂಸ್ಕೃತಿ

ನಮ್ಮ ಗತವೈಭವಗಳ ಬಗ್ಗೆ ಆಡಿಕೊಳ್ಳುವ ಜನತೆ ಸಂಸ್ಕೃತಿಯನ್ನು ಅಲಕ್ಷಿಸುತ್ತಿದೆ. ವಿಶ್ವಕ್ಕೆ ಆದರ್ಶಪ್ರಾಯವಾಗಿ ಮೆರೆದಾಡಿದ್ದ ಆರ್ಯ ಸಂಸ್ಕೃತಿಯಿಂದು ದಿನೇದಿನೇ ಅವನತವಾಗುತ್ತಿದೆ. ಪತನಗೊಳ್ಳುತ್ತಿರುವ ಈ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಸರ್ವ ಪ್ರಯತ್ನಗಳೂ ಸ್ವತಂತ್ರ ಭಾರತದಲ್ಲಿ ನಡೆಯಬೇಕು; ಅದರಿಂದಲೇ ಭಾರತದ ಸಾಂಸ್ಕೃತಿಕ ಉದ್ಧಾರ ಸಾಧ್ಯ.

ಶ್ರೀ ಎಂ. ನಾ. ಉಡುಪ, ವಿದ್ವಾನ್.

ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಒಂದೊಂದು ಸಂಸ್ಕೃತಿ ಇದೆ. ಸಂಸ್ಕೃತಿಯು ಆ ದೇಶದ ಜೀವಾಳ. ದೇಶದ ಮೇಲೆ ಶತ್ರುಗಳ ಅಭಿಯೋಗವಾದರೆ ದೇಶದ ನಾಗರಿಕತೆಗೆ ತಡೆಬಂದೀತು; ದಾರಿದ್ರ್ಯವು ದೇಶದಲ್ಲಿ ತಾಂಡವವಾಡೀತು. ಆದರೆ ಸಂಸ್ಕೃತಿಗೆ ಶತ್ರುಗಳಿಂದ ಸಂಘರ್ಷದಲ್ಲಿ ಯಾವ ಹಾನಿಯೂ ಆಗದು. ಅಂದ ಮೇಲೆ ಸಂಸ್ಕೃತಿಯೆಂದರೇನು? ಮನುಷ್ಯ ಜೀವನದ ಸರ್ವತೋಮುಖ ವಿಕಾಸಪೂರ್ಣವಾದ ಆತ್ಮಶ್ರೀ. ನಾಗರಿಕತೆಯು ಮಾನವತೆಯ ಹೊರಗಿನ ವೇಷಭೂಷಣವಾದರೆ, ಸಂಸ್ಕೃತಿಯು ಮಾನವತೆಯ ಜೀವಪ್ರಾಣ, ಇದು ಒಂದೊಂದು ದೇಶದಲ್ಲಿ ಒಂದೊಂದು ಮುಖದಿಂದ ಕಾಣಿಸಿಕೊಂಡಿದೆ. ಭಾರತದಲ್ಲಿ ಆಧ್ಯಾತ್ಮಿಕ ವಿವೇಚನೆಯೇ ಆರ್ಯ ಸಂಸ್ಕೃತಿ; ನೀತಿಯು ಚೀನೀಯರ ಸಂಸ್ಕೃತಿ; ಈಜಿಪ್ಟಿನಲ್ಲಿ ಸಾಮ್ರಾಜ್ಯ ತತ್ವ; ಗ್ರೀಕರಲ್ಲಿ ಕಲೆ ಮತ್ತು ಸ್ವಾತಂತ್ರ್ಯಕಾಂಕ್ಷೆ; ರೋಮನ್ ಸಂಸ್ಕೃತಿಯಲ್ಲಿ ಕಟ್ಟಳೆ; ಅರಬ್ ಸಂಸ್ಕೃತಿಯಲ್ಲಿ ಮತಾಭಿಮಾನ; ಆಧುನಿಕ ಯುರೋಪ್ ಸಂಸ್ಕೃತಿಯಲ್ಲಿ ಅಧಿಕಾರಾಭಿಲಾಷೆಯೇ ಮುಖ್ಯ. ಹೀಗೆ ಸಂಸ್ಕೃತಿಯು ವಿವಿಧ ಮುಖಗಳು ವಿವಿಧ ದೇಶಗಳಲ್ಲಿ ಕಾಣಿಸಿಕೊಂಡಿವೆ, ಇವೇ ಅವು ಅವಕ್ಕೆ ಚಂದ. ಒಂದು ಜನಾಂಗವು ಮತ್ತೊಂದು ಜನಾಂಗದ ನಾಗರಿಕತೆಯನ್ನು ಅನುಸರಿಸೀತಲ್ಲದೆ ಸಂಸ್ಕೃತಿಯನ್ನು ಅನುಸರಿಸಲಾರದು. ಇದನ್ನು ಎಲ್ಲಾ ದೇಶಗಳು ತಿಳಿದುಕೊಂಡು ತಮ್ಮ ಸಂಸ್ಕೃತಿಗೆ ಸುಂದರವಾದ ಮೊಗವಾಡ ಕೊಡಲು ಪ್ರಯತ್ನಿಸಬೇಕಲ್ಲದೇ, ಇನ್ನೊಂದು ರಾಷ್ಟ್ರದಲ್ಲಿ ತಮ್ಮ ಸಂಸ್ಕೃತಿಯ ಮುದ್ರೆಯೊತ್ತಲು ಪ್ರಯತ್ನಪಡುವುದು ಸರಿಯಲ್ಲ. ಕತ್ತೆಯು ಹುಲಿಯ ಚರ್ಮವನ್ನು ಹೊತ್ತೊಡನೆ ಹುಲಿಯಾದೀತೆ?

ಭಾರತ ಭೂಮಿಯ ಆರ್ಯ ಭಾಷೆಯಲ್ಲಿ ಸಂಸ್ಕೃತಿ ಎಂದರೆ ಆಧ್ಯಾತ್ಮಿಕ ಪ್ರಗತಿ. ಈ ದೇಶವು ಎಂದಿನ ವರೆಗೆ ತನ್ನ ಸಂಸ್ಕೃತಿಯನ್ನು ಅವಿಚ್ಛಿನ್ನವಾಗಿಯೂ ಪ್ರಜ್ವಲಿತವಾಗಿ ಇಟ್ಟುಕೊಂಡಿತ್ತೋ; ಅಲ್ಲಿಯ ವರೆಗೆ ಇದಕ್ಕೆ ಜಗತ್ತಿನಲ್ಲೇ ಮೇಲೆಡೆ ಇತ್ತು. Race, Religion, Culture ಎಂದರೆ ಕುಲ, ಧರ್ಮ ಮತ್ತು ಸಂಸ್ಕೃತಿ—ಇವು ಒಂದಕ್ಕೊಂದು ಸಂಬಂಧವುಳ್ಳವಾದುದರಿಂದ ಇವನ್ನು ಆರ್ಯ ಜನಾಂಗವು ಕಾದುಕೊಳ್ಳಬೇಕಿತ್ತು. ವ್ಯಕ್ತಿಯ ಜೀವನಕ್ಕೆ ಶೀಲ ಮುಖ್ಯವಾದಂತೆ ರಾಷ್ಟ್ರದ ಜೀವನಕ್ಕೆ ಸಂಸ್ಕೃತಿಯೇ ಮುಖ್ಯ ಆಧಾರ ಮತ್ತು ಭೂಷಣವೆಂದು ತಿಳಿಯಬೇಕಿತ್ತು. ಆದರೆ ಭಾರತೀಯರ ಕರ್ಮ ಧರ್ಮ ಸಂಯೋಗದಿಂದ ಅದೇ ಅವರಿಂದ ಮರೆಯಾಗುತ್ತಿದೆ. ಇದೇ ಭಾರತೀಯರ ದುರ್ದೈವ!

ಜನರು ಯಾವಾಗಲೂ ಮೇಲುಪಂಕ್ತಿಯನ್ನು ಅನುಸರಿಸುವವರು. ಯಥಾರಾಜಾ ತಥಾಪ್ರಜಾ. ಅಧಿಕಾರಿವರ್ಗವು ಯಾವ ಮಾರ್ಗದಲ್ಲಿ ನಡೆಯುತ್ತದೋ ಜನತೆಯು ಅದನ್ನೇ ಮಹಾ ಪ್ರಸಾದವೆಂದು ಸ್ವೀಕರಿಸುವುದು. ಅಶೋಕನ ಕಾಲದಲ್ಲಿ ಭಾರತೀಯ ಸಂಸ್ಕೃತಿಯು ನಾಲ್ಕೂ ಪಾದಗಳನ್ನೂರಿ ಹೇಗೆ ನಡೆದಾಡುತ್ತಿತ್ತು? ಅಶೋಕನೆಲ್ಲ ಇದಕ್ಕೆ ಕಾರಣನಲ್ಲವೆ? ಹರ್ಷಪುಲಿಕೇಶಿಗಳ ಕಾಲದಲ್ಲೂ, ಗುಪ್ತರ ರಾಜ್ಯಭಾರ ಕಾಲದಲ್ಲೂ ಆರ್ಯ ಸಂಸ್ಕೃತಿ ಉನ್ನತೋನ್ನತವೇರುವ ಮಾರ್ಗವನ್ನು ಹಿಡಿದಿತ್ತು. ಆಧ್ಯಾತ್ಮಿಕ ವಿಚಾರಗಳು ಗುಡಿಗೋಪುರಗಳಲ್ಲೂ, ಗುರುಗೃಹ ರಾಜಗೃಹಗಳಲ್ಲೂ ಸಮಾನವಾಗಿತ್ತು. ಆಗ ಸಂಪತ್ತನ್ನು ಕಳೆದು ಕೊಂಡವನು ಭಿಕಾರಿಯೆನ್ನಿಸುತ್ತಿರಲಿಲ್ಲ; ನೀತಿ ನಿಯಮಗಳನ್ನು ಹೋಗಲಾಡಿಸಿಕೊಂಡವನು ಭಿಕಾರಿ ಪರದೇಶಿ ಎನ್ನಿಸುತ್ತಿದ್ದನು. ಆಗ ಪ್ರತಿಯೊಂದು ವ್ಯಕ್ತಿಯೂ ಆರ್ಯ ಸಂಸ್ಕೃತಿಯ ಪ್ರತೀಕವಾಗಿದ್ದ. ಉಡುಗೆ ತೊಡುಗೆ, ತರ್ಕ ವಿತರ್ಕ—ಅಷ್ಟೇಕೆ? ಜೀವನದ ಆದರ್ಶವೇ ಆರ್ಯ ಸಂಸ್ಕೃತಿಗೆ ಅಭಿಮುಖವಾಗಿತ್ತು. ಈ ಕುರಿತು ಆದರ್ಶ ರಾಜನಾದ ಅಶ್ವಪತಿಯು ತನ್ನ ದೇಶದಲ್ಲಿ ಸುಭಿಕ್ಷವೇಕೆ ನೆಲಸಿತ್ತೆಂಬುದರ ಕುರಿತು ಹೀಗೆ ಹೇಳಿದ್ದಾನೆ—"ನನ್ನ ದೇಶದಲ್ಲಿ ಕಳ್ಳ, ಮೋಸಗಾರ, ಹೆಂಡಕುಡುಕ, ಅವಿದ್ಯಾವಂತ, ವ್ಯಭಿಚಾರಿಗಳಿಲ್ಲ. ಇನ್ನು ವ್ಯಭಿಚಾರಿಣಿಗಳು ಹೇಗಿರುವರು? (ಛಾಂದೋಗ್ಯ ೫-೧೧-೫) ಇದು ಆರ್ಯ ಸಂಸ್ಕೃತಿಯನ್ನು ರಕ್ಷಿಸಿದುದರ ಪರಿಣಾಮವಲ್ಲವೆ?

ಈಗೀಗ ಆರ್ಯ ಸಂಸ್ಕೃತಿಯು ಹಳ್ಳಿಹಳ್ಳಿಗಳಿಂದಲೂ ಗಂಟುಮೂಟೆ ಕಟ್ಟಿಕೊಂಡು ಹೊರಟ ಚಿಹ್ನೆ ಕಾಣಿಸುತ್ತಿದೆ. ಕಿರಿಯರಿಗೆ ಹಿರಿಯರಲ್ಲಿ ಮನ್ನಣೆ ಇಲ್ಲ. ಮನುಷ್ಯರೆಲ್ಲಾ ದುರಭ್ಯಾಸಗಳ ಪಿಂಡವಾಗಿದ್ದಾರೆ. ಆಚರಣೆಯಲ್ಲಿ ಸೊನ್ನೆ ಸುತ್ತಿದ್ದರೂ, ಮಾತಿಗೆ ಬರಗಾಲವಿಲ್ಲ. ಭಾರತದ ಜೀವಾಳವಾದ ಆಧ್ಯಾತ್ಮಿಕ ವಿಚಾರಗಳು ಶ್ರುತಿ ಉಪನಿಷತ್ತುಗಳಲ್ಲೂ, ಭಾರತ ರಾಮಾಯಣಗಳಲ್ಲೂ ಉಳಿದಿವೆ. ಇತರರನ್ನು ನುಂಗಲು ಇರುವೆಗಳೂ ಆತುರಪಡುತ್ತಿವೆ. ಮೋಸ, ಕೃತಘ್ನತೆಗಳಿಲ್ಲದ ಮನುಷ್ಯರೇ ಅಪರೂಪ. ಸರಸ್ವತಿಯು ವಿಹರಿಸುವ ವಿದ್ಯಾಲಯಗಳಲ್ಲಿ ಇಂದು ವಿಕಟ ಪಿಶಾಚಿ ಡಕ್ಕಿಣಿಗಳು ನರ್ತಿಸುತ್ತಿವೆ. ವ್ಯವಹಾರದಲ್ಲಿ ಸುಣ್ಣ ಬೆಣ್ಣೆಗಳು ಯಾವುದೆಂದು ತಿಳಿಯುವುದು ಅಸಾಧ್ಯವಾಗಿದೆ. ಇವೆಲ್ಲಾ ಯಾವುದರ ಲೋಪದ ಪರಿಣಾಮ? ಭಾರತದ ಸಂಸ್ಕೃತಿಯಾದ ಆಧ್ಯಾತ್ಮ ವಿಚಾರಗಳಿಗೆ ಭಾರತದಲ್ಲೇ ಅರ್ಧಚಂದ್ರ ಪ್ರಯೋಗವಾದುದರ ಫಲಿತಾಂಶವಲ್ಲವೆ? ಭಾರತೀಯರ ಷೋಡಶ ಕರ್ಮಗಳಲ್ಲಿ ನಾಮಕರಣ, ಉಪನಯನ, ವಿವಾಹ ಮೊದಲಾದ ಕೆಲವು ಕರ್ಮಗಳು ಮೊನ್ನಿನವರೆಗೆ ಜೀವಂತವಿದ್ದುವು. ಈಗ ಉಪನಯನ ಕಾಲುಕಿತ್ತಿದೆ! ಉಪನಯನವಾದ ವಟುವಿಗೂ ಗಾಯತ್ರಿಯ ಜ್ಞಾನವಿಲ್ಲ!

ಸ್ತ್ರೀ ಪ್ರಪಂಚಕ್ಕೆ ರಾಮಾಯಣದ ಸೀತೆ, ಭಾರತದ ಸಾವಿತ್ರಿ, ದ್ರೌಪದಿಯರು ಆದರ್ಶರಾಗಿದ್ದರು. ಅಂದು ಸ್ತ್ರೀಯರಿಗೆ ಪಾತಿವ್ರತ್ಯವೇ ಭೂಷಣವಾಗಿತ್ತು. ಈಗ ಪಾತಿವ್ರತ್ಯದ ವಿಚಾರವನ್ನು ಕೇಳಿದೊಡನೆ ಸ್ತ್ರೀಯರು ಗಹಗಹಿಸಿ ನಗುತ್ತಾರೆ. ಆ ಶಬ್ದವೆತ್ತಿದವನನ್ನು ಶುಂಭನೆಂದು ಭಾವಿಸುತ್ತಾರೆ. ಮಕ್ಕಳಿಗೆ ಯೌವ್ವನದಲ್ಲಿ ತಂದೆ ತಾಯಿಗಳ ಗುರುತಿಲ್ಲ. 'ಮಾತೃದೇವೋ ಭವ' ಮೊದಲಾದ ವಾಕ್ಯಗಳನ್ನು ಆಧ್ಯಾತ್ಮಿಕ ಗ್ರಂಥಗಳಿಂದ ಇನ್ನು ಅಳಿಸಿ ತೆಗೆಯಬೇಕಾಗಿದೆ. ಗೀತೆ ಉಪನಿಷತ್ತುಗಳನ್ನು ಮೆಚ್ಚುವವರಿಗಿಂತಲೂ ಸಹಸ್ರಸಹಸ್ರ ಸಂಖ್ಯೆಯಲ್ಲಿ ಹೆಚ್ಚಾಗಿ ಸಾಮಾಜಿಕ ಕಾದಂಬರಿ ಸಿನೆಮಾಗಳನ್ನು ಮೆಚ್ಚುತ್ತಾರೆ. ದೇವತಾದರ್ಶನಕ್ಕಾಗಿ ತಪಸ್ಸುಮಾಡುತ್ತಿದ್ದ ಭಾರತೀಯರು ಸಿನೆಮಾ ನಟಿಯರ ಅನುಗ್ರಹದರ್ಶನ ಭಾಷಣಕ್ಕಾಗಿ ತಪಸ್ಸು ಮಾಡುತ್ತಿದ್ದಾರೆ. ಯಾವ ಯುಗದಲ್ಲೂ ಆಗದ ಆರ್ಯರ ಸಂಸ್ಕೃತಿಯ ಸಮಾಧಿಯು ಈ ಯುಗದಲ್ಲಾಗುತ್ತಿದೆ. ಇಂತಹ ವಿಚಾರಗಳನ್ನು ಎಲ್ಲಾ ಸಂಪಾದಕರೂ ಪ್ರಕಟಿಸಲು ಭಯಪಡುತ್ತಾರೆ; ಎಲ್ಲಿ ತಾವು ವಾಚಕರ ಆಗ್ರಹಕ್ಕೆ ಪಾತ್ರರಾದರೆ—? ಆಧ್ಯಾತ್ಮಿಕ ವಿಚಾರ, ಪ್ರಾರ್ಥನೆಗಳು ಒಂದು ನಿಮಿಷಕ್ಕಿಂತ ಹೆಚ್ಚು ಜನರಿಗೆ ಬೇಡ. ಸಿನೆಮಾ ನಟಿಯರ ಪ್ರಶಂಸೆ ವಿಮರ್ಶೆಗಳು ಗಂಟೆಗಟ್ಟಲೆ ಮಾಡಿದರೂ ಕಡಿಮೆಯೇ. ಇಂತಹ ಸ್ಥಿತಿ ಭಾರತ ಭೂಮಿಯನ್ನು ಆದರ ಸಂಸ್ಕೃತಿಯು ಕಡೆಗೆ ಹೊರಳಿಸುವುದು ಹೇಗೆ? ಹೊರಳಿಸುವ ಭಟನಾಟರೂ ಯಾವನು?

ಭಾರತದ ವಿನಾಶಕ್ಕೆ ಜಾತಿಭೇದವೇ ಕಾರಣವೆನ್ನುತ್ತಾರೆ. ಆದರೆ ವರ್ಣ ವ್ಯವಸ್ಥೆ ಜಾತಿ ವಿಚಾರ ದೇವತೆಗಳಲ್ಲೂ ಇತ್ತೆಂದು ವೇದಕಾಲದ ಜನತೆಯ ಅಭಿಪ್ರಾಯವಾಗಿತ್ತು. ಅಗ್ನಿ ಬೃಹಸ್ಪತಿಗಳು ಬ್ರಾಹ್ಮಣರು; ಇಂದ್ರ ವರುಣ ಸೋಮ ಯಮ ವಿಷ್ಣುಗಳು ಕ್ಷತ್ರಿಯರು; ವಸು ರುದ್ರ ಆದಿತ್ಯ ವಿಶ್ವೇದೇವ ಮರುತ್ತುಗಳು ವೈಶ್ಯರು; ಪೂಷನು ಶೂದ್ರನು ಎಂಬ ಭಾವನೆ ಆ ಕಾಲದಲ್ಲಿತ್ತು. ಈ ಭಾವನೆಯಿಂದ ಅಂದಿನ ಜನತೆಯು ಇಂದಿನಂತಾಗಿರಲಿಲ್ಲ. ನಾಲ್ಕು ವರ್ಣದವರೂ ಸುಖಜೀವನ ನಡೆಸುತ್ತಿದ್ದರು. ಜಾತಿಭೇದವಿಲ್ಲದ ಸಹೋದರರೇ ಇಂದು ಎಷ್ಟು ಕಚ್ಚಾಡಿಕೊಳ್ಳುತ್ತಾರೆ? ಒಬ್ಬನ ಕುತ್ತಿಗೆಯನ್ನು ಮತ್ತೊಬ್ಬನು ಹಿಸುಕಲು ಹಿಂದಾಗುವವರು ಎಷ್ಟು ಮಂದಿ? ಪ್ರಪಂಚವು ಯಾವ ಕಾಲದಲ್ಲೂ ಒಂದೇ ಮಟ್ಟದಲ್ಲಿರಲಿಲ್ಲ; ಎಷ್ಟೋ ಏರುತಗ್ಗುಗಳಿವೆ. ಈ ಏರುತಗ್ಗುಗಳ ಭಾವನೆಯು ಕೇವಲ ಆಧ್ಯಾತ್ಮಿಕ ವಿಚಾರಗಳಿಂದ ಮಾತ್ರ ಸರಿಪಡಿಸಬಹುದಾಗಿದೆ. ಮಹಾಭಾರತ ರಾಮಾಯಣ ಅಷ್ಟಾದಶಪುರಾಣಗಳೆಲ್ಲಾ ಈ ಗುರಿಯನ್ನಿಟ್ಟುಕೊಂಡೇ ಜನ್ಮಿಸಿವೆ. ಅವುಗಳ ಮಾತಿಗೆ ಕಿವಿಗೊಟ್ಟವರೆಗೆ ಭಾರತಕ್ಕೆ ನೆಮ್ಮದಿ ಇತ್ತು. ಭಾರತದ ಜನತೆಯು ಹೀಗೇ ಮುಂದರಿದರೆ ಯುರೋಪಿನಲ್ಲಿ ನಡೆದ ಪ್ರಳಯವು ಇಲ್ಲೂ ಸದ್ಯದಲ್ಲೇ ಕಾಣಿಸಿಕೊಳ್ಳುವುದು. ತಾಯಿಗಂಡ ಜನತೆಯನ್ನು ಕಾಲಪುರುಷನು ಆರೈಸಿಕೊಳ್ಳಲಾರನು!

ಜ್ಞಾನವು ಸಂಸ್ಕೃತಿಯ ಲಕ್ಷಣ. ಈ ಪ್ರಾಚೀನ ಸಂಸ್ಕೃತಿಗಳೆಲ್ಲಾ ಸಮಶೀತೋಷ್ಣವಲಯಗಳಲ್ಲೂ, ಗಂಗಾ ಸಿಂಧೂ, ಯುಫ್ರೆಟೀಸ್ ಟೈಗ್ರೀಸ್, ನೈಲ್, ಯಾಂಗ್ಸಿಕಿಯಾಂಗ್ ಹೋಯಾಂಗ್ ಹೋ ಮುಂತಾದ ನದಿಗಳ ದಡಗಳಲ್ಲೂ ಬೆಳೆದುವು. ಈಗ ಇಲ್ಲೇ ಇವುಗಳ ಪ್ರಥಮ ವಿನಾಶದ ಚಿಹ್ನೆ ಕಾಣಿಸುತ್ತಿದೆ. ಇಂದಿನ ಯುರೋಪು ಸಂಸ್ಕೃತಿಯು ಏಷ್ಯಾ ಖಂಡದಲ್ಲಿ ಹುಟ್ಟಿ ಕ್ರೀಟ್ ಮಾರ್ಗವಾಗಿ ಗ್ರೀಸ್ ದೇಶಕ್ಕೆ ಹೋಗಿ ಬಳೆದು, ಅನಂತರ ರೋಮನ್ ಸಾಮ್ರಾಜ್ಯದಲ್ಲಿ ಹರಡಿ ಆ ಮೇಲೆ ಇಂದಿನ ಯುರೋಪು ಸಂಸ್ಕೃತಿಯಾಯಿತು. ಅಂದರೆ ಯುರೋಪು ಸಂಸ್ಕೃತಿಯ ಜನ್ಮವೂ ಆಧ್ಯಾತ್ಮಿಕ ವಿಚಾರಗಳಲ್ಲೇ ಆಯಿತು.

ಸಂಸ್ಕೃತಿ ಬಳೆಯಲು ಸ್ವಾತಂತ್ರ್ಯ ಬೇಕು. ಈಗ ಭಾರತಕ್ಕೆ ಸ್ವಾತಂತ್ರ್ಯ ಬಂದಿದೆ. ಇಲ್ಲಿ ಈಗ ಆರ್ಯ ಸಂಸ್ಕೃತಿ ಎಷ್ಟು ಅಭಿವೃದ್ಧಿ ಹೊಂದಿದೆ? ಹೊಂದುತ್ತಿದೆ? ಆಧ್ಯಾತ್ಮಿಕ ಪ್ರಗತಿಯು ಎಷ್ಟಾಗಿದೆ? ಮಹಾತ್ಮಾ ಗಾಂಧಿಗಳ ವಿಚಾರವನ್ನು ಮಾತು ಮಾತಿಗೂ ಉದಾಹರಿಸುವ ನಾವು ಅವರಿಗೆ ಪ್ರಿ

(೧೭ ನೇ ಪುಟ ನೋಡಿರಿ)

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ-

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆರ್ಯ ಸಂಸ್ಕೃತಿ

೧೩ ನೇ ಪುಟದಿಂದ

ಯವಾದ ಅಧ್ಯಾತ್ಮಿಕ ವಿಚಾರಗಳನ್ನು ಮೆಚ್ಚುವುದಿಲ್ಲವೇಕೆ? ನೀವು ಮಾತಿನ ಮಲ್ಲರು. ಭಾರತೀಯರನ್ನು ಗೊಡ್ಡು ಅಧ್ಯಾತ್ಮಿಕ ವಿಚಾರವಾದಿಗಳೆಂದು ಯಾರೂ ತಿರಸ್ಕರಿಸಬೇಕಾಗಿಲ್ಲ. ಭರತ ಖಂಡದಲ್ಲಿ ಅಧ್ಯಾತ್ಮಿಕ ಶಾಸ್ತ್ರಗಳೆಷ್ಟು ಬೆಳೆದಿವೆಯೋ, ಲೋಕ ಸಂಗ್ರಹಕ್ಕಾಗಿ ಅಷ್ಟೇ ಐಹಿಕ ವಿಷಯವಾದ ಶಾಸ್ತ್ರಗಳೂ ಇರುವುದರಿಂದ ಭಾರತೀಯರ ಸಂಸ್ಕೃತಿಯು ಇತರ ಸಂಸ್ಕೃತಿಗಳಂತೆ ಅಪೂರ್ಣವಾಗಿಲ್ಲದೆ ಸರ್ವಾಂಗ ಸುಂದರವಾಗಿದೆ.

ಈಗ ಭಾರತದ ಹಿರಿಯರು ಮಾಡತಕ್ಕ ಅಮೋಘ ಸೇವೆಯೆಂದರೆ ಆರ್ಯ ಸಂಸ್ಕೃತಿಯನ್ನು ಈ ದೇಶದಲ್ಲಿ ಉಳಿಸಿಕೊಳ್ಳುವುದು. ಘಜನಿ ಮಹಮ್ಮದ ಔರಂಗಜೇಬರಂಥವರು ಈ ದೇಶದ ನೂರಾರು ಸಾವಿರಾರು ಗುಡಿ ಗೋಪುರಗಳನ್ನು ಧ್ವಂಸಮಾಡಿದರೂ. ಆರ್ಯ ಸಂಸ್ಕೃತಿಯ ಮೇಲೆ ಕೈಎತ್ತಲಾಗದುದರಿಂದ ನಷ್ಟವಾದ ಗುಡಿಗೋಪುರಗಳು ಪುನಃನಿರ್ಮಾಣವಾದುವು ಈಗ ಆರ್ಯಸಂಸ್ಕೃತಿಯು ಜನರ ಹೃದಯದಿಂದ ಕಾಲುಕೀಳುತ್ತಿರುವುದರಿಂದ ಗುಡಿ ಗೋಪುರಗಳೆಲ್ಲಾ ಇದ್ದೂ ಇಲ್ಲದಂತಾಗಿವೆ. ಆಧ್ಯಾತ್ಮಿಕ ವಿಚಾರಗಳನ್ನು ಶಿಕ್ಷಣದ ಮೂಲಕ ಭಾರತದ ವಿದ್ಯಾರ್ಥಿಗಳಿಗೆ ಇಂಜೆಕ್ಷನ್, ಕೊಡುವುದರಿಂದ ಮಾತ್ರ ಆರ್ಯಸಂಸ್ಕೃತಿಯು ಭಾರತದಲ್ಲಿ ನಿಂತೀತಲ್ಲದೆ, ಇಲ್ಲದಿದ್ದರೆ ಭಾರತವು ಸಂಸ್ಕೃತಿ ಶೂನ್ಯ ಹೃದಯ ಶೂನ್ಯ ರಾಷ್ಟ್ರವಾಗಿ ನೆರೆಹೊರೆಯ ದೇಶಗಳ ಕೈತುತ್ತಾಗುವುದು. ಅಂಥಾ ದುರ್ದಿನವು ನಮ್ಮ ಪವಿತ್ರ ಭಾರತಕ್ಕೆಂದೂ ಬಾರದಿರಲಿ !

ಅತ್ತ ಪ್ರಾಂತದ ಹೆಸರೂ ಕನ್ನಡವಾಗಲಿಲ್ಲ— ಇತ್ತ ಕನ್ನಡದ ಪೂರ್ತ ನೆಲವೂ ನಮಗುಳಿಯಲಿಲ್ಲ.

(೮ನೇ ಪುಟದಿಂದ)

ದುರ್ಗಗಳೇನು ಬೆಲೆಯಲ್ಲಿ ಕಡಿಮೆಯವೆ? ಒಂದು ಕರಾವಳಿಯ ಪ್ರದೇಶವಾದರೆ, ಇನ್ನೊಂದು ಭಾರತದ ಪ್ರಸಿದ್ಧ ಹತ್ತಿಯ ಕೇಂದ್ರ. ಪಂಚಾಯತದಾರರೆದುರು ಹಳೆಯ ಮೈಸೂರು ತನ್ನದೇ ಚಿನ್ನದ ನಾಡು ಎಂದರೆ— ತಾನು ಒಂದು ಇಂಚನ್ನು ಬಿಡಲಾರೆ ಎಂದರೆ— ನಮಗೆ ಹೊಸತು ದೊರೆಯಲಾರದು. ಇತ್ತ ನಮ್ಮ ಪ್ರತಿನಿಧಿಗಳೂ, ಅಂದರೆ ದಕ್ಷಿಣಕನ್ನಡದ ರಾಜಕಾರ್ಯ ಯಾರ ಕೈಗೊಂಬೆಯಾಗಿ ಉಳಿದಿದೆಯೋ ಅವರು —ಅವರೂ ಜಿಲ್ಲೆ ಕನ್ನಡ ಜಿಲ್ಲೆ ಎಂಬ ಅಭಿಮಾನವಿಲ್ಲದವರು. ಐವತ್ತೇಳರ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಕಾಂಗ್ರೆಸ್ಸನ್ನು ಗೆಲ್ಲಿಸುವ ಭರದಲ್ಲಿ ಕಾಸರಗೋಡನ್ನು ಕಡೆಗಣಿಸಿದರು. ನಮ್ಮಲ್ಲಿಯ ಒಂದು ಪಾರ್ಲಿಮೆಂಟ್ ಸ್ಥಾನಕ್ಕೆ—ಕೊಡಗಿನ ಒಂದು ಪ್ರದೇಶವೂ ಸೇರಬೇಕಾಯಿತು. ಹೀಗೆ ನಮ್ಮವರ ಉದಾಸೀನದಿಂದಲೂ ನಾವು ನಮ್ಮ ನೆಲವನ್ನು ಕಳಕೊಂಡೆವು. ದೇಶದ ರಾಜಕಾರಣಗಳಲ್ಲಿ ಪ್ರಬಲರಾದ ಆಂಧ್ರರು ಬಳ್ಳಾರಿಯ ಅಂಶಗಳನ್ನು ಪಡೆದೇ ಬಿಟ್ಟರಾದರೆ ಹಳೆಯ ಮೈಸೂರಿಗರಿಗೆ ಅವರ ವೈಶಿಷ್ಟ್ಯವೇ ದೊಡ್ಡದಾಯಿತು.—ವಿಲಯನ ಪ್ರದೇಶದ ರಾಜಕಾರಣಿಗಳಲ್ಲಿ ಕನ್ನಡಾಭಿಮಾನ ಕಡಿಮೆಯಾಯಿತು. ದಕ್ಷಿಣ ಕನ್ನಡದ ರಾಜಕಾರಣಿಗಳು ಕನ್ನಡ ಎಂದರೆ ಖಂಡಿತ ಮೂಗು ಮುರಿದವರು.— ಅಂತೂ ಕುಂತಿ ಮಕ್ಕಳ ಕತೆ ನಮ್ಮದಾಯಿತು. ಅತ್ತ ಪ್ರಾಂತದ ಹೆಸರೂ ಕನ್ನಡವಾಗಲಿಲ್ಲ ಇತ್ತ ನಮ್ಮ ನೆಲವೂ ನಮಗುಳಿಯಲಿಲ್ಲ. —ಭಾರತದ ಸ್ವಾತಂತ್ರ್ಯವು ನಮಗೆ ಕೊಟ್ಟ ಉಡುಗರೆ ಎಂದರೆ ನಾವು ಇದ್ದ ಕನ್ನಡತನವನ್ನೂ ಆತ್ಮಾಭಿಮಾನವನ್ನೂ ಕಳಕೊಳ್ಳುವಂತಾದದ್ದು. ಹೋಗಲಿ, ಹೆಸರಿನಿಂದ ಏನು. ಒಟ್ಟು ದೇಶದ ಅಭಿವೃದ್ಧಿ ಮುಖ್ಯ ಎಂದರೆ ಆಡಳಿತದಲ್ಲೂ ಈ ಹಳೆಯ ಮೈಸೂರ ಪ್ರಭಾವವೇ ಎತ್ತಿ ತೋರುತ್ತಿದೆ ತ್ರಿಮೂರ್ತಿ ಸಮಿತಿ ಪ್ರಾಂತಗಳ ಪುನರ್ವರ್ಗೀಕರಣ ಕಾರ್ಯಕ್ಕಾಗಿ ವಿಷಯ ಸಂಗ್ರಹಿಸುತ್ತಿರುವಾಗಲೇ, ಮೈಸೂರು ಮುಂದುವರಿದ ನೆಲ—ಮೈಸೂರೊಡನೆ ಸೇರುವ ಇತರ ಭಾಗಗಳಲ್ಲಿ ಕೊರತೆಯ ಬೇಡುಗಳು ಎತ್ತಿ ತೋರಿಸಲು ಹನುಮಂತಯ್ಯನವರ ಶೇಷಾದ್ರಿ ಸಮಿತಿ ವರದಿ ಪ್ರಕಟವಾಗಿತ್ತು. ಇಂದಿಗೂ ನಾವೆಲ್ಲ Integrated— ಮೈಸೂರೊಡನೆ ಸೇರಿಕೊಂಡ ಭಾಗಗಳೆಂಬುದೇ ಆಡಳಿತದಲ್ಲಿನ ಮನೋಭಾವ ದೇಶಕ್ಕಿಂತ ಪಕ್ಷವೇ ದೊಡ್ಡದಾಗಿ ಪಕ್ಷದ ಶಿಸ್ತಿಗೆ ತಲೆಬಾಗುವ ಶಾಸಕರು—ವಿಲಯನ ಪ್ರದೇಶದ ಪ್ರತಿನಿಧಿಗಳೂ ಇದನ್ನು ಪ್ರತಿಭಟಿಸ ಬೇಕಾದದ್ದು. ಆದರೆ ಅವರೂ ಮೌನ.

ಏಕೀಕರಣವಾದರೆ ನಮ್ಮ ಮಲೆನಾಡು ಅಭಿವೃದ್ಧಿಗೊಳ್ಳುತ್ತದೆ— ನಮಗೆ ಇನ್ನೂರ ಮೈಲು ಕರಾವಳಿಯ ಪ್ರದೇಶವಿದೆ. ಇತ್ಯಾದಿ, ಇತ್ಯಾದಿಬಹಳವಾಗಿ ಕೊಚ್ಚಿಕೊಂಡೆವು. ಈಗ ಅದೆಲ್ಲ ಜಂಬದ ಮಾತಾಯಿತು. ಮಲೆನಾಡ ಅಭಿವೃದ್ಧಿ ಯಾರಿಗೆ ಬೇಕು? ಸಮಿತಿಗಳೇನೋ ಆಗಿವೆ. ವಿದೇಶಗಳಲ್ಲಿ ಯಾದರೆ ಇಷ್ಟೊಂದು ವಿಪುಲ ಸಂಪತ್ತಿನ ಈ ಬೀಡನ್ನು ಹೀಗೆಯೇ ಬಿಟ್ಟಾರೆಯೆ?— ಇನ್ನು ಕರಾವಳಿಯು? ಅಲ್ಲೂ ರಾಜಕೀಯ— ಈ ಕರಾವಳಿಯು ರಾಜಕೀಯದಲ್ಲಿ ನಮ್ಮದೂ ಕೊಂಚ ಪಾಲಿದೆ. ಇನ್ನೂರು ಮೈಲು ಕರಾವಳಿಯಲ್ಲಿ ಒಂದು ಪ್ರಬುದ್ಧ ಬಂದರವಾಗದೆ ಉಳಿಯಿತು. ಆಗಬೇಕಿತ್ತು ಮಲ್ಪೆ—ತಜ್ಞರು ಶಿಫಾರಸು ಮಾಡಿದ್ದು ಅದನ್ನೇ. ರಫಿ ಅಹಮ್ಮದ್ ಕಿಡ್ವಾಯಿ ಈಗ ಬದುಕಿದ್ದರೆ ಅದರ ಕತೆ ಹೇಳುತ್ತಿದ್ದರು. ಹದಿನೆಂಡು ವರ್ಷಗಳ ಕಾಲ ಮಲ್ಪೆ ಹಿಂದೂಡಲ್ಪಟ್ಟಿತು. ಮಲ್ಪೆ-ಭದ್ರಾವತಿಯ ಮಲೆನಾಡ ರೈಲು ರಸ್ತೆಯೂ ಕನಸಿನ ಕತೆಯಾಯಿತು. ಮಂಗಳೂರು ರಾಜಕಾರಣಿಗಳು ಹಳೆಯ ಮೈಸೂರಿಗರಂತೆ —ದಕ್ಷಿಣ ಕನ್ನಡ ಜಿಲ್ಲೆ ಎಂದರೆ ಮಂಗಳೂರು—ಮಂಗಳೂರು ಮಾತ್ರ ಎನ್ನುವವರು —ಹಾಸನ ಮಂಗಳೂರು ರೈಲ್ವೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವ ಪ್ರಯತ್ನ ನಡೆದಿದೆ. ಅರ್ಧ ಶತಮಾನದ ಹಿಂದೆಯೇ

(೧೯ನೇ ಪುಟ ನೋಡಿರಿ)

INDIA'S MOST DURABLE & ECONOMICAL

DIESEL TRUCK & BUS CHASSIS....

TATA - MERCEDES - BENZ

DIESEL TRUCKS & BUS CHASSIS

The Arvind Motors (Private) Ltd.,

BALMATTA ROAD : : MANGALORE.

ಗೋಪಾಲನ ಅದೃಷ್ಟ

(೭ನೇ ಪುಟದಿಂದ)

ದರೂ ಅವರು ಬೇರೆ ಹೋಗೋದಿಲ್ಲ. ನಿನ್ನಪ್ಪನಿಗೆ ಮರ್ಯಾದಿ ಹೋದೀತಂತೆ ಮರ್ಯಾದೀ! ಮೊನ್ನೆ ಪ್ಯಾಂಟ್ಸನ್ನು ಹೋದಾಗ ಶಾಲೇಲಿ ಹೋಗಿ ರಂಪಾಮಾಡಿ ಬಿಟ್ರೇ ತನ್ನ ಮಾನ ಹೋಗುತ್ತೇ ಅಂದ್ರಲ್ಲಾ! ನಮ್ಮ ಹುಡುಗ ಆಕಲು ತಪ್ಪಿದರೆ ಶಾಲೇಲಿ ಯಾರೇನು ಮಾಡ್ತಾರು? ಕದ್ದವ ಸಿಕ್ಕಿ ಬೀಳುವ ಹಾಗೆ ಮಾಡುತ್ತಾನೋ? ತಿನ್ನಪ್ಪಾ, ತಿನ್ನು. ಅಪ್ಪನ ಕೈಲಿ ಪೆಟ್ಟುತಿಂದು ಸಾಯ್ಲಿಕ್ಕೇ ನೀನು ಹುಟ್ಟಿದ್ದೀ ಅಂತ ಕಾಣುತ್ತೇ!...." ಹೀಗೆ ತಾಯಿ ಸಿಟ್ಟಿನಿಂದಲೂ ದುಃಖದಿಂದಲೂ ಬಾಯಿ ತುಂಬಾ ಬಡಬಡಿಸಿದಳು.

'ಅಮ್ಮಾ, ಅಪ್ಪನ ಹತ್ರ ಹೇಳಬೇಡಾಮ್ಮ. ಇನ್ನು ಮೇಲೆ ಬಿಸಾಡೋದಿಲ್ಲಮ್ಮ' ಎಂದು ಅಳುತ್ತಾ ರಾಗವಾಗಿ ಹೇಳಿದ ಗೋಪಾಲ.

'ಇನ್ನು ಮೇಲೆ ಎಂಥಾದ್ದನ್ನೋ ನೀನು ಬಿಸಾಡೋದು? ಐದೂವರೆ ರೂಪಾಯಿ ಪುಸ್ತಕ ಬಿಸಾಡಿದೆಯಲ್ಲೋ!'

'ಇನ್ನೊಂದು ಪುಸ್ತಕ....'

'ದುಡ್ಡೆಲ್ಲಿದೆ — ಮೇಲಿಂದ ಸುರೀತಾ ಇದೇ ಅಂದು ಕೊಂಡ್ಯಾ?

'ಅಮ್ಮಾ, ಅಪ್ಪನಿಗೆ ಗೊತ್ತಾದ್ರೆ ಹೊಡೀತಾರಮ್ಮ. ಇನ್ನು ಮೇಲೆ ಖಂಡಿತಾ ಬಿಸಾಡೋದಿಲ್ಲಾ..."

ತಾಯಿಯ ಹೃದಯ ಕರಗಿತು. ಹೋದ ಪುಸ್ತಕ ಇನ್ನು ಸಿಕ್ಕುವ ದಾರಿಯಂತೂ ಇಲ್ಲ, ಶಾಲೆಗೂ ಬೇಕಾಗುತ್ತೆ. ಇನ್ನು ಮೇಲೆ ಜಾಗರೂಕನಾಗಿರುವುದಾಗಿ ಅವನಿಂದ ಭಾಷೆ ಪಡೆದು ಎಲ್ಲಿಂದಲೋ ಐದೂವರೆ ರೂಪಾಯಿ ತಂದುಕೊಟ್ಟರು ಶಾರದಮ್ಮ. 'ನಿನ್ನ ಹೊಟ್ಟೆ ತಣ್ಣಗಿರಲಮ್ಮಾ' ಎಂದು ಕೊಳ್ಳುತ್ತಾ ಓಡಿ ಹೋಗಿ ಹೊಸ ಚರಿತ್ರೆ ಪುಸ್ತಕ ಕೊಂಡುಕೊಂಡು ಬಂದ ಗೋಪಾಲ.

ದೇಶ ಸೇವಕ ಶಂಕರ್ರಾಯರು ಬೆಳಗ್ಗೆ ಹತ್ತು ಗಂಟೆಗೆ ಮನೆಯಿಂದ ಹೋದವರು ರಾತ್ರಿ ಎಂಟು ಗಂಟೆ ಹೊತ್ತಿಗೆ ಮನೆಗೆ ಬಂದರು. ಆಗ ಅವರ ದರ್ಶನಕ್ಕಾಗಿ ಹೆಡ್ಮಾಸ್ಟರ್ ಸುಂದರ ಶೆಟ್ಟರು ಕಾದಿದ್ದರು. ಅವರ ಕೈಯಲ್ಲೊಂದು ಪುಸ್ತಕದ ಕಟ್ಟಿದ್ದಿತು. ಅದಕ್ಕೆ ದೇಶ ಸೇವಕ ಶಂಕರ್ರಾಯರ ಮುನ್ನುಡಿಯೊಂದು ಅವರಿಗಾಗ ಬೇಕಿತ್ತು. ದೊಡ್ಡ ಮನುಷ್ಯರು ಶಂಕರ್ರಾಯರು ಹಿಂದೆ ಅವರು ಮಾಡಿದ ತ್ಯಾಗವೆಷ್ಟು! ಸೇವೆಯೆಷ್ಟು! ಮೂರು ಬಾರಿ ಸತ್ಯಾಗ್ರಹಮಾಡಿ ಜೈಲಿಗೆ ಹೋಗಿ ಬಂದಿದ್ದಾರಂತೆ. ಆ ಪ್ರಾಂತದವರಿಗೆಲ್ಲಾ ಅವರೇ ಮುಖಂಡರು.

ಆದರೆ ಇತ್ತೀಚೆಗೆ ಇಂತಹ ತ್ಯಾಗಿಗಳು ಹಲವರಿರುವರೆಂದು ಗೊತ್ತಾಗಿತ್ತು. ಅಂತೆಯೇ ಶಂಕರ್ರಾಯರಿಗೂ ಕೆಲವು ಸ್ಪರ್ಧಾಳುಂಟಾಗಿದ್ದರು. ಆದರೆ ತಮ್ಮ ನೂರು ಸುತ್ತಲೂ ವ್ಯಾಪಾರ ಮಹಿವಾಟುಗಳ ಬಲಗಳಿರುವ ಶಂಕರ್ರಾಯರ ಮುಂದೆ ಅವರೆಲ್ಲ ಬಲಹೀನರಾಗಿದ್ದರು. ಆ ಪ್ರಾಂತದಲ್ಲಿ ಶಂಕರ್ರಾಯರ ಪ್ರಭಾವವೇ ಹೆಚ್ಚು. ಅಲ್ಲಿ ನಡೆಯುವ ಪ್ರತಿಯೊಂದು ಸಾಂಘಿಕ ಸಾಮಾಜಿಕ ಸಮಾರಂಭಗಳು ಇವರ ಕೈಯಿಂದಲೇ ನೆರವೇರುತ್ತಿದ್ದುವು. ಈಗ ಆಗೋಸ್ತು ೧೫ಕ್ಕೆ ಸ್ವಾತಂತ್ರ್ಯೋತ್ಸವದ ಸಮಾರಂಭ ಕೂಡಾ ಅವರ ಕೈಯಿಂದಲೇ ನೆರವೇರಬೇಕೆಂದು ಊರ ಹತ್ತು ಸಮಸ್ತರು ಕೇಳಿಕೊಂಡಿದ್ದರು. ಒಪ್ಪದೆ ನಿರ್ವಾಹವಿರಲಿಲ್ಲ. ಆಗ ನಡೆಯುವ ಸಾರ್ವಜನಿಕ ಸಭೆಯಲ್ಲಿ ಅವರನ್ನು ಪ್ರಶಂಸಿಸಿ ಕೆಲವರು ಮಾತಾಡಲಿದ್ದಾರಂತೆ. ಅವರೂ ಏನೋ ಭಾಷಣ ಮಾಡಬೇಕಾಗಿತ್ತು. ಅದೇ ವಿಷಯವನ್ನು ನೆನೆದುಕೊಳ್ಳುತ್ತಾ ಮನೆಗೆ ಬಂದಿದ್ದರು.

ಕಾದಿದ್ದ ಹೆಡ್ಮಾಸ್ಟರ್ ಸುಂದರ ಶೆಟ್ಟರ ಪುಸ್ತಕಕ್ಕೆ ಅರೆನಿಮಿಷದೊಳಗೆ ಮುನ್ನುಡಿ ಕೊಟ್ಟದ್ದಾಯಿತು. ಆ ವಿಷಯದಲ್ಲಿ ಇವರಿಗೆ ಶ್ರಮವಾಗಬಾರದೆಂದು ಹೆಡ್ಮಾಸ್ತರೇ ಎಲ್ಲಾ ತಯಾರಿಸಿ ಕೊಂಡೇ ಬಂದಿದ್ದರು ಇವರೊಂದು ದಸ್ಕತು ಎಳೆದುಬಿಟ್ಟರೆ ಮುನ್ನುಡಿಯಾದ ಹಾಗೆ.

ಹೆಡ್ಮಾಸ್ಟರನ್ನು ಕಳುಹಿಸಿದ ಮೇಲೆ ಶಂಕರ್ರಾಯರು ತಮ್ಮ ಮೇಜಿನ ಡ್ರಾವರಿನ ಅರೆಯನ್ನೆಳೆದು ಏನನ್ನೋ ಬಿಡಿಸಿ ನೋಡಿ ಪತ್ನಿಯನ್ನು ಕೋಪದಿಂದ ಕರೆದು 'ಇಲ್ಲಿದ್ದ ಐದೂವರೆ ರೂಪಾಯಿ ಏನಾಯಿತೆಂದು ಕೇಳಿದರು. ಸಕ್ಕರೆ ತೊಗರೀ ಬೇಳೆಗಳಿಗಾಗಿ ತಾನು ಬಳಸಿಕೊಳ್ಳಬೇಕಾಯಿತೆಂದು ಶಾರದಮ್ಮ ಹೇಳಿದರು. 'ಮೊನ್ನೆ ತಾನೇ ತೊಗರೀ ಬೇಳೆ ತಂದದ್ದು. ಅಷ್ಟರೊಳಗಾಗಿ ಹೋಯಿತೋ?' —ಎಂದು ಮುಂತಾಗಿ ಸ್ವಲ್ಪ ತನಿಖೆ ನಡೆಸಿದರು. ಶಾರದಮ್ಮ ಕೂಡಾ ಅವರ ತನಿಖೆಗಳಿಗೆ ತಕ್ಕ ಉತ್ತರ ಕೊಟ್ಟೇ ಕೊಟ್ಟರು. ಇಂಥ ದುಬಾರಿ ಖರ್ಚಿನ ಬಗ್ಗೆ ಹೆಂಡತಿಗೆ ಅಷ್ಟು ಬೋಧನೆ ಕೊಟ್ಟು, ಇನ್ನು ಮೇಲೆ ದುಡ್ಡಿನ ವಿಷಯದಲ್ಲಿ ತಾನೇ ಹೆಚ್ಚಿನ ಜಾಗ್ರತೆ ವಹಿಸಿಕೊಳ್ಳಬೇಕಾಯಿತೆಂದೂ ಹೇಳಿಕೊಂಡು ಆ ಪ್ರಕರಣವನ್ನು ಮುಗಿಸಿದರು ಶಂಕರ್ರಾಯರು.

ಇದನ್ನೆಲ್ಲಾ ಕೇಳುತಿದ್ದ ಗೋಪಾಲನ ಎದೆ ಸಿಟಪಿಟಿ ಅನ್ನುತಿತ್ತು. ಪುಣ್ಯದ ತಾಯಿ ಗುಟ್ಟು ಬಿಡದೆ ಅವನನ್ನು ಸಂರಕ್ಷಣೆ ಮಾಡಿದಳು!

ರಾತ್ರಿ ಊಟಗೀಟ ಎಲ್ಲಾ ಆಗಿ ಶಂಕರ್ರಾಯರು ವಿಶ್ರಾಂತಿ ಕೋಣೆಯಲ್ಲಿ ಕುಳಿತರು. ಮೇಲಿನ ಹಲಗೆಯಿಂದ ಒಂದು ಪುಸ್ತಕವನ್ನು ತೆಗೆದು ತಮ್ಮೆದಿರು ತೆರೆದಿಟ್ಟುಕೊಂಡು 'ಗೋಪಾಲ! ಇಲ್ಲಿ ಬಾರೋ' ಎಂದು ಕರೆದರು.

ಹೆದರುತ್ತಾ ಗೋಪಾಲ ಬಂದು ನಿಂತ.

"ಈ ಪುಸ್ತಕದ ಪಾಠಗಳನ್ನು ಮಾಸ್ತರು ಹೇಳಿ ಕೊಡುತ್ತಾರಷ್ಟೆ? ಇದರ ನೋಟ್ಸು ಗೀಟ್ಸು ಎಲ್ಲಾ ಬರೆದಿಟ್ಟಿದ್ದೀ ತಾನೆ? ಆ ನೋಟ್ಸು ಪುಸ್ತಕ ತಾ ನೋಡುವ" ಅಂದರು.

"ತರ್ತೇನಪ್ಪಾ" ಎಂದು ಉತ್ಸಾಹದಿಂದ ಕೂಗುತ್ತಾ ಹಾರಿ ಹಾರಿ ಓಡಿದ ಗೋಪಾಲ. ಒಂದೇ ಹಾರಿಗೆ ತಾಯಿಯ ಹತ್ತರ ಹೋಗಿ ಗುಟ್ಟಾಗಿ—"ಆ ಚರಿತ್ರೆ ಪುಸ್ತಕ ಅಪ್ಪನ ಹತ್ರ ಉಂಟಮ್ಮ. ನನಗೀಗ ಪಾಠ ಹೇಳಿಕೊಡ್ತಾರಂತ ಕಾಣುತ್ತೆ. ನೋಟ್ಸು ತಾ ಅಂದರು" ಎಂದ.

"ಹಃ! ಅವರಾ? ಅವರೇನ್ ಪಾಠ ಮಾಡ್ತಾರೋ ಮಣ್ಣು? ಇಷ್ಟು ದಿವಸ ಮಾಡದವರು!" ಅಂದರು ಶಾರದಮ್ಮ.

ಗೋಪಾಲ ನೋಟು ಪುಸ್ತಕ ತೆಗೆದುಕೊಂಡು ತಂದೆಯ ಬಳಿಗೆ ಹೋದ. ಶಂಕರ್ರಾಯರು ಎರಡು ಪುಸ್ತಕಗಳನ್ನೂ ಬಿಡಿಸಿಕೊಂಡು ಮಗನನ್ನು ತನ್ನ ಪಕ್ಕದಲ್ಲಿ ಕೂಡಲು ಹೇಳಿದರು.

"ನೋಡು. ನನಗೀಗ ಕೆಲವು ಸಂಗತಿ ನೀನು ಬರೆದು ಕೊಡಬೇಕು. ನಮ್ಮ ದೇಶಕ್ಕೆ ಯಾವಾಗ ಸ್ವಾತಂತ್ರ್ಯ ಬಂದದ್ದು? ಸ್ವಾತಂತ್ರ್ಯ ಸಿಕ್ಕೋದಕ್ಕೆ ಎಷ್ಟು ಮುಂಚೆ ಮಹಾತ್ಮಾ ಗಾಂಧಿಯವರು ಸತ್ತದ್ದು? ಸ್ವಾತಂತ್ರ್ಯ ಸಿಕ್ಕಿದ ಮೇಲೆ ನಡೆದ ಮುಖ್ಯ ಘಟನೆಗಳು ಯಾವುವು? ಯಾವಾಗ? ಎಂಬುದನ್ನೆಲ್ಲಾ ಒಂದು ಕಾಗದದಲ್ಲಿ ಚೆಂದಾಗಿ ಬರೆ ನೋಡುವಾ?"

"ಏನಪ್ಪಾ? ನಾನು ಬರೀಬೇಕೆ?"

"ಹೌದೋ. ನೀನೇ. ಶಾಲೆಯಲ್ಲಿ ಮಾಸ್ತರು ಪ್ರಬಂಧಗಿಬಂಧ ಬರೆಸುತ್ತಾರೋ ಇಲ್ಲವೋ? ಇಕೋ ನೋಡು, ಹೀಗೆ ಶುರುಮಾಡು. "ಮಾನ್ಯರೆ, ಬಂಧುಗಳೇ, ಭಗಿನಿಯರೆ, ಇದೀಗ ಇಂತಿಷ್ಟನೆಯ ಸ್ವಾತಂತ್ರ್ಯ ಸಂಗ್ರಾಮ-ಅಲ್ಲಲ್ಲ ಮಹೋತ್ಸವ. ಹುಂ. ಬರೆ— ಎಷ್ಟನೇದಂತ ಪುಸ್ತಕದಲ್ಲಿ ನೋಡಿ ಲೆಕ್ಕಮಾಡಿ ಗುರುತಿಸು.'

'ಏನೊಂದ್ರೆ ಇದೆಲ್ಲಾ? ನೀವು ಇವನಿಗೆ ಪಾಠ ಹೇಳಿ ಕೊಡುವ ಲಕ್ಷಣವೋ ಇದು?' ಎಂದರು ಶಾರದಮ್ಮ.

'ಮತ್ತೇನಿಲ್ಲಾ. ಇವನನ್ನು ದೊಡ್ಡ ದೇಶ ಸೇವಕನನ್ನಾಗಿ ಮಾಡಿಬಿಡುವಾಂತ ಇದ್ದೇನೆ.' ಎಂದು ಶಂಕರ್ರಾಯರು ಸ್ವರವನ್ನು ತಗ್ಗಿಸಿ—'ಅಲ್ವೇ, ನನಗೆ ಈ ವರೆಗೆ ಭಾಷಣ ಬರೆದುಕೊಟ್ಟು ಸಹಾಯ ಮಾಡುತ್ತಾ ಇದ್ದ ಆ ಕೃಷ್ಣ ಶರ್ಮ ಸತ್ತು ಹೋಗಿ ಈ ಕಷ್ಟ ಬಂತು. ಯಾರಿಗೂ ಹೇಳಿ ಬಿಡಬೇಡಾ ಮತ್ತೆ. ಹೆಂಗುಸರ ಬಾಯಿ—"

'ಸಾಕು ಬಿಡೀ. ಅದಕ್ಯಾಗಿ ಈ ಪೋರನ ಹತ್ತಿರವೇ ಬರಸೋದು?'

'ಬರಸೋದೇನು ಬಂತೇ? ಬರೆಸಿಕೊಂಡು ಸಭೆಯಲ್ಲಿ ಓದಿದರೂ ಕಷ್ಟವೇ. ಭಾಷಣಗಾರ್ರ ಹೆಸರೇ ಇಳಿದು ಹೋಗುತ್ತೆ. ನಾನು ಇವನನ್ನೆ ಮೇಜೀ ಅಡೀಲಿ ಕೂರಿಸಿ ಬಿಡಬೇಕೂಂತ ಇದ್ದೇನೆ. ನಾನು ನಿಧಾನವಾಗಿ ನಿಲ್ಲಿಸೀ ನಿಲ್ಲಿಸೀ ಭಾಷಣ ಮಾಡುವಾಗ ಇವನು ಈ ಕಾಗದ ನೋಡಿ ನನಗೆ ಎತ್ತಿ ಕೊಡುತ್ತಾ ಇದ್ದರಾಯಿತು. ಜಡಿದು ಬಿಡುತ್ತೇನೆ ಗಂಭೀರ ಭಾಷಣ'

'ನಿಮ್ಮಹತ್ರ ಕೂತವರಿಗೆ ಗೊತ್ತಾಗೋದಿಲ್ವೇನು?'

'ಅವರೊಬ್ಬಿಬ್ರು ನಮ್ಮವರೇ ಬಿಡೇ. ನಾಲ್ಕು ಸಾರಿ ಕಾಫೀ ಕುಡಿಸಿ ಬಿಟ್ಟರೆ ಬಾಯಿ ಮುಚ್ಚಿಕೊಂಡು ಬಿದ್ದಿರ್ತಾರೆ.'

ಆದಲ್ಲಾಂದ್ರೇ, ದೇಶಸೇವಕರೂ ಅಂತ ಬಿರುದು ಗಳಿಸಿದ ನಿಮಗೆ, ಹಿಂದೆ ಅನೇಕ ಕೆಲಸ ಮಾಡಿದಂಥಾ ನಿಮಗೆ ಆ ವಿಷಯವೊಂದೂ ಈಗ ನೆನಪೇ ಇಲ್ಲಾಂತ ಕಾಣುತ್ತಲ್ಲಾ?

"ಮತ್ತೆ ಯಾವಾಗಲೂ ನೆನಪಿರುತ್ತೆಯೇ ಅವೆಲ್ಲಾ? ಆಗ ಅದೊಂದು ಜನ್ಮ ಈಗ ಇದೊಂದು ಜನ್ಮ. ಆಗ ದೇಶ ಸೇವೆ ಮಾಡಿದ್ದೂ ಜೈಲಿಗೆ ಹೋದ್ದೂ ಹೋದ ಜನ್ಮದ ಕತೇ ಅನ್ನು. ಈಗ ಪದವಿ ಅಧಿಕಾರಗಳುಳ್ಳ ಎಷ್ಟೋ ಕೆಲಸಗಳೆಡೆಯಲ್ಲಿ ಅದನ್ನೆಲ್ಲಾ ನೆನಪಿಟ್ಟು ಕೊಳ್ಳುತ್ತಾ ಕುಳಿತರೆ ನಾವಿಷ್ಟು ಹೊತ್ತಿಗೆ ಭಿಕಾರಿಗಳಾಗಿರಬೇಕಾಗ್ತಿತ್ತು. ಏನೋ ವರುಷಕ್ಕೊಂದಾವರ್ತಿ ಬರುವ ಇಂತಹ ಉತ್ಸವಗಳಲ್ಲಿ ಅವುಗಳನ್ನು ಜನರಿಗೆ ನೆನಪು ಮಾಡಿ ಕೊಡಬೇಕು. ಅವರು ನೆನಪಿಟ್ಟುಕೊಳ್ಳಬೇಕು. ಉಂ, ಬರೆಯೋ ನೀನು."

ಈ ಸಮಯದಲ್ಲಿ ಆ ಪುಸ್ತಕದ ವಿಷಯ ಹೇಳಿ ಪತಿಗೆ ನಷ್ಟದ ಚಿಂತೆ ಬೇರೆ ಹುಟ್ಟಿಸಬಾರದೆಂದುಕೊಂಡು "ಸರಿಸರಿ! ತಂದೆಯೂ ಮಗನೂ ಕೂಡಿ ಏನೋ ಮಾಡಿಕೊಳ್ಳೀ!" ಎಂದು ಹೇಳಿ ಶಾರದಮ್ಮ ಆಚೆಗೆ ಹೋಗಿಬಿಟ್ಟರು.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M.O one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

BUY

ADVERTISED GOODS

ನಮ್ಮ ಜಿಲ್ಲೆಯ ಉಪ್ಪಿನ ಸತ್ಯಾಗ್ರಹದ ಕೆಲನೆನಪುಗಳು

(೬ನೇ ಪುಟದಿಂದ)

ಕಾಮಾಕ್ಷಿಯಮ್ಮ, ಶ್ರೀಮತಿ ಯಮುನಾಬಾಯಿ ಮುಂತಾದ ಮಹಿಳೆಯರೂ ಸಲ್ಲಿಸಿದ ಸೇವೆ ಶ್ಲಾಘನೀಯವಾಗಿದೆ.

೧೯೩೦ರ ಉಪ್ಪಿನ ಸತ್ಯಾಗ್ರಹದ ಸಂದರ್ಭದಲ್ಲಿ ಕರಾವಳಿಯುದ್ದಕ್ಕೂ ಹರಡಿಕೊಂಡಿದ್ದು ಸಮುದ್ರ ರಾಜನೊಡನೆ ಹೋರಾಡಿ ಸಾಹಸಮಯ ಜೀವನ ಸಾಗಿಸುತ್ತಿರುವ ಮೊಗವೀರ ಬಂಧುಗಳು ಸಲ್ಲಿಸಿದ ಸೇವೆ ಮಾಡಿದ ತ್ಯಾಗವೂ ಸ್ಮರಣೀಯವಿದೆ. ಶ್ರೀ ಎಚ್. ಕೃಷ್ಣಪ್ಪ ತಿಂಗಳಾಯರೇ ಮೊದಲಾದ ಮುಂದಾಳುಗಳು ತಮ್ಮ ಸಮಾಜದವರನ್ನು ಈ ಸಮರಕ್ಕೆ ಸಿದ್ಧತೆಗೊಳಿಸುತ್ತಿದ್ದರು. ಮೇ ತಾ. ೧ರಂದು ಜನಪ್ರಿಯ ಮುಂದಾಳು ಶ್ರೀ ಸದಾಶಿವರಾಯರ ಬಂಧನದ ಬಗ್ಗೆ ಮೈದಾನಿನಲ್ಲಿ ೧೫ ಸಾವಿರಕ್ಕಿಂತಲೂ ಮಿಕ್ಕಿದ ಜನ ಸಮೂಹ ಕೂಡಿ ಪ್ರಚಂಡ ಸಭೆ ಮೆರವಣಿಗೆ ನಡೆಯಿತು. ಮೇ ೬ನೇ ತಾರೀಕಿನಂದು ಹರಿಜನ ಸಮಾಜದವರೇ ಒಟ್ಟುಗೂಡಿ ಶ್ರೀ ಸದಾಶಿವರಾಯರ ಭಾವಚಿತ್ರವನ್ನು ಹೊತ್ತುಕೊಂಡು ಮೆರವಣಿಗೆ ಮಾಡಿ ಸಾರ್ವಜನಿಕ ಸಭೆಗೂಡಿಸಿದರು.

ಇಂತು ಉಪ್ಪಿನ ಸತ್ಯಾಗ್ರಹದ ಯಶಸ್ವಿಯಾಗಲು ಮುಂದೆ ಮೇ ೨೦ಕ್ಕೆ ಕಳ್ಳಿನಂಗಡಿಯ ಬಾಗಿಲಲ್ಲಿ ಪಿಕೆಟಿಂಗ್ ನಡೆಸುವ ಕಾರ್ಯಕ್ರಮ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ೧೪೪ನೇ ಸೆಕ್ಷನ್ ಜಾರಿಗೊಳಿಸಲ್ಪಟ್ಟ ಕಾರಣ, ಗುತ್ತಿಗೆಗಳ ಮುಂದೆ ಪಿಕೆಟಿಂಗ್ ಮಾಡುತ್ತಿದ್ದ ಸ್ವಯಂ ಸೇವಕರು ಪೋಲಿಸರ ನಿರ್ದಯ ಲಾಠೀ ಪೆಟ್ಟುಗಳಿಗೆ ಗುರಿಯಾಗಿ ರಕ್ತದ ಓಕುಳಿಯಲ್ಲಿ ಮುಳುಗುತ್ತಿದ್ದರು. ಇದರಿಂದ ಜನತೆ ಮತ್ತಷ್ಟು ಕ್ಷುಬ್ಧವಾಗಿ ಸ್ವಾತಂತ್ರ್ಯ ಸಮರಕ್ಕೆ ಬೆಂಬಲ ನೀಡುತಿತ್ತು.

ಇದೇ ಸಂದರ್ಭದಲ್ಲಿ ಜಿಲ್ಲೆಯ ವಾಗ್ಮಿಶ್ರೇಷ್ಠರೆಂದು ಹೆಸರಾದ ಶ್ರೀ ನಾರಾಯಣ ಕಿಲ್ಲೆಯವರು ಅದೇ ಆಗ ತನ್ನ ಉದ್ಯೋಗಕ್ಕೆ ರಾಜಿನಾಮೆಯಿತ್ತು ಸತ್ಯಾಗ್ರಹ ಸಮರಕ್ಕೆ ಧುಮುಕಿದರು; ಅವರ ವಾಗ್ವೈಖರಿ ಜನತೆಯನ್ನು ಮುಗ್ಧಗೊಳಿಸಿ ಸತ್ಯಾಗ್ರಹಕ್ಕೆ ಹೆಚ್ಚಿನ ಬೆಂಬಲ ಸಿಗುವಂತೆ ಮಾಡಿತು. ಗುತ್ತಿಗೆಗಳ ಪಿಕೆಟಿಂಗ್ ಸತ್ಯಾಗ್ರಹ ಜಿಲ್ಲೆಯ ನಾನಾ ಭಾಗಗಳಲ್ಲಿ ನಡೆಯಿತು ಒಂದು ಕಡೆ ಗುತ್ತಿಗೆಯ ಬಾಗಿಲಲ್ಲಿ ನಿಂತ ಸ್ವಯಂ ಸೇವಕರೊಬ್ಬರಿಗೆ ಕುಡುಕನೊರ್ವನು ದೊಣ್ಣೆಯಿಂದ ವಿಪರೀತವಾಗಿ ಹೊಡೆದಿದ್ದನು. ಮಂಗಳೂರಿನ ಪ್ರಮುಖ ಗುತ್ತಿಗೆಗಳ ಬಾಗಿಲಲ್ಲಿ-ಸ್ವಯಂ ಸೇವಕರಿಗೆ ಅವರ್ಣನೀಯವಾದ ಹಿಂಸೆ ನಡೆಯಿತು.

ಆ ಕಾಲದಲ್ಲಿ ಮಂಗಳೂರಲ್ಲಿ ಈ ಸತ್ಯಾಗ್ರಹವನ್ನು ಹುರುಪಿನಿಂದ ನಡೆಸುತ್ತಿದ್ದ ಯುವಕ ಮುಂದಾಳುಗಳು ಶ್ರೀಗಳಾದ ಹಿರಿಯಡ್ಕ ರಾಮರಾಯ ಮಲ್ಯರು, ಬೋಳಾರ ಭೋಜರಾಯರು, ಬಿ. ಅನಂತ ಭಟ್ಟಗಳು, ಬಿ. ಕೋಚಣ್ಣ ಭಂಡಾರಿಗಳು, ಕೆ. ತಿಮ್ಮಪ್ಪ ಶೆಟ್ಟರೇ ಮುಂತಾದವರು ಅಷ್ಟು ಹೊತ್ತಿಗೆ ಸೆರೆಮನೆಗೊಯ್ಯಲ್ಪಟ್ಟರು. ಸ್ವಯಂ ಸೇವಕರು ಎಡೆಬಿಡದೆ ಅಪೂರ್ವ ಸಹನಾ ಶಕ್ತಿಯಿಂದ ಪಿಕೆಟಿಂಗ್ ಮಾಡಿ ಪೋಲೀಸ್ ಮರ್ದನಗಳಿಗೆ ತುತ್ತಾಗುತ್ತಿದ್ದರು. ನೇಡಿಗುಡ್ಡೆಯಲ್ಲಿ ಶ್ರೀ ಶಂಭು ಎಂಬ ಸ್ವಯಂ ಸೇವಕರು ಪೋಲೀಸರ ಪೆಟ್ಟುಗಳನ್ನು ಸಹಿಸಿದ ತಾಳ್ಮೆ ಅಭಿನಂದನೀಯವಾದುದು. ಇಂತಹ ವಿಷಮ ಸಂದರ್ಭದಲ್ಲಿ ಜೂನ್ ೨೫ನೇ ತಾರೀಕಿನಂದು ಮಂಗಳೂರಲ್ಲಿ ಸಭೆ ಮೆರವಣಿಗೆ ಕೂಡದೆಂದು ಆಜ್ಞೆ ಆಗಿದ್ದರೂ ಪೋಲೀಸರ ಲಾಠಿ ಪೆಟ್ಟುಗಳಿಗೆ ತಲೆಯೊಡ್ಡಬೇಕೆಂದು ಗೊತ್ತಿದ್ದರೂ ೧೦೦ ಮಂದಿ ಸ್ವಯಂ ಸೇವಕ ವೀರರು ಶ್ರೀ ಬಳಸಾವರ ಮುಕುಂದರಾಯರ ನೇತೃತ್ವದಲ್ಲಿ ಮೆರವಣಿಗೆ ಹೊರಟರು. ರಥಬೀದಿಯಿಂದ ಹಂಪನಕಟ್ಟೆಗೆ ತಲಪುತ್ತಲೇ ಮೆರವಣಿಗೆಯ ತಂಡ ಹೆಚ್ಚಿತು. ಪೋಲೀಸರು ತಂಡೋಪತಂಡವಾಗಿ ಬಂದು ಮೆರವಣಿಗೆಯನ್ನು ತಡೆದರು. ನಿರ್ದಯವಾಗಿ ಅಮಾನುಷವಾಗಿ ಲಾಠೀ ಪ್ರಯೋಗ ನಡೆಯಿತು. ಸ್ವಯಂ ಸೇವಕರು ಸ್ಥಳಬಿಟ್ಟು ಕದಲಲೇ ಇಲ್ಲ. ಹೆಚ್ಚಿನವರು ಹೊಡೆತದಿಂದ ಮೂರ್ಛಿತರಾದರು. ಮೂರ್ಛೆ ಬಿದ್ದ ಸ್ವಯಂ ಸೇವಕರನ್ನು ಕಾಲಿನಲ್ಲಿ ಹಿಡಿದೊಯ್ದು ಪೋಲೀಸರು ಮೋಟರ್ ಲಾರಿಗಳಲ್ಲಿ ತುಂಬಿಸುತ್ತಿದ್ದರು. ಮೂರ್ಛಿತರಾಗಿ ಬಿದ್ದ ಸ್ವಯಂ ಸೇವಕರಿಗೆ ಹೊಡೆಯಬಾರದೆಂದು ಓರ್ವ ಯುರೋಪಿಯನ್ ಸಾರ್ಜೆಂಟ್ ಪೋಲಿಸರಿಗೆ ಆಜ್ಞೆಕೊಟ್ಟನು. ಮಳೆ ಧಾರಾಕಾರವಾಗಿ ಸುರಿಯುತ್ತಿತ್ತು! ಶ್ರೀ ದುಗ್ಗಪ್ಪ ಸುವರ್ಣರೆಂಬ ಸ್ವಯಂ ಸೇವಕರು ಮೂರ್ಛಿತರಾಗಿ ಬಿದ್ದವರು ಚರಂಡಿಯಲ್ಲಿ ಮೂರು ಗಂಟೆಗಳ ಕಾಲ ಬಿದ್ದಿದ್ದರು! ರಸ್ತೆಯಲ್ಲಿ ಹಾದು ಹೋಗುವವರಿಗೆಲ್ಲಾ ಹೊಡೆತಗಳ ಮಳೆ! ವಕೀಲ ಶ್ರೀ ರಾಮಯ್ಯ ಪೂಂಜರ ಗುಮಾಸ್ತರಿಗೆ ಆಫೀಸಿನ ಜಗಲಿಯಲ್ಲಿಯೇ ಹೊಡೆದರು! ಹೋಟೆಲು ಅಂಗಡಿ, ಸಿನೆಮಾ ಆಸ್ಪತ್ರೆ ಕಂಪೌಂಡುಗಳಿಗೆ ಹೊಕ್ಕು ಉನ್ಮತ್ತರಾಗಿ ಪೋಲೀಸರು ಹೊಡೆಯುತ್ತಿದ್ದರು. ವೀಳ್ಯದೆಲೆ, ಹಾಲು ಮಾರುವ ಕ್ರೈಸ್ತ ಸ್ತ್ರೀಯರಿಗೂ ಅಸಭ್ಯ ರೀತಿಯಿಂದ ಹೊಡೆಯುತ್ತಿದ್ದರು. ಶ್ರೀ ಬಳಸಾವರ ಮುಕುಂದರಾಯರಿಗೆ ೨೨ ಕಡೆ ಪೆಟ್ಟಾಗಿತ್ತು. ಇಂತು ಪೆಟ್ಟಾಗಿ ಮೂರ್ಛಿತರಾಗಿ ಬಿದ್ದ ಸ್ವಯಂ ಸೇವಕರಿಗೆ ಶ್ರೀ ರಾಮಕೃಷ್ಣ ನರ್ಸಿಂಗ್ ಹೋಮಿನವರು ಮಾಡಿದ ಉಚಿತಾರ್ಥ ಚಿಕಿತ್ಸೆ ಪ್ರಶಂಸನೀಯವಾಗಿದೆ.

ಜನತೆಯ ಸ್ವಾತಂತ್ರ್ಯಾವೇಶ ಉಕ್ಕುತ್ತಿತ್ತು, ಬ್ರಿಟಿಷರ ಮರ್ದನ ಪ್ರಬಲವಾಗುತ್ತಿತ್ತು, ಇಡಿಯ ಭಾರತದಲ್ಲಿ ಇದೇ ಅವಸ್ಥೆ ಕಂಡಾಗ ಒಮ್ಮೆ ಈ ಆವೇಶ ತಣಿಸಬೇಕೆಂದು ಸರಕಾರ ಸಿದ್ಧತೆಯ ಮಾಡಿದಂತೆ ತೋರುತ್ತದೆ. ಗಾಂಧಿ ಇರ್ವಿನ್ ಒಪ್ಪಂದ ಆಗಿ ಉಪ್ಪಿನ ಸತ್ಯಾಗ್ರಹ ಕೊನೆಗೊಂಡಿತು. ಮಹಾತ್ಮರ ಆದೇಶದಂತೆ ಸತ್ಯಾಗ್ರಹ ಹಿಂದೆಗೆಯಲ್ಪಟ್ಟಿತು!

೦೦ ೦೦

ಉಪ್ಪಿನ ಸತ್ಯಾಗ್ರಹದ ಹೋರಾಟ ಹೂಡಿದ ಕಾಲದಲ್ಲಿ ನಮ್ಮ ಸ್ವಾತಂತ್ರ್ಯ ವೀರರಿಗೆ ಮುಂದೆ ತಮ್ಮ ಜೀವಮಾನದಲ್ಲಿ ಸ್ವಾತಂತ್ರ್ಯದ ಅಮೃತ ದೊರಕೀತೆಂಬ ಕಲ್ಪನೆಯಿರುವುದು ಸಾಧ್ಯವಿರಲಿಲ್ಲ. ತಾವು ದಾಸ್ಯದಿಂದ ನರಳಿದ್ದು ಸಾಕು, ತಮ್ಮ ಮಕ್ಕಳು ಮೊಮ್ಮಕ್ಕಳಾದರೂ ಸ್ವಾತಂತ್ರ್ಯದ ಸುಖವನ್ನನುಭವಿಸಲಿ ಎಂಬುದೇ ಅವರ ಕಣ್ಣಮುಂದಿನ ಆದರ್ಶವಾಗಿತ್ತು; ಆದಾಗಿಯೇ ಅಂದಿನ ಸತ್ಯಾಗ್ರಹೀವೀರರನೇಕರು—ಮುಂದೆ ಎಂ.ಎಲ್. ಸಿ., ಎಂ. ಎಲ್. ಎ.ಗಳಾಗುವ ಸಂದರ್ಭ ಬಂದಾಗ, ಮಂತ್ರಿಶೂನ್ಯರಾಗುವ ಸಂಧಿ ಸಿಕ್ಕಾಗ ಹಿಂದೆ ಸರಿದರು ಅಥವಾ ಹಿಂದೂಡಲ್ಪಟ್ಟರು. ಆದರ್ಶ ಮತ್ತು ತತ್ವಗಳ ನಿಷ್ಠೆಯುಳ್ಳವರು ಅದರ ಆಚರಣೆಯಲ್ಲಿ ತಮ್ಮ ಜೀವಿತದ ಸುಖವನ್ನು ಕಲ್ಪಿಸಿಕೊಳ್ಳುತ್ತಾರೆ; ವ್ಯವಹಾರ ಪಟುಗಳು, ತಮ್ಮ ವ್ಯವಹಾರದಿಂದ ಸಿಗುವ ಲಾಭ ನಷ್ಟಗಳ ಲೆಕ್ಕದಲ್ಲಿಯೇ ತಮ್ಮ ಜೀವಿತದ ಯಶಸ್ಸನ್ನು ಎಣಿಕೆ ಮಾಡುತ್ತಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಆದರ್ಶ ಬೇರೆ; ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಆ ಆದರ್ಶ ಉಳಿಯಬೇಕಾಗಿಲ್ಲ; ಮುಂದಿನದು ದೇಶದ ಆಡಳಿತ ಮಾಡುವ ವ್ಯವಹಾರ; ಆ ವ್ಯವಹಾರದಲ್ಲಿ ಚತುರರಾದವರು ಯಶಸ್ವಿಗಳಾದರು!

(೧೭ನೇ ಪುಟದಿಂದ)

ಜಿಲ್ಲೆಯ ಕೊನೆಯ ಅಂಚಾದ ಮಂಗಳೂರಲ್ಲಿ ಬಂದು ನಿಂತ ರೈಲು ಅಲ್ಲಿಂದ ಒಂದು ಇಂಚೂ ಮುಂದುವರಿಯಲಿಲ್ಲ. ಇನ್ನೂ ಮುಂದುವರಿಯುವ ಸಂಭವ ಕಾಣುವುದಿಲ್ಲ. ರೈಲು ದಾರಿ ಹಾಸನದಿಂದ ಮಂಗಳೂರಿಗೆ ಬರಬೇಕಂತೆ—ಭದ್ರಾವತಿ-ಮಲ್ಪೆ ರೈಲು ಯಾಕಾಗಬಾರದು? ಜಿಲ್ಲೆಯ ಅರ್ಧ ಭಾಗಕ್ಕೆ—ಹಾಗೂ ಮಲೆನಾಡಿನ ನೂರು ಮೈಲಿಗೆ ರೈಲು ಬಂದಂತಾಗುವುದಿಲ್ಲವೆ?— ಇಬ್ಬರ ನ್ಯಾಯ ಮೂರನೆಯವನ ಆದಾಯ. ಮಲ್ಪೆ, ಮಂಗಳೂರು ವಿವಾದದಲ್ಲಿ ಲಾಭಹೊಂದಿದವರು ತಮಿಳರು, ಬಂಗಾಳಿಗಳು. ಇನ್ನೂರು ಮೈಲು ಕರ್ಣಾಟಕದ ಕರಾವಳಿಗೆ ಬಂದರವಿಲ್ಲ—ನೂರಾರು ಮೈಲು ವಿಸ್ತೀರ್ಣದ ಮಲೆನಾಡಿಗೆ ರೈಲುದಾರಿ ಇಲ್ಲ. ಇದು ನಮ್ಮ ಕರ್ಣಾಟಕದ ಮುಖಂಡರು ನಮಗಿತ್ತ ಸ್ವಾತಂತ್ರ್ಯದ ಕಾಣಿಕೆ.

ಜ್ಯೋತಿ ಟಾಕೀಸ್

ಮಂಗಳೂರು

12—8—60ರಿಂದ

ಪದ್ಮಿನಿ ಪಿಕ್ಚರ್ಸ್ ಅರ್ಪಿಸುವ

ಎಂ. ಬಿ. ಆರ್. ಪ್ರೊಡಕ್ಷನ್ಸ್

ಮಕ್ಕಳ ರಾಜ್ಯ

(ಕನ್ನಡ)

ನಿರ್ಮಾಪಕ-ನಿರ್ದೇಶಕ

ಬಿ. ಆರ್. ಪಂತುಲು

ತಾರಾಗಣ

ಬಿ. ಆರ್. ಪಂತುಲು .... ಎಂ. ವಿ. ರಾಜಮ್ಮ
ಡಿಕ್ಕಿ ಮಾಧವ ರಾವ್ .... ಕಾಂಚನ
ನರಸಿಂಹರಾಜು .... ಎಂ. ಎನ್. ಲಕ್ಷ್ಮೀದೇವಿ
ಬಾಲಕೃಷ್ಣ .... ಬೇಬಿ ಲಕ್ಷ್ಮೀಬಾಯ್
ಮಾಸ್ಟರ್ ಉಮೇಶ್ .... ಬೇಬಿ ಚಂದ್ರಕಲಾವತಿ

ಮತ್ತು

ಗೌರವ ನಟರು

ನಟಿಗರ್ ತಿಲಕಂ ಶಿವಾಜಿ ಗಣೇಶನ್

ಬರುತ್ತದೆ—

ಜೆಮಿನಿಯವರ ಪೈಗಾಮ್ (ಹಿಂದಿ)

ಕಾಮ ವಿಜ್ಞಾನದ ಮಾಹಿತಿಗಾಗಿ ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.

ಉತ್ತಮವಾಗಿ ಬೈಂಡು ಮಾಡಿದ ವರ್ಷ, ವರ್ಷಗಳ ಸಂಚಿಕೆಗಳು.

ನೂತನ ದಂಪತಿಗಳಿಗಂತೂ ಬೇಕಾದ ಅಪೂರ್ವ ಸಂಗ್ರಹ.

ಪ್ರತಿ ಸಂಪುಟದ ಬೆಲೆ ರೂ. 4=50.

ಅಂಚೆ ವೆಚ್ಚ ರೂ. 1=50.

ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಎರಡು ವರ

ಕೈಕಯಿಗೆ ಮಾತ್ರ ದಶರಥನಿತ್ತನಲ್ಲ
ವರವೆರಡನಂತೆಯೆ ಕಣಾ! ಪ್ರತಿ ವ್ಯಕ್ತಿ
ಗಿಹವು ೧ಹುಟ್ಟೊಡನೆರಡು ವರಮಾತ್ಮಶಕ್ತಿ
ಯಿಂದವಂ ಗಳಿಸದಿರೆ ಅನ್ಯಥಾ ಹೊಲ್ಲ೨.
ಸ್ವಾರ್ಥವನೊ ವರಕೆ ಪರಮಾರ್ಥವನೊ ಕುರಿವೆ?೩
ರಾಮನಿಗೆ ಕಾಡು, ತನ್ನಣುಗನಿಗೆ ನಾಡು
೪ಎಂದೆರೆಯಲೆಬ್ಬಿಸಿದೆ ೫ಕಡಜಗಳ ಗೂಡು!
ಪರಮಾರ್ಥದಲಿ ಸಲಿಸೆ ೬ತೆತ್ತು ಪಡೆದಿರುವೆ.
ವರವನೆನೆ ಮೋಕ್ಷವೆಂದಿತ್ತೊಂದು ಹೊತ್ತು೭,
ಮಾತೃಭೂ ಮಾತೃಧರ್ಮವೆ ಇಂದು ಪರಮಂ;
ದೇಶವನು ಧರ್ಮವನು ೮ಕಾಯೆರಡು ವರನುಂ
ಬಳಸು, ಇನ್ನಾಗದಂತಪ್ಪ೯ ಪರರ ತೊತ್ತು!
ಏಳು! ೧೦ಖಂಡಿಸಖಂಡ ದೇಶಧರ್ಮಗಳಾ
ಹುಟ್ಟುಹಗೆಗಳನಳಿಯೆ ಅಳಿದುಳಿದು ನೆಗಳಾ!೧೧

ಗೋವಿಂದ ಪೈ.

೧ ಹುಟ್ಟುವಾಗಲೆ. ೨ ಕೇಡು. ೩ ಕುರಿ = ಕೋರು, ಇಚ್ಛಿಸು. ೪ ಎರೆಯಲು = ಬೇಡಿದರೆ. ೫ ಕಡಜ (wasp). ೬ (ಕೊಟ್ಟು) ಪಡಕೊಂಡಿರುವಿ, ನಿನಗುಂಟು. ೭ ಇತ್ತೊಂದು ಹೊತ್ತು = ಒಮ್ಮೊಮ್ಮೆ ಅಂಥಾದ್ದೊಂದು ಕಾಲವಿತ್ತು. ೮ ಕಾಯೆ (= ರಕ್ಷಿಸಲಿಕ್ಕೆ) + ಎರಡು. ೯ ಅವು = ನಿನ್ನ ದೇಶವೂ ನಿನ್ನ ಧರ್ಮವೂ. ೧೦ ಖಂಡಿಸು (= ನಾಶಪಡಿಸು) + ಅಖಂಡ (= ಎಲ್ಲಾ) + (ನಿನ್ನ) ದೇಶ (+ ಮತ್ತು +) ಧರ್ಮ (ಇವುಗಳ) + ಹುಟ್ಟು ಹಗೆಗಳನು (= ನಿಜವೈರಿಗಳನ್ನು). ೧೧ (ನೀನು +) ಅಳಿಯೆ (= ಸತ್ತರೆ) + (ನೀನು +) ಅಳಿದುಳಿದು (= ಸತ್ತೂ ಬದುಕಿ) + ನೆಗಳಾ (= ಪ್ರಖ್ಯಾತನಾಗು).

ನಮ್ಮ ಹೊಸ ಸಮಸ್ಯೆ: ಗಡಿರಕ್ಷಣೆ

(೫ನೇ ಪುಟದಿಂದ)

ಭಾರತದೊಡನೆ ಯಾವ ರೀತಿಯ ಸಂಬಂಧವನ್ನು ಚೀನಾ ಮುಂದಕ್ಕೆ ಇಟ್ಟುಕೊಳ್ಳಬಹುದು ಎಂದು ಹೇಳ ಬರುವಂತಿಲ್ಲ—ಆದರೆ ಕಳೆದ ವರ್ಷದಿಂದ ಚೀನಾ ಭಾರತದ ವಿರುದ್ಧ ಪ್ರಚಾರ ಧಾಳಿಯನ್ನು ಆರಂಭಿಸಿದೆ. ಭಾರತೀಯರಲ್ಲಿ ಕಲವರು ಸಾಮ್ರಾಜ್ಯ ಶಾಹಿಗಳೆಂದು ಅದು ನಿಂದಿಸಿತು. ಟಿಬೇಟಿನಲ್ಲಿ ಉಪಟಳ ಕೊಡಲು ಭಾರತದ ಕೆಲವರು ಪ್ರಚೋದಿಸಿದರೆಂದು ಅದು ಆಪಾದಿಸಿತು. ಆ ಬಳಿಕ ಕಳೆದ ಮೇ ೧ರಲ್ಲಿ ಅಮೇರಿಕದ ಗುಪ್ತ ಚಾರೀ ವಿಮಾನವನ್ನು ರಶ್ಯಾ ಕೆಡವಿದಾಗ ಭಾರತವು ಅಮೇರಿಕದ ನೀತಿಯನ್ನು ಖಂಡಿಸಲಿಲ್ಲವೆಂದು ಅದು ದೋಷಾರೋಪಣೆ ಮಾಡಿತು. ಈಗ ಮೊನ್ನೆ ನಡೆದ ಅಖಿಲ ಭಾರತ ಸರಕಾರಿ ನೌಕರರ ಮುಷ್ಕರದ ಪೂರ್ವ ಭಾವಿಯಾಗಿ ಪ್ರಧಾನಿ ನೆಹರೂರವರು ಕೆಲಸಗಾರರ ಕೇಳಿಕೆಗಳನ್ನು "ನಿಂದಿಸಿದರೆಂ"ದೂ ಅವರು ಲಡಕ್‌ನಲ್ಲಿದ್ದ ಭಾರತೀಯ ಸೇನೆಗಳಿಗೆ ಸಂದರ್ಶನ ಕೊಟ್ಟು ಶಾಂತಿ ಭಂಗ ಮಾಡಲು ಯತ್ನಿಸಿದರೆಂದೂ ಆಪಾದಿಸಿದೆ.

ಚೀನಾದ ಈ ವರ್ತನೆಗಳನ್ನು ಪರಿಶೀಲಿಸುವಾಗ ಭಾರತದ ಉತ್ತರ ಗಡಿಯ ಸಮಸ್ಯೆ ಬೇಗನೆ ಸುಲಭದಲ್ಲಿ ಬಗೆ ಹರಿಯುವಂತಿಲ್ಲವೆಂದು ಸ್ಪಷ್ಟವಾಗುವುದು. ಚೀನಾ ಈಗ ಆಕ್ರಮಿಸಿರುವ ಪ್ರದೇಶವನ್ನು ಭಾರತಕ್ಕೆ ಶಾಂತಿಯಿಂದ ಬಿಟ್ಟುಕೊಟ್ಟೀತೆಂದು ಹೇಳಲು ಯಾವ ಆಧಾರವೂ ದೊರಕುವುದಿಲ್ಲ. ಮತ್ತೆ ಭಾರತವು ಚೀನದ ಮೇಲೆ ಬಲಪ್ರಯೋಗಿಸಿ ತನ್ನ ಗಡಿ ಪ್ರದೇಶವನ್ನು ಮರಳಿ ಪಡೆಯುವ ಪ್ರಯತ್ನ ಮಾಡುವ ಕೆಲಸವು ಸಂಭವನೀಯವಾಗಿರಬಹುದಾದರೂ ಸುಲಭ ಸಾಧ್ಯವಲ್ಲ.

ಎಲ್ಲಾ ತರದ ಕೈಮಗ್ಗದ ಉತ್ತಮ ತರಗತಿಯ
ಖಾತ್ರಿರಂಗಿನ ಶೀರೆಗಳಿಗೆ
ಒಮ್ಮೆ ಸಂದರ್ಶಿಸಿರಿ.
ಪೂರ್ಣಿಮಾ ಸ್ಟೋರ್ಸ್
— ರಖಂ ಮತ್ತು ಚಿಲ್ಲರೆ ಕೈಮಗ್ಗದ ಜವುಳಿ ಮಳಿಗೆ —
ಪೊಪ್ಯುಲರ್ ಇನ್‌ಶೂರೆನ್ಸ್ ಕಟ್ಟಡ,
ಮಂಗಳೂರು-೧
ಅಖಿಲಭಾರತ ಕೈಮಗ್ಗ ಸಪ್ತಾಹದ ಪ್ರದರ್ಶನದಲ್ಲಿ
ಪದಕ ಮತ್ತು ಪ್ರಶಸ್ತಿ ಪಡೆದ
ನಮ್ಮ ಶೀರೆಗಳನ್ನು ಉಪಯೋಗಿಸಿರಿ.

ಜಾರಿ ಬಿದ್ದವ

ಕವಿ:- ಯಸ್. ವೆಂಕಟರಾಜ.

೧ ಮೂರುದಾರಿ ಕೂಡಿದಲ್ಲಿ
ಜಾರಿಬಿದ್ದನೊಬ್ಬ
ಊರುಗೋಲು ಹಿಡಿದು ಮೆಲ್ಲ
ಸಾರುತಿದ್ದ ಹಳಬ
ಕೇರಿ ಕೇರಿ ಮಕ್ಕಳಿಗೆ
ಅದೇ ಒಂದು ಹಬ್ಬ
ದಾರಿ ಮೇಲೆ ಕುಸಿದು ಬಿದ್ದ
ಕಸದ ಖಾಲಿಡಬ್ಬ!

೨ ಅಯ್ಯೋ—ಎಂದು ಚಿತ್ರಗಾರ
ನೋಡಿ ಓಡಿ ಬಂದ
ಕೈಯ ಕೆಮರದಿಂದ ಫೋಟೋ
ತೆಗೆದು-ಥೇಂಕ್ಯೂ-ಎಂದ
ಒಡನೆ ನಿಂತು ಸ್ಫೂರ್ತಿ ಬಂತು
ಎಂದು ದಿಗಿಲಿನಿಂದ
ಪೆನ್ನನೆತ್ತಿ ಕವಿ ಪುಂಗವ
ಬರೆದನೊಂದು ಕಂದ!

೩ ಶಾಲೆಬಿಟ್ಟ ಹುಡುಗನೊಬ್ಬ
ತೂರಿದಂತೆ ಕಲ್ಲು
ನೇರವಾಗಿ ಟೆಸ್ಟ್ ಪಂದ್ಯ
ಗೆಲುವ ಸ್ಟ್ರೈಟ್ ಬೋಲು!
ಸೇರಿತಲ್ಲಿ ಕೇಕೆ ಹೊಡೆದು
ಮಕ್ಕಳದೇ ಸಾಲು
ಯಾರು ಹೊಡೆದರೇನು? ಎಲ್ಲಾ
ಒಂದೆ ತಲೆಯ ಪಾಲು!

೪ ಯಾರೊ ಒಂದು ನುಡಿದ ಗುಟ್ಟು
ಗಡ್ಡದ ಸನ್ಯಾಸಿ
ಜಾರಿಬಿದ್ದ ಊರುಗೋಲು—
ಒಂದು ಸೊನ್ನೆ ಓ. ಸಿ.
ಭಾರಿ ಜನರ ಗಲಭೆಯಾಯ್ತು
ನಡೆಯಿತಲ್ಲಿ ಸಟ್ಟ
ಮಾರವಾಡಿ ಸೈಕಲೇರಿ
ಮೆಲ್ಲ ಜಾರಿಬಿಟ್ಟ!

೫ ಬಂದಳಲ್ಲಿ ಭಾವಜೀವಿ
ಕೋಲುಗಣ್ಣಿನವಳು
ಓದದೆಯೆ ಪರೀಕ್ಷೆಗಾಗಿ
ಹೊರಟ ಹೆಣ್ಣು ಮಗಳು
ಎಂದು ಬಾರದಿರುವ ಭಕ್ತಿ
ತುಂಬಿ ನುಡಿದಳಬ್ಬ—
ಕಾಲುಜಾರಿ ಬಿದ್ದುದಲ್ಲ
ಇವನೆ ಸಾಯಿಬಾಬ!

೬ ಹೋಗುತಿದ್ದ ಸೋಡವಾಲ
ಅಲ್ಲೆ ಗಾಡಿ ಬಿಟ್ಟ
ನುಗ್ಗುತಿದ್ದ ಪೋರ ಜನರ
ಕಿಸೆಗೆ ಕೈಯ ಕೊಟ್ಟ
ಸೋಡ ಕುಡಿದು ಕಡಲೆ ಮೆದ್ದು
ಜಗಿಯುತಿತ್ತು ಜನತೆ
ಆಗು ಹೋಗುಗಳಲಿ ನಿಂತು
ನೋಡುವುದೇ ಘನತೆ!

೭ ಹೆಳವನವನ ಬಳಿಗೆ ಸಾರಿ
ಮೆಲ್ಲ ನುಡಿದನಾಗ
—ಬಾಳಲಿರುವ ಬಳಿಯಿದಲ್ಲ
ತೆರಳು ಮುಂದೆ ಬೇಗ—
ಹೆಗಲುಕೊಟ್ಟು ಕೈಯಕೊಟ್ಟು
ಎತ್ತಿಹಿಡಿದ ಕಾಲ
ಕೆಳಗೆ ಜಾರಿ ಬಿದ್ದಿತಲ್ಲಿ
ನನ್ನ ಹಣದ ಚೀಲ!

೮ ಹೆಕ್ಕಿಕೊಳಲು ಬಾಗಿದಾಗ
ಒಡನೆ ಮಿಂಚಿನಂತೆ
ಸಿಕ್ಕಿತೆಂದು ಮುದುಕನೆದ್ದ—
ಅಲ್ಲಿ ನಾನೆ ಸೋತೆ!
—ಇವನೆ ನನ್ನನಿಲ್ಲಿ ಕೆಡಹಿ
ಓಡಿಹೋದ ಕಳ್ಳ
ಸಿಕ್ಕಿಬಿದ್ದ ಕೆಟ್ಟ ಹುಡುಗ
ಎಂತಹ ಕಲಿಕಾಲ!

೯ ಸುತ್ತಮುತ್ತ ನೋಡಿದಾಗ
ಮನಸಿಗಾಯ್ತು ಭೀತಿ
ಮತ್ತೆ ಕೇಳಲಿರುವುದೊಂದೆ
ಕಾಲಿಗಿರುವ ನೀತಿ
ಹೊಯ್ಯೊ ಹೊಯ್ಯೊ ಎನುವ
ಗುಂಪು
ದಾಟಿದ ಚಮತ್ಕಾರ
ಏನೋ ಎಂತೊ—ಶಿವಗೆ ಗೊತ್ತು!
ಎಲ್ಲರಿಗೂ ನಮಸ್ಕಾರ!

ನಮ್ಮ ನಾಡು ನಿಜವಾಗಿ ಸ್ವತಂತ್ರವೆನಿಸಬೇಕಾದರೆ—

(೪ನೇ ಪುಟದಿಂದ)

...ಗಳಾದವೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದುದರಿಂದ ಅಂಥ ...ನೈಕ್ಯಕ್ಕೆ ಎಡೆ ಕೊಡುವ, ಭಾಷೆ, ಮತ, ಪ್ರಾಂತ್ಯಗಳಿಗೆ ಸಂಬಂಧಿಸಿದ ಪ್ರತ್ಯೇಕ ... ಭಾವನೆಗಳಿಗೆ ಎಡೆಕೊಡಲಾಗದು. ...ಮ್ಮ ಜನಾಂಗದ ಈ ತಲೆಮಾರಿಗೆ ಈ ...ಗರೂಕತೆ ತೀರ ಅವಶ್ಯವಾಗಿದೆ.

ಪ್ರಜಾಧರ್ಮ

ಇಷ್ಟು ಸ್ವಲ್ಪ ಕಾಲದಲ್ಲಿ ಇಷ್ಟೊಂದು ...ದಲಾವಣೆಗಳು ನಮ್ಮ ಇತಿಹಾಸದಲ್ಲಿ ...ಂದೂ ಕಂಡು ಬಂದಿದ್ದಿಲ್ಲ. ಈಗ ಶಕ್ತಿ ...ತ್ತು ಸಂಪತ್ತುಗಳು ಮನುಷ್ಯನ ಮನ...ನಲ್ಲಿ ಒಂದು ಬಗೆಯ ಉನ್ಮಾದವನ್ನುಂ... ಮಾಡಲಾರಂಭಿಸಿವೆ. ಅಧಿಕ ಸಂಪ...ತ್ತು, ಮೇಲ್ಮಟ್ಟದ ಜೀವನ ಈ ಗುರಿಗೆ ...ರೆಲ್ಲವೂ ಅಧೀನವಾಗಿರುವಂತಿದೆ. ಆದ... ಭವಿಷ್ಯದಲ್ಲಿ ನಮ್ಮ ಕಲ್ಯಾಣ, ನಮ್ಮ ...ನಾಂಗದ ನಿಯತಿ ಹೊಂದಿಕೊಂಡಿರು...ದು ನಮ್ಮ ಭೌತಿಕ ಸಂಪತ್ತಿಗಿಂತಲೂ ...ಚ್ಚಾಗಿ ಆತ್ಮ ಬಲದ ಆಧಾರದ ಮೇಲೆ.

ಹೆಚ್ಚು ಹೆಚ್ಚು ಮಂದಿ ವಿದ್ಯಾವಂತ...ಾಗುತ್ತಿದ್ದಾರೆ. ಆದರೆ ನಾವು ಕಲಿತವ...ದ ಮಾತ್ರಕ್ಕೆ ಸಾಲದು. ನಿಜವಾದ ...ಂಸ್ಕೃತಿಯಿಲ್ಲದಿದ್ದರೆ ಸಮಾಜಕ್ಕೆ ನಮ್ಮಿಂ... ಸುಖವಿಲ್ಲ.

ಸಾಕ್ಷರನನ್ನಿಸುವವನು ತಿರುಗು ಮು...ಗಾದರೆ ರಾಕ್ಷಸನಾಗುತ್ತಾನೆ. ಅರಿಸ್ಟಾ...ಟಲ್ ಹೇಳುವಂತೆ—'ಪ್ರಬುದ್ಧ ಮಾನವ ...ಪ್ರಾಣಿಕೋಟಿಗಳಲ್ಲಿ ಅತ್ಯುತ್ತಮ ಜೀವಿ. ಆದರೆ ನ್ಯಾಯ ನೀತಿಗಳಿಂದ ಬೇರ್ಪಟ್ಟರೆ ಅವನಿಗಿಂತ ಕೀಳು ಪ್ರಾಣಿಯಿಲ್ಲ'. ವಿಜ್ಞಾನ, ಯಂತ್ರಶಕ್ತಿಗಳು ಏನನ್ನು ಸಾಧಿಸಿದರೂ ಅವು ನಮ್ಮ ಸ್ವಾರ್ಥಕ್ಕೆ ಮದ್ದಲ್ಲ. ಈ ವಿಶ್ವದ ರಹಸ್ಯವನ್ನಂತೂ ಅವು ಭೇದಿಸಲಾರವು. ನಾವು ಪ್ರಕೃತಿಯ ಮೇಲೆ ನಮ್ಮ ಸಾಮರ್ಥ್ಯವನ್ನು ಸ್ಥಾಪಿಸಲು ತೊಡಗಿರುವೆವೇ ಹೊರತು ನಮ್ಮ ಮೇಲೆ ನಮಗೆ ಹಿಡಿತವಿಲ್ಲ. ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಹೇಗೋ ಹಾಗೆ ರಾಷ್ಟ್ರ ಜೀವನದಲ್ಲಿ ಕಂಡುಬರುವ ಸಾಮಾಜಿಕ, ರಾಜಕೀಯ ಹಾಗು ಆರ್ಥಿಕ ಅವ್ಯವಸ್ಥೆಗಳಿಗೆ ಬೈಜಿಕವೆಂದರೆ ಒಂದೇ— ಕೆಲವು ಮೂಲ ಭೂತ ನೈತಿಕ ಮೌಲ್ಯಗಳನ್ನು ಗೌರವಿಸುವುದು.

ರಾಷ್ಟ್ರದ ಸಂಪತ್ತು ವೃದ್ಧಿಯಾಗಬೇಕು. ಅಸಮಾನತೆಯು ಕಡಿಮೆಯಾಗುತ್ತ ಹೋಗಬೇಕು. ಜನಸಾಮಾನ್ಯರ ಜೀವನ ಉತ್ತಮಗೊಳ್ಳಬೇಕು. ಭಯ, ಅಜ್ಞಾನ, ಸ್ವಾರ್ಥಗಳ ಮುಸುಕನ್ನು ಭೇದಿಸಿ ಹೊರ ಚಿಮ್ಮಬೇಕಾಗಿದೆ— ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಗಳ ದೃಷ್ಟಿಯಿಂದಲೂ ನಿಜವಾಗಿ ಸ್ವತಂತ್ರವೆನಿಸುವ ನವಭಾರತ. ಇದಕ್ಕೆ ನಮಗೆ ಯಾರ ತಡೆಯೂ ಇಲ್ಲ. ಹಾಗೆ ನೋಡಿದರೆ ಒಮ್ಮೊಮ್ಮೆ ನಮಗೆ ನಾವೇ ತಡೆಯಾಗುತ್ತೇವೆ. ಆದುದರಿಂದ ಪ್ರಜಾಪ್ರಭುತ್ವದಲ್ಲಿರಲೇ ಬೇಕಾದ ಒಂದು ಶಿಸ್ತು ನಮ್ಮನ್ನಾಳಬೇಕು. ಹಾಗಾದರೇನೇ ಈ ರಾಷ್ಟ್ರದ ಭವಿಷ್ಯ ಸುಭದ್ರವೆನ್ನಬಹುದು. ಆ ಶಿಸ್ತು ಆ ಪ್ರಜಾಧರ್ಮ ನಮ್ಮನ್ನು ಒಂದುಗೂಡಿಸಿ ಬಾಳಿಸಬೇಕಾಗಿದೆ.

'ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ ಧರ್ಮವನ್ನು ನಾಶಗೊಳಿಸಲು ಹೊರಟವರನ್ನು ಅದು ವಿನಾಶಕ್ಕೊಯ್ಯುತ್ತದೆ. ರಕ್ಷಿಸುವವರನ್ನು ಧರ್ಮ ರಕ್ಷಿಸುತ್ತದೆ. ಈ ಪ್ರಜಾಧರ್ಮ ಕೂಡ ಹಾಗೆಯೇ. ಅದನ್ನು ಅಲಕ್ಷಿಸಿದರೆ ರಾಷ್ಟ್ರಕ್ಕೆ ಕ್ಷೇಮವಿಲ್ಲ. ಸ್ವಾತಂತ್ರ್ಯವೂ ಇಲ್ಲ.

೦೦ ೦೦

ರಾಧಾಕೃಷ್ಣನ್‌ರವರ ಈ ಹಿತೋಕ್ತಿಗಳು ಯಾರೂ ಕೇಳಿ ತಿಳಿಯದವುಗಳೇನಲ್ಲ. ಅಂಥದೇ ಮಾತುಗಳನ್ನು ಹಲವರು ಆಡಿ ಆಡಿ ಅವು ಚರ್ವಿತ ಚರ್ವಣವಾಗಿವೆಯೆಂದರೂ ಸಲ್ಲುವುದು. ಆದರೆ ಅವುಗಳಲ್ಲಡಗಿರುವ ಸತ್ಯವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆ ಸತ್ಯವನ್ನು ಗಮನಿಸಿದರೆ ಮಾತ್ರ ನಮ್ಮ ನಾಡು ಎಲ್ಲ ವಿಧದಿಂದಲೂ ಸ್ವತಂತ್ರವೆನ್ನಿಸೀತು.

'ಮುದುರು ಸಂಕೋಚಗಳು
ಕೊರಗಿಸುವ ಶಂಕೆಗಳು
ಕೊಲಬೆದ್ದ ಸಂಶಯವು
ಕೊನೆಗಾಣಲಿ
....
....
ಈಗಿನೀ ಭಾರತದ
ಒಳಕೋಟಲೆಗಳನ್ನು
ನಿಲಿಸಿ ಕೂಡಿಸಬಲ್ಲ
ಸುಮನಸರ ಗಿಡಣಗಳು
ಶುಭದ ಸೊಬಗಿನ ಸೈನ್ಯ
ಭಾಗ್ಯವನು 'ಕೀರ್ತಿಯನು ಬೆಳ ಬೆಳಸಲಿ'

—ಎಂದು ಹಾರೈಸಿದ ಕವಿವಾಣಿಯೊಂದಿಗೆ ದನಿಗೂಡಿಸಲು ಯಾರಿಗೆ ತಾನೆ ಇಷ್ಟವಿಲ್ಲ!

VISIT
GENERAL RADIO ELECTRONICS
Light House Hill Road, Hampankatta,
MANGALORE-1.
MANY LATEST MODELS RADIOS TO CHOOSE
AUTHORISED DEALERS FOR
Bush (England), Metz Printed Circuit (Germany),
& Sahara (Holland).

ಮೈಸೂರು ಟ್ಯಾಪ್ ಫೌಂಡ್ರಿ,
ಸುಬೇದಾರ್ ಛತ್ರಂ ರೋಡು, ಬೆಂಗಳೂರು-2.
ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟ್ಯಾಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟ್ಯಾಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.
ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟ್ಯಾಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.
ಇಂದೇ ವಿವರಗಳಿಗೆ ಬರೆಯಿರಿ:—
THE MYSORE TYPE FOUNDRY
Subedar Chatram Road, BANGALORE-2.

Khira
STEEL CABINET
for your HOME... or your OFFICE
In olive green or special grey, KHIRA Steel Cabinets have a perma finish of oven-baked enamel, are pretreated against corrosion. These cabinets have a 3-way locking device for maximum safety of your valuables. At any KHIRA showroom!
Utility Cabinet, 78" high. Two other sizes available are: Popular, 65" high and Midget, 50" high
Khira
KHIRA STEEL WORKS PRIVATE LIMITED
Ghodbunder Road, Santa Cruz, Bombay 23
Visit our Show Room



SHASTRY & CO.
HAMPANKATTA — MANGALORE-1.

ಸ್ವಾತಂತ್ರ್ಯ ದಿನೋತ್ಸವದ
ಹಾರ್ದಿಕ ಶುಭಾಶಯಗಳು!
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
NAVAYUGA ENTERPRISE LTD., UDIPI.
(ನವಯುಗ ಪ್ರೆಸ್, ಉಡುಪಿ, ಇದರ ಮಾಲಿಕರು)

ಸಾಮಾನ್ಯ ಧರ್ಮಪಾಲನೆಯೇ ರಾಷ್ಟ್ರೀಯ ಭದ್ರತೆಯ ಬುನಾದಿ

(೩ನೇ ಪುಟದಿಂದ)

ಎಂಬ ಚಾರುವತ್ತ ಮನೋಧರ್ಮವು ಆದರ್ಶ ಭಾರತೀಯತ್ವ— ಸಾಮಾನ್ಯ ಮನುಷ್ಯನು ದೇವತ್ವದ ಆದರ್ಶಕ್ಕೇರುವ ಸೋಪಾನ.

"ಯೇನಕೇನ ಪ್ರಕಾರೇಣ ಸ್ವಾರ್ಥಂ ನಿತ್ಯಮುಪಾರ್ಜಯೇತ್" ಎಂಬುದು (Corruption) ಅಧರ್ಮಶೀಲತೆ ಎಣಿಸುತ್ತದೆ. ಈ ಅಧರ್ಮದಿಂದ ಸಮಾಜ ಸಂಘಟನೆ ಶಿಥಿಲವಾಗುತ್ತದೆ, ದೇಶಪ್ರೇಮ ಬತ್ತಿ ಹೋಗುತ್ತದೆ, ಸೌಭ್ರಾತ್ರ ಸಹಜ ಸಹಕಾರ ಶೀಲ ಅಳಿಯುತ್ತದೆ. (Law and order) ವಿಧಿ-ವ್ಯವಸ್ಥೆಗಳ ಪಾಲನೆ ತೋರಿಕೆಯದಾಗುತ್ತದೆ, ಅಂಥ ಶ್ರದ್ಧೆ ಬೆಳೆಯುತ್ತದೆ, ಆಮಿಷವಶ್ಯತೆಯಿಂದ ನೀಚತೆ ತಲೆದೋರುತ್ತದೆ.

ಪರಹಾನಿಕರವಾಗಿ ಸಂಪಾದಿಸ ಹೊರಡುವ ಸ್ವಾರ್ಥ,ಗಳಲ್ಲಿ ಹಣ, ಆಸ್ತಿ, ಚಿನ್ನ ಮುಂತಾದ ಭೋಗ ಸಾಧನಗಳೂ, ಹೆಣ್ಣು, ಗಂಡು, ಪ್ರಸಿದ್ಧಿ, ಬಹುಮಾನ, ಸ್ಥಾನ, ಮಾನ, ಅಧಿಕಾರ ಮುಂತಾದ ಸುಖಸಾಧನಗಳೂ ಮುಖ್ಯವಾಗಿವೆ. ಇವೆಲ್ಲವನ್ನೂ, ಪಾತ್ರತ್ವದಿಂದ ಇತರ ಪಾತ್ರತ್ವಕ್ಕೆ ಅಪಮಾನವಾಗದಂತೆ ಅರ್ಜಿಸುವುದು ಸಾಮಾನ್ಯಧರ್ಮ. ಇವುಗಳ ಆ ಪಾತ್ರದಾನವು ಅಧರ್ಮ ಪಾತ್ರತ್ವವನ್ನುಗುರುತಿಸುವುದೇಧರ್ಮಜ್ಞತೆ, ಲೋಕ ವ್ಯವಹಾರ ಕುಶಲತೆ, ಈ ಕೌಶಲ ಕೊರತೆಯಾದಲ್ಲಿ ಪ್ರಭುಗಳು ವಾಕ್ ಪಾರುಷ್ಯ, ದಂಡಪಾರುಷ್ಯ ಮತ್ತು ಅರ್ಥದೂಷ ಎಂಬಂತಹ ದೋಷಣಗಳನ್ನು ಮಾಡಿ ಆಡಳಿತ ಶೈಥಿಲ್ಯಕ್ಕೆಡೆಗೊಟ್ಟು ಭಾರತದಲ್ಲಿ ಅಶಾಂತಿಪರ್ವವನ್ನು ನೆಲೆನಿಲ್ಲಿಸುತ್ತಾರೆ. ಅಂಥ ಪ್ರಭುಗಳ ಪಾತ್ರತೆಯನ್ನೀಗ ನಾವು ಪ್ರಶ್ನಿಸಬೇಕಾಗಿದೆ, ಪ್ರಭುತ್ವಕ್ಕೆ ಅಪಾತ್ರರಾದವರನ್ನು ಗದ್ದಿಗೆಗೇರಿಸದಿರುವ ನಿರ್ವಾಚನ ಸ್ಥೈರ್ಯವನ್ನು ೧೯೬೨ನೆಯ ಚುನಾವಣೆಯಲ್ಲಿ ಜನ ತೋರಿಸಬೇಕಾದೆ. ಪ್ರಭುತ್ವದ ಪಾತ್ರತೆಯ ಲಕ್ಷಣಗಳು ಇಂತಿವೆ.

೧. ತ್ಯಾಗ—ಸಾರ್ವಜನಿಕ ಸೇವಾಪರಾಯಣತೆ.

೨. ಕೃತಕರ್ಮತ್ವ— ಜನೋಪಕಾರ ಮಾಡಿದ ಪೂರ್ವಚರಿತ್ರೆ

೩. ಕುಲೀನತೆ— ಸತ್ಸಂಪ್ರದಾಯದಲ್ಲಿ ಬೆಳೆದು ಬಂದಿರುವಿಕೆ

೪. ಸುಶೀಲಕತೆ—ಸಭ್ಯರನ್ನು ಮೆಚ್ಚಿಸುವ ವರ್ತನಾ ಸೌಂದರ್ಯ.

೫. ರೂಪವತ್ತೆ—ಸಭ್ಯಾಕರ್ಷಕ ವ್ಯಕ್ತಿತ್ವ ಸಂಪನ್ನತೆ.

೬. ಯೌವನ—ಅಶಿಥಿಲ ದೇಹ-ಮನಃಶಕ್ತಿಗಳು.

೭. ಉತ್ಸಾಹ—ಹತ್ತು ಮನುಷ್ಯರ ಕೆಲಸದಲ್ಲಿ ಉಮೇದು.

೮. ದಕ್ಷತೆ—ಕರ್ಮ ಕೌಶಲ, ಕ್ರಮಬದ್ಧ ಕಾರ್ಯನಿರ್ವಾಹ ಶಕ್ತಿ.

೯. ಲೋಕಾನುರಾಗ—ಲೋಕಪ್ರಿಯತೆ. ಲೋಕಪ್ರೇಮ, ಲೋಕಾಸಕ್ತಿ.

೧೦. ತೇಜಸ್ಸು—ವ್ಯಕ್ತಿತ್ವದ ಅಂತಃಶಕ್ತಿ, ಪ್ರಭಾವಿಕ್ತ್ವ.

೧೧. ವೈದಗ್ಧ್ಯ—ಅನುಭವದ ಅಗ್ನಿಯಲ್ಲಿ ಹೊಕ್ಕು ಹೊರಟು ಪಳಗಿದ ಬುದ್ಧಿಮತ್ತೆ.

೧೨. ಶೀಲ—ತತ್ವನಿಷ್ಠ ವರ್ತನೆ.

ಈ ೧೨ ನಾಯಕತನದ ಸಾಮಾನ್ಯ ಗುಣಗಳು, ನೇತೃತ್ವದ ಲಕ್ಷಣಗಳು, ಒಡೆಯತನದ ಕೈಗಂಬಗಳು. ಈ ಗುಣ ಸಮೃದ್ಧಿಯಿಲ್ಲದವರು ಸಾರ್ವಜನಿಕ ಮುಖಂಡರೆನ್ನಿಸಲಾರರು; ಎನ್ನಿಸಿದರೆ ಸರ್ವಹಾನಿ ಮೆಲ್ಲನೆ ಆರಂಭವಾಗುತ್ತದೆ, ಕ್ರಮೇಣ ವೃದ್ಧಿಯಾಗುತ್ತದೆ! ದ್ರೌಪದಿಯು "ಪತಿಂದೇಹಿ" ಎಂದು ಪರಮೇಶ್ವರನನ್ನು ಪೂರ್ವಜನ್ಮದಲ್ಲಿ ಬೇಡಿದಂತೆ ಭಾರತೀಯರಿಂದು ಜಿಲ್ಲೆ ಜಿಲ್ಲೆಗಳಲ್ಲಿ, ತಾಲೂಕು—ತಾಲೂಕುಗಳಲ್ಲಿ ಯೋಗ್ಯ ನಾಯಕರನ್ನು ಹುಡುಕಬೇಕು, ಬೆಳೆಸಬೇಕು; ಅಯೋಗ್ಯರ ಅಹಮಹಮಿಕೆಯನ್ನು ತಡೆಗಟ್ಟಬೇಕು. ಇದು ಸಮಾಜಬಲವರ್ಧನೆಯ ಮೂಲ ಸೂತ್ರ. Society is a republic—ಸಮಾಜವೊಂದು ಗಣರಾಜ್ಯವಲ್ಲವೇ? ಸಮಾಜದಲ್ಲಿಯ ವೈಷಮ್ಯವು ರಾಷ್ಟ್ರವೃಕ್ಷಕ್ಕೆ ಕೊಡಲಿ. ಜಾತಿಗಳನ್ನು ಸಮಾಜಗಳೆಂದು ಕರೆಯುವುದು ದುರುಪಯೋಗವಷ್ಟೆ. ಅವೇ ವರ್ಣಧರ್ಮವನ್ನು ಕೇವಲ ಶಬ್ದಗತ ಆಚರಾಮಕತ್ವಕ್ಕೆ ಗುರಿಪಡಿಸಿದಂಥವು. ಜಾತಿಗುರುತ್ವದ ಕ್ಷೇತ್ರದಲ್ಲಿ ಭಾವನಾಶುದ್ಧಿ—ಭಾವ ವೈಶಾಲ್ಯಗಳುಂಟಾಗದೆ ಜಾತ್ಯಸ್ಥರಲ್ಲುಂಟಾಗದು. ವರ್ಣನಿರ್ಣಾಯಕವಾದ ಗುಣಕರ್ಮಗಳನ್ನು ನಿರ್ಧರಿಸಿ, ಎಷ್ಟನೆಯ ವಯಸ್ಸಿನಲ್ಲಿ ಯಾರು ಯಾರಿಗಿಂದು ದ್ವಿಜ—ದ್ವಿಜೇತರ ಸ್ಥಾನಮಾನಗಳನ್ನೂ ಕರ್ತವ್ಯಾಕರ್ತವ್ಯಗಳನ್ನೂ ಹೇಳಬಲ್ಲರು? ಅಂಥ ಬುದ್ಧರಿದ್ದಾರೆಂದರೆ ಯಾರು ಒಪ್ಪಿಯಾರು? ಆದುದರಿಂದ ಹಿಂದು ಸಮಾಜ ಅಥವಾ ಭಾರತೀಯ ರಾಷ್ಟ್ರವು ಸುದೃಢ, ಸುಭದ್ರ, ಸಂಯುಕ್ತ ಎನ್ನಿಸಲು ಸಾಮಾನ್ಯರು—

'ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯ ನಿಗ್ರಹಃ' ಎಂಬೀ ಆಚಾರಗಳನ್ನು ಜಾತಿ-ಸ್ಥಳ ಭೇದಗಳಿಗೊಳಗಾಗದೆ ಸಹಜೀವಿಗಳೆಲ್ಲರಲ್ಲೂ ಇಟ್ಟುಕೊಳ್ಳಬೇಕು ಈ ಪಂಚಲಕ್ಷಣಗಳುಳ್ಳದ್ದೇ ಮನುಷ್ಯಧರ್ಮ, ಸಾರ್ವಧರ್ಮ.

ಸಾಗುವಾ ಬನ್ನಿ

೧

ಮನಮನದಲಿ ತಾ ಒಲುಮೆಯ ಮಾಡಿ,
ತಾಯಿಯ ಚೆಲುವನು ಮನದಣಿ ಹಾಡಿ,
ಹರುಷದಿ ನಾಡಿನ ಸೇವೆಯ ಮಾಡಿ
ಸಾಗುವಾ ಬನ್ನಿ ಗೆಳೆಯರೆ ಕೂಡಿ.

೨

ಏಳಿರಿ ಎಲ್ಲರು ಹುರಿಗೊಂಡೇಳಿ;
ದ್ವೇಷಾಸೂಯೆಗಳೆಲ್ಲವ ಹೂಳಿ,
ಅಂತಃಕಲಹವನೆಲ್ಲವ ಸೀಳಿ
ನಾಡಿನ ಸೇವೆಯ ಗೆಯ್ಯಲು ಏಳಿ.

೩

ನಾಡಿನ ಅಂಚಿಗೆ ಬರಲಿದೆ ಕುತ್ತು!
ಎಲ್ಲವು ಇರುದೆ ನಮ್ಮಯ ಸುತ್ತು!
ಎಲ್ಲವು ಮುಗಿದಿರೆ ಏನಿದು ಮತ್ತೆ?
ಏಕಿದು ಗಡಿಗಳ ಗೊಂದಲವಿತ್ತು?

೪

ಮುಂಗೈಚೋರಿನ ಈ ಮಾತೇಕೆ?
ಗಡಿ ಸಮಿತಿಯ ಈ ಗೊಂದಲವೇಕೆ?
ಬೆಳಗಾಂ ಕಾರ್ವಾರ್ ಪ್ರಶ್ನೆಯದೇಕೆ?
ಇಷ್ಟೆಲ್ಲವ ನಾವ್ ತಾಳಲುಬೇಕೆ?

೫

ಏಳಿರಿ ಗೆಳೆಯರೆ ಎಲ್ಲವನರಿತು
ನಮ್ಮಯ ಕಹಿತನವೆಲ್ಲವ ಮರೆತು
ನಮ್ಮಯ ನೆಲವನು ಉಳಿಸಲು ಬೆರೆತು,
ಏಳಿರಿ, ಅದುವೇ ಜೀವದ ಗುರುತು.

೬

ಸುಮ್ಮನೆ ಕುಳಿತರೆ ಬಿಡುವರೆ ಪರರು
ಹಾವಳಿ ಮಾಡಲು ಆತಿಸಿ ಅವರು
ತಮ್ಮಯ ಬಲವನು ತೋರುತಲಿಹರು;
ಮಾಯಾ ಜಾಲವ ಬೀಸುತಲಿಹರು.

೭

ಒಬ್ಬಳೆ ಕನ್ನಡ ತಾಯಿಯು ನಮಗೆ
ಒಂದೇ ಕನ್ನಡ ಬಾಯಿಯು ನಮಗೆ
ಹೀಗಿರೆ, ಕನ್ನಡ ಯೋಚನೆ ನಮಗೆ
ಜೀವದ ಪ್ರಶ್ನೆಯೆ ಆಗಿಹುದೆಲಗೆ.

೮

ಕನ್ನಡ ಮಾತೆಯ ದುಕ್ಕಳೆ ಏಳಿ
ತಾಯಿಗೆ ಬಂದಿಹ ಸಂಕಟ ಕೇಳಿ
ಸಾಗಿರಿ ಮುಂದಕೆ ಧೈರ್ಯವ ತಾಳಿ
ನಾಡಿನ ಸೇವೆಯಗೆಯ್ಯಲು ಬಾಳಿ.

—ಎಸ್. ಎಸ್. ಬಸುಪಟ್ಟದ,
ಗುಳೇದ ಗುಡ್ಡ.

When at Mangalore
Stay—at
UDIPI SRI KRISHNA BHAVAN
BOARDING & LODGING
&
Visit
Only the air condition Restaurant
MOHINI VILAS
Phone No. 133

ನಮ್ಮ ಗ್ರಾಹಕರಿಗೂ, ಹಿತಚಿಂತಕರಿಗೂ
೧೪ನೇ ಸ್ವಾತಂತ್ರ್ಯೋತ್ಸವದ
ಹಾರ್ದಿಕ ಅಭಿನಂದನೆಗಳು
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್
ತೆಂಕಪೇಟೆ - - - - ಉಡುಪಿ
SRI GAJANANA CLOTH STORES
TENKAPET, UDIPI.
THE FASHION CREATORS IN THE TOWN &
WHERE ALWAYS SOME THING IS NEW!

ವೆಸ್ಟ್ ಕೋಸ್ಟ್ ಟ್ರಾನ್ಸ್‌ಪೋರ್ಟ್ ಬಸ್ ಸರ್ವಿಸು
ಮಂಗಳೂರು.

ಜಿಲ್ಲೆಯ ಎಲ್ಲ ಪ್ರಾಮುಖ್ಯ ಕೇಂದ್ರಗಳಿಗೂ, ತೀರ್ಥಕ್ಷೇತ್ರಗಳಿಗೂ ಪ್ರಯಾಣ ಸೌಕರ್ಯವಿದೆ.

ಜಿಲ್ಲೆಯಲ್ಲಿ ಇದೀಗ ಹೊಸತಾಗಿ ಪ್ರಾರಂಭವಾದ

ಮಂಗಳೂರು-ಸೋಮೇಶ್ವರ ಲೈನ್

Via ಮೂಲ್ಕಿ, ಉಡುಪಿ, ಪೆರ್ಡೂರು

ಡೈರೆಕ್ಟ ಸರ್ವಿಸು

ಪೆಸಂಜರರಿಗೆ ತುಂಬಾ ಅನುಕೂಲ.

ಸುರತ್ಕಲ್, ಮೂಲ್ಕಿ, ಪಡುಬಿದ್ರೆ, ಉಚ್ಚಿಲ, ಕಾಪು, ಕಟಪಾಡಿ, ಉಡುಪಿ, ಪೆರ್ಡೂರು, ಹೆಬ್ರಿ ಮೊದಲಾದ ಎಲ್ಲ ಸ್ಥಳಗಳಿಂದ ತೀರ್ಥಹಳ್ಳಿ, ಶಿವಮೊಗ್ಗ, ಸಾಗರ ಇತ್ಯಾದಿ ಕಡೆಗಳಿಗೆಲ್ಲಾ ಹೋಗುವ ಪ್ರಯಾಣಿಕರಿಗೆ ಡೈರೆಕ್ಟ್ ಟಿಕೇಟುಗಳನ್ನು ಕೊಡಲಾಗುತ್ತದೆ.

A House for

Quality Photographs, Enlargements and Oil Paintings etc.

ARUNA PHOTO STUDIO

Near Bus Stand, UDIPI.

Amateur Service a Speciality

ಶುದ್ಧ ಮತ್ತು ತಾಜಾ

ತೆಂಗಿನೆಣ್ಣೆ ಮತ್ತು **ಎಳ್ಳೆಣ್ಣೆ**

ಕೆಲಗೂರು ಚಾ

ವಿಚಾರಿಸಿರಿ:

ಜೈ ಭಾರತ್ ಮಿಲ್ಸ್ ಪ್ರೈವೇಟ್ ಲಿಮಿಟೆಡ್,

JAI BHARATH MILLS PRIVATE LTD.,

"Chittaranjan Bldgs."

UDIPI.

Tel: PROTECTION. Phone: 11.

ESTD: 1919 P. O. Box No. 9

K A L M A N J E



M E T A L W A R E

VYASACHARYA'S || UDIPI.

ಕಲ್ಮಂಜೆ ವ್ಯಾಸಾಚಾರ್ಯರ **ಪಾತ್ರೆ ಭಂಡಾರ**

ಸರ್ವರಿಗೂ ಬೇಕಾದ ವಿಶೇಷ ತರದ

ಉಡುಪಿ ಪಾತ್ರೆಗಳು

ಶುದ್ಧ ಚೀನಿ, ಬೆಳ್ಳಿಯ ಪಾತ್ರೆಗಳು, ದೇವತಾ ಪೂಜಾ ಕಾಲದಲ್ಲಿ ಉಪಯೋಗಿಸುವ ಪಾತ್ರೆಗಳು, ತಾಂಬ್ರ, ಹಿತ್ತಾಳೆ, ಶುದ್ಧ ಕಂಚು ಮೊದಲಾದ ಚಿಕ್ಕ ದೊಡ್ಡ ಹಲವು ವಿಧದ ಪಾತ್ರೆಗಳು, ಜಾಘಂಟೆಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿವೆ.

N. B:— ನವೀನ ಸ್ಟೈನ್‌ಲೆಸ್ ಸ್ಟೀಲಿನ ಎಲ್ಲಾ ತರದ ಉಪಕರಣಗಳ ವಿಶೇಷ ಸ್ಟಾಕಿಸ್ಟರು.

ನಮ್ಮ ಸರಕುಗಳು ಎಲ್ಲೆಲ್ಲೂ ಶ್ಲಾಘಿಸಲ್ಪಟ್ಟಿವೆ.

ಖಾತ್ರಿ ಮಾಲು ! ನ್ಯಾಯವಾದ ತೂಕ !! ಒಂದೇ ದರ !!!

ಮಹಾ ಬುದ್ಧಿಶಾಲಿಗಳು, ಶಿಲ್ಪಿಗಳು, ತತ್ವಶಾಸ್ತ್ರಜ್ಞರು,
—ಇಂಜಿನಿಯರರು ಮತ್ತು ರಾಷ್ಟ್ರ ನಿರ್ಮಾಣಕರು—

ಇವರೆಲ್ಲರೂ ಪ್ರಾಚೀನ ಕಾಲದಿಂದಲೂ ಇದ್ದ
ನೈಸರ್ಗಿಕ ಉತ್ತೇಜಕವಾದ

SOVEREIGN
SNUFF & BEEDIES

ಸೊವರಿನ್ ನಶ್ಯ

ವನ್ನು ಉಪಯೋಗಿಸಿ ತಮ್ಮ ಮೆದುಳಿನ
ಚುರುಕನ್ನು ಕಾಯ್ದುಕೊಂಡಿದ್ದಾರೆ.

SOVEREIGN SNUFF & BEEDI WORKS
POST BOX No. 1 : KARKALA, S. Kanara.

For your requirements in:

School and College Books
Books on Current Day Politics and fiction etc.
Stationery and office requisites
Paper and Printer's Sundries

The Reputed Firm in South Kanara

SCHOOL BOOK COMPANY
Book Sellers — Publishers — Stationers

PRINCIPAL PAPER DEALERS

Head Office:	*Branch Office:*
CAR-STREET	K. S. R. ROAD
	HAMPANKATTA
MANGALORE	MANGALORE
Phone No. 229	Phone No. 229 A

Distributors for:

The Mysore Paper Mills, Ltd.
BHADRAVATHI
(For S. Kanara & N. Malabar)

Agents of:

Ganges Printing Ink Factory, Ltd.
HOWRAH

೪—ವೇದಗಳು
ಮತ್ತು

ಸಂಪೂರ್ಣ ಮಹಾಭಾರತವು:

ಎಂಬತ್ತು (೮೦) ಗ್ರಂಥಗಳಲ್ಲಿ
೩೧-೧೨-೧೯೬೦ರ ವರೆಗೆ ಆಜೀವ ಸದಸ್ಯತ್ವ:—ರೂ. ೧೫೦/-
(ಒಂದುನೂರೈವತ್ತು ರೂಪಾಯಿಗಳು.)
ಈ ವರೆಗೆ ಪ್ರಕಟವಾದ ೫ (ಐದು) ಗ್ರಂಥಗಳ ಮಾದರಿ:—



೧-೧-೧೯೬೧ರಿಂದ ಆಜೀವ ಸದಸ್ಯತ್ವವನ್ನು ರೂ. ೨೦೦—ಎರಡುನೂರು ರೂಪಾಯಿಗಳಿಗೆ ಏರಿಸಲಾಗುವುದು. ಆದ್ದರಿಂದ ತ್ವರೆಮಾಡಿರಿ.

ಲಕ್ಷ್ಮಣ ಬಾಬಣ ಪೈ ಮೆಮೋರಿಯಲ್ ಪಬ್ಲಿಕೇಶನ್ಸ್,
ಮಣಿಪಾಲ, ಜಿಲ್ಲೆ ದ. ಕನ್ನಡ.

Best of Automobile
Service offered by the
Engineers of

MODERN
GARAGE
UDIPI.

Your cars made new by the
most modern and
experienced spray
painters

Phone: 65 Grams: KARNAD

ಭಾರತದಲ್ಲಿ ಉದ್ಯೋಗದ ಸಮಸ್ಯೆ

ದಿನೇ ದಿನೇ ವಿಶಾಲರೂಪ ಧರಿಸುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ದೂರೀಕರಿಸಲು ಭಾರಿ ಕೈಗಾರಿಕೆಗಳು ಸಾಲವೆಂಬುದು ಇದೀಗ ಅನುಭವ ವೇದ್ಯವಾಗಿದೆ. ಈ ಅತಿಗಂಭೀರ ಸಮಸ್ಯಾ ಸಂಹಾರಕ್ಕೆ ಸೂಕ್ತ ಉಪಾಯ ವೊಂದನ್ನು ಇಲ್ಲಿ ಸೂಚಿಸಲಾಗಿದೆ.

ಶ್ರೀ ಕು. ಶಿ. ಹರಿದಾಸ ಭಟ್ಟ, ಎಂ. ಎ.

ಮೂರನೆಯ ಯೋಜನೆಯ ಕರಡು ಇದೇ ಈಗ ಸಿದ್ಧವಾಗಿ ನಮ್ಮ ಕಣ್ಣ ಮುಂದಿರುವಾಗ ಉದ್ಯೋಗ ಕೊಡುವ ದೃಷ್ಟಿಯಿಂದ ನಮ್ಮ ಔದ್ಯಮಿಕ ಕ್ಷೇತ್ರದ ಸ್ವರೂಪವನ್ನಷ್ಟು ಪರಿಶೀಲಿಸೋಣ. ಭಾರತದ ಬೆಳೆಯುತ್ತಿರುವ ಜನ ಸಂಖ್ಯೆಯನ್ನು ಗಮನಿಸಿ ಈಗ ಇರುವ ಮತ್ತು ಇನ್ನು ಮುಂದೆ ಸೇರುವ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವುದೆಂತು ಎಂಬುದನ್ನು ವಿಚಾರಿಸೋಣ.

ನಮ್ಮ ದೇಶ ಬೇಸಾಯಗಾರರ ದೇಶ, ಬೇಸಾಯವೇ ನಮ್ಮ ಇದುವರೆಗಿನ ಮಹೋದ್ಯಮ. ಈ ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗವನ್ನು ಹುಟ್ಟಿಸುವುದು ಅಸಾಧ್ಯವಾಗಿದೆ. ಕಾರಣ, ಈಗ ಬೇಸಾಯದಲ್ಲಿ ನಿರತರಾಗಿರುವ ಜನರ ಸಂಖ್ಯೆಯೇ ಹೆಚ್ಚಾಯಿತೆಂದು ತಜ್ಞರ ಅಭಿಪ್ರಾಯ. ಹಾಗಾದರೆ ಬೇಸಾಯದಿಂದ ಹೊರಗಿನ ಔದ್ಯಮಿಕ ಕ್ಷೇತ್ರದಲ್ಲಿ ನಾವು ಕಾರ್ಯಪ್ರವೃತ್ತರಾದರೆ ಸಮಸ್ಯೆಯು ನೀಗಬಹುದೇ ಹೇಗೆ? ಕಳೆದ ಎರಡು ಯೋಜನೆಗಳಲ್ಲಿ ಮುಖ್ಯವಾಗಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ, ಭಾರೀ ಕೈಗಾರಿಕೆಗಳಿಗೆ ಮಹತ್ತ್ವವನ್ನು ಕೊಟ್ಟರೂ ಕೂಡ ನಮ್ಮ ನಿರುದ್ಯೋಗದ ಗಂಭೀರ ಸಮಸ್ಯೆ ಪರಿಹಾರವಾಗದೆ ಉಳಿದುದನ್ನು ನಾವು ಲಕ್ಷಿಸಿದರೆ ಭಾರೀ ವೆಚ್ಚದ ಭಾರೀ ಕೈಗಾರಿಕೆಗಳಿಂದ ನಮಗೆ ಉದ್ಧಾರವಿಲ್ಲವೆಂದು ತನ್ನಿಂದ ತಾನೇ ಹೊಳೆದೀತು. ಜಮ್‌ಶೇದ್‌ಪುರದ ಟಾಟಾ ಉಕ್ಕಿನ ಕಾರ್ಖಾನೆಯಲ್ಲಿ ಹತ್ತು ಲಕ್ಷ ಟನ್ ಉಕ್ಕನ್ನು ಉತ್ಪಾದಿಸಲು 28,000 ಜನರು ಅಗತ್ಯವಿದ್ದರೆ, ಹೊಸ ಆವಿಷ್ಕಾರಗಳ ದೆಸೆಯಿಂದಾಗಿ ಇಪ್ಪತ್ತು ಲಕ್ಷ ಟನ್ ಉಕ್ಕಿನ ಉತ್ಪಾದನೆಗೆ 26,000 ಜನರಿಗೆ ಮಾತ್ರ ಉದ್ಯೋಗದ ಅವಕಾಶ ಸಿಗುವುದಂತೆ. ಭಾರೀ ಕೈಗಾರಿಕೆಯು ವರ್ಧಿಸಿದಂತೆ ಉದ್ಯೋಗದ ಅವಕಾಶ ಸಂಕ್ಷೋಚಗೊಳ್ಳುವುದಕ್ಕೆ ಇದು ಒಂದು ಉತ್ತಮ ಉದಾಹರಣೆ ಭಿಲ್ಯೆ, ರೂರ್ಕೆಲ ಕಾರ್ಖಾನೆಗಳ ಹತ್ತು ಲಕ್ಷ ಟನ್ ಉತ್ಪಾದನೆಯ ಕಾರ್ಖಾನೆಗಳಲ್ಲಿ 8000ದಿಂದ 10,000 ಜನರು ಮಾತ್ರ ಕೆಲಸಕ್ಕೆ ದೊರೆಕರೆ ಸಾಕಂತೆ. ನಮ್ಮ ಬಟ್ಟೆಯ ಗಿರಣಿಗಳಲ್ಲಿರುವ ಯಾಂತ್ರಿಕ ಮಗ್ಗಗಳಿಗೆ 'ಆಟೋಮೇಶನ್' (ಸ್ವಯಂ ಚಾಲಿತ) ಎಂಬ ನೂತನ ಉತ್ಪಾದನಾ ತಂತ್ರವನ್ನು ಜೋಡಿಸಿದರೆ ಸಾವಿರಗಟ್ಟಲೆ ಜನ ನಿರುದ್ಯೋಗಿಗಳಾಗಬೇಕಾಗುವುದು. ಪಾಶ್ಚಾತ್ಯರ ಉತ್ಪಾದನಾ ವಿಧಾನಗಳನ್ನು ತೀರಾ ಅನುಕರಿಸುವುದರಿಂದ ನಮ್ಮ ದೇಶಕ್ಕೆ ಬರಬಹುದಾದ ಅಪಾಯವು ಇಷ್ಟರಿಂದ ವಿದಿತವಾಗುವುದಿಲ್ಲವೆ?

ಹಳ್ಳಿಗಳಲ್ಲಿ ಉದ್ಯೋಗವಿಲ್ಲದ ಜನರು ಮಹಾ ನಗರಗಳ ಕಡೆಗೆ ಧಾವಿಸುವುದರಿಂದ ಹಳ್ಳಿಗಳಲ್ಲಿ ನಿರುದ್ಯೋಗ ಕಡಿಮೆಯಾಗುವುದಿಲ್ಲವೆಂದು ನನ್ನ ವಾದವಲ್ಲ. ಒಬ್ಬ ಹಳ್ಳಿಗನು ಮುಂಬಯಿಗೆ ಹೋಗಿ ಅಲ್ಲಿ ಒಂದು ಕೆಲಸವನ್ನು ದೊರಕಿಸಿದರೆ ನಿಜವಾಗಿ ಎರಡು ಪ್ರಯೋಜನಗಳಿವೆ:

(೧) ಆತ ಈ ಮೊದಲು ಕೃಷಿ ಮಂಡಲದಲ್ಲಿ ನಿರುದ್ಯೋಗಿಯಾಗಿದ್ದರೆ ಪೇಟೆಯಲ್ಲಿ ಉದ್ಯೋಗಿಗಳ ಸಂಖ್ಯೆ ಒಂದರಷ್ಟು ವೃದ್ಧಿಯಾದ್ದು. (೨) ಔದ್ಯಮಿಕ ಕ್ಷೇತ್ರದ ಆತನ ದುಡಿಮೆಯಿಂದ ಆತನ ಕುಟುಂಬದ ವರಮಾನವು ಹೆಚ್ಚಿದುದು. ಇದೇ ರೀತಿ ಈಗ ನಮ್ಮ ಭಾರೀ ಕೈಗಾರಿಕೆಗಳು ಹುಟ್ಟಿಕೊಂಡ ಪ್ರದೇಶದ ಹಳ್ಳಿಯ ಜನರಷ್ಟೇ ಸಿಂಧ್ರಿ, ಭಿಲ್ಯೆ ಮುಂತಾದ ಕೇಂದ್ರಗಳಲ್ಲಿ ಉದ್ಯೋಗ ಪಡೆದಿರುವುದೂ ನಿಜ ಆದರೆ ವರ್ಷಕ್ಕೆ 70 ಲಕ್ಷದಂತೆ ಮುಂದುವರಿಯುತ್ತಿರುವ ನಮ್ಮ ನಿರುದ್ಯೋಗದ ಸಮಸ್ಯೆಗೆ ಇಷ್ಟರಿಂದಲೇ ಪರಿಹಾರ ಒದಗದು.

ಗ್ರಾಮಾಂತರಗಳಲ್ಲಿಯೇ ಉದ್ಯೋಗದ ಅವಕಾಶ ಹೆಚ್ಚಬೇಕು ಎಂಬುದು ಇಲ್ಲಿನ ವಾದ. ಒಂದು ಗ್ರಾಮ ಸಣ್ಣದಾದರೆ ಹತ್ತು ಗ್ರಾಮಗಳನ್ನು ಸೇರಿಸಿ ಒಂದು ಘಟಕವಾಗಿ ಮಾಡೋಣ. ಹತ್ತು ಗ್ರಾಮಗಳ ಹಿರಿಯರನ್ನು ಸೇರಿಸಿ ಆ ಪರ ಗ್ರಾಮಕ್ಕೆ ಬೇಕಾದ ಅನುಕೂಲತೆಗಳು ಯಾವುವು ಎಂದು ವಿಚಾರಿಸೋಣ. ಎಲ್ಲಾ ಹಳ್ಳಿಗಳಲ್ಲಿಯೂ ರಸ್ತೆ, ಶಾಲೆ, ಬಾವಿ, ನೀರಾವರಿ ಕಾಲುವೆ, ಮನೆಮಟ್ಟು—ಇಷ್ಟರ ಅವಶ್ಯಕತೆ ಯಾವ ಕಾಲಕ್ಕೂ ಇದ್ದೇ ಇರುತ್ತದೆ. ಇವುಗಳ ನಿರ್ಮಾಣಕ್ಕೆ ಜನರು ಸ್ವತಃ ಸಿದ್ಧರಾಗಬೇಕು. ಹಳ್ಳಿಯಲ್ಲಿರುವ ಜನ ತಮ್ಮ ಬಿಡುವಿನಲ್ಲಿ ಈ ಕೆಲಸಗಳಿಗೆ ಸ್ವಸಂತೋಷದಿಂದಲೋ, ಸರಕಾರದ ಒತ್ತಾಯದಿಂದಲೋ ಹಾಜರಾಗತಕ್ಕದ್ದು. 'ಎಲ್ಲರ ಕೆಲಸ ಯಾರ ಕೆಲಸವೂ ಅಲ್ಲ'ವೆಂಬ ಆಸಡ್ಡೆಯನ್ನು ನಾವು ನೀಗಿದರೆ ಭೂಮಿಯ ಸಂಪತ್ತನ್ನು ಅಭಿವರ್ಧಿಸುವ ಅನೇಕಾನೇಕ ಬಂಡವಾಳ ಯೋಜನೆ'ಗಳನ್ನು (Capital projects) ಹೆಚ್ಚು ವೆಚ್ಚವಿಲ್ಲದೇನೆ ನಿರ್ವಹಿಸಲು ಸಾಧ್ಯವಿದೆ. ಪ್ರತಿ ಹಳ್ಳಿಗಳಲ್ಲಿ—ಅಥವಾ ನಮ್ಮ ನಿಯೋಜಿತ ಹತ್ತು—ಹಳ್ಳಿ'ಗಳಲ್ಲಿ ಕಂಡಿತವಾಗಿ ನಿರುದ್ಯೋಗಿಗಳಾಗಿರುವವರ ಒಂದು ಚಿಕ್ಕ 'ಭೂಸೇನೆ' ಯನ್ನು ರಚಿಸಿ ಹಳ್ಳಿಯ ಆಸುಪಾಸಿನಲ್ಲಿ ಕಾಡುಗಳನ್ನು ಬೆಳೆಸುವ ಕೆಲಸಕ್ಕೆ ಹಚ್ಚಬೇಕು. ಹಳ್ಳಿಯ ಹತ್ತಿರವೇ ಇರುವ ಈ ಉದ್ಯೋಗಕ್ಕೆ ಕಡಮೆ ಕೂಲಿಯಲ್ಲಿ ಜನರು ಪ್ರವೇಶಿಸುವಂತೆ ಪ್ರಚಾರ ನಡೆಸಬೇಕು. ನಮ್ಮ ದೇಶದ ರಕ್ಷಣೆಗೆ ನಾವು ನಿಯೋಜಿಸುವ ಸೇನೆಯಂತೆ ಈ ಭೂಸೇನೆಯೂ ಹಳ್ಳಿಗಳಿಂದ ದೂರ ಕೆಲಸ ಮಾಡಬೇಕಾದ ಸನ್ನಿವೇಶವಿದ್ದಲ್ಲಿ (ಉತ್ತರಪ್ರದೇಶದ ಭೂಸೇನೆಯಂತೆ) ಅವರಿಗೆ ಕೊಡುವ ಸಂಬಳವಿಂದ ಪೇಟೆಯ ಧಾರಣೆಗಳನ್ನು ಮೇಲಕ್ಕೇರಲು ಉತ್ತೇಜನ ದೊರೆಯುವುದರಿಂದ ಹೆಚ್ಚು ಕೆಲಸ ಹಳ್ಳಿಯ ಹತ್ತಿರವೇ ನಡೆಯುವಂತೆ ನೋಡಿಕೊಳ್ಳುವುದೊಳ್ಳಿತು. ಇಂಥ 'ಬಂಡವಾಳದ ಯೋಜನೆ' ಗಳಿಗೂ ಒಂದು ಮಿತಿ ಇರುವುದರಿಂದ ಹಳ್ಳಿಗಳಲ್ಲಿ ಯಾವುದಾದರೂ ಒಂದೆರಡು ಪುಟ್ಟ ಉದ್ಯಮಗಳನ್ನು ಸ್ಥಾಪಿಸಬೇಕು. 20ರಿಂದ 50 ಜನರಿಗೆ ಉದ್ಯೋಗದ ಅವಕಾಶವನ್ನುಂಟುಮಾಡುವ ಸಣ್ಣ ಕೈಗಾರಿಕೆಗಳು ದೇಶದಲ್ಲಿ ಸರ್ವತ್ರ ಹರಡಿದರೆ ಮಾತ್ರ ನಮ್ಮ ಅತಿ ಗಂಭೀರವಾದ ನಿರುದ್ಯೋಗದ ಸಮಸ್ಯೆಯು ಮಾಯವಾದೀತು. ಉಡುಪಿಯ ಆಸುಪಾಸಿನಿಂದಲೆ ಕೆಲ ಉದಾಹರಣೆಗಳನ್ನು ಕೊಡುವುದಾದರೆ ಭಾರತ ಕ್ಯಾನಿಂಗ್ ಫ್ಯಾಕ್ಟರಿ (ಕಾಪು) ಕಾರೊನೆಟ್ ಫಿಶ್ ಕ್ಯಾನಿಂಗ್ ಫ್ಯಾಕ್ಟರಿ (ಮಲ್ಪೆ) ಮತ್ತು ಕೆಮಿಕಲ್ ಫ್ಯಾಕ್ಟರಿ (ಹೆಜಮಾಡಿ) ಇಂಥ ಉದ್ಯಮಗಳಾಗುತ್ತವೆ. ಗಾತ್ರದ ದೃಷ್ಟಿಯಿಂದ ಇವು ಚಿಕ್ಕವು; ಆದರೆ, ಉದ್ಯೋಗದ ಮೇಲಿನ ಪರಿಣಾಮದ ದೃಷ್ಟಿಯಿಂದ ಇವು ಮಹೋದ್ಯಮಗಳೇ ಸರಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O. S. 191/60.

ವೆಂಕಟ್ರಮಣ ಮುಂಡೇಚ —ವಾದಿ,

A. ರಾಮ ಶಗ್ರಿತ್ತಾಯ, ಅಳಿಟ್ಟ ರಾಮ ಕೃಷ್ಣ ಶಗ್ರಿತ್ತಾಯರ ಮಗ, ಮುಂಡೆಕೋಲು ಗ್ರಾಮದ ತೋಟಂಪಾಡಿ, ಪುತ್ತೂರು ತಾಲೂಕು Post ಅಜ್ಜಾವರ, S. K. ಪ್ರತಿವಾದಿರೀಗೆ.

ವಾದಿಯು ನಿಮ್ಮ ಮೇಲೆ ರೂ. 1286-36 ಕ್ಕೆ ಮಾಡಿದ ನೋಟಿನ ದಾವೆಯು ತಾ. 29-8-60ಕ್ಕೆ ವ್ಯಾದೆಯಿರುವದ್ರಿಂದ ನೀವು ಆ ದಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಉದೆಹರಿಸದಿದ್ದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

(By Court order)

(Sd) B. Sripathi Rao,
Advocate for Plff.

ಪುತ್ತೂರು 6—8—60

ಪುತ್ತೂರು ಡಿ. ಮು. ಕೋರ್ಟಿನಲ್ಲಿ
S. C. 201/60.

ಕಾರ್ಕಳ ಶ್ರೀ ಬಾಹುಬಲಿ ಮಹಾ ಮಸ್ತಕಾಭಿಷೇಕ ಟ್ರಸ್ಟ —ವಾದಿ.

ಮಂಜುನಾಥ ಮ್ಯೊಲಿ ಕೂಡಾ —ಪ್ರತಿವಾದಿರು.

2ನೇ ಪ್ರತಿವಾದಿ:—ರುಕ್ಮಿ ಹೆಂಗಸು—ಮಂಜುನಾಥ ಮ್ಯೊಲಿಯ ಚಿಕ್ಕ ತಾಯಿ—ಕುಕ್ಕಳ ಗ್ರಾಮದ ವಾದೆ—ಇವರಿಗೆ.

ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ತಾ. 22-8-57ರಲ್ಲಿ ನೀವು ಕೂಡಾ ವಾದಿಗೆ ಬರಕೊಟ್ಟ ಚಾಲಗೇಣಿ ಚೀಟು ಪ್ರಕಾರ ತಾ. 31-3-59, 31-12-59; 31-3-60ಕ್ಕೆ ವಾದಿಗೆ ಬರಬೇಕಾದ ಗೇಣಿ ಬಾಕಿಗೆ ಮಾಡಿದ ಮೇಲಿನ ದಾವೆಯನ್ನು ತಾ. 27-9-60ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟರುತ್ತದೆ. ಆ ದಿವಸ ಹಾಜರಾಗಿ ಉದಯರಿಸ ತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಏಕಪಕ್ಷ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(Sd) M. Sadashiva Rao,
Vakil for Plaintiff.

ತಾ. 10-8-60.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
S. C. 47/60

ಶಿವಶಂಕರ ರಾವ್ —ವಾದಿ.

ವೆಂಕಟೇಶ ನ್ಯಾಕ ಕೂಡಾ-ಪ್ರತಿವಾದಿರು.

3ನೇ ಪ್ರತಿವಾದಿ ಮಂಗೇಶ ರಾವ್, ರಾಘವೇಂದ್ರ ರಾಯರ ಮಗ, Karnataka Buildings, Moghul Lane, Mahim Bombay.

—ಇವರಿಗೆ ತಿಳಿಸುವುದೇನೆಂದರೆ,

1ನೇ ಪ್ರತಿವಾದಿಯಿಂದ ಡಿ. ಪ್ರೊ. ನೋಟಿನ ಪ್ರಕಾರ ಬರತಕ್ಕ ಹಣದ ವಸೂಲಿಗೆ ವಾದಿಯು ದಾಖಲುಮಾಡಿದ ಈ ದಾವೆಯು ತಾ. 29—8—60ಕ್ಕೆ ಇರುವುದರಿಂದ ನಿಮಗೇ ನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Vakil for plaintiff.

ಪುತ್ತೂರು ತಾ. 9—8—60.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O. S. No. 205/1960.

ಪಿಕಿ ಜಂಮ —ವಾದಿ.

ಮತ್ತು

ಲಿಂಗಮ ಕೂಡಾ —ಪ್ರತಿವಾದಿರು

2; 3, 6ನೇ ಪ್ರತಿವಾದಿರು.

2. ಸೀತು ಹೆಂಗಸು—ವೀರಪ್ಪ ನಾಯ್ಕರ ಪತ್ನಿ.

3. ರಾಮಣ್ಣ ನಾಯ್ಕ. 6. ಬೊಮ್ಮಕ್ಕ. ವೀರಪ್ಪ ನ್ಯಾಕರ ಮಕ್ಕಳು—

ಎಲ್ಲರೂ ಕಡೇಶ್ವಾಲ್ಯ ಗ್ರಾಮದ ಬರೆಂಗ್ಯಾ ಎಂಬಲ್ಲಿರುವ-Post Kadeshwalya ರೀಗೆ—

ಮೃತ ವೀರಪ್ಪ ನಾಯ್ಕರು ಬರಕೊಟ್ಟ ಡಿ. ಪ್ರೊನೋಟಿನಲ್ಲಿನ ಅಸಲು ಬಡ್ಡಿ ವಸೂಲಿಗೆ ನಿಮ್ಮ ಮೇಲೆ ವಾದಿಯು ಮಾಡಿದ ಮೇಲಿನ ದಾವೆಯು ತಾ. 1.9.60ಕ್ಕೆ ಇರುವದ್ರಿಂದ ನಿಮಗೆ ಆಕ್ಷೇಪಣೆ ಇದ್ದರೆ ನೀವು ಆ ದಿನ ಬೆಳಿಗ್ಗೆ ಗಂಟೆ 10ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದರೆ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

(By order of the Court).

Sripati Rao B.
Advocate for Plaintiff.

Tele. GOLDKING



Prop. S. L. SHET.

ತಾಜಾ ವಜ್ರಗಳಿಗೆ ಮತ್ತು ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ ಸುವರ್ಣಗೃಹ.

ಎಸ್. ಎಲ್. ಶೇಟ್
ಡಾಯಮಂಡ್ ಹೌಸ್
ಕೆ. ಎಸ್. ರಾವ್ ರೋಡ್, ಮಂಗಳೂರು-1

ಮಕ್ಕಳ ಕಾಯಿಲೆಗಳಿಗೆ
ಮಾರ್ಗರೇಟರ
ಫಿಟ್ಸ್ ಕ್ಯೂರ್
ಗ್ರೋಥ್ ಆಯಿಲ್
ಉಪಯೋಗಿಸಲು ಮರೆಯದಿರಿ.
ತಯಾರಕರು:
ಮಾರ್ಗರೇಟ್ ಪ್ರೊ. ಕಂ., ಉಡುಪಿ.

ಸೈಂಟ್ ಅಂತೋನಿ ಸೈಕಲ್ ವರ್ಕ್ಸ್,

ಚರ್ಚ್‌ರೋಡ್, ಉಡುಪಿ.

ಉಡುಪಿಯ ಪ್ರಮುಖ ಸೈಕಲ್ ಮತ್ತು ಬಿಡಿ ಭಾಗಗಳ ವ್ಯಾಪಾರಸ್ಥರು.
ನಮ್ಮಲ್ಲಿ ಹೊಸ ಸೈಕಲುಗಳೂ, ಪೆಟ್ರೊಮೆಕ್ಸ್‌ಗಳೂ ಯಾವಾಗಲೂ ಮಾರಾಟಕ್ಕೆ ದೊರೆಯುತ್ತವೆ.

ಎಲ್ಲಾ ತರದ ಸೈಕಲ್ ಮತ್ತು ಪೆಟ್ರೊಮೆಕ್ಸ್ ರಿಪೇರಿ ಕೆಲಸಗಳನ್ನು ತೃಪ್ತಿಕರವಾಗಿ ಸಕಾಲದಲ್ಲಿ ಮಾಡಿಕೊಡಲಾಗುವುದು.

ಸ್ಟವ್ ಪೈಂಟ್ ಮಾಡಲಾಗುವುದಲ್ಲದೆ ಪರವೂರ ಆರ್ಡರುಗಳಿಗೆ ವಿಶೇಷ ಗಮನ ಕೊಡಲಾಗುವುದು.

ಪ್ರೊಪ್ರೈಟರ್: ಎಲ್. ಡಿ. ಸಿಲ್ವ.

ಸ್ಥಾಪನೆ: 1935.

ಸರ್ವ ವಿಧದ ಇಲೆಕ್ಟ್ರಿಕ್ ಸಾಮಗ್ರಿಗಳಿಗೂ, ಇಲೆಕ್ಟ್ರಿಕ್ ಮೋಟರುಗಳಿಗೂ, ನೀರಿನ ಪಂಪು ಸೆಟ್ಟುಗಳಿಗೂ, ನಾಜೂಕಾದ ಫಿಟ್ಟಿಂಗ್ ಕೆಲಸಗಳಿಗೂ ನಮ್ಮನ್ನು ವಿಚಾರಿಸಿರಿ

ಉಡುಪಿ ಇಲೆಕ್ಟ್ರಿಕ್ ಸ್ಟೋರ್ಸ್

ಚರ್ಚ್ ರೋಡ್, ಉಡುಪಿ.

ಮರದ ಸಕಲ ಬಗೆಯ ಆಕರ್ಷಕ ಕಾಮಗಾರಿಗೆ

ಭಾರತ್ ಉಡ್ ಇಂಡಸ್ಟ್ರೀಸ್

ಒಳಕಾಡು, ಉಡುಪಿ.

ನಮ್ಮ ಸುಸಜ್ಜಿತ ಕಾರ್ಖಾನೆಯಿಂದ ಮನೆ ಕಟ್ಟಲು ಬೇಕಾಗುವ ಮರದ ವಿವಿಧ ಸಾಮಗ್ರಿಗಳನ್ನು ಸಕಾಲದಲ್ಲಿ ಒದಗಿಸಿ ಕೊಡಲಾಗುವುದು.

ಯಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್,
ರಥಬೀದಿ, ಮಂಗಳೂರು.

ಇವರ 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಿಗಳು

ದೇಹಪುಷ್ಟಿ ಲೇಹ (ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ) ಶರೀರದ ಉಷ್ಣತೆ, ಸೊಂಟನೋವು, ಕೈಕಾಲು ಬಚ್ಚುವುದು, ಒಳಜ್ವರ, ಅಶಕ್ತತೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಶಕ್ತಿಯನ್ನು ಉಂಟು ಮಾಡುವುದು. ಪೌಂಡು 1ರ ರೂ. 7. ½ ಪೌಂಡು ರೂ. 4.

ಕಸ್ತೂರಿ ಮಿಶ್ರಣ ದಶಮೂಲ ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ.
8 ಔನ್ಸು ರೂ. 2, 12 ಔನ್ಸು ರೂ. 3, 24 ಔನ್ಸು ರೂ. 6.

ಚವನಪ್ರಾಶ (ಬಂಗಾರ ಮಿಶ್ರ) ಅತ್ಯಂತ ಶಕ್ತಿವರ್ಧಕ. ಕೆಮ್ಮು, ಉಬ್ಬಸ ಇವುಗಳ ಮೇಲೆ ದಿವ್ಯಔಷಧಿ, ರಾತ್ಲು 1ರ ರೂ. 6. ½ ರಾತ್ಲು ರೂ. 3-4-0

ಅಶೋಕಾರಿಷ್ಟ ಮತ್ತು ಮಾತ್ರೆ ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಋತುಶೂಲೆ ಮುಂತಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳ ಮೇಲೆ ದಿವ್ಯಔಷಧ. ಬಾಟ್ಲ 1ರ ರೂ. 4.

ಔಷಧಿ ಸಿಗುವ ಸ್ಥಳ: 1) ನ್ಯೂ ಕೆನರಾ ಜನರಲ್ ಸ್ಟೋರ್ಸ್, ವಿಕ್ಟೋರಿಯಾ ಗಾರ್ಡನ್ ರೋಡ್, ಬ್ಯಾಕುಲ್ಲಾ, ಬೊಂಬ್ಯಾ. 2) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, ಕೆಮಿಸ್ಟ್ 648-A, ಡಿಲ್ಯಾಲ್ ರೋಡ್, ಬ್ಯಾಕುಲ್ಲಾ, ಬೊಂಬ್ಯಾ 27. 3) ಮಂಗಳೂರು ಸ್ಟೋರ್ಸ್, ರಘುರಾಜ ಭವನ, ಗೋಖಲೆ ರೋಡ್ ಸೌತ್, ದಾದರ್, ಬೊಂಬ್ಯಾ 28. 4) ಶ್ರೀ ವೆಂಕಟೇಶ ಪ್ರೊವಿಜನ್ & ಜನರಲ್ ಸ್ಟೋರ್ಸ್, ಶೇಷಾದ್ರಿಪುರಂ, ಬೆಂಗಳೂರು. 5) ಪ್ರಭು ಫಾರ್ಮಸಿ, ಕಾರ್ಕಳ. 6) ವೆಲ್ಕಟಿ ಸ್ಟೋರ್ಸ್, ಸುಳ್ಯ. 7) ಶ್ರೀಧರ್ ಭಟ್ ಬ್ರದರ್ಸ್, ಪುತ್ತೂರು. 8) ಪೈ ಸ್ಟೋರ್, ಪುತ್ತೂರು. 9) P. ಕೃಷ್ಣ ಪೈ & ಸನ್ಸ್, ಪಾಣೆಮಂಗಳೂರು. 10) ಶಾಂತಾವರ ವಾಸುದೇವ ಕಾಮತ್, ಬೆಳ್ತಂಗಡಿ 11) ಕೆ. ವೆಂಕಟೇಶ ನ್ಯಾಕ್, ಗುರುವಾಯನ ಕೆರೆ 12) T. ಗೋಪಾಲಕೃಷ್ಣ ಪೈ, ಬ್ರಹ್ಮಾವರ. 13) ಜನತಾ ಫಾರ್ಮಸಿ, ಕುಂದಾಪುರ. 14) H. ನರಸಿಂಹ ನ್ಯಾಕ್, ಶಂಕರನಾರಾಯಣ. 15) H. ಗಣಪಯ್ಯ ನರಸಿಂಹ ಕಾಮತ್, ಕುಂದಾಪುರ 16) ಕೃಷ್ಣಾ ಮೆಡಿಕಲ್ಸ್, ಕಾಸರಗೋಡು, 17) ರಾಮನಾಥ ಸ್ಟೋರ್ಸ್, ಕಾಂಞಂಗಾಡ್. 18) ಕೆನರಾ ಸ್ಟೋರ್ಸ್, ಮಡಿಕೇರಿ. 19) ಜ್ವರಹರಿ ಕಂಪೆನಿ, ಶಿಮೋಗಾ. 20) ಮೈಸೂರು ಮೆಡಿಕಲ್ ಸ್ಟೋರ್ಸ್, ಶಿಮೋಗಾ. 21) ಮೆಡಿಕಲ್ ಎಂಪೋರಿಯಂ, ಹಾಸನ. ಪೋಸ್ಟು ಮುಖಾಂತರ ಔಷಧಿ ಬೇಕಾದವರು ಔಷಧಿ ಕ್ರಯದ ಅರ್ಧಾಂಶ ಹಣವನ್ನು ಮನಿಯಾರ್ಡರ್ ಮೂಲಕ ರವಾನಿಸತಕ್ಕದ್ದು.

ಸರ್ವರಿಗೂ ಸ್ವಾತಂತ್ರ್ಯ ದಿನದ ಶುಭಾಶಯಗಳು!

ಉಡುಪಿಗೆ ಬಂದಾಗ—

ಶುಚಿ ರುಚಿಯಾದ ಕಾಫಿ ತಿಂಡಿಗಳಿಗೆ
ಉತ್ತಮ ಊಟ ಉಪಹಾರಗಳಿಗೆ
ಸುಖಕರವಾದ ವಸತಿ ಸೌಕರ್ಯಕ್ಕೆ

ಸುಖನಿವಾಸ

: : ಕೋರ್ಟ್ ರೋಡು, ಉಡುಪಿ, ದ. ಕನ್ನಡ : :

ಇದೇ ಸಪ್ಟೆಂಬರದಿಂದ ೪೦ನೇ ವರ್ಷಾರಂಭ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ವಾರಪತ್ರಿಕೆ
(1921ರಲ್ಲಿ ದಿ। ಎ. ಬಿ. ಶೆಟ್ಟರಿಂದ ಸ್ಥಾಪಿತವಾದುದು)
ವಾರ್ಷಿಕ ಚಂದಾ ರೂ. 6=25 (ಅಂಚವೆಚ್ಚ ಸಹಿತ)
6 ತಿಂಗಳಿಗೆ ,, ,, 3=50 (,,)
ಚಂದಾದಾರರಾಗಿ ಪ್ರೋತ್ಸಾಹಿಸಿರಿ
ಮೆನೇಜರ್ 'ನವಯುಗ' ಉಡುಪಿ

Read & Advertise in NAVAYUGA WEEKLY, UDIPI.

ಸರ್ವರಿಗೂ ಸ್ವಾತಂತ್ರ್ಯದಿನದ ಶುಭಾಶಯಗಳು.

ನಗರದ ಕೇಂದ್ರದಲ್ಲಿ ಸಕಲ ಸೌಕರ್ಯಗಳಿಂದೊಡಗೂಡಿರುವ ಅತ್ಯುತ್ಕೃಷ್ಟ ವಸತಿ ಗೃಹ—

ರೋಯಲ್ ಮಹಾಲ್

ಉಡುಪಿ.

ಹೆಚ್ಚಿನ ಕೊಠಡಿಗಳು ಸೇರಿಸಲ್ಪಟ್ಟು ವಿಸ್ತರಿಸಲ್ಪಟ್ಟ
ಪ್ರವಾಸಿಕರ ಆದರ್ಶ ನಿವಾಸ

ವ್ಯವಸ್ಥಾಪಕರು:— ಕೆ. ವೆಂಕಟ್ರಮಣ ಭಟ್.

ಒಂದೇ ಸಂಸ್ಥೆಯಿಂದ ಬಹುಮುಖ ಸೇವೆ

ಮನೋರಂಜನೆಗೆ ಉತ್ತಮ ಚಲಚಿತ್ರಗಳು!
ಮನಸ್ಸು ಮಿದುಳಿನ ವಿಕಾಸನೆಗೆ
ಉತ್ತಮ ಜಾಹೀರಾತಿಗೆ
ಉತ್ತಮ ಸಾಧನ—"ಪ್ರಕಾಶ ಪತ್ರಿಕೆ"

ಮದುವೆ, ಮುಂಜಿಗೆ ಥಿಯೇಟರಿನ ವ್ಯವಸ್ಥೆ,
ಸಭೆ ಸಮಾರಂಭಗಳಲ್ಲಿ ಧ್ವನಿವರ್ಧಕ ಯಂತ್ರ.
ವ್ಯಾಪಾರ ವಹಿವಾಟು ಸಮೃದ್ಧಿಗೆ ಸ್ಲೈಡ್ ಪ್ರದರ್ಶನ,
ಇತ್ಯಾದಿ ಸೇವಾ ಸೌಲಭ್ಯಗಳಿವೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್,

ಉಡುಪಿ, ದ. ಕ.

ಮಿಲಿಯಾಂತರ ಜನರ ಮೆಚ್ಚುಗೆಯ ಸೇವನೆಯಿಂದಲೇ

ದಕ್ಷಿಣ ಭಾರತದ ಗುಡಿಕೈಗಾರಿಕೆಗಳಲ್ಲಿ

ಪ್ರಥಮ ಸ್ಥಾನವನ್ನು ಪಡೆದಿರುವ

ಮಂಗಳೂರಿನ ಏಕಮೇವ ಸಂಸ್ಥೆ



DESIGN AND TRADE MARK REGISTERED

ಪಿ. ವಿ. ಎಸ್. ಬೀಡೀಸ್ (ಪ್ರೈವೇಟ್) ಲಿಮಿಟೆಡ್

ಪೋಸ್ಟ್ ಬಾಕ್ಸ್ ನಂ. 707

ಕೊಡಿಯಾಲಬೈಲ್

ಮಂಗಳೂರು - 3

ಫೋನ್ { ಆಫೀಸು: 83, 83A
ನಿವಾಸ: 593, 593A

ತಂತಿ: ಪುತ್ತುಬೀಡೀಸ್.

NAVAYUGA
18-8-1960

Regd. No. M. 3619
LICENCE No. 31
Licensed to Post without Prepayment.

ಸ್ಪ್ರಿಂಗುಗಳು ಮುರಿದು ಬೀಳುವುದನ್ನು ತಪ್ಪಿಸಿರಿ

ಕೆನರಾ ಸ್ಪ್ರಿಂಗುಗಳು ನಿಶ್ಚಿಂತೆಯಿಂದ ನಿಮ್ಮನ್ನೊಯ್ಯುವುವು.

ಬಾಳಿಕೆ ಮತ್ತು ಭರವಸೆ ಬೇಕಾದಲ್ಲಿ ಅವೆರಡೂ ಈ ಸ್ಪ್ರಿಂಗಿನಲ್ಲಿವೆ.

ತಯಾರಿಕೆಯ ಪ್ರತಿ ಮಟ್ಟದಲ್ಲೂ ಗುಣ ಪರೀಕ್ಷಿಸಲಾಗಿದ್ದು ಅಮೇರಿಕದ ಅತ್ಯುತ್ತಮ ಮಟ್ಟದಂತೆ ಸ್ಪ್ರಿಂಗಿನ ಪ್ರತಿ ಹಾಳೆಗಳನ್ನು ದೀರ್ಘಕಾಲ ಬಾಳುವಿಕೆಯ ಬಗ್ಗೆ ಆಧುನಿಕ ವಿಜ್ಞಾನ ರೀತ್ಯಾ ಉಷ್ಣಶಕ್ತಿ ಪ್ರಯೋಗಿಸಲ್ಪಟ್ಟಿವೆ.

ತಯಾರಕರು:

ದಿ ಕೆನರಾ ವರ್ಕ್‌ಶೋಪ್ಸ್ ಲಿಮಿಟೆಡ್

ಮಂಗಳೂರು-3



"ಭಾರತ ಸ್ವಾತಂತ್ರ್ಯೋತ್ಸವ"ದ ಇಂದಿನ ಶುಭದಿನದಲ್ಲಿ ದೇಶದ ಸರ್ವತೋಮುಖ ಅಭಿವೃದ್ಧಿಯಲ್ಲಿ ನಮ್ಮ ಅಂಶದಾನವನ್ನು ಸಲ್ಲಿಸುವೆವೆಂಬ ಪ್ರತಿಜ್ಞೆಯ ನವೀಕರಣದಿಂದ, ದೇಶದ ಜನತೆಗೆ ಮುಂದಕ್ಕೂ ಹೆಚ್ಚಿನ ಸೇವೆ ಸಲ್ಲಿಸುವೆವೆಂದು ಸರ್ವರಿಗೂ ಹೃತ್ಪೂರ್ವಕ ಶುಭ-ಸಂತೋಷವನ್ನು ಬಯಸುವೆವು.

ಫೋನ್: 3. ಕಾರ್ಕಳ.　　391. ಮಂಗಳೂರು.

ಭಾರತ ಬೀಡಿ ವರ್ಕ್ಸ್ (ರಿಜಿಸ್ಟರ್ಡ್)

ಪೋಸ್ಟ ಬೋಕ್ಸ್ ನಂ. 30.

ಕಾರ್ಕಳ, ದ. ಕ.

Edited, Printed & Published by K. H. Shetty at the Navayuga Press, Udipi, S. India.

ಸೆಪ್ಟೆಂಬರದಿಂದ ೪೦ನೇ ವರ್ಷಾರಂಭ

ನವಯುಗ

ವಾ. ಚಂದಾ ರೂ. 6—25] ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ [ಬೆಲೆ: 13 ನ. ಪೈಸೆ.

ವರುಷ ೩೯. ವಾರ ೫೦. 25-8-1960 Vol. 39. No. 50.

ಪ್ರಚಲಿತ ಪ್ರಸಂಗ

ಉಚ್ಚ ಶಿಕ್ಷಣ ಪ್ರವೇಶಕ್ಕೆ ಮಾನದಂಡ

ವಿಶ್ವವಿದ್ಯಾಲಯ ಪ್ರವೇಶೇಚ್ಛುಗಳು ಅತ್ಯಧಿಕವಾಗುತ್ತಿರುವುದರಿಂದ, ಇಲ್ಲಿ ಮಿತಿಯನ್ನು ಹೇರಿ ಪ್ರತಿಭಾ ಸಂಪನ್ನ ಮತ್ತು ಸುಯೋಗ್ಯ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶ ನೀಡುವ ಕುರಿತು ವಿಚಾರ ವಿಮರ್ಶೆಗೆ ಈಗ ಮರಳಿ ಬಲ ಬಂದಿದೆ. ಆದರೆ, ಪ್ರಜಾಸತ್ತೆಯಲ್ಲಿ ಇದೆಷ್ಟು ನ್ಯಾಯಸಮ್ಮತವೆಂಬುದನ್ನೂ ಯೋಚಿಸಬೇಕಷ್ಟೆ?

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ಮತ್ತು ಅನಿವಾರ್ಯವಾಗಿ ನೀಡುವ ದೃಢ ನಿರ್ಧಾರವನ್ನು ಭಾರತ ಸರಕಾರವು ಮಾಡಿರುವುದನ್ನು ಪ್ರತ್ಯೇಕ ನಾಗರಿಕನೂ ಅವಶ್ಯ ಅಭಿನಂದಿಸಲೇ ಬೇಕಾಗಿದೆ. ಇದನ್ನು ಕಾರ್ಯಗತಗೊಳಿಸುವಲ್ಲಿ ಮುಂಬರುವ ಅಡಚಣೆಗಳೆಲ್ಲವನ್ನು ಸೂಕ್ತ ವಿಧಾನದಲ್ಲಿ ಪರಿಹರಿಸಿ ಯೋಜನೆಯನ್ನು ಕ್ರಮೇಣ ಯಶಸ್ವಿಗೊಳಿಸುವುದರಲ್ಲಿ ಸರಕಾರವು ತತ್ಪರವಾಗುತ್ತಿದೆ. ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟವನ್ನು ನೀಡುವುದು, ಯಾವುದೇ ಜಾತಿ ಮತ ಧರ್ಮಗಳ ಭೇದವಿಲ್ಲದೆ ಎಲ್ಲಾ ಪ್ರತಿಭಾವಂತ ಮತ್ತು ಯೋಗ್ಯ ವಿದ್ಯಾರ್ಥಿಗಳಿಗೆ ಛಾತ್ರವೃತ್ತಿಯನ್ನು ನೀಡುವುದು ಮೊದಲಾದ ಕೆಲವೊಂದು ಕಾರ್ಯಕ್ರಮವನ್ನು ವ್ಯವಹೃತಗೊಳಿಸುವ ಆಲೋಚನೆ ಮಾಡುತ್ತಿದೆ. ಈ ದಿಸೆಯಲ್ಲಿ ಕೆಲವೊಂದು ರಾಜ್ಯ ಸರಕಾರಗಳು ಕಾರ್ಯಪ್ರವೃತ್ತವಾಗಿ ತುಸು ಮಟ್ಟಿಗೆ ಶ್ರೇಯ ಗಳಿಸಿವೆ. ಮದ್ರಾಸ ರಾಜ್ಯದ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಮಧ್ಯಾಹ್ನ ಭೋಜನ ಸೌಲಭ್ಯವನ್ನು ಒದಗಿಸುವ ಕ್ರಮ ಈಗ ಜ್ಯಾರಿಗೆ ಬರುವ ಸಲ್ಲಕ್ಷಣಗಳು ಗೋಚರವಾಗುತ್ತಿವೆ. ವಿದ್ಯಾರ್ಥಿಗಳ ಉಪಯೋಗಕ್ಕೆ ಅವಶ್ಯಕವಾದ ಪುಸ್ತಕ, ಅಂಗಿ ವಸ್ತ್ರಗಳನ್ನೂ ಶಾಲೆಗೆ ಬೇಕಾದ ಸಲಕರಣೆಗಳನ್ನೂ ಕೊಂಡುಕೊಳ್ಳಲು ಆ ರಾಜ್ಯದ ಆದ್ಯಂತ ಸುಮಾರು ಆರು ಕೋಟಿ ರೂಪಾಯಿಗಳನ್ನು ಕಲೆ ಹಾಕುವ ಕೆಲಸವೂ ನಡೆದಿದೆಯೆಂದು ತಿಳಿಯುತ್ತದೆ. ಮೈಸೂರು ರಾಜ್ಯದಲ್ಲಿಯೂ ವಿರಳವಾಗಿ, ಅತಿ ನಿಧಾನವಾಗಿ ಕೆಲವೊಂದು ಶಾಲೆಗಳಲ್ಲಿ ಮಧ್ಯಾಹ್ನದೂಟದ ವ್ಯವಸ್ಥೆಯಾಗಿದೆ. ಮುಂದಿನ ವರ್ಷಗಳಲ್ಲಿ ಸಾರ್ವಜನಿಕರ ಸಹಾಯವು ಧಾರಾಳ ಪ್ರಮಾಣದಲ್ಲಿ ದೊರೆಯಿತೆಂದರೆ, ಈ ಯೋಜನೆಯನ್ನು ಇನ್ನೂ ವಿಸ್ತೃತವಾಗಿ ಹರಿಸುವುದು ಸಾಧ್ಯವಾಗಬಹುದು.

ರಾಜ್ಯ ಹಾಗೂ ಕೇಂದ್ರ ಸರಕಾರಗಳು ತಮ್ಮ ಆದಾಯದ ಬಹ್ವಂಶವನ್ನು ವಿದ್ಯಾಪ್ರಸಾರಕ್ಕಾಗಿಯೇ ವಿನಿಯೋಗಿಸುವುದು ಈಗ್ಗೆ ಕೆಲವರ್ಷಗಳಿಂದ ನಡೆದು ಬಂದ ದಾರಿಯಾಗಿದೆ. ಸ್ವತಂತ್ರ ಪ್ರಜಾಸತ್ತಾತ್ಮಕ ರಾಷ್ಟ್ರವೊಂದರಲ್ಲಿ ಎಲ್ಲ ನಾಗರಿಕರೂ ಅಕ್ಷರಸ್ಥರಾಗುವುದು ಅಪೇಕ್ಷಣೀಯ ಮಾತ್ರವಲ್ಲ ಅತ್ಯಂತಾವಶ್ಯಕವೂ ಹೌದು. ಆದುದರಿಂದ ಈ ಬಗ್ಗೆ ಇನ್ನೂ ಹೆಚ್ಚಿನ ಲಕ್ಷ್ಯ ಹರಿಸುವುದು ಅಗತ್ಯವೇ. ಆದರೂ ಇಂದು ರಾಷ್ಟ್ರದ ಮುಂದೆ ಮತ್ತೊಂದು ಮಹಾ ಸಮಸ್ಯೆ ಪರ್ವತಾಕಾರದಲ್ಲಿ ಬಂದು ನಿಂತಿದೆ. ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಬಯಸುವ ವಿದ್ಯಾರ್ಥಿಗಳ ಸಂಖ್ಯೆಯು ದಿನೇ ದಿನೇ ಏರುತ್ತ ಬರುತ್ತಿದೆ. ಅಧಿಕಾಧಿಕ ಮಕ್ಕಳು ವಿದ್ಯಾದಾನ ಪಡೆಯುತ್ತಿರುವಂತೆಯೇ ಇಂತಹ ಅಭ್ಯರ್ಥಿಗಳೂ ಹೆಚ್ಚುವುದು ಸ್ವಾಭಾವಿಕ. ಸರಕಾರವಾದರೂ ಇಂತಹ ಉಚ್ಚ ಮಟ್ಟದ ಶಿಕ್ಷಣವನ್ನು ನೀಡಲು ತುಂಬ ಹಣ ಸುರಿಯುತ್ತಿದೆ. ಆದರೂ ಇದಕ್ಕಾಗಿ ಮೀಸಲಿಡುವ ಹಣವೆಂದರೆ ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆಯಂತೆಯೇ ಆಗಿದೆ. ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ದಟ್ಟಣೆಯು ಇದೇ ರೀತಿಯಾಗಿ ಬೆಳೆಯುತ್ತ ಬಂದರೆ, ಅದರಿಂದ ವಿಶ್ವವಿದ್ಯಾಲಯ ಮುಖ್ಯವಾಗಿ ಅವಕ್ಕೆ ಆರ್ಥಿಕ ನೆರವು ನೀಡುವ ರಾಜ್ಯ—ಕೇಂದ್ರ ಸರಕಾರಗಳು ಮುಂದೆ ತುಂಬ ತಲೆಕೆಡಿಸಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದಾಗಿ ವಿಶ್ವವಿದ್ಯಾಲಯ ಶಿಕ್ಷಣ ಪ್ರವೇಶದ ಬಗ್ಗೆ ಮಿತಿ ಹೇರುವ ಆಲೋಚನೆಯನ್ನೂ ಭಾರತ ಸರಕಾರದ ವಿದ್ಯಾಮಂತ್ರಿ ಡಾ| ಶ್ರೀಮಾಲಿಯವರು ಇತ್ತೀಚೆಗೆ ಹೊರಗೆಡಹಿದ್ದಾರೆ.



ಚಿಲಿಯಲ್ಲಿ ಇತ್ತೀಚೆಗೆ ನಡೆದ ಭೂಕಂಪ ಪೀಡಿತನೊಬ್ಬನಿಗೆ ಅಮೆರಿಕೆಯ ಸೈನಿಕ ವೈದ್ಯಕೀಯ ದಳದವರು ಚಿಕಿತ್ಸೆ ನಡೆಸುತ್ತಿದ್ದಾರೆ.

ಅಧಿಕ ಪ್ರಮಾಣದಲ್ಲಿ ವಿಸ್ತರಿಸಿದ ಉಚ್ಚ ಶಿಕ್ಷಣದ ಬಾಗಿಲನ್ನು ವಿಶಿಷ್ಟ ಯೋಗ್ಯತೆಯಿರುವವರಿಗೆ ಮಾತ್ರ ತೆರೆದಿರಬೇಕು ಎಂದು ವಿಶ್ವವಿದ್ಯಾಲಯ ಸಹಾಯ ಧನಾಯೋಗದ ಅಧ್ಯಕ್ಷ ಡಾ| ಸಿ. ಡಿ. ದೇಶಮುಖರೂ ಹಲವಾರು ಬಾರಿ ಉದ್ಗರಿಸಿದ್ದಾರೆ. ಅರ್ಹತಾ ಸಂಪನ್ನರಿಗೆ ಮತ್ತು ತಾವು ಪಡೆದ ಉಚ್ಚ ಶಿಕ್ಷಣದ ಲಾಭವನ್ನು ದೇಶಕ್ಕೆ ಉಣಿಸಬಲ್ಲವರಿಗೆ ಮಾತ್ರ ಹೆಚ್ಚಿನ ಶಿಕ್ಷಣವನ್ನು ಪಡೆಯುವ ಅವಕಾಶ ಬೇಕು ಎಂದವರು ಒಂದಲ್ಲ ಹಲವು ಬಾರಿ ಉಚ್ಚರಿಸಿದ್ದಾರೆ. ವಿಶ್ವವಿದ್ಯಾಲಯದ ಶೈಕ್ಷಣಿಕ ಸ್ತರ ಹಾಗೂ ಗೌರವವನ್ನು ರಕ್ಷಿಸಿಕೊಂಡು ಬರುವುದಕ್ಕೂ ಇದರಿಂದ ಸಹಾಯವಾಗುವುದು. ಈಗ, ಇದೇ ಅಭಿಪ್ರಾಯ ಸರಕಾರೀ ವಲಯದಿಂದಲೂ ಹೊರಬಿದ್ದುದು ಆಶ್ಚರ್ಯವೆನಿಸುವುದಿಲ್ಲ. ಪ್ರಧಾನಿ ನೆಹರು ಕೂಡ ಈ ಅಭಿಪ್ರಾಯವನ್ನು ಮನ್ನಿಸಿದ್ದಾರೆ. ಆದರೆ, ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಕ್ಕೆ ಮಿತಿಯನ್ನು ಹೇರುವಾಗ, ಉಳಿದವರಿಗೆ ತಾಂತ್ರಿಕವೇ ಮೊದಲಾದ ಇತರ ಶಿಕ್ಷಣವನ್ನು ಪಡೆಯುವ ಸೌಲಭ್ಯವನ್ನು ಒದಗಿಸಬೇಕೆಂದು ಶ್ರೀ ನೆಹರುರವರ ಅಂಬೋಣವಾಗಿದೆ. ಸೋವಿಯತ್ ರಶ್ಯದಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರವೇಶಪೂರ್ವದಲ್ಲಿ ಅಭ್ಯರ್ಥಿಗಳಿಗೆ ಕ್ಲಿಷ್ಟಕರವಾದ ಪರೀಕ್ಷೆಯೊಂದಿದೆಯೆಂದೂ ಇವುಗಳಲ್ಲಿ ಉತ್ತೀರ್ಣರಾದವರು ಮಾತ್ರ ಕಾಲೇಜುಗಳಲ್ಲಿ ಪ್ರವೇಶ ದೊರಕಿಸಿಕೊಳ್ಳುವರೆಂದೂ ತಿಳಿದು ಬರುತ್ತದೆ. ಶೈಕ್ಷಣಿಕ ಸ್ತರವು ದಿನೇದಿನೇ ಪತನಗೊಳ್ಳುತ್ತಿರುವುದೆಂಬ ದೂರಿಗೆ ಗುರಿಯಾದ ಭಾರತದಲ್ಲೂ ಇದೇ ಮಾದರಿಯ ಪರೀಕ್ಷೆಯೊಂದನ್ನು ತೊಡಗಿಸಿದರೆ ನಿಜವಾಗಿಯೂ ಅಭ್ಯರ್ಥಿಗಳ ಸಂದಣಿ ಬಹು ಕುಂದಿ ಹೋಗುವುದು. ಆಗ, ವಿಶ್ವವಿದ್ಯಾಲಯ ಪ್ರತಿಭಾಸಂಪನ್ನರಾದವರು ಮಾತ್ರ ಪ್ರವೇಶ ಪಡೆಯುವುದರಿಂದ ಉತ್ತಮ ಸ್ತರವನ್ನು ಉಳಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಈಗಿನಂತೆ ಎಲ್ಲರೂ ಕಾಲೇಜು ಸೇರಿ ಅಲ್ಲಿ ನೀರಿನಂತೆ ಹಣಸುರಿದು ಅರ್ಧದಲ್ಲೇ ವಿದ್ಯಾಭ್ಯಾಸವನ್ನು ನಿಲ್ಲಿಸಿಬಿಡುವಂತಹ ಪ್ರಮೇಯ ಉಂಟಾಗಲಾರದು. ಇದರಿಂದ, ದೇಶದ ಸಂಪತ್ತು ಮತ್ತು ಶಕ್ತಿಗಳ ದುರುಪಯೋಗ ನಿಲ್ಲುವುದು; ಜತೆಗೆ ಅಂತಹವು ದುಡಿಯಲು ತೊಡಗಿದರೆಂದರೆ, ರಾಷ್ಟ್ರದ ಸಂಪತ್ತೂ ಹೆಚ್ಚುವುದು. ಆಗ ರಾಷ್ಟ್ರದ ಹಿತದೃಷ್ಟಿಯಿಂದಲೂ ಈ ರೀತಿಯಾಗಿ ಪ್ರವೇಶಕ್ಕೆ ನಿರ್ಬಂಧವನ್ನು ಹೇರುವುದು ಸರ್ವಥಾ ಅನುಚಿತವೆನ್ನುವಂತಿಲ್ಲ.

ಆದರೆ, ಒಂದು ಪ್ರಶ್ನೆ ಅವಶ್ಯ ಏಳುತ್ತದೆ. ಸ್ವತಂತ್ರ ಪ್ರಜಾಸತ್ತಾತ್ಮಕ ರಾ

(೧೨ನೇ ಪುಟ ನೋಡಿರಿ)

ಕಥಾವಿಹಾರ

ಬಯಸಿದ ಸೌಂದರ್ಯ ವಂಚಿಸಿತು

ಸೌಂದರ್ಯಕ್ಕೆ ಮಾರುಹೋದ ಪದ್ಮಳನ್ನು ಅದೇ ಸೌಂದರ್ಯವು ವಂಚಿಸಿಬಿಟ್ಟಿತು. ತನ್ನ ಮುಗ್ಧ ಮನಸ್ಸು ತಿಳಿಯದೆ ಮಾಡಿದ ಈ ಅಪರಾಧದಿಂದ ಆಕೆ ಆಜೀವ ಮರುಗುವಂತಾಯಿತು.

ಶ್ರೀ ಹೇಮನಾಥ ಶೆಟ್ಟಿ.

"ಅಪ್ಪಾ......'

'ಡೆಕ್ಕನ್ ಹೆರಾಲ್ಡ್' ಪತ್ರಿಕೆಯನ್ನೋದುವುದರಲ್ಲಿ ಮಗ್ನರಾಗಿದ್ದ ಭಾಸ್ಕರ ರಾಯರು ತಲೆಯೆತ್ತಿ ನೋಡಿದರು. ಇದಿರಿನಲ್ಲಿ ದೈನ್ಯದ ಮೂರ್ತಿಯಂತೆ ನಿಂತಿದ್ದ ತಮ್ಮ ಮಗಳಾದ ಪದ್ಮಳನ್ನು ಕಂಡು ಅವಾಕ್ಕಾದರು! ಏಕೆಂದರೆ ಈ ವರೆಗೆ ಹೀಗೆ ಆವಳು ಅವರ ರೂಮಿಗೆ ಬಂದಿರಲಿಲ್ಲ. ಏನೋ ಗಹನವಾದ ವಿಚಾರವಿರಬೇಕೆಂದು ಭಾವಿಸಿದ ರಾಯರು,

"ಏನು ಪದ್ಮಾ? ಏಕೆ ಬಂದೆ?" ಎಂದು ಕೇಳಿದರು. ಪದ್ಮಾ ಒಂದುಕ್ಷಣ ತಡೆದಳು. ಹೇಳಲೇ, ಬಿಡಲೇ ಎಂದವಳ ಮನಸ್ಸು ಹೊಯ್ದಾಡತೊಡಗಿತು. ಆದರೂ ಮರುಕ್ಷಣ ಸಾವರಿಸಿಕೊಂಡು,

"ನೀವು ನನ್ನ ಮದುವೆಯ ಪ್ರಯತ್ನದಲ್ಲಿದ್ದೀರೆಂದು ನಾನು ಬಲ್ಲೆ." ಎಂದಳು.

"ಹರಿ. ನೀನು ತಿಳಿದಿರಬೇಕಾದುದು ಸಹಜವೇ ಆಗಿದೆ."

"ಇದರಲ್ಲಿ ನನ್ನದೊಂದು ಕೋರಿಕೆಯನ್ನು ನೆರವೇರಿಸಿಕೊಡುವಿರಾ?"

ರಾಯರ ಕುತೂಹಲ ಬೆಳೆಯಿತು.

"ಯಾವ ಕೋರಿಕೆ?"

"ನೀವು ನನಗಾಗಿ ಆರಿಸುವ ಗಂಡು ನನಗೆ ಒಪ್ಪಿಗೆಯಾಗಬೇಕು. ಈ ವಿಷಯದಲ್ಲಿ ಸ್ವಾತಂತ್ರ್ಯವೀಯುವಿರಾ?"

—ಎಂದು ಪದ್ಮ ಆಶಾದೃಷ್ಟಿಯಿಂದ ತಂದೆಯನ್ನು ನೋಡತೊಡಗಿದಳು.

ಈಗ ಮಾತ್ರ ರಾಯರು ಕೊಂಚ ವಿಚಾರ ಮಾಡಬೇಕಾಯಿತು. ಪದ್ಮಳೇಕೆ ಈ ಬೇಡಿಕೆ ಮುಂದುವರಿಸಿದ್ದಾಳೆ? ಆಧುನಿಕ ಕಾಲದಲ್ಲಿ ಯುವತಿಯರು ಮದುವೆಯಾದ ನಂತರ ಗಂಡನನ್ನು ಪ್ರೀತಿಸುವ ಬದಲು, ಮೊದಲೇ ಪ್ರೀತಿಸಿದವರನ್ನು ವಿವಾಹವಾಗಲು ತವಕಪಡುತ್ತಾರೆ. ಹಾಗೇನಾದರೂ ಪದ್ಮಳು ಯಾರನ್ನಾದರೂ ಪ್ರೇಮಿಸಿ, ಸ್ವಾತಂತ್ರ್ಯ ಬೇಕೆಂಬ ಈ ಆಟ ಹೂಡಿರುವಳೋ ಎಂದು ಸಂದೇಹಿಸಿದ ರಾಯರು, ಅದನ್ನು ಪರಿಹರಿಸುವ ಸಲುವಾಗಿ.

"ಈ ಸ್ವಾತಂತ್ರ್ಯದ ಉಪಯೋಗವನ್ನು ಇಷ್ಟರ ವರೆಗೆ ಮಾಡಿಕೊಂಡಿಲ್ಲ ತಾನೇ?" ಎಂದು ಕೇಳಿದರು.

ಪದ್ಮಳು ಕ್ಷಣ ಮಾತ್ರದಲ್ಲಿ ರಾಯರ ಮನಸ್ಸಿನಲ್ಲಿ ಇದ್ದುದನ್ನು ಗ್ರಹಿಸಿಕೊಂಡಳು.

"ಅಪ್ಪಾ, ನಿಮ್ಮ ಮಾತಿನ ಮರ್ಮವನ್ನರಿತೆ. ಆ ರೀತಿ ಎಂದಿಗೂ ನಾನು ಕಾರ್ಯವೆಸಗಿಲ್ಲ. ನನ್ನ ಆಶಯವೇ ಬೇರೆಯಾಗಿತ್ತು. ವಯಸ್ಸು ಹಾಗೂ ರೂಪದಲ್ಲಿ ನನಗೆ ಹೊಂದಿಕೆಯಾಗುವವರನ್ನೇ ಕೈಹಿಡಿಯಬೇಕೆಂಬ ಬಯಕೆಯಿಂದ ನಾನು ಹಾಗೆ ಕೇಳಿದೆ."

—ಎಂದು ಸತ್ಯ ಸಂಗತಿಯನ್ನರುಹಿದಳು.

ಪದ್ಮಳ ಈ ನುಡಿಗಳಲ್ಲಿ ಸತ್ಯಾಂಶವು ಬಹಳವಿದೆಯೆಂದು ರಾಯರಿಗೆ ಹೊಳೆಯದಿರಲಿಲ್ಲ. ಎಷ್ಟೋ ತರುಣಿಯರು ತಮ್ಮ ಹಿರಿಯರ ಒತ್ತಾಯಕ್ಕೆ ಬಲಿಯಾಗಿ ಪ್ರಾಯ ಸಂದ ವೃದ್ಧರೊಡನೆ ಅಥವಾ ತಾವು ಮೆಚ್ಚದವರೊಡನೆ ವಿವಾಹವಾಗಿ, ಬಾಳಿನಲ್ಲಿ ಅನಂತ ದುಃಖವನ್ನನುಭವಿಸಿದ ಕಥೆಗಳನ್ನು ರಾಯರು ಕೇಳಿಬಲ್ಲರು. ಆದರೂ ಇನ್ನೊಂದು ಮಾತನ್ನಾಡಿ ಅವಳ ಹೃದಯವನ್ನು ಪರೀಕ್ಷಿಸಬೇಕೆಂದು ಬಗೆದು, ನಗುತ್ತಾ,

"ಅತಿ ರೂಪವಂತನಾದ ದರಿದ್ರನೋರ್ವನನ್ನು ಮದುವೆಯಾಗುವೆಯಾ?" ಎಂದರು.

"ನಿಶ್ಚಯವಾಗಿಯೂ......"

—ನಿಸ್ಸಂಕೋಚದಿಂದ ಪದ್ಮಳು ಉತ್ತರಿಸಿದಳು.

ರಾಯರ ಬಾಯಿಯಿಂದ ಮೇಲಿನ ಮಾತು ಹೊರಟಿದ್ದರೂ, ತಮ್ಮ ಮಗಳನ್ನು ಕಡು ಬಡವನಿಗೆ ಕೊಡಲು ಎಂದಿಗೂ ಅವರೊಪ್ಪುತ್ತಿರಲಿಲ್ಲ. ತಮ್ಮ ಮುದ್ದಿನ ಏಕಮಾತ್ರ ಮಗಳನ್ನು ಅನುಕೂಲವಾದ ಕಡೆಗೆ ಕೊಡಬೇಕೆಂಬುದು ಅವರ ಉತ್ಕಟೇಚ್ಛೆಯಾಗಿತ್ತು.

ಇನ್ನೂ ಒಂದೆರಡು ವಿವೇಕದ ಮಾತುಗಳನ್ನು ಮಗಳಿಗೆ ಆಡಿ ತೋರಿಸಬೇಕೆಂದು ಇಚ್ಛಿಸಿದ ರಾಯರು,

"ಕೇವಲ ಬಾಹ್ಯ ಸೌಂದರ್ಯವೇ ಒಬ್ಬನ ಯೋಗ್ಯತೆಯನ್ನಳೆಯಬಲ್ಲ ಸಾಧನವಲ್ಲ ಪದ್ಮಾ... ಒಬ್ಬನ ವ್ಯಕ್ತಿತ್ವವು ಪರಿಪೂರ್ಣವಾಗಬೇಕಾದರೆ ಬೇರೆ ಕೆಲವು ಗುಣಗಳೂ ಅವನಲ್ಲಿ ಹಾಸು ಹೊಕ್ಕಾಗಿರಬೇಕು" ಎಂದು ನುಡಿದರು.

"ಇದನ್ನು ಅಲ್ಲವೆನ್ನಲಾರೆ, ಅಪ್ಪಾ... ಆದರೂ ಒಬ್ಬನ ರೂಪವು ಅವನ ವ್ಯಕ್ತಿತ್ವವನ್ನು ಎತ್ತಿ ತೋರಿಸಲೂ, ಇತರರ ಆದರಾಭಿಮಾನಕ್ಕೆ ಪಾತ್ರವಾಗಲೂ ಸಹಕಾರಿಯಾಗಿದೆ ಎಂದು ನಾನು ದೃಢವಾಗಿ ನಂಬಿದ್ದೇನೆ."

"ನಿನ್ನ ಆ ನಂಬಿಕೆ ಎಂದಿಗೂ ಹುಸಿಯಾಗದಿರಲಿ"—ಎಂದು ರಾಯರು ಹಾರೈಸಿದರು. ಮಗಳ ಬೇಡಿಕೆಯನ್ನು ಮನ್ನಿಸುವ ಭರವಸೆಯಿತ್ತರು.

ಪದ್ಮಳ ಮನಸ್ಸು ಹಗುರವಾಯಿತು ಗೆಲವಿನ ಭಾವದಿಂದಲೇ ಅವಳು ಅಲ್ಲಿಂದ ತೆರಳಿದಳು.......

ಪದ್ಮಳೇನೂ ಹೇಳಿಕೊಳ್ಳುವಷ್ಟು ಸೌಂದರ್ಯವತಿಯಾಗಿರಲಿಲ್ಲ. ಆದರೂ ಅವಳ ಚೆಲುವು ಸಾಧಾರಣಮಟ್ಟಿಗೆ ಆಕರ್ಷಣೀಯವಾಗಿತ್ತು. ಅದೇಕೋ ಅವಳಲ್ಲಿ ವಿಲಕ್ಷಣವಾದ ಬಯಕೆಯೊಂದು ಅರಳಿನಿಂತಿತ್ತು. ಅತ್ಯಂತ ರೂಪವಂತನಾದವನೇ ತನ್ನ ಪತಿಯಾಗಬೇಕೆಂದು ಆಶಿಸಿದ್ದಳು. ಪತಿಯ ಸೌಂದರ್ಯವು ಸಮಾಜದಲ್ಲಿ ಎದ್ದು ತೋರುವಂತಿದ್ದರೆ ತನ್ನ ಸ್ಥಾನಮಾನವು ಒಂದು ಅಂತಸ್ತು ಮೇಲೇರುವುದೆಂದೇ ಅವಳ ಭಾವನೆ. ಇದೇ ಕಾರಣದಿಂದ ಅವಳು ತಂದೆಯೊಡನೆ ತನ್ನ ಬೇಡಿಕೆಯನ್ನು ಮುಂದಿರಿಸಿದ್ದಳು.

ಪದ್ಮಳ ಮನೋಭಾವ ಹೀಗಿದ್ದರೆ, ಅವಳ ತಾಯಿ ಸೀತಮ್ಮನವರ ಎಣಿಕೆ ಇನ್ನೊಂದು ದಾರಿ ಹಿಡಿದಿತ್ತು! ತನ್ನ ಅಳಿಯನು ಭಾರೀ ಶ್ರೀಮಂತನಾಗಬೇಕೆಂದು ಬಯಸಿದ್ದರು. ಪದ್ಮಳು ತುಂಬುವ ಮನೆಯಲ್ಲಿ ಸಂಪತ್ತು ತುಂಬಿ ತುಳುಕಾಡುತ್ತಿರುವುದನ್ನು ಕಣ್ಣಾರೆ ಕಾಣುವ ಹಿರಿಯಾಸೆ ಅವರದು

ಭಾಸ್ಕರ ರಾಯರು ಮಾತ್ರ ತಾಯಿ-ಮಗಳಿಗಿಂತ ಭಿನ್ನವಾದ ಯೋಚನೆಯಲ್ಲಿಯೇ ಇದ್ದರು. ತಮ್ಮ ಅಳಿಯನಾಗುವವನು ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿರಬೇಕು; ಅವನಿಗೊಂದು ಉನ್ನತ ಸ್ಥಾನವಿರಬೇಕು ಎಂದವರ ಇಚ್ಛೆಯಾಗಿತ್ತು.

ಹೀಗೆ, ಮೂವರ ಮನೋರಥವನ್ನೂ ಈಡೇರಿಸಿಕೊಡಬಲ್ಲ ಗಂಡನನ್ನು ಹುಡುಕುವ ಕಾರ್ಯವನ್ನು ರಾಯರು ಕೈಗೊಂಡರು...ತಮ್ಮ ಬಂಧು ಮಿತ್ರರೆಲ್ಲರಿಗೂ ಈ ವಿಚಾರ ತಿಳಿಸಿ ಅವರ ಸಹಾಯ ಕೋರಿದರು.

...ಅನತಿ ಕಾಲದಲ್ಲಿಯೇ ಇದು ಬಹು ತೊಡಕಿನ ಕೆಲಸವೆಂಬುದರ ಅರಿವು ಅವರಿಗಾಗ ತೊಡಗಿತು.

ವರದಕ್ಷಿಣೆಯ ಮಟ್ಟಿಗೆ ರಾಯರು ಹಿಂಜರಿಯುವ ಪ್ರಶ್ನೆಯಿದ್ದಿಲ್ಲ. ಏಕೆಂದರೆ ಮಗಳ ಮದುವೆಗೆಂದೇ ಬೇಕಾಗುವಷ್ಟು ಹಣವನ್ನು ಬೇಂಕಿನಲ್ಲಿ ಶೇಖರಿಸಿ ಇಟ್ಟಿದ್ದರು. ಆದರೆ ಗಂಡು ಸಿಗಬೇಕಲ್ಲ? ಅದು ಕೂಡಾ ಮೂವರಿಗೂ ಒಪ್ಪಿಗೆಯಾಗಬೇಕಲ್ಲ?

ದಿನಗಳು ಉರುಳುತ್ತಿದ್ದುವು......

....ಆ ದಿನ ಸಂಜೆ ರಾಯರು ಮನೆಗೆ ಬಂದಾಗ ಅವರ ಮುಖ ಪ್ರಸನ್ನವಾಗಿತ್ತು. ಬಂದವರೇ ಸೀತಮ್ಮನನ್ನು ಕರೆದು,

"ನಾಳೆ ನೆರೆಯೂರ ನಾರ್ಣಪ್ಪಯ್ಯನವರು ತಮ್ಮ ಮಗನೊಂದಿಗೆ ಪದ್ಮಳನ್ನು ನೋಡಲು ಬರುವರು" ಎಂದರು. ಸೀತಮ್ಮನವರ ಮುಖ ಸಂತೋಷದಿಂದ ಅರಳಿತು. ತಮ್ಮ ಬೀಗರಾಗುವವರ ಸ್ಥಿತಿಗತಿಗಳನ್ನು ರಾಯರೊಡನೆ ವಿಚಾರಿಸಿದರು.

"ನಾರ್ಣಪ್ಪಯ್ಯನವರು ದೊಡ್ಡ ಜವಳಿ ಅಂಗಡಿಯೊಂದರ ಮಾಲೀಕರು. ರಮೇಶ ಅವರ ಹಿರಿಯ ಮಗ. ಮೆಟ್ರಿಕ್ಯುಲೇಶನ್ ಪಾಸು ಮಾಡಿದ್ದಾನೆ. ನೋಡಲು ಲಕ್ಷಣವಾಗಿದ್ದಾನೆ. ತಂದೆಯ ವ್ಯವಹಾರದಲ್ಲಿ ಸಹಾಯ ಮಾಡುತ್ತಿದ್ದಾನೆ. ವ್ಯಾಪಾರ ಒಳ್ಳೆಯ ಸ್ಥಿತಿಯಲ್ಲಿದೆ. ಆ ಮನೆಯಲ್ಲಿ ಲಕ್ಷ್ಮಿಯೇ ತಾಂಡವವಾಡುತ್ತಿದ್ದಾಳೆ..."

—ಎಂದು ರಾಯರು ವಿವರಿಸಿದಾಗ ಸೀತಮ್ಮನವರಿಗೆ ಹಿಡಿಸಲಾರದಷ್ಟು ಹಿಗ್ಗುಂಟಾಯಿತು. ಅವರ ಸಂಭ್ರಮವನ್ನು ಹೇಳತೀರದು. ಈ ವಿಚಾರವನ್ನು ಅವರು ಪದ್ಮಳಿಗೆ ತಿಳಿಸಿ ಭಾವೀ ಬೀಗರ ಉಪಚಾರದ ಸಿದ್ಧತೆಗಾರಂಭಿಸಿದರು.

ಪದ್ಮಳು ವಿಷಯವರಿತು ಗಂಭೀರಳಾದಳು. ಅವಳ ಮನಸ್ಸೇನನ್ನೋ ವಿಚಾರಿಸ ತೊಡಗಿತು...

ಮರುದಿನ ಹತ್ತು ಗಂಟೆಯ ಹೊತ್ತಿಗೆ ಭಾಸ್ಕರರಾಯರ ಮನೆಯೆದುರು ಕಾರೊಂದು ನಿಂತಿತು. ಕಾರಿನಿಂದ ನಾರ್ಣಪ್ಪಯ್ಯನವರು, ಮಗ ರಮೇಶ ಮತ್ತು ಇನ್ನೋರ್ವ ಸಂಬಂಧಿಕರೂ ಇಳಿದರು. ರಾಯರೇ ಬಂದವರನ್ನು ಸ್ವಾಗತಿಸಿ ಮನೆಯೊಳಗೆ ಕರೆದುಕೊಂಡು ಹೋದರು. ಕುಶಲ ಪ್ರಶ್ನೆಗಳಾದುವು.

ಬೇಗನೆ ಬಹು ಆದ್ದೂರಿಯಿಂದಲೇ ಸತ್ಕಾರವು ಜರಗಿತು. ಸೀತಮ್ಮನವರ ಭವ್ಯವಾದ ಭೋಜನವುಂಡು ತೃಪ್ತರಾದರು. ಕೊನೆಗೆ ಹೆಣ್ಣನ್ನು ನೋಡುವ ಕಾರ್ಯ ಉಳಿದಿತ್ತು.

(೧೧ನೇ ಪುಟ ನೋಡಿರಿ)



ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡಿದ್ದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ನೋವುಗಳ ಅತ್ಯುತ್ತಮ ಸಂಹಾರಿಣಿ!

ಅಮೃತಾಂಜನ

ಶ್ರಮವನ್ನೇ ಅರಿಯದ ಪ್ರಯಾಣಿಕರು ‡‡

ವಿಶಾಲ ವಿಶ್ವದಲ್ಲಿ ಅತ್ಯಂತ ವೇಗದಲ್ಲಿ ಅವಿರತ ಪ್ರಯಾಣ ಬೆಳೆಸುವ ವಿವಿಧ ಗ್ರಹಗಳ ಬಗ್ಗೆ ಹೊಸತನದಿಂದ ಕೂಡಿದ ಹಳೆಯ ವಿಚಾರಗಳನ್ನು ನೀವೂ ಅವಶ್ಯ ತಿಳಿಯಬೇಕು. ಈ ಅಂತರಿಕ್ಷ ಪ್ರಯಾಣಿಕರಿಗೆ ಶ್ರಮದ ಜ್ಞಾನವೇ ಇಲ್ಲದಿರುವುದು ಸೋಜಿಗ.

ಪ್ರೊ. ಕೇ. ಎಸ್. ಸವಣೂರ, ಎಂ. ಎಸ್‌ಸಿ.

ಪ್ರಾಸ್ತಾವಿಕ

ಈಗ ನಾನು ವಿವರಿಸಲಿರುವ ಪ್ರಯಾಣಿಕರ ಕತೆಯು ಬಹಳೇ ಮನೋರಂಜಕವೂ ಮತ್ತು ನಮ್ಮನ್ನು ದಿಗ್ಭ್ರಮೆಗೊಳಿಸುವಂತಹದೂ ಆಗಿದೆ. ಇದು ಹೊಸತನವನ್ನು ಅಡಗಿಸಿಕೊಂಡ ಬಹಳೇ ಹಳೆಯದಾದ ಕತೆಯು. ನಮ್ಮ ಕತೆಯ ಮುಖ್ಯ ವಿಷಯರಾದ ಈ ಪ್ರಯಾಣಿಕರು ನಮಗೆ ತೋರಿಕೆಯಲ್ಲಿ ಚಿರಪರಿಚಿತರಾದರೂ ಇವರ ವಿಷಯದಲ್ಲಿನ ಹಲವು ವಿವರಗಳು ನಮ್ಮಲ್ಲಿಯ ಕೆಲವರಿಗೆ ಮಾತ್ರ ತಿಳಿದವುಗಳು. ಈ ಪ್ರಯಾಣಿಕರು ಯಾರು? ಎಲ್ಲಿಂದ ಹೊರಟವರು, ಪ್ರಯಾಣವನ್ನೇಕೆ ಕೈಕೊಂಡಿರುವರು, ಇಂತಹ ಪ್ರಯಾಣವನ್ನು ಅವಿರತವಾಗಿ ಸಾಗಿಸಲು ಬೇಕಿರುವ ಶಕ್ತಿಯನ್ನು ಹೇಗೆ ಪಡೆದಿರುವರು, ಇವರು ಪ್ರಮಾಣದಲ್ಲಿ ಎಷ್ಟಿರುವರು ಇಂತಹ ಇನ್ನೂ ಅನೇಕಾನೇಕ ಪ್ರಶ್ನೆಗಳನ್ನು ಉತ್ತರಿಸಲು ಮನುಷ್ಯನು ಅನಾದಿ ಕಾಲದಿಂದ ಪ್ರಯತ್ನಿಸಿದ್ದಾನೆ ಮತ್ತು ಇವುಗಳಲ್ಲಿಯ ಹಲವು ವಿಷಯಗಳನ್ನು ಕಿಂಚಿತಾದರೂ ತಿಳಿಯುವಲ್ಲಿ ಸಫಲನಾಗಿದ್ದಾನೆ. ಇಂತಹ ಕೋಟ್ಯನುಕೋಟಿ ಪ್ರಯಾಣಿಕರಲ್ಲಿ ನಮಗೆ ಅತ್ಯಂತ ಸಮೀಪದವರಾದ ಮತ್ತು ನಮ್ಮ ಸೂರ್ಯಮಾಲೆಯಲ್ಲಿ ಪ್ರಮುಖರಾದ ಹಾಗು ಗ್ರಹಗಳೆಂದು ಪರಿಚಿತರಾದ ಇವರು ಪ್ರಯಾಣಿಕರ ಮತ್ತು ನಮ್ಮ ಪೃಥ್ವಿಯನ್ನು ಸುತ್ತುತ್ತಿರುವ ಚಂದ್ರ ಇವರ ವಿಷಯಗಳನ್ನು ಕಿಂಚಿತ್ ತಿಳಿಯಲು ಪ್ರಯತ್ನಿಸೋಣ. ಗ್ರಹಾಂತರ ಪ್ರಯಾಣವು ಸಾಧ್ಯವಾಗಬಹುದೆಂಬ ಇಂದಿನ ವೈಜ್ಞಾನಿಕ ಪ್ರಯೋಗಗಳನ್ನು ಲಕ್ಷ್ಯದಲ್ಲಿರಿಸಿ ಇಂತಹ ಪ್ರಯಾಣಗಳು ಎಷ್ಟು ದೂರದವುಗಳು ಎಂಬುದನ್ನು ತಿಳಿಯುವುದೂ ಮಹತ್ವದ್ದಿದೆ. ಆದರೆ ಈ ಲೇಖದಲ್ಲಿ ಮುಖ್ಯವಾಗಿ ಉಪೇಕ್ಷಿಸಿದ ವಿಚಾರವೆಂದರೆ ನಮ್ಮ ಪ್ರಯಾಣಿಕರಾದ ಶನಿ, ಗುರು, ಮಂಗಳ, ಶುಕ್ರ, ಬುಧ ಮತ್ತು ಚಂದ್ರ ಇವರ ದೂರಗಳನ್ನು ಕುರಿತು ಮತ್ತು ಅವರು ಕೈಕೊಂಡಿರುವ ಮಾರ್ಗದ ಆಳತೆಯನ್ನು ಕುರಿತು ಇತ್ಯಾದಿ ವಿವರಿಸುವುದೇ ಆಗಿದೆ.

ಪ್ರಯಾಣಿಕರ ಆಕಾರ ಮತ್ತು ದೂರಗಳು

ಇಡಿಯಾದ ವಿಶ್ವವನ್ನು ಒನ್ನೆಲೆಯಲ್ಲಿರಿಸಿ ವಿಚಾರಮಾಡಿದಾಗ ಮಹತ್ವದ ದೃಷ್ಟಿಯಿಂದ ನಮ್ಮ ಪೃಥ್ವಿಯು ಸಹಾರಾ ಮರುಭೂಮಿಯಲ್ಲಿಯ ಒಂದು ಉಸುಕಿನ ಕಣದಷ್ಟು ಮಹತ್ವದ್ದಿದೆ ಎಂಬುದು ಮಾನವನ ಅಹಂಕಾರಕ್ಕೆ ಕುಠಾರಪ್ರಾಯವಾಗಿ ಪರಿಣಮಿಸಿದೆ. ಖಗೋಳ ಶಾಸ್ತ್ರದಲ್ಲಿ ನಾವು ಅಳೆಯುವ ಅಂತರಗಳು ಪ್ರಚಂಡ ಪ್ರಮಾಣದವುಗಳಿದ್ದು ಇವುಗಳು ಲಕ್ಷಾಂತರ ಇಲ್ಲವೆ ಕೋಟ್ಯಂತರ ಮೈಲುಗಳಷ್ಟಿವೆ ಎಂದು ಹೇಳಿದಲ್ಲಿ ಇವುಗಳ ಮಹತ್ವವು ನಮಗೆ ತಿಳಿಯದು. ಕಾರಣ ನಮ್ಮ ಸೂರ್ಯಮಾಲೆಯನ್ನು ನಮಗೆ ಚಿರಪರಿಚಿತವಿರುವ ಮತ್ತು ಗ್ರಹಿಸಲು ಸುಲಭಸಾಧ್ಯವಾದ ಫೂಟುಗಳು ಮತ್ತು ಮೈಲುಗಳಲ್ಲಿ ವಿವರಿಸಲು ಪ್ರಯತ್ನಿಸಿ ಇಲ್ಲಿಯ ಪ್ರಮಾಣಗಳನ್ನು ತಿಳಿಯಲು ಪ್ರಯತ್ನಿಸೋಣ. ಈಗ ನಮ್ಮ ಸೂರ್ಯನು ೬೦೦ ಫೂಟು ವ್ಯಾಸದ ಗೋಲವಿದ್ದಾನೆ ಎಂದು ತಿಳಿದು ಇದೇ ಪ್ರಮಾಣದಲ್ಲಿ ಉಳಿದ ಗ್ರಹಗಳ ಪ್ರಮಾಣಗಳನ್ನು ಮತ್ತು ಸೂರ್ಯನಿಂದ ಇವುಗಳ ಅಂತರಗಳು ಎಷ್ಟಿವೆ ಎಂಬುದನ್ನು ತಿಳಿಯುವಾ. ಸಾಧಾರಣವಾಗಿ ೧೫೦೦ ಮೈಲುಗಳನ್ನು ಒಂದು ಫೂಟೆಂದು ಗಣಿಸಿ ಬೇರೆ ಬೇರೆ ಗ್ರಹಗಳ ಪ್ರಮಾಣ ಮತ್ತು ಸೂರ್ಯನಿಂದ ಇವುಗಳ ದೂರಗಳು ಕೆಳಗಿನ ಕೋಷ್ಟಕದಲ್ಲಿ ಕಾಣಿಸಿದಂತೆ ಇವೆ.

ಕೋಷ್ಟಕ ೧

ಗ್ರಹಗಳು ಮತ್ತು ಸೂರ್ಯ	ಪ್ರಮಾಣ (ವ್ಯಾಸ)	ಸೂರ್ಯನಿಂದ ಅಂತರ
	ಫೂಟುಗಳು	ಮೈಲುಗಳು
ಸೂರ್ಯ	೬೦೦	೦
ಬುಧ	೨.೦೦	೪.೭೫
ಶುಕ್ರ	೫.೨೫	೯.೦೦
ಪೃಥ್ವಿ	೫.೫೦	೧೨.೨೫
ಮಂಗಳ	೩.೦೦	೧೮.೫೦
ಗುರು	೬೦.೦೦	೬೪.೦೦
ಶನಿ	೫೧.೦೦	೧೧೭.೦೦

ಮೇಲೆ ವಿವರಿಸಿದ ವಿಷಯಗಳು ನಮ್ಮ ಗ್ರಹಮಾಲೆಯನ್ನಷ್ಟೇ ವಿಚಾರದಲ್ಲಿರಿಸಿದಾಗ ಉಪಯುಕ್ತವಾದವುಗಳು. ನಮಗೆ ಗೋಚರಿಸುವ ಮತ್ತು ಸ್ವಯಂ ಪ್ರಕಾಶವನ್ನು ಬೀರುವ ನಕ್ಷತ್ರಗಳನ್ನು ಮೇಲಿನ ಚಿತ್ರೀಕರಣದಲ್ಲಿ ಸಮಾವೇಶಗೊಳಿಸಲು ಪ್ರಯತ್ನಿಸಿದರೆ ನಾವು ಈ ಮೊದಲೇ ರೂಪಿಸಿದ ಸೂರ್ಯನ ಪ್ರಮಾಣವನ್ನು ೧ ಫೂಟಿಗೆ ಇಳಿಸಬೇಕಾಗುವದು; ಎಂದರೆ ನಮ್ಮ ಹೊಸ ಚಿತ್ರೀಕರಣದಲ್ಲಿ ೯,೦೦,೦೦೦ ಮೈಲುಗಳನ್ನು ಸಾಧಾರಣವಾಗಿ ೧ ಫೂಟೆಂದು ಗಣಿಸಬೇಕಾಗುವದು. ಈಗ ನಮ್ಮ ಪೃಥ್ವಿಯು ಸೂರ್ಯನಿಂದ ೩೬ ಯಾರ್ಡುಗಳ ಅಂತರದಲ್ಲಿರುವ ಒಂದು ಚಿಕ್ಕ ಮಣಿಯಷ್ಟು ಸಣ್ಣದಾಗುವುದು. ೧ ಸೆಕಂದಿಗೆ ೧,೮೬,೦೦೦ ಮೈಲುಗಳ ವೇಗದಿಂದ ಭ್ರಮಿಸುವ ಬೆಳಕು ನಮಗೆ ಅತ್ಯಂತ ಸಮೀಪದ ನಕ್ಷತ್ರದಿಂದ ಹೊರಟು ನಮ್ಮ ಪೃಥ್ವಿಯನ್ನು ಮುಟ್ಟಲು ೪ ವರುಷಗಳಿಗಿಂತಲೂ ಹೆಚ್ಚಿನ

(೧೭ನೇ ಪುಟ ನೋಡಿರಿ)

‡‡ ಈ ಲೇಖವನ್ನು ಬರೆಯುವಲ್ಲಿ ಪ್ಯಾಟ್ರಿಕ್ ಮೂರ್ ಅವರ 'Guide to the Planets' ಎಂಬ ಪುಸ್ತಕದ ಸಹಾಯವನ್ನು ಪಡೆದಿದ್ದೇನೆ.—ಲೇ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 336/1960

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ — ವಾದಿ

ಮತ್ತು

ವಿಲಿಯಂ ಲುವಿಸ್ ಕೂಡಾ— ಪ್ರತಿವಾದಿರು

ಸದ್ರಿ ಪ್ರತಿವಾದಿರು:

1. ವಿಲಿಯಂ ಲುವಿಸ್- ಲಿಯೋ ಲುವಿಸರ ಮಗ- ಮೂಡು ತೋನ್ಸೆ ಗ್ರಾಮದ ಕಲ್ಯಾಣಪುರ ಸಂತೆಕಟ್ಟೆ ಬಳಿ.

3. ಚಾರ್ಲ್ಸ್ ಲುವಿಸ್ - ಲಿಯೋ ಲುವಿಸರ ಮಗ, ಉದಿಯಾವರ ಗ್ರಾಮ.— ಇವರಿಗೆ

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು 6-8-59ರಲ್ಲಿ ರೂಪಾಯಿ 100/-ಕ್ಕೆ ಬರೆಕೊಟ್ಟ ಡಿಮಾಂಡ್ ನೋಟಿನ ಅಸಲು, ಬಡ್ಡಿ, ಬಿ! ನೋಟೀಸಿನ ಖರ್ಚು ಕೂಡಾ ರೂಪಾಯಿ 122-15ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾ. 29-8-1960ಕ್ಕೆ ತನ್ನಿಖೆ ಬಗ್ಗೆ ಇಟ್ಟಿದೆ. ಆ ದಿವ್ಸ ಸದರಿ ಪ್ರತಿವಾದಿರು ಸ್ವತಃ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಸರಿ ನಡೆಯದ್ರೆ ಅವರ ಗೈರ್‌ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದರಿ ಪ್ರತಿವಾದಿರಿಗೆ ಈ ಮೂಲಕ ತಿಳಿಸೋಣಾಗಿಯದೆ.

M Damoder Kamath,
Advocate for Pltf.

ಉಡುಪಿ, ತಾ. 15-8-1960.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಂಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25)

ಮನೆಯಿಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ ಪುಸ್ತಕ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪಥ್ಯ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕವನ್ನು ಬುಕ್‌ಪೋಸ್ಟು ಮಾಡಬಹುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 39/1960.

ಅರ್ಜಿದಾರರು: 1. ಸಂಜೀವಿ ಬಾಯಿ, ಪದ್ಮನಾಭ ಶ್ಯಾನುಭಾಗರ ಹೆಂಡ್ತಿ. 2. ಕಸ್ತೂರಿ, ಕೇಶವ ಶ್ಯಾನುಭಾಗರ ವಿಧವೆ. 3. ಪ್ರಭಾಕರ ಬಾಬು, ಕೇಶವ ಶ್ಯಾನುಭಾಗರ ಮಗ, ಗಾರ್ಡಿಯನ್ 2ನೇ ಅರ್ಜಿದಾರಳು. 4 ಪದ್ಮನಾಭ ಶ್ಯಾನುಭಾಗ, ರಂಗಣ್ಣ ಶ್ಯಾನುಭಾಗರ ಮಗ — ಕುಂದಾಪುರ ತಾಲ್ಲೂಕು ಮರವಂತೆ ಗ್ರಾಮ, P. O. Marvanthe— ಇವರಿಗೆ.

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದ್ರೆ—

ಕೇಶವ ಶ್ಯಾನುಭಾಗರು ಮೃತಪಟ್ಟಿರುವುದರಿಂದ ಅವರ ಬಾಬ್ತು ಲೈಫ್ ಇನ್ಶೂರೆನ್ಸ್ ಕೊರ್ಪೊರೇಶನ್ ಆಫ್ ಇಂಡಿಯಾದವರಲ್ಲಿರುವ ರೂಪಾಯಿ 1462-21ನ್ನು 1ರಿಂದ 3ನೇ ವರೇಗಿನ ಅರ್ಜಿದಾರರು ಪಡೆಯವರೇ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 3-9-1960ಕ್ಕೆ ಇರುತ್ತದೆ.

ಆ ಕುರಿತು ಯಾರದ್ದಾದರೂ ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಹೀರು ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಸದ್ರಿ ಅರ್ಜಿದಾರರಿಗೆ ವಾರಿಸು ಸರ್ಟಿಫಿಕೇಟು ಕೊಡಲಾದೀತು ಎಂಬ ಸಂಗ್ತಿ ಕೋರ್ಟು ಮುಖಂ ಮೇರೆಗೆ ಸರ್ವ ಜನರಿಗೂ ಈ ಮೂಲಕ ತಿಳಿಸೋಣಾಗಿಯದೆ.

K. Raghunatha Shenoi,
Pleader for Petitioners.

Coondapoor, 13—8—1960.

ವಿನೋದ ಮೀಮಾಂಸೆ

ಪರೀಕ್ಷೆಯೆಂದರೆ ಎಲ್ಲರೂ ಹೆದರುತ್ತಾರೆ

ಮೂರೇ ಮೂರಕ್ಷರದ ಈ ಶಬ್ದ ಕಿವಿಗೆ ಬಿದ್ದೊಡನೆಯೇ ಎಲ್ಲರೂ ಸರ್ಪ ಕಂಡಂತೆ ಹೆದರುತ್ತಾರೆ. ಪರೀಕ್ಷೆಯೆಂದರೆ ಒಂದು ಬಗೆಯ ಆಟವೆಂದು ಯಾರೂ ತಿಳಿಯುವುದಿಲ್ಲ. ಅದೇಕೆಂದು ಬಲ್ಲಿರಾ?

ಶ್ರೀ "ರಾಶಿ"

“ಪರೀಕ್ಷೆ” ಎಂಬೀ ಮೂರು ವರ್ಣದ ಒಂದೇ ಒಂದು ಪದದಲ್ಲಿ ಭಯಂಕರ ಭಯಾನಕತೆಯು ಹುದುಗಿ ಕೊಂಡಿದೆ. ಸ್ವರ್ಗ ಮರ್ತ್ಯ ಪಾತಾಳಗಳ ಒಳಿತು ಕೆಡುಕುಗಳೆಲ್ಲವೂ ಇದರಲ್ಲಿಯೇ ಅಡಗಿರುವುದೆಂದು ತಿಳಿಯಲಾಗುತ್ತದೆ. ಈ ಭೀಷಣತೆಯ ಚಿಹ್ನೆಯಾದ ‘ಪರೀಕ್ಷೆ’ಯನ್ನು ಯಾಕೇ ಆಗಲೀ ಎದುರಿಸುವ ದುಸ್ಸಂದರ್ಭವನ್ನು ಪರಮಾತ್ಮನು ಯಾರಿಗೂ ಕೊಡದಿರಲಿ. ಮಹಾತ್ಮಾ ಮಸೀಹನು ತನ್ನ ನಿಜ ಶಿಷ್ಯರಿಗೆ ಪ್ರಾರ್ಥನೆ ಮಾಡುವ ವಿಧಾನವನ್ನು ಉಪದೇಶಿಸುವಾಗ, ಒಂದು ಒಳ್ಳೆಯ ವಿಚಾರವನ್ನೂ ತಿಳಿಸಿದ್ದಾನೆ. “ನಮ್ಮನ್ನು ಪರೀಕ್ಷೆಗೆ ಗುರಿ ಮಾಡಬೇಡ; ಕೆಡುಕುಗಳಿಂದ ಉಳಿಸು.” ಎಂಬುದೇ ಅದರ ಮಥಿತಾರ್ಥ. ಇದನ್ನು ಇಂದಿಗೂ ಎಲ್ಲ ಕ್ರಿಶ್ಚಿಯನ್ನರು ಓದುತ್ತಾರೆ; ‘‘ಪರೀಕ್ಷೆ”ಯೆಂದರೆ ಭಗವದ್ಭಕ್ತರಿಗೂ ತಲೆ ಸಿಡಿತವೆಂದಿದರಿಂದ ನಮಗೆ ಗೊತ್ತಾಗುವುದಿಲ್ಲವೆ?

ಉತ್ತಮೋತ್ತಮ ಲೋಹವಾದ ಬಂಗಾರವನ್ನು ಕೇವಲ ಪರೀಕ್ಷಾರ್ಥವಾಗಿ ಅಗ್ನಿಯಲ್ಲಿ ಹಾಕಿದಾಗ, ಮೊತ್ತ ಮೊದಲು ಅದೊಂದು ಬಾರಿ ಕಂಪಿತವಾಗಿ ಮುಂದೆ ತನ್ನ ಸಾಂದ್ರತೆಯನ್ನು ಕಳೆದುಕೊಂಡು, ಅಣು ಪರಮಾಣುಗಳನ್ನು ವಿರಳೀಕರಿಸಿ ಕರಗಿಬಿಡುವುದಲ್ಲವೆ? ಜಡ ಪದಾರ್ಥಗಳೇ ಪರೀಕ್ಷೆಗೆ ಹೆದರಿಹೋಗುವಾಗ ಚೇತನರ ಅವಸ್ಥೆಯನ್ನೇನೆನ್ನಬೇಕು? ಪಾಠಶಾಲೆಗೆ ಹೋಗಿ ವಿದ್ಯಾಧ್ಯಯನ ಮಾಡದವರು ನೀವಲ್ಲ. ಆದುದರಿಂದ ನಿಮ್ಮ ಮನಸ್ಸನ್ನು ಒಂದಷ್ಟು ವರ್ಷ ಹಿಂದಕ್ಕೆ ತಿರುಗಿಸಿ, ನೀವು ಪಾಠಶಾಲೆಯ ವಿದ್ಯಾರ್ಥಿಯಾಗಿದ್ದ ಆ ದಿನಗಳನ್ನು ಒಂದು ಬಾರಿ ನೆನಪಿಸಿಕೊಳ್ಳಿರಿ. ಮೈ ಜುಮ್ಮೆನ್ನುವುದಿಲ್ಲವೆ? ವಿದ್ಯಾರ್ಥಿ ಜೀವನವು ಸುಖಜೀವನವೆಂದು ಅವರ ಹೆತ್ತವರು ಅಥವಾ ರಕ್ಷಕರು ಅವಶ್ಯ ತಿಳಿದಿರಬಹುದು; ಆದರೆ, ನೀವು ಒಂದೇ ಒಂದು ದಿನವಾದರೂ ಸುಖ ಜೀವನ ಬಾಳಿದ್ದಿದೆಯೆ? ಸರ್ವಥಾ ಸಾಧ್ಯವಿರುವುದಿಲ್ಲ. ನಿದ್ರೆ, ಜಾಗರಣೆ ಎರಡರಲ್ಲೂ ನೂರಾರು ಚಿಂತೆ. ಈ ಚಿಂತಾ ರಾಕ್ಷಸನನ್ನು ಚಿತ್ತದಿಂದ ಹೊರಗಟ್ಟುವುದು ಎಂದಾದರೂ ಶಕ್ಯವೆನಿಸಿದ್ದಿದೆಯೆ? ಕ್ಷಣ ಕ್ಷಣವೂ ಒಂದಲ್ಲ ಒಂದು ರೀತಿಯ ಪರೀಕ್ಷೆಗೆ ನೀವು ಗುರಿಯಾಗುತ್ತಿದ್ದಿಲ್ಲವೆ? ಆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬರುವುದೂ ತಾಯಿ ಹೊಟ್ಟೆಯನ್ನು ನುಗ್ಗಿ ಮರಳಿ ಹೊರ ಬರುವುದೂ ಸಮಾನ ಪರಿಶ್ರಮ ಫಲಗಳೆಂದು ನೀವು ಕಂಠೋಕ್ತವಾಗಿ ಘೋಷಿಸಬಲ್ಲಿರಿ.

ಇಂದು ತಾವು ಪ್ರಕಾಂಡ ಪಂಡಿತರು, ಅತುಲೈಶ್ವರ್ಯಾಧಿಪರು, ಅತಿ ಬಲಶಾಲಿಗಳು, ಮಹಾದೇಶ ಹಿತೈಷಿಗಳು, ಮಹಾ ಸತ್ಯಸಂಧರು, ಮಹಾ ನಿಷ್ಕಪಟಿ ಮಿತ್ರರು ಎಂಬಿತ್ಯಾದಿ ಉಪನಾಮ ಧಾರಿಗಳಾಗಿ ನಮ್ಮೆದುರು ಮುಖ ತೋರಿಸಿ ನಮ್ಮನ್ನು ನಾಚುವಂತೆ ಮಾಡುತ್ತಿರುವ ಮಹಾ ಮೇಧಾವಿಗಳನ್ನೂ ಒಂದು ಬಾರಿ ಸರಳ ಪರೀಕ್ಷೆಯೊಂದಕ್ಕೆ ಗುರಿಮಾಡಿರಿ; ಆಗ ಹೆಚ್ಚೆಂದರೆ, ಸೇಕಡಾ ಆರಷ್ಟು ಫಲಿತಾಂಶವನ್ನು ಅವರು ತಂದುಕೊಡಬಲ್ಲರು. ಯಾವನೇ ಒಬ್ಬ ಶ್ರೀಮಂತ ಮಿತ್ರನನ್ನು ನೀವು ಇಪ್ಪತ್ತು ರೂಪಾಯಿ ಕೈಗಡಕ್ಕಾಗಿ ಭೆಟ್ಟಿಯಾಗಿರಿ. ಆತನು ಈಗಷ್ಟೇ ಹಣವನ್ನು ಕಾಸುಕಾಸು ಒಟ್ಟುಸೇರಿಸಿ ಇನ್ನೊಬ್ಬ (ಆತ ನಿಮ್ಮಷ್ಟು ಸಮೀಪವರ್ತಿಯಲ್ಲ) ನಿಗೆ ಕೈಗಡ ಕೊಟ್ಟುಬಿಟ್ಟಿದ್ದಾನೆ; ದಯಾಶೀಲರಾದ ವೈದ್ಯರಲ್ಲಿಗೆ ಪ್ರಥಮ ಚಿಕಿತ್ಸೆಗಾಗಿ ತೆರಳಿರಿ, ಅವರು ಭಾರಿ ರೋಗಿಯೊಬ್ಬನ ಹೃದಯಾಂತರಾಳಕ್ಕೇನೇ ಸ್ಟೆತೋಸ್ಕೋಪಿಟ್ಟು ಪರೀಕ್ಷೆ ನಡೆಸುವುದರಿಂದ ವಿಚಲಿತರಾಗುವಂತಿಲ್ಲ. ನಿಮ್ಮ ಅತಿ ಸುಪರಿಚಿತ ಪ್ರಕಾಶಕರನ್ನು ನಿಮ್ಮದೇ ಪುಸ್ತಕೆಯಾಗಿ ಅಚ್ಚಾದ ಪುಸ್ತಕದ ಒಂದೆರಡು ಪ್ರತಿಗಳು ಬೇಕಿತ್ತೆಂದು ಕೇಳಿರಿ, ಅವುಗಳೆಲ್ಲಾ ಊರ ಪರವೂರ ಪುಸ್ತಕ ವ್ಯಾಪಾರಿಗಳಲ್ಲಿಯೇ ಉಳಿದಿವೆ! ಹೀಗೆಯೇ ಇಂತಹ ಸತ್ವಪರೀಕ್ಷೆಯಲ್ಲಿ ಸಫಲವಾಗುವುದೆಂದರೆ, ಅಷ್ಟು ಸುಲಭವಲ್ಲ; ಜಯಶೀಲನಾದರೆ, ಮುಂದಿನ ವರ್ಗಕ್ಕೆ ಕಾಲಿರಿಸಬೇಕು; ಅಲ್ಲಿ ಮತ್ತೂ ದೊಡ್ಡ ಪರೀಕ್ಷೆಗೆ ಕೂರಬೇಕಾಗುವುದು. ಈ ಪ್ರಕಾರದ ನಿರರ್ಥಕ ಕಠಿನ ಪರೀಕ್ಷೆಗಳಿಗೆ ಅಂಜಿಯೇ ಹೆಚ್ಚಿನವರು ಪ್ರಥಮ ಬಾರಿಯೇ ಅನುತ್ತೀರ್ಣರಾಗಿ ಬಿಡುವುದೇ ಕ್ಷೇಮವೆಂದು ತಿಳಿದರೆ, ಅನ್ಯಾಯವೆಲ್ಲಿಯದು?

ಪರೀಕ್ಷಾರ್ಥಿಯು ವಿಷಯಗಳನ್ನು ಎಷ್ಟರ ಮಟ್ಟಿಗೆ ತಿಳಿದಿರುವನೆಂದು ಆತನ ಉತ್ತರ ಪತ್ರವನ್ನು ತೂಗಿ ನೋಡುವ ಪರೀಕ್ಷಕನಿಗಿಂತ ಪರಮಾತ್ಮನಿಗೆ ಚೆನ್ನಾಗಿ ತಿಳಿದಿದೆ. ಹಾಗಿರುವಾಗ ಪರೀಕ್ಷಾರ್ಥಿಯಾದರೂ ಪರೀಕ್ಷೆಗೆ ಅದೃಷ್ಟದ ಮೇಲೆ ಭಾರ ಹಾಕಿಬಿಟ್ಟು ಕೂರುವ ಸಾಹಸ ಮಾಡಬಹುದು; ಆದರೆ, ಪಾಪಾತ್ಮರಾದ ನಾವು ಪರಮಾತ್ಮನೆದುರು ಪರೀಕ್ಷೆಗೊಡುವ ಧೈರ್ಯವಂತರಾಗುವುದಾದರೂ ಹೇಗೆ?

ಈ ಪ್ರಪಂಚದಲ್ಲಿ ಎಲ್ಲವೂ ಪರೀಕ್ಷಾಮಯವೇ ಆಗಿರುವುದು ದೃಗ್ಗೋಚರವಾಗುವುದು. ಪರೀಕ್ಷೆ ವಿನಾ ಕೆಲಸ ಪೂರ್ಣಗೊಳ್ಳದು. ಮಾನವನ ಬುದ್ಧಿಯು ಅತ್ಯಲ್ಪವಾದುದರಿಂದ, ಈ ಪರೀಕ್ಷೆಗಳಿಗೆ ಗುರಿಯಾದ ವಿಷಯವು ಸರಿಯಾಗಿ ಸಮರ್ಪಕವಾಗಿ ನಿರೂಪಿಸಲ್ಪಡಲಾರದು ಎಂಬುದೇ ತುಸು ಖೇದನಾರ್ಹವಾದ ವಿಷಯವಾಗಿದೆ. ಯಾವುದೇ ಒಂದು ಸಂಗತಿಯನ್ನು ತೆಗೆದುಕೊಳ್ಳಿರಿ, ಒಂದೊಂದು ಕಾಲಕ್ಕೆ ಒಂದೊಂದು ಪರೀಕ್ಷೆಯಲ್ಲಿ ವಿಜಯಿಯಾಗುವುದು.

ಪರಮಾತ್ಮನು ‘ಸತ್ಯ’ ಎಂಬ ವಿಷಯವನ್ನೇ ಪರೀಕ್ಷೆಗೆ ಗುರಿ ಮಾಡಿರಿ; ಆತನ್ನು ‘ಸತ್ಯ’ನು ಎನ್ನಲಿರುವಷ್ಟೇ ಬಲವಾದ ಆಧಾರಗಳು ‘ಅಸತ್ಯ’ ನೆನಿಸುವುದಕ್ಕೂ ದೊರೆಯುತ್ತವೆ; ಈ ಪರೀಕ್ಷೆಯ ಪರಿಣಾಮವೂ ಬೇಗನೇ ಪ್ರಕಟವಾಗುವುದು ಸಾಧ್ಯವಿರುವುದಿಲ್ಲ. ಕಪಟಿಗಳು ಹೆಚ್ಚಾಗಿ ಸಿಹಿ ಮಾತುಗಾರರೂ ಶಿಷ್ಟಾಚಾರಿಗಳೂ ಆಗಿರುತ್ತಾರೆ; ಅತ್ಯಲ್ಪ ಬೆಲೆಯ ಲೋಹದಲ್ಲಿಯೇ ಕೀಳುಲೋಹ ಮಿಶ್ರಣಾಂಶ ತುಂಬವಿರುತ್ತದೆ; ಅಲ್ಪ ವಿದ್ಯೆಯಿರುವಲ್ಲಿಯೇ ಮಹಾ ಗರ್ವವಿರುತ್ತದೆ; ಹಾಗಿರುವಾಗ ಇವೆಲ್ಲವನ್ನೂ ಪರೀಕ್ಷಿಸುವ ದಾಂಢಿಗನೇ ಮೊತ್ತಮೊದಲಿಗೆ ವಂಚಿತನಾದರೆ ಯಾರನ್ನು ಯಾರೆನ್ನಬೇಕು? ರತ್ನ ಪರೀಕ್ಷಕನೂ ಮೋಸ ಹೋಗುತ್ತಿರುವಾಗ, ಈ ಸಾಮಾನ್ಯ ಜನರದೇನು ಮಹಾ? ಎಂತಲೇ ಪರೀಕ್ಷೆ ಪಾಸಾಗುವುದು ತುಂಬ ಪ್ರಯಾಸವೆನಿಸುತ್ತಿದೆ; ಅದೂ ಇತ್ತೀಚಿಗೆ.

ಮಾನವನ ದೈನಂದಿನ ಜೀವನದಲ್ಲೂ ಪರೀಕ್ಷೆ ಮಹತ್ವದ ಪಾತ್ರವಹಿಸುತ್ತದೆ. “ಹುಚ್ಚು ಬಿಡದೆ ಮದುವೆಯಾಗದು; ಮದುವೆಯಾಗದೆ ಹುಚ್ಚು ಬಿಡದು” ಎಂಬ ಅಮೃತವಾಕ್ಯ ವಿವಾಹ ಯೋಗ್ಯನಾದವನನ್ನು ಪರೀಕ್ಷಿಸಿ ಘೋಷಿಸಿದ ಪರಿಣಾಮ. ಮನೆಯಲ್ಲಿ ನಿಮ್ಮಜ್ಜಿಗೆ ಸೌಖ್ಯವಿಲ್ಲವೆಂದಿಟ್ಟುಕೊಳ್ಳಿ. ಆರೋಗ್ಯ ಸುಧಾರಿಸುವುದಕ್ಕೆ ಬದಲು ದಿನೇ ದಿನೇ ಬಿಗಡಾಯಿಸುತ್ತದೆ ಎಂದು ಊಹಿಸಿರಿ. ಆಗ ಒಳ್ಳೆಮಣಿಕಿನಿಂದ ತೊಡಗಿದ ಈ ಪರೀಕ್ಷೆ ಎಂ. ಬಿ., ಬಿ. ಎಸ್; ಎಂ. ಡಿ. ಮೊದಲಾದ ಪದವೀಧರರ ವರೆಗೂ ಮುಂದುವರಿಯುತ್ತದೆ. ಮತ್ತೂ ಕೆಲವೊಮ್ಮೆ ಇವರೆಲ್ಲರೂ ಯಮರಾಯನ ಮುಂದೆ ಪರೀಕ್ಷೆಗೊಟ್ಟು ಸೋತುಹೋಗಬೇಕಾಗುವುದೂ ಉಂಟು ಅಂತೂ ಆರೋಗ್ಯ ಸುಧಾರಿಸಿತು ಎನ್ನೋಣ, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಒಬ್ಬರೇ ಆದರೆ, ಜೋಲು ಮೋರೆ ಹಾಕಿದವರು ಹಲವರು ತಾನೆ?

ಯೋಗ್ಯತೆಯನ್ನು ಅಳೆಯುವ ಪದವೀಧರರೆದುರು ಬರಿ ಕಂಠರು ಪರೀಕ್ಷೆಗೊಡುವುದರಲ್ಲಿ ಏನು ಸೋಜಿಗವೆಂದು ನೀವು ಸಂದೇಹಿಸಬಹುದು, ಇರಲಿ. ಕೆಲವೊಮ್ಮೆ ಇಂತಹ ಮಹಾಮೇಧಾವೀ ಪದವೀಧರರೇ ನಿಮ್ಮ ವರ್ಗದವರ ಮುಂದೆ ಪರೀಕ್ಷೆಗೊಡುವ ಸಂಭವ ಬರುವುದುಂಟು; ಇಂತಹ ಸಂದರ್ಭಗಳಲ್ಲಿ ವಿದ್ವಾಂಸರೇ ಫೇಲಾಗಿ ಹೋಗುತ್ತಾರೆ. ಅಂಗಡಿಕಾರ ಸೇರೆಂದು ಅರ್ಧ ರಾತಲು ಹೆಚ್ಚು ಕೊಡುವುದರಲ್ಲಿ ಪ್ರವೀಣನಿದ್ದಾನೆ; ಎಲೆ ಮಾರುವ ಹೆಂಗಸು ೪×೭= ೩೫ ಎಂಬ ಹೊಸ ಸಿದ್ಧಾಂತವನ್ನು ಕಂಡು ಹುಡುಕಿ ಗಣಿತ ಶಾಸ್ತ್ರ ಪಂಡಿತರನ್ನೂ ಪರೀಕ್ಷೆಗೆ ಆಹ್ವಾನಿಸುತ್ತಾಳೆ. ತರಗತಿಯ ಹಿಂಗಡೆಯ ಬೆಂಚಿನಲ್ಲಿ ಆರಾಮಾಸನ ಹಾಕಿದ ವಿದ್ಯಾರ್ಥಿಗಳು ಲೆಕ್ಚರ್ ಹೊಡೆಯುವ ಪ್ರೊಫೆಸರರ ಸಹನಾಶಕ್ತಿಯನ್ನು ಪರೀಕ್ಷಿಸುವುದರಲ್ಲಿ ನಿಸ್ಸೀಮರೆನಿಸುತ್ತಾರೆ. ಮನೆಯ ಹೆಂಡತಿ ಗಂಡನ ಪ್ರಾಣಹಿಂಡಿ ಆತನ ‘ಆತ್ಮ’ವನ್ನೇ ಪರೀಕ್ಷಿಸುತ್ತಾಳೆ. ತಮ್ಮ ಹೆತ್ತವರ ಸಂಪತ್ತಿನ ಮೌಲ್ಯವನ್ನಳೆಯುವ ತಹತಹದಿಂದ ಕೂಡಿದ ಮಕ್ಕಳು ಅವರಿಂದ ಹಣವನ್ನು ಸುಲಿಸುಲಿದು ಜಿದೆಷ್ಟೆಂದು ಪರೀಕ್ಷಿಸುತ್ತಾರೆ. ಚಿಕ್ಕ ಮಗುವನ್ನೇ ನೋಡಿರಿ; ತನ್ನ ರೋದನ ಬಲದಿಂದ ಮನೆಯವರೆಲ್ಲರನ್ನೂ ಪರೀಕ್ಷಿಸುತ್ತದೆ.

ಪರೀಕ್ಷಿಸುವ ವಿಧಾನಗಳೂ ಹಲವಿವೆ. ಪರೀಕ್ಷೆ ನಡೆಸುವವರೂ ನಾನಾ ವೇಶಗಳನ್ನು ಹಾಕಿಕೊಂಡು ಬರುವುದುಂಟು. ಗೌರಿಯನ್ನು ಶಿವನು ಬಾಲಬ್ರಹ್ಮಚಾರಿಯಾಗಿಯೂ ಇಂದ್ರನು ಅರ್ಜುನನನ್ನು ವೃದ್ಧತಾಪಸನಾಗಿಯೂ ಪರೀಕ್ಷಿಸಿದ ಸಂಗತಿ ನೆನಪಿದೆ ತಾನೆ? ಹಾಗೆಯೇ ಕೆಲವು ಪರೀಕ್ಷಕರು ಮಕ್ಕಳ ರೂಪ ಧರಿಸುತ್ತಾರೆ; ಇನ್ನು ಕೆಲವರು ಹೆಂಡಂದಿರೆನಿಸಿಕೊಳ್ಳುತ್ತಾರೆ; ಮತ್ತೆ ಕೆಲವರು ವಿದ್ಯಾರ್ಥಿಗಳು, ಚಿರಪರಿಚಿತರು, ನೌಕರರು, ಆತ್ಮ ಸ್ನೇಹಿತರು, ವ್ಯಾಪಾರಿಗಳು— ಇವೇ ಮೊದಲಾದ ಒಂದಲ್ಲ ಹಲವಾರು ಆಕಾರಗಳಲ್ಲಿ ನಮ್ಮ ಮುಂದೆ ಬರುತ್ತಾರೆ. ಇವರಲ್ಲಿ ಬಕಯಾವುದು ಹಂಸ ಯಾವುದು ಎಂಬುದನ್ನು ತಿಳಿದು ನಡೆಯುವ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಧೀಮಂತರು ಮಾತ್ರ ಅತಿ ವಿರಳ. ಕೇವಲ ಸೇಕಡಾ ೪ ಊ ಇಲ್ಲ. ಎಲ್ಲರೂ ಪ್ರತಿಕ್ಷಣದಲ್ಲಿಯೂ ಒಂದರ ಮೇಲೊಂದು ಪರೀಕ್ಷೆಗೆ ಗುರಿಯಾಗಿ ಕೊನೆಗಾದರೂ ಯಾರಾದರೊಬ್ಬನಿಂದ ಸೋಲುಣ್ಣಲೇ ಬೇಕಾ

(೮ನೇ ಪುಟ ನೋಡಿರಿ)

ರಾಮತೀರ್ಥ (ಮಾಸಿಕ ಪತ್ರ)
(ಹಿಂದಿ ಭಾಷೆಯಲ್ಲಿ)
ಸಂಪಾದಕರು: **ಯೋಗಿರಾಜ ಶ್ರೀ ಉಮೇಶಚಂದ್ರರು.**
ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ.
ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೧೪.

ಅಭಿಪ್ರಾಯ

ಕಾಂಗ್ರೆಸ್ ವಿಭಜಿಸಿ ಆಳುತ್ತಿದೆಯೆ?

ಸ್ವತಂತ್ರ ಪಕ್ಷದ ನಾಯಕ ಶ್ರೀ ರಾಜಾಜಿಯವರು ಕಾಂಗ್ರೆಸ್‌ನ ನೀತಿಯನ್ನು ಖಂಡಿಸಿ, ಅದು ದೇಶವನ್ನು ವಿಭಜಿಸಿ ಆಳಿ ಅಧಿಕಾರಕ್ಕೆ ಬಲವಾಗಿ ಅಂಟಿಕೊಳ್ಳ ಬಯಸುತ್ತದೆ ಎಂದು ಆರೋಪಿಸಿದ್ದಾರೆ. ಈ ಗಂಭೀರ ಆರೋಪದತ್ತ ನಾಗರಿಕರು ದೃಷ್ಟಿ ಹರಿಸಿ ಇದರ ಯಥಾರ್ಥತೆಯನ್ನು ತಿಳಿದುಕೊಳ್ಳಬೇಕಾಗಿದೆ.

ಸಾರ್ವತ್ರಿಕ ಚುನಾವಣೆಗಳಿಗೆ ಕನಿಷ್ಠ ಆರು ತಿಂಗಳುಗಳಿಗೆ ಮೊದಲು ಆಳುವ ಪಕ್ಷವು ರಾಜಿನಾಮೆಯಿತ್ತು ಹೊರಗೆ ಬರಬೇಕೆಂದೂ ಇದರಿಂದ ದೇಶದಲ್ಲಿ ಸ್ವತಂತ್ರರೂಪದಲ್ಲಿ ಚುನಾವಣೆಗಳು ನಡೆಯುವುದಕ್ಕೆ ಅವಕಾಶವೊದಗುವುದೆಂದೂ ಸ್ವತಂತ್ರ ಪಕ್ಷದ ನಾಯಕ ಶ್ರೀ ರಾಜಾಜಿಯವರು ಇತ್ತ ಕರೆಯನ್ನು ಕಾಂಗ್ರೆಸ್ಸು ವಿರೋಧಿಸಿದೆ. ಕಾಂಗ್ರೆಸ್‌ನ ವರ್ತನೆಯಿಂದ ಅದೊಂದೇ ಚುನಾವಣೆಗಳಲ್ಲಿ ಗೆಲ್ಲಲು ಸರಕಾರೀ ಅಧಿಕಾರವನ್ನು ಉಪಯೋಗಿಸುವ ಪಕ್ಷವೆಂದು ರಾಜಾಜಿ ಆರೋಪಿಸಿದ್ದಾರೆ. ಹಾಗೆಯೇ ಕಂಪೆನಿಗಳು ರಾಜಕೀಯ ಪಕ್ಷಗಳಿಗೆ ಸಹಾಯನೀಡುವುದಕ್ಕೆ ತಡೆಹಾಕಬೇಕೆಂಬ ತನ್ನ ಸಲಹೆಯೂ ನಿರುಪಯುಕ್ತವಾದುದರಿಂದ ಕಾಂಗ್ರೆಸ್ಸೊಂದೇ ಶ್ರೀಮಂತರ ಪಕ್ಷವೆಂದು ಅವರು ವಾದಿಸಿದ್ದಾರೆ. ಸ್ವತಂತ್ರ ಪಕ್ಷವು ಅಧಿಕಾರಕ್ಕೆ ಬಂದರೆ ನಿಜಕ್ಕೂ ಇವೆರಡನ್ನು ಕಾರ್ಯಗತಗೊಳಿಸುವುದಾಗಿ ಅವರು ಭರವಸೆಯಿತ್ತಿದ್ದಾರೆ. ಅವರ ವಾದಸರಣಿ ಹೀಗಿದೆ:

ತಾನು ಆಳುವ ಪಕ್ಷವು ಕನಿಷ್ಠ ಆರು ತಿಂಗಳ ಮೊದಲು ಅಧಿಕಾರ ತ್ಯಜಿಸಬೇಕೆಂದು ಕೇಳಿಕೊಂಡಾಗ, ಈ ಪದ್ಧತಿಯು ಜಗತ್ತಿನ ಬೇರಾವ ದೇಶದಲ್ಲೂ ಇಲ್ಲವೆಂಬ ವಾದವನ್ನು ಮುಂದೊಡಲಾಯಿತು. ಎಲ್ಲವನ್ನೂ ಪರಾನುಕರಣೆ ಮಾಡುವುದಕ್ಕಿಂತ ಇದೊಂದನ್ನಾದರೂ ಭಾರತವು ತಾನಾಗಿಯೇ ಮಾಡಬಾರದೇಕೆ? ಇತರ ಯಾವುದೇ ರಾಷ್ಟ್ರದಲ್ಲಿ ವ್ಯಕ್ತಿಗತ ಚಟುವಟಿಕೆಗಳಲ್ಲಿ ಸರಕಾರ ಭಾರತದಷ್ಟು ಹಸ್ತಕ್ಷೇಪ ನಡೆಸುವುದಿಲ್ಲ; ಅಲ್ಲಿ ಕೊನೆಯ ಕೆಲವೇ ತಿಂಗಳುಗಳಲ್ಲಿ ಯಾವುದೇ ಹೊಸ ಶಾಸನಗಳು ರೂಪಿತಗೊಳ್ಳುವುದಿಲ್ಲ. ಆದರೆ, ಭಾರತದಲ್ಲಿ ಇಂತಹ ಪರಿಸ್ಥಿತಿ ಉಳಿದಿಲ್ಲ. ಚುನಾವಣೆಗಳಲ್ಲಿ ಗೆಲ್ಲುವ ಉದ್ದೇಶದಿಂದ ಕೊನೆಯ ಮಾಸಗಳಲ್ಲಿಯೇ ಮಂತ್ರಿಗಳು ಹಲವಾರು ಆಜ್ಞೆಗಳನ್ನು ಹೊರಡಿಸಿ, ಜನತೆಯನ್ನು ಆಕರ್ಷಿಸಿಬಿಡುತ್ತಾರೆ.

ಆಳುವ ಪಕ್ಷವು ಅಧಿಕಾರವನ್ನು ಪೂರ್ಣಭಾವಿಯಾಗಿ ತ್ಯಜಿಸಿದರೆ, ಒಂದಲ್ಪ ಸಮಯದ ವರೆಗಾದರೂ ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ತಂತಮ್ಮ ಕ್ಷೇತ್ರಗಳಲ್ಲಿ ಆಡಳಿತ ನಿರ್ವಹಿಸುವ ಸಂದರ್ಭ ಒದಗುವುದು. ಇಂತಹ ಅವಕಾಶ ಪಡೆಯುವುದರಿಂದ ಅವರೂ ಸಂತುಷ್ಟರಾಗಬಹುದು. ಈ ನಡುವೆ ಪಕ್ಷಾತೀತ ಮತ್ತು ನಿಷ್ಪಕ್ಷಪಾತ ರಾಜ್ಯಪಾಲರಾಡಳಿತಗಳಲ್ಲಿ ತಮಗೆ ಲಾಭಕರವಾದುದಾವುದೆಂದು ತಿಳಿದುಕೊಳ್ಳುವ ಅವಕಾಶವು ಪ್ರಜಾಜನರಿಗೂ ಒದಗುವುದು. ಚುನಾವಣೆಗಳಲ್ಲಿ ರಾಷ್ಟ್ರಪತಿಗಳ ಆಳಿಕೆಯನ್ನು ಬಯಸುವವರಾರೆಂದು ತಿಳಿಯುವ ಸಲುವಾಗಿ ಪ್ರತ್ಯೇಕವಾಗಿ ಹೆಚ್ಚಿನ ಮತಪೆಟ್ಟಿಗೆಯೊಂದನ್ನೂ ಇರಿಸಲು ಜನತೆ ಬಯಸಲೂ ಬಹುದು. ನಮ್ಮ ದೇಶದಲ್ಲಿ ಚುನಾವಣೆಗೆ ಮೊದಲು ಆಳುವ ಪಕ್ಷವು ಅಧಿಕಾರದಿಂದ ಹೊರಬರುವ ಶಾಸನವೊಂದು ನಿರ್ಮಾಣವಾಗುವ ಸಮಯ ಒದಗಿಬಂದೀತು.

ಅಮೆರಿಕೆಯಲ್ಲಿ ರಾಜಕೀಯ ಪಕ್ಷಗಳಿಗೆ ಕಂಪೆನಿಗಳು ಸ್ವೇಚ್ಛಾನುಸಾರವಾಗಿ ಇಲ್ಲವೇ ಅನಿವಾರ್ಯವಾಗಿ ಧನಸಹಾಯ ಮಾಡಲು ಪ್ರತಿಬಂಧನವಿದೆ. ಸ್ವತಂತ್ರ ಪಕ್ಷವು ಶ್ರೀಮಂತರದು ಎಂದು ದೂರಲಾಗುತ್ತಿದೆ. ಶ್ರೀಮಂತರಿಂದ ಧನಸಹಾಯ ಪಡೆಯುವ ಪಕ್ಷ ಮಾತ್ರ ಶ್ರೀಮಂತರ ಪಕ್ಷ ಹೊರತು ಉಳಿದುವಲ್ಲ. ಶ್ರೀಮಂತರಿಂದ ಹಣ ತನಗೆ ಬೇಕೆಂದು ಕಾಂಗ್ರೆಸ್ ಹೇಳುತ್ತಿದೆ ಆದುದರಿಂದ ಇನ್ನು ಮುಂದಕ್ಕಾದರೂ ಅದು ಸ್ವತಂತ್ರಪಕ್ಷವನ್ನು ಶ್ರೀಮಂತರದ್ದೆಂದು ಹೇಳದಿರಲಿ.

ಭಾಷಾ ಪ್ರಶ್ನೆಯಲ್ಲಿ ತನಗೂ ದ್ರಾವಿಡ ಕಜಗಂಗೂ ಸಂಬಂಧವಿದೆಯೆಂಬುದು ತೀರ ಕಲ್ಪಿತವಾಗಿದೆ. ತಾನು ಇಂಗ್ಲಿಷನ್ನು ಬೇಕೆನ್ನುತ್ತೇನೆ. ದ್ರಾವಿಡ ಕಜಗಂ ಕೂಡ ಬೇಕೆನ್ನುತ್ತದೆ. ಇದು ಧ್ಯೇಯ ಸಾಮ್ಯ ಮಾತ್ರ. ತಾನೂ ನೀರು ಕುಡಿಯುತ್ತೇನೆ; ಕಾಂಗ್ರೆಸಿಗರೂ ನೀರು ಕುಡಿಯುತ್ತಾರೆ; ಆದುದರಿಂದ ತಾನೂ ಕಾಂಗ್ರೆಸಿಗನೆನ್ನುವಷ್ಟೇ ಈ ಕಲ್ಪನೆಯಲ್ಲಿ ಸಮತೆಯಡಗಿದೆ.

ಚುನಾವಣೆಗಳು ಸಮೀಪಿಸುತ್ತಿರುವುದರಿಂದ ಭೂಮಿತಿ ಹೇರುವ ಶಾಸನ ಮಾಡಲು ಕಾಂಗ್ರೆಸ್ಸು ವಿಲಂಬಿಸುತ್ತಿದೆ. ಭೂಮಾಲಿಕರನ್ನು ಇನ್ನೂ ಶಾಸನ ಆಗಿಲ್ಲವೆಂದು ಹೇಳಿ ತನ್ನತ್ತ ಎಳೆಯ ಬಯಸುತ್ತಿದೆ. ಚುನಾವಣೆ ಮುಗಿಯುವ ವರೆಗೆ ಈ ಸೂಚನೆಯೇ ಕೈಬಿಟ್ಟು ಹೋಗುವುದು. ವಿಭಜಿಸಿ ಆಳುವ ನೀತಿಯನ್ನು ಕಾಂಗ್ರೆಸ್ಸು ಅನುಸರಿಸುತ್ತಿದೆ. ಜನತೆಯನ್ನು ಭೂಡವಳದಾರರು ಮತ್ತು ನೌಕರರು; ಸಣ್ಣ ಹಿಡುವಳಿದಾರರು, ದೊಡ್ಡ ಹಿಡುವಳಿದಾರರು ಮೊದಲಾಗಿ ವಿಂಗಡಿಸಿ ತಮ್ಮ ಅಧಿಕಾರವನ್ನುಳಿಸಿಕೊಳ್ಳಲು ಹವಣಿಸಿದೆ. ಸ್ವರಾಜ್ಯ ಬಂದನಂತರ ಇವೆಲ್ಲವೂ ಸರಿಹೋದಬಹುದೆಂದಿದ್ದ ಜನತೆ ಹದಿಮೂರು ವರ್ಷಾನಂತರವೂ ಇದೇ ರೋಗಕ್ಕೆ ಗುರಿಯಾಗಿದೆ. ಆದುದರಿಂದ ಜನತೆ ಗಂಭೀರವಾಗಿ ಪರ್ಯಾಲೋಚನೆ ನಡೆಸಿ ಕಾಂಗ್ರೆಸ್ಸಿನ ನೀತಿಯನ್ನು ಖಂಡಿಸುವ ಸಮಯ ವೇಗ ಸನ್ನಿಹಿತವಾಗಿದೆ.

ಹೊಸ ಶಿಷ್ಯವೇತನ ಸಾಲಗಳು ಕೊಡಲ್ಪಟ್ಟಿವೆ

ಈ ವರುಷ ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ತಾಂತ್ರಿಕ ಅಭ್ಯಾಸಗಳಲ್ಲಿ ತೊಡಗಿರುವ ೪೦ ವಿದ್ಯಾರ್ಥಿಗಳಿಗೆ ಸಾಲರೂಪ ಶಿಷ್ಯವೇತನಗಳನ್ನು ಕೊಡಲಾಗಿದೆ. ಇದರಿಂದ ಇಂಥ ಶಿಷ್ಯವೇತನಗಳನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ೧೪೦ ಆದಂತಾಯಿತು. **ಕೆನರಾ ಬೇಂಕ್ ಜುಬಿಲಿ ಶಿಕ್ಷಣ ನಿಧಿಯಿಂದ** ಆರಿಸಲ್ಪಟ್ಟ ಈ ವಿದ್ಯಾರ್ಥಿಗಳಲ್ಲಿ ಮೈಸೂರು, ಆಂಧ್ರಪ್ರದೇಶ, ಗುಜರಾತ, ಕೇರಳ, ಮದ್ರಾಸು ಮತ್ತು ಮಹಾರಾಷ್ಟ್ರ ರಾಜ್ಯದವರು ಇದ್ದಾರೆ.

ಕೆನರಾ ಬೇಂಕ್ ಲಿಮಿಟೆಡ್

(ಸ್ಥಾಪನೆ : ೧೯೦೬)

— ಜನತೆಯ ಸೇವೆಯಲ್ಲಿದೆ —

ವಿಜ್ಞಾನ ವಿಹಾರ

ಆಕಾಶಯಾನದ ಅಗ್ರೇಸರರು

ಇಂದು ದಿನಕ್ಕೆ ನಾಲ್ಕಾರು ಬಾರಿ ಆಕಾಶದಲ್ಲಿ ಹಾರುವ ವಿಮಾನವನ್ನು ನಾವು ಕಾಣುತ್ತೇವೆ. ಆಕಾಶಯಾನದ ಕನಸು ಸಾವಿರಾರು ವರ್ಷಗಳ ಹಿಂದಿನದು; ಅದು ನನಸಾಗಲು ಅನೇಕಾನೇಕ ವೇತ್ತರು ಶ್ರಮಿಸಿದ್ದಾರೆ; ಆದರೆ, ಕಾಲ ಪರಿಪಕ್ವವೆನಿಸಬೇಕಾದರೆ, ಬಹು ದೀರ್ಘಾವಧಿ ಬೇಕಾಯಿತು.

ಶ್ರೀ ಅ. ಕೃಷ್ಣ ಭಟ್ಟ, ಬಿ. ಎಸ್‌ಸಿ. (ಆನರ್ಸ್)

ಅನಾದಿಯಲ್ಲಿ:

ಸೂರ್ಯನನ್ನು ಹಿಡಿದೆನೆಂದು ಬಹು ಎತ್ತರಕ್ಕೆ ಹಾರಿ ರೆಕ್ಕೆ ಸುಡಿಸಿಕೊಂಡು ಬಿದ್ದ ಜಟಾಯುವಿನಣ್ಣ ಸಂಪಾತಿಯ ಕತೆ ಪುರಾಣ ಓದಿದವರಿಗೆ ಅದರಲ್ಲೂ ನಮ್ಮೂರ ತಾಳಮದ್ದಳೆಯನ್ನು ಕೇಳಿದವರಿಗೆ ಅಪೂರ್ವವಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಆಕಾಶಯಾನದ ವಿಚಾರದಲ್ಲಿ ಹಬ್ಬಿದ ಕತೆಗಳನೇಕ. ಡೇಡಲಸ್ ಮತ್ತು ಇಕಾರಸ್ ಎಂಬ ತಂದೆ-ಮಕ್ಕಳು ಮಿನೋಸ್ ರಾಜನ ಸೆರೆಮನೆಯನ್ನು ತಪ್ಪಿಸಲು ಹಾರಿದುದೂ ಮಗನು ಏಜಿಯನ್ ಸಮುದ್ರಕ್ಕೆ ಅಪ್ಪಳಿಸುವ ಹೊತ್ತಿಗೆ ಸೂರ್ಯನು ಮೇಣವನ್ನು ಕರಗಿಸಿ ರೆಕ್ಕೆಗಳನ್ನಾತನ ಪಕ್ಕಗಳಿಗೊತ್ತುವಂತೆ ಮಾಡಿದುದೂ ಎರಡು ಸಾವಿರ ವರ್ಷಗಳ ಹಿಂದೆ ನಡೆದ ಸಂಗತಿಯಂತೆ.

ಶಕಾರಂಭದ ಬಳಿಕ:

ಹದಿಮೂರನೆಯ ಶತಮಾನದ ಮಧ್ಯಭಾಗದಲ್ಲಿ ರೋಜರ್ ಬೇಕೋನ್ "ಸುಸಜ್ಜಿತ ಯಂತ್ರಗಳ ಸಹಾಯದಿಂದ ಕೃತಕ ರೆಕ್ಕೆಗಳನ್ನು ನಿರ್ಮಿಸಿ ಗಾಳಿಯನ್ನು ತಳ್ಳಲು ಸಾಧ್ಯವಾಗಲೇ ಬೇಕು. ಅಂತಹದೊಂದು ಸಾಧನದ ನಿರ್ಮಾಣ ಅಸಾಧ್ಯವಲ್ಲ" ಎಂದು ಇಂಗ್ಲೆಂಡಿನಲ್ಲಿ ಸಾರತೊಡಗಿದ್ದ.

ಬಿಶೊಪ್ ಗೊಡ್ವಿನ್ ಎಂಬಾತ ಇಪ್ಪತ್ತೈದು ಬೆಳೆದ ಬಲಿಷ್ಠವಾದ ರೂಣಪಕ್ಷಿ (Goose)ಗಳನ್ನೊಂದು ರಥಕ್ಕೆ ಕಟ್ಟಿ ಚಂದ್ರಮನಲ್ಲಿಗೆ ಹಾರುವ ಸುಂದರ ಯೋಜನೆಯನ್ನು ಕಲ್ಪಿಸಿದ್ದ. ಅದರದನ್ನು ಕಾರ್ಯಗತಗೊಳಿಸುವ ಕರ್ತೃ ಆತನಾಗಲಿಲ್ಲ.

ಆಕಾಶಯಾನದ ಮೂಲತತ್ವಗಳು ಮೊತ್ತಮೊದಲಿಗೆ ಹೊಳೆದು ಕಂಡುದು ಲಿಯೊನಾರ್ಡೊ ಡಾ ವಿನ್ಸಿ ಎಂಬೊಬ್ಬ ಭಾವಜೀವಿಗೆ. ಆದರೆ ಆತನೆಷ್ಟು ಕನಸು ಕಟ್ಟಬಲ್ಲನೋ, ಅದನ್ನು ನನಸಾಗಿಸುವ ಬುದ್ಧಿ ಸಾಮರ್ಥ್ಯವೂ ಧುಮ್ಮಿಕ್ಕುತ್ತಿತ್ತು ಬೇಕೆಂದಾಗ. ವಿನ್ಸಿ ಹುಚ್ಚನಂತೆ ಕತ್ತರಿಸಿದ ರೆಕ್ಕೆಗಳೆಷ್ಟೊ! ಹಕ್ಕಿಗಳು ಹಾರುವ ಕ್ರಮ, ರೆಕ್ಕೆಗಳನ್ನಗಲಿಸುವ ವಿಧಾನಗಳನ್ನಾತ ನೋಡಿದಷ್ಟೂ ದಣಿಯನು. ಚಿಕ್ಕ ಚಿಕ್ಕ ಗರಿಗಳ ಸೂಕ್ಷ್ಮವಾದ ಅಲುಗಾಟವನ್ನಾತ ಎವೆಯಿಕ್ಕದೆ ದಿಟ್ಟಿಸುತ್ತಿದ್ದನು ಪ್ರಪಂಚವನ್ನೇ ಮರೆತವನಂತೆ. ಆತನ ಅನವರತ ಅಭ್ಯಾಸವು ಹಕ್ಕಿಗಳ ಹಾರಾಟವನ್ನು ಗಣಿತ ನಿಯಮಕ್ಕೊಳಗಾಗಿ ನಡೆಯುವ ಪ್ರಕೃತಿಯ ಒಂದು ವಿಧಾನವೆಂದೂ, ಅವುಗಳ ಹಾರಾಟದ ವೈವಿಧ್ಯವನ್ನು ಮಾನವನಿಗನುಸರಿಸಲು ಕಷ್ಟವಾಗಬಹುದಾದರೂ, ಸರ್ವಸಾಮಾನ್ಯವಾದ ಹಾರಾಟವನ್ನಾತನಿಗೆ ಸಾಧಿಸಲು ಸಾಧ್ಯವಿದೆಯೆಂದೂ ತೋರಿಸಿಕೊಟ್ಟಿತು. ಪೆಟ್ರೋಲಿಯಂ ಮೊದಲಾದ ಚಾಲಕ ಶಕ್ತಿಗಳಂದಿದ್ದಿದ್ದರೆ ಆ ಮೇಧಾವಿಯ ಕನಸು ನನಸಾಗುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ.

ವಾತಾವರಣದ ಅಗೋಚರ ಪ್ರವಾಹಗಳ ದೆಸೆಯಿಂದ ಆಗಸದಲ್ಲಿ ನಿಶ್ಚಲವಾದ ರೆಕ್ಕೆಗಳಿಂದ ಹಾರುವ ಗಿಡುಗಗಳನ್ನು ನೋಡಿ ಒಟೊ ಲಿಲಿಯೆಂಥಾಲ್ (Otto Lilienthal), ಜಾರುವಿಕೆಯ ನಿಯಮವನ್ನನುಸರಿಸುವ ಉಪಕರಣವನ್ನು ರಚಿಸುವ ಪ್ರಯತ್ನ ಮಾಡಿದನು. ಆದರೆ ವಾತಾವರಣದ ವಿಶೇಷ ಸ್ಥಿತಿಗತಿಗಳ ಸಾಲಭ್ಯ ಪಡೆಯುವ ಮೊದಲು, ಅವು ಸಿಗುವ ತನಕವೂ ಭೂಮಿಯಿಂದೇರಿ ಸಾಗಬೇಕಲ್ಲ!

ಕಳೆದ ಶತಮಾನಾಂತ್ಯದಲ್ಲಿ ಲೇಂಗ್ಲಿ (Langley) ರಚಿಸಿದ ಉಗಿಯಂತ್ರದಿಂದ ನಡೆಸಲ್ಪಟ್ಟ ಹದಿನೈದಡಿ ಅಗಲದ ಇಪ್ಪತ್ತೈದು ಅಡಿ ಉದ್ದದ ಉಪಕರಣವು ಹೊರಟ ಸ್ಥಾನದಿಂದ ಅರ್ಧ ಮೈಲು ದೂರದಲ್ಲಿ ನೂರಡಿ ಎತ್ತರವೇರಿತ್ತು. ಉಗಿಯೊತ್ತಡವು ಬೀಳಲು ಪ್ರಾರಂಭವಾದಾಗಲೇ ಅದು ಚಕ್ರಾಕಾರವಾಗಿ ತಿರುಗಿ ಬರತೊಡಗಿತ್ತು. ತೆಳುವಾದ ಉಕ್ಕಿನ ಆವರಣದ ಆ ಉಪಕರಣ ಬಿದ್ದಾಗಲೂ ಒಡೆಯಲಿಲ್ಲ!

ಮೇಲೆ ಹೇಳಿದುದು ವಾಯುವಿಗಿಂತ ಹೆಚ್ಚು ಭಾರದ ವಸ್ತುವಿನ ಕುರಿತು. ಜೋಸೆಫ್ ಮತ್ತು ಎಟನ್ನೆ ಮೊಂಟ್ಗೊಲ್ಫಿರ್ ಎಂಬೆರಡು ಫ್ರೆಂಚ್ ನಾಗರಿಕರು, ತಂಗಾಳಿಗಿಂತ ಹಗುರವಾದ ಬಿಸಿಗಾಳಿಯು ಮೇಲೇರುವ ತತ್ವದ ಮೇಲೆ ಬೆಲೂನುಗಳನ್ನೂ ಕಂಡುಹಿಡಿದರು. ಹೊತ್ತುವ ಬತ್ತಿಯನ್ನೆತ್ತಿಕೊಂಡೇರುವ ಬೆಲೂನುಗಳನ್ನು ಹಗ್ಗಗಳ ಮೂಲಕ ಬೇಕಾದಂತೆ ತಡೆದು ನಿಲ್ಲಿಸುತ್ತಿದ್ದರು. ಫ್ರಾನ್ಸಿನ ರಾಜ ಲೂಯಿಯು ಎರಡು ಜನ ಪಾತಕಿಗಳನ್ನು ಪ್ರಯೋಗಾರ್ಥವಾಗಿ ಬೆಲೂನುಗಳಲ್ಲೇರಿಸುವ ಆಸೆಯನ್ನು ವ್ಯಕ್ತಪಡಿಸಿದಾಗ ಪಿಲಾಟರ್ ಡಿ ರೋಝಿಯರ್ ಎಂಬೊಬ್ಬ ಉತ್ಸಾಹಿ, "ಪ್ರಪ್ರಥಮವಾಗಿ ಆಗಸವನ್ನೇರುವ ಭಾಗ್ಯವನ್ನು ನನಗೆ ಕೊಡದೆ ಆ ಪಾಪಿಗಳಿಗೇಕೆ ಕೊ

(ಆನೇ ಪುಟ ನೋಡಿರಿ)

> ಸತ್ಕಾರ್ಯಗಳಿಗೆ ಧನಾಭಾವವು ಆತಂಕವೊಡ್ಡಬಾರದು. ದುಷ್ಕಾರ್ಯಗಳಿಗೆ ಧನಸಹಾಯವು ಎಂದಿಗೂ ದೊರೆಯಬಾರದು.

NAVAYUGA

Founder:—

Late Sri. A. B. SHETTY,
Former Minister for Public Health
Govt. of Madras & Govt. of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ವರುಷ	ಉಡುಪಿ	ವಾರ
೩೯	೨೫-೮-'೬೦	೫೦

ಮಧ್ಯಾಹ್ನ ಊಟದ ಯೋಜನೆ

ಆರೋಗ್ಯ ಕಾರ್ಯಕ್ರಮಗಳನ್ನು ನಿಯೋಜಿಸುವ ಸಮಿತಿಯು ಇತ್ತೀಚೆಗೆ ಶಾಲೆಗೆ ಹೋಗುವ ಎಲ್ಲ ಬಾಲಕ ಬಾಲಿಕೆಯರಿಗೆ ಮಧ್ಯಾಹ್ನದ ಊಟವನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಕೇಂದ್ರ ಸರಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಸಿಫಾರಸು ಮಾಡಿರುವುದೆಂದು ತಿಳಿದುಬಂದಿದೆ. ಇದಕ್ಕಾಗಿ ವಾರ್ಷಿಕ ಒಟ್ಟು ಸುಮಾರು ೧೪೦ ಕೋಟಿ ರೂಪಾಯಿಗಳು ವೆಚ್ಚವಾಗಬಹುದೆಂದು ಅಂದಾಜನ್ನೂ ಅದು ಮಾಡಿ, ಇದರಲ್ಲಿ ಅರ್ಧಾಂಶದಷ್ಟನ್ನು ಕೇಂದ್ರ ಸರಕಾರವೂ ಉಳಿದಂಶವನ್ನು ರಾಜ್ಯ ಸರಕಾರ, ಸ್ಥಳೀಯ ಸಂಸ್ಥೆಗಳು ಹಾಗೂ ವಿದ್ಯಾರ್ಥಿ ಪಾಲಕರು ಇಲ್ಲವೇ ಸಾರ್ವಜನಿಕರಿಂದ ಎತ್ತಬೇಕೆಂದೂ ವರದಿಯಲ್ಲಿ ನಿರೂಪಿಸಿದೆ. ಸಮಿತಿಯು ವಿದ್ಯಾರ್ಥಿಗಳನ್ನು ಸುದೃಢಗೊಳಿಸುವುದಕ್ಕಾಗಿ ಅವರ ಆಹಾರದಲ್ಲಿ ಪೌಷ್ಟಿಕಾಂಶವನ್ನು ಹೆಚ್ಚಾಗಿ ಸೇರಿಸಬೇಕೆಂದೂ ಕೇಳಿಕೊಂಡಿರುತ್ತದೆ. ಸಮಿತಿಯ ಈ ಅಭಿಪ್ರಾಯವನ್ನು ಪ್ರತಿಯೋರ್ವ ನಾಗರಿಕನೂ ಮುಕ್ತಹಸ್ತದಿಂದ ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ; ಆದರೆ, ಈ ಯೋಜನೆಯು ಕಾರ್ಯಗತವಾಗುವಾಗ ಎಡತಾಕುವ ವಿಘ್ನಗಳನ್ನು ನ್ಯಾಯೋಚಿತ ರೀತಿಯಲ್ಲಿ ದೂರೀಕರಿಸುವುದು ಮಾತ್ರ ಅತ್ಯವಶ್ಯವೆಂದು ಅವಶ್ಯ ಹೇಳಬೇಕಾಗಿದೆ.

ಯೋಜನೆಗೆ ಬೇಕಾಗುವ ಹಣದಲ್ಲಿ ಅರ್ಧಾಂಶವನ್ನು ಕೇಂದ್ರ ಸರಕಾರದ ವಿವಿಧ ಮಂತ್ರಿ ಶಾಖೆಗಳು ಒದಗಿಸಿಕೊಡುವುದೇನೋ ನಿಜವೇ. ಉಳಿದರ್ಧವನ್ನು ತುಂಬಿಸಿಕೊಳ್ಳುವುದೇ ಪ್ರಯಾಸದ ಮಾತಾಗಿದೆ. ಮುಖ್ಯವಾಗಿ, ದೀನದರಿದ್ರರಿಂದ ತುಂಬಿರುವ ಭಾರತದಲ್ಲಿ ಅಧಿಕಾಂಶ ವಿದ್ಯಾರ್ಥಿಗಳ ಪಾಲಕರು ತಮ್ಮ ಮಕ್ಕಳಿಗೆ ಆವಶ್ಯಕ ಪುಸ್ತಕ, ಬಟ್ಟೆಬರೆಗಳನ್ನು ತೆಗೆದುಕೊಳ್ಳುವುದಕ್ಕೂ ಅಶಕ್ತರಿರುವರೆಂಬುದನ್ನೂ ವಾಸ್ತವವಾಗಿ ಈಗ ಶಾಲೆಗೆ ಹೋಗುತ್ತಿರುವವರಲ್ಲಿ ಕೆಲವಾದರೂ ವಿದ್ಯಾರ್ಥಿಗಳು ಮಧ್ಯಾಹ್ನ ಉಪವಾಸವಿರುವರೆಂಬುದನ್ನೂ ನಾವು ಗಮನಿಸಬೇಕು. ಸಾಮಾನ್ಯವಾಗಿ ಶಕ್ತಿದಾಯಕ ಆಹಾರವನ್ನಷ್ಟೇ ಹೆಚ್ಚಿನ ಪಾಲಕರು ತಮ್ಮ ಮಕ್ಕಳಿಗೆ ಒದಗಿಸಬಲ್ಲರಲ್ಲದೆ ಪೌಷ್ಟಿಕ ಆಹಾರವನ್ನು ನೀಡಲು ಅವರು ಸರ್ವಥಾ ಅಸಮರ್ಥರಿರುವರೆಂಬುದನ್ನೂ ನಾವು ಲಕ್ಷಿಸಬೇಕಾಗುತ್ತದೆ. ಮಳೆಗಾಲದ ದಿನಗಳಲ್ಲಿ ಹಲಸಿನ ಬೀಜವನ್ನು ಬೇಯಿಸಿ ಹೊಟ್ಟೆ ತುಂಬಿಸಿಕೊಳ್ಳುವಷ್ಟು ಬಡವರೂ ನಮ್ಮ ಗ್ರಾಮಗಳಲ್ಲಿದ್ದಾರೆ. ಇಂತಹ ಪಾಲಕರಿಂದ ಮಧ್ಯಾಹ್ನದೂಟದ ಯೋಜನೆಗಾಗಿ ಆರ್ಥಿಕ ಸಹಾಯವನ್ನು ಪಡೆಯುವುದಂತೂ ದೂರವುಳಿಯಿತು; ಕೇಳುವುದೂ ಉಚಿತವೆನಿಸಲಾರದು. ಸ್ಥಳೀಯ ಸಂಸ್ಥೆಗಳಾದರೂ ಆರ್ಥಿಕ ದೃಷ್ಟಿಯಿಂದ ಸುದೃಢವಾಗಿವೆಯೆಂದು ನಿಶ್ಚಯವಾಗಿ ಹೇಳುವಂತಿಲ್ಲ. ಹೆಚ್ಚಿನವುಗಳು ರಾಜ್ಯ ಸರಕಾರದ ಸಹಾಯ ಸಾಲಗಳನ್ನೇ ನಂಬಿಕೊಂಡು ಕುಂಟುತ್ತ ಮುಂದುವರಿಯುತ್ತಿವೆ. ಆದರೂ ಪಂಚಾಯತ ರಾಜ್ಯ ಸ್ಥಾಪನೆಯಾಗುವಾಗ, ಅವುಗಳ ಆದಾಯದ ಮೂಲಗಳು ಹೆಚ್ಚುವ ಸಂಭವವಿದೆ. ಹೀಗಾಗಿ ಇದರಲ್ಲಿ ಒಂದಂಶವನ್ನು ಅವುಗಳು ಅನಿವಾರ್ಯವಾಗಿ ಈ ಯೋಜನೆಗೆ ನೀಡಲೇಬೇಕೆಂದು ವಿಧಿಸಿ ಉಳಿದಂಶವನ್ನು ರಾಜ್ಯ ಸರಕಾರವು ತನ್ನ ಖಜಾನೆಯಿಂದ ಕೊಡುವುದಕ್ಕೆ (ಸಮಯಕ್ಕೆ ಸರಿಯಾಗಿ) ಸಿದ್ಧವಾದರೆ, ನಿಜಕ್ಕೂ ಯೋಜನೆ ಸಫಲಗೊಂಡೀತು. ಸಾರ್ವಜನಿಕರು ಹಾಗೂ ಪಾಲಕರಿಂದ ಇಂತಿಷ್ಟು ಪಡೆಯಬೇಕೆಂದು ಹೇಳಿದರೆ, ನಿರೀಕ್ಷಿಸಿದಷ್ಟು ಪ್ರಯೋಜನ ಎಂದಿಗೂ ದೊರೆಯುವುದಿಲ್ಲ; ನಗದಿಯಾಗಿ ಊಟದ ವ್ಯವಸ್ಥೆ ನಡೆಸುವವರಿಗೆ ಸಿಗುವ ಹಣದಲ್ಲೇ ಕೆಲಸ ಮುಗಿದು ಹೋಗಿ, ಏನೋ ಒಂದು ತರದ ಊಟವು ವಿದ್ಯಾರ್ಥಿಗಳಿಗೆ ದೊರಕೀತು. ಇಂತಹ ಊಟದಲ್ಲಿ ಶಾರೀರಿಕ ಹಾಗೂ ಮಾನಸಿಕ ಸುದೃಢತೆ ಬೆಳೆಸುವುದಕ್ಕೆ ಆವಶ್ಯಕವಾದ ಆಹಾರಾಂಶಗಳು ನಿರೀಕ್ಷಿತ ಪ್ರಮಾಣದಲ್ಲಿ ದೊರೆಯುವುದು ಸಾಧ್ಯವಿರುವುದಿಲ್ಲ. ಈಗಾಗಲೇ ನಮ್ಮ ರಾಜ್ಯದ ಕೆಲವೊಂದು ಶಾಲೆಗಳಲ್ಲಿ ಈ ವ್ಯವಸ್ಥೆ ಅಸಮರ್ಪಕ ರೀತಿಯಲ್ಲಿ ನಡೆಯುಕೊಂಡು ಬರುತ್ತಿದೆಯೆಂದು ಕೇಳುತ್ತೇವೆ. ಇಂತಹ ಅರ್ಧಂಬರ್ಧ ಯೋಜನೆಯಿಂದ ಸಮಿತಿಯು ಬಯಸಿದ ಪ್ರಯೋಜನಗಳು ಲಭಿಸಲಾರವು.

ಆದರೆ, ಆರ್ಥಿಕ ಕೊರತೆಯಿರುವ ಒಂದೇ ಒಂದು ಕಾರಣದಿಂದ ಉಪಯುಕ್ತವಾದ ಈ ಯೋಜನೆ ಮುಗ್ಗರಿಸುವುದು ಸರಿಯಲ್ಲ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ತಮ್ಮ ವಿವಿಧ ಖಾತೆಗಳಲ್ಲಿ ತುಸು ಮಿತವ್ಯಯವನ್ನು ಸಾಧಿಸಿಕೊಂಡರೆ, ಈ ೧೪೦ ಕೋಟಿ ರೂಪಾಯಿಗಳ ಬಾಬು ಕೂಡಿಸುವುದು ಹೆಚ್ಚಿನ ಪ್ರಯಾಸವೆನಿಸುವುದಿಲ್ಲ; ಮತ್ತು ಸರಕಾರಗಳಿಗೆ ಹಣ ಕೂಡಿಸುವ ಶಕ್ತಿಯೂ ಇದೆ; ಸಾಧ್ಯತೆಯೂ ಇದೆ. ಮುಂದಿನ ಜನಾಂಗವಾದ ಇಂದಿನ ಮಕ್ಕಳು ಸುದೃಢರೂ ಬುದ್ಧಿವಂತರೂ ಆಗಬೇಕೆಂದು ಬಯಸುವ ನಾವು ಈ ಬಗ್ಗೆ ತೀವ್ರ ಗಮನ ಹರಿಸಿ, ಈ ನಿಯೋಜಿತ ಯೋಜನೆಯನ್ನು ಪೂರ್ಣರೂಪದಲ್ಲಿ ಕಾರ್ಯಗತಗೊಳಿಸುವ ಆವಶ್ಯಕತೆಯಿದೆ; ಗಂಭೀರವಾಗಿ ಪರಿಸ್ಥಿತಿಯನ್ನು ಅಭ್ಯಸಿಸಿ, ಬರುವ ಅಡೆತಡೆಗಳನ್ನು ನಿವಾರಿಸಿಕೊಳ್ಳುವ ಸಾಹಸವನ್ನು ಮಾಡಬೇಕಾಗಿದೆ.

'ನವಯುಗ'ದ ನಲ್ವತ್ತನೆ ವರ್ಷ

ಈ ಸಂಚಿಕೆಯೊಡನೆ "ನವಯುಗ"ದ ಮೂವತ್ತೊಂಬತ್ತನೆಯ ಸಂಪುಟವು ಮುಕ್ತಾಯಗೊಳ್ಳುವುದು. ಮುಂದಿನ ಸಂಚಿಕೆಯು ೪೦ನೆ ವರ್ಷದ ಮೊದಲನೆಯ ಅಂಕವಾಗಿ ವಾಚಕರ ಕೈಸೇರಲಿರುವುದು. ಪತ್ರಿಕಾ ಪ್ರಪಂಚದಲ್ಲಿ ಇಷ್ಟೊಂದು ದೀರ್ಘಕಾಲ ತಲೆಯೆತ್ತಿ ನಿಲ್ಲುವುದೆಂದರೆ, ಅದೂ ಮಧ್ಯಮ ಮಟ್ಟದ ದೇಶೀಯ ಭಾಷಾ ಪತ್ರಿಕೆಗಳಿಗೆ, ಸಾಹಸದ ಮಾತೆಂದು ಪ್ರತ್ಯೇಕ ಹೇಳಬೇಕಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ದೀರ್ಘಕಾಲ ನಿಂತಿರುವ ಪತ್ರಿಕೆಗಳಲ್ಲಿ ಒಂದಾದ "ನವಯುಗ" ತನ್ನ ವಾಚಕರ ಅಪೇಕ್ಷೆಗನುಸಾರವಾಗಿ ಕಾಲೋಚಿತವಾದ ಬದಲಾವಣೆಗಳೊಂದಿಗೆ ಜ್ಞಾನಪಿಪಾಸುಗಳ ತೃಷೆಯನ್ನು ನೀಗಿಸುತ್ತ ಬಂದಿದೆ. 'ರಾಜನೀತಿ'ಯು ಇಂದು ಜನ ಜನದ ನರನಾಡಿಗಳಲ್ಲಿಯೂ ಸಂಚರಿಸುತ್ತಿರುವಾಗ, ರಾಜಕಾರಣಕ್ಕೆ ಪ್ರಾಧಾನ್ಯ ನೀಡಬೇಕೆಂದು ಹೇಳುವವರೂ ಇದ್ದಾರೆ. ಆದರೆ, ಈ ಕೆಲಸವನ್ನು ದೈನಿಕ ಪತ್ರಿಕೆಗಳು ಹೇರಳ ಪ್ರಮಾಣದಲ್ಲಿ ಮಾಡುತ್ತಿರುವುದರಿಂದ ವಾರಪತ್ರಿಕೆಗಳು ಇವಕ್ಕೇ ಪ್ರಾಧಾನ್ಯವನ್ನು ನೀಡುವುದು ಇಂದು ಅಷ್ಟೊಂದು ಸಮಂಜಸವೆನಿಸುವುದಿಲ್ಲ. ಈಗೀಗ ಕನ್ನಡದಲ್ಲಿಯೂ ದೈನಿಕಗಳು ಹೆಚ್ಚಾಗಿವೆ. ಸರ್ವೇ ಸಾಮಾನ್ಯವಾಗಿ ಎಲ್ಲೆಡೆಯೂ ಇವು ಬಿಸಿ ಬಿಸಿ ವಾರ್ತೆಗಳನ್ನು ಹರಡಿಸುತ್ತವೆ. ಅವನ್ನೇ ಮರಳಿ ಸಾಪ್ತಾಹಿಕಗಳು ವಾಚಕರಿಗೊದಗಿಸಿದರೆ, ಅವು ಹಳಸಲಾಗುತ್ತವೆಯಲ್ಲವೆ? ಎಂತಲೇ ರಾಜಕೀಯವನ್ನು ಪೂರ್ಣ ತ್ಯಜಿಸದೆ, ನಿಷ್ಪಕ್ಷವಾಗಿ, ಜನತೆಯ ಜ್ಞಾನಾಭಿವರ್ಧನೆಯತ್ತ ಗಮನ ಹರಿಸುವ ಕಾರ್ಯವನ್ನು 'ನವಯುಗ'ವು ಮಾಡುತ್ತಲಿದೆ; ಇದನ್ನೇ ಇನ್ನು ಮುಂದಕ್ಕೂ ಮುಂದುವರಿಸುತ್ತ ಹೋಗುವುದು.

'ಪತ್ರಿಕೆಯನ್ನು ಮಾಡಿ ನೋಡು' ಎಂಬುದು ಒಂದು ಗಾದೆಯ ಮಾತಾಗಿ ಬಂದಿದೆ. ಅನೇಕಾನೇಕ ವಿಘ್ನವಿಡಂಬರಗಳನ್ನೂ ಕಷ್ಟನಿಷ್ಠುರಗಳನ್ನೂ ಸಹಿಸಿಕೊಂಡು ಬರುತ್ತಿರುವ ಪತ್ರಿಕೆಯ ನಿಜವಾದ ಜೀವಾಳವೆಂದರೆ, ಅದರ ಚಂದಾದಾರರು ಮಾತ್ರ. ಚಂದಾದಾರರ ಸಂಖ್ಯೆ ಬೆಳೆಯುತ್ತ ಬಂದಲ್ಲಿ ಪತ್ರಿಕೆಯ ಸ್ಥಿತಿಗತಿಯೂ ಉನ್ನತವಾಗುತ್ತ ಬರುವುದು; ವಾಚಕರಿಗೂ ಅನೇಕಾನೇಕ ಉಪಯುಕ್ತ ಮಾಹಿತಿಯನ್ನು ಒದಗಿಸುವ ಅನುಕೂಲ ದೊರೆಯುವುದು. ಆದುದರಿಂದ, ಚಂದಾದಾರರು ಕ್ರಮವಾಗಿ ತಮ್ಮಿಂದ ಸಲ್ಲತಕ್ಕ ಹಣವನ್ನು ಪಾವತಿ ಮಾಡುತ್ತ ಬರಬೇಕೆಂದು ಪ್ರತ್ಯೇಕ ಸೂಚಿಸಬೇಕಾಗಿಲ್ಲ. "ನವಯುಗ"ದ ಯಶಸ್ಸಿಗೆ ಕಾರಣರಾದ ಚಂದಾದಾರರು, ಜಾಹೀರಾತುದಾರರು, ಲೇಖಕ ಬಂಧುಗಳೆಲ್ಲರನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಂಡು, ಇವರೆಲ್ಲರ ಸಹಾಯವು ಇದಕ್ಕೂ ಮಿಗಿಲಾಗಿ ಮುಂದಿನ ವರ್ಷದಲ್ಲಿ ದೊರೆಯುವುದೆಂದು ಹಾರೈಸುತ್ತೇವೆ. ನಿಮ್ಮೆಲ್ಲರ ಸಹಕಾರದಿಂದ, ಸಲಹೆ ಸೂಚನೆಗಳಿಂದ 'ನವಯುಗ'ವು ನವಯುಗದ ವಾಣಿಯನ್ನು ಕನ್ನಡಿಗರ ಮನೆಮನೆಗೆ ಮುಟ್ಟಿಸುವುದರಲ್ಲಿ ಯಶಸ್ವಿಯಾಗಲೆಂದೂ ಶ್ರೀ ಪರಮಾತ್ಮನು ನಮ್ಮ ಧ್ಯೇಯವನ್ನು ಕಾರ್ಯಕೃತಗೊಳಿಸುವಲ್ಲಿ ಅನುಕೂಲನಾಗಲೆಂದೂ ಅಭಿಲಷಿಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಸಹೋದರ ಮೈತ್ರಿ

ಭಾರತದ ಭೂಭಾಗವನ್ನು ಚೀನವು ತನ್ನದೆಂದು ಭೂಪಟದಲ್ಲಿ ತೋರಿಸಿದ್ದು, ಮುಂದೆ ಅದರ ಮೇಲೆ ತನ್ನ ಅಧಿಕಾರವನ್ನು ಜಮಾಯಿಸಲು ತೊಡಗಿರುವುದನ್ನು ನಾವು ಕಣ್ಣಮುಂದೆ ನೋಡುತ್ತಿರುವಂತೆಯೇ ಈಗ ಇದಕ್ಕೆ ಪುಷ್ಟಿದೊರೆಯುವ ಇನ್ನೊಂದು ಸಂಗತಿ ಬೆಳಕುಕಂಡಿದೆ. ೧೯೫೭ರಲ್ಲಿ ರಶ್ಯವು ತಾನುಪ್ರಕಟಿಸಿದ ಒಂದು ಜಾಗತಿಕ ನಕ್ಷೆಯಲ್ಲಿಯೂ ಭಾರತದ ಕೆಲವೊಂದು ಭಾಗವನ್ನು ಚೀನಾದ ಅಂಶವೆಂದು ಗುರುತಿಸಿರುವುದು. ಈ ಬಗ್ಗೆ ಭಾರತವು ರಶ್ಯಕ್ಕೆ ಪ್ರತಿಭಟನೆಯನ್ನು ವ್ಯಕ್ತಪಡಿಸಿದಾಗ, ಅದು ವಿಷಯವನ್ನು ಪರಿಶೀಲಿಸುವ ಆಶ್ವಾಸನೆಯಿತ್ತಿದೆಯಂತೆ. ರಶ್ಯ ಮತ್ತು ಚೀನಗಳು ತಯಾರಿಸಿದ್ದ ಭೂಪಟಗಳಲ್ಲಿ ಚೀನದ್ದೆಂದು ಅಂಕಿತವಾದ ಭಾಗಗಳಲ್ಲಿ ಕೆಲವೆಡೆ ಸಾಮ್ಯತೆಯಿರುವುದೆಂದೂ ಗೊತ್ತಾಗಿದೆ. ರಶ್ಯ-ಚೀನಾಗಳ ನಡುವಣ ಮೈತ್ರಿಯು ಇದರಿಂದ ಬಹು ಬಿಗಿಯಿರುವುದೆಂದು ತಿಳಿಯಬಹುದಲ್ಲವೆ?

ಸರಕಾರಿ ಭಾಷೆಯ ಪ್ರಶ್ನೆ

ಭಾರತದ ಸರಕಾರಿ ಭಾಷೆಯಾಗಿ ಹಿಂದಿಯನ್ನು ೧೯೬೫ರ ನಂತರ ಸ್ವೀಕರಿಸಬೇಕಾಗಿದ್ದರೂ ಈ ಅವಧಿಯ ಮೇಲೆಯೂ ಇಂಗ್ಲಿಷನ್ನು ಸರಕಾರಿ ಭಾಷೆಯಾಗಿ ಕೆಲಕಾಲ ಮುಂದುವರಿಯುವ ಬಗ್ಗೆ ಸಂವಿಧಾನದ ೩೪೩ನೆಯ ಅನುಚ್ಛೇದಕ್ಕೆ ಸಕಾಲದಲ್ಲಿ ತಿದ್ದುಪಡಿ ವಿಧೇಯಕವನ್ನು ಮಂಡಿಸಲಾಗುವುದೆಂದು ಗೃಹಮಂತ್ರಿ ಶ್ರೀ ಪಂತರು ಲೋಕ ಸಭೆಯಲ್ಲಿ ತಿಳಿಸಿದ್ದಾರೆ. ಹಿಂದಿಯನ್ನು ಯಾರ ಮೇಲೂ ಒತ್ತಾಯದಿಂದ ಹೇರಲಾಗುವುದಿಲ್ಲವೆಂದೂ ಈ ಬಗ್ಗೆ ಯಾರೂ ಕಳವಳಪಡಬೇಕಾಗಿಲ್ಲವೆಂದೂ ಅವರು ಸ್ಪಷ್ಟಪಡಿಸಿದ್ದಾರೆ.

ಅನಿಶ್ಚಿತ ರಾಜಕಾರಣ

ಆಫ್ರಿಕೆಯಲ್ಲಿನ ಕಾಂಗೋ-ಕಟಾಂಗಗಳ ಗೊಂದಲವು ಮುಂದುವರಿಯುತ್ತಿದ್ದಂತೆಯೇ ಪಶ್ಚಿಮ ಆಫ್ರಿಕೆಯ ಮಾಲಿ ಒಕ್ಕೂಟದಿಂದ ಸೆನೆಗಲ ರಾಜ್ಯವು ಹೊರನಡೆದು ತಾನು ಸ್ವತಂತ್ರವೆಂದು ಸಾರಿ ಇನ್ನೊಂದು ವಿಸ್ಮಯವನ್ನುಂಟು ಮಾಡಿದೆ. ದೇಶದಲ್ಲಿ ಗಂಡಾಂತರ ಪರಿಸ್ಥಿತಿಯನ್ನು ಸಾರಿದ್ದು ಮಾತ್ರವಲ್ಲ, ತನ್ನನ್ನು ಪ್ರತ್ಯೇಕ ರಾಷ್ಟ್ರವೆಂದು ಬಗೆದು ಸದಸ್ಯತ್ವ ನೀಡಬೇಕೆಂದು ಸಂಯುಕ್ತ ರಾಷ್ಟ್ರ ಸಂಸ್ಥೆಗೆ ವಿನಂತಿ ಪತ್ರವನ್ನೂ ರವಾನಿಸಿದೆ. ೧೯೫೯ರ ನವಂಬರದಲ್ಲಿ ಸ್ವಾತಂತ್ರ್ಯಗಳಿಸಿದ ಸೆನಗಲ್ ಮತ್ತು ಸುಡಾನ್‌ಗಳ ಒಕ್ಕೂಟವನ್ನು ಬಹು ಪ್ರಯಾಸದಿಂದ ಹದಿನಾರು ತಿಂಗಳ ಮೊದಲು ರಚಿಸಲಾಗಿತ್ತು. ಒಕ್ಕೂಟದ ಅಧ್ಯಕ್ಷರ ನೇಮಕದಲ್ಲಿ ಈ ಎರಡು ರಾಷ್ಟ್ರಗಳ ನಡುವೆ ಭಿನ್ನಾಭಿಪ್ರಾಯವೆದ್ದುದೇ ಈ ಪ್ರತ್ಯೇಕತೆಗೆ ಕಾರಣವೆಂದು ಗೊತ್ತಾಗಿದೆ.

ಅಲ್ಲಲ್ಲಿಯ ಸುದ್ದಿಸಾರ

ಸ್ವಾತಂತ್ರ್ಯ ದಿನಾಚರಣೆಗಳು.

ಉಡುಪಿ ನಗರಸಭೆ— ಮತ್ತು ಸಾರ್ವಜನಿಕರ ವತಿಯಿಂದ ಸ್ವಾತಂತ್ರ್ಯ ದಿನಾಚರಣೆಯು ನೆರವೇರಿತು. ನಗರಸಭಾಧ್ಯಕ್ಷ ಡಾ| ಕೆ. ಎಲ್. ಐತಾಳರು ಬೆಳಿಗ್ಗೆ ಅಜ್ಜರಕಾಡು ಮೈದಾನದಲ್ಲಿ ಧ್ವಜಾರೋಹಣಗೈದರು. ಪರ್ಯಾಯ ಪೀಠಿಗೆ ಏರಿದ ಶ್ರೀ ಪಾದಂಗಳವರ ಕಡೆಯಿಂದ ವಿದ್ಯಾರ್ಥಿಗಳಿಗೆ ಸಿಹಿತಿಂಡಿ ವಿತರಣೆ ಮಾಡಲಾಯಿತು. ಸಂಜೆ ಕುಂದಾಪುರ ಅಸಿಸ್ಟೆಂಟ್ ಕಮಿಶನರ್ ಶ್ರೀ ಕೆ. ನರಸಿಂಹ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜನತಾ ಭವನದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಡಾ ಕೆ. ಎಲ್. ಐತಾಳರು ಸ್ವಾಗತ ಭಾಷಣವಿತ್ತರು. ಡಾ. ಪಿ ಜಿ. ಆಚಾರ್ಯರು ಭಾಷಣವಿತ್ತ ಮೇಲೆ ಅಧ್ಯಕ್ಷರು ಬಹುಮಾನ ಕಂಟಿ ಭಾಷಣಮಾಡಿದರು. ಮನರಂಜನೆಯ ಕಾರ್ಯಕ್ರಮಗಳಾದ ಮೇಲೆ ಮುನ್ಸಿಪಲ್ ಕಮಿಶನರ್ ಶ್ರೀ ಎ. ಜೋಶುವರವರು ಕೃತಜ್ಞತೆಗಳನ್ನರ್ಪಿಸಿದರು.

ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ ಧ್ವಜವಂದನೆ ಎನ್. ಸಿ. ಸಿ ಹಾಗೂ ಎ. ಸಿ. ಸಿ. ದಳದವರ ಪಥಚಲನ ಪ್ರಧಾನಾಧ್ಯಾಪಕ ಶ್ರೀ ವಿಟ್ಠಪ್ಪನವರಿಂದ ಗೌರವರಕ್ಷೆ ಸ್ವೀಕಾರ ಮೊದಲಾದ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯ ದಿನಾಚರಣೆಯು ಆಚರಿಸಲ್ಪಟ್ಟಿತು.

ಪಡುಕಳ್ತೂರು— ಹಾ| ಪ್ರಾ| ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಎಲ್ಲೂರ್ ಲಕ್ಷ್ಮೀನಾರಾಯಣ ಜೋತಿಷ್ಯರ ಅಧ್ಯಕ್ಷತೆಯಲ್ಲಿ ಪ್ರಭಾತಫೇರಿ, ಧ್ವಜವಂದನೆ, ಸಭೆ, ವಿನೋದಾವಳಿ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು. ಶ್ರೀ ರಘುರಾಮ ಶೆಟ್ರ ವತಿಯಿಂದ ಮಕ್ಕಳಿಗೆ ಸಿಹಿತಿಂಡಿ ವಿತರಣೆಯಾಯಿತು.

ಕಿದಿಯೂರು ಎಯ್ಡೆಡ್— ಹಿರಿಯ ಬುನಾದಿ ಮತ್ತು ಉನ್ನತ ಪ್ರಾಥಮಿಕ ಶಾಲೆಯಲ್ಲಿ ಉಡುಪಿ ರಾಷ್ಟ್ರಭಾಷಾ ಶಿಕ್ಷಕ ಶಿಬಿರದ ಪ್ರಾಧ್ಯಾಪಕ ಉ ಲಕ್ಷ್ಮೀನಾರಾಯಣ ಕಿಣಿಯವರ ಹಿರಿತನದಲ್ಲಿ ಸ್ವಾತಂತ್ರ್ಯೋತ್ಸವವು ಆಚರಿಸಲ್ಪಟ್ಟಿತು. ಶಾಲಾ ಮುಖ್ಯೋಪಾಧ್ಯಾಯರು ಸ್ವಾಗತಿಸಿದ ಬಳಿಕ, ಸ್ವಾಗತ ನೃತ್ಯ ಶ್ರೀಗಳಾದ ಎಚ್. ವೆಂಕಟಗಿರಿ, ಎಂ. ಎಂ. ಜಾಫರ್ ಮತ್ತು ಕೆ. ಭೋಜ ಪೂಜಾರಿಯವರೂ, ಅಧ್ಯಕ್ಷರೂ ಭಾಷಣವಿತ್ತರು. ಶಾಲಾ ಆಡಳಿತದಾರ ಶ್ರೀ ಎ. ನಾರಾಯಣ ತಂತ್ರಿ ಮತ್ತು ಅಧ್ಯಾಪಕ ವೃಂದದ ವತಿಯಿಂದ ಸಾಟಕ್ಕಿನೀರು ಮತ್ತು ಸಿಹಿತಿಂಡಿಯನ್ನು ಮಕ್ಕಳಿಗೆ ವಿತರಣೆ ಗೈಯಲಾಯ್ತು. ಪ್ರಾತಃಕಾಲ "ಪ್ರಭಾತ ಫೇರಿ"ಯಾಗಿ ಶಾಲಾ ಪ್ರಾಧ್ಯಾಪಕ ಶ್ರೀ ಕೆ. ಪದ್ಮನಾಭ ಭಟ್, ಬಿ. ಎ. ಬಿ. ಟಿ. ಯವರು ರಾಷ್ಟ್ರ ಧ್ವಜವನ್ನರಳಿಸಿದರು.

ಮರ್ಣೆ ಎಯ್ಡೆಡ್ ಎಲಿಮೆಂಟರಿ ಶಾಲೆಯಲ್ಲಿ ಮಣಿಪುರ ಪಂಚಾಯತ ಬೋರ್ಡಿನ ವೈಸ್ ಪ್ರೆಸಿಡೆಂಟರಾದ ಮರ್ಣೆ ಬೊಮ್ಮಯ್ಯ ಶೆಟ್ರವರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಸಭೆ, ಬಳಿಕ ಮೆರವಣಿಗೆ ಇತ್ಯಾದಿ ಕಾರ್ಯಕಲಾಪಗಳು ಸಾಂಗವಾಗಿ ನೆರವೇರಿದುವು. ಅಪರಾಹ್ನ ಮರ್ಣೆ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಪರವೂರ ಅರ್ಥದಾರಿಗಳ ಕೂಡುವಿಕೆಯಿಂದ ಸುಧನ್ವ ಕಾಳಗ ಯಕ್ಷಗಾನ ಕೂಟ ಜರಗಿತು.

ಆಲೂರು ಸರಸ್ವತಿ ಎಯ್ಡೆಡ್ ಎಲಿಮೆಂಟರಿ ಶಾಲೆಯಲ್ಲಿ ಹರ್ಕೂರು ಪಟೇಲ್ ಹೆರಿಯಣ್ಣ ಸೆಟ್ರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಶ್ರೀ ಸುಬ್ರಾಯ ಆಚಾರ್ಯರಿಂದ ಸಿಹಿತಿಂಡಿ ವಿತರಣೆ, ಉಪ್ಪೂರು ಜಗನ್ನಾಥ ಸೆಟ್ಟರಿಂದ ಧನ್ಯವಾದ ಸಮರ್ಪಣೆ ಮೊದಲಾದ ಕಾರ್ಯಕಲಾಪಗಳಿಂದ ಜರಗಿತು.

ಆಜ್ರಿಹರ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಪಟೇಲ್ ರಘುರಾಮ ಶೆಟ್ರಿಂದ ಧ್ವಜಾರೋಹಣ, ಶ್ರೀ ಎ. ಯಸ್. ವಿಟ್ಠಲ್ ಶೆಟ್ರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ ಮೊದಲಾದ ಕಾರ್ಯಕ್ರಮಗಳಾದುವು

ನಾಡಗುಡ್ಡೆ ಅಂಗಡಿಯಲ್ಲಿ ಶ್ರೀ ದೇರಣ್ಣ ರೈಯವರಿಂದ ಧ್ವಜಾರೋಹಣ, ಭಾಷಣ, ಶಾಲಾಮಕ್ಕಳಿಗೆ ಸ್ಲೇಟು, ಸಿಹಿತಿಂಡಿ ವಿತರಣೆ, ಪಂದ್ಯಾಟ, ಯಕ್ಷಗಾನ ಕೂಟ ಶ್ರೀ ಪಿ. ಯಂ. ಹುರಿಗದ್ದಿಯವರಿಗೆ ಸುವರ್ಣ ಪದಕ ಸಮರ್ಪಣೆಯು ನಡೆಯಿತು.

ಪಾದೂರು ಯು. ಬಿ. ಯೆಂ. ಸಿ. ಶಾಲೆಯಲ್ಲಿ ಶ್ರೀ ವಾಸುದೇವ ಐತಾಳರಿಂದ ಧ್ವಜಾರೋಹಣ, ಸಾರ್ವಜನಿಕ ಸಭೆ, ಭಾಷಣ, ಶ್ರೀ ಎಂ. ಜಯರಾಮ ಹೆಗ್ಡೆಯವರಿಂದ ಧನ್ಯವಾದ, ಮಕ್ಕಳಿಗೆ ಸಿಹಿತಿಂಡಿ ವಿತರಣೆಗಳಿಂದ ಸ್ವಾತಂತ್ರ್ಯೋತ್ಸವ ಜರಗಿತು.

ದೈವಜ್ಞ ವೆಲ್‌ಫೇರ್ ಸೆಂಟರ್— ಮಂಗಳೂರು, ಇದರ ವತಿಯಿಂದ ಸ್ವಾತಂತ್ರ್ಯ ದಿನೋತ್ಸವವು ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದ ವಠಾರದಲ್ಲಿ ತಕ್ಕ ಕಾರ್ಯಕ್ರಮಗಳಿಂದ ಜರಗಿತು. ಪ್ರಾತಃಕಾಲ ಶ್ರೀ ಎಮ್. ಎನ್. ಶೇಟ್‌ರವರು ರಾಷ್ಟ್ರೀಯ ಧ್ವಜವನ್ನರಳಿಸಿದರು. ಬಾಲಕರಿಗೆ ಸಿಹಿತಿಂಡಿ ಹಂಚಲಾಯಿತು. ಸಾಯಂಕಾಲ ಶ್ರೀ ಯು. ಪಿ. ಎಸ್. ರಾಯಕರ್‌ರವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಎಸ್. ವಾಸುದೇವ ರಾವ್‌ರವರೂ, ಶ್ರೀ ಕೆ. ಕೆ. ಆರ್. ಶೇಟ್‌ರವರೂ ಭಾಷಣಮಾಡಿದರು. ಅಧ್ಯಕ್ಷರ ಭಾಷಣವಾದಬಳಿಕ ದೈವಜ್ಞ ಬ್ರಾಹ್ಮಣ ವೆಲ್‌ಫೇರ್ ಸೆಂಟರಿನ ವ್ಯವಸ್ಥಾಪಕ ಶ್ರೀ ಕೆ. ಕೆ. ಆರ್. ಶೇಟ್‌ರವರು ಧನ್ಯವಾದಗಳನ್ನಿತ್ತರು.

ಮುಲ್ಕಿ ಯು. ಬಿ. ಯಂ. ಸಿ.— ಹಿರಿಯ ಬುನಾದಿ ಶಾಲಾ ವಠಾರದಲ್ಲಿ ಡಾ. ವಿ. ಕೆ. ಬಲ್ಲಾಳರಿಂದ ಧ್ವಜಾರೋಹಣವಾಗಿ ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಭಾಷಣ, ಲೇಖನ ವಾಚನಗಳಾದುವು. ಕೊಡಿಪ್ಪಾರು ಪಂಚಾಯತದ ವತಿಯಿಂದ ಸಿಹಿತಿಂಡಿ ವಿತರಣೆಯಾಯಿತು.

ಸುರತ್ಕಲ್ ಮುಕ್ಕ ಮಿತ್ರಪಟ್ಟಣ ಗಂಗಯ ಸ್ಮಾರಕ ರಾತ್ರಿ ಶಾಲೆ ಮತ್ತು ಅಗ್ಗಿದ ಕರಿ ಹಾ| ಪ್ರಾ| ಶಾಲೆಗಳ ಒಡನಾಟದಿಂದ ವಿವಿಧ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯ ದಿನಾಚರಣೆ ನಡೆಯಿತು

ಕಟಪಾಡಿ— ಇಲ್ಲಿಯ ಎಸ್. ವಿ. ಎಸ್. ಹೈಸ್ಕೂಲಿನ ಕಲಾಮಂದಿರದಲ್ಲಿ ಡಾ. ಕೆ. ಜಿ. ಕಿಣಿಯವರ ಅಧ್ಯಕ್ಷತೆಯಲ್ಲಿ ಸೇರಿದ ವಿದ್ಯಾರ್ಥಿಗಳ ಸಭೆಯಲ್ಲಿ ಡಾ| ಟಿ. ಮಾಧವ ಪೈಗಳು ಪ್ರಚಲಿತ ಸಮಸ್ಯೆಗಳ ಕುರಿತು ಉಪನ್ಯಾಸವಿತ್ತರು. ಆರಂಭದಲ್ಲಿ ಹೆಡ್ ಮಾಸ್ಟರ್ ಶ್ರೀ ಪಿ. ದಯಾನಂದ ನಾಯ್ಕರು ಡಾ| ಪೈಗಳ ಬಹುಮುಖ ಸೇವೆಯ ಪರಿಚಯಮಾಡಿ ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಬಾಲಕೃಷ್ಣ ನಾಯ್ಕರು ಧನ್ಯವಾದಗೆಳನ್ನಿತ್ತರು

ದ. ಕ. ಜಿಲ್ಲಾ ಪದ್ಮಶಾಲಿ ಸಮಾಜ ಸೇವಾ ಸಂಘದ ಸಮಿತಿಯ ಸಭೆಯೊಂದು ಕಿನ್ನಿಮೂಲ್ಕಿ ವೀರಭದ್ರ ನಿಲಯದಲ್ಲಿ ತಾ. 14ರಂದು ಶ್ರೀ ಕೆ. ವಿ. ಸೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಜರಗಿ ವಿದ್ಯಾರ್ಥಿ ವೇತನ ಮಂಜೂರಾತಿ ಮೊದಲಾದ ಕಾರ್ಯಕ್ರಮಗಳಾದುವು.

ಬೆಳ್ತಂಗಡಿ ಪ್ರದೇಶಕ್ಕೆ ವಿದ್ಯುತ್ ವಿಸ್ತರಣೆ— ಮೈಸೂರು ವಿದ್ಯುತ್ ಬೋರ್ಡಿನ ತಾ. 16ರಲ್ಲಿ ಜರಗಿದ ಸಭೆಯಲ್ಲಿ ಬಂಟ್ವಾಳದಿಂದ 33 ಕಿ. ವ. ಲೈನನ್ನು ಬೆಳ್ತಂಗಡಿ ವಿಸ್ತರಿಸಲು ರೂ. 6,33,000 ಮಂಜೂರಾಗಿದೆಯೆಂದೂ ಅಲ್ಲಿಂದ ಗುರುವಾಯನಕೆರೆ, ಉಜ್ರೆ, ಧರ್ಮಸ್ಥಳ, ಕಲ್ಮಂಜ, ಮುಂಡಾಜೆ, ಚಾರ್ಮಾಡಿ, ಪುಂಜಾಲುಕಟ್ಟೆ, ವೇಣೂರು, ನಿಡ್ಲೆ, ಇವೇ ಮೊದಲಾದ ಕಡೆಗಳಿಗೆ ವಿದ್ಯುಚ್ಛಕ್ತಿಯನ್ನು ವಿಸ್ತರಿಸಲಾಗುವುದೆಂದು ವಿದ್ಯುತ್ ಬೋರ್ಡಿನ ಸದಸ್ಯ ಶ್ರೀ ಟಿ. ಎ. ಪೈಗಳು ಸೂಚಿಸುತ್ತಾರೆ.

ವಿದೇಶ ಪ್ರಯಾಣ— ಪುತ್ತೂರು ತಾಲೂಕು ಕಲ್ಯಾಡಿ ಗುತ್ತಿನ ವಾ, ಗುಗ್ಗಳಿ ಎಸ್ಟೇಟು ಸುಪರಿಂಟೆಂಡೆಂಟರಾದ ಶ್ರೀ ಎಂ. ರಘುನಾಥ ರೈಗಳ ಪುತ್ರ ಶ್ರೀ ಜಾನುರಾಜ ರೈ "ಇಂಡಿಯನ್ ನೇವಿ" ಇವರು ತಾ. 14ರಂದು ಹೆಚ್ಚಿನ ತರಬೇತಿಗಾಗಿ ಏರ್ ಇಂಡಿಯಾ ಇಂಟರ್‌ನೇಶನಲ್ ವಿಮಾನದಲ್ಲಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು.

ಕಾಲೇಜು ಯೂನಿಯನಿನ ಚುನಾವಣೆ— ಉಡುಪಿಯ ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನ ಚುನಾವಣೆಯು ಇತ್ತೀಚೆಗೆ ನಡೆದು ಶ್ರೀ ಲೋರೆನ್ಸ್ ಸುವಾರಿಸರವರು ಅಧ್ಯಕ್ಷರಾಗಿ; ಉಪೇಂದ್ರ ನಾಯಕ್ ಕೆ. ಕಾರ್ಯದರ್ಶಿಯಾಗಿ; ಶ್ರೀಗಳಾದ ಶಿತಾರ್ಡಿ ವಿಲಿಯಂ ಪಿಂಟೊ, ಹಿಸ್ಟರಿ ಇಕಾನಾಮಿಕ್ಸ್—ಕಾರ್ಯದರ್ಶಿ; ದಿನಕರ ನಾಯಕ್—ಎ. ಕಾಮರ್ಸ್ ಸಂಘದ; ವಿಶ್ವನಾಥ ಶೆಟ್ಟಿ ಪಿ, ಭಾಷಾಸಂಘದ ಕಾರ್ಯದರ್ಶಿ; ಭವಾನಿ ಶಂಕರ್ ಪ್ರಭು—ಎಕ್ಲೆಟಿಕ್ ಸಂಘದ ಕಾರ್ಯದರ್ಶಿ; ರಾಮಕೃಷ್ಣ ಹೆಗ್ಡೆ—ಸಾಯನ್ಸ್ ಸಂಘದ ಕಾರ್ಯದರ್ಶಿ; ಅನಂತ ಪದ್ಮನಾಭ ಮಿತ್ತಂತಾಯ ನಾಟಕ ಸಂಘದ ಕಾರ್ಯದರ್ಶಿ; ಮೇರಿಯನ್ ರೊಡ್ರಿಗೀಸ್... ಸೋಶಿಯಲ್ ಸರ್ವಿಸ್ ಲೀಗಿನ ಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟಿದ್ದಾರೆ.

ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು— ಕಾಲೇಜಿನ 'ಹಿಸ್ಟರಿ ಇಕನಾಮಿಕ್ಸ್' ಸಂಘದ ಉದ್ಘಾಟನೆ ತಾ. 20ರಲ್ಲು ಪ್ರಿನ್ಸಿಪಾಲ್ ಎಚ್. ಸುಂದರ ರಾವ್‌ರವರ ಅಧ್ಯಕ್ಷತೆಯಲ್ಲಿ ಡಾ. ಕೆ. ಬಿ. ರಾಮಕೃಷ್ಣ ರಾವ್, ಪಿ ಎಚ್. ಡಿ. ರವರಿಂದ ನೆರವೇರಿಸಲ್ಪಟ್ಟಿತು. ಪ್ರೊಫೆಸರ್ ಕು. ಶಿ. ಹರಿದಾಸ ಭಟ್ಟರು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ—ಶಿತಾರ್ಡಿ ವಿಲಿಯಂ ಪಿಂಟೊ ಧನ್ಯವಾದ ಸಮರ್ಪಿಸಿದರು.

ಕುರ್ಪಾಡಿ— ಸ್ಥಳೀಯ ವಿಶ್ವವಿದ್ಯಾ ಸಂಘದ ಮಹಾಸಭೆಯು ನಾಲನ್ನು ಶಾಲೆಗಳ ಉದ್ಯೋಗಸ್ಥರ ಸಮ್ಮುಖದಲ್ಲಿ ಸೇರಿ ಶಾಲಾ ಏಳಿಗೆ, ಇತ್ಯಾದಿ ವಿಷಯಗಳು ಚರ್ಚಿಸಲ್ಪಟ್ಟುವು. ಶಾಲೆಗಳ ಮೆನೇಜರ್ ಡಾ| ಕೆ. ಕೆ. ಕಲ್ಕೂರರು ಸಂದರ್ಭೋಚಿತ ಭಾಷಣವಿತ್ತ ಬಳಿಕ ಅಧ್ಯಕ್ಷಿಣಿ ಶ್ರೀಮತಿ ಚಂದ್ರಾವತಿಯವರಿತ್ತ ಲಘುಉಪಾಹಾರ ನಡೆಯಿತು.

ಪಡುಬಿದ್ರಿ— ತಾ. 7-8-60ರಲ್ಲಿ ಕಾಡಿಪಟ್ಣ ನಡಿಪಟ್ಣ ವಿದ್ಯಾಪ್ರಚಾರಕ ಸಂಘ (ರಿಜಿಸ್ಟರ್ಡ್) ಇದರ ವಾರ್ಷಿಕ ಮಹಾಸಭೆಯು ಪಡುಬಿದ್ರಿ ಫಿಶರೀಸ್ ಹೈಸ್ಕೂಲಿನ ವಠಾರದಲ್ಲಿ ಆನಂದ ಪಿ. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿ ವರದಿ, ಲೆಕ್ಕಪತ್ರಗಳ ಮಂಜೂರಾತಿಯಾಗಿ ಸಂಘದ ಮುಂದಿನಾಭಿವೃದ್ಧಿಯ ವಿಚಾರದಲ್ಲಿ ಹಲವು ನಿರ್ಣಯಗಳಾದುವು. ಮುಂದಿನ 2 ವರ್ಷಗಳ ಆಡಳಿತ ಸಮಿತಿಗೆ ಶ್ರೀ ಆನಂದ ಪಿ. ಕರ್ಕೇರ್, ಶ್ರೀ ಅಣ್ಣ ಗುರಿಕಾರ್, ಶ್ರೀ ಕಿಟ್ಟು ಕೋಟ್ಯಾನ್, ಶ್ರೀ ಅಪ್ಪಣ್ಣ ಟಿ. ಬಂಗೇರ, ಶ್ರೀ ಪಿ. ಶ್ರೀಧರ ಮೆಂಡನ್, ಶ್ರೀ ಗೋಪಾಲ ಸಾಲ್ಯಾನ್, ಶ್ರೀ ಕೇಶವ ಬಿ. ಮೆಂಡನ್, ಶ್ರೀ ಶ್ರೀಧರ ಸಾಲ್ಯಾನ್, ಶ್ರೀ ನಾರಾಯಣ ಗುರಿಕಾರ ಮತ್ತು ಶ್ರೀನಿವಾಸ ಸಾಲ್ಯಾನರು ಆರಿಸಲ್ಪಟ್ಟರು.

ಕೆಡಂದಲೆ— ಸ್ಥಳೀಯ ಬೇಸಿಕ್ ಹಾ ಪ್ರಾ. ಶಾಲೆಯು ಕಳೆದ ಹತ್ತು ವರ್ಷಗಳಿಂದ ಶೇಕಡಾ ನೂರು ಫಲಿತಾಂಶ ಪಡೆದ ಸವಿನೆನಪಿಗಾಗಿ ಒಂದು ಸಂತೋಷ ಸಮಾರಂಭವನ್ನು ಮೂಡಬಿದ್ರಿ ಜೈನ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಎ. ಸೋಮಪ್ಪ ರೈಗಳ ಅಧ್ಯಕ್ಷತೆಯಲ್ಲಿ ತಾ. 15-8-60ರಂದು ಜರಗಿಸಲಾಯಿತು. ಉತ್ತಮ ಫಲಿತಾಂಶ ಪಡೆದ ಬಗ್ಗೆ ಜಿಲ್ಲಾ ಬೋರ್ಡಿನವರ ದೊರೆತ ಎರಡು ಬೆಳ್ಳಿಯ ಗುರಾಣಿಗಳನ್ನು ಶ್ರೀ ಕೆ. ಕಾಂತ ರೈ ವಿದ್ವಾನ್, ಇವರು ಉದ್ಘಾಟಿಸಿದರು. ಸಭಿಕರ ಹಾಗೂ ಅಧ್ಯಕ್ಷರ ಭಾಷಣವಾದ ಮೇಲೆ ಮಕ್ಕಳ ವಿವಿಧ ವಿನೋದಾವಳಿಗಳೂ, "ಬದಿತ್ತ ಬಿರ್ದ್" ಎಂಬ ತುಳು ನಾಟಕವೂ ಪ್ರದರ್ಶಿಸಲ್ಪಟ್ಟಿತು. ಅಂದು ಬೆಳಿಗ್ಗೆ ಶ್ರೀ ಕೆ. ವಿನಾಯಕ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿದ ಸ್ವಾತಂತ್ರ್ಯೋತ್ಸವದಲ್ಲಿ ಶ್ರೀಗಳಾದ ಯಚ್. ರಫೀಕ್ ಅಹಮ್ಮದ್, ಕೆ. ಚಂದ್ರಾಯ ಆಚಾರಿ ಮತ್ತು ಶ್ರೀ ಕೆ. ಜಿ. ಶೆಟ್ಟಿಯವರು ಮಾತನಾಡಿದರು.

ದಿ| ಬೇಳಿಂಜೆ ಕೃಷ್ಣಯ್ಯ ಹೆಗ್ಡೇರ ಭಾವಚಿತ್ರ ಅನಾವರಣ— ಸ್ವಾತಂತ್ರ್ಯ ದಿನೋತ್ಸವದಂದು ಉಡುಪಿ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಡಾ|| ಟಿ. ಮಾಧವ ಪೈಗಳು ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಆದರ್ಶ ಜನನಾಯಕರಾಗಿದ್ದ ದಿ. ಬೇಳಿಂಜೆ ಕೃಷ್ಣಯ್ಯ ಹೆಗ್ಡೇರ ಭಾವಚಿತ್ರವನ್ನು ಅನಾವರಣ ಮಾಡಿದರು. ಕ್ಲಬ್ಬಿನ ಕಾರ್ಯದರ್ಶಿ ಶ್ರೀ ಎನ್. ವಿ. ಕಾಮತರು ಸ್ವಾಗತ ಭಾಷಣಮಾಡಿ ಭಾವಚಿತ್ರವನ್ನು ದಾನವಾಗಿ ಕೊಟ್ಟ ಶ್ರೀ ಬೇಳಿಂಜೆ ಸಂಜೀವ ಹೆಗ್ಡೇರನ್ನು ಅಭಿವಂದಿಸಿದರು. ಡಾ. ಪೈಗಳು ಭಾವಚಿತ್ರ ಅನಾವರಣಮಾಡಿ ದಿವಂಗತ ಹೆಗ್ಡೇರ ಆದರ್ಶ ಜೀವನವು ಯುವಕರಿಗೆ ಮಾರ್ಗದರ್ಶನ ಮಾಡಲೆಂದರು. ಡಾ. ಪಿ. ಆರ್. ನಾಯಕ್. ಶ್ರೀಗಳಾದ ರಫಿಯುದ್ದೀನ್, ಎನ್. ಸೀತಾರಾಮ ಕಾಮತ್, ಬಿ. ಶ್ಯಾಮರಾಯ ಶೆಟ್ಟಿ, ಕೊಟ್ಟಕಾರ್ ಮಂಜುನಾಥ ಪೈ ಮೊದಲಾದವರು ದಿವಂಗತರ ಪ್ರಾಮಾಣಿಕತೆ ನಿಷ್ಕಳಂಕ ವ್ಯಕ್ತಿತ್ವದ ಕುರಿತು ಮಾತಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಎಸ್. ಎಲ್. ನಾರಾಯಣ ಭಟ್ಟರು ಕೃತಜ್ಞತೆಗಳನ್ನರ್ಪಿಸಿದರು.

ಶ್ರೀ ಪೂರ್ಣಪ್ರಜ್ಞ ಕಾಲೇಜಿನ— ಕನ್ನಡ ಸಾಹಿತ್ಯ ಸಂಘ ಮತ್ತು ಲಲಿತ ಕಲೆಗಳ ಕ್ಲಬ್ಬಿನ ಉದ್ಘಾಟನಾ ಸಮಾರಂಭವು ತಾ. 19ರಂದು ಶ್ರೀ ಶಿವರಾಮ ಕಾರಂತರಿಂದ ನೆರವೇರಿಸಲ್ಪಟ್ಟಿತು. ಪ್ರಾರ್ಥನೆಯಾದ ಬಳಿಕ ಪ್ರಿನ್ಸಿಪಾಲ್ ವಿ. ಯಮ್. ಇನಾಮದಾರರು ಸ್ವಾಗತ ಭಾಷಣಮಾಡಿ ಶ್ರೀ ಕಾರಂತರ ಪರಿಚಯ ಮಾಡಿಕೊಟ್ಟರು ಶ್ರೀ ಕಾರಂತರು ಸಾಹಿತ್ಯ ರಚನೆಗೆ ಬೇಕಾದ ಅನುಭವ ಸ್ಫೂರ್ತಿ ಮೊದಲಾದ ಕುರಿತು ವಿಚಾರಪೂರ್ಣ ಭಾಷಣ ಮಾಡಿದರು.

ಎಂ. ಜಿ. ಎಂ. ಕಾಲೇಜ್ ಯೂನಿಯನಿನ— ಪ್ರಾರಂಭೋತ್ಸವವು ತಾ 12ರಂದು ಸ್ಟೆಂಟ್ ಎಲೋಶಿಯಸ್ ಕಾಲೇಜಿನ ಪ್ರಿನ್ಸಿಪಾಲ್ ರೆ. ಫಾ| ಎಸ್. ಮೊಂತೇರೊ ಅವರಿಂದ ನೆರವೇರಿಸಲ್ಪಟ್ಟಿತು. ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಸಭಾಧ್ಯಕ್ಷತೆ ವಹಿಸಿದ್ದರು.

ಮಣಿಪಾಲ— ಬುನಾದಿ ಪ್ರಾಥಮಿಕ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವವು ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಶಾಲಾಮಕ್ಕಳೆಲ್ಲರಿಗೂ ಸಮವಸ್ತ್ರ ವಿತರಣೆ ಮಾಡಲಾಯಿತು. ಶ್ರೀಮತಿ ಎಸ್. ಪಿ. ಕಾಮತರವರು ಸಿಹಿ ತಿಂಡಿ ಹಂಚಿದರು.

ಒಂಪಾರು ಗ್ರಾಮದ— ಮೂರ್ತಿ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಶ್ರೀ ರಾಮಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ನಡೆಯಿತು.

ಉಡುಪಿ ಶ್ರೀ — ಬ್ರಹ್ಮ ಬೈದ್ಯರ್ಕಳ ಕೃಪಾಪೋಷಿತ ಯಕ್ಷಗಾನ ಸಂಘದ ಕಾರ್ಯಾಲಯದಲ್ಲಿ ಸ್ವಾತಂತ್ರ್ಯೋತ್ಸವವು ಶ್ರೀ ವಾಸುದೇವಾಚಾರ್ಯ ಬಿ. ಎ. ಬಿ. ಟಿ ಇವರ ನೇತೃತ್ವದಲ್ಲಿ ಯಥಾಸಾಂಗವಾಗಿ ಜರಗಿತು.

ಕೆನರಾ ಬೇಂಕ್ ತ್ರೈಮಾಸಿಕ ಉದ್ಘಾಟನೆ— ಬೆಂಗಳೂರಿನ ಆಡಳಿತ ಕಛೇರಿಯಲ್ಲಿ ಬೇಂಕಿನ ಅಧ್ಯಕ್ಷ ಶ್ರೀ ಎ. ದಾಮೋದರ ಪೈ ಅವರಿಂದ ತಾ 15ರಂದು ನೆರವೇರಿಸಲ್ಪಟ್ಟಿತು. ಬೇಂಕಿನ ವಾರ್ತಾಧಿಕಾರಿ ಶ್ರೀ ಆರ್. ಜಿ. ಘಾಟಕ್ ಅವರು ಸ್ವಾಗತ ಭಾಷಣಮಾಡಿದರು ಶ್ರೀ ದಾಮೋದರ ಪೈಗಳು ಉದ್ಘಾಟನಾ ಭಾಷಣ ಮಾಡುತ್ತಾ ಈ ಪತ್ರಿಕೆಯು ಕೆನರಾ ಬೇಂಕಿನ ಸಿಬಂದಿಯವರಲ್ಲಿ ಪರಸ್ಪರ ತಿಳುವಳಿಕೆಗೆ ಸಹಾಯಕವಾಗಲೆಂದು ಹಾರೈಸಿದರು.

ಎ. ಬಿ. ಶೆಟ್ಟಿ ಮೆಮೋರಿಯಲ್ ಹಾಸ್ಟೆಲ್, ಮೈಸೂರು— ಈ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳ ಸಭೆಯು ತಾರೀಕು 6-8-60ರಂದು ನಿಲಯದ ವಾರ್ಡನ್ ಶ್ರೀ ಎಂ. ಎಸ್. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ರಚಿಸಲಾದ ವಿದ್ಯಾರ್ಥಿ ಸಂಘಕ್ಕೆ ಶ್ರೀಗಳಾದ ಎಂ. ಎಸ್. ಶ್ರೀಕಂಠಯ್ಯ (ಅಧ್ಯಕ್ಷ) ರಾಮಚಂದ್ರ ಸೆಟ್ಟಿಗಾರ್ (ಉಪಾಧ್ಯಕ್ಷ) ಹೆಚ್. ತಿಮ್ಮಪ್ಪ ಭಂಡಾರಿ (ಕಾರ್ಯದರ್ಶಿ) ವೈ. ಸಂಜೀವ ರೈ, (ಕಾರ್ಯದರ್ಶಿ) ಯು. ಅಣ್ಣಪ್ಪ ಶೆಟ್ಟಿ, ಮೋಹನ್ ಎಸ್. ಚಂಡಾ ಮತ್ತು ಬಿ. ಕೆ. ರಘುನಾಥ್ (ಸದಸ್ಯರು) ಆರಿಸಲ್ಪಟ್ಟರು.

ಅನುಭವ

ಹೆತ್ತವರಿಗೆ ಮಕ್ಕಳ ಮೇಲೆ ಪ್ರೀತಿಯಿಲ್ಲವೆ?

> ತನ್ನನ್ನು ಸದಾ ಅಜ್ಞಾನಿಯೆಂದು ಬಯ್ಯುತ್ತಿದ್ದ ತಂದೆಯನ್ನು ತೀರಿಸಲು ಹವಣಿಸಿದ ಒಬ್ಬ ಮಗ, ಅದರ ನಿಜ ಕಾರಣವನ್ನು ತಿಳಿದ ನಂತರ ತನ್ನ ಕೃತ್ಯಕ್ಕಾಗಿ ಪರಿತಪಿಸಿ ಆರು ತಿಂಗಳು ಮಾವನ ಮನೆಯಲ್ಲಿ ಕುರಿ ಮೇಯಿಸುವ ಶಿಕ್ಷೆಯನ್ನನುಭವಿಸಿದನು; ಈ ಸಂದರ್ಭದಲ್ಲೇ ಆತ ಮಹಾಕವಿಯಾದನು— ಈ ಸಂಸ್ಮರಣೆಯು ನನ್ನ ಹೃತ್ಪಟಲದಲ್ಲಿ ಹಾಯ್ದು ಹೋಗುವ ಘಟನೆಯೊಂದು ನಡೆಯಿತು.

ಎಸ್. ಎಸ್. ಎಲ್. ಸಿ. ಪಾಸು ಮಾಡಿಕೊಂಡ ಬಳಿಕ ಎಲ್ಲ ವಿದ್ಯಾರ್ಥಿಗಳಲ್ಲಿರುವಂತೆಯೇ ಕಾಲೇಜು ಸೇರುವ ಆಶೆ ಮೂಗಿನ ವರೆಗಿತ್ತು. ಆದರೆ, ಸಾಮಾನ್ಯ ಕುಟುಂಬವೊಂದರಲ್ಲಿರುವಂತೆಯೇ ಧನಾಭಾವದ ನೆಪವನ್ನು ತಂದೆ ಮುಂದೊಡ್ಡುತಿದ್ದರು. ತಾಯಿಯ ಮನಸ್ಸೇನೋ ನನಗೆ ಅನುಕೂಲವಾಗಿಯೇ ಇತ್ತು. ಆದರೆ, ಮನೆಯ ಯಜಮಾನರ ಇಚ್ಛೆಗೆ ವಿರೋಧವಾಗಿ ನಡೆಯುವ ಶಕ್ತಿ ಯಾರಲ್ಲಿಯೂ ಇರುವುದಿಲ್ಲ. ಅಂತೂ ಆದಷ್ಟು ಕಡಿಮೆ ವೆಚ್ಚದಲ್ಲಿ ಅಧ್ಯಯನ ನಡೆಸುವೆನೆಂದೂ ಯಾವುದೇ ಅನಾವಶ್ಯಕ ವೆಚ್ಚವನ್ನು ಮಾಡುವುದಿಲ್ಲವೆಂದೂ ಕೈಭಾಷೆಯಿತ್ತು ತಂದೆಯವರ ಅನುಮತಿಯನ್ನು ಪಡೆಯುವ ಮಹಾಸಾಹಸದಲ್ಲಿ ಕೊನೆಯಲ್ಲಿ ಗೆದ್ದುಬಿಟ್ಟೆ. ಮರುದಿನವೇ ಮಂಗಳೂರಿನ ಗಾಡಿ ಹತ್ತಿ ಕಾಲೇಜು ಸೇರಿಬಿಟ್ಟೆ.

ಕೆಲವು ತಿಂಗಳುಗಳು ಸರಿಯಾಗಿಯೇ ಯಾವುದೇ ವಿಶೇಷವಿಲ್ಲದೇನೇ ಗತಿಸಿದುವು. ಪ್ರತಿ ಮಾಹೆ ಮೂವತ್ತು— ಮೂವತ್ತೈದು ರೂಪಾಯಿಗಳಲ್ಲಿ ನನ್ನ ಜೀವನ ನಡೆಯುತಿತ್ತು. ಮನೆಯಿಂದ ನಾನು ಇಷ್ಟನ್ನು ಮಾತ್ರವೇ ತರಿಸಿಕೊಳ್ಳುತಿದ್ದೆ. ಪ್ರತಿ ಹತ್ತನೆಯ ತಾರೀಕಿನಂದು ತಪ್ಪದೆ ತಂದೆಯವರಿಂದ ಹಣ ಕೈಸೇರುತಿತ್ತು. ಅಲ್ಲದೇ ಅವರು ಆಗಾಗ ಬರೆಯುತಿದ್ದರು: "ಮಗೂ, ಅನಾವಶ್ಯಕವೆಚ್ಚಮಾಡಬೇಡ. ಯಾವುದು ಆಗತ್ಯವೋ ಅಂತಹ ಖರ್ಚನ್ನು ಮಾಡು. ಆಹಾರ—ವಿಹಾರಗಳಲ್ಲಿ ಒಂದು ಶಿಸ್ತನ್ನು ಇಟ್ಟುಕೊ. ಸಂಗಾತಿಗಳ ದರ್ಭಾರಿಗೆ ಮಾರುಹೋಗಬೇಡ. ಬೆಳ್ಳಗಿರುವುದೆಲ್ಲಾ ಹಾಲೆಂದು ತಿಳಿಯಬೇಡ...." ಇತ್ಯಾದಿ. ನಾನೂ ಸಂಯಮದಿಂದ ವರ್ತಿಸುವ ಆಶ್ವಾಸನೆಯನ್ನವರಿಗೆ ನೀಡುತಿದ್ದೆ.

ನನ್ನ ಕೆಲ ಸಂಗಾತಿಗಳು ನಾವು ತಿಳಿಯದಂತೆ ಅನಾವಶ್ಯಕ ವೆಚ್ಚ ಮಾಡುತಿದ್ದರು. ಮನೆಯಲ್ಲಿ ಹಿರಿಯರು ಅಷ್ಟೊಂದು ಹಣವನ್ನು ಕೂಡಿಸಲು ಅದೆಷ್ಟು ಪ್ರಯಾಸ ಪಡುತ್ತಿರಬಹುದು ಎಂಬುದರ ಕಲ್ಪನೆಯೂ ಅವರಿಗಿದ್ದಂತೆ ತೋರುತ್ತಿರಲಿಲ್ಲ. ಅದನ್ನು ಯೋಚಿಸುವ ಆಗತ್ಯವೂ ಅವರಿಗಿದ್ದಿಲ್ಲ. ಎಲ್ಲಾದರೂ ಹಣ ಕೈಸೇರುವಾಗ ಒಂದೆರಡು ದಿನ ತಡವಾದರೆ, ಆಕಾಶವೇ ತಲೆಗುರುಳಿದಂತೆ ರಂಪಾಟವೆಬ್ಬಿಸುತಿದ್ದರು. ಇದೆಲ್ಲಾ ನನಗೆ ವಿಚಿತ್ರವೆಂಬಂತೆ ತೋರುತಿತ್ತು. ನಾನೆಲ್ಲಾದರೂ ನಡುವೆ ಬಾಯಿ ಹಾಕಲು ಪ್ರಯತ್ನಿಸಿದರೆ, ಅವರು ನನ್ನನ್ನೇ ಗದರಿಸುತಿದ್ದರು; ಗೇಲಿ ಮಾಡುತಿದ್ದರು. "ವಿದ್ಯಾರ್ಥಿ ಜೀವನ ಸುಖದಿಂದ ಕಳೆಯಬೇಕು. ಈ ಅಧ್ಯಾಯ ಮುಗಿದ ಬಳಿಕ ಎಂತಹ ವಿಪತ್ತು ಎದುರಿಸಬೇಕಾಗಿದೆ ಎಂದು ಯಾರಿಗೆ ಗೊತ್ತು? ಹೇಗೂ ಐವತ್ತು ಕಳಿಸುತ್ತಾರೆ; ಇನ್ನೊಂದು ಹತ್ತು ಹೆಚ್ಚಿಗೆ ಕಳಿಸಿದರೆ ಏನಂತೆ? ಮಾಗು ಹರಿಯುವುದೆ?" ಎಂದು ಮುಂತಾಗಿ ಅವರ ವಾದಸರಣಿ ಹರಿಯುತಿತ್ತು. ಟಾಯಂ ಟೇಬಲಿಗೆಂದು ಮನೆಯಿಂದ ಹಣ ತರಿಸಿಕೊಂಡ ಬುದ್ಧಿವಂತನ ಸ್ಮರಣೆಯನ್ನು ತಂದೀಯುವ ಕುಬೇರ ಪುತ್ರರೂ ಇದ್ದರು. ಇವರೆಲ್ಲರ ದೃಷ್ಟಿಯಲ್ಲಿ ನಾನೊಬ್ಬ ಅಪರಾಧಿ. ನಮ್ಮೂರಿನವನೇ ಒಬ್ಬ ನನ್ನ ಸಹಾಧ್ಯಾಯಿಯಿದ್ದ. ಆತನಿಗೆ ಮನೆಯಿಂದ ಹಣ ಬರುವುದರಲ್ಲಿ ಕಡಿತವಾಗತೊಡಗಿತ್ತು. ಇದಕ್ಕೂ ನಾನು ಕಡಿಮೆ ಹಣ ತರಿಸುತಿದ್ದುದೇ ಕಾರಣವೆಂದಾತ ಒಂದು ದಿನ ಸಂಶೋಧಿಸಿಯೇ ಬಿಟ್ಟ. ಹೀಗೆ ಎಲ್ಲರೂ ತಿರಸ್ಕಾರದೃಷ್ಟಿಯಿಂದ ನೋಡುತಿದ್ದರೂ ನಾನು ಅದಾವುದನ್ನೂ ಗಮನಿಸದೆ ನನ್ನಷ್ಟಕ್ಕೇ ಇರತೊಡಗಿದ್ದೆ.

ವರ್ಷಾಂತ್ಯ ಸಮೀಪವಾಯಿತು. ವಿಶ್ವವಿದ್ಯಾಲಯದ ಪರೀಕ್ಷೆಗಾಗಿ ಹಣ ತುಂಬುವ ಸೂಚನೆಯು ಬಂದಿತ್ತು. ಜತೆಗೆ ಕಾಲೇಜಿನ ಕೊನೆಯ ಟರ್ಮಿನ ಫೀಯನ್ನೂ ತುಂಬ ಬೇಕಿತ್ತು. ಹಾಸ್ಟೆಲಿನ ಬಿಲ್ಲೂ ತೆರುವುದಕ್ಕಿತ್ತು. ಹೀಗೆ ಒಟ್ಟು ಸುಮಾರು ೧೫೦ ರೂಪಾಯಿಗಳ ಆವಶ್ಯಕತೆ ನನಗಿತ್ತು. ಮನೆಗೆ ಕೂಡಲೇ ಪತ್ರ ಬರೆದೆ. ನಾಲ್ಕನೆಯ ದಿನವೇ ಮನಿಆರ್ಡರ ಬಂತು. ಆದರೆ, ನೂರೈವತ್ತರ ಬದಲು ಐವತ್ತು ಮಾತ್ರ! ನನ್ನ ಹೃದಯ ಚಡಬಡಿಸ ಹತ್ತಿತು. ನ್ಯಾಯವಾದ ವೆಚ್ಚಗಳಿಗೂ ಹಣ ದೊರಕಿಸದೆ ತಂದೆಯ ಮೇಲೆ ದೂರ್ವಾಸ ಕೋಪ ಬಂದು ಬಿಟ್ಟಿತು. ಎಲ್ಲಾದರೂ ಅವರು ಎದುರು ಸಿಗುತಿದ್ದರೆ ಹರಿದು ತಿನ್ನುತಿದ್ದೆನೋ ಏನೋ! ಅಂದು ನನ್ನ ಮನಸ್ಸಿನ ಹಿಡಿತ ತಪ್ಪಿತು; ಸಿಕ್ಕ ಸಿಕ್ಕವರೊಡನೆ ನಾನು ತಂದೆಯವರ ಅನ್ಯಾಯದ ಬಗ್ಗೆ ದೂರಿಕೊಂಡೆ. ಉಳಿದವರಂತೆ ಪ್ರತಿಮಾಹೆ ನೂರಾರು ರೂಪಾಯಿ ತರಿಸಿಕೊಳ್ಳದೆ ಮೂವತ್ತು ನಲ್ವತ್ತರಲ್ಲಿಯೇ ದಿನ ದೂಡಿದುದೇ ನನ್ನ ತಪ್ಪು ಎಂದು ನನಗೆ ಕೆಲವರು ಉಪದೇಶಿಸಿದರು; ನನಗೂ ಇದು ಹೌದು ಎನ್ನಿಸಿತು. "ಏನೇ ಆಗಲಿ, ಪರೀಕ್ಷೆಗೆ ಕಟ್ಟಲು ಇನ್ನೂ ವಾರವೊಂದಿದೆ; ಹಣವಿಲ್ಲದೆ ಹೋದರೆ ಪರೀಕ್ಷೆಯೂ ಇಲ್ಲ; ಅಪ್ಪನಿಗೇ ಬೇಡವಂತೆ ಮತ್ತೆ ನನಗೇನು" ಎಂಬಷ್ಟು ವೈರಾಗ್ಯ ಭಾವ ನನ್ನಲ್ಲಿ ಮೂಡಿತ್ತು.

ಎರಡು ದಿನ ಕಳೆಯಿತು. ನಾನು ಆರಾಮಾಸನದಲ್ಲಿ ಕುಳಿತು ಅದೇನನ್ನೋ ಯೋಚಿಸುತಿದ್ದೆ. ಒಂದಲ್ಲ ನೂರು ವಿಚಾರಗಳು ನನ್ನ ಮನಃ ಪಟಲದಲ್ಲಿ ಮಿಂಚಿ ಮಾಯವಾದುವು. ಅವುಗಳ ಸ್ಪಷ್ಟರೂಪವೊಂದೂ ತಿಳಿಯುತ್ತಿರಲಿಲ್ಲ. ಬಾಗಿಲು ಖಟ ಖಟ ಎಂದಿತು. ಆಗಲೇ ಸಮಾಧಿ ಭಂಗವಾದಂತಾಯಿತು. ಉದಾಸೀನ ಮನಸ್ಕನಾಗಿ ಎದ್ದು ಅಗುಳಿ ಕಿತ್ತು ಬಾಗಿಲು ತೆರೆದೆ. ಅಂಚೆಯವನು ಮನಿಆರ್ಡರ ಫಾರ್ಮೊಂದನ್ನು ನನ್ನ ಕೈಗಿತ್ತು ರೂಪಾಯಿ ಗಣಿಸತೊಡಗಿದ. ಹಣ ಮನೆಯಿಂದಲೇ ಬಂದಿತ್ತು. ಮೊತ್ತ ರೂ. ೧೦೦ ಎಂ. ಓ. ಕೂಪನ್ನಿನಲ್ಲಿ ಬರೆದಿತ್ತು: "ಮಗೂ, ನೀನು ನೂರೈವತ್ತು ಕೇಳಿದ್ದಿ. ಅಂದು ಅಷ್ಟಿಲ್ಲದಿದ್ದುದರಿಂದ ಆಗತ್ಯಕ್ಕೆಂದು ಐವತ್ತು ಮಾತ್ರ ರವಾನಿಸಿದ್ದೆ. ಉಳಿದುದನ್ನು ಸರಿಹೊಂದಿಸಿಕೊಂಡು ಈಗ ಕಳಿಸುತಿದ್ದೇನೆ. ಇನ್ನು ಮುಂದಕ್ಕೆ ಹೆಚ್ಚಿಗೆ ಹಣ ಬೇಕಾಗಿದ್ದರೆ, ಒಂದು ವಾರ ಮೊದಲೇ ತಿಳಿಸು; ಹೊಂದಿಸಿಕೊಳ್ಳಲು ಅವಕಾಶ ದೊರೆಯುತ್ತದೆ."

ಅದನ್ನು ಓದುತಿದ್ದ ನನ್ನ ನಯನಗಳಲ್ಲಿ ವಾರಿ ಬಿಂದುಗಳು ತಮ್ಮಷ್ಟಕ್ಕೇನೇ ಉರುಳಿ ಎಂ. ಓ. ಕೂಪನಿನ ಮೇಲೆ ಬಿದ್ದುವು. ಇದನ್ನು ಅಂಚೆಯವನೂ ಕಾಣದಿರಲಿಲ್ಲ. ನಾನು ತುಂಬಿದ ಹೃದಯದಿಂದ ನೋಟುಗಳನ್ನೆತ್ತಿಕೊಂಡು ಹೃದಯಕ್ಕೆ ಒತ್ತಿಕೊಂಡೆ. ತಮ್ಮ ಮಕ್ಕಳ ಮನಸ್ಸು ಹೆತ್ತವರಿಗೆ ತಿಳಿಯುವುದಿಲ್ಲ ಎಂದು ಅನ್ನುವುದು ಹೇಗೆ? —ಶ್ರೀ. ಗೋರಾ.

ವಿನೋದ ಮೀಮಾಂಸೆ

(೪ನೇ ಪುಟದಿಂದ)

ಗುತ್ತದೆ. ಪ್ರಾಥಮಿಕ ವರ್ಗಗಳಲ್ಲಿ ಅತಿ ಸುಲಭದಲ್ಲಿ ತೇರ್ಗಡೆ ಹೊಂದಿದ ಮಹಾ ಬುದ್ಧಿವಂತರಾದರೂ ವಿಶ್ವವಿದ್ಯಾಲಯ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿಯೇ ಆಗುತ್ತಾರೆ—ಆಗಲೇ ಬೇಕು ತಾನೆ? ತನ್ನ ಇಚ್ಛೆಯಂತೆ ತನ್ನ ಜೀವನವನ್ನು ರೂಪಿಸಿಕೊಳ್ಳುವ ಮಾನವನು ಅದೇ ಜೀವನದಲ್ಲಿ ಎಡತಾಕುವ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವಾಗ ಯಾರೋ ಬರೆದ ಪುಸ್ತಕಗಳನ್ನು ಯಾರಿಂದಲೋ ಓದಿಸಿಕೊಂಡು ಮತ್ತಾರಿಂದಲೋ ಪರೀಕ್ಷೆಗೆ ಗುರಿಯಾಗಿ ಬೇರಾರ ಕೈಯಲ್ಲೊ ಅಂಕದಾನ ಪಡೆದು ವಿಶ್ವವಿದ್ಯಾಲಯದ ಮೂಲಕ 'ಉತ್ತೀರ್ಣ' ನೆನಿಸುವುದೆಂದರೆ, ಅದು ಅಶ್ವಮೇಧ ಯಾಗಕ್ಕಿಂತಲೂ ಬಿಗಿಯಲ್ಲವೆ? ಎಂತಲೇ "ಸಾಧ್ಯವಿಲ್ಲವು ಪರೀಕ್ಷೆಯೊಳೆನಗನ್ನು ಜಯವು | ವಿದ್ಯಾ ಪರೀಕ್ಷಕರಿಗಿಲ್ಲ ವೈದಯವು" ಎಂಬ ಪಲ್ಲವಿಯನ್ನು ವಿದ್ಯಾರ್ಥಿಗಳು ಹಾಡಿದರೆ ಅದೇನು ಮಹಾ?

ಪರೀಕ್ಷೆಯೆಂದರೆ ದೂರದಲ್ಲೇ ನಮಸ್ಕಾರ ಹೊಡೆಯುವುದು ಕ್ರಮಪ್ರಾಪ್ತ ಪರಂಪರೆ. ನಿರುದ್ಯೋಗಿಗಳು ಉದ್ಯೋಗ ಪಡೆಯಲು ಪರೀಕ್ಷೆಗೆ ಕೂರಬೇಕಾಗುತ್ತದೆ. ಆದರೆ, ಈ ಪರೀಕ್ಷೆಯೆಂಬುದು ಬೆಕ್ಕಿನ ತಲೆಯಮೇಲಿನ ದೀಪ ಎಂದವರು ಬಲ್ಲರು. ಆದುದರಿಂದಲೇ ಅವರು ತಾವು ಪರೀಕ್ಷೆಗೆ ಕೂಡಲು ಅಂಜಿ ತಮ್ಮ ಅದೃಷ್ಟವನ್ನೇ ಮುಂದೂಡಿ ಅದನ್ನೇ ತಾವು ಪರೀಕ್ಷಿಸುವಷ್ಟು ಮುಂದುವರಿಯುತ್ತಾರೆ. ಪರೀಕ್ಷೆಯೆಂಬುದು ಭಯಾನಕಾಕಾರದ ರಾಕ್ಷಸ; ದುರ್ಜನ; ಸಜ್ಜನ ವಿರೋಧಿ. ಎಂತಲೇ ಪರೀಕ್ಷೆಗಳ ಮೌಲ್ಯ, ಪ್ರಾಧಾನ್ಯಗಳನ್ನು ಕಡಿಮೆಮಾಡಬೇಕೆಂಬ ವಾದ ಮುಂದೆ ಬಂದಿದೆ. ಆದು ವರೆಗೆ ಪರೀಕ್ಷೆ ಅಸ್ಪರ್ಶ—ಅದರ ಸೋಂಕು ತಗಲಿಯೇ ೧೦೮ ಡಿಗ್ರಿ ಜ್ವರ ಏರಬಹುದು. ಇದರಿಂದಲೇ "ನಮ್ಮನ್ನು ಪರೀಕ್ಷೆಗೆ ಗುರಿಮಾಡ ಬೇಡ" ಎಂದು ಮೌನ ಕಾಲೂರಿ ದೇವರನ್ನು ಅತಿ ನಮ್ರರಾಗಿ ಪ್ರಾರ್ಥಿಸುವ ವಾಡಿಕೆ ತಲೆದೋರಿರಬಹುದಲ್ಲವೆ?

ವಿಜ್ಞಾನ ವಿಹಾರ

(೫ನೇ ಪುಟದಿಂದ)

ದುತ್ತೀಯಾ?" ಎಂದು ಸ್ಪಷ್ಟವಾಗಿ ಮಾತಲಿಸಿದನಂತೆ.

ರೋಝಿಯರನೊಂದಿಗೇ ಕುಳಿತಿದ್ದ ಮಾರ್ಕ್ವಿಸ್ ಡಿ ಆರ್ಲಾಂಡಿಸ್ ಮೊತ್ತ ಮೊದಲಿನ ಆಕಾಶಯಾನದ ಅನುಭವವನ್ನು ಹೇಳಿ ಹೋಗಿದ್ದಾನೆ—ಘನ ಗಾಂಭೀರ್ಯದಿಂದ ಮೇಲೇರುತ್ತಿದ್ದವರ ಬೆಲೂನಿನಿಂದ ಕೆಳಗೆ ನೆರೆದ ಜನ ಸಂದಣಿಯನ್ನು ನೋಡಿ ಮಾರ್ಕ್ವಿಸ್ ವೈಮರಿತ. ಬೆಲೂನು ನದಿ, ಹೊಲ ಬಯಲುಗಳ ಮೇಲೆ ಹಾರಿತು. ವೈಲುಗಟ್ಟಲೆ ಹಾರಿ ಕಡೆಗೊಂದು ಹೊಲದಲ್ಲಿ ಬಂದು ಅವರಿಳಿದರು. ಬೆಲೂನಿನ ಆಸೆಯೆಂತೂ ಇರಲಿಲ್ಲ. ಆನಂದಾತಿರೇಕದಿಂದ ರೋಝಿಯರ್ ಮೂರ್ತಿಯಾಗಿದ್ದನು.

೧೭೮೫ರಲ್ಲಿ ಇಂಗ್ಲಿಷ್ ಕಾಲುವೆಯನ್ನು ಬೆಲೂನು ದಾಟಿತು; ವಿಜ್ಞಾನದ ಅನೇಕ ಸಂಶೋಧನೆಗಳಿಗಾಗಿ ಸಾವಿರಾರು ಅಡಿ ಎತ್ತರದ ತನಕ, ಅತ್ಯಾಧುನಿಕ ಉಪಕರಣಗಳನ್ನು ಹೊತ್ತುಕೊಂಡು ಹಾರಿ ಏರಿ ಭೂಮಿಗೆ ತಿರುಗಿ ಇಳಿದಿವೆ.

ರೈಟ್ ಸಹೋದರರು ತಯಾರಿಸಿದ ವಿಮಾನ ಸರ್ವೋಪಯೋಗಕಾರಿಯಾಯಿತು. ಅಂತರಿಕ್ಷ ಯಾನದ ಕನಸು ನೆನಸೆನ್ನಿಸುವ ಕಾಲ ಬಂದಿದ್ದರೆ ಅದು ರೈಟ್ ಸಹೋದರರ ಉದ್ಯಮದಿಂದ ಹುಟ್ಟಿ ಬೆಳೆದ ಪ್ರಯತ್ನದ ಫಲವಾಗಿದೆ.

ಸೀತೆಯನ್ನಿರಿಸಿಕೊಂಡು ಲಂಕೆಗೆ ಹಾರಿದ ರಾವಣನ ಪುಷ್ಪಕ ವಿಮಾನದ ಸ್ಮರಣೆಯಿಂದ ನಾವೂ ದೊಡ್ಡ ವ್ಯಕ್ತಿಗಳೇ" ಎಂಬ ಹೆಮ್ಮೆ ಕ್ಷಣಕ್ಕಾದರೂ ಬಂದರೆ ಅದು ಉಪಯೋಗವಿಲ್ಲದ ಒಣ ಜಂಭವೆಂದು ವಿನೀತ ಭಾವದಿಂದ ಒಪ್ಪಲೇಬೇಕಾಗುತ್ತದೆ. ಒಂದೆರಡು ವರ್ಷಗಳ ಹಿಂದೆ ನಮ್ಮ ದೇಶದ ಯುವಕ ವಿಜ್ಞಾನಿಗಳಲ್ಲಾರೋ ಒಂದು ಆಕಾಶ ಬಾಣವನ್ನು ಹಾರಿಸಿದ್ದರು. ರಾಜಸ್ಥಾನದ ಮುಖ್ಯ ಮಂತ್ರಿ ಸುಖಾಡಿಯಾ ಈ ವಿಚಾರದಲ್ಲಿ ಬಾಲವೇಧಾವಿ ಚಂಪಾಲಾಲನಿಂದಾಗಿ ಹೆಚ್ಚು ತಲೆ ಹಾಕಿರುವರೆಂಬ ಸುದ್ದಿಯೂ ಬಂದಿದೆ. ಎಂದರೆ, ಆಸೆ ಕಡಿಮೆ ಹೋಗಿಲ್ಲ; ಹಿಂದಿನವರು ಸಾಧನೆಗೆ ತಕ್ಕ ಯೋಗ್ಯತೆಯನ್ನು ತಂದು ಕೊಳ್ಳುವುದು ನಮ್ಮ ಹೆಗಲ ಮೇಲೆ ಬಿದ್ದ ಭಾರವಾಗಿದೆ.

ಕನ್ನಡ ಲೈಬ್ರರಿ ಪುಸ್ತಕಗಳಿಗೆ
ವಿಚಾರಿಸಿರಿ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.—ಸಂ. ನ.)

ಮಧ್ವ ರಾಮಾಯಣ– ಕನ್ನಡಿಸಿದವರು: ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಪ್ರಕಾಶಕರು: ಉಡುಪಿ ಶ್ರೀ ಫಲಿಮಾರು ಮಠ. ಪುಟಗಳು: ೧೪೦. ಬೆಲೆ: ರೂ. ೨.

ಮಧ್ವ ಸಂಪ್ರದಾಯ ಪ್ರವರ್ತಕ ಶ್ರೀ ಆಚಾರ್ಯ ಮಧ್ವರು "ದುರ್ಜನರ ಮೋಹಕ್ಕಾಗಿ ಶಾಸ್ತ್ರಗಳಲ್ಲಿ ಒಮ್ಮೊಮ್ಮೆ ಕಥೆಯನ್ನು ಅದಲು ಬದಲು ಮಾಡಿ ಹೇಳುವುದುಂಟು; ಕಥಾ ವ್ಯಕ್ತಿಗಳನ್ನೂ, ಕಥಾ ಕಾಲವನ್ನೂ ಬದಲಿಸಿಬಿಡುವುದುಂಟು. ಆದಕ್ಕಾಗಿ ನಾನು ನಿರ್ಣಯರೂಪವಾದ ಈ ಗ್ರಂಥವನ್ನು ಬರೆಯಬೇಕಾಯಿತು" ಎಂದು ಮಹಾಭಾರತ ತಾತ್ಪರ್ಯ ನಿರ್ಣಯವನ್ನು ಬರೆದರು. ಅದರಲ್ಲಿ ಪ್ರಾಸಂಗಿಕವಾಗಿ ಬಂದಿರುವ 'ರಾಮಾಯಣ'ದ ಕಥೆಯ ಭಾಗವು 'ಮಧ್ವರಾಮಾಯಣ' ಎಂಬ ಈ ಪುಸ್ತಕ ರೂಪದಲ್ಲಿ ಶ್ಲೋಕಾರ್ಥ ಸಹಿತವಾಗಿ ನಮ್ಮ ಮುಂದೆ ಬಂದಿದೆ.

ರಾಮಾಯಣದ ಹಿರಿಮೆ ಹಾಗೂ ಗರಿಮೆಗಳನ್ನು ಪ್ರತ್ಯೇಕ ಸಂಸ್ಕೃತಿ ಪ್ರಿಯನೂ ಅರಿತುಕೊಂಡಿದ್ದಾನೆ. ರಾಮಾಯಣದ ಕಥೆಯನ್ನು ಬರೆದವರೊ ಬಹು ಮಂದಿ. ಶತ ಕೋಟಿ ರಾಮಾಯಣಗಳು ಮೊದಲೇ ಇದ್ದುವಂತೆ. ಈ ಲೋಕೋಕ್ತಿಯಿಂದ ರಾಮಾಯಣವು ಜನಪ್ರಿಯವಾದ ಕಥಾ ಭಾಗವೆಂದು ನಾವು ನಿಸ್ಸಂಶಯವಾಗಿ ಹೇಳಬಹುದು. ಶ್ರೀ ಮಧ್ವಾಚಾರ್ಯರು ದ್ವೈತಸಿದ್ಧಾಂತವನ್ನು ಪ್ರತಿಪಾದಿಸುವ ಸಲುವಾಗಿಯೇ ತಮ್ಮ ಗ್ರಂಥಗಳನ್ನು ಬರೆದವರು. ಆದುದರಿಂದ ಅವರ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿಯೂ ಈ ಪ್ರತಿಪಾದನಾ ಧ್ಯೇಯದ ಪ್ರಭಾವ ಬಿದ್ದಿರುವುದನ್ನು ನಾವು ನೋಡಬಹುದು.

ರಾಮಾಯಣದ ಕಥಾ ನಾಯಕ ರಾಮನು ಪರಮಾತ್ಮನ ಅವತಾರ; ಆತನು ಜನತೆಗೆ ಮಾರ್ಗದರ್ಶನ ಮಾಡುವ ಸಲುವಾಗಿ, ದುಷ್ಟ ನಿಗ್ರಹಕ್ಕಾಗಿ ಈ ಪ್ರಪಂಚದಲ್ಲಿ ವಿಹರಿಸಿ, ತೋರಿಕೆಯ ಬಗ್ಗೆ ಒಂದು ನಾಟಕವಾಡಿದನು. ಈ ಮಾತು ಕೆಲವೊಮ್ಮೆ ರಾಮನ ಬಾಯಿಯಿಂದಲೇ ಹೊರಬೀಳುವುದು. ಈ ನಾಟಕವು ಸಂಪೂರ್ಣ ಯಶಸ್ವಿಯಾಗಿ ಕೊನೆಗೊಂಡು, ಪ್ರಪಂಚದಲ್ಲಿ ಉತ್ಕೃಷ್ಟವಾದ ರಾಮರಾಜ್ಯದ ಸ್ಥಾಪನೆಯಾಯಿತು. "ಈ ರಾಮಚರಿತೆಯನ್ನು ನಾನು ಸಮಸ್ತ ಪುರಾಣಗಳನ್ನು, ಪಂಚರಾತ್ರಗಳನ್ನು ಭಾರತವನ್ನು, ವೇದಗಳನ್ನು, ಮೂಲ ರಾಮಾಯಣವನ್ನು ಮಥಿಸಿ ಸಾರರೂಪವಾಗಿ ನಿರೂಪಿಸಿದ್ದೇನೆ...... ಬಹುಕಲ್ಪಗಳಿಗನುಸಾರವಾಗಿ, ಬಹು ಗ್ರಂಥಗಳ ಆಸರೆಯಿಂದ ಈ ಕೃತಿಯನ್ನು ನಿರ್ಮಿಸಿದ್ದೇನೆ. ಆದ್ದರಿಂದ ಒಂದೆರಡು ಗ್ರಂಥಗಳನ್ನೋದಿದವರು ಈ ಗ್ರಂಥದಲ್ಲಿ ವಿರೋಧಗಳನ್ನು ತೋರುವ ಮಾತುಗಳಿಗೆ 'ಇಳಿಯಬಾರದು'" (೯–೧೨೫, ೧೨೬, ೧೨೭) ಎಂದು ಶ್ರೀ ಮಧ್ವಾಚಾರ್ಯರೇ ಉಳಿದವರಿಗೆ ಎಚ್ಚರಿಕೆಯಿತ್ತಿರುವುದನ್ನು ನಾವು ಅಷ್ಟು ಲಘುವಾಗಿ ತೆಗೆದುಕೊಳ್ಳುವಂತಿಲ್ಲ.

ಶ್ರೀ ಗೋವಿಂದಾಚಾರ್ಯರ ಅನುವಾದ ಕಾರ್ಯವು ಯಶಸ್ವಿಯಾಗಿದೆ. ಮೂಲದ ಶ್ಲೋಕಗಳ ಸಾರವನ್ನು ಕ್ರೋಢೀಕರಿಸಿ ಚೊಕ್ಕ ವಿದ್ದಷ್ಟು ಸರಳ ಕನ್ನಡ ಭಾಷೆಯಲ್ಲಿನ ಈ ಅನುವಾದ ಉತ್ತಮವಾಗಿದೆ. ಶ್ರೀ ದೇವಡಿಗರ ಕಲಾ ಕೌಶಲ ಮುಖಪುಟಕ್ಕೆ ಮೆರುಗಿತ್ತಿದೆ. ತಮ್ಮ ಆರಾಧ್ಯ ದೇವತೆಯಾದ ಶ್ರೀ ರಾಮನ ಲೀಲಾರೂಪವಾದ ರಾಮಾಯಣವನ್ನು ತಮ್ಮ ಆಚಾರ್ಯರು ವರ್ಣಿಸಿರುವ ಈ ಭಾಗವನ್ನು ಸಾಮಾನ್ಯ ಜನರಿಗೂ ತಿಳಿಯುವ ಅನುಕೂಲತೆಯನ್ನು ಒದಗಿಸುವ ಸದುದ್ದೇಶದಿಂದ ಶ್ರೀ ಫಲಿಮಾರು ಮಠಾಧೀಶರು ಹೊಸ ಕಜ್ಜಕ್ಕೆ ಕೈಹಾಕಿದ್ದಾರೆ. ಇವರು ಪ್ರಾರಂಭಿಸಿರುವ 'ರಾಮನವಮಿ ಪ್ರಕಾಶನ'ದಲ್ಲಿ ಉತ್ತಮವಾದ ರಾಮಕಥಾ ಪ್ರಸಂಗಗಳು ವರ್ಷಂಪ್ರತಿ ಪ್ರಕಟಗೊಂಡು, ಜನತೆಯಲ್ಲಿ ಭಗವದ್ಭಕ್ತಿ ಹಾಗೂ ಸದಾಚಾರಗಳು ನೆಲೆನಿಲ್ಲುವಂತೆ ಪ್ರೇರಕವಾಗಲಿ, ಮಠಾಧೀಶರ ಉದ್ದೇಶ ಸಾರ್ಥಕವಾಗಲಿ.

ಸತ್ತವನ ಸಂತಾಪ—(ವಿಡಂಬನೆಗಳು) ಲೇಖಕ ಶ್ರೀ ಕೆ. ಜಿ. ಶೆಟ್ಟಿ, ಕಡಂದಲೆ. ಪ್ರಕಾಶಕರು: ಸರಸ್ವತೀ ಸಾಹಿತ್ಯಮಾಲೆ, ಕಡಂದಲೆ, ದ. ಕ. ಪುಟಗಳು: ೭೯. ಬೆಲೆ. ರೂ. ೦—೭೫.

ಕನ್ನಡ ಸಾಹಿತ್ಯದಲ್ಲಿ ವಿಡಂಬನಾ ರೂಪದ ಕೃತಿಗಳು ಬೇಕಾದಷ್ಟು ಬೆಳೆದು ಬಂದಿಲ್ಲ. 'ಸತ್ತವನ ಸಂತಾಪ'ದಲ್ಲಿ ವಿಡಂಬನೆಗಳೆಂದು ಹೇಳಿಸಿಕೊಳ್ಳುವ ೧೧ ಕೃತಿಗಳಿವೆ. ಇವುಗಳಲ್ಲಿ ಕೆಲವೊಂದು (ಅಯ್ಯೋ ಪಾಪ! ನಾಲ್ಕು ಪೆಣ್ಣ; ಇತ್ಯಾದಿ) ಕಥಾರೂಪದಲ್ಲಿವೆ, 'ಸತ್ತವನ ಸಂತಾಪ'ವೆಂಬುದು ಸಂವಾದದ ಆಕಾರ ತಾಳಿದೆ. ಸಮಾಜದ ಕುಂದು ಕೊರತೆಗಳನ್ನು ಎತ್ತಿ ತೋರಿಸುವಲ್ಲಿ ವಿಡಂಬನೆಗಳು, ಹರಟೆಗಳು ಅಗ್ರಗಣ್ಯ ಪಾತ್ರ ವಹಿಸುತ್ತವೆ ಮಾತ್ರವಲ್ಲ ಪರಿಣಾಮಕಾರಿ ಪ್ರಭಾವವನ್ನೂ ಬೀರುತ್ತವೆ. ಇಲ್ಲಿ ಸಂಕಲಿತವಾದ ಲೇಖನಗಳಲ್ಲಿ 'ಧರ್ಮ ಸಂಕಟ', 'ಆದುವ ನೀತಿ ಆಚರಣೆಗಿಲ್ಲ', 'ಬಹಿರಂಗ ಪದ್ದತೆ' ಮೊದಲಾದ ಕೆಲವು ವಿಡಂಬನೆಗಳಾಗಿಯೇ ಇದ್ದು ಉತ್ತಮವಾಗಿವೆ. ಲೇಖಕ ಶ್ರೀ ಶೆಟ್ಟರು ಸಾಹಿತ್ಯ ಪ್ರೇಮಿಗಳಿಗೆ ಈಗಾಗಲೇ ಸಾಕಷ್ಟು ಸುಪರಿಚಿತರಿದ್ದಾರೆ. ಅವರ ಲೇಖನಿಯಲ್ಲಿ ಸಮಾಜವನ್ನು ತಿದ್ದುವ ಶಕ್ತಿಯಿದೆ; ಕಸುವೂ ಇದೆ. ಅವರಿಂದ ಇನ್ನೂ ಉತ್ತಮ ವರ್ಗದ ಅಪೂರ್ವ ಕೃತಿಗಳನ್ನು ನಾವು ನಿರೀಕ್ಷಿಸಬಹುದು.

ಜಾನಪದ ಕಥನ ಗೀತೆಗಳು:— ಸಂಪಾದಕರು: ಶ್ರೀ ಕ. ರಾ. ಕೃ. ಪ್ರಕಾಶಕರು: ಜನಪದ ಸಾಹಿತ್ಯ ಅಕಾಡೆಮಿ, ಕಾವ್ಯಕುಟೀರ, ಸರಸ್ವತೀಪುರಂ. ಮೈಸೂರು. ಪುಟಗಳು: ೪೮೮. ಬೆಲೆ: ರೂ. ೮ ೫೦.

"ಅಂಬಿಗರ ಗಂಗ"ದಿಂದ ಆರಂಭವಾಗಿ ಹಲವಾರು ಜಾನಪದ ಗೀತೆಗಳನ್ನು ಅತ್ಯಧಿಕ ಪ್ರಯಾಸದಿಂದ ಸಂಗ್ರಹಿಸಿ, ಅವುಗಳ ಮೃದು ಮಧುರ ಮಧುವಿನ ಸೌಗಂಧವನ್ನು ಈಗಾಗಲೇ ಕರ್ನಾಟಕ ತುಂಬ ಹರಿಸಿದ ಶ್ರೀ ಕ. ರಾ. ಕೃ. ರವರ ನೂತನ ಸಂಗ್ರಹ "ಜಾನಪದ ಕಥನ ಗೀತೆಗಳು" ಮೈಸೂರು, ತುಮಕೂರು, ಬೆಂಗಳೂರು, ಶ್ರೀರಂಗಪಟ್ಟಣ, ಮಂಡ್ಯ, ಆದಿಚುಂಚನಗಿರಿ, ಶಿವಮೊಗ್ಗ ಮೊದಲಾದ ಮತ್ತು ಬಯಲು ನಾಡಿನ ಜಿಲ್ಲೆಗಳ ಬೇರೆ ಬೇರೆ ಸಂದರ್ಭಗಳಲ್ಲಿ ಹಾಡುತ್ತಿರುವ ೩೫ ದೀರ್ಘ ಕಥನಗೀತೆಗಳು ಈ ಸಂಗ್ರಹದಲ್ಲಿ ಅಡಕವಾಗಿವೆ. ಇವುಗಳಲ್ಲಿ ಕೆಲವೊಂದು (ಉದಾಹರಣೆಗೆ, ಅಂಬಿಗರ ಗಂಗ, ಈರೋಬಿ, ಬಂಜೆ ಹೊನ್ನಮ್ಮ ಮೊದಲಾದುವು) ಶ್ರೀ ಕ. ರಾ. ಕೃ. ರವರ ಮೊದಲ ಕೃತಿಗಳಲ್ಲೇ ಬೆಳಕು ಕಂಡಿದ್ದರೂ ಇದೀಗ ಅವು ಪರಿಷ್ಕೃತ ರೂಪದಲ್ಲಿ ಪ್ರಕಟಗೊಂಡಿವೆ. ಇವೆಲ್ಲವು ಹಳ್ಳಿಯ ಹಾಡುಗಳಾಗಿರುವುದರಿಂದ, ಹಾಡುಗಳ ನಿರೂಪಣೆಯಲ್ಲಿ ಪುನರುಕ್ತಿ ಬರುವುದು ಸ್ವಾಭಾವಿಕವಾಗಿದೆ; ಮತ್ತು ಈ ಪುನರುಕ್ತಿ ಗೀತೆಗಳಿಗೆ ಸೊಬಗನ್ನು ತಂದೀಯುತ್ತದೆ. ಹಾಡುವ ಪ್ರಯಾಸ ನಾಡಿಕೆ, ಆಚಾರವನ್ನು ಬೆಳಸಿಕೊಳ್ಳುವ ಬಗೆ ಬಗೆಯ ಸಂವಿಧಾನಗಳು, ಪ್ರತಿ ಕಥೆಗೂ ಸ್ವಾರಸ್ಯದ ಕಲ್ಪನೆಗಳಿಗೆ ಹೊಂದಿಕೊಳ್ಳುವಂತಹ ವಿವಿಧ ಛಂದಸ್ಸು—ಅಲಂಕಾರ ಮೊದಲಾದುವನ್ನು ನಾವಿಲ್ಲಿ ಕಾಣಸಿಗುವುದು ಸಾಧ್ಯ. ದಿಗ್ದರ್ಶನಾರ್ಥವಾಗಿ ಇಲ್ಲಿ "ಹೆಡೆಗೆಂಟು ನಲುಗಿ ಉರಿದ್ಹೋದೋ" ಎಂಬುದನ್ನು ವಿಮರ್ಶಿಸಬಹುದು.

ನಾಗಮ್ಮನ ಸೌಂದರ್ಯಕ್ಕೆ ಮರುಳಾದ ನವಿಲೂರ ದೊರೆಗಳು ಆಕೆಯನ್ನು ತಮಗೆ ಕೊಡಬೇಕೆಂದು ಕೇಳಿದರು. ಮೊದಲು ಹೆಣ್ಣನ ಹೆತ್ತವರು.

ಅರಿಯಾದ ನನು ಹೆಣ್ಣು ಆರಿವೆ
ಉಡಲರಿಯಾದು
ಹರಿವಾಣ ಬೆಳಗೋದ ಕಲಿಯಾದು ।

ಎಂದು ಮುಂತಾದ ಕಾರಣಗಳನ್ನು ಮುಂದಿಟ್ಟು "ನವಿಲೂರ ದೊರೆಗಳಿಗೆ ಹೆಣ್ಣ ನಾವು ಕೊಡಲಾರೆವೋ" ಎಂದು ದೃಢ ಮನಸ್ಸಿನಿಂದ ಇರುವರು. ಆದರೂ ಮುಂದೆ,

ರಾಯ ಕೊಟ್ಟಿಗರೆಯ ಬೋಳಿಂಬರೆಯ
ಮ್ಯಾಲೆ
ಹತ್ತು ಮಂದಿಗ ಬತ್ತ ಮದಿವ್ಯಾನೆ ।
ನಾಗಮ್ಮಗೆ
ನಾರಿಗೆ ಉಗುವ ಒದನ್ಯಾನೆ ॥

ಎಂಬ ಕಾರಣದಿಂದ ಲಗ್ನ ನಿಶ್ಚಯವಾಗಿಯೇ ಬಿಟ್ಟಿತು. ಆದರೆ ಬಳೆತೊಡುವ ಸಮಯ ಬಲಗೈ ಸೀತುಬಿಟ್ಟರು ಯಾಕೋ!; ಎರಡು ಬೆರಳುಗಳೂ ಸೀತವು. ಅಂತೂ ಅಪಶಕುನ! ಮದುವಣಿಗ ಚಂದಯ್ಯ ಮಂಗಲಸ್ನಾನಕ್ಕೆಣಿಯಾದಾಗ, ತಮ್ಮ ಆದನ್ನು ಬೇಡರು ಕದ್ದೊಯ್ದ ಸುದ್ದಿ ಕೇಳಿ ಅದನ್ನು ಬಿಡಿಸಹೋಗಿ, ಅಲ್ಲಿ

ಮುಂಗೋಳಿ ಕೂಗೀತು ಮಾಳು
ಕೆಂಪೇರಿತು
ಸೀಗೇಯ ಮೆಳೆಯಲ್ಲಿ ಮಲಗವನೆ ।
ಚಂದಯ್ಯ
ರಾಳು ಬೇಡಾರು ಅವನ ಕಡಿದಾರು ॥

ಅದರೆ, ಆತನ ಕೈಹಿಡಿಯುವ ನಿರ್ಧಾರ ಮಾಡಿದ ನಾಗಮ್ಮ ಹಿಂಜರಿಯದೆ, ಆ ನಿಯೋಜಿತ ಪತಿಯೊಡನೆಯೇ ಕೊಂಡ ಸೇರ ಬಯಸುತ್ತಾಳೆ. ಆವಳು 'ಹನಮೂಲೆ ಅದಾವ ಎದೆಗುಂದು' ಎಂದು ಕೊಂಡು ಮುನ್ನಡೆಯುತ್ತಾಳೆ. ಅನ್ಯಗತಿ ಕಾಣದೆ ಬಂಧುಗಳು "ನಾಗಮ್ಮನ ಕಿಚ್ಚಿಗೆ ಧಾರೆ ಎರೆದಾರು" ಅರೆಕ್ಷಣದಲ್ಲೇ "ನಾಗಮ್ಮನ ಹೆಡೆಗೆಂಟು ನಲುಗಿ ಉರಿದ್ಹೋದೋ."

ಈ ಕಥಾನಕ ತೀರ ಪುಟ್ಟ ಆದರೆ, "ಕುಲನಾರಿಯು ಒಂದೇ ಬಾರಿ ಪತಿಯನ್ನಾರಿಸುತ್ತಾಳೆ" "ಸತಿಗೆ ಪಾತಿವ್ರತ್ಯವೇ ಭೂಷಣ" ಎಂಬ ಆದರ್ಶೋಕ್ತಿಗಳನ್ನು ಕಾರ್ಯಗತಗೊಳಿಸುತ್ತಾಳೆ. ಇಂತಹ ಅಮರ ತತ್ತ್ವಗಳು ಏಕನಾದದ ದಾಸಯ್ಯನವರು ಹಳ್ಳಿಹಳ್ಳಿಯ ಪಾಮರ ಜನತೆಯ ತುದಿನಾಲಗೆಯಲ್ಲಿ ಕುಣಿದಾಡುತ್ತಿರುವುವು. ಅವುಗಳಲ್ಲಿ ಅಮೃತವಿದೆ, ಸುಧೆಯಿದೆ. ಅವನ್ನು ಸವಿಯುವುದರಿಂದ ಭಾರವಾದ ಮನ ಹಗುರವಾಗುತ್ತದೆ.

ಇಂತಹ ಹಲವಾರು ಕಥಾನಕಗಳು ಅಡಕವಾಗಿರುವ ಈ ಸಂಗ್ರಹವು ಅಪೂರ್ವವಾದುದು. ಸಂಪಾದಕರು ತಾವು ಈ ಬಗ್ಗೆ ಪಟ್ಟ ಪರಿಶ್ರಮ ವೃತ್ತಾಂತವನ್ನು ಓದುವಾಗ ಮೈನವಿರೇಳುವುದು. ಮುಗ್ಧ ಪಾಮರಿಯರ ಬಾಯಿ ಬಿಡಿಸುವುದೆಂದರೆ, ಕಲ್ಲಿನ ಗೊಂಬೆಯೊಡನೆ ನುಡಿಯುವಂತೆ! ಶ್ರೀ ಕಾ. ರಾ. ಕೃ. ರವರ ಅವಿರತ ಪರಿಶ್ರಮದ ಫಲವನ್ನು ಕನ್ನಡಿಗರು ಸಾನಂದವಾಗಿ ಉಣ್ಣುವಂತಾಗಿದೆ. ಕಥನ ಗೀತೆಗಳೊಡನೆ, ಅವುಗಳ ಕಥಾ ಸಾರಾಂಶವನ್ನೂ ಅವುಗಳಲ್ಲಿ ಬರುವ ಕ್ಲಿಷ್ಟ ಜಾನಪದ ಪದಗಳ ಅರ್ಥಗಳನ್ನೂ ಇತ್ತಿರುವುದು ಉಪಯುಕ್ತವಾಗಿದೆ. ಪದ ಕೋಶವನ್ನು ತುಸು ವಿಸ್ತರಿಸುತ್ತಿದ್ದರೆ, ಮತ್ತೂ ಅನುಕೂಲವಾಗುತ್ತಿತ್ತು. ಶ್ರೀ ಜಿ. ವರದರಾಜರಾಯರು ತಮ್ಮ ಮುನ್ನುಡಿಯಲ್ಲಿ ಈ ಗ್ರಂಥದ ಮೇಲೆ ನ್ಯಾಯ ದೃಷ್ಟಿ ಬೀರಿದ್ದಾರೆ. ಅದು ವಾಚನೀಯವಾಗಿದೆ. "ಜಾನಪದದಲ್ಲಿ ಕೇಳುವ ಪ್ರತಿಯೊಂದು ಕಥನ ಗೀತೆಯೂ ಮನದಟ್ಟಿಕೊಳ್ಳಬೇಕಾದುದಾಗಿದೆ. ಕಥಾನಕದಲ್ಲಿ ಬರುವ ಭಿನ್ನ ವಿಭಿನ್ನ ವ್ಯಕ್ತಿಗಳು, ಅವರ ಆಚಾರ—ವಿಚಾರಗಳು—ಅವುಗಳ ಪರಸ್ಪರ ವೈಖರಿ, ಕಥೆಯನ್ನು ಮುಂದೊಯ್ಯುವ ರೀತಿ, ಇಂದಿಗೂ ನಶಿಸಿಹೋಗದಂತಹ ಅಮರ್ತ್ಯತತ್ತ್ವ ಪ್ರತಿಪಾದನೆಗಳು ಅಲ್ಲಲ್ಲಿ ಅಲಂಕಾರ ಛಂದಸ್ಸುಗಳ ಬೆಡಗು, ವ್ಯಂಗ್ಯೋಕ್ತಿಗಳ ಸೊಬಗು—ಜಾನಪದ ಗೀತೆಗಳು ಕಾವ್ಯಗಳಿಗಿಂತ ಏನೇನೂ ಕಡಿಮೆಯಲ್ಲ ಜಾನಪದ ಗೀತಾಕರ್ತೃಗಳು ಅನಕ್ಷರಸ್ಥರಲ್ಲವೆಂಬುದಕ್ಕೆ ಸಾಕ್ಷಿಗಳಾಗಿರುವುವು. ಗೆಳೆಯ ಕ. ರಾ. ಕೃ. ರವರು ಜಾನಪದ ಗೀತಾ ಸಂಗ್ರಹಕ್ಕಾಗಿಯೇ ತಮ್ಮ ಜೀವನವನ್ನು ಮೀಸಲಿಟ್ಟುದ್ದು ಅವರ ಪರಿಶ್ರಮ ಯಶಸ್ವಿಯಾಗಲೆಂದೂ ಅದಕ್ಕೆ ಸರಿಯಾದ ಪುರಸ್ಕಾರ ಕನ್ನಡಿಗ ಸರಕಾರ—ಜನತೆಯಿಂದ ದೊರೆಯಲೆಂದೂ ಹಾರಯ್ಸುತ್ತೇವೆ.

ಗೋರಾ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 196/1959.

R. E. P. 184/1960

ಮಹಾರಾಷ್ಟ್ರ ಎಪೆಕ್ಸ್ ಕೊರ್ಪರೇಶನ್ ಲಿಮಿಟೆಡ್ ಉಡ್ಪಿ— ವಾದಿ, ಅರ್ಜಿದಾರ.

ಮತ್ತು

K. ಬಾಲಕೃಷ್ಣ ಭಟ್ಟ ಕೂಡಾ— ಪ್ರತಿವಾದಿರು, ಎದ್ರಿರು.

ಇವರೊಳಗೆ

1ನೇ ಎದ್ರಿ M. ಬಾಲಕೃಷ್ಣ ಭಟ್ಟ— M. ವೆಂಕಟೇಶ ಭಟ್ಟರ ಮಗ— ಕೆನರಾ ರೇಡಿಯೋ ಹೌಸಿನ ಮ್ಹಾಲಿಕ— ಉಡುಪಿ ಕಸಬಾ ಹಿರಾಬಾಗ್— ಇವರಿಗೆ,

ನಿಮ್ಮನ್ನು ಕೈದು ಮಾಡಿ ಬಂದಿಖಾನೆಯಲ್ಲಿಡುವದರ ಮೂಲಕ 1959ನೇ ಇಸವಿಯ ನಂಬರು O. S. 196ನೇ ವ್ಯಾಜ್ಯದ ಡಿಕ್ರಿಯ ಅಮಲ್‌ಜಾರಿ ಬಗ್ಗೆ ಅರ್ಜಿದಾರನು ಈ ಕೋರ್ಟಿಗೆ ಅರ್ಜಿಯನ್ನು ಮಾಡಿದ್ದಾನೆ. ಆದುದರಿಂದಾ ಸದರಿ ಡಿಕ್ರಿಯ ಅಮಲ್‌ಜಾರಿಯಲ್ಲಿ ನಿಮ್ಮನ್ನು ಸಿವಿಲ್ ಬಂದಿಖಾನೆಯಲ್ಲಿ ಯಾಕೆ ಹಾಕಕೂಡದೆಂಬದಕ್ಕೆ ಸಬಬು ತೋರಿಸಲಿಕ್ಕೆ 1960ನೇ ಇಸವಿ ಅಗೋಸ್ತು ತಿಂಗಳು 31ನೇ ತಾರೀಕಿನಲ್ಲಿ ಈ ಕೋರ್ಟಿನ ಮುಂದೆ ನೀವು ಹಾಜರಾಗಬೇಕಾಗಿರುತ್ತದೆ.

By order of the Court.

M Damoder Kamath

Advocate for Petitioner.

ಉಡುಪಿ, ತಾ. 18-8-1960.

ನಮ್ಮ ಪ್ರೊಡಕ್ಟ್ಸನಲ್ಲಿ ತಯಾರಾಗುವ

ಫೌಂಟೆನ್ ಪೆನ್ ಇಂಕ್, ರಬ್ಬರ್ ಸ್ಟಾಂಪ್ ಪೇಡ್ ಇಂಕ್, ಲಿಕ್ವಿಡ್ ಗಮ್, ಟೂತ್ ಪೌಡರ್, ದಶಾಂಗ ಧೂಪ, ಲಾಲ್ ಗಂಧ (ಕುಂಕುಮ್) ಇತ್ಯಾದಿಗಳಿಗೆ ಉಡುಪಿ ಕುಂದಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಆರ್ಡರು ಬುಕ್ ಮಾಡಿಕೊಡುವರೆ, ಕಮಿಶನಿನ ಮೇಲೆ ಕೆಲಸ ಮಾಡಬಲ್ಲ ಯೋಗ್ಯ ಸೇಲ್ಸ್ ಏಜಂಟರು, ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಇಂದೇ ವಿಚಾರಿಸಿರಿ.

ಪೊಪ್ಯುಲರ್ ಪ್ರೊಡಕ್ಟ್ ಕಂಪೆನಿ,

:: ತ್ರಿಶೂಲೇಶ್ವರ ದೇವಸ್ಥಾನ ರಸ್ತೆ, ಮಂಗಳೂರು-1. :

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1–25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರಮವನ್ನೆ ಅರಿಯದ ಪ್ರಯಾಣಿಕರು

(೯ನೇ ಪುಟದಿಂದ)

ಅವಧಿಯನ್ನು ತೆಗೆದುಕೊಳ್ಳುವುದು ಮತ್ತು ನಮ್ಮ ಹೊಸ ಚಿತ್ರೀಕರಣದಲ್ಲಿ ಇಂತಹ ನಕ್ಷತ್ರವು ನಮ್ಮಿಂದ ೫,೫೦೦ ಮೈಲುಗಳ ಅಂತರದಲ್ಲಿ ಇರುವುದು. ನಮ್ಮ ವಿಶ್ವವು ಎಷ್ಟು ವಿಶಾಲವಿದೆ ಎಂಬುದನ್ನು ತಿಳಿಯಲು ಇದೊಂದು ಉದಾಹರಣೆಯು ಸಾಕು. ನಕ್ಷತ್ರಗಳು ನಮ್ಮಿಂದ ಪ್ರಚಂಡ ಅಂತರಗಳಲ್ಲಿವೆಯಾದ್ದರಿಂದ ಅವುಗಳು ಗತಿಯಲ್ಲಿದ್ದರೂ ಆಕಾಶದಲ್ಲಿ ಸ್ಥಿರವಾದ ಸ್ಥಾನಗಳನ್ನು ಆಕ್ರಮಿಸಿಕೊಂಡು ಅಲ್ಲಿಯೇ ನೆಲೆಸಿಂತಿರುವಂತೆ ಕಾಣುವವು.

ನಮ್ಮ ಗ್ರಹಮಾಲೆಯ ರಾಜ

ನಮ್ಮ ಸೂರ್ಯನು ಗ್ರಹಮಾಲೆಯ ರಾಜನು ಇವನಿಂದಾಗಿಯೇ ಬೇರೆ ಗ್ರಹಗಳು ಉಷ್ಣತೆ ಹಾಗು ಬೆಳಕನ್ನು ಪಡೆಯುವವು. ಇವನ ಶಕ್ತಿಯುತವಾದ ಗುರುತ್ವಾಕರ್ಷಣೆಯು ಗ್ರಹಗಳ ಗತಿಗಳನ್ನು ನಿಯಂತ್ರಿಸುತ್ತದೆ. ಸೂರ್ಯನು ಇಲ್ಲದಿದ್ದಲ್ಲಿ ಮಾನವ ಜನಾಂಗವು ಕ್ಷಣ ಕಾಲದಷ್ಟು ಸಹ ಬದುಕಿ ಉಳಿಯದು. ಪರಿಸ್ಥಿತಿಯು ಹೀಗಿದ್ದರೂ ಇಂದು ನಮ್ಮೆಲ್ಲರ ಲಕ್ಷ್ಯವು ಗ್ರಹಗಳ ಕಡೆಗೇ ಹೊರಳಿದೆ. ನಮ್ಮ ಪೃಥ್ವಿಯನ್ನು ಹೋಲುವಂತಹ ಆದರೆ ಭಿನ್ನಪರಿಸ್ಥಿತಿಗಳಿರುವ ಜಗತ್ತುಗಳೆಂದು ಈ ಗ್ರಹಗಳನ್ನು ಭಾವಿಸಬಹುದಾಗಿದೆ. ಇಂದು ಇವುಗಳನ್ನು ಆಕ್ರಮಿಸುವ ವೈಜ್ಞಾನಿಕ ಪ್ರಯತ್ನಗಳು ಮುಂದವರಿಯತೊಡಗಿವೆ.

ಪ್ರಯಾಣಿಕರ ಪಥ ಮತ್ತು ವೇಗಗಳು

ಸೂರ್ಯನಿಂದ ಇಷ್ಟು ಪ್ರಚಂಡ ಅಂತರದಲ್ಲಿರುವ ನಮ್ಮ ಪ್ರಯಾಣಿಕರು ಕ್ರಮಿಸುವ ಪಥದ ಅಳತೆಗಳನ್ನು ಮತ್ತು ಇದನ್ನು ಅವರು ಯಾವ ವೇಗದಿಂದ ಕ್ರಮಿಸುವರು ಹಾಗು ಇವರಿಗೆ ಎಷ್ಟು ವೇಳೆಯು ಹತ್ತಬಹುದು ಎಂಬುದನ್ನು ತಿಳಿಯುವುದು ಮನೋರಂಜಕವಿದೆ. ಮೊದಲು ಇಲ್ಲಿಯ ನಿಜವಾದ ಅಂಕಿ ಸಂಖ್ಯೆಗಳನ್ನು ತಿಳಿದು ಆ ಬಳಿಕ ಇವುಗಳನ್ನು ನಮಗೆ ಸುಲಭದಲ್ಲಿ ಮನವರಿಕೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಈ ಮೊದಲೇ ವಿವರಿಸಿದ ರೀತಿಯಲ್ಲಿ ಪ್ರಮಾಣೀಕರಿಸೋಣ.

ಸೂರ್ಯನಿಂದ ಗ್ರಹಗಳ ನಿಜವಾದ ಅಂತರಗಳನ್ನು ಮತ್ತು ಗ್ರಹಗಳ ವೇಗಗಳನ್ನು ವಿವರಿಸುವ ಕೋಷ್ಟಕವು ಕೆಳಗೆ ಕಾಣಿಸಿದಂತೆ ಇದೆ.

ಕೋಷ್ಟಕ ೨

ಗ್ರಹಗಳು	ಸೂರ್ಯನಿಂದ ಅಂತರ ಮೈಲುಗಳಲ್ಲಿ	ಪಥದ ಅಳತೆ ಮೈಲುಗಳಲ್ಲಿ	ಪಥವನ್ನು ಸುತ್ತುವ ವೇಳೆ	ಪಥದಲ್ಲಿಯ ಗತಿ ಪ್ರತಿ ಸೆಕಂಡಿಗೆ
ಬುಧ	೩೬,೦೦೦,೦೦೦	ಸೂರ್ಯನಿಂದ	೮೮ ದಿನಗಳು	೨೯.೭ ಮೈಲುಗಳು
ಶುಕ್ರ	೬೭,೨೦೦,೦೦೦	ಅಂತರ×	೨೨೪ ,,	೨೧.೭ ,,
ಪೃಥ್ವಿ	೯೩,೦೦೯,೦೦೦	೩.೧೪×೨	೩೬೫| ,,	೧೮.೫ ,,
ಮಂಗಳ	೧೪೧,೫೦೦,೦೦೦		೬೮೭ ,,	೧೫.೦ ,,
ಗುರು	೪೮೩,೩೦೦,೦೦೦		೧೧||| ವರ್ಷಗಳು	೮ ೧ ,,
ಶನಿ	೮೮೬,೧೦೦,೦೦೦		೨೯|| ,,	೬ ೦ ,,

೧೫೮೦೦ ಮೈಲುಗಳನ್ನು ೧ ಫೂಟೆಂದು ತಿಳಿದು ಮೇಲಿನ ಅಂಕಿ ಸಂಖ್ಯೆಗಳನ್ನು ಕೆಳಗೆ ಕಾಣಿಸಿದಂತೆ ಪರಿವರ್ತಿಸಿದೆ.

ಕೋಷ್ಟಕ ೩

ಗ್ರಹಗಳು	ಸೂರ್ಯನಿಂದ ಅಂತರ ಮೈಲುಗಳಲ್ಲಿ	ಪಥದ ಅಳತೆ ಮೈಲುಗಳಲ್ಲಿ	ಪಥವನ್ನು ಸುತ್ತುವ ವೇಳೆ	ಪಥದಲ್ಲಿಯ ಗತಿ ಫೂಟುಗಳಲ್ಲಿ ಸೆಕಂಡಿಗೆ	ತಾಸಿಗೆ
ಬುಧ	೪.೭೫	೨೯.೮೬	೮೮ ದಿನಗಳು	೦.೦೧೯೯	೭೧.೬೬
ಶುಕ್ರ	೯.೦೦	೫೬.೫೪	೨೨೪ ,,	೦.೦೧೪೫	೫೨.೦೦
ಪೃಥ್ವಿ	೧೨.೨೫	೭೬.೯೭	೩೬೫| ,,	೦.೦೧೨೩	೪೪.೪೦
ಮಂಗಳ	೧೮.೫೦	೧೧೬.೨೦	೬೮೭ ,,	೦.೦೧೦೦	೩೬.೦೦
ಗುರು	೬೪.೦೦	೪೦೨.೧೦	೧೧||| ವರ್ಷಗಳು	೦.೦೦೫೪	೮.೦೦
ಶನಿ	೧೧೭.೦೦	೭೩೫.೦೦	೨೯|| ವರ್ಷ ,,	೦.೦೦೪೦	೬.೦೦

ನಮ್ಮ ಮೇಲಿನ ಚಿತ್ರೀಕರಣದಲ್ಲಿ ಸಾಧಾರಣ ೨,೧೬೦ ಮೈಲುಗಳ ವ್ಯಾಸದ ಗೋಲದಂತಿದ್ದು ಮತ್ತು ಪೃಥ್ವಿಯಿಂದ ೨,೩೮,೦೦೦ ಮೈಲುಗಳ ಅಂತರದಲ್ಲಿ ತನ್ನ ಸೃಷ್ಟೀ ಪ್ರದಕ್ಷಿಣೆಯನ್ನು ಕೈಕೊಂಡಿರುವ ನಮ್ಮ ಚಂದ್ರನ ಸ್ಥಾನವೇನೆಂಬುದನ್ನು ತಿಳಿಯುವಾ. ಇವನಿಗೆ ತನ್ನ ಪಥದಲ್ಲಿ ಒಂದು ಪ್ರದಕ್ಷಿಣೆಯನ್ನು ಪೂರೈಸಲು ೨೭ ದಿನಗಳು ೭ ತಾಸು ೪೩ ಮಿನಿಟುಗಳ ವೇಳೆಯು ಬೇಕಾಗುವುದು.

೧೫೦೦ ಮೈಲುಗಳು=೧ ಫೂಟು, ಇಂತಹ ಚಿತ್ರೀಕರಣದಲ್ಲಿ ಚಂದ್ರನ ಸ್ಥಾನ

ಕೋಷ್ಟಕ ೪

ಪೃಥ್ವಿಯಿಂದ ಅಂತರ ಫೂಟುಗಳಲ್ಲಿ	ಪಥದ ಅಳತೆ ಫೂಟುಗಳಲ್ಲಿ	ಪಥವನ್ನು ಸುತ್ತುವ ವೇಳೆ	ಪಥದಲ್ಲಿಯ ಗತಿ ಪ್ರತಿ ತಾಸಿಗೆ, ಫೂಟುಗಳಲ್ಲಿ
೧೬೦	೯೩೦.೨	೨೭.ದಿ.೭ತಾ.೪೩ಮಿ.	೧.೫೨

ಪೃಥ್ವಿಯನ್ನು ೫ ಫೂಟು ೬ ಇಂಚುಗಳ ಗೋಲವನ್ನಾಗಿಸಿದ ಈ ಚಿತ್ರೀಕರಣದಲ್ಲಿ ಚಂದ್ರ ಗೋಲದ ವ್ಯಾಸವು ಕೇವಲ ೧೭ ಇಂಚುಗಳಷ್ಟಾಗುವುದೆಂಬುದನ್ನು ನಾವು ಇಲ್ಲಿ ನೆನೆಯಬಹುದು.

ಕೊನೆಯದಾಗಿ

ಇತ್ತೀಚೆಗೆ ನಡೆದ ಕೃತಕ ಚಂದ್ರರನ್ನು ಭೂಮಿಯಿಂದ ಹಾರಿಸುವ ಪ್ರಯೋಗಗಳ ಫಲಿತಾಂಶಗಳ ಹಿನ್ನೆಲೆಯಲ್ಲಿ ಈ ಮೊದಲೇ ವಿವರಿಸಿದ ವಿಷಯಗಳನ್ನು ತುಲನೆ ಮಾಡಬಹುದು. ಸೆಕಂಡಿಗೆ ೫ ಮೈಲುಗಳ ವೇಗದಿಂದ ಚಲಿಸುವ ವಸ್ತುವು ನಮ್ಮ ಚಂದ್ರನು ಪೃಥ್ವಿಯನ್ನು ಸುತ್ತುವರಿಯುವಂತೆ ತಾನೂ ಸುತ್ತುವರಿಯುವುದು. ಈ ವಸ್ತುವಿನ ವೇಗವು ಸೆಕಂಡಿಗೆ ೭ ಮೈಲುಗಳಷ್ಟಾದಾಗ ಪೃಥ್ವಿಯ ಗುರುತ್ವಾಕರ್ಷಣ ಶಕ್ತಿಯನ್ನು ಮೀರಿ ಇದು ಮುಂದುವರಿಯುವುದು. ಈ ವೇಗಗಳನ್ನು ೩ನೆಯ ಕೋಷ್ಟಕದಲ್ಲಿ ನಮೂದಿಸಿದ ಗ್ರಹಗಳ ವೇಗದೊಂದಿಗೆ ತುಲನೆ ಮಾಡಿದಾಗ ಗ್ರಹಗಳು ಎಷ್ಟು ಪ್ರಚಂಡ ವೇಗದಿಂದ ತಮ್ಮ ಪಥವನ್ನು ಸುತ್ತುವರಿಯುತ್ತಿರುವುವು ಎಂಬುದರ ಕಲ್ಪನೆಯನ್ನು ಮಾಡಿಕೊಳ್ಳಲು ಸಾಧ್ಯ. ಎಲ್ಲಿಯೋ ೧—೨ ಟನ್ನುಗಳ ಭಾರದ ಗೋಲಗಳನ್ನು ಪೃಥ್ವಿಯಿಂದ ನೂರಾರು ಮೈಲುಗಳ ಅಂತರದಲ್ಲಿ ಪೃಥ್ವಿಯನ್ನು ಸುತ್ತುವರಿಯುವಂತೆ ಮಾಡಲು ವಿಜ್ಞಾನಿಗಳು ಕೈಕೊಂಡ ಶ್ರಮವನ್ನು ಹಿನ್ನೆಲೆಯಲ್ಲಿರಿಸಿ ಪ್ರಚಂಡ ಭಾರದ ಈ ಗ್ರಹಗಳೆಂಬ ಗೋಲಗಳು ಸೂರ್ಯನಿಂದ ಕೊಟ್ಯನು ಕೋಟಿ ಮೈಲುಗಳ ಅಂತರದಲ್ಲಿ ವೇಳೆಗೆ ಸರಿಯಾಗಿ ತಮ್ಮ ಪಥದಲ್ಲಿ ಹೇಗೆ ಭ್ರಮಿಸುತ್ತಿರಬಹುದು, ಇವುಗಳು ತಮ್ಮ ಪಥವನ್ನು ಹೊಂದುವ ಪೂರ್ವದಲ್ಲಿ ಎಲ್ಲಿದ್ದವು ಮತ್ತು ಎಂತಹ ಪ್ರಚಂಡ ಶಕ್ತಿಯಿಂದ ಹೊರಟು ತಮ್ಮ ಪಥವನ್ನು ಹೊಂದಿದವು ಇತ್ಯಾದಿ ವಿಷಯಗಳನ್ನು ತಿಳಿಯಲು ಪ್ರಯತ್ನಿಸಿದಾಗ ನಿಸರ್ಗದ ವೈಜ್ಞಾನಿಕ ಕುಶಲತೆಯು ನಮ್ಮನ್ನು ದಿಙ್ಮೂಢರನ್ನಾಗಿ ಮಾಡುವುದು, ಮಾನವನ ಬುದ್ಧಿಮತ್ತೆಗೆ ಸಮಸ್ಯೆಗಳನ್ನು ಹಾಗು ಅವುಗಳ ಪರಿಹಾರಗಳನ್ನು—ಇವೆರಡನ್ನೂ ಒದಗಿಸುತ್ತಿರುವ ನಿಸರ್ಗಕ್ಕೆ ಅನಂತಾನಂತ ವಂದನೆಗಳು. !

(ಸ್ವಾತಂತ್ರ್ಯದಿನೋತ್ಸವಸಂಚಿಕೆಗೆ ಬಂದ ಲೇಖನ)

ನೋಟೀಸು.

ಪೆರ್ಡೂರು ಅನಂತಪದ್ಮನಾಭ ದೇವರ ಭಂಡಾರದ ಬಾಬ್ತು ತೊಳಸಲು ಅಕ್ಕಿ ಮುಡಿ 60-0 (ಅರ್ವತ್ತು ಮುಡಿ) ಮಾರುವುದಿದೆ. ಆ ಬಗ್ಗೆ ಇದೇ ಬರುವ ತಾರೀಕು 30—8—1960ನೇ ಮಂಗಳವಾರ ಅಪರಾಹ್ನ ಗಂಟೆ 4-30ಕ್ಕೆ ಸರಿಯಾಗಿ ಭಂಡಾರದ ಶರ್ತಗಳಿಗೆ ಒಳಪಟ್ಟು ಎಕ್ಸಿಕ್ಯೂಟೀವ್ ಆಫೀಸರರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಪೇಕ್ಷೆ ಉಳ್ಳವರು ಸಮಯಕ್ಕೆ ಬಂದು ಏಲಂನಲ್ಲಿ ಭಾಗವಹಿಸಬಹುದು.

K. B: Shetty,
Executive Officer,
Sri Ananthapadmanabha Temple, Perdur.

ಪೆರ್ಡೂರು, ತಾ. 13—8—60.

In the Court of the District Munsif of Mangalore

S. C. No. 179 of 1960

Between
Paschal Nazareth — Plaintiff
and
Duming D'Souza } — Defendants
Vincent D'Souza }

To
1) Sri Duming D'Souza,
2) Sri Vincent D'Souza,
Mannagudde, Urva, Mangalore Town.

Please take notice that the above suit on a Hundi filed against you by the Plaintiff is posted to 29—8—1960 for your appearance by person or Pleader. On default you will be declared exparte.

C. Pais. B.A.,B.L.

Mangalore, 12—8—1960



ಪ್ರಕಟಣೆ

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 78/1959
R. I. A. 427/60

ಅನಂತಪದ್ಮನಾಭ ಭಟ್ಟ ಕೂಡಾ— ಅರ್ಜಿದಾರರು

ಮತ್ತು

ಚಂದ್ರಭಾಗಿ ಹೆಗಡ್ತಿ ಕೂಡಾ—ಎದ್ರಿರು

ಇವರೊಳಗೆ—

6ನೆ ಎದ್ರಿ = ಲಕ್ಷ್ಮಿನಾರಾಯಣ ಹೆಗಡೆ—ಚಂದ್ರಭಾಗಿ ಹೆಗಡ್ತಿ ಮಗ—ಉಡುಪಿ ತಾಲ್ಲೂಕು ಹಿರೆಬೆಟ್ಟು ಗ್ರಾಮ— ಇವರಿಗೆ ಈ ಮೂಲಕ ತಿಳಿಸುವದೇನೆಂದರೆ:—

ಮೇಲ್ಕಂಡ ದಾವೆಯಲ್ಲಿ ಕೊಡೋಣಾದ ಪ್ರಿಲಿಮಿನರಿ ಡಿಕ್ರಿ ವಿಧಿಯಂತೆ ಫೈನಲ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರರು ದಾಖ್ಲು ಮಾಡಿದ ಮೇಲ್ಕಂಡ ಅರ್ಜಿ ತಾರೀಕು 30—8—1960ಕ್ಕೆ ತನ್ಖಿ ಬಗ್ಗೆ ಇಡೋಣಾಗಿಯದೆ—ಆ ಕುರಿತು 6ನೆ ಎದ್ರಿಗೆ ಆಕ್ಷೇಪಣೆ ಹೇಳತಕ್ಕದ್ದುಯಿದ್ರೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸೋಣಾಗಿಯದೆ.

V. R. Kidiyoor,
Advocate for Petitioners.

ಉಡುಪಿ, 16—8—60.

ಕಥಾವಿಹಾರ

(೨ನೇ ಪುಟದಿಂದ)

ಸೀತಮ್ಮನವರು ಮಗಳನ್ನು ಕರೆದರು.

ಪದ್ಮಳು ಸರ್ವಾಲಂಕಾರ ಭೂಷಿತೆಯಾಗಿ ಎಲ್ಲರ ಮುಂದೆ ಬಂದು ನಿಂತಳು. ಗಂಡು ಹೆಣ್ಣನ್ನು ನೋಡಿದಷ್ಟೇ ಆಸಕ್ತಿಯಿಂದ ಹೆಣ್ಣು ಗಂಡನ್ನು ಕೂಡಾ ನೋಡಿತು. ಗಂಡು—ಹೆಣ್ಣುಗಳ ದೃಷ್ಟಿಗಳು ಪರಸ್ಪರ ಸಮ್ಮಿಳಿತವಾದುವು.

ತಟ್ಟನೆ ಪದ್ಮ ಕತ್ತು ತಗ್ಗಿಸಿ ಕೋಣೆಯೊಳಗೆ ನುಸುಳಿಬಿಟ್ಟಳು!

ಮಗಳ ಮನೋಗತವನ್ನರಿಯದೆ ಯಾವುದಕ್ಕೂ ಕೈಹಾಕಲೊಲ್ಲದ ರಾಯರು ಪದ್ಮಾಳನ್ನು ಹಿಂಬಾಲಿಸಿದರು. ಪದ್ಮಳ ಕೋಣೆಯನ್ನು ಪ್ರವೇಶಿಸಿ ರಾಯರು,

"ನಿನಗೆ ಒಪ್ಪಿಗೆಯಾಯಿತೇ?" ಎಂದರು.

"ಅಪ್ಪಾ...., ನನ್ನ ಅಭಿಪ್ರಾಯ ಹೇಳಲೇ?"

"ಹೇಳು."

"ಈ ಕಪ್ಪು ಮೈಬಣ್ಣದವನನ್ನು ಮದುವೆಯಾಗಲಾರೆ"—ಎಂದು ನಿರ್ಧಾರದ ಧ್ವನಿಯಲ್ಲಿ ಹೇಳಿಬಿಟ್ಟಳು.

ಒಡನೆ ರಾಯರಿಗೆ ಸಿಡಿಲೆರಗಿದಂತಾಯಿತು. ಅವರ ಆಶಾ ಸೌಧವು ಕುಸಿದು ಬಿತ್ತು! ಹಾಂ! ಹೌದು! ರಮೇಶ ನಸುಗಪ್ಪು! ಆದರೇನಾಯಿತು? ಇದೊಂದು ದೊಡ್ಡ ಕೊರತೆಯೇ? ನಸುಕಪ್ಪಾದರೂ ಲಕ್ಷಣವಾಗಿಲ್ಲವೇ? ಉಳಿದ ಅನುಕೂಲತೆಗಳನ್ನು ಪರಾಮರ್ಶಿಸಬೇಡವೇ?

ಪದ್ಮಳ ಮಾತು ಕೇಳಿ ರಾಯರಿಗೆ ಅಸಮಾಧಾನವಾಗದಿರಲಿಲ್ಲ. ಅವರು ಸಿಡಿಮಿಡಿಗೊಂಡು,

"ನಿನಗೆ ಮತ್ತೆ ಮನ್ಮಥನನ್ನೇ ಎಲ್ಲಿಂದ ತರಲಿ?" ಎಂದುಬಿಟ್ಟರು. ಕೂಡಲೇ ಪದ್ಮಳ ಕಣ್ಣಲ್ಲಿ ನೀರು ತುಂಬಿತು. ಅವಳು ಬಿಕ್ಕಳಿಸಲಾರಂಭಿಸಿದಳು.

ಮಗಳ ಕಂಬನಿ ಕಂಡು ರಾಯರ ಸಿಟ್ಟು ಝರ್ರನೇ ಇಳಿಯಿತು. ಮಗಳ ಮನಸ್ಸನ್ನು ನೋಯಿಸಿದೆನಲ್ಲಾ ಎಂದು ಪಶ್ಚಾತ್ತಾಪಪಟ್ಟರು. ಮಗಳಿಗೆ ಒಪ್ಪಿಗೆಯಾಗದೆ ತಾನೇಕೆ ಮುಂದುವರಿಯಲಿ? ಇರುವವಳು ಒಬ್ಬಳೇ ಮಗಳು...... ಅವಳ ಮನಸ್ಸು ನೋಯಿಸಬಾರದೆಂದು ನಿಶ್ಚಯಿಸಿದರು.

......ಆ ಸಂಬಂಧ ಮುರಿಯಿತು. ಬಂದವರನ್ನು ಏನೋ ಕುಂಟುನೆವ ಹೇಳಿ ಹಿಂದೆ ಕಳುಹಿಸಲಾಯಿತು.

ರಾಯರಿಗೆ ಮತ್ತೆ ಪೇಚಾಟಕ್ಕಿಟ್ಟುಕೊಂಡಿತು. ಅವರ ಮೇಲಿನ ಹೊಣೆಯು ಹೆಚ್ಚಿತೇ ವಿನಃ ಕಡಿಮೆಯಾಗಲಿಲ್ಲ; ಪದ್ಮಳಿಗಾಗಿ ಗಂಡನ್ನು ಆರಿಸುವ ಕಾರ್ಯವು ಪುನಃ ಆರಂಭವಾಯಿತು.

ಸಮೀಪದ ಊರುಗಳನ್ನೆಲ್ಲಾ ಸುತ್ತಿದುದಾಯಿತು.

ಇಷ್ಟಮಿತ್ರರೊಡನೆ ವಿಚಾರಿಸಿದುದಾಯಿತು. ಯಾವುದೂ ಪ್ರಯೋಜನಕ್ಕೆ ಬೀಳಲಿಲ್ಲ.

ಆದರೆ ಬ್ರಹ್ಮದೇವರು ಪದ್ಮಳಿಗೆಂದೇ ಅತಿ ಸೌಂದರ್ಯದಿಂದ ಕೂಡಿದ ಅರವಿಂದನನ್ನು ಇನ್ನೊಂದು ಕಡೆಯಲ್ಲಿ ಸೃಷ್ಟಿಸಿರುವಾಗ ಅವಳ ವಿವಾಹವಾಗದಿರುತ್ತದೆಯೇ?

ಶುಭ ಮುಹೂರ್ತದಲ್ಲಿ ಪದ್ಮಳು ಅರವಿಂದನ ಪತ್ನಿಯಾದಳು. ಅರವಿಂದನು ಸೌಂದರ್ಯದ ಆಗರವೇ ಆಗಿದ್ದುದರಿಂದ ಪದ್ಮಳು ಬಯಸಿದುದು ಕೈಗೂಡಿತು. ಆ ವಳಿಗಾಡ ಸಂಭ್ರಮ ಅಷ್ಟಿಷ್ಟಲ್ಲ.

ಬಿ. ಎ. ಪದವೀಧರನಾಗಿದ್ದ ಅರವಿಂದನು ದೂರದ ನಗರವೊಂದರಲ್ಲಿ ಒಳ್ಳೆಯ ಹುದ್ದೆಯಲ್ಲಿದ್ದ. ಅವನ ಮನೆಯ ಸ್ಥಿತಿಯೂ ಅನುಕೂಲವಾಗಿತ್ತು. ಇಷ್ಟರ ತನಕ ಹೋಟೆಲಿನ ಅನ್ನ ಉಂಡ ಆತನಿಗೆ ಪದ್ಮಳೊಡನೆ ಹೊಸ ಬಿಡಾರ ಹೂಡುವ ಅವಕಾಶ ದೊರೆಯಿತು.

ಪದ್ಮಳು ಪತಿಗೃಹಕ್ಕೆ ಹೊರಟು ನಿಂತಳು. ಭಾಸ್ಕರ ರಾಯರೂ ಸೀತಮ್ಮನವರೂ ತುಂಬಿದ ಹೃದಯದಿಂದ ಮಗಳನ್ನು ಪತಿಯೊಡನೆ ಕಳುಹಿಸಿ ಸಮಾಧಾನದ ಉಸಿರೆಳೆದರು. ಪದ್ಮಳ ಇಚ್ಛೆಯನ್ನು ನೆರವೇರಿಸಿದೆವೆಂಬ ತೃಪ್ತಿ ಅವರಿಗಾಗಿತ್ತು.

○○ ○○

"ತೀರ್ಥರೂಪರ ಚರಣಾರವಿಂದಗಳಲ್ಲಿ,

........ಪದ್ಮಳು ಬೇಡಿಕೊಳ್ಳುವ ಆಶೀರ್ವಾದಗಳು.

ತಮ್ಮ ಪ್ರಿಯ ಮಗಳ ಪತ್ರ ಬಂತೆಂದು ನಿಮಗೂ, ಅಮ್ಮನಿಗೂ ಬಹು ಸಂಭ್ರಮವಾಗಬಹುದು, ಆದರೆ, ಅಪ್ಪಾ, ಆನಂದದಾಯಕವಾದ ಸಮಾಚಾರಗಳಿಂದ ನಿಮ್ಮ ಮನಸ್ಸನ್ನು ಸಂತೋಷಗೊಳಿಸುವ ಭಾಗ್ಯ ನನ್ನ ಪಾಲಿಗೆ ಒದಗದಾಯಿತಲ್ಲಾ?

ಅಪ್ಪಾ, ಏನೆಂದು ಬರೆಯಲಿ? ನನ್ನ ಯಾವ ಸೌಭಾಗ್ಯದ ಕುರಿತು ಬಣ್ಣಿಸಲಿ? ನನ್ನ ಬಾಳು ನಾಯಿಯ ಬಾಳ್ವೆಗಿಂತ ಹೀನವಾಗಿ ಹೋಗಬೇಕೆ?

ಅಪ್ಪಾ, ನನಗಾಗಿ ನೀವು ಅನವರತವೂ ಕಷ್ಟಪಡಬೇಕಾಯಿತು. ಓರ್ವ ಸುಂದರ ಪುರುಷನನ್ನು ನನಗೆ ಪತಿಯಾಗಿ ಒದಗಿಸಬೇಕೆಂದು ನೀವು ಪಟ್ಟ ಶ್ರಮದ ಅರಿವು ಈಗಲೂ ನನಗೆ ಇದೆ.

ಆದರೆ ವಿಧಿಯ ವಿಕಟಾಟ್ಟಹಾಸದ ಇದಿರು ಯಾರೇನು ಮಾಡಲಾಗುತ್ತದೆ? ಆ ನನ್ನ ಪತಿಯ ಸೌಂದರ್ಯವೇ ನನಗೆ ಕುಠಾರಪ್ರಾಯವಾಯಿತಲ್ಲ? ನನ್ನ ಜೀವನ ನೌಕೆಯನ್ನೇ ಅಡಿಮೇಲು ಮಾಡಿತಲ್ಲಾ? ಮಾಣಿಕ್ಯವೆಂದು ಭ್ರಮಿಸಿ ಹೋದರೆ ಅದೇ ಕೆಂಡವಾಗಿ ಪರಿಣಮಿಸಬೇಕೇ?

ಅಪ್ಪಾ...., ಇನ್ನೇಕೆ ಬಚ್ಚಿಡಲಿ? ನಿಮ್ಮೊಡನೆ ಹೇಳದೆ ಇನ್ನಾರೊಡನೆ ಈ ದುರಂತ ಕಥೆಯನ್ನು ತೋಡಿಕೊಳ್ಳಲಿ? ಏನಿದ್ದರೂ ನಿಮಗೆ ತಿಳಿಸುವುದು ಮಗಳಾದ ನನ್ನ ಕರ್ತವ್ಯವಲ್ಲವೇ?

ಅಪ್ಪಾ, ಮದುವೆಯಾದ ಹೊಸದರಲ್ಲಿ ನಮ್ಮ ಜೀವನವು ನಿರಾತಂಕವಾಗಿ ಸಾಗಿತ್ತು. ಅವರಿಗೆ ನನ್ನ ಮೇಲೆ ಅಮಿತವಾದ ಪ್ರೇಮವಿತ್ತು. ನಾನೂ ಅವರ ಅಪಾರವಾದ ರೂಪರಾಶಿಗೆ ಮಾರುಹೋಗಿ ಅವರಲ್ಲಿ ನಿಷ್ಕಲ್ಮಷ ಪ್ರೀತಿಯನ್ನಿಟ್ಟಿದ್ದೆ. ಆ ಸೌಂದರ್ಯಸುಧೆಯನ್ನಾಸ್ವಾದಿಸುವ ಭಾಗ್ಯವೇ ನನ್ನ ಪಾಲಿಗಿತ್ತು! ನಿಜ ಹೇಳಬೇಕಾದರೆ ಈ ನಗರದಲ್ಲೇ ನನ್ನ ಸ್ವಾಮಿಗಳಷ್ಟು ಸುಂದರ ಪುರುಷರಿದ್ದಿರಲಿಲ್ಲ. ಇದು ನನಗೆ ಅತೀವ ಹೆಮ್ಮೆಯ ವಿಷಯವಾಗಿತ್ತು.

ಆದರೆ...ಬ್ರಹ್ಮಲಿಖಿತವನ್ನು ಮೀರುವುದು ಸಾಧ್ಯವೇ? ಅಪ್ಪಾ, ಇದೇ ಪರಿಸ್ಥಿತಿಯಲ್ಲಿ ಹಾಲಿನಂತೆ ಇದ್ದ ನಮ್ಮ ಸಂಸಾರಕ್ಕೆ ಹುಳಿ ಹಿಂಡುವಂತಹ ಘಟನೆಯೊಂದು ಜರಗಿತು.

ಒಂದು ದಿನ ಅವರು ಆಫೀಸಿನಿಂದ ಬರುವಾಗ ಒಂದು ಪತ್ರಿಕೆಯನ್ನು ತಂದಿದ್ದರು. ಅದರಲ್ಲಿ 'ಬೇಕಾಗಿದ್ದಾರೆ' ಎಂಬ ಶೀರ್ಷಿಕೆಯ ಕೆಳಗಡೆ ಪ್ರಕಟವಾದ ಒಂದು ವಿಜ್ಞಾಪನೆಯ ಕಡೆಗೆ ನನ್ನ ಗಮನ ಸೆಳೆದರು. ನಾನೂ ಓದಿದೆ. 'ಚಲಚ್ಚಿತ್ರಗಳಲ್ಲಿ ನಟಿಸಲು ಪದವೀಧರರಾದ ಸುಂದರ ಯುವಕರು ಬೇಕಾಗಿದ್ದಾರೆ. ಅಪೇಕ್ಷೆ ಉಳ್ಳವರು ತಮ್ಮ ಛಾಯಾಚಿತ್ರಗಳೊಂದಿಗೆ ಈ ಕೆಳಗೆ ಕಾಣಿಸಿದವರೊಡನೆ ವ್ಯವಹರಿಸತಕ್ಕದ್ದು' ಎಂಬ ವಿಜ್ಞಾಪನೆಯ ಕೆಳಗೆ ಸಿನೇಮಾ ನಿರ್ಮಾಪಕರೊಬ್ಬರ ವಿಳಾಸ ಕೊಡಲ್ಪಟ್ಟಿತ್ತು. ಯಾವ ದಿನಗಳಿಗೆಯಲ್ಲಿ ಇವರದನ್ನು ಹಿಡಿದುಕೊಂಡು ಬಂದರೋ ಏನೋ? ಅವರು ನನ್ನನ್ನು ನೋಡಿ ನಗುತ್ತಾ 'ಅದೃಷ್ಟವನ್ನೊಮ್ಮೆ ಪರೀಕ್ಷಿಸಲೇ' ಎಂದರು. 'ಈ ಪರೀಕ್ಷೆಯಿಂದ ಸಿಗುವ ಸೌಭಾಗ್ಯವಾದರೂ ಏನು?' ಎಂದು ನಾನು ತಾತ್ಸಾರದಿಂದ ನುಡಿದೆ. ಆಗ ಅವರು ಸಿನೇಮ ನಟನಾಗಿ ಮೆರೆದಾಡುವ ಅನೇಕ ಭವ್ಯ ಚಿತ್ರಗಳನ್ನು ರಸವತ್ತಾಗಿ ವಿವರಿಸಿ ನನ್ನ ಬಾಯಿ ಮುಚ್ಚಿಸಿದರು. ಅಯ್ಯೋ! ಭಗವಂತಾ, ಇವರಿಗೆ ಈ ಹುಚ್ಚು ಏಕೆ ಅಂಟಿಸಿದೆಯೋ?

ಕೆಲವು ದಿನಗಳ ನಂತರ ಇವರು ತಂದ ಸಮಾಚಾರವನ್ನು ಕೇಳಿ ನಾನು ಅಪ್ರತಿಭಳಾದೆ. ಚಲಚ್ಚಿತ್ರ ನಿರ್ಮಾಪಕರಿಂದ, ಅವರು ಸದ್ಯದಲ್ಲಿಯೇ ನಿರ್ಮಿಸಲಿರುವ ಚಿತ್ರವೊಂದರಲ್ಲಿ ಅಭಿನಯಿಸುವ ಸಲುವಾಗಿ ಕರೆ ಬಂದಿತ್ತು. ಇವರಿಗೆ ಈ ಅವಕಾಶ ದೊರಕಿದುದು ಆಶ್ಚರ್ಯವಲ್ಲ. ಇವರ ಆಕರ್ಷಕವಾದ ರೂಪಿಗೆ ಯಾರಾದರೂ ಮಾರು ಹೋಗಲೇ ಬೇಕು. ಇವರು ತನ್ನ ನೌಕರಿಯನ್ನೂ ತೊರೆದು ಬಿಡುವ ದೃಢ ನಿರ್ಧಾರದಿಂದಲೇ ಮನೆಗೆ ಬಂದಿದ್ದರು. ನಾನು ಮಾತ್ರ ಇವರ ಯೋಜನೆಗಳನ್ನೆಲ್ಲ ಆಮೂಲಾಗ್ರವಾಗಿ ಪ್ರತಿಭಟಿಸಿದೆ. ಆದರೆ ಇವರ ಮನೋಭಾವವೇ ಪೂರ್ಣವಾಗಿ ಪರಿವರ್ತನೆ ಹೊಂದಿತ್ತು. ನನ್ನ ಯಾವ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ನನ್ನ ವಿರೋಧವನ್ನು ಲೆಕ್ಕಿಸದೆ ಕೆಲಸಕ್ಕೆ ರಾಜಿನಾಮೆಯನ್ನೂ ಕಳುಹಿಸಿದರು....

ಅಪ್ಪಾ ಇಲ್ಲಿಗೆ ನನ್ನ ಜೀವನಾಗಸದಲ್ಲಿ ಕಾರ್ಮುಗಿಲು ಕವಿಯ ತೊಡಗಿತು....

ಚಿತ್ರದ ಶೂಟಿಂಗ್ ಆರಂಭವಾಯಿತು. ಅದರಲ್ಲಿ ನಟಿಸುವ ಸಲುವಾಗಿ ಇವರು ಸ್ಟುಡಿಯೋದಲ್ಲಿ ಹಾಜರಿರುವುದು ಅನಿವಾರ್ಯವಾಯಿತು. ಮನೆ ಬಿಟ್ಟು ತೆರಳಿದವರು ಹಿಂದಿರುಗುವುದು ಬಹು ಅಪರೂಪವಾಗಿ ಬಿಟ್ಟಿತು. ಒಮ್ಮೊಮ್ಮೆ ಮಧ್ಯ ರಾತ್ರಿ ಕಳೆದ ನಂತರ ಬರುತ್ತಿದ್ದರು ಇವರ ಸಾನ್ನಿಧ್ಯವಿಲ್ಲದೆ ನನಗೆ ಮನೆಯೇ ಮಸಣವಾಗ ತೊಡಗಿತು. ಈ ಕುರಿತು ವಿಚಾರಿಸಿದಾಗ ಏನೋ ಹೇಳಿ ಮುಗಿಸುತ್ತಿದ್ದರು. ಬರಬರುತ್ತಾ ನಾನು ಮನೆಯಲ್ಲಿದ್ದೇನೆಂಬುದನ್ನೂ ಸಂಪೂರ್ಣವಾಗಿ ಮರೆತರು.

ಅಪ್ಪಾ, ಆ ಮೇಲೆ ಇದರ ಮರ್ಮ ನನಗೆ ತಿಳಿಯಿತು. ಸಿನೇಮ, ನಟನಾದವನು ತನ್ನ ಸೌಂದರ್ಯದ ಸದುಪಯೋಗ ಮಾಡಿಕೊಳ್ಳಬೇಡವೇ? ನನ್ನವರ ರೂಪಕ್ಕೆ ಮರುಳಾದ ಬೆಡಗಿನ ಚಲಚಿತ್ರ ನಟಿಯರ ಆ ಕಾಂಕ್ಷೆಯನ್ನು ಅವರು ಪೂರೈಸಬೇಡವೇ? ನಾನು ಕೂಡಾ ಇದೇ ರೂಪವನ್ನು ಕಂಡು ಇವರ ಕೈ ಹಿಡಿದವಳಲ್ಲವೇ? ತಮ್ಮ ಹಾವಭಾವಗಳಿಂದಲೂ, ಬೆಡಗು ಬಿನ್ನಾಣಗಳಿಂದಲೂ ಇವರನ್ನು ಮರುಳುಗೊಳಿಸಲಾರಂಭಿಸಿದ್ದ ಆ ತಾರೆ

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ.
ಮನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1910


ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಕಾಮ ವಿಜ್ಞಾನದ ಮಾಹಿತಿಗಾಗಿ ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ
ಕಲಿಯುಗ
ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50.
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಯರನ್ನು ಧಿಕ್ಕರಿಸಲು ಇವರೇನು ದೈವಾಂಶ ಸಂಭೂತರೇ? ಇವರು ಕೂಡಾ ಸಾಮಾನ್ಯ ಹಾಗೂ ದುರ್ಬಲ ಮನಸ್ಸಿನ ಮನುಷ್ಯನೇ ಅಲ್ಲವೇ?

ಸ್ಟುಡಿಯೋದಲ್ಲಿ ಏನು ಅಭಿನಯಿಸುವರೋ ಅದನ್ನು ಪರಮಾತ್ಮನೇ ಬಲ್ಲ. ಆದರೆ ಈ ತರುಣಿಯರೊಡನೆ ಸಲ್ಲಾಪವು ಅವ್ಯಾಹತವಾಗಿ ಇಂದಿನ ತನಕ ನಡೆಯುತ್ತಾ ಬಂದಿದೆ. ಈ ಸಲ್ಲಾಪವು ಮಾತ್ರ ನನ್ನೆದೆಯಲ್ಲಿ ಕಿಚ್ಚನ್ನು ಹೊತ್ತಿಸುತ್ತಾ ಇದೆ ನನ್ನ ಪ್ರಾರ್ಥನೆಗಳು ಅರಣ್ಯರೋದನವಾಯಿತು....ಮನೆಯ ಮಡದಿಯನ್ನು ಮರೆತು, ಈ ನೀತಿಗೆಟ್ಟ ತರುಣಿಯರ ತಾಳಕ್ಕೆ ಸರಿಯಾಗಿ ಕುಣಿಯುತ್ತಾ ಮೆರೆಯತೊಡಗಿದರು, ಈ ಅಸಹ್ಯ ಸ್ಥಿತಿಯನ್ನು ನೋಡಲಾರೆ...., ಅಪ್ಪಾ!

ಇಷ್ಟರಲ್ಲಿಯೇ ಮುಗಿಯಿತೇ? ಇಲ್ಲ! ಇಲ್ಲ. ಒಂದು ದಿನ ರಾತ್ರಿ ಇವರು ಮನೆಗೆ ಬಂದಾಗ ವೈಷಿಂಲಿನ ಪ್ರಜ್ಞೆ ತಪ್ಪಿತ್ತು! ತೂರಾಡುತ್ತಾ ಒಳಗೆ ಬಂದರು. ಕಣ್ಣುಗಳು ಕೆಂಪಾಗಿದ್ದುವು! ಬಾಯಿಯಿಂದ ಒಂದು ಬಗೆಯ ದುರ್ನಾತ ಹೊರಡುತ್ತಿತ್ತು! ಕಂಠಪೂರ್ತಿ ಮದ್ಯ ಸೇವಿಸಿ ಬಂದಿದ್ದರು. ಆಗಲೇ ನನ್ನ ಜಂಘಾಬಲ ಉಡುಗಿ ಹೋಯಿತು. ಸಿನೇಮಾದ ಹುಚ್ಚಿನೊಡನೆ ಕುಡಿತ ಚಟವೂ ಇವರಿಗಂಟಿತು. ಇದು ನನ್ನನ್ನು ಪೂರ್ಣ ಧೃತಿಗೆಡಿಸಿಬಿಟ್ಟಿತಪ್ಪಾ! ಸುರಪಾನಾಸಕ್ತರಾದವರು ಉದ್ಧಾರವಾದುದಿದೆಯೋ ? ಈ ಅಭ್ಯಾಸವು ಈಗ ಬಹು ಬೆಳೆದು ಬಿಟ್ಟಿದೆ. ಈ ಜನ್ಮದಲ್ಲಿಯೇ ಇದು ಬಿಟ್ಟು ಹೋಗುವ ಚಟವಲ್ಲ.

ಒಮ್ಮೆ ಅವರು ಹೊರಗೆ ಹೊರಟಾಗ ನಾನು ದೃಢ ನಿಶ್ಚಯದಿಂದ ಅವರ ಕಾಲುಗಳನ್ನು ಗಟ್ಟಿಯಾಗಿ ಹಿಡಿದು ನಿಲ್ಲಿಸಿದೆ. ತಟ್ಟನೆ ಅವರು ನೂಕಿದ ರಭಸಕ್ಕೆ ಕಾಲಿನ ಬೂಟ್ಸು ನನ್ನ ಹಣೆಗೆ ಬಡಿಯಿತು. ರಕ್ತ ಧಾರೆಯಾಗಿ ಹರಿಯಿತು. ಇದನ್ನು ನೋಡಿಯೂ ನೋಡದವರಂತೆ ಅವರು ಹೋಗಿಯೇ ಬಿಟ್ಟರು. ಹಣೆಯ ಗಾಯವು ನನಗೆ ಅಷ್ಟು ವೇದನೆಯನ್ನುಂಟು ಮಾಡಲಿಲ್ಲ. ನನ್ನ ಹೃದಯಕ್ಕೆ ಅದಕ್ಕಿಂತಲೂ ದೊಡ್ಡ ಗಾಯವಾಗಿದೆ, ಅಪ್ಪಾ!

ಹಣೆಯ ಗಾಯ ಅಳಿಯಬಹುದು, ಆದರೆ ಹೃದಯದ ಗಾಯ ಮಾಗಬಹುದೇ?

ಹೀಗೆ, ನನ್ನ ಈ ಬಾಳು ಹದಗೆಟ್ಟು ಹೋಗಿದೆ. ದುಶ್ಚಟಗಳು ಇವರಿಗೆ ಬಲವಾಗಿ ಅಂಟಿವೆ. ಇತ್ತೀಚೆಗೆ ಇವರ ದರ್ಶನವೇ ಅಪರೂಪವಾಗ ತೊಡಗಿದೆ. ವಾರದಲ್ಲಿ ಒಂದೆರಡು ಸಲ ಬಂದು, ಕೆದರಿದ ಕಣ್ಣುಗಳಿಂದ ನನ್ನನ್ನು ಕೆಕ್ಕರಿಸಿ ನೋಡಿ, ಒಂದೆರಡು ಒರಟು ಮಾತುಗಳನ್ನಾಡಿ ನನ್ನ ಹೃದಯಕ್ಕೆ ಬರೆಯೆಳೆದು, ಹೊರಟು ಹೋಗುತ್ತಿದ್ದಾರೆ...... ಇನ್ನೇನುಳಿಯಿತು ನನ್ನ ಸೌಭಾಗ್ಯ? ನಿತ್ಯವೂ ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದೇನೆ. ನನ್ನ ಕಳೆಬರಹವನ್ನು ದೂಷಿಸುತ್ತಿದ್ದೇನೆ.

ಇಷ್ಟನ್ನು ಕೇಳಿ ಅಮ್ಮ ಎಷ್ಟು ನೊಂದುಕೊಳ್ಳುವಳೋ? ನೀವು ಕೂಡಾ ಅಳಿಯನಿಗೆ ಒಂದೆರಡು ಉಪದೇಶದ ಮಾತುಗಳನ್ನು ಹೇಳಲು ಮುಂದಾಗಬಹುದು. ಆದರೆ ಅಪ್ಪಾ, ಆ ಸಾಹಸಕ್ಕೆ ಕೈಹಚ್ಚಬೇಡಿರಿ. ಇವರ ಸ್ಥಿತಿಯು ಹದಗೆಟ್ಟು ನಿಂ

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಷ್ಟ್ರವೊಂದರಲ್ಲಿ ಅಭ್ಯಾಸೇಚ್ಛುಗಳಿಗೆ ಈ ರೀತಿಯ ತಡೆ ಹಾಕುವುದು ನ್ಯಾಯೋಚಿತವೆನಿಸುವುದೇ ಅಥವಾ ಇಲ್ಲವೇ? ಮಹಾರಾಷ್ಟ್ರದ ಮುಖ್ಯ ಮಂತ್ರಿ ಶ್ರೀ ವೈ. ಬಿ. ಚವನರು ಈಗಾಗಲೇ ಸಾಕಷ್ಟು ವಿಸ್ತೃತರೂಪದಲ್ಲಿ ಚರ್ಚಿಸಲ್ಪಟ್ಟ ಪೂರ್ವ ಪರೀಕ್ಷೆಗಳಲ್ಲಿ ತುಂಬ ಯೋಗ್ಯತೆಯಿದೆ ಎಂಬುದನ್ನು ತೋರಿಸಿದ ವಿದ್ಯಾರ್ಥಿಗಳಿಗೆ

ತಿರುವುದರಿಂದ ಅದು ಪ್ರಯೋಜನಕಾರಿಯಾಗಲಾರದು.

ಒಮ್ಮೊಮ್ಮೆ ನಿಮ್ಮಲ್ಲಿಗೆ ಬಂದ ಬಿಡಲೇ ಎಂದೆನಿಸುವುದು....ಆದರೆ....ಅದು ಸರಿಯಲ್ಲ. ಪತಿಗೃಹವೇ ನನಗೆ ಸ್ವರ್ಗ, ಪತಿಯೇ ಪ್ರತ್ಯಕ್ಷ ದೇವರು. ಈ ಒಂದು ಸತೀ ಧರ್ಮದ ಪಾಲನೆಗಾಗಿ ನಾನಿಲ್ಲಿ ಇನ್ನೂ ಕೊಳೆಯಬೇಕಾಗಿದೆ. ಅವರು ಹೇಗಿದ್ದರೂ ನನ್ನ ಸ್ವಾಮಿ. ಈ ಸ್ವಾಮಿಯ ಸೇವೆಮಾಡುವುದೇ ನನ್ನ ಕರ್ತವ್ಯ... ನೊರಕಿದಷ್ಟು ಸಮಯ ಇವರ ಸೇವೆಮಾಡಿ ನನ್ನೀ ಬಾಳಿನ ಚರಮಗೀತೆ ಹಾಡಲು ನಿರ್ಧರಿಸಿದ್ದೇನೆ.

ಅಪ್ಪಾ, ಕೊನೆಯದಾಗಿ ನನ್ನ ಒಂದು ಮಾತನ್ನು ನಡೆಯಿಸಿ ಕೊಡುವಿರಾ? ನೀವು ಇದಾವ ವಿಷಯಗಳನ್ನೂ ಮನಸ್ಸಿಗೆ ಹಚ್ಚಿಕೊಳ್ಳಕೂಡದು.... ನಾನು ಸೌಭಾಗ್ಯದಲ್ಲಿರುವೆನೆಂದೇ ಬಗೆದು, ನೀವಿಬ್ಬರೂ ನಿಶ್ಚಿಂತೆಯಿಂದ ಇರಬೇಕೆಂದು ಈ ಅಭಾಗಿನಿ ನಿಮ್ಮನ್ನು ಬೇಡಿಕೊಳ್ಳುತ್ತಿದ್ದಾಳೆ....

ಇತಿ ಪದ್ಮ ಬೇಡುವ ಆಶೀರ್ವಾದ·

ಒಂದು ವರ್ಷದ ನಂತರ, ಕೈಸೇರಿದ ಈ ಪತ್ರ ಓದಿ ಮುಗಿಸಿದ ರಾಯರು ಪತ್ನಿಯ ಮುಖವನ್ನು ದಿಟ್ಟಿಸಿದರು· ಈಗಾಗಲೇ ಸೀತಮ್ಮನವರ ಕಣ್ಣುಗಳಿಂದ ಧಾರೆಗಟ್ಟಿ ಕಂಬನಿ ಸುರಿಯತೊಡಗಿತ್ತು!...

...ರಾಯರು ಮಾತ್ರ ನಿಶ್ಚಲರಾಗಿ, ಕಲ್ಲುಗೊಂಬೆಯಂತೆ ಕುಳಿತು ಬಿಟ್ಟಿದ್ದರು. ಅವರ ಮನಸ್ಸು ಅದಾವುದೋ ವಿಚಾರದ ಸತ್ಯವನ್ನು ಶೋಧಿಸಲು ಹೊರಟಿತ್ತು...!

ಮಾತ್ರ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ನೀಡಬೇಕೆಂಬ ವಿಷಯದ ಬಗ್ಗೆ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದಾರೆ. ಈ ರೀತಿ ಅರ್ಹತೆಯನ್ನು ಪಡೆಯದವನು ಸಾಮಾಜಿಕ ದೃಷ್ಟಿಯಿಂದ ಒಬ್ಬ 'ನಿರುಪಯೋಗಿ' ವ್ಯಕ್ತಿಯೆನಿಸುವ ಸಂಭವವೂ ಬರಬಹುದು. ವ್ಯಕ್ತಿಯು ತನ್ನ ವೈಯುಕ್ತಿಕ ಪ್ರಗತಿಯನ್ನು ಮಾಡಿಕೊಳ್ಳುವುದರಿಂದ ರಾಷ್ಟ್ರದ ಹಿತವೂ ಸಾಧಿಸಲ್ಪಡುವುದರಿಂದ ಒಂದು ಸ್ವತಂತ್ರ ದೇಶದಲ್ಲಿ ಈ ರೀತಿಯ ನಿರ್ಬಂಧವಿರುವುದು ಸರಿಯಲ್ಲವೆನ್ನುತ್ತಾರೆ, ಶ್ರೀ ಚವನರು. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಜ್ಞಾನ ಸಂಪಾದನಾ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಬೇಕು; ದೇಶದ ಮುಂದಿರುವ ಮೂಲಭೂತ ಸಮಸ್ಯೆಗಳನ್ನು ಅಭ್ಯಸಿಸಬೇಕು. ಜ್ಞಾನದ ಬೆಳವಣಿಗೆಯು ಅರ್ಧದಲ್ಲೇ ನಿಂತು ಬಿಟ್ಟರೆ ಅದು ನಿಷ್ಪ್ರಯೋಜನಕರವಾಗುವುದು; ಭಾರತವು ಹಿಂದುಳಿಯುವುದಕ್ಕೆ ಜ್ಞಾನ ವೃಕ್ಷಕ್ಕೆ ನೀರೆರೆಯದುದರಿಂದ ಅದು ಮುರುಟಿದುದೇ ಮೂಲ ಕಾರಣವಾಗಿದೆ. ಆದುದರಿಂದ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ತಾವು ಸಾಧಿಸಬೇಕೆಂದಿರುವ ಲಕ್ಷ್ಯಗಳನ್ನು ತಮ್ಮ ಮನಃಪಟಲದಲ್ಲಿ ಮೊದಲಾಗಿ ರೂಪಿಸಿಕೊಂಡು, ಹೃತ್ಪೂರ್ವಕವಾಗಿ ಅವನ್ನು ಕಾರ್ಯಗತಗೊಳಿಸಬೇಕಾಗುತ್ತವೆ.

ಜ್ಞಾನಸಂಪಾದನೆಗಾಗಿ ಇಂದು ಉಚ್ಚ ಶಿಕ್ಷಣ ಪಡೆಯುವವರ ಸಂಖ್ಯೆ ಅತಿವಿರಳ—ಭಾರತದಲ್ಲಿ, ಬರೀ ಮೆಟ್ರಿಕ್ಯುಲೇಷನಿಗಿಂತ ಏನಾದರೂ ಒಂದು ಪದವಿ ಇದ್ದರೆ, ಅದರಿಂದ ನೌಕರಿಯರಸುವುದು ತುಸು ಸುಲಭವಾದೀತು ಎಂಬ ಆಶಯದಿಂದಲೇ ಭಾರತೀಯ ವಿದ್ಯಾರ್ಥಿಗಳೂ ಹೆತ್ತವರೂ ಕೂಡಿರುತ್ತಾರೆ. ವಿದ್ಯಾರ್ಥಿಗಳಾದರೂ ಜ್ಞಾನ ಸಂಪಾದನೆಗಾಗಿ ತಾವು ಬಂದಿರುವುದೆಂಬುದನ್ನು ಮರೆತು, ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದನ್ನೇ ತಮ್ಮ ಮುಖ್ಯ ಉದ್ದೇಶವಾಗಿಟ್ಟುಕೊಳ್ಳುತ್ತಾರೆ. ಏನೇನೋ ಮಾಡಿ ತಮ್ಮ ಗುರಿಯನ್ನು ಸಾಧಿಸುವ ಪ್ರಯತ್ನ ನಡೆಸುತ್ತಾರೆ. ತಮ್ಮ ಮೇಧಾಶಕ್ತಿ ಯೇನೇ ಇರಲಿ, ಅದರ ಸಂಪೂರ್ಣ ಪ್ರಯೋಜನವನ್ನವರು ಪಡೆಯುವುದಿಲ್ಲವೆಂಬುದು ಸರ್ವವಿದಿತ. ಹಾಗಿರುವಾಗ, ವಿಶ್ವವಿದ್ಯಾಲಯಗಳ ಘಟ್ಟವಾದರೂ ಹೇಗೆ ಉಳಿಯಬೇಕು? ದಿನಂಪ್ರತಿ ಕೇಳಿ ಬರುವ ವಿದ್ಯಾರ್ಥಿಗಳ ಅಶಿಸ್ತು, ಅಸಭ್ಯವರ್ತನೆ ಮೊದಲಾದ ಅನಾಗರಿಕ ಯೋಗ್ಯ ಕೃತ್ಯಗಳಿಗೂ ಪ್ರವೇಶ ನಿರ್ಬಂಧ ಹೇರುವುದರಿಂದ ತುಸು ಪರಿಹಾರ ದೊರೆಯಬಹುದು. ಆದರೆ, ಸರ್ವರಿಗೂ ಸಮಾನಾಧಿಕಾರ, ಸಮಾನಾವಕಾಶವನ್ನು ನೀಡುವ ನಮ್ಮ ಪ್ರಜಾಪ್ರಭುತ್ವದಲ್ಲಿ ಈ ರೀತಿಯ ನಿರ್ಬಂಧವಿರುವುದು ಸಮಂಜಸವೇ ಎಂಬುದನ್ನು ಮೂರು ಮೂರು ಬಾರಿಗೆ ಯೋಚಿಸಿ ಈ ದಿಸೆಯಲ್ಲಿ ಮುಂದುವರಿಯಬೇಕಾಗಿದೆ. ಮಿತಿ ಹೇರುವ ಹೆಸರಿನಲ್ಲಿ ದೇಶಕ್ಕೆ ಕಲಂಕ ಹಚ್ಚುವ ಕೆಲಸ ನಡೆಯಬಾರದು; ಕ್ಷಾರ ಮಾಡಿಸಿ ತಿಥಿ ಕೇಳುವಂತಾಗ ಬಾರದು. ಈ ಮಾದರಿಯ ದಾಷ್ಟ್ಯ್ರ ರೀತಿಯ ಹೆಜ್ಜೆಯಿಡುವಾಗ ಅದೆಷ್ಟು ಎಚ್ಚರಿಗೆ ವಹಿಸಿದರೂ ಅದು ಅತ್ಯಲ್ಪವೇ ಸರಿ.



ಆಕಾಶ ವೀಕ್ಷಣೆಗಾಗಿ ಹಾರಲು ಸಿದ್ಧವಾದ ಅಮೇರಿಕೆಯ ಥೋರ್ ರಾಕೆಟ್.

139

ಶಾಖೆಗಳು

ದಕ್ಷಿಣ ಭಾರತದ ಎಲ್ಲೆಡೆಗಳಲ್ಲಿ– ಅದು ವಾಣಿಜ್ಯ ಕ್ಷೇತ್ರವಾಗಿರಲಿ,
ಕೈಗಾರಿಕಾ ಪ್ರದೇಶವಾಗಿರಲಿ, ಇಲ್ಲವೆ ಶೈಕ್ಷಣಿಕ ಕೇಂದ್ರವಾಗಿರಲಿ–ಅಲ್ಲಿ
ಸಿಂಡಿಕೇಟ್ ಬೇಂಕಿನ ಶಾಖೆಯೊಂದು ನಿಮ್ಮ ಆರ್ಥಿಕ ಸೇವೆಗೆ ಸಿದ್ಧವಾಗಿ ನಿಂತಿದೆ.

ಬೊಂಬಾಯಿ ನಗರದಲ್ಲಿ ನಮ್ಮ ೧೩೮ನೆಯ ಶಾಖೆ ಮುಲುಂದ್;
ದ. ಕ. ಜಿಲ್ಲೆಯಲ್ಲಿ ೧೩೯ನೆಯ ಶಾಖೆ ಸುರತ್ಕಲ್— ಈ ಎರಡು ಹೊಸ
ಶಾಖೆಗಳು ೧೦-೮-೧೯೬೦ರಂದು ಪ್ರಾರಂಭವಾಗಿವೆ.

ಯಾವುದೇ ತರದ ನಿಮ್ಮ ಬೇಂಕಿಂಗ್ ವ್ಯವಹಾರವನ್ನು ಸಿಂಡಿಕೇಟ್ ಬೇಂಕಿನ
ಈ ವಿಶಾಲವಾದ ೧೩೯ ಶಾಖಾ ಸಮುದಾಯದ ಮೂಲಕ
ನೀವು ಯಶಸ್ವಿಯಾಗಿ ನೆರವೇರಿಸಬಲ್ಲಿರಿ.

—ಸಿಂಡಿಕೇಟ್ ಬೇಂಕ್

The Canara Industrial & Banking Syndicate Limited, Udipi.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗದ ೩ನೆಯ ವರ್ಷವು ಅಂತ್ಯವಾಗಿ ಸಪ್ಟಂಬರ ಆದಿಯಿಂದ ೪ನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಈ ತಿಂಗಳಾಂತ್ಯದೊಳಗಾದರೂ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಚಂದಾಹಣವನ್ನು ಸಿಂಡಿಕೇಟ್ ಬೇಂಕಿನ ಯಾವದೇ ಶಾಖೆಯಲ್ಲಿ 'ನವಯುಗ" ದ ಖಾತೆಗೆ ಯಾವದೊಂದು ತರದ ಖರ್ಚಿಲ್ಲದೆ ಪಾವತಿಮಾಡಬಹುದಾಗಿದೆ.

—ಮೆನೇಜರ್,

Edited, Printed & Published by K. H. Shetty, at the Navayuga Press, Udipi, S. India.

ನವ ಯುಗ

1)	1-9-1960	12
2)	8-9-1960	12
3)	15-9-1960	12
4)	22-9-1960	12
5)	29-9-1960	10
6)	6-10-1960	12
7)	13-10-1960	12
8)	20-10-1960	12
9)	27-10-1960	12
10)	3-11-1960	12
11)	10-11-1960	12
12)	17-11-1960	12
13)	24-11-1960	12
14)	1-12-1960	12
15)	8-12-1960	12
16)	15-12-1960	8
17)	22-12-1960	12
18)	5-1-1960	12
19)	12-1-1960	12
20)	26-1-1960	32 ಪ್ರಜಾರಾಜ್ಯ ವಿಶೇಷಾಂಕ

254

 pms

21)	2-	2-	1961	12
22)	9.	2.	1961	12
23)	16	2-	1961	12
24)	23	2-	1961	12
25)	2	3.	1961	12
26)	9-	3	1961	12
27)	16	3	1961	12
28)	23	3	1961	12
29)	30	3	1961	12
30)	6.	4-	1961	12
31)	13	4-	1961	12
32)	20	4-	1961	12
33)	27	4-	1961	12
34)	4.	5	1961	12
35)	11-	5	1961	12
36)	18	5-	1961	12
37)	25	5	1961	12
38)	1-	6	1961	12
39)	[illegible]	6.	1961	12
40)	15	6	1961	

2-40

41)	22 - 6 1961	12
42)	29 - 6 - 1961	12
43)	6 - 7 - 1961	12
44)	13 - 7 - 1961	12
45)	20 - 7 - 1961	12
46)	27 - 7 - 1961	12
	3 - 8 - 1961	12
47)	17 - 8 - 1961	36 Independence day special
48)	24 - 8 - 1961	12
49)	31 - 8 - 1961	12
~~50)~~		
		144

1) 254
2) 240
3) 144

40th year of publication. 1-9-1960 ೪೦ನೇ ವರ್ಷ.

ಸಂಪುಟ ೪೦ | Vol. 40

ಸಂಚಿಕೆ ೧ | No. 1

ಬೆಲೆ 0-13

ನವಯುಗ

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ನಾಗಾರಾಜ್ಯ ಸ್ಥಾಪನೆಯ ಹಿನ್ನೆಲೆಯೇನು?

ಮೊದಲಿನಿಂದಲೂ ತೊಡಕಿನದಾಗಿದ್ದ ಈ ನಾಗಾ ಪ್ರಶ್ನೆ ಪ್ರತ್ಯೇಕ ರಾಜ್ಯ ರಚನಾನಂತರವಾದರೂ ಬಗೆಹರಿದೀತು ಎಂದು ವಿಶ್ವಾಸಪಡುವುದು ಸಾಧ್ಯವೆ? ಎಂಬ ಸಂದೇಹವೇನಿಲ್ಲ. ಸದ್ಯ ಇಂಗ್ಲೆಂಡಿನಲ್ಲಿರುವ ಫಿಜೋ ಮುಂದಿಡುವ ಹೆಜ್ಜೆ ಯಾವುದೆಂದು ಯಾರಿಗೆ ಗೊತ್ತು?

ಮೊನ್ನೆ ಜುಲೈ ೩೧ರಂದು ಪ್ರಧಾನ ಮಂತ್ರಿ ನೆಹರು ಭಾರತ ಒಕ್ಕೂಟದೊಳಗೆ 'ನಾಗಾ ಪ್ರದೇಶ'ವೆಂಬ ಹೊಸದೊಂದು ರಾಜ್ಯವನ್ನು ಸ್ಥಾಪಿಸಲು ಭಾರತ ಸರಕಾರವು ಒಪ್ಪಿರುವ ಸಂಗತಿಯನ್ನು ಘೋಷಿಸಿದರು. ಸಂಪ್ರದಾಯದ ಪದ್ಧತಿ ಕಟ್ಟಳೆಗಳಿಗನುಗುಣವಾಗಿ ತಮ್ಮ ಪ್ರಗತಿಯನ್ನು ಮಾಡಿಕೊಳ್ಳುವ ಇರಾದೆಯಿಂದ ಕೂಡಿರುವ ನಾಗಾ ಜನರ ಇಚ್ಛೆಯನ್ನು ಪೂರೈಸುವ ಸಲುವಾಗಿ ಈ ನಿರ್ಧಾರಕ್ಕೆ ಬರಲಾಯಿತು.

ಭಾರತದ ಆಗ್ನೇಯ ಗಡಿ ಪ್ರದೇಶದಲ್ಲಿರುವ ಐದು ಭಾಗಗಳಲ್ಲಿ ನಾಗಾ ಗುಡ್ಡಗಾಡು ಪ್ರದೇಶವೂ ಒಂದಾಗಿದೆ. ಅಸಾಮು, ಆಗ್ನೇಯ ಗಡಿ ಪ್ರಾಂತ, ನಾಗಾ ಗುಡ್ಡಗಾಡುಗಳು, ಟ್ಯೂನ್ಸಾಂಗ್ ಪ್ರದೇಶ, ಮಣಿಪುರ ಮತ್ತು ತ್ರಿಪುರಗಳು ಈ ಗಡಿಭಾಗದಲ್ಲಿವೆ. ನಾಗಾ ಗುಡ್ಡಗಾಡು ಮತ್ತು ಟ್ಯೂನ್ಸಾಂಗ್ ಪ್ರದೇಶವು ಪೂರ್ವದಲ್ಲಿ ಬರ್ಮಾ, ಉತ್ತರದಲ್ಲಿ ನೇಫಾ ಮತ್ತು ಅಸಾಮು, ಪಶ್ಚಿಮದಲ್ಲಿ ಅಸಾಮು ಹಾಗೂ ದಕ್ಷಿಣದಲ್ಲಿ ಮಣಿಪುರಗಳಿಂದ ಆವೃತವಾಗಿದೆ.

ನಾಗಾ ಗುಡ್ಡಗಾಡು ಮತ್ತು ಟ್ಯೂನ್ಸಾಂಗ್ ಪ್ರದೇಶವನ್ನು ೧೯೫೭ನೆ ಡಿಸೆಂಬರದಲ್ಲಿ ನಿರ್ಮಿಸಲಾಯಿತು. ಕೇಂದ್ರದ ವಿದೇಶ ವ್ಯವಹಾರ ಮಂತ್ರಿಶಾಖೆಯ ಮೂಲಕ ಈ ರಾಜ್ಯದ ಆಡಳಿತೆಯು ಸದ್ಯ ನಡೆಯುತ್ತಿದೆ. ಅಸಾಮಿನ ರಾಜ್ಯಪಾಲರೇ ರಾಷ್ಟ್ರಪತಿಯವರ ಪ್ರತಿನಿಧಿಯಾಗಿ ಈ ರಾಜ್ಯವನ್ನು ನೋಡಿಕೊಳ್ಳುತ್ತಿದ್ದಾರೆ. ಮೊದಲಿನ ನಾಗಾಗುಡ್ಡಗಳ ಕೊಹಿಮಾ ಮತ್ತು ಮೊಕೊಚುಂಗ ಜಿಲ್ಲೆಗಳನ್ನು ಹಾಗೂ ನೇಫಾದ ಟ್ಯೂನ್ಸಾಂಗ್ ಜಿಲ್ಲೆಯನ್ನೂ ಸೇರಿಸಿ ಈ ರಾಜ್ಯವನ್ನು ಸ್ಥಾಪಿಸಲಾಗಿತ್ತು. ಈಗ ಇಲ್ಲಿನ ೭೧೩ ಗ್ರಾಮಗಳಲ್ಲಿ ಸುಮಾರು ೩೬೯ ಸಾವಿರ ಜನರು ವಾಸಿಸುತಿದ್ದಾರೆ.

ಇದುವರೆಗೆ ಕೇಂದ್ರಾಡಳಿತೆಯಡಿಯಿರುವ ಈ ರಾಜ್ಯವನ್ನು ಸ್ವಾಡಳಿತ ರಾಜ್ಯವನ್ನಾಗಿ ರಚಿಸಲು ಭಾರತ ಸರಕಾರವು ನಿರ್ಧಾರಕ್ಕೆ ಬರುವುದಕ್ಕೆ ಅಪೂರ್ವ ಹಿನ್ನೆಲೆಯಿರುವುದು. ಪರ್ವತ ಪ್ರದೇಶದಲ್ಲಿ ನೆಲಸಿರುವ ನಾಗಾ ಜನರು ತಮ್ಮ ಹಳೆಯ ಸಂಪ್ರದಾಯ ಮತ್ತು ಸಂಸ್ಕೃತಿಗಳ ಬಗ್ಗೆ ಬಹಳಷ್ಟು ಅಭಿಮಾನ ಪಡುವವರು. ಇಲ್ಲಿನ ಶೈಕ್ಷಣಿಕ ಕ್ಷೇತ್ರವು ಮುಖ್ಯವಾಗಿ, ಬಾಪ್ಟಿಸ್ಟ್ ಮತ್ತು ರೋಮನ್ ಕಥೋಲಿಕ ಕ್ರೈಸ್ತ ಮಿಶನ್‌ಗಳ ಕೈಯಲ್ಲಿರುವುದು.

೧೯೨೯ರಲ್ಲಿ ಸೈಮನ್ ಕಮಿಶನ್ ಭಾರತ ಸಂಚಾರ ಮಾಡುತಿದ್ದಾಗ, ಕೆಲವು ನಾಗಾ ನಾಯಕರು ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಂದಿಟ್ಟಿದ್ದರು. ೧೯೪೭ರಲ್ಲಿ ಭಾರತ ಸರಕಾರ ಮತ್ತು ನಾಗಾ ರಾಷ್ಟ್ರೀಯ ಸಮಿತಿಯ ನಡುವೆ ಒಂಬತ್ತು ವಿಷಯಗಳಿಂದ ಆಡಕವಾದ ಒಪ್ಪಂದವೊಂದು ಆಯಿತು. ಇದಕ್ಕೆ ನಾಗಾ ನಾಯಕರಲ್ಲೊಬ್ಬನಾದ ಫಿಜೋವು ವಿರೋಧ ವ್ಯಕ್ತಪಡಿಸಿ ಮುಂದೆ ಭೂಗತನಾದನು. ೧೯೫೨ರಲ್ಲಿ ಫಿಜೋ ಮತ್ತು ನೆಹರುರವರ ನಡುವೆ ಮಾತುಕತೆ ನಡೆದರೂ ಅದು ನಿಷ್ಪ್ರಯೋಜಕವಾಯಿತು; ಶ್ರೀ ಫಿಜೋ ವಿಧ್ವಂಸಕ ಚಟುವಟಿಕೆಗಳಲ್ಲಿ ನಿರತನಾದನು. ಇದರಿಂದಾಗಿ ಮುಂದೆ ಈ ಪ್ರದೇಶದಲ್ಲಿ ದೊಂಬಿಯೇ ಎದ್ದಂತಾಯಿತು. ಪೋಲೀಸು ಠಾಣೆಗಳು ಸುಟ್ಟು ಹೋದುವು. ೧೯೫೬ರಲ್ಲಿ ಸೈನ್ಯವೇ ಇಲ್ಲಿ ಪ್ರವೇಶಿಸಬೇಕಾಯಿತು. ೧೯೫೭ರಲ್ಲಿ ಪರಿಸ್ಥಿತಿ ಸುಧಾರಿಸತೊಡಗಿದುದರಿಂದ ಸೈನ್ಯವು ಮರಳಿತು. ೧೯೫೭ ನಾಗಾ ಜಾತಿಗಳ ಸುಮಾರು ೧,೦೦೦ ಪ್ರತಿನಿಧಿಗಳ ಒಂದು ಸಮ್ಮೇಳನ ಸೇರಿತು. ನಾಗಾ ಗುಡ್ಡ ಮತ್ತು ಟ್ಯೂನ್ಸಾಂಗ ಪ್ರದೇಶವು ಈ ಸಮ್ಮೇಳನದ ನಿರ್ಧಾರದಂತೆ ಸ್ಥಾಪನೆಗೊಂಡಿತು.

ಒಂದು ರಾತ್ರಿ [illegible] ಅಂಗಡಿ [illegible] ಮತ್ತು [illegible] ದೊರೆಯುತ್ತದೆ

ಕಳೆದ ಸುಮಾರು ವರ್ಷಗಳಲ್ಲಿ ಈ ಪ್ರದೇಶದಲ್ಲಿ ಬಹಳಷ್ಟು ಸುಧಾರಣೆ ಆಗಿದೆ. ೭ ಪ್ರೌಢ ಶಾಲೆಗಳು, ೪೯ ಮಾಧ್ಯಮಿಕ ಶಾಲೆಗಳು [illegible] ಮತ್ತು [illegible] ಸ್ಥಾಪನೆಯಾಗಿವೆ. ಇವುಗಳಲ್ಲಿ ಒಟ್ಟು ೧೬,೦೦೦ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಅಭ್ಯಾಸಿಸುತಿದ್ದಾರೆ. [illegible] ಪ್ರದೇಶಕ್ಕೆ ನೀರಿನ ಸೌಕರ್ಯವನ್ನು ಒದಗಿಸಲಾಗಿದೆ. ೨೫ ಆಸ್ಪತ್ರೆಗಳು, [illegible] ಚಿಕಿತ್ಸಾಲಯಗಳು ತೆರೆಯಲ್ಪಟ್ಟಿವೆ. ಹಲವಾರು ರಸ್ತೆಗಳು ನಿರ್ಮಾಣಗೊಳ್ಳುತ್ತಿವೆ. [illegible] ಆಗುವುದು.

ಕೇಂದ್ರ ಸರಕಾರವು ಉತ್ತಮ ರೀತಿಯಿಂದ ಆಡಳಿತೆ ನಿರ್ವಹಿಸಿದರೂ ಶ್ರೀ ಫಿಜೋವಿಗೆ ಇದು ಸರಿಬರಲಿಲ್ಲ. ಆತನ ಉಪಟಳ ಹೆಚ್ಚುತ್ತ ಬಂತು. ೧೯೫೮ರಲ್ಲಿ ನಾಗಾ ಜನರ ಎರಡನೆಯ ಅಧಿವೇಶನ ನಡೆದು ಈ ಪ್ರದೇಶದ ಭವಿಷ್ಯದ ಕುರಿತಾದ ಪ್ರಸ್ತಾಪಗಳನ್ನು ರಚಿಸಿತು. ೧೯೫೯ರಲ್ಲಿ ಸೇರಿದ್ದ ಮೂರನೆಯ ಸಮ್ಮೇಳನದಲ್ಲಿ ಪ್ರತ್ಯೇಕ ನಾಗಾರಾಜ್ಯದ ಕರಡು ಸಂವಿಧಾನವನ್ನು ಸ್ವೀಕರಿಸಲಾಯಿತು. ಪ್ರತಿನಿಧಿಗಳು ಈ ವರ್ಷದ ಏಪ್ರಿಲ್‌ನಲ್ಲಿ ಅಸಾಮ ಗವರ್ನರರನ್ನೂ ಜುಲೈಯಲ್ಲಿ ಪ್ರಧಾನಿ ನೆಹರುರವರನ್ನೂ ಕಂಡು ತಮ್ಮ ಬೇಡಿಕೆಯನ್ನು ಮುಂದಿಟ್ಟರು.

ಮಾತುಕತೆಗಳ ಪರಿಣಾಮವಾಗಿ ನಾಗಾಜನರಿಗೆ ಭಾರತ ಒಕ್ಕೂಟದಲ್ಲಿಯೇ ಪ್ರತ್ಯೇಕ ರಾಜ್ಯವು ದೊರೆಯುವುದು. ಹೊಸ ರಾಜ್ಯ ಕೇಂದ್ರದ ಶಾಸನಾಧಿಕಾರವನ್ನು ಹೊಂದಿರುವುದು. ಇದಕ್ಕೆ ಚುನಾಯಿತರಾಗಿರುವ ಸಚಿವಸಂಪುಟವೊಂದಿರುವುದು. ಅಸಾಮದ ರಾಜ್ಯಪಾಲರೇ ನಾಗಾರಾಜ್ಯದ ರಾಜ್ಯಪಾಲರಾಗುವರು. ನಾಗಾಜನರ ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳಿಗೆ ವಿಶೇಷ ರಕ್ಷಣೆ ದೊರೆಯುವುದು. ಭೂಸ್ವಾಮಿತ್ವ ಮತ್ತು ಸ್ವಾಧೀನತೆಗಳ ಬಗ್ಗೆ ನಾಗಾ ಸಾಂಪ್ರದಾಯಿಕ ನಿಯಮಗಳೇ ಉಳಿಯುವುವು. ಒಂದು ದಶಕ ಟ್ಯೂನ್ಸಾಂಗ ಪ್ರದೇಶಕ್ಕೆ ವಿಶೇಷ ವಿಧಾನವನ್ನು ಮಾಡಲಾಗಿದೆ. ಇದು ನಾಗಾ ಪ್ರದೇಶಕ್ಕೆ ನೀಡಲಾದ ಎಲ್ಲ ಸೌಲಭ್ಯಗಳನ್ನು ಪಡೆಯುವ ತನಕ ಮುಂದಿನ ಹತ್ತು ವರುಷಗಳ ಕಾಲ ಕೇಂದ್ರಾಡಳಿತೆಯಲ್ಲೇ ಇರುವುದು.

ಮೊದಲು [illegible] ಬೇರೆ ಬೇರೆ [illegible] ೧೯೫೧ [illegible] ಜನರ ಪ್ರತಿನಿಧಿ [illegible] ರಾಜ್ಯ [illegible]

([illegible])

40th year of publication. 1-9-1960 ೪೦ನೇ ವರ್ಷ.

ಸಂಪುಟ ೪೦ Vol. 40

ನವಯುಗ

ಸಂಚಿಕೆ ೧ No. 1

ಬೆಲೆ 0=13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ನಾಗಾರಾಜ್ಯ ಸ್ಥಾಪನೆಯ ಹಿನ್ನೆಲೆಯೇನು?

ಮೊದಲಿನಿಂದಲೂ ತೊಡಕಿನದಾಗಿದ್ದ ಈ ನಾಗಾ ಪ್ರಶ್ನೆ ಪ್ರತ್ಯೇಕ ರಾಜ್ಯ ರಚನಾನಂತರವಾದರೂ ಬಗೆಹರಿದೀತು ಎಂದು ವಿಶ್ವಾಸಪಡುವುದು ಸಾಧ್ಯವೆ? ಎಂಬ ಸಂದೇಹವೇಳದಿಲ್ಲ. ಸದ್ಯ ಇಂಗ್ಲೆಂಡಿನಲ್ಲಿರುವ ಫಿಜೋ ಮುಂದಿಡುವ ಹೆಜ್ಜೆ ಯಾವುದೆಂದು ಯಾರಿಗೆ ಗೊತ್ತು?

ಮೊನ್ನೆ ಜುಲೈ ೩೦ರಂದು ಪ್ರಧಾನ ಮಂತ್ರಿ ನೆಹರು ಭಾರತ ಒಕ್ಕೂಟದೊಳಗೆ 'ನಾಗಾ ಪ್ರದೇಶ'ವೆಂಬ ಹೊಸದೊಂದು ರಾಜ್ಯವನ್ನು ಸ್ಥಾಪಿಸಲು ಭಾರತ ಸರಕಾರವು ಒಪ್ಪಿರುವ ಸಂಗತಿಯನ್ನು ಘೋಷಿಸಿದರು. ತಮ್ಮದೇ ಆದ ಪದ್ಧತಿ ಕಟ್ಟಲೆಗಳಿಗನುಗುಣವಾಗಿ ತಮ್ಮ ಪ್ರಗತಿಯನ್ನು ಮಾಡಿಕೊಳ್ಳುವ ಇರಾದೆಯಿಂದ ಕೂಡಿರುವ ನಾಗಾ ಜನರ ಇಚ್ಛೆಯನ್ನು ಪೂರೈಸುವ ಸಲುವಾಗಿ ಈ ನಿರ್ಧಾರಕ್ಕೆ ಬರಲಾಯಿತು.

ಭಾರತದ ಆಗ್ನೇಯ ಗಡಿ ಪ್ರದೇಶದಲ್ಲಿರುವ ಐದು ಭಾಗಗಳಲ್ಲಿ ನಾಗಾ ಗುಡ್ಡಗಾಡು ಪ್ರದೇಶವೂ ಒಂದಾಗಿದೆ. ಅಸಾಮು, ಆಗ್ನೇಯ ಗಡಿ ಪ್ರಾಂತ, ನಾಗಾ ಗುಡ್ಡಗಾಡುಗಳು, ಟ್ಯೂನ್ಸೇಂಗ್ ಪ್ರದೇಶ, ಮಣಿಪುರ ಮತ್ತು ತ್ರಿಪುರಗಳು ಈ ಗಡಿಭಾಗದಲ್ಲಿವೆ. ನಾಗಾ ಗುಡ್ಡಗಾಡು ಮತ್ತು ಟ್ಯೂನ್ಸೇಂಗ್ ಪ್ರದೇಶವು ಪೂರ್ವದಲ್ಲಿ ಬರ್ಮಾ, ಉತ್ತರದಲ್ಲಿ ನೇಫಾ ಮತ್ತು ಅಸಾಮು, ಪಶ್ಚಿಮದಲ್ಲಿ ಅಸಾಮು ಹಾಗೂ ದಕ್ಷಿಣದಲ್ಲಿ ಮಣಿಪುರಗಳಿಂದ ಆವೃತವಾಗಿದೆ.

ನಾಗಾ ಗುಡ್ಡಗಾಡು ಮತ್ತು ಟ್ಯೂನ್ಸೇಂಗ್ ಪ್ರದೇಶವನ್ನು ೧೯೫೭ನೆ ದಶಂಬರದಲ್ಲಿ ನಿರ್ಮಿಸಲಾಯಿತು. ಕೇಂದ್ರದ ವಿದೇಶ ವ್ಯವಹಾರ ಮಂತ್ರಿಶಾಖೆಯ ಮೂಲಕ ಈ ರಾಜ್ಯದ ಆಡಳಿತೆಯು ಸದ್ಯ ನಡೆಯುತ್ತಿದೆ. ಅಸಾಮುದ ರಾಜ್ಯಪಾಲರೇ ರಾಷ್ಟ್ರಪತಿಯವರ ಪ್ರತಿನಿಧಿಯಾಗಿ ಈ ರಾಜ್ಯವನ್ನೂ ನೋಡಿಕೊಳ್ಳುತಿದ್ದಾರೆ. ಮೊದಲಿನ ನಾಗಾಗುಡ್ಡಗಳ ಕೊಹಿಮಾ ಮತ್ತು ಮೊಕೊಚುಂಗ ಜಿಲ್ಲೆಗಳನ್ನು ಹಾಗೂ ನೇಫಾದ ಟ್ಯೂನ್ಸೆಂಗ್ ಜಿಲ್ಲೆಯನ್ನೂ ಸೇರಿಸಿ ಈ ರಾಜ್ಯವನ್ನು ಸ್ಥಾಪಿಸಲಾಗಿತ್ತು. ಈಗ ಇಲ್ಲಿನ ೭೧೩ ಗ್ರಾಮಗಳಲ್ಲಿ ಸುಮಾರು ೩೬೯ ಸಾವಿರ ಜನರು ವಾಸಿಸುತಿದ್ದಾರೆ.

ಇದುವರೆಗೆ ಕೇಂದ್ರಾಡಳಿತೆಯಡಿಯಿರುವ ಈ ರಾಜ್ಯವನ್ನು ಸ್ವಾಡಳಿತ ರಾಜ್ಯವನ್ನಾಗಿ ರಚಿಸಲು ಭಾರತ ಸರಕಾರವು ನಿರ್ಧಾರಕ್ಕೆ ಬರುವುದಕ್ಕೆ ಅಪೂರ್ವ ಹಿನ್ನೆಲೆಯಿರುವುದು. ಪರ್ವತ ಪ್ರದೇಶದಲ್ಲಿ ನೆಲಸಿರುವ ನಾಗಾ ಜನರು ತಮ್ಮ ಹಳೆಯ ಸಂಪ್ರದಾಯ ಮತ್ತು ಸಂಸ್ಕೃತಿಗಳ ಬಗ್ಗೆ ಬಹಳಷ್ಟು ಅಭಿಮಾನ ಪಡುವವರು. ಇಲ್ಲಿನ ಶೈಕ್ಷಣಿಕ ಕ್ಷೇತ್ರವು ಮುಖ್ಯವಾಗಿ, ಬಾಪ್ಟಿಸ್ಟ್ ಮತ್ತು ರೋಮನ್ ಕಥೋಲಿಕ ಕ್ರೈಸ್ತ ಮಿಶನ್‌ಗಳ ಕೈಯಲ್ಲಿರುವುದು.

೧೯೨೯ರಲ್ಲಿ ಸೈಮನ್ ಕಮಿಶನ್ ಭಾರತ ಸಂಚಾರ ಮಾಡುತಿದ್ದಾಗ, ಕೆಲವು ನಾಗಾ ನಾಯಕರು ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಂದಿಟ್ಟಿದ್ದರು. ೧೯೪೭ರಲ್ಲಿ ಭಾರತ ಸರಕಾರ ಮತ್ತು ನಾಗಾ ರಾಷ್ಟ್ರೀಯ ಸಮಿತಿಯು ನಡುವೆ ಒಂಬತ್ತು ವಿಷಯಗಳಿಂದ ಅಡಕವಾದ ಒಪ್ಪಂದವೊಂದು ಆಯಿತು. ಇದಕ್ಕೆ ನಾಗಾ ನಾಯಕರಲ್ಲೊಬ್ಬನಾದ ಫಿಜೋವು ವಿರೋಧ ವ್ಯಕ್ತಪಡಿಸಿ ಮುಂದೆ ಭೂಗತನಾದನು. ೧೯೫೦ರಲ್ಲಿ ಫಿಜೋ ಮತ್ತು ನೆಹರುರವರ ನಡುವೆ ಮಾತುಕತೆ ನಡೆದರೂ ಅದು ನಿಷ್ಪ್ರಯೋಜಕವಾಯಿತು; ಶ್ರೀ ಫಿಜೋವು ವಿಧ್ವಂಸಕ ಚಟುವಟಿಕೆಗಳಲ್ಲಿ ನಿರತನಾದನು. ಇದರಿಂದಾಗಿ ಮುಂದೆ ಈ ಪ್ರದೇಶದಲ್ಲಿ ದೊಂಬಿಯೇ ಎದ್ದಂತಾಯಿತು. ಪೋಲೀಸು ಠಾಣೆಗಳು ಸುಟ್ಟುಹೋದುವು. ೧೯೫೬ರಲ್ಲಿ ಸೈನ್ಯವೇ ಇಲ್ಲಿ ಪ್ರವೇಶಿಸಬೇಕಾಯಿತು. ೧೯೫೭ರಲ್ಲಿ ಪರಿಸ್ಥಿತಿ ಸುಧಾರಿಸತೊಡಗಿದುದರಿಂದ ಸೈನ್ಯವು ಮರಳಿತು. ೧೮ ನಾಗಾ ಜಾತಿಗಳ ಸುಮಾರು ೧,೦೦೦ ಪ್ರತಿನಿಧಿಗಳ ಒಂದು ಸಮ್ಮೇಳನ ಸೇರಿತು. ನಾಗಾ ಗುಡ್ಡ ಮತ್ತು ಟ್ಯೇನ್ಸಾಂಗ ಪ್ರದೇಶವು ಈ ಸಮ್ಮೇಳನದ ನಿರ್ಧಾರದಂತೆ ಸ್ಥಾಪನೆಗೊಂಡಿತು.

ಒಂದು ರಾತಲು ಸಸ್ಯಾಹಾರಕ್ಕೆ ೫ ಮಿನಿಟು ಬೆಣ್ಣೆಗೆ ೨೨ ಮಿನಿಟು ೧೨ ಮೊಟ್ಟೆಗಳಿಗೆ ೧೯ ಮಿನಿಟು ಮತ್ತು ಒಂದು ಜತೆ ಬಟ್ಟೆಬರೆಗಳಿಗೆ ೩೩ ತಾಸು ೧೦ ಮಿನಿಟು ಗಳಕಾಲ ಅಮೆರಿಕೆಯಲ್ಲಿ ದುಡಿಯಬೇಕಾಗುತ್ತದೆ.

ಕಳೆದ ಮೂರು ವರ್ಷಗಳಲ್ಲಿ ಈ ಪ್ರದೇಶದಲ್ಲಿ ಬಹಳಷ್ಟು ಸುಧಾರಣೆಯಾಗಿದೆ. ೭ ಪ್ರೌಢ ಶಾಲೆಗಳು, ೪೯ ಮಾಧ್ಯಮಿಕ ಶಾಲೆಗಳು, ೪೧೧ ಪ್ರಾಥಮಿಕ ಶಾಲೆಗಳು ಮತ್ತೊಂದು ತಾಂತ್ರಿಕ ಶಿಕ್ಷಣ ಸಂಸ್ಥೆ ಇಲ್ಲಿ ಸ್ಥಾಪಿತವಾಗಿ, ಇವುಗಳಲ್ಲಿ ಒಟ್ಟು ೧೦,೦೦೦ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಅಭ್ಯಸಿಸುತಿದ್ದಾರೆ. ಕಾಲಂಶದಷ್ಟು ಪ್ರದೇಶಕ್ಕೆ ನೀರಿನ ಸೌಕರ್ಯವನ್ನು ಒದಗಿಸಲಾಗಿದೆ. ೭೫ ಆಸ್ಪತ್ರೆಗಳು ಮತ್ತು ೩೩ ಚಿಕಿತ್ಸಾಲಯಗಳು ತೆರೆಯಲ್ಪಟ್ಟಿವೆ. ಹಲವಾರು ಮೈಲು ಮಾರ್ಗರಚನೆಯೂ ಆಗಿರುವುದು.

ಕೇಂದ್ರ ಸರಕಾರವು ಉತ್ತಮ ರೀತಿಯಿಂದ ಆಡಳಿತೆ ನಿರ್ವಹಿಸಿದರೂ ಶ್ರೀ ಫಿಜೋವಿಗೆ ಇದು ಸರಿಬರಲಿಲ್ಲ. ಆತನ ಉಪಟಳ ಹೆಚ್ಚುತ್ತ ಬಂತು. ೧೯೫೮ರಲ್ಲಿ ನಾಗಾ ಜನರ ಎರಡನೆಯ ಅಧಿವೇಶನ ನಡೆದು ಈ ಪ್ರದೇಶದ ಭವಿಷ್ಯದ ಕುರಿತಾದ ಪ್ರಶ್ನಾವಳಿಯನ್ನು ರಚಿಸಿತು. ೧೯೫೯ರಲ್ಲಿ ಸೇರಿದ್ದ ಮೂರನೆಯ ಸಮ್ಮೇಳನದಲ್ಲಿ ಪ್ರತ್ಯೇಕ ನಾಗಾರಾಜ್ಯದ ಕರಡು ಸಂವಿಧಾನವನ್ನು ಸ್ವೀಕರಿಸಲಾಯಿತು. ಪ್ರತಿನಿಧಿಗಳು ಈ ವರ್ಷದ ಎಪ್ರಿಲ್‌ನಲ್ಲಿ ಅಸ್ಸಾಮದ ಗವರ್ನರರನ್ನೂ ಜುಲೈಯಲ್ಲಿ ಪ್ರಧಾನಿ ನೆಹರುರವರನ್ನೂ ಕಂಡು ತಮ್ಮ ಬೇಡಿಕೆಯನ್ನು ಮುಂದಿಟ್ಟರು.

ಮಾತುಕತೆಗಳ ಪರಿಣಾಮವಾಗಿ ನಾಗಾಜನರಿಗೆ ಕೆಲಕಾಲದಲ್ಲಿಯೇ ಪ್ರತ್ಯೇಕ ರಾಜ್ಯವು ದೊರೆಯುವುದು. ಹೊಸ ರಾಜ್ಯಕ್ಕೊಂದು ಶಾಸನ ಸಭೆಯಿರುವುದು. ಇದಕ್ಕೆ ಜವಾಬ್ದಾರರಾಗಿರುವ ಸಚಿವಸಂಪುಟವೊಂದಿರುವುದು. ಅಸಾಮುದ ರಾಜ್ಯಪಾಲರೇ ನಾಗಾರಾಜ್ಯದ ರಾಜ್ಯಪಾಲರಾಗುಳಿಯುವರು. ನಾಗಾಜನರ ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳಿಗೆ ವಿಶೇಷರಕ್ಷಣೆ ದೊರೆಯುವುದು. ಭೂಸ್ವಾಮಿತ್ವ ಮತ್ತು ಪರಾಧೀನತೆಗಳ ಬಗ್ಗೆ ನಾಗಾ ಸಾಂಪ್ರದಾಯಿಕ ನಿಯಮಗಳೇ ಉಳಿಯುವುವು. ಹಿಂದುಳಿದ ಟ್ಯೇನ್ಸಾಂಗ ಪ್ರದೇಶಕ್ಕೆ ವಿಶೇಷ ಏರ್ಪಾಡನ್ನು ಮಾಡಲಾಗಿದೆ. ಇದು ನಾಗಾ ಪ್ರದೇಶಕ್ಕೆ ನೀಡಲಾದ ಎಲ್ಲ ಸೌಲಭ್ಯಗಳನ್ನು ಪಡೆಯುವುದಾದರೂ ಮುಂದಿನ ಹತ್ತು ವರ್ಷಗಳ ಕಾಲಕ್ಕೆ ಕೇಂದ್ರಾಡಳಿತೆಯಲ್ಲೇ ಉಳಿಯುವುದು.

ಮೂರು ವರ್ಷಗಳ ವರೆಗೆ ಬೇಕಾಗುವ ಮಧ್ಯಾವಧಿಯಲ್ಲಿ ೧೫ ನಾಗ ಜನಾಂಗಗಳ ಪ್ರತಿನಿಧಿ ಮಂಡಳವು ರಾಜ್ಯಪಾಲರಿಗೆ ಸಹಾಯ ನೀಡುವುದು; ಹಾಗೂ ಸ

(೧೨ನೇ ಪುಟ ನೋಡಿರಿ)

40th year of publication. 1-9-1960 ೪೦ನೇ ವರ್ಷ.

ಸಂಪುಟ ೪೦ Vol. 40

ಸಂಚಿಕೆ ೧ No. 1

ಬೆಲೆ 0-13

ನವಯುಗ

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ನಾಗಾರಾಜ್ಯ ಸ್ಥಾಪನೆಯ ಹಿನ್ನೆಲೆಯೇನು?

ಮೊದಲಿನಿಂದಲೂ ತೊಡಕಿನದಾಗಿದ್ದ ಈ ನಾಗಾ ಪ್ರಶ್ನೆ ಪ್ರತ್ಯೇಕ ರಾಜ್ಯ ರಚನಾನಂತರವಾದರೂ ಬಗೆಹರಿದೀತು ಎಂದು ವಿಶ್ವಾಸಪಡುವುದು ಸಾಧ್ಯವೆ? ಎಂಬ ಸಂದೇಹವೇಳದಿಲ್ಲ. ಸದ್ಯ ಇಂಗ್ಲೆಂಡಿನಲ್ಲಿರುವ ಫಿಜೋ ಮುಂದಿಡುವ ಹೆಜ್ಜೆ ಯಾವುದೆಂದು ಯಾರಿಗೆ ಗೊತ್ತು?

ಮೊನ್ನೆ ಜುಲೈ ೩೧ರಂದು ಪ್ರಧಾನ ಮಂತ್ರಿ ನೆಹರು ಭಾರತ ಒಕ್ಕೂಟದೊಳಗೆ 'ನಾಗಾ ಪ್ರದೇಶ'ವೆಂಬ ಹೊಸದೊಂದು ರಾಜ್ಯವನ್ನು ಸ್ಥಾಪಿಸಲು ಭಾರತ ಸರಕಾರವು ಒಪ್ಪಿರುವ ಸಂಗತಿಯನ್ನು ಘೋಷಿಸಿದರು. ತಮ್ಮದೇ ಆದ ಪದ್ಧತಿ ಕಟ್ಟಲೆಗಳಿಗನುಗುಣವಾಗಿ ತಮ್ಮ ಪ್ರಗತಿಯನ್ನು ಮಾಡಿಕೊಳ್ಳುವ ಇರಾದೆಯಿಂದ ಕೂಡಿರುವ ನಾಗಾ ಜನರ ಇಚ್ಛೆಯನ್ನು ಪೂರೈಸುವ ಸಲುವಾಗಿ ಈ ನಿರ್ಧಾರಕ್ಕೆ ಬರಲಾಯಿತು.

ಭಾರತದ ಆಗ್ನೇಯ ಗಡಿ ಪ್ರದೇಶದಲ್ಲಿರುವ ಐದು ಭಾಗಗಳಲ್ಲಿ ನಾಗಾ ಗುಡ್ಡಗಾಡು ಪ್ರದೇಶವೂ ಒಂದಾಗಿದೆ. ಅಸಾಮು, ಆಗ್ನೇಯ ಗಡಿ ಪ್ರಾಂತ, ನಾಗಾ ಗುಡ್ಡಗಾಡುಗಳು, ಟ್ಯೂನ್ಸೇಂಗ್ ಪ್ರದೇಶ, ಮಣಿಪುರ ಮತ್ತು ತ್ರಿಪುರಗಳು ಈ ಗಡಿಭಾಗದಲ್ಲಿವೆ, ನಾಗಾ ಗುಡ್ಡಗಾಡು ಮತ್ತು ಟ್ಯೂನ್ಸೇಂಗ್ ಪ್ರದೇಶವು ಪೂರ್ವದಲ್ಲಿ ಬರ್ಮಾ, ಉತ್ತರದಲ್ಲಿ ನೇಫಾ ಮತ್ತು ಅಸಾಮು, ಪಶ್ಚಿಮದಲ್ಲಿ ಅಸಾಮು ಹಾಗೂ ದಕ್ಷಿಣದಲ್ಲಿ ಮಣಿಪುರಗಳಿಂದ ಆವೃತವಾಗಿದೆ,

ನಾಗಾ ಗುಡ್ಡಗಾಡು ಮತ್ತು ಟ್ಯೂನ್ಸೇಂಗ್ ಪ್ರದೇಶವನ್ನು ೧೯೫೭ನೆ ಡಿಸೆಂಬರದಲ್ಲಿ ನಿರ್ಮಿಸಲಾಯಿತು. ಕೇಂದ್ರದ ವಿದೇಶ ವ್ಯವಹಾರ ಮಂತ್ರಿಶಾಖೆಯ ಮೂಲಕ ಈ ರಾಜ್ಯದ ಆಡಳಿತೆಯು ಸದ್ಯ ನಡೆಯುತ್ತಿದೆ. ಅಸಾಮುದ ರಾಜ್ಯಪಾಲರೇ ರಾಷ್ಟ್ರಪತಿಯವರ ಪ್ರತಿನಿಧಿಯಾಗಿ ಈ ರಾಜ್ಯವನ್ನೂ ನೋಡಿಕೊಳ್ಳುತಿದ್ದಾರೆ. ಮೊದಲಿನ ನಾಗಾಗುಡ್ಡಗಳ ಕೊಹಿಮಾ ಮತ್ತು ಮೊಕೊಚುಂಗ ಜಿಲ್ಲೆಗಳನ್ನು ಹಾಗೂ ನೇಫಾದ ಟ್ಯೂನ್ಸೇಂಗ್ ಜಿಲ್ಲೆಯನ್ನೂ ಸೇರಿಸಿ ಈ ರಾಜ್ಯವನ್ನು ಸ್ಥಾಪಿಸಲಾಗಿತ್ತು. ಈಗ ಇಲ್ಲಿನ ೭೧೩ ಗ್ರಾಮಗಳಲ್ಲಿ ಸುಮಾರು ೩೬೯ ಸಾವಿರ ಜನರು ವಾಸಿಸುತಿದ್ದಾರೆ.

ಇದುವರೆಗೆ ಕೇಂದ್ರಾಡಳಿತೆಯಡಿಯಿರುವ ಈ ರಾಜ್ಯವನ್ನು ಸ್ವಾಡಳಿತ ರಾಜ್ಯವನ್ನಾಗಿ ರಚಿಸಲು ಭಾರತ ಸರಕಾರವು ನಿರ್ಧಾರಕ್ಕೆ ಬರುವುದಕ್ಕೆ ಅಪೂರ್ವ ಹಿನ್ನೆಲೆಯಿರುವುದು. ಪರ್ವತ ಪ್ರದೇಶದಲ್ಲಿ ನೆಲಸಿರುವ ನಾಗಾ ಜನರು ತಮ್ಮ ಹಳೆಯ ಸಂಪ್ರದಾಯ ಮತ್ತು ಸಂಸ್ಕೃತಿಗಳ ಬಗ್ಗೆ ಬಹಳಷ್ಟು ಅಭಿಮಾನ ಪಡುವವರು. ಇಲ್ಲಿನ ಶೈಕ್ಷಣಿಕ ಕ್ಷೇತ್ರವು ಮುಖ್ಯವಾಗಿ, ಬಾಪ್ಟಿಸ್ಟ್ ಮತ್ತು ರೋಮನ್ ಕೆಥೋಲಿಕ ಕ್ರೈಸ್ತ ಮಿಶನ್'ಗಳ ಕೈಯಲ್ಲಿರುವುದು.

೧೯೨೯ರಲ್ಲಿ ಸೈಮನ್ ಕಮಿಶನ್ ಭಾರತ ಸಂಚಾರ ಮಾಡುತಿದ್ದಾಗ, ಕೆಲವು ನಾಗಾ ನಾಯಕರು ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಮುಂದಿಟ್ಟಿದ್ದರು. ೧೯೪೭ರಲ್ಲಿ ಭಾರತ ಸರಕಾರ ಮತ್ತು ನಾಗಾ ರಾಷ್ಟ್ರೀಯ ಸಮಿತಿಯ ನಡುವೆ ಒಂಬತ್ತು ವಿಷಯಗಳಿಂದ ಅಡಕವಾದ ಒಪ್ಪಂದವೊಂದು ಆಯಿತು. ಇದಕ್ಕೆ ನಾಗಾ ನಾಯಕರಲ್ಲೊಬ್ಬನಾದ ಫಿಜೋವು ವಿರೋಧ ವ್ಯಕ್ತಪಡಿಸಿ ಮುಂದೆ ಭೂಗತನಾದನು. ೧೯೫೦ರಲ್ಲಿ ಫಿಜೋ ಮತ್ತು ನೆಹರುರವರ ನಡುವೆ ಮಾತುಕತೆ ನಡೆದರೂ ಅದು ನಿಷ್ಪ್ರಯೋಜಕವಾಯಿತು; ಶ್ರೀ ಫಿಜೋವು ವಿಘಾತಕ ಚಟುವಟಿಕೆಗಳಲ್ಲಿ ನಿರತನಾದನು. ಇದರಿಂದಾಗಿ ಮುಂದೆ ಈ ಪ್ರದೇಶದಲ್ಲಿ ದೊಂಬಿಯೇ ಎದ್ದಂತಾಯಿತು. ಪೋಲೀಸು ಠಾಣೆಗಳು ಸುಟ್ಟುಹೋದುವು. ೧೯೫೬ರಲ್ಲಿ ಸೈನ್ಯವೇ ಇಲ್ಲಿ ಪ್ರವೇಶಿಸಬೇಕಾಯಿತು. ೧೯೫೭ರಲ್ಲಿ ಪರಿಸ್ಥಿತಿ ಸುಧಾರಿಸತೊಡಗಿದುದರಿಂದ ಸೈನ್ಯವು ಮರಳಿತು, ೧೬ ನಾಗಾ ಜಾತಿಗಳ ಸುಮಾರು ೧,೦೦೦ ಪ್ರತಿನಿಧಿಗಳ ಒಂದು ಸಮ್ಮೇಳನ ಸೇರಿತು. ನಾಗಾ ಗುಡ್ಡ ಮತ್ತು ಟೀನಸ್ಸಾಂಗ ಪ್ರದೇಶವು ಈ ಸಮ್ಮೇಳನದ ನಿರ್ಧಾರದಂತೆ ಸ್ಥಾಪನೆಗೊಂಡಿತು.

ಒಂದು ರಾತಲು ಸಸ್ಯಾಹಾರಕ್ಕೆ ೫ ಮಿನಿಟು ಬೆಣ್ಣೆಗೆ ೨೨ ಮಿನಿಟು ೧೨ ಮೊಟ್ಟೆಗಳಿಗೆ ೧೯ ಮಿನಿಟು ಮತ್ತು ಒಂದು ಜತೆ ಬಟ್ಟೆಬರೆಗಳಿಗೆ ೪೩ ತಾಸು ೧೦ ಮಿನಿಟು ಗಳಕಾಲ ಅಮೆರಿಕೆಯಲ್ಲಿ ದುಡಿಯಬೇಕಾಗುತ್ತದೆ.

ಕಳೆದ ಮೂರು ವರ್ಷಗಳಲ್ಲಿ ಈ ಪ್ರದೇಶದಲ್ಲಿ ಬಹಳಷ್ಟು ಸುಧಾರಣೆಯಾಗಿದೆ. ೭ ಪ್ರೌಢ ಶಾಲೆಗಳು, ೪೯ ಮಾಧ್ಯಮಿಕ ಶಾಲೆಗಳು, ೪೮೧ ಪ್ರಾಥಮಿಕ ಶಾಲೆಗಳು ಮತ್ತೊಂದು ತಾಂತ್ರಿಕ ಶಿಕ್ಷಣಸಂಸ್ಥೆ ಇಲ್ಲಿ ಸ್ಥಾಪಿತವಾಗಿ, ಇವುಗಳಲ್ಲಿ ಒಟ್ಟು ೧೦,೦೦೦ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಅಭ್ಯಸಿಸುತಿದ್ದಾರೆ. ಕಾಲಂಶದಷ್ಟು ಪ್ರದೇಶಕ್ಕೆ ನೀರಿನ ಸೌಕರ್ಯವನ್ನು ಒದಗಿಸಲಾಗಿದೆ. ೭೫ ಆಸ್ಪತ್ರೆಗಳು ಮತ್ತು ೨೩ ಚಿಕಿತ್ಸಾಲಯಗಳು ತೆರೆಯಲ್ಪಟ್ಟಿವೆ. ಹಲವಾರು ಮೈಲು ಮಾರ್ಗರಚನೆಯೂ ಆಗಿರುವುದು.

ಕೇಂದ್ರ ಸರಕಾರವು ಉತ್ತಮ ರೀತಿಯಿಂದ ಆಡಳಿತೆ ನಿರ್ವಹಿಸಿದರೂ ಶ್ರೀ ಫಿಜೋವಿಗೆ ಇದು ಸರಿಬರಲಿಲ್ಲ. ಆತನ ಉಪಟಳ ಹೆಚ್ಚುತ್ತ ಬಂತು. ೧೯೫೮ರಲ್ಲಿ ನಾಗಾ ಜನರ ಎರಡನೆಯ ಅಧಿವೇಶನ ನಡೆದು ಈ ಪ್ರದೇಶದ ಭವಿಷ್ಯದ ಕುರಿತಾದ ಪ್ರಶ್ನಾವಳಿಯನ್ನು ರಚಿಸಿತು. ೧೯೫೯ರಲ್ಲಿ ಸೇರಿದ್ದ ಮೂರನೆಯ ಸಮ್ಮೇಳನದಲ್ಲಿ ಪ್ರತ್ಯೇಕ ನಾಗಾರಾಜ್ಯದ ಕರಡು ಸಂವಿಧಾನವನ್ನು ಸ್ವೀಕರಿಸಲಾಯಿತು. ಪ್ರತಿನಿಧಿಗಳು ಈ ವರ್ಷದ ಎಪ್ರಿಲ್‌ನಲ್ಲಿ ಅಸಾಮದ ಗವರ್ನರರನ್ನೂ ಜುಲೈಯಲ್ಲಿ ಪ್ರಧಾನಿ ನೆಹರುರವರನ್ನೂ ಕಂಡು ತಮ್ಮ ಬೇಡಿಕೆಯನ್ನು ಮುಂದಿಟ್ಟರು.

ಮಾತುಕತೆಗಳ ಪರಿಣಾಮವಾಗಿ ನಾಗಾಜನರಿಗೆ ಕೆಲಕಾಲದಲ್ಲಿಯೇ ಪ್ರತ್ಯೇಕ ರಾಜ್ಯವು ದೊರೆಯುವುದು. ಹೊಸ ರಾಜ್ಯಕ್ಕೊಂದು ಶಾಸನ ಸಭೆಯಿರುವುದು. ಇದಕ್ಕೆ ಜವಾಬ್ದಾರರಾಗಿರುವ ಸಚಿವಸಂಪುಟವೊಂದಿರುವುದು. ಅಸಾಮುದ ರಾಜ್ಯಪಾಲರೇ ನಾಗಾರಾಜ್ಯದ ರಾಜ್ಯಪಾಲರಾಗುಳಿಯುವರು. ನಾಗಾಜನರ ಸಾಮಾಜಿಕ ಮತ್ತು ಧಾರ್ಮಿಕಪದ್ಧತಿಗಳಿಗೆ ವಿಶೇಷರಕ್ಷಣೆ ದೊರೆಯುವುದು. ಭೂಸ್ವಾಮಿತ್ವ ಮತ್ತು ಪರಾಧೀನತೆಗಳ ಬಗ್ಗೆ ನಾಗಾ ಸಾಂಪ್ರದಾಯಿಕ ನಿಯಮಗಳೇ ಉಳಿಯುವುವು. ಹಿಂದುಳಿದ ಟೀನಸ್ಸಾಂಗ ಪ್ರದೇಶಕ್ಕೆ ವಿಶೇಷ ಏರ್ಪಾಡನ್ನು ಮಾಡಲಾಗಿದೆ. ಇದು ನಾಗಾ ಪ್ರದೇಶಕ್ಕೆ ನೀಡಲಾದ ಎಲ್ಲ ಸೌಲಭ್ಯಗಳನ್ನು ಪಡೆಯುವುದಾದರೂ ಮುಂದಿನ ಹತ್ತು ವರ್ಷಗಳ ಕಾಲಕ್ಕೆ ಕೇಂದ್ರಾಡಳಿತೆಯಲ್ಲೇ ಉಳಿಯುವುದು.

ಮೂರು ವರ್ಷಗಳ ವರೆಗೆ ಬೇಕಾಗುವ ಮಧ್ಯಾವಧಿಯಲ್ಲಿ ೧೬ ನಾಗ ಜನಾಂಗಗಳ ಪ್ರತಿನಿಧಿ ಮಂಡಳವು ರಾಜ್ಯಪಾಲರಿಗೆ ಸಹಾಯ ನೀಡುವುದು; ಹಾಗೂ ಸ

(೧೨ನೇ ಪುಟ ನೋಡಿರಿ)

ESTD. 1921

NAVAYUGA KANNADA WEEKLY, UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ವ್ಯವಸ್ಥಾಪಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಕಲಿಯುಗದ ಮಹಿಮೆ

ದಿನಗಳೆದಂತೆ ತನ್ನ ಪೂರ್ವಜರ ಪರಂಪರಾಪ್ರಾಪ್ತವಾದ ಸದ್ಗುಣಗಳನ್ನು ನವನಾಗರಿಕ ಜನಾಂಗವು ಕಳೆದುಕೊಳ್ಳುತ್ತ ಬರುತ್ತಿದೆ. ಕಾಲ ಪರಿವರ್ತನೆಯೊಡನೆ ಜನರ ರೀತಿನೀತಿಗಳೂ ಬದಲಾಗುವುದು ಅದೆಷ್ಟು ವ್ಯಾವಹಾರಿಕ?

ಶ್ರೀ ಪಾ. ಚಂದ್ರಶೇಖರ ಚಡಗ.

— ೧ —

"ಮಗೂ"

"ಏನು ತಾತಾ?"

"ಸಂಧ್ಯಾ ವಂದನೆಯನ್ನು ಮಾಡಿದೆಯಾ?"

"ಹೌದು ತಾತಾ"

"ಯಾವಾಗ ಮಗೂ?"

"ಸದಾಕಾಲವೂ ಸಂಧ್ಯಾ ವಂದನೆ ಮಾಡುತ್ತಿರುವೆನು"

"ಆಂ! ಅದೇನೋ? ಸದಾಕಾಲವೂ. ಸಂಧ್ಯಾವಂದನೆ ಮಾಡುವುದೆಂದರೆ..." ಆಶ್ಚರ್ಯಭರಿತನಾಗಿ ಮೊಮ್ಮಗನ ಕಡೆ ನೋಡುತ್ತಾ ಅಜ್ಜ ಕೇಳಿದನು.

"ತಾತಾ, ನಾನು ಸಿನೇಮಾನಟಿ ಸಂಧ್ಯಾಳನ್ನು ಸದಾ ಕಾಲವೂ ಹೃದಯದಲ್ಲಿ ವಂದಿಸುತ್ತಿರುತ್ತೇನೆ ಇದನ್ನೇ ಸಂಧ್ಯಾವಂದನೆ ಎಂದು ನಾನು ಕರೆದುದು." ನಗುನಗುತ್ತಾ ಮೊಮ್ಮಗನು ಉತ್ತರಿಸಿದನು.

"ಅಯ್ಯೋ ಮಗೂ, ನೀನು ಕಾಲೇಜಿಗೆ ಹೋಗಿ ಸಂಪೂರ್ಣ ಹಾಳಾಗಿಬಿಟ್ಟೆ ಜಪ ತಪಗಳಿಗೆಲ್ಲಾ ಎಳ್ಳುನೀರು ಬಿಟ್ಟೆ. ಯಾವಾಗ ನೋಡಿದರೂ ನಿನಗೆ ಸಿನೇಮಾದ ಧ್ಯಾನವೇ! ಪಠ್ಯಪುಸ್ತಕದ ಒಂದು ಪದ್ಯ ಕಂಠಪಾಠ ವಿಲ್ಲದಿದ್ದರೂ ಪ್ರತಿಯೊಂದು ಸಿನೇಮಾದ ಗೀತೆಗಳು ನಿನಗೆ ಕಂಠಸ್ಥವಾಗಿವೆ. ಸಿನೇಮಾ ನಟ-ನಟಿಯರೇ ನಿನ್ನ ಪಾಲಿನ ದೇವ–ದೇವಿಯರು. ಅಯ್ಯೋ ದೇವಾ; ಈ ಅನರ್ಥಗಳನ್ನೆಲ್ಲಾ ನೋಡುವುದಕ್ಕೆ ನಾನೇಕೆ ಇನ್ನೂ ಬದುಕಿಕೊಂಡಿರುವೆನು? ನನ್ನ ತಂದೆಯವರು ಒಂದು ದಿನ ನಾನು ಅದೇನೋ ಕಾರಣದಿಂದ ಸಂಧ್ಯಾವಂದನೆ ಮಾಡಲು ಮರೆತುದುದರಿಂದ ನನಗೆ ಎರಡು ದಿನ ಊಟವನ್ನೇ ಹಾಕಿರಲಿಲ್ಲ. ಎಲ್ಲಾ ಕಲಿಯುಗದ ಮಹಿಮೆ!" ಅಜ್ಜನ ಕಂಠದಿಂದ ನಿಟ್ಟುಸಿರೊಂದು ಹೊರಬಿದ್ದಿತು. ಆಗಲೇ ಮೊಮ್ಮಗ ಇಸ್ತ್ರಿಹಾಕಿಸಿದ ಬಟ್ಟೆಯನ್ನು ಧರಿಸಿಕೊಂಡು ಸಿನೇಮಾಕ್ಕೆ ಹೊರಟುಬಿಟ್ಟಿದ್ದನು.

— ೨ —

"ಮಗೂ"

"ಏನಜ್ಜೀ"

"ಮಗೂ, ನನಗೆ ವಯಸ್ಸಾಯಿತು. ಕಣ್ಣು ಸರಿಯಾಗಿ ತೋರುವುದಿಲ್ಲ. ಒಲೆಯ ಬುಡದಲ್ಲಿ ಕುಳಿತು ಏನು ಮಾಡುತ್ತಿರುವೆ? ಅಗ್ನಿಕಾರ್ಯ ಮಾಡುತ್ತಿರುವೆಯೇನೋ?"

"ಹೌದಜ್ಜಿ."

"ಉಫ್ ಉಫ್ ಉಫ್" ಅಜ್ಜಿಗೆ ಕೆಮ್ಮು ಬಂತು. ಏನು ಮಾಡಿದರೂ ಕೆಮ್ಮನ್ನು ತಡೆಹಿಡಿದುಕೊಳ್ಳಲಾರದಾದಳು. ಕೊನೆಗೂ ಕೆಮ್ಮು ನಿಂತಿತು.

"ಮಗೂ, ಏನು ವಾಸನೆ ಇದು? ನನಗೆ ವಾಂತಿ ಬರುವಂತಾಗುತ್ತದಲ್ಲಾ!" ಅಜ್ಜಿ ಮೆಲ್ಲನೆ ಕೇಳಿದಳು.

"ನನ್ನಂತಹ ಬ್ರಹ್ಮಚಾರಿಗಳ ಅಗ್ನಿಕಾರ್ಯ ಮಾಡುವಾಗ ಅದರ ಅನುಭವವಿಲ್ಲದ ನಿಮಗೆ ಹಾಗಾಗುವುದು ಸ್ವಾಭಾವಿಕ ಕಾಣಜ್ಜೀ!" ನಗುತ್ತಾ ಮೊಮ್ಮಗ ಉತ್ತರಿಸಿದನು.

"ಏನು, ನೀನು ಅಗ್ನಿಕಾರ್ಯ ಮಾಡಿದರೆ ನನಗೆ ಕೆಮ್ಮು ಬರುವುದೇ? ಅದು ಹೇಗೆ?" ಆಶ್ಚರ್ಯಚಕಿತಳಾಗಿ ಅಜ್ಜಿ ಕೇಳಿದಳು.

"ಅಜ್ಜೀ, ಅಜ್ಜ ಅಗ್ನಿಕಾರ್ಯ ಮಾಡುತಿದ್ದಾಗ ನಿನಗೆ ಕೆಮ್ಮು ಬರುತಿದ್ದಿಲ್ಲವೇ?" ಮೊಮ್ಮಗ ಕೇಳಿದನು.

"ಅಯ್ಯೋ ಮರುಳೇ, ನಿನಗೆ ಇನ್ನೂ ಬುದ್ಧಿಯಿಲ್ಲ, ನಿನ್ನ ಅಜ್ಜ ಬ್ರಹ್ಮಚಾರಿಯಾಗಿದ್ದಾಗ ನಾನವರನ್ನು ನೋಡಿದ್ದೇನೆಯೋ?"

"ಹ್ಹ! ಹ್ಹ! ಹ್ಹ!" ಮೊಮ್ಮಗ ನಗುತ್ತಾ ಹೇಳಿದನು, "ಅಜ್ಜೀ ಅದು ಸರಿ, ನನಗೆ ಅದು ಹೊಳೆಯಲೇ ಇಲ್ಲ. ಅಜ್ಜೀ, ನವೀನ ಯುಗದ ಬ್ರಹ್ಮಚಾರಿಗಳು ಮಾಡುವ ಅಗ್ನಿಕಾರ್ಯ ಬೇರೆ ರೀತಿಯದು ಕಣೋ. 'ದೈವದರ್ಶನ'ದ ವೇಳೆ ಪೂಜಾರಿಯು ಬೆಂಕಿಯನ್ನೇ ನುಂಗಿದರೆ ನಾವು ಸದಾಕಾಲವೂ ಹೊಗೆಯನ್ನು ನುಂಗಿ ಹಾಗೆಯೇ ಮೂಗು, ಬಾಯಿಗಳಿಂದ ಹೊರಬಿಡುವಷ್ಟು ಸಿದ್ಧಿಯನ್ನು ಪಡೆದುಕೊಂಡಿದ್ದೇವೆ."

"ಅಯ್ಯೋ, ಏನೊಂದ್ರೇ, ನಿನ್ನ ಮಾತು ಒಂದೂ ಅರ್ಥವಾಗುವುದಿಲ್ಲವಲ್ಲಾ!" ಅಜ್ಜಿ ಪಿಳಿಪಿಳಿ ಕಣ್ಣು ಬಿಡುತ್ತಾ ಕೇಳಿದಳು.

"ನಮ್ಮ ಅಗ್ನಿಕಾರ್ಯ ಅಂದರೆ ಸಿಗರೇಟು ಸೇವನೆ ಕಾಣೋ" ಮೊಮ್ಮಗ ನಗುನಗುತ್ತಾ ಗಟ್ಟಿಯಾಗಿ ಹೇಳಿದನು.

"ಏನು!! ನೀನೂ ಸಿಗರೇಟು ಸೇದುತ್ತೀಯಾ? ಅಯ್ಯೋ ದೇವರೇ, ನಿನ್ನ ಮನೆ ಹಾಳಾಗಿ ಹೋಗಲಿ! ಅಯ್ಯೋ ನಿನಗೆ ಆವ್ಲೇಂಥರ ಬುದ್ಧಿ ಹೇಗೆ ಬಂತಪ್ಪಾ! ಕಲಿಯುವ ಹುಡುಗ, ಮೇಲೆ ಬ್ರಹ್ಮಚಾರಿ ಬೇರೆ! ಅಗ್ನಿಕಾರ್ಯ ಮಾಡುತ್ತೇನೆ ಎಂದು ಹೇಳಿ ಒಲೆಯ ಮುಂದೆ ಕುಳಿತು ಸಿಗರೇಟು ಸೇದುತ್ತಿಯಲ್ವೇ? ನಿನ್ನ ಕಿಸೆಯಲ್ಲಿ ಯಾವಾಗಲೂ ಬೆಂಕಿಪೆಟ್ಟಿಗೆ ಏಕಿರುತ್ತೆ ಎಂದು ನನಗೀಗ ತಿಳಿಯಿತು ಬಿಡು. ಅಂಗಳದಲ್ಲಿ ಇವತ್ತು ನಿನ್ನ ಬೆಂಕಿಪೆಟ್ಟಿಗೆ ಬಿದ್ದುಕೊಂಡಿತ್ತು. ಅದನ್ನು ನಾನು ತೆಗೆದುಕೊಂಡಿಟ್ಟಿದ್ದೆ. ಅದಕ್ಕೆ ಒಲೆಯ ಬಳಿ ಬಂದೆಯಾ? ಅಯ್ಯೋ ದೇವರೆ, ಎಲ್ಲಾ ನಿನ್ನಾಟ! ಈ ಕಲಿಯುಗದ ಮಹಿಮೆ!" ಎಂದು ಅಜ್ಜಿ ಗೊಣಗುತಿದ್ದಾಗಲೇ ಮೊಮ್ಮಗನು ಸಿಗರೇಟು ಮುಗಿದುದರಿಂದ ಹೊಸ ಸಿಗರೇಟ್ ಪ್ಯಾಕನ್ನೂ, ಬೆಂಕಿಪೆಟ್ಟಿಗೆಯನ್ನೂ ಕೊಳ್ಳಲು ಅಂಗಡಿಗೆ ಹೋಗಿದ್ದನು!

— ೩ —

"ಮಗೂ"

"ಏನಮ್ಮಾ?"

"ಗಂಟೆ ಹನ್ನೆರಡಾಗಬಹುದು."

"ಹೂಂ"

"ಇನ್ನು ಮಲಗಬಹುದಲ್ಲಾ!"

"ಇನ್ನೂ ಕೊಂಚ ಓದಲಿಕ್ಕೆ ಇದೆಯಮ್ಮಾ".

"ಮಗೂ, ಇದೇನು ಇಷ್ಟು ಓದುವುದು. ಪರೀಕ್ಷೆ ಸಮೀಪಿಸಿತೇನು?"

"ಹೌದಮ್ಮಾ. ಪರೀಕ್ಷೆಗೆ ಇನ್ನು ನಾಲ್ಕೇ ದಿನಗಳು ಉಳಿದಿವೆ."

"ನೀನು ಓದುವ ಪುಸ್ತಕ ಯಾವುದು ಮಗೂ?"

"ಇದೊಂದು ಪತ್ತೇದಾರಿ ಕಾದಂಬರಿ. ಬಹಳ ಚೆನ್ನಾಗಿದೆಯಮ್ಮಾ!"

"ಏನು! ಕಾದಂಬರಿಯೇ! ಪರೀಕ್ಷೆ ಹತ್ತಿರ ಬಂದಾಗ ಕಾದಂಬರಿಯೋದುವುದೇ? ಕಾದಂಬರಿ ಓದುವುದರಿಂದ ಏನು ಪ್ರಯೋಜನ ಮಗೂ?" ತಾಯಿ ವಿಸ್ಮಯ ಪೂರಿತ ನೇತ್ರಗಳಿಂದ ಮಗನನ್ನು ನೋಡುತ್ತಾ ಕೇಳಿದಳು.

"ನಮ್ಮ ಜ್ಞಾನ ಹೆಚ್ಚಾಗುವುದಮ್ಮಾ! ಮಗ ಮೆಲ್ಲನೆ ಉತ್ತರಿಸಿದನು.

"ಏನು! ಪತ್ತೇದಾರಿ ಕಾದಂಬರಿ ಓದಿ ಕಳ್ಳತನ ಮಾಡುವ ಜ್ಞಾನಗಳಿಸುವುದೇ ಮಗೂ? ಪರೀಕ್ಷೆ ಸಮೀಪಿಸಿದಾಗ ಪಠ್ಯಪುಸ್ತಕಗಳನ್ನು ಓದುವುದನ್ನು ಬಿಟ್ಟು ಕಾದಂಬರಿಯೋದುವುದೇ? ಅಯ್ಯೋ ದೇವರೆ! ಈ ಪತ್ತೇದಾರಿ ಕಾದಂಬರಿಗಳನ್ನು ಓದುವ ಹುಚ್ಚು ನಿನಗೆ ಹೇಗೆ ಹಿಡಿಯಿತ

(೧೧ನೇ ಪುಟ ನೋಡಿರಿ)

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ಚಂದ್ರದರ್ಶನ

ಸುಪ್ರಸಿದ್ಧ ಉಪಮಾನ—ಚಂದ್ರ

ಚಂದ್ರಲೋಕವನ್ನು ದೂರದಲ್ಲೇ ನೋಡುತ್ತಿದ್ದ ಹಿಂದಿನ ಕವಿಗಳು ಅದನ್ನು ನಾನಾ ರೀತಿಯಾಗಿ ವರ್ಣಿಸಿದರು. ಮಾನವ ಈ ಲೋಕವನ್ನು ಮುಟ್ಟಿದನೆಂದರೆ, ಆಗ ಅದು ಕೇವಲ ಭಸ್ಮದ ರಾಶಿಯಾಗಿ ಗೋಚರಿಸದಿರುವುದೆ?

ಮಾನವರೇನೋ ಚಂದ್ರಲೋಕವನ್ನು ಮುಟ್ಟುವ ತವಕದಲ್ಲಿ ಒಂದೇ ಸವನೆ ಮುಂದುವರಿಯುತಿದ್ದಾರೆ. ಎಂತಾದರೂ ಮಾಡಿ ಚಂದ್ರನನ್ನು ತಮ್ಮ ಅಧೀನದಲ್ಲಿರಿಸಬೇಕೆಂಬ ಅಭಿಲಾಷೆಯಿಂದ ಕಾರ್ಯತತ್ಪರರಾಗಿದ್ದಾರೆ. ಚಂದ್ರನು ಭೂಮಿಯಿಂದ ಸಿಡಿದು ನೆಗೆದ ಒಂದು ಭಾಗವೆಂಬುದನ್ನು (ಶುದ್ಧ) ಪ್ರಾಚೀನ ಭಾರತೀಯರೂ ಕಂಡುಕೊಂಡಿರಬೇಕು. ಸಂಸ್ಕೃತ ಕಾವ್ಯಗಳಿಂದ ಈ ಚಂದ್ರನನ್ನು ಕಿತ್ತೆಸೆದು ಬಿಟ್ಟರೆ, ಆ ಸಾಹಿತ್ಯ ಅಲಂಕಾರ ಹೀನವೂ ನೀರಸವೂ ಆಗಿ ಪರಿಣಮಿಸುವುದು. ಸಂಸ್ಕೃತ ಸಾಹಿತ್ಯದಲ್ಲಿ ಚಂದ್ರನದು ಅಜರಾಮರವಾದ ಸ್ಥಾನವೆನಿಸಿದೆ. ಹಲವಾರು ರೂಪಗಳಲ್ಲಿ ಚಂದ್ರನನ್ನು ಸಂಸ್ಕೃತ ಕವಿಗಳು ಸ್ಮರಿಸಿಕೊಂಡಿದ್ದಾರೆ.

ಚಂದ್ರನನ್ನು ಒಂದು ಡಜನಿಗೂ ಮಿಕ್ಕಿದ ಉಪಮೇಯಗಳಿಗೆ ಉಪಮಾನವಾಗಿ ನಿರೂಪಿಸಿದ ಮೇಧಾವಿ ಕವಿ ರಾಜಶೇಖರ. ಒಂದೇ ಉಪಮಾನದಲ್ಲಿ ಇಷ್ಟೊಂದು ಉಪಮೇಯಗಳ ಗುಣವನ್ನು ಸಾಮಾನ್ಯ ಕವಿಗಳು ಕಾಣುವುದು ಸರ್ವಥಾ ಅಸಾಧ್ಯ. ಆದುದರಿಂದಲೇ ರಾಜಶೇಖರನು ಮಹಾಕವಿ ಮಾತ್ರವಲ್ಲ; ಅಸಾಧಾರಣ ಕವಿಯೂ ಹೌದು. ಇಲ್ಲಿ ಆತನು ಚಂದ್ರನನ್ನು ವರ್ಣಿಸಿದ ಕೆಲವೊಂದು ರೀತಿಯನ್ನು ವಿವರಿಸಬಹುದು.

ಸಂಧ್ಯಾ ಸಮಯ. ಪಶ್ಚಿಮದಲ್ಲಿ ರಕ್ತವರ್ಣದ ಸೂರ್ಯನು ಸಾಗರದಲ್ಲಿ ಸ್ನಾನ ಮಾಡಿದನು; ಅದೇ ಕುಂಕುಮಪೂರ್ಣ ಸೂರ್ಯನು ಗೌರವರ್ಣ ಹೇಮಕುಂಭನಾಗಿ ಪೂರ್ವ ದಿಕ್ಕಿನಲ್ಲಿ ಉದಿಸಿದನು. ಈ ಕಲ್ಪನೆಯನ್ನು ಕವಿಯು,

ದೀಪಯನ್ನಥ ನಭಃ ಕಿರಣೌಘೈಃ
ಕುಂಕುಮಾರುಣ ಪಯೋಧರ ಗೌರಃ
ಹೇಮಕುಂಭ ಇವ ಪೂರ್ವ ಪಯೋಧೇಃ
ಉನ್ಮಮಜ್ಜ ಶನಕೈಸ್ತುಹಿನಾಂಶುಃ ||

ಎಂಬ ಶ್ಲೋಕದಲ್ಲಿ ಲಲಿತ ಶಬ್ದಗಳಿಂದ ವರ್ಣಿಸಿದ್ದಾನೆ.

ಶೈಲಚ್ಛಲೇನ ಸ್ವಂ ದೀರ್ಘ
ಭುಜಮುತ್ತಸ್ಯ ಭೂ ವಧೂಃ
ನಿಶಾಸಖ್ಯಾಃ ಕರೋತೀವ
ಶಶಾಂಕತಿಲಕಂ ಮುಖೇ ||

ನವ ವಧುವಾದ ಭೂಮಿಯು ತನ್ನ ಸ್ನೇಹಿತೆಯಾದ ನಿಶೆಯ ಹಣೆಯಲ್ಲಿ ತಿಲಕವನ್ನಿಡಲು ಪರ್ವತಶಿಖರಗಳ ದೀರ್ಘ ಭುಜಗಳನ್ನು ಬಳಸಿಕೊಂಡಳು. ಆಗ ನಿಶೆಯ ಹಣೆಯಲ್ಲಿ ಕಾಣಿಸಿದ ತಿಲಕವೇ ಚಂದ್ರ —ಎಂತಹ ಅಮೋಘ ಕಲ್ಪನೆಯದು!

'ಇನ್ನೊಂದೆಡೆ ಕವಿಯು ಚಂದ್ರನನ್ನು ರಜತ ಘಟವೆನ್ನದೆ ಜ್ಯೋತ್ಸ್ನೆಯ ಜಲಧಾರೆಗಳು ಸುರಿಯುವ ಸ್ಫಟಿಕ ಮಣಿಯ ಮಡಿಕೆಯೆಂದು ಹೇಳುತ್ತಾನೆ:

ಸ್ಫಟಿಕ ಮಣಿಘಟ ಇವೇಂದು ಸ್ತ್ರಸ್ಯಾಂ
ಅಪಿವಾನವಾನನ ಮಿಮಾಂಕಃ
ಕ್ಷರತಿ ಚಿರಂಯೋನ ಯಥಾ
ಜ್ಯೋತ್ಸ್ನಾ ಘನಸಾರ ಧೂಲಿರಿವ ||

ಮತ್ತೊಂದು ಶ್ಲೋಕದಲ್ಲಿ ಕವಿಯು ಚಂದ್ರನನ್ನು ಸಿಂಹದ ರೂಪದಲ್ಲಿ ಪ್ರದರ್ಶಿಸಿದ್ದಾನೆ. ಈ ತೇಜಸ್ವಿಯಾದ ವನರಾಜನು ಪರ್ವತ ಶಿಖರದಲ್ಲಿ ಉದಯವಾಗುತ್ತಿರುವುದನ್ನು ಕಂಡು, ಅಂಧಕಾರದ ದುರ್ವಾರ ಘಟೆ ಗಳು ವಿಚಿತವಾಗಿ ಓಡತೊಡಗಿದುವು. ಇದರಿಂದ ಇಡಿ ಪ್ರಪಂಚದಲ್ಲಿ ಆವರಿಸಿದ್ದ ನಿಬಿಡ ಅಂಧಕಾರವು ದೂರವಾಯಿತು:

ಫುಲ್ಲಾತಿ ಮುಕ್ತ ಕುಸುಮಸ್ತಬಕಾಭಿರಾಮ
ದೂರೋಲ್ಲಸತ್ ಕಿರಣಕೇಸರಮಿಂದು ಸಿಂಹಂ
ದೃಷ್ಟ್ವೋದಯಾದ್ರಿ ಶಿಖರಸ್ಥಿತಮಂಧಕಾರ
ದುರ್ವಾರ ವಾರಣ ಘಟಾ ವ್ಯಘಟಂತ ಸದ್ಯಃ ||

ಕವಿಯ ಕಲ್ಪನೆಗೆ ಮಿತಿಯೆಂಬುದಿರುವುದಿಲ್ಲ. ಒಂದೊಮ್ಮೆ ಆತ ಚಂದ್ರನನ್ನು ಸಿಂಹದ ರೂಪದಲ್ಲಿ ನೋಡುತ್ತಾನೆ; ಮರುಕ್ಷಣವೇ ಆತ ಹಂಸವಾಗಿ ಕವಿಗೆ ತೋರುತ್ತಾನೆ. ಅಂಧಕಾರದಿಂದ ಆವರಿಸಲ್ಪಟ್ಟ ಸಮುದ್ರದಲ್ಲಿ ವಿಹರಿಸುತ್ತಿರುವ ನಾವಿಕನಂತೆ ಅದು ಗೋಚರಿಸುವುದು.

ಪ್ರೇತ್ಯೈಕೇಂದು ಹಂಸೇಸ್ಮಿನ್
ಸ್ನಾನಾಮಿವ ತಮೋಂಬುಭಿಃ
ನಭಸ್ತಡಾಗೇ ಮದನಸ್ತಾರಾ
ಕುಮುದ ಹಾಸಿನೀ ||

ತಮೋಂಬುಧಿಯ ಏಕಮಾತ್ರ ನಾವಿಕನ ಸ್ಮರಣೆಮಾಡಿ, ಕವಿಯು ಚಂದ್ರನನ್ನು 'ನವನೀತ ಪಿಂಡ'ವೆಂಬುದಾಗಿಯೂ ಉಲ್ಲೇಖಿಸುತ್ತಾನೆ:

ಉದಯತಿ ನವನೀತ ಪಿಂಡ ಪಾಂಡುಃ
ಕುಮುದವನಾಸ್ಯವ ಘಟ್ಟಯನ್ ಶಶಾಂಕಃ
ಉದಯಗಿರಿ ತಟಸ್ಫಟಾಟ್ಟಹಾಸೀ
ರಜನಿ ವಧೂ ಮುಖದರ್ಪಣಃ ಶಶಾಂಕಃ ||

ತನ್ನ ಕರ (ಕಿರಣ) ಗಳಿಂದ ಕುಮುದವನವನ್ನು ವಿಕಸಿತಗೊಳಿಸುತ್ತಿರುವ, ಅಟ್ಟಹಾಸದಿಂದ ಉದಯಗಿರಿ ತಟದಲ್ಲಿ ಉದಯೋನ್ಮುಖನಾಗುತ್ತಿರುವ ಚಂದ್ರನು ಒಂದು ಬೆಣ್ಣೆಯ ಮುದ್ದೆಯಂತೆ ರಜನೀವಧು ತನ್ನ ಕಮನೀಯ ಮುಖಾರವಿಂದದ ದರ್ಶನವನ್ನು ಮಾಡಿ ಸ್ವಯಂ ಮುಗ್ಧವಾಗಿ ಬಿಟ್ಟಳಂತೆ!

"The moon is mirror of ash"— (ಚಂದ್ರನು ಭಸ್ಮದ ದರ್ಪಣ) ಎಂದೊಬ್ಬ ಆಂಗ್ಲ ಕವಿ ಚಂದ್ರನನ್ನು ವರ್ಣಿಸಿದ್ದಾನೆ.

ಇಂತಹ ಮನೋರಂಜಕವೆನಿಸಿದ ಸಾವಿರಾರು ಉಪಮಾನಗಳಿಗೆ ಕಾರಣನಾದ ಚಂದ್ರನ ಮೇಲೆ ರಷ್ಯ, ಅಮೇರಿಕೆಗಳ ರಾಕೇಟುಗಳು ನಿರಂತರ ಹಾರಾಡುತ್ತ ಚಂದ್ರಲೋಕ ಮುಟ್ಟುವುದರಲ್ಲಿ ಯಶಸ್ವಿಯಾದುವೆಂದರೆ, ಆಗ ಚಂದ್ರನೊಂದು ಬೂದಿಯ ರಾಶಿಯಾಗಿ ಮಾತ್ರ ತೋರಿಬಂದರೆ, ಅದರಲ್ಲಿ ಆಶ್ಚರ್ಯವಿಲ್ಲ.

"ದೂರತಃ ಪರ್ವತಾಃ ರಮ್ಯಾಃ" ಎನ್ನುವುದು ಇದಕ್ಕೇ ತಾನೆ?

(ಸಂಗ್ರಹ)

ಸಾಹಿತ್ಯಸಮಾಲೋಚನೆ

ಕಾವ್ಯಕನ್ನಿಕೆಯ ಶೃಂಗಾರ ಪ್ರಸಾದನಗಳು

ಕಾವ್ಯಕೃತಿಗೆ ವಸ್ತು ಮತ್ತು ಶೈಲಿಗಳೆರಡೂ ಅವಶ್ಯಕ. ವಸ್ತುವಿಲ್ಲದ ಕಾವ್ಯ ಹಕ್ಕಿಯಿಲ್ಲದ ಗೂಡು, ಶೈಲಿಗಾಣದ ಕಾವ್ಯ ನಿಸ್ಸಾರ ಗೊಬ್ಬರದಂತೆ. ಇವೆರಡೂ ಸಮಜೋಡಿಯಾಗಿ ಯಥೋಚಿತವಾಗಿ ಬಂದರೆ ಮಾತ್ರ ಅಭಿವ್ಯಂಜಕ ಕಾವ್ಯವಾಗಬಹುದು.

ಕಲೆ ಮತ್ತು ನೀತಿಗಳನ್ನು ಬೇರೆ ಬೇರೆಯಿರಿಸಲು ಭಾರತೀಯರು ಒಪ್ಪುವುದಿಲ್ಲ. ಸಂಸ್ಕೃತದ ಅದ್ವಿತೀಯ ಮಹಾಕವಿಯ ಕುಮಾರ ಸಂಭವ ಕಾವ್ಯವು ಶುದ್ಧ ಕಲೆಯ ದೃಷ್ಟಿಯಿಂದ ಅತ್ಯುನ್ನತ ಮೇರುಕೃತಿಯಾಗಿದೆ. ಆದರೆ, ಆಚಾರದ ದೃಷ್ಟಿಯಲ್ಲಿ ಅದು ಶಂಕಾಯೋಗ್ಯವೂ ಹೌದು. ಇದರಿಂದಾಗಿಯೇ ಕಾಳಿದಾಸನು ಕುಷ್ಟರೋಗ ಪೀಡಿತನಾಗಿ ಕೊನೆಯುಸಿರನ್ನೆಳೆದನೆಂದೂ ಇದಕ್ಕೆ ಅವನು ಶಿವ – ಪಾರ್ವತಿಯರ ಶೃಂಗಾರ ವರ್ಣನೆ ಗೆಯ್ದುದೇ ಕಾರಣವೆಂದೂ ಜನರ ಅಂಬೋಣವಿದೆ. ಭಾರತೀಯ ಸಾಹಿತ್ಯ ಶಾಸ್ತ್ರದಲ್ಲಿ ಅಶ್ಲೀಲತೆ ಮತ್ತು ಗ್ರಾಮ್ಯವೆಂಬುವನ್ನು ದೋಷಗಳೆಂದು ಗಣಿಸಲಾಗಿದೆ. ಇವುಗಳ ಸಂಬಂಧ ಹೆಚ್ಚಾಗಿ ಶಬ್ದಗಳೊಡನಿದ್ದರೂ ಇವು ದೋಷಗಳೆಂದು ಸ್ವೀಕೃತವಾದುದರಿಂದ ಭಾರತೀಯ ಆಚಾರ್ಯರು ಕಲೆ—ನೀತಿ ವಿಚ್ಛೇದವನ್ನು ವಿರೋಧಿಸುತ್ತಿದ್ದರೆಂದು ಖಂಡಿತವಾಗಿ ಹೇಳಬಹುದು. ಇಂದು ಕೇವಲ ನೀತಿಮತ್ತೆಯ ಪ್ರದರ್ಶನಕಾಗಿಯೇ ಬರೆದಿರುವ ಗ್ರಂಥಗಳನ್ನು ತಿರಸ್ಕರಿಸಿ, ಶೃಂಗಾರ ಸಾಗರರೂಪೀ ಗ್ರಂಥಗಳನ್ನು ಯಥೇಚ್ಛವಾಗಿ ಪ್ರಶಂಸಿಸುವ ಪರಿಪಾಠ ಹೆಚ್ಚುತಿದೆ. ಪ್ರೇಮ-ವಿರಹಗಳಿಲ್ಲದ ಕೃತಿಯು ನಿಸ್ಸಾರವೆಂಬ ಅಪಖ್ಯಾತಿಗೆ ಗುರಿಯಾಗಿದೆ. ನೀತಿ ಮತ್ತು ಸದಾಚಾರಗಳನ್ನು ಪ್ರದರ್ಶಿಸುವುದು ಪ್ರಯಾಸಕರವಾದರೂ ಅವನ್ನು ದೂರೀಕರಿಸುವುದು ಸಲ್ಲಕ್ಷಣವೆನ್ನುವಂತಿಲ್ಲ. ಆದುದರಿಂದ, ಮಧ್ಯಮ ಮಾರ್ಗವೊಂದನ್ನು ನಾವು ಹಿಡಿಯಬೇಕಾದ ಆವಶ್ಯಕತೆಯಿದೆ. ಅಭಿವ್ಯಂಜನೆಯ ಹೆಸರಿನಲ್ಲಿ ಕಾವ್ಯದ ವಸ್ತುವನ್ನು ಗೌಣವೆಂದು ತಿಳಿದು ಶೈಲಿಯನ್ನು ಮಾತ್ರ ತೀವ್ರವಾಗಿ ಗಮನಿಸಿದ ನೇಮಿಚಂದ್ರನೇ ಮೊದಲಾದವರ ಅಥವಾ ಯಥಾರ್ಥವಾದವೆಂದು ಸಮಾಜದ ಉತ್ತಮತೆ, ಅಧಮತೆಯೆಲ್ಲವುಗಳ ನಗ್ನ ಚಿತ್ರವನ್ನು ರೂಪಿಸಹೊರಟಿರುವ ಕೆಲವು ಆಧುನಿಕ ಲೇಖಕರ ಅನೀತಿ ಮತ್ತು ವಾಸನೆಗಳಿಗೆ ಉತ್ತೇಜಕವೆನಿಸುವ ಸಾಹಿತ್ಯವು ಜನತೆಗೆ ದಕ್ಷ ಮಾರ್ಗದರ್ಶನ ಮಾಡಲಾರರೆಂದು ತಿಳಿಯಬೇಕಾಗುತ್ತದೆ.

ಕಾವ್ಯವು ವಸ್ತುಪ್ರಧಾನ ಅಥವಾ ವರ್ಣನಾಪ್ರಧಾನವೆಂಬೆರಡು ವಿಧವಾಗಿ ವಿಭಜಿಸಲ್ಪಟ್ಟರೂ, ವಸ್ತು ಹಾಗೂ ವರ್ಣನೆ ಅಥವಾ ಆಕಾರ ಎರಡೂ ಮುಖ್ಯಪಾತ್ರ ವಹಿಸುತ್ತವೆ. ವಸ್ತು ಸುಂದರವಿಲ್ಲದೆ ಕೇವಲ ವರ್ಣನೆಯಿಂದಲೇ ಕಾವ್ಯ ತುಂಬಿದರೆ, ಅದು ಹಕ್ಕಿಯಿಲ್ಲದ ಗೂಡಿನಂತೆ, ಮಕ್ಕಳಿಲ್ಲದ ಮನೆಯಂತೆ, ದುಡ್ಡುಹಾಕದ ಚೀಲದಂತೆ. ಇದೇ ರೀತಿಯಲ್ಲಿ ಆಕಾರಕ್ಕೆ ಪರ್ಯಾಪ್ತ ಸ್ಥಾನವೀಯದೆ ವಸ್ತುನಿಷ್ಠವಾಗಿಯೇ ಇರುವುದು ತೋರಣ ಕಾಣದ ಮದುವೆ ಚಪ್ಪರದಂತೆ ನಿಸುವುದು. ಹೀಗೆ ಎರಡೂವಿಧಗಳಿಂದಲೂ ಕಾವ್ಯ ಕೃತಿಯು ಉಚಿತಮೂಲ್ಯವನ್ನು ಎಂದಿಗೂ ಪಡೆಯಲಾರದು. ಮಾನವನಿಗೆ ಆಂತರಿಕ ಹಾಗೂ ಬಾಹ್ಯ ಸೌಂದರ್ಯಗಳೆರಡೂ ಬೇಕಾಗುತ್ತವೆ. ಒಂದಿಲ್ಲವಾದರೆ, ಇನ್ನೊಂದು ಶೋಭಾಯಮಾನವಾಗದು. ಹಾಗೆಯೇ ಕಾವ್ಯಕ್ಕೂ ವಿಷಯ ಮತ್ತು ಶೈಲಿಗಳೆರಡರಲ್ಲಿಯೂ ಸುಂದರತೆಯಿರುವುದು ಅಗತ್ಯ. ಮಂಗಲ ರೂಪಿಯಾದ ಸೌಂದರ್ಯವೇ ನಿಜವಾದ ಸೌಂದರ್ಯ.

ರಾಘವಾಂಕ ಕಾವ್ಯ ಕನ್ನಿಕೆಯ ರೂಪವನ್ನು ಈ ರೀತಿ ಚಿತ್ರಿಸಿದ್ದಾನೆ:

"ರಸ ಜೀವ ಭಾವವೊಡಲರ್ಥವವಯವ ಶಬ್ದ
ವಿರಸವೇ ನುಡಿಯಲಂಕಾರವೇ ತೊಡಿಗೆಯು ತ
ವೆ ಲಕ್ಷಣವೆ ಲಕ್ಷಣ ವಿಮಳ ಸದನ್ಯಾಸ ನಡೆ
ರೀತಿ ಸುಕುಮಾರತೆ ||
ರಸಿಕತನ ಸುಳಿ ಸುಖಂ........"

(೯ನೇ ಪುಟ ನೋಡಿರಿ)

NAVAYUGA WEEKLY
(Estd in 1921)
ADVERTISEMENT RATES
Display Advertisements:— Rs. 2-8/ per column inch for contracts of 100" or more and Rs. 3/-per column inch for casual advertisements.
Classified Advertisements:— As. 8/- per line (minimum 8 lines)
For rates for advertising in colours and special positions please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಕ್ರೀಡಾಂಗಣ

ಶಾಲೆಗೆ ಒಬ್ಬ ಕ್ರೀಡಾಶಿಕ್ಷಕ

ಭಾರತೀಯ ಕ್ರೀಡಾಪಟುಗಳು ಮೇಲಿಂದಮೇಲೆ ನಾನಾ ಕ್ರೀಡಾ ಸ್ಪರ್ಧೆಗಳಲ್ಲಿ ಅಪಜಯವನ್ನು ಪಡೆಯುತ್ತಾ ಬಂದಾಗ ದೇಶದಲ್ಲಿ ಆಟದ ಮಟ್ಟ ಅಧೋಗತಿಗಿಳಿದಿದೆ ಎಂಬ ಕೂಗೆದ್ದಿತು. ಆಟದ ಮಟ್ಟ ಕೀಳಾಗಿರುವುದನ್ನು ಸರ್ಕಾರದವರೂ ಗಮನಿಸಿ ಆಟದ ಮಟ್ಟವನ್ನು ಸುಧಾರಿಸುವುದಕ್ಕೆ ಸಂಬಂಧಪಟ್ಟಂತೆ ಸೂಕ್ತವಾದ ಶಿಫಾರಸುಗಳನ್ನು ಮಾಡುವುದಕ್ಕಾಗಿ ಪಾಟಿಯಾಲ ಮಹಾರಾಜರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದರು. ಸಮಿತಿಯು ಮಾಡಿದ ಹಲವಾರು ಅಮೂಲ್ಯವಾದ ಶಿಫಾರಸುಗಳಲ್ಲಿ ಆಟಗಾರರಿಗೆ ತರಬೇತಿ ಕೊಡುವ ಯೋಗ್ಯರಾದ ಶಿಕ್ಷಕರ ನಿರ್ಮಾಣಕ್ಕೆಂದು ಒಂದು ತರಬೇತಿ ಕೇಂದ್ರವನ್ನು ಸ್ಥಾಪಿಸಬೇಕೆಂಬುದೂ ಒಂದಾಗಿದೆ. ಈ ಲೇಖನದಲ್ಲಿ ಪಾಟಿಯಾಲದಲ್ಲಿರುವ ಕ್ರೀಡಾ ಶಿಕ್ಷಕರ ತರಬೇತಿ ಸಂಸ್ಥೆಯ ಸ್ಥಾಪನೆಯ ಉದ್ದೇಶವನ್ನು ಸಂಕ್ಷಿಪ್ತವಾಗಿ ಕೊಡಲಾಗಿದೆ.

ಪೋಲೀಸು ಅಧಿಕಾರಿಗಳು ತರಬೇತಿ ಪಡೆದು ಸ್ವದೇಶಕ್ಕೆ ಮರಳಿದಾಗ—ಎಡದಿಂದ ಬಲಕ್ಕೆ ಐ. ಯು. ನೋಕು (ಫಿಜೀ), ಎಸ್. ಎಂ. ಕುಂವೇಂಡ (ನ್ಯಾಸಾಲೇಂಡ್) ಮತ್ತು ಮ್ವಿಫುಲಿಲ್ವಾ (ಉತ್ತರ ರೋಡೆಸಿಯಾ).

ಪ್ರತಿಯೊಂದು ಶಾಲೆ ಮತ್ತು ಕಾಲೇಜಿಗೆ ಒಬ್ಬ ಯೋಗ್ಯ ಕ್ರೀಡಾ ಶಿಕ್ಷಕನಿರಬೇಕು ಎಂಬುದು ಅಸಂಖ್ಯಾತ ಭಾರತೀಯ ಕ್ರೀಡಾಭಿಮಾನಿಗಳು ಮತ್ತು ಆಟಗಾರರ ಆಶಯವಾಗಿದೆ. ಈ ವರ್ಷಾಂತ್ಯದ ವೇಳೆಗೆ ಪಾಟಿಯಾಲದಲ್ಲಿ ಕಾರ್ಯಾರಂಭ ಮಾಡಲಿರುವ ಕ್ರೀಡಾ ಶಿಕ್ಷಕರ ತರಬೇತಿ ಸಂಸ್ಥೆಯು ಅಸಂಖ್ಯಾತ ಕ್ರೀಡಾಭಿಮಾನಿಗಳ ಹೆಬ್ಬಯಕೆಯನ್ನು ಈಡೇರಿಸಲಿದೆ.

ಪಾಟಿಯಾಲದಲ್ಲಿರುವ ಯಾದವೇಂದ್ರ ಸ್ಟೇಡಿಯಂನಲ್ಲಿ ಇದೇ ಡಿಸೆಂಬರ್ ತಿಂಗಳಿಂದ ವ್ಯಾಯಾಮ ಕ್ರೀಡಾಪಟುಗಳ ತರಬೇತಿ ಪ್ರಾರಂಭವಾಗಲಿದೆ. ತರಬೇತಿಯಲ್ಲಿ ಮಗ್ನರಾಗಲಿರುವ ವ್ಯಾಯಾಮ ಕ್ರೀಡಾಪಟುಗಳ ಪಾದದ ಸಪ್ಪಳದಿಂದ ಸ್ಟೇಡಿಯಂ ಪ್ರತಿಧ್ವನಿಸಲಿದೆ.

ವ್ಯಾಯಾಮ ಕ್ರೀಡೆಗಳು ಮತ್ತಿತರ ಕ್ರೀಡೆಗಳಲ್ಲಿ ಪಾರಂಗತರಾದ ಹತ್ತು ಹನ್ನೆರಡು ಜನ ವಿದೇಶೀ ಕ್ರೀಡಾ ಶಿಕ್ಷಕರು ಭಾರತದ ಮೊದಲನೆಯ ತಂಡದ ಕ್ರೀಡಾ ಶಿಕ್ಷಕರಿಗೆ ತರಬೇತಿ ಕೊಡುವರು.

ಇನ್ನು ಮೂರು ವರ್ಷಗಳ ಸಮಯದಲ್ಲಿ, ಭಾರತದ ರಾಷ್ಟ್ರೀಯ ಕ್ರೀಡಾ ಶಿಕ್ಷಕ ಸಂಸ್ಥೆಯಿಂದ ಸಂಪೂರ್ಣ ತರಬೇತಿಯನ್ನು ಪಡೆದು ಹೊರಬರುವ ಈ ಕ್ರೀಡಾ ಶಿಕ್ಷಕರು ದೇಶದ ಎಲ್ಲಾ ಭಾಗಗಳಲ್ಲಿಯೂ ತಾವೇ ಕ್ರೀಡಾ ಶಿಕ್ಷಕರಿಗೆ ತರಬೇತಿ ಕೊಡುವ ಕಾರ್ಯವನ್ನು ಆರಂಭಿಸುವರು.

ಈಗ ಪಾಟಿಯಾಲದಲ್ಲಿ ಸ್ಥಾಪನೆಯಾಗಿರುವ ರಾಷ್ಟ್ರೀಯ ಕ್ರೀಡಾ ಸಂಸ್ಥೆಯು, ಅಧೋಗತಿಗಿಳಿದಿರುವ ಆಟದ ಮಟ್ಟವನ್ನು ಸುಧಾರಿಸಲು ಆಟಗಾರರಿಗೆ ತರಬೇತಿ ಸೌಲಭ್ಯಗಳನ್ನು ಒದಗಿಸಿ ಕೊಡುತ್ತದೆ. ಈ ಸಂಸ್ಥೆಯು, ಹಾಕಿ ಆಟವನ್ನು ಬಿಟ್ಟು ಉಳಿದೆಲ್ಲ ಆಟಗಳಲ್ಲಿ ಲಭ್ಯವಾಗದೇ ಇರುವ ಪ್ರತಿಭಾನ್ವಿತ ಕ್ರೀಡಾ ಶಿಕ್ಷಕರನ್ನು ತಯಾರು ಮಾಡುವುದು. ಚಿತ್ತಾಕರ್ಷಣೆಗೆ ಹೆಚ್ಚು ಅವಕಾಶವಿಲ್ಲದೆ ಶಿಕ್ಷಣಾರ್ಥಿಗಳು ಏಕಾಗ್ರ ಚಿತ್ತದಿಂದ ತಮ್ಮ ತಮ್ಮ ತರಬೇತಿಯನ್ನು ಕೈಗೊಳ್ಳಲು ಸಾಧ್ಯವಾಗುವುದಕ್ಕಾಗಿ, ಪ್ರಶಾಂತವಾದ ಪಾಟಿಯಾಲಾ ನಗರವನ್ನು ತರಬೇತಿಗಾಗಿ ಆರಿಸಲಾಗಿದೆ.

ಕ್ರೀಡಾ ಶಿಕ್ಷಕ ಸಂಸ್ಥೆಯ ಸ್ಥಾಪನೆಗೆ ಕಾರಣವೇನು ಎಂದು ಪ್ರಶ್ನಿಸಬಹುದಾಗಿದೆ. ಅದಕ್ಕೆ ಉತ್ತರವಿಷ್ಟೆ. ಭಾರತೀಯ ಕ್ರೀಡಾಪಟುಗಳು ಅನೇಕ ಅಂತಾರಾಷ್ಟ್ರೀಯ ಕ್ರೀಡಾಸ್ಪರ್ಧೆಗಳಲ್ಲಿತ್ತ ಅತೃಪ್ತಿಕರವಾದ ಹಾಗೂ ಕೀಳುಮಟ್ಟದ ಪ್ರದರ್ಶನ, ಏಕಪ್ರಕಾರವಾಗಿ ನಾನಾ ಕ್ರೀಡಾಂಗಗಳಲ್ಲಿ ಭಾರತೀಯ ಕ್ರೀಡಾಪಟುಗಳು ಹೊಂದಿದ ಪರಾಭವ, ಇವು ದೇಶದಲ್ಲಿ ಆಟದ ಮಟ್ಟವನ್ನು ಸುಧಾರಿಸುವ ವಿಷಯಕ್ಕೆ ಅಗ್ರ ಪ್ರಾಧಾನ್ಯವೀಯಬೇಕೆಂಬ ಅಂಶದತ್ತ ಪ್ರತಿಯೊಬ್ಬ ಕ್ರೀಡಾಭಿಮಾನಿ ಹಾಗೂ ಆಟಗಾರನ ಕಣ್ಣನ್ನು ತೆರೆಸಿದವು. ಸರ್ಕಾರದವರು ಸಹ ಈ ಅಂಶವನ್ನು ಗಮನಿಸಿಯೇ ಹೆಸರಾಂತ ಆಟಗಾರರೂ ಕ್ರೀಡಾಭಿಮಾನಿಗಳೂ ಆದ ಪಾಟಿಯಾಲ ಮಹಾರಾಜರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದರು. ಆಟದ ಮಟ್ಟ ಕೆಳಗಿಳಿಯಲು ಕಾರಣವೇನು, ಅದನ್ನು ಸುಧಾರಿಸಲು ಯಾವರೀತಿಯ ಕ್ರಮ ಕೈಗೊಳ್ಳಬಹುದು. ಈ ಮುಂತಾದವನ್ನು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತವಾದ ಶಿಫಾರಸುಗಳನ್ನು ಮಾಡುವುದು ಈ ಸಮಿತಿಯ ನೇಮಕದ ಉದ್ದೇಶವಾಗಿತ್ತು. ಸಮಿತಿಯು ತನ್ನ ಶಿಫಾರಸುಗಳನ್ನು ಸರ್ಕಾರದವರಿಗೆ ಸಲ್ಲಿಸಿತು. ಒಂದೇ ಸವನೆ ಕ್ರೀಡಾ ಶಿಕ್ಷಕರನ್ನೂ ಶಿಕ್ಷಣಾರ್ಥಿಗಳನ್ನೂ ಒದಗಿಸಲು ಸಾಧ್ಯವಾಗುವಂತಹ ಒಂದು ಕಾರ್ಯಕ್ರಮ ಅಗತ್ಯವೆಂದು ಸಮಿತಿ ಸೂಚಿಸಿತು. ವಿವಿಧ ಆಟಗಳು ಮತ್ತು ಕ್ರೀಡೆಗಳಲ್ಲಿ ಶ್ರೇಷ್ಠದರ್ಜೆಯ ಕ್ರೀಡಾಶಿಕ್ಷಕರುಗಳನ್ನು ಒದಗಿಸಲು ಒಂದು ಕೇಂದ್ರ ಕ್ರೀಡಾ ಶಿಕ್ಷಕರ ತರಬೇತಿ ಸಂಸ್ಥೆ ಅಗತ್ಯವೆಂದೂ ಸಮಿತಿಯು ಭಾವಿಸಿತು.

ಜುಲೈ ತಿಂಗಳ ಆದಿಭಾಗದಲ್ಲಿ ರೈಲ್ವೆ ಕ್ರೀಡಾ ನಿಯಂತ್ರಣ ಮಂಡಲಿಯ ಅಧ್ಯಕ್ಷರಾಗಿದ್ದ ಶ್ರೀ ಎಂ. ಕೆ. ಕೌಲ್‌ರವರನ್ನು ಪಾಟಿಯಾಲದ ರಾಷ್ಟ್ರೀಯ ಕ್ರೀಡಾ ಶಿಕ್ಷಕರ ತರಬೇತಿ ಸಂಸ್ಥೆಯ ಡೈರೆಕ್ಟರನ್ನಾಗಿ ನೇಮಿಸಲಾಯಿತು. ಶ್ರೀ ಕೌಲ್ ಅವರು ಹೆಸರಾಂತ ಆಡಳಿತಗಾರರೂ ಆಟಗಾರರೂ ಆಗಿದ್ದಾರೆ. ಶ್ರೀಯುತರ ಉತ್ಸಾಹ, ಶ್ರದ್ಧೆಗಳಿಂದಾಗಿ ರೈಲ್ವೆಯು ಭಾರತದ ಕ್ರೀಡಾ ಭೂಪಟದಲ್ಲಿ ಒಂದು ಸ್ಥಾನ ದೊರಕಿಸಿಕೊಂಡಿದೆ.

ಹಲವಾರು ವಿದೇಶೀ ಕ್ರೀಡಾ ಶಿಕ್ಷಕರು ನವೆಂಬರ್ ತಿಂಗಳಲ್ಲಿ ದೇಶಕ್ಕೆ ಆಗಮಿಸುವ ನಿರೀಕ್ಷೆಯಿದೆ. ಡಿಸೆಂಬರ್ ತಿಂಗಳಲ್ಲಿ ಪಾಟಿಯಾಲದ ಸಂಸ್ಥೆ ಕಾರ್ಯವನ್ನಾರಂಭಿಸುವ ನಿರೀಕ್ಷೆಯಿದೆ ಇನ್ನೆರಡು ಮೂರು ವರ್ಷಗಳಲ್ಲಿ ಈ ಸಂಸ್ಥೆಯು ಪೂರ್ಣಾಭಿವೃದ್ಧಿಗೊಳ್ಳುವ ನಿರೀಕ್ಷೆಯಿದೆ. ಒಂದೊಂದು ಸಲವೂ ತರಬೇತಿಯು ಸಾಮಾನ್ಯವಾಗಿ ಮೂರು ನಾಲ್ಕು ವರ್ಷಗಳ ಕಾಲ ನಡೆಯುವ ನಿರೀಕ್ಷೆಯಿದೆ. ಶ್ರೇಷ್ಠ ಕ್ರೀಡಾ ಶಿಕ್ಷಕರು ತರಬೇತಿಪಡೆದು ಹೊರಬರುವವರೆಗೂ ಈ ಸಂಸ್ಥೆಯಲ್ಲಿ ಆರು ತಿಂಗಳಿಂದ ಹನ್ನೆರಡು ತಿಂಗಳವರೆಗೆ ನಡೆಯುವ ಸಂಕ್ಷಿಪ್ತ ತರಬೇತಿ ವರ್ಗಗಳನ್ನು ವ್ಯವಸ್ಥೆಗೊಳಿಸುವ ಉದ್ದೇಶವಿದೆ.

ದೀರ್ಘಾವಧಿಯ ಕ್ರಮವಾಗಿ ಕಾರ್ಯನಿರ್ವಾಹಕ ಮಂಡಲಿಯು ವ್ಯಾಯಾಮ ಕ್ರೀಡೆಗಳು (ಅಥ್ಲೆಟಿಕ್ಸ್), ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್, ಬಾಕ್ಸಿಂಗ್, ಕ್ರಿಕೆಟ್, ಫುಟ್‌ಬಾಲ್, ಗರುಡಿಸಾಧನೆ, ಈಜುವಿಕೆ, ಟೇಬಲ್ ಟೆನ್ನಿಸ್, ವಾಲಿಬಾಲ್, ಭಾರ ಎತ್ತುವಿಕೆ ಮತ್ತು ಮಲ್ಲಯುದ್ಧ—ಈ ಕ್ರೀಡಾಂಗಗಳಲ್ಲಿ ಖ್ಯಾತಿ ಗಳಿಸಿರುವ ವಿದೇಶೀ ಕ್ರೀಡಾ ಶಿಕ್ಷಕರುಗಳ ಸೇವೆಗಳನ್ನು ಪಡೆಯಲು ಉದ್ದೇಶಿಸಿದೆ. ಹಾಕಿ ಆಟದ ವಿಷಯದಲ್ಲಿ ಭಾರತವು ತೌರುಮನೆಯಾಗಿದೆ. ಈ ಕಾರಣದಿಂದ ಹಾಕಿ ಆಟದ ವಿಷಯದಲ್ಲಿ ಸ್ವದೇಶೀ ಪ್ರವೀಣರ ಸೇವೆಗಳನ್ನೇ ಪಡೆಯಲಾಗುವುದು. ಸದ್ಯಕ್ಕೆ ಬಾಕ್ಸಿಂಗ್ ವಿಷಯದಲ್ಲಿ ಸಹ ಭಾರತೀಯ ಪ್ರವೀಣರ ಸೇವೆಗಳನ್ನೇ ಪಡೆಯಲಾಗುವುದು.

ಕೇಂದ್ರ ಸಂಸ್ಥೆಯ ಪ್ರಯತ್ನಗಳಿಗೆ ಪೂರಕವಾಗಿ ಕೇಂದ್ರ ಸರ್ಕಾರದವರು ಹಣಕಾಸು ಲಭ್ಯವಾದಲ್ಲಿ ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಪ್ರಾದೇಶಿಕ ಕ್ರೀಡಾಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವ ಉದ್ದೇಶವನ್ನಿಟ್ಟುಕೊಂಡಿದ್ದಾರೆ.

ಸುಲಭ ಉಳಿತಾಯಕ್ಕೆ
ಹೊಸ ಮಾರ್ಗ
ಪ್ರತಿ ತಿಂಗಳೂ 5 ರೂ., 10 ರೂ., 20 ರೂ.,
ಅಥವಾ 50 ರೂ.ಗಳ ಕೂಪನ್ನುಗಳನ್ನು ಕೊಂಡು
ನಮ್ಮ ನವೀನ ಮಾದರಿಯ
ಕ್ಯುಮುಲೇಟಿವ್ ಡಿಪಾಸಿಟ್ ಯೋಜನೆಯಲ್ಲಿ
ನಿಮ್ಮ ಹಣ ವಿನಿಯೋಗಿಸಿರಿ

ವೈಶಿಷ್ಟ್ಯಗಳು:
- ತಿಂಗಳಿನ ಯಾವ ದಿನದಲ್ಲೇ ಆಗಲಿ ಕಂತು ಕಟ್ಟಬಹುದು.
- ಕಂತು ಕಟ್ಟಲು ತಡವಾದರೆ ದಂಡ ತೆರಬೇಕಾಗಿಲ್ಲ.
- ನಿಮ್ಮ ಹಣಕ್ಕೆ ಆಕರ್ಷಕ ದರದಲ್ಲಿ ಬಡ್ಡಿಯು ದೊರೆಯುತ್ತದೆ.

—: ವಿವರಗಳಿಗೆ :—
ನಿಮಗೆ ಹತ್ತಿರವಾಗಿರುವ ನಮ್ಮ ಯಾವುದಾದರೊಂದು ಶಾಖೆಯ ಮೆನೇಜರರೊಡನೆ ವ್ಯವಹರಿಸಿರಿ.
ಕೆನರಾ ಬ್ಯಾಂಕ್ ಲಿಮಿಟೆಡ್
ಶ್ರೀ
(ಸ್ಥಾಪನೆ — 1906)
–ವಿವೇಚನೆಯಿಂದ ಉಳಿಸಿರಿ....ಕ್ರಮವಾಗಿ ಕೂಡಿಡಿರಿ–

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ
ವಿಚಾರಿಸಿರಿ–
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಪರಿಚಯ

ಎಂಬತ್ತೊಂದರ ಬ್ರಹ್ಮಚಾರಿ- ಡಾ| ರಾಯ್

ಕಮ್ಯುನಿಸ್ಟರ ಬಲವಾದ ಕೇಂದ್ರವೆನಿಸಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಡಾ| ವಿಧಾನಚಂದ್ರ ರಾಯ್ ಜನತೆಯ ಅಪೇಕ್ಷೆಗೆ ವ್ಯತಿರಿಕ್ತ ನಡೆಯುವರಲ್ಲ. ಆದರೆ, ಅಸಾಮದ ಭಾಷಾ ಗೊಂದಲದಲ್ಲಿ ಇವರು ವಹಿಸಿದ ಧೋರಣೆಯು ಮಾತ್ರ ಏಕಪಕ್ಷೀಯವಾಗಿದೆಯೆಂದು ನಿಷ್ಪಕ್ಷಪಾತಿ ರಾಜಕಾರಣಿಗಳ ಅಭಿಪ್ರಾಯ.

ವಿರೋಧ ಮತ್ತು ಲೋಕಪ್ರಿಯತೆಗಳಿಂದ ಪ್ರಭಾವಿತರಾಗದಿರುವ ಕೆಲವೇ ಮಂದಿಗಳಲ್ಲಿ ಡಾಕ್ಟರ ವಿಧಾನ ಚಂದ್ರ ರಾಯರು ಅಗ್ರಗಣ್ಯರಾಗಿದ್ದಾರೆ ಎಂದು ನಾಲ್ಕು ವರ್ಷಗಳಿಗೆ ಮೊದಲು ಪ್ರಕಾಶಗೊಂಡ ರಾಜಾಜಿಯವರ ಉದ್ಗಾರವೂ ಅಸಾಮದಲ್ಲಿ ಇತ್ತೀಚೆಗೆ ನಡೆದ ಗೊಂದಲಗಳಿಂದ ತನ್ನ ಬೆಲೆಯನ್ನು ಕಳೆದುಕೊಂಡಂತಾಗಿದೆ.

ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಡಾ| ವಿಧಾನಚಂದ್ರ ರಾಯರು ಅಸಾಮದ ಗಲಭೆಯಿಂದ ಉದ್ವಿಗ್ನರಾದುದು ಸ್ವಾಭಾವಿಕ. ಅಲ್ಲಿನ ಉಪದ್ರವಗಳ ಭಯಾನಕ ಪರಿಣಾಮವನ್ನು ಕೇಳಿದೊಡನೆಯೇ, "ಅಲ್ಪಸಂಖ್ಯಾಕರ ರಕ್ಷಣೆ ಮಾಡಲಾರದ ಸರಕಾರವು ಅಧಿಕಾರ ತ್ಯಾಗವೂ ಡಬೇಕು" ಎಂದು ಕ್ರುದ್ಧವಾಗಿ ನುಡಿದಿದ್ದ ರಾಯರು ಪಶ್ಚಿಮ ಬಂಗಾಲದ ಕಾಂಗ್ರೆಸ್ ಸಮಿತಿಯು ಅಗೋಸ್ತು ೧೫ರಂದು ಎಲ್ಲೆಡೆಯೂ ಸಂಭ್ರಮದಿಂದ ಆಚರಿಸುತಿದ್ದ ಸ್ವಾತಂತ್ರ್ಯ ದಿನೋತ್ಸವವನ್ನು ಬಂಗಾಳದಲ್ಲಿ ಆಚರಿಸದಿರಲು ನಿರ್ಣಯಿಸಿದಾಗ, ಈ ಗೊತ್ತುವಳಿಯನ್ನು ವಿರೋಧಿಸಬೇಕಾದ ಆವಶ್ಯಕತೆ ಉಳಿಯಲಿಲ್ಲ. ಅಂತ್ಯದಲ್ಲಿ ಪ್ರಧಾನಿ ನೆಹರುರವರ ಮಾತನ್ನು ಅಲ್ಲಗಳೆಯಲಾರದೆ ಅವರು ಆ ಗೊತ್ತುವಳಿಯನ್ನು ಪುನರ್ವಿಮರ್ಶಿಸುವಂತೆ ಕೇಳಿಕೊಂಡರೂ ವಾಸ್ತವಿಕವಾಗಿ, ಅಸಾಮದ ಗಲಭೆಯ ವಿಷಯದಲ್ಲಿ ಕೇಂದ್ರ ಸರಕಾರವು ತಾಳಿದ ನೀತಿಯ ಬಗ್ಗೆ ಅಸಂತುಷ್ಟಿ ವ್ಯಕ್ತಪಡಿಸುವ ಪ್ರಮುಖ ಮಹಾನುಭಾವರಲ್ಲಿ ಡಾ. ರಾಯರೂ ಒಬ್ಬರೆನ್ನಬಹುದು.

ಅಸಾಮ ರಾಜ್ಯದಲ್ಲಿ ನೆಲಸಿರುವ ಬಂಗಾಲಿಗಳನ್ನು ಅಲ್ಲಿಂದ ಓಡಿಸುವ ಬಗ್ಗೆ ಅಸಾಮಿಗಳು ಒಂದು ನಿಶ್ಚಿತ ಕಾರ್ಯಕ್ರಮವನ್ನು ಸಿದ್ಧಪಡಿಸಿಕೊಂಡಿರುವರೆಂದೂ ಇದು ಕಾರಣದಿಂದ ಅಲ್ಲಿ ಎದ್ದ ಗಲಭೆಯು ಪೂರ್ವನಿಯೋಜಿತ ಯೋಜನೆಯಂತೆ ನಡೆಯಿತಲ್ಲದೆ ಆಕಸ್ಮಿಕವಾಗಿ ಅಲ್ಲವೆಂದೂ ಇಂದಿಗೂ ಡಾ. ರಾಯರು ದೃಢವಿಶ್ವಾಸ ತಾಳಿದ್ದಾರೆ. ಮಾತ್ರವಲ್ಲ, ಈ ಕಾರ್ಯಕ್ರಮವು ಪ್ರಭಾವಶಾಲಿಯಾಗಿ ನಡೆಯಬೇಕೆಂದು ಕೆಲವು ಮಹತ್ವಪೂರ್ಣ ವ್ಯಕ್ತಿಗಳೂ ಪ್ರತ್ಯಕ್ಷ ಅಥವಾ ಪರೋಕ್ಷ ವಿಧಾನಗಳಿಂದ ನೆರವು ನೀಡಿದ್ದಾರೆ ಎಂದೂ ಅವರು ಬಲವತ್ತರವಾಗಿ ನಂಬಿದ್ದಾರೆ.

ಭಾಷಾ ಪ್ರಶ್ನೆಯ ಬಗ್ಗೆ ಡಾ| ರಾಯರು ಅಸಹಿಷ್ಣುಗಳಲ್ಲ. ನಾಲ್ಕು ವರ್ಷದ ಮೊದಲು ಬಿಹಾರ ಮತ್ತು ಪಶ್ಚಿಮ ಬಂಗಾಲಗಳ ಏಕೀಕರಣದ ಮಾತಿಗೆ ಪುಟ ಬಂದಾಗ, ಬಿಹಾರದ ಮುಖ್ಯಮಂತ್ರಿಯವರೊಡನೆ ಆಗ ಒಂದು ನಿರ್ಣಯಕ್ಕೆ ಬಂದುದೇ ಇದಕ್ಕೆ ಸಾಕ್ಷಿ. ಪಶ್ಚಿಮ ಬಂಗಾಳದ ಜನತೆಯಲ್ಲಿ ಏಕೀಕರಣದ ಬಗ್ಗೆ ಸದ್ಭಾವನೆಯನ್ನು ಹುಟ್ಟಿಸಲು ಶಕ್ತಿ ಮೀರಿ ಡಾ| ರಾಯರು ಪ್ರಯತ್ನಿಸಿದರೆನ್ನೋ ನಿಜವೇ. ಆದರೆ, ರಾಜ್ಯ ವಿಧಾನ ಸಭೆಯ ಉಪಚುನಾವಣೆಗಳಲ್ಲಿ ಜನತೆಯು ಏಕೀಕರಣ ವಿರೋಧಿಗಳನ್ನು ಆರಿಸಿದುದನ್ನು ಕಂಡುಕೊಂಡು, ತನ್ನ ವೈಯಕ್ತಿಕ ಪ್ರತಿಷ್ಠೆ ಮತ್ತು ಪರಿಷ್ಕಾರ ದೋಷಗಳನ್ನು ಗಮನಿಸದೆ, ಏಕೀಕರಣವನ್ನು ಕಾರ್ಯಾನ್ವಿತಗೊಳಿಸಲು ತಾವು ಅಸಮರ್ಥರೆಂಬುದನ್ನು ಹೇಳಿಯೇ ಬಿಟ್ಟರು. ಇದರಿಂದಾಗಿ ಡಾ| ರಾಯರು "ಅದೂರದರ್ಶಿ", ಭಾಷಾವಾದಿಗಳ ಕೈಗೊಂಬೆ" ಎಂದು ಮುಂತಾದ ಉಪನಾಮಗಳನ್ನು ಪಡೆದರು. ಹಲವಾರು ಮಹನೀಯರ ನಿಂದನೆಗೂ ಕೋಪಕ್ಕೂ ಒಳಗಾದರು. ಆದರೆ, ಜನತೆಯ ಅಪೇಕ್ಷೆಗೆ ವಿರೋಧವಾಗಿ ಯಾವುದನ್ನೇ ಆದರೂ ಅವರ ತಲೆಯ ಮೇಲೆ ಹೊರಿಸಬಾರದೆಂದೂ, ಒಂದು ವೇಳೆ ಹೊರಿಸಿಯೇ ಬಿಟ್ಟರೆ ಅದು ಅನುಚಿತವಾಗುವುದೆಂದೂ ಅವರು ತಿಳಿದುಕೊಂಡು, ತಮ್ಮ ನಿರ್ಧಾರವನ್ನೇ ಬದಲಿಸಿದರು.

ರಾಜ್ಯ ಮುಖ್ಯಮಂತ್ರಿಗಳಲ್ಲಿ ವಯೋವೃದ್ಧರಾದ ಡಾ. ರಾಯರು ಸದಾ ನೈಸರ್ಗಿಕ ಅಥವಾ ಮಾನವನಿರ್ಮಿತ ಸಂಕಟಗಳು ಕಾಡುತ್ತಿರುವ ಪಶ್ಚಿಮಬಂಗಾಳದ ಮುಖ್ಯಮಂತ್ರಿಯಾಗಿದ್ದಾರೆ. ಕಮ್ಯುನಿಸ್ಟರ ಬೆಂಬಲಕ್ಕೆ ದುರ್ಗದಂತಿರುವ ಪ. ಬಂಗಾಳದಲ್ಲಿ ಈ ಕಮ್ಯೂನಿಸ್ಟರೂ ಹಲವಾರು ಗೊಂದಲಗಳನ್ನು ಎಬ್ಬಿಸುವುದಿದೆ. ಡಾ. ರಾಯರು ಕಳೆದ ಹನ್ನೆರಡು ವರ್ಷಗಳಿಂದ ಈ ಕೀಟಲೆಗಳನ್ನು ಧೈರ್ಯದಿಂದ ಎದುರಿಸುವಲ್ಲಿ ಸಫಲರಾಗಿದ್ದಾರೆ. ಕಮ್ಯುನಿಸ್ಟ ನೇತಾರರ ಪ್ರಹಾರಗಳಿಗೆ ಪ್ರತೀಕಾರವನ್ನು ಮಾಡುವುದರಲ್ಲಿ ಅಸಮಾನ ಕೌಶಲ ಡಾ| ರಾಯರಲ್ಲಿದೆ. ಈ ಬಗ್ಗೆ ಎಂಟು ವರ್ಷದ ಮೊದಲೊಮ್ಮೆ ನಡೆದ ಘಟನೆ ಮನೋಜ್ಞವಿದೆ. ವಿಧಾನ ಸಭೆಯಲ್ಲಿ ಕಮ್ಯೂನಿಸ್ಟ್ ನಾಯಕ ಶ್ರೀ ಜ್ಯೋತಿ ವಸುರವರು "ನೀವು ಒಬ್ಬ ಮರಿ ಹಿಟ್ಲರ" ಎಂದು ಡಾ| ರಾಯರನ್ನು ಆರೋಪಿಸಿದರು. ಆಗ, ಡಾ| ರಾಯರು ಎದ್ದು ನಿಂತು, "ನಾನು ಮರಿ ಹಿಟ್ಲರನೆಂದಾದರೆ, ತಾವು ಮರಿ ಸ್ಟಾಲಿನ್ ಆಗಿರುವಿರಿ" ಎಂದು ಉದ್ಗರಿಸಿದರು.

ಮೊನ್ನೆ ಜುಲಾಯಿ ತಿಂಗಳಿಗೆ ಡಾ| ರಾಯರಿಗೆ ೮೧ ವರ್ಷ ತುಂಬಿತು. ದೇಶದ ಪ್ರಮುಖ ಚಿಕಿತ್ಸಕರಲ್ಲಿ ಇವರು ಗಣನೀಯ ಸ್ಥಾನ ಪಡೆದಿದ್ದಾರೆ. ಕಾಂಗ್ರೆಸಿನ ನಾಯಕರಾಗಿರುವ ಇವರು ಕಲ್ಕತ್ತೆಯ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿಯೂ ಕಲಕತ್ತೆಯ ಕಾರ್ಪರೇಶನಿನ ಮೇಯರರಾಗಿಯೂ ಇದ್ದರು. ಅವಿವಾಹಿತರಾದ ಡಾ| ರಾಯರ ೬ ಅಡಿ ೨ ಅಂಗುಲ ಎತ್ತರದ ಭೀಮಕಾಯ ಇವರ ವ್ಯಕ್ತಿತ್ವವನ್ನು ಮತ್ತೂ ಪ್ರಭಾವಶಾಲಿಗೊಳಿಸುವಲ್ಲಿ ಸಹಾಯಕವಾಗಿದೆ.

ಪಶ್ಚಿಮ ಬಂಗಾಲದ ಜನತೆಯ ಆಕಾಂಕ್ಷೆಗಳನ್ನು ಅರಿತುಕೊಂಡು, ಕಮ್ಯುನಿಸ್ಟರ ದಾಳಿಯಿಂದ ಅದನ್ನು ರಕ್ಷಿಸುವ ಎಡೆಗಾರಿಕೆ ಈ ೮೧ ವರ್ಷದ ಬ್ರಹ್ಮಚಾರಿಯಲ್ಲೂ ಉಳಿದಿರುವುದರಿಂದಲೇ ಡಾ. ರಾಯ್‌ರವರು ಗಣನೀಯ ರಾಜಕಾರಣಿಗಳಲ್ಲಿ ಒಬ್ಬರೆನಿಸಿ ಮೆರೆದಾಡುತಿದ್ದಾರೆ. ಇಂತಹ ನಾಯಕಮಣಿಯ ಮುಖದಿಂದ ಅಸಾಮ ಗೊಂದಲದ ಬಗ್ಗೆ ಎದ್ದು ಉದುರಿದ ಉದ್ಗಾರ ಮಾತ್ರ ಅವರ ಬಗ್ಗೆ ತುಸು ಅಸಮಾಧಾನ ವುದಿಸಲು ಕಾರಣವಾಗಿದೆಯೆಂದು ತೋರುವುದಿಲ್ಲವೆ? ಅಥವಾ ಅಸಾಮದ ಭಾಷಾಗೊಂದಲವು ಡಾ. ರಾಯರೆನ್ನುವಂತೆ ಪೂರ್ವನಿಯೋಜಿತ ಯೋಜನೆಯೇ ಆಗಿದ್ದಿತೆ?

ಮಹಾರಾಣಿ ಎಲಿಜಬೆತ್ತಳು ರೋಯಲ್ ಹೋರ್ಟಿಕಲ್ಚರಲ್ ಸೊಸೈಟಿಯ ಪುಷ್ಪ ಪ್ರದರ್ಶನವೊಂದನ್ನು ವೀಕ್ಷಿಸುವುದು.

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು
ಓದಲೇಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ
ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.
ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು
ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ
ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.
ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.
ರೂ. ೩=೫೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	3_75
ಪಂಚಿಮತು (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ನಾವು ದೋಷಯುಕ್ತರಾಗಿದ್ದು ಬೇರೆಯವರ ದೋಷಗಳನ್ನೇ ಎತ್ತಿತೋರಿಸಿ ಅವನ್ನು ತಿದ್ದಿಕೊಳ್ಳುವಂತೆ ಹೇಳುವುದು ಅದೆಷ್ಟು ಮೂರ್ಖತನ!

ನವಯುಗ

ವರುಷ	ಉಡುಪಿ	ವಾರ
೪೦	೧-೯-'೬೦	೧

ಪಂತರ ಹಿತೋಕ್ತಿ

ಉತ್ತರ ಮತ್ತು ಮಧ್ಯಪ್ರದೇಶಗಳು ಸದಸ್ಯರಾಷ್ಟ್ರವಾಗಿರುವ ಕೇಂದ್ರ ಪ್ರಾದೇಶಿಕ ಪರಿಷತ್ತಿನಲ್ಲಿ ಭಾರತದ ಗೃಹಮಂತ್ರಿ ಪಂಡಿತ ಪಂತರು ರಾಷ್ಟ್ರೀಯತೆ ಮತ್ತು ಐಕ್ಯಸಾಧನೆಯ ಬಗ್ಗೆ ಮಾಡಿದ ಉದ್ಗಾರ ಮತ್ತು ನೀಡಿದ ಕರೆಗಳು ಪ್ರತ್ಯೇಕ ಭಾರತೀಯನಿಗೂ ಉಪಾದೇಯವಿರುವುವು. ರಾಜಕೀಯ ಸ್ವಾತಂತ್ರ್ಯವನ್ನು ಹದಿಮೂರು ವರ್ಷಗಳಿಗೆ ಮೊದಲೇ ನಾವು ಪಡೆದಿದ್ದೇವೆ; ಇದು ಸರಿಯೇ. ಆದರೆ, ಈ ಹದಿಮೂರು ವರ್ಷಗಳಲ್ಲಿ ನಾವು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸುವುದು ಸಾಧ್ಯವಾಗಿಲ್ಲ. ಇದಕ್ಕೆ ಇನ್ನೂ ಹಲವು ವರ್ಷ ಕಳೆಯಬೇಕಾಗಬಹುದು. ಆದರೂ ನಾವು ಪ್ರತಿಯೊಂದು ವಿಷಯದಲ್ಲೂ ಸಂಪೂರ್ಣ ಸ್ವಾವಲಂಬಿಗಳಾಗುವವರೆಗೆ ಒಂದು ಪರಿಪೂರ್ಣ ರಾಷ್ಟ್ರದ ಪ್ರಜೆಗಳಾಗಿ ನಿಲ್ಲುವುದು ಸಾಧ್ಯವಿರುವುದಿಲ್ಲ. ಪರಾವಲಂಬನಕ್ಕಿಂತ ಸ್ವಾವಲಂಬನ ಜೀವನದಲ್ಲಿ ಸ್ವಾದ ಹೆಚ್ಚು; ಎಂತಲೇ ಸಂಪೂರ್ಣ ಸ್ವಾವಲಂಬಿ ರಾಷ್ಟ್ರವನ್ನಾಗಿ ಭಾರತವನ್ನು ಪುನಾರಚಿಸುವ ಕಾರ್ಯ ಭರದಿಂದ ಸಾಗುತ್ತಿದೆ; ಇದರಲ್ಲಿ ನಾವು ಯಶಸ್ವಿಯಾದೆಂದು ಸ್ವಾತಂತ್ರ್ಯದ ಉದ್ದೇಶಗಳಲ್ಲಿ ಒಂದು ಕೈಗೂಡಿದಂತಾಗುವುದು. ಆದರೂ ಸ್ವಾತಂತ್ರ್ಯವು ಪರಿಪಕ್ವವಾಗಿ ಬೆಳೆಯುವಂತೆ ಸಗಲು ರಾಷ್ಟ್ರೀಯ ಭಾವನೆಯೂ ಬಲಿತು ಬರುವುದು ಅತ್ಯವಶ್ಯ.

ಒಂದು ದೇಶದ ಪ್ರಜೆಯಲ್ಲಿ ತನ್ನ ಮಾತೃಭೂಮಿಯ ಬಗ್ಗೆ ಆದರಾಭಿಮಾನಗಳು ಇರಬೇಕಾದ ಅಗತ್ಯವನ್ನು ಎಲ್ಲರೂ ಪ್ರತಿಬಿಂಬಿಸುತ್ತಾರೆ. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂಬ ಉಕ್ತಿಯೊದರೋ ಮಾತೃಭೂಮಿಯ ಬಗ್ಗೆ ಪ್ರಜೆಯು ಇಡಬೇಕಾದ ಗೌರವ ಭಾವನೆ ಮತ್ತು ತೋರಿಸಬೇಕಾದ ಕರ್ತವ್ಯ ಬುದ್ಧಿಗಳನ್ನು ನಮಗೆ ಎತ್ತಿ ತೋರಿಸುತ್ತದೆ. ಪ್ರಧಾನಿ ನೆಹರೂ ಗೃಹಮಂತ್ರಿ ಪಂತ ಮೊದಲಾದವರಿಂದ ಹಿಡಿದು ತುಂಡು ಮುಂದಾಳುವೆನಿಸಿಕೊಂಡವನೂ ರಾಷ್ಟ್ರೀಯ ಭಾವನೆ ಬಲಿಯಬೇಕೆಂದು ಪದೇಪದೇ ಜನತೆಗೆ ಉಪದೇಶಿಸತೊಡಗುತ್ತ ಬಂದು ಬಹುಕಾಲವಾಯಿತು. ಈ ಕಾರಣದಿಂದ ಸದ್ಯ ಪಂಡಿತ ಪಂತರ ಉದ್ಗಾರ ಚರ್ವಿತಚರ್ವಣವಾದರೂ ಅದರಲ್ಲಿ ಹೇಳಸಲೆಂಬುದಿರುವುದಿಲ್ಲ. ದೇಶದ ಸುತ್ತಮುತ್ತಲೂ ಸಾಮ್ರಾಜ್ಯಶಾಹಿಗಳು ಭೂತಾಕಾರ ತಾಳಿ ಕೇಕೆಹಾಕುತ್ತಿರುವ ಈ ಸನ್ನಿವೇಶದಲ್ಲಿ ಭಾರತವು ತಾನು ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ ಶತಪ್ರಯತ್ನ ಮಾಡಬೇಕಾಗಿದೆ. ಉತ್ತರದ ಸುದೀರ್ಘ ಸೀಮೆಯಲ್ಲಿ ಚೀನೀಯರ ಆಕ್ರಮಣ ನಡೆದನಂತರವಾದರೂ ಈ ರಾಷ್ಟ್ರೀಯತೆಯ ಬೆಲೆಯನ್ನು ಎಲ್ಲ ಭಾರತೀಯರೂ ಸರಿಯಾಗಿ ಕಂಡುಕೊಳ್ಳುವಂತಾದುದು ಸುದೈವ. ಈ ಆಕ್ರಮಣದ ಬಗ್ಗೆ ಸ್ವಯಂ ಕಮ್ಯುನಿಸ್ಟ ರಾಷ್ಟ್ರಗಳ ಹಸ್ತಕರೆನಿಸಿದ ಭಾರತೀಯ ಕಮ್ಯುನಿಸ್ಟರೂ ಬಿಸಿಬಿಸಿ ತುಪ್ಪ ನುಂಗಿದವರ ದುಸ್ಥಿತಿಯನ್ನು ಹೊಂದಿರುವಾಗ, ಉಳಿದವರ ಮಾತು ಬೇರೆ ಹೇಳಬೇಕಾಗಿಲ್ಲ. ಹೀಗೆ ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಯಿಲ್ಲ ಎಂಬುದರಲ್ಲಿ ಹುರುಳಿಲ್ಲ; ಅದು ಇದೆ; ಆದರೆ, ಇಷ್ಟೂ ಸಾಕಷ್ಟು ಜಾಗ್ರತವಾಗಬೇಕಾಗಿದೆ ಎಂದು ಮಾತ್ರ ಹೇಳಬಹುದು. ನಮ್ಮ ರಾಷ್ಟ್ರೀಯತೆಗೆ ಅನ್ಯರು ನೀಡುವ ಪಂಥಾಹ್ವಾನವನ್ನು ನಾವು ಧೈರ್ಯಸಾಹಸಗಳಿಂದ ಸ್ವೀಕರಿಸಲೇ ಬೇಕಾಗಿದೆ; ಈ ದೃಢನಿರ್ಧಾರವನ್ನು ನಾವೆಲ್ಲರೂ ಈ ಮೊದಲೇ ಮಾಡಿದ್ದೇವೆ. ಪಂಡಿತ ಪಂತರು ಇಂತಹ ನಿರ್ಧಾರವನ್ನು ಅವಕಾಶವೊದಗಿದಾಗ ಕಾರ್ಯಕೃತಗೊಳಿಸಲು ಹಿಂಜರಿಯಬಾರದೆಂದು ಸ್ಮರಣೆಗೆ ತಂದು ಕೊಟ್ಟರು.

ಭಾರತದಂತಹ ಬಹುಭಾಷಾಭ್ಯಾಸಿಗಳ, ಬಹು ಮತಾವಲಂಬಿಗಳ ರಾಷ್ಟ್ರವನ್ನು "ಒಡೆದು ಆಳುವ," ತಮ್ಮ ನೀತಿಯಂತೆ ಬ್ರಿಟಿಷರು ಆಳಿದರು; ಇದರಿಂದಾಗಿ ಪ್ರಾಂತಾಭಿಮಾನ, ಭಾಷಾಭಿಮಾನ ಹಾಗೂ ಜಾತಿಮತಾಭಿಮಾನಗಳ ಝುಂಝಾವಾತಕ್ಕೆ ನಾವು ಸಿಲುಕಿ ಆದರಲ್ಲಿಯೇ ಮಿಲಿಮಿಲಿ ಒದ್ದಾಡುತ್ತಿರುವುದೂ ಉಂಟು. ಆಸಾಮದಲ್ಲಿ ನಡೆದ ಆಸಾಮಿ-ಬಂಗಾಳಿ ಭಾಷಾ ವಿವಾದದ ಗೊಂದಲ, ಪಂಜಾಬದಲ್ಲಿ ಹಿಂದೀ—ಪಂಜಾಬಿ ಗಲಭೆಗಳು ಇತ್ತೀಚೆಗಿನವಾದರೆ, ಮರಾಠಿ—ಗುಜರಾತಿಗಳ ಪ್ರಶ್ನೆ ಹರಿಸಿದ ರಕ್ತ ನದಿಗಳನ್ನು ನಾವು ಮರೆಯುವುದು ಸಾಧ್ಯವಿಲ್ಲ. ಭಾಷೆ — ಜಾತಿಮತಗಳು ದೇಶದ ಆಂತರಿಕ ಪ್ರಶ್ನೆಗಳು ಅವುಗಳ ಬಗ್ಗೆ ನಾವು ಅಭಿಮಾನ ಶೂನ್ಯರಾಗಿರಬೇಕೆಂದು ಯಾರೂ ಹೇಳುವುದಿಲ್ಲ; ಆದರೆ, ಒಂದು ವಿಶಾಲ ಜನ ಸಮೂಹದ ನಡುವೆ ವ್ಯಕ್ತಿಗತ ಅಭಿಮಾನವನ್ನು ದೂರವಿರಿಸುವಂತೆಯೇ ಇಡಿಯ ದೇಶದ ಹಿತದ ಮುಂದೆ ಇವು ಸಂಕುಚಿತವಾಗಿ ತೋರುತ್ತವೆ. ವ್ಯಕ್ತಿಗಿಂತ ಕುಟುಂಬ ಹಿರಿದು, ಕುಟುಂಬ, ಗ್ರಾಮ, ಜಿಲ್ಲೆ, ರಾಜ್ಯ ಮತ್ತು ದೇಶಗಳು ಒಂದರಿಂದಿನ್ನೊಂದು ದೊಡ್ಡವು. ಆದುದರಿಂದ ಸಮಷ್ಟಿಯ ಮುಂದೆ ವ್ಯಷ್ಟಿಯನ್ನು ತಲೆವಾಗಿಸಿ, ರಾಷ್ಟ್ರೀಯ ಮನೋಭಾವನೆಯನ್ನು ನಾವು ತಾಳಬೇಕು; ನಾವೆಲ್ಲರೂ ಭಾರತೀಯರು ಎಂಬ ಭಾವ ಸದಾ ಪ್ರತಿಧ್ವನಿಸುವಂತಿರಬೇಕು. ಇದರ ಮುಂದೆ ಸಂಕುಚಿತ ಮನೋವೃತ್ತಿಯು ನಿಂತು ಅದನ್ನು ಮರೆಯಾಗದಂತೆ ಎಚ್ಚರಿಕೆ ವಹಿಸಿಕೊಳ್ಳಬೇಕು. ಆಗತಾನೇ ನಮ್ಮ ದೇಶದ ಭದ್ರತೆಯನ್ನು ನಾವು ಉಳಿಸಿಕೊಳ್ಳಬಹುದು; ಆಂತರಿಕ ಶಾಂತಿಯನ್ನೂ ಸ್ಥಾಪಿಸಬಹುದು! ಸಂಪೂರ್ಣ ಸ್ವಾತಂತ್ರ್ಯದ ಸತ್ಫಲಗಳೆಲ್ಲವನ್ನೂ ಭುಂಜಿಸಬಹುದು. ಮತ್ತು ವಿದೇಶಗಳ ಜುಲುಮೆ ಬಲಾತ್ಕಾರಗಳಿಗೆ ಅಂಜದೆ ಸ್ವತಂತ್ರ ವಾತಾವರಣದಲ್ಲಿ ವಿಹರಿಸಬಹುದು. ಈಗ ಜಾಗ್ರತವಾಗುತ್ತಿರುವ ಈ ಭಾವ ಇನ್ನೂ ಬೆಳೆದು ಬರುವುದೂ ಉಳಿಯುವುದೂ ಅತ್ಯವಶ್ಯ.

ಸಂಕ್ಷಿಪ್ತ ಸುದ್ದಿಗಳು

ಕತ್ತಲೆಯಲ್ಲಿ ಬೆಳಕು

ಆಫ್ರಿಕೆಯ ಕತ್ತಲೆಯ ರಾಜ್ಯ ಕಾಂಗೋದಲ್ಲಿ ಕತ್ತಿ ಚಮಕಿಸುವುದು ನಿಂತಂತೆ ತೋರುವುದಿಲ್ಲ. ಅಲ್ಲಿ ನೆಲೆನಿಂತಿದ್ದ ಬೆಲ್ಜಿಯನ್ ಸೈನಿಕರನ್ನು ಹೊರಗಟ್ಟಲು ತೆರಳಿದ್ದ ಸಂಯುಕ್ತ ರಾಷ್ಟ್ರಸಂಸ್ಥೆಯ ಸೈನಿಕ ಪಡೆಯು ಇದೀಗ ತಾನೇ ಕಾಂಗೋ ಸೈನಿಕರಿಂದ ಆಘಾತ ತಿನ್ನತೊಡಗಿದೆ. ಕಟಾಂಗ ಪ್ರದೇಶವು ಮೊದಲೇ ಕಾಂಗೋ ಒಕ್ಕೂಟದಿಂದ ಸಿಡಿದುಹೋಗಿದ್ದು ಈಗ ಕಸಾಯ್ ಎಂಬ ಇನ್ನೊಂದು ರಾಜ್ಯವೂ ತಾನು ಸ್ವತಂತ್ರವೆಂದು ಸಾರಿಕೊಂಡು ವಿಶ್ವದ ಸ್ವತಂತ್ರ ರಾಷ್ಟ್ರಗಳ ಸಹಕಾರವನ್ನು ಯಾಚಿಸಿದೆ. ಕಾಂಗೋ ಸೈನಿಕರು ಕಾಯಿದೆ ವ್ಯವಸ್ಥೆಯನ್ನು ಪುನಃ ಸ್ಥಾಪಿಸುವ ಉದ್ದೇಶವನ್ನಿಟ್ಟುಕೊಂಡು ಕಸಾಯಿಯನ್ನು ಪ್ರವೇಶಿಸಿರುವರು. ಕಾಂಗೋದ ಲುಮುಂಬಾರವರ ಪಡೆಯನ್ನು ಹೊರದಬ್ಬಲು ಕಸಾಯ್‌ಯು ದೃಢ ನಿರ್ಧಾರವನ್ನು ಮಾಡಿದಂತಿದೆ. ಸಂಯುಕ್ತ ರಾಷ್ಟ್ರ ಸಂಸ್ಥೆ ತನ್ನ ಕಾರ್ಯವನ್ನು ಹೇಗೆ ತೂಗಿಸಿಕೊಳ್ಳುವುದೆಂಬುದೇ ಇನ್ನು ಮುಂದೆ ನೋಡ ಬೇಕಾಗಿರುವ ಸೋಜಿಗ.

ಈ ಸೌಲಭ್ಯಬೇಕು

ರಾಜ್ಯ ಪುನರ್ಘಟನಾ ನಂತರ ಮೈಸೂರಿಗೆ ಸೇರಿ ಹೋದ ದಕ್ಷಿಣ ಕನ್ನಡ ಜಿಲ್ಲೆಗಾದ ಹಲವಾರು ಅನ್ಯಾಯಗಳಲ್ಲಿ ಇಲ್ಲಿನ ಶಿಕ್ಷಕರಿಗೆ ಖಾಸಗಿಯಾಗಿ ವಿಶ್ವವಿದ್ಯಾಲಯ ಪರೀಕ್ಷೆಗಳಿಗೆ ಕೂರುವ ಸವಲತ್ತು ದೂರವಾದುದೂ ಒಂದಾಗಿದೆ. ಶಿಕ್ಷಕನಾದವನು ತನ್ನ ಜ್ಞಾನವನ್ನು ಹೆಚ್ಚಿಸುತ್ತ ಬಂದಷ್ಟು ಆತನ ಅಧ್ಯಾಪನ ಕಾರ್ಯವು ಪರಿಪುಷ್ಟವಾಗಿ ಸಾಗುವುದು ಮಾತ್ರವಲ್ಲ, ಅದರ ಪರಿಣಾಮವೂ ವಿದ್ಯಾರ್ಥಿಯ ಮೇಲಾಗುವುದು. ಖಾಸಗಿಯಾಗಿ ಉಚ್ಚ ಪರೀಕ್ಷೆಗಳಿಗೆ ಕೂರಲು ಬಿಡುವುದರಿಂದ ಅಧ್ಯಾಪಕರಿಗೂ ಆರ್ಥಿಕವಾಗಿ ಪ್ರಯೋಜನ ದೊರೆಯುವ ಸಂಭವವಿರುವುದು. ಮದ್ರಾಸದಂತಹ ಉನ್ನತ ಮಟ್ಟವನ್ನು ಉಳಿಸಿಕೊಂಡು ಬಂದು, ಭಾರತದಲ್ಲಿ ಗಣನೀಯ ಸ್ಥಾನವನ್ನು ಪಡೆದಿರುವ ವಿಶ್ವವಿದ್ಯಾಲಯವೇ ಕೆಲವೊಂದು ನಿಯಮಗಳಿಗೊಳಪಟ್ಟು ಖಾಸಗಿಯಾಗಿ ಅಧ್ಯಾಪಕರಿಗೆ ಪರೀಕ್ಷೆ ಕೊಡುವ ಸೌಲಭ್ಯವನ್ನು ಪ್ರದಾನಮಾಡಿದುದನ್ನು ಎಲ್ಲರೂ ಪ್ರಶಂಸಿಸುತ್ತಿದ್ದರು; ಮತ್ತು ಅದರಿಂದ ಉಚಿತ ಲಾಭವನ್ನೂ ಗಳಿಸುತ್ತಿದ್ದರು. ಭಾರತದ ಇನ್ನು ಕೆಲವು ವಿಶ್ವವಿದ್ಯಾಲಯಗಳೂ ತಮ್ಮ ಕ್ಷೇತ್ರದೊಳಗಿನವರಿಗೆ, ಮತ್ತೆ ಕೆಲವು ಅಖಿಲ ಭಾರತೀಯರಿಗೆ ಖಾಸಗಿಯಾಗಿ ಪರೀಕ್ಷೆಗೆ ಪ್ರವೇಶ ನೀಡುತ್ತಿರುವಾಗ, ನಮ್ಮ ರಾಜ್ಯದಲ್ಲಿನ ಎರಡೂ ವಿಶ್ವವಿದ್ಯಾಲಯಗಳು ಇಂತಹರಿಗೆ ತಮ್ಮ ಬಾಗಿಲನ್ನು ಮುಚ್ಚಿಬಿಟ್ಟಿರುವುದು ತುಂಬ ಶೋಚನೀಯ. ಈ ವಿಶ್ವವಿದ್ಯಾಲಯಗಳು ನೊದ ಮೊದಲು ಇಂತಹ ಸೌಕರ್ಯ ನೀಡಬಹುದೆಂದು ಆಶೆ ಮೂಡಿದ್ದರೂ ಇದೀಗ ಆ ಆಶೆ ಮೂಲೆಪಾಲಾಗಿದೆ. ಸರಕಾರವು ವಿಶ್ವವಿದ್ಯಾಲಯಗಳನ್ನು ಈ ಬಗ್ಗೆ ಒತ್ತಾಯಪಡಿಸುವುದು ಸರಿಯಲ್ಲವಾದರೂ ವಿಶ್ವವಿದ್ಯಾಲಯಗಳೇ ತಮ್ಮ ಕಣ್ಣುಗಳನ್ನು ಕುಸು ತೆರೆದು, ಇತರ ಭಾರತೀಯ ಹಾಗೂ ವಿದೇಶೀಯ ವಿಶ್ವವಿದ್ಯಾಲಯಗಳು ನೀಡುತ್ತಿರುವ ಸೌಲಭ್ಯಗಳನ್ನು ಗಮನಪೂರ್ವಕ ನಿರೀಕ್ಷಿಸಿದರೆ, ಆಗ ತಮ್ಮ ಧೋರಣೆಯಲ್ಲಿ ಸುಧಾರಣೆಯಾಗಬೇಕಾದುದು ಅವಶ್ಯವೆಂದು ಮನಗಾಣುವುದು ಸಾಧ್ಯ.

ಜೋರ್ಡಾನದಲ್ಲಿ ಕಾರಸ್ಥಾನ

ಮಧ್ಯ ಪ್ರಾಚ್ಯದ ಜೋರ್ಡಾನದ ಪ್ರಧಾನ ಮಂತ್ರಿ ಹಾಜಾ ಮಾಜಾಲಿಯವರು ಅಮ್ಮಾನದಲ್ಲಿರುವ ವಿದೇಶೀಯ ಮಂತ್ರಿ ಶಾಖೆಯ ಕಛೇರಿಯ ಬಳಿಯಲ್ಲಿ ನಡೆದ ಬಾಂಬು ಸ್ಫೋಟನದಿಂದ ನಿಧನರಾದರು. ಈ ಸ್ಫೋಟವು ತೀವ್ರವಾಗಿದ್ದು ಪ್ರಧಾನಿಯವರಲ್ಲದೆ ಇತರ ೧೨ ಜನರು ಮಡಿದರೆಂದೂ ೫ ಜನರು ಘಾಯಾಳುಗಳಾದರೆಂದೂ ತಿಳಿದು ಬಂದಿದೆ. ಪ್ರಧಾನಿಯವರನ್ನು ಕೊಲೆಗೆಯ್ಯುವ ಉದ್ದೇಶದಿಂದಲೇ ಈ ಬಾಂಬನ್ನು ಸ್ಫೋಟಗೊಳಿಸಲಾಗಿದೆ ಎಂಬ ಊಹನೆಯಿರುವುದು. ರಾಷ್ಟ್ರದಾದ್ಯಂತ ಗಂಡಾಂತರದ ಪರಿಸ್ಥಿತಿಯನ್ನು ಸಾರಲಾಗಿದ್ದರೂ ಬಾಂಬು ಸ್ಫೋಟ ಮಾಡಿದವರು ಯಾರೆಂಬುದರ ಪತ್ತೆಯಾಗಿರುವುದಿಲ್ಲ. ಸದ್ಯ ತೆರವಾದ ಪ್ರಧಾನಿ ಸ್ಥಾನಕ್ಕೆ ಬಹಜಾಟ್ ಟಲ್ಹೂನಿಯವರನ್ನು ನೇಮಿಸಲಾಗಿದೆಯೆಂದು ಗೊತ್ತಾಗಿದೆ.

ಸಂಪತ್ತು ಎಲ್ಲಿಗೆ ಹೋಯಿತು?

ಭಾರತೀಯ ಲೋಕಸಭೆಯು ಐದು ದಿನಗಳ ವರೆಗೆ ಚರ್ಚೆ ನಡೆಸಿ ಮೂರನೆಯ ಪಂಚವಾರ್ಷಿಕ ಯೋಜನೆಯ ಕರಡಿಗೆ ಸಮ್ಮತಿಯಿತ್ತಿತು. ಕರಡು ಯೋಜನೆಯು ಅವಾಸ್ತವಿಕವೂ ತಪ್ಪು ತಿಳುವಳಿಕೆಗೆಡೆಮಾಡುವಂತಿರುವುದೂ ಆದುದರಿಂದ, ಇದನ್ನು ಒಪ್ಪಿಕೊಳ್ಳಬಾರದೆಂದು ಸ್ವತಂತ್ರ ಪಕ್ಷದ ಪ್ರೊ| ರಂಗರು ವಾದಿಸಿ ತಿದ್ದುಪಡಿಯನ್ನು ತಂದರೂ ಅದು ತಿರಸ್ಕೃತವಾಯಿತು. ಮೊದಲಿನೆರಡು ಯೋಜನೆಯ ಅವಧಿಯಲ್ಲಿ ಹೆಚ್ಚಿದ ಆದಾಯವು ಎಲ್ಲಿದೆಯೆಂಬುದನ್ನು ಪರಿಶೀಲಿಸಿ ಅದನ್ನು ಗೊತ್ತುಹಚ್ಚುವುದಕ್ಕಾಗಿ ತಜ್ಞರ ಸಮಿತಿಯೊಂದನ್ನು ರಚಿಸಿ ಈ ಅವಧಿಯಲ್ಲಿ ಜನತೆಯ ಜೀವನ ಪರಿಸ್ಥಿತಿಯಲ್ಲಾದ ಪರಿವರ್ತನೆಗಳು ಹಾಗೂ ಸಂಪತ್ತಿನ ಹಂಚಿಕೆ ಯಾವ ರೀತಿಯಾಗಿದ್ದುವು ಎಂಬುದನ್ನು ಕಂಡುಹಿಡಿಯಲಾಗುವುದೆಂದು ಯೋಜನಾ ಮಂತ್ರಿ ನಂದಾ ಅವರು ತಿಳಿಸಿದರು. ಬೆಲೆಯ ಏರಿಕೆಯನ್ನು ತಡೆಗಟ್ಟಲು ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸಭೆ ಸೇರಿ ಸೂಕ್ತ ವಿಧಾನ ಕೈಗೊಳ್ಳುವುದೆಂದು ಅವರು ಭರವಸೆಯಿತ್ತರು.

ಇದೀಗ ರಾಜ್ಯದ ದೌರ್ಭಾಗ್ಯ

ಮೈಸೂರು ಮಂತ್ರಿಮಂಡಳಿಯ ಮೇಲೆ ಹೊರಿಸಲಾಗಿದ್ದ ವಿವಿಧ ಆರೋಪಗಳನ್ನು ಉತ್ತರಿಸಿದರೂ ವಿಧಾನ ಸಭೆಗಳ

ಕಾಂಗ್ರೆಸ್ ಸದಸ್ಯರಲ್ಲಿ ಭಿನ್ನಮತೀಯರಿಗೆ ಅಸಮಾಧಾನ ದೂರವಾಗಲಿಲ್ಲ. ಅವರು ಡಿಲ್ಲಿಯತನಕ ಹೋಗಿ ಈ ಸಂಗತಿಯನ್ನು ವರಿಷ್ಠರಿಗೆ ಮನವರಿಕೆ ಮಾಡಿಕೊಟ್ಟರು. ಸಪ್ತಂಬರ ೧೬ನೆ ದಿನಾಂಕದಂದು ವಿಧಾನಸಭಾ ಕಾಂಗ್ರೆಸ್ ಸದಸ್ಯರನ್ನು ಉದ್ದೇಶಿಸಿ ಪ್ರಧಾನಿ ನೆಹರು ಮಾತಾಡಲಿರುವರೆಂದು ಗೊತ್ತಾಗಿದೆ. ಅವರು ಮಂತ್ರಿಮಂಡಳಿಯನ್ನು ಬದಲಾಯಿಸುವುದು ಸರಿಯಲ್ಲವೆಂಬ ಅಭಿಪ್ರಾಯವನ್ನು ಮುಂದಿಡಲೂ ಬಹುದು. ಆದರೆ, ಭಿನ್ನಮತೀಯರು ಪೆಟ್ಟೊಂದು ತುಂಡೆರಡು ಎಂಬ ನೀತಿಗೆ ಮರೆಹೊಕ್ಕಿರುವಂತೆ ಭಾಸವಾಗುತ್ತಿದೆ. ಇದರ ಪರಿಣಾಮವು ಏನಾಗಬಹುದೆಂದು ಊಹಿಸುವುದೂ ಅಸಾಧ್ಯವೆಂಬಂತಾಗಿದೆ. ಬೆಕ್ಕಿನ ತಲೆಯಮೇಲಿನ ದೀಪದಂತೆ ಮೈಸೂರಿನ ರಾಜಕೀಯ ಅನಿಶ್ಚಿತ ವಾತಾವರಣದಲ್ಲಿಯೇ ಕುಂಟುತ್ತ ಮುಂದುವರಿಯುತ್ತಿರುವುದು ರಾಜ್ಯದ ದೌರ್ಭಾಗ್ಯ.

ಒರಿಸ್ಸದಲ್ಲಿ ಮಹಾಪೂರ

ಒರಿಸ್ಸ ರಾಜ್ಯದಾದ್ಯಂತ ನದಿಗಳಲ್ಲಿ ಮಹಾಪೂರವೆದ್ದುದರಿಂದ ಅನೇಕ ಪ್ರಾಣಹಾನಿಗಳು ನಡೆದುವಲ್ಲದೇ ಬೆಳೆಗಳು ನಷ್ಟವಾಗಿವೆ. ರಾಜ್ಯಸರಕಾರವು ಮಹಾಪೂರ ಸಂತ್ರಸ್ತರಿಗೆ ಉಚಿತ ಸೌಲಭ್ಯವನ್ನು ನೀಡುವ ಕಾರ್ಯಾರಂಭಿಸಿದೆ. ಪ್ರಧಾನಿ ನೆಹರೂರವರು ಸಂತ್ರಸ್ತ ಪ್ರದೇಶವನ್ನು ಭೆಟ್ಟಿ ಮಾಡುವ ಕಾರ್ಯಕ್ರಮ ವಿರಿಸಿಕೊಂಡಿದ್ದಾರೆ.

ಕ್ರಾಂತಿಕಾರಿ ಕಾರ್ಯಕ್ರಮ

ಗ್ರಾಮಾಧಿಕಾರಿಗಳ ಅನುವಂಶಿಕ ಅಧಿಕಾರವನ್ನು ಕಿತ್ತುಹಾಕುವ ಬಗ್ಗೆ ವಿಧೇಯಕವೊಂದನ್ನು ಮೈಸೂರು ರಾಜ್ಯದ ವಿಧಾನಸಭೆಯಲ್ಲಿ ಕಂದಾಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರು ಮಂಡಿಸಿದರು. ಹಲವಾರು ತಲೆಮಾರುಗಳಿಂದ ನಡೆದು ಬಂದ ಈ ಪದ್ಧತಿಯನ್ನು ರದ್ದುಗೊಳಿಸುವುದು ಕ್ರಾಂತಿಕಾರಿ ಹೆಜ್ಜೆಯೆಂದೂ ಇದರಿಂದ ಸಂಪೂರ್ಣ ಸ್ವತಂತ್ರ ಪ್ರಜಾಸತ್ತೆಯ ಸ್ಥಾಪನೆ ಸಾಧ್ಯವಾಗುವುದೆಂದೂ ಅವರು ವಿವರಿಸಿದರು. ರಾಜ್ಯದ ಬೇರೆಬೇರೆ ವಿಭಾಗಗಳಲ್ಲಿರುವ ಗ್ರಾಮಾಧಿಕಾರಿ ಪದ್ಧತಿಯನ್ನವರು ತಿಳಿಸುತ್ತ ಇದನ್ನು ಹೋಗಲಾಡಿಸುವುದರ ಅವಶ್ಯಕತೆಯನ್ನು ಪ್ರತಿಬಿಂಬಿಸಿದರು. ಕಾಂಗ್ರೆಸ್, ಪ್ರ. ಸ. ಪಾ. ಮತ್ತು ಕಮ್ಯುನಿಸ್ಟ್ ಪಕ್ಷಗಳ ಸದಸ್ಯರು ಈ ವಿಧೇಯಕವನ್ನು ಬೆಂಬಲಿಸಿ,೧೯೬೨ರ ಒಳಗೆ ಇದನ್ನು ಕಾರ್ಯಗತಗೊಳಿಸಬೇಕೆಂದು ಅಭಿಪ್ರಾಯಪಟ್ಟರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 62/1958

R. E. P. 35/1960.

ಜಲಜಾಕ್ಷಿ ಅಮ್ಮ ಕೂಡಾ- ಅರ್ಜಿದಾರರು.

ಮತ್ತು

ವೆಂಕಪ್ಪ ಶೆಟ್ಟಿ ಕೂಡಾ — ಎದ್ರಿರು.

ಇವರೊಳಗೆ

2ನೇ ಎದ್ರಿ:-ಸಂತೋಷ ಕುಮಾರ-ಸೀತಮ್ಮ ಶೆಡ್ತಿರ ಮಗ-ಉಡ್ಪಿ ತಾಲ್ಲೂಕು ಶಿವಳ್ಳಿಗ್ರಾಮ

-ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಮೇಲ್ಕಂಡ ಅಮಲ್ದಾರಿಯಲ್ಲಿ ದಾಖಲಾದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವರೆ ತಾರೀಖು 6-9-1960ಕ್ಕೆ ಯಿಟ್ಟಿರುತ್ತದೆ. ಆ ಕುರಿತು ಆಕ್ಷೇಪಣೆ ಯೇನಾದರೂ ಯಿದ್ದರೆ ಸದ್ರಿ ದಿವಸ ಪೂರ್ವಾಹ್ನ 10ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳಬಹುದು.

K. Ramakrishna Rao.

Vakil for Petitioners.

Udipi Dated 30—8—1960.

ಅಲ್ಲಲ್ಲಿಯ ಸುದ್ದಿ ಸಾರ

ಹೊಸ ಹಿಂದೀ ವರ್ಗಗಳು—ಉಡುಪಿಯ ಹಿಂದೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ತಾ. 1-9-1960ರಿಂದ ಹೊಸ ಪ್ರಾಥಮಿಕ, ಮಧ್ಯಮಾ, ರಾಷ್ಟ್ರಭಾಷಾ, ಪ್ರವೇಶಿಕಾ ಹಾಗೂ ವಿಶಾರದ ಪ್ರಥಮ ಖಂಡ (ಪೂರ್ವಾರ್ಧ) ಮತ್ತು ದ್ವಿತೀಯ ಖಂಡ (ಉತ್ತರಾರ್ಧ) ವರ್ಗಗಳು ಪ್ರಾರಂಭವಾಗಿವೆ. ವರ್ಗಗಳಿಗೆ ಸೇರಲಿಚ್ಛಿಸುವವರು ಸಮಿತಿಯ ಆಫೀಸಿನಲ್ಲಿ ವಿಶೇಷ ಮಾಹಿತಿಯನ್ನು ಪಡೆಯಬಹುದು.

ಕಾರ್ಯಕಾರಿಮಂಡಲದ ಸಭೆ—ದ. ಕ. ಜಿಲ್ಲಾ ಮೂಲ್ಯರ ಯಾನೆ ಕುಲಾಲರ ಶ್ರೀರಾಮ ಸೇವಾ ಜಾತ್ಯಭ್ಯುದಯ ಸಂಘದ ಕಾರ್ಯಕಾರಿ ಮಂಡಲದ ಸಭೆಯು ಮಂಗಳೂರ ಲ್ಲಿ ಶ್ರೀಮಾನ್ ಪಿ. ನಾರ್ಣಪ್ಪನವರ ಅಧ್ಯಕ್ಷತೆಯಲ್ಲಿ ತಾ. 21-8-1960ರಲ್ಲು ಜರಗಿ, ಕುಲಾಲ ವಿದ್ಯಾರ್ಥಿಗಳಿಂದ ಬಂದಿದ್ದ ವಿದ್ಯಾವೇತನ ಅರ್ಜಿಗಳನ್ನು ಪರಿಶೀಲಿಸಿದ ನಂತರ ಆ ಬಗ್ಗೆ ಬೇಕಾದ ಹಣವನ್ನು ಸೇಂಕ್ಷನ್ ಮಾಡಲಾಯಿತು.

ದಿ| ಎ. ಬಿ. ಶೆಟ್ಟಿ ಸ್ಮಾರಕ ನಿಧಿಗೆ ಸಹಾಯ ಮಾಡಬೇಕೆಂದಿರುವ ಮಹನೀಯರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ: ಮಳೆಗಾಲದ ಸಮಯದಲ್ಲಿ ಧನಸಂಗ್ರಹದ ಕೆಲಸಕ್ಕೆ ಅಷ್ಟೊಂದು ಪ್ರೋತ್ಸಾಹ ದೊರೆಯಲಿಕ್ಕಿಲ್ಲವೆಂದು ಕೆಲವು ಮಹನೀಯರು ಅಭಿಪ್ರಾಯಪಟ್ಟದ್ದರಿಂದ ಕೆಲಸವನ್ನು ಸ್ವಲ್ಪ ಸಮಯಕ್ಕೆ ಮುಂದರಿಸಲಾಗಿಯದೆ; ತನ್ಮಧ್ಯೆ ಕೆಲವು ಮಹನೀಯರು ಸ್ಮಾರಕ ಫಂಡಿನ ಮನವಿಗೆ ಗಮನಕೊಟ್ಟು ತಮ್ಮ ಸಹಾಯ ಧನವನ್ನು ಕೊಟ್ಟಿರುತ್ತಾರೆ. ಹೀಗೆ ಲಭಿಸಿದ ಸಹಾಯದಿಂದ ಶ್ರೀ ಎ. ಬಿ. ಸೆಟ್ರ ತೈಲಚಿತ್ರವನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಅನಾವರಣ ಮಾಡಿರುತ್ತದೆ ಮತ್ತು ಶಿಲಾಪ್ರತಿಮೆಯನ್ನು ಬೊಂಬಾಯಿಯಲ್ಲಿ ಮಾಡಲಿಕ್ಕೆ ಕೊಟ್ಟಿರುತ್ತದೆ. ಸ್ಮಾರಕ ನಿಧಿಯ ಜಮೆಯು ಹೆಚ್ಚಿದಂತೆಯೆ ಬೇರೆ ಕೆಲಸಗಳ ಆಲೋಚನೆ ಮಾಡಲಾಗುವದು. ಈ ಫಂಡಿಗೆ ಸಹಾಯಮಾಡಲಿಚ್ಛಿಸುವವರು ತಮ್ಮ ಸಹಾಯ ಧನವನ್ನು ಫಂಡಿನ ಕೋಶಾಧಿಕಾರಿ ಶ್ರೀ ಪಿ. ಯಮ್. ಹೆಗ್ಗಡೆಯವರಿಗೆ ಕೊಟ್ಟು ರಶೀದಿ ಪಡಕೊಳ್ಳಬೇಕಾಗಿ ಸ್ಮಾರಕ ಸಮಿತಿಯ ಅಧ್ಯಕ್ಷ ಶ್ರೀ ಕೆ. ಟಿ. ಆಳ್ವರು ವಿನಂತಿಸುತ್ತಾರೆ.

ಡಾ| ಶೆಟ್ಟರು ಅಮೆರಿಕೆಗೆ

ಮೈಸೂರಿನ ಎನಿಮಲ್ ಹಸ್‌ಬೆಂಡ್ರಿ ಸರ್ವಿಸಸ್‌ನ ಡೈರೆಕ್ಟರಾದ ಡಾ| ಕೆ. ಎಸ್. ಶೆಟ್ಟಿ, ಜಿ. ಎಂ. ವಿ. ಸಿ., ಪಿ. ಎಚ್‌ಡಿ. ಇವರು ಸಪ್ಟಂಬರ ೪ರಂದು ಅಮೆರಿಕೆಗೆ ತೆರಳಲಿರುವರು. ಇವರು ಅಲ್ಲಿ ಮೂರು ತಿಂಗಳುಗಳ ಕಾಲವಿದ್ದು, ಪಶುವೈದ್ಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಅಧ್ಯಯನ ನಡೆಸುವರು.

ಹಿಂದಿನ ಹೈದರಬಾದ ಸರಕಾರದಲ್ಲಿ, ೧೩ ವರ್ಷ ಸೇವೆಸಲ್ಲಿಸಿದ ಶ್ರೀ ಶೆಟ್ಟರು ೧೯೪೫ರಲ್ಲಿ ಯುರೋಪಿನ ಹಲವಾರು ದೇಶಗಳಲ್ಲಿ ಸಂಚರಿಸಿ, ಪಶುವೈದ್ಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ತಿಳಿದುಕೊಂಡರು. ೧೯೪೮ರಲ್ಲಿ ಎಡಿನ್‌ಬರ್ಗ ವಿಶ್ವವಿದ್ಯಾಲಯವು ಇವರಿಗೆ ಡಾಕ್ಟರೇಟ್ ಪದವಿಯನ್ನಿತ್ತಿತು. ವಿದೇಶದಿಂದ ಮರಳಿ ಪುನಃ ಹೈದರಬಾದದಲ್ಲಿಯೇ ಉನ್ನತ ಪದವಿಯಲ್ಲಿ ನಿಯುಕ್ತರಾದ ಇವರು ೧೯೫೬ರಲ್ಲಿ ರಾಜ್ಯಪುನರ್ಘಟನಾನಂತರ ಮೈಸೂರು ಸರಕಾರದಡಿಯಲ್ಲಿ ಪಶುವೈದ್ಯ ಶಾಖೆಯ ಡೈರೆಕ್ಟರರಾಗಿ ದುಡಿಯುತಿದ್ದಾರೆ. ಮೈಸೂರು ರಾಜ್ಯದಲ್ಲಿ ವೆಟರ್ನರಿ ಕಾಲೇಜೊಂದು ೧೯೫೮ರಲ್ಲಿ ಸ್ಥಾಪನೆಯಾಗಿದ್ದು ಇದರ ಬಗ್ಗೆಯೂ ಡಾ| ಶೆಟ್ಟರು ತುಂಬ ಪರಿಶ್ರಮ ಪಟ್ಟಿದ್ದಾರೆ.

ಡಾ| ಕೆ. ಎಸ್. ಶೆಟ್ಟರ ಪ್ರಕೃತದ ಅಮೆರಿಕೆಯ ಸಂಚಾರದಿಂದ ಮತ್ತವರು ಅಲ್ಲಿ ನಡೆಸುವ ಪಶುವೈದ್ಯಕ ಅಧ್ಯಯನದಿಂದ ನಮ್ಮ ರಾಜ್ಯಕ್ಕೂ ದೇಶಕ್ಕೂ ಪ್ರಯೋಜನ ದೊರೆಯುವುದೆಂಬ ಹಾರೈಕೆಯೊಡನೆ ಅವರ ಯಾತ್ರೆಗೆ ಶುಭ ಕೋರುತ್ತೇವೆ.

ಪಾರ್ತಿಸುಬ್ಬ ಸ್ಮಾರಕೋತ್ಸವ—ಕನ್ನಡನಾಡಿನ ಸುಪ್ರಸಿದ್ಧ ಯಕ್ಷಗಾನಕವಿ-ಪಾರ್ತಿಸುಬ್ಬನ ಸ್ಮಾರಕೋತ್ಸವವೊಂದು ಆಗ-16ರಂದು ಕುಂಬಳೆಯ ಕಣಿಪುರ ಗೋಪಾಲಕೃಷ್ಣ ದೇವಾಲಯದ ವಠಾರದಲ್ಲಿ ಜರಗಿತು. "ಪಾರ್ತಿಸುಬ್ಬ ಮೆಮೋರಿಯಲ್ ಯಕ್ಷಗಾನ ಮಂಡಳಿ"ಯವರು "ವಿಶ್ವಾಮಿತ್ರ ಯಾಗರಕ್ಷೆ" (ಪುತ್ರಕಾಮೇಷ್ಟಿ) ಎಂಬ ಕಥಾಭಾಗವನ್ನು ಚಿತ್ರಿಸಿದರು. ಕುಮಾರಿ ನರ್ಮದಾ, ಮಂಡೂರು-ಅವರು ಹಾಡುಗಾರಿಕೆಯನ್ನು ನೆರವೇರಿಸಿದರು. ಬಳಿಕ ಉತ್ಸವ ಸಂಬಂಧವಾದ ಸಂದೇಶ—ಭಾಷಣಗಳು ಜರಗಿದುವು. ಶ್ರೀ ವಿದ್ವಾನ್ ವೆಂಕಟರಾಜ ಪುಣಿಂಚಿತ್ತಾಯರು—"ಪಾರ್ತಿಸುಬ್ಬ ಮತ್ತು ಅವನ ಕೃತಿಗಳು" ಎಂಬ ವಿಷಯದಲ್ಲಿ ಭಾಷಣಮಾಡಿದರು. ನಂತರ—ಶ್ರೀ ಶೇಣಿ ಗೋಪಾಲಕೃಷ್ಣ ಭಟ್; ಎಸ್. ಕೃಷ್ಣ ಭಟ್; ಪಿ. ಗೋಪಾಲಕೃಷ್ಣ ಪುಣಿಂಚಿತ್ತಾಯರು; ನಾರಾಯಣ ಅಡಿಗ; ದಾಮೋದರ ಅಗ್ಗಿತ್ತಾಯರು; ಸುಂದರ ಮುಂತಾದವರ ಕೂಡುವಿಕೆಯಿಂದ "ಪಟ್ಟಾಭಿಷೇಕ—ಪಂಚವಟಿ" ಪ್ರಸಂಗಗಳು ಚಿತ್ರಿಸಲ್ಪಟ್ಟುವು. ಶ್ರೀ ಎ. ಕೆ. ಮುಂಚಿತ್ತಾಯರು ಹಾಡಿದ್ದರು. ಶ್ರೀ ಬಾಬು ರೈಗಳು ಧನ್ಯವಾದವಿತ್ತರು.

ವಿದ್ಯುದ್ದೀಪ ಉದ್ಘಾಟನೆ. ಪರ್ಕಳ ಶ್ರೀ ಮಹಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ಯಚ್. ರಘುನಾಥ ಪೈ ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ತಾ22-8-60ರಲ್ಲಿ ಶ್ರೀ ಬೇಳಂಜೆ ವಿಠಲ ಹೆಗ್ಡೆಯವರು ವಿದ್ಯುದ್ದೀಪವನ್ನು ಉದ್ಘಾಟಿಸಿದರು. ಪ್ರಾರಂಭದಲ್ಲಿ ಪಂಚಾಯತು ಚೆಯರ್‌ಮೇನ್ ಶ್ರೀ ಮಂಜುನಾಥ ಶೆಣೈಯವರು ಮುಖ್ಯ ಅತಿಥಿಗಳನ್ನೂ ಎಲೆಕ್ಟ್ರಿಕ್ ಕಮಿಟಿ ಅಧ್ಯಕ್ಷ ಶ್ರೀ ಬಿ. ಭುಜಂಗ ಹೆಗ್ಡೆಯವರನ್ನೂ ಸ್ವಾಗತಿಸಿ, ವಿದ್ಯುದ್ದೀಪವನ್ನು ದಾನವಾಗಿತ್ತ ಮಹನೀಯರ ಹೆಸರುಗಳನ್ನು ಜಾಹೀರು ಪಡಿಸಿದರು. ಸಭಿಕರ ಪರವಾಗಿ ಪರ್ಕಳ ಶ್ರೀ ಗುರುರಾಜ ಜೋಯಿಸರು ಶ್ರೀ ಕೆ. ಆನಂದ ಶೆಟ್ಟರು ಕೆಲವು ಸೂಚನೆಗಳನ್ನು ತಿಳಿಸಿದ ತರುವಾಯ ದಾನಿಗಳಿಗೂ, ಸಹಕಾರವಿತ್ತ ಇಲೆಕ್ಟ್ರಿಕ್ ಅಸಿಸ್ಟಂಟ್ ಇಂಜನಿಯರ್ ಶ್ರೀ ಕೃಷ್ಣ ಸೆಟ್ಟರಿಗೂ ಮತ್ತು ಡಿಪಾರ್ಟ್‌ಮೆಂಟಿಗೂ ಕೃತಜ್ಞತೆಯನ್ನರ್ಪಿಸಿದರು.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ಪ್ರಾರಂಭೋತ್ಸವ—ಮೈಸೂರಿನ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ಪ್ರಾರಂಭೋತ್ಸವ ಸಮಾರಂಭವು 21—8—60ರಂದು ಯಾದವಗಿರಿ ಬಡಾವಣೆಯಲ್ಲಿರುವ ನಿಲಯದ ಆವರಣದಲ್ಲಿ ನಡೆಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥಾನದ ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ವಹಿಸಿದ್ದರು.

ನಿಲಯದ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಸ್ವಾಗತ ಭಾಷಣಮಾಡುತ್ತ ನಿಲಯಕ್ಕೆ ತನ್ನದೇ ಆದ ಸ್ವಂತ ಕಟ್ಟಡವೊಂದನ್ನು ಕಟ್ಟಲು ಐದು ಎಕ್ರೆ ಜಮೀನನ್ನು ದಾನವಾಗಿ ಕೊಡಿಸಿಕೊಡಬೇಕೆಂದರು.

ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ವೈ. ಸಂಜೀವ ರೈಯವರು ಶುಭ ಸಂದೇಶಗಳನ್ನು ಓದಿದರು.

ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಬಂದಿದ್ದ ಆರೋಗ್ಯ ಸಚಿವರಾದ ಡಾ. ಕೆ. ಕೆ. ಹೆಗ್ಡೆಯವರು ವಿದ್ಯಾರ್ಥಿನಿಲಯದ ಆರಂಭೋತ್ಸವ ಮತ್ತು ವಿದ್ಯಾರ್ಥಿ ಸಂಘದ ಆರಂಭ ಭಾಷಣಮಾಡುತ್ತಾ ದಿವಂಗತ ಎ. ಬಿ. ಶೆಟ್ಟರು ಅರ್ಧ ಶತಮಾನ ಕಾಲದಲ್ಲಿ ಮಾಡಿದ ಸಮಾಜ ಸೇವಾ ಕಾರ್ಯಗಳನ್ನು ವಿವರಿಸಿದರು.

ಅಧ್ಯಕ್ಷತೆವಹಿಸಿದ್ದ ಶ್ರೀ ಕಡಿದಾಳ್ ಮಂಜಪ್ಪನವರು ಭಾಷಣಮಾಡುತ್ತಾ ದೇಶದಲ್ಲಿ ನೀತಿಯ ಅಭಾವ ಹೆಚ್ಚಿರುವ ಈ ಕಾಲದಲ್ಲಿ ದಿವಂಗತ ಎ. ಬಿ. ಶೆಟ್ಟರಂತಹ ಮಹಾವ್ಯಕ್ತಿಗಳು ಅಗತ್ಯವೆಂದೂ ಶ್ರೀ ಶೆಟ್ಟರು ಹಿರಿಯ ಆದರ್ಶದಾರರಾಗಿದ್ದು ದೇಶಕ್ಕೆ ಸ್ಫೂರ್ತಿದಾಯಕವಾಗುವಂತಹ ರೀತಿಯಲ್ಲಿ ನಡೆದುಕೊಂಡಿದ್ದರೆಂದೂ ಅಂತವರ ಹೆಸರಿನಲ್ಲಿ ವಿದ್ಯಾರ್ಥಿ ನಿಲಯ ಸ್ಥಾಪನೆಯಾಗುತ್ತಿರುವ ಬಗ್ಗೆ ಸಂತೋಷ ವ್ಯಕ್ತಪಡಿಸಿ ವಿದ್ಯಾರ್ಥಿಗಳು ಅವರ ಆದರ್ಶವನ್ನು ಸದಾ ಗಮನದಲ್ಲಿಡಬೇಕೆಂದರು. ಶ್ರೀ ಶೆಟ್ಟರ ಹೆಸರಿನಲ್ಲಿ ಸ್ಥಾಪನೆಯಾಗುವ ವಿದ್ಯಾರ್ಥಿ ನಿಲಯಕ್ಕೆ ಜಾಗಕೊಡುವುದು ಸರಕಾರದ ಮುಖ್ಯ ಕರ್ತವ್ಯವೆಂದು ತಾನು ಹೇಳುವುದಾಗಿಯೂ ನುಡಿದರು. ನಿಲಯದ ವಾರ್ಡನ್ ಶ್ರೀ ಎಂ. ಎಸ್. ಶ್ರೀಕಂಠಯ್ಯನವರು ವಂದಿಸಿದರು.

ತಾಲೂಕು ಬೋರ್ಡ್ ಚುನಾವಣೆ—ದ. ಕ ಜಿಲ್ಲಾ ತಾಲೂಕು ಬೋರ್ಡ್ ಚುನಾವಣೆಗಳು ಒಕ್ಟೋಬರ ತಿಂಗಳಲ್ಲಿ ಜರಗಲಿದ್ದು, ಮೂರು ವಿಭಾಗಗಳನ್ನಾಗಿ ವಿಂಗಡಿಸಿ ಚುನಾವಣೆಯ ದಿನಗಳನ್ನು ನಿರ್ಧರಿಸಲಾಗಿದೆ.

ಬಂಟ್ವಾಳ ಮತ್ತು ಕುಂದಾಪುರ ತಾಲೂಕುಗಳಲ್ಲಿ 6-10-60ರಂದು ಉಡುಪಿ ಮತ್ತು ಪುತ್ತೂರು ತಾಲೂಕುಗಳಲ್ಲಿ 8-10-60 ರಂದೂ, ಕಾರ್ಕಳ, ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ 11-10-60 ರಂದು ಚುನಾವಣೆಗಳು ಜರಗುವವು.

ಉಮೇದ್ವಾರರು ತಾ. 29-8 60ರಿಂದ 3—9—60ರ ವರೆಗೆ ಚುನಾವಣಾಧಿಕಾರಿಗಳ ಎದುರು ತಮ್ಮ ನಾಮಪತ್ರಗಳನ್ನು ದಾಖಲು ಮಾಡಬೇಕು. ಈ ನಾಮಪತ್ರಗಳ ಪರಿಶೀಲನೆಯು ತಾ. 6—9—60ರಂದು ನಡೆಯುವುದು. ತಾ. 9—9—60ರ ಒಳಗೆ ಉಮೇದ್ವಾರರು ಇಚ್ಛಿಸಿದಲ್ಲಿ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಬಹುದು.

ಹೆಚ್ಚಿನ ವಿವರಗಳು ಬೇಕಾದಲ್ಲಿ ಸಂಬಂಧಪಟ್ಟ ತಹಶಿಲ್ದಾರರವರಿಂದ ತಿಳಿಯಬಹುದು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. S. No. 355/60

ತಿಂಮಪ್ಪ ಸೆಟ್ಟಿ —ಅರ್ಜಿದಾರ.

ಮತ್ತು

ಅಣ್ಣಯ್ಯ ನ್ಯಾಕ —ಯೆದ್ರಿ.

ಇವರೊಳಗೆ—

ಅಣ್ಣಯ್ಯ ನ್ಯಾಕ್—ಕೊಳಂಬೆ ದೇವಪ್ಪ ನ್ಯಾಕನ ಮಗ—ಕಾರ್ಕಳ ತಾಲ್ಲೂಕು ಬೇಳಂಜೆ ಗ್ರಾಮದಲ್ಲಿರುವುದು—

ವಾದಿರಿಗೆ ನೀವು ಬರಕೊಟ್ಟ ದಾವಾ ಡಿಮಾಂಡ್ ನೋಟು ಮೇರೆಗೆ ಬರತಕ್ಕ ಋವೇಜು ವಸೂಲು ಬಗ್ಗೆ ನಿಮ್ಮ ಮೇಲೆ ಅವರು ದಾವಾ ದಾಖ್ಲು ಮಾಡಿದ ಮೇಲ್ಕಂಡ ದಾವೆಯು ತಾ. 9—9—60ಕ್ಕೆ ತನ್ಖೆಗೆ ಇಟ್ಟಿದೆ. ಆ ದಿವಸ ಬೆಳಿಗ್ಗೆ 10 ಗಂಟೆಗೆ ನೀವು ಈ ಕೋರ್ಟುಮುಂದೆ ಹಾಜರು ಆಗಿ ವ್ಯವಹರಿಸುವರೆ ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು.

(By order of Court)

Perody Vittal Shetty,

B. A., LL. B.

Advocate for Plaintiff.

ಉಡ್ಪಿ ತಾ. 29—8—60

ಕರ್ತವ್ಯಜ್ಞಾನ

ರಾಷ್ಟ್ರೀಯ ಐಕ್ಯ ನಮ್ಮ ಪರಮ ಲಕ್ಷ್ಯ

ಗಳಿಸಿದ ರಾಜಕೀಯ ಸ್ವಾತಂತ್ರ್ಯದೊಡನೆ ಆರ್ಥಿಕ ಸ್ವಾತಂತ್ರ್ಯವನ್ನೂ ಪಡೆಯಲು ಪ್ರಯತ್ನಿಸುವ ನಾವು ರಾಷ್ಟ್ರೀಯ ಐಕ್ಯವನ್ನು ಉಳಿಸಿಕೊಂಡು ಏಕತೆಯ ಭಾವದಿಂದ ನಡೆದುಕೊಳ್ಳಬೇಕಾದುದು ಅವಶ್ಯವೆನ್ನುತ್ತಾರೆ, ಗೃಹ ಮಂತ್ರಿ ಪಂತ್.

ಭಾರತವು ವಿಷಮ ಪರಿಸ್ಥಿತಿಯಲ್ಲಿರುವ ಈ ಗಳಿಗೆಯಲ್ಲಿಯೂ ಭಾಷಾ ಸಂಬಂಧದ ಉನ್ಮಾದ, ಪ್ರಾಂತೀಯತೆ ಮತ್ತು ಸಾಂಪ್ರದಾಯಿಕತೆಗಳನ್ನು ಬೆಳೆಸುತ್ತ ಬರುತ್ತಿರುವುದು ನಮ್ಮ ದೌರ್ಭಾಗ್ಯವೆನ್ನಬೇಕು. ಇವುಗಳು ನಮ್ಮ ಶಕ್ತಿಯನ್ನು ಕುಂಠಿತಗೊಳಿಸುವುವು ಮಾತ್ರವಲ್ಲ, ವಿಶಾಲ ಭಾರತ ಭೂಮಿಯಲ್ಲಿ ನೆಲಸುತ್ತಿರುವ ಕೋಟ್ಯಂತರ ಜನತೆಯನ್ನು ಭಾವನಾತ್ಮಕ ಏಕಸೂತ್ರದಲ್ಲಿ ಬಂಧಿಸುವ ಮಹಾ ಕಾರ್ಯಕ್ಕೆ ಬಾಧೆಯನ್ನು ತಂದೀಯುವುವು.

ಒಂದೆಡೆ ನಾವು ನಮ್ಮ ದೇಶದ ಆರ್ಥಿಕ ಪುನರ್ನಿರ್ಮಾಣ ಕಾರ್ಯದಲ್ಲಿ ಬಹು ಪ್ರಯಾಸದಿಂದ ಮುಂದುವರಿಯುತಿದ್ದೇವೆ. ಈ ಗುರಿಯ ಸಾಧನೆಗಾಗಿ ತತ್ಪರತೆಯಿಂದ ಕಾರ್ಯಪ್ರವೃತ್ತರಾಗಿದ್ದೇವೆ. ಇದೇ ಸಮಯದಲ್ಲಿ ನಮ್ಮ ದೇಶದ ಐಕ್ಯ ಮತ್ತು ಭಾರತೀಯರ ಸ್ವಾತಂತ್ರ್ಯಕ್ಕೆ ಆಹ್ವಾನವೀಯುವಂತಹ ಘಟನೆಯೂ ನಡೆದಿದೆ. ಈ ಆಹ್ವಾನವನ್ನು ನಾವು ಅವಶ್ಯ ಎದುರಿಸಲೇ ಬೇಕು. ರಾಷ್ಟ್ರೀಯ ಐಕ್ಯ ಸಾಧನೆಯನ್ನು ಉಳಿದೆಲ್ಲವುಗಳಿಗಿಂತ ಮೇಲಿನದೆಂಬ ಮನವರಿಕೆ ಮಾಡಿಕೊಳ್ಳುವ, ದೇಶವನ್ನು ಔದ್ಯೋಗಿಕ ಮತ್ತು ಆರ್ಥಿಕ ದೃಷ್ಟಿಯಿಂದ ಸಬಲಗೊಳಿಸುವ ಸಲುವಾಗಿ ನಮ್ಮ ಸಕಲ ಸಾಧನಗಳನ್ನೂ ಸಂಪೂರ್ಣವಾಗಿ ಕಾರ್ಯಗತಗೊಳಿಸುವುದು ಇಂದಿನ ಅತಿ ಆವಶ್ಯಕತೆಗಳಲ್ಲಿ ಅಗ್ರಗಣ್ಯವಾದುದು.

ವಿಶ್ವವು ಇಂದು ಮಾನವ ಸಮಾಜವು ಅತಿ ಅಪಾಯದ ಘಟ್ಟವನ್ನು ಮುಟ್ಟಿರುವ ಒಂದು ವಿಚಿತ್ರ ಯುಗ ಪದ್ಧತಿಯಲ್ಲಿ ಮುಂದುವರಿಯುತ್ತಿದೆ. ವ್ಯೋಮಮಂಡಲದ ಮೇಲೆ ವಿಜ್ಞಾನವುಗಳಿಸಿದ ಅಸಾಧಾರಣ ವಿಜಯವು ಭವಿಷ್ಯದಲ್ಲಿ ವಿಶ್ವವೊಂದೇ ಎಂಬ ಭಾವನೆಯನ್ನು ಉಂಟುಮಾಡಿದೆ. ಆದರೆ, ಅದರ ಹಿಂದೆಯೇ ಮಾನವನು ವ್ಯೋಮವಿಜಯಗಳಿಸಿದ ಮಹಾ ಸಾಧನಗಳಿಂದ ತನ್ನ ಅಸ್ತಿತ್ವವನ್ನೂ ನಷ್ಟಗೊಳಿಸುವ ಅಪಾಯದನಡುವೆ ಸಿಕ್ಕಿ ವಿಲಿವಿಲಿ ಒದ್ದಾಡುತಿದ್ದಾನೆ.

ಇಂತಹ ವಿಷಣ್ಣಾವಸ್ಥೆಗೀಡಾದ ತ್ರಸಿತ ಪ್ರಪಂಚದಲ್ಲಿ ನಾವು ಶಾಂತಿಸ್ಥಾಪನೆ ಮತ್ತು ಪಾರಸ್ಪರಿಕ ಪ್ರೇಮ ಅಂಕುರಿಸುವಂತೆ ಮಾಡುವ ಕಾರ್ಯಗಳಲ್ಲಿ ನಮ್ಮ ಸಹಾಯಹಸ್ತ ನೀಡಲು ಪ್ರಯತ್ನಿಸುತಿದ್ದೇವೆ. ಮತ್ತು ಇದೇ ಕಾರಣದಿಂದ ಇತರ ರಾಷ್ಟ್ರಗಳ ಮುಂದೆ ನಾವು ಸಮ್ಮಾನ ಪಡೆಯುವುದು ಸಾಧ್ಯವಾಯಿತು. ಇದೇ ಸ್ಥಾನಮಾನಗಳನ್ನು ನಾವು ಇನ್ನು ಮುಂದಕ್ಕೂ ಉಳಿಸಿಕೊಂಡು ಹೋಗಬೇಕಾಗಿದೆ.

ನಾವು ಬಹು ಪರಿಶೀಲನೆ ನಡೆಸಿ, ವಿಮರ್ಶಿಸಿ, ಮೂರನೆಯ ಯೋಜನೆಯ ಅಂತಿಮ ರೂಪವನ್ನು ನಿರ್ಧರಿಸಿದ್ದೇವೆ. ಎರಡನೆಯದನ್ನು ಕಾರ್ಯಗತಗೊಳಿಸಿದುದರಿಂದ, ಅಭಿವೃದ್ಧಿಯು ನಿಶ್ಚಿತ ರೂಪದಲ್ಲಿ ಮುಂದುವರಿಯುತ್ತಿದೆ; ಉತ್ಪಾದನೆಯ ಪ್ರಮಾಣ ಅದೆಷ್ಟೋ ಹೆಚ್ಚುತ್ತಿದೆ. ಉದ್ಯೋಗ, ನೀರಾವರಿ, ವಿದ್ಯುತ್, ಗಣಿ, ಆಯಾತ ನಿರ್ಯಾತ, ಸಮಾಜ ಸೇವೆಯೇ ಮೊದಲಾದ ಹಲವಾರು ಕ್ಷೇತ್ರಗಳು ಪಡೆದ ಸಾಫಲ್ಯವು ಅತಿ ಪ್ರಭಾವಶಾಲಿಯಾಗಿದೆ.

ಮೂರನೆಯ ಯೋಜನೆಯನ್ನು ಕಾರ್ಯಾನ್ವಿತಗೊಳಿಸುವಲ್ಲಿ ನಾವು ವಿದೇಶೀಯ ಸಹಾಯವನ್ನು ಅವಶ್ಯ ಪಡೆದುಕೊಳ್ಳಬೇಕಾಗುವುದು. ನಾವು ಈ ಸಂಬಂಧದಲ್ಲಿ ಸ್ವಾವಲಂಬಿಗಳಾಗಿರಲು ಪ್ರಯತ್ನಿಸಬೇಕಾಗಿದೆ. ಹೀಗಾಗಬೇಕಾದರೆ, ಎಲ್ಲ ವಸ್ತುಗಳೂ ನಮ್ಮಲ್ಲಿಯೇ ಉತ್ಪಾದಿಸಲ್ಪಡುವುದು ಅವಶ್ಯ. ಯಂತ್ರಗಳನ್ನು ತಯಾರಿಸುವ ಕಾರಖಾನೆಗಳನ್ನು ನಾವು ನಮ್ಮ ದೇಶದಲ್ಲಿ ತೆರೆಯಬೇಕಾಗುವುದು. ಆಹಾರ ಧಾನ್ಯಗಳ ಸಂಬಂಧದಲ್ಲಿಯೂ ನಾವು ಸ್ವಾವಲಂಬಿಗಳಾಗಬೇಕು. ಇಲ್ಲವಾದರೆ, ಆಹಾರದ ಬಗ್ಗೆ ನಾವು ಸದಾ ಪರಾಶ್ರಯಿಗಳಾಗಿದ್ದರೆ, ವಿದೇಶಗಳಿಗೆ ಅತ್ಯಧಿಕ ಪ್ರಮಾಣದಲ್ಲಿ ಹಣವನ್ನು ಸುರಿಯುತ್ತ ಬರಬೇಕಾಗುವುದು. ಇದರಿಂದ ನಮ್ಮ ಆರ್ಥಿಕ ಸ್ವಾತಂತ್ರ್ಯಗಳಿಸುವ ಗುರಿಯು ಜಲಮರೀಚಿಕೆಯಾಗುವುದು; ಆದುದರಿಂದ, ದೇಶದ ಉತ್ಥಾನಕ್ಕಾಗಿ ಹೋರಾಡುವ ದೃಢ ಸಂಕಲ್ಪದೊಡನೆ ನಮ್ಮ ಐಕ್ಯವನ್ನು ಉಳಿಸಿಕೊಳ್ಳುವ ದೃಢ ಪ್ರತಿಜ್ಞೆಯನ್ನೂ ನಾವು ಮಾಡಬೇಕಾಗಿದೆ.

— —



ಅತ್ಯುತ್ತಮ ಮಾದರಿಯ ವೇಗವಾಗಿ ಚಲಿಸಬಲ್ಲ ಸಾರಿಗೆಯ ವಿಮಾನ.

ಹುರಿಗಡಲೆಗಳು

ಕೇಂದ್ರ ಸರಕಾರದ ನೌಕರರ ಸಂಪಿನ ಬಗ್ಗೆ ಆಕಾಶವಾಣಿಯು ನಿಷ್ಪಕ್ಷಪಾತತನದಿಂದ ವಾರ್ತೆಯನ್ನು ಬಿತ್ತರಿಸಿದೆ.

—ಬಾನುಲಿ ಮಂತ್ರಿ ಕೇಸ್ಕರ್.

ಹೆತ್ತವರಿಗೆ ಹೆಗ್ಗಣವಾದರೂ ಮುದ್ದೇ ಅಲ್ಲವೆ?

○ ○

ಮುಖ್ಯಮಂತ್ರಿ ಜತ್ತಿಯವರಿತ್ತ ಉತ್ತರಗಳು ಭಿನ್ನಾಭಿಪ್ರಾಯದ ಗುಂಪಿನವರಿಗೆ ಸಮಾಧಾನ ತಂದೀಯಲಿಲ್ಲ. ಆದುದರಿಂದ ವಿಶಾಲ ತಳಹದಿಯ ಮಂತ್ರಿಮಂಡಳ ಬೇಡಿಕೆಯೊಡನೆ ಅವರು ದಿಲ್ಲಿ ಯಾತ್ರೆ ಕೈಗೊಳ್ಳುವರು.

—ವಾರ್ತೆ.

"ಮೂರ್ಖಸ್ಯ ನಾಸ್ತ್ಯೌಷಧಂ".

"ಮೂರ್ಖಂಗೆ ಬುದ್ಧಿಯನು ನೂರ್ಕಾಲ ಹೇಳಿದರೆ, ಗೋರ್ಕಲ್ಲ ಮೇಲೆ ಮಳೆಗರೆದಂತೆ"—

○ ○

ಪರರಿಗೆ ಕೇಡಾಗದಂತೆ ಹಾಸ್ಯದ ಉಪಯೋಗವಾಗಬೇಕು.

— ಹುಬ್ಬಳ್ಳಿಯ ಮೆಡಿಕಲ್ ಕಾಲೇಜಿನಲ್ಲಿ ಶ್ರೀ ಪಾಟೀಲ ಪುಟ್ಟಪ್ಪನವರಭಾಷಣ.

ಇದೊಂದೇ ನಮಗರಿಯದ ವಿದ್ಯೆ ತಾನೆ?

○ ○

"....ಮಂತ್ರಿಗಳ ಸಂಚಾರ ಕಾರ್ಯಕ್ರಮ"—ಸುದ್ದಿ.

"ಇದು ಬೇಡ; ಮಂತ್ರಿಗಳು ರಾಜಧಾನಿಯಲ್ಲಿ ಎಂದಿರುವರು ಎಂದು ಮೊದಲು ಹೇಳಿ" ಎಂದನಂತೆ ಒಬ್ಬ ನಾಗರಿಕ.

○ ○

ಬೆಳಗಾವಿಯಲ್ಲಿ ಒಂದು ಫ್ಲಾಯಿಂಗ್ ಸ್ಕೂಲು ಸ್ಥಾಪಿಸಬೇಕೆಂದು ರಾಜ್ಯ ಸರಕಾರವು ಕೇಂದ್ರಕ್ಕೆ ಬರೆದಿದೆ ವರ್ತಮಾನ.

ಈಗಿರುವುದೆಲ್ಲ ಸ್ಲೀಪಿಂಗ್ ಸ್ಕೂಲಾಗಿ ಬರಬಹುದೆ ?

○○ ○○

ಕೇಂದ್ರ ರಾಜ್ಯವೆಂಬ ಭೇದವಿಲ್ಲದೆ ಎಲ್ಲ ಸರಕಾರಿ ನೌಕರರ ವೇತನ ಪ್ರಮಾಣವನ್ನು ನಿರ್ಧರಿಸಲು ಅ. ಭಾ. ದೃಷ್ಟಿಕೋಣದಿಂದ ವಿಚಾರಿಸಬೇಕೆಂದು ಕೇಂದ್ರದ ಮನವೊಲಿಸುವ ಪ್ರಯತ್ನವನ್ನು ಮದ್ರಾಸವು ನಡೆಸುತ್ತಿದೆ.

— ಶ್ರೀ ಸಿ ಸುಬ್ರಹ್ಮಣ್ಯಂ

ಸಮಾಜವಾದ ಮಾದರಿಯ ಸ್ಥಾಪನೆಯಮೂಲವಿದು ಎಂದು ರಾಜ್ಯ ಸರಕಾರಿ ನೌಕರರು ಪ್ರಶಂಸಿಸಬೇಕು.

○ ○

ಕಳೆದ ನಾಲ್ಕು ತಿಂಗಳುಗಳಲ್ಲಿ ಭಾರತ-ಚೀನ ಗಡಿಯಲ್ಲಿ ಚೀನವು ೧೭ ಸಲ ಭಾರತದ ವಾಯು ಪ್ರದೇಶವನ್ನು ಉಲ್ಲಂಘಿಸಿದೆ.— ಸಂರಕ್ಷಣಾ ಮಂತ್ರಿ.

ಸದ್ಯ ಇಷ್ಟಾದರೂ ಲೆಕ್ಕಕ್ಕೆ ಸಿಕ್ಕಿತಲ್ಲಾ! ಇದೇ ಸಂತೋಷ.

○○ ○○

ದುರ್ಬಲ ಬೇಂಕುಗಳನ್ನು ಇತರ ಬೇಂಕುಗಳೊಡನೆ ವಿಲೀನಗೊಳಿಸುವ ಬಗ್ಗೆ ಕೇಂದ್ರ ಸರಕಾರವು ವಿಚಾರಿಸುತ್ತಿದೆ.

—ಮುರಾರ್ಜಿ ದೇಸಾಯಿ.

ತಿಮಿರಗಳು ತಿಮಿಂಗಿಲಗಳ ಹೊಟ್ಟೆ ಸೇರಬೇಕು—ಇದು ವಿಧಿನಿಯಮ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ದಿ. ಕಥೋಲಿಕ್ ಬೇಂಕ್ ಲಿಮಿಟೆಡ್, ಶಿರ್ವ.

The Catholic Bank Limited, Shirva.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು, ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ, ಪಡಕೊಂಡ ಸಾಲವನ್ನು, ಕ್ರಮಪ್ರಕಾರ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೂಡಾ ಮರುಪಾವತಿ ಮಾಡದಿರುವುದರಿಂದ ಸದ್ರಿಯವರಿಗೆ, ವ, ಸದ್ರಿಯವರು ಮೃತಪಟ್ಟಲ್ಲಿ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:— ಸದ್ರಿಯವರು ಈಡಿಟ್ಟ ನಗಗಳನ್ನು ತಾರೀಕು 15—9—60ರ ವಳಗೆ ಬಿಡಿಸದಿದ್ದಲ್ಲಿ 17-9-60ನೇ ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆ, ಯಾ, ನಮಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲದ ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
34/846 15-6-1958	ಕಾಡುವೆ ಪೂಜಾರಿ, S/o ಬೊಳ್ಳು ಪೂಜಾರಿ, ಕಲತೂರು, ಕೋಟೆ, ಪಾದೂರು P. O. (S. K)	20/-
34/1015 4-6-1958	ವಿಕ್ಟರ್ ಡಿ'ಸೋಜ, S/o ಮಸೆಲ್ ದಿ'ಸೋಜ, ಕಲತೂರು, ಪಾದೂರು P. O. (S. K.)	170/-
34/1605 20-8-1958	ಹೊನ್ನಯ್ಯ ಆಚಾರಿ, S/o ನಾರಾಯಣ ಆಚಾರಿ, ಬರಿಹಿತ್ಲು, ಕಲತೂರು ಗ್ರಾಮ, ಪಾದೂರು P. O. (S.K.)	25/-
34/2286 10-12-1958	ಲೀಯೊ ಡಿ'ಸೋಜ, S/o ಪಿಯೂದ್ ಡಿ'ಸೋಜ, ಬಡಗುಪಂಜಿಮಾರ್, ಶಿರ್ವ P. O. (S. K.)	25/-

The Catholic Bank Ltd.,
Shirva.
23—8—60.

(*Sd.*) M. Bhasker Shet,
Agent.

ಜನಮತ:

ನಾಗರಿಕರ ನ್ಯಾಯವಾದ ದೂರುಗಳನ್ನು ಈ ವಿಭಾಗದಲ್ಲಿ ಪ್ರಕಟಿಸಲಾಗುವುದು. ಸಾರ್ವಜನಿಕ ಹಿತದೃಷ್ಟಿಯಿಂದ ಈ ವಿಭಾಗದ ಸದುಪಯೋಗವನ್ನು ವಾಚಕರು ಮಾಡಿಕೊಳ್ಳಬಹುದು.

ಬಂಟ ಸಮಾಜದವರು ಎದ್ದೇಳಿ

"ಬಂಟ ಸಮಾಜದವರೂ ಹಿಂದುಳಿದವರೇ"—ಎಂಬ ಶಿರೋನಾಮೆಯಿಂದ ಮಂಗಳೂರಿನ 'ನವಭಾರತ'ದಲ್ಲಿ ಲೇಖನವೊಂದು ತಾ. 28-8-60ರಲ್ಲಿ ಪ್ರಕಟವಾದುದನ್ನು ಬಂಟ ಸಮಾಜದವರೆಲ್ಲರೂ ಓದಿರಬೇಕು, ಓದದಿದ್ದರೆ ಇನ್ನಾದರೂ ಓದಿರಿ.

ನಾವು ಹಿಂದುಳಿದವರಾಗಲಿ ಮುಂದುವರಿದವರಾಗಲಿ, ಆ ಪ್ರಶ್ನೆಯು ಪ್ರಸ್ತುತ ಮುಖ್ಯವಲ್ಲ. ನಮ್ಮ ಸಮಾಜದವರು ಈ ಲೇಖನವನ್ನು ಓದಿದ ಮೇಲಾದರೂ, ನಮ್ಮ ಜಿಲ್ಲೆಯ ಇತರ ಜಾತಿಯ ಬಂಧುಗಳು ನಮ್ಮನ್ನು ಯಾವ ದೃಷ್ಟಿಯಿಂದ ನೋಡುತ್ತಾರೆಂಬುದನ್ನು ನಾವು ತಿಳಿದುಕೊಳ್ಳುವುದು ಅತೀ ಪ್ರಾಮುಖ್ಯ ಪ್ರಶ್ನೆಯೆಂಬುದನ್ನು ನಾವು ತಿಳಿಯಬೇಕು. ಹಾಗೆ ತಿಳಿದು, ಜಿಲ್ಲೆಯ ರಾಜಕೀಯ ಸಾಮಾಜಿಕ, ಆರ್ಥಿಕ ಜೀವನದಲ್ಲಿ ನಮ್ಮ ಪಾತ್ರದ ನಿಲುವೆಯನ್ನೂ, ದೃಷ್ಟಿಕೋನವನ್ನೂ ತಿದ್ದುಪಡಿಮಾಡಿಕೊಳ್ಳುವುದು ಅತಿ ಅವಶ್ಯಕವಾಗಿ ಪರಿಣಮಿಸಿದೆ.

ಮೇಲಿನ ಶಿರೋನಾಮೆಯಿಂದ ಬರೆದವರು. ಪ್ರಾಯಶಃ ಬಿಲ್ಲವರು, ಮೊಗವೀರರು—ಈ ಸಮಾಜಕ್ಕೆ ಸೇರಿದವರಾಗಿರಬೇಕೆಂತ ಊಹಿಸಬಹುದು; ಅವರು ಬಂಟ ಸಮಾಜದ ಮೇಲೆ ನಿಂದಾತ್ಮಕವಾದ ಲೇಖನವನ್ನು ಬರೆಯುವಾಗ ಹೆಸರು ಕೊಡದೆಯಿದ್ದುದು ಅವರ ಹೇಡಿತನ. ಆದರೆ ಬಿಲ್ಲವ ಮೊಗವೀರ ಮುಂದಾಳುಗಳು ಇವರಲ್ಲವೆಂಬುದು ಖಚಿತ; ಈ ಲೇಖನವನ್ನು ಪ್ರಕಟಿಸಿದವರು ನಮ್ಮ ಜಿಲ್ಲೆಯ ಪ್ರಮುಖ ವ್ಯಕ್ತಿಗಳಾದ ಶ್ರೀ ವಿ. ಯಸ್. ಕುಡುವರು—ನವಭಾರತದ ಸಂಪಾದಕರು.

ಇಂತಹ ಲೇಖನವನ್ನು ಉದ್ದೇಶವಿಲ್ಲದೆ ಬರೆದುದಲ್ಲ. ಉದ್ದೇಶಪೂರ್ವಕವಾಗಿಯೇ ಪ್ರಕಟಿಸಿದುದು. ಆದುದರಿಂದ ಬಂಟ ಸಮಾಜದವರು ಈ ವರೆಗೆ ಅಫೀಮು ತಿನ್ನಿಸಿದ ಸರ್ಕಸ್ಸಿನ ಸಿಂಹಗಳಂತೆ ಅಮಲಿನಿಂದ ಅವರಿತರಾದವರು, ಚೇತರಿಸಿ ಎದ್ದು ನಿಂತು ನಮ್ಮ ಬಾಲ ಹಿಡಿದು ಕೆಣಕುವವರನ್ನು ಗುರುತಿಸುವದು ಅಗತ್ಯ ಇನ್ನಾದರೂ ನಿದ್ದೆಯಿಂದ ಎಚ್ಚತ್ತು ನಮ್ಮ ಜಿಲ್ಲೆಯ ಇತರ ಬಾಂಧವರು ನಮ್ಮನ್ನು ಯಾವ ದೃಷ್ಟಿಯಿಂದ ನೋಡುತ್ತಾರೆ ಎಲ್ಲಿಗೆ ನಮ್ಮನ್ನು ಮುಂದಾಳುಗಳ ಸೋಗಿನಿಂದ ತಳ್ಳುತ್ತಿದ್ದಾರೆ, ನಮ್ಮ "ಸ್ಥಾನಮಾನ" ಜಿಲ್ಲೆಯಲ್ಲಿಎಲ್ಲಿ ಏನು ಎಂಬುದನ್ನು ಮನಗಂಡು ಆವಶ್ಯಕತಾನುಸಾರವಾಗಿ ನಮ್ಮ ಧೋರಣೆಗಳನ್ನು ಆರ್ಥಿಕ ಸಾಮಾಜಿಕ ಮತ್ತು ರಾಜಕೀಯ ರಂಗದಲ್ಲಿ ರೂಪಿಸಿಕೊಳ್ಳುವುದು ಅಗತ್ಯ. ಅದಕ್ಕಾಗಿ ಒಗ್ಗಟ್ಟಿನಿಂದ ನಾವು ದುಡಿಯುವುದು ಅಗತ್ಯ. ಒಂದು ಸಮಾಜವನ್ನು ಇನ್ನೊಂದು ಸಮಾಜಕ್ಕೆ ಎತ್ತಿಕಟ್ಟಿ ಲಾಭ ಪಡೆಯುವ ಮಗುದೊಂದು ಸಮಾಜವಿರಬಹುದು. ಆದರೆ ಅದನ್ನು ಕಂಡು ಹಿಡಿದು ಸಕಾಲದಲ್ಲಿ ಅಂತಹ ಅನಾಹುತಕ್ಕೆ ಆಹುತಿಯಾಗದಂತೆ ಜಾಗೃತರಾಗಿರುವುದು ನಮ್ಮ ಧೋರಣೆಯಾಗಿರಬೇಕು. ನಮ್ಮ ಸಮಾಜದವರು ಎಚ್ಚತ್ತು ಜಾಗ್ರತರಾಗಲಿ ಎಂಬುದೇ ನನ್ನ ಹಾರೈಕೆ.

—ನಾರಾಯಣ ರೈ,
ಎಡ್ವಕೇಟ್, ಮಂಗಳೂರು.

'NAVAYUGA' WEEKLY is in the list of periodicals and Newspapers approved or use in Secondarys School as per proceedings Roc· No· 466 N/50 date 2-12-1950 of the Director of public Instruction Madras·

ಇದಕ್ಕೆ ಪರಿಹಾರವೇ ಇಲ್ಲವೆ?

ಸಂಪಾದಕರೇ,

ಉಡುಪಿಯ ಕಲ್ಸಂಕದಿಂದ ಕಲ್ಯಾಣಪುರಕ್ಕೆ ಹೋಗುವ ರಾಜಮಾರ್ಗದಲ್ಲಿ ನಗರಸಭೆಯು ಗಡಿಯವರೆಗಿನ ಭಾಗದ ಸ್ಥಿತಿಯು ತುಂಬ ಶೋಚನೀಯವಾಗಿದೆ. ಈಗ ಅಲ್ಲಲ್ಲಿ ಒಂದೊಂದಡಿ ಆಳದ ಹೊಂಡಗಳು ಬಹಳಷ್ಟು ಅಗಲದಲ್ಲಿ ತೋರಿಬರುತ್ತಿದ್ದು ಆ ರಸ್ತೆಯಲ್ಲಿ ಬಸ್ಸು, ಸೈಕಲುಗಳು ಹೋಗುವುದೇ ಪ್ರಯಾಸತಮವೆನಿಸಿದೆ. ಆದರೆ ಜೋರಿನ ಮಳೆಯು ಬಂದು ಇಂತಹ ಹೊಂಡಗಳಲ್ಲಿ ನೀರು ತುಂಬಿತೆಂದರೆ, ಮತ್ತೆ ಕೆಸರು ಹಾರುವ ಚೋದ್ಯ ಕೇಳುವುದೇ ಬೇಡ. ಮಣ್ಣು, ಮರಳುಗಳಿಂದ ಈ ಸಾವಿರಾರು ಹೊಂಡಗಳನ್ನು ಮುಚ್ಚುವ ಕೆಲಸ ಈ ಮಳೆಗಾಲದಲ್ಲಿ ಒಂದಲ್ಲ ನಾಲ್ಕು ಬಾರಿ ನಡೆದಿವೆ; ಆದರೆ, ಅವುಗಳೆಲ್ಲವೂ ನಿರರ್ಥಕವೆನಿಸಿಕೊಂಡಿವೆ. "ಬ್ಲೇಕ್ ಟೋಪ್" ಮಾಡಿದ ಮಾರ್ಗಗಳೇ ಈ ದುಸ್ಥಿತಿಯಲ್ಲಿರುವಾಗ, ಇನ್ನು ಉಳಿದುವುಗಳ ಗತಿ ಹೇಗಿರಬಹುದು? ನಗರಸಭೆಯು ಸೀಮೆಯೊಳಗಿನ ಈ ಭಾಗವನ್ನು ಕೂಡಲೇ ರಿಪೇರಿಮಾಡಿ ಜನತೆಗಾಗುವ ನಿತ್ಯ ಪಂಕಾಭಿಷೇಕ (ಪಂಕ=ಕೆಸರು)ದಿಂದ ಉಳಿಸುವಂತೆ ನಗರಸಭೆಯವರಾದರೂ ಸಂಬಂಧಪಟ್ಟವರನ್ನೇ ಕೇಳಿಕೊಳ್ಳಬಾರದು.

—ವಾರಿಗೆ.

ಮೈಸೂರಿನ ಗಡಿ ವಿವಾದಗಳು

ಮಾನ್ಯ ಸಂಪಾದಕರೇ,

ಪೂನಾದಲ್ಲಿ ಜರಗಿದ- ಎ ಐ. ಸಿ. ಸಿ. ಅಧಿವೇಶನಕ್ಕೆ—ಹೋಗಿದ್ದ ಮೈಸೂರಿನ ಮುಖ್ಯಮಂತ್ರಿ ಶ್ರೀ ಜತ್ತಿಯವರು—ಬರುವಾಗ ಮಹಾರಾಷ್ಟ್ರ—ಮೈಸೂರು ರಾಜ್ಯಗಳ ಗಡಿ ವಿವಾದಕ್ಕೊಂದು—ಸೂಕ್ತ ಪರಿಹಾರಕ್ಕೆ ಒಪ್ಪಿಕೊಂಡೇ ಬಂದಿದ್ದರು. ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ ಚವಸರು ಜತ್ತಿಯವರ ಕೈ ಕುಲುಕಿ—ಗೃಹಮಂತ್ರಿ ಪಂತರ ಸಮ್ಮುಖಕ್ಕೆ ಕರೆದ್ಯೊದು ನಾಲ್ವರ ಸಮಿತಿಯ ನೇಮಕಕ್ಕೆ ಜತ್ತಿಯವರನ್ನು ಒಪ್ಪಿಸಿಯೇ ಬಿಟ್ಟರು. "ಸಣ್ಣ ಪುಟ್ಟ ಬದಲಾವಣೆಗಳನ್ನುಳಿದು ಬೇರಾವುದಕ್ಕೂ ಒಪ್ಪಲಾರೆ" ಎಂದು ಇದುವರೆಗೂ ಹೇಳುತ್ತಾ ಬಂದಿದ್ದ ಜತ್ತಿಯವರು ಈಗ ಮಾತ್ರ ಈ ಸಮಿತಿಯ ನೇಮಕಕ್ಕೆ 'ಅಸ್ತು' ಕೊಟ್ಟಿರುವುದು ಯಾಕೋ — ಅವರಿಗೆ ಗೊತ್ತು.

ಬಹುಶಃ ನಾಲ್ಕಾರು ವರ್ಷಗಳಿಂದ—ಮಹಾ ರಾಷ್ಟ್ರೀಯರ ಉಪಟಳವನ್ನು ಸಹಿಸಿ—ಬೇಸತ್ತು—ಹೇಗಾದರೂ ಈ ವಿವಾದವೊಂದು ಬಗೆಹರಿಯಿತೆಂದೇನೋ — ಅವರು ಒಪ್ಪಿರಬೇಕು. ಚಿಂತೆಯಿಲ್ಲ; ಆದರೆ—ಕರ್ನಾಟಕಕ್ಕೆ ಬರಬೇಕಾಗಿದ್ದ ಭಾಗಗಳ ಕುರಿತೂ —ಒಂದು ನಿರ್ಧಾರಕ್ಕೆ ಬರಲು—ಜತ್ತಿಯವರು ಏಕೆ ಪ್ರಯತ್ನಿಸಲಿಲ್ಲವೋ—ಅವರೇ ಹೇಳಬೇಕು.

ಸಾಹಿತ್ಯ ಸಮಾಲೋಚನೆ

(೩ನೇ ಪುಟದಿಂದ)

ಇದರಲ್ಲಿಯೊದರೂ ನೀತಿ ಆಚಾರ ಮತ್ತು ವಸ್ತುಗಳ ಪ್ರತ್ಯಕ್ಷ ಉಲ್ಲೇಖವಿಲ್ಲದಿದ್ದರೂ ಅವುಗಳು ತಿರಸ್ಕೃತವಾಗಲಿಲ್ಲ. "ಹರನೆಂಬುದೇ ಸತ್ಯ ಸತ್ಯವೆಂಬುದೆ ಹರನು" ಎಂಬ ನೀತಿಯನ್ನು ಜಗತ್ತಿಗೆ ತೋರಿಸಿಕೊಟ್ಟ ಆತನ ಹರಿಶ್ಚಂದ್ರ ಕಾವ್ಯದ ವಸ್ತುವನ್ನೂ ಆತನು ಒಂದು ಪದ್ಯದಲ್ಲಿ ಹೇಳುತ್ತಾನೆ:

ವಸುಧಾಧಿಪತಿ ಹರಿಶ್ಚಂದ್ರ ಘನ ಸತ್ಯನೆಂ
ದೆಸೆದು ವಾಸಿಷ್ಠನಿಂದ್ರಂಗೆನಲು ಕೌಶಿಕಂ
ಹುಸಿ ಮಾಳ್ಪೆನೆಂದು ಭಾಷೆಯನಿತ್ತು ಧರೆಗೆ
ಬಂದವನಿಪನ ಸತಿಸುತ್ರರಾ ॥
ಅಸುವಂತ್ಯವೆನೆ ನಿಗ್ರಹಂ ಮಾಡೆ ತಪ್ಪದಿರೆ
ಶಶಿ ಮೌಳಿ ಶ್ರೀ ವಿಶ್ವನಾಥ ಭೂಪಂಗೆ ಕರು
ಣಿಸಿ ಸಕಲ ಸಾಮ್ರಾಜ್ಯವಿತ್ತಾತನಂ ಮೆರೆದ
ಕೃತಿ ..."

ಕೇವಲ ಒಂದೇ ಪದ್ಯದಲ್ಲಿ ನಿರೂಪಿಸಬಲ್ಲ ಕಥೆಯನ್ನೇ ಸುವಿಸ್ತರಿಸಿ, ಆತ ೭೭೫ ವಾರ್ಧಕ ಷಟ್ಪದಿಗಳನ್ನೂ ಒಂದು ದೊಡ್ಡ ರಗಳೆಯನ್ನೂ ಬರೆದಿದ್ದಾನೆ. ಶೈಲಿ, ವಸ್ತು ವರ್ಣನೆ ಯೆಲ್ಲವೂ ಯಥೋಚಿತ ಸ್ಥಾನವನ್ನು ಪಡೆದಿದ್ದರೆ, ಅದು ನೀತಿಯುಕ್ತವಾಗಿದ್ದರೆ ಜನಾದರಣೀಯವಾಗುವುದು.

ರಸ್ಕಿನ್, ಟಾಲ್‌ಸ್ಟಾಯ್, ಐ. ಎ. ರಿಚರ್ಡ್ಸ್ ಮೊದಲಾದ ಐರೋಪ್ಯ ಮಹಾನುಭಾವರು ಕೂಡ ಶೈಲಿಯೊಡನೆ ವಸ್ತುವಿಗೂ ಮಹತ್ವವನ್ನಿತ್ತು ಕಲೆ ಮತ್ತು ಸದಾಚಾರಗಳ ಸಮನ್ವಯ ಬೇಕೆಂದಿದ್ದಾರೆ. ವಸ್ತುವನ್ನು ಕಡೆಗಣಿಸುವ ಅಭಿವ್ಯಂಜನೆಯು ನಿಜವಾದ ಅಭಿವ್ಯಂಜನೆಯಲ್ಲ. ಶೈಲಿಗೆಮಾತ್ರ ಪ್ರಾಧಾನ್ಯವೀಯುವ ಕೃತಿಯು ವಿಷಭರಿತ ಕನಕ ಕುಡಿಕೆಯಂತೆ ನಿಸ್ಸಾರವಾದ ಗೊಬ್ಬರದಂತೆ, ಪ್ರತಿಸ್ಪರ್ಧಿಯಿಲ್ಲದ ವೀರನಂತೆ. ರಾಗವಿಲ್ಲದ ಸಂಗೀತ ಕೋವಿದನಂತೆ. ಆವಶ್ಯಕ ಭೋಜನ ಪದಾರ್ಥಗಳಿಲ್ಲದೆ ಚಮಚ, ಮುಳ್ಳು, ಭೋಜನಪಾತ್ರೆ ಮೊದಲಾದುವುಗಳಿಂದಾದರೂ ಪ್ರಯೋಜನವಿದೆಯೆ? ಹಾಗೆಯೇ ವಸ್ತುವಿಲ್ಲದ ಕಾವ್ಯ ಕಾವ್ಯವಲ್ಲ ಅದು ಶುದ್ಧ ಹರಟೆಯಲ್ಲದೆ ಬೇರೇನೆ

—ಶ್ರೀ ಗೋರಾ.

ವಿಚಿತ್ರ ಯೋಚನೆ

ಗೃಹಮಂತ್ರಿ ಪಂತರು—ಕಾಂಗ್ರೆಸಿನ ಮಹಾ ಮಹಾ ಮುಖಂಡರು ಅಲ್ಲಿ ಇರುವಾಗ—ಖಂಡಿತವಾಗಿಯೂ ಈ ಬಗ್ಗೆ ಒಂದು ಪರಿಹಾರೋಪಾಯವನ್ನು—ಕಂಡು ಹಿಡಿಯಬಹುದಾಗಿತ್ತು. ಗಡಿವಿವಾದಗಳನ್ನು ಬಗೆಹರಿಸುವ — ಪ್ರಶ್ನೆಯೇ ಇಲ್ಲವೆಂದಾದರೆ ಈ ಮಹಾರಾಷ್ಟ್ರ—ಮೈಸೂರು ರಾಜ್ಯಗಳ ಗಡಿಗಳ ಬಗೆಗೆ ಮಾತ್ರ—ಪಂತರಿಗೂ ಇಷ್ಟು ಆಸಕ್ತಿ ಯೇಕೆ? ಚವನರ ಒತ್ತಾಯವೇಕೆ? ಜತ್ತಿಯವರ ಒಪ್ಪಿಗೆಯೇಕೆ? ಗಡಿವಿವಾದವನ್ನು ಮುಗಿಸಲು ಮನಸ್ಸಿದ್ದರೆ—ಮೈಸೂರು—ಕೇರಳ ಗಡಿವಿವಾದಗಳಿಗೂ ಒಂದು ಸಮಿತಿ ಮಾಡಬಾರದಾಗಿತ್ತೆ? ಮೈಸೂರು—ಆಂಧ್ರಗಳ ಗಡಿವಿವಾದಗಳಿಗೂ ಒಂದು ಪರಿಹಾರ ಕಂಡು ಹಿಡಿಯಬಾರದಾಗಿತ್ತೆ? ಆ ರಾಜ್ಯಗಳ ಮುಖ್ಯ ಮಂತ್ರಿಗಳನ್ನೂ ಇದಕ್ಕೆ ಒಪ್ಪಿಸಬಾರದಾಗಿತೆ? ಮಾನ್ಯ ಜತ್ತಿಯವರೂ, ಮೈಸೂರಿನ ಎಲ್ಲ ಗಡಿವಿವಾದಗಳೂ ಒಮ್ಮೆಲೆ ಬಗೆ ಹರಿಯಬೇಕೆಂದು ಛಲ ಹಿಡಿಯ ಬಾರದಾಗಿತ್ತೆ? ಬರಿಯ ಮಹಾರಾಷ್ಟ್ರ—ಮೈಸೂರುಗಳ ತಕರಾರು ಮುಗಿಯದಿದ್ದರೆ ಏನಾಗುತ್ತಿತ್ತು?

ಅಂತೂ ಇಲ್ಲಿಯೂ ಒಂದು ಕಣ್ಣು ಮುಚ್ಚಾಲೆ ಆಟ ನಡೆದಿದೆ. ಗೃಹಮಂತ್ರಿ ಪಂತರ — ಪಕ್ಷಪಾತ ನಡೆದಿದೆ. ಕಾಂಗ್ರೆಸ್ ಪರಿಷ್ಠರ ಒತ್ತಾಯದ ಪ್ರಯೋಗ ಆಗಿದೆ. ಜತ್ತಿಯವರ ಅಳ್ಳೆದೆಯ ಪ್ರದರ್ಶನವೂ ಆಗಿದೆ.

ಬಹುಶಃ ಮಹಾರಾಷ್ಟ್ರೀಯರಂತೆ—ಗಡಿನಾಡುಗಳ ಕನ್ನಡ ಜನ ಕಲ್ಲು ಹೊಡೆಯಲಿಲ್ಲ. ಬೆಂಕಿಕೊಡಲಿಲ್ಲ ಆರ್ಭಟಿಸಿ ಕಿರಿಚಲಿಲ್ಲ. ಕನ್ನಡಿಗರ ಕೇಳಿಕೆಗೆ ಮನ್ನಣೆ ಸಿಗಬೇಕಾದರೆ—ಮಹಾರಾಷ್ಟ್ರೀಯರದೇ ಹಾದಿ ಹಿಡಿಯಬೇಕಾದೀತೇನೊ? ಕನ್ನಡ ರಾಜ್ಯದ ಮುಖ್ಯ ಮಂತ್ರಿಯೂ ಇನ್ನೊಬ್ಬ ಚವ್ಹಾಣರೇ ಆಗಬೇಕೇನೋ. ಏನಾದರೂ—ಬೆಂಗಳೂರಿಂದ ದಿಲ್ಲಿ ತನಕ—ಗಡಿನಾಡ ಕನ್ನಡಿಗರನ್ನು ಕೇಳುವವರಿಲ್ಲ - ಎನ್ನುವ ಮಾತು ಈಗ ದೃಢವಾಗುತ್ತ ಬಂದಿದೆ. ಯೋಗ್ಯ ಮುಂದಾಳುಗಳಿಲ್ಲದೆ ಎದೆಗಾರಿಕೆಯಿರುವ ಸರಕಾರ ಇಲ್ಲದೆ—ಅವರ ಪಾಡು ಅಸಹನೀಯವಾಗಿದೆ

ವಿಚಿತ್ರ ಯೋಚಕ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ,

ಕಾಮ ವಿಜ್ಞಾನದ ಮಾಹಿತಿಗಾಗಿ
ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ
ಕಲಿಯುಗ
ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ
ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ
ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50.
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ವಿಚಾರವರ್ಷ

ಜ್ಞಾನದ ಮೂಲಸಾಧನ—ವೇದಗಳು

ವಿಶ್ವದ ಅತ್ಯಂತ ಪ್ರಾಚೀನತಮ ಜ್ಞಾನಾಗಾರಗಳೆನಿಸಿದ ವೇದಗಳನ್ನು ಪಾಶ್ಚಾತ್ಯ—ಪೌರ್ವಾತ್ಯ ವಿದ್ವಾಂಸರೆಲ್ಲರೂ ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ಅವು ಸಮಾಜಕ್ಕೆ ಸದ್ಬೋಧನೆ ನೀಡಿರುವುದೇ ಇದಕ್ಕೆ ಕಾರಣವಾಗಿದೆ.

ಶ್ರೀ ಕೆ. ಎ. ದೇವದಾಸ, ಶಿರೋಮಣಿ.

ವೇದ ಓದಬಾರದೇ?

ಸ್ತ್ರೀಯರೂ ಶೂದ್ರರೂ ವೇದವನ್ನು ಓದಬಾರದು ಎಂದು ವೈದಿಕರು ಹೇಳುವುದುಂಟು. ಈ ಮಾತಿನ ಪ್ರಕಾರ ಹೆಂಗಸರು—ಬ್ರಾಹ್ಮಣಿತಿಯರೂ ಯಜ್ಞೋಪವೀತವನ್ನು ಧರಿಸದವರೂ ವೇದವನ್ನು ಓದಬಾರದೆಂದೂ ಎಂದರೆ ಅಜ್ಞಾನವನ್ನು ಅದೇ ಪುಸ್ತಕದಿಂದ ನೇರಾಗಿ ಪಡೆಯಬಾರದೆಂದೂ ಹೇಳದಂತಾಯಿತು. ಆದರೆ ಆ ಮಾತು ಸಾಂಪ್ರದಾಯಿಕವೆಂದೂ ವಿವಾದಾತ್ಮಕ ಹಾಗೂ ವಿಮರ್ಶಾತ್ಮಕವೆಂದೂ ಹೇಳಬಹುದು.

ವೇದದಲ್ಲಿ ಅನೇಕ ವಿಷಯಗಳು

ನಾಲ್ಕಾಗಿ ವಿಭಾಗಿಸಲ್ಪಟ್ಟಿರುವ ವೇದದಲ್ಲಿ ಪುರಾತನ ಚರಿತ್ರೆ, ವರ್ಣನೆ, ಜ್ಞಾನೋಪದೇಶವೇ ಮೊದಲಾದ ಹತ್ತು ಹಲವು ತತ್ವಗಳು ಅಡಕವಾಗಿವೆ. ಆ ಚಿಕ್ಕ ಚಿಕ್ಕ ಮಾತುಗಳಲ್ಲಿ ಅಷ್ಟೊಂದು ಅರ್ಥ ಬಾಹುಳ್ಯವಿರುವುದೇ ಅದಕ್ಕಿರುವ ಪ್ರಾಶಸ್ತ್ಯ ಕಾರಣಗಳಲ್ಲಿ ಒಂದು. ತಿಲಕರು ಕಂಡ ಪ್ರಕೃತಿ ಸ್ವರೂಪ, ಮಹರ್ಷಿ ದಯಾನಂದರು ಕಂಡ ದೇವ ಸ್ವರೂಪ, ಪೌರಾಣಿಕರು ಕಂಡ ದೇವತಾ ವೃತ್ತಾಂತ, ಉಪನಿಷತ್ಕಾರರು ತೋರಿದ ಆತ್ಮತತ್ವ ಇವೆಲ್ಲವೂ ವೇದದ ಮಂತ್ರಗಳಲ್ಲಿ ಹಾಸು ಹೊಕ್ಕಾಗಿವೆ.

ವೇದದ ವಿಷಯ ಅರಿವಾಗಬೇಕು

ವಿದ್ಯಾಭ್ಯಾಸದಲ್ಲಿ ಸುಧಾರಣೆಯಾಗಬೇಕೆಂದು ಮುಂದಾಳು ಹೇಳುತ್ತಿದ್ದಾರೆ ಲೋಕವೇ ಹೊಗಳುವ ವೇದದಂತಹ ಅಮೂಲ್ಯ ಗ್ರಂಥಗಳು ಕಲಿಸಲ್ಪಟ್ಟರೆಯಲ್ಲವೇ ಭಾರತೀಯರಿಗೆ ಲಾಭಕರ! ಅದರಲ್ಲಿ ಏನಿದೆಯೆಂಬ ಅರಿವಾಗುವ ತನಕ ಜ್ಞಾನ ಸಿದ್ಧಿ ಹೇಗಾದೀತು?

ವೇದ ಮಂತ್ರಗಳ ಆವಿರ್ಭಾವ

ಆರ್ಯರು ಪಂಜಾಬಿನತ್ತ ಆರ್ಯಾವರ್ತದಲ್ಲಿ ನೆಲೆನಿಂತ ಮೇಲೆ—ಅರ್ಥಾತ್ ಪರುಶರಾಮಾವತಾರ ಕಾಲದ ನಂತರ—ಅಥವಾ—ವಾಮನಾವತಾರ ಕಳೆದ ಬಳಿಕ—ಬೇರೆ ಬೇರೆ ಗ್ರಾಮಗಳಲ್ಲಿ ನೆಲೆಯಾದ ಋಷಿಗಳಿಗೆ ಗೋಚರವಾದ ವೇದ ಮಂತ್ರಗಳಲ್ಲಿ ಆ ಕಾಲದ ಹಾಗೂ ಅದಕ್ಕೂ ಹಿಂದಿನ—ಎಂದರೆ—ವಾಮನಾವತಾರದ ವರೆಗಿನ ಕಾಲ ಸ್ಥಿತಿಯೂ, ಜನತಾ ವಾರ್ತೆಯೂ, ಕೂಡಾ ಗೋಚರವಾಗುತ್ತದೆ. ಈ ಮಂತ್ರಗಳನ್ನು ದೇವತಾ ಹೋಮಾದಿಗಳಲ್ಲಿ ಉಪಯೋಗಿಸುತ್ತಿದ್ದರು. ಇವು ಪವಿತ್ರವಾಗಿದ್ದುವು. ಪಾರ್ಥಿವ ಶರೀರಗಳಲ್ಲದ ದೇವತೆಗಳೂ ಕೂಡಾ ಈ ಮಂತ್ರಗಳಿಗೆ ಒಲಿಯುತ್ತಿದ್ದರು.

ಸಾಮವೇದ ಪ್ರಕರಣ

ಕೆಲ ಋಷಿಗಳು ಸಂಗೀತ ಪ್ರಧಾನವಾಗಿ ದೇವತೆಗಳನ್ನು ಸ್ತುತಿಸ ತೊಡಗಿದರು. ಅವರ ಅನುಯಾಯಿಗಳೂ ಆಗಾನ ಮಾರ್ಗವನ್ನೇ ಅವಲಂಬಿಸಿದರು—ಪೂಜಾ ಹೋಮಾದಿಗಳ ಬದಲಾಗಿ ಭಜನೆ ಏರ್ಪಡಿಸುವಂತೆ. ಆ ಸಾಮಗಾಯಕರೆಂದರೆ ಅಂದಿನ ದಾಸ ಕೂಟದವರಾದರು. ಈ ಸಂಪ್ರದಾಯವು ಹಳೆಯ ಸಂಪ್ರದಾಯದವರಿಗೆ ಒಗ್ಗಲಿಲ್ಲ. ಭೃಗು ಮೊದಲಾದವರು ಸಾಮದ ಕಟ್ಟಾ ವೈರಿಗಳಾಗಿದ್ದರೆಂದೂ ಕೇಳಬಹುದು. ಆದ್ದರಿಂದಲೇ—

"ಸಾಮಧ್ವನಾ ವೃಗ್ಯ ಜುಷೀ ನಾಧೀಯೀತ ಕದಾಚನ" (ಮನುಸ್ಮೃತಿ) ಸಾಮವನ್ನು ಹಾಡುವ ಧ್ವನಿ ಎಲ್ಲಿ ಕೇಳಿಸುತ್ತದೋ ಆ ಸ್ಥಳದಲ್ಲೆಲ್ಲಿಯೂ ಋಗ್ವೇದ-ಯಜುರ್ವೇದಗಳನ್ನು ಓದಬೇಡ—ಎಂದೂ "ತಸ್ಮಾತ್ ತಸ್ಯಾಶುಚಿ ರ್ಧ್ವನಿಃ" ಸಾಮ ವೇದದ ಧ್ವನಿ ಕೇಳುವುದೇ ಅಮಂಗಲವೆಂದೂ ಹೇಳಲಾಗಿದೆ ಆದರೇನಾಯ್ತು?

ಸಂಗೀತ ಪ್ರಧಾನವಾದ ಸಾಮವೇದವು ಜನಮನವನ್ನೇ ಸೆಳೆಯಿತು. ವೈದಿಕರಲ್ಲಿ ಋಗ್ಯಜುರ್ವೇದಿಗಳ ಪಂಗಡ ಒಂದು, ಸಾಮಗರ ಹೊಸ ಪಕ್ಷವೊಂದು—ಹೀಗೆ ಬೆಳೆಯುತ್ತಾ ಬಂತು ಮಾಧು ಚಕ್ರವರ್ತಿಯೂ ಹಳೆಯ ಪಂಗಡವನ್ನೇ ಸಮರ್ಥಿಸಿ, ಹೊಸ ಪಂಗಡವನ್ನು ತೆಗಳಿದ್ದರಿಂದ ಸಮಾಜದಲ್ಲಿ ಸಾಮವೇದಿಗಳಿಗೆ ಸ್ಥಾನ ಬಲಹೀನವಾಗುತ್ತಾ ಇತ್ತು.

ನಾನಾ ದಾಸವರೇಣ್ಯರ ಹಾಗೂ ಭಕ್ತ ಕವಿಗಳ ವಚನಗಳನ್ನೂ, ಕೀರ್ತನೆಗಳನ್ನೂ ಸಂಗ್ರಹಿಸುವಂತೆ ಭಗವಾನ್ ವೇದವ್ಯಾಸರು ದ್ವಾಪರ ಯುಗದ ಅಂತ್ಯದಲ್ಲಿ ಎಲ್ಲವನ್ನೂ ಸಂಗ್ರಹಿಸಿ ಪರಿಶೀಲಿಸಿ, ಯುಕ್ತ ರೀತಿಯಲ್ಲಿ ವಿಭಾಗಿಸಿದರು. ಆ ಕಾಲದಲ್ಲೇ ಪರಮಾತ್ಮನು ಶ್ರೀಕೃಷ್ಣನಾಗಿ ಅವತರಿಸಿದ್ದರಿಂದ ಆತನ ಅಭಿಪ್ರಾಯವನ್ನೂ ನೇರಾಗಿ ಪಡೆಯಲು ಶಕ್ತರಾದರು. ಮನು ಸ್ಮೃತಿಯ ಬೆಂಬಲದಿಂದ ತಾವೇ ಶ್ರೇಷ್ಠರೆನಿಸಿದ್ದ ಸಾಮ ವಿರೋಧಿಗಳಿಗೆ ಭಗವದ್ಗೀತೆಯ ಮೂಲಕ "ವೇದಾನಾಂ ಸಾಮವೇದೋಸ್ಮಿ" ಎಂಬ ಯೋಗ್ಯ ಉತ್ತರವೂ ಕೊಡಲ್ಪಟ್ಟಿತು. 'ನಾಲ್ಕು ವೇದಗಳ ಪೈಕಿ ನಾನು ಸಾಮವೇದ ಸ್ವರೂಪಿಯಾಗಿದ್ದೇನೆಂ"ಬ ಭಗವದ್ವಚನದಿಂದ ಸಾಮವೇದಕ್ಕೂ, ಸಾಮವೇದಿಗಳಿಗೂ ಶ್ರೀ ವೇದವ್ಯಾಸರ ಪರಿಶ್ರಮದಿಂದ ಸ್ಥಾನವು ದೊರಕಿತು.

ವೇದದಲ್ಲಿ ಅನೇಕ ವಿಷಯಗಳಿವೆ:—

ಇಂತಿರುವ ನಾಲ್ಕು ವೇದಗಳ ಪೈಕಿ ಚಾರಿತ್ರಿಕ ಹಾಗೂ ಸಾಮಾಜಿಕ ವಿಷಯಗಳ ಸಂಶೋಧನೆಗೆ ಬಲವಾದ ಆಧಾರವೀಯುವ ಋಗ್ವೇದದಲ್ಲಿ ಕಂಡುಬರುವ ವಿಷಯ ಸಾಗರದಿಂದ ಒಂದೆರಡು ತುಂತುರುಗಳನ್ನು ಮಾತ್ರ ಇಲ್ಲಿ ಉದುರಿಸ ಬಯಸುತ್ತೇನೆ.

೧. "ತಂದೆಯು ಮಕ್ಕಳ ಸಲುವಾಗಿ ಸಂಪಾದನೆ ಮಾಡಿ ಅವರ ಕ್ಷೇಮ ಚಿಂತನೆಯಲ್ಲಿ ನಿರತನಾಗಿರುವಂತೆ ಅಗ್ನಿಯು ನಮ್ಮ ಕ್ಷೇಮ ಚಿಂತೆಯಲ್ಲಿಯೇ ಇರುವನು."—ಇದರಿಂದ ಬಡ ಸಮಾಜದ ಗೃಹಸ್ಥರಿಗೆ ಪಾಠವು ದೊರೆಯುವದು. ಜನಿಸಿದ ಮಕ್ಕಳ ಭಾವೀಕ್ಷೇಮದ ಮಾರ್ಗವು ಸ್ಥಿರವಾಗದೆ— ಸಂತಾನ ಸಮೃದ್ಧಿಯೇ ಗುರಿಯಾಗಿಟ್ಟುಕೊಳ್ಳಬಾರದು.

೨. 'ಭಜಕರೆಲ್ಲರೂ ಒಂದುಗೂಡಿ ದೇವರನ್ನು ನುತಿಸಬೇಕು." ಇದು ಸಾಮೂಹಿಕ ಪ್ರಾರ್ಥನೆ ಹಾಗೂ ಭಜನಾ ಸಂಘಗಳ ಉಪಯುಕ್ತತೆಯನ್ನು ತೋರಿಸುತ್ತದೆ.

೩. "ಇಂದ್ರನನ್ನು ಸೇವಿಸುವವರು ಬೇರೆ ದೇಶದವರಾದರೂ ಸರಿ— ಅವರು ನಮ್ಮೊಂದಿಗೆ ಬರಲಿ"—ಈಶ್ವರ ಪ್ರಾರ್ಥನೆಯಲ್ಲಿ ಸಮಭಾಗಿಗಳಾದರೆ—ಮತ್ತೆ ಅಲ್ಲಿ ಸ್ವಕೀಯರು— ಪರಕೀಯರೆಂಬ ಭೇದವಿಲ್ಲ.

೪. "ಮನುಷ್ಯರೇ ದೇವತೆಗಳಾದವರು. ಋಭುಗಳು"— ಎಲ್ಲರೂ ಪುಣ್ಯದ ಪರಿಣಾಮಕ್ಕನುಸಾರ ದೇವಸುಖ ಅನುಭವಿಸಿ, ಮತ್ತೆ ಮರ್ತ್ಯಲೋಕಕ್ಕಿಳಿಯುತ್ತಾರಂತೆ. ಆದರೆ ಕ್ಷತ್ರಿಯರಾದ ಋಜು ಸೋದರರು ದೇವಲೋಕದ ರಾಷ್ಟ್ರೀಯರಂತೆಯೇ ಆದ ಸುಕೃತಿಗಳು.

೫. 'ಇಂದ್ರನು ಸಾವಿರ ಕಣ್ಣುಳ್ಳವನು."—ಗೌತಮನು ಅಹಲ್ಯೆಗೆ ಶಾಪವಿತ್ತನಂತರವಾಗಿರಬೇಕು— ಈ ಮಂತ್ರವು ಆವಿರ್ಭವಿಸಿದ್ದು. ಎಂದು ಚಾರಿತ್ರಿಕ ದೃಷ್ಟಿಯಿಂದ ತೋರುತ್ತದೆ.

೬. "ಸೂರ್ಯನು ರೋಗ ಬಾಧೆಗಳನ್ನು ಚೆನ್ನಾಗಿ ನಾಶಮಾಡುವನು." —ಬಿಸಿಲಿನ ಗುಣವನ್ನು ಆರ್ಯರು ಅಂದೇ ಸಾರಿದ್ದು—ಇಂದಿನ ವಿಜ್ಞಾನಿಗಳೂ ಒಪ್ಪುತ್ತಾರೆ.

೭. "ಹೊಲಿದು ತಯಾರಿಸಿದ ಅಂಗಿಯು ಶರೀರವನ್ನು ಕಾಪಾಡುವಂತೆ ಯಾಗಾದಿಗಳಲ್ಲಿ ದಕ್ಷಿಣೆಕೊಟ್ಟವನನ್ನು ಅಗ್ನಿಯು ಕಾಪಾಡುತ್ತಾನೆ."— ದರ್ಜಿ ಇರದಿದ್ದರೂ ಕೈಹೊಲಿಗೆಯಿಂದಲಾದರೂ ವೇದಕಾಲದಲ್ಲಿ ಚಳಿಗೆ ಅಂಗಿ ಹಾಕುತ್ತಿದ್ದರೆಂದೂ, ಅಂಗಿಯು ನಿಷಿದ್ಧವಾಗಿರಲಿಲ್ಲವೆಂದೂ ಗೊತ್ತಾಗುತ್ತದೆ.

೮. "ನಾನು ನನ್ನ ದ್ವೇಷಿಗಳನ್ನು ಹಿಂಸಿಸುವುದಿಲ್ಲ"—ಮಾನವ ಧರ್ಮದ ಮೂಲ ಸೂತ್ರಗಳಲ್ಲೊಂದಿದು.

೯. "ಒಂದು ಗೃಹದಲ್ಲಿ ನೂರು ಜನರಿಗೆ ಸಾಕಾಗುವಷ್ಟು ಸಂಪತ್ತು ಇರಬೇಕು."—ಅಭಾವ ವೈರಾಗ್ಯದಿಂದ 'ನನ್ನ ಜೀವನ ಸಾಗಿದರೆ ಸಾಕೆಂ'ದು ಹೇಳುವ ಗೃಹಸ್ಥನನ್ನು ಎಚ್ಚರಿಸುವುದು ಈ ಮಾತು. ಅಷ್ಟು ಧನಕ್ಕಾಗಿ ಪರಿಶ್ರಮಿಸಲೇ ಬೇಕು.

ಇಂತೀ ರೀತಿಯ ಅಮೃತವಾಣಿಯಿಂದ ವೇದವು ಸೂರ್ಯನಂತೆ ರಾರಾಜಿಸುತ್ತದೆ. ಸಾಮಾನ್ಯ ಕಾವ್ಯಗಳಲ್ಲೇ ಕಾಲ ಕಳೆಯುವ ಹವ್ಯಾಸಕ್ಕಿಂತಲೂ ಉದಾತ್ತ ತತ್ವಗಳಿರುವ ಗ್ರಂಥರಾಶಿಗಳ ಕಡೆಗೆ ಮನವೊಲಿದರೆ ಆತ್ಮಾನಂದವೂ ಸ್ವಾಭಿಮಾನವೂ ಜಾಗ್ರತವಾಗುವದು. ಚಾರಿತ್ರಿಕವಾಗಿಯೂ ವೇದವು ಪುರಾತನ ಕಾಲದ ರಹಸ್ಯವನ್ನು ನೀಡುತ್ತದೆ.

The Moolky Bank, Ltd.
MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ	4%
5 ,, 12 ,,	$4\frac{1}{4}$%
13 ,, 24 ,,	$4\frac{1}{2}$%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ $\frac{1}{4}$% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ $2\frac{1}{2}$%

ಚಾಲ್ತಿ ಠೇವಣಾತಿಗೆ $\frac{1}{2}$%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರಾಂಜ,
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.
ಸ್ಥಾಪನೆ: 1920

ರಾಮತೀರ್ಥ (ಮಾಸಿಕ ಪತ್ರ)
(ಹಿಂದಿ ಭಾಷೆಯಲ್ಲಿ)
ಸಂಪಾದಕರು: ಯೋಗಿರಾಜ ಶ್ರೀ ಉಮೇಶಚಂದ್ರರು.

ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೧೪.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ



ಜನರಲ್ ಕೆ. ಎಸ್. ತಿಮ್ಮಯ್ಯನವರು ಡೆಹರಡೂನ್ನಿನ ಭಾರತೀಯ ಮಿಲಿಟರಿ ಅಕಾಡೆಮಿಯಲ್ಲಿ ನಡೆದ ಎನ್. ಸಿ. ಸಿ. ಮತ್ತು ತಾಂತ್ರಿಕ ಪದವೀಧರರ ಅಭ್ಯಾಸಾವಧಿಯಲ್ಲಿ ವಂದನೆಯನ್ನು ಸ್ವೀಕರಿಸಿದರು.

<u>ಅಭಿಪ್ರಾಯ</u>

ಮಾನವೋನ್ನತಿ ಹೇತು—ಶಿಕ್ಷಣ

> ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಪಾಠ್ಯ ವಿಷಯಗಳನ್ನು ಸಂಯೋಜಿಸದೆ ಒತ್ತಾಯದಿಂದ ಒಂದು ವಿಷಯವನ್ನು ಮಕ್ಕಳ ಮನಸ್ಸಿನೊಳಗೆ ಹೊಗಿಸುವುದು ಅನರ್ಥಕಾರಿ. ವಿಶ್ವದ ಎಲ್ಲ ರಾಷ್ಟ್ರಗಳೂ ಈ ಸತ್ಯವನ್ನು ಕಂಡುಕೊಂಡಲ್ಲಿ ವಿಶ್ವಕಲ್ಯಾಣವಾಗಲು ಸಹಾಯತೆ ದೊರೆಯುವುದು.

ಶ್ರೀ "ಸಿರಿಪತಿ"

ಇಂದಿನ ವಿದ್ಯಾಭ್ಯಾಸವು ಕೇವಲ ಪುಸ್ತಕದಲ್ಲಿ ಬರೆದದ್ದನ್ನು ಓದಿ ಬಾಯಿಪಾಠಮಾಡಿ ಮಾಡುವಂತಹುದಾಗಿದೆ!—ವಿದ್ಯಾರ್ಥಿಗಳ ನೆನಪಿನ ಶಕ್ತಿಯು ವಿಕಾಸವಾದ ಮಾತ್ರಕ್ಕೆ ಅವರ ಬುದ್ಧಿ-ಜ್ಞಾನಗಳ ವಿಕಾಸವಾದಂತಾಯಿತೇ? ಬರೆದದ್ದೇ ಬರೆದು ಓದಿದ್ದನ್ನೇ ಓದಿ ಇಂದಿನ ಹುಡುಗರಿಗೆ ವಿದ್ಯಾಭ್ಯಾಸದ ಅಭಿರುಚಿಯೇ ಕಡಿಮೆಯೆನಿಸತೊಡಗಿದೆ!...

ಅವರು ಇಸ್ವಿಯನ್ನೆಣಿಸುವುದರಲ್ಲಿಯೂ ರಾಜರ ಹೆಸರುಗಳ ಟಿಪ್ಪಣಿ ಇಡುವುದರಲ್ಲಿಯೂ, ಅನೇಕ ಸ್ಥಳಗಳ ಯಾದಿಯಲ್ಲಿಯೂ—ವ್ಯರ್ಥ ಅಭ್ಯಸನ ಹೊಂದುತ್ತಿರುವರೇ ಹೊರತು, ತಮಗೆ ಇಂದಿನ ದಿನಗಳಲ್ಲಿಯಾವವಸ್ತುವಿನ ಅವಶ್ಯಕತೆಯಿದೆ, ತಮ್ಮ ಇಂದಿನ-ನಾಳೆಯ ಕರ್ತವ್ಯವೇನು!— ತಾನು ನಾಳೆ ಪ್ರೌಢನಾಗಿ ಯಾವಉದ್ಯೋಗ-ವೃತ್ತಿಕೈಕೊಳ್ಳುವೆನು? ತನ್ನ ವಾಸವು ಹಳ್ಳಿಯಲ್ಲಿಯೇ ಶಹರದಲ್ಲಿಯೇ, ಆ ಬಗ್ಗೆ ತನ್ನ ಶಿಕ್ಷಣ ಯಾವ ರಂಗದಲ್ಲಿ ಯಾವ ವಿಷಯದಲ್ಲಿ ನಡೆಯಬೇಕು! ಎನ್ನುವ ಯಾವ ಗೊತ್ತುಗುರಿಯೂ ಇರುವುದಿಲ್ಲ! ನಮ್ಮ ಶಿಕ್ಷಣ ಕ್ರಮದಲ್ಲಿ ಉಂಟಾದ ಈ ಪ್ರಮಾದವನ್ನು ಹೋಗಲಾಡಿಸಲು ಅವಶ್ಯ ಕ್ರಮ ನಾವು ಕೈಕೊಳ್ಳಲೇಬೇಕು, ವಿದ್ಯಾರ್ಥಿಗಳ ಅಭಿರುಚಿಯುಳ್ಳ ವಿಷಯಗಳನ್ನೇ ಅವರ ಶಿಕ್ಷಣದಲ್ಲಿ ತೊಡಗಿಸಬೇಕೇ ವಿನಃ ಅವರ ಮನಸ್ಸಿನಲ್ಲಿ ವ್ಯರ್ಥವಾಗಬಹುದಾದ ಒಣ ವಿಷಯಗಳನ್ನು ಒತ್ತಾಯಪೂರ್ವಕ ಸೇರಿಸುವುದರಲ್ಲಿ ಪ್ರಯೋಜನವಿಲ್ಲ! ನಮ್ಮ ಇಂದಿನ ಶಿಕ್ಷಣ ರಂಗದಲ್ಲಿ ಬದಲಾವಣೆ ಅತ್ಯಗತ್ಯ.

ಕೆಲ ಸಂದರ್ಭಗಳಲ್ಲಿಯಂತೂ ಶಿಕ್ಷಣಾನಂತರ ನಮ್ಮ ಯುವಕರು ಅದರಿಂದ ಏನೊಂದೂ ಯೋಗ್ಯ ಪ್ರಯೋಜನೆ ಮಾಡಿಕೊಳ್ಳಲಸಮರ್ಥರಾಗಿ ಜೀವನದಲ್ಲಿಯೇ ನಿರಾಸೆಗೊಳ್ಳುತ್ತಲಿರುವದೂ ಇದೆ. ನಮ್ಮ ಈಗಿನ ವಿದ್ಯಾಭ್ಯಾಸಕ್ರಮದಿಂದ ವಿದ್ಯಾರ್ಥಿಗಳಿಗೆ ಅವರವರ ಬುದ್ಧಿವಿಕಾಸಕ್ಕೆ ಅಭಿರುಚಿಯುಳ್ಳ ವಿಷಯಗಳನ್ನೇ ಆರಿಸಿಕೊಡುವ ಕರ್ತವ್ಯ ನಮ್ಮದಾಗಿದೆ. (ನಮ್ಮ ಪಾಠಶಾಲೆ—ವಿಶ್ವವಿದ್ಯಾಲಯಗಳು ಇದನ್ನು ಗಮನಿಸಬೇಕು!)

ನೈಸರ್ಗಿಗವಾಗಿ ಒಬ್ಬ ವಿದ್ಯಾರ್ಥಿಗೆ ಮೆಚ್ಚುವ ವಿಷಯ ಇನ್ನೊಬ್ಬನಿಗೆ ಸೇರದಿರಬಹುದ.!! ಅವನ ಬುದ್ಧಿ—ಜ್ಞಾನಶಕ್ತಿಯನ್ನು ಶೋಷಿಸಿ ಅವನಿಗೆ ಅಭಿರುಚಿಯಿದ್ದ ವಿಷಯಕ್ಕೆ ಅವಕಾಶ ಒದಗಿಸಿಕೊಟ್ಟು ಅವನನ್ನು ಆ ವಿಷಯದಲ್ಲಿ ತಜ್ಞನನ್ನಾಗಿ ಮಾಡಬೇಕು. ಇಂತಾಗಿ ಇಂದಿನ ಯುವಕರು ಯಾವ ವಿಷಯದಲ್ಲಿ ಅಭಿರುಚಿಗೊಂಡು ತಮ್ಮ ಶಿಕ್ಷಣದಲ್ಲಿ ಪ್ರಗತಿ ಹೊಂದಲು ಸಮರ್ಥರಿರುವರೋ ಆಯಾ ವಿಷಯಗಳಲ್ಲಿಯೇ ಅವರನ್ನು ತಜ್ಞರನ್ನಾಗಿ ಮಾಡಿ ಅವರನ್ನು ಜೀವನಕ್ಕೆ ಹಚ್ಚಿಕೊಡುವ ಮಹತ್ವದ ಭಾರ ಶೈಕ್ಷಣಿಕ ವಿದ್ಯಾಲಯದ ಮೇಲಧಿಕಾರಿಗಳ ಮಹತ್ವದ ಹೊಣೆಯಾಗಿದೆ.

ಹಳ್ಳಿಗರಿಗೂ ನಗರಸ್ಥರಿಗೂ ಅನುಕೂಲವಾಗುವಂತೆ ವಿದ್ಯಾರ್ಥಿಗಳನ್ನು ಈ ಮೇಲಿನವಿಷಯದ ಕುರಿತು—ಪ್ರಯೋಗ ಮಾಡಲು ಯೋಗ್ಯವಾದ ಪ್ರಾಯೋಗಿಕ ವಿದ್ಯಾಲಯಗಳನ್ನು ತೆರೆಯುವದು ಅತ್ಯವಶ್ಯ!—ತಮ್ಮ ಬಾಲ್ಯ ಶಿಕ್ಷಣ ಮುಗಿಸಿದ ಈ ಹುಡುಗರು ಈ ಪ್ರಾಯೋಗಿಕ ವಿದ್ಯಾಲಯ ಸೇರಿ—ಅಲ್ಲಿ ತಮ್ಮ ಅಭಿರುಚಿಯುಳ್ಳ ವಿಷಯ ಪಡೆದು ತಮ್ಮ ಉಚ್ಚಶಿಕ್ಷಣವನ್ನು ಇಚ್ಛಿತ ವಿದ್ಯಾ ಶಾಖೆಯಲ್ಲಿ ಅಭ್ಯಸಿಸಲು ತೆರಳಬಹುದು! ಒತ್ತಾಯದಿಂದ ಅಭಿರುಚಿಯಿಲ್ಲದ (ನೈಸರ್ಗಿಕ ದತ್ತವಲ್ಲದ) ವಿದ್ಯಾಭ್ಯಾಸದಿಂದಾಗಿ ಎಷ್ಟೋ ಯೋಗ್ಯ ವ್ಯಕ್ತಿಗಳು ತಮ್ಮ ಜೀವಿತವನ್ನೇ ಕೆಡಿಸಿಕೊಂಡಿರುವರು! ಅಥವಾ ಅವರ ಬುದ್ಧಿವಿಕಾಸಕ್ಕೆ ಯೋಗ್ಯ ಅವಕಾಶ ಸಲಹೆ ದೊರೆಯದೆ ದೇಶಕ್ಕೆ ಹಾನಿಯಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ!

ಮೇಲಿನಂತೆ, ಶಿಕ್ಷಣವು ಯಾವಾಗಲೂ ಒಂದು ದೇಶದಲ್ಲಿ ಮಾತ್ರ ನಡೆಯದೆ ವಿಶ್ವದಲ್ಲಿಯೇ ಇಂತಹ ಸಂಸ್ಥೆಗಳಿರಬೇಕು. ವಿಶ್ವದಲ್ಲಿಯ ಜನತೆಯ ಪ್ರಗತಿಯೇ ವಿಶ್ವದ ಪ್ರಗತಿ—ಒಂದು ನಾಡು ಒಂದು ದೇಶ—ಒಂದು ಖಂಡವೆನ್ನದೆ ಎಲ್ಲರೂ ವಿಶ್ವದ ಜನತೆ ವಿಶ್ವದ ಪ್ರತಿಯೊಂದು ಜನತೆಯ ಯೋಗ್ಯ ವಿಕಾಸವನ್ನು ವಿಶ್ವ ಸಂಸ್ಥೆಯು ಗಮನಿಸಿದಾಗಲೇ ವಿಶ್ವ ಕಲ್ಯಾಣ ಸಾಧ್ಯ—ವಿಶ್ವ ಕಲ್ಯಾಣವನ್ನು ಉದ್ದೇಶಿಸಿ ಪ್ರಯತ್ನಿಸುವ ಪ್ರತಿಯೊಬ್ಬ ಸಮಾಜವಾದಿ ಮುಂದಾಳುವೂ ದೇಶ ದೇಶದ ಶೈಕ್ಷಣಿಕ ಶಾಖೆಯ ಮೇಲಧಿಕಾರಿಗಳೂ ನಮ್ಮ ಇಂದಿನ ಶಿಕ್ಷಣದಲ್ಲಿಯ ಈ ಕುಂದು ಕೊರತೆಗಳನ್ನು ಪರಿಶೀಲಿಸಿ ವಿಶ್ವದ ಏಳಿಗೆಗೆ ದುಡಿಯುವದು ಅವರ ಕರ್ತವ್ಯ.

(ಸಂಗ್ರಹಿಸಿದ್ದು.)

ಕಥಾವಿಹಾರ

(೨ನೇ ಪುಟದಿಂದ)

ಪ್ಪಾ!' ಎಂದು ತಾಯಿ ಹೇಳುತ್ತಿರುವಾಗಲೇ ಮಗನು ಕೆಲವು ಪುಟಗಳನ್ನು ಓದಿ ಮುಗಿಸಿದ್ದನು.

೪

"ಮಗೂ"

"ಏನಪ್ಪಾ?"

"ಪರೀಕ್ಷೆ ಇಷ್ಟು ಬೇಗ ಮುಗಿಯಿತೇನೋ?

"ನಾವೇ ಪರೀಕ್ಷೆಯಾ ಮುಗಿಸಿ ಬಿಟ್ಟೆವಪ್ಪಾ" ಎಂದು ಮಗನು ವಿಜಯದ ಆನಂದ ತುಂದಿಲನಾಗಿ ಹೇಳಿದನು.

"ಅಂದರೆ....ಅಂದರೇನು ಮಗೂ?" ತಂದೆ ಆಶ್ಚರ್ಯದಿಂದ ಕೇಳಿದನು.

"ಪ್ರಶ್ನೆಪತ್ರಿಕೆ ಕಠಿಣವಾಗಿತ್ತು ವಿದ್ಯಾರ್ಥಿಗಳೆಲ್ಲಾ ಪ್ರಶ್ನೆ ಪತ್ರಿಕೆಗಳನ್ನು ಹರಿದು, ಖಾಲಿಯಾದ ಉತ್ತರ ಪುಸ್ತಕಗಳನ್ನೇ ಕೊಟ್ಟು, ಪರೀಕ್ಷಾ ಭವನದಿಂದ ಹೊರ ಬಂದೆವು."

"ಪ್ರಶ್ನೆ ಪತ್ರಿಕೆ ಕಠಿಣವಾಗಿತ್ತೆಂದು ಹೇಳಿದೆಯಲ್ಲಾ! ಅಧ್ಯಾಪಕರು ಹೇಳಿ ಕೊಡದ ವಿಷಯಗಳ ಮೇಲೆ ಪ್ರಶ್ನೆಗಳು ಬಂದಿದ್ದವೇ?"

"ಇಲ್ಲಪ್ಪಾ! ಪ್ರಶ್ನೆ ಪತ್ರಿಕೆಯಲ್ಲಿ ಸಾಕಷ್ಟು ಆಯ್ಕೆ (choice)ಗೆ ಅವಕಾಶವಿದ್ದಿರಲಿಲ್ಲ!"

"ಮಗೂ, ಆಯ್ಕೆಗಳನ್ನು ನಂಬಿ ವಿದ್ಯಾರ್ಥಿಗಳು ಕೈಕಟ್ಟಿ ಕುಳಿತುಕೊಳ್ಳಬಾರದು. ಎಲ್ಲಾ ವಿಷಯಗಳನ್ನು ಚೆನ್ನಾಗಿ ಕಲಿತುಕೊಂಡೇ ಪರೀಕ್ಷಾ ಭವನಕ್ಕೆ ಹೋಗಬೇಕು. ನಾವೆಲ್ಲ ಕಲಿಯುತಿದ್ದಾಗ ಪ್ರಶ್ನೆ ಪತ್ರಿಕೆಯಲ್ಲಿ ಆಯ್ಕೆಯೇ ಇರಲಿಲ್ಲ. ಈ ಮುಷ್ಕರಗಳೂ, ಬಹಿಷ್ಕಾರಗಳೂ ಇರಲಿಲ್ಲ. ಅಧ್ಯಾಪಕರೆಂದರೆ ವಿದ್ಯಾರ್ಥಿ ನಡುಗುತ್ತಿದ್ದರು ಅವರಲ್ಲಿ ಭಯಭಕ್ತಿಯೂ ಇದ್ದಿತ್ತು. ಆದರೆ...ಇಂದು........ ಎಲ್ಲಾ ಈ ಕಲಿಯುಗದ ಮಹಿಮೆ....!" ಎಂದು ತಂದೆ ಹೇಳುತ್ತಿರುವಾಗಲೇ ಮಗನು ಅಂದು ಪ್ರಶ್ನೆ ಪತ್ರಿಕೆ ಕಠಿಣವಾಗಿದ್ದುದರ ನಿಷೇಧಾರ್ಥವಾಗಿ ಊರ ರಸ್ತೆಯಲ್ಲಿ ನಡೆಯಲಿರುವ ಮೆರವಣಿಗೆಯಲ್ಲಿ ಭಾಗವಹಿಸಲು ಹೊರಟಿದ್ದನು!!



ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.



NAVAYUGA
REGD. NO. M. 3619

UDIPI, THURSDAY
1—9—1960

LICENSE NO. 31
Licensed to Post without Prepayment

ಮಹಿಳಾಮಂಡಳ

ಸೌಂದರ್ಯದ ಅನುಚಿತ ಲಾಭವೆತ್ತಬಾರದು

ರಕ್ಷಾಪತ್ರ, ಭಿತ್ತಿಪತ್ರ ಮೊದಲಾದ ಎಲ್ಲ ಜಾಹೀರಾತು ಸಾಧನಗಳಲ್ಲಿ ನಾರಿಯರ ಅಂಗಾಂಗಗಳ ಸೌಂದರ್ಯಜಾಲವನ್ನು ಹರಡಿ ಪ್ರಕಟಣಾಕರ್ತರು ಅನುಚಿತ ಲಾಭವೆತ್ತುತ್ತಾರೆ. ಈ ಪದ್ಧತಿಯಿಂದ ನಾರೀತ್ವ ಮತ್ತವರ ಪ್ರತಿಷ್ಠೆಗೆ ಕುಂದುಂಟಾಗುತ್ತದೆ.

ಆಧುನಿಕ ಯುಗವನ್ನು ವಿಜ್ಞಾನ ಮತ್ತು ಪ್ರಕಟಣೆಗಳ ಕಾಲವೆಂದು ಹೇಳಬಹುದು. ಜೀವನದ ಅನಂತ ಆಶೆ-ಆಕಾಂಕ್ಷೆಗಳು ಮತ್ತು ಅವಶ್ಯಕತೆಗಳ ಪೋಷಕ ಶಕ್ತಿಯಿಂದಾಗಿ ವಿಜ್ಞಾನವು ನಿತ್ಯವೂ ಅದ್ಭುತರೂಪದಲ್ಲಿ ವಿಕಾಸ ಹೊಂದುತ್ತಿದೆ. ಅಂತೆಯೇ ಪ್ರಕಟಣೆಗಳೂ ಸಮೃದ್ಧವಾಗುತ್ತಿವೆ. ಅನೇಕ ವಸ್ತುಗಳನ್ನು ಪ್ರಚಾರಗೊಳಿಸುವುದಕ್ಕೆ ಪ್ರಕಟಣೆಗಳೇ ಅಮೂಲ್ಯ ಸಾಧನ ಎಂಬ ಕಲ್ಪನೆ ಹುದುಗಿಹೋಗಿದೆ. ಇದರಿಂದ ಪ್ರಕಾಶಕರು ತಮ್ಮ ಪ್ರಕಟಣೆಗಳನ್ನು ಅಧಿಕಾಧಿಕ ಸುಂದರ, ಆಕರ್ಷಕ ಮತ್ತು ಮೋಹಕವಾಗಿಸಲು ಪ್ರಯಾಸಪಡುತ್ತಿದ್ದಾರೆ. ಹೀಗಾಗಿ ಸೌಂದರ್ಯ, ಆಕರ್ಷಣೆಗಳಿಗೆ ಸ್ತ್ರೀಯರ ಸೌಂದರ್ಯವೇ ಆಧಾರವಾಗಿರುತ್ತದೆ.

ಸ್ತ್ರೀಯ ಶೀಲ ಮತ್ತು ಅಶ್ಲೀಲ ಹಾವಭಾವ ಪ್ರದರ್ಶಕ ಚಿತ್ರಗಳು ಪ್ರಕಟಣೆಗಳಲ್ಲಿ ಬೆಳಕು ಕಾಣುತ್ತಿವೆ. ಕೆಲವೊಮ್ಮೆ ಇವು ಮರ್ಯಾದೆ ಮತ್ತು ಶಿಷ್ಟಾಚಾರಗಳ ಎಲ್ಲೆಯನ್ನು ಮೀರಿ ನಾರಿಯರ ನಾರೀತ್ವ ಮತ್ತು ಪ್ರತಿಷ್ಠೆಗಳಿಗೆ ಕುಠಾರ ಪ್ರಾಯವಾಗುತ್ತಿವೆ. ಇಂತಹ ಚಿತ್ರಗಳನ್ನು ನಾವು ಗಂಭೀರವಾಗಿ ವಿಮರ್ಶಿಸುವುದಾದರೆ, ನಾರಿಯರ ಕೋಮಲತೆ ಮತ್ತಾಕೆಯ ಶಾರೀರಿಕ ಸೌಂದರ್ಯವು ಪುರುಷರ ಬರ್ಬರತೆಯ ತೃಪ್ತಿಗೋಸ್ಕರವಾಗಿರುವುದು ಎಂಬ ಭಾವನೆ ಇಂತಹ ಪ್ರಕಟಣಾ ಕರ್ತರಲ್ಲಿರುವುದೆಂದು ಹೇಳಬಹುದು.

"ನಾರಿಯರ ಸೌಂದರ್ಯಮಯ ಅಶ್ಲೀಲ ಚಿತ್ರಗಳನ್ನು ಕೇವಲ, ಪ್ರಚಾರಕ್ಕಾಗಿ ಮಾತ್ರ ಪ್ರಕಟಿಸುವೆವಲ್ಲದೆ ಅವರ ಮರ್ಯಾದೆ, ಪ್ರತಿಷ್ಠೆಗಳ ಮೇಲೆ ಕೆಸರೆರಚುವುದಕ್ಕಲ್ಲ; ಸೌಂದರ್ಯವೆಂದೂ ಅಶ್ಲೀಲವಾಗಿರುವುದಿಲ್ಲ; ಪ್ರೇಕ್ಷಕನ ದೃಷ್ಟಿಯಲ್ಲಿ ಮಾತ್ರ ಅಶ್ಲೀಲತೆಯಿರುವುದು" ಎಂದು ಹೇಳುವುದರಿಂದ ಮಾನವನ ಅಂತಃಕರಣದ ಮನೋವೈಜ್ಞಾನಿಕ ಪೃಷ್ಠಭೂಮಿಯನ್ನು ಕೆದಕಿದಂತಾಗುವುದು. ಇಂದು ಆದರ್ಶಕ್ಕಿಂತ ಪತನದತ್ತ, ಗುಣಕ್ಕಿಂತ ಅವಗುಣದತ್ತ ಮಾನವ ಪ್ರವೃತ್ತಿ ಚಲಿಸುತ್ತಿರುವುದು ಸತ್ಯದಿಂದ ಎಳ್ಳಷ್ಟೂ ದೂರವಲ್ಲ. ನಾರಿಯ ಅಶ್ಲೀಲ ಚಿತ್ರ ಮಾನವ ಹೃದಯದ ಉದ್ದಾಮ ವಾಸನೆಯನ್ನು ಉದ್ರಿಕ್ತಗೊಳಿಸುವಷ್ಟು ವಸ್ತುವಿನ ಪ್ರಚಾರ ಮಾಡುವುದಿಲ್ಲ. ಕುಶಲ ಪ್ರಕಟಣಾಕರ್ತರು ಮನುಷ್ಯನ ಈ ದುರ್ಬಲತೆಯನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ನವಯುವಕರು ಈ ಮೋಹದ ಮಹಾಜಾಲಕ್ಕೆ ಶೀಘ್ರ ಸಿಕ್ಕಿಬೀಳುತ್ತಿರುವುದನ್ನು ನಾವು ನೋಡುತ್ತೇವೆ.

ಪ್ರಚಾರ ಮಾಡುವುದೇ ಪ್ರಕಟಣೆಗಳ ಮುಖ್ಯ ಉದ್ದೇಶವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ, ನಾವು ಅದರ ಪರಿಣಾಮವನ್ನೂ ಮನನಮಾಡಬೇಕಾಗಿದೆ. ಪ್ರಕಟಿತ ವಸ್ತುಗಳ ಉಪಯೋಗವನ್ನು ಪುರುಷರೂ ಸ್ತ್ರೀಯರೂ ಮಾಡುತ್ತಾರೆ; ಆದರೆ, ಅಂತಹ ಪ್ರಕಟಣೆಯನ್ನು ಸೌಂದರ್ಯೀಕರಣಗೊಳಿಸುವಲ್ಲಿ ಸ್ತ್ರೀಯರ ಚಿತ್ರಗಳನ್ನು ಮಾತ್ರ ಏಕೆ ಉಪಯೋಗಿಸಬೇಕು? ನಾರಿಯ ಕೋಮಲ ಮತ್ತು ಸುಂದರ ಅಂಗಗಳ ಹೆಸರುಗಳೇ ಪುರುಷನ ದಾನವ ಬುದ್ಧಿಗೆ ರಂಜಕವಾಗಿರುವುದು ಮತ್ತು ಇದರಿಂದ ಅನುಚಿತ ಲಾಭವನ್ನು ವ್ಯಾಪಾರಿಯು ಪಡೆಯ ಬಯಸುವುದೇ ಕಾರಣವೆಂಬುದು ಸುಸ್ಪಷ್ಟವಿದೆ.

"ಸೌಂದರ್ಯವು ಎಂದಿಗೂ ಅಶ್ಲೀಲವಾಗುವುದಿಲ್ಲ" ಎಂಬ ಕಥನವು ಸತ್ಯವಾದುದೇ. "ಅಶ್ಲೀಲತೆ ಪ್ರೇಕ್ಷಕನ ದೃಷ್ಟಿಯಲ್ಲಿದೆ" ಇದನ್ನೂ ಒಪ್ಪಬೇಕಾಗಿದೆ. ಆದರೆ, ನಾರಿಯರ ಅಂಗಗಳನ್ನು ಉಲ್ಲೇಖಿಸಿಯೇ ಇದನ್ನು ವಿಶ್ಲೇಷಿಸಬೇಕಾದುದೂ ಏಕೆ? ಪ್ರಕೃತಿಯ ಅನಂತ ಹೃದಯಹಾರಿ ಮತ್ತು ಸುಂದರ ಹೂಗಳಲ್ಲಿ ಅಸೀಮ ಅಕಲಂಕ ಸೌಂದರ್ಯವು ನಮಗೆ ತೋರುವುದಿಲ್ಲವೆ? ಪ್ರಕಟಣೆಗಳಿಗೆ ಇಂತಹ ಪ್ರಾಕೃತಿಕ ಸುಂದರ ದೃಶ್ಯಗಳನ್ನು ಏಕೆ ತೆಗೆದುಕೊಳ್ಳಬಾರದು? ವೀಕ್ಷಕನ ದೃಷ್ಟಿ ಪುಷ್ಪದ ಅಪರಿವರ್ತಿತ ಮತ್ತು ಅಚಂಚಲವಾದ ಹಾಗೂ ನಾರಿಯ ಚಂಚಲವಾದ ಸೌಂದರ್ಯವೆರಡನ್ನೂ ನೋಡಬಲ್ಲುದು; ಆದರೆ, ಹೂವಿನ ಸುಂದರತೆಯು ಸ್ಥಿರವಾಗಿದೆ; ಸದಾಕಾಲ ಅದು ಸುಂದರವಾಗಿಯೇ ಇರುತ್ತದೆ. ಅದರ ನಗ್ನ ಸೌಂದರ್ಯದಲ್ಲಿ ಯಾರೇ ಆದರೂ ಶೀಲತೆ ಅಶ್ಲೀಲತೆಗಳ ಬಗ್ಗೆ ಕಾಳಜಿವಹಿಸುವ ಗೋಜಿಗೆ ಹೋಗುವುದಿಲ್ಲ; ನಾರಿಯ ಸೌಂದರ್ಯಮಾನ ಈ ವಿವಾದಕ್ಕೆ ಗುರಿಯಾಗಿದೆ. ಇದೇಕೆ ಹೀಗೆ? 'ವಾಸನೆ' ಯೇ ಈ ವಿವಾದವೇಳುವುದಕ್ಕೆ ಮೂಲ ಕಾರಣವೆಂಬ ಉತ್ತರ ಆಗ ಬಂದೇ ಬರುತ್ತದೆ.

ಉದ್ದನೆಯ ಪ್ರಕಟಣೆಗಳಲ್ಲಿ, ಜಾಹೀರಾತುಗಳಲ್ಲಿ, ಕೇಲೆಂಡರ್‌ಗಳಲ್ಲಿ ನಾರಿಯರ ಸುಂದರ ಚಿತ್ರಗಳನ್ನು ಪ್ರಕಟಿಸಿದರೆ, ಪ್ರಚಾರದೃಷ್ಟಿಯಿಂದ ವಸ್ತುವಿನ ಬೇಡಿಕೆ ಹೆಚ್ಚುವುದು ಖಂಡಿತವೇ. ಆದರೆ, ಅದರ ಜತೆಗೇನೇ ಸಮಾಜದಲ್ಲಿ ವಿಕೃತ ಮನೋವೃತ್ತಿಯೂ ವಿಕಾಸಹೊಂದುವುದು ಹೀಗೆ ವಿಕಸಿತವಾದ ವಿಕೃತ ಮನೋವೃತ್ತಿಯು ಇಂದಿನ ಸಮಾಜದ ಮೇಲೆ ಬಹಳಷ್ಟು ದುಷ್ಪರಿಣಾಮ ಬೀರಲಾರದೆಂದಿಟ್ಟುಕೊಂಡರೂ ಮುಂದಿನ ಪೀಳಿಗೆಗಳ ಮೇಲೆ ಸಾಕಷ್ಟು ಕೆಟ್ಟ ಪ್ರಭಾವವನ್ನು ಹರಡಿಸಿಯೇ ಬಿಡುವುದು. ಇದು ಭಾವೀ ಸಮಾಜಕ್ಕೆ ಘಾತಕವಾದುದು. ಅಲ್ಲದೇ ನಾರಿಯರ ಹಾವಭಾವ ಅಂಗಲಾವಣ್ಯಗಳನ್ನು ಮಾನವನ ಕಾಮ ವಾಸನೆಗಳನ್ನು ಉದ್ರಿಕ್ತಗೊಳಿಸಿ, ತನ್ಮೂಲಕ ಅನುಚಿತ ಲಾಭ ಪಡೆಯ ಬಯಸುವುದೆಂದರೆ, ನಾರೀತ್ವದ ಮೇಲೆ ಮತ್ತು ನಾರಿಯರ ಮರ್ಯಾದೆ, ಪ್ರತಿಷ್ಠೆಯ ಮೇಲೆ ಮಾಡಿದ ಅಪಚಾರದಂತೆಯೇ ಸರಿ.

(ನ. ಭಾ. ಟಾಯಿಮ್ಸಿನ ಕೃಪೆಯಿಂದ)

ಚಿಲ್ಲರೆ ನಯೆಪೈಸೆಗಳೆ?
ಹತ್ತು, ನೂರರ ನೋಟುಗಳೆ?
ಯಾವುದೇ ಇರಲಿ—
ವ್ಯವಸ್ಥಿತವಾಗಿ ಉಳಿಸಿ;
ಅಭಿವೃದ್ಧಿಯನು ಗಳಿಸಿ.

ದಿನದ ಇಪ್ಪತ್ತೈದು ನಯೆಪೈಸೆಗಳು
ಏಳು ವರುಷಗಳಲ್ಲಿ ಏಳುನೂರು
ರೂಪಾಯಿಗಳ ನಿಧಿಯನ್ನು
ನಿಮಗೆ ತಂದೊಪ್ಪಿಸುವ,

ಪಿಗ್ಮಿ

ಸಿಂಡಿಕೇಟ್ ಬೇಂಕ್ ಮೊದಲಾಗಿ
ಪ್ರಾರಂಭಿಸಿದ ಮತ್ತೀಗ ಸರ್ವ
ಜನಪ್ರಿಯವಾದ ಚಿಕ್ಕ
ಉಳಿತಾಯ ಯೋಜನೆ.

ವರುಷದ ಒಂದು ಸಾವಿರ ರೂಪಾಯಿಗಳು
(ನೀವು ಇನ್ನೂರ ಐವತ್ತರಿಂದಲೂ
ಪ್ರಾರಂಭಿಸಬಹುದು)
ಮೂವತ್ತೈದು ವರುಷಗಳಲ್ಲಿ ನೂರು
ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿಗೆ
ಸಂಪತ್ತನ್ನು ಕೂಡಿಸಿ ಕೊಡುವ

ಇನ್ವೆಸ್ಟರ್ಸ್ ಏಜನ್ಸಿ

ಭಾರತೀಯ ಬೇಂಕಿಂಗ್ ಕ್ಷೇತ್ರದಲ್ಲೇ
ನವೀನವಾಗಿ ಸಿಂಡಿಕೇಟ್ ಬೇಂಕ್
ಕೈಗೊಂಡಿರುವ ಮತ್ತೀಗ ಜನಾನುರಾಗ
ಗಳಿಸುತ್ತಿರುವ ವಿನಿಯೋಗ ವಿಭಾಗ

ನಿಮಗೆ ಬೇಕಾದ ವಿವರಗಳನ್ನೀಯಲು ನಮ್ಮ ನೂರಮೂವತ್ತೊಂಬತ್ತು ಶಾಖೆಗಳು ಸಿದ್ಧವಾಗಿವೆ.
ಅಥವಾ ನೀವು ನೇರವಾಗಿ ನಮ್ಮ ಪ್ರಧಾನ ಕಾರ್ಯಾಲಯಕ್ಕೆ ಬರೆಯಬಹುದು.

ದಯಮಾಡಿ ಯೋಚಿಸಿ:

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ
ಸ್ಥಾಪನೆ: ೧೯೨೫

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಲಹೆಯೂ ಯುವುದು. ಕಾಯಿದೆಯು ಸರಿಯಾಗಿ ಪಾಲಿಸಲ್ಪಡುವಂತೆ ಮತ್ತು ಕೇಂದ್ರದಿಂದ ಕೊಡಲಾಗುವ ಸಹಾಯಧನವು ನಿಯಮಿತ ಉದ್ದೇಶಗಳಿಗಾಗಿ ಸುಯೋಗ್ಯ ರೀತಿಯಲ್ಲಿ ವ್ಯಯವಾಗುವಂತೆ ನೋಡಿಕೊಳ್ಳಲು ಈ ಮಂಡಳಿಯು ಹೊಣೆಗಾರವಾಗಿರುವುದು. ನಾಗಾ ಪ್ರದೇಶದ ಈಗಿನ ಆಯವು ಐದು ಲಕ್ಷ ರೂಪಾಯಿಗೂ ಕಡಿಮೆಯಿದ್ದು ಕೇಂದ್ರವು ೪ ಕೋಟಿಗೂ ಮಿಕ್ಕಿ ವ್ಯಯಿಸುತ್ತಿರುವುದರಿಂದ ಈ ವ್ಯವಸ್ಥೆ ಅವಶ್ಯವಾಗಿದೆ. ಮುಂದಕ್ಕಾದರೂ ಕೇಂದ್ರದ ವಿದೇಶ ವ್ಯವಹಾರ ಮಂತ್ರಿಖಾತೆಯಡಿಯಲ್ಲಿಯೇ ಈ ನೂತನ ರಾಜ್ಯವಿರುವುದಕ್ಕೆ ಉಭಯತರರೂ ಒಪ್ಪಿದ್ದಾರೆ. ನಾಗಾ ಪ್ರದೇಶದ ಮೂರನೆಯ ಯೋಜನೆಯಲ್ಲಿ ಮಾರ್ಗ ನಿರ್ಮಾಣಕ್ಕೆ ವಿಶೇಷ ಗಮನ ಹರಿಸಲಾಗಿದೆ. ೧೯೬೦—೬೧ರ ಬಗ್ಗೆ ರೂ. ೧೫೮ ಲಕ್ಷಗಳ ಅಭಿವೃದ್ಧಿ ಕಾರ್ಯಕ್ರಮಗಳು ಈಗಾಗಲೇ ಮಂಜೂರಾಗಿವೆ. ಇಲ್ಲಿನ ಮುಖ್ಯ ಆಯವಾದ ಅರಣ್ಯೋತ್ಪಾದನೆಯು ಸದ್ಯ ವಾರ್ಷಿಕ ೩ ಲಕ್ಷ ರೂಪಾಯಿಗಳಾಗಿದ್ದು ಇದನ್ನು ೧೦ ಲಕ್ಷಗಳಿಗೇರಿಸುವ ಅಪೇಕ್ಷೆಯಿರುವುದು.

ನಾಗಾ ನಾಯಕರಲ್ಲಿ ಸದ್ಯ ನಿಯೋಗದ ನಾಯಕರಾದ ಡಾ॥ ಇಂಕ್ಲೋಂಗ್ಲಿಬಾ ಓರವರು ಪ್ರಧಾನರು. ಇವರು ನಾಗಾ ರಾಷ್ಟ್ರೀಯ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಈ ಸಮಿತಿಯು ಪ್ರತ್ಯೇಕ ನಾಗಾರಾಜ್ಯದ ಸ್ಥಾಪನೆಗಾಗಿ ರಚಿಸಲ್ಪಟ್ಟಿದ್ದರೂ ಇದನ್ನು ಮುಂದಕ್ಕೂ ಮುಂದುವರಿಸಿಕೊಂಡು ಹೋಗುವ ಮತ್ತು ಒಂದು ರಾಜಕೀಯ ಪಕ್ಷವಾಗಿ ಪರಿವರ್ತಿಸುವ ಯೋಜನೆಯೂ ಇರುವಂತೆ ತೋರುತ್ತಿದೆ.

ಬಹುಕಾಲದಿಂದ ಅತೃಪ್ತರಾಗಿರುವ ಈ ನಾಗಾ ಜನಾಂಗಕ್ಕೆ ತನ್ನ ಆಶಯವು ಕಾರ್ಯಗತವಾದುದರಿಂದ ಅಲ್ಲಿ ಇನ್ನು ಮುಂದಕ್ಕಾದರೂ ಶಾಂತತೆ ನೆಲಸಬಹುದೆಂಬ ಆಶೆಯನ್ನು ವ್ಯಕ್ತಪಡಿಸಬಹುದು. ಆದರೂ ಫಿಜೋವಿನ ಅನುಯಾಯಿಗಳು ಈಗೇನು ಆಟವಾಡುತ್ತಿರುವರೆಂದು ಮುಂದೆ ತಾನೇ ಪ್ರಕಟವಾಗಬೇಕಾಗಿದೆ.

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೋ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

40th year of publication. 8-9-1960 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೨ No. 2

ಬೆಲೆ 0-13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಕತ್ತಲೆಯ ಕಾಂಗೊದಲ್ಲಿ ಕತ್ತಿಗಳ ಮೇಲಾಟ

ಕಾಂಗೋ ಗಣತಂತ್ರದಲ್ಲಿ ಎದ್ದಿರುವ ಭಿನ್ನಾಭಿಪ್ರಾಯ ಉಲ್ಬಣಾವಸ್ಥೆಗೇರಿದೆ; ಪೂರ್ವ ಪಶ್ಚಿಮ ಶಕ್ತಿಬಣಗಳು ತಮ್ಮ ಬಲಪ್ರದರ್ಶನಕ್ಕೆ ಕಾಂಗೋವನ್ನೇ ರಂಗಸ್ಥಳವನ್ನಾಗಿ ರೂಪಿಸುತ್ತಿರುವಂತೆ ತೋರತೊಡಗಿದೆ. ಈ ನಡುವೆ ಸಂಯುಕ್ತ ರಾಷ್ಟ್ರಸಂಘ ಗೂಡಿನಲ್ಲಿ ಬಿದ್ದ ಇಲಿಯಾಗಿದೆ.

ಜಾಗತಿಕ ರಾಜಕಾರಣದಲ್ಲಿ ಮಹತ್ವದ ಸ್ಥಾನವನ್ನು ಪಡೆದ ಕಾಂಗೊವಿನಲ್ಲಿ ಪೂರ್ವ ಪಶ್ಚಿಮ ರಾಷ್ಟ್ರಗಳು ಪರಸ್ಪರ ಹೋರಾಟ ನಡೆಸುವ ಹಂಚಿಕೆಯನ್ನು ಮಾಡುತ್ತಿರುವಂತೆ ತೋರುತ್ತದೆ. ಮೂಲ ಕಾಂಗೋ ರಾಜ್ಯದಿಂದ ಕಟಾಂಗವು ಕೆಲ ದಿನಗಳಲ್ಲಿಯೇ ಸಿಡಿದು ಹೋದುದಲ್ಲದೇ ಮತ್ತೆ ಪುನಃ ಕಸಾಯ್ ರಾಜ್ಯವು ಪ್ರತ್ಯೇಕ ಸ್ವತಂತ್ರ ರಾಷ್ಟ್ರವೆಂದು ಘೋಷಿಸಿಕೊಂಡಿದೆ. ಕಾಂಗೋವಿನಿಂದ ಬೆಲ್ಜಿಯಂ ಸೇನೆಯನ್ನು ಹೊರಗಟ್ಟಲು ತೆರಳಿದ ಸಂಯುಕ್ತ ರಾಷ್ಟ್ರ ಸಂಸ್ಥೆಯ ಸೇನೆಯು ಸ್ವಯಂ ಕಾಂಗೋ ಸೈನಿಕರಿಂದಲೇ ಪೀಡಿತವಾಗ ಬೇಕಾದ ಪರಿಸ್ಥಿತಿ ತಲೆದೋರಿದುದು ಖೇದಾರ್ಹ. ಗಣರಾಜ್ಯ ಕಾಂಗೋವನ್ನು ವಿಶ್ವದ ಬೇರೆ ಬೇರೆ ರಾಷ್ಟ್ರಗಳು ಮನ್ನಿಸಲು ಮುಂದಾಗಿವೆ; ಆದರೆ, ಕಾಂಗೊವಿನಿಂದ ಬೇರೆಯಾದ ಕಟಾಂಗ ಮತ್ತು ಕಸಾಯ್ ಪ್ರಾಂತಗಳು ತಮ್ಮ ಸರಕಾರಗಳನ್ನೂ ಮನ್ನಿಸಬೇಕೆಂದು ಕೇಳಿಕೊಂಡಿರುವುದರಿಂದ—ವಿಚಿತ್ರ ಸನ್ನಿವೇಶವೊಂದು ಉದ್ಭವಿಸಿದೆ. ಪೂರ್ವ—ಪಶ್ಚಿಮ ರಾಷ್ಟ್ರಗಳು ಬಲಾಬಲ ಪ್ರದರ್ಶನಕ್ಕೆ ಆಫ್ರಿಕೆಯ ಕತ್ತಲೆಯ ಕಾಂಗೊ ಉತ್ತಮ ಸ್ಥಳವೆಂದು ಭಾವಿಸಿದಂತೆ ದೃಗ್ಗೋಚರವಾಗತೊಡಗಿದೆ. ಇದಕ್ಕೆ ಪುಷ್ಟಿಯೀಯುವಂತೆ ಸಂಯುಕ್ತ ಅರಬ ರಾಷ್ಟ್ರದ ಕಮ್ಯುನಿಸ್ಟ್ ಚೀನಾ ನಿಯುಕ್ತ ರಾಯಭಾರಿಯು ಲಿಯೋಪಾಲ್ಡವಿಲ್ಲ (ಕಾಂಗೋದ ರಾಜಧಾನಿ)ವನ್ನು ತಲಪಿರುವ ವಾರ್ತೆ ಬಂದಿರುತ್ತದೆ. ಸಂಯುಕ್ತರಾಷ್ಟ್ರ ಸಂಸ್ಥೆಯು ಕಾಂಗೋವಿನ ಬಗ್ಗೆ ಕಾರ್ಯಾಚರಣೆ ಮಾಡುತ್ತಿರುವಾಗಲೇ ಜಗತ್ತಿನ ಎರಡು ರಾಜಕೀಯ ಬಣಗಳು ಪರಸ್ಪರ ಸ್ಪರ್ಧಾಭಾವನೆಯನ್ನು ಪ್ರದರ್ಶಿಸುತ್ತಿವೆಯೋ ಎಂಬ ಸಂದೇಹಕ್ಕೆ ಈ ಆಗಮನವು ಆಸ್ಪದವೀಯುತ್ತಿದೆ.

ಪ್ರತಿಪಕ್ಷದ ಕೂಟನೀತಿಜ್ಞರು ಒಬ್ಬರು ಇನ್ನೊಬ್ಬರ ಆಗಮನ—ನಿರ್ಗಮನಗಳ ಮೇಲೆ ವಿಶೇಷ ದೃಷ್ಟಿಯಿಟ್ಟುಕೊಂಡ, ಒಮ್ಮಿಂದೊಮ್ಮೆಲೇ ತಮ್ಮ ನಡುವೆ ಓರ್ವ ಹೊಸ ವ್ಯಕ್ತಿ ಬಂದು ನಿಂತಿರುವನೆಂದು ತಿಳಿಯತೊಡಗಿದ್ದಾರೆ. ಕಾಂಗೋವಿನ ಎರಡೂ ಪಕ್ಷಗಳು ಕಮ್ಯುನಿಸ್ಟ್ ಚೀನವು ರಾಷ್ಟ್ರದಲ್ಲಿ ಕಾಲೂರಿದ್ದುದರಿಂದ, ಸಾಮರಸ್ಯದ ದೃಷ್ಟಿಯಲ್ಲಿ ಮಹತ್ವಪೂರ್ಣ ಹಾಗೂ ಉಪದ್ರವಗಳನ್ನು ತಂದೊಡ್ಡುವ ಇರಾದೆಯದಕ್ಕಿದೆ ಎಂದು ಗುಸು ಗುಸು ಆಡಿಕೊಳ್ಳತೊಡಗಿದ್ದಾರೆ. ಚೀನೀಯ ರಾಜದೂತ ಶ್ರೀ ಟೀನ್ ಚಿಯೊ ಟಾಓರು ತಾನು ಕಾಂಗೋದ ವಿದೇಶ ಮಂತ್ರಿ ಶ್ರೀ ಜಸ್ಟಿನ್ ಬಂಬೋಕೊರವರ ಆಮಂತ್ರಣದ ಮೇಲೆ ಬಂದಿರುವೆನಲ್ಲದೆ ಯಾವುದೇ ರಾಜಕೀಯ ಗುಪ್ತ ಯೋಜನೆಯನ್ನಿಟ್ಟುಕೊಂಡಲ್ಲವೆಂದು ಉದ್ಗರಿಸಿರುವರಾದರೂ ಈ ಮಾತಿನಲ್ಲಿ ಸಂಪೂರ್ಣ ವಿಶ್ವಾಸ ಯಾರಿಗೂ ಹುಟ್ಟಿಲ್ಲ. ಕೂಮಿಂಟಾಂಗದ ರಾಜದೂತನಿಗೆ ತನ್ನ ಪರಿಚಯ ಪತ್ರವನ್ನು ನೀಡಲು ಕಾಂಗೊ ಸರಕಾರ ಮೂರು ವಾರಗಳಿಂದಲೂ ತಡೆಯುತ್ತಿರುವುದರಿಂದ ಪಾಶ್ಚಾತ್ಯ ಬಣಗಳಿಗೆ ತುಂಬ ವಿವಂಚನೆಯು ಹುಟ್ಟಿಕೊಂಡಿದೆ. ಇದರೊಡನೆ ಇನ್ನೊಂದು ಘಟನೆಯೂ ಈ ಚಿಂತೆಯನ್ನು ಹೆಚ್ಚಿಸುವಂತಿದೆ. ಜೆಕೆಸ್ಲೊವಾಕಿಯಾದ ಒಂದು ಶಿಷ್ಟ ಮಂಡಳಿಯು ಕಾಂಗೊವಿನ ರಾಜಧಾನಿಯಲ್ಲಿ ತಂಗಿ, ಸರಕಾರದೊಡನೆ, ವ್ಯಾಪಾರಿಕ ಒಪ್ಪಂದವನ್ನು ಮಾಡುವ ವಿಚಾರ ವಿಮರ್ಶೆ ನಡೆಸ ತೊಡಗಿದೆ. ಈ 'ವ್ಯಾಪಾರ ಒಪ್ಪಂದ'ದಲ್ಲಿಯೂ ಏನಾದರೂ ರಹಸ್ಯವಡಗಿಲ್ಲವೆಂಬ ಧೈರ್ಯ ಯಾರಲ್ಲಿಯೂ ಉಳಿದಿಲ್ಲ.

ಪೂರ್ವ ಯುರೋಪಿನ ರಾಜಕಾರಣಿಗಳು ಕಾಂಗೋ ಗಣತಂತ್ರವು ಅತ್ಯಂತ ಋಣಪಾತ್ರ ದೇಶವೆಂದೂ ಅದರ ಆರ್ಥಿಕ ಕಠಿನತೆಗಳು ಕೇವಲ ತಾತ್ಕಾಲಿಕವಾಗಿರುವುವೆಂದೂ ಹೇಳುತ್ತಾರೆ. ಪಶ್ಚಿಮ ರಾಜಕೀಯವಾದಿಗಳ ಅಭಿಪ್ರಾಯದಂತೆ, ಜೆಕೆಸ್ಲೊವಾಕಿಯಾವು ತ್ವರಿತದಲ್ಲಿಯೇ ಕಾಂಗೊವಿಗೆ ಉಪಭೋಗದ ಸಾಮಗ್ರಿಗಳು, ಶಸ್ತ್ರಾಸ್ತ್ರಗಳು ಮತ್ತು ಕಾರಖಾನೆಗಳು ಮೊದಲಾದುವನ್ನು ಅನುಕೂಲ ಶರ್ತಗಳ ಮೇಲೆ ಕೊಡಬಹುದು. ಈ ಕೊಡುಗೆಯ ಭಯದಿಂದ ಅವರು ಚಿಂತಿತರಾಗಿದ್ದಾರೆ.

ವಿಶ್ವದ ಬೇರೆ ಬೇರೆ ಕಮ್ಯುನಿಸ್ಟ ರಾಷ್ಟ್ರಗಳು ಕಾಂಗೊವಿಗೆ ನಾನಾಪ್ರಕಾರದ ನೆರವು ನೀಡಲು ಮುಂದಾಗಿವೆ; ಮತ್ತು ಅದಕ್ಕೆ ಆವಶ್ಯಕ ತಯಾರಿಯನ್ನೂ ನಡೆಸಹತ್ತಿವೆ. ರಶ್ಯವು ೧೫೧ ಶಿಷ್ಯ ವೃತ್ತಿಗಳು, ೫ ವಿಮಾನ, ೬ ಹಡಗ ಆಹಾರಧಾನ್ಯ, ೨೪ ವೈದ್ಯರ ದಳ ೧೦೦ ನೇಗಿಲ ಪ್ರಕಾರದ ಟ್ರಕ್ ಮತ್ತೊಂದು ಇಲ್ಯೂಶಿನ್ ವಿಮಾನಗಳನ್ನು ಕೊಡಲು ಒಪ್ಪಿರುತ್ತದೆ. ಈ ವಿಮಾನವು ಕಾಂಗೋ ಪ್ರಧಾನಿ ಶ್ರೀ ಲುಮುಂಬಾರವರ ವ್ಯಕ್ತಿಗತ ಉಪಯೋಗಕ್ಕಾಗಿರುವುದಂತೆ.

ಈ ಕೊಡುಗೆಯನ್ನು ನಾವು ಕೇಳುವಾಗ, ಕೆಲವೊಂದು ವಿಚಾರಗಳತ್ತ ಅವಶ್ಯ ಗಮನ ಹರಿಸಬೇಕಾಗುತ್ತದೆ: ರಶ್ಯ ಮತ್ತು ಅಮೆರಿಕೆಗಳು ಯಾವುದೇ ಸಹಾಯವನ್ನು ನೀಡಿದ್ದರೂ ಅದು ಯುಕ್ತ ರಾಷ್ಟ್ರಸಂಘದ ಮುಖಾಂತರವಾದುದರಿಂದ ಅವುಗಳಿಗೆ ರಾಜಕೀಯ ಮಹತ್ವವೇನೂ ಇರಲಾರದು. ಆದರೆ, ಈ ಬಗ್ಗೆ ಕೆಲವೊಂದು ಅಪವಾದಗಳೂ ಎದ್ದಿವೆ. ಅಮೆರಿಕೆಯ ಶಿಷ್ಯವೃತ್ತಿಗಳು ಉಭಯ ದೇಶೀಯ ಸಂಧಿಯಲ್ಲಿ ಅಂತರ್ಗತವಾಗಿವೆ. ಅಮೆರಿಕೆಯ ರಾಯಭಾರಿ ಕಛೇರಿಯಲ್ಲಿ ಉಮೇದ್ವಾರರು ನಾಮಾಂಕನಗೊಳಿಸಬೇಕು. ಈಗಾಗಲೇ ಸುಮಾರು ಒಂದು ಸಾವಿರ ಉತ್ಸಾಹಿಗಳು ಮುಂದೆ ಬಂದಿದ್ದಾರೆ. ಈ ಶಿಷ್ಯ ವೃತ್ತಿಗಳು ಮೂರರಿಂದ ಆರು ತಿಂಗಳುಗಳವರೆಗಿದ್ದು, ಕಾಂಗೋವಿನ ವಿಧಾಯಕ, ವಕೀಲ ಪತ್ರಕಾರ, ನರ್ಸ್ ಮತ್ತಿತರ ವ್ಯಕ್ತಿಗಳಿಗೆ ಅಲ್ಪಕಾಲಿಕ ಪಾಠ್ಯಕ್ರಮದಂತೆ ತರ

(೧೨ನೇ ಪುಟ ನೋಡಿರಿ)



ಶಾಂತಿಗಾಗಿ ಅಣುಶಕ್ತಿ

೧. ಯುಕ್ತರಾಷ್ಟ್ರ ಸಂಘದಲ್ಲಿ ಅಮೆರಿಕೆಯ ಅಧ್ಯಕ್ಷ ಐಸನ್ ಹಾವರರು ಶಾಂತಿಗಾಗಿ ಅಣುಶಕ್ತಿಯನ್ನು ಬಳಸಬೇಕೆಂದು ೧೯೫೩ರಲ್ಲಿ ವಿನಂತಿಸಿದರು. ಇದರನ್ವಯ, ಅಂತಾರಾಷ್ಟ್ರೀಯ ಅಣುಶಕ್ತಿ ಸಮಿತಿಯ ರಚನೆಯಾಯಿತು. ೨. ಅಣುಶಕ್ತಿಯ ಶಾಂತ ಉಪಯೋಗ ಮಾಡುವವರಿಗೆ ಫೋರ್ಡ್ ಮೋಟಾರು ಕಂಪನಿಯು ೭೫ ಸಾವಿರ ಡಾಲರ್ ಮತ್ತು ಹತ್ತು ಚಿನ್ನದ ಪದಕಗಳೊಂದರ ೧೦ ಬಹುಮಾನಗಳನ್ನೂ ಸ್ಥಾಪಿಸಿದೆ. ೩. ವೈದ್ಯಕೀಯದಲ್ಲಿ ಅಣುಶಕ್ತಿ ಹಲವಾರು ರೋಗ ಚಿಕಿತ್ಸೆಗೆ ನೆರವಾಗುವುದೆಂದು ತಿಳಿದುಬಂದಿದೆ.

ESTD. 1921

NAVAYUGA
KANNADA WEEKLY, UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

●

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಪ್ರತಿಜ್ಞೆ ಪೂರ್ತಿಯಾಯಿತು!

> ಮಾತೃಭೂಮಿಯ ಪಾರತಂತ್ರ್ಯವನ್ನು ದೂರೀಕರಿಸಲು ಬದ್ಧಕಂಕಣನಾದ ರಂಗಣ್ಣನಂತಹ ಉತ್ಸಾಹಿಗಳ ಆವಶ್ಯಕತೆ ಈಗ ಗಳಿಸಿದ ಸ್ವಾತಂತ್ರ್ಯ ರಕ್ಷಣೆಗೂ ಆತ್ಯಾವಶ್ಯವೆನಿಸುವುದಿಲ್ಲವೆ? ಸ್ವಾತಂತ್ರ್ಯ ಗಳಿಸುವಂತೆಯೇ ಅದನ್ನು ಉಳಿಸುವುದೂ ಪರಮ ಕಷ್ಟ.

ಶ್ರೀ ಎಚ್. ಆನಂದರಾಮ ಅಡಿಗ.

ರಂಗಣ್ಣ ತಿರುಗಿ ನೋಡಿದ. ಕಾರ್ಗತ್ತಲೆಯ ಕಪ್ಪುದಾರಿಯಲ್ಲಿ ಕೆಲವು ದೂರ ಬಂದು ನಿಂತು ನೋಡಿದ. ತನ್ನ ಎಂಟು ಜನ ಅನುಯಾಯಿಗಳು ಬಹುದೂರದಲ್ಲಿ ಬರುತ್ತಿದ್ದುದು ಗೋಚರವಾಯಿತು. ಕತ್ತಲೆಯನ್ನು ಸೀಳಿ ಕಂಠಕರಾಗಿ ರಂಗಣ್ಣನನ್ನು ಅನುಸರಿಸಿಬರುತ್ತಿರುವ ಅನುಯಾಯಿಗಳನ್ನು ಕೈತಟ್ಟಿ 'ಬೇಗ ಬನ್ನಿರೆಂ'ದ ರಂಗಣ್ಣ. ಕಾಡಿನ ಮಧ್ಯೆ ಹೊರಟ ದಾರಿಯಲ್ಲಿ ನೀರವತೆಯು ತುಂಬಿ ತುಳುಕುತಿತ್ತು. ಒಂಬತ್ತು ಜನರ ನಡೆಯುವ ಸಪ್ಪಳವಲ್ಲದೇ ಬೇರಿನ್ನಾವ ಶಬ್ದವೂ ಕಾನನದೊಳಗಿಂದ ಹೊರಡುತ್ತಿರಲಿಲ್ಲ. ತುಸು ಹೊತ್ತು ನಿಂತು ರಂಗಣ್ಣ, ತನ್ನವರೆಲ್ಲ ಬಂದಮೇಲೆ ಪುನಃ ಹೆಜ್ಜೆ ಹಾಕಿದ. ರಂಗಣ್ಣ, ನಾಳಿನ ಕಾರ್ಯಕ್ರಮವನ್ನು ಮನಸ್ಸಿನಲ್ಲಿಯೇ ವಿಚಾರಿಸುತ್ತ, ಹಿಂದೂ ದೇಶವನ್ನು ಸ್ವಾಧೀನಪಡಿಸಿಕೊಂಡ ಇಂಗ್ಲೀಷರನ್ನು ಹಿಂತೋಡಿಸಲು ಭಾರತ ಮಾತೆಯ ಬಿಡುಗಡೆಗಾಗಿ ಯಾವ ಉಪಾಯವನ್ನು ಮಾಡಲಿ? ಎಂಬುದರ ವಿಚಾರ ವಿನಿಮಯಕ್ಕಾಗಿ ಒಂದು ಮೈಲು ದೂರದ 'ಕಾನನ ದೇವಿ'ಯ ಗುಡಿಗೆ ಬರುತ್ತಲಿದ್ದ. ಸ್ವಾತಂತ್ರ್ಯ ಆಂದೋಲನಕ್ಕೆ ಹುರುಪನ್ನೀಯಲು ರಂಗಣ್ಣನು ಸಾಕ್ಷಿಯಾಗಿದ್ದ. ಮಾತ್ರವಲ್ಲ, 'ಮಾಡು ಇಲ್ಲವೇ ಮಡಿ' ಎಂಬ ಗಾಂಧೀಜಿಯವರ ಮಾತಿಗೆ ರಂಗಣ್ಣ ತಲೆದೂಗಿದ್ದ. ಜೈಲುವಾಸವನ್ನು ಗಾಂಧೀಜಿ ಅನುಭವಿಸುತ್ತಿದ್ದಾಗ ರಂಗಣ್ಣ ಉರಿದೆದ್ದು ಹಾರಿ ಜೈಲಿಗೆ ಬೆಂಕಿ ಕೊಡಬೇಕೆಂದು ನಿಶ್ಚಯಿಸಿದ. ಸತ್ಯಾಗ್ರಹವನ್ನು ವರ್ಣಿಸಿ ಹೇಳುತ್ತಿದ್ದ ಗೌಡರು ರಂಗಣ್ಣನಲ್ಲಿ ಸ್ಫೂರ್ತಿಯನ್ನು ತುಂಬಿಸಿದ್ದರು. ಆದರಿಂದ ರಂಗಣ್ಣ, ಬಸ್ಸು, ಲಾರಿ, ಸೈಕಲುಗಳು ತಿರುಗದಂತೆ ಮಾಡಲು ರಸ್ತೆಗಳನ್ನು ಕಡಿದು ಅನುಯಾಯಿಗಳೊಡನೆ ದುಡಿದು ಬೆವರಿಳಿಸಿ ಬಲು ಆಯಾಸಗೊಂಡಿದ್ದ. ಏನೇ ಆಗಲಿ ರಾತ್ರಿಯ ಸಭೆಗೆ ಹೋಗಬೇಕೆಂಬ ಲವಲವಿಕೆ ಅವನ ನರನರಗಳಲ್ಲಿ ಹರಿಯಿತು. ಹಾಗಿದ್ದೂ ಆ ಸಭಾಸ್ಥಾನಕ್ಕೆ ಇಷ್ಟು ದಿನಕ್ಕಿಂತಲೂ ಸ್ವಲ್ಪ ತಡವಾಗಿಯೇ ರಂಗಣ್ಣನ ಪಂಗಡ ಹೊರಟಿತ್ತು. ರಂಗಣ್ಣ, ಒಬ್ಬಳೇ ಹೆಂಡತಿಯನ್ನು ಹಳ್ಳಿಯಲ್ಲಿ ಬಾಗಿಲಿಕ್ಕಿ ಮಲಗಿಕೊಳ್ಳುವಂತೆ ಹೇಳಿ, ತನ್ನವರೊಂದಿಗೆ ಕಾರಿರುಳಲ್ಲಿ ದೀಪಿಗೆಯಿಲ್ಲದೆ ಹೊರಡಬೇಕಾಯಿತು. ದಿನವಿಡೀ ದುಡಿದು ಸೋತ ರಂಗಣ್ಣ ನಡೆನಡೆದು ಒಂದು ಮರದ ಬುಡದಲ್ಲಿ ಕುಳಿತು ತನ್ನನ್ನು ಹಿಂಬಾಲಿಸಿದ ರಾಜಣ್ಣನಿಗೆ ಹೇಳಿದ—'ರಾಜಣ್ಣ, ನನಗೆ ನಡೆಯಲು ಆಗುತ್ತಿಲ್ಲ—ಆದಕ್ಕಾಗಿ ನಾನಿಲ್ಲೇ ಕುಳಿತಿರುತ್ತೇನೆ—ನೀವು ನಾಳಿನ ಕೆಲಸ ನಿಶ್ಚಯಿಸಿ ನಮ್ಮ ಪಾಲಿಗೆ ಬಂದದ್ದನ್ನು ಒಪ್ಪಿಕೊಂಡು ಬನ್ನಿ. ಭಾರತ ಮಾತೆಯ ಬಿಡುಗಡೆಯಾಗದ ಹೊರತು ರಂಗಣ್ಣ ನಿದ್ರಿಸುವಂತಿಲ್ಲ. ಇದು ಖಂಡಿತ." ರಂಗಣ್ಣನ ನಿರ್ಧಾರವನ್ನು ಕೇಳಿದ ಅನುಯಾಯಿಗಳು ಎದುರಿಗೆ ನೋಡಿ ರಂಗಣ್ಣ "ಯಾರೋ ಇತ್ತಕಡೆ ಬರುತ್ತಲಿದ್ದಾರೆ. ನಮ್ಮ ಈ ಕಾಡೊಳಗಿನ ಈ ದಾರಿ ಹೇಗೆ ಕಂಡುಕೊಂಡರೊ ದೇವರೇ ಬಲ್ಲ." ನಿಂತ ರಾಜಣ್ಣ ಕೈತೋರಿಸುತ್ತ ಹೇಳಿದ. ಮೆಲ್ಲಗೆ ಎದ್ದು ನಿಂತು ರಂಗಣ್ಣ ಮಂಜು ಬೆಳಕಿನಲ್ಲಿ ನಮ್ಮತ್ತ ಬರುತ್ತಿದ್ದ ಜನರನ್ನು ನೋಡಿದ.

ಕಾನನದ ನಿಶ್ಶಬ್ದವನ್ನು ಭೇದಿಸುವ ಕೂಗು ಕೇಳುತಿತ್ತು. ಆದರೆ ಅವರಾಡುವ ಮಾತನ್ನು ಆಲಿಸಿದರೆ ಅವರು ಇಂಗ್ಲೀಷಿನವರ ಪಡೆಯವರೆಂದು ಬೇರೆ ಹೇಳಬೇಕಾಗಿಯೇ ಇರಲಿಲ್ಲ. ಮರದ ಸಮೀಪ ಬರುವಾಗ ರಂಗಣ್ಣ ಕೆಳಕ್ಕೆ ನೋಡಿದ. ಪರಿಚಯವಿಲ್ಲದ ಯಾರೊ ಹೊಸಬರು. ಅವರ ಉಡಿಗೆ ತೊಡಿಗೆ ವಿಚಿತ್ರವಾಗಿತ್ತು. ಅವರ ಕೋಲಾಹಲದ ಬೆಳಕಿಗೆ ಮರದ ಮೇಲಿದ್ದ ಮಂಗವೊಂದು 'ಚಿಟಾರನೆ' ಕಿರುಚಿ ಗೆಲ್ಲಿನಿಂದ ನೆಗೆದು ಇನ್ನೊಂದು ಗೆಲ್ಲಿನಲ್ಲಿ ಕುಳಿತಿತು. ಬಿರುಸಿಂದ ನಡೆದು ಬರುತ್ತಿದ್ದವರ ವೇಗ ಒಮ್ಮೆಲೆ ಕಡಿಮೆಯಾಯಿತು. ಮೇಲಕ್ಕೆ ನೋಡಿದಾಗ ಯಾವುದೋ ಒಂದು ಪ್ರಾಣಿ ಮರದಲ್ಲಿ ಅಡರಿ ಕುಳಿತಿರುವುದು ಕಣ್ಣಿಗೆ ಬಿದ್ದಾಗ 'ಯಾರದು?' ಎಂದು ಗುಡುಗಿತು ಬಂದ ವ್ಯಕ್ತಿ.

'ಇಂದಲ್ಲ ನಾಳೆಯಾದರೂ ಗುಂಡಿನೇಟಿಗೆ ನಾನಾಗಲೀ ನನ್ನ ಅನುಯಾಯಿಗಳಾಗಲೀ ಆಹುತಿಯಾಗುವುದು ಖಂಡಿತ. ಹಾಗಿರುವಾಗ ಈಯೊಂದು ಜನರಿಗೆ ನಾವು ಮರಹತ್ತಿ ಕುಳಿತುಕೊಳ್ಳುವಂಥ ಹೇಡಿಗಳಾಗಬೇಕೆ? ರಂಗಣ್ಣನ ರೋಮ ಕೂಪಗಳಲ್ಲಿ ಕೋಪದ ಕಿಡಿಯು ಕಾರಹತ್ತಿ—'ನಾನು!' ಎಂದ.

'ಅಂದರೆ?' ಧ್ವನಿಯ ಪರಿಚಯವನ್ನು ತಿಳಿಯದೆ ಪುನಃ ಗುಡುಗಿದವರು ಬಂದಿದ್ದವರು.

'ನಾನು....' ರಂಗಣ್ಣನ ಪುನರುತ್ತರ.

'ಏನು? ನೀವು ಇಂಗ್ಲೀಷರ ಪಡೆಯವರೋ, ಇಲ್ಲವೇ ನಾಗ ಗೌಡರ ಪಡೆಯವರೊ?"—ಉತ್ತರಕ್ಕಾಗಿ ಕಾದು ಕುಳಿತರು ನಿಂತಿದ್ದವರು.

ರಂಗಣ್ಣ ಪೇಚಿಗೆ ಸಿಕ್ಕಿಬಿದ್ದ. ಈಗ ಕಾಳಗ ಮಾಡೋಣವೆಂದರೂ ನಿಶ್ಶಸ್ತ್ರಧಾರಿಗಳಾಗಿದ್ದೇವೆ! 'ಆಲೋಚಿಸಿ ಉತ್ಸಾಹದಿಂದ—'ನಾವು ನಾಗ ಗೌಡರವಕಡೆಯವರು!' ರಂಗಣ್ಣ ಹೇಳಿದ. ಮರದ ಮೇಲೆ ಕುಳಿತು ರಂಗಣ್ಣ ನಿರೀಕ್ಷಿಸಿದುದು ಗುಂಡಿನೇಟನ್ನು... ಆದರೆ ಬದಲು ನಗುತ್ತಾ ಕೈಚಪ್ಪಾಳೆ ತಟ್ಟುವುದು ಕೇಳಿಸಿದಾಗ ರಂಗಣ್ಣ ಏನಾಯಿತು? ಎಂದು ತಿಳಿಯಲಾರದೆ ದಂಗು ಬಡಿದವನಂತೆ ಮರವನ್ನು ಗಟ್ಟಿಯಾಗಿ ಹಿಡಿದು ಕುಳಿತಿದ್ದ. ನಗುವುದು ನಿಂತಾಗ 'ಯಾರು ರಂಗಣ್ಣನೇ?' ಎಂದರು ಬರಬರುತ್ತಾ ನಾಗ ಗೌಡರು. ನಾಗ ಗೌಡರ ಧ್ವನಿ ರಂಗಣ್ಣನಿಗೆ ಚಿರಪರಿಚಿತವಾಗಿತ್ತು. ಎಂಟೂ ಜನರು ಆಶ್ಚರ್ಯದಿಂದ 'ಯಾರು ಗೌಡರೆ?' ಎಂದರು. ನಿಶ್ಶಬ್ದಗೊಂಡಿದ್ದ ಅರಣ್ಯ ಎಚ್ಚರಗೊಂಡಿತು. ಕೆಳಕ್ಕೆ ಇಳಿಯದ ರಂಗಣ್ಣನನ್ನು ಗೌಡರು ಇಳಿಯುವಂತೆ ಕೇಳಿಕೊಂಡರು. 'ನಾನಿಷ್ಟು ಹೇಡಿಯಾಗಿ ಮರ ಹತ್ತಿ ಕುಳಿತುಕೊಳ್ಳಬೇಕಾಯಿತೆ? ನಾನೆಂತಹ ಪಾಪಿ!' ಎಂದು ಮುಖವನ್ನು ಗೌಡರಿಗೆ ತೋರಿಸಲಾರದೆ ಗಳಗಳನೆ ಅತ್ತು ಬಿಟ್ಟ. ಉಳಿದೆಲ್ಲರೂ ಕೆಳಕ್ಕಿಳಿದರು. ರಂಗಣ್ಣ ಮುಖ ಮುಚ್ಚಿಕೊಂಡೇ ಕೆಳಕ್ಕಿಳಿದ.

'ಏನಾದರೇನು? ಬಂದವರೊಡನೆ ಕಾದಾಡಿ ಗೆಲ್ಲುವುದು. ಇಲ್ಲವಾದರೆ ಸೋಲದೇ, ಹಿಮ್ಮೆಟ್ಟದೇ ಉತ್ಸಾಹ ಗುಂದದೇ,

(೧೧ನೇ ಪುಟ ನೋಡಿರಿ)

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನಾಡಿದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಸಂಪಾದನದಾನ

ನಾವು ಗೌರವಿಸಲು ಕಲಿಯಬೇಕು

ತನ್ನ ಬಗ್ಗೆ ಗೌರವ ಪ್ರಶಂಸೆಗಳನ್ನು ಬಯಸುವವ ತಾನೂ ಅವನ್ನು ಪರರಿಗೀಯಬೇಕೆಂದು ತಿಳಿಯುವುದಿಲ್ಲ. ನಾವು ಇನ್ನೊಬ್ಬರು ನಮ್ಮನ್ನು ಕಾಣಬೇಕೆಂದು ಬಯಸುವ ರೀತಿಯಲ್ಲೇ ಇನ್ನೊಬ್ಬರನ್ನು ನಾವು ಕಾಣಬೇಕೆಂಬ ಸತ್ಯವಾಕ್ಯವನ್ನು ನಾವು ಅವಶ್ಯ ನೆನಪಿನಲ್ಲಿಡಬೇಕು.

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್

ಪ್ರಪಂಚದಲ್ಲಿ ಸಂಸಾರ ತ್ಯಾಗಮಾಡಿದ ಶ್ರೇಷ್ಠ ತ್ಯಾಗಿಗಳಾದ ಮಹಾಪುರುಷರ ಹೊರತು, ಮತ್ತೆಲ್ಲರಿಗೂ ಸಾಮಾನ್ಯವಾಗಿ, ಏನಾದರೂ ಅಪಮಾನವುಂಟಾದಾಗ—ದುಃಖವೂ ಸ್ವಲ್ಪಸ್ವಲ್ಪ ಗೌರವ, ಅಥವಾ ಪ್ರಶಂಸೆ ದೊರೆತಾಗ-ಸಂತೋಷವೂ ಉಂಟಾಗುತ್ತಿರುವುದು ಅಪರೂಪವಲ್ಲ. ಮಾನವ ಸಮಾಜದ ಮಾತು ಅಂತಿರಲಿ, ಪ್ರಾಣಿ, ಮತ್ತು ಪಕ್ಷಿ ಸಮೂಹದಲ್ಲೂ ಕೂಡ, ಈ ಪ್ರವೃತ್ತಿಯು ಚೆನ್ನಾಗಿ ಕಂಡುಬರುವುದು.

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಮತ್ತೊರ್ವ ವ್ಯಕ್ತಿಯನ್ನು ಏನಾದರೂ ಸಕಾರಣವಾಗಿ—ಅಥವಾ ನಿಷ್ಕಾರಣವಾಗಿ ಕೂಡ ಅಗೌರವವಾಗಿ, ಕಾಣುವುದು, ಕಂಡುಬರುತ್ತಿರುವುದು. ಆದರೆ, ಹಾಗೆ ಮತ್ತೊರ್ವನನ್ನು ಅಗೌರವವಾಗಿ ಕಂಡು ಅಪಮಾನಗೊಳಿಸುವ ಮೊದಲು,—'ತನಗೇನಾದರೂ, ಹಾಗೆ, ಮತ್ತೊರ್ವನು ಅಪಮಾನಗೊಳಿಸಿದರೆ, ಎಷ್ಟು ದುಃಖವಾಗಬಹುದು?" ಎಂದು ಸ್ವಲ್ಪ ಯೋಚಿಸಿಕೊಂಡರೆ, ಇನ್ನೊಬ್ಬನನ್ನು ತುಚ್ಛವಾಗಿ ಕಾಣುವ ಆ ಪ್ರವೃತ್ತಿ, ನಿಧಾನವಾಗಿಯಾದರೂ, ನಿಂತುಹೋಗಬಹುದು. ವಿಚಾರವಂತನಾದ ಮನುಷ್ಯನು, ಎಂದೂ ಮತ್ತೊಬ್ಬನ ಮನನೋಯುವಂತೆ ಮಾತನಾಡಬಾರದು. ಚಿಕ್ಕವರು, ದೊಡ್ಡವರನ್ನದೆ, ಅವರವರ ಯೋಗ್ಯತೆಗೆ ತಕ್ಕಂತೆ, ಎಲ್ಲರಲ್ಲಿಯೂ, ಗೌರವದಿಂದ ವ್ಯವಹಾರ ಮಾಡಬೇಕಾದುದು ಮುಖ್ಯ ಕರ್ತವ್ಯವಾಗಿದೆ. ಗುರುಹಿರಿಯರಲ್ಲಿ ಗೌರವದಿಂದ ನಡೆದುಕೊಳ್ಳುವುದೇ ಆತ್ಮೋನ್ನತಿಗೆ—ಹೆದ್ದಾರಿಯಾಗಿದೆ. ಪುರಾಣೇತಿಹಾಸಗಳಲ್ಲಿ ಎಲ್ಲಿ ನೋಡಿದರೂ, ಆತ್ಮೋನ್ನತಿಯನ್ನು ಸಾಧಿಸಿ, ಜಗತ್ಕಲ್ಯಾಣವನ್ನು ಗೈದ ಮಹಾಪುರುಷರ ಜೀವನವು ಇದಕ್ಕೆ ವ್ಯತಿರಿಕ್ತವಾಗಿ ಇದ್ದಿಲ್ಲವೆಂದು ಕಂಡುಬರುವುದು. ಭಾರತದ ಅಭ್ಯುದಯಕ್ಕಾಗಿ ದುಡಿದು, ಯುಗಪುರುಷರೆಂದೆನಿಸಿ ಕೀರ್ತಿಶಾಲಿಗಳಾದ, ಶಿವಾಜಿ, ಗೋಖಲೆ, ತಿಲಕ, ವಿವೇಕಾನಂದ, ಮಹಾತ್ಮಾಗಾಂಧಿ ಮೊದಲಾದವರು ಕೂಡ, ಮಾತಾಪಿತೃಗಳಲ್ಲಿ, ಗುರುಹಿರಿಯರಲ್ಲಿ, ಗೌರವವನ್ನು ತೋರಿಸಿ, ಸಂಮಾನವನ್ನಿತ್ತು, ಆತ್ಮೋನ್ನತಿಯನ್ನು ಸಾಧಿಸಿದವರಾಗಿರುವರೆಂದು, ನಮಗಿಂದು, ಆ ಮಹಾಪುರುಷರ ಜೀವನದರ್ಶನದಿಂದ ತಿಳಿದುಬರುವುದು. ಶಾಸ್ತ್ರಗಳೂ ಇದನ್ನೇ ಎತ್ತಿ ಸಾರುತ್ತಿವೆ! ಆದಿಮಾನವ—ಮಹಾ ಮನು, ತನ್ನ, ಅಮರಗ್ರಂಥದಲ್ಲಿ—

"ಆಚಾರ್ಯಶ್ಚ ಪಿತಾ ಚೈವ ।
ಮಾತಾ ಭ್ರಾತಾ ಚ ಪೂರ್ವಜಃ ।
ನಾರ್ತೇನಾಪ್ಯವಮಂತವ್ಯಾ । ಬ್ರಾಹ್ಮಣೇನ ವಿಶೇಷತಃ ॥
ಆಚಾರ್ಯೋ ಬ್ರಹ್ಮಣೋ ಮೂರ್ತಿಃ ।
ಪಿತಾ ಮೂರ್ತಿಃ ಪ್ರಜಾಪತೇಃ ।
ಮಾತಾ ಪೃಥಿವ್ಯಾ ಮೂರ್ತಿಸ್ತು ।
ಭ್ರಾತಾ ಸ್ವೋ ಮೂರ್ತಿರಾತ್ಮನಃ ॥
ಯಂ ಮಾತಾ ಪಿತರೌ ಕ್ಲೇಶಂ ।
ಸಹೇತೇ ಸಂಭವೇ ನೃಣಾಮ್ ।
ನತಸ್ಯ ನಿಷ್ಕೃತಿಃ ಶಕ್ಯಾ । ಕರ್ತುಂ ವರ್ಷ ಶತೈರಪಿ ॥
ತಯೋರ್ನಿತ್ಯಂ ಪ್ರಿಯಂ ಕುರ್ಯಾ ।
ದಾಚಾರ್ಯಸ್ಯ ಚ ಸರ್ವದಾ ।
ತೇಷ್ವೇವ ತ್ರಿಷು ತುಷ್ಟೇಷು ।
ತಪಃ ಸರ್ವಂ ಸಮಾಪ್ಯತೇ ॥
ತೇಷಾಂ ತ್ರಯಾಣಾಂ ಶುಶ್ರೂಷಾ ।
ಪರಮಂ ತಪ ಉಚ್ಯತೇ ॥"
(ಮನು)

ಎಂಬುದಾಗಿ ಹೇಳಿರುವನು— 'ಗುರು ತಂದೆ ತಾಯಿ, ಮತ್ತು ಅಣ್ಣ, ಇವರನ್ನು ಎಂತಹ ಕಠಿಣ ಸಂದರ್ಭದಲ್ಲೂ ಕೂಡ, ಗೌರವದಿಂದ ನೋಡಿಕೊಳ್ಳಬೇಕು, ಮತ್ತು ಬ್ರಾಹ್ಮಣರನ್ನೂ ಸದಾ ಸನ್ಮಾನಿಸುತ್ತಿರಬೇಕು. ಗುರು ಬ್ರಹ್ಮನ ಮೂರ್ತಿಯಾಗಿ, ತಂದೆ ಪ್ರಜಾಪತಿಯಾಗಿ—ತಾಯಿ, ಭೂದೇವಿಯಾಗಿ, ಮತ್ತು ಅಣ್ಣನಾದವನು ತನ್ನ ಪ್ರತಿಬಿಂಬದಂತೆ, ಇಂತು ಇರುತ್ತಾರೆ. ಇವರನ್ನು ಅಪಮಾನಗೊಳಿಸಿದರೆ, ಇವರಿಗೆ ಸಂಬಂಧಿಸಿದ ಆ ದೇವತೆಗಳನ್ನು ಅಪಮಾನಿಸಿದಂತಾಗುವುದು. ಮಕ್ಕಳಿಗೆ ಜನ್ಮವಿತ್ತ ಜನನೀ ಜನಕರು, ಅವರನ್ನು ಸಾಕಿ ಸಲಹಲು, ಎಷ್ಟೋ ಕಷ್ಟಗಳನ್ನು ಸಹನೆಯಿಂದ ಅನುಭವಿಸುತ್ತಾರೆ. ಅವರ ಈ ಮಾತಾಪಿತೃ ಋಣ—ಸಾವಿರ ಸಾವಿರ ವರ್ಷಗಳ ಸೇವೆಯಿಂದಲೂ ತೀರಿಸಲು ಸಾಧ್ಯವಿಲ್ಲದುದಾಗಿದೆ! ಆದರೆ, ಪ್ರತಿದಿನವೂ ಇವರಿಗೆ ಪ್ರಿಯವಾದ ಕಾರ್ಯಗಳನ್ನು ಮಾಡುತ್ತ ಭಕ್ತಿಯಿಂದ ಸೇವೆ ಮಾಡುತ್ತ ಇದ್ದರೆ, ಜನ್ಮ ಸಾರ್ಥಕವಾಗುತ್ತದೆ, ಇವರು ಸಂತುಷ್ಟರಾಗುವುದರಿಂದ ಎಲ್ಲವೂ ಪೂರ್ಣವಾಗುತ್ತದೆ. ಈ ಮೂವರ ಸೇವೆ ಮಾಡುವುದಕ್ಕಿಂತ ಮಿಗಿಲಾದ ತಪ ಬೇರೊಂದಿಲ್ಲ;

ಯಾರು ಇಂತು ಮಾತಾಪಿತರಿಗೆ, ಗುರುಹಿರಿಯರಿಗೆ ವಿಧೇಯನಾಗಿ, ಅವರ ಸೇವೆ ಮಾಡುತ್ತ ಅವರನ್ನು ಪ್ರಸನ್ನಗೊಳಿಸುವನೋ ಅಂಥವನಿಗೆ ಜೀವನದಲ್ಲಿ—ಅಸಾಧ್ಯವೆಂಬುದು ಇರುವುದಿಲ್ಲ. ಮತ್ತು ಅಂಥವನಿಗೆ, ನಿತ್ಯಾನಂದವೂ ಸತ್ಕೀರ್ತಿಯೂ ಲಭಿಸಿ ಕೊನೆಗೆ ಸಾಯುಜ್ಯ ಪದವಿ ಲಭಿಸುವುದು.

ಜನನೀಜನಕರನ್ನೂ ಗುರುಹಿರಿಯರನ್ನೂ ಪ್ರಸನ್ನಗೊಳಿಸದೆ, ಅವರ ಸೇವೆಯನ್ನು ಮಾಡದೆ, ಯಾವ ಸತ್ಕಾರ್ಯವನ್ನು ಮಾಡಿದರೂ, ಅದು ನಿಷ್ಫಲವಾಗುತ್ತದೆ. ವಯೋವೃದ್ಧರನ್ನು ಹೇಗೆ ಕಾಣಬೇಕೆಂಬುದರ ಕುರಿತು, ಮಹಾತ್ಮ ಮನು—

"ಅಭಿವಾದನ ಶೀಲಸ್ಯ।
ನಿತ್ಯಂ ವೃದ್ಧೋಪಸೇವಿನಃ
ಚತ್ವಾರಿ ತಸ್ಯ ವರ್ಧಂತೇ
ಆಯುರ್ವಿದ್ಯಾಯಶೋಬಲಂ"

ಯಾವ ಮನುಷ್ಯನು, ಪ್ರತಿನಿತ್ಯವೂ ವೃದ್ಧರಿಗೆ, ಪ್ರಣಾಮಗಳನ್ನರ್ಪಿಸುತ್ತ ಗೌರವಿಸುವನೋ, ಅಂಥವನ ಆಯುಷ್ಯ, ವಿದ್ಯೆ ಮತ್ತು ಶಕ್ತಿ, ದಿನೇ ದಿನೇ ಹೆಚ್ಚುತ್ತದೆ! ಎಂದು ಹೇಳಿರುವನು.

ಆದರೆ ಇಂದು, ಮನುಷ್ಯನಲ್ಲಿ ಅಹಂಕಾರ ಹೆಚ್ಚಿದೆ. ಎಲ್ಲಿ ನೋಡಿದರೂ ಮಾತಾಪಿತೃಗಳನ್ನೂ ಗುರುಹಿರಿಯರನ್ನೂ ಗೌರವಿಸದೆ ಇರುವುದೂ, ಕೆಲ ಕೆಲವರು ಅಪಮಾನಗೊಳಿಸುವುದೂ ಕೂಡ ಕಂಡುಬರುತ್ತಿದೆ. ಇನ್ನು ವೃದ್ಧರನ್ನು ವಂದಿಸಿ, ಗೌರವದಿಂದ ಕಾಣುವ ರೀತಿಯಂತೂ ವಿಪರೀತಕ್ಕೆ ತಿರುಗಿದೆ. ಇಷ್ಟೇ ಅಲ್ಲ, ಸರ್ವವ್ಯಾಪಕವಾಗಿರುವ ಈಶ್ವರೀ ಶಕ್ತಿಯನ್ನೂ ಕೂಡ "ಇಲ್ಲ" ಎಂದು ಹೇಳಿ, ಅಪಮಾನಗೊಳಿಸುವಷ್ಟು ಅಹಂಕಾರ ಹೆಚ್ಚಿದೆ. ಇದು ಬಹು ಖೇದದಾಯಕವಾದ ವಿಚಾರವಾಗಿದೆ ಇದರ ಪರಿಣಾಮ ಬಹಳ ಭಯಾನಕವಾದುದಾಗಿರುವುದು,

(೧೦ನೇ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25)

ಮನೆಯಲ್ಲಿಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 399/1959
R. E. P. 326/1960

ದಿ. ಕಾಂಗಾಳ ನಾಯಕ್ ಬೇಂಕ್ ಲಿಮಿಟೆಡ್ ಉಡ್ಪಿ ಇದ್ರ ಟೌನ್ ಬ್ರಾಂಚ್ ಏಜಂಟ P. ಪುರುಷೋತ್ತಮ ನಾಯಕ್
—ಅರ್ಜಿದಾರ.

ಮತ್ತು

U. ಗೋವಿಂದಪ್ರಾಯ ಪ್ರಭು ಕೂಡಾ
—ಯೆದ್ರಿರು.

ಇವರೊಳಗೆ—

2ನೇ ಯೆದ್ರಿ:—M. ಬಾಲಕೃಷ್ಣ ಭಟ್, M. ವೆಂಕಟೇಶ ಭಟ್ರ ಮಗ, ಉಡ್ಪಿ ಕ್ಸಬಾ ತೆಂಕಪೇಟೆಯಲ್ಲಿರುವ ದಿ. ಕೆನರಾ ರೇಡಿಯೋ ಹೌಸ್ ಮೂಲಕ, ಉಡ್ಪಿ ಕ್ಸಬಾ ಹಿರಿಬಾಗ-ಇವರಿಗೆ.

ನಿಮ್ಮನ್ನು ಕೈದುಮಾಡಿ ಬಂದಿಖಾನೆಯಲ್ಲಿಡುವುದರ ಮೂಲಕ 1959ನೇ ಇಸವಿ ಕ್ರಮ ನಂಬರು 399ನೇ ವ್ಯಾಜ್ಯದ ಡಿಕ್ರಿಯ ಅಮಲ್‌ಜ್ಯಾರಿ ಬಗ್ಗೆ ಅರ್ಜಿದಾರನು ಈ ಕೋರ್ಟಿಗೆ ಅರ್ಜಿಯನ್ನು ಮಾಡಿದ್ದಾನೆ. ಆದುದರಿಂದ ಸದ್ರಿ ಡಿಕ್ರಿಯ ಅಮಲ್‌ಜ್ಯಾರಿಯಲ್ಲಿ ನಿಮ್ಮನ್ನು ಸಿವಿಲ್ ಬಂದಿಖಾನೆಯಲ್ಲಿ ಯಾಕೆ ಹಾಕಕೂಡದೆಂಬದಕ್ಕೆ ಸಬಬು ತೋರಿಸಲಿಕ್ಕೆ 1960ನೇ ಇಸವಿ ಸಪ್ಟಂಬರ ತಿಂಗಳ 7ನೇ ತಾರೀಕಿನಲ್ಲಿ ಈ ಕೋರ್ಟುಮುಂದೆ ನೀವು ಹಾಜರಾಗಬೇಕಾಗಿರುತ್ತದೆ.

By order of the Court.

H. Ramanath Pai,
Advocate for Petitioner.

Udipi Dated 1—9—60.

ವಿಚಾರವರ್ಷ

ಅರ್ವಾಚೀನ ಧಾರ್ಮಿಕತೆಯ ಮೂಲ

ಧರ್ಮ ಮಾನವನಿಗಿಂತ ಬೇರೆಯಲ್ಲ. ಆತನ ಅವಿಭಾಜ್ಯ ಅಂಗವೇ ಅದು. ಮಾನವನೂ ಇತರ ಪ್ರಾಕೃತಿಕ ಪದಾರ್ಥವೆಂದು ತಿಳಿಯುವುದೇ ಮಾನವತೆ. ಇದರಿಂದ ತನ್ನ ಶಕ್ತಿ, ಸಾಮರ್ಥ್ಯಗಳ ಪರಿಪೂರ್ಣ ಉಪಯೋಗವನ್ನು ಮಾಡಿಕೊಳ್ಳುವಲ್ಲಿಯೇ ಅರ್ವಾಚೀನ ಧಾರ್ಮಿಕತೆಯು ಮೂಲವಡಗಿದೆ.

ಮರಗಿಡಗಳು ಮತ್ತು ಪಶುಪಕ್ಷಿಗಳಂತೆ ಮಾನವನೂ ಪ್ರಾಕೃತಿಕ ಪದಾರ್ಥವೆಂದು ನಂಬುವವರನ್ನು "ಮಾನವತಾವಾದಿ" ಎಂದು ಹೆಸರಿಸಬಹುದು. ಆಗ, ಆತನ ಮನಸ್ಸು, ಮಿದುಳು, ಆತ್ಮ, ಶರೀರ ಇವು ಯಾವುದೇ ದೈವೀ ರಚನೆಯಲ್ಲ; ವಿಶ್ವದ ವಿಕಾಸ ಪ್ರಕ್ರಿಯೆಯ ಅಂಗಗಳಾಗುವುವು. ಆತ ಪ್ರಕೃತಿಯಿಂದ ಪರವಾದ ಒಂದು ವಸ್ತುವಿನಿಂದ ನಿಯಂತ್ರಿತ-ಸಂಚಾಲಿತನಾಗುವುದಿಲ್ಲ; ಆವನು ಆತ್ಮಶಕ್ತಿಯನ್ನೇ ಆಧರಿಸುವವನಾಗುತ್ತಾನೆ. ನಂಬಿಗೆ ಎಂಬುದನ್ನು ಧರ್ಮಾಸ್ಥೆಯೆಂದು ನಾವು ಬಗೆಯಬೇಕು.

ಮಾನವತಾವಾದಿಯು ಧಾರ್ಮಿಕನೆನಿಸುವುದೆಂತು? ಧರ್ಮವು ಅತಿ ಭೌತಿಕ ಶಕ್ತಿಗಳೊಡನೆ ಸಂಬಂಧಿಸಿಲ್ಲವೆ? ಎಂದರೆ, ಇಲ್ಲವೆಂದೇ ಹೇಳಬೇಕು. ಪರಮಾತ್ಮ ಸಂಬಂಧವಿಲ್ಲದೆಯೂ ಧರ್ಮವಿರಬಲ್ಲುದು. ಹಾಗಾದರೆ, ಧರ್ಮವೆಂದರೇನು? ಮಾನವನ ಭವಿಷ್ಯದೊಡನೆ ಸಂಬಂಧವಿಟ್ಟುಕೊಂಡಿರುವ ಮಾನವ ಅಂಗವನ್ನೇ ಧರ್ಮವೆನ್ನಬಹುದು. ಮಾನವನಲ್ಲಿರುವ ಸದ್ವೃತ್ತಿಗಳೂ ದುರ್ವೃತ್ತಿಗಳೂ ಇದರಲ್ಲಿ ಅಡಕವಾಗಬಲ್ಲುದು. ಪವಿತ್ರ ಮತ್ತು ಪಾವನವಾದುವೆಲ್ಲವೂ ಧರ್ಮದ ಕಕ್ಷೆಯೊಳಗೆ ಬರಬಲ್ಲುವು. ಮಾನವ ಜೀವನವನ್ನು ಅಸತ್ಯ, ಅಪವಿತ್ರ ಸ್ವರೂಪದಿಂದ ಉದ್ಧರಿಸಿ, ಸತ್ಯ ಮತ್ತು ಶೌಚದತ್ತ ಕೊಂಡೊಯ್ಯುವುದೇ ಧರ್ಮದ ಉದ್ದೇಶ.

ಪ್ರತಿಯೊಂದು ಧರ್ಮಕ್ಕೂ ಒಂದೊಂದು ಕರ್ಮಕಾಂಡವಿದೆ; ತನ್ನದೇ ಆದ ಆಚಾರ ಸಂಹಿತೆಯಿದೆ. ಸತ್ಯ, ಅಸತ್ಯವೆಂದರೇನು, ಆಸ್ಥೆಯ ಪ್ರಣಾಳಿಕೆ ಯಾವ ರೀತಿಯದುವೆಂಬುದನ್ನಿವು ತಿಳಿಸುತ್ತವೆ. ಆದರೆ, ಅಂತ್ಯದಲ್ಲಿ ಆಸ್ಥೆಯೇ ನಿರ್ಣಾಯಕನಾಗಿದೆ; ಈ ಆಸ್ಥೆ ವ್ಯಕ್ತಿಯ ಆತ್ಮಜ್ಞಾನ ಮತ್ತು ವಿಶ್ವಜ್ಞಾನವನ್ನು ಆಧರಿಸಿದೆ.

ಮಾನವತಾವಾದಿಯ ಆಸ್ಥೆಯು ಮಾನವೀಯ ಜ್ಞಾನವನ್ನು ಹೊಂದಿಕೊಂಡಿದೆ. ಈ ಪ್ರಪಂಚದಲ್ಲಿ ನಮ್ಮ ಸ್ಥಾನವೂ ನವೇನೆಂಬುದನ್ನು ಡಾರ್ವಿನನು ತೋರಿಸಿಕೊಟ್ಟನಂತರ, ಸಮಸ್ತ ದೃಶ್ಯ ತತ್ವ, ಸಮಸ್ತ ಚರಾಚರ ಜಗತ್ತು ವಿಕಾಸದ ಒಂದು ವಿರಾಟ್ ಪ್ರಕ್ರಿಯೆ ಎಂಬ ತತ್ವದಲ್ಲಿ ನಮ್ಮ ವಿಶ್ವಾಸ ಬೆಳೆಯಿತು. ಈ ತತ್ವವೇ 'ಜೀವನ'ವನ್ನೂ ರೂಪಿಸುತ್ತದೆ. ಮನಸ್ಸು ಮತ್ತು ಚೇತನಗಳು ಇದರ ದೇಣಿಗೆಗಳೇ ಆಗಿವೆ.

ಈ ವಿರಾಟ ಸಾರ್ವಭೌಮ ಪ್ರಕ್ರಿಯೆಯು ಮೂರು ತೆರವಾಗಿದೆ. ಪ್ರತಿಯೊಂದು ಪ್ರಣಾಲಿಗೂ ಸ್ವತಂತ್ರಗತಿಯಿದೆ. ಇವುಗಳಲ್ಲಿ ಕೊನೆಯದೇ ಮಾನವ ರೂಪ. ಸಂಚಿತ ಜ್ಞಾನ ಮತ್ತು ಅನುಭವಗಳ ಸುನಿಯೋಜನವನ್ನಿದು ಹೊಂದಿಕೊಂಡಿದೆ. ಜೀವನದ ಉತ್ತಮ ಗುರಿ ಮತ್ತು ಸತ್ಯಾದರ್ಶಗಳನ್ನು ಸಂಪಾದಿಸಲು ಈ ರೂಪ ಪ್ರಯತ್ನಿಸುತ್ತದೆ.

ಮಾನವನೇ ಪ್ರಪಂಚದ ಅರ್ವಾಚೀನ ಮಹತ್ವಪೂರ್ಣ ಜೀವ. ಮಾನವ ವಿಕಾಸ ಪರಂಪರೆಯ ಸಂಚಾಲಕನೂ ಅವನೇ. ಕಳೆದ ಐವತ್ತು ಲಕ್ಷ ವರ್ಷಗಳ ನಿರಂತರ ವಿಕಾಸದ ಸತ್ಫಲವೇ ಮಾನವ. ಮಾನವ ಹಲವಾರು ದುಃಖ-ಹಾನಿಗಳನ್ನು ಸಹಿಸಿದರೂ ಆತ ವಿಕಾಸವಾದನು. ಆತ ಅನೇಕ ಮಹಾನ್ ಪ್ರಾಪ್ತಿಯನ್ನು ಹೊಂದಿದ. ದೇವಾಲಯ, ಇಗರ್ಜಿ, ಭವನಗಳು, ವಾಯುಯಾನ, ಕಾವ್ಯ ಮತ್ತು ಕಲೆ, ದರ್ಶನ ಮತ್ತು ವಿಜ್ಞಾನ ಇವೆಲ್ಲವೂ ಆತನ ಸಾಧನೆಗಳು. ಮಾನವೀಯ ಜ್ಞಾನ ಮತ್ತು ಅನುಭವಗಳ ಕಚ್ಚಳವೇ ಈ ಪ್ರಗತಿಯ ಬೆಂಗೋಲು. ವೈಜ್ಞಾನಿಕ ವಿಧಾನಗಳು ಹಾಗೂ ಕಲಾತ್ಮಕ ವಿಚಾರಗಳು ಈ ಪ್ರಗತಿಗೆ ನೆರವಾದುವು.

ಪರಮಾತ್ಮನ ಚಮತ್ಕಾರವೆಂದು ಹೇಳುವ ಎಲ್ಲ ವ್ಯುತ್ಪತ್ತಿ ಹಾಗೂ ವಿಕಾಸ ಕಾರ್ಯಗಳು ಶುದ್ಧ ಪ್ರಾಕೃತಿಕ ಕಾರಣಗಳಿಂದ ಉಂಟಾಗಿವೆ. ಮಹಾಮಾರಿಗಳನ್ನು ಪರಮಾತ್ಮನ ಶಿಕ್ಷೆ ಆಘಾತವನ್ನು ಆತನ ಎಚ್ಚರಿಕೆಯೆಂದು ತಿಳಿಯುವುದಿಲ್ಲ. ಜಾದುಗಾರನಿಗೆ ಭೂತ ಪ್ರೇತಗಳೊಡನೆ ಸಂಬಂಧವಿದೆ, ದೇವನ ದಿವ್ಯ ಪ್ರೇರಣೆಯಿಂದ ಕವಿ ಬರೆಯುತ್ತಾನೆ, ಆತನಿಗೆ ಯಾವುದೋ ಮಹಾ ಜ್ಯೋತಿಯಿಂದ ಪ್ರಕಾಶ ದೊರೆಯುತ್ತದೆ ಎಂಬುದನ್ನು ನಂಬುವುದಿಲ್ಲ. ಇಂದಿಗೂ ದೇವಾಲಯಗಳಲ್ಲಿ ಮಳೆಗಾಗಿ ಪ್ರಾರ್ಥನೆ ಮಾಡುವರಾದರೂ ದೇವನು ಮಳೆಯೊಡೆಯ ಎಂಬುದರಲ್ಲಿ ಯಾರಿಗೂ ವಿಶ್ವಾಸ ಕಡಿಮೆ. ನರಕವೆಂಬ ಇಲ್ಲವೇ ಸ್ವರ್ಗವೆಂಬ ಲೋಕವಿರುವುದಿಲ್ಲ ಎಂದು ಹೆಚ್ಚಿನವರು ತಿಳಿದಿದ್ದಾರೆ.

ನಮಗೆ ಮಾನವನ ಸಿದ್ಧಿ—ಸಫಲತೆಗಳಲ್ಲಿ ವಿಶ್ವಾಸವಿದೆ. ಜ್ಞಾನ ಮತ್ತು ಅನುಭವ ಸಂಚಯಗಳಲ್ಲಿ ಅಗಾಧ ಶ್ರದ್ಧೆಯಿದೆ. ಮಾನವನ ಜ್ಞಾನ, ಅನುಭವ ಮತ್ತು ಅಧ್ಯವಸಾಯಗಳ ಪರಿಣಾಮವನ್ನು ನಾವು ಪ್ರತ್ಯಕ್ಷ ನೋಡುತಿದ್ದೇವೆ. ವಿಜ್ಞಾನ, ಚಿಕಿತ್ಸಾ ಶಾಸ್ತ್ರಗಳಲ್ಲಿ ಇವು ಪರಾಕಾಷ್ಠೆಯನ್ನು ಮುಟ್ಟಿವೆ. ಮನಶ್ಶಾಸ್ತ್ರ ಮತ್ತು ರಾಜನೀತಿಯಲ್ಲಿಯೂ ನಾವು ಮಾನವೀಯ ಚಮತ್ಕಾರಗಳ ನಿರೀಕ್ಷೆ ಮಾಡಬಹುದು.

ಮಾನವನ ಇತರ ಯೋಗ್ಯತೆ ಮತ್ತು ಕ್ಷಮತೆಗಳನ್ನೂ ನಾವು ತಿಳಿದುಕೊಳ್ಳಬಹುದು. ಆತನಲ್ಲಿ ಹೊಸತಿನ ಬಗ್ಗೆ ಆಕರ್ಷಣೆ, ಚಮತ್ಕಾರದ ಬಗ್ಗೆ ಅಭಿರುಚಿ, ಸಂಶೋಧನೆಯ ಬಗ್ಗೆ ಕುತೂಹಲವಿವೆ. ಈ ಜಿಜ್ಞಾಸೆಯೇ ಆತನ ಜೀವನದಲ್ಲಿ ರಸ ಮತ್ತು ಆನಂದವನ್ನು ತಂದೀಯುವುದು. ಇವುಗಳಿಂದ ಪ್ರೇರಿತನಾಗಿ ಆತ ಸಂಶೋಧನೆ ನಡೆಸುತ್ತಾನೆ; ಎಡತಾಕುವ ಅಡಚಣೆಗಳಿಂದ ಉತ್ತೇಜಿತನಾಗುತ್ತಾನೆ; ಜ್ಞಾನಾನುಭವ ಸಾಗರದಲ್ಲಿ ಮುಳುಗೇಳುತ್ತಾನೆ.

ಸೌಂದರ್ಯದ ಕಡೆಗಿರುವ ಸಹಜ ಆಕರ್ಷಣ ಮತ್ತು ಸೌಂದರ್ಯಜನ್ಯ ಆನಂದವು ಮಾನವನನ್ನು ಸೃಷ್ಟಿಯತ್ತ ಹರಿಸುತ್ತದೆ; ತನ್ನ ರಚನೆಯನ್ನು ಸೌಂದರ್ಯಮಯವಾಗಿಸಲು ಪ್ರೇರೇಪಿಸುತ್ತದೆ. ತನ್ನ ದುರ್ಗುಣ, ದೌರ್ಬಲ್ಯ, ದೋಷಗಳನ್ನು ಸ್ವೀಕರಿಸುವ ಪ್ರವೃತ್ತಿಯು ಮಾನವನನ್ನು ನೈತಿಕವಾಗಿ ಉದ್ಧರಿಸುತ್ತದೆ! ತಾನು ಅಪೂರ್ಣ ಎಂಬ ಭಾವನೆಯು ಪೂರ್ಣವನ್ನು ಅರಸಲು ಪ್ರೋತ್ಸಾಹ ನೀಡುತ್ತದೆ. ಪೂರ್ಣತ್ವದ ಸಂಶೋಧನೆಯೇ ಮನುಷ್ಯನ ಶಾಶ್ವತ ಮಂಗಲ ವಿಧಾಯಕವಾಗಿದೆ.

ಸ್ವಾಭಾವಿಕ ನ್ಯಾಯಪ್ರಿಯತೆಯು ಮಾನವನನ್ನು ತನ್ನಿಂದ ಅಶಕ್ತ, ಅಸಹಾಯ, ದುಃಖಿಗಳ ವಿಪತ್ತನ್ನು ದೂರಗೊಳಿಸಲು ಪ್ರೇರೇಪಣೆಯೀಯುತ್ತದೆ. ಆತನಲ್ಲಿರುವ ಪ್ರೇಮ ಭಾವನೆಯು ತಿರಸ್ಕಾರ ಭಾವನೆಯನ್ನು ಗೆಲ್ಲುತ್ತದೆ. ಸೇವಾ ಪರಾಯಣತೆಯು ರೋಗಿ ಶುಶ್ರೂಷೆಯತ್ತ ಪ್ರವರ್ತಿಸುವಂತೆ ಮಾಡುತ್ತದೆ.

ವಿಶಾಲ ಪ್ರಗತಿಪಥದಲ್ಲಿ ಇದುವರೆಗೆ ಮಾನವ ಕ್ರಮಿಸಿದ ದೂರ ಅತ್ಯಲ್ಪ. ದೈಹಿಕ, ಭೌತಿಕ, ಆಧ್ಯಾತ್ಮಿಕ, ಧಾರ್ಮಿಕ ಅನುಭೂತಿಗಳನ್ನು ಪಡೆಯುತ್ತ ಅವುಗಳಿಂದ ಆನಂದಗಳಿಸುವುದು ಇನ್ನೂ ಬಾಕಿಯುಳಿದಿದೆ. ಏಕಾಗ್ರತೆಯ ಛಾಯೆಯಲ್ಲಿ ದೈನಿಕ ಜೀವನದ ಸೀಮೆಗಳನ್ನು, ಆವಶ್ಯಕತೆ ಮತ್ತು ಚಿಂತೆಗಳನ್ನು ಆತ ಮೀರಿಯುವ ಶಕ್ತಿ ಪಡೆದಿಲ್ಲ. ಇಂದಿಗೂ ತನ್ನ ಶಕ್ತಿ, ಸತ್ತೆ ಮತ್ತು ಪ್ರಗತಿಗೆ ಅನುರೂಪವಾಗಿ ಸ್ವಾಸ್ಥ್ಯ, ಮನೋದಶೆ, ಆತ್ಮಿಕ ಸುಖ, ಕಲ್ಯಾಣ, ಜ್ಞಾನ, ವಿವೇಕ ಮತ್ತು ರಸಾನುಭವವನ್ನು ಪಡೆಯಲಾರದಾಗಿದ್ದಾನೆ. ಆದುದರಿಂದ ಆತನ, ಜೀವನದ ವಿಕಾಸವಿನ್ನೂ ಬಾಕಿಯುಳಿದಿದೆ.

ಆದುದರಿಂದ, ಮಾನವನು ತನ್ನ ಜ್ಞಾನ, ಅನುಭವ ಮತ್ತು ಭಾವನೆಯ ಅಕ್ಷಯ ಕೋಶವನ್ನು ಸಮಾಜ ಮತ್ತು ಪ್ರಾಣಿಗಳ ಹಿತಕ್ಕಾಗಿ ವ್ಯಯಿಸಬೇಕು. ಇದರಲ್ಲಿ ಅಪರಿಮಿತ ಆನಂದವಿದೆ. ತನ್ನ ಅಪಾರಶಕ್ತಿಯಿಂದ ಸಾಧ್ಯವೆನಿಸಿದ ಸಿದ್ಧಿಗಳ ಪರಿಚಯವನ್ನು ಮಾಡಿಕೊಟ್ಟರೆ, ಆತ ನಿಜಕ್ಕೂ ಸಫಲನಾದನು. ಈ ಪ್ರೇರಣೆ, ಬೋಧದಾನಗಳನ್ನು ಭಾವೀ ಸಮಾಜ ರಚನೆಯಲ್ಲಿ ಮಹಾಧಾರ್ಮಿಕತೆಯೆಂದು ಕರೆಯಬಹುದು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 340/1958

R. E. P. No 334/1960

ಯಾಕೂಬ್ ಸಾಹೇಬ —ಅರ್ಜಿದಾರ.

ಮತ್ತು

ಕಿಟ್ಟ ಪೂಜಾರಿ, ಚಂದು ಪೂಜಾರಿ ಅಳಿಯ ಉಡ್ಪಿ ತಾಲ್ಲೂಕು ಕೊಡವೂರು ಗ್ರಾಮ—ಎದ್ರಿ.

ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ಮೇಲ್ಕಂಡ O.S.No 340/1958 ನೆ ಡಿಕ್ರಿ ಮೇಲೆ ಅರ್ಜಿದಾರನು ನಡ್ಸಿದ ಅಮ್ಲಜಾರಿಯಲ್ಲಿ ಎದ್ರಿಯನ್ನು ಯಾಕೆ ಸಿವಿಲ್ ಬಂಧೀಖಾನೆಗೆ ರವಾನಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ ಸದ್ರಿ ಎದ್ರಿಯು ತಾರೀಕು 16—9—1960ಕ್ಕೆ ಹಾಜ್ರಾಗತಕ್ಕದ್ದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ.

K. Varadaraya Pai,
Advocate for petitioner.

ಉಡ್ಪಿ 1—9—1960

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು
ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ
ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.
ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು
ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ
ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.
ತಜ್ಞನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.
ರೂ. ೩-೨೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವ್ಯಕ್ತಿ ಪರಿಚಯ

ವಿದೇಶ ಕಾರ್ಯದರ್ಶಿ — ಆರ್. ಕೆ. ನೆಹರು

ಮಹಾ ಪ್ರಶ್ನೆಗಳು ಉದ್ಭವಿಸಿದಾಗ, ಅವನ್ನು ಲಘುವೆಂದು ತಿಳಿಯದೆ ಸುಲಭದಲ್ಲಿ ಬಗೆಹರಿಸಿಕೊಳ್ಳುವ ಆವಶ್ಯಕತೆ ಈಗ ಭಾರತೀಯ ವಿದೇಶ ಮಂತ್ರಿ ಶಾಖೆಗಿದೆ. ಇದನ್ನು ನಿರ್ವಹಿಸಲು ವಿದೇಶ ಶಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ಕೆ. ನೆಹರು ಸಮರ್ಥರಿದ್ದಾರೆ.

ಇಂದು ಭಾರತೀಯ ಸರಕಾರದ ವಿದೇಶ ಮಂತ್ರಿ ಶಾಖೆಯ ಪ್ರಧಾನ ಕಾರ್ಯದರ್ಶಿಯಾಗಿರುವ ಶ್ರೀ ರತನ್ ಕುಮಾರ ನೆಹರುರವರು ಐದು ವರ್ಷಕ್ಕೆ ಮೊದಲು ಇದೇ ಶಾಖೆಯಲ್ಲಿ ಕಾರ್ಯದರ್ಶಿಯಾಗಿದ್ದರು. ಈ ನಡುವೆ ಶ್ರೀ ಆರ್. ಕೆ. ನೆಹರುರವರು ಚೀನ ಮತ್ತು ಸಂಯುಕ್ತ ಅರಬ ಗಣರಾಜ್ಯದಲ್ಲಿ ಭಾರತೀಯ ರಾಯಭಾರಿಗಳಾಗಿಯೂ ನೇಮಿತರಾಗಿದ್ದರು. ಬ್ರಿಟಿಷರ ಆಡಳಿತಾವಧಿಯಲ್ಲಿ ಆಂಗ್ಲೇಯರೊಡನೆ ಸ್ಪರ್ಧಿಸಿ ಇಂಡಿಯನ್ ಸಿವಿಲ್ ಸರ್ವಿಸ್ (ಐ. ಸಿ. ಎಸ್.) ಪರೀಕ್ಷೆಯಲ್ಲಿ ಸರ್ವಪ್ರಥಮರಾಗಿ ಉತ್ತೀರ್ಣರಾದ ಕೆಲವೇ ಭಾರತೀಯರಲ್ಲಿ ಶ್ರೀ ನೆಹರು ಒಬ್ಬರಾಗಿದ್ದಾರೆ. ಶ್ರೀ ನೆಹರುರವರಲ್ಲದೆ ದಿ. ರಮೇಶ ಚಂದ್ರದತ್ತ, ದಿ. ಗಿರಿಜಾಶಂಕರ ವಾಜಪೇಯಿ, ದಿ. ಅರ್ದೇಶೀರ ದಲಾಲ, ವಿಶ್ವವಿದ್ಯಾಲಯ ಸಹಾಯಧನಾಯೋಗದ ಅಧ್ಯಕ್ಷ ಡಾ। ಚಿಂತಾಮಣಿ ದ್ವಾರಕಾನಾಥ ದೇಶಮುಖ ಸೋವಿಯತ್ ರಶ್ಯದ ಭಾರತೀಯ ರಾಯಭಾರಿ ಶ್ರೀ ಕೆ. ಪಿ. ಎಸ್. ಮೆನನ್‌ರವರೂ ಐ.ಸಿ.ಎಸ್. ಪರೀಕ್ಷೆಯಲ್ಲಿ ಸರ್ವೋಚ್ಚ ಸ್ಥಾನವನ್ನು ಗಳಿಸಿದ್ದಾರೆ.

ಮುಂದಿನ ಅಕ್ಟೋಬರಕ್ಕೆ ತಮ್ಮ ಗೌರವಶಾಲಿಯಾದ ೫೮ ವರ್ಷಗಳನ್ನು ಮುಗಿಸಿ ಕಾರ್ಯಭಾರ ಹೊತ್ತುಕೊಳ್ಳಲಿರುವ ಶ್ರೀ ನೆಹರುರವರ ಮೇಲೆ ಅವರ ಪ್ರಾಯವು ಯಾವುದೇ ರೀತಿಯ ಪರಿಣಾಮ ಬೀರಲಿಲ್ಲ. ಇಂದಿಗೂ ನೋಡಿದವರಿಗೆ ಅವರ ವಯಸ್ಸನ್ನು ನಂಬುವುದೂ ದುಷ್ಕರವೆನ್ನುವ ಸುದೃಢ ಶರೀರ ಶ್ರೀ ನೆಹರುರವರಿಗಿದೆ. ಅಚ್ಚುಕಟ್ಟಿನ ವೈಕಟ್ಟು, ಗಂಭೀರ ಮುಖಚರ್ಯೆ, ಸದಾ ಪ್ರಸನ್ನಚಿತ್ತ—ಇವು ಇವರ ಆಕರ್ಷಣೆಗಳು.

ಉತ್ತರ ಪ್ರದೇಶದ ರಾಜಧಾನಿ ಅಲ್ಲಹಬಾದಿನಲ್ಲಿ ಪ್ರಾರಂಭಿಕ ಶಿಕ್ಷಣವನ್ನು ಪಡೆದ ಶ್ರೀ ಆರ್. ಕೆ. ನೆಹರು ತಮ್ಮ ಕಿಶೋರಾವಸ್ಥೆಯಲ್ಲಿಯೇ ಮುಂದಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್ ಸೇರಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ನಡೆಸುತ್ತಿರುವಾಗ ಇವರು ಅಲ್ಲಿನ ಹಾಕ್ಕೀ ಕ್ರೀಡಾ ಸಂಗಡದ ಕೇಪ್ಟನ್ ಆಗಿದ್ದರು. ಇಲ್ಲಿ ಬಿ. ಎ. ಪದವಿಯನ್ನು ಗಳಿಸಿದ ಬಳಿಕ, ೧೯೨೫ ಐ. ಸಿ. ಎಸ್. ಪದವೀಧರರಾದರು. ಈ ಎಡರಲ್ಲೂ ಇವರು ಇತಿಹಾಸವನ್ನು ಮುಖ್ಯ ವಿಷಯವಾಗಿ ಆರಿಸಿಕೊಂಡಿದ್ದರು.

ಇಪ್ಪತ್ತು ವರ್ಷಗಳ ಕಾಲ ಇಂಗ್ಲೆಂಡಿನಲ್ಲಿಯೇ ನೆಲಸಿ, ಐ. ಸಿ. ಎಸ್. ಪದವೀಧರನಾಗಿ ಸ್ವದೇಶಕ್ಕೆ ಮರಳಿ ಬಂದ ಶ್ರೀ ನೆಹರುರವರಿಗೆ ಒಂದು ದೂರದ ಹಳ್ಳಿಯಲ್ಲಿ ಗ್ರಾಮ ಪಂಚಾಯತಿ ಚುನಾವಣಾ ಸಂಬಂಧದ ವ್ಯವಸ್ಥೆ ಮಾಡುವ ಕೆಲಸವನ್ನು ಒಪ್ಪಿಸಲಾಯಿತು. ಈ ತಮ್ಮ ಪ್ರಾರಂಭಿಕ ಉದ್ಯೋಗದ ಸ್ಮರಣೆಯು ನೆಹರುರವರ ಸ್ಮೃತಿಪಟಲದಲ್ಲಿ ಎಂದೂ ಮಾಸಿಹೋಗದು.

೧೯೫೫ರಲ್ಲಿ ಕಮ್ಯುನಿಸ್ಟ್ ಚೀನದಲ್ಲಿ ಶ್ರೀ ನೆಹರು ಭಾರತೀಯ ರಾಯಭಾರಿಯಾಗಿದ್ದಾಗ, ಪೇಕಿಂಗದಲ್ಲಿರುವ ಭಾರತೀಯ ರಾಯಭಾರಿ ಕಾರ್ಯಾಲಯದ ಪುಸ್ತಕಾಲಯಕ್ಕೆ ಹಿಂದೀ ಮತ್ತಿತರ ದೇಶೀಯ ಭಾಷೆಗಳ ಸುಮಾರು ಒಂದು ಸಾವಿರ ಪುಸ್ತಕಗಳನ್ನು ಕೊಂಡುಹೋಗಿದ್ದರು. ತಮ್ಮ ಕಛೇರಿಯಲ್ಲಿ ಸ್ವಲ್ಪಮಟ್ಟಿಗೆ ಹಿಂದಿಯನ್ನು ಬಳಸುವ ಪ್ರಯತ್ನವನ್ನೂ ಇವರು ಮಾಡಿದ್ದಾರೆ.

ಶ್ರೀ ನೆಹರುರವರಿಗೆ ಪರ್ವತಾರೋಹಣವೆಂದರೆ ಪಂಚಪ್ರಾಣ. ೧೯೫೨ರಲ್ಲಿ ವಿದೇಶ ಮಂತ್ರಿ ಶಾಖೆಯ ಕಾರ್ಯದರ್ಶಿಯಾಗಿದ್ದಾಗ, ಭೂತಾನಕ್ಕೆ ತೆರಳಿದ್ದರು. ಬೆಟ್ಟದ ದಾರಿಯ ಸಂಚಾರವು ಪ್ರಯಾಸವೆನಿಸಬಾರದೆಂದು ಭೂತಾನದ ಮಹಾರಾಜರು ತಮ್ಮ ಉತ್ತಮ ಕುದುರೆಯನ್ನು ಸವಾರಿಗಾಗಿ ಕಳಿಸಿದ್ದರು. ಆದರೆ, ಆರೋಹಣಪ್ರಿಯ ನೆಹರು ಕುದುರೆ ಸವಾರಿ ಮಾಡುವುದನ್ನು ಬಿಟ್ಟು ೧೫ ಸಾವಿರ ಅಡಿ ಎತ್ತರದ ಪರ್ವತ ಮಾರ್ಗವನ್ನು ಕಾಲ್ನಡೆಯಾಗಿಯೇ ನಡೆದುಹೋದರು.

೧೯೩೫ರಿಂದ ೩೭ರ ವರೆಗೆ ಶ್ರೀ ನೆಹರು ಮಧ್ಯಪ್ರದೇಶದಲ್ಲಿ ಕಾರ್ಯ ನಿರ್ವಹಿಸಿದ್ದರು. ಅನಂತರ ಬೊಂಬಾಯಿ, ಮದ್ರಾಸ ರಾಜ್ಯಗಳಲ್ಲಿ ವಿವಿಧ ಪದಗಳಲ್ಲಿ ರಾರಾಜಿಸಿ, ಕೇಂದ್ರ ಸರಕಾರದ ಉಪ ಕಾರ್ಯದರ್ಶಿ ಹಾಗೂ ಮುಂದೆ ಸಹ ಕಾರ್ಯದರ್ಶಿಯಾದರು. ಆ ಮೇಲೆ, ಕೇಂದ್ರೀಯ ರೆವಿನ್ಯೂ ಬೋರ್ಡ್‌ನ ಅಧ್ಯಕ್ಷರಾದರು. ೧೯೪೭ರಲ್ಲಿ ಸಾರಿಗೆ ಮಂತ್ರಿ ಶಾಖೆಯ ಕಾರ್ಯದರ್ಶಿಯಾಗಿ, ಅಂತರರಾಜ್ಯ ಸಂಪರ್ಕ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ, ೧೯೪೯ರಿಂದ ೫೨ರ ವರೆಗೆ ವಿದೇಶ ಕಾರ್ಯದರ್ಶಿಯಾದರು.

೧೯೫೩ರಲ್ಲಿ ಕೋರಿಯಾದಲ್ಲಿ ತಟಸ್ಥ ರಾಷ್ಟ್ರಗಳ ಪ್ರತ್ಯರ್ಪಣ ಆಯೋಗ ಸ್ಥಾಪನೆಗಾಗಿ ಭಾರತೀಯ ದಳವು ಅಲ್ಲಿ ತೆರಳುವಾಗ, ಶ್ರೀ ನೆಹರು ಅದರ ನಾಯಕತ್ವವನ್ನು ವಹಿಸಿದ್ದರು. ಇದಾದ ಒಂದೇ ವರ್ಷದಲ್ಲಿ ಭಾರತದಲ್ಲಿದ್ದ ಫ್ರೆಂಚ ವಸಾಹತುಗಳ ಹಸ್ತಾಂತರ ಕಾರ್ಯಕ್ರಮದಲ್ಲಿ ಫ್ರೆಂಚ ಸರಕಾರದೊಡನಾದ ಒಪ್ಪಂದದ ಸಲುವಾಗಿ ಸಂಧಾನದ ಮಾತುಕತೆಗಳನ್ನು ತೊಡಗಿಸಿ, ಅದರಲ್ಲಿ ಯಶಸ್ವಿಯಾದರು. ದೇಶದಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ದುಡಿದು ತಮ್ಮ ವಿಶಾಲ ಅನುಭವದಿಂದ ರಾಷ್ಟ್ರಕ್ಕೆ ಅಪಾರ ಸೇವೆ ಸಲ್ಲಿಸಲು ಸಮರ್ಥರಾದ ಕೆಲವೇ ಭಾರತೀಯರಲ್ಲಿ ಶ್ರೀ ಆರ್. ಕೆ. ನೆಹರುರವರು ಅಗ್ರಗಣ್ಯ ಸ್ಥಾನವನ್ನು ಪಡೆದಿದ್ದಾರೆ. ರತನ್ ಕುಮಾರ ನೆಹರು ಪ್ರಧಾನಿ ನೆಹರುರವರ ಕೈಮನೆಗಳಿಗೆ ಒಪ್ಪುವಂತೆ ಕಾರ್ಯ ಪ್ರವೃತ್ತರಾಗಲು ಶಕ್ತರಿದ್ದಾರೆ; ಭಾರತಕ್ಕೆ ರತ್ನಪ್ರಾಯರಾಗಿದ್ದಾರೆ.

ನಿಶ್ಶಸ್ತ್ರೀಕರಣ ಪ್ರಶ್ನೆ

ಸಂಯುಕ್ತರಾಷ್ಟ್ರಸಂಸ್ಥೆಯ ಭಾವಿ ಅಧಿವೇಶನ

ರಶ್ಯನ್ ಪ್ರಧಾನಿ ಶ್ರೀ ಕ್ರುಶೇವರು ಮುಂದಿನ ಸಂ. ರಾ. ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಿಶ್ಶಸ್ತ್ರೀಕರಣದ ಬಗ್ಗೆ ಹೊಸ ಸೂಚನೆಗಳನ್ನು ಸ್ವತಃ ಮಂಡಿಸಲಿದ್ದಾರೆ. ಇದರಿಂದ ಅಮೆರಿಕೆ, ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ವರಿಷ್ಠ ನಾಯಕರೂ ಇದರಲ್ಲಿ ಭಾಗವಹಿಸುವರೆಂಬ ನಿರೀಕ್ಷೆಯಿದೆ.

ಇದೇ ತಿಂಗಳ ೨೦ನೆ ದಿನಾಂಕದಿಂದ ಸೇರಲಿರುವ ಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯು ಇತಿಹಾಸ ಪ್ರಸಿದ್ಧವೆನಿಸುವ ನಿರೀಕ್ಷೆಯಿದೆ. ಸೋವಿಯತ್ ರಶ್ಯದ ಪ್ರಧಾನಿ ಶ್ರೀ ನಿಕೀಟಾ ಕ್ರುಶೇವರೇ ಸ್ವಯಂ ರಶ್ಯನ್ ಪ್ರತಿನಿಧಿ ಮಂಡಳದ ನಾಯಕತ್ವವನ್ನು ವಹಿಸುವರೆಂಬ ವಾರ್ತೆ ಹಬ್ಬಿದುದರಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಈ ಬಗ್ಗೆ ಚಟುವಟಿಕೆಗಳು ವ್ಯಕ್ತವಾಗತೊಡಗಿವೆ. ಶ್ರೀ ಕ್ರುಶೇವರು ನಾಯಕತ್ವವನ್ನು ವಹಿಸಲು ಮುಖ್ಯವಾಗಿ

ಎರಡು ಕಾರಣಗಳನ್ನು ಉಲ್ಲೇಖಿಸಬಹುದು. ಮೊದಲನೆಯದಾಗಿ, ನಿಶ್ಶಸ್ತ್ರೀಕರಣ ಘೋಷಣೆಯ ಬಗ್ಗೆ ಅವರು ಕೆಲ ಹೊಸ ಸೂಚನೆಗಳನ್ನು ಮಾಡಿ ಜಗತ್ತನ್ನೇ ವಿಸ್ಮಯಗೊಳಿಸಲಿರುವರೆಂದು ನಂಬಲಾಗಿದೆ. ಎರಡನೆಯದಾಗಿ, ಆಫ್ರೋ-ಏಶ್ಯನ್ ರಾಷ್ಟ್ರಗಳ ಪ್ರತಿನಿಧಿಗಳೆಲ್ಲರೂ ಇಲ್ಲಿ ಸೇರುವುದರಿಂದ, ಆ ರಾಷ್ಟ್ರಗಳ ಮೈತ್ರಿಯನ್ನು ಹೆಚ್ಚಿಸಿಕೊಳ್ಳುವುದೀಗ ರಶ್ಯಕ್ಕೆ ಬೇಕಾಗಿರುವುದರಿಂದ, ಇಂತಹ ಸುಸಂದರ್ಭವನ್ನು ಕಳೆದುಕೊಳ್ಳುವುದಕ್ಕೆ ಅವರ ಮನಸ್ಸು ಒಪ್ಪಲಾರದು.

ಶ್ರೀ ಕ್ರುಶೇವರೇ ಈ ಅಧಿವೇಶನದಲ್ಲಿ ಭಾಗವಹಿಸಲಿರುವುದರಿಂದ, ಅಮೆರಿಕೆಯ ಅಧ್ಯಕ್ಷ ಐಸನ್ ಹಾವರ್, ಬ್ರಿಟನ್ನಿನ ಪ್ರಧಾನಿ ಹೆರಾಲ್ಡ್ ಮ್ಯಾಕಮಿಲನ್ ಮತ್ತು ಫ್ರಾನ್ಸದ ಅಧ್ಯಕ್ಷ ಜ. ದ ಗಾಲೆಯವರೂ ಇದರಲ್ಲಿ ಉಪಸ್ಥಿತರಿದ್ದು ತಂತಮ್ಮ ಅಭಿಪ್ರಾಯಗಳನ್ನು ಪ್ರಕಟಪಡಿಸಬಹುದೆಂಬ ನಿರೀಕ್ಷೆಯಿದೆ. ರಶ್ಯನ್ ವಾದದಿಂದ ವಿಶೇಷ ಪ್ರಯೋಜನ ದೊರೆಯುವುದೆಂದು ಪಾಶ್ಚಾತ್ಯ ರಾಷ್ಟ್ರಗಳು ವಿಶ್ವಾಸ ತಾಳಿಲ್ಲವಾದರೂ ತಾವು ಸುಮ್ಮನುಳಿದೆವೆಂಬ ಅಪಕೀರ್ತಿ ಬಾರದಂತೆ ಇವರು ಬಯಸುತ್ತಾರೆ. ಮಿತ್ರ ರಾಷ್ಟ್ರಗಳ ನಡುವೆ ಕೂಲಂಕಷ ವಿಚಾರ ವಿನಿಮಯವು ನಡೆದ ಬಳಿಕ ನಿಶ್ಚಿತ ನಿರ್ಧಾರವು ವ್ಯಕ್ತಪಡುವುದಾದರೂ ಇವರೆಲ್ಲರೂ ಮುಂದಿನ ಸಭೆಯಲ್ಲಿ ಭಾಗವಹಿಸುವ ಸಂಭವವು ಹೆಚ್ಚಾಗಿದೆ. ಶ್ರೀ ಐಕರಂತೂ ನಿಶ್ಶಸ್ತ್ರೀಕರಣ ಸಭೆಯಲ್ಲಿ ಭಾಗವಹಿಸಿ ಸಮಾರೋಪ ಭಾಷಣ ಮಾಡಲು ನಿರ್ಧರಿಸಿದ್ದಾರೆ.

ಈ ಎಲ್ಲಾ ಕಾರಣಗಳಿಂದ ಮುಂದಿನ ಅಧಿವೇಶನವು ಅತಿ ಪ್ರಮುಖವಾಗಿರುವುದು ಮಾತ್ರವಲ್ಲದೆ ಇದಕ್ಕೆ ಶೃಂಗ ಸಮ್ಮೇಳನದ ಆಕಾರವೂ ಮಹತ್ವವೂ ಬರುವುದು. ಹೀಗೆ ತೀರ ಉಚ್ಚಮಟ್ಟದಲ್ಲಿ ಅತಿ ಪ್ರಧಾನವೆನಿಸಿದ ನಿಶ್ಶಸ್ತ್ರೀಕರಣ ಪ್ರಶ್ನೆಯ ಬಗ್ಗೆ ಚರ್ಚೆ ನಡೆಯುವುದು ಹಿತಕರವಾದುದರಿಂದ ಸ್ವಾಗತಾರ್ಹವಾಗಿದೆ. ಭಾರತೀಯ ಪ್ರಧಾನಿಯವರೂ, ತನ್ನ ಉಪಸ್ಥಿತಿಯು ಆವಶ್ಯವೆಂದು ಅಥವಾ ಉಪಯುಕ್ತವೆಂದು ಇತರ ಧುರೀಣರು ಅಭಿಪ್ರಾಯಪಡುವುದಾದರೆ, ಈ ಸಭೆಯಲ್ಲಿ ಭಾಗವಹಿಸಲು ಸಿದ್ಧರಿದ್ದಾರೆ.

‘ನಚಿಕೇತ’ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.**

ಮಾರಾಟಗಾರರು: **ನವಭಾರತ ಬುಕ್ ಡಿಪ್ಪೊ, ಉಡುಪಿ.**

> ಪ್ರತಿಭಾವಂತ ವ್ಯಕ್ತಿ ತನ್ನ ಮಾರ್ಗವನ್ನು ಸ್ವಯಂ ಅರಸಿಕೊಳ್ಳುತ್ತಾನೆ; ತನ್ನ ದಾರಿದೀಪವನ್ನು ತನ್ನ ಕೈಯಲ್ಲಿಯೇ ಇಟ್ಟುಕೊಂಡು ಅದರ ಬೆಳಕಿನಲ್ಲೇ ಮುಂದುವರಿಯುತ್ತಾನೆ.

ನವಯುಗ

ವರುಷ	ಉಡುಪಿ	ವಾರ
೪೦	೮-೯-'೬೦	೨

ಹಿಂದುಳಿಯುವಿಕೆ

ನಮ್ಮ ಸಂವಿಧಾನವು ರಾಜ್ಯ ಸರಕಾರಗಳಿಗೆ ಜನತೆಯಲ್ಲಿ ದುರ್ಬಲಸಂಗಡಗಳು ಮುಖ್ಯವಾಗಿ ಹಿಂದುಳಿದ ವರ್ಗ ಮತ್ತು ಹಿಂದುಳಿದ ಜಾತಿಗಳವರು, ಆರ್ಥಿಕವಾಗಿಯೂ ವಿದ್ಯೆಯಲ್ಲಿಯೂ ಮುಂದು ಬರುವಂತೆ ಮತ್ತು ಅವರನ್ನು ಸಾಮಾಜಿಕ ಅನ್ಯಾಯಗಳಿಂದ ರಕ್ಷಿಸುವಂತೆ ವಿಶೇಷ ಗಮನ ಹರಿಸುವ ಅಧಿಕಾರವನ್ನಿತ್ತಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಇಂತಹ "ವಿಶೇಷ ರಕ್ಷಣೆ"ಗೆ ಅರ್ಹರಾದವರ ಒಂದೊಂದು ಯಾದಿಯಿದೆ; ಅವು ಆಗಾಗ ಪುನರ್ವಿಮರ್ಶೆಗೆ ಗುರಿಯಾಗುವುದೂ ಇದೆ. ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಇವರಿಗೆ ವಿಶೇಷ ಸವಲತ್ತುಗಳನ್ನು ಕೊಡಲಾಗುತ್ತಿದೆ. ಅಸ್ಪೃಶ್ಯತೆಯೆಂಬುದನ್ನು ನ್ಯಾಯಬಾಹಿರವೆಂದು ಘೋಷಿಸಿ, ಸಾರ್ವಜನಿಕ ಸ್ಥಳಗಳಲ್ಲಿ ಸ್ಪರ್ಶಾಸ್ಪೃಶ್ಯತೆಯ ಭೇದ ವ್ಯಕ್ತಪಡಿಸಿದವರಿಗೆ ದಂಡನೆಯನ್ನೂ ವಿಧಿಸಲಾಗುತ್ತಿದೆ. ಇಂತಹ ಹಿಂದುಳಿದವರ ಉನ್ನತಿಗಾಗಿ "ಮುಂದುವರಿದವರು" ಎಂಬ ಪಟ್ಟ ಹೆಚ್ಚಲ್ಪಟ್ಟವರು ತಮ್ಮ ಲಾಭಾಲಾಭಗಳನ್ನು ಕಡೆಗಣಿಸಿ, ತಮ್ಮ ಅಭಾಗ್ಯವಂತ ಸಹೋದರರ ಉನ್ನತಿಗಾಗಿ ಸರಕಾರದೊಡನೆ ತಾವೂ ಪರಿಶ್ರಮ ಪಡುತ್ತಿರುವರು. ತಮ್ಮ ಪರಂಪರಾಪ್ರಾಪ್ತವಾಗಿ ಬಂದ ಕಟ್ಟುಕಟ್ಟಲೆಗಳನ್ನು ಮುರಿದು, ರಾಷ್ಟ್ರೀಯ ಭಾವನೆಯ ಬೀಜವನ್ನು ಬಿತ್ತಿಕೊಂಡು, ಪ್ರಧಾನಿ ನೆಹರುರವರು ಹೇಳಿದ ಜಾತ್ಯತೀತ ಸಮಾಜ ರಚನೆಯ ಕಾರ್ಯದಲ್ಲಿ ಸಹಯೋಗ ನೀಡುತ್ತಿರುವುದು ಕಣ್ಣಿಗೆ ಕಾಣುವ ವಿಷಯ.

ಹೀಗಿದ್ದರೂ 'ಅಸ್ಪೃಶ್ಯತೆ'ಯು ದೂರವಾಗುತ್ತ ಬಂದಿತೇದು ಪ್ರಚಾರ ಮಾಡುವುದೆಂದರೆ, 'ಹರಿಜನರಿಗೆ ನ್ಯಾಯವಾಗಿ ದೊರೆಯಬೇಕಾಗಿರುವ ವಿಶೇಷ ಸವಲತ್ತುಗಳನ್ನು ತಾವೇ ಅಪಹರಿಸಿಕೊಳ್ಳುವ ದುರಾಲೋಚನೆ'ಯೆಂದು ಕೇಂದ್ರ ಮಂತ್ರಿವರ್ಯರೂ ಹರಿಜನ ನಾಯಕರೂ ಆದ ಶ್ರೀ ಜಗಜ್ಜೀವನರಾಮರು 'ಮುಂದುವರಿದವ'ರಿಗೆ ಎಚ್ಚರಿಕೆ ಯಿತ್ತಿರುವುದು ಸೋಜಿಗವೆನಿಸುತ್ತದೆ. ಜಾತಿ ವರ್ಗಗಳನ್ನು ಹೊಂದಿಕೊಂಡು ಹಿಂದು—ಮುಂದೆಂಬ ವಿಭಾಗ ಮಾಡುವುದು ಸರಿಯಲ್ಲವೆಂದು ಇಂದು ಭಾರತಕ್ಕೆ ಭಾರತವೇ ಅಭಿಪ್ರಾಯ ಪಡುತ್ತಿದೆ. ಹರಿಜನರಾಗಲೀ ಉಳಿದ ಹಿಂದುಳಿದವರೆಂಬ ಉಪನಾಮಧಾರಿಗಳಾಗಲೀ ತಾವು ಮುಂದೆ ಬಂದಿದ್ದೇವೆ ಎಂದು ಹೇಳಿಕೊಳ್ಳುವುದಕ್ಕೆ ತಯಾರಿಲ್ಲ. ಏಕೆಂದರೆ, ಎಲ್ಲರೂ ಯಾವುದೇ ಪ್ರಕಾರದಿಂದ ಹಿಂದುಳಿದವರ ಯಾದಿಗೆ ಸೇರಿಬಿಟ್ಟು ಸಾಂವಿಧಾನಿಕವಾಗಿ ತಮಗೆ ದೊರೆಯುವ ವಿವಿಧ ಸಹಾಯ—ಸೌಲಭ್ಯಗಳನ್ನು ಪಡೆಯುವ ಅಭಿಲಾಷಾಯುಕ್ತರಾಗುತ್ತಾರೆಯೇ ಹೊರತು, ಅವನ್ನು ಕಳೆದುಕೊಳ್ಳುವುದಕ್ಕಲ್ಲ. ಮೈಸೂರು ರಾಜ್ಯವು ಈ ಹಿಂದು—ಮುಂದುಗಳ ಬಗ್ಗೆ ವಿಚಾರಿಸಿ, ವರದಿಯೊಪ್ಪಿಸಲು ನೇಮಿಸಿದ್ದ ನಾಗನ ಗೌಡ ಸಮಿತಿಗೆ ಬಳ್ಳಾರಿ ಜಿಲ್ಲೆಯ ನಾಗರಿಕರು ತಾವೆಲ್ಲರೂ ಹಿಂದುಳಿದ ವರ್ಗಕ್ಕೆ ಸೇರಿದವರೆಂದು ಮೊರೆಯಿಟ್ಟರಂತೆ! ಇದೇ ರೀತಿಯಲ್ಲಿ ರಾಜ್ಯದಲ್ಲಿ ನೂರಕ್ಕೆ ೯೫ರಷ್ಟು ಜನರನ್ನೂ ಈ ಯಾದಿಯಲ್ಲಿ ಸೇರಿರುವ ಹಿಂದುಳಿದವರ ಯಾದಿಯನ್ನು ಘೋಷಿಸಿ ಮೈಸೂರು ಸರಕಾರವು ಮೊದಲೊಮ್ಮೆ ನಾಚಿಗೆಪಡುವಂತಾದುದನ್ನು ನಾವು ನೆನೆಯಬೇಕು. ಹಿಂದುಳಿದವರು, ಅವರಲ್ಲಿ ಮತ್ತೂ ಹಿಂದುಳಿದವರು— ಎಂದು ಮುಂತಾದ ವಿಭಾಗ ಮಾಡುವ ಬಗ್ಗೆಯೂ ವಿಧಾನ ಸಭೆಯಲ್ಲಿ ನಗೆಯಾಟ ನಡೆದುದು ಮೊನ್ನೆ ಮೊನ್ನೆ. ಹೀಗೆ ಯಾರೂ ತಮ್ಮನ್ನು ಮುಂದುವರಿದವರೆಂದು ಹೇಳಿಕೊಳ್ಳಲು ಹಿಂಜರಿದರೆ, ರಾಜ್ಯ ಮುಂದುವರಿಯುವುದಾದರೂ ಹೇಗೆ? ಹರಿಜನರಾಗಲೀ ಇತರ ಹಿಂದುಳಿದ ವರ್ಗಗಳವರಾಗಲೀ ತಾವು ಮುಂದು ಬರಬೇಕು; ಇತರರಂತೆಯೇ ಸಮಾಜದಲ್ಲಿ ಗಣನೀಯ ಸ್ಥಾನ ಪಡೆಯಬೇಕೆಂದು ಅಂತರಿಕವಾಗಿ ಬಯಸುತ್ತಾರೆ; ಅವರ ಬಯಕೆ ಹಲವಾರು ಸಂದರ್ಭಗಳಲ್ಲಿ ಈಡೇರಿಯೂ ಇದೆ. ಆದರೆ, ಕಾನೂನಿನ ದೃಷ್ಟಿಯಲ್ಲಿ ಅವರು ಮುಂದುವರಿದವರೆಂದೆನಿಸಿಕೊಂಡು, ತಮಗಿರುವ ವಿಶೇಷ ಹಿತರಕ್ಷಣೆ—ಸದವಕಾಶ—ಸ್ಥಾನಗಳ ಕಾಯ್ದಿರಿಸುವಿಕೆಗಳನ್ನು ಕಳೆದುಕೊಳ್ಳಲು ಎಳ್ಳಷ್ಟೂ ಬಯಸುವುದಿಲ್ಲ. ನಾಮ್ಮನ್ನರು ಅಸ್ಪೃಶ್ಯತೆಯನ್ನು ಗಮನಿಸದೆ ಅವರೊಡನೆ ಜತೆಗೂಡಿ ನಡೆಯುತ್ತಿರಲು ಪ್ರಯತ್ನ ಪಡುತ್ತಿರುವಾಗ ಅಂತಹ ಸಮಾಜ ಸುಧಾರಕರನ್ನೇ ಎಚ್ಚರಿಸುವ ಮಾತು ಶ್ರೀ ಜಗಜ್ಜೀವನರಾಮರಂತಹ ಹೊಣೆಗಾರ ವ್ಯಕ್ತಿಯ ಬಾಯಿಂದ ಹೊರಬಿದ್ದುದು ಅವರ ಸಂಕುಚಿತ ಮನೋವೃತ್ತಿಯನ್ನು ತೋರಿಸುತ್ತದೆ. ವಾಸ್ತವಿಕವಾಗಿ, ಮುಂದುವರಿಯುತ್ತಿರುವವರು, ಹೆಮ್ಮೆ ಪಡಬೇಕಾದವರು ಆಶೆ ಆಮಿಷಗಳಿಗೆ ಬಲಿಬಿದ್ದು ಮತ್ತೂ ಹಿಂದುಳಿಯಬಯಸುವುದಾದರೆ, ಅಂತಹರು ಮುಂದೆಬರುವುದಾದರೂ ಎಂದು? ಮೇಲೆಳೆದಷ್ಟೂ ಕೆಳಕ್ಕೆ ಜಗ್ಗುವ ಮನೋವೃತ್ತಿಯು ದೂರವಾಗದ ಹೊರತು ಈ ಮಾದರಿಯಜ್ಜಿ ಗಂಭೀರ ಎಚ್ಚರಿಕೆ ಬರುವುದು ನಿಲ್ಲಲಾರದು.

ನಾವು ಸ್ಥಾಪಿಸಬೇಕೆಂದು ಬಯಸಿದ "ಜಾತ್ಯತೀತ ವರ್ಗರಹಿತ ಕಲ್ಯಾಣ ರಾಷ್ಟ್ರ" ಅನ್ವರ್ಥವೆನಿಸಬೇಕಾದರೆ, ಹಿಂದುಳಿದವರೆಲ್ಲರೂ ಮುಂದುವರಿದವರಾಗಬೇಕು; ಹಿಂದುಳಿದವರು ಮತ್ತೂ ಹಿಂದುಳಿಯುತ್ತ ಹೋಗುವುದೆಂದರೆ, ಸರಕಾರವು ವೆಚ್ಚಮಾಡುತ್ತಿರುವ ಕೋಟಿಗಟ್ಟಲೆಯ ಮೊತ್ತ ನೀರಿನಲ್ಲಿ ಮಾಡಿದ ಹೋಮದಂತೆಯೇ ಸರಿ. "ಹಿಂದುಳಿಯುವಿಕೆ"ಎಂದು ನೆಲತೋರದ ಬಾವಿಯಲ್ಲ. ಪ್ರತಿ ವರ್ಷವೂ ಅದನ್ನು ಮುಚ್ಚಲು ಮಣ್ಣು ಸುರಿಯುತ್ತಿದ್ದಂತೆ ಅದು ಮತ್ತೂ ಆಳವಾಗುತ್ತ ಹೋಗುವುದೆಂದರೆ, ಅದೇ ಚೋದ್ಯವನ್ನ ಬೇಕು!

ಸಂಕ್ಷಿಪ್ತ ಸುದ್ದಿಗಳು

ಅಧಿಕಾರ ವ್ಯಾಪ್ತಿಬಾಹಿರ

ದೇಶದ ಎಲ್ಲ ನಾಗರಿಕರು ಕುತೂಹಲದಿಂದ ಎದುರು ನೋಡುತಿದ್ದ ಕಮಾಂಡರ್ ನಾನಾವತಿಯವರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಬೆಂಚು ತನ್ನ ತೀರ್ಪನ್ನು ಸಾರಿದೆ. ಇದರಂತೆ ಆಗಿನ ಮುಂಬಯಿ (ಈಗಿನ ಮಹಾರಾಷ್ಟ್ರ)ದ ರಾಜ್ಯಪಾಲರು ಕಮಾಂಡರ ನಾನಾವತಿಯವರ ಶಿಕ್ಷೆಯನ್ನು ಅಮಾನತುಗೊಳಿಸಲು ಹೊರಡಿಸಿದ ಆಜ್ಞೆಯು ಸಂವಿಧಾನದ ೧೬೧ನೆಯ ಅನುಚ್ಛೇಧದಲ್ಲಿ ರಾಜ್ಯಪಾಲರಿಗೀಯಲಾದ ಅಧಿಕಾರ ವ್ಯಾಪ್ತಿಗೆ ಮೀರಿದುದಾಗುತ್ತದೆ. ಇದರಿಂದಾಗಿ ಕಮಾಂಡರ್ ನಾನಾವತಿಯವರು ಬೊಂಬಾಯಿ ಉಚ್ಚ ನ್ಯಾಯಾಲಯವಿತ್ತ ಜೀವಾವಧಿ ಶಿಕ್ಷೆಗೆ ಒಳಗಾಗಬೇಕಾಗುವುದು.

ಸಂತ್ರಸ್ತರಿಗೆ ಸಹಾಯ

ಮೈಸೂರು, ಆಂಧ್ರ ಮತ್ತು ಪಂಜಾಬದ ಕೆಲ ಭಾಗಗಳು ಅನಾವೃಷ್ಟಿಯ ಪರಿಣಾಮವಾಗಿ ಅಕಾಲ ಪೀಡಿತವಾಗಿ ಅಲ್ಲಿನ ಜನತೆಯು ಕಂಗೆಟ್ಟಿದ್ದರೆ, ಒಡಿಸ್ಸ ಮತ್ತು ಪಂಜಾಬ ರಾಜ್ಯಗಳಲ್ಲಿ ಬಂದ ಅತಿ ವೃಷ್ಟಿ ಮತ್ತು ಏರಿದ ಮಹಾಪೂರಗಳ ದೆಸೆಯಿಂದ ಬಹುಭಾಗದ ಜನತೆ ಕಂಗಾಲಾಗಿದೆ. ಉತ್ತರ ಕರ್ನಾಟಕ ಮತ್ತು ರಾಯಲಸೀಮೆಗಳಲ್ಲಿ ಬರಗಾಲ ಕಾಮಗಾರಿಗಳನ್ನು ತೊಡಗಲು ಆಯಾ ಸರಕಾರಗಳು ಸೂಕ್ತ ಏರ್ಪಾಡನ್ನು ಮಾಡಿವೆ. ಆಹಾರ ಧಾನ್ಯಗಳ ಸರಬರಾಯಿಯತ್ತ ವಿಶೇಷ ಗಮನವನ್ನೂ ಹರಿಸಿವೆ. ಕೇಂದ್ರ ಸರಕಾರದ ಗಮನವನ್ನೂ ಇತ್ತ ಸೆಳೆಯಲು ಪ್ರಯತ್ನಿಸಿವೆ. ಒಡಿಸ್ಸದ ಪರಿಸ್ಥಿತಿಯನ್ನು ನೋಡಿ ಬಂದವರ ಮಾತಿನಲ್ಲಿ ಹೇಳುವುದಾದರೆ, ಆ ರಾಜ್ಯ ಮಹಾಪೂರ ಪೂರ್ವ ಸ್ಥಿತಿಗೆ ಬರಬೇಕಾದರೆ, ಇನ್ನು ೧೦—೧೫ ವರ್ಷಗಳು ಬೇಕಾಗುವುವು! ಹಲವಾರು ಪ್ರಾಣಹಾನಿ ಸಂಭವಿಸಿದುದು ಮಾತ್ರವಲ್ಲ ಕೋಟಿಗಟ್ಟಲೆಯಲ್ಲಿ ನಷ್ಟವುಂಟಾಗಿವೆ. ಇದನ್ನು ತುಂಬುವುದಂತೂ ಮುಂದಿನ ಮಾತು; ಸದ್ಯ ತಮ್ಮ ವಸತಿ, ಸಂಪತ್ತಿಗಳನ್ನು ಕಳೆದುಕೊಂಡು ದಿಕ್ಕುಗೇಡಿಗಳಾದ ಸಾವಿರಾರು ಕುಟುಂಬಗಳಿಗೆ ಪುನರ್ವಸತಿಯ ಸೌಕರ್ಯವನ್ನು ಒದಗಿಸುವುದೇ ಮಹಾಪ್ರಶ್ನೆಯೆನಿಸಿದೆ. ಇನ್ನೂ ಮಹಾಪೂರದ ದುಷ್ಪ್ರಭಾವ ಇಳಿಯುವ ಹವಣಿಕೆಯಿಲ್ಲವಾದುದರಿಂದ, ಭೀಕರ ಪರಿಣಾಮವನ್ನು ಎದುರಿಸಬೇಕಾದ ಆಗತ್ಯವೀಗ ಬಂದಿದೆ. ರಾಜ್ಯ ಸರಕಾರವು ಈ ಬಗ್ಗೆ ಕೇಂದ್ರ ಸರಕಾರಕ್ಕೊಂದು ವರದಿಯನ್ನು ಕಳಿಸಿದ್ದು, ಅದನ್ನು ಓದುವಾಗ, ಮೈ ರೋಮಾಂಚನವೇಳುತ್ತದೆ. ಮಹಾಪೂರ ಸಂತ್ರಸ್ತರ ಹಾಗೂ ಅಕಾಲ ಪೀಡಿತರ ದಾರುಣ ಸ್ಥಿತಿಯನ್ನು ಕಲ್ಪಿಸುವುದೂ ಅಸಾಧ್ಯವೆನಿಸಿದೆ. ಆಯಾ ರಾಜ್ಯ ಮತ್ತು ಕೇಂದ್ರಸರಕಾರದವರು ಕೈಗೊಳ್ಳುವ ವಿವಿಧ ಪರಿಹಾರೋಪಾಯಗಳು ಆದಷ್ಟು ತೀವ್ರವಾಗಿ ನಡೆದು, ಅವುಗಳು ಸತ್ಪರಿಣಾಮವನ್ನುಂಟುಮಾಡಲಿ; ಜನತೆಯೂ ತನ್ನ ಉದಾರತೆಯನ್ನು ಈ ಸಂತ್ರಸ್ತರತ್ತ ತೋರ್ಪಡಿಸಲಿ

ಬೆಲೆಯಿಳಿಯಲು ಉಪಾಯ

ಈಗ ವಿತರಣೆಯಾಗುತ್ತಿರುವ ಅವಶ್ಯಕ ಪದಾರ್ಥಗಳಲ್ಲಿ ಸೇ. ಮೂವತ್ತರಷ್ಟು ಸಹಕಾರಿ ಸಂಘಗಳ ಕೈಸೇರಿದರೆ, ಪದಾರ್ಥಗಳ ಬೆಲೆಯೇರಿಕೆಯನ್ನು ಸುಲಭದಲ್ಲಿ ತಡೆಹಿಡಿಯಬಹುದೆಂದು ಯೋಜನಾ ಮಂತ್ರಿ ಗುಲ್ಜಾರೀಲಾಲ ನಂದಾರವರು ಮೂರನೆಯ ಪಂಚವಾರ್ಷಿಕ ಯೋಜನೆಯ ಮೇಲಿನ ಚರ್ಚೆಯ ವೇಳೆ ಅಭಿಪ್ರಾಯಪಟ್ಟರು. ಮಾತ್ರವಲ್ಲ, ಮೂರನೆಯ ಯೋಜನಾವಧಿಯಲ್ಲಿ ಆಹಾರ, ವಸ್ತ್ರ ಮೊದಲಾದ ಅತ್ಯಂತಾವಶ್ಯಕ ವಸ್ತುಗಳ ಬೆಲೆಯನ್ನು ಹೆಚ್ಚದಂತೆ ನೋಡಿಕೊಳ್ಳಲು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವ ಭರವಸೆಯಿತ್ತರು.

ಮದ್ರಾಸರಾಜ್ಯದ ವಿನಂತಿ

ಮದ್ರಾಸ ಶಾಸನ ಸಭೆಯು ಭಾರತದ ಒಕ್ಕೂಟದಲ್ಲಿ ಪ್ರಶಾಸನಾತ್ಮಕ ವ್ಯವಹಾರಗಳ ಬಗ್ಗೆ ಇಂಗ್ಲಿಷ್ ಭಾಷೆಯ ಉಪಯೋಗವನ್ನು ಮುಂದುವರಿಸಿಕೊಂಡು ಹೋಗುವುದಾಗಿ ಪ್ರಧಾನಿ ನೆಹರು ಇತ್ತ ಭರವಸೆಯನ್ನು ಕಾರ್ಯಗತಗೊಳಿಸಲು ಆವಶ್ಯಕ ವಿಧೇಯಕವನ್ನು ತಯಾರಿಸಬೇಕೆಂದು ಕೇಂದ್ರ ಸರಕಾರವನ್ನು ಭಿನ್ನವಿಸುವ ಗೊತ್ತುವಳಿಯೊಂದನ್ನು ಸ್ವೀಕರಿಸಿದೆ. ಮೇಲ್ಮನೆಯು ಇದೇ ಮಾದರಿಯ ಠರಾವೊಂದನ್ನು ಮೊದಲೇ ಮಾಡಿರುತ್ತದೆ.

ಕನ್ನಡದಲ್ಲಿ ವಿಶ್ವಕೋಶ

ಮೈಸೂರು ವಿಶ್ವವಿದ್ಯಾಲಯದ ಸಿನೇಟು ಸಭೆ ಸೇರಿ, ಒಟ್ಟು ಸೇ. ೫೦ಕ್ಕಿಂತ ಅಧಿಕ ಅಂಕ ಪಡೆದು, ಕೇವಲ ಒಂದು ವಿಷಯದಲ್ಲಿ ಫೇಲಾದ ವಿದ್ಯಾರ್ಥಿಗೆ ಹೆಚ್ಚೆಂದರೆ, ಸೇ. ಏರಡು ಗ್ರೇಸ್ ಮಾರ್ಕುಗಳನ್ನು ಕೊಡಲು ನಿರ್ಧಾರಕ್ಕೆ ಬಂದಿದೆಯೆಂದು ತಿಳಿಯುತ್ತದೆ. ಕೇಂದ್ರ ವಿಜ್ಞಾನ ಸಂಶೋಧನೆಯ ಮಂತ್ರಿ ಶಾಖೆಯ ಆರ್ಥಿಕ ಸಹಾಯದಿಂದ ವಿಶ್ವವಿದ್ಯಾಲಯವು ಕನ್ನಡದಲ್ಲಿ ವಿಜ್ಞಾನ ವಿಶ್ವಕೋಶವೊಂದನ್ನು ಸಿದ್ಧಗೊಳಿಸಲು ಯೋಚಿಸುತ್ತಿದೆಯೆಂದೂ ಇದಕ್ಕೆ ಒಟ್ಟು ೪೦ ಸಾವಿರ ರೂಪಾಯಿಗಳು ಬೇಕಾಗಬಹುದೆಂದೂ ಗೊತ್ತಾಗಿದೆ.

ಮಂತ್ರಿಮಂಡಳಿಯ ಭವಿಷ್ಯ

ಕಾಂಗ್ರೆಸ್ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿ ಯವರು ತ್ರಿವೇಂದ್ರಮಕ್ಕೆ ಹೋಗುವ ದಾರಿಯಲ್ಲಿ ಬೆಂಗಳೂರಲ್ಲಿ ತಂಗಿ, ಕಾಂಗ್ರೆಸ್ ರಾಜಕೀಯ ಧುರೀಣರೊಡನೆ ವಿಚಾರ ವಿನಿಮಯ ಮಾಡಿದರು. ಅವರು ದೆಹಲಿಯಿಂದ ತಮ್ಮೂರಿಗೆ ತೆರಳುವಾಗಲೂ ಕೆಲಸಮಯ ಈ ನಾಯಕರೊಡನೆ ಕಳೆದಿದ್ದರು. ಇಲ್ಲಿನ ಮುಖಂಡರಲ್ಲಿದ್ದ ವೈಮನಸ್ಯ ಹಾಗೂ ಭಿನ್ನಾಭಿಪ್ರಾಯಗಳು ಏನೊಂದೂ ಬದಲಾವಣೆಯಾಗಿಲ್ಲವಾದುದರಿಂದ ಅವರು ಪರಿಸ್ಥಿತಿಯನ್ನು ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷಕ್ಕೆ ತಿಳಿಸುವರೆಂದು ನಂಬಲಾಗಿದೆ. ಸಪ್ಟಂಬರ ೧೧ರಂದು ಬೆಂಗಳೂರಿಗೆ ಪ್ರಧಾನಿ ನೆಹರು ಬಂದನಂತರವೇ ಮಂತ್ರಿಮಂಡಳಿಯ ಬದಲಾವಣೆಯ ಬಗ್ಗೆ ನಿಶ್ಚಿತ ಧೋರಣೆಯು ವ್ಯಕ್ತಪಡಬಹುದು.

ತಾಲೂಕು ಬೋರ್ಡ್ ಚುನಾವಣೆ

ಕಾಂಗ್ರೆಸ್ ಉಮೇದ್ವಾರಿಗಳು.

ಕುಂದಾಪುರ ತಾಲೂಕು.

1. ಬೈಂದೂರು: 1. ಶ್ರೀ ಯು. ಸುಬ್ಬಣ್ಣ ಶೆಟ್ಟಿ. 2. ಶ್ರೀ ಬಿ. ಶ್ರೀನಿವಾಸ ಹೊಳ್ಳ, 3. ಶ್ರೀ ಸುಬ್ಬ, [ಕಾದಿಟ್ಟ ಸ್ಥಾನ]

2. ಖಂಬದಕೋಣೆ: ಶ್ರೀ ಆರ್. ಕೆ. ಸಂಜೀವ ರಾವ್, 2. ಶ್ರೀ ಬಿ. ಎ ಬಾದರ್.

3. ಗಂಗೊಳ್ಳಿ: 1. ಶ್ರೀ ಕೊಳ್ಕೆಬೈಲ್ ಸೂರಪ್ಪ ಶೆಟ್ಟಿ, 2. ಶ್ರೀ ಎಚ್. ಭಾಸ್ಕರ ಕಾಮತ್.

4. ವಂಡ್ಸೆ: 1. ಶ್ರೀ ವೆಂಕಪ್ಪ ಶೆಟ್ಟಿ ಕೆ. 2. ಶ್ರೀ ಶಿವರಾಮ ಶೆಟ್ಟಿ ಬಿ.

೫. ಶಂಕರನಾರಾಯಣ: 1. ಶ್ರೀ ಜಿ. ಎಸ್. ಆಚಾರ್, 2. ಬಿ. ಸಂಜೀವ ನಾಯ್ಕ (ಕಾದಿಟ್ಟ ಸ್ಥಾನ]

6. ಹಾಲಾಡಿ; 1. ಶ್ರೀ ಎ. ಗೋಪಾಲಕೃಷ್ಣ ಕೊಡ್ಗಿ, 2. ಶ್ರೀ ಹಾಲಾಡಿ ಮಹಾಬಲ ಶೆಟ್ಟಿ.

7. ಬಸ್ರೂರು: 1. ಶ್ರೀ ಮುತ್ತಯ್ಯ ಹೆಗ್ಡೆ ಎಂ; ಶ್ರೀ ಬಿ. ಸುಬ್ಬಣ್ಣ ಶೆಟ್ಟಿ.

8. ಕುಂದಾಪುರ: 1. ಶ್ರೀ ಎನ್. ಎಸ್. ಪರಮೇಶ್ವರಯ್ಯ, 2. ಶ್ರೀ ಕೇಶವ ಕಾಮತ್, 3. ಶ್ರೀಮತಿ ಮೂಲೆ ಪದ್ಮಾವತಿ. [ಕಾದಿಟ್ಟ ಸ್ಥಾನ]

ಪುತ್ತೂರು ತಾಲೂಕು

1. ಪುತ್ತೂರು: ಶ್ರೀ ಎ. ಭೀಮ ಭಟ್, 2. ಶ್ರೀಮತಿ ಕೃಷ್ಣಾ ಬಾಯಿ, ಬೈಂದೂರು, [ಕಾದಿಟ್ಟ ಸ್ಥಾನ] 3. ಶ್ರೀ ವೆಂಕಪ್ಪ, [ಕಾದಿಟ್ಟ ಸ್ಥಾನ]

2. ಕಾವು: 1. ಶ್ರೀ ಐತ್ತಪ್ಪ ರೈ ಕೆ., 2. ಶ್ರೀ ಜಿ ಶ್ಯಾಮ ಭಟ್, 3. ಶ್ರೀ ಕೃಷ್ಣ ನಾಯಕ್, [ಕಾದಿಟ್ಟ ಸ್ಥಾನ]

3. ಸುಳ್ಯ: 1. ಶ್ರೀ ರಾಮಣ್ಣ ಗೌಡ, ಎ. 2. ಶ್ರೀ ಈಶ್ವರ ಭಟ್, ಪಿ., 3. ಶ್ರೀ ಐತಪ್ಪ ನಾಯ್ಕ, [ಕಾದಿಟ್ಟ ಸ್ಥಾನ]

4. ಬೆಳ್ಳಾರೆ: 1. ಶ್ರೀ ಕೊಡ್ಯಗುಳಿ ಚನ್ನಪ್ಪ, 2. ಶ್ರೀ ಎನ್. ವೆಂಕಟಸುಬ್ಬರಾವ್.

5. ಸವಣೂರು: 1. ಶ್ರೀ ಜೆ. ಪರಮೇಶ್ವರ ಗೌಡ, 2. ಶ್ರೀ ಬಿ. ಚಿಟ್ಟಣ್ಣ ರೈ.

6. ಉಪ್ಪಿನಂಗಡಿ: 1. ಶ್ರೀ ಕ್ಯೊಲ ಸುಬ್ಬಣ್ಣ ರೈ, 2. ಶ್ರೀಮತಿ ಸುಮಿತ್ರ, [ಕಾದಿಟ್ಟ ಸ್ಥಾನ]

7. ಕಡಬ: 1. ಶ್ರೀ ಸುಬ್ರಹ್ಮಣ್ಯ ಗೌಡ, 2. ಶ್ರೀ ಎ. ಗುಡ್ಡಪ್ಪ ರೈ.

8. ಪಂಜ: 1. ಶ್ರೀ ಡಿ. ವೀರಪ್ಪ ಗೌಡ, 2. ಶ್ರೀ ಟಿ. ಸುಬ್ಬಯ್ಯ ಶೆಟ್ಟಿ.

ಬೆಳ್ತಂಗಡಿ ತಾಲೂಕು

1. ಬೆಳ್ತಂಗಡಿ: 1. ಶ್ರೀ ಭೋಜರಾಜ ಹೆಗ್ಡೆ, 2. ಡಾ| ಡಿ. ನಾರಾಯಣ ರಾವ್, 3. ಶ್ರೀಮತಿ ಆಲೀಸ್ ಫೆರ್ನಾಂಡಿಸ್, [ಕಾದಿಟ್ಟ ಸ್ಥಾನ]

2. ಮುಂಡಾಜೆ: 1. ಶ್ರೀ ಜಿ. ಎನ್. ಭಿಡೆ 2. ಶ್ರೀ ವೀರಪ್ಪ

3. ಧರ್ಮಸ್ಥಳ: 1. ಶ್ರೀ ಕೆ. ಸೂರ್ಯನಾರಾಯಣ ರಾವ್, 2. ಶ್ರೀ ಮಾಡಂಕಲ್ಲು ವಾಸುದೇವ ಹೆಬ್ಬಾರ್.

4. ಕೊಕ್ಕಡ: 1. ಶ್ರೀ ದಂಬೆ ಸುಬ್ಬರಾವ್, 2. ಶ್ರೀ ವಿಟ್ಠಲ. [ಕಾದಿಟ್ಟ ಸ್ಥಾನ]

5. ತಣ್ಣೀರುಪಂತ: 1. ಶ್ರೀ ಕುಂಬಾರ ಪೂಜಾರಿ, 2. ಶ್ರೀ ಕೇದೆ ಸುಬ್ಬ ಪೂಜಾರಿ.

6. ವೇಣೂರು: 1. ಶ್ರೀ ಕೆ. ನರಸಿಂಹ ಪೈ, 2. ಶ್ರೀ ಬಿ. ಗುಣಪಾಲ ಹೆಗ್ಡೆ.

7. ನಾರಾವಿ: 1. ಶ್ರೀ ಕೆ. ಕೃಷ್ಣ ಭಟ್, 2. ಶ್ರೀ ಎಂ ಧರಣಪ್ಪ ಅಧಿಕಾರಿ.

ಕಾರ್ಕಳ ತಾಲೂಕು

1. ಹೆಬ್ರಿ: 1. ಶ್ರೀ ಭುಜಂಗ ಬಲ್ಲಾಳ, 2. ಡಾ| ಯು. ಕೃಷ್ಣ.

2. ಅಜೆಕಾರು: 1. ಶ್ರೀ ಜಿನರಾಜ ಹೆಗ್ಡೆ, 2. ಗೋಪಾಲ ಶೆಟ್ಟಿ.

3. ಕಾರ್ಕಳ: 1. ಶ್ರೀ ದುರ್ಗಾ ವೆಂಕಟೇಶ ಭಟ್, 2. ಶ್ರೀ ಎನ್. ಗುಣಪಾಲ ಜೈನ್, 3. ಶ್ರೀಮತಿ ಮನೋರಮಾ ಸಂಪಿಗೆತ್ತಾಯ. [ಕಾದಿಟ್ಟ ಸ್ಥಾನ]

4. ಬೆಳ್ಮಣ್: 1. ಶ್ರೀಮತಿ ವಸಂತಿ ಎನ್. ಮುಂಡ್ಕೂರು [ಕಾದಿಟ್ಟ ಸ್ಥಾನ], 2. ಶ್ರೀ ಮೋಹನದಾಸ ಅಡ್ಯಂತಾಯ, 3. ಡಾ| ಕೆ ವೆಂಕಟರಾವ್.

5. ಮೂಡುಬಿದಿ: 1. ಶ್ರೀ ಜಿ. ವಾಸುದೇವ ಪೈ 2. ಶ್ರೀ ಎಚ್. ವಿಜಯರಾಜ್, 3. ಶ್ರೀ ಸುಂದರ ಎಂ. ಕೆ. (ಕಾದಿಟ್ಟ ಸ್ಥಾನ)

6. ಶಿರ್ತಾಡಿ: 1. ಶ್ರೀ ಪಿ. ನಾಗರಾಜ ಶೆಟ್ಟಿ, 2. ಶ್ರೀ ಎಸ್. ಡಿ. ಸಾಮ್ರಾಜ್ಯ.

ಬೈಲೂರು: ಡಾ| ಕೆ. ಎಲ್. ಎನ್. ರಾವ್, 2. ಶ್ರೀ ಶೇಖರ ಹೆಗ್ಡೆ.

ಕಲ್ಯಮುಂಡ್ಕೂರು: 1. ಶ್ರೀ ಆನಂದ ಆಳ್ವ ಎಂ. 2. ಶ್ರೀ ರಾಮಮೋಹನ ರೈ ಎಂ.

ಸಂಗಬೆಟ್ಟು: 1. ಶ್ರೀ ರಾಧಾಕೃಷ್ಣ ರೈ. 2. ಶ್ರೀ ಬಿ ಜನಾರ್ದನ ಶೆಟ್ಟಿ.

ಬಂಟ್ವಾಳ ತಾಲೂಕು

1. ಪುದು ಶ್ರೀ ಎ. ನಾಗಣ್ಣ ಬಲ್ಲಾಳ, 2. ಶ್ರೀ ಕೆ. ಶುಕ್ರ ಪೂಜಾರಿ.

ಬಂಟ್ವಾಳ-1. ಶ್ರೀ ಧರ್ಮಪಾಲ ಶೆಟ್ಟಿ, 2. ಶ್ರೀಮತಿ ಲಿಜ್ಜಿ ಡಿ'ಸೋಜಾ (ಕಾದಿಟ್ಟ ಸ್ಥಾನ)

3. ಕಾವಳಮುಡೂರು: 1. ಶ್ರೀ ಕೆ. ಎನ್. ಮಹಾಬಲ ಶೆಟ್ಟಿ, 2. ಶ್ರೀ ಎಸ್. ಕೆ. ಎ. ಲಿಂಗಪ್ಪ ಬಂಗೇರ.

4. ಪಾಣೆಮಂಗಳೂರು: 1. ಶ್ರೀ ಎಸ್. ಕೇಶವ ಕುಡ್ವ, 2. ಶ್ರೀ ಎಸ್. ಎ. ಶೇಕಬ್ಬ.

5. ಮಾಣಿ: 1. ಡಾ| ಎಂ. ಎಸ್ ಹೆಗ್ಡೆ, 2. ಶ್ರೀಮತಿ ಪಿ. ನಾಗರತ್ನ (ಕಾದಿಟ್ಟ ಸ್ಥಾನ)

6. ವಿಟ್ಲ: 1. ಶ್ರೀ ಟಿ. ವೆಂಕಟೇಶ ಪೈ, 2. ಶ್ರೀಮತಿ ಲೀಲಾವತಿ ಕೆ. ರೈ, 3. ಶ್ರೀ ಎಮ್. ಸೋಮಪ್ಪ ನಾಯ್ಕ (ಕಾದಿಟ್ಟ ಸ್ಥಾನ).

7. ಕೊಲ್ನಾಡು: 1 ಶ್ರೀ ಕೆ. ವೆಂಕಪ್ಪಯ್ಯ, 2 ಶ್ರೀ ಕೆ. ಅಣ್ಣಪ್ಪ ಭಂಡಾರಿ.

8. ಕನ್ಯಾನ: ಶ್ರೀ ಶಂಕರ ನಾರ್ಣಪ್ಪಯ್ಯ, 2 ಶ್ರೀ ಪಿ. ರಾಮ ಆಳ್ವ.

ಮಂಗಳೂರು ತಾಲೂಕು

1. ಮೂಲ್ಕಿ: 1 ಶ್ರೀ ಎಂ. ಆರ್. ಎಚ್. ಪೂಂಜ, 2 ಶ್ರೀಮತಿ ಅಗ್ನೆಸ್ ಡಿ'ಸೋಜ (ಕಾದಿಟ್ಟ ಸ್ಥಾನ).

2. ಕಿನ್ನಿಗೋಳಿ: 1 ಶ್ರೀ ನಾರಾಯಣ ಸಪಿಲ್, 2 ಶ್ರೀ ಡಿ. ಜೆ ಮಿರಾಂದ.

3. ಸುರತ್ಕಲ್: 1 ಶ್ರೀ ಪುರಂದರ ವಿಠಲದಾಸ ಆಚಾರ್ (ಡಮ್ಮಿ) ಬಾಬುರಾಯ ಕಾಮತ್. 2 ಶ್ರೀ ಎಚ್. ಶ್ರೀನಿವಾಸ ಕೋಟ್ಯಾನ್, (ಡಮ್ಮಿ) ರಾಮಕೃಷ್ಣ.

4. ಪಣಂಬೂರು: 1 ಶ್ರೀ ಪಿ. ರಾಜೀವ ಭಂಡಾರಿ (ಡಮ್ಮಿ) ಮುಗೇರಗುತ್ತು ಭುಜಂಗ ಶೆಟ್ಟಿ, 2 ಶ್ರೀ ವೆಂಕಪ್ಪ ಬಿ. ಕೆ.

5. ಮಳಲಿ: 1 ಶ್ರೀ ಎಚ್. ರಮೇಶ ನಾಯಕ್, 2 ಶ್ರೀ ಗುರುವ ಪ್ರೂಜಾರಿ (ಡಮ್ಮಿ) ತಬುರ ಮುಖಾರಿ (ಕಾದಿಟ್ಟ ಸ್ಥಾನ).

6. ಗುರುಪುರ: 1 ಶ್ರೀ ಅರ್ಕುಳ ಬಾಬು ಪೂಜಾರಿ, 2 ಶ್ರೀ ಪದ್ಮಯ ಆಳ್ವ.

7. ಪಡವು: 1 ಶ್ರೀ ಪಿ. ರಘುನಾಥ ಶೆಣೈ, 2 ಶ್ರೀ ಬಜಿಲಗುತ್ತು ನಾರಾಯಣ ಶೆಟ್ಟಿ, 3 ಶ್ರೀಮತಿ ಪಾವ್ಲಿನ್ ಬ್ರಿಟೊ (ಕಾದಿಟ್ಟ ಸ್ಥಾನ).

8. ದೇರ್ಲಕಟ್ಟೆ: 1 ಶ್ರೀ ಕೆ. ಪುರುಷೋತ್ತಮ ಶೆಟ್ಟಿ, 2 ಶ್ರೀ ಎಂ. ಅಬಿಯಬ್ಬ ಜನರಲ್ ಸೆಕ್ರೆಟರಿ, ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ, ಮಂಗಳೂರು.

9. ಉಳ್ಳಾಲ: 1 ಶ್ರೀ ಬಿ. ಎಂ. ಇದಿನಬ್ಬ, 2 ಶ್ರೀ ಸದಾನಂದ ಕಿಣಿ.

ಉಡುಪಿ ತಾಲೂಕು

1. ಕೊಕ್ಕರ್ಣೆ: 1 ಶ್ರೀ ಸವಕೂರು ಶೀನಪ್ಪ ಹೆಗ್ಡೆ, 2 ಶ್ರೀ ಕೊಳ್ಕೆಬೈಲ್ ಭುಜಂಗ ಶೆಟ್ಟಿ, 3 ಶ್ರೀ ರಾಮನಾಯ್ಕ್ (ಕಾದಿಟ್ಟ ಸ್ಥಾನ).

ಕೋಟ: 1 ಶ್ರೀ ಜಿ. ಪಿ. ಐತಾಳ್, ಶ್ರೀ ಎಚ್. ನರಸಿಂಹ ಐತಾಳ್ (ಡಮ್ಮಿ) 2 ಶ್ರೀ ಎಂ ಕೆ. ಕುಂದರ್.

1. ಬ್ರಹ್ಮಾವರ: 1 ಶ್ರೀ ಆನಂದ ಕುಂದ ಹೆಗ್ಡೆ, 2 ಶ್ರೀ ವೈ. ಲಕ್ಷ್ಮಣ, 3 ಶ್ರೀಮತಿ ವಿಜಯಲಕ್ಷ್ಮೀ ಅಮ್ಮ, ಆರೂರು (ಕಾದಿಟ್ಟ ಸ್ಥಾನ).

2 ಹಿರಿಯಡ್ಕ: 1 ಶ್ರೀ ಪಿ. ಶಿವಾಜಿ ಶೆಟ್ಟಿ, 2 ಶ್ರೀ ಕೆ. ಮಂಜುನಾಥ ನಾಯ್ಕ್.

3. ಉಡ್ಪಿ: 1 ಶ್ರೀ ಮಧ್ವರಾಜ್, 2 ಶ್ರೀ ಡೆನಿಸ್ ಡಿ'ಸೋಜ, 3 ಶ್ರೀಮತಿ ವಾರಿಜ (ಕಾದಿಟ್ಟ ಸ್ಥಾನ).

4. ಕಟಪಾಡಿ: 1 ಶ್ರೀ ಕೆ. ಮುದ್ದು ಸುವರ್ಣ, 2 ಶ್ರೀ ಕುರ್ಕಾಲ್ ವಾಸುದೇವ ಕಿಣಿ.

5. ಕಾಪು: 1 ಶ್ರೀ ದೇವೇಂದ್ರ ಪಡಿತ್ತಾಯ, 2 ಶ್ರೀ ಕುಪ್ಪ ಬಂಗೇರ.

6. ಶಿರ್ವ: 1 ಡಾ. ಯು. ಕೃಷ್ಣಾಚಾರ್, 2 ಶ್ರೀ ಸುಂದರ ಶೆಟ್ಟಿ.

ಎಂ. ರಘುನಾಥ,
ಪ್ರಧಾನ ಕಾರ್ಯದರ್ಶಿ,
ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿ.

"ಮೈಸೂರು ಕ್ಲಿನಿಕ್ಸ್" ಉದ್ಘಾಟನೆ

"ಮೈಸೂರು ಕ್ಲಿನಿಕ್ಸ್" ಉದ್ಘಾಟನೆ— ತುಮಕೂರು ಜಿಲ್ಲೆಯ ತುರುವೆಕೆರೆಯಲ್ಲಿ ಬ್ರಹ್ಮಾವರದ ಡಾ| ಬಿ ಶೇಖರ ಶೆಟ್ರ "ಮೈಸೂರು ಕ್ಲಿನಿಕ್ಸ್" ಇದರ ಉದ್ಘಾಟನೆಯನ್ನು ಬೌರ ಸಭಾಧ್ಯಕ್ಷ ಶ್ರೀ ಟಿ. ಎಸ್. ಬಸವರಾಜರವರು ಕಳೆದ ತಾ. 19 ರಂದು ನೆರವೇರಿಸಿದರು. ತಹಶೀಲ್ದಾರ್ ಶ್ರೀ ಲಕ್ಷ್ಮೀ ನರಸಪ್ಪನವರು ಸಭಾಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಕುಂದಾಪುರದ ವಕೀಲ್ ಶ್ರೀ ಜಿ. ಕುಶಲ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಬಿ. ಡಿ. ಒ. ಶ್ರೀ ಬಿ. ಕೃಷ್ಣಪ್ಪ ಮತ್ತು ಶ್ರೀ ಟಿ ಕೃಷ್ಣಮೂರ್ತಿಯವರು ಭಾಷಣ ಮಾಡಿದರು. ಶ್ರೀ ಡಿ ಕುಶಲ ಹೆಗ್ಡೆಯವರು ಸಂದೇಶ ವಾಚನಗೈದರು. ಕೊನೆಗೆ ಶ್ರೀ ರಾಮಾನುಜಾಚಾರ್ಯರು ದನ್ಯವಾದಗಳನ್ನಿತ್ತರು.

ಮೈಸೂರು ರಾಜ್ಯ ಸಂಗೀತ ನಾಟಕ ಎಕೆಡೆಮಿಯವರು— ಕನ್ನಡ ರಂಗಭೂಮಿಯ ಹಿರಿಯ ನಟರಲ್ಲೊಬ್ಬರಾದ ನಟಭಯಂಕರ ಅಭಿನಯ ಕಂಠೀರವ ಶ್ರೀ ಎಂ ಎಸ್. ಗಂಗಾಧರ ರಾಯರಿಗೆ ಅವರು ಅವರ ಹಳ್ಳಿಯಾದ ಮಾಕನಹಳ್ಳಿ ಪಟ್ನ (ತುಮ್ಕೂರು ಜಿಲ್ಲೆ)ದಲ್ಲಿ ತೀವ್ರ ಕಾಯಿಲೆಗೊಳಗಾಗಿರುವ ಪ್ರಯುಕ್ತ ಅವರ ಚಿಕಿತ್ಸೆಗಾಗಿ ಕುಟುಂಬದವರು ಧನಸಹಾಯ ಕೋರಿ ಮನವಿಮಾಡಿದ್ದರಿಂದ ಆ ಬಗ್ಗೆ ಒಂದು ಸಾವಿರ ರೂಪಾಯಿಗಳನ್ನು ಸಹಾಯಧನವಾಗಿ ಕೊಟ್ಟಿರುತ್ತಾರೆ.

ವಿದೇಶ ಪ್ರಯಾಣ— ಇದೇ ತಿಂಗಳು ಹೋಲೆಂಡಿನಲ್ಲಿ ಜರಗಲಿರುವ ೧೩ನೇ ಇಂಟರ್ ನೇಶನಲ್ ಬೇಕಿಂಗ್ ಸಮ್ಮರ್ ಸ್ಕೂಲಿನ ಅಲ್ಪಾವಧಿಯ ಅಧ್ಯಯನಕ್ಕಾಗಿ ಸಿಂಡಿಕೇಟ್ ಬೇಂಕಿನ ಡಿವಿಜನಲ್ ಮೆನೇಜರ್ ಶ್ರೀ ಎಚ್. ನರಹರಿರಾಯರು ಭಾರತೀಯ ಬೇಂಕುಗಳ ಪ್ರತಿನಿಧಿಯಾಗಿ ಆರಿಸಲ್ಪಟ್ಟು ಅನೋಸ್ತು ೩೦ರಂದು ವಿದೇಶ ಪ್ರಯಾಣ ಕೈಗೊಂಡಿರುವರು.

ದ. ಕ. ಜಿಲ್ಲೆಯಲ್ಲಿ ಆನೆಕಾಲು ರೋಗ ನಿರೋಧ ಕಾರ್ಯಕ್ರಮ:— ದ. ಕ. ಜಿಲ್ಲೆಯಲ್ಲಿ ಜನತೆಗೆ ತೊಂದರೆ ಕೊಡುತ್ತಿರುವ ಫೈಲೇರಿಯಾ ನಿವಾರಣೆಗೋಸ್ಕರ ರಾಷ್ಟ್ರೀಯ ಫೈಲೇರಿಯಾ ನಿವಾರಣಾ ಯೋಜನೆಯಂತೆ ಉಡುಪಿ, ಮಲ್ಪೆ ಕಲ್ಯಾಣಪುರ ಉದ್ಯಾವರ, ಪಡುಬಿದ್ರಿ, ಕಟಪಾಡಿ, ಕುಂದಾಪುರ, ಕಾರ್ಕಳ ಮೂಡುಬಿದ್ರೆ, ಮೂಲ್ಕಿ, ಕಿನ್ನಿಗೋಳಿ, ಬಜ್ಪೆ, ಸುರತ್ಕಲ್, ಪಣಂಬೂರು, ಪುತ್ತೂರು, ಪಾಣೆಮಂಗಳೂರು, ಬಂಟ್ವಾಳ, ಉಲ್ಲಾಳ, ಈ ಮುನ್ಸಿಪಾಲಿಟಿ ಯಾ ಪಂಚಾಯತುಗಳಲ್ಲಿ ಸಾಮೂಹಿಕವಾಗಿ ಹೆಟ್ರಜನ್ ಚಿಕಿತ್ಸೆಯನ್ನು ಕೈಗೊಳ್ಳುವುದಾಗಿ ರಾಜ್ಯದ ಫೈಲೇರಿಯಾ ಆಫೀಸರರು ತಿಳಿಸುತ್ತಾರೆ. ಈ ಚಿಕಿತ್ಸೆಯು ತಾ. 5—9—60ರಿಂದ ಉಡುಪಿಯಲ್ಲಿ ಪ್ರಾರಂಭವಾಗಿದೆ. ಎಲ್ಲಾ ಕಡೆಗಳ ಕಾರ್ಯಕ್ರಮವು ತಾ 13—5—61 ಕ್ಕೆ ಕೊನೆಗೊಳ್ಳುವುದು.

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಚೇರಿ : ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣೆ ಮಾಡಿರಿ.

ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಬಡ್ಡಿ ದರಗಳು

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ಸದ್ಯದಲ್ಲೇ ತೆರೆಯಲ್ಪಡುವ ಶಾಖೆಗಳು:—

ಭದ್ರಾವತಿ — ತುಮಕೂರು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 432/1958,
R. I. A. 370/1960

ಪಿ. ಗುರುರಾಜಾಚಾರ್ಯ— ಅರ್ಜಿದಾರ
ಮತ್ತು
ತಮ್ಮಂಣ ಭಟ್ಟ ಕೂಡಾ—ಯೆದ್ರಿರು
ಯಿವರೊಳಗೆ

೨ನೇ ಯೆದ್ರಿ— ವೆಂಕಟ್ರಮಣಾಚಾರ್ಯ, ಕೃಷ್ಣಾಚಾರ್ಯರ ಮಗ ಉಡ್ಪಿ ತಾಲೂಕು ಬಾಳಕುದ್ರು ಗ್ರಾಮದಲ್ಲಿರುವವರು— ಯಿವರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:

ಮೇಲ್ಕಂಡ ವ್ಯಾಜ್ಯದಲ್ಲಿ ಕೊಡೋಣಾದ ಪ್ರಿಲಿಮ್ನರಿ ಡಿಕ್ರಿಯನ್ನು ಫ್ಯಾನಲ್ ಡಿಕ್ರಿ ಮಾಡಬೇಕಾಗಿ ನಗ್ಗೈರೆ ಅರ್ಜಿದಾರನು ಅರ್ಜಿ ಕೊಟ್ಟಿರುವುದರಿಂದ, ಸದ್ರಿ ಅರ್ಜಿಯನ್ನು ತನ್ನಿಖೆ ಬಗ್ಗೆ ತಾರೀಕು 10–9–60ಕ್ಕೆ ಯಿಟ್ಟಿರುವುದರಿಂದ, ನಿಮಗೆ ಯೇನಾದ್ರೂ ಉದಾಹರಿಸುವಂಥಾದಿದ್ರೆ, ಆ ದಿನ ಬೆಳಿಗ್ಗೆ 10 ಗಂಟೆಗೆ ಕೋರ್ಟ ಮುಂದೆ ಹಾಜ್ರಾಗಿ ಉದಾಹರಿಸತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲ್ಪಡುವುದು.

K. Ramakrishna Rao,
Vakil for Petitioner.
ಉಡ್ಪಿ, ತಾರೀಕು 6-9-1960.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No 277/1960

ಬಿ. ಗೋಪಾಲಕೃಷ್ಣಯ್ಯ—ವಾದಿ
ಮತ್ತು
ಸೇಸು ಪೂಜಾರ್ತಿ ಕೂಡ 4 ಜನರು—
ಪ್ರತಿವಾದಿರು.

ಈ ದಾವೆಯ 2ನೇ ಪ್ರತಿವಾದಿ ಸದ್ರಿ ಸೇಸು ಪೂಜಾರ್ತಿ ಮಗ ಯರ್ಲಪಾಡಿ ಗ್ರಾಮದಲ್ಲಿರುವ ದೇಜು ಪೂಜಾರಿಗೆ ತಿಳಿಸುವುದೇನಂದ್ರೆ:—

ವಾದಿಯು ಗೇಣಿ ಬಾಕಿ ರೂಪಾ 522-37 N. P. ಬಗ್ಗೆ ನಿಮ್ಮ ಮೇಲೆ ಕೂಡ ಮಾಡಿದ ಮೇಲಿನ ದಾವೆಯನ್ನು ತನ್ನಿಖೆ ಇಟ್ಟಿರುವ ತಾರೀಕು 19-9-1960ನೇ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ನೀವು ಸದ್ರಿ ಕೋರ್ಟ ಮುಂದೆ ಹಾಜ್ರಾಗಿ ಉದಾಹರಿಸದಿದ್ದಲ್ಲಿ ಸದ್ರಿ ದಾವೆಯಲ್ಲಿ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ತೀರ್ಮಾನಿಸಲಾಗುವುದು.

(ಕೋರ್ಟ ಹುಕುಂ ಪ್ರಕಾರ)

ಬೈಕಾಡಿ ವಾಸುದೇವ ರಾವ್,
ವಾದಿಕಡೆ ಎಡ್ವೋಕೇಟ್.
ಕಾರ್ಕಳ, ತಾರೀಕು 7-9-1960.

ಶುದ್ಧ ಹರಟೆ

ಕ್ಷಾಮ ನಿವಾರಣೆಗೆ ತಾರಕೋಪಾಯ

ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಸುಭಿಕ್ಷೆ ತರುವುದಕ್ಕಾಗಿ ದೇವತಾಪ್ರಾರ್ಥನೆ ನಡೆಸುವ ಆಜ್ಞೆಯನ್ನು ಮೈಸೂರು ಸರಕಾರ ಹೊರಡಿಸಿದೆ. ಈ ಆಜ್ಞೆಯ ಹಿಂದೆ ರಾಜಕೀಯ ಸದುದ್ದೇಶವಿದೆಯೆಂಬುದೇ ಕುಂತಳಾಪ್ರಿಯರ ಅಭೂತಪೂರ್ವ ತರ್ಕ ಸರಣಿ.

ಶ್ರೀ ಕುಂತಳಾಪ್ರಿಯ

ಬಡವನು ದೇವರಲ್ಲಿ ಮೊರೆಯಿಡುವುದನ್ನೂ, ದುಃಖಪೀಡಿತನು ಭಗವಂತನ ಹೆಸರೆತ್ತುವುದನ್ನೂ, ಕಷ್ಟದಲ್ಲಿ ಬಿದ್ದವನು ಪರಮಾತ್ಮನ ನಾಮವನ್ನು ಸಂಕೀರ್ತಿಸುವುದನ್ನೂ ತನ್ನ ಜೀವನಾಭ್ಯುದಯವನ್ನು ಬಯಸುವವನು ಈಶ ಸ್ಮರಣೆಯನ್ನು ಮಾಡುವುದನ್ನು ನಾವು ಕೇಳಿದ್ದೇವೆ.

ಇದು ಕಲಿಕಾಲ. ಪ್ರಮಾಣಿಕತನ ಇಂದಿನವರಲ್ಲಿ ಹೆಚ್ಚಿಲ್ಲ. ಬ್ರಾಹ್ಮಣ 'ಸರ್ವಶ್ರೇಷ್ಠ' ಎಂಬ ಭಾವನೆ ಈಗ ಕಡಿಮೆಯಾಗಿದೆ. ದೇವಾಲಯದ ಹೊರವಳಯದಲ್ಲಿ ದೇವರನ್ನು ವಂದಿಸುವ ಜನರು ಇಂದು ಹರಿಜನರಾಗಿದ್ದಾರೆ. "ಸರಕಾರವು ನಾಸ್ತಿಕವಾಗಿದೆ. ಜನರು, ನಾಸ್ತಿಕರಾಗುತ್ತಿದ್ದಾರೆ; ದುರ್ಮಾರ್ಗಾವಲಂಬಿಗಳಾಗುತ್ತಿದ್ದಾರೆ, ಇಂದಿನ "ಜನ" ಎಂದು ಕೆಲ ಸಂಪ್ರದಾಯಬದ್ಧರು ಹೇಳುವುದನ್ನು ನಾವು ಕೇಳಿದ್ದೇವೆ.

ಆದರೆ ಈಗ ಅವರನ್ನು ಅಚ್ಚರಿಗೊಳಿಸತಕ್ಕ ಸುದ್ದಿಯೊಂದು ಹೊರಬಿದ್ದಿದೆ. ಕ್ಷಾಮ ನಿವಾರಣೆಗಾಗಿ ದೇವತಾಪ್ರಾರ್ಥನೆಯನ್ನು ಸಪ್ಟೆಂಬರ್ ೪ರಂದು ನಡೆಸಬೇಕೆಂದು ಸರಕಾರವು ಸೂಚೀಪತ್ರವನ್ನು ಹೊರಡಿಸಿದೆಯೆಂದು ಮಾನ್ಯ ಮಹಾ ಮೈಸೂರು ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಎಸೆಂಬ್ಲಿಯಲ್ಲಿ ತಿಳಿಸಿದ್ದಾರೆ; ಆ ಪ್ರಾರ್ಥನೆಯೂ ನಡೆಯಿತೆನ್ನಿ.

ಪಾಪದ ಬಡ ಜನತೆಗಾಗಿ, ಅದರಲ್ಲೂ ಕ್ಷಾಮಪೀಡಿತರಬಗ್ಗಾಗಿ ಮಂತ್ರಿಗಳು ಮಾಡಿದ ಈ ಕಾರ್ಯ ಸ್ತುತ್ಯಾರ್ಹವಾಗಿದೆ. ಒಳ್ಳೆಯ ಕಾರ್ಯಗಳು ನಡೆಯುವುದೆ ಅಸಂಭವವಾಗಿರುವ ಈ ಕಾಲದಲ್ಲಿ ನಡೆದ ಈ ಕೆಲಸವನ್ನು ನಾವು ಸ್ತುತಿಸಲೇಬೇಕು. ಆದರೆ ಈ ಸೂಚೀಪತ್ರ ಸಪ್ಟೆಂಬರ ನಾಲ್ಕರೊಳಗಾಗಿ ರಾಜ್ಯದೆಲ್ಲಾ ದೇವಾಲಯಗಳಿಗೆ ಬಂದು ತಲಪಬಹುದೆಂದು ಊಹಿಸುವುದು ಕಷ್ಟವಾದರೂ, ಎಂದಾದರೂ ಸೂಚೀಪತ್ರ ಬಂದೇ ಬರುವುದುಳ್ಳೆಂಬುದರಲ್ಲಿ ಸಂದೇಹವಿಲ್ಲ. ಆದರೆ ಆ ಸೂಚೀಪತ್ರವು ಬಹಿರಂಗವಾದ ಗುಪ್ತ ವಿಷಯಗಳನ್ನೊಳಗೊಂಡಿರಬಹುದೆ ಎಂಬ ಶಂಕೆಗೆ ಕುಂತಳಾಪ್ರಿಯರು ತುತ್ತಾಗಿದ್ದಾರೆ.

ರಾಜ್ಯದ ಜನ, ಭಾರಿ ಕ್ಷಾಮದಿಂದ ತತ್ತರಿಸಿ ಹೋಗಿದ್ದರೆ, ರಾಜ್ಯದ ಕಾಂಗ್ರೆಸು ಮಂತ್ರಿಗಳು ರಾಜಕೀಯ ಕ್ಷೇಮ ಕ್ಷಾಮದಿಂದ ತತ್ತರಿಸಿ ಹೋಗಿರುವರೆಂಬುದು ಸತ್ಯಕ್ಕೆ ದೂರವಾದ ಮಾತೇನೂ ಅಲ್ಲ. ಜನತೆಯ ಪರವಾಗಿ ದೇವರಿಗೆ ಪ್ರಾರ್ಥನೆ ಸಲ್ಲಿಸಬೇಕೆಂದ ಆ ಸೂಚೀಪತ್ರವು ರಾಜ್ಯದ ಮಂತ್ರಿಮಂಡಲದ ಬಗ್ಗೆಯೂ ದೇವರಿಗೆ ಪ್ರಾರ್ಥನೆ ಸಲ್ಲಿಸಬೇಕೆಂಬ ಸೂಚನೆಯಿಂದ ಕೂಡಿಕೊಂಡಿರಬಹುದೆ? ಇಲ್ಲವಾದರೆ ಮಂತ್ರಿಗಳು ಇಷ್ಟು ದೊಡ್ಡ ಆಸ್ತಿಕರಾದರೆಂದೇ ಹೇಳಬೇಕಾಗುತ್ತದೆ. ನೀರಿಗಾಗಿ ಕಾಲುವೆತೋಡಿಸಿ ಇದೇ ಮುಂದಿನ ದೇವಾಲಯ ಅನ್ನುವ ಮಂತ್ರಿಗಳು ಹೀಗೇಕೆ ಹೇಳಿದರೆಂಬುದು ತರ್ಕನೀಯ ವಿಚಾರವಾಗಿದೆ.

'ಸಂಕಟಬಂದರೆ ವೆಂಕಟರಮಣ' ವೆಂಬ ಮಾತಿನ ತುಣುಕೊಂದು ಪ್ರಚಾರದಲ್ಲಿದೆ. ಸದ್ಯಕ್ಕೆ ಜನ ಕ್ಷಾಮಕ್ಕಿಂತಲೂ ಮಂತ್ರಿಮಂಡಲಕ್ಕೆ ಸ್ವಕ್ಷೇಮ ಕ್ಷಾಮವೆ ಮಾನ್ಯ ಮಂತ್ರಿಗಳಿಂದ ಈ ರೀತಿಯ ಉದ್ಗಾರ ಹೊರಡಲು ಕಾರಣವಾಯಿತೆ? ಎಂಬ ಮಂತ್ರಿಗಳ ಚುರುಕು ಬುದ್ಧಿಗೆ ಮಾತ್ರ ಹೊಳೆಯಬಲ್ಲುದೇ ಹೊರತು ಕುಂತಳಾ ಪ್ರಿಯರಂತಹ ಮಂದ ಮತಗಳಿಗಲ್ಲ.

ಮಾನ್ಯ ಕಡಿದಾಳ್ ಮಂಜಪ್ಪನವರ ಈ ಹೇಳಿಕೆ ಕಾಂಗ್ರೆಸಿನ ಕೆಲ ವರ್ತುಲಗಳಲ್ಲಿ ಮತ್ತು ರಾಜ್ಯದ ಕ್ಷಾಮ ಪೀಡಿತ ಜನರಲ್ಲಿ ಸ್ವಾಗತವನ್ನು ಪಡೆದಿದೆ. ಮಂಜು ಕರಗಿ ನೀರಾದರೆ ಸಾಕು ನಮ್ಮಲ್ಲಿಯ ಕ್ಷಾಮ ನಿವಾರಣೆ ಯಾಗುವುದೆಂದು ನನ್ನ ಮಿತ್ರರು ಆಡಿದ ಮಾತು ಬಹು ಅರ್ಥಪೂರ್ಣವಾಗಿದೆಯೆಂದರೆ ನೀವು ಅನ್ಯಥಾ ಭಾವಿಸಬಾರದು. ಮಂಜನ್ನು ಕರಗಿಸುವವರು ಯಾರೆಂಬುದೆ ಇಂದಿನ ಬಹುದೊಡ್ಡ ಸಮಸ್ಯೆಯಾಗಿದೆ. ಬಿಸಿಯಾಗದೆ ಬೆಣ್ಣೆ ಕರಗದು ಎಂದು ಹೇಳುವುದನ್ನು ನೀವು ಕೇಳಿದ್ದೀರಿ. ಸೂರ್ಯ ಪ್ರಕಾಶದಿಂದ ಕರಗದ ಮಂಜನ್ನು ಈ ರಾಜ್ಯದ ಮಂತ್ರಿ ಮಂಡಲ ವಿರೋಧಿ ತಂಡದವರು ಬಿಸಿ ಮಾಡುತ್ತಿದ್ದಾರೆ. ಅದು ಅಂದರೆ ಆ ಮಂಜು ಕರಗಿಯೆ ಹೋದರೆ....? ಅದರಿಂದುಂಟಾದ ನೀರು ರಾಜ್ಯದಲ್ಲಿಯ ಕ್ಷಾಮ ಪರಿಸ್ಥಿತಿಯನ್ನು ಪರಿಹಂಸಬಹುದೆ?

ಮಾನ್ಯ ಮಂತ್ರಿಗಳು ಈ ರೀತಿಯಾಗಿ ಮಳೆಯ ಬರವನ್ನೇಕೆ ಬಯಸುವರೆಂಬುದನ್ನು ನೀವು ಬಲ್ಲಿರಾ? ಕುಂತಳಾ ಪ್ರಿಯರ ತರ್ಕಬದ್ಧ ಅಭಿಪ್ರಾಯ ಕೇಳಿರಿ: ಕ್ಷಾಮ ಪೀಡಿತ ಪ್ರದೇಶವು ಮಳೆಗಾಲವಿರುವುದರಿಂದ ಆ ಪ್ರದೇಶದ ಬಹು ಮಂದಿ ಎಮ್ಮೆಲ್ಲೆಗಳ ತಲೆ ಈಗಾಗಲೇ ಸೂರ್ಯಾತಪದಿಂದ ಬೆದಬೆದನೆ ಬೆಂದು ಕುದಿಯತೊಡಗಿದೆ. ಮಳೆ ಬಂದು ಆ ತಾಪ ಎಳ್ಳಷ್ಟಾದರೂ ಕಡಿಮೆಯಾಯಿತೆಂದರೆ, ವಿರೋಧೀ ದಳಗಳ ಬಲ ಕಳೆಗುಂದುವುದು. ಈ ಧೈರ್ಯವೇ ಸದ್ಯ ಕರೆ ಕಳಿಸಲು ಪ್ರೇರೇಪಣೆಯಿತ್ತಿದೆ. ಸಂಕಟ ಬಂದಾಗಲಾದರೂ ದೇವರ ನೆನಕೆ ಬಂದು ರಾಜ್ಯದ ಹಲವಾರು ದೇವಾಲಯಗಳಲ್ಲಿ ಪ್ರಾರ್ಥನಾ ಸೇವೆಗೆ ತೊಡಗಿದ ಮೈಸೂರು ಮಂತ್ರಿಮಂಡಳಿಯ ಕ್ಷೇಮಕ್ಷಾಮವನ್ನು, ಒಂದೇ ನಾಮೋಚ್ಚಾರಣೆಯಿಂದ ಗಜರಾಜನಿಗೆ ವರದ ಹಸ್ತ ನೀಡಿದ ಪರಮಾತ್ಮ, ದೂರೀಕರಿಸುವುದರಲ್ಲಿ ಸಂದೇಹವಿಟ್ಟರೆ, ಸಾಕ್ಷಾತ್ ದೇವರಲ್ಲಿಯೇ ದೋಷವರಸಿಕೊಂಡಂತೆ!

೦೦ ೦೦

ಈ ಬಾರಿಯ ಪ್ರೈಜಬಾಂಡು ಎತ್ತುವಿಕೆಯಲ್ಲಿ ನನ್ನ ಚಾನ್ಸ್ ಏಳಲೇಯಿಲ್ಲವೆಂದು ನನ್ನ ಮಿತ್ರರೊಬ್ಬರು ಹೇಳಿದರು.

—ಇನ್ನು ಮೂರು ತಿಂಗಳವರೆಗೆ ಅವರು ನಿದ್ದೆ ಕೆಟ್ಟು ಆರೋಗ್ಯ ಹಾಳುಮಾಡಿಕೊಳ್ಳಬಹುದಲ್ಲಾ!

—ಆರೋಗ್ಯವೇ ಭಾಗ್ಯವೆಂದು ತಿಳಿದುಕೊಳ್ಳುವ ಕುಂತಳಾಪ್ರಿಯರು ಬಾಂಡನ್ನೆ ಕೊಂಡುಕೊಳ್ಳಲಿಲ್ಲ!

೦೦ ೦೦

ನಿಮ್ಮ ಮನೆಯಲ್ಲಿ ರೇಡಿಯೊ ಇಲ್ಲವೆ?

—ಇಲ್ಲ. ಆದರೆ ಮನೆಯಲ್ಲಿ ವಾರ್ತೆಗಳ ವಿವರವನ್ನೀಯುವ, ಸಂಗೀತವನ್ನು ಹಾಡುವ ಮಡದಿಯೇ ಇದ್ದಾಳೆ. ಮಡದಿಯಿದಿರು ರೇಡಿಯೋವಿಗೆ ಸ್ಥಾನವೆಲ್ಲಿಯದು?

ಅಮೇರಿಕೆಯು ಹಾರಿಸಿದ ೭ A ಉಪಗ್ರಹವು ಜತೆಯಾಗಿ ಹಾರಿದ ದೃಶ್ಯವಿದು. ಕೆಳಗಿನದು ೭ ; ಮೇಲಿನದು ಅದರ ಜತೆಗಾರ.

ಮೆಟ್ರಿಕ್ ತೂಕ
ಮತ್ತು
ಅಳತೆಗಳು

ದೊರೆಯುವ ಸ್ಥಳ:
ಲೈಸೆನ್ಸ್ ಡೀಲರ್ಸ್
ಗುಂಡು ನಾಯಕ್ ಅಂಡ್ ಸನ್ಸ್
ಕಾರ್ ಸ್ಟ್ರೀಟ್
ಉಡುಪಿ (ಸಾ. ಕೆ.)

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!
ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.
ಕಥಾ ಕೌಮುದಿ
(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)
ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.
ಬೆಲೆ: ರೂ. ೧—೮—೦ (1 = 50)
ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.
ದೊರೆವ ಸ್ಥಳ.
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಪಂಚಮುಖಿ (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	3 00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಅಖಿಲ ಭಾರತ ಕುಶಲ ಕೈಗಾರಿಕೆಯ ಮಹಾಮಂಡಳವು ಮಕ್ಕಳ ಆಟಿಕೆಗಳ ತಯಾರಿಯತ್ತ ಗಮನ ಹರಿಸುತ್ತದೆ. ಮೇಲಿನ ಎಡಗಡೆಯ ಚಿತ್ರದಲ್ಲಿ ಕೊಂಡಪಲ್ಲಿಯ ಆನೆ ಮತ್ತು ಮಾವುತರ ಗೊಂಬೆಯನ್ನೂ, ಬಲಗಡೆಯಲ್ಲಿ ಮಗು ವಿವಿಧ ಶೈಕ್ಷಣಿಕ ಪುತ್ತಳಿಗಳೊಡನೆ ಆಡುತ್ತಿರುವುದನ್ನೂ ಕಾಣಬಹುದು.

ಸಾಹಿತ್ಯ ಸಮಾಲೋಚನೆ

ಜೀವನ ವಿಮರ್ಶೆಯೇ ಕಾವ್ಯ

ಜೀವನ ವಿಮರ್ಶೆಯೇ ಕಾವ್ಯ. ಜೀವನವನ್ನು ಕಾವ್ಯದಿಂದ ಪ್ರತ್ಯೇಕಿಸಿದರೆ, ಅಂತಹ ಕಾವ್ಯದಲ್ಲಿ ಮನಮೋಹಕ ಗುಣಗಳಾವುವೂ ಇರಲಾರದು. ಕಬ್ಬಿನ ಪಿಪ್ಪಿಯಂತದು ನೀರಸವಾಗುವುದು.

ಶ್ರೀ ಗೋರಾ

ಸಾಹಿತ್ಯ ಕೃತಿಗಳೆಲ್ಲವನ್ನೂ ಕವಿಕೃತೆವಾಗಿರುವುದರಿಂದ ಕಾವ್ಯವೆಂಬ ಸಾಮಾನ್ಯ ಹೆಸರಿನಿಂದ ಉಲ್ಲೇಖಿಸಬಹುದು. ಈ ಕಾವ್ಯಗಳಲ್ಲಿ ವಸ್ತು ಹಾಗೂ ವರ್ಣನೆ ಮತ್ತು ಶೈಲಿಯು ಬೇಕೆಂಬುದನ್ನು ಈ ಮೊದಲೇ ಸಮರ್ಥಿಸಲಾಗಿದೆ. ಈಗ ಕಾವ್ಯದ ಲಕ್ಷಣದತ್ತ ತುಸು ಗಮನವನ್ನು ಹರಿಸಬಹುದು; ಮತ್ತು ಇದು ಅವಶ್ಯವೂ ಹೌದು.

ಕಾವ್ಯ ಲಕ್ಷಣವನ್ನು ವಿಭಿನ್ನ ರೀತಿಯಲ್ಲಿ ವಿಭಿನ್ನ ಆಚಾರ್ಯರು ಹೇಳುತ್ತಾರೆ. ಶ್ರೀ ಮೆಥ್ಯೂ ಆರ್ನಾಲ್ಡ್ ಎಂಬವರು "ಜೀವನ ವಿಮರ್ಶೆಯೇ ಕಾವ್ಯ, ಕಾವ್ಯದಲ್ಲಿ ಮಾನವ ಜೀವನದ ವಿಮರ್ಶೆ ನಡೆದಿರಬೇಕು" ಎಂದು ಘೋಷಿಸಿದ್ದಾರೆ. ವಿಮರ್ಶೆಯೆಂಬುದು ತೋರಿಕೆಯ ಮಟ್ಟಿಗೆ ಹೊರಗಿನ ವಸ್ತುವೆಂದು ಕಾಣಬಹುದಾದರೂ ವಾಸ್ತವಿಕವಾಗಿ ಅದು ಜೀವನವನ್ನು ಬಿಟ್ಟು ದೂರವಿರುವುದು ಸಾಧ್ಯವಿರುವುದಿಲ್ಲವೆಂತಲೇ ಅದು ಜೀವನಕ್ಕಿಂತ ಸರ್ವಥಾ ಅಭಿನ್ನ. ಕಾವ್ಯವೆಂಬುದು ಜೀವನಕ್ಕಿಂತ ಹೊರಗಿರುವ ವಸ್ತುವಲ್ಲ. ಕಾವ್ಯ ಜೀವನದ ಆತ್ಮಚಿಂತನಮಯ ಮುಖರಿತರೂಪವಾಗಿದೆ. ಜೀವನದ ಪ್ರಧಾನ ಲಕ್ಷಣಗಳಾದ ಪೋಷಕ ಸಾಮಗ್ರಿಯನ್ನು ತರುವುದು, ಹೆಚ್ಚಿಸುವುದು, ಸಂಚಾಲಿಸುವುದು ಮೊದಲಾದ ಶಕ್ತಿಗಳೂ ಅದರಲ್ಲಿರುತ್ತವೆ. ಜೀವನದ ರಕ್ಷಣೆ ಮತ್ತು ಅಭಿವೃದ್ಧಿಯು ಈ ಆತ್ಮಚಿಂತನೆಯ ವ್ಯಾವಹಾರಿಕ ರೂಪವೆನಿಸುತ್ತದೆ. ಜೀವನವೇ ಇಲ್ಲವೆಂದಾದರೆ, ವಿಮರ್ಶೆಯಾದರೂ ಏತರದು? ಆದರೆ ವಿಮರ್ಶೆಯ ಬಗ್ಗೆಯೂ ತುಸು ಗಮನವಿರಬೇಕಾಗುತ್ತದೆ. ಈ ವಿಮರ್ಶೆಯು ಜೀವನದ ಶೋಭೆ, ಸಂಪನ್ನತೆ, ಸಾರ್ಥಕತೆಗಳನ್ನು ಹೆಚ್ಚಿಸಲು ನೆರವಾಗಬೇಕು. ಕಾವ್ಯ ಮತ್ತು ಸಾಹಿತ್ಯಗಳು ಜೀವನದ ಗತಿವಿಧಿಗಳನ್ನು ಅಭ್ಯಸಿಸಿಕೊಂಡು ಅದನ್ನು ಮಂಗಳಮಯಗೊಳಿಸುವಲ್ಲಿ ಸಹಾಯಕವಾಗಿವೆ. ಪ್ರಸಿದ್ಧ ಆಲಂಕಾರಿಕ ಮಮ್ಮಟಾಚಾರ್ಯನು ಹೇಳಿದ ಕಾವ್ಯಲಕ್ಷಣದ ಪ್ರತಿ ಅಂಶವೂ ಜೀವನಕ್ಕೆ ಸಂಬಂಧಿಸಿದೆ. ಆತನು ವಿವರಿಸುವ ಕಾವ್ಯ ಲಕ್ಷಣ ಹೀಗಿದೆ:

> ಕಾವ್ಯೇ ಯಶಸೇ ಅರ್ಥಕೃತೇ ವ್ಯವ
> ಹಾರವಿದೇ
> ಶಿವೇತರಕ್ಷತಯೇ
> ಸದ್ಯಃ ಪರನಿರ್ವೃತ್ತಯೇ ಕಾಂತಾ
> ಸಮ್ಮಿತ—
> ಯೋಪದೇಶಯುಜೇ ||

ಕಾವ್ಯದ ರಚನೆಯು ಯಶಸ್ಸಿಗಾಗಿ, ಸಂಪತ್ತಿಗಾಗಿ, ವ್ಯವಹಾರ ತಿಳಿಯುವುದಕ್ಕಾಗಿ, ಅಮಂಗಲಗಳ ದೂರೀಕರಣಕ್ಕಾಗಿ, ಶೀಘ್ರ ಆನಂದ ತಂದೀಯುವುದಕ್ಕಾಗಿ, ಮತ್ತು ಪ್ರೇಯಸಿಯಂತಹ ಮೃದುಮಧುರ ಉಪದೇಶ ನೀಡುವ ಸಲುವಾಗಿ ಇರುವುದೆಂದು ಆತ ಹೇಳುತ್ತಾನೆ.

ಭಾರತದ ಆಚಾರ್ಯರು ವ್ಯವಹಾರ ಜ್ಞಾನ, ಅಮಂಗಲನಾಶ (ಆ ಕಾಲದಲ್ಲಿ ಅಮಂಗಲನಾಶವು ದೇವತೆಗಳ ಸ್ತುತಿ ಸ್ತೋತ್ರಗಳಿಂದಆಗುತ್ತಿತ್ತು. ಇಂದಿದು ವೀರಸ್ತವನದಿಂದಾಗಬಹುದು.), ಮತ್ತು ಮಧುರ ಉಪದೇಶಗಳನ್ನು ಕಾವ್ಯದ ಸೀಮೆಯಿಂದ ಹೊರಗಿನವೆಂದು ತಿಳಿಯುತ್ತಿರಲಿಲ್ಲ. ಕೆಲವರು ಪ್ರಶ್ನಿಸಬಹುದು: ಉಪದೇಶ ಪಡೆಯುವುದಕ್ಕಾಗಿ ನಾವು ಕಾವ್ಯ ಗ್ರಂಥಗಳನ್ನೇಕೆ ಓದಬೇಕು? ಧರ್ಮ ಶಾಸ್ತ್ರ ಮತ್ತು ಆಚಾರ ಶಾಸ್ತ್ರಗಳನ್ನು ಅಭ್ಯಸಿಸಿದರಾಗದೆ? ಆದುದರಿಂದ ಕಾವ್ಯದಲ್ಲಿ ಉಪದೇಶವು ಉಚಿತವಲ್ಲ ಎಂದು. ಆದಕ್ಕಾಗಿಯೇ ಮೇಲೆ ತಿಳಿಸಿದ ಕಾವ್ಯಲಕ್ಷಣದಲ್ಲಿ 'ಕಾಂತಾಸಮ್ಮಿತ' ಎಂಬ ವಿಶೇಷಣವನ್ನು 'ಉಪದೇಶ'ಕ್ಕೆ ಜೋಡಿಸಲಾಗಿದೆ. ಕಾವ್ಯವು ಮಾಡುವ ಉಪದೇಶವು ಕಾಂತೆಯದರಂತೆ ಮಧುರ ಹಾಗೂ ಪ್ರೇಮಪೂರ್ಣವಾಗಿರುತ್ತದೆ. ಸರ್ವಜ್ಞನ ಅಥವಾ ಬಸವಣ್ಣನವರ ಒಂದು ವಚನ ಇಲ್ಲವೇ ದಾಸವರ್ಯರ ಒಂದೊಂದು ಗೀತೆ ನೂರಾರು ಒಣ ಉಪದೇಶಗಳು ಮಾಡಲಾರದ ಕೆಲಸವನ್ನೂ ಮಾಡಿಬಿಡುವಷ್ಟು ಶಕ್ತಿಶಾಲಿಯಾಗಿಲ್ಲವೆ? ಶ್ರೀ ಡಿ. ವಿ. ಜಿ.ಯವರ ಮಂಕುತಿಮ್ಮನ ಕಗ್ಗದ ಒಂದೊಂದು ಚರಣದಲ್ಲೂ ಅದೆಂತಹ ಅಪಾರ ಶಕ್ತಿ ಅಡಗಿದೆ!

> ಜಟ್ಟಿಕಾಳಗದಿ ಗೆಲ್ಲದೊಡೆ ಗರುಡಿಯ
> ಸಾಮು.
> ಪಟ್ಟು ಪರಸೆಗಳೆಲ್ಲ ವ್ಯರ್ಥವೆನ್ನುವೆ
> ಯೇನ್
> ಮುಟ್ಟಿನೋಡವನ ಮೈ ಕಬ್ಬಿಣ ಗಟ್ಟಿ
> ಗಟ್ಟಿಬಲಗರುಡಿಫಲ—ಮಂಕುತಿಮ್ಮ ||

ಉದ್ದೇಶ ಪೂರ್ತಿಯಾಗದೆ ಹೋದರೂ ಕಲಿತ ವಿದ್ಯೆಯು ಮಾನವನಿಗೆ ಅಲಂಕಾರ ಪ್ರಾಯವೇ ಆಗಿರುವುದಲ್ಲವೆ?

ಕಾವ್ಯವೆಂಬುದು ಕೇವಲ ಕಾಮಸಾಧಕವಲ್ಲ; ಅದು ಚತುರ್ವಿಧ ಪುರುಷಾರ್ಥ ವಿಧಾಯಕವಾಗಿದೆ:

> ಧರ್ಮಾರ್ಥಕಾಮ ಮೋಕ್ಷಾಣಾಂ
> ವೈಚಕ್ಷಣ್ಯಂ ಕಲಾಸು ಚ
> ಕರೋತಿ ಪ್ರೀತಿಂ ಕೀರ್ತಿಂ ಚ ಸಾಧು
> ಕಾವ್ಯ ನಿಬಂಧನಂ ||

ಎಂಬ ಆಚಾರ್ಯ ಭಾಮಹನ ಅಭಿಪ್ರಾಯವನ್ನು ನಾವು ಅವಶ್ಯ ಅಧ್ಯಯನ ಮಾಡಿಕೊಳ್ಳಬೇಕು.

ಕನ್ನಡದ ಆಲಂಕಾರಿಕರಾದರೂ ಕಾವ್ಯಕ್ಕೆ ವಿಶೇಷವಾಗಿ ತಮ್ಮದೇ ಆದ ಲಕ್ಷಣವನ್ನು ಹೇಳಿಲ್ಲವೆಂದು ಹೇಳಬಹುದು. "ಕಾವ್ಯಂ ಸವಿಶೇಷ ಶಬ್ದರಚನಂ ವಿವಿಧಾರ್ಥ ವ್ಯಕ್ತಿವರ್ತಿ ತಾಲಂಕಾರಂ" ಎಂದು ನೃಪತುಂಗನೂ "ಇರೆ ಶಬ್ದಾರ್ಥಂಗಳ್ ತತ್ಪರತೆಯಿನದು ಕಾವ್ಯಂ" ಎಂದು ನಾಗವರ್ಮನೂ ವಿವರಿಸಿದ್ದಾರೆ. ಇವೆರಡೂ ದಂಡಿಯ "ಶಬ್ದಾರ್ಥೌ ಸಹಿತೌ ಕಾವ್ಯಂ" ಮತ್ತು ಕುಂತಲನ "ಶಬ್ದಾರ್ಥೌ ಸಹಿತೌ ವಕ್ರಕವಿ ವ್ಯಾಪಾರ ಶಾಲಿನೀ...." ಎಂಬಿತ್ಯಾದಿಯೊದುವನ್ನೇ ಸಾಮ್ಯವಾಗಿ ಹೋಲುತ್ತದೆ.

ಪೂರ್ವಲಕ್ಷಣಾಚಾರ್ಯರು ಅದೇನೇ ಹೇಳಿದ್ದರೂ ಅವರಲ್ಲಿ ಅದೆಷ್ಟೇ ವಾಗ್ಯುದ್ಧ ನಡೆದರೂ ಮಮ್ಮಟನ ಲಕ್ಷಣವಿಂದಿಗೂ ಸಾಧುವಾಗಿದೆ. ಆರಂಭದಲ್ಲಿ ಉಲ್ಲೇಖಿಸಿದ ಮೇಥ್ಯೂ ಆರ್ನಾಲ್ಡರ ಲಕ್ಷಣವು ಬಹುಮಟ್ಟಿಗೆ ಇದನ್ನೇ ಸಮರ್ಥಿಸುತ್ತದೆ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ। ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ-

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 213/1960.

ದಿ. ಕೆನರಾಯಿಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ —ವಾದಿ.

ಮತ್ತು

ಸಿ. ಪಿ. ಪದ್ಮನಾಭ ಕೂಡಾ —ಪ್ರತಿವಾದಿ.

ಇವರೊಳಗೆ

1ನೇ ಪ್ರತಿವಾದಿ ಸಿ. ಪಿ. ಪದ್ಮನಾಭ. ವಾಸುದೇವ ನಂಬೀಸನರ ಮಗ—ಉಡುಪಿ ತಾಲೂಕು ಚೆಂಪ್ಪಾರ ಬೆಟ್ಟುಗ್ರಾಮದ ಹಿರಿಯಡಕ—ಇವರಿಗೆ—

ಪ್ರತಿವಾದಿರು ವಾದಿಬೇಂಕಿಗೆ ತಾರೀಕು 16—1—59 ರಲ್ಲಿ ರೂಪಾಯಿ 1000—00 ಕ್ಕೆ ಬರೆಕೊಟ್ಟ ಡಿಮಾಂಡ್ ನೋಟಿನ ಅಸಲು ಬಾಕಿ ಬಡ್ಡಿ ಕೂಡಾ ರೂ. 1068—78ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 14—9—60ಕ್ಕೆ ತನಿಖೆ ಬಗ್ಗೆಯಿಟ್ಟಿದೆ. ಆ ದಿವಸ ಸದರಿ 1ನೇ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತರ ಕೋರ್ಟಿಗೆ ಹಾಜರಾಗಿ ಉತ್ತರ ಹರಿಸದಿದ್ದರೆ ಆತನ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದೆಂದು ಸದರೀ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸಲಾಗಿಯದೆ.

M. Damoder Kamath.

Advocate for Plaintiff.

ಉಡುಪಿ ತಾ. 8—9—60

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಸಂಮಾನದಾನ

(೪ನೇ ಪುಟದಿಂದ)

ನಾವು ಭಯಂಕರವಾದ ಈ ಅವನತಿಯ ಪ್ರವಾಹದಲ್ಲಿ ಸಿಲುಕದೆ, ಯಥಾಶಕ್ತಿಯಾಗಿ, ಮಾತಾ, ಪಿತಾ, ಗುರು ದೇವತಾ, ಎಂಬ ಭಾವನೆಯಿಂದ, ಸಂಮಾನಿಸುತ್ತ ಹಿರಿಯರನ್ನೂ ವೃದ್ಧರನ್ನೂ ಗೌರವದಿಂದ ಕಾಣಬೇಕಾದುದು ಕರ್ತವ್ಯವಾಗಿದೆ.

ಆದರೆ, ಮಾನ ಸನ್ಮಾನಗಳನ್ನು ಕೃತ್ರಿಮವಾಗಿ, ಕೇವಲ ಅಭಿನಯ ರೂಪದಿಂದ ತೋರಿಸಿದರೆ—ಅದರಿಂದ ಸತ್ಫಲ ಎಂದೂ ದೊರೆಯಲಾರದು. ಶುದ್ಧ ಹೃದಯದಿಂದ ಮಾಡಿಬಂದ, ಸಂಮಾನದಿಂದ ಮಾತ್ರವೇ ಸತ್ಫಲ ಲಭಿಸುವುದು.

"ವಿಷ ಕುಂಭಂ ಪಯೋ ಮುಖಂ" ಎಂಬಂತಿರುವ ಕೃತ್ರಿಮವಾದ ಸನ್ಮಾನವು, ಹಿಂದೆ ಭಗವಾನ್ ಶ್ರೀಕೃಷ್ಣನಿಗೆ ಕೌರವೇಶ್ವರನಿಂದ ನಡೆಯಿತು. ಆದರೆ, ಜಗತ್ತಿನ ಸೂತ್ರಧಾರಿಯಾದ, ಶ್ರೀಕೃಷ್ಣನಿಗೆ, ಕೌರವನ ಈ ರಹಸ್ಯ ತಿಳಿಯದಿರುತ್ತದೆಯೇ? ಆತನು ಕೌರವೇಶ್ವರನ ರಾಜ ವೈಭವದ ಸಂಮಾನವನ್ನು ತಿರಸ್ಕರಿಸಿ, ಶುದ್ಧ ಹೃದಯದಿಂದ ಗೌರವಿಸುವ, ಭಕ್ತನಾದ ವಿದುರನಲ್ಲಿಗೆ, ತಾನಾಗಿಯೇ ಹೋಗಿ, ಸಂತೋಷದಿಂದ ಆಹಾರವನ್ನು ಸ್ವೀಕರಿಸಿದನು. "ಆಚರಣೆಗೆತಕ್ಕ ಫಲ" ಎಂಬಂತೆ, ಮುಂದೆ ಕೌರವನಿಗೂ, ಭಕ್ತ ವಿದುರನಿಗೂ, ದುಷ್ಫಲ—ಸತ್ಫಲಗಳು ದೊರೆತುವು!

ಅಹಂಕಾರಿಯಾದ ಮನುಷ್ಯನು, ಯಾರನ್ನೂ ಮನಃಪೂರ್ವಕವಾಗಿ, ಗೌರವಿಸಲು ಮುಂದಾಗುವುದಿಲ್ಲ. ಆತನು ಒಳಗೊಳಗೇ ಮತ್ಸರಪಡುತ್ತ "ತಾನೇ ತಾನು" ಎಂದುಕೊಂಡಿರುತ್ತಾನೆ. ಆದರೆ ಇದರಿಂದ, ಅಂಥವನು ತನಗೆ ತಾನೇ ಕೇಡನ್ನುಂಟುಮಾಡಿಕೊಳ್ಳುತ್ತಾನೆ. ಇಂಥವನು, ನಿಜವಾದ ಸಂಮಾನದಿಂದ ವಂಚಿತನಾಗುತ್ತಾನೆ, ಮತ್ತು ತನ್ನ ಆತ್ಮೋನ್ನತಿಗೆ ತಾನೇ ಕುಠಾರಪ್ರಾಯನಾಗಿ—ಕೊನೆಗೆ ಪಶ್ಚಾತ್ತಾಪಪಟ್ಟುಕೊಳ್ಳುತ್ತಾನೆ. ತಾನೊಳ್ಳೆಯವನಾದರೆ—ಜಗತ್ತೇ ಒಳ್ಳೆಯದು, ಎಂಬ ಗಾದೆಯಂತೆ, ಯಾವಾಗಲೂ ತಾನು, ಇತರರನ್ನು ಅವರವರ ಯೋಗ್ಯತೆಗೆ ತಕ್ಕಂತೆ, ಗೌರವದಿಂದ, ವಿಶ್ವಾಸದಿಂದ, ಪ್ರೀತಿಯಿಂದ ಕಂಡರೆ, ಅವರೂ ಅಂತೆಯೇ ಪ್ರೀತಿ ವಿಶ್ವಾಸಗಳನ್ನು ತೋರಿಸುತ್ತಾರೆ. ಆಗ ಎಲ್ಲರಿಗೂ ಸಂತೋಷವಾಗುತ್ತದೆ. ಆ ಸಂತೋಷದ ಫಲ, ಸಹಕಾರ - ವಿಶ್ವಾಸ—ಆಶೀರ್ವಾದ, ಈ ರೂಪಗಳಿಂದ, ಸತತವಾಗಿ ನಮಗೆ ಲಭಿಸುತ್ತ ಇರುತ್ತದೆ. ಭಾರತಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟ ಮಹಾಪುರುಷರ ಜೀವನಕ್ರಮವೂ ಇಂತಹ ಸದಾಚರಣೆಗಳಿಂದ, ದಿವ್ಯವಾಗಿತ್ತು. ಇದರಿಂದಲೇ ಅವರು, ಮಹಾಕಾರ್ಯಗಳನ್ನು ಸಾಧಿಸಿ ಸಫಲರಾಗಿದ್ದಾರೆ! ಮತ್ತು ಭಾರತಕ್ಕೆ ಸ್ವಾತಂತ್ರ್ಯ ದೊರೆತ, ಆಗೋಸ್ತು 15 ರಂದು ಭಾರತಾದ್ಯಂತ್ಯ ಪೂಜಾರ್ಹರಾಗಿದ್ದಾರೆ! ಮಹಾತ್ಮನು ಕೂಡ, ಅದನ್ನೇ ಬೋಧಿಸಿರುವನು. ಈ ದಿವ್ಯಸ್ಮರಣೆ, ನಮ್ಮ ಹೃದಯದಲ್ಲಿ ಸದಾ ಇದ್ದು, ನಮಗೆ ನವಚೇತನವನ್ನೀಯುತ್ತಿರಲಿ! ಈ ನವಚೇತನವು, ಭಾರತದ ಅಭ್ಯುದಯಕ್ಕಾಗಿ ಸದಾ ಲಭಿಸುತ್ತಿರಲಿ!

"ಸರ್ವೇ ಭವಂತು ಸುಖಿನಃ ।
ಸರ್ವೇ ಸಂತು ನಿರಾಮಯಾಃ
ಸರ್ವೇ ಭದ್ರಾಣಿ ಪಶ್ಯಂತು, ।
ಮಾಕಶ್ಚಿದ್ ದುಃಖ ಭಾಗ್ಭವೇತ್॥"

(ಆಧಾರ: ಭವರೋಗಕೇ ರಾಮಬಾಣ ದವಾ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಲಂಡನ್‌ನ ವಿಕ್ ಥಿಯೇಟರಿನಲ್ಲಿ ರಾಣಿ ಎಲಿಜಬೆತ್.

ಜನಮತ:

ನಾಗರಿಕರ ನ್ಯಾಯವಾದ ದೂರುಗಳನ್ನು ಈ ವಿಭಾಗದಲ್ಲಿ ಪ್ರಕಟಿಸಲಾಗುವುದು. ಸಾರ್ವಜನಿಕ ಹಿತದೃಷ್ಟಿಯಿಂದ ಈ ವಿಭಾಗದ ಸದುಪಯೋಗವನ್ನು ವಾಚಕರು ಮಾಡಿಕೊಳ್ಳಬಹುದು.

ಸೆಕ್ರೆಟೇರಿಯಲ್ ವಿಭಾಗ ತೆರೆಯಲ್ಪಡಲಿ.

ಮಾನ್ಯ ಸಂಪಾದಕರೆ,

ಉಡುಪಿ ನಗರವು ವಿದ್ಯಾಕ್ಷೇತ್ರದಲ್ಲಿ ದಿನೇ ದಿನೇ ಮುಂದುವರಿಯುತ್ತಿರುವುದು ಉಡುಪಿಯ ಸೌಭಾಗ್ಯವೇ ಆಗಿದೆ. ಆದರೆ ಇದು ಕಾಲೇಜು ವಿದ್ಯಾಭ್ಯಾಸದ ಕಡೆಗೇ ಹರಿಯುತ್ತಿದೆ. ಈ ಸಮಾರಂಭದಲ್ಲಿ ಸೆಕೆಂಡರಿ ವಿದ್ಯಾಕ್ಷೇತ್ರದಲ್ಲಿ ಸಹ ನಮ್ಮ ಪ್ರಗತಿಯಾಗದಿದ್ದಲ್ಲಿ ಈಗಿರುವ ಸೌಲಭ್ಯಗಳು ಫಲಕಾರಿಯಾಗಲಾರವು.

ಉಡುಪಿಯ ಹಿರಿಯ ವಿದ್ಯಾ ಸಂಸ್ಥೆಯಾದ ಬೋರ್ಡ್ ಹೈಸ್ಕೂಲು — ವಿವಿಧೋದ್ದೇಶ ಹಾಗೂ ಹೈಯರ್ ಸೆಕೆಂಡರಿ ಶಾಲೆಯಾಗಿ ರೂಪಿಸಲ್ಪಟ್ಟಿದೆ. ಆದರೆ ಇಲ್ಲಿ ಇಟ್ಟಿರುವ ಐಚ್ಛಿಕ ವಿಷಯಗಳಲ್ಲಿ ಡ್ರಾಯಿಂಗ್ ಮತ್ತು ಪೈಂಟಿಂಗ್, ಮತ್ತು ಕೃಷಿ ಮಾತ್ರ ಇವೆ. ಇವುಗಳು ಉಪಯುಕ್ತ ವಿಷಯಗಳೇ. ಆದರೆ ನಮ್ಮ ಉಡುಪಿಯ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಸೆಕ್ರೆಟೇರಿಯಲ್ ಕೋರ್ಸ್ ಆಗತ್ಯ ಬೇಕಿತ್ತು. ಈ ವಿಷಯವು ಕ್ರಿಶ್ಚನ್ ಹೈಸ್ಕೂಲಿನಲ್ಲಿದ್ದರೂ ಅದು ಕೇವಲ ಉಡುಪಿಯ ದಕ್ಷಿಣ ಕ್ಷೇತ್ರದ ವಿದ್ಯಾರ್ಥಿಗಳಿಗೆ ಮಾತ್ರ ಪ್ರಯೋಜನಕಾರಿಯಾಗಿದೆ. ಆ ಶಾಲೆಯು ಪಟ್ಟಣದ ಒಂದು ಮೂಲೆಯಲ್ಲಿರುವುದರಿಂದ ಪಟ್ಟಣದ ನಡುಭಾಗದ ಬಾಲಕರಿಗೆ ಈ ಸೌಲಭ್ಯವು ಸಿಗದಂತಾಗಿದೆ. ಈ ಕಾರಣ ಸಂಬಂಧಪಟ್ಟವರು ಈ ಕಡೆ ಗಮನಕೊಟ್ಟು ಹೈಯರ್ ಸೆಕಂಡರಿ ಕ್ಲಾಸಿನಲ್ಲಾದರೂ ಬರುವ ವರ್ಷದಿಂದ ಈ ವಿಭಾಗವನ್ನು ತೆರೆದು ಈ ಕೊರತೆಯನ್ನು ನೀಗಿಸುವರಾಗಿ ನಂಬುತ್ತೇನೆ.

—ಓರ್ವ ನಾಗರಿಕ.

ಯಾರು ಹಿತವರು ನಿನಗೆ.......

ಬೆಂಗಳೂರಲ್ಲಿ ತಮ್ಮ ಬೇಳೆ ಬೇಯಲಿಲ್ಲವೆಂದು ಮೈಸೂರು ಕಾಂಗ್ರೆಸಿನ ಭಿನ್ನಾಭಿಪ್ರಾಯ ಪಂಗಡದವರು ಡಿಹಲಿ ಯಾತ್ರೆಯನ್ನು ಮುಗಿಸಿ ಬಂದರು; ತಮಗೆ ಖಂಡಿತ ಜಯಶ್ರೀ ಒಲಿಯುವಳೆಂದು ಅವರು ಡಂಗುರವನ್ನು ಬಡಿಯತೊಡಗಿದ್ದಾರೆ. ನಾಯಕತ್ವ ಬದಲಾವಣೆಯಾಗದೆ ಹೋದರೆ, ಮುಂದಿನ ಚುನಾವಣೆಗಳಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಗೆಲ್ಲಲಾರದೆಂಬ ಭವಿಷ್ಯವನ್ನೂ ನುಡಿದಿದ್ದಾರೆ. ಆದರೆ, ಮುಂದಿನ ಬಾರಿ ಕಾಂಗ್ರೆಸ್ ಮೈಸೂರಲ್ಲಿ ಸೋಲುವುದಾದರೆ, ಜತ್ತಿ ಮಂತ್ರಿಮಂಡಳಿ ಮುರಿಯಲಿಲ್ಲವೆಂದಲ್ಲ, ಶಾಶ್ವತ ಮಂತ್ರಿಮಂಡಳಿ ಸ್ಥಾಪಿಸುವ ಶಕ್ತಿ ಮೈಸೂರು ಕಾಂಗ್ರೆಸಿಗೆ ಬಹುಮತ ದೊರೆತರೂ ಇಲ್ಲವಲ್ಲಾ ಎಂಬ ಜನತೆಯ ಕೊರಗಿನಿಂದ ಎಂದು ಹೇಳಿದರೆ ತಪ್ಪಾಗಲಾರದು.

—ಗೋಪಿ.

ಪುರುಷನಾಗಿರುವುದೂ ಅಪರಾಧವೆ

ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ರಾಜ್ಯ ಸರಕಾರವು ಹೆಣ್ಮಕ್ಕಳಿಗೆ 'ಆಟೆಂಡೆನ್ಸ್ ಸ್ಕಾಲರ್‌ಶಿಪ್' (ಉಪಸ್ಥಿತಿ ಶಿಷ್ಯವೃತ್ತಿ)ನ್ನು ಕೊಡುತ್ತಿರುವುದು ಪ್ರಶಂಸನಾರ್ಹ. ಅದರೊಂದಿಗೆ ಇದೇ ರೀತಿಯಲ್ಲಿ ಬಡ, ಬುದ್ಧಿವಂತ ಹಾಗೂ ಕ್ರಮವಾಗಿ ಶಾಲೆಗೆ ಬರುವ ಗಂಡು ಮಕ್ಕಳಿಗೂ ಇವನ್ನು ನೀಡುವುದು ಅವಶ್ಯ. ಸ್ತ್ರೀ—ಪುರುಷರಿಗೆ ಸಮಾನಾಧಿಕಾರವಿರುವ ಈ ಕಾಲದಲ್ಲಿ ಶಿಷ್ಯವೃತ್ತಿ ಪಡೆಯದಿರಲು ಪುರುಷರಾಗಿ ಜನಿಸಿರುವುದು ಅವರ ಅಪರಾಧವೆಂಬಂತಾಗಬಾರದು.

—ಸದಾನಂದ.

ಹಾಸನ ಮಂಗಳೂರು ರೈಲ್ವೆ

ಮಂಗಳೂರು-ಹಾಸನ ರೇಲು ಮಾರ್ಗ ರಚನೆಯು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲೂ ಸೇರುವ ಲಕ್ಷಣವೀಗ ಗೋಚರಿಸುತ್ತಿಲ್ಲ. ಈ ಮಾರ್ಗದ ಅವಶ್ಯಕತೆಯನ್ನು ಮನಗಂಡು, ಜಿಲ್ಲೆಯ ಶಾಸಕರೂ ರಾಜ್ಯಸರಕಾರವೂ ತೀವ್ರ ಕಾರ್ಯಕ್ರಮ ಕೈಗೊಳ್ಳುವುದು ಆಗತ್ಯವಲ್ಲವೆ?

—ಲಕ್ಷ್ಮೀಕಾಂತ.

ಇದು ವಿರೋಧಾಭಾಸವಲ್ಲವೆ?

ಮಾಧ್ಯಮಿಕ ಶಾಲೆಗಳಿಗೆ ೨೨೦ ಮತ್ತು ಪ್ರಾಥ ಶಾಲೆಗಳಿಗೆ ೨೦೦ ಶಾಲಾದಿನಗಳು ಎಂದು ಹೇಳಿ ಮೈಸೂರು ವಿದ್ಯಾ ಇಲಾಖೆಯು ವಾರ್ಷಿಕ ರಜಾಪಟ್ಟಿಗಳನ್ನು ಕಳಿಸಿ ಅವನ್ನು ಖಡಾಖಂಡಿತವಾಗಿ ಎಲ್ಲ ಶಾಲೆಗಳೂ ಅನುಸರಿಸಬೇಕೆಂದು ವಿಧಿಸಿದೆ. ಆದರೆ, ವರ್ಷದ ೩೬೫ ದಿನಗಳಲ್ಲಿ ರಜಾದಿನ (ಕೆಲವು ಸಾಮಾನ್ಯ ರಜಾದಿನದಂದೇ ಬರುತ್ತವೆ)ಗಳನ್ನು ವಜಾ ಮಾಡಿದರೆ ಆಗ ನಿಶ್ಚಿತ ಶಾಲಾ ದಿನಗಳಿಗಿಂತ ಹೆಚ್ಚೇ ಆಗುತ್ತದೆಯೆಂಬುದನ್ನು ಯಾರೂ ಕಂಡುಕೊಳ್ಳಬಹುದು. ೨೦೦ ಅಥವಾ ೨೨೦ಕ್ಕಿಂತ ಹೆಚ್ಚು ದಿನ ಶಾಲೆ ನಡೆದರೆ, ಅದಕ್ಕೆ ವಿಶೇಷ ನೋಯಬೇಕಾದ ಆಗತ್ಯವಿಲ್ಲವಾದರೂ ಆ ೨೦೦, ೨೨೦ ಎಂಬ ಸಂಖ್ಯೆಯನ್ನು ನಮೂದಿಸುವ ಆಗತ್ಯವೇನು? ಇಂತಿಂತಹ ದಿನ ರಜೆಯೆಂದು ತಿಳಿಸಿ, ಉಳಿದುದೆಲ್ಲವೂ ಶಾಲಾದಿನವೆಂದು ಮಾತ್ರ ಹೇಳುವುದು ಉಚಿತವಲ್ಲವೆ? ೨೦೦ ಅಥವಾ ೨೨೦ ದಿನ ಶಾಲೆಯೆಂದು ಹೇಳಿ, ಅದಕ್ಕಿಂತ ಹೆಚ್ಚು ದಿನ ಶಾಲೆ ನಡೆಸುವುದು ವಿರೋಧಾಭಾಸವೆಂದು ತೋರುವುದಿಲ್ಲವೆ?

—ನ್ಯಾಯದರ್ಶಿ.

ಹಾರ್ಮೋನಿಯಮ್ ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ

ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೋ, ಉಡುಪಿ.

ಕಥಾವಿಹಾರ

(೨ನೇ ಪುಟದಿಂದ)

ಕಾಳಗ ಕೊಟ್ಟು ಮಡಿದು ವೀರಸ್ವರ್ಗವನ್ನು ಸಂಪಾದಿಸುವದನ್ನು ಬಿಟ್ಟು ರಣಹೇಡಿಗಳಂತೆ ಓಡಿ ಮರ ಹತ್ತಲು ನಾಚಿಕೆಯಾಗಲಿಲ್ಲವೇ ರಂಗಣ್ಣಾ?' ನಾಗ ಗೌಡರ ಮಾತು ರಂಗಣ್ಣನಿಗೆ ಕಾದ ಕಬ್ಬಿಣದ ಬರೆಯನ್ನು ಎಳೆಯಿತು. ಮಾತ್ರವಲ್ಲ ರಂಗಣ್ಣನ ರಕ್ತವನ್ನ ಕುದಿಸಿಬಿಟ್ಟಿತು. ರಾಜಣ್ಣನ ಮಾತಿಗೆ ತಲೆಗೊಟ್ಟು ತನಗೆ ಮರ್ಯಾದೆಯುಳಿಯಲಿಲ್ಲವಲ್ಲಾ ಎಂದು ಚಿಂತಿಸಿ ರಂಗಣ್ಣ,—ಗೌಡರೇ, ನಾನು ನಾಳಿನ ಕಾರ್ಯಕ್ಕಾಗಿ ಜೀವ ಉಳಿಸಿಕೊಳ್ಳದೇ ಗತ್ಯಂತರವಿರಲಿಲ್ಲ!'

'ಭೇಷ್, ಅಂತಹ ಮಹತ್ಕಾರ್ಯವೊಂದು ನಮ್ಮಿಂದ ನಾಳೆ ನಡೆಯಲಿಕ್ಕೇಬೇಕು. ರಂಗಣ್ಣ, ನೀನು ನಿನ್ನ ಅನುಯಾಯಿಗಳೊಡನೆ ಅತಿ ಜಾಗ್ರತೆಯಿಂದ ಕೆಲಸ ನಡೆಸಿದ್ದಿ. ಭಾರತ ಮಾತೆಯ ಬಂಧನವು ಹರಿದುಹೋದರೆ ಅದರ ಸಂಪೂರ್ಣ ಶ್ರೇಯಸ್ಸು ನಮಗೆಲ್ಲರಿಗೆ ನಾಡಿನ ಜನರಿಗೆಲ್ಲರಿಗೆ ಆದರೆ ಸಾಧಿಸುವ ಹೊಣೆಯನ್ನು ಪ್ರತಿಯೊಬ್ಬರೂ ಹೊರಲೇಬೇಕು.'—"ಭಾರತ ಮಾತಾಕೀ ಜೈ!" ಉದ್ಘೋಷಣೆಯು ಬಹುದೂರದ ವರೆಗೂ ಪಸರಿಸಿತು. ಆ ನಸು ಸಂಜೆಯ ಬೆಳಕಿನಲ್ಲೇ ಎಲ್ಲರೂ ಹೊರಟರು.

ಅರಣ್ಯ ಮಧ್ಯದಲ್ಲಿ ಒಂದು ಹಾಳು ದೈವದ ಗುಡಿ. ಆ ಊರಿನ ಜನರಿಗೆ ಶ್ರೇಷ್ಠ ದೈವಾಲಯವಾಗಿತ್ತದು. ಸ್ವಾತಂತ್ರ್ಯ ಹೋರಾಟಕ್ಕಾಗಿ ಇದು ಸಭಾಂಗಣವಾಗಿ ಒಂದು ತಿಂಗಳಾಗಿದೆ. ನಾಗ ಗೌಡರು ಜನರಲ್ಲಿ ಸ್ಫೂರ್ತಿತುಂಬಿ ತಮ್ಮ ಪಡೆಗಳನ್ನು ಚುರುಕುಗೊಳಿಸಿ ತಾವು ಎಣಿಸಿದ ಕಾರ್ಯವನ್ನು ಮಾಡಿಸುತ್ತಿದ್ದರು. ಪ್ರತಿಯೊಬ್ಬರೂ ಜೀವನದ ಸರ್ವ ಸಾರ್ಥಕತೆಗಳನ್ನು ಬದಿಗೊತ್ತಿ ದುಡಿಯುತ್ತಲಿದ್ದಾರೆ—ಅಲ್ಲಿ—ಇಲ್ಲಿ ಗುಂಡಿಗಾಹುತಿಯಾದರು ಅನೇಕರು. ನಾಗ ಗೌಡರ ತಂಡ ಇನ್ನೂ ದೊಡ್ಡ ಗುಂಡಿನ ಮಳೆಗರೆಯಲ್ಪಡುವ ಅತ್ಯದ್ಭುತ ಸಾಹಸಕ್ಕೆ ಕೈ ಹಾಕಿರಲಿಲ್ಲ—'ಚಿಕ್ಕ ಚಿಕ್ಕ ಕೆಲಸಗಳನ್ನು ಪೂರೈಸಿಕೊಂಡು ಒಂದು ದಿನ ಕೆಲಸವನ್ನು ಪೂರೈಸಿಯೇ ಬಿಟ್ಟಂತಾಗದೇ' ಎಂದು ನಾಗ ಗೌಡರು ರಂಗಣ್ಣ ಅನುಚರರೊಡನೆ ಕೇಳುವರು. ಅಂತಹ ದಿನಗಳೆಷ್ಟೋ ಕಳೆದು ಹೋದುವು.

ರಂಗಣ್ಣ ದಿನವೂ ತನ್ನ ಪಾಲಿಗೆ ಬಂದ ಕೆಲಸವನ್ನು ನೆರವೇರಿಸದೇ ಸಭಾಂಗಣಕ್ಕೆ ಬರುತ್ತಿರಲಿಲ್ಲ. ಇಂದು ಸ್ವಲ್ಪ ತಡವಾಗಿತ್ತು. ಅದಕ್ಕೆಂದೇ ನಾಗ ಗೌಡರ ಪಡೆಯವರು ಕಾದು ಕಾದು ಬೇಸತ್ತು ರಂಗಣ್ಣನ ಮನೆಯತ್ತ ನಡೆದಿದ್ದರು. ರಂಗಣ್ಣ ದಾರಿಯಲ್ಲಿಯೇ ದೊರಕಿದ. ನಾಗ ಗೌಡರು, ರಂಗಣ್ಣ—ಉಳಿದ ಜನರು ದೈವ ಗುಡಿಯ ಸಮೀಪದ ವಿಶಾಲವಾದ ಸ್ಥಳಕ್ಕೆ ಬಂದರು. ರಂಗಣ್ಣ ಒಮ್ಮೆ ಸಿಂತವನು ಅಲುಗಾಡದೇ ಹಾಗೆಯೇ ನಿಂತ.

'ಬಾರೋ ರಂಗಣ್ಣ' ನಾಗ ಗೌಡರು ಎಷ್ಟು ಕರೆದರೂ ರಂಗಣ್ಣ ತುಟಿ ಅಲ್ಲಾಡಿಸಲಿಲ್ಲ—ಕಾಲು ಕೀಳಲಿಲ್ಲ—'ಅದೇಕಾಗಿ ಮೌನಿಯಾದೆ ರಂಗಣ್ಣ?'

'ಗೌಡರೇ, ಭಾರತಾಂಬೆಗೆ ನಾನು ದ್ರೋಹ ಬಗೆದಿದ್ದೇನೆ. ನಿನ್ನೆ ಸಹಕರಿಸಿ ಟ್ಟು ಹೊರಟು ಇಂದು ಹೇಡಿಯಾಗಿದ್ದೇನೆ. ಅವಳ ಗೃಹದತ್ತ ಬರಲಾರೆ. ಈ ಹೇಡಿ ರಂಗಣ್ಣನನ್ನು ಆಕೆ ಖಂಡಿತವಾಗಿಯೂ ಬಂಧನದ ಬೇಗೆಯ ಕಣ್ಣುಗಳಿಂದ ನೋಡಲಾರದೆ ಬಿಡಳು. ನಾನು ಅಪರಾಧ ಮಾಡಿದ್ದೇನೆ. ಅದಕ್ಕೆ ದೂರವಿದ್ದೇ ಕ್ಷಮಾಪಣೆಯನ್ನು ಕೇಳುತ್ತೇನೆ — 'ನೀವೆಲ್ಲರೂ ಹೋಗಿ!' ಕೈಮುಗಿದು ಭಾರತಾಂಬೆಯತ್ತ ಉದ್ದಂಡ ಪ್ರಣಾಮ ಗೈದ. ನಾಗ ಗೌಡರು ಚಿಂತಾಕ್ರಾಂತರಾದರು. 'ರಂಗಣ್ಣನ ಮನಸ್ಸು ಈ ಪರಿಯಲ್ಲಿ ಪರಿಣಾಮ ಹೊಂದುವುದೆಂದು ತಿಳಿದಿದ್ದರೆ 'ಹೇಡಿ' ಎನ್ನುತ್ತಿರಲಿಲ್ಲ'ವೆಂಬಂತಾಯಿತು.

'ರಂಗಣ್ಣ, ನೀನು ದೇವಿಯ ಗುಡಿಯನು ಪ್ರವೇಶಿಸದಿದ್ದರೆ ನಾನೂ ಪ್ರವೇಶಿಸಲಾರೆ' ನಾಗ ಗೌಡರು ಹೀಗೆಂದು ಹೇಳಿದಾಗ—'ಗೌಡರೇ, ನನ್ನನ್ನು ನರಕಕ್ಕೆ ತಳ್ಳುವಿರಾ?' ಎಂದ. ಉತ್ತರವನ್ನು ನಿರೀಕ್ಷಿಸದೇ ದೇವಿಯ ಗುಡಿಗೆ ತೆರಳಿದ ರಂಗಣ್ಣ.

ಎರಡು ಹಣತೆಗಳು ಜ್ಯೋತಿಯುತವಾಗಿ, ಕಾಂತಿಯನ್ನು ಬೀರುತ್ತ ಉರಿಯುತ್ತಲಿವೆ—ಮಧ್ಯೆ ಭಾರತಾಂಬೆಯ ದೊಡ್ಡದಾದ ಮೃಣ್ಮೂರ್ತಿಯೊಂದು ವಿರಾಜಿಸುತಿತ್ತು. ಅಕ್ಕಪಕ್ಕಗಳಲ್ಲಿ ಬಾವುಟಗಳು ಅರಳಿವೆ — ಎಲ್ಲರೂ ಗುಡಿಯನ್ನು ಪ್ರವೇಶಿಸಿದಾಗ ಏಕಕಂಠದಿಂದ 'ಭಾರತ ಮಾತೆಯು ಬಿಡುಗಡೆಯಾಗಲಿ!' ಎಂದರು. ರಂಗಣ್ಣ ಯಾವುದಕ್ಕೂ ಕಿವಿಗೊಡದೆ ಭಾರತಾಂಬೆಯ ಪಾದದಡಿ ಬಿದ್ದು ಕ್ಷಮೆ ಕೇಳಿದ. ಭಾರತಾಂಬೆಯ ಮುಖವನ್ನೊಮ್ಮೆ ನೋಡಿದ. ಹಿಂಸೆಗಾಗಿ ಹೇಸಿ ಕಂಗಾಲಾದ ಮಾತೆ ಸ್ಥಿರ ಬುದ್ಧಿಯುತಳಾಗಿ ತನ್ನವರ ಸಾವನ್ನು ನೋಡಲಾರದೆ, ಕಣ್ಮುಚ್ಚಿ ಕುಳಿತಿದ್ದಳು. ಹಣತೆಯ ಬೆಳಕಿನಲ್ಲಿ ಅವಳ ರಾಜಮುಕುಟ ಥಳಥಳನೆ ಹೊಳೆಯುತಿತ್ತು. ಮೂಲೆಯಲ್ಲಿ ಹೋಗಿ ಕುಳಿತ ರಂಗಣ್ಣ.

ನಾಗ ಗೌಡರು ಭಾರತ ಮಾತೆಯ ಮುಂದೆ ಕೈಮುಗಿದು "ನಾವೆಲ್ಲರೂ ಶಕ್ತಿ ಮೀರಿ ನಿನ್ನ ಬಿಡುಗಡೆಗಾಗಿ ಆಹೋರಾತ್ರಿ ಮಡಿಯುತ್ತೇವೆ. ರಕ್ತದ ಕೋಡಿ ಹರಿಯುತ್ತದೆ. ತನ್ನ ಮಕ್ಕಳ ರಕ್ತದ ಕಾಲುವೆಯು ಹರಿಯುವುದನ್ನು ನೋಡದ ಮಾತೆ ಕಣ್ಮುಚ್ಚಿ ಕುಳಿತಿರುವೆ. ಹರಸು ತಾಯೆ!......" ಬೇಡಿಕೊಂಡರು. ಅಲಂಕರಿಸಿದ್ದ ಪುಷ್ಪವೊಂದು ದೇವಿಯ ಕಾಲಡಿ ಅಂಜಲಿಯನ್ನೊತ್ತಿ ನಮಸ್ಕರಿಸಿದ ಗೌಡರ ಅಂಜಲಿಯಲ್ಲಿ ಬಿದ್ದಿತು. 'ಅಪೂರ್ವ ಸೂಚನೆಯಾಯಿತು' ಎಂಬಂತೆ ಎಲ್ಲರೂ ಕರತಾಡನ ಮಾಡಿದರು.

ಸಭೆ ಸೇರಿತು. ಊರಿನ ತಾಲೂಕು ಆಫೀಸು, ಪೋಲೀಸ್ ಠಾಣೆ, ಇನ್ನಿತರ ಸರಕಾರೀ ಆಫೀಸುಗಳಿಗೆ ಬೆಂಕಿ ಕೊಡುವುದೆಂದಾಯಿತು. ನಾಗ ಗೌಡರು ಎಚ್ಚರಿಕೆಯನ್ನೀಯುತ್ತಾ (ನಾವಿನ್ನೂ ಇಂತಹ ಭೀಕರವಾದ ಕೆಲಸಕ್ಕೆ ಕೈಹಾಕಿಲ್ಲ. ಆದ್ದರಿಂದ ಎಲ್ಲರೂ ಜಾಗ್ರತೆಯಿಂದ ಏಕಕಾಲದಲ್ಲಿ ಬೆಂಕಿಕೊಡಬೇಕು. ನಿರ್ನಾಮಗೊಂಡಾಗ ಈ ಬಾವುಟವನ್ನು ಎತ್ತಿ ನಮ್ಮ ಸಂತೋಷವನ್ನು ವ್ಯಕ್ತಪಡಿಸೋಣ. ರಂಗಣ್ಣಾ, ನಿನ್ನ ಬುದ್ಧಿಗೇನಾದರೂ ಹೊಳೆದರೆ ಹೇಳಿಬಿಡು.' ಎಂದಾಗ ರಂಗಣ್ಣನೆಂದ—'ಗೌಡರೇ, ನಮ್ಮ ಜನರು ಇಂಥ ಕೆಲಸಕ್ಕೆ ಕೈಹಾಕಬಾರದು. ಅಲ್ಲದೇ ಅತ್ಯಲ್ಪರಾಗಿದ್ದೇವೆ. ನಾಳೆ ನಮ್ಮೊಟ್ಟಿಗೆ ಇನ್ನೂ ಜನರನ್ನು ಸೇರಿಸುವ ಪ್ರಯತ್ನವನ್ನು ಮಾಡಿಕೊಂಡು ಆ ನಂತರ ಈ ಕೆಲಸಕ್ಕೆ ಕೈಹಚ್ಚಿದಂತಾಗದೇ?'...'

'ಆಗಬಹುದು. ನಾಳೆ ಹಗಲು ಎಲ್ಲರೂ ಇನ್ನಷ್ಟು ಜನರು ಬರುವಂತೆ ಪ್ರೋತ್ಸಾಹಿಸುವ ಕಾರ್ಯವನ್ನು ಹೊಂಬೇಕು. ಒಂದೇ ಮನಸ್ಸಿನಿಂದ, ಕಾಯ ಹೃದಯತರಾಗಿ ದುಡಿಯಿರಿ. ಬಂಧನವ ಬಿಡಿಸೋಣ'. ನಾಗ ಗೌಡರು ರಂಗಣ್ಣನ ಮಾತಿಗೆ ಒಪ್ಪಿದರು.

'ಹಾಗಾದರೆ ನಾಳೆ ರಾತ್ರಿ ನಿಶ್ಚಯಿಸುವುದೇ?' ರಾಜಣ್ಣ ಕೇಳಿದ.

'ಛೀ! ನಾಳೆ ರಾತ್ರಿ ನಾವು ಸಂಕಲ್ಪಿಸಿದ ಕಾರ್ಯವನ್ನು ನೆರವೇರಿಸಲೇ ಬೇಕು. ಅದಕ್ಕೆಲ್ಲರೂ ಪ್ರತಿಜ್ಞೆಮಾಡಿರಿ' ನಾಗ ಗೌಡರು ಕೇಳಿಕೊಂಡರು. ನೆರೆದ ನೂರಾರು ಮಂದಿ ದೇವಿಯ ಸಮ್ಮುಖದಲ್ಲಿ ಪ್ರತಿಜ್ಞೆಮಾಡಿದರು.

ಸೂರ್ಯನು ತನ್ನ ಪ್ರಖರವಾದ ಬೆಳಕನ್ನು ಧರಣಿ ದೇವಿಗೆ ಅರ್ಪಿಸಿ, ಭಾರತ ಮಾತೆಯ ಬಿಡುಗಡೆಗಾಗಿ ಹಣಗಾಡಿ ರಕ್ತ ಸುರಿಸಿ, ಜೀವವನ್ನೇ ದಾನಮಾಡುತ್ತಿರುವ ಭಾರತೀಯರನ್ನು ಕಂಡು ಮನದೊಳಗೆ ಮರುಗಿ, ಇಂತಹ ವಿಪತ್ತನ್ನು ನಾನು ನೋಡಲಾರೆನೆಂದು ಪಶ್ಚಿಮಾಂಬುಧಿಯಲ್ಲಿ ಮಾಯವಾಗಿ ಬಿಟ್ಟ.

ರಾತ್ರಿಬಳು: ಭೀಕರ ದೈವ ಗುಡಿಯ ಒಳಗೂ—ಹೊರಗೂ ಜನರು ನೆರೆದಿದ್ದಾರೆ. ಅವರ ರಕ್ತವು ನರನಾಡಿಗಳಲ್ಲಿ; ರೋಮಕೂಪಗಳಲ್ಲಿ ಹರಿಯುತ್ತಿತ್ತು. ಭರದಿಂದ. ರಂಗಣ್ಣ ಭಾರತ ಮಾತೆಯ ಎದುರು ಎರಡು ಹಣತೆಯನ್ನು ಹಚ್ಚಿಟ್ಟು ಮಾತೆಯ ಮುಖವನ್ನು ಬೆಳಗಿಸಿದ. ನಾಗ ಗೌಡರು ಮಾತೆಯೊಡನೆ ತಮ್ಮ ಇಂದಿನ ಕೆಲಸವನ್ನು ನಿವೇದಿಸಿಕೊಂಡು ಸಹಾಯ



ಹೂಗ್ಲಿ ನದಿಯ ದಂಡೆಯಲ್ಲಿರುವ ಹಾಲ್ದಿಯಾವನ್ನು ಪೂರಕ ಬಂದರವನ್ನಾಗಿ ಉಪಯೋಗಿಸಲಾಗುತ್ತಿದೆ. ಚಿತ್ರದಲ್ಲಿ ಈ ಬಂದರದಲ್ಲಿ ಒಂದು ಹಡಗ ನಿಂತಿರುವುದನ್ನು ಕಾಣಬಹುದು.

The Moolky Bank, Ltd.

MULKI.

ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ,
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ). ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್‌ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತವೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಕನ್ನಡ ಲೈಬ್ರೆರಿ ಪುಸ್ತಕಗಳಿಗೆ ವಿಚಾರಿಸಿರಿ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮಾಡು ದೇವಿ', ಎಂದು ಬೇಡಿಕೊಂಡರು. ಸಾವಿರಾರು ಜನರ ಮಧ್ಯೆ ಪಂಜಿನ ಬೆಳಕು ಹೊತ್ತಿಕೊಂಡಿತು. ಸ್ವತಃ ನಾಗೇಗೌಡರು ಕೆಲಸವನ್ನು ಎಲ್ಲರಿಗೂ ಹಂಚಿಕೊಟ್ಟು "ಹೊರಡಿರಿ" ಎಂದರು. ಉಚ್ಚಸ್ವರದಿಂದ 'ಭಾರತಮಾತಾಕೀ ಜೈ' ಎಂದು, ಶರವೇಗದಿಂದ ತಾಲೋಕ್ ಕಛೇರಿಯತ್ತ ಸಾವಿರಾರು ಜನರ ದಂಡು ಹೊರಟಿತು. ಎಲ್ಲದಕ್ಕೂ ರಂಗಣ್ಣ ಮುಂದಾಗಿ ಹೊರಟಿದ್ದಾನೆ. ಕಾವಲು ಕಾಯುತ್ತಿರುವ ಜನರು ಕಾರಾಗಾರದ ಕಾವಲನ್ನು ಚೆನ್ನಾಗಿ ಕಾಯುತ್ತಿದ್ದಾರೆ—ತಾಲೋಕು ಕಛೇರಿಯಲ್ಲಿ ಪೋಲೀಸರು 'ಗಸ್ತು' ತಿರುಗುತ್ತಲಿದ್ದಾರೆ. ಬೀಗ ಮುದ್ರೆಯಿಂದ ಭದ್ರಿತವಾಗಿದ್ದ ಕೆಲವು ಕಟ್ಟಡಗಳನ್ನು ನೋಡಿ ನಾಗ ಗೌಡರು 'ಕಳ್ಳರು ಬೀಗವನ್ನು ಮುರಿಯುತ್ತಾರೆ. ಆದರೆ ನಮಗದು ಬೇಕಿಲ್ಲ. ಕೊಡಿರೊ ಬೆಂಕಿ!' ಎಂದರು. ಅಲ್ಲಲ್ಲಿ ಬೆಂಕಿಯು ಉರಿದಿದ್ದಾಗ, ಪೋಲೀಸರ ದಂಡು ಎಚ್ಚೆತ್ತು ಗುಂಡಿನ ಸುರಿಮಳೆಯನ್ನು ಸುರಿಸಲು ತೊಡಗಿತು. ಉರಿ ನಂದಿಸುವ ಪ್ರಯತ್ನಕ್ಕೆ ಯಾರೂ ಹೋಗಿರದೇ ಭಾರತೀಯರ ನಿರ್ನಾಮ ಮಾಡುವ ಹಂಚಿಕೆಯಲ್ಲಿ ತೊಡಗಿದರು. ಗುಂಡಿನೇಟಿಗೆ ಎಳೆಯ—ಯೌವನದ—ಹಣ್ಣಾದ—ಹೃದಯಗಳೆಷ್ಟೋ ಆಹುತಿಯಾದುವು ಗುಂಡುಗಳ ಬೊಬ್ಬಾಟ, ಜನರ ಚೀತ್ಕಾರ, ಧೀರಯೋಧರು ಮುನ್ನುಗ್ಗಿರಿ' ಎಂಬ ಘೋಷಣೆ!

ಢಂ! ಢಂ! ಢಂ!— ಗುಂಡುಗಳು ಆಯಾಸವಿಲ್ಲದೇ ಹಾರುತ್ತಿದ್ದುವು. ಒಂದು ಗುಂಡು ಬಿರುಸಿನಿಂದ ಬಂದು ರಂಗಣ್ಣನ ತೊಡೆಯನ್ನು ತುಂಡರಿಸಿತು. ಇನ್ನೊಂದು ಗೌಡರ ಬಲಕೈಯ ಹಸ್ತವನ್ನು ಚೊಕ್ಕ ಹೊರಟು ಹೋಯಿತು. ರಾಜಣ್ಣ ಎಲ್ಲಿಂದಲೋ ಓಡಿ ಬಂದು ನೋಡಿದಾಗ ನೆಲಕ್ಕೆ ಬಿದ್ದ ರಂಗಣ್ಣ ಧ್ವಜವನ್ನು ಮೇಲಕ್ಕೆತ್ತಿ 'ಭಾರತ ಮಾತಾಕೀ ಜೈ!' ಎಂದು ತೊದಲು ತೊದಲಾಗಿ ನುಡಿಯುತ್ತಲಿದ್ದ. ಧ್ವಜದಿಂದ ಇಳಿಯುತ್ತಿದ್ದ ರಕ್ತವನ್ನು ನೋಡಿ ರಂಗಣ್ಣನನ್ನೂ, ಗೌಡರನ್ನೂ ಜೀವಂತರನ್ನಾಗಿ ಮಾಡಲು ದೂರದ ದೈವದಗುಡಿಗೆ ಸಾಗಿಸಲು ಹವಣಿಸಿದ.

ಆ ಗುಡಿಯಲ್ಲಿ ರಕ್ತದ ಹೊಳೆ ಹರಿಯಿತು. ಭಾರತದ ಧ್ವಜವು ರಕ್ತಯುತವಾಗಿ ಭಾರತಾಂಬೆಯ ಮೂರ್ತಿಗೆ ಆಚ್ಛಾದಿಸಲ್ಪಟ್ಟಿತು. ನಾಗ ಗೌಡರು ಭಾರತಮಾತೆಯನ್ನು ನೋಡಲಾರದೆ ಕಣ್ಣುಮುಚ್ಚಿ ಕುಳಿತರು ರಂಗಣ್ಣ ನರಳುವಿಕೆಯ ಮಧ್ಯೆ 'ಭಾ...ರ....ತ.... ಮಾ....ತಾ....ಕೀ... ಜೈ!' ಎಂದನ್ನುತ್ತಲಿದ್ದ. ರಂಗಣ್ಣನ ಉಚ್ಚಾರ ಮಾತೆಯ ಕಿವಿ ಮುಟ್ಟುತ್ತಲಿತ್ತು. ಬೆಳಗಾಗುವಾಗ ಮೂರ್ಛೆಯಿಂದ ಎಚ್ಚೆತ್ತ ರಂಗಣ್ಣ,—ಗೌಡರೇ, ಈ ಪಾಪಿಯನ್ನು ಇಲ್ಲಿಗೇಕೆ ಹೊತ್ತು ತಂದಿರಿ? ನಮ್ಮವರೆಲ್ಲ ಸತ್ತು ಬಿದ್ದಿರುವಾಗ ನನ್ನೊಬ್ಬನನ್ನುಳಿಸಿ ಏನು ಪ್ರಯೋಜನ? ಅಲ್ಲಿಯೇ ಸತ್ತು ಮಣ್ಣು ಮುಕ್ಕಿದ್ದರೆ ಸ್ವರ್ಗವಲ್ಲವೇ?' ಎಂದು ಸಂತಾಪದಿಂದ ಉರುಳುತ್ತಿರುವ ರಂಗಣ್ಣನ ದೇಹವನ್ನು ಗೌಡರು ಮುಟ್ಟಿನೋಡಿ ಮನೆಗೆ ಸಾಗಿಸಿದರು.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಬೇತಿಯನ್ನು ಈ ಅವಧಿಯಲ್ಲಿ ಕೊಡಲಾಗುವುದು.

ಆದರೆ, ರಶ್ಯದ ಕೊಡುಗೆಯು ತುಸು ವ್ಯಾಪಕವಿರುವಂತೆ ತೋರುತ್ತದೆ. ೧೫೦ ಮೆಟ್ರಿಕ್ಯುಲೇಟ್‌ಗಳಿಗೆ ಐದು ವರ್ಷದ ವರೆಗೆ ಉಚ್ಚ ಶಿಕ್ಷಣ ನೀಡಲು ರಶ್ಯ ಅನುಮತಿಸಿದೆ. ಮುಂದಿನ ವರ್ಷವೂ ಇಷ್ಟೇ ಶಿಷ್ಯವೃತ್ತಿಯನ್ನು ಕೊಡಮಾಡಿದರೆ, ಇನ್ನೈದು ವರ್ಷಗಳಲ್ಲಿ ಕಾಂಗೋವಿನ ಆಡಳಿತೆ ನಡೆಸಲು ಮುನ್ನೂರು ಯುವಕರು "ರಶ್ಯದಲ್ಲಿ" ತರಬೇತಿ ಹೊಂದುವರು. ಇದನ್ನು ಆದು ಲಕ್ಷ್ಮಿಸಿಯೋ-ಒವರ್ ಅಮೆರಿಕನ್ ಪತ್ರಕರ್ತನು ಉದ್ಗರಿಸಿದ: "ಕಾಂಗೋವನ್ನು ಮಿತ್ರರಾಷ್ಟ್ರವನ್ನಾಗಿ ಮಾಡಿಕೊಳ್ಳುವುದಷ್ಟೇ ನಮ್ಮ ಧ್ಯೇಯ. ಆದರೆ, ನಾಳೆ ಕಾಂಗೋವಿನಲ್ಲಿ ತಮ್ಮ ಪ್ರಭಾವ ಸ್ಥಾಪನೆ ಮಾಡುವುದೇ ರಶ್ಯನ್ ಕೊಡುಗೆಯ ಮೂಲ ಲಕ್ಷ್ಯ."—ಈ ಅಭಿಪ್ರಾಯವನ್ನು ಅಲ್ಲಗಳೆಯುವುದು ಕಷ್ಟಸಾಧ್ಯ.

ಶ್ರೀ ಲುಮುಂಬರವರ ವಲಯದಲ್ಲಿ ಕಮ್ಯುನಿಸ್ಟರ ಬಗ್ಗೆ ಸಹಾನುಭೂತಿ ವ್ಯಕ್ತಪಟ್ಟಿರುವುದನ್ನು ಕಂಡು ಪಾಶ್ಚಾತ್ಯ ಪ್ರೇಕ್ಷಕರು ದಿಙ್ಮೂಢರಾಗಿದ್ದಾರೆ. ಆಲ್ಜೀರಿಯಾ ಸರಕಾರವು ಕಾಂಗೋವಿಗೆ ಶ್ರೀ ಸರ್ಜ್ ಮೈಕೇಲ್'ರ ಸೇವೆಯನ್ನು ದಾನ ಮಾಡಿದೆ. ಶ್ರೀ ಮೈಕೇಲರು ಫ್ರಾನ್ಸದ ಕಮ್ಯುನಿಸ್ಟರಿರುವರು. ಇವರು ಪ್ರಧಾನಿ ಲುಮುಂಬಾರವರ ಪ್ರೆಸ್—ಸಚಿವರಾಗಿದ್ದಾರೆ. ಹಾಗೆಯೇ ಮೇಡಂಬ್ಲಾಯಿಯವರು ಪ್ರಧಾನಿಯವರ ಕಾರ್ಯಾಲಯದಲ್ಲಿದ್ದಾರೆ. ಮೊದಲು ಮೆಜಿಸ್ಟ್ರೇಟರಾಗಿದ್ದ ಶ್ರೀ ಗೂಟಾಯಿಟ್'ರು ಈಗ ಕಾನೂನು ಸಲಹೆಗಾರರಾಗಿದ್ದಾರೆ. ಬೆಲ್ಜಿಯನರಾದ ಶ್ರೀ ರವಿವಾಯರರು ರಾಜನೀತಿಕ ಪರಾಮರ್ಶದಾತರಾಗಿದ್ದಾರೆ. ಈ ಅಧಿಕಾರಿಗಳು ಶ್ರೀ ಲುಮುಂಬಾರೊಡನೆ ಕೆಲಸ ಮಾಡುತ್ತಿರುವುದು ಎಲ್ಲರಿಗೂ ಗೊತ್ತಾಗಿದೆ. ಆದರೆ, ಇವರ ಪ್ರಭಾವವು ಮಾತ್ರ ಅತ್ಯಲ್ಪವೆಂದು ಹೇಳಲಾಗುತ್ತಿದೆ. ಈ ಪದಾಧಿಕಾರಿಗಳ ಮೇಲೆ ಕೆಲವೊಂದು ನಿರ್ದಿಷ್ಟ ಕಾರ್ಯಗಳ ಬಗ್ಗೆ ಮಾತ್ರ ಪ್ರಧಾನಿಯವರು ಭರವಸೆಯಿಡುತ್ತಿದ್ದಾರೆಂದೂ ತಿಳಿದುಬಂದಿದೆ.

ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯದಂತೆ, ಎಲ್ಲಕ್ಕಿಂತ ದೊಡ್ಡ ತೊಡಕೆಂದರೆ, ರಶ್ಯನ್ ಸಹಾಯ. ಕಟಾಂಗದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ಪ್ರಧಾನಿ ಲುಮುಂಬಾರವರ ಆಶಯವನ್ನು ಅದು ಸಂಪೂರ್ಣ ಸಮರ್ಥಿಸುತ್ತದೆ. ಯುಕ್ತರಾಷ್ಟ್ರಸಂಘದಲ್ಲಿ ವಿಶ್ವಾಸವಿಡುವುದರೊಡನೆಯೇ ಅದರ ಪ್ರಧಾನ ಕಾರ್ಯದರ್ಶಿಯವರ ಮೇಲೆ ಪ್ರಹಾರ ಮಾಡುವ ದ್ವಿವಿಧ ನೀತಿಯನ್ನೂ ಅನುಸರಿಸುತ್ತಿದೆ. ಕಾಂಗೋವಿನ ಪೂರ್ವದ ರಾಜಧಾನಿ ಸ್ಟೈನ್ಲೆ ವಿಲ್ಲಾದಲ್ಲಿ ರಶ್ಯದಿಂದ ಬಂದಿರುವ ೧೨ ವಿಮಾನಗಳು ತಂಗಿರುವವೆಂದೂ ಇವುಗಳಲ್ಲಿ ೧೦೦ ರಶ್ಯನ್ ಕರ್ಮಚಾರಿಗಳು ಆಗಮಿಸಿರುವರೆಂದೂ ತಿಳಿಯುತ್ತದೆ. ಕಾಂಗೊವಿನಿಂದ ಸಿಡಿದು ಹೋದ ಕಟಾಂಗವನ್ನು ಮರಳಿ ಪಡೆಯುವ ಸಲುವಾಗಿ, ಕಾಂಗೋ ಸೈನಿಕರನ್ನು ಕಟಾಂಗಕ್ಕೆ ರವಾನಿಸಲು ಈ ವಿಮಾನಗಳನ್ನು ಬಳಸಿಕೊಳ್ಳಲಾಗುವುದೆಂದು ಊಹಿಸಲಾಗಿದೆ. ಇದರೊಡನೆಯೇ ರ್ಯಾಟರ್, ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಶನ್ ಮತ್ತು ಲಂಡನ್ ಡೈಲಿ ಎಕ್ಸ್‌ಪ್ರೆಸ್‌ನ ಪ್ರತಿನಿಧಿಗಳನ್ನು ಕೇಂದ್ರ ಕಾಂಗೊವಿನ ರಾಜಧಾನಿ ಲುಲುವಾ ಬರ್ಗದಲ್ಲಿ ಸೆರೆಹಿಡಿದಿರುವರೆಂಬ ವರ್ತಮಾನವು ದಂಗುಬಡಿಸುವಂತಿದೆ.

ತೀವ್ರ ವಿವಂಚನಾತ್ಮಕ ಘಟನೆಗಳು ನಿರಂತರವಾಗಿ ನಡೆಯುತ್ತಿರುವ ಕಾಂಗೊವು ಪೂರ್ವ ಪಶ್ಚಿಮ ರಾಷ್ಟ್ರಗಳ ಬಲಾಬಲ ಪ್ರದರ್ಶನ ರಂಗಸ್ಥಳವಾಗುವ ಎಲ್ಲ ಲಕ್ಷಣಗಳೂ ಗೋಚರವಾಗತೊಡಗಿವೆ. ಅದರೊಡನೆ ಯುಕ್ತರಾಷ್ಟ್ರ ಸಂಘದ ಸತ್ವಪರೀಕ್ಷೆಯೂ ನಡೆಯುತ್ತಿದೆ. ಆರು ವರ್ಷಗಳಿಗೆ ಮೊದಲು ಈಜಿಪ್ತದಲ್ಲಿ ನಡೆದ ಶಕ್ತಿ ಪರೀಕ್ಷೆ ಮರಳಿ ಈಗ ಕಾಂಗೋವಿನಲ್ಲಿ ಆಗಬಹುದೇ ಎಂಬ ಸಂದೇಹ ಎಲ್ಲರಲ್ಲಿಯೂ ಹುದುಗಿದೆ. ಕತ್ತಲೆಯ ಕಾಂಗೊವಿನಲ್ಲಿ ಕತ್ತಿಯ ಅಲಗಿನ ಬೆಳಕು ಮಿಂಚತೊಡಗಿದೆ; ಪರಿಣಾಮ ಕಾದು ನೋಡಬೇಕಾಗಿದೆ.

ಅಣಕವಾಡು:

ಭಾರತಿಯ ದುರ್ದಶೆ

ವಿಷದ ಸರ್ಪವ ತಿಳಿದು, 'ಅದಕೆ ಎರೆ ಹಾಲು
ವಿಷವ ಬಿಡುವುದು' ಎಂದವನವನಾಗ ಸುಭಗ
ವಿಷವು ತಾ ಬಲಿದು ಎರೆವಗೆ ಕಡಿಯೆ ಮುಂದಾಗೆ,
"ವಿಷ ಸರ್ಪ ಕಡಿದು ಕೊಲು" ಎಂದವನೆ ಸುಭಗ ||

ಪ್ರಶಾಸನ

ಏರಿಯೆರಡನು ಹಾರಿ ದಾಟುವುದ ಬಿಟ್ಟು,
ನೇರದೋರಿಯೆ ಲೇಸು ಎಂಬುದಿದು ರಟ್ಟು,
ಎರಡು ಬಾಹುಗಳುದ್ದ ಕಿಂತ ಬಹು ಕಡಿಮೆ
ಮೂರನೆಯದೆಂದೆಂಬುವುದೆ ರಾಜ್ಯ ಕಳಿಮೆ||

—ರಾಶಿ.

5 ರೂ. ಮಾತ್ರ

ನೀವಿನ್ನೂ ಸಿಂಡಿಕೇಟ್ ಬೇಂಕಿನಲ್ಲಿ ಒಂದು ಸೇವಿಂಗ್ಸ್‌ಬೇಂಕ್ ಖಾತೆಯನ್ನು ತೆರೆದಿಲ್ಲವೆ?
ಹಾಗಾದರೆ ಇನ್ನು ತಡಮಾಡಬೇಡಿರಿ.
ಕೇವಲ ಐದು ರೂಪಾಯಿಗಳಿಂದ ನೀವು ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ಪ್ರಾರಂಭಿಸಬಹುದು.
ನಿಮಗೆ ಸಾಧ್ಯವಿದ್ದಷ್ಟನ್ನು—25 ನಯೆಪೈಸೆಯಷ್ಟನ್ನು ಸಹಾ—ನೀವು ನಿಮ್ಮ ಲೆಕ್ಕಕ್ಕೆ ಕೂಡಿಸುತ್ತಾ ಹೋಗಬಹುದು.
ಸಿಂಡಿಕೇಟ್ ಬೇಂಕಿನ ಚೆಕ್ ಮತ್ತು ಪಾಸ್ ಪುಸ್ತಕಗಳೆರಡು ನಿಮ್ಮ ಗೌರವದ ಸೊತ್ತುಗಳಾಗುವುವು.
ಮಾತ್ರವಲ್ಲ, ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿಯೂ ಸಿಗುವುದು.
ಇಂದೇ ನಿಮಗೆ ಸಮೀಪವಿರುವ ನಮ್ಮ ಶಾಖೆಯೊಂದನ್ನು ದಯಮಾಡಿ ಸಂದರ್ಶಿಸಿರಿ.

ಆಗಾಗ ಉಳಿಸಲು
ಮಿತವಾಗಿ ವ್ಯಯಿಸಲು
ಬಡ್ಡಿಯನು ಗಳಿಸಲು

ಸೇವಿಂಗ್ಸ್ ಬೇಂಕ್

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಕಾಮ ವಿಜ್ಞಾನದ ಮಾಹಿತಿಗಾಗಿ
ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ
ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ
ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

40th year of publication. 15-9-1960 ೪೦ನೇ ವರ್ಷ

ಸಂಪುಟ ೪೦ | ಸಂಚಿಕೆ ೩

ನವಯುಗ

Vol. 40 | No. 3 | ಬೆಲೆ 0-13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ದೇಶ ರಕ್ಷಣೆಗೆ ಸ್ತ್ರೀಯರು ಮುಂದಾಗಬೇಕು

ಸ್ತ್ರೀಯರು ಬಣ್ಣದ ಚಿಟ್ಟೆಗಳಂತೆ ಮೆರೆದಾಡುವುದರಿಂದ ದೇಶಕಲ್ಯಾಣವಾಗಲಾರದು. ಇಂದು ಝಾನ್ಸಿ ಲಕ್ಷ್ಮೀಬಾಯಿಯಂತಹ ವೀರ ರಮಣಿಯರ ಆವಶ್ಯಕತೆ ಭಾರತಕ್ಕಿದೆ—ಎಂದು ಕಾಂಗ್ರೆಸ್ ಅಧ್ಯಕ್ಷ ನೀಲಂ ಸಂಜೀವ ರೆಡ್ಡಿಯವರ ಅಂಬೋಣ.

ತಿರುವನಂತಪುರದಲ್ಲಿ ಕಾಂಗ್ರೆಸ್ ಮಹಿಳಾ ಸಮ್ಮೇಳನವು ಸೇರಿ ಚರ್ಚಿಸಿಕೊಂಡು ನಿರ್ಧರಿಸಿದ್ದ ಕಾರ್ಯಕ್ರಮ ಯೋಜನೆಗಳೇನೇ ಇರಲಿ, ಅವುಗಳ ಔಚಿತ್ಯದ ಪ್ರಶ್ನೆಯೊಂದನ್ನು ದೂರವಿಟ್ಟು ವಿಚಾರಿಸುವುದಾದರೆ, ಮಹಿಳೆಯರಿಗೆ ಸರಿಯಾದ ಉಪದೇಶ ದೊರೆತಿದೆಯೆಂಬುದು ನಿರ್ವಿವಾದ. ಕೇಂದ್ರದ ವಿತ್ತಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ಈ ಸಮ್ಮೇಳನವನ್ನು ಉದ್ಘಾಟಿಸುತ್ತ, "ನ್ಯಾಯ ಹಾಗೂ ಸಮಾನತೆಗಳಲ್ಲಿ ಪುರುಷರಂತೆಯೇ ಸಮಾನಾಧಿಕಾರ ಸ್ತ್ರೀಯರಿಗೂ ದೊರೆಯಬೇಕು. ಸಂವಿಧಾನದಲ್ಲಿ ಈ ಸಮಾನತೆಯನ್ನು ಕೊಡಮಾಡಿದ್ದರೂ ವಾಸ್ತವಿಕವಾಗಿ ಬಂದಿಲ್ಲ. ಆದುದರಿಂದ ಮಹಿಳೆಯರು ಈ ಸಮಾನತಾಧಿಕಾರವನ್ನು ಗಳಿಸಲು ಹೋರಾಡಬೇಕು; ಸ್ವಾಭಾವಿಕವಾಗಿ ದುರ್ಬಲಳಾಗಿದ್ದರೂ ಮಹಿಳೆ ಈ ಬಗ್ಗೆ ಪುರುಷರಿಗೆ ಹೆದರಬಾರದು" ಎಂದು ಅಬಲೆಯರಲ್ಲಿ ಉತ್ಸಾಹವನ್ನು ಹುರಿದುಂಬಿಸುವ ಉಜ್ವಲ ಭಾಷಣವನ್ನು ಮಾಡಿದರು.

ಹಾಗೆಯೇ ಈ ವನಿತಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಇಂದಿರಾ ಗಾಂಧಿಯವರೂ ಸಮಾನತೆಯ ಬಗ್ಗೆ ಎಚ್ಚರಿಕೆ ನೀಡಿದ್ದು ಮಾತ್ರವಲ್ಲದೆ, ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಸ್ತ್ರೀಯರು ತಮ್ಮಲ್ಲಿ ಐಕ್ಯವನ್ನು ಸ್ಥಾಪಿಸಿಕೊಳ್ಳಬೇಕು; ರಾಜಕೀಯದಲ್ಲಿ ಹೆಚ್ಚು ಹೆಚ್ಚಾಗಿ ದುಡಿಯಬೇಕು; ತಮ್ಮ ಹಕ್ಕುಗಳನ್ನು ಪಡೆಯಲು ಹೋರಾಡಬೇಕು ಎಂದು ಮುಂತಾಗಿ ಉಪದೇಶಿಸಿದರು. ಆದರೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ಮಾತ್ರ, ಹೆಂಗಸರು ಪುರುಷರೊಡನೆ ಹೋರಾಡುವುದಕ್ಕೆ ತಮ್ಮ ಪ್ರತ್ಯಕ್ಷ ಬೆಂಬಲವನ್ನು ಸೂಚಿಸದೆ, ನಮ್ಮ ರಾಷ್ಟ್ರಕ್ಕೆ ಅಪಾಯ ಒದಗಿ ಬಂದಾಗ ಹೋರಾಡಲು ಬಣ್ಣಬಣ್ಣದ ಚಿಟ್ಟೆಯಂತೆ ಮೆರೆದಾಡುವವರಿಂದ, ಏನೂ ಪ್ರಯೋಜನವಿಲ್ಲ; ಆದುದರಿಂದ ಸಮಯ ಬಂದಾಗ ಕತ್ತಿ ಹಿಡಿಯಬಲ್ಲ ಝಾನ್ಸಿ ಲಕ್ಷ್ಮೀಬಾಯಿಯಂತೆ ಮಹಿಳೆಯರಾಗಬೇಕೆಂದು ಉದ್ಬೋಧಪ್ರದವಾಗಿ ಕರೆಯಿತ್ತರು.

ಸಮಾಜದಲ್ಲಿ ಸ್ತ್ರೀಯರ ಸ್ಥಾನವೂ ನವು ಉನ್ನತವಾದುದು; ಅದರ ಕರ್ತವ್ಯವೂ ಹಿರಿದಾದುದು. "ತೊಟ್ಟಿಲು ತೂಗುವ ಕೈಯೇ ರಾಷ್ಟ್ರವಾಳಬಲ್ಲುದು" ಎಂಬಂತೆ ಮಾತೆಯರ ಹೊಣೆಯನ್ನು ಸಂಪೂರ್ಣವಾಗಿ ನಿರ್ವಹಿಸಿದ ಸಮಾಜವು ಉನ್ನತ ಮಸ್ತಕವಾಗಿ ಮೆರೆದಾಡಬಲ್ಲುದು. ಪುರುಷ-ಸ್ತ್ರೀಯರು ಒಂದೇ ನಾಣ್ಯದ ಎರಡು ಮುಖಗಳು; ಒಂದೇ ಗಾಡಿಯ ಎರಡು ಎತ್ತುಗಳು. ಅವರಿಬ್ಬರೂ ಪ್ರತಿಯೊಂದು ವಿಷಯದಲ್ಲಿಯೂ ಸಮಾನರಾಗಿದ್ದರೆ, ಮಹಿಳೆಗೂ ಸುಖ, ಆತನನ್ನು ಕಟ್ಟಿಕೊಂಡ ಮಹನೀಯನೂ ಆರಾಮಿ. ಅದು ಬಿಟ್ಟು 'ಎತ್ತು ಏರಿಗೆಳೆದರೆ, ಕೋಣ ನೀರಿಗೆಳೆಯಿತೆಂ'ಬಂತಾದರೆ ಮಾತ್ರ ಅಧಿಕಾರ ಪ್ರಾಪ್ತಿಯ ಹೋರಾಟ ನಿತ್ಯ ನಡೆದು ಮನೆಯೊಂದು ರಣರಂಗವಾದೀತೇ ಹೊರತು ಸ್ತ್ರೀಗಾಗಲೀ ಪುರುಷನಿಗಾಗಲಿ ಯಾವುದೇ ಶಾಂತಿ ಸಿಗಲಾರದು.

ಅನ್ಯೋನ್ಯತೆ ನೆಲಸಿರುವ ಸಂಸಾರದಲ್ಲಿ ಸ್ತ್ರೀ—ಪುರುಷರು ಅಧಿಕಾರಕ್ಕಾಗಿ ಜಗಡಾಡಬಾರದು. ಸ್ತ್ರೀಗೆ ನ್ಯಾಯವಾಗಿ ಸಲ್ಲಬೇಕಾದ ಮತ್ತು ಅವಶ್ಯಬೇಕಾದ ಅಧಿಕಾರಗಳನ್ನು ಅಂತಹ ಪತಿಯು ಸ್ವಾಭಾವಿಕವಾಗಿ ಅಯಾಚಿತವಾಗಿಯೇ ಕೊಡುತ್ತಾನೆ. ಆದರೆ, ತನಗೆ ದೊರೆತಿರುವ ಇಂತಹ ಅಧಿಕಾರವನ್ನು ಆಕೆ ದುರುಪಯೋಗಪಡಿಸಿ, ಅಧಿಕಾರದ ಹೆಸರಿನಲ್ಲಿ ತನ್ನ ವೈಭವ ಪ್ರದರ್ಶನಕ್ಕೆ ಸೊಂಟಗಟ್ಟಿದರೆ, ಅಂತಹಳಿಂದ ಕುಟುಂಬಕ್ಕಾಗಲೀ ಸಮಾಜಕ್ಕಾಗಲೀ ದೇಶಕ್ಕಾಗಲೀ ಲಾಭವಿಲ್ಲ. ಬಣ್ಣದ ಚಿಟ್ಟೆಗಳಂತೆ ಮೆರೆದಾಡುವುದೇ ಅಧಿಕಾರದ ಪರಮೋಚ್ಚ ವ್ಯವಹರಣೆಯಲ್ಲ. ತನ್ನ, ಕುಟುಂಬದ, ಸಮಾಜದ, ದೇಶದ ಹಿತಕ್ಕಾಗಿ ತನಗಿರುವ ಅಧಿಕಾರವನ್ನು ಸದುಪಯೋಗಪಡಿಸಿಕೊಳ್ಳುವುದು ಸ್ತ್ರೀಯಾದವಳ ಕರ್ತವ್ಯವಾಗಿದೆ.

ನಮ್ಮ ದೇಶದ ಸಂವಿಧಾನದಲ್ಲಿ ಸ್ತ್ರೀ—ಪುರುಷರಿಗೆ ಕಾನೂನಿನ ದೃಷ್ಟಿಯಲ್ಲಿ ಸಮಾನಾಧಿಕಾರವನ್ನು ಕೊಡಲಾಗಿದೆ. ಹಿಂದೂ ವಾರೀಸು ಹಕ್ಕಿನ ಮಸೂದೆ, ಹಿಂದೂ ಕೋಡು ಮೊದಲಾದುವು ಇಂತಹ ಮಹಿಳೋದ್ಧಾರಕ್ಕೆ ಟೊಂಕ ಕಟ್ಟಿಯೇ ವ್ಯವಹರಣೆಗೆ ಬರುತ್ತಿವೆ. ಕಾನೂನುಗಳಿಂದ ಅಧಿಕಾರವನ್ನು ಗಳಿಸುವ ಹವಣಿಕೆಯಿಂದ ಅಲ್ಲಸಲ್ಲದ ಗೊಂದಲಗಳೇಳುವುವೆಂಬುದು ಅನುಭವಕ್ಕೆ ನಿಲುಕದ ವಿಷಯವಲ್ಲ. ಇನ್ನು ಅಧಿಕಾರವನ್ನು ಸ್ತ್ರೀಯರಿಗೆ ಕೊಡದಿರುವ ಪುರುಷರಾದರೂ ಇಂದು ಅಪವಾದಕ್ಕೊಳ್ಪಟ್ಟರಂತಿರಬಹುದೇ ಹೊರತು ವಿಪುಲವಾಗಿಲ್ಲ. ಈ ಅಪವಾದವಾದರೂ ಜನತೆಯಲ್ಲಿ ಶಿಕ್ಷಣ ಹೆಚ್ಚಿ ಪ್ರಚಲಿತ ಪರಿಸ್ಥಿತಿಯ ಅರಿವಾಗುವಾಗ ತನ್ನಿಂತಾನೇ ದೂರವಾಗಬಹುದು. ಅಧಿಕಾರಕ್ಕಾಗಿ ಹೋರಾಡಬೇಕೆಂದು ಹೇಳುವಾಗ, ಪಾಶ್ಚಾತ್ಯ ಮಹಿಳೆಯರು ಸಂಪೂರ್ಣ ಸ್ವಾತಂತ್ರ್ಯಾಧಿಕಾರಗಳನ್ನು ಪಡೆದೂ ಯಾವ ಮಹಾಸುಖವನ್ನು ಅನುಭವಿಸುತ್ತಾರೆಂಬತ್ತ ನಾವು ಗಮನಹರಿಸಿದರೆ, ಈ ಬಗೆಯ ಹೋರಾಟದಿಂದ ಮನಶ್ಶಾಂತಿ ದೊರೆಯಲಾರದು, ಮನಶ್ಶಾಂತಿಯಿಲ್ಲದೆ ಅಧಿಕಾರದ ಸದುಪಯೋಗ, ತನ್ಮೂಲಕ ರಾಷ್ಟ್ರಕಲ್ಯಾಣವಾಗದೆಂಬುದನ್ನು ಊಹಿಸಿ ತಿಳಿದುಕೊಳ್ಳಬಹುದು. ಹಾಗೆಯೇ ರಾಜಕೀಯದಲ್ಲಿ ಮಹಿಳೆಯರು ಮುಳುಗಿರಬೇಕೆಂಬ ವಾದವನ್ನು ಒಪ್ಪುವುದು ಅಸಾಧ್ಯವಾದರೂ, ಅದರಲ್ಲಿ ನಿರಾಸಕ್ತ ಧೋರಣೆಯನ್ನು ವಹಿಸುವುದು ಮಾತ್ರ ತರವಲ್ಲ. ಇಂದು ಮಹಿಳೆಯರು ರಾಜಕಾರಣದಲ್ಲಿ, ಸಾರ್ವಜನಿಕ ಕ್ಷೇತ್ರದಲ್ಲಿ ಅಜಾಗ್ರತರಾಗಿರುವುದು ಅಶಿಕ್ಷಣದ ಕಾರಣದಿಂದ ಮಾತ್ರ ಹೊರತು, ಅನಾಸ್ಥೆಯಿಂದಲ್ಲ. ಅವರಲ್ಲಿ ರಾಷ್ಟ್ರೀಯ ಶಿ

(ಅನೇ ಪುಟ ನೋಡಿರಿ)

ಅಮೇರಿಕದಲ್ಲಿ ಜನಪದ ಸಂಗೀತ

೧. ಅಮೇರಿಕೆಯಲ್ಲಿ ದನಗಾಹಿಗಳು, ಕೂಲಿದಾರಿ ಕರ್ಮಚಾರರು ಮೊದಲಾದ ಬೇರೆ ಬೇರೆ ಪಂಗಡಗಳ ಜನರು ತಮ್ಮದೇ ಸಂಗೀತವನ್ನು ರಚಿಸಿಕೊಂಡಿದ್ದಾರೆ. ನೀಗ್ರೋಗಳಲ್ಲಿಯೂ ಉತ್ಸಾಹಪೂರ್ಣ ಸಂಗೀತವಿದೆ; ಮಿಲಿಟರಿಯವರೂ ತಮಗನುಕೂಲವಾದ ಹಾಡುಗಳನ್ನು ಕಟ್ಟಿಕೊಂಡಿದ್ದಾರೆ. ೨. ಚೆಕೊಸ್ಲೊವಾಕಿಯಾದ ಅಂಟನ್ ಡ್ವೊರ್ಷಾಕ್ ಎಂಬವನು ನೀಗ್ರೋ ಸಂಗೀತದಲ್ಲಿ ಭಾಗವಹಿಸಲು ಪ್ರಯತ್ನಿಸಿದ್ದನು. ೩. ಈ ಸಂಗೀತಗಳು ಅಖಂಡ ಜಗತ್ತಿನಲ್ಲಿಯೇ ಪಸರಿಸಿ ಜನಪ್ರಿಯವಾಗುತ್ತಿವೆ.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

●

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಸುವರ್ಣೆಯ ಮಡಿಲಲ್ಲಿ......

ಜಲಕ್ರೀಡೆಯಾಡಲು ಸುವರ್ಣ ತೀರಕ್ಕೆ ತೆರಳಿದ ನವದಂಪತಿಗಳಲ್ಲಿ ಮದುವಣಿಗ ಭಾವನ ಬಲವಂತಕ್ಕೆಂಬಂತೆ ಕಟ್ಟುಬಿದ್ದು, ಅಂತ್ಯದಲ್ಲಿ ಕೊನೆಯುಸಿರನ್ನೆಳೆದನು; ಆನಂದದಿಂದ ಮಾರುದ್ದ ಹಿಗ್ಗಬೇಕಾಗಿದ್ದ ಯಮುನೆಯ ಮುಖ ಬೆಂಕುದ್ದಕ್ಕೆಳೆದು ಕುಗ್ಗಿ ಹೋಯಿತು.

ಶ್ರೀ "ಉಪ್ಲಾಡಿ"

ಆ ದಿನ, ತಂದೆ ತಾಯಿಗಳು ಪರಸ್ಪರ ಆಡಿಕೊಳ್ಳುತ್ತಿದ್ದ ಸಂಭಾಷಣೆಯನ್ನು ಕೇಳಿದ ದಿನ—ಯಮುನೆಗೊಂದು ಹೊಸ ಅನುಭವ! ಆ ದಿನದಿಂದ ಆಕೆಗೆ ತಾನೊಂದು ಹೊಸ ಯುಗದಲ್ಲಿ ಕಾಲಿರಿಸಿದಂತೆನಿಸುತಿತ್ತು.

'ಜಾತಕ ಎಲ್ಲಿಯಾದರೂ ಸೊರಡಿಸಿರುವಿರೇ?''

ಜಾತಕ! ತಾನು ಊಹಿಸಿಯೂ ಇರದ ಪ್ರಶ್ನೆಯನ್ನು ತಾಯಿ ತಂದೆಗೆ ಕೇಳುತ್ತಿರುವುದನ್ನು ಮಲಗಿದಲ್ಲಿಂದಲೇ ಕದ್ದು ಕೇಳಿದಳು, ಯಮುನೆ. ಕಿವಿ ಆ ಕಡೆಗೇ ಆಲೈಸುತಿತ್ತು.

"ಕೊರಡಿಸಿದ ಮಾತ್ರಕ್ಕೇ ಆಗಿಹೋಗುವುದೇ?"

ರಾಧಮ್ಮ ಕೊಂಚಕಾಲ ಸುಮ್ಮನಿದ್ದು ಹೇಳಿದಳು— "ಬ್ರಹ್ಮಾವರ ನರಸಿಂಹ ಶಾಸ್ತ್ರಿಗಳ ಮಗ ಊರಿಗೆ ಬಂದಿರಬೇಕು".

ಶ್ರೀನಿವಾಸರಾಯರು ಮತ್ತೆ ಮಾತಾಡಲಿಲ್ಲ. ಈ ಮೌನ ಯಮುನೆಯನ್ನು ಬಹಳ ಕಾಡಿಸಿತು. ನರಸಿಂಹ ಶಾಸ್ತ್ರಿಗಳಿಗೂ ಶ್ರೀನಿವಾಸರಾಯರಿಗೂ ದೂರದ ಸಂಬಂಧ—ಅತ್ತಿಕಾಯಿ ಗೋಳಿಕಾಯಿಯದು! ಯಮುನೆಯೂ ಮುರಲಿಯನ್ನು ಕಂಡಿದ್ದಳು. ಮುಂಚೆ ಅವರಿಬ್ಬರನ್ನೂ ಜೊತೆಮಾಡಿ ಚಿಕ್ಕಂದಿನಲ್ಲಿ ತಮಾಶೆಮಾಡುತಿದ್ದ ನೆನಪು ಈಗಲೂ ಆಕೆಗಿದೆ. ಮೊದಲಿನಿಂದಲೂ ಒಂದು ತರಹದ ಗೌರವ-ಆದರದ ಭಾವನೆ ಆತನ ಮೇಲಿತ್ತು ಆಕೆಗೆ. ಆದೀಗ ಬೆಳೆದು ಹೇಗಾಗಿತ್ತೆಂದರೆ, ಮುರಲೀಧರನೆಲ್ಲಿಯಾದರೂ ಮನೆಗೆಬಂದರೆ ಯಮುನೆ ಒಳಗಿನಿಂದಹೊರ ಬರುತ್ತಿರಲಿಲ್ಲ. ಮುರಲೀಧರ ಇದೀಗ ಬೆಂಗಳೂರಿನಲ್ಲಿ ಇಂಜನೀಯರಿಂಗ್ ಓದುತಿದ್ದವನು ಊರಿಗೆ ಬಂದಿದ್ದಾನೆ.

ಆತನ ಪ್ರಸ್ತಾಪ ಬರುತ್ತಲೇ ಮಾತು ನಿಲ್ಲಲು ಕಾರಣವಿಷ್ಟೆ— ಶ್ರೀನಿವಾಸರಾಯರಿಗೆ ಯಾರೋ ಹೇಳಿದ್ದಾರಂತೆ, 'ನರಸಿಂಹ ಶಾಸ್ತ್ರಿಗಳು ಮೂರು ಸಾವಿರ ಹಾರೈಸುತಿದ್ದಾರೆ' ಎಂದು. ಅದು ಬರಿಯ ಗಾಳಿ ವರ್ತಮಾನವೇ ಆಗಿದ್ದರೂ ಸುಳ್ಳು ಎನ್ನಲೂ ಸಾಧ್ಯವಿರಲಿಲ್ಲ.

"ಮುರಲಿ ಬಂದಿದ್ದಾನೆ. ಆದರೆ ನಮ್ಮ ಮಾಧುವಿನ ಪತ್ತೆಯಿಲ್ಲ"—ರಾಧಮ್ಮ ಮತ್ತೊಂದು ದನಿ ಹೊರಡಿಸಿದಳು.

"ಮಾಧು ಎರಡು ದಿನ ಬಿಟ್ಟು ಬರುತ್ತೇನೆಂದಿದ್ದಾನೆ" ಎಂದರು ಎರಡು ದಿನಗಳ ಹಿಂದೆ ತಮಗೆ ತಲುಪಿದ್ದ ಕಾಗದವನ್ನು ನೆನಸಿಕೊಳ್ಳುತ್ತಾ.

ಮಾಧವ, ಶ್ರೀನಿವಾಸರಾಯರ ಹಿರಿಯ ಮಗ— ಯಮುನೆಯ ಅಣ್ಣ—ಮುರಲಿಯು ಹೋಗುತಿದ್ದ ಕಾಲೇಜಿಗೇ ಈ ವರ್ಷ ಸೇರಿದ್ದ.

—ಇದೇ ರೀತಿ ಗಂಡ ಹೆಂಡಿರ ಸಂಭಾಷಣೆ ತಡೆ ತಡೆದು ಸಾಗುತಿತ್ತು. ಯಮುನೆ ಗಟ್ಟಿಯಾಗಿ ಉಸಿರನ್ನೂ ಬಿಡದೆ ಮೈಯೆಲ್ಲ ಕಿವಿಯಾಗಿ ಕೇಳುತಿದ್ದಳು. ಕೊನೆಯಲ್ಲಿ ರಾಧಮ್ಮ ಹೇಳಿದಳು-"ಬ್ರಹ್ಮಾವರದ ಸಂಬಂಧವೇ ಆಗಿದ್ದರೆ ಒಳ್ಳೆಯದಿತ್ತು"

ಸ್ವಲ್ಪ ಹೊತ್ತು ಬಿಟ್ಟು, "ಜಾತಕ ಕಳುಹಿಸಿದ್ದೇನೆ" ಎಂದರು ಶ್ರೀನಿವಾಸರಾಯರು. ಅವರ ಮನಸ್ಸಿನಲ್ಲಿಯೂ ಒಳ್ಳೆಯದಿತ್ತು. ಎಂಬ ಮಾತು ಅನುರಣಿಸುತಿತ್ತು. ಯಮುನೆಯ ಹೃದಯಾಂತರಾಳದಲ್ಲಿಯೂ ಅದೇ ಮಾತು ಪ್ರತಿಧ್ವನಿಸಲ್ಪಟ್ಟು ಹೊದಿಕೆಯೊಳಗೇ ಮುಗುಳುನಗುವೊಂದು ತೃಪ್ತಿಸೂಚಕವಾಗಿ ತೇಲಿಹೋಯಿತು. —

ಕೆಲವು ದಿನಗಳಲ್ಲಿ ಶ್ರೀನಿವಾಸರಾಯರಿಗೆ ತಿಳಿದುಬಂತು-ಅವರು ಕೇಳಿದ್ದ ಗಾಳಿವರ್ತಮಾನ ಸುಳ್ಳುಎಂದು. ಅದೂ ಒಂದು ಸ್ವಾರಸ್ಯ ಪ್ರಸಂಗ. ಅಲ್ಲಿ ನರಸಿಂಹ ಶಾಸ್ತ್ರಿಗಳ ಕಿವಿಗೂ ಯಾರೋ ತೂರಿಬಿಟ್ಟಿದ್ದಾರೆ—' ಶ್ರೀನಿವಾಸರಾಯರು ಒಂದು ಪೈ ಖರ್ಚು ಮಾಡಲೂ ತಯಾರಿಲ್ಲವಂತೆ. ಸಂಪೂರ್ಣ ಖರ್ಚು ವಹಿಸಿಕೊಂಡು ಹೆಣ್ಣನ್ನು ಕೊಂಡು ಹೋಗಬೇಕಂತೆ !"

ಈ ಎರಡು ಗಾಳಿವರ್ತಮಾನಗಳ ದೆಸೆಯಿಂದ ಎರಡು ಮನೆತನಗಳು ಪರಸ್ಪರ ವಿಚಾರಿಸಿಕೊಳ್ಳುವ ಗೋಜಿಗೆ ಹೋಗದೆ [ಹೋದರೂ ವ್ಯರ್ಥ ತಾನೆ!], ತಟಸ್ಥವಾಗಿ ಕುಳಿತಿದ್ದುವು. ಅದು ಪುನಃ ಹೊಂದಿಕೆಯಾದುದು ರಜೆಯಲ್ಲಿ ಮುರಲಿ ಮತ್ತು ಮಾಧವ ಬೆಂಗಳೂರಿನಿಂದ ಊರಿಗೆ ಬಂದನಂತರವೇ!

ಸಮೀಪದಲ್ಲೇ ದಿನವನ್ನು ನಿಶ್ಚಯಿಸಿದರು. ವಧೂವರರ ಜೊತೆ ಎಲ್ಲರ ದೃಷ್ಟಿಯಲ್ಲೂ ಸಮರ್ಪಕವೆನಿಸಿತ್ತು. ಮಾಧವ ಮುರಲಿಯನ್ನು ಕೀಟಲೆಗೊಳಿಸುತಿದ್ದ.—"ಮಿ. ಮುರಲೀಧರ್ ಜ್ಯೇಷ್ಠ ಬಹುಳ ಅಷ್ಟಮಿಯ ನಂತರ ನಿನ್ನ 'ಭಾವ' ಎಂತ ಕರೆಯುವುದಾಯಿತು. ಅಲ್ಲಿಯ ತನಕ ಏನೆಂದು ಕರೆಯಲಿ?"

"ಏನುಬೇಕಾದರೂ ಕರೆ. ಓಗೊಡುತ್ತೇನೆ"

"ಸರಿ! ಹಾಗೇ ಕರೆಯಲೇ? ಮಿ. ಏನುಬೇಕಾದರೂ,... ಓ ಮಿಸ್ಟರ್ ಏನುಬೇಕಾದರೂ...ಉತ್ತರವಿಲ್ಲವೇಕೆ?"

ಉತ್ತರವಾಗಿ ನಗುತ್ತಾ ಕೈಯಲ್ಲಿರುವ ಪುಸ್ತಕದ ಸುರುಳಿಯಿಂದ ಮಾಧೂವಿನ ಬೆನ್ನಿಗೆ ತಮಾಶೆಯಾಗಿ ಹೊಡೆಯ ಹೋಗುತಿದ್ದ. ಮಾಧೂ ತಪ್ಪಿಸಿಕೊಳ್ಳುತ್ತಾ, "ಭಾವನ್ನ ಮಾತನಾಡಿಸಿದ್ದಕ್ಕೆ ಬಹುಮಾನ ಸಿಕ್ಕಿತು—ತಲುಪಿತು" ಎನ್ನುತಿದ್ದ.

ಯಮುನೆಯನ್ನು ಕಂಡಾಗಲೂ ಆತನ ತಮಾಷೆ ಇದ್ದುದೇ. ಆಕೆಯನ್ನು ನೋಡಿದೊಡನೆಯೇ ಪ್ರಾರಂಭಿಸುತಿದ್ದ—

"ಮುರಲೀಧರನಾ ಕೊಳಲಿನ ಬೆರಳಿಗೆ
ಯಮುನಾ ನದಿ ನೀರೂ
ಉಕ್ಕಿ ಯುಕ್ಕಿ ರಸಭಾವದ ತೆರೆಯಲಿ
ಮೈಯೆಲ್ಲಾ ನವಿರು!"

ಅಲ್ಲಿ ಯಮುನೆಯ ಕೈಯಿಂದಲೂ ಪೆಟ್ಟು ತಪ್ಪಿಸಿಕೊಳ್ಳುತಿದ್ದ.

ಮದುವೆಯ ಸಿದ್ಧತೆ ಸಂಭ್ರಮದಿಂದಲೇ ಸಾಗುತಿತ್ತು. ಏನೋ—ಮದುವೆಗೆ ನಾಲ್ಕಾರು ದಿನಗಳಿರುವಾಗ, ಬೆಟ್ಟದಾಕೃತಿಯ ಮೋಡಗಳು ಸುತ್ತಣಿಂದಲೂ ಎದ್ದುಬಂದು ಸಿಡಿಲು ಗುಡುಗುಗಳ ಘೋರ ಅರ್ಭಟೆಯೊಂದಿಗೆ ಧಾರಾಕಾರವಾಗಿ ಮಳೆ ಸುರಿಸತೊಡಗಿದುವು. ಇಕ್ಕಡೆಯ ದಿಬ್ಬಣಿಗರೂ ನಾನಾಕಡೆಗೆ ಹರಕೆ-ಮುಡಿಪುಗಳನ್ನು ಕಟ್ಟಿದರು, ಅಂತೂ ಒಂದು ಹಗಲು, ಒಂದು ರಾತ್ರಿಯ ಅಖಂಡ ನೃತ್ಯವನ್ನೆಸಗಿ ಮಳೆರಾಯ ತೆರೆಯ ಹಿಂದೆ ಸರಿದ. ಮತ್ತೆ ಮುಂಚಿನಂತೆ ಬಿಸಿಲು ಪ್ರಾರಂಭವಾಯಿತು.

ಆ ದಿನ ಶ್ರೀನಿವಾಸ ರಾಯರ ತುಂಬಿದ ಮನೆಯಲ್ಲಿ ಗದ್ದಲವೇ ಗದ್ದಲ. ಗುಡ್ಡಬೆಟ್ಟಗಳ ವಿಶಾಲವಾದ ಹಸಿರು ಭೂಮಿಯ ಒಂದೆಡೆಯಲ್ಲವರ ಮನೆ. ಮನೆಯಿಂದ ಅರ್ಧ ಮೈಲಿ ದೂರದಲ್ಲೇ ಸು

(೧೧ನೇ ಪುಟ ನೋಡಿರಿ)

ರಾಮತೀರ್ಥ (ಮಾಸಿಕ ಪತ್ರ)

(ಹಿಂದಿ ಭಾಷೆಯಲ್ಲಿ)

ಸಂಪಾದಕರು: **ಯೋಗಿರಾಜ ಶ್ರೀ ಉಮೇಶಚಂದ್ರರು.**

ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೧೪.

ಮಹಿಳಾ ಮಂಡಳ

ಮನೆಯ ಶೃಂಗಾರದಲ್ಲಿ ಮಹಿಳೆಯ ಪಾತ್ರ

ವಿಶೇಷ ವೆಚ್ಚಮಾಡದೆ ಮಧ್ಯಮ ವರ್ಗದ ಕುಟುಂಬದವರೂ ತಮ್ಮ ಪುಟ್ಟ ಮನೆಯನ್ನು ಓರಣವಾಗಿ ಸಜ್ಜುಗೊಳಿಸಿ, ಅದನ್ನು ಆಕರ್ಷಕವೆನಿಸುವಂತೆ ಮಾಡಬಹುದು. ಈ ಗೃಹಶೃಂಗಾರ ಕಾರ್ಯದಲ್ಲಿ ಮಹಿಳೆಯರು ಆಸ್ಥೆ ವಹಿಸುವುದು ಅವಶ್ಯ.

ಚಿಕ್ಕದಾದರೂ ಚೊಕ್ಕವಾದ ಮನೆಯು ಎಂತಹರನ್ನೂ ತನ್ನತ್ತ ಆಕರ್ಷಿಸಬಲ್ಲದು. ಆದುದರಿಂದಲೇ ಎಲ್ಲರೂ ತಮ್ಮ ಮನೆಯನ್ನು ಸಾಧ್ಯವಾದಷ್ಟು ಸುಂದರವಾಗಿಡಲು ಅಪೇಕ್ಷಿಸುತ್ತಾರೆ. ಮನೆಯ ಶೃಂಗಾರ ಕಾರ್ಯದಲ್ಲಿ ಪುರುಷರಿಗಿಂತಲೂ ಸ್ತ್ರೀಯರಿಗೆ ಆಸಕ್ತಿ ಹೆಚ್ಚು. ಇದು ಸ್ವಾಭಾವಿಕವೂ ಹೌದು. ಮನೆಯ ಆಗು ಹೋಗುಗಳು ಗೃಹಿಣಿಗೆ ತಿಳಿದಿರುವಷ್ಟು ಪುರುಷನಿಗೆ ಅರಿವಾಗುವುದು ಸರ್ವತಃ ಅಸಾಧ್ಯ ಎಂತಲೇ ಎಲ್ಲ ಸ್ತ್ರೀಯರೂ ತಮ್ಮ ಮನೆಯನ್ನು ಸುಂದರ ಮೇಜು ಕುರ್ಚಿಗಳಿಂದ, ಉತ್ತಮೋತ್ತಮ ಪರದೆಗಳಿಂದ, ಅಲಂಕಾರ ಸಾಧನಗಳಿಂದ ಕೂಡಿಕೊಂಡಿರಬೇಕು; ತನ್ನ ಪರಿವಾರವೂ ಸಂಪನ್ನವೆಂದು ಹೆಸರಿಸಿಕೊಳ್ಳುವಂತಾಗಬೇಕು ಎಂದು ಬಯಸುತ್ತಾಳೆ. ಆದರೆ, ಇವೆಲ್ಲವನ್ನೂ ಸಾಧಿಸಿಕೊಳ್ಳುವುದು ಎಲ್ಲ ಸ್ತ್ರೀಯರಿಗೂ ಶಕ್ಯವೆನಿಸುವುದಿಲ್ಲ. ತಮ್ಮ ಮನೋಭಿಲಾಷೆಯನ್ನು ಕಾರ್ಯಗತಗೊಳಿಸುವಷ್ಟು ಆರ್ಥಿಕಾನುಕೂಲತೆ ಅವರಿಗಿರುವುದಿಲ್ಲ ಆದರೂ ಇದ್ದುದರಲ್ಲಿಯೇ ತೃಪ್ತಿಪಟ್ಟುಕೊಂಡು, ಅದರಲ್ಲಿಯೇ ತಂತಮ್ಮ ಗೃಹ ಸೌಂದರ್ಯವನ್ನು ಹೆಚ್ಚಿಸುವ ಪ್ರಯತ್ನ ಪಡುವುದು ಅಪೇಕ್ಷಣೀಯ.

ಒಂದು ಮಧ್ಯಮವರ್ಗದ ಕುಟುಂಬದ ಮನೆಯನ್ನು ತೆಗೆದುಕೊಳ್ಳಿರಿ. ಈ ಮನೆಯಲ್ಲಿ ಅಡಗೆಮನೆಯಲ್ಲದೆ ಕೇವಲ ಎರಡೇ ಕೋಣೆಗಳಿವೆ. ಇವುಗಳಲ್ಲಿ ಒಂದು 'ಬೈಠಕ್'ಖಾನೆಯಾಗಿ ಉಪಯೋಗಿಸಲ್ಪಡುತ್ತದೆ. ಈ ಕೋಣೆಯ ಗೋಡೆಗೆ ಯಾವ ಬಣ್ಣ ಬಳಿದಿದ್ದಾರೆಂದು ಮೊದಲು ನೋಡಿಕೊಂಡು, ಅದಕ್ಕನುಸಾರವಾಗಿ, ಮುಂದಿನ ಅಲಂಕಾರವನ್ನು ಮಾಡಬೇಕು. ಗೋಡೆಯ ಬಣ್ಣ ನಸು ನೀಲಿಯಾದರೆ, ನೀವು ಕಡು ನೀಲಿಯ ಪರದೆಯನ್ನು ಇಳಿಬಿಡಬಹುದು. ಪರದೆಗಳಿಗಾಗಿ ಹೊಸ ಬಟ್ಟೆಗಳನ್ನು ಕೊಂಡುಕೊಳ್ಳಬೇಕಾದ ಅಗತ್ಯವಿಲ್ಲ. ನಿಮ್ಮ ಬಹಳ ಹಳೆಯದಲ್ಲದ ಸೀರೆಯನ್ನೇ ಸರದಿಗೆ ಸರಿಯಾಗಿ ಹೊಲಿಸಿಕೊಂಡು ಕೆಲಸವನ್ನು ಪೂರಯಿಸಿಕೊಳ್ಳಬಹುದು.

ಬೈಠಕ್ ಖಾನೆಯಲ್ಲಿ ಕೆಲವೊಂದು ಆಸನಗಳ ಅವಶ್ಯಕತೆಯಿರುವುದು. ಶ್ರೀಮಂತರಾದರೆ, ಸೋಫಾವನ್ನು ತೆಗೆದುಕೊಂಡಾರು. ಮಧ್ಯಮ ವರ್ಗದವರಿಗೆ ಅಷ್ಟೊಂದು ವೈಭವ ಬೇಕಾಗಿಲ್ಲ. ಒಂದು ಪೆಟ್ಟಿಗೆಯ ಅಳತೆಗೆ ಸರಿಯಾದ ದಿಂಬನ್ನು ಹೊಲಿದಿಟ್ಟುಕೊಂಡರೆ, ಒಂದರಲ್ಲಿಯೇ ಸೋಫ ಮತ್ತು ಪೆಟ್ಟಿಗೆಗಳೆರಡರ ಉಪಯೋಗವನ್ನೂ ಪಡೆದುಕೊಳ್ಳಬಹುದು. ದಿಂಬಿನ ಮೇಲೆ ವರ್ಣ–ವಿವರ್ಣದ ಹರಿವಸ್ತ್ರವನ್ನೂ ಹರಡಬಹುದು. ಈ ರೀತಿ ತಯಾರಿಸಿದ ಕೃತಕ ಸೋಫಾವನ್ನು ಗೋಡೆಯ ಪಕ್ಕದಲ್ಲೇ ಇಡುವುದರಿಂದ ಒರಗುವುದಕ್ಕೂ ಅನುಕೂಲ. ದಿಂಬಿಗಾದರೂ ವಿಶೇಷ ಪ್ರಯಾಸಪಡುವುದು ಅನಗತ್ಯ. ಹಳೆಯ ಹತ್ತಿಯನ್ನೇ ಹಿಂಜಿ ಶುದ್ಧಗೊಳಿಸಿ, ಹೊಸ ಆವರಣದಲ್ಲಿ ತುಂಬಿಸಿದರೆ ಸಾಕಾಗುವುದು. ಇದಕ್ಕೆ ವಿಶೇಷ ವೆಚ್ಚ ಬರುವುದಿಲ್ಲ.

'ಕೃತಕ ಸೋಫಾ'ದ ಮುಂಭಾಗದಲ್ಲೇ ಒಂದೆರಡು ಚಿಕ್ಕ ಸ್ಟೂಲುಗಳನ್ನು ಇಟ್ಟುಕೊಳ್ಳಿರಿ. ಇದರ ಮೇಲೆ ಹೂದಾನಿಯನ್ನೂ ಮಡಗಿಕೊಳ್ಳಬಹುದು. ನೆಲವನ್ನು ಜಮಖಾನೆಯಿಂದ ಹಾಸುವ ಬದಲು ಚಾಪೆಯಿಂದ ಹೊದಿಸಬಹುದು. ಇದರ ಮೇಲೆ ಸಂದರ್ಭ ಬಂದಾಗ ಕೂರುವುದೂ ಸಾಧ್ಯ. ಬೈಠಕ್‌ಖಾನೆಯಲ್ಲಿ ಒಂದೆರಡು ಚಿತ್ರಗಳಿದ್ದರೆ, ಅದರ ಸೌಂದರ್ಯಕ್ಕೆ ಕಲಶವಿಟ್ಟಂತಾಗುವುದು. ಪ್ರಾಕೃತಿಕ ದೃಶ್ಯಗಳ ಚಿತ್ರವಾಗಿದ್ದರೆ, ಒಳ್ಳೆಯದು. ನೋಡಲು ಸುಂದರವಾದ ತಾರೀಕು ಪಟ್ಟಿಯನ್ನೂ ಇಲ್ಲಿ ನೇತಾಡಿಸಬಹುದು. ಬೈಠಕ್‌ನಲ್ಲಿ ಆವಶ್ಯಕ ಪದಾರ್ಥಗಳಲ್ಲದೆ ಹೆಚ್ಚಿನ ವಸ್ತುಗಳಾವುವೂ ಇರಬಾರದು.

ಅಮೆರಿಕೆಯು ತಯಾರಿಸಿದ ಆಂಟಿ ಸಬ್.ಮೆರಿನ್ ಟಾರ್ಪೆಡೊ.

ನಿಮ್ಮೊಡನೆ ಒಂದು ಕನ್ನಡಿ ಕಪಾಟು ಇದ್ದರೆ. ಪುಸ್ತಕ ಪತ್ರಿಕೆಗಳನ್ನು ಅದರಲ್ಲಿ ಮಡಗಿಕೊಳ್ಳಬಹುದು. ನಿಮ್ಮ ನಿಮ್ಮ ಶಕ್ತ್ಯನುಸಾರ ಈ ಕೋಣೆಯನ್ನು ಅದೆಷ್ಟೂ ಶೃಂಗರಿಸಬಹುದು. ಆದರೆ, ನಿಮ್ಮ ಸಂಸಾರದ ಆರ್ಥಿಕ ಸ್ಥಿತಿಯನ್ನದು ಮೀರುವಂತಾಗ ಬಾರದೆಂಬುದನ್ನು ಅವಶ್ಯ ನೆನಪಿನಲ್ಲಿಡಬೇಕು.

ಇನ್ನು ಇನ್ನೊಂದು ಕೋಣೆಯ ವಿಚಾರ. ಕೋಣೆಯ ಇಕ್ಕಡೆಯ ಗೋಡೆಗಳಲ್ಲಿಯೂ ಹಲಗೆಯನ್ನು ಹಾಕಿಸಿಕೊಳ್ಳಿರಿ. ಇದರಲ್ಲಿ ಒಂದರ ಮೇಲೆ ಶೃಂಗಾರ ಪ್ರಸಾದನಗಳನ್ನು ಇಟ್ಟುಕೊಳ್ಳಬಹುದು. ಬಟ್ಟೆಬರೆ ತುಂಬಿದ ಪೇಟಿಗಳನ್ನು ಮಡಗಬಹುದು. ಇನ್ನೊಂದರಲ್ಲಿ ನಿಮ್ಮ ಖಾಸು ವಸ್ತುಗಳನ್ನು ಪೇರಬಹುದು. ಗೃಹೋಪಯೋಗಿಯಾಗುವ ವಸ್ತುಗಳನ್ನೂ ಈ ಕೋಣೆಯಲ್ಲಿ ಸಜ್ಜುಗೊಳಿಸಬಹುದು.

ಅಡುಗೆ ಮನೆಯ ಸೌಂದರ್ಯವನ್ನೂ ಕಾಪಾಡಿಕೊಳ್ಳುವುದು ಅಗತ್ಯ. ಅಡುಗೆಯ ಪಾತ್ರಗಳನ್ನು ಓರಣವಾಗಿಡುವುದರಿಂದಲೇ ಇದಕ್ಕೊಂದು ಕಳೆಯು ಬರುವುದು. ಮನೆಯ ಮುಂದೆ ಕಿರಿಯದೊಂದು ತೋಟವನ್ನು ಮಾಡಿ, ಅದರಲ್ಲಿ ನಾಲ್ಕು ಹೂ ಗಿಡಗಳನ್ನೋ ಬಣ್ಣದ ಸಸಿಗಳನ್ನೋ ನಾಟುವುದರಿಂದ ಮನೆಯ ಸುಂದರತೆ ದ್ವಿಗುಣಿತವಾಗುವುದು. ಮಕ್ಕಳ ಮರಿಗಳಿದ್ದರೆ, ಅವುಗಳು ಹಾಕಬಹುದಾದ ಕಸವನ್ನು ಆಗಾಗ ಗುಡಿಸಿ ತೆಗೆಯುತ್ತಿಂದರೆ, ಮನೆಯ ಶೋಭೆಯು ಹೆಚ್ಚುವುದು. ಇದೆಲ್ಲವನ್ನೂ ಮಾಡಲು, ಒದಗಿಸಿಕೊಳ್ಳಲು ಹೆಚ್ಚು ವೆಚ್ಚವಾಗುವುದಿಲ್ಲ; ಅಥವಾ ಅಧಿಕ ಸಮಯವೂ ತಗಲುವುದಿಲ್ಲ; ಪ್ರಯಾಸ ಪಡಬೇಕಾದ ಅಗತ್ಯವೂ ಇಲ್ಲ. ಮುಖ್ಯ ಮನಸ್ಸಿರಬೇಕು. ಮನಸ್ಸಿದ್ದರೆ, ಮಾರ್ಗವಿದೆ. ಸ್ತ್ರೀಯು ತುಸು ಆಸ್ಥೆವಹಿಸಿದರೆ, ಆಕೆ ತನ್ನ ಮನೆಯನ್ನು ಶೃಂಗಾರದ ನೆಲೆಯನ್ನಾಗಿ ಮಾಡಬಲ್ಲಳು; ಅನಾಸ್ಥೆಯಿಂದಿದ್ದರೆ, ಅದನ್ನೇ ಸ್ಮಶಾನ ಸದೃಶವನ್ನಾಗಿಸಿಯೂ ಬಿಡಬಲ್ಲಳು. 'ಒಲಿದರೆ ನಾರಿ; ಮುನಿದರೆ ಮಾರಿ' ಎಂದ ಹಿರಿಯರ ಮಾತು ಅನುಭವದಿಂದ ಹೊರಬಂದುದು.

"ಹೆಣ್ಣಿನಿಂದಲೆ ಇಹವು ಹೆಣ್ಣಿನಿಂದಲೆ ಪರವು; ಹೆಣ್ಣಿನಿಂದಲೆ ಸಕಲ ಸಂಪದವು" ಎಂದು ಉದ್ಘೋಷಿಸಿದ ಸರ್ವಜ್ಞ ಸತ್ಯವನ್ನೇ ಹಾಡಿದ್ದಾನೆ. ಹೆಂಗಸರು ಆಸ್ಥೆವಹಿಸುವುದರಿಂದ ಒಂದು ಬಡ ಸಂಸಾರವಾದರೂ ತಮ್ಮ ಮನೆಯನ್ನು ಆಕರ್ಷಕವಾಗಿ ಇರಿಸಿಕೊಳ್ಳುವುದು ಸಾಧ್ಯ.

ದ. ಕ. ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

S. C. 38/1960

A. ಶ್ರೀನಿವಾಸ ಭಟ್ಟ —ವಾದಿ.

ಮತ್ತು

K. R. ಬಾಲಕೃಷ್ಣ ರಾವ್, ರಾಮಕೃಷ್ಣ ಮಂಜಿತ್ತಾಯರ ಮಗ, ಊಡ್‌ಲೆಂಡ್ಸ್ ಹೊಟೆಲ್ ಬೆಂಗಳೂರು —ಪ್ರತಿವಾದಿ.

—ಇವರಿಗೆ.

ನೋಟೀಸು

ಮೇಲ್ಕಾಣ್ಸಿದ ವಾದಿಯು ರೂಪಾಯಿ 846—4—3ರ ವಸೂಲಿ ಬಗ್ಗೆ ಮೇಲಿನ ವಾಜ್ಯವನ್ನು ದಾಖಲ್ಲುಮಾಡಿರುತ್ತಾನೆ. ಸದ್ರಿ ಸಂಬ್ರವು ತನಿಖೆಗೆ ತಾ. 4–10–1960ಕ್ಕೆ ಇಟ್ಟದೆ. ಮೇಲ್ಕಾಣ್ಸಿದ ಪ್ರತಿವಾದಿಗೆ ಏನಾದರೂ ಆಕ್ಷೇಪಣೆ ಇದ್ರೆ ಸದ್ರಿ ತಾರೀಕಿನಲ್ಲಿ ಹಾಜರಾಗಿ ತಿಳಿಸಿಕೊಳ್ಳತಕ್ಕದ್ದು.

K. Venkat Rao,
Advocate for Plaintiff.

ಮಂಗಳೂರು 1—9—1960

ಬೇಂಕುಗಳ ಯೋಗ್ಯ ಮಾರ್ಗದರ್ಶನದಿಂದ
ನೀವು ಭಾಗ್ಯವಂತರಾಗಿ ಬಾಳಬಹುದು.

ಕೊರ್ಪೊರೇಶನ್ ಬೇಂಕು

ನೀವು ಭಾಗ್ಯವಂತರಾಗಿ ಬಾಳುವಂತೆ ಯೋಗ್ಯ ಮಾರ್ಗದರ್ಶನ ನೀಡಲು ನಿಮ್ಮ ಎಡಬಲಗಳಲ್ಲಿ, ಸುತ್ತುಮುತ್ತಲಲ್ಲಿ, ಸುವ್ಯವಸ್ಥಿತ ಹಾಗೂ ಸೌಲಭ್ಯಪೂರ್ಣ ಶಾಖೆಗಳನ್ನು ತೆರೆದಿಟ್ಟಿದೆ.

ನಿಮ್ಮ ನೆರೆಯಲ್ಲೇ ಇರುವ ಇದರ ಶಾಖೆಯನ್ನು ನಾಳೆ ನೋಡದೆನ್ನದೆ ಇಂದೇ ಸಂದರ್ಶಿಸಿರಿ!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)

ಕಾಮ ವಿಜ್ಞಾನದ ಮಾಹಿತಿಗಾಗಿ
ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ
ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ
ಅಪೂರ್ವ ಸಂಗ್ರಹ.

ಪ್ರತಿ ಸಂಪುಟದ ಬೆಲೆ ರೂ. 4=50
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ವಿಚಾರವರ್ಷ

ಗಂಡು ಹೆಣ್ಣಿನ ಆಕರ್ಷಣೆ - ಪ್ರಣಯ

ಸೃಷ್ಟಿಯಲ್ಲಿರುವ ದೈವದಾಟಗಳಲ್ಲಿ ಪ್ರಣಯವೂ ಒಂದು. ಇದರ ಸಶಾಸ್ತ್ರೀಯ ಅಭ್ಯಾಸದಿಂದ ನವೀನ ರಾಷ್ಟ್ರದ ಬುನಾದಿ ರಚಿಸಬಹುದು. ಕುಚೇಷ್ಟೆಯಿಂದ ನೋಡಿ ನಗುವಷ್ಟು ಕುತ್ಸಿತವಾದುದು ಪ್ರಣಯವಲ್ಲವೆಂಬುದನ್ನು ಆವಶ್ಯ ಗಮನಿಸಬೇಕು.

ಶ್ರೀ ಮೋಹನ ಮುತಾಲಿಕ, ಬಿ. ಎ.

ಗಂಡು ಹೆಣ್ಣುಗಳಲ್ಲಿ ಪ್ರಣಯಪೂರ್ವಿಯಾಗಿ ಕೆಲವೊಂದು ವಿಚಿತ್ರವಾದರೂ ಸತ್ಯವೆನಿಸುವಂತಹ ಘಟನೆಗಳು ಸಂಭವಿಸುತ್ತವೆ. ಇವುಗಳನ್ನು ಸಾಮಾನ್ಯವಾಗಿ ಯಾರೂ ವಿಶೇಷ ಗಮನಗಳೊಂದಿಗೆ ಕಾಣದಿದ್ದರೂ ಮಾನಸಶಾಸ್ತ್ರ ಮತ್ತು ಮನೋ ವಿಜ್ಞಾನ ಶಾಸ್ತ್ರಗಳಲ್ಲಿ ಇದಕ್ಕೆ ಹೆಚ್ಚಿನ ಮಹತ್ವ ಪ್ರಾಪ್ತವಾಗಿದೆ.

ಗಂಡು-ಹೆಣ್ಣುಗಳ ಪರಿಚಯ ಮುಖಶಃ ಒಬ್ಬರಿಗೊಬ್ಬರು ಸಂದರ್ಶಿಸಿದಾಗಲೇ ಆಗಬೇಕೆಂದೇನೂ ಇಲ್ಲ. ಅಥವಾ ಅದಕ್ಕೆ ಯಾವ ಸಂದರ್ಭದ ಅವಶ್ಯಕತೆಯೂ ಇಲ್ಲ; ಅದಕ್ಕೆ ಎಳ್ಳಷ್ಟೂ ಹಣವನ್ನು ಖರ್ಚು ಮಾಡಬೇಕಿಲ್ಲ—ಪ್ರಯತ್ನ ಪಡಬೇಕಾದುದೂ ಇಲ್ಲ. ಆದರೆ ಎಲ್ಲ ವಿಷಯಗಳೂ ನಿಮಿತ್ತವಾಗಿ ಮಾತ್ರ ಕಾಣಿಸಿಕೊಳ್ಳುತ್ತವೆನ್ನಬೇಕು.

ನಾವು ತರುಣ ತರುಣಿಯರಲ್ಲಿ ಪ್ರೇಮವುದಿಸಿ ಮದುವೆಯಾಯಿತು ಅಥವಾ ಅದರಲ್ಲಿ ಅವರಿಗೆ ಅಡ್ಡಿ ಬಂದುದರಿಂದ ಆತ್ಮಹತ್ಯೆ ಮಾಡಿಕೊಂಡರು, ಎಂಬ ಇತ್ಯಾದಿ ಅನೇಕ ವಿಧವಾದ ಸುದ್ದಿ—ವಿಷಯ-ಸಂಗತಿಗಳನ್ನು ಕೇಳುತ್ತಿದ್ದೇವೆ—ಅರಿಯುತ್ತಿದ್ದೇವೆ—ಕಾಣುತ್ತಿದ್ದೇವೆ ಇಷ್ಟೆಲ್ಲವನ್ನೂ ನೋಡಬೇಕಾದರೆ ಇದರಲ್ಲಿ ಅಂತಹ ಮತ್ತು ಅಷ್ಟು ಮಹತ್ವವಾಗುವಂತಹ ವಸ್ತುವಾದರೂ ಏನು?

ಅನೇಕರು ಈ ಬಗ್ಗೆ ಪಡುತ್ತಿರುವ ಅಭಿಪ್ರಾಯಗಳನ್ನು ಗಮನಿಸಿದರೆ ಇದೊಂದು ಮೂಢ ನಂಬಿಕೆಯ ವಿಶೇಷ ಆತ್ಮವಿಶ್ವಾಸದ ಪ್ರತೀಕವೆಂದು ಹೇಳುತ್ತಾರೆ. ಇನ್ನೂ ಹಲವರು ಇದು ಸುಖ-ಸಂತೋಷ ಪ್ರದಾತವೆಂದು ಉಸುರುತ್ತಾರೆ, ಮತ್ತೂ ಕೆಲವರು ಜೀವನದಲ್ಲಿ ಗಂಡು-ಹೆಣ್ಣು ಬಿಟ್ಟು ಇನ್ನಾವುದೂ ಅನುಭವಿಸತಕ್ಕ ವಿಷಯವೇ ಇಲ್ಲವೆಂದು ಹೇಳುತ್ತಾರೆ. ಹೀಗೆ ಎಷ್ಟೋ ಬಗೆಯಾಗಿ ಪ್ರಶ್ನೆಗಳು ಎದುರುಬರುತ್ತವೆ—ನಿಲ್ಲುತ್ತವೆ—ಚರ್ಚೆಗೆ ಆಸ್ಪದ ಮಾಡಿಕೊಡುತ್ತವೆ

ಏನೇ ಇರಲಿ, ಪ್ರೇಮಿಸುವುದೆಂದರೆ ಒಟ್ಟಾರೆ ಅರ್ಥವಿಲ್ಲದ ಯಾವುದೋ ಒಂದು ಭಾವನಾತ್ಮಕ ಪ್ರೇರಿತ ಶಕ್ತಿಯಿಂದ ಮಾತ್ರವೆಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ಶಕ್ತಿಯ ಕೇಂದ್ರಸ್ಥಾನ ಇದೇ ಎಂದು ಹೇಳುವುದು ದುಸ್ತರವಾದ ಕೆಲಸ, ಮನುಷ್ಯನ ಕಾರ್ಯಗಳನ್ನು ನೆರವೇರಿಸಲು ಇಂದ್ರಿಯಗಳು ಸಹಕರಿಸುವವಾದರೂ, ಆ ಇಂದ್ರಿಯಗಳಿಗೆ ಚಾಲನೆ ಕೊಡಲು ಯಾವ ಶಕ್ತಿ ಎಲ್ಲಿಂದ ಬರುತ್ತದೆಂಬುದನ್ನು ಊಹಿಸುವುದು ಮಾತ್ರ ಅಶಕ್ಯವಾದುದಾಗಿದೆ. ಆದರೂ ಶಕ್ತಿಯೆಂಬುದು ದೈಹಿಕ ಜೀವನದಲ್ಲಿ ಪರಿಣಾಮ ಮಾಡುವುದೆಂಬುದನ್ನು ಮಾತ್ರ ಮರೆಯಲಾಗದು.

ಈ ಪ್ರೇಮಪೂರಿತ ಪ್ರಣಯ ಸ್ವರೂಪೀ ಶಕ್ತಿಯು ಪರಸ್ಪರ ವಿರೋಧಿ ಜಾತಿಗಳಲ್ಲಿ ಮೂಡುವುದು ಸಹಜ ಸ್ವಭಾವವಾಗಿದ್ದರೂ ಅದಕ್ಕೆ ಒಂದು ನೀತಿಯಾಗಲೀ ನಿಯಮವಾಗಲೀ ಇದ್ದುದು ಕಂಡು ಬರುವುದಿಲ್ಲ. ಆದರೆ ಪರಸ್ಪರ ವಿರೋಧಿ ಜಾತಿಗಳು (ಲಿಂಗ ಭೇದಗಳು) ಆಕರ್ಷಿತರಾಗಬಹುದು. ಮನುಷ್ಯ ಪ್ರಾಣಿಗಳಲ್ಲಿ ಇದಕ್ಕೆ ವಿಶೇಷ ಪ್ರಾಮುಖ್ಯತೆ ಮತ್ತು ಗೌರವ ಕೊಡಲಾಗುತ್ತದೆ. ಯಾರೂ ಯಾರದೇ ಸೌಂದರ್ಯವನ್ನಾಗಲೀ ಗುಣಗಳನ್ನಾಗಲೀ, ಸ್ವಭಾವವನ್ನಾಗಲೀ ಅರಿಯುವುದು ಅಸ್ವಾಭಾವಿಕವಾದುದು. ಏಕ ಜಾತೀಯ ಪ್ರಾಣಿಗಳು ವಿಶೇಷವಾಗಿ ಕಲೆತು, ಬೇಕಾದ ಹಾಗೆ ಚೇಷ್ಟೆ, ಕುಚೇಷ್ಟೆಗಳನ್ನು ಮಾಡಬಹುದಾದರೂ ವಿರೋಧ ಜಾತಿಗಳ ಆಕರ್ಷಣೆ ಮತ್ತು ಮೂಢ ವಿಶ್ವಾಸಗಳು ಮಾತ್ರ ಎಂದಿಗೂ ಮೂಡಿಬರಲಾರವು. ಯಾರಾದರೊಬ್ಬರ ಬಗ್ಗೆ ಏಕಜಾತೀಯ ಜನರ ಗುಣದೋಷಗಳ ಬಗ್ಗೆ ತಿಳಿಸಬಹುದಾದರೂ ಕಲ್ಪಿಸಬಹುದಾದ ವಿರೋಧಜಾತೀಯ ಸಂಬಂಧದ ಬಗ್ಗೆ ತಮ್ಮ ಜಾತೀಯ ಜನರಲ್ಲಿ ದೋಷಗಳೇ ಹೆಚ್ಚಾಗಿ ಹುಟ್ಟಿಸಬಹುದು. ಯೋಗ್ಯತೆಯ ವಿಷಯವನ್ನೂ ಚರ್ಚಿಸಬಹುದು. ಆದರೆ ಪರಸ್ಪರ ವಿರೋಧಿ ಜಾತಿಗಳಲ್ಲಿ ಮಾತ್ರ ಜನರ ವಿಷಯಗಳ ಚರ್ಚೆಗಳ ದನಿಮಾತ್ರ ಕೇಳುವುದೇ ಹೊರತು, ಆಕರ್ಷಣೆಗೆ ಅಲ್ಲಿ ಎಂದಿಗೂ ಬಣ ಎಂಬುವದಿಲ್ಲ.

ಸರಿ; ಆದರೆ ಗಂಡು—ಹೆಣ್ಣುಗಳಲ್ಲಿ ಒಬ್ಬರೊಬ್ಬರಿಗೆ ಪ್ರೇಮವೆಂಬುದಾಗಲೀ, ವೈಯಕ್ತಿಕ ವಿಷಯದಲ್ಲಿ ಆಸಕ್ತಿಯೆಂಬುದಾಗಲೀ ಹುಟ್ಟುವುದು ಹೇಗೆ? ಅದನ್ನು ತಿಳಿದುಕೊಳ್ಳುವುದು ಸಾಧ್ಯವೇ? ಹೀಗಿದ್ದರೂ ವಿರೋಧ ಜಾತಿಗಳ ಆಕರ್ಷಣೆಯ ಪರಿಣಾಮವೇನು? ಎಂಬ ಪ್ರಶ್ನೆಗಳಂತೂ ಸಹಜ ಸ್ವಾಭಾವಿಕವಾಗಿ ಕಂತಾನೆಯೇ ಒಂದರಹಿಂದೊಂದಾಗಿ ಮೂಡಿಬರುತ್ತವೆ.

ಸಹಕಾರಿ ಸಮ್ಮೇಳನದಲ್ಲಿ ಸೇರಿದ್ದ ರೈತರು ಉತ್ತಮೋತ್ಪಾದಿಸಿದ ಬೀಜಗಳನ್ನು ಪರಿಶೀಲಿಸುವುದರಲ್ಲಿ ಮಗ್ನರಾಗಿದ್ದಾರೆ.

ಸಾಧಾರಣತಃ ಪ್ರತಿಯೊಂದು ವ್ಯಕ್ತಿಗೂ ಒಂದೊಂದು ವಿಷಯದಲ್ಲಿ ಆಸಕ್ತಿ ಇದ್ದೇ ಇರುತ್ತದೆ. ಈ ವಿಷಯವೇ ವಿಶೇಷವಾದ ವೈಯಕ್ತಿಕ ವಿಷಯದಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತದೆ. ಕೆಲವೊಂದು ಸಲ ಗಂಡು-ಹೆಣ್ಣುಗಳ ದರ್ಶನವಿಲ್ಲದೆ ಮದುವೆಯಾಗುತ್ತಿರುವುದನ್ನು ನಾವು ಕಾಣುತ್ತೇವೆ. ಹಿಂದಿನ ಕಾಲದಲ್ಲಂತೂ ಈ ರೂಢಿ ಸರ್ವಸಾಮಾನ್ಯವಾಗಿತ್ತು. ಆದರೆ ಕಲಿತವರೆಂದು ಹೇಳುತ್ತಿರುವ ಗಂಡು-ಹೆಣ್ಣುಗಳಲ್ಲೂ ಈ ತರಹದ ದರ್ಶನವಿಲ್ಲದೆ ಸಂಬಂಧಗಳು ಬೆಳೆಯುತ್ತಿರುವುದನ್ನು ನಾವು ಈಗಲೂ ಕಾಣಬಹುದಾಗಿದೆ. ಅಲ್ಲದೆ ಇಂತಹ ಕುಟುಂಬಗಳು ಸುಖಕರವಾಗಿ ಸಾಗುವುದನ್ನು ನಿರೀಕ್ಷಿಸಬಹುದಾಗಿದೆ. ಇದಕ್ಕೆ ಅನೇಕ ಕಾರಣಗಳನ್ನು ಕೊಡಲಾಗುತ್ತಿದ್ದರೂ ಮುಖ್ಯವಾಗಿ ಮೂರು ಕಾರಣಗಳನ್ನು ನಿರೀಕ್ಷಿಸಬಹುದು. ಮೊದಲನೆಯದಾಗಿ ಪ್ರತಿ ಜಾತಿ ಆಕರ್ಷಣೆಗೆ ರೂಪ, ಜಾತಿ (ಧಾರ್ಮಿಕ) ಕುಲ, ಗೋತ್ರ ಮೊದಲಾದುವುಗಳ ಸಂಬಂಧವಿರದಿರುವುದು, ಎರಡನೆಯದಾಗಿ ಭಾವನಾತ್ಮಕ ಒಳ್ಳೆ ಅಭಿಪ್ರಾಯವನ್ನು ತಿಳಿದುಕೊಂಡಿರುವುದು; ಮೂರನೆಯದಾಗಿ ಪ್ರತಿಜಾತಿಯ ಮೂಲ, ಪೂರ್ವ ಮತ್ತು ವರ್ತಮಾನ ಕಾಲದ ಸಂಗತಿಗಳನ್ನು ಅರಿತುಕೊಳ್ಳುವುದು. ಹಿರಿಯರು ತಮ್ಮ ಮಕ್ಕಳಿಗೆ ಸಂದರ್ಶನವೀಯದ್ದು ಪರೀಕ್ಷೆಯನೆಸ ಮಾಡಿ ಪ್ರಶ್ನಿಸುವುದು ನಾವು ಮಾತ್ರಕ್ಕೆ ಸರಿ ಎಂದೆನ್ನಬೇಕಾಗುತ್ತದೆ. ಏಕೆಂದರೆ ಈ ಪ್ರಶ್ನೆಯಾದರೂ ಇದೀಗ ಮೇಲೆ ವಿವರಿಸಿದ ವಿವರಗಳನ್ನೇ ವಿಶೇಷವಾಗಿ ಹೋಲುತ್ತದೆನ್ನಬೇಕು.

ಇನ್ನೊಂದು ಬಗೆಯ ವಿಶೇಷ ವೈಯಕ್ತಿಯ ವಿಷಯದಲ್ಲಿ ಆಸಕ್ತಿ ಬೆಳೆಯುವುದೆಂದರೆ ಪ್ರತಿ ಜಾತಿಗಳ ಪರಿಚಯವಿದುವುದಾದರೂ, ಒಬ್ಬರನ್ನೊಬ್ಬರೂ ಯಾವುದಾದರೂ ಕಾರಣದಿಂದ ನೋಡಬಹುದಾದರೂ, ಮಾತನಾಡದೆ ಇರುವುದು ಅಥವಾ ಮಿತವ್ಯಯಿಯಾಗಿರುವುದು. ಈ ವಿಷಯದ ಬಗ್ಗೆ ಅನೇಕ ಚರ್ಚೆಗಳು ಶಾಸ್ತ್ರಜ್ಞರಲ್ಲಿ ನಡೆದಿರುವವಾದರೂ ಈ ವಿಷಯದಲ್ಲಿ ಅರಿತುಕೊಳ್ಳಬೇಕಾದುದು ಬಹಳಷ್ಟಿದೆ. ಪ್ರತಿಜಾತಿ ಆಕರ್ಷಣೆಯೆಂಬುದು ಸಾಮಾನ್ಯವಾದ ವಿಷಯ. ಆದರೆ ಮಾತನಾಡುವ ಪ್ರಸಂಗ ಕಡಿಮೆ. ಮಾತನಾಡುವ ಕುತೂಹಲವಿದ್ದರೂ ಒಂದು ತರಹದ ಭಯ. ಭೆಟ್ಟಿಯಾಗುವುದಾದರೂ ಹೇಗೆ? ಎಂಬುದೂ ಒಂದು ಚಿಂತೆ. ಏಕೆಂದರೆ ಪ್ರತಿಜಾತಿಗಳು ತಪ್ಪುತಿಳಿದುಕೊಳ್ಳುವುದಕ್ಕೆ ವಿಶೇಷವಾದ ಆಸ್ಪದ ಇರುವುದೆಂಬ ಭಾವನೆ ಪ್ರತಿಯೊಬ್ಬರಲ್ಲೂ ಸಾಮಾನ್ಯ ಇದ್ದೇ ಇರುತ್ತದೆ. ಹೀಗಾಗಿ ಭಾವನಾತ್ಮಕ ವಿಚಾರಗಳಿಗೆ ಮುಸುಕು ಹಾಕಿ ಕಾಣದಂತೆ ಮಾಡಲು ಈ ಜನ ಪ್ರಯತ್ನಿಸುತ್ತಾರೆ. ಗುಪಿತತೆ ಇವರಲ್ಲಿ ವಿಶೇಷವಾಗಿರುವುದರಿಂದ ಇಂತಹ ಜನರ ಮದುವೆಗಳ ಬಗ್ಗೆಯಾಗಲೀ ಸಂಬಂಧಗಳ ಬಗ್ಗೆಯಾಗಲೀ ಏನನ್ನೂ ಹೇಳುವುದು ಸಾಧ್ಯವಾಗಲಾರದು. ಆದರೆ ಈ ಭಾವನಾವೇಶದ ಗುಪಿತ ಪ್ರತಿಜಾತಿಗಳು ತಮ್ಮ ಇಚ್ಛಾನುಸಾರ ಭಾವಿಸಿದವರೊಂದಿಗೆ ಸಂಬಂಧ ಬೆಳೆಸಿದ್ದುದೇ ಆದರೆ ಇವರ ಜೀವನ ಎಲ್ಲರಿಗಿಂತಲೂ ಹೆಚ್ಚು ಸುಖಮಯವಾಗಿ ಮತ್ತು ಸರಾಗವಾಗಿ ಸಾಗುವುದೆಂದು ಅನುಭವದಿಂದ ಹೇಳಲಾಗುತ್ತಿದೆ.

ಅದೇ ದರ್ಶನವಿಲ್ಲದೆ ಆಗುತ್ತಿರುವ ಸಂಬಂಧಿತ ಪ್ರಣಯಿಗಳ ಜೀವನ ನಡೆಯಬಹುದಾದರೂ ಅಲ್ಲಿ ಸುಖಮಯ ಮತ್ತು ಸಂಗತೆಯ ಬಗ್ಗೆ ಯಾವುದೇ ಸ್ಪಷ್ಟ

(೧೨ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಚೇರಿ : ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.

ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕಮ್ಯಾದ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಬಡ್ಡಿ ದರಗಳು.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ಸದ್ಯದಲ್ಲೆ ತೆರೆಯಲ್ಪಡುವ ಶಾಖೆಗಳು:—

ಭದ್ರಾವತಿ — ತುಮಕೂರು.

ಸಾಹಿತ್ಯ ಸಮಾಲೋಚನೆ

ಕಲೆಗಳ ಮಹೋದ್ದೇಶ

ಉತ್ತಮ ಕಲೆ ಜನತೆಯನ್ನು ಬೇರ್ಪಡಿಸದು. ಲೋಕಹಿತವೇ ಸಕಲ ಕಲೆಗಳ ಮೂಲೋದ್ದೇಶ. ಯಶಸ್ಸು ಮತ್ತು ಪ್ರೇಯಸ್ಸುಗಳ ಯಥೋಚಿತ ಸಮನ್ವಯವೇ ಕಲೆ. ಇಂತಹ ಕಲೆಗಳಲ್ಲಿ ಕಾವ್ಯಕಲೆ ಗಣನೀಯ ಸ್ಥಾನ ಪಡೆದಿದೆ.

ಶ್ರೀ ಗೋರಾ.

'ಕಾವ್ಯವು ಜೀವನಕ್ಕೆ ಸಂಬಂಧಿಸಿದೆ' ಎಂಬ ಉಕ್ತಿ ಭಾರತಕ್ಕೇನೂ ಹೊಸತಲ್ಲ. ಪ್ರಾಚೀನ ಕಾಲದಿಂದಲೂ ಇದು ನಡೆದುಕೊಂಡು ಬಂದ ಸಂಗತಿ. ಭಾರತೀಯ ಕಾವ್ಯಪರಂಪರೆ ಹುಟ್ಟಿಬಂದುದೇ ಲೋಕಹಿತಕ್ಕಾಗಿ. ಮಹರ್ಷಿ ಆದಿಕವಿ ವಾಲ್ಮೀಕಿಯ ಕರುಣಾಪೂರ್ಣಹೃದಯ ಕ್ರೌಂಚ ವಧೆಯ ದೃಶ್ಯಕಂಡು ದ್ರವಿತಗೊಂಡು ರಾಮಾಯಣ ರಸಗಂಗೆಯರೂಪದಲ್ಲಿ ಹರಿಯತೊಡಗಿತು. ಇದನ್ನೇ ಧ್ವನ್ಯಾಲೋಕ ಎಂಬ ಅಲಂಕಾರಿಕ ಗ್ರಂಥದಲ್ಲಿ "ಕ್ರೌಂಚ ದ್ವಂದ್ವವಿಯೋಗೋತ್ಥಃ ಶೋಕಃ ಶ್ಲೋಕತ್ವಮಾಗತಃ" ಎಂದು ಹೇಳಲಾಗಿದೆ. ಎಂದರೆ, ಕ್ರೌಂಚ ಮಿಥುನ ವಿಚ್ಛೇಧದಿಂದ ಉದಿಸಿಬಂದ ಶೋಕವು ಶ್ಲೋಕರೂಪದಲ್ಲಿ ಹೊರಬಂದಿತು. ಭಾರತೀಯ ವಿಚಾರಧಾರೆಯಂತೆ ಕಾವ್ಯವು ಲೋಕಹಿತಕ್ಕಾಗಿಯೇ ಇರುವುದು. ಲೋಕದ ಜನತೆಯ ಪಕ್ಷವನ್ನು ಹಿಡಿದುಕೊಂಡೇ ನಮ್ಮ ಸಾಹಿತ್ಯ ಪ್ರವಾಹ ಹರಿದುಬಂದಿತು. ರಘುವಂಶ ಮೊದಲಾದ ಮಹಾಕಾವ್ಯಗಳು ಸರ್ವ ಭೂತಹಿತಾರ್ಥ ವಾಗಿಯೇ ಬರೆಯಲ್ಪಟ್ಟುವು. ಕನ್ನಡದ ಆದಿಕವಿ ಪಂಪನ ಪಂಪ ಭಾರತವು ವಿಕ್ರಮಾರ್ಜುನ ವಿಜಯವಾಗಿತ್ತು; ರನ್ನನ ಗದಾಯುದ್ಧವು ಸಾಹಸ ಭೀಮ ವಿಜಯವಾಗಿತ್ತು. ತಿರುಮಲಾರ್ಯನ ಚಿಕದೇವರಾಜ ವಂಶಾವಳಿಯೇ ಮೊದಲಾದುವಾದರೂ ತನ್ನ ಆಶ್ರಯದಾತನ ಯಶೋಗಾನಕ್ಕಾಗಿಯೇ ನಿರ್ಮಾಣಗೊಂಡ ಕೃತಿಗಳು. ಆದರೂ ಇವುಗಳಲ್ಲಿ ತತ್ಕಾಲೀನ ಜೀವನ ಸಂಪರ್ಕವಿದ್ದೇ ಇರುವುದರಿಂದ ಇವೂ ಲೋಕಹಿತಕ್ಕಾಗಿಯೇ ನಿರ್ಮಿತವಾದುವೆನ್ನಲಡ್ಡಿಯಿಲ್ಲ. ಈ ಮಾದರಿಯ ಹಲವು ಕೃತಿಗಳಲ್ಲಿ ನೀತಿಯ ದಿಗ್ದರ್ಶನವನ್ನೂ ಮಾಡಿರುವುದೂ ದೃಗ್ಗೋಚರವಾಗುತ್ತದೆ.

"ಹರನೆಂಬುದೇ ಸತ್ಯ, ಸತ್ಯವೆಂಬುದೆ ಹರನು" ಎಂಬ ನೀತಿಯನ್ನು ಸಮಾಜದಲ್ಲಿ ಬಿತ್ತರಿಸುವ ಸಲುವಾಗಿ ಹರಿಶ್ಚಂದ್ರೋಪಾಖ್ಯಾನದ ಹುಸಿ ಹೋದ್ದಿದ ಹರಿಶ್ಚಂದ್ರನನ್ನು ಸತ್ಯ ಹರಿಶ್ಚಂದ್ರನಾಗಿಸಿದ ರಾಘವಾಂಕ ಜನತೆಯ ಸಲುವಾಗಿಯೇ ಕಾವ್ಯ ರಚಿಸಿದನು. ತನ್ನ ನಿರರ್ಗಳವಾದ ಅಪ್ರತಿಮವಾದ ಸಹಜ ಕವಿತಾಶಕ್ತಿಯಿಂದ ನಾರಣಪ್ಪನು ಮಹಾಭಾರತವನ್ನು ಬರೆದನು. ಅದೂ, "ಅರಸುಗಳಿಗಿದು ವೀರ, ದ್ವಿಜರಿಗೆ ಪರಮವೇದದ ಸಾರ, ಯೋಗೀಶ್ವರರ ತತ್ವವಿಚಾರ, ಮಂತ್ರಿಜನಕ್ಕೆ ಬುದ್ಧಿಗುಣ, ವಿರಹಿಗಳ ಶೃಂಗಾರ, ವಿದ್ಯಾಪರಿಣತರಲಂಕಾರ, ಕಾವ್ಯಕೆ ಗುರು ಆಗಿತ್ತು. ಇದರಿಂದ ಕವಿಯು ಆ ಕಾಲದ ಎಲ್ಲ ಜನರನ್ನೂ ಗಮನದಲ್ಲಿಟ್ಟುಕೊಂಡು, ಅವರೆಲ್ಲರ ಜೀವನದಿಂದಲೂ ಪ್ರೇರೇಪಣೆ ಪಡೆದು ಜನತಾಪಕ್ಷವನ್ನು ಬಿಡದೆ ಕಾವ್ಯ ರಚಿಸಿದನೆನ್ನುವುದು ನಿಸ್ಸಂಶಯ. ಶ್ರೀಕೃಷ್ಣನಲ್ಲಿದ್ದ ಕವಿಯ ಅಪಾರ ಭಕ್ತಿಯೇ ಕಾವ್ಯವಲ್ಲರಿಯಾಗಿ ಹರಡಿ ಕಲಿಯುಗವೂ ದ್ವಾಪರವಾಗುವಂತೆ ಆಗಿ ಬಿಟ್ಟಿತು. ಮುಂದೆ ಲಕ್ಷ್ಮೀಶನಾದರೂ ಹಳೆಯ ಚೌಕಟ್ಟಿನಲ್ಲಿಯೇ ಭಗವದನುಗ್ರಹದ ಉತ್ತರ ಭಾರತದ ಅಶ್ವಮೇಧ ಪರ್ವವನ್ನು ಬರೆದಿರುವನಾದರೂ ಆದರಲ್ಲೂ ಜನತೆಯನ್ನು ಮರೆತಂತಿಲ್ಲ. ಶ್ರೀಕೃಷ್ಣನು ಧರ್ಮರಾಯನಲ್ಲಿ ಮರ್ಯಾದೆಯಿಂದ, ಭೀಮನಲ್ಲಿ ಸಲುಗೆಯಿಂದ, ಅರ್ಜುನನಲ್ಲಿ ಸ್ನೇಹದಿಂದ, ದ್ರೌಪದಿಯಲ್ಲಿ ಕರುಣೆಯಿಂದ, ಭಕ್ತರಲ್ಲಿ ಪ್ರೇಮದಿಂದ ವರ್ತಿಸುತ್ತಿರುವಂತೆ ಕವಿ ವರ್ಣಿಸಿದ್ದಾನೆ. ಇದರಿಂದ ಒಬ್ಬ ಸತ್ಪುರುಷನು ಬೇರೆ ಬೇರೆ ಜನರೊಡನೆ ಅವರವರ ಮನೋವೃತ್ತಿಗಳಿಗನುಗುಣವಾಗಿ ವರ್ತಿಸುವ ಆವಶ್ಯಕತೆಯನ್ನು ಕವಿ ಪ್ರತಿಬಿಂಬಿಸಿದ್ದಾನೆ. ಕವಿ ಚಿತ್ರಿಸಿದ ಚಂಡಿ, ಹಂಸಧ್ವಜ, ತಾಮ್ರಧ್ವಜ ಮೊದಲಾದವರು ನಮ್ಮ ಸುತ್ತು ಮುತ್ತಲಿನ ಜನರ ನೈಜ ಚಿತ್ರದಂತಿರುವರು. ಪ್ರಪಂಚದ ನಡೆವಳಿಕೆಗಳಿಗನುಗುಣವಾಗಿಯೇ ಪ್ರತಿಯೊಂದು ಸನ್ನಿವೇಶ, ಪಾತ್ರಗಳನ್ನು ಅಳವಡಿಸಿಕೊಂಡಿರುವುದರಿಂದ, ಇವು ಸಹಜಸನ್ನಿವೇಶ ಮತ್ತು ಸತ್ಯ ಪಾತ್ರಗಳೆಂಬ ಮಂಕು ಬೂದಿಯನ್ನೂ ನಮ್ಮ ಕಣ್ಣಿಗೆರಚುವುದರಲ್ಲಿ ಯಶಸ್ವಿಯಾಗಿದ್ದಾನೆ.

೩೦ನೆ ಶತಮಾನದ ಆದಿಯಲ್ಲಿದ್ದ ಮುದ್ದಣ್ಣನೂ ಜನತೆಯನ್ನು ಕಡೆಗಣಿಸಲಿಲ್ಲ. ಸೀತೆಗೆ ಮಕ್ಕಳಿಲ್ಲವೆಂಬ ಮರುಕವು ಕವಿ—ಕವಿಪತ್ನಿಯರ ಹೃದಯದ ಕರಬಾಗಿದೆ. ಅಲ್ಲಿ ರಾಮ-ಸೀತೆಯರ ಸಂವಾದ ಈ ಪತಿಸತಿಯರ ಸಲ್ಲಾಪವಾಗಿದೆ. ಬಂಜೆತನದೊಂದು ನೋವು ಮೂರ್ತಿಮತ್ತಾಗಿ ವರ್ಣಿತವಾಗಿದ್ದು, ಆ ವರ್ಣನೆ ನಿತ್ಯಸತ್ಯವಾಗಿದೆ. ಇದೇ ರೀತಿಯಲ್ಲಿ ಸಾಹಿತ್ಯ ಧಾರೆ ಬೆಳೆಯುತ್ತ ಬಂದಿದೆ. ಅದು ಕಲೆಯೊಡನೆ ಜನವನ್ನೂ ತನ್ನೊಡನೆ ಸೆಳೆದುಕೊಂಡು ಬಂದಿವೆ. ಇಂದಿನ ಭಾವಗೀತೆಗಳಾದರೂ ಕಲೆಯನ್ನು ತಿರಸ್ಕರಿಸುವಂತಿಲ್ಲ.

ಕಲೆ ಮತ್ತು ಕಾವ್ಯಗಳ ಪ್ರಧಾನ ಧ್ಯೇಯ ಆದಿಕಾಲದಿಂದಲೂ ಮಾನವಹಿತ. ಕವಿಗಳು ಜೀವನದಿಂದ ಅದೆಷ್ಟೋ ದೂರವ್ಹೋಡಿ ಹೋದರೂ, ಅವರು ಸ್ವಪ್ನಲೋಕದಲ್ಲೇ ವಿಹರಿಸುತ್ತಿದ್ದರೂ ಭೌತಿಕ ಆವಶ್ಯಕತೆಗಳನ್ನು ದೂರೀಕರಿಸುವ ಸಾಹಸ ಮಾಡಲಾರರು. ಸಂಸಾರದ ನಾನಾತರದ ಜಂಜಾಟಗಳಿಗೆ ಹೆದರಿ, ತಿರಸ್ಕಾರದಿಂದ ವೈರಾಗ್ಯ ಭಾವಪ್ರಜೋದಿತರಾಗಿ, "ಯಾರಿಗೆ ಯಾರುಂಟು ಎರವಿನ ಸಂಸಾರ..." ಎಂದು ಹಾಡಿದ ದಾಸವರೇಣ್ಯರೇ, "ಈಸಬೇಕು, ಇದ್ದು ಜೈಸಬೇಕು" ಎಂದೂ ಉದ್ಗರಿಸಿ ಧೈರ್ಯ ತುಂಬಿದ್ದಾರೆ. ಇದೂ ಜನಹಿತಕಾರಕವಲ್ಲವೆ?

ನಿಜವಾದ ಕಲೆ ಅಥವಾ ಕವಿತೆ ಜೀವನವನ್ನು ತಿರಸ್ಕರಿಸಲಾರದು. ಮಾನವ ತಾನು ಜೀವಿಸುವ ಈ ಕೋಲಾಹಲಮಯ ಭೂಮಿಯನ್ನು ಬಿಟ್ಟಿರುವುದು ಸಾಧ್ಯವಿಲ್ಲ. ಚಿರಶಾಂತಿ ಎಂದು ಮೃತ್ಯುವನ್ನೂ ಹೆಸರಿಸುತ್ತಾರೆ. ಮಾನವ ಆಹಾರವೊಂದರಿಂದಲೇ ಜೀವಿಸಲಾರ; ಆತನ ಜೀವನವನ್ನು ಸರಸಗೊಳಿಸಲು ಸೌಂದರ್ಯ ಮತ್ತು ಅನುರಾಗಗಳೂ ಅವಶ್ಯ. ಕಲೆಯು ಕಲೆಗಾಗಿ ಎಂಬ ವಾದವು ಸೌಂದರ್ಯಕ್ಕೆ ಪ್ರಾಧಾನ್ಯವೀಯುತ್ತದೆ. ಸೌಂದರ್ಯವು ಜೀವನದೊಡನೆ ಸಾರ್ಥಕವೆನಿಸುತ್ತದೆ. ಜೀವನವನ್ನು ಚಿರಮಂಗಲಮಯ ಮತ್ತು ಸತತ ಪ್ರಯತ್ನ ಶೀಲಗೊಳಿಸುವುದರಲ್ಲೇ ಬದುಕು ಸಾರ್ಥಕ್ಯ ಪಡೆಯುತ್ತದೆ. ಆಂತರಿಕ ಹಾಗೂ ಬಾಹ್ಯ ಸೌಂದರ್ಯಗ್ರಹಣ ಮಾಡಿ, ಜೀವನವನ್ನು ಸಾರ್ಥಕಮಾಡುವ ಕಲೆಯೇ ಜನಮನಾಕರ್ಷಕವಾಗಿದೆ.

ಕಲೆಯನ್ನು ಪ್ರಚಾರದೃಷ್ಟಿಯಲ್ಲಿ ಬಳಸುವುದರಿಂದ, ಅದರ ಕೊಲೆಯಾದಂತಾಗುವುದು. ಕಲಾವಿದ ತನ್ನ ಸ್ವೇಚ್ಛೆ ಮತ್ತು ಸ್ಫೂರ್ತಿಗಳಿಂದಲೂ ಜೀವನ ಹಿತಸಾಧನೆ ಮಾಡಬಲ್ಲನು. ಅರ್ಥದಿಂದದು ಹೊರಗಿರಲಾರದಾದರೂ ಅದೇ ಅವನ ಮುಖ್ಯ ಧ್ಯೇಯವಲ್ಲ. ಆರ್ಥಿಕ ಲೋಭದಿಂದ ಕಲೆಯನ್ನು ವಿಕೃತಗೊಳಿಸುವುದೆಂದರೆ, ಅದನ್ನು ಆದರ್ಶದ ಮಹಡಿಯಿಂದ ಕೆಳಗುರುಳಿಸಿದಂತೆ. ಸೌಂದರ್ಯ ಕಲಾಕಾರನ ಮುಖ್ಯಧ್ಯೇಯವಾಗಿದೆ; ನೀತಿ ಆಚಾರ ಮತ್ತು ಉಪಯುಕ್ತತೆಗಳನ್ನು ಉನ್ನತೀಕರಿಸುವುದೂ ಆತನ ಪುನೀತ ಕರ್ತವ್ಯವಾಗಿದೆ. ಸೌಂದರ್ಯವನ್ನು ಮಂಗಲಮಯಗೊಳಿಸುವುದೇ ಕಲೆಗೆ ಪ್ರಾಣಪ್ರತಿಷ್ಠೆ ಮಾಡಿದಂತೆ. ಈ ಪ್ರಾಣಪ್ರತಿಷ್ಠೆ ಶ್ರದ್ಧಾ ಭಕ್ತಿಯುಕ್ತವಾಗಿರಬೇಕು. ಶ್ರೇಯಸ್ಸು ಮತ್ತು ಪ್ರೇಯಸ್ಸುಗಳೆರಡರ ಯಥೋಚಿತ ಸಮನ್ವಯವೇ ಕಲೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. No 347/1960.

ರಾಮಕೃಷ್ಣ ನ್ಯಾಕ—ವಾದಿ.

ಮತ್ತು

1. ಮುತ್ತ ನ್ಯಾಕ— ಯೆಲ್ಲ ನ್ಯಾಕನ ಮಗ.
2. ಯೆಲ್ಲ ನ್ಯಾಕ - 1ನೇಯವನ ಮಗ.

ಉಡ್ಪಿ ತಾಲೂಕು ಹಲುವಳ್ಳಿ ಗ್ರಾಮದ ಕಂಚಿಕಾರ ಬೆಟ್ಟನಲ್ಲಿರುವವರು . ಪ್ರತಿವಾದಿರು

ಇವರೊಳಗೆ

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ

ವಾದಿಗೆ ಪ್ರತಿವಾದಿರು ತಾರೀಕು 19—6—57ರಲ್ಲು ರೂಪ್ಯಾ 150—00ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ವಿನೇಜುಕೇಳಿ ವಾದಿಯು ಮಾಡಿದ ಮೇಲ್ಕಂಡ ದಾವೆಯು ತಾ. 19—9—60ಕ್ಕೆ ಯಿಟ್ಟಿದೆ. ಆ ಕುರಿತು ನಿಮಗೇನಾದರೂ ಉದಾಹರಿಸುವುದಿದ್ದರೆ ಆ ದಿವ್ಸ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು.

(By order of the Court)

P. N. Krishnamurthi Rao,
Advocase for Plaintiff.

Udipi, S. K. Dated 20—8—60.

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ ೩=೫೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved or use in Secondarys School as per proceedings Roc. No. 466 N/50 date 2-12-1950 of the Director of public Instruction Madras.

ಬಹಳಷ್ಟು ಉಂಡೊಡನೆಯೇ ನಾವು ಬಲಕಾಯರಾಗುವುದಿಲ್ಲ; ಉಂಡುದನ್ನು ಅರಗಿಸಿಕೊಂಡರೆ ಮಾತ್ರ ತಪ್ಪದೆ ದೃಢಕಾಯರಾಗುವೆವು.

ನವಯುಗ

ವರುಷ	ಉಡುಪಿ	ವಾರ
೪೦	೧೫-೯-'೬೦	೩

ಸ್ನೇಹ ಸಂಬಂಧ

ಪಾಕಿಸ್ತಾನ ಮತ್ತು ಭಾರತಗಳು ಮೂಲ ಭಾರತದಿಂದ ವಿಭಜನೆಗೊಳ್ಳುವುದರೊಡನೆಯೇ ಇವೆರಡು ರಾಷ್ಟ್ರಗಳ ನಡುವೆ ಭಿನ್ನಾಭಿಪ್ರಾಯಗಳೂ ಉದ್ಭವಿತವಾಗಿದ್ದುವು. ಕಾಲಕ್ರಮದಲ್ಲಿ ಪಾಕಿಸ್ತಾನದಲ್ಲಿ ಅಧಿಕಾರ ಗದ್ದುಗೆಯೇರಿದ್ದ ವಿವಿಧ ರಾಜಕೀಯ ಪಕ್ಷಗಳ ದುರಾಗ್ರಹದ ಕಾರಣದಿಂದ ಈ ಭಿನ್ನಾಭಿಪ್ರಾಯಗಳು ಹೆಚ್ಚುತ್ತ ಬಂದು, ಇವೆರಡರ ನಡುವೆ ಉತ್ತರ ದಕ್ಷಿಣ ಧ್ರುವಗಳ ಅಂತರವುಂಟಾಯಿತು. ಅಗ್ನಿಗೆ ತುಪ್ಪವೆರೆಯುವಂತೆ ಕಾಶ್ಮೀರ ಪ್ರಶ್ನೆಯೂ ಒಂದು ನಡುವೆ ಬಂದು ಈ ವೈಮನಸ್ಯವು ಮತ್ತೂ ಬಲಿಯ ತೊಡಗಿತು. ಈಗ ರಾಜಕೀಯ ಪಕ್ಷಗಳ ಹಾಲಾಹಲ ಭರಿತ ಆಡಳಿತೆಯು ಸಮಾಪ್ತವಾಗಿ, ಅಲ್ಲಿ ಅಯೂಬಖಾನರ ಏಕಛತ್ರಾಧಿಪತ್ಯದಡಿಯಲ್ಲಿ ಹಿಂದಿನ ಅಲ್ಲೋಲ ಕಲ್ಲೋಲ ಹಾಗೂ ಪ್ರಕ್ಷುಬ್ಧ ವಾತಾವರಣವು ತುಸುವಾದರೂ ಕೊನೆಗೊಂಡು, ಹಿಂದಿನಿಗಿಂತ ಇಂದು ನೆಮ್ಮದಿ ಅಧಿಕವಾಗಿದೆ ಎಂದು ಹೇಳಬಹುದು. ಭಾರತದ ವಿರುದ್ಧ ಜಿಹಾದದ ಗುಲ್ಲೆಬ್ಬಿಸುವ ಪರಿಸ್ಥಿತಿಯಿಂದು ಉಳಿದಿಲ್ಲ. ಪಾಕಿಸ್ತಾನವು ಭಾರತ ಮತ್ತು ತನ್ನೊಳಗಿರುವ ವಿವಿಧ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಲು ಆತುರವಾಗಿರುವುದು ಮಾತ್ರವಲ್ಲ, ಈಗಾಗಲೇ ಸೀಮಾ ವಿವಾದದಲ್ಲಿ ಉಭಯ ರಾಷ್ಟ್ರಗಳ ನಡುವೆ ಒಪ್ಪಂದವನ್ನು ಸಾಧಿಸಿಕೊಂಡಿದೆ. ಇದೇ ರೀತಿಯಲ್ಲಿ ಸದ್ಯ ಕಾಲುವೆ ನೀರಿನ ಪ್ರಶ್ನೆಯೂ ಕೊನೆಗೊಳ್ಳುವುದು; ಮತ್ತು ಈ ಸಂಬಂಧದ ಒಪ್ಪಂದಕ್ಕೆ ಸಹಿ ಹಾಕಲು ಭಾರತೀಯ ಪ್ರಧಾನಿ ನೆಹರುರವರು ಇದೇ ತಾ. ೧೯ರಂದು ಪಾಕಿಸ್ತಾನಕ್ಕೆ ತೆರಳಲಿರುವರು.

ಪ್ರಧಾನಿ ನೆಹರುಗಳ ಸ್ವಾಗತಕ್ಕೆ ಭವ್ಯವಾದ ಸಿದ್ಧತೆಗಳು ನಡೆಯುತ್ತಲಿವೆಯೆಂದು ತಿಳಿಯುತ್ತದೆ. ಬಹು ವರ್ಷಗಳಿಂದಲೂ ಉಭಯ ರಾಷ್ಟ್ರನಾಯಕರ ಶಿರೋವೇದನೆಯೆನಿಸಿದ ಈ ನೀರಿನ ಪ್ರಶ್ನೆ ಜಾಗತಿಕ ಬ್ಯಾಂಕಿನ ಉಪಾಧ್ಯಕ್ಷ ಇಲಿಫರ ಮಾರ್ಗದರ್ಶನದಲ್ಲಿ ಪರಿಸಮಾಪ್ತಿಗೊಂಡುದು ಸಂತೋಷಜನಕವೆನಿಸಿದೆ. ಇನ್ನು ಈ ಎರಡು ರಾಷ್ಟ್ರಗಳಲ್ಲಿರುವ ಮುಖ್ಯ ಪ್ರಶ್ನೆಯೆಂದರೆ ಕಾಶ್ಮೀರದ ಬಗ್ಗೆ ಇರುವುದು ಮಾತ್ರ. ಪಾಕ್ ಅಧ್ಯಕ್ಷ ಅಯೂಬರು ನಾಯಕದ್ವಯರ ಭೆಟ್ಟಿಯ ಅವಧಿಯಲ್ಲಿ ಈ ಕುರಿತಾಗಿಯೂ ಶಾಂತಿಯುತ ಸಮಾಧಾನಕ್ಕೆ ಬರುವ ಬಗ್ಗೆ ಚರ್ಚೆ ನಡೆದು ಅದೂ ಕಾರ್ಯರೂಪಕ್ಕೆ ಬರುವುದೆಂದು ಹಾರೈಸಿರುವರೆಂದು ತಿಳಿಯುತ್ತದೆ. ಇದೆಷ್ಟು ಕೃತ್ಯಾಕೃತ್ಯವಾದೀತೆಂಬುದನ್ನು ದೂರವಿರಿಸಿ ಹೇಳುವುದಾದರೆ, ಕಾಶ್ಮೀರದ ವಿವಾದವು ಕೊನೆಗೊಳ್ಳಬೇಕೆಂಬುದರಲ್ಲಿ ಭಿನ್ನಾಭಿಮತ ವಿರುವುದಿಲ್ಲ. ಸದ್ಯ ಯುಕ್ತರಾಷ್ಟ್ರ ಸಂಘದ ಮುಂದೆ ಇರುವುದಾದರೂ ಅದು ಈ ಸಮಸ್ಯೆಯ ಬಗ್ಗೆ ಏನೊಂದೂ ಮಾಡುವತ್ತ ಆಸಕ್ತಿ ವಹಿಸುವಂತಿಲ್ಲ. ಚುನಾವಣೆಯ ಮೂಲಕವೇ ಈ ಪ್ರಶ್ನೆಗೆ ಉತ್ತರಕಂಡು ಹಿಡಿಯ ಬೇಕೆಂದಿಲ್ಲವೆಂಬ ಅಯೂಬರ ಉಕ್ತಿ ಪಾಕಿಸ್ತಾನದ ಹಿಂದಿನ ಆಡಳಿತದಾರರಿಂದ ತುಸು ಬದಲಾದಂತಿದೆ. ಈಗ ಪರಿಸ್ಥಿತಿಯೆಂಬುದು ಈ ಸಹೋದರ ರಾಷ್ಟ್ರಗಳ ನಡುವೆ ಸಾಮಂಜಸ್ಯವಿರಬೇಕೆಂಬುದನ್ನು ಸಾರಿಹೇಳುತ್ತಿದೆ. ಪಾಕಿಸ್ತಾನಕ್ಕೆ ಈ ಹಿಂದೆ ವಿದೇಶೀಯ ಸಮರ್ಥಕರು ಬಹುಸಂಖ್ಯೆಯಲ್ಲಿದ್ದರೂ ಇಂದು ಅವರೆಲ್ಲರ ಒಲವು ಭಾರತದತ್ತ ಸರಿಯತೊಡಗಿದೆ. ಭಾರತದ ಉತ್ತರದಲ್ಲಿ ಕಮ್ಯುನಿಸ್ಟ ಚೀನಾದ ಆಕ್ರಮಣ ನಡೆದಂದಿನಿಂದ ಈ ವಿಭಾಗದ ರಾಜಕೀಯ ನೆಲೆಯೇ ವಿಪರ್ಯಾಸಗೊಂಡಂತಾಗಿದೆ. ಪಾಕಿಸ್ತಾನದ ಮನಸ್ಸಿನಲ್ಲೂ ಭೀತಿ ಉದ್ಭವಿಸಿದೆ. ಇದರಿಂದಲೇ ಪರಸ್ಪರ ಸಹಕಾರದ ಒಪ್ಪಂದದ ಮಾತೂ ಮುಂದೆಬಂದಿದೆ. ಪ್ರಧಾನಿ ನೆಹರುರವರಿದನ್ನು ತೇಲಿಸಿಬಿಟ್ಟರೇನೋ ನಿಜವೇ, ಆದರೂ ಕಾಶ್ಮೀರದ ವಿವಾದವು ಇನ್ನೂ ಮುಂದುವರಿಯುವುದಕ್ಕಿಂತ ಕೊನೆಗೊಳ್ಳುವುದು ಲೇಸೆಂದು ಮಾತ್ರ ಹೇಳಬಹುದು.

ಕಾಶ್ಮೀರದ ಬಗ್ಗೆ ಭಾರತ ಪಾಕಿಸ್ಥಾನಗಳ ವಾದಗಳು ಮೊದಲೇ ಜಗಜ್ಜಾಹೀರಾಗಿವೆ. ಇವುಗಳ ನ್ಯಾಯಾನ್ಯಾಯತೆಯನ್ನು ಇಂದಿನ ರಾಜಕಾರಣ ಹಾಗೂ ಇನ್ನಿತರ ಕಾರಣಗಳಿಂದ ವಿಮರ್ಶಿಸುವುದು ಅಸಮಂಜಸ. ಅಂದು ಪರಿಸ್ಥಿತಿಗೆ ಹೊಂದಿಕೊಂಡು ಮಾಡಿದ ವಾದ—ವಿವಾದಗಳು ಅದೇ ರೂಪದಲ್ಲಿ ಇಂದೂ ಉಳಿಯುವುದು ಸಾಧ್ಯವಿಲ್ಲ. ಮೂರು ವರ್ಷಗಳಿಗೆ ಮೊದಲು ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿಯು ಈ ಬಗ್ಗೆ ಒಪ್ಪಿಸಿದ್ದ ವರದಿಯೂ ಈ ವಾದವನ್ನು ಪುಷ್ಟೀಕರಿಸಿದೆ. ಹಾಗಿರುವಾಗ, ಈಗ ಈ ಹಳೆ ಪ್ರಶ್ನೆಯನ್ನು ಇಂದಿನ ಪರಿಸ್ಥಿತಿಗೆ ಹೊಂದಿಸಿಕೊಂಡು ಪುನರ್ವಿಮರ್ಶೆ ನಡೆಸುವುದು, ಈ ಬಗ್ಗಾಗಿ ಸಂಯುಕ್ತ ರಾಷ್ಟ್ರ ಸಂಘದಿಂದ ಹಿಂತೆಗೆದುಕೊಳ್ಳುವುದು, ಉಭಯ ನಾಯಕರು ಸಂಧಾನದ ಮೂಲಕವೇ ಇತ್ಯರ್ಥ ಮಾಡಿಕೊಳ್ಳುವುದು ಸರಿಯೇ. ಆದರೆ, ಈ ಬಗ್ಗೆ ಯಾವುದೇ ದೃಷ್ಟಿಯಿಂದ ವಿಚಾರಿಸಿದರೂ ಕಾಶ್ಮೀರವು ಭಾರತಕ್ಕೇ ಸೇರಬೇಕಾಗಿರುವುದರಿಂದ, ಪಾಕ್ ಧುರೀಣರು ಅದನ್ನು ಸಂಪೂರ್ಣ ಕೈಬಿಡಲು ಒಪ್ಪುತ್ತಾರೆಯೇ ಎಂಬುದೇ ವಿಚಾರಣೀಯ. ಅದರೂ ಇತರ ಹಲವಾರು ವಿಷಯಗಳ ಬಗ್ಗೆ ಮಾತುಕತೆ ನಡೆದಾಗ ನಾಯಕದ್ವಯರ ನಡುವೆ ಕಾಶ್ಮೀರ ಪ್ರಶ್ನೆಯ ಕುರಿತಾದ ಚರ್ಚೆಯೂ ನಡೆಯುವುದು ಅಸಂಭವವಲ್ಲವೆಂದು ಮಾತ್ರ ಇಂದು ಅನ್ನಬಹುದು.

ಅಭಿನಂದನೆ

ಬ್ರಿಟಿಷರ ಆಡಳಿತಾವಧಿಯಲ್ಲಿ ಹಿಂದುಳಿದ ದೇಶೀಯ ಸಂಸ್ಥಾನಗಳು ಅಭಿವೃದ್ಧಿ ಹೊಂದುವುದಕ್ಕೆ ಮೂಲಕಾರಣರಾದ ಮಹಾರಾಜರ ಮೈಸೂರಿನ ದಿವಾನರಾಗಿದ್ದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಇಂದಿಗೆ ಶತಾಯುಷಿಗಳಾದರು. ಶತಮಾನ ಕಾಲ ಬದುಕುವುದೇ ಅಪರೂಪವಾಗಿರುವ ಈ ಕಾಲದಲ್ಲಿ, ವಯಸ್ಸು ನೂರಾದರೂ ಮನಸ್ಸು, ಬುದ್ಧಿಶಕ್ತಿಗಳು ನಲುವತ್ತರವರಂತಿರುವ ಮೇಧಾವೀ ನಿರ್ಮಾತರಾದ ಇವರನ್ನು ಮೈಸೂರು ಮಾತ್ರವಲ್ಲ ಭಾರತವೇ ಗೌರವಿಸುತ್ತದೆ. ಭಾರತದಂತಹ ಹಳ್ಳಿಗಳ ರಾಷ್ಟ್ರದ ಉದ್ಧಾರಕ್ಕೆ ಉದ್ಯಮರಂಗವೇ ಬುನಾದಿಯೆಂದು ಘೋಷಿಸಿ, ಬಹಳಷ್ಟು ಹಿಂದುಳಿದಿದ್ದ ದೇಶೀಯ ಸಂಸ್ಥಾನ ಮೈಸೂರು ಔದ್ಯಮಿಕ, ಶೈಕ್ಷಣಿಕ ರಂಗಗಳಲ್ಲಿ ಮುಂದು ಬರುವಂತೆ ಮಾರ್ಗ ಕಲ್ಪಿಸಿದ ಮಹಾನ್ ವ್ಯಕ್ತಿ ವಿಶ್ವೇಶ್ವರಯ್ಯನವರು. ಇವರು ಮೈಸೂರಿನ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ರೂಪಿಸಿದ್ದು, ಅವು ಪೂರ್ಣರೂಪದಲ್ಲಿ ಕಾರ್ಯಗತವಾದರೂ ಆದರ್ಶ ರಾಜ್ಯವಾಗುವುದು. ತನ್ನ ೧೦೦ ವರ್ಷಗಳ ಸಫಲ ಜೀವನದಲ್ಲಿ ದೇಶದ ಉನ್ನತಿಗಾಗಿಯೇ ಶ್ರಮಿಸಿದ ಇವರನ್ನು 'ಭಾರತರತ್ನ' ಬಿರುದುಯಿತ್ತು ಗೌರವಿಸಲಾಗಿದೆ. ಶ್ರೇಯಸ್ಕರ ಮೇಧಾಶಕ್ತಿಯ ಸದುಪಯೋಗದಿಂದಲೇ ಅವರು 'ಆಧುನಿಕ ಮೈಸೂರಿನ ನಿರ್ಮಾತ' ಎಂಬ ಪದವಿಗಳಿಸಿದ್ದಾರೆ. ಈ ಕಾರಣದಿಂದ ಮೈಸೂರು ರಾಜ್ಯದಾದ್ಯಂತದಲ್ಲಿ ಇಂದು ವಿಜೃಂಭಣೆಯಿಂದ ಶ್ರೀ ವಿಶ್ವೇಶ್ವರಯ್ಯನವರ ಶತಮಾನೋತ್ಸವವು ನಡೆಯಲಿದೆ. ಅವರ ದೀರ್ಘ ಜೀವನ ದರ್ಶನ ಮಾಡುವುದರೊಡನೆ ಮುಂದೆಯೂ ಹಲವಾರು ವರ್ಷ ಅವರ ಮಾರ್ಗದರ್ಶನ ನಮ್ಮ ರಾಷ್ಟ್ರಕ್ಕೆ ದೊರೆಯಲೆಂಬ ಆಶಯವನ್ನು ವ್ಯಕ್ತಪಡಿಸಲಾಗುವುದು. ಅವರ ೧೦೦ನೆಯ ಜನ್ಮದಿನದ ಈ ಸುಅವಸರದಲ್ಲಿ ಅವರನ್ನು ಅಭಿನಂದಿಸಲು ಪ್ರತ್ಯೇಕ ಕನ್ನಡಿಗನಿಗೂ ಅಭಿಮಾನವೆನಿಸುತ್ತದೆ.

— —

ಶ್ರದ್ಧಾಂಜಲಿ:

ಫಿರೋಜ ಗಾಂಧಿ ಇನ್ನಿಲ್ಲ!

ಲೋಕ ಸಭೆಯ ಪ್ರಭಾವಿ ಸದಸ್ಯ ೪೮ ವರ್ಷ ಪ್ರಾಯದ ಫಿರೋಜ ಗಾಂಧಿಯವರ ನಿಧನದಿಂದ ಭಾರತವು ತನ್ನೊಬ್ಬ ವರ್ಚಸ್ವೀ ಪುತ್ರನನ್ನು ಕಳೆದುಕೊಂಡಿತು; ಕಾಂಗ್ರೆಸ್ ತನ್ನ ಹಿತೈಷಿಯೊಬ್ಬನಿಂದ ಸದಾ ದೂರವುಳಿಯುವಂತಾಯಿತು. ಬೊಂಬಾಯಿಯ ಪಾರ್ಸಿ ಕುಟುಂಬವೊಂದರಲ್ಲಿ ಜನಿಸಿದ ಫಿರೋಜ ಗಾಂಧಿ ಸೋದರತ್ತೆಯ ಆಸರೆಯಲ್ಲಿ ಬೆಳೆದು ಲಂಡನ್ನಿನಲ್ಲಿ ಉಚ್ಚ ಶಿಕ್ಷಣವನ್ನು ಪಡೆದರು. ವಿಚಿತ್ರ ಘಟನೆಯೊಂದರಿಂದ ಪ್ರೇರಿತರಾಗಿ ಭಾರತದ ಸ್ವಾತಂತ್ರ್ಯ ಸಮರ ರಂಗದಲ್ಲಿ ಧುಮುಕಿದರು; ೧೯೪೨ರಲ್ಲಿ ಜವಾಹಿರಲಾಲ ನೆಹರೂರವರ ಪುತ್ರಿ ಇಂದಿರೆಯನ್ನು ವಿವಾಹವಾದರು. ಕಾಲಕ್ರಮದಲ್ಲಿ ರಾಜೀವ ಮತ್ತು ಸಂಜೀವ ಎಂಬಿಬ್ಬರು ಕುವರರು ಇವರಿಗೆ ಹುಟ್ಟಿದರು. ಕೆಲಕಾಲ ವಿಮಾಕ್ಷೇತ್ರದಲ್ಲಿ ದುಡಿದ ಫಿರೋಜ ಗಾಂಧಿ ನ್ಯಾಶನಲ್ ಹೆರಾಲ್ಡ್ ಪತ್ರಿಕೆಯ ಮ್ಯಾನೇಜಿಂಗ್ ಡೈರೆಕ್ಟರರಾಗಿ ಹಲವು ವರ್ಷವಿದ್ದರು. ಎಕ್ಸ್‌ಪ್ರೆಸ್ ನ್ಯೂಸ್ ಪೇಪರ್ಸ್‌ನ ಡೈರೆಕ್ಟರರಾಗಿ ೧೯೫೦ರ ವರೆಗೆ ಉಳಿದಿದ್ದರು. ೧೯೫೦ರಲ್ಲಿ ತಾತ್ಕಾಲಿಕ ಲೋಕಸಭೆಯ ಸದಸ್ಯರಾದ ಇವರು ಕೊನೆಯವರೆಗೂ ತಮ್ಮ ಸದಸ್ಯತ್ವವನ್ನು ಉಳಿಸಿಕೊಂಡಿರುವರು. ವಿಷಯವನ್ನು ಕೂಲಂಕಷವಾಗಿ ಅಭ್ಯಸಿಸಿ ಚರ್ಚೆನಡೆಸುವ ಗುಣದಿಂದ ಇವರು ಲೋಕಸಭೆಯ ಗೌರವಾದರಗಳಿಗೆ ಪಾತ್ರರಾಗಿದ್ದರು. ಡಾಲ್ಮಿಯಾ, ಮುಂಧ್ರಾ ಪ್ರಕರಣ ಮೊದಲಾದ ದುರ್ವ್ಯವಹಾರಗಳ ಮೇಲೆ ಪ್ರಕಾಶ ಚೆಲ್ಲಿದ್ದ ಧೀರರಿವರು. ಕಾಂಗ್ರೆಸ್ಸಿನ ಸದಸ್ಯರಾಗಿದ್ದುಕೊಂಡು, ಕಾಂಗ್ರೆಸ್ ತಪ್ಪಿನಲ್ಲಿ ಅದನ್ನು ತಿದ್ದಿಕೊಳ್ಳಬೇಕೆಂದು ಹೇಳುವ ಎದೆಗಾರಿಕೆಯಿದ್ದುದು ದಿವಂಗತ ಗಾಂಧಿಯವರೊಬ್ಬರಿಗೇ. ಸರಕಾರಿ ಪಕ್ಷದವರಾಗಿದ್ದರೂ, ಸರಕಾರದ ಹುಳುಕನ್ನು ಕೆದಕಿ ಸರಿದಾರಿಯಲ್ಲಿ ಮುನ್ನಡೆಸುವಂತೆ ಮಾಡುವ ಏಕಮೇವ ಕಾಂಗ್ರೆಸ್ ಸದಸ್ಯರಿವರು. ಕಾಂಗ್ರೆಸಿಗರ ಮೇಲಿನ ಆರೋಪ ವಿಚಾರಣಾ ಸಮಿತಿಯ ನೇಮಕ, ಕೇಂದ್ರ ಸರಕಾರಿ ನೌಕರರ ಸಂಪನ್ನು ನಿಲ್ಲಿಸುವ ಪ್ರಯತ್ನಗಳಲ್ಲಿ ಇವರ ಕೈವಾಡವಿತ್ತು. ಫಿರೋಜ ಗಾಂಧಿಯವರ ದೇಹಾಂತದಿಂದ ಭಾರತದ ಲೋಕಸಭೆಯ ಹಾಗೂ ಕಾಂಗ್ರೆಸಿನ ಜ್ಯೋತಿಯೊಂದು ಕಣ್ಮರೆಯಾದಂತಾಯಿತು. ದಿವಂಗತರಿಗೆ ದೇಶಕ್ಕೆ ದೇಶವೇ ನೀಡುವ ಶ್ರದ್ಧಾಂಜಲಿಯೊಡನೆ ನಮ್ಮ ಕಟಕನ್ನೂ ಸೇರಿಸುತ್ತೇವೆ.

—ಸಂ. ನ.

ಸಂಕ್ಷಿಪ್ತ ಸುದ್ದಿಗಳು

ಮಲೆನಾಡಿನ ಅಭಿವೃದ್ಧಿ

ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಸಲಹೆ ಸೂಚನೆಗಳನ್ನು ನೀಡುವ ಸಲುವಾಗಿ ಏರ್ಪಡಿಸಿದ್ದ ಮಂಡಳಿಯನ್ನು ರಾಜ್ಯ ಸರಕಾರವು ಈಗಾಗಲೇ ವಿಸರ್ಜಿಸಿದೆ. ಈ ಮಂಡಳಿಯು ಕೊಡಬೇಕಾಗಿದ್ದ ಎಲ್ಲಾ ಸಲಹೆಗಳನ್ನು ಕೊಟ್ಟಾಗಿರುವುದರಿಂದ ಮತ್ತು ಅವನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿರುವುದರಿಂದ ಮಂಡಳಿಯ ಆವಶ್ಯಕತೆ ಮುಂದಕ್ಕಿಲ್ಲದಿರುವುದರಿಂದ ಸರಕಾರ ಹಾಗೆ ಮಾಡಿತೆಂದು ವಿಧಾನ ಸಭೆಯಲ್ಲಿ ಎತ್ತಿದ ಪ್ರಶ್ನೆಗೆ ಕಾರಣ ದೊರೆಯಿತು.

ಬರಗಾಲವನ್ನು ತಡೆಗಟ್ಟಿರಿ

ಮೈಸೂರು ರಾಜ್ಯದ ವಿಶಾಲ ಭಾಗದಲ್ಲಿ ತಲೆದೋರಿದ ಬರಗಾಲದ ಬಗ್ಗೆ ವಿಧಾನ ಸಭೆಯಲ್ಲಿ ಸುದೀರ್ಘವಾದ ಚರ್ಚೆ ನಡೆಯಿತು. ಸರ್ವಸಾಮಾನ್ಯ ಭಾಗವಹಿಸಿ ಎಲ್ಲ ಸದಸ್ಯರೂ ಬರಗಾಲವನ್ನು ಶಾಶ್ವತವಾಗಿ ತಡೆಗಟ್ಟುವ ಆವಶ್ಯಕತೆಯನ್ನು ಪ್ರತಿಬಿಂಬಿಸಿದರು ಮತ್ತು ಆವಶ್ಯಕ ಸಲಹೆಗಳನ್ನೂ ಇತ್ತರು.

ಲುಮುಂಬಾರಲ್ಲಿ ಉತ್ಸಾಹ

ತನ್ನನ್ನು ಪ್ರಧಾನಿ ಪಟ್ಟದಿಂದ ತಳ್ಳಿಹಾಕಿದ ಕಾಂಗೊ ಅಧ್ಯಕ್ಷ ಕಸವುಬರಿಂದ ಅವರ ರಾಷ್ಟ್ರಾಧ್ಯಕ್ಷರ ಅಧಿಕಾರವನ್ನು ಲುಮುಂಬಾ ವಶಪಡಿಸಿಕೊಂಡಿದ್ದು ತಾನೇ ಪ್ರಧಾನಿಯೂ ಕಾಂಗೋದ ಮಹಾದಂಡನಾಯಕನೂ ಆಗಿರುವೆನೆಂದ ಘೋಷಿಸಿರುವರು. ಕಾಂಗೋದ ಸೆನೇಟಿನಲ್ಲಿ ವಿಶ್ವಾಸಮತ ಪಡೆಯುವ ಸಂದರ್ಭ

(೭ನೇ ಪುಟ ನೋಡಿರಿ)

ಅಲ್ಲಲ್ಲಿಯ ಸುದ್ದಿ ಸಾರ

ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘ, ಉಡುಪಿ— ಈ ಸಂಘದ ಆಡಳಿತ ಮಂಡಳಿಯ ಸಭೆಯು, ತಾ 6—9—60ರಂದು ಉಡುಪಿ "ಮುಕುಂದ ನಿವಾಸ"ದಲ್ಲಿ ಸಂಘದ ಪ್ರೆಸಿಡೆಂಟರಾದ ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕುಲಾಲು ಗಣಪಯ್ಯ ಶೆಟ್ಟರು ಗತ ಸಭೆಯ ವರದಿಯನ್ನು ಓದಿ, ಸಂಘದ ರಿಜಿಸ್ಟ್ರಿಯಾದ ಘಟನಾವಳಿಗಳ ಛಾಪಾ ಪುಸ್ತಕಗಳ ವಿತರಣೆಯನ್ನು ಮಾಡಿದಮೇಲೆ ಪ್ರಾಥಮಿಕ ಶಾಲೆಗಳಿಗೆ ವರ್ಷದಲ್ಲಿ ಡಿಸ್ಕ್ರಿಶನಲ್ ರಜೆಯಾಗಿ ಉಪಯೋಗಿಸಲು ಬರೇ 4 ದಿನಗಳನ್ನು ಮಾತ್ರ ಕೊಡಲಾಗಿದ್ದು, ಅದು ಜಡಿಮಳೆ ನೆರೆ ಮತ್ತು ಸ್ಥಳೀಯ ಉತ್ಸವಾದಿ ಪರ್ವದಿನಗಳಿಗೆ ಉಪಯೋಗಿಸುವರೆ ಎಷ್ಟಕ್ಕೂ ಸಾಕಾಗದ ಕಾರಣ ಸದ್ರಿ ಡಿಸ್ಕ್ರಿಶನಲ್ ರಜೆಯನ್ನು 4ರಿಂದ 10ಕ್ಕೆ ಏರಿಸುವಂತೆಯೂ ಜಿಲ್ಲೆಯ ಹಾ. ಎ. ಶಾಲೆಗಳಲ್ಲಿ ಅನೇಕ ವರ್ಷಗಳಿಂದ ಕೆಲಸಮಾಡುತ್ತಿದ್ದ ವೃತ್ತಿಪರ ಶಿಕ್ಷಕರಿಗೆ 1960ನೇ ಮೇ ಅಖೈರಿಯವರೆಗೆ ತಿದ್ದುಪಡಿಯಾದ ಹೊಸ ಸ್ಕೇಲಿನ ಮೇರಿಗೆ ಗ್ರಾಂಟು ಸಿಗುತ್ತಾ ಇದ್ದು, ಕಳೆದ ಜೂನ್ ತಿಂಗಳಿಂದ ಅವರ ಗ್ರಾಂಟನ್ನು ತಡೆಹಿಡಿದುದು ನ್ಯಾಯವಲ್ಲವೆಂತಲೂ, ಸದ್ರಿ ವೃತ್ತಿಪರ ಶಿಕ್ಷಕರ ತಡೆಹಿಡಿಯಲ್ಪಟ್ಟ ಗ್ರಾಂಟನ್ನು ಕೂಡಲೇ ಕೊಡಿಸುವಂತೆಯೂ, ಕಳೆದ ಜೂನ್ ಆರಂಭದಲ್ಲಿ ಗಂಗೊಳ್ಳಿ ಯಸ್. ವಿ. ಟಿ. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಹೊಸತಾಗಿ ನೇಮಿಸಲ್ಪಟ್ಟ ಟ್ರೈನ್ಡ್ ಅಧ್ಯಾಪಕರ ಗ್ರಾಂಟನ್ನೂ ಹೀಗೆಯೇ ಇತರ ಶಾಲೆಗಳ ಅಧ್ಯಾಪಕರ ತಡೆಹಿಡಿಯಲ್ಪಟ್ಟ ಗ್ರಾಂಟನ್ನೂ ಕೂಡಲೇ ಕೊಡಿಸುವಂತೆಯೂ ಈ ಸಂಘವು ರಿಜಿಸ್ಟರ್ಡ್ ಆಗಿರುವುದರಿಂದ ಸಂಘದ ಘಟನೆಯ ಛಾಪಾ ಪ್ರತಿಗಳನ್ನು ಬೆಂಗಳೂರಿನ ವಿದ್ಯಾಇಲಾಖಾ ಡೈರೆಕ್ಟರರಿಗೂ, ಮೈಸೂರಿನ ಡಿಸ್ಟ್ರಿಕ್ಟ ಡೈರೆಕ್ಟರರಿಗೂ, ಜಿಲ್ಲಾ ವಿದ್ಯಾಧಿಕಾರಿಗಳಿಗೂ ಕಳುಹಿಸಿ, ವಿದ್ಯಾಇಲಾಖೆಯಿಂದ ಆಗಾಗ ಬರಬಹುದಾದ ಪ್ರಾಮುಖ್ಯ ಸರ್ಕ್ಯುಲಾರುಗಳನ್ನು ಈ ಸಂಘಕ್ಕೂ ಕಳುಹಿಸಿಕೊಡುವಂತೆಯೂ ಮೇಲಧಿಕಾರಿಗಳಿಗೆ ಬರಕೊಳ್ಳಬೇಕೆನ್ನುವ ವಗೈರೆ ಹಲವು ನಿರ್ಣಯಗಳು ಮಂಜೂರಾದುವು.

ಫೀಲ್ಡ್ ಆಫೀಸರರ ಸಮ್ಮೇಳನ— ಉಡುಪಿ ಲೈಫ್ ಇನ್‌ಶೂರನ್ಸ್ ಕೊರ್ಪರೇಶನಿನ ಉಡುಪಿ ಶಾಖೆಯ ಫೀಲ್ಡ್ ಆಫೀಸರರ ಸಮ್ಮೇಳನವೊಂದು ಕಳೆದ ತಾ. 31ರಂದು ಬೊಂಬೆ ಲೈಫ್ ಕಟ್ಟಡದಲ್ಲಿ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಅಸಿಸ್ಟಂಟ್ ಬ್ರಾಂಚ್ ಮೆನೇಜರ್ ಶ್ರೀ ಟಿ. ಪಿ. ಎನ್ ನಂಬಿಯಾರರು ಸ್ವಾಗತ ಭಾಷಣ ಮಾಡುತ್ತ ಫೀಲ್ಡಾಫೀಸರರು ಕಳೆದ ವರ್ಷ ಸಾಧಿಸಿದ ಉತ್ತಮ ಕಾರ್ಯಗಳಿಗಾಗಿ ಅವರನ್ನು ಅಭಿನಂದಿಸಿದರು. ಅಧ್ಯಕ್ಷ ಶ್ರೀ ಪೈಗಳು ಸಮ್ಮೇಲನವನ್ನು ಉದ್ಘಾಟಿಸುತ್ತಾ, ಫೀಲ್ಡಾಫೀಸರರ ಕರ್ತವ್ಯ, ಉದ್ದಿಮೆ ಪ್ರಗತಿ ಸಾಧನೆಗಳ ಕುರಿತು ಮಾತನಾಡಿದರು. ಅಸಿಸ್ಟೆಂಟ್ ಡಿವಿಜನಲ್ ಮೆನೇಜರ್ ಶ್ರೀ ಇ. ಯು. ಜಾಕೊಬ್ ಅವರು ಜೀವವಿಮೆಯು ಸಂದೇಶವು ರಾಜ್ಯದ ಹಳ್ಳಿ ಮೂಲೆಗೆ ಹಬ್ಬಬೇಕಾದ ಆವಶ್ಯಕತೆಯ ಕುರಿತು ಭಾಷಣ ಮಾಡಿದರು. ಕೊನೆಗೆ ಫೀಲ್ಡ್ ಆಫೀಸರರ ಪರವಾಗಿ ಶ್ರೀ ಟಿ. ಸಂಜೀವ ಪೈಗಳು ಕೃತಜ್ಞತೆಗಳನ್ನರ್ಪಿಸಿದರು.

ಎಂ. ಜಿ. ಎಂ. ಕಾಲೇಜಿನ ಕಾಮರ್ಸ್ ಎಸೋಸಿಯೇಶನಿನ ಉದ್ಘಾಟನೆಯು ಉಡುಪಿ ಲೈಫ್ ಇನ್‌ಶೂರೆನ್ಸ್ ಕೊರ್ಪರೇಶನಿನ ಅಸಿಸ್ಟಂಟ್ ಡಿವಿಜನಲ್ ಮೆನೇಜರ್ ಶ್ರೀ ಇ. ಯು. ಜಾಕೋಬ್ ಅವರಿಂದ ತಾ. 6ರಂದು ಜರಗಿಸಲ್ಪಟ್ಟಿತು. ಅಧ್ಯಕ್ಷತೆಯನ್ನು ಪ್ರಿನ್ಸಿಪಾಲ್ ಎಚ್. ಸುಂದರರಾಯರು ವಹಿಸಿದ್ದರು. ಶ್ರೀ ಕೆ. ಆರ್ ಶ್ರೀಕಂಠಯ್ಯನವರು ಸ್ವಾಗತಿಸಿದ ಬಳಿಕ ಇನ್‌ಶೂರೆನ್ಸಿನ ಕುರಿತು ಉದ್ಘಾಟಕರು ಭಾಷಣವಿತ್ತರು. ಅಧ್ಯಕ್ಷರು ಮಾತನಾಡಿದ ಮೇಲೆ ಕಾರ್ಯದರ್ಶಿ ಶ್ರೀ ಅಮ್ಮುಂಜೆ ದಿನಕರ ನಾಯ್ಕರು ಆಭಾರ ಸೂಚಿಸಿದರು.

ಸಾಯನ್ಸ್ ಎಸೋಸಿಯೇಶನಿನ ಉದ್ಘಾಟನೆಯು ಕಳೆದ ತಾ. 31ರಂದು ಕಾರ್ಕಳ ಭುವನೇಂದ್ರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ದಾಮೋದರ ಕಿಣಿ ಅವರಿಂದ ಪ್ರಿನ್ಸಿಪಾಲ್ ಶ್ರೀ ಸುಂದರ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಕೆ. ರಾಮದಾಸ್ ಅವರು ಆರಂಭದಲ್ಲಿ ಸ್ವಾಗತಿಸಿದರು. ಶ್ರೀ ರಾಮಕೃಷ್ಣ ಹೆಗ್ಡೆಯವರು ಅಂತ್ಯದಲ್ಲಿ ಧನ್ಯವಾದಗಳನ್ನು ಅರ್ಪಿಸಿದರು.

ಲಯನ್ಸ್ ಕ್ಲಬ್ಬಿನ ಸಭೆ— ಉಡುಪಿ ಲಯನ್ಸ್ ಕ್ಲಬ್ಬಿನ ಪಾಕ್ಷಿಕ ಸಭೆಯು ತಾ 2ರಲ್ಲಿ ಡಿ. ಮುನ್ಸಿಫ್ ಶ್ರೀ ಜಿ. ಎಸ್ ನಾಗಮೋತಿಯವರ ಅಧ್ಯಕ್ಷತೆಯಲ್ಲಿ ನೆರವೇರಿದಾಗ ಶ್ರೀ ಮೋಹನದಾಸ ಬಾಳಿಗರು ಕಂಪೆನಿಗಳೂ ಆರ್ಥಿಕ ವ್ಯವಸ್ಥೆಯೂ ಎಂಬ ಕುರಿತು ಭಾಷಣವಿತ್ತರು. ವಕೀಲ್ ಶ್ರೀ ಎಸ್. ವಿ. ಕಾಮತರು ಮಂಗಳೂರು ಲಯನ್ಸ್ ಕ್ಲಬ್ಬಿನ ಚಾರ್ಟರ್ ವಿತರಣಾ ಸಮಾರಂಭ ದವಿವರಗಳನ್ನಿತ್ತು ಮಾತನಾಡಿದರು. ಅಧ್ಯಕ್ಷರ ಭಾಷಣವಾದಮೇಲೆ ಕಾರ್ಯದರ್ಶಿ ಶ್ರೀ ಬಿ. ಜಗನ್ನಾಥ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಕೊಳಕುಂದ ಜಾನುವಾರು ಸಂತೆಯು ವಾಡಿಕೆಯಂತೆ ಪುತ್ತೂರು ತಾಲೂಕಿನ ಸುಬ್ರಹ್ಮಣ್ಯ ಗ್ರಾಮದ ಕೊಳಕುಂದದಲ್ಲಿ ನವಂಬರ ತಾ 3ರಿಂದ ತಾ 13ರ ವರೆಗೆ ಜರಗಲಿರುವುದೆಂದೂ ಸರ್ವರೂ ಸಹಕರಿಸಬೇಕೆಂದೂ ಪುತ್ತೂರಿನ ಅಸಿಸ್ಟಂಟ್ ಕಮಿಶನರ್ ಶ್ರೀ ನೂರ್ ಮಹಮೂದ್ ಇವರು ಸೂಚಿಸುತ್ತಾರೆ.

ಯಕ್ಷಗಾನ-ಉಡುಪಿಯ ಶ್ರೀ ಬ್ರಹ್ಮ ಬೈದ್ಯರ್ಕಳ ಭೂಮಾಪತಿ ಯಕ್ಷಗಾನ ಸಂಘದ ಕಾರ್ಯಾಲಯದಲ್ಲಿ ಅನಂತವ್ರತದ ಸಲುವಾಗಿ ರತ್ನಾವತಿ ಕಲ್ಯಾಣ ಎಂಬ ಕಥಾಭಾಗದ ವಿಶೇಷ ಯಕ್ಷಗಾನ ಕೂಟವನ್ನು ಶ್ರೀ ಬಿ. ಜಿ. ಸತ್ಯಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿಸಲಾಯಿತು. ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಪಾಲನಾ ಉಪಾಧ್ಯಾಯರು ಸ್ವಾಗತಿಸಿದ್ದರು.

ಬೆಳ್ತಂಗಡಿ— ದಸರಾ ಮಹೋತ್ಸವದ ಅಂಗವಾಗಿ ಜಿಲ್ಲಾ ಮಟ್ಟದಲ್ಲಿ ನಡೆದ ಅಂತರ್ ಶಾಲಾ ಪಂದ್ಯಾಟಗಳಲ್ಲಿ ಬೆಳ್ತಂಗಡಿ ಬೋರ್ಡ್ ಹೈಸ್ಕೂಲಿನವರು ಕಬಡಿ ಆಟದಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುವರು. ಶೋರ್ಟ್‌ಪುಟನಲ್ಲಿ ಇಲ್ಲಿಯ ವಿದ್ಯಾರ್ಥಿ ಪದ್ಮರಾಜ್ ಶೆಟ್ಟರು ದ್ವಿತೀಯಸ್ಥಾನವನ್ನೂ ಪಡೆದು ಶಾಲೆಗೆ ಕೀರ್ತಿ ತಂದಿರುವರು.

ಮೂಳೂರು ಬಿಲ್ಲವರ ಯೂನಿಯನ್— ಇದರ ಆಶ್ರಯದಲ್ಲಿ ತಾರೀಖು 6-9-60ರಂದು ಶ್ರೀ ಸೀತಾರಾಮ ಸಾಲಿಯಾನರ ಅಧ್ಯಕ್ಷತೆಯಲ್ಲಿ "ಗುರುಜಯಂತಿ"ಯು ಆಚರಿಸಲ್ಪಟ್ಟಿತು. ಗುರೂಜಿಯವರ ಭಾವಚಿತ್ರದ ಮೆರವಣಿಗೆಯನಂತರ ದಿವಂಗತ ಮೂಳೂರು ಕುಶ್ವ ಪೂಜಾರಿಯವರ ಭಾವಚಿತ್ರವು ಶ್ರೀ ಸರ್ವ ಪೂಜಾರಿಯವರಿಂದ ಅನಾವರಣ ಮಾಡಲ್ಪಟ್ಟಿತು. ದಿ| ಕುಶ್ವ ಪೂಜಾರಿಯವರ ಸೂಕ್ಷ್ಮ ಪರಿಚಯವನ್ನು ಉಚ್ಚಿಲ ಶ್ರೀ ಮೋನಪ್ಪ ಪೂಜಾರಿಯವರು ಮಾಡಿದರು. ಆ ಮೇಲೆ ಶ್ರೀ ಗುರುಚರಿತ್ರೆಯ ವಿಷಯ ಶ್ರೀ ಯು. ಅಣ್ಣಯ್ಯ ಪೂಜಾರಿಯವರು ಭಾಷಣ ಮಾಡಿದರು. ಗುರುಪೂಜೆ ಮೊದಲಾದ ಕಾರ್ಯಕ್ರಮಗಳುಜರಗಿಕೊನೆಗೆ ಶ್ರೀ ವೈ. ನಾರಾಯಣ ಪೂಜಾರಿಯವರ ಧನ್ಯವಾದದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

(೬ನೇ ಪುಟದಿಂದ)

ದಲ್ಲಿ ಲುಮುಂಬಾರಿಗೆ ೪೧ ಪರ, ೨ ವಿರುದ್ಧ ಮತಗಳು ದೊರೆತುವು. ಸಿನೇಟು ತನಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದನಂತರ ಶ್ರೀ ಲುಮುಂಬಾರವರು ಕಾಂಗೊದಲ್ಲಿರುವ ಸಂಯುಕ್ತ ರಾಷ್ಟ್ರಸಂಸ್ಥೆಯ ಎಲ್ಲ ಸೇನೆಗಳೂ ಹಿಂದೆ ಹೋಗಬೇಕೆಂದು ಕರೆಯಿತ್ತರು.

ಬೇಂಕುಗಳು ಸಮರ್ಥವಿವೆ

ಬೇಂಕಿಂಗ್ ಕಂಪೆನಿ ತಿದ್ದುಪಡಿ ವಿಧೇಯಕದ ಮೇಲೆ ಚರ್ಚೆ ನಡೆಯುತಿದ್ದಾಗ, ಅರ್ಥಮಂತ್ರಿ ದೇಸಾಯಿಯವರು, ಭಾರತದಲ್ಲಿ ಸದ್ಯ ಬೇಂಕಿಂಗ್ ಸಂಸ್ಥೆಗಳು ತೃಪ್ತಿಕರವಾಗಿ ನಡೆಯುತ್ತಿರುವುದರಿಂದ ಅವುಗಳ ರಾಷ್ಟ್ರೀಕರಣ ಅನಾವಶ್ಯವೆಂದು ತಿಳಿಸಿದರು. ಆದರೂ ಆಡಳಿತೆಯ ದೋಶಗಳಿಂದ ಕೆಲವೊಂದು ಬೇಂಕುಗಳನ್ನು ಮುಚ್ಚಬೇಕಾಗಿ ಬರಲೂ ಬಹುದೆಂದವರು ಹೇಳಿದರು.

ಕೇಂದ್ರ ಶಿಕ್ಷಣ ಸಂಸ್ಥೆ

ಕೇಂದ್ರ ಸರಕಾರವು ಸ್ಥಾಪಿಸಬೇಕೆಂದಿರುವ ಕೇಂದ್ರ ಸಂಸ್ಕೃತ ಸಂಸ್ಥೆಯನ್ನು ಹೈದರಬಾದಿನಲ್ಲಿ ಸ್ಥಾಪಿಸುವುದಾಗಿ ತಿಳಿಯುತ್ತದೆ. ಈ ಬಗ್ಗೆ ಅಲ್ಲಿನ ಸಂಸ್ಕೃತ ಕಾಲೇಜಿನ ಅಧಿಕಾರಿಗಳೊಂದಿಗೆ ಆ ಕಾಲೇಜನ್ನು ವಶಪಡಿಸುವ ಬಗ್ಗೆ ಮಾತುಕತೆ ನಡೆಸಲಿದೆಯೆಂದೂ ಸಂಸ್ಕೃತ ಆಯೋಗವು ಈ ಕಾಲೇಜು ಉತ್ತಮ ಮಟ್ಟದ್ದೆಂದು ಅಭಿಪ್ರಾಯ ಕೊಟ್ಟುದರಿಂದ ಅದನ್ನು ಆರಿಸಲಾಯಿತೆಂದೂ ಶಿಕ್ಷಣ ಮಂತ್ರಿ ಶ್ರೀ ಶ್ರೀಮಾಲಿ ಲೋಕಸಭೆಯಲ್ಲಿ ತಿಳಿಸಿದ್ದಾರೆ

ಪ್ರಕಟಣೆ

ಉಡುಪಿ ತಾಲೂಕು ಆತ್ರಾಡಿ ಗ್ರಾಮದಲ್ಲಿರುವ ಹೊಸ ಬೀಡು ಶೇಷಮ್ಮ ಹೆಗ್ಗಡ್ತಿಯವರ ಮಗಳು ರಾಧಮ್ಮ ಹೆಗ್ಗಡ್ತಿಯು ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನಂದರೆ—

ನನ್ನ ಕುಟುಂಬದಲ್ಲಿ ನಡಿಯುತ್ತಿರುವ ಪಾಲಿನ ವ್ಯಾಜ್ಯದಲ್ಲಿ ಅರ್ಜಿಗಳು ಕೊಡುವ ವಗೈರೆ ಬಗ್ಯೆ ಎಂತ ನನ್ನ ಅಳಿಯ (ಮಗಳ ಗಂಡ) ಬಾಳ್ಕುದ್ರು ನಾರಾಯಣ ಹೆಗ್ಡೆಯು ನನ್ನನ್ನು ನಂಬಿಸಿ ಕೆಲವು ಖಾಲಿ ಕಾಗ್ದಗಳಲ್ಲಿ ನನ್ನ ಎಡ ಹೆಬ್ಬೆಟ್ಟಿನ ಮೊಹರುಗಳನ್ನು ಪಡಕೊಂಡಿದ್ದ, ನನ್ನನ್ನು ವಂಚಿಸಿ ಪಡೆದ ಆ ಹೆಬ್ಬೆಟ್ಟಿನ ಗುರ್ತುಗಳ ಆಧಾರದಿಂದ ಏನೋ ಕಲ್ಪನೆಯ ರಿಕಾರ್ಡುಗಳನ್ನು ತಯಾರಿಸುವವನಾಗಿ ಈಗ ನನ್ನ ತಿಳಿವಳಿಕೆಗೆ ಬಂದಿರುತ್ತದೆ. ಹಾಗೆ ಅವನು ತಯಾರಿಸಬಹುದಾದ ಯಾವತ್ತು ರಿಕಾರ್ಡುಗಳು ಕಲ್ಪನೆಯವುಗಳೂ ಜಾರಿಗೆ ಬರತಕ್ಕವುಗಳೂ, ನಾನು ಒಪ್ಪತಕ್ಕವುಗಳೂ, ನನ್ನನ್ನು ಬಾಧಿಸತಕ್ಕವುಗಳೂ ಅಲ್ಲ. ಎಂಬ ಸಂಗ್ತಿಯನ್ನು ಈ ಮೂಲಕ ತಿಳ್ಸಿರುತ್ತೇನೆ,

● ಈ ಎಡಕೈ ಹೆಬ್ಬೆಟ್ಟಿನ ಗುರುತು ರಾಧಮ್ಮ ಹೆಗ್ಗಡ್ತಿಯ ರುಜು ಆಗಿರುತ್ತದೆ,

ಆತ್ರಾಡಿ ತಾ. 12-9-1960.

ಸುಲಭ ಸಾಹಿತ್ಯ ಪ್ರಕಾಶನ ಕುಮಟಾದ

ಹೆಮ್ಮೆಯ ಪ್ರಕಟಣೆ.

ದೀಪಾವಳಿಯ ದಿನ ೧೯—೧೦—೬೦ರಂದು ಪ್ರಕಟವಾಗುವುದು.

»» ನವರತ್ನ ««

ದೇಶ ವಿದೇಶಗಳ ಸುವಿಖ್ಯಾತ ಬರಹಗಾರರು ಸಾಹಿತ್ಯ, ವೇದಾಂತ, ತತ್ವವಿಚಾರ, ಮೊದಲಾದ ಜೀವನದ ಅನೇಕ ಸಮಸ್ಯೆಗಳ ಮೇಲೆ ಬೆಳಕು ನೀಡಿದ್ದಾರೆ. ಇದೇ ಗ್ರಂಥಕ್ಕಾಗಿ ಬರೆಯಿಸಿ, ಜಾಗರೂಕತೆಯಿಂದ ಸಂಪಾದಿಸಲಾಗಿದೆ. ತ್ರಿವರ್ಣ ಮುಖಪುಟ, ಒಳಗಡೆ ಅನೇಕ ಚಿತ್ರಗಳುಳ್ಳ ಈ ಪುಸ್ತಕವನ್ನು ಪ್ರೊ|| ಬಿ. ಎಚ್. ಶ್ರೀಧರ, ಎಂ. ಎ. ಅವರು ಸಂಪಾದಿಸಿದ್ದಾರೆ. ಬೆಲೆ: ೨—೫೦ ನಪೈ.

ಸೂಚನೆ: [ತಾ. ೧-೧೦-೬೦ರ ಒಳಗೆ ಪ್ರಕಟನಾಪೂರ್ವ ಬೆಲೆ ಎಂದು ೨ ರೂಪಾಯಿM.O. ದಿಂದ ಕಳಿಸಿದವರಿಗೆ "ನವರತ್ನ"ವ ಪ್ರತಿಯನ್ನು ಪೋಸ್ಟಿನಿಂದ ಕಳಿಸಲಾಗುವದು.]

ನಿಮ್ಮ ಸ್ಥಳೀಯ ಪುಸ್ತಕವ್ಯಾಪಾರಿ ಅಥವಾ ನ್ಯೂಸ್ ಏಜಂಟರ ಕಡೆ ಕಾದಿರಿಸಿರಿ.

ಆಸ್ತಮಾ ರೋಗಿಗಳ ತಿಳುವಳಿಕೆಗಾಗಿ —

ಪ್ರಖ್ಯಾತವಾದ ಆಸ್ತಮಾ ಹಿಮಾಲಯನ್ ಮೂಲಿಕೆಯನ್ನು ಹಾಲು ಮತ್ತು ಅನ್ನದಿಂದ ತಯಾರಿಸಿದ ಖೀರ್‌ನೊಂದಿಗೆ ತಾ4-10-60 ಪೂರ್ಣಿಮೆಯ ರಾತ್ರೆ ಸೇವಿಸಿದರೆ ಅಸ್ತಮಾ, ನೇವಸ, ಕೆಮ್ಮು, ಉಬ್ಬಸ, ಉಸಿರಾಟಕ್ಕೆ ಕಷ್ಟವಾಗುವಿಕೆ, ಉಸಿರು ಕಟ್ಟುವಿಕೆ ಇವು ಗುಣವಾಗುವುವು. ಕೂಡಲೇ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡಿರಿ.

Sri Mahatma Sidh Baba Seva Ashram, P. O. Chitrakot, U. P.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2-75
ಪಂಚಮುತು (ಕಾದಂಬರಿ)	2-50
ನಮ್ಮ ಸುತ್ತಲಿನ ಕಡಲು	1-75
ಪರಮಾಣು—ಇಂದು—ನಾಳೆ	3-00

ಸಿಗುವ ಸ್ಥಳ: ನವಭಾರತ ಬುಕ್ ಡಿಪೊ, ಉಡುಪಿ.

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮಿನ್ದಾರ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಮದುವೆ ಸೀರೆ	1	0

ಅಪೂರ್ವ ಸಂದರ್ಭ !

ರೂ36-6-0ಯ ಈ ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ 30-0-0ಕ್ಕೆ ಕೊಡಲಾಗುವುದು.

ಬರೆಯಿರಿ:—

ನವಭಾರತ ಪುಸ್ತಕ ಭಂಡಾರ, ಉಡುಪಿ

ಅಭಿನಂದನೆ

ಶತಾಯು ವಿಶ್ವೇಶ್ವರಯ್ಯನವರು

ಕಡಿಮೆ ಮಾತಾಡಬೇಕು; ಹೆಚ್ಚು ಮಾಡಿತೋರಿಸಬೇಕು— ಎಂಬುದನ್ನು ಜೀವನದ ಮೂಲ ತತ್ತ್ವವನ್ನಾಗಿರಿಸಿದ ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ೧೫ನೆ ದಿನಾಂಕ ಶತಾಯುಷಿಯಾಗುವರು. ಭಾರತೀಯರೆಲ್ಲರ ಆದರದ ಗೌರವದ ಅಭಿಮಾನದ ಈ ಮೂರ್ತಿಯನ್ನು ಈ ಸುದಿನದಲ್ಲಿ ಭಾರತಕ್ಕೆ ಭಾರತವೇ ಅಭಿನಂದಿಸುತ್ತದೆ.

"ಪವಿತ್ರರಾಗಿರುವುದೆಂತು, ಕಠೋರ ಪರಿಶ್ರಮ ಮಾಡುವುದೆಂತು, ದೀರ್ಘ ಜೀವಿಯಾಗುವುದೆಂತು ಮತ್ತು ಲೋಕ ಪ್ರಿಯತೆ ಗಳಿಸುವುದೆಂತು ಎಂಬುದನ್ನು ನಮಗೆ ಕಲಿಸಿಕೊಟ್ಟ ಭಾರತದ ಮಹಾಪುತ್ರರನ್ನು ನಾವು ಅನುಕರಿಸಬೇಕು"- ಎಂದು ಇಂದಿನಿಂದ ಹತ್ತು ವರ್ಷಗಳಿಗೆ ಮೊದಲು ಚಕ್ರವರ್ತಿ ಶ್ರೀ ರಾಜಗೋಪಾಲಾಚಾರ್ಯರು ಮೈಸೂರಿನ ಮಾತ್ರವಲ್ಲ, ಭಾರತದ ಮಹಾವೃದ್ಧ ಪುರುಷ ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ೯೦ನೆಯ ಜನ್ಮದಿನೋತ್ಸವದ ಸಂದರ್ಭದಲ್ಲಿ ಅವರ ಬಗ್ಗೆ ಶ್ರದ್ಧೆಯನ್ನು ವ್ಯಕ್ತಪಡಿಸಿದರು. ಅದೇ ವಿಶ್ವೇಶ್ವರಯ್ಯನವರು ಸಪ್ಟಂಬರ ೧೫ಕ್ಕೆ ತಮ್ಮ ೧೦೦ ವರ್ಷಗಳ ಸಫಲ ಜೀವನವನ್ನು ಬಾಳಿ, ೧೦೧ನೆಯ ವರ್ಷಕ್ಕೆ ಪಾದಾರ್ಪಣ ಮಾಡಲಿದ್ದಾರೆ.

ತಮ್ಮ ದೀರ್ಘ ಜೀವನದ ಬಗ್ಗೆ ಶ್ರೀ ವಿಶ್ವೇಶ್ವರಯ್ಯನವರು ವಿಸ್ಮಯಪಡುವುದಿಲ್ಲ. ಈ ಕುರಿತಾಗಿ ಚರ್ಚಿಸುವುದೂ ಅವರಿಗೆ ಇಷ್ಟವಿಲ್ಲ. ಒಂದು ಬಾರಿ ಒಬ್ಬ ಪತ್ರಿಕಾಕರ್ತರು ಆದರಪೂರ್ವಕವಾಗಿ ಪ್ರಶ್ನಿಸಿದರಂತೆ: "ತಾವು ಹೇಗಿದ್ದೀರಿ?" ಈ ಸವಾಲಿನಿಂದ ಸಿಟ್ಟಿಗೆದ್ದ ವಿಶ್ವೇಶ್ವರಯ್ಯನವರು ಮರುಪ್ರಶ್ನೆ ಮಾಡಿದರು: "ತಾವು ಹೀಗೇಕೆ ಕೇಳುತ್ತೀರಿ? ನಾನು ಪ್ರಾಣಾಂತಿಕ ಸ್ಥಿತಿಯಲ್ಲಿದ್ದೇನೆಯೇನು?"

ತಮ್ಮ ದೀರ್ಘ ಜೀವನದ ರಹಸ್ಯವನ್ನು ಅವರು ಗುಪಿತವಾಗಿ ಎಂದೂ ಇಟ್ಟುಕೊಂಡಿಲ್ಲ. ಯುವಕರಿಗೆ, ಏನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬುದರ ಬಗ್ಗೆ ಉಪದೇಶ ನೀಡಲು ಅವರು ಹಿಂದುಮುಂದು ನೋಡುವುದಿಲ್ಲ. "ನಿಮ್ಮ ಕಣ್ಣುಗಳ ಕಾಂತಿಯನ್ನುಳಿಸ ಬಯಸುವಿರಾದರೆ, ಪ್ರತಿದಿನ ಕೆಲ ಮಿನಿಟುಗಳ ಕಾಲ ಕಣ್ಣಿನ ಗೊಂಬೆಗಳನ್ನು ಮೇಲೆ ಕೆಳಗೆ, ಅತ್ತ ಇತ್ತ ಚಲಿಸುವಂತೆ ಮಾಡಿ ಅದಕ್ಕೆ ವ್ಯಾಯಾಮ ದೊರೆಯುವಂತೆ ಮಾಡಿರಿ. ಬೆರಳುಗಳಿಂದ ಕಣ್ಣುಗಳನ್ನು ಮೆಲ್ಲಮೆಲ್ಲನೆ ಒರಸಿ, ಅವನ್ನು ಆರಾಮವಾಗಿಡಿರಿ. ಊಟಕ್ಕೆ ಮೊದಲು ಹೆಚ್ಚು ಹಸಿವೆಯಾಗುವುದು ಉತ್ತಮಾರೋಗ್ಯದ ಸಲ್ಲಕ್ಷಣವಾಗಿರುವುದರಿಂದ ಕಡಿಮೆ ಆಹಾರ ಸೇವಿಸಿರಿ. ನಿತ್ಯವೂ ಒಂದೆರಡು ಮೈಲು ತಿರುಗಾಟ ಮಾಡಬೇಕು; ಭೋಗ-ವಿಲಾಸಗಳ ಬಗ್ಗೆ ವಿಶೇಷ ಆಸಕ್ತರಾಗಬೇಡಿರಿ" ಎಂದು ಕೆಲವಾರು ವರ್ಷಗಳ ಮೊದಲೇ ಅವರು ಯುವಕರಿಗೆ ಹೇಳಿ, ತಮ್ಮ ಜೀವನದ ರಹಸ್ಯವನ್ನು ತಿಳಿಸಿಬಿಟ್ಟಿದ್ದರು.

ಬೊಂಬಾಯಿ ಸರಕಾರದ ಸಾರ್ವಜನಿಕ ನಿರ್ಮಾಣ ವಿಭಾಗದ ಸಹಾಯಕ ಇಂಜಿನಿಯರ ಪದವಿಯಿಂದ ಹಿಡಿದು, ಮೈಸೂರಿನ ದಿವಾನಗಿರಿಯ ವರೆಗಿನ ಹೊರೆಯನ್ನು ನಿರ್ವಹಿಸಿದ ಶ್ರೀ ವಿಶ್ವೇಶ್ವರಯ್ಯ ಅನುಶಾಸಿತ ವಿಧಾನದಿಂದ ಕೆಲಸ ಮಾಡುವುದನ್ನೇ ತನ್ನ ಸಫಲತೆಯ ಮೂಲವೆಂದು ತಿಳಿಯುತ್ತಾರೆ. ನಿಯೋಜಿತ ಅರ್ಥ ವ್ಯವಸ್ಥೆಯ ಬಗ್ಗೆ ಯೋಚಿಸಿ, ಉದ್ದಿಮೆಗಳ ವಿಸ್ತಾರವಾಗದೆ ಉದ್ಧಾರವಾಗದು ಎಂಬ ಎಚ್ಚರಿಕೆ ನೀಡಿದ ಪ್ರಥಮ ಭಾರತೀಯರೆಂದರೆ, ಆಧುನಿಕ ಮೈಸೂರಿನ ನಿರ್ಮಾತೃ ವಿಶ್ವೇಶ್ವರಯ್ಯನವರು. ಆದರೆ, ದೇಶದ ಆಧುನಿಕ ಅರ್ಥವ್ಯವಸ್ಥೆಯ ಬಗ್ಗೆ ಇವರು ಅಸಮಾಧಾನ ವ್ಯಕ್ತಪಡಿಸುತ್ತಾರೆ. ರಾಷ್ಟ್ರೀಕರಣದ ಪ್ರವೃತ್ತಿಯು ಭಾರತೀಯ ಆರ್ಥಿಕ ವಿಕಾಸಕ್ಕೆ ಬಾಧಕವೆಂದಿವರು ಹತ್ತು ವರ್ಷ ಮೊದಲು ಅಂದಿದ್ದರು. ೧೯೪೭ರಲ್ಲಿ ಭಾರತ ಸರಕಾರವು ವಿಮಾನ ಸೇವೆಯನ್ನು ರಾಷ್ಟ್ರೀಕರಿಸಲು ನಿರ್ಧರಿಸಿದ್ದಾಗ ಇವರದನ್ನು ವಿರೋಧಿಸಿದ್ದರು. ಸಹಕಾರಿ ವ್ಯವಸಾಯದಿಂದಾಗಬಹುದಾದ ದುಷ್ಪರಿಣಾಮಗಳನ್ನು ಸರಕಾರದ ಗಮನಕ್ಕಿವರು ತಂದಿದ್ದಾರೆ.

೧೮೬೧ರ ಸಪ್ಟಂಬರ ೧೫ರಂದು ಇಂಜಿನಿಯರ—ರಾಜನೀತಿಜ್ಞ ವಿಶ್ವೇಶ್ವರಯ್ಯನವರು ಮೈಸೂರಲ್ಲಿ ಜನಿಸಿದರು. ಬೆಂಗಳೂರಿನ ಸೆಂಟ್ರಲ್ ಹಿಂದೂ ಕಾಲೇಜ್ ಮತ್ತು ಪೂಣೆಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಉಚ್ಚ ಶಿಕ್ಷಣವನ್ನು ಪಡೆದರು. ತಮ್ಮ ೨೩ನೆಯ ವರ್ಷದಲ್ಲೇ ಬೊಂಬಾಯಿ ಸರಕಾರದ ಸಾರ್ವಜನಿಕ ನಿರ್ಮಾಣ ಕಾರ್ಯ ವಿಭಾಗದ ಸಹಾಯಕ ಇಂಜಿನಿಯರರಾಗಿ ಸೇರಿಕೊಂಡರು. ಆ ನಂತರ ಕೆಲಸಮಯ ಹಿಂದಿನ ಹೈದರಾಬಾದ ರಾಜ್ಯದಲ್ಲಿದ್ದು ೧೯೦೯ರಲ್ಲಿ ತಮ್ಮ ಮೈಸೂರಿಗೆ ಬಂದರು. ಮೂರೇ ವರ್ಷಾನಂತರ ರಾಜ್ಯದ ದಿವಾನರೂ ಆದರು. ಮೈಸೂರಿನ ಕೃಷ್ಣರಾಜಸಾಗರ, ವಿಶ್ವವಿದ್ಯಾಲಯ, ಬ್ಯಾಂಕ್, ವಾಣಿಜ್ಯ ಮಂಡಲ, ಮೈಸೂರ್ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆ, ಜಯಚಾಮರಾಜೇಂದ್ರ ಒಕ್ಯುಪೇಶನಲ್ ಇನ್ಸ್ಟಿಟ್ಯೂಟ್ ಮತ್ತು ಮೈಸೂರು ಸಾಬೂನು, ಚರ್ಮದ ಕಾರಖಾನೆ ಮೊದಲಾದ ಅನೇಕಾನೇಕ ಸಂಸ್ಥೆಗಳು ಇವರ ಕಾರ್ಯಕ್ರಮದ ಯೋಜನೆಯಂತೆ ಸ್ಥಾಪಿತವಾದುವು. ರಾಜ್ಯದಲ್ಲಿ ಶಿಕ್ಷಣ ಪ್ರಸಾರದ ಬಗ್ಗೆ ದಿಟ್ಟ ಹೆಜ್ಜೆ ಇಟ್ಟವರು ಇವರೇ ಸರಿ. ಇವರ ಮಾರ್ಗದರ್ಶನಾನುಸಾರವಾಗಿ ಉಳಿದ ಕೆಲವೊಂದು ರಾಜ್ಯಗಳೂ ಅಭಿವೃದ್ಧಿಯ ಹಾದಿ ತುಳಿಯತೊಡಗಿದುವು.

ಶತಾಯು ಮಹಾಪುರುಷ ವಿಶ್ವೇಶ್ವರಯ್ಯನವರ ಮಿದುಳು ಇಂದೂ ಹಿಂದಿನಂತೆಯೇ ಸಕ್ರಿಯವಾಗಿದೆ. "ಕಡಿಮೆ ಆಡು; ಹೆಚ್ಚು ಮಾಡು!' ಎಂಬುದು ಇವರ ವ್ಯಕ್ತಿತ್ವದ ವೈಶಿಷ್ಟ್ಯ. ಮುಪ್ಪಿನ ಕಾರಣದಿಂದ ಅವರ ವಿಚಾರಶಕ್ತಿ ಕುಂಠಿತವಾಗಲಿಲ್ಲ; ಕಠೋರ ಪರಿಶ್ರಮ ಮಾಡಲು ನಿಶ್ಶಕ್ತತೆಯೂ ಇಲ್ಲ. ತನ್ನ 'ಜೀವನದ ಸಂಸ್ಮರಣೆ'ಯನ್ನಲ್ಲದೆ, "ಭಾರತದ ಪುನಾರಚನೆ" ಮತ್ತು 'ಭಾರತದ ಯೋಜಿತ ಅರ್ಥ ವ್ಯವಸ್ಥೆ' ಎಂಬೆರಡು ಪುಸ್ತಕಗಳನ್ನೂ ಇವರು ಬರೆದಿದ್ದಾರೆ. ಭಾರತದ ಪ್ರಾತಃಸ್ಮರಣೀಯ ರತ್ನಪ್ರಾಯರಲ್ಲಿ ಅಗ್ರಗಣ್ಯರಾದ ಶ್ರೀ ವಿಶ್ವೇಶ್ವರಯ್ಯನವರ ಶತಮಾನೋತ್ಸವವು ಬಹು ವಿಜೃಂಭಣೆಯಿಂದ ನೆರವೇರಲಿದ್ದು ಪ್ರಧಾನಿ ನೆಹರು ಅವರು ಇದರಲ್ಲಿ ಭಾಗವಹಿಸುವರು. ಶ್ರೀ ವಿಶ್ವೇಶ್ವರಯ್ಯನವರು ಇನ್ನೂ ಬಹುಕಾಲ ತಮ್ಮ ಅನುಭವ-ಜ್ಞಾನ ಬುದ್ಧಿಗಳ ಪ್ರಯೋಜನವನ್ನು ಮುಂದಕ್ಕೂ ಭಾರತೀಯರಿಗೆ ನೀಡುತ್ತಿರಲಿ ಎಂಬುದೇ ಈ ಶುಭ ದಿನದ ಹೃತ್ಪೂರ್ವಕ ಹಾರೈಕೆ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಕ್ಷಣವು ಅಧಿಕಾಧಿಕ ಪ್ರಚಾರಗೊಂಡಂತೆ ದೈನಂದಿನ ಆಗು ಹೋಗುಗಳ ಬಗ್ಗೆ ಅವರೂ ತಿಳಿದುಕೊಳ್ಳುವ ಸದವಕಾಶವೊದಗಿ ಬಂದಲ್ಲಿ ಸಕ್ರಿಯವಾಗಿ ಭಾಗವಹಿಸುವ ನಿರ್ಧಾರ ಮಾಡಲು ಹಿಂಜರಿಯಲಾರರು.

ಇನ್ನು ಈ ಮಹಿಳಾ ಸಮ್ಮೇಳನದ ಔಚಿತ್ಯವನ್ನು ತುಸು ವಿಚಾರಿಸಿದರೆ, ಅಪ್ರಸ್ತುತವೆನಿಸದು. ಮಹಿಳೆಯರಲ್ಲಿ ಒಕ್ಕಟ್ಟನ್ನೂ ಏಕತೆಯನ್ನೂ ಸ್ಥಾಪಿಸಬೇಕೆಂದು ಬಯಸಿದ ಈ ಸಂಘಟಕರು ಕಾಂಗ್ರೆಸ್ ಮಹಿಳೆಯರನ್ನು ಮಾತ್ರ ಏಕತ್ರಗೊಳಿಸಿದುದು ರಾಜಕೀಯ ಕಾರಣಗಳಿಂದ ಮಾತ್ರವೆಂದು ಹೇಳಬಹುದು. ಮಹಿಳೆಯರಿಗಿರುವ ಸಮಸ್ಯೆಗಳೆಲ್ಲವೂ ಇಡಿ ದೇಶದಲ್ಲಿಯೇ ಒಂದೇ ಆಗಿರುವಾಗ ಸಾಮಾಜಿಕ ಅನ್ಯಾಯಗಳೆ ಸ್ವರೂಪತಃ ಭಿನ್ನವಿರುವಾಗ, ರಾಜಕಾರಣಿಗಳ ನೇತೃತ್ವದಲ್ಲಿಯೇ ಈ ಪರಿಷತ್ತು ಸೇರಿ, ರಾಜಕೀಯ ದೃಷ್ಟಿಯಿಂದಲೇ ಸಮಸ್ಯೆಗಳತ್ತ ಲಕ್ಷ್ಯಪೂರಯಿಸಿತೆನ್ನಬಹುದು. ಆದರೆ, ಇದಕ್ಕಾಗಿ ಬೇರೆ ಒಂದು ಸಂಘಟನೆಯ ಆವಶ್ಯಕತೆಯಿತ್ತೆ? ಕಾಂಗ್ರೆಸ್ ಪಕ್ಷದಲ್ಲಿಯೇ ಈ ಬಗ್ಗೆ ಚರ್ಚಿಸುವುದು ಶಕ್ಯವಿದ್ದಿಲ್ಲವೇ ಎಂದೆನಿಸುತ್ತದೆ. ಪಕ್ಷದಲ್ಲಿಯೇ ಮಹಿಳಾ ಸದಸ್ಯರಿಗೆ ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಿಕೊಟ್ಟರೆ, ಸಾಕಾಗಬಹುದಿತ್ತು. ಪ್ರಶಾಸನಾತ್ಮಕ ಸುಧಾರಣೆಗಳಿಂದ ಆದ ಲಾಭಾಲಾಭಗಳ ಬಗ್ಗೆ ಆಲೋಚನಾತ್ಮಕ ಚರ್ಚೆ ನಡೆಯಬೇಕಾದರೆ, ಕೇವಲ ಕಾಂಗ್ರೆಸ್ ಮಹಿಳೆಯರು ಮಾತ್ರ ಒಟ್ಟು ಸೇರಿದರೆ ಸಾಲದು; ಎಲ್ಲ ಮಹಿಳೆಯರೂ ಒಗ್ಗೂಡುತ್ತಿದ್ದರೆ, ಒಳ್ಳೆಯದೆನ್ನಬಹುದಿತ್ತು.

ಅದೇನೇ ಇದ್ದರೂ, ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿಯವರು ದೇಶ ಸಂರಕ್ಷಿಸುವ ಝಾನ್ಸಿ ಲಕ್ಷ್ಮೀಬಾಯಿಯಂತಹರಾಗಬೇಕೆಂದು ಮಹಿಳೆಯರಿಗಿತ್ತ ಕರೆ ಮಾತ್ರ ಕಾಂಗ್ರೆಸ್ ಮಹಿಳೆಯರಿಗೆ ಮಾತ್ರವಲ್ಲ, ಎಲ್ಲರಿಗೂ ಅನ್ವಯಿಸುವುದು. ಭಾರತೀಯ ಮಹಿಳೆಯರು ಈ ಉಪದೇಶದ ಸಾರವನ್ನು ಗ್ರಹಿಸಿ, ಅಧಿಕಾರ ಹೋರಾಟದಲ್ಲಿಯೇ ವ್ಯರ್ಥ ಸಮಯಗಳೆಯದೆ, ದೇಶಹಿತ ದೃಷ್ಟಿಯಿಂದ ಸರಸ ಜೀವನವನ್ನು ಬಾಳಿ ಭಾವಿ ಜನಾಂಗದ ನಿರ್ಮಾಣ ಕಾರ್ಯದಲ್ಲಿ ಬಹು ಜಾಗ್ರತೆ ವಹಿಸುವುದರಿಂದ, ದೇಶ ಕಲ್ಯಾಣಕ್ಕೂ ಕಾರಣವಾಗುವುದು.

ಮೆಟ್ರಿಕ್ ತೂಕ ಮತ್ತು ಅಳತೆಗಳು

ದೊರೆಯುವ ಸ್ಥಳ: ಲೈಸೆನ್ಸ್ ಡೀಲರ್ಸ್

ಗುಂಡು ನಾಯಕ್ ಅಂಡ್ ಸನ್ಸ್
ಕಾರ್ ಸ್ಟ್ರೀಟ್, ಉಡುಪಿ (ಸೌ. ಕೆ.)

ಹೊಸತಾಗಿ ತೆರೆದಿರುವ ನಮ್ಮ ಹಿಂದುಗಡೆಯಲ್ಲಿರುವ ಗುಂಡು ನಾಯಕ್ಸ್ ಫೇಶನ್ ಎಂಪೋರಿಯಂ—ಜವಳಿ ಅಂಗಡಿಯನ್ನು ಸಂದರ್ಶಿಸಿರಿ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೇರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ. ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ.
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಸಭ್ಯತೆಯ ಸಾಧನ

ನಿಷ್ಕಲಂಕ ವಿಶ್ವಾಸಯೋಗ್ಯ ವರ್ತನೆ

ಒಬ್ಬ ವ್ಯಕ್ತಿಯ ವೈಯಕ್ತಿಕ ಚರಿತ್ರ ಹೀನತೆ ಅಥವಾ ಅಭಾವದ ದೆಸೆಯಿಂದ ಅಖಂಡ ಸಮಾಜ, ದೇಶಗಳಿಗೇನೇ ನಷ್ಟವಾಗುವ, ಅಪಕೀರ್ತಿ ತಟ್ಟುವ ಉದಾಹರಣೆಗಳನ್ನು ಕಂಡರೆ, ನಿಷ್ಕಲಂಕ ವಿಶ್ವಾಸಯೋಗ್ಯ ವರ್ತನೆಯೇ ನಾವು ಸಭ್ಯರೆಂದುಕೊಳ್ಳಲು ಸಾಧನವೆಂದು ತಿಳಿಯುವುದು.

ಶ್ರೀ ರಾಶಿ.

ಒಂದು ದಿನ ಓರ್ವ ಮಿತ್ರನನ್ನು ಭೆಟ್ಟಿಯಾದಾಗ, ಆತ ತನ್ನೊಡನಿದ್ದ ಇನ್ನೊಬ್ಬನಿಗೆ ನನ್ನ ಪರಿಚಯ ಮಾಡಿಕೊಟ್ಟ: "....ಇಂತಹ ಸಂಸ್ಥೆಯಲ್ಲಿ ಪ್ರಧಾನ ವ್ಯವಸ್ಥಾಪಕರಾಗಿದ್ದಾರೆ......" ಆಗ ಆ ಹೊಸ ವ್ಯಕ್ತಿ ನನ್ನನ್ನು ನಖಶಿಖಾಂತವಾಗಿ, ಒಂದೇ ನೋಟದಿಂದ ನನ್ನನ್ನು ತಿಳಿದುಕೊಳ್ಳುವ ಅಪೇಕ್ಷೆಯಿಂದೆಂಬಂತೆ ನಿಧಾನವಾಗಿ ನೋಡತೊಡಗಿದ. ನನಗೆ ಇದು ಸರಿಬರಲಿಲ್ಲವಾದರೂ ಮಿತ್ರತ್ವದಿಂದಾಗಿ ಮೌನಿಯಾದೆ. ಮತ್ತೊಂದು ದಿನ ನಾನು ನನ್ನ ಮಿತ್ರನನ್ನು ಎದುರ್ಗೊಂಡಾಗ, ಆ ನವವ್ಯಕ್ತಿಯ ರಹಸ್ಯ ಭೇದಿಸಿದೆ. ಆತ ನಾನು ಸಂಬಂಧವಿರಿಸಿಕೊಂಡಿದ್ದ ಸಂಸ್ಥೆಯೊಡನೆ ಮೊದಲು ಸಂಬಂಧವಿರಿಸಿದ್ದನಂತೆ. ಆದರೆ, ಆದರ ಹಿಂದಿನ ಪ್ರಧಾನ ವ್ಯವಸ್ಥಾಪಕನದು ಯಾವಾಗಲೂ ಸಿಡುಕಿನ ಸ್ವಭಾವ; ನೌಕರ ಚಾಕರರೊಡನೆ ಜಗಳಾಡುವುದೇ ಆತನ ಕೆಟ್ಟ ಗುಣ. ಕೆಲಸದಲ್ಲಿ ಯಾವುದೇ ಆಸಕ್ತಿಯಿಲ್ಲ; ಸಿಟ್ಟು ಮೂಗಿನ ತುದಿಯಲ್ಲಿ.......ಇತ್ಯಾದಿಯಾದ ಪುರಾಣ ಕೇಳಿ, ಆತನಲ್ಲಿ ಜನಿಸಿದ್ದ ಈರ್ಷ್ಯಾ ಮನೋಭಾವನೆಯನ್ನು ನಾನು ಕಂಡುಕೊಂಡೆ. ಕೆಲವೇ ದಿನಗಳಲ್ಲಿ ಸಾರ್ವಜನಿಕರಲ್ಲಿ ನಮ್ಮ ಸಂಸ್ಥೆಯ ಬಗ್ಗಿದ್ದ ಅಭಿಪ್ರಾಯವೂ ನನಗಾಯಿತು. ಆ ಹೊಸ ವ್ಯಕ್ತಿಯಾದರೂ ನಮ್ಮ ಸಂಸ್ಥೆಯ ಬಗ್ಗೆ ದುರಭಿಪ್ರಾಯದಿಂದಲೇ ಆ ರೀತಿ ನನ್ನನ್ನು ನೋಡಿರಬೇಕು. ಸಂಸ್ಥೆಯ ಪ್ರಧಾನ—ವ್ಯವಸ್ಥಾಪಕರ ಸ್ವಭಾವವೇ ಆ ರೀತಿಯೆಂದಾತ ತಿಳಿದುಕೊಂಡಿರಬಹುದು. ಯಾರೋ ಒಬ್ಬನ ಕಾರಣದಿಂದ ಒಂದು ಸಂಸ್ಥೆಯ ಗೌರವ ಹೇಗೆ ಅಳಿಯುತ್ತದೆ ಎಂದು ನನಗಾಗ ತಿಳಿಯಿತು. ಓರ್ವ ಸಾಧಾರಣ ವ್ಯಕ್ತಿಯು ತನ್ನ ದುರ್ಬಲತೆಯಿಂದ ಹಿರಿಯ ಸಂಸ್ಥೆಗೆ ಪರೋಕ್ಷವಾಗಿ ಮಾಡುವ ಹಾನಿಯೇನೆಂದು ನಾ ಕಂಡುಕೊಂಡೆ. ಒಬ್ಬ ವ್ಯಕ್ತಿ ತನ್ನ ಚಾರಿತ್ರಿಕ ಅಥವಾ ಸ್ವಭಾವಗತ ಅಭಾವದಿಂದ ತಾನಲ್ಲದೆ ತನ್ನ ಸಂಬಂಧಿತರನ್ನೂ ಕೆಡಿಸುತ್ತಾನೆ ಎಂಬುದು ಸ್ವಯಂವೇದ್ಯವಾಯಿತು.

ಒಬ್ಬ ರಾವಣನಿಂದಾಗಿ ಆತನ ಕುಲವೂ ದೇಶವೂ ಸಂಪೂರ್ಣ ನಷ್ಟವಾಯಿತು; ಒಬ್ಬ ಕೌರವನಿಂದ ಕುರುವಂಶವೇ ಅಪಕೀರ್ತಿಗೆ ಗುರಿಯಾಯಿತು. ಇದೆಲ್ಲ ಹಿಂದಿನ ಕಥೆಗಳಾದರೆ, ಇಂತಹ ಉದಾಹರಣೆಗಳು ಇಂದಿಗೂ ನಡೆಯುತ್ತಿವೆ. ಕೇವಲ ಒಂದೆರಡು ಕೆಟ್ಟವರಿಂದ ಏನು ಹಾನಿ? ಎಂದು ಪ್ರಶ್ನಿಸಬಹುದು; ಆದರೆ, ಮೇಲಿನ ಉದಾಹರಣೆಯೇ ಅದರಿಂದ ಎಷ್ಟು ಹಾನಿಯೊದಗೀತೆಂಬುದನ್ನು ತಿಳಿಸಬಲ್ಲುದು.

ನೆರೆಮನೆಯ ಗೃಹಸ್ಥರೊಬ್ಬರು ತಮ್ಮ ಪ್ರಾಯ ಪ್ರಬುದ್ಧ ಕುಮಾರಿಗೆ ಸರಿಯಾದ ವರನನ್ನರಸುತ್ತಿದ್ದರು. ಒಬ್ಬ ಯೋಗ್ಯ ವರ ಪರಿಚಯ ನೀಡುತ್ತ ಅವರ ಸ್ನೇಹಿತರೆಂದರು: "ಹುಡುಗ ಸುಂದರನೂ ಸುಶೀಲನೂ ಇದ್ದಾನೆ. ಎಂ. ಎ. ಪದವೀಧರ. ಕಾಲೇಜಿನಲ್ಲಿ ಉದ್ಯೋಗವೂ ಇದೆ. ಆಸ್ತಿಪಾಸ್ತಿಯೂ ಸ್ವಲ್ಪ ಇದೆ. ಆತನ ಊರು ..." ತಕ್ಷಣ ಆ ಗೃಹಸ್ಥರು ತಡೆದು ನುಡಿದರು: "ಬೇಡ, ಬೇಡ. ಆ ಊರವನಿಗೆ ಏನೇ ಆಗಲಿ, ನನ್ನ ಹುಡುಗಿಯನ್ನು ಕೊಡಲಾರೆ." ಈ ಗೃಹಸ್ಥರ ವಾದಸರಣಿ ಅವಿವೇಕದ್ದಿರಬಹುದು; ಆದರೆ, ಅವರಲ್ಲಿ ಆ ಊರವರ ಬಗ್ಗೆ ಎಂತಹ ದುರಭಿಪ್ರಾಯವಿದೆಯೆಂಬುದನ್ನು ಗಮನಿಸಬಹುದು. ಆ ಊರಿನ ಒಬ್ಬಿಬ್ಬರು ಕ್ರೂರಿಗಳೋ ಕಠೋರರೋ ಆಗಿದ್ದಿರಬಹುದು; ಇದರಿಂದಾಗಿ ಆ ನಗರದವರಿಗೇನೇ ಕಲಂಕ ಬಡಿಯುವಂತಾಯಿತು.

ಒಂದು ಆಫೀಸಿನಲ್ಲಿ ನೌಕರರ ಆವಶ್ಯಕತೆಗೆ ತಕ್ಕಂತೆ ಪ್ರತಿ ಮಾಸದಲ್ಲೂ ಮುಂಗಡವಾಗಿ ವೇತನ ಕೊಡುತ್ತಿದ್ದರು. ಒಬ್ಬ ನೌಕರನು ಒಂದು ತಿಂಗಳ ವೇತನ ಮುಂಗಡ ಪಡೆದು ಪರಾರಿಯಾದನು. ಅನಂತರ, ಆಫೀಸಿನಲ್ಲಿ ತಿಂಗಳ ೧೦ನೆ ತಾರೀಕಿಗೆ ಮೊದಲು ಹಿಂದಿನ ತಿಂಗಳ ವೇತನವನ್ನು ಕೊಡಲಾಗುವುದೆಂದು ತಿಳಿಸಲಾಯಿತು. ಒಬ್ಬ ನೌಕರನ ವಿಶ್ವಾಸಘಾತದಿಂದಾಗಿ ಆಫೀಸಿನ ನೂರಾರು ನೌಕರರು ದೊರೆಯುತ್ತಿದ್ದ ಸೌಲಭ್ಯದಿಂದ ವಂಚಿತರಾಗುವಂತಾಯಿತು. ಇದೇ ರೀತಿಯಲ್ಲಿ ಕೈಗಡ ಕೊಡುತ್ತಿದ್ದ ಮಹನೀಯರೊಬ್ಬರನ್ನು ನಾನು ಬಲ್ಲೆ. ಯಾರೇ ಬರಲಿ, ಕರುಣೆದೋರಿ ಅವರಿಗೆ ಹತ್ತೋ ಹದಿನೈದೋ ಕಡಗೊಡುತ್ತಿದ್ದರು. ವಾಗ್ದಾನ ಮಾಡಿದ ದಿನದಂದು ತಪ್ಪದೇ ತಂದು ಕೊಡುತ್ತಿದ್ದರು. ಒಂದು ವೇಳೆ ಮರಳಿಸಲು ಅನನುಕೂಲವಾದರೂ ಬಂದು ತಿಳಿಸಿ ಇನ್ನೊಂದು ದಿನ ನಿಶ್ಚಿತವಾಗಿ ಕೊಡುತ್ತಿದ್ದರು. ಇದರಿಂದಾಗಿ ಹಲವರಿಗೆ ಉಪಕಾರವಾಗುತ್ತಿತ್ತು. ಒಂದು ಬಾರಿ ಒಬ್ಬನು ಮಾಡಿದ ಮೋಸದಿಂದಾಗಿ ಯಾರಿಗೇ ಆಗಲಿ ಕೈಗಡ ಕೊಡುವುದನ್ನೇ ಅವರು ನಿಲ್ಲಿಸಿ ಬಿಟ್ಟರು. ಉದಾರಿದಾನಿಗಳೊಬ್ಬರು ಯಾವುದೇ ಸಂಘ ಸಂಸ್ಥೆಯ ಹೆಸರಲ್ಲಿ ಚಂದಾ ಎತ್ತಲು ಬರುವವರಿಗೆ ಸಹಾಯ ನೀಡುತ್ತಿದ್ದರು. ಒಮ್ಮೆ ಒಬ್ಬ ತಾನು... ಸಂಸ್ಥೆಯ ಕಾರ್ಯದರ್ಶಿಯೆಂದು ಸಹಾಯ ಕೇಳಿದ. ಇವರು ಕೊಟ್ಟರು. ಆದರೆ, ಆ ಹೆಸರಿನ ಸಂಸ್ಥೆಯೇ ಇಲ್ಲವೆಂದು ಅವರಿಗೆ ತಿಳಿದ ನಂತರ ಸಂಸ್ಥೆಗಳ ಬಗ್ಗೆ ಅವರಿಗಿದ್ದ ಅಭಿಮಾನವೇ ದೂರವಾಯಿತು.

ಅರಬ ದೇಶದವರು ಭಾರತದ ಒಂದು ಬಂದರದಿಂದ ಅಕ್ಕಿಯನ್ನು ತರಿಸುವ ಒಪ್ಪಂದ ಮಾಡಿದರಂತೆ. ಬಂದರದವರು ತೋರಿಸಿದ್ದ ಅಕ್ಕಿ ಒಂದು, ಕಳಿಸಿದ್ದ ಅಕ್ಕಿ ಒಂದಾಯಿತಂತೆ. ಆ ಮೇಲೆ ಆ ಬಂದರದಲ್ಲಿ ಅರಬರು ವ್ಯಾಪಾರವನ್ನೇ ಮಾಡಬಾರದೆಂದು ಪ್ರಚಾರ ಮಾಡಿದರಂತೆ. ಇಂತಹ ಒಬ್ಬೊಬ್ಬ ವ್ಯಕ್ತಿಯಿಂದ ಸಮಾಜ, ನಗರ, ಗ್ರಾಮ ಮಾತ್ರವಲ್ಲ, ದೇಶಕ್ಕೂ ಅಪಕೀರ್ತಿ ಬರುವುದುಂಟು. ಜಪಾನದ ಒಂದು ಕಾಲೇಜಿನಲ್ಲಿ ಅಧ್ಯಯನ ನಡೆಸುತ್ತಿದ್ದ ವಿದ್ಯಾರ್ಥಿಯೊಬ್ಬ ಮನೆಗೆ ತಂದ ಪುಸ್ತಕಾಲಯದ ಪುಸ್ತಕವೊಂದರಿಂದ ಒಂದು ಚಿತ್ರವನ್ನು ಹರಿದು ತೆಗೆದನಂತೆ. ಈ ಸಂಗತಿಯನ್ನು ಕಂಡುಕೊಂಡ ಜಪಾನೀ ಹುಡುಗ ಅಧಿಕಾರಿಗಳಿಗೆ ಸತ್ಯ ಸಂಗತಿ ತಿಳಿಸಿದಾಗ, ಅವರು ಆ ಮೇಲೆ ಭಾರತೀಯ ವಿದ್ಯಾರ್ಥಿಗಳಿಗೆ ಮನೆಗೆ ಕೊಂಡೊಯ್ಯಲು ಪುಸ್ತಕವನ್ನೇ ಕೊಡಬಾರದೆಂದು ಆಜ್ಞೆ ಮಾಡಿದರಂತೆ! ಒಬ್ಬ ಭಾರತೀಯ ದುರ್ವ್ಯವಹಾರದಿಂದ ಎಲ್ಲ ಭಾರತೀಯ ವಿದ್ಯಾರ್ಥಿಗಳ ಮೇಲೂ ಅವಿಶ್ವಾಸ ಮೂಡುವಂತಾಯಿತು!

ಇದೇ ಮಾದರಿಯ ದುಃಖದ ಪ್ರಸಂಗಗಳು ಹಲವಿರಬಹುದು. ಒಬ್ಬನ ಒಂದು ಸಣ್ಣ ತಪ್ಪು, ಮೂರ್ಖತನ ಅಥವಾ ಅಲಕ್ಷ್ಯದ ಪರಿಣಾಮದಿಂದ ಎಲ್ಲರೂ ಶಂಕಸ್ಪಕ್ಕೀಡಾಗುತ್ತಾರೆ. ಒಬ್ಬ ವ್ಯಕ್ತಿಯು ಮಾಡಿದ ವಿಶ್ವಾಸಘಾತ ಇಡಿ ಪರಿವಾರವನ್ನೇ ಅವಿಶ್ವಸ್ತಗೊಳಿಸುತ್ತದೆ. ಇವೆಲ್ಲವೂ ಸಾಮಾನ್ಯವೆಂದು ನಮಗೆ ತೋರಬಹುದು. ಆದರೆ, ಇವು ನಾಗರಿಕತೆಯ ಅವಹೇಳನವೆಂಬುದು ಖಂಡಿತ. ನಮ್ಮ ಸ್ವಾತಂತ್ರ್ಯವನ್ನು ಉಳಿಸುವುದೂ ಅಳಿಸುವುದೂ ನಮ್ಮ ಕೈಯಲ್ಲಿದೆ. ನಾವು ಪ್ರಪಂಚದಲ್ಲಿ ಉನ್ನತ ಮಸ್ತಕರಾಗಿರಬೇಕಾದರೆ, ಎಲ್ಲ ಕೆಲಸಗಳಲ್ಲಿಯೂ ಅದೆಷ್ಟು ಚಿಕ್ಕದೇ ಆಗಿರಲಿ, ಸಂಪೂರ್ಣ ಲಕ್ಷ್ಯವಿರಿಸುವುದು ಅವಶ್ಯ. ನಮ್ಮ ಕೆಲಸಗಳಿಂದ ಯಾರಿಗೂ ಹಾನಿತಟ್ಟದಂತೆ ಎಚ್ಚರಿಕೆಯಿಡಬೇಕಾದುದು ಅನಿವಾರ್ಯ ಆಗ, ಅಂತಹ ಸುಸಂಸ್ಕೃತ ನಾಗರಿಕರು ಹೋದಲ್ಲೆಲ್ಲಾ ತಮ್ಮ ಮಾತೃಭೂಮಿ, ಸಮಾಜ, ಕುಟುಂಬಗಳಿಗೆ ಕೀರ್ತಿತರಬಲ್ಲರು; ಪರರಲ್ಲಿ ಆದ, ಪ್ರೇಮ ಮತ್ತು ಶ್ರದ್ಧಾಭಾವವನ್ನು ಜಾಗ್ರತಗೊಳಿಸಬಲ್ಲರು. ಸಭ್ಯರೆನಿಸಿಕೊಳ್ಳುವುದಕ್ಕೆ ವೇಶಭೂಷಣಗಳು ಸಾಧನಗಳಲ್ಲ; ನಮ್ಮ ವರ್ತನೆಯೆಂಬುದನ್ನು ನಾವು ಸ್ಮರಣೆಯಲ್ಲಿಡಬೇಕು.

ಉಡುಪಿ ಡಿ. ಮುಂ. ಕೋರ್ಟಿನಲ್ಲಿ

S. C. 287/1960.

K. ನಾರಾಯಣ ರಾವ್ — ವಾದಿ.

ಮತ್ತು

ನಾರಾಯಣ ಶೆಟ್ಟಿ ಕೂಡಾ — ಪ್ರತಿವಾದಿರುಗಳವರೊಳಗೆ

ಉಡುಪಿ ತಾಲೂಕು ಪೆರ್ಡೂರು ಗ್ರಾಮದ ಮಂಟ್ಯಾಳದಲ್ಲಿರುವ ದುಗ್ಗಪ್ಪ ಶೆಟ್ರ ಮಗ 1ನೇ ಪ್ರತಿವಾದಿ ನಾರಾಯಣ ಶೆಟ್ರಿಗೆ-

ವಾದಿಯು ನಿಮ್ಮಿಂದ ಬರಬೇಕಾದ ಚಾಲಗೇಣಿಯ ಬಾಬ್ತು ಕಳೆದ ದುರ್ಮುಖಿ ಸಂ|ರದ ಲಾಗ್ವಾತಿನ ಗೇಣಿ ಬಾಕಿ, ಬಡ್ಡಿ ಕೂಡಾ ರೂಪಾಯಿ 462—67ಕ್ಕೆ ಮಾಡಿದ ವ್ಯಾಜ್ಯವು ತಾರೀಕು 19—9—1960ಕ್ಕೆ ಯಿಟ್ಟಿರುವುದರಿಂದ ಆ ದಿವಸ ಹಗಲು ಗಂಟೆ 10ಕ್ಕೆ ನೀವು ಈ ಕೋರ್ಟುಮುಂದೆ ಹಾಜರಾಗಿ ನಿಮ್ಮ ಉದಾಹರಣೆಯಿದ್ದರೆ, ಹಾಜರು ಪಡಿಸತಕ್ಕದ್ದು ತಪ್ಪಿದ್ರೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

B. S. Hegde
Vakil for Plff.

ಉಡುಪಿ 7—9—60.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪಥ್ಯದ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗ ... ರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಚಾರುಚಯನ

ಆಧುನಿಕ ಅರ್ಥ ಮೀಮಾಂಸೆ

"ಸಿರಿಪತಿ"

ಮಿತವ್ಯಯ

ಆ ವೇಶಭೂಷಣಗಳಿಂದಲೇ ಅವನೊಬ್ಬ ಕಾಲೇಜು ವಿದ್ಯಾರ್ಥಿಯೆಂದು ಸಹಜವಾಗಿ ಹೇಳಬಹುದು. ಅರ್ಧವಾರು ಚೀಟಿನ ತಿರುವೆಯಿಂದ (Blouse Piece) ನವೀನ ಮಾದರಿಯ "Bushirt" ಹೊಲಿಸಿಕೊಂಡಿದ್ದಾನೆ. ಅವನ ಪೇಂಟು ನೋಡಿ! ಅದೂ ಒಂದೂವರೆ ವಾರು ಮದಾಸು ಬಿನ್ನಿಯಲ್ಲೇ ಮುಗಿದಿದೆ! ಅದಕ್ಕೆ ಬಕಲ್ ಬಟ್ಟನುಗಳ ಆವಶ್ಯಕತೆಯೂ ಇಲ್ಲ! ಸೊಂಟಕ್ಕೆ ಹಾಕಿದ್ದ ಚರ್ಮದ "ವಡ್ಯಾಣ"ವೇ ಆಧಾರವಾಗಿದೆ! ಇದು "ಅವಾಂ ಪೇಂಟು"! ಇವರೆಲ್ಲ ಕಾಲೇಜು "Economics" ಓದಿರಬೇಕು! ಕೂದಲು ಸಣ್ಣದಾಗಿ ಕತ್ತರಿಸಿಕೊಂಡಿದ್ದಾನೆ, ಈ ತರುಣ—೩ ತಿಂಗಳಿಗೊಮ್ಮೆ ಕಟ್ಟಿಂಗ್ ಮಾಡಿಕೊಳ್ಳುತ್ತಿರಬೇಕು! ಗಡ್ಡ ಮೀಸೆಗಳನ್ನೂ ಬಿಟ್ಟಿದ್ದಾನೆ! ನೋಡಿ! ಇದೂ ಒಂದು ಫೇಶನ್ನ್. ಹಿಂದಿನ ಕಾಲದಲ್ಲಿ "ಕಣ್ವ" ಮಹರ್ಷಿಗಳ ಆಶ್ರಮದಲ್ಲಿ ದುಶ್ಯಂತ ಮಹಾರಾಜನು "ನಾಪಿಕ"ರ ಅಭಾವದಿಂದ ಗಡ್ಡಬಿಟ್ಟಂತೆ ಇವರೂ ಇರಬಹುದೇ— ಅಥವಾ ಇದೂ ಇಂದಿನ ಯುಗದ "ಮಿತವ್ಯಯ ಯೋಜನೆ" (Economics) ಯಾಗಿರಬಹುದೇ! ಅವನ ಶರ್ಟು ಪೇಂಟುಗಳಿಗೆ ಒಟ್ಟುಸೇರಿ-೬ ಜೇಬುಗಳಿದ್ದರೂ ಅವೆಲ್ಲ ಖಾಲಿ! ಬೆವರನ್ನೊರಸಲು ಅವನ ಆಸ್ತಿಯಾಗಿದ್ದ ಕರ್‌ಚೀಫ್ ಅಂಗಿ ಕೊಲರಿನ ಕೆಳಗೆ ಕುತ್ತಿಗೆಗೆ ಹೊಂದಿಕೊಂಡಿದೆ! ಅವನು ಹಣವಿಡುವ ಸ್ಥಳ ಇನ್ನೂ ವಿಚಿತ್ರ....ಶರ್ಟಿನ ಕೈಗಳ ಮಡಿಕೆಯೇ ಹಣವಿಡುವ ಸ್ಥಳ! ಅನವಶ್ಯಕವಾದ ಜೇಬುಗಳನ್ನು ಇರಿಸದಿದ್ದಲ್ಲಿ ಇನ್ನಷ್ಟು ಉಳಿತಾಯವಾಗಬಹುದಿತ್ತಲ್ಲವೇ!

೦೦ ೦೦

ಸಮಾಜ ಸೇವಕ

ಆದೋ ನೋಡಿ....ಇವನೊಬ್ಬ ಸಮಾಜ ಸೇವಕ (Social Worker) ಸಮಾಜ ಸೇವಕನೆಂಬುದೂ ಒಂದು ಹುದ್ದೆಯೇ ಆಗಿದೆ. ಈಗಿನ ಕಾಲದಲ್ಲಿ! ಇದಕ್ಕೆ ಯಾವ ಪರೀಕ್ಷೆಯನ್ನೂ ಪಾಸುಮಾಡಬೇಕಾಗಿಲ್ಲ! ಇಂದಿನ ಯುಗದಲ್ಲಿ ಸ್ವಪ್ರಭಾವದಿಂದ ಗಳಿಸಬಹುದಾದ ಹುದ್ದೆಯೆಂದರೆ ಇದು! ತಂದೆತನ! ತಾಯ್ತನ ಎಂದಂತೆಯೇ— ಸಮಾಜಸೇವಕತನವೆಂಬ ಹುದ್ದೆಯು....ಅವರವರೇ ಇಟ್ಟುಕೊಳ್ಳಬಹುದಾಗಿದೆ! "ಸಮಾಜ ಕಾರ್ಯಕರ್ತ" (Social Worker) ಎಂಬ "Letter Head" ಮಾಡಿ, ಖಾದಿ ಜುಬ್ಬ ಧರಿಸಿ,ಒಂದು ಪಂಜೆಯನ್ನುಟ್ಟು ಬೊಕ್ಕತಲೆ ಬಿಟ್ಟರೆ ಸರಿ! ಎಂತಹ ಅಸಾಧ್ಯ ಕಾರ್ಯಗಳನ್ನೂ ಸಾಧಿಸಬಹುದು. ಕಾರ್ಯಕಲಾಪಗಳಿಲ್ಲದೆಯೂ ಇವರು ಸಮಾಜ ನಿರ್ಮಾಣ ಮಾಡಬಲ್ಲರು.

"ರಹಿತ"

ಆದೋ ಅವನೊಬ್ಬ ರೈತ.... (ರಹಿತ) ಬರಿಮೈ ...ತಲೆಗೆ ಒಂದು 'ಮುಂಡಾಸ' ಮರ್ಯಾದೆ ಮುಚ್ಚುವಷ್ಟು— ತುಂಡು ಅರಿವೆ—ಹೆಗಲಮೇಲಿಟ್ಟ ಮಾಸಿದ್ದ ಪಂಚೆಯ ತುಂಡು—ಇದರಿಂದ ಅವನು ತನ್ನ ಮೈಯ ಬೆವರನ್ನೊರಸಿಕೊಳ್ಳುವವನ್ನು ಕಾಣಬಹುದು!—ಇದೋ, ಅವನ ಕಾಲು ಪಾದಗಳೆಲ್ಲ ಒಡೆದಿದೆ! ಅವನ ನೆರೆದ ಗಡ್ಡ ಮೀಸೆ! ಎಲೆಯಡಿಕೆ ತಂಬಾಕೂ ಹಾಕುವ ಚಟವಿರಬೇಕು ಅವನಿಗೆ ಅವನ ಕಡಬಾಯಿಂದ ತಾಂಬೂಲದ ಜೊಲ್ಲು ಇಳಿಯುತ್ತಲಿದೆ! ಅವನ ಹೆಗಲು—ಪಕ್ಕೆಲುವುಗಳು ಎದ್ದು ಕಾಣಿಸುತ್ತಿದೆ! ಅಧಿಕ ಶ್ರಮಜೀವಿಯಾದ ಅವನ ಕೈಕಾಲುಗಳ ಸ್ನಾಯುಗಳು ಬಿರುಸುಗೊಂಡು ಎದ್ದು ಕಾಣುವವು. ಅವನ ಮೈಕೈಗಳೆಲ್ಲ ಉರುವಾಗಿವೆ! ಆಭರಣಗಳಾವುವೂ ಅವನಲ್ಲಿಲ್ಲ! ಅವನ ಹೊಟ್ಟೆಯು ಬೆನ್ನಿಗೆ ತಾಗಿದೆ! ಅವನಲ್ಲಿಯ ನಿಸ್ಪೃಹತನವು ಮುಖಚೇಷ್ಟೆಯಲ್ಲೇ ಎದ್ದು ಕಾಣುತ್ತದೆ! ಅವನ ಪಾದರಕ್ಷೆಯನ್ನು ನೋಡಿ! ಅದೆಷ್ಟೋ ವರುಷದ್ದಿರಬೇಕು! ಗಾಡಿಗೆ ಸೈಕಲ್ ಟ್ಯೂಬಿಗೆ "ಪೇಚು" ಹಾಕಿದಂತೆ—ಅವನ ಪಂಜೆಗೂ "ಪೇಚು" ಹಾಕಿದ್ದಾನೆ -ಅವನ ತಾಂಬೂಲದ "ಚಂಚಿ"—ನೋಡಿ! ಅದರಲ್ಲಿ ನಾಲ್ಕಾರು ಮಡಿಕೆಗಳಿವೆ! ಅದೇ ಅವನ ಪರ್ಸು! ಎಂಟುಹತ್ತು ಆಣೆ ನಗದುಗಳೆಲ್ಲ ಅದರಲ್ಲಿಯೇ ಅವನಿಡುವದು! ಅದರೊಟ್ಟಿಗೇ ಎಲೆ, ಅಡಿಕೆ, ತಂಬಾಕು —ವಗೈರೆ ತಾಂಬೂಲದ ಸಾಮಾನುಗಳು —ಅಲ್ಲದೆ—ಕಿವಿಯ "ಕಿಗ್ಗಿ" ತೆಗೆಯುವ ಬಗ್ಗೆ ಬೇಕಾದ "ಕಿಗ್ಗಿಕಡ್ಡಿ" ಮತ್ತು ಹಲ್ಲು ಸೂಜಿ"—ಅವನು ಸೊಂಟಕ್ಕೆ ಸುತ್ತಿದ್ದ ಕಾಚಾವನ್ನೇ ಉದ್ದ ಇಳಿಬಿಟ್ಟು ಅದನ್ನೇ ಎರಡು ಸುತ್ತು ತಿರುಗಿಸಿ—ಸೊಂಟದಲ್ಲಿ ಸಿಕ್ಕಿಸಿ—ಇನ್ನೊಂದು ತುದಿಯನ್ನು (ಅಂಚನ್ನು) ಹೆಗಲಿಗೇರಿಸುವನು! ಇದು ನಮ್ಮ ಕಡೆಯ ರೈತನೊಬ್ಬನ ವ್ಯಕ್ತಿತ್ವ—!!

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.—ಸಂ. ಸ.)

ಹತ್ತು ಹೆಡೆಯ ಹಾವು— ಕಾದಂಬರಿಕಾರರು: ಶ್ರೀ ದು. ನಿಂ. ಬೆಳಗಲಿ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಪುಟಗಳು: ೧೪೫. ಬೆಲೆ: ರೂ. ೧-೫೦.

ತಮ್ಮ ಸ್ವಾರ್ಥಸಾಧನೆಗಾಗಿ ನಿಸ್ವಾರ್ಥರನ್ನು ಹೊಲ್ಲಮಾಡಿ ಸಜ್ಜನರಿಗಿದು ಇರಲು ತಾಣವಲ್ಲ' ವೆಂಬುದನ್ನು ಪ್ರತ್ಯಕ್ಷೀಕರಿಸುವ ಹಲವಾರು ಮುಖಗಳು ಇಂದಿನ ಸಮಾಜದಲ್ಲಿ ತೋರಿಬರುತ್ತಿವೆ. ದುಶ್ಶಕ್ತಿಗಳ ಪ್ರಾಬಲ್ಯವಿರುವಾಗ ಸತ್ ಶಕ್ತಿಯನ್ನು ಗುರುತಿಸುವವರೂ ವಿರಳವಾಗಿರುವಾಗ, ಈ ಸತ್ ಶಕ್ತಿವಂತರನ್ನು ಕೇಳುವವರಾದರೂ ಯಾರು? ಇಂತಹ ಕುಹಕಿಗಳ ನಡುವೆ ಸಿಕ್ಕು ತೊಳಲಾಡಿದರೂ "ಬೆಟ್ಟದ ಮೇಲೊಂದು ಮನೆಯಮಾಡಿ ಮೃಗಂಗಳಿಗಂಜಿದಡೆಂತಯ್ಯಾ..." ಎಂಬ ಅಕ್ಕಮಹಾದೇವಿಯರ ಮಾತಿನಂತೆ ಬಂದುದನ್ನೆಲ್ಲಾ ಎದುರಿಸುವ ದೃಢಮನಸ್ಸು ಮಾಡಿದ ಅಧ್ಯಾಪಕ ಸಂಗಮನಾಥ, ಮತ್ತು ಅವರನ್ನು ಮನಸಾರೆ ವರಿಸಿದ್ದ ಕಮಲಾಕರವರ ದಾರುಣ ಚಿತ್ರವನ್ನು ನಾವು ಈ ಕಾದಂಬರಿಯಲ್ಲಿ ಕಾಣಬಹುದು. ಮಣ್ಣಿನ ಮನಿ ಮತ್ತು ಮಠ ಮಾಸ್ತರರು ವೇದವನ್ನೋದುತ್ತ ಗಾಳವಿಕ್ಕುವ ಮುಟ್ಠಾಳರಾಗಿ ತೋರಿಬರುತ್ತಾರೆ; ತಮ್ಮ ಪ್ರತಿಸ್ಪರ್ಧಿಯಂತಿರುವ ಸಂಗಮನಾಥನನ್ನು ಸಂದರ್ಭಸಾಧಿಸಿ ಬಗ್ಗುಬಡೆಯುವ ಸಂಚಿಗೆ ಕಾರಣರಾಗುತ್ತಾರೆ. ಹತ್ತು ಹೆಡೆಯ ಸಮಾಜಸರ್ಪ, ಸರ್ಪದ ಹೆಸರೆತ್ತಿದೊಡನೆಯೇ ಮಾರುದ್ದ ಸರಿವ ಸಂಗಮನಾಥರ ಜೀವನವನ್ನೇ ನೀರಸಮಯವಾಗಿ ಮಾಡಿಬಿಟ್ಟ ಕುತೂಹಲಕಾರಿ ಕಥಾನಕವನ್ನು ಓಂನಿಂದ ಇತಿಯವರೆಗೆ ಓದಿ ಮುಗಿಸದೆ ಕೆಳಗಿಡಲು ಮನಸ್ಸೊಪ್ಪುವುದಿಲ್ಲ.

ಪ್ರಾಥಮಿಕ— ಮಾಧ್ಯಮಿಕ ಶಾಲೆಗಳ ವಾತಾವರಣದ ಈ ಕಥಾವಸ್ತು ಧರ್ಮಗುರುಗಳನ್ನೂ ತನ್ನತ್ತ ಸೆಳೆದುಕೊಂಡಿದೆ. ಸಮಾಜಕ್ಕೆ ಮಾರ್ಗದರ್ಶನಗೆಯ್ದು ಅದನ್ನು ಸತ್ಪಥದಲ್ಲಿ ನಡೆಸುವ ಮಹಾಪೀಠದಲ್ಲಿ ರಾರಾಜಿಸಿದವರು ಇದ್ದುದನ್ನು ಇದ್ದಂತೆ ನುಡಿವ ಸಂಗಮನಾಥನ ಮೇಲೆ ತಮ್ಮ ಉರಿಯನ್ನೂ ಕಾರಿದರು. ಕುಮಾರ್ಗಗಾಮಿನಿ ಮುಖ್ಯೋಪಾಧ್ಯಾಯಿನಿ ಬಸಮ್ಮನೇ ಸಂಗಮರ ಬಗ್ಗೆ ಕಣ್ಣೀರು ಸುರಿಸಿದರೂ ಆತನಿಗಾಗುವ ಶಾಸ್ತಿ ಸಾಲದೆಂದೇ ಮಠದ ಮಾಸ್ತರರ ಪಾದವಾಗಿ ಉಳಿಯುವಷ್ಟು ವಿಷಕಾರುತಿದ್ದರವರು. ಅಂತೂ ನಿಷ್ಕಲ್ಮಷ ಹೃದಯಿ, ಸಜ್ಜನ, ಪ್ರತ್ಯಕ್ಷದರ್ಶಿ, ನಿಸ್ವಾರ್ಥಿ, ಕರ್ತವ್ಯದಕ್ಷ ಸಂಗಮ ಸಮಾಜದ ದುರಳ್ಳಿ ಮಹಾಪರಾಧಿಯೆನಿಸಿ ತನ್ನ ಸಜ್ಜನತೆಯ ಬಗ್ಗೆ ಶಿಕ್ಷೆಯನ್ನು ಅನುಭವಿಸಬೇಕಾಗಿ ಬಂದಾಗ ಎಂತಹ ಕಲ್ಮನವಾದರೂ ಒಸರದಿರಲಾರದು.

ಈ ಕಾದಂಬರಿಯಲ್ಲಿ ಇನ್ನೂ ಒಂದು ವೈಶಿಷ್ಟ್ಯವಿದೆ. ಶನಿವಾರ ಮುಂಜಾನೆಯ ಹೊತ್ತಿನಲ್ಲಿ ಪ್ರಾರಂಭವಾಗುವ ಈ ಕಾದಂಬರಿಯ ಕಥೆ ಮಧ್ಯರಾತ್ರಿಯ ಹೊತ್ತಿಗೆ ಅಂತ್ಯಗೊಳ್ಳುತ್ತದೆ. ಇಂತಹ ಅಲ್ಪಾವಧಿಯ ಕಥಾನಕ ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಹೊಸತು. ಈ ನೂತನ ಪ್ರಯೋಗವು 'ಹತ್ತು ಹೆಡೆಯ ಹಾವಿ"ನಲ್ಲಿ ಯಶಸ್ವಿಯಾಗಿದೆ. ಬೆಳಗಲಿಯವರ ಹೃದಯಸ್ಪರ್ಶಿ ಶೈಲಿಯೂ ಸರಳ ಪದ ಪುಂಜಗಳೂ ಕಾದಂಬರಿಯ ಬಗ್ಗೆ ತೀವ್ರಾಸಕ್ತಿಯನ್ನು ಕೆರಳಿಸುವಂತಿದೆ. ಶ್ರೀ ಕೆ. ಬಿ ಕುಲಕರ್ಣಿಯವರ ಅರ್ಥಪೂರ್ಣ, ಮುಖಚಿತ್ರ ಹಾಲು ಕಾಗದದಲ್ಲಿ ಅಂದವಾದ ಮುದ್ರಣ ಪುಸ್ತಕಕ್ಕೆ ಹೆಚ್ಚಿನ ಮೆರಗನ್ನು ತಂದಿತ್ತಿವೆ.

ಶಾಂತಿ ಸದನ— (ಕಥಾ ಸಂಕಲನ) ಕಥೆಗಾರರು: ಶ್ರೀ ನಾಗೇಶ ಜಾನಭಾಗ. ಪ್ರಕಾಶಕರು: ಶ್ರೀ ಎಸ್. ಆರ್. ಹೆಗಡೆ, ಸುಲಭ ಸಾಹಿತ್ಯ ಪ್ರಕಾಶನ, ಕುಮಟಿ. ಪುಟಗಳು: ೧೫೭. ಬೆಲೆ: ರೂ. ೧-೫೦

"ಒಂದು ಕಾಲದಲ್ಲಿ ತುಂಬ ಬರೆಯುತ್ತಿದ್ದು ಈಗ ಬರೆಯುವುದನ್ನು ನಿಲ್ಲಿಸಿರುವ" ಶ್ರೀ ನಾಗೇಶ ಜಾನಭಾಗರ ಈ ಕಥಾಸಂಕಲನದಲ್ಲಿ ಒಟ್ಟು ೨೨ ವಿವಿಧ ದೃಷ್ಟಿಯಿಂದ ವಿವೇಚಿಸಲ್ಪಟ್ಟ ಕಥೆಗಳಿವೆ. ಕಾದಂಬರಿಗಳ ಸುರಿಮಳೆಯ ಈ ಕಾಲದಲ್ಲಿ ಕಥೆ ಬರೆಯುವುದೂ ಅದನ್ನು ಸಂಗ್ರಹಿಸಿ ಪ್ರಕಟಿಸುವುದೂ ವ್ಯಾಪಾರಿ ದೃಷ್ಟಿಯ ಲಾಭದಾಯಕವಲ್ಲದ ಮಾತೆಂಬುದನ್ನು ಅವಶ್ಯ ಒಪ್ಪಲೇ ಬೇಕು. ಆದರೂ ಕಥೆಗಳು ತಮ್ಮ ಉತ್ತಮತೆಯನ್ನುಳಿಸಿಕೊಂಡಲ್ಲಿ ಅವು ಜನಾದರ ಗಳಿಸುವುದಕ್ಕೆ 'ಹೆಚ್ಚು' ತಡವಾಗದು; ಕಥೆಯೋದುವ ಪ್ರವೃತ್ತಿ ಕುಂಠಿತವಾಗುತ್ತ ಬರುವುದು ವಾಸ್ತವವಾದರೂ ಆಸಕ್ತಿಯು ಸಂಪೂರ್ಣ ಅಳಿದು ಹೋಗಿಲ್ಲವೆಂಬುದಕ್ಕೆ ಅಪರೂಪವಾಗಿ ಹೊರಬರುವ ಕಥಾ ಸಂಕಲನಗಳೇ ಸಾಕ್ಷಿಯಾಗಿವೆ.

ಪ್ರಕೃತ ಸಂಕಲನದ ಶಾಂತಿ ಸದನ, ಚಿಕ್ಕದೊಡ್ಡವರು, ಬಂಗಾರದ ಉಂಗುರ, ಮಗು ಮೊದಲಾದ ಕೆಲವು ಕಥೆಗಳು ಬೇರೆ ಭಾಷೆಯ ಕಥೆಗಳ ಆಧಾರದಿಂದ ಬರೆಯಲ್ಪಟ್ಟವು. ಕಲಾಕಾರ, ತಪ್ಪಾರದು, ಬಿಡುಗಡೆ ಮೊದಲಾದುವು ಸಮಾಜದ ಕರಾಳ ದರ್ಶನವನ್ನು ನಮಗೆ ಮಾಡಿಸುತ್ತವೆ. ಸಮಾಜದ ನೈಜ ಚಿತ್ರವನ್ನು ಕಂಡ ಕವಿ ತನ್ನ ಶಕ್ತಿಪೂರ್ಣ ಲೇಖನಿಯಿಂದ ಅವಕ್ಕೆ ಶಾಬ್ದರೂಪವಿತ್ತು ಸಮಸ್ಯೆಗಳನ್ನು ನಮ್ಮ ಮುಂದೆ ಇರಿಸಿ, ಅವಕ್ಕೆ ತನ್ನ ಪರಿಹಾರವನ್ನೂ ಪರೋಕ್ಷವಾಗಿ ಸೂಚಿಸುತ್ತಾನೆ. ಈ ದೃಷ್ಟಿಯಿಂದ ಸಂಕಲಿತ ಕಥೆಗಳು ಉತ್ತಮವಿವೆ; ವಾಚನೀಯವಾಗಿವೆ.

—ಗೋರಾ.

ಕನ್ನಡ ಲೈಬ್ರರಿ ಪುಸ್ತಕಗಳಿಗೆ
ವಿಚಾರಿಸಿರಿ—
ನವಭಾರತ ಪುಸ್ತಕ ಭಂಡಾರ,
ಉಡುಪಿ.



The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—
1ರಿಂದ 4 ತಿಂಗಳ ವರೆಗೆ 4%
5 ,, 12 ,, 4¼%
13 ,, 24 ,, 4½%
ರೂ. 8,000/- ಮತ್ತು ಮೇಲಣ
ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಕಥಾವಿಹಾರ

(೨ನೇ ಪುಟದಿಂದ)

ವರ್ಣಾ ನದಿ ಹರಿಯುತ್ತಿದ್ದಾಳೆ. ಒಂದು ಮಳೆ ಬಂದು ಹೋದುದರಿಂದ ನದಿಯ ನೀರು ಉಕ್ಕಿ ಭೋರ್ಗರೆದು ಹರಿಯುತ್ತಿತ್ತು. ಮದುವೆಗೆ ಬಂದ ನೆಂಟರಿಷ್ಟರು—ಬಂಧು ಬಾಂಧವರು ಆ ನದಿಯಲ್ಲೇ ಸ್ನಾನಾಹ್ನಿಕಗಳನ್ನು ಪೂರೈಸುತ್ತಿದ್ದರು. ಅಂತಹ ನದೀ ಸ್ನಾನದಲ್ಲಿ ಇಷ್ಟವಿಲ್ಲದವರಿಗೆ ಮನೆಯಲ್ಲಿ ಬಿಸಿನೀರ ವ್ಯವಸ್ಥೆಯೂ ಇತ್ತು.

ಶ್ರೀಗುರುದೇವತಾನುಗ್ರಹದಿಂದ ಮುರಲೀಧರನು ಜ್ಯೇಷ್ಠ ಬಹುಳ ಅಷ್ಟಮಿಯ ದಿನ ರಾತ್ರಿ ಅಗ್ನಿಸಾಕ್ಷಿಯಾಗಿ ಯಮುನೆಯನ್ನು ತನ್ನವಳನ್ನಾಗಿ ಸ್ವೀಕರಿಸಿದ. ಬ್ರಾಹ್ಮಣರು ಆಶೀರ್ವದಿಸಿದರು.

ವಿದ್ಯಾವಂತೆ ಕನ್ಯೆ—ಪದವೀಧರ ವರ! ಅನ್ಯೋನ್ಯ ಅನುರೂಪರಾದ ದಂಪತಿಗಳನ್ನು ಕಂಡು ಇಕ್ಕೆಡೆಯ ಮಾತಾಪಿತೃಗಳೂ ಹರ್ಷಿತರಾಗಿದ್ದರು.

ಮದುವೆಯ ವಿಧಿಗಳೆಲ್ಲ ಕ್ರಮವತ್ತಾಗಿ ಸಾಗಿದುವು. ವಿಧಿಗಳೆಂದರೇನು? ಆಯಾ ವಂಶದಲ್ಲಿ ಪೂರ್ವದಿಂದಲೂ ಅನುಸರಿಸಿಕೊಂಡು ಬಂದ ಸಂಪ್ರದಾಯಗಳ ಮೊತ್ತ ತಾನೆ! ಉದಾಹರಣೆಗಾಗಿ ವಧೂವರರ ಜಲಕ್ರೀಡೆ! ಅದೂ ಒಂದು ವಿಧಿ. ಅದಕ್ಕೆ ಕನ್ನಡದಲ್ಲಿ 'ಕೆರೆ ಮೀಯುವುದು' ಎನ್ನುತ್ತಾರೆ. ವಧೂವರರು ಮದುವೆಯ ನಾಲ್ಕನೆಯ ದಿನ ಈ 'ಕೆರೆ ಮೀಯುವುದ'ಕ್ಕಾಗಿ ಹೊಳೆಗೆ ಹೊರಟರು.

ಮುಂದುಗಡೆಯಿಂದ ಕೆಲವು ಜನ ಗಂಡಸರು— ಅವರಲ್ಲಿ ಮುರಲಿ ಮತ್ತು ಮಾಧವರಿದ್ದಾರೆ. ಹಿಂಗಡೆಯಿಂದ ಹೆಂಗಸರ ತಂಡ.

ಸಾಮಾನ್ಯ ಹತ್ತು ಗಂಟೆಯ ಸಮಯ. ಬಿಸಿಲು ಕಟ್ಟಿಗೆ ಕಾಯುತ್ತಿತ್ತು. ಕಾಡು ಗುಡ್ಡಗಳ ಎಡೆಯಲ್ಲಿ ನುಸುಳಿಕೊಂಡು ಸರಳು ಕಲ್ಲಿನ ಕಾಲು ಹಾದಿಯು ಹಾವಿನಂತೆ ಮಲಗಿತ್ತು. ಅದರಲ್ಲೇ ಸಾಗಿ ಎಲ್ಲರೂ ಹೊಳೆಯ ದಡವನ್ನು ತಲುಪಿದರು.

"ಭಾವ! ನಿಮ್ಮೂರ ಹೊಳೆ ಅಲ್ಲ ಭಾವ, ಇದು"— ಎನ್ನುತ್ತಾ ಮಾಧವ ಗುಳುಮ್ಮನೆ ನದಿಗೆ ಹಾರಿ ಈಜ ತೊಡಗಿದ.

"ಸರಿ, ಪ್ರಾರಂಭವಾಯಿತು, ಕಿಡಿಗೇಡಿ!" ಎಂದು ಸ್ವಲ್ಪ ಬಿಗುಪಿನಿಂದಲೇ ಹೇಳಿದರು ಶ್ರೀನಿವಾಸರಾಯರು. ಆದರೆ ಮಾಧವ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ನದಿಯಲ್ಲಿ ಈಜುತ್ತಾ ಮುಂದೆ ಹೋದ.

"ಆತ ಹೇಳಿದ ಮಾತನ್ನು ಕೇಳುವವನೇ ಅಲ್ಲ" ಎಂದಳು ರಾಧಮ್ಮ. ಪುರೋಹಿತರು ನಗುತ್ತಾ "ಮಕ್ಕಳಾಟಿಕೆ ಬುದ್ಧಿ!" ಎಂದುಕೊಂಡು ಮಂತ್ರ ಕಲಶದ ಸ್ಥಾಪನೆಗೆ ತೊಡಗಿದರು. ಅಷ್ಟರೊಳಗೆಯೇ ಮಾಧವ ಆಚೆ ದಡದ ಸಮೀಪ ಹೋಗಿಯಾಗಿತ್ತು.

ಯಥಾವತ್ತಾಗಿ ವಿಧಿಗಳೆಲ್ಲವೂ ಮುಗಿದ ಮೇಲೆ ಎಲ್ಲರೂ ಸ್ನಾನಕ್ಕಿಳಿದರು. ಮುರಲಿಯೂ ಸ್ನಾನಕ್ಕಿಳಿದ. ಮಾಧವನೂ ನದಿಯ ನೀರನ್ನೊಮ್ಮೆ ಗಣ್ಯವಿಲ್ಲದವರಂತೆ ಸುತ್ತಾಡಿ ಬಂದು ಈಚೆಯ ದಡವನ್ನು ತಲುಪಿದ. "ಭಾವ, ಅಲ್ಲಿಯೇ ನಿಂತಲ್ಲಿಯೇ ನಿಂತು ಕಾಗೆ ಮಿಂದಂತೆ ಮೀಯುತ್ತೀಯಲ್ಲ, ಬಾ—ಒಂದು ಸಾಲು ಹೋಗೋಣ" ಎಂದು ಈಜಾಟಕ್ಕೆ ಆಹ್ವಾನಿಸಿದ.

ಈ ಮಾತಿಗೆ ರಾಧಮ್ಮ "ಸಾಕು, ಈ ತುಂಬಿದ ಹೊಳೆಯಲ್ಲಿ ಸೊಕ್ಕುವಷ್ಟೇನು ಬಂತೀಗ?" ಎಂದಳು.

ಮಾಧವ ನೀರಿನಲ್ಲಿಯೇ ತೇಲುತ್ತಾ "ಪಾಪ. ಭಾವನಿಗೆ ಈಜು ಗೊತ್ತೇ ಇಲ್ಲ" ಎಂದು ನಗತೊಡಗಿದ. ಮುರಲಿಯೂ ಮುಗುಳ್ನಗುತ್ತಾ ಮಾಧವನನ್ನು ಹಿಂಬಾಲಿಸಿ ನೀರಿನಲ್ಲಿಳಿದ.

ಮದುಮಗನ ಈಜಲು ಇಳಿದುದನ್ನು ಕಂಡು ಶ್ರೀನಿವಾಸ ರಾಯರು "ಬೇಡ ಬೇಡ" ಎಂದು ಆತಂಕಿಸಿದರು. ಆದರೆ ಮಾಧವ, "ತೊಂದರೆಯಿಲ್ಲ. ಈ ವರ್ಷ ಈಜಾಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಭಾವನಿಗೆ ದೊರಕಿದುದು. ಮರೆತೇ ಹೋಯಿತೇ?" ಎನ್ನುತ್ತಾ ಮುಂದೆ ಈಜತೊಡಗಿದ. ಮುರಲಿ ಬೆನ್ನಟ್ಟುತ್ತಿದ್ದ.

"ಈಜುವುದರಲ್ಲಿ ಗಟ್ಟಿಗನಾದರೆ ಅದಕ್ಕೀಗ ಸಮಯವಲ್ಲ"—ದಡದಲ್ಲಿ ನಿಂತು ಕೂಗಿ ಹೇಳಿದರು ಶ್ರೀನಿವಾಸರಾಯರು. ಆದರೆ ಅವರಿಬ್ಬರೂ ಈಜುತ್ತಾ ಬಹುದೂರ ಸಾಗಿದ್ದರು.

ಮತ್ತೊಮ್ಮೆ ಗಟ್ಟಿಯಾಗಿ ಕೂಗಿ ಹೇಳಿದರು—"ಇಗೋ ಮಾಧಾ, ಗಂಡಾಂತರಕ್ಕೆ ನೂಕಿಸಬೇಡ, ಎಚ್ಚರಿಸಿದ್ದೇನೆ!"

"ಎಚ್ಚರಿಸಿದ್ದೇನೆ" ಎಂಬ ಮಾತು ಈಜುತ್ತಿದ್ದವರಿಗೂ ಕೇಳಿಸಿತು. ಮಾಧಾ ತಲೆಯೆತ್ತಿ ಹಿಂತಿರುಗಿ ನೋಡಿದ. ಮುರಲಿ ಈಜಿಕೊಂಡು ಬರುತ್ತಿದ್ದಾನೆ. ಮತ್ತೊಮ್ಮೆ ತಲೆಯೆತ್ತಿ ಸುತ್ತಲೂ ನೋಡಿದ. ಸುವರ್ಣೆ ಭೋರ್ಗರೆದು ಧಾವಿಸುತ್ತಿದ್ದಾಳೆ! ಎಲ್ಲೆಲ್ಲೂ ಜಲಮಯ—ನೊರೆ ನೊರೆಯ ತೆರೆಗಳು ಉರುಳುರುಳಿ ಬರುತ್ತಿವೆ. ಆಕಾಶ ಪಾತಾಳಗಳೆಲ್ಲ ತನ್ನಲ್ಲೇ ಐಕ್ಯವೆಂಬಂತೆ ಅರ್ಭಟಿಸುತ್ತಿರುವ ಜಲರಾಶಿಯನ್ನು ನೋಡಿ ಮಾಧವ ಒಮ್ಮೆಗೇ ತತ್ತರಿಸಿ ಹೋದ. ಭಯದ ಕರಿಯ ಛಾಯೆ ಇದ್ದಕ್ಕಿದ್ದಂತೆ ಆತನನ್ನು ಆವರಿಸಿತು. "ಇಂದು ಮದುಮಗನನ್ನು ಈ ನೀರಿನ ನಡುವಿಗೆ ನಾನೇ ಎಳೆದುಕೊಂಡು ಬಂದೆ"—ಮಾಧವ ತನ್ನವರು ನಿಂತಿದ್ದ ದಡವನ್ನೊಮ್ಮೆ ನೋಡಿದ. ತಂಗಿ ಯಮುನೆ ಭಯಕಾತರ ದೃಷ್ಟಿಯಿಂದ ತಮ್ಮೀರ್ವರನ್ನು ಪ್ರತೀಕ್ಷಿಸುತ್ತಿದ್ದಂತೆ ಭಾಸವಾಯಿತು. ತಾನೊಬ್ಬ ಅಪರಾಧಿ ಎಂಬ ಭಾವನೆ ಬರುತ್ತಲೇ ಕೈಕಾಲುಗಳ ಬಲವೇ ಉಡುಗಿ ಹೋದಂತಾಯಿತು. ಅಲ್ಲಿಂದಲೇ ವಾಪಸು ತಿರುಗಿ, "ಭಾವ ಮರಳುವ" ಎಂದ.

ಮುರಲಿಯೂ ಹಿಂತಿರುಗಿ ನೋಡುತ್ತಲೇ ಆತನೂ ಮೂಕನಾದ. ಈಜುತ್ತಾ ಇಬ್ಬರೂ ಬಹುದೂರ ಬಂದು ಬಿಟ್ಟಿದ್ದರು. ದಡದಲ್ಲಿರುವವರು ಚಿಕ್ಕ ಚಿಕ್ಕದಾಗಿ—ಅಸ್ಪಷ್ಟವಾಗಿ ತೋರುತ್ತಿದ್ದರು. ದುರ್ದೈವವಶಾತ್ ಆಗಲೇ ಎತ್ತಣಿಂದಲೋ ಕಾರ್ಮೋಡಗಳೆದ್ದು ಬಿರುಗಾಳಿಯೂ ಪ್ರಾರಂಭವಾಗಿತ್ತು. ಮುಂಚಿನ ಕಟ್ಟಿಗಿನ ಬಿಸಿಲು ಎಲ್ಲಿಯೋ ಮಾಯವಾಗಿತ್ತು. ನದಿಯಲ್ಲಿ ದೊಡ್ಡ ದೊಡ್ಡ ಅಲೆಗಳು ಏಳತೊಡಗಿದ್ದುವು.

ಮುರಲಿ ಮತ್ತು ಮಾಧವ—ಇಬ್ಬರೂ ಅಂತಹ ವಾತಾವರಣಕ್ಕೆ ಹಾಗೂ ಈ ನದಿಗೆ ಹೆದರುವವರಾಗಿರಲಿಲ್ಲ. ಆದರೂ ಅದೇಕೋ ಆ ದಿನ ಅವರು ನಡು ನೀರಿನಲ್ಲಿ ಮರಗಟ್ಟಿದ್ದರು!

ಶ್ರೀನಿವಾಸರಾಯರು ಮತ್ತಿತರರು ದಡದಲ್ಲಿ ನಿಂತೇ ಚಡಪಡಿಸ ತೊಡಗಿದರು. ಸಮೀಪದಲ್ಲೆಲ್ಲೂ ದೋಣಿಯೂ ಇರಲಿಲ್ಲ. ದೋಣಿಯನ್ನು ಕಾಣಬೇಕಿದ್ದರೆ ಅರ್ಧ ಫರ್ಲಾಂಗ್ ದೂರ ಹೋಗಬೇಕಿತ್ತು. ಯಮುನೆ ಕಾತರಳಾಗಿ ಜೀವ ಕೈಯಲ್ಲಿ ಹಿಡಿದುಕೊಂಡು ಒಂದೇ ಸಮನೆ ಈಜಿಕೊಂಡು ಬರುವವರನ್ನು ದಿಟ್ಟಿಸುತ್ತಿದ್ದಳು.

ದಿಟ್ಟಿಸಿದರೆ ತೋರುವುದೇನು? ಭಯಂಕರವಾದ ತೆರೆಗಳೇಳುತ್ತಿರುವುದರಿಂದ ಒಮ್ಮೆ ದೃಶ್ಯ—ಇನ್ನೊಮ್ಮೆ ಅದೃಶ್ಯ ಎಂಬಂತೆ ಇಬ್ಬರೂ ಮಂದಗತಿಯಲ್ಲಿ ಮುಂದೆ ಸಾಗುತ್ತಿದ್ದರು.

ಏಳುತ್ತಿರುವ ತೆರೆಗಳ ಮೇಲಿಂದ ಒಂದು ಚಿಕ್ಕ ಮರದ ಗೆಲ್ಲು ಮುರಲಿಯ ಬಳಿಯಿಂದಲೇ ತೇಲಿ ಬರುತ್ತಿತ್ತು. ತನಗೆ ಅಡ್ಡವಾಗಿ ಬಂದ ಆ ಗೆಲ್ಲನ್ನು ಎಡಗೈಯಿಂದ ಎಳೆದ ಆತ. ದೂರ ಎಸೆಯಲೋಸುಗ ಆ ಗೆಲ್ಲನ್ನು ಎತ್ತಿದ. ಎತ್ತಿ ನೋಡುತ್ತಲೇ ಇಡೀ ಮೈ ಜುಮ್ಮೆಂದಿತು. ಒಂದು ಭಯಂಕರವಾದ ಸರ್ಪ ಆ ಗೆಲ್ಲಿನಲ್ಲಿ ಸುರುಳಿಸುರುಳಿಯಾಗಿ ಸುತ್ತಿಕೊಂಡಿತ್ತು. ಕಂಡವನೇ ಅದನ್ನಲ್ಲಿಯೇ ಎಸೆದುಬಿಟ್ಟ. ಆದರೆ ಹೆಡೆಬಿಚ್ಚಿದ ಆ ಕಾಳೋರಗ ಆತನ ಹೆಬ್ಬೆರಳನ್ನು ಹರಿದೇ ಬಿಟ್ಟಿತು! ನೀರಿನಲ್ಲಿದ್ದರೂ ಮುರಲಿ ಒಮ್ಮೆಗೇ ಬೆವರಿಹೋದ.

ಮಾಧೂ, ಹಿಂದಿನಿಂದ ಬರುತ್ತಿದ್ದವ, ಇದಾವುದನ್ನೂ ಗಮನಿಸಿರಲಿಲ್ಲ.

ಕೆಲವು ಮಿನಿಟುಗಳಲ್ಲಿಯೇ ಇಬ್ಬರೂ ದಡವನ್ನು ಸಮೀಪಿಸಿದರು. ಮಾಧವನೆಂದ—"ಭಾವ, ಏನಾದರೂ ಗಂಡಾಂತರ ಸಂಭವಿಸಿದ್ದರೆ, ನಾನು ಮನಸೋಚ್ಛೆಯಾಗಿ ಬೈಗಳ ಕೇಳಬೇಕಿತ್ತು"—ಆತನ ಸ್ವರ ನಡುಗುತ್ತಿತ್ತು.

ಶ್ರೀನಿವಾಸರಾಯರು ಆಗಲೇ ಪ್ರಾರಂಭಿಸಿಬಿಟ್ಟಿದ್ದರು—"ಸಂಪೂರ್ಣ ಹುಚ್ಚು! ಈ ದಿನದಲ್ಲಿ ಅವನ್ನ ಎಳಕೊಂಡು ಹೋಗಬೇಕಾದರೆ ಎಂತಹ ಹುಚ್ಚು ಹೇಳಿ!" ಎಂದು ಪುರೋಹಿತರೊಡನೆ ತಮ್ಮ ವಾದದ ಸಮರ್ಥನೆ ಮಾಡತೊಡಗಿದ್ದರು.

ಯಮುನೆಗೆ ಹೋದ ಜೀವ ಬಂದಂತಾಗಿತ್ತು.

ಆದರೆ... ..

ಮಧುರವಾದ ಹಾಲ್ಗಡಲಲ್ಲಿ ಆದಿಶೇಷ ಹೆಡೆಯಾಡಿಸುತ್ತಿರುವುದನ್ನು ಅರಿಯದಾದಳು ಯಮುನೆ. ಕರಾಳ ಛಾಯೆಯಿರಾಚವು ತೆರೆಯ ಮರೆಯಲ್ಲಿದ್ದೇ ಅರ್ಭಟಿಸುತ್ತಿತ್ತು.

ಮುರಲಿ ದೊಡ್ಡ ಗೊಂದಲದಲ್ಲಿ ಬಿದ್ದ. ದಡದಲ್ಲಿ ನಿಂತು ಮೈ ಒರಸಿಕೊಳ್ಳುತ್ತಿದ್ದಂತೆಯೇ ಆತ ಮಾಧವನ ಮುಖ ನೋಡಿದ. ಸರಳ ಹೃದಯದ ಮಾಧವನ ಬಗ್ಗೆ ಕನಿಕರ ಮೂಡಿ ಕುತ್ತಿಗೆ ಬಿಗಿದು ಬಂತು. ಶ್ರೀನಿವಾಸರಾಯರ ಸ್ವಭಾವ ಆತ ಬಲ್ಲ. ಹಾಗೆಂದು ಗುಟ್ಟನಲ್ಲಿಡಲೇ....?

ಕೈ ರಕ್ತ ಬಸಿಯುತ್ತಿತ್ತು; ಉರಿಯುತ್ತಿತ್ತು. ಮೊನ್ನೆ ತಾನೇ ಕೈಹಿಡಿದ ಯಮುನೆಯ ಗತಿ? ಮಾಧವನ ಸ್ಥಿತಿ? ಸಾವಿನ ಕರಾಳ ಅನುಭವ........ಮುರಲಿ ಮಲೇರಿಯ ಹಿಡಿದವರಂತೆ ನಡುಗತೊಡಗಿದ.

ಭಾವನ ವಿಲಕ್ಷಣ ನಡವಳಿಕೆಯನ್ನು ಗಮನಿಸಿದ, ಮಾಧವ. ಸಮೀಪಿಸಿ, "ಏನಾಯಿತು ಭಾವ?" ಎಂದ. ಕೈಯಿಂದ ರಕ್ತ ಬಸಿಯುತ್ತಿರುವುದನ್ನು ಕಂಡು "ಇದೇನು ಭಾವ?" ಎಂದು ಕೇಳಿದ.

"ಇದು... ಅದು.... ಬೇರೇನಲ್ಲ" ಎನ್ನುತ್ತಾ ಮುರಲಿ ಸಮಾಧಾನದಿಂದಲೇ ಬಟ್ಟೆಯ ಸೆರಗನ್ನು ಹರಿದು ಕಟ್ಟತೊಡಗಿದ. ಮಾಧವ ಆತನ ಕೈಯನ್ನು ಹಿಡಿದು ಪರೀಕ್ಷಿಸಿ, "ಅಯ್ಯೋ, ಭಾವ... ಅಪ್ಪಾ!" ಎಂದು ಒಮ್ಮೆಗೇ ಚೀರಿದ. ಎಲ್ಲರೂ ಅಲ್ಲಿಗೆ ಓಡಿಬಂದರು.

ಮುರಲಿ ಕರುಣಾರ್ದ್ರ ದೃಷ್ಟಿಯಿಂದ ಮಾಧವನ ಕಡೆಗೊಮ್ಮೆ ಯಮುನೆಯ ಕಡೆಗೊಮ್ಮೆ ನೋಡಿ ತಾಳ್ಮೆಯಿಂದ ನಿಜಸ್ಥಿತಿಯನ್ನು ಆದಷ್ಟು ಮರೆಮಾಚತೊಡಗಿದ. ಆದರೆ ವಿಷಯ ಎಲ್ಲರಿಗೂ ತಿಳಿಯಲ್ಪಟ್ಟು ಎಲ್ಲರನ್ನೂ ಕಾಳಕೂಟವಲ್ಲದ್ದಿದಂತಾಯಿತು.

"ಮೊನ್ನೆ ಕೈಹಿಡಿದ ಯಮುನೆಗೋಸ್ಕರ— ಈ ಮಾಧವನ ಸರಳ ಸ್ನೇಹ

ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & CO. (M. I.) CALCUTTA—40

ಸ್ಟಾಕಿಸ್ಟರು: (I) ಷಾ ಕಂಪೆನಿ, ಮಂಗಳೂರು—1.

ನೋವುಗಳ ಅತ್ಯುತ್ತಮ ಸಂಹಾರಿಣೀ

ಅಮೃತಾಂಜನ

NAVAYUGA
REGD. NO. M. 3619

UDIPI, THURSDAY
15—9—1960

LICENSE NO. 31
Licensed to Post without Prepayment

ಸರ್ವೇಶ್ವರ, ಪರಮಾತ್ಮ, ನನಗೆ ಇದೊಂದು ಪ್ರಸಂಗದಲ್ಲಿ ಆಯುಸ್ಸು ಕೊಡುವುದಿದ್ದರೆ ಈ ಪ್ರಸಂಗವನ್ನೇ ಯಾರಿಗೂ ತಿಳಿಸದೆ ಮುಚ್ಚಿಡುತ್ತಿದ್ದೆ"—ಮುರಲಿಯ ಎದೆಯೇ ಕರಗಿ ನೀರಾಗಿತ್ತು.

ಶ್ರೀನಿವಾಸರಾಯರು ಮಗನ ಮೇಲಿನ ಸಿಟ್ಟಿನಿಂದ ನಡುಗುತ್ತಿದ್ದರು. "ಅವನ್ನ ಇಲ್ಲಿಯೇ ಕೊಚ್ಚಿ ತೋರಣ ಹಾಕ್ಬೇಕು ...."

ಮಾಧವ ಮುರಲಿಯ ಜೀವದ ಬದಲಿಗೆ ತನ್ನ ಜೀವವನ್ನು ಕೊಡಲೂ ಸಿದ್ಧನಿದ್ದ. ಅಧೋಮುಖಿಯಾಗಿ ಕಣ್ಣೀರ್ಗರೆಯುತ್ತಿದ್ದ.

ಅಲ್ಲಿಂದ ಡಾಕ್ಟರರಲ್ಲಿಗೆ ನಾಲ್ಕು ಮೈಲು-ರಸ್ತೆಯಲ್ಲಿ ಹೋಗುವುದಿದ್ದರೆ ಆರು ಮೈಲು.

ಸಾಹುಕಾರ್ ಶೀನಪ್ಪ ಕಮ್ತಿಯವರ ಕಟ್ಟೆಗೆ ಲಾರಿ ಅಲ್ಲಿಯೇ ಸಮೀಪದ ಕಾಡಿನ ವರೆಗೆ ಬಂದಿತ್ತು. ಮುರಲಿಯನ್ನು ಅದರಲ್ಲಿ ಕುಳ್ಳಿರಿಸಿಕೊಂಡು ಶ್ರೀನಿವಾಸರಾಯರು ಮತ್ತು ನರಸಿಂಹ ಶಾಸ್ತ್ರಿಗಳು ಡಾಕ್ಟರರಲ್ಲಿಗೆ ಹೋದರು. ಪುರೋಹಿತರು, "ದೇವರಿದ್ದಾನೆ. ಗಡಿಬಿಡಿಯ ಪ್ರಸಂಗವೇನಿಲ್ಲ" ಎಂದು ಮುಂತಾಗಿ ಉಳಿದವರನ್ನು ಸಮಾಧಾನ ಪಡಿಸುತ್ತಾ ಮನೆಯ ಕಡೆ ತಿರುಗಿಸಿದರು ಎಲ್ಲರೂ ಜೋಲು ಮೋರೆಯಿಂದ ಮನೆಯತ್ತ ಸಾಗಿದರು.

ಮುರಲಿ ಹತ್ತಿದ ಲಾರಿಯ ಸದ್ದು ಕೇಳಿಸುವ ವರೆಗೂ ಅದೇ ಕಡೆ ನೋಡುತ್ತಾ ನಿಂತು ಕೊನೆಗೆ ನಿಟ್ಟುಸಿರೊಂದನ್ನು ಬಿಟ್ಟು ಮಾಧವ ಮನೆಯತ್ತ ಹೆಜ್ಜೆ ಹಾಕಿದ.

ಹೊರ ಚಾವಡಿಯಲ್ಲಿ ಎಲ್ಲರೂ ಒಂದೊಂದು ಮೂಲೆ ಹಿಡಿದು ಕುಳಿತಿದ್ದರು. ಪುರೋಹಿತರು-ಮತ್ತೆ ಕೆಲವರು ಹೆಬ್ಬಾಗಿಲಲ್ಲಿ ಕುಳಿತು ತುಂಡು ತುಂಡು ಮಾತುಗಳನ್ನು ಮೆಲು ದನಿಯಲ್ಲಾಡಿಕೊಳ್ಳುತ್ತಿದ್ದರು. ಚಿಕ್ಕ ಮಕ್ಕಳು ಮಾತ್ರ ವಿಸ್ಮಯದಿಂದ ಹೆತ್ತವರ ಮುಖ ನೋಡುತ್ತಾ ಬೇಕೋ ಬೇಡವೋ ಎಂಬಂತೆ ನೆಗೆದಾಡುತ್ತಿದ್ದುವು. ಒಂದು ಕಡೆಯಲ್ಲಿ ಅಡಿಗೆಯವರ ಕೆಲಸ ಸದ್ದಿಲ್ಲದೆ, ಯಂತ್ರವತ್ತಾಗಿ ಸಾಗುತ್ತಿತ್ತು.

"ಯಮುನಾ.... ಈ ಚಾಂಡಾಲನ್ನ ಕ್ಷಮಿಸಲಾರೆಯಾ?" ಕಂಠ ಬಿಗಿದು ಬಂದು ಮಾಧವನ ಮಾತು ಮುಳುಗಿ ಹೋಗಿತ್ತು. ಆ ಕೋಣೆಯಲ್ಲಿ ಅವರಿಬ್ಬರು ಮಾತ್ರ ಇದ್ದಿದ್ದರು.

ಯಮುನಾ ತಲೆಯೆತ್ತಲಿಲ್ಲ. ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿತ್ತು.

"ಯಮುನಾ.... ಪೂರ್ಣ.... ನನ್ನಿಂದ...." ಮುಂದುವರಿಸಲು ಸಾಧ್ಯವಾಗದೆ ಬಿಕ್ಕಿಬಿಕ್ಕಿ ಅಳತೊಡಗಿದ, ಮಾಧವ. ಯಮುನೆಯೂ ಮುಖಕ್ಕೆ ಸೆರಗು ಮುಚ್ಚಿಕೊಂಡು ಬಿಕ್ಕಳಿಕತೊಡಗಿದಳು. ಇಬ್ಬರೂ ಸ್ಥಿರಿಸಿಕೊಳ್ಳಬೇಕಾದರೆ ಬಹು ಕಾಲ ಹಿಡಿಯಿತು.

ಹೊರಗಣಿಂದ ಯಾರೋ ಬಂದಂತಾಯಿತು. ಮಾಧವ ಇಣಿಕಿ ನೋಡಿದ. ಮಾಯೆಯೋ, ಸ್ವಪ್ನವೋ— ತಾನಾವ ಲೋಕದಲ್ಲಿರುವೆನೆಂಬುದೇ ಅರಿಯದಾದ. ಭೂಮಿಯೇ ತಿರುಗುವಂತಾಯಿತು.

ಕಿಟಕಿಯ ಸರಳುಗಳನ್ನು ಗಟ್ಟಿಯಾಗಿ ಹಿಡಿದುಕೊಂಡ. ಆ ಸರಳುಗಳೂ ಅಸ್ಥಿರವಾದುವು! "ಅಮ್ಮಾ!.... ಯಮು...ನಾ" ಎನ್ನುತ್ತಾ ಅಲ್ಲಿಯೇ ಕುಸಿದುಬಿದ್ದ.

ಮುರಲಿಯ ಹೆಣವನ್ನು ಹೆಬ್ಬಾಗಲಿನಿಂದ ಒಳಕ್ಕೆ ಸಾಗಿಸುತ್ತಿದ್ದರು.

ಇಡೀ ಮನೆಯೇ ಚಿತ್ರದಲ್ಲಿ ಬರೆದಂತೆ ಸ್ತಂಭೀಭೂತವಾಗಿ ಹೋಗಿತ್ತು.

ಮಾಧವ ಚೇತರಿಸಿಕೊಳ್ಳುವಾಗ ಯಮುನೆ ಬಾಡಿಡೆ ಒರಗಿದುದನ್ನೂ ರಾಘಮ್ಮ ಬಂದು ಗಾಳಿ ಹಾಕಿ ಉಪಚರಿಸುತ್ತಿದ್ದುದನ್ನೂ ಕಂಡ. ಆಕೆ ತನ್ನೆಡೆ ನೋಡಿದಾಗ ತಾಯಿಯ ಆ ದೃಷ್ಟಿಯನ್ನೆದುರಿಸಲಾರದೇ ಹೋದ. ತಡವರಿಸುತ್ತಾ ಎದ್ದುನಿಂತು ಒರಗಿದ್ದ ತಂಗಿಯ ಕಾಲಬಳಿ ಉದ್ದಂಡ ಬಿದ್ದು, "ಯಮುನಾ.... ಕ್ಷಮಿಸು!" ಎಂದು ಹೇಳಿ, ಎದ್ದು, ಹುಚ್ಚನಂತೆ ಹಿಂದಿನ ಬಾಗಿಲಿನಿಂದ ಹೊರಹೊರಟ.

ಸುವರ್ಣೆ ಯಥಾಪ್ರಕಾರ ಮುಂಚಿನಂತೆ ಆರ್ಭಟಿಸುತ್ತಾ ಧಾವಿಸುತ್ತಿದ್ದಳು. ಕೆಲವೊಮ್ಮೆ ಕೊರಕಲು ಬಂಡೆಯ ಮೇಲಿಂದ ನೊರೆ ನೊರೆಯಾಗಿ ಹಾರಿ, ಕೆಲವೊಮ್ಮೆ ವೇಗವಾಗಿ ಸುಳಿದು, ಕೆಲವೊಮ್ಮೆ ಅಡ್ಡ ಬಂಡೆಗೆ ತಾಗಿ ಚಿಮ್ಮಿ ಕೃತಾಂತನ ವಿಕಟ ಸಡಗರದಿಂದ ಮುಂದೆ ಸಾಗುತ್ತಿರುವ ಆಕೆಯ ಚೆಲ್ಲಾಟವನ್ನು ಮಾಧವ ದಡದಲ್ಲಿಯ ಎತ್ತರದ ಸಾಲು ಬಂಡೆಯೊಂದರ ಮೇಲೆ ನಿಂತು ನೋಡಿದ. ಆತನ ಕಣ್ಣಿನಲ್ಲಿ ಕೊಂಚವೂ ಖೇದವಿರಲಿಲ್ಲ. ಕಣ್ಣೀರು ಸಂಪೂರ್ಣ ಆರಿತ್ತು. ಮುಖ ಬಿಗುವೇರಿತ್ತು. ವಿಧಿಯ ಕರಾಳ ಹಸ್ತದೊಡನೆ ಸೆಣಸಾಡಲು ನಿಂತ ಅಲೌಕಿಕ ಯೋಧನಂತೆ ನಿಂತಿದ್ದ. ಬಹುಕಾಲ ನದಿಯನ್ನೇ ಕೆಂಗಣ್ಣಿನಿಂದ ಈಕ್ಷಿಸುತ್ತಾ ನಿಂತ. ಆತ ನಿಂತ ಬಂಡೆ ನದಿಯ ನೀರಿನಿಂದ ನಾಲ್ಕು ಪುರುಷ ಪ್ರಮಾಣ ಎತ್ತರದಲ್ಲಿತ್ತು. ಆತ ತನ್ನೊಳಗೇ ಏನೋ ಗೊಣಗ ತೊಡಗಿದ.

ವಿಷಗಳಿಗೆಯಲ್ಲಿ ನೆನಸಿದ ಹುಚ್ಚು ಹುಡುಗಾಟಿಕೆಯಿಂದಾಗಿ ಆತ ಅಂದು ಅಪರಾಧಿಯಾಗಿದ್ದ. ಮುರಲಿಯನ್ನು ತಾನು ಒತ್ತಾಯಿಸದಿದ್ದರೆ....

ಮಾಧವನಿಗೆ—ತನ್ನ ಮೇಲೆ ತನಗೇ—ಸಿಟ್ಟೇರಿತು. "ಪಾಪಿ, ಜೀವ!" ಎಂದುಕೊಂಡು ತುಟಿ ಕಚ್ಚಿದ. ಹಾಗೆಯೇ ಕಾಲು ಅಗಲಮಾಡಿ ಸೊಂಟದ ಮೇಲೆ ಕೈಗಳನ್ನಿಟ್ಟು ಬಾನನ್ನು ದಿಟ್ಟಿಸತೊಡಗಿದ. ಬಲಿದ ಯಾವುದೋ ದೃಢ ನಿಶ್ಚಯದಿಂದ ಆತನ ಮುಖ ಕಳೆಯೇರಿತ್ತು.

ಕೆಲ ಹೊತ್ತಿನಲ್ಲೇ "ಧುಳುಂ" ಎಂಬ ಅದ್ಭುತವಾದ ಸದ್ದಿಗೆ ಅಕ್ಕ ಪಕ್ಕದ ಪಕ್ಷಿಗಳು ಹೆದರಿ ಚೀರಿಡುತ್ತಾ ಹಾರಿ ಹೋದುವು!

—— —

ವಿಚಾರವರ್ಷ

(೪ನೇ ಪುಟದಿಂದ)

ಅಭಿಪ್ರಾಯ ಹೊಂದುವುದು ತಪ್ಪೆಂದು ಹೇಳಬಹುದು.

ಮತ್ತೊಂದು ಸ್ವರೂಪದ್ದೆನ್ನಲಾಗುವ ಪ್ರಣಯಿಗಳ ಮನೋವೃತ್ತಾಂತವನ್ನೂ ಅರಿಯಬಹುದು. ಈ ತರಹದ ಪ್ರತಿಜಾತಿ ವ್ಯಕ್ತಿಗಳು 'ಧಾಡಸಿ' ವೃತ್ತಿಯುಳ್ಳವರಾಗಿರುತ್ತಾರೆಂದೂ ಇವರಲ್ಲಿ ಅದೆಷ್ಟು ಬೇಗನೇ ಒಬ್ಬರೊಬ್ಬರು ಸಂಬಂಧಿತ ವಿಷಯಗಳ ಪ್ರಚೋದನೆ ಮತ್ತು ಚಟುವಟಿಕೆಗಳಿಂದಾಗಿ ಮಾತನಾಡುವುದು, ಓಡಿಯಾಡುವುದು ಮೊದಲಾದವುಗಳಲ್ಲಿ ವಿಶೇಷ ಆಸಕ್ತಿ ತೋರುವರೆಂದೂ ಹೇಳಲಾಗುತ್ತದೆ. ಇವರು ಎಷ್ಟೋ ಸಲ ಇತರರ ಸಂಬಂಧವನ್ನೂ ಕೆಡಿಸಿಕೊಳ್ಳಬಹುದಾಗಿದೆ. ಆದರೆ, ಇಂತಹವರ ಭಾವೀ ಜೀವನವು ಬೇಗನೆಯೇ ಹುರುಳಿಲ್ಲದ್ದೆನಿಸುವಂತಾಗುವದೆಂದೂ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗುತ್ತಿದೆ. ಈ ತರಹದ ಸಂಬಂಧಗಳೇ ಪಡುವುದರಿಂದಲೇ— ಅಮೇರಿಕೆ ಮೊದಲಾದ ಮುಂದುವರಿದಿರುವವೆಂದು ಹೇಳಲಾಗುತ್ತಿರುವ ರಾಷ್ಟ್ರಗಳಲ್ಲಿ ವರ್ಷಂಪ್ರತಿ ಎಷ್ಟೋ ಪಾಲು ಜನ ಸೋಡಚೀಟಿ ಕೊಡುವುದನ್ನು ಕಾಣಬಹುದು.

ಇಷ್ಟೇ ಅಲ್ಲದೆ ಇದೇ ರೀತಿ ಅಂತರ್ಭೇದಗಳ ಬಗ್ಗೆಯೂ ಎಷ್ಟೋ ಬಗೆಯ ಪ್ರಣಯ ವಿಲಾಸಗಳ ಬಗ್ಗೆ ಹೇಳಲಾಗುತ್ತಿರುವವಾದರೂ ಈ ಚಿಕ್ಕ ಲೇಖದಲ್ಲಿ ಅದೆಲ್ಲವನ್ನೂ ಬರೆಯುವುದು ಅಸಾಧ್ಯ. ಮದುವೆಯಾಗಲೀ ಅಥವಾ ಬಿಡಲಿ; ಸಂಬಂಧ ಬೆಳೆಸಲಿ ಇಲ್ಲವೇ ಇಟ್ಟುಕೊಳ್ಳಲಿ ಅಥವಾ ಬಿಡಲಿ, ಏನೇ ಇದ್ದರೂ ಪ್ರತಿಜಾತಿನಿರೀಕ್ಷಣೆ ಮತ್ತು ಆ ವಿಷಯಕ್ಕೆ ಸಂಬಂಧಿತ ವಿಷಯಗಳ ಬಗ್ಗೆ ಮಾತನಾಡುವದಾಗಲೀ, ಚರ್ಚಿಸುವುದಾಗಲೀ ಅಥವಾ ಮನದಲ್ಲಿ ಆ ಬಗ್ಗೆ ಗುಂಯುಗುಡುತ್ತಿರುವುದಾಗಲೀ ಪ್ರತಿಯೋರ್ವರ ಸಾಮಾನ್ಯ ಸಂಗತಿಯಾಗಿದೆ. ಮದುವೆಯಾಗಿ ಸುಖ ಸಂಸಾರ ಸಾಗಿಸುತ್ತಿದ್ದರೂ ಎರಡನೆಯವರನ್ನು ಕುತೂಹಲದಿಂದ ನೋಡದಿರುವ ಪ್ರಾಣಿಗಳೇ ಇಲ್ಲವೆನ್ನಬೇಕು. ಕಣ್ಣೇ ನಂಬಲಾಗದು.

ಕುತೂಹಲವೆಂಬುದು ಮನುಷ್ಯನ ಸಹಜ ಸ್ವಭಾವವಾಗಿದ್ದು, ಮನುಷ್ಯ ಪ್ರಾಣಿಯ ಪ್ರಣಯಭೇದಗಳಲ್ಲಿ ಏಕಮಾತ್ರವಾಗಿ ಅರಿಸಿ, ಜೀವನದ ಸುಖಜೀವನ ನಡೆಸಬೇಕಾದದ್ದು ವಿಶ್ವದ ಕಲ್ಯಾಣ ದೃಷ್ಟಿಯಿಂದಲ್ಲೆ ಮಹತ್ವಪೂರಿತವಾದುದಾಗಿದೆ. ವಿವರಿಸಲಾದ ಅನೇಕ ವಿಧಗಳಲ್ಲಿ ಭಾವನಾವೇಶದ ಗರ್ಭಿತ ಪ್ರತಿಜಾತಿಗಳ ಸಂಬಂಧಕ್ಕೆ ಎಲ್ಲೆಡೆ ಮನ್ನಣೆ ಸಿಗುತ್ತಿದೆ. ಇದಕ್ಕೆ ಕೊಡಲಾಗುತ್ತಿರುವ ಮುಖ್ಯವಾದ ಕಾರಣಗಳಲ್ಲಿ ಇಂತಹ ಸಂಬಂಧದಿಂದಾಗಿ ಆ ಪ್ರಣಯಿಗಳು ಪೂರ್ವದಲ್ಲಿ ತಾವು ಕಾಣುತ್ತಿದ್ದ ಕನಸನ್ನು ನನಸುಗೊಳಿಸಲು ಅವಿರತವಾಗಿ ಪ್ರಯತ್ನಿಸುವುದೇ ಮುಖ್ಯವಾಗಿದೆಂದು ಶಾಸ್ತ್ರಜ್ಞರ ಅಭಿಪ್ರಾಯ ಅಲ್ಲದೆ ಅವರಲ್ಲೇ ನಿಶ್ಚಲವಾದ ನಿರ್ಮಲವಾದ ಮತ್ತು ಕಾರ್ಯತತ್ಪರತೆಯ ನೈಜ ಪ್ರೇಮ ಅಡಗಿದೆಂದು ಅಭಿಪ್ರಾಯ ಪಡಲಾಗುತ್ತದೆ. ವಿಶ್ವಾಸ ಮತ್ತು ನಂಬುಗೆಗಳು ಇದರಲ್ಲಿ ಬಹ್ವಂಶವಾಗಿ ಜೀವನವನ್ನು ಆಳುತ್ತವೆಂದು ಹೇಳಬಹುದು.

ಏನೇ ಆಗಲಿ, ಮನುಷ್ಯ ಸುಖವಾಗಿ ಬಾಳಬಿಚ್ಛಿಸುತ್ತಾನೆ. ಅದಕ್ಕಾಗಿ ಸೃಷ್ಟಿಯಲ್ಲಿ ನಡೆಯುವ ದೈವಾಟಗಳಲ್ಲಿ ಪ್ರಣಯವೂ ಒಂದು. ಇದನ್ನೂ ಶಾಸ್ತ್ರೀಯವಾಗಿ ಅಭ್ಯಸಿಸಿ ಅದಕ್ಕನುಸರಿಸಿ ಮನುಷ್ಯ ಕಲಿತುಕೊಂಡು ನಡೆಯಬೇಕಾಗಿದೆ —ಇದೆಲ್ಲ ಭಾವೀ ರಾಷ್ಟ್ರದ, ನವೀನ ಸಮಾಜದ ಅಡಿಗಲ್ಲಿಗೆ ಎಂದು ಸ್ಪಷ್ಟವಾಗಿ ತಿಳಿಯಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಚಿಲ್ಲರೆ ನಯೆಪೈಸೆಗಳೆ?
ಹತ್ತು, ನೂರರ ನೋಟುಗಳೆ?
ಯಾವುದೇ ಇರಲಿ—
ವ್ಯವಸ್ಥಿತವಾಗಿ ಉಳಿಸಿ;
ಅಭಿವೃದ್ಧಿಯನ್ನು ಗಳಿಸಿ.

ದಿನದ ಇಪ್ಪತ್ತೈದು ನಯೆಪೈಸೆಗಳು
ಏಳು ವರುಷಗಳಲ್ಲಿ ಏಳುನೂರು
ರೂಪಾಯಿಗಳ ನಿಧಿಯನ್ನು
ನಿಮಗೆ ತಂದೊಪ್ಪಿಸುವ,

ಪಿಗ್ಮಿ

ಸಿಂಡಿಕೇಟ್ ಬೇಂಕ್ ಮೊದಲಾಗಿ
ಪ್ರಾರಂಭಿಸಿದ ಮತ್ತೀಗ ಸರ್ವ
ಜನಪ್ರಿಯವಾದ ಚಿಕ್ಕ
ಉಳಿತಾಯ ಯೋಜನೆ.

ವರುಷದ ಒಂದು ಸಾವಿರ ರೂಪಾಯಿಗಳು
(ನೀವು ಇನ್ನೂರ ಐವತ್ತರಿಂದಲೂ
ಪ್ರಾರಂಭಿಸಬಹುದು)
ಮೂವತ್ತೈದು ವರುಷಗಳಲ್ಲಿ ನೂರು
ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿಗೆ
ಸಂಪತ್ತನ್ನು ಕೂಡಿಸಿ ಕೊಡುವ

ಇನ್ವೆಸ್ಟರ್ಸ್ ಏಜನ್ಸಿ

ಭಾರತೀಯ ಬೇಂಕಿಂಗ್ ಕ್ಷೇತ್ರದಲ್ಲೇ
ನವೀನವಾಗಿ ಸಿಂಡಿಕೇಟ್ ಬೇಂಕ್
ಕೈಗೊಂಡಿರುವ ಮತ್ತೀಗ ಜನಾನುರಾಗ
ಗಳಿಸುತ್ತಿರುವ ವಿನಿಯೋಗ ವಿಭಾಗ

ನಿಮಗೆ ಬೇಕಾದ ವಿವರಗಳನ್ನೀಯಲು ನಮ್ಮ ನೂರಮೂವತ್ತೊಂಬತ್ತು ಶಾಖೆಗಳು ಸಿದ್ಧವಾಗಿವೆ.
ಅಥವಾ ನೀವು ನೇರವಾಗಿ ನಮ್ಮ ಪ್ರಧಾನ ಕಾರ್ಯಾಲಯಕ್ಕೆ ಬರೆಯಬಹುದು.
ದಯಮಾಡಿ ಯೋಚಿಸಿ:

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ
ಸ್ಥಾಪನೆ: ೧೯೨೫

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ.

Edited, Printed & Published by K. H. Shetty, at the Navayuga Press, Udipi, S. India.

40th year of publication. 22-9-1960 ೪೦ನೇ ವರ್ಷ

ಸಂಪುಟ ೪೦ | ನವಯುಗ | Vol. 40

ಸಂಚಿಕೆ ೪ | No. 4

ಬೆಲೆ 0=13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಭಿನ್ನಾಭಿಪ್ರಾಯದ ಬೀಜ ಮೊಳೆಯಬಾರದು

ವ್ಯಕ್ತಿಗಿಂತ ಸಂಸ್ಥೆ ದೊಡ್ಡದು; ಅಧಿಕಾರಕ್ಕಿಂತ ಅವಕಾಶ ಹಿರಿದು ಎಂಬುದನ್ನು ಮರೆಯದೆ ಕಾಂಗ್ರೆಸ್ ಕಾರ್ಯಕರ್ತರು ದುಡಿಯದೆ ಹೋದರೆ, ಪಕ್ಷವು ಶಿಥಿಲವಾಗುವುದು ಖಂಡಿತ.

ಶ್ರೀ ರಾಶಿ.

ಮೈಸೂರಿನ ರಾಜಕಾರಣದಲ್ಲಿ ಪ್ರಧಾನಿ ನೆಹರೂರವರ ಬೆಂಗಳೂರ ದರ್ಶನಾನಂತರದಲ್ಲಿ ಒಂದು ಹೊಸ ವಾತಾವರಣ ತಲೆದೋರಿದಂತಾಗಿದೆ. ಒಂದು ಪಕ್ಷದವರು ಸಂತುಷ್ಟರಾದರೆ; ಇನ್ನೊಂದರವರು ತೀರ ನಿರಾಶೆಗೊಂಡಿರುವರೆಂದು ತಿಳಿಯುತ್ತದೆ. ಇದರಿಂದಾಗಿ ತಾವು ಡಿಲ್ಲಿಯ ವರೆಗೂ ಹೋಗಿ ಮಾಡಿದ ವಾದವು ಕಡೆಗಾಲಿಂದ ಒದೆತ ತಿಂದುದರ ಬಗ್ಗೆ "ಭಿನ್ನಮತೀಯರಿಗೆ" ನುಂಗಲಾರದ ತುತ್ತಾಗಿ ಪರಿಣಮಿಸಿತು. ಅಷ್ಟು ಮಾತ್ರವಲ್ಲದೇ ಮಂತ್ರಿಮಂಡಳಿಯನ್ನು ಉರುಳಿಸುವ ರಾಜಕಾರಣದಲ್ಲೇ ಮೈಸೂರಿನ ಕಾಂಗ್ರೆಸ್ ನಾಯಕರು ತತ್ಪರರಾಗಿರುವರೆಂದೂ ಮೈಸೂರಿನಿಂದ ತನ್ನಲ್ಲಿಗೆ ಬಂದ ಪ್ರತಿಯೊಬ್ಬನೂ ಮಂತ್ರಿಮಂಡಳಿಯ ಮೇಲಾಗಲೀ ಪಕ್ಷದ ಗುಂಪುಗಳ ಮೇಲಾಗಲೀ ಮಾತಾಡಿದುದನ್ನು ಕೇಳಿ ಕೇಳಿ ತನಗೆ ಸಾಕಾಗಿ ಹೋಯಿತು ಎಂಬ ಪ್ರಧಾನಿಯವರ ಉದ್ಗಾರ ಮೈಸೂರು ಕಾಂಗ್ರೆಸ್ಸಿಗರ ದವಡೆಗೆ ಕೊಟ್ಟ ಏಟಿನಂತಾಯಿತು ಎಂದು ಹೇಳಬಹುದು.

ಆರಂಭದಿಂದಲೂ ಮೈಸೂರಿನ ಕಾಂಗ್ರೆಸ್ಸು ಕೆಲವೊಂದು ಅನಭಿಷಿಕ್ತ ದೊರೆಗಳೆನಿಸಿಕೊಂಡವರ ಕಪಿ ಮುಷ್ಟಿಯೊಳಗೆ ಕುಣಿಯುತಿತ್ತು. ಇವರ ಕೃಪೆ ಅವಕೃಪೆಗಳನ್ನವಲಂಬಿಸಿ ಅಲ್ಲಿನ ರಾಜಕಾರಣವು ನಡೆದುಕೊಂಡು ಬರುವುದು ಸಂಪ್ರದಾಯವೆಂಬಷ್ಟು ಮಾಮೂಲಾಗಿದೆ. ಒಬ್ಬ ನಾಯಕನನ್ನು ಗದ್ದುಗೆಯಿಂದಿಳಿಸಿ ಮತ್ತೊಬ್ಬನನ್ನು ಏರಿಸುವ ಸಾಹಸದೊಡನೆಯೇ ಹೊಸ ನಾಯಕನ ಮೇಲೆ ಅವಿಶ್ವಾಸ ಮೂಡಲು ಪ್ರಾರಂಭಿಸುವಷ್ಟು ಕೊಳಕು ಮೈಸೂರಿನ ರಾಜಕಾರಣದಲ್ಲಿರುವುದು ರಾಜ್ಯಕ್ಕೆ ಭೂಷಣವಲ್ಲ. ನಾಯಕರ ಬದಲಾವಣೆಯಿಂದ ಮೈಸೂರು ಕಾಂಗ್ರೆಸ್‌ನ ಸಮಸ್ಯೆಗಳು ಇದುವರೆಗೆ ಪರಿಹಾರಗೊಳ್ಳಲಿಲ್ಲ; ಇನ್ನು ಗೊಳ್ಳುವಂತಹ ಆಶೆಯಿಡುವುದೂ ಸಾಧ್ಯವಿಲ್ಲ. ಪ್ರಧಾನಿಗಳು ಹೇಳುವಂತೆ ಆಡಳಿತೆಯಲ್ಲಿನ ಚಿಕ್ಕಪುಟ್ಟ ಕುಂದುಕೊರತೆಗಳನ್ನು ಎತ್ತಿಕಟ್ಟಿ, ಅವಕ್ಕೆ ಅನಪೇಕ್ಷಣೀಯ ಪ್ರಸಿದ್ಧಿಯನ್ನು ಕೊಟ್ಟು ಸಚಿವ ಸಂಪುಟ ಸರಿಪಡಿಸಲಾರದಂತಹ ಅಕ್ಷಮ್ಯ ಅಪರಾಧವೆಸಗಿದೆಯೆಂದು ಡಂಗುರ ಹೊಯ್ಯುವ ಹವ್ಯಾಸ ಕಾಂಗ್ರೆಸ್‌ನಂತಹ ಅಧಿಕಾರಾರೂಢ ಪಕ್ಷದ ಸದಸ್ಯರಿಗೆ ಮರ್ಯಾದೆಯಲ್ಲ; ಪಕ್ಷದ ಗೌರವಕ್ಕಂತೂ ಉಚಿತವಲ್ಲ. 'ನಡೆವರೆಡಹದೆ ಕುಳಿತರೆಡಹುವರೆ' ಎಂಬಂತೆ ಸರಕಾರ ಕೆಲಸ ಮಾಡುವಾಗ, ಮಾಡಿಸುವಾಗ ತಪ್ಪುಗಳೂ ಅನ್ಯಾಯಗಳೂ ತಿಳಿದೂ ತಿಳಿಯದೆಯೂ ಆಗಬಹುದು; ಆಗುವುದೂ ಸ್ವಾಭಾವಿಕವೆ. ಆದರೆ, ಇವನ್ನೆಲ್ಲಾ ಪಕ್ಷದ ಒಳಗೇನೇ ಚರ್ಚಿಸಿ ಸರಿಪಡಿಸಿಕೊಳ್ಳುವುದು; ಇನ್ನು ಮುಂದಕ್ಕಾದರೂ ಅಂತಹ ದೋಷಗಳು ತಲೆದೋರದಂತೆ ಎಚ್ಚರಿಕೆ ವಹಿಸುವುದು—ಇದಕ್ಕಾಗಿ ಮುಂಜಾಗ್ರತೆ ವಹಿಸುವುದರಿಂದ, ಸರಕಾರವೂ ಸರಿದಾರಿಯಲ್ಲಿ ನಡೆಯುವುದಕ್ಕೆ ಅನುಕೂಲವಾಗುವುದು; ಮತ್ತು ಪಕ್ಷದ ಘನತೆಗೂ ಈ ವಿಧಾನ ಯೋಗ್ಯವಾದುದು.

ಕಾಂಗ್ರೆಸ್ ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ಸೂಚ್ಯವಾಗಿಯೇ "ಭಿನ್ನಾಭಿಪ್ರಾಯವನ್ನು ಹುಟ್ಟಿಸಿದವರೇ ಅದನ್ನು ದೂರೀಕರಿಸಬೇಕು" ಎಂದು ಅಂದು ಹೇಳಿದ್ದಾರೆ. ಆದರೆ, ತಾವು ಹೊರಿಸಿದ್ದ ಅಪವಾದನೆಗಳ ಬಗ್ಗೆ ಪಕ್ಷದ ಸಭೆಯಲ್ಲಿ ಚರ್ಚೆ ನಡೆದಾಗ, ಭಿನ್ನಮತೀಯರಿಗೆ ಏನೇನೂ ಸಮಾಧಾನವಾಗದೆ ಡಿಲ್ಲಿ ಯಾತ್ರೆಯನ್ನೇ ಮಾಡುವುದಲ್ಲದೆ ಬೇರೆ ದಾರಿಯೇ ಅವರಿಗೆ ಗೋಚರಿಸಲಿಲ್ಲವೆಂದಾಗ, ಈ ಭಿನ್ನಾಭಿಪ್ರಾಯಗಳು ವಾಸ್ತವಿಕವಾದುವೇ ಅಥವಾ ಭಿನ್ನಾಭಿಪ್ರಾಯಕ್ಕಾಗಿಯೇ ಇರುವಂತಹುದೇ ಎಂಬ ಸಂದೇಹ ಹುಟ್ಟಿದರೆ ಆಶ್ಚರ್ಯವಲ್ಲ. 'ಒಲ್ಲದ ಗಂಡನಿಗೆ ಮೊಸರಲ್ಲೂ ಕಲ್ಲು' ಎಂಬಂತೆ ಜತ್ತಿಯವರೂ ಅವರ ಸಹೋದ್ಯೋಗಿಗಳೂ ಅದೇನೇ ವಿವರಣೆಯಿತ್ತರೂ, ಮೊದಲೇ 'ತಮಗೆ ಸಮಾಧಾನವಾಗುವುದಿಲ್ಲ' ಎಂಬ ಘೋಷಣೆ ಎಬ್ಬಿಸಿದ ಶಾಸಕರಿಗೆ ಅದು ಪಥ್ಯವಾಗುವುದಾದರೂ ಹೇಗೆ? ಆದರೆ, ರಾಜ್ಯದ ನಾಯಕ ಬದಲಾವಣೆಗೆ ಕೇಂದ್ರ ವರಿಷ್ಠರ ಅನುಮತಿ ದೊರೆಯಬೇಕೆಂದಿರುವುದರಿಂದ ಈ ಮೂರೂವರೆ ವರ್ಷದಲ್ಲಿ ಇಬ್ಬರೇ ಮುಖ್ಯ ಮಂತ್ರಿಗಳಾದರು; ಇಲ್ಲವಾದರೆ, ವರ್ಷಕ್ಕೆ ಮೂರೂವರೆ ಜನರಿಗೆ ಮುಖ್ಯ ಮಂತ್ರಿಗಳಾಗುವ ನಸೀಬು ಬರುತಿತ್ತೋ ಏನೋ!

ಪಕ್ಷದ ಕಾರ್ಯಕರ್ತರು ಸದಾಚಾರಸಂಪನ್ನರಾಗಿ, 'ಸತ್ಕಾರ್ಯನಿರತರಾಗಿರುವರಾದರೆ, ಎಂತಹ ನಾಯಕನನ್ನೂ ತಮಗೆ ಬೇಕಾದಂತೆ ಕೊಂಡುಹೋಗಬಹುದು. ಒರಟು ಆನೆಯನ್ನಾದರೂ ಬುದ್ಧಿವಂತರಾದ ಮಾನವರು ಸಾಕಿ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಾರೆ. ಆದರೆ, ಪಕ್ಷದ ಸದಸ್ಯರಲ್ಲಿರುವ ಅಧಿಕಾರ ದಾಹ ಮತ್ತು ಸ್ವಾರ್ಥ ಮನೋವೃತ್ತಿಯಿಂದಾಗಿ ಅವರು ತಮ್ಮ ಸಮಯವನ್ನು ರಾಜ್ಯದ ಹಿತಕ್ಕಾಗಿ ವ್ಯಯಿಸದೆ, ತಮ್ಮ ಸ್ವಾರ್ಥಸಾಧನೆಗಾಗಿಯೇ ಉಪಯೋಗಿಸಿಕೊಳ್ಳುವಂತಾಗಿದೆ. ಚುನಾವಣೆಗಳಲ್ಲಿ ಗೆಲ್ಲುವ ಸಲುವಾಗಿ ಗುಣ, ಸಚ್ಚಾರಿತ್ರ್ಯವನ್ನು ಗಮನಿಸದೆ ಹಣವಂತರನ್ನೇ ಆರಿಸಿ, ಅವರಿಗೆ ಪಕ್ಷದ ಟಿಕೇಟು ಕೊಟ್ಟರೆ, ಅವರು ಗೆದ್ದು ಬಂದನಂತರ, ತಾವು ಮಾಡಿದ ವೆಚ್ಚದ ಬಾಬು ಕೂಡಿಸುವುದಕ್ಕಾಗಿ ಒಂದಲ್ಲ ಒಂದು ವಿಧದ ಅಧಿಕಾರಕ್ಕೆ ಬಾಯಿ ತೆರೆಯುತ್ತ ಕುಳಿತರೆ ಆಶ್ಚರ್ಯಪಡಬೇಕೇಕೆ? ತಮಗೆ ಕೊಡುತ್ತಿರುವ ಮಾಸಿಕ ವೇತನವನ್ನು ಪಡೆದು ಚುನಾವಣಾನಂತರ ತನ್ನ ಮತದಾರ ಕ್ಷೇತ್ರವನ್ನು ಒಂದು ಬಾರಿಯೂ ನೋಡದ ಜನತಾ ಪ್ರತಿನಿಧಿಗಳಿಗೆ ರಾಜ್ಯದ ನಾಗರಿಕರ ಸಮಸ್ಯೆಗಳು ಹೇಗೆ ತಿಳಿಯಬೇಕು? ಅವರ ಬುದ್ಧಿವಂತ ಮೆದುಳಿಗೆ ಆಲೋಚಿಸಲು ಗಂಭೀರವಾದ ಪ್ರಶ್ನೆಗಳಾದರೂ ಎಲ್ಲಿಂದ ಬರಬೇಕು? ಎಂತಲೇ ಅವರೆಲ್ಲರೂ ತಮಗಿರುವ ಸಮಯ

(೧೨ನೇ ಪುಟ ನೋಡಿ)

ಅಮೇರಿಕೆಯಲ್ಲಿ ಶಿಕ್ಷಣ.

೧. ಅಮೆರಿಕೆಯ ವಿದ್ಯಾರ್ಥಿಗಳು ೬ರಿಂದ ೧೬ ವರ್ಷಗಳ ವರೆಗೆ ಸಾರ್ವತ್ರಿಕ ಶಿಕ್ಷಣ ಪಡೆಯುತ್ತಾರೆ. ಪ್ರಾಥಮಿಕ ಶಾಲೆಯಿಂದ ತೊಡಗುವ ಈ ವಿದ್ಯಾಭ್ಯಾಸವು ಕಾಲೇಜುಗಳ ವರೆಗೂ ಮುಂದುವರಿಯುತ್ತದೆ. ಕೆಲವರು ಸ್ನಾತಕೋತ್ತರ ಶಿಕ್ಷಣವನ್ನೂ ಹೊಂದುತ್ತಾರೆ. ೨. ಅಲ್ಲಿನ ಶಾಲೆಗಳು ವಿದ್ಯಾರ್ಥಿಗಳಿಗೆ ವಿಜ್ಞಾನ, ಗಣಿತ ಮೊದಲಾದ ವಿವಿಧ ವಿಭಾಗಗಳಲ್ಲಿ ಅಧ್ಯಯನ ನಡೆಸುವ ಅವಕಾಶವನ್ನು ಒದಗಿಸುತ್ತವೆ. ೩. ೫ ವರ್ಷದ ಮಕ್ಕಳು ಕಿಂಡರ್‌ಗಾರ್ಟನ್ನಿನಲ್ಲಿ ಆಟ ಪದ್ಯಗಳನ್ನು ಕಲಿತು ಮುಂದೆ ಶಾಲೆ ಸೇರುವರು.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚು ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ವರದಿಗಾರನ ಡೈರಿಯಿಂದ.......

ಕೊಲೆ, ಆತ್ಮಹತ್ಯೆ, ಕಳವು, ಸುಲಿಗೆ ಮೊದಲಾದುವುಗಳ ತಪಾಸಣೆಯಲ್ಲಿ ಹೊರಟ ವರದಿಗಾರ ಅಂದು ನಿರಾಶನಾಗಿ ದಿನಾಸ್ತಮಯ ಸಮಯದಲ್ಲಿ ಕಾರ್ಯಾಲಯಕ್ಕೆ ಕಾಲಿಡುತ್ತಿರುವಾಗ ಒಂದು ಆತ್ಮಹತ್ಯೆಯ ವರದಿ ದೊರೆಯಿತು; ಆ ಸ್ಥಳಕ್ಕೆ ಧಾವಿಸಿ ನೋಡುವಾಗ, ವರದಿಗಾರನ ಜೀವವೇ ಹಾರಿಹೋದಂತಾಯಿತು!........

(ಒಂದು ಬಲ್ಗೇರಿಯನ್ ಕಥೆ)

"ನಿನ್ನಿಂದ ನನಗೆ ಬೇಕಾದುದೆಲ್ಲ ಇಷ್ಟೇ: ಎರಡು ಆತ್ಮಹತ್ಯೆ, ಒಂದು ಪ್ರಾಣಹರಣ ಪ್ರಯತ್ನ, ಒಂದು ದುರವಸ್ಥೆಯ ಮರಣ, ಎರಡು ಅಥವಾ ಮೂರು ಕಳ್ಳತನಗಳು, ಇನ್ನೂ ಅಂತಹ ಕೆಲವು ಸಣ್ಣ ವಿಷಯಗಳು."—ಎಂದು ಸಂಪಾದಕರು ಹೇಳಿದರು.

ನಾನು ಹತಾಶನಾಗಿ ತತ್ತರಪಡುತ್ತಾ,—"ಅದು ಹೇಗೆ ಸಾಧ್ಯ?! ನಾನೇನೂ ಅಪರಾಧಿಯಲ್ಲ! ನನ್ನಿಂದ ನೀವು ಒಂದು ಆತ್ಮಹತ್ಯೆ ಪಡೆಯುವುದು ಸಾಧ್ಯವಾಗಬಹುದು. ಆದರೆ, ನೀವು ಎರಡು ಕೇಳುತ್ತೀರಿ! ಕೊಲೆ ಮತ್ತು ಕಳ್ಳತನಗಳ ವಿಷಯದಲ್ಲಂತೂ, ಅದು ನನಗೆ ಸಾಧ್ಯವಾಗದ ಮಾತು!" ಎಂದೆನು.

ಸಂಪಾದಕರು ತಮ್ಮ ಮೊನಚಾದ ಗುತ್ತಿ ಗಡ್ಡವನ್ನು ಸವರುತ್ತ, ಅನುಗ್ರಹಪೂರ್ವಕ ದೃಷ್ಟಿಯಿಂದ ಮಂದಹಾಸ ಬೀರುತ್ತ, ನನಗೆ ತಮ್ಮ ಅಭಿಪ್ರಾಯವನ್ನು ವಿವರಿಸಿದರು.

"ಇಂತಹ ಕೆಲಸ ನೀವೆಂದೂ ಮಾಡಿಲ್ಲೆಂತ ಕಾಣುತ್ತೆ. ಅದು ಸ್ಪಷ್ಟ. ಆದರೆ....ನೀವು ನನ್ನ ಮಾತು ತಪ್ಪಾಗಿ ತಿಳಿದುಕೊಂಡಿದ್ದೀರಿ...."

ಅವರು ನನಗೆ ದೀರ್ಘ ವಿವರಣೆಗಳನ್ನಿತ್ತರು. ಆತ್ಮಹತ್ಯೆ ಮಾಡಿಕೊಳ್ಳುವುದಾಗಲೀ, ಅಥವಾ ಕಳ್ಳತನ ಮಾಡುವುದಾಗಲೀ ಅಥವಾ ಬೇರಾವುದಾದರೂ ಅಪರಾಧವನ್ನು ಮಾಡುವುದಾಗಲೀ ಅನವಶ್ಯವೆಂಬುದನ್ನು ನಾನು ಮನಗಂಡೆನು; ನನ್ನ ಲೇಖನಿಯೇ ನನ್ನ ಅನ್ನವನ್ನು ಗಳಿಸುವುದೆಂಬುದನ್ನೂ, ಆ ಕೆಲಸಕ್ಕೆ ಕೋವಿಯು ಬೇಕಾಗಿಲ್ಲವೆಂಬುದನ್ನೂ, ನಾನು ತಿಳಿದುಕೊಂಡೆನು.

೦ ೦ ೦

ನಾನು ಬೀದಿಯಲ್ಲಿ ಸಂಚರಿಸುತ್ತಿದ್ದೆ. ಈ ಹೊತ್ತು ಅದೃಷ್ಟವೇನೂ ಲಭಿಸಲಿಲ್ಲ. ನಾನು ಆರು ತಿಂಗಳಿನಿಂದ ಕೆಲಸ ಮಾಡುತ್ತಿದ್ದೇನೆ. ಯಾವಾಗಲೂ ಸುದ್ದಿಗಳನ್ನು ಒದಗಿಸುತ್ತ ಬಂದಿದ್ದೇನೆ—ಬೇಕಾಗಿದುದಕ್ಕಿಂತ ಹೆಚ್ಚಾಗಿಯೇ! ಆದರೆ ಈ ದಿನ ಒಂದು ಸಣ್ಣ ತುಂಡು ಸುದ್ದಿ ಕೂಡ ಇಲ್ಲ. ಅತ್ಯಂತ ಸಾಧಾರಣವಾದ ಸುದ್ದಿ ಸಹ, ಇಲ್ಲವೇ ಇಲ್ಲ! ನನಗೆ ಕನಿಷ್ಠ ಪಕ್ಷ ಒಂದಾದರೂ ಕೊಲೆ ಬೇಕಾಗಿತ್ತು! ಹೌದು! ಬೇಕಾಗಿದೆ! ಎಲ್ಲಿ....ಕೊರಳುಪಟ್ಟಿ ಮೇಲೆತ್ತಿ ಹೋಗುವಾತನೇ, ನಿನ್ನ ಜೇಬಿನಿಂದ 'ರಿವಾಲ್ವರ್' ಹೊರಗೆ ತೆಗೆದು, ಅಲ್ಲಿ ಹೋಗುತ್ತಿರುವ ಆ 'ಬೌಲರ್' ಟೊಪ್ಪಿಗೆಯ ಮಹಾಶಯನಿಗೆ ಗುರಿಯಿಟ್ಟು ಹೊಡೆ. ಊಂ! ಹಾರಿಸು ಗುಂಡು! ಢಂ! ಆತ ಬಿದ್ದನೆಂದರೆ, ನಾನು ಕೀಸದ ಕಡ್ಡಿಯನ್ನೂ, ಟಿಪ್ಪಣಿ-ಪುಸ್ತಕವನ್ನೂ ಹೊರ ತೆಗೆದುಕೊಂಡು ಎಲ್ಲವನ್ನೂ, ನಡೆದಂತೆ ಬರೆದುಕೊಳ್ಳುವೆನು. ದೊಡ್ಡ ಸುದ್ದಿ! ಹಾರಿಸು!

ಆದರೆ ಆ ಕೊರಳುಪಟ್ಟಿ ಮೇಲೆತ್ತಿದ ಮನುಷ್ಯನು ಒಂದು ಪಾದರಕ್ಷೆ ಅಂಗಡಿಯೊಳಕ್ಕೆ ಪ್ರವೇಶಿಸಿದನು. ಹೇಡಿ! ತುಚ್ಛ ಮನುಷ್ಯ! ಆ 'ಬೌಲರ್' ಟೊಪ್ಪಿಗೆಯ ಮಹಾಶಯನು ತನ್ನ ಪಾಡಿಗೆ ತಾನು ಹೊರಟು ಹೋದನು....ಶಾಂತನಾಗಿ!.... ಹಾಳು ಸನ್ನಿವೇಶ! ಸುದ್ದಿ ಸಿಕ್ಕಲಿಲ್ಲ, ಏನೂ ಸುದ್ದಿಯೇ ಇಲ್ಲ! ನಾನು ನಿರಾಶನಾದೆ.

೦ ೦ ೦

ತಕ್ಷಣವೇ ಏನೋ ಢಡಢಡ ಶಬ್ದ ಎಲ್ಲಿಂದಲೋ ಕೇಳಿ ಬಂದಿತು. ಆ ಬಗ್ಗೆ ಸಂಶಯವೇ ಇಲ್ಲ. ಅವು 'ರಿವಾಲ್ವರಿನ' ಗುಂಡುಗಳೇ ಇರಬೇಕು! ನಾನು ಆ ದಿಶೆಯಲ್ಲಿ ಓಡಿದೆನು....ಅದೊಂದು ಪರಿವಾರದ ದೃಶ್ಯ ಎಂದು ಕೊಂಡೆನು. ಅಪ್ಪ ಕುಡುಕ; ಅವನ ಹೆಂಡತಿ ಬಯ್ಯುತ್ತಾಳೆ ಅವನಿಗೆ ವಿಪರೀತ ಸಿಟ್ಟು. ಮೇಜಿನಿಂದ ಒಂದು 'ರಿವಾಲ್ವರ'ನ್ನು ಹೊರತೆಗೆದು, ಢಂಢಯೆಂದು ಗುಂಡು ಹಾರಿಸುತ್ತಾನೆ... ಹೆಂಡತಿ ಬೀಳುತ್ತಾಳೆ. "ಅಯ್ಯೋ, ದೇವರೇ!" ಎನ್ನುತ್ತ ಅತ್ತೆ ಕೂಗುತ್ತ ಓಡಿ ಬರುತ್ತಾಳೆ....ದೊಡ್ಡ ಮಗ ಓಡಿ ಬರುತ್ತಾನೆ. ಢಂ! ಅವನೂ ಬೀಳುತ್ತಾನೆ. ಭಯೋತ್ಪಾತ, ರಕ್ತಪಾತ, ಕೋಲಾಹಲ!

ಶನಿಕಾಟ! ಕಲ್ಪನೆಯೆಲ್ಲಾ ಸುಳ್ಳಾಯಿತು! ಈ ಸಲವೂ ಏನೂ ಇಲ್ಲ ಸಣ್ಣ ಹುಡುಗಿಯೊಬ್ಬಳು ಕಂಬಳಿ ಬಿಡಿಸುತ್ತಿದ್ದಾಳೆ! ಅದೇ ಢಡಢಡ ಶಬ್ದ!

೦ ೦ ೦

ನಾನಿನ್ನೂ ಮುಂದಕ್ಕೆ ಹೊರಟೆನು. ನನ್ನ ಜೇಬಿನಲ್ಲಿ ಒಂದೇ ಒಂದು ಲೇವಾ ಉಳಿದಿತ್ತು. ಅದನ್ನು ಹೊರತೆಗೆದು ಅಲ್ಲಿ ನಿಂತಿದ್ದ 'ಜಿಪ್ಸಿ' ಹುಡುಗನೊಬ್ಬನಿಗೆ ಕೊಡುತ್ತಾ, "ಹೋಗು, ಆ ಹುಡುಗನ ಕಪಾಳಕ್ಕೆ ಒಂದೇಟು ಕೊಡು!" ಎಂದು ಹೇಳಿದೆನು.

ನನ್ನ ಟಿಪ್ಪಣಿ ಪುಸ್ತಕವನ್ನು ಹೊರತೆಗೆದು, ಪರಿಣಾಮಕ್ಕಾಗಿ ಕಾದು ನೋಡಿದೆನು. ಆ 'ಜಿಪ್ಸಿ' ಹುಡುಗನು ಇನ್ನೊಬ್ಬನನ್ನು ಹೊಡೆಯುವನು. ಆ ಹುಡುಗನು ಇವನಿಗೊಂದು ಒದೆಕೊಡುವನು. ಒಬ್ಬ ದೊಡ್ಡ ಮನುಷ್ಯನು ಅಡ್ಡಬರುವನು. ಮತ್ತೊಬ್ಬಾತ, ಇನ್ನೊಬ್ಬಾತ–ಒಂದು ಗುಂಪೇ ಸೇರುವುದು. ವಾದ–ವಿವಾದಗಳು ನಡೆಯುವುವು. ಆ ಮೇಲೆ ಅವರ ಪೈಕಿ ಇನ್ನಿಬ್ಬರು ಹೊಡೆದಾಡುವರು, ಇತ್ಯಾದಿ ಯೋಚನೆಗಳು!

ಆ 'ಜಿಪ್ಸಿ' ಹುಡುಗನು ಲೇವ್ ನಾಣ್ಯವನ್ನು ತೆಗೆದುಕೊಂಡು ಆ ಇನ್ನೊಬ್ಬ ಹುಡುಗನವರೆಗೂ ಹೋದನು. ಆ ಮೇಲೆ ತಕ್ಷಣವೇ ಆ ಕಡೆ ಪಕ್ಕದಲ್ಲೇ ಇದ್ದ ಗಲ್ಲಿಯೊಳಕ್ಕೆ ನುಗ್ಗಿ ತಪ್ಪಿಸಿಕೊಂಡು ಹೊರಟೇ ಹೋದನು. ತುಂಟ! ಮೋಸಗಾರ! ನನಗೇ ಕೈಕೊಟ್ಟ!

ಇನ್ನೇನೂ ಮಾಡುವಂತಿಲ್ಲ. ಆದದ್ದಾಗಿಹೋಯಿತು. ಆ ದಿನ ಏನೂ ಸಂಭವಿಸುವ ಲಕ್ಷಣವೇ ಕಾಣಲಿಲ್ಲ. ಸಂಪಾದಕರಿಗೆ ಸಿಟ್ಟು ನೆತ್ತಿಗೇರುವುದು. ಪ್ರಾಯಶಃ ಆತನು ನನ್ನನ್ನು ಕೆಲಸದಿಂದಲೇ ತೆಗೆದು ಹಾಕುತ್ತಾನೇನೋ! ಒಳ್ಳೆಯದೇ, ತೆಗೆದುಹಾಕಲಿ! ನನ್ನ ಮಿತ್ರ ಗೋಫೋ ವಾಪಸು ಬಂದಿದ್ದಾನೆ; ಸಿಕ್ಕಿದ್ದ. ನನಗವನು ೨೦೦ ಲೇವಾ ಕೊಡಬೇಕಾದದ್ದಿದೆ. ನಾಳೆ ಭಾನುವಾರ ಖಂಡಿತ ಕೊಡುವುದಾಗಿ ಮಾತುಕೊಟ್ಟಿದ್ದಾನೆ.... ಆ ಹಣ ಬಂದರೆ, ಇನ್ನೊಂದು ಕೆಲಸ ಸಿಕ್ಕೋವರೆಗೂ, ಹೇಗೋ ಕಾಲಹಾಕಬಹುದು.

೦ ೦ ೦

ಆದರೆ, ಅದೇನಲ್ಲಿ ಜನಸಂದಣಿ?.... ನಾನೂ ಅಲ್ಲಿಗೆ ಧಾವಿಸಿದೆ. ಒಂದು ಬಳಲಿದ ಕುದುರೆ ಬಿದ್ದಿತ್ತು. ಆದರೆ ಬಾಯಲ್ಲಿ ನೊರೆ ಬರುತ್ತಿತ್ತು. ಬಹುಶಃ ಅದು ಸಾಯಲೂ ಬಹುದು.... "ಈ ಗಾಡಿಹೊಡೆಯುವ ಜನ ಶುದ್ಧ ಕಟುಕಮನಸ್ಸಿನವರು. ನಗರೀ ಬೀದಿಯ ರಸ್ತೆಯಲ್ಲಿ ಹೀಗೆಯೇ ಬಿದ್ದು ಸಾಯುವ ಕುದುರೆಗಳು ಎಷ್ಟೋ! ಇದಕ್ಕೆಲ್ಲ ಇವರೇ...."

(೧೧ನೇ ಪುಟ ನೋಡಿರಿ)

ಬಚ್ಚನೆಯ ಮನೆ
ವೆಚ್ಚಕ್ಕೆ ಹಣ

ಬೇಕಾದಲ್ಲಿ
ಮುಂಚಿತವಾಗಿಯೇ ಒಂದು ಉಳಿತಾಯ
ಯೋಜನೆಯನ್ನು ತಯಾರಿಸಿ, ಅದರಂತೆ
ಕೊರ್ಪೊರೇಶನ್ ಬೇಂಕಿನಲ್ಲಿ
ಹಣವನ್ನು ಉಳಿಸುತ್ತಾ ಬನ್ನಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ.

6 ರಾಜ್ಯಗಳಲ್ಲಿ ಒಟ್ಟು 60 ಶಾಖೆಗಳು

ವಿಚಾರ ವರ್ಷ

ವಿರೋಧಾಭಾಸಗಳು ಪರಿಹಾರಗೊಳ್ಳಲಿ

ಜಾತೀಯತೆಯ ಮಾನದಂಡದಿಂದ ಹಿಂದುಳಿದವರು—ಮುಂದುವರಿದವರೆಂದು ಪ್ರಥಕ್ಕರಿಸುವುದರಿಂದ ಪ್ರತಿಭಾವಂತರೂ ಯೋಗ್ಯರೂ ಸಾರ್ವಜನಿಕ ಸರಕಾರಿ ರಂಗದಿಂದ ದೂರವುಳಿಯುವರು. ಹಿಂದುಳಿದವರನ್ನು ಮುಂದೆ ತರುವ ಹೆಸರಿನಲ್ಲಿ ಮುಂದುವರಿದವರನ್ನು ಹಿಂದೆ ತಳ್ಳುವ ಯೋಜನೆ ನಡೆದರೆ, ಇದಕ್ಕೆ ಕೊನೆಯೆಲ್ಲಿ? ರಾಷ್ಟ್ರದ ಉದ್ಧಾರವೆಲ್ಲಿ!

ಶ್ರೀ ವೈ. ಹರಿಶ್ಚಂದ್ರ ರಾವ್

ಭಾರತೀಯರಿಂದ ನಾಪ್ರ ಪರರ ದಾಸ್ಯ ಶೃಂಖಲೆಯನ್ನು ಕಿತ್ತೊಗೆಯುವುದಕ್ಕಾಗಿ, ನಮ್ಮವರೇ ಆದ ಹಲವಾರು ತ್ಯಾಗಿಗಳು ಮತ್ತು ಅತೀವ ಕಷ್ಟ ನಷ್ಟಗಳನ್ನೂ ತಾಯ್ನಾಡಿನ ಬಂಧ ವಿಮೋಚನೆಗಾಗಿ ಧೀರರಾಗಿ, ಹಸನ್ಮುಖರಾಗಿ ಸ್ವೀಕರಿಸಿದವರ ಉಜ್ವಲ ಪರಂಪರೆಯುಳ್ಳವರ ಜನಾಂಗದವರಾಗಿದ್ದೇವೆ. ಕೆಲವರು ಭಾರತಾಂಬೆಯ ಶೂರರಾದ ಸುಪುತ್ರರು ತಮ್ಮ ಮಾತೃಭೂಮಿಯನ್ನು ಸ್ವತಂತ್ರಗೊಳಿಸಲೋಸ್ಕರ ಮತ್ತು ಕೋಟಿಗಟ್ಟಲೆ ಭಾರತೀಯರನ್ನು ಪರಕೀಯರ ಕಪಿಮುಷ್ಟಿಯಿಂದ ವಿಮುಕ್ತಗೊಳಿಸುವುದಕ್ಕಾಗಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟು ಪ್ರಾಣಾರ್ಪಣೆ ಮಾಡಿ ಹುತಾತ್ಮರಾದ ಧೀರರು. ಆ ಕಾಲದ ನಮ್ಮ ಮುಂದಾಳುಗಳ ಮತ್ತು ಜನತೆಯ ಮನೋಭಾವನೆ ವಿಶಾಲವಾಗಿ, ಪರಸ್ಪರರಲ್ಲಿ ಪ್ರೇಮ, ತ್ಯಾಗ, ಸಹಕಾರ, ಸಹಜೀವನ, ಸಹೋದರ ಭಾವನೆಗಳಿದ್ದು ಜೀವನವೇ ಆದರ್ಶಪೂರ್ಣವಾಗಿತ್ತು. ಪ್ರತಿಯೊಬ್ಬ ಭಾರತೀಯನೂ (ಳೂ) ತನ್ನ ರಾಷ್ಟ್ರದ ಬಿಡುಗಡೆಗಾಗಿ ಮತ್ತು ರಾಷ್ಟ್ರವನ್ನು ಭವ್ಯವಾಗಿ ಪುನಾರಚಿಸುವುದಕ್ಕಾಗಿ ಸದಾ ಬದ್ಧಕಂಕಣರಾಗಿದ್ದರು. ಸಾಧಿಸುವ ಸಾಧಕರಾಗಿ ಗುರಿಮುಟ್ಟಲು ಮುನ್ನಡೆಯುತ್ತಿದ್ದರು.

ಕೊನೆಗೂ ಹಲವು ವರುಷಗಳಿಂದ ನಮ್ಮ ಯೋಗ್ಯ ಮುಂದಾಳುಗಳ ಮಾರ್ಗದರ್ಶನದಿಂದ ಜನತೆ ನಡೆಸಿದ 'ಸ್ವಾತಂತ್ರ್ಯ ಸಂಗ್ರಾಮ, 'ಸ್ವಾತಂತ್ರ್ಯ ಜನ್ಮಸಿದ್ಧ ಹಕ್ಕು, ಎಂಬ ಜಾಗೃತಿಗಳ ದೆಸೆಯಿಂದ, ಸತತವೂ ಸಂಘಟಿತವೂ ಆದ ಚಳುವಳಿ ಯಶಸ್ವಿಯಾಗಿ, ಅದರ ಪ್ರತಿಫಲವಾಗಿ ಸ್ವಾತಂತ್ರ್ಯವೇನೋ ಸಿಕ್ಕಿತು. ಅವರ ಪ್ರಥಮೋದ್ದೇಶ್ಯವೂ ಕೈಗೂಡಿತು. ಆದರೆ ಅವರ ದ್ವಿತೀಯ ನಿರ್ಧಾರವಾತ್ರ ದಿನದಿಂದ ದಿನಕ್ಕೆ ಕ್ಷೀಣವಾಗತೊಡಗಿತು.

ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಯಾವ ಪ್ರೇರಕ ಶಕ್ತಿಯ ಹುರುಪು, ಸ್ಫೂರ್ತಿಯಿಂದ ನಮ್ಮಲ್ಲಿಯ ಸಾಮಾಜಿಕ, ರಾಜಕೀಯ, ಆರ್ಥಿಕ, ಮತೀಯ, ಜಾತೀಯ ಭೇದಭಾವನೆಗಳನ್ನು ಬದಿಗೊತ್ತಿ, ದೃಢ ನಿರ್ಧಾರದಿಂದ ಗುರಿಮುಟ್ಟಲು ಐಕಮತ್ಯದಿಂದ ಸಾಮೂಹಿಕವಾಗಿ ಪರಸ್ಪರರಿಗೆ ಸಹಾಯಕರಾಗಿ ವರ್ತಿಸಿದ್ದೆವೋ ಆ 'ಕೆಚ್ಚು, ಇಂದು ಲವಲೇಶವೂ ಉಳಿಯದಿರುವುದು ತುಂಬಾ ವಿಷಾದನೀಯ.'

ನಾವು ನಮ್ಮ ರಾಷ್ಟ್ರವನ್ನಿಂದು ಆಳುತಿದ್ದೇವೆ. ನಮ್ಮ ಶ್ರೇಯೋಭಿವೃದ್ಧಿಗಾಗಿ ಮಾರ್ಗದರ್ಶಕವಾಗುವಂತೆ, ಘಟನೆಯನ್ನು ನಿರ್ಮಿಸಿಕೊಂಡು ಅದರ ಸೀನ್ಯೋಲ್ಲಂಘನೆ ಮಾಡದೆ ಆಳಿಕೊಳ್ಳುವುದಕ್ಕೆ ಮುಂದಾಗಿದ್ದೇವೆ. ಘಟನೆಯಲ್ಲೇನೋ ಪ್ರತಿಯೊಬ್ಬರಿಗೂ ಸಮಾನ ಅವಕಾಶವನ್ನು ಕಲ್ಪಿಸಲಾಗಿಯದಲ್ಲದೆ ನಮ್ಮ ಕನಸಾದ 'ಕಲ್ಯಾಣ ರಾಷ್ಟ್ರ, ಸಮಾಜವಾದ, ರಾಮರಾಜ್ಯ, ಗ್ರಾಮರಾಜ್ಯ, ಸರ್ವೋದಯದ ಘೋಷಣೆಗಳನ್ನೂ ಧಾರಾಳವಾಗಿ ಘೋಷಿಸುತ್ತಿದ್ದೇವೆ. ಆದರೆ ನಮ್ಮ ದುರದೃಷ್ಟದಿಂದ ನುಡಿಗೂ ನಡೆಗೂ ಅಜಗಜಾಂತರ ದೂರವೇ ಉಳಿದಿದೆ. ಎಲ್ಲರಿಗೂ ಸಮಾನ ಅವಕಾಶವನ್ನು ಸಾರಿದ ಸಂವಿಧಾನದಲ್ಲಿಯೇ ಹಿಂದುಳಿದವರನ್ನು ಮುಂದಕ್ಕೆ ತರುವ ಕಲ್ಪನೆಯಿಂದ ಮುಂದರಿದವರನ್ನು ಹಿಂದೆ ತಳ್ಳುತ್ತಾ ಅವರವಕಾಶವನ್ನು ಕಸಿದುಕೊಳ್ಳುತ್ತಾ ನಡೆದಿದ್ದೇವೆ.

ಹೀಗೆಂದಾಗ ಅನೇಕ ವಾದಗಳೂ, ಪ್ರಶ್ನೆಗಳೂ ಹುಟ್ಟಿಬರುವುದು ಸ್ವಾಭಾವಿಕ. ವಾಸ್ತವವಾಗಿ ಇದು ಸತ್ಯವೇ ಆಗಿದೆ. ಇಂದು 'ಹಿಂದುಳಿಗ' ಮತ್ತು 'ಮುಂದರಿದ' ಎಂದು ನಿಶ್ಚಯಿಸುವುದಕ್ಕೆ ಉಪಯೋಗಿಸುವ ಅಳತೆಗೋಲು ಇಂತಹ ಅವಾಂತರಕ್ಕೆ ಕಾರಣವಾಗಿದೆ. ನಮ್ಮ ಹಿರಿಯರು ಪ್ರತಿಯೊಬ್ಬರಿಗೂ ಕರ್ತವ್ಯದ ಕರೆಯನ್ನು ಕೊಟ್ಟು, ಸತ್ಕಾರ್ಯ ಮಾಡಿ ಸಕ್ರಿಯರಾಗಿ ಬಾಳಿ ಜೀವನವನ್ನು ಸಾರ್ಥಕಗೊಳಿಸಲೆಂಬ ಸದುದ್ದೇಶದಿಂದ ವರ್ಣಾಶ್ರಮ ಧರ್ಮವನ್ನು ಆಚರಣೆಗೆ ತಂದಿದ್ದರು. ನಾವಾದರೂ ಆ ಗುರಿಗಿನಲ್ಲೇ ಮುಂದುವರಿದು ಎಡವುತ್ತಾ, ಕರ್ತವ್ಯ ಕರ್ಮಗಳನ್ನು ಬಿಟ್ಟು ಬಿಟ್ಟು ಬರೇ ಹುಟ್ಟಿನಿಂದಲೇ ಜಾತಿ, ಮತ ಇತ್ಯಾದಿಗಳನ್ನು ನಿರ್ಧರಿಸುತ್ತಿದ್ದೇವೆ. ಈ ಜಾತಿಮತಗಳನ್ನು 'ಮಾನದಂಡ'ವಾಗಿ ಮಾಡಿಕೊಂಡು ಹುಟ್ಟಿಬಂದ '·ಜಾತಿಯೊಂದು ಶಾಪ" ಎಂಬಂತೆ ಜಾತಿಯ ಮಾನದಂಡದಿಂದ ಹಿಂದುಳಿದವರು, ಮುಂದುವರಿದವರೆಂದು ವಿಭಜನೆ ಮಾಡುತ್ತೇವೆ. ಔದ್ಯೋಗಿಕ, ಸಾಮಾಜಿಕ, ಶೈಕ್ಷಣಿಕ ಹಲವಾರು ರಿಯಾಯತಿಗಳನ್ನೂ ಕೆಲವು ಸಹಾಯ ಸವಲತ್ತುಗಳನ್ನೂ ಹಿಂದುಳಿದವರ ಕಲ್ಯಾಣಕ್ಕಾಗಿ ಉಪಯೋಗಿಸಲು ಆತುರರಾಗಿದ್ದೇವೆ. ನಿಜವಾಗಿ ಹಿಂದುಳಿದವರಾರು? ಅವರ ಹೆಸರಲ್ಲಿ ಈ ಸಹಾಯ, ರಿಯಾಯತಿ, ಸವಲತ್ತುಗಳ ವಿತರಣೆ ಸರಿಯಾಗಿ ನಡೆದಿದೆಯೇ? ಎಂಬ ಪ್ರಶ್ನೆಗಳಿಗೆ ಮಾತ್ರ ತೃಪ್ತಿಕರ ಉತ್ತರ ದೊರೆಯದಾಗಿದೆ. ಜಾತ್ಯತೀತ ರಾಷ್ಟ್ರ, ಕಲ್ಯಾಣ ರಾಷ್ಟ್ರ, ಸಮಾಜವಾದೀ ಮಾದರಿಯ ಸಮಾಜ ರಚನೆಯ ಆದರ್ಶ ಮಾರ್ಗದಲ್ಲಿ ಮುನ್ನಡೆಯುವ ರಾಷ್ಟ್ರವೊಂದಕ್ಕೆ ಯೋಗ್ಯವಲ್ಲದ ದಾರಿಯಿಂದಲೇ ನಾವು ತಪ್ಪು ಹೆಜ್ಜೆಗಳೊಂದಿಗೆ ಸಾಗುತ್ತಿದ್ದೇವೆಂದರೆ ಅತಿಶಯೋಕ್ತಿಯೇನಲ್ಲ. ಜಾತ್ಯತೀತ ರಾಷ್ಟ್ರವೊಂದರಲ್ಲಿ ಜಾತಿಯನ್ನೇ ಎಲ್ಲದಕ್ಕೂ ಮೂಲವಾಗಿರಿಸಿಕೊಳ್ಳುವ ನಿಯಮ ತೀರಾ ಅಪಮಾನಕರ. ಕಲ್ಯಾಣ ರಾಷ್ಟ್ರದಲ್ಲಿ ದುಃಖಿತರ, ಶೋಷಿತರ, ಬಡತನದಿಂದ, ಹಸಿವಿನಿಂದ ನರಳುತ್ತಿರುವವರ ಕಷ್ಟ ಕಾರ್ಪಣ್ಯಗಳನ್ನು ಸೂಕ್ತವಾಗಿ ಬಗೆಹರಿಸುವ ರಚನಾತ್ಮಕ ಯೋಜನೆಗೆ ನಿಜವಾಗಿ ಯೋಗ್ಯ ಪುರಸ್ಕಾರ ದೊರೆಯದಿರುವುದು ಅಕ್ಷಮ್ಯ ಅಪರಾಧವಲ್ಲವೇ?

ಈಗಿರುವ ಯಾವ ಜಾತಿಯೇ ಆಗಲಿ ಸಾಮೂಹಿಕವಾಗಿ ಮುಂದುವರಿದಿದೆಯೋ ಅಥವಾ ಹಿಂದುಳಿದಿವೆಯೋ ಎಂಬುದು ಎಲ್ಲರಿಗೂ ತಿಳಿದಿರುವ ಬಹಿರಂಗ ಸತ್ಯ. ಆದ ಕಾರಣ ನಮ್ಮ ಸ್ವೀಕೃತ ನೀತಿ ಸೂತ್ರವನ್ನು ಪುನರಾಲೋಚಿಸಬೇಕಾದ ಕಾಲ ಸನ್ನಿಹಿತವಾಗಿದೆ. ಇಂದಿನ ನೀತಿಯಿಂದಾಗಿ ರಾಷ್ಟ್ರ ಜೀವನದಲ್ಲಿ ದ್ವೇಷ, ಅಸೂಯೆ, ಪ್ರತೀಕಾರ ಮನೋಭಾವನೆಗಳೇ ತಾಂಡವವಾಡುತ್ತಿವೆ. ಇದಾರಿಗೂ ಹಿತಕರವಾದ ವಾತಾವರಣವೇನಲ್ಲ.

ನಿಜವಾಗಿ ನಮಗೆ ರಾಷ್ಟ್ರ ಜೀವನದಿಂದ ಬಡತನ, ಅಜ್ಞಾನ, ಅವಿದ್ಯೆ, ಶೋಷಣೆ ಇವುಗಳನ್ನು ತೊಡೆದು ಹಾಕಬೇಕೆಂಬ ಚಲವಿರುವುದಾದರೆ ನಮ್ಮ ಆಡಳಿತೆಯಂತ್ರದ ಸ್ವೀಕೃತ ನೀತಿಯ ಪುನಃ ವಿಮರ್ಶೆ ಅತ್ಯಾವಶ್ಯಕವಾಗಿದೆ. ಹಳ್ಳಿ, ಪಳ್ಳಿಗಳಿಂದ ಕೂಡಿರುವ ನಮ್ಮ ರಾಷ್ಟ್ರದ ಉದಗಲಕ್ಕೆ ವಾಸಿಸುತ್ತಿರುವ ಜನರು ಹಿಂದುಳಿದ, ಮುಂದುವರಿದ, ಸತ್ಯ ಚಿತ್ರವನ್ನೊಮ್ಮೆ ಕಣ್ಣಾರೆ ಕಾಣಬೇಕೆಂದಿದ್ದರೆ ಆಗತ್ಯವಾಗಿ ಅವರನ್ನೊಮ್ಮೆ ಸಂದರ್ಶಿಸಲೇ ಬೇಕು ಆಗ ತಿಳಿದೀತು.

ಈ ವಿರೋಧಾಭಾಸಗಳನ್ನು ಉತ್ತಮವಾಗಿ ಪರಿಹರಿಸಲು ವ್ಯಕ್ತಿಯ, ಅದಾಯ, ಸರಕಾರ ಯಾ ಸಮಾಜದಲ್ಲಿ ಪಡೆದಿರುವ ಸ್ಥಾನಮಾನ ಸವಲತ್ತುಗಳನ್ನು ಗಣನೆಗೆ ತಂದುಕೊಂಡು ಆ ಕುಟುಂಬದ ಸಂಬಂಧದಲ್ಲಿ ಹಿಂದುಳಿದ, ಮುಂದುವರಿದ ತೀರ್ಮಾನಕ್ಕೆ ಬರುವುದೊಂದೇ ಸೂಕ್ತವಾದ ಉಪಾಯ. ಇದರೊಂದಿಗೆ ದೀನರ, ದಲಿತರ, ಶೋಷಿತರ, ದುಃಖಿತರ ಕಲ್ಯಾಣ ಸಾಧ್ಯವಾದೀತು. ಈಗಿನ ನೀತಿಯೇ ಮುಂದುವರಿದರೆ ಕೆಲವೇ ವರುಷಗಳಲ್ಲಿ ರಾಷ್ಟ್ರದಲ್ಲಿ ಮತ್ತೊಂದು 'ಮುಂದುವರಿದವರನ್ನು ಹಿಂದೆ ತಳ್ಳುವ ಯೋಜನೆಯನ್ನು ಪ್ರಾರಂಭಿಸಬೇಕಾದೀತು. ಈಗ ಮುಂದುವರಿದವರು ಸಹಜವಾಗಿ ಮೂಲೆ ಸರಿದು ಆಗ ಹಿಂದುಳಿದವರಾಗುತ್ತಾರೆ. ಯಾವಾಗಲೂ ನ್ಯಾಯವಾಗಿ ಹಿಂದುಳಿದವರನ್ನು ಮುಂದಕ್ಕೆ ತರಬೇಕಾದುದು ಯಥಾರ್ಥವೂ ನ್ಯಾಯೋಚಿತವೂ ಆಗಿದೆ.

ಪ್ರತಿಭಾವಂತರನ್ನೂ, ಯೋಗ್ಯರನ್ನು ಕುದೃಷ್ಟಿಯಿಂದ ನಮ್ಮ ಸಾರ್ವಜನಿಕ, ಸರಕಾರೀ ಜೀವನರಂಗದಿಂದ ದೂರ ತಳ್ಳುವುದಂತೂ ಖಂಡನೀಯವೂ ಅಪಾರ ನಷ್ಟದಾಯಕವೂ ಆದ ಕಾರ್ಯವೇ ಆಗಿದೆಯೆಂಬುದು ವಿಚಾರಿಸಿದರೆ ತಿಳಿದುಕೊಳ್ಳಬಹುದಾದ ವಾಸ್ತವಾಂಶ. ಅದುದರಿಂದ ನಮ್ಮ ಜಾತಿ ಮೂಲ ಪದ್ಧತಿ ಬದಲಾಗಿ ರಾಷ್ಟ್ರದ ಸರ್ವಾಂಗೀಣ ಪ್ರಗತಿ ಸಾಧ್ಯವಾಗಬೇಕಿದ್ದರೆ ಅನಿವಾರ್ಯವಾಗಿ ನಾವು ನಮ್ಮ ಜಾತಿ ಸೂತ್ರಗಳನ್ನು ಸರಕಾರೀ ಸಾರ್ವಜನಿಕರಂಗದಿಂದ ಬಹುದೂರ ಹಿಂತಿರುಗಿ ಬರಲಾರದಷ್ಟು ದೂರ ಕ್ಕೊಡಿಸಲೇ ಬೇಕು.

ನೋವುಗಳ ಅತ್ಯುತ್ತಮ ಸಂಹಾರಿಣೀ



ಅಮೃತಾಂಜನ

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಚೇರಿ : ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.

ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಬಡ್ಡಿ ದರಗಳು.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ಸಧ್ಯದಲ್ಲೆ ತೆರೆಯಲ್ಪಡುವ ಶಾಖೆಗಳು:—

ಭದ್ರಾವತಿ — ತುಮಕೂರು.

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.

ರೂ 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೋ, ಉಡುಪಿ.

ಅಭಿಪ್ರಾಯ

ಆಚಾರ್ಯ ಕೃಪಲಾನಿ ವ್ಯಕ್ತಿತ್ವ ಕಳೆದುಕೊಳ್ಳಲಾರರು

ಪ್ರ. ಸ. ವಾ. ಪಕ್ಷದ ಪ್ರಪ್ರಥಮ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಪಕ್ಷಕ್ಕೆ ರಾಜಿನಾಮೆಯಿತ್ತರಂತೆ. ಇದಕ್ಕೆ ಬೇಕಾದ ಹಿನ್ನೆಲೆ ಆರು ವರ್ಷಗಳಿಂದಲೂ ನಿರ್ಮಾಣಗೊಳ್ಳುತ್ತಿತ್ತು.

"ಆಚಾರ್ಯ ಕೃಪಲಾನಿಯವರು ತಮ್ಮ ವ್ಯಕ್ತಿತ್ವವನ್ನು ಶ್ರೀ ಅಶೋಕ ಮೆಹತರವರ ವ್ಯಕ್ತಿತ್ವದೊಡನೆ ಏಕೀಕರಿಸಿಕೊಳ್ಳುವರೆ?"—ಶ್ರೀ ಕೃಪಲಾನಿಯವರ ಕಿಸಾನ್ ಮಜದೂರ ಪ್ರಜಾಪಕ್ಷ ಮತ್ತು ಶ್ರೀ ಮೆಹತಾರ ಸಮಾಜವಾದೀ ಪಕ್ಷಗಳು ಎಂಟು ವರ್ಷಗಳ ಮೊದಲು ಒಗ್ಗೂಡಿದಾಗ ಒಬ್ಬ ಪ್ರಸಿದ್ಧ ಲೇಖಕ ಕೇಳಿದ ಪ್ರಶ್ನೆಯಿದು. ಈ ಪ್ರಶ್ನೆಗೆ ನಿಷೇಧಾರ್ಥಕವಾದ ಉತ್ತರ ರೂಪವಾಗಿ ಶ್ರೀ ಕೃಪಲಾನಿಯವರು ಪ್ರಜಾ ಸಮಾಜವಾದಿ ಪಕ್ಷಕ್ಕೆ ರಾಜಿನಾಮೆ ಕೊಡುವ ತಮ್ಮ ವಿಚಾರವನ್ನು ಶ್ರೀ ಮೆಹತಾರಿಗೆ ತಿಳಿಸುವ ಪತ್ರವು ಈಗ ಹೊರಟಿದೆಯೆಂಬಂತಿದೆ.

೧೯೫೨ರಲ್ಲಿ ಎರಡೂ ಪಕ್ಷಗಳು ಒಂದು ಸೇರಿ ಪ್ರಜಾ ಸಮಾಜವಾದಿ ಪಕ್ಷವಾಗಿ ರೂಪಿತಗೊಂಡಾಗ ಆಚಾರ್ಯ ಕೃಪಲಾನಿಯವರು ಅದರ ಪ್ರಥಮ ಅಧ್ಯಕ್ಷರಾಗಿ, ಶ್ರೀ ಅಶೋಕ ಮೆಹತಾ ಪ್ರಥಮ ಪ್ರಧಾನ ಕಾರ್ಯದರ್ಶಿಯವರಾಗಿ ಆಯ್ಕೆಗೊಂಡರು. ೫೩ರ ಜೂನಿನಲ್ಲಿ ಬೇತೂಲದಲ್ಲಿ ಸೇರಿದ್ದ ಪಕ್ಷದ ವಾರ್ಷಿಕ ಮಹಾಸಭೆಯಲ್ಲಿ ಆಚಾರ್ಯರು, "ಪ್ರಜಾಸಮಾಜವಾದಿ ಪಕ್ಷವು ಐತಿಹಾಸಿಕ ಕಾರ್ಯ ಮಾಡಬೇಕಾಗಿದೆ; ಏಕೆಂದರೆ, ಅದು ಪ್ರಜಾಸತ್ತೆ ಮತ್ತು ಆರ್ಥಿಕ ಮತ್ತು ಸಾಮಾಜಿಕ ಐಕ್ಯವನ್ನು ಸ್ಥಾಪಿಸಲು ವಚನಬದ್ಧವಾಗಿದೆ"ಎಂದುಘೋಷಿಸಿದ್ದರು. ದುರ್ದೈವವಶದಿಂದ ಮತ್ತೆ ಒಂದೇ ವರ್ಷದಲ್ಲಿ ಆಚಾರ್ಯರಿಗೂ ಪಕ್ಷಕ್ಕೂ ಮತಭೇದ ತಲೆದೋರುವ ದುರ್ಲಕ್ಷಣಗಳು ಗೋಚರವಾಗತೊಡಗಿದುವು. ಕೇರಳದಲ್ಲಿ ಸ್ಥಾಪಿತವಾಗಿದ್ದ ಪ್ರ. ಸ. ವಾ. ಮಂತ್ರಿಮಂಡಳದ ಅಧಿಕಾರಕಾಲದಲ್ಲಿ ಅಲ್ಲಿ ಗೋಳಿಬಾರು ನಡೆದಾಗ ಪಕ್ಷದ ಉಚ್ಚ ನಾಯಕರಲ್ಲಿಯೂ ಭಿನ್ನಾಭಿಪ್ರಾಯ ಹುಟ್ಟಿತು. ಆಚಾರ್ಯ ಮತ್ತು ಡಾಕ್ಟರ ಲೋಹಿಯಾರಲ್ಲಿನ ಒಡಕಿನಿಂದಾಗಿ ಲೋಹಿಯಾರವರು ತಮ್ಮ ಪ್ರಧಾನ ಕಾರ್ಯದರ್ಶಿಯ ಹುದ್ದೆಗೆ ತ್ಯಾಗಪತ್ರವೀಯಬೇಕಾಯಿತು.

"ಅಹಿಂಸೆ, ರಾಜನೀತಿ ಮತ್ತು ಸಮಾಜವಾದದಂತಹ ಪ್ರಶ್ನೆಗಳ ಮೇಲೆ ಪಕ್ಷಕ್ಕೂ ನನಗೂ ಮತಭೇದವಿದೆ. ನನ್ನ ನೀತಿಯನ್ನು ಅನುಸರಿಸಲು ಒಪ್ಪದ ಪಕ್ಷದ ನೇತೃತ್ವವನ್ನು ನಾನು ವಹಿಸಿಕೊಳ್ಳಲಾರೆ. ನಾನು ಗಾಂಧಿವಾದದ ಹಳೆಯ ಪುರಸ್ಕರ್ತನಿದ್ದೇನೆ; ನನ್ನಂತಹನಿಂದ ಹೊಸ ಸಿದ್ಧಾಂತಗಳನ್ನು ಕಲಿಯುವುದು ಸಾಧ್ಯವಿಲ್ಲ" ಎಂದು ಆಚಾರ್ಯ ಕೃಪಲಾನಿಯವರು ತಮ್ಮ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆಯನ್ನು ೧೯೫೪ರಲ್ಲಿ ಸೇರಿದ್ದ ಪಕ್ಷದ ನಾಗಪುರ ಅಧಿವೇಶನದಲ್ಲಿ ಕೊಟ್ಟು ಬಿಟ್ಟರು. ದಿವಂಗತ ಆಚಾರ್ಯ ನರೇಂದ್ರ ದೇವರು ಪಕ್ಷದ ಕಾರ್ಯಕಾರಿ ಸಮಿತಿಯನ್ನು ರಚಿಸಿದಾಗ, ಅದರ ಸದಸ್ಯನಾಗಿರುವುದಕ್ಕೂ ಶ್ರೀ ಕೃಪಲಾನಿ ತಿರಸ್ಕರಿಸಿ ಬಿಟ್ಟರು.

ಪಕ್ಷದ ಗಯಾ ಸಮ್ಮೇಳನದಲ್ಲಿ ಈ ಮತ ಭಿನ್ನತೆಯು ಮತ್ತಷ್ಟು ಬೆಳೆಯಿತು. ಇದರಲ್ಲಿ ಆಚಾರ್ಯ ನರೇಂದ್ರ ದೇವರು ತಯಾರಿಸಿದ ಪಕ್ಷದ ನೀತಿ ಸಂಬಂಧದ ಕುರಿತಾಗಿ ಮಾತಾಡುತ್ತ ಆಚಾರ್ಯ ಕೃಪಲಾನಿ ಅಂದಿದ್ದರು: "ಈ ವಾದವು ಮಾರ್ಕ್ಸ್, ಗಾಂಧಿ, ಜಯಪ್ರಕಾಶ, ವಿನೋಬಾ, ಕೃಪಲಾನಿ ಮತ್ತಿತರ ಮುಖಂಡರ ವಾದಗಳ ಸಮ್ಮಿಶ್ರಣ. ವರ್ಗ ಸಂಘರ್ಷಣೆಯ ಸಿದ್ಧಾಂತವನ್ನು ಪಕ್ಷವು ಅಂಗೀಕರಿಸುವುದಾದರೆ, ಅದರ ಸ್ವತಂತ್ರ ವಿಚಾರಧಾರೆಯು ಸಂಪೂರ್ಣ ಮಾಲೆ ಪಾಲಾಗುವುದು."

ಕಳೆದ ಆರು ವರ್ಷಗಳಿಂದಲೂ ಆಚಾರ್ಯ ಕೃಪಲಾನಿಯವರು ಪ್ರ. ಸ. ವಾ. ಪಕ್ಷದ ರಾಷ್ಟ್ರೀಯ ಕಾರ್ಯಕಾರೀ ಸಮಿತಿಯ ಸದಸ್ಯರಾಗಿಲ್ಲ. ಅಸ್ಸಾಮದಲ್ಲಿ ನಡೆದ ಗಲಭೆಗಳ ಬಗ್ಗೆ ಕಳೆದವಾರ ಲೋಕಸಭೆಯಲ್ಲಿ ತಮ್ಮ ಪಕ್ಷದ ಬಗ್ಗೆಯೂ ಟೀಕಿಸಲು ಹಿಂಜರಿಯಲಿಲ್ಲ. ರಾಷ್ಟ್ರಭಾಷಾ ಆಯೋಗದ ವರದಿಯನ್ನು ಅದರ ಮೂಲರೂಪದಲ್ಲಿಯೇ ಸ್ವೀಕರಿಸಬೇಕೆಂದು ವಾದಿಸಿದ ಪ್ರಸವಾ.ದ ಏಕ ಮಾತ್ರ ನೇತಾರರಿವರು. ಭಾಷಾವಾರು ರಾಜ್ಯವಿಂಗಡಣೆಯನ್ನು ಮೆಚ್ಚದಿರುವವರಿವರು.

ಸರಕಾರದ ಆರ್ಥಿಕ ನೀತಿ ಮತ್ತು



ಯೋಜನೆಗಳ ಬಗ್ಗೆಯೂ ತಮ್ಮ ಪಕ್ಷದ ಬಹುಮತಾಭಿಪ್ರಾಯಕ್ಕಿಂತ ಕೃಪಲಾನಿಯವರದು ಭಿನ್ನಾಭಿಪ್ರಾಯವಿದೆ. ಕಳೆದ ಬಾರಿಯ ಲೋಕಸಭಾಧಿವೇಶನದಲ್ಲಿ ಇವರು ಮತ್ತು ಅಶೋಕ ಮೆಹತಾರವರು ಪಾಂಚವಾರ್ಷಿಕ ಯೋಜನೆಗಳ ಕುರಿತಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಪರಸ್ಪರ ವಿರೋಧವಾಗಿವೆ.

ಮಹಾತ್ಮಾ ಗಾಂಧೀಜಿಯವರ ಅತಿ ಹಳೆಯ ಸಂಗಾತಿ ತಾನು ಎಂದು ಕೃಪಲಾನಿಯವರ ವಾದ. ಸರದಾರ ಪಟೇಲರಿಗೂ ಮೊದಲು, ಜವಾಹರಲಾಲರಿಗಿಂತ ಮತ್ತೂ ಮೊದಲು ತಾನು ಗಾಂಧೀಜಿಯವರ ಅನುಯಾಯಿಯಾಗಿದ್ದೆನೆಂದವರೊಮ್ಮೆ ಹೇಳಿದ್ದರು. ಒಂದು ಕಾಲದಲ್ಲಿ ಇವರು ಪ್ರೊಫೆಸರರಾಗಿದ್ದರು. ಇಂದಿಗಾದರೂ ಸರಿ, ಇವರಲ್ಲಿ ನಾಯಕತ್ವಕ್ಕಿಂತ 'ಪ್ರೊಫೆಸರತ್ವ'ವೇ ಹೆಚ್ಚಾಗಿದೆ. ಶ್ರೀ ಕೃಪಲಾನಿ ಶುದ್ಧ ಗಾಂಧೀವಾದಿಗಳು; ಆಧುನಿಕ ಭಾರತದ ಪರಿಸ್ಥಿತಿಗೆ ಅನುಕೂಲವಾಗುವಂತೆ ಗಾಂಧೀವಾದೀ ವಿಚಾರಗಳನ್ನು ಕಾರ್ಯಾನ್ವಿತಗೊಳಿಸಬೇಕೆಂದು ಇವರನ್ನುತ್ತಾರೆ. ಇವರಿಗೆ ಚರಖದ ಮೇಲೆ ಅಭಿಮಾನವಿದೆ; ಆದರೆ, ಖದ್ದಿಯೆಯ ಮೇಲೆ ಹೇಳಿಕೊಳ್ಳುವಂತಹ ವಿರೋಧ ಏನೂ ಇಲ್ಲ.

ರಚನಾತ್ಮಕ ಕಾರ್ಯಸಾಧನೆಗೆ ಶ್ರೀ ಕೃಪಲಾನಿಯವರು ಆಚಾರ್ಯರೇ ಹೌದು. ೧೯೩೪ರಿಂದ ೪೬ರ ವರೆಗಿನ ಬಹು ದೀರ್ಘ ಕಾಲ ಇವರು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಒಂದು ಬಾರಿ ಕಾಂಗ್ರೆಸ್ ಅಧ್ಯಕ್ಷರೂ ಆಗಿದ್ದರು. ರಾಜನೀತಿಯೆಂಬುದು ಕೇವಲ ಒಂದು ಯಂತ್ರವಲ್ಲದೆ ಮತ್ತೇನೂ ಅಲ್ಲ ಎಂದು ತಿಳಿಯುವವರಲ್ಲಿ ಇವರೊಬ್ಬರು. ಉತ್ತಮ ಭಾಷಣಕರ್ತರಾದ ಆಚಾರ್ಯರು ಲೋಕಸಭೆಯನ್ನೇ ನಡುಗಿಸುವ ಸಾಮರ್ಥ್ಯವುಳ್ಳವರು. ಗೃಹಸ್ಥರಾಗಿದ್ದರೂ ಇಂದು ರಾಜನೀತಿಕ ಫಕೀರರಿವರು.

ತಾನು ಪ್ರ. ಸ. ವಾ. ಪಕ್ಷಕ್ಕೆ ನೀಡುವ ರಾಜಿನಾಮೆಯ ಪತ್ರವು ಸದ್ಯ ಸ್ಥಗಿತಗೊಂಡರೂ ಆಚಾರ್ಯರಿಗೆ ಪಕ್ಷದ ನೀತಿಯಲ್ಲಿ ಆಸಕ್ತಿ ಮರಳಿ ಹುಟ್ಟಲಾರದು ಎಂಬುದು ಖಂಡಿತ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ಸಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಪ್ರಕಟಣೆ.
ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 32/1960.

1. M. ಲಕ್ಷ್ಮೀನಾರಾಯಣ ರಾವ್, ರಾಮಪ್ಪಯ್ಯನ ಮಗ, 2. ಕಲ್ಯಾಣಿ ಬಾಯಿ, ಶಂಕರನಾರಾಯಣ ರಾಯರ ಹೆಂಡ್ತಿ — ಉಡುಪಿ ತಾಲ್ಲೂಕು ಹಿರಿಯಡ್ಕ ಗ್ರಾಮದ ಅಲುಗ್ಗೇಲು ಎಂಬಲ್ಲಿರುವವರು—ಅರ್ಜಿದಾರರು

ಅರ್ಜಿದಾರರ ಸಹೋದರ M. ಸುಬ್ರಾಯ ಶಾನುಭಾಗ ಎಂಬವರು ಕಳೆದ ತಾ. 13—10—1959ರಲ್ಲು ಮೃತವಾಗಿ ಆತಗೆ ಅರ್ಜಿಯಲ್ಲಿ ಕಾಣಿಸಿದಂತೆ ದ. ಕ. ಜಿಲ್ಲಾ ಎಡ್ಯುಕೇಶನಲ ಆಫೀಸಿನಿಂದ T. P. F. A/c No. 2247ರ ಮೇರೆಗೆ ಬಹಾ ರೂಪ್ಯಾ 483/- ಮತ್ತು Management Contribution ಬಾಬ್ತು ಬಹಾ ರೂಪ್ಯಾ 162/- ಸರಕಾರದಿಂದ ಪಡೆಯುವರೇ ಕೂಡಾ ಹಕ್ಕುದಾರರಾದ ಅರ್ಜಿದಾರರು, ಆ ಬಗ್ಗೆ 1ನೇ ಅರ್ಜಿದಾರನ ಹೆಸರಿಗೆ ಒಂದು ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಅರ್ಜಿಯ ಕುರಿತು ಆಕ್ಷೇಪ ಉಳ್ಳವರು ತಾರೀಕು 8-10-1960ರಲ್ಲು ಬೆಳಿಗ್ಗೆ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿರುವದೆ.

I Subba Rao,
Advocate for Petitioners.

ಕಾರ್ಕಳ, ತಾರೀಕು 12-9-1960.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕಲಾಕ್ಷೇತ್ರ

ಚಿತ್ರಕಲೆಯು ಜನಪ್ರಿಯವಾಗಿಲ್ಲ, ಏಕೆ?

ಆಧುನಿಕ ಫೊಟೊಗ್ರಾಫಿಯ ಎದುರು ಪ್ರಾಚೀನ ಚಿತ್ರಕಲೆ ಜನಪ್ರಿಯತೆಯನ್ನು ಗಳಿಸುವುದು ದುಸ್ಸಾಧ್ಯವಾಗಿದೆ. ಇದಕ್ಕೆ ಕಾರಣವೇನು, ಎಂಬುದನ್ನು ಕಲಾವಿದರು ಯೋಚಿಸಿ ತಮ್ಮ ತಪ್ಪನ್ನು ತಿದ್ದಿಕೊಳ್ಳಬೇಕಾಗಿದೆ.

ಶ್ರೀ ಪ್ರೇಮಚಂದ್ರ ಭಾರದ್ವಾಜ.

ಸಾವಿರಾರು ವರ್ಷಗಳ ಹಿಂದಿನ ಮಾತು. ಆಗ ಮಾನವನು ಗಿರಿಕಂದರಗಳಲ್ಲಿ ವಾಸಿಸಿಕೊಂಡಿದ್ದನು. ಮರದ ತೊಗಟೆಗಳನ್ನು ಧರಿಸುತ್ತಿದ್ದನು. ಕಾಡು ಪ್ರಾಣಿಗಳನ್ನು ಕೊಂದು ಅವುಗಳ ಮಾಂಸದಿಂದಲೇ ಹೊಟ್ಟೆ ಹೊರೆದುಕೊಳ್ಳುತ್ತಿದ್ದನು.

ಒಂದು ದಿನ ಯಜಮಾನ ಬಹುತಡವಾಗಿ ಮನೆಗೆ ಹಿಂತಿರುಗಿದನು. ಆಗ ಆತನ ಮಡದಿಯು ಕೇಳಿದಳು—“ನಾನಿಂದು ಬಹು ಚಿಂತಿತಳಾಗಿರುವೆನು. ನೀವಿಂದು ಏಕೆ ತಡಮಾಡಿ ಮನೆಗೆ ಹಿಂತಿರುಗಿದಿರಿ?”

“ಇಂದು ನಾನು ಬಹುದೊಡ್ಡ ಪಶುವನ್ನು ಇದಿರುಗೊಂಡೆನು” ಎಂದು ಗಂಡನು ಉತ್ತರಿಸಿದನು.

“ನೀವಾದರೊ ಬಹುದೊಡ್ಡ ಪರಿಶ್ರಮಿಗಳು. ನಿಮ್ಮನ್ನಿಷ್ಟು ತಡವಾಗಿ ಮನೆಗೆ ಬರುವಂತೆ ಮಾಡುವಷ್ಟು ಅದು ದೊಡ್ಡದಾಗಿತ್ತೆ?” ಎಂದಳು ಹೆಂಗಸು?

ಗಂಡಸು ಉತ್ತರ ಕೊಟ್ಟನು—“ನನ್ನ ರಾಣಿ! ಅದು ಬಹುದೊಡ್ಡ ಪಶುವಾಗಿತ್ತು. ಇಷ್ಟು ದೊಡ್ಡದಾಗಿತ್ತು. ಇಷ್ಟು ದೊಡ್ಡದಾಗಿತ್ತು. ನಾನೇನು ಹೇಳಲಿ. ನಿನಗೆ ಹೇಗೆ ಹೇಳಲಿ? ಅದು ಬಹುದೊಡ್ಡ ಪಶುವಾಗಿತ್ತು.”

ಅನಂತರ ಆ ಗಂಡಸು ಅತ್ತಿತ್ತ ನೋಡಿದನು. ಒಲೆಯಲ್ಲಿ ಕಟ್ಟಿಗೆಗಳು ಉರಿಯುತ್ತಿದ್ದವು. ಆತನೊಂದು ಕಟ್ಟಿಗೆಯನ್ನೆಳೆದು ಅದರ ಕರಿಭಾಗದಿಂದ ಆ ಭಯಾನಕ ಪಶುವಿನ ಒರಟು ಮೊರಟು ಆಕೃತಿಯನ್ನು ಬಿಡಿಸಿದನು.

ಆತನೆ ಮೊತ್ತಮೊದಲಿನ ಚಿತ್ರಕಾರನೆಂದು ಹೇಳುತ್ತಾರೆ.

ಮೊದಲನೆಯ ಚಿತ್ರಕಾರನು ಮಾನವನಲ್ಲವೆಂದು ಹೇಳುವವರೂ ಇದ್ದಾರೆ. ಮಾನವನಿಗಿಂತ ಮೊದಲು ಭೂಮಿ ಇದ್ದಿತ್ತು. ಈ ಭೂಮಿಯಲ್ಲಿ ಬಗೆಬಗೆಯ ಬಣ್ಣಗಳು ಇದ್ದುವು. ಈ ಭೂಮಿಯನ್ನು ಸೃಷ್ಟಿಮಾಡಿದವನೆ ಮೊದಲನೆಯ ಚಿತ್ರಕಾರನಾಗಿದ್ದಾನೆ. ಪ್ರಕೃತಿಯು ಕಲಾಮಯವಾಗಿದೆ. ಏನೇ ಇರಲಿ. ಅನಂತ ಕಾಲದಿಂದ ಚಿತ್ರಕಾರನು ಸುಂದರ ಕೃತಿಗಳನ್ನು ರಚಿಸಿಕೊಂಡು ಬಂದಿರುವನು. ಚಿತ್ರಕಲೆಯಲ್ಲಿ ನಾನಾ ರೀತಿಯ ಶೈಲಿಗಳಿವೆ. ನಮ್ಮ ದೇಶದಲ್ಲಿ ಮೊಗಲರ ಕಾಲದ ಚಿತ್ರಕಲೆಯು ಒಂದು ವಿಶೇಷ ಬಗೆಯದ್ದಾಗಿದೆ. ರಾಜಸ್ಥಾನ ಮೊದಲಾದ ಕಡೆಗಳ ಶೈಲಿಗಳು ಸಾಕಷ್ಟು ಪ್ರಸಿದ್ಧವಾಗಿವೆ.

ಆರಂಭದಲ್ಲಿ ಚಿತ್ರಕಾರನು ಪ್ರಕೃತಿಯ ಚಿತ್ರಣವನ್ನು ಮಾಡುವುದರಿಂದಲೆ ಆನಂದವನ್ನು ಪಡುತ್ತಿದ್ದನು. ಸೂರ್ಯೋದಯ, ಸೂರ್ಯಾಸ್ತ, ಹಿಮಾಚ್ಛಾದಿತ ಪರ್ವತ ಶಿಖರಗಳು, ಯುವತಿಯರ ಭಾವ ಭಂಗಿಗಳು, ಹರಿಯುತ್ತಿರುವ ನದಿಗಳು ಮತ್ತು ಋಷಿಗಳ ತಪೋಭೂಮಿಕೆ ಮೊದಲಾದುವುಗಳನ್ನು ಆತನು ಚಿತ್ರಿಸುತ್ತಿದ್ದನು. ರಾಜರು, ಮಹಾರಾಜರು ಮತ್ತು ನವಾಬರ ಕಾಲದಲ್ಲಿ ಆತನು ಅವರ ದರ್ಬಾರಿಗೆ ಸಂಬಂಧಿಸಿದ ಚಿತ್ರಗಳನ್ನು ಬಿಡಿಸುತ್ತಿದ್ದನು. ಧಾರ್ಮಿಕ ಕತೆಗಳು ಕೆಲವು ಚಿತ್ರಗಳಿಗೆ ಪ್ರೇರಕಗಳಾದುವು. ಅವುಗಳಲ್ಲಿ ಕೃಷ್ಣನ ರಾಸಕ್ರೀಡೆ ಮತ್ತು ರಾಮನ ವನವಾಸ ಇತ್ಯಾದಿ ಚಿತ್ರಗಳು ಮಹತ್ವಪೂರ್ಣದವುಗಳಾಗಿವೆ.

ಮೆಲ್ಲ ಮೆಲ್ಲನೆ ಫೊಟೋಗ್ರಾಫಿಯ ವಿಕಾಸವಾಯಿತು. ಆಗ ಕಲೆಯ ಬಹು ಉನ್ನತ ಸ್ಥಾನಕ್ಕೇರಿತು. ಫೋಟೋಗ್ರಾಫಿಯಲ್ಲಿ ಬಿಡಿಸಿದಷ್ಟು ಸುಂದರವಾಗಿ ಚಿತ್ರಕಾರನಿಂದ ಬಿಡಿಸಲು ಅಸಾಧ್ಯವಾಗಿದೆ. ತರತರ ಬಣ್ಣದ ಫೋಟೋಗ್ರಾಫಿನಿಂದಾಗಿ ಚಿತ್ರಕಾರನಿಗೆ ಬಹುದೊಡ್ಡ ಆಘಾತವಾದಂತಾಯಿತು. ಆತನು ತನ್ನ ಕಲೆಯ ಅಭಿವ್ಯಕ್ತೀಕರಣಕ್ಕಾಗಿ ಬೇರೆ ಮಾರ್ಗವನ್ನು ಅವಲಂಬಿಸಬೇಕಾಯಿತು. ಸ್ತ್ರೀ ಆತನು ತನ್ನ ಕಲೆ ಅಧಿಕ ಮಹತ್ವಪೂರ್ಣವಾಗಿದೆಯೆಂಬುದನ್ನು ಜನರಿಗೆ ತೋರಿಸಬಯಸಿದನು.

ಒಬ್ಬ ಚಿತ್ರಕಾರ ಮತ್ತು ವಿಜ್ಞಾನಿಯಲ್ಲಿ ಬಹುದೊಡ್ಡ ಅಂತರವಿದೆ. ವಿಜ್ಞಾನಿಗೆ ತನ್ನ ಸಂಶೋಧನಾ ಕಾರ್ಯಗಳಲ್ಲಿ ಹಿಂದಿನ ವಿಜ್ಞಾನಿಗಳ ಸಹಾಯವು ಲಭಿಸುವುದು. ಆದರೆ ಚಿತ್ರಕಾರನು ತನ್ನ ಕಾರ್ಯವನ್ನು ಮಾಡುವುದಕ್ಕಾಗಿ ತನ್ನ ಕಾಲವೇಳೆಯನ್ನಿಲ್ಲಬೇಕಾಗುತ್ತದೆ. ಆತನು ಇನ್ನೊಬ್ಬ ಕಲಾಕಾರನ ಕೆಲಸವನ್ನು ಅಧ್ಯಯನಿಸಿದರೂ ಬಣ್ಣದ ತಟ್ಟೆಗಳನ್ನು ಹಿಡಿದು ಸ್ವಯಂ ಅಧ್ಯಯನ ಮಾಡಬೇಕಾಗುತ್ತದೆ. ಆದುದರಿಂದ ಚಿತ್ರಕಾರನ ಮೊತ್ತಮೊದಲನೆಯ ಆವಶ್ಯಕತೆಯೆಂದರೆ ‘ಸಾಧನೆ’ಯಾಗಿದೆ. ಈಗ ಆ ಸಾಧನೆ ಕಲಾಕಾರರಲ್ಲಿ ಕಡಿಮೆಯಾಗಿರುವುದರಿಂದಲೆ ಕಲೆ ತನ್ನ ಜನಪ್ರಿಯತೆಯನ್ನು ಕಳಕೊಳ್ಳುತ್ತಿದೆ. ಇದೇ ಕಲಾಕಾರನ ಮೊದಲನೆಯ ಸಮಸ್ಯೆಯಾಗಿದೆ.

ಕಲಾಕೃತಿಯ ಉದ್ದೇಶ ಸೌಂದರ್ಯ ಸೃಷ್ಟಿಯಾಗಿದೆ. ಓಸ್ಕರ್ ವಾಇಲ್ಡನು “ಕಲೆಯು ಸ್ವಯಂ ತನ್ನ ಪ್ರದರ್ಶನವನ್ನು ತಾನು ಮಾಡಿಕೊಳ್ಳುತ್ತದೆ”ಯೆಂದು ಹೇಳಿರುವನು. “ಕಲೆಯು ಹಸ್ತಶಿಲ್ಪವಾಗಿಲ್ಲ. ಚಿತ್ರಕಾರನ ತರತರದ ಭಾವನೆಗಳ ಅಭಿವ್ಯಕ್ತಿ ಸಾಧನವಾಗಿದೆ”ಯೆಂದು ಟಾಲಸ್ಟಾಯ್ ಹೇಳಿರುವನು. “ಕೈ, ಮನಸ್ಸು ಮತ್ತು ಮಸ್ತಿಷ್ಕವು ಒಂದಾಗಿ ಕಾರ್ಯವನ್ನು ಮಾಡಿದರೆ ಅದೇ ಕಲೆಯಾಗಿದೆ. ಅದೇ ಸುಂದರ ವಸ್ತುವಾಗಿದೆ” ಎಂದು ರಸ್ಕಿನ್ ಹೇಳಿರುವನು.

ನನ್ನೊಬ್ಬ ಮಿತ್ರರು ಒಂದು ರಾಜ್ಯ ಸರಕಾರಿ ಆರ್ಟ್ಸ್ ಕಾಲೇಜಿನ ಪ್ರಧಾನಾಧ್ಯಾಪಕರಾಗಿದ್ದಾರೆ. ಅವರು ದೊಡ್ಡ ವಿದ್ವಾಂಸರಾಗಿದ್ದಾರೆ. ಅವರು, “ಕಲೆಯು ಜನತೆಗಾಗಿರುವುದಿಲ್ಲ. ಕಲಾಕಾರನು ತನ್ನ ನಿಜ ಭಾವನೆಗಳ ವ್ಯಕ್ತಿಗತ ಪ್ರದರ್ಶನವನ್ನು ಮಾಡುತ್ತಾನೆ. ಸ್ವಂತ ಸುಖಕ್ಕಾಗಿಯೆ ಆತನು ಅದನ್ನು ರಚಿಸುತ್ತಾನೆ. ಆತನು ಜನತೆಯ ಆದರ ಗೌರವವನ್ನು ಗಣಿಸುವವನೇ ಅಲ್ಲ. ಜನತೆಯು ಆತನ ಕೃತಿಯನ್ನು ಪ್ರಶಂಸಿಸಲಿ. ಪ್ರಶಂಸಿಸದಿರಲಿ. ಪರವಾ ಇಲ್ಲ. ತನ್ನ ಕಾರ್ಯದಿಂದ ಆತನಿಗೆ ಆತ್ಮಿಕ ಸಂತೋಷವಾದರೆ ಸರಿ. ಆತನು ಸುಖಿಯಾಗುವನು. ಕೆಲಬಾರಿ ಆತನು ತನ್ನ ರಚನಾ ಕೃತಿಗಳನ್ನು ಮಾರುವುದಕ್ಕಾಗಿ ಬಯಸುತ್ತಾನೆ. ಆತನು ಹೊಟ್ಟೆ ತುಂಬಿಸಬೇಕಲ್ಲವೆ?” ಎಂದು ಹೇಳಿದರು.

ಸಮಾಜವು ತಮ್ಮ ಮೇಲೆ ಏನು ಪ್ರಭಾವ ಬೀರಲಾರದೆಂದು ಹೇಳುವ ಚಿತ್ರಕಾರನೂ ಇದ್ದಾನೆ. ಈ ರೀತಿಯಾಗಿ ಕಲಾಕಾರ ನು ಸಮಾಜೋತ್ಥಾನದಲ್ಲೂ, ನಿರ್ಮಾಣದಲ್ಲೂ ಪುನರ್ಸಂಘಟನೆಯಲ್ಲೂ ಪಾಲುಗಾರನಾಗುವುದಿಲ್ಲ. ಮತ್ತು ಆತನು ನಮ್ಮ ಸಭ್ಯತೆ, ಸಂಸ್ಕೃತಿ ಮತ್ತು ಜಾಗ್ರತಿಯ ಪ್ರತೀಕವಾಗಬಹುದಾದ ಕೃತಿಗಳನ್ನು ರಚಿಸದೆ ಹೋದರೆ ಸಮಾಜವು ಆತನನ್ನು ಮರೆತು ಬಿಡುತ್ತದೆ. ನಿಜವಾಗಿಯೂ ವ್ಯಕ್ತಿ ಮತ್ತು ಸಮಾಜಗಳ ನಡುವೆ ನಿಕಟವಾದ ಸಂಬಂಧವಿದೆ.

ಕಲೆಯನ್ನು ಬಯಸದ ರಾಷ್ಟ್ರ ಇಂದಿನತನಕ ಹುಟ್ಟಿಗೊಂಡಿಲ್ಲ. ಕಲೆಯು ಯಾವಾಗಲೂ ರಾಜ್ಯಾಶ್ರಿತವಾಗಿದೆ. ಆದರೆ ಅದರ ಅವನತಿಗೆ ಕಲಾಕಾರನ ದೋಷವೆ ಕಾರಣವಾಗಿದೆ. ಆತನು ಜನಸಮುದಾಯದ ಹಿತ, ಲಾಭ, ಸುಖ ಸಂತೋಷ ಮತ್ತು ಹರ್ಷಕ್ಕಾಗಿ ಎಂದೂ ಯಾವ ಕೃತಿಯನ್ನೂ ರಚಿಸಿಲ್ಲ. ಕಲೆ ರಾಷ್ಟ್ರವನ್ನಾಗಲಿ ಸಂಸ್ಕೃತಿಯನ್ನಾಗಲಿ ಪ್ರತಿನಿಧೀಕರಿಸುವ ಕಾರ್ಯವನ್ನೆಸಗಲಿಲ್ಲವೆಂಬ ಮಾತು ನಿಜವಾಗಿದೆ. ಕಲಾಕಾರನು ಇದೇ ರೀತಿಯಾಗಿ ಚಿತ್ರಗಳನ್ನು ಬರೆದರೆ ಅವನ್ನು ಬಣ್ಣದ ಗೊಂಬೆಯೆಂದು ಕರೆಯಬಹುದು. ಆ ಕಲೆಯು ನಿಷ್ಪ್ರಯೋಜಕವೆಂದೆನಿಸುವುದು. ತಾವು ಈ ಒಂದು ಹೇಳಿಕೆಯನ್ನು ಕೇಳಿಲ್ಲವೆ?

ಒಬ್ಬ ಚಿತ್ರಕಾರನು ತನ್ನ ಕೃತಿಯ ಮುಂದೆ ಗಂಭೀರ ಮುದ್ರೆಯಿಂದ ಕುಳಿತುಕೊಂಡಿದ್ದನು. ಆತನೊಬ್ಬ ಮಿತ್ರನು ಪ್ರಶ್ನಿಸಿದನು: ಚಿಂತೆಯ ಕಾರಣವೇನು?”

“ಚಿತ್ರ ಪೂರ್ಣವಾಗಿದೆ. ಆದರೆ ನಾನು ಇದರ ಮೂಗನ್ನು ಸ್ವಲ್ಪ ತಿದ್ದಲು ಬಯಸುತ್ತೇನೆ”ಂದನು ಮಿತ್ರನು ಹೇಳಿದನು “ಅದರಲ್ಲಿ ಯೋಚಿಸಬೇಕಾದ ಮಾತೇನಿದೆ! ತಿದ್ದಿಬಿಡಿರಿ.”

ಚಿತ್ರಕಾರನು “ಸುಲಭದ ಮಾತಲ್ಲ”ವೆಂದು ಹೇಳಿದನು.

ಆಧುನಿಕ ಯುಗದ ಒಬ್ಬ ಚಿತ್ರಕಾರನ ಚಿತ್ರಕ್ಕೆ ಪ್ರಥಮ ಪುರಸ್ಕಾರ ದೊರೆತಾಗ ಆತನು ಕೂಗಿ ಹೇಳಿದನು—“ಬೇಡ ಬೇಡ. ನನಗೆ ಮೊದಲ ಬಹುಮಾನ ಬೇಡ. ತಾವೇಕೆ ನನ್ನ ಚಿತ್ರವನ್ನು ತಲೆ ಕೆಳಗಾಗಿ ತೂಗ ಹಾಕಿದಿರಿ” ಎಂದನು.

ಯುರೋಪಿನಲ್ಲಿ ಕೆಲ ಕಲಾಕಾರರು ತಮ್ಮ ಸ್ಟುಡಿಯೋಗಳಲ್ಲಿ ಪಕ್ಷಿ ಮತ್ತು ಮಂಗಗಳನ್ನು ಸಾಕುತ್ತಾರೆ. ಬ್ರಶನ್ನು ಪಕ್ಷಿನ ಬಾಲಕ್ಕೆ ಕಟ್ಟಿರುತ್ತಾರೆ ಮತ್ತು ಅವುಗಳ ಪಂಜಗಳನ್ನು ಬಣ್ಣಗಳಿಂದ ತುಂಬಿಸಿ ಕಾಗದ ಅಥವಾ ಬಟ್ಟೆಯ ಮೇಲೆ ಅವುಗಳನ್ನು ಬಿಡಿಸುತ್ತಾರೆ. ಮಂಗನ ಕೈಗೊಂದು ಸುತ್ತಿಗೆಯನ್ನು ಕೊಟ್ಟು ಕಲ್ಲುಗಳನ್ನು ಪುಡಿಮಾಡಿಸುತ್ತಾರೆ. ಅದರಿಂದ ದೊರೆತ ಚಿಕ್ಕ ಚಿಕ್ಕ ಹರಳುಗಳನ್ನು ಪಾಲಿಶ್ ಹಾಕಿ ಮಾರಟಕ್ಕಿಡುತ್ತಾರೆ. ಆಧುನಿಕ ಕಲೆಯು ಈ ರೀತಿಯಾಗಿ ಅವನತಿಗಿಳಿಯುತ್ತಿದೆಯೆಂದಾಗ ವರ್ತಮಾನ ಕಲೆಯು ಅದೇಕೆ ಲೋಕ ಪ್ರಿಯವಾಗುವುದಿಲ್ಲವೆಂಬ ಪ್ರಶ್ನೆಯನ್ನು ಕೇಳುವ ಪ್ರಮೇಯವೆ ಉಳಿಯಲಾರದಷ್ಟೆ!

(ನವಭಾರತ ಟೈಮ್ಸಿನ ಕೃಪೆಯಿಂದ)

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.

ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ. ೩=೫೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

> ದೀಪವಾರಿದ ಮೇಲೆ ತೈಲವೆರೆಯುವುದು, ಚೋರರ ನೋಡಿದ ಮೇಲೆ ಎಚ್ಚರಾಗುವುದು, ನೀರು ಹರಿದ ನಂತರ ಕಟ್ಟೆ ಕಟ್ಟುವುದು ನೀರಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುವುದು.

ನವಯುಗ

ವರುಷ	ಉಡುಪಿ	ವಾರ
೪೦	೨೨-೯-'೬೦	೪

ನೆಹರುರವರ ಸಲಹೆ

ಮೈಸೂರಿನ ಮಂತ್ರಿಮಂಡಳಿಯನ್ನು ಬದಲಾಯಿಸಬೇಕೆಂಬ ಉದ್ದೇಶದಿಂದ ಕೂಡಿದ ಕಾಂಗ್ರೆಸಿನ ಭಿನ್ನಾಭಿಪ್ರಾಯದ ಗುಂಪಿನವರಿಗೆ ಪ್ರಧಾನಿ ನೆಹರು ಸಾಲೋಚಿತವಾದ ಹಿತೋಕ್ತಿಯನ್ನಾಡಿದ್ದಾರೆ. ರಾಜ್ಯದ ನಾಯಕರೆನಿಸಿಕೊಂಡವರು ಸಕ್ರಿಯವಾಗಿ ರಚನಾತ್ಮಕ ಕಾರ್ಯಕ್ರಮಗಳಲ್ಲಿ ತಮ್ಮ ಮನಸ್ಸನ್ನು ಹರಿಯಗೊಡುವುದನ್ನು ಬಿಟ್ಟು, ಚಿಕ್ಕ ಪುಟ್ಟ ವ್ಯಾಜ್ಯಗಳನ್ನು ಎಬ್ಬಿಸಿ, ಅವನ್ನು ಪ್ರಚಾರಮಾಡಿ ಅನಪೇಕ್ಷಣೀಯ ಗೊಂದಲಗಳಿಗೆ ಕಾರಣರಾಗುವುದರಲ್ಲೇ ತಲ್ಲೀನರಾಗುವುದನ್ನು ಶ್ರೀ ನೆಹರು ಖಂಡಿಸಿದ್ದಾರೆ. ರಾಜ್ಯದ ಮುಂದೆ ಪಂಚವಾರ್ಷಿಕ ಯೋಜನೆ, ಬರಗಾಲದ ಸಮಸ್ಯೆ ಮೊದಲಾದ ಅತಿ ಪ್ರಧಾನವಾದ ಪ್ರಶ್ನೆಗಳಿರುವಾಗ, ಅವನ್ನು ಸರಿಯಾಗಿ ನಿರ್ವಹಿಸುವುದನ್ನು ಬಿಟ್ಟು, ತಮ್ಮ ತಮ್ಮೊಳಗೆ ಕಚ್ಚಾಡಿ ಪಕ್ಷದೊಳಗೊಂದು ಎದುರು ದಳವನ್ನು ನಿರ್ಮಿಸುವ ಕಾಂಗ್ರೆಸ್ ನೀತಿಯನ್ನು ಅವರು ನಿಂದಿಸಿದ್ದಾರೆ; ಅದು ಅಸಹ್ಯವೆಂದಿದ್ದಾರೆ. ಭಿನ್ನಾಭಿಪ್ರಾಯಗಳನ್ನು ಸಮಾಧಾನ ಚಿತ್ತದಿಂದ ವಿಚಾರಿಸಿ ಬಗೆಹರಿಸಿಕೊಳ್ಳಲು ಸಾಧ್ಯವಿರುವಾಗ ಧುರೀಣತ್ವದಲ್ಲಿ ಬದಲಾವಣೆ ಬಯಸುವುದು ಸರಿಯಲ್ಲ; ಪಕ್ಷದ ಮೂಲಭೂತ ಧೋರಣೆಗೂ ಸರಕಾರದ ನೀತಿಗೂ ವ್ಯತಿರೇಕತೆ ತೋರಿ ಬಂದಲ್ಲಿ ಮಾತ್ರ ನಾಯಕತ್ವದಲ್ಲಿ ಪರಿವರ್ತನೆ ಮಾಡಬಹುದೇ ಹೊರತು, ಬೇಕೆಂಬಂತೆ ಅಲ್ಲ ಎಂದು ತಿಳಿಸಿ, ಹೀಗೆ ಮಂತ್ರಿಮಂಡಳಿಯ ಮಾರ್ಪಾಟಿನಿಂದ ಪಕ್ಷದ ಬಲವು ಕುಂದಿ ದುರ್ಬಲವಾಗುವುದೆಂದೂ ಪಕ್ಷದ ಮೇಲೆ ಜನತೆಗಿರುವ ಆಸ್ಥೆ, ವಿಶ್ವಾಸ ದೂರವಾಗುವುದೆಂದೂ ಸೂಚ್ಯವಾಗಿ ನುಡಿದಿದ್ದಾರೆ.

ಪ್ರಧಾನಿ ನೆಹರೂರವರ ಅಭಿಪ್ರಾಯವು ಕಾಂಗ್ರೆಸ್ ಪುರಸ್ಕೃತವಲ್ಲ; ಕೇವಲ ವೈಯಕ್ತಿಕವಾದುದು. ಮತ್ತು ಈ ಬಗ್ಗೆ ಅಂತಿಮ ನಿರ್ಣಯ ಕೊಡತಕ್ಕವರಾದರೂ ವರಿಷ್ಠ ಮಂಡಳಿಯೇ. ನೆಹರುರವರ ಉಪದೇಶದಿಂದ ತೃಪ್ತರಾಗದ ಭಿನ್ನಮತೀಯರು ವರಿಷ್ಠರ ಆಜ್ಞೆಯನ್ನು ಕಾಯುತ್ತಿರುವರಂತೆ. ಆದರೆ ಅಲ್ಲಿಂದ ಬರಬಹುದಾದ ಸಲಹೆಯನ್ನು ಪರೋಕ್ಷವಾಗಿ ನೆಹರು ತಿಳಿಸಿದ್ದಾರೆಂಬುದು ಖಂಡಿತವೆ. ಮೈಸೂರಿನಲ್ಲಿಂದು ಎದ್ದಿರುವ ಸಮಸ್ಯೆ ಇಂದು ನಿನ್ನೆಯದಲ್ಲ. ಅದು 'ಬ' ವರ್ಗದ ರಾಜ್ಯವಾಗಿರುವಾಗಲೇ ಗುಂಪು ರಾಜಕಾರಣಕ್ಕೆ ಹೆಸರಾದುದು. ಇಂದು ಭಿನ್ನಮತೀಯರು ತಮ್ಮ ನಾಯಕನನ್ನಾಗಿ ಆರಿಸಿದ ಶ್ರೀ ಕೆಂಗಲ್ ಹನುಮಂತಯ್ಯನವರೂ ಈ ಭಿನ್ನಾಭಿಪ್ರಾಯದ ದೆಸೆಯಿಂದಲೇ ಹಿಂದೊಮ್ಮೆ ಉರುಳಿದ್ದರು; ರಾಜ್ಯ ಪುನರ್ಘಟನಾನಂತರ ಹೊಸ ರಾಜ್ಯಕ್ಕೆ ಮತ್ತೊಮ್ಮೆ ನಾಯಕನನ್ನು ಆರಿಸಬೇಕಾಗಿದ್ದರೂ ಕೇವಲ ಮೂರೇ ಮೂರು ಮಾಸಗಳ ಬಗ್ಗೆ ಶ್ರೀ ಕಡಿದಾಳರನ್ನು ಮುಖ್ಯ ಮಂತ್ರಿಪಟ್ಟಕ್ಕೆ ಏರಿಸಲು ಪಣತೊಟ್ಟ ಮೈಸೂರಿನಲ್ಲಿ ಧುರೀಣತ್ವದ ಬದಲಾವಣೆಯಿಂದ ಈ ವೈಮನಸ್ಯ, ಗುಂಪು ರಾಜಕೀಯಗಳು ದೂರವಾಗುವುವೆಂದು ಯಾರಾದರೂ ಹೇಳಿದರೆ, ಅದು ನೂರಕ್ಕೆ ನೂರರಷ್ಟು ಸುಳ್ಳು.

ಹೀಗೆ ಹೇಳಿದುದರಿಂದ ಸದ್ಯದ ಮುಖ್ಯ ಮಂತ್ರಿ ಜತ್ತಿಯವರಾಗಲೀ ಅವರ ಸಹೋದ್ಯೋಗಿಗಳಾಗಲೀ ನಿರ್ದೋಷಿಗಳೆಂದೂ ಭಿನ್ನ ಮತೀಯರು ಅವರ ಮೇಲೆ ವೃಥಾರೋಪ ಹೊರಿಸುತ್ತಿರುವರೆಂದೂ ನಾವು ಹೇಳುವುದಿಲ್ಲ. ಆದರೂ ಭಿನ್ನ ಮತೀಯರ ಮಾತಿನಲ್ಲಿ ಸ್ವಭಾವೋಕ್ತಿಯಂತೆಯೇ ಉತ್ಪ್ರೇಕ್ಷೆಯೂ ಹುದುಗಿದೆಯೆಂಬುದು ನಿಜ. ಒಂದು ಕೋಪಕ್ಕೆ ಒಂದು ಬಾವಿ ಹಾರಲು ಹೋದರೆ, ಮಾಸವನಾದವನಿಗೆ ಬಾವಿಯೆಷ್ಟಿರಬೇಡ? ಹಾಗೆಯೇ ಭಿನ್ನಾಭಿಪ್ರಾಯ ತಲೆದೋರಿದೊಡನೆಯೇ ನಾಯಕನನ್ನು ಗದ್ದುಗೆಯಿಂದ ಕೆಳಗಿಳಿಸುತ್ತ ಹೋದರೆ, ಎಲ್ಲರೂ 'ಏಕ್ ದಿನ್ ಕಾ ಸುಲ್ತಾನ'ರಾಗಿ ಹೋದಾರು. ಹೀಗೆ ಆಗಾಗ್ಗೆ ಮಂತ್ರಿಮಂಡಳಿಯನ್ನು ಪರಿವರ್ತನೆ ಮಾಡುವುದರಿಂದ ಆಡಳಿತೆಯಲ್ಲಿ ಶಿಥಿಲತೆ, ಪಕ್ಷದಲ್ಲಿ ಅಶಿಸ್ತು, ಜನತೆಯಲ್ಲಿ ಅತೃಪ್ತಿ ತಿರಸ್ಕಾರಗಳು ತಲೆಯಿಣಿಕಿ ನೋಡುವುವು. ಇದರಿಂದ ಪಕ್ಷವು ದುರ್ಬಲವಾಗುವುದು ಮಾತ್ರವಲ್ಲ, ಅದರೊಳಗಿರುವ ಪಂಗಡ ಮನೋಭಾವ ಮುಂದಕ್ಕೂ ಹೆಚ್ಚುತ್ತ ಹೋಗುವುದು. ಹೀಗಾದರೆ, ರಾಜ್ಯದ ಪ್ರಗತಿಯೆಂತಾಗಬೇಕು? ಆದುದರಿಂದ, ಪಕ್ಷದ ಒಗ್ಗಟ್ಟು ಮತ್ತು ಶಕ್ತಿಸಂವರ್ಧನೆಯ ದೃಷ್ಟಿಯಿಂದ ಮಂತ್ರಿಗಳು ತಪ್ಪಿದಲ್ಲಿ ಪಕ್ಷದ ಸದಸ್ಯರು ತಿದ್ದಿ ಹೇಳಿ, ತಮ್ಮೊಡಕನ್ನು ಒಡಕೆಂದು ತೋರಿಸಿಕೊಳ್ಳದೆ ಸೌಹಾರ್ದದಿಂದ ನಡೆಸಿಕೊಳ್ಳಬೇಕಾದುದು ಅತ್ಯವಶ್ಯ. ಈ ದೃಷ್ಟಿಯಿಂದ ನೆಹರುರವರ ಉದ್ಗಾರ ಯಥಾರ್ಥವಾಗಿದೆ. ಇನ್ನಾದರೂ ಮೈಸೂರು ಕಾಂಗ್ರೆಸಿಗರು "ನಾವೆಲ್ಲಾ ಒಂದೇ" ಎಂಬ ನೀತಿಯನ್ನು ಆಚರಿಸಿ ತೋರಿಸಬೇಕಾಗಿದೆ. ರಾಷ್ಟ್ರದ ಐಕ್ಯವನ್ನುಳಿಸಬೇಕೆಂದು ಜನತೆಗೆ ಕರೆಕೊಡುವ ಕಾಂಗ್ರೆಸ್ಸು ತನ್ನಲ್ಲಿಯೇ ಐಕ್ಯವನ್ನುಳಿಸಿಕೊಳ್ಳದೆ ಹೋದರೆ, ಅದು ಹಾಸ್ಯಾಸ್ಪದ! ಪ್ರಧಾನಿಯವರ ಕಿವಿಮಾತನ್ನು ಕೆಳಗಿವಿಗೇಳದೆ ಮೈಸೂರು ಕಾಂಗ್ರೆಸ್ಸು ಸರಿದಾರಿಯಲ್ಲಿ ನಡೆಯುವುದರಿಂದ ಪಕ್ಷಕ್ಷೇಮ.

ಕಾಂಗೋವಿನ ವಿದ್ಯಮಾನ

ಕಾಂಗೋವಿನ ವಿದ್ಯಮಾನ ಕುತೂಹಲಕಾರಿಯಾದಂತೆಯೇ ರೋಮಾಂಚನಕಾರಿಯೂ ಹೌದು. ಅಲ್ಲಿನ ಅಧ್ಯಕ್ಷ-ಪ್ರಧಾನಿಯವರು ಪರಸ್ಪರರನ್ನ ಅಧಿಕಾರದಿಂದ ಕಿತ್ತುಹಾಕಿದರು; ಅವರಿಬ್ಬರನ್ನೂ ಸೇನೆಯು ಹಿಂದೆ ತಳ್ಳಿತು. ಪ್ರಧಾನಿ ಲುಮುಂಬಾ ಒಂದು ಬಾರಿ ಕಾಣೆಯಾದರು; ಮತ್ತೆ ದೃಗ್ಗೋಚರರಾದರು. ಅಧ್ಯಕ್ಷ ಕಸವುಬಾ ದಿಗ್ಬಂಧಿತರಾದರು; ಮುಕ್ತರಾದರು. ಸೇನೆ ಕ್ರಾಂತಿಯೆದ್ದು ತಾನೇ ಅಧಿಕಾರಕ್ಕೆ ಮುಂದುವರಿದಂತಾಯಿತು; ಹಿಂಜರಿಯಿತು. ಸಂಯುಕ್ತ ರಾಷ್ಟ್ರಸಂಘದ ಸೇನೆಯು ಅಲ್ಲಿ ಶಾಂತಿ ಮತ್ತು ನ್ಯಾಯಪಾಲನೆ ಮಾಡಲು ಪ್ರವೇಶಿಸಿತ್ತು,—ಕಾಂಗೋವಿನ ಅಪೇಕ್ಷೆಯ ಮೇರೆಗೆ ಈಗಲ್ಲಿ ಗೊಂದಲ ಮತ್ತಷ್ಟು ತೀವ್ರವಾಗುತ್ತಿರುವಂತೆಯೇ ಆ ಸೇನೆ ಹಿಂದೆ ಹೋಗಬೇಕೆಂಬ ಆಜ್ಞೆ ಲುಮುಂಬಾರಿಂದ ಹೊರಟಿದೆಯಂತೆ. ಹೀಗೆ ಕಾಂಗೋವಿನಲ್ಲಿ ಪರಸ್ಪರ ವಿಚಿತ್ರಕರವೆನಿಸಿದ ಘಟನೆಗಳು ನಡೆಯುವಾಗ ಮತ್ತೆ ಭದ್ರತಾ ಸಮಿತಿ—ಯುನೋಗಳ ಅವಸ್ಥೆ ಹೇಗಾಗಿರಬಹುದು? ಕಾಂಗೋವಿನಲ್ಲಿ ಕಾನೂನು ವ್ಯವಸ್ಥೆಯನ್ನು ಸಂಸ್ಥಾಪಿಸಲು ತೆರಳಿದ್ದ ಸಂ. ರಾ. ಸಂಸ್ಥೆಯ ಸೇನೆಯು ತನ್ನ ಹಿಂದಿನ ಗೊತ್ತುವಳಿಯನ್ನು ಮೀರಿದ್ದುದರಿಂದ ಅದನ್ನು ಕಿತ್ತುಹಾಕಬೇಕೆಂಬ ರಶ್ಯದ ಗೊತ್ತುವಳಿಯು ಭದ್ರತಾಸಮಿತಿಯಲ್ಲಿ ಬಿದ್ದುಹೋಯಿತು; ಅಂತೆಯೇ ಸಿಲೋನ್ ಮತ್ತು ಟ್ಯುನಿಶಿಯಾಗಳು ಮಂಡಿಸಿದ, ಸಮಿತಿಯ ಹಿಂದಿನ ನಿರ್ಧಾರವನ್ನೇ ಮತ್ತೂ ಬಲಪಡಿಸಬೇಕೆಂಬ ಗೊತ್ತುವಳಿಯನ್ನು ರಶ್ಯವು ತನ್ನ ವಿಟೋ ಪ್ರಯೋಗಿಸಿ ತಳ್ಳಿಹಾಕಿತು. ಈ ರೀತಿಯ ಭಿನ್ನಾಭಿಪ್ರಾಯಗಳು ಒಟ್ಟುಸೇರಿ ಶಾಂತಿ ಸ್ಥಾಪನೆಯ ಬಗ್ಗೆ ಹೇಗೆ ಶ್ರಮಿಸುವರು ಎಂಬುದೇ ಪ್ರಶ್ನೆಯಾಗಿದೆ. ಲುಮುಂಬಾರವರು ಸಂ. ರಾ. ಸೇನೆಯು ಮರಳಬೇಕೆಂದೂ ರಶ್ಯದ ಸೇನೆಯು ಕಾಂಗೋವಿಗೆ ಬರುವುದೆಂದೂ ತಿಳಿಸಿದ್ದಾರೆ. ಒಂದು ದೇಶವು ತನಗೆ ಬೇಕಾದ ಸಹಾಯವನ್ನು ಯಾವುದೇ ರಾಷ್ಟ್ರದಿಂದ ತರಿಸಿಕೊಳ್ಳಲು ಸ್ವತಂತ್ರವಿದೆ. ಆದರೆ, ಕಾಂಗೋವಿಗೆ ತನ್ನ ಸೇನೆ ಕಳಿಸಲು ಮುಂದಾಗುತ್ತಿರುವ ಸಂ. ರಾ. ಸಂಸ್ಥೆಯ ಸದಸ್ಯ ರಾಷ್ಟ್ರ ರಶ್ಯ ತಾನೂ ಯುಕ್ತ ರಾಷ್ಟ್ರ ಸಂಘದಲ್ಲಿ ಸೇರಿರುವುದರಿಂದ ಅವರ ನಿರ್ಣಯವನ್ನು ಮುರಿಯುವುದೆಷ್ಟು ನ್ಯಾಯೋಚಿತವೆಂಬುದನ್ನು ಆಲೋಚಿಸಬೇಕಾಗಿದೆ. ಅದೇನೇ ಇದ್ದರೂ ಈ ಕಾಂಗೋ ಪ್ರಕರಣಗಳಿಂದ ಎಲ್ಲರೂ ತಲೆ ಕೆಡಿಸಿಕೊಳ್ಳುವ ಪ್ರಮೇಯವೊದಗಿ ಬಂದಿದೆಯೆಂದರೆ, ಅತ್ಯುಕ್ತಿಯಾಗಲಾರದು.

ಸಂಕ್ಷಿಪ್ತ ಸುದ್ದಿಗಳು

ಅಪೂರ್ವ ಅಧಿವೇಶನ

ವಿಶ್ವದ ಹಿರಿಯ ರಾಷ್ಟ್ರಗಳ ವರಿಷ್ಠರು ಸ್ವಯಂ ಸಂಯುಕ್ತ ರಾಷ್ಟ್ರ ಸಂಸ್ಥೆಯ ಸಾಮಾನ್ಯ ಸಭೆಯ ಹದಿನೈದನೆಯ ಸಮ್ಮೇಳನದಲ್ಲಿ ಭಾಗವಹಿಸುವುದರಿಂದ ಇದು ಇತಿಹಾಸ ಪ್ರಸಿದ್ಧವಾಗುವುದೆಂಬ ನಿರೀಕ್ಷೆಯಿದೆ. ರಶ್ಯದ ಪ್ರಧಾನಿ ನಿಕಟಾ ಕ್ರುಶ್ಚೇವ, ಅಮೆರಿಕೆಯ ಅಧ್ಯಕ್ಷ ಐಸನ್‌ಹಾವರರು ಈಗಾಗಲೇ ತಕ್ಕ ಸಿದ್ಧತೆಯನ್ನು ಮಾಡಿರುತ್ತಾರೆ. ಭಾರತೀಯ ಪ್ರಧಾನಿಯವರೂ ಈ ಅಧಿವೇಶನದಲ್ಲಿ ಭಾಗವಹಿಸುವ ನಿರ್ಧಾರವನ್ನು ಮಾಡಿದ್ದಾರೆ. ಶ್ರೀ ನೆಹರುರವರೊಡನೆ ವಿದೇಶ ಮಂತ್ರಾಲಯದ ಕಾರ್ಯದರ್ಶಿ ಶ್ರೀ ಎಸ್. ದತ್ತರೂ ತೆರಳಲಿರುವುದರಿಂದ ಅಧಿವೇಶನದ ಮುಂದೆ ಬರತಕ್ಕ ವಿಶ್ವಶಾಂತಿ-ನಿಶ್ಶಸ್ತ್ರೀಕರಣ ಮೊದಲಾದ ಮುಖ್ಯ ಪ್ರಶ್ನೆಗಳ ಬಗ್ಗೆ ಭಾರತವೂ ಸಮರ್ಥ ಹಾಗೂ ಸೂಕ್ತ ಮಾರ್ಗದರ್ಶನ ಮಾಡುವುದರಲ್ಲಿ ಸಂದೇಹ ಪಡಬೇಕಾಗಿಲ್ಲ.

ನವ ಮನ್ವಂತರೋದಯ

ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಕಾಲುವೆ ನೀರಿನ ವಿವಾದ ವಿಶ್ವಬೇಂಕಿನ ಮಧ್ಯಸ್ಥಿಕೆಯಿಂದಾಗಿ ಸಮಾಧಾನಕರವಾಗಿ ಪರಿಸಮಾಪ್ತಿಗೊಳ್ಳುವಂತಾಯಿತು. ಉಭಯ ರಾಷ್ಟ್ರಗಳ ಇತಿಹಾಸದಲ್ಲೇ ಪ್ರಧಾನ ಘಟನೆಯಾದ ಈ ಸಂಬಂಧದ ಒಪ್ಪಂದಕ್ಕೆ ಭಾರತದ ಪ್ರಧಾನಿ ನೆಹರು ಮತ್ತು ಪಾಕಿಸ್ತಾನದ ಅಧ್ಯಕ್ಷ ಜ| ಅಯೂಬ ಖಾನರು ಕರಾಚಿಯಲ್ಲಿ ಸಹಿ ಹಾಕಿದರು. ಜಗತ್ತಿನಲ್ಲೇ ಅತಿ ಹಿರಿದಾದ ನೀರಾವರಿ ಯೋಜನೆಯಾದ ಸಿಂಧೂ ಜಲಾನಯನದ ಬಗ್ಗೆ ಉಭಯ ರಾಷ್ಟ್ರಗಳು ೧೨ ವರ್ಷಗಳಿಂದ ಹೊಡೆದಾಡುವಂತಿದ್ದು ಇದು ಬಗೆಹರಿದುದರಿಂದ ಈ ಸಹೋದರ ರಾಷ್ಟ್ರಗಳ ಬಾಂಧವ್ಯದಲ್ಲಿ ನವ ಮನ್ವಂತರ ಉದಯಿಸಿತೆಂದು ಎಲ್ಲೆಲ್ಲಿಯೂ ಪ್ರಶಂಸೆಗಳಿಸಿವೆ.

ಬೆಂಗಳೂರಲ್ಲಿ ಕಲಾ ಶಾಲೆ

ಮುಂಬಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ಗೆ ಭೆಟ್ಟಿಯಿತ್ತು ಅದರ ರಚನೆಯ ಕುರಿತು ಅಧ್ಯಯನ ನಡೆಸಿಕೊಂಡು ಬಂದ ಮೈಸೂರಿನ ಶಿಕ್ಷಣ ಸಚಿವ ಶ್ರೀ ಅಣ್ಣಾರಾವ್ ಗಣಮುಖಿಯವರು ಬೆಂಗಳೂರಲ್ಲಿಯೂ ಅದೇ ಮಾದರಿಯ ಒಂದು ಕಲಾ ಶಾಲೆಯನ್ನು ಸ್ಥಾಪಿಸಲು ಮೈಸೂರು ಸರಕಾರವು ನಿರ್ಧರಿಸಿರುವುದಾಗಿ ಸಾರಿದ್ದಾರೆ. ಅಲ್ಲದೇ ಈ ಕಾಲೇಜಿನ ರಚನೆಗಾಗಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಂಟು ಲಕ್ಷ ರೂಪಾಯಿಗಳನ್ನು ತೆಗೆದಿರಿಸುವ ಯೋಚನೆಯಿರುವುದೆಂದೂ ತಿಳಿಸಿದ್ದಾರೆ. ಜೀವನವೂ ಒಂದು ಕಲೆಯಾಗಿದ್ದು ಪ್ರತಿಯೊಬ್ಬ ವ್ಯಕ್ತಿಯೂ ಕಲೆಯನ್ನರಿತವನಾಗಿರಬೇಕೆಂಬುದಾಗಿ ಅವರು ಅಭಿಪ್ರಾಯಿಸಿ ಮೈಸೂರಿನ ಚಿತ್ರಕಲಾವಿದರ ಮಹತ್ತನ್ನು ಉದ್ಘಾಟಿಸುತ್ತ ಸರಕಾರದ ನಿರ್ಣಯವನ್ನು ಘೋಷಿಸಿದ್ದಾರೆ.

ವಿಶ್ವೇಶ್ವರಯ್ಯ ಸ್ಮಾರಕ

ಭಾರತರತ್ನ ಡಾ|| ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ನೂರನೆಯ ಜನ್ಮದಿನೋತ್ಸವದ ನೆನಪಿಗಾಗಿ ಬೆಂಗಳೂರಲ್ಲಿ ಕೈಗಾರಿಕೆ ಹಾಗೂ ತಾಂತ್ರಿಕ ಪ್ರದರ್ಶನಾಲಯವೊಂದನ್ನು ನಿರ್ಮಿಸಲು ಶತಮಾನೋತ್ಸವ ಸಮಿತಿಯವರು ನಿರ್ಣಯಿಸಿದ್ದಾರೆ. ಇದಕ್ಕಾಗಿ ಕನಿಷ್ಠ ೧೫ ಲಕ್ಷ ರೂಪಾಯಿಗಳನ್ನು ಸಂಗ್ರಹಿಸುವ ಭರವಸೆಯಿತ್ತರೆ, ಕೇಂದ್ರ ಸರಕಾರದ ಸಂಸ್ಕೃತಿ ಮತ್ತು ವೈಜ್ಞಾನಿಕ ಸಂಶೋಧನಾ ಮಂಡಳಿಯವರು ಏಳೂವರೆ ಲಕ್ಷ ರೂಪಾಯಿಗಳನ್ನು ಕಾಣಿಕೆಯಾಗಿ ಕೊಡುವರೆಂದು ಕೇಂದ್ರ ಮಂತ್ರಿ ಪ್ರೊ| ಹುಮಾಯೂನ ಕಬೀರರು ವಾಗ್ದಾನ ಮಾಡಿದ್ದಾರೆ. ಶ್ರೀ ವಿಶ್ವೇಶ್ವರಯ್ಯನವರಿಗೆ ಅತಿ ಪ್ರಿಯವಾದ ಮತ್ತು ಜನೋಪಯೋಗಿಯಾಗಬಹುದಾದ ಈ ಸ್ಮಾರಕವು ಯಥಾರ್ಥವಾಗಿಯೇ ಇರುವುದೆಂದು ಹೇಳಬಹುದು.

ಅಲ್ಲಲ್ಲಿಯ ಸುದ್ದಿಸಾರ

ಹೃದಯಸ್ತಂಭನದಿಂದ ಡಾ| ಯು. ಪಿ. ಮಲ್ಯರ ನಿಧನ— ದ. ಕ. ಜಿಲ್ಲೆಯ ನಿಷ್ಠಾವಂತ ಕಾಂಗ್ರೆಸಿಗರೂ ಪ್ರಮುಖ ಕಾರ್ಯಕರ್ತರೂ ಆಗಿದ್ದ ಡಾ. ಯು. ಪಿ. ಮಲ್ಯ, ಎಲ್. ಎಮ್. ಎಂಡ್ ಎಸ್. ಇವರು ತಾ. 16ನೇ ರಾತ್ರೆ 62ನೇ ವಯಸ್ಸಿನಲ್ಲಿ ಪೆಂಟ್‌ಲೇಂಡ್ ಪೇಟೆಯ ತಮ್ಮ ನಿವಾಸದಲ್ಲಿ ಹೃತ್ಕ್ರಿಯೆ ನಿಂತು ನಿಧನಹೊಂದಿದರು. ಡಾ. ಮಲ್ಯರು ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿ ಕಾರಾಗೃಹವಾಸವನ್ನೂ ಅನುಭವಿಸಿದ್ದರು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿಯೂ ಪ್ರದೇಶ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿಯೂ ಮದ್ರಾಸ್ ಎಸೆಂಬ್ಲಿಯ ಸದಸ್ಯರಾಗಿಯೂ ಇವರು ಅಮೂಲ್ಯ ಸೇವೆ ಸಲ್ಲಿಸಿರುವರು. ನಗರಸಭೆಯ ಸದಸ್ಯರಾಗಿದ್ದರಲ್ಲದೆ ಜಿಲ್ಲಾ ಹರಿಜನ ಸಂಘದ ಮತ್ತು ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಕಮಿಟಿಯ ಅಧ್ಯಕ್ಷರಾಗಿಯೂ ಸರ್ವೋದಯ ಕಾರ್ಯಕರ್ತರಾಗಿಯೂ ವಿಶೇಷ ಜನಸೇವೆ ಮಾಡಿ ಅತ್ಯಂತ ಜನಪ್ರಿಯತೆಗಳಿಸಿದ್ದರು. 1931ರಿಂದ ಕೆನರಾ ಬೇಂಕಿಂಗ್ ಕಾರ್ಪೋರೇಶನಿನ ಡೈರೆಕ್ಟರಾಗಿದ್ದರಲ್ಲದೆ ಕಳೆದ ನವಂಬರದಿಂದ ಅದರ ಚೇರ್‌ಮೆನ್ನರಾಗಿದ್ದರು. ದಕ್ಷ ಡಾಕ್ಟರಾಗಿದ್ದು ಶ್ರೀ ರಾಮಕೃಷ್ಣ ನರ್ಸಿಂಗ್ ಹೋಮನ್ನು ಸ್ಥಾಪಿಸಿ ಪ್ರಸಿದ್ಧರಾಗಿದರು. ಡಾ. ಮಲ್ಯರು ಶ್ರೀ ಯು. ಎಸ್. ಮಲ್ಯ ಎಂ. ಪಿ. ಯವರ ಹಿರಿಯ ಸಹೋದರರು. ದಿವಂಗತರ ಸ್ಮರಣಾರ್ಥವಾಗಿ ಮರುದಿನ ಸಂಜೆ ವಿಶೇಷ ಜನಸಂದಣಿಯೊಡನೆ ನಡೆಯಿತು.

ನಿಧನ— ಉಡುಪಿ ತಾಲೂಕು ಬೋರ್ಡಿಗೆ ಕೊಕ್ಕರ್ಣೆ ಮತದಾರ ಕ್ಷೇತ್ರದಿಂದ ಕಾಂಗ್ರೆಸ್ ಕಡೆಯಿಂದ ಅವಿರೋಧ ಆಯ್ಕೆ ಹೊಂದಿರುವ ಶ್ರೀ ಎಸ್. ಶೀನಪ್ಪ ಹೆಗ್ಡೆಯವರು ಇದೇ ತಾ. 13ರಲ್ಲಿ ತಮ್ಮ 60ನೇ ವರ್ಷದಲ್ಲಿ ನಿಧನ ಹೊಂದಿರುವರು. ಇವರು ಮಂಗಳೂರು ವೆನ್‌ಲಾಕ್ ಆಸ್ಪತ್ರೆಯಲ್ಲಿ ಕೆಲ ಸಮಯದಿಂದ ಚಿಕಿತ್ಸೆ ಪಡೆಯುತ್ತಿದ್ದರು. ಆಸ್ಪತ್ರೆಯಿಂದ ಕೊಕ್ಕರ್ಣೆಗೆ ಬಂದಮೇಲೆ ಮರಣ ಹೊಂದಿರುವುದು ಶೋಚನೀಯವಿದೆ.

ಸರ್. ವಿಶ್ವೇಶ್ವರಯ್ಯನವರ ಶತಮಾನೋತ್ಸವ— ಉಡುಪಿ ರೋಟರೀ ಕ್ಲಬ್, ಲಾಯನ್ಸ್ ಕ್ಲಬ್ ಮತ್ತು ಎ. ಐ. ಎಂ. ಓ. ದ. ಕ. ಜಿಲ್ಲಾ ಕೌನ್ಸಿಲಿನ ಸಂಯುಕ್ತ ಸಭೆಯು ಮುನಿಸಿಪಾಲಿಟಿಯಲ್ಲಿ ತಾ. 15ರಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಭಾರತರತ್ನ ಎಂ. ವಿಶ್ವೇಶ್ವರಯ್ಯನವರ ಶತಮಾನೋತ್ಸವವನ್ನು ಆಚರಿಸಲಾಯಿತು. ಡಾ| ಮಾಧವ ಪೈಗಳು ಭಾಷಣ ಮಾಡುತ್ತಾ ಡಾ| ವಿಶ್ವೇಶ್ವರಯ್ಯನವರು ರಾಜ್ಯದ ಕೈಗಾರಿಕಾಭಿವೃದ್ಧಿಯಲ್ಲಿ ವಹಿಸಿದ ಶ್ರಮವನ್ನೂ ಅವರ ದುಡಿಮೆಯ ಸಂದೇಶವನ್ನೂ ವಿವರಿಸಿದರು. ಶ್ರೀ ಜಿ. ಎಸ್. ನಾಗವೇಣಿ, ಡಾ| ಇ. ಅನಂತರಾವ್, ಶ್ರೀ ಟಿ. ರಮೇಶ ಪೈ ಇವರು ಸಂದರ್ಭೋಚಿತ ಭಾಷಣವನ್ನಿತ್ತರು. ಶ್ರೀ ಎನ್. ವಿ. ಕಾಮತರು ಧನ್ಯವಾದವಿತ್ತರು.

ಶ್ರೀಕೃಷ್ಣ ಜಯಂತಿ— ಉಡುಪಿ ಶ್ರೀಕೃಷ್ಣಮಠದಲ್ಲಿ ಪರ್ಯಾಯ ಪುತ್ತಿಗೆ ಮಠದ ಶ್ರೀ ಪಾದಂಗಳವರ ನೇತೃತ್ವದಲ್ಲಿ ತಾ. 12ರಲ್ಲಿ ಶ್ರೀಕೃಷ್ಣಾಷ್ಟಮಿ ಮಹೋತ್ಸವವೂ ಮರುದಿನ ಮೊಸರುಕುಡಿಕೆ ಉತ್ಸವವೂ ಧಾಮಧೂಮವಾಗಿ ನೆರವೇರಿತು. ಉಡುಪಿ ಬ್ರಹ್ಮ ವೈದ್ಯರ್ಕರ ಧೂಮಾವತಿ ಯಕ್ಷಗಾನ ಸಂಘದವರು ಪರ್ಯಾಯ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಶ್ರೀಕೃಷ್ಣಾಷ್ಟಮಿಯ ಸಂಬಂಧ ಸಮಾರಂಭವನ್ನು ಜರಗಿಸಿ 'ಶ್ರೀಕೃಷ್ಣ ಜನನ' ಎಂಬ ಯಕ್ಷಗಾನವನ್ನು ನೆರವೇರಿಸಿದರು. ಆರಂಭದಲ್ಲಿ ಶ್ರೀ ಪಾ. ಲ. ನಾ. ಉಪಾಧ್ಯಾಯರು ಸ್ವಾಗತಿಸಿದರಲ್ಲದೆ ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು.

ಶತಮಾನೋತ್ಸವ— ಡಾ| ಎಂ. ವಿಶ್ವೇಶ್ವರಯ್ಯನವರ ಶತಮಾನೋತ್ಸವವನ್ನು ತಾ 15ರಲ್ಲಿ ಉಡುಪಿ ಗ್ರಾಮ ಗುಡಿಕೈಗಾರಿಕಾ ಸಂಘದ ನೇತೃತ್ವದಲ್ಲಿ ಶ್ರೀ ಎ. ಜೆ. ಆಲ್ಸೆಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಬಡಬಗ್ಗರಿಗೆ ದಾನ— ಮುಲ್ಕಿಯ ದಿವಂಗತ ಶ್ರೀ ಕೆ. ಎಮ್. ಸೋಮ ಸಾಮಕಾರರು ಕಳೆದ 20 ವರ್ಷಗಳ ಹಿಂದೆ ಶ್ರೀಕೃಷ್ಣಜಯಂತಿಯ ಕಾಲದಲ್ಲಿ ಹರಿಜನ ಮತ್ತು ಬಡಬಗ್ಗರಿಗೆ ಉಪ್ಪು ಮತ್ತು ಎಣ್ಣೆಯನ್ನು ಧರ್ಮಾರ್ಥವಾಗಿ ಹಂಚುವ ಪದ್ಧತಿಯನ್ನು ಅವರ ನೆನಪಿಗಾಗಿ ಅವರ ಪುತ್ರ ಶ್ರೀ ಎಮ್. ಕೆ. ಶ್ರೀನಿವಾಸನವರು ತಾ. 11ರಲ್ಲಿ ಜರಗಿಸಿದರು. ನೂರಾರು ಎರುಡೂವರೆನೂರಿ ಬಡಬಗ್ಗರಿಗೆ ಉಪ್ಪು, ಎಣ್ಣೆ ಹಂಚಲಾಯಿತು.

ಶ್ರೀ ಎಂ. ವಿ.ರವರ ಭಾವಚಿತ್ರ ಅನಾವರಣ— ಮಂಗಳೂರಿನ ಸರಕಾರೀ ಕಾಲೇಜಿನಲ್ಲಿ ಡಾ| ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರವನ್ನು ಮೈಸೂರು ಹೈಕೋರ್ಟಿನ ನ್ಯಾಯಮೂರ್ತಿ ಶ್ರೀ ಹಟ್ಟಿಯವರು ಶ್ರೀನಿವಾಸರಾಯರು ತಾ. 17ರಂದು ಅನಾವರಣಗೈದರು. ಅಲ್ಲದೆ ಡಾ| ವಿಶ್ವೇಶ್ವರಯ್ಯನವರ ಶತಮಾನೋತ್ಸವದ ನಿಮಿತ್ತ ಕಾಲೇಜಿನವರು ಏರ್ಪಡಿಸಿದ ಸ್ಪರ್ಧೆಗಳಲ್ಲಿ ವಿಜಯಿಗಳಾದವರಿಗೆ ಬಹುಮಾನಗಳನ್ನೂ ಹಂಚಿದರು.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ— ಮೈಸೂರಿನ ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ತಾ. 15ರಂದು ಸರ್. ವಿಶ್ವೇಶ್ವರಯ್ಯನವರ ಶತಮಾನೋತ್ಸವವನ್ನು ಆಚರಿಸಲಾಯಿತು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಎಂ. ಎಸ್. ಶ್ರೀ ಕಂಠಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀ ರಘುನಾಥ ಪೈಯವರ ಪ್ರಾರ್ಥನೆಯಾದ ನಂತರ ನಿಲಯದ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಸ್ವಾಗತ ಭಾಷಣ ಮಾಡಿದರು.

ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ. ಡಿ. ನರಸಿಂಹಯ್ಯನವರು ಭಾಷಣ ಮಾಡಿ ಸರ್. ಎಂ. ವಿಶ್ವೇಶ್ವರಯ್ಯನವರು ಸಾಧಿಸಿದ ಮಹತ್ಕಾರ್ಯಗಳನ್ನು ಪ್ರಶಂಸಿಸಿ ವಿದ್ಯಾರ್ಥಿಗಳು ಅವರ ಆದರ್ಶವನ್ನು ಪಾಲಿಸಬೇಕೆಂದರು.

ಅಧ್ಯಕ್ಷರ ಭಾಷಣವಾದ ನಂತರ ಕಾರ್ಯದರ್ಶಿ ಶ್ರೀ ತಿಮ್ಮಪ್ಪ ಭಂಡಾರಿಯವರು ವಂದನೆಗಳನ್ನರ್ಪಿಸಿದರು.

ಮೈಸೂರು ಪತ್ರಿಕೋದ್ಯೋಗಿಗಳ ಸಭೆ— ಮೈಸೂರು ನಗರದ 'ಪತ್ರಿಕೋದ್ಯೋಗಿಗಳ ಸಂಘದ ಸಭೆಯು ತಾ 18ರಂದು ಅದರ ಅಧ್ಯಕ್ಷರಾದ ಶ್ರೀ ಎ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ಜರಗಿ ಮೈಸೂರು ನಗರದಲ್ಲಿ ಸುದ್ದಿಕಾಗದ ಉಪಕಛೇರಿ ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸಮಾಡುವಂತೆ ಕೆಲ ಸಲಹೆಗಳನ್ನಿತ್ತರು.

ಧರ್ಮಾರ್ಥ ಅಕ್ಕಿ ಮತ್ತು ಮೊಬಲಗು ವಿತರಣೆ— ಮಾಡುವ ಕಾರ್ಯಕ್ರಮವನ್ನು ಶ್ರೀ ನಾಗಾಳ ಉಪೇಂದ್ರ ಶ್ರೀನಿವಾಸನಾಯ್ಕರು ಈ ವರ್ಷ ಇದೇ ತಾ 25ನೇ ಆದಿತ್ಯವಾರ ಮಾಡಿಕೆಯ ಪ್ರಮಾಣದಲ್ಲಿ ಉಡುಪಿ ನಾಗಾಳ ನಾಯಕ್ ಬ್ಯಾಂಕ್ ವಠಾರದಲ್ಲಿ ಜರಗಿಸುವರು.

ಕಲ್ಯಮುಂಡ್ಕೂರು— ಬೋರ್ಡು ಶಾಲೆಯ ಎ ಶಾಲಾ ಕಮಿಟಿಯವರು ನೂತನ ಬಿಲ್ಡಿಂಗ್ ರಾ. ಪಿ. ಯೋಜನಾ ಇಲಾಖೆಯ ಸಂಚ್ಯಾರ್ಥ ಫಂಡಿನ, ವಾಗೂ ಊರವರ ಧನ ಸಹಾಯ ಹಾಗೂ ಪ್ರೋತ್ಸಾಹದಿಂದ ನೂತನ ಬೆಟ್ಟು ಶ್ರೀ ಶ್ರೀಧರ ಪಡಿವಾಳರು ಧರ್ಮಾರ್ಥವಾಗಿ ಬಿಟ್ಟುಕೊಟ್ಟ ಸ್ಥಳದಲ್ಲಿ ಹೊಸ ಶಾಲಾ ಕಟ್ಟಡದ ಉದ್ಘಾಟನೆ ಸಮಾರಂಭವು ತಾ 17—9—60ರಂದು ಶ್ರೀ ಎಂ. ಡಿ. ಆತಿಕಾರಿಯವರ ಅಧ್ಯಕ್ಷತೆಯಲ್ಲಿ ಕುಂದಾಪುರ ಅಸಿಸ್ಟೆಂಟ್ ಕಮಿಶನರಾದ ಶ್ರೀಯುತ ನರಸಿಂಹ ಮೂರ್ತಿ ಐ. ಎ. ಎಸ್. ಇವರ ಹಸ್ತದಿಂದ ಉದ್ಘಾಟಿಸಲಾಯಿತು. ಶಾಲಾ ಕಮಿಟಿಯ ಅಧ್ಯಕ್ಷರಾದ ಶ್ರೀ ಶ್ರೀಧರ ಪಡಿವಾಳರು ಸ್ವಾಗತ ಭಾಷಣ ಗೈದರು. ಅಧ್ಯಕ್ಷರ ಭಾಷಣದನಂತರ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ರಾಜಾಪುರ ಸಾರಸ್ವತ ಸಂಘ, ಮುಂಬಯಿ— ವಿಜ್ಞಾನದಲ್ಲಿ ಉಚ್ಚ ಪದವಿ (Ph. D.)ಯನ್ನು ಗಳಿಸುವುದಕ್ಕಾಗಿ ಕೌನ್ಸಿಲ್ ಒಫ್ ಸೈಂಟಿಫಿಕ್ ಇಂಡಸ್ಟ್ರಿಯಲ್ ರಿಸರ್ಚ್, ಭಾರತ ಸರ್ಕಾರ, ಇದರಿಂದ ಅರಿಸಿ ಬಂದು, ಅಮೇರಿಕಾದ ಟೆಕ್ಸಾಸ್ ಯೂನಿವರ್ಸಿಟಿಗೆ ತೆರಳಲಿರುವ ನಮ್ಮ ಸಂಘದ ಸದಸ್ಯರೂ ಹೊಸಮಾರು ಶ್ರೀ ರಾಮರಾಯ ಪ್ರಭುರವರ ಸಹೋದರರೂ ಆದ ಶ್ರೀ ಪಿ. ಶಂಕರ ಪ್ರಭು ಇವರನ್ನು ತಾ. 8—9—60ರಲ್ಲು ಸಂಘದ ವತಿಯಿಂದ ಶ್ರೀ ಯನ್. ವಿ. ನಾಯಕ್‌ರವರ ಅಧ್ಯಕ್ಷತೆಯಲ್ಲಿ ಸತ್ಕರಿಸಲಾಯಿತು. ಗೌ. ಕಾರ್ಯದರ್ಶಿ ಶ್ರೀ ಪಿ. ಡಿ. ಪ್ರಭುರವರಿಂದ ಸ್ವಾಗತಿಸಿದ ಬಳಿಕ ಅತಿಥಿಯವರು ಉಚಿತ ಉತ್ತರಿಸಿದರು ಸಭಿಕರ ಭಾಷಣವಾದ ಮೇಲೆ ಲಘು ಉಪಹಾರದೊಂದಿಗೆ ಸಭೆಯು ಮುಕ್ತಾಯವಾಯಿತು. ಶ್ರೀ ಪ್ರಭುರವರು ತಾ. 11—9—60ರಲ್ಲು ವಾಯುಮಾರ್ಗವಾಗಿ ಅಮೇರಿಕಕ್ಕೆ ತೆರಳಿದರು.

ಅಕಾಲ ನಿವಾರಣೆಗೆ ಯೋಜನೆ

ಮೈಸೂರಿನ ಉತ್ತರದ ಜಿಲ್ಲೆಗಳಲ್ಲಿ ಆಗಾಗ ತಲೆದೋರುತ್ತಿರುವ ಬರಗಾಲವನ್ನು ಎದುರಿಸಲು ಹಲವಾರು ಕಾರ್ಯಕ್ರಮಗಳು ಯೋಜಿತವಾಗಲಿವೆ. ಅವುಗಳಲ್ಲಿ ಕೃಷ್ಣಾ ಗೋದಾವರೀ ನದಿಗಳ ನೀರಿನಲ್ಲಿ ನ್ಯಾಯೋಚಿತ ಪಾಲನ್ನು ಪಡೆದುಕೊಳ್ಳುವುದೂ ಒಂದಾಗಿದೆ. ಕೃಷ್ಣಾ ನದೀ ಕೊಳ್ಳದಲ್ಲಿ ೩೭೭ ಲಕ್ಷ ಎಕ್ರೆ ಜಮೀನಿದ್ದು ಇದರಲ್ಲಿ ೧೭೭ ಲಕ್ಷ ಎಕ್ರೆ ಮೈಸೂರಿನದಾಗಿದೆ. ಆದರೂ ಸದ್ಯ ಮೈಸೂರಿಗೆ ಸೇ. ೩೭ ರಷ್ಟು ನೀರು ಮಾತ್ರ ದೊರೆಯುತ್ತಿದೆ. ಆದುದರಿಂದ ತನಗೆ ಈ ನದಿಯ ನೀರಿನಲ್ಲಿ ೪೮ ಸೇ. ಸಿಗಬೇಕೆಂಬುದು ಮೈಸೂರಿನ ವಾದ. ರಾಜ್ಯದಲ್ಲಿ ಅತಿ ಕಡಿಮೆ ಮಳೆ ಬೀಳುವ ಪ್ರದೇಶವೂ ಇಲ್ಲಿರುವುದರಿಂದ, ಈ ಬಗ್ಗೆ ನ್ಯಾಯವಾದ ಒಂದು ತತ್ವಕ್ಕನುಸಾರವಾಗಿ ಸಂಬಂಧಿತ ರಾಜ್ಯಗಳೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂಬ ಗೊತ್ತುವಳಿಯೊಂದನ್ನು ವಿಧಾನ ಸಭೆಯು ಸ್ವೀಕರಿಸಿದೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C No 199/60.

ಕೆ. ರಾಮಕೃಷ್ಣ ರಾವ್ —ವಾದಿ.

ಬಾಬು ಯಾನೆ ಪೂವಣಿ ಪೂಜಾರಿ. ಕಾಂತಪ್ಪ ಹೆಂಗ್ಸಿನ ಮಗ ಬೆಳ್ತಂಗಡಿ ತಾಲೂಕು ಕಡಿರುದ್ಯಾವರ ಗ್ರಾಮದ ಕೊಂಬರೊಡಿ—

—ಪ್ರತಿವಾದಿ.

ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ.

ಡಿ. ನ್ಯೊ. ನೋಟಿನ ಬಾಬ್ತು ಬರತಕ್ಕ ಹಣದವಸೂಲಿಗೋಸ್ಕರ ಮಾಡಿದ ಈ ದಾವೆಯು ತಾ. 1—10—60ಕ್ಕೆ ಇರುವುದರಿಂದ ನೀವುಗೇನಾದರೂ ಆಕ್ಷೇಪಣೆಯಿದ್ದಲ್ಲಿ ಆ ದಿವಸ ಉಪಸ್ಥಿತಿಸಿ ಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao·
Vakil for Plaintiff.

ಪುತ್ತೂರು ತಾರೀಖು 13—9—1960.

ಏಲಂ ನೋಟೀಸು.

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಬಜಪೆ, ದ. ಕ.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ರಿಜಿಸ್ಟ್ರ ನೋಟೀಸು ಕೊಟ್ಟಲ್ಲಿ ಸಹಾ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರು ಈಡಿಟ್ಟ ಈ ಕೆಳಗೆ ತಪಶೀಲು ಕಾಣಿಸಿದ ನಗಗಳನ್ನು ಬರುವ ತಿಂಗಳ ತಾರೀಕು 5—10—'60ರ ಒಳಗೆ ಬಿಡಿಸದಿದ್ದಲ್ಲಿ ತಾರೀಕು 8—10—'60ರಲ್ಲು ಅಪರಾಹ್ನ ಗಂಟೆ 1—00ಕ್ಕೆ ಸರಿಯಾಗಿ ಮೇಲ್ಕಾಣಿಸಿದ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಸದ್ರಿ ತಾರೀಕಿಗೆ ಏಲಂ ಮಾಡ ಲಸಾಧ್ಯವಾದಲ್ಲಿ ಸದ್ರಿ ಏಲಮನ್ನು ಪುನಃ ನೋಟೀಸು ಕೊಡದೇನೇ ಬೇಂಕಿಗೆ ಯುಕ್ತ ಕಂಡ ಇನ್ನಿತರ ದಿನಗಳಲ್ಲಿ ಮುಂದುವರಿಸಲಾದೀತು.

ನಗಗಳ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
34/1245	ಗುಡ್ಡಪ್ಪ ಹೆಗ್ಡೆ, ನಾರಾಯಣ ಹೆಗ್ಡೆಯವರ ಅಳಿಯ, ಅವರ ಮನೆ, ಎಕ್ಕಾರು ಗ್ರಾಮ, ಎಕ್ಕಾರು ಪೋಸ್ಟು. ಇವರು ಈಡಿಟ್ಟ ತಾತಿ ಒಂದು, ಉಂಗುರ ಒಂದು.	Rs. 30/=
34/1314	ಗುಡ್ಡಪ್ಪ ಹೆಗ್ಡೆ, ನಾರಾಯಣ ಹೆಗ್ಡೆಯವರ ಅಳಿಯ, ಅವರ ಮನೆ, ಎಕ್ಕಾರು ಗ್ರಾಮ, ಎಕ್ಕಾರು ಪೋಸ್ಟು. ಇವರು ಈಡಿಟ್ಟ ಕಂಟ್ಲೆ ಒಂದು.	,, 120/=
35/994	ಬಿ. ಹಮ್ಮಬ್ಬ, ಇಬ್ರಾಹಿಮ್ ಬ್ಯಾರಿಯವರ ಮಗ, ಬಡಗ ಬೆಳ್ಳೂರು, ಕೊಂಚಿಲ್ ಮನೆ, ಬೆಳ್ಳೂರ್ ಪೋಸ್ಟು. ಇವರು ಈಡಿಟ್ಟ ಉಂಗುರ ಒಂದು.	,, 30/=
35/1515	ವೆಂಕಪ್ಪ ಆಳ್ವ, ಕೊರಗ ಆಳ್ವರ ಮಗ, ಕೌಡೂರು ದೊಡ್ಡ ಮನೆ, ಕಿನ್ನಿ ಕಂಬಳ ಪೋಸ್ಟು. ಇವರು ಈಡಿಟ್ಟ ಚೈನು ಒಂದು, ಪಂಚುಸರ ಒಂದು.	,, 115/=

Office of the Catholic Bank Ltd.
Bajpe, S. K.
Dated 19—9—60.

(Sd.) E. D'Cunha,
Agent.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O S 404/59· R·E·P 230/60.

ಹಮೀದ್ ಅಲಿಚಿನ್ನಾಡ್—ಅರ್ಜಿದಾರ ವಾದಿ

ಮೈದಿನ್ ಕುಂಞ ಬ್ಯಾರಿ ಕೂಡಾ ೨ಪ್ರತಿವಾದಿಗಳು 2ನೆ ಎದ್ರಿ ಅಬ್ಬುಬಕ್ಕರ್ ಬ್ಯಾರಿ ಕುಂಜಾರು ಮಹಮ್ಮದ್ ಬ್ಯಾರಿ ಮಗ.. ಬೆಳ್ಳಾರೆ ಕಸಬೆ ಯಲ್ಲಿ—

ಸದ್ರಿ ಅಮಲ್ಜಾರಿಯಲ್ಲಿ ಎದ್ರಿಗೆ ವಾರಂಟಿಗೆ ಹುಕುಂ ಅಪೇಕ್ಷಿಸಿದ್ದು ಅದರ ವಾರಂಟಿನ ಕುರಿತು ನೋಟೀಸಿನ ವ್ಯಾದೆ ತಾರೀಕು 6—10—1960ಕ್ಕೆ ಇಟ್ಟಿರುತ್ತದೆ. ಅವ್ಯಾದೆಗೆ ಸದ್ರಿ 2ನೆ ಎದ್ರಿಯು ತನ್ನ ಆಕ್ಷೇಪವೇನಾದರೂ ಹೇಳುವುದಿದ್ದರೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜ್ರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದರೆ ಆತನನ್ನು ಗೈರಹಾಜರುಯೆಂತ ಮಾಡಿ ಅಮಲ್ಜಾರಿಯನ್ನು ಮುಂದುವರಿಸಲಾದೀತು ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

(Sd·) B· L· N· Rai,
Advocate for Petitioners.

ಪುತ್ತೂರು, ತಾರೀಕು 14-9-60.

ಬೇಕಾಗಿದ್ದಾರೆ

ಕನಿಷ್ಠ ಒಂದೆರಡು ವರ್ಷಗಳ ಮಾಹಿತಿ ಇರುವ ಕಂಪೋಸಿಟರ್ ಮತ್ತು ಬೈಂಡರರು ಬೇಕಾಗಿದ್ದಾರೆ,

ಅಲ್ಲದೆ ಕಂಪೋಸಿಂಗ್, ಬೈಂಡಿಂಗ್ ಮೊದಲಾದ ವಿಭಾಗಗಳಲ್ಲಿ ಕಲಿಬೇಕಿತಬಗ್ಗೆ ಕೆಲವು ಹುಡುಗರನ್ನೂ ಸೇರಿಸಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ತಾಲೂಕು ಬೋರ್ಡು ಚುನಾವಣೆಯಲ್ಲಿ

ಕಾಂಗ್ರೆಸಿಗೇನೇ ಮತವೀಯಿರಿ

ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈ ಅವರ ವಿನಂತಿ.

ಜನತೆಯ ಇಚ್ಛೆಯಂತೆ ಪ್ರಜಾಸತ್ತೆ ನಡೆಯಬೇಕು. ಇದಕ್ಕಾಗಿ ಜನರೆಲ್ಲರ ಅಭಿಲಾಷೆಯು ಆಡಳಿತೆಯಲ್ಲಿ ಪ್ರತಿಬಿಂಬಿತವಾಗಿರಬೇಕು. ರಾಜ್ಯದ ಆಡಳಿತೆಯಲ್ಲಿ ಅತ್ಯಧಿಕ ಜನರು ಭಾಗವಹಿಸುವುದರಿಂದ, ರಾಷ್ಟ್ರಾಭಿವೃದ್ಧಿಯ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಸಮರ್ಪಕತೆಯು ತೋರಿಬರುವುದು ಸಾಧ್ಯವಾಗುವುದು. ಇದಕ್ಕಾಗಿ, ಕಾಂಗ್ರೆಸ್ ಸರಕಾರವು ಪಂಚಾಯತ ರಾಜ್ಯ ಸ್ಥಾಪಿಸುವ ನಿರ್ಧಾರಕ್ಕೆ ಬಂದಿದೆ.

ಗ್ರಾಮವನ್ನೇ ಮುಖ್ಯ ಘಟಕವನ್ನಾಗಿಟ್ಟು, ಕ್ರಮವಾಗಿ [ತಾಲೂಕು, ಜಿಲ್ಲೆ, ರಾಜ್ಯಮಟ್ಟದಲ್ಲಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲಾಗುವುದು. ಇದರಿಂದ ಪ್ರತಿ ಗ್ರಾಮದ ಜನರಿಗೂ ತಂತಮ್ಮ ಆವಶ್ಯಕತೆಗಳಾವುವೆಂದು ಕಂಡುಕೊಂಡು, ಅವನ್ನು ಪೂರೈಸಿಕೊಳ್ಳುವ ಅವಕಾಶವು ಬರುವುದು. ಸರಕಾರವೂ ತನ್ನ ಆದಾಯದಲ್ಲಿ ಒಂದಂಶವನ್ನು ಈ ಸ್ಥಳೀಯ ಸಂಸ್ಥೆಗಳಿಗೀಯುವುದು. ಪ್ರತಿ ತಾಲೂಕಿನಲ್ಲೂ ಆ ತಾಲೂಕಿನ ಜನತೆಯಿಂದ ಚುನಾಯಿತರಾದ ಪ್ರತಿನಿಧಿಗಳಿರುವ ತಾಲೂಕು ಬೋರ್ಡು ಕೂಡ ಸ್ಥಳೀಯ ಸಂಸ್ಥೆಗಳಲ್ಲಿ ಮಹತ್ವಪೂರ್ಣವಾದುದು.

ನಮ್ಮ ಜಿಲ್ಲೆಯಲ್ಲಿ ತಾಲೂಕು ಬೋರ್ಡಿಗೆ ನಡೆಯತಕ್ಕ ಚುನಾವಣೆಗಳು ಸಮೀಪಗತವಾಗುತ್ತಿವೆ. ಅಕ್ಟೋಬರ ೫ರಂದು ಬಂಟ್ವಾಳ ಮತ್ತು ಕುಂದಾಪುರ, ೮ರಂದು ಉಡುಪಿ ಮತ್ತು ಪುತ್ತೂರು, ಹಾಗೂ ೧೧ರಂದು ಮಂಗಳೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಇವು ಜರಗುವುವು. ಚುನಾವಣೆಯಲ್ಲಿ ಯೋಗ್ಯರನ್ನೂ ಸಮರ್ಥರನ್ನೂ, ಜನಹಿತ ಚಿಂತಕರನ್ನೂ ಆರಿಸಿ ಕಳುಹಿಸ ಬೇಕಾದುದು ನಾಗರಿಕರ ಹೊಣೆಗಾರಿಕೆಯಾಗಿದೆ ಜವಾಬ್ದಾರಿಯರಿತ ಹೊಣೆಗಾರ ವ್ಯಕ್ತಿಗಳೇ ತಾಲೂಕು ಬೋರ್ಡಿನ ಸದಸ್ಯರಾಗಿ ಆರಿಸಿ ಬರುವಂತೆ ನೋಡಿಕೊಳ್ಳುವುದರಿಂದ ತಾಲೂಕಿನ ಭಾಗ್ಯ ಕಣ್ಣು ತೆರೆದೀತು.

ವೈಯಕ್ತಿಕವಾಗಿ ಸಮರ್ಥರಾದವರಾದರೂ ಚುನಾವಣೆಗೆ ನಿಂತರೆ, ಅದರಿಂದ ಕೆಲವೊಂದು ಅನಪೇಕ್ಷಿತ ಕಹಿ ಪ್ರಸಂಗಗಳು ತಲೆದೋರುವ ಸಂಭವವಿರುವುದನ್ನು ಕಂಡುಕೊಂಡ ಕಾಂಗ್ರೆಸ್ ಪಕ್ಷದ ನೆಲೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿತು. ಇದಾವಕಾರಣದಿಂದಲೋ, ಉಳಿದ ರಾಜಕೀಯ ಪಕ್ಷಗಳು ಹೀಗೆ ಮಾಡಲಿಲ್ಲ. ಜಿಲ್ಲೆಯ ವಿವಿಧ ತಾಲೂಕು ಬೋರ್ಡುಗಳ ೧೨೯ ಸ್ಥಾನಗಳಿಗೂ ಕಾಂಗ್ರೆಸ್ಸು ತನ್ನ ಉಮೇದ್ವಾರರನ್ನು ನಿಲ್ಲಿಸಿದ್ದು, ಅವುಗಳಲ್ಲಿ ಕೆಲವಾರು ಸ್ಥಾನಗಳನ್ನು ಈಗಾಗಲೇ ಅವಿರೋಧವಾಗಿ ಕಾಂಗ್ರೆಸ್ಸು ಗಳಿಸಿದೆ. ಚುನಾವಣೆಗಳಲ್ಲಿಯಾದರೂ ಕಾಂಗ್ರೆಸಿಗೆ ಎದುರಾಟ ಹೇಳಿಕೊಳ್ಳುವಷ್ಟು ಬಲವಿಲ್ಲವಾದುದರಿಂದ ಎಲ್ಲೆಡೆಯೂ ಕಾಂಗ್ರೆಸ್ಸು ಬಹುಮತ ಪಡೆಯುವುದು ಖಂಡಿತವೇ. ಕಾಂಗ್ರೆಸಿನ ಕೈಯಲ್ಲಿ ತಾಲೂಕುಬೋರ್ಡುಗಳ ಆಡಳಿತೆ ಬಂ[illegible] ನಿಯಮಗಳಿಗನುಸಾರವಾಗಿ ಬೋರ್ಡಿನ ಅಧ್ಯಕ್ಷರು ಹಾಗೂ ಅದರ ಕಾಂಗ್ರೆಸ್ ಸದಸ್ಯರಿಗೆ ತಕ್ಕ ಸಲಹೆ ಸೂಚನೆಗಳನ್ನು ಕೊಟ್ಟು, ಯಥಾಯೋಗ್ಯ ರೀತಿಯಲ್ಲಿ ಆಯಾ ತಾಲೂಕಿನ ಅಭಿವೃದ್ಧಿ ಕಾರ್ಯಗಳು ನಡೆಯುವಂತೆ ನೋಡಿಕೊಳ್ಳಲು ಸುಲಭವಾಗುವುದು. ಸ್ವತಂತ್ರ ಸದಸ್ಯರಿಗೆ ಯಾವುದೇ ವಿಧದ ಬಂಧನಗಳಿಲ್ಲದಿರುವುದರಿಂದ ಅಂತಹರ ಕೈಯಲ್ಲಿ ಆಡಳಿತ ಸೂತ್ರ ಸರಿಯಾಗಿ ಕೆಲಸಮಾಡಲಾರದು. ಈ ಕಾರಣದಿಂದ ಪ್ರಚಂಡ ಬಹುಮತದಿಂದ ಎಲ್ಲೆಲ್ಲೂ ಕಾಂಗ್ರೆಸ್ ಉಮೇದ್ವಾರರೇ ಚುನಾವಣೆಗಳಲ್ಲಿ ಗೆದ್ದುಬರುವಂತೆ ನೋಡುವ ಹೊಣೆಗಾರಿಕೆ ಜನತೆಗೆ ಸೇರಿದುದು. ಇದನ್ನವರು ತಿಳಿದು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುವುದು ಅತ್ಯವಶ್ಯ.

ಕ್ಷಯನಿರೋಧ

ಟಿ. ಬಿ. ಮುದ್ರೆಗಳನ್ನು ಕೊಂಡುಕೊಳ್ಳಿರಿ

ಭಾರತದ ಕ್ಷಯರೋಗ ಸಂಘವು ಹನ್ನೊಂದು ವರ್ಷಗಳಿಗೆ ಮೊದಲು ಆರಂಭಿಸಿದ ಕ್ಷಯರೋಗ ಮುದ್ರೆ ಮಾರಾಟದ ಆಂದೋಲನವು ಸರಕಾರೇತರ ಚಟುವಟಿಕೆಯಾಗಿ ಕ್ಷಯರೋಗ ನಿರೋಧಕ್ಕೆ ಬಹು ಪ್ರಚೋದನೆ ನೀಡಿದೆ. ಈ ಚಳವಳವು ರಾಜ್ಯ ಸಂಘಗಳ ನೇತೃತ್ವದಲ್ಲಿ ನಡೆಯುತ್ತದೆ. ಆರೋಗ್ಯ ಶಿಕ್ಷಣ ಮತ್ತು ಕ್ಷಯರೋಗ ನಿರೋಧ ಕಾರ್ಯಗಳಿಗಾಗಿ ಸಾಕಷ್ಟು ಹಣ ಸಂಗ್ರಹಿಸುವುದೇ ಈ ಚಳವಳಿಯ ಉದ್ದೇಶ. ಸಾರ್ವಜನಿಕರ ಮತ್ತು ಉದ್ಯಮಿಗಳ ಸಹಾಯದಿಂದ ಈ ಚಳವಳವು ಯಶಸ್ವಿಯಾಗಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು, ಸೇವಾ ಸಂಸ್ಥೆಗಳು, ವಿದ್ಯಾರ್ಥಿ ಕೂಟಗಳು, ಸಾಮಾಜಿಕ ಸಂಘಗಳು ಇದರಲ್ಲಿ ಉತ್ಸಾಹವನ್ನು ತೋರಿಸಿ, ರಾಜ್ಯ ಸಂಘಗಳೊಡನೆ ಸಹಕರಿಸಲು ಮುಂದಾಗಿವೆ. ಕೆಲವು ರಾಜ್ಯಗಳಲ್ಲಿ ಟಿ. ಬಿ. ಸಂಘವು ಉಪಸಮಿತಿಗಳನ್ನು ರಚಿಸಿಕೊಂಡು ಕಾರ್ಯ ಸಾಗಿಸುತ್ತಿದೆ.

ರಾಜ್ಯಸಂಘಗಳು ಹಿಂದಿನ ಚಳವಳಗಳ ಅವಧಿಯಲ್ಲಿ ಸಂಗ್ರಹಿಸಿದ್ದ ಹಣವನ್ನು ಕ್ಷಯರೋಗಿಗಳ ಆರೈಕೆ, ಜಿಲ್ಲೆಗಳ ಟಿ. ಬಿ. ಕೆಲಸಗಳು, ಟಿ. ಬಿ. ವಾರ್ಡುಗಳಲ್ಲಿ ಹಾಸಿಗೆಗಳ ಹೆಚ್ಚಳ ಮೊದಲಾದ ಕಾರ್ಯಗಳಲ್ಲಿ ವಿನಿಯೋಗಿಸಿದೆ.

೧೧ನೆಯ ಕ್ಷಯರೋಗ ಮುದ್ರಾ ವಿಕ್ರಯಾಂದೋಲನವು ಗಾಂಧೀ ಜಯಂತಿ (ಅಕ್ಟೋಬರ ೨)ರಂದು ಪ್ರಾರಂಭವಾಗಿ ಪ್ರಜಾಪ್ರಭುತ್ವದಿನ (ಜನವರಿ ೨೬)ರಂದು ಮುಕ್ತಾಯಗೊಳ್ಳುವುದು. ಈ ಬಾರಿಯೂ ಜನತೆಯಿಂದ ಟಿ. ಬಿ. ಮುದ್ರೆಗಳಿಗೆ ಹೆಚ್ಚಿನ ಬೇಡಿಕೆ ಬರಬಹುದೆಂಬ ವಿಶ್ವಾಸವಿದೆ ಟಿ. ಬಿ. ಮುದ್ರೆಯ ಚಿತ್ರವು ಪ್ರತಿ ವರ್ಷವೂ ಬದಲಾವಣೆ ಹೊಂದುತಿದ್ದು, ಈ ವರ್ಷ ಹಕ್ಕಿಯೊಂದು ತನ್ನ ಮರಿಗೆ ಆಹಾರ ತಿನ್ನಿಸುವ ಆಕರ್ಷಕ ಚಿತ್ರವಿರುವುದು. ಪತ್ರ, ಪಾರಿತೋಷಕಗಳ ಮೇಲೆ ಹಚ್ಚಲು ಇವು ಯೋಗ್ಯವಿವೆ. ಅಕ್ಟೋಬರ ೨ನೆ ದಿನಾಂಕದಿಂದ ಈ ವರ್ಷವೂ ಟಿ. ಬಿ. ಮುದ್ರೆಗಳನ್ನು ಮಾರಲು ತೊಡಗಲಾಗುವುದು. ಪ್ರತಿ ಮುದ್ರೆಯ ಬೆಲೆ ಕೇವಲ ಹತ್ತು ನಯೇ ಪೈಸೆಗಳು.

ಸಾರ್ವಜನಿಕರೆಲ್ಲರೂ ಹತ್ತು ನಯೇ ಪೈಸೆ ಬೆಲೆ ಬಾಳುವ ಟಿ. ಬಿ. ಮುದ್ರೆಗಳನ್ನು ಕೊಂಡುಕೊಂಡು ದೇಶದ ಕ್ಷಯರೋಗ ನಿರೋಧ ಕಾರ್ಯದಲ್ಲಿ ತಮ್ಮ ಸಹಕಾರವೀಯುವರೆಂಬ ನಿರೀಕ್ಷೆಯಿದೆ.

ಸಿಂಹಳದಲ್ಲಿ ಭಾರತೀಯರು

ಎದುರಿಸಬೇಕಾಗಿ ಬಂದ ಹೊಸ ಸಮಸ್ಯೆ

ಸಿಲೋನಿನಲ್ಲಿ ಶ್ರೀಮತಿ ಭಂಡಾರನಾಯಿಕೆಯವರು ಪ್ರಧಾನಿಗಳಾದ ನಂತರವಾದರೂ ಸಿಂಹಳದಲ್ಲಿ ನೆಲಸಿರುವ ಭಾರತೀಯರ ಸಂಕಷ್ಟಗಳ ನಿವಾರಣೆಯಾಗಬಹುದೆಂದು ನೆನಸಿದ್ದರೆ, ಅನೇಕರ ಕೇವಲ ಕನಸಾಗಿ ಉಳಿಯುವ ಪ್ರಸಂಗವಲ್ಲಿ ನಡೆದಿದೆ. ಭಾರತೀಯರಿಗೆ ಮಾತ್ರವಲ್ಲ ಸಿಂಹಳೀಯೇತರರು ಅಲ್ಲಿ ದಿನದೂಡುವುದು ತುಸು ಪ್ರಯಾಸವೆನಿಸ ತೊಡಗಿದೆ. ಮೂರು ತಿಂಗಳುಗಳಿಗಿಂತ ಅಧಿಕ ಕಾಲ ಸಿಲೋನಿನಲ್ಲಿ ಉಳಿಯುವ ಎಲ್ಲ ವಿದೇಶೀಯ ವೀಸಾದಾರರೂ ವಾರ್ಷಿಕ ರೂ. ೪೦೦ ತೆರಿಗೆಯನ್ನೂ ವಿರಾಷ್ಟ್ರೀಯರು ನಡೆಸುವ ಪ್ರತಿ ಉದ್ದಿಮೆಗೆ ವಾರ್ಷಿಕ ರೂ. ೧,೦೦೦ ಕರವನ್ನೂ ತೆರಬೇಕೆಂದು ವಿಧಿಸುವ ಘೋಷಣೆಯೊಂದನ್ನು ಸಿಲೋನಿನ ಅರ್ಥ ಮಂತ್ರಿಗಳು ಮಾಡಿದ್ದಾರೆ. ಈ ಎರಡೂ ಘೋಷಣೆಗಳ ಪರಿಣಾಮವಾಗಿ ಸಾಮಾನ್ಯ ಆದಾಯವಿರುವ ಭಾರತೀಯರೆಲ್ಲರೂ ಸಿಲೋನನ್ನು ಅನಿವಾರ್ಯವಾಗಿ ತ್ಯಜಿಸಬೇಕಾಗುವುದು.

ಈಗ ಸುಮಾರು ೩೫ ಸಾವಿರದಷ್ಟು ವೀಸಾದಾರ ಭಾರತೀಯರು ಸಿಂಹಳದಲ್ಲಿರುವರೆಂದು ತಿಳಿಯುತ್ತದೆ. ಇವರಲ್ಲಿ ಕೆಲಮಂದಿ ಬಂಡವಳಶಾಹಿಗಳಿರಬಹುದಾದರೂ ಹೆಚ್ಚಿನವರು ಕರಣಿಕರು, ಗುಮಾಸ್ತರು, ಕ್ಷೌರಿಕರು ಮತ್ತು ಮಡಿವಳರಿರುತ್ತಾರೆ. ಇವರಲ್ಲಿ ಯಾರೊಬ್ಬನ ಉಳಿತಾಯವಾದರೂ ವಾರ್ಷಿಕ ರೂ. ೪೦೦ ಇರುವುದಿಲ್ಲ; ಕೆಲವರಲ್ಲಿ ಏನೂ ಉಳಿಯುವುದಿಲ್ಲ. ಆದರೂ ಅವರೆಲ್ಲರೂ ಈ ಹೊಸ ತೆರಿಗೆಯನ್ನು ತೆರಲೇಬೇಕಾಗಿ ಬಂದಿದೆ. ಸಣ್ಣ ಪುಟ್ಟ ಅಂಗಡಿ, ಚಹ ಹೋಟೆಲುಗಳ ಮೂಲಕರೂ ವ್ಯಾಪಾರ ನಡೆಸುವ ಸಲುವಾಗಿ ವಾರ್ಷಿಕ ರೂ. ೧,೦೦೦ವನ್ನು ಕೊಡಲೇಬೇಕು. ಇದರಿಂದ ಇವರಿಗೆ ತಾಳಲಾರದ ಪೆಟ್ಟು ಬಿದ್ದಂತಾಗಿದೆ. ಇವರಲ್ಲಿ ದುಡಿಯುವವನೂ ತಲಾ ರೂ.೪೦೦ ತೆರಬೇಕು. ಈಗ ವ್ಯಾಪಾರ ಪ್ರಾರಂಭಿಸುವಾಗ ಮಾತ್ರ ರಿಜಿಸ್ಟ್ರಿ ಹಾಸಲು ತೆತ್ತರೆ ಸರಿ; ಆದರೆ, ಇನ್ನು ಮುಂದೆ ಪ್ರತಿ ವರ್ಷವೂ ತೆರುತ್ತ ಇರಬೇಕಾಗುವುದು,

ಇದುವರೆಗೆ ೧೬ ವರ್ಷ ಪ್ರಾಯಕ್ಕೆ ಮೀರಿದ ಮಕ್ಕಳಿಗೆ ಮಾತ್ರ ಪ್ರತ್ಯೇಕ ವೀಸಾ ಇದ್ದು ಇದಕ್ಕಿಂತ ಕೆಳಗಿನವರದ್ದು ತಂದೆ ಅಥವಾ ತಾಯಿಯವರ ವೀಸಾದಲ್ಲೇ ಸೇರಿಸಲ್ಪಡುತಿತ್ತು. ಇನ್ನು ಮುಂದಿನ ಕತೆ ಹೇಗೆ ಎಂದು ಮಾತ್ರ ನಿಶ್ಚಿತವಾಗಿ ತಿಳಿದಿಲ್ಲ. ಅಲ್ಲದೆ, ಈ ಹೊಸ ವಿಧಾನದ ಕರ ಹೇರುವ ಕುರಿತಾಗಿ ನಿರ್ಧಾರ ಮಾತ್ರ ಹೊರಬಿದ್ದಿದ್ದು ಇದಕ್ಕೆ ಇನ್ನೂ ಹಲವಾರು ಸ್ಪಷ್ಟೀಕರಣಗಳು ಬೆಳಕು ಕಾಣಬೇಕಷ್ಟೆ. ಇಂಡಿಯನ್ ಮರ್ಕೆಂಟೈಲ್ ಚಾಂಬರಿನವರು ಈ ಬಗ್ಗೆ ಅರ್ಥ ಮಂತ್ರಿಯವರಿಗೆ ವರದಿಯನ್ನರ್ಪಿಸಲಿರುವರಂತೆ.

ಸದ್ಯ ಅರ್ಥ ಮಂತ್ರಿಗಳು ಇತ್ತ ಹೇಳಿಕೆಯಂತೆ ಸಿಂಹಳದ ನಾಗರಿಕರಲ್ಲದವರೆಲ್ಲರೂ ಈ ಕರವನ್ನು ತೆರಬೇಕಾಗುವುದು. ಆದರೂ ಸರಕಾರಿ ನೌಕರಿ, ಕಾರ್ಪೊರೇಶನ್‌ಗಳು, ಸ್ಥಳೀಯ ಸಂಸ್ಥೆಗಳು ಮತ್ತು ಸರಕಾರವು ಮಾನ್ಯಮಾಡಿದ ಬಂಡವಳವಿರುವ ವಿದೇಶೀಯ ವ್ಯಾಪಾರಿ ಸಂಸ್ಥೆಗಳ ಬಗ್ಗೆ ಮಾತ್ರ ವಿನಾಯತಿಯಿರುವುದು.

ಅಂತೂ ಸಿಂಹಳದ ಈ ಹೊಸ ಉಪಕ್ರಮವು ಅಲ್ಲಿ ನೆಲಸಿರುವ ವಿದೇಶೀಯರನ್ನು ದಂಗುಗೊಳಿಸಿದೆ.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

ಮೆಟ್ರಿಕ್ ತೂಕ ಮತ್ತು ಅಳತೆಗಳು

ದೊರೆಯುವ ಸ್ಥಳ: ಲೈಸೆನ್ಸ್ ಡೀಲರ್ಸ್

ಗುಂಡು ನಾಯಕ್ ಅಂಡ್ ಸನ್ಸ್

ಕಾರ್ ಸ್ಟ್ರೀಟ್, ಉಡುಪಿ (ಸೌ. ಕೆ.)

ಹೊಸತಾಗಿ ತೆರೆದಿರುವ ನಮ್ಮ ಹಿಂದುಗಡೆಯಲ್ಲಿರುವ ಗುಂಡು ನಾಯಕ್ಸ್ ಫೇಶನ್ ಎಂಪೋರಿಯಂ—ಜವಳಿ ಅಂಗಡಿಯನ್ನು ಸಂದರ್ಶಿಸಿರಿ.

ಶುದ್ಧ ಹರಟೆ

ಕಾಂಗ್ರೆಸ್ ಮಹಿಳಾ ಸಮ್ಮೇಳನಮ್

ಭಾರತದ ದಕ್ಷಿಣ ಮೂಲೆಯ ತಿರುವನಂತಪುರದಲ್ಲಿ ಕಾಂಗ್ರೆಸ್ ಮಹಿಳಾ ಸಮ್ಮೇಳನ ನಡೆದುದರಿಂದ, ರೊಚ್ಚಿಗೆದ್ದ ನವಯುವಕರು ತಮ್ಮೂರಲ್ಲೇ ಈ ಸಮ್ಮೇಳನ ನಡೆಯಲಿಲ್ಲವಲ್ಲಾ ಎಂದು ಕೈಕುಸಿದುಕೊಂಡರಂತೆ!

ಶ್ರೀ ಕುಂತಳಾಪ್ರಿಯ

ಸ್ತ್ರೀ ಮುಳೆಯಾಳವೆಂದು ಪ್ರಸಿದ್ಧವಾದ ಕೇರಳದತಿರುವನಂತಪುರದಲ್ಲಿಅಖಿಲಭಾರತ ಕಾಂಗ್ರೆಸ್ ಮಹಿಳಾ ಸಮ್ಮೇಳನವು ಶ್ರೀಮತಿ ಇಂದಿರಾ ಗಾಂಧಿಯವರ ಘನ ಅಧ್ಯಕ್ಷತೆಯಲ್ಲಿ ನಡೆಯಿತೆಂಬ ಸುದ್ದಿಯನ್ನು ನಾವು ಪತ್ರಿಕೆಗಳಿಂದ ಓದಿ ತಿಳಿದುಕೊಂಡು ಸಂತೋಷಪುಲಕಿತರಾದೆವು. ಈ ಸಮ್ಮೇಳನ ತಮ್ಮ ತಮ್ಮ ಊರಲ್ಲೇ ನಡೆಯಬೇಕಾಗಿತ್ತೆಂದು ಕಾಲೇಜಿನ ನವತರುಣ ವಿದ್ಯಾರ್ಥಿಗಳು, ಯುವಕರು, ಕಲಾಪ್ರಿಯರು, ಸೌಂದರ್ಯೋಪಾಸಕರು ಮತ್ತು ಬ್ರಹ್ಮಚಾರಿಗಳು ಬಯಸುವುದು ಸ್ವಾಭಾವಿಕವೇ ಆಗಿದೆ. ಎಂತಲೇ ಇನ್ನು ಮುಂದಕ್ಕಾದರೂ ಪ್ರತಿ ಊರಲ್ಲಿಯೂ ಕಡಿಮೆ ಪಕ್ಷ ಮಾಸಕ್ಕೊಂದಾವರ್ತಿ ಇಂತಹ ಸಮ್ಮೇಳನ ನಡೆಯಬೇಕೆಂದು ಅಪೇಕ್ಷೆ ಮುಂದಿಡಬಹುದು.

ಸಮ್ಮೇಳನದ ಮೆರವಣಿಗೆಯಲ್ಲಿ ಮೂರು ಸಾವಿರಕ್ಕೂ ಮಿಕ್ಕಿದ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದಲ್ಲದೆ, ಸಾವಿರಾರು ಮಹಿಳೆಯರು ನಡೆದುಕೊಂಡು ಬರುತ್ತಿದ್ದರಂತೆ. ಆ ಸಮಯದಲ್ಲಿ ಮಾರ್ಗದ ಇಕ್ಕಡೆಗಳಲ್ಲೂ ಹಿಂದೆಂದೂ ನೋಡದಷ್ಟು ಜನರು ಕಿಕ್ಕಿರಿದುಕೊಂಡಿದ್ದರಂತೆ. ಈ ವಾರ್ತೆಯನ್ನು ಪತ್ರಿಕೆಗಳಲ್ಲಿ ಓದಿದ ಅನೇಕ ಜನರ ಬಾಯಲ್ಲಿ, ಸಿಹಿ ಮಿಠಾಯಿಯನ್ನು ಹಾಕಿಕೊಂಡರೆ ನೀರೂರುವಂತೆ ಜೊಲ್ಲು ಇಳಿಯಿತೆಂಬುದನ್ನು ಕುಂತಳಾಪ್ರಿಯರು ಊಹಿಸಿಯೇ ಹೇಳಬಲ್ಲರು. ತಿರುವನಂತಪುರದ ಆ ಉಲ್ಲಾಸಮಯ ಸಮಾರಂಭವು ಇಲ್ಲಿನ ತರುಣರಲ್ಲಿ ತಾತ್ಕಾಲಿಕ ಉತ್ಸಾಹವನ್ನು ತುಂಬುವಷ್ಟು ಸಮರ್ಥವಾಗಿದೆ. ಅನೇಕರು ದೇವರಲ್ಲಿ ಮುಂದಾದರೂ ಈ ಸಮ್ಮೇಳನ ನಮ್ಮಲ್ಲಿ ನಡೆಯುವಂತಾಗಲೆಂದು ಹರಕೆ ಹೊತ್ತರೆಂದರೆ ಯಾರೂ ಅಚ್ಚರಿಪಡಬೇಕಾದುದಿಲ್ಲ.

'ಚಂದ್ರಮುಖ, ನಳಿನಮುಖ, ಕಮಲಮುಖ ಮತ್ತಿನ್ನಿತರ ಮುಖಗಳನ್ನು ಕಾಣುವ ಸುಯೋಗ ತಮಗೆ ತಪ್ಪಿತಲ್ಲ!' ಎಂದು ಕೊರಗುವ ಜನರು ನಮ್ಮಲ್ಲಿ ಖಂಡಿತಕ್ಕೂ ಇದ್ದಾರೆ; ಪೂರ್ಣ ಸೆರಗಳೆದ, ಅರೆಸೆರಗೆಳೆದ, ಮುಕ್ಕಾಲು ಮೇಲುದ ಹೊದ್ದ ಮತ್ತು ಸೆರಗೇ ಯಿಲ್ಲದ ತರತರದ ಹೆಣ್ಣುಗಳನ್ನು ಕಣ್ಣುತುಂಬಾ ಕಂಡು ಆನಂದಿಸುವ ಸುಸಂದರ್ಭ ತಮಗೊದಗಲಿಲ್ಲವಲ್ಲಾ! ಎಂದು ವ್ಯಥಿಸುವ ಜನರೂ ಇಲ್ಲದಿಲ್ಲ. ಸ್ವಯಂ ಕುಂತಳಾಪ್ರಿಯರಿಗೂ ಅದರ ಸವಿನೆನಪಾದಾಗ ಮೈ ರೋಮಾಂಚವೇಳಿತೆಂದರೆ ಇನ್ನು ಸಾಮಾನ್ಯರ ಪಾಡೇನು?

ಅರ್ಥಸಚಿವರೆ ಈ ಸಮ್ಮೇಳನದ ಉದ್ಘಾಟನೆಯನ್ನು ಮಾಡಿದರು. 'ಅವರೇ ಬಲು ಭಾಗ್ಯವಂತರು ಭಾರತದಲ್ಲಿ' ಎಂದ ನನ್ನ ಮಿತ್ರರೊಬ್ಬರು ಅಭಿಪ್ರಾಯಪಟ್ಟರು. ಕಾಂಗ್ರೆಸು ಮಹಿಳಾ ಸಮ್ಮೇಳನ ತಿರುವನಂತಪುರದಲ್ಲಿ ನಡೆದರೇನು? ಮಹಿಳಾ ಕಮ್ಯುನಿಸ್ಟ್ ಯಾ ಮಹಿಳಾ ಪಿ. ಯಸ್. ಪಿ. ಅಲ್ಲ ಸ್ವತಂತ್ರ ಸಮ್ಮೇಳನ ೧೯೬೦ರೊಳಗಾಗಿ ನಮ್ಮೂರಲ್ಲಿ ನಡೆಯದಿರಲಿಕ್ಕಿಲ್ಲವೆಂದು ಕೆಲ ನವಯುವಕರು ಆಶಾಬದ್ಧರಾಗಿ ಭವಿಷ್ಯದಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜಕೀಯದಲ್ಲಿ ಮಹಿಳೆಯರು ಸೇರಿಕೊಂಡರೆ ಅದರಲ್ಲಿಯ ಗುಂಪು ರಾಜಕೀಯ ಕೊನೆಗೊಳ್ಳಬಹುದೆಂದು ಅನೇಕ ರಾಜಕೀಯ ವೀಕ್ಷಕರ ನಿರೀಕ್ಷಣೆಯಾಗಿದೆ. ಉಂಡುಟೆಗೊಂಡು ಗಟ್ಟಿಯಾದ ಕಡಿವಾಣವಿದ್ದರೆ ಅದು ಯಾವ ರೀತಿ ಶಿಕ್ಷಾಬಟ್ಟು ಚಲಿಸಿದೋ ಅದೇ ರೀತಿ ರಾಜಕಾರಣಿಗಳು ಶಿಕ್ಷಾಬಟ್ಟು ಪುನಃಪರಿವರ್ತನೆಗೊಳ್ಳರೆಂದು ಈ ವೀಕ್ಷಕರು ಅಭಿಪ್ರಾಯಪಟ್ಟಂತಿದೆ.

ಮನೆಯಲ್ಲಿ ತಾಯಂದಿರು ಮನೆಗೆಲಸವನ್ನು ತನ್ನ ಮಗಳಿಗೆ ಹೇಳಿಕೊಟ್ಟಂತೆ ಮಗನಿಗೂ ಹೇಳಿಕೊಡಬೇಕೆಂದು ಶ್ರೀಮತಿ ಇಂದಿರಾ ಗಾಂಧಿಯವರು ಮಹಿಳೆಯರಿಗೆ ಉಪದೇಶವಿತ್ತುದನ್ನು ಇತ್ತೀಚೆಗೆ ಮದುವೆಯಾದ ಮಿತ್ರರೊಬ್ಬರು ಇದೊಂದು ಬಹಳ ಒಳ್ಳೆಯ ವಿಚಾರ. ತಾಯಂದಿರು ಅತ್ಯವಶ್ಯವಾಗಿ ಹೀಗೆ ಮಾಡಲೇಬೇಕು. ಮುಂದಾದರೂ ಆ ಗಂಡು ಮಕ್ಕಳು ಮದುವೆಯಾದ ಮೇಲೆ ನನ್ನಂತೆ ಕಷ್ಟಪಡುವ ಸಂದರ್ಭ ಬರಲಾರದಲ್ಲಾ! ಎಂದು ಉದ್ಗರಿಸಿ ಸ್ವಾಗತಿಸಿದರು.

ನಮ್ಮ ಹೆಂಗಸರು ಚಿಟ್ಟೆಗಳಂತಾಗದೆ ಝಾನ್ಸಿ ಲಕ್ಷ್ಮೀ ಬಾಯಿಯಂತಾಗಬೇಕೆಂದು ಕಾಂಗ್ರೆಸು ಅಧ್ಯಕ್ಷ ಶ್ರೀ ನೀಲಂ ಸಂಜೀವ ರೆಡ್ಡಿಯವರು ಹೇಳಿದ್ದಾರೆ. ಲಕ್ಷ್ಮೀಬಾಯಿ ಬ್ರಿಟಿಷರೊಡನೆ ಕಾದಾಡಿ ಕೀರ್ತಿವಂತಳಾದಳು. ಈ ದಿನ ಈ ಬಾಯಿಗಳು ಈಗ ಕಾದುವುದಾರೊಡನೆ? ಗಂಡನೊಡನೆ ಕಾದಿ ವೀರ ರಮಣಿಯಾಗಲಿ ಎಂಬುದೇ ರೆಡ್ಡಿಯರ ಅಂತರ್ಯವಿದ್ದರೂ ಇರಬಹುದೆಂದು ತರ್ಕಿಸಬಹುದು.

ಶ್ರೀಮತಿ ಇಂದಿರಾ ಗಾಂಧಿಯವರು ಸಮ್ಮೇಳನದ ಅಧ್ಯಕ್ಷರಾದುದು ಅರ್ಥಪೂರ್ಣವಾಗಿದೆಯೆಂದೂ, ಅವರ ಆದರ್ಶವನ್ನು ಮಹಿಳೆಯರು ಅನುಸರಿಸಿದಲ್ಲಿ ದೇಶದ ಬಹುದೊಡ್ಡ ಸಮಸ್ಯೆ ಪರಿಹಾರವಾಗಬಹುದೆಂದೂ ಕುಂತಳಾ ಪ್ರಿಯರು ಅಭಿಪ್ರಾಯ ಪಡುತ್ತಾರೆ. ಸಿಂಹಳ ಪ್ರಧಾನಿ ಶ್ರೀಮತಿ ಭಂಡಾರ ನಾಯಕೆಯವರು ಈ ಸಮ್ಮೇಳನಕ್ಕೆ ಸಂದೇಶವೊಂದನ್ನು ಕಳುಹಿಸಿರುವರಂತೆ. ಅದರಲ್ಲಿ ಹೆಣ್ಣು ಹೇಗೆ ಪ್ರಧಾನಿಯಾಗಬಹುದೆಂಬುದರ ಬಗ್ಗೆ ವಿವರಣೆಯಿದ್ದರೂ ಇರಬಹುದೆಂದು ಗಂಡು ದಿಗಿಲುಗೊಂಡರೆ ದೇವರೇ ಕೈಕೊಡಬೇಕು.

o o o

«ದೇಶದ ಸಂಪತ್ತನ್ನು ಹೆಚ್ಚಿಸಲು ಸ್ತ್ರೀ ಪುರುಷರು ಸತತವಾಗಿ ಯತ್ನಿಸಬೇಕೆಂ» ದು ಕ್ಕೆ ಮಹಿಳಾ ಸಮ್ಮೇಳನೋದ್ಘಾಟಕ ಶ್ರೀ ದೇಸಾಯಿ.

—ಅವರುಕ್ಷಣಗಾಗಲೆ ಹೆಚ್ಚಿಸಿದ ಸಂಪತ್ತಿಗಾರುಗತಿ?



ರಾಷ್ಟ್ರಧ್ವಜದ ಉದ್ದಗಲಗಳು ೩:೨ರ ನಿಷ್ಪತ್ತಿಯಲ್ಲಿರಬೇಕು.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ. ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ!
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ದ. ಕ. ಮಂಗಳೂರು ಡಿ. ಮುನ್ಸಿಫರ ಕೋರ್ಟಿನಲ್ಲಿ.

R. E. P. 238/1960. O. S. 544/1955.

ವೆಂಕಪ್ಪ ಕೂಡಾ — ಅರ್ಜಿದಾರರು
ಬಾಗಿ ಕೂಡಾ — ರೆಸ್ಪೋಂಡೆಂಟರು

ನೋಟೀಸು.

1ನೇ ಬಾಗಿ ಹೆಂಗಸು, ದುಗ್ಗು ಮಗಳು, ಬಡಗ ಯೆಕ್ಕಾರು.
2ನೇ ವೀರಮ್ಮ ಬಾಗಿ ಮಗಳು — ಡಿ —
3ನೇ ನಾರಾಯಣ ಶೆಟ್ಟಿ — ಡಿ —
4ನೇ ಪೋಮಯ್ಯ ಶೆಟ್ಟಿ 2ನೇಯವಳ — ಡಿ —
5ನೇ ಬೋಜ ಶೆಟ್ಟಿ ಮಕ್ಕಳು — ಡಿ —
6ನೇ ಸುಂದರ ಶೆಟ್ಟಿ ಮೂಳೂರು.
7ನೇ ರಾಜು ಶೆಟ್ಟಿ — ಡಿ —
8ನೇ ಬೂಬು ಹೆಂಗಸು, ದುಗ್ಗು ಮಗಳು — ಡಿ —
9ನೇ ಕೊರಗ ಶೆಟ್ಟಿ 8ನೇಯವಳ — ಡಿ —
10ನೇ ರುಕ್ಮಿಣಿ ಮಕ್ಕಳು. — ಡಿ —
11ನೇ ಸೀತಾರಾಮ, 10ನೇಯವಳ ಮಗ, — ಡಿ —
12ನೇ ರಾಮಣ್ಣ ಶೆಟ್ಟಿ, ದುಗ್ಗು ಮಗ, ಬಡಗ ಯೆಕ್ಕಾರು.
13ನೇ ಸಂಕಪ್ಪ ಶೆಟ್ಟಿ — ಡಿ —
14ನೇ ನಾರಾಯಣ ಶೆಟ್ಟಿ ಸುಬ್ಬು ಮಕ್ಕಳು. — ಡಿ —
15ನೇ ಸಂಜೀವ ಶೆಟ್ಟಿ — ಡಿ —
20ನೇ ಹೆಣ್ಣು ಮಗು, ಗಾರ್ಡಿಯನ್ 1ನೇ ಪ್ರತಿವಾದಿ, ಮೂಳೂರು.

ಮೇಲ್ಕಂಡ ಅರ್ಜಿದಾರರು ಮೇಲಿನ ನಂಬ್ರದಲ್ಲಿ ಆದ ಡಿಕ್ರಿ ಪ್ರಕಾರ ತಮಗೆ ಬರತಕ್ಕ ಖ್ರಚುಗಳ ವಸೂಲಿ ಬಗ್ಗೆ ಸದ್ರಿ ನಂಬ್ರದಲ್ಲಿ ಕೋರ್ಟು ಡಿಪೋಸಿಟಿನಲ್ಲಿರುವ ಆ ಹಣವನ್ನು ಜಪ್ತುಪಡಿಸಿರುವುದರಿಂದ ಅದನ್ನು ಯಾವ ವಿಧದಿಂದಲೂ ಪರಾಧೀನ ಮಾಡಕೂಡದೆಂದು ಈ ಮೇಲ್ಕಾಣಿಸಿದ ಎದ್ರಿರು ಅತಂಕಿಸಲ್ಪಟ್ಟಿದ್ದಾರೆ. ಸದ್ರಿ ಅರ್ಜಿಯು ತನಿಖೆ ಬಗ್ಗೆ ತಾ. 4—10—1960ಕ್ಕೆ ಇಟ್ಟಿದೆ.

ಮಂಗಳೂರು, 14—9—1960.

P. ಶ್ರೀಧರ ರಾವ್,
ಅರ್ಜಿದಾರರ ಕಡೆ ಎಡ್ವೊಕೇಟ್.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ) 2_75
ಪಂಚಮುಖ (ಕಾದಂಬರಿ) 2_50
ನಮ್ಮ ಸುತ್ತಲಿನ ಕಡಲು 1_75
ಪರಮಾಣು—ಇಂದು—ನಾಳೆ 3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ವಿಚಿತ್ರ ಸತ್ಯ

ಬಲು ಧನದ ಸಿರಿಗಾಗಿ ಸ್ವದಫನ

ವಿಮೆಯುಳಿಸಿ, ಅದರ ಮೊತ್ತವನ್ನು ಕೂಡಲೇ ಪಡೆಯುವ ಸಲುವಾಗಿ ತನ್ನನ್ನೇ ತಾನು ದಫನ ಮಾಡಿಕೊಂಡ ಒಬ್ಬ 'ರುಮೇನಿಯನ'ನ ವಿಚಿತ್ರ ಕಥೆ ಓದುವಾಗ ನೀವೂ ಅಯ್ಯೋ ಎನ್ನದಿರಲಾರಿರಿ.

ವೃದ್ಧಾಪ್ಯದಲ್ಲಿ ಉಪಯೋಗಕ್ಕೆ ಬೀಳಲೆಂದೋ, ನಡುಪ್ರಾಯದಲ್ಲೇ ಮೃತ್ಯುಮುಖನಾದರೆ ಸಂಸಾರಕ್ಕೆ ಆಸರೆ ದೊರೆಯಲೆಂದೋ, ತಮ್ಮ ಮಕ್ಕಳ ಮದುವೆಗಳ ಪ್ರಯೋಜನಕ್ಕೆಂದೋ ಜೀವವಿಮೆ ಮಾಡುವುದನ್ನು ನಾವು ಕೇಳಿದ್ದೇವೆ; ಕಂಡಿದ್ದೇವೆ; ಮಾಡಿದ್ದೇವೆ ಕೂಡ. ಆದರೆ, ಓರ್ವ ರುಮೇನಿಯಾದವನು ವಿಮಾಕಂಪೆನಿಗೆ ಮೋಸಮಾಡುವ ಉದ್ದೇಶದಿಂದಲೇ ಜೀವವಿಮೆಯುಳಿಸಿ, ತನ್ನನ್ನು ಜೀವಂತ ದಫನಗೊಳಿಸಿದನೆಂದು ಕೇಳಿದರೆ, ನೀವು ವಿಸ್ಮಯಪಡುವಿರಿ; ಪಾಪ, ದುರದೃಷ್ಟಶಾಲಿಯಾದ ಆ ನಾಗರಿಕ ತನ್ನ ಸಂಚಿನಲ್ಲಿ ಜಯಶೀಲನಾಗಲಿಲ್ಲವೆಂಬುದು ಮಾತ್ರ ದುಃಖಾರ್ಹ ಸಂಗತಿಯಲ್ಲವೆ?

ಆತನ ಊರಲ್ಲಿ ಒಂದು ಭಾರಿ ನೆರೆ ಬಂದು ಪಶು ಪ್ರಾಣಿಗಳಲ್ಲದೆ ನೂರಾರು ಮಾನವರೂ ತಮ್ಮ ಜೀವವನ್ನು ಕಳೆದುಕೊಂಡರು, ಪ್ರಕೃತಿಯ ಈ ವಿಕೋಪದ ಲಾಭವೆತ್ತುವ ಇರಾದೆಯಿಂದ ಈತ ತನ್ನ ಕೆಲವಾರು ಸಂಗಾತಿಗಳ ನೆರವಿನಿಂದ ಒಂದು ಉಪಾಯ ಹೂಡಿದ. ಒಂದು ದಿನ ಮನೆಯಿಂದ ಈತ ಏಕಾಏಕಿಯಾಗಿ ಮಾಯವಾದ. ಆವನ ಮಿತ್ರರು ಆತ ಸತ್ತನೆಂದು ಸುದ್ದಿ ಹರಡಿಸಿದರು. ಪರಿಣಾಮವಾಗಿ ನೆರೆಯಲ್ಲಿ ಸತ್ತವರ ಯಾದಿಯಲ್ಲಿ ಇವನ ಹೆಸರೂ ಪ್ರಕಟವಾಯಿತು;

ಆಪ್ತ ಮಿತ್ರನೊಬ್ಬ ತೋರಿಕೆಯ ಮಟ್ಟಿಗೆ ಆತನ ಹೆಣವನ್ನು ಶವಪೆಟ್ಟಿಗೆಯಲ್ಲಿ ತುಂಬಿಸಿ, ಆತನ ಸಂಬಂಧಿಕರೊಡನೆ ಕೂಡಿ ದಫನ ಮಾಡಿಯೂ ಬಂದನು. ಇಲ್ಲಿಯೂ ಆ ಮೃತನೆಂದು ಜಗಜ್ಜಾಹೀರಾದ ವ್ಯಕ್ತಿ ಅಂತಿಮ ಸಂಸ್ಕಾರ ನಡೆಯುವಾಗ ಆ ಜನರೊಡನೆ ಕಲೆತುಕೊಂಡು ತಾನು ಹೂಡಿದ ಆಟ ಯಥಾಯೋಗ್ಯವಾಗಿ ನಡೆಯಿತೆಂದು ಒಳಗಿಂದೊಳಗೇನೇ ಸಂತಸದಾಳುತ್ತಿದ್ದನೆಂದರೆ, ನೀವು ಸುಳ್ಳೆನ್ನಬಹುದು; ಆದರೆ, ನೂರಕ್ಕೆ ನೂರರಷ್ಟು ಈ ಮಾತು ಸತ್ಯ. ಇದೆಲ್ಲಾ ನಾಟಕವೇಕೆಂದು ನೀವು ಪ್ರಶ್ನಿಸಬಹುದು. ಆತ ೫೦ ಸಾವಿರ ಫ್ರೆಂಕುಗಳಿಗೆ ಜೀವವಿಮೆ ಇಳಿಸಿದ್ದ; ಅದನ್ನು ಪಡೆಯುವ ಸಲುವಾಗಿಯೇ ಈ ಹೂಟ! ಅವನ ದೌರ್ಭಾಗ್ಯದಿಂದ ಈ ನಾಟಕದ ಅಂತಿಮ ದೃಶ್ಯ ನಾಟಕೀಯವೇ ಆಗಿಬಿಟ್ಟಿತು! ಆತನ 'ವಿಧವೆ' ಪತ್ನಿಗೆ ವಿಮಾಕಂಪೆನಿಯಿಂದ ವಿಮಾ ಮೊಬಲಗು ಬಂದುಮುಟ್ಟುವುದರಲ್ಲಿತ್ತು; ಆದರೆ, ಪೋಲೀಸರಿಗೆ ಇದರಲ್ಲಿ ಸಂದೇಹ ಕಂಡುಬರಬೇಕೆ? ಅವರು ಸಂಶೋಧನೆ ನಡೆಸಿದರು; ಆದರೆ ಯಾವ ಕುರುಹೂ ದೊರೆಯಲಿಲ್ಲ. ತಮ್ಮ ಸಂಶಯ ದೂರವಾಗದುಳಿಯಲು ಆ ಬುದ್ಧಿವಂತ ಪೋಲೀಸರು ದಫನಮಾಡಿದ ಶವದ ಪೆಟ್ಟಿಗೆಯನ್ನು ಬಿಚ್ಚಿ ನೋಡುವುದೆಂದು ನಿಶ್ಚಯಿಸಿಬಿಟ್ಟರು! ಹೂತುದನ್ನು ಹೊರತೆಗೆದು ನೋಡುವುದೆಂದರೇನು? ಆ 'ಮೃತ'ನ ಪರಿವಾರದವರೂ 'ವಿಧವೆ' ಪತ್ನಿಯೂ ಆಕ್ಷೇಪವೆತ್ತದಿರುತ್ತಾರೆಯೆ? ಆದರೆ, ಪೋಲೀಸರು ಕೇಳಬೇಕಲ್ಲಾ? ಅವರು ಪೆಟ್ಟಿಗೆಯನ್ನು ತೆಗೆದು ಬಾಗಿಲು ತೆರೆದರು, ಹೊದಿಸಿದ ಬಟ್ಟೆ ಬಿಚ್ಚಿದರು; ಮೂಗಿಗೆ ಬೆರಳೇರಿಸಲೇಬೇಕಾಯಿತು! ಅಲ್ಲಿ ಮಣ್ಣಿನ ಹೆಂಟೆಗಳನ್ನೂ ವರ್ತಮಾನ ಪತ್ರಿಕೆಗಳ ರಾಶಿಯನ್ನೂ ಇರಿಸಿ 'ಶವ' ಮಹೋದಯ ಪರಾರಿಯಾಗಿದ್ದ! ಅವರ ಸಂದೇಹ ನಿಜವಾಯಿತು! ಅನಂತರ ಆತನ ಶೋಧನೆಯಾಯಿತು; ಆವನನ್ನು ಸೆರೆಹಿಡಿಯಲು ಹೆಚ್ಚು ಕಷ್ಟವಾಗಲಿಲ್ಲ. ನ್ಯಾಯಾಲಯದ ಸಮ್ಮುಖದಲ್ಲಿ ವಂಚನೆಯ ಸಂಚು ನಡೆಸಿದ ಆರೋಪದ ಮೇಲೆ ಎಂಟು ವರ್ಷ ಶಿಕ್ಷೆಯೂ ದೊರೆಯಿತು.

ಆತ ಈ ರೀತಿ ಕಂಪೆನಿಗಳಿಗೆ ಮೋಸ ಮಾಡಿದುದು ಅದೇನೂ ಮೊದಲ ಬಾರಿಯಾಗಿರಲಿಲ್ಲ. ದೇಶವಿದೇಶಗಳ ಹಲವಾರು ವಿಮಾ ಕಂಪೆನಿಗಳಿಗೆ ಆತ ವಂಚನೆ ಮಾಡಿದ್ದ. ಆತ ನ್ಯಾಯಾಲಯದಲ್ಲಿತ್ತ ಹೇಳಿಕೆಯಿಂದ ಇದೆಲ್ಲ ತಿಳಿಯಿತು.

ಒಂದುಬಾರಿ ಅಮೆರಿಕೆಯಲ್ಲಿ ಐದು ಸಾವಿರ ಡಾಲರ್‌ಗಳಿಗೆ ವಿಮೆಯುಳಿಸಿದ್ದ. ಕೆಲವೇ ಸಮಯದಲ್ಲಿ ಯಂಗ್‌ಸ್ಟೌನ್‌ನಲ್ಲಿ ಪೋಲೀಸರಿಗೆ ಒಂದು ರಸ್ತೆಯ ಪಕ್ಕದಲ್ಲಿ ಹೆಣ ಸಿಕ್ಕಿತು. ಅದರ ಅಂಗಾಂಗಗಳೂ ಮುಖವೂ ಮೋಟಾರಿನಡಿ ಬಿದ್ದು ನಜ್ಜುಗುಜ್ಜಾಗಿದ್ದುದರಿಂದ ಗುರುತು ಹಿಡಿಯುವುದು ಅಸಾಧ್ಯವಾಗಿತ್ತು. ಆದರ ಕಿಸೆಯಲ್ಲಿ ವಿಮಾಕಂತು ತೆತ್ತ ರಶೀದಿ, ವಿವಾಹದ ಪ್ರಮಾಣಪತ್ರ, ಸ್ವಂತ ದಿನಚರಿ ಮೊದಲಾದುವು ದೊರೆತವು. ಇವುಗಳ ಆಧಾರದಿಂದ ಆತನ ಪತ್ನಿಗೆ ಕರೆಹೋಯಿತು. ಆಕೆ ಅದೆಲ್ಲಿಗೋ ಸಂಬಂಧಿಕರ ಮನೆಗೆ ತೆರಳಿದ್ದಳು. ವಿಮಾಕಂಪೆನಿಯು ಸಹಾನುಭೂತಿಯನ್ನು ವ್ಯಕ್ತಪಡಿಸಿ ವಿಮಾ ಮೊಬಲಗನ್ನು ಆ 'ವಿಧವೆ'ಗೆ ಕಳಿಸಿಕೊಟ್ಟಿತು.

ಗದ್ದೆಗಳಲ್ಲಿ ಬೆಳೆದ ಗೋದಿಯನ್ನು ಗಾಡಿಗೆ ಹೇರುವುದರಲ್ಲಿ ರೈತರು ನಿರತರಾಗಿದ್ದಾರೆ.

ಸ್ವಲ್ಪ ಸಮಯದಲ್ಲೇ ಈ ಹಣವನ್ನು ಉಪಭೋಗಿಸಲು ಆಕೆಯ ಪತಿಯೂ ಬಂದನು. ನೆರೆಹೊರೆಯವರಿಗೆ 'ಆವರ' ತಮ್ಮ ಬಂದಿದ್ದಾರೆಂದು ಸಮಾಧಾನ ಹೇಳಿ ಐದು ಸಾವಿರ ಡಾಲರನ್ನು ಮಜಾದಿಂದ ವೆಚ್ಚಮಾಡಿದರು. ಇದೇ ಮಾದರಿಯ ವಂಚನೆಯಿಂದ ಆತ ತನ್ನ ಜೀವನವನ್ನು ವೈಭವದಿಂದ ಸಾಗಿಸುತ್ತಿದ್ದ; ಆದರೆ, ರುಮೇನಿಯಾದಲ್ಲಿ ಮಾತ್ರ ಅವನ 'ಬೆಟ್ಟಿ ಬಂಗಾರ' ಬಯಲಿಗೆ ಬಂದುಬಿಟ್ಟಿತು.

ಹಣ ಮಾಡುವ ಆಸೆಯಿಂದ ತಾನೇ ಬೀಸಿದ ಬಲೆಯಲ್ಲಿ ಸಿಕ್ಕಿಬೀಳುವುದೂ ಇದೆ. ಡ್ರ್ಯ ಕ್ಲೀನಿಂಗ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ ಒಬ್ಬಾಕೆ ತರುಣಿಯ ಕತೆಯೂ ಅದೇ ರೀತಿಯಿದೆ. ಕಂಪೆನಿಯ ಯಜಮಾನನು ವಿಶ್ವಾಸಕ್ಕೆ ಪಾತ್ರಳಾಗಿದ್ದ ಈಕೆಯ ವಶಕ್ಕೆ ಸಹಸ್ರಾನುಸಹಸ್ರ ಡಾಲರ್‌ಗಳ ಕೊಡುಕೊಳ್ಳಾಟವನ್ನು ಇತ್ತಿದ್ದ. ಕಾಲಕ್ರಮದಲ್ಲಿ ಆಕೆ ಕಂಪೆನಿಯ ಹಣವನ್ನು ಸ್ವೋಪಯೋಗಕ್ಕೆ ಬಳಸಿಕೊಂಡಳು. ತನ್ನ ರಹಸ್ಯ ಮಾಲೀಕನಿಗೆ ತಿಳಿಯಬಹುದೆಂದು ಅಂಜಿದಾಗ, ಆಕೆಯೊಂದು ಜಾಲವನ್ನು ನೇಯ್ದಳು.

ತನ್ನೊಬ್ಬ ಪ್ರೇಮಿಯನ್ನು ಈ ಷಡ್ಯಂತ್ರದ ಸೂತ್ರಧಾರನನ್ನಾಗಿ ಮಾಡಿದಳು. ಆ ಪ್ರೇಮಿ ತನ್ನ ಸ್ನೇಹಿತನನ್ನು ಕೂಡಿಸಿಕೊಂಡ. ಆಕೆ ಟ್ರೆಜರಿಯ ಬಳಿ ಏಕಾಕಿಯಾಗಿ ಕುಳಿತಿರುವಾಗ ಇವರಿಬ್ಬರು ಹೋಗಿ ಜೋರಿಯಿಂದ ನಾಲ್ಕಾರು ಗಾಯಮಾಡಿ, ಟ್ರೆಜರಿಯ ಒಂದಷ್ಟು ಹಣವನ್ನು ಅಪಹರಿಸಿಕೊಂಡು ಬರುವುದೆಂದೂ, ಮಾಲಕ ಬಂದು ನೋಡುವಾಗ, ದರೋಡೆಯಾಯಿತೆಂದು ತಿಳಿದುಕೊಳ್ಳುವನೆಂದೂ ಈ ಯೋಜನೆಯ ಸಂಚು. ಇದರಿಂದ ಆಕೆ ಬಚಾವಾಗುವಳು ತಾನೆ? ಯೋಜನೆ ರೂಪಿತವಾಯ್ತು; ದಿನವೂ ನಿಶ್ಚಿತವಾಯ್ತು. ಸರಿಯಾದ ಸಮಯದಲ್ಲಿ ಇರ್ವರೂ ದರೋಡೆಗಾರರು ಕೋಣೆ ನುಗ್ಗಿದರು. ಹುಡುಗಿಗೆ ಸಂತೋಷವಾಯಿತು. ಆಕೆ ಬೇಗದ ಕೈ ಅವರ ಕೈಯಲ್ಲಿ ಕೊಟ್ಟು, ಹಣವೆಲ್ಲಿರುವುದೆಂದು ತಿಳಿಸಿ ತನ್ನ ಕೆಲಸದಲ್ಲಿ ಮಗ್ನಳಾದಳು.

ಬಂದ ಇಬ್ಬರಲ್ಲಿ ಒಬ್ಬ ಚೂರಿ ಹೊರತೆಗೆದ; ಪೂರ್ವನಿಯೋಜಿತ ಯೋಜನೆಯಂತೆ ಗಾಯಮಾಡಲು ಮುಂದುವರಿದ. ಅಷ್ಟರಲ್ಲಿಯೇ ಅವನ ಬುದ್ಧಿ ಬದಲಾಯಿತು. ಎಲ್ಲಾ ಹಣವನ್ನು ಅಪಹರಿಸುವ ಆಶೆಯಿಂದ ಆತ ತರುಣಿಯ ಕುತ್ತಿಗೆಗೆ ಚೂರಿಯಿಂದಿರಿದ; ಸ್ನೇಹಿಗಳಿಬ್ಬರೂ ಹಣ ದೋಚಿಕೊಂಡು ಮಾಯವಾದರು. ಪೋಲೀಸರ ಅವಿರತ ಶ್ರಮದಿಂದ ಈ ಇರ್ವರೂ ಸೆರೆಯಾಳುಗಳಾದರು. ವಿಚಾರಣೆಯ ಸಂದರ್ಭದಲ್ಲಿ ಈ ಸತ್ಯಸಂಗತಿ ಗೊತ್ತಾಯಿತು. ಇರ್ವರಿಗೂ ಮೂರು ಮೂರು ವರ್ಷದ ಶಿಕ್ಷೆಯಾಯಿತು. ಆದರೆ, ಅವರ ಅಪರಾಧದೆದುರು ಇದು ಅತ್ಯಲ್ಪವೆಂದು ಎಲ್ಲರೂ ಅಂದುಕೊಳ್ಳಬಹುದು.

ಪರಂತು, ಒಂದು ಮಾತು ಮಾತ್ರ ನಿತ್ಯ ಸತ್ಯ. ಮನುಷ್ಯ ಅತ್ಯಂತ ಚತುರತೆಯಿಂದ ಬಹು ವಿಚಾರ ವಿಮರ್ಶೆಯಿಂದ ವಂಚನೆಯ ಸಂಚನ್ನು ಮಾಡಿದರೂ ಅದು ಒಂದಲ್ಲ ಒಂದು ದಿನ ಆತನನ್ನೇ ಬಲಿತೆಗೆದುಕೊಳ್ಳುವುದೆಂದು ಮೇಲಿನೆರಡು ಘಟನೆಯಿಂದ ನಾವು ತಿಳಿದುಕೊಳ್ಳಬಹುದು.

(ಸಂಗ್ರಹ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಕುಮಾರಿ ಬಿಲ್ಲೆಗಳು
(Regd.)
ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.
ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ಸ.

ಸವಿನೆನಪು:

ಆನೆಯೂ ಗೆಳೆಯನನ್ನು ಮರೆಯಲಿಲ್ಲ!

ನಾಲ್ಕು ವರ್ಷಗಳಿಗೆ ಮೊದಲು ಕಂಡಿದ್ದ ಕಿರು ಗೆಳೆಯ ಸೋಮುವನ್ನು ಜನತಾ ಸರ್ಕಸ್‌ನ ಭೀಮು ಮರೆಯದೆ ಗುರುತಿಸಿ, ಚೀಲದಲ್ಲಿನ ಬಾಳೆ ಹಣ್ಣನ್ನು ಮೆಂದಾಗ ಎಲ್ಲರೂ ಆಶ್ಚರ್ಯದಿಂದ ನೋಡಿ ದಂಗು ಬಡೆದರು!

ಶ್ರೀ ಸಿರಿಪತಿ.

ನಮ್ಮೂರ ಅಡವಿಯನ್ನು ಕಡಿಯಲು ಪ್ರಾರಂಭಿಸಿದರು. ಕಟ್ಟಿಗೆ ನಾಟು ಸಾಗಿಸಲು ೯ ತಿಂಗಳು ಹಿಡಿಯಿತು! ಆ ಸಮಯ ಕಟ್ಟಿಗೆ ನಾಟು ಸಾಗಾಟದ ಕೆಲಸಕ್ಕೆ "ಭೀಮು" ಎಂಬ ಹೆಸರಿನ ಒಂದು ಆನೆಯನ್ನು ನಮ್ಮೂರ ಸಾಹುಕಾರ ನಂಜಪ್ಪನವರು ತರಿಸಿದ್ದರು. ಸಾಕಿದ ಈ ಆನೆಯನ್ನು ನೋಡುವದು ನಮ್ಮೂರ ಮಕ್ಕಳುಗಳಿಗೆ ಒಂದು ತಮಾಷೆಯಾಗಿತ್ತು!—

ನಮ್ಮ ಸೋಮು ಪ್ರತಿದಿನ ಎರಡಾವರ್ತಿ ತಪ್ಪದೆ – "ಭೀಮು"ವನ್ನು ನೋಡಲು ಹೋಗುತ್ತಿದ್ದ! ಯಾವಾಗಲೂ ಬಾಳೆ ಹಣ್ಣು, ಸೀಯಾಳ, ಕಬ್ಬು, ಅನಾನಸು—ಯಾ ಒಂದಿಲ್ಲೊಂದು ಹಣ್ಣು ಕೊಡುವ ಸೋಮುವಿಗೂ ಭೀಮುವಿಗೂ ಮೈತ್ರಿ ಬೆಳೆಯಿತು!—ಹುಡುಗರಲ್ಲಿ ಮುಂದಾಳು ಸೋಮು ಬಂದೊಡನೆ ಭೀಮು ಸಿಳ್ಳು ಹಾಕಿ ಕರೆಯುತ್ತಿತ್ತು! ಒಮ್ಮೊಮ್ಮೆ ಕೆಲಸದಲ್ಲಿದ್ದಾಗ ಸಹ ಸೋಮು ದೂರದಲ್ಲಿ ಕಂಡರೆ ಅತ್ತ ತಿರುಗಿ ಸಿಳ್ಳುಹಾಕಿ ತನ್ನ ಮೈತ್ರಿಯ ದ್ಯೋತಕವಾದ ಪ್ರಾಣಿ ಸಹಜ ಸನ್ನೆಯಿಂದ ಸೋಮುವನ್ನು ಆಹ್ವಾನಿಸುತ್ತಿತ್ತು! ಸೋಮು ದೂರದಿಂದ ಬಾಯಿಯಲ್ಲಿ ಸಿಳ್ಳುಹಾಕಿ ನುತ್ತೆ ಕಾಣುವೆನೆಂದು ಕೈಕರವಸ್ತ್ರ ಬೀಸಿ ಹಾರಿಸಾಗುತ್ತಿದ್ದ—ಸ್ಕೂಲಿನೆಡೆಗೆ!

ಕಟ್ಟಿಗೆ ಸಾಗಾಟದ ನಂತರ ಭೀಮುವಿನ ಧನಿ ಭೀಮುವನ್ನು ಒಂದು ಸರ್ಕಸ್ ಕಂಪನಿಗೆ ಮಾರಿದರು! ಪುಟ್ಟ ಸೋಮುವಿಗೆ ಏನೆಂದು ತಿಳಿಯುವ ಮೊದಲೇ ಭೀಮು ಪೂನಾದಲ್ಲಿಯ 'ಜನತಾ ಸರ್ಕಸ್' ಕಂಪನಿಗೆ ಹೊರಟಾಗಿತ್ತು! ಸ್ಕೂಲಿನಿಂದ ಹಿಂತಿರುಗಿ ಬಂದ ನಂತರ ವಿಷಯ ತಿಳಿದ ಸೋಮುವಿನ ಕಣ್ಣಲ್ಲಿ ಅಶ್ರು ಪ್ರವಾಹ ಹರಿಯಿತು! ಆದರೆ ಮಾಡಬೇನು.

ಎರಡು ವರ್ಷಗಳ ನಂತರ ಸೋಮು ತಂದೆಯ ಜೊತೆಗೆ ಪೂನಾಕ್ಕೆ ಹೋಗಿದ್ದ! ಅವನಿನ್ನೂ ತನ್ನ "ಭೀಮು" ಜನತಾ ಸರ್ಕಸ್ ಕಂಪನಿಯಲ್ಲಿಯೇ ಇರಬಹುದೇ! ಏನೇ ಆಗಲಿ ಒಮ್ಮೆ ನೋಡಿಬರಬೇಕು' ಎಂದು ಆಲೋಚಿಸುತ್ತ ಹೊರಟಿದ್ದ! ಅಂತೆಯೇ ತಂದೆಯೊಡನೆ ಮರುದಿನವೇ ಜನತಾ ಸರ್ಕಸ್ಸಿಗೆ ಹೋಗೋಣವೆಂದು ಹಟ ಹಿಡಿದ! —ಸೋಮು ಬಾಳೆಹಣ್ಣಿನ ಗೊನೆಯನ್ನು ಸಂಗಡಿರಿಸಿಯೇ ಹೊಂಟ!

ಜನತಾ ಸರ್ಕಸ್ ಪ್ರಾರಂಭವಾಗಿದೆ! ಸೋಮಣ್ಣನು ತಂದೆಯೊಡನೆ ಒಳ ಹೊಕ್ಕ! ಆನೆಗಳ 'ದೇಖಾವೆ' ಪ್ರಾರಂಭವಾಯಿತು! ಭೀಮುವನ್ನು ನೋಡಿ ಸೋಮು ಕೈನೀಡಿದ! ಮಿತ್ರನ ಮೈತ್ರಿಯ ಒಸಗೆಯಿಂದಾಗಿ "ಭೀಮು" ತನ್ನ ಕರ್ತವ್ಯವನ್ನೂ ಮರೆತ! ತನ್ನ ಸಿಳಿವಾದ ಸೊಂಡಿಲನ್ನು ನೀಡಿ ಗೆಲರಿಯಲ್ಲಿ ಕುಳಿತ ಸೋಮುವನ್ನು ಕರೆಯಿತು! ಪ್ರೇಕ್ಷಕರಿಗೆಲ್ಲ ಅಂಜಿಕೆಯಾಯಿತು! ಕೆಲವರು ಬೊಬ್ಬೆಯನ್ನಿಡಲಾರಂಭಿಸಿದರು...ಸೋಮು ಸೊಂಡಿಲನ್ನೇರಿದ...ಆನೆಯು....ಸೋಮುವಿನ ಕೈಚೀಲದಿಂದ ಬಾಳೆಹಣ್ಣು ಹೊರ ತೆಗೆದು ತಿನ್ನಲಾರಂಭಿಸಿತು!...ಸೋಮು ಪ್ರೇಕ್ಷಕರನ್ನು ಉದ್ದೇಶಿಸಿ ..."ಯಾರೂ ಅಂಜಬೇಡಿರಿ....ಈ ಆನೆ ನನ್ನ ಸ್ನೇಹಿತ" — ೨ ವರ್ಷದ ನಂತರ ನಿಟ್ಟೂರಿನಿಂದ ಬಂದ ಮಿತ್ರನ ಬೆಟ್ಟಿಯಾಗಿದೆ." ಎಂದ ಜನರಲ್ಲಿ ಶಾಂತತೆ ನೆಲಸಿತು. ಸೋಮು ಸುರಕ್ಷಿತವಾಗಿ ಕೆಳಗಿಳಿದ" ಸೋಮುವಿನ ತಂದೆಗೆ ಮಗನ ಗೆಳೆಯತನವೇ ಸರ್ಕಸ್ ನೋಡುವ ಹಂಬಲವಾಗಿದ್ದಿರಬೇಕೆಂದು ಈಗ ತಿಳಿದರು! ಮೂಕ ಪ್ರಾಣಿಗಳು ಸಹ ಮನುಷ್ಯರಲ್ಲಿ ಕಾಣುವ ಸ್ನೇಹವು ಜಗತ್ತಿನಲ್ಲಿ ಅಮೂಲ್ಯವಾಗಿದೆ! ಹುಡುಗರಲ್ಲಿ ಸಹ ಅಷ್ಟು ದೊಡ್ಡ ಆನೆಗೆ ಅಷ್ಟೊಂಥಹ ಸ್ನೇಹ ವಿರಬೇಕು!

ಕಾವು ವಿಜ್ಞಾನದ ಮಾಹಿತಿಗಾಗಿ ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ
ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ
ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕಥಾವಿಹಾರ

(೨ನೇ ಪುಟದಿಂದ)

"ಪಕ್ಕಕ್ಕೆ ಸರಿ!" ಎಂದು ಯಾರೋ ಕೂಗಿದರು. ನಾನು ಬರೆಯುವುದನ್ನು ನಿಲ್ಲಿಸಿ ತಲೆಯೆತ್ತಿ ನೋಡಿದೆನು.... ಈ ಅವಕಾಶವೂ ಹೋಗಬೇಕೆ?....ಆ ಹಾಳು ಕುದುರೆ ಎದ್ದೇಬಿಟ್ಟಿತು! ಇಷ್ಟು ಮಾತ್ರಕ್ಕೆ ಕೆಳಗೆ ಏಕೆ ಬೀಳಬೇಕಾಗಿತ್ತೋ! ಈ ಜೀವದ ಭಾರವನ್ನೇ ಕಳೆದುಕೊಂಡಿದ್ದಿದ್ದರೆ, ಅದಕ್ಕೇ ಚೆನ್ನಾಗಿರುತ್ತಿಂಲಿಲ್ಲವೇ?

ನಾನು ಇನ್ನೂ ಮುಂದಕ್ಕೆ ಹೋದೆನು. ಮುದುಕಿಯೊಬ್ಬಳು ದಾರಿಯಲ್ಲಿ ಕಾಲು ಜಾರಿ ಕೆಳಗೆ ಬಿದ್ದಳು, ನನ್ನ ಟಿಪ್ಪಣಿ ಪುಸ್ತಕ ತಕ್ಷಣವೇ ಹೊರಕ್ಕೆ ಬಂದಿತು. ಆಕೆ ಪ್ರಾಯಶಃ ಇನ್ನು ಮೇಲಕ್ಕೆ ಏಳುವುದಿಲ್ಲ...ಊಹುಂ! ಅದೂ ನಿರಾಶೆಯಾಯಿತು. ಆ ಮುದುಕಿ ಎದ್ದೇ ಎದ್ದಳು! ಇವತ್ತೇನೂ ಅದೃಷ್ಟವೇ ಇಲ್ಲ. ಹಾಗೆಂಕಲೇ ಹೇಳಬೇಕಾಗಿದೆ!

o o o

ಕವಿತಾ ವಿತಾನ:

ನಾನು ನಾನೆ; ನೀನು ನೀನೆ. ನಾನೆ ನೀನು; ನೀನೆ ನಾನು.

೧

ನಾನು! ನೀನು? ಅಂದರೇನು?
ನನಗು ನಿನಗು ಬಂಧ ವೇನು?
ಉಚ್ಚ ನಾನು.
ತುಚ್ಛ ನೀನು.
ನಾನು, ನೀನು ಏನು? ಏನು?
ಹ್ಹಹ್ಹ! ಹ್ಹಹ್ಹ! ಹ್ಹಿಹ್ಹಿಹ್ಹಿಹ್ಹಿ!!

೨

ನನಗು ನಿನಗು ಸಾಮ್ಯವೇನು?
ಆರ್ಯ ಮತ ಮಹಂತ ನಾನು;
ವರ್ಣರಿಕ್ತ ಮ್ಲೆಂಛ ನೀನು.
ನಾ ಪುನೀತ;
ನೀನು ಪತಿತ.
ನೀನು ನಾನು ರಾಹು ಭಾನು.
ಹ್ಹಹ್ಹ! ಹ್ಹಹ್ಹ! ಹ್ಹಿಹ್ಹಿಹ್ಹಿಹ್ಹಿ!!

೩

ನನಗು ನಿನಗು ಅರ್ಥವೆರಡು;
ಗಣ್ಯ ಧನ್ಯ ಮಾನ್ಯ ನಾನು;
ಅನ್ಯ ವನ್ಯ ಶೂನ್ಯ ನೀನು.
ಪೂಜ್ಯ ಗ್ರಾಹ್ಯ ಸ್ತುತ್ಯ ನಾನು,
ವರ್ಜ್ಯ ತ್ಯಾಜ್ಯ ದೂಷ್ಯ ನೀನು.
ನಾನು ಶ್ರೇಷ್ಠ;
ನೀ ನಿಕೃಷ್ಟ.
ನಾ ಕೃತಾರ್ಥ; ನೀನು ವಿಕೃತ.
ನಾನು ನಾನೆ; ನೀನು ನೀನೆ.
ಹ್ಹಹ್ಹ! ಹ್ಹಹ್ಹ! ಹ್ಹಿಹ್ಹಿಹ್ಹಿಹ್ಹಿ!!

೧

"ನಾನು" "ನೀನು" ಅಂದರೇನು?
ನೀನು ನಾನು ಒಂದೆ ಅನ್ನು.
ನಿತ್ಯ ನೀನು;
ಸತ್ಯ ನಾನು.
ನಾನು ನೀನು ಹಾಲು ಜೇನು.
ಆಹ! ಅಹ್ಹ! ವಾಹ್ವ! ವಾಹ್ವ!!

೨

ನನಗು ನಿನಗು ಭೇದ ವೇನು?
ಮನುಜ-ಧರ್ಮ ಭಕ್ತ ನೀನು;
ಹೃಜ್ಜೀವನ ಸಂತ ನಾನು.
ನೀನು ಅಣ್ಣ!
ನಾನು ತಮ್ಮ.
ನಾನು ನೀನು ಚಂದ್ರ ಭಾನು.
ಆಹ! ಆಹ! ವಾಹ್ವ! ವಾಹ್ವ!!

೩

ನಾನು ಭಾವ; ನೀನು ಅರ್ಥ;
ನನಗು ನಿನಗು, ಮಧ್ಯ ವ್ಯರ್ಥ.
ಹೃದಯ ತಾರತಮ್ಯ ರಹಿತ;
ಸ್ನೇಹ ಪ್ರೇಮ ವಿನಯ ಮಮತೆ;
ಅದುವೆ ನಮ್ಮ ಶ್ರೇಯ ಗೀತೆ
ನೀನು ತೇಜ
ನಾನು ಓಜ
ನಾನು ನೀನು ಓತಪ್ರೋತ.
ನಾನೆ ನೀನು; ನೀನೆ ನಾನ .
ಆಹ! ಅಹ್ಹ! ವಾಹ್ವ! ವಾಹ್ವ!!

—ಸಾಗರ್

"ಏನು?! ಆತ್ಮಹತ್ಯೆ ಎಂದಿರಾ?! ಅರ್ಥ ವಿನಿಷ ಆಯಿತೆ? ...ದಾರಿ ಬಿಡಿ, ದಾರಿ ಬಿಡಿ!"

"ಇದೇನು ಆತ್ಮಹತ್ಯೆಯೇ?!"—ಎಂದು ನಾನು ಹೆಣ್ಣಾಳನ್ನು ಕೇಳಿದೆನು.

"ಹೌದು, ಆ ವಿದ್ಯಾರ್ಥಿ ತನಗೆ ತಾನೇ ಗಂಟಿಟ್ಟುಕೊಂಡು ಸತ್ತನು!"

"ಒಳ್ಳೆಯದು! ಹಾಗೆಯೇ ಇರಬೇಕು! ಅದೇ ಸರಿ! ಆತನದೇ ಸರಿಯಾದ ಕಲ್ಪನೆ!" —ಎಂದು ನಾನು ಕೂಗಾಡುತ್ತ ಆ ಹೆಣ್ಣಾಳಿಗೆ ಹೃತ್ಪೂರ್ವಕ ಧನ್ಯವಾದ ಹೇಳಿದೆನು. ಆ ಮೇಲೆ ಅವಸರವಸರವಾಗಿ ಮೆಟ್ಟಿಲುಗಳನ್ನೇರಿ ನಡೆದೆನು.

"ನೀವೀಗ ಬಂದೇನೂ ಪ್ರಯೋಜನವಿಲ್ಲ. ನಿಮಗಿಂತಲೂ ಮೊದಲು ಇನ್ನೂ ಎಷ್ಟೋ ಜನ ಬಂದು ಹೋಗಿದ್ದಾರೆ."— ಎಂದು ಆ ಹೆಣ್ಣಾಳು ಗೊಣಗುಟ್ಟಿದಳು.

ನಾನು ನನ್ನ ಟಿಪ್ಪಣಿ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಆ ಕೋಣೆಯೊಳಕ್ಕೆ ಹೋದೆನು ಜನ ಸಂದಣಿಯಲ್ಲಿ ಒಳ ನುಗ್ಗಿದೆನು. ಸಂತಸದಿಂದ ನನ್ನ ಮುಖ ಹೊಳೆಯುತ್ತಿತ್ತು, ಸುದ್ದಿ ಸಿಕ್ಕಿತಲ್ಲಾ ಎಂದು ಆದರೆ ಇದ್ದಕ್ಕಿದ್ದ ಹಾಗೆಯೇ ನನ್ನ ಮೊಣಕಾಲುಗಳು ಕುಸಿದು ಬಿದ್ದುವು, ನಾನ ನಿಲ್ಲಲಾರದಾದೆನು. ಅಲ್ಲೇ ಇದ್ದ ಆರಾಮ ಕುರ್ಚಿಯ ಮೇಲೆ ಕುಸಿದು ಬಿದ್ದೆನು. ಆತ್ಮಹತ್ಯೆ ಮಾಡಿಕೊಂಡಿದ್ದ ವಿದ್ಯಾರ್ಥಿಯು ಬೇರೆ ಯಾರೂ ಅಲ್ಲ. ಅವನೇ ಗೋಪೋ— ಭಾನುವಾರ ನನ್ನ ಇನ್ನೂರು ಲೇವಾ ಸಾಲ ತೀರಿಸುವುದಾಗಿ ಮಾತು ಕೊಟ್ಟಿದ್ದ ಗೋಪೋನೇ! ಈಗ ಸತ್ತು ಬಿದ್ದಿದ್ದ! ನನಗೆ ಸಾಲ ತೀರಿಸಬೇಕಾದ ಏಕ ಮಾತ್ರ ವ್ಯಕ್ತಿ ಗೋಪೋ ಇನ್ನಿಲ್ಲದಾದನು. ಈ ಆತ್ಮಹತ್ಯೆಗೆ ಅವನು ಇಷ್ಟೇಕೆ ಆತುರಪಡಬೇಕಾಗಿತ್ತು? ಸೋಮುವಾರದವರೆಗೂ ಸುಮ್ಮನಿರಬಾರದಾಗಿತ್ತೆ?!

ಯಾರೋ ನನ್ನ ಮೇಲೆ ತಣ್ಣೀರೆರಚಿದರು. "ನಿನಗೇನಾಯಿತು?"—ಎಂದು ಯಾರೋ ಮಹಿಳೆಯು ಅಳುತ್ತಳುತ್ತ ನನ್ನನ್ನು ಕೇಳಿದಳು.

"ಏನೂ ಇಲ್ಲ. ಬಳಲಿ ಬಿದ್ದೆ. ಅಷ್ಟೆ!"

o o o

'ದಯವಿಟ್ಟು, ನಿಮ್ಮ ಹೆಸರೇನು, ತಿಳಿಸುತ್ತೀರಾ? ಮೃತರಿಗೂ, ನಿಮಗೂ ಏನು ಸಂಬಂಧ? ನೀವು ಅವರನ್ನು ಎಷ್ಟು ದಿನಗಳಿಂದ ಬಲ್ಲಿರಿ? ಅವರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣ ಏನಿರಬಹುದು, ನಿಮ್ಮ ಅಭಿಪ್ರಾಯದಲ್ಲಿ?"–ಎಂದು ಚೆನ್ನಾಗಿ ಉಡುಪು ಧರಿಸಿದ್ದ ಮಹಾಶಯನೊಬ್ಬನು ನನ್ನನ್ನು ಕೇಳಿದನು.

"ಅದೆಲ್ಲ ನಿಮಗೇಕೆ ಬೇಕು? ನೀವು ಯಾರು?"

'ನಾನೊಬ್ಬ ವರದಿಗಾರ!'

"ನಾವಿಬ್ಬರೂ ಹಾಗಾದೆವು' ನೀನೂ— ನಾನೂ ಕೂಡ! ನಾನೂ ಕೂಡ ನಿನ್ನ ಹಾಗೆಯೇ....ವರದಿಗಾರ!"—ನಾನು ಸಾವರಿಸಿಕೊಂಡು ಹೇಳಿದೆ.

NAVAYUGA
REGD. NO. M. 3619

UDIPI, THURSDAY
22–9–1960

LICENSE NO. 31
Licensed to Post without Prepayment

ಯಾರ ಆಯ್ಕೆಯಾಗಬಹುದು?

ಅಮೆರಿಕೆಯಲ್ಲಿ ಅಧ್ಯಕ್ಷ ಚುನಾವಣೆ

ನವಂಬರ ೮ರಂದು ವಿಶ್ವವಿಖ್ಯಾತ ಅಮೆರಿಕೆಯಲ್ಲಿ ನೂತನ ಅಧ್ಯಕ್ಷರ ಆಯ್ಕೆ ನಡೆಯುವುದು. ಟೆಲಿವಿಜನಿನ ಸಹಾಯದಿಂದ ಮತದಾರರೆಲ್ಲರನ್ನೂ ಸ್ಪರ್ಧಾಳುಗಳ ಕಾಣುವ ಅವಕಾಶ ಪ್ರಥಮ ಬಾರಿಗೆ ಒದಗಿಸಿ ಕೊಡಲಾಗಿದೆ.

ಅಮೆರಿಕೆಯ ಅಧ್ಯಕ್ಷ ಚುನಾವಣೆಯ ದಿನ ಸಮೀಪಗತವಾಗುತ್ತಿರುವಂತೆಯೇ ಸ್ಪರ್ಧಿಸಿದ ಹುರಿಯಾಳುಗಳ ಪ್ರಚಾರ ಕಾರ್ಯವೂ ಬಿರುಸಾಗಿ ನಡೆಯುತ್ತ ಬಂದಿದೆ. ರಿಪಬ್ಲಿಕನ್ ಪಕ್ಷದಿಂದ ಸದ್ಯದ ಉಪಾಧ್ಯಕ್ಷ ಶ್ರೀ ರಿಚರ್ಡ್ ಎಂ. ನಿಕ್ಸನ್‌ರವರೂ ಡೆಮೊಕ್ರೆಟಿಕ್ ಪಕ್ಷದಿಂದ ಶ್ರೀ ಜೋನ್ ಎಫ್. ಕೆನೆಡಿಯವರೂ ಈ ಚುನಾವಣೆಯಲ್ಲಿ ಉಮೇದ್ವಾರರಾಗಿರುವರು. ಸ್ವರಾಷ್ಟ್ರೀಯ, ವಿದೇಶೀಯ ಮತ್ತು ಅಂತಾರಾಷ್ಟ್ರೀಯ ನೀತಿಗಳ ಕುರಿತಾದ ಭಾಷಣಗಳು ಅಮೆರಿಕೆಯ ತುಂಬ ಪ್ರತಿಧ್ವನಿಸತೊಡಗಿವೆ.

ಶ್ರೀ ನಿಕ್ಸನ್‌ರವರು ಅಂತಾರಾಷ್ಟ್ರೀಯ ಸಾಮ್ಯವಾದದ ಕುರಿತಾಗಿ ಮಾತಾಡುತ್ತ, "ಸಾಮ್ಯವಾದದ ಬಲ ಮತ್ತು ನಿರ್ಬಲತೆಗಳನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಸಾಮ್ಯವಾದವು ನಾಸ್ತಿಕತೆಯನ್ನು ಪ್ರತಿಪಾದಿಸುತ್ತದೆ; ಮಾನವರನ್ನು ಗುಲಾಮಗಿರಿಗೆ ತಳ್ಳುತ್ತದೆ, ನ್ಯಾಯವನ್ನು ಅಲ್ಲಗಳೆಯುತ್ತದೆ ಅದೊಂದು ಮಿಥ್ಯಾಸಿದ್ಧಾಂತವಾಗಿದೆ. ಸತ್ಯ ಪ್ರತಿಪಾದನೆಯಿಂದಲೇ ಆ ಮಿಥ್ಯೆಯನ್ನು ಬಯಲಿಗೆಳೆಯುವುದು ಸಾಧ್ಯ ಎಂದು ಹೇಳುವುದರಿಂದ ಅದನ್ನು ತಿಳಿದುಕೊಂಡಂತಾಗಲಿಲ್ಲ"–ಎಂದಿರುವರು ಸಾಮ್ಯವಾದವೆಂಬುದು ಕೇವಲ ಅಮೆರಿಕೆಯ ಮಾತ್ರವಲ್ಲ, ಪ್ರಪಂಚದ ಎಲ್ಲ ಸ್ವತಂತ್ರ ರಾಷ್ಟ್ರಗಳ ಜನರು ಎದುರಿಸಬೇಕಾಗಿರುವ ಸಮಸ್ಯೆಯೆಂದೂ ಶ್ರೀ ನಿಕ್ಸನ್‌ರು ಹೇಳುತ್ತಾರೆ

ಅಮೆರಿಕೆಯ ಶ್ರಮಸಂಘ ಔದ್ಯೋಗಿಕ ಸಂಘಟನೆಯ ವ್ಯವಸ್ಥಾಪಕ ಸಮಿತಿಯು ಶ್ರೀ ಕೆನೆಡಿಯವರು ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸುವುದಕ್ಕೆ ಅನುಮೋದನೆ ನೀಡಿತ್ತು. ಸುಮಾರು ಒಂದೂವರೆ ಕೋಟಿ ಅಮೆರಿಕೆಯ ಮಜೂರರ ಬೆಂಬಲ ಈ ಸಂಘಕ್ಕಿರುವುದು. ಅಮೆರಿಕೆಯ ರಕ್ಷಣಾ ನೀತಿಯನ್ನು ಇವರು ಪದೇ ಪದೇ ಸಮರ್ಥಿಸಿರುವರು. ಚುನಾವಣಾ ಆಂದೋಲನದಲ್ಲಿ ತಾನು ಅಮೆರಿಕೆಯ ಸುರಕ್ಷಾ ಸಮಸ್ಯೆಯ ಬಗ್ಗೆ ವಿವಿಧ ರೀತಿಯಾಗಿ ಚರ್ಚಿಸುವೆನೆಂದೂ ತನ್ನ ಈ ಚರ್ಚೆಯು ಜವಾಬ್ದಾರಿಯುತ ಮತ್ತು ರಚನಾತ್ಮಕವಾಗಿರುವುದೆಂದೂ ಅಂದಿರುವರು.

ಅಮೆರಿಕೆಯ ಕಾಂಗ್ರೆಸ್ ಒಂದು ಮಸೂದೆಯನ್ನು ಮಂಜೂರುಮಾಡಿದ್ದು, ಇದರನ್ವಯ ಅಧ್ಯಕ್ಷಪದದ ಸ್ಪರ್ಧಾಳುಗಳು ಜನತೆಗೆ ಟೆಲಿವಿಜನ್ ಭಾಷಣವನ್ನು ಮಾಡಲಿರುವರು. ಅಲ್ಲದೇ ಉಪಾಧ್ಯಕ್ಷ ನಿಕ್ಸನ್ ಮತ್ತು ಸಿನೇಟರ್ ಕೆನೆಡಿಯವರಿಬ್ಬರನ್ನೂ ಟೆಲಿವಿಜನಿನಲ್ಲಿ ಹೆಚ್ಚಿನ ಅಮೆರಿಕನ್ ಮತದಾರರು ಕಾಣುವ ಅವಕಾಶ ಒದಗುವುದು. ಈ ಇರ್ವರು ಉಮೇದುವಾರರೂ ಮೂರು ಯಾ ನಾಲ್ಕುಬಾರಿ ಟೆಲಿವಿಜನ್‌ನಲ್ಲಿ ವಾದ ವಿವಾದ ಮಾಡಲಿರುವರು. ಮೊದಲನೆಯದು ಚಿಕಾಗೊವಿನಲ್ಲಿ ಸ್ವದೇಶೀಯ ವಿಷಯಗಳ ಕುರಿತು ಸಪ್ಟೆಂಬರ ೨೬ರಂದು ನಡೆಯುವುದು. ನ್ಯೂಯಾರ್ಕ್ ನಗರದಲ್ಲಿ ಏರ್ಪಡಿಸುವ ಎರಡನೆಯ ದರ್ಶನದಲ್ಲಿ ವಿದೇಶ ನೀತಿಯ ಕುರಿತಾಗಿಯೂ ಚರ್ಚೆ ನಡೆಯುವುದು. ಅಕ್ಟೋಬರ ೨೧ರಂದು ನೆರವೇರಲಿರುವ ಮೂರನೆಯ ಟೆಲಿವಿಜನ್ ದರ್ಶನದಲ್ಲಿ ಭೇಟಿ ನಡೆಸುವವರು ಕೇಳಬಹುದಾದ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲಿರುವರು.

ನವಂಬರ ೮ನೇ ತಾರೀಕಿನಂದು ಜರಗಲಿರುವ ಅಮೆರಿಕನ್ ಅಧ್ಯಕ್ಷ ಚುನಾವಣೆಯು ವಿಶ್ವದ ಎಲ್ಲಾ ರಾಷ್ಟ್ರಗಳ ಮೇಲೆ ಪರಿಣಾಮ ಬೀರುವುದೆಂಬುದು ನಿಸ್ಸಂಶಯ ಶಾಂತಿ ದೂತರೆಂದು ಹೆಸರಾದ ಸದ್ಯದ ಅಧ್ಯಕ್ಷ ಐಸನ್ ಹಾವರರು ವಿದೇಶ ನೀತಿಯ ಬಗೆಗೆ ಅಮೆರಿಕನ್ ಮತದಾರರು ಯಾವ ಅಭಿಪ್ರಾಯ ವ್ಯಕ್ತಪಡಿಸುವರೆಂಬುದನ್ನು ನಾವು ಈ ಚುನಾವಣಾ ಪರಿಣಾಮದಿಂದ ತಿಳಿದುಕೊಳ್ಳಬಹುದು.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ದಲ್ಲಿ ಮಂತ್ರಿಮಂಡಳಿಯನ್ನು ಉರುಳಿಸಲು ಹವಣಿಸುವುದಲ್ಲದೆ ಮತ್ತೇನನ್ನು ಮಾಡಬಲ್ಲರು?—ಎಂದು ಸಾಮಾನ್ಯ ನಾಗರಿಕ ಪ್ರಶ್ನಿಸುವಂತಾಗಿದೆ.

ಭಾರತದ ಗತವೈಭವದಂತೆಯೇ ಭಾರತೀಯ ಕಾಂಗ್ರೆಸಿಗೂ ಉಳಿದಿರುವುದು ಕೇವಲ ಗತವೈಭವ ಮಾತ್ರ. ಹಿಂದೆ ಭಾರತದಲ್ಲಿ ವಿಶ್ವವಿಖ್ಯಾತ ರಾಜವಂಶಗಳು ಆಳಿ ಭಾರತೀಯ ಸಂಸ್ಕೃತಿಯನ್ನು ವಿಶಾಲ ವಿಶ್ವದಲ್ಲಿ ಹರಡಿಸಿದ್ದರೆ, ಇಂದದು ಪ್ರಪಂಚದ ಅತಿ ಹಿಂದುಳಿದ ರಾಷ್ಟ್ರಗಳಲ್ಲಿ ಒಂದಾಗಿದೆ. ಅಂತೆಯೇ ಕಾಂಗ್ರೆಸಿನಲ್ಲೂ ಸಚ್ಚರಿತ್ರ, ನಿಸ್ವಾರ್ಥತೆ ಮೊದಲಾದ ಹಲವಾರು ಸದ್ಗುಣಗಳಿದ್ದ ಕಾಲ ಗತಕಾಲವಾಗಿ ಹೋಯ್ತು. ಇದೀಗ ದುರ್ಗಂಧ ಹರಡಲು ಪ್ರಾರಂಭವಾಗಿದೆ. ಈ ದುರ್ನಾಥ ಕೆಲವು ರಾಜ್ಯಗಳಲ್ಲಿ ವಿರಳವಿರಬಹುದು, ನಮ್ಮ ಮೈಸೂರಲ್ಲಿ ಮಾತ್ರ ಇದು ಸಾಂದ್ರವಾಗಿದೆ. ಪದೇ ಪದೇ ಮಂತ್ರಿಮಂಡಳಿ ಉರುಳಿಸುವ ದುಃಖಿಯದಲ್ಲವೆಂದೂ ಇದು ಸತ್ ಸಂಪ್ರದಾಯವಲ್ಲವೆಂದೂ, ಒಂದು ವೇಳೆ ನಾಯಕತ್ವದ ಬದಲಾವಣೆ ಯಾದರೆ, ರಾಜ್ಯದಲ್ಲಿ ಕಾಂಗ್ರೆಸ್ಸಿನ ಶಕ್ತಿ, ಗೌರವಗಳು ಹ್ರಾಸಗೊಳ್ಳುವವೆಂದೂ ಮುಂದೆ ಇದೇ ಕಾಂಗ್ರೆಸ್ ಜನಬಲವನ್ನು ಕಳೆದುಕೊಳ್ಳಲು ಕಾರಣವಾಗುವುದೆಂಬುದೂ ಅವಶ್ಯ ನೆನಪಿಡಬೇಕು. ಶಾಸಕರೆಂದರೆ, ಅಧಿಕಾರ ಲೋಲುಪರಲ್ಲ; ಜನತಾ ಪ್ರತಿನಿಧಿಗಳು, ಅವರ ಸೇವಕರು ಎಂಬ ಭಾವನೆ ಹುಟ್ಟುವಂದೇ ಈ 'ಭಿನ್ನಾಭಿಪ್ರಾಯ' ದೂರವಾಗಬಹುದು ವ್ಯಕ್ತಿಗಿಂತ ಸಂಸ್ಥೆ ಹಿರಿದು; ಅಧಿಕಾರಕ್ಕಿಂತ ಅವಕಾಶ ದೊಡ್ಡದು. ದೇಶದ ಹಿರಿಯ ಪಕ್ಷವಾದ ಕಾಂಗ್ರೆಸ್ಸು ದೇಶದ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟು ಕಾರ್ಯ ಪ್ರವೃತ್ತವಾಗಬೇಕು; ಆ ಪಕ್ಷದ ಶಾಸಕರು ತಾವು ಆರಿಸಿದ ನಾಯಕನನ್ನು ಅವಿಶ್ವಾಸದಿಂದ ಕಾಣದೆ ತಮ್ಮ ಸಲಹೆ ಸೂಚನೆಗಳಿಂದ, ಇಡಿ ರಾಜ್ಯದ ಹಿತದೃಷ್ಟಿಯಿಂದ ಸರಿದಾರಿಯಲ್ಲಿ ನಡೆಸಿಕೊಂಡು ಹೋಗಬೇಕು.

ಆಡಳಿತೆಯಲ್ಲಿ ನ್ಯೂನಾತಿರೇಕಗಳು ಕಾಣಿಸಿಕೊಳ್ಳುವುದು ಸ್ವಾಭಾವಿಕವೆ. ಅವನ್ನು ಸರಿಪಡಿಸುವುದನ್ನು ಬಿಟ್ಟು, ಅವನ್ನೇ ಭಿನ್ನಾಭಿಪ್ರಾಯದ ಬೀಜವನ್ನಾಗಿ ಬಿತ್ತಿ ಮನಸ್ತಾಪ ವೃಕ್ಷವಾಗಿ ಬೆಳೆಸುವುದು ಒಂದೇ ಪಕ್ಷಕ್ಕೆ ಸೇರಿದವರಿಗೆ ಸರಿಯಲ್ಲ. ತಮ್ಮ ಮನೆಯ ಹುಳುಕನ್ನು ಕಂಡು, ಅವನ್ನು ತಿದ್ದಿಕೊಳ್ಳುವುದನ್ನು ಬಿಟ್ಟು, ಊರೆಲ್ಲಾ ಟಾಂ ಟಾಂ ಬಡೆದರೆ, ಮೇಲೆ ನೋಡಿ ಉಗುಳಿದಂತೆಯೇ ಸರಿ. ಮೈಸೂರು ಕಾಂಗ್ರೆಸ್‌ನೊಳಗಿದ್ದ ಅಂತಃಕಲಹದ ದುರುಪಯೋಗವನ್ನು ಈಗಾಗಲೇ ವಿರೋಧೀ ಪಕ್ಷಗಳು ಮಾಡಿಕೊಂಡಿವೆ. ಇದರಿಂದ, ಕಾಂಗ್ರೆಸ್‌ನ ಬಲ ಗುಂದುವುದು; ಅದು ಅಕ್ರಿಯವಾಗಿ ಶಕ್ತಿಹೀನವಾಗಿ ದುರ್ಬಲಗೊಳ್ಳುವುದು. ಪಕ್ಷದ ಸಂಘಟನೆ ಶಿಥಿಲವಾದರೆ, ಪಕ್ಷಕ್ಕೆ ಮತ್ತೆ ಮೃತ್ಯುವೆಂಬುದು ಬೇಡ. ಆದುದರಿಂದ ಕಾಂಗ್ರೆಸ್ ಪಕ್ಷದ ಹಿತದೃಷ್ಟಿಯಿಂದ, ಅದು ರಾಜ್ಯದಲ್ಲಿ ಇನ್ನೂ ದುರ್ಬಲವಾಗಿ ಉಳಿಯಬೇಕೆಂಬ ಆಶಯವಿರುವುದಾದರೆ, ರಾಜ್ಯದ ಶಾಸಕರು ಭಿನ್ನಾಭಿಪ್ರಾಯಗಳೆಲ್ಲವನ್ನೂ ದೂರಕ್ಕೆ ಓಡಿಸಿ, ತಾವೇ ಮೊದಲು ಆರಿಸಿದ ನಾಯಕನನ್ನು ಆತನ ಪಾಳಿಯಿರುವಷ್ಟು ಸಮಯ ಹೊಂದಿಸಿಕೊಂಡು; ರಾಜ್ಯಹಿತಕ್ಕಾಗಿ, ಪ್ರಜೆಗಳ ಪುನರುತ್ಥಾನಕ್ಕಾಗಿ ದುಡಿಯಲು ಬದ್ಧಕಂಕಣರಾಗಬೇಕು. ಇದರಿಂದ ಅವರಿಗೂ ಕೀರ್ತಿ, ಪಕ್ಷಕ್ಕೂ ಗೌರವ; ರಾಜ್ಯಕ್ಕೂ ಹಿತಕರ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 331/1960.

ರುಕ್ಮಿಣಿ ಹೆಗ್ಗಡ್ತಿ —ವಾದಿಳು.

ಶಿಟ್ಟ ಶೆಟ್ಟಿ ಸಹಾ —ಪ್ರತಿವಾದಿರು,

1. ಶಿಟ್ಟ ಶೆಟ್ಟಿ. 2. ಜಲಜ ಶೆಡ್ತಿ, ಶೀನಿ ಶೆಡ್ತಿ ರ ಮಕ್ಕಳು—

5. ಸುಂದರ ಶೆಟ್ಟಿ, ಶಂಕರಿ ಶೆಡ್ತಿ ಮಗ-ಕಾರ್ಕಳ ತಾಲ್ಲೂಕು ನೀರೆ ಗ್ರಾಮದ ಅರಂತಬೆಟ್ಟನಲ್ಲಿರುವವರು.

ಸದ್ರಿ 1, 2, 5ನೇ ಪ್ರತಿವಾದಿರಾದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ,

ನೀವು ಕೂಡಾ ವಾದಿವಳಗೆ ಮೂಲಗೇಣಿ ಹಕ್ಕಿನಿಂದ ಅನುಭವಿಸಿ ಬರುವ ಆಸ್ತಿಯ ಬಾಬ್ತು ಕಳದ ತಾರೀಕು 31–3–60ಕ್ಕೆ ವಾದಿಳಿಗೆ ಬರತಕ್ಕ ಮೂಲಗೇಣಿ, ಗೇಣಿ ಬಡ್ಡಿ ಕೂಡಾ ರೂ. 159–00ಕ್ಕೆ ವಾದಿಳು ದಾಕ್ಲು ಮಾಡಿದ ಸದ್ರಿ ದಾವೆಯು ತಾರೀಕು 5–10–60ಕ್ಕೆ ನಿಮಗೆ ಆಕ್ಸರ ನೋಟೀಸಿಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜರಾಗಿ ಉದಾಹರಣೆ ಕೊಡತಕ್ಕದ್ದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. V. Kamath,
Advocate for Plaintiff.
Karkal, 11—9—60.

ಚಿಲ್ಲರೆ ನಯೆಪೈಸೆಗಳೆ?
ಹತ್ತು, ನೂರರ ನೋಟುಗಳೆ?
ಯಾವುದೇ ಇರಲಿ—
ವ್ಯವಸ್ಥಿತವಾಗಿ ಉಳಿಸಿ;
ಅಭಿವೃದ್ಧಿಯನ್ನು ಗಳಿಸಿ.

ದಿನದ ಇಪ್ಪತ್ತೈದು ನಯೆಪೈಸೆಗಳು ಏಳು ವರುಷಗಳಲ್ಲಿ ಏಳುನೂರು ರೂಪಾಯಿಗಳ ನಿಧಿಯನ್ನು ನಿಮಗೆ ತಂದೊಪ್ಪಿಸುವ,

ಪಿಗ್ಮಿ

ಸಿಂಡಿಕೇಟ್ ಬೇಂಕ್ ಮೊದಲಾಗಿ ಪ್ರಾರಂಭಿಸಿದ ಮತ್ತೀಗ ಸರ್ವ ಜನಪ್ರಿಯವಾದ ಚಿಕ್ಕ ಉಳಿತಾಯ ಯೋಜನೆ.

ವರುಷದ ಒಂದು ಸಾವಿರ ರೂಪಾಯಿಗಳು (ನೀವು ಇನ್ನೂರ ಐವತ್ತರಿಂದಲೂ ಪ್ರಾರಂಭಿಸಬಹುದು) ಮೂವತ್ತೈದು ವರುಷಗಳಲ್ಲಿ ನೂರು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಸಂಪತ್ತನ್ನು ಕೂಡಿಸಿ ಕೊಡುವ

ಇನ್ವೆಸ್ಟರ್ಸ್ ಏಜನ್ಸಿ

ಭಾರತೀಯ ಬೇಂಕಿಂಗ್ ಕ್ಷೇತ್ರದಲ್ಲೇ ನವೀನವಾಗಿ ಸಿಂಡಿಕೇಟ್ ಬೇಂಕ್ ಕೈಗೊಂಡಿರುವ ಮತ್ತೀಗ ಜನಾನುರಾಗ ಗಳಿಸುತ್ತಿರುವ ವಿನಿಯೋಗ ವಿಭಾಗ

ನಿಮಗೆ ಬೇಕಾದ ವಿವರಗಳನ್ನೀಯಲು ನಮ್ಮ ನೂರಮೂವತ್ತೊಂಬತ್ತು ಶಾಖೆಗಳು ಸಿದ್ಧವಾಗಿವೆ.

ಅಥವಾ ನೀವು ನೇರವಾಗಿ ನಮ್ಮ ಪ್ರಧಾನ ಕಾರ್ಯಾಲಯಕ್ಕೆ ಬರೆಯಬಹುದು.

ದಯಮಾಡಿ ಯೋಚಿಸಿ:

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಮುಕುಂದ ನಿವಾಸ, ಉಡುಪಿ
ಸ್ಥಾಪನೆ: ೧೯೨೫

'NAVAYUGA' WEEKLY is in the list of periodicals and Newspapers approved or use in Secondarys School as per proceedings Roc. No. 466 N/50 date 2-12-1950 of the Director of public Instruction Madras.

Edited, Printed & Published by K. H, Shetty, at the Navayuga Press, Udipi, S. India.

40th year of publication. 29-9-1960 ೪೦ನೇ ವರ್ಷ

ಸಂಪುಟ ೪೦ Vol. 40

ಸಂಚಿಕೆ ೫ No. 5

ಬೆಲೆ 0-13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಸಹೋದರ ಪ್ರೇಮ ಬೆಳೆದು ಬರಲಿ

> ಭಾರತ-ಪಾಕ್‌ಗಳ ನಡುವಣ ವಿರಸವೀಗ ಕೊನೆಗೊಂಡು ಸರಸವುಕ್ಕಿ ಹರಿಯತೊಡಗಿದೆ. ಈ ಸಹೋದರ ಸದ್ಭಾವನೆ ಮುಂದೆಯೂ ಬೆಳೆದ ಬಂದು, ಉಭಯ ರಾಷ್ಟ್ರಗಳು ಮೈತ್ರಿಯಿಂದಿರುವುದೇ ಅವುಗಳ ಹಿತಕ್ಕೆ ಹೇತು.

ಸಿಂಧೂ ನದಿಯ ಜಲಾನಯನದ ನೀರು ಹಂಚಿಕೆಯ ಬಗ್ಗೆ ಉಭಯ ಸಮ್ಮತಿಯಿಂದ ಸಹಿ ಮಾಡಲಾದ ಒಪ್ಪಂದವು ಭಾರತ ಮತ್ತು ಪಾಕಿಸ್ತಾನೀಯ ಜನತೆಯನ್ನು ಅತಿನಿಕಟಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಬಲ್ಲುದು. ಪಾಕಿಸ್ತಾನವು ಜನನವಾದೊಡನೆಯೇ ಅದರ ಜೊತೆಯಲ್ಲೇ ಹುಟ್ಟಿಕೊಂಡ ಈ ಸಮಸ್ಯೆ ಕಾಲುವೆ ನೀರ ಪ್ರಶ್ನೆಯೆಂದು ವಿಶ್ವವಿದಿತವಾಗಿದೆ. ಜಾಗತಿಕ ಬ್ಯಾಂಕಿನ ಉಪಾಧ್ಯಕ್ಷ ಶ್ರೀ ಡಬ್ಲ್ಯು. ಎ. ಬಿ. ಇಲಿಫರು ಈ ಎರಡೂ ರಾಷ್ಟ್ರಗಳಲ್ಲಿ ಒಂದು ಒಪ್ಪಂದವಾಗುವ ಬಗ್ಗೆ ಕೆಲವಾರು ವರ್ಷಗಳಿಂದ ಶ್ರಮಿಸಿದ್ದು, ಸದ್ಯ ಅವರ ನಿರಂತರ ಪರಿಶ್ರಮ ಸಫಲಗೊಂಡಂತಾಯಿತು. ೧೯೫೪ರಲ್ಲಿ ಜಾಗತಿಕ ಬ್ಯಾಂಕು ಉಭಯ ರಾಷ್ಟ್ರಗಳಿಗೂ ಈ ಸಮಸ್ಯಾ ಪರಿಹಾರದ ಬಗ್ಗೆ ಕೆಲವೊಂದು ಸಲಹೆಯಿತ್ತಿತು. ಇವುಗಳನ್ನು ಅಂದು ಭಾರತವು ಒಪ್ಪಿಕೊಂಡಿದ್ದರೂ ಪಾಕಿಸ್ತಾನವು ಸ್ವೀಕರಿಸದಿದ್ದುದರಿಂದ ಅಂದು ಒಡಂಬಡಿಕೆಯಾಗಲಿಲ್ಲ. ಈಗ ಇವೇ ಸಲಹೆಗಳ ಆಧಾರದಿಂದ ರೂಪುಗೊಂಡ ಒಪ್ಪಂದವು ಉಭಯ ಸಮ್ಮತವಾದುದರಿಂದ ಈ ರಾಷ್ಟ್ರಗಳ ಇತಿಹಾಸದಲ್ಲಿಯೇ ಒಂದು ನೂತನ ಮನ್ವಂತರೋದಯವಾಯಿತು.

ಸಿಂಧೂನದೀ ಜಲಾನಯನದಲ್ಲಿರುವ ಒಟ್ಟು ೧೬೮ ಲಕ್ಷ ಎಕ್ರೆ ಅಡಿ ನೀರಿನಲ್ಲಿ ಸೇಕಡಾ ೮೦ರಷ್ಟನ್ನು ಮುಂದಿನ ಹತ್ತು ವರ್ಷಗಳ ವರೆಗೆ ಮತ್ತು ಕೆಲವೊಂದು ಶರತ್ತುಗಳ ಮೇರೆಗೆ ಆ ಮೇಲೆ ನೂರು ವರ್ಷಗಳವರೆಗೆ ಭಾರತವು ಪಾಕಿಸ್ತಾನಕ್ಕೆ ಕೊಡುವುದು. ಈ ಅವಧಿಯೊಳಗೆ ಪಾಕಿಸ್ತಾನವು ಆವಶ್ಯಕ ಕಾಲುವೆಗಳನ್ನು ನಿರ್ಮಿಸಿಕೊಳ್ಳದೆ ಹೋದರೆ, ಆ ಮೇಲೆ ಭಾರತವು ನೀರು ಕೊಡಲು ಹೊಣೆಗಾರವಾಗಿರುವುದಿಲ್ಲ. ಪಾಕಿಸ್ತಾನಕ್ಕೆ ಕೂಡ ಕಾಲುವೆಗಳ ರಚನೆಗಾಗಿ ಭಾರತವು ೮೩.೬ ಕೋಟಿ ರೂಪಾಯಿಗಳನ್ನು ಸಹಾಯ ರೂಪದಲ್ಲಿ ಹತ್ತು ವಾರ್ಷಿಕ ಸಮ ಕಂತುಗಳಲ್ಲಿ ಕೊಡುವುದು. ಜಮ್ಮು ಮತ್ತು ಕಾಶ್ಮೀರ, ಪಂಜಾಬು ಮತ್ತು ಹಿಮಾಚಲ ಪ್ರದೇಶಗಳಲ್ಲಿ ಸಾಗುವಳಿಗೆ ಆವಶ್ಯಕವೆನಿಸುವಷ್ಟು ನೀರನ್ನು ಇದೇ ಜಲಾನಯನದಿಂದ ದೊರಕಿಸಿಕೊಳ್ಳಲು ಒಡಂಬಡಿಕೆಯಲ್ಲಿ ಸಾಕಷ್ಟು ಭದ್ರತೆಯನ್ನು ನೀಡಲಾಗಿದೆ.

ಕಾಲುವೆ ನೀರಿನ ಒಪ್ಪಂದವು ಸಮಾಧಾನಕರವಾಗಿ ಬಗೆ ಹರಿದುದರಿಂದ, ಇನ್ನು ಮುಂದೆ ಪರಿಹಾರ ಕಾಣದೆ ಇರುವ ಕೆಲವೊಂದು ಸಮಸ್ಯೆಗಳೂ ಉಭಯ ಸಮ್ಮತಿಯಿಂದ ಕೊನೆಗಾಣುವುದೆಂಬ ಆಶೆಯಿಟ್ಟುಕೊಳ್ಳಬಹುದು. ಪಾಕಿಸ್ತಾನದಲ್ಲಿ ಸಂಚರಿಸಿದ ನೆಹರು ಮತ್ತು ಅವರನ್ನು ಕೂಡಿಕೊಂಡಿದ್ದ ಜ|| ಅಯೂಬಖಾನರು ವಿವಿಧೆಡೆಗಳಲ್ಲಿ ಹೊರಡಿಸಿದ ಉದ್ಗಾರಗಳಿಂದ ಮೊದಲು ಒಂದೇ ಸಂಸ್ಕೃತಿ ಮತ್ತು ಇತಿಹಾಸಗಳೊಡನೆ ಬೆಳೆದು ಬಂದಿರುವ ಉಭಯ ರಾಷ್ಟ್ರಗಳಲ್ಲಿ ಮಧುರ ಬಾಂಧವ್ಯವಿರಬೇಕೆಂದು ಬಯಸುವಂತಿದೆ; ಮತ್ತು ಇದು ಅಪೇಕ್ಷಣೀಯವೂ ಆಗಿದೆ. ಈಗಾಗಲೇ ಆರ್ಥಿಕ ಮತ್ತು ಸೀಮಾ ವಿವಾದಗಳ ಬಗ್ಗೆ ಮುತುವರ್ಜಿಯಿಂದ ಇಕ್ಕಡೆಗಳಲ್ಲೂ ವಿಚಾರ ವಿನಿಮಯ ಸಾಗತೊಡಗಿದೆ; ಇವೂ ಸದ್ಯದಲ್ಲಿಯೇ ಮುಕ್ತಾಯಗೊಳ್ಳಬಹುದೆಂದು ನಿರೀಕ್ಷಿಸಬಹುದು. ಆಗ ಉಳಿಯುವುದು ಕಾಶ್ಮೀರದ ಮಾತು ಮಾತ್ರ. ಅಧ್ಯಕ್ಷ ಅಯೂಬರು ಕಾಶ್ಮೀರ ಪ್ರಶ್ನೆಯನ್ನೂ ಸೌಹಾರ್ದಯುತವಾಗಿಯೇ ಬಿಡಿಸಬಹುದು; ಇದಕ್ಕಾಗಿ ಹಿಂದಿನ ಧೋರಣೆಯನ್ನೇ ಅವಲಂಬಿಸಿರಬೇಕಾಗಿಲ್ಲ ಎಂಬರ್ಥದಲ್ಲಿ ಇತ್ತೀಚೆಗೆ ಆಡಿದ ಮಾತುಗಳನ್ನು ಗಮನಿಸಿದರೆ, ಪಾಕಿಸ್ತಾನಕ್ಕೆ ಕಾಶ್ಮೀರದ ಪ್ರಶ್ನೆಗಿಂತಲೂ ನೀರಿನ ಸಮಸ್ಯೆಯೇ ಹಿರಿದಾಗಿತ್ತು ಎಂದು ಹೇಳಬಹುದು. ಕಾಲುವೆ ನೀರಿನ ವಿವಾದವನ್ನು ಮತ್ತಷ್ಟು ಬಲಪಡಿಸುವುದಕ್ಕಾಗಿ ಮತ್ತು ತನ್ಮೂಲಕ ಅತ್ಯಧಿಕ ನೀರನ್ನು ಪಡೆಯುವುದಕ್ಕಾಗಿಯೇ ಪಾಕಿಸ್ತಾನದ ಹಿಂದಿನ ಮಂತ್ರಿಮಂಡಳಿಗಳು ಕಾಶ್ಮೀರದ ಪ್ರಶ್ನೆಯನ್ನು ಅಚಲವಾಗಿ ಹಿಡಿದುಕೊಂಡು ಅದರಲ್ಲಿಯೇ ಜೋತಾಡಿದುವೆನ್ನಬಹುದು.

ಹಾಗೆಂದು ಕಾಶ್ಮೀರವನ್ನು ಇದ್ದಕ್ಕಿದ್ದಂತೆಯೇ ಇನ್ನೊಬ್ಬರಿಗೆ ಬಿಟ್ಟುಕೊಡಲು ಇಬ್ಬರಲ್ಲಿ ಯಾರೂ ಸಿದ್ಧರಿಲ್ಲವೆಂಬುದು ನ್ಯಾಯವೇ. ಭಾರತವಂತೂ ಅದು ತನ್ನದೇ ಎಂದು ಹಿಂದಿನಿಂದಲೂ ಹೇಳಿಕೊಂಡು ಬಂದಿದೆ. ಇಲ್ಲಿ ಅಬಲವಾಗಿರುವುದು ಪಾಕಿಸ್ತಾನದ ವಾದಗಳು. ಈಗ ವಿಶ್ವಸಂಸ್ಥೆಯ ಮುಂದೆ ಈ ಪ್ರಶ್ನೆಯಿರುವುದಾದರೂ ಅದೇನೂ ಕಾರ್ಯಕ್ರಮ ಕೈಗೊಳ್ಳುವ ಸ್ಥಿತಿಯಲ್ಲಿಲ್ಲದಿರುವುದರಿಂದ, ಅಪೇಕ್ಷಿಸುವುದಾದರೆ, ಪ್ರಶ್ನೆಯನ್ನು ಹಿಂತೆಗೆದುಕೊಳ್ಳಲು ಭಾರತ ಮತ್ತು ಪಾಕಿಸ್ತಾನಗಳಿಗೆ ಅವಕಾಶ ನೀಡುವುದು. ಉಭತರರ ನಡುವೆ ಅರ್ಥ ಅಭಿಪ್ರಾಯ, ಅಪೇಕ್ಷೆಗಳು ಸಮಾನತೆ ಹೆಚ್ಚಿದಂತೆ ಸಮಸ್ಯೆಗಳ ಪರಿಹಾರ ಸುಲಭ ಸಾಧ್ಯವಾಗುವುದರಿಂದ, ಮುಂದಿನ ವಿವಾದ ಗ್ರಸ್ತವಿಷಯಗಳೂ ಸಮುಚಿತ ಮಾರ್ಗದಲ್ಲಿ ಕೊನೆಗಂಡು, ಸಹೋದರ ರಾಷ್ಟ್ರಗಳಾಗುವವೆಂದು ಹಾರಯ್ಸಬಹುದು.

ಅಮೇರಿಕೆಯಲ್ಲಿ ಅಧ್ಯಕ್ಷ ಚುನಾವಣೆ

೧. ಅಮೇರಿಕೆಯಲ್ಲಿ, ಸ್ವಾಭಾವಿಕವಾಗಿ ಸ್ವದೇಶದಲ್ಲಿ ಹುಟ್ಟಿದ ೩೫ ವರ್ಷ ಪ್ರಾಯದ ನಾಗರಿಕನು ಮಾತ್ರ ಅಧ್ಯಕ್ಷ ಸ್ಥಾನಕ್ಕೆ ಉಮೇದ್ವಾರನಾಗಲು ಸಮರ್ಥನು. ೧೭೮೯ರಲ್ಲಿ ಈ ಸಂಯುಕ್ತ ಸ್ಥಾನಗಳು ಸ್ಥಾಪಿತವಾದಂದಿನಿಂದ ೩೩ ಜನ ಅಧ್ಯಕ್ಷರು ಆಗಿ ಹೋದರು. ೨. ಹೆಚ್ಚಿನ ಅಮೇರಿಕನ್ ಅಧ್ಯಕ್ಷರ ಪ್ರಾರಂಭಿಕ ಜೀವನವು ಕಷ್ಟಪ್ರದವಾಗಿತ್ತು. ಅಬ್ರಹಂ ಲಿಂಕನ್ನನ ಜೀವನವೇ ಇದಕ್ಕೆ ಮಹತ್ಸಾಕ್ಷಿ. ೩. ನಾಲ್ಕು ವರ್ಷಗಳ ಒಂದು ಅವಧಿಯವರೆಗೆ ಜನತೆಯಿಂದ ಚುನಾಯಿತನಾದ ಅಧ್ಯಕ್ಷನು ಅಧಿಕಾರದಲ್ಲಿರುವನು; ಒಬ್ಬನು ಎರಡು ಅವಧಿಗಳಿಗಿಂತ ಹೆಚ್ಚು ಕಾಲ ಈ ಹುದ್ದೆಯಲ್ಲಿರಲಾರನು.

ಚಂದಾದಾರರಲ್ಲಿ ವಿನಂತಿ

ಇದೀಗ 'ನವಯುಗದ ೩೯ನೆಯ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ ೪೦ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ"ದ ಖಾತೆಗೆ ಯಾವದೊಂದು ಇತರದ ಖರ್ಚೂ ಇಲ್ಲದೆ ಪಾವತಿಮಾಡಬಹುದಾಗಿದೆ.

—ಮೆನೇಜರ್

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಬಹುದೂರದ ದಾರಿಯತ್ತ......

ತನ್ನ ಕಿರಿಯ ಮಗನ ದುಶ್ಚಟಗಳಿಯಿಂದ ರೋಸಿ ಹೋದ ನಾರಣಪ್ಪ ಹಿರಿಯ ಮಗನಲ್ಲಿಗೆ ತೆರಳಲು ಬಸ್ಸು ಹತ್ತಬಯಸಿದರೆ, ಆ ಕಂಡಕ್ಟರನು ಕಿರಿಯ ಮಗನಿಗಿಂತಲೂ ಕೆಟ್ಟವನಾಗಿ ಬಿಟ್ಟ. ಆಗ ನಾರಣಪ್ಪ ಬಹುದೂರದ ದಾರಿಯತ್ತ...

ಶ್ರೀ ಎಚ್. ರಾಮಕೃಷ್ಣ ಅಡಿಗ,

ಶಾಮೂಗೆ ಒಪ್ಪದೇ ಬೇರೆ ಮಾರ್ಗವಿರಲಿಲ್ಲ. ಅಂತೂ ಕಟ್ಟಕಡೆಗೆ ಆ ಅಪರಿಚಿತ ವ್ಯಕ್ತಿಗೆ ಕಾಗದ ಬರೆದು ಕೊಡುವುದಾಗಿ ಹೇಳಿ ಲೇಖನಿಯನ್ನು ಸರಿಮಾಡಿಕೊಂಡು, ಅಂಗಡಿಯ ಹೊರಗಿನ ಬೆಂಚಿಗೆ ಬಂದು ಕುಳಿತ.

ಒಳಗಿನ ಸ್ಟೂಲಿನಲ್ಲಿ ಪೇಪರು ಓದುತ್ತ ಕುಳಿತಿದ್ದ ನಾನು ಶಾಮುವಿನ ವರ್ತನೆಯ ಬಗ್ಗೆಯೇ ಆಲೋಚಿಸ ಹತ್ತಿದೆ.

ಹಳ್ಳಿಗರೆಂದರೆ, ಆತನಿಗೆ ಎಲ್ಲಿಲ್ಲದ ತಿರಸ್ಕಾರ. ತಾನು ಅಂಗಡಿ ಮುಚ್ಚಿ ಬೊಂಬಾಯಿಯತ್ತ ಹೋಗುವೆನೆಂದು ಆತ ಪ್ರತಿವರ್ಷವೂ ಬೇಸಗೆಯ ರಜೆಯಲ್ಲಿ ಮನೆಗೆ ಬಂದ ನನ್ನೊಡನೆ ಹೇಳುವುದು ವಾಡಿಕೆ. ಒಂಬತ್ತನೆ ವರ್ಷದಲ್ಲಿ ವಿದ್ಯೆಗೆಂದು ಹಳ್ಳಿಯನ್ನು ಬಿಟ್ಟು ಇನ್ನೂ ಪಟ್ಟಣವನ್ನೇ ಸುತ್ತುತ್ತಿದ್ದ ನನಗೆ ಹಳ್ಳಿಯನ್ನು ಕಾಣುವುದೆಂದರೆ, ನಂದನವನವನ್ನು ಕಂಡಂತೆ. ಹಾಗಾಗಿ ನನ್ನ ಹಳ್ಳಿಯ ವರ್ಣನಾ ವೈಖರಿಗೆ ಮನಸೋತ ಶಾಮಣ್ಣ ಊರಲ್ಲೇ ನಿಂತಿದ್ದ. ರಜೆಯಲ್ಲಿ ನನಗೆ ಹೊತ್ತು ಕಳೆಯಲು ಒಂದು ಅಂಗಡಿ; ಮಾತನಾಡಲು ಒಬ್ಬ ಶಾಮಣ್ಣ.

ಅಂದೂ ಹಾಗೆಯೇ—ಹರಟೆ ಹೊಡೆಯುತಿದ್ದೆವು. ಅನಿರೀಕ್ಷಿತ ವೇಳೆಯಲ್ಲಿ ಬಂದ ಮಳೆ ಪೇಟೆಯ ಸೊಬಗನ್ನೇ ಕೆಡಿಸಿತ್ತು. ಆ ಮಾತು ಈ ಮಾತು ಬೆಳೆಯುತ್ತ ಸಾಗಿರಲು, "ಸ್ವಾಮಿ, ಒಂದು ಕಾಗದ ಬರ್ದು ಕೊಡ್ತೀರಾ?" ಎಂದೊಂದು ಹಳೆಯ ಹಳ್ಳಿಯ ವ್ಯಕ್ತಿ ಶಾಮಣ್ಣನನ್ನ ಕೇಳಿದ.

"ಇದೇನು ರಜಿಸ್ಟ್ರ ಆಫೀಸ್?....ಇವರು ರಜಿಸ್ಟ್ರಾರ?" ಈ ಮಾತಿನಿಂದುಂಟಾದ ನೋವು, ನನಗೆ ಬಂದ ನಗೆಯನ್ನ ಅಲ್ಲೇ ಹತ್ತಿಕ್ಕಿತು. "ನನ್ನೊಡನೆ ಹೇಳಿದ್ರೆ ನಾನಾದ್ರೂ ಬರೆದು ಕೊಡ್ತಿದ್ದೆ" ಎಂಬಷ್ಟಾಯಿತು, ನನಗೆ, ಆ ವ್ಯಕ್ತಿಯ ಮುಖ ನೋಡಿ;

"ಹೂಂ" ಎಂದು ಆ ವ್ಯಕ್ತಿ ಅತ್ತಿತ್ತ ನೋಡಿ ಕಂಬಕ್ಕೊರಗಿ ನಿಂತು ಪುನಃ ಕೇಳಿತು,

"ಬೀಡಿ ಇದೆಯೆ" "ಹೌದು" ಶಾಮಣ್ಣ ತಗ್ಗಿದ ದನಿಯಲ್ಲಿ ಉತ್ತರಿಸಿದ.

"ಒಂದು ಕಟ್ಟು ಕೊಡಿರಿ".

ಅವರ ಲೇವಾದೇವಿ ಮುಗಿಯಿತು. ಆತ ಬೀಡಿ ಹಚ್ಚಿದ. ಪ್ರಾಯಶಃ ಈತನಕ ಬೀಡಿ ಸೇದಿದ ಕೈ ಅದಲ್ಲ ಎಂಬುದು, ಆತನ ನಡೆವಳಿಕೆಯಿಂದ ಸ್ಪಷ್ಟ ತಿಳಿಯುವಂತಿತ್ತು. ಓರೆಗಣ್ಣಿನಿಂದ ನೋಡಿ, ಮತ್ತೆ ಪತ್ರಿಕೆಯತ್ತ ಗಮನವಿತ್ತೆ.

"ಹತ್ತು ನಯೇಪೈಸಾ ಕೊಟ್ಟು ಕಾಗದ ತಂದಿದ್ದೇನೆ. ಒಂದು ದಯವಿಟ್ಟು ಬರ್ದು ಕೊಡಿ ಸ್ವಾಮಿ........ ಅಷ್ಟೊಂದು ಉಪಕಾರವಿದ್ಲಿ"

ಶಾಮೂ ನನ್ನನ್ನ ನೋಡಿದ. ನಾನು ಹುಬ್ಬು ಬಾಯಿಗಳಿಂದ 'ಬರೆದು ಕೊಡು ಮಾರಾಯ' ಎಂದು ಸೂಚಿಸಿದೆ. ಆತ ಹೊರಗಿನ ಬೆಂಚಿಗೆ ಹೋಗಿ ಕುಳಿತು, "ಹ್ಞಾಂ.... ಯಾರಿಗೆ?" ಎಂದ.

"ನನ್ನ ಮಗನಿಗೆ, ಅಂದರೆ ಆತ ಬೊಂಬಾಯಿಯಲ್ಲಿದ್ದಾನೆ. ಹೋಗಿ ನಾಲ್ಕು ವರ್ಷ ಆಯ್ತು. ಒಂದು ಪಾವಾಣೆ ಕಳ್ಸಿದ್ದಿಲ್ಲ. ಹೋದ ಕೂಡ್ಲೆ ಸೌಖ್ಯವಿಲ್ಲ ಎಂದದ್ದಕ್ಕೆ ನೂರು ರೂಪಾಯ್ಯ ನಾನೇ ಕಳ್ಸಿದ್ದೆ.... "

"ಹೂಂ. ಸಾಕು. ಇದೇ ಸ್ಪೀಡಿನಲ್ಲಿ ಹೋಗಲಿಕ್ಕೆ ನಾನೇನು ನೌಕರಿಯವನೆ? ಆತ ಹೋಗಿ ನಾಲ್ಕು ವರ್ಷ ಆಯ್ತು. ಮುಂದೆ?" ಶಾಮೂವಿನ ಮಾತಿಗೆ ನನ್ನೊಡನೆ ಆ ವ್ಯಕ್ತಿ ನಕ್ಕಿತು. ನಾನು, 'ನಿಮ್ಮ ಹೆಸರು?' ಎಂದದ್ದಕ್ಕೆ 'ನಾರಣಪ್ಪ' ಎಂದುತ್ತರ ಬಂತು.

"ನಾರಣಪ್ಪ, ನೀವು ಕಾಗ್ದ ಬೊಂಬೇಲಿರುವ ಮಗನಿಗೆ ಬರೆಯುವುದು. ಏನೆಂತ ಬರೀಬೇಕು? ಹಣ ಕಳಿಸಲಿಕ್ಕೆಯೆ?" ಎಂದು ಬಿಕ್ಕಟ್ಟನ್ನು ಪರಿಹರಿಸಿ ಬಿಡನೆ ಕ್ಲಾಸಿನ ತನಕ ಕಲಿತ ಶಾಮೂಗೆ ಪತ್ರ ಬರೆಯಲು ಎಡೆ ಮಾಡಿಕೊಟ್ಟೆ.

"ಹಾಗಲ್ಲ ಕೇಳಿ..." ಎಂದು ನಾರಣಪ್ಪ ದೂರದ ಚಡಿಗೆ ಎಂಜಲುಗುಳಿ ಹೇಳತೊಡಗಿದ: "ಅವನೂ ನಮ್ಮ ಮನೇಲೇ ಇದ್ದಿದ್ದ. ಎರಡು ಗಂಡು ಮಕ್ಳು ನಂಗೆ ಈ ಬೊಂಬಾಯಿಯಲ್ಲಿದ್ದವ ಹಿರ್ಯ. ಅತ್ನಿಗೆ ನನ್ನ ಹೆಂಡ್ತೀ ಅಂದಂತೆ ಮದ್ವೆ ಮಾಡ್ಸಿದೆ. ಎರಡು ವರ್ಸ್ದಲ್ಲೇ ನನ್ಮೇಲೆ ಸಿಟ್ಮಾಡಿಕೊಂಡು ಇದ್ದ ಬಿದ್ದ ಕೈಗೆ ಸಿಕ್ಕ ಕಾಸುಗಳನ್ನು ಹೊತ್ಕೊಂಡು ಬೊಂಬಾಯಿಗೆಂತ ಓಡಿಹೋದ. ನಾನೇನೋ ದುಡಿದು ನಾಲ್ಕು ಕಾಸು ಕೂಡಿಟ್ಟಿದ್ದೇನೆ—ಮಕ್ಳಿಗೇ ಅಂತ. ಅವರಿಗೆ ಸಿಗುವುದನ್ನ ಅವರೇ ಹಾಳುಮಾಡಿಕೊಂಡರು ಅಂತ ಸುಮ್ಮಗೆ ಇದ್ದೆ... ಈಗ ಎರಡನೆಯವನದ್ದೂ ಮದ್ವೆ ಆಯ್ತು ನೋಡಿ. ಆ ಮಹಾರಾಯಿತಿ ಮನೆಗೆ ಯಾವಾಗ ಕಾಲಿಟ್ಳೊ ಕಲಿಕಾಲಿಟ್ಟಂಗಾಯ್ತು...." ಎಂದು ನಾರಣಪ್ಪ ಅಲ್ಲೇ ಕೆಳಗೆ ಕುಳಿತುಕೊಂಡನು. ಒಂದು ಕೊಡೆ ಮತ್ತೊಂದು ಗಂಟು ಅವರ ಬಳಿಯಲ್ಲೇ ತೆಪ್ಪಗೆ ಬಿದ್ದುಕೊಂಡವು. ನನ್ನ ಕೈಲಿದ್ದ ಪತ್ರಿಕೆ, ಶಾಮೂ ಕೈಲಿದ್ದ ಲೇಖನಿ ಹಾಗೆಯೇ ಇದ್ದುವು ಸ್ತಬ್ಧವಾಗಿ.

"ಅವನು ನನ್ನನ್ನು ಚೆನ್ನಾಗಿ ಕಾಣುತ್ತಿದ್ದ. ಆಕೆ ಬಂದಾಗ್ಲೇ ನನಗೂ ನನ್ನ ಮಗನಿಗೂ ಜಗಳ ಹುಟ್ಟಿಸಿದಳು. ಇಲ್ಲದ ಒಡಕನ್ನೂ ತಂದು ಹಾಕಿದಳು. ನೋಡಿ, ನನ್ನ ಹೊಟ್ಟೆಯಲ್ಲಿ ಹುಟ್ಟಿದಂತಹ ಜೀವಿಯನ್ನಾಕೆ ಹಾಳ್ಮಾಡಿದ್ಳಾಳೆ ಮಾಟಗಾತಿ.

"ಸ್ವಾಮಿ, ಎಂತಿದ್ದರೂ ಕೇಳ್ತಿದೀರಿ. ಎಲ್ಲಾ ಕತೆ ಹೇಳ್ತೇನೆ" ಎಂದು ಉಗುಳು ನುಂಗಿ ನಾರಣಪ್ಪ ಮತ್ತೆ ಕತೆ ಮುಂದುವರಿಸಿದ: 'ನಾನೂ ಊರು ಬಿಟ್ಟು ಗಟ್ಟದ ಮೇಲೆ ಹೋದವನೆ. ಅಲ್ಲಿ ದುಡಿದ ಆಳಾಗಿ, ಕಡೆಗೆ ನಾಲ್ಕಾರು ಜನರನ್ನು ದುಡೀಲಿಕ್ಕೆ ಜತೆಗೆ ಕರಕೊಂಡು ನಾಲ್ಕು ಕಾಸು ಮಾಡಿ, ಊರಿಗೆ ಬಂದು, ಈಗ ಒಂದು ಮನೆ ಗಿನೆ ಅಂತ ಮಾಡಿಕೊಂಡಿದ್ದೇನೆ— ಅಂದರೆ, ನನ್ನ ಸ್ವಂತದ್ದಲ್ಲ—ಒಕ್ಲು—ಗೇಣಿ ಹಾಕಿಕೊಂಡಿದ್ದೇವೆ. ಅದರಲ್ಲೇ ಒಂದಿಷ್ಟು ಕೃಷಿವೂ ಡಿಕೊಂಡಿದ್ದೇವೆ."

ನಾಳೆ ಬೆಳಗ್ಗೆ ಅಲ್ಲಿ ನಿಲ್ಲುವುದು ಅನಿಶ್ಚಿತವಾಗಿದ್ದರೂ ಆತನ ದೃಢ ನಂಬಿಕೆಯನ್ನು ಕಂಡು ನನಗೆ ಆಶ್ಚರ್ಯವಾಯ್ತು.

"ಆದರೆ, ಈಗ ಈಗ ಅವನ್ನೆಲ್ಲಾ ಕಳೆದ ಸ್ವಾಮಿ – ನಮ್ಮ ಮನೆಯ ಚಿನ್ನ ಬೆಳ್ಳಿಯನ್ನೆಲ್ಲಾ ಕದ್ದು ಮಾರಿದ—ಯಾರಿಗೆ ಮಾರಿದ್ದು ಎಂಬುದು ತಿಳಿದಿದ್ರೂ ನಮ್ಮ

(೭ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಹಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಚೇರಿ : ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ಪ್ಯಾದಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.

ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಬಡ್ಡಿ ದರಗಳು

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ಸದ್ಯದಲ್ಲೆ ತೆರೆಯಲ್ಪಡುವ ಶಾಖೆಗಳು:—
ಭದ್ರಾವತಿ — ತುಮಕೂರು.

ನೋವುಗಳ ಅತ್ಯುತ್ತಮ ಸಂಹಾರಿಣೀ



ಅಮೃತಾಂಜನ

ಸತ್ಯದರ್ಶನ

ಸರ್ವಸಮತಾಭಾವ—ಸಮಗ್ರದೃಷ್ಟಿ

ಸರ್ವಪ್ರಕಾರದ ಬಂಧನಗಳಿಂದ ಮುಕ್ತರಾದರೆ, ಆತ್ಮ ಸ್ವರೂಪವನ್ನು ಕಾಣಬಹುದು: ಸರ್ವಸಮತಾಭಾವನೆಯೇ ಇದಕ್ಕೆ ಹೇತು; ಆಗಲೇ ಆತ್ಮಾನಂದ ಪ್ರಾಪ್ತಿಯಾಗುವುದು—ಎಂಬ ವಾದ ಅವತಾರಿ ಶ್ರೀ ಕೃಷ್ಣ ಮೂರ್ತಿಯವರದು.

ಶ್ರೀ ಕೃಷ್ಣ ಮೂರ್ತಿಯವರೊಬ್ಬ ಕುತೂಹಲಕಾರಣರಾದ ವ್ಯಕ್ತಿ. ಆ್ಯನಿ ಬಿಸೆಂಟರು ಇವರನ್ನು 'ಅವತಾರ'ವೆಂದು ಹೇಳಿದ್ದರು. ಅಮೆರಿಕೆಯ ಒಂದು ಪತ್ರಿಕೆ "ಸೌಮ್ಯ ಸುಂದರ ಮನುಷ್ಯ" ಎಂದು ಹೊಗಳಿತ್ತು. ಥಿಯೊಸೊಫಿಸ್ಟ್ ಸೊಸೈಟಿಯ ಪ್ರಧಾನಾಧ್ಯಾಪಕನಾಗಲು ಇವರು ನಿರಾಕರಿಸಿದ್ದರು. ಇಂತಹ ವಿಶ್ವಸುಂದರ ಕ್ರಾಂತಿಕಾರಿ ಪುರುಷನ ದರ್ಶನ ಮಾತ್ರವಲ್ಲ, ಭಾಷಣ ಕೇಳುವುದಕ್ಕೂ ತಹತಹ ಪಡುತ್ತಿದ್ದರು.

ಮುಂಬಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್‌ನ ಅಂಗಳದಲ್ಲಿ ಕೃಷ್ಣ ಮೂರ್ತಿಯವರ ಶ್ರದ್ಧಾಳುಗಳು ಗುಂಪು ಸೇರಿದ್ದರು. ಶುಭ್ರ ವಸ್ತ್ರಧಾರಿ ಕೃಷ್ಣ ಮೂರ್ತಿಯವರು ವೇದಿಕೆಯ ಮೇಲೆ ಮಂಡಿಸಿ ತಮ್ಮ ಪ್ರವಚನಕ್ಕೆ ತೊಡಗಿದರು:

"ಸರ್ವ ಪ್ರಕಾರದ ಬಂಧನದಿಂದ ಮುಕ್ತನಾಗಿಯೇ ಮಾನವ ತನ್ನ ಆನಂದಮಯ ಸ್ವರೂಪವನ್ನು ಕಾಣಬಲ್ಲ. ಈ ನಿರ್ಬಾಧ ಆನಂದವೇ ನಮ್ಮ ಜೀವನದ ಸ್ವಭಾವ. ಈ ಸ್ವಭಾವದಲ್ಲಿ ಶಾಶ್ವತವಾಗಿದ್ದು ನಾವು ಶಾಶ್ವತ ಸಾಮ್ಯವನ್ನು ಗಳಿಸಬಲ್ಲೆವು. ಸಮಾಜದ ಅನುಚಿತ ಲಾಭ ಪಡೆಯಲಿಕ್ಕೆ ನಾವು ಆಶಿಸುವಷ್ಟು ಸಮಯ ಸಾಮಾಜಿಕ ಬಂಧನಗಳು ನಮ್ಮನ್ನು ಕಷ್ಟಕ್ಕೀಡು ಮಾಡುವುವು. ಲೋಭ ಮೋಹವನ್ನು ತ್ಯಜಿಸಿದರೆ, ಬಂಧನವೂ ಶಿಥಿಲವಾಗುವುದು. ಆತ್ಮಭಾವಕ್ಕಿಂತ ಬಂಧನಕ್ಕೆ ನಾವು ವಿಶೇಷ ಪ್ರಾಧಾನ್ಯ ನೀಡುವುದರಿಂದ ಆತ್ಮಭಾವವು ಬಂಧನದ ದಾಸನೆನಿಸಿದೆ. ಆತ್ಮ ಭಾವವನ್ನು ತೇಜಸ್ವಿಗೊಳಿಸಿದರೆ, ವಜ್ರ ಘಾತವಾದರೂ ನಮ್ಮ ಮೇಲೆ ಯಾವುದೇ ಪ್ರಭಾವ ಬೀರಲಾರದು."

ಕೃಷ್ಣ ಮೂರ್ತಿಯವರ ಈ ವಾದ ಸರಣಿಯನ್ನು ಕೇಳುವಾಗ, "ಆತ್ಮಾ ವಾರೇ ದ್ರಷ್ಟವ್ಯಃ ಶ್ರೋತವ್ಯೋ ನಿದಿಧ್ಯಾಸಿತವ್ಯಃ" ಎಂಬ ಉಪನಿಷದ್ ವಾಣಿಯ ನೆನಪಾಗುವುದು. ಭಾರತದ ಆತ್ಮನಿಷ್ಠ ಸಂಸ್ಕೃತಿಯ ಸಾರ ಭೂತಜ್ಞಾನ ವಿಮರ್ಶೆಯನ್ನೇ ಇವರು ಮಾಡುತಿದ್ದರು. ಅವರು ಮುಂದುವರಿದು ನುಡಿದ ಮಾತುಗಳು ವಿಸ್ಮಯ ಕಾರಕವಾಗಿದ್ದುವು: "ನಿಮ್ಮ ಶ್ರುತಿಸ್ಮೃತಿಗಳ ಸಂಸ್ಕಾರ ಬದ್ಧ ವಿಚಾರಗಳ ದಾಸ್ಯದಿಂದ ಬಿಡುಗಡೆ ಹೊಂದದ ಹೊರತು ನಿಮ್ಮ ಆತ್ಮವನ್ನು ಬಂಧಮುಕ್ತಗೊಳಿಸುವುದು ಸಾಧ್ಯವಿಲ್ಲ. ಬೌದ್ಧಿಕ ಮುಕ್ತಿಯೇ ಜೀವನ್ಮುಕ್ತಿಗೆ ಸಾಧನ. ನಮ್ಮ ಹೊಸ ವಿಚಾರಗಳು ಹಳೆಯ ಸ್ಮೃತಿಗಳಿಂದಲೇ ಬಿಗಿಯಲ್ಪಟ್ಟಿವೆ. ಇದೇ ನಮ್ಮ ದುರ್ದೈವ. ನಮ್ಮ ಧಾರ್ಮಿಕ ಗ್ರಂಥಗಳೂ ಅವುಗಳಲ್ಲಿ ಪ್ರತಿಪಾದಿತ ವಿಚಾರಗಳೂ ನಮ್ಮನ್ನು ತಮ್ಮ ದಾಸ್ಯ ಶೃಂಖಲೆಯಲ್ಲಿ ಬಿಗಿದಿವೆ. ಬುದ್ಧಿಯನ್ನು ಶ್ರದ್ಧಾರಹಿತಗೊಳಿಸುವುದರಿಂದಲೇ ಬೌದ್ಧಿಕ ಸ್ವಾತಂತ್ರ್ಯ ಪಡೆಯಬಲ್ಲೆವು. ಶ್ರದ್ಧೆ ನಮ್ಮನ್ನು ನಿಸ್ತೇಜಗೊಳಿಸುತ್ತದೆ. ಪ್ರಾಚೀನ ಉಕ್ತಿಗಳಲ್ಲಿ ವಿಶ್ವಾಸವಿಡುವುದರಿಂದ ನವೀನೋಕ್ತಿಗಳ ಬಗ್ಗೆ ಅವಿಶ್ವಾಸ ಮೂಡುತ್ತದೆ. ಆದುದರಿಂದ ಪುರಾತನ ಪ್ರಿಯತೆಯನ್ನು ದೂರೀಕರಿಸಬೇಕು."

ವೇದಗಳನ್ನು ನಿಶ್ಚಯ ಜ್ಞಾನವೆಂದೂ, ಗೀತಾ ಮತ್ತು ಉಪನಿಷತ್ತುಗಳನ್ನು ಆತ್ಮಜ್ಞಾನವೆಂದು ತಿಳಿಯುವವರನ್ನು ಈ ವಾದ ಗೊಂದಲಕ್ಕೀಡು ಮಾಡುವುದು. ಆದರೆ, ಎರಡರ ನಡುವೆ ಶಬ್ದ ವಿನ್ಯಾಸದಲ್ಲಿ ಮಾತ್ರ ಭೇದವಿರುವುದು; ಮೂಲತಃ ಎರಡೂ ಒಂದೇ ಸತ್ಯವನ್ನು ಪ್ರತಿಪಾದಿಸುತ್ತವೆಯೆಂಬುದು ವಿಚಾರಮಾಡಿದರೆ ಹೊಳೆಯದಿರದು.

ಕೃಷ್ಣಮೂರ್ತಿಯವರು ವಿದ್ರೋಹೀ ಸ್ವರದಿಂದ ಹೇಳಿದರು: "ನಾವು ಬಾಹ್ಯ ಪರಿಸ್ಥಿತಿಯ ಗುಲಾಮರಾಗಿರುತ್ತೇವೆ. ಮಿಥ್ಯೆಯನ್ನೇ ಆಧರಿಸಿದ ಸಾಮಾಜಿಕ ಶಿಷ್ಟಾಚಾರಗಳು ಸತ್ಯದ ಸ್ಥಾನವನ್ನಾಕ್ರಮಿಸಿವೆ. ಸತ್ಯವೆಂದು ಕರೆಯಿಸಿಕೊಳ್ಳುವ ಈ ಮಿಥ್ಯಾ ವಿಚಾರ ಮತ್ತು ವಿಶ್ವಾಸಗಳು ಮಾನವಾತ್ಮವನ್ನು ಜಗ್ಗುತ್ತಿವೆ. ಇವುಗಳಿಂದ ಮುಕ್ತಿ ಪಡೆಯುವುದು ಸಾಹಸದ ಕೆಲಸ. ಇಂತಹ ಸಾಹಸಿಯೇ ನಿಜವಾದ ಸುಖ ಭೋಗಿಸಲು ಅಧಿಕಾರಿಯೆನಿಸುತ್ತಾನೆ. ಪ್ರಯತ್ನಿಸಿರಿ; ಅಪ್ರಿಯ ಬಂಧನಗಳನ್ನು ಕಡಿದೊಗೆಯಿರಿ. ನಿಮ್ಮನ್ನು ಬಂಧನ ಮುಕ್ತಗೊಳಿಸುವುದೇ ನನ್ನ ಉದ್ದೇಶ. ಹೊಸ ಬಂಧನಕ್ಕೆ ಗುರಿ ಮಾಡುವುದಲ್ಲ. ಬಂಧನವೇ ದುಃಖ ಹೇತು."

ಕೃಷ್ಣಮೂರ್ತಿಯವರು 'ಮುಕ್ತಿದೂತ' ಎಂಬುದಾಗಿ ಹಿಂದೆಯೇ ಪ್ರಚಾರವಾಗಿತ್ತು. ಇವರಿಂದ ಅದೆಷ್ಟೋ ರೂಢಿಬದ್ಧ ಸ್ತ್ರೀ ಪುರುಷರು ಮುಕ್ತರಾಗಿದ್ದರು. ಮುಕ್ತಿಪ್ರೇರಕ ಉಕ್ತಿಗಳನ್ನು ಹೊರಡಿಸುತ್ತಿರುವಾಗ ಅವುಗಳಲ್ಲಿ ಒಂದು ತರದ ಇಂದ್ರಜಾಲ ಶಕ್ತಿಯ ಪ್ರಭಾವ ಬೀಳುತಿತ್ತು. ಹೆಚ್ಚಿನವರ ಮೇಲೆ ಈ ಇಂದ್ರಜಾಲದ ಪರಿಣಾಮ ಸಾಕಷ್ಟು ಆಗಿಯೇ ಆಗುತಿತ್ತು. ಆಗ, ವಿಚಾರ ಪ್ರಪಂಚದಲ್ಲಿರುವ ಸತ್ಯವನ್ನು ನಿರ್ಭಯರಾಗಿ ಹೇಳುವವರು ಇವರೊಬ್ಬರೇ ಎಂಬ ಭಾವನೆ ಮೂಡುತಿತ್ತು. ಆದರೆ, ಕ್ರಿಯಾತ್ಮಕತೆಯ ದೃಷ್ಟಿಯಿಂದ ವಿಚಾರಿಸುವಾಗ ತುಸು ಸಂದೇಹವೇಳಬಹುದು. ಮನಸ್ಸು ವಿದ್ರೋಹಗೊಳ್ಳುತಿತ್ತು. ಆದರೆ, ಈ ವಿದ್ರೋಹ ಅವರ ಸಂದರ್ಶನದಿಂದ ದೂರವಾಗುತಿತ್ತು.

ವಿದ್ರೋಹಪೂರಿತ ಮನದಿಂದೊಬ್ಬರು ಅವರ ಭೆಟ್ಟಿ ಮಾಡಿದ್ದರು. ಇಬ್ಬರೊಳಗೂ ಸಂಭಾಷಣೆ ನಡೆದಿತ್ತು:

"ಬಾಹ್ಯ ಪರಿಸ್ಥಿತಿಗಳು ನಮ್ಮ ವಿಕಾಸಕ್ಕೆ ಬಾಧಕವಾಗಿ ದುಃಖ ಹೇತುವಾಗಿರುವುದರಿಂದ, ಅವನ್ನು ಬಿಡಬೇಕು, ಎಂದು ನೀವನ್ನುತ್ತೀರಿ. ಪತ್ನಿಯು ತನ್ನ ವಿಕಾಸಕ್ಕೆ ಬಾಧಕಳು, ಸಮಾಜವು ಅವರೋಧಕವೆಂದು ಪತಿಯೊಬ್ಬನು ಭಾವಿಸಿದರೆ, ಅವನ್ನೂ ದೂರೀಕರಿಸುವುದು ಉಚಿತವೆ?"—ಪ್ರಶ್ನೆಯಿದು ಪೃಚ್ಛಕನ ಸಮೀಪ ಬಂದು ಆತನ ಕೈಹಿಡಿದು ಸ್ನೇಹದಿಂದ ಉತ್ತರಿಸಿದರು ಕೃಷ್ಣಮೂರ್ತಿ: "ಯಾವುದೇ ಪರಿಸ್ಥಿತಿಯ ಮೇಲೆ ದೋಷಾರೋಪಣೆ ಮಾಡುವಾಗ, ನಮ್ಮ ದೃಷ್ಟಿಯಲ್ಲಿ ದೋಷವಿಟ್ಟುಕೊಳ್ಳಬಾರದು. ನಾವು ವಸ್ತುಗಳ ಖಂಡಿತ ರೂಪವನ್ನು ನೋಡುತ್ತೇವೆ. ಅವರ ಸಮಗ್ರ ಸ್ವರೂಪ ನಮ್ಮ ಅಲ್ಪ ದರ್ಶನಾಭ್ಯಾಸಿ ದೃಷ್ಟಿಗೆ ಅಗೋಚರವಾಗಿದೆ. ನಮ್ಮ ಆತ್ಮ ಸ್ವಾಭಾವಿಕವಾಗಿ ವಿರಾಡ್ರೂಪಿ. ಆದರೆ, ನಮ್ಮ ಸ್ವರೂಪವನ್ನೇ ತಿಳಿಯದ ಅಲ್ಪ ದರ್ಶಿಗಳಾಗಿರುವಾಗ, ಅಲ್ಪತೆಯ ಕೂಪದಲ್ಲಿಯೇ ನಾವು ಮುಳುಗಿರುತ್ತೇವೆ.

"ಅಲ್ಪದರ್ಶಿಗಳು ಮಾತ್ರವಲ್ಲದೇ ಅಲ್ಪ ಭೋಗಿಗಳಾಗಿ ಅಲ್ಪದಲ್ಲಿಯೇ ಆಸಕ್ತರಾಗಿರುತ್ತೇವೆ. ಆಗ ನಾವು ಅಲ್ಪವನ್ನು ಭೋಗಿಸುವುದಿಲ್ಲ; ಅಲ್ಪವೇ ನಮ್ಮನ್ನು ಭೋಗಿಸುತ್ತದೆ. ಅಲ್ಪ, ಕ್ಷಣಿಕ ಭೋಗಗಳಲ್ಲಿಯೇ ನಾವು ಆತ್ಮ ತೃಪ್ತಿಯ ಮಿಥ್ಯಾನುಭವ ಪಡೆಯುವುದರಿಂದ ವಿರಾಟ್ ವಿಶ್ವರೂಪ ದರ್ಶನ ಮತ್ತು ಉಪಭೋಗದ ಆಕಾಂಕ್ಷೆಯೇ ನಮ್ಮಿಂದ ದೂರವಾಗುತ್ತದೆ. ನಾವು ವಿರಾಟ್-ದರ್ಶನದ ಅಭ್ಯಾಸ ಮಾಡಬೇಕು; ಆಗ ವಸ್ತುಗಳ ವಾಸ್ತವಿಕ ರೂಪಗಳನ್ನು ನೋಡಬಲ್ಲೆವು. ಈ ವಿರಾಟ್ ದೃಷ್ಟಿಯನ್ನೇ ಸಮಗ್ರ ದೃಷ್ಟಿಯೆನ್ನುವರು. ಇದನ್ನೇ ನಾನು 'ಟೋಟಲ್ ವಿಜನ್' (Total vision) ಎನ್ನುತ್ತೇನೆ. ಸಮಗ್ರ ದೃಷ್ಟಿಯಿಂದ ಈಕ್ಷಿಸಿದಾಗ ಮಾತ್ರ ಒಂದು ವಸ್ತುವಿನ ಸೌಂದರ್ಯ ದರ್ಶನವಾಗುವುದ; ಅದೇ ವಸ್ತುವಿನ ನಿಜ ಸ್ವರೂಪ. ವಸ್ತುವಿನ ರೂಪರೇಖೆಗಳನ್ನು ನೋಡುವುದು, ಅದನ್ನು ಪರಿಸ್ಥಿತಿಯಿಂದ ಪ್ರತ್ಯೇಕಿಸಿ ಪರೀಕ್ಷಿಸುವುದು ಮಹಾಪರಾಧ. ಪ್ರತಿ ವಸ್ತುವಿನ ಸಮಗ್ರ ರೂಪವನ್ನು ನೋಡುವ ಅಭ್ಯಾಸ ಬೆಳೆದಂತೆ ಹೇಯ ವಸ್ತುಗಳ ಸಂಖ್ಯೆಯೂ ಕಡಿಮೆಯಾಗುವುದು.

'ವಸ್ತುವಿನ ಸಮಗ್ರ ರೂಪ ಕಾಣುವುದರಿಂದ, ಮನಸ್ಸಿನಲ್ಲಿ ನವೀನ ವಿಚಾರ ಪ್ರಕ್ರಿಯೆ ಪ್ರಾರಂಭವಾಗುವುದು. ವಸ್ತುವಿನ ಸದೋಷಾಂಶದೊಡನೆ ಬಂಧಿತವಾದ ದೃಷ್ಟಿ ಅಲ್ಲಿಂದ ಪಾರಾಗಿ, ವಿಶಾಲ ಕ್ಷೇತ್ರದತ್ತ ಆಕರ್ಷಿಸಲ್ಪಡುವುದು. ಮಮತೆಯ ಕ್ಷೇತ್ರ ವಿಸ್ತೃತವಾಗುತ್ತ ನಾವು ಸಂಪೂರ್ಣ ವಿಶ್ವವನ್ನೇ ಜಾಗ್ರತ ದೃಷ್ಟಿಯಿಂದ ನೋಡುತ್ತೇವೆ. ವಸ್ತುವು ಇರುವ ರೂಪದಲ್ಲಿಯೇ ನೋಡುವುದಕ್ಕೆ ವಿಶ್ವದ ಕಡೆಗಿರುವ ಆಸ್ಥೆಯೆನ್ನುತ್ತಾರೆ. ಈ ಆಸ್ಥಾಭಾವದಿಂದಲೇ ಎಲ್ಲರಲ್ಲಿಯೂ ಆತ್ಮಭಾವವು ಜಾಗ್ರತಗೊಳ್ಳುತ್ತದೆ.

"ಎಲ್ಲವುಗಳಲ್ಲಿಯೂ ತನ್ನತನ ಪ್ರದರ್ಶಿಸುವುದರಿಂದ, ತನ್ನಲ್ಲಿ ಸರ್ವಭಾವ ಬರುವುದರಿಂದ ಮನಸ್ಸಿನಲ್ಲಿ ಶಾಶ್ವತ ಸಾಮ್ಯವು ಸ್ಥಿರವಾಗಿ ನೆಲೆಯೂರುತ್ತದೆ. ಇದುವೇ ಸಮಗ್ರ ದೃಷ್ಟಿಯಾಗಿದೆ."

ಶ್ರೀ ಕೃಷ್ಣಮೂರ್ತಿಯವರ ವಾದಸರಣಿ ಭಿನ್ನವಾಗಿದ್ದರೂ ಅವರು ಪ್ರಾಚೀನ ಭಾರತೀಯ ಸಿದ್ಧಾಂತವನ್ನು ಅರ್ವಾಚೀನ ವಿಧಾನಗಳಿಂದ ಸಾಧಿಸುವುದರಲ್ಲಿ ನಿಷ್ಣಾತರು ಎಂತಲೇ ಅವರಲ್ಲಿ ಜನತೆ ಭಕ್ತಿ ಭಾವ ಪ್ರದರ್ಶಿಸುತಿತ್ತು!

(ಸತ್ಯಕಾಮ ವಿದ್ಯಾಲಂಕಾರರ ಲೇಖನವೊಂದರ ಆಧಾರದಿಂದ)

ಕಾಮ ವಿಜ್ಞಾನದ ಮಾಹಿತಿಗಾಗಿ ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಬೆಚ್ಚನೆಯ ಮನೆ
ವೆಚ್ಚಕ್ಕೆ ಹಣ

ಬೇಕಾದಲ್ಲಿ
ಮುಂಚಿತವಾಗಿಯೇ ಒಂದು ಉಳಿತಾಯ
ಯೋಜನೆಯನ್ನು ತಯಾರಿಸಿ, ಅದರಂತೆ
ಕೊರ್ಪೊರೇಶನ್ ಬೇಂಕಿನಲ್ಲಿ
ಹಣವನ್ನು ಉಳಿಸುತ್ತಾ ಬನ್ನಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ.
6 ರಾಜ್ಯಗಳಲ್ಲಿ ಒಟ್ಟು 60 ಶಾಖೆಗಳು

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಚಿತ್ರ ಸತ್ಯ

ಪ್ರಪಂಚದ ಅತಿ ಚಿಕ್ಕ ನಗರ—ಮೆಡ್ರೋಡಂ

ದ್ವಿತೀಯ ಜಾಗತಿಕ ಯುದ್ಧಾನಂತರ ರೋಗಗ್ರಸ್ತ ಬಾಲಕರ ವಿಶ್ರಮಧಾಮವಾಗಿ ರೂಪಿತವಾದ ಮೆಡ್ರೋಡಂ ಇಂದು ಸರ್ವ ಜನಮನಾಕರ್ಷಕವಾಗಿ ಪರಿಣಮಿಸಿದೆ; ಇಲ್ಲಿ ಅಂಥರೂ ಬಂದು ನಗರ ಸೌಂದರ್ಯವನ್ನು ಸವಿದು ಆನಂದ ತುಂದಿಲರಾಗಬಲ್ಲರು!

ಪ್ರಪಂಚದ ಅತಿ ಚಿಕ್ಕ ನಗರ ಮಡ್ರೋಡಂ ಎಂಬುದು ಮಡ್ರೋ ಪದಿಯ ಕಟ್ಟೆಯುಳ್ಳದೆ. ಇದು ಕೇವಲ ಚಿಕ್ಕ ನಗರ ಮಾತ್ರವಲ್ಲ, ಇಲ್ಲಿನ ಎಲ್ಲ ವಸ್ತುಗಳೂ ಚಿಕ್ಕವು. ಈ ನಗರದ ಉದ್ಯಾನದಲ್ಲಿ ನಿಂತುಕೊಂಡರೆ, ನೀವು 'ಲಿಲಿಪುಟ್'ನ ಗಲೀವರ'ನಂತೆ ತೋರಿಬರುವಿರಿ. ಸಣ್ಣ ಪುಟ್ಟ ಬಂದರ, ರೇಲುಗಾಡಿ, ದೀಪಸ್ತಂಭ ಮೊದಲಾದುವುಗಳು ಇಲ್ಲಿವೆ. ನಗರದ ೩೦ ಶಾಲೆಗಳ ವಿದ್ಯಾರ್ಥಿಗಳು ಸದಸ್ಯರನ್ನು ಆರಿಸಿದ ನಗರ ಪಾಲಿಕೆಯೊಂದು ಇಲ್ಲಿದೆ.

ನೆದರ'ಲೇಂಡ್ಸ್‌ನಲ್ಲಿರುವ ಈ ಮಡ್ರೋಡಂನಲ್ಲಿ ದೊಡ್ಡ ನಗರದಲ್ಲಿರುವ ಎಲ್ಲ ವಸ್ತುಗಳೂ ಇವೆ; ಆಕಾರ ಮಾತ್ರ ಇಪ್ಪತ್ತೈದರಲ್ಲಿ ಒಂದಂಶದಷ್ಟು. ಈ ನಗರ ರಚನೆಯಲ್ಲಿ ಕಲಾಕಾರರು, ಶಿಲ್ಪಿಗಳು ಮತ್ತು ಬೇರೆ ಬೇರೆ ಕಾರ್ಯಗಳಲ್ಲಿ ತಜ್ಞರು ಸಹಕಾರವಿತ್ತಿದ್ದಾರೆ. ನಗರ ನಿರ್ಮಾಣಕ್ಕೆ ಎರಡು ವರ್ಷಗಳ ಕಾಲ ಬೇಕಾಯಿತಂತೆ. ೧೯೫೨ ನೆ ಇಸವಿಯ ಜುಲಾಯಿ ೨ನೆ ದಿನಾಂಕದಂದು ಈ ನಗರದ ಉದ್ಘಾಟನೆಯಾಯಿತು. ಈ ದಿನವನ್ನು ಮಕ್ಕಳೆಲ್ಲರೂ ಐತಿಹಾಸಿಕ ದಿನವೆಂದು ಮನ್ನಿಸಿದ್ದಾರೆ.

ಈ ನಗರದ ಇತಿಹಾಸ ೧೧ನೆಯ ಶತಮಾನದಷ್ಟು ಹಿಂದೆ ಸರಿಯುತ್ತದೆ. ಆ ಕಾಲದಲ್ಲಿ ಇಲ್ಲಿ ಬೂರ ಡೈಸ್ಟೀನ್‌ನ ಕೋಟೆಯಿತ್ತು. ಇದರ ವರ್ಣನೆಯು ನಮಗೆ ಅಲ್ಲಿನ ಪ್ರಚಲಿತ ಕಥೆಗಳಿಂದ ತಿಳಿಯುತ್ತದೆ. ಕೋಟೆಯ ಸಮೀಪದಲ್ಲಿಯೇ ಒಂದು ಚೌಕವಿದ್ದು, ಇದರ ಇತಿಹಾಸದಿಂದ ೧೩ನೆಯ ಶತಾಬ್ಧಿಯ ಜನರ ಆಹಾರ-ವಿಹಾರ-ಜೀವನಗಳ ಕುರಿತಾದ ಪರಿಚಯ ನಮಗೆ ಆಗುವುದು. ಈ ಸಣ್ಣ ಸ್ಥಳದಲ್ಲಿಯೇ ಸುಂದರವಾಗಿ ನಿರ್ಮಿಸಲ್ಪಟ್ಟ ಆ ಕಾಲದ ಸಕಲ ವಸ್ತುಗಳೂ ಜೋಪಾನವಾಗಿ ಇಡಲ್ಪಟ್ಟಿವೆ. ಇಗರ್ಜಿ, ಚಿಕಿತ್ಸಾಲಯಗಳು, ಪ್ರಾಚೀನ ಕಾಲದ ಮನೆ ಮಠಗಳೆಲ್ಲವೂ ನೋಡ ನೋಡುತಿದ್ದಂತೆಯೇ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ನಗರದ ಹೊರ ಭಾಗದಲ್ಲಿ ಪ್ರತೀಹಾರಿಯಂತೆ ಇಗರ್ಜಿಯು ಅತ್ಯಂತ ಸುಂದರ ರೂಪದಲ್ಲಿ ನಿಂತಿದೆ. ಇದರ ಸಮೀಪದಲ್ಲಿಯೇ ಹಳೆಯ ನಗರದ ಮಧ್ಯಕಾಲೀನ ಭಾಗವಿದೆ. ಇದರ ಸ್ಥಾಪತ್ಯಕಲೆಯು ಸಂಪೂರ್ಣ ಭಿನ್ನವಾಗಿದೆ. ಇಲ್ಲಿನ ಮನೆಗಳ ಹೆಸರುಗಳೂ ತೀರ ವಿಚಿತ್ರವಾಗಿವೆ. ಮಡ್ರೋಡಂನ ಮೊದಲಿನ ಟೌನ್ ಹಾಲ್‌ನ ಹೆಸರು ಇಂದಿಗೂ ಪ್ರಾಚೀನ ಬ್ಲೈ ಹೌಸ್ ಎಂದಾಗಿದೆ; ಇಲ್ಲಿ ಟ್ರಿಪನ್ನೀರು ಮತ್ತಿತರ ವ್ಯಾಪಾರಿಕ ವಸ್ತುಗಳನ್ನು ಅಳೆಯಲಾಗುತ್ತಿದೆ. ಪ್ರಾತಃಕಾಲದಿಂದ ಬಹು ರಾತ್ರೆಯವರೆಗೂ ಇಲ್ಲಿನ ಪುಟ್ಟ ರೇಲುಗಾಡಿಗಳು ಓಡುತ್ತಿವೆ. ರೇಲಿನ ಎಲ್ಲ ವ್ಯವಸ್ಥೆಗಳೂ ಸ್ವಯಂ ಚಾಲಿತವಾಗಿವೆ. ಆದುದರಿಂದ ಡ್ರೈವರನ ಅಥವಾ ಗಾರ್ಡನ ಆವಶ್ಯಕತೆಯಿಲ್ಲ.

ಈ ನಗರದಲ್ಲಿ ಇಷ್ಟೊಂದು ಆಕರ್ಷಣೆಗೆ ಕಾರಣವೇನು? ಮಕ್ಕಳ ಮನೋರಂಜಕ ವ್ಯವಸ್ಥೆಯಿರುವುದರಿಂದ ಅವರು ಬರುವುದು ಸ್ವಾಭಾವಿಕವೇ; ಆದರೆ, ಪ್ರೌಢರು ಇವನ್ನು ಏಕೆ ಬಯಸುತ್ತಾರೆ? ಮಕ್ಕಳ ಆಟಿಕೆಗಳಿಂದ ಅವರು ಆಕರ್ಷಿತರಾಗಿರುವುದು ಏಕೆ? ಮಡ್ರೋಡಂ ಸ್ಥಾಪನೆಯಾದ ಮೊದಲಿನ ಐದು ವರ್ಷಗಳಲ್ಲಿ ಬಂದ ದರ್ಶಕರಲ್ಲಿ ಕೇವಲ ಸೇಕಡಾ ಮೂವತ್ತರಷ್ಟು ಮಕ್ಕಳು ಉಳಿದವರು ಪ್ರೌಢರು ಎಂದರೆ ನಿಮಗೆ ವಿಸ್ಮಯವಾಗಬಹುದು.

ಈ ಪುಟ್ಟ ನಗರವು ಕುರುಡರಿಗೆ ವರದಾನ ಸಮಾನವಾಗಿದೆ. ತಾವು ಕಣ್ಣಿಂದ ಕಾಣದ ವಸ್ತುಗಳನ್ನು ಇಲ್ಲಿ ಕೈಮುಟ್ಟಿ ಅವನ್ನು ತಿಳಿದು ಆನಂದಿಸುವರು. ಮನೆ ಮಠಗಳು, ರೇಲ್ವೆ, ವಿಮಾನ ಮೊದಲಾದುವನ್ನು ಮುಟ್ಟಿ ಕುರುಡರಿಗೆ ತಿಳಿದುಕೊಳ್ಳಲು ಅನುಕೂಲವಾಗುವಂತೆ ಅವು ತಯಾರಿಸಲ್ಪಟ್ಟಿವೆ.

ಒಮ್ಮೆ ಒಬ್ಬ ಮುದಿಯ ಕುರುಡ ಇಲ್ಲಿಯ 'ಶಾಂತಿ ಭವನ'ವನ್ನು ಮುಟ್ಟಿ ಅದು ಹೇಗಿದೆಯೆಂದು ತಿಳಿಯುವ ಆಶಯದಿಂದ ನಗರ ಪ್ರವೇಶಕ್ಕೆ ಅನುಮತಿ ಬೇಡಿದ, ಆತ ಆ ಭವನವನ್ನು ಕಟ್ಟಲು ನೆರವಾದ ಶಿಲ್ಪಿಯಿದ್ದ; ಆದರೆ, ಮಧ್ಯಕಾಲದಲ್ಲಿಯೇ ಆತನೊಂದು ದುರ್ಘಟನೆಗೀಡಾಗಿ, ದೃಷ್ಟಿಯನ್ನು ಕಳೆದುಕೊಂಡಿದ್ದ ಕಿವುಡನೂ ಆಗಿದ್ದ. ತಾನು ಇದುವರೆಗೆ ಇಟ್ಟುಕೊಂಡಿದ್ದ ಕಲ್ಪನೆಯಂತೆ ಈ ಭವನವಿದೆಯೇ ಇಲ್ಲವೇ ಎಂದವನಿಗೆ ತಿಳಿಯಬೇಕಿತ್ತು. ಆತನಿಗೆ ಪುಟ್ಟ 'ಶಾಂತಿ ಭವನ'ವನ್ನು ಮುಟ್ಟಿ ತಿಳಿಯುವ ಅವಕಾಶ ದೊರೆಯಿತು. ಆತನ ಆಶಯ ಪೂರ್ಣವಾದುದರಿಂದ, ಆವನ ನಯನಗಳು ಆನಂದ ಬಾಷ್ಪಗಳನ್ನು ಸುರಿಸಿದುವು.

ಈ ಪುಟ್ಟ ನಗರ ಮನೋರಂಜನೆಗಾಗಿಯೇ ನಿರ್ಮಾಣಗೊಂಡುದಲ್ಲ; ವಿಶೇಷ ಆವಶ್ಯಕತೆ ಬಿದ್ದೇ ರಚಿತವಾಗಿದೆ. ನೆದರ್ ಲೇಂಡಿನ ಜನರು ದ್ವಿತೀಯ ಲೋಕ ಯುದ್ಧಾನಂತರದಲ್ಲಿ 'ತಪೇದಿಕ್' ರೋಗಕ್ಕೆ ಬಲಿಯಾದರು. ಹೆಚ್ಚಿನ ವಿದ್ಯಾರ್ಥಿಗಳೂ ಇದರಿಂದ ಬಳಲ ತೊಡಗಿದರು. ಈ ಮಕ್ಕಳಿಗೆ ಯೋಗ್ಯ ಚಿಕಿತ್ಸೆ ದೊರಕಿಸುವ ಸಲುವಾಗಿ ಅಲ್ಲಿ ಸೆನಟೋರಿಯಂನ್ನು ಮೊದಲಿಗೆ ಸ್ಥಾಪಿಸಲಾಯಿತು. ಚಿಕಿತ್ಸೆ ಪೂರ್ಣವಾದ ಮೇಲೂ ಸ್ವಲ್ಪ ವಿಶ್ರಾಂತಿ ದೊರೆಯಬೇಕೆಂಬ ಉದ್ದೇಶದಿಂದ ಅವರು ಅಲ್ಲಿಯೇ ಕೆಲಕಾಲ ಉಳಿಯುವ ವ್ಯವಸ್ಥೆ ಮಾಡಿದರು. ಅವರಿಗೆ ಈ ಅವಧಿಯಲ್ಲಿ ಯಾವುದೇ ಪ್ರಕಾರದ ಚಿಂತೆಗಳು ಎಡತಾಕದಂತೆ ವ್ಯವಸ್ಥೆ ಮಾಡಲಾಯಿತು.

ಈ ಒಂದು ಉದ್ದೇಶಕ್ಕಾಗಿಯೇ ಮಡ್ರೋಡಂನ ಸ್ಥಾಪನೆಯಾಯಿತು; ಮತ್ತು ಅದು ತನ್ನ ಉದ್ದೇಶಗಳಲ್ಲಿ ಸಂಪೂರ್ಣ ಯಶಸ್ವಿಯಾಯಿತು. ಅಂದು ರೋಗಗ್ರಸ್ತ ಬಾಲಕರ ವಿಶ್ರಮಧಾಮವಾಗಿ ನಿರ್ಮಿತವಾದ ಮಡ್ರೋಡಂ ಇಂದು ಆಬಾಲವೃದ್ಧರನ್ನು ತನ್ನತ್ತ ಆಕರ್ಷಿಸುತ್ತಿದೆ; ವಿಶ್ವದಲ್ಲಿಯೇ ಅತಿ ಚಿಕ್ಕ, ಆದರೆ ಚೊಕ್ಕ ಆಕರ್ಷಕ ನಗರವೆಂಬ ಕೀರ್ತಿ ಗಳಿಸಿದೆ.

ರವೀಂದ್ರರ ಶತಮಾನೋತ್ಸವ

ಜಗದ್ವಿಖ್ಯಾತ ನೋಬಲ್ ಪಾರಿತೋಷಕವನ್ನು ಪಡೆದ ಭಾರತೀಯ ಸಾಹಿತ್ಯಕಾರ ಕವೀಂದ್ರ ರವೀಂದ್ರರು ತಮ್ಮ 'ಗೀತಾಂಜಲಿ'ಯಿಂದ ಲೋಕಪ್ರಸಿದ್ಧರಾದರು ಅದ್ವಿತೀಯ ಪಂಡಿತರಾದ ಇವರು 'ಶಾಂತಿನಿಕೇತನ'ವನ್ನು ಸ್ಥಾಪಿಸಿ ಅದನ್ನು ಸಮರ್ಪಕವಾಗಿ ನಡೆಸಿಕೊಂಡು ಬಂದರು ಇಂದಿಗೂ ಪರಿಕಮಿಸುವರ ಚಿರಸ್ಮಾರಕವಾಗಿ ಅದು ವಿಶ್ವವಿಖ್ಯಾತವಾಗಿದೆ. ಋಷಿತುಲ್ಯ ಜೀವನವನ್ನು ಬದುಕುತಿದ್ದ ರವೀಂದ್ರರ ಶತಮಾನೋತ್ಸವವು ಭಾರತದಲ್ಲಿ ಮಾತ್ರವಲ್ಲ ವಿಶ್ವದ ಬೇರೆ ಬೇರೆಡೆಗಳಲ್ಲಿ ಯಥೋಚಿತವಾಗಿ ಆಚರಿಸುವ ಬಗ್ಗೆ ಏರ್ಪಾಡುಗಳು ನಡೆಯುತ್ತಿವೆ. ಇಂದು ಕಣ್ಮರೆಯಾದ ಕವೀಂದ್ರರನ್ನು ವಿಶ್ವಸಾಹಿತ್ಯಪ್ರೇಮಿಗಳು ಮರೆಯದೆ ಉತ್ಸವದ ಯಶಸ್ವಿಗಾಗಿ ದುಡಿಯುತಿದ್ದಾರೆ. ಭಾರತದಲ್ಲಿಯೂ ಈ ಬಗ್ಗೆ ಆವಶ್ಯಕ ಕಾರ್ಯಕ್ರಮಗಳು ತಯಾರಿಗೊಳ್ಳುತ್ತಿವೆ.

"ವಿಶ್ವಕವಿ"ಯ "ಜನಾದರಣೀಯತೆ"ಯ ಪರಿಚಯವನ್ನು "ರವೀಂದ್ರ ಶತಮಾನೋತ್ಸವ"ವೇ ತೋರಿಸಿಕೊಡುತ್ತದೆ.

ಪತ್ನಿ ಶ್ರೀಮತಿ ಮೃಣಾಳಿನೀದೇವಿಯವರೊಡನೆ ತೆಗೆದ ಕವೀಂದ್ರರ ಚಿತ್ರವೊಂದನ್ನಿಲ್ಲಿ ಕಾಣಬಹುದು.

ಕುಮಾರಿ ಚಿಲ್ಲಿಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & CO. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ

ಹಾಜರಿ ರಿಜಿಸ್ಟ್ರಗಳೂ

ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ

ಸಿಗುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಇನ್ನೊಬ್ಬರನ್ನು ವ್ಯಥಾ ನೋಯಿಸುವುದಕ್ಕಿಂತ ಮಿಗಿಲಾದ ಪಾಪಕರ್ಮವಿಲ್ಲ: ಬೇರೆಯವರಿಗೆ ಸುಖ ಪೊದಗಿಸುವುದಕ್ಕಿಂತ ಹೆಚ್ಚಿನ ಪುಣ್ಯಕಾರ್ಯ ಮತ್ತೊಂದಿಲ್ಲ.

ನವಯುಗ

ರುಸ ೪೦	ಉಡುಪಿ ೨೯-೯-'೬೦	ವಾರ ೫

ರಾಷ್ಟ್ರೀಯ ನೈರ್ಮಲ್ಯ

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಜನ್ಮದಿನವಾದ ಅಕ್ಟೋಬರ ಎರಡನೆ ದಿನಾಂಕವನ್ನು ರಾಷ್ಟ್ರೀಯ ನೈರ್ಮಲ್ಯ ದಿನವನ್ನಾಗಿ ಆಚರಿಸಬೇಕೆಂದು ಕೇಂದ್ರ ಸರಕಾರವು ನಿಯೋಜಿಸಿದೆ. ಈ ವಿಚಾರವನನ್ನು ವಿವಿಧ ರಾಜ್ಯ ಸರಕಾರಗಳಿಗೂ ತಿಳಿಸಿ ಅವು ತಂತಮ್ಮ ಪ್ರದೇಶಗಳಲ್ಲಿ ಈ ಬಗ್ಗೆ ಆವಶ್ಯಕ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ. ರಾಜ್ಯ ಸರಕಾರಗಳಾದರೂ ಈ ಪರಿಪತ್ರವನ್ನು ತನ್ನ ಅಂಕಿತದಲ್ಲಿರುವ ಎಲ್ಲ ಸರಕಾರಿ, ಅರೆಸರಕಾರಿ ಆಡಳಿತೆಗಳಿಗೆ ಕಳಿಸಿ ಆ ದಿನವನ್ನು ರಾಷ್ಟ್ರೀಯ ನೈರ್ಮಲ್ಯದ ದಿನವನ್ನಾಗಿ ಆಚರಿಸುವಂತೆ ಕೇಳಿಕೊಂಡಿರುವುದು ಸ್ವಾಭಾವಿಕವೆ. ರಾಷ್ಟ್ರೀಯ ನೈರ್ಮಲ್ಯದತ್ತ ನಮ್ಮ ಸರಕಾರದ ಗಮನವು ಇಷ್ಟು ತಡವಾಗಿಯಾದರೂ ವಿಶೇಷವಾಗಿ ಹರಿಯತೊಡಗಿದುದು ಸಂತೃಪ್ತಿಯನ್ನ ಬೀರು. ಹಾಗಾಗಿ, ಕೇಂದ್ರ ಸರಕಾರದ ನಿರ್ಧಾರವನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇವೆ.

ಭಾರತವು ಪ್ರಜಾಪ್ರಭುತ್ವವಾಗಿ ರೂಪುಗೊಂಡ ನಂತರ ರಾಜಕೀಯ ಪಕ್ಷಗಳ ಘೋಷಣೆಗಳನ್ನು ಕೊರಡಿಸುವದರಲ್ಲಿ ತತ್ಪರರಾಗಿದ್ದರೆ, ಸರಕಾರವು ದಿನಾಚರಣೆ—ಸಪ್ತಾಹಾಚರಣೆಗಳನ್ನು ಆಚರಿಸುವತ್ತ ದೃಷ್ಟಿ ಹರಿಸಿದೆ. ವರ್ಷದ ಐವತ್ತೆರಡು ವಾರಗಳಿಗೂ ಮಿಕ್ಕುವಷ್ಟು ಸಪ್ತಾಹಗಳೂ ಮುನ್ನೂರ ಅರುವತ್ತೈದು (ಆರು) ದಿನಗಳಿಗೂ ಮೀರುವಷ್ಟು ದಿನಗಳೂ "ಆಚರಣೆ"ಯ ಮಟ್ಟಿಗೆ ಈಗ ಸಾಲದೆಂಬಂತಹ ಸ್ಥಿತಿ ತಲೆದೋರುವ ಸಂಭವವಿದೆ. ಅಂದಿನಿಂದಲೂ ನಾವು ಹಲವಾರು "ಆಚರಣೆ"ಗಳನ್ನು ಮಾಡಿದ್ದೇವೆ; ವೇದಿಕೆಯ ಮೇಲೆ ನಿಂತು, 'ಖಾದಿ ಬಟ್ಟೆಗಳನ್ನೇ ಉಪಯೋಗಿಸಿರಿ'; 'ವನ್ಯ ಮೃಗಗಳನ್ನು ಸಂರಕ್ಷಿಸಿರಿ'; 'ಹೆಚ್ಚು ಮರಗಳನ್ನು ನೆಡಿರಿ'; 'ಕಂಪೋಸ್ಟ್ ಗೊಬ್ಬರವನ್ನೇ ಬಳಸಿರಿ'—ಮೊದಲಾದ ಹಲವಾರು ಕ್ರಾಂತಿಕಾರಕ ಘೋಷಣಾಯುಕ್ತ ಭಾಷಣಗಳನ್ನು ನಾವು ಕೇಳಿದ್ದೇವೆ. ಇನ್ನು ಕೆಲವು 'ಆಚರಣೆಗಳು' ಕಾಗದ ಪತ್ರಗಳಲ್ಲಿಯೇ ಮುಗಿದು ಹೋಗುವುದೂ ಇದೆ! ಹಿಂದೊಮ್ಮೆ ಒಂದು ಸಂಸ್ಥೆಯಲ್ಲಿ ಸಹಕಾರಿ ದಿನಾಚರಣೆಯ ಸಮಾರಂಭವೊಂದರಲ್ಲಿ ಪ್ರಾಸ್ತಾವಿಕ ಭಾಷಣಕರ್ತರು 'ಸರಕಾರದವರು ಆಜ್ಞಾಪಿಸಿದ್ದಾರೆ: ಹಾಗಾಗಿ ನಾವು ಆಚರಿಸುತ್ತಿದ್ದೇವೆ' ಎಂದು ಉದ್ಗಾರವನ್ನು ನಾವು ಗಂಭೀರವಾಗಿ ಯೋಚಿಸುವುದಾದರೆ, ಜನತೆಯಲ್ಲಿ ಇಂತಹ 'ಆಚರಣೆ'ಗಳ ಬಗ್ಗೆ ಯಾವ ಭಾವನೆಯಿದೆ ಎಂಬುದರ ಅರಿವಾಗಬಹುದು. ಇವಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕೆಂಬುದು ಮುಖ್ಯ ವಿಚಾರವಲ್ಲ. ಜನತೆಯಲ್ಲಿ ಈ ಬಗ್ಗೆ ಆಸಕ್ತಿ ಹುಟ್ಟಿಸುವ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲವೆಂಬುದಷ್ಟೇ ಸತ್ಯ ಸಂಗತಿ. ಇಂತಹ ಕೆಲಸವನ್ನು ಯಾರು ಮಾಡಬೇಕು ಎಂಬ ಪ್ರಶ್ನೆ ಏಳುವುದು ಸ್ವಾಭಾವಿಕ. ಆದರೆ, ಸಾಮಾಜಿಕ ಕಾರ್ಯಕರ್ತರೆಂಬ ಖ್ಯಾತಿ ಪಡೆದವರು ಉದ್ದುದ್ದ ಭಾಷಣ ಬಿಗಿದು ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುವುದರಿಂದ ಸ್ಥಿತಿ ಸುಧಾರಣೆಯಾಗಲಾರದು; ಅವರು ಜನಜನಕ್ಕೆ ಅಂತಹ 'ಆಚರಣೆ'ಗಳ ಸಂದೇಶವನ್ನು ಮುಟ್ಟಿಸುವ ಮತ್ತು ಅವರ ಮನಸ್ಸನ್ನು ಒಲಿಸಿಕೊಳ್ಳುವ ಕೆಲಸ ನಡೆಸಬೇಕು ಎಂಬುದಾಗಿ ಸೂಚಿಸಬಹುದು.

'ರಾಷ್ಟ್ರೀಯ ನೈರ್ಮಲ್ಯ ದಿನಾಚರಣೆ"ಯು ಹಲವಾರು ದಿನಾಚರಣೆಗಳಲ್ಲಿ ಒಂದಾಗಿರುವುದಾದರೂ ಇದರ ಮಹತ್ವ ಉಳಿದವುಗಳಿಗಿಂತ ಅಧಿಕವಿದೆ. ಆರೋಗ್ಯ ರಕ್ಷಣೆಗೆ ನೈರ್ಮಲ್ಯವೇ ಬುನಾದಿಯೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಕೊಳಕು ಬೀದಿಗಳಿಂದ, ದುರ್ಗಂಧಭರಿತ ನೀರು ತುಂಬಿದ ಹಳ್ಳಕೊಳ್ಳಗಳಿಂದ, ಅಶುಚಿಯಾದ ಒಂದು ಪ್ರದೇಶದಲ್ಲಿ ಅನಾರೋಗ್ಯವು ತಾನಾಗಿಯೇ ತಲೆದೋರುತ್ತದೆ. ಈ ಸಮಸ್ಯೆ ಹಳ್ಳಿಗಳಿಗಿಂತಲೂ ನಗರಗಳಲ್ಲಿ ಬಹು ಜಟಿಲವಾಗಿದೆ. ನೈರ್ಮಲ್ಯದತ್ತ ಗಮನ ಹರಿಸದ ಊರುಗಳಲ್ಲಿ ಆರೋಗ್ಯವೂ ಕಡೆಗಣಿಸಲ್ಪಟ್ಟಂತೆಯೇ ಸರಿ. ಹಾಗಾಗಿ ಆರೋಗ್ಯವೊಂದಿಲ್ಲವಾದರೆ, ಸಕಲ ಸಂಪತ್ತು ನಿಷ್ಪ್ರಯೋಜಕವಾಗುವುದು. ಆದುದರಿಂದ 'ನೈರ್ಮಲ್ಯ ದಿನಾಚರಣೆ'ಯು ಇಂದು ಭಾರತಕ್ಕೆ ಅತ್ಯವಶ್ಯವಾದುದು; ಮಹಾತ್ಮಾ ಗಾಂಧೀಜಿಯವರ ಆತ್ಮಕ್ಕೂ ಈ ದಿನಾಚರಣೆಯು ಕೃತಿರೂಪದಲ್ಲಿ ಯಶಸ್ವಿಯಾದರೆ ತೃಪ್ತಿದೊರೆಯುವುದು. ಪ್ರಜಾಧರ್ಮದ ಬಗ್ಗೆ ಸಾಕಷ್ಟು ಜ್ಞಾನ ನಗರವಾಸಿಗಳಲ್ಲಿಯೂ ಇಲ್ಲವೆಂದು ಖೇದದಿಂದ ಹೇಳಬೇಕಾಗಿದೆ. ಸಾರ್ವಜನಿಕ ಕೆರೆ, ಪಾಯಿಖಾನೆ, ಮೈದಾನು ಮೊದಲಾದವುಗಳಲ್ಲಿ ಜನತೆ ಹರಿಸುವ ಕೊಳಚೆಯನ್ನು ವಿವರಿಸಬೇಕಾಗಿಲ್ಲ ತಮ್ಮ ಮನೆಗಳನ್ನು ನಿರ್ಮಲಗೊಳಿಸುವ ಭರದಲ್ಲಿ ಸಾರ್ವಜನಿಕ ಬೀದಿಗಳಿಗೆ ಕಸಕಡ್ಡಿಗಳ ಕುಪ್ಪೆ ಎಸೆಯುವುದು; ತಮ್ಮ ಅಂಗಳದ ಕೊಳಚೆಯನ್ನು ಮತ್ತೊಬ್ಬರ ಅಂಗಳಕ್ಕೆ ಎಸೆಯುವುದು ನಗರಗಳಲ್ಲಿ ಸಾಮಾನ್ಯವಾದ ಸಂಗತಿ. ಬೀದಿಗಳ ಪಕ್ಕಗಳಲ್ಲಿಯೇ ಮಲವಿಸರ್ಜನೆ ಮಾಡುವಂತೆ ಮಕ್ಕಳನ್ನು ಪ್ರೇರೇಪಿಸುವ ಹಿರಿಯರಿಗೂ ಕಡಿಮೆಯಿಲ್ಲ. ಇದೇ ಮಾದರಿಯಲ್ಲಿ ನಗರಗಳ 'ಸುಶಿಕ್ಷಿತ"ರೆನಿಸಿದ ಜನತೆಯು ಮುಂದುವರಿಯುವುದಾದರೆ, ನೈರ್ಮಲ್ಯದ ಬಗ್ಗೆ ಹಾಗೂ ಜನತೆಗೆ ಪ್ರಜಾಧರ್ಮದ ಬಗ್ಗೆ ಜ್ಞಾನವೆಷ್ಟೆಂಬುದನ್ನು ನಾವು ತಿಳಿಯಬಹುದು. ಇಂತಹ ದುರಭ್ಯಾಸವನ್ನು ದೂರೀಕರಿಸುವುದೇ ನಗರ ನೈರ್ಮಲ್ಯದ ಬುನಾದಿ. ಈ ಕೆಲಸ ಯಾರಿಂದ ಆಗಬೇಕು? ಒಬ್ಬಿಬ್ಬರಿಂದ ಆಗುವ ಕೆಲಸವಿದಲ್ಲ; ಭಾಷಣ ಘೋಷಣೆಗಳಿಂದ ಕೆಲಸವಾಗುವಂತಿಲ್ಲ. ಮಾತು ಕಡಿಮೆ ಮಾಡಿ ಕೃತಿಯಿಂದಲೇ ಮಾಡಿತೋರಿಸಬೇಕಾದ ಅತ್ಯವಶ್ಯ ಕರ್ತವ್ಯ. ಪತ್ರಿಕೆಗಳಲ್ಲಿ ಪ್ರಸಿದ್ಧಿ ಪಡೆಯುವ ಹಾಗೂ ಆಚರಿಸಿದೆವೆಂದು ಹೇಳಿಕೊಳ್ಳುವ ಉದ್ದೇಶದಿಂದ, ನಾಲ್ವರು ಜನರು ಕೂಡಿ ಭಾಷಣ ಮಾಡುವುದಕ್ಕಿಂತ ಅವರೇ ರಚನಾತ್ಮಕ ಕಾರ್ಯಗಳಿಗಿಳಿದರೆ, ಕುಸುಮಾಟರೂ ಪ್ರತಿಫಲ ದೊರೆತೀತು. ಸಭೆ ಮೆರವಣಿಗೆಗಳಲ್ಲಿ ಜನತೆ ಸೇರುವುದೂ ಸೇರಿದವರು ವಿಷಯ ಗ್ರಹಿಸುವುದೂ ಅಷ್ಟರಲ್ಲಿಯೇ ಇದೆ. ಆದಕ್ಕಿಂತ 'ನಗರ ನೈರ್ಮಲ್ಯ'ದಲ್ಲಿ ಆಸಕ್ತಿಯಿದ್ದವರಾದರೂ ಆ ಕಾರ್ಯಕ್ಕಿಳಿದರೆ, ಉಳಿದವರಿಗೂ ಒಂದಲ್ಲ ಒಂದು ದಿನ ತಮ್ಮ ಕರ್ತವ್ಯದ ಜ್ಞಾನವಾದೀತು. ಮಹಾತ್ಮಾ ಗಾಂಧೀಜಿಯವರಾದರೂ ಇದನ್ನೇ ಮಾಡುತಿದ್ದರು. ಅವರ ಜನ್ಮದಿನದಂದು ಆಚರಿಸಲಾಗುವ ಈ 'ರಾಷ್ಟ್ರೀಯ ನೈರ್ಮಲ್ಯ ದಿನಾಚರಣೆ'ಯು ಸಾರ್ಥಕವಾಗಬೇಕಾದರೆ, ರಚನಾತ್ಮಕ ಕಾರ್ಯಗಳತ್ತ ಸಾಮಾಜಿಕ ಕಾರ್ಯಕರ್ತರು ಅವಶ್ಯ ಧ್ಯಾನವೀಯಬೇಕು. ಘೋಷಣೆಗಳಿಂದ ನಿರ್ಮಲ ಅಂಕುರಿಸುವುದಿಲ್ಲ.

ಸಹಾನುಭೂತಿ

ಮೈಸೂರು ವಿಧಾನ ಪರಿಷತ್ತಿನಲ್ಲಿ ಶಿಕ್ಷಕರ ವೇತನವನ್ನು ಹೆಚ್ಚಿಸಬೇಕೆಂಬ ಗೊತ್ತುವಳಿಯನ್ನು ಶ್ರೀ ವಿ. ಆರ್. ನಾಯ್ಡುರವರು ಮಂಡಿಸಿ "ಢಂ ಢಂ ಡೋಲು" ಬಡೆದರು. ಅಧ್ಯಾಪಕರ ಸ್ಥಿತಿಗತಿಗಳ ಕಡೆಗೆ ಸರಕಾರವೇನೂ ಗಮನ ಹರಿಸುತ್ತಿಲ್ಲವೆಂಬುದನ್ನು ಅವರು ಗಮನಿಸಿ 'ಅವರ ಕಷ್ಟ ತಿರುಪತಿ ಶ್ರೀನಿವಾಸನಿಗೇ ಗೊತ್ತು' ಎಂದರಂತೆ. ಈ ಗೊತ್ತುವಳಿಯ ಮೇಲಿನ ಚರ್ಚೆಗೆ ಉತ್ತರಗೊಡುತ್ತ ಶಿಕ್ಷಣ ಸಚಿವ ಹಾಗೂ ಆರ್ಥಿಕ ಉಪಸಚಿವರು ಸರಕಾರವು ಸಾಧ್ಯವಾದಷ್ಟು ಪರಿಶೀಲಿಸಿ, ಅಧ್ಯಾಪಕರ ಸಮಸ್ಯೆಗಳನ್ನು ಪರಿಹರಿಸುವುದಾಗಿ ಆಶ್ವಾಸನ ವಿತ್ತರಂತೆ. ಈ ಮಂತ್ರಿದ್ವಯರು ರಾಜ್ಯದಲ್ಲಿ ಶಿಕ್ಷಕರ ಸಂಖ್ಯೆ ಹೆಚ್ಚಿರುವುದೆಂದೂ ಅವರ ಸಂಖ್ಯೆ ಇನ್ನೂ ಹೆಚ್ಚುತ್ತ ಹೋಗುವುದೆಂದೂ ಇದಕ್ಕಾಗಿ ಸರಕಾರವು ತುಂಬ ವೆಚ್ಚ ಮಾಡಬೇಕಾಗುವುದೆಂದೂ, ಉಚಿತ ಶಿಕ್ಷಣ, ಕಡ್ಡಾಯ ಶಿಕ್ಷಣಗಳ ಯೋಜನೆಯಿಂದ ಸರಕಾರವು ಮತ್ತಷ್ಟು ವೆಚ್ಚ ಮಾಡಬೇಕಾಗಿ ಬಂದಿದೆ, ಬರುತ್ತಿದೆಯೆಂದೂ ಆದುದರಿಂದ ಎಲ್ಲಕ್ಕೂ ಮೊದಲು ರಾಜ್ಯದ ಆರ್ಥಿಕ ಸ್ಥಿತಿಗತಿಗಳನ್ನು ನೋಡಿಕೊಂಡು ಸಾಧ್ಯವಿದ್ದಷ್ಟು ಸಹಾನುಭೂತಿ ತೋರಿಸಲಾಗುವುದೆಂದ ಬಳಿಕ ಶ್ರೀ ನಾಯ್ಡುರವರು ಗೊತ್ತುವಳಿಯನ್ನು ಹಿಂತೆಗೆದುಕೊಂಡರಂತೆ. ತಮ್ಮ ಪರವಾಗಿ ಗೊತ್ತುವಳಿ ಮಂಡಿಸಿ ಹಿಂತೆಗೆದುಕೊಂಡ ಶ್ರೀ ನಾಯ್ಡುರವರನ್ನು ಸಹಾನುಭೂತಿಪರ ಪರಿಶೀಲನೆಯ ಆಶ್ವಾಸನೆಯಿತ್ತ ಮಂತ್ರಿವರ್ಯರನ್ನೂ ಅಧ್ಯಾಪಕ ಬಂಧುಗಳು ಅಭಿನಂದಿಸದಿರಲಾರರು. ಈ ಅಭಿನಂದನೆಯ ಗುಂಗು ದೂರ ಸರಿಯುವುದಕ್ಕೆ ಮೊದಲು, ಆಶ್ವಾಸನವಿತ್ತ ಮಂತ್ರಿಗಳು ತಮ್ಮ ಹುದ್ದೆಯಿಂದ ಉರುಳುವುದಿಲ್ಲವೆಂಬ ಆಶ್ವಾಸನವನ್ನು ಕೊಡುವ ಧರದಿ ಸದ್ಯ ಭಿನ್ನಮತೀಯ ಮೈಸೂರು ಕಾಂಗ್ರೆಸ್ ಶಾಸಕರದ್ದಾಗಿದೆಯಲ್ಲವೆ? ಆದರಲ್ಲಿ ಶಿಕ್ಷಕರ ಅಪಕೃಪೆಗೆ ಪಾತ್ರರಾಗುವಷ್ಟು ಕೆಚ್ಚು ಇರಬಹುದೆ?

ಸಂಕ್ಷಿಪ್ತ ಸುದ್ದಿಗಳು

ಕ್ರುಶ್ಚೇವರ ಕೋಪಾಟೋಪ

ಕಾಂಗೋವಿನ ಗೊಂದಲದಿಂದ ಕಂಗಾಲಾದ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ರಶ್ಯ—ಅಮೆರಿಕೆಗಳ ಜಟಾಪಟಿವು ಸಾಗುತ್ತಿದೆ. ಈ ನಡುವೆ ತಟಸ್ಥ ರಾಷ್ಟ್ರಗಳ ಒಂದು ಪಂಗಡವನ್ನು ಕಟ್ಟಿ ಮಾರ್ಶಲ್ ಟಿಟೊ ಉಭಯತ್ರರನ್ನು ನಿಕಟ ತರುವ ಸಾಹಸ ಮಾಡುತಿದ್ದಾರೆ. ಪ್ರಧಾನಿ ನೆಹರುರವರು ಕೂಡಾ ವರಿಷ್ಠ ನಾಯಕರೊಡನೆ ಈ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸುಧಾರಿಸುವ ಕುರಿತು ವಿಚಾರ ವಿನಿಮಯ ನಡೆಸುತಿದ್ದಾರೆ. ಕಾಂಗೋ ಪ್ರಶ್ನೆಗೆ ಸೂಕ್ತ ಪರಿಹಾರವು ಕಂಡು ಹಿಡಿಯಲ್ಪಟ್ಟಲ್ಲಿ—ಮುಖ್ಯವಾಗಿ ಅಲ್ಲಿನ ಪರಸ್ಪರ ವಿರೋಧೀ ಧುರೀಣರಲ್ಲಿ ಸಂಧಾನ ಸಾಧ್ಯವಾದರೆ, ತಾವು ರಾಜಿಗೆ ಸಿದ್ಧರಿರುವುದಾಗಿ ಕ್ರುಶ್ಚೇವರ ಅಭಿಪ್ರಾಯವಿದ್ದಂತೆ ಗೋಚರವಾಗುತ್ತಿದೆ. ಶ್ರೀ ಕ್ರುಶ್ಚೇವರು ಸಂ. ರಾ. ಸಂಸ್ಥೆಯ ಕಾರ್ಯದರ್ಶಿ ಹುದ್ದೆಯನ್ನು ಬದಲಿಸಬೇಕೆಂದು ಬೇಡಿಕೊಂಡಿದ್ದರು.

ಅಂಗವಿಕಲರಿಗೆ ಉದ್ಯೋಗ

ಶ್ರೀ ದ. ಪ. ಕರಮರಕರರು ಕೇಂದ್ರ ಆರೋಗ್ಯ ಮಂತ್ರಿಯಾದಂದಿನಿಂದ ಒಂದೊಂದು ಭಾಷಣದಲ್ಲಿ ಒಂದೊಂದು ವಿಶೇಷತೆಯನ್ನು ಎತ್ತಿ ಹೇಳುವುದರಲ್ಲಿ ಅಗ್ರಗಣ್ಯರು. ಅಂತಾರಾಷ್ಟ್ರೀಯ ಬಧಿರ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿ, ಅಂಗವಿಕಲರ ಬಗ್ಗೆ ಸಹಾನುಭೂತಿಯನ್ನವರು ಪ್ರದರ್ಶಿಸಿದ್ದಾರೆ. ಇಂತಹರಿಗೂ ಸಮಾಜವು ಸಲ್ಲಿಸಬೇಕಾದ ಕರ್ತವ್ಯವಿದೆಯೆಂದು ಹೇಳಿ, ದೇಶದ ಉದ್ದಿಮೆಗಳ ಒಡೆಯರು ತಮ್ಮ ಸಂಸ್ಥೆಗಳಲ್ಲಿ ಕೆಲವೊಂದು ಕಿವುಡರನ್ನೂ ಮೂಕರನ್ನೂ ಸೇರಿಸಿಕೊಳ್ಳುವ ನಿಯಮವಿಟ್ಟುಕೊಳ್ಳುವುದು ಉಚಿತವೆಂದರು.

ಸಂಪಿಗೆ ನಿರ್ಬಂಧ

ಹೊಸದಿಲ್ಲಿಯಲ್ಲಿ ಸೇರಿದ್ದ ಭಾರತೀಯ ಕೂಲಿಕಾರ ಪರಿಷತ್ತು ಎರಡು ದಿನ ಸಭೆ ಸೇರಿ ಆರು ವಿಷಯಗಳನ್ನು ಚರ್ಚಿಸಿ ಯಾವುದೇ ನಿರ್ಧಾರ ಕೈಗೊಳ್ಳದೆ ಪರ್ಯವಸಾನಗೊಂಡಿತು. ಮಜೂರ ಮಂತ್ರಿ

ಕಾಸರಗೋಡು ಮು. ಕೋರ್ಟಿನಲ್ಲಿ

S. C. 389/1947

R. E. P 241/1960.

ಕೃಷ್ಣಬಾಲ್ಯತ್ತಾಯ —ಅರ್ಜಿದಾರ,

ಮುಕ್ತು

ಹರಿಯಪ್ಪ ನಾಯ್ಕ ಸಹಾ —ರೈಸಾಂಡೆಂಟ್ರು, 1ನೇ ರೈ-ಹರಿಯಪ್ಪ ನಾಯ್ಕ—ಕಾಂತಪ್ಪ ನಾಯ್ಕನ ಮಗ. 4ನೇ ರೈ-ಬಾಬು ನಾಯ್ಕ-ಕಾಂತು ನಾಯ್ಕನ ನ್ಯಾನರ ಮಗ ಗಾರ್ಡಿಯನ್ 1ನೇ. ಹರಿಯಪ್ಪ ನಾಯ್ಕ—ಕಾಸರಗೋಡು ತಾಲೂಕು ಅಡೂರು 1ನೇ ಗ್ರಾಮದಲ್ಲಿರುವವರು—ಇವರಿಗೆ ತಿಳಿಯಪಡಿಸುವುದೇನಂದ್ರೆ,

ಮೇಲ್ಕಂಡ ಅಮ್ಲಜಾರಿಯಲ್ಲಿ ಸ್ಥಿರಾಸ್ತಿ ಜಪ್ತಾಗಿ ನಿಮಗೆ ಜ್ಯಾರಿಯಾಗಿ ಜಪ್ತಿ ಹುಕುಂ ಜ್ಯಾರಿ ಬಗ್ಗೆ ಸದ್ರಿ ಅಮ್ಲಜ್ಯಾರಿಯು ತಾ. 10—10—1960ಕ್ಕೆ ಇಟ್ಟಿರುವದ್ರಿಂದ ಆ ದಿವಸ ನೀವು ಸದ್ರಿ ಕೋರ್ಟುಮುಂದೆ ಹಾಜ್ರಾಗಲು ತಪ್ಪಿದರೆ ನಿಮ್ಮನ್ನು ಎಕ್ಸಪಾರ್ಟಿ ಮಾಡೋಣಾದೀತು ಎಂಬ ಸಂಗ್ತಿ ಈ ಮೂಲ್ಕ ತಿಳಿಸೋದಾಗಿದೆ.

(Sd) K. P. Gopalakrishna Shetty

Advocate for Petitioner.

ಕಾಸರಗೋಡು 29—9—60

ಶ್ರೀ ಗುಲ್ಜಾರಿಲಾಲ ನಂದಾರವರು ಈ ಪರಿಷತ್ತಿನಲ್ಲಿ ಮಾತಾಡುತ್ತ, ಸರಕಾರಿ ನೌಕರರು ಸಂಪು ಹೂಡುವುದನ್ನು ನಿರ್ಬಂಧಿಸಲು ಮಾಡಿದ ಸರಕಾರದ ಯೋಜನೆಯನ್ನು ಸಮರ್ಥಿಸಿದರು. ಇದೇ ಮಾದರಿಯ ಕಾಯಿದೆಯನ್ನು ಇತರ ನೌಕರರ ಬಗೆಗೂ ಮಾಡಬಹುದು; ಆದರೆ, ಅದು ಈಗ ಬೆಂಬಲ ಗಳಿಸದಿರಬಹುದು ಎಂದವರು ತಿಳಿಸಿದರು. ಸೇರಿದ್ದ ಒಡೆಯ ಹಾಗೂ ಕೂಲಿಗಾರರ ಪ್ರತಿನಿಧಿಗಳು ಶ್ರೀ ನಂದಾರವರು ಸರಕಾರಿ ನೌಕರರ ಸಂಪನ್ನು ಪ್ರತಿಬಂಧಿಸುವ ಕುರಿತಿತ್ತ ಸ್ಪಷ್ಟೀಕರಣವನ್ನು ಸ್ವಾಗತಿಸಿ ತಲೆಯಾಡಿಸಿದರು.

ಬಿಡುಗಡೆ ನೀಡಿರಿ

ಒರಿಸ್ಸದ ಮುಖ್ಯಮಂತ್ರಿ ಡಾ| ಹರಿಕೃಷ್ಣ ಮೆಹತಾಬರು ತಮ್ಮನ್ನು ನವಂಬರ ೧೫ರ ಸುಮಾರಿಗೆ ಮುಖ್ಯಮಂತ್ರಿ ಪದವಿಯಿಂದ ಬಿಡುಗಡೆ ಮಾಡಬೇಕೆಂದು ಕಾಂಗ್ರೆಸ್ ಅಧ್ಯಕ್ಷರಿಗೆ ಪತ್ರ ಬರೆದಿರುವರೆಂದು ತಿಳಿಯುತ್ತದೆ. ಡಾ| ಮೆಹತಾಬರಲ್ಲಿ ಈ ಅಭಿಲಾಷೆ ಹುಟ್ಟಲು ಕಾರಣವೇನೆಂದು ಸರಿಯಾಗಿ ಇನ್ನೂ ಗೊತ್ತಾಗಿಲ್ಲ.

ದಬ್ಬಿದರೂ ಕದಲಲಾರೆ

ಆಂಧ್ರದಲ್ಲಿ ಎದ್ದ ಕಾಂಗ್ರೆಸ್ ಬಿಕ್ಕಟ್ಟು ಹಾಗೆಯೇ ನಿಂತಿದೆ. ಮುಖ್ಯಮಂತ್ರಿ ಶ್ರೀ ಡಿ. ಸಂಜೀವಯ್ಯನವರು ತನಗೆ ವಿಧಾನಸಭೆ ಮತ್ತು ಪರಿಷತ್ತುಗಳಲ್ಲಿ ಬಹುಮತದ ಬೆಂಬಲವಿರುವುದರಿಂದ ವಿಶ್ವಾಸಮತ ಪಡೆಯುವ ಪ್ರಶ್ನೆಯೇ ಇಲ್ಲವೆಂದು ಅತೀವ ಧೈರ್ಯದಿಂದ ಹೇಳಿದ್ದಾರೆ. ಮುಂದಿನ ಕತೆಯೇನೆಂದು ನೋಡಬೇಕಷ್ಟೆ.

ಕಾಶ್ಮೀರದ ಭವಿಷ್ಯ

ಸಿಂಧೂನದೀ ನೀರಿನ ಕುರಿತಾದ ವಿವಾದವನ್ನು ಸೌಹಾರ್ದಮಯವಾಗಿ ತೀರಿಸಿಕೊಂಡ ಭಾರತ—ಪಾಕಿಸ್ತಾನಗಳ ಜನತೆಯನ್ನು ವಿಶ್ವದ ರಾಷ್ಟ್ರಗಳು ಅಭಿನಂದಿಸುತ್ತಿವೆ. ಇದೇ ರೀತಿಯಲ್ಲಿ ಕಾಶ್ಮೀರ ಪ್ರಶ್ನೆಯೂ ಬಗೆ ಹರಿಯಲೆಂಬ ಆಕಾಂಕ್ಷೆ ಪಾಕ್—ಭಾರತಗಳಿಗಿದೆ. ಪ್ರಧಾನಿ ನೆಹರುರವರು ಪಾಕಿಸ್ತಾನಿ ಅಧ್ಯಕ್ಷ ಅಯೂಬರೊಂದಿಗೆ ಮಾತಾಡುತ್ತಿರುವಾಗ ಈ ಸಮಸ್ಯಾಪೂರಣಕ್ಕೂ ಸಹಾಯಕವಾಗುವ ಹಲವು ವಿಚಾರಗಳನ್ನು ಹೊರಗೆಡಹಿದರು. ಇಡಿ ಕಾಶ್ಮೀರವನ್ನು ಕಾಶ್ಮೀರ, ಜಮ್ಮು ಮತ್ತು ಆಜಾದ (ಪಾಕ್ ಆಕ್ರಮಿತ) ಕಾಶ್ಮೀರವೆಂದು ಮುಬ್ಭಾಗ ಮಾಡಿ ಪ್ರತಿಪ್ರತ್ಯೇಕ ಮತದಾನ ನಡೆಸಿ, ಆಯಾ ಕ್ಷೇತ್ರಗಳು ಸೇರ ಬಯಸುವ ರಾಷ್ಟ್ರದೊಡನೆ ಸೇರ್ಪಡೆಗೊಳಿಸುವುದೂ ಇದರಲ್ಲಿ ಒಂದು. ಆದರೆ, ಭಾರತವು ಈ ವಾದಕ್ಕೆ ಅದೆಷ್ಟು ಬೆಲೆ ಕೊಡಬಲ್ಲದು?

ವೇತನ ಸಮಿತಿಯ ವರದಿ

ತನ್ನ ನೌಕರರ ವೇತನ ಪರಿಶೀಲಿಸಲು ಮೈಸೂರು ಸರಕಾರವು ನೇಮಿಸಿದ್ದ ಸಮಿತಿಯು ಸದ್ಯದಲ್ಲೇ (ಅಕ್ಟೋಬರ?) ತನ್ನ ವರದಿಯನ್ನು ಸಲ್ಲಿಸುವುದೆಂದೂ ಅದನ್ನು ಸಹಾನುಭೂತಿಪರರಾಗಿ ಪರಿಶೀಲಿಸಿ, ಮುಂದಿನ ನವಂಬರ ತಿಂಗಳ ಒಳಗೆ ಸರಕಾರವು ತನ್ನ ನಿರ್ಧಾರವನ್ನು ಪ್ರಕಟಿಸುವುದೆಂದೂ ತಿಳಿದುಬಂದಿದೆ. ಅಂತೆಯೇ ಮಾಸಿಕ ರೂ. ೩೦೦ಕ್ಕಿಂತ ಕಡಿಮೆ ವೇತನವಿರುವ ಅಧ್ಯಾಪಕರ ಮಕ್ಕಳಿಗೆ ಉಚಿತ ಶಿಕ್ಷಣವೀಯುವುದಕ್ಕೂ ಸರಕಾರ ಪರಿಶೀಲಿಸುತ್ತಿದೆಯೆಂದೂ ಕೇಂದ್ರ ಸರಕಾರವು ಈ ಬಗ್ಗೆ ಸಹಾಯವಿತ್ತರೆ, ಇದನ್ನೂ ಕಾರ್ಯಗತಗೊಳಿಸಲು ಪ್ರಯತ್ನಿಸುವುದಾಗಿಯೂ ತಿಳಿಯುತ್ತದೆ.

ಟಿಬೇಟಿನ ಬಗ್ಗೆ ಚರ್ಚೆ

ಟಿಬೇಟಿನ ಪ್ರಶ್ನೆಯನ್ನು ಸಂ. ರಾ. ಸಂಘವು ಪರಿಶೀಲಿಸುವುದರಿಂದ ಚೀನಾದ ಆಂತರಿಕ ವ್ಯವಹಾರದಲ್ಲಿ ಅದು ಕೈಹಾಕಿದಂತಾಗುವುದು. ಅಲ್ಲಿ ಜನರ ಮೇಲೆ ಜನತಾ ಚೀನವು ದಬ್ಬಾಳಿಕೆ ನಡೆಸಿದೆಯೆಂಬ ದೂರು ಸಂಪೂರ್ಣ ಸುಳ್ಳಾಗಿದೆ. ಸತ್ಯ ಸಂಗತಿಯೆಂದರೆ, ಅಲ್ಲಿ ಪ್ರತಿಗಾಮಿ ಶಕ್ತಿಗಳು ದಂಗೆಯೆದ್ದಿದೆ—ಎಂದು ರಶ್ಯವು ಮಾರ್ಗದರ್ಶಕ ಸಭೆಯಲ್ಲಿ ವಾದಿಸಿತು. ಈ ವಾದಕ್ಕೆ ಯುಗೊಸ್ಲಾವಿಯಾ, ಬಲ್ಗೇರಿಯಾಗಳೂ ಬೆಂಬಲವಿತ್ತುವು. ಅಮೆರಿಕೆ ಬ್ರಿಟನ್‌ಗಳು, ಮಾನವೀಯ ಹಕ್ಕುಬಾಧ್ಯತೆಗಳನು ನಿರಾಕರಿಸಿದಾಗ ಸಂ. ರಾ. ಸಂಘದ ಮೂಲಕ ಅದನ್ನು ಮರಳಿ ಕೊಡಿಸುವ ಪ್ರಯತ್ನ ನಡೆಯುತ್ತಿದೆ. ಟಿಬೇಟು ಈ ರೀತಿಯ ಒಂದು ಪ್ರಶ್ನೆಯಾಗಿದ್ದು ಅದನ್ನು ಚರ್ಚಿಸುವುದು ಅನುಚಿತವಲ್ಲ" ವೆಂದು ಹೇಳಿದುವು. ಬಹುಮತದಿಂದ ಕಾರ್ಯಕ್ರಮ ಪಟ್ಟಿಯಲ್ಲಿ ಇದು ಸೇರಿಸಿಕೊಳ್ಳಲ್ಪಟ್ಟಿತು.

ಓದುಗರಲ್ಲಿ—

ಕೆಲವೊಂದು ಅನಾನುಕೂಲತೆಗಳ ದೆಸೆಯಿಂದ ಈ ವಾರದ ಸಂಚಿಕೆಯಲ್ಲಿ ೧೦ ಪುಟಗಳನ್ನು ಮಾತ್ರ ಕೊಡುವಂತಾದುದಕ್ಕಾಗಿ ವಿಷಾದಿಸುತ್ತೇವೆ.

—ಮೇನೇಜರ್.

ಅಲ್ಲಲ್ಲಿಯ ಸುದ್ದಿ ಸಾರ

ಗ್ರಾಮ ಉದ್ಯೋಗಸ್ಥರ ಪರೀಕ್ಷೆ— ಗ್ರಾಮ ಉದ್ಯೋಗಸ್ಥರ ವರ್ಷಾವಧಿ ಪರೀಕ್ಷೆಯು ಇದೇ ಅಕ್ಟೋಬರ ೨೪ ಮತ್ತು ೨೫ನೇ ತಾರೀಕುಗಳಲ್ಲಿ ಕುಂದಾಪುರ, ಮಂಗಳೂರು, ಪುತ್ತೂರು ಡಿವಿಜನುಗಳಲ್ಲಿ (ಮತ್ತು ಕೊಳ್ಳೇಗಾಲದಲ್ಲಿ) ನಡೆಯುವುವು. ಈ ಪರೀಕ್ಷೆಗೆ ದಾಖಲಾಗಲಿಕ್ಕೆ ಎಲ್ಲರೂ(ಹೆಂಗಸರು ಕೂಡ) ಅರ್ಹರಾಗಿದ್ದಾರೆ.

ಪರೀಕ್ಷೆಗೆ ದಾಖಲು ಮಾಡಿಕೊಳ್ಳಲಿಕ್ಕೆ ತೆರಬೇಕಾದ ಫೀಸನ್ನು ತೆತ್ತು ನಿಯುಕ್ತ ಫಾರ್ಮಿನಲ್ಲಿ ಅಕ್ಟೋಬರ ತಾ. ೫ರೊಳಗೆ ಅಸಿಸ್ಟಂಟ್ ಕಮಿಶನರಿಗೆ ಅರ್ಜಿ ಬರೆಯತಕ್ಕದ್ದು. ಕನ್ನಡದಲ್ಲಿ ಪರೀಕ್ಷೆ ನಡೆಯುವುದು ಎಂದು ಡೆಪ್ಯುಟಿ ಕಮಿಷನರ್ ಶ್ರೀ ಸಿ. ಜಿ. ಪದ್ಮನಾಭ ಅವರು ತಿಳಿಸುತ್ತಾರೆ.

ಡಾ| ಯು. ಪಿ. ಮಲ್ಯರ ನಿಧನಕ್ಕಾಗಿ ಸಂತಾಪ ಸೂಚಕ ಠರಾವನ್ನು ತಾ. 23ರಲ್ಲಿ ನಗರಸಭಾಪತಿ ಶ್ರೀ ಮಜೇಲ್ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದ ಮಂಗಳೂರು ನಗರ ಸಭೆಯಲ್ಲಿ ಮಂಜೂರು ಮಾಡಲಾಯಿತು.

ತಾ. 18ರಲ್ಲಿ ಮಂಗಳೂರು ಕೇಂದ್ರ ಮೈದಾನಿನಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ಬಿ. ಮಂಜಯ ಹೆಗ್ಡೆ ಅಧ್ಯಕ್ಷತೆಯಲ್ಲಿ ನೆರವೇರಿದ ಸಾರ್ವಜನಿಕಸಭೆಯಲ್ಲಿ ಡಾ. ಯು. ಪಿ. ಮಲ್ಯರ ನಿಧನಕ್ಕಾಗಿ ದುಃಖವನ್ನು ವ್ಯಕ್ತಪಡಿಸಲಾಯ್ತು. ದಿ. ಡಾ. ಮಲ್ಯರ ರಾಜಕೀಯ ಜೀವನ, ತ್ಯಾಗ, ದೇಶಾಭಿಮಾನ ಮೊದಲಾದುವನ್ನು ಕುರಿತು ಶ್ರೀಗಳಾದ ಕೆ. ಕೆ. ಶೆಟ್ಟಿ, ಕೆ. ಸೂರ್ಯನಾರಾಯಣ ಅಡಿಗ, ಮಜೇಲ್ ಶ್ರೀನಿವಾಸ ನಾಯ್ಕ, ಮಂಜಪ್ಪ ಉಲ್ಲಾಳ್, ಬಿ. ದಾಮೋದರ ಬಾಳಿಗ, ಮುದ್ರಾಡಿ ಕೃಷ್ಣಯ ಶೆಟ್ಟಿ, ಎ. ಶಂಕರ ಆಳ್ವ, ಡಾ. ಕೊಯಿಲೊ ಮೊದಲಾದವರು ಮಾತನಾಡಿದರು.

ದ. ಕ. ಜಿಲ್ಲೆಯಲ್ಲಿ ಮೆಟ್ರಿಕ್ ತೂಕದ ಪದ್ಧತಿಯು ಇದೇ ಅಕ್ಟೋಬರದಿಂದ ಕಡ್ಡಾಯವಾಗಿ ಜಾರಿಗೆ ಬರುವುದು.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಪೆರ್ಕಾಳ— 16-9-60ರಲ್ಲು ಸ್ಥಳೀಯ ಶ್ರೀ ಮಹಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ಗುರುರಾಜ ಜೋಯಿಸ್ಯರಿಂದ ಪದ್ಧತಿಯಂತೆ ನಡೆಯುವ ಲಕ್ಷ ಹೂವಿನ ಪೂಜೆಯು ವಿಜೃಂಭಣೆಯಿಂದ ನಡೆಯಿತು. ಪೆರ್ಕಾಳ ಶಾರದಾ ಕಲಾಮಂಡಳಿಯವರಿಂದ ಯಕ್ಷಗಾನ, ಭಜನೆ ನಡೆದಬಳಿಕ ಸಬ್ ಪೋಸ್ಟ್ ಮಾಸ್ತರ್ ಕೆ. ಆನಂದ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಹಿರ್ಗಾ ಪಂಚಾಯತ್ ಅಧ್ಯಕ್ಷ ಪಿ. ಮಂಜುನಾಥ ಶ್ಯಾನುಭಾಗರು ಸ್ವಾಗತಿಸಿ ದೇವಸ್ಥಾನಕ್ಕೆ ಒಂದು ರಥದ ಆಗತ್ಯವನ್ನು ವಿವರಿಸಿ ಸಹಕಾರ ಕೋರಿದರು. ಶ್ರೀ ಗುರುರಾಜ ಜ್ಯೋತಿಸ್ಯರೂ, ಬಿ. ಪಾಂಡುರಂಗ ಹೆಗ್ಡೆಯೂ ಮಾತಾಡಿದ ನಂತರ ಸಭೆಯಲ್ಲೆ ರೂ. ಒಂದು ಸಾವಿರಕ್ಕೂ ಮಿಕ್ಕಿ ಭಕ್ತಾದಿಗಳಿಂದ ವಾಗ್ದಾನವಾಯಿತು

ಬಂಟರ ಯಾನೆ ನಾಡವರ ಸಂಘ, ಮುಂಬಾಯಿ— ಮೇಲಿನ ಸಂಘದ ಪ್ರಥಮ ಅಧ್ಯಕ್ಷರಾಗಿ ಅನೇಕ ವರ್ಷಗಳ ವರೆಗೆ ಆ ಸ್ಥಾನವನ್ನು ಅಲಂಕರಿಸಿ ಸಂಘದ ಮೇಲ್ಮೆಗಾಗಿ ಸದಾ ಸಹಾಯ ಸಹಾನುಭೂತಿ ಗಳನ್ನಿತ್ತ ದಿವಂಗತ ಡಾ. ವೆಂಕಟಪ್ಪಯ ಶೆಟ್ರ ಆತ್ಮಕ್ಕೆ ಚಿರಶಾಂತಿಯನ್ನೀಯುವಂತೆ ಭಗವಂತನಲ್ಲಿ ಪ್ರಾರ್ಥಿಸಲಾಯಿತಲ್ಲದೆ, ಸಂಘದ ಅನುತಾಪವನ್ನು ಮೃತರ ಧರ್ಮಪತ್ನಿಗೆ ತಿಳಿಸಬೇಕಾಗಿ ತಾ. 11-9-1960 ಜರಗಿದ ಕಮಿಟಿ ಸಭೆಯಲ್ಲಿ ನಿರ್ಧರಿಸಲಾಯಿತು.

ಕಾರ್ಕಳ— ತಾ.20-9-60ರಂದು ಕಾರ್ಕಳ ಜೀವವಿಮಾ ಏಜಂಟರ ಪರಿಷತ್ತು ಫೀಲ್ಡ್ ಆಫೀಸರವರ ಆಫೀಸಿನಲ್ಲಿ, ಆಸಿಸ್ಟಾಂಟ್ ಬ್ರಾಂಚ್ ಮೆನೇಜರ್ ಶ್ರೀ ಟಿ. ಪಿ. ಎಸ್. ನಂಬಿಯಾರವರ ಅಧ್ಯಕ್ಷತೆಯಲ್ಲಿ ಜರಗಿತು. ಫೀಲ್ಡ್ ಆಫೀಸರ್ ಶ್ರೀ ಎ. ಎಸ್ ಕಿದಿಯೂರರವರು ಸ್ವಾಗತ ಭಾಷಣವನ್ನು ಮಾಡಿದರು. ಅಧ್ಯಕ್ಷರು ಎಲ್ಲಾ ಏಜಂಟರೊಡನೆಯೂ ಸಮಾಲೋಚನೆ ನಡೆಸಿದ ಬಳಿಕ ತಮ್ಮ ಭಾಷಣದಲ್ಲಿ ಜೀವವಿಮಾ ಕೋರ್ಪರೇಷನಿನ ಪಂಚವಾರ್ಷಿಕ ಯೋಜನೆಯನ್ನು ವಿವರಿಸಿ ಎಲ್ಲರೂ ಅದರ ಯಶಸ್ವಿಗಾಗಿ ದುಡಿಯಬೇಕೆಂದರು. ಹಿರಿಯ ಏಜಂಟ್ ಶ್ರೀ ಕೆ. ರಾಘವೇಂದ್ರ ರಾಯರವರು ಧನ್ಯವಾದ ಸಮರ್ಪಣೆಗೈದರು.

ಕಾರ್ನಾಡು ಸದಾಶಿವ ರಾವ್ ಸದನದ ಶಂಕುಸ್ಥಾಪನೆ— ಕಾರ್ನಾಡು ಸದಾಶಿವ ರಾವ್ ಸ್ಮಾರಕ ಸೇವಾಶ್ರಮದ ವ್ಯವಸ್ಥಾಪಕತ್ವದಲ್ಲಿ ನಡೆಯುವ ಮೂಲ್ಕಿಯ ಪುನರೂರು ಭಾರತಮಾತಾ ಶಾಲೆಯ ಹೊಸ ಕಟ್ಟಡ ಕಾರ್ನಾಡು ಸದಾಶಿವ ರಾವ್ ಸದನದ ಶಂಕು ಸ್ಥಾಪನಾ ಸಮಾರಂಭವು ತಾ. 21ರಲ್ಲು ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಶ್ರೀ ಅದಮಾರು ಮಠದ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂಗಳವರಿಂದ ನೆರವೇರಿತು. ಡಾ| ವಿ. ಎ. ಆಸ್ರಣ್ಣನವರು ಸ್ವಾಗತಿಸಿದರು. ಶ್ರೀ ಜಿ. ಮಹಾಬಲ ಶೆಟ್ಟರು ಮುಖ್ಯ ಅತಿಥಿಗಳ ಗುಣ ಪರಿಚಯ ಮಾಡಿದರು. ಕುಮಾರಿ ಸುಶೀಲರವರು ಶಾಲಾ ವರದಿಯನ್ನೂ ಡಾ| ಸಂಜೀವ ನಾಥರು ಸೇವಾಶ್ರಮದ ಚಟುವಟಿಕೆಗಳ ವರದಿಯನ್ನೂ ಹೇಳಿದರು. ಡಾ| ಕೆ. ಪಿ. ಮಧ್ಯಸ್ಥರು ಸಂದೇಶಗಳನ್ನು ಓದಿದರು. ಡಾ| ರಾಮಣ್ಣ ಶೆಟ್ಟಿ, ಶ್ರೀ ಸುಬ್ಬ ಚಂಪ, ಮರಿಯನ್ ಪಾಯಸ್, ಪಿ. ಎನ್ ಕರ್ಕೇರ ಮೊದಲಾದವರು ಭಾಷಣವಿತ್ತರು. ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಭಾಸ್ಕರ ಶೆಟ್ಟರು ಧನ್ಯವಾದಿಸಿದರು, ಸಂಜೆ ನಾಟಕಾದಿ ವಿನೋದಾವಳಿಗಳಿದ್ದುವು.

ಚಂದಾಹಣ—

ಬಾಕಿ ಇರುವ ಚಂದಾದಾರರಿಗೆ ಮುಂದಿನ ವಾರದ ಯಾ ಅನಂತರದ ಪತ್ರಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಈ ಬಗ್ಗೆ ಯಾರೂ ದಯಮಾಡಿ ಅನ್ಯಥಾ ಭಾವಿಸದೆ ವಿ. ಪಿ.ಯನ್ನು ಪಡೆಕೊಂಡು ಸಹಕರಿಸಬೇಕಾಗಿ ವಿನಂತಿ.

—ಮೆನೇಜರ್.

ಪರಿಚಯ

ತಳ ಕಾಣದ ಕೊಳ

ಹಂಗೆರಿಯ ಲೆಗಿವನ್‌ಯೋಸ್‌ನಲ್ಲಿರುವ ಒಂದು ಕೊಳ ತಳ ಕಾಣದು. ಒಂದು ಕಾಲದಲ್ಲಿ ಜಾಗು ಪ್ರದೇಶವಾಗಿದ್ದು ಯಾರಿಗೂ ಬೇಡವಾದ ಆ ಸ್ಥಳ ಇಂದು ಒಂದು ಸುಂದರ ಉದ್ಯಾನಕ್ಕೂ ಸಸ್ಯ ಶಾಲೀನತೆಗೂ ಜನ್ಮವಿತ್ತಿದೆ—ಎಂದರೆ ನೀವು ವಿಸ್ಮಿತರಾಗದಿರುವಿರಾ?

ಸ್ಥಳ ಪುರಾಣವಿಲ್ಲದ ಸ್ಥಳವುಂಟೆ? ಕಟ್ಟುಕತೆಯಿಲ್ಲದ ಪಟ್ಟಣವುಂಟೆ? ಪ್ರಪಂಚದ ಯಾವ ಭಾಗಕ್ಕೆ ಹೋದರೂ ಪ್ರತಿಯೊಂದು ಗ್ರಾಮದ ಅಥವಾ ಪಟ್ಟಣದ ಬಗ್ಗೆ ಒಂದು ಒಂದು ಹಳೆಯ ಕತೆ ಇದ್ದೇ ಇರುತ್ತದೆ. ಅದರಂತೆ ಹಂಗರಿ ದೇಶದಲ್ಲಿ ಬುಡಾಪೆಸ್ಟ್ ನಗರದ ದಕ್ಷಿಣಭಾಗದಲ್ಲಿರುವ ಲೆಗಿವನ್‌ಯೋಸ್ ಎಂಬ ಒಂದು ಸ್ಥಳದ ಕೊಳದ ಬಗ್ಗೆ ಒಂದು ಅಡಗೂಲಜ್ಜಿಯ ಕತೆ ಹೆಣೆದುಕೊಂಡು ಬಂದಿದೆ.

ಅದೊಂದು ದೆವ್ವದ ಕತೆ. ತಳವಿಲ್ಲದ ಕೊಳ ಅದರ ವಸ್ತು. ಇಂದು ಉಲ್ಲಾಸದ ಉದ್ಯಾನವಾಗಿರುವ ಲೆಗಿವನ್‌ಯೋಸ್ ಹಿಂದೊಮ್ಮೆ ಜಾಗು ಭೂಮಿಯಾಗಿತ್ತು. ಒಂದು ಕಾಲಕ್ಕೆ ಆ ನಿವೇಶದಲ್ಲಿ ಇಟ್ಟಿಗೆ . ತಯಾರಿಸುವ ಕಾರ್ಖಾನೆಯೊಂದಿತ್ತಂತೆ ಅದರ ಮಾಲೀಕ ಬಹಳ ಹಣವಂತ; ಆದರೆ ಕ್ರೂರಿ ಅವನ ದುಷ್ಟತನಕ್ಕೆ ಅವನನ್ನು ಶಿಕ್ಷಿಸುವ ಸಲುವಾಗಿಯೋ ಏನೋ ಎಂಬಂತೆ ಒಂದು ದಿನ ರಾತ್ರಿ ಇದ್ದಕ್ಕಿದ್ದಂತೆಯೇ ಕುಸಿದು ಹೋತು ಹೋಯಿತು. ಮಾರನೇ ದಿನ ಬೆಳಗ್ಗೆ ನೋಡಿದರೆ ಅದರ ಸ್ಥಳದಲ್ಲಿ ಒಂದು ದೊಡ್ಡ ಕೊಳವಿತ್ತು. ಆದರೆ ಅದು ತಳವಿಲ್ಲದ ಕೊಳವಾಗಿತ್ತು. ಇಂದಿಗೂ ಅದರ ಆಳವನ್ನು ಅರಿತವರಿಲ್ಲ. ಕಾರ್ಖಾನೆಯ ಮಾಲೀಕನು ದೆವ್ವಾಗಿ ಅಲ್ಲಿಗೆ ಹೋದವರನ್ನೆಲ್ಲ ಕೊಳದೊಳಕ್ಕೆ ಎಳೆದುಕೊಂಡು ಮುಳಗಿಸುತ್ತಿದ್ದನಂತೆ! ಇದು ಹಳೆಯ ಕತೆ. ಕೊನೆಗೆ ಮಾನವ ಶಕ್ತಿಯೇ ಆ ದೆವ್ವವನ್ನು ಸದೆಬಡೆದು ಗೆಲ್ಲಬೇಕಾಯಿತು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O S 235/1956.

R· E. P. 26/1960·

ಜಲಜಾಕ್ಷಿ ಅಮ್ಮ ಕೂಡಾ—ಅರ್ಜಿದಾರರು.

ಮತ್ತು

ಸಂತೋಷ ಕುಮಾರ್– ಶೀತಮ್ಮ ಶೆಡ್ತಿರ ಮಗ—ಉಡುಪಿ ತಾಲೂಕು ಶಿವಳ್ಳಿ ಗ್ರಾಮ.

—೨ನೇ ಎದ್ರಿ.

ಇವರೊಳಗೆ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ಮೇಲ್ಕಂಡ ಅಮಲ್ದಾರಿಯಲ್ಲಿ ಹಾಜ್ರಾದ ಇಸ್ತಿಹಾರಿನ ಶರತಗಳನ್ನು ನಿರ್ಣಯಿಸುವ ಬಗ್ಗೆ ತಾರೀಕು. 1—10—1960ಕ್ಕೆ ಇಟ್ಟಿರುವದ್ರಿಂದ ಆಕ್ಷೇಪಣೆಯಿದ್ದರೆ ಆ ದಿವಸ ಪೂರ್ವಾಹ್ನ 10ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಬಹುದು.

K. Ramakrishna Rao.

Vakil for Petitioners.

ಉಡುಪಿ. ತಾರೀಕು 21-9-60.



೧೯೩೦ರಲ್ಲಿ ಶಾಂತಿನಿಕೇತನದಲ್ಲಿ ಕವಿ ಠಾಗೋರರು ಧ್ಯಾನದಲ್ಲಿದ್ದಾಗ ತೆಗೆದ ಚಿತ್ರವಿದು.

ಕತೆ ಹಾಗಿರಲಿ ಲೆಗಿವನ್‌ಯೋಸ್‌ದ ಕೊಳವು ತುಂಬ ಆಳವೆಂಬುದೇನೋ ನಿಜ. ಅದರ ಸುತ್ತ ಜಾಗು ಭೂಮಿಯಿತ್ತು. ಕೊಳದ ಮೇಲೆ ಜೊಂಡು ಬೆಳೆದಿತ್ತು. ಕಾರ್ಮಿಕರ ಹಾಗೂ ಇತರ ಸಣ್ಣಪುಟ್ಟ ಕೆಲಸಗಾರರ ಮಕ್ಕಳು ಗೊತ್ತಿಲ್ಲದೆ ಅಲ್ಲಿಗೆ ಹೋಗಿ ಮುಳುಗಿ ಸಾಯುತ್ತಿದ್ದರು. ದೊಡ್ಡವರೂ ಅನೇಕರು ಆ ಕೊಳದ ಬಳಿಗೆ ಹೋಗಿ ನೀರಿನಲ್ಲಿ ಮುಳುಗಿ ಮಡಿಯುತ್ತಿದ್ದರು. ಆ ಪ್ರದೇಶದ ಸುತ್ತಮುತ್ತಲಿದ್ದ. ಮುರುಕಲು ಗೋಡೆಗಳೂ, ಹಾಳು ಮನೆಗಳೂ, ಅಕೃತ್ಯಕಾರರ ಆವಾಸಸ್ಥಾನಗಳಾಗಿದ್ದವು.

ಇಂದು ಆ ಪ್ರದೇಶದಲ್ಲಿ ಒಂದು ಸುಂದರ ಉದ್ಯಾನವಿದೆ. ಲೆಗಿವನ್‌ಯೋಸದ ಜನರು ಸ್ವಯಂ ಸೇವೆಯ ಮೂಲಕ ಆ ನಿವೇಶನವನ್ನು ಸರಿಪಡಿಸಿ, ಕೊಳದ ಸುತ್ತ ಬಲವಾದ ಕಬ್ಬಿಣದ ಕಂಬಗಳನ್ನು ಹಾಕಿದ್ದಾರೆ. ಜಾಗು ಭೂಮಿಯನ್ನು ಸರಿಪಡಿಸಿ ಅದನ್ನು ಜನಸಂಚಾರಕ್ಕೆ ಯೋಗ್ಯವಾದುದನ್ನಾಗಿ ಮಾಡಿದ್ದಾರೆ. ಯಾರೂ ಈಗ ಕೊಳದ ಬಳಿಗೆ ಹೋಗುವಂತೆಯೇ ಇಲ್ಲ ಆದರ ಸುತ್ತಲಿನ ವಿಶಾಲ ಪ್ರದೇಶದಲ್ಲಿ ಅತ್ಯಂತ ಸುಂದರವಾದ ಉದ್ಯಾನವನ್ನು ನಿರ್ಮಿಸಲಾಗಿದೆ. ಹಚ್ಚ ಹಸುರಿನ ಮೈದಾನ, ಮಕ್ಕಳ ಆಟಕ್ಕೆ ಸುಸಜ್ಜಿತವಾದ ವ್ಯವಸ್ಥೆ! ದೊಡ್ಡವರು ಕುಳಿತುಕೊಳ್ಳಲು ಒಳ್ಳೆಯ ಪೀಠಗಳು ಆ ಉದ್ಯಾನವನ್ನು ಅಲಂಕರಿಸುತ್ತಿವೆ, ಅಲ್ಲಿಯ ಉಪಹಾರ ಗೃಹವೂ, ಭೋಜನ ಮಂದಿರವೂ ಅತ್ಯಾಧುನಿಕವಿದ್ದು, ಭವ್ಯವಾಗಿವೆ. ಅಲ್ಲಿನ ರುಚಿರುಚಿಯಾದ ತಿನಿಸುಗಳನ್ನು ತಿನ್ನುತಿರುವ ಜನರಿಗೆ, ಸುಪ್ರಸಿದ್ಧವಾದ ಹಂಗರಿಯ ಜಿಪ್ಸಿ ವಾದ್ಯಗೋಷ್ಠಿಯು ಇಂಪಾದ ಸಂಗೀತದ ರಸದೂಟವನ್ನು ಸಹ ಉಣಿಸುತ್ತಿರುತ್ತದೆ. ಆ ಉದ್ಯಾನದಲ್ಲಿ ಒಂದು ಭವ್ಯರಂಗ ಮಂದಿರವೂ ಇದೆ. ತಿರುಗಣೆಯ ರಂಗ ಮಂಟಪವುಳ್ಳ ಈ ನಾಟಕ ಮಂದಿರವು ಕಲಾಪ್ರೇಮಿಗಳಿಗೆ ಒಂದು ಅತ್ಯಂತ ಆಕರ್ಷಕ ಸ್ಥಳವಾಗಿದೆ.

ಒಂದು ಕಾಲಕ್ಕೆ ಕಾಲಿಡಲೂ ಭಯಪಡುತ್ತಿದ್ದ ಜಾಗವು ಇಂದು ನಂದನವನವಾಗಿದೆ. ಸಹಸ್ರಾರು ಜನ ಕಾರ್ಮಿಕರಿಗೆ ಆಪ್ಯಾಯಮಾನವಾಗಿದೆ. ವಿದೇಶಿ ಪ್ರವಾಸಿಗರಿಗೆ ಹಂಗರಿಯ ಸಾಂಪ್ರದಾಯಿಕ ಆದರಾತಿಥ್ಯದ ಪ್ರತೀಕವಾಗಿದೆ.

ಇಂದು ಅಲ್ಲಿ ವಿಹರಿಸುತ್ತಿದ್ದ ಸ್ಥಳೀಯ ಜನರಿಗೇ ಅದರ ದೆವ್ವದ ಕತೆ ಮರೆತು ಹೋಗಿದೆ. ಅಂದು ದೆವ್ವದ ಕೊಳವಾಗಿದ್ದ ಸ್ಥಳ ಇಂದು ಉಲ್ಲಾಸದ ಉದ್ಯಾನವಾಗಿದೆ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ-

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦-೬-೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಂಸ್ಕೃತಿದರ್ಶನ

ದೇವಭೂಮಿ ಕುಮಾಯುವಿನ ನೃತ್ಯ

ಭೂತಪ್ರೇತಗಳನ್ನೂ ಅಂಕೆಯಲ್ಲಿಟ್ಟುಕೊಂಡ ಭೂತವಿಜಯಿಗಳು ಕುಮಾಯುವಿನಲ್ಲಿದ್ದಾರೆ. ಈ ಭೂತಗಳ ತೃಪ್ತಿಗಾಗಿ ನೃತ್ಯಗಳನ್ನು ಏರ್ಪಡಿಸಿ ಬಲಿಯೀಯುವುದು ಕುಮಾಯು ಜನರ ಪದ್ಧತಿ.

ಹೆದರುವವರನ್ನು ಮಾತ್ರ ಭೂತಗಳು ಪೀಡಿಸುತ್ತವೆಯೆಂದು ಭೂತ ಪ್ರೇತಗಳಲ್ಲಿ ವಿಶ್ವಾಸವಿಡುವವರು ಅನ್ನುತ್ತಾರೆ. ಆದರೆ, ಪ್ರತ್ಯಕ್ಷವಾದಿಗಳು ಭೂತಗಳಿಗೂ ಪಂಥಾಹ್ವಾನ ಕೊಡುವುದರಿಂದ ಅವೇ ಇವರಿಗೆ ಹೆದರುತ್ತವೆ. ಇಂತಹ ಜನರು ಅಪರೂಪಕ್ಕಾಗಿ ಯಾದರೂ ಇದ್ದಾರೆಂಬುದು ನಿಜ. ಪ್ರಾಚೀನ ಕುಮಾಯೂವಿನಲ್ಲಿ ಇಂತಹ ಸಾಹಸಪೂರ್ಣ ಘಟನೆಯ ಉಲ್ಲೇಖವಿದೆ. ಅಲ್ಮೋಡಾದ ಸಮೀಪ 'ಅನಾರಿಯಾಕೋಟ' ಗ್ರಾಮದಲ್ಲಿ ಅನಾರಿಯಾ ಎಂಬ ವ್ಯಕ್ತಿಯ ವಂಶಜರು ಇಂದೂ ಇದ್ದಾರೆ. ಇವರು ಭೂತಪ್ರೇತಗಳನ್ನು ಓಡಿಸುವ ಕಲೆಯಲ್ಲಿ ನಿಷ್ಣಾತರು. ಅನಾರಿಯಾನು ಬಹಳ ಬಲಿಷ್ಠನಾದ ಮನುಷ್ಯ. ಆತ ಭೂತರಾಜ 'ಮಸಾನ'ನ ಗಡ್ಡ ಹಿಡಿದು ಎಳೆದು ಬಿಟ್ಟಿದ್ದನಂತೆ!

ಸಾವುಲ್ ನದಿಯನ್ನು ದಾಟಿದರೆ, ಅಲ್ಮೋಡಾದ ಪೂರ್ವದಲ್ಲಿ ಒಂದು ಸ್ಮಶಾನವಿದೆ. ಆಕಾಶದಲ್ಲಿ ಚಂದ್ರನ ಜ್ಯೋತಿಯಿಲ್ಲದಾಗ, ಅಂಧಕಾರ ಭಯಾನಕವಾಗಿ ಹರಡಿರುವಾಗ, ಭೂತಪ್ರೇತಗಳು ಇಲ್ಲಿ ತಮ್ಮ ಲೀಲೆಗೆ ತೊಡಗುತ್ತವೆ; ಅವು ಚೆನ್ನಾಗಿ ಹಾಡಿ ನಲಿಯುತ್ತವೆ; ಕೂಗಾಡುತ್ತವೆ ಮತ್ತು ಯಾರಾದರೂ ಏಕಾಕಿಯಾಗಿ ಆ ದಾರಿಯಲ್ಲಿ ಬಂದರೆ, ಆತನನ್ನು ಆಕ್ರಮಿಸುತ್ತವೆ; ಆವುಗಳೊಡನೆ ಡೋಲಿಯಲ್ಲಿ ಆಸೀನನಾಗಿ ಭೂತರಾಜ "ಮಸಾನ"ನೂ ಇರುತ್ತಾನೆ ಎಂದು ಹೇಳುತ್ತಾರೆ.

ಒಂದು ದಿನ ಸಾಕಷ್ಟು ರಾತ್ರಿ ಕಳೆದ ಮೇಲೆ ಅನಾರಿಯಾ ತನ್ನ ಊರತ್ತ ಮರಳಿ ಹೋಗುತಿದ್ದ. ಮಾರ್ಗದಲ್ಲಿ ಆತನಿಗೆ ಪ್ರೇತಗಳ ಮೆರವಣಿಗೆ ಎದುರಾಯಿತು. ಆತನನ್ನು ಕಂಡೊಡನೆಯೇ ಅವು ಕೂಗಾಡತೊಡಗಿದುವು. ಅನಾರಿಯಾ ಒಂದಿಷ್ಟೂ ವಿಚಲಿತನಾಗಲಿಲ್ಲ. ಒಂದು ಕ್ಷಣ, ಆತ ಅವುಗಳ ಗತಿವಿಧಿಯನ್ನು ನೋಡುತ್ತ ನಿಂತ; ತತ್‌ಕ್ಷಣ ಹಾರಿ, ಭೂತರಾಜನ ಉದ್ದವಾದ ಗಡ್ಡವನ್ನು ಹಿಡಿದ; ಭೂತಗಳು ಕೂಗಾಡುವುದನ್ನು ಮರೆತು, ಆತನನ್ನೇ ಪ್ರತೀಕ್ಷಿಸತೊಡಗಿದುವು. ಅನಾರಿಯಾನ ಹಿಡಿತ ಸಡಿಲದಿದ್ದುದನ್ನು ಕಂಡ ಭೂತ ರಾಜ ಹೆದರಿ ಹೇಳಿದ— "ನನ್ನ ಗಡ್ಡವನ್ನು ಬಿಡು; ಒಂದು ವರವನ್ನು ಕೊಡುತ್ತೇನೆ." ಹೀಗೆ ಅನಾರಿಯಾ ಭೂತಗಳ ಮೇಲೆ ತನ್ನ ಪ್ರಭಾವವನ್ನು ಸ್ಥಾಪಿಸಿದ ಅಂದಿನಿಂದ ಆತನ ವಂಶಜರು ಭೂತ ಪ್ರೇತ ನಿವಾರಣೆಯಲ್ಲಿ ಪ್ರವೀಣರಾದರು. ಯಾರಾದರೊಬ್ಬನಿಗೆ ಭೂತ ಹಿಡಿದರೆ, ಇವರಿಗೇ ಕರೆ ಹೋಗುತ್ತದೆ. ಅನಾರಿಯಾ ವಂಶಜರಿಗೆ ಹೆದರಿ ಭೂತಗಳು ಅವರ ಗ್ರಾಮಕ್ಕೆ ಕಾಲಿಡುವುದಿಲ್ಲ.

ಚಿಕಿತ್ಸಾ ಸೌಕರ್ಯವೊದಗುವ ವರೆಗೆ ದೇವಿ-ದೇವತೆಗಳ ಶಕ್ತಿಯ ಮೇಲೆ ಜನರಿಗೆ ಸಂಪೂರ್ಣ ವಿಶ್ವಾಸವಿತ್ತು. ಮಲೇರಿಯಾ ಅಂಟಿದರೆ, ನಡುಕ ಮತ್ತು ತಲೆನೋವನ್ನು [ ]ಯಾವುದೋ ದೇವತೆಯ ಕ್ರೋಧದ ಫಲವೆಂದು ತಿಳಿಯುತ್ತಿದ್ದರು. ಗ್ರಾಮದ ಗುರುವಿನ ಸಹಾಯದಿಂದ ಆ ದೇವತೆಯನ್ನು ಸಂತುಷ್ಟಗೊಳಿಸುವ ಪ್ರಯತ್ನ ಮಾಡುತಿದ್ದರು.

ರೋಗಿಯ ಖಾಸ ಸಂಬಂಧಿಕರು ವ್ರತಾಚರಣೆ ಮಾಡುತ್ತಿದ್ದರು. ಒಂದು ಗೆರಸೆಯಲ್ಲಿ ಧಾನ್ಯ ಹಾಗೂ ಹಣವನ್ನು ಹಾಕಿ ಆ ಗೆರಸೆಯನ್ನೆತ್ತಿ [ ]ಒಯ್ಯುತಿದ್ದರು. ಹಣವನ್ನಾತ ತನ್ನ ದಕ್ಷಿಣೆಯಾಗಿಸಿ ಧಾನ್ಯವನ್ನು ಎರಡೂ ಕೈಗಳಲ್ಲಿ ತುಂಬಿಸಿ ಮೇಲೆ ಕೆಳಗೆ ಚೆಲ್ಲುತಿದ್ದ. ಆ ಊರಿನ ದೇವೀ ದೇವತೆಯರ ಹಾಗೂ ಭೂತ ಪ್ರೇತಗಳ ನಾಮೋಚ್ಚಾರಣೆಯೂ ನಡೆಯುತಿತ್ತು. ಏನೋ ಲೆಕ್ಕಮಾಡುವವನಂತೆ ಆತ ನಟಿಸುತಿದ್ದ. ಆ ಮೇಲೆ ಆತ ದುಃಖದ ಕಾರಣ ಮತ್ತು ಆ ದುಃಖನಾಶಕ್ಕಾಗಿ ಪೂಜಿಸ ಬೇಕಾದ ದೇವತೆಯ ಹೆಸರನ್ನು ಹೇಳುತಿದ್ದ.

ದೇವತೆಯ ಹೆಸರು ತಿಳಿದನಂತರ 'ಡಾಂಗರೀ' ಎಂಬ ನೃತ್ಯ ಮಾಡುವವನನ್ನು ಕರೆಯುತಿದ್ದರು. ಅವನಿಗೆ ಸುಗಂಧಿತ ಧೂಪವೀಯುತಿದ್ದರು. ಡಾಂಗರಿಯು ಬಿಳುಪು ಸೀರೆ ನಡುವಿಗೆ ಸುತ್ತಿ ನರ್ತಿಸುತ್ತ ಕೂಗಾಡುತಿದ್ದ. ಆಗಲೇ ದೇವತೆಯು ಆತನ ಶರೀರವನ್ನು ಪ್ರವೇಶಿಸುತಿತ್ತು. ಇನ್ನಷ್ಟು ಸುಗಂಧಿತ ಧೂಪವನ್ನು ಅವನಿಗೆ ಕೊಟ್ಟು ರೋಗಿಯ ರೋಗವನ್ನು ದೂರ ಮಾಡಬೇಕೆಂದು ಪ್ರಾರ್ಥಿಸುತಿದ್ದರು. ಆಗ ಡಾಂಗರಿಯು ಕುಪಿತನಂತೆ ತೋರುತಿದ್ದರೆ ಕೈಚಪ್ಪಾಳೆ ಬಡಿಯುತಿದ್ದರು, ನಮಸ್ಕರಿಸುತಿದ್ದರು. ಆಗ ಆತ ರೋಗದ ಕಾರಣವನ್ನೂ ನಿದಾನವನ್ನೂ ತಿಳಿಸಿ ಉಪಾಹಾರ ಪಡೆಯುತಿದ್ದ.

ಇದು ಪ್ರಾಸಂಗಿಕ ಪೂಜೆ. ದೇವೀದೇವತೆಯರ ಸಂಮಾನಾರ್ಥ ಮತ್ತು ಅವರ ಕ್ರೋಧದಿಂದ ಬಿಡುಗಡೆ ಹೊಂದುವ ಸಲುವಾಗಿಯೂ ಇಂತಹ ನೃತ್ಯಗಳನ್ನು ಏರ್ಪಡಿಸಲಾಗುತಿತ್ತು.

ತಾನು ದುರದೃಷ್ಟಶಾಲಿಯೆಂದೂ ಇದಕ್ಕೆ ಯಾವುದೇ ಪ್ರೇತಾತ್ಮನ ಅಪ್ರಸನ್ನತೆಯೇ ಕಾರಣವೆಂದೂ ಯಾವನಾದರೂ ಕಂಡುಕೊಂಡರೆ, ಆತ ತನ್ನ ಕುಟುಂಬದವರನ್ನೂ ನಿಕಟ ಬಂಧುಗಳನ್ನೂ ಸ್ವಗೃಹ ಅಥವಾ ಮಂದಿರಗಳಲ್ಲಿ ಒಟ್ಟುಗೂಡಿಸುತಿದ್ದನು. ಆಗ ಒಂದರಿಂದ ಇಪ್ಪತ್ತೆರಡು ದಿನಗಳವರೆಗೆ ನರ್ತನವು ನಡೆಯುವುದು. ಕೆಲವೊಮ್ಮೆ ಆರು ಆರು ತಿಂಗಳುಗಳವರೆಗೂ ಮುಂದುವರಿಯುವುದು. ರಾತ್ರಿ ನೃತ್ಯಾನಂತರ ದೇವತಾ ಪೂಜೆ ನಡೆಯುತಿತ್ತು.

ಹೆಚ್ಚಿನ ಗ್ರಾಮಗಳಲ್ಲಿ ದೇವಾಲಯಗಳಿರುತ್ತಿದ್ದುವು. ಆದರೆ, ಇವುಗಳಲ್ಲಿ ಮೂರ್ತಿಗಳಿರುತ್ತಿರಲಿಲ್ಲ. ಪ್ರೇತಾತ್ಮಗಳಿಂದ ಪ್ರೇರಿತ ನೃತ್ಯ ಏರ್ಪಡಿಸುವುದಕ್ಕೆ ಈ ಮಂದಿರಗಳ ಸ್ಥಾಪನೆ ಕಾರಣ. ಸಿಹಿತಿಂಡಿಗಳು ಹಾಲು, ಮೊಸರು, ಹೂ ಹಣ್ಣುಗಳನ್ನು ನೈವೇದ್ಯವಾಗಿ ನೀಡುತಿದ್ದರು; ಅಲ್ಲದೆ ಎಮ್ಮೆ, ಮೇಕೆ, ಜಿಂಕೆ ಹಂದಿ ಮೊದಲಾದುವುಗಳೂ ಬಲಿಯೀಯಲ್ಪಡುತಿದ್ದುವು.

ಆದರೆ, ಈಗ ಅಲ್ಲಲ್ಲಿ ಔಷಧಾಲಯಗಳು ಸ್ಥಾಪಿತವಾದುದರಿಂದ, ಚಿಕಿತ್ಸಕ ದೇವತೆಗಳ ಪ್ರಾಬಲ್ಯ ಕುಂದಿದೆ. ಆಡು ಜಿಂಕೆಗಳ ಬಲಿಯು ಈಗಲೂ ನಡೆಯುವುದಿದೆ; ಏಕೆಂದರೆ, ಅಲ್ಲಿನ ಜನರು ಮಾಂಸ ಭಕ್ಷಣ ಮಾಡಬಯಸುತ್ತಾರೆ. ಅಲ್ಲೆಲ್ಲಿಯೂ ಮಾಂಸದಂಗಡಿಗಳಿಲ್ಲ. ಪೂಜೆಯ ನೆವನದಿಂದ ಪರ್ವತ ಆಡುಗಳ ರುಚಿಕರ ಮಾಂಸ ತಿನ್ನುವ ಕುಮಾಯೂವಿನ ಜನ ದೇವತೆಗಳನ್ನು ಸಂತುಷ್ಟಗೊಳಿಸುವ ಕೆಲಸವನ್ನು ಬಿಡಬೇಕಾದರೂ ಏಕೆ?

ಚಿಕಿತ್ಸಾ ಶಾಸ್ತ್ರದ ಪರಿಚಯ ಕುಮಾಯೂ ಜನರಿಗೆ ಆಗಿದ್ದರೂ ಪಶುಚಿಕಿತ್ಸೆ ಇನ್ನೂ ಪ್ರಾರಂಭಿಕಾವಸ್ಥೆಯಲ್ಲಿದೆ. ಇಂದಿಗೂ ಅಲ್ಲಿ ನೂರಾರು ದನ ಎಮ್ಮೆಗಳು 'ರಿಂಡರ್ ಪೆಸ್ಟ್', ಮತ್ತು ರಕ್ತ ಸ್ರಾವ, ಸಂಬಂಧದ "ಸೆಪ್ಟೀಸೀಮಿಯಾ" ರೋಗಗಳಿಂದ ಸಾಯುತ್ತವೆ. ಆದುದರಿಂದ ಪಶು ದೇವತೆಯಾದ 'ಚಾಮುಣ'ಎಂಬುದರ ಆರಾಧನೆ ಇನ್ನೂ ನಡೆಯುತ್ತಿದ್ದರೆ ವಿಸ್ಮಯ ಪಡಬೇಕಿಲ್ಲ. ಕ್ಷೇತ್ರಪಾಲ ಅಥವಾ ಭೂಮಿಯಾ ಕೂಡ ಹಿಂದಿನಂತೆಯೇ ಆರಾಧ್ಯನಾಗಿ ಉಳಿದಿದ್ದಾನೆ.

ಕುಮಾಯೂವಿನ ದೇವಿದೇವತೆಯರು ಮತ್ತು ಭೂತ ಪ್ರೇತಗಳು ಅಸಂಖ್ಯ. ಇವುಗಳ ಆಧಿಪತ್ಯ ಬಹುದಿನಗಳಿಂದ ನಡೆದು ಬಂದಿತ್ತು. ಬಹು ಬಲವಾಗಿ ನೆಲೆಯೂರಿತ್ತು. ಆದರೂ ಇಂದು ಅವುಗಳ ಸಿಂಹಾಸನ ಕಂಪಿಸತೊಡಗಿದೆ. ವಿಜ್ಞಾನ ಮತ್ತು ನಾಗರಿಕತೆಗಳ ಸಂಕೇತಗಳಾದ ವಿಕಾಸೋನ್ಮುಖ ಶಕ್ತಿಗಳು ಇವುಗಳನ್ನು ಬೇರುಸಹಿತ ಕಿತ್ತು ಬಿಸುಡುವುದರಲ್ಲಿ ತಲ್ಲೀನವಾಗಿವೆ.

(ಸಂಗ್ರಹಿತ)

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಇಜ್ಜತ್ ನಗರದಲ್ಲಿನ ಭಾರತೀಯ ಪಶು ಸಂಶೋಧನಾಲಯದಲ್ಲಿ ಪಶುರೋಗ ನಿರೋಧಕ ಲಸಿಕೆಗಳನ್ನು ಕಂಡುಹಿಡಿಯಲಾಗಿದೆ. ಭಾರತದಲ್ಲಿ ಮಾತ್ರವಲ್ಲ, ಏಶ್ಯ ಖಂಡದಲ್ಲೇ ಈ ಲಸಿಕೆ ಸುಪ್ರಸಿದ್ಧವಿದೆ. ಚಿತ್ರದಲ್ಲಿ ಈ ಸಂಸ್ಥೆಯ ಕೋಳಿ-ಬಾತುಕೋಳಿಗಳ ವಿಭಾಗವೊಂದನ್ನು ಕಾಣಬಹುದು.

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೋ, ಉಡುಪಿ.

ಕಥಾವಿಹಾರ

(೨ನೇ ಪುಟದಿಂದ)

ಬಿಟ್ಟು ಬೇರೆಯವರಿಗೆ ತಿಳೀಬಾರ್ದು. ನಿನ್ನ ಮಗ ಮನೆಯಿಂದ ಕದ್ದು ಮೂರ್ದಿಂತ ಊರ ಜನ ಆಡಬಾರ್ದು ಅಂತ ನಾನು ಸುಮ್ಮನೇ ಇದ್ದೆ. ಅಷ್ಟೇ ಅಲ್ಲ.... ಕೆ ಹೇಳಿದಂತೆ ಕುಣಿಯುತಿದ್ದಾನೆ. ನಮ್ಮ ಹಳ್ಳೀಲಿ ಆಗಬಾರದ್ದೆಲ್ಲಾ ಆಗ ಹತ್ತಿದೆ ಈಗ..." ಎಂದೊಡನೆಯೇ ಶಾಮು ನನ್ನ ಮುಖ ನೋಡಿದ. ನನ್ನ ಅಭಿಮಾನಕ್ಕೆ ಭಂಗ ತಂದ ನೂತಾದ್ದರಿಂದ ನನ್ನ ಮುಖ ವಿವರ್ಣವಾಗಿ ಕಳೆಗಟ್ಟಿರಬೇಕು. ನನಗೆ ಒಂದು ನಮೂನೆ ಆಯ್ತು. ದೃಷ್ಟಿ ಬೇರೆ ಕಡೆಗೆ ಬದಲಿಸಿದೆ.

"ಅಂದ್ರೆ, ಆತ ಹಳ್ಳೀ ಕೆಲ್ಸ ಬೇಡವೆಂದು ಪೇಟೆಗೆ ಹೋದ. ಅಲ್ಲಿಂದ ಚಾ, ಕಾಫಿ, ಬೀಡಿ ಎಲ್ಲವನ್ನೂ ಹಳ್ಳಿಗೆ ಹೊತ್ತು ತಂದ. ಈಗ ನಮ್ಮಿಬ್ಬರ ಸಂಪಾದನೆಯೂ—ಅವನದ್ದಲ್ಲ ಅನ್ನಿ—ಅವನಿಗೆ ಖರ್ಚಿಗೆ ಸಾಕಾಗುವುದಿಲ್ಲ. ನಮ್ಮ ಆಯುಷ್ಕಾಲದಲ್ಲಾಗಿದೆ. ಆಪತ್ಕಾಲಕ್ಕೆ ಬೇಕೆಂದು ಒಂದು ಮುನ್ನೂರು ರೂಪಾಯಿ ಮನೆಯ ಒಂದು ಕಡೆ ಇಟ್ಟಿದ್ದೆ, ಯಾರೂ ಕಾಣದಂತೆ—ಅದು ಆತನಿಗೆ ಗೊತ್ತಾಗಿದೆ. ಎಲ್ಲಿಟ್ಟಿದೆ, ಎಲ್ಲಿದೆ ಎಂಬುದು ಗೊತ್ತಿಲ್ಲ—ಆವಾಗ ಹೇಳಬೇಕು, ಇಲ್ದಿದ್ರೆ ನಾನು ಸಾಯ್ತೀನೆ, ಆಥ್ವಾ ಅಪ್ಪನ್ನ ಮುಗಿಸ್ತೀನೇಂತ ಹೇಳ್ದಾನಂತೆ ಆಕೆಯೊಡನೆ" ಎಂದಾತ ಉಗುಳು ನುಂಗಿದ. ದುಡಿದು ಬಳಲಿದ ದೇಹಕ್ಕೆ ಚಿಂತೆಯು ಹೊಗೆ ಹಿಡಿಸಿ ಕಪ್ಪಾದುದು ಸ್ಪಷ್ಟ ತಿಳಿಯುತಿತ್ತು. ಹಣ್ಣು ಮೀಸೆ, ಗುಳಿ ಬಿದ್ದ ಗಲ್ಲ, ಒಂದೆರಡು ಹಲ್ಲುದುರಿದ ಬೋಡು ಬಾಯಿ—ನನಗೆ ಎಂದೆಂದೂ ಮರೆಯಲಾರದಂತಹ ದೃಶ್ಯವದು. ಅವನನ್ನು ನೋಡುತಿದ್ದೆ.

"ಅಲ್ದಿದ್ರೆ ನಾನು ಹಣ ಕೊಡ್ತಿದ್ದೆ. ಎಷ್ಟು ಕೆಟ್ಟವನೇ ಆಗಲಿ, ನಮಗೆ ಹುಟ್ಟಿದ ಮಕ್ಕಳಲ್ಲವೆ? ಆದ್ರೆ, ಆತ ಯಾರೂ ಮಾಡಬಾರ್ದ ಕೆಲ್ಸ ಕಲೀತಿದ್ದಾನೆ... ಊರಲ್ಲಿ ನಡೆಯುವ ಅಸತ್ಕೃತ್ಯಗಳನ್ನ ವಹಿಸುತಿದ್ದಾನೆ. ಹೊತ್ತು ಹೋಗದ್ದಕ್ಕೆ ಇಸ್ಪೀಟಾಡುವುದಂತೆ, ಅದಂತೆ ಇದಂತೆ—ಬದ್ರಬದ್ಲು ಗದ್ದೆಗೆ ಗೊಬ್ರ ಹೊತ್ತು ಹಾಕಿದ್ರೆ ಮುಂದಿನ ವರ್ಷ ಸುಖವಾಗಿ ಉಣಬಹುದಿತ್ತು. ಆ ಬುದ್ಧಿ ಆ ಮಕ್ಕಿಗೆ ಇದೆಯೆ? ಏನಾದ್ರೆ ನಮ್ಮ ನಿಮ್ಮಂತವರು ಹೇಳಿದ್ರೆ ಕೇಳುವವರೇ ಅವ್ರು?"

ಆತ ಮತ್ತೆ ನಿಟ್ಟುಸಿರೆಳೆದ. ಶಾಮೂ ನನ್ನನ್ನ ನೋಡಿದ. ಅವನಿಗೆ ಅಂತಹ ಪ್ರಸಂಗಗಳು ಸಿಗುವುದು ಪ್ರಾಯಃ ದುರ್ಲಭವಿರಬೇಕು. ಆತನ ಕತೆ ಕೇಳಿ, ಬೆಚ್ಚಿಬೆರಗಾಗಿದ್ದ ನನಗೆ—ಹಳ್ಳಿಯು ಮೇಲಣ ನನಗೆ ತಿಳಿಯದ ಇಂತಹ ಕಥೆಗಳೂ ನಡೆಯುತ್ತಿವೆಯೋ—ಎಂಬ ಆಶ್ಚರ್ಯ.

"ಹ್ಞೂಂ" ಎಂದು ಮತ್ತೆ ಆವರ ಕತೆಗೆ ಕೊಂಡಿ ಸಿಲುಕಿಸಿದೆ....

"ನೋಡಿ, ಆದ್ಕೇ ಈಗ, ಮನೆಯೆಲ್ಲಾ ಬಿಟ್ಟು ಮೊದಲನೇ ಮಗನ ಮನೆಗೆ ಹೊರಟೆ. ಅಪ್ಪ ಇಂತಹ ಕಷ್ಟಕ್ಕೆ ಗುರಿಯಾಗಿದ್ದಾನೆಂದು ತಿಳಿದ್ರೆ ಅವನು ನನ್ನನ್ನು ನಾಕ್ಲಿಕ್ಕಿಲ್ಲವೆ?"

"ಅದು ಹೌದು, ಅವನಿಂದ ನಿಮಗೆ ಕಾಗದ ಬಂದಿದೆಯೆ?........" ನನ್ನ ಪ್ರಶ್ನೆ. ದನಿಯನ್ನ ಇಳಿಸಿಕೊಂಡು ನಾರಣಪ್ಪ ಹೇಳತೊಡಗಿದರು: "ಕಾಗ್ದ ಅಂದ್ರೆ.... ಹಣ ಕಳ್ಸಿ ಅಂತ ಬರೆದಿದ್ನಲ್ಲಾ, ಆಗಿನ ವಿಳಾಸ ಇದೆ. ಅದಕ್ಕೆ ಆಗಾಗ ಬರ್ಸಿ ಹಾಕಿದ್ದೀನೆ. ಉತ್ತರ ಅವ್ನು ಬರಿಯೋದೇ ಇಲ್ಲ."

"ಓಹೋ, ಹಾಗೋ.... ಹಾಗಾದ್ರೆ ನೀವು ಅಲ್ಲಿಗೆ ಬರುತ್ತೇನೆಂದು ಕಾಗ್ದ ಹಾಕ್ತೀರೋ?... ಅರ್ಥವಾಗದ ಶಾಮು ಮಧ್ಯೆ ಪ್ರಶ್ನಿಸಿದ.

"ಹಾಗಲ್ಲ" ಎಂದು ಮತ್ತೆ ನಾರಣಪ್ಪ ತೊಡಗಿದರು. "ನಾನೀಗ ಹೊರಟು ಬಂದವನು. ಇವತ್ತು ನನಗೆ ಮನೆಯಲ್ಲಿರುವುದೇ ಬೇಡವೆನಿಸಿತು. ಅಂಗಡಿಗೆ ಹೋಗಿ ಮಳೆಗಾಲದ ಸಾಮಾನು ತರುತ್ತೇನೆಂದು ಹೊರಟು ಬಂದೆ.... ದಾರಿಯಲ್ಲಿ ಬೊಂಬಾಯಿಗೆ ಹೋಗುವುದೆಂತ ನಿಶ್ಚಯ ಮಾಡ್ದೆ. ಪಾಪ, ಮನೇಲಿ ಕಡೆಗೆ ತಾಯಿ ಮಕ್ಕಳೆಂದು ನನ್ನನ್ನ ಹುಡುಕಾಡಿ ಮರುಗಬಾರದು ನೋಡಿ..." ಅವರ ಮಾತು ಕೇಳಿ ಏನೋ ಅನಿಸಿತು. "ಅಂದರೆ, ಮನೆಗೆ ಬೊಂಬ್ಯಾಗೆ ಹೋಗ್ತೇನೆ ಹುಡುಕಬೇಡಿ ಅಂತ ಬರೀಲಿಕ್ಕೆ ಈ ಕಾಗ್ದವೆ?" ಎಂದೆ.

"ಹೌದು. ಇಷ್ಟೇ ಅಲ್ಲ. ಮತ್ತೂ ಇದೆ ಬರೀಲಿಕ್ಕೆ ಬೀಜಗೀಜ ಹಾಕಿದ್ದೇನೆ. ನೀನು ಮಗನ್ನ ನಂಬಬೇಡ. ಬೇರೆ ಆಳನ್ನು ಹಾಕಿಕೊಂಡು ಬೇಸಾಯ ಮಾಡು. ನಾನು ಮುಂದಿನ ವರ್ಷ ಬರುತ್ತೇನೆ. ನೀವಿಬ್ಬರೂ ಯೋಚ್ನೆ ಮಾಡ್ಬೇಡಿ ಎಂದೆಲ್ಲಾ ಬರೆದು ಅವಳ ಹೆಸ್ರಲ್ಲಿ ಕಾಗ್ದ ಹಾಕಿ".

ನಾರಣಪ್ಪನವರ ಮಾತ್ಸಿನ ಕಥಾಸಿರೂಪಣೆಯಿಂದ ತಿಳಿದ ವಿಚಾರವಿದು: ಅವರ ಮನೆ ನಮ್ಮ ಪೇಟೆಯಿಂದ ಹತ್ತು ಮೈಲು ದೂರ. ಅಲ್ಲಿಂದ ೪ ಮೈಲಿಗೆ ಟಪ್ಪಾಲಿದೆ. ಆದರೆ, ಬಸ್ಸನ್ನು ಮರಿ ಹೋಗಲು ನಮ್ಮ ಪೇಟೆಗೇ ಬರಬೇಕು. ಹಾಗೆ ಬಂದ ನಾರಣಪ್ಪ ಬೊಂಬ್ಯಾಗೆ ಹೋಗಬಯಸಿದರು. ಇಲ್ಲಿಂದ ಅವರ ಆ ಹಳ್ಳೀ ಟಪ್ಪಾಲ ಆಫೀಸಿಗೆ ಕಾಗ್ದವನ್ನು ಬರ್ಸಿ ಹಾಕಿ ಅವರು ಬಸ್ಸೇರಿ ಹೋಗುವುದು ಎಂದು ನಾವು ನಿರ್ಧಾರವನ್ನು ಮಾಡಿಕೊಂಡೆವು.

ಹಾಗೆಯೇ ಶಾಮೂ ಅವರಿಗೆ ಕಾಗ್ದ ಬರೆದಿದ್ದ. ಟಪ್ಪಾಲು ಆಫೀಸನ್ನ ಕೈಸನ್ನೆಯಿಂದ ತೋರಿಸಿ ಪೆಟ್ಟಿಗೆಗೆ ಕಾಗ್ದವನ್ನು ಹಾಕಿ ಬರಲು ಹೇಳಿ ಕಳಿಸಿಕೊಟ್ಟ.

ನನ್ನ ಕೈಲಿದ್ದ ಪತ್ರಿಕೆ ಹಾಗೇ ಇತ್ತು. ಓದಲಿಕ್ಕೆ ಕಣ್ಣನ್ನು ಅಕ್ಷರಗಳ ಮೇಲೆ ಹರಿಸಿದರೆ, ನಾರಣಪ್ಪನ ಚಿತ್ರವೇ ಎದುರು ಬಂದು ನಲಿಯುತಿತ್ತು. ಹಳೆಯ ಹೊಸತುಗಳ ಬಗೆಗೆ ಅಲ್ಲಸಲ್ಲದ ಅಭಿಪ್ರಾಯ ನೀಡುತಿತ್ತು.... ಬೇಡವೆಂದು ಅವರನ್ನು ಹಳ್ಳಿಗೆ—ಮನೆಗೆ—ಕಳಿಸಲೇ... ಎಂದೊಮ್ಮೆ ನಿರ್ಧರವಾದರೆ, ಮತ್ತೊ ಮತ್ತೊ ಮುದುಕನನ್ನು ಪಾಪದ ಕೂಪಕ್ಕೆ ತಳ್ಳುವುದೇ ಎಂಬ ಮರು ಪ್ರಶ್ನೆ... ಧರ್ಮ ಸಂಕಟದಲ್ಲಿ ಸಿಲುಕಿದ ನಾನು ಕಲ್ಲಾಗಿ ಕುಳಿತಿದ್ದೆ. ಮೊದಮೊದಲು ತಮಾಷೆಗೆಂದು ಕೇಳ ಕುಳಿತಿದ್ದ ಶಾಮುವೂ ಕೊನೆಗೆ ಗಂಭೀರವದನನಾದ.

ನಾರಣಪ್ಪ ಟಪ್ಪಾಲಿಗೆ ಕಾಗ್ದ ಹಾಕಿ ಬರುತ್ತಲೇ ಬಸ್ ಬಂತು. ಶಾಮುವಿನ ಅಂಗಡಿಯಿಂದ ನಾಲ್ಕು ಮಾರು ದೂರದಲ್ಲಿ ನಿಂತ ಬಸ್ಸಿನ ಹತ್ತಿರ ಹೋಗಿ 'ಬರಲೇ ಸ್ವಾಮಿ' ಎಂದು ಕೇಳಿದರು.

"ಎಲ್ಲಿಗೆ?" ಎಂದು ಕರ್ಕಶ ಧ್ವನಿಯಲ್ಲಿ ಪ್ರಶ್ನೆ ಬಂತು.

"ಬೊಂಬಾಯಿಗೆ ಹೋಗ್ಬೇಕು...."
ನಗೆಯ ಬೀಜಗಳೆರಡನ್ನು ನಾರಣಪ್ಪ ಹೊರ ಚೆಲ್ಲಿದರು ಅಕ್ಕಪಕ್ಕದ ಅಂಗಡಿಯವರನ್ನ ಕಂಡಾಗ ಸ್ಪಷ್ಟ ತಿಳಿಯುತಿತ್ತು.

"ಜಪಾನಿಗೆ ಹೋಗುವುದಿಲ್ಲವೆ? ರೈಟ್" ಕಂಡೆಕ್ಟರನ ಉತ್ತರ. ನಗೆಗಡಲಲ್ಲಿ ವ್ಯಾಪಾರಸ್ಥರನ್ನು ತೇಲಿಸಿ, ಬಸ್ಸು ಹೊರಟುಹೋಯಿತು. ನಾರಣಪ್ಪ ಅಂಗಡಿಗೆ ಬಂದರು. ಹೆಜ್ಜೆಯ ಮೇಲೆ ಹೆಜ್ಜೆಯನ್ನಿಕ್ಕಿಕೊಂಡು ತಲೆಯನ್ನು ಕೆಳಗಿಕ್ಕಿ ಮೆಲ್ಲನೆ ಬಂದರು. ನಾವಿಬ್ಬರೂ ಕುಳಿತಲ್ಲೇ ಕುಳಿತಿದ್ದೆವು.

ಒಂದು ಜತೆ ಕೋಣನ ಪೈರು ಎದುರು ದಾರಿಯಿಂದ ಸಾಗಿತು. ಒಂದು ಬಡ ಕುಟುಂಬ ನೇಗಿಲು ನೊಗ ಗಾಡಿಯಲ್ಲಿ ಪರವೂರಿಗೆಂದು ಹೊರಟಿತ್ತು. ಎದುರಿನ ದಿಬ್ಬಣವೊಂದು ಮನೆಯತ್ತ ತೆರಳಿತು. ಎಲ್ಲವನ್ನೂ ಕಲ್ಲಾಗಿ ಕಂಡುಕೊಂಡ ನಾರಣಪ್ಪ ತಾವೇ ಹೇಳಿದರು: "ನಾನು ಇನ್ನು ಹೋಗುವುದಿಲ್ಲ ಇವರೂ ನನ್ನನ್ನು ಕಂಡರೆ ಸಿಟ್ಟು ಮಾಡುತ್ತಾರೆ. ಅಷ್ಟು ಜನರನ್ನು ಕರೆದುಕೊಂಡು ಹೋದವರಿಗೆ ನಾನೊಬ್ಬ ಹೆಚ್ಚೇ? ಇವರಿಗಿಂತ ನನ್ನ ಮಗ ಒಳ್ಳೆಯೋನಪ್ಪಾ......" ಆವರು ನಿರ್ಧಾರಿತ ಸ್ವರದಲ್ಲಿ ಮಾತಾಡಿದರು. ನನಗೂ ಹೌದೆಂದು ಕಂಡಿತು. ನಮಗೆ ಒಂದು ಜೊತೆ ಹೋರಿ ಬೇಕು, ದರ ಮಾಡಿ, ಮನೆಗೆ ಹೋಗ್ತೇನೆ ಸ್ವಾಮಿ......" ಎಂದವರು ಹೊರಟರು. ನನಗೆ ಅವರ ಬಗ್ಗೆ ಎಲ್ಲಿಲ್ಲದ ಕನಿಕರ, ಅನುಕಂಪ ಮೂಡಿ ಬಂತು. ಶಾಮೂಗೆ ತನ್ನ ಬಗೆಗೇ ಎಲ್ಲಿಲ್ಲದ ತಾತ್ಸಾರ......ನಾರಣಪ್ಪನು ತನ್ನನ್ನುದ್ದೇಶಿಸಿ ಮಾತಾಡಿದರೆಂಬಂತೆ ಬದಲಾಗಿ ಹೋಗಿದ್ದ.

— ——

ಉಡ್ಪಿ ಡಿ. ಮು. ಕೋರ್ಟಿನಲ್ಲಿ
R. I. A. 452/60. O. S. 73/59.
ಕೊರಪಳು ಸೆಡ್ತಿ —ಅರ್ಜಿದಾರಳು.
ಮತ್ತು
ಪದ್ದಕ್ಕ ಸೆಡ್ತಿ ಕೂಡಾ —ಎದ್ರಿರು.
ಇವರೊಳಗೆ

3 ರುದ್ರು ಸೆಡ್ತಿ. 4. ಗಿಡ್ಡಿ ಯಾನೆ ಚಿಟ್ಟಿ ಸೆಡ್ತಿ, 5. ನಾರಾಯಣ ಸೆಟ್ಟಿ. 6. ಮಹಾಬಲ ಸೆಟ್ಟಿ. 7. ಸೀತ್ರು ಸೆಡ್ತಿ. 8. ರತಿ ಸೆಡ್ತಿ—ಪದ್ದಕ್ಕ ಸೆಡ್ತಿ ಮಕ್ಕಳು— ಉಡ್ಪಿ ತಾಲ್ಲೂಕು ಕೊರಂಗ್ರಪಾಡಿ ಗ್ರಾಮ

ಮೇಲಿನ ಅರ್ಜಿಯ 3ರಿಂದ 8ನೇ ಎದ್ರಿರಿಗೆ ತಿಳಿಯಪಡಿಸುವುದೇನೆಂದರೆ—

ಅರ್ಜಿದಾರಳು ಹಿಸೆ ವಗೈರೆ ನಿವೃತ್ತಿ ಕೇಳಿ ಫೈನಲ್ ಡಿಕ್ರಿ ಬಗ್ಗೆ ದಾಖಲ್ಲು ಮಾಡಿದ ಮೇಲಿನ ಅರ್ಜಿಯು ತಾ. 1-10-60ಕ್ಕೆ ಈ ಕೋರ್ಟಿನಲ್ಲಿ ಇಟ್ಟಿರುವುದರಿಂದ ಸದ್ರಿ ಅರ್ಜಿಯಲ್ಲಿ ಆಕ್ಷೇಪಣೆ ಇದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಹಾಜರಾಗಿ ಜಾಹೀರು ಮಾಡಿಕೊಳ್ಳುವುದು.

Y. C. S. Hegde,
Advocate for Petitioner.
ಉಡ್ಪಿ, 19-9-60.

'NAVAYUGA' WEEKLY is in the list of periodicals and Newspapers approved or use in Secondarys School as per proceedings Roc. No. 466 N/50 date 2-12-1950 of the Director of public Instruction Madras.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಮೆಟ್ರಿಕ್ ತೂಕ ಮತ್ತು ಅಳತೆಗಳು

ದೊರೆಯುವ ಸ್ಥಳ: ಲೈಸೆನ್ಸ್ ಡೀಲರ್ಸ್
ಗುಂಡು ನಾಯಕ್ ಅಂಡ್ ಸನ್ಸ್
ಕಾರ್ ಸ್ಟ್ರೀಟ್, ಉಡುಪಿ (ಸೌ. ಕೆ.)
ಹೊಸತಾಗಿ ತೆರೆದಿರುವ ನಮ್ಮ ಹಿಂದುಗಡೆಯಲ್ಲಿರುವ ಗುಂಡು ನಾಯಕ್ಸ್ ಫೇಶನ್ ಎಂಪೋರಿಯಂ—ಜವಳಿ ಅಂಗಡಿಯನ್ನು ಸಂದರ್ಶಿಸಿರಿ.



NAVAYUGA
REGD. NO. M. 3619

UDIPI, THURSDAY
29-9-1960

LICENSE NO. 31
Licensed to Post without Prepayment

ಅಭಿಪ್ರಾಯ

ಸಣ್ಣ ಕಥೆಗಳು ಬೆಳೆಯಬೇಕು

ಕಾದಂಬರಿಯ ಮಹಾಪೂರದೊಡನೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಸಣ್ಣ ಕಥೆಗಳೂ ಬೆಳೆದು ಬರಬೇಕು; ಇದಕ್ಕಾಗಿ ಕನ್ನಡಿಗ ಲೇಖಕರೂ ಜನತೆಯೂ ಜಾಗ್ರತರಾಗಬೇಕು; ಮುರುಟಿದ ಕಥಾ ಸಾಹಿತ್ಯವಲ್ಲರಿ ಸಮೃದ್ಧವಾಗಿ ಚಿಗುರಿ ನಲಿಯುವಂತೆಸಗಬೇಕು.

ಶ್ರೀ ವಿಚಿತ್ರ ಯೇತಡ್ಕ

ಹೆಚ್ಚಿಲ್ಲ; ಹತ್ತು ಹದಿನೈದು ವರ್ಷಗಳ ಹಿಂದಿನಮಾತು: ಕನ್ನಡದಲ್ಲಿ ಸಣ್ಣಕತೆಗಳ ಸುಗ್ಗಿಯ ಕಾಲ ಅದು. ಯಾವ ಪತ್ರಿಕೆ ತೆರೆದು ನೋಡಿದರೂ ಒಂದಲ್ಲ ಒಂದು ಸಣ್ಣ ಕತೆ ಓದಲು ಸಿಗುತ್ತಿತ್ತು. ವಿಶೇಷ ಸಂಚಿಕೆಗಳಲ್ಲಂತೂ—ಅವುಗಳಿಗೆ ಪ್ರಾಧಾನ್ಯ ಇರುತಿತ್ತು. ವರ್ಷ ವರ್ಷವೂ ಹತ್ತಿಪ್ಪತ್ತು, ಸುಂದರ ಕಥಾ ಸಂಕಲನಗಳೂ ಹೊರ ಬೀಳುತ್ತಿದ್ದುವು. ಇಂದು ಕಾದಂಬರಿಕಾರರೆಂದು ಸುಪ್ರಸಿದ್ಧಿಗೆ ಬಂದವರಲ್ಲಿ ಹೆಚ್ಚಿನವರು ಆಗ ಶ್ರೇಷ್ಠ ತರಗತಿಯ ಕತೆಗಾರರಾಗಿ ಬೆಳಕಿಗೆ ಬಂದಿದ್ದರು. ಶ್ರೀಗಳಾದ ತ. ರಾ. ಸು, ಕಟ್ಟೀಮನಿ, ನಿರಂಜನ, ಚದುರಂಗ, ರಮಾನಂದ ಘಾಟೆ, ಶ್ರೀಕಂಠ, ವ್ಯಾಸರಾಯ ಬಲ್ಲಾಳ, ಶೇಷಗಿರಿರಾವ್, ಬಿ. ವಿ. ಬಾಳಿಗಾ, ಕೃಷ್ಣ ಪಾಲ, ಚೆನ್ನ ಬಸಪ್ಪ, ಪಾಟೀಲ ಪುಟ್ಟಪ್ಪ, ದಿ. ರಾ. ಕೃ ಶೆಟ್ಟಿ, ಇತ್ಯಾದಿ ಇತ್ಯಾದಿ ಹಲವಾರು ತರುಣ ಲೇಖಕರೂ ಆ ಕಾಲದಲ್ಲಿ ತುಂಬ ಕತೆಗಳನ್ನು ಬರೆದು ಸಣ್ಣಕತೆಗಳಿಗೂ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದು ಅಗ್ರಸ್ಥಾನವನ್ನು ಗಳಿಸಿಕೊಟ್ಟಿದ್ದರು. ಕನ್ನಡ ವಾಚಕ ವೃಂದವೂ ಸಣ್ಣಕತೆಗಳ ಸೃಷ್ಟಿಯನ್ನು ಅತ್ಯಾತುರದಿಂದ ಹಾರೈಸಿ—ಮನಸಾರೆ ಮೆಚ್ಚಿಕೊಂಡಿತ್ತು.

ದಿನಗಳೆದಂತೆ ಈ ಸ್ಥಿತಿ ಬದಲಾವಣೆಯಾಗುತ್ತ ಬರತೊಡಗಿತ್ತು. ಕೈ ಹೊತ್ತಿಗೆಗಳ ಕಾಲ ಬಂದ ಮೇಲಂತೂ ಸಣ್ಣ ಕತೆಗಳನ್ನು ಕೇಳುವವರೇ ಇಲ್ಲದಂತಾಯಿತು. ಕಾದಂಬರಿಗಳ ಸಂಖ್ಯೆ ವಿಪುಲವಾಯಿತು ಬರೆಯಲು ಬರುವವರೆಲ್ಲರೂ ಕಾದಂಬರಿಗಳನ್ನೆ ಬರೆಯಲಾರಂಭಿಸಿದರು. ಪ್ರಕಾಶಕರಿಗೂ ಬೇಕಾದುದು ಕಾದಂಬರಿಗಳೇ ಆದ ಬಳಿಕ ಓದುಗರಿಗೆ ಅವುಗಳೇ ಸಿಗುವುದೆಂದಾದ ಬಳಿಕ ಸಣ್ಣಕತೆಗಳ ಬೆಳವಣಿಗೆಯೆ ಕುಂಠಿತವಾಗತೊಡಗಿತು.

ಇದೇ ಪರಿಸ್ಥಿತಿ ಉಳಿಯಬೇಕೇ ಅಳಿಯಬೇಕೆ? ಇಷ್ಟೇ ಈಗ ನಾವು ಯೋಚಿಸಬೇಕಾದ ವಿಚಾರ. ಕಾದಂಬರಿಯ ಮಹಾಪೂರ ನಿಲ್ಲಬೇಕೆಂದು ಯಾರೂ ಹೇಳಲಾರರು ಆದರೆ ಒಂದನ್ನು ತುಳಿದು ಇನ್ನೊಂದು ಮೇಲೆ ಬರುವುದನ್ನು ಯಾರೂ ಒಪ್ಪಲಾರರು. ಅದೂ ಬೆಳೆಯಲಿ; ಸಾಹಿತ್ಯದ ಇತರ ಪ್ರಕಾರಗಳೂ ಜೊತೆಯಲ್ಲಿಯೇ ಬೆಳೆಯಲಿ. ಎಲ್ಲರೂ ಅಪೇಕ್ಷಿಸುವುದು ಇದನ್ನೆ ಅಲ್ಲವೆ?

ನಾಡದು ಉಡುಪಿಯಲ್ಲಿ ಸಾಹಿತ್ಯ ಸಮ್ಮೇಲನ ಜರುಗುತ್ತದೆ. ಜೊತೆಗೇ ಕಥಾ ಗೋಷ್ಠಿಯೂ ಇರಬಹುದು. ಗೋಷ್ಠಿ ಇರಲಿ, ಇಲ್ಲದಿರಲಿ, ಕತೆಗಳ ಅಭಿವೃದ್ಧಿಯ ಕುರಿತು ಅಲ್ಲಿ ಸಮಾಲೋಚನೆ ನಡೆಯಲೇ ಬೇಕು ಅದಕ್ಕಾಗಿ ಒಂದು ವಿಸ್ತೃತ ವಿಮರ್ಶಾತ್ಮಕ ಕಾರ್ಯಕ್ರಮ ನಿರ್ಧಾರವಾಗಬೇಕು ಕನ್ನಡ ಲೇಖಕರ ಬಳಗ ವಾಚಕ ವೃಂದ ಅಭಿಮಾನಿಗಳತಂಡ ಈ ಕೆಲಸ ಮಾಡಲೇಬೇಕು. ಅದು ಅವರ ಕರ್ತವ್ಯ ಅಲ್ಲವೆ?

ಮೊದಲು ಆಗಾಗ ಅಲ್ಲಲ್ಲಿ ಕತೆಗಾರರ ಸಮ್ಮೇಲನ ಜರಗುತ್ತಿತ್ತು ಕಥಾ ಸ್ಪರ್ಧೆಗಳು ನಡೆಯುತ್ತಿದ್ದುವು. ಇನ್ನೂ ಈಗಲೂ ಅಂತಹ ಕಾರ್ಯಕ್ರಮಗಳನ್ನೂ ಯಾಕೆ ಕೈಗೊಳ್ಳಬಾರದು ಈಗಲೂ ಕತೆಗಾರರಿಲ್ಲವೇ? ಕತೆಗೇಳುವವರು ಓದುವವರು ಇಲ್ಲವೆ? ಈಗಿರುವ ಪ್ರಕಾಶಕರು ಪ್ರಕಟಣಗಾರರು ಈ ಕುರಿತು ಯೋಚಿಸಬಾರದೇಕೆ?

ಹಿಂದೆ ಜಗತ್ತಿನ ವಿವಿಧ ಭಾಷೆಗಳ ವಿವಿಧ ಸಾಹಿತಿಗಳು ಕಥಾ ಸಂಕಲನಗಳ ಅನುವಾದ ಅಲ್ಲಲ್ಲಿ ಇಷ್ಟಿಷ್ಟಾದರೂ ಆಗುತ್ತಿತ್ತು. ಈಗಲೂ ಆ ಕಾರ್ಯ ಭರದಿಂದ ನಾಗದಂತಾಗುವುದಿಲ್ಲವೆ? ನಮ್ಮ ಸಾಹಿತ್ಯ ಬೆಳೆಯುವುದರ ಜೊತೆಗೇ ಜಗತ್ತಿನ ಇತರ ಭಾಷೆಗಳ ಲೇಖಕರ ರಸಾಸ್ವಾದನೆಯನ್ನೂ ನಾವು ಮಾಡಬಹುದಲ್ಲವೆ? ವಿವಿಧ ಭಾಷೆಗಳೊಳಗೂ ಒಂದು ರೀತಿಯ ಸಾಮರಸ್ಯ [ಸಾಮಿಪ್ಯ ಸೌಹಾರ್ದತೆಗಳು ಬೆಳೆದು ಬರಲು ಒಂದು ಸದವಕಾಶವೂ ಇದರಿಂದ ದೊರೆತಂತಾಗುವುದಿಲ್ಲವೆ?

ಕನ್ನಡ ಕಥಾ ಪ್ರಪಂಚವೇನೂ ಈಗ ನಿರ್ನಾಮವಾಗಲಿಲ್ಲ. ಬೆಳವಣಿಗೆಯ ನಿರಂತರ ಪರಿಶ್ರಮ ಮಾತ್ರ ಕುಂಠಿತವಾಗಿದೆ ಅಷ್ಟೇ ಈಗ ಪ್ರಯತ್ನಿಸಿದರೆ ಉತ್ಸಾಹ ಕ್ರಿಯಾ ಶೀಲರಾದರೆ ದ್ವಿಗುಣಿತ ರೀತಿಯ ಅಭಿವೃದ್ಧಿಯನ್ನೂ ವೈವಿಧ್ಯವನ್ನೂ ವೈಶಾಲ್ಯವನ್ನೂ ಸುಲಭದಲ್ಲಿ ಸಾಧಿಸಬಹುದು. ಕನ್ನಡ ಲೇಖಕರು ಜನ ಸಮುದಾಯ ಜಾಗೃತರಾದರೆ ಮಾತ್ರ ಈ ಕೆಲಸ ಸಾಧ್ಯ.

ವಿಶೇಷ ಲಾಭದಾಯಕವಾದ
ಸಿಂಡಿಕೇಟ್ ಬೇಂಕ್ ಕೇಶ್ ಸರ್ಟಿಫಿಕೇಟುಗಳು
ರೂ. 100 ಮೂರು ವರುಷಗಳಲ್ಲಿ ರೂ. 112-50
ನಿಮಗೆ ಸಮೀಪವಿರುವ ನಮ್ಮ ೧೩೯ ಶಾಖೆಗಳಲ್ಲೊಂದರಲ್ಲಿ ವಿಚಾರಿಸಿ
ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಶಾಂತಿಸಾಧನೆಯ ಪ್ರಯತ್ನ

ಸಂ. ರಾ. ಸಂಸ್ಥೆಯ ಸಮ್ಮೇಳನ

ವಿಶ್ವದ ಹಿರಿಯ ರಾಷ್ಟ್ರಗಳ ವರಿಷ್ಠರೆಲ್ಲರೂ ಭಾಗವಹಿಸುತ್ತಿರುವ ಪ್ರಚಲಿತ ಅಧಿವೇಶನದಲ್ಲಿ ಪ್ರಧಾನಿ ನೆಹರುರವರು ಗಣನೀಯ ಪಾತ್ರ ವಹಿಸುವ ನಿರೀಕ್ಷೆಯಿದೆ.

"ಶಾಂತಿ ಸಾಧನೆಯಲ್ಲಿ ಹಾಗೂ ಜಗತ್ತಿನ ಇಬ್ಬಣಗಳಲ್ಲಿ ದ್ವೇಷವನ್ನು ಕಡಿಮೆ ಮಾಡಲು ಯಾರಾದರೂ ಸಮರ್ಥರಾಗವವರಿರುವುದಾದರೆ, ಅವರು ನೆಹರು ಮಾತ್ರ" ಎಂದು ಸಂಯುಕ್ತ ರಾಷ್ಟ್ರಸಂಸ್ಥೆಯ ನೂತನ ಅಧ್ಯಕ್ಷ ಆಯರ್ಲೆಂಡಿನ ಶ್ರೀ ಫೆಡರಿಕ್ ಎಚ್. ಬೋಲ್ಯಾಂಡರು ತಾನು ಚುನಾಯಿತರಾದನಂತರ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತ ಹೇಳಿದರೆಂದು ವರದಿಯಾಗಿದೆ. ಹಾಗೆಯೇ 'ಶಾಂತಿದೂತ' ನೆಹರು ವಿಶ್ವಸಂಸ್ಥೆಯ ಸಭೆಯಲ್ಲಿ ಭಾಗವಹಿಸಲು ನಿರ್ಧರಿಸಿರುವುದನ್ನು ಅವರು ಸ್ವಾಗತಿಸಿದ್ದಾರೆ.

ವಿಶ್ವದ ಪ್ರಮುಖ ರಾಷ್ಟ್ರಗಳ ವರಿಷ್ಠರೆಲ್ಲರೂ ಈ ಬಾರಿ ಭಾಗವಹಿಸುತ್ತಿರುವುದರಿಂದ ವಿಶ್ವಸಂಸ್ಥೆಯ ಇತಿಹಾಸದಲ್ಲಿಯೇ ಇದು ಅತಿ ಮಹತ್ವದ ಸಮ್ಮೇಳನವಿದಾಗುವುದು ನಿರ್ವಿವಾದ. ಚೀನವನ್ನೊಂದನ್ನುಳಿದು ಇತರ ಕಮ್ಯೂನಿಸ್ಟ್ ರಾಷ್ಟ್ರಗಳ ನಾಯಕತ್ವವನ್ನು ಹೊತ್ತುಕೊಂಡು ಕ್ರುಶ್ಚೇವರು ಮೊತ್ತಮೊದಲಿಗೇನೇ ಕುರ್ಚಿಯನ್ನಲಂಕರಿಸಿದ್ದಾರೆ. ಅಮೆರಿಕೆಯ ಅಧ್ಯಕ್ಷ ಐಸನ್‌ಹಾವರ್, ಬ್ರಿಟನ್ನಿನ ಪ್ರಧಾನಿ ಮ್ಯಾಕಮಿಲನ್, ಯುಗೊಸ್ಲಾವಿಯಾದ ಅಧ್ಯಕ್ಷ ಮಾರ್ಶಲ್ ಟಿಟೊ, ಘಾನದ ರಾಷ್ಟ್ರಪತಿ ನುಕ್ರೂಮಾ, ಐಗುಪ್ತದ ನಸ್ಸೇರ, ಇಂಡೋನೇಶಿಯಾದ ಡಾ| ಸುಕರ್ಣ ಮೊದಲಾದ ಮಹನೀಯರು ಪ್ರತ್ಯಕ್ಷವಾಗಿ ಸಹಭಾಗಿಯಾಗಿದ್ದಾರೆ.

ಅಮೆರಿಕೆ ಮತ್ತು ರಶ್ಯಗಳ ನಡುವಣ ಬಿರುಕು ಇತ್ತೀಚೆಗೆ ಬಹಳಷ್ಟು ವಿಸ್ತಾರಕ್ಕೆ ಹರಡಿದೆ. ಇದರಿಂದಾಗಿ, ಈ ಎರಡರ ವರಿಷ್ಠರು ಸಮ್ಮೇಳನದಲ್ಲಿ ಒಂದು ಸೇರುವಾದರೂ ಪರಸ್ಪರ ಭೇಟಿಯಾಗುವ ನಿರೀಕ್ಷೆಯಿಲ್ಲ. ಆದರೂ ಮಾರ್ಶಲ್ ಟಿಟೊರವರು ತಟಸ್ಥ ರಾಷ್ಟ್ರಗಳ ಒಂದು ಗುಂಪನ್ನು ಬಲಪಡಿಸಿ ಈ ಬಿರುಕನ್ನು ಕಡಿಮೆಗೊಳಿಸುವ ಪ್ರಯತ್ನ ಮಾಡುತ್ತಿರುವರೆನ್ನಲಾಗಿದೆ. ಮತ್ತು ಇದಕ್ಕಾಗಿಯೇ ಅವರು ಐಕ್ ಮತ್ತು ಕ್ರುಶ್ಚೇವರನ್ನು ಬೇರೆ ಬೇರೆಯಾಗಿ ಭೆಟ್ಟಿಯಾಗಿದ್ದಾರೆ. ಶ್ರೀ ನೆಹರುರವರೊಡನೆಯೂ ಐಕ್ ಹಾಗೂ ಮ್ಯಾಕಮಿಲನರು ವಿಚಾರವಿನಿಮಯ ಮಾಡಿದ್ದಾರೆ. ಆಫ್ರಿಕೆಯಲ್ಲಿ ಸದ್ಯ ಉಂಟಾಗಿರುವ ಗೊಂದಲದ ಪರಿಸ್ಥಿತಿಯಲ್ಲಿ ನೆಹರುರವರ ಮಾರ್ಗದರ್ಶನವು ಯುಕ್ತ ರಾಷ್ಟ್ರಸಂಸ್ಥೆಗೆ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಉಪಕಾರಿಯಾಗಬಹುದು.

ಆಫ್ರಿಕೆಯ ರಾಷ್ಟ್ರಗಳ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಾರದು; ಅಪಾಯಕಾರಿ ಶಸ್ತ್ರಾಸ್ತ್ರ ಸ್ಪರ್ಧೆಯಲ್ಲಿ ತೊಡಗದೆ ಅವುಗಳ ಭದ್ರತಾ ರಕ್ಷಣೆಗೆ ನೆರವಾಗಬೇಕು; ಕಾಂಗೋವಿಗೆ ಅವಸರದ ನೆರವನ್ನು ನೀಡಬೇಕು; ದೀರ್ಘಾವಧಿ ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಅಂತಾರಾಷ್ಟ್ರೀಯ ನೆರವು ನೀಡಬೇಕು ಮತ್ತು ಶಿಕ್ಷಣಕ್ಕೆ ಸಹಾಯನೀಡಬೇಕೆಂಬ ಐದಂಶದ ಸಲಹೆಯನ್ನು ಐಕರು ಸಂ. ರಾ ಸಭೆಯಲ್ಲಿ ನೀಡಿದ್ದಾರೆ. ಅಲ್ಲದೇ ರಶ್ಯವು ನಿಶ್ಶಸ್ತ್ರೀಕರಣದ ಒಗ್ಗೆ ಮಾತುಕತೆ ಆಡಲು ಮುಂದೆ ಬರಬೇಕೆಂದು ಆಹ್ವಾನವನ್ನೂ ಕೊಟ್ಟಿದ್ದಾರೆ.

ಕಮ್ಯುನಿಸ್ಟ ವಿರೋಧಿಯೆಂದು ಕೀರ್ತಿ ಪಡೆದ ಬೋಲ್ಯಾಂಡರು ಅಧ್ಯಕ್ಷ ಸ್ಥಾನಕ್ಕೆ ಆರಿಸಲ್ಪಟ್ಟೊಡನೆಯೇ ನಿಕಿಟಾ ಕ್ರುಶ್ಚೇವರು ತುಸು ಪೆಚ್ಚಾಗಿದ್ದಾರೆ. ಅವರು ಸಂಯುಕ್ತ ರಾಷ್ಟ್ರ ಸಂಘದ ಕಾರ್ಯದರ್ಶಿಯ ಹುದ್ದೆಯು ನಿಷ್ಪ್ರಯೋಜಕವೆಂದು ಘೋಷಿಸಿದ್ದುದು ತುಂಬ ವಿವಾದಕ್ಕೆಡೆ ಮಾಡಿದೆ. ಕಾಂಗೊವಿನ ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡವರಲ್ಲಿ ರಶ್ಯ ಅಗ್ರಗಣ್ಯ ಸ್ಥಾನ ಪಡೆಯುತ್ತದೆಯೆಂಬುದರ ಒಗ್ಗೆ ಸಂಘದ ವಲಯಗಳಲ್ಲಿ ಭಿನ್ನಾಭಿಪ್ರಾಯವಿರಲಾರದು.

೧೪ ಹೊಸ ರಾಷ್ಟ್ರಗಳಿಗೆ ತನ್ನ ಸದಸ್ಯತನವನ್ನು ನೀಡಿದ ಸಂಯುಕ್ತ ರಾಷ್ಟ್ರ ಸಂಸ್ಥೆಯ ಪ್ರಚಲಿತ ಅಧಿವೇಶನದಂತಹ ಸಭೆ ಇದುವರೆಗೆ ಸೇರಿಲ್ಲ; ವಿಶ್ವದಲ್ಲಿ ಅಶಾಂತಿಯ ಕಿಡಿಯೊಂದರೂ ಈಗಿನಂತೆ ಇದುವರೆಗೆ ಎದ್ದಿರಲಿಲ್ಲ; ಎಂತಲೇ ಸಂಸ್ಥೆಯ ಇತಿಹಾಸದಲ್ಲೇ ಅಭೂತಪೂರ್ವ ಸಮ್ಮೇಳನವಿದು.

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	3-75
ಪಂಚವಾರ್ತು (ಕಾದಂಬರಿ)	2-50
ನಮ್ಮ ಸುತ್ತಲಿನ ಕಡಲು	1-75
ಪರಮಾಣು—ಇಂದು—ನಾಳೆ	3. 00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ

Edited, Printed & Published by K. H. Shetty at the Navayuga Press Udipi S. India

40th year of publication. 6-10-1960 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೬ No. 6

ಬೆಲೆ 0=13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಮಹಾ ಪುರುಷರ ಪುನರ್ಮಿಲನ ?

ಪಂಚ ತಟಸ್ಥ ರಾಷ್ಟ್ರಗಳು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯಲ್ಲಿ ಮಂಡಿಸಿದ ಕ್ರುಶೇವ-ಐಕ್ ಪುನರ್ಮಿಲನವಾಗಬೇಕೆಂಬ ಗೊತ್ತುವಳಿಯು ಅರ್ಥಪೂರ್ಣವಾಗಿದೆ.

ವಿಶ್ವ ನೇತಾರರೆಲ್ಲರೂ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಭಾಗವಹಿಸಿದ ಇತಿಹಾಸ ಪ್ರಸಿದ್ಧವಾದ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯಾಧಿವೇಶನಕ್ಕೆ ಇದೀಗ ವಿಶೇಷ ಕಳೆಯು ಕಂಡುಬಂದಿದೆ. ರಶ್ಯನ್ ಪ್ರಧಾನಿ ಕ್ರುಶೇವರು ಸ್ವಯಂ ಈ ಅಧಿವೇಶನದಲ್ಲಿ ಭಾಗವಹಿಸುವುದಾಗಿ ಸಾರಿದುದರಿಂದ ಉಳಿದ ಪ್ರಮುಖ ಪಾಶ್ಚಾತ್ಯ ಹಾಗೂ ತಟಸ್ಥ ರಾಷ್ಟ್ರಗಳ ವರಿಷ್ಠರೂ ಅನಿವಾರ್ಯವಾಗಿಯೆಂಬಂತೆ ಇದರಲ್ಲಿ ಭಾಗವಹಿಸಲು ತೆರಳುವಂತಾಯಿತು. ಹಾಗಾಗಿ, ಸಂಯುಕ್ತ ರಾಷ್ಟ್ರ ಸಂಘದಲ್ಲಿ ಈ ಹಿರಿಯ ರಾಜಕಾರಣಿಗಳ ಪ್ರದರ್ಶನಕ್ಕೆ ಮೂಲಹೇತುವಾದ ಕ್ರುಶೇವರು ಮತ್ತೇನನ್ನು ಮಾಡದಿದ್ದರೂ ಈ ಮಹಾಕಾರ್ಯವನ್ನು ಗೆಯ್ದರೆಂದು ಹೇಳಬಹುದು. ಶ್ರೀ ಕ್ರುಶೇವರು ಕೇವಲ ರಶ್ಯದ ಮಾತ್ರವಲ್ಲ ಕಮ್ಯುನಿಷ್ಟ ಸದಸ್ಯ ರಾಷ್ಟ್ರಗಳೆಲ್ಲವುಗಳ ಅಗ್ರ ನಾಯಕತ್ವವನ್ನೂ ಸ್ವೀಕರಿಸಿದುದು ಮತ್ತೊಂದು ಮಹತ್ವದ ವಿಚಾರವಾಗಿದೆ.

ಅಮೆರಿಕೆಯ ಅಧ್ಯಕ್ಷ ಐಸನ್‌ಹಾವರ್ ಮತ್ತು ರಶ್ಯನ್ ಪ್ರಧಾನಿ ನಿಕಿಟಾ ಕ್ರುಶೇವರ ನಡುವೆ ಪೇರಿಸ್‌ನಲ್ಲಿ ಸೇರಿದ್ದ ವರಿಷ್ಠ ಸಮ್ಮೇಳನದಲ್ಲಿ ನಿಶ್ಶಸ್ತ್ರೀಕರಣ ಪ್ರಶ್ನೆಯ ಬಗ್ಗೆ ಭಿನ್ನಾಭಿಪ್ರಾಯಗಳು ತಲೆದೋರಿ ಈ ಒಡಕಿನಿಂದ ಎದ್ದ ದ್ವೇಷಾಗ್ನಿ ಕಾಂಗೋ ಘಟನೆಯಿಂದ ಮತ್ತಷ್ಟು ಉದ್ರಿಕ್ತವಾಯಿತೆಂದು ಹೇಳಬಹುದು. ಈ ಪೂರ್ವ ಪಶ್ಚಿಮ ವೈಮನಸ್ಯವನ್ನು ನೀಗಿಸಲು ಆ ಇಬ್ಬರು ಮಹಾನಾಯಕರು ಭಿನ್ನತೆಯ ಬೀಜವುದಿಸಿದಲ್ಲಿಂದಲೇ ಮರು ಮಾತುಕತೆಗೆ ತೊಡಗುವುದರಿಂದ ಪ್ರಚ್ಛನ್ನ ಯುದ್ಧದ ಭೀತಿ ದೂರವಾಗಿ ತನ್ಮೂಲಕ ಸದ್ಯ ಕಲುಷಿತಗೊಂಡ ಮನೋಭಾವ ದೂರವಾದುವುದು ಸಾಧ್ಯ. ಇದರಿಂದ ಎಲ್ಲ ಪ್ರಶ್ನೆಗಳೂ ಸಮಾಧಾನಕರ ವಿಧಾನದಲ್ಲಿ ಬಗೆಹರಿಯುವುದಕ್ಕೆ ಅವಕಾಶ ನೀಡಿದಂತಾಗುವುದೆಂದು ಘಾನಾದ ಅಧ್ಯಕ್ಷ ಶ್ರೀ ಎನ್‌ಕ್ರೂಮಾರ ಅಭಿಪ್ರಾಯ. ಈ ಅಭಿಪ್ರಾಯವನ್ನೇ ಬೆಂಬಲಿಸಿ, ಐಕ್-ಕ್ರುಶೇವರು ಪುನಃ ಸಂಪರ್ಕವನ್ನು ಇಟ್ಟುಕೊಳ್ಳಬೇಕೆಂದು ಕೇಳಿಕೊಳ್ಳುವ ಗೊತ್ತುವಳಿಯೊಂದನ್ನು ಭಾರತ, ಇಂಡೊನೇಶಿಯಾ, ಸಂಯುಕ್ತ ಅರಬ ರಾಜ್ಯ, ಯುಗೊಸ್ಲಾವಿಯಾ ಮತ್ತು ಘಾನಾಗಳು ಸಂ. ರಾ. ಸಂಘದ ಸಭೆಯಲ್ಲಿ ಮುಂದಿಟ್ಟುವು. ಪ್ರಸ್ತಾವ ಸಂಬಂಧಿತ ಇರ್ವರು ಮಹಾಶಯರಿಗೂ ಪೂರ್ವಸೂಚನೆಯಿಲ್ಲದೆ ಮುಂಬಂದ ಈ ಗೊತ್ತುವಳಿಯನ್ನು ನೆರೆದಿದ್ದ ಸದಸ್ಯ ರಾಷ್ಟ್ರಗಳು ಧ್ವನಿಮೂಲಕ ಸ್ವಾಗತಿಸಿದವೆಂದು ತಿಳಿಯುತ್ತದೆ. ಅಂತೂ ಈ ಬಗ್ಗೆ ಇಷ್ಟರಲ್ಲೇ ಚರ್ಚೆ ನಡೆಯಬಹುದು ಮತ್ತದು ಸ್ವೀಕಾರವಾಗಲೂ ಬಹುದು.

ಕಾಂಗೋ ಪ್ರಕರಣದಲ್ಲಿ ಸಂ. ರಾ. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಡಾಗ್ ಹೆಮ್ಮರಶೀಲ್ಡರು ಪಕ್ಷಪಾತತನವನ್ನು ತೋರಿಸಿ, ಸಂಘದ ಅಪೇಕ್ಷೆಗೆ ವಿರುದ್ಧವಾಗಿ ಕಾರ್ಯವೆಸಗಿದ್ದಾರೆ; ಅವರು ಕಾಂಗೊವಿನ ಅಂತರಿಕ ವಿಷಯುಗಳಲ್ಲಿ ಹಸ್ತಕ್ಷೇಪ ನಡೆಸಿದ್ದಾರೆ. ಆದುದರಿಂದ ಪ್ರಧಾನ ಕಾರ್ಯದರ್ಶಿಯೊಬ್ಬನನ್ನೇ ನೇಮಿಸುವ ಬದಲು ಪೂರ್ವ, ಪಶ್ಚಿಮ ಮತ್ತು ತಟಸ್ಥ ರಾಷ್ಟ್ರಗಳ ಪ್ರತಿನಿಧಿಗಳಿರುವ ಮೂವರು ಪ್ರಧಾನ ಕಾರ್ಯದರ್ಶಿಗಳ ಸಮಿತಿಯೊಂದನ್ನು ರಚಿಸಬೇಕು ಎಂದು ಶ್ರೀ ಕ್ರುಶೇವರು ಅಭಿಪ್ರಾಯ ಪಟ್ಟುದರಿಂದ ಅಮೆರಿಕ-ರಶ್ಯಗಳ ಭಿನ್ನತೆ ಮತ್ತಷ್ಟು ಅಧಿಕವಾಯಿತು. ಈ ಪ್ರಶ್ನೆಯ ಬಗ್ಗೆ ಮಾತನಾಡಿದ ನ್ಕ್ರೂಮಾರು ಸಹಾಯಕ ಪ್ರಧಾನ ಕಾರ್ಯದರ್ಶಿಗಳನ್ನಾಗಿ ಈ ಮೂರು ಬಗೆಯ ರಾಷ್ಟ್ರ ಪ್ರತಿನಿಧಿಗಳನ್ನು ಆರಿಸಿ, ಅವರಿಗೆ ವಿಶಿಷ್ಟ ಅಧಿಕಾರವನ್ನು ನೀಡುವುದು ಸೂಕ್ತವೆಂದು ಅಂದಿದ್ದಾರೆ.

ಶ್ರೀ ಹೆಮ್ಮರಶೀಲ್ಡರು ಪಾಶ್ಚಾತ್ಯ ಬಂಡವಾಳಶಾಹಿ ಮತ್ತು ವಸಾಹತುವಾದಿ ರಾಷ್ಟ್ರಗಳ ಚೇಲರಂತೆ ನರ್ತಿಸುತ್ತಿದ್ದಾರೆಂದು ಆರೋಪಿಸಿದ ಶ್ರೀ ಕ್ರುಶೇವರು ನಿಶ್ಶಸ್ತ್ರೀಕರಣದ ಪ್ರಶ್ನೆಯನ್ನು ಚರ್ಚಿಸಬೇಕೆಂದಿದ್ದರೆ ಕಮ್ಯುನಿಷ್ಟ ಚೀನಕ್ಕೆ ಸಂ. ರಾ. ಸಂಘದಲ್ಲಿ ಪ್ರವೇಶ ದೊರೆಯಬೇಕೆಂದು ವಾದಿಸಿದರು. ಈ ಬಗ್ಗೆ ಅಮೆರಿಕೆಯ ನೀತಿಯನ್ನು ಖಂಡಿಸುವ ಭಾವಾವೇಶದ ಭರದಲ್ಲಿ ಅವರು ಹಂಚಲಾಗಿದ್ದ ಮುದ್ರಿತ ಭಾಷಣದಲ್ಲಿಲ್ಲದ ವಿಷಯಗಳನ್ನೂ ಎತ್ತಿ ಹೇಳತೊಡಗಿದುದರಿಂದ ಸಭಾಪತಿಗಳು ಅವರಿಗೆ ಸೂಚನೆ ಕೊಡಬೇಕಾಯಿತೆಂದು ತಿಳಿಯುತ್ತದೆ. ಚೀನಕ್ಕೆ ಪ್ರಾತಿನಿಧ್ಯ ದೊರೆಯುವವರೆಗೆ ನಿಶ್ಶಸ್ತ್ರೀಕರಣ ಪ್ರಶ್ನೆಯ ಬಗ್ಗೆ ಚರ್ಚೆ ನಿರರ್ಥಕವೆಂದೂ ಮಾತ್ರವಲ್ಲ, ಸಂಘದ ಸಾಮಾನ್ಯ ಕಾರ್ಯಕೃತಿಗಳೂ ನಿಷ್ಫಲವೆಂದೂ ಅವರು ಉದ್ಘೋಷಿಸಿದರು. ಈ ಸಭೆಯು ಚೀನಕ್ಕೆ ಸಂ. ರಾ. ಸಂಘದ ಸದಸ್ಯತ್ವವನ್ನು ಕೊಡಬೇಕೆಂಬ ವಿಚಾರವನ್ನು ಒಂದು ವರ್ಷದ ವರೆಗೆ ಮುಂದುವರಿಸಿತ್ತು. ಈ ಉದ್ರೇಕದಿಂದಾಗಿಯೇ ಕಪ್ಪಿನಿ ಟಾಂಗ್ ಚೀನದ ಪ್ರತಿನಿಧಿ ಭಾಷಣ ಮಾಡಲು ಎದ್ದು ನಿಂತಾಗ ಸೋವಿಯತ್ ಪ್ರತಿನಿಧಿ ಮಂಡಳವು ಸಭಾತ್ಯಾಗವನ್ನೂ ಮಾಡಿಬಿಟ್ಟಿತು!

ಪಂಚ ತಟಸ್ಥ ರಾಷ್ಟ್ರಗಳು ಡಾ| ಸುಕರ್ಣರ ಮೂಲಕ ಮಂಡಿಸಿದ ಪುನಃ ಸಂಪರ್ಕ ಬೆಳೆಸುವ ಗೊತ್ತುವಳಿಯನ್ನು ಸಮರ್ಥಿಸಿದ ನೆಹರುರವರೂ ಮಾತನಾಡಿದರು. ಹೆಚ್ಚಿನ ಅಮೆರಿಕನ್ ರಾಜನೀತಿ ವಿಮರ್ಶಕರು ಈ ಗೊತ್ತುವಳಿಯನ್ನು ಸ್ವೀಕರಿಸುವುದರಿಂದ ಏನೂ ಹಾನಿಯಿಲ್ಲವೆಂದು ಅಭಿಪ್ರಾಯಪಡುವರಾದರೂ ಅಧ್ಯಕ್ಷ ಐಕರು ಕೇವಲ ಭೆಟ್ಟಿಯಾಗುವ ಉದ್ದೇಶಕ್ಕಾಗಿಯೇ ಭೆಟ್ಟಿಯಾದರೆಂದರೆ, ರಿಪಬ್ಲಿಕನ್ ಪಕ್ಷದ ಮೇಲೆ ಸದ್ಯದ ಅಧ್ಯಕ್ಷ ಚುನಾವಣೆಯಲ್ಲಿ ದುಷ್ಪ್ರಭಾವ ಬೀರುವುದೆಂದೂ ಅವರು ಹೆದರುತ್ತಾರೆ.

ಪ್ರಪಂಚದ ಶಾಂತಿಯ ಜವಾಬ್ದಾರಿಯು ಚತುರ್ಮಹಾರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸ್, ಅಮೆರಿಕ ಮತ್ತು ರಶ್ಯಗಳ ಮೇಲೆ ಮಾತ್ರ ಇದೆ ಎಂಬ ಸಂಗತಿಯನ್ನು ಆಫ್ರೇಸ್ಯಾದ ಮಹಾನಾಯಕರು ಒ

(೯ನೇ ಪುಟ ನೋಡಿರಿ)



ಅಮೆರಿಕೆಯ ರಾಜ್ಯ ಪದ್ಧತಿ.

೧. ಅಮೆರಿಕೆಯ ರಾಜ್ಯ ಪದ್ಧತಿಯಲ್ಲಿ ಜನತೆಗೆ ಸರಕಾರದ ಮೇಲೆ ಪೂರ್ಣ ನಿಯಂತ್ರಣವಿದೆ. ಮುಕ್ತ ಮತದಾನ ರೀತಿಯಲ್ಲಿ ಅವರು ಎಲ್ಲ ಮಟ್ಟದ ಅಧಿಕಾರಿಗಳಿಗೂ ಮತ ನೀಡುವರು. ಸ್ತ್ರೀ ಪುರುಷರೆಲ್ಲರೂ ಅಧಿಕಾರಕ್ಕೆ ಬರಬಹುದು. ೨೧ ವರ್ಷ ಮೀರಿದ ಅಮೆರಿಕೆಯ ನಾಗರಿಕರೆಲ್ಲರಿಗೂ ಮತಾಧಿಕಾರವಿದೆ. ೨. ಎಲ್ಲರಿಗೂ ಸಮಾನಾವಕಾಶವಿರುವುದರಿಂದ ಅನೇಕ ಉನ್ನತಾಧಿಕಾರಿಗಳು ಶ್ರಮಿಕ ವರ್ಗದವರಾಗಿಯೇ ಮೇಲೇರಿ ಬಂದಿದ್ದಾರೆ. ೩. ಅಲ್ಲಿ ಮತದಾನವು ಗುಪ್ತವಾಗಿ ನಡೆಯುವುದರಿಂದ ಯಾರಿಗೆ ಮತನೀಡಲಾಯಿತೆಂದು ತಿಳಿಯುವುದಿಲ್ಲ.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಮುರುಟಿದ ಬಳ್ಳಿ ಚಿಗುರಿತು

ನಿರಪರಾಧಿನಿ ಧರ್ಮಪತ್ನಿ ಸಖುವನ್ನು ಕೊಂಡೆಯಾದ ರಾಜಯ್ಯ ಕಳೆದುಕೊಂಡು ಬಿಟ್ಟ. ಪಶ್ಚಾತ್ತಾಪದಗ್ಧ ಹೃದಯಿಯಾಗಿ ಮರಳಿ ಭಾಗ್ಯವಶದಿಂದ ಮುರುಟಿದ ಬದುಕುಬಳ್ಳಿಯನ್ನು ಚಿಗುರಿಸಿದ.

ಶ್ರೀ ಎಸ್. ದತ್ತಾತ್ರೇಯ ಪೈ.

'ಭಿಕ್ಷೆ ನೀಡಮ್ಮ...ಅಮ್ಮ ಬಾಗಿಲಿಗೆ ಭಿಕ್ಷುಕ ಬಂದಿದ್ದಾನೆ...ಭಿಕ್ಷೆ ನೀಡಮ್ಮಾ...." ಎಂಬ ಧ್ವನಿ ಅಡಿಗೆಮನೆಯಲ್ಲಿದ್ದ ಸಖೂವಿಗೆ ಕೇಳಿಸಿತು. "ಹೌದು... ಹಿಂದಿನದೇ ಸ್ವರ, ಹಿಂದೆ ಬಂದವನೇ ಆಗಿರಬೇಕು. ಇಂದು ಖಂಡಿತವಾಗಿಯೂ ಅವನ ವಿಷಯವನ್ನು ತಿಳಿಯಲೇಬೇಕು" ಎಂದು ನಿಶ್ಚಯಿಸಿದಳು ಸಖೂ. ಅವಳ ಮುಖ ಸಂತೋಷಿತವಾಯಿತು. ಕೈಯಲ್ಲಿ ಅಕ್ಕಿಯನ್ನು ಹಿಡಿದುಕೊಂಡು ಹೊರಗೆ ಓಡೋಡಿ ಬಂದಳು.

"ಹೌದು ಅದೇ ಭಿಕ್ಷುಕ, ಮೊದಲು ಬಂದವನೇ" ಭಿಕ್ಷುಕನನ್ನು ಕಂಡು ದೃಢೀಕರಿಸಿದಳು ಸಖೂ. ಅವನು ಹೊರಗೆ ಸುಮ್ಮನೇ ನಿಂತಿದ್ದ. ಅವನನ್ನು ನೋಡಿದರೆ ಆತ ಏನನ್ನೋ ಯೋಚಿಸುತ್ತಿರುವನಂತೆ ತೋರುತಿತ್ತು. ಅವನಿಗೆ ಈ ಪ್ರಪಂಚದ ಧ್ಯಾನವೇ ಇಲ್ಲದಿರುವಂತೆ ತೋರುತಿತ್ತು. "ಭಿಕ್ಷೆ ತಗೊಳ್ಳಿ" ಎಂದು ಸಖೂ ಹೇಳಿದಾಗಲೇ ಆತ ಎಚ್ಚರನಾದುದು. ಕೂಡಲೆ ತನ್ನ ಪಾತ್ರೆಯನ್ನು ಮುಂದಕ್ಕೆ ಚಾಚಿ ಅಕೆಯ ಭಿಕ್ಷೆಯನ್ನು ಸ್ವೀಕರಿಸಿದ. "ನೀನು ಮಾಂಗಲ್ಯವತಿಯಾಗಿ ಬಾಳು" ಎಂದು ಹರಸಿದ. ಈ ಮಾತು ಸಖೂವಿನ ಹೃದಯವನ್ನು ಇರಿಯಿತು. ಅವಳ ಮನಸ್ಸಿಗೆ ಬಹಳ ವ್ಯಥೆಯಾಯಿತು. 'ಈತ ತನ್ನನ್ನು ಅಣಕಿಸುತ್ತಿರಬೇಕು' ಎಂದು ಭಾವಿಸಿದಳು. ಆದರೂ ಧೈರ್ಯವನ್ನು ತಂದುಕೊಂಡು "ಸ್ವಾಮಿ..." ಎಂದಳು.

"ಏನಮ್ಮ...." ಭಿಕ್ಷುಕ ಸಮಾಧಾನದಿಂದ ಕೇಳಿದ.

"ನಿಮ್ಮೊಡನೆ ಒಂದು ಮಾತನ್ನು ಕೇಳಬಹುದೇ..."

"ಭಿಕ್ಷುಕನಾದ ನನ್ನಲ್ಲಿ ನೀನು ಕೇಳುವ ವಿಷಯವಾದರೂ ಏನು? ಆಗಲಿ, ನನಗೆ ತಿಳಿದರೆ ಹೇಳುತ್ತೇನೆ. ಅದೇನು? ಹೇಳಮ್ಮ?"

"ತಾವು...... ಯಾರೆಂದು ಕೇಳಬಹುದೇ......"

"ಭಿಕ್ಷೆಗೆ ಬಂದವರೊಡನೆ ಈ ವಿಷಯದಲ್ಲಿ ಪ್ರಸ್ತಾಪವೇಕೆ? ಭಿಕ್ಷುಕರ ಕುಲಗೋತ್ರಗಳನ್ನು ಕೇಳಿ ನಿಮಗಾಗಬೇಕಾದುದೇನು? ಅದನ್ನು ನಾನು ಹೇಳುವಂತಿಲ್ಲ. ನೀವು ಕೇಳುವ ಹಾಗೂ ಇಲ್ಲ...." ಎಂದು ಹೇಳುತ್ತ ಆತ ನಡೆದೇಬಿಟ್ಟ.

ಸಖೂವಿನ ಮನ ನೊಂದಿತು. "ಈತ ಹೀಗೇಕೆ ಹೇಳಿದ? ಒಂದುವೇಳೆ ನಾನು ಯೋಚಿಸಿದವರಿವರಲ್ಲದಿರಬಹುದೆ? ಅಲ್ಲದಿದ್ದಲ್ಲಿ ತನ್ನ ವಿಷಯವನ್ನು ಯಾಕೆ ತಿಳಿಸುತ್ತಿರಲಿಲ್ಲ? ನನ್ನ ಪರಿಚಯವೇ ಒಂದುವೇಳೆ ಅವರಿಗೆ ಆಗದಿರಬಹುದೆ?" ಎಂದು ಏನೇನೋ ಯೋಚಿಸುತ್ತ ಇದ್ದಳು.

ತನ್ನ ಗತಜೀವಿತವು ಕಣ್ಣ ಮುಂದೆ ಗೋಚರಿಸತೊಡಗಿತು ಸಖೂ ತನ್ನ ತಂದೆಯ ಒಬ್ಬಳೇ ಮಗಳು. ಬಹಳ ಪ್ರೀತಿಯಿಂದ ಅವಳ ತಂದೆ ಇವಳನ್ನು ಸಾಕಿದ. ವಿದ್ಯಾಭ್ಯಾಸವನ್ನು ಸಾಧಾರಣ ಮಟ್ಟಿಗೆ ಮಾಡಿಸಿದ್ದ. ತಾಯಿಯಿಲ್ಲದ ತಬ್ಬಲಿಯಾದುದರಿಂದ ಅವನಿಗೆ ಅವಳದೇ ಯೋಚನೆ. ಸಖೂ ಪ್ರಾಯಪ್ರಬುದ್ಧೆಯಾಗುತ್ತ ಬರುತ್ತಿದ್ದಂತೆ ಅವನಲ್ಲಿ ವ್ಯಥೆ ಪ್ರಾರಂಭವಾಗುತ್ತಿತ್ತು. "ಹುಡುಗಿಯರು ಎಷ್ಟು ಬೇಗನೇ ಬೆಳೆಯುತ್ತಾರಪ್ಪ! ಇನ್ನು ಅವಳಿಗೆ ಮದುವೆ ಮಾಡಬೇಡವೆ? ಹುಡುಗನೆಲ್ಲಿ ಇದ್ದಾನೆ? ಅವಳಿಗೆ ಸರಿಸಮಾನನಾದವನು ಸಿಗಬಹುದೆ?" ಎಂಬ ಚಿಂತೆಯೂ ಅವನಲ್ಲಿ ವಿಶೇಷವಾಗಿತ್ತು.

ಅಂತೂ ಕೊನೆಗೆ ಪ್ರಯತ್ನ ಮಾಡಿ ಬೆಂಗಳೂರಿನ ಹುಡುಗನೊಬ್ಬನನ್ನು ಗೊತ್ತು ಹಚ್ಚಿದ. ಹುಡುಗ ಹುಡುಗಿಯನ್ನು ನೋಡಬಯಸಿದ. ಬಂದು ಸುಮುಹೂರ್ತದಲ್ಲಿ ಸಖೂವನ್ನು ನೋಡಿದ. ಒಪ್ಪಿದ. ಇದಾದ ಆರೇ ಆರು ತಿಂಗಳುಗಳಲ್ಲಿಯೇ ಮದುವೆಯಾಗಿಯೇ ಬಿಟ್ಟಿತ್ತು. ಗಂಡನೊಂದಿಗೆ ತೆರಳುವಾಗ ಸಖೂವಿಗಾದ ದುಃಖ ಅಷ್ಟಿಷ್ಟಲ್ಲ. ತಾಯಿಯಿಲ್ಲದಿದ್ದರೂ ತನ್ನ ಬಹಳ ಪ್ರೇಮಲ ತಂದೆಯನ್ನು ಬಿಟ್ಟು ಈ ಮನೆಯನ್ನು ಬಿಟ್ಟು ಹೋಗುವುದಾದರೂ ಹೇಗೆ? ತಾನು ಗಂಡನ ಮನೆಗೆ ಹೋದರೆ ತನ್ನ ತಂದೆಯವರನ್ನು ನೋಡುವವರಾದರೂ ಯಾರು? ಎಂದು ಬಹಳವಾಗಿ ಚಿಂತಿಸಿದ್ದಳು. ಆದರೆ ಮಾಡುವುದಾದರೂ ಏನು?

ಸಖೂವಿನ ಗಂಡ ರಾಜಯ್ಯ ಅಷ್ಟೇನೂ ಶ್ರೀಮಂತನಲ್ಲ; ಬಡವನೂ ಅಲ್ಲ. ಒಂದೆರಡು ಎಕ್ರೆ ಭೂಮಿಯಿದೆ. ಮನೆಯಿದೆ, ಹಿತ್ತಲಿದೆ. ಊಟಕ್ಕೆ ಬೇಕಾಗುವಷ್ಟು ಅಕ್ಕಿ ಸ್ವಂತ ಭೂಮಿಯಿಂದ ದೊರೆಯುತಿತ್ತು. ಬೇರೆ ಖರ್ಚುಗಳನ್ನು ಮಾತ್ರ ನೋಡಿದರಾಯ್ತು. ಮನೆಯಲ್ಲೂ ಹೆಚ್ಚಿಗೆ ಜನರಿಲ್ಲ. ಅತ್ತಿಗೆ, ವಿಧವೆಯಾದ ನಾದಿನಿ, ಅವಳ ನಾಲ್ಕು ವರುಷದ ಮಗ ಇಷ್ಟೇ ಜನರು. ಆದರೆ ಅತ್ತಿಗೆ ಗಯ್ಯಾಳಿ. ತನ್ನ ಮಗಳ ಮಾತನ್ನು ಕೇಳುವವಳು ರಾಜಯ್ಯ ತಾಯಿ ಹೇಳಿದಂತೆ ಕೇಳುವವನು.

ನಾದಿನಿಗೆ ತನ್ನ ಅತ್ತಿಗೆಯನ್ನು ನೋಡಲಾಗುತ್ತಿರಲಿಲ್ಲ. ಅತ್ತಿಗೆಯ ವಿಷಯದಲ್ಲಿ ತನ್ನ ತಾಯಿಯೊಡನೆ ದೂರು ಹೇಳಿ ರಾದ್ಧಾಂತವನ್ನೇ ತೆಗೆಯುತ್ತಿದ್ದಳು. ಇದರಿಂದಾಗಿ ಸಖೂವಿಗೆ ಬೈಗಳ ಮಳೆಯಾಗುತಿತ್ತು. ಕೆಲವು ಬಾರಿ ಪೆಟ್ಟುಗಳೂ ಬೀಳುತ್ತಿದ್ದವು ಆದರೆ ಪಾಪ ಅವಳೇನು ಮಾಡಿಯಾಳು?

ತನ್ನ ಅತ್ತೆನಾದಿನಿಯರ ಕಾಟದಿಂದ ಹಣ್ಣು ಹಣ್ಣಾಗಿ ಹೋದಳು ಸಖೂ. "ಇಲ್ಲಿ ನಿಂತರೆ ಇನ್ನು ನಾನು ಉಳಿಯುವಂತಿಲ್ಲ. ನಾವು ಬೇರೆ ಕಡೆಯಾದರೂ ನಿಲ್ಲೋಣ"ವೆಂದು ಒಂದು ಬಾರಿ ಗಂಡನೊಡನೆ ಹೇಳಿದ್ದಳು. "ನಾನು ಈ ಮನೆ ಬಿಟ್ಟು ಬರುವವನಲ್ಲ. ತಾಯಿಯನ್ನು ಬಿಟ್ಟು ಬರಲು ನನ್ನಿಂದ ಸಾಧ್ಯವಾಗದು. ನೀನು ಹೋಗುವದಾದರೆ ಈಗಲೇ ನಡೆ" ಎಂದು ಹೆಂಡತಿಯನ್ನು ಬೈದಿದ್ದ ರಾಜಯ್ಯ. ಸಖೂ ಉಭಯ ಸಂಕಟದಲ್ಲಿ ಬಿದ್ದು ಹೋದಳು. ಗಂಡನನ್ನು ಬಿಟ್ಟು ಹೋಗಲು ಸಾಧ್ಯವೇ? ಆ ನರಕದಲ್ಲಿಯೇ ಅವಳು ತೊಳಲುವಂತಾಯಿತು.

ಒಂದು ಬಾರಿಯ ರಾದ್ಧಾಂತವಂತೂ ಬಹಳ ವಿಶೇಷಕ್ಕೆ ಬಂದು ಹೋಯಿತು. ಅಂದು ಭಾನುವಾರವಾಗಿತ್ತು. ಸಾಯಂಕಾಲದ ಸಮಯ. ಸಖೂ ದೇವಾಲಯ

(೧೧ನೇ ಪುಟ ನೋಡಿರಿ)

ರಾಮತೀರ್ಥ (ಮಾಸಿಕ ಪತ್ರ)

(ಹಿಂದಿ ಭಾಷೆಯಲ್ಲಿ)

ಸಂಪಾದಕರು: ಯೋಗಿರಾಜ ಶ್ರೀ ಉಮೇಶಚಂದ್ರರು.

ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯೆ, ಮಹಿಳೆಯರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೧೪.

ವಿಚಾರವರ್ಷ

ಕರ್ನಾಟಕದ ಸಾರಿಗೆ ಸಂಪರ್ಕ ಸಮಸ್ಯೆಗಳು

ನಮ್ಮ ದುರ್ಬಲತೆಯಿಂದ ನಮ್ಮ ಸಾರಿಗೆ ಸಂಪರ್ಕ ಸಮಸ್ಯೆಗಳು ಬಗೆಹರಿಯುವ ಸಲ್ಲಕ್ಷಣಗಳು ತೋರುತ್ತಿಲ್ಲ; ಈ ಬಗ್ಗೆ ನಮ್ಮ ರಾಜ್ಯದ ಸರಕಾರವೂ ಅಭಿವೃದ್ಧಿ ಮಂಡಳವೂ ತೀವ್ರ ಒತ್ತಾಯ ತರಬೇಕು. ಪ್ರಥಮ ದ್ವಿತೀಯ ಯೋಜನೆಯಲ್ಲಿ ಪರಿಹಾರ ಕೈಬಿಟ್ಟರೂ ಮೂರನೆಯದರಲ್ಲಿ ಮೀನ ಮೇಷ ನಡೆಸುವುದು ಸಲ್ಲದು.

ಶ್ರೀ ಬಿ. ಜಿ. ಸತ್ಯಮೂರ್ತಿ

೧೯೫೬ನೇ ಇಸವಿ ನವಂಬರ್ ತಿಂಗಳು ಬೃಹದ್ ಕರ್ನಾಟಕ ಏಕೀಕರಣವಾಯಿತು. ಏಕೀಕರಣವಾಗಿ ಇಂದಿಗೆ ನಾಲ್ಕು ವರ್ಷಗಳು ಸಂದುವು. ಆದರೆ ಸಹಸ್ರಾರು ಕನ್ನಡಿಗರ ಪೂರೈಕೆಗಳು ಹಾಗೇ ನಿಂತು ಅತ್ತ ರಾಜ್ಯಾಭಿವೃದ್ಧಿಗೂ ಇತ್ತ ರಾಷ್ಟ್ರಾಭಿವೃದ್ಧಿಗೂ ಪ್ರತಿಕೂಲವಾಗಿದೆ.

ಪ್ರಥಮ ದ್ವಿತೀಯ ಯೋಜನೆಗಳಲ್ಲಿಯೇ ಆಗಿ ಮುಗಿದು ಇತರ ರಾಜ್ಯಗಳಿಗೆ ಮಾದರಿ ರಾಜ್ಯವಾಗಿ ತನ್ನಲ್ಲಿರುವ ಸಂಪತ್ಸಮೃದ್ಧಿಯಿಂದ ವಾಣಿಜ್ಯ, ವ್ಯಾಪಾರ ಸಂಪರ್ಕಗಳನ್ನು ಬೆಳೆಸಿ ರಾಜ್ಯದ ಆರ್ಥಿಕಾಭಿವೃದ್ಧಿಯಲ್ಲಿಯೂ ಮುನ್ನಡೆಯಬೇಕಿತ್ತು. ದುರದೃಷ್ಟವಶಾತ್ ಈಗ ತೃತೀಯ ಯೋಜನೆಯ ಪಟ್ಟಿಯಲ್ಲಿ ಸೇರುವುದಕ್ಕೂ ಇನ್ನೂ ಮೀನ—ಮೇಷ ಎಣಿಸುತ್ತಿವೆ, ಕರ್ನಾಟಕದ ಅಭಿವೃದ್ಧಿ ಯೋಜನೆಗಳು. ಯೋಜನೆಯ ಕರಡುಪ್ರತಿಯನ್ನು ತಯಾರಿಸುತ್ತಿರುವ ಈ ಕಾಲದಲ್ಲಿ ಕೈಬಿಟ್ಟರೆ ನಂತರ ಇದು ಕೈಗೂಡುವ ಪರಿಸ್ಥಿತಿ ಒದಗಿಬರುವುದೋ, ಇಲ್ಲವೋ ಎಂಬ ಶಂಕೆಯು ತಲೆದೋರುವುದು.

ಕನ್ನಡನಾಡಿನ ಸಾರಿಗೆ ಸಂಪರ್ಕ ಆದ್ಯ ಅಗತ್ಯಗಳಾದ ಮಂಗಳೂರು—ಕಾರವಾರ ಬಂದರುಗಳ ನಿರ್ಮಾಣ, ರಾಜ್ಯ ಮಧ್ಯಭಾಗದಿಂದ ಪಶ್ಚಿಮ ಕರಾವಳಿ ಬಂದರಿಗೆ ಅಗತ್ಯವಾಗಿ ಬೇಕಾದ ರೈಲುಮಾರ್ಗ, ಹುಬ್ಬಳ್ಳಿ ವಿಮಾನನಿಲ್ದಾಣ ಇವು ವಿಶೇಷ ವಿನಿಮಯ ಪಡೆಯಲು ಬೇಕಾದ ಬಹುಮುಖ್ಯ ಆಶೋತ್ತರ ಪೂರೈಕೆಗಳು.

ಕಳೆದ ಯೋಜನೆಗಳಲ್ಲಿ ಕರ್ನಾಟಕದ ಈ ಸಾರಿಗೆ ಸಂಪರ್ಕಕ್ಕೆ ಏಕೆ ಮಾನ್ಯತೆ ಕೊಡಲಿಲ್ಲವೆಂಬುದು ಊಹಿಸಲಾರದ ಸಮಸ್ಯೆ! ಅಂತೆಯೇ ಇಂದಾದರೂ ಈ ಮುಖ್ಯ ಅಂಶಗಳನ್ನು ಒತ್ತಾಯದಿಂದ ಲಾದರೂ ಅನುಷ್ಠಾನಕ್ಕೆ ತರುವ ಕಾರ್ಯ ಏಕೆ ಹಿಂಚು—ಮುಂಚು ಆಗುತ್ತದೆಯೆಂಬುದು ಅನೇಕರ ಇಂದಿನ ಸಮಸ್ಯೆ.

ಈ ಅತ್ಯವಶ್ಯಕ ಸಾರಿಗೆ ಸಂಪರ್ಕದ ಕಾರ್ಯಕ್ಕೆ ಮೊಟ್ಟಮೊದಲು ಕೈಹಾಕಿದವರು ಶತಾಯುಷಿ—ಭಾರತರತ್ನ ಸರ್. ಎಂ. ವಿ. ಅಂದು ಪ್ರಾರಂಭಿಸಿದ ಈ ಯೋಜನೆ ಅವರ ಆಡಳಿತದಲ್ಲೇ ಕಾರ್ಯರೂಪಕ್ಕೆ ಬಂದಿದ್ದರೆ ಅವು ಇಂದಿನ ಭದ್ರಾವತಿ, ಕೃಷ್ಣರಾಜಸಾಗರ, ಜೋಗ ಜಲಪಾತದಂತೆ ಕರ್ನಾಟಕ ಮುನ್ನಡೆಯ ರಹದಾರಿಗಳಾಗುತ್ತಿದ್ದುದರಲ್ಲಿ ಸಂಶಯವಿಲ್ಲ. ಸರ್. ಎಂ. ವಿ. ಬಿಟ್ಟ ಅಂದಿನ ಮಾತು ಇಂದಿಗೂ ಕನ್ನಡಿಗರಿಗೆ ಕನಸಾಗಿ ಉಳಿದಿದೆ! ಇನ್ನು ಇದರ ಜನ್ಮದಾತನಾಗಿ ಯಾವ ಪುಣ್ಯಾತ್ಮ ಅವತರಿಸುತ್ತಾನೋ ಈಕ್ಷಿಸುವ ಪರಿಸ್ಥಿತಿ ಬಂದೊದಗಿದೆ.

ಸಂಸ್ಥಾನದ ಒಳಭಾಗದಿಂದ ರೈಲುಮಾರ್ಗವನ್ನು ಪಶ್ಚಿಮ ತೀರದ ಅನುಕೂಲವಾದ ಬಂದರಿನೊಡನೆ ಹೀಗೆ ಅರಸೀಕೆರೆಯಿಂದ ಹಾಸನದ ಮಾರ್ಗವಾಗಿ ಮಂಗಳೂರಿಗೆ ರೈಲುಮಾರ್ಗ ಹಾಕುವುದರಿಂದ ಒಳನಾಡಿನ ವ್ಯಾಪಾರ—ವಾಣಿಜ್ಯವನ್ನು ಇತರ ಪಾಶ್ಚಾತ್ಯ ರಾಷ್ಟ್ರಗಳೊಡನೆ ನಡೆಸಲು ಅನುಕೂಲಿಸುವುದು.

ಹಾಗೂ ಈಗಿರುವ ಮಂಗಳೂರು ಬಂದರಿನಲ್ಲಿ ಮಳೆಗಾಲ ಶುರುವಾದಂದಿನಿಂದ ಎಂದರೆ ಜೂನ್ ತಿಂಗಳಿಂದ ಡಿಸೆಂಬರ್ ಆಖೇರಿಯವರೆಗೂ ಹಡಗಿನ ಸಂಚಾರ ಕೈದಾಗುವುದನ್ನು ತಪ್ಪಿಸಲು ಸರ್ವಋತು ಬಂದರಾಗಿ ಪರಿವರ್ತಿಸುವುದರಿಂದ ವರ್ಷದ ಎಲ್ಲಾ ಕಾಲದಲ್ಲೂ ವಾಣಿಜ್ಯ ಸಂಪರ್ಕ ಯಥೇಚ್ಛವಾಗಿ ಸಾಗುತ್ತದೆ.

ಭಟ್ಕಳಕ್ಕೆ ಪಶ್ಚಿಮ ಘಟ್ಟಗಳಿಂದ ಶಿವಮೊಗ್ಗ ಮೂಲಕ ರೈಲು ಹಾಕುವುದನ್ನೂ, ಭಟ್ಕಳವನ್ನು ರೇವು ಪಟ್ಟಣವಾಗಿ ಮಾಡುವುದನ್ನೂ ಸರ್ ಎಂ. ವಿ ಅಂದೇ ಆಲೋಚಿಸಿದ್ದರು. ಆದರೆ ಬ್ರಿಟಿಷ್ ಆಡಳಿತದಲ್ಲಿದ್ದ ಅಂದಿನ ಪರಿಸ್ಥಿತಿ ಹೊಂದಿಬರದೆ ಆಲೋಚನೆ ಅಲ್ಲಿಗೆ ನಿಂತಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಮಾಡಿದ ಆಲೋಚನೆ ಸ್ವಾತಂತ್ರ್ಯೋತ್ತರದಲ್ಲಿ ಕೃತಿರೂಪಕ್ಕೆ ತರಲು ವಿಶ್ವೇಶ್ವರಯ್ಯ ಅಂದಿನ ಪರಿಸ್ಥಿತಿಯ ಅಧಿಕಾರದಲ್ಲಿದ್ದರೆ ಈ ಯೋಜನೆಗಳೆಲ್ಲಾ ಎಂದೋ ಮುಗಿಯುತ್ತಿದ್ದವು. ಎಂದರೆ ಈ ಬಗ್ಗೆ ಕರ್ನಾಟಕದಲ್ಲಿ ಆಸಕ್ತಿ ತಳೆದವರಾರೂ ಇಲ್ಲವೇ? ಎಂದು ಮೂಗುಮುರಿಯುವಂತಾಗಿದೆ. ಇತರ ರಾಜ್ಯಗಳ ಹಲವಾರು ಬೇಡಿಕೆಗಳಿಗೆ ಪುರಸ್ಕಾರ ದೊರೆತರೂ ಕರ್ನಾಟಕದ; ರಾಷ್ಟ್ರದ ಬಹುಶೀಘ್ರ ಪ್ರಗತಿಗೆ ಕಾರಣವಾದ ಕೆಲವೇ ಬೇಡಿಕೆಗಳನ್ನು ಕಡೆಗಾಣಿಸಲ್ಪಡಲು ಕಾರಣವೇ ತಿಳಿದಿಲ್ಲ.

ಕನ್ನಡಿಗರ ಕೂಗಿಗೆ ಕಿವಿಕೊಟ್ಟು ರಾಜ್ಯದ ಅಭಿವೃದ್ಧಿ ಮಂಡಳಿ ಇದೀಗ ತೃತೀಯ ಯೋಜನೆಯ ಕರಡುಪ್ರತಿಯಲ್ಲಿ ಈ ಅಭಿವೃದ್ಧಿ ಕಾರ್ಯಗಳ ಸೇರುವಿಕೆಗೆ ಪ್ರಯತ್ನಪಡುತ್ತಿದೆ. ಇದು ಸ್ವಾಗತಾರ್ಹ. ಕೈಹಿಡಿದ ಕಾರ್ಯ ಪರಿಣಾಮಕಾರಿಯಾಗಿ ಸಾಧಿಸುವಂತೆ ಮಾಡುವುದು ಆಳುವವರ ಕರ್ತವ್ಯ. ಕನ್ನಡಿಗರ ಈ ಕೋರಿಕೆಗಳಿಗೆ ಹೆಚ್ಚಿನ ಮನ್ನಣೆಯಿತ್ತು ಕಾರ್ಯಮಗ್ನರಾಗಬೇಕು.

ಈ ಬಗ್ಗೆ ತೃತೀಯ ಯೋಜನೆಯಲ್ಲಿ ಕಡ್ಡಾಯವಾಗಿ ಸೇರಿಸಲು ತೀವ್ರ ಒತ್ತಾಯ ಅಗತ್ಯ.

ಯೋಜನೆಗಳು ಆರ್ಥಿಕ ಅಭಿವೃದ್ಧಿಯ ತಳಹದಿಯೆಂಬುದು ಸರ್ವವೇದ್ಯ. ಎಂದ ಮೇಲೆ—ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಉಪಯುಕ್ತ ಹಾಗೂ ಅವಶ್ಯವಾದ ಕಾರ್ಯಗಳನ್ನೂ ಸ್ವೀಕರಿಸುವುದು ಕೇಂದ್ರ ಶಾಸಕರಿಗೂ ಒಪ್ಪುವ ಮಾತು ಎಂಬುದು ನಿರ್ವಿವಾದ.

ಸರ್ವಾನುಮತದಿಂದ ಈ ನಿರ್ಣಯಗಳನ್ನು ಶಾಸಕ ಸಭೆ ಸ್ವೀಕರಿಸಿದೆ. ಇನ್ನು ಉಳಿದಿರುವುದು ಯೋಜನೆಯ ಅಂತಿಮ ಸ್ವರೂಪದಲ್ಲಿ ಸೇರಿಸುವುದರ ಒತ್ತಾಯದ ಬೇಡಿಕೆ ಮಾತ್ರ. ತೃತೀಯ ಯೋಜನೆಯಲ್ಲಿ ಯಾವುದೇ ಕೈಬಿಟ್ಟರೂ; ಮಂಗಳೂರನ್ನು ಸರ್ವಋತು ಬಂದರಾಗಿಸುವುದು, ಕಾರ್ವಾರನ್ನು ಮಧ್ಯಮ ಬಂದರಾಗಿಸುವುದು, ಹಾಸನ ಮಂಗಳೂರಿನ ರೈಲುಮಾರ್ಗ, ಹುಬ್ಬಳ್ಳಿ ಕಾರ್ವಾರದ ರೈಲುಮಾರ್ಗ ಯೋಜನಾಭಿವೃದ್ಧಿಯು ಅತ್ಯಂತ ಅವಶ್ಯ ಬೇಡಿಕೆಯಾಗಲೇಬೇಕು.

ಭಾರತ ವರ್ಷದಲ್ಲಿ ಕಡಲ ತೀರವಿದ್ದೂ ಬಂದರಿಲ್ಲದ ಎರಡು ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಇದೇ ಸೌಕರ್ಯ ಇತರ ಪಾಶ್ಚಾತ್ಯ ರಾಷ್ಟ್ರಗಳಿಗಿದ್ದಿದ್ದರೆ ಪ್ರಖ್ಯಾತ ಬಂದರುಗಳು ನಿರ್ಮಾಣಗೊಳ್ಳುತ್ತಿತ್ತು. ರಾಜ್ಯದಲ್ಲಿ ಖನಿಜ ಸಂಪತ್ತಿಗೇನೂ ಕೊರತೆಯಿಲ್ಲ ಹೆಚ್ಚು ಅನುಕೂಲವಿಲ್ಲದಿದ್ದಾಗ್ಯೂ ಮ್ಯಾಂಗನೀಸ್, ಕಬ್ಬಿಣದ ಅದುರು ಮುಂತಾದ ಖನಿಜ ಸಂಪತ್ತು, ಅರಣ್ಯಸಂಪತ್ತು ಹೊರದೇಶಗಳಿಗೆ ರಫ್ತಾಗುತ್ತಲೇ ಇದೆ.

ಇಷ್ಟೆಲ್ಲ ಮಹತ್ವಪೂರ್ಣ ಕಾರಣಗಳಿದ್ದಾಗ್ಯೂ; ತೃತೀಯ ಯೋಜನೆಯ ಕರಡು ಪ್ರತಿಯಲ್ಲಿ ಸಣ್ಣ ಬಂದರುಗಳ ಅಭಿವೃದ್ಧಿ ಕಾರ್ಯಗಳಿಗಾಗಿ ಕೇವಲ ಮೂರುವರೆ ಕೋಟಿ ಮಾತ್ರ ಹಂಚಿರುವುದು ಶೋಚನೀಯ. ಮಂಗಳೂರಿನ ಸರ್ವಋತು ಬಂದರಿನ ಅಭಿವೃದ್ಧಿಗಾಗಿ ಸುಮಾರು ಹತ್ತು ಕೋಟಿ ರೂ.ಗಳು ಬೇಕೆಂದು ಅಂದಾಜು ಮಾಡಿರುವಾಗ ಮೂರುವರೆ ಕೋಟಿ ಯಾವ ಮೂಲೆಗೆ?

ಕರ್ನಾಟಕದ ಸಾರಿಗೆ ಸಂಪರ್ಕಕ್ಕೆ ಅತ್ಯಗತ್ಯವಾಗಿ ಬೇಕಾದ, ಕನ್ನಡಿಗರ ಅನೇಕ ದಿನಗಳ ಈ ಆಶೋತ್ತರಗಳನ್ನು ಕಾರ್ಯಗತಗೊಳಿಸುವ ಪೂರ್ಣಹೊಣೆ ಅಭಿವೃದ್ಧಿ ಮಂಡಳಿಯ ಮೇಲಿದೆ. ಸಮಸ್ಯೆಗಳನ್ನು ನಿರೀಕ್ಷಿಸುವುದಕ್ಕಿಂತ ವೀಕ್ಷಿಸಲು ತೊಡಗುವುದು ಲೇಸು. ಔಷಧಿ ಕುಡಿಯುವುದು ರೋಗಿಯ ಕರ್ತವ್ಯ ಔಷಧಿ ರೋಗಿಗೆ ಕೊಡುವುದು ವೈದ್ಯನ ಕರ್ತವ್ಯ ಎರಡೂ ಕರ್ತವ್ಯಗಳೆ ಆದರೂ ಇದರಲ್ಲಿ ಮುಖ್ಯ ಹೊಣೆ ಯಾರದು? ಎಂಬ ಸಮಸ್ಯೆಯನ್ನು ವಿಮೋಚಿಸಿಯೇ ನಾವಿಂದು ಕರ್ತವ್ಯಪಾಲಕರಾಗಬೇಕಾಗಿದೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 275/1956;
R. I. A. 1114/1958
R. E. P. 37 of 1960.

P. ಗುರುರಾಜಾಚಾರ್ಯ—ಅರ್ಜಿದಾರ

ಮತ್ತು

ಪೊಳಿನಾಯ ವ್ಯಾಸಪ್ರಿಯ ಕೂಡಾ – ಎದುರು ಅವರೊಳಗೆ—

3ನೇ ಎದು:— ಲಕ್ಷ್ಮಿ ಅಮ್ಮ— ವೆಂಕಟ್ರಮಣ ಸರಳಾಯರ ಮಗಳು— ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮ—ಇವರಿಗೆ—

ಮೇಲ್ಕಂಡ ಅಮಲ್ಜಾರಿಯಲ್ಲಿ ಅರ್ಜಿದಾರನು ಹಾಜರುಪಡಿಸಿದ ಇಸ್ತಿಹಾರಿನ ಶರತ್ತುಗಳನ್ನು ನಿಶ್ಚಯಿಸುವರೆ ತಾರೀಕು 14–10–1960 ಕ್ಕೆ ಇಟ್ಟಿರುತ್ತದೆ ಆಕ್ಷೇಪಣೆಯೇನಾದರೂ ಇದ್ದರೆ ಆ ದಿನ್ನ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪ ಮಾಡಿಕೊಳ್ಳಬಹುದು.

K. Ramakrishna Rao,
Vakil for Petitioner.
Udipi, Dated 26—9—1960.

---

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಚೇರಿ : ಉಡುಪಿ, ದ. ಕನ್ನಡ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.

ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆಂಟ್, ಚಿಕ್ಕಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಬಡ್ಡಿ ದರಗಳು.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ಸದ್ಯದಲ್ಲೇ ತೆರೆಯಲ್ಪಡುವ ಶಾಖೆಗಳು:—

ಭದ್ರಾವತಿ — ತುಮಕೂರು.

ಹಾರ್ಮೋನಿಯಮ್ ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಬುಕ್ ಡಿಪೊ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಜನಜೀವನ

ಚಿತ್ರವಿಚಿತ್ರ ದೇಶ ನೈಜೀರಿಯಾ

ಮೊನ್ನೆ ಮೊದಲನೆ ದಿನಾಂಕ ಸ್ವತಂತ್ರವಾದ ನೈಜೀರಿಯಾದ ಜನರಲ್ಲಿ ಚಿತ್ರವಿಚಿತ್ರ ಜೀವನ ಕ್ರಮವಿದೆ. ಇವನ್ನು ತಿಳಿದಾಗ ನಮಗೆ ವಿಸ್ಮಿತವೂ ವಿಸ್ಮಯವೂ ಏಕಕಾಲದಲ್ಲಿ ಉಂಟಾಗುವುವು.

ಭಾರತದ ಮೂರರಲ್ಲೊಂದು ಭಾಗದಷ್ಟು ವಿಸ್ತಾರವಿರುವ ನೈಜೀರಿಯಾವು ಒಂದು ವಿಚಿತ್ರ ದೇಶವಾಗಿದೆ. ಇಲ್ಲಿನ ಮೂರೂವರೆ ಕೋಟಿ ಜನರು ೨೫೦ಕ್ಕೂ ಮಿಕ್ಕಿದ ಕೋಮುಗಳಲ್ಲಿ ಹಂಚಿ ಹೋಗಿದ್ದಾರೆ. ರೀತಿ—ರಿವಾಜು, ಆಚಾರ—ವಿಚಾರ, ಮಾತುಗಾರಿಕೆ ಎಲ್ಲವಲ್ಲಿಯೂ ಇವುಗಳಲ್ಲಿ ಭಿನ್ನತೆಯಿದೆ. ಪ್ರಾಚೀನ—ಅರ್ವಾಚೀನತೆಗಳು ಇಲ್ಲಿ ಸಹ ಅಸ್ತಿತ್ವದಲ್ಲಿವೆ. ಲಂಡನ್ ವಿಶ್ವವಿದ್ಯಾಲಯಕ್ಕೆ ಸಂಬದ್ಧವಾದ ವಿಶ್ವವಿದ್ಯಾಲಯ ಕಾಲೇಜಿನ ಆವರಣಕ್ಕೆ ಕಾಲಿಟ್ಟರೆ, ಆತ ಆಫ್ರಿಕೆಯ ಒಂದು ಕಾಲೇಜಿನಲ್ಲಿ ತಾನಿರುವೆನೆಂಬುದನ್ನೇ ಮರೆಯುತ್ತಾನೆ. ಆದರೆ, ಅಲ್ಲಿಂದ ಕೆಲವೇ ಮೈಲುದೂರ ನಡೆದರೆ, ನಗೆ-ನಾಚಿಗೆ, ಬಟ್ಟೆಬರೆಗಳೆಂದರೇನೆಂಬರಿಯದ ಜನರು ಬಾಹ್ಯ ಪ್ರಪಂಚದ ಗೋಜಿಗೆ ಹೋಗದೆ ಜೀವಿಸುತ್ತಿರುವುದನ್ನೂ ಕಾಣಬಹುದು. ಇಂತಹ ವಿಚಿತ್ರ ದೇಶವೊಂದರಲ್ಲಿನ ವೈಚಿತ್ರ್ಯಗಳನ್ನು ಅರಸ ಹೊರಡುವವನಿಗೆ ವಿಷಯ ದೊರೆಯದಿರುವುದು ಅಸಾಧ್ಯ.

ಪ್ರಪಂಚದಲ್ಲಿ ಮೋಟರು ಕಾರುಗಳ ಬೇಡಿಕೆ ಹಾಗೂ ಪ್ರಚಾರ ಅಮೇರಿಕೆಯಲ್ಲಿ ಹೆಚ್ಚೆಂದು ಎಲ್ಲರೂ ಬಲ್ಲರು. ಆದರೆ, ಸೈಕಲುಗಳ ದೇಶ ನೈಜೀರಿಯಾವೆಂದು ತಿಳಿದವರು ಅದೆಷ್ಟು ಮಂದಿ? ಇಲ್ಲಿನ ಯುವಕರಲ್ಲಿರುವ ಏಕಮೇವ ಅಭಿಲಾಷೆಯೆಂದರೆ, ಒಂದೇ ಒಂದು ಸೈಕಲ್ ಕೊಂಡುಕೊಳ್ಳುವುದೇ ಆಗಿದೆ. ಇದರಿಂದಾಗಿ ಕೋಟ್ಯಂತರ ರೂಪಾಯಿಗಳನ್ನು ತೆತ್ತು ಬ್ರಿಟನ್ನಿನಿಂದ ಲಕ್ಷಾಂತರ ಸೈಕಲುಗಳನ್ನು ಇದು ಆಯಾತ ಮಾಡುತ್ತದೆ. ಮೋಟಾರು, ರೇಲು ಗಾಡಿಗಳ ಅಭಾವವೇ ಸೈಕಲ್ (ದ್ವಿಚಕ್ರ ವಾಹನ) ಪ್ರಿಯತೆ ಬೆಳೆಯಲು ಕಾರಣವಾಯಿತೆನ್ನುವುದು ನಿಜ.

ಆಫ್ರಿಕವು ಗ್ರಾಮ ಸಮುದಾಯವೆಂದು ಕರೆಯಲ್ಪಡುತ್ತದೆ. ಏಕೆಂದರೆ, ಈ ಭೂಖಂಡದ ಜನರಲ್ಲಿ ಅತ್ಯಧಿಕರು ಗ್ರಾಮಗಳಲ್ಲಿಯೇ ವಾಸಿಸುತಿದ್ದಾರೆ. ಈ ಹಳ್ಳಿಗಳಲ್ಲಿ ಹೆಚ್ಚಿನವು ವರ್ತಮಾನ ಕಾಲಿಕ ನಾಗರಿಕ ಪ್ರಕಾಶದಿಂದ ಅದೆಷ್ಟೋ ದೂರವಿದ್ದಾರೆ. ಇಡಿ ಖಂಡದಲ್ಲೇ ಬೆರಳೆಣಿಕೆಯಷ್ಟು ನಗರಗಳಿದ್ದು ಇವೂ ಉತ್ತರ ಕರಾವಳಿಯಲ್ಲಿ (ಕೈರೊ ಆಲ್ಜೀರಿಯಾ ಆದಿ) ಮತ್ತು ದಕ್ಷಿಣ ಆಫ್ರಿಕೆಯಲ್ಲಿ (ಕೇಪ್ ಟೌನ್, ಜೋಹನ್ಸ್ ಬರ್ಗ ಆದಿ)ವೆ. ಆದರೆ, ನೈಜೀರಿಯಾದಲ್ಲಿ ಎರಡು ಮಹಾ ನಗರಗಳಿವೆ. ದೇಶದ ರಾಜಧಾನಿ ಲಾಗೋಸ್‌ನ ಜನಸಂಖ್ಯೆ ಮೂರೂವರೆ ಲಕ್ಷದಷ್ಟಿದೆ. ಪಶ್ಚಿಮ ಪ್ರದೇಶದ ರಾಜಧಾನಿ ಈ ಬಾಹದನವು ನೈಜೀರಿಯಾದ ಬಹುದೊಡ್ಡ ಮತ್ತು ಆಫ್ರಿಕೆಯ ಬಹು 'ಕರಿಯ' ನಗರವಾಗಿದೆ. ಐದು ಲಕ್ಷಕ್ಕಿಂತಲೂ ಹೆಚ್ಚು ಜನರಿಲ್ಲಿದ್ದಾರೆ. ಇವಲ್ಲದೆ ಇನ್ನು ಐದು ನಗರಗಳ ಜನ ಸಂಖ್ಯೆ ಒಂದು ಲಕ್ಷಕ್ಕೂ ಮಿಕ್ಕಿದೆ ಮತ್ತು ನಾಲ್ಕರ ಜನಸಂಖ್ಯೆ ಒಂದು ಲಕ್ಷಕ್ಕೆ ಸಮೀಪದಲ್ಲಿದೆ. ಆಫ್ರಿಕೆಯ ಯಾವುದೇ ಬೇರೆದೇಶದಲ್ಲಿ ಇಷ್ಟೊಂದು ಒಳ್ಳೆಯ ದಾಖಲೆಯಿರುವುದಿಲ್ಲ.

ನೈಜೀರಿಯಾದ ಪೂರ್ವ ಪ್ರದೇಶದ ಕೆಲ ವಂಶಗಳ ನವಯುವಕರು 'ತಿದ್ದಿ ಬೆಳೆದ' ತೋರ ಹುಡುಗಿಯರನ್ನು ಮೆಚ್ಚುತ್ತಾರೆ. ವಿವಾಹಕ್ಕೆ ಮೊದಲು ಅವರನ್ನು ತೋರವಾಗಿ ಬೆಳೆಯಿಸುವ ಪ್ರಯತ್ನ ನಡೆಯುತ್ತದೆ ನಿಯತ ದಿನಕ್ಕೆ ಕೆಲವು ಮಾಸಗಳಿಗೆ ಮೊದಲು ಆ ಹುಡುಗಿಯನ್ನು ಪ್ರತ್ಯೇಕ ಓವರಿಯೊಂದರಲ್ಲಿರಿಸುತ್ತಾರೆ. ಆಕೆಯ ಆಹಾರವೆಲ್ಲವೂ ಅಲ್ಲಿಯೇ ನೀಡಲ್ಪಡುತ್ತವೆ. ದಿನನಿತ್ಯ ಎಣ್ಣೆ ಹಚ್ಚಿ ಸ್ನಾನಮಾಡಿಸುತ್ತಾರೆ. ಅಲ್ಲಿ ಕೂತಿರುವಂತೆಯೇ ಮನೆಯ ಎಲ್ಲ ಕೆಲಸಗಳನ್ನೂ ಆಕೆಗೆ ಕಲಿಸಲಾಗುತ್ತದೆ. ಇದೇ ರೀತಿ ನಡೆದು ವಿವಾಹದ ದಿನಕ್ಕೆ ಆಕೆ 'ತೋರ'ವಾಗಿ ಬಿಡುತ್ತಾಳೆ.

ಉತ್ತರ ಪ್ರದೇಶದಲ್ಲಿರುವ ಮೂವತ್ತು ಲಕ್ಷ ಫುಲಾನಿಯರಲ್ಲಿಯೂ ತೋರ ಹುಡುಗಿಯರನ್ನು ತೆಳ್ಳಗಿನ ಹುಡುಗಿಯರಿಂತ ಪತಿ ಪಡೆಯಬಲ್ಲ. ಹಿಂದಿನಕಾಲದಲ್ಲಿ ನೈಜೀರಿಯಾದ ಶ್ರೀಮಂತನು ಯುವತಿಯನ್ನರಸಬಯಸಿದರೆ, ಆತ ಅವರನ್ನು ಗೋಡೆಗೆ ಮುಖಮಾಡಿ ಸಾಲಾಗಿ ನಿಲ್ಲಿಸುತ್ತಿದ್ದ. ಆಗ ಹಿಂಗಡೆ ನೋಡಿ ಅತಿ 'ದಪ್ಪ'ದ ಹುಡುಗಿಯನ್ನೇ ಆರಿಸಿಕೊಳ್ಳುತಿದ್ದ. ನೈಜೀರಿಯಾ ನರಲ್ಲಿ ಫುಲಾನೀ ಜನರು ಬಹು ಬಲವಂತರು. ಇವರು ಶತಮಾನಾಂತರಕ್ಕೆ ಮೊದಲು ಉತ್ತರ ಆಫ್ರಿಕದಿಂದ ನೈಜೀರಿಯಾದ ಮೇಲೆ ಆಕ್ರಮಣಮಾಡಿ, ಅಲ್ಲಿ ಸಾಮ್ರಾಜ್ಯ ಸ್ಥಾಪಿಸಿದ್ದರು. ಇವರ ಪೂರ್ವಜರು ವೀರ್ಯಕ್ಕಾಗಿ ಹೆಸರು ವಾಸಿಯಾಗಿದ್ದರು. ಆ ಕಾಲದಲ್ಲಿ ಇವರಲ್ಲೊಂದು ವಿಚಿತ್ರ ಪದ್ಧತಿಯಿತ್ತು. ಅವರ ರಾಜನು ವೃದ್ಧಾಪ್ಯದ ಅಥವಾ ಯಾವುದೇ ರೋಗದ ಕಾರಣದಿಂದಾಗಿ, ಅಶಕ್ತನಾಗಿದ್ದರೆ, ಅವನನ್ನು ಜೀವಂತ ಕೊಂದು ಹಾಕುತಿದ್ದರು. ರಾಜನು ತಮ್ಮ ಕುಲದ ಶಕ್ತಿದ್ಯೋತಕನೆಂದವರು ತಿಳಿದಿದ್ದರಲ್ಲದೆ ಆತ ನಿಶ್ಶಕ್ತನಾಗುವುದನ್ನು ಸಹಿಸುತ್ತಿರಲಿಲ್ಲ.

ಇಂದಿನ ಫುಲಾನಿಯಾವರ ರೀತಿ-ನೀತಿಗಳೂ ಇದನ್ನೇ ಪ್ರಮಾಣೀಕರಿಸುತ್ತವೆ. ಓರ್ವ ಹುಡುಗ ಯುವಕನಾದನೇ ಇಲ್ಲವೇ ಎಂದವರು ನಡೆಸುವ ಪರೀಕ್ಷೆಯೊಂದು ಕುತೂಹಲಕಾರಿಯಾಗಿದೆ. ಪರೀಕ್ಷಾರ್ಥಿಯು ಯಾವುದೇ ಒಂದು ಪ್ರಾಣಿಯ ಕೊಂಬುಗಳನ್ನು ತಲೆಯಲ್ಲಿಟ್ಟು ನಿಂತುಕೊಳ್ಳುತ್ತಾನೆ. ಅನಂತರ ಆತನ ನಗ್ನ ಶರೀರದ ಮೇಲೆ ಇತರರು ಕೊರಡೆಯಿಂದ ಬಾರಿಸುತ್ತಾರೆ; ಆತ ನಗುತ್ತಿರುತ್ತಾನೆ. ಆತನು ಧರಿಸಿದ ಕೊಂಬೂ ಕೆಳಗುರುಳುವುದಿಲ್ಲ ಎಲ್ಲರೂ ಹೊಡೆದಾದ ನಂತರ ಯುವತಿಯರ ಒಂದು ಗುಂಪು ಬಂದು, ಆತನ ಸಹನಾ ಶೀಲತೆಯನ್ನು ಪ್ರಶಂಸಿಸುತ್ತಾರೆ. ಮೂರು ಬಾರಿ ಕೊರಡೆ ಏಟು ಕೊಡುವ ಕಾರ್ಯ ಮುಗಿದ ಬಳಿಕ ಕೆಲ ಜನರು ಮುಂಬಂದು ಆತನ ಹಣೆಯನ್ನು ನಿರೀಕ್ಷಿಸುತ್ತಾರೆ. ಅದರಲ್ಲಿ ಬೆವರಿನ ಒಂದೇ ಒಂದು ಬಿಂದು ಕಂಡು ಬಂದಿತೆಂದರೆ, ಹುಡುಗನ ಶ್ರಮವೆಲ್ಲ ವ್ಯರ್ಥವಾಗಿ ಆತ ಪರೀಕ್ಷೆಯಲ್ಲಿ ಅನುತ್ತೀರ್ಣನಾಗುತ್ತಾನೆ. ಪ್ರತಿ ಹುಡುಗನೂ ಪುರುಷತ್ವ ಪ್ರಾಪ್ತಿಗಾಗಿ ಈ ಪರೀಕ್ಷೆಗೆ ಗುರಿಯಾಗಲೇಬೇಕು. ಪರೀಕ್ಷಾರ್ಥಿಗಳಲ್ಲಿ ಕೆಲವರು ಸರೀ

(೯ನೇ ಪುಟ ನೋಡಿ)

ಹನ್ನೊಂದನೇ ಟಿ. ಬಿ. ಮುದ್ರೆ ಮಾರಾಟದ ಚಳವಳ

(ಅಕ್ಟೋಬರ 2ರಿಂದ ಜನವರಿ 26ರ ವರೆಗೆ)

(ಟ್ಯೂಬರ್ ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯ, ನ್ಯೂ ಡಿಲ್ಲಿ, ಇವರಿಂದ ಪ್ರಾರಂಭಿಸಲ್ಪಟ್ಟದ್ದು)

ಅಕ್ಟೋಬರ 2ರಿಂದ ಮಾರಾಟಕ್ಕಿರುವ ಹೊಸ ಟಿ. ಬಿ. ಮುದ್ರೆ.



ಕ್ಷಯರೋಗವು ಭಾರತದಲ್ಲಿಯ ಹಲವು ಕುಟುಂಬಗಳ ಹೃದಯಗಳನ್ನೇ ಕೀಳುತ್ತದೆ. ಈ ರೋಗದಿಂದ ನರಳುವ ವಿಪುಲ ಜನಸಮುದಾಯದ ಕತೆಯನ್ನು ಕೇಳಲು ವಿಷಾದವಾಗುತ್ತದೆ. ವರ್ಷಂಪ್ರತಿ ಕ್ಷಯ ರೋಗದಿಂದ ಅನೇಕರು ಮರಣಪಡುತ್ತಾರೆ. ಇನ್ನೂ ಹೆಚ್ಚಿನ ಜನರು ಈ ರೋಗ ಪೀಡಿತರಾಗಿದ್ದರೂ ತಾವದಕ್ಕೆ ಬಲಿಯಾಗಿದ್ದೇವೆಂಬುದನ್ನು ಅರಿಯಲಾರದವರಾಗಿದ್ದಾರೆ. ಅವರೆಲ್ಲರಿಗೂ ಸಹಾಯ ಬೇಕಾಗಿದೆ.

ನೀವು, ಯಥಾರ್ಥವಾಗಿಯೂ ಅವರಿಗೆ ಸಹಾಯ ಮಾಡಬೇಕೆಂದಿರುವಿರಿ. ಕ್ಷಯ ರೋಗ ಮುದ್ರೆಯ ಚಳವಳಕ್ಕೆ ಪ್ರೋತ್ಸಾಹ ಕೊಡುವುದೇ ನೀವು ಅವರಿಗೆ ಸಹಾಯ ನೀಡಬಹುದಾದ ಅತ್ಯುತ್ತಮ ಮಾರ್ಗವಾಗಿದೆ. ಅದು ನಿಧಿಯನ್ನು ತರುತ್ತದೆ, ಮತ್ತು ಜನತೆಗೆ ತಿಳುವಳಿಕೆಯನ್ನು ಕೊಡುತ್ತದೆ. ಈ ಸಂದರ್ಭದಲ್ಲೇ ಅದು ಅಂಥಾ ದುರ್ದೈವಿ ರೋಗಿಗಳಿಗೆ ಸಹಾಯ ಮಾಡುವ ಟಿ. ಬಿ. ಸಂಸ್ಥೆಗಳನ್ನೂ ಬಲಗೊಳಿಸುತ್ತದೆ.

ಕ್ಷಯ ರೋಗ ಮುದ್ರೆಗಳನ್ನು ಖರೀದಿಸಿ ನಿಮ್ಮ ಪತ್ರಗಳಿಗೆ ಅಂಟಿಸಿರಿ.
ಒಂದು ಮುದ್ರೆಯ ಬೆಲೆ ಹತ್ತು ನಯೇಪೈಸೆ ಮಾತ್ರ.

ಟಿ. ಬಿ. ಮುದ್ರೆಗಳು ರಾಜ್ಯದ ಟಿ. ಬಿ. ಸಂಘಗಳಲ್ಲಿಯೂ ಅವುಗಳ ವಿವಿಧ ಏಜನ್ಸಿಗಳಲ್ಲಿಯೂ ಮಾರಾಟಕ್ಕೆ ದೊರೆಯುತ್ತವೆ.

ಈ ಸ್ಥಳದ ಉದಾರ ದಾತೃಗಳು—

ಮೆಸರ್‍ಸ್ ಶಾ ವೆಲ್ಲೇಸ್ ಎಂಡ್ ಕಂಪೆನಿ, ಕಲ್ಕತ್ತಾ.

ನೀವು ಸಾಹಸಿಗಳೆ?

ಸಾಹಸ ಜ್ಯೋತಿಯನ್ನು ಉರಿಸಿಕೊಳ್ಳಿರಿ

ನಿಮ್ಮಲ್ಲಿ ಸಾಹಸವೆಷ್ಟಿದೆಯೆಂಬುದನ್ನು ಪರೀಕ್ಷಿಸಲು ಪ್ರಶ್ನಾವಳಿಯಿಲ್ಲಿದೆ. ಇವನ್ನು ಉತ್ತರಿಸಿ ಅದನ್ನು ಕಂಡುಕೊಳ್ಳಿರಿ. ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ವಿಸಂಚನೆ ಪಡಬೇಡಿರಿ. ಪ್ರಯತ್ನಿಸಿ ಮತ್ತೊಮ್ಮೆ ನೋಡಿರಿ.

"ಸಾಹಸವೇ ಸಫಲತೆಯ ಕೀಲಿ ಕೈ" ಎಂದು ಪರಂಪರಾ ಪ್ರಾಪ್ತವಾಗಿ ನಂಬಿಕೊಂಡು ಬಂದ ನಂಬುಗೆ ನಮ್ಮ ದೈನಂದಿನ ಜೀವನವಾದರೂ ನಮಗಿದನ್ನೇ ತೋರಿಸಿಕೊಡುತ್ತದೆ. ಇಬ್ಬರು ವ್ಯಕ್ತಿಗಳಲ್ಲಿ ಏಕ ಸಮವಾದ ಪರಿಸ್ಥಿತಿ, ಏಕ ಸಮವಾದ ಯೋಗ್ಯತೆ ಮತ್ತು ಏಕ ಸಮನಾದ ಸಾಧನ ಸಂಪತ್ತಿಯಿದ್ದರೂ ಅವರಲ್ಲೊಬ್ಬನು ಏನೇನೋ ಮಾಡಿ ಸಫಲನಾದಾನು; ಮತ್ತೊಬ್ಬನು ವಿಫಲನಾದಾನು. ಇದರಲ್ಲಿ ಸಾಹಸವಿರುವುದು ಮತ್ತು ಇಲ್ಲದಿರುವುದೇ ಕಾರಣವಾಗಿದೆ.

ಆಗ, ನಮ್ಮಲ್ಲಿ ಎಷ್ಟು ಸಾಹಸವಿದೆಯೆಂಬುದನ್ನು ತಿಳಿಯುವ ಲವಲವಿಕೆಯೇಳುವುದು ನ್ಯಾಯವೇ. ಆತ್ಮ ಪರೀಕ್ಷೆಗಾಗಿ ಕೆಲವೊಂದು ಪ್ರಶ್ನೆಗಳನ್ನು ಇಲ್ಲಿ ಕೂಡ ಹಾಕಲಾಗಿದೆ. ನೀವು ಒಂದೊಂದೂ ಪ್ರಶ್ನೆಯನ್ನು ಓದಿ ಅರ್ಥಮಾಡಿಕೊಂಡು "ಹೌದು", ಅಥವಾ "ಇಲ್ಲ" ಎಂಬ ಉತ್ತರವನ್ನು ಬರೆಯಿರಿ:

೧. ನೀವು ವಿವಿಧ ರೀತಿಯ ಅಭಿರುಚಿಗಳು ಹುಟ್ಟುವುದನ್ನು ಮೆಚ್ಚುತ್ತೀರಾ?

೨. ನಿಮ್ಮಲ್ಲಿ ಯಾವುದೇ ಕ್ಲಬ್, ಸೊಸೈಟಿ, ಸಭೆ, ಸಂಘ ಸಂಸ್ಥೆಗಳಲ್ಲಿ ಸೇರಬೇಕೆಂಬ ಬಯಕೆಯಿದೆಯೆ?

೩. ನಿಮ್ಮ ಮಿತ್ರರಿಗೆ ಹೊಸ ಹೊಸ ಕಾರ್ಯಕಲಾಪಗಳ ಬಗ್ಗೆ ಸೂಚನೆಗಳನ್ನಿತ್ತು ಅವರು ಅತ್ತ ಪ್ರಯತ್ನ ನಡೆಸುವಂತೆ ಪ್ರೇರೇಪಣೆ ನೀಡುತ್ತೀರಾ?

೪. ಸಂದರ್ಭವೊದಗಿದರೆ, ಯಾವುದೇ ಅನ್ಯ ಉದ್ಯೋಗ ಮಾಡಲು ನೀವು ಸಿದ್ಧರಿರುವಿರಾ?

೫. ವಿರಾಮದ ದಿನಗಳನ್ನು ಮಾಮೂಲಾಗಿ ಹಟಟಿಗಳಲ್ಲಿ ಕಳೆಯುವುದಕ್ಕಿಂತ ಹೊಸ ವಿಧಾನದಲ್ಲಿ ಕಳೆಯುವುದು ಆನಂದದಾಯಕವೆಂದು ಬಯಸುತ್ತೀರಾ?

೬. ಬದಲಾದ ವಾತಾವರಣವು ನಿಮಗೆ ಮೆಚ್ಚುಗೆಯಾಗುವುದೆ? ಹೊಸ ನಗರಗಳನ್ನು ನೋಡುವುದು, ಹೊಸ ಜನರೊಡನೆ ಸೇರಿಕೊಳ್ಳುವುದನ್ನು ನೀವು ಸ್ವಾಗತಿಸುತ್ತೀರಾ?

೭. ತಿನ್ನುವ ಹೊಸ ಪದಾರ್ಥಗಳನ್ನು ಕಂಡೊಡನೆಯೇ ನೀವು ಅವುಗಳ ರುಚಿಯರಿತುಕೊಳ್ಳಲು ಪ್ರಯತ್ನಿಸುತ್ತೀರಾ?

೮. ನಿಮ್ಮ ನಿರ್ಧಾರಿತ ಕಾರ್ಯಕ್ರಮಗಳಲ್ಲದೆ ವಾಚನಾಲಯ, ಯಂತ್ರ ಕಾರಖಾನೆ ಮೊದಲಾದುವುಗಳಿಗೆ ಹೋಗುವ, ವಿಹಾರಕ್ಕಾಗಿ ಕಣಿವೆಯಲ್ಲಿ ಇಳಿಯುವ, ಬೆಟ್ಟ ಹತ್ತುವ ನೂತನ ಅನುಭವ ಪಡೆಯಲು ನೀವು ಆತುರರಾಗಿದ್ದೀರಾ?

೯. ರೋಮಾಂಚಕ ಕಾರ್ಯಗಳನ್ನು ಅದ್ಭುತ ಸಾಫಲ್ಯಗಳನ್ನು ನೋಡಿ ಉತ್ಸಾಹದಿಂದ ಪುಲಕಿತರಾಗುತ್ತೀರಾ?

೧೦. ಹೊಸ ವಿಧಾನದ ಕಲೆ, ಸಂಗೀತ ಮತ್ತು ನಾಟಕ ಮೊದಲಾದುವನ್ನು ಅರಿತುಕೊಳ್ಳಲು ಮತ್ತು ಅವನ್ನು ಹೊಗಳಲು ಪ್ರಯತ್ನಿಸುತ್ತೀರಾ?

೧೧. ಬಂದಿರುವ ಆಮಂತ್ರಣಗಳನ್ನು ಸ್ವೀಕರಿಸಿ ಆ ಸಮಾರಂಭಗಳಲ್ಲಿ ಭಾಗವಹಿಸಲು ಉತ್ಸುಕರಾಗಿದ್ದೀರಾ?

೧೨. ಬೇರೆಯವರನ್ನು ನೀವಾಗಿಯೇ ಮೊದಲು ಮಾತಾಡಿಸುತ್ತೀರಾ?

೧೩. ನಿಮ್ಮ ಬಗ್ಗೆ ಬೇರೆಯವರು ಇಟ್ಟುಕೊಂಡ ಅಭಿಪ್ರಾಯದಲ್ಲಿ ನಿಮಗೆ ಯುಕ್ತಿಯುಕ್ತ ಮತಭೇದವಿದೆಯೆ?

೧೪. ಕಳೆದ ಒಂದು ವರ್ಷದಲ್ಲಿ ನಿಮಗೆ ಯಾರಾದರೊಬ್ಬ ಹೊಸ ಮಿತ್ರನು ದೊರಕಿರುವನೆ?

೧೫. ಅವಶ್ಯಕತೆ ಕಂಡುಬಂದಾಗ, ನೀವು ಒಬ್ಬರೇ ಕೆಲಸವನ್ನು ಪೂರೈಸಬಲ್ಲಿರಾ?

೧೬. ಹೊಸ ಕೆಲಸ ಮಾಡುವುದರಲ್ಲಿ ಅಥವಾ ಹೊಸ ಕ್ಷೇತ್ರ ತಯಾರಿಸುವಲ್ಲಿ ನಿಮ್ಮ ಸಂಪಾದನೆಯಲ್ಲಿ ಒಂದು ಭಾಗವನ್ನು ವೆಚ್ಚಮಾಡುತ್ತೀರಾ?

೧೭. ಸುಲಭದಲ್ಲಿ ಒಂದು ನಿರ್ಣಯಕ್ಕೆ ಬಂದು, ನೀವು ಅದನ್ನು ಕಾರ್ಯಾನ್ವಿತಗೊಳಿಸುವುದಕ್ಕೆ ತತ್ಪರರಾಗುವಿರಾ?

೧೮. ಸಂದರ್ಭ ಬಂದಾಗ, ನಿಮ್ಮ ಪರಿವಾರ ಮತ್ತು ಮಿತ್ರರ ಅನಾವಶ್ಯಕ ಅಡೆತಡೆಗಳನ್ನು ದೂರು ಮಾಡುವ ಸಾಮರ್ಥ್ಯವಿದೆಯೆ?

೧೯. ನಿಮ್ಮದಕ್ಕಿಂತಲೂ ಮೇಲ್ಮಟ್ಟದಲ್ಲಿ ನೀವು ಆಲೋಚಿಸಬಲ್ಲಿರಾ?

೨೦. ನಿಮ್ಮ ಮನಸ್ಸು ಮತ್ತು ಹೃದಯಗಳನ್ನು ಪರಿಸ್ಥಿತಿಗನುಸಾರವಾಗಿ ಪರಿವರ್ತಿಸಿಕೊಳ್ಳುವಿರಾ?

ಮೇಲಿನ ಇಪ್ಪತ್ತು ಪ್ರಶ್ನೆಗಳಲ್ಲಿ ನೀವು 'ಹೌದು' ಎಂದು ಉತ್ತರಿಸಿದ ಪ್ರತಿಯೊಂದಕ್ಕೂ ಐದು ಅಂಕಗಳನ್ನು ಹಾಕಿಕೊಳ್ಳಿರಿ; ಒಟ್ಟುಗೂಡಿಸಿರಿ. ಆಗ ಒಟ್ಟು ೭೦ ಅಥವಾ ಅದಕ್ಕೆ ಹೆಚ್ಚಾದರೆ, ನೀವು ಮಹಾ ಸಾಹಸಿಗಳೆಂದುಕೊಳ್ಳಿ. ೬೦ರಿಂದ ೭೦ರ ವರೆಗಾದರೆ, ನೀವು ಸಂತೋಷಜನಕ ಸಾಹಸಿಗಳೆಂದರ್ಥ. ಆದರೆ, ೫೦ಕ್ಕಿಂತ ಕಡಿಮೆ ಅಂಕ ಪಡೆದವರ ಸ್ಥಿತಿ ಚಿಂತಾಜನಕ.

ಮೂರನೆಯ ವರ್ಗಕ್ಕೆ ನೀವು ಸೇರಿದರೂ ಅಂಜಬೇಕಾಗಿಲ್ಲ. ಅಳುಕುವುದರಿಂದ ನಿಮ್ಮಲ್ಲುಳಿದಿದ್ದ ಸಾಹಸವೂ ದೂರವಾಗುವುದು. ಆದುದರಿಂದ ಸಂದರ್ಭವೊದಗಿದಾಗ, ಅದರಿಂದ ಪ್ರಯೋಜನ ಪಡೆದು, ಮೆಲ್ಲ ಮೆಲ್ಲನೆ ನಿಮ್ಮಲ್ಲಿ ಸಾಹಸದ ಭಾವನೆ ಬೆಳೆಯುವಂತೆ ಮಾಡಿರಿ. ಹೊಸ ಹೊಸ ಸಂಸ್ಥೆಗಳಲ್ಲಿ ಸೇರಿಕೊಂಡು, ಭಿನ್ನ ಭಿನ್ನಾಭಿರುಚಿಯ ಜನರೊಡನೆ ಬೆರೆತು, ಇದರಿಂದ ನವನವ ಪರಿಸ್ಥಿತಿಗಳನ್ನು ಹಾದು ಅತಿ ಸರಳತೆಯಿಂದ ನಿಮ್ಮಲ್ಲಿ ಸಾಹಸದ ಜ್ಯೋತಿಯನ್ನುರಿಸಬಲ್ಲಿರಿ.

ಅಭಿಪ್ರಾಯ

ಬಹುಮುಖ ಪ್ರತಿಭಾಸಂಪನ್ನ ಮೆಹತಾಬ

ಇತಿಹಾಸಕಾರರೂ ಪತ್ರಿಕಾಕರ್ತರೂ ಸಾಹಿತಿಗಳೂ ರಾಜಕಾರಣಿಯೂ ಆದ ಡಾ| ಹರೇಕೃಷ್ಣ ಮೆಹತಾಬರು ಒಡಿಸ್ಸದ ಮುಖ್ಯಮಂತ್ರಿ ಪದವಿಗೆ ರಾಜಿನಾಮೆಯೀಯುವರಂತೆ. ಇದಕ್ಕೆ ಕಾಂಗ್ರೆಸ್‌ನಲ್ಲಿನ ಒಡಕೇ ಕಾರಣವಾಗಿರಬಹುದೆ?

ಕಾಂಗ್ರೆಸ್ ಪಕ್ಷದ ಆಂತರಿಕ ದಳಗಳನ್ನೂ ಕೆಟ್ಟ ಮನೋಭಾವನೆಯನ್ನು ದೂರೀಕರಿಸಲು ಮತ್ತು ಶಾಶ್ವತ ಮಂತ್ರಿಮಂಡಳಿಯೊಂದನ್ನು ರಚಿಸಲು ಹಾಗೂ ವಿರೋಧೀ ಪಕ್ಷಗಳ ಶಕ್ತಿಯನ್ನು ಕುಂದಿಸಲು ಒಡಿಸ್ಸದ ಮುಖ್ಯ ಮಂತ್ರಿ ಡಾ|| ಹರೇಕೃಷ್ಣ ಮೆಹತಾಬರು ಬಹು ಆಲೋಚಿಸಿ ಸಂಯುಕ್ತ ಮಂತ್ರಿ ಮಂಡಳಿಯನ್ನು ಸ್ಥಾಪಿಸುವ ಸಾಹಸಕ್ಕೆ ಒಂದೂವರೆ ವರ್ಷಗಳಿಗೆ ಮೊದಲು ಕೈ ಹಾಕಿದರು. ವಿಧಾನ ಸಭೆಯಲ್ಲಿ ಸದಸ್ಯರ ಸಂಖ್ಯೆ ಮತ್ತು ವಿಚಾರದ ದೃಷ್ಟಿಯಿಂದ ಗಣತಂತ್ರ ಪರಿಷತ್ತಿನೊಡನೆ ಸಂಧಿಮಾಡಿಕೊಳ್ಳುವುದು ಸೂಕ್ತವೆಂದು ಅವರಿಗೆ ತೋರಿತು. ಇದರಿಂದಾಗಿ ಪ್ರಾದೇಶಿಕ ಕಾಂಗ್ರೆಸ್‌ನ ವಿರೋಧವನ್ನು ಗಣನೆಗೆತಾರದೆ, ಪರಿಷತ್ತಿನೊಡನೆ ಸೇರಿಕೊಂಡು ಮಂತ್ರಿ ಮಂಡಳಿಯನ್ನು ರಚಿಸಿಯೇ ಬಿಟ್ಟರು. ೧೯೫೯ರ ಮೇ ೨೨ರಂದು ಸ್ಥಾಪಿತವಾದ ಈ ಮಂತ್ರಿ ಮಂಡಳವನ್ನು ಎರಡೂ ಪಕ್ಷಗಳ ಕೆಲವು ಗಣನೀಯ ಪಾತ್ರಧಾರಿಗಳು ಟೀಕಿಸಿದ್ದರು. ಇತ್ತ ಒಡಿಸ್ಸದ ಪ್ರಾದೇಶಿಕ ಕಾಂಗ್ರೆಸ್‌ನ ವಿರೋಧವು ಬಹುವಾಗಿ ಕಾಣಿಸಿಕೊಂಡಿದ್ದು, ಇದರಿಂದಾಗಿಯೇ ಡಾ| ಮೆಹತಾಬರು ತಮ್ಮನ್ನು ನಿವೃತ್ತಗೊಳಿಸಬೇಕೆಂದು ವರಿಷ್ಠರನ್ನು ಕೇಳಿಕೊಂಡಿರುವುದು ಸಂಭವನೀಯವಾಗಿದೆ.

ರಾಜ್ಯಪಾಲ ಪದವಿಯಿಂದ ನಿವೃತ್ತರಾದ ಮೇಲೆ ರಾಜಕಾರಣವನ್ನು ಬಿಡದುಳಿದವರಲ್ಲಿ ರಾಜಾಜಿ ಪ್ರಥಮಸ್ಥಾನ ಪಡೆದರೆ, ಮೆಹತಾಬರಿಗೆ ದ್ವಿತೀಯ ಸ್ಥಾನ ಸಲ್ಲಬೇಕು. ದ್ವಿತೀಯ ಸಾರ್ವತ್ರಿಕ ಚುನಾವಣೆಗಳಿಗೆ ಮೊದಲೇ ಮೆಹತಾಬರು ಮುಂಬಯಿಯ ರಾಜ್ಯಪಾಲರಾಗಿದ್ದಾಗ ಒಡಿಸ್ಸದ ಮುಖ್ಯಮಂತ್ರಿ ಶ್ರೀ ನವಕೃಷ್ಣ ಚೌಧರಿಯವರು ರಾಜಿನಾಮೆಯಿತ್ತುದ್ದರಿಂದ ಇವರು ಮರಳಿ ತಮ್ಮ ರಾಜ್ಯದ ವಿಧಾನ ಮಂಡಲೀಯ ಕಾಂಗ್ರೆಸ್‌ನ ನಾಯಕತ್ವವನ್ನು ವಹಿಸಬೇಕಾಯಿತು.

೨೧—೧೧—೧೮೯೯ರಲ್ಲಿ ಒಡಿಸ್ಸದ ಬಾಲಾಸೋರ ಜಿಲ್ಲೆಯ ಆಗರಪಾಡ ಗ್ರಾಮದಲ್ಲಿ ಶ್ರೀ ಮೆಹತಾಬರು ಜನಿಸಿದರು. ಇವರ ಮಾವನಿಗೆ ಪುತ್ರರಿಲ್ಲದುದರಿಂದ ಇವರನ್ನವರೇ ಸಲಹಿದರು. ಸಂಪನ್ನ ಕುಟುಂಬದಲ್ಲಿ ಜನಿಸಿದ ಇವರನ್ನು ಗದ್ದೆಗಳ ಕರ್ಮಚಾರಿಗಳು 'ಮೆಹತಾಬ ರಾಜ' ಎಂದೇ ಸಂಬೋಧಿಸುತಿದ್ದರು.

ಸ್ವಾತಂತ್ರ್ಯಾಂದೋಲನದ ವೇಳೆಯಲ್ಲಿ ಭಾರತದ ಹಲವಾರು ಶ್ರೀಮಂತ ಪರಿವಾರಗಳು ತ್ಯಾಗ ಬುದ್ಧಿಯನ್ನು ಪ್ರದರ್ಶಿಸಿ ಕಷ್ಟಕ್ಕೆ ಗುರಿಯಾಗಿದ್ದುವು. ಇವುಗಳಲ್ಲಿ ಯುವಕ ಮೆಹತಾಬರ ಕುಟುಂಬವೂ ಒಂದು. ಯೌವನಾವಸ್ಥೆಯ ಪ್ರಾರಂಭದಲ್ಲಿಯೇ ಇವರು ಕಾಂಗ್ರೆಸ್ ಪಕ್ಷವನ್ನು ಸೇರಿದರು. ಸ್ವಾತಂತ್ರ್ಯದ ಚಳುವಳಿಯಲ್ಲಿ ಮಾತ್ರವಲ್ಲ ಪ್ರಗತಿಶೀಲ ಆರ್ಥಿಕ ಆಂದೋಲನದಲ್ಲಿಯೂ ಇವರು ಸಕ್ರಿಯವಾಗಿ ಭಾಗ ವಹಿಸಿದರು. ಒಡಿಸ್ಸದಲ್ಲಿ ಕಣಿಕಾದ ಜಮೀನದಾರ ವಿರುದ್ಧವಾಗಿ, ಆಂದೋಲನ ನಡೆಸಲು ಕಣಿಕಾ ಪ್ರಜಾ ಆಂದೋಲನ ಸಮಿತಿಯು ಸ್ಥಾಪನೆಗೊಂಡಿತು. ಈ ಸಮಿತಿಯ ಅಧ್ಯಕ್ಷರಾಗಿ ಜಮೀನ್ದಾರರ ಯುವಕನಾದ ಮೆಹತಾಬರು ಆರಿಸಲ್ಪಟ್ಟರೆಂದರೆ, ವಿಸ್ಮಯ ಪಡಬೇಕು.

ತಮ್ಮ ಎಳೆಯ ವಯಸ್ಸಿನಲ್ಲಿಯೇ ಒಡಿಸ್ಸ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಪದವಿಯಿಂದ ಹಿಡಿದು ಕಾಂಗ್ರೆಸ್ ಕಾರ್ಯ ಸಮಿತಿಯ ಸದಸ್ಯತ್ವದ ವರೆಗಿನ ಹಲವಾರು ಸ್ಥಾನಗಳಲ್ಲಿ ಇವರು ವಿರಾಜಿಸಿದ್ದಾರೆ. ೧೯೪೬ರಿಂದ ೫೦ರ ತನಕ ಒಡಿಸ್ಸದ ಮುಖ್ಯ ಮಂತ್ರಿಯಾಗಿ, ೫೦ರಿಂದ ೫೨ರ ವರೆಗೆ ಕೇಂದ್ರೀಯ ಸರಕಾರದ ಉದ್ದಿಮೆ ಮತ್ತು ವಾಣಿಜ್ಯ ಮಂತ್ರಿಗಳಾಗಿ, ೧೯೫೫—೫೬ರಲ್ಲಿ ಮುಂಬಯಿಯ ರಾಜ್ಯಪಾಲರಾಗಿ ಅನಂತರ ಮರಳಿ ಒಡಿಸ್ಸದ ಮುಖ್ಯಮಂತ್ರಿಗಳಾಗಿ ಇವರು ದುಡಿದರು. ಆದರೆ, ಡಾ| ಮೆಹತಾಬರ ವ್ಯಕ್ತಿತ್ವವು ರಾಜನೀತಿಕ ಕ್ಷೇತ್ರಕ್ಕೆ ಮಾತ್ರ ಪರಿಮಿತವಾಗಿಲ್ಲ. ಇವರು ಇತಿಹಾಸಜ್ಞರೂ ನಾಟಕಕಾರರೂ ಉಪನ್ಯಾಸಕಾರರೂ

(೮ನೇ ಪುಟ ನೋಡಿರಿ)

ಬೆಚ್ಚನೆಯ ಮನೆ
ವೆಚ್ಚಕ್ಕೆ ಹಣ

ಬೇಕಾದಲ್ಲಿ
ಮುಂಚಿತವಾಗಿಯೇ ಒಂದು ಉಳಿತಾಯ
ಯೋಜನೆಯನ್ನು ತಯಾರಿಸಿ, ಅದರಂತೆ
ಕೊರ್ಪೊರೇಶನ್ ಬೇಂಕಿನಲ್ಲಿ
ಹಣವನ್ನು ಉಳಿಸುತ್ತಾ ಬನ್ನಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: **ಉಡುಪಿ**, ಮೈಸೂರು ರಾಜ್ಯ.

6 ರಾಜ್ಯಗಳಲ್ಲಿ ಒಟ್ಟು 60 ಶಾಖೆಗಳು

ಸಂಯಮ ಮತ್ತು ಪರಿಶ್ರಮಗಳು ಮಾನವನ ಸರ್ವಾಧಿಕ ಚಿಕಿತ್ಸಕವೆನಿಸಿವೆ. ಸಂಯಮವು ಅತ್ಯಧಿಕ ಭೋಗಲಾಲಸೆಯನ್ನು ತಡೆಯುತ್ತದೆ; ಪರಿಶ್ರಮವು ಹಸಿವೆಯನ್ನು ಹೆಚ್ಚಿಸುತ್ತದೆ.

ನವಯುಗ

ವರುಷ	ಉಡುಪಿ	ವಾರ
೪೦	೬-೧೦-'೬೦	೬

ಮನೋನೈರ್ಮಲ್ಯ ಬೇಕು

ಅಮೃತಸರದಲ್ಲಿ ಉಪರಾಷ್ಟ್ರಪತಿ ಡಾ। ರಾಧಾಕೃಷ್ಣನ್ನರು ಗಾಂಧೀ ಜಯಂತಿಯಂದು ಗಾಂಧೀಜಿಯವರ ಪುತ್ಥಳಿಯನ್ನು ಅನಾವರಣ ಮಾಡುತ್ತ ಮಾನವನು ಪ್ರತಿ ಕ್ಷೇತ್ರದಲ್ಲಿಯೂ ನೈರ್ಮಲ್ಯವನ್ನು ಕಾಯ್ದುಕೊಂಡು ಬರಬೇಕೆಂದು ವಿನಂತಿಸಿದರು. ಆದರೆ, ಇಂದು ಕೇವಲ ನಮ್ಮ ದೇಶದಲ್ಲಿ ಮಾತ್ರವಲ್ಲ, ಅಖಂಡ ಪ್ರಪಂಚದಲ್ಲಿಯೇ ಎದ್ದು ತೋರುವ ಕೊರತೆಯೆಂದರೆ, ಪರಿಶುದ್ಧತೆ. ವ್ಯಕ್ತಿಯಿಂದ ಹಿಡಿದು ರಾಷ್ಟ್ರೀಯ ಸರಕಾರಗಳ ವರೆಗೂ ಎಲ್ಲೆಲ್ಲೂ ಕಲುಷಿತ ವಾತಾವರಣಗಳು ತೋರಿಬಂದಿರುವ ಕಾರಣದಿಂದಲೇ 'ವಿಶ್ವಶಾಂತಿ'ಯ ಹೆಸರಲ್ಲಿ ಕತ್ತಿಗಳನ್ನು ಝಳಪಿಸುವಂತಹ ದಾರುಣ ಪರಿಸ್ಥಿತಿ ತಲೆದೋರಿದೆ. ಸೇವೆ, ಶಾಂತಿಗಳ ಉಪದೇಶ ಮಾಡುವವರ ಸಂಖ್ಯೆಯು ದಿನದಿಂದ ದಿನಕ್ಕೆ ಅಧಿಕವಾಗುತ್ತ ಬರುತ್ತದೆ. ಮಗನಿಗೆ ಹೆಣ್ಣು ನೋಡಲು ತನ್ನ ಮಾಗಿಲಿ ಮಡದಿಯೊಡನೆ ಹೊರಟವನೊಬ್ಬನಿಗೆ ನಡುದಾರಿಯಲ್ಲಿ ಮಾಗಿಲಿ ಎದುರಾದಾಗ ಅವಲಕ್ಷಣವಾಯಿತೆಂದು ಬಯ್ದನಂತೆ. ತನ್ನ ತಲೆಯ ಮೇಲೆ ಕಸವಿರಿಸಿಕೊಂಡು ಪರರದನ್ನು ತರ್ಜನಿಸುವ ಹವ್ಯಾಸವೀಗೀಗ ಎಲ್ಲೆಲ್ಲಿಯೂ ದೃಷ್ಟಿಗೋಚರವಾಗುತ್ತಿದೆ. ಇಂತಹ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳುವಷ್ಟು ಸೌಜನ್ಯವಿಲ್ಲದ ಕಲುಷಿತ ಮನೋವೃತ್ತಿಯ ಈ ಪ್ರಪಂಚದಲ್ಲಿ ಸಹಜೀವನ, ಸಹ ಅಸ್ತಿತ್ವ, ಸಹಕಾರ ಬುದ್ಧಿ, ಶಾಂತಿ, ಸೌಹಾರ್ದ, ಸುಖ ಮೊದಲಾದ ಶಬ್ದಗಳು ಕೇವಲ ಬಯಲಾಡಂಬರಕ್ಕೆ ಮಾತ್ರವಾಗಿ ಉಳಿದಿವೆ.

ನಮ್ಮ ದೇಶವನ್ನೇ ಎತ್ತಿಕೊಳ್ಳುವುದಾದರೂ ಇದೇ ಅವಸ್ಥೆ. ರಾಷ್ಟ್ರಪಿತ ಗಾಂಧೀಜಿಯವರ ಕನಸಿನ ರಾಮರಾಜ್ಯ ಕನಸಿನಲ್ಲೂ ಕಣ್ಮುಂದೆ ಬರುವ ಸುದಿನಗಳು ದೂರವಾಗತೊಡಗಿವೆ. ವ್ಯಕ್ತಿಯು ತನ್ನಲ್ಲಿ ಪರಿವರ್ತನೆ ಮಾಡಿಕೊಂಡಷ್ಟು ಸಮಾಜದಲ್ಲಿ ಸುಧಾರಣೆಗಳಾಗುವುವು. ಸಮಾಜದಲ್ಲಿಯ ಲೋಪದೋಷಗಳು ದೂರವಾದರೆ ಮಾತ್ರ ರಾಷ್ಟ್ರದ ನೈತಿಕ ಸ್ತರವೇರಬಹುದು. ವ್ಯಕ್ತಿಯು ತಾನು ಒಂದು ಸಮಾಜದ ಅಂಗ, ತಾನು ಸಮಾಜದಿಂದ ಸಹಾಯ ಪಡೆಯುವಂತೆಯೇ ತನ್ನಿಂದಲೂ ಅದಕ್ಕೆ ಸಲ್ಲಬೇಕಾದ ಕೆಲವೊಂದು ಸೇವೆಗಳಿವೆಯೆಂಬುದನ್ನು ಅರಿತು ವ್ಯಕ್ತಿಗತ ಸ್ವಾರ್ಥವನ್ನು ತ್ಯಜಿಸಿ, ತನ್ನ ಮನಸ್ಸಿನ ಕೊಳಕೆಲ್ಲವನ್ನೂ ದೂರೀಕರಿಸಿ ಸಮಾಜವನ್ನು ಸುದೃಢಗೊಳಿಸಬೇಕು. ಈ ಸಮಾಜವು ಬಲವಾಗಿ, ರಾಷ್ಟ್ರದ ಭದ್ರತೆ ಹಾಗೂ ಸುದೃಢತೆಗೆ ಪ್ರಯತ್ನಿಸಬೇಕು. ಆದರೆ, ಇಂದು ನಮ್ಮ ಸ್ಥಿತಿ ಇದಕ್ಕೆ ತೀರ ವ್ಯತಿರಿಕ್ತವಾಗಿದೆ. ಮನೋಮಾಲಿನ್ಯದಿಂದಾಗಿ ಪರಸ್ಪರರನ್ನು ಅರಿತುಕೊಳ್ಳುವ ಗೋಜನ್ನೇ ಬಿಟ್ಟು ಬಿಟ್ಟವರನೇಕರು. ಸಮಾಜದ ನಾಯಕರಾದರೂ ತಮ್ಮ ವ್ಯಕ್ತಿಗತ ಪ್ರತಿಷ್ಠೆಯನ್ನಷ್ಟೆ ಅಚಲ ಲಕ್ಷ್ಯವಾಗಿರಿಸಿ ಸೇವೆಯ ಹೆಸರಿನಲ್ಲಿ ಸ್ವಾರ್ಥಸಾಧನೆ ಮಾಡುತ್ತ ಸಮಾಜೋದ್ಧಾರದ ಬದಲು ಆತ್ಮೋದ್ಧಾರಕ್ಕಾಗಿಯೇ ಸಮಾಜವನ್ನು ಬಳಸಿಕೊಳ್ಳುತಿದ್ದಾರೆ. ಇದೇ ಕ್ರಮ ಸರಕಾರ—ಸರಕಾರೇತರ ವರ್ಗಗಳಲ್ಲೂ ನಡೆಯುತ್ತಿದೆ. ಜನತೆಗೆ ಆವಶ್ಯಕ ಸೇವೆಗಳನ್ನು ಸಕಾಲದಲ್ಲಿ ಮಾಡಿಕೊಡಬೇಕಾದ ಸರಕಾರಿ ನೌಕರರು ಪ್ರಜಾಜನರ ಬಗ್ಗೆ ದುರಭಿಮಾನದಿಂದಲೇ ವರ್ತಿಸುತ್ತಾರೆ; ರಾಜಕೀಯ ಪಕ್ಷಗಳಾದರೂ ಪೈಪೋಟಿಯ ಭರದಲ್ಲಿ ಅದೇನೇನೋ ಹೇಳಿದರೂ ಅವೂ ತಮ್ಮ ಪ್ರಚಾರ ಹಾಗೂ ಉನ್ನತಿಯ ದಾರಿಯನ್ನು, ಅದೆಷ್ಟು ಕೀಳು ಮಟ್ಟದ್ದಿರಲಿ, ಮೆಟ್ಟುತ್ತದೆ. ಅಧಿಕಾರದಾಹದ ಪ್ರಭಾವವಂತೂ ಹೇಳತೀರದು. ಇಂತಹ ಆಂತರಿಕ ಹೊಲಸು ಮನೆಮನೆಯಲ್ಲಿ ಕೇರಿಕೇರಿಯಲ್ಲಿ, ಹರಡಿರುವಾಗ ಬಾಹ್ಯ ಕಶ್ಮಲಗಳನ್ನು ಉಚ್ಚಾಟನೆ ಮಾಡಿದ ಮಾತ್ರಕ್ಕೆ ದೇಶದ ಆರೋಗ್ಯ ನೆಟ್ಟಗಾಗಲಾರದು. ದೇಶದ ಆರೋಗ್ಯ ಸರಿಯಾಗದೆ ಸುಭಿಕ್ಷೆ ದೊರೆಯಲಾರದು.

ಗಾಂಧೀ ಜಯಂತಿಯ ದಿನವನ್ನು ರಾಷ್ಟ್ರೀಯ ನೈರ್ಮಲ್ಯ ದಿನಾಚರಣೆಯೆಂದು ಸರ್ವತ್ರ ಭಾರತದಲ್ಲಿ ಆಚರಿಸಲಾಯಿತು; ಹೆಚ್ಚಿನೆಡೆಯಲ್ಲಿ ನಿರಾಡಂಬರವಾಗಿಯೇ ಕಸಕಡ್ಡಿಗಳ ನಿರ್ಮೂಲನವಾಗಿರಬಹುದು. ಆದರೆ, ಇದಕ್ಕೂ ಹೆಚ್ಚಿನ ಕಶ್ಮಲ ನಮ್ಮ ನಮ್ಮ ಹೃದಯದಲ್ಲಿ, ಮನಸ್ಸಿನಲ್ಲಿದೆಯೆಂಬುದನ್ನು ಮರೆಯಬಾರದು. ಮಾನವನು ಮನೋವಾಕ್ಕಾಯಗಳಿಂದ ಶುಚಿರ್ಭೂತನಾಗುವತನಕ ಆತನ ಉದ್ಧಾರವಾಗದು; ಸಮಾಜ—ದೇಶಗಳ ಮಾತಂತೂ ದೂರವುಳಿಯಲಿ. ಆದುದರಿಂದ ಪ್ರತ್ಯೇಕ ನಾಗರಿಕನೂ ಈ ಕಶ್ಮಲವನ್ನು ಗುಡಿಸಿ ತೆಗೆಯುವುದಕ್ಕೆ ಬದ್ಧಕಂಕಣನಾಗಬೇಕು. ತಾನು ಒಳ್ಳೆಯವನಾದರೆ, ದೇಶ ಒಳ್ಳೆಯದಾಗುವುದು. ಎಲ್ಲರಿಗಾಗಿ ನಾವು ಬದುಕಬೇಕು; ನಮ್ಮ ಯಾವುದೇ ವರ್ತನೆಯಿಂದ ದೇಶದ ವಿಶ್ವದ ಹಿತಚಿಂತನೆಯು ಆಗುವಂತೆ ತಮ್ಮ ಮನೋವೃತ್ತಿಯನ್ನು ಬದಲಾಯಿಸಿಕೊಳ್ಳದೆ ಹೋದರೆ, ಈಗಾಗಲೇ ಅತೃಪ್ತಿ ಅಶಾಂತಿಗಳ ತವರೂರಾದ ಪ್ರಪಂಚ ಸರ್ವನಾಶಗೊಂಡೀತು. ಇದೇ ಮಾತನ್ನು ಪ್ರಧಾನಿ ನೆಹರುರವರೂ ಸಂಯುಕ್ತ ರಾಷ್ಟ್ರಸಂಸ್ಥೆಯಲ್ಲಿ ಉದ್ಗರಿಸಿದ್ದಾರೆ. ನಾಗರಿಕರು ಸತ್ಯಮಾರ್ಗಾವಲಂಬಿಗಳಾಗಿ ಮನಃಕಷಾಯವನ್ನು ಜಾಡಿಸಲು ಇದೀಗ ಪ್ರೇರಣಾತ್ಮಕ ಕಾಲವಾಗಿದೆ.

ಸ್ವತಂತ್ರ ನೈಜೀರಿಯಾ

ಕತ್ತಲೆಯ ಭೂಖಂಡವೆಂಬ ಉಪನಾಮಕ್ಕೆ ಪಾತ್ರವಾಗಿದ್ದ ಆಫ್ರಿಕೆಯಲ್ಲಿ ಒಂದೊಂದೇ ವಸಾಹತು ರಾಜ್ಯಗಳು ಸ್ವತಂತ್ರವಾಗ ತೊಡಗಿರುವುದು ಮತ್ತು ಅವು ಪ್ರಜಾಪ್ರಭುತ್ವದ ತತ್ತ್ವಗಳನ್ನು ಉಪಾದೇಯವೆಂದು ಗ್ರಹಿಸಿ ಮುನ್ನಡೆಯಲು ಯತ್ನಿಸುತ್ತಿರುವುದು ಸಂತೋಷದ ಸಂಗತಿ. ಕಾಂಗೊವು ಸ್ವತಂತ್ರವಾದ ಕೆಲವು ದಿನಗಳಲ್ಲೇ ಅಶಾಂತಿಯ ಮೇಘಚ್ಛಾಯೆ ಅಖಂಡ ವಿಶ್ವದಲ್ಲಿ ವ್ಯಾಪಿಸಿ ಚಿಂತಾಜನಕವಾಗಿದ್ದ ಇದೇ ಸನ್ನಿವೇಶದಲ್ಲಿ ಆಫ್ರಿಕೆಯ ದೊಡ್ಡ ರಾಜ್ಯಗಳಲ್ಲಿ ಒಂದಾದ ನೈಜೀರಿಯಾವನ್ನು ಬ್ರಿಟಿಷರು ಬಿಟ್ಟು ತೊಲಗಿದರು. ಈಗ ಈ ಭೂಖಂಡದಲ್ಲಿಯೇ ಅತಿಹಿರಿಯ ಸ್ವತಂತ್ರ ರಾಷ್ಟ್ರವಾಗಿ ನೈಜೀರಿಯಾ ರೂಪುಗೊಂಡಿದೆ. ನೈಜೀರಿಯಾದಲ್ಲಿ ಬ್ರಿಟಿಷರು ಅನುಸರಿಸಿದ ಪ್ರಶಾಸನ ನೀತಿಯು ಅವರ ಇತರ ವಸಾಹತುಗಳಿಗಿಂತ ಭಿನ್ನವಾಗಿತ್ತು. ಪ್ರಜಾತಂತ್ರ ಆಡಳಿತಗೆ ಅಲ್ಲಿನ ಜನರಿಗೆ ಸಾಕಷ್ಟು ತರಬೇತಿಯನ್ನು ಕೊಟ್ಟೇ ಇದು ವರೆಗೆ ಅಧಿಕಾರ ಹಸ್ತ ನೀಡಿದ್ದ ಬ್ರಿಟಿಷರು ಇದೀಗ ಸಹಾಯ ಹಸ್ತವೀಯಲು ಸಿದ್ಧರಾಗಿದ್ದಾರೆ. ಸರ್ ಜೇಮ್ಸ್ ರಾಬರ್ಟ್‌ಸನರನ್ನು ಕೆಲ ವಾರಗಳ ಮಟ್ಟಿಗೆ ಗವರ್ನರ ಜನರಲರ ಹುದ್ದೆಯಲ್ಲಿರಲು ಒಪ್ಪಿ ನೈಜೀರಿಯದಲ್ಲಿ ಯಾವುದೇ ಕಂದುಗಳುಂಟಾಗದಂತಾಗಲು ಎಚ್ಚರಿಕೆ ವಹಿಸಿದ್ದಾರೆ. ನೈಜೀರಿಯನ್ ನಾಯಕರಾದರೂ ಇದನ್ನು ಬಯಸಿದ್ದರು. ಹೀಗಾಗಿ, ಬ್ರಿಟಿಷರು ತಮ್ಮ ರಾಜನೀತಿಯ ಪ್ರಶಂಸಾಕಿರೀಟಕ್ಕೆ ನವಿಲು ಗರಿಯೊಂದನ್ನು ಸೇರಿಸಿಕೊಂಡರು. ನೈಜೀರಿಯಾವಾದರೂ ವಿಚಿತ್ರ ಸನ್ನಿವೇಶಗಳ ವಿಚಿತ್ರ ರೀತಿನೀತಿಯ ತನ್ನ ವಿಶಾಲವಾದ ದೇಶದ ಅಖಂಡತೆಯನ್ನು ಉಳಿಸಿಕೊಂಡು ಕಾಂಗೊವಿನಂತಹ ದುಸ್ಥಿತಿಗೆ ಈಡಾಗದಂತಿರಲು ಎಚ್ಚರಿಕೆ ವಹಿಸಿವೆ. ಈ ಕಾರ್ಯದಲ್ಲಿ ಬ್ರಿಟಿಷರು ಯೋಗ್ಯ ಪಥ ಪ್ರದರ್ಶನ ಮಾಡಿದ್ದಾರೆ. ನೈಜೀರಿಯಾವು ಘಾನಾದಂತೆಯೇ ಆಫ್ರಿಕದ ಗಣರಾಷ್ಟ್ರವಾಗಿ ಜನತಂತ್ರದ ವಿಶ್ವಶಾಂತಿಯ ಕೈವಾರಿಯಾಗಿ ಬೆಳೆದು ಬರಲೆಂದು ಸಭ್ಯ ರಾಷ್ಟ್ರಗಳು ಆಶಿಸುತ್ತವೆ.

ಸಂಕ್ಷಿಪ್ತ ಸುದ್ದಿಗಳು

ಒಕ್ಕಲತನ ಮಂಡಳ

ಸಹಕಾರಿ ಒಕ್ಕಲತನ ಮಂಡಳವೊಂದನ್ನು ಕೇಂದ್ರಸರಕಾರವು ಸ್ಥಾಪಿಸಿದೆ. ಕರ್ನಾಟಕದ ಧುರೀಣರಾಗಿರುವ ಶ್ರೀ ಎಸ್. ನಿಜಲಿಂಗಪ್ಪನವರು ಅಧ್ಯಕ್ಷರಾಗಿದ್ದಾರೆ. ದೇಶದಲ್ಲಿ ಸಹಕಾರಿ ವ್ಯವಸಾಯ ಪದ್ಧತಿಗೆ ಪ್ರೋತ್ಸಾಹನೀಡುವುದೇ ಈ ಮಂಡಳಸ್ಥಾಪನೆಯ ಉದ್ದೇಶ. ವಿವಿಧ ರಾಜ್ಯಗಳಲ್ಲಿಯೂ ಇದೇ ಮಾದರಿಯ ಮಂಡಳಗಳನ್ನು ಸ್ಥಾಪಿಸುವ ವಿಷಯವನ್ನು ರಾಜ್ಯಸರಕಾರಗಳೇ ಪರಿಶೀಲಿಸುವುವು.

ದಕ್ಷಿಣ ರಾಜ್ಯಗಳ ಆದರ್ಶ

ಶಿಕ್ಷಣ, ಪ್ರಶಾಸನ ಮತ್ತು ಉದ್ಯೋಗಗಳ ಸಂಬಂಧದಲ್ಲಿ ದಕ್ಷಿಣದ ರಾಜ್ಯಗಳು ಅಲ್ಪಸಂಖ್ಯಾಕ ಭಾಷಾವಾದಿಗಳ ಹಿತರಕ್ಷಣೆ ಮಾಡಿದ್ದು ಇದು ಉಳಿದವರಿಗೆ ಮಾರ್ಗದರ್ಶಕವಾಗಿರುವುದಾಗಿ ಕೇಂದ್ರ ಗೃಹಮಂತ್ರಿ ಶ್ರೀ ಗೋವಿಂದ ವಲ್ಲಭ ಪಂತರು ಅಭಿಪ್ರಾಯಿಸಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಆವರವರ ಮಾತೃಭಾಷೆಯಲ್ಲಿ ಒದಗಿಸುವುದು. ಸರಕಾರಿ ಪ್ರಕಟಣೆಗಳನ್ನು ಆ ಭಾಷೆಗಳಲ್ಲಿ ಪ್ರಕಟಿಸುವುದು ಉದ್ಯೋಗಗಳ ಸ್ಪರ್ಧಾಪರೀಕ್ಷೆಗಳಲ್ಲಿ ಅಲ್ಪಸಂಖ್ಯಾಕರಿಗೆ ಹಾನಿಯಾಗದಂತೆ ನೋಡಿಕೊಳ್ಳುವುದೇ ಈ ಮುಖ್ಯ ಆದರ್ಶಗಳು.

ಚೀನ-ಬ್ರಹ್ಮಗಳ ಒಡಂಬಡಿಕೆ

ಚೀನ ಮತ್ತು ಬ್ರಹ್ಮದೇಶಗಳ ಗಡಿ ಒಪ್ಪಂದಕ್ಕೆ ಪ್ರಧಾನಿದ್ವಯರು ಪೀಕಿಂಗದಲ್ಲಿ ಸಹಿ ಹಾಕಿದರು. ಏಶ್ಯಾದ ರಾಷ್ಟ್ರಗಳು ಪಂಚಶೀಲ ತತ್ವಗಳನ್ವಯ ಸಹಜೀವನ ನಡೆಸುವರೆಂಬುದಕ್ಕೆ ಈ ಒಪ್ಪಂದವೊಂದು ಉತ್ತಮ ಉದಾಹರಣೆಯಾಗಿದೆಯೆಂದು ಚೀನೀಯ ಪ್ರಧಾನಿ ಚೌ ಅಭಿಪ್ರಾಯಪಟ್ಟರು. ಈ ಸಂಧಿಯಿಂದಾಗಿ, ಬ್ರಹ್ಮ ಮತ್ತು ಚೀನಗಳ ಮೈತ್ರಿಯು ಮತ್ತಷ್ಟು ಸಂವರ್ಧಿಸುವುದೆಂದು ಆಶಿಸಲಾಗಿದೆ.

ನೆಹರೂರವರ ಭಾಷಣ

ಯುಕ್ತರಾಷ್ಟ್ರ ಸಂಘದಲ್ಲಿ ಐದು ತಟಸ್ಥ ರಾಷ್ಟ್ರಗಳು ಒಂದು ಗೊತ್ತುವಳಿಯನ್ನು ಮಂಡಿಸಿ ಐಕ್-ಕ್ರುಶ್ಚೇವರು ಮರಳಿ ಭೇಟಿಯಾಗುವಂತೆ ಕೇಳಿಕೊಂಡಿವೆ. ಈ ಗೊತ್ತುವಳಿಯ ಬಗ್ಗೆ ಮಾತನಾಡುತ್ತ ಪ್ರಧಾನಿ ನೆಹರು ವಿಶ್ವಶಾಂತಿ ಅಥವಾ ವಿಶ್ವನಾಶಗಳೆರಡೇ ಇಂದು ಜನತೆಯ ಮುಂದಿರುವುದೆಂದೂ ಅನ್ಯ ಮಾರ್ಗವಾವುದೂ ಉಳಿದಿಲ್ಲವೆಂದೂ ತಿಳಿಸಿ, ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಸದಸ್ಯ ರಾಷ್ಟ್ರಗಳು ಹೆಚ್ಚಿದಂತೆ ಅದರ, ಸಮತೂಕವನ್ನುಳಿಸಿಕೊಳ್ಳುವುದು ಕಷ್ಟವಾಗಿದೆ. ಸಂಪೂರ್ಣ ನಿಶ್ಶಸ್ತ್ರೀಕರಣವನ್ನು ಸಾಧಿಸಿ ಶಾಂತಿ ಸ್ಥಾಪನೆ ಮಾಡುವುದೇ ಇಂದಿನ ಆದ್ಯಕರ್ತವ್ಯವೆಂದು ಘೋಷಿಸಿದರು.

ಹೆಮ್ಮರ್ ಶೀಲ್ಡರಲ್ಲಿ ಅಸಮಾಧಾನ

ಸಂ. ರಾ. ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಡಾಗ್ ಹೆಮ್ಮರ್ ಶೀಲ್ಡರಲ್ಲಿ ತಮಗೆ ವಿಶ್ವಾಸವಿಲ್ಲದಿರುವುದರಿಂದ ಅವರನ್ನು ಪದಚ್ಯುತಿಗೊಳಿಸಬೇಕೆಂಬ ತಮ್ಮ ಅಭಿಪ್ರಾಯವನ್ನು ಕ್ರುಶ್ಚೇವರು ಪುನರುಚ್ಚರಿಸಿದರು. ಚೀನಕ್ಕೆ ಸಂಸ್ಥೆಯಲ್ಲಿ ಪ್ರಾತಿನಿಧ್ಯ ದೊರೆಯದೆ ನಿಶ್ಶಸ್ತ್ರೀಕರಣ ಪ್ರಶ್ನೆಯು ಉಚಿತ ರೀತಿಯಲ್ಲಿ ಬಗೆಹರಿಯದು ಎಂದೂ ಅವರು ಅಂದರು.

ಧ್ರುವ ಸಂಗಮವಾದೀತೆ?

ತಮ್ಮ ಮತ್ತು ಪ್ರಧಾನಿ ಕ್ರುಶ್ಚೇವರ ನಡುವೆ ಭೆಟ್ಟಿಯಾಗುವುದರಿಂದ ಏನಾದರೂ ಸತ್ಪರಿಣಾಮವಾಗುವುದಾದರೆ, ರಶ್ಯಕ್ಕೆ ಶಾಂತಿಯ ಬಗ್ಗೆ ಕಳಕಳಿಯಿರುವುದಾದರೆ ತಾವು ಸಿದ್ಧರೆಂದು ಐಕರೂ, ಐಕರಿಗೆ ಶಾಂತಿಯ ಬಗ್ಗೆ ಆಸಕ್ತಿಯಿರುವುದೆಂದು ವ್ಯಕ್ತವಾದರೆ ತಾವು ಭೆಟ್ಟಿಗೆ ಸಿದ್ಧನೆಂದು ಕ್ರುಶ್ಚೇವರೂ ಅಂದು ಕೊಂಡಿದ್ದಾರೆ. ಆದರೆ, ಉಭಯತರರಲ್ಲಿ ಈ ಬಗ್ಗೆ ವಿಶ್ವಾಸವು ಹೇಗೆ ಬರಬೇಕೆಂದು ಮಾತ್ರ ತಿಳಿದು ಬಂದಿಲ್ಲ.

ಮುರುಳ್ಯ—ಸ್ಥಳೀಯ ಬೋ. ಎ. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಸಂಕಪ್ಪ ಗೌಡರಿಗೆ ಮಾಡೂರಿಗೆ ವರ್ಗವಾದ ಪ್ರಯುಕ್ತ ತಾ. ೨೦ರಂದು ಸಮಾಧಿ ಮಾಳಿಗೆಯಲ್ಲಿ ಶ್ರೀ ಕೆ. ಹೂವಯ್ಯ ಗೌಡರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವೊಂದು ಜರಗಿತು. ಶ್ರೀ ಹಂಪಿಹೊಳಿ, ಶ್ರೀ ಕೆ. ನಾರಾಯಣ ರೈ ಮೊದಲಾದವರು ಸಮಯೋಚಿತ ಭಾಷಣವಿತ್ತರು.

ಅಲ್ಲಲ್ಲಿಯ ಸುದ್ದಿಸಾರ

ಉದ್ಘಾಟನಾ ಸಮಾರಂಭ— ಮಣಿಪಾಲ ಪವರ್ ಪ್ರೆಸ್‌ನ ಕಟ್ಟಡದ ಹೊಸ ವಿಸ್ತರಣೆಯ ಉದ್ಘಾಟನೆಯು ಉಡುಪಿ ನಗರ ಸಭಾಪತಿ ಡಾ. ಕೆ. ಎಲ್. ಐತಾಳರಿಂದ ಶ್ರೀ ರಮೇಶ ಯು. ಪೈ ಇವರ ನೇತೃತ್ವದಲ್ಲಿ 29—9—60ರಂದು ಜರಗಿತು. ಪ್ರಾರಂಭದಲ್ಲಿ ಶ್ರೀಯುತ ಪೈಯವರು ತಮ್ಮ ಸ್ವಾಗತ ಭಾಷಣದಲ್ಲಿ ಮಣಿಪಾಲ ಪವರ್ ಪ್ರೆಸ್ ಸಾಧಿಸಿದ ಉನ್ನತಿಯ ಗೌರವವು ಅದರ ಮೆನೇಜರ್ ಮತ್ತು ನೌಕರವೃಂದಕ್ಕೆ ಸಲ್ಲಬೇಕೆಂದೂ ಮುಂದೆಯೂ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿ ಸಾರ್ವಜನಿಕರ ಪ್ರೀತಿಗೆ ಪಾತ್ರರಾಗುವ ಭರವಸೆಯನ್ನಿತ್ತರು. ಉದ್ಘಾಟನಾ ಭಾಷಣದಲ್ಲಿ ಡಾ. ಐತಾಳರು ಈ ಪ್ರೆಸ್ಸಿಗೂ ತನಗೂ ಆದಿಯಿಂದಲೂ ಒಂದು ತರ ಇದ್ದ ಸಂಬಂಧವನ್ನು ಪ್ರಸ್ತಾಪಿಸಿ ಮ್ಯಾನೇಜರು, ನೌಕರವರ್ಗ ಮತ್ತು ಸಾರ್ವಜನಿಕರು ಈ ಮೂರು ದಿಸೆಯಿಂದಲೂ ಅನ್ಯೋನ್ಯತೆಯಿಂದ ಪ್ರಗತಿಯನ್ನು ಸಾಧಿಸಿದ್ದು, ಇದು ಇನ್ನೂ ಅಭಿವೃದ್ಧಿಯನ್ನು ಹೊಂದಿ ಮುದ್ರಣಾಲಯಕ್ಕೆ ಸಂಬಂಧಿಸಿದ ಇತರ ವಿಭಾಗಗಳನ್ನು ಶೀಘ್ರವೇ ಪ್ರಾರಂಭಿಸಲೆಂದು ಹಾರೈಸಿದರು. ಪ್ರೆಸ್ಸಿನ ಮೆನೇಜರ್ ಶ್ರೀ ಬಿ. ಕೃಷ್ಣಯ್ಯನವರು ಧನ್ಯವಾದವನ್ನರ್ಪಿಸುತ್ತಾ ತಮ್ಮ ಪ್ರಗತಿಗೆ ಕಾರಣರಾದ ಸರ್ವರ ಉಪಕಾರ ಸಹಕಾರಗಳನ್ನು ಸ್ಮರಿಸಿದರು. ಶಾರದಾಪೂಜೆ. ಶ್ರೀ ಬಿ. ಕೃಷ್ಣಮೂರ್ತಿ ಆಚಾರ್ಯ ಮತ್ತು ಪಾರ್ಟಿಯವರಿಂದ ವಾದ್ಯಗೋಷ್ಠಿ, ಪ್ರಸಾದ ವಿತರಣೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಬಂಟರ ಯಾನೆ ನಾಡವರ ಸಂಘ, ಮಂಗಳೂರು— ತಾ. 25—9—60ರಂದು ರಾಮಕೃಷ್ಣ ವಿದ್ಯಾರ್ಥಿ ಭವನದ ವೆಂಕಪ್ಪ ಪೂಂಜ ಹಾಲಿನಲ್ಲಿ ಸಾರ್ವಜನಿಕ ಸಭೆ ನಡೆದು ದಾನಿಗಳೂ ಸಮಾಜಸೇವಕರೂ ಆದ ಮುಚಲೆಮೂರು ಸಂಕಪ್ಪ ಭಂಗರ ತೈಲ ಚಿತ್ರವನ್ನು ಸಂಘದ ಅಧ್ಯಕ್ಷ ಶ್ರೀ ಕೆ. ಟಿ. ಆಳ್ವರ ಅಧ್ಯಕ್ಷತೆಯಲ್ಲಿ ಅನಾವರಣ ಮಾಡಲಾಯಿತು. ಶ್ರೀಯುತ ಎಮ್. ಶೀನ ಪೂಂಜರು, ಕಾರ್ಯದರ್ಶಿ ಸುಂದರರಾಮ ಶೆಟ್ಟರು, ಶ್ರೀ ಸಿ. ಎಸ್. ತಿಮ್ಮಪ್ಪ ಶೆಟ್ಟರು, ಶ್ರೀ ಭಂಗರ ಗುಣಕಥನ ಮಾಡಿದರು. ಶ್ರೀ ರಾಮಣ್ಣ ಶೆಟ್ಟರಿಂದ ಉಪಾಹಾರ ಸತ್ಕಾರ ನಡೆಯಿತು.

ನಂತರ ಕಾರ್ಯಕಾರಿ ಸಮಿತಿಯ ಸಭೆ ಜರಗಿ ಪುತ್ತೂರು ಮಹಾ ಸಭೆಯಲ್ಲಿ ಆ ಸಭೆಯ ಅಧ್ಯಕ್ಷ ಶ್ರೀ ಸಿ. ಎಸ್. ತಿಮ್ಮಪ್ಪ ಶೆಟ್ಟರು ತಂದ ಗ್ರಾಮ ಸಮಾಜ ಸೇವಾ ಮತ್ತು ಗ್ರಾಮಗಳಿಂದ ಸಂಘಕ್ಕೆ ಪ್ರತಿನಿಧಿಗಳು ಆರಿಸಿ ಬರುವ ವಿಷಯ ಚರ್ಚೆ ನಡೆಯಿತು. ಈ ಯೋಜನೆಯನ್ನು ಸಣ್ಣ ಕ್ಷೇತ್ರದಲ್ಲಿ ಕಾರ್ಯರೂಪಕ್ಕೆ ತಂದು ಅದರ ಫಲಿತಾಂಶವನ್ನು ಕಂಡುಕೊಳ್ಳಬೇಕಾಯಿತು.

ಸಂಘದ ಸದಸ್ಯರಾಗುವರೆ ಹತ್ತು ರೂಪಾಯಿ ವಂತಿಗೆ ಕೊಟ್ಟಲ್ಲಿ ಹತ್ತು ವರ್ಷಗಳ ವರೆಗೆ ಮೆಂಬರರಾಗಿ ಆರಿಸಬಹುದೆಂತಲೂ ನಿರ್ಣಯಿಸಲಾಯಿತು.

ಮೈಸೂರಿನಲ್ಲಿ ತೆರೆದ ಎ. ಬಿ. ಶೆಟ್ಟಿ ಮೆಮೋರಿಯಲ್ ಹಾಸ್ಟೆಲಿಗೆ ಧನ ಸಹಾಯ ಮಾಡುವ ವಿಷಯ ಸಹ ಚರ್ಚಿಸಲಾಯಿತು.

ಸುರತ್ಕಲ್— ಅಗ್ಗಿದಕಳಿ ಹಾ| ಎ| ಶಾಲೆಯ ವಾರ್ಷಿಕೋತ್ಸವ ಮತ್ತು ದಸರಾ ಮಹೋತ್ಸವ ಸಮಾರಂಭಗಳು ತಾ. 27—9—60ರಂದು ಶ್ರೀ ಸುರತ್ಕಲ್ ಸುಬ್ರಾಯ ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯರು ವರದಿ ವಾಚನ, ಶುಭ ಸಂದೇಶ ಓದಿದರು. ಶಾಲಾ ಹಳೇ ವಿದ್ಯಾರ್ಥಿ ಶ್ರೀ ಯಂ. ಉಮೇಶ ರಾವ್ ಇವರು ಅಭಿನಂದನೆ ಗೈದರು. ಶಾಲಾ ಉದಯ ಹಸ್ತ ಪತ್ರಿಕೆ ಉದ್ಘಾಟನೆ, ಇನಾಮು ಹಂಚೋಣವಾದ ಬಳಿಕ, ಸಭಿಕರಲ್ಲಿ ಶ್ರೀ ಕೆ. ಎಸ್. ಆಚಾರ್ಯ, ಶ್ರೀ ದೂಮಪ್ಪ ಗುರಿಕಾರ, ಶ್ರೀ ಬಿ. ಎಂ. ದೋಡ್‌ವಾಲ ಬಿ. ಇ.; ಶ್ರೀ ಕೆ. ಎ. ಆಚಾರ್ಯ ಇವರು ಭಾಷಣಗೈದರು. ಅಧ್ಯಕ್ಷ ಭಾಷಣವಾದ ಬಳಿಕ ಮಕ್ಕಳಿಂದ ವಿವಿಧ ವಿನೋದಾವಳಿಗಳಾದುವು.

ತಾ. 26—9—60ರಂದು ಅಗ್ಗಿದಕಳಿ ಹಾ| ಎ| ಶಾಲೆ ಸುರತ್ಕಲ್‌ನ ಹಳೇ ವಿದ್ಯಾರ್ಥಿ ಸಂಘದ ದಿನಾಚರಣೆಯು ಶಾಲಾ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಸುರತ್ಕಲ್ ಮುಕ್ಕ ಮಿತ್ರಪಟ್ಟಣ ಗಂಗಯ ಸ್ಮಾರಕ ರಾತ್ರಿ ಶಾಲೆಯಲ್ಲಿ ತಾ. 28—9—60ರಂದು ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ದಸರಾ ಹಬ್ಬವು ನೆರವೇರಿತು.

ದೇವಲ್ಕುಂದ— ಶ್ರೀ ವಿಜಯಾ ಪ್ರಾಥಮಿಕ ಶಾಲೆಯಲ್ಲಿ "ಶ್ರೀ ಶಾರದಾಪೂಜಾ" ಸಮಾರಂಭವು ತಾ 28—9—60ರಂದು ಶ್ರೀ ಎಸ್. ಹಿರಿಯಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಕುಕ್ಕಿಕಟ್ಟೆ— ಬುನಾದಿ ಶಾಲೆಯಲ್ಲಿ ಶ್ರೀ ಕೆ. ಗಿರಿಯಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ತಾ. 23—9—60ರಂದು ನಾಡಹಬ್ಬವು ನಡೆಯಿತು. ಸೋಶಿಯಲ್ ವೆಲ್‌ಫೇರ್ ಸೊಸೈಟಿ ದಕ್ಷಿಣ ಕನ್ನಡ ಇವರಿಂದ ಶಾಲೆಯ ಹರಿಜನ ಮಕ್ಕಳಿಗಾಗಿ ಕೊಡಲ್ಪಟ್ಟ ಬಟ್ಟೆಬರೆಗಳನ್ನು ಹಂಚಲಾಯಿತು. ಈ ಸಂದರ್ಭದಲ್ಲಿ ಶ್ರೀ ಕೆ. ಗುರುರಾಜ ಭಟ್ಟ, ಶ್ರೀ ಕೆ. ಶಿವರಾಮ ಶೆಟ್ಟಿ ಇವರು ಮಾತಾಡಿದರು. ಭಜನೆ, ಸಿಹಿ ತಿಂಡಿ ಹಂಚಿಕೆ ಇತ್ಯಾದಿ ಕಾರ್ಯಕ್ರಮಗಳೊಂದಿಗೆ ಸಭಾಂತ್ಯವಾಯಿತು.

ಕಿದಿಯೂರು— ಎಯ್ಡೆಡ್ ಕಿರಿಯ ಬುನಾದಿ ಮತ್ತು ಉನ್ನತ ಪ್ರಾಥಮಿಕ ಶಾಲೆಯಲ್ಲಿ ಸಪ್ತಂಬರ ತಿಂಗಳ ತೇದಿ ೨೮, ೨೯, ೩೦ ರಂದು ನಾಡಹಬ್ಬವು ಸಂಭ್ರಮದಿಂದ ಜರಗಿತು. ತೇದಿ ೨೮ನೇ ಬೆಳಿಗ್ಗೆ ಶಾರದಾಪೂಜೆಯಾಯಿತು. ಸಂಜೆ ಸಭಾ ಕಾರ್ಯಕ್ರಮವು ಆಯುರ್ವೇದ ವಿದ್ವಾನ್ ಶ್ರೀ ಜಿ ಬಿ ಸವಣೂರ ಎಲ್. ಎ. ಎಮ್. ಎಸ್. ಅವರ ಹಿರಿತನದಲ್ಲಿ ನಡೆಯಿತು. ಶಾಲಾ ಆಡಳಿತೆದಾರ ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳು ಸ್ವಾಗತಿಸಿದರು ಶ್ರೀ ಕಡೆಕಾರು ಭೋಜ ಪೂಜಾರಿಯವರು ಮಾತನಾಡಿದ ಬಳಿಕ ಅಧ್ಯಕ್ಷರು ಈ ದಿನದ ಮಹತ್ವವನ್ನು ವಿವರಿಸಿ ಶಾಲೆಯ ಪ್ರಗತಿಯನ್ನು ಕೊಂಡಾಡಿದರು. ಬಳಿಕ ವಿವಿಧ ವಿನೋದಾವಳಿಗಳಾದುವು. ತೇದಿ 29—30ರಲ್ಲಿ ಸಹ ಪೂಜೆ, ಭಜನೆ, ಹರಿಕೀರ್ತನೆ ಮೊದಲಾದ ಕಾರ್ಯಕ್ರಮಗಳಾದುವು.

ಗಾಂಧೀ ಜಯಂತಿ— ಮಂಗಳೂರಿನ ಬಿಜೈ ಮಂಡಲ ಕಾಂಗ್ರೆಸಿನ ನೇತೃತ್ವದಲ್ಲಿ ಗಾಂಧೀ ಜಯಂತಿಯು ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಉಡುಪಿಯ ಜನಪ್ರಿಯ ಮುಂದಾಳುಗಳಲ್ಲೊಬ್ಬರಾದ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ಬಳಿಕ ಶ್ರೀಗಳಾದ ಸೇವ ನಮಿರಾಜ ಮಲ್ಲಿ, ಪಿ. ಎಫ್. ರೊಡ್ರಿಗಸ್, ಬಿ. ಲಕ್ಷ್ಮಣದೇವ ವಿದ್ಯಾರ್ಥಿ ಮೊದಲಾದವರು ಗಾಂಧೀ ಜಯಂತಿಯ ಕುರಿತು ಮಾತನಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ವಂದನಾರ್ಪಣೆಯಾಗಿ ಹರಿಜನ ಕೊಲೊನಿಗೆ ಸ್ವಚ್ಛತೆಯ ಬಗ್ಗೆ ಸಂದರ್ಶನವೀಯಲಾಯಿತು.

ವಿದಾಯ ಸತ್ಕಾರ— ಮಂಗಳೂರಿನ ವಿಜಯ ಬೇಂಕಿನಲ್ಲಿ 20 ವರುಷಗಳಿಂದ ಕಾರ್ಯದರ್ಶಿಗಳಾಗಿದ್ದ ಶ್ರೀ ಬಿ. ಮಹಾಬಲ ಶೆಟ್ಟಿ, ಬಿ. ಎ. ಬಿ. ಎಲ್. ಇವರು ನಿವೃತ್ತರಾಗುವ ಪ್ರಯುಕ್ತ ಕಳೆದ ತಾ. 30ರಂದು ಅವರಿಗೆ ಶ್ರೀ ಬಿ. ಮಂಜಯ ಹೆಗ್ಡೆ, ಬಿ. ಎ. ಬಿ. ಎಲ್. ಅವರ ಅಧ್ಯಕ್ಷತೆಯಲ್ಲಿ ಬೇಂಕಿನ ಪ್ರಧಾನ ಕಾರ್ಯಾಲಯದಲ್ಲಿ ವಿದಾಯ ಸತ್ಕಾರವನ್ನು ಏರ್ಪಡಿಸಲಾಗಿತ್ತು. ಶ್ರೀ ಶೆಟ್ಟರು ಬೇಂಕಿಗೆ ಸಲ್ಲಿಸಿದ ಸೇವೆಯ ಕುರಿತು ಹಲವರು ಪ್ರಶಂಸಿಸಿದರು. ಶ್ರೀ ಶೆಟ್ಟರು ಉತ್ತರಿಸಿದ ಬಳಿಕ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ದೇಲಂಪಾಡಿ— ಮಯ್ಯಾಳ ಶ್ರೀ ಗೋಪಾಲಕೃಷ್ಣ ಎಯ್ಡೆಡ್ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ತಾ. 30—9—60ರಂದು "ಶಾರದಾ ಪೂಜೆ" ಹಾಗೂ "ಹೆತ್ತವರ ಸಭೆ"ಯು ಕಾಸರಗೋಡು ರೇಂಜಿನ ಸಹಾಯಕ ವಿದ್ಯಾಧಿಕಾರಿಗಳಾದ ಶ್ರೀ ಸಂಜೀವ ಏಲ್ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಸಲ್ಪಟ್ಟಿತು.

ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಜಿ. ಕೃಷ್ಣ ಭಟ್ಟರು ಸ್ವಾಗತಿಸಿದರು. ಶ್ರೀ ಎಸ್. ವೆಂಕಪ್ಪ ಶರ್ಮ ಹಾಗೂ ಶ್ರೀ ಕೆ. ವಾಮನ ಕಾಮತರು ಸಭಿಕರ ಪರವಾಗಿ ಮಾತನಾಡಿದರು.

ಅಧ್ಯಕ್ಷರು "ಶಾಲಾಭಿವೃದ್ಧಿ ಕಾರ್ಯದಲ್ಲಿ ಹೆತ್ತವರ ಕರ್ತವ್ಯ"ದ ಕುರಿತು ಮಾತನಾಡಿದರು.

ಉಪಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾರದಾ ಪೂಜೆಯು 29—9—60ರಂದು ನೆರವೇರಿಸಲ್ಪಟ್ಟಿತು.

ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ನಿಧನ:— ಉಡುಪಿಯ ಹಿರಿಯ ಮುಂದಾಳುಗಳಲ್ಲೊಬ್ಬರೂ ಜನಪ್ರಿಯರೂ ಕೊಚ್ಚಿಕಾರ್ ಕುಟುಂಬದ ಹಿರಿಯರೂ ಆಗಿದ್ದ ಶ್ರೀ ಪದ್ಮನಾಭ ಪೈಗಳು ಇದೇ ತಾ. 2ನೇ ಗಾಂಧೀಜಯಂತಿಯ ದಿನ ಬೆಳಿಗ್ಗೆ ತಮ್ಮ 77ನೇ ಪ್ರಾಯದಲ್ಲಿ ಉಡುಪಿ ಬ್ರಹ್ಮಗಿರಿಯ ಸ್ವಗೃಹದಲ್ಲಿ ನಿಧನ ಹೊಂದಿದರು. ದಿ| ಪೈಗಳು ತಮ್ಮ ಕಾಲೇಜು ವಿದ್ಯಾಭ್ಯಾಸದ ನಂತರ ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ಸ್ವಲ್ಪ ಸಮಯ ಕೆಲಸ ನಿರ್ವಹಿಸಿದ್ದರು. ಬಳಿಕ ಅವರು ಜೀವವಿಮಾ ಕ್ಷೇತ್ರಕ್ಕೆ ಪ್ರವೇಶಿಸಿ ಬೊಂಬೇಲೈಫ್ ಇನ್‌ಶೂರೆನ್ಸ್ ಕಂಪೆನಿಯಲ್ಲಿ ಉತ್ತಮ ಸೇವೆ ಸಲ್ಲಿಸಿದರು. ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಸಂಸ್ಥೆಯನ್ನು ಸ್ಥಾಪಿಸಿ ಬೊಂಬೇಲೈಫಿನ ಮುಖ್ಯ ಏಜಂಟರಾದರು. ಉಡುಪಿಯ ಹೊಸ ಮಾದರಿಯ ಕಟ್ಟಡ ನಿರ್ಮಾಣಕ್ಕೆ ಇವರೇ ಕಾರಣರಾಗಿದ್ದರು. ಕೊಚ್ಚಿಕಾರ್ ಬ್ರದರ್ಸ್ ಸಂಸ್ಥೆಯ ಡೈರೆಕ್ಟರರಾಗಿ ಜಿಲ್ಲೆಯಲ್ಲಿಯೂ ಜಿಲ್ಲೆಯ ಹೊರಗೂ ತುಂಬಾ ಖ್ಯಾತಿಗಳಿಸಿದರು. 40 ವರ್ಷಗಳಿಂದ ಉಡುಪಿ ಕೆನರಾ ಬೇಂಕಿಂಗ್ ಕೋ-ಅಪರೇಶನಿನ ಡೈರೆಕ್ಟರರಾಗಿದ್ದರಲ್ಲದೆ ಹಲವು ಸಂಘ ಸಂಸ್ಥೆಗಳಲ್ಲಿ ಆಡಳಿತ ವರ್ಗದಲ್ಲಿದ್ದು ಸೇವೆ ನಿರ್ವಹಿಸಿದ್ದರು. ಸ್ವತಃ ಕಾಂಗ್ರೆಸಿಗರಾಗಿದ್ದರಲ್ಲದೆ ಕಾಂಗ್ರೆಸ್ ಮುಂದಾಳುಗಳಿಗೆ ಸದಾ ಆತಿಥ್ಯವನ್ನೀಯುತ್ತಿದ್ದರು. ಮೇಲು ಕೀಳು ಎನ್ನದೆ ಎಲ್ಲರನ್ನೂ ಸಹೋದರ ಭಾವದಿಂದ ನೋಡುತ್ತಿದ್ದ ಇವರು ಉದಾರಿಗಳೂ ಆತಿಥಿ ಸತ್ಕಾರಕ್ಕೆ ಪ್ರಸಿದ್ಧರೂ ಆಗಿದ್ದರು. ಮೃತರ ದುಃಖೀ ಬಂಧು ಬಳಗದವರೊಡನೆ ನಾವು ಸಹಾನುತಾಪ ಪಡುತ್ತೇವೆ.

ನಾಡಹಬ್ಬ— ಅಂಬಲಪಾಡಿ ಉಡುಪಿ ಗೀತಾಭವನದಲ್ಲಿ ಶಾರದಾ ಜಯಂತಿ ಮತ್ತು ನಾಡ ಹಬ್ಬಗಳ ಕಾರ್ಯಕ್ರಮಗಳು ಜೀವವಿಮಾ ಕಾರ್ಪರೇಶನಿನ ಸೀನಿಯರ್ ಡಿವಿಜನಲ್ ಮೆನೇಜರ ಶ್ರೀ ಟಿ. ಆರ್ ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿದುವು. ಶಾರದಾ ಪೂಜಾ ನಂತರ, ವಿದ್ವಾನ್ ಕೆ ಎಲ್. ಎನ್. ಉಪಾಧ್ಯಾಯರು "ಉಪನಿಷದ್ವಾಣಿ", ಎಂಬುದರ ಕುರಿತಾಗಿ ಮಾತಾಡುತ್ತಾ ಅಪೂರ್ಣಜ್ಞಾನ ಪಡೆದ ನಾವು ಪೂರ್ಣಜ್ಞಾನಗಳಿಸಬೇಕೆಂದು ಉದಾಹರಣೆಗಳಿಂದ ಸ್ಪಷ್ಟಪಡಿಸಿದರು. ವಿದ್ವಾನ್ ಎ. ಸುಬ್ರಾಯಾಚಾರ್ಯರು ಗೀತೆಯ ವಿಶ್ವರೂಪ ಕಥನವನ್ನೂ ನಾಡ ಹಬ್ಬದ ಮಹತ್ವವನ್ನೂ ವಿವರಿಸಿ ವಿಜಯದಶಮಿಯ ದಿನ ನಮ್ಮ ಶರೀರದ ಶುಂಭ ನಿಶುಂಭಾದಿಗಳನ್ನು ಸಂಹರಿಸುವ ನಿರ್ಧಾರ ಮಾಡಬೇಕೆಂದು ಕೇಳಿ ಕೊಂಡರು. ಅಧ್ಯಕ್ಷರು ವಿದ್ವಾಂಸರ ಅಭಿಪ್ರಾಯವನ್ನು ಪುಷ್ಟೀಕರಿಸಿದರು. ಪ್ರಾರಂಭದಲ್ಲಿ ಶ್ರೀ ಎ ಕೃಷ್ಣರಾಯರು ಸ್ವಾಗತಿಸಿ ಅಧ್ಯಕ್ಷರ ಪರಿಚಯ ಮಾಡಿ ಕೊಟ್ಟರು. ಅಂತ್ಯದಲ್ಲಿ ಕಾರ್ಯದರ್ಶಿ ಗೋಪೀಚಂದ ರಾಯರು ಧನ್ಯವಾದಗಳನ್ನರ್ಪಿಸಿದರು.

ಹೆಚ್ಚಿನ ವ್ಯಾಸಂಗಕ್ಕಾಗಿ ಅಮೇರಿಕಕ್ಕೆ— ಮಂಗಳೂರಿನ ನಿವೃತ್ತ ಎಗ್ರಿಕಲ್ಚರಲ್ ಡೆಪ್ಯುಟಿ ಡೈರೆಕ್ಟರ್ ರಾವ್ ಬಹದೂರ್ ಕೆ. ಟಿ. ಆಳ್ವರ ಪುತ್ರ, ಮದ್ರಾಸ್ ಎಗ್ರಿಕಲ್ಚರಲ್ ಸರ್ವಿಸಿನಲ್ಲಿದ್ದ ಶ್ರೀ ಕೆ. ರಾಧಾಕೃಷ್ಣ ಆಳ್ವರೂ ಟಿ. ಸಿ. ಎಮ್. ಫೆಲೋಶಿಪ್‌ನ ಮೇರೆಗೆ ಹೋರ್ಟಿಕಲ್ಚರ್ ವಿಭಾಗದಲ್ಲಿ ಉಚ್ಚ ಶಿಕ್ಷಣಕ್ಕಾಗಿ ಸಪ್ಟಂಬರ 18ರಂದು ಅಮೇರಿಕಕ್ಕೆ ವಿಮಾನಮೂಲಕ ತೆರಳಿರುವರು.

ನಡೂರು— ಶ್ರೀ ಮಹಾಲಿಂಗೇಶ್ವರ ಶಾಲಾ ಹಳೆ ವಿದ್ಯಾರ್ಥಿ ಸಂಘದ ಸಭೆಯು ತಾ 26—9—1960ರಂದು ಜರಗಿ ಶಾಲಾ ಮೆನೇಜರ್ ಶ್ರೀ ಪಿ. ನಾರಾಯಣ ಶೆಟ್ಟರು ಅಧ್ಯಕ್ಷರಾಗಿಯೂ ಪಿ. ವಸಂತ ಕುಮಾರ ಶೆಟ್ಟಿ, ಮತ್ತು ಎನ್. ಭಾಸ್ಕರ ಶೆಟ್ಟರು ಕಾರ್ಯದರ್ಶಿಗಳಾಗಿಯೂ ಪೈ. ಪಾಂಡುರಂಗ ಶೆಟ್ಟಿ ಮತ್ತು ಎನ್. ಸುರೇಂದ್ರನಾಥ ಶೆಟ್ಟರು ಗ್ರಾಮಾಭ್ಯುದಯದ ಸಂಪಾದಕರಾಗಿಯೂ ಆರಿಸಲ್ಪಟ್ಟರು.

ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ— ನಾಡಹಬ್ಬ ಮಹೋತ್ಸವವು ದಿನಾಂಕ ೨೪—೯—೬೦ರಿಂದ ೨೬—೯—೬೦ರ ವರೆಗೆ ವಿಜೃಂಭಣೆಯಿಂದ ಜರಗಿತು. ಮೊದಲ ದಿನ ಶ್ರೀ ರುದ್ರ ಸ್ವಾಮಿಗಳಿಂದ ಧ್ವಜಾರೋಹಣವಾಗಿ ನಾಡದೇವಿಯ ಸ್ಥಾಪನೆ ಪೂಜಾದಿ ಕಾರ್ಯಕ್ರಮಗಳಾದುವು. ಸಾಯಂಕಾಲವೂ ಮರು ದಿನವೂ ಶ್ರೀತ ಶ್ರೀಕಂಠಯ್ಯ, ಎಂ. ಎ. ಅವರು ಭಾಷಣವನ್ನಿತ್ತರು. ಶ್ರೀ ಗುಲಾಮ ರಸೂಲ್, ಎಂ. ಆರ್. ಬುದ್ಧಿವಂತ ಶೆಟ್ಟಿಯವರ ಕಾವ್ಯ ಗಾಯನವಾಯಿತು. ದಿನಾಂಕ ೨೬—೯—೬೦ರಂದು ಶ್ರೀ ಬೋಪಾ ರಾಮಣ್ಣನವರ ಅಧ್ಯಕ್ಷತೆಯಲ್ಲಿ ಶ್ರೀ ಗುಂಡಾಚಾರ್ಯ ಮಾಸ್ತರ್, ಶ್ರೀ ಎಂ. ಜಿ. ಕುಲಕರ್ಣಿಯವರು ಭಾಷಣವನ್ನಿತ್ತರು. ಪ್ರತಿ ದಿನವೂ ಮನರಂಜನೆಯ ಕಾರ್ಯಕ್ರಮಗಳಿದ್ದುವು.

ವಿದಾಯ ಸತ್ಕಾರ— ಉಡುಪಿ ಸರಕಾರೀ ಆಸ್ಪತ್ರೆಯಲ್ಲಿ ಮೆಡಿಕಲ್ ಆಫೀಸರರಾಗಿದ್ದ ಡಾ| ಎನ್. ಎಲ್. ಪೂಂಜರಿಗೆ ಬೆಂಗಳೂರಿಗೆ ವರ್ಗವಾದ ಪ್ರಯುಕ್ತ ಇದೇ ತಾ. 3ರಂದು ಸತ್ಕಾರ ಸಮಿತಿಯವರು ವಿದಾಯ ಸತ್ಕಾರ ಸಮಾರಂಭವೊಂದನ್ನು ರಾಯಭಾರಿ ಆಫೀಸಿನಲ್ಲಿ ಏರ್ಪಡಿಸಿದ್ದರು. ನಗರಸಭಾಪತಿ ಡಾ| ಕೆ. ಎಲ್. ಐತಾಳರು ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿ ಸತ್ಕಾರ ಸಮಿತಿಯ ಪರವಾಗಿ ಶ್ರೀ ಎನ್. ಸೀತಾರಾಮ ಕಾಮತರು ಸ್ವಾಗತಿಸಿದರು. ಶ್ರೀಗಳಾದ ಎಸ್. ಎಲ್. ನಾರಾಯಣ ಭಟ್, ಕೆ. ವರದರಾಯ ಪೈ, ಕೇಶವ ಕುಡ್ವ ಮೊದಲಾದವರು ಅತಿಥಿಗಳ ಕುರಿತು ಮಾತನಾಡಿದರು. ಅತಿಥಿಗಳು ಉತ್ತರಿಸಿದ ಮೇಲೆ ಅಧ್ಯಕ್ಷರ ಭಾಷಣವಾಯಿತು. ಡಾ| ಕನ್ನನ್ ನಂಬಿಯಾರರು ಧನ್ಯವಾದಗಳನ್ನರ್ಪಿಸಿದರು.

ಮಂತ್ರಿ ಡಾ. ಕೆ. ಕೆ. ಹೆಗ್ಡೆಯವರ ಸಂಚಾರ— ರಾಜ್ಯದ ಆರೋಗ್ಯ ಮಂತ್ರಿ ಡಾ. ಕೆ. ಕೆ. ಹೆಗ್ಡೆಯವರು ಇದೇ ತಾ. ೬ಕ್ಕೆ ಬೆಂಗಳೂರಿನಿಂದ ಹೊರಟು ಹಾಸನಕ್ಕಾಗಿ ರಾತ್ರಿ ಮಂಗಳೂರು ತಲಪಿ ಮರು ದಿನ ಅಲ್ಲೇ ಉಳಿಯುವರು. ತಾ. 7ನೇ ಬೆಳಿಗ್ಗೆ ಮಂಗಳೂರಿಂದ ಹೊರಟು ಮಣಿಪಾಲಕ್ಕೆ ಬಂದು ಒಂಭತ್ತು ವರೆ ಗಂಟೆಗೆ 27ನೇ ಮೈಸೂರು ರಾಜ್ಯ ವೈದ್ಯಕೀಯ ಪರಿಷತ್ತನ್ನು ಉದ್ಘಾಟಿಸುವರು. ಅನಂತರವೂ 8, 9ರಂದೂ ಜಿಲ್ಲಾ ಸಂಚಾರ ಮಾಡುವರು. ತಾ. 10ನೇ ಬೆಳಿಗ್ಗೆ ಮಂಗಳೂರಿಂದ ಬೆಂಗಳೂರಿಗೆ ತೆರಳುವರು.

ನವರಾತ್ರಿ ಮಹೋತ್ಸವ— ಉಡುಪಿಯ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದ ಶ್ರೀವರದೇಂದ್ರ ಕಲಾ ಮಂದಿರದಲ್ಲಿ ನವರಾತ್ರಿಯ ಸಲುವಾಗಿ ಪ್ರತಿ ದಿನವೂ ಪುರಾಣ, ವಾಚನ ಮನರಂಜನೆಯ ಕಾರ್ಯಕ್ರಮ ಜರಗಿದವು.

ನವರಾತ್ರಿಯ ಅಂಗವಾಗಿ ಶ್ರೀ ಬ್ರಹ್ಮಚೈತನ್ಯರ ದೂಮಾವತಿ ಯಕ್ಷಗಾನ ಸಂಘದವರು "ಶ್ರೀಕೃಷ್ಣಪಾರಿಜಾತ" ಎಂಬ ಯಕ್ಷಗಾನ ನಾಟಕವನ್ನು ದೇವರ ಸನ್ನಿಧಿಯಲ್ಲಿ ಅಭಿನಯಿಸಿದರು.

ಉಚ್ಚ ಶಿಕ್ಷಣಕ್ಕಾಗಿ ವಿದೇಶ ಪ್ರಯಾಣ— ಉಡುಪಿ ಉದ್ಯಾವರದ ದಿ| ಸದಿಯ ಸಾಹುಕಾರರ ಅಳಿಯ ಹಾಗೂ ದಿ| ಸುಬ್ಬಣ್ಣ ಕುಂದರರ ಪುತ್ರ ಶ್ರೀ ಎಂ. ಲಾಲಾಜಿ ಸಾಲಿಯಾನರವರು ಬಾಲ್ಟಿಮೋರ್‌ನಲ್ಲಿರುವ ಜೋನ್ಸ್ ಹಾಪ್ಕಿನ್ಸ್ ಯುನಿವರ್ಸಿಟಿಯಲ್ಲಿ ಸ್ಯಾನಿಟರಿ ಇಂಜಿನಿಯರಿಂಗ್‌ನಲ್ಲಿ ಹೆಚ್ಚಿನ ಶಿಕ್ಷಣ ಪಡೆಯುವ ಸಲುವಾಗಿ ಕಳೆದ ತಿಂಗಳು ತಾ. 22ರಂದು ಮಂಗಳೂರಿನಿಂದ ವಿಮಾನಮೂಲಕ ಪ್ರಯಾಣ ಮಾಡಿದರು.

ಆಧ್ಯಾತ್ಮ ಸಾಧನೆ

ಸಮರ್ಥ ರಾಮದಾಸ

ಮಹಾರಾಷ್ಟ್ರ ಸಾಮ್ರಾಜ್ಯ ಸ್ಥಾಪಕ ಶಿವಾಜಿಯ ಗುರು ಸಮರ್ಥ ರಾಮದಾಸರು ಭೌತಿಕ ಬಂಧನದಿಂದ ಮುಕ್ತರಾಗಿ ತಮ್ಮ ತಪೋಬಲದಿಂದ ಶಿಷ್ಯರನ್ನು ಅನುಗ್ರಹಿಸಿ ಶ್ರೀರಾಮನಲ್ಲಿ ಐಕ್ಯರಾದರು.

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಕೆಲವು ಶತಮಾನಗಳ ಹಿಂದೆ ಮಹಾರಾಷ್ಟ್ರ ದೇಶದಲ್ಲಿ 'ಜಂಬೂ' ಹೆಸರಿನ ಒಂದು ಹಳ್ಳಿಯಲ್ಲಿ ಸೂರ್ಯಾಜಿನಾಮಧೇಯದ ಒಬ್ಬ ವಿಪ್ರೋತ್ತಮನಿದ್ದನು. ಆತನು ಪ್ರತಿನಿತ್ಯವೂ ಸುಜ್ಞಾನ ಮಂತ್ರವಾದ ರಾಮನಾಮವನ್ನು ಜಪಿಸುವ ವಾಡಿಕೆಯನ್ನಿಟ್ಟುಕೊಂಡಿದ್ದನು. ಆತನಿಗೆ ಪತಿವ್ರತಾ ಶಿರೋಮಣಿಯಾದ ಪತ್ನಿ ಇದ್ದಳು. ಅವರಲ್ಲಿ ಆಗಾಗ್ಗೆ ರಾಮಾಯಣಪಾರಾಯಣವಾಗುತ್ತಿತ್ತು. ಊರ ಜನರು ಈ ದಂಪತಿಗಳನ್ನು ಭಯಭಕ್ತಿಯಿಂದ ಮನ್ನಿಸುತ್ತಿದ್ದರು. ಹಲವು ವರ್ಷಗಳ ತನಕ ಇವರಲ್ಲಿ ಸಂತತಿಯಾಗಲಿಲ್ಲ, ಕೊನೆಯಲ್ಲಿ ಆಂಜನೇಯೋಪಾಸನೆಯನ್ನು ಮಾಡಿದಾಗ ಆ ಕುಟುಂಬದಲ್ಲಿ ಒಬ್ಬ ಪುತ್ರನು ಜನಿಸಿದನು. ಸಂತೋಷದಿಂದ ದಂಪತಿಗಳು ಬಡಬಗ್ಗರಿಗೆ ಅನ್ನದಾನ ಮಾಡಿದರು. ಶುಕ್ಲಪಕ್ಷದ ಚಂದ್ರನಂತೆ ಶೋಭಿಸುವ ಮಗನನ್ನು ರಾಮದಾಸನೆಂದು ಕರೆದರು. ಆತನು ದೇವಶಕ್ತಿಯಿಂದಲೂ, ಆಂಜನೇಯ ಕೃಪೆಯಿಂದಲೂ ಸಕಲ ವಿದ್ಯೆಗಳಲ್ಲೂ ಪಾರಂಗತನಾಗಿ ಮಹಾಜ್ಞಾನಿಯಾಗಿ ಪ್ರಕಾಶಿಸಿದನು. ಊರಜನರು ಆತನ ಪ್ರಾಜ್ಞತೆಯನ್ನು ಕಂಡು ಆಶ್ಚರ್ಯಗೊಂಡರು. ಮುಖ್ಯಪ್ರಾಣನ ಅಂಶವಾದುದರಿಂದ ತನ್ನ ಬಾಲ್ಯದಲ್ಲಿ ಗಿಡಗಳನ್ನೇರುವುದೂ, ಹಾರುವುದೂ ಮೊದಲಾದ ಕಪಿಕಾರ್ಯ ಕ್ರಮದಲ್ಲಿ ಅಭಿರುಚಿಗೊಂಡಿದ್ದನು.

ಎಂಟು ವರ್ಷಗಳಾದಾಗ ರಾಮದಾಸನಿಗೆ ಉಪನಯನವಾಯಿತು. ಧೈರ್ಯಶಾಲಿಯೂ, ಉತ್ಸಾಹಭರಿತನೂ, ಭಾಗ್ಯಶೀಲನೂ ಆದ ಈತನನ್ನು ಜನರು 'ಸಮರ್ಥ'ನೆಂದು ಕರೆಯತೊಡಗಿದರು. ಹೀಗೆಯೆ ಆತನಿಗೆ ಹದಿನಾರು ವರ್ಷಗಳು ತುಂಬಿದಾಗ, ಆತನ ಹೆತ್ತವರು ಆತನಿಗೆ ಮದುವೆಮಾಡಬೇಕೆಂತ ಅಪೇಕ್ಷೆಪಟ್ಟಾಗ, ಆತನು ಒಡಂಬಡಲಿಲ್ಲ. ನೆಂಟರಿಷ್ಟರಿಂದಲೂ, ಊರ ಪ್ರಮುಖರಿಂದಲೂ ಹೇಳಿಸಿ ನೋಡಿದರು. ಯಾವುದೂ ಸಾಧಿಸಲಿಲ್ಲ. ಕೊನೆಗೆ ಆತನನ್ನು ಕೇಳದೆ, ಯೋಗ್ಯಳಾದ ಕನ್ಯೆಯನ್ನು ನಿಶ್ಚಯಿಸಿದರು. ವಿವಾಹ ದಿನವನ್ನು ಕೂಡ ನೋಡಿ ಮದುವೆಯ ಯಾವತ್ತೂ ಸಿದ್ಧತೆಗಳು ಏರ್ಪಟ್ಟವು. ವಿವಾಹ ಮುಹೂರ್ತವು ಸಂಧಿಸಿತು. ಮಂಗಳ ವಾದ್ಯಗಳು ಮೊಳಗಿದವು. ವಿಪ್ರರ ವೇದಪಾರಾಯಣೆ ಶುರುವಾಯಿತು. ಕನ್ಯೆಯನ್ನು ಲಗ್ನ ಮಂಟಪಕ್ಕೆ ಕರೆ ತಂದರು. ಕುಲ ಪುರೋಹಿತರು ಮಂಗಳ ಸೂತ್ರವನ್ನು ರಾಮದಾಸನ ಕೈಯ್ಯಲ್ಲಿ ಕೊಟ್ಟು "ಇದನ್ನು ನಿನ್ನ ಸತಿಯಾಗುವ ಈ ಕನ್ಯೆಯ ಕಂಠದಲ್ಲಿ ಧಾರಣ ಮಾಡು" ಎಂದರು. ಆಗ ತರುಣ ರಾಮದಾಸನು "ಈ ಸೂತ್ರವು ನನಗೆ ಅವಶ್ಯವಿಲ್ಲ. ಇದು ಭೌತಿಕ ಪ್ರೇಮಪಾಶದ ಸೂತ್ರವು. ಇದನ್ನು ಈಕೆಯ ಕಂಠಕ್ಕೆ ಬಂಧಿಸುವ ಯೋಗವು ನನ್ನಲಿಲ್ಲ" ಎಂದು ಗಟ್ಟಿಯಾಗಿ ನುಡಿದು, ಆ ಸ್ಥಳವನ್ನು ಬಿಟ್ಟು ಅರಣ್ಯಾಭಿಮುಖನಾಗಿ ಹೋಯಿವಾದನು. ಆತನ ವೃದ್ಧ ಮಾತಾಪಿತರು ಗಳಗಳನೆ ಅತ್ತರು. ಬಂದ ಅತಿಥಿಗಳು ಹಿಂದಿರುಗಿದರು. ವಿವಾಹಕಾರ್ಯವು ನಡೆಯಲಿಲ್ಲ. ಆತನ ತಾಯಿ ತಂದೆಯರು ನಿರಾಶರಾದರು.

ರಾಮದಾಸನಿಗೆ ಸಂಸಾರ ಬಂಧನದ ಅಪೇಕ್ಷೆ ಇರಲಿಲ್ಲ. ತಾನು ಸನ್ಯಾಸಿಯಾಗಿಯೆ ಈ ಮಾನವಜನ್ಮದಿಂದ ಮುಕ್ತನಾಗಬೇಕೆಂದು ಹವಣಿಸಿದ್ದನು. ಅಲ್ಲಿಂದ ಓಡಿ ಬಂದವನೇ ಭಯಭೀತಿಯಿಲ್ಲದೆ ನಿಬಿಡವಾದ ಕಾಡೊಂದನ್ನು ಹೊಕ್ಕು ಅಲ್ಲಿದ್ದ ಕೆರೆಯಲ್ಲಿ ಸ್ನಾನಮಾಡಿ ಆಂಜನೇಯಾನುಗ್ರಹದಿಂದ ತನ್ನ ಸನ್ಯಾಸಧರ್ಮಕ್ಕೆ ಭಂಗಬರಲಿಲ್ಲವೆಂದು ಹನುಮನನ್ನು ಸ್ತುತಿಸುತ್ತಾ ಹಲವು ವರ್ಷಗಳವರೆಗೆ ಕಂದಮೂಲ ಫಲಗಳ ಭಕ್ಷಣೆಯಿಂದ ರಾಮಸ್ಮರಣೆಮಾಡುತ್ತಾ ಮಹಾಯೋಗಿಯಾದನು. ಇಡಿ ದೇಶದಲ್ಲಿ ಆತನ ಹೆಸರು ಪ್ರಖ್ಯಾತಿಯಾಯಿತು.

ಒಂದು ದಿನ ಆತನ ಅಪಾರವಾದಭಕ್ತಿಗೆ ಮೆಚ್ಚಿ ಅದನ್ನು ಸಂಪೂರ್ಣವಾಗಿಪರೀಕ್ಷಿಸುವ ಬಗ್ಗೆ ಪರಮಾತ್ಮನು ಆತನಿರುವ ಆ ನಿಬಿಡವಾದ ಅರಣ್ಯಕ್ಕೆ ಆಂಜನೇಯನನ್ನು ವ್ಯಾಘ್ರ ರೂಪದಲ್ಲಿ ಕಳುಹಿಸಿದನು. ಅತಿ ಭಯಂಕರ ಸ್ವರೂಪದ ಹುಲಿಯೊಂದು ಆ ಕಾಡಿನಲ್ಲಿ ರಾಮದಾಸನ ಮುಂದೆ ನಿಂತು ಗರ್ಜಿಸುವಾಗ, ಸಮರ್ಥನು ನಗುನಗುತ್ತಾ ತನ್ನ ಜ್ಞಾನದೃಷ್ಟಿಯಿಂದ ಬಂದವನು ಮುಖ್ಯಪ್ರಾಣನೆಂದು ಅರಿತು ತನ್ನ ಎರಡೂ ಕೈಗಳನ್ನು ಜೋಡಿಸಿ ಗರ್ಜಿಸುವ ಕೃತಕ ಮೃಗವನ್ನು ನಮಿಸಿದನು. ಆಗ ಆಕಾಶದಿಂದ

ಅತಿ ವೇಗದಲ್ಲಿ ಚಲಿಸಬಲ್ಲ ಅಮೆರಿಕದ ನೂತನ ಮಾದರಿಯ ಲಾಂಚು.

ಪುಷ್ಪವೃಷ್ಟಿಯು ಸುರಿಯಿತು. ಆಗ ಸೋತ ಆಂಜನೇಯನು ತನ್ನ ನಿಜರೂಪವನ್ನು ಭಕ್ತ ರಾಮದಾಸನಿಗೆ ತೋರಿಸಿ "ನೀನು ಸಾಯುಜ್ಯವನ್ನು ಪಡೆವೆ" ಎಂದು ಮೈಮುಟ್ಟಿ ಆಶೀರ್ವದಿಸಿ ಅದೃಶ್ಯನಾದನು. ರಾಮದಾಸ ಸಮರ್ಥನು ರಾಮಾಂಜನೇಯರನ್ನು ಭಕ್ತಿಪೂರ್ವಕವಾಗಿ ಸ್ತುತಿಸುತ್ತಾ ಕ್ರಮೇಣ ಚಂದ್ರಭಾಗಾನದಿಯ ತೀರದಲ್ಲಿರುವ ಪುಣ್ಯಕ್ಷೇತ್ರವಾದ ಪಂಡರಾಪುರಕ್ಕೆ ಬಂದು ವಿಠಲಧ್ಯಾನದಲ್ಲಿ ಮಗ್ನನಾಗಿ, ಸುದಿನದಲ್ಲಿ ಈ ನಶ್ವರವಾದ ಭೂಮಿಯಿಂದ ಅದೃಶ್ಯನಾಗಿ ರಾಮನಲ್ಲಿ ಐಕ್ಯಹೊಂದಿದನು.

ತಪೋಕಾಲದಲ್ಲಿ ಆತನನ್ನು ಅನೇಕ ಭಕ್ತರೂ ಶಿಷ್ಯರೂ ಆವರಿಸಿಕೊಂಡಿದ್ದರು. ಅವರಲ್ಲಿ ಛತ್ರಪತಿ ಶಿವಾಜಿ ಮಹಾರಾಜನೊಬ್ಬನು. ಶಿವಾಜಿಯು ಸಮರ್ಥನಲ್ಲಿ ಸಂಪೂರ್ಣ ಭಕ್ತಿಯನ್ನಿರಿಸಿ, ದಿನೇ ದಿನೇ ಆತನನ್ನು ಧ್ಯಾನಿಸಿ, ಕಷ್ಟ ಸಂಘಟನೆಗಳು ಬಂದಾಗ ಸಮರ್ಥನು ಸೂಚಿಸುವ ಉಪಾಯಗಳನ್ನು ಮಾಡಿ ವೈರಿಗಳನ್ನು ಸುಲಭವಾಗಿ ಗೆಲ್ಲುತ್ತಿದ್ದನು. ಶಿವಾಜಿ ರಾಮದಾಸರಲ್ಲಿ ನಡೆದ ಅನೇಕ ಕಥೆಗಳಿವೆ, ರಾಮದಾಸನ ದೃಷ್ಟಿಯಲ್ಲಿ ಶಿವಾಜಿ ಮಹಾರಾಜನು ಆತನ ಶಿಷ್ಯರಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದನು. ಇಂತಹ ವಿಕ್ರಮ ಭಕ್ತಿ ಯೋಗವನ್ನು ಪಡೆದ ಮಹಾತ್ಮರು ನಮ್ಮ ಪುಣ್ಯ ದೇಶದಲ್ಲಿ ಹಿಂದೆ ಎಷ್ಟೋ ಮಂದಿ ಆಗಿ ಹೋದರು. ಈ ಕಾಲದಲ್ಲಿ ಕೂಡ ಅಂತಹ ಯೋಗಿಗಳ ಆತ್ಮಬಿಂಬದ ಶಕ್ತಿಯಿಂದಲೇ ಆಂಜನೇಯನ ಉಪಾಸನೆಯಿಂದಲೇ, ಅಲ್ಲಲ್ಲಿ ತಲೆದೋರುವ ನಾಸ್ತಿಕತೆಗೆ ಎಡೆಯಿಲ್ಲದಂತಾಗುವುದು ನಿಶ್ಚಯವು.

ಅಭಿಪ್ರಾಯ

(೫ನೇ ಪುಟದಿಂದ)

ಹೌದು. ಪತ್ರಿಕಾಕಾರರಾಗಿಯೂ ಇವರು ದುಡಿದಿದ್ದರು. ಒಡಿಸ್ಸದಲ್ಲಿ ಪ್ರಕಟವಾಗುವ 'ಪ್ರಜಾತಂತ್ರ' ಮತ್ತು ಆಂಗ್ಲ ಭಾಷೆಯ 'ಈಷ್ಟರ್ನ್ ಟಾಯಿಮ್ಸ್' ಪತ್ರಿಕೆಗಳನ್ನು ಇವರೇ ಸ್ಥಾಪಿಸಿದ್ದರು.

ಪ್ರಥಮ ಸಾರ್ವತ್ರಿಕ ಚುನಾವಣೆಗಳ ನಂತರ ಡಾ. ಮೆಹತಾಬರು ಕೇಂದ್ರೀಯ ಕಾಂಗ್ರೆಸ್ಸಿನ ಸಂಸತ್ ಪಕ್ಷದ ಪ್ರಧಾನ ಕಾರ್ಯದರ್ಶಿಯವರಾಗಿ ಚುನಾಯಿತರಾದರು. ಬೊಂಬಾಯಿಯ ರಾಜ್ಯಪಾಲ ಪದವಿಯಲ್ಲಿ ಕೇವಲ ೨೦ ತಿಂಗಳ ಅಲ್ಪಾವಧಿಯಲೇ ಇವರು ಅಲ್ಲಿನ ಎಲ್ಲ ದಳಗಳವರ ವಿಶ್ವಾಸವನ್ನೂ ಗಳಿಸಿದ್ದರು; ಪ್ರತಾಪ ಗಡದಲ್ಲಿ ಶಿವಾಜಿಯ ಪ್ರತಿಮೆ ಸ್ಥಾಪಿಸುವ ಕಾರ್ಯದಲ್ಲಿ ಸಕ್ರಿಯಭಾಗ ವಹಿಸಿದ್ದರು.

ಭೂದಾನ ಆಂದೋಲನವು ತರ್ಕ ಶುದ್ಧವಾದುದೆಂದು ಇವರು ಒಪ್ಪುವುದಿಲ್ಲ. ಇದು ಕೇವಲ 'ದರಿದ್ರತಾ ವಿತರಣಾ ಆಂದೋಲನ'ವೆಂದು ಡಾ| ಮೆಹತಾಬರ ಖಚಿತಾಭಿಪ್ರಾಯ. ಅಹಿಂದೀ ಭಾಷಾ ಪ್ರದೇಶದವರಾದರೂ ಇವರು ಹಿಂದಿಯನ್ನು ವಿರೋಧಿಸುವುದಿಲ್ಲ. ಶಾಲೆ ಮತ್ತು ಕಾಲೇಜುಗಳಲ್ಲಿ ಹಿಂದಿಯನ್ನು ಶಿಕ್ಷಣ ಮಾಧ್ಯಮವಾಗಿ ಮಾಡಬೇಕೆಂದಿವರು ಹೇಳುತ್ತಾರೆ ಕಾಂಗ್ರೆಸ್ ಪಕ್ಷದಲ್ಲಾದರೂ ಪ್ರಧಾನಿ ನೆಹರುರವರ ಪ್ರಬಲ ಸಮರ್ಥಕರಲ್ಲಿ ಇವರೂ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ. 'ಸಾಧನಾರ ಪಥೇ' ಎಂಬ ಹೆಸರಿನಲ್ಲಿ ತಮ್ಮ ಆತ್ಮ ಕಥೆಯನ್ನು ಒಡಿಯಾ ಭಾಷೆಯಲ್ಲಿ ಬರೆದಿದ್ದಾರೆ.

ಹರ್ಷ ಬಾಲಗ್ರಹ ತೈಲ

HARSHA BALAGRAHA TAILA

A Reputed Remedy for Fits.

ಬಾಲಗ್ರಹ ರೋಗಕ್ಕೆ
ಒಂದು ಖಾತ್ರಿಯಾದ ಮದ್ದು.

ಉಪಯೋಗದ ಕ್ರಮ ಸೀಸೆಯಲ್ಲಿದೆ.

ದ. ಕ. ಜಿಲ್ಲೆಯನ್ನು ಬಿಟ್ಟು ಉಳಿದ ಎಲ್ಲಾ ಕಡೆಗಳಿಗೂ ಏಜಂಟರು ಬೇಕು.

ಬೆಲೆ: ತೊಲೆ ಬಾಟ್ಲಿ 0—6—0. ವ್ಯಾಪಾರಸ್ಥರಿಗೆ ಕಮಿಷನ್.

ಸ್ಟಾಕಿಸ್ಟರು:— U. Venkatesh Jogappa Shanbhogue & Sons, Udipi.

V. V. Shenoy & Sons, Karkala.

ಚಂದಾಹಣ—

ಬಾಕಿ ಇರುವ ಚಂದಾದಾರರಿಗೆ ಮುಂದಿನ ವಾರದ ೧೫ರ ಅನಂತರದ ಪತ್ರಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಈ ಬಗ್ಗೆ ಯಾರೂ ದಯಮಾಡಿ ಅನ್ಯಥಾ ಭಾವಿಸದೆ ವಿ. ಪಿ.ಯನ್ನು ಪಡಕೊಂಡು ಸಹಕರಿಸಬೇಕಾಗಿ ವಿನಂತಿ.

—ಮೆನೇಜರ್

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಷ್ಟವಂತೆ ತೋರುವುದಿಲ್ಲ. ಇದರಿಂದಾಗಿಯೇ ಇಂಡೋನೇಶಿಯಾದ ಡಾ|| ಸುಕರ್ಣರು ಮುಂಬರುವ ಶಿಖರ ಸಮ್ಮೇಳನದಲ್ಲಿ ಆಫ್ರೇಸ್ಯಾ ರಾಷ್ಟ್ರಗಳ ಪ್ರತಿನಿಧಿಗಳಿಗೂ ಭಾಗವಹಿಸುವ ಅವಕಾಶವಿರಬೇಕೆಂದು ಅಂದಿದ್ದಾರೆ. ಇವರನ್ನುವಂತೆ ಬೃಹತ್ತಾಯ ದೇಶಗಳು ಮಾತ್ರ ಶಾಂತಿ ಅಥವಾ ಯುದ್ಧವೆಸಗಲು ಸಮರ್ಥರೆಂದು ತಿಳಿಯಬಾರದು; ಶಾಂತಿಭಂಗಮಾಡುವ ಶಕ್ತಿ ನಮ್ಮಲ್ಲಿದೆಯೆಂದವರು ಈ ರೀತಿ ನಿರ್ಣಯಿಸಿದರೆ, ಅದು ಉಚಿತವಾಗದು. ಈ ನಾಲ್ಕು ರಾಷ್ಟ್ರಗಳು ಒಟ್ಟಾಗಿಯಲ್ಲವೇ ಬೇರೆಬೇರೆಯಾಗಿ ಜಗತ್ತಿನ ಭವಿಷ್ಯದ ನಿರ್ಣಯ ಮಾಡಲು ಅಧಿಕಾರ ಸಂಪನ್ನರಲ್ಲ. ಪಂಚರ ರಾಷ್ಟ್ರ ಪ್ರಸ್ತಾಪವನ್ನು ಸ್ವೀಕರಿಸಿದರೆ, ಅಮೆರಿಕೆಯು ವಿಷಮ ಸ್ಥಿತಿಗೆ ಇಳಿಯುವುದೆಂದು ಇನ್ನು ಕೆಲವರ ವಿಚಾರಧಾರೆ. ಸೋವಿಯತ್ ರಶ್ಯ ಆರ್. ಬಿ. ೪೭ರ ಜೀವಂತ ಕರ್ಮಚಾರಿಗಳನ್ನು ಬಿಡುಗಡೆಗೊಳಿಸಿದರೆ, ನಾಯಕದ್ವಯರ ಭೆಟ್ಟಿಗೆ ಭಾದಕವಾಗಿರುವ ವಾತಾವರಣವು ತುಸು ನಿರ್ಭಾದಕವಾಗಬಹುದು; ಅಮೆರಿಕೆಯ ಅಧಿಕಾರಿಗಳು ಆರ್. ಬಿ. ೪೭ ಮತ್ತು ಯು ೨ರ ವಿಮಾನ ಘಟನೆಗಳ ನಡುವೆ ಭಿನ್ನತೆಯಿದೆಯೆಂದು ಹೇಳುತ್ತಾರೆ. ಇವರ ಅಭಿಪ್ರಾಯದಂತೆ ಯು ೨ ವಿಮಾನದ ಚಾಲಕನ ಬಂಧನ ವಿರೋಧರೂಪವಾಗಿ ಶಿವರೊಡನೆ ಆಧಾರವಿರುವುದಿಲ್ಲ; ಆದರೆ, ಆರ್. ಬಿ. ೪೭ ವಿಮಾನವನ್ನು ಅಂತರಾಷ್ಟ್ರೀಯ ಕ್ಷೇತ್ರದಲ್ಲಿಯೇ ಹೊಡೆದುರುಳಿಸಲಾಯಿತು ಎನ್ನುತ್ತಾರೆ.

ತಟಸ್ಥರಾಷ್ಟ್ರಗಳ ಗೊತ್ತುವಳಿಯ ಬಗ್ಗೆ ಕ್ರುಶ್ಚೇವರ ಪ್ರತಿಕ್ರಿಯೆ ಇಷ್ಟರಲ್ಲಿಯೇ ತಿಳಿದುಬಂದೀತು. ಸ್ವಾಭಾವಿಕವಾಗಿ ಇದು ಭಿನ್ನಮತೀಯವಾಗಿಯೂ ಇರಬಹುದು. ಕೇವಲ ಭೆಟ್ಟಿಯಿಂದೇನು ಪ್ರಯೋಜನವೆಂಬ ಸವಾಲು ಹಾಕಿಕೊಂಡು ಉತ್ತರ–ದಕ್ಷಿಣ ಧ್ರುವಗಳಂತೆ ವಿರುದ್ಧ ದಿಕ್ಕಿಗೆ ಮುಖಹಾಕಿ ಕುಳಿತಮಾತ್ರಕ್ಕೆ ವಿಶ್ವಶಾಂತಿಯೂ ಇಲ್ಲ; ವಿಶ್ವತ್ವೇಷನಾಶವೂ ಇಲ್ಲ. ಆದುದರಿಂದ ಇಕ್ಕಡೆಯುವರೂ ಈ ಗೊತ್ತುವಳಿಯ ಮೂಲ ಉದ್ದೇಶ ಸಾಧನೆಗಾಗಿ ಸ್ವಯಂ ಪ್ರೇರಣೆಯಿಂದ ಮುಂದೆ ಬಂದರೆ ಮಾತ್ರ ಸ್ವಲ್ಪವಾದರೂ ಪರಿಣಾಮಕಾರಿಯಾದೀತು. ಅದು ಹೊರತು ವಿಭಿನ್ನತೆಗೆ ಅಂಟಿ ಕೂರುವುದಾದರೆ ಬಿದಿಗೆಯ ಬಂಬಾಧರದಲಿ ಇಂದಿಗು ಮಿಲನದ ಚಿಹ್ನೆಯು ತೋರದಿದೆ' ಎಂಬುದು ಸ್ಥಿರಸತ್ಯವಾಗಬಹುದು.

— —

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1–25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಎಡ ಚಿತ್ರ; ಹೊಗೆ ಸೊಪ್ಪು ರಫ್ತು ಮಾಡುವುದಕ್ಕೆ ಸಿದ್ಧಗೊಳ್ಳುತ್ತಿರುವಾಗ, ಅದನ್ನು ಹೊಗೆ ಸೊಪ್ಪಿನ ಉನ್ನತಾಧಿಕಾರಿಯೊಬ್ಬನು ಪರಿಶೀಲಿಸುತ್ತಿದ್ದಾನೆ. ಬಲ ಚಿತ್ರ; ಹುಲುಸಾಗಿ ಬೆಳೆದ ಹೊಗೆಸೊಪ್ಪಿನ ಪೈರಿನ ತೋಟ.

ಜನಜೀವನ

(೪ನೇ ಪುಟದಿಂದ)

ಕಷ್ಟವೇಳೆ ಜೀವ ತೊರೆಯುವುದೂ ಇದೆ; ಆದರೆ, ಇದರಿಂದ ಅವರಿಗೆ ಲವಲೇಶದಷ್ಟೂ ಹೆದರಿಕೆಯೆಂಬುದು ಜನಿಸುವುದಿಲ್ಲ.

ನೈಜೀರಿಯಾದ ಪೂರ್ವಪ್ರದೇಶದಲ್ಲಿ ಸುಮಾರು ೫೦ ಲಕ್ಷದಷ್ಟು ಇಬೋ ವಂಶಕ್ಕೆ ಸೇರಿದ ಜನರಿದ್ದಾರೆ. ಇವರಲ್ಲಿ ವಿವಾಹಕ್ಕೆ ವಧುವಿಗೆ ವರದಕ್ಷಿಣೆ ಕೊಡುವ ಪದ್ಧತಿಯಿದೆ. ನಮ್ಮಲ್ಲಿ ಹುಡುಗಿಯ ಕಡೆಯವರು ವರದಕ್ಷಿಣೆ ಕೊಡುವುದಾದರೆ, ಅವರಲ್ಲಿ ಹುಡುಗನವರಾಗಿ ವಧೂ ದಕ್ಷಿಣೆಯನ್ನು ನೀಡಬೇಕಾಗುತ್ತದೆ. ಇಬೋ ಜಾತಿಯಲ್ಲಿ ಪುರುಷರು ತಮ್ಮ ಪತ್ನಿಯನ್ನು ಚುಂಬಿಸುವುದು ವರ್ಜಿಸಲ್ಪಟ್ಟಿದೆ. ಕಣ್ಣುಗಳೊಡನೆ ಕಣ್ಣುಗಳನ್ನು ಸೋಕಿಸಿಯೇ ಪ್ರೇಮ ಪ್ರದರ್ಶನ ಮಾಡಬೇಕಾಗುತ್ತದೆ. ಈ ಜಾತಿಯ ಪುರೋಹಿತನು ಹಲವಾರು ವ್ರತನಿಯಮಗಳನ್ನು ಪಾಲಿಸಬೇಕಾಗುತ್ತದೆ ಆತ ಯಾವುದೇ ಶವವನ್ನು ನೋಡಬಾರದು; ಮೊಟ್ಟೆ, ಮಾಂಸಾದಿಗಳನ್ನು ತಿನ್ನಬಾರದು; ಆತನ ಮನೆಯಲ್ಲಿ ನಾಯಿ ಹೊಗಬಾರದು. ಒಂದುವೇಳೆ ಆಕಸ್ಮಾತ್ ಒಂದು ನಾಯಿ ಬಂದಿತೆಂದರೆ, ಅದನ್ನು ಬಡಿದೇ ಕೊಂದು ಹಾಕುತ್ತಾರೆ.

ದೇಶದ ಪಶ್ಚಿಮ ಪ್ರದೇಶವು ಪ್ರಗತಿಪಥದಲ್ಲಿ ಉಳಿದೆರಡು ಪ್ರದೇಶಗಳನ್ನು ಮೀರಿದೆ. ಆದರೂ ಇಲ್ಲಿ ವೈಚಿತ್ರ್ಯವೆಂಬುದು ಇಲ್ಲದಿಲ್ಲ. ಇವರ ಉತ್ತರಾಧಿಕಾರ ನಿಯಮವು ಸೋಜಿಗವಿದೆ. ತಂದೆಯ ಸಂಪತ್ತಿಯು ಮಗನಿಗೂ ತಾಯಿಯದು ಮಗನಿಗೂ ದೊರೆಯುತ್ತದೆ.

ನೈಜೀರಿಯಾ ಒಂದು ದೇಶವಲ್ಲ; ಕಡಿಮೆಯೆಂದರೆ, ಮೂರು ದೇಶವೆಂದು ಒಬ್ಬ ಸಮಾಲೋಚಕನು ಹೇಳಿದ್ದಾನೆ. ನೈಜೀರಿಯಾವು ರಾಜಧಾನಿಯನ್ನು ಬಿಟ್ಟು, ಉತ್ತರ ಪೂರ್ವ ಮತ್ತು ಪಶ್ಚಿಮ ಭಾಗಗಳೆಂದು ವಿಭಜಿತವಾಗಿದೆ. ಪೂರ್ವ ಮತ್ತು ಪಶ್ಚಿಮ ಪ್ರದೇಶಗಳನ್ನು ಸೇರಿಸಿ 'ದಕ್ಷಿಣ ಪ್ರದೇಶ'ವೆಂದೂ ಕರೆಯುತ್ತಾರೆ. ಈ ಮೂರು ಪ್ರದೇಶಗಳ ಜನಜೀವನ ಮಾತ್ರ ಭಿನ್ನವಿರುವುದಲ್ಲದೇ ರಾಜಕೀಯ ಪರಿಸ್ಥಿತಿಯೂ ಬೇರೆ ಬೇರೆಯಿದೆ. ಪೂರ್ವ ಮತ್ತು ಪಶ್ಚಿಮ ಪ್ರದೇಶಗಳು ಸಾಕಷ್ಟು ಪ್ರಗತಿಗಳಿಸಿವೆ. ೧೯೫೬ರಿಂದಲೇ ಬ್ರಿಟಿಷರು ಹೊರಹೋಗಬೇಕೆನ್ನುವ ಬೇಡಿಕೆಯನ್ನು ಮುಂದಿಟ್ಟಿವೆ. ಉತ್ತರ ಪ್ರದೇಶವು ಹಿಂದುಳಿದುದಿದ್ದು ಇಂಗ್ಲಿಷರು ಹೊರಟು ಹೋದನಂತರ, ಎಲ್ಲಾದರೂ ದಾಕ್ಷಿಣಾತ್ಯರು ತನ್ನಮೇಲೆ ಅಧಿಕಾರ ಜಮಾಯಿಸಬಾರದೆಂದು ಇದನ್ನು ವಿರೋಧಿಸುತ್ತದೆ.

ಪೂರ್ವ ಮತ್ತು ಪಶ್ಚಿಮ ಪ್ರದೇಶಗಳಲ್ಲಿ ಸ್ತ್ರೀಯರಿಗೂ ಮತದಾನದ ಅಧಿಕಾರವನ್ನು ನೀಡಲಾಗಿದ್ದು, ಉತ್ತರ ಪ್ರದೇಶದಲ್ಲಿ ಮಾತ್ರ ಇಲ್ಲವೆಂಬುದೇ ವಿಚಿತ್ರ ಸಂಗತಿ. ಈ ಬಗ್ಗೆ ಔತ್ತರೇಯರು ಹೋರಾಡುವುದಕ್ಕೂ ಸಿದ್ಧರು. ಅನಕ್ಷರತೆ ಮತ್ತು ಅಜ್ಞಾನ ಜರ್ಜರಿತ ದೇಶದಲ್ಲಿ (ಪ್ರಾಯಶಃ ಪ್ರಪಂಚದಲ್ಲಿ ಮೊದಲನೆಬಾರಿಗೆ) ಕೆಲವೊಂದು ಸ್ಥಾನಗಳಲ್ಲಿ ಕಳೆದ ಚುನಾವಣೆಗಳಲ್ಲಿ ಮತದಾನವೂ ನಡೆಯಿತು. ಮತದಾನ ಕ್ರಮವೂ ಅತಿ ವಿಚಿತ್ರವಿತ್ತು. ಮತದಾತಾರನು ಮತಾಧಿಕಾರಿಯ ಕಿವಿಯಲ್ಲಿ ಯಾರಿಗೆ ನೀಡಬೇಕೆಂದು ಹೇಳುತ್ತಿದ್ದನು; ಮತಾಧಿಕಾರಿಯು ಆ ವ್ಯಕ್ತಿಗೆ ಮತವೀಯುತಿದ್ದನು.

ಇಲ್ಲಿನ ವಿದೇಶೀ ಶಾಸಕರು ಈ ದೇಶದ ಬಗ್ಗೆ ಸ್ನೇಹವೃತ್ತಿಯನ್ನಿಟ್ಟುಕೊಂಡಿದ್ದುದು ಮತ್ತೊಂದು ಚೋದ್ಯ. ಸ್ವಪಕ್ಷದಗಳ ಆಧಾರದಿಂದ ನಿಲ್ಲಲು ಯೋಗ್ಯವಾಗಬೇಕು; ನಾವು ಇಲ್ಲಿಂದ ಹೊರಹೋಗಬೇಕು ಎಂಬ ಭಾವನೆಯಿಂದಲೇ ಬ್ರಿಟಿಷರು ಶಾಸನ ನಡೆಸುತಿದ್ದರು. ಈ ನೀತಿಯು ಬ್ರಿಟಿಷರು ಭಾರತದ ಒಗ್ಗರಿಸಿದುದಕ್ಕಿಂತ ಬೇರೆಯಾಗಿದೆ. ವಿಭಿನ್ನ ಪ್ರಥೆಗಳ ತವರ್ಮನೆಯನ್ನು ವಿಭಜಿಸದೆ ಏಕಸೂತ್ರದಲ್ಲಿ ಸಂರಕ್ಷಿಸಿಕೊಂಡುಬಂದ ಶ್ರೇಯಸ್ಸು ಬ್ರಿಟಿಷರಿಗೇನೇ ಸಲ್ಲಬೇಕು.

ಇಂತಹ ವಿಚಿತ್ರತಮ ದೇಶ ಅಕ್ಟೋಬರ ಒಂದನೆ ದಿನಾಂಕದಂದು ಸ್ವತಂತ್ರವಾದ ವಾತಾವರಣದಲ್ಲಿ ಉಸಿರಾಡತೊಡಗಿತು. ಅದರ ಭವಿಷ್ಯವು ಹೇಗೆ ಮುಂದುವರಿಯಬಹುದೆಂದು ಮುಂದೆ ಕಾಣಬೇಕಷ್ಟೆ.

(ಕೃಪೆ: ನ. ಭಾ. ಟಾಯಮ್ಸ್)

ಮೆಟ್ರಿಕ್ ತೂಕ ಮತ್ತು ಅಳತೆಗಳು

ದೊರೆಯುವ ಸ್ಥಳ: ಲೈಸೆನ್ಸ್ ಡೀಲರ್ಸ್

ಕೆ. ಆರ್. ಗುಂಡು ನಾಯಕ್ & ಸನ್ಸ್

ಕಾರ್ ಸ್ಟ್ರೀಟ್, ಉಡುಪಿ (ಸೌ. ಕೆ.)

ಮೆಟ್ರಿಕ್ ಪದ್ಧತಿಯ ತಕ್ಕಡಿಗಳು ದೊರೆಯುತ್ತವೆ.

ಹೊಸತಾಗಿ ತೆರೆದಿರುವ ನಮ್ಮ ಹಿಂದುಗಡೆಯಲ್ಲಿರುವ ಗುಂಡು ನಾಯಕ್ಸ್ ಫೇಶನ್ ಎಂಪೋರಿಯಂ—ಜವಳಿ ಅಂಗಡಿಯನ್ನು ಸಂದರ್ಶಿಸಿರಿ.

ಕಾಮ ವಿಜ್ಞಾನದ ಮಾಹಿತಿಗಾಗಿ ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ

ಕಲಿಯುಗ

ಸಂಪುಟವನ್ನು ಅವಶ್ಯ ಓದಿರಿ.

ಉತ್ತಮವಾಗಿ ಬೈಂಡು ಮಾಡಿದ ವರ್ಷ, ವರ್ಷಗಳ ಸಂಚಿಕೆಗಳು.

ನೂತನ ದಂಪತಿಗಳಿಗಂತೂ ಬೇಕಾದ ಅಪೂರ್ವ ಸಂಗ್ರಹ.

ಪ್ರತಿ ಸಂಪುಟದ ಬೆಲೆ ರೂ. 4=50

ಅಂಚೆ ವೆಚ್ಚ ರೂ. 1=50.

ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಮಹಿಳಾ ಮಂಡಳ

ಮದುವೆಯ ಹಾಡುಗಳು

(ಲೇಖಾಂಕ ೧)

ಗ್ರಾಮದ ಪಾಮರಿಯರು ಪ್ರಕೃತಿ ಸೌಂದರ್ಯದ ಮಡಿಲಲ್ಲಿ ಹುಟ್ಟಿ ಬೆಳೆದಿದ್ದು ಅವರ ಪಂಚಮ ಸ್ವರದ ಹಾಡುಗಳನ್ನು ಎದುರಿಸುವ ಶಕ್ತಿ ಕೆಲವು ವರ್ಷಗಳಿಗೆ ಮೊದಲು ಸಿನಿಮಾ ಹಾಡುಗಳಿಗಿರಲಿಲ್ಲ. ಆದರೆ, ಇಂಪಾದ ಸವಿಯಾದ ಆ ಜನಪದ ಗೀತೆಗಳನ್ನು ಮೆಚ್ಚಿ ಇಂದು ಸಿನೀಮಾ ಸಂಗೀತ ತನ್ನ ಪ್ರಭುತ್ವವನ್ನು ಸ್ಥಾಪಿಸಿ ಬಿಟ್ಟಿದೆ. ಕಾಲಸ್ಯ ಕುಟಿಲಾ ಗತಿಃ

ಶ್ರೀಮತಿ ರುಕ್ಮಿಣೀ ದೇವಿ

ಭಾರತೀಯರ ಸಂಸ್ಕೃತಿಯ ಅವಶೇಷಗಳೇನಾದರೂ ಇನ್ನೂ ಉಳಿದಿದ್ದರೆ ಹಳ್ಳಿಗಳಲ್ಲಿ—ಅದರಲ್ಲೂ ಅಲ್ಲಿನ ಒಕ್ಕಲಗಿತ್ತಿಯರಲ್ಲಿ, ಪಾಮರಿಯರಲ್ಲಿ, ಕಾಣಬಹುದು. ಸುಮಾರು ಇಪ್ಪತ್ತು ವರ್ಷಗಳಿಗಿಂತಲೂ ಸ್ವಲ್ಪ ಹಿಂದಿನ ಮಾತು. ಸಿನೆಮಾದ ಪದ್ಯಗಳೊಂದೂ ಹಳ್ಳಿಗರ ಹೊಸ್ತಿಲನ್ನು ದಾಟಿರಲಿಲ್ಲ. ಆಕಾಶವಾಣಿಯ ಗಂಧಗಾಳಿಯೂ ಹಳ್ಳಿಗರ ಮೇಲೆ ಬೀಸಿರಲಿಲ್ಲ. ಮದುವೆ ಮೊದಲಾದ ಶುಭಮಹೋತ್ಸವಗಳಲ್ಲಿ ಹೋಟೆಲಿನ ಅಳಿಯನಾಗಿದ್ದರೆ ಗ್ರಾಮ್‌ಫೋನಿನ ಹರಿವಾಣವನ್ನು ಮದುವೆ ಚಪ್ಪರದಲ್ಲಿ ಬಿಡಿಸಿಟ್ಟು ಅದರಿಂದ ಹಾಡುಗೀತಗಳನ್ನು ಹಾಡಿಸುತ್ತಿದ್ದ. ಆದರೆ ಹಳ್ಳಿಯ ಪ್ರಕೃತಿ ಸೌಂದರ್ಯದೊಡನೆ ಕೂಡಿಬಾಳಿದ ಮಹಿಳೆಯರ ಹಾಡುಗಳ ಲಹರಿಯೊಡನೆ ಅದಕ್ಕೆ ಸ್ಪರ್ಧಿಸಲು ಸಾಧ್ಯವಾಗುತ್ತಿರಲಿಲ್ಲ. ಹಳ್ಳಿಯ ಪ್ರಮದೆಯೊಬ್ಬಳು ಉಡುಗೆ ತೊಡುಗೆಗಳಿಂದ ವಿಭೂಷಿತಳಾಗಿ ತುರುಬಿಗೆ ಮಲ್ಲಿಗೆ ಚೆಂಡನ್ನು ಸಿಕ್ಕಿಸಿಕೊಂಡು ತಾಂಬೂಲದಿಂದ ಬಿಂಬಾಧರೆಯಾಗಿ ಹತ್ತು ಜನರ ಮುಂದೆ ಹಾಡನ್ನು ಹೇಳಲು ಕುಳಿತಳೆಂದರೆ ಬಿದುಗಣ್ಣಿನ ಬಿಚ್ಚುಕೂದಲಿನ ಅಪ್ಸರೆಯರೂ ತಲೆಬಾಗಿಸಬೇಕಲ್ಲವೆ? ಎಷ್ಟೋ ಹಾಡುಗಳಲ್ಲಿ ಶ್ರೀರಾಮ ಸೀತೆಯರ ವಿಚಾರಗಳು. ಎಷ್ಟೋ ಕೀರ್ತನೆಗಳಲ್ಲಿ ರಾಧಾಕೃಷ್ಣರ ಸಮುಜ್ವಳ ಜೀವನದ ರೇಖೆಗಳು. ಎಷ್ಟೋ ಪದ್ಯಗಳಲ್ಲಿ ಸಾವಿತ್ರಿ ದಮಯಂತಿ ದ್ರೌಪದಿಯರ ಬಾಳಿನ ಸುಖದುಃಖಗಳು ಪುನರಾವರ್ತನವಾಗುತ್ತಿದ್ದುವು. ಅಂದು ಹಳ್ಳಿಯ ಸ್ತ್ರೀಯರಿಗೆ ಅಕ್ಷರಗಳ ಜ್ಞಾನವಿಲ್ಲದಿದ್ದರೂ ಒಬ್ಬೊಬ್ಬರಿಗೆ ಸಾವಿರಾರು ವಿಧದ ರಾಗಗಳು ಹಾಡುಗಳು ಕಂಠಪಾಠವಾಗಿರುತ್ತಿದ್ದುವು. ಅವರ ನೆನಪು ಶಕ್ತಿಗೆ ಬೆರಗಾಗಬೇಕು. ಅವರಲ್ಲಿ ಹಲವರು ಛಂದಸ್ಸೆಂದರೇನು? ಮಾತ್ರೆ ಗಣಲಯ ಪ್ರಾಸಗಳ ಗತಿಯೆಂದರೇನೆಂದು ತಿಳಿಯದಿದ್ದರೂ ರಸಭರಿತವಾದ ಹಾಡುಗಳನ್ನೂ ಹಾಡುಗಬ್ಬಗಳನ್ನೂ ನೇಯುವ ಕವಯಿತ್ರಿಯರು! ಬಹುಮಂದಿ ತರುಣಿಯರು ಹಳ್ಳಿಯ ಬಾವಿಕಟ್ಟೆಗಳಲ್ಲೋ, ಹೊಳೆಯ ಬಡದಲ್ಲೋ, ದೇವಾಲಯಗಳ ಸುತ್ತಿನಲ್ಲೋ ಸೇರಿದರೆಂದರೆ ಈಗಿನಂತೆ ನಿಟ್ಟುಸಿರು ಬಿಡುವ ದಿನಗಳಾಗಿರಲಿಲ್ಲ ಅವು. ಅವರ ಚೆಂಗಾಟ, ಚೆಲುನೋಟ, ಮುದ್ದು ಕೊರಳಿನ ಹಾಡಾಟಗಳೇನು? ಇವೆಲ್ಲಾ ಇಂದಿನ ತರುಣಿಯರಲ್ಲಿ ಕಾಣೆವು ನಾವು. ಇನ್ನು ಹತ್ತು ವರ್ಷಗಳು ಕಳೆದ ಮೇಲೆ ಅವೆಲ್ಲಾ ಕನಸಿನ ಚಿತ್ರಗಳಾಗುವುವು. ಹಳೆಯ ಹೆಂಗುಸರು ಅವನ್ನು ತಮ್ಮ ಮಕ್ಕಳಿಗೆ—ಕಥೆಯಾಗಿ ಹೇಳುವ ದಿನ ಬಂದೀತು. ಕಾಲಪುರುಷನಿಗೂ ಹೆಂಗಳೆಯರ ಮೇಲೆ ಏನು ಮತ್ಸರವೋ!

'ಮದುವೆ ಮಾಡಿದವ ಬಲ್ಲ' ಇದು ಹಿಂದಿನ ಜನರ ಅನುಭವ. ಮದುವೆಗಳು ನಾಲ್ಕು ದಿನ ನಡೆಯಬೇಕು. ಆಗ ಹಾಡುಗಿತ್ತಿಯರು ತಮ್ಮ ಹಾಡುಗಳನ್ನೆಲ್ಲಾ ನೆನಪು ಮಾಡಿಕೊಳ್ಳಬೇಕು. ಚಪ್ಪರದಲ್ಲಿ ದಿಬ್ಬಣವು ಪ್ರವೇಶ ಮಾಡಿದೊಡನೆ ವಿವಿಧ ರಾಗಗಳಿಂದ ಹಾಡುಗಳನ್ನು ಹಾಡತೊಡಗಿದರೆ ದಿಬ್ಬಣವು ಗಂಡಿನ ಮನೆಯನ್ನು ಪ್ರವೇಶ ಮಾಡಿದಾಗಲೂ ಹಾಡು ಮುಗಿಯುವಂತಿರಲಿಲ್ಲ. ಮದುಮಕ್ಕಳಿಗೆ ಎಣ್ಣೆಯೊತ್ತಿದ ಹಾಡು, ದಿಬ್ಬಣಿಗರು ಬಿಡಾರ ಕೇಳುವ ಹಾಡು, ಮದುಮಗನಿಗೆ ಹಾಲು ಕೊಟ್ಟ ಹಾಡು, ಮಾವನು ಅಳಿಯನ ಪಾದ ತೊಳೆದ ಹಾಡು, ಮದುಮಕ್ಕಳನ್ನು ಹಸೆಗೆ ಕರೆಯುವ ಹಾಡು, ಉಡುಗೊರೆ ಕೊಡುವ ಹಾಡು, ಆರತಿ ಎತ್ತುವ ಹಾಡು, ಮದುಮಕ್ಕಳಲ್ಲಿ ಸಲಿಗೆ ಬೆಳೆಸುವ ಉರುಟಣೆಯ ಹಾಡು—ಆ ಕಾಲದಲ್ಲಿ ಅರಸಿನ ಪರಸ್ಪರ ಹಚ್ಚುವುದು—ಅದರಲ್ಲೂ ವಧುವು ತನ್ನ ಕೋಮಲ ಕಂಠದಿಂದ ವರನನ್ನು ಸಂಬೋಧಿಸುತ್ತಾ ಹಾಡುತ್ತಾ ಅರಸಿನ ಹಚ್ಚುವ ಬೆಡಗು, ಓಕುಳಿಯಾಟ, ಮಲ್ಲಿಗೆ ಚೆಂಡಾಟ ಇವೆಲ್ಲಾ ಗೃಹಸ್ಥಾಶ್ರಮದ ಮೊದಲ ದಿನಗಳಲ್ಲಿ ನಡೆಯುವ ಶೃಂಗಾರ ಲೀಲೆಗಳು! ತಾರುಣ್ಯದ ಉಕ್ಕು ಬಂದ ತರುಣನಿಗೂ, ಪತಿಯ ಸಾನ್ನಿಧ್ಯದಿಂದ ಪಾವನೆಯಾದೆನೆಂದು ಭಾವಿಸುವ ವಧುವಿಗೂ ಈ ಗಳಿಗೆಗಳೆಲ್ಲಾ ರಸನಿಮಿಷಗಳು. ಸಾರಾಂಶ: ಹಿಂದಿನ ಮದುವೆಯ ನಾಲ್ಕು ದಿನಗಳೆಂದರೆ ಪ್ರಾಪಂಚಿಕರು ಪ್ರಪಂಚದ ಕಷ್ಟ ನಿಷ್ಠುರಗಳನ್ನು ಮರೆಯುವ ದಿನ. ಆ ದಿನದ ದೃಶ್ಯಗಳು ತರುಣರಿರಲಿ—ಬಚ್ಚುಬಾಯಿಯ ಮುದುಕರಿಗೂ ತಲೆಗೊಮ್ಮೆ ಬಾಸಿಂಗವನ್ನೇರಿಸಿಕೊಳ್ಳಲು ಹುಮ್ಮಸ್ಸು ಹುಟ್ಟಿಸುವ ಸನ್ನಿವೇಶಗಳು. ಬೀಗರ ಔತಣ ಕಾಲದಲ್ಲಂತೂ ಗಂಡು ಹೆಣ್ಣಿನ ಕಡೆಯವರು, ಬಡಿಸುವವರು ಸಾರಿನ ಉಗ್ಗಕ್ಕೆ ಕೈ ಕೊಟ್ಟೊಡನೆ ಹಾಡುಗಳಿಂದ ಬೀಗರನ್ನು ಪರಸ್ಪರ ದೂರಲಿಕ್ಕೆ ತೊಡಗಿದರೆಂದರೆ ಬೆರಸಿದ ಮಜ್ಜಿಗೆ ಬಂದಮೇಲೂ ಹಾಡು ಮುಗಿಯುವಂತಿಲ್ಲ. ಎರಡೂ ಕಡೆಯವರಲ್ಲಿ ಹಾಡಿನ ಜಟಾಪಟಿಯಾಗಿ ಒಂದು ಕಡೆಯವರ ಹಾಡಿನ ಬಂಡವಾಳವು ಮುಗಿದ ಮೇಲೆಯೇ ಹಾಡು ನಿಲ್ಲುತಿತ್ತು. ಪ್ರತಿ ಹಾಡೂ ವಿವಿಧ ರಾಗಗಳಲ್ಲಿರುತ್ತಿತ್ತು. ಕೆಲವರಲ್ಲಿ ಹಾಡುವ ಸ್ತ್ರೀಯರೇ ಪ್ರತ್ಯೇಕವಿದ್ದು ಅವರನ್ನು ಮದುವೆಗಳಿಗೆ ಕರೆಸಿ ಅವರಿಂದ ಹಾಡಿಸಿ, ಅವರನ್ನು ಉಪಚರಿಸಿ ಬಹುಮಾನಿಸುತ್ತಿದ್ದರು. ಈಗಿನ ಎಷ್ಟು ಮಂದಿ ಸ್ತ್ರೀಯರಿಗೆ ಸುಟ್ಟು ತಿನ್ನಲೂ ಒಂದು ಹಾಡು ಗೊತ್ತಿದೆ? ಗೊತ್ತಿದ್ದರೂ ನೀರಸವಾದ ಗದ್ಯರೂಪದ ಸಿನೆಮಾ ಪದಗಳು ನಾಲ್ಕು. ಅವನ್ನೂ ಹತ್ತು ಜನರು ಸೇರಿದ ಸಭೆಯಲ್ಲಿ ಹೇಳುವ ಧೈರ್ಯವಿಲ್ಲ. ಈಗ ನಾಲ್ಕು ದಿನಗಳ ಮದುವೆಗಳೂ ಉಡುಗಿಹೋಗಿ ನಾಲ್ಕು ಗಂಟೆಗೆ ಬಂದಿವೆ; ಮುಂದೆ ನಾಲ್ಕು ನಿಮಿಷಕ್ಕೆ ಇಳಿಯುವ ಸಂಭವವಿರಬಹುದೆ? ಯಾರಿಗೆ ಗೊತ್ತು?

ಹಳ್ಳಿಗರಿಗೆ ಹಿಂದಿನ ವಿನೋದಗಳನ್ನು ಮಾಡುವ ಶಕ್ತಿ ಇಲ್ಲ. ಗ್ರಾಮಬಾಲೆಯರಿಗೆ ಒಬ್ಬರನ್ನೊಬ್ಬರಿಗೆ ಹಾಡುಗಳಿಂದ ಕೆಣಕುವ ಎದೆಗಾರಿಕೆ ಇಲ್ಲ. ಬಂಡವಾಳವಿಲ್ಲದ ಬಡಾಯಿಯು ಎಲ್ಲೆಲ್ಲಿಯೂ ಕಾಣಿಸುತ್ತಿದೆ. ಹಳ್ಳಿಗಳಲ್ಲಿ ಅಲ್ಲೊಂದು ಇಲ್ಲೊಂದು ಶಾಲೆಯಾಗಿ ಹುಡುಗಿಯರು ಓದುಬರಹ ಕಲಿತು ವಿರಾಮ ಕುರ್ಚಿಗಳಲ್ಲಿ ಕುಳಿತು 'ನ್ಯೂಸ್ ಪೇಪರ್' ಓದತೊಡಗಿದ್ದಾರೆ. ಹುಟ್ಟಿದ ಮಕ್ಕಳನ್ನು ತೊಟ್ಟಿಲಿಗೆ ಹಾಕಿ ತೂಗಲು ಜೋಗುಳದ ಪದ ಇಂದಿನ ಸ್ತ್ರೀಯರಿಗೆ ತಿಳಿಯದು. ಶಾಲೆಯಲ್ಲಿ ಈಗ ತೊಟ್ಟಿಲ ತೂಗುವ ಪದಗಳನ್ನು ಹೇಳಿಕೊಡುವುದಿಲ್ಲ. ನ್ಯೂಸ್ ಪೇಪರ್‌ಗಳಲ್ಲಿ ಅವು ಬರುವುದಿಲ್ಲ. ಕುಮಾರವ್ಯಾಸ, ಲಕ್ಷ್ಮೀಶರು ಯಾವ ಜೋಗುಳ ಪದಗಳಿಂದ ಪ್ರಚೋದಿತರಾಗಿ ಮಹಾಕಾವ್ಯ ನಿರ್ಮಾಣಮಾಡುವ ಶಕ್ತಿಯುಳ್ಳವರಾದರೋ ಆ ಜೋಗುಳ ಪದಗಳು ಇಂದೆಲ್ಲಿ? ಅಜಮಿಳನ ಹಾಡು, ದ್ರೌಪದೀ ವಸ್ತ್ರಾಪಹರಣ, ಗಜೇಂದ್ರ ಮೋಕ್ಷ, ಲವಕುಶರ ಹುಟ್ಟು, ಲಕ್ಷ್ಮಣನ ನಕ್ಕ ಹಾಡು—ಇಂತಹ ಪುಣ್ಯಕಥೆಯ ಹಾಡುಗಳೆಲ್ಲಾ ಸ್ತ್ರೀಯರಿಗೆ ಬೇಡಾಗಿವೆ. ಇಂಗ್ಲಿಷ್ ಬಲ್ಲ ಸ್ತ್ರೀಯರು 'ಇವೆಲ್ಲಾ ಎಂಥಾ ನೋನ್ಸೆನ್ಸ್!' ಎನ್ನುತ್ತಾರೆ. ಹಿಂದಿನ ಗೃಹಿಣಿಯರು ಬೆಳಗ್ಗೆ ಹಾಸಿಗೆ ಬಿಟ್ಟೊಡನೆ ಉದಯರಾಗವನ್ನು ಹಾಡಲು ಆರಂಭಿಸಿ ರಾತ್ರಿ ಮಲಗುವವರೆಗೂ ಒಂದಲ್ಲ ಒಂದು ಹಾಡನ್ನು ಹಾಡುತ್ತಾ ಕೆಲಸ ಮಾಡುತ್ತಿದ್ದರು. ಆದರಿಂದ ಆಯಾಸವೂ ಕಡಿಮೆ. ಅಲ್ಲದೆ ಭಗವದ್ವಿಚಾರಗಳನ್ನು ಪುನಃ ಪುನಃ ಮನನಮಾಡುತ್ತಿದ್ದುದರಿಂದ ಮನಸ್ಸು ಸಂಸ್ಕಾರ ಹೊಂದಿ ಬಡವರಲ್ಲಿ ಕರುಣೆ, ಬಲ್ಲಿದರಲ್ಲಿ ಗೌರವ, ಪ್ರಾಣಿಗಳಲ್ಲಿ ದಯೆ, ಪ[ತಿ]ಯಲ್ಲಿ ಅನುರಾಗ, ಭಗವಂತನಲ್ಲಿ ಭಕ್ತಿಯು ತಾನಾಗಿ ಉಂಟಾಗಿ ಸಂಸಾರದ ಕಷ್ಟ ಕಡಿಮೆಯಾಗಿ ದೇವಲೋಕದ ನಂದನವನವಾಗಿ ಸಾಗುತಿತ್ತು. ಸಾರಾಂಶ—ಹಿಂದಿನ ಹಳ್ಳಿ ಸ್ತ್ರೀಯರಿಗೆ ಈ ಮರ್ತ್ಯಲೋಕದ ದುಃಖ ಕಷ್ಟಗಳನ್ನು ಕಡಿಮೆ ಮಾಡುವ ಉಪಾಯ ತಿಳಿದಿತ್ತು. ಹಳ್ಳಿಗಳ ಸ್ತ್ರೀಯರ ಹಿರಿಮೆಯು ಆ ದಿನಗಳಲ್ಲಿ ಗೃಹಕಾರ್ಯ ಮತ್ತು ಹಾಡುಗಾರಿಕೆಯನ್ನು ಅವಲಂಬಿಸಿತ್ತು. ಬಾಲಕಿಯರು ಮನೆಯ ಕಸ ಮುಸರೆಗಳನ್ನು ಮುಗಿಸಿ ಮೇಲೆ ಒಂದೆರಡು ಮೈಲು ದೂರಕ್ಕಾದರೂ ನಡೆದು ಹೋಗಿ ಹಾಡನ್ನು ಹೇಳಿಕೊಂಡು ದಾರಿಯೆಲ್ಲಾ ಅದನ್ನು ಮನನ ಮಾಡುತ್ತಾ ಬರುತ್ತಿದ್ದರು. ಕಲಿತ ಹಾಡುಗಳನ್ನು ಹರಿದಿನ ಪುಣ್ಯ ದಿನಗಳಲ್ಲಿ ದೇವರ ಮುಂದೆ—ದೇವರ ಕೋಣೆಯಲ್ಲಿ ಕುಳಿತು ಹಾಡುತ್ತಿದ್ದರು. ಗೃಹ ದೇವತೆಗಳೂ ಭಾವೀ ಗೃಹಿಣಿಯರ ಗಾನಲಹರಿಗೆ ಪ್ರಸನ್ನರಾಗಿ ತಲೆ ತೂಗುತ್ತಿದ್ದಿರಬಹುದು. ಇವರು ಗೃಹಿಣಿಯರಾಗಿರುವಾಗ ಮಕ್ಕಳ ಲೋಲಿಸೋತನೆ, ಸಂಸಾರದ ಗೋಳನ್ನನುಭವಿಸುತ್ತಿರಲಿಲ್ಲ. ಮನೆಯ ವಾತಾವರಣವೂ ಅವರ ಪಾವನ ಪದಗಳಿಂದ ಪರಿಶುದ್ಧವಾಗುತಿತ್ತು. ಗಾಳಿಚೇಷ್ಟೆಯ ಸುಳಿವೇ ಅಲ್ಲಿರುತ್ತಿರಲಿಲ್ಲ. ಇಂಪಾದ ಕೊರಳು, ನಿರ್ಮಲ ತಾರುಣ್ಯ, ದೈವಿಕ ವಿಚಾರ—ಇವುಗಳಿಂದ ಬೆರೆತ ಯಾವ ಹಾಡಾದರೂ ಕೊಳ್ಳಿಯಂತೆ ಹಳ್ಳಿಯನ್ನು ಪವಿತ್ರ ವೃಂದಾವನವಾಗಿ ನಿರ್ಮಿಸಬಲ್ಲುದಾಗಿತ್ತು. ಇಂದಿನ ಸ್ತ್ರೀಯರು ಎತ್ತಿ ಒಗೆದ ಇಂತಹ ಹಾಡುಗಳನ್ನು ಪುನಃ ಆಯ್ದು ಹೆಕ್ಕುವ ಭಾಗ್ಯ ವರಿಗುಂಟೆ?

ಅಂತಾರಾಷ್ಟ್ರೀಯ ಒಲಿಂಪಿಕ್ ಪಂದ್ಯಾಟದಲ್ಲಿ ಭಾಗವಹಿಸಿದ ಭಾರತೀಯ ಪ್ರಸಿದ್ಧ ಕ್ರೀಡಾಪಟು ಮಿಲ್ಖಾಸಿಂಘರನ್ನು ಈ ಚಿತ್ರದಲ್ಲಿ ಕಾಣಬಹುದು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾ ಲೇಖನಗಳನ್ನು ಆಮಂತ್ರಿಸಲಾದೆ. ಇವು ಚಿಕ್ಕದಿರ ಬೇಕಲ್ಲ ಕಾಗದದ ಒಂದೇ ಮಗ್ಗುಲಿನಲ್ಲಿ ಬೇಕು. ಲೇಖಕಬಂಧುಗಳು ಸ ಕರಿಸಬೇಕಾಗಿ ವಿನಂತಿ. —ಸಂ.

ಕುಮಾರಿ ಬಿಲ್ಲೆಗಳು

(Regd.)

ವಿವಿಧ ಮುಟ್ಟು ದೋಷಗಳಿಂದ ನರಳುವ ಸ್ತ್ರೀಯರಿಗೆ ಆರೋಗ್ಯದಾಯಕ.

ಮೆಡಿಕಲ್ ಸ್ಟೋರುಗಳಲ್ಲಿ ಟ್ಯೂಬಿಗೆ ರೂ. 3/- (ಸಾದಾ), ರೂ. 5/- (ಸ್ಪೆಶ್ಯಲ್), ರೂ. 8/- (ಎಕ್ಸ್ಟ್ರಾ ಸ್ಪೆಶ್ಯಲ್) ದರದಲ್ಲಿ ವಿಕ್ರಯಿಸಲ್ಪಡುತ್ತದೆ.

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: (1) ಷಾ ಕಂಪೆನಿ, ಮಂಗಳೂರು—1.

ಕಥಾವಿಹಾರ

(೨ನೇ ಪುಟದಿಂದ)

ಕ್ಕೆಂದು ಹೊರಟು ನಿಂತಿದ್ದಳು. ಹೊರಗೆ ನಿಧಾನವಾಗಿ ಮಳೆ ಬೀಳುತಿತ್ತು. ಮನೆಯ ಹಿಂದುಗಡೆ ಹಪ್ಪಳವನ್ನು ಒಣಗಲು ಹಾಕಿದ್ದರು. ಆ ವಿಷಯ ಸಖೂವಿಗೆ ಗೊತ್ತಿರಲಿಲ್ಲ. ಮಧ್ಯಾಹ್ನದ ಬಿಸಿಲು ನೋಡಿ ಅವಳ ನಾದಿನಿ ಹಪ್ಪಳವನ್ನು ಒಣಗಲು ಹಾಕಿದ್ದಳು. ಸಾಯಂಕಾಲ ಮಳೆ ಬಂದಾಗ ಅವಳೂ ಹಪ್ಪಳವನ್ನು ತೆಗೆಯಲಿಲ್ಲ. "ಸಖೂವಿಗೆ ಬುದ್ಧಿ ಕಲಿಸಬೇಕು." ಎಂದು ಹಿಂದಿನಿಂದಲೂ ನೆನೆದ ಅವಳಿಗೆ ಇದೇ ಸರಿಯಾದ ಸಮಯ-ವೆಂದು ನೆನೆದು ತನಗೆ ಗೊತ್ತಿದ್ದರೂ ಹಪ್ಪಳವನ್ನು ತೆಗೆದಿರಲಿಲ್ಲ. ಮಳೆ ಇನ್ನೂ ಜೋರಾಯ್ತು. ಒಣಗಲು ಹಾಕಿದ ಹಪ್ಪಳಗಳು ನೀರಿನಲ್ಲಿ ತೇಲ ತೊಡಗಿದವು. ಆಗ ತಾನೇ ಹಿತ್ತಲಿನಿಂದ ಬಂದ ಅತ್ತೆ ಅದನ್ನು ನೋಡಿ "ಏ ಕುಸುಮಾ, ಹಪ್ಪಳವನ್ನು ಯಾಕೆ ತೆಗೆಯಲಿಲ್ಲವೋ?" ಎಂದು ಕೂಗುತ್ತ ಮಳೆಯಲ್ಲಿ ನೆನೆಯುತ್ತ ತಾನು ಹಪ್ಪಳವನ್ನು ಹೆಕ್ಕ ತೊಡಗಿದಳು.

"ನಾನು ಅತ್ತಿಗೆಯವರೊಡನೆ ಹೇಳಿದ್ದೇ ನಮ್ಮಾ" ಎಂದಳು. ಈ ಮಾತನ್ನು ಕೇಳುತ್ತಲೇ ಸಖೂವಿನ ಹೃದಯಕ್ಕೆ ಶೂಲ ಇರಿದಂತಾಯಿತು. ಈಗ ತನಗೆ ಪೆಟ್ಟು ಮತ್ತು ಬೈಗಳ ಹೊರೆಯಿದೆ" ಎಂದು ನೆನೆದಳು. ಅವಳ ಯೋಚನೆ ಮುಗಿಯಲಿಲ್ಲ ಸ್ವಲ್ಪ ಸಮಯ ಕಳೆಯುತ್ತಲೇ ಅತ್ತೆ ಕೈಯಲ್ಲೊಂದು ದೊಡ್ಡ ಬೆತ್ತವನ್ನು ಹಿಡಿದು ಸಖೂವಿನ ಬಳಿಗೆ ಬಂದು "ಏನೇ ಮಹಾ ರಾಣಿ........ನಿನಗೆ ಹೇಳಿದ ಕೆಲಸ ಮಾಡಲಿಕ್ಕಾಗುವುದಿಲ್ಲ ಅಲ್ವೇನೆ?" ಎನ್ನುತ್ತ ಬೆತ್ತದಿಂದ ರಪರಪ ಎಂದು ಹೊಡೆದಳು. ಸಖೂ ಬೊಬ್ಬೆ ಹಾಕಿದಳು, ಅತ್ತಳು, ಆದರೂ ಕೇಳುವವರ್‍ಯಾರು ಇಲ್ಲ. ಎಲ್ಲರೂ ಅವಳ ವಿರೋಧಿಗಳೆ. ಅತ್ತೆಗೆ ಹೊಡೆ ಹೊಡೆದು ಕೈ ನೋತು ಹೋದುವು. ಸಖೂವನ್ನು ಬೈಯ್ಯುತ್ತ ತನ್ನ ಕೆಲಸವನ್ನು ಮಾಡತೊಡಗಿದಳು.

ರಾತ್ರಿ ರಾಜಯ್ಯ ಮನೆಗೆ ಬಂದ ತಾಯಿ ಅವನೊಡನೆ ಅಲ್ಲಸಲ್ಲದ ಸುಳ್ಳು ವಿಷಯಗಳನ್ನು ಹೇಳಿ ಅವನ ಕಿವಿಯೂದಿದಳು. ಮೊದಲೇ ದಣಿದು ಬಂದಿದ್ದ ಅವನಿಗೆ ತನ್ನ ತಾಯಿಯ ಮಾತನ್ನು ಕೇಳಿ ತಡೆಯಲಾರದಷ್ಟು ಕೋಪ ಬಂದುಬಿಟ್ಟಿತು. ಓಡಿ ಓಡಿ ತನ್ನ ಕೋಣೆಯಲ್ಲಿ ದುಃಖಾತಿರೇಕದಿಂದ ಮಲಗಿದ್ದ ಸಖೂವನ್ನು ಮುಡಿಯಲ್ಲಿ ಹಿಡಿದು ಸರಿಯಾಗಿ ನಾಲ್ಕೇಟು ಬಾರಿಸಿದ. ಅಂದು ರಾತ್ರಿ ಸಖೂವಿಗೆ ಊಟವಿಲ್ಲ. ಊಟ ಮಾಡೆಂದು ಹೇಳುವವರೂ ಯಾರು ಇಲ್ಲ......

ಆದೇನೋ ರಾಜಯ್ಯನಿಗೆ ಸತ್ಯ ಸಂಗತಿ ಅರಿತಾಗ ಆತ ಪಿಚೆಂತಿತನಾದ. ಕೊನೆಗೆ ಒಂದು ನಿರ್ಧಾರಕ್ಕೆ ಬಂದ. "ತನ್ನಿಂದ ನಿಜವಾಗಿಯೂ ಸಖೂವಿಗೆ ಸುಖವಿಲ್ಲ. ಅದಕ್ಕೆ ... ನಾನು ಈ ಮನೆ ಬಿಡುವುದೇ ಲೇಸು. ತಾನಿಲ್ಲದ ವೇಳೆ ಈ ಮನೆಯಲ್ಲಿ ನಿಲ್ಲಲಾರದೆ ತಂದೆಯ ಮನೆಗಾದರೂ ಹೋಗಲಿ" ಎಂದು ನಿಶ್ಚಯಿಸಿದ. ಅಂದು ಮಧ್ಯರಾತ್ರಿ. ರಾಜಯ್ಯ ತನ್ನ ಹೆಂಡತಿಯನ್ನು ಬಿಟ್ಟು, ಮನೆಯವರುಗಳನ್ನು ತ್ಯಾಗಮಾಡಿ, ಹೊರಟೇ ಬಿಟ್ಟ. "ಎಲ್ಲಿಗೆ" ಎಂದು ಅವನ ಮನ ಕೇಳುತಿತ್ತು. "ದೇವರು ನೆನೆದಲ್ಲಿಗೆ" ಎಂದು ಅವನು ಉತ್ತರವಿತ್ತ. ನಿಜವಾಗಿಯೂ ರಾಜಯ್ಯ ಮೊದಲ ರಾಜಯ್ಯನಾಗಿರಲಿಲ್ಲ. ಆತ ಸಂಪೂರ್ಣವಾಗಿ ಬದಲಾಗಿಬಿಟ್ಟಿದ್ದ.

ಮರುದಿನ ಮನೆಯಲ್ಲಿ "ಹಗರಣವೇ ಹಗರಣ". ಗಂಡಹೆಂಡತಿಯರಿಗೆ ಜಗಳವಾಗಿ ರಾಜಯ್ಯ ಊರುಬಿಟ್ಟ" ಎಂದು ಅವನ ತಾಯಿ ಊರಲ್ಲೆಲ್ಲ ವಾರ್ತೆ ಹಬ್ಬಿಸಿದಳು. ಸಖೂವಿನ ಕೋಮಲ ಹೃದಯಕ್ಕೆ ಕೂರಂಬಿಕ್ಕಿದಂತೆ ಆಯ್ತು. ಅತ್ತೆ ನಾದಿನಿಯರು ಕಾಡತೊಡಗಿದರು, ಅದನ್ನೂ ಸಖೂ ಸಹಿಸಿದಳು. ಇನ್ನೆರಡು ದಿನಗಳ ಮೇಲೆ ಪತಿ ಬರುವನು. ಆ ಮೇಲಾದರೂ ಅವರಲ್ಲಿ ದಮ್ಮಯ್ಯ ಹಾಕಿ ಬೇರೆ ಮನೆ ಮಾಡಬಹುದು" ಎಂದು ನೆನೆದಳು. ಎಂಟು ಹತ್ತು ದಿನಗಳು ಕಳೆದರೂ ರಾಜಯ್ಯನ ಸುಳಿವೇ ಇಲ್ಲ ಸಖೂವಿಗೆ ಅತ್ತೆಯ ಕಾಟವು ವಿಶೇಷವಾಯ್ತು: ಕೊನೆಗೊಂದು ಸಾಯಂಕಾಲ ಗಂಡನ ಮನೆಯಿಂದ ತವರಿಗೆ ಹೊರಟೇಬಿಟ್ಟಳು ಅತ್ತೆ ನಾದಿನಿಯರು ಆ ಸಮಯ ಮನೆಯಲ್ಲಿರಲಿಲ್ಲ.

ಅಪರೂಪವಾಗಿ ಮನೆಗೆ ಬಂದ ಮಗಳನ್ನು ನೋಡಿ ಅವಳ ತಂದೆ ಆಶ್ಚರ್ಯಪಟ್ಟ. "ಏನೇ ಸಖೂ, ವರ್ತಮಾನವಿಲ್ಲದೆ ಬಂದ ಬಿಟ್ಟೆ. ಮುಖವೇಕೆ ಹೀಗೆ ಬಾಡಿದೆ? ಮೈ ಸರಿಯಾಗಿಲ್ಲವೇ? ಮನೆಯವರೆಲ್ಲರೂ ಸೌಖ್ಯವೆ?" ಎಂದು ಮಮತೆಯಿಂದ ಕೇಳಿದ. "ಅದೆಲ್ಲ ಆಮೇಲೆ ಅಪ್ಪ, ಮೊದಲು ನನಗೆ ಏನಾದರೂ ತಿನ್ನುವುದಕ್ಕೆ ಕೊಡು. ಹೊಟ್ಟೆ ಹಸಿವಾಗುತ್ತೆ. ಊಟವಿಲ್ಲದೆ ಮೂರು ದಿನವಾಯ್ತು" ಎಂದಳು. ಅವಳ ತಂದೆ ಹೆದರಿಹೋದ. "ಊಟಕ್ಕೆ ಸಿದ್ಧವಾಗಿ. ಕೈ ಕಾಲು ಮುಖ ತೊಳೆದುಕೊಂಡು ಬಾ" ಎಂದ. ಸ್ವಲ್ಪ ಸಮಯದಲ್ಲೆ ಸಖೂ ಊಟ ಮುಗಿಸಿದಳು, ಅವಳಿಗೀಗ ಹೋದ ಜೀವ ಬಂದಂತಾಯ್ತು. ಅವಳ ತಂದೆಗೆ ಮಾತ್ರ ಮಗಳಿಂದ ಕೇಳಿದ ಅವಳ ಗಂಡನ ಮನೆಯ ಕಷ್ಟವನ್ನು ಕೇಳಿ ಸಹಿಸಲಾರದಷ್ಟು ವ್ಯಥೆಯಾದರೂ ಸಖೂವನ್ನು ಸಾಂತ್ವನಗೊಳಿಸಿದ.

ಹೀಗೆ ಹತ್ತು ವರ್ಷಗಳು ಕಳೆದಿರಬಹುದು. ರಾಜಯ್ಯನ ಪತ್ತೆಯಿಲ್ಲ. ಸಖೂವಿನ ಅತ್ತೆಯ ಮನೆಯಿಂದ ಯಾವತರದ ವರ್ತಮಾನವೂ ಇಲ್ಲ. ಒಂದುಬಾರಿ ಗಂಡನ ಮನೆಗೆ ಹೋಗಿಬರಲೆ" ಎಂದು ಸಖೂ ನಿಶ್ಚಯಿಸಿದ್ದಳು. ಆದರೆ ಅವಳ ಮನ ಅದಕ್ಕೆ ಒಪ್ಪಲಿಲ್ಲ. ಈಗ ಸಖೂವಿಗೆ ಮೂವತ್ತೊಂದು ವರುಷ ಪ್ರಾಯ. ಯಾವಾಗಲೂ ಗಂಡನ ನೆನಪನ್ನು ತೆಗೆಯುತ್ತಲೇ ಇದ್ದಳು. ಅವನಿಗಾಗಿ ಚಿಂತಿಸುತಿದ್ದಳು. ಅದರೇನು? ಅದರಿಂದ ಪ್ರಯೋಜನವಿಲ್ಲದಂತಾಯಿತು.

ಒಂದು ದಿನ ಸಖೂ ಅಡಿಗೆಮನೆಯಲ್ಲಿದ್ದಳು, ಅವಳ ತಂದೆ ಹೊರಗೆ ಕೂತು ಭಾಗವತವನ್ನು ಓದುವುದರಲ್ಲಿ ಮಗ್ನನಾಗಿದ್ದ. ಆಗ 'ಭಿಕ್ಷ ನೀಡಮ್ಮ....." ಎಂದು ಬಾಗಿಲಿಗೆ ಬಂದ್ದ ಭಿಕ್ಷುಕನೊಬ್ಬ ಕೂಗಿದ. ಸಖೂ ಭಿಕ್ಷವನ್ನು ಹಿಡಿದು ಹೊರಬಂದಳು. ಭಿಕ್ಷುಕನನ್ನು ಕಾಣುತ್ತಲೇ ತನ್ನ ಗಂಡನನ್ನು ಕಂಡಂತಾಯ್ತು ಅವಳಿಗೆ. ಅವಳ ತಂದೆಗೂ ಹಾಗೆ ಅನ್ನಿಸಿತ್ತು. ಆತ ಹೋದಮೇಲೆ "ಸಖೂ ಸನ್ಯಾಸಿ... ನಮ್ಮ ರಾಜಯ್ಯನಹಾಗಿದ್ದಾನಲ್ಲ...." ಎಂದಿದ್ದ. "ಹೌದಪ್ಪ ನನಗೂ ಹಾಗೆ ಅನ್ನಿಸಿದೆ...." ಎಂದಳು. "ಆಗಲಿ, ಇನ್ನು ಬರಬಹುದು. ಆಗ ವಿಚಾರಿಸುವ...." ಎಂದಿದ್ದ.

ಅನಂತರ ಭಿಕ್ಷುಕ ಇಂದು ಬಂದಿದ್ದ. ಸಖೂ ಇಂದು ಅವನನ್ನು ವಿಚಾರಿಸಿದ್ದಳು. ಅವನು ಏನೂ ಉತ್ತರಕೊಡದೆ ಹೋಗಿದ್ದ ಇದನ್ನು ತನ್ನ ತಂದೆಗೆ ತಿಳಿಸಿದಳು. "ಹೌದಮ್ಮ ನಿಜವಾಗಿಯೂ ಅವನು ನಮ್ಮ ರಾಜಯ್ಯ....ನಿನ್ನ ಪಂಚಾಯಿ ಸರಿಯಾಗಿ ಸಿಗದಿರಬೇಕು. ಅಥವಾ ನಾಚಿಕೊಂಡಿರಬೇಕು. ಇನ್ನು ಒಂದರೆ ನೋಡೋಣ...." ಎಂದ ಸಖೂವಿಗೂ ಇದರಿಂದ ಸಮಾಧಾನವಾಯ್ತು. "ಇನ್ನು ತಾನು ತನ್ನ ಗಂಡನನ್ನು ಪಡೆದೇನು" ಎಂಬ ಭರವಸೆ ಅವಳಿಗಾಗಿತ್ತು.

ಎಂಟು ದಿನಗಳ ತರುವಾಯ ಭಿಕ್ಷುಕ ಪುನಃ ಬಂದ, "ಭಿಕ್ಷೆ ನೀಡಮ್ಮಾ...." ಎಂದು ಅರಚಿದ. ಸಖೂ ಈ ಬಾರಿ ಬರೀ ಕೈಯ್ಯಲ್ಲಿಯೇ ಬಂದಳು. ಆಗ ಅವಳ ತಂದೆ ಅಲ್ಲಿರಲಿಲ್ಲ. ಹೊರಗೆಲ್ಲೋ ಹೋಗಿದ್ದ "ಭಿಕ್ಷೆ ನೀಡಮ್ಮಾ...." ಎಂದು ಪುನಃ ಕೂಗಿದ ಭಿಕ್ಷುಕ.

"ಸ್ವಾಮೀ, ನಾನಾರೆಂದು ನಿಮಗೆ ತಿಳಿಯಲಿಲ್ಲವೆ? ನನ್ನಲ್ಲೂ ನಿಮಗೆ ಸಂಕೋಚವೆ" ಎಂದಳು. ಅಷ್ಟರಲ್ಲಿ ಅವಳ ತಂದೆಯೂ ಅಲ್ಲಿಗೆ ಬಂದ ಭಿಕ್ಷುಕನನ್ನು ಸರಿಯಾಗಿ ನೋಡಿದ. "ಹೌದು, ನಿಜವಾಗಿಯೂ ಹೌದು. ಇವನು ರಾಜಯ್ಯನೇ...." ಎಂದು ಗುರುತು ಹಿಡಿದ.

"ರಾಜಯ್ಯ, ನೀನು ಹೀಗೇಕೆ ಆದಿಯಪ್ಪ? ನನ್ನಲ್ಲೂ ನೀನು ಹೀಗೇಕೆ ಮಾಡುವಿ" ಎಂದ. ಭಿಕ್ಷುಕ ಮಾತನಾಡಲಿಲ್ಲ. ಬದಲು ಅವನ ಕಣ್ಣಿಂದ ನೀರು ಇಳಿಯಿತು. ಇನ್ನು ಅಲ್ಲಿ ನಿಲ್ಲಬಯಸದೇ ನಿಧಾನವಾಗಿ ಹಿಂದಕ್ಕೆ ಹೋಗತೊಡಗಿದ್ದ. ಈಗ ಸಖೂವಿಗೆ ಧೈರ್ಯವಾಯ್ತು. ಈತ ತನ್ನ ಗಂಡನೆಂದು ಅವನ ಕಣ್ಣೀರಿನಿಂದಲೇ ತಿಳಿದಿತ್ತವಳಿಗೆ. ಓಡಿಹೋಗಿ ಅವನ ಪಾದಗಳನ್ನು ಹಿಡಿದು ಅತ್ತಳು. "ಸ್ವಾಮಿ, ನೀವು ನನ್ನನ್ನು ಬಿಟ್ಟು ಹೋಗುವಿರಾ? ನಾನು ತಮ್ಮೊಂದಿಗೆ ಬರುವೆನು" ಎಂದು ಅತ್ತಳು. ಆಗ ಭಿಕ್ಷುಕನ ಮೌನ ಮುರಿಯಿತು. "ಸಖೂ ನನ್ನ ಪಾದವನ್ನು ಬಿಡು. ನಾನು ಪಾಪಿ" ಎಂದು.

ಹಿಡಿದ ಪಾದ ಬಿಡದೆ ವಿಮೋಚನೆಯಾಗದಿರಲು ಕ್ಷಣಕಾಲ ಯೋಚಿಸಿದ ರಾಜಯ್ಯನ ಮನಸ್ಸು ಕರಗಿತು. ಅವನ ಕಣ್ಣೀರು ಕಪೋಲಗಳನ್ನು ತೋಯಿಸಿತು. ಸಖೂವಿನ ಸಂಸಾರ ಪುಷ್ಪ ಮರಳಿ ಅರಳಿತು.

— —

The Moolky Bank, Ltd.

MULKI.

ಡಿಪ್ಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು

ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ 2½%

ಚಾಲ್ತಿ ಠೇವಣಾತಿಗೆ ½%

ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪೂಂಜ

ಮೆನೇಜರ್,

ಮೂಲ್ಕಿ ಬ್ಯಾಂಕ್ ಲಿ. ಮುಲ್ಕಿ.



ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ

ಹಾಜರಿ ರಿಜಿಸ್ಟ್ರಗಳೂ

ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ

ಸಿಗುತ್ತವೆ.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ವಿವಿಧ ಸೈಜುಗಳಲ್ಲಿ

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

NAVAYUGA
D. NO. M. 3619

UDIPI, THURSDAY
6–10–1960

LICENSE NO. 31
Licensed to Post without Prepayment

ಸಾಹಿತ್ಯ ಸೃಷ್ಟಿ

ಆತ್ಮದಾನದ ಪರ್ಯಾಯರೂಪ—ಸಾಹಿತ್ಯ

ತನ್ನ ರಕ್ತದ ಪ್ರತಿಯೊಂದು ಬಿಂದುವನ್ನೂ ಕೊಟ್ಟು ತಾನು ಚಿತ್ರಿಸುವ ಪಾತ್ರಗಳ ಶೀಲಚಾರಿತ್ರ್ಯಗಳತ್ತ ಗಮನವಿತ್ತು ಸಾಹಿತ್ಯ ಕೃತಿಯನ್ನು ನಿರ್ಮಿಸುವ ಸಾಹಿತ್ಯಕಾರ ಆತ್ಮದಾನವನ್ನೇ ಮಾಡುತ್ತಾನೆ. ಇದಕ್ಕೆ ಪ್ರಪಂಚದ ಹಲವಾರು ಸುವಿಖ್ಯಾತ ಲೇಖಕರ ವಿಚಾರಲಹರಿಯೇ ಸಾಕ್ಷಿಯಾಗಿದೆ.

ಶ್ರೀ ಗೋರಾ.

"ತನ್ನ ಕೃತಿಯೊಂದನ್ನು ವಾಚಕವೃಂದ ಕೈಗೊಪ್ಪಿಸುವಾಗ, ಲೇಖಕನಾದವನು, ಮಗಳನ್ನು ಅಳಿಯನ ಮನೆಗೆ ಕಳಿಸಿಕೊಡುವಾಗ, "ಈಗ ಈಕೆ ನಿನ್ನವಳು; ಈಕೆಗೆ ಸುಖವಿತ್ತರೆ, ಸುಖಿಯಾಗುವಳು; ದುಃಖವೀಯುವೆಯಾದರೆ, ದುಃಖಿಯಾಗುವಳು" ಎಂದು ಹೇಳಿ ದುಃಖಿಸುವ ತಂದೆಯಂತೆ ಚಿಂತಿತಮನಸ್ಕನಾಗುವ"ನೆಂದು ವಿಶ್ವಕವಿ ರವೀಂದ್ರರು ಹೇಳಿದ್ದರು.

ಸಾಹಿತ್ಯಕಾರ ತನ್ನ ರಕ್ತವನ್ನು ಕೊಟ್ಟು ಸಾಹಿತ್ಯಸೃಷ್ಟಿ ಮಾಡುತ್ತಾನೆ. ಆದುದರಿಂದ ಆತ ತನ್ನದೊಂದು ಲೇಖನವನ್ನು ಜನತೆಯ ಸಮಕ್ಷಮದಲ್ಲಿಡುವಾಗ, "ನನ್ನ ಅಂತರಾತ್ಮನ ಅಂತರಾಳದಲ್ಲಿ ಸುರಕ್ಷಿತವಾಗಿ ರಕ್ಷಿಸಿಕೊಂಡಿದ್ದ, ವೇದನೆ ಮತ್ತು ವಿಚಿಂತೆಗಳಿಂದ ನಾನು ನಿರ್ಮಿಸಿದ, ಸ್ನೇಹದಿಂದ ವರ್ತಿಸಿ ಮನ್ನಿಸಿಕೊಂಡು ಬಂದ, ಎಡತಾಕಿನ ಕಷ್ಟಗಳನ್ನು ಸಹಿಸಿ ಮರ್ಯಾದೆಯುಳಿಸಿದ ಕೃತಿಯೊಂದನ್ನು ನಿಮ್ಮೆಲ್ಲರ ಸಮ್ಮುಖದಲ್ಲಿಡುತಿದ್ದೇನೆ. ಇದನ್ನು ಕಿತ್ತೆಸೆಯುವುದು ಅಥವಾ ಆದರದಿಂದ ಬರಮಾಡಿಕೊಳ್ಳುವುದು ನಿಮ್ಮ ಪಾಲಿಗೆ ಸೇರಿದೆ" ಎಂದು ಮನಸ್ಸಿನಲ್ಲೇ ಅಂದುಕೊಳ್ಳುತ್ತಾನೆ.

ಕವಿ ವಾಲ್ಟ್ ಹ್ವಿಟ್‌ಮನನು ಒಂದು ಬಾರಿ ತನ್ನ ಪುಸ್ತಕದ ಬಗ್ಗೆ ಅಂದಿದ್ದ— "ಸಂಗಾತಿಯೆ, ಇದೇನೂ ಒಂದು ಪುಸ್ತಕವಲ್ಲ. ಇದನ್ನು ಮುಟ್ಟಿದವನು ಒಂದು ಜೀವಂತ ಜಾಗ್ರತ ಮಾನವನನ್ನು ಮುಟ್ಟುತ್ತಾನೆ. ಲೇಖಕನು ಅಭ್ಯಾಸಬಲದಿಂದ ಮೆದುಳಿನ ಚಾಪಲ್ಯಕ್ಕೋಸುಗ ಕಾಗದವನ್ನು ಕಪ್ಪುಮಾಡಿದ್ದಾನೆಂದು ತಿಳಿಯುವವರು ಯಾವುದೇ ಪುಸ್ತಕದ ಮಹತ್ವವನ್ನು ಅರಿತುಕೊಳ್ಳಲಾರರು. ಪುಸ್ತಕದಲ್ಲಿ ಸಾಹಿತ್ಯಕಾರನ ಪ್ರಾಣವು ಹುದುಗಿರುತ್ತದೆ; ಆತನ ಯುಗ ಯುಗದ ಜೀವನ ಸಾಧನೆ ಸಾಕಾರವಾಗಿರುತ್ತದೆ."

ಈ ಅಭಿಪ್ರಾಯದ ಕಾರಣ ಸುಸ್ಪಷ್ಟವಾಗಿದೆ. ಲೇಖಕ ತಾನು ಚಿತ್ರಿಸಿದ ಪಾತ್ರಗಳ ಸುಖದುಃಖಗಳನ್ನು ತನ್ನ ಸುಖದುಃಖಗಳೆಂದೇ ತಿಳಿದಿರುತ್ತಾನೆ. ಆ ಪಾತ್ರಗಳೆಲ್ಲವೂ ಸ್ವಜನರಷ್ಟು ನಿಕಟವಾಗಿರುತ್ತವೆ.

ಕಾದಂಬರಿ ಲೇಖಕ ಬಾಲಜಾಕ್ ಎಂಬವರು ಒಂದು ಕಾದಂಬರಿ ಬರೆಯುವುದರಲ್ಲಿಯೇ ನಿಮಗ್ನರಾಗಿದ್ದರು. ಒಂದಾದಿನ ಮಧ್ಯರಾತ್ರಿಯಲ್ಲಿ ಅವರಿಗೆ ಒಬ್ಬ ಸ್ನೇಹಿತ ಸಿಕ್ಕಾಗ ಅವರು ಕೂಗಿ ಹೇಳಿದರಂತೆ— "ಆವನು ಸತ್ತೇ ಹೋಗಿಬಿಟ್ಟ." ಆ ಸ್ನೇಹಿತ ಯಾರು ಸತ್ತರೆಂದು ತಿಳಿಯದೆ ಒಂದು ಕ್ಷಣ ಅಪ್ರತಿಭನಾಗಿ ಬಿಟ್ಟ. ಕೊನೆಗೆ ಕೇಳಿದಾಗ, ಆತನಿಗೆ ಸತ್ಯ ಸಂಗತಿ ತಿಳಿಯಿತು. ಶ್ರೀ ಬಾಲಜಾಕರು ಬರೆಯುತಿದ್ದ ಒಂದು ಕಾದಂಬರಿಯಲ್ಲಿನ ಒಂದು ಪಾತ್ರ ಆಗತಾನೇ ಸತ್ತಿತ್ತು!

ತುರ್ಗನೇವ ಎಂಬೊಬ್ಬ ಕವಿಯ ಕಾದಂಬರಿ 'ಪಿತಾಪುತ್ರ"ದಲ್ಲಿನ ಪ್ರಥಮ ಪಾತ್ರವು ಮಡಿದುಬಿದ್ದಾಗ ಆತ ಬಿಕ್ಕಳಿಸಿ ಅತ್ತುಬಿಟ್ಟನಂತೆ. ತಂದೆ ತನ್ನ ಮಗ-ಮಗಳೊಂದಿಗೆ ವರ್ತಿಸುತ್ತಿರುವಂತೆಯೇ ಅತಿ ಪ್ರೇಮಲಭಾವನೆಯಿಂದ ಆತ ತನ್ನ ಪಾತ್ರಗಳೊಡನೆ ವರ್ತಿಸುತಿದ್ದ. ಆತ ಈ ಪಾತ್ರಗಳ ಶೀಲವನ್ನು ಕೂಡ ಸಂಪೂರ್ಣವಾಗಿ ನಿಭಾಯಿಸಿ ಬಿಟ್ಟಿದ್ದನು. ಆತನು ಚಿತ್ರಿಸಿದ್ದ ಯಾವುದೇ ಪಾತ್ರದ ಬಾಯಿಯಿಂದ ಒಂದೇ ಒಂದು ಅಸಭ್ಯ ಶಬ್ದವನ್ನಾಡಿಸಿಲ್ಲವೆಂಬುದು ಗಮನೀಯವಾಗಿದೆ.

ನಿಜವಾದ ಸಾಹಿತ್ಯಕಾರ ತನ್ನ ಪಾತ್ರಗಳ ವ್ಯಕ್ತಿತ್ವದ ಬಗ್ಗೆ ಸಂಪೂರ್ಣ ಗಮನವಿಡುತ್ತಾನೆ. ಇಬ್ಸನ್‌ನೊಡನೆ ಒಂದು ಬಾರಿ ಯಾರೋ ಕೇಳಿದರು: "ನಿಮ್ಮ.... ಪಾತ್ರದ ಮುಖದಿಂದ ಇಂತಹ ಮಾತುಗಳು ಹೊರಡಲು ಕಾರಣವೇನು?" ಕೂಡಲೇ ಉತ್ತರ ಬಂದಿತು: "ನೋಡಿ ಸ್ವಾಮಿ, ಆ ಪಾತ್ರವು ನನ್ನೊಡನೆ ಅವೇ ಮಾತುಗಳನ್ನು ಹೇಳಿತ್ತು. ಅವನ್ನೇ ನಾನು ಬರೆದೆನಷ್ಟೆ."

ಲೇಖನವೆನ್ನುವುದು ಆತ್ಮದಾನದ ಇನ್ನೊಂದು ಹೆಸರು. ಜಾರ್ಜ್ ಬರ್ನಾರ್ಡ ಶಾ ರೊಡನೆ ಅವರ ಜೀವನ ಚರಿತ್ರೆಯ ಬಗ್ಗೆ ಪ್ರಶ್ನಿಸಿದಾಗ ಅವರು ಹೇಳಿದ್ದರು: "ನನಗೆ ಜನತೆಗೆ ಏನನ್ನು ಕೊಡಬೇಕೆಂದಿತ್ತೋ ಅವೆಲ್ಲವನ್ನೂ ನನ್ನ ವಿವಿಧ ಕೃತಿಗಳಲ್ಲಿ ನಾನು ಕೊಟ್ಟು ಮುಗಿಸಿದ್ದೇನೆ. ಇನ್ನು ಬಾಕಿಯುಳಿದಿರುವುದೇನೂ ಇಲ್ಲ."



ಗಾಜು ಪುಡಿ ಮಾಡುವ ಯಂತ್ರವೊಂದನ್ನು ನಿಪುಣ ನೌಕರನು ಕಾರಖಾನೆಯಲ್ಲಿ ಪರೀಕ್ಷಿಸುತಿದ್ದಾನೆ.

ಲೇಖಕರು ಈ ಆತ್ಮದಾನವನ್ನು ಯಾವುದೋ ಒಂದು ಶಕ್ತಿಯ ವಶೀಭೂತರಾಗಿಯೇ ಮಾಡುತ್ತಾರೆ. ರೋಮಾಂ ರೋಲಾಂ ಎಂಬವರೊಡನೆ ಒಂದುಬಾರಿ ಯಾರೋ ಮಹನೀಯರೊಬ್ಬರು "ತಾವು ಏತಕ್ಕೋಸ್ಕರ ಬರೆಯುತ್ತೀರಿ?" ಎಂದು ಕೇಳಿದ್ದರು. ಇದನ್ನು ಉತ್ತರಿಸುತ್ತ ಲೇಖಕರು ಹೇಳಿದ್ದರು: "ನನಗೆ ಬರೆಯದ ಹೊರತು ಇರಲಾಗುವುದಿಲ್ಲ. ಅದಕ್ಕಾಗಿ ಬರೆಯುತ್ತಿರುತ್ತೇನೆ. ವಿಚಾರ ವಿಮರ್ಶೆ ಮಾಡುವ ಮತ್ತು ಕಾರ್ಯವೆಸಗುವ ಸರ್ವೋತ್ತಮ ವಿಧಾನನೆಂದರೆ ಲೇಖನ ಬರೆಯುವುದೇ ಎಂದು ನಾನು ತಿಳಿಯುತ್ತೇನೆ. ಲೇಖನ ಬರೆಯುವುದು ಎಂದರೆ ನನ್ನ ಮಟ್ಟಿಗೆ ಶ್ವಾಸೋಚ್ಛ್ವಾಸದಂತೆ; ಜೀವನದಂತೆ. ಅದಿಲ್ಲದೆ ನಾನು ಬದುಕಿರಲಾರೆ."

ಬರವಣಿಗೆಗೆ ಪ್ರೇರಕವಾಗುವ ಆ ಶಕ್ತಿಯ ಸ್ವರೂಪವು ಲೇಖಕನ ಆಂತರಿಕ ಹಾಗೂ ಬಾಹ್ಯ ಸ್ಥಿತಿಗತಿಗಳಿಗನುಸಾರವಾಗಿ ವಿವಿಧ ರೂಪವಾಗಿರುವುದು. "ನನ್ನ ದರಿದ್ರ ಮತ್ತು ದುಸ್ಸಹವಾದ ಜೀವನದಿಂದಾಗಿಯೇ ನಾನು ಸಾಹಿತ್ಯಕಾರನಾದೆ. ನನ್ನ ಅನುಭೂತಿಗಳು ನನ್ನನ್ನು ಬರೆಯುವಂತೆ ಪ್ರೇರೇಪಿಸಿದುವು; ಆಗ ನಾನು ಸುಮ್ಮನಿರಲಾರದಾದೆ" ಎಂದು ಮಾಕ್ಸಿಮ್ ಗಾರ್ಕಿ ಹೇಳಿದ್ದರು. ಮಹಾತ್ಮಾ ಗಾಂಧೀಯವರು "ಪರಮಾತ್ಮನೇ ನನ್ನಿಂದ ಬರೆಸುತ್ತಾನೆ" ಎಂದು ಅನ್ನುತಿದ್ದರು.

ಸೃಷ್ಟಿಯೂ ಒಂದು ಸಾಧನೆಯೆಂದು ಕೆಲವು ಸಾಹಿತ್ಯಕಾರರ ಅಭಿಪ್ರಾಯ. ಸಾನೇ ಗುರೂಜಿಯವರು ಲೇಖನ ಕಲೆಯೆಂಬುದನ್ನು ಉಪಾಸನೆಯ ಒಂದು ರೂಪವೆಂದು ತಿಳಿಯುತಿದ್ದರು. "ನಾನು ಜೀವನದ ಓರ್ವ ನಮ್ರ ಉಪಾಸಕನು. ನನ್ನ ಬರವಣಿಗೆ, ಮಾತು, ವಿಚಾರ ಮತ್ತು ಪ್ರಾರ್ಥನೆ ಎಲ್ಲವೂ ಈಯೊಂದು ಧ್ಯೇಯ ಸಾಧನೆಗಾಗಿಯೇ ಇರುತ್ತವೆ" ಯೆಂದು ಅವರು ಹೇಳುತಿದ್ದರು.

ಸುಪ್ರಸಿದ್ಧ ಹಿಂದೀ ಸಾಹಿತ್ಯ ಸಾಮ್ರಾಟರಾದ ಶ್ರೀ ಪ್ರೇಮಚಂದರೂ ಇದೇ ವಿಪರೀತ ದೃಷ್ಟಿಕೋಣವನ್ನು ಇಟ್ಟುಕೊಂಡಿದ್ದರು. "ಲೇಖನಿಯ ದಾಸ" ಎಂದು ಅವರು ತಮ್ಮನ್ನು ಕರೆದುಕೊಳ್ಳುತಿದ್ದರು. "ನನ್ನ ಅದೃಷ್ಟ ಹಾಗೂ ಮನಸ್ಸುಗಳೆ ಮಾರ್ಗ ನನಗೆ ದರಿದ್ರರ ಪರಿಚಯವನ್ನು ಮಾಡಿಕೊಟ್ಟಿತು. ಇದರಿಂದ ನಾನು ನಿಜವಾಗಿಯೂ ಸಂತುಷ್ಟನಾಗಿರುವೆನು. ಇದರಿಂದಲೇ ನನ್ನ ಮನಸ್ಸಿಗೆ ಶಾಂತಿ ಲಭಿಸುತ್ತಿದೆ" ಎಂದವರು ಬಹು ಪ್ರಸನ್ನತೆಯಿಂದಲೇ ಅಂದುಕೊಳ್ಳುತಿದ್ದರು. ಇದನ್ನೇ ನಮ್ಮ ಹಿಂದಿನವರು 'ಸ್ವಾಂತ ಸುಖಾಯ' ಎನ್ನುತಿದ್ದರು.

ಹೀಗೆ ಲೇಖಕನು ತನ್ನ ವ್ಯಕ್ತಿತ್ವವನ್ನೇ ತನ್ನ ಕೃತಿಗಳಲ್ಲಿ ವಿಮರ್ಶೆಗೆ ತೊಡಗುವನು. ಆಯಾ ಪಾತ್ರಗಳ ಶೀಲ ಚಾರಿತ್ರ ಚಿತ್ರಣದಲ್ಲಿ ಆಸಕ್ತನಾಗಿ ಅದರಲ್ಲಿ ಪರಿಣತನಾದನೆಂದರೆ, ಆತ ಉದ್ದಾಮನೆನಿಸುವುದರಲ್ಲಿ ಸಂದೇಹವಿಲ್ಲ.

— —

ಅಧಿಕ ಫಲದಾಯಕವಾದ
ಸಿಂಡಿಕೇಟ್ ಬೇಂಕ್ ಕೇಶ್ ಸರ್ಟಿಫಿಕೇಟುಗಳು
ಮೂರು ವರುಷಗಳಲ್ಲಿ

100 ರೂಪಾಯಿಗಳು 112-50

1000 ರೂಪಾಯಿಗಳು 1125

● ಮೂರು ವರುಷಗಳ ಅವಧಿಯ
ನೂರು ಮತ್ತು ಸಾವಿರ ರೂಪಾಯಿಗಳ
ಸಿಂಡಿಕೇಟ್ ಬೇಂಕ್ ಕೇಶ್ ಸರ್ಟಿಫಿಕೇಟುಗಳು
ನಿಮ್ಮ ಹಣಕ್ಕೆ ಅತ್ಯಧಿಕ ಬಡ್ಡಿಯನ್ನು ಕೊಡುವುವು.
● ಹೆಚ್ಚಿನ ವಿವರಗಳಿಗೆ ನಿಮಗೆ ಸಮೀಪವಿರುವ ನಮ್ಮ ಗರ್ಶಾಖೆಗಳಲ್ಲೊಂದರಲ್ಲಿ ದಯಮಾಡಿ ವಿಚಾರಿಸಿರಿ.

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಪಂಚಮುಖ (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

Edited, Printed & Published by K. H. Shetty, at the Navayuga Press, Udipi, S. India.

40th year of publication. 13-10-1960 ೪೦ನೇ ವರ್ಷ

ಸಂಪುಟ ೪೦ Vol. 40

ಸಂಚಿಕೆ ೭ No. 7

ಬೆಲೆ 0=13

ನವಯುಗ

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಮೈಸೂರು ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ

ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ರಾಜ್ಯದಲ್ಲಿ ಯೋಗ್ಯತಾಸಂಪನ್ನ ವೈದ್ಯರ ಅಭಾವ ನಿರ್ಮೂಲನೆಗೆ ಪ್ರಯತ್ನ ನಡೆಸಲಾಗಿದೆ; ಗ್ರಾಮೀಣ ಪ್ರದೇಶಗಳಿಗೂ ಸಮರ್ಥ ವೈದ್ಯಕೀಯ ಸೇವೆಯೊದಗಿಸುವುದೇ ಸರಕಾರದ ಉದ್ದೇಶವಿದೆ.

ಮೈಸೂರು ವಿಶ್ವವಿದ್ಯಾಲಯದ ನಿಯಂತ್ರಣದಲ್ಲಿದ್ದ ವೈದ್ಯಕೀಯ ಶಿಕ್ಷಣವನ್ನು ಸರಕಾರವು ವಹಿಸಿಕೊಂಡಿದೆ. ಬೊಂಬಾಯಿ ಸರಕಾರದಿಂದ ಮಂಜೂರಾದ ಹುಬ್ಬಳ್ಳಿಯ ಮೆಡಿಕಲ್ ಕಾಲೇಜನ್ನು ೧೯೫೭ರಲ್ಲಿ ಸ್ಥಳಾವಕಾಶ, ಅಧ್ಯಾಪಕ ಮತ್ತಿತರ ಸಲಕರಣೆಗಳ ಅಭಾವಗಳನ್ನು ಎದುರಿಸಿ ಸ್ಥಾಪಿಸಲಾಗಿದೆ. ಖಾಸಗಿ ಸಂಸ್ಥೆಯು ನಡೆಸುತ್ತಿದ್ದ ಬೆಂಗಳೂರು ಮೆಡಿಕಲ್ ಕಾಲೇಜನ್ನು ಅದೇ ವರ್ಷ ಸರಕಾರ ತನ್ನ ಅಂಕಿತಕ್ಕೆ ತೆಗೆದುಕೊಂಡಿತು. ಮೈಸೂರು ಮೆಡಿಕಲ್ ಕಾಲೇಜು ಸ್ಥಾಪನೆಯಾಗಿ ಮೂವತ್ತು ವರ್ಷ ಕಳೆದರೂ ಇಂಡಿಯನ್ ಮೆಡಿಕಲ್ ಕೌನ್ಸಿಲು ನಿರ್ಧರಿಸಿದ್ದ ಸ್ತರವನ್ನು ಇಲ್ಲಿ ತರಲಾಗಲಿಲ್ಲ. ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳ ಮತ್ತು ಸರಕಾರದ ಇಲಾಖೆಗಳ ಸಹಕಾರದಿಂದ ಈ ಕಾಲೇಜುಗಳು ಒಂದು ರೂಪಕ್ಕೆ ಬಂದಿವೆ; ನಿರೀಕ್ಷಿತ ಮಟ್ಟವನ್ನೂ ಇನ್ನು ಒಂದೆರಡು ವರ್ಷಗಳಲ್ಲಿ ತರುವುದು ಸಾಧ್ಯವಾಗಬಹುದು. ಪೂರ್ಣಾವಧಿಯ ಟೀಚಿಂಗ್ ಯುನಿಟ್‌ನ್ನು ಮಂಜೂರು ಮಾಡಿ, ಯೋಗ್ಯತಾಸಂಪನ್ನ ಅಧ್ಯಾಪಕರನ್ನು ನೇಮಿಸುವತ್ತ ಸರಕಾರ ಪ್ರಯತ್ನಿಸುತ್ತಿದೆ. ಸರಕಾರದ ಉದಾರ ಧೋರಣೆಯಿಂದಾಗಿ ನೂರರಷ್ಟು ಡಾಕ್ಟರರು ದೇಶ ವಿದೇಶಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಗಳಿಸಲು ತೆರಳಿದ್ದಾರೆ; ಇವರು ಮುಂದಿನ ಎರಡು ವರ್ಷಗಳೊಳಗೆ ಮರಳಿ ಬರುವ ನಿರೀಕ್ಷೆಯಿದೆ. ನಮ್ಮ ಎಲ್ಲ ಶೈಕ್ಷಣಿಕ ಸಂಸ್ಥೆಗಳು, ಪ್ರಧಾನ ಮತ್ತು ಜಿಲ್ಲಾ ಮುಖ್ಯ ನಗರದ ಆಸ್ಪತ್ರೆಗಳಲ್ಲಿ ಯೋಗ್ಯತಾಸಂಪನ್ನ ಡಾಕ್ಟರರೂ ವಿಶೇಷಜ್ಞರೂ ಮುಂದಿನ ಎರಡು ಮೂರು ವರ್ಷಗಳಲ್ಲಿ ದೊರೆಯುವರೆಂದು ನಂಬಬಹುದು.

ಡಾಕ್ಟರರ ಆವಶ್ಯಕತೆಯನ್ನು ಪೂರೈಸಲು ಯೋಜನಾವಧಿಯಲ್ಲಿ ಇನ್ನೊಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸಬೇಕೆಂದು ಸರಕಾರದ ಆಶೆಯಿತ್ತು. ಹಲವು ಕಾರಣದಿಂದ ಇದು ಅಸಾಧ್ಯವಾದುದರಿಂದ ಸರಕಾರವು ಬೆಂಗಳೂರು ಮತ್ತು ಮೈಸೂರು ಕಾಲೇಜುಗಳಲ್ಲಿ ಐವತ್ತು ಐವತ್ತು ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶವೀಡುವ ಏರ್ಪಾಟು ಮಾಡಿತು. ೧೨೦ ವಿದ್ಯಾರ್ಥಿಗಳನ್ನು ಎಂ. ಬಿ. ಬಿ. ಎಸ್. ಗೆ ಒಯ್ಯುವ ಪ್ರಿ-ಪ್ರೊಫೆಶನಲ್ ಕೋರ್ಸಿಗೂ ೧೨೦ ಮಂದಿಯನ್ನು ಮೊದಲನೆ ಎಂ. ಬಿ. ಬಿ. ಎಸ್. ವರ್ಗಕ್ಕೂ ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿ ಸೇರಿಸಿಕೊಳ್ಳಲಾಯಿತು. ಕಳೆದ ವರ್ಷ ಈ ದಾಖಲಾತಿ ೮೦ ಇತ್ತು. ಕೇಂದ್ರ ಸರಕಾರದವರು ಹೆಚ್ಚಿನ ಸ್ಥಾನಗಳಿಗಾಗಿ ಒದಗುವ ಆವೃತ ಮತ್ತು ಅನಾವೃತ್ತ ವೆಚ್ಚಕ್ಕಾಗಿ ರೂ. ೫೯ ಲಕ್ಷವನ್ನು ಇತ್ತಿದ್ದಾರೆ ಮತ್ತು ರಾಜ್ಯ ಸರಕಾರವು ರೂ. ೬೦ ಲಕ್ಷವನ್ನು ಖರ್ಚು ಮಾಡುತ್ತದೆ. ಪೂರ್ಣಾವಧಿಯ ಟೀಚಿಂಗ್ ಯುನಿಟ್‌ಗಳನ್ನು ಪ್ರಾರಂಭಿಸಿದುದಕ್ಕೆ ಕೇಂದ್ರ ಸಹಾಯದ ಬಗ್ಗೆ ಮಾಡಿದ ಮನವಿಗೆ ಆಶಾದಾಯಕ ಉತ್ತರ ದೊರೆಯಬಹುದು.

ಡಾಕ್ಟರರ ಯೋಗ್ಯತೆಗಳಲ್ಲಿ ಸಾಧ್ಯವಾದಷ್ಟು ಸಮಾನತೆಯನ್ನು ತರುವುದಕ್ಕಾಗಿ, ಸಂಕ್ಷಿಪ್ತ ಎಂ. ಬಿ. ಬಿ. ಎಸ್. ಕೋರ್ಸನ್ನು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಕಳೆದ ವರ್ಷದಿಂದ ಪ್ರಾರಂಭಿಸಲಾಗಿದೆ. ಅನಾಟೊಮಿ ಫಾರ್ಮಕೊಲೊಜಿಯಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಸರಕಾರವು ಮಂಜೂರುಮಾಡಿದೆ. ಬೆಂಗಳೂರು ಮತ್ತು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಬಿ. ಫಾರ್ಮ ಕೋರ್ಸನ್ನು ಕೂಡ ತೆರೆಯಲು ನಿರ್ಧರಿಸಿದೆ.

೧೬ ಲಕ್ಷ ರೂಪಾಯಿಗಳ ಅನಾವೃತ್ತ ವೆಚ್ಚದಲ್ಲಿ ಬೆಂಗಳೂರಲ್ಲಿ ಒಂದು ದಂತ ಕಾಲೇಜನ್ನು ಸ್ಥಾಪಿಸಲಾಗಿದೆ. ಈ ಕಾಲೇಜಿನಲ್ಲಿಯೂ ಯೋಗ್ಯ ಅಧ್ಯಾಪಕರ ನೇಮಕದ ಬಗ್ಗೆ ಸರಕಾರವು ಕ್ರಮ ಕೈಗೊಂಡಿದೆ.



ಅಮೆರಿಕೆಯ ಕ್ರೀಡಾಸಕ್ತಿ

೧. ಒಲಿಂಪಿಕ್, ಪಾನ್ ಅಮೆರಿಕನ್ ಮೊದಲಾದ ಅಂತಾರಾಷ್ಟ್ರೀಯ ಆಟಗಳ ಸ್ಪರ್ಧೆಗಳಲ್ಲಿ ಅಮೆರಿಕೆಯು ಭಾಗವಹಿಸುತ್ತದೆ. ೨. ೧೯೬೦ರಲ್ಲಿ ಚಳಿಗಾಲದ ಒಲಿಂಪಿಕ್ ಆಟಗಳು ಅಮೆರಿಕೆಯಲ್ಲಿಯೇ ನಡೆಯಲಿರುವುವು. ೩. ಅಮೆರಿಕೆಯ ರಾಜ್ಯಾಂಗ ವಿಭಾಗವು ಪ್ರತಿ ವರ್ಷವೂ ಪ್ರಪಂಚದ ಬೇರೆ ಬೇರೆ ದೇಶಗಳಿಗೆ ಆಟದ ಪಂಗಡಗಳನ್ನು ಸೌಹಾರ್ದ ಮತ್ತು ಮಿತ್ರತ್ವಗಳಿಗಾಗಿ ಕಳಿಸಿಕೊಡುತ್ತಿದೆ.

ದಿ ಕಾಲೇಜ್ ಆಫ್ ಇಂಡಿಯನ್ ಮೆಡಿಸನನ್ನು ಡಿಪ್ಲೊಮಾ ಕೋರ್ಸಿನಿಂದ ಪದವೀ ಅಭ್ಯಾಸಕ್ಕೆ ಉನ್ನತೀಕರಿಸಲಾಗಿದೆ. ಆಯುರ್ವೇದ ಕ್ರಮದಲ್ಲಿ ಉತ್ತಮ ತರಬೇತಿಯೊಡನೆ ಅಭ್ಯಾಸ ಮಾಡಲು ಈ ಉಪಕ್ರಮದಿಂದ ಸಹಾಯವಾಗುವುದು. ಆಯುರ್ವೇದದ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲು ದೃಢವಾದ ಬುನಾದಿಯನ್ನೂ ಹಿನ್ನೆಲೆಯನ್ನೂ ಹಾಕಿಕೊಡುವಂತೆ ಅಭ್ಯಾಸಪತ್ರಿಕೆಯಲ್ಲಿ ಅನಾಟಮಿ, ಫಿಸಿಯೋಲಜಿಗಳ ಅಧ್ಯಯನಕ್ಕೂ ಅವಕಾಶ ಕಲ್ಪಿಸಿ ಕೊಡಲಾಗಿದೆ.

ಬಳ್ಳಾರಿ, ಬೆಂಗಳೂರು ಮತ್ತು ಬೆಳಗಾಮುಗಳಲ್ಲಿ ಜಿ. ಸಿ. ಎ. ಎಮ್. ಕೋರ್ಸನ್ನು ಖಾಸಗಿ ಸಂಸ್ಥೆಗಳು ಪ್ರಾರಂಭಿಸಿವೆ. ಬೆಂಗಳೂರು, ಮೈಸೂರು, ಉಡುಪಿ ಮತ್ತು ಕುಷ್ಟಗಿಗಳಲ್ಲಿ ಖಾಸಗಿ ಸಂಸ್ಥೆಗಳು ಶುದ್ಧಾಯುರ್ವೇದ ಕಾಲೇಜುಗಳನ್ನು ನಡೆಸಲು ಪ್ರೋತ್ಸಾಹ ಕೊಡಲಾಗುತ್ತಿದೆ.

ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಮೈಸೂರಿನ ವೈದ್ಯಕೀಯ ಶಿಕ್ಷಣದ ವಿವರಗಳನ್ನು ಮೇಲೆ ಈಯಲಾಗಿದೆ. ಈ ಕ್ಷೇತ್ರದಲ್ಲಿ ನಾವು ಮಾಡಬೇಕಾದುದು ಇನ್ನೂ ಪರ್ವತದಷ್ಟು ಇದೆ.

ನಮ್ಮ ವೈದ್ಯಕೀಯ ಕಾಲೇಜುಗಳು ಮತ್ತು ಸಂಸ್ಥೆಗಳನ್ನು ಪರಿಶೀಲಿಸಿ ಅವುಗಳ ಕಾರ್ಯಕ್ರಮವನ್ನು ಸುಧಾರಿಸಲು ಸಲಹೆ ನೀಡಲು ಸರಕಾರದಿಂದ ನೇಮಿತರಾದ ಮೇಜರ್ ಜನರಲ್ ಭಟಿಯಾರ ಸೇವೆಯನ್ನು ಕೊಂಡಾಡಬೇಕಾಗಿದೆ ಇವರು ಸರಕಾರಕ್ಕೆ ತನ್ನ ಅಮೂಲ್ಯ ವರದಿಯನ್ನು ಒಪ್ಪಿಸಿದ್ದು ಇದರಲ್ಲಿ 'ಇಂಡಿಯನ್ ಮೆಡಿಕಲ್ ಕೌನ್ಸಿಲು ನಿಯಮಿಸಿದ ಸ್ತರವನ್ನು ನಮ್ಮ ಕಾಲೇಜುಗಳಲ್ಲಿ ತರುವಂತೆ, ಜಿಲ್ಲೆಯ ಮತ್ತು ಪ್ರಧಾನ ಆಸ್ಪತ್ರೆಗಳಲ್ಲಿ ವಿಶೇಷ ತಜ್ಞರ ಸೇವೆಯನ್ನು ಒದಗಿಸುವ ವ್ಯವಸ್ಥೆ ತೊಡಗಿಸುವಂತೆ, ಜಿಲ್ಲೆಯ ಪ್ರಧಾನ ನಗರದ ಆಸ್ಪತ್ರೆಗಳ ವಿಭಾಗಗಳಲ್ಲಿ ಸಮಾನ ಮಾದರಿಯನ್ನು ತರುವಂತೆ, ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆಗಳನ್ನು ಒಂದುಗೂಡಿಸುವಂತೆ

(೯ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

●

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಬಿಡಿಪ್ರತಿ ರೂ. 0-13

ಚಂದಾ ಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಬೆವರಿನ ಬೆಲೆ ದೊರೆಯಿತು

ಕೃತ ಮಾಡಿದರೆ ಮೂಲಗೇಣಿಗೆ ಕೊಟ್ಟೇನೆಂಬ ಧನಿಯರ ಮಾತು ನಂಬಿ ಚಾಲಗೇಣಿಯ ಭೂಮಿಯನ್ನು ಬೆವರಿಳಿಸಿದ ನಾಗಪ್ಪ, ಕೃತ ಫಲ ಕೊಟ್ಟು ತನ್ನ ಬೆವರಿನ ಬೆಲೆ ಕೊಡಲು ಸನ್ನದ್ಧವಾಯಿತು. ನಾಗಪ್ಪನಿಗೂ ತನ್ನ ಬೆವರಿನ ಬೆಲೆ ದೊರೆಯಿತು!

ಶ್ರೀ "ಜನ್ನ", ಮರವಂತೆ.

ಒಡೆಯರಿಂದ ಬಂದ ಕರೆಗೆ ಓಗೊಟ್ಟು ನಾಗಪ್ಪ ಅವರ ಮನೆಯ ಅಂಗಳದಲ್ಲಿ ಹಾಜರಾದ. ಮಧ್ಯಾಹ್ನದ ಭೋಜನ ತೀರಿಸಿ ಆರಾಮಾಸನದಲ್ಲಿ ಮಂಡಿಸಿ, ಹೊಟ್ಟೆಯ ಮೇಲೆ ಕೈಯೆಳೆಯುತ್ತಾ ತಾವು ಆತನನ್ನು ಕರೆಸಿದ ಕಾರಣವನ್ನು ವಿವರಿಸುತ್ತಾ ಧನಿಗಳು ಹೇಳಿದರು—

"ನೋಡು—ಇಂದಿಗೆ ಆರು ವರುಷ ಕಳೆಯಿತು—ನಿನಗೆ ನನ್ನ ಆ ಸ್ಥಳವನ್ನು ಚಾಲಗೇಣಿಗೆಕೊಟ್ಟು. ಹಿಂದಿನ ವರುಷವೇ ಅದನ್ನು ಬಿಟ್ಟುಬಿಡಲು ತಿಳಿಸಿದ್ದೆ. ಆದರೆ ನೀನು ಈ ವರುಷದವರೆಗೆ ವಾಯಿದೆ ಹಾಕಿದ ಕಾರಣ ಆಗಲೆಂದು ಇಲ್ಲಿಯ ತನಕ ಸುಮ್ಮನಿದ್ದಾಯಿತು. ಇನ್ನು ಮಾತ್ರ ಆಗಲಿಕ್ಕಿಲ್ಲ; ಅದನ್ನು ನೀನು ಬಿಟ್ಟೇ ತೀರಬೇಕು. ತಿಳಿಯಿತೋ?"

ನಾಗಪ್ಪನಿಗೆ ಸಿಡಿಲು ಬಡಿದಂತಾಯಿತು. ಆದರೂ ಸಾವರಿಸಿಕೊಂಡು ಆತ ನುಡಿದ—

"ಸ್ವಾಮಿ, ಆರು ವರುಷಗಳ ನನ್ನ ಕೃತ ಈಗ ಫಲ ಕೊಟ್ಟಿದೆ. ಅದನ್ನೊಂದು ಬಾರಿಯಾದರೂ ನಾನು ಸವಿದಿಲ್ಲ. ಈ ಒಂದು ವರುಷ ಮಾತ್ರ ನನಗೆ ಬಿಟ್ಟುಬಿಡಿ. ನಂತರ ನೀವು ಹೇಳುವ ಮೊದಲೇ ನಾನು ಬಿಟ್ಟುಬಿಡುವೆ."

'ಅದೆಲ್ಲಾ ಆಗದ ಮಾತು. ನೀನೆಲ್ಲೋ ಪಾಪದವನೆಂದು ಇಷ್ಟರ ತನಕ ಸುಮ್ಮನಿದ್ದೆ. ಇಂದಿನ ನಂತರ ಆ ಸ್ಥಳದಲ್ಲಿ ನಿನಗೆ ಯಾವ ಅಧಿಕಾರವೂ ಇಲ್ಲ ತಿಳಿಯಿತೊ? ನನ್ನ ಮಾತು ಮೀರಿ ನೀನಿನ್ನು ಆ ತೋಟದಲ್ಲಿ ಕಾಲಿಟ್ಟೆಯಾದರೆ—ನೋಡಿಕೋ—ನಿನ್ನ ಸೊಂಟ ಮುರಿಸಿಬಿಟ್ಟೇನು...." ಎಂದು ಗುಡುಗಿ ಒಡೆಯರು ನಾಗಪ್ಪನಿಗೆ ಮುಂದೆ ಮಾತನಾಡಲೂ ಸಮಯ ಕೊಡದೇ ಅಲ್ಲಿಂದೆದ್ದು ಒಳನಡೆದರು. ಮಾತನಾಡಬೇಕೆಂದು ತೆರೆದಿದ್ದ ಬಾಯನ್ನು ಹಾಗೇ ಮುಚ್ಚಿ ಉಗುಳು ನುಂಗಿದ ಆತನ ಕೊರಳುಬ್ಬಿ, ಕಣ್ಣೀರು ಕೋಡಿಯಾಗಿ ಹರಿಯಿತು. ತಾನು ಆರು ವರುಷಗಳಿಂದಲೂ ರಕ್ತ ಚೆಲ್ಲಿ ದುಡಿದ ದುಡಿತದ ಫಲವನ್ನು ತಾನುಣ್ಣದೇ, ಒಡೆಯರ ಸೊತ್ತಾಗುವುದನ್ನು ನೆನೆದಷ್ಟೂ ಆತನ ದುಃಖ ಉಮ್ಮಳಿಸಿತು. ಆದರೆ ಆತನೇನು ತಾನೇ ಮಾಡಬಲ್ಲ? ಆತ ಮೆಲ್ಲನೆ ಅಲ್ಲಿಂದೆದ್ದು ಹಿಂತಿರುಗಿ ಬಂದ.

ಒಡೆಯರ ಕರೆ ಕೇಳಬರುವಾಗ ಆತ ಅದೇ-ತನ್ನ ದುಡಿತದಿಂದ ಸೊಂಪಾದ ಆ ತೋಟವನ್ನು ಹಾಯ್ದೇ ಬಂದಿದ್ದ— 'ಇದು ತನ್ನ ಬೆವರಿನ ಬೆಲೆಯೆಂದು ಎದೆಯುಬ್ಬಿಸಿಕೊಂಡು ಅಭಿಮಾನದಿಂದ ಬಂದಿದ್ದ. ಈಗಲೂ ಅದನ್ನು ಹಾಯ್ದೇ ಹಿಂತಿರುಗಿದ. ಆದರೆ ಅಭಿಮಾನದಿಂದ ಮೈಯನ್ನುಬ್ಬಿಸಿಯಲ್ಲ; ಒಡೆಯರ ದುರಭಿಮಾನಕ್ಕೆ ಬಲಿಯಾಗಿ ಸ್ವಪ್ನಗಳನ್ನು ಮುದುಡಿಸಿ, ದುಃಖದ ಭಾರದಿಂದ ಬಾಗಿ ಆತ ಆ ತೋಟದಲ್ಲೇ ಕುಸಿದು ಕುಳಿತ. ತನಗೂ—ಆ ತೋಟಕ್ಕೂ ಇರುವ ಸಂಬಂಧ ಇಂದಿಗೆ ಕಡಿಯಿತೆಂಬುದನ್ನು ನಂಬುವುದೂ ಆತನಿಗೆ ಕಷ್ಟವಾಯಿತು. ಆದರೆ ಈಗ ನಡೆದ ಘಟನೆ ಕನಸಲ್ಲವೆಂಬುದು ಆತನಿಗೆ ಗೊತ್ತಷ್ಟೆ.

ತಂಗಾಳಿ ಬೀಸಿ ತೆಂಗಿನ ಗರಿಗಳು ಶಬ್ದ ಮಾಡಿದುವು. ಹೂಬಿಟ್ಟಿದ್ದ ಮಾವಿನ ಸಸಿಗಳು ತೂಗಿದುವು. ಆರು ವರ್ಷಗಳ ಹಿಂದೆ ಬಂಜರು ಬಿದ್ದಿದ್ದ ಆ ಭೂಮಿಯಲ್ಲಿ ಇಂದು ಹಚ್ಚಹಸುರಾದ ಪೈರು ನರ್ತಿಸುತ್ತಿತ್ತು. ಇನ್ನೊಂದು ವರ್ಷದಲ್ಲಿಯೇ ಫಲ ಕೊಡಲಿದ್ದ ತೆಂಗು ಮಾವು ಇತ್ಯಾದಿ ಮರಗಳ, ಹೂಭಾರದಿಂದ ತೊನೆಯುತ್ತಿದ್ದುವು. ನಾಗಪ್ಪ ಯೋಚಿಸುತ್ತಿದ್ದ—ಗತಿಸಿದ ಆರು ವರ್ಷಗಳ ತನ್ನ ಹಾಗೂ ತೋಟದ ಕಥೆಯನ್ನು:

ಆ ಹಳ್ಳಿಯ ಪ್ರಾಮಾಣಿಕ ರೈತರಲ್ಲಿ ನಾಗಪ್ಪನೂ ಒಬ್ಬ. ಪ್ರಾಯದ ಕಾಲದಲ್ಲಿ ಘಟ್ಟಕ್ಕೆ ಹೋಗಿ ದುಡಿಯುತ್ತಿದ್ದ. ಆದರೆ ಈಗೀಗ ಅಲ್ಲಿಯ ಛಳಿ ಹವೆ ಒಗ್ಗದೇ ಆತ ಊರಿನಲ್ಲೇ ನೆಲಸಿದ್ದ. ಚಿಕ್ಕದೊಂದು ಮನೆ. ಜೀವನ ನಿರ್ವಹಣೆಗಾಗಿ ಕೂಲಿನಾಲಿ ಮಾಡುವ ಹೆಂಡಿರು ಮಕ್ಕಳು ಆತನ ಆಸ್ತಿ. ಘಟ್ಟದ ದುಡಿತದಿಂದ ನಿವೃತ್ತಿಗೊಂಡಿದ್ದ ನಾಗಪ್ಪನಿಗೆ ತನ್ನ ಮನೆಯ ಹತ್ತಿರದ— ಆ ಭಟ್ಟರ ಬಂಜರು ಭೂಮಿಯ ಮೇಲೆ ಕಣ್ಣು ಬಿತ್ತು. 'ಅದನ್ನು ಚಾಲಗೇಣಿಗೆ ಪಡೆದುಕೊಂಡು ಕೃಷಿ ಮಾಡಿದರೆ ಮೂಲಗೇಣಿಗೆ ಕೊಡುವೆ'ನೆಂಬ ಒಡೆಯರ ಪೊಳ್ಳು ಆಶ್ವಾಸನೆಯನ್ನು ನಂಬಿ- ಆ ಸ್ಥಳದಲ್ಲಿ ಒಂದೊಂದಾಗಿ ತೆಂಗು, ಮಾವು, ಹಲಸು, ಬಾಳೆ ಇತ್ಯಾದಿ ಸಸಿಗಳನ್ನು ನೆಟ್ಟು ಅದನ್ನು ನಂದನವನವಾಗಿ ಪರಿವರ್ತಿಸಿದ್ದ. ಆದರೆ ಮೂಲಗೇಣಿಯ ಮಾತೆತ್ತಿದಾಗ ಭಟ್ಟರು ಅದನ್ನು ತಳ್ಳಿಹಾಕಿದ್ದರು. ಕೊನೆಗೆ ಸ್ಥಳವನ್ನೂ ಬಿಡೆಂದು ಹೇಳಿದಾಗ ನಾಗಪ್ಪ ಅಧೀರನಾದ. ಇಂತಹ ವಿಷಯಗಳಲ್ಲಿ ಆಡಿದಂತೆ ನಡೆಯುವ ಭಟ್ಟರು ಅದನ್ನೂ ಇಂದು ನಡೆಸಿಬಿಟ್ಟಿದ್ದರು. ಕಳೆದ ವರ್ಷ ಕೇಳಿದಾಗ ತಾನು ಒಂದು ಬಾರಿಯಾದರೂ ಅದರ ಫಲವನ್ನುಂಡು ನಂತರ ಬಿಡುವುದಾಗಿ ತಿಳಿಸಿದ್ದ. ಆದರೆ ಅದಕ್ಕೆ ಮೊದಲಾಗಿಯೇ ಇಂದು ಭಟ್ಟರು ಆಜ್ಞೆಯಿತ್ತಿದ್ದರು. ನಾಗಪ್ಪನ ಹಾಗೂ ತೋಟದ ಋಣ ಅಂದಿಗೆ ತೀರಿತ್ತು. ಸರಕಾರವೇನೋ ಚಾಲಗೇಣೀ ರೈತರಿಗೆ ತನ್ನ ಕಾನೂನಿನ ಮರೆಯನ್ನೊದಗಿಸಿದೆಯಾದರೂ ಕಾನೂನಿನ ಅನುಕೂಲತೆಯನ್ನು ನಾಗಪ್ಪನಂತಹ ಬಡ ಒಕ್ಕಲಿಗರು ಹೇಗೆ ತಾನೇ ಪಡೆಯಬಲ್ಲರು

○○ ○○ ○○

ಅದು ನಡೆದು ಎರಡು ವರ್ಷಗಳುರುಳಿವೆ. ನಾಗಪ್ಪ ಈಗ ಜೈಲಿನ ಕಂಬಿಗಳನ್ನೆಣಿಸುವ 'ಕೈದಿ!' ಅದೊಂದು ದಿನ ನಾಗಪ್ಪ ಆ ದಾರಿಯಾಗಿ—ಆ ತೋಟದ ಪಕ್ಕದಲ್ಲಿ ಹಾದುಹೋಗುತ್ತಿದ್ದ. ಮಾವಿನ ಮರಗಳು ಫಲದಿಂದ ಭಾರವಾಗಿ ತೂಗುತ್ತಿದ್ದುವು. ಅದು ಆತನ ಶ್ರಮದ ಫಲ; ಬೆವರಿನ ಬೆಲೆ. ಆತನ ಅಂದಿನ ದುಡಿಮೆ ಇಂದು ಹಣ್ಣಾಗಿ ತೂಗುತ್ತಿತ್ತು—ಆ ಅಭಿಮಾನ ಆತನನ್ನು ಕಾಡಿತು. ಒಂದೇ ಒಂದು ಹಣ್ಣಿಗಾಗಿ ಎಟಕಿದ ಸಂತಸದಿಂದ ಕಣ್ಣಾರಳಿಸಿ ಕೈ ನೀಡಿದ—ಕೈಗೆ ಬಿತ್ತು!...... ಹಣ್ಣಲ್ಲ—ತೋಟವನ್ನು ಕಾಯುತ್ತಿದ್ದ ಒಡೆಯರ ಆಳಿನ ದೊಣ್ಣೆಯ ಪೆಟ್ಟು! ಆ ಕೃತ್ಯವೇ ಆತನ ಮಹಾಪರಾಧ. ಅದರ ಫಲವಾಗಿ- ತನ್ನ ಶ್ರಮದ ಫಲವನ್ನು, ತನ್ನ ಒಂದೇ ಒಂದು ಆಸೆಯನ್ನು ಈಡೇರಿಸಿಕೊಳ್ಳಲು ಹೋದ ಆ ದುರಾಚಾರ(?)ದ ಫಲವಾಗಿ ಆತನಿಗೆ ಆರು ತಿಂಗಳ ಸಶ್ರಮ ಶಿಕ್ಷೆ ದೊರೆಯಿತು!

ಬೆಚ್ಚನೆಯ ಮನೆ
ವೆಚ್ಚಕ್ಕೆ ಹಣ

ಬೇಕಾದಲ್ಲಿ
ಮುಂಚಿತವಾಗಿಯೇ ಒಂದು ಉಳಿತಾಯ
ಯೋಜನೆಯನ್ನು ತಯಾರಿಸಿ, ಅದರಂತೆ
ಕೊರ್ಪೊರೇಶನ್ ಬೇಂಕಿನಲ್ಲಿ
ಹಣವನ್ನು ಉಳಿಸುತ್ತಾ ಬನ್ನಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ.
6 ರಾಜ್ಯಗಳಲ್ಲಿ ಒಟ್ಟು 60 ಶಾಖೆಗಳು

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಮಹಿಳಾಮಂಡಳ

ಮದುವೆಯ ಹಾಡುಗಳು

(ಲೇಖಾಂಕ ೨)

ಮದುವೆಯ ನಾಲ್ಕು ದಿನ ಮಹಿಳೆಯರ ಕೈಗೊಂಬೆಯಾಗಿರುವ ವರ ಇಕ್ಕಡೆಯುವರ ಪರಿಹಾಸ್ಯ ಕಟಕಿಗಳ ನಡುವೆ ಕಂಗಾಲಾಗಿ ಹೋಗುತ್ತಾನೆ. ಪ್ರಾಚೀನ ಆರ್ಯ ಸಂಸ್ಕೃತಿಯ ಪ್ರದರ್ಶನಕ್ಕಾಗಿ ಅಭಿನಯಿಸುವ ನಾಟಕವೇ ಮದುವೆ!

ಶ್ರೀಮತಿ ರುಕ್ಮಿಣೀ ದೇವಿ

ಮದುವೆಯ ಹಾಡುಗಳನ್ನು ಶುಭದಿನದ ಹಾಡುಗಳೆಂದೂ ಕರೆಯಬಹುದು. ಈಗ ಈ ಶುಭದಿನದ ಹಾಡುಗಳೆಂದರೆ ಸ್ತ್ರೀಯರ ಗತಕಾಲದ ವೈಭವಗಳೆಂದರೆ ತಪ್ಪಾಗದು. ಈಗ ಅಪರೂಪವಾಗಿ ಮದುವೆಯ ಚಪ್ಪರದಲ್ಲಿ, ಉಪನಯನದ ಮನೆಗಳಲ್ಲಿ ಕೆಲವು ಹಾಡುಗಳನ್ನು ಕೇಳಲು ಸಾಧ್ಯವಿದೆ. ಇವು ಇಂದು ನಮ್ಮ ಪಾಲಿಗೆ ದೊರೆತ ನಮ್ಮ ಸಂಸ್ಕೃತಿಯ ಅವಶೇಷಗಳು. ಅವಶೇಷಗಳು ಬಾಳಿದ್ದ ದಿನಗಳಲ್ಲಾದರೂ ಅವುಗಳ ಸಿಂಹಾವಲೋಕನವನ್ನೊಮ್ಮೆ ಮಾಡುವುದು ಅಪ್ರಾಸಂಗಿಕವಾಗಲಾರದು.

ಮದುವೆಯ ದಿನ್ನ ನಿರ್ಧಾರವಾಗಿಹೋಗಿದೆ. ನಾಂದೀ ಸಮಾವರ್ತನೆಯ ದಿನ ಅಡಿಗೆ ಭಟ್ಟರು ಅಡುಗೆಯನ್ನು ತಯಾರಿಸಲು ಬಂದಿದ್ದಾರೆ. ತರಕಾರಿಗಳೆಲ್ಲಾ ತೊಳೆದು ಸ್ವಚ್ಛವಾಗಿ ಅಡುಗೆಯ ಚಪ್ಪರದಲ್ಲಿವೆ. ಭಟ್ಟರು ತರಕಾರಿಗಳನ್ನು ಅರಿಯಲು, ಹೆಚ್ಚಲು ತೊಡಗಿದಾಗ ಸ್ತ್ರೀಯೊಬ್ಬಳು ಗಣಪತಿಯನ್ನು ಪ್ರಾರ್ಥಿಸುತ್ತಾಳೆ—

ಸಿದ್ಧಿ ವಿನಾಯಕ|ಶೀಘ್ರವ ಮಾಡಯ್ಯ|
ಸಿದ್ದೆಳು ಕಡಲೆ ನಿನಗೀವೆ ||
ನಿನಗೀವೆ ಗಣನಾಥ | ಶೀಘ್ರವ
ಮಾಡಯ್ಯ ಮದುವೆಗೆ || ೧ ||
ಎಳ್ಳು ಗದ್ದೆಯಲಿರುವ | ಡೊಳ್ಳೊಟ್ಟೆ
ಗಣನಾಥ | ಎಳ್ಳುಲಡ್ಡಿಗೆಯ ನಿನಗೀವೆ||
ನಿನಗೀವೆ ಗಣನಾಥ | ಒಳ್ಳೇದು
ಮಾಡಯ್ಯ ಮದುವೆಗೆ || ೨ ||

ಗಣನಾಥನಿಗೆ ಸ್ತ್ರೀಯರು ಕೊಡುವ ಲಡ್ಡಿಗೆಯಲ್ಲಿ ತುಂಬಾ ಇಷ್ಟ. ಅವನು ನಡೆಯುತ್ತಕ್ಕ ಶುಭಕಾರ್ಯಕ್ಕೆ ಅನುಗ್ರಹವೀಯುವನು!

ದಿಬ್ಬಣವು ವರನ ಮನೆಯಿಂದ ವಧುವಿನ ಮನೆಗೆ ಹೊರಟು ವಧುವಿನ ಮನೆಯ ಮುಂದಿನ ಮುಳಗದ್ದೆಯಲ್ಲಿ ಸಾಲಾಗಿ ನಿಲ್ಲುವುದು ಆಗ ವಧುವಿನ ಕಡೆಯವರು ವರನ ಕಡೆಯವರನ್ನು ಸ್ವಾಗತಿಸುವರು. ದಿಬ್ಬಣವು ಬೇಂಡು ವಾದ್ಯಗಳೊಡನೆ ಮದುವೆಯ ಚಪ್ಪರವನ್ನು ಪ್ರವೇಶಿಸುವುದು. ಆಗ ವರನ ಕಡೆಯ ಸ್ತ್ರೀಯರು—

'ಬಂದೇವು ಬಿಸಜಾಕ್ಷಿ | ನಾರಿ ಮ
ಕರೋಡೆ | ಬಂದೇವು ಬಿಸಜಾಕ್ಷಿ||ಪ||'

ಎನ್ನುತ್ತಾ ತಮ್ಮ ದಿಬ್ಬಣದ ವೈಭವವನ್ನು ವಿವರಿಸತೊಡಗುವರು. ಆಗ ಆ ವೈಭವದ ವಿವರಣೆಯಲ್ಲಿ ಆನೆ, ಕುದುರೆ, ಪಲ್ಲಕಿಗಳ ಮೆರವಣಿಗೆಗಳ ವಿಚಾರವೆಲ್ಲಾ ಬರುವುದು. ಆ ಮೇಲೆ ಅವರು ತಾವು ದೂರದಿಂದ ಬಂದಿದ್ದೇವೆ. ತಮಗೆ ಉಳಿದುಕೊಳ್ಳಲು ಬಿಡಾರವೆಲ್ಲೆಂದು ಕೇಳುವರು.

ಮುತ್ತಿನ ಚಪ್ಪರವೆಲ್ಲಿ | ಪಟ್ಟೆ ಮಂಚಗಳೆಲ್ಲಿ | ಲೋಡು ಸಿಂಹಾಸನ ನಮಗೆಲ್ಲಿ || ಲೋಡು ಸಿಂಹಾಸನ ನಮಗೆಲ್ಲಿ ಬೀಗರೆ | ನೂತನ ಬಿಡಾರ ನಮಗೆಲ್ಲಿ? || ೧ ||

ಇನ್ನು ಬಿಡಾರಕ್ಕೆ ಬೇಕಾದ ಸಾಮಗ್ರಿಗಳೂ ಸಲಕರಣೆಗಳೂ ಎಲ್ಲಿಯೆಂದು ರಾಜರೀತಿಯಿಂದ ಕೇಳುವರು. ಬೀಗರಲ್ಲವೆ? ಬೀಗಿರುವುದೇ ಅವರ ಸಹಜ ಸ್ವಭಾವ. ಅದಕ್ಕೆ ವಧುವಿನ ಕಡೆಯವರೂ ಹಾಡಿನ ಮೂಲಕ ಉತ್ತರನೀಯುವರು. ಮುಂದೆ ಗಂಡಿನ ಕಡೆಯವರು ದೂರದಿಂದ ಬಂದ ತಮ್ಮನ್ನು ಉಪಚರಿಸಲಿಲ್ಲವೇಕೆ? ಎನ್ನುವರು.

ಬಾಳ ದೂರನಿಂದ ಬಿಸಿಲು ಸಹಿಸಿ
ಬಂದೆವು | ದಾಹದಿಂದ ಬಳಲಿ ಬದುವು
ಮುಖಿಯರೆಲ್ಲರೂ || ಪ || ಶಾಲೆರತ್ನ
ಮಂಚವಿಲ್ಲ ಲೀಲೆಯಿಂದಲಿ | ಬಾಲೆ
ಬೀಸಲಿಲ್ಲ ಮುಕ್ತಲಿತಾಳ್ವಂತದಿ||ಪಂಚ
ರತ್ನ ಕಲಶಗಳಲ್ಲಿ ಮುಂಚೆ ಜಲವಿಲ್ಲ,
ಮಂಚವಿರಿಸಿ ಮಡಗಲಿಲ್ಲ ಚಂಚಲಾ
ಕ್ಷಿಯೆ || ೧ ||

ಮುಂದೆ ವಧುವಿನ ತಂದೆಯು ವರನ ಪಾದ ತೊಳೆಯಲು ಬರುವನು. ಮಹಿಳೆಯರಾಗ ಜನಕರಾಜನು ಶ್ರೀರಾಮನ ಪಾದ ತೊಳೆದುದನ್ನು ನೆನಪು ಮಾಡುವರು.

ರಾಜ ಸಭೆಯನೆಲ್ಲ | ರಾಜಿಸುತಲಿ
ದಿವ್ಯ | ರಾಜನಂತಿಹ ರಘುರಾಜಾ
ರಾಮನ ದಿವ್ಯ | ಪಾದವ ತೊಳೆದನು
ಜನಕನೃಪ || ರಘುಕುಲತಿಲಕನ
ಮೃದುತರವಾದ ದಿವ್ಯ | ಪಾದವ
ತೊಳೆದನು ಜನಕನೃಪ || ಪಾದ
ತೊಳೆದ ಶಿಲೆ | ಯಾದ ಅಹಲ್ಯೆಯ |
ಭೇದವ ಕಳೆದ ಮೃದುವಾದ ರಾಮನ
ದಿವ್ಯ | ಪಾದವ ತೊಳೆದನೆ ಜನಕ
ನೃಪ || ೧ ||

ಅಳಿಯನು ದೂರದಿಂದ ದಣಿದು ಬಂದಿದ್ದಾನೆ. ಮಾವನು ಪಾದ ತೊಳೆದಾಯಿತು. ಇನ್ನು ರತ್ನದಂತಹ ಹೊಸ ಅಳಿಯನಿಗೆ ಬಾಯಾರಿಕೆಯನ್ನು ತಣಿಸಲು ಬರೇ ಹಸಿ ಬಿಸಿ ನೀರನ್ನು ಕೊಡಲು ಸಾಧ್ಯವೇ? ನೀರನ್ನು ಕೊಟ್ಟರೆ ಬೀಗಿತಿಯರು ಸುಮ್ಮನಿರುವರೆ? ಅದಕ್ಕಾಗಿ ಸಾಕ್ಷಾತ್ ಅತ್ತೆಯೇ ಪಟ್ಟೆಯುಟ್ಟು ಬೆಳಗಿದ ಬೆಳ್ಳಿತಟ್ಟೆಯಲ್ಲಿ ಉತ್ತಮವಾಗಿ ಕಾಸಿದ ದನದ ಹಾಲನ್ನು ತಂದು ಕೊಡುವಳು.

ಹಾಲನ್ನೆ ತಾರೆ ಬೇಗ | ನಾರೀಮ
ಣಿಯೆ ಈಗ || ಕಾಳಿಯ ಮಡುವ
ಧುಮುಕಿ | ಕಲಕಿದ ವಿಷವನೆಲ್ಲ |
ಕಾಳಿಂಗನ್ಹೆಡೆಯ ತುಳಿದು | ದಣಿದು
ಬಂದಿಹನು ಧೀರಾ || ೧ ||

ಮದುಮಗನ ಹೊಟ್ಟೆ ತಣ್ಣಗಾಯಿತು. ಇನ್ನು ಪುರೋಹಿತನ ಮಂತ್ರಘೋಷಗಳ ನಡುವೆ ವಧುವೂ ವರನೂ ಪರಸ್ಪರ ಮಾಲೆ ಹಿಡಿದುಕೊಂಡು ಸಭೆಯ ಮುಂದೆ ಅಗ್ನಿಸಾಕ್ಷಿಯಾಗಿ ಗಂಡಹೆಂಡಿರಾಗುವರು. ಆಗ ಸ್ತ್ರೀಯರು—

ಮಾಲೆ ಹಾಕಿದಳ್ ಬಾಲೆ ರುಕ್ಮಿಣಿ |
ನೀಲಮೇಘ ಶ್ಯಾಮಗೆ || ಪಾಲಿತಾ
ಮಣಿ | ಶೀಲ ಗುಣಮಣಿ | ಬಾಲ
ಕೃಷ್ಣನ ಕೊರಳಿಗೆ || ಪಲ್ಲ ||
ದುಂಡುಮಲ್ಲಿಗೆ ಕೆಂಡಸಂಪಿಗೆ| ಹಿಂಡು
ಬಿಳಿಸೇವಂತಿಗೆ | ಕುಂಡಲಾಲಂಕೃತದಿ
ಹೊಳೆಯುವ | ಕೋದಂಡ ಕೃಷ್ಣನ
ಕೊರಳಿಗೆ || ೧ ||

ರುಕ್ಮಿಣೀ ಕೃಷ್ಣರ ವಿವಾಹವು ತಮ್ಮ ಕಣ್ಣಮುಂದೆ ಆದಂತೆ ವರ್ಣಿಸುವರು. ಇನ್ನು ಉಡುಗೊರೆಕೊಟ್ಟ ಹಾಡು ಮುಗಿದು ಮುದಿ ಮುತ್ತೈದೆಯರು ವಧೂವರರನ್ನು ಹರಸುವರು—

ಸರಸಿಜೋದ್ಭವನರಸಿ ಕರುಣದಿ | ತರು
ಣಿ ನೀ ಸುಖಿಯಾಗಿರ್ರೈ | ತರುಣಿ ನೀ
ಸುಖಿಯಾಗಿರ್ರೈ || ಪಡೆದ ಜನನೀ ಜನ
ಕರಿಗೆ ನೀ | ಪಿಡಿದ ಕನ್ನಡಿಯಂದದಿ|
ಒಡನೆ ಮನುಜರ ಬಂಧು ಬಳಗಕೆ
ಮುದದಿ ಮಾಣಿಕ್ಯವೆನ್ನಿಸು || ೧ ||
ಅತ್ತೆಮಾವನ ಸೇವೆಯನು ಬಹು |
ಅರ್ತಿಯಿಂದಲಿ ಮಾಡು ನೀ || ಹತ್ತು
ಮಂದಿ ಸುಪುತ್ರರನು ಪಡೆ | ಲಕ್ಷ್ಮೀ
ರಮಣನ ದಯದಿಂದ || ೨ ||

ಇನ್ನು ಮಗಳನ್ನು ಕೈಯೆತ್ತಿಕೊಡುವ ಹಾಡು ಕರುಣಾರಸ ಭರಿತವಾದುದು ಆಗ ಸಂಸಾರಿಗಳೆಲ್ಲಾ ಕಣ್ಣೀರನ್ನೊರಸಿಕೊಳ್ಳುವರು; ತಂದೆ ತಾಯಿಗಳು ಭೋರೆಂದು ಅಳುವರು. ಮೂರು ದಿನಗಳವರೆಗೆ ನಲಿದು ಮೆರೆದ ಮದುವೆಯ ಚಪ್ಪರವು ಅಂದು ಏನನ್ನೋ ಕಳೆದುಕೊಳ್ಳಲಿಕ್ಕಿದೆ ಎಂದು ತೋರುವುದು. ಮದುವೆಯ ಮನೆಯೇ ಅಂದು ನಿಸ್ತೇಜ!

ಇನ್ನು ನೀವೇ ಪಾಲಿಸುವುದು | ಎಮ್ಮ
ನಂದನೆಯ | ಸಖಿಯೆ ||
ನಿಮ್ಮ ಕುವರನಿಗಿತ್ತ ಸಾಧ್ವೀ |
ರನ್ನ ಗುಣವತಿಯ || ಪಲ್ಲ ||
ಅರಿಯದೇ ಮನ ನೋಯಿಸಿದರೆ |
ಸಹಿಸಿಕೊಳ್ಳಮ್ಮ || ನಿಮ್ಮ ಕುವರಿ
ಯಂತೆ ಇವಳ ನೋಡಿಕೊಳ್ಳಮ್ಮ
|| ೧ ||

ಹಲವು ವರ್ಷಗಳ ವರೆಗೆ ಪ್ರಾಣಕ್ಕಿಂತ ಪ್ರಿಯವಾಗಿ ಸಾಕಿದ ಕರುಳ ತುಂಡೊಂದನ್ನು ಪರರ ಕೈಗೆ ಒಪ್ಪಿಸುವ ಸುಮುಹೂರ್ತವದು. ಕಾಳಿದಾಸನೂ ಕಣ್ವನ ಬಾಯಿಯಿಂದ ಈ ವಿಷಯವನ್ನು ಅತಿ ಮಹತ್ವಾಗಿ ಹೇಳಿಸಿರುವನು—]

ಈ ಹಾಡುಗಳಲ್ಲಿ ಅತ್ಯಂತ ಸ್ವಾರಸ್ಯವಿರುವುದು ಬೀಗರ ಹಾಡಿನಲ್ಲಿ. ವರನ ಕಡೆಯವರು ತಮಗೇನೂ ಉಪಚಾರ ಉಪಚಾರ ಸಾಲದೆನ್ನುವರು. ವಧುವಿನ ಕಡೆಯವರು—'ಈ ಪಾಟೆ ಬಡಿಸಿದ ಪಾಲ್ಯಾನ್ನ, ಭಕ್ಷ್ಯಭೋಜ್ಯಗಳು ಎಲ್ಲಿ ಹೋದುವು? ಎಲೆಯೂ ಕಾಣಿಸುವುದಿಲ್ಲ' ಎಂದು ಹೇಳುವುದೂ ಒಂದು ವಿನೋದದ ಸನ್ನಿವೇಶ. ಮೊದಲು ವನಜಮುಖಿ ಎಂದು ಆರಂಭಿಸಿದ ತರ್ಕವು ಕಡೆಗೆ ಸೂಕರ ಮುಖಿಯ ವರೆಗೆ ಹೋಗುತ್ತದೆ. ಕೊನೆಗೆ ಹಾಡಿನ ಕಾವೇರಿ ಗಂಡು ಹೆಣ್ಣಿನವರು ಬಿಸಿ ಬಿಸಿ ಎರಡು ಮಾತಾಡಿಸಿಕೊಳ್ಳುವುದೂ ಉಂಟು. ಆ ಸವಿಯಾದ ಸಾರು, ಹುಳಿ, ಪಳದ್ಯ, ಭಕ್ಷ್ಯ, ಪರಮಾನ್ನಗಳನ್ನು ಸವಿಯುವಾಗ ಕೋಕಿಲ ಕಂಠದ ಗಾನ, ನೋವಾಗದ ಕಟುಮಾತಿನ ಹೊಡೆತಗಳು ಎಲ್ಲರಿಗೂ ಸ್ವಲ್ಪವಾದರೂ ಜೀರ್ಣಶಕ್ತಿಯನ್ನು ಹೆಚ್ಚಿಸದಿಲ್ಲ. ವರನ ಕಡೆಯವರು—

ಮನಸಿಜನರಗಿಣಿ ಮನ್ನಿಸೆ ರಮಣಿ |
ಮನವೊಲಿದೆಮ್ಮೊಳು ನೀ | ಸತರುಣಿ,
ಮನವೊಲಿದೆಮ್ಮೊಳು ನೀ || ಪ ||
ಲಾಡು ಜಿಲೇಬಿ ಪಯ | ನೀಡುವ
ಪೇಣಿಯ | ಸೋಡಿಗುಳೋರಿಗೆಯ |
ಸಕ್ಕರೆಯ | ಕೂಡಿದ ಮಂಡಿಗೆಯ ||
ಜೋಡು ಹಪ್ಪಳ ಸಂಡಿಗೆ ಶಾವಿ
ಗೆಯ | ನೀಡದೆ ಕುಳಿತಿಹೆಯಾ || ೧ ||

ವಧುವಿನ ಕಡೆಯವರು—

ಹಾ ಏನಿದು ಚೋದ್ಯವೆ | ಮಾನಿನಿ
ಸಾಧ್ಯವೆ | ಏನೆಂಬೆ ವಿದ್ಯವ | ಹಾ
ಏನಿದು ಚೋದ್ಯವೆ || ಪ || ನಾರನ್ನ
ತೋರಿರೆ || ನೂರಾರು ಬಗೆ ತಂದಿ
ಕ್ಕೀರೆ | ನಾರಿ ತಿನ್ನುತ್ತೀರೆ | ಬಾರಿ
ದೂರುವರೆ | ಮೋರೆಯತೆರೆ | ರೆ |
ಸೀರೆಯು ಜಾರಿರೆಹಾ || ೧ ||

ವಧೂವರರು ವರನ ಮನೆಗೆ ಬಂದಾಗ ಗೃಹ ಪ್ರವೇಶ ಮಾಡಲು ಸುಲಭದಿಂದ ಸಾಧ್ಯವಾಗುವುದಿಲ್ಲ. ವರನ ಸೋದರಿ ಬಾಗಿಲಲ್ಲಿ ಅಡ್ಡನಿಂತು—ಅಣ್ಣ ಅತ್ತಿಗೆಯೊಡನೆ ಚಂಗಾಟವಾಡುವಳು. ಮದುವೆಗಳಲ್ಲೆಲ್ಲಾ ವರನು ಸ್ತ್ರೀಯರ ಕೈಗೊಂಬೆಯಾಗ ವರ್ತಿಸಬೇಕಾಗುವುದು. ಅವರು ಮದುವೆಯ ಸೂತ್ರಧಾರರು.

ವಲ್ಲಭೆಯನು ಕರಕೊಂಡು ವಿನೋದದಿ | ಎಲ್ಲಿಗೆ ಗಮನವಿದು, ಅಣ್ಣಯ್ಯ
ಕೇಳ್ | ನಿಲ್ಲೊಂದು ಮಾತಂಟೆನ್ನ,
ಈ ಲೋಕದೊ| ಳಿಲ್ಲದ ನಡತೆ ಯನು,
ತಿಳಿದವನು ನೀನು || ಎಲ್ಲ ಲೋಕ
ಕ್ಕೊಡೆಯ ಲಕ್ಷ್ಮೀ | ವಲ್ಲಭನೆ ನೀನೊ
ಲಿದು ಕಡುಕೃಪೆ | ಯಲ್ಲಿ ಎನಗಿಷ್ಟ
ವನು ಈ ಕ್ಷಣ | ವಲ್ಲಿ ಪಾಲಿಪುದನಕ
ಕದಬಿಡೆ || ದಯಮಾಡಣ್ಣಯ್ಯ ಶ್ರೀ
ಕೃಷ್ಣಯ್ಯ || ೧ ||

(೯ನೇ ಪುಟ ನೋಡಿರಿ)

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಚೇರಿ : ಉಡುಪಿ, ದ ಕನ್ನಡ.

ನಮ್ಮ 3 ವರ್ಷ ಮ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.

ರೂ. 87-00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕಮ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಬಡ್ಡಿ ದರಗಳು.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

ಸದ್ಯದಲ್ಲೆ ತೆರೆಯಲ್ಪಡುವ ಶಾಖೆಗಳು:—

ಭದ್ರಾವತಿ — ತುಮಕೂರು.

<u>ಸುಖಪ್ರಾಪ್ತಿ</u>

ನೀವು ಸುಖಿಯಾಗಿರಲು ಬಯಸುತ್ತೀರಾ?

ನಿಮ್ಮ ಮನಸ್ಸಿನಲ್ಲಿ ಹುದುಗಿರುವ ಚಿಂತೆಯ ಸಂಗತಿಯನ್ನು ಯಾರೊಡ ನಾದರೂ ತೋಡಿಕೊಳ್ಳಿ. ಇದರಿಂದ ಮನಸ್ಸಿನ ಭಾರ ಕಡಿಮೆಯಾಗಿ ನೀವು ಸುಖಿಗಳಾಗುವಿರಿ. ಚಿತೆ ನಿರ್ಜೀವವನ್ನು ದಹಿಸುವುದಾದರೆ, ಚಿಂತೆ ಸಜೀವಿಯನ್ನೂ ಸುಡುವುದೆಂಬುದನ್ನು ಮರೆಯದಿರಿ.

(ಡಾ| ಜಾರ್ಜ್. ಎಸ್. ಸ್ಟಿವೆನ್ಸರ ಲೇಖನದಿಂದ)

ಜನರ ಅಸ್ವಸ್ಥತೆ ನಿರಾಶೆಯಷ್ಟು ವಿಶಾಲವಾಗಿಯೂ ವಿಕಟವಾಗಿಯೂ ಇಲ್ಲ. ಹೆಚ್ಚಿನ ಜನರು ತಮ್ಮ ಚಿಂತೆ ಇಲ್ಲವೇ ಅಶಾಂತತೆಯನ್ನು ಪ್ರಕಟಗೊಳಿಸುವ ಬದಲಾಗಿ, ಮನಸ್ಸಿನೊಳಗೇನೇ ಕುದಿಯುತ್ತಿರುತ್ತಾರೆ. ಇದನ್ನು ಕುಡಿದು ಬಿಡುವುದರಿಂದ, ಕಷ್ಟವೆನಿಸುವುದು. ಇದರ ಜಾಲವು ಬಹು ವಿಸ್ತಾರವಾಗಿದೆ; ಇದರಿಂದಾಗಿಯೇ ಒಂದು ಬಾರಿ ಈ ಜಾಲದಲ್ಲಿ ಸಿಕ್ಕಿಕೊಂಡರೆ, ಮಾನವ ಅದರಿಂದ ಮುಕ್ತನಾಗುವುದು ಅಸಾಧ್ಯ. ಇದರ ಪರಿಣಾಮವಾಗಿಯೇ ಸಣ್ಣ ಪುಟ್ಟ ಚಿಂತಾಜನಕ ಸಂಗತಿಗಳೂ ಹಿರಿಯ ರೂಪವನ್ನು ಹೊಂದಿ ರೌದ್ರಾವತಾರ ತಾಳುತ್ತವೆ.

ತನ್ನನ್ನು ಚಿಂತೆ ಅಥವಾ ನಿರಾಶೆಯು ಕಾಡುವಾಗ, ತಲೆ ತಗ್ಗಿಸುತ್ತಾನೆಯೇ ಇಲ್ಲವೇ ಸಾಹಸ ತೋರಿಸುತ್ತಾನೆಯೇ ಎಂಬುದು ಆಯಾ ವ್ಯಕ್ತಿಯನ್ನು ಹೊಂದಿಕೊಂಡಿದೆ. ನಮ್ಮ ಧೈರ್ಯ ಮತ್ತು ಆಶೆಗಳು ಕಿರಿಯವುಗಳಾಗಿದ್ದಷ್ಟು ಎಡತಾಕುವ ನಿರಾಶೆಯು ಬೃಹದ್ರೂಪ ಹೊಂದುತ್ತದೆ. ಮಾನವನ ಸಹನಾಶಕ್ತಿ ಹಾಗೂ ಧೈರ್ಯಶೀಲತೆಯೆದುರು ಯಾವುದೇ ಆಪತ್ತು ತಲೆಯೆತ್ತುವುದಿಲ್ಲ.

ಒಂದು ಸಮಸ್ಯೆ, ಕಠಿಣತೆ ಡೋಲಾಯಮಾನ ಪರಿಸ್ಥಿತಿಯಲ್ಲಿರುವಾಗ, ಸಮಸ್ಯೆಯ ಪ್ರತ್ಯಕ್ಷ ಪರಿಹಾರ ಮತ್ತು ನಿದಾನವೇ ನಮಗೆ ಪ್ರಸನ್ನತೆಯನ್ನು ಕಂಡೀಯಬಲ್ಲುದು. ಇಲ್ಲವಾದರೆ, ನಮ್ಮ ಸ್ನಾಯುಗಳು ಅಶಾಂತವಿರುವುದರಿಂದ ಮನಸ್ಸೂ ಅಶಾಂತವಾಗುವುದು. ಕೆಲವೊಮ್ಮೆ ಬೀಗದಲ್ಲಿ ಕೀಲಿ ಸಿಕ್ಕಿ ಬೀಳುವಂತೆ ನಮ್ಮ ಮನಸ್ಸು ಸಮಸ್ಯೆಯ ಬೀಗವನ್ನು ತೆರೆಯದಿರುವುದು ಅಥವಾ ಅದರಿಂದ ಬಿಡುಗಡೆಯನ್ನೂ ಪಡೆಯದಿರುವುದು. ಈ ಕಿಂಕರ್ತವ್ಯ ವಿಮೂಢ ಸ್ಥಿತಿಯು ವ್ಯಕ್ತಿಯ ಉತ್ಸಾಹವೆಲ್ಲವನ್ನೂ ಶಿಥಿಲಗೊಳಿಸಲು ಕಾರಣವಾಗುವುದು; ಜೀವನದ ಪ್ರೇರಣೆಗಳನ್ನು ಸಂಪೂರ್ಣ ಕುಂಠಿತಗೊಳಿಸುವುದು; ವ್ಯಕ್ತಿಯಲ್ಲಿ ಪ್ರೇರಣೆಗಳೇ ಇಲ್ಲವೆಂದಾದರೆ, ಉತ್ಸಾಹ ನಾಮಾವಶೇಷವಾದರೆ, ಆತ ಬದುಕುವುದಾದರೂ ಹೇಗೆ?

ವಿವಿಧ ಭಾವನೆಗಳು, ಕಾಮನೆಗಳ ದಮನ, ಹನನ ಅಥವಾ ಅಸಫಲತೆಯೇ ಈ ಪ್ರಕಾರದ ನಿರಾಶೆ ಮತ್ತು ಅಶಾಂತ ಮನಃಸ್ಥಿತಿಗೆ ಮೂಲವಾಗಿದೆ. ನೀವು ಇದೊಂದು ಕಾರ್ಯದಲ್ಲಿ ಅಸಫಲರಾದಿರೆಂದರೆ, ಅದರ ಫಲ ನಿಮಗೆ ಇಂದೇ ದೊರೆಯುತ್ತದೆ; ನಾಳೆ ಪ್ರಸನ್ನರಾಗಿರಬಹುದು ಎಂದು ಹೇಳುವಂತಿಲ್ಲ. ಜೀವನದಲ್ಲಿ ಗಳಿಸಿದ ಅಸಫಲತೆಯು ಇಂದು, ನಾಳೆ, ಅಥವಾ ಹಲವು ವರ್ಷಾನಂತರವೂ ತನ್ನ ವಿಕೃತ ಸ್ವರೂಪದೊಡನೆ ನಿಮ್ಮ ಮುಂದೆ ಬರಬಹುದು; ನಮ್ಮ ಮನಸ್ಸನ್ನು ವಿವಿಧ 'ಕಾಂಪ್ಲೆಕ್ಸ್' (ಮಿಶ್ರಣ)ದಲ್ಲಿ ಅದ್ದಿಬಿಡಬಹುದು.

ನೀವು ನಿಮ್ಮ ಸ್ಥಿತಿಯನ್ನು ತಿಳಿದುಕೊಳ್ಳಲು ಬಯಸುವುದಾದರೆ, ಕೆಳಗೆ ಕೊಟ್ಟಿರುವ ಪ್ರಶ್ನೆಗಳನ್ನು ಓದಿರಿ; ಮತ್ತು ಮನನ ಮಾಡಿರಿ.

೧. ನೀವು ಯಾವಾಗಲೂ ಚಿಂತಿತರಾಗಿರುತ್ತೀರಾ? ಚಿಂತೆಯು ಸ್ವಯಂ ಬಹು ಕಷ್ಟಕಾರಿಯಾಗಿದೆ. ಆದುದರಿಂದ ನೀವು ಕಾರಣವಿಲ್ಲದೆಯೇ ಚಿಂತಿಸುತ್ತೀರಾ ಎಂದು ನಿಮ್ಮನ್ನೇ ಕೇಳಿಕೊಳ್ಳಿರಿ. ಕಷ್ಟ ಅಥವಾ ಕಠಿನತೆಗಳು ಬಂದಾಗ, ನೀವು ವ್ಯಸನಪಡುತ್ತೀರಾ? ಭಾನುವಾರ ಆಮೋದ ಪ್ರಮೋದಗಳಿಂದ, ಸುಖ ಶಾಂತಿಯಿಂದ ಕಳೆದರೂ ಸೋಮವಾರ ಕೆಲಸಕ್ಕೆ ಹೋಗುವ ಗಡಿಬಿಡಿಯಲ್ಲಿರುತ್ತೀರಾ? ಇಂತಹ ಗಡಿಬಿಡಿ ಹಾಗೂ ಅಂಜಿಕೆಗಳು ನಿಮ್ಮನ್ನು ಯಾವಾಗಲೂ ಕಾಡುತ್ತಿವೆಯೆ? ಎಂಬುದನ್ನು ವಿಚಾರ ಮಾಡಿರಿ.

೨. ಸಹಜವಾಗಿಯೂ ನೀವು ಉದ್ವಿಗ್ನರೂ ಖಿನ್ನರೂ ಆಗಬಲ್ಲಿರಾ? ನಿಮಗೆ ಮೆಚ್ಚುಗೆಯಾಗುವ ಕೆಲಸವಿಲ್ಲವಾದರೆ ನೀವು ಸಿಟ್ಟೇಳುತ್ತೀರಾ? ನಿಮ್ಮ ಅಧಿಕಾರಿಗಳು ಇಲ್ಲವೇ ಅಧೀನರ ಮೇಲೆ ದೋಷಾರೋಪಣ ಮಾಡುತ್ತೀರಾ? ಕೇವಲ ಕ್ಷುಲ್ಲಕ ಸಮಸ್ಯೆಗಳೂ ನಿಮಗೆ ದುಃಖವನ್ನು, ಅಶಾಂತಿಯನ್ನು ಹುಟ್ಟಿಸುವುವೆ?

೩. ದೈನಿಕ ಜೀವನದ ಆನಂದವು ನಿಮ್ಮನ್ನು ಸಂತುಷ್ಟಗೊಳಿಸುವುದಿಲ್ಲವೆ? ದೈನಂದಿನ ಸಾಧಾರಣ ಕಾರ್ಯಕಲಾಪಗಳಿಂದ ಆನಂದಹೊಂದುವ ಜನರು ಅತ್ಯಲ್ಪ. ಉದ್ಯಾನದಲ್ಲಿ ತಿರುಗಾಟ, ಯಾತ್ರೆ, ಚಂದ್ರ, ಪ್ರಭಾತ ಸಂಧ್ಯಾದರ್ಶನ, ವರ್ಷಾಕಾಲದಲ್ಲಿ ಸುತ್ತುವರಿಯುವ ಮೇಘಮಾಲೆ, ಮಯೂರನೃತ್ಯ, ಮೈದಾನಿನಲ್ಲಿ ಆಡುತ್ತ ಅಲ್ಲೋಲಕಲ್ಲೋಲವೆಬ್ಬಿಸುವ ಬಾಲಕ ಬಾಲಿಕೆಯರು — ಇವುಗಳಿಂದ ನಿಮಗೆ ಸಂತೋಷವೆನಿಸುವುದಿಲ್ಲವೆ? ಅಥವಾ ಇವುಗಳಿಂದ ದೊರೆಯಬಲ್ಲ ಸುಖವು ನಿಮಗೆ ಕೇವಲ ಕ್ಷಣಿಕವಾಗಿ ತದನಂತರ ನಿರಾಶಾಂಧಕಾರದಲ್ಲಿಯೇ ತೊಳಲಾಡುತ್ತಿರುವಿರಾ?

೪. ಹೊಸ ಮನುಷ್ಯರು ಮತ್ತು ಹೊಸ ಪರಿಸ್ಥಿತಿಗಳೆಂದರೆ ನೀವು ಹೆದರಿ ಹೋಗುತ್ತೀರಾ? ನಮ್ಮಲ್ಲಿ ಹೆಚ್ಚಿನವರು ಅಪರಿಚಿತರನ್ನು ಶಂಕಾದೃಷ್ಟಿಯಿಂದಲೇ ನೋಡುತ್ತಾರೆ. ಎಲ್ಲರೂ ಅಜ್ಞಾತ ವ್ಯಕ್ತಿಗಳಲ್ಲಿ ಶಂಕೆಯನ್ನೇ ತೋರಿಸುತ್ತಾರೆ. ಅಪರಿಚಿತರಲ್ಲಿ ವಿಶ್ವಾಸವನ್ನಿಡದೆ, ಅವರ ಸ್ವಭಾವಾದಿಗಳ ಬಗ್ಗೆ ತುಸು ನಿಗಾವಿಟ್ಟುಕೊಳ್ಳುತ್ತಾರೆ. ಆದರೆ, ಅವರನ್ನು ಕಂಡು ನೀವು ಭಯಭೀತರಾಗುತ್ತೀರಾ? ಒಬ್ಬನ ಬಗ್ಗೆ ಒಂದು ಬಾರಿ ಇಟ್ಟುಕೊಂಡ ಭಾವನೆಯನ್ನು ನೀವು ಸ್ಥಿರವಾಗಿಟ್ಟುಕೊಳ್ಳುವಿರಾ? ಇಂದೊಂದು ಅಭಿಪ್ರಾಯವಿದ್ದು ನಾಳೆಗೆ ಅದು ಬದಲಾವಣೆ ಹೊಂದುವುದಿಲ್ಲವೆ? ಸ್ವಾರ್ಥ ಪರಾಯಣತೆಯಿಂದ ನಿಮ್ಮ ಅಭಿಪ್ರಾಯವು ಪರಿವರ್ತನೆಯಾಗುವುದಿಲ್ಲವೆ? ನಿಮ್ಮ ಹಿತಗಳಿಗೆ ಬಾಧಕನಾಗಿ ಅಹಿತ ಸಾಧಕನಾಗುವನಾದರೂ ವಾಸ್ತವಿಕವಾಗಿ ಅವನು ಉತ್ತಮನೆಂದು ನಿಮಗೆ ವಿಶ್ವಾಸವಿದೆಯೆ? ಅತನಲ್ಲಿ ಕೆಲವೊಂದು ದುರ್ಬಲತೆಗಳಿವೆಯಾದರೂ ಒಳ್ಳೆಯ ನೇರ ವ್ಯಕ್ತಿಯಾತನೆಂದರೆ, ನೀವು ನಂಬುವಿರಾ?

೫. ಸಾಧಾರಣ ಸಂಭಾಷಣೆಯು ನಡುವೆ ನೀವು ಉರಿದುಬೀಳುತ್ತೀರಾ? ನಿಮ್ಮ ಅನುಭವವೇನೆನ್ನುತ್ತದೆ? ಪ್ರತಿಯೊರ್ವನಿಗೂ ತನ್ನದೇ ಆದ ವಿಶೇಷ ಅನುಭೂತಿಗಳೂ ಅವಸ್ಥೆಗಳೂ ಜೀವನ ಪ್ರಣಾಲಿಗಳೂ ಇರುತ್ತವೆ. ಹಾಗಿರುವಾಗ ನಮ್ಮದೇ ಆದ ದೃಷ್ಟಿಕೋಣವನ್ನು ವಹಿಸಬೇಕೆಂದು ಒತ್ತಾಯಿಸುವುದು, ಮತ್ತು ತನ್ನ ವಾದವನ್ನೇ ಸ್ವೀಕರಿಸಬೇಕೆಂದು ಆಗ್ರಹತೊಡುವುದು ಅನುಚಿತವೆನಿಸುವುದಿಲ್ಲವೆ?

(೯ನೇ ಪುಟ ನೋಡಿರಿ)

ಅಮೆರಿಕೆಯ ಅಧ್ಯಕ್ಷ ಸ್ಥಾನಕ್ಕೆ ನವಂಬರ ೮ ರಂದು ಚುನಾವಣೆ ನಡೆಯಲಿರುವುದು. ರಿಪಬ್ಲಿಕನ್ ಪಕ್ಷದ ಅಧ್ಯಕ್ಷ ಸ್ಥಾನದ ಹುರಿಯಾಳು ಉಪಾಧ್ಯಕ್ಷ ರಿಚರ್ಡ್ ಎಂ. ನಿಕ್ಸನ್ (ಎಡಗಡೆ) ಮತ್ತು ಉಪಾಧ್ಯಕ್ಷ ಸ್ಥಾನದ ಸ್ಪರ್ಧಿ ಛಾಯಬಾರಿ ಹೆನ್ರಿ ಕೆಬಟ್ ಲೋಜ್ (ಬಲ)ರವರು ಚುನಾವಣೆಯ ಕುರಿತಾಗಿ ಮಾತಾಡಿಕೊಳ್ಳುತಿದ್ದಾರೆ.

ನಿಶ್ಚಿತ ದರ ಎಂದರೆ ನ್ಯಾಯ, ಕನಿಷ್ಟ ದರ

ನಮ್ಮಲ್ಲಿಯ ದರಗಳು ತೀರಾ ಕಡಿಮೆಯೆಂತ ನೀವು ಕೇಳಿ ತಿಳಿದಿರಬಹುದು.
ನೋಡಿ ತಿಳಿಯುವದು ಕೇಳಿ ತಿಳಿಯುವುದಕ್ಕಿಂತ ವಾಸಿ ಎಂಬುದು ಅರಿತವರ ಹಿತವಾದ
ನಮ್ಮ ದರಗಳ ಸರಳತೆ ಮನವರಿಕೆಯಾಗುವಂತೆ
ಯಾವ ಬಟ್ಟೆಯನ್ನೂ—
ಕರವಸ್ತ್ರವಾಗಲೀ—ಜರತಾರಿ ಸೀರೆಯಾಗಲೀ
ನಮ್ಮಲ್ಲಿಂದ ಪಡಕೊಳ್ಳಿರಿ.

ಕುಲ್ಕಾಡಿಕಾರ್ಸ್ ನೂತನ್ ಸಿಲ್ಕ್ಸ

ಬಡಗುಪೇಟೆ, ಉಡುಪಿ. ಹಂಪನಕಟ್ಟೆ, ಮಂಗಳೂರು.

ಸ್ಥಳ ಪರಿಚಯ

ಪ್ರಾಚೀನ ಐತಿಹಾಸಿಕ ನಗರ—ಬಿದನೂರು

ರಾಣಿಯ ದ್ರೋಹದಿಂದ ಶತ್ರುಪಾಲಾಗಿ ಭಗ್ನಾವಶೇಷವೆನಿಸಿದ ಬಿದನೂರು ಇಂದು 'ನಗರ'ವೆಂಬ ಹೆಸರಿನಿಂದ ಪ್ರೇಕ್ಷಣೀಯ ಸ್ಥಳವಾಗಿ ಕಂಗೊಳಿಸುತ್ತದೆ.

ಶ್ರೀ ಸಿ. ಗುರುದತ್ತ ರಾವ್.

ಒಂದಾನೊಂದು ಕಾಲದಲ್ಲಿ ಶಿವಪ್ಪ ನಾಯ್ಕನ ಆಳ್ವಿಕೆಯಲ್ಲಿ ಲಕ್ಷ ಮನೆಗಳ ವೈಭವದಿಂದ ತುಂಬಿ ತುಳುಕಾಡುತ್ತಿದ್ದ ಹಿಂದಿನ ಬಿದನೂರು ಸಂಸ್ಥಾನ (ಈಗಿನ ನಗರ) ಇನ್ನು ಕೆಲವೇ ವರ್ಷಗಳಲ್ಲಿ ಲಿಂಗನಮಕ್ಕಿ ಜಲಾಶಯದ ಯೋಜನೆಯಿಂದಾಗಿ ಜಲಸಮಾಧಿಯಾಗುವ ಮುನ್ನ ಇದರ ಹಿಂದಿನ ಮತ್ತು ಈಗಿನ ಕೆಲವೇ ಐತಿಹಾಸಿಕ ವಿಷಯಗಳನ್ನು ಅರಿಯದವನು ನಿರ್ಭಾಗ್ಯನೆಂದರೆ ತಪ್ಪಾಗುವುದೆಂತು?

ಹಿಂದೆ ಇದೇ ನಗರಕ್ಕೆ ಜನರು ಬಿದನೂರು, ಬಿದಿರಹಳ್ಳಿ, ಬಿದಿರೂರು ಇತ್ಯಾದಿ ಹೆಸರುಗಳಿಂದ ಕರೆಯುತ್ತಿದ್ದರು. ಇದು ಕೆಳದಿನಾಯಕರ ರಾಜಧಾನಿಯಾಗಿದ್ದಿತು. ಇದು ಹೈದರನ ಕೈವಶವಾದ ಮೇಲೆ ಹೈದರನು ಇಲ್ಲಿಯ ವೈಭವವನ್ನು ನೋಡಿ ಇದಕ್ಕೆ "ಹೈದರ್ ನಗರ" ಎಂದು ಹೆಸರಿಟ್ಟು ಕರೆದನು. ಆದರೆ ಈಗ ಹೈದರ್ ಎಂಬ ಶಬ್ದವು ಮಾಯವಾಗಿ "ನಗರ" ಎಂಬ ಹೆಸರು ಮಾತ್ರ ಉಳಿದಿದೆ.

ಶಿವಪ್ಪ ನಾಯಕನ ನಂತರ ಬಿದನೂರಿನ ರಾಜಕುಮಾರ ಬಸಪ್ಪ ನಾಯಕನು ೧೭೫೫ರಲ್ಲಿ ಕಾಲವಾಗಲು ಅವನ ಹೆಂಡತಿಯೂ ಚೆನ್ನ ಬಸಯ್ಯನೆಂಬ ಅವನ ದತ್ತು ಪುತ್ರನೂ ರಾಜ್ಯವನ್ನು ನೋಡಿಕೊಳ್ಳುತ್ತಿದ್ದರು. ರಾಣಿಯು ನಿಂಬಯ್ಯನೆಂಬವನನ್ನು ಕಟ್ಟಿಕೊಂಡು ದುರ್ನಡತೆಗೆ ಬಿದ್ದಳು. ಇದು ಆಕೆಯ ಮಗನಿಗೆ ತಿಳಿದು ಅವನು ಆಕ್ಷೇಪಿಸಿದನು. ಆದ್ದರಿಂದ ಇವನ (ಮಗನ) ಕಾಟವೇ ಇಲ್ಲದಂತೆ ಮಾಡಲು ರಾಣಿ ಮತ್ತು ನಿಂಬಯ್ಯ ಇಬ್ಬರೂ ಸೇರಿ ಒಬ್ಬ ಜಟ್ಟಿಯನ್ನು ಗೊತ್ತು ಮಾಡಿ ಅವನಿಂದ ಚೆನ್ನ ಬಸಯ್ಯನನ್ನು ಕತ್ತು ಮುರಿಸಿ ಕೊಲ್ಲಿಸಿದರು. ಸೋಮಶೇಖರನೆಂಬ ಮತ್ತೊಬ್ಬ ಹುಡುಗನು ದತ್ತುವಾದನು.

ಹೀಗಿರಲು ಒಬ್ಬನು ಹೈದರಾಲಿಯನ್ನು ಕಂಡು ತಾನು ಚೆನ್ನಬಸಯ್ಯನೆಂದೂ, ಜಟ್ಟಿಯು ತನ್ನನ್ನು ಕೊಲ್ಲದೆ ಬಿಡಲು ತಾನು ಬದುಕಿ ಬಂದೆನೆಂದೂ, ತನಗೆ ಸಹಾಯ ಮಾಡಿ ಬಿದನೂರು ಸಂಸ್ಥಾನವನ್ನು ಕೊಡಿಸಬೇಕೆಂದೂ ಕೇಳಿಕೊಂಡನು. ಹೈದರನು ಅವನ ಮಾತುಗಳನ್ನು ನಂಬಿ ತಾನು ಅದನ್ನು ಕೊಡಿಸುವೆನೆಂದು ಒಪ್ಪಿಕೊಂಡನು. ಅನಂತರ ಹೈದರನು ಸೈನ್ಯ ಸಮೇತನಾಗಿ ಬಿದನೂರನ್ನು ಮುತ್ತಲು ಬಂದನು. ಶಿವಮೊಗ್ಗೆ ಹೈದರನ ವಶವಾಯಿತು. ಆಗ ರಾಣಿಯು ಹೈದರನ ಸೇನೆ ರಾಜಧಾನಿಯ ಹತ್ತಿರ ಬಂದಾಗ ತಾನು ೧೮ ಲಕ್ಷ ವರಹಗಳನ್ನು ಕೊಡುವುದಾಗಿಯೂ ಅದನ್ನು ತೆಗೆದುಕೊಂಡು ಹೈದರನು ಹಿಂತಿರುಗಬೇಕೆಂದೂ ಹೇಳಿ ಕಳುಹಿಸಿದಳು. ಆದರೆ ಹೈದರ್ ರಾಣಿಯ ಮಾತಿಗೆ ಒಪ್ಪಲಿಲ್ಲ. ಹೈದರನ ಸೇನೆ ಮುಂದುವರಿಯಿತು. ಇದರಿಂದ ರಾಣಿಗೂ ಅವಳ ಇನಿಯನಿಗೂ ಹೆದರಿಕೆಯುಂಟಾಗಿ ಇಬ್ಬರೂ "ಬಲ್ಲಾಳ ರಾಯನದುರ್ಗ"ಕ್ಕೆ ಓಡಿಹೋದರು. ಆದರೆ ಹೋಗುವುದಕ್ಕೆ ಮುಂಚೆ ರಾಣಿಯು ಅಲ್ಲಿದ್ದ ಭಂಡಾರವನ್ನು ಬೇರೆಕಡೆಗೆ ಸಾಗಿಸಬೇಕೆಂದೂ, ಅಷ್ಟಕ್ಕೆ ಅವಕಾಶವಿಲ್ಲದಿದ್ದರೆ ಅರಮನೆಗೂ, ಖಜಾನೆಗೂ ಬೆಂಕಿ ಇಡಬೇಕೆಂದೂ ಹೇಳಿದಳು.

ಇತ್ತ ಹೈದರನು ಬಂದು ರಾಜಧಾನಿಯನ್ನು ಮುಂದುಗಡೆಯಿಂದ ಮುತ್ತುವಂತೆ ನಟಿಸುತ್ತಾ, ಕುಂತಿಯ ರಾಜನ ಮಂತ್ರಿಯಾದ ಲಿಂಗಣ್ಣನು ತೋರಿಸಿದ ಗುಪ್ತ ಮಾರ್ಗವನ್ನು ಹಿಡಿದು ಹಿಂದುಗಡೆಯಿಂದ ಊರಿಗೆ ಪ್ರವೇಶಮಾಡಿದನು. ಇತ್ತ ರಾಣಿಯ ಆಜ್ಞೆಯಂತೆ ಭಂಡಾರವನ್ನು ಸಾಗಿಸಲು ಅವಕಾಶವಿಲ್ಲದಿದ್ದ ಕಾರಣ, ರಾಣಿಯು ಗೊತ್ತುಮಾಡಿದ್ದ ಜನರು ಅರಮನೆಗೂ, ಖಜಾನೆಗೂ ಬೆಂಕಿ ಹತ್ತಿಸಿಬಿಟ್ಟರು. ಇದರಿಂದಾಗಿ ಪ್ರಜೆಗಳು ಚೆಲ್ಲಾಪಿಲ್ಲಿಯಾಗಿ ಓಡಿಹೋಗಿ ಅವಿತುಕೊಂಡರು. ಬಿದನೂರು ಹೈದರನ ಕೈವಶವಾಯಿತು. ಕುಬೇರನ ಪಟ್ಟಣ— ದಂತೆಯೂ, ಇಂದ್ರನ ಅಮರಾವತಿಯಂತೆಯೂ ಇದ್ದ ಬಿದನೂರು ಸಂಸ್ಥಾನ ದಿಕ್ಕೇ ಇಲ್ಲದಂತಾಗಿ ಹೈದರನ ಕೈವಶವಾಗಬೇಕಾಯಿತು. ಹೈದರನಿಗೆ ಸುಮಾರು ೧ ಕೋಟಿ ೨೦ ಲಕ್ಷ ಪೌಂಡಿನಷ್ಟು ದ್ರವ್ಯ ಸಿಕ್ಕಿತೆಂದು ಹೇಳುತ್ತಾರೆ. [ಇದು ನಗರದ ಪ್ರಾಚೀನ ಕತೆ. ಇದನ್ನು ಕ.ನಂ ಪುರವರ ದ ಕ್ಷಾ ಕ್ಷಿ ಪು ಸ್ತ ಕ ದ ಆಧಾರದಿಂದ ಬರೆದಿದೆ.]

ನಗರ, ನಗರಕ್ಕೆ ೯ ಮೈಲಿ ದೂರವಿರುವ ಹೊಸ ನಗರ ತಾಲೂಕಿನಲ್ಲಿಯೂ,೫೦ ಮೈಲಿ ದೂರವಿರುವ ಶಿವಮೊಗ್ಗ ಡಿಸ್ಟ್ರಿಕ್ಟ್‌ನಲ್ಲಿಯೂ ಇದೆ.

ಹೈದರನ ನಂತರ ನಗರ ಹೀನ ಸ್ಥಿತಿಗೆ ಇಳಿದರೂ, ಈಗಲೂ ಇಲ್ಲಿ ಪ್ರತಿಯೊಬ್ಬ ಮಾನವನೂ ನೋಡಬೇಕಾದಂತಹ ಅನೇಕ ದೊಡ್ಡ ದೊಡ್ಡ ಕಟ್ಟಡಗಳೂ, ರಮ್ಯ ಸ್ಥಳಗಳೂ, ದೇವಸ್ಥಾನಗಳೂ ಇವೆ.

ಇವುಗಳಲ್ಲಿ ಮುಖ್ಯವಾದವು ಯಾವುವೆಂದರೆ:—

೧. **ಕೋಟೆ:**—ಒಳಗೆಲ್ಲಾ ಪಾಳು ಬಿದ್ದಿದ್ದರೂ ಹೊರಗಿನಿಂದ ನೋಡಿದರೆ ಯಾವ ಮಾನವನಿಗಾದರೂ ಆಶ್ಚರ್ಯಪಡಿಸುವಂತಹ ಒಂದು ಅದ್ಭುತ ಕೋಟೆ.

೨. **ದೇವಗಂಗೆ:**—ಇಲ್ಲಿ ಸುಂದರವಾದ ಏಳು ಕೊಳಗಳಿದ್ದು ನೋಡಲು ಬಹಳ ರಮ್ಯವಾಗಿದೆ. ಹಿಂದೆ ಇಲ್ಲಿ ಮನೋಹರವಾದ ಒಂದು ಉದ್ಯಾನ ವನವಿತ್ತು. ಇಲ್ಲಿ ಈಗ ಒಂದು ಶಿವಾಲಯವಿದೆ.

೩. **ಪಂಚಮುಖಿ:**—ಐದು ಮುಖಗಳನ್ನು ಹೊಂದಿರುವ ಒಂದು ಅದ್ಭುತವಾದ ಆಂಜನೇಯನ ವಿಗ್ರಹವಿದೆ. ಇಲ್ಲಿಯೇ ಸಮೀಪ ಶ್ರೀ ರಾಘವೇಂದ್ರ ಸ್ವಾಮಿಗಳ ಒಂದು ಬೃಂದಾವನವಿದೆ. ಇವೆರಡೂ ಯಾವನಿಗಾದರೂ ಸೋಜಿಗವನ್ನುಂಟು ಮಾಡುತ್ತವೆ.

೪. **ಬಸವನ ಗುಡಿ:**-ಹಿರೇ ಮಠವೆಂದು ಕರೆಯಲ್ಪಡುವ ಒಂದು ಬೀದಿಯಲ್ಲಿ ಅತೀ ದೊಡ್ಡದಾಗಿರುವ ಒಂದು ಬಸವನ ವಿಗ್ರಹವಿರುವ ಗುಡಿಯಿದೆ.

ಹೆಸರುಗಳನ್ನು ಹೇಳಿ ಮುಗಿಸಲು ಸಾಧ್ಯವಿಲ್ಲವಾದಂತಹ ಅನೇಕ ಸುಂದರ ದೇವಾಲಯಗಳು ಈ ಊರಿನಲ್ಲಿ ಸ್ಥಿರವಾಗಿವೆ. ಅವುಗಳನ್ನು ನೋಡಿದರೆ ನಮಗೆ ಹಿಂದಿನವರ ಸಂಸ್ಕೃತಿ ವ್ಯಕ್ತವಾಗದೆ ಇರದು. ಈ ದೊಡ್ಡ ದೇವಾಲಯಗಳಲ್ಲಿ ಗುಜರೀಪೇಟೆ ವೆಂಕಟರಮಣ ದೇವಸ್ಥಾನ, ಕೊತ್ವಾಲಪೇಟೆ ಈಶ್ವರ ದೇವಸ್ಥಾನ, ಗದ್ದೆ ವೆಂಕಟರಮಣ ದೇವಸ್ಥಾನ ಇವು ಮುಖ್ಯ ಹಾಗೂ ಪ್ರಸಿದ್ಧಿಯಾದವು.

ನಗರದಲ್ಲಿ ಎಲ್ಲಾ ಕಡೆಯಲ್ಲಿರುವಂತೆ, ಪಂಚಾಯಿತಿ, ಸರ್ಕಾರೀ ಆಸ್ಪತ್ರೆ, ಜಾನವಾರು ಆಸ್ಪತ್ರೆ, ಮಾಧ್ಯಮಿಕ ಹಾಗೂ ಪ್ರಾಥಮಿಕ ಶಾಲೆಗಳು, ಬಂಗಲೆ, ಸಹಕಾರ ಸಂಘ ಇತ್ಯಾದಿಗಳಿದ್ದು ಜನರಿಗೆ ಯಾವರೀತಿಯಲ್ಲೂ ಕೊರತೆಯಿಲ್ಲ. ಜನರಿಗೆ ಮನೋರಂಜನೆಗಾಗಿ ಯುವಕ ಹಾಗೂ ಮಹಿಳಾ ಸಮಾಜಗಳು ಶ್ರಮಪಟ್ಟು ಕೆಲಸಮಾಡುತ್ತಿವೆ. ವಾಚಕ— ಮಹನಿಯರು ಒಮ್ಮೆ ಇತ್ತಕಡೆ ಬಂದಾಗ ಈ ಊರಿನಲ್ಲಿ ಇಳಿದು ನಮ್ಮ ಸಂತೋಷದಲ್ಲಿ ಭಾಗಿಗಳಾಗಿ ಅಲ್ಲಿಯ ಪ್ರಕೃತಿ ಸೌಂದರ್ಯ, ಭವ್ಯಕೋಟೆ, ದೇವಾಲಯ ಇತ್ಯಾದಿಗಳನ್ನು ನೋಡಿ ಆನಂದಿಸಬಹುದು.

In the Court of the District Munsiff of Mangalore

O. P. 35/1960.

Between:—

Anne Mary Souza Bai and other ... Petitioners

and

Saraswathi alias Rukmini Amma and other ... Respondents.

To

2nd respondent,
Mary Fernandes Bai
d/o Francis Fernandes,
residing at Pachanady Village,
Mangalore Taluk.

Please take notice that the petitioners have filed the above application for entering full satisfaction of the rent for the year ending 31—3—1960 under sec. 3 (3) of the Madras Cultivating Tenants Protection Act and the same is posted to 21—10—1960 for your appearence. You are hereby requested to appear on the said date either in person or through a lawyer, failing which the petition will be proceeded with in your absence.

(*Sd.*) P. Sadashiva Rao,
Advocate for Petitioners.

Mangalore, D. 10—10—1960.

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು
ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್. ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ ೩-೨೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved or use in Secondarys School as per proceedings Roc· No· 466 N/50 date 2-12-1950 of the Director of public Instruction Madras·

ಪರಿಮಳಯುಕ್ತ ಚಂದನವು ತುಟ್ಟಿಯಾದರೂ ದೊರೆಯದಿರುವುದಿಲ್ಲ; ಸಾಧು ಸಜ್ಜನರು ದುರ್ಲಭರಾದರೂ ಅಲಭ್ಯವೆಂದೆನ್ನುವಂತಿಲ್ಲ.

ನವಯುಗ

ವರುಷ	ಉಡುಪಿ	ವಾರ
೪೦	೧೩-೧೦-'೬೦	೭

ವೈದ್ಯಕ ಪರಿಷತ್ತು

ಮೈಸೂರು ರಾಜ್ಯದ ೨೭ನೆಯ ವೈದ್ಯಕ ಪರಿಷತ್ತು ಮಣಿಪಾಲದಲ್ಲಿ ಇದೇ ತಾ. ೭ರಿಂದ ೯ರ ವರೆಗೆ ವೈಭವೋಪೇತವಾಗಿ ನೆರವೇರಿತು. ರಾಜ್ಯದ ಆರೋಗ್ಯ ಮಂತ್ರಿಗಳಾದ ಡಾ| ಕೆ. ಕೆ. ಹೆಗ್ಡೆಯವರು ಈ ಪರಿಷತ್ತನ್ನು ಉದ್ಘಾಟಿಸಿದರು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಮದ್ರಾಸ ರಾಜ್ಯದಲ್ಲಿ ಸೇರಿಕೊಂಡಿರುವಾಗ ಮಂಗಳೂರಲ್ಲಿ ಇದೇ ತರದ ರಾಜ್ಯ ವೈದ್ಯಕ ಪರಿಷತ್ತು ಸೇರಿತ್ತು. ಇದೀಗ ಮೈಸೂರು ರಾಜ್ಯ (ಕರ್ನಾಟಕ) ಸ್ಥಾಪನೆಯಾದ ವೇಳೆ ನಮ್ಮ ಜಿಲ್ಲೆಗೆ, ಪ್ರಪ್ರಥಮವಾಗಿ, ಈ ಅಧಿವೇಶನ ಸೇರಿಸಿದ ಗೌರವ ಪ್ರಾಪ್ತಿಯಾಗಿದೆ. ಅಧಿವೇಶನದ ಅಂಗವಾಗಿ ವಿವಿಧ ವಿಚಾರ ಸಂಕಿರಣಗಳೂ ಯಥೋಚಿತವಾಗಿ ಉಪಯುಕ್ತವಾಗಿ ಜರಗಿಸಲ್ಪಟ್ಟವು. ಈ ಪರಿಷತ್ತಿನ ಅವಧಿಯಲ್ಲಿ ವೈದ್ಯಕೀಯಕ್ಕೆ ಸಂಬಂಧಿಸಿದ ವಸ್ತು ಪ್ರದರ್ಶನವೊಂದನ್ನೂ ಏರ್ಪಡಿಸಲಾಗಿದ್ದು ಇದು ಸಂಪೂರ್ಣ ಸಫಲವಾಗಿದೆಯೆನ್ನಬೇಕು. ಪರಿಷತ್ತಿಗೆ ಆಗಮಿಸಿದ ಪ್ರತಿನಿಧಿಗಳು ಮಾತ್ರವಲ್ಲ, ಆಸುಪಾಸಿನ ನಾಗರಿಕರೂ ಶಾಲೆ, ಕಾಲೇಜುಗಳ ಅಪಾರ ಸಂಖ್ಯೆಯ ವಿದ್ಯಾರ್ಥಿಗಳೂ ಇದನ್ನು ಕಣ್ಣಾರೆಕಂಡು ಸಂತೃಪ್ತಮನಸ್ಕರಾಗಿ ಮರಳಿದುದೇ ಇದಕ್ಕೆ ಸಾಕ್ಷಿ. ಇಂತಹ ಅಚ್ಚುಕಟ್ಟಾದ, ಸುವ್ಯವಸ್ಥಿತ ರೀತಿಯಲ್ಲಿ ಇಷ್ಟೊಂದು ಬೃಹತ್ ಪರಿಮಾಣದ ವಸ್ತುಪ್ರದರ್ಶನವನ್ನು ಸಜ್ಜುಗೊಳಿಸಿದುದರಿಂದ ಸ್ವಾಗತ ಸಮಿತಿಯು ಮಹದುಪಕಾರವೆಸಗಿದಂತಾಗಿದೆ. ಪರಿಷತ್ತಿನಲ್ಲಿ ಉಪಸ್ಥಿತರಿದ್ದ ಪ್ರತಿನಿಧಿಗಳಿಗೂ ಸೂಕ್ತ ವ್ಯವಸ್ಥೆಯು ಏರ್ಪಡಿತ್ತು ಮತ್ತು ಇವರೆಲ್ಲರೂ ಪ್ರಫುಲ್ಲಿತ ಹೃದಯದಿಂದ ಸಮ್ಮೇಳನದಲ್ಲಿ ಭಾಗವಹಿಸಿದುದರಿಂದ ಇದರ ಸಫಲತೆ ಸಂಪೂರ್ಣವಾದಂತೆಂದು ಹೇಳಬಹುದು. ಇಂತಹ ಅಭೂತಪೂರ್ವ ಪರಿಷತ್ತಿನ ಯಶಸ್ಸಿಗೆ ಕಾರಣೀಭೂತರಾದ ಸ್ವಾಗತಸಮಿತಿಯವರೂ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಿಬಂದಿ ಹಾಗೂ ವಿದ್ಯಾರ್ಥಿಗಳೂ ಖಂಡಿತಕ್ಕೂ ಅಭಿನಂದನಾರ್ಹರು.

ವೈದ್ಯಕೀಯ ವಿಜ್ಞಾನವು ತೀವ್ರಗತಿಯಲ್ಲಿ ಮುಂದುವರಿಯುತ್ತಿರುವಾಗ, ಇದರ ಪರಿಚಯವನ್ನು ಈ ವೃತ್ತಿಯವರೆಲ್ಲರೂ ಮಾಡಿಕೊಳ್ಳುವದು ಅತ್ಯವಶ್ಯವಾದುದರಿಂದ, ಈ ಮಾದರಿಯ ಪರಿಷತ್ತುಗಳು ಪರಸ್ಪರ ವಿಚಾರ ವಿನಿಮಯಗಳ ಮೂಲಕ ಹೊಸ ಹೊಸ ವಿಚಾರಗಳನ್ನು ತಿಳಿಯುವುದಕ್ಕೆ ಅನುಕೂಲವಾಗುವುದೆಂದೂ, ಈ ವಿಚಾರ ಸಂಕಿರಣವು ಉಪಯುಕ್ತವೆಂದೂ ಹೇಳಿದ ಮಾನ್ಯ ಮಂತ್ರಿ ಹೆಗಡೆಯವರ ಅಭಿಪ್ರಾಯವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈ ದೃಷ್ಟಿಯಿಂದಲೂ ಅನುಭವಿಕರಾದ ಪಂಡಿತರಾದ ಹಲವಾರು ವೈದ್ಯರು ಸಹಯೋಗ ನೀಡಿ ಇವುಗಳಲ್ಲಿ ಆಸಕ್ತರಾಗಿ ಭಾಗವಹಿಸಿದುದರಿಂದ ಪ್ರಕೃತದ ಸಮ್ಮೇಳನವು ಯಶಸ್ವಿಯಾಗಿದೆ.

ಮಾನ್ಯ ಆರೋಗ್ಯ ಮಂತ್ರಿಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ರಾಜ್ಯದ ವೈದ್ಯಕೀಯ ಶಿಕ್ಷಣದ ಕುರಿತಾಗಿ ಹೇಳಿದ ವಿಚಾರವನ್ನು ಇದೇ ಸಂಚಿಕೆಯ ಬೇರೊಂದೆಡೆ ಕೊಟ್ಟಿದ್ದೇವೆ. ಇವರು, ರಾಜ್ಯದಲ್ಲಿನ ಬೆಂಗಳೂರು, ಮೈಸೂರು ಹಾಗೂ ಹುಬ್ಬಳ್ಳಿಯ ಮೆಡಿಕಲ್ ಕಾಲೇಜುಗಳನ್ನೂ ಅವುಗಳ ಪರಿಸ್ಥಿತಿಯನ್ನೂ ವಿವರಿಸಿ, ಇಂಡಿಯನ್ ಮೆಡಿಕಲ್ ಕೌನ್ಸಿಲಿನವರು ನಿರ್ಧರಿಸಿದ ಮಟ್ಟವನ್ನು ಕಾಯ್ದುಕೊಂಡು ಬಂದಿರುವ, ಪ್ರಾರಂಭವಾದ ಐದೇ ವರ್ಷಗಳೊಳಗೆ ಅದರಿಂದ ಮನ್ನಣೆ ಪಡೆದಿರುವ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಹೆಸರನ್ನು ತಮ್ಮ ಸುದೀರ್ಘವಾದ ಭಾಷಣದಲ್ಲಿ ಎಲ್ಲಿಯೂ ಎತ್ತದಿರುವುದನ್ನು ಕಂಡು, ಆ ಭಾಷಣ ಕೇಳಿದವರು "ಇದೇನು ಸೋಜಿಗ?" ಎನ್ನುವಂತಾಗಿದೆ! ಪರಿಷತ್ತು ಇದೇ ಕಾಲೇಜಿನಲ್ಲಿ ನಡೆಯುತ್ತಿರುವುದೂ ಮಾನ್ಯ ಮಂತ್ರಿವರ್ಯರು ಇದೇ ಜಿಲ್ಲೆಗೆ ಸೇರಿದವರಾಗಿರುವುದೂ ಅವರು ಈ ಬಗೆ ಧರಿಸಿದ ಮೌನವ್ರತಕ್ಕೆ ಕಾರಣವೇನೆಂಬುದನ್ನು ಮತ್ತಷ್ಟು ಜಟಿಲವಾಗಿಸುತ್ತದೆ. ಖಾಸಗಿಯಾಗಿರುವ ಆಯುರ್ವೇದಿಕ ಕಾಲೇಜುಗಳನ್ನು ಹೆಸರಿಸಿದ ಮಂತ್ರಿವರ್ಯರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಹೆಸರೆತ್ತುವಷ್ಟು ಸೌಜನ್ಯ ತೋರದೆ ಹೋದುದು ತೀರ ವಿಚಿತ್ರವೆಂಬಂತಾಗಿದೆ. ಕಸ್ತೂರ್ಬಾ ಮೆಡಿಕಲ್ ಕಾಲೇಜು ಖಾಸಗಿ ವಿಭಾಗದವರು ಸಾರ್ವಜನಿಕ ಸಹಾಯದಿಂದ ಮಾಡಬಹುದಾದ ಮಹಾ ಸಾಹಸದ ದ್ಯೋತಕವಾಗಿದೆ. ಇದನ್ನೇ ಡಾ| ಜಿ. ವಿ. ಜೋಶಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಪುನರುಚ್ಚರಿಸಿದ್ದಾರೆ. "Out of the four Colleges referred to above, one is (ಕಸ್ತೂರ್ಬಾ ಮೆಡಿಕಲ್ ಕಾಲೇಜ್) conducted by an independent body and the standard of education imparted there is reported to be satisfactory. As regards the Government owned colleges I am sorry to say that the affairs are not in a very happy state. These colleges are apparently inadequated staffed and poorly equipped. (ರಾಜ್ಯದ ನಾಲ್ಕು ಮೆಡಿಕಲ್ ಕಾಲೇಜುಗಳಲ್ಲಿ ಒಂದು ಖಾಸಗಿಯದಾಗಿದ್ದು ಇಲ್ಲಿಯ ಶಿಕ್ಷಣ ಮಟ್ಟವು ತೃಪ್ತಿಕರವಿದೆ. ಉಳಿದ ಮೂರು ಸರಕಾರಿ ಕಾಲೇಜಗಳಲ್ಲಿಯ ಪರಿಸ್ಥಿತಿ ತೃಪ್ತಿಕರವಿಲ್ಲ. ಅಧ್ಯಾಪಕ ವರ್ಗವೂ ಸಲಕರಣೆಗಳೂ ಅಭಾವ ಸ್ಥಿತಿಯಲ್ಲಿವೆ.) ರಾಜ್ಯ ಕೌನ್ಸಿಲಿನ ಹಿಂದಿನ ಅಧ್ಯಕ್ಷ ಡಾ| ಆದಿಕೇಶವಲುರವರು, "What we heard is nothing when compared with what we see here. Dr. T. M. A. Pai seems to possess Allad-din's lamp with him. His genie is his genius" (ನಾವು ಕೇಳಿದುದಕ್ಕಿಂತ ನಾವು ಇಲ್ಲಿ ಹೆಚ್ಚು ಕಾಣುತ್ತೇವೆ. ಡಾ| ಟಿ. ಎಂ. ಎ. ಪೈಯವರ ಹತ್ತಿರ ಅಲ್ಲಾದಿನನ ಮಂತ್ರ ಬದ್ಧಿತ ದೀಪವಿರುವ ಹಾಗೆ ಕಾಣುತ್ತದೆ. ಅವರ ದೆವ್ವವೇ ಅವರ ಪ್ರತಿಭೆ) ಎಂದು ತನ್ನ ಭಾಷಣದಲ್ಲಿ ಧ್ವನಿಗೂಡಿಸಿದ್ದಾರೆ. ಜಿಲ್ಲೆಯ ಹೊರಗಿನ ಪಂಡಿತೋತ್ತಮರಾದ ಈ ಇರ್ವರು ಉದ್ದೇಶಪೂರ್ವಕವಾಗಿ ಹೆಸರೆತ್ತಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಮಟ್ಟವನ್ನೂ ಅದು ಬೆಳೆದು ಬಂದ ಬಗೆಯನ್ನೂ ಕಂಡು ಆನಂದಾತಿರೇಕದಿಂದ ಉದ್ಗರಿಸಿದರು. ಆದರೆ, ಅದೇನೋ ಮಾನ್ಯ ಮಂತ್ರಿಯವರಿಗೆ ಇದಾವುದರ ಪರಿವೆಯೇ ಇಲ್ಲದಂತೆ ಸರಕಾರಿ ಕಾಲೇಜುಗಳ ಹೀನ ಸ್ಥಿತಿಯನ್ನಷ್ಟೆ ನಾಗರಿಕರ ಮುಂದಿಟ್ಟು ಕೈ ತೊಳೆದುಕೊಂಡರು! ಇದೇ ಸೋಜಿಗ ಮಾತ್ರವಲ್ಲ ವಿಚಿತ್ರ ಜಟಿಲ ಸಮಸ್ಯೆಯೇ ಆಗಿ ಪರಿಣಮಿಸಿದೆ!

ನೀರ ಮೇಲಣ ಹೋಮ

ಇತಿಹಾಸ ಪ್ರಸಿದ್ಧ ಯುನೋ ಅಧಿವೇಶನದಲ್ಲಿ ಕ್ರುಶ್ಚೇವ-ಐಕ ಭೆಟ್ಟಿಯಾಗಬೇಕೆಂದು ಸೂಚಿಸುವ ಭಾರತ ಸಹಿತ ಪಂಚ ರಾಷ್ಟ್ರಗಳು ಮಂಡಿಸಿದ್ದ ಗೊತ್ತುವಳಿಯನ್ನು ಪ್ರಧಾನಿ ನೆಹರು ಹಿಂತೆಗೆದುಕೊಂಡುದರಿಂದ ಪರಿಸ್ಥಿತಿ ಮತ್ತಷ್ಟು ಜಟಿಲಗೊಂಡಿದೆ. ಈ ಮೂಲ ಗೊತ್ತುವಳಿಯ ಮುಖ್ಯಾಶಯವನ್ನೇ ಬದಿಗೊತ್ತುವಂತಹ 'ರಶ್ಯ—ಅಮೇರಿಕೆಗಳು ಸಂಪರ್ಕ ಬೆಳೆಸಬೇಕು' ಎಂಬ ತಿದ್ದುಪಡಿಯನ್ನು ಸ್ವೀಕರಿಸಿದುದರಿಂದ ಈ ಅನಿರೀಕ್ಷಿತ ಪ್ರಶ್ನೆ ಉದ್ಭವಿಸಿತು. ವಿಶ್ವದಲ್ಲಿ ದ್ವೇಷಭಾವನೆಯನ್ನು ದೂರಮಾಡಲು ಭಾರತದ ಪ್ರಧಾನಿಗಳೊಬ್ಬರಿಂದಲೇ ಸಾಧ್ಯವೆಂಬ ಅಭಿಪ್ರಾಯವು ಯುನೋದ ಅಧ್ಯಕ್ಷರದ್ದಿರಬಹುದಾದರೂ ಇವರು ದ್ವೇಷಶಮನಕ್ಕಾಗಿ ಮಾಡಿದ ಪ್ರಯತ್ನವು ನೀರಮೇಲಣ ಹೋಮವಾದುದದರಿಂದ ಭಾರತಕ್ಕೆ ಮಾತ್ರವಲ್ಲ, ಆಫ್ರೇಸ್ಯಾ ರಾಷ್ಟ್ರಗಳಿಗೂ ಆಘಾತವುಂಟಾಗಿದೆ. ಬಾಯಲ್ಲಿ ಶರಣಾರ್ಥಿಯಾಗಿ ಕಂಕುಳಲ್ಲಿ ದಂಡ ಧರಿಸುವವರಂತಿರುವ ರಾಷ್ಟ್ರಗಳ ವರ್ತನೆಯಿಂದ ದ್ವೇಷಾಗ್ನಿಗೆ ತುಪ್ಪವೆರೆದಂತೆಯೇ ಈಗ ಆಯಿತು. ಇನ್ನು ಶಾಂತಿಪಥದ ದಾರಿ ಯಾವುದೆಂದು ತೋರಿಸುವ ಕೆಚ್ಚು ಇರುವುದಾದರೂ ಯಾರಿಗೆ?

ಸಂಕ್ಷಿಪ್ತ ಸುದ್ದಿಗಳು

ಅನಕೃ ಅಧ್ಯಕ್ಷರಾದರು

ಇದೇ ವರ್ಷದ ದಶಂಬರದಲ್ಲಿ ಉಡುಪಿ—ಮಣಿಪಾಲದಲ್ಲಿ ನೆರವೇರುವುದೆಂದು ನಿಯೋಜಿತವಾದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಯಾರು ವಹಿಸಬೇಕೆಂಬುದರ ಬಗ್ಗೆ ಎದ್ದಿದ್ದ ಕುತೂಹಲತೆಗಳು ಈಗ ಒಂದು ಮುಕ್ತಾಯಕ್ಕೆ ಬಂದಿದೆ. ಸ್ವಾಗತ ಸಮಿತಿಯವರು ಸೂಚಿಸಿದಂತೆ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಅ. ನ. ಕೃಷ್ಣರಾಯರು ಸಮ್ಮೇಳನದ ಅಧ್ಯಕ್ಷತನವನ್ನು ವಹಿಸುವುದಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಶ್ರೀ ಶಿವಮೂರ್ತಿ ಶಾಸ್ತ್ರಿಯವರ ನೇತೃತ್ವದಲ್ಲಿ ನಿರ್ಧರಿಸಿತೆಂಬ ಸುದ್ದಿ ಬಂದಿದೆ. ಕನ್ನಡಿಗರಲ್ಲಿ ಹೆಚ್ಚಿನವರು ಅನಕೃರವರೇ ಅಧ್ಯಕ್ಷರಾಗಬೇಕೆಂದು ಬಯಸಿದ್ದುದರಿಂದ, ಅವರೆಲ್ಲರ ಇಷ್ಟಾರ್ಥ ಪೂರ್ತಿಯಾಯಿತೆಂದು ತಿಳಿಯಬಹುದು.

ಭಿನ್ನಾಭಿಪ್ರಾಯಕ್ಕೆ ಪರಿಹಾರ

ತಾರೀಕು ೧೮ರಂದು ಸೇರಲಿರುವ ಕಾಂಗ್ರೆಸ್ ಪಾರ್ಲಿಮೆಂಟರಿ ಸಭೆಯಲ್ಲಿ ಉತ್ತರ ಪ್ರದೇಶ, ಮೈಸೂರು ಮತ್ತು ಒಡಿಸ್ಸ ರಾಜ್ಯಗಳಲ್ಲಿ ವಿಧಾನ ಮಂಡಳದ ಕಾಂಗ್ರೆಸ್ ಸದಸ್ಯರ ನಡುವೆ ಎದ್ದಿರುವ ಭಿನ್ನಾಭಿಪ್ರಾಯಗಳ ಕುರಿತಾಗಿ ಚರ್ಚೆ ನಡೆಯಲಿರುವುದೆಂದು ತಿಳಿಯುತ್ತದೆ. ಮೈಸೂರಿನ ಭಿನ್ನಾಭಿಪ್ರಾಯ ಗುಂಪಿನವರ ನಾಯಕ ಶ್ರೀ ಕೆಂಗಲ್ ಹನುಮಂತಯ್ಯನವರು ನವದೆಹಲಿಗೆ ತೆರಳಿದ್ದು ಅಲ್ಲಿ ಇವರು ಕಾಂಗ್ರೆಸ್ ವರಿಷ್ಠ ಮಂಡಳದ ಸದಸ್ಯರೊಡನೆ ಚರ್ಚಿಸಿ ವಿಶಾಲ ತಳಹದಿಯ ಮೇಲೆ ಹೊಸ ಮಂತ್ರಿಮಂಡಳ ಸ್ಥಾಪಿಸಬೇಕೆಂದು ಒತ್ತಾಯಪಡಿಸುವರಾಗಿ ಗೊತ್ತಾಗಿದೆ. ಉತ್ತರ ಪ್ರದೇಶದಲ್ಲಿ ಮತ್ತು ಒಡಿಸ್ಸಗಳಲ್ಲಿ ಮುಖ್ಯಮಂತ್ರಿಯವರು ರಾಜಿನಾಮೆಯೀಯಲು ನಿರ್ಧರಿಸಿದುದರ ಕುರಿತಾಗಿಯೂ ಪಾರ್ಲಿಮೆಂಟರಿ ಸಭೆಯಲ್ಲಿ ಚರ್ಚಿಸಲಾಗುವುದೆಂದೂ ತಿಳಿದು ಬಂದಿದೆ.

ಕ್ರುಶ್ಚೇವರಿಗೆ ಮುಖಭಂಗ?

ಸದ್ಯ ೯೯ ಸದಸ್ಯ ರಾಷ್ಟ್ರಗಳ ಪ್ರತಿನಿಧಿ ಸಂಸ್ಥೆಯಾಗಿರುವ ಯುಕ್ತ ರಾಷ್ಟ್ರ ಸಂಘದಲ್ಲಿ ಕಮ್ಯುನಿಷ್ಟ ಚೀನಕ್ಕೆ ಪ್ರಾತಿನಿಧ್ಯವೀಯಬೇಕೆಂಬ ಶ್ರೀ ಕ್ರುಶ್ಚೇವರ ಸೂಚನೆಯು ಬಿದ್ದು ಹೋಯಿತು. ಕಳೆದ ೧೦ ವರ್ಷಗಳಿಂದಲೂ ಏಕಸಮವಾಗಿ ಈ ಸೂಚನೆಯನ್ನು ತಿರಸ್ಕರಿಸುತ್ತ ಬರಲಾಗುತ್ತಿದೆ. ಈ ಬಗ್ಗೆ ಕ್ರುಶ್ಚೇವರು ಮಾತನಾಡುತ್ತ ಚೀನಾ ಪ್ರವೇಶಕ್ಕೆ ಒಡ್ಡುತ್ತಿರುವ ಆತಂಕಗಳೆಲ್ಲವೂ ಇಸ್ಪೀಟಿನ ಎಲೆಗಳಂತೆ ಉದುರಿ ಹೋಗಿ, ಅದನ್ನು ಕರೆದುಕೊಳ್ಳುವ ದಿನ ಪ್ರಾಪ್ತವಾಗುವುದು ಎಂದು ಆಶಿಸಿದರು. ಈ ನಿರ್ಣಯವು ರಶ್ಯನ್ ಪ್ರಧಾನಿಯವರ ಮುಖಭಂಗ ಮಾಡಿದಂತೆಯೆಂದು ರಾಜಕೀಯ ತಜ್ಞರು ಅಂದುಕೊಳ್ಳುತ್ತಿದ್ದಾರೆ. ಕ್ರುಶ್ಚೇವರು ಚೀನಕ್ಕೆ ಪ್ರಾತಿನಿಧ್ಯ ಕೊಡದೆ ಹೋದರೆ, ಸೋವಿಯತ ಬಣ್ಣದ ರಾಷ್ಟ್ರಗಳು ಯುನೋವನ್ನು ತ್ಯಜಿಸುವವೆಂದೂ ಹೇಳಿದ್ದರು.

ಸಪನ್ಮೂಲ ಪರಿಶೋಧನೆ

ಮಾಜಿ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಮೈಸೂರು ಸರಕಾರವು ಒಂದು ಸಮಿತಿಯನ್ನು ರಚಿಸಿ, ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಕಾರ್ಯಕೃತವಾಗದಿರುವ ಮತ್ತು ತೃತೀಯ ಯೋಜನೆಯಲ್ಲಿ ಸೇರಲಿರುವ ವಿವಿಧ ಯೋಜನೆಗಳನ್ನು ಕಾರ್ಯಗತಗೊಳಿಸಲು ಆವಶ್ಯಕವಾದ ಹಣ ಮತ್ತಿತರ ಸಾಧನ ಸಂಪತ್ತುಗಳನ್ನು

...ಂಡುಹಿಡಿಯುವಂತೆ ಕೇಳಿಕೊಂಡಿದೆ. ...ರಕಾರದ ವೆಚ್ಚದಲ್ಲಿ ಎಲ್ಲೆಲ್ಲಿ ವಿಸ್ತರಣೆ ...ಮಾಡಬಹುದು ಮತ್ತು ಎಲ್ಲೆಲ್ಲಿ ಹೊ... ಸಲನ್ನು ಮಗ್ಗಲಗಳನ್ನು ಪಡೆಯಬಹುದು ...ಂದು ಇದು ರಾಜ್ಯ ಸರಕಾರಕ್ಕೆ ಸಲಹೆ ...ನೀಡುವುದು. ಈ ಸಮಿತಿಯಲ್ಲಿ ದ. ಕ... ...ಡ ಜಿಲ್ಲೆಯ ಶ್ರೀ ಬಿ. ವೈಕುಂಠ ಬಾಳಿ...ರೂ ಒರ್ವ ಸದಸ್ಯರಾಗಿ ಸೇರ್ಪಡೆಗೊಂ...ದ್ದಾರೆ.

ಅಸ್ಸಾಮಿನಲ್ಲಿ ಗೊಂದಲ

ಅಸ್ಸಾಮದಲ್ಲಿನ ಭಾಷಾ ಪ್ರಶ್ನೆಯನ್ನು ...ಗೆಹರಿಸಲು ತೆರಳಿದ್ದ ಗೃಹಮಂತ್ರಿ ಪಂ...ರು ಅಸಫಲರಾಗಿ ಮರಳಬೇಕಾಯಿತು. ...ದರಿಂದಾಗಿ ರಾಜ್ಯಭಾಷೆಯಾಗಿ ಅಸ್ಸಾ...ಮು ಮತ್ತು ಇಂಗ್ಲಿಷ್ (ಮುಂದಿದು ಹಿಂ... ಆಗುವುದು) ಗಳೆಂದು ಘೋಷಿಸುವ ...ಧೇಯಕವೊಂದನ್ನು ವಿಧಾನಸಭೆಯಲ್ಲಿ ...ಮಂಡಿಸಲಾಯಿತು. ಬ್ರಹ್ಮಪುತ್ರ ಕೊಳ್ಳ...ದಲ್ಲಿರುವವರಿಗೆ ಬಂಗಾಳಿಯನ್ನೂ ಗುಡ್ಡ...ಗಾಡುಗಳ ಜನಾಂಗದರಿಗೆ ಇತರ ಭಾಷೆ...ಗಳನ್ನೂ ರಾಜ್ಯಭಾಷೆಗಳಾಗಿಟ್ಟುಕೊಳ್ಳ...ಲು ಅಧಿಕಾರನೀಡುವ ಮತ್ತು ಭಾಷಾ ...ಅಲ್ಪ ಸಂಖ್ಯಾಕರಿಗೆ ರಕ್ಷಣೆನೀಡುವ ಅವ...ಕಾಶವನ್ನು ಈ ವಿಧೇಯಕದಲ್ಲಿ ಒದಗಿಸ...ಲಾಗಿದೆ. ಆದರೆ, ಮಂಡಿಸಿದ ವಿಧೇಯಕ...ಕ್ಕೆ ಬಹಳಷ್ಟು ವಿರೋಧ ವ್ಯಕ್ತಪಟ್ಟಿದೆ. ...ಮುಖ್ಯವಾಗಿ ಗುಡ್ಡಗಾಡು ಪ್ರತಿನಿಧಿಗಳ...ಿಂದು ಅಧಿಕವಿರುವಂತೆ ತೋರುತ್ತದೆ.

ವಿಚಿತ್ರ ವಾತಾವರಣ

ಕಾಶ್ಮೀರದ ಪ್ರಶ್ನೆ ಬಗೆಹರಿಯದ ಹೊ... ಪಾಕಿಸ್ತಾನವು ಭಾರತವನ್ನು ನಂಬ...ಲಾರದು ಎಂಬ ಅಧ್ಯಕ್ಷ ಅಯೂಬರ ...ಚಿತ್ರ ವಾದದಿಂದ ಸೋಜಿಗ ವಾತಾವ...ರಣವೊಂದು ಉಂಟಾಗಿದೆ. ಸಿಂಧೂ ನದಿ ...ನೀರಿನ ವಿವಾದವು ಸೌಹಾರ್ದಮಯ ...ವಾತಾವರಣದಲ್ಲಿ ನಡೆದ ನಂತರ ಈ ರಾ...ಷ್ಟ್ರಗಳ ನಡುವೆ ಸಂಬಂಧ ದೃಢವಾದೀ...ತೆಂದು ಆಶಿಸಿದವರಿಗೆ ತಣ್ಣೀರೆರಚಿದಂತಾ...ದೆ. ಕಾಶ್ಮೀರ ಪ್ರಶ್ನೆಯನ್ನು ಎತ್ತುವು...ದಾದರೆ, ಅದು ಮತ್ತಷ್ಟು ಜಟಿಲವಾಗು...ವುದೆಂದು ನೆಹರು ಒಂದೆಡೆ ಹೇಳಿದ್ದಾರೆ. ...ದರೂ ಯಾವುದೇ ವೈಮನಸ್ಯಕ್ಕೆ ಕಾರ...ಣವಾಗದಂತೆ ನ್ಯಾಯ ರೀತಿಯಿಂದ ಇ...ದನ್ನು ಬಗೆಹರಿಸುವತ್ತ ಉಭಯತ್ರರಿ...ಗೂ ಆಸಕ್ತಿಯಿದೆ. ಕಾಶ್ಮೀರದ ಮುಖ್ಯ...ಮಂತ್ರಿ ಬಕ್ಷಿ ಗುಲಾಮ ಮಹಮ್ಮದರು ...ಪಾಕಿಸ್ತಾನವು ಕಾಶ್ಮೀರದಿಂದ ಸಂಪೂ...ರ್ಣ ಕಾಲ್ತೆಗೆಯಬೇಕೆಂದು ಹೇಳಿದ್ದಾರೆ.

ಹಾರ್ಮೋನಿಯಮ್

ಬೋಧನ ಕ್ರಮ

ಎಂಬ ಶ್ರೀ. ಎ. ರಾಮಪ್ಪನವರಿಂದ
ರಚಿತವಾದ

ಕನ್ನಡ ಸಂಗೀತ ಪುಸ್ತಕವು

ನಮ್ಮಲ್ಲಿ ದೊರೆಯುತ್ತದೆ.

ಬೆಲೆ ರೂ. 2. V. P. ಮಾಡುವುದಿಲ್ಲ.

ರೂ. 2=50 ಕಳಿಸಿದರೆ ಒಂದು ಪ್ರತಿ
ಯನ್ನು ಬುಕ್ ಪೋಸ್ಟಿನಿಂದ
ಕಳಿಸಬಹುದು.

ನವಭಾರತ ಬುಕ್ ಡಿಪೋ, ಉಡುಪಿ.

ಅಲ್ಲಲ್ಲಿಯ ಸುದ್ದಿಸಾರ

ತಾಲೂಕು ಬೋರ್ಡ್ ಚುನಾವಣೆ— ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಕಾಂಗ್ರೆಸಿಗೆ ಪ್ರಚಂಡ ಬಹುಮತ ದೊರಕಿರುವುದು. ಉಡುಪಿ ತಾಲೂಕು ಬೋರ್ಡಿನಲ್ಲಿ 19 ಸ್ಥಾನಗಳಿದ್ದು ಹನ್ನೊಂದಕ್ಕೆ ಮಾತ್ರ ಸ್ಪರ್ಧೆಯಿತ್ತು. ಇದರಲ್ಲಿ ಈ ಕೆಳಗಿನಂತೆ ಕಾಂಗ್ರೆಸಿಗೆ 10 ಸ್ಥಾನಗಳು ಸಿಕ್ಕಿವೆ. ಬ್ರಹ್ಮಾವರ (ಮಹಿಳೆಯರಿಗಾಗಿ ಕಾದಿರಿಸಿದ ಸ್ಥಾನ) ಶ್ರೀಮತಿ ಆರೂರು ಜಲಜಾಕ್ಷಿಯಮ್ಮ ಮತ್ತು ಶ್ರೀ ಆನಂದ ಕುಂದ ಹೆಗ್ಡೆ. (ಇನ್ನೊಂದು ಸ್ಥಾನಕ್ಕೆ ಸ್ವತಂತ್ರ ಅಭ್ಯರ್ಥಿ ಶ್ರೀ ರಘುನಾಥ ಶೆಟ್ಟರು ಆರಿಸಲ್ಪಟ್ಟಿದ್ದಾರೆ) ಹಿರಿಯಡ್ಕ— ಶ್ರೀ ಪಿ. ಶಿವಾಜಿ ಶೆಟ್ಟಿ ಬಿ. ಎ ಎಲ್‌ಎಲ್. ಬಿ. ಮತ್ತು ಶ್ರೀ ಮಂಜುನಾಥ ನಾಯಕ್, ಕಟಪಾಡಿ— ಶ್ರೀ ಬಿ. ಕಾಳಪ್ಪ ಶೆಟ್ಟಿ ಮತ್ತು ಶ್ರೀ ಕೆ. ಮುದ್ದು ಸುವರ್ಣ, ಕಾಪು— ಶ್ರೀ ಕೆ. ಆರ್. ಬಂಗೇರ ಮತ್ತು ಶ್ರೀ ಎಸ್. ದೇವೇಂದ್ರ ಪೆಜತ್ತಾಯ, ಶಿರ್ವ— ಡಾ. ಯು. ಕುಪ್ಪಣ್ಣಾಚಾರ್ಯ ಮತ್ತು ಶ್ರೀ ಸುಂದರ ಶೆಟ್ಟಿ.

8 ಸ್ಥಾನಗಳಿಗೆ ಕಾಂಗ್ರೆಸ್ ಹುರಿಯಾಳುಗಳು ಅವಿರೋಧವಾಗಿ ಮೊದಲೇ ಆರಿಸಲ್ಪಟ್ಟಿದ್ದಾರೆ. ಆದರೆ ಹಾಗೆ ಅವಿರೋಧವಾಗಿ ಆರಿಸಲ್ಪಟ್ಟವರಲ್ಲಿ ಕೊಕ್ಕರ್ಣೆ ಕ್ಷೇತ್ರದ ಹುರಿಯಾಳು ಶ್ರೀ ಶೀನಪ್ಪ ಶೆಟ್ಟರು ದಿವಂಗತರಾಗಿದ್ದಾರೆ. ತೆರವಾದ ಆ ಸ್ಥಾನಕ್ಕೆ ಮರು ಚುನಾವಣೆ ಜರಗಬೇಕಾಗಿದೆ.

ರೈತ ಸಂಘ— ಮೂಡಬಿದ್ರಿ ಅಭಿವೃದ್ಧಿ ಕೇಂದ್ರಕ್ಕೊಳಪಟ್ಟ ಕಡಂದಲೆ ಗ್ರಾಮದಲ್ಲಿ ಕಳೆದ ತಾ. 27ರಂದು ಪಟೇಲ್ ಶ್ರೀ ಕೆ. ಸಂಜೀವ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಒಂದು ರೈತ ಸಂಘವನ್ನು ಸ್ಥಾಪಿಸಲಾಯಿತು. ಸಮಾಜ ಶಿಕ್ಷಣ ಸಂಘಟಕರಾದ ಶ್ರೀ ವೆಂಕಟರಮಣಾಚಾರ್ಯರು ರೈತ ಸಂಘ ಉದ್ದೇಶ, ಉಪಯೋಗವೇನೆಂಬುದನ್ನು ವಿವರಿಸಿ ಭಾಷಣಮಿತ್ತರು. ನಂತರ ಶ್ರೀ ಕೆ. ಬಾಬು ರಾಯರನ್ನು ಅಧ್ಯಕ್ಷರನ್ನಾಗಿಯೂ, ಕೆ. ನಾರಾಯಣ ಶೆಟ್ಟರನ್ನು ಉಪಾಧ್ಯಕ್ಷರನ್ನಾಗಿಯೂ, ದಿ. ಜೋಗಿ ಶೆಟ್ಟರನ್ನು ಕೋಶಾಧಿಕಾರಿಯನ್ನಾಗಿಯೂ, ಶ್ರೀ ಗೋವಿಂದ ಶೆಟ್ಟಿ ಮತ್ತು ಕೆ. ಜೈ. ಶೆಟ್ಟರನ್ನು ಜತೆ ಕಾರ್ಯದರ್ಶಿಗಳನ್ನಾಗಿಯೂ ಆಯ್ಕೆ ಮಾಡಲಾಯಿತು.

ಭಾರತ್ ಮೆಡಿಕಲ್ ಹಾಲ್— ಡಾ| ಅನಂತರಾಮ ರೈ ಇವರು ಇದೇ ತಾ. 9ರಂದು ಕಾಸರಗೋಡು ತಾಲೂಕಿನ ಮಂಗಲ್ಪಾಡಿಯಲ್ಲಿ ಉಪ್ಪಳ ರೈಲ್ವೇ ಸ್ಟೇಶನಿನ ಬಳಿ ಭಾರತ್ ಮೆಡಿಕಲ್ ಹಾಲ್‌ನ್ನು ಪ್ರಾರಂಭಿಸಿದ್ದಾರೆ.

ಪಾಂಗಾಳ ನಾಯಕ್ ಬೇಂಕಿನ ಭದ್ರಾವತಿ ಶಾಖೆಯು ಶಂಕರ ಟಾಕೀಸಿನ ಬಳಿ ಇದೇ ತಾ. 14ರಂದು ತೆರೆಯಲ್ಪಡುವುದು.

ಬೈಂದೂರಲ್ಲಿ ವಿಮಾ ಏಜಂಟರ ಸಭೆ— ಕಳೆದ ತಾ. 25ರಂದು ಗಂಗೊಳ್ಳಿ ವಲಯದ ವಿಮಾ ಏಜಂಟರ ಸಭೆಯೊಂದು ಸಮಾಜ ಶಿಕ್ಷಣ ಪ್ರಸಾರ ಕೇಂದ್ರದಲ್ಲಿ ಡಾ| ರಾಮಚಂದ್ರ ಎಸ್. ಉಲ್ಲಾಳ ಇವರ ಅಧ್ಯಕ್ಷತೆಯಲ್ಲಿ ಜರಗಿತು ಬಿ. ಶ್ರೀನಿವಾಸ ಹೊಳ್ಳರು ಸ್ವಾಗತಿಸಿದ ಬಳಿಕ ವಿಚಾರ ವಿನಿಮಯ ನಡೆಯಿತು. ಉಡುಪಿ ಬ್ರಾಂಚ್ ಮೆನೇಜರ್ ಶ್ರೀ ಟಿ. ಪಿ ಯನ್. ನಂಬಿಯಾರರು ಹಳ್ಳಿಗಳಲ್ಲಿ ಜೀವ ವಿಮೆಯ ಪ್ರಸಾರದ ಆವಶ್ಯಕತೆಯನ್ನು ವಿವರಿಸಿದರು. ಶ್ರೀ ಹಾಲಾಡಿ ಸಂಜೀವ ಶೆಟ್ಟರು ದಕ್ಷ ಸೇವೆ ಸಲ್ಲಿಸುತ್ತಿರುವ ಈ ವಲಯದ ಏಜಂಟರನ್ನು ಅಭಿನಂದಿಸಿದರು. ರಾತ್ರಿ ಜೀವ ವಿಮೆಯ ಕುರಿತಾದ ಚಲಚ್ಚಿತ್ರವನ್ನು ಪ್ರದರ್ಶಿಸಲಾಯಿತು. ಮರುದಿನ ಬಂಟಕಲ್ಲಿಯಲ್ಲಿ ಜೀವ ವಿಮಾ ಚಲಚ್ಚಿತ್ರ ಪ್ರದರ್ಶನ ಸಂಬಂಧವಾಗಿ ಬೋ. ಹಾ. ಎ. ಶಾಲೆಯಲ್ಲಿ ಸೇರಿದ ಸಭೆಯನ್ನುದ್ದೇಶಿಸಿ ಶ್ರೀ ಟಿ. ಪಿ. ಯನ್. ನಂಬಿಯಾರ್ ಮೊದಲಾದವರು ಭಾಷಣವನ್ನಿತ್ತರು.

ಶಿರ್ವದಲ್ಲಿ ದಸರಾ ಮಹೋತ್ಸವ— ತಾ 27—9—60ರಿಂದ ತಾ 30-9-60ರವರೆಗೆ ಇಲ್ಲಿಯ ಕಲಾರಾಧಿನ ಸಂಘದವರಿಂದ ಸ್ಥಳೀಯ ನಿತ್ಯಾನಂದ ಸದನದಲ್ಲಿ ದಸರಾ ಮಹೋತ್ಸವವು ಅತಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು

ಮೊದಲ ದಿನ ಡಾ| ವೈ. ಆರ್. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ರೆ| ಫಾ| ಎಚ್. ನೀನ್ಯೂಸಿಯವರು ಉತ್ಸವದ ಉದ್ಘಾಟನೆ ಮಾಡಿದ ಬಳಿಕ ಬಾಲಕೆಯರಿಂದ ಸಂಗೀತ ಮತ್ತು 'ಸಂತ ಮೀರಾ' ಎಂಬ ನಾಟಕವು ಜರಗಿತು. ಮುಂದೆ ಮೂರು ದಿನಗಳಲ್ಲಿ ಭಜನೆ, ಸಂಗೀತ ಭಾಷಣಾದಿಗಳ ಜತೆಕ್ರಮವಾಗಿ ಬಾಲಕೆಯರಿಂದ 'ಶ್ರೀ ಕೃಷ್ಣ ತುಲಾಭಾರ' ಬಾಲಕರಿಂದ ಭಸ್ಮಾಸುರ ಮೋಹಿನಿ; ಪ್ರೌಢರಿಂದ 'ಸತ್ಯ ವಿಜಯ' ಎಂಬ ನಾಟಕಗಳು ಅಭಿನಯಿಸಲ್ಪಟ್ಟಿವಲ್ಲದೆ, ಕೊನೆಯ ದಿನದ ಉತ್ಸವದ ಅಧ್ಯಕ್ಷ ಸ್ಥಾನವನ್ನು ಪಲಿಮಾರು ಮಠದ ಶ್ರೀ ವಿಭುದೇಶ ತೀರ್ಥ ಶ್ರೀಪಾದಂಗಳವರು ವಹಿಸಿದುದು ಉತ್ಸವಕ್ಕೆ ಹೆಚ್ಚಿನ ಕಳೆಯನ್ನಿತ್ತಿತ್ತು.

ಮಣಿಪಾಲದಲ್ಲಿ ಮೈಸೂರು ರಾಜ್ಯ ವೈದ್ಯಕೀಯ ಸಮ್ಮೇಳನ—27 ನೇ ಮೈಸೂರು ಪ್ರಾಂತೀಯ ವೈದ್ಯಕ ಸಮ್ಮೇಳನವು ಇಂಡಿಯನ್ ಮೆಡಿಕಲ್ ಎಸೋಶಿಯೇಶನಿನ ಉಡುಪಿ ಶಾಖೆಯ ಆಶ್ರಯದಲ್ಲಿ ಇದೇ 7ರಿಂದ 9ರ ವರೆಗೆ ಮಣಿಪಾಲದಲ್ಲಿ, ಯಶಸ್ವಿಯಾಗಿ ಜರಗಿತು. ತಾ. 7ನೆ ಬೆಳಿಗ್ಗೆ ಮೈಸೂರು ರಾಜ್ಯದ ಆರೋಗ್ಯ ಮಂತ್ರಿ ಡಾ| ಕೆ. ಕೆ ಹೆಗ್ಡೆಯವರು ಕಸ್ತೂರ್ ಬಾ ಮೆಡಿಕಲ್ ಕೋಲೇಜಿನ ಪ್ರೇಕ್ಷಾ ಮಂದಿರದಲ್ಲಿ ಸಮ್ಮೇಳನವನ್ನು ಉದ್ಘಾಟಿಸಿದರು. ಪ್ರಾರ್ಥನೆಯಾದ ಬಳಿಕ ಸ್ವಾಗತ ಸಮಿತಿಯ ಅಧ್ಯಕ್ಷ ಡಾ| ಟಿ. ಎಮ್. ಎ ಪೈಯವರು ಸರ್ವರನ್ನೂ ಸ್ವಾಗತಿಸುತ್ತಾ ಮಣಿಪಾಲದ ಪೂರ್ವೇತಿಹಾಸವನ್ನು ನಿರೂಪಿಸಿ 1953ರಲ್ಲಿ ಸ್ಥಾಪಿತವಾದ ಅತ್ಯುತ್ತಮ ಮಟ್ಟವನ್ನು ಗಳಿಸಿರುವ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನಲ್ಲಿ ರಾಜ್ಯ ಸಮ್ಮೇಳನ ನೆರವೇರುತ್ತಿರುವುದು ಆನಂದ ಮತ್ತು ಮಹತ್ವಪೂರ್ಣವಾದುದೆಂದೂ ಎಕೆಡಮಿ ಆಫ್ ಜನರಲ್ ಎಜ್ಯುಕೇಶನ್ ಈ ಉನ್ನತ ಮಟ್ಟದ ಮೆಡಿಕಲ್ ಕಾಲೇಜನ್ನು ಮಕ್ಕಳ ಮತ್ತು ಹೆತ್ತವರ ಸಹಕಾರ ಹಾಗೂ ಸರಕಾರದ ಸಹಾಯದಿಂದ ಉತ್ತಮ ರೀತಿಯಲ್ಲಿ ನಡೆಯುತ್ತದೆಂದೂ ಈ ಕಾಲೇಜು ಪ್ರಾರಂಭವಾದ 5 ವರ್ಷಗಳೊಳಗೇನೇ ಇಂಡಿಯನ್ ಮೆಡಿಕಲ್ ಕೌನ್ಸಿಲಿನ ಅಂಗೀಕಾರ ಪಡೆದಿರುವುದೆಂದೂ ಕಡಿಮೆ ಭಂಡವಾಳ ಮತ್ತು ಕಡಿಮೆ ವೆಚ್ಚದಲ್ಲಿ ನಡೆಯುತ್ತಿರುವುದು ಈ ಸಂಸ್ಥೆಯ ವೈಶಿಷ್ಟ್ಯವೆಂದೂ ಎಕೆಡಮಿಯ ಶಿಕ್ಷಣ ರಂಗದಲ್ಲಿ ಮಾಡುತ್ತಿರುವ ಕಾರ್ಯಗಳೇನೆಂಬುದನ್ನೂ ವಿವರಿಸಿದರು. ಪರಿಷತ್ತಿನ ಸದವಕಾಶದಲ್ಲಿ ಏರ್ಪಡಿಸಿದ ವೈದ್ಯಕೀಯ ಪ್ರದರ್ಶನವು ಜನಸಾಮಾನ್ಯರಿಗೂ ವಿದ್ಯಾರ್ಥಿಗಳಿಗೂ ಜ್ಞಾನಾಭಿವೃದ್ಧಿಗೆ ಸಹಾಯಕವಾಗುವುದೆಂದೂ ಎಲ್ಲರೂ ಇದರ ಪ್ರಯೋಜನವನ್ನು ಪಡೆಯಬೇಕೆಂದೂ ಹೇಳಿ, ನಮ್ಮ ಜಿಲ್ಲೆಯವರೇ ಆದ ಮೈಸೂರು ಸರಕಾರದ ಆರೋಗ್ಯ ಮಂತ್ರಿ ಡಾ. ಕೆ. ಕೆ. ಹೆಗ್ಡೆಯವರು ಪರಿಷತ್ತನ್ನು ಉದ್ಘಾಟಿಸುವಂತೆ ಕೇಳಿಕೊಂಡರು.

ಡಾ. ಕೆ. ಕೆ. ಹೆಗ್ಡೆಯವರು ಇಂಥಾ ಪರಿಷತ್ತಿನ ಪ್ರಯೋಜನ, ವೈದ್ಯರ ಜವಾಬ್ದಾರಿ, ಸರಕಾರದ ಆರೋಗ್ಯ ಇಲಾಖೆಯು ಮಾಡಿರುವ ಮಾಡಲಿರುವ ಹಲವಾರು ಯೋಜನೆಗಳನ್ನು ವಿವರಿಸಿ ಸಮ್ಮೇಳನವನ್ನು ಉದ್ಘಾಟಿಸಿದರು. (ಇವರ ಭಾಷಣದ ಸಾರಾಂಶವನ್ನು ಮೊದಲ ಪುಟದಲ್ಲಿ ಕೊಡಲಾಗಿದೆ.)

ಸ್ವಾಗತ ಸಮಿತಿಯ ಕಾರ್ಯದರ್ಶಿ ಡಾ| ಕೃಷ್ಣ ರಾಯರು ದೇಶದಾದ್ಯಂತದಿಂದ ಬಂದಿರುವ ಸಂದೇಶಗಳನ್ನು ಓದಿದರು. ಆ ಮೇಲೆ ಮೈಸೂರು ರಾಜ್ಯದ ವೈದ್ಯ ಸಮ್ಮೇಳನದ ಹಿಂದಿನ ಅಧ್ಯಕ್ಷರಾದ ಡಾ| ಆದಿಕೇಶವುಲುರವರು ಅಲ್ಪಾವಧಿಯಲ್ಲಿ ಮಣಿಪಾಲದಲ್ಲಿ ಡಾ| ಟಿ. ಎಂ. ಎ. ಪೈಗಳು ಸಾಧಿಸಿದ ಮಹತ್ಕಾರ್ಯಗಳನ್ನೂ, ಪ್ರಗತಿಯನ್ನೂ ಪ್ರಶಂಸಿಸಿ ಪರಿಷತ್ತಿನ ಮುಂದಿನ ಅಧಿಕಾರ ಸೂತ್ರವನ್ನು ಹೊಸ ಅಧ್ಯಕ್ಷ ಡಾ| ಜಿ. ಬಿ. ಜೋಶಿಯವರಿಗೆ ಒಪ್ಪಿಸಿದರು.

ಅಧ್ಯಕ್ಷ ಡಾ| ಜೋಶಿಯವರು ತಮ್ಮ ವಿಚಾರ ಮತ್ತು ಅನುಭವಪೂರ್ಣ ಭಾಷಣದಲ್ಲಿ ಡಾಕ್ಟರರು ಹಳ್ಳಿಗಳಿಗೆ ತೆರಳಿ ವೈದ್ಯಕೀಯ ವೃತ್ತಿಯನ್ನು ಪ್ರಾರಂಭಿಸಲು ಇರುವ ಅಡೆತಡೆ ಈ ದಿಸೆಯಲ್ಲಿ ಸರಕಾರ ಮಾಡಬೇಕಾದ ಕರ್ತವ್ಯ ಎಲ್ಲ ದೇಶಗಳಂತೆ ನಮ್ಮ ದೇಶದಲ್ಲಿಯೂ ಇರುವ ತಜ್ಞ ಡಾಕ್ಟರರ ಅಭಾವ, ಮೆಡಿಕಲ್ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆರಿಸುವ ಕ್ರಮದಲ್ಲಿಯ ಲೋಪದೋಷಗಳು ವೆಲ್ಲೂರು ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಆರಿಸುವ ನೂತನ ಪದ್ಧತಿ ಮೊದಲಾದುವನ್ನು ವಿವರಿಸಿದರು. ರಾಜ್ಯದ ಸರಕಾರಿ ಮೆಡಿಕಲ್ ಕಾಲೇಜುಗಳ ದುಃಸ್ಥಿತಿಗಾಗಿ ವಿಷಾದಿಸಿ ಕಸ್ತೂರ್ ಬಾ ಮೆಡಿಕಲ್ ಕಾಲೇಜಿನ ಉನ್ನತ ಮಟ್ಟವನ್ನು ಶ್ಲಾಘಿಸಿ ಆದಕ್ಕಾಗಿ ದಣಿಸಿ ಬಂದಿಯನ್ನೂ ಡಾ. ಪೈಗಳ ಸಾಹಸವನ್ನೂ ಕೊಂಡಾಡಿದರು. ವೈದ್ಯರು ಪ್ರಾಮಾಣಿಕ ಮತ್ತು ನಿಷ್ಠಾಪೂರ್ವಕ ಸೇವೆ ಸಲ್ಲಿಸಿ ತಮ್ಮ ವೃತ್ತಿ ಗೌರವವನ್ನು ಕಾಪಾಡಿಕೊಳ್ಳಬೇಕೆಂದರು. ಡಾ. ಕೃಷ್ಣರಾಯರು ಧನ್ಯವಾದ ಸಮರ್ಪಣೆ ಮಾಡಿದ ಬಳಿಕ ರಾಷ್ಟ್ರಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು. ಮಧ್ಯಾಹ್ನ ರಾಜ್ಯದ ಮೆಡಿಕಲ್ ಸರ್ವಿಸಿನ ಡೈರೆಕ್ಟರ್ ಡಾ. ವಿ. ಆರ್. ನಾಯ್ಡು ರವರು ವೈದ್ಯಕೀಯ ಪ್ರದರ್ಶನವನ್ನು ಉದ್ಘಾಟಿಸಿದರು. ಅನಂತರ ಪೂ ತಾ. 8, 9ರಲ್ಲಿಯೂ ತಜ್ಞ ಡಾಕ್ಟರರಿಂದ ಭಾಷಣ, ನಿಬಂಧವಾಚನ, ವಿಚಾರ ಸಂಕಿರಣಗಳು ಜಯಪ್ರದವಾಗಿ ನೆರವೇರಿ ತಾ. 9 ರಲ್ಲಿ ಪರಿಷತ್ತು ಯಶಸ್ವಿಯಾಗಿ ಕೊನೆಗೊಂಡಿತು. ಪ್ರದರ್ಶನವು ತಾ. 10ರವರೆಗೂ ಇತ್ತು.

ದುಃಖ ಸೂಚಕ ಸಭೆ— ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ನಿಧನಕ್ಕಾಗಿ ಸಂತಾಪ ಸೂಚಕ ಸಭೆಯೊಂದು ತಾ 6ರಂದು ಉಡುಪಿ ವಿಕ್ಟೋರಿಯಾ ಜುಬಿಲಿ ಕ್ಲಬ್ಬಿನಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆ ಕರೆದ ಡಾ. ಕೆ. ಎಲ್. ಐತಾಳರು ದಿವಂಗತ ಪೈಗಳ ಗುಣಕಥನ ಮಾಡಿ ದುಃಖಸೂಚಕ ಗೊತ್ತುವಳಿಯನ್ನು ಓದಿ ಹೇಳಿದರು. ಡಾ. ಟಿ ಎಂ ಎ. ಪೈ, ಶ್ರೀ ಕು. ಶಿ. ಹರಿದಾಸ ಭಟ್ಟ, ಶ್ರೀ ಎ. ಜೆ. ಆಲ್ಸೆಯವರು ದಿವಂಗತ ಪೈಗಳ ಉದಾತ್ತ ಮತ್ತು ಆದರ್ಶ ಜೀವನದ ಕುರಿತು ಮಾತಾಡಿದ ಬಳಿಕ ಅಧ್ಯಕ್ಷರ ಭಾಷಣವಾಯಿತು.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ
ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ!
ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶುದ್ಧ ಹರಟೆ

ದೀರ್ಘ ಸುಷುಪ್ತಿಯಲ್ಲಿ ಮನೋರಮ ವಿಲಾಸ!

ಕೈಯಲ್ಲಿ ಹಣ ಟಣಟಣನ್ನುತಿದ್ದರೆ, ದೇಶೋದ್ಧಾರದ ಹುಚ್ಚು ಅಂಟಿಕೊಂಡರೆ, ಕೀರ್ತಿ ಗಳಿಸಬಹುದೆಂಬ ಭ್ರಾಂತಿ ಮನುಷ್ಯನಿಗೆ ತಗಲಿಬಿಟ್ಟರೆ.......? ಅಂತಹ ಒಂದು ಮನೋರಮ ವಿಲಾಸದ ವೈಖರಿಯು ಅನುಭವವಿಲ್ಲಿದೆ!

ಶ್ರೀ "ಕುಂತಳಾಪ್ರಿಯ"

ಕುಂತಳಾಪ್ರಿಯರು ಒಂದು ರಾತ್ರಿ ಮಲಗಿ ನಿದ್ದೆ ಹೋದರು. ಪ್ರತಿದಿನ ಮಲಗುತ್ತಿರಲಿಲ್ಲವೆಂಬುದು ಇದರ ಅಭಿಪ್ರಾಯವಲ್ಲ. ಅದು ಕುಂತಳಾಪ್ರಿಯರ ಪಾಲಿಗೊಂದು ಶುಭದಿನವಾಗಿತ್ತು. ಅವರೊಂದು ಕನಸನ್ನು ಕಂಡರು. ಆ ಕನಸು ಅವರಲ್ಲಿ ಸುಪ್ತವಾಗಿ ಹುದುಗಿದ್ದ ದಿವ್ಯ ಜ್ಞಾನವನ್ನು ಹೊಡೆದೆಬ್ಬಿಸಿತು. ನವಸ್ಫೂರ್ತಿಯನ್ನು ತುಂಬಿಸಿತು. ಪರೋಪಕಾರದ ಬುದ್ಧಿಯನ್ನು ಜಾಗ್ರುತಗೊಳಿಸಿತು. ಅಂದು ಅವರ ಸದ್ಬುದ್ಧಿ ಸಗೋಚರವಾಯಿತು.

ಮುಂದೆ ಬರುವ ಡಿಸೆಂಬರ್ ಒಂದನೆಯ ತಾರೀಕಿನ ದಿನ ಪ್ರೈಜ, ಬಾಂಡಿನ ಬಹುಮಾನ ಚೀಟಿಯನ್ನು ಸರಕಾರವೆತ್ತುವ ದಿನ. ತಮ್ಮ ಅದೃಷ್ಟ ಪರೀಕ್ಷೆಯನ್ನು ಮಾಡಬೇಕೆಂಬ ಉದ್ದೇಶದಿಂದ ಹಣ ಕಟ್ಟಿದವರೆಲ್ಲ ಫಲಿತಾಂಶಕ್ಕಾಗಿ ಒಂಟೆಯಂತೆ ಕತ್ತೆತ್ತಿ ಪತ್ರಿಕೆಗಳನ್ನು ಕೊಳ್ಳುವದಿನ. ಎಲ್ಲರಂತಿರುವ ಕುಂತಳಾಪ್ರಿಯರು ತಾವು ಕೊಂಡ ಐದು ರೂಪಾಯಿ ಪ್ರೈಜು ಬಾಂಡಿಗೆ ಬಹುಮಾನವೆದ್ದಿರುವುದೇ ಎಂಬ ಸಂಶಯ ನಿವಾರಣೆಗಾಗಿ ಪತ್ರಿಕೆಯನ್ನುಕೊಂಡು ಓದಿದರು. ಅವರಿಗೆ ಪ್ರಥಮ ಬಹುಮಾನವೆದ್ದಿರುವುದನ್ನು ಕಂಡು ಸಂತೋಷಭರಿತರಾದ ಅವರು ಹಣವನ್ನು ಖರ್ಚು ಮಾಡುವುದು ಹೇಗೆ? ಎಂಬ ವಿಚಾರದಲ್ಲಿ ಯೋಚನಾಮಗ್ನರಾದರು. ಅಕಸ್ಮಾತ್ತಾಗಿಯೆ ಹಣ ಬಂದುದರಿಂದ ಆ ಯೋಚನೆ ಅನಿವಾರ್ಯವಾಗಿತ್ತು.

ಮಿಂಚಿನಂತೆ ಒಂದು ಯೋಚನೆಯನ್ನು ದೇವರು ಕುಂತಳಾಪ್ರಿಯರ ತಲೆಯಲ್ಲಿ ಹೊಳೆಯಿಸಿದರು. "ಭಕ್ತನೆ! ನೀನು ಪ್ರತಿಕಾ ವ್ಯವಸಾಯವನ್ನು ಮಾಡಿ ದೇಶೋದ್ಧಾರವನ್ನು ಕೈಗೊಳ್ಳು" ಎಂದು. ಭಕ್ತಪ್ರಿಯರು ಸಂತುಷ್ಟರಾಗಿ ಹೇಳಿದರು. ಆವರು ಯೋಚನೆಗೆ ಮುಕ್ತಾಯವನ್ನಿತ್ತರು.

ಬಂದ ಏಳುವರೆ ಸಾವಿರ ರೂಪಾಯಿಗಳಲ್ಲಿ ತಾನು ಮೊದಲು ಪ್ರೈಜುಬಾಂಡ್‌ಗಾಗಿ ಖರ್ಚುಮಾಡಿದ್ದ ಐದು ರೂಪಾಯಿಗಳನ್ನು ಮಾತ್ರ ತಮ್ಮ ಖರ್ಚಿಗೆ ತೆಗೆದ ಕುಂತಳಾಪ್ರಿಯರು ಉಳಿದ ಏಳು ಸಾವಿರದ ನಾಲ್ಕುನೂರ ತೊಂಬತ್ತೈದು ರೂಪಾಯಿಗಳನ್ನು ಭಾವಿ ಪತ್ರಿಕೆಯ ಮೂಲನಿಧಿಯಾಗಿ ತೆಗೆದಿಟ್ಟರು.

ಅನಂತರ ಕುಂತಳಾಪ್ರಿಯರ ತಲೆತಿಂದ ಸಮಸ್ಯೆಯೆಂದರೆ ಪತ್ರಿಕೆಯನ್ನು ಎಷ್ಟು ದಿನಗಳಿಗೊಮ್ಮೆ ನಡೆಸುವುದು ಯೆಂಬುದಾಗಿದೆ. ದಿನಪತ್ರಿಕೆಯನ್ನು ನಡೆಸುವುದೆ? ವಾರಪತ್ರಿಕೆಯ ಸಂಪಾದಕರಾಗುವುದೆ? ಮಾಸಿಕ ಅಥವಾ ತ್ರೈಮಾಸಿಕ ಯಾ ವರ್ಷಕ್ಕೊಂದೊ ಎರಡೊ ಮೂರೊ, ಐದೊ ಸಂಚಿಕೆಗಳನ್ನು ಕೊಡುವ ಪತ್ರಿಕೆಯ ಸಂಚಾಲಕನಾಗುವುದೇ? ಎಂಬ ವಿಷಯದಲ್ಲಿ ತರ್ಕ ವಿತರ್ಕಗಳಾಗಿ ದಿನ ಪತ್ರಿಕೆಯನ್ನೇ ನಡೆಸುವುದೆಂಬ ತೀರ್ಮಾನಕ್ಕೆ ಕುಂತಳಾಪ್ರಿಯರು ಬಂದರು.

ದಿನ ಪತ್ರಿಕೆಯ ಹೆಸರು ಯಾವುದಾಗಿರಬೇಕೆಂಬ ವಿಚಾರ ಅನಂತರ ಕುಂತಳಾಪ್ರಿಯರ ತಲೆ ಬಿಸಿಮಾಡಿತು. ವಿಚಾರ ಶಕ್ತಿ ಕರಗಿ ನೀರಾಯಿತು. 'ಅರುಣಾಸ್ತ'ವೆಂಬ ಹೆಸರನ್ನಿಡಬೇಕೆಂದು ತೀರ್ಮಾನವಾಯಿತು. ಸೂರ್ಯಾಸ್ತದೊಳಗೆ ಅಚ್ಚಾಗಿ ಹೊರ ಬೀಳುವ ಈ ಪತ್ರಿಕೆಯು ಮರುದಿನ ಅರುಣಾಸ್ತದೊಳಗಾಗಿ ಮಾರಿ ಹೋಗಬೇಕೆಂಬ ಉದ್ದೇಶದಿಂದ ಆ ರೀತಿಯಾಗಿ ಕುಂತಳಾಪ್ರಿಯರು ಪತ್ರಿಕೆಗೆ ಹೆಸರನ್ನಿಟ್ಟರು.

ಈ ದಿನ ಪತ್ರಿಕೆಯ ಕ್ರಯವು ಕೇವಲ ಎರಡು ನಯೇ ಪೈಸೆ ಮಾತ್ರ. ಫುಲ್ ಸ್ಕೇಪ್ ಸೈಜಿನ, ಎರಡು ಪುಟದ, ಒಂದೇ ಕಾಗದದ ಈ ಪತ್ರಿಕೆಯಲ್ಲಿ ಲೋಕಲ್ ಸುದ್ದಿಗಳ (ಲೋಕಲ್ ನ್ಯೂಸ್‌ನ ತದ್ಭವ) ಬಗ್ಗೆ ತೀವ್ರವಾದ ಗಮನವನ್ನು ಕೊಡಲಾಗುವುದು. ಎರಡನೆಯ ಪುಟದ ಮಧ್ಯ ಭಾಗದಲ್ಲಿ ಪ್ರತಿ ದಿನವು ಒಂದು ವಿಶೇಷ ಲೇಖನಗಳನ್ನು ಕೊಡಲಾಗುವುದು ಅದೇ ಪುಟದ ಎಡ ಮಗ್ಗುಲಿನ ಎರಡು ಕಲಂಗಳಲ್ಲಿ ಎರಡು ವಿಚಾರಗಳ ಬಗ್ಗೆ (ಒಂದು ಇಹಲೋಕ ಸುದ್ದಿಯ ಬಗ್ಗೆ, ಇನ್ನೊಂದು ಪರಲೋಕ ಸುದ್ದಿಯ ಬಗ್ಗೆ) ಸಂಪಾದಕೀಯವನ್ನು ಬರೆಯಲಾಗುವುದು. ಮೊದಲನೆಯ ಪುಟ ತುಂಬಾ ಲೋಕಲ್ ಸುದ್ದಿಗಳು ಪ್ರಕಟಗೊಳ್ಳುವವು.

ಚಂದಾ ಹಣವನ್ನು ವಸೂಲು ಮಾಡುವ ಬಗೆ ಹೊಸ ರೀತಿಯದಾಗಿದೆ. ಪ್ರತಿಯೊಂದು ಬೀದಿಗಳಲ್ಲೂ ನಾಲ್ಕೈದು ಹುಡುಗರು ಸೈಕಲ್ಲಿನಲ್ಲಿ ಪ್ರತಿದಿನ ಸಾಯಂಕಾಲ ಬೀದಿಯ ಪ್ರತಿಯೊಂದು ಅಂಗಡಿಗೂ ಅರುಣಾಸ್ತವನ್ನು ಕೊಡುತ್ತಾ ಬರುವರು. ಪ್ರತಿ ವಾರದ ಕೊನೆಯ ದಿನವಾದ ಶನಿವಾರ ಪತ್ರಿಕೆ ಹಂಚುವಾಗ ಚಿಲ್ಲರೆಗಳನ್ನು ಸಂಗ್ರಹಿಸಲು ಅನುಕೂಲವಾಗುವಂತೆ ಒಂದು ಡಬ್ಬಿಯನ್ನು ಹಿಡಿದುಕೊಂಡು ಹೋಗುವರು. ಸಾಹುಕಾರರು ಆ ಡಬ್ಬಿಗೆ ಹಣ ಹಾಕಿದರೆ ಸರಿ. ವಾರಕ್ಕೆ ಹದಿನಾಲ್ಕು ನಯಾ ಪೈಸೆಗಳನ್ನು ಕೊಟ್ಟ ವ್ಯಾಪಾರಿಗಳನ್ನು ಪತ್ರಿಕೆ ಮಾರುವ ಹುಡುಗರು ಋಣಮುಕ್ತರನ್ನಾಗಿಸುತ್ತಾರೆ.

ಗಾಳಿ ಸುದ್ದಿಗಳ ಬಗ್ಗೆ ನಮ್ಮ ಪತ್ರಿಕೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನೀಯಲಾಗುವುದು. ಸುಳ್ಳನ್ನು ಪ್ರಕಟಿಸುವ ಪತ್ರಿಕೆಯನ್ನು ಸುಳ್ಳು ಹೇಳುವ ಲೋಕದ ಜನರೆಲ್ಲಾ ಸ್ವಾಗತಿಸದಿರಲಾರರಷ್ಟೆ! ಹೊಸ ಸುಳ್ಳು ನೋಡುವ ಲವಲವಿಕೆಯನ್ನು ಓದುಗರಲ್ಲಿ ಉಳಿಸಿಕೊಳ್ಳುವ ಯತ್ನವನ್ನು ಮಾಡಲಾಗುವುದು.

ಅಗ್ರಲೇಖನದಲ್ಲಿ ಊರಿನ ಅಗ್ರಗಣ್ಯರನ್ನು ಹೊಗಳುವ ಲೇಖನಗಳನ್ನೆ ಪ್ರಕಟಿಸಲಾಗುವುದು. ಹೊಗಳುವವರು, ಹೊಗಳಲ್ಪಡುವವರು ಪತ್ರಿಕೆಯ ಚಂದಾದಾರರಾಗುವುದು ಮಾತ್ರವಲ್ಲದೆ ನಿಶ್ಚಿತ ಮೊಬಲಗನ್ನು ಪತ್ರಿಕೆಗೆ ತೆರಬೇಕು. ಎಡವರ್ಟೈಸ್‌ಮೆಂಟಿಗೆ ಹಣ ತೆತ್ತಂತೆ.

ಪತ್ರಿಕೆಯ ಭಾಷೆ, ಶೈಲಿ ಅನುಕರಣೀಯವಾಗಿಯೆ ಇರುವುದು. ಅನಧಿಕೃತವಾಗಿ ತಿಳಿದು ಬಂದಿದೆ, ಹೇಳಲಾಗುತ್ತಿದೆ, ತಿಳಿದುಕೊಳ್ಳಲಾಗುವುದು, ಮಾಡಬಹುದಾಗಿದೆ ಇಂತಹ ಶಬ್ದಗಳ ಸಂಖ್ಯೆ ಹೆಚ್ಚಿದ್ದ ಪತ್ರಿಕೆ ಜನಾದರಣೀಯವಾಗುವುದರಲ್ಲಿ ಸಂದೇಹವಿಲ್ಲ. ಶಾಲಾ ವರ್ಧಂತಿ, ಯಕ್ಷಗಾನ ಸಂಘದ ಸೇವೆ, ಗಾಂಧಿ ಜಯಂತಿ, ಪಾನ ಸಪ್ತಾಹ ಉದ್ಘಾಟನೆ, ಈ ರೀತಿಯ ಸ್ಥಳೀಯ ವಾರ್ತೆಗಳು ಗಾಳಿ ಸುದ್ದಿಯೊಂದಿಗೆ ಪ್ರಕಟವಾಗುವುವು.

ಇಂತಹ ವ್ಯವಸ್ಥೆಗಳನ್ನು ಮಾಡಿದ ಕುಂತಳಾಪ್ರಿಯರು ಎಚ್ಚರಗೊಂಡರು. ಕನಸು, ಭವಿಷ್ಯವನ್ನು ನುಡಿಯುವುದಂತೆ. ಹಾಗಾದರೆ ವಾಚಕರಾದ ನೀವೆಲ್ಲಾ ಮುಂದೆ ಚಂದದಾರರಾಗಿ ನನ್ನನ್ನು ಪ್ರೋತ್ಸಾಹಿಸುವಿರಾಗಿ ನಂಬಬಹುದಷ್ಟೆ!

o o o

"ಇಷ್ಟು ಮಾಡಿದ್ದೇವೆ. ಇನ್ನು ಸರಕಾರವನ್ನು ನಂಬುವುದು ಕಷ್ಟ" ಎಂದು ಎಂ. ಎಲ್. ಎ. ಯೊಬ್ಬರು ಉದ್ಗರಿಸಿದರಂತೆ.

—ವಿಧಾನ ಸೌಧದಲ್ಲಿ ಸರಕಾರದ ಕೆಲಸ ದೇವರ ಕೆಲಸ'ವೆಂಬುದನ್ನು ತಿದ್ದಿದ ಸರಕಾರ ಅದು ನಂಬದ ಕೆಲಸವೆಂದು ಬರೆಸಬಹುದಂತೆ.



ಪೋರ್ ಬಂದರಿನಲ್ಲಿರುವ ಈ ಹಳೆಯ ಮನೆಯಲ್ಲಿ ಗಾಂಧೀಜಿಯವರ ಪೂರ್ವಿಕರು ನೆಲಸಿದ್ದರು. 91 ವರ್ಷಗಳ ಕೆಳಗೆ ಭಾರತದ ಮಹಾ ಭವಿಷ್ಯದ ಹೊಂಗನಸಾಗಿ ಗಾಂಧೀಜಿಯವರು ಹುಟ್ಟಿದ್ದೂ ಇದೇ ಮನೆಯಲ್ಲಿ.

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

O. S No. 390/1957

R. I. A. No. 686/1960

ಜನ್ನಿ ನಾರಾಯಣಯ್ಯ-- ಅರ್ಜಿದಾರ,

ಮತ್ತು

ವಿಶ್ವನಾಥ ಭಟ್ಟ ಕೂಡಾ—ಎದ್ರಿರು,

ಇವರೊಳಗೆ

ಈ ಮೂಲಕ ಸದ್ರಿ ವ್ಯವಹರಣೆಯ 1ನೆ ಎದ್ರಿ ವಿಶ್ವನಾಥ ಭಟ್ಟ, ಸುಬ್ಬಂಣ ಭಟ್ಟ, ಉಡ್ಪಿ ತಾಲ್ಕು ಎಲ್ಲೂರು ಗ್ರಾಮದ ಕುಂಜೂರಲ್ಲಿರುವವರಿಗೆ ತಿಳಿಸುವದೇನಂದ್ರೆ—

ಮೇಲ್ಕಂಡ ದಾವೆಯ ಪ್ರಿಲಿಮಿನರಿ ಡಿಕ್ರಿಯನ್ನು ಎಬ್ಸಲ್ಯೂಟು ಮಾಡಿ ಫ್ಯಾನಲ ಡಿಕ್ರಿ ಕೊಡ್ಸಬೇಕಾಗಿ ಬರಕೊಂಡ ಮೇಲ್ಕಂಡ ಅರ್ಜಿ ನಿನ್ನ ಹಾಜರಿ ಬಗ್ಗೆ ತಾರೀಕು 4—11—'60ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ನೀವು ಸ್ವತಹಾ ಯಾ ವಕೀಲ್ ದ್ವಾರಾ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿನ್ನನ್ನು ಶಿವ್ಯಾ ಮಾಡಿ ಸದ್ರಿ ವ್ಯವಹರಣೆ ಯೇಕಪಕ್ಷವಾಗಿ ತೀರ್ಮಾನಿಸಲಾದೀತು.

By order of the Court.

N. Mohandas Adyanthaya.

Advocate for petitioner.

Karkal, 10—10—60.

ಕುಮಾರಿ ಬಿಲ್ಲೆಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತವೆ. ಟ್ಯೂಬಿಗೆ ರೂ. 3=00 (ಸಾದಾ), ರೂ. 5=00(ಸ್ಪೆಶ್ಯಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಯಲ್).

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮಹಿಳಾಮಂಡಳ

(೩ನೇ ಪುಟದಿಂದ)

ಮುಂದೆ ತಂಗಿಯೇ ಅಣ್ಣನ ಅಭಿಪ್ರಾಯವನ್ನು ಹೀಗೆ ಹೇಳುವಳು.

ಆ ಕಮಲಾಕ್ಷಿಯರುಗಳ ಸಮ್ಮೇಳದಿ। ರಾಕೇಂದು ಮುಖಿಯು ನೀನು, ದ್ವಾರದೊಳೆನ್ನ । ಏಕವ್ವ ತಡೆದೆ ನೀನ್ಯ, ನೀ ಬೇಡಿಕೊ । ಬೇಕಾದ ಬಯಕೆಯನು, ನೀ ಪೇಳದುದನು ॥ ಲೋಕವೀರೇಳೊಳಗೆ ಇದ್ದರು । ನಾ ತಂಸಿ ಕೊಡಿಸುವೆನು ಈ ಕ್ಷಣ । ಕೋಕಿಲಸ್ವರೆ ಕಂಬುಕಂಧರೆ । ಪಾಕಶಾಸನ ಸುತನ ಪ್ರಿಯಳೆ । ಕದಬಿಡೆ ತಂಗಿ ಮೋಹನಾಂಗಿ ॥ ೩ ||

ಈ ಸಂಭಾಷಣೆಯಲ್ಲಿ ಅಣ್ಣನ ಮಾತುಗಳನ್ನು ಅಣ್ಣನೇ ಹಾಡಿದರೆ ಅಲ್ಲೊಂದು ಸುಂದರ ಏಕಾಂಕ ನಾಟಕವೇ ನಡೆಯುವುದು. ಆದರೆ ವರನು ಮೌನವಿದ್ದ ಮಾತ್ರಕ್ಕೆ ನಾಟಕವು ನಿಂತು ಹೋಗುವುದಿಲ್ಲ; ಸೋದರಿಯೇ ಏಕ ವ್ಯಕ್ತಿಯು ನಾಟಕವನ್ನು ಅಭಿನಯಿಸಿಯೇ ಬಿಡುವಳು. ಕೊನೆಗೆ ಕೃಷ್ಣಣ್ಣಯ್ಯನು—'ನಿನ್ನಯ ಕಂದಗೆನ್ನಯ ಕುವರಿ ಕೊಡುವೆನು' ಎಂದು ಸೋದರಿಯೊಡನೆ ಒಪ್ಪಂದ ಮಾಡಿಕೊಂಡ ಮೇಲೆಯೇ ದ್ವಾರವು ಪ್ರವೇಶಕ್ಕೆ ತೆರವಾಗುವುದು. ತಂಗಿ ಸುಭದ್ರೆಯು ನಗುತ್ತಾ ಅಣ್ಣ ಅತ್ತಿಗೆಯರನ್ನು ಬಿಡುವಳು. ಎಂಥಾ ಸುಂದರ ಸನ್ನಿವೇಶ! ಹಾಡಿನಲ್ಲೂ ಎಂತಹ ಕವಿತಾ ಶಕ್ತಿ!

ಮದುವೆಯ ಹಾಡುಗಳು ಇಷ್ಟಕ್ಕೇ ಮುಗಿಯಲಿಲ್ಲ. ವೀಳಯ ಕೊಟ್ಟ ಹಾಡುಗಳಿವೆ; ಇನ್ನೂ ಹಲವು ವಿಧದ ಹಾಡುಗಳಿವೆ. ಲಕ್ಷ್ಮೀ ಶೋಭಾನೆಯ ಹಾಡಿನ ಕೆಲವು ಸೊಲ್ಲುಗಳನ್ನಾದರೂ ಮದುವೆಯ ಚಪ್ಪರದಲ್ಲಿ ಹಾಡದಿರುತ್ತಿರಲಿಲ್ಲ. ಇದು ಉಡುಪಿಯ ವಾದಿರಾಜ ಸ್ವಾಮಿಗಳಿಂದ ರಚಿಸಲ್ಪಟ್ಟಿತು— ಭಾರತೀಯ ಸಂಸ್ಕೃತಿಯು ಭಾರತದ ನಾರಿಯರಿಂದ ಅದೃಶ್ಯವಾಗಬಾರದೆಂಬ ಬಯಕೆಯು ಈ ಸ್ವಾಮಿಗಳಿಗೂ ಇದ್ದಿರಬಹುದಲ್ಲವೆ?

ಮದುವೆಯ ಹಾಡುಗಳೆಲ್ಲಾ ನವದಂಪತಿಗಳಿಗೆ ನವತರುಣಿಯರು ತೋರುವ ನವಮಾರ್ಗ. ಹಾಲು ತುಪ್ಪದ ದಿನ ಉಪಾಹಾರದ ಹೊಳೆ ಹರಿದಂತೆ ಹಾಡಿನ ಹೊಳೆಯೂ ಹರಿಯುವುದು. ವಧೂವರರ ಸೆರಗನ್ನು ಬಿಗಿದು ಅವರಿಬ್ಬರ ಲಜ್ಜೆಯನ್ನು ಕಡಿಮೆಮಾಡುವ ಕ್ಷಿಎತ್ತುಗಡೆಯೂ ನಡೆಯುವುದು. ಅಂತೂ ಆ ದಿನ ರಾತ್ರಿ ಭಾಮಿನಿಯರೂ, ಪ್ರಮದೆಯರೂ ಚಪ್ಪರದಲ್ಲಿ ತುಂಬಾ ನಗುವಿನ ತೆರೆಯನ್ನೆಬ್ಬಿಸುತ್ತಾರೆ. ವರನಿಗೆ ಸಂಸಾರ ಜೀವನವು ಸ್ವರ್ಗಜೀವನವೆನ್ನಿಸುತ್ತಾರೆ. ಇಂತಹ ಕಣ್ಣುಕಟ್ಟುಗಳು ಮದುವೆಯ ದಿನಗಳಲ್ಲಿ ನೂರಾರು ನಡೆದು ಹೋಗುತ್ತವೆ. ಈ ಸೊಗಸಿನಲ್ಲಿ ಪಾಲುಗಾರರಾಗುವುದಕ್ಕೆ ನೂರಾರು ಸಾವಿರಾರು ಜನರು ನೆರೆಯುತ್ತಾರೆ. ಈಗ ಲಾಭದ ಆಸೆಯಿಂದ ಈ ಮದುವೆಯ ನಾಟಕದ ಬುಡಕ್ಕೆ ಕೊಡಲಿಯ ಹೊಡೆತವನ್ನು ಹಾಕಿದ್ದಾರೆ. ಇದೊಂದು ನಾಟಕೀಯ ಕಾರ್ಯ ಮಾತ್ರವಲ್ಲ; ಆರ್ಯಸಂಸ್ಕೃತಿಯ ಪ್ರದರ್ಶನವೆಂಬುದನ್ನು ಮರೆತಿದ್ದಾರೆ. ಈ ಭಾವನೆಯೇ ಜನರ ಮನಸ್ಸಿನಲ್ಲಿ ಬಲವಾದರೆ ಆರ್ಯಸಂಸ್ಕೃತಿಯೇ ನಮ್ಮಿಂದ ಅಗಲುತ್ತಿದೆಯಲ್ಲಾ ಎಂಬ ವ್ಯಸನ!

(ಮುಗಿಯಿತು)

ಸುಖಪ್ರಾಪ್ತಿ

(೪ನೇ ಪುಟದಿಂದ)

ನೀವು ಅಸಾಧಾರಣ ಮಾನವರಲ್ಲವಾದರೆ, ಮೇಲಿನ ಪಂಚ ಪ್ರಶ್ನೆಗಳಿಗೂ ಹಾದೆಂದು ಉತ್ತರಿಸುವಿರಿ. ಈ ಉತ್ತರವು ಅಸ್ವಸ್ಥ ಅಥವಾ ದುಃಖದ ದ್ಯೋತಕವಲ್ಲ. ನಿಮಗೆ ನಿಮ್ಮ ತ್ರಸ್ತ ಮನಃಸ್ಥಿತಿಯ ಅರಿವಾದರೆ, ನಿಮ್ಮ ಕಷ್ಟಪರಂಪರೆಗಳು, ದುಃಖಕಾರಣಗಳು, ಕಠಿನತೆಗಳ ಅಥವಾ ಅಶಾಂತತೆಗಳೆಲ್ಲವನ್ನೂ ನಿಮ್ಮ ಸಖ ಇಲ್ಲವೇ ಹಿತೈಷಿಯೊಡನೆ ಇದ್ದಕ್ಕಿದ್ದಂತೆ ತೋಡಿಕೊಳ್ಳುವುದೇ ತಾರಕೋಪಾಯ.

ಆದರೆ, ಒಂದು ವಿಷಯವನ್ನು ನೀವು ಅವಶ್ಯ ತಿಳಿದುಕೊಳ್ಳಬೇಕು. ಪ್ರಪಂಚದಲ್ಲಿ ಎಲ್ಲ ಮನುಷ್ಯರೂ ಮರಣಶೀಲರು; ಅಮರರಾಗಿರುವವರಾರೂ ಇಲ್ಲ. ಎಲ್ಲರೂ ಪರಸ್ಪರಾಧೀನರಾಗಿರುವರು, ಅನ್ಯೋನ್ಯಾಶ್ರಿತರಾಗಿರುವರು. ಇದನ್ನು ವಿರೋಧಿಸಿ ಯಾರೇ ಆದರೂ ತನ್ನ ಕಾಲ ಮೇಲೆಯೇ ತಾನು ನಿಂತಿರುವೆನೆಂದು ವಾದಿಸಿದರೆ ಅದು ಮಿಥ್ಯಾವಾದವಾಗುವುದು. ವೈಜ್ಞಾನಿಕ ಸಂಶೋಧನೆಗಳು ಮಾನವ ಸಮೂಹಕ್ಕೆ ಒಂದು ಅಪ್ರತ್ಯಕ್ಷ ಐಕಭಾವನೆಯನ್ನು ಮೂಡಿಸಿವೆ. ಟಿಕೇಟು ಕೊಂಡುಕೊಂಡು ಬಸ್ಸಿನಲ್ಲಿ ಪ್ರಯಾಣ ಮಾಡುವವನು ತನ್ನ ಕಾಲಬಲದಲ್ಲೇ ಪ್ರಯಾಣಿಸುತ್ತಿರುವೆನೆಂದು ವಾದಿಸುವನೆ? ಬಸ್ಸಿನ ನಿರ್ಮಾಣದಲ್ಲಿ ನೂರಾರು ಕರ್ಮಚರರ ಕೈವಾಡವಿರುವುದನ್ನು ಮರೆಯಬಲ್ಲೆವೆ? ಆದುದರಿಂದ ನಿಮ್ಮ ಇಷ್ಟಮಿತ್ರರೊಡನೆ ಹೃದಯ ತೆರೆದು ಮಾತನಾಡಿರಿ. ಜಯಪರಾಜಯವೆರಡೂ ಚಿತ್ತಸಂಬಂಧಿಯಾದುದು. ಆದುದರಿಂದ ನಿಮ್ಮ ಮನಸ್ಸು ಜಯಶಾಲಿಯಾಯಿತೆಂದರೆ, ಸಮಸ್ತ ಸುಖಗಳೂ ನಿಮ್ಮ ಕಾಲಬುಡಕ್ಕೆ ಬಂದು ಸೇರುವುವು. ಯಾವಾಗಲೂ ಚಿತ್ತವನ್ನು ನಿಷ್ಕಲ್ಮಷವಾಗಿರಗೊಳಿಸುವುದರಿಂದ ಸುಖಶಾಲಿಗಳಾಗಬಹುದು.

ಡೆಮೊಕ್ರೆಟಿಕ್ ಪಕ್ಷದಿಂದ ಸಿನೇಟರ ಲಿಂಡನ್ ಬಿ. ಜಾನ್ಸನ್ (ಎಡ) ಮತ್ತು ಜಾನ್ ಎಫ್. ಕೆನ್ನೆಡಿ (ಬಲ)ಯವರು ಕ್ರಮವಾಗಿ ಅಮೆರಿಕೆಯ ಉಪಾಧ್ಯಕ್ಷ ಮತ್ತು ಅಧ್ಯಕ್ಷ ಸ್ಥಾನಗಳಿಗೆ ಡೆಮೊಕ್ರೆಟಿಕ್ ಪಕ್ಷದ ಹುರಿಯಾಳುಗಳಾಗಿದ್ದಾರೆ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ವೈದ್ಯಕೀಯ ಶಿಕ್ಷಣ ಮತ್ತು ಆಡಳಿತೆ ಸಂಬಂಧದ ಕೆಲವು ಸಲಹೆಗಳನ್ನು ಈಗಾಗಲೇ ಕಾರ್ಯಗತಗೊಳಿಸಲಾಗಿದೆ; ಉಳಿದುವನ್ನು ಸರಕಾರ ಪರ್ಯಾಲೋಚಿಸುತ್ತಿದೆ.

ವೈದ್ಯರ ಕೊರತೆಯನ್ನು ನೀಗಿಸಿಕೊಳ್ಳಲು ೧೯೫೬ರಲ್ಲಿ ಪ್ರಾರಂಭಿಸಿದ ಗೌರವ ವೈದ್ಯಕೀಯ ಅಧಿಕಾರಿಗಳ ಪದ್ಧತಿಯು ಸಾಕಷ್ಟು ಜಯಪ್ರದವಾಗಿದೆ ಈ ಪ್ರಣಾಳಿಯು ತೃಪ್ತಿಕರವಾಗಿ ಸಾಗುತ್ತಿದೆಯೆನ್ನಲು ಸಂತೋಷವಾಗುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಪದವೀಧರರು ಉದ್ಯೋಗ ಕೈಗೊಳ್ಳಲು ಸಿದ್ಧರಿಲ್ಲವೆಂದು ಸರಕಾರವು ಕಂಡುಕೊಂಡರೆ, ಲೈಸೆನ್ಸಿಯೇಟ್ ಕೋರ್ಸನ್ನು ಪ್ರಾರಂಭಿಸಲು ಹಿಂಜರಿಯಬಾರದು. ಇವರಲ್ಲಿ ಗ್ರಾಮೀಣ ಆರೋಗ್ಯ ಸೇವೆಗೆ ಅನುಕೂಲವಾಗುವಂತೆ ಪ್ರತ್ಯಕ್ಷ ತರಬೇತಿಗೆ ಪ್ರಾಧಾನ್ಯನೀಯುವ ಅಭ್ಯಾಸ ಪತ್ರಿಕೆಯನ್ನು ಮಾಡಲಾಗುವುದು. ದೇಶದಲ್ಲಿ ಒಂದೇ ವಿಧವಾದ ವೈದಕೀಯ ಶಿಕ್ಷಣವಿರಬೇಕೆಂದು ನಾನು ಒಪ್ಪುತ್ತೇನೆ. ನಮ್ಮ ಗುರಿಯೂ ಇದೇ. ಆದರೆ; ನಮ್ಮ ದೇಶದ ದೈನಂದಿನ ಜೀವನದ ಹೃದಯ ಸ್ಪರ್ಶಿಸತ್ಯತೆಯನ್ನು ಕಂಡು ಕುರುಡರಾಗಿರುವುದು ಸಾಧ್ಯವಿಲ್ಲ ನಾವು ಜನಸಾಮಾನ್ಯರ ಹಿತವನ್ನು ಅಲ್ಲಗಳೆಯುವುದು ಅಸಾಧ್ಯ. ಸರಕಾರವು ಡಿಪ್ಲೊಮಾ ಕೋರ್ಸನ್ನು ತೆರೆದರೂ ವೈದ್ಯಕೀಯ ಪದವೀಧರರ ಅಭಾವ ದೂರವಾಗಿ, ಗ್ರಾಮ ಪ್ರದೇಶಗಳಲ್ಲಿ ಸರಿಯಾದ ವ್ಯವಸ್ಥೆಯಾಗುವ ವರೆಗೆ ಮಾತ್ರ ಅದಿರುವುದೆಂದು ಹೇಳಬಯಸುತ್ತೇನೆ.

(೨೭ನೆಯ ರಾಜ್ಯ ವೈದ್ಯಕ ಸಮ್ಮೇಳನದಲ್ಲಿ ಮಾನ್ಯ ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗಡೆಯವರು ಮಾಡಿದ ಉದ್ಘಾಟನಾ ಭಾಷಣದಿಂದ)

'ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ. ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್. ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಚಾರವರ್ಷ

ಪರ್ಯಾಲೋಚನೀಯ ವಿಚಾರಗಳು

ಗಾಂಧೀಜಿಯವರು ತಾವು ಮೃತ್ಯುಮುಖರಾಗುವುದಕ್ಕೆ ಪೂರ್ವದಲ್ಲಿ ಕಾಂಗ್ರೆಸ್ ಮತ್ತು ಪ್ರಶಾಸನದ ಬಗ್ಗೆ ಕೆಲವೊಂದು ಸಂದೇಹಗಳನ್ನು ಮುಂದಿಟ್ಟಿದ್ದರು; ಆ ಸಂದೇಹಗಳು ಸತ್ಯವಾಗಿರುವ ಈ ಕಾಲದಲ್ಲಿ ಅವನ್ನು ಪರ್ಯಾಲೋಚಿಸುವ ಆವಶ್ಯಕತೆಯಿದೆ.

ಗಾಂಧೀ ಜಯಂತಿಯ ಮಹತ್ವವನ್ನು ನಮ್ಮ ರಾಷ್ಟ್ರನಾಯಕರು ತಿಳಿಯಬೇಕಾದರೆ, ಅವರು ತಮ್ಮ ಎದೆ ಮುಟ್ಟಿಕೊಂಡು ಗಾಂಧೀಜಿಯವರು ತಮ್ಮ ಜೀವನಾಂತ್ಯದ ಸಮಯವೇನು ಹೇಳಿದರೆಂಬುದನ್ನು ತುಸು ಯೋಚಿಸಬೇಕು. ಅವರು ಈ ಮಾತುಗಳನ್ನು ತಮ್ಮ ಬಾಳ್ವೆ ಮುಗಿಯುತ್ತ ಬಂತೆಂದು ತಿಳಿದುಕೊಂಡು ಹೇಳಿರಲಿಲ್ಲವಾದರೂ ಸ್ವಾತಂತ್ರ್ಯ ಲಭಿಸಿದನಂತರ ಅಂದಿದ್ದರು. ಅವರಂದಿದ್ದನ್ನು ಶೀಘ್ರ ಒಪ್ಪಿಕೊಳ್ಳದೆ ಹೋದರೆ, ತಮ್ಮ ಅವಸಾನ ಸಮೀಪವಾಗುತ್ತಿವೆ ಎಂಬ ಅರ್ಥ ಹುದುಗಿತ್ತು.

ಕಾಂಗ್ರೆಸ್ ಸಂಸ್ಥೆಯನ್ನು ರಾಜಕೀಯ ಪಕ್ಷವನ್ನಾಗಿ ಪರಿವರ್ತಿಸಲು ಅದರ ರೂಪ ಬದಲಾಗಬೇಕೆಂದು ಗಾಂಧಿ ನುಡಿದಿದ್ದರು. ಕಾಂಗ್ರೆಸ್ಸು ಕೇವಲ ಅಧಿಕಾರ ಪಡೆಯುವುದಕ್ಕಾಗಿ ಮತ ಬೇಡುತ್ತ ಹೋಗಬಾರದು; ಈ ಲೋಭ ಲಾಲಸೆಯಿಂದ ಅದನ್ನು ಅಧಿಕಾರ ಲಾಲಸೆಯು ಕಬಳಿಸಬಾರದು ಎಂದು ಈ ಸಲಹೆಯನ್ನು ಇತ್ತಿದ್ದರು. ಹದಿಮೂರು ವರ್ಷ ನಂತರ ಈ ಭಯವು ಗೋಚರಿಸತೊಡಗಿದೆ. ಎಲ್ಲ ರಾಜ್ಯಗಳಲ್ಲಿ ಅಧಿಕಾರಕ್ಕಾಗಿ ಕದನ ನಡೆಯತೊಡಗಿದೆ. ಕಾಂಗ್ರೆಸ್ ನಂತಹ ಪವಿತ್ರ ಸಂಸ್ಥೆಗೆ ಅಪಕೀರ್ತಿ ತಟ್ಟತೊಡಗಿದೆ.

ಅಧಿಕಾರ ಲೋಭ ಬೆಳೆಯುತ್ತ ಬಂದಂತೆ ಅಧಿಕಾರ ಪ್ರಾಪ್ತ ಮಂತ್ರಿಗಳ ಸಂಖ್ಯೆಯೂ ಹೆಚ್ಚುತ್ತ ಬರುತ್ತಿವೆ. ಉಳಿದ ಸಾರ್ವಜನಿಕ ಕಾರ್ಯಕರ್ತರಿಂದ ಇವರ ಸಂಪರ್ಕ ಮತ್ತು ಖರ್ಚುಗಳು ಬೇರೆಯಾಗುತ್ತ ನಡೆಯುತ್ತಿವೆ. ಸಾಮಾನ್ಯ ಜನತೆಗಿಂತ ಹೆಚ್ಚಿನ ಸೌಲಭ್ಯ ಇವರಿಗೆ ಲಭಿಸುತ್ತದೆ. ಹೀಗಿರುವಾಗ, ಅಂತಹ ಸ್ಥಾನವನ್ನೂ ಸೌಕರ್ಯಗಳನ್ನೂ ಪಡೆಯಲು ಆಶಿಸುವವರು ಹೆಚ್ಚಾಗುವುದು ಸ್ವಾಭಾವಿಕ. ಇದರಿಂದಾಗಿಯೇ ಗಾಂಧೀಜಿಯವರು ಅಂದು ಕಾಂಗ್ರೆಸ್ ನಾಯಕರನ್ನು ಕರೆದು ಹೇಳಿದ್ದರು: "ಸರಕಾರದಲ್ಲಿ ಅಧಿಕಾರ ಬಯಸುವವರು ಅಧಿಕ ಆರಾಮ ಮತ್ತು ವೇತನದ ಆಸೆಯನ್ನು ಬಿಟ್ಟುಬಿಡಬೇಕು. ಅವರು ಜನಸಾಮಾನ್ಯರಂತೆಯೇ ಇರಬೇಕು. ಮಿತವ್ಯಯದಿಂದಲೇ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕು." ಆದರೆ, ನಮ್ಮ ಮಹಾತ್ಯಾಗಿ ನೇತಾರರಲ್ಲಿಯೂ ಈ ಭಾವನೆ ಮೂಡಲಿಲ್ಲ; ಅವರಮೇಲೆ ಯಾವುದೇ ಅಂಕುಶವೂ ಉಳಿಯಲಿಲ್ಲ.

ಗಾಂಧೀಜಿಯವರು ತಮ್ಮ ಕೊನೆಯ ಗಳಿಗೆಗಳಲ್ಲಿ ಕಾಂಗ್ರೆಸ್ ಮತ್ತು ಸರಕಾರದ ಪ್ರಮುಖ ಮುಂದಾಳುಗಳನ್ನು ಕರೆದು; "ನೀವು ಸರಕಾರದಿಂದ ಹೊರಬಂದು, ಎರಡನೆ ಶ್ರೇಣಿಯ ಕೆಲಸಮಾಡುವವರಿಗೆ ಅದನ್ನು ನಡೆಸ ಬಿಡಿರಿ" ಎಂದು ಉಪದೇಶಿಸಿದ್ದರು. ಈಗ ಸರಕಾರ ಸೂತ್ರವಹಿಸಿದ ಹೆಚ್ಚಿನವರಿಗೆ ಕರೆಯುತ್ತಿದ್ದರು; ಅಧಿಕಾರ ತ್ಯಜಿಸಿ ಹೊರಬನ್ನಿರಿ; ಕಾರ್ಯಮಾಡಬಲ್ಲವರಿಗೆ ಅದನ್ನು ಕೊಡಿರಿ. ಜನತೆಯೊಡನೆ ನಿಕಟ ಸಂಪರ್ಕವನ್ನು ನೀವು ಹೊರಗಿದ್ದುಕೊಂಡೇ ಹೆಚ್ಚಿಸಬಲ್ಲಿರಿ. ನೀವು ಸರಕಾರ ನಡೆಸಲು ಕಳಿಸುವ ಜನರಮೇಲೆ ಅಂಕುಶವನ್ನೂ ಇಟ್ಟುಕೊಳ್ಳಬಲ್ಲಿರಿ. ಅಲ್ಲಿಂದಲೇ ನಿಮ್ಮ ಸಲಹೆಗಳಿಂದ ಸಹಕರಿಸಬಲ್ಲಿರಿ." ೧೯೩೫ರ ಶಾಸನದಂತೆ ೧೯೩೭ರಲ್ಲಿ ಪ್ರಾಂತಗಳಲ್ಲಿ ಕಾಂಗ್ರೆಸ್ಸು ಸರಕಾರ ಸ್ಥಾಪನೆಗೊಂಡಾಗ, ಅವುಗಳಿಗೆ ಸೂಕ್ತ ಮಾರ್ಗದರ್ಶನವನ್ನು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್ ಮಾಡಿದಂತೆ ಈ ವ್ಯವಸ್ಥೆಯಿಂದಾಗುತ್ತಿತ್ತು. ಆದರೆ, ದುರ್ಭಾಗ್ಯವಶದಿಂದ ಗಾಂಧೀಜಿಯವರ ಈ ಆಸೆಯೂ ಫಲಿಸಲಿಲ್ಲ. "ಇಂದು ಕಾಂಗ್ರೆಸ್‌ನಲ್ಲಿ ಶಿಸ್ತು ಸರಿಯಾಗಿಲ್ಲ; ಕಾಂಗ್ರೆಸಿಗರಲ್ಲಿ ಶಾಂತಿಯಿಲ್ಲ, ಅಧಿಕಾರ ಸಂಪಾದನೆಯಲ್ಲೇ ಹೊಡೆದಾಡಿಕೊಳ್ಳುತ್ತಾರೆ" ಎಂದು ಇಂದಿಗೂ ನಮ್ಮ ಪ್ರಧಾನಿಯವರು ಹೇಳುತ್ತ ಬರುವಷ್ಟು ದುಸ್ಥಿತಿಯುಂಟಾಗಿದೆ.

ಕಾಂಗ್ರೆಸ್ ನಾಯಕರು ಮೇಲೆ ಸೂಚಿಸಿದ ಮೂರು ಮಾತುಗಳನ್ನು ಅವಶ್ಯ ಗಮನಿಸಬೇಕು. ಮಹಾನಾಯಕ ಸ್ಥಾನದಲ್ಲಿರುವವರು ಇವನ್ನು ಸ್ಮರಿಸಿಕೊಂಡು, ಈಗ ತಾವು ಮಾಡುತ್ತಿರುವ ಅಪರಾಧಗಳನ್ನು ತಿದ್ದಿಕೊಳ್ಳಲು ಪ್ರಯತ್ನಿಸದಿದ್ದರೆ, ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಬಹುದು. ತೃತೀಯ ಪಂಚವಾರ್ಷಿಕ ಯೋಜನೆಯ ಯಶಸ್ವಿತೆಯೂ ಕೆಟ್ಟು ಹೋಗಬಹುದು.

ಸ್ವರಾಜ್ಯಾನಂತರ, ಸರಕಾರವು ತನ್ನ ಸರಕಾರಿ ಕೆಲಸಗಳಲ್ಲಿ ಸಿಕ್ಕಿ ಕೊಂಡಿರುತ್ತದೆ; ಸರಕಾರಿ ಆಡಳಿತೆಯಲ್ಲಿ ಪ್ರಮುಖ ನಾಯಕರು ಇದ್ದು ಜನತಾ ಸಂಪರ್ಕವೂ ಹ್ರಾಸಗೊಳ್ಳುತ್ತದೆ; ನಾಯಕರಲ್ಲಿ ಅಧಿಕಾರವ್ಯಾಮೋಹ ಬೆಳೆಯುತ್ತದೆ—ಎಂಬುದರ ಬಗ್ಗೆ ಗಾಂಧಿಯವರು ಅಶಾಂತರಾಗಿದ್ದರು. ಇದೇ ವಿಚಾರವನ್ನು ೧೯೪೮ರ ಫೆಬ್ರವರಿಯಲ್ಲಿ ವಾರ್ಧಾದಲ್ಲಿ ಸೇರಲಿದ್ದ ಸರ್ವಸೇವಾ ಸಂಘ ಮತ್ತು ಕಾಂಗ್ರೆಸ್ ನಾಯಕರ ಸಭೆಯ ಮುಂದಿಡಲು ಅವರು ತೆರಳಲಿದ್ದರು. ರಾಜೇಂದ್ರ ಪ್ರಸಾದರು ವಾರ್ಧಾಕ್ಕೆ ಆಗಮಿಸಿದ ದಿನವೇ ಅತ್ತ ಗಾಂಧಿಯವರ ಕೊಲೆ ನಡೆಯಿತು! ರಾಜೇಂದ್ರ ಪ್ರಸಾದರು ಆ ವೇಳೆ ವಾರ್ಧಾದಲ್ಲಿಯೇ ಗಾಂಧೀಜಿಯವರ ವಿಚಾರಗಳನ್ನು ಸಭೆಯ ಮುಂದೆ ಇಟ್ಟರು. ವಿನೋಬಾಜಿಯವರು ಸರ್ವಸೇವಾ ಸಂಘದ ಅಧ್ಯಕ್ಷ ಸ್ಥಾನವನ್ನು ವಹಿಸಿ ಅಂತಹ ಮಾರ್ಗದರ್ಶನ ಮಾಡುವುದಕ್ಕೆ ಕೇಳಿಕೊಂಡರು. ಆದರೆ, ಪರಿಸ್ಥಿತಿಯ ಒತ್ತಡದಿಂದ, ಪ್ರಸಾದರು ರಾಷ್ಟ್ರಪತಿಯ ಹುದ್ದೆಯನ್ನೇ ಸ್ವೀಕರಿಸಬೇಕಾಗಿ ಬಂತು. ಗಾಂಧೀಜಿಯವರ ಅನುಯಾಯಿಗಳೆನಿಸಿಕೊಂಡವರೆಲ್ಲರೂ ಹೇಗೆಯೋ ಒಂದೊಂದು ಕಾರಣಗಳಿಂದಾಗಿ ಅಧಿಕಾರಕ್ಕೇನೇ ಅಂಟಿಕೊಳ್ಳಬೇಕಾಯಿತು. "ನೀನು ನನ್ನ ಭಕ್ತನೆಂದು ಹೇಳುತ್ತಿ. ಮುಂಜಾನೆಯ ಕೋಳಿ ಕೂಗುವುದಕ್ಕೆ ಮೊದಲೇ ನನ್ನ ಬಗ್ಗಿನ ವಿಚಾರಗಳಿಗೆ ತಿಲಾಂಜಲಿಯಿತ್ತು ಅವನ್ನು ತಿರಸ್ಕರಿಸಬಲ್ಲೆ" ಎಂದು ಯೇಸು ಕ್ರಿಸ್ತ ಹೇಳಿದ್ದನಂತೆ. ಹಾಗೆಯೇ ಈ ಗಾಂಧಿಯ ಅಪ್ಪಟ ಶಿಷ್ಯರ ಕತೆಯಾಯಿತು. ಗಾಂಧಿ ಶಿಷ್ಯರೆನ್ನುತ್ತಿರುವ ನಾವು ಗುರುವಿನ ಮರಣಾನಂತರ ಅವರ ಒಂದೊಂದೇ ವಿಚಾರವನ್ನು ತೊರೆಯುತ್ತಿದ್ದೇವೆ. ನಮ್ಮ ಜೀವನಾವಧಿಯಲ್ಲಿ ಅವನ್ನು ಗ್ರಹಿಸಬಲ್ಲೆವೋ ಇಲ್ಲವೋ ಹೇಳಬರುವಂತಿಲ್ಲ. ಕ್ರಿಸ್ತನ ಭಕ್ತರು ಆಗ ಏನೋ ಮಾಡಿದರು ಆದರೆ, ಮುಂದೆ, ಆತನ ವಿಚಾರಗಳು ಬಹು ಪ್ರಚಾರಗೊಂಡುವು; ಇಡಿ ಪ್ರಪಂಚದಲ್ಲಿ ಹರಡಿದುವು. ಇದರಿಂದಾಗಿ ನಾವೂ ಒಂದು ವಿಷಯದಲ್ಲಿ ವಿಶ್ವಾಸವಿಡಬಹುದು; ನಾವಿಂದು ಯಾವುದೇ ರೀತಿಯಲ್ಲಿ ಗಾಂಧೀಯವರ ವಿಚಾರಗಳಿಂದ ದೂರವಿರಲಿ, ಅವುಗಳಲ್ಲಿ ಸತ್ಯವಡಗಿರುವುದಾದರೆ, ಶಕ್ತಿಯಿರುವುದಾದರೆ ಗಾಂಧೀ ವಿಚಾರಗಳ ಪ್ರಚಾರವು ಆಗಬಹುದು. ನಾವು ಅವನ್ನು ಸ್ವೀಕರಿಸಲಿ, ತಿರಸ್ಕರಿಸಲಿ, ಅವು ಸದಾ ಜೀವಂತವಾಗಿರುವುವು; ಅಖಂಡ ಪ್ರಪಂಚಕ್ಕೆ ಜೀವನದಾನ ಮಾಡುವುವು.

ಇದರಂತೆಯೇ ಗಾಂಧೀಜಿಯವರು ಕಾಂಗ್ರೆಸ್ಸಿಗೆ, ಕಾಂಗ್ರೆಸ್‌ನ ನಾಯಕರಿಗೆ ಮತ್ತು ಸರಕಾರ ಚಲಾಯಿಸುವ ವಿಧಾನದ ಬಗ್ಗೆ ಆಡಿದ ಮಾತುಗಳೂ ಸತ್ಯವಾಗುವ ಕಾಲ ಬಂದೀತು. ಇಂದು ಕಾಂಗ್ರೆಸ್ಸು ಆಧಾರ ಮತ್ತು ಆಹಾರಾಭಾವದಿಂದ ಡೋಲಾಯಮಾನವಾಗಿದೆ. ಇದಕ್ಕೆ ಆಧಾರ ಮತ್ತು ಆಹಾರಗಳು ಥಟ್ಟನೆ ದೊರೆಯದೆ ಹೋದರೂ ಕತ್ತಲೆ ಹರಡಲಾರದು; ಏಕೆಂದರೆ, ಗಾಂಧೀಜಿಯವರಂತಹ ಪವಿತ್ರಾತ್ಮರು ಸಾಕಷ್ಟು ಪ್ರಕಾಶ ಮೊದಲೇ ಬೀರಿದ್ದಾರೆ, ಅವರ ಆಶೀರ್ವಾದ ಬಲವೂ ಅದಕ್ಕಿದೆ. ನಮ್ಮ ಕಾಂಗ್ರೆಸ್ ನಾಯಕರು ಗಾಂಧೀಜಯಂತಿಯನ್ನು ಮಾತ್ರ ಆಚರಿಸಿ ತೃಪ್ತರಾಗಲಾರರು; ಗಾಂಧೀಜಿಯವರ ಆದರ್ಶವನ್ನು ಸದಾಸ್ಮರಣೆಯಲ್ಲಿಟ್ಟು ಅವರ ವಿಚಾರಗಳನ್ನು ಮನನಮಾಡಿ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಸರಿಯಾಗಿ ನಡೆಯುವ ಕಾಲವೂ ಬರಬಹುದು; ಬರತ್ತದೆ.

(ಆಧಾರದಿಂದ)

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—
1ರಿಂದ 4 ತಿಂಗಳ ವರೆಗೆ 4%
5 ,, 12 ,, 4¼%
13 ,, 24 ,, 4½%
ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ½%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ,
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಹರ್ಷ ಬಾಲಗ್ರಹ ತೈಲ
HARSHA BALAGRAHA TAILA
A Reputed Remedy for Fits.
ಬಾಲಗ್ರಹ ರೋಗಕ್ಕೆ
ಒಂದು ಖಾತ್ರಿಯಾದ ಮದ್ದು.
ಉಪಯೋಗದ ಕ್ರಮ ಸೀಸೆಯಲ್ಲಿದೆ.
ದ. ಕ. ಜಿಲ್ಲೆಯನ್ನು ಬಿಟ್ಟು ಉಳಿದ ಎಲ್ಲಾ ಕಡೆಗಳಿಗೂ ಏಜಂಟರು ಬೇಕು.
ಬೆಲೆ: ತೊಲೆ ಬಾಟ್ಲ 0—6—0. ವ್ಯಾಪಾರಸ್ಥರಿಗೆ ಕಮಿಷನ್.
ಸ್ಟಾಕಿಸ್ಟರು:-- U. Venkatesh Jogappa Shanbhogue & Sons, Udipi.
V. V. Shenoy & Sons, Karkala.

ಕಾಮ ವಿಜ್ಞಾನದ ಮಾಹಿತಿಗಾಗಿ ಡಾ| ಎಂ. ಗೋಪಾಲಕೃಷ್ಣ ರಾಯರಿಂದ ಸಂಪಾದಿತವಾದ
ಕಲಿಯುಗ
ಸಂಪುಟವನ್ನು ಅವಶ್ಯ ಓದಿರಿ.
ಉತ್ತಮವಾಗಿ ಬೈಂಡು ಮಾಡಿದ ವರ್ಷ, ವರ್ಷಗಳ ಸಂಚಿಕೆಗಳು.
ನೂತನ ದಂಪತಿಗಳಿಗಂತೂ ಬೇಕಾದ ಅಪೂರ್ವ ಸಂಗ್ರಹ.
ಪ್ರತಿ ಸಂಪುಟದ ಬೆಲೆ ರೂ. 4=50
ಅಂಚೆ ವೆಚ್ಚ ರೂ. 1=50.
ಕೆಲವೇ ಪ್ರತಿಗಳಿವೆ. ತ್ವರೆ ಮಾಡಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.



ಸರ್ವೆ ಸಾಧನಗಳನ್ನು ನೌಕರನೊಬ್ಬನು ಪರಿಶೀಲಿಸುತಿದ್ದಾನೆ.

ಪುಸ್ತಕ ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.—ಸಂ. ನ.)

ಮಣಿಮಾಲೆ—ಲೇಖಕರು: ಶ್ರೀ ನಡುಮನೆ ಸುಬ್ಬಣ್ಣ ರೈ. ಪ್ರಕಾಶಕರು: ಬಾಲಸಾಹಿತ್ಯ ಮಂಡಲ ಲಿಮಿಟೆಡ್, ಮಂಗಳೂರು. ಪುಟಗಳು: ೮೭. ಬೆಲೆ. ರೂ. ೧.

ಭಾವಿ ಜನಾಂಗವಾದ ಇಂದಿನ ಮಕ್ಕಳ ಗುಣನಡತೆಗಳು ಉತ್ತಮವೆನಿಸುವುದಕ್ಕೆ, ಅವರ ಭಾವ ಪರಿಶುದ್ಧವಾಗುವುದಕ್ಕೆ ಹಿಂದಿನ ಲೋಕೋತ್ತಮ ಪುರುಷರ ಆದರ್ಶ ಚರಿತ್ರೆಯನ್ನು ಮನನಮಾಡುವುದು ಅತ್ಯವಶ್ಯ. ಇಂಥವರ ಗುಣಶೀಲಗಳ ಅಧ್ಯಯನಕ್ಕೆ ಅನುಕೂಲವಾಗುವಂತೆ ಕೆಲ ಮಹನೀಯರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಸಂಗ್ರಹಿಸುವ ಪ್ರಯತ್ನವನ್ನು ಈ ಕಿರುಹೊತ್ತಗೆಯಲ್ಲಿ ಮಾಡಲಾಗಿದೆ. ನಮ್ಮ ದೇಶದ ೧೪ ಪುಣ್ಯಚರಿತರ ಪರಿಚಯವು ಇಲ್ಲಿದೆ. ಇದರಲ್ಲಿ ಗೌತಮಬುದ್ಧನೊಬ್ಬನನ್ನು ಉಳಿದರೆ, ಉಳಿದ ಮಹಾವ್ಯಕ್ತಿಗಳು ನಮ್ಮ ಸಮಕಾಲೀನರು ಅಥವಾ ನಮ್ಮ ಕಾಲಕ್ಕೆ ಸಮೀಪವಿರುವವರು. ಎಲ್ಲಕ್ಕಿಂತ ಹೆಚ್ಚಾಗಿ ಇಲ್ಲಿ ರಾಜಕಾರಣಿಗಳಿಗೆ ವಿಶೇಷ ಪ್ರಾಧಾನ್ಯವನ್ನು ಕೊಟ್ಟಿರುವಂತೆ ತೋರುತ್ತದೆ. ಭಾರತೀಯ ಮಹಾವಿಜ್ಞಾನಿ ಡಾ| ಸಿ. ವಿ. ರಾಮನ್, ರಾಷ್ಟ್ರಪಿತ ಮಹಾತ್ಮಾ ಗಾಂಧಿ, ಸರ್ವೋದಯ ನಾಯಕ ವಿನೋಬಾ ಭಾವೆ, ಪುರುಷ ರಾಮಕೃಷ್ಣ ಪರಮಹಂಸ, ದಾರ್ಶನಿಕ ರಾಧಾಕೃಷ್ಣನ್—ಇವರನ್ನುಳಿದರೆ, ಬೇರೆಯವರೆಲ್ಲ ರಾಜಕಾರಣಿಗಳೇ ಆಗಿರುತ್ತಾರೆ.

ಕೇವಲ ಚರಿತ್ರೆಯನ್ನು ತಿಳಿಸಿ, ಅವರ ಗುಣಶೀಲಗಳನ್ನು ಅನುಸರಿಸುವ ಪ್ರೇರಣೆ ನೀಡುವುದು ಮಾತ್ರ ಈ ಪುಸ್ತಕದ ಉದ್ದೇಶವಲ್ಲ. ಜತೆಗೆ ಭಾಷಾ ಶುದ್ಧತೆ ಹಾಗೂ ಪ್ರೌಢಿಮೆಯ ಮತ್ತು ಸಾಹಿತ್ಯಾಭಿರುಚಿಯ ಬಗ್ಗೆಯೂ ಆಸಕ್ತಿ ಹುಟ್ಟುವಂತೆ ಮಾಡುವುದನ್ನೂ ಇಲ್ಲಿ ಗಮನದಲ್ಲಿಟ್ಟುಕೊಳ್ಳಲಾಗಿದೆ. ಇದರಿಂದಾಗಿ, ವಿದ್ಯಾರ್ಥಿಗಳಿಗೆ, ಮುಖ್ಯವಾಗಿ ಹೈಸ್ಕೂಲು ಮೆಟ್ಟಿದವರಿಗೆ ಅನುಕೂಲವಾಗಿದೆ; ಅತ್ಯುಪಯುಕ್ತವಾಗಿದೆ. "ನೂತನ ಚಿತ್ರಗಳ ಮತ್ತು ಶಿಕ್ಷೆಯ ಮರಣದಿಂದ ರಮಾಬಾಯಿಯವರ ಶೋಕಾಂಬುಧಿಯು ಅಲ್ಲೋಲ ಕಲ್ಲೋಲವಾಯಿತು"—(ಪುಟ ೩೩) ಎಂಬ ವಾಕ್ಯವೊಂದು ಶ್ರೀ ರೈಯವರ ಪ್ರಗಲ್ಭ ಭಾಷಾ ಶೈಲಿಗೆ ಉದಾಹರಣೆ ಸಾಕು. ಇದು ಯಕ್ಷಗಾನದ ಗದ್ಯಗಾರಿಕೆಯ ಮಿಂಚು ಕೆಲವೆಡೆ ತುಸು ಕ್ಲಿಷ್ಟವಾಗಿ ಕಾಣುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಪುಸ್ತಕದ ಕೊನೆಯಲ್ಲಿ ಎಲ್ಲ ಅಭ್ಯಾಸಗಳನ್ನೂ ಸೇರಿಸಿರುವುದರಿಂದ ಪಠ್ಯಪುಸ್ತಕದ ಉದ್ದೇಶದಿಂದಲೇ ಮುದ್ರಣಗೊಂಡುದಿದೆಂದು ತಾನಾಗಿಯೇ ತಿಳಿಯುವುದು.

ಭಾರವಿ ಮಹಾಕವಿಯ ಕಿರಾತಾರ್ಜುನೀಯ ಕಥೆ—ಕಥಿಸಿದವರು: ಶ್ರೀ ಕೃಷ್ಣ ಭಟ್ಟ, ಪೆರ್ಲ. ಪ್ರಕಾಶಕರು: ಪೊಪ್ಯುಲರ್ ನ್ಯೂಸ್ ಏಜನ್ಸಿ, ಪುತ್ತೂರು, ದ. ಕ. ಪುಟಗಳು: ೭೪. ಬೆಲೆ: ರೂ. ೦-೮೦.

"ಉಪಮಾ ಕಾಲಿದಾಸಸ್ಯ ಭಾರವೇರರ್ಥಗೌರವಂ" ಎಂಬ ಪ್ರಶಂಸೆ ಸಂಸ್ಕೃತ ಸಾಹಿತ್ಯದಲ್ಲಿದೆ. ಇಂಥ ಸ್ತುತ್ಯಾರ್ಹ ಭಾರವಿಯ 'ಕಿರಾತಾರ್ಜುನೀಯ" ಮಹಾಕಾವ್ಯವು ಸಂಸ್ಕೃತ ಸಾಹಿತ್ಯದಲ್ಲಿ ತನ್ನದೇ ಆದ ಗಣನೀಯ ಸ್ಥಾನವನ್ನು ಗಳಿಸಿದೆ. ಮಹಾಭಾರತದಲ್ಲಿನ ಅರಣ್ಯಪರ್ವದ ಇಂದ್ರಕೀಲಕ ಪ್ರಕರಣವೇ ಕಥಾವಸ್ತುವಾಗಿರುವ ಈ ಮಹಾಕಾವ್ಯದ ಕಥೆಯು 'ಕಿರಾತಾರ್ಜುನೀಯ'ವೇ ಮೊದಲಾದ ಒಂದೆರಡು ಪುಸ್ತಕಗಳು ಮೊದಲೇ ಪ್ರಕಟಗೊಂಡಿವೆ. ಇದೀಗ ಇದೇ ಕಥೆಯನ್ನು ಶ್ರೀ ಕೃಷ್ಣ ಭಟ್ಟರು ಸಂಕ್ಷಿಪ್ತವಾಗಿ ನಿರೂಪಿಸುವ ಹೊತ್ತಗೆಯನ್ನು ರಚಿಸಿದ್ದಾರೆ.

ಮಹಾಕಾವ್ಯದಲ್ಲಿ ಅನಾವಶ್ಯಕವಾದ ವಿವಿಧ ವರ್ಣನೆಗಳಿಗೆ ವ್ಯತ್ಯಯವುಂಟಾಗದಂತೆ, ಮೂಲಕವಿಯ ಅಭಿಪ್ರಾಯಕ್ಕೆ ಆತಂಕವೊದಗದಂತೆ, ಕಥಾ ಭಾಗಕ್ಕೆ ಧಕ್ಕೆಯೊದಗದಂತೆ ಸಂಗ್ರಹವಾಗಿ ನಿರೂಪಿಸಿದ ಶ್ರೀ ಭಟ್ಟರ ಚಾತುರ್ಯ ಪ್ರಶಂಸನೀಯ. ಭಾರವಿಯ ಮಹಾಕಾವ್ಯದ ಉತ್ತುಂಗ ವಿಚಾರಗಳ ಸೂಕ್ಷ್ಮ ಪರಿಚಯವನ್ನು ಕನ್ನಡದಲ್ಲಿ ಮಾಡಿಕೊಡುವುದೇ ಈ ಪ್ರಯತ್ನದ ಪ್ರಧಾನ ಉದ್ದೇಶವಾಗಿರುವುದರಿಂದ ಕಥೆಗಿಂತ ವರ್ಣನೆ, ಉಪಮೆ, ಉತ್ಪ್ರೇಕ್ಷೆ, ರೂಪಕ ಮೊದಲಾದ ಕಲ್ಪನಾ ವಿಲಾಸಕ್ಕೇನೇ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ವರ್ಣನಾ ವೈಖರಿಯನ್ನು ಪುಸ್ತಕದ ಆಕಾರಕ್ಕನುಗುಣವಾಗಿ ಸಂಕೋಚಪಡಿಸಲಾಗಿದೆ. ಸಂಸ್ಕೃತ ಕಾವ್ಯಕಥೆಯಾದ ಕಾರಣದಿಂದ ಸಂಸ್ಕೃತ ಪದಗಳ ಪ್ರಚುರತೆಯು ಎಲ್ಲೆಲ್ಲಿಯೂ ಬರುತ್ತಿದೆ. ಅರ್ಜುನ—ಕಿರಾತ ದೂತ; ಅರ್ಜುನ—ಕಿರಾತರ ಸಂಭಾಷಣೆಯಲ್ಲಿ ಮೂಲದ ನಾಟಕೀಯತೆಯೂ ಎದ್ದು ತೋರುತ್ತದೆ.

"ಭೂವ್ಯೋಮಗಳನ್ನು ವ್ಯಾಪಿಸುತ್ತಾ, ಬಾಣಗಳು ಬಂದು ಬೀಳುತ್ತಿರಲು, ಧನುಸ್ಸನ್ನು ಎತ್ತಿ ಹಿಡಿದು ಟಂಕಾರ ಮಾಡುತ್ತಾ ಕ್ರುದ್ಧನಾಗಿ ನಿಂತ ಅರ್ಜುನನ ದೃಷ್ಟಿಯು ವಿನಾಶವನ್ನು ಸೂಚಿಸುವ ಉಲ್ಕೆಯಂತೆ ಕಿರಾತನ ಪಡೆಯ ಮೇಲೆ ಬಿತ್ತು." (ಪುಟ ೫೧) ಈ ಮೊದಲಿನ ವಾಕ್ಯಗಳಲ್ಲಿ ಶ್ರೀ ಭಟ್ಟರು ಬಳಸಿದ ಶೈಲಿಯು ಮೂಲದ ಅನುಸರಣೆ, ಅಲಂಕಾರ ಪ್ರಯೋಗಗಳೊಡನೆ ನಮ್ಮ ಕಣ್ಣಮುಂದೆ ಮೂರ್ತಿಮತ್ತಾಗಿ ನಿಲ್ಲುತ್ತದೆ. ಸಂಸ್ಕೃತ ಮಹಾಕಾವ್ಯಗಳ ಅಧ್ಯಯನ ಮಾಡಿ ಅವುಗಳ ಗುಣಗ್ರಹಿಸುವ ಶಕ್ತಿ ಜನತೆಯಲ್ಲಿ ಹ್ರಸವಾಗುತ್ತಿರುವಾಗ, ಅವುಗಳ ಕಥೆಯನ್ನಾದರೂ ತಿಳಿದುಕೊಳ್ಳುವ ಸೌಕರ್ಯ ಒದಗುವುದು ಅಪೇಕ್ಷಣೀಯವಾಗಿದೆ. ಇಂತಹ ಪಳೆಯ ಕಾವ್ಯಗಳ ಕಥೆಯನ್ನು ಸಂಕ್ಷಿಪ್ತವಾಗಿಯಾದರೂ ಬರೆಯುವುದರಿಂದ ಅವುಗಳ ಸಾರ ಸವಿಯುವ ಅವಕಾಶವಾದರೂ ಉಳಿದೀತು; ಅವನ್ನು ಬರೆದ ಕವಿಗಳ ಬಗೆ ನಮ್ಮಲ್ಲಿ ಆದರಾಭಿಮಾನಗಳು ಬೆಳೆದರೂ ಬೆಳೆದೀತು. "ಸಂಸ್ಕೃತ ಕಿರಾತಾರ್ಜುನೀಯ"ದ ಸವಿಯನ್ನು ಸವಿಯಲಾರದವರು ಅದರ ಕೋಳ್ಮಿಂಚೊಂದನ್ನು ಈ ಪುಸ್ತಕದಲ್ಲಿ ಕಾಣಬಹುದು.

—ಗೋರಾ.

ಮೆಟ್ರಿಕ್ ತೂಕ ಮತ್ತು ಅಳತೆಗಳು

ಇದಕ್ಕೆ ಸಂಬಂಧಪಟ್ಟ ಬೂಕ್ ಸಹ ಸಿಗುತ್ತವೆ.



ದೊರೆಯುವ ಸ್ಥಳ: ಲೈಸೆನ್ಸ್ ಡೀಲರ್ಸ್ ಲೈಸನ್ಸ್ ಮತ್ತು ರಿಪೇರರ್ಸ್ ಲೈಸನ್ಸ್ ಸಹ ಪಡೆದಿರುತ್ತೇವೆ.

ಕೆ. ಆರ್. ಗುಂಡು ನಾಯಕ್ & ಸನ್ಸ್

ಕಾರ್ ಸ್ಟ್ರೀಟ್, ಉಡುಪಿ (ಸೌ. ಕೆ.)

ಹೊಸತಾಗಿ ತೆರೆದಿರುವ ನಮ್ಮ ಹಿಂದುಗಡೆಯಲ್ಲಿರುವ ಗುಂಡು ನಾಯಕ್ಸ್ ಫೇಶನ್ ಎಂಪೋರಿಯಂ—ಜವಳಿ ಅಂಗಡಿಯನ್ನು ಸಂದರ್ಶಿಸಿರಿ.

ಮಕ್ಕಳ ಮಂಟಪ

ಟವರ್ ಆಫ್ ಲಂಡನ್

ಇಂಗ್ಲೆಂಡಿನಲ್ಲಿಯೇ ಅತಿ ಸುಂದರವಾದ ಈ ಟವರನ್ನು ಪೂರ್ಣರೂಪಕ್ಕೆ ತರುವಲ್ಲಿ ಅನೇಕ ಪರಿವಾರಗಳ ಕೈ ದುಡಿದಿದೆ. ಇದರ ಇತಿಹಾಸವನ್ನು ಎಲ್ಲರೂ ತಿಳಿದುಕೊಳ್ಳುವುದು ಆವಶ್ಯ.

ಶ್ರೀ "ಸಿರಿಪತಿ"

ಇಂಗ್ಲೆಂಡ ದೇಶದಲ್ಲಿ "ಟೋವರ್-ಆಫ್-ಲಂಡನ್" ಅಂದಿನಿಂದಿಂದಿಂಗೂ ಪ್ರಸಿದ್ಧವಾಗಿದೆ. ಹಿಂದಿನ ಕಾಲದಲ್ಲಿ ವಿದೇಶಗಳಿಂದ ಲಂಡನ್ ನಗರ ರಕ್ಷಿಸಲು ಇದರಲ್ಲಿ ಸೈನ್ಯವನ್ನಿಟ್ಟಿದ್ದರು. ಈ ಗೋಪುರದ ಮೇಲೆ ನಿಂತು ನೋಡಿದರೆ—ಲಂಡನ್ ನಗರದಲ್ಲಿ ಹೊರಗಿನಿಂದ ಬರುವ ಸೈನ್ಯವನ್ನು ಈಕ್ಷಿಸಬಹುದಾಗಿತ್ತು! ಎತ್ತರ ಸ್ಥಳದಲ್ಲಿದ್ದ ಈ ಸ್ಥಳ ನಯನಾನಂದಕರವೂ ಆಗಿದೆ.

ಇದರ ಮೊದಲನೇ ಗೋಪುರ ಅಂದರೆ ಮುಂದೆ ಕಾಣುವ—ಬಿಳೇ ಗೋಪುರ (WhiteTower)ವನ್ನು (William) ವಿಲಿಯಮ್ ಎನ್ನುವ ಅಂದಿನ ರಾಜನು ಕಟ್ಟಿಸಿದನು. ಆ ಮೊದಲು ಇದೊಂದು ಕೋಟೆಯಂತೆ ಉಪಯೋಗಿಸಲ್ಪಡುತ್ತಿತ್ತು! ಅನಂತರ ಬಂದ ರಾಜರು ಸುತ್ತಲಿನ ಭಾಗಗಳನ್ನು ಕಟ್ಟಿಸಿದರು.

ಕ್ರಿ. ಶ. ೧೨೧೬ರಲ್ಲಿ ಮೂರನೇ ಹೆನ್ರಿ ಎನ್ನುವವನು ಇನ್ನುಳಿದ ಮುಖ್ಯ ದ್ವಾರಗಳನ್ನೆಲ್ಲ ಕಟ್ಟಿಸಿದನು. ಆದರೆ ಅವನು ಕಟ್ಟಿಸಿದ ಕೆಲ ದಿನಗಳಲ್ಲಿಯೇ ಅವು ಉರುಳಿದವು. ಅವನ ಮರು ಪ್ರಯತ್ನವೂ ಫಲಿಸಲಿಲ್ಲ! ಅವನು ಮೂರನೇ ಬಾರಿ ಪ್ರಯತ್ನಿಸಿ ಯಶಸ್ವಿಯಾಗಿ ಇದರ ಉಳಿದೆಲ್ಲ ಭಾಗಗಳನ್ನು ಕಟ್ಟಿಸಿದನು.

ತನ್ನಂತರ ಇದನ್ನು ಜೈಲಖಾನೆಯಂತೆ ಉಪಯೋಗಿಸಲಾಯಿತು!—ಸೊರ್‌ಪ್ರೋಕ್‌ದ ಧರ್ಮಗುರುಗಳನ್ನು ಜೈಲಿನಲ್ಲಿರಿಸಿದುದು ಇಲ್ಲಿಯೇ! ಈ ಟೋವರ್-ಆಫ್-ಲಂಡನ್ ಅಷ್ಟೊಂದು ಭದ್ರವಾಗಿಲ್ಲವೆಂದು ತಿಳಿದುದು...ಅವರು ತಪ್ಪಿಸಿಕೊಂಡ ನಂತರ! ಸೊರ್‌ಪೋಕ್‌ದ ಧರ್ಮಗುರುಗಳನ್ನು ಸೆರೆ ಬಿಡಿಸಲು....ಕುಡಿಯುವ ಸಾರಾಯಿ ಕುಜವೆಯಲ್ಲಿ ಹಗ್ಗವನ್ನು ಹಾಕಿ ಒಳಗೆ ಕಳಿಸಲಾಗಿ...ಕುಡಿದು ಮತ್ತರಾದ ಕಾವಲುಗಾರರಿಂದ ತಪ್ಪಿಸಿ, ಹಗ್ಗವನ್ನು ಟೋವರ್‌ದಲ್ಲಿಯ ಕಿಡಕಿಗೆ ಕಟ್ಟಿ ಅದರಾಧಾರದಿಂದ ಹೊರಗೆ ಬಂದಿದ್ದರು! ಬಿಷಪರು...ತಪ್ಪಿಸಿಕೊಂಡ ವಿಷಯ ರಾಜನಿಗೆ ತಿಳಿದಾನಂತರ ಜೈಲಖಾನೆಯಾದ ಈ ಟೋವರ್—ಪ್ರೇಕ್ಷಣೀಯ ಸ್ಥಳವಾಗಿ ಉಳಿಯಿತು!

ರಾಜಾ, ಸ್ಟೆಫ್ನ್‌ನಿಂದ ಅನ್ ಮಹಾರಾಣಿಯವರ ಕಾಲದ ವರೆಗೆ ಇದು ಅರಸು ಮನೆಯವರ ವಾಸ ಸ್ಥಳವಾಯಿತು. ಇಲ್ಲಿಯ ವಸ್ತು ಸಂಗ್ರಹಾಲಯವು ಪ್ರತಿ ರವಿವಾರ—ಲಂಡನ್ ಜನತೆಯ ಪ್ರೇಕ್ಷಣೀಯ ಸ್ಥಳ!—ಇಂಗ್ಲಂಡೇತರ ರಾಜಯೋದ್ಧರು–ಈ ಟೋವರ್‌ನಲ್ಲಿ ಜೈಲುವಾಸದಲ್ಲಿದ್ದು–ಮಡಿದಾ ನಂತರ–ಕುರುಹಿಗಾಗಿ ಇರಿಸಿದ ವಿಗ್ರಹಗಳಿವೆ! ಇದರಲ್ಲಿ ಸೆಕ್ಷನ್ ಜನಾಂಗದ ಕಾಲದ ಗುರುತುಗಳಿವೆ-ಆದರೆ ಈ ಗೋಪುರದ ಮಧ್ಯಭಾಗ (ಪ್ರಮುಖ ಭಾಗ) ಯಾರು ಕಟ್ಟಿಸಿದರೆಂಬುದು ಇನ್ನೂ ಅಧಿಕೃತವಾಗಿ ತಿಳಿದಿರುವದಿಲ್ಲ. ಇತ್ತಲಾಗಿನ ಬರಹಗಾರರು. ಇದನ್ನು ಜ್ಯೂಲಿಯಸ್ ಸೀಝರ್ ಎನ್ನುವವನು ಕಟ್ಟಿಸಿದನು. ಇದನ್ನು ರೋಮನಗರದವರ ಕೋಟೆ—ಎಂತ ಕರೆದನೆನ್ನುವರು. ಆದರೆ ಇದಕ್ಕೆ ಅಧಿಕೃತ ಲೇಖಗಳಲ್ಲಿಯೂ ಕಂಡುಬರುವದಿಲ್ಲ. ಆದರೆ ಕೂಲಂಕಷವಾಗಿ ಇಲ್ಲಿಯ ಕೆತ್ತನೆಯ ಕೆಲಸ ನೋಡಿದರೆ ಅದಕ್ಕೂ ಬಹು ಪುರಾತನ ಕೃತಿಗಳಿವೆ! ಅಲ್ಲದೆ ಯುಗಾಂತರದ ಹಿಂದಿನ ಭಾಷೆಗಳಿವೆ!-ಆ ಕಾಲದಲ್ಲಿ ಇದನ್ನು ಯಾವ ಬಗ್ಗೆ ಉಪಯೋಗಿಸಲಾಗುತ್ತೆಂಬ ಬಗ್ಗೆ ಯಾವ ಉಲ್ಲೇಖವೂ ಕಾಣಿಸುವದಿಲ್ಲ!

(ಸಂಗ್ರಹಿಸಿದ್ದು)

NAVAYUGA
REGD. NO. M. 3619

UDIPI, THURSDAY
13-10-1960

LICENSE NO. 31
Licensed to Post without Prepaymen

ಕಲಾಕ್ಷೇತ್ರ

ನೋಡಿ ದಣಿಯುವು ಜನರ ಕಂಗಳು!

ಪಂಜಾಬಿನ ಪುರುಷ ಸ್ತ್ರೀಯರು ಜಾನಪದ ನೃತ್ಯಗಳಲ್ಲಿ ತತ್ಪರರಾಗುವಾಗ ಗಂಧರ್ವ ಕಿನ್ನರಿಯರೇ ಹಾಡಿ ನಲಿಯುತ್ತಿರುವಂತೆ ಭಾಸವಾಗುತ್ತದೆ. ಈ ಆನಂದ ಅವರ್ಣನೀಯ, ಆಸ್ವಾದನೀಯ.

(ಗೋರಾ ರಿಂಪ ಸಂಗ್ರಹಿತ)

ಬಂಗಾರದ ಬಣ್ಣದ ತೆನೆಗಳನ್ನು ಹೊತ್ತ ಗದ್ದೆಗಳಲ್ಲಿ ನಲಿದಾಡುವ ಗೋದಿಯ ಗಿಡಗಳಂತೆಯೇ ಪಂಜಾಬದ ಜಾನಪದ ನೃತ್ಯಗಳು ರಸಮಯ, ಓಜಪೂರ್ಣ ಹಾಗೂ ಸ್ಫೂರ್ತಿದಾಯಕವಾಗಿರುತ್ತವೆ. ಉತ್ಸಾಹಾತಿರೇಕವನ್ನು ಮೂರ್ತಸ್ವರೂಪಕ್ಕೆ ತರಬಲ್ಲ ಆ ಲೋಕನೃತ್ಯವನ್ನು ಪ್ರತಿ ಹಳ್ಳಿಯಲ್ಲಿಯೂ ಹೊಸ ಬೆಳೆಯನ್ನು ಸ್ವಾಗತಿಸುವ ವೇಳೆ ಕಾಣಬಹುದು. ಪಂಜಾಬದ ಜನತೆಯು ತನ್ನ ಪ್ರತಿಯೊಂದು ವರ್ತನೆಯಲ್ಲಿ ಹೊಸ ರೀತಿಯ ಸ್ಫೂರ್ತಿಯನ್ನು ಪಡೆಯುತ್ತದೆ. ಅದರ ಈ ಸ್ವಾಭಾವಿಕತೆಯು ಅವರ ದೈನಿಕ ಕಾರ್ಯಕಲಾಪಗಳಲ್ಲಿ, ಉತ್ಸವ, ರಸಮಯ ಪರ್ವಗಳಲಿ ಸಮಾನರೂಪವಾಗಿ ತೋರಿಬರುವುದು. ಪಂಜಾಬಿಗಳ ಕಠೋರತಮವಾದ ಜೀವನ ಚರ್ಯೆಯ ನಡುವೆ ಇಂತಹ ಕೋಮಲತಮ ಭಾವುಕ ಗೀತ ಮತ್ತು ಅವುಗಳಿಗೆ ತಕ್ಕಂತೆ ನಡೆಯುವ ಸಾಮೂಹಿಕ ನೃತ್ಯಗಳ ಕಲ್ಪನೆಯು ಕೂಡ ಮೂಡಿಬರಲೊಲ್ಲದು.

"ಭಾಂಗಡಾ" ಎಂಬುದು ಬಹುಜನಪ್ರಿಯವಾದ ನೃತ್ಯವಾಗಿದೆ. ಬಣ್ಣ ಬಣ್ಣದ ಮುಂಡಾಸು ಮತ್ತು ಲುಂಗಿಗಳನ್ನು ಕಟ್ಟಿಕೊಂಡು, ಹೊಳೆಯುವ ರೇಷ್ಮೆ ಅಂಗಿಯ ಮೇಲೆ ಬಿಳಿಯ ಗುಂಡಿಗಳುಳ್ಳ ವಾಸ್ಕೋಟನ್ನು ಧರಿಸಿ ಹಿಮ್ಮೇಳನದ ಜಂಕಾರದ ಮಧ್ಯೆ ಪಂಜಾಬಿ ಯುವಕನು ಪರಿಪೂರ್ಣ ಉತ್ಸಾಹದಿಂದ ಭಾಂಗಡಾ ನೃತ್ಯದಲ್ಲಿ ಭಾಗವಹಿಸುವಾಗ, ಸತ್ತ ಹೆಣದ ಎದೆಯಲ್ಲೂ ಒಂದು ಕ್ಷಣ ಮರೆಯಾದ ಉತ್ಸಾಹದ ಪ್ರವಾಹವನ್ನು ಮರಳಿ ಹರಿಯಗೊಡಬೇಕು!

ಮಹತ್ವಪೂರ್ಣ ಉತ್ಸವ ಮತ್ತು ಪರ್ವ ದಿನಗಳಲ್ಲಿ 'ಭಾಂಗಡಾ' ನೃತ್ಯವನ್ನು ಅಭಿನಯಿಸುವುದು ರೂಢಿ. ಆದರೆ, ಗೋದಿ ಹೂ ಬಿಡಲು ಪ್ರಾರಂಭವಾದೊಡನೆಯೇ ತೊಡಗುವುದು ಈ ಪದ್ಧತಿ. ದೂರದೂರದ ವರೆಗೆ ಹರಡಿರುವ ಚಂದ್ರಿಕೆಯ ನಡುವೆ ಡೋಲು ಬಾರಿಸಿ "ಭಾಂಗಡಾ" ನೃತ್ಯಕ್ಕೆ ಯುವಕರನ್ನು ಆಮಂತ್ರಿಸುವಾಗ, ಅವರು ಗುಂಪುಗುಂಪಾಗಿ ಬಂದು ಏಕತ್ರಿತರಾಗುತ್ತಾರೆ. ಡೋಲುಕಾರನ ಸುತ್ತ ನೃತ್ಯಕಾರರು ಸೇರಿ ತತ್ಪರರಾಗುತ್ತಾರೆ. ವೃತ್ತಾಕಾರವಾಗಿ ತಿರುತಿರುಗಿ 'ಹೋಹೋ' ಎನ್ನುತ್ತ ತಮ್ಮ ಕೈಯ ಊರುಕೋಲುಗಳನ್ನು ಹಾರಿಸಿಯೇ ತಾಳ ಬಡೆಯುವ ಕಾರ್ಯಕ್ರಮದಿಂದ ಭಾಂಗಡಾ ನೃತ್ಯ ಮೊದಲಾಗುತ್ತದೆ. ನೃತ್ಯದ ನಡುವೆಯೂ ಜನರು ಬರುತ್ತಿರುತ್ತಾರೆ; ನೃತ್ಯರಸಕ್ಕೆ ಯಾವುದೇ ಭಂಗಹೊದಗದಂತೆ ಇವರೂ ಸೇರಿಕೊಳ್ಳುತ್ತಾರೆ. "ಬಲೆ ಬಲೆ ಓಹ್ ಬಲೆ ಬಲೆ" ಧ್ವನಿಯು ಎಲ್ಲೆಲ್ಲೂ ಪ್ರತಿಧ್ವನಿಸತೊಡಗುತ್ತದೆ. ನೃತ್ಯದ ನಾಯಕನು ಡೋಲುಕಾರನ ಸಮೀಪ ನಟ್ಟನಡುವೆ ನಿಂತಿರುತ್ತಾನೆ; ಆವೃತ್ತಿಗಳನ್ನು ಆಗಾಗ ತಡೆದು "ಡೋಲಾ", ಅಥವಾ "ಬೋಲೀ" ಎನ್ನುವ ಪಂಜಾಬಿ ಲೋಕನೃತ್ಯ ಗೀತೆಗಳ ತುಣುಕುಗಳನ್ನು ಧ್ವನಿಯೆತ್ತಿ ಹಾಡುತ್ತಾನೆ. ಈ ತುಂಡು ಮುಗಿಯಿತೆಂದರೆ ಹಿಂದಿನಂತೆಯೇ ಆವೃತ್ತರೂಪದ ನೃತ್ಯ ಪ್ರಾರಂಭವಾಗುವುದು. ಈ ವಿಧದ "ಭಾಂಗಡಾ" ಸಮೂಹವು ವೈಶಾಖದ ವರೆಗೂ ವೈಭವಪೂರ್ಣವಾಗಿ ನಡೆಯುತ್ತಿರುವುದು.

"ಭಾಂಗಡಾ"ವು ಪುರುಷ ಪ್ರಿಯ ನೃತ್ಯವೆಂದಾದರೆ, "ಗಿದ್ಧಾ" ಎಂಬುದು ಸ್ತ್ರೀಯರ ಸಾಮೂಹಿಕ ನೃತ್ಯವಾಗಿದೆ. ಗ್ರಾಮೀಣ ಸ್ತ್ರೀಯರ ವಿಶಿಷ್ಟ ಆಕರ್ಷಣೆಯಿದು. ಗೀತೆಯನ್ನು ಹಾಡುಹಾಡುತ್ತ ಅವರು ಸುತ್ತು ಬರುತ್ತಾರೆ, ಒಬ್ಬರಿನ್ನೊಬ್ಬರ ಕೈ ಹಿಡಿದು ಕ್ಷಣಮಾತ್ರದಲ್ಲಿ ಸುತ್ತಿ ಬಿಡುತ್ತಾರೆ. ಮೇಲ್ಗಡೆಯಿಂದ ಈ ನೃತ್ಯವನ್ನು ನೋಡುವಾಗ ಶತಪತ್ರ ಕಮಲವು ಅರಳುತ್ತಿರುವಂತೆ ಗೋಚರಿಸುತ್ತದೆ. ಧರಿಸಿದ ಬಟ್ಟೆಬರೆಗಳ ಹೊಳಪಿನಿಂದ ವಿಚಿತ್ರ ವಾತಾವರಣವೊಂದು ನಿರ್ಮಾಣವಾಗುತ್ತದೆ. "ಗಿದ್ಧಾ ನೃತ್ಯ"ದಲ್ಲಿ ಭಾಗವಹಿಸುವ ಸ್ತ್ರೀಯರು ಅಂಗೈತಟ್ಟಿ ತಾಳಕ್ಕೆ ಸರಿಯಾಗಿ ಹಾಡು ಹಾಡುತ್ತಾರೆ. ಈ ಹಾಡುಗಳನ್ನು ರಚಿಸಿಕೊಂಡವರಾದರೂ ಅವರೇ. ವಾಸ್ತವಿಕವಾಗಿ ಹೇಳುವುದಾದರೆ, ಇವುಗಳು ಅವರ ಜೀವನಗೀತೆಯ ಪ್ರತಿಚ್ಛಾಯೆಯೇ ಆಗಿದೆ.

ನಹರು ತಂಗಿದ್ದ 'ಕುಲೂ' ಕಣಿವೆಯ ಭಾಗವು ಪಂಜಾಬದ ಮನೋರಮ ಭಾಗವಾಗಿದೆ. ಗಂಧರ್ವ ಕಿನ್ನರರ ಕಣಿವೆಯಿದು ಎಂದು ಪ್ರತೀತಿಯಿದೆ. ಇಲ್ಲಿನ ಸಂಗೀತ ಮತ್ತು ನೃತ್ಯಗಳೇ ಇದಕ್ಕೆ ಕಾರಣವೆಂದರೆ ಅತಿಶಯೋಕ್ತಿಯಲ್ಲ. ಇಲ್ಲಿಯ ಜನರು ತಮ್ಮ ದೇವತೆಗಳನ್ನು ಪ್ರತ್ಯಕ್ಷೀಕರಿಸುವುದಕ್ಕಾಗಿಯೇ ನರ್ತಿಸುತ್ತಾರೆ. ತಮ್ಮ ಕಣಿವೆಯ ದೇವತೆ ರಘುನಾಥನು ತಮ್ಮ ಮೇಲೆ ಪ್ರಸನ್ನನಾದನೆಂದರೆ, ಉತ್ತಮ ಬೆಳೆಯು ಕೈಸೇರೀತು; ತಮ್ಮ ಸಮೃದ್ಧಿಯಾದೀತು, ವಸಂತದವರೆಗೆ ತಾವು ಸುಖಿಗಳಾಗಿರುವುದು ಸಾಧ್ಯವಾದೀತು ಎಂಬ ವಿಶ್ವಾಸವಿಡುತ್ತಾರೆ. ಆದುದರಿಂದ ರಘುನಾಥನನ್ನು ಪ್ರಸನ್ನೀಕರಿಸುವ ಸಲುವಾಗಿ ತಮ್ಮೆಲ್ಲ ಕೆಲಸಗಳನ್ನು ಬದಿಗೊತ್ತಿ ಸಾಮೂಹಿಕವಾಗಿ ನರ್ತಿಸುತ್ತಾರೆ.

ಕುಲುಕಣಿವೆಯಲ್ಲಿ ನರ್ತನಕಾಲವು ಜ್ಯೇಷ್ಠದಿಂದ ಕಾರ್ತಿಕ ಮಾಸದವರೆಗೆ ಪಲ್ಲವಿಸುತ್ತದೆ. ಕೃಷಿ ಕಾರ್ಯಗಳಿಗೆ ವ್ಯವಸ್ಥೆ ಮಾಡುವುದರೊಡನೆ ಕೂಡ ನರ್ತನಕ್ಕೂ ಇವರು ಲಕ್ಷ್ಯಹರಿಸುತ್ತಾರೆ. ತಮ್ಮ ದೇವರನ್ನು ಗ್ರಾಮದ ಹೊರಗಡೆ ಹಸುರು ಮೈದಾನಿಗೆ ತರುತ್ತಾರೆ. ಅಲ್ಲಿ ನರ್ತಕರೂ ಸಂಗೀತಜ್ಞರೂ ಒಟ್ಟುಸೇರುತ್ತಾರೆ. ಸಾಮೂಹಿಕ ನೃತ್ಯನಟಿಸಿ ದೇವರನ್ನು ಪ್ರಸನ್ನೀಕರಿಸುತ್ತಾರೆ. ಒಂದು ಪಂಗಡ ಆಯಾಸಗೊಂಡು ದಣಿಯಿತೆಂದರೆ, ಇನ್ನೊಂದು ಪಂಗಡ ಮುಂದೆಬರುತ್ತ ಹೀಗೆ ಈ ನೃತ್ಯ ನಡೆಯುತ್ತಿರುತ್ತ ಗ್ರಾಮೀಣ ನಾರಿಯರೂ ಪುರುಷರೊ ನೆ ನರ್ತಿಸುವುದುಂಟು; ಕೆಲವೊಮ್ಮೆ ಅವರು ತಮ್ಮದೇ ಪ್ರತ್ಯೇಕವಾದ ನೃತ್ಯ ಡುವುದುಂಟು. ಇದಲ್ಲದವರು ಸುತ್ತು ಯುತ್ತ ದೇವರಿಗೆ ಆರತಿಯೆತ್ತುತ್ತಾರೆ

ಕುಲು ಕಣಿವೆಗಳಲ್ಲಿ 'ದಸರಾ' ಪವ ಕಾಲ. ಈ ಅವಧಿಯಲ್ಲಿ ಇಲ್ಲಿ ಬಹು ಭವಪೂರ್ಣ ಉತ್ಸವವು ನಡೆಯುತ್ತ ಕಣಿವೆಗಳಲ್ಲಿನ ಬೇರೆ ಬೇರೆ ದೇವತೆಗಳ ರಘುನಾಥನಲ್ಲಿ ಒಂದುಗೂಡುತ್ತವೆ. ರಘುನಾಥನಾದರೂ ನಿಶ್ಚಿತ ವಿಶಾಲ ಸ್ಥಳದ ಸಿಂಹಾಸನಾಸೀನನಾಗುತ್ತಾನೆ. ಜನಪದ ತಿ ಮತ್ತು ನೃತ್ಯಗಳಿಂದ ಮೂರು ಅಹೋ ರಾತ್ರಿ, ವಿಜೃಂಭಣೆಯಿಂದ ವೈಭವಪ ರ್ಣವಾಗಿ ಉತ್ಸವವು ನಡೆಯುತ್ತದೆ. ದೈವಭಕ್ತ ಜನತೆ ಆಯಾಸಗೊಂಡು ಮಿಸುವುದಂತೂ ಇಲ್ಲ; ನಿದ್ರೆಯು ಮಾ ತೂ ದೂರವುಳಿಯಿತು. ಆದರೂ ಇ ಅವರ ಹೆಜ್ಜೆಯು ಕ್ರಮಬದ್ಧತೆಯನ್ನು ಪ್ಪಿಸುತ್ತ ಬಂದು ಕೊನೆ ಕೊನೆಗೆ ಸೋ ಸಿಬಿಡುವುದೂ ಉಂಟು. ಇಂಪ್ರ ಧನು ನಲ್ಲಿ ಆಸ್ತಿಕೊಳ್ಳಲ್ಪಟ್ಟ ಈ ಕಿ ರಿಯರು ಜನಪದ ನೃತ್ಯಗಳ ಮೂ ಕ ಅನುಭವಿಸುವ ಸ್ವರ್ಗೀಯ ಆನಂದವನ್ನು ವರ್ಣಿಸುವುದು ಅಸಾಧ್ಯ

ಇಂತಹ ಜನಪದ ಗೀತೆ ಮತ್ತು ತ್ಯಗಳು ಇಂದಿಗೂ ಭಾರತದ ಹಳ್ಳಿ ಹ ಗಳಲ್ಲಿ ಪ್ರಚಾರದಲ್ಲಿವೆ. ನಾಗರಿಕತೆ ಹಾಗೂ ಸುಧಾರಣೆ ಪ್ರಗತಿಗಳ ಸೋ ಪ್ರವಾಹದಲ್ಲಿ ಚಿತ್ತಾನಂದಕರವಾಗಿರು ಇವು ಕೊಚ್ಚಿ ಹೋಗದಂತೆ ಮುಂಜಾ ತೆ ವಹಿಸುವುದು ಆವಶ್ಯಕ. ಇಲ್ಲವಾದ ಇನ್ನು ಕೆಲವೇ ಸಮಯದಲ್ಲಿ ಇವೆಲ್ಲ ನಾಮಕ್ಕೆ ಮಾತ್ರ ಅವಶೇಷಗಳಾಗಿ ತೋರಿಬರಬಹುದು..

ನಿಮಗೆ ಯಾವುದು?

ದಿನ........ ನಿಮ್ಮ ಸಂಪಾದನೆ ದಿನಂಪ್ರತಿ ನಿಮ್ಮ ಕೈಗೆ ಬರುವುದಾದರೆ........ಪಿಗ್ಮಿ
'ಪಿಗ್ಮಿ' ನಿಮಗೆ ಅನುಕೂಲವಾಗಿದೆ, ಪಿಗ್ಮಿ ಸಂಗ್ರಾಹಕನು
ನಿಮ್ಮಲ್ಲಿಗೆ ಬಂದು ನಿಮ್ಮ ಚಿಲ್ಲರೆ ಕಾಸುಗಳನ್ನು
ಸಿಂಡಿಕೇಟ್ ಬೇಂಕಿನಲ್ಲಿ ನಿಮಗಾಗಿ ಸಂಗ್ರಹಿಸಿಡುವನು.

ತಿಂಗಳು..ನೀವು ತಿಂಗಳು ತಿಂಗಳು ವೇತನ ಪಡೆಯುವವರಾದರೆ..ಕ್ಯುಮುಲೇಟಿವ್
'ಕ್ಯುಮುಲೇಟಿವ್' ನಿಮಗೆ ತಕ್ಕುದಾಗಿದೆ. ಸಿಂಡಿಕೇಟ್ ಬೇಂಕಿನಲ್ಲಿ
ಹತ್ತೋ, ನೂರೋ ನೀವು ಉಳಿಸುತ್ತಿರಬಹುದು

ವರುಷ ನಿಮ್ಮ ಆದಾಯ ವರುಷಂಪ್ರತಿ ಬರುವಂತಹದಾದರೆ. ಇನ್ವೆಸ್ಟರ್ಸ್ ಏಜನ್ಸಿ
'ಇನ್ವೆಸ್ಟರ್ಸ್ ಏಜನ್ಸಿ' ನಿಮಗೆ ಯೋಗ್ಯವಾಗಿದೆ. ಸಿಂಡಿಕೇಟ್
ಬೇಂಕಿನ ಸಮರ್ಥ ಅಧಿಕಾರಿಗಳಿರುವ ಈ ವಿಭಾಗ ನಿಮ್ಮ
ಉಳಿತಾಯವನ್ನು ಅಭಿವೃದ್ಧಿಗೊಳಿಸಲು ನೆರವಾಗುತ್ತದೆ.

ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್,
ಉಡುಪಿ.

ಜೀವನದ ವಿವಿಧ ಘಟನೆಗಳನ್ನು ಹೃದ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರ ಉಡುಗೊರೆಯಾಗಿ ಕೊಡಲಿಕ್ಕಾ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯ
ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡು

ನೋವುಗಳ ಅತ್ಯುತ್ತಮ ಸಂಹಾರಿ



ಅಮೃತಾಂಜನ



Edited, Printed & Published by K. H. Shetty, at the Navayuga Press, Udipi, S. India.

40th year of publication. 20-10-1960 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೮ No. 8

ಬೆಲೆ 0=13

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಏಷ್ಯನ್ ಆರೋಗ್ಯ ಸಂಸ್ಥೆಯ ಯೋಜನೆಗಳು

ಸಿಂಹಳದ ಸರಕಾರವು ಏಷ್ಯನ್ ರಾಷ್ಟ್ರಗಳ ಆರೋಗ್ಯ ಸಂಸ್ಥೆಯ ಸ್ಥಾಪನೆಯ ಬಗ್ಗೆ ವಿಶೇಷ ಕಳಕಳಿ ವಹಿಸುತ್ತಿದೆ. ಆಯುರ್ವೇದದ ಪುನರುತ್ಥಾನ ಮತ್ತು ಪ್ರಚಾರಕ್ಕಾಗಿ ವಿವಿಧ ಕಾರ್ಯಕ್ರಮ ಕೈಗೊಳ್ಳುವುದೇ ಇದರ ಪ್ರಧಾನೋದ್ದೇಶವಿದೆ.

ಜಾಗತಿಕ ಆರೋಗ್ಯಸಂಸ್ಥೆಯ ಅನುರೂಪವಾಗಿರುವ ಏಷ್ಯನ್ ರಾಷ್ಟ್ರಗಳ ಆರೋಗ್ಯಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದು ಆಯುರ್ವೇದದ ತಜ್ಞ ಶ್ರೀ ಪಂಡಿತ ಶಿವ ಶರ್ಮರು ಮಾಡಿರುವ ಸಲಹೆಯೊಂದನ್ನು ಸಿಲೋನ್ ಸರಕಾರವು ಸ್ವೀಕರಿಸಿದೆ. ಈ ಸಲಹೆಯನ್ವಯ ನಿಯೋಜಿತ ಯೋಜನೆಯನ್ನು ಕಾರ್ಯಕ್ಕೆತಗೊಳಿಸಲು ಸಿಂಹಳೀಯ ಸರಕಾರವು ಆಗ್ನೇಯ ಏಷ್ಯದ ವಿವಿಧ ದೇಶಗಳೊಡನೆ ಸಂಪರ್ಕವನ್ನು ಬೆಳೆಸತೊಡಗಿದೆ.

ಕೊಲಂಬೋ ಯೋಜನೆಯಲ್ಲಿ ಅಂತರ್ಗತವಾಗಿರುವ ಆಯುರ್ವೇದ ಸಂಬಂಧದಲ್ಲಿ ಸಿಂಹಳ ಸರಕಾರದ ಭಾರತೀಯ ಸಲಹೆಗಾರರಾದ ಪಂಡಿತ ಶಿವ ಶರ್ಮರು ಆಯುರ್ವೇದದ ಅಧ್ಯಯನ, ಸಂಶೋಧನೆ ಮತ್ತು ವೈದ್ಯಕೀಯ ಸಹಾಯತೆಗಳ ಕುರಿತಾಗಿ ಸುವಿಸ್ತೃತವಾದ ವರದಿಯೊಂದನ್ನು ಸಿಂಹಳ ಸರಕಾರಕ್ಕೆ ಅರ್ಪಿಸಿದರು. ಶ್ರೀ ಎಸ್. ಡಬ್ಲ್ಯು. ಆರ್. ಡಿ. ಭಂಡಾರ ನಾಯಕೆಯವರು ಸಿಂಹಳೀಯ ಪ್ರಧಾನಿಯಾಗಿದ್ದಾಗ ಒಪ್ಪಿಸಿದ್ದ ಈ ವರದಿಯನ್ನು ಆಗಿನ ಸರಕಾರವು ಸಂಪೂರ್ಣ ರೂಪದಲ್ಲಿ ಸ್ವೀಕರಿಸಿತ್ತು. ಆದರೆ, ಅದನ್ನು ಕಾರ್ಯಾನ್ವಯಗೊಳಿಸಲು ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಮೊದಲೇ ಶ್ರೀ ಭಂಡಾರನಾಯಕೆಯವರು ಕೊಲೆಗೀಡಾದರು. ಹಾಗಾಗಿ, ಆ ಯೋಜನೆಯು ಮುಂದುವರಿಯಲಿಲ್ಲ.

ಭಂಡಾರನಾಯಕೆಯವರ ಹತ್ಯಾನಂತರ, ಸಿಂಹಳದ ಸಚಿವಸಂಪುಟ ಮಾತ್ರವಲ್ಲ, ರಾಜಕಾರಣವೇ ಅಸ್ಥಿರಸ್ಥಿತಿಯಲ್ಲಿದ್ದುದರಿಂದ, ಈ ವಿಸ್ತೃತ ಕಾರ್ಯಕ್ರಮ ಯೋಜನೆಯ ಬಗ್ಗೆ ಯಾರಲ್ಲಿಯೂ ಆಸಕ್ತಿ ಹುಟ್ಟಬರಲಿಲ್ಲ. ಈಗ, ಅಲ್ಲಿನ ಪರಿಸ್ಥಿತಿಯು ಸ್ಥಿಮಿತಕ್ಕೆ ಬಂದಿದೆ; ಶ್ರೀಮತಿ ಭಂಡಾರನಾಯಕೆಯವರು ಪ್ರಧಾನಿಪಟ್ಟವೇರಿದ್ದಾರೆ. ಹೆಚ್ಚಿನ ಯೋಜನೆಗಳ ಬಗ್ಗೆ ತಮ್ಮ ಪತಿಯವರ ಧೋರಣೆಯನ್ನೇ ಮುಂದುವರಿಸಿಕೊಂಡು ಬಂದಿರುವ ಇವರು ಈಗ ಆ ಹಿಂದುಳಿದ ಯೋಜನೆಯನ್ನು ಮರಳಿ ಕೈಗೆತ್ತಿಕೊಂಡಿದ್ದಾರೆ; ಅದನ್ನು ಕಾರ್ಯರೂಪಕ್ಕೆ ತರುವ ಆಶಯವನ್ನು ತೋರ್ಪಡಿಸುತ್ತಿದ್ದಾರೆ.

ಏಷ್ಯನ್ ದೇಶಗಳಿಗೆ ಸಂಬಂಧಿತವಾದ ಈ ಯೋಜನೆಯು ಸದ್ಯದಲ್ಲಿಯೇ ಸಫಲವಾಗುವ ನಿರೀಕ್ಷೆಯಿದೆ. ಏಷ್ಯನ್ ರಾಷ್ಟ್ರಗಳಲ್ಲಿ ಪ್ರಾಚ್ಯ ಚಿಕಿತ್ಸಾ ಪ್ರಣಾಲಿಯ ಜ್ಞಾನ, ಮತ್ತು ಪದ್ಧತಿಯನ್ನು ಪುನರುಸ್ಥಾಪನಗೊಳಿಸುವುದೇ ಈ ಯೋಜನೆಯ ಪ್ರಧಾನೋದ್ದೇಶವಾಗಿದೆ. ಆಯುರ್ವೇದದ ಸಿದ್ಧಾಂತ ಹಾಗೂ ಅದರ ವ್ಯವಹಾರವನ್ನು ಸಂಯೋಗಿ ಪರೀಕ್ಷಿಸುವಾಗ, ಆಧುನಿಕ ಪದ್ಧತಿಯೊಡನೆ ಹೋಲಿಸುವಾಗ, ಇದರ ಆಧಾರಭೂತ ಸಿದ್ಧಾಂತಗಳು ಅಧಿಕ ದೃಢವಾಗಿವೆ; ವೈಜ್ಞಾನಿಕ ಹಾಗೂ ಆರ್ಥಿಕ ಸಂಭಾವನಾಯುಕ್ತವಾಗಿವೆಯೆಂಬುದು ಮನವರಿಕೆಯಾಗುತ್ತದೆ. ಮಾದಕತಾ ವಿಹೀನತೆಯ ಹಾಗೂ ತಂತುಗಳನ್ನು ಸುದೃಢಗೊಳಿಸುವ ಗುಣಗಳಿಂದ ಆಯುರ್ವೇದ ಹಾಗೂ ಮತ್ತಿತರ ಸಹ ಪದ್ಧತಿಗಳು ವ್ಯಾಪಕರೂಪದಲ್ಲಿ ಸ್ವೀಕರಿಸಲು ಯೋಗ್ಯವಾಗಿವೆಯೆಂದು ಪಂಡಿತ ಶರ್ಮರ ಅಭಿಪ್ರಾಯ.

ಆಯುರ್ವೇದ ಮತ್ತು ಅಲೋಪಥಿಗಳ ನಡುವೆ ವಿಶೇಷ ಅಂತರವಿರುವುದಿಲ್ಲ. ಆಯುರ್ವೇದವು ರೋಗಿಯ ಶಾರೀರಿಕ ರಚನೆಯ ಮೇಲೆ ವಿಶೇಷ ಬಲವೀಯುತ್ತದೆ; ಆದರೆ, ಅಲೋಪಥಿಯು ರೋಗದ ಸ್ಥಿತಿಯನ್ನೇ ವಿಶೇಷವಾಗಿ ಗಮನಿಸುತ್ತದೆ. ಪಾಶ್ಚಾತ್ಯ ಮಾದರಿಯ ಔಷಧಗಳು ರೋಗವನ್ನು ನಿವಾರಿಸಲು ಅಸಮರ್ಥವಾದಲ್ಲಿ ಆಯುರ್ವೇದವು ಅವನ್ನು ಗುಣಮಾಡಿದ ಉದಾಹರಣೆಗಳು ಸಾಕಷ್ಟಿವೆ. ಸ್ಪರ್ಶಾಸ್ಪರ್ಶ ರೋಗಗಳನ್ನು ನಿರ್ಮೂಲಿಸುವಲ್ಲಿ ಇದು ಸಫಲವಾಗುವುದಾದರೆ, ಅಲ್ಪ ಪೋಷಣೆ, ಸ್ವಾಸ್ಥ್ಯ ಪತನ, ಪಾಚನ ಸಂಬಂಧಿ ಅಸಂತುಲನೆ ಮೊದಲಾದುವುಗಳಿಗೂ ಪ್ರಭಾವಶಾಲೀ ಚಿಕಿತ್ಸೆಯನ್ನು ಒದಗಿಸಲು ಸಮರ್ಥವಾಗುವುದು. ಅದುದರಿಂದ ಆಯುರ್ವೇದವು ಹಿಂದೆ ಮೆರೆದಾಡುತ್ತಿದ್ದಂತೆಯೇ ಮುಂದಕ್ಕೂ ಅತಿ ಪ್ರಚಾರಕ್ಕೆ ಬರುವ ಸಾಧ್ಯತೆಯಿದೆ. ಈ ಚಿಕಿತ್ಸೆಯು ಅಧಿಕ ಕುಶಲ ಹಾಗೂ ಕ್ರಾಂತಿಕಾರಿಯಾಗುವುದೂ ಅಶಕ್ಯವೇನಲ್ಲ.

ಆಯುರ್ವೇದ ಮತ್ತು ತತ್ಸಂಬಂಧಿತ ವೈದ್ಯ ಪದ್ಧತಿಗಳ ವಿಕಾಸ ಮತ್ತು ಪ್ರಚಾರ ಕಾರ್ಯದತ್ತ ವಿಶೇಷ ಗಮನವೀಯಬೇಕಾಗಿದೆ. ಭೂತಕಾಲದಲ್ಲಿ ರೋಗ ನಿವಾರಕ ಸಾಧನಗಳೇ ಇವಾದುದರಿಂದ ಮತ್ತು ವರ್ತಮಾನ ಕಾಲದಲ್ಲಾದರೂ ಅಧಿಕ ಸಂಖ್ಯಾಕರು ಈ ವೈದ್ಯಪದ್ಧತಿಯನ್ನೇ ಅವಲಂಬಿಸಿಕೊಂಡಿರುವುದರಿಂದ ಈ ಬಗ್ಗೆ ಅಧಿಕಾಸಕ್ತಿ ಹರಿಯಬೇಕಾಗಿದೆ. ಅಂತಾರಾಷ್ಟ್ರೀಯ ಸ್ತರದಲ್ಲಿಯೂ ಆಯುರ್ವೇದ ಅಭಿವೃದ್ಧಿಗಾಗಿ ಶ್ರಮಿಸುವ ಅವಕಾಶವೀಗ ಸನ್ನಿಹಿತವಾಗಿದೆ; ಇದರ ಪೂರ್ವಭಾವಿ

(೧೨ನೇ ಪುಟ ನೋಡಿರಿ)

ನೆನಪಿರಲಿ! ಸ್ಥಾಪನೆ: 1910 ಸುವರ್ಣ ಸುಸಂಧಿ!

1960ನೇ ಇಸವಿ ನಮ್ಮ ಸುವರ್ಣೋತ್ಸವದ ವರ್ಷ

ದಕ್ಷಿಣ ಕನ್ನಡದ ಚರಿತ್ರೆಯಲ್ಲಿ ಜವುಳಿಯ ಉದ್ಯೋಗದಲ್ಲಿ ಪ್ರಪ್ರಥಮ ಸುವರ್ಣ ಮಹೋತ್ಸವವನ್ನು
ಆಚರಿಸುವ ಜವುಳಿಯ ಮಳಿಗೆ ಯಾವುದು ಗೊತ್ತೇ?

ನಾನಾಲಾಲ್ ಗೋವಿಂದಜೀ ಪಂಡ್ಯಾ & ಸನ್ಸ್‌ರವರ ಮಳಿಗೆ.

ನಮ್ಮ ಮಳಿಗೆಯ ಸುವರ್ಣ ಮಹೋತ್ಸವದ ಶುಭ ಸಂದರ್ಭದ ಸಲುವಾಗಿ ನಮ್ಮ ಪ್ರೀತಿ ವಿಶ್ವಾಸದ ಎಲ್ಲ ಗ್ರಾಹಕರಿಗೆ
ಎಲ್ಲ ಬಟ್ಟೆಗಳ ನಗದಿ ವಿಕ್ರಯದ ಮೇಲೂ ಸೇಕಡಾ 6¼ ನಗದಿ ಡಿಸ್ಕೌಂಟು ಕೊಡಲಾಗುವುದು.

[ಈ ಅವಧಿಯು ತಾ. 15 10 '60ರಿಂದ ತಾ. 3—11—'60ರ ವರೆಗೆ ಬರೇ 20 ದಿನಗಳು ಮಾತ್ರ.]

ಈ ಸ್ಪೆಷಲ್ ರಿಯಾಯತಿಯ ಲಾಭವನ್ನು ಪಡೆಯಲು ಮರೆಯಬೇಡಿರಿ,

ನ್ಯಾಯ ಬೆಲೆ! ಒಂದೇ ದರ!! ಖಾತ್ರಿ ಮಾಲು!!!

ವಿ. ಸೂ: (ಈ ಡಿಸ್ಕೌಂಟು ರಿಯಾಯತಿ ಬಿನ್ನಿ, ಮೆಟ್ಟೂರು ಮತ್ತು ದರ ಮುದ್ರಣ ಇದ್ದ ಮಿಲ್ಲು ಬಟ್ಟೆಗಳಿಗೆ ಅನ್ವಯಿಸುವುದಿಲ್ಲ.)

ನಾನಾಲಾಲ್ ಗೋವಿಂದಜೀ ಪಂಡ್ಯಾ & ಸನ್ಸ್

ಜವುಳಿ ವ್ಯಾಪಾರಿಗಳು, ಬಡಗುಪೇಟೆ, ಉಡುಪಿ, ದ. ಕ.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

●

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 00
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಬೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಚಿತ್ರಗುಪ್ತನ ದಫ್ತರ ಸುಳ್ಳಾಗದು

ಪತಿವ್ರತೆ ಮತ್ತು ವೇಶ್ಯೆಯರು ಚಿತ್ರಗುಪ್ತನೆದುರು ಮಿಲನಗೊಂಡರು. ಚಿತ್ರಗುಪ್ತ ಆ ನಿಷ್ಠ ಪತಿವ್ರತೆಗೆ ನಿಮ್ನ ಸ್ವರ್ಗವನ್ನೂ ವೇಶ್ಯೆಗೆ ಉಚ್ಚ ಸ್ವರ್ಗವನ್ನೂ ಆಜ್ಞಾಪಿಸಿದ. ಇದರ ಕಾರಣವರಿಯುವುದರಲ್ಲೇ ಕುತೂಹಲವಡಗಿದೆ.

ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ.

ಚಿತ್ರಗುಪ್ತನು ತನ್ನೆದುರಿದ್ದ ದಫ್ತರುಗಳನ್ನು ಮಗುಚುತ್ತಿದ್ದ. ನೋಡು ನೋಡುತ್ತಿದ್ದಂತೆಯೇ ಆತ ಕಣ್ಣು ಮುಚ್ಚಿಕೊಂಡು ಧ್ಯಾನಯೋಗಿಯಂತೆ ಚಿಂತನ-ಮನನದಲ್ಲಿ ಓಲಾಡಿಯಾಡಿದ. ಆತನು ಕಣ್ಣುತೆರೆದಾಗ, ತನ್ನ ಮುಂದೆ ಇಬ್ಬರು ಸ್ತ್ರೀಯರು ನಿಂತಿರುವುದು ಕಂಡಿತು. ಅವರು ಉತ್ಕಂಠಭಾವದಿಂದ ಚಿತ್ರಗುಪ್ತನ ನಿರ್ಣಯವನ್ನೇ ಪ್ರತೀಕ್ಷಿಸುತ್ತಿದ್ದರು. ಮೊದಲನೆಯ ನಾರಿಯು ಕುಲೀನವಧುವಿನಂತೆಯೂ, ಎರಡನೆಯವಳು ಕುಲಕಲಂಕಿನಿಯೆನಿಸಿದ ವೇಶ್ಯೆಯಂತೆಯೂ ತೋರಿಬರುತ್ತಿದ್ದಳು.

ಯಾವುದನ್ನಾದರೂ ಪ್ರತೀಕ್ಷಿಸುತ್ತ ನಿಲ್ಲುವುದೆಂದರೆ ಪರಮಕಷ್ಟ. ಅದರಲ್ಲೂ ನ್ಯಾಯಾಧೀಶನು ನಿರ್ಣಯವೀಯುವುದರಲ್ಲಿ ತೆಗೆಯುವ ಹೊತ್ತಿನ ಪ್ರತಿಯೊಂದು ಕ್ಷಣವೂ ಯುಗವಾಗಿ ಪರಿಣಮಿಸುವುದು ಸ್ವಾಭಾವಿಕ. ಚಿತ್ರಗುಪ್ತನ ನಿರ್ಣಯವನ್ನು ಕಾದುಕಾದು ಆ ಹೆಂಗಸರಿಬ್ಬರೂ ಅಧೀರರಾದರು. ಮನಸ್ಸಿನ ಜಂಜಾಟದ ಕುರುಹು ಶರೀರದ ಅಂಗಾಂಗಗಳಲ್ಲಿ ಅಭಿವ್ಯಕ್ತವಾಗತೊಡಗಿದುವು. ಇಂತಹ ಅಸ್ಥಿರ, ಅಸಂಯತ ಅವಸ್ಥೆಯಲ್ಲಿ ಎರಡನೆಯವಳ ಕೈತೋಳು ಮೊದಲನೆಯವಳನ್ನು ಸೋಕಿತು.

ತತ್‌ಕ್ಷಣವೇ ಆಕೆ ಮಾರುದ್ದ ಹಾರಿಬಿಟ್ಟು ಕಣ್ಣು ಕೆಂಪುಮಾಡಿ ಕೂಗತೊಡಗಿದಳು. ಅವಳ ಕೋಪವು ನೆತ್ತಿಗೇರಿತ್ತೆಂದು ಯಾರೂ ಹೇಳಬಹುದಿತ್ತು. ತಕ್ಷಕ ಸರ್ಪರಾಜನು ಆಕೆಯನ್ನು ಕಡಿದನೆಂಬಂತಾಯಿತು ಅವಳ ಅವಸ್ಥೆ. "ಎನೇ, ನಿನಗೆ ಕಣ್ಣು ತೋರುವುದಿಲ್ಲವೆ? ಕುಲಕಲಂಕಿನಿ, ವೇಶ್ಯೆಯಾಗಿರುವುದು ಸಾಲದೆ ಈ ರೀತಿ ಹೇಯಂಕೃತ್ಯವೆಸಗುತ್ತೀಯ? ನಾನು ಯಾರೆಂದು ನಿನಗೆ ಗೊತ್ತೆ?" ಎಂದಳಾಕೆ.

ಆಗ ಎರಡನೆಯವಳೆಂದಳು: "ತಂಗಿ, ಗುರುತು ಸಿಗದೇನು? ನಾವು ಭೂಮಿಯಲ್ಲಿರುವಾಗ, ನೆರೆಮನೆಯವರಾಗಿದ್ದರೆಂಬುದನ್ನು ಮರೆಯುವುದು ಸಾಧ್ಯವೆ? ಕಳೆದ ಹತ್ತು ವರ್ಷಗಳಿಂದಲೂ ನಮ್ಮ ಕಿಟಕಿಯೆಡೆಯಿಂದ ನಿನ್ನನ್ನು ನೋಡುತ್ತಿದ್ದೆ."

"ಹಾಗಾದರೆ...... ಹಾಗಾದರೆ...."

ಕ್ರೋಧ ಹೊತ್ತಿಹೊಗಲು ಮುಂದೆ ಮಾತೇ ಹೊರಡಲಿಲ್ಲ. ಮೊದಲಿನಾಕೆ ಬಹು ಪ್ರಯಾಸದಿಂದ ಕೋಪ-ಸಂತಾಪವನ್ನು ನುಂಗಿಕೊಂಡಳು. ಅನಂತರ, ತುಸು ಮೃದುವಾಗಿ ಹೇಳತೊಡಗಿದಳು: "ನಿನ್ನ ಪಾಪಮಯ ಸ್ಪರ್ಶವಿದು! ಹೆ, ಪರಮಾತ್ಮ ನನ್ನ ಹಣೆಯಲ್ಲಿ ಇಂತಹ ದುರದೃಷ್ಟಶಾಲಿ ಲೇಖ ಬರೆದಿದೆಯೆ? ಭೂಮಿಯಲ್ಲಿ ಜನರು ನನ್ನನ್ನು ಪತಿವ್ರತೆಯೆಂದು ಹೆಸರಿಟ್ಟು ಆದರಾಭಿಮಾನಗಳಿಂದ ಪೂಜಿಸುತ್ತಿದ್ದರು. ಇಲ್ಲಿ ಸ್ವರ್ಗಲೋಕದಲ್ಲಿ ಈ ಕರಿಮುಸುಡಿನ ಕಲಂಕಿನಿಯ ಸ್ಪರ್ಶವಾಗಬೇಕಾಯಿತೆ?... ಛಿ... ಛಿ! ..." ಹೇಳುತ್ತಿದ್ದಂತೆಯೇ ಆಕೆ ತಡೆದಳು.

ಚಿತ್ರಗುಪ್ತನ ಧ್ಯಾನ ಮುದ್ರೆ ಮುರಿಯಿತು. ಆವನು ಪದೇ ಪದೇ ಇರ್ವರನ್ನೂ ನೋಡಿದನು. ಸ್ವಲ್ಪ ಸಮಯಾನಂತರ ತನ್ನ ಬಲಬದಿಯಲ್ಲಿ ನಿಂತಿದ್ದ ಯಮದೂತರನ್ನು ನೋಡಿ ಹೇಳಿದನು: "ನೋಡಿರಿ, ಈ ಮೊದಲಿನ ಹೆಂಗಸು ಪ್ರಪಂಚದಲ್ಲಿ ಪತಿವ್ರತೆಯೆಂಬ ಹೆಸರಿನಲ್ಲಿ ಪ್ರಸಿದ್ಧಳಾಗಿದ್ದಳು. ಈಕೆಯನ್ನ ಸ್ವರ್ಗಕ್ಕೆ ಕರೆದೊಯ್ಯುವಂತೆ ದೇವದೂತರಿಗೆ ತಿಳಿಸಿಬಿಡಿರಿ."

ಇದನ್ನಾಲಿಸಿದ ಪತಿವ್ರತಾ ಶಿರೋಮಣಿಗುಂಟಾದ ಆನಂದಕ್ಕೆ ಮೇರೆಯೇ ಉಳಿಯಲಿಲ್ಲ. ತಿರಸ್ಕಾರಭಾವನೆಯಿಂದ ಆಕೆ ಎರಡನೆಯವಳನ್ನು ನೋಡಿ ನಗಲು ಪ್ರಯತ್ನಿಸಿದಳು. ಆ ನಗು ಇನ್ನೂ ತುಟಿಗಳೆಡೆಯಲ್ಲಿ ಮಿಂಚಲು ಸನ್ನದ್ಧವಾಗುತ್ತಿತ್ತು ಅಷ್ಟರಲ್ಲಿಯೇ ಚಿತ್ರಗುಪ್ತನ ಮಾತು ಆಕೆಯ ಕಿವಿದೆರೆಗೆ ಬಡೆಯಿತು. "ಈ ಎರಡನೆಯವಳನ್ನೂ ದೇವದೂತರು ಸ್ವರ್ಗಕ್ಕೆ ಕರೆದೊಯ್ಯುತ್ತಾರೆ."

"ಎಲ್ಲಿಗೆ?" ಮೊದಲಿನಾಕೆ ವಿಸ್ಮಯದಿಂದ ಕೇಳತೊಡಗಿದಳು.

"ಸ್ವರ್ಗಕ್ಕೆ" ಎಂಬ ಉತ್ತರ ದೊರೆಯಿತು.

"ಛಿ, ಛೀ... ಹೀಗೆಂದೂ ಆಗಬಾರದು ಮಹಾರಾಜರೇ! ಇಲ್ಲಿ ಏನೋ ತಪ್ಪಾಗಿರಬೇಕು. ಈ ಪಾಪಿನಿಯ ಸ್ಥಾನವು ನರಕದಲ್ಲಿ ಈಕೆಯನ್ನು ಎದುರುನೋಡುತ್ತಿದೆ. ಈಕೆಯನ್ನು ಅಲ್ಲಿಗೇನೇ ಕಳುಹಿಕೊಡಬೇಕು."

"ಏಕೆ?"

"ಏಕೆ! ಈಕೆ ವೇಶ್ಯೆಯೆಂದು ನಿಮಗೆ ಗೊತ್ತಿಲ್ಲವೆ? ವ್ಯಭಿಚಾರ ಮತ್ತು ಪಾಪದ ಕೊಳಗಳಲ್ಲಿಯೇ ಯಾವಾಗಲೂ ಓಕುಳಿಯಾಡುವವಳೆಂದು ನೀವು ಅರಿಯಿರಾ?"

ಚಿತ್ರಗುಪ್ತನಿಗೆ ನಗುಬಂತು. ಆತ ಮರಳಿ ಎಡಗಡೆಯಲ್ಲಿದ್ದ ಯಮದೂತರನ್ನು ಕರೆದು ಹೇಳಿದ: "ಸರಿ; ಸ್ವರ್ಗದಲ್ಲಿನ ಯಮದೂತರೊಡನೆ ಈ ವೇಶ್ಯೆಯನ್ನು ಸರ್ವೋನ್ನತ ಸ್ವರ್ಗಕ್ಕೆ ಕರೆದೊಯ್ಯುವಂತೆ ಹೇಳಿರಿ."

ಈಗ ಮೊದಲಿನಾಕೆಗೆಗಾದ ಖೇದಾಶ್ಚರ್ಯ ಅಷ್ಟಿಷ್ಟಲ್ಲ: "ಕ್ಷಮಿಸಿ, ನಾಲಿಗೆ ಕಿರಿದು, ಮಾತು ಹಿರಿದಾಗತೊಡಗಿದೆ. ಆದರೆ, ನಿಜ ಹೇಳುವುದಾದರೆ, ಈಗ ಬಹು ದೊಡ್ಡ ಅನ್ಯಾಯವಾಗುತ್ತಿದೆ."

"ಚಿತ್ರಗುಪ್ತನ ದಫ್ತರ ಎಂದೂ ಸುಳ್ಳಾಗುವುದಿಲ್ಲ" ಎಂದು ಆತ ಪಾಪಪುಣ್ಯಗಳ ಅಂಕಿತವನ್ನು ನೋಡುತ್ತ ಮನದೊಳಗೇನೇ ನಕ್ಕುಬಿಟ್ಟ!

ಆಗ ಪತಿವ್ರತೆ ತನ್ನನ್ನೇ ತಾನು ಮರೆತು ಬಿಟ್ಟಳು. ಆಕೆಯ ನೇತ್ರಗಳಿಂದ ಅಗ್ನಿ ಕಣಗಳು ಸುರಿಯತೊಡಗಿದುವು. "ಮಹನೀಯರೇ, ಸ್ವರ್ಗದಲ್ಲಿ ನನಗೆ ಕಾದಿಟ್ಟ ಸ್ಥಾನವಾವುದು?" ಕೇಳಿದಳಾಕೆ.

"ಅತಿ ಹೀನವಾದುದು"—ಚಿತ್ರಗುಪ್ತ

(೧೧ನೇ ಪುಟ ನೋಡಿರಿ)

ರಾಮತೀರ್ಥ (ಮಾಸಿಕ ಪತ್ರ)
(ಹಿಂದಿ ಭಾಷೆಯಲ್ಲಿ)
ಸಂಪಾದಕರು: **ಯೋಗಿರಾಜ ಶ್ರೀ ಉಮೇಶಚಂದ್ರರು.**

ಪ್ರತಿ ತಿಂಗಳಲ್ಲೂ ೧ನೇ ತಾರೀಕಿಗೆ ರಾಮತೀರ್ಥ ಮಾಸಿಕವು ಪ್ರಕಟವಾಗುತ್ತದೆ. ರಾಮತೀರ್ಥ ಮಾಸಿಕದಲ್ಲಿ ಧಾರವಾಹಿಕ ಉಪನ್ಯಾಸ, ಕತೆ, ತೀರ್ಥಯಾತ್ರ ಮಹಾತ್ಮ್ಯ, ಮಹಿಳೆಯವರ ಆರೋಗ್ಯ, ಮದ್ದಿಲ್ಲದೆ ನೈಸರ್ಗಿಕ ಉಪಚಾರಗಳಿಂದ ರೋಗ ನಿವಾರಣ, ವೇದಾಂತ, ಗೀತೆ, ಮುಂತಾದ ಅನೇಕ ವಿಷಯಗಳಿವೆ. 130ಕ್ಕಿಂತಲೂ ಹೆಚ್ಚಿಗೆ ಪುಟಗಳಿವೆ. ಮೂರು ಕಲರುಗಳಿಂದ ಆಕರ್ಷವಾದ ಮುಖಪೃಷ್ಠವಿದೆ. ಒಂದು ಸಂಚಿಕೆಯ ಕ್ರಯ ೦-೪೦ ನಯೇಪೈಸೆ. ವರುಷದ್ದು ರೂ. ೪-೦೦ ಇದೆ. ಅವಶ್ಯ ಚಂದಾದಾರರಾಗಿರಿ.

ಶ್ರೀ ರಾಮತೀರ್ಥ ಯೋಗಾಶ್ರಮ,
ಮುಂಬಯಿ-೧೪.

The Moolky Bank, Ltd.
MULKI.
ಡಿಪ್ರೋಸಿಟು ಮೇಲಣ ಆಕರ್ಷಕ
ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 8,000/- ಮತ್ತು ಮೇಲಣ ಡಿಪೋಸಿಟಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ¼%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.

ಯಂ. ಆರ್. ಯಚ್. ಪ್ರೂಂಜ.
ಮೆನೇಜರ್,

ಮೂಲ್ಕಿ ಬೇಂಕ್ ಲಿ. ಮುಲ್ಕಿ.

ನಿಮಗೂ ಗೊತ್ತಿರಲಿ

ಪೋಲೀಸರಿಗೆ ಮಾತ್ರ ಹೆದರುವ ವ್ಯಕ್ತಿ!

ಕಥನದಲ್ಲಿ ರಸ ಹಿಂಡಿ ರಸಿಕರನ್ನು ದಂಗುಬಡಿಸಬಲ್ಲ ಡಾ| ಹಿಚ್‌ಕಾಕರು ಚಲಚ್ಚಿತ್ರ ನಿರ್ಮಾಪಕರಲ್ಲಿ ವಿಶ್ವವಿಖ್ಯಾತರು. ನಾಟ್ಯಕಲಾ ಪ್ರೇಮದಿಂದ ಅದರಲ್ಲಿಯೇ ಮುಳುಗಿರುವುದು ತಮ್ಮ ಕರ್ತವ್ಯವೆಂದು ತಿಳಿಯುವ ಇವರು ಯಾರಿಗೂ ಅಂಜುವುದಿಲ್ಲ; ಆದರೆ, ಪೋಲೀಸರೆಂದರೆ, ಅವರ ಎದೆ ಗಡಗಡಿಸುತ್ತದೆ!

ಚಲಚ್ಚಿತ್ರ ನಿರ್ದೇಶನದಲ್ಲಿ ಮಹಾ ವಿದ್ವಾಂಸರು ಶ್ರೀ ಹಿಚ್‌ಕಾಕ್ ಎಂದು ಮಾತ್ರ ಕೆಲವರಿಗೆ ಗೊತ್ತು. ಒಬ್ಬ ಪರಿಶ್ರಮಿ ನಿರ್ದೇಶಕನು ಐತಿಹಾಸಿಕ ಅಥವಾ ಪೌರಾಣಿಕ ಕಥಾ ಚಿತ್ರಗಳನ್ನು ನಿರ್ಮಿಸಿ ಪ್ರೇಕ್ಷಕರನ್ನು ಮುಗ್ಧಗೊಳಿಸಬಲ್ಲನಾದರೂ ಸಂಪೂರ್ಣ ಸಾಮಾನ್ಯ ಕಥಾನಕದ ಆಧಾರದಿಂದ ದರ್ಶಕರನ್ನು ವಿಮೋಹಿತಗೊಳಿಸುವುದು ಹಿಚ್‌ಕಾಕರ ವೈಶಿಷ್ಟ್ಯವೆಂದು ವಿಮರ್ಶಕರ ಅಭಿಪ್ರಾಯ.

ಶ್ರೀ ಹಿಚ್‌ಕಾಕರು ಬಹುಪರಿಶ್ರಮಿಗಳು. ಚಿತ್ರ ತಯಾರಿಯ ವೇಳೆ ಅವರು ಒಮ್ಮೊಮ್ಮೆ ಎಂಟು ಹತ್ತು ದಿನಗಳ ವರೆಗೂ ತನ್ಮಯರಾಗಿಯೇ ಇರುತಿದ್ದರು. ಹಸಿವು, ಬಾಯಾರಿಕೆ. ಸ್ನಾನ, ಅಲಂಕಾರಗಳ ಗೊಡವೆಯಿಲ್ಲದೆ ಅವರು ತಮ್ಮ ಕಾರ್ಯದಲ್ಲಿ ತತ್ಪರರಾಗುತಿದ್ದರು. ಕಥಾಲೇಖಕರೊಡನೆಯೇ ಕಥೆಯ ಮೂಲ ಪ್ರತಿಯನ್ನು ತಯಾರಿಸಿಕೊಳ್ಳುತಿದ್ದರು ತಾನೂ ಅವರೊಡನೆ ಕೂಡಿಕೊಂಡು ಕಥಾನಕವು ಅಧಿಕಾಧಿಕ ಸುಘಟಿತ ಹಾಗೂ ಸಂವಾದವು ರೋಚಕವಾಗಿರುವಂತೆ ಎಚ್ಚರಿಕೆ ವಹಿಸುತಿದ್ದರು.

ನಿರ್ಮಾಣಕಾರ್ಯವಾರಂಭವಾಗುವುದಕ್ಕೆ ನಾಕಷ್ಟು ಪೂರ್ವಭಾವಿಯಾಗಿಯೇ ಅವರು ಕಥಾವಿವರಣೆಗೆ ಲಿಖಿತರೂಪವೀಯುತಿದ್ದರು. "ಇದುವರೆಗೆ ನಾನು ಕೆಮರಾದೆದುರು ಕಥೆಯಲ್ಲಿ ಪರಿವರ್ತನೆಯನ್ನಾಗಲೀ ಕಥಾಸೂತ್ರದ ಸಂಶೋಧನೆಯನ್ನಾಗಲೀ ಮಾಡಿಲ್ಲ" ಎಂದವರು ಅಭಿಮಾನ ಪೂರ್ವಕವಾಗಿ ಹೇಳಿಕೊಳ್ಳುತ್ತಾರೆ. ಕಥೆಯಲ್ಲಿ ರೋಚಕತೆಯನ್ನು ಹುಟ್ಟಿಸುವ ಸಲುವಾಗಿ ಅವರು ಪತ್ತೇದಾರಿತನ ಕಳವು, ಕೊಲೆ, ಸುಲಿಗೆ, ಹೂಳಿಟ್ಟ ಕೊಪ್ಪರಿಗೆ ಮೊದಲಾದುವುಗಳಿಗೆ ಸಂಬಂಧಿಸಿದ ಘಟನೆಗಳನ್ನು ತರುವರಾದರೂ ಈ ಕೌಶಲವು ಸ್ವಾಭಾವಿಕ ರೂಪದಲ್ಲಿ ತೋರ್ಪಡುವುದು ಹೆಮ್ಮೆಯ ಸಂಗತಿ.

ಆಲ್ಫ್ರೆಡ್ ಹಿಚ್‌ಕಾಕರು ಲಂಡನ್ನಿನಲ್ಲಿ ಜನಿಸಿದ್ದರು. ಅವರು ವಿಜ್ಞಾನ ಮತ್ತು ಇಂಜನಿಯರಿಂಗ್ ಶಿಕ್ಷಣವನ್ನು ಲಂಡನ್ ವಿಶ್ವವಿದ್ಯಾಲಯದಲ್ಲಿಯೇ ಪಡೆದರು. ಅಮೆರಿಕೆಯ ಚಲಚ್ಚಿತ್ರಗಳು ಅವರ ಜೀವನ ವಿಕಾಸದಲ್ಲಿ ಬಹುಮೂಲ್ಯ ಪಾತ್ರ ವಹಿಸಿದ್ದುವು. ಶ್ರೀ ಹಿಚ್‌ಕಾಕರು ಇದನ್ನು ಹೃತ್ಪೂರ್ವಕವಾಗಿ ಒಪ್ಪಿಕೊಳ್ಳುತ್ತಾರೆ.

ಲಂಡನ್ನಿನಲ್ಲಿ 'ಪೆರಮೌಂಟ್' ಸ್ಟುಡಿಯೊದ ಶಾಖೆಯು ಪ್ರಾರಂಭವಾದೊಡನೆಯೇ ಶ್ರೀ ಹಿಚ್‌ಕಾಕರು ನೌಕರಿಗಾಗಿ ಒಂದು ಅರ್ಜಿ ಗುಜರಾಯಿಸಿದರು. ಇಪ್ಪತ್ತು ವರ್ಷದ ತರುಣ ಹಿಚ್‌ಕಾಕರಿಗೆ ಉದ್ಯೋಗ ಲಭಿಸಿತು. ತದನಂತರ, ತನ್ನ ಕಾರ್ಯಕ್ಷಮತೆ, ಚತುರತೆ ಮತ್ತು ಸಾಮರ್ಥ್ಯಗಳಿಂದ ಮೇಲಧಿಕಾರಿಗಳನ್ನು ಪ್ರಸನ್ನೀಕರಿಸಿದರು. ಅವರು ಲಂಡನ್ನಿನಲ್ಲಿ ಹಲವಾರು ಚಲಚ್ಚಿತ್ರಗಳನ್ನು ನಿರ್ಮಿಸಿದರು ಇವುಗಳಲ್ಲಿ 'ದಿ ಥರ್ಟಿನೈನ್ ಸ್ಟೆಪ್ಸ್ ಅಂಡ್ ದಿ ಲೇಡಿ ವೆನಿಶೀಜ್' ಎಂಬುದು ಸರ್ವಲೋಕಪ್ರಿಯ ಹಾಗೂ ಸುಪ್ರಸಿದ್ಧವಾಗಿದೆ. ಈ ಚಿತ್ರವು 'ಕ್ಲಾಸಿಕಲ್ ಫಿಲ್ಮ್' ಗಳ ಸಾಲಿನಲ್ಲಿ ಸೇರಿಕೊಂಡು ಆಗಾಗ ಪ್ರದರ್ಶಿತವಾಗುತ್ತಿದೆ.

೧೯೩೯ರಲ್ಲಿ ಶ್ರೀ ಹಿಚ್‌ಕಾಕರು ಲಂಡನನ್ನು ತ್ಯಜಿಸಿ ಹಾಲಿವುಡ್‌ಗೆ ತೆರಳಿದರು. ಆ ಸಮಯದಲ್ಲಿ ಅಮೆರಿಕೆಯ ಸ್ಟುಡಿಯೊಗಳು ನಾನಾ ಪ್ರಕಾರದ ಯಾಂತ್ರಿಕ ಸಾಧನಗಳಿಂದ ಸುಸಜ್ಜಿತಗೊಂಡಿದ್ದುವು. ಇವು ಶ್ರೀ ಹಿಚ್ ಕಾಕರನ್ನು ಆಕರ್ಷಿಸಿದುವು; ಅಲ್ಲದೆ ಹಾಲಿವುಡ್ಡಿನಲ್ಲಿ ವೇತನವೂ ಬಹಳಷ್ಟು ದೊರೆಯುತಿತ್ತು.

ಪ್ರಪಂಚದ ಸುಖಸಜ್ಜನರಲ್ಲಿ ಇಂದು ಶ್ರೀ ಹಿಚ್‌ಕಾಕರೊಬ್ಬರು. ಅವರ ದೇಹ ದಪ್ಪ. ತೆಪ್ಪಗೆ ಕೂತಿರುವುದು ಇವರ ಪ್ರಕೃತಿಗೆ ವಿರೋಧ. ಸದಾ ಮಧುರ ಸ್ವಭಾವವಿವರದಾದರೂ ಜನರನ್ನು ನಿರಂತರ ಹೆದರಿಸುತ್ತಿರುವುದೇ ಅವರ ಉದ್ಯೋಗವಾಗಿದೆ. ಭಯ, ಹತ್ಯೆ, ಸಂಶಯಗಳ ಚಿತ್ರ ತಯಾರಿಸುವುದು ಇವರ ಅತಿ ಪ್ರಿಯವಾದ ಕೆಲಸ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಅವರು ಜಗದ್ವಿಖ್ಯಾತವೆನಿಸಿದ 'ಸಸ್ಪೆನ್ಸ್ ಫಿಲ್ಮ್' ಗಳನ್ನು ತಯಾರಿಸುತ್ತ ಇದ್ದಾರೆ. ಇವುಗಳಿಂದಾಗಿಯೇ ಎಲ್ಲ ದೇಶಗಳವರಿಗೂ ಹಿಚ್‌ಕಾಕರ ಹೆಸರು ಚಿರಪರಿಚಿತವಿದೆ.

ಒಂದು ಬಾರಿ ಅವರು ಸ್ವೀಡನಿಗೆ ತೆರಳಿದಾಗ ಅಶಾತೀತ ಸ್ವಾಗತವೇ ಲಭಿಸಿತು. ಅವರು ಒಂದು ಹೋಟಲಿನ ಮಾಲಿಕರಿಗೆ ಫೋನು ಮಾಡಿ ತಾನು ಬರುವುದಾಗಿ ಸೂಚನೆಯಿತ್ತಿದ್ದರು. ಆತ ಬಗೆಬಗೆಯ ಖಾದ್ಯಗಳನ್ನು ಸಿದ್ಧಪಡಿಸಿದ್ದ. ಬಡಿಸುವಾಗ್ಯ ಖಡ್ಗ, ತೋಪು, ಬಂದೂಕು ಮೊದಲಾದುವುಗಳ ಆಕಾರದಲ್ಲಿದ್ದ ಆ ನಾನಾ ಪ್ರಕಾರದ ಖಾದ್ಯಗಳನ್ನು ಕಂಡು ಸ್ವಯಂ ಹಿಚ್‌ಕಾಕರಿಗೇನೇ ನಗು ತಡೆಯಲಾಗಲಿಲ್ಲ. ಹಾಂಗ್‌ಕಾಂಗಿನಲ್ಲಿಯೂ ಅವರಿಗೆ ಅಭೂತಪೂರ್ವ ಸ್ವಾಗತ ದೊರಕಿಯಿತು. ಅಲ್ಲಿನೆಲ್ಲಾ ಪತ್ರಿಕೆಗಳು ದೊಡ್ಡಕ್ಷರಗಳಲ್ಲಿ ಅವರ ಆಗಮನದ ವಾರ್ತೆಯನ್ನು ಮುದ್ರಿಸಿದುವು.

ಪ್ರಸಿದ್ಧ ವೈಜ್ಞಾನಿಕ ಡಾ| ರಾಬರ್ಟ್ ವಿಲಿಕನ್‌ರೊಡನೆ ಒಮ್ಮೆ ಡಾ| ಹಿಚ್‌ಕಾಕರು ಕೇಳಿದ್ದರೇ: "ಅಣು ಬಾಂಬು ತಯಾರಾದರೆ, ಅದೆಷ್ಟು ದೊಡ್ಡದಿರಬಹುದು? ಎಂದು". "ಏನಪ್ಪ, ನಿನಗೆ ಬೇ

(೧೦ ನೇ ಪುಟ ನೋಡಿರಿ)



ಕ್ಷಯರೋಗವು ನಿಮಗೆ ಹೇಗೆ ತಗಲುತ್ತದೆ?

ಕ್ಷಯರೋಗವು ಒಬ್ಬರಿಂದ ಇನ್ನೊಬ್ಬರಿಗೆ ಹಲವು ವಿಧದಿಂದ ತಗಲುತ್ತದೆ.

(1) ಟಿ. ಬಿ. ಕ್ರಿಮಿಗಳಿಂದ ಕೂಡಿದ ಗಾಳಿಯನ್ನು ಸೇವಿಸುವುದರಿಂದ:

(ಟಿ. ಬಿ. ತಗಲಿದ ಜನರು ಕೆಮ್ಮುವುದರಿಂದಾಗಲೀ ಕಫವನ್ನು ಹೊರಗೆ ಉಗುಳುವುದರಿಂದಾಗಲೀ ಕ್ರಿಮಿಗಳನ್ನು ಹರಡುತ್ತಾರೆ.) ಇದು ಸಾಮಾನ್ಯವಾಗಿ ಸರಿಯಾಗಿ ಗಾಳಿ ಬೆಳಕು ಇಲ್ಲದ ಕೋಣೆಗಳಲ್ಲಿ ನಡೆಯುತ್ತದೆ.

(2) ಎಲ್ಲರೂ ಉಪಯೋಗಿಸುವ ವಸ್ತುಗಳಿಂದ:

ನೀರು ಕುಡಿಯುವ ಲೋಟಾಗಳು, ಊಟದ ಬಟ್ಟಲುಗಳು, ಹಾಸು ಬಟ್ಟೆ, ಟವೆಲ್ ಮತ್ತು ಎಲ್ಲರೂ ಉಪಯೋಗಿಸುವ ವಸ್ತುಗಳನ್ನು ಕ್ಷಯರೋಗಿಯು ಉಪಯೋಗಿಸುವುದರಿಂದ ಅಥವಾ ಅವನ ಎಂಜಲು ಯಾ ಉಗುಳಿನಿಂದ ಕೂಡಿದ ವಸ್ತುಗಳನ್ನು ಬಳಸುವುದರಿಂದ.

ಕ್ಷಯರೋಗದ ಕುರಿತು, ಅದರ ಸ್ವಭಾವ, ತಡೆಗಟ್ಟುವ ವಿಧಾನ, ಚಿಕಿತ್ಸೆಯ ರೀತಿ, ಇವುಗಳನ್ನು ಜನರಿಗೆ ಹೇಳುವ ಉದ್ದೇಶಗಳಿಂದ ಕ್ಷಯರೋಗ ಮೊಹರು ಮಾರಾಟ ಚಳವಳವು ಕೂಡಿದೆ. ಈ ಚಳವಳವನ್ನು ಯಶಸ್ವಿಗೊಳಿಸಲಿಕ್ಕೆ ದಯಮಾಡಿ ಟಿ. ಬಿ. ಮುದ್ರೆಗಳನ್ನು ಕೊಂಡುಕೊಂಡು ನಿಮ್ಮ ರಾಜ್ಯದ ಟಿ. ಬಿ. ಸಂಘಗಳಿಗೆ ಅವುಗಳ ಚಟುವಟಿಕೆಗಳನ್ನು ಮುಂದುವರಿಸಲು ಸಹಾಯ ಮಾಡಿರಿ.

ಇದೀಗ ದೀಪಾವಳಿಯ ಸಮಯ. ಈ ದೀಪಾವಳೀ ಸಮಯದಲ್ಲಿ ನಮ್ಮ ಇಷ್ಟಮಿತ್ರರಿಗೆ ಉಡುಗೊರೆಗಳನ್ನು ಕೊಡಲು ಧಾವಿಸುವಾಗ ಟಿ. ಬಿ. ಮುದ್ರೆಗಳನ್ನು ಖರೀದಿಸಲಿಕ್ಕೂ ಅವುಗಳನ್ನು ಉಡುಗೊರೆಯ ಪೇಕೇಟುಗಳಿಗೆ ಅಂಟಿಸಲಿಕ್ಕೂ ಮರೆಯದಿರೋಣ. ಒಂದು ಟಿ. ಬಿ. ಮುದ್ರೆಯ ಬೆಲೆ 10 ನಯೇಪೈಸೆ ಮಾತ್ರ.

ಒಂದು ಟಿ. ಬಿ.
ಮುದ್ರೆಯ ಬೆಲೆ
ಹತ್ತು ನಯೇಪೈಸೆ ಮಾತ್ರ

ಮುದ್ರೆಗಳು ಸಿಗುವ ಸ್ಥಳಗಳು— (1) ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ. ಗವರ್ನಮೆಂಟ್ ಟಿ. ಬಿ. ಸೆನಿಟೋರಿಯಂ, ಓಲ್ಡ್ ಮದ್ರಾಸ್ ರೋಡು, ಬೆಂಗಳೂರು-೮. (2) ಮಹಿಳಾ ಮಂಡಲ, ಮತ್ತು ಶ್ರೀ. ಬಸವೇಶ್ವರ ದೇವಸ್ಥಾನ, ಪಂಚ್ ಕಮಿಟಿ, ಕಲ್ಯಾಣ ಗ್ರೈನ್ ಮರ್ಚೆಂಟ್ಸ್ ಎಸೋಸಿಯೇಶನ್ ಮತ್ತು ಭಾರತ ಸಮಾಜ, ಬೀದರ. (3) ದೈವಜ್ಞ ವೆಲ್‌ಫೇರ್ ಸೆಂಟರ್, ಶ್ರೀ ಲಕ್ಷ್ಮೀ ನಾರಾಯಣ ಟೆಂಪ್ಲ್ ಕಂಪೌಂಡು, ಬಸವನಗುಡಿ, ಮಂಗಳೂರು. (4) ಗೌರವ ಕಾರ್ಯದರ್ಶಿ, ದ. ಕ. ಜಿಲ್ಲಾ ಕ್ಷಯರೋಗ ಸಮಿತಿ, ಗವರ್ನಮೆಂಟ್ ವೆನ್‌ಲಾಕ್ ಹಾಸ್ಪಿಟಲ್, ಮಂಗಳೂರು. (5) ಶ್ರೀ ಯಲ್. ಎಸ್. ಕಾಮತ್, ಆರ್ಗನೈಜರ್, ಭಾರತ ಸೇವಕ ಸಮಾಜ, ಕೆನರಾ ಕಾಲೇಜು, ಕುಮಟಾ. (6) ಅಧ್ಯಕ್ಷರುಗಳು ಮಹಿಳಾ ಸಮಾಜ, ಕಾರವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ಧಾಪುರ, ಅಳಿಯೂರು, ಸೂಪ ಮತ್ತು ಯಲ್ಲಾಪುರ.

ಹನ್ನೊಂದನೇ ಕ್ಷಯರೋಗ ಮೊಹರು ಮಾರಾಟ ಚಳವಳ

(ದಿ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ ನ್ಯೂ ಡಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟದ್ದು.)

Space kindly donated by:
M/s. Place, Siddons & Gough (Private) Ltd., Calcutta.

ವ್ಯಕ್ತಿ ಪರಿಚಯ

ನೈಜೀರಿಯಾ ಪ್ರಧಾನಿ—ಅಬೂಬಕರ್

ಅಧ್ಯಾಪಕರಾಗಿದ್ದ ಅಬೂಬಕರ್ ಪ್ರಧಾನಿಯಾಗುವರೆಂದು ಯಾರು ಭವಿಷ್ಯ ಅಂದಿದ್ದರು? ಆದರೆ, ನೈಜೀರಿಯಾಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಬೇಡಿದವರಲ್ಲಿ ಇವರೇ ಅಗ್ರಗಣ್ಯರಾಗಿ ಇಂದು ಮಹೋನ್ನತ ಪದವಿಗೇರಿದರು. 'ಅಖಿಲ ಆಫ್ರಿಕಾ'ವು ಕಲ್ಪನೆಯ ಕನಸು ಎನ್ನುತ್ತಾರೆ, ಇವರು.

ಆಫ್ರಿಕೆಯ ಸರ್ವ ವಿಶಾಲ ಮತ್ತು ಸಪನ್ನ ರಾಷ್ಟ್ರ ನೈಜೀರಿಯಾದ ಪ್ರಧಾನ ಮಂತ್ರಿಯ ಸ್ಥಾನಕ್ಕೆ ಓರ್ವ ಶಾಲಾಧ್ಯಾಪಕನನ್ನು ನೇಮಿಸಿ ಇತಿಹಾಸದಲ್ಲಿ ಒಂದು ವಿಶೇಷ ದಾಖಲೆಯನ್ನು ವಿಧಿಯು ನಿರ್ಮಿಸಿತು. ಅಲಹಾಜಿ ಸರ್ ಅಬೂಬಕರ್ ತಫಾವಾ ಬಲೇವಾರೇ ಈ ಅದೃಷ್ಟಶಾಲಿ ಅಧ್ಯಾಪಕರು. ತಫಾವಾ ಬಲೇವಾರೇ ಎಂಬುದು ಇವರು ಜನಿಸಿದ ಹಳ್ಳಿಯ ಹೆಸರು. ಅವರಿಗೆ ಸರ್ ಎಂಬ ಬಿರುದೂ ಇತ್ತೀಚೆಗೆ ದೊರೆತುದು. ಇವನ್ನುಳಿದರೆ, ಇಂದಿಗೂ ಅವರು ಮೂಲತಃ ಅಧ್ಯಾಪಕರಾಗಿಯೇ ಉಳಿದಿದ್ದಾರೆ.

ಆಫ್ರಿಕೆಯ ಅತ್ಯಂತ ಗಣನೀಯ ನೇತಾರರಲ್ಲಿ ಅಬೂಬಕರರು ಒಬ್ಬರಾಗಿದ್ದಾರೆ. ಲೋಕಪ್ರಿಯರಾಗುವಲ್ಲಿ ಅಥವಾ ಸತ್ತಾರೂಢರಾಗುವಲ್ಲಿ ಪ್ರತಿದ್ವಂದ್ವಿ ಇಲ್ಲವೇ ವಿರೋಧಿಯು ವಿರುದ್ಧ ಉರಿಕಾರಬೇಕಾದ ಅಗತ್ಯ ಇವರಿಗೆ ತೋರಿಬರಲಿಲ್ಲ. 'ನೀವು ಸಂತೆಪೇಟೆಗಳಿಗೆ ಹೋಗಿ ಭಾಷಣಗಳನ್ನು ಮಾಡಿ ಜನತೆಯನ್ನು ಉತ್ತೇಜಿತಗೊಳಿಸಿರಿ"ಯೆಂದೊಬ್ಬ ವಸಾಹತಿನ ಅಧಿಕಾರಿಯೊಮ್ಮೆ ಸಲಹೆಯಿತ್ತಾಗ, ಇವರು "ನಾನು ಈ ಪ್ರಕಾರದ ಪ್ರಚಾರದಲ್ಲಿ ವಿಶ್ವಾಸವಿಡುವುದಿಲ್ಲ; ನನ್ನ ಮಾರ್ಗದಲ್ಲಿಯೇ ನಾನು ಕಾರ್ಯಪ್ರವೃತ್ತನಾಗುತ್ತೇನೆ; ಇದರಿಂದ ಜನತೆ ಸಂತುಷ್ಟವಾಗದೆ ಹೋದರೆ, ನನ್ನ ದುರದೃಷ್ಟ. ಮತ್ತೇನನ್ನೂ ನಾನು ಮಾಡಲಾರೆ" ಎಂದಿವರು ಸ್ಪಷ್ಟವಾಗಿ ಅಂದಿದ್ದರು.

ಸರ್ ಅಬೂಬಕರರು ವಿಶ್ವಾಸ ಪಾತ್ರ ಮತ್ತು ಧೈರ್ಯಶಾಲಿ ವ್ಯಕ್ತಿಯಾಗಿದ್ದಾರೆ ಇವರ ಆತ್ಮ ವಿಶ್ವಾಸ ಅತಿ ಪ್ರಬಲವಾದುದು. ನೈಜೀರಿಯಾದ ಇತರ ನಾಯಕರಂತೆ ಪ್ರಭಾವ ಶಾಲಿ ವ್ಯಕ್ತಿತ್ವವಿಲ್ಲದಿದ್ದರೂ ಇವರು ಕ್ಷೇತ್ರೀಯ ಪ್ರತಿದ್ವಂದ್ವೀ ಶಕ್ತಿಗಳ ಸಂತುಲನೆಯಲ್ಲಿ ಸಫಲರಾಗಿದ್ದಾರೆ. ಕ್ರಾಂತಿಗಿಂತ ಸುಧಾರಣೆಯಲ್ಲಿ ಇವರಿಗೆ ಅತುಳ ವಿಶ್ವಾಸ. ಕ್ರಾಂತಿಕಾರಿ ಪರಿವರ್ತನೆಯಿಂದ ಜನರು ಅಪ್ರಸನ್ನರಾಗುವರಾದುದರಿಂದ ಪರಿವರ್ತನೆಯು ಕ್ರಮವಾಗಿ ನಡೆಯುತ್ತ ಬರಬೇಕೆನ್ನುತ್ತಾರೆ, ಅಬೂಬಕರ್.

ಶ್ರೀ ಅಬೂಬಕರರ ತಂದೆ ಜಿಲ್ಲಾಧಿಕಾರಿಯಾಗಿದ್ದರು. ತಮ್ಮ ಗ್ರಾಮದಲ್ಲಿ ಪ್ರಾರಂಭಿಕ ಶಿಕ್ಷಣವನ್ನು ಪಡೆದನಂತರ, ಉತ್ತರ ನೈಜೀರಿಯಾದ ಕೆಟಸಿಯಾ ಕಾಲೇಜಿನಲ್ಲಿ ಅಬೂಬಕರ್ ಸೇರಿಕೊಂಡರು. ತಮ್ಮ ೨೩ನೆಯ ವಯಸ್ಸಿನಲ್ಲಿ ಅಧ್ಯಾಪನ ವ್ಯವಸಾಯದಲ್ಲಿ ಪ್ರಮಾಣಪತ್ರ ಪಡೆದುಕೊಳ್ಳಲು ಲಂಡನ್ ವಿಶ್ವವಿದ್ಯಾಲಯದ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್ಸ್‌ನಲ್ಲಿ ಪ್ರವೇಶ ಪಡೆದರು. ಈ ನಡುವೆ ಇವರು ಅಧ್ಯಾಪಕರಾಗಿ ದುಡಿದಿದ್ದರು. ಶಿಕ್ಷಣ ಸಮಾಪ್ತಿಯಾಗಿ ಇವರು ನೈಜೀರಿಯಾಕ್ಕೆ ಮರಳಿ ಬರುವಾಗ, ಅವರಲ್ಲಿ ನವೀನ ದೃಷ್ಟಿಯೊಂದು ಅಂಕುರಿಸಿತು. "ನವದೃಷ್ಟಿಯೊಡನೆ ನಾನು ಬ್ರಿಟನ್ನಿನಿಂದ ನೈಜೀರಿಯಾಕೆ ಮರಳಿದೆ; ಏಕೆಂದರೆ, ನಾನು ಬ್ರಿಟನ್ನಿನಲ್ಲಿ ವ್ಯಕ್ತಿಗತ ಸ್ವಾತಂತ್ರ್ಯದ ಸುಪಕ್ವವನ್ನರಿತಿರುವ ಕಾನೂನು ಪಾಲನೆ ಮಾಡುವ ನಿರ್ಭೀತ ವ್ಯಕ್ತಿಗಳನ್ನು ಕಂಡಿದ್ದೆ" ಎಂದು ಅವರೇ ಹೇಳುತ್ತಾರೆ.

೪೭ ವರ್ಷ ವಯಸ್ಸಿನ ಅಬೂಬಕರರು ಗಂಭೀರ ಪ್ರಕೃತಿಯವರು. ತಮ್ಮ ಭಾವಗಳನ್ನು ಮುಖದಲ್ಲಿ ಪ್ರಕಟಗೊಳಿಸುವುದಿಲ್ಲ. ಕೆಲವೊಮ್ಮೆ ಗಂಭೀರ ಚಿಂತನಾ ನಂತರ ಅವರು ಮುಗುಳು ನಕ್ಕರೆಂದರೆ, ಅವರ ವ್ಯಕ್ತಿತ್ವವು ದೀಪ್ತಮಾನವಾಗುತ್ತದೆ. ನೈಜೀರಿಯಾದ ಸಂಪೂರ್ಣ ಸ್ವಾತಂತ್ರ್ಯವನ್ನು ಸಮರ್ಥಿಸುವವರಲ್ಲಿವರು ಅಗ್ರ ಗಣ್ಯರು. ಆದರೆ, 'ಅಖಿಲ ಆಫ್ರಿಕಾ'ದಂತಹ ಶಬ್ದಗಳು ಇವರನ್ನು ಆಕರ್ಷಿಸಗೊಳಿಸುವುದಿಲ್ಲ. ಐದು ವರ್ಷಗಳಿಗೆ ಮೊದಲೇ ಇವರು ಅಮೆರಿಕೆಯನ್ನು ನೋಡಿ ಬಂದಿದ್ದಾರೆ.

ಆಫ್ರಿಕೆಯ ಎಲ್ಲೆಡೆಯಲ್ಲೂ ಸ್ವಾತಂತ್ರ್ಯಾಂದೋಲನವು ಹರಡಿದಾಗ, ಶ್ರೀ ಅಬೂಬಕರರು ಆಂದೋಲನಕ್ಕೆ ನೆಗೆದರು. ಸುಸ್ಪಷ್ಟವಾದ ಮಾತುಗಳಲ್ಲಿ ಐದು ವರ್ಷಗಳ ಹಿಂದೆ ಇವರು ನೈಜೀರಿಯಾದ ಪೂರ್ಣಸ್ವರಾಜ್ಯವನ್ನು ಬೇಡಿದ್ದರು. ಅಂದಿನಿಂದ ಇವರು ಕಾಲಕ್ರಮೇಣ ನಾಯಕತನವನ್ನೂ ಗಳಿಸುತ್ತ ಬಂದರು. ಇವರ ನಾರ್ದರ್ನ್ ಪೀಪಲ್ಸ್ ಕಾಂಗ್ರೆಸ್ ಎಂಬುದು ನೈಜೀರಿಯಾದ ಬಹುದೊಡ್ಡ ರಾಜಕೀಯ ಪಕ್ಷ.

ಗೇರೆ ಜಾತಿಗೆ ಸೇರಿದ ಅಬೂಬಕರ್ ೧೯೪೬ರಲ್ಲಿ ಬಾವುಚಿಯ ಶ್ರೀಮಂತರ ಶಾಸನ ಪರಿಷತ್ತಿನಲ್ಲಿ ಸದಸ್ಯರಾಗಿ ನಿಯುಕ್ತರಾದರು. ೧೯೪೭ರಲ್ಲಿ ಸಂವಿಧಾನವು ವ್ಯವಸ್ಥಿತವಾದನಂತರ ಕೇಂದ್ರೀಯ ವಿಧಾನ ಪರಿಷತ್ತಿನಲ್ಲಿ ಸದಸ್ಯರಾಗಿ ಚುನಾಯಿತರಾದರು. ಒಂದು ವರ್ಷಾನಂತರ ಲಂಡನ್ನಿನಲ್ಲಿ ಸೇರಿದ್ದ ಆಫ್ರಿಕಾ ಸಮ್ಮೇಳನದಲ್ಲಿಯೂ ಇವರು ಭಾಗವಹಿಸಿದರು.

ನೈಜೀರಿಯಾದ ಸ್ವಾತಂತ್ರ್ಯೋತ್ಸವ ಸಮಾರಂಭದ ಕೊನೆಯಲ್ಲಿ ಸರ್ ಅಬೂಬಕರ್ ಅಂದಿದ್ದರು: "ಸುವಿಶಾಲದೇಶ ನೈಜೀರಿಯಾವು ಕಠೋರತೆ ಅಥವಾ ರಕ್ತಪಾತವಿಲ್ಲದೆ ಸ್ವಾತಂತ್ರ್ಯವನ್ನು ಪಡೆದಿದೆ. ಗಂಭೀರವಾದ ಅಂತಾರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ತನ್ನ ಹೊಣೆಗಾರಿಕೆಯೇನೆಂಬುದನ್ನದು ಜಗತ್ತಿಗೆ ತೋರಿಸಿಕೊಡಬೇಕಾಗಿದೆ." ಈ ಉತ್ತರದಾಯಿತ್ವವನ್ನು ಪೂರ್ಣ ಮಾಡುವ ಸಲುವಾಗಿಯೇ ಸರ್ ಅಬೂಬಕರ್ ನೈಜೀರಿಯಾ ಪ್ರತಿನಿಧಿ ಮಂಡಲದ ನಾಯಕರಾಗಿ ಸಂಯುಕ್ತ ರಾಷ್ಟ್ರ ಸಂಘದ ಸಭೆಯಲ್ಲಿ ಭಾಗ ವಹಿಸಿದ್ದಾರೆ.

)ನೆಯ ಕನಸು!

ವಿಶ್ವ ಸರಕಾರದ ಹುಚ್ಚು ಕಲ್ಪನೆ!

ವಿಶ್ವರಾಜ್ಯ—ವಿಶ್ವ ಸರಕಾರದ ಕಲ್ಪನೆಗೆ ಹುಚ್ಚೆಂದು ಹೆಸರಿಡುವ ಈ ುದಲ್ಲಿ ಜನತೆಯು ಶಾಂತಿ ಸುಖ, ಸಮೃದ್ಧಿಗಳನ್ನು ಬಯಸುವುದಾದರೆ, ಅದು ನ ಕುಸುಮವೇ ಆಗುವುದು. ಜನತೆಯ ಆಶೆ-ಆಕಾಂಕ್ಷೆಗಳು ಪೂರೈಸ್ಯ ಕಾದರೆ, ವಿಶ್ವ ರಾಜ್ಯ—ವಿಶ್ವ ಸಂಹಿತೆಗಳ ನಿರ್ಮಾಣವೇ ತಾರಕೋಪಾಯ ಗಿದೆ.

ಂದಿನ ದಿನಗಳಲ್ಲಿ ಮಾನವ ಸಮಾಜ ಅಸಂತೋಷ, ಚಡ ಪಡಿಸುವಿಕೆ, ಅ ತಿಗಳ ಲಕ್ಷಣಗಳು ತಲೆದೋರುತ್ತಿ ದನ್ನು ನಾವುಪ್ರತ್ಯಕ್ಷ ಕಾಣುತ್ತೇವೆ. , ಈ ಅಸಂತೃಪ್ತಿ ಹಾಗೂ ದುಃಖ ಗ್ಗೆ ಸಮುಚಿತ ವಿಧಾನದಲ್ಲಿ ವಿಶ್ಲೇಷ ಡೆದಿರುವುದಿಲ್ಲ. ಪ್ರಸಿದ್ಧ ದಾರ್ಶನಿಕ ುದ ಎಮರ್ಸನ್ ಎಂಬವನು, "ಮಾ ಜೀವನ ಕ್ಷುದ್ರತಾಪೂರ್ಣವಾಗಿ ಂಬುದನ್ನು ನಾವೆಲ್ಲರೂ ಒಪ್ಪುತ್ತೇ ಆದರೆ ಹಿಂದೆಯೂ ಇದೇರೀತಿಯ ಂತಿ ಹಾಗೂ ಮುಕ್ತಿಯ ಅಭಿಲಾಷೆ ಟ್ಟು ಎಂದು ನಾವೆಂತು ತಿಳಿಯಬಹು ಇಂತಹ ಅಜ್ಞಾನ ಮತ್ತು ಅಭಾವ ಭೌತಿಕ ಐಶ್ವರ್ಯದ ನಂದನ ವನ ; ಮಾಯಾ ಮರೀಚಿಕೆಯಂ ರ್ವತ್ರ ವ್ಯಾಪಿಸಿರುವ ಆತ್ಮವಂಚನೆ ಮೂಲ ಹೇತುವಾಗಿದೆಯೆನ್ನ ಬ . ಸಮಾಜದ ಸಚೇತನ ತತ್ವವು ಕ ಾರರು ಹಾಗೂ ಅವರ ಅನುಯಾ ಗಳು ಆಲೋಚನೆ, ವಿಚಾರಣೆ ಹಾ ಸೃಜನಾತ್ಮಕ ಕಲ್ಪನೆ ಮತ್ತು ಪ್ರೇ ದಾಯಕ ವೆನಿಸಿದ ಹಾರ್ದಿಕ ಅನೂ ತಿಗಳ ಅಭಾವದಿಂದಿರುವುದರಿಂದ ಈ ಬಾನಲವು ಬೂದಿ ಮುಚ್ಚಿದ ಕೆಂಡ ಒಳಗಿಂದೊಳಗೆ ದಗದಗಿಸುತ್ತದೆ." ಂದು ಆದರ್ಶದ ಹೆಸರೆತ್ತುವವರಲ್ಲಿ ಭ, ಈರ್ಷ್ಯೆ, ದಂಭ, ಲಿಪ್ಸೆ, ದರ್ಪ, ತ್ತ ಹಿಂಸೆಗಳೇ ಹೆಚ್ಚಿವೆ. ಈ ಆದರ್ಶ ಇಂದು ನಮ್ಮ ಸಮಾಜದ ಮನಸ್ಸಿ ಹಾಗೂ ಅದರ ಕಾರ್ಯಕಲಾಪಗಳ ಪಸರಿಸಿಕೊಂಡಿದೆ. ವಿಶಾಲವಾದ ಮ ಳಲ್ಲಿ ಸೌಂದರ್ಯ ಮತ್ತು ಕಲೆಗಳು ಪವಾಗಿರುವಂತೆ ಮಾನವನಲ್ಲಿ ಮ ನ್ನು ಉತ್ತೇಜಿಸುವ ವಿಶ್ವಾಸಗಳೂ ರವಾಗಿವೆ. ಭಾವನಾತ್ಮಕ ಮೌಲ್ಯಗ ಭಾವ, ಸೃಜನಾತ್ಮಕ ಚಿಂತನೆಗಳ ಸ, ಬಾಹ್ಯಾಡಂಬರಕ್ಕೆ ನೀಡುವ ಮಹತ್ವಗಳೇ ಈ ತೆರದ ನಿರಾಶೆಗೆ ಮುಖ್ಯ ಕಾರಣಗಳು. ಅಚಿಂತನೆಯೂ ಈ ಬಗ್ಗೆ ಕೆಲಮಟ್ಟಿಗೆ ಕಾರಣವಾಗಿದೆ.

"ಸಾಮಾನ್ಯವಾಗಿ ಪ್ರತಿಯೊಂದು ಪೀಳಿಗೆಯು ತನ್ನ ಕಾಲ ಮತ್ತು ಸಮಯದಲ್ಲಿ ವಿಶ್ವಪುನನಿರ್ಮಾಣದ ಬಗ್ಗೆ ವಿಶ್ವಾಸ ಮಾಡಿರುವುದು. ಆದರೆ, ನಮ್ಮ ಪೀಳಿಗೆಯ ಕರ್ತವ್ಯ ಇಷ್ಟರಿಂದಲೇ ಮುಗಿಯುವುದಿಲ್ಲ; ನಮ್ಮ ಕಾಲಾವಧಿಯಲ್ಲಿ ಈ ವಿಶ್ವವನ್ನು ಸ್ವಹಸ್ತಗಳಿಂದಲೇ ನಾಶಮಾಡಿ ಬಿಡಬೇಕಾಗಿದೆ" ಎಂದು ದಿವಂಗತ ಅಲ್ಬೇರ ಕಾಮೂರವರು ಅಂದಿದ್ದರು. ಕಾಮೂರವರು ಒಂದು ಹೊಸ ವಿಶ್ವರಾಜ್ಯ ಹಾಗೂ ಸರಕಾರದ ಕಲ್ಪನೆ ಮಾಡಿದ್ದರು. ಈ ಕಲ್ಪನಾ ರಾಜ್ಯದಲ್ಲಿ ತತ್ಕಾಲದ ನಿರಾಶಾಮಯ ವಾತಾವರಣದಲ್ಲಿಯಾದರೂ ರಾಷ್ಟ್ರಗಳ ನಡುವೆ ಸ್ವಾತಂತ್ರ್ಯದ ಆಧಾರದ ಮೇಲೆ ಸಂಪೂರ್ಣ ಸಮಾಜದಲ್ಲಿ ಪುನಃ ಶಾಂತಿ, ಶ್ರಮ ಹಾಗೂ ಪ್ರೇರಣಾದಾಯಕ ವಿಶ್ವಾಸಗಳನ್ನು ಪ್ರತಿಷ್ಠಾಪಿಸಬೇಕು. "ಮಾನವ ಸಮಾಜವನ್ನು ವಿಧ್ವಂಸತೆ ಅಥವಾ ದುರವಸ್ಥೆಯಿಂದುಳಿಸಿ, ನ್ಯಾಯ ವ್ಯವಸ್ಥೆಯನ್ನು ಸ್ಥಾಪಿಸಬೇಕು, ಇದು ವಿಶ್ವಸರಕಾರ ಸ್ಥಾಪನೆಯಿಂದ ಮಾತ್ರ ಸಾಧ್ಯ" ಎಂದು ಪ್ರಸಿದ್ಧದಾರ್ಶನಿಕ ಬರ್ಟ್ರೆಂಡ್ ರಸ್ಸೆಲರು ಅನ್ನುತಾರೆ. ಆದರೆ, ಹಲವಾರು ರಾಷ್ಟ್ರ ಮತ್ತು ವ್ಯಕ್ತಿಗಳಿಗೆ ವಿಶ್ವಸರಕಾರದಲ್ಲಿ ಆಸ್ಥೆ—ಆಸಕ್ತಿಯಿಲ್ಲ. ಅಜ್ಞಾನ ಮತ್ತು ಅಂಧಕಾರಮಯ ಪ್ರವೃತ್ತಿಗಳು ನಮ್ಮನ್ನು ಈಗಲೂ ಸರ್ವನಾಶದತ್ತ ಕೊಂಡೊಯ್ಯುತ್ತಿವೆ; ಇವನ್ನು ದೂರೀಕರಿಸುವ ಯಾವುದೇ ಸಾಧನ ನಮ್ಮೊಡನಿರುವುದಿಲ್ಲ.

ಇಂದು ಅದೃಶ್ಯ ಪಾಶವಿಕ ಪ್ರವೃತ್ತಿಗಳು ನಿರ್ಣಾಯಕ ಸ್ಥಿತಿಯಲ್ಲಿವೆ. ಆದುದರಿಂದ ಯಾವುದೇ ಕಾಯಿದೆ ವ್ಯವಸ್ಥೆಯು, ಅದೆಷ್ಟು ತರ್ಕಸಂಗತವಾಗಿಯೇ ಇರಲಿ, ಅದು ಅಧಿಕಾಂಶ ಜನಸಮಾಜವನ್ನು ಆಕರ್ಷಿಸಲು ಅಶಕ್ತವಾಗುವುದು. ಸಮುಚಿತ ಚಿಂತನೆ, ಸಾಧನ ಸಾಮಗ್ರಿಗಳು ಒಂದುಗೂಡಿದುವೆಂದರೆ, ಅತಿ ನಿಕಟದಲ್ಲಿಯೇ ನವಯುಗದ ಈ ಕಲ್ಪನೆಯ ವಿಶ್ವಸಂಹಿತೆ, ಪರಾವಲಂಬಿ ಹಾಗೂ ಬಾಲಿಶತೆಯಿಂದ ಕೂಡಿದ ಭಾವನೆಗಳು ದೂರವೋದುವ ಕಾಲವಿದೆಯೆಂದು ಅರ್ಥ. ಇದರಲ್ಲಿ ಸಂಸ್ಕಾರ ಜನ್ಯ ನಿರಂಕುಶ ಧಾರ್ಮಿಕ ಭಾವನೆಗಳು ಛಾಯಾ ಮಾತ್ರಕ್ಕೂ ಇರಲಾರವು; ಯೌವನಾವಸ್ಥೆಯ ಉದ್ದಂಡ ಪ್ರವೃತ್ತಿಯಂತೆ ನವೋದಿತ ರಾಷ್ಟ್ರಗಳಲ್ಲಿ ಕಂಡು ಬರುವ ವಿರೋಧ, ವಿದ್ರೋಹ, ಸ್ವಚ್ಛಂಧತೆ ಹಾಗೂ ನಿಕೃಷ್ಟ ವ್ಯಕ್ತಿವಾದಗಳೂ ಇರುವುದಿಲ್ಲ. ಈ ಪ್ರವೃತ್ತಿಗಳನ್ನು ದೂರ ಮಾಡುವುದು ನಮ್ಮ ಉದ್ದೇಶವಲ್ಲ; ಚರಿತ್ರ ನಿರ್ಮಾಣಕ್ಕೆ, ಅನುಶಾಸನದಲ್ಲಿರುವುದಕ್ಕೆ ಒಂದು ಉಪಯುಕ್ತ ಸಮಯ ಮತ್ತು ಸ್ಥಾನವಿರುವಂತೆಯೇ ಸ್ವಾತಂತ್ರ್ಯ ಮತ್ತು ಆತ್ಮನಿರ್ಭರತೆಗೂ ಒಂದು ಸಮಯ ಮತ್ತು ಸ್ಥಾನವಿರಬೇಕು. ಆದರೆ, ನಮಗಿಂದು ಪರಿಪಕ್ವ ಹಾಗೂ ವಿಶಾಲ ಜ್ಞಾನ ಬೇಕಾಗಿದೆ. ಈ ಸೃಜನಾತ್ಮಕ ಹಾಗೂ ಪ್ರೇರಣಾತ್ಮಕ ಭಾವನೆಯು ಪ್ರೇಮ ವಿವಾಹ ಹಾಗೂ ಪರಿವಾರಗಳಿಗೇನೇ ಪರಿಸೀಮಿತವಾಗದೆ ಅಂತಾರಾಷ್ಟ್ರೀಯ ಸಂಸರ್ಗ ಸಂಬಂಧದಲ್ಲಿಯೂ ಸಜೀವ ಶೃಂಖಲೆಯಾಗಿರಬೇಕು. ಆಗಲೇ ನಾವು ವ್ಯಕ್ತಿಗತ ಹಾಗೂ ರಾಷ್ಟ್ರೀಯ ಜೀವನದಲ್ಲಿ ಅಹಂಕಾರ, ದರ್ಪ ಮತ್ತು ಮಿಥ್ಯಾದಂಭಗಳನ್ನು ಮೆಟ್ಟನಿಲ್ಲಬಲ್ಲೆವು.

ವಿಶ್ವಸಂಹಿತೆಯಲ್ಲಿ ಕೆಲವೊಂದು ವಿಶೇಷತೆಗಳಿರಬೇಕು: ವಿಶ್ವದ ಬೇರೆ ಬೇರೆ ಸಂಸ್ಕೃತಿಗಳ ಮತ್ತು ಸ್ಥಳಗಳ ಪ್ರತಿಷ್ಠಾವಂತ ಸಾಹಿತ್ಯಕಾರರ ಸಜೀವ ಕಲ್ಪನಾತ್ಮಕ ಸಾಹಿತ್ಯ ಮತ್ತು ಸಮನ್ವಯಾತ್ಮಕ ವಿಚಾರಗಳಿರುವುವು. ಭೂತ ಮತ್ತು ವರ್ತಮಾನ ಕಾಲಗಳಲ್ಲಿ ಲಭಿಸಿದ ಎಲ್ಲ ಸತ್ಸಾಹಿತ್ಯಗಳಿಂದ ಸಹಿತೆಯನ್ನು ಪೂರ್ತಿ ಮಾಡಬಲ್ಲ ಗದ್ಯಪದ್ಯಗಳ ಸಂಗ್ರಹವಿರುವುದು. ಧಾರ್ಮಿಕ ಉಪಾಖ್ಯಾನಗಳೊಂದಿಗೆ ಇದರಲ್ಲಿ ಇತಿಹಾಸ, ಸಮಾಜ ವಿಜ್ಞಾನ, ಜೀವಶಾಸ್ತ್ರ, ದಂಡವಿಧಾನ, ಭೌತಿಕ ಹಾಗೂ ದಾರ್ಶನಿಕ ತತ್ವಸಾರಗಳೂ ಇರುವುವು. ಸಾಮಾಜಿಕ ವಿಕಾಸೋದ್ಭವ, ಪತನ ಅಥವಾ ಪ್ರಗತಿಯ ಉಲ್ಲೇಖವು ಪ್ರೇಮಧಾರೆಯು ಪ್ರವಹಿಸುವಂತೆ ಹರಿಯತೊಡಗುವುದು. ಈ ಸಂಹಿತೆಯು ಪ್ರಾಚೀನ ಧರ್ಮ ಗ್ರಂಥಗಳ ಹಾಗಿರದೆ ಆಧುನಿಕ ವಿಜ್ಞಾನಕ್ಕೆ ಅನುರೂಪವಾಗಿರುವುದು.

ಇಷ್ಟು ಮಾತ್ರವಲ್ಲದೆ, ಈ ಸಂಹಿತೆಯಲ್ಲಿ ಪೂರ್ವ ಮತ್ತು ಪಶ್ಚಿಮ. ರಾಷ್ಟ್ರಗಳ ಧರ್ಮ ಶಾಸ್ತ್ರ, ಬೈಬಲ್, ಕುರಾನ್, ಮಾರ್ಕ್ಸನ ಅಧಿನಾಯಕವಾದಿ ವಿಶ್ವಾಸಗಳಿಗೆ ವಿಪರೀತವಾದ ಎಲ್ಲ ವರ್ಗಗಳಿಗೂ ನ್ಯಾಯೋಚಿತ ಪಾಲು ನೀಡುವಿಕೆ ಮತ್ತು ವಿವಿಧ ಸಾಂಸ್ಕೃತಿಕ ಕೊಡುಗೆಗಳ ಪ್ರಶಂಸೆ ಆಡಕವಾಗುವುದು. ಒಂದು ವರ್ಗದ ಅಥವಾ ವ್ಯಕ್ತಿಯ ಸರ್ವ ಶ್ರೇಷ್ಠತೆಗೆ ಇದರಲ್ಲಿ ಎಂದಿಗೂ ಸ್ಥಾನ ದೊರೆಯಲಾರದು. ಬಲಾತ್ಕಾರದಿಂದ ಮತಾಂತರಗೊಳಿಸುವುದು, ದಂಡಯಾತನೆ ಹಾಗೂ ಕೈದಿಗಳ ಶಿಬಿರಗಳಿಗೂ ಮಾನ್ಯತೆ ಸಿಗದು.

ಇಂತಹ ಸಂಹಿತೆಯಿಂದ ವಿಗ್ರಹವಾದಿ ಅಹಂಕಾರಿ ಮಾನವ ಸಮಾಜಕ್ಕೆ ಪಾರಸ್ಪರಿಕ ಸಹಯೋಗ ಮತ್ತು ಮಿಲನದ ಸಂದೇಶ ಪ್ರಾಪ್ತವಾಗುವುದು. ಸಮಾಜದಲ್ಲಿ ವ್ಯಾಪ್ತವಾಗಿರುವ ವಿರೋಧಾಭಾಸಗಳನ್ನು ದೂರಮಾಡಿ ಪ್ರೇಮ ಪೂರ್ವಕ ಸಮನ್ವಯ ಸಾಧಿಸುವುದೇ ಈ ಸಂಹಿತೆಯ ಉದ್ದೇಶ. ಮಾನವ-ಪ್ರಕೃತಿ, ನರ-ನಾರಿ, ತರ್ಕ—ಭಾವನೆ, ಕಲ್ಪನೆ-ಬುದ್ಧಿ, ವಿಜ್ಞಾನ-ಕಲೆ, ವ್ಯವಸ್ಥೆ-ಶ್ರಮ ಪೂರ್ವ—ಪಶ್ಚಿಮಗಳ ನಡುವೆ ಅಚಲ ಸಂಬಂಧವನ್ನು ಸ್ಥಾಪಿಸುವುದು ಜನಸಮುದಾಯದಲ್ಲಿ ಅಜಸ್ರ ಪ್ರೇಮಧಾರೆ ಹರಿಸುವುದರಿಂದ ಮಾತ್ರ ಸಾಧ್ಯ. ಹೆನ್ರಿ ಜೇಮ್ಸ್‌ರ ಮಾತುಗಳಲ್ಲಿ ಹೇಳುವುದಾದರೆ, "ತನ್ನಂತೆಯೇ ಪರರನ್ನು ಪ್ರೇಮಿಸುವುದೇ ಸಹನಶೀಲತೆ ಹಾಗೂ ಪ್ರೇಮಗಳ ನಿಜವಾದ ಆದರ್ಶ. ಇಂತಹ ಭಾವನೆಗಳಿಂದಲೇ ವಿಶ್ವಸಮಸ್ಯೆಗಳು ನಿವಾರಣೆಗೊಳ್ಳುವುವು." "ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಣವಕ್ಕು" ಎಂದ ಸರ್ವಜ್ಞನ ಇಂಗಿತವೂ ಇದೇ ಇದ್ದಿರಬೇಕು.

ಜನತೆಯಲ್ಲಿ ಹೃದಯ ಗ್ರಾಹಕತೆ, ಸರಸತೆ, ಸ್ಪಷ್ಟತೆ ಹಾಗೂ ಆತ್ಮಸಂತುಷ್ಟತೆಗಳಿಂದ ಕೂಡಿದ ಗುಣಗಳಿದ್ದರೆ ಮಾತ್ರ ಈ ಸಂಹಿತೆ ಸಫಲವಾದೀತು. ಇದನ್ನು ಒಪ್ಪುವಂತೆ ಮಾಡಲು ರಾಜಕಾರಣದ ಅಧಿಕಾರಿಯು ದಂಡನಾಯಕನಾಗಲಾರನು. ಇಗರ್ಜಿಗಳು, ಮಸೀದಿಗಳು, ದೇವಾಲಯಗಳ ರೂಢಿಗ್ರಸ್ತ ಪರಂಪರೆಯನ್ನಳಿ

(ಆನೇ ಪುಟ ನೋಡಿರಿ)

ಬೆಚ್ಚನೆಯ ಮನೆ
ವೆಚ್ಚಕ್ಕೆ ಹಣ

ಬೇಕಾದಲ್ಲಿ
ಮುಂಚಿತವಾಗಿಯೇ ಒಂದು ಉಳಿತಾಯ
ಯೋಜನೆಯನ್ನು ತಯಾರಿಸಿ, ಅದರಂತೆ
ಕೊರ್ಪೊರೇಶನ್ ಬೇಂಕಿನಲ್ಲಿ
ಹಣವನ್ನು ಉಳಿಸುತ್ತಾ ಬನ್ನಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ.
6 ರಾಜ್ಯಗಳಲ್ಲಿ ಒಟ್ಟು 60 ಶಾಖೆಗಳು

ಮೆಟ್ರಿಕ್ ತೂಕ ಮತ್ತು ಅಳತೆಗಳು
ಇವಕ್ಕೆ ಸಂಬಂಧಪಟ್ಟ ಬೂಕ್ ಸಹ ಸಿಗುತ್ತದೆ.



ದೊರೆಯುವ ಸ್ಥಳ: ಲೈಸೆನ್ಸ್ ಡೀಲರ್ಸ್ ಲೈಸನ್ಸ್ ಮತ್ತು ರಿಪೇರರ್ಸ್ ಲೈಸನ್ಸ್ ಸಹ ಪಡೆದಿರುತ್ತೇವೆ.
ಕೆ. ಆರ್. ಗುಂಡು ನಾಯಕ್ & ಸನ್ಸ್
ಕಾರ್ ಸ್ಟ್ರೀಟ್, ಉಡುಪಿ (ಸೌ. ಕೆ.)
ಈಗತಾನೆ ಹೊಸತಾಗಿ ಮೆಟ್ರಿಕ್ ತೂಕ ಮತ್ತು ಚಿಮಿಣಿ ಎಣ್ಣೆ ಅಳೆಯುವ ಲಿಟರ್ಸು ಬಂದಿರುತ್ತವೆ.
1000 ಗ್ರಾಮ್ಸುದಿಂದ 3. ಕೆ. ಜಿ. ಸೆಟ್ಟು 1ರ ರೂ. 12-00. ಹಿತ್ತಾಳಿ ಖುಲಿಮೆನ್ ಸೆಟ್ಟುಗಳನ್ನು ಬೆಂಗಳೂರು ದರಕ್ಕೇನೆ ಇಲ್ಲಿ ಪಡೆಯಬಹುದು.

> ಇನ್ನೊಬ್ಬರ ದುಃಖವನ್ನು ನಾವು ಅರಿತುಕೊಳ್ಳ ಬಯಸುವುದಾದರೆ ನಾವು ಅವರಾಗಿರಬೇಕು; ನಾವು ನಾವಾಗಿ ಅವರ ದುಃಖವನ್ನಳೆದರೆ, ಅದು ನಮ್ಮದೇ ದುಃಖವಾದೀತು ಅವರದಾಗಲಾರದು.

ನವಯುಗ

ವರುಷ	ಉಡುಪಿ	ವಾರ
೪೦	೨೦-೧೦-'೬೦	೮

ಸಮಯೋಚಿತ ಕರೆ

ಸ್ವತಂತ್ರ ಪಕ್ಷದ ನಾಯಕ ಹಿರಿಯ ರಾಜಕೀಯ ಮುತ್ಸದ್ದಿ ರಾಜಾಜಿಯವರು ದೇಶದ ನಾನಾ ಎಡೆಗಳಲ್ಲಿ ಸ್ವತಂತ್ರ ಪಕ್ಷದ ಪ್ರಚಾರಕಾರ್ಯವನ್ನು ಮಾಡುತ್ತಿರುವುದು ಸರ್ವವಿದಿತ. ಅವರು ಕೇರಳದಲ್ಲಿ ಸಂಚಾರ ಮಾಡುವಾಗ ದೇಶದಲ್ಲಿ ಕಾಂಗ್ರೆಸ್ಸಿಗೆ ಪ್ರತಿಸ್ಪರ್ಧಿಯಾದ ಒಂದು ಪ್ರಬಲ ವಿರೋಧಿ ಪಕ್ಷವನ್ನು ಸ್ಥಾಪಿಸುವುದರ ಆವಶ್ಯಕತೆಯನ್ನು ಪ್ರತಿಬಿಂಬಿಸಿದರು. ಸ್ವತಂತ್ರ ಪಕ್ಷವನ್ನೇ ಬಲಪಡಿಸಬೇಕೆಂದೂ ಅವರು ಪ್ರತಿಪಾದಿಸಿದರು. "ಕಮ್ಯೂನಿಸ್ಟರ ಧೋರಣೆಯನ್ನು ಅನುಸರಿಸಿದರೆ ಮಾತ್ರ ಚುನಾವಣೆಗಳಲ್ಲಿ ಗೆಲ್ಲಬಹುದೆಂದು ಕಾಂಗ್ರೆಸ್ಸಿಗರು ತೀರ್ಮಾನಿಸಿಕೊಂಡಿದ್ದಾರೆ; ಕಮ್ಯೂನಿಸ್ಟರಂತೆಯೇ ಕಾಂಗ್ರೆಸ್ಸು ಕಾನೂನುಗಳ ನಿಯಂತ್ರಣವನ್ನು ದಿನೇದಿನೇ ಬಲಪಡಿಸುತ್ತಿದೆ. ಜನತೆ ಎಚ್ಚೆತ್ತು ಇದನ್ನು ಪ್ರತಿಭಟಿಸದೆ ಹೋದರೆ ರಾಷ್ಟ್ರಕ್ಕೆ ಅಪಾಯವಿದೆ. ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ಈಗಿನಕ್ಕಿಂತಲೂ ಅಧಿಕ ಸ್ವಾತಂತ್ರ್ಯ ಸರಕಾರಕ್ಕಿತ್ತು. ಇವನ್ನು ಹೋಗಲಾಡಿಸಲು ಪ್ರಬಲ ಪ್ರತಿಪಕ್ಷವೊಂದನ್ನು ಕಟ್ಟುವುದೇ ಸರಿಯಾದ ಔಷಧ" ಎಂದಿವರು ಕರೆಯಿತ್ತರೆಂದು ವರದಿಯಾಗಿದೆ.

ರಾಜಾಜಿಯವರು ಯಾವ ಪಕ್ಷದ ಪರವಾಗಿ ಪ್ರಚಾರಕಾರ್ಯ ನಡೆಸಲಿ, ಅವರೆಂದಂತೆ ಪ್ರಬಲ ಪ್ರತಿಪಕ್ಷದ ಅಭಾವವು ತುಂಬಿಬರಬೇಕೆಂಬ ವಾದವನ್ನು ಎಲ್ಲರೂ ಒಪ್ಪುವಂತಹುದೇ ಆಗಿದೆ. ಸ್ವಯಂ ಪ್ರಧಾನಿ ನೆಹರುರವರೂ ಪ್ರತಿಪಕ್ಷಗಳು ಬೆಳೆಯಬರಬೇಕೆಂದು ಹಿಂದೊಮ್ಮೆ ಅಂದಿದ್ದರು. ನಮ್ಮಲ್ಲಿ ಒಬ್ಬರ ಹಿಂದೊಬ್ಬರಂತೆ ಪ್ರತಿಪಕ್ಷವನ್ನು ಕಟ್ಟುವುದರಲ್ಲೇನೋ ಅಗ್ರಗಣ್ಯರು ಹುಟ್ಟಿ ಬಂದರಾದರೂ ಅವನ್ನು ಬೆಳೆಸುವ ಮತ್ತು ಸರಿಯಾದ ಮಾರ್ಗದರ್ಶನದಿಂದ ಮುನ್ನಡೆಸುವ ತಾಳ್ಮೆ ಹೆಚ್ಚಿನ ನಾಯಕರಲ್ಲಿ ಉಳಿಯದಿರುವುದು ಖೇದನೀಯ. ಕಾಂಗ್ರೆಸ್ಸಿಗೆ ಪ್ರಬಲ ವಿರೋಧಿ ದಳವನ್ನು ಕಟ್ಟುವುದಕ್ಕಾಗಿ ಅದರಿಂದ ಸಿಡಿದು ಹೊರ ಬಂದು ಕಿಸಾನ ಮಜದೂರ ಪ್ರಜಾಪಕ್ಷಕ್ಕೆ ಅಡಿಗಲ್ಲು ಹಾಕಿ, ಮುಂದೆ ಇದನ್ನು ಮತ್ತೂ ಬಲಪಡಿಸಲು ಪ್ರಜಾ ಸಮಾಜವಾದಿಯೆಂದು ರೂಪಾಂತರ ಹೊಂದಿಸಿ ಈಗ, ಆ ಪಕ್ಷವನ್ನೇ ತ್ಯಜಿಸುವ ಮನಸ್ಸು ಮಾಡಿದ ಕೃಪಲಾನಿಯವರು ತಮ್ಮ ಕಾರ್ಯದಲ್ಲಿ ಅಸಫಲರಾದರು. ಇದೇ ರೀತಿಯಲ್ಲಿ ನಮ್ಮ ದೇಶದ ವಿವಿಧ ಪ್ರತಿ ಪಕ್ಷಗಳು ಸಂಖ್ಯೆಯಲ್ಲಿ ಬಹಳಷ್ಟಿದ್ದರೂ ಬಲದಲ್ಲಿ ಯಾವುದೂ ಸರಿಯಿಲ್ಲವೆಂಬುದಕ್ಕೆ ಕಳೆದೆರಡು ಸಾರ್ವತ್ರಿಕ ಚುನಾವಣೆಗಳೇ ಸಾಕ್ಷಿಯಾಗಿವೆ. ಅಮೇರಿಕೆ--ಬ್ರಿಟನ್ ಮೊದಲಾದ ಕೆಲವೊಂದು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ರಾಜಕೀಯ ಪಕ್ಷಗಳ ಸಂಖ್ಯೆ ಕಡಿಮೆಯಿದೆ. ಇದು ಅಲ್ಲಿನ ಜನತೆಯ ವಿಚಾರೈಕ್ಯದ ದ್ಯೋತಕವೆಂದಾದರೆ, 'ನಮ್ಮಲ್ಲಿ ವಿಪುಲ ಪಕ್ಷಗಳಿರುವುದಕ್ಕೆ ವಿಚಾರ ಸ್ವಾತಂತ್ರ್ಯವೇ ಕಾರಣವೆನ್ನಬೇಕಾಗುತ್ತದೆ. ಒಂದು ಸಣ್ಣ ಕಾರಣದಿಂದ ಮೂಲ ಪಕ್ಷದಿಂದ ಸಿಡಿದು ಇನ್ನೊಂದು ಪಕ್ಷ ಸ್ಥಾಪಿಸುವುದರಲ್ಲಿಯೇ ನಮ್ಮ ಕೆಲನಾಯಕರು ನಿಸ್ಸೀಮರಾಗಿರುತ್ತಾರೆಂಬುದರಿಂದಲೇ ನಮ್ಮ ಪ್ರಬಲ ರಾಜಕೀಯ ಪಕ್ಷ ಕಾಂಗ್ರೆಸ್ಸೊಂದನ್ನುಳಿದರೆ, ಉಳಿದುವಾವುವೂ 'ಪಕ್ಷ'ವೆಂಬ ಹೆಸರಿಗೆ ಅಷ್ಟು ಯೋಗ್ಯವೆನ್ನುವಂತಿಲ್ಲ. ಈ ಪಕ್ಷಗಳಾದರೂ ಒಮ್ಮತದಿಂದ ವಿಧಾನ ಸಭೆ-ಸಂಸತ್‌ಗಳಲ್ಲಿ ಕಾರ್ಯವೆಸಗುತ್ತವೆಯೇ ಎಂದರೆ, ಅದಕ್ಕೂ ನಾಸ್ತಿ ಎಂಬುದೇ ಉತ್ತರ. ಹಾಗಾಗಿ ಆಳುವ ಪಕ್ಷ ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಸಿದುದೇ ಕಾರುಬಾರುವೆಂಬಂತಹ ಸ್ಥಿತಿಗೆ ಬರುವ ಕಾಲ ಸನ್ನಿಹಿತವಾಗುವಂತಾಗಿದೆ. ಪ್ರತಿಪಕ್ಷಗಳ ಭಯಭೀತಿಯು ಲವಲೇಶವೂ ಇಲ್ಲದೆ ಕಾಂಗ್ರೆಸ್ಸು ತನ್ನೊಳಗೆಯೇ ಗುಂಪುಗಳನ್ನು ಕಟ್ಟಿಕೊಂಡು ಅಧಿಕಾರಕ್ಕಾಗಿ ಹೋರಾಟ ನಡೆಯಿಸುತ್ತಿರುವುದು ಇಂದು ಮಾಮೂಲು ಎಂಬಂತಾಗಿದೆ. ಮೈಸೂರು, ಒಡಿಸ್ಸ, ಉತ್ತರ ಪ್ರದೇಶ, ಪಂಜಾಬ, ಆಂಧ್ರ—ಮೊದಲಾದ ರಾಜ್ಯಗಳಲ್ಲಿ ಈ ಅಂತರ್ಯುದ್ಧ ನಿರಾತಂಕವಾಗಿಯೆಂಬಂತೆ ಸಾಗಿಕೊಂಡು ಬರುತ್ತಿದೆ. ರಾಜ್ಯ ಮತ್ತು ಕೇಂದ್ರದಲ್ಲಿ ಕಾಂಗ್ರೆಸ್ಸಿಗೆ ಸಮಜೋಡಿಯಾಗಿ ನಿಂತು ಅಧಿಕಾರ ನಿರ್ವಹಿಸಬಲ್ಲ ಪ್ರತಿಪಕ್ಷವೊಂದಿದ್ದರೆ, ಕಾಂಗ್ರೆಸ್ಸು ಬಿಕ್ಕಟ್ಟಿನಿಂದ ರಾಜ್ಯದ, ದೇಶದ ಅಭಿವೃದ್ಧಿಗೆ ಹೆಚ್ಚಿನ ಗಮನಕೊಡುತಿತ್ತು; ಮುಂದಿನ ಚುನಾವಣೆಯಲ್ಲಿ ಜನತೆಯ ವೋಟೆ ಹೋಗಬೇಕಲ್ಲ ಎಂಬ ಭಯವಾದರೂ ಇರುತಿತ್ತು. ಆದರೆ, ಭಾರತದ ದೌರ್ಭಾಗ್ಯದಿಂದ ಕಾಂಗ್ರೆಸ್ಸಿಗೆ, ಸಮಾನವಾದ ಪ್ರತಿ ಪಕ್ಷದ ಮಾತು ಬಿಡುವ, ತಕ್ಕಮಟ್ಟಿನ ವಿರೋಧಿ ದಳವೊಂದೂ ಇಲ್ಲದಂತಾಗಿದೆ. ಈ ಅಭಾವವನ್ನೇ ರಾಜಾಜಿ ಒತ್ತಿ ಹೇಳಿದ್ದಾರೆ; ನಾಗರಿಕರ ಗಮನವನ್ನು ಈ ಗಂಭೀರ ಪ್ರಶ್ನೆಯತ್ತ ಪುನಃ ಸೆಳೆದಿದ್ದಾರೆ.

ಈಗ ಇರುವ ಪ್ರಶ್ನೆಯೊಂದು ಪಾರ್ಲಿಮೆಂಟರಿ ಪದ್ಧತಿಯ ಆಡಳಿತೆಯಲ್ಲಿ ವಿರೋಧಿ ಪಕ್ಷಗಳು ಅನಿವಾರ್ಯ. ಈ ಪಕ್ಷವನ್ನು ಯಾರು ಬೆಳೆಸಬೇಕು? ಕಾಂಗ್ರೆಸ್ ಪಕ್ಷವೇ ವಿರೋಧೀ ಪಕ್ಷಗಳು ಬೆಳೆಯುವುದಕ್ಕೆ ಅವಕಾಶ ನೀಡಬೇಕೆಂದು ಕೆಲವರ ಅಭಿಪ್ರಾಯ. ಆದರೆ, ಇದನ್ನು ಒಪ್ಪುವುದು ಸಾಧ್ಯವಿಲ್ಲ. ಕಾಂಗ್ರೆಸ್ಸು ಹೇಳಿ ಕೇಳಿ ರಾಜಕೀಯ ಪಕ್ಷವಾಗಿ ಇಂದು ಪರಿಣಮಿಸಿದೆ. ಅದು ವಿರೋಧಿಗಳಿಗೆ ಪ್ರೋತ್ಸಾಹ — ಉತ್ತೇಜನೆಯನ್ನು ಕೊಡತೊಡಗಿದರೆ, ಒಂದು ದಿನ ತಾನು ಪೆಟ್ಟಿಗೆ ಕಟ್ಟಬೇಕಾಗಿ ಬರದಿರದು. ಆದುದರಿಂದ, ವಿರೋಧಿ ದಳಗಳನ್ನು ಕಟ್ಟುವ ಮತ್ತು ಪಕ್ಷದ ಧ್ಯೇಯಧೋರಣೆಯನ್ನು ರೂಪಿಸಿ ಜನತೆಯ ಮನಸ್ಸನ್ನು ತನ್ನತ್ತ ಆಕರ್ಷಿಸುವಂತೆ ಜನತೆಯ ವಿಶ್ವಾಸವನ್ನೂ ಮತವನ್ನೂ ದಕ್ಕಿಸಿಕೊಳ್ಳುವುದು ವಿರೋಧೀ ಪಕ್ಷದ ನಾಯಕರ ಕರ್ತವ್ಯವಾಗಿದೆ. ಮರದ ನೆರಳಡಿ ಬೆಳೆದ ಗಿಡವೊಂದು ದಷ್ಟಪುಷ್ಟವಾಗಿ ಬೆಳೆಯಲಾರದು. ನದಿ ದಂಡೆಯಲ್ಲಿ ಬಿಸಿಲು ಮಳೆ ಚಳಿಗಳನ್ನು ತಾಳಿಕೊಂಡು ಹುಲುಸಾಗಿ ಸ್ವತಂತ್ರವಾಗಿ ತಲೆಯೆತ್ತುವ ಗಿಡ ಮಾತ್ರ ಪುಷ್ಟಿಯಾದೀತು. ಪರರು ಎರೆದ ಹಾಲಿಗಿಂತ ತಾನೇ ಸೆಳೆದ ನೀರು ಸ್ವಾದಿಷ್ಟವಾಗಿರುವಂತೆ ವಿರೋಧಿ ಪಕ್ಷಗಳು ಆಡಳಿತ ಪಕ್ಷದ ಕೃಪಾವೃಕ್ಷದಡಿಯಲ್ಲಿ ತಾವು ಬೆಳೆಯಬಯಸುವುದು ನ್ಯಾಯವಲ್ಲ; ವ್ಯವಹಾರ್ಯವೂ ಅಲ್ಲ. ಮನೆಗೆ ಬಂದ ನೆಂಟರು ಯಜಮಾನರೇ ಆಗಿಬಿಟ್ಟರೆ ಎಂಬ ಭಯವೂ ಸ್ವಾಗತಿಸಿದವರಿಗಂಟುವುದು ಸ್ವಾಭಾವಿಕ. ಇದೇ ಮಾತನ್ನು ರಾಜಾಜಿಯವರು ಪ್ರತಿಪಕ್ಷ ಬೇಕೆಂಬವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಅವರು ಕಾಂಗ್ರೆಸ್ಸು ಅನ್ಯಾಯ ಮಾಡುತ್ತಿದೆ ಎಂಬ ಆಡಳಿತೆಯ ಒಂದು ಮುಖವನ್ನಷ್ಟೇ ಪ್ರಚಾರ ಮಾಡುವುದರಲ್ಲಿ ನಿಮಗ್ನರಾಗಿರುವಂಥವರೂ ಭಾರತ ಪ್ರಜಾಪ್ರಭುತ್ವದಲ್ಲಿ ಪ್ರಬಲವಾದ ಶಕ್ತಿಯುತವಾದ, ಅವಕಾಶ ದೊರೆತಾಗ ಆಡಳಿತೆಯನ್ನೂ ಯಶಸ್ವಿಯಾಗಿ ನಿರ್ವಹಿಸಬಲ್ಲ ಪ್ರಜಾಪ್ರಭುತ್ವದ ತತ್ವಗಳಲ್ಲಿ ವಿಶ್ವಾಸವಿಡುವ ರಾಜಕೀಯ ಪಕ್ಷ ಬೆಳೆಯಬೇಕೆಂಬ ಅವರ ವಾದ ನ್ಯಾಯೋಚಿತವಾಗಿದೆ. ಈ ಬಗ್ಗೆ ಜನ ಜಾಗೃತವಾಗಬೇಕು.

ಅಭಿನಂದನೆಗಳು

ದಕ್ಷಿಣಕನ್ನಡ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ತಾಲೂಕ ಬೋರ್ಡುಗಳಿಗೆ ಚುನಾವಣೆಗಳು ನಡೆದಿದ್ದು ಎಲ್ಲ ತಾಲೂಕುಗಳಲ್ಲಿಯೂ ಪಕ್ಷವಾಗಿ ಸ್ಪರ್ಧಿಸಿದ ಕಾಂಗ್ರೆಸ್ಸು ತನ್ನ ಜಯಭೇರಿಯನ್ನು ಮೊಳಗಿಸಿದೆ. ಇತರ ಯಾವ ರಾಜಕೀಯ ಪಕ್ಷಗಳೂ ಪಕ್ಷದ ನೆಲೆಯಲ್ಲಿ ಸ್ಪರ್ಧಿಸುವ ಸಾಹಸಕ್ಕೆ ಇಳಿದಿಲ್ಲವಾದರೂ ಅವು ಸ್ವತಂತ್ರರಿಗೆ ಪ್ರತ್ಯಕ್ಷಾ ಪ್ರತ್ಯಕ್ಷ ಬೆಂಬಲವನ್ನಿತ್ತಿವೆಯೆಂದು ತಿಳಿಯುತ್ತದೆ. ಪ್ರತಿಸ್ಪರ್ಧಿಗಳನ್ನು 'ಹೇಳ ಹೆಸರಿಲ್ಲವೆಂಬಂತೆ' ಸೋಲಿಸಿದ ಕಾಂಗ್ರೆಸ್ಸು ಪಕ್ಷವು ಜನಾದರವನ್ನು ಉಳಿಸಿಕೊಂಡಿದೆಯೆಂಬುದಕ್ಕೆ ಈ ಚುನಾವಣೆಯ ಫಲಿತಾಂಶವೇ ಪ್ರತ್ಯಕ್ಷ ಸಾಕ್ಷಿಯಾಗಿದೆ. ಚುನಾವಣೆಗೆ ಮೊದಲು ಪಕ್ಷ-ಪ್ರತಿಪಕ್ಷಗಳ ಪ್ರಚಾರ ವೈಖರಿ ಹಾಗೂ ಜನಬೆಂಬಲದ ಒಲವುಗಳ ಆಧಾರದಿಂದ ನಿರೀಕ್ಷಿಸಿದಷ್ಟಾದರೂ ಪ್ರತಿ ಸ್ಪರ್ಧಿಗಳು ಗೆಲ್ಲಲಿಲ್ಲವೆಂದಾದಾಗ, ಜನತೆಯೂ ಮತಾಧಿಕಾರದ ಮಹತ್ವವನ್ನು ಅರಿತುಕೊಂಡೇ ಅದನ್ನು ಉಪಯೋಗಿಸಿದೆ ಎನ್ನಬಹುದು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಕಾಂಗ್ರೆಸ್‌ನ ಸಂಘಟನೆಯನ್ನು ಯಶಸ್ವಿಯಾಗಿ ನಡೆಸುತ್ತಿರುವುದರಿಂದಲೇ ಇಂತಹ 'ನಭೂತೋ ನಭವಿಷ್ಯತಿ' ಎಂಬ ರೀತಿಯಲ್ಲಿ ಕಾಂಗ್ರೆಸ್ ಗೆದ್ದಿತು. ಚುನಾಯಿತ ಜನತಾ ಪ್ರತಿನಿಧಿಗಳಾದರೂ ತಮ್ಮ ಹೊಣೆಗಾರಿಕೆಯನ್ನರಿತು, ಪಕ್ಷದ ಅಮೂಲ್ಯ ತತ್ವಗಳನ್ನು ಬಿಡದೆ ಆಯಾ ತಾಲೂಕಿನ ಜನತೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಹೆಣಗಾಡುವ ನಿರ್ಧಾರದಿಂದ ದುಡಿಯಲಿ, ಪಂಚಾಯತ ರಾಜ್ಯವು ಯಶಸ್ವಿಯಾಗುವಂತೆ
ಮಿಸಲೆಂದು ಹಾರೈಸಿ, ಇವರೆಲ್ಲರನು
ಅಭಿನಂದಿಸುತ್ತೇವೆ.

ದೀಪಾವಳಿಯು

'ನವಯುಗ'ದ ಚಂದಾದಾರರಿಗೆ,
ಜಾಹೀರಾತುದಾರರಿಗೆ, ಓದುಗರಿಗೆ
ಹಾಗೂ ಸಮಸ್ತ ಹಿತಚಿಂತಕರಿಗೆ
ಶುಭಪ್ರದವಾಗಲಿ.

ವಿಶಾಲ ಜನತೆಯಲ್ಲಿ
ಮನದ ಕತ್ತಲೆ ತೊಲಗಲಿ,
ನವಪ್ರಕಾಶ ಬೆಳಗಲಿ,
ನವಚೇತನ ನವಸಂತಸ
ನವ ಮನೋಭಾವ ತುಂಬಲಿ
ತುಂಬಿ ತುಳುಕಿ ಹರಿಯಲಿ.

—ಸಂಪಾದಕರು

ಸಂಕ್ಷಿಪ್ತ ಸುದ್ದಿಗಳು

ತ್ವೇಷಶಮನ ಪ್ರಯತ್ನ

ವಿಶ್ವಶಾಂತಿಯ ಮೇಲೆ ಕವಿದಿರು
ಮೋಡವನ್ನು ದೂರೀಕರಿಸಲು ಪಂ
ರಾಷ್ಟ್ರಗಳು ಮಂಡಿಸಿದ್ದ ಗೊತ್ತುವ
ಯನ್ನು ಅದರ ಉದ್ದೇಶವು ತಿದ್ದುಪಡಿ
ನ್ನು ಸ್ವೀಕರಿಸಿದುದರಿಂದ ಈಡೇರುವ
ಕ್ಷಣ ದೋರದಿದ್ದುದರಿಂದ ಯುನೊ
ದಿಂದ ಹಿಂತೆಗೆಯಲಾಗಿತ್ತು. ಕ್ರುಶ್ಚೇ
ಮತ್ತು ಐಸನ ಹೋವರ ಭೇಟಿಯನ್ನು
ಗೊತ್ತುವಳಿಯಲ್ಲಿ ಪ್ರಚೋದಿಸಲಾಗಿತ್ತು
ಈಗ ಭಾರತವು ಕೆಲವು ತಟಸ್ಥ ರಾಷ್ಟ್ರ
ಗಳ ನಾಯಕತ್ವವನ್ನು ವಹಿಸಿ ಪುನಃ
ನ್ನೊಂದು ಪ್ರಯತ್ನವನ್ನು ಮಾಡುತ್ತಿದೆ
ಜಾಗತಿಕ ತ್ವೇಷವು ಹೆಚ್ಚಿದುದರ ಬಗ್ಗೆ
ವಿಮಂಚನೆಯನ್ನು ವ್ಯಕ್ತಪಡಿಸಿ ಶಾಂ
ಸಾಧನೆಗೆ ಸಹಾಯವಾಗುವ ವಿಧಾಯ
ಕಾರ್ಯಕ್ರಮಗಳನ್ನು ತತ್‌ಕ್ಷಣಕ್ಕೆಗೊ
ಬೇಕೆಂಬ ಇನ್ನೊಂದು ಗೊತ್ತುವಳಿಯನ್ನು
ಮುಂದೆ ತಂದಿದೆ. ಇದಕ್ಕೆ ಪ್ರತ್ಯಕ್ಷ
ರೋಧವು ಯು. ನೋ.ದಲ್ಲಿ ತೋರಿ ಬ
ಲಾರದೆಂಬ ವಿಶ್ವಾಸವಿದ್ದರೂ ಫಲ ಯ
ವ ರೀತಿ ದೊರೆಯಬಹುದೆಂದು ನಿರೀಕ್ಷಿಸ
ವಂತಿಲ್ಲ.

ವಿರಿಕದಿಂದ ಗದಾ ಪ್ರಹಾರ

ದಕ್ಷಿಣ ಆಫ್ರಿಕೆಯ ವರ್ಣಭೇದ ನೀ
ಯನ್ನು ಟೀಕಿಸುತ್ತಿರುವ ಭಾರತದ ನಿಲ
ಮೆಯನ್ನು ದ. ಆಫ್ರಿಕೆಯ ಪ್ರತಿನಿಧಿ ಶ್ರೀ
ಏರಿಕ್ ಲೌ ರವರು ಉಗ್ರವಾಗಿ ಟೀಕಿ
ದ್ದಾರೆ. ಭಾರತದಲ್ಲಿ ಜಾತಿ ಭೇದವಿದೆ,
ಗರಗಳು ಅನಾರೋಗ್ಯ, ಆಹಾರಾಭಾವ
ಗಳಿಂದ ನರಳುತ್ತಿವೆ. ನಾಗಾ ಪ್ರದೇಶದ
ಲ್ಲಿ ಭಾರತೀಯ ಪೋಲೀಸರು ನಿರ್ದಯತೆ
ಯಿಂದ ನಡೆದುಕೊಂಡಿದ್ದಾರೆ, ದಕ್ಷಿಣ
ಭಾರತದ ತಾಲಗಾರರು ಸಾಲಿಗರ ಗುಲಾ
ಮರಂತಿರಬೇಕಾಗುತ್ತದೆ, ಕೂಲಿಗಾರರಿಗೆ
ಮಾನವೀಯ ಹಕ್ಕುಗಳನ್ನು ಕೊಡಲಾಗು
ತ್ತಿಲ್ಲವೆಂದು ಮುಂತಾಗಿ ಹೇಳಿ, ದ. ಆಫ್ರಿಕೆ

ಯ ಸ್ಥಿತಿಯು ಘೋರತರಕ್ಕಿಂತ ಬಹಳಷ್ಟು ಉತ್ತಮವಾಗಿದೆಯೆಂದು ಹೇಳಿದರು. ತಮ್ಮ ನೀತಿಯನ್ನು ಟೀಕಿಸುವ ರಾಷ್ಟ್ರಗಳ ಮೇಲೆ, ಮುಖ್ಯವಾಗಿ ಭಾರತದ ಮೇಲೆ ಸದಾ ಪ್ರಹಾರ ನಡೆಸುತ್ತಿದ್ದ ಶ್ರೀ ಏರಿಕರು ತಮ್ಮ ದೋಷಗಳನ್ನು ಅಲಕ್ಷಿಸಿ ಪರರನ್ನು ದೂಷಿಸುವುದು ನ್ಯಾಯವಲ್ಲವೆಂದು ಉಪದೇಶಿಸಿದರು.

ಸಮಸ್ಯೆ ಪರಿಹಾರವೆಲ್ಲಿ?

ರಾಜಧಾನಿ ದೆಹಲಿಯಲ್ಲಿ ಈಗ್ಗೆ ಕೆಲವು ದಿನಗಳಿಂದ ತುಂಬ ಚಟುವಟಿಕೆಗಳು ನಡೆಯುತೊಡಗಿವೆ. ವಿವಿಧ ರಾಜ್ಯಗಳಲ್ಲಿ ವಿಧಾನ ಸಭಾ ಕಾಂಗ್ರೆಸ್ ಮತ್ತು ರಾಜ್ಯ ಕಾಂಗ್ರೆಸ್‌ಗಳ ನಡುವೆ ವಿರಸವು ತಲೆದೋರಿದ್ದುದರಿಂದ ಹೊಸ ಸಮಸ್ಯೆಯು ತಲೆದೋರಿದೆ. ಉತ್ತರ ಪ್ರದೇಶದಲ್ಲಿ ಆ ಮಂತ್ರಿಮಂಡಳಿಯ ಸದಸ್ಯರು ಬೆಂಬಲಿಸಿದ ಉಮೇದ್ವಾರರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಸೋತು ಹೋದುದರಿಂದ ಇದು ತನಗಾದ ಪರಾಭವವೆಂದು ಸಂಪೂರ್ಣಾನಂದರು ರಾಜಿನಾಮೆಯೊಡನೆ ನಿರ್ಧಾರಕ್ಕೆ ಬಂದಿದ್ದಾರೆ. ಒಡಿಸ್ಸದಲ್ಲಿ ಕಾಂಗ್ರೆಸ್-ಗಣತಂತ್ರ ಪರಿಷತ್ತುಗಳ ಸಮ್ಮಿಶ್ರ ಸರಕಾರದ ಬಗ್ಗೆ ಈಗ ಅಸಂತೋಷ ತಲೆದೋರುತ್ತಿದೆ. ಇದರಿಂದ, ಡಾ. ಮೆಹತಾರು ತಮ್ಮನ್ನು ಬಿಡುಗಡೆ ಮಾಡುವಂತೆ ವಿನಂತಿಸಿದ್ದಾರೆ. ಮೈಸೂರಿನ ಬಣಗಳ ಉಲ್ಬಣಾವಸ್ಥೆಗೇರಿ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರೂ ಮಾಜಿ ಉಪಮಂತ್ರಿ ರಾಮಕೃಷ್ಣ ಹೆಗಡೆಯವರೂ ದಿಲ್ಲಿ ಸುತ್ತುತಿದ್ದಾರೆ. ಆಂಧ್ರ ಪ್ರದೇಶದಲ್ಲಿದ್ದ ಎದ್ದ ಬಿರುಗಾಳಿ ಒಮ್ಮೆಗೆ ತುಸು ಶಾಂತವಾಗಿದೆ. ಆದರೆನ್ನು ಎಂದೇಳಬಹುದೆಂದು ಸದ್ಯ ಹೇಳುವಂತಿಲ್ಲ. ಪಂಜಾಬದ ಮುಖ್ಯಮಂತ್ರಿ ಕೈರೋನರ ಅಪವಾದಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ ಇದುವರೆಗವರಿವನ್ನು ಜಿರ್ಣಿಸುತ್ತ ಬಂದಿರುವರಾದರೂ ಇನ್ನೂ ಎಷ್ಟು ಕಾಲ ಅವರ ಪಾಚನಶಕ್ತಿ ಸರಿಯಾಗುಳಿದೀತೆನ್ನುವಂತಿಲ್ಲ ಈ ಎಲ್ಲ ಪ್ರಶ್ನೆ—ಸಮಸ್ಯೆಗಳಿಗೆ ಸಮರ್ಪಕ ಉತ್ತರ-ಪರಿಹಾರಗಳನ್ನು ಪಾರ್ಲಿಮೆಂಟರಿ ಬೋರ್ಡು ಹುಡುಕಬೇಕಾಗಿದೆ.

ಬೇಲಿ ಹೊಲಮೇದರೆ...

ಆಸ್ತಿ ಒಡೆತನಗಳ ಅಧಿಕಾರವನ್ನು ಗೌರವಿಸುವುದಾಗಿ ಸಂವಿಧಾನದಲ್ಲಿ ಹೇಳಿದೆ. ಸಾರ್ವಜನಿಕ ಕಾರ್ಯಗಳಿಗಾಗಿ ಆಸ್ತಿಯನ್ನು ವಶಪಡಿಸಿಕೊಂಡರೆ, ಯೋಗ್ಯ ಪರಿಹಾರ ನೀಡುವ ಬಗ್ಗೆಯೂ ಉಲ್ಲೇಖವಿರುವುದು. ಈಗ ಸರಕಾರವು ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಲು ಹವಣಿಸುತ್ತಿದೆ; ಆದರೆ ಸಾರ್ವಜನಿಕ ಕಾರ್ಯಗಳಿಗಾಗಿ ಅಲ್ಲ; ಹೆರವರಿಗೆ ಕೊಡುವುದಕ್ಕಾಗಿ. ಈ ಬಗ್ಗೆ ಕಾಯಿದೆಗಳನ್ನೂ ರಚಿಸುತ್ತಿದೆ. ಇದಕ್ಕಾಗಿ ನೀಡಬೇಕೆಂದಿರುವ ಪರಿಹಾರವು ನ್ಯಾಜವಾದುದೂ ಅಲ್ಲ; ಸಾಕಷ್ಟು ಇರುವುದೂ ಇಲ್ಲ. ಹಾಗಿರುವಾಗ ಈ ವಿಧದ ಕಾಯಿದೆಗಳ ರಚನೆಯು ಸಂವಿಧಾನಕ್ಕೆ ವಿರೋಧವಾದುದು—ಸಂವಿಧಾನ ವಿರೋಧಿಯಾಗಿ ಸರಕಾರವೇ ಕಾರ್ಯವೆಸಗುವುದು ನ್ಯಾಯವಲ್ಲ—ಎಂದು ರಾಜಾಜಿ ವ್ಯಕ್ತಪಡಿಸಿದ್ದಾರೆ.

ಶಿಕ್ಷಣದ ಉದ್ದೇಶ

ಸಾಂಸ್ಕೃತಿಕ ಸ್ವಾತಂತ್ರ್ಯ ಮತ್ತು ಪರಸ್ಪರ ಸಹನೆಗಳವ್ವರೆ ವಿವಿಧ ಸಾಂಸ್ಕೃತಿಕ ರೀತಿ ನೀತಿಗಳಲ್ಲಿ ಐಕ್ಯ ಹಾಗೂ ಭಾವನಾತ್ಮಕ ಏಕೀಕರಣವನ್ನು ಸಾಧಿಸಲು ಸಾಧ್ಯವಾಗುವುದು. ಈ ರೀತಿಯ ಐಕ್ಯ ಸ್ಥಾಪನೆಗೆ ಶಿಕ್ಷಣವು ಸಹಕಾರಿಯಾಗಬೇಕೆಂದು ಕೇಂದ್ರ ಶಿಕ್ಷಣ ಮಂತ್ರಿ ಶ್ರೀಮಾಲಿಯವರೆಂದಿದ್ದಾರೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 42/60.

1. ಮುತ್ತಕ್ಕ, 2 ಲೀಲಾವತಿ, 3 ಕುಮಾರಿ U. ಸುಶೀಲ, 4. U ಜ್ಯೋತಿಶ್ಚಂದ್ರ, 5. U. ಸತೀಶ್ಚಂದ್ರ, 6. U. ರಮೇಶ್ಚಂದ್ರ, 7. ಕುಮಾರಿ U. ಪ್ರಫುಲ್ಲವೇಣಿ — —ಅರ್ಜಿದಾರರು.

ಅರ್ಜಿದಾರರೆಲ್ಲ ಉಡುಪಿ ಕ್ರಿಬೆ ಮಿಲ್ಕನ್ ಕಂಪೌಂಡಿನಲ್ಲಿರುವದಿವಂಗತ ಎಸ್. ಡಿ. ಕೆಂಪ್ಟ್ರೂರ್ ವಿಧವೆ 1ನೇ ಮುತ್ತಕ್ಕ ಮತ್ತು ಇವರ ಮಕ್ಕಳು 2ನೇ ಲೀಲಾವತಿ, 3ನೇ ಕುಮಾರಿ U. ಸುಶೀಲ, 4ನೇ U. ಜ್ಯೋತಿಶ್ಚಂದ್ರ, 5ನೇ U. ಸತೀಶ್ಚಂದ್ರ, 6ನೇ U. ರಮೇಶ್ಚಂದ್ರ, ಮತ್ತು 7ನೇ ಕುಮಾರಿ U. ಪ್ರಫುಲ್ಲವೇಣಿ.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದ್ರೆ -

ಮೇಲ್ಕಂಡ ಆಜಿಯ 1ನೇ ಅರ್ಜಿದಾರಳ ಗಂಡ ಮಿಕ್ಕ ಅರ್ಜಿದಾರರ ತಂದೆ ಶ್ರೀ. ಎಸ್. ಡಿ. ಕೆಂಪ್ಟ್ರೂರ್ — ತಾರೀಕು ರಲ್ಲಿ ಸ್ವರ್ಗಸ್ಥರಾಗಿರುವುದರಿಂದ ಅವರಿಗೆ ಬರತಕ್ಕ ಇನ್ಸೂರೆನ್ಸ್ ಪೋಲಿಸಿಗಳ ಹ್ಯವೇಜು ವಸೂಲು ಪಡೆಯುವರೆ ವಾರೀಸುದಾರರಾದ ತಾವು ಹಕ್ಕುದಾರರೆಂತಲೂ ಆ ಕುರಿತು 1ನೇ ಅರ್ಜಿದಾರಳ ಹೆಸರಿನಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿಯೆಗ್ಗರೆ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 2-11-1960ಕ್ಕೆ ಇಡೋಣಾಗಿಯದೆ. ಆ ಕುರಿತು ಕೈಫ ಹೇಳತಕ್ಕವರು ಇದ್ದರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದಾಗಲಿಗ್ಗೆ 10 ಗಂಟೆಗೆ ಖಾಜರಾಗಿ ತಾವು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸಮಸ್ತ ಜನರಿಗೆ ತಿಳಿಸೋಣಾಗಿಯದೆ

(By order of the court)

P. Shivaji Shey. B.A.,LL.B
Advocate for petitioners.

ಉಡುಪಿ, ತಾ. 14-10-60

ಅಲ್ಲಲ್ಲಿಯ ಸುದ್ದಿಸಾರ

ದ. ಕ. ಜಿಲ್ಲಾ ಶೈಕ್ಷಣಿಕ ಸಮ್ಮೇಳನವು—ಬಂಟ್ವಾಳದಲ್ಲಿ ಇದೇ ತಾ 22ನೇ ಅಪರಾಹ್ನ 3 ಗಂಟೆಗೆ ಎಸ್. ವಿ. ಎಸ್. ಹಾಯರ್ ಸೆಕೆಂಡರಿ ಶಾಲಾ ಪಠಾರದಲ್ಲಿ ವಿದ್ಯಾ ಇಲಾಖೆಯ ಡಾರೈಕ್ಟರ್ ಶ್ರೀ ಎ. ಸಿ. ದೇವಗೌಡ ಇವರಿಂದ ಉದ್ಘಾಟಿಸಲ್ಪಡುವುದು. ಅನಂತರ ಶ್ರೀ ಟಿ. ವಿ. ತಿಮ್ಮ ಗೌಡ (ಶೈಕ್ಷಣಿಕ ಸಂಶೋಧನೆಯ ಡಿರೆಕ್ಟರರು) ಇವರ ನೇತೃತ್ವದಲ್ಲಿ ವಿದ್ಯಾಗೋಷ್ಠಿ ಜರಗುವುದು ವಿದ್ಯಾಭಿಮಾನಿಗಳು ಸಮ್ಮೇಳನದಲ್ಲಿ ಭಾಗವಹಿಸ ಬೇಕೆಂದು ಸ್ವಾಗತ ಸಮಿತಿಯವರು ವಿನಂತಿಸುತ್ತಾರೆ.

ವಾಗ್ವರ್ಧಿನಿ ಸಭೆ—ಉಡುಪಿಯ ಹಿಂದೀ ಪ್ರಚಾರ ಸಮಿತಿಯ ವಾಗ್ವರ್ಧಿನಿ ಸಭೆಯೊಂದು ತಾ 9ರಂದು ಶ್ರೀ ಎ. ಜೆ. ಆಳ್ವೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ವರದಿ ವಾಚನವಾದ ಮೇಲೆ ಶ್ರೀಗಳಾದ ದಾಂತಿ, ವಲ್ ಪನ್ ಕರ್ ಮತ್ತು ಕುಮಾರಿ ಶಾಂತ ದೇವಿ ಇವರು ರಾಷ್ಟ್ರೀಯ ಉಳಿತಾಯ ಯೋಜನೆಯ ಕುರಿತು ಭಾಷಣವಿತ್ತರು. ಅಧ್ಯಕ್ಷರ ಅನುಭವಪೂರ್ಣ ಭಾಷಣವಾದ ಮೇಲೆ ಧನ್ಯವಾದಾರ್ಪಣವಾಯಿತು.

ವರ್ಗಾವರ್ಗಿ—ದ. ಕ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಬಿ. ಎಂ. ಕುಡುಬಿಯವರು ರಾಯಚೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಅವರ ಸ್ಥಾನಕ್ಕೆ ಮೂಲ್ಕಿ ಸರಕಾರಿ ಹ್ಯಾಸ್ಕೂಲಿನ ಹೆಡ್ಮಾಸ್ತರ್ ಶ್ರೀ ಕೆ. ವಿಟ್ಠಲ ಶೆಣೈಯವರು ನೇಮಿಸಲ್ಪಟ್ಟಿದ್ದಾರೆ.

ವಿಮಾ ಏಜಂಟರ ಸಭೆ—ವಿಮೋದ್ಯೋಗವನ್ನು ದಕ್ಷತೆಯಿಂದ ಮುಂದುವರಿಸಿಕೊಂಡು ಹೋಗುವ ಕುರಿತು ವಿಚಾರವಿನಿಮಯ ಮಾಡಲಿಕ್ಕಾಗಿ ತಾ. 15ರಂದು ಫೀಲ್ಡ್ ಆಫೀಸರ್ ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯರು ಉಡುಪಿ ಬಾಂಟೆಲ್ಫೆರ್ಫ್ ಕಟ್ಟಡದಲ್ಲಿ ವಿಮಾ ಏಜಂಟರ ಸಭೆಯೊಂದನ್ನು ಶ್ರೀ ಜಾಕೋಬರ ಅಧ್ಯಕ್ಷತೆಯಲ್ಲಿ ಏರ್ಪಡಿಸಿ ಸತ್ಕಾರಕೂಟವನ್ನು ಜರಗಿಸಿದರು. ಶ್ರೀ ಪಿ. ಟಿ ಎನ್. ನಂಬಿಯಾರರು ವಿಮಾ ಪ್ರಪಂಚದಲ್ಲಿ ದುಡಿವ ಕುರಿತು ಸಲಹೆ ಸೂಚನೆಗಳನ್ನಿತ್ತರು. ಪ್ರತಿನಿಧಿಗಳ ಪರವಾಗಿ ಶ್ರೀ ಬಿ. ಶ್ಯಾಮರಾಯ ಶೆಟ್ಟರು ಮಾತನಾಡಿ ಶ್ರೀ ಹೆಗ್ಡೆಯರ ಪರಿಶ್ರಮವನ್ನು ಕೊಂಡಾಡಿ ಅಭಿನಂದಿಸಿದರು.

ಡಾ| ಟಿ. ಎಂ. ಎ. ಪೈಗಳಿಗೆ ಸತ್ಕಾರ—ಈ ಬಾರಿಯ ದಸರೆಗೆ ರಾಜಾತಿಥಿಗಳಾಗಿ ತೆರಳಿದ್ದ ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರರೂ ಎಕೆಡಮಿ ಆಫ್ ಜನರಲ್ ಎಜ್ಯುಕೇಶನಿನ ರಜಿಸ್ಟ್ರಾರರೂ ಆದ ಡಾ|ಟಿ. ಎಂ. ಎ. ಪೈಯವರನ್ನು ಕಳೆದ ತಾ. 28ರಂದು ಮೈಸೂರು ಪುರಸಭೆಯವರು ಅವರು ಮಾಡುತ್ತಿರುವ ಜನಸೇವಾ ಕಾರ್ಯಗಳನ್ನು ಶ್ಲಾಘಿಸಿ ಸತ್ಕರಿಸಿದರು. ಅದೇ ರೀತಿ ನಂಜನಗೂಡು ನಗರ ಸಭೆಯವರೂ ಡಾ| ಪೈಗಳಿಗೆ ಸ್ವಾಗತ ಸಮಾರಂಭವೊಂದನ್ನು ಏರ್ಪಡಿಸಿದ್ದರು.

ವಿದಾಯ ಸತ್ಕಾರ—ಮಂಗಳೂರಿನ ಗವರ್ನಮೆಂಟ್ ಟ್ರೈನಿಂಗ್ ಕಾಲೇಜಿನ ಸಂಗಾಮಿ ಪ್ರಿನ್ಸಿಪಾಲರಾಗಿದ್ದು ಮೈಸೂರಿಗೆ ಜಿಲ್ಲಾ ವಿದ್ಯಾಧಿಕಾರಿಗಳಾಗಿ ಹೋಗಲಿರುವ ಶ್ರೀ ಎಸ್. ಎಂ. ಕೃಷ್ಣನ್ ಅವರಿಗೂ ಅದೇ ಕಾಲೇಜಿನಲ್ಲಿ ಲೆಕ್ಚರರಾಗಿದ್ದು ನಿವೃತ್ತರಾದ ಶ್ರೀ ಬಿ. ವಿ. ರಮಣ ಅವರಿಗೂ ವಿದಾಯ ಕೊಡಲು ಕಾಲೇಜು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಲೆಕ್ಚರರ್ ಶ್ರೀಮತಿ ಎಂ ಮೂಲತಿಯವರ ಅಧ್ಯಕ್ಷತೆಯಲ್ಲಿ ತಾ 14ರಂದು ಸತ್ಕಾರ ಕೂಟವೊಂದು ಜರಗಿತು. ಇದೇ ಸಂದರ್ಭದಲ್ಲಿ ಕಾಲೇಜಿನ ಮೋಡೆಲ್ ಸ್ಕೂಲಿನ ಪ್ರಧಾನಾಧ್ಯಾಪಕರಾಗಿ ಭಡ್ತಿ ಹೊಂದಿದ ಲೆಕ್ಚರರ್ ಬಿ. ಎ. ಕ್ಲೇವಿಯರಿಗೂ ಅಭಿನಂದನೆ ಕೊಡಲಾಯಿತು.

ಗೊಬ್ಬರದ ಕಾರಖಾನೆ

ಪ್ರತಿವರ್ಷ ೧.೦೫ ಲಕ್ಷ ಟನ್ ಯೂರಿ ಗೊಬ್ಬರ ಮತ್ತು ೩ ಲಕ್ಷ ಟನ್ ನೈಟ್ರೋ—ಫಾಸ್ಪೇಟ ಗೊಬ್ಬರವನ್ನು ಉತ್ಪಾದಿಸುವ ದೊಡ್ಡ ಕಾರಖಾನೆಯೊಂದನ್ನು ಬೊಂಬಾಯಿಯ ಸಮೀಪದ ಟ್ರಾಂಬೆಯಲ್ಲಿ ಸ್ಥಾಪಿಸಲು ಭಾರತವು ನಿರ್ಧರಿಸಿದೆ. ಇದಕ್ಕಾಗಿ ಅಮೇರಿಕೆಯು ೨೭|| ಕೋಟಿ ರೂಪಾಯಿಗಳ ಸಹಾಯವನ್ನು ನೀಡುವುದಾಗಿ ಪ್ರಕಟಿಸಿದೆ. ೧೯೬೨-೬೩ರ ಸುಮಾರಿಗೆ ಈ ಕಾರಖಾನೆಯು ಮಾರ್ಕೋತ್ಪಾದನೆಗೆ ಪ್ರಾರಂಭಿಸುವ ನಿರೀಕ್ಷೆಯಿರುವುದು. ಏಶ್ಯದ ಗೊಬ್ಬರದ ದೊಡ್ಡ ಕಾರಖಾನೆಗಳಲ್ಲಿ ಇದು ಕೂಡ ಒಂದಾಗುವುದು.

ದೇಲಂಪಾಡಿ—ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ 15ನೇ ರಾತ್ರಿ 'ಶರಸೇತು ಭಂಗ' ಎಂಬ ಪ್ರಸಂಗದ ಯಕ್ಷಗಾನ ತಾಳಮದ್ದಳೆಯು ನಡೆಯಿತು. ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರವರು ಈ ಕಾರ್ಯಕ್ರಮವನ್ನು ನಿರ್ದೇಶಿಸಿದ್ದು—ಪ್ರಸಿದ್ಧ ಅರ್ಥಧಾರಿಗಳು ಶ್ರೀ ಶೇಷಧಾರಿ ಗುಡ್ಡಪ್ಪ ಗೌಡರು ವಂದನಾರ್ಪಣೆ ಗೈದರು.

ಉಪಯುಕ್ತವಾದ ಕೆಲವು ಪುಸ್ತಕಗಳು

ಬದುಕು ಬಂಗಾರ (ಕುಮಾರಸ್ವಾಮಿ)	1	8
ಹಿರೋಶಿಮಾದಿಂದ ಜಿನೇವ (ಯು. ಆರ್. ಆಚಾರ್ಯ)	1	8
ಇಂದಿನ ವಿಜ್ಞಾನ ಮತ್ತು ಮಾನವ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	8
ನಡುಹಗಲಿನ ಕಗ್ಗತ್ತಲೆ (ಅನು: ಕು.ಶಿ.ಹರಿದಾಸ ಭಟ್)	2	8
ಶಿಕ್ಷಣದ ಧ್ಯೇಯಗಳು (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ ಮತ್ತು ಕೆ.ಬಿ.ರಾಮಕೃಷ್ಣ ರಾವ್)	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಅನು: ಕು. ಶಿ. ಹರಿದಾಸ ಭಟ್)	2	0
ಅಮೇರಿಕದ ಆರು ಕತೆಗಳು ,,	1	12
ಏಶಿಯದ ಸಂಪತ್ತು (ಕು. ಶಿ. ಹರಿದಾಸ ಭಟ್)	2	0
ಘಂಟೆಮಾರಾ (ಅನು: ಕು ಶಿ. ಹರಿದಾಸ ಭಟ್)	2	0
ನೋಹದ ಮಹಾಜಾಲ (ವೀರಪ್ಪ ಯಗಟಿ)	1	12
ದೇಶಭಕ್ತ (ಕೆ. ಕೆ. ಶೆಟ್ಟಿ, ಎಂ ಎಲ್. ಸಿ.)	1	4
ಭಾರತೀಯ ಮಹಾ ಪುರುಷರು (ಗೋಪಿಚಂದ ರಾವ್)	1	8
ಕಥಾ ಕೌಮುದಿ ,,	1	8
ಅದೃಷ್ಟಶಾಲಿ ರಾಷ್ಟ್ರನಾಯಕ ಜಾರ್ಜ್ ವಾಶಿಂಗ್‌ಟನ್ (ಅನು: ಯು. ಲಕ್ಷ್ಮೀನಾರಾಯಣಾಚಾರ್ಯ)	1	4
ಭಾವಾರ್ಜನೆ (ನಚಿಕೇತ)	1	4
ಮದುವೆ ಸೀರೆ (ಕಥಾಸಂಕಲನ)	1	0

ನವಯುಗ ಪ್ರೆಸ್, ಉಡುಪಿ.
ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್, ಮಂಗಳೂರು.

ಚಂದಾದಾರರಲ್ಲಿ ವಿನಂತಿ

ಇದೀಗ 'ನವಯುಗದ ೩೯ನೆಯ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ ೪೦ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಚಂದಾಹಣವನ್ನು ಸಿಂಡಿಕೇಟ್ ಬ್ಯಾಂಕಿನ ಯಾವದೇ ಶಾಖೆಯಲ್ಲಿ 'ನವಯುಗ" ದ ಖಾತೆಗೆ ಯಾವದೊಂದು ತರದ ಖರ್ಚೂ ಇಲ್ಲದೆ ಪಾವತಿಮಾಡಬಹುದಾಗಿದೆ.

—ಮೆನೇಜರ್

ಬೃಹನ್ಮುಂಬಯಿ ಹೋಟೇಲು ಮಾಲಿಕರಲ್ಲಿ ವಿನಂತಿ

ಮುಂಬಯಿ ನಗರದಲ್ಲಿ ಹೋಟೇಲು ವ್ಯಾಪಾರವು ಇತ್ತೀಚೆಗೆ ತುಂಬ ಕಷ್ಟಸಾಧ್ಯವಾಗುತ್ತಾ ಬರುತ್ತಿದೆ. ಒಂದೆಡೆಯಿಂದ ಪ್ರತಿ ದಿನವೆಂಬಂತೆ ಹೊಸ ಹೊಸ ತೆರಿಗೆಗಳು ಮತ್ತು ನಿಯಂತ್ರಣಗಳ ಒತ್ತಡವು ಹೆಚ್ಚುತ್ತಿರುವಂತೆ ಇನ್ನೊಂದೆಡೆಯಿಂದ "ಟ್ರೇಡ್ ಯೂನಿಯನ್"ಗಳಿಂದ ಪ್ರೇರಿತರಾದ ನೌಕರ ವರ್ಗದವರ ಕಿರುಕುಳಗಳು ಅತೀವ ಕಷ್ಟದಾಯಕವಾಗುತ್ತಿವೆ. ಹೋಟೇಲು ಮಾಲಿಕರ ಸಂಕಷ್ಟಗಳು ದೈನಂದಿನ ಹೆಚ್ಚುತ್ತಿರುವುದಕ್ಕೆ ಸಂಘ ಶಕ್ತಿಯ ಕೊರತೆಯೇ ಒಂದು ಮುಖ್ಯ ಕಾರಣವೆನ್ನಬಹುದು. ಪ್ರಕೃತ, ಹೋಟೇಲು ಮಾಲಿಕರದ್ದೆಂದು ಕರೆಯಲ್ಪಡುವ ಕೆಲವು ಸಂಘಗಳು ಇವೆಯಾದರೂ, ಹೋಟೇಲು ಮಾಲಿಕರ ಉನ್ನತಿಗಾಗಿ ಲಾಭದೃಷ್ಟಿಯಿಲ್ಲದೆ ಕೆಲಸ ಮಾಡುವ ಅವರದ್ದೇ ಆದ ಸಂಸ್ಥೆಯೊಂದು, ಇನ್ನೂ ಬೆಳೆದು ಬಂದಿಲ್ಲ. ನಮ್ಮೊಳಗಿನ ಬಿಕ್ಕಟ್ಟಿನ ಮತ್ತು ಸಂಘಟನಾ ಶಕ್ತಿಯ ಕೊರತೆಯ ಪ್ರಯೋಜನವನ್ನು ಅನ್ಯರು ಪಡೆದು ಯಥೇಚ್ಛ ಲಾಭ ಸಂಪಾದಿಸುವಂತೆ ಆಗಿದೆ. ಇವನ್ನೆಲ್ಲಾ ಮನಗಂಡು ನಮ್ಮ ಕಷ್ಟ ಸಂಕಷ್ಟಗಳನ್ನು ಒಗ್ಗಟ್ಟಾಗಿ ಎದುರಿಸುವ ಒಂದೇ ಉದ್ದೇಶದಿಂದ ನಮ್ಮದೇ ಆದ ಒಂದು ಸಂಘವನ್ನು ಸ್ಥಾಪಿಸುವರೇ ಹೋಟೇಲು ವ್ಯವಸಾಯದಲ್ಲಿರುವ ನಮ್ಮ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.

ನಮ್ಮ ಮುಖ್ಯ ಉದ್ದೇಶಗಳನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ಸೂಚಿಸಬಹುದು.

1. ನಗರ ಸಭೆಯವರಿಂದ ಹೇರಿಸಲ್ಪಟ್ಟ ಮಿತಿ ಮೀರಿದ "ನೀರು ತೆರಿಗೆ"ಯನ್ನು ಕಡಿಮೆ ಮಾಡುವ ಪ್ರಯತ್ನ.

2. ಕೊಳವೆ ನಾಗಾಟದ ಬಗ್ಗೆ ಪ್ರತ್ಯೇಕ ತೆರಿಗೆ ತೆರುವ ಯೋಜನೆಯನ್ನು ರದ್ದುಗೊಳಿಸುವರೇ ಹೋರಾಡುವುದು.

3. ಪೋಲೀಸು, ಮುನಿಸಿಪಲ್ ಮತ್ತು ಲೇಬರ್ ವಿಷಯಕ ಸೆಣಸಾಟಗಳಲ್ಲಿ ಹೋಟೇಲು ಮಾಲಿಕರಿಗೆ ಧರ್ಮಾರ್ಥ ಅನುಭವ ಸಹಾಯ ನೀಡುವುದು.

4. ಹೋಟೇಲು ವ್ಯವಸಾಯದ ಬುಡಕ್ಕೇನೇ ಕೊಡಲಿ ಏಟನ್ನೀಯುವಂತಿರುವ "ಕನಿಷ್ಠ ವೇತನ ಮಸೂದೆ (Minimum Wages Act)" ಯನ್ನು ಹೋಟೇಲು ವ್ಯವಸಾಯಕ್ಕೂ ಹೊಂದಾಣಿಕೆಗೊಳಿಸಬೇಕೆಂಬ ನೌಕರ ವರ್ಗದವರ ಚಳವಳಿಯನ್ನು ಪರಿಣಾಮಕಾರಿಯಾಗಿ ಎದುರಿಸುವುದು.

5. ಹೋಟೇಲು ಮಾಲಿಕರ ಕನಿಷ್ಟ ಪಕ್ಷ ಒಬ್ಬ ಪ್ರತಿನಿಧಿಯಾದರೂ ನಗರ ಸಭೆಗೆ ಚುನಾಯಿಸಲ್ಪಡುವಂತೆ ಸರ್ವ ಪ್ರಯತ್ನ ಮಾಡುವುದು.

6. ನಮ್ಮ ಜನರಲ್ಲಿ ರಾಜಕೀಯ ಹಕ್ಕು ಭಾಧ್ಯತೆಗಳ ಜ್ಞಾನ ಹೆಚ್ಚಿಸುವುದು.

ಹೋಟೇಲು ವ್ಯಾಪಾರದಲ್ಲಿರುವ ನಮ್ಮೆಲ್ಲರ ಸಾಮೂಹಿಕ ಅಭಿವೃದ್ಧಿಗಾಗಿ ನಮ್ಮೊಳಗಿನ ಭಿನ್ನತೆಗಳನ್ನು ತೊರೆದು ಏಕಮತದಿಂದ ದುಡಿಯುವ ನಮಗಾಗಿ ನಮ್ಮವರೇ ಸ್ಥಾಪಿಸಲ್ಪಡುವ ನಮ್ಮ ಈ ಸಂಸ್ಥೆಗೆ ನಮ್ಮೆಲ್ಲರ ನೆರವು ಅತೀ ಅಗತ್ಯ. ನಾವೆಲ್ಲರೂ ಸಂಘ ಶಕ್ತಿಯ ಗುಟ್ಟನ್ನರಿತು ಈ ಸಂಸ್ಥೆಯನ್ನು ರಕ್ಷಿಸಿ ಪೋಷಿಸುವಂತೆ ಶಕ್ತಿ ಮೀರಿ ಪ್ರಯತ್ನಿಸಬೇಕು. "ಒಗ್ಗಟ್ಟಿನಲ್ಲಿ ಬಲವಿದೆ" ಎಂಬುದನ್ನು ಮರೆಯದೆ ನಮ್ಮದೇ ಆದ ಈ ಸಂಘವನ್ನು ಸ್ಥಾಪಿಸಿ, ನೆರವು ಪ್ರೋತ್ಸಾಹಗಳನ್ನು ನೀಡಿ ಒಮ್ಮತದಿಂದ ದುಡಿದರೆ ಮಾತ್ರ ನಮ್ಮೀ ಉದ್ಯೋಗದ ಪ್ರಗತಿಯಾದೀತು. ಈ ಸಂಸ್ಥೆಯ ಸದಸ್ಯತನದ ವರ್ಗಣಿ ಮೂರು ರೂಪಾಯಿ. ಅದರೂ ಹೆಚ್ಚಿನ ಉದಾರ ದಾನ ಸದಾ ಸ್ವಾಗತವು. ಈ ಸಂಸ್ಥೆಯ ಉದ್ದೇಶ ಸಾಧನೆಗಾಗಿ ಮತ್ತು ಅದರ ಕಾರ್ಯಕಲಾಪಗಳನ್ನು ಸಾರ್ಥಕಗೊಳಿಸುವುದಕ್ಕಾಗಿ ಪ್ರತಿಯೊಬ್ಬ ಹೋಟೇಲು ಮಾಲಿಕರೂ ಹೃತ್ಪೂರ್ವಕ ಸಹಕರಿಸುವಂತೆ ವಿನಂತಿಸುವ ತಮ್ಮೆಲ್ಲರ ಸಹೋದ್ಯೋಗಿ.

ಬಿ ಗೋಪಾಲ ಶೆಟ್ಟಿ, ದಾದರ್,
ಪ್ರಧಾನ ಕಾರ್ಯದರ್ಶಿ,
ಮುಂಬ್ಯಾ ಪ್ರದೇಶ ಹೋಟೇಲು ಮತ್ತು ರೆಸ್ಟೋರೆಂಟ್ ಮಾಲಿಕರ ಸಭಾ
ಗೋಹರ್ ತಾಜ್ ಬಿಲ್ಡಿಂಗ್,
ವಿನ್ಸೆಂಟ್ ರೋಡ್,
ದಾದರ್, ಬೊಂಬ್ಯಾ 14.

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ
ದಿ ಪಾಂಗಾಳ ನಾಯಕ್ ಬೇಂಕ್ ಲಿ.,
ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)
ನಮ್ಮ 3 ವರ್ಷ ಮಾಯಿದೆಯ ಕ್ಯಾಷ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.
ರೂ. 87-00 3 ವರ್ಷಗಳ ಅಂತ್ಯದಲ್ಲಿ
ಬಡ್ಡಿ ಕೂಡಿ ರೂ. 100-00 ಒದಗಿಸುವುದು.
ಕರೆ, ಚಿಕ್ಕಮಾಯಿದೆ, ನಿರಖು ಠೇವಣಾತಿಗಳ ಮೇಲೆ
ಆಕರ್ಷಣೀಯ ಬಡ್ಡಿ ದರಗಳು.
ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ
(ಸ್ಥಾಪನೆ: 1920)

ಸಾದರ ಸ್ವೀಕಾರ

ವಿಶೇಷ ಸಂಚಿಕೆಗಳು

ತೆಂಗಿನ ಬುಲ್ಲೆಟಿನ್-(ಸ್ವಾತಂತ್ರ್ಯ ದಿನ ಸಂಚಿಕೆ) ಸಂಪಾದಕರು: ಡಾ. ಪಿ. ಜೆ. ಗ್ರಿಗರಿ, ಪ್ರಕಾಶಕರು: ಭಾರತದ ಕೇಂದ್ರ ತೆಂಗಿನ ಕಮಿಟಿ, ಎರ್ನಾಕುಳಂ. ವಾ. ಚಂದಾ: ರೂ. ಒಂದು.

ತೆಂಗಿನ ಕೃಷಿಯ ಅಭಿವೃದ್ಧಿಗೆ ಸಹಾಯಕವಾಗುವಂತೆ ಪ್ರಕಟಗೊಳ್ಳುವ ಈ ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಸ್ವದೇಶದಲ್ಲಿ ಮಾತ್ರವಲ್ಲ ಫಿಲಿಪ್ಪೈನ್ಸ್, ಜಮೈಕ, ಝಾಂಜಿಬಾರ್, ಕೆನಿಯಾ ಮತ್ತು ಟೆಂಗನೀಕ ಮೊದಲಾದ ವಿದೇಶಗಳಲ್ಲಿ ತೆಂಗಿನ ಕೃಷಿಯ ವಿಧಾನಗಳು ಮತ್ತು ಸಂಶೋಧನೆಗಳಿಗೆ ಸಂಬಂಧಿಸಿದ ಪಾಂಡಿತ್ಯಪೂರ್ಣ ಲೇಖನಗಳು ಸಚಿತ್ರವಾಗಿದ್ದು ತೆಂಗಿನ ತೋಟಗಾರರಿಗೆ ಉಪಯುಕ್ತವಿದೆ. ಎಂದಿನಂತೆ ಈ ವಿಶೇಷ ಸಂಚಿಕೆಯು ಈ ವರ್ಷವೂ ಆಕರ್ಷಕವಾಗಿದೆ.

ವಿಕ್ರಮ—(ಸಾಪ್ತಾಹಿಕ) ಸಂಪಾದಕರು: ಬಿ. ಎಸ್. ಎನ್. ಮಲ್ಯ. ಪ್ರಕಾಶಕರು. ವಿಕ್ರಮ ಪ್ರಕಾಶನ ಟ್ರಸ್ಟ್, ಚಾಮರಾಜ ಪೇಟೆ, ಬೆಂಗಳೂರು—೧೮. ಬೆಲೆ: ರೂ. ೧—೦೦.

ಯುಗಪುರುಷ-(ಮಾಸಿಕ) ಸಂಪಾದಕರು ಮತ್ತು ಪ್ರಕಾಶಕರು: ಕೊಡತ್ತೂರು ಅನಂತ ಪದ್ಮನಾಭ ಉಡುಪ, ಕಿನ್ನಿಗೋಳಿ (ದ. ಕ.) ಬೆಲೆ: ರೂ. ೧-೦೦

ಮೇಲಿನೆರಡೂ ಪತ್ರಿಕೆಗಳ ವಿಜಯದಶಮಿ (ದಸರಾ) ವಿಶೇಷಸಂಚಿಕೆಗಳು ಕನ್ನಡನಾಡಿನ ಸುರಿತ ಬರಹಗಾರರ ಕೃತಿಗಳಿಂದ ಪ್ರಕಟಗೊಂಡಿವೆ. ಸಾಮಾಜಿಕ ರಾಜಕೀಯ ಸಮಸ್ಯೆಗಳಿಗೆ ವಿಕ್ರಮದಲ್ಲಿ ಪ್ರಾಶಸ್ತ್ಯ ದೊರೆತಿದ್ದರೆ, ಸಾಹಿತ್ಯ, ಸಂಸ್ಕೃತಿಗಳಿಗೂ 'ಯುಗಪುರುಷ' ಸ್ಥಾನವಿತ್ತಿದೆ. ಎರಡೂ ಸಂಚಿಕೆಗಳು ಹಿಂದಿನ ವರ್ಷಗಳಂತೆ ಆಕರ್ಷಕವಿವೆ. ವಾಚನೀಯವಿವೆ.

ವಿಜಯವಾಣಿ (ವಿಜಯ ದಶಮಿ ಸಂಚಿಕೆ)—ಸಂಪಾದಕರು: ಹೆಚ್. ಆರ್. ಗುಂಡೂ ರಾವ್, ತುಮಕೂರು.

ಕೈದಾಳದ ಶ್ರೀ ಚನ್ನಕೇಶ್ವರ ಸ್ವಾಮಿಯ ವಿಗ್ರಹದ ಚಿತ್ರದ ಕೂಡಿಕೆಯೂ ವಿವಿಧ ಕಥೆ-ಲೇಖನಗಳೂ ಉಳ್ಳ ಈ ಸಂಚಿಕೆಯನ್ನು ಸ್ವಾಗತಿಸುತ್ತೇವೆ.

ಕಲ್ಪನೆಯ ಕನಸು!

(೫ನೇ ಪುಟದಿಂದ)

ದು, ಈ ಸಂಹಿತೆಯಲ್ಲಿ ಕಾಲಕಾಲಕ್ಕೆ ಸಂಶೋಧನೆ, ಪರಿಮಾರ್ಜನೆ. ಸಂವರ್ಧನೆಗಳೂ ನಡೆಯಬಹುದು.

ಭೂತಕಾಲದಲ್ಲಿ ಹಲವಾರುಬಾರಿ ಒಂದು ಪುಸ್ತಕವೇ ಘಟನಾಚಕ್ರವನ್ನು ತಿರುಗಿಸಿದೆ. ಆದುದರಿಂದ ಈ ವಿಶ್ವಸಂಹಿತೆಯು ಈ ಅಂಧಕಾರಪೂರ್ಣ ವಿಶ್ವದಲ್ಲಿ ಸತತ ಪ್ರಜ್ವಲಿತ ದೀಪಶಿಖೆಯಂತಿರುತ್ತದೆ. ಈ ಮಹಾಯುದ್ಧದಲ್ಲಿ ತಮ್ಮನ್ನು ಹೋಮಿಸಿಕೊಳ್ಳಬಯಸುವ ಜನರಿಗೆ ವಿಲ್ಲಿಯಂ ಲಾಯಡ್ ಗೆರಿಸನ್ "ಅಖಂಡ ವಿಶ್ವವೇ ನನ್ನ ದೇಶ; ಸಂಪೂರ್ಣ ಮಾನವಸಮಾಜವೇ ನನ್ನ ದೇಶವಾಸಿ" ಎಂಬ ವಾಕ್ಯ ಸಂತೋಷವೀಯಬಲ್ಲುದು.

(ಶ್ರೀ ಹೆನ್ರಿ ಎ. ಮರ್ರೆಯವರ ಲೇಖದಿಂದ)

ಕುಮಾರಿ ಬಿಲ್ಲೆಗಳು
(Registered)
ಈ ದೇಶೀಯ ತಯಾರಿಕೆಯು ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಮಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತದೆ.ಟ್ಯೂಬಿಗೆ ರೂ. 3=00 (ಸಾದಾ), ರೂ. 5=00 (ಸ್ಪೆಶ್ಯಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಯಲ್).
P. DEVEE & Co. (M. I.) CALCUTTA—40
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

A NEW BOOK WITHIN THE REACH OF EVERYBODY
"LETTER WRITING MADE EASY"
(75 EVERY DAY LETTERS)
(Written by An Experienced Techer.)
Useful to one and all, the teacher, the student and the layma.
Price: Rs. 1 = 25. (Postage extr
If Rs.1=50 is sent by M.O one copy will be snt by B.P.
Copies can be had from the Publishers:
Navayuga Enterprise Ltd. Udip
and also from:
M/s Indian Industrials & Agencies, Mngalore-1.
M/s Navabharat Book Depot, Udipi.

ಭಾರತೀಯ ದರ್ಶನ

ಜರ್ಮನ್ ದಾರ್ಶನಿಕರ ಆಸಕ್ತಿ

ಭಾರತೀಯರಿಂದ ಪ್ರತಿಪಾದಿತವಾದ ಸಿದ್ಧಾಂತಗಳು, ಭಾರತೀಯ ದರ್ಶನ, ವೇದಾಂತ ಹಾಗೂ ಧರ್ಮಗಳ ಬಗ್ಗೆ ಜರ್ಮನ್ ದಾರ್ಶನಿಕರನೇಕರಲ್ಲಿ ಆಸ್ಥೆಯಿತ್ತು. ಭಾರತೀಯ ಮತ್ತು ಕ್ರೈಸ್ತ ವಿಚಾರಧಾರೆ ಸಮನ್ವಯಗೊಂಡ ನವ ಧರ್ಮವೊಂದು ವಿಶ್ವಧರ್ಮವಾಗುವುದೆಂದು ಹಾರ್ಟ್‌ಮನ್ ಹೇಳಿದ್ದರು!

ಭಾರತೀಯ ದಾರ್ಶನಿಕ ಮತ್ತು ವಿಚಾರಕರು ಪಾಶ್ಚಾತ್ಯರ ಮೇಲೆ ತುಂಬ ಪ್ರಭಾವ ಬೀರಿದ್ದಾರೆ. ಯುರೋಪಿನ ಪ್ರಾಚೀನ ದಾರ್ಶನಿಕರಲ್ಲಿ ಕೆಲವರು ಭಾರತದ ವಿಚಾರಧಾರೆಯನ್ನು ಸ್ವೀಕರಿಸಿದರು. ಜರ್ಮನ್ ದಾರ್ಶನಿಕನಾದ ಆರ್ಥರ್ ಶೋಪನಹರ(೧೭೮೮–೧೮೬೦) ಭಾರತೀಯ ಸಂಸ್ಕೃತಿ ಮತ್ತು ದರ್ಶನಗಳ ಪ್ರಶಂಸಕನಾಗಿದ್ದನು. ತನ್ನ ಮಾನಸಿಕ ವಿಕಾಸಕ್ಕೆ ಮತ್ತು ವಿಶ್ವಾಸಕ್ಕೆ ಜೊತೆಗೆ ಕೇವಲ ಪ್ಲೆಟೊ, ಕಾಂಟ್ ಮೊದಲಾದ ದಾರ್ಶನಿಕರು ಮಾತ್ರವಲ್ಲದೆ ಭಾರತೀಯ ದಾರ್ಶನಿಕರೂ ಕಾರಣ ಪುರುಷರಾಗಿದ್ದಾರೆ ಎಂದು ಇವರು ಒಪ್ಪಿಕೊಂಡಿದ್ದಾರೆ. ಶೋಪನಹರರು ಭಾರತೀಯ ಉಪನಿಷತ್ತುಗಳನ್ನು ಅಧ್ಯಯಿಸಿದರು; ಅವುಗಳಲ್ಲಿ ಅತಿ ಮಾನವೀಯ ವಿಚಾರಗಳಿವೆಯೆಂದು ತಿಳಿದುಕೊಂಡರು. ಯುರೋಪಿನ ವಿಚಾರ ಧಾರೆಯ ಮೇಲೆ ಉಪನಿಷತ್ತುಗಳು ತೀವ್ರ ಪ್ರಭಾವ ಬೀರುವುವೆಂದವರು ಆಶಾವಾದವನ್ನು ಪ್ರಕಟಿಸಿದರು.

ವೇದಾಂತ ಮಾತ್ರವಲ್ಲ ಬೌದ್ಧಧರ್ಮದ ಪ್ರಭಾವವೂ ಈ ಜರ್ಮನ್ ವಿದ್ವಾಂಸರ ಮೇಲೆ ಬೀಳದಿರಲಿಲ್ಲ. ತಮ್ಮ ಅಧ್ಯಯನ ಶಾಲೆಯಲ್ಲಿ ಟಿಬೇಟಿನಲ್ಲಿ ದೊರೆತ ಬುದ್ಧನ ವಿಗ್ರಹಕ್ಕೆ ಇವರು ಮಹತ್ವಪೂರ್ಣ ಸ್ಥಾನವನ್ನಿತ್ತಿದ್ದರು. ತಾವು ಕಂಡುಕೊಂಡ ಸಿದ್ಧಾಂತವು ಬೌದ್ಧಧರ್ಮ ಸಿದ್ಧಾಂತದೊಡನೆ ಹೋಲುತ್ತದೆಯೆಂದಿವರು ಅಭಿಮಾನದಿಂದ ಹೇಳುತ್ತಿದ್ದರು. ಅತ್ಯಧಿಕ ಅನುಯಾಯಿಗಳಿರುವ ಧರ್ಮವಿದೆಂದು ಹೃತ್ಪೂರ್ವಕ ಅನ್ನುತಿದ್ದರು.

ವೇದಾಂತದ ಮೇಲೆಯೇ ಆಧರಿಸುವಂತಹ ಒಂದು ಆದರ್ಶದ ಮಂತ್ರವೊಂದನ್ನಿವರು ಕಂಡುಹಿಡಿದಿದ್ದರು. ಮೋಕ್ಷ ಪಡೆಯಬೇಕೆಂದು ಬಯಸುವವನು ಮಾಯಾಮೋಹವನ್ನು ಬಿಟ್ಟುಬಿಡಬೇಕೆಂಬುದೇ ಇವರ ಮಹಾಮಂತ್ರವಾಗಿತ್ತು.

ವೇದಾಂತ ಮತ್ತು ಬೌದ್ಧ ಧರ್ಮಗಳ ಆದರ್ಶವನ್ನು ಪಯಾಡರ ಶೆಲ್ಲಿಂಗ್ (೧೭೭೫–೧೮೫೪) ಎಂಬವರು ತಮ್ಮ "ಯುರೋಪಿನ ಸಾಂಸ್ಕೃತಿಕ ಜೀವನದಲ್ಲಿ ವೇದಾಂತ ಮತ್ತು ಬೌದ್ಧ ಧರ್ಮ" ಎಂಬ ಪುಸ್ತಕದಲ್ಲಿ ಪ್ರಸ್ತಾವಿಸಿದ್ದಾರೆ.

ಹಿಂದೂ ಧರ್ಮದಿಂದ ಪ್ರಭಾವಿತರಾದ ಜರ್ಮನ್ ದಾರ್ಶನಿಕರಲ್ಲಿ ಕಾಂಟ (೧೭೨೪–೧೮೦೪)ರ ಹೆಸರನ್ನು ಮರೆಯುವುದು ಸಾಧ್ಯವಿಲ್ಲ. ಇವರು ಕೋನಿಂಗ್ಸ್ ಬರ್ಗದಲ್ಲಿರುತಿದ್ದರು. ಇವರು ಕೋನಿಂಗ್ಸ್ ಬರ್ಗ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದಾಗ, ಭಾರತೀಯ ದರ್ಶನ ಶಾಸ್ತ್ರವನ್ನೂ ಸ್ವಲ್ಪ ಕಲಿತಿದ್ದರು; ಆದರೆ, ಅಧಿಕ ಜ್ಞಾನ ಅಗ ಗಳಿಸಿರಲಿಲ್ಲ. ವಿಶ್ವವಿದ್ಯಾಲಯದಲ್ಲಿ ಅವರು ಭಾರತದ ಭೂಗೋಲ ಮತ್ತು ಹಿಂದೂ ಪರಂಪರೆಯ ಕುರಿತಾಗಿ ಆಗಾಗ ಚರ್ಚೆ ನಡೆಸುತಿದ್ದರು. ಇವರು ಭಾರತೀಯ ದರ್ಶನದ ಅಧ್ಯಯನ ನಡೆಸಿರುವುದಾದರೂ ಪ್ರಾಚೀನ ಗ್ರೀಕ ಕೃತಿಗಳಿಂದಲೇ ಎಂಬುದು ಸೋಜಿಗ! ಹಿಂದೂಧರ್ಮವನ್ನು ಇವರು ಯಾವಾಗಲೂ ಪ್ರಶಂಸಿಸುತಿದ್ದರು. ಪರಮಾತ್ಮನ ವಿಷಯದಲ್ಲಿ ಶುದ್ಧವಾದ ಕಲ್ಪನೆಗಳು ಈ ಧರ್ಮದಲ್ಲಿವೆ ಎಂದವರು ಹೇಳುತ್ತಿದ್ದರು.

ಕಾರ್ಲ ಕ್ರಿಶ್ಚಿಯನ್ ಫ್ರೆಡರಿಕ್ ಕ್ರಾಸ್ (೧೭೮೧–೧೮೩೨) ಎಂಬ ಇನ್ನೊಬ್ಬ ಜರ್ಮನ್ ದಾರ್ಶನಿಕನನ್ನು ಅವಶ್ಯ ಹೆಸರಿಸಬೇಕು. ಸೆಕ್ಸನಿಯವರಾಗಿದ್ದ ಇವರು ತಮ್ಮ ಜೀವಮಾನವಿಡಿ ವೇದಾಂತವನ್ನು ಹೊಗಳುತಿದ್ದರು. ಇವರು ಜೈನ ಮತ್ತು ಬೌದ್ಧ ಧರ್ಮಗಳ ಬಗ್ಗೆಯೂ ಗ್ರಂಥಗಳನ್ನು ಬರೆದರು; ಯೋಗಸಾಧನೆಯನ್ನು ಮಾಡುತಿದ್ದರು; ತನ್ನ ಶಿಷ್ಯರಿಗೂ ಯೋಗಸಾಧನೆ ಮಾಡಬೇಕೆಂದು ಉಪದೇಶಿಸುತಿದ್ದರು.

ಭಾರತೀಯ ದರ್ಶನಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿದ ಇನ್ನೊಬ್ಬ ಜರ್ಮನ್ ವಿಚಾರಕನೆಂದರೆ, ವಾನ್ ಹಾರ್ಟಮನ್ (೧೮೪೨–೧೯೦೬). ಈತ ತನ್ನ ಗ್ರಂಥಗಳನ್ನು ಬರೆಯುತ್ತ ಮುಂದೆ ಒಂದು ಕಾಲದಲ್ಲಿ ಭಾರತೀಯ ಮತ್ತು ಕ್ರೈಸ್ತ ವಿಚಾರ ಧಾರೆಗಳ ಸಮನ್ವಯದಿಂದಾದ ಒಂದು ಧರ್ಮವುಂಟಾಗುವುದೆಂದು ಉಲ್ಲೇಖಿಸಿದ್ದಾನೆ.

ರಡೋಲ್ಫ್ ಸ್ಟೀನರ (೧೮೬೧–೧೯೨೫) ರನ್ನು ನಾವಿಲ್ಲಿ ಹೆಸರಿಸಬಹುದು. ಶ್ರೀಮತಿ ಎನ್ನಿ ಬಿಸೆಂಟರ ಬ್ರಹ್ಮವಿದ್ಯೆಯನ್ನಿವರು ಒಂದು ಬಾರಿ ಕಲಿತಿದ್ದರು. ಶ್ರೀ ಸ್ಟೀನರರೂ ಭಾರತೀಯ ಧರ್ಮ ಸಿದ್ಧಾಂತವನ್ನು ಕಲಿಸುತಿದ್ದರು; ಆತ್ಮ ಸಾಧನೆ ಮತ್ತು ಯೋಗ ಸಾಧನೆಗಳಲ್ಲಿ ಆಸ್ಥೆಯನ್ನಿವರು ಇಟ್ಟಿದ್ದರು



ಭಾರತೀಯ ಮಲೇರಿಯಾ ಸಂಸ್ಥೆಯು ದಿಲ್ಲಿಯಲ್ಲಿದ್ದು ರೋಗ ನಿಯಂತ್ರಣದ ಬಗ್ಗೆ ತುಂಬ ಕಳಕಳಿ ವಹಿಸುತ್ತಿದೆ.

ಪುತ್ತೂರು ಡಿ. ಮು ಕೋರ್ಟಿನಲ್ಲಿ

R. E. P. 312/1960.
O. S. 227/1959.

ಅಂಗರಜ್ಜ ಜನಾರ್ಧನ ಭಟ್ಟ — ವಾದಿ.
— ಅರ್ಜಿದಾರ

ಮತ್ತು

ಶೇಷಮ್ಮ-ಮುಕ್ವೆ ಆದಿರಾಜ ಅರಿಗರ ಪತ್ನಿ-ಕ ಗುಂಡದಮನೆ ಸರಸ್ವತಿ ಅಮ್ಮನವರ ಮಗಳು ಪುತ್ತೂರು ತಾಲೂಕು ನರಿಮೊಗ್ರು ಗ್ರಾಮದ ಮುಕ್ವೆ ಎಂಬಲ್ಲಿರುವವಳು—
— ಪ್ರತಿವಾದಿ-ಎದ್ರಿಳು.

ಎದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಮೇಲಿನ ಅಮಲ್ದಾರಿಯಲ್ಲಿ ಡಿಕ್ರಿ ಐವೇಜು ವಸೂಲಿಗೆ ವಾದಿಯು ಪ್ರತಿವಾದಿಳ ಮೂಲಗೇಣಿ, ದರಖಾಸ್ತು ವ ಮೂಲಿಹಕ್ಕಿನ ಪುತ್ತೂರು ತಾಲ್ಲೂ ನಂಬ್ರ 45ನೇ ನರಿಮೊಗರು ಗ್ರಾಮದ ಸ. ನಂ. 122/2 ; 209 ; 120/4 ; 126/2 ; 202/2 ; 202/5 ; 123/1 ; 202/3 ; 202/4 ; 202/1 ; 123/2A ; 123/2B ; 120/5 ; 262/1B,1C 3 ನೇ ಜೊಲಗಳನ್ನು ಜಪ್ತಿ ಪಡಿಸಿ ಏಲಂ ಪಡಿಸಬೇಕಾಗಿ ವಗೈರೆ ಕಾಣಿಸಿ ನಿವೃತ್ತಿ ಕೇಳಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ ತಾ. 10—11—1960 ನೇ ದಿವಸ ಪೂರ್ವಾಹ್ನ 10 ಗಂಟೆಗೆ ಈ ಕೋರ್ಟ ಮುಂದೆ ದಾಖಲುಮಾಡಿ ಕೊಳ್ಳತಕ್ಕದಂತ ಕೋರ್ಟ ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿಯದೆ.

(Sd.) N. R. Bhat.
ವಾದಿಕಡೆ ಎಡ್ವಕೇಟ್.

ಪುತ್ತೂರು ತಾ. 11—10—60.

ಅಸ್ತಮಾ ರೋಗಿಗಳ
ತಿಳುವಳಿಕೆಗಾಗಿ—

ಪ್ರಖ್ಯಾತವಾದ ಅಸ್ತಮಾ ಹಿಮಾಲಯನ್ ಮೂಲಿಕೆಯನ್ನು ಹಾಲು ಮತ್ತು ಅನ್ನದಿಂದ ತಯಾರಿಸಿದ ಖೀರ್‌ನೊಂದಿಗೆ 3-11-60 ಪೂರ್ಣಿಮೆಯ ರಾತ್ರಿ ಸೇವಿಸಿದರೆ ಅಸ್ತಮಾ, ನೇಮಸ, ಕೆಮ್ಮು, ಉಬ್ಬಸ, ಉಸಿರಾಟಕ್ಕೆ ಕಷ್ಟವಾಗುವಿಕೆ, ಉಸಿರು ಕಟ್ಟುವಿಕೆ ಇವು ಗುಣವಾಗುವುವು ಕೂಡಲೇ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡಿರಿ.

Sri Mahatma Sidh Baba Seva Ashram, P. O. Chitrakot, U. P.

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ
ಕಥೆಕಾದಂಬರಿ ಇತ್ಯಾದಿಪುಸ್ತಕಗಳೂ
ಸಿಗುತ್ತವೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.

ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ವಿಚಾರ ವಿವೇಚನೆ:

ದೇವಾಲಯಗಳು ಸಚೇತನಗೊಳ್ಳಲಿ

ಸಮಾಜದ ಸರ್ವಾಂಗೀಣ ಉನ್ನತಿಗಾಗಿ ನಮ್ಮ ಪೂರ್ವಜರು ಸ್ಥಾಪಿಸಿ ಬೆಳೆಸಿದ್ದ ನಮ್ಮ ಮಠ ಮಂದಿರಗಳು ಇಂದು ವಿಶಾಲ ಸಮಾಜದ ಹೆಚ್ಚಿನ ಅಂಶವನ್ನು ಕಡೆಗಣಿಸಿ, ಅವರ ಸಂಬಂಧವನ್ನು ಕಡಿದುಕೊಂಡು ಬಲಗುಂದಿವೆ. ಇವು ಸಚೇತನಗೊಂಡು ಸರ್ವರ ಗೌರವಾದರಗಳಿಗೆ ಪಾತ್ರವಾಗಬೇಕಾದರೆ, ಅವುಗಳ ಕಾರ್ಯಕ್ಷೇತ್ರವೂ ವಿಸ್ತಾರವಾಗಬೇಕು. ಇಲ್ಲವಾದರೆ ವ್ಯರ್ಥ್ಯವಾಗಿ ಹೋಗುವ ಕಾಲ ಅತಿ ನಿಕಟವಾಗುತ್ತಿದೆ.

ಶ್ರೀ ವೈ. ಹರಿಶ್ಚಂದ್ರ ರಾವ್.

ಮಾನವ ಹುಟ್ಟಿನಿಂದಲೇ ಸ್ವಾಭಾವಿಕವಾಗಿ ಭಾವಜೀವಿಯಾಗಿದ್ದಾನೆ. ರಾಗ–ಭಾವಗಳಿಗೆ ಮಾನವಜೀವನದಲ್ಲಿ ಅತ್ಯುಚ್ಚ ಸ್ಥಾನವಿದೆಯೆಂದರೂ ಅತಿಶಯೋಕ್ತಿಯೆನಿಸಲಾರದು. ಆದರೂ ಅಲ್ಲೊಬ್ಬರು, ಇಲ್ಲೊಬ್ಬರು ರಾಗ–ಭಾವಗಳಿಗೆ ಬಲಿಬೀಳದ ಯೋಗಿಗಳಿರಲೂ ಬಹುದು. ಪ್ರಕೃತಿದತ್ತವಾದ ನೈಜ್ಯ ಚಾಲನೆ ಕೆಲವೊಮ್ಮೆ ನಮ್ಮ ರಾಗ—ಭಾವಗಳಿಗೆ ಸ್ಫೂರ್ತಿಯನ್ನೂ, ಮಾರ್ಗದರ್ಶನವನ್ನೂ ಮಾಡಬಲ್ಲುವಾದರೂ, ಅನಾದಿ ಕಾಲದಿಂದಲೂ ನಮ್ಮ ಹಿರಿಯರು ಮಾನವನಿರ್ಮಿತ ಹುರುಪು, ಚೇತನ, ಮಾರ್ಗದರ್ಶನಗಳಿಗೂ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದರು. ಮನುಷ್ಯನಿಗೆ ಮುಖ್ಯವಾಗಿ ಪ್ರಾಣಿಗಳಂತೆ ನಿದ್ರೆ ಆಹಾರ, ಮೈಥುನದ ಅವಶ್ಯಕತೆ ಇರುವಂತೆಯೇ; ಜ್ಞಾನ, ವಿಚಾರ, ವಿದ್ಯೆ ಇವುಗಳ ಅಗತ್ಯವೂ ಅತಿಯಾಗಿಯೇ ಇದೆ. ಹೊಟ್ಟೆ, ಬಟ್ಟೆಯ ಪ್ರಶ್ನೆಯೊಂದಿಗೆ ಜೀವನ ಸಾರ್ಥಕಗೊಳಿಸಲು "ಜೀವನದರ್ಶನ"ದ ಆಕಾಂಕ್ಷೆಯೂ ಬಲವಾಗಿದೆ. ಇದನ್ನೆಲ್ಲಾ ಮನಗಂಡೇ, ನಮ್ಮ ಪೂರ್ವಿಕರು ಜನಜೀವನ ಸುಖಕರವೂ, ಆಶಾದಾಯಕವೂ, ಸಾರ್ಥಕವೂ ಆಗುವಂತೆ ತಮ್ಮ ಜೀವನದ ಅನಧಿಯಲ್ಲೇ ಕೆಲವೊಂದು ಆಚಾರ, ವಿಚಾರ ಸಂಪ್ರದಾಯ ಪದ್ಧತಿಗಳನ್ನೂ ಬಳಸಿಕೊಂಡರು.

ಅವರು ವರ್ಣಾಶ್ರಮ ಧರ್ಮಗಳನ್ನು ಇದೇ ದೃಷ್ಟಿಯಿಂದ ಕರ್ತವ್ಯದ ಕರೆಗೊಟ್ಟು ಪ್ರಾರಂಭಿಸಿದರು. ಜನಾಂಗ ಜೀವನ, ಪ್ರೇಮ, ಸಹಕಾರ, ಪರಸ್ಪರ ತಿಳುವಳಿಕೆಗಳಿಂದ ಕೂಡಿರಲೆಂದೂ ಇನ್ನೂ ಅಸಂಖ್ಯಾತ ರೂಢಿ ನಿಯಮಗಳನ್ನೂ ಜಾರಿಗೆ ತಂದರು. ಅವುಗಳೊಂದಿಗೆ ಪ್ರತಿಯೊಬ್ಬನೂ ಇನ್ನಿತರರ ಇರವನ್ನೂ ಗೌರವದಿಂದ ಮನ್ನಿಸುವಂತೆ, ನಾವೆಲ್ಲರೂ "ದೇವರ ಮಕ್ಕಳು" ನಮ್ಮಲ್ಲಿ ಮೇಲು ಕೀಳು ಎಂಬುದು ಇಲ್ಲ. ನಾವು ನಮ್ಮ ಕರ್ತವ್ಯ, ಕರ್ಮಗಳನ್ನು ಸಾಂಗವಾಗಿ ನೆರವೇರಿಸಿದರೆ ನಮ್ಮ ಜೀವನ ಧನ್ಯವಾಗುವುದೆಂದರು ಜ್ಞಾನಾರ್ಜನೆಗಾಗಿ ಹಲವಾರು ದೇವ ಮಂದಿರ, ಮಠಗಳನ್ನೂ ತೆರೆದು ಅವುಗಳ ವಿನಿಯೋಗಕ್ಕಾಗಿ ಸ್ವಇಚ್ಛೆಯಿಂದ ಮುಂದೆಬಂದು ಹೇರಳ ಆಸ್ತಿ ಪಾಸ್ತಿಗಳನ್ನೂ ಚಿನ್ನಾಭರಣಗಳನ್ನೂ ಕೊಟ್ಟರು. ಇವೆಲ್ಲಾ ವಿನಿಯೋಗವಾಗುವಾಗ ಜನಾಂಗಜೀವನಕ್ಕೆ ಸದುಪಯೋಗವಾಗುವಂತೆ ಆ ಮಂದಿರ, ಮಠಗಳಲ್ಲಿ ವಿದ್ಯೆ, ಜ್ಞಾನಾರ್ಜನೆಗಳಿಗೆ ಅನುಕೂಲ ಮಾಡಿದರು. ಜನರು ಪರಸ್ಪರ ಗೌರವ, ವಿಶ್ವಾಸದಿಂದ ಕೂಡಿ ಬಾಳುವಂತೆ, ಅಲ್ಲೇ ಸಮಾಜದ ನ್ಯಾಯತೀರ್ಮಾನ, ವಿಚಾರ ವಿನಿಮಯ, ದಣಿದ ಬಾಳಿಗೆ ಮನಶ್ಶಾಂತಿ ದೊರೆಯುವಂತೆ ವಿವಿಧ ಧಾರ್ಮಿಕ ಉಪನ್ಯಾಸ, ಕಲಾತ್ಮಕ, ಸಾಂಸ್ಕೃತಿಕ ಚಟುವಟಿಕೆಗಳಿಗೂ ಹೆಚ್ಚಿನ ಗಮನವಿತ್ತು ಸಮಾಜ ಜೀವನದ ಸರ್ವಾಂಗಕ್ಕೂ ಇಲ್ಲಿಂದಲೇ ಹುರುಪನ್ನೂ, ಮಾರ್ಗದರ್ಶನದ ವ್ಯವಸ್ಥೆಯನ್ನೂ ಮಾಡಿದ್ದರು.

ಆದರೆ ಇಂದು ಅವೆಲ್ಲಾ ಶಿಥಿಲವಾಗಿ ಅಳಿದುಳಿದ "ಹಳೆಯ ಕಂದಾಚಾರದ, ಕುರುಡು ನಂಬಿಕೆ, ಅಂಧಶ್ರದ್ಧೆಯ ಕುರುಹುಗಳ ಕೇಂದ್ರವಾಗಿ ಉಳಿದುಕೊಂಡಿವೆ. ಅವು ಯೆಂದರೆ ಅಚ್ಚರಿಪಡಬೇಕಾದುದು ಏನೂ ಇಲ್ಲ. ಹಿಂದೆ ಗ್ರಾಮಕ್ಕೊಂದು ದೇವಳ ಇದ್ದು, ಗ್ರಾಮಜೀವನದ ಕೇಂದ್ರವನ್ನಾಗಿ ಅದನ್ನುಪಯೋಗಿಸುತಿದ್ದರೆ ಇಂದು ಕೆಲವು ವಿಶಿಷ್ಟ ಜಾತಿ, ವ್ಯಕ್ತಿಗಳ ಗುತ್ತಿಗೆಗಳಾಗಿವೆ ಅವು. ಸಾರ್ವಜನಿಕ ದೇವಾಲಯಗಳು ಜೀರ್ಣವಾಗಿ ಜಾತಿ, ಜಾತಿಗಳಿಗೂ ಬೇರೆ ಬೇರೆ ಮಂದಿರಗಳು ತಲೆ ಎತ್ತಿವೆ. ನಮ್ಮ ಪೂರ್ವಿಕರು ಯಾವ ಆದರ್ಶ, ಗುರಿಗಳನ್ನಿರಿಸಿಕೊಂಡಿದ್ದರೋ ಅವಿಂದು ಮಣ್ಣುಪಾಲಾಗಿವೆ. ಅವರು ಕೂಡಿಸಿಟ್ಟ ಜಮೀನು, ಧನಕನಕಗಳು ಹಲ ಕೆಲವರ ಪ್ರಯೋಜನಕ್ಕಾಗಿ ಪರೋಕ್ಷವಾಗಿ ಆತಂಕವಿಲ್ಲದೆ ವಿನಿಯೋಗವಾಗಿ ಸಮಾಜಕ್ಕೆ ಸಲ್ಲಬೇಕಾದ ಪಾಲು ಮಾಯವಾಗಿದೆ. ಹಸಿವಿಲ್ಲದವರಿಗೆ ಯಥೇಚ್ಛವಾಗಿ ತಿಂದುಂಡು ಬಿಸುಡಲು ಇದರ ಭಾರೀ ಮೊತ್ತ ನಿರ್ವಿಘ್ನವಾಗಿ ವೆಚ್ಚವಾಗುತ್ತಿದೆ. ಹಸಿದವರಿಗೆ ಜಾತಿಯೊಂದು ಬೇತಾಳರೂಪದಿಂದ ಅಡ್ಡಿಪಡಿಸುತ್ತಿದೆ. ಸಾರ್ವಜನಿಕ ಜೀವನ ಕೇಂದ್ರಗಳಾಗಿದ್ದವು ಇಂದು

(೧೨ನೇ ಪುಟ ನೋಡಿರಿ)

ನಿಮಗೂ ಗೊತ್ತಿರಲಿ

(೩ ನೇ ಪುಟದಿಂದ)

ಲಿಗೆ ಹೋಗಬೇಕೆಂಬ ಆಶೆಯುಂಟಾಗಿದೆಯೆ?—ಎಂಬ ಉತ್ತರ ಕೂಡಲೇ ಬಂದಿತು. ಹಿರೋಶಿಮಾದಲ್ಲಿ ಅಣುಬಾಂಬು ಸುರಿದು ಅಣು ಯುಗ ಪ್ರಾರಂಭವಾಗುವುದಕ್ಕೆ ಮೊದಲಿನ ಸಂವಾದವಿದು.

ಕೊಲೆ ಮತ್ತು ಸುಲಿಗೆಗಳಿಗೆ ಪ್ರಾಧಾನ್ಯವೀಯುವ ಚಲಚ್ಚಿತ್ರ ರಚನೆಯಲ್ಲಿ ಡಾ। ಹಿಚ್‌ಕಾಕರಿಗೆ ಅಭಿರುಚಿ ಹುಟ್ಟಿದುದು ಹೇಗೆಂಬುದಕ್ಕೆ ಒಂದು ಸ್ವಾರಸ್ಯಪೂರ್ಣ ಕಥೆಯಿದೆ. ಹಿಚ್‌ಕಾಕರು ಐದು ವರ್ಷದ ಬಾಲಕರಾಗಿದ್ದಾಗ, ಇವರ ತಂದೆಯವರೊಂದು ಪತ್ರವನ್ನು ಬರೆದು, ಪೋಲೀಸ್ ಸ್ಟೇಶನ್ನಿಗೆ ಕಳಿಸಿದರು. ಅಲ್ಲಿ ಅಧಿಕಾರಿಯು ಪತ್ರವನ್ನು ಓದಿ ನೋಡಿ ಇವರನ್ನು ಬಂಧಿಸಿದನು. ದಿಙ್ಮೂಢರಾದ ಹಿಚ್‌ಕಾಕರನ್ನು ಪೋಲೀಸು ಅಧಿಕಾರಿಯು ನೋಡುತ್ತ, "ನಿನಗೆ ದುಷ್ಟ ಹುಡುಗರಾಗುವುದರ ಗತಿಯೇನೆಂದು ನಾನು ಕಲಿಸಿಕೊಡಬೇಕೆಂದು ನಿನ್ನಪ್ಪನ ಆಶೆ" ಎಂದನು.

ಈ ಅನುಭವದ ಪ್ರಭಾವ ಬಹುಕಾಲ ಮಾಸಲಿಲ್ಲ. ಹಿಚಕಾಕರು ಪೋಲೀಸರಿಗೆ ಹೆದರುವಷ್ಟು ಮತ್ತಾರಿಗೂ ಅಂಜಲಾರರು ಇದರಿಂದಾಗಿಯೇ ಇವರು ನ್ಯಾಯಸಮ್ಮತನಾಗಿ ನಡೆಯುವ ಸುಸಭ್ಯ ನಾಗರಿಕರಾದರು.

ಇತರ ಚಿತ್ರ ನಿರ್ಮಾಪಕರು ಮೆಚ್ಚದ ವಸ್ತುಗಳನ್ನೇ ಡಾ. ಹಿಚ್‌ಕಾಕರು ಹೆಕ್ಕಿತೆಗೆಯುತ್ತಾರೆ. ಅವರ ಪ್ರೇರಣಾಸ್ರೋತ ಮತ್ತು ಕಥಾಚಯನದ ಕ್ಷೇತ್ರವಾದರೂ ತೀವ್ರ ವಿಚಿತ್ರತಮವಾದುದು. "ಟು ಕೇಚ್ ಎ ಥೀಫ್" ಎಂಬ ಚಿತ್ರದ ವಸ್ತುವನ್ನು ಒಂದು ರಹಸ್ಯಮಯ ಕಾದಂಬರಿಯಿಂದ ಚುನಾಯಿಸಲಾಗಿದೆ. 'ರಿಯರ್ ವಿಂಡೋ' ಎಂಬುದನ್ನು ಹೋಲಿವುಡ್ಡಿನ ಎಲ್ಲ ನಿರ್ಮಾತರೂ ತಿರಸ್ಕರಿಸಿದ್ದರು. ಹಿಚ್‌ಕಾಕರೇ ಇದನ್ನು ಆಳವಡಿಸಿಕೊಂಡರು. ಜನರು ಈ ಕಥೆಯು ಚಿತ್ರರೂಪಕ್ಕಿಳಿಯುವುದಿಲ್ಲವೆಂದು ಖಂಡಿತಕ್ಕೂ ನಂಬಿದ್ದರು. ಆದರೆ, ಹಿಚ್‌ಕಾಕರ ಅವಿರತ ಪರಿಶ್ರಮದಿಂದದು ಚಿತ್ರವಾಗಿ ಪ್ರದರ್ಶನಕ್ಕೆ ಬಂದಾಗ, ಜನರು ದಂಗುಹಿಡಿದು ಹೋದರು.

ಒಂದು ಗಂಭೀರ—ಪ್ರಹಸನವಿಹೀನ, ಶುಷ್ಕವಿಷಯವನ್ನಾದರೂ ರಹಸ್ಯ, ರೋಮಾಂಚಕ ಮತ್ತು ಹಾಸ್ಯಗಳಿಂದ ತುಂಬಿಸಿ ಮನೋರಮವಾಗಿ ಮಾಡಬಲ್ಲ ಪರಿಣತಿ ಡಾ। ಹಿಚ್‌ಕಾಕರದು. ಈ ಒಂದು 'ಮಾಯೆ', ಬೇರಾವ ದಿಗ್ದರ್ಶಕನಲ್ಲೂ ಇರುವುದಿಲ್ಲ. ಈ ಜಾದುಗಾರಿಕೆಗೆ ಕಾರ್ಯರೂಪವೀಯುವಾಗ ಡಾ। ಹಿಚ್‌ಕಾಕರು ಪಡುವ ಅವಿರತ ಪರಿಶ್ರಮವನ್ನು ಅನ್ಯ ನಿರ್ದೇಶಕ ಮಾಡುವುದಿಲ್ಲವೆಂಬುದೂ ಸತ್ಯವೇ. ಸಾಕಷ್ಟು ಕೀರ್ತಿಯನ್ನೂ ಅನಂತ ಸಫಲತೆಯನ್ನೂ ಸಮೃದ್ಧಿಯನ್ನೂ ಪಡೆದಿರುವುದರಿಂದ ಇನ್ನೂ ಅವರು ಕಠೋರ ಪರಿಶ್ರಮಪಡುವ ಅಗತ್ಯವಾದರೂ ಏನೆಂದು ಜನ ವಿಸ್ಮಿತರಾಗಿದ್ದಾರೆ. ಅವರ ಮನಸ್ಸಿನಲ್ಲಿನ ಅಪಾರ ನಾಟ್ಯಕಲಾ ಪ್ರೇಮವೇ ಇದಕ್ಕೆಮೂಲಭೂತ ಕಾರಣವಾಗಿದೆ. ಈ ಕಲೆಯಲ್ಲಿ ನಿರತನಾಗಿರುವುದೇ ಹಿಚ್‌ಕಾಕರಿಗೆ ಸಂತೋಷವನ್ನು ತರಬಲ್ಲ ಕರ್ತವ್ಯವಾಗಿದೆ.

(ಸಾಧಾರ)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. No. 290/1960.

ಕೃಷ್ಣ ಹೆಬ್ಬಾರ — ವಾದಿ.

ಮತ್ತು

ದುಗ್ಗಣ್ಣ ಗೌಡ ಕೂಡಾ —ಪ್ರತಿವಾದಿರು, 2ನೇ ಪ್ರತಿವಾದಿ— ಶಾಂತಪ್ಪ ಗೌಡ, ಕೆಂಚ ಗೌಡರ ಮಗ, ಪುತ್ತೂರು ತಾಲೂಕು ರೆಂಜ ಲಾಡಿ ಗ್ರಾಮದ ಚಾಕೋಟೆಜಾಲು ಎಂಬಲ್ಲಿ.

—ಇವರಿಗೆ

ನೀವು ಕೂಡಾ ಸದ್ರಿ ವಾದಿಗೆ ತಾ. 27—5—1958ರಲ್ಲು ರೂ. 300-00 ಕ್ಕೆ ಬರಕೊಟ್ಟ ಡಿ ಪ್ರೋ ನೋಟಿನ ಅಸ್ಲು ಬಡ್ಡಿ ಹಣಗಳ ವಸೂಲಿ ಬಗ್ಗೆ ಮಾಡಿದ ಮೇಲಿನ ದಾವೆಯು ತಾ. 21—10—1960ಕ್ಕೆ ವಿಚಾರಣೆಯಿರುತ್ತದೆ. ನಿಮಗೇನಾದರೂ ಆಕ್ಷೇಪವಿದ್ದಲ್ಲಿ ಆ ದಿವಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿ ಕೊಳ್ಳತಕ್ಕದ್ದೆಂತಲೂ ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾಗುವುದೆಂತಲೂ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿದೆ.

(Sd.) N. Subramanyam.
Advocate for Plff.

ಮೊಕ್ಕಾಂ ಪುತ್ತೂರು 12—10—1960.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C 275/60

ಗಣಪಯ್ಯ ಉಡ್ಪ. —ವಾದಿ.

ಶ್ರೀನಿವಾಸ ಮೈಪಾಡಿ ಸಹಾ - ಪ್ರತಿವಾದಿರ ಸದ್ರಿ ವಾದಿರಕಡೆಯಿಂದ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

1. ಪ್ರತಿವಾದಿರು ಶ್ರೀನಿವಾಸ ಮೈಪಾಡಿ- ಸೂರಪ್ಪ ಮೈಪಾಡಿ ಮಗ. 2. ಸುಬ್ರಾಯ ಮೈಪಾಡಿ— ವೆಂಕಟ್ರಮಣ ಮೈಪಾಡಿ ಮ[illegible] 3. ಆನಂದ ಮೈಪಾಡಿ—ರಾಮಚಂದ್ರ ಮೈ[illegible] ಪಾಡಿ ಮಗ ಬಸ್ರೂರು ಗ್ರಾಮ [illegible] ಪಟ್ಟಕುದ್ರು.

ವಾದಿಗೆ ಪ್ರತಿವಾದಿರು ತಾ11—6—57 [illegible] ಲ್ಲು ಬರಸಿ ಕೊಟ್ಟ ಡಿಮಾಂಡ ನೋಟಿನ [illegible] ಹಾ ಅಸ್ಲು ಬಡ್ಡಿ ರೂ 149—00ಬರಮಾಡಿ ಕೊಳ್ಳುವರೆ ವಾದಿ ಪ್ರತಿವಾದಿರ ಮೇಲೆ ಹೂಡಿದ ಮೇಲ್ಕಂಡ ದಾವೆಯು ತಾ. 1—11—60 ಕ್ಕೆ ಅಖೈರು ತನ್ಕಿಗೆಯಿಡೋಣಾಗಿಯದೆ. [illegible] ಕುರಿತು ನಿಮ್ಮದೇನಾದ್ರೂ ಉದಾಹರಣೆಯಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿದೆ.

G. Sanjiva Rao B.A.LL B
Vakil

Coondapur Date 12—10—60.

ಹರ್ಷ ಬಾಲಗ್ರಹ ತೈಲ

HARSHA BALAGRAHA TAILA

A Reputed Remedy for Fits.

ಬಾಲಗ್ರಹ ರೋಗಕ್ಕೆ
ಒಂದು ಖಾತ್ರಿಯಾದ ಮದ್ದು.

ಉಪಯೋಗದ ಕ್ರಮ ಸೀಸೆಯಲ್ಲಿದೆ.

ದ. ಕ. ಜಿಲ್ಲೆಯನ್ನು ಬಿಟ್ಟು ಉಳಿದ ಎಲ್ಲಾ
ಕಡೆಗಳಿಗೂ ಏಜಂಟರು ಬೇಕು.

ಬೆಲೆ: ತೊಲೆ ಬಾಟ್ಲ 0—6—0. ವ್ಯಾಪಾರಸ್ತರಿಗೆ ಕಮಿಷನ್.

ಸ್ಟಾಕಿಸ್ಟರು:— U. Venkatesh Jogappa Shanbhogue & Sons, Udipi.
V. V. Shenoy & Sons, Karkala.

ಕಥಾವಿಹಾರ

(೨ನೇ ಪುಟದಿಂದ)

ನು ಗಂಭೀರ ಸ್ವರದಿಂದ ಹೇಳಿದನು.

“ನನ್ನಂತಹ ಪತಿವ್ರತಾ ಶಿರೋಮಣಿಗೆ, ಅಷ್ಟಾವಕ್ರ ಪತಿಯೊಡನೆ ಅಮರಣ ಅತಿನಿಷ್ಠೆಯಿಂದ ಜೀವನ ನಿರ್ವಹಿಸಿ ತೊಳಲಿದ ನನಗೆ ಇಂತಹ ದುರ್ಗತಿಯೆ? ಪ್ರತಿನಿತ್ಯ ಹೊಸ ಹೊಸ ವ್ಯಕ್ತಿಗಳನ್ನು ಆಲಂಗಿಸುವ ಈ ಡಾಕಿನಿಗೆ ಉನ್ನತ ಸ್ವರ್ಗ! ಈ ಪಾಪಿಯ ನೆರಳಿನಿಂದ ದೂರವಿರುವ ನನ್ನಂತಹ ಉತ್ತಮ, ಪತಿವ್ರತಾತ್ಮಳಿಗೆ ನಿಮ್ಮ ಸ್ವರ್ಗದಲ್ಲಿ ಸ್ಥಾನ ದೊರೆಯುವುದು. ನಿಮ್ಮ ನ್ಯಾಯಪಾಲನೆ ಸರಿಯಾಗಿದೆ!”

“ಚಿತ್ರಗುಪ್ತನ ಅಂಕಿತಗಳು ಯಾವಾಗಲೂ ತಪ್ಪೆನಿಸಲಾರವು. ಮಾನವನ ಜೀವನದ ಕ್ಷಣಕ್ಷಣದ ಮತ್ತು ಮನಸ್ಸಿನ ಕಣಕಣದ ಅಂಕಿತವೆಲ್ಲವೂ ಇಲ್ಲಿವೆ.”

“ನಾನು ಅಖಂಡ ಜೀವನವನ್ನು ಆ ಕುರೂಪಿಯೊಡನೆ ದಾಂಪತ್ಯ ರೀತಿಯಿಂದ ಬಾಳಿದ್ದೆನು— ಇದನ್ನು ನಿಮ್ಮ ಪುಸ್ತಕದಲ್ಲಿ ಬರೆದಿಟ್ಟಿರುವಿರಿ ತಾನೆ?”

“ಹೌದು; ಈ ಸಂಗತಿಯಿದೆ. ಈ ಪುಸ್ತಕದಲ್ಲಿ ಇನ್ನೂ ಹಲವಾರು ವಿಷಯಗಳಿವೆ.”

“ಇನ್ನೂ ಇವೆಯೆ? ಯಾವುವು?'

“ನೀವು ಪ್ರತಿನಿತ್ಯ ನಿಮ್ಮ ಶಯ್ಯಾಗೃಹದ ಕಿಟಕಿಯ ಬಳಿ ನಿಂತುಕೊಂಡಿರುತ್ತಿದ್ದಿರಿ. ಆದರೆ, ಹೊರಗಿನ ಶುಭ್ರ ಬೆಳದಿಂಗಳನ್ನು ನೋಡುತ್ತಿರಲಿಲ್ಲ; ಅಂಧಕಾರವನ್ನೂ ಈಕ್ಷಿಸುತ್ತಿರಲಿಲ್ಲ; ನಕ್ಷತ್ರಗಳ ಜಗಮಗಾಟವನ್ನೂ ವೀಕ್ಷಿಸುತ್ತಿರಲಿಲ್ಲ. ಪರಂತು.......'

“ಪರಂತು.... ಏನು?” ಪತಿವ್ರತೆಯು ಭಯಭೀತಳಾಗಿ ಪ್ರಶ್ನಿಸಿದಳು.

“ಪರಂತು, ನೀವು ನೆರೆಯ ಈ ಕಲಂಕಿನಿಯ ಮನೆಗೆ ಬಂದು ಹೋಗುತ್ತಿರುವ ಸುಂದರ ತರುಣರನ್ನೇ ನೆಟ್ಟ ದೃಷ್ಟಿಯಿಂದ ದೃಷ್ಟಿಸುತಿದ್ದಿರಿ. ತಿಳಿಯಿತೆ?'

“ಸುಳ್ಳು ಮಹಾಸ್ವಾಮಿ, ಇದು ಸಂಪೂರ್ಣ ಸುಳ್ಳಿನ ಕಂತೆ!

ಚಿತ್ರಗುಪ್ತನು ತನ್ನ ದಪ್ತರನ್ನು ಪುನಃ ಕತ್ತಿತ್ತ ತಿರುವಿ ಹೇಳಿದ— “ಛೀ, ಛೀ! ಏನು? ಈ ಅಂಕಿತಗಳು ಸುಳ್ಳು ಹೇಳುವುದುಂಟೇ? ನೀವು ನಿತ್ಯವೂ ನಿಮ್ಮ ಕುರೂಪಿ ಅಷ್ಟಾವಕ್ರ ಪತಿಯ ತೋಳತೆಕ್ಕೆಯಲ್ಲಿ ಬಿದ್ದುಕೊಂಡಿರುತ್ತಿದ್ದಿರಿ. ಇದು ನಿಜವೇ. ಆದರೆ, ಮಿಲನದ ಪ್ರತಿಕ್ಷಣವೂ ನಿಮ್ಮ ಮನಸ್ಸು ಹೃದಯಗಳು ತಿರಸ್ಕಾರ ಮತ್ತು ಉಪೇಕ್ಷೆಗಳಿಂದ ತುಂಬಿ ಹೋಗುತಿದ್ದುವು. ನಿಮ್ಮ ಚಿತ್ತ ಚಂಚಲವಾಗಿ ಅತ್ತಿಂದಿತ್ತ ಸುತ್ತುವುದರಲ್ಲಿಯೇ ತತ್ಪರವಾಗುತಿತ್ತು. ಈಗಲಾದರೂ ಅರ್ಥವಾಯಿತೆ?”

“ನನ್ನ ಮನವು ಎಲ್ಲೆಲ್ಲಿ ಹರಿದಾಡುತಿತ್ತು?”

“ಈ ವೇಶ್ಯೆಯ ರಂಗಮಹಲಿನಲ್ಲಿ, ಈಕೆಯ ಮನೆಗೆ ಆಗಮಿಸುತಿದ್ದ ನವಯುವಕರ ಬಾಹುಪಾಶದಲ್ಲಿ. ಏನು, ಇದು ಸರಿಯಲ್ಲವೆ?”

“ಆದರೆ. ಈ.... ಈ ವೇಶ್ಯೆ ನನಗಿಂತ ಪುಣ್ಯವಂತೆ ಹೇಗಾದಾಳು?”

ಮುಂದಿದ್ದ ಪುಟವನ್ನೇ ನೆಟ್ಟ ದೃಷ್ಟಿಯಿಂದೊಮ್ಮೆ ನೋಡಿ ಚಿತ್ರಗುಪ್ತ ಮುಂದುವರಿಸಿದ— “ನೀವು ನಿಮ್ಮ ಕಿಟಿಕಿಯ ಬಳಿ ನಿಂತು ಅತ್ತಿತ್ತ ನೋಟಹಾಯಿಸುತಿದ್ದಾಗ, ಈಕೆ ಅತ್ಯಂತ ಭಕ್ತಿಭಾವದಿಂದ ನಿಮ್ಮನ್ನು ಕಾಣುತಿದ್ದಳು. ಈಕೆಯ ಕಣ್ಣುಗಳು ತನ್ನಬಳಿಗೆ ಬರುತಿದ್ದ ಸುಂದರ ಯುವಕರ ಮೇಲಿರದೆ ನಿಮ್ಮತ್ತ ಸುಳಿದಾಡುತಿತ್ತು. ಪ್ರತಿದಿನ ಈಕೆ ಕೈಜೋಡಿಸಿ ಅನ್ನುತಿದ್ದಳು— “ಪರಮಾತ್ಮ, ಜೀವನ ನಾಟಕವನ್ನು ನೀನು ಎಷ್ಟೊಂದು ಕೌಶಲಪೂರ್ಣನಾಗಿ ಅಭಿನಯಿಸುತ್ತೀಯ? ನಿನ್ನ ದಯೆಯಿಂದಲೇ ನನ್ನಂತಹ ಪಾಪಿನಿಗೂ ದಿನನಿತ್ಯ ಪತಿವ್ರತೆಯ ದರ್ಶನವಾಗುತ್ತಿದೆ. ನಿನ್ನ ಈ ಮಹದುಪಕಾರದ ಭಾರದಿಂದ ನಾನು ಕುಂಠಿತಳಾಗುತಿದ್ದೇನೆ. ನನ್ನ ಅಮಾವಾಸ್ಯೆಯ ಅಂಧಕಾರ ಭರಿತವಾದ ಜೀವನದಲ್ಲಿಯೂ ಈ ಪ್ರಕಾಶ ಕಿರಣ ಪುಂಜವು ನಿನ್ನ ದಯದಿಂದಲೇ ಗೋಚರಿಸುತ್ತಿದೆ. ನಾನು ಕೋಮಲ ಪುಷ್ಪಶಯ್ಯೆಯ ಮೇಲೆ ಮದನನ ಬಾಹುಪಾಶಗಳೆಡೆಯಲ್ಲಿ ಇರುವಾಗ ಕೂಡ ನನ್ನ ಮನಸ್ಸು ಈ ಅನಂತ ಪ್ರಕಾಶವನ್ನೇ ಅವಿರತವಾಗಿ ಪೂಜಿಸುತ್ತಿರುವಂತೆ ದಯಮಾಡಿರುವಿ.” ಇದರಿಂದಾಗಿ ಈ ವೇಶ್ಯೆಯು ನಿನಗಿಂತ ಹೆಚ್ಚಿನವಳಾದಳು. ಈಗಲಾದರೂ ಸಮಾಧಾನವೆನಿಸಿತೆ?”

ಚಿತ್ರಗುಪ್ತನ ಈ ಉತ್ತರವನ್ನು ಆಲಿಸಿದ ಕ್ಷಣದಲ್ಲಿಯೇ ಆ ‘ಪತಿವ್ರತಾ ನಾರಿ’ಯ ನೇತ್ರಗಳು ಸಜಲವಾದುವು. ಪಶ್ಚಾತ್ತಾಪದಿಂದ ಕಣ್ಣೀರು ಮಿಡಿಯುತೊಡಗಿದಳು.

ಮನಸ್ಸಿನ ಮೈಲಿಗೆಯನ್ನು ತೊಳೆಯಲು ಕಣ್ಣೀರಿನಿಂದ ಹೆಚ್ಚಿನದು ಬೇರಾವುದಿಲ್ಲ. ಆ ‘ಪತಿ ಪರಾಯಣೆ’ ತನ್ನ ಮುಂದೆ ನಿಂತಿದ್ದ ಆ ‘ಕುಲಕಲಂಕಿನಿ ವೇಶ್ಯೆ’ ಪಾದಗಳಿಗೆ ಮಣಿದು ಬಿದ್ದಳು.

(ಮರಾಠೀ ಕತೆಯೊಂದರ ರೂಪಾಂತರ

ಪ್ರಕೃತಿಸುಂದರವಾದ ಭಾರತೀಯ ಪರ್ವತನಗರಗಳು



ಭಾರತದ ಬಯಲು ಪ್ರದೇಶಗಳು ಉಷ್ಣತೆಯಿಂದ ಬೆಂದಿರುವಾಗ, ಬೆಟ್ಟಗಳು, ಪರ್ವತಕಣಿವೆಗಳು ತಂಪಗಿನ ಹವೆಯಿಂದ ಕೂಡಿರುತ್ತವೆ. ಬೇಸಗೆಯ ವಿರಾಮದ ದಿನಗಳಲ್ಲಿ ಸಾಧ್ಯವಿದ್ದವರು ಬೆಟ್ಟದೂರುಗಳಲ್ಲಿ ಒಂದಾರುದಿನ ಆರಾಮವಾಗಿದ್ದು ಮರಳುತ್ತಾರೆ. ನಮ್ಮ ದೇಶದ ವಿವಿಧ ಭಾಗಗಳಲ್ಲಿನ ಬೆಟ್ಟದೂರುಗಳಿಗೆ ಮೋಟಾರು ಸೌಕರ್ಯವಿರುವುದರಿಂದ ಪ್ರಯಾಣವು ಪ್ರಯಾಸವೆನಿಸುವುದಿಲ್ಲ. ಕೆಲವೆಡೆಗಳಿಗೆ ರೇಲು ಹಾಗೂ ವಿಮಾನಗಳ ಮೂಲಕವೂ ಹೋಗಬಹುದು. ನವದೆಹಲಿಯಿಂದ ಕಾಶ್ಮೀರವನ್ನು ಕೆಲವೇ ತಾಸುಗಳಲ್ಲಿ ಮುಟ್ಟಬಹುದು. ಉತ್ತರದ ಕುಲುಕಣಿವೆಯನ್ನೂ ವಿಮಾನದಿಂದ ಸೇರಬಹುದು.

ಈ ಚಿತ್ರವನ್ನು ನೋಡಿರಿ. ಇದರಲ್ಲಿ ಮೇಲಿನ ಸಾಲಿನ ಎಡಚಿತ್ರವು ಕಾಶ್ಮೀರದ ಒಂದು ಮನಮೋಹಕ ದೃಶ್ಯವಾಗಿದೆ. ತಣ್ಣಗಿನ ಹವೆ, ಹಿಮ ತುಂಬಿದ ಪರ್ವತ ಶಿಖರಗಳು, ಅಗಲಕಿರಿದಾದ ರೋಮಾಂಚನಕಾರಕ ಕಣಿವೆಗಳು, ಬಣ್ಣಬಣ್ಣದ ಉದ್ಯಾನಗಳು, ಜಗಮಗಿಸುವ ನೀರ್ಝರಿಗಳು, ಸುವಿಸ್ತೃತವಾದ ಸರೋವರಗಳು ಕಾಶ್ಮೀರದ ಹೆಚ್ಚುಗಾರಿಕೆ. ವಿರಾಮದ ದಿನಗಳಲ್ಲಿ ನಿಮ್ಮ ಮನಸ್ಸು ಪ್ರಸನ್ನವಿರಬೇಕಾದರೆ ಏನೇನು ಬೇಕು, ಅವೆಲ್ಲವೂ ಕಾಶ್ಮೀರದಲ್ಲಿವೆ. ದೆಹಲಿಯಿಂದ ೬೦೧ ಮೈಲು ದೂರವಿರುವ ಪಠಾನಕೋಟವು ಇಲ್ಲಿನ ರೇಲ್ವೆ ನಿಲ್ದಾಣವಾಗಿದೆ. ಅಲ್ಲದೆ ರಾಜಧಾನಿ ಶ್ರೀನಗರ ಮತ್ತು ದೆಹಲಿಗಳ ನಡುವೆ ನಿತ್ಯ ವಿಮಾನ ಹಾರುತ್ತದೆ.

ಡಾರ್ಜಲಿಂಗ್‌ನ ಒಂದು ಪಕ್ಷಿ ನೋಟವು ಅದೇ ಸಾಲಿನ ಬಲಪಕ್ಕದಲ್ಲಿದೆ. ಭಾರತದ ಪೂರ್ವ ಭಾಗದ ಪಶ್ಚಿಮ ಬಂಗಾಲದಲ್ಲಿ ಡಾರ್ಜಲಿಂಗ್ ಮತ್ತು ಕಾಲಿಂಪಾಂಗ್‌ಗಳೂ ಆಸ್ಸಾಮದಲ್ಲಿ ಶಿಲ್ಲಾಂಗೂ ಪ್ರಧಾನ ಪರ್ವತ ನಗರಗಳು. ಆದರೆ, ಡಾರ್ಜಲಿಂಗ್ ಅತ್ಯಂತಾಕರ್ಷಕವಾದುದು. ‘ಭಾರತೀಯ ಬೆಟ್ಟದೂರುಗಳ ರಾಣಿ’ ಎಂಬ ಗೌರವಕ್ಕಿದು ಪಾತ್ರವಾಗಿದೆ. ಹಿಮಭರಿತ ಪರ್ವತ ಶ್ರೇಣಿಗಳ ರಮ್ಯ ಹೃದಯಂಗಮ ದೃಶ್ಯಗಳು ಮಾತ್ರವಲ್ಲದೆ ಇಲ್ಲಿ ಬೌದ್ಧರ ಅವಶೇಷಗಳೂ ಅಸಂಖ್ಯಾತ ಜೋಗುಗಳೂ ಇರುತ್ತವೆ.

ದಕ್ಷಿಣ ಭಾರತದ ಊಟಿ ಅಥವಾ ಉಟಕಮಂಡವು ಹೆಸರಾಂತ ಬೆಟ್ಟದೂರು (ಕೆಳಗಿನ ಸಾಲಿನ ಎಡಚಿತ್ರ) ಇಲ್ಲಿಂದ ಹನ್ನೆರಡು ಮೈಲುಗಳ ಅಂತರದಲ್ಲಿ ನಿಶ್ಯಬ್ದವಾದ ಕೂನೂರು ಇದೆ. ಮಧುರೆ ಜಿಲ್ಲೆಯಲ್ಲಿ ನೀಲಿನ ಫಳನಿ ಬೆಟ್ಟಗಳ ದಕ್ಷಿಣ ಸೋಪಾನಗಳಲ್ಲಿ ‘ಕೊಡೈಕನಲ್’ ಎಂಬ ಊರು ಇದೆ. ಇಲ್ಲಿ ಹಲವಾರು ಆಹ್ಲಾದಕಾರಕ ವೃಕ್ಷಗಳ ಜತೆಗೊಂದು ಮನೋಹರ ತಟಾಕವೂ ಇದೆ. ವಿನೋದಕ್ಕಾಗಿ ಬೇಟೆಯಾಡುವುದಕ್ಕೂ ಇದು ಸಮಂಜಸವಾದ ಸ್ಥಳ. ಮದ್ರಾಸದಿಂದ ಊಟಿ ಅಥವಾ ಕೊಡೈಕನಲ್‌ಗೆ ಬಸ್ಸು ಇಲ್ಲವೇ ರೇಲುಗಳ ಮೂಲಕ ಪ್ರಯಾಣಿಸಬಹುದು.

ಅಬೂ ಬೆಟ್ಟಗಳ ಸೌಂದರ್ಯವಿಶಿಷ್ಟತೆಗಳನ್ನು ಯಾರು ಕೇಳಿಲ್ಲ? ರಾಜಸ್ಥಾನದ ನಿರ್ಜನ ಪೀಠಭೂಮಿಯಲ್ಲಿನ ಈ ಪ್ರದೇಶವು ವರ್ಷದ ಸದಾಕಾಲವೂ ಏಕಸಮವಾದ ಹವೆಯಿರುತ್ತದೆ. ಕ್ರಿಸ್ತಶಕ ೧೧—೧೩ನೆಯ ಶತಮಾನಗಳ ಜೈನಸಂಸ್ಕೃತಿಯ ವೈಭವದ ಪ್ರತೀಕಗಳಾದ ದಿಲ್ವಾರ ದೇವಾಲಯಗಳಿಂದ ಇವುಗಳ ಕೀರ್ತಿ ಜಗದ್ವ್ಯಾಪಿಯೆನಿಸಿದೆ. ಈ ಬೆಟ್ಟಗಳ ಒಂದು ದೃಶ್ಯವನ್ನು ಕೆಳಗಿನ ಸಾಲಿನ ಬಲ ಚಿತ್ರದಲ್ಲಿ ನೋಡಬಹುದು.

ಪಶ್ಚಿಮ ಭಾರತದ ಮಹಾಬಲೇಶ್ವರವೆಂಬುದು ಬೊಂಬಾಯಿ ಮಧ್ಯರಾಗಳ ನಡುವೆ ಇರುವುದು.

NAVAYUGA
REGD. NO. M. 3619

UDIPI, THURSDAY
20-10-1960

LICENSE NO. 31
Licensed to Post without Prepaymen

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಯಾಗಿಯೇ ಆಶ್ಯನ್ ರಾಷ್ಟ್ರಗಳ ಆರೋಗ್ಯ ಸಂಸ್ಥೆಯು ರಚನೆಯಾಗುತ್ತಿದೆ. ಮಾನವ ನೇತ್ರರೋಗಗಳನ್ನು ದೂರೀಕರಿಸಲು ಆಯುರ್ವೇದವು ಪ್ರಭಾವಶಾಲಿಯಾಗಿದೆಯೆಂದು ಈಗ ಜಗಜ್ಜನಿತವಿದೆ. ಅನೇಕ ಆಶ್ಯನ್ ರಾಷ್ಟ್ರಗಳಿಂದ ಈ ಬಗ್ಗೆ ಬೇಡಿಕೆಗಳೂ ಬರುತ್ತಿವೆ.

ಆಶ್ಯನ್ ಆರೋಗ್ಯ ಸಂಸ್ಥೆಯೊಂದನ್ನು ರಚಿಸಿ ಅದರ ಮೂಲಕ ೧೧ ಸೂತ್ರಗಳಡಕವಾಗಿರುವ ಕಾರ್ಯಕ್ರಮವನ್ನು ವ್ಯವಸ್ಥೆಗೊಳಿಸುವ ಇರಾದೆ ಸದ್ಯ ಮುಂದಿದೆ. ಏಶ್ಯದ ಬೇರೆ ಬೇರೆ ದೇಶಗಳಲ್ಲಿ ಪ್ರಚಲಿತವಿರುವ ವಿಭಿನ್ನ ವೈದ್ಯಕೀಯ ಪದ್ಧತಿಯನ್ನು ಅಭ್ಯಸಿಸುವುದು ಮತ್ತು ಸಾಧ್ಯವಾದಷ್ಟು ಇವುಗಳ ನಡುವೆ ಸಮಾನತೆಯನ್ನು ತಂದು ವೈದ್ಯಕ ಕ್ರಮವನ್ನು ಸಮನ್ವಯಗೊಳಿಸುವುದು ಅಗ್ರಗಣ್ಯ ಉದ್ದೇಶವಿದೆ. ಈ ಆರೋಗ್ಯ ಸಂಸ್ಥೆಯ ಅಂಕಿತದಲ್ಲಿ ಒಂದು ಪ್ರಯೋಗಶಾಲೆಯೂ ಒಂದು ಸಂಶೋಧನಾ ಕೇಂದ್ರವೂ ಇರುವವು. ಹೆಚ್ಚಿನಂತೆ ಇವೆರಡೂ ಕೊಲಂಬೊವಿನಲ್ಲಿಯೇ ಸ್ಥಾಪನೆಗೊಳ್ಳುವುವು. ವೈದ್ಯಕೀಯಕ್ಕೆ ಸಂಬಂಧಿಸಿದ ಪುಸ್ತಕಗಳು, ಪತ್ರಿಕೆಗಳು ಹಾಗೂ ವೈದ್ಯಕೀಯ ಪತ್ರಿಕೆಗಳನ್ನು ಪ್ರಕಾಶಿಸುವುದು, ವಿದ್ವಾಂಸರೂ ವೈದ್ಯರೂ ಪ್ರಾವಿಧಿಕ ಕರ್ಮಚಾರಿಗಳು ನಡೆಸುವ ಸಂಶೋಧನಾ ಕಾರ್ಯಗಳಿಗೆ ಆರ್ಥಿಕ ರೂಪದಲ್ಲಿ ಸಹಾಯ ನೀಡುವುದೂ ಸಂಸ್ಥೆಯ ಮೂಲೋದ್ದೇಶಗಳಲ್ಲಿ ಅಡಕವಾಗಿದೆ.

ಸಂಸ್ಥೆಯು ಸ್ಥಾಪಿಸುವ ಸಂಶೋಧನಾ ಕೇಂದ್ರದಲ್ಲಿ ಆಧುನಿಕ ರೋಗ ಶಾಸ್ತ್ರಿಗಳೂ ನಿದಾನ ಶಾಸ್ತ್ರಿಗಳೂ ಇರುವರು. ಇವರು ಸಂಸ್ಥೆಯ ಸಂಶೋಧನಾ ಮತ್ತು ಚಿಕಿತ್ಸಾ ಸಂಬಂಧಿ ಪ್ರಗತಿಯನ್ನು ಬೇರೆ ಬೇರೆಯಾಗಿ ಮತ್ತು ಸ್ವತಂತ್ರವಾಗಿ ಪರಿಶೀಲಿಸುವರು. ಕೇಂದ್ರದ ಕಾರ್ಯಗಳು ಇದರಿಂದ ಸುಸೂತ್ರವಾಗಿ ಸಾಗಬಹುದು. ಸದ್ಯ ಈ ಯೋಜನೆಯ ಬಗ್ಗೆ ವಿವಿಧ ದೇಶಗಳೊಡನೆ ವಿಚಾರವಿಮರ್ಶೆ ನಡೆಯುತ್ತಿದ್ದು ಇದರ ಸಂಪೂರ್ಣ ರೂಪವು ಮುಂದಿನ ವರ್ಷ ಜನವರಿಯ ಸುಮಾರಿಗೆ ನಿಶ್ಚಿತಗೊಳ್ಳುವ ನಿರೀಕ್ಷೆಯಿದೆ.

ಆಯುರ್ವೇದದ ಉತ್ತಮ ವೈದ್ಯಪದ್ಧತಿಯ ಸಶಾಸ್ತ್ರೀಯ ಅಧ್ಯಯನದಿಂದ ಅಸಾಧ್ಯ ರೋಗಗಳೂ ನಿವಾರಣೆಗೊಂಡಿವೆ; ಅಲೋಪಥಿಯು ಸಾಧಿಸದುದನ್ನು ಆಯುರ್ವೇದ ಮಾಡಿ ತೋರಿಸಿದೆ. ಆಶ್ಯನ್ ರಾಷ್ಟ್ರಗಳಿಗೆ ಹೊಂದಿಕೊಳ್ಳುವ ಸುಲಭವಾದ ಈ ಚಿಕಿತ್ಸಾ ಪದ್ಧತಿಯು ಪರಿಪೂರ್ಣ ವಿಕಾಸಗೊಳ್ಳುವುದು ಅಪೇಕ್ಷಣೀಯವಾಗಿದೆ. ಈ ಒಂದು ಬೃಹದ್ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಸಿಂಹಳ ಸರಕಾರವು ಮಾಡುತ್ತಿರುವ ಸಾಹಸವು ಪ್ರಶಂಸಾರ್ಹವೇ ಸರಿ.

'ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.



ಭಾರತದ ಪ್ರಧಾನಿಯವರು ಪಾಕಿಸ್ತಾನಕ್ಕೆ ಭೇಟಿ ಕೊಟ್ಟು ಹಿಂತಿರುಗುವಾಗ ಪಾಕಿಸ್ತಾನದ ಅಧ್ಯಕ್ಷ ಜ. ಅಯೂಬ್‌ಖಾನ್ ಮತ್ತು ಅಲ್ಲಿಯ ಸೇನಾ ಅಧಿಕಾರಿಗಳು ನೆಹರೂರವರನ್ನು ಮತ್ತು ಭಾರತೀಯ ಅಧಿಕಾರಿಗಳನ್ನು ಬೀಳ್ಕೊಡುವುದು.

ವಿಚಾರ ವಿವೇಚನೆ

(೧ನೇ ಪುಟದಿಂದ)

ಜಾತಿ, ಜಾತಿಗಳೊಳಗೆ ವೈಷಮ್ಯ, ಕ್ರೋಧಗಳನ್ನು ಹುಟ್ಟಿಸುವಷ್ಟಿತವರುಮನೆಗಳಾಗಿವೆ. ಉಂಡು ಬಿಸುಟ ಎಂಜಲೆಲೆಯನ್ನು ಅತ್ಯಾಸಕ್ತಿಯಿಂದ ಕಾದು ನೆಕ್ಕುವವರ ಒಂದು ಹೊಸವರ್ಗದ ನಿರ್ಮಾಣ ಸಮಾಜಕ್ಕೆ ದೊರೆತ ಅತ್ಯಮೋಘ ಲಾಭವಲ್ಲವೇನು?

ನಾವಿಂದು ನವ ನಾಗರಿಕತೆಯ ಪರಮಾವಧಿಯ ಹಂತದಲ್ಲಿ ಬಾಳುತ್ತಿದ್ದೇವೆ. ಆಧುನಿಕತೆ ನಮ್ಮ ನರನಾಡಿಗಳಲ್ಲೂ ಪ್ರವೇಶಿಸಿ ಬೇರುಬಿಟ್ಟಿದೆ. 'ಹೊಸತು ಚಿನ್ನ, ಹಳೆಯದೆಲ್ಲಾ ಮಣ್ಣು' ಎಂಬ ಸಿದ್ಧಾಂತಕ್ಕೆ ಬಂದುಮುಟ್ಟಿದ್ದೇವೆ. ಈ ನವೋಲ್ಲಾಸದಿಂದ ಪುರಾತನದ ಒಳ್ಳೆಯ ಅಂಶಗಳನ್ನು ಗುರುತಿಸಿ, ಪುರಸ್ಕರಿಸುವಷ್ಟು ವೇಳೆ ನಮಗಿಲ್ಲವಾಗಿದೆ. ಆದರ ಜೊತೆಗೆ ನವೀನ ಆಚಾರಗಳಲ್ಲಿ ವಿಚಾರಗಳು ಶೂನ್ಯವಾಗಿವೆ.

ಆದುದರಿಂದಲೇ ನಮ್ಮ ಹಿರಿಯರ ಆಕಾಂಕ್ಷೆ ನಮಗೆ ಪಥ್ಯವೆನಿಸಲೊಲ್ಲದು. ಇಂದು ದೇವಮಂದಿರ, ಮಠಗಳಲ್ಲಿ ಅಡಕವಾಗಿ ಹಲವರಿಗಾಗಿ ಉಪಯೋಗಿಸಲ್ಪಡುತ್ತಿರುವ ಸಂಪತ್ತನ್ನು ಸಮಾಜಕ್ಕಾಗಿ ಅದರ ಉನ್ನತಿ ಶ್ರೇಯೋಭಿವೃದ್ಧಿಗಾಗಿ ನಿಯೋಜಿಸುವ ಕಾರ್ಯಕ್ರಮ, ಯೋಜನೆ ನಮ್ಮಲಿಲ್ಲವಾಗಿದೆ. ನಮ್ಮ ರಾಷ್ಟ್ರದಲ್ಲಿ ಈ ಮಂದಿರ, ಮಠಗಳಲ್ಲಿ ಅಡಗಿರುವ ಸಂಪತ್ತನ್ನು, ಆಸ್ತಿಯ ಉತ್ಪಾದನೆಗಳನ್ನು ಬಯಲಿಗೆಳೆದು ಸಮಾಜದ ಸರ್ವಾಂಗೀಣ ಅಭಿವೃದ್ಧಿಗಾಗಿ ಉಪಯೋಗಿಸಿದರೆ ಇದರ ಫಲಿತಾಂಶ ಯಾವ ಪಂಚವಾರ್ಷಿಕ ಯೋಜನೆಯನ್ನೂ ಸರಿಮಿಗಿಲೆನಿಸದಿರದು. ಆದರೆ ತೊಡಕುಗಳಿವೆ. ಇಲ್ಲಿ ಕಾಯಿದೆಯ ಬಲವಂತವೇನೂ ಇಲ್ಲ. ಸಂಬಂಧಿಸಿದವರ ವಿಚಾರ ವಿವೇಚನೆ, ಹೃದಯ ಪರಿವರ್ತನೆಯೊಂದೇ ಇದಕ್ಕೆ ಉತ್ತಮ ಪರಿಹಾರ. ನಮ್ಮ ಆದರ್ಶಪುರುಷನಾದ ಶ್ರೀಕೃಷ್ಣನು ಗೀತೆಯಲ್ಲಿ "ದೀನ, ದಲಿತರ, ರೋಗಿಗಳ, ಹಸಿದವರ ಸೇವೆ ಮಾಡಿ ಅವರ ಕಲ್ಯಾಣ ಕಾರ್ಯಕ್ಕಾಗಿ ದುಡಿಯುವುದೇ ತನ್ನ ಪ್ರೀತಿಯ ಮತ್ತು ಜೀವನ ಸಾರ್ಥಕ್ಯದ ಹೆಗ್ಗುರಿ, ಎಂದೂ ಸಾರಿದ್ದಾನೆ.

ಇದು ಒಮ್ಮೆಲೇ ಆಗುವಂತಹದೇನಲ್ಲ. ಹಲವಾರು ಹಂತಗಳಿಂದಲೇ ಬರಬೇಕು. ಅಸಾಧ್ಯವಾದುದೇನಿಲ್ಲ. ಪ್ರಾರಂಭದಲ್ಲಿ ನಾವೇನನ್ನು
ಸಾಧಿಸದಿದ್ದರೂ, ಶಿಕ್ಷಣ ಕ್ಷೇತ್ರದ ಅ
ಶ್ಯಕತೆಯನ್ನಾದರೂ ಪೂರೈಸಲು ವಿಶೇ
ಲಕ್ಷ್ಯಕೊಟ್ಟು ಈ ಸಂಸ್ಥೆಗಳು ವಿದ
ಸಂಸ್ಥೆಗಳನ್ನಾದರೂ ತೆರೆಯುವ ಮನ
ಮಾಡಬೇಕು. ಅದರೊಂದಿಗೆ ಧಾರ್ಮಿ
ವಿಚಾರ ವಿವೇಚನೆ, ಕಲಾತ್ಮಕ ಚಟು
ಟಿಕೆ, ಸಾಂಸ್ಕೃತಿಕ ಸಮಾರಂಭಗಳಿಗೆ ಅ
ಕಾಶಮಾಡಿ ಕೊಡಬೇಕು ಆಗಲೇ ನವ
ದೇವಾಲಯಗಳು ಸರ್ವಜನಾದರಣೀಂ
ವೂ, ಸಮಾಜಕ್ಕೆ ಸುಖಶಾಂತಿಗಳನ್ನಿ
ಯುವ ನೆಲೆಬೀಡುಗಳಾಗಿ, ಜನ ಜೀವ
ದಲ್ಲಿ ಅತ್ಯುನ್ನತ ಗೌರವಾದರಗಳನ್ನು
ಡೆಯಬಲ್ಲವು. ಇಂತಹ ಸಂಸ್ಥೆಗಳು ಕೆ
ವು ಬೆರಳೆಣಿಕೆಯಷ್ಟು ನಮ್ಮ ಕಣ್ಣ ಮ
ದಿರುವುದರಿಂದಲೇ ಇವನ್ನು ಸಾಧಿಸು
ಕೆಚ್ಚು ನಮ್ಮಲ್ಲಿ ಮೊಳೆಯಲೇಬೇಕು.
ವ್ಯತೆಯೊಂದೇ ನಮ್ಮ ಜೀವನದ ಪೂರ
ವಾಗಲಾರದು. ಅದರೊಂದಿಗೆ ದಿವ್ಯ
ಯೂ ಬೆಳೆದು ಬರಬೇಕು. ಪ್ರಪಂಚ
'ಜನತಾ ಸೇವೆಯೇ ಜನಾರ್ಧನ ಸೇವೆ
ಎಂದೂ ಕಂಠೋಕ್ತವಾಗಿ ಸಾರಿದ ನಾ
ನಮ್ಮ ಕೃತಿಯಲ್ಲಿ ಮಾತ್ರ ತಪ್ಪಿದ್ದೇ
ನಡೆ ನುಡಿ ಈಗ ಒಂದಾಗ
ಬೇಕು. "ಸರ್ವೇ ಜನಾಃ ಸುಖಿನೋ
ವಂತು ಎಂದು ಕಂಠಪಾಠ ಮಾಡಿ ಸಾ
ರುವ ಕೇಂದ್ರಗಳಲ್ಲಿ, ಆ ಮಾತಿನಲ್ಲಿ ಅ
ಕವಾಗಿರುವ ತತ್ವವನ್ನು ಕೃತಿಯಲ್ಲಿ ಅ
ರಿಸುವ ಮನೋ ನಿರ್ಧಾರ ಒಡಮೂ
ಬರಲೇಬೇಕು. ಆಗಲೇ ಸಾಧಿಸಿದ ಸಾ
ಕರ ಆತ್ಮ ವಿಶ್ವಾಸ ಮೂಡಿ ಬಂದೀತು
ನಮ್ಮ ಜನಾಂಗದ ಬೆನ್ನು ಹತ್ತಿ ಬಂ
ಪದಂ ಭೂತದಂತಿರುವ ಹಸಿವು, ಅಜ್ಞಾ
ನ, ಅವಿದ್ಯೆ ಇವು ತೊಲಗದೆ ಸರ್ವರ
ಸುಖವಾಗಿರುವುದಕ್ಕೆ ಎಂದಿಗೂ ಸಾಧ್ಯ
ಲ್ಲವೆಂಬುದು ಪ್ರತ್ಯಕ್ಷ ಸತ್ಯ. ಅವನ
ತೊಡೆದು ಹಾಕುವ ಛಲದಿಂದ ಕಾ
ರ್ಯ ಪ್ರವೃತ್ತರಾಗದಿದ್ದರೆ, ನಮ್ಮ ಮ
ದೇವಾಲಯಗಳು ಜನತೆಯ ಮೆಚ್ಚು
ಯನ್ನು ಕಳಕೊಂಡು ಅವರಿಂದ ತಿರಸ್ಕಾ
ರ, ಧಿಕ್ಕಾರ, ಬಹಿಷ್ಕಾರಗಳಿಗೆ ಬಲಿಯಾ
ಗುವ ಕಾಲ, ದಿನಮಾತ್ರ ಬಹುದೂರವ
ತೂ ಖಂಡಿತ ಉಳಿದಿಲ್ಲ, ಜನತಾ ಸೇವೆ
ಯೇ ಜನಾರ್ಧನನ ಸೇವೆ, ಎಂಬ ಜ
ಣ್ನುಡಿ ಈಗ ನಮ್ಮ ಜೀವನದ ಆದರ್ಶ
ಗುರಿಯಾಗಬೇಕು.

ತಮಸೋ ಮಾ ಜ್ಯೋತಿರ್ಗಮಯ.......

ಕತ್ತಲೆಯಿಂದ ಪ್ರಕಾಶದೆಡೆಗೆ, ಅಭಿವೃದ್ಧಿ—ಪ್ರಗತಿಗಳೆಡೆಗೆ
ಮುನ್ನಡೆಯಬೇಕೆಂಬುದರ ಸಂಕೇತವಾದ

ದೀಪಾವಳಿಯು

ತುಂಬುಸಂಖ್ಯೆಯ ನಮ್ಮ ಗ್ರಾಹಕರಿಗೆ, ಹಿಂತಚಿಂತಕರಿಗೆ
ಶುಭ-ಶ್ರೇಯಸ್ಸುಗಳನ್ನು, ವ್ಯವಹಾರದಲ್ಲಿ ಸಮೃದ್ಧಿಯನ್ನು ತರಲಿ.

ಶುಭಾಶಯಗಳೊಂದಿಗೆ:

ನಿಮ್ಮ

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K, H, Shetty, at the Navayuga Press, Udipi, S. India,

40th year of publication. 27-10-1960 ೪೦ನೇ ವರ್ಷ

ಸಂಪುಟ ೪೦ | Vol. 40

ಸಂಚಿಕೆ ೯ | No. 9

ಬೆಲೆ 0=13

ನವಯುಗ

NAVAYUGA KANNADA WEEKLY UDIPI

ಪ್ರಚಲಿತ ಪ್ರಸಂಗ

ಪಂಚಾಯತ ರಾಜ್ಯದ ಯಶಸ್ವಿತೆ

> ಪಂಚಾಯತ ರಾಜ್ಯ ಭರಣಕ್ಕೆ ತಕ್ಕ ಪೂರ್ವರಂಗ ಈಗ ತಾನೇ ಸುಸಜ್ಜಿತವಾಗುತ್ತಿದೆ. ಚುನಾಯಿತ ಪ್ರತಿನಿಧಿಗಳು ಪಂಚಾಯತ ರಾಜ್ಯದ ಆದರ್ಶವನ್ನು ಸರ್ವಸಮ್ಮತ ಸರ್ವಹಿತ ರೀತಿಯಲ್ಲಿ ಕಾರ್ಯಕೃತಗೊಳಿಸುವುದರಲ್ಲಿಯೇ ಪಂಚಾಯತ ರಾಜ್ಯದ ಯಶಸ್ವಿತೆ ಅಡಗಿದೆ.

ಶ್ರೀ ರಾಶಿ.

ಪಂಚಾಯತ ರಾಜ್ಯಸ್ಥಾಪನೆಯ ಘನೋದ್ದೇಶವನ್ನಿಟ್ಟುಕೊಂಡು, ಗ್ರಾಮ ಸ್ವರಾಜ್ಯದ ಸ್ವಪ್ನವನ್ನು ನನಸಾಗಿಸುವ ಆಶಯದಿಂದ, ಬಾಪೂಜಿಯವರ ಕನಸಿನ ರಾಮರಾಜ್ಯವನ್ನು ವಾಸ್ತವಿಕ ರೂಪಕ್ಕೆ ತರುವ ಪ್ರಯತ್ನದಲ್ಲಿ ದಿಟ್ಟ ಹೆಜ್ಜೆಯೊಂದನ್ನಿಡುವ ಮಹಾ ಸಾಹಸವನ್ನು ಭಾರತದ ಕೆಲವು ರಾಜ್ಯಗಳು ತೋರಿಸತೊಡಗಿವೆ. ಇವುಗಳಲ್ಲಿ ನಮ್ಮ ಮೈಸೂರು ನಾಮಧೇಯದ ಕರ್ನಾಟಕ ರಾಜ್ಯವೂ ಒಂದೆಂಬುದು ನಮಗೆಲ್ಲ ಅಭಿಮಾನದ ಸಂಗತಿ. ಪಂಚಾಯತ ರಾಜ್ಯದ ತತ್ವಗಳು ಆದರ್ಶವಿವೆ; ಉದಾತ್ತವಾಗಿವೆ; ಇವುಗಳನ್ವಯ ಪಂಚಾಯತುಗಳು ಕಾರ್ಯ ನಿಮಗ್ನವಾದುವೆಂದರೆ, ರಾಮರಾಜ್ಯದ ಕಲ್ಪನೆಯು ಖಂಡಿತಕ್ಕೂ ಕೆಲವು ವರ್ಷಗಳಲ್ಲೇ ನಿಜರೂಪಕ್ಕೆ ಬರುವುದರಲ್ಲಿ ಸಂದೇಹವಿಲ್ಲ; ಆದರೆ, ನಮ್ಮ ಗ್ರಾಮ ಪಂಚಾಯತಗಳು ಪಂಚಾಯತ ರಾಜ್ಯದಲ್ಲಿ ಪಂಚಾಯತುಗಳು ನಿರ್ವಹಿಸಬೇಕಾದ ಕರ್ತವ್ಯವನ್ನು ದಕ್ಷ ಹಾಗೂ ಸಮರ್ಥ ರೀತಿಯಿಂದ ನಿರ್ವಹಿಸುವಷ್ಟು ಶಕ್ತಿ ಸಂಪನ್ನವಾಗಿವೆಯೇ ಎಂಬುದನ್ನು ನಾವು ಪರ್ಯಾಲೋಚಿಸಿದರೆ, ಸಮರ್ಪಕವಾದ ಉತ್ತರ ಲಭಿಸುವುದು ಸಂದೇಹ.

ಅನಕ್ಷರಸ್ಥರೂ, ಅಜ್ಞರೂ ಅಧಿಕ ಸಂಖ್ಯಾಕರಾಗಿರುವ ನಮ್ಮ ಗ್ರಾಮ ಅಲ್ಲಿ ಪಂಚಾಯತಗಳಿಗೆ ಸುಶಿಕ್ಷಿತ ಯೋಗ್ಯತಾಸಂಪನ್ನ, ಕರ್ತವ್ಯನಿಷ್ಠ, ಸೇವಾಭಿಲಾಷಿ ಪ್ರತಿನಿಧಿಗಳು ಚುನಾಯಿತರಾಗಿ ಬರುತ್ತಾರೆಂದು ನಂಬುವುದು ಸಾಧ್ಯವೆ? ಇಂತಹ ಗುಣಗಳಿಲ್ಲದ ಪ್ರತಿನಿಧಿಗಳು ಪಂಚಾಯತದಲ್ಲಿ ಕೂತು ಕೆಲಸ ಮಾಡುವುದಾದರೂ ಏನು? ಯಾವ ರೀತಿಯಲ್ಲಿ? ಅಕ್ಷರಸ್ಥ—ಅನಕ್ಷರಸ್ಥ; ಬಡವ—ಬಲ್ಲಿದ; ಸ್ತ್ರೀ—ಪುರುಷರೆಂಬ ಭೇದವಿಲ್ಲದೆ ಸಮಸ್ತ ಪ್ರಾಯಸ್ಥರಿಗೂ ಮತಾಧಿಕಾರವನ್ನಿತ್ತುದು ಮಾತ್ರವಲ್ಲದೆ ಪ್ರಜಾಪ್ರತಿನಿಧಿಯಾಗುವ ಅರ್ಹತೆಯನ್ನೊದಗಿಸಿದ ನಮ್ಮ ಸಂವಿಧಾನ ಉದಾರವಾಗಿದೆ, ಮಾದರಿಯಾಗಿದೆಯೆಂದು ಒಪ್ಪಿಕೊಳ್ಳಬೇಕಾದರೂ ಮತಾಧಿಕಾರದ ಮೌಲ್ಯವನ್ನರಿಯದ, ಪ್ರಜಾಪ್ರಭುತ್ವದ ತತ್ವಗಳನ್ನು ತಿಳಿದುಕೊಳ್ಳದ ನಮ್ಮ ಬಹುಸಂಖ್ಯಾತ ಅನಕ್ಷರಸ್ಥ ಅಜ್ಞ ಪ್ರಜೆಗಳು ಸಮರ್ಥ ರೀತಿಯಲ್ಲಿ ಮತಾಧಿಕಾರವನ್ನು ಚಲಾಯಿಸುವರೆಂಬುದು ಎಣಿಸಿರುವಷ್ಟು ವಾಸ್ತವವೆಂದು ಹೇಳಬರುವುದಿಲ್ಲ. ಆಡಳಿತೆ ನಿರ್ವಹಿಸುವೆಂದರೆ, ಕಡಲೆಕಾಯಿ ಮೆದ್ದಂತಲ್ಲ; ಪ್ರಾಪ್ತವಾದ ಅಧಿಕಾರವೆಂಬುದು 'ಇಷ್ಟಾರ್ಥ ಸಿದ್ಧಿಯನ್ನು ಕೊಡುತ್ತದೆ ಎಂಬ ಉತ್ಸಾಹವು ಪ್ರಾರಂಭದಲ್ಲಿದ್ದರೂ ಅದು ಪ್ರಾಪ್ತವಾದ ಮೇಲೆ ಕಷ್ಟವನ್ನೇ ಕೊಡುತ್ತದೆ. ಒದಗಿ ಬಂದ ರಾಜ್ಯ ಪರಿಪಾಲನೆಯ ವೃತ್ತಿಯೂ ದರೋಡೆ ಶ್ರಮಪರಿಹಾರಕ್ಕಾಗಿರುವುದಲ್ಲ; ತನ್ನ ಕೈಯಿಂದಲೇ ಎತ್ತಿ ಹಿಡಿದುಕೊಂಡ ಕೊಡೆಯಂತೆ' ಇರುವುದು. ಈ ಭಾರವನ್ನು ಧರಿಸುವ ಶಕ್ತಿಯು ನಮ್ಮ ಗ್ರಾಮಸ್ಥರಲ್ಲಿ ಇಂದು ಬಂದಿದೆಯೇ ಎಂಬುದನ್ನು ನಾವು ನೋಡಬೇಕು.

ಸಾಮಾನ್ಯವಾಗಿ ಪಂಚಾಯತ ರಾಜ್ಯದಲ್ಲಿ ಗ್ರಾಮ ಪಂಚಾಯತುಗಳಿಗೆ ಹೆಚ್ಚಿನ ಅಧಿಕಾರ ನೀಡಲಾಗುವುದು. ಅವುಗಳು ಮಾಡಬೇಕಾದ ಕೆಲಸ ಕಾರ್ಯಗಳೂ ಹೆಚ್ಚುವುವು; ಆದರೆ, ಇವನ್ನವು ಅದೆಷ್ಟು ಮಟ್ಟಿಗೆ ಯಶಸ್ವಿಗೊಳಿಸುವುವೆಂಬುದರ ಬಗ್ಗೆ ತೃಪ್ತಿ ತರಬಲ್ಲ ಅವಕಾಶಮಾತ್ರ ಕಡಿಮೆಯೆನ್ನಬಹುದು.

ಜಿಲ್ಲಾ ಬೋರ್ಡುಗಳನ್ನು ಸಾಕಷ್ಟು ಪೂರ್ವದಲ್ಲಿಯೇ ರದ್ದುಗೊಳಿಸಲಾಗಿದೆ. ಜಿಲ್ಲಾಬೋರ್ಡು ನಿರ್ವಹಿಸುತ್ತಿದ್ದ ಎಲ್ಲ ಕೆಲಸಗಳನ್ನೂ ಡಿಸ್ಟ್ರಿಕ್ಟ್ ಕಮಿಶನರ ಆದೇಶದಂತೆ ಈ ಒಂದು ವರ್ಷದಲ್ಲಿ ಹಳೆಯ ಮಾದರಿಯಲ್ಲೇ ನಡೆಸಿಕೊಂಡುಬರಲಾಗುತ್ತಿದೆ. ತಾಲೂಕು ಬೋರ್ಡುಗಳ ರಚನೆಯಾಗಿ ಅವುಗಳ ಕೈಗೆ ಆಡಳಿತೆ ನೀಡುವ ಸಂದರ್ಭ ಬರುವುದಕ್ಕೆ ಬಹುದಿನ ಮೊದಲೇ ಜಿಲ್ಲಾ ಬೋರ್ಡನ್ನು ರದ್ದುಗೊಳಿಸಿದುದು ಅನವಶ್ಯವೆಂಬ ಭಾವನೆಯೂ ಕೆ ಜನರಲ್ಲಿದೆ. ಮುಖ್ಯವಾಗಿ ಜಿಲ್ಲಾ ಬೋರ್ಡುಗಳ ಅಧೀನವಿದ್ದ ಶಿಕ್ಷಣ ಸಂಸ್ಥೆಗಳ ಪ್ರಶ್ನೆಯೊಂದು ಇನ್ನೂ ಇತ್ಯರ್ಥವಾದಂತೆ ತೋರುವುದಿಲ್ಲ. ಪ್ರಾಥಮಿಕ ಶಾಲೆಗಳನ್ನು ಗ್ರಾಮ ಪಂಚಾಯತುಗಳಿಗೂ ಪ್ರೌಢ ಶಾಲೆಗಳನ್ನು 'ಸ್ಕೂಲ್ ಬೋರ್ಡ್' ಒಂದನ್ನು ರಚಿಸಿ ಅದಕ್ಕೂ ಕೊಡಲಾಗುವುದೆಂದು ಕಿಂವದಂತಿ ಇತ್ತೀಚೆಗೆ ಬಲವಾಗಿ ಹರಡಿದೆ. ದ. ಕನ್ನಡದಲ್ಲಿನ ಜಿಲ್ಲಾ ಬೋರ್ಡು ಶಾಲೆಗಳನ್ನು ಸರಕಾರವೇ ವಹಿಸಿಕೊಳ್ಳಬೇಕೆಂದು ಹಲವಾರು ವಿನಂತಿಗಳು ಈಗಾಗಲೇ ಸರಕಾರಕ್ಕೆ ಹೋಗಿವೆ; ಅವುಗಳ ಬಗ್ಗೆ ಒಂದೊಂದು ಬಾರಿ ಒಂದೊಂದು ರೀತಿಯ ಹೇಳಿಕೆ ಬರುತ್ತಿರುವುದಾದರೂ ಅಂತಿಮ ನಿರ್ಧಾರ ಮಾತ್ರ ಯಾವುದೆಂದು ಇನ್ನೂ ಬಹಿರಂಗವಾಗಿಲ್ಲ. ಆದರೆ, ಸ್ಕೂಲ್ ಬೋರ್ಡ್‌ಗಳನ್ನು ರಚಿಸಿ ಅದಕ್ಕೆ ಪ್ರೌಢ ಶಾಲೆಗಳ ಆಡಳಿತೆ ಬಿಟ್ಟುಕೊಡುವುದು ಯಾವುದೇ ರೀತಿಯಿಂದ ಹಿತಕರವಲ್ಲವೆಂಬುದು ಖಂಡಿತವೇ. ಹಾಗೆಯೇ ಗ್ರಾಮ ಪಂಚಾಯತುಗಳಡಿಯಲ್ಲಿ ಪ್ರಾಥಮಿಕ ಶಾಲೆಗಳು ಉತ್ತಮಗೊಳ್ಳುತ್ತವೆ ಎಂಬುದೂ ಭ್ರಮಾ ಮೂಲವೇ ಸರಿ. ಈ ಬಗ್ಗೆ ಸರಕಾರವು ಗಂಭೀರವಾಗಿ ವಿಚಾರ ಮಾಡಬೇಕು; ನಗರ ಸಭೆಗಳ ಆಡಳಿತೆಯಲ್ಲಿರುವ ಪ್ರಾಥಮಿಕ ಶಾಲೆಗಳ ಪರಿಸ್ಥಿತಿಯನ್ನು ಸರಿಯಾಗಿ ಅಭ್ಯಸಿಸಬೇಕು. ಖಾಸಗಿ ಶಾಲೆಗಳಿಗಿಂತಲೂ ನಿಸ್ಸತ್ವ

(೧೨ನೇ ಪುಟ ನೋಡಿರಿ)



ಅಮೇರಿಕೆಯಿಂದ ಇದನ್ನು ನಾವು ಕಲಿಯಬೇಕು

೧. ವಿವಿಧ ಕಾಲೇಜುಗಳಲ್ಲಿ ಅಧ್ಯಯನ ನಡೆಸುತ್ತಿರುವ ೩೦ ಲಕ್ಷ ಅಮೇರಿಕನ್ ವಿದ್ಯಾರ್ಥಿಗಳಲ್ಲಿ ೬ ಲಕ್ಷ ವಿದ್ಯಾರ್ಥಿಗಳು ಒಂದಲ್ಲ ಒಂದು ಬಗೆಯ ಛಾತ್ರವೃತ್ತಿಯನ್ನು ಪಡೆಯುತ್ತಾರೆ. ಈ ಛಾತ್ರವೃತ್ತಿಗಳಲ್ಲಿ ಅಧಿಕಾಂಶವನ್ನು ಖಾಸಗಿ ಸಂಘಸಂಸ್ಥೆಗಳೇ ಏರ್ಪಡಿಸಿರುವುವು. ೨. ವಿದೇಶಗಳಲ್ಲಿ ಅಧ್ಯಯನ ಮಾಡಿ ವಿಚಾರ ಮತ್ತು ಸೌಹಾರ್ದ ವಿನಿಮಯಕ್ಕಾಗಿಯೂ ಕೆಲವು ಛಾತ್ರವೃತ್ತಿಗಳು ದೊರೆಯುತ್ತವೆ. ೩. ಶಿಷ್ಯವೃತ್ತಿ ದೊರೆಯದ ಅಮೇರಿಕನ್ ವಿದ್ಯಾರ್ಥಿಗಳು ತಮ್ಮ ಕಾಲೇಜು ವಿದ್ಯಾಭ್ಯಾಸಕ್ಕೆ ಆರ್ಥಿಕ ಸಹಾಯ ಪಡೆಯಲು ತಮ್ಮ ರಕ್ಷಕರನ್ನು ಪೀಡಿಸುವುದಿಲ್ಲ; ಬದಲು ಬಿಡುಸಮಯದಲ್ಲಿ ಉದ್ಯೋಗ ಮಾಡುತ್ತಾರೆ.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty,
Former Minister for Public Health, Govt. of Madras & Govt. of Mysore.

●

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-00
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-00

ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-25
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕಥಾವಿಹಾರ

ಮರುಕಳಿಸುವ ನೆನಕೆಯಿದು!

ಅನ್ನಬ್ರಹ್ಮನ ಕಾಟ ತಡೆಯಲಾರದೆ, ವಿಧಿಯ ವಿಚಿತ್ರ ಮಾಟಕ್ಕೆ ಬಲಿಬಿದ್ದು ತನ್ನ ಅಸುದೊರೆದ ಆ ಗೋಪುವಿನ ನಿಸ್ತೇಜವೆನಿಸಿದ ಮುಖ ದೀಪಾವಳಿಯ ದಿನ ತಪ್ಪದೆ ಮರುಕಳಿಸಿ ಚಿತ್ತಪಟಲದಲ್ಲಿ ಪ್ರತಿಬಿಂಬಿಸುತ್ತದೆ! ಆಗ, ಆತನಂತಹ ಸಹಸ್ರಾನುಸಹಸ್ರ ಸಂಖ್ಯೆಯ ಬಡ ಜನತೆಯ ಬಗ್ಗೆ ಅನುಕಂಪ ಮೂಡುತ್ತದೆ.

ಶ್ರೀ ಕೆ. ದಾಮೋದರ ಐತಾಳ, ವಿದ್ವಾನ್.

ಆಶ್ವೀಜ ಬಹುಳ ಅಮಾವಾಸ್ಯೆಯ ದಿನ ದೀಪಾವಳಿ. ವರುಷಕ್ಕೊಂದು ಬರುವ ದೊಡ್ಡ ಹಬ್ಬ. ಈ ಹಬ್ಬ ಬಂತೆಂದರೆ ಬಾಲಕರಿಗೂ, ಯುವಕರಿಗೂ, ವೃದ್ಧರಿಗೂ ತುಂಬಾ ಸಂತೋಷವೇ ಸಂತೋಷ. ಪಟಾಕಿ ಚಟಾಕಿಗಳನ್ನು ಬಿಡುವ ಹಂಬಲ ಹುಡುಗರಿಗೆ. ಹೊಸ ಮಡದಿಯನ್ನು ಮಡಿಲಲ್ಲಿ ಕುಳ್ಳಿರಿಸಿಕೊಂಡು ಆಕೆಯ ಚೆಲುವು ನೋಡಿ ಸಂತಸಪಡುವ ಆಸೆ ನವವಿವಾಹಿತ ಯುವಕರಿಗೆ. ಮಕ್ಕಳ, ಮರಿಮಕ್ಕಳ ಗಂಡ ಹೆಂಡಿರನ್ನು ಕಂಡು ಸಂತೋಷಪಟ್ಟುಕೊಂಡು ಸೇಸೆಯನ್ನು ಹಾಕುವ ಬಯಕೆ ವೃದ್ಧರಿಗೆ.

ನನ್ನ ಮಿತ್ರ ಗೋಪುವಿಗೆ ಮದುವೆಯಾಗಿ ಆರು ತಿಂಗಳುಗಳು ಮಾತ್ರ ಕಳೆದಿದ್ದುವು. ಅಂದು ದೀಪಾವಳಿಯ ದಿನ ನಾನು ಆ ನವೀನ ದಂಪತಿಗಳನ್ನು ನಮ್ಮಲ್ಲಿಗೆ ಆಹ್ವಾನಿಸಿದ್ದೆನು. ಆತನು ನನ್ನ ಆಮಂತ್ರಣವನ್ನು ಮನ್ನಿಸಿದ್ದನು. ಬದಲಾಗಿ ಆತನು ದೀಪಾವಳಿಯ ಮರುದಿನ (ಬಲಿಪಾಡ್ಯ) ನನ್ನನ್ನು ಆತನಲ್ಲಿಗೆ ಆಮಂತ್ರಿಸಿದ್ದನು. ಈ ರೀತಿಯಾಗಿ ಆಮಂತ್ರಣಗಳ ವಿನಿಮಯ ನಮ್ಮಲ್ಲಿ ನಡೆದಿತ್ತು.

ಗೋಪುವಿಗೆ ಪ್ರೆಸ್ಸಿನಲ್ಲಿ ಕೆಲಸ. ಮನೆಯಿಂದ ಪ್ರೆಸ್ಸಿಗೆ ನಾಲ್ಕು ಮೈಲುಗಳ ದೂರವಿತ್ತು. ದಿನ ಬೆಳಗ್ಗೆ ಆತನು ನಡೆದು ಅಲ್ಲಿಗೆ ಹೋಗುತ್ತಿದ್ದನು. ಮಧ್ಯಾಹ್ನ ಆತನು ಮನೆಯಿಂದ ತಂದ ಬುತ್ತಿಯನ್ನು ತೀರಿಸಿ ರಾತ್ರಿ ಮನೆಗೆ ಹಿಂತಿರುಗುತ್ತಿದ್ದನು. ಕೆಲವು ಬಾರಿ ನಡೆದುಕೊಂಡೂ ತಪ್ಪಿದರೆ ಬಸ್ಸಿನಲ್ಲೂ ಬರುತ್ತಿದ್ದನು. ಆತನ ಮನೆ ಮತ್ತು ಪ್ರೆಸ್ಸುಗಳ ನಡುವೆ ನಮ್ಮ ಮನೆಯಿತ್ತು. ರಾತ್ರಿ ವಿಶೇಷ ಭತ್ತೆ ಸಿಗುವ ಕೆಲಸ ಪ್ರೆಸ್ಸಿನಲ್ಲಿದ್ದರೆ ಗೋಪು ಅಲ್ಲೇ ಉಳಿದು ಕೆಲಸ ಮುಗಿದ ಕೂಡಲೆ ನಮ್ಮ ಮನೆಯನ್ನು ಸೇರಿ ರಾತ್ರಿ ಕಳೆದು ಮರುದಿನ ಬೆಳಗ್ಗೆ ಬೇಗನೆಯೆದ್ದು ತನ್ನ ಮನೆಗೆ ಹೋಗುತ್ತಿದ್ದನು.

ಈಗ ಆತನಿಗೆ ಮದುವೆಯಾಗಿದೆ. ಸಂಸಾರದ ಭಾರ ಆತನ ತಲೆಯ ಮೇಲೆ ಬಿದ್ದಿದೆ. ಆದ್ದರಿಂದ ಆತನು ಅನಿವಾರ್ಯವಾಗಿ ಹೆಚ್ಚು ದುಡಿಯಲೇ ಬೇಕಾಗಿತ್ತು. ಹಣ ಹೆಚ್ಚು ಸಂಪಾದಿಸಬೇಕಿತ್ತು - ಸಂಸಾರ ಚೆನ್ನಾಗಿ ಸಾಗಬೇಕಾದರೆ. ಆದ್ದರಿಂದ ಆತನು ಮದುವೆಯಾದಂದಿನಿಂದ ರಾತ್ರಿ ಹೆಚ್ಚು ಕೆಲಸ ಮಾಡಲಾರಂಭಿಸಿದ್ದನು. ಮನೆಗೆ ಹೋಗಲು ತೊಂದರೆಯಾದರೆ ಆತನು ನಮ್ಮಲ್ಲಿಗೆ ಬರುತ್ತಿದ್ದನು.

ನನ್ನ ತಾಯಿ ಸ್ವಲ್ಪ ಹಳೆ ಮರ್ಜಿಯವರು. ಹೊಸ ಗಂಡಹೆಂಡಿರನ್ನು ಕರೆದು ಒಂದು ದಿನ ನಮ್ಮಲ್ಲಿ ಸತ್ಕರಿಸಬೇಕೆಂದು ಅವರು ಅನೇಕ ಬಾರಿ ನನ್ನಲ್ಲಿ ಹೇಳಿದ್ದರು. ನಾನು ನನ್ನ ಹುಟ್ಟು ಹಬ್ಬದ ದಿನವಾದ ದೀಪಾವಳಿಯ ದಿನವೆ ಆಮಂತ್ರಿಸೋಣವೆಂದಿದ್ದೆ. ಅವರು ಅದನ್ನೊಪ್ಪಿದರು.

ನನ್ನ ತಂದೆಯವರು ಮನೆಯಲ್ಲಿ ತಮ್ಮ ತಂಗಿಯರಿಗೆ ಹೊಸ ಅಂಗಿ ವಸ್ತ್ರಗಳನ್ನು ಕೊಂಡುಕೊಂಡಿದ್ದರು. ನಾನು ಕೂಡಾ ನನ್ನ ಹುಟ್ಟು ಹಬ್ಬ ಸಂಭ್ರಮದಿಂದ ಆಚರಿಸಬೇಕೆಂಬ ಉದ್ದೇಶದಿಂದ ಹೊಸ ಅಂಗಿ ವಸ್ತ್ರವನ್ನು ಕ್ರಯಕ್ಕೆ ಪಡೆದುಕೊಂಡಿದ್ದೆನು. ತಾಯಿ ತಂದೆಗಳನ್ನು ಗೌರವಿಸಲೂ ಕೂಡಾ ಅವರ ಮನಸ್ಸೊಪ್ಪುವ ಉಡಿಗೆತೊಡಿಗೆಗಳನ್ನು ನಾನು ತರಿಸಿದ್ದೆನು. ನನ್ನ ಮಿತ್ರನಿಗೂ ಆತನ ಮಡದಿಗೂ ಉಡುಗೊರೆಯಾಗಿ ಕೊಡಲು ನನ್ನ ಮನಸ್ಸೊಪ್ಪುವ ಬಟ್ಟೆಬರೆಗಳನ್ನು ವಿಕ್ರಯಿಸಿದ್ದೆನು.

ಚಿಕ್ಕ ಮಕ್ಕಳ ಮನಸ್ಸು ತೃಪ್ತಿಯಾಗಬೇಕಾದರೆ ಪಟಾಕಿ, ಚಟಾಕಿ, ಆಟಂಬಾಂಬು ಮೊದಲಾದ ಮನೋರಂಜಕ ವಸ್ತುಗಳು ಅವಶ್ಯ ಬೇಕು ನಾನು ಅದರ ಆವಶ್ಯಕತೆಯನ್ನು ಅರಿತಿದ್ದೆನಾದ್ದರಿಂದ ಅದೂ ನನ್ನಲ್ಲಿತ್ತು!

ಅಮಾವಾಸ್ಯೆಯ ದಿನ ರಾತ್ರಿ ತುಳಸಿಕಟ್ಟೆಯ ಮುಂದುಗಡೆ ಬಲಿಯ ರೂಪವನ್ನು ಬಣ್ಣಬಣ್ಣಗಳಿಂದ ಬರೆದು ಆ ಸ್ಥಳವನ್ನು ತಳಿರು ತೋರಣಗಳಿಂದ ಸಿಂಗರಿಸುವುದು ನಮ್ಮಲ್ಲಿಯ ವಾಡಿಕೆ. ಅಂದು ರಾತ್ರಿ ದೇವರ ಕೋಣೆಯಲ್ಲಿ ದೇವರಿಗೆ ಪೂಜೆಮಾಡಿ ತುಳಸಿಕಟ್ಟೆಯೆದುರು ಬಲಿಯನ್ನು ಪೂಜಿಸುವುದು ನಮ್ಮಲ್ಲಿಯ ಕ್ರಮ. ಪೂಜಾ ಕಾಲದಲ್ಲಿ ಕಡುಬು ಮತ್ತು ಅವಲಕ್ಕಿ ಪಂಚಕಜ್ಜಾಯಗಳನ್ನು ಸಮರ್ಪಿಸುವುದು ನಮ್ಮಲ್ಲಿಯ ವೈಶಿಷ್ಟ್ಯ. ಬಲಿ ಪೂಜೆಯಾದ ನಂತರ ಮನೆಯಲ್ಲಿರುವ ಎಲ್ಲಾ ಕೋಣೆಗಳಿಗೂ ಒಂದು ದೊಡ್ಡ ಹರಿವಾಣದಲ್ಲಿ ಹಂತೆಗಳನ್ನಿಟ್ಟು (ಸೀಲಾಂಡರ) ಇಟ್ಟುಕೊಂಡು ಘಂಟೆ ಬಾರಿಸುತ್ತಾ, ಒಂದೊಂದು ಹಂತೆಯನ್ನು ಒಂದೊಂದು ಕೋಣೆಯಲ್ಲೂ, ಬಾವಿಕಟ್ಟೆ, ಹಟ್ಟಿಕೊಟ್ಟಿಗೆ ಮತ್ತು ಅಕ್ಕಿ ಪಾತ್ರದ ಮೇಲೂ ಬೆಳಗಿಸುವುದು ನಮ್ಮಲ್ಲಿಯ ವಿಶೇಷ ವೈಶಿಷ್ಟ್ಯ. ಮರುದಿನ ಬೆಳಗ್ಗೆ ಎದ್ದು ಮಿಂದು ತುಳಸಿ ಪೂಜೆಮಾಡಿ ಪ್ರತ್ಯಕ್ಷ ಗೋಪೂಜೆಯನ್ನು ಗೋಸಮರ್ಪಣೆಯನ್ನು ಮಾಡುವುದು ನಮ್ಮಲ್ಲಿಯ ಪದ್ಧತಿ, ನಾವಂದು ಅದಕ್ಕನುಗುಣವಾದ ರೀತಿಯಲ್ಲಿ ಅಣಿಮಾಡಿದ್ದೆವು.

ಅಂದು ಗೋಪುವಿನ ಪ್ರೆಸ್ಸಿಗೆ ರಜೆಯಾಗಿತ್ತು. ಆದರೂ ಆತನು ವಿಶೇಷ ಭತ್ತೆಯ ಆಸೆಯಿಂದ ಪ್ರೆಸ್ಸಿಗೆ ವಿಶೇಷ ಕೆಲಸಕ್ಕಾಗಿ ಹೋಗಿದ್ದನು. ತಾನು ರಾತ್ರಿಯ ಸಮಯದಲ್ಲಿ ಬರುವೆನೆಂದೂ, ತನ್ನ ಹೆಂಡತಿ ಕತ್ತಲೆಯಾಗುವುದಕ್ಕಿಂತ ಮುಂಚಿತವಾಗಿಯೇ ನಿಮ್ಮಲ್ಲಿಗೆ ಬರುವಳೆಂದೂ ಹೇಳಿದ್ದನು. ನಾನು ಆವನ ಆ ಮಾತನ್ನು ಒಪ್ಪಿದ್ದೆನು—ಒಂದು ಚಿಕ್ಕ ತಿದ್ದುಪಡಿಯೊಂದಿಗೆ. ಗೋಪು ಕತ್ತಲೆಯಾಗುವುದಕ್ಕಿಂತ ಮುಂಚಿತವಾಗಿಯೇ ಪೂಜಾರಂಭ ಕಾಲದಲ್ಲಿ ಹಾಜರಿರಬೇಕೆಂದು ನಾನು ಆತನನ್ನು ಆಗ್ರಹಪೂರ್ವಕವಾಗಿ ಕೇಳಿಕೊಂಡಿದ್ದೆನು.

ನಮ್ಮಲ್ಲಿಯ ಚಿಕ್ಕ ಮಕ್ಕಳು ಸಾಯಂಕಾಲವನ್ನು ಬಹಳ ಆತುರದಿಂದ ಕಾಯುತ್ತಿದ್ದರು. ಇಂಟರ್‌ವ್ಯೂಗೆ ಹೋದವರು ಎಪೋಯಿಂಟ್‌ಮೆಂಟ್ ಆರ್ಡರ್ ಕಾದ ಹಾಗೆ. ಕತ್ತಲೆಯಾದೊಡನೆಯೆ ತಂದಿಟ್ಟಿರುವುದಕ್ಕೆ ಹೊತ್ತಿಸುವುದರಿಂದ ಮಕ್ಕಳೆಲ್ಲ ಒಂದಾಗಿ ನನ್ನನ್ನು ಸುತ್ತುವರಿದು "ಅಣ್ಣಾ! ಪೂಜೆಮಾಡು" ಎಂದು ಒತ್ತಾಯಿಸಲಾರಂಭಿಸಿದರು. ಗೋಪುವಿನ ಮಡದಿ ಬಂದಿದ್ದರೂ ಆತನು ಬರಲಿಲ್ಲವಾದ್ದರಿಂದ ನಾನು ಆತನನ್ನೆ ಕಾದುಕುಳಿತಿದ್ದೆನು. ಮಕ್ಕಳ ಒತ್ತಾಯಕ್ಕೆ ಕಟ್ಟುಬಿದ್ದ ನಾನು ಪೂಜೆ ಆರಂಭಿಸಿದೆನು.

(೧೧ನೇ ಪುಟ ನೋಡಿ

40 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ ಪಾಂಗಾಳ ನಾಯಕ್ ಬೇಂಕ್ ಲಿ.,

ಪ್ರಧಾನ ಕಛೇರಿ: ಉಡುಪಿ, (ದ. ಕನ್ನಡ.)

ನಮ್ಮ 3 ವರ್ಷ ಮಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ.

ರೂ. 87-00 3 ವರ್ಷಗಳ ಅಂತ್ಯದಲ್ಲಿ
ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕಮಾಯಿದೆ, ಸಿರಖು ಠೇವಣಾತಿಗಳ ಮೇಲೆ
ಆಕರ್ಷಣೀಯ ಬಡ್ಡಿ ದರಗಳು.

ರೂ. 1 ಕೋಟಿಗೂ ಮಿಕ್ಕಿದ ಚಲಾವಣಾ ಬಂಡವಾಳ

(ಸ್ಥಾಪನೆ: 1920)

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ವಿದೇಶೀಯರ ದೃಷ್ಟಿಯಲ್ಲಿ ಪಂಡಿತ ನೆಹರು

ನಮ್ಮ ಪ್ರಧಾನಿ ಜವಾಹರಲಾಲರೆಂಬುದು ನಮಗೆಲ್ಲ ಹೆಮ್ಮೆಯ ಮಾತಲ್ಲವೆ? ಹಾಗೆಯೇ, ನೆಹರು ತಮ್ಮ ಮಿತ್ರನೆನ್ನುವುದು ವಿದೇಶೀಯರಿಗೂ ಅಭಿಮಾನ! ಈ ಲೇಖದಲ್ಲಿ ಇದರ ಸಮರ್ಥನೆಗೆ ಸಹಕಾರಿಯಾಗುವ ಕೆಲವೊಂದು ಪತ್ರಗಳನ್ನು ಉದಹರಿಸಿದೆ.

ಶ್ರೀ ಸಂಜೀವ ಲಕ್ಷ್ಮೀಶ್ವರ, ಬಿ. ಎ.

ಹಿಂದುಸ್ಥಾನದ ಸಂತ ಪ್ರಧಾನ ನೆಹರು ಅವರನ್ನು ಭಾರತೀಯರಾದ ನಾವು ನಮ್ಮ ನಾಯಕರೆಂದು ಮನ್ನಿಸುವದು ಸ್ವಾಭಾವಿಕವೇ ಸರಿ. ಅದಕ್ಕಿಂತ ಅವರು ವಿದೇಶೀಯರಿಂದ ಎಷ್ಟು ಮನ್ನಣೆ ಪಡೆಯುವರು ಎಂಬುದನ್ನು ಅರಿತಲ್ಲಿ ಅವರ ನಿಜವಾದ ವ್ಯಕ್ತಿತ್ವದ ಕಲ್ಪನೆ ಬರುವದು. ಇದನ್ನರಿಯಲು ಅವರಿಗೆ ಬಂದ ಅನೇಕ ವಿದೇಶೀಯರ ಓಲೆಗಳು ಬಹಳೇ ಸಹಾಯಕಾರಿಯಾಗುವವು. ಈ ಉದ್ದೇಶದಿಂದ ಇಲ್ಲಿ ಅಂಥ ಕೆಲ ಓಲೆಗಳ ಸಾರವನ್ನು ಕೊಡಲಾಗಿದೆ.

೧. ರಾಬರ್ಟ ಓ. ಮೆನೆಲ್

ದಿನಾಂಕ ೨-೯-೩೧.

ಪ್ರಿಯ ಮಿತ್ರರೇ,

ಕಳೆದ ವಾರದಿಂದ ನನ್ನ ಮನಸ್ಸು ನಿಮ್ಮ ಬಗ್ಗೆಯೇ ವಿಚಾರಿಸಹತ್ತಿದೆ. ನಿಮಗೆ ನನ್ನ ಪರಿಚಯವಿಲ್ಲ. ನಿಜ. ಆದರೆ ನೀವು ಕೋರ್ಟಿನ ಮುಂದೆ ಕೊಟ್ಟ ಹೇಳಿಕೆಯನ್ನು ಓದಿ ನನ್ನ ಹೃದಯ ತುಂಬಿ ಬಂದು, ನಿಮ್ಮ ಬಗ್ಗೆ ನನಗೆ ಆತ್ಮಾದರ ಉಂಟಾಗಿದೆ. ಅದರ ಪರಿಣಾಮವಾಗಿಯೇ ಈಗ ಈ ಓಲೆ ಬರೆಯುತ್ತಿದ್ದೇನೆ.

ನಿಮ್ಮ ಶಾಂತಚಿತ್ತದ ಧೈರ್ಯ ಹಾಗು ನಿಮ್ಮ ಅನುಯಾಯಿಗಳಾದ ಸ್ವಯಂ ಸೇವಕರ ನಿಸ್ವಾರ್ಥವಾದ ದೇಶಪ್ರೇಮವನ್ನು ನೋಡಿ ನನಗೆ ಆದ ಅಭಿಮಾನ ಹಾಗು ಆನಂದವನ್ನು ವರ್ಣಿಸಲಾರೆ. ನಾನೂ ಕೂಡ ಕೋರ್ಟು ಮಾರ್ಷಲ್ ಆಗಿ ೨೭ ತಿಂಗಳು ಕಾಲ ಬಂದೀವಾಸವನ್ನು ಅನುಭವಿಸಿದ್ದರಿಂದ ನಿಮ್ಮ ಹೋರಾಟದ ಕಲ್ಪನೆ ನನಗೆ ಇದೆ. ನಿಮಗೆ ಈ ವಿಷಯವಾಗಿ ಎಷ್ಟು ಬರೆದರೂ ನನಗೆ ತೃಪ್ತಿ ಎನಿಸದು. ಆದರೆ ಅದನ್ನು ಓದಲು ನಿಮಗೆ ಸಮಯ ದೊರೆಯಲಾರದೆಂಬ ಅರಿವು ನನಗಿದೆ.

"ಟೈಮ್ಸ್" ಪತ್ರಿಕೆಯ ವರದಿಯ ಕಟಿಂಗ್ಸಗಳನ್ನು ಯಾರಾದರೂ ನಿಮಗೆ ಕಳಿಸುತ್ತಿರಬಹುದು. ಇಲ್ಲದೇ ಇದ್ದಪಕ್ಷದಲ್ಲಿ ನಾನು ಕಳಿಸುವೆನು. ನೀವು ತಳೆದ ಧೋರಣೆಗಾಗಿ ನನ್ನ ಹಾರ್ದಿಕ ಬೆಂಬಲವಿದೆ.

ತಮ್ಮ ವಿಶ್ವಾಸಿ,
ರಾಬರ್ಟ. ಓ. ಮೆನ್ನೆಲ್.

೨. ಎಫ್. ಲೆಸ್ನಿ

ಇಂಡೋ-ಝೆಕೋಸ್ಲೊವಾಕ ಸೊಸಾಯಟಿ.

೧೯—೧೧—೩೫

ಮಾನ್ಯರೆ,

ನೀವು "Glimpses of world history" ಎಂಬ ಪುಸ್ತಕವನ್ನು ಕಳಿಸಿದ್ದಕ್ಕಾಗಿ ತುಂಬ ಕೃತಜ್ಞತೆಗಳು. ಅದನ್ನು ಓದಿ ಮುಗಿಸಿದೆ. ಜಗತ್ತಿನ ಇತಿಹಾಸದ ಮಹತ್ವದ ಘಟನೆಗಳ ಕ್ರೋಢೀಕರಣ ಹಾಗು ನಿಮ್ಮ ವೈಯ್ಯಕ್ತಿಕ ಧೋರಣೆಗಳು ನನ್ನ ಮನಸ್ಸನ್ನು ಸೆರೆ ಹಿಡಿದವು. "ಮಗಳಿಗೆ ತಂದೆಯ ಓಲೆಗಳು" ಎಂಬ ಪುಸ್ತಕದಲ್ಲಿಯ ನಿಮ್ಮ ಪತ್ರಗಳು ವೈವಿಧ್ಯ ಪೂರ್ಣವಾಗಿವೆ. ಇದೊಂದು ಅದ್ವಿತೀಯ ಗ್ರಂಥವೆಂಗು ಧಾರಾಳವಾಗಿ ಹೇಳಬಹುದು.

ನಿಮ್ಮ ಸಹೃದಯದ ಸಹಕಾರದ ಮೂಲಕವಾಗಿ ನಮ್ಮ ಸಂಸ್ಥೆಯು ಅಭಿವೃದ್ಧಿ ಹೊಂದಿ ನಮ್ಮ—ನಿಮ್ಮ ದೇಶದ ಮಧುರ ಸ್ನೇಹವು ಬೆಳೆಯುವದರಲ್ಲಿ ಸಂಶಯವಿಲ್ಲ.

ನೆಹರು ಅವರೇ, ವಿಶ್ವಾಸವಿರಲಿ.

ತಮ್ಮ ವಿಶ್ವಾಸಿಕ,
ಎಫ್. ಲೆಸ್ನಿ.

೩. ಎಚ್. ಎನ್. ಬ್ರೇಲ್ಸಫೋರ್ಡ್

ಲಂಡನ್, ೮-೩-೩೬.

ಪ್ರಿಯ ನೆಹರು,

ಅನೇಕ ದಿನಗಳಿಂದ ಬರಲಾರದೆಂಬ ವಿಪತ್ತು ಕೊನೆಗೆ ನಿಮ್ಮ ಪಾಲಿಗೆ ಬಂದಿತು. ಈ ವಿಪತ್ತು ನಿಮ್ಮಲ್ಲಿದ್ದ ಸ್ಥೈರ್ಯ, ಧೈರ್ಯಗಳನ್ನೆಲ್ಲ ಒರೆಗೆ ಹಚ್ಚುವಂತೆ ಮಾಡಿರಲು ಸಾಕು. ಯಾವ ಮಿತ್ರನ ಸಾಂತ್ವನ ಪರ ಮಾತುಗಳು ನಿಮ್ಮ ದುಃಖವನ್ನು ಕಡಿಮೆ ಮಾಡಲಾರವು, ನಿಮ್ಮ ಪತ್ನಿಯನ್ನು ಕೆಲ ನಿಮಿಷ ಮಾತ್ರ ನೋಡಿದ ನನಗೆ ಕೂಡ, ನಿಮ್ಮ ದುಃಖದ ಕಲ್ಪನೆ ಬಂದಿದೆ ಎಂಥ ಅಸಾಧಾರಣ ಸ್ತ್ರೀ ಇದ್ದರವರು! ಎಂಬುದನ್ನು ನೆನೆದಾಗ ಅವರ ವಿಯೋಗದಿಂದಾದ ದುಃಖದ ಕಲ್ಪನೆ ಬರುವದು. ನಿಮಗೆ ಆದ ದುಃಖದಲ್ಲಿ ನಾನು ಕೂಡ ಭಾಗಿಯಾಗಿದ್ದೇನೆ.

ಇಂಥ ವಿಪತ್ತಿನ ಸಮಯದಲ್ಲಿ ನೀವು ಧೃತಿಗೆಡಬೇಡಿರಿ. ಹಿಂದುಸ್ಥಾನಕ್ಕೆ ವೈಯ್ಯಕ್ತಿಕವಾಗಿ ನೀವು ಹಾಗು ನಿಮ್ಮಂಥರ ಆವಶ್ಯಕತೆ ಬಹಳದೆ. ನಿಮ್ಮಲ್ಲಿಯ ಅನೇಕ ಧುರೀಣರಲ್ಲಿ ನಿಮ್ಮ ಧೈರ್ಯ ಹಾಗು ಬುದ್ಧಿಶಕ್ತಿ ಇಲ್ಲ; ಇದನ್ನು ಲಕ್ಷ್ಯದಲ್ಲಿರಿಸಿ ಧೈರ್ಯ ತಂದುಕೊಳ್ಳಿರಿ. ನಿಮ್ಮ ಆತ್ಮ ಚರಿತ್ರೆಯನ್ನು ಕಳಿಸುವಿರಾ?

ನಿಮ್ಮವನೇ ಆದ,
ಎಚ್. ಎನ್. ಬ್ರೇಲ್ಸಫೋರ್ಡ.

೪. ವ್ಹಿ. ಗೊಲಾಂಝು.

ಲಂಡನ್, ೮-೩-೩೬.

ಪ್ರಿಯ ನೆಹರು,

ಅಲ್ಬರ್ಟ ಹಾಲಿನಲ್ಲಿ ಜರುಗಿದ ಸಭೆಗೆ ಸಂದೇಶ ಕಳಿಸಿದ್ದಕ್ಕಾಗಿ ಕೃತಜ್ಞತೆಗಳು. ಸಂದೇಶವನ್ನು ಓದುವ ಮುನ್ನ ಅದು ಯಾರಿಂದ ಬಂದಿದೆ ಎಂಬುದನ್ನು ಹೇಳಿರಲಿಲ್ಲ. "ಹಿಂದುಸ್ಥಾನದ ಜನತೆ" ಎಂದು ಓದಿದ ಕೂಡಲೆ

(೧೧ನೇ ಪುಟ ನೋಡಿರಿ)



ನಿಮಗೊಂದು ಮಗಳಿದ್ದಾಳೆ. ಮುಂದೆ ಅವಳು ದೊಡ್ಡವಳಾಗಿ ಅವಳ ವಿವಾಹವಾಗುತ್ತದೆ. ಆ ಸಮಯದಲ್ಲಿ ಅವಳ ವಿವಾಹದ ಎಲ್ಲಾ ಖರ್ಚುಗಳಿಗಾಗಿ ನಿಮ್ಮ ಬಳಿ ಸಾಕಷ್ಟು ಹಣ ಇರಬಹುದೆ?

ಇರಲು ಸಾಧ್ಯವಿದೆ! ನೀವು ಒಂದು ಜೀವ ವಿಮಾ ಪಾಲಿಸಿಯನ್ನು ಈಗ ಪಡಕೊಂಡಲ್ಲಿ, ನಿಮಗೆ ಆ ಸಮಯದಲ್ಲಿ ಸಾಕಷ್ಟು ಹಣ ಸಿಗುತ್ತದೆ. ನೀವು ಬದುಕಿರಲಿ, ಇಲ್ಲದಿರಲಿ, ನಿಮ್ಮ ಮಗಳ ವಿವಾಹದ ಸಮಯದಲ್ಲಿ ಹಣವನ್ನು ಒದಗಿಸುವ ಜವಾಬ್ದಾರಿಕೆಯನ್ನು ಜೀವ ವಿಮೆ ವಹಿಸುತ್ತದೆ.

ಇದರ ಹೆಚ್ಚಿನ ವಿಷಯಗಳನ್ನು ವಿವರವಾಗಿ ತಿಳಿಸಲು ಓರ್ವ ಜೀವ ವಿಮಾ ಏಜಂಟನಿಗೆ ಹೇಳಿರಿ.

ಜೀವ ವಿಮೆ
ಗಿಂತ ಶ್ರೇಷ್ಠ ಉಳಿತಾಯ ಇನ್ನೊಂದಿಲ್ಲ

ASP/LIC-72

ಶುದ್ಧ ಹರಟೆ

ಗಂಭೀರ ಸಮಸ್ಯೆ—ಸಂಖ್ಯಾಪೂರ್ತಿ!

ಅಶನ ವಸನ ವಸತಿಗಳ ಸಮಸ್ಯೆಯನ್ನು ಬಗೆಹರಿಸಿ ಕಲ್ಯಾಣ ರಾಷ್ಟ್ರ ಸ್ಥಾಪಿಸಲು ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ವ್ಯವಸ್ಥೆಗೊಳಿಸಲಾಗಿದೆ; ಅದರೊಡನೆ ಸಭೆ ಸಮ್ಮೇಳನಗಳಲ್ಲಿ ಸಂಖ್ಯಾಪೂರ್ತಿಯ ಗಂಭೀರ ಸಮಸ್ಯೆಯನ್ನು ಬಗೆಹರಿಸಲು ಚುರುಪು ಹಂಚುವುದನ್ನೂ ಯೋಜನೆಯಲ್ಲಿ ಅವಶ್ಯ ಸೇರಿಸ ಬೇಕಿತ್ತು—ಎನಿಸುವುದಿಲ್ಲವೆ?

ಶ್ರೀ ಪಾ. ಚಂದ್ರಶೇಖರ ಚಡಗ.

ಜನ ಸಂಖ್ಯೆಯ ಹೆಚ್ಚಳದ ಪ್ರಮಾಣದಲ್ಲಿ ಕಡಿಮೆಯಾಗಬೇಕು, ಮಿತ ಸಂತಾನ ಯೋಜನೆ ಬರಬೇಕು ಎಂದು ಕೂಗೆಬ್ಬಿಸುವ ಈ ಕಾಲದಲ್ಲೇ ಜನರಿಲ್ಲದೆ ಒದ್ದಾಡುವ ಪ್ರಸಂಗವೂ ನಮ್ಮ ಭಾರತದಲ್ಲೇ ಬರುತ್ತಿದೆ ಎಂದರೆ ನೀವು ನಂಬುವಿರಾ? ಆದರೆ ನನ್ನೀ ಮಾತು ನೂರಕ್ಕೆ ನೂರರಷ್ಟು ಸತ್ಯ. ನೋಡಿ, ನೀವು ಒಂದು ಸಾರ್ವಜನಿಕ ಸ್ಥಳದಲ್ಲಿ ಒಂದು ಸಭೆ ಮಾಡಿ ಒಬ್ಬ ಸಾಹಿತಿಯನ್ನು (ಅವನು ಎಷ್ಟೇ ಪ್ರಖ್ಯಾತನಿರಲಿ) ಕರೆಸಿ ಒಂದು ಭಾಷಣ ಏರ್ಪಡಿಸಿರಿ, ಬೇಕಾದರೆ ಅಚ್ಚು ಹಾಕಿಸಿದ ಕರಪತ್ರಗಳನ್ನು ಒಂದೆರಡು ವಾರಗಳ ಮೊದಲೇ ಹಂಚತೊಡಗಿರಿ. ಸಭೆಯ ಕುರಿತು ಪ್ರಚಂಡ ಪ್ರಚಾರ ಮಾಡಿರಿ. ತದನಂತರ ಸಭೆ ಆರಂಭವಾದೊಡನೆ ಒಮ್ಮೆ ಸಭೆಯ ಕಡೆ ಕಣ್ಣು ಹೊರಳಿಸಿರಿ. ಬಳಿಕ “ಅರೇ, ಇಷ್ಟೆಲ್ಲಾ ಪ್ರಚಾರ ಮಾಡಿದ ಮೇಲೂ ಮೂರು ಮುಕ್ಕಾಲು ಜನರು ಮಾತ್ರ ಬರಬೇಕೇ? ಬೀದಿ ಬೀದಿಗಳಲ್ಲಿ ಅಲೆದಾಡಿ ಹೊತ್ತುಗಳೆಯುವ ಈ ಜನರಿಗೆ ಈ ಸಭೆಗೆ ಬಂದಿದ್ದರೆ ಅವರಪ್ಪನ ಗಂಟೇನು ಹೋಗುತಿತ್ತು”? ಎಂದು ಅವರ ಮೇಲೆ ಅನಾವಶ್ಯಕ ರೇಗಬೇಡಿ.

ನಿಮ್ಮ ಸಭೆಯಲ್ಲಿ ಮುಂದಿನ ಬೆಂಚುಗಳು ಖಾಲಿಯಾಗಿಯೇ ಇರುವುವು. ಅದರಲ್ಲಿ ಯಾರಾದರೂ ಕುಳಿತಿದ್ದರೆ ಅವರು ನಿಮ್ಮ ಸ್ನೇಹಿತರು, ಬಂಧುಗಳು, ಇನ್ನು ಈ ಕಾರ್ಯಕ್ರಮ ಸಂಘ ಸಂಸ್ಥೆಗಳ ಹೆಸರಿನಲ್ಲಿ ನಡೆದಿದ್ದರೆ ಆ ಸಂಘ ಸಂಸ್ಥೆಗಳ ಸದಸ್ಯರಲ್ಲಿ ಕೆಲವರು ಬೆಂಚುಗಳ ಮುಂದೆ ಖಾಲಿ ಜಾಗವಿದ್ದರೆ ಹಲ ಕೆಲವು ಚಿಕ್ಕ ಮಕ್ಕಳು ಬಂದು ಕುಳಿತಿರುತ್ತಾರೆ. ಅವರೇಕೆ ಬಂದಿರುವಿರೆಂಬುದೇ ಅವರಿಗೇ ಗೊತ್ತಿರುವುದಿಲ್ಲ. ಹಾಗೂ ಅವರಿಲ್ಲದ ಎಡೆಯೂ ಇಲ್ಲ. ಬೀಡಿ, ಸಿಗರೇಟುಗಳ ಪ್ರಚಾರದ ಸಭೆಯಿರಲಿ, ಡೊಂಬರಾಟವಿರಲಿ, ಜಾತ್ರೆಯಿರಲಿ, ಸಾಹಿತ್ಯಿಕ ಸಭೆಗಳಿರಲಿ—ಅಷ್ಟೇಕೆ ಹಳ್ಳಿಯಲ್ಲಿ ರಸ್ತೆಯ ಒಂದು ಪಕ್ಕದಲ್ಲಿ ಒಂದು ಕಾರು ನಿಂತಿರಲಿ—ಇವರು ಹಾಜರಾಗಿರುತ್ತಾರೆ. ಚುರುಪು ಹಂಚುವ ಏರ್ಪಾಡು ನಡೆದರೆ ಇವರ ಸಂಖ್ಯೆ ಇನ್ನೂ ದೊಡ್ಡ ಪ್ರಮಾಣದಲ್ಲಿ ನೆರೆಯುವುದು. ಇನ್ನು ಸಭೆಯಲ್ಲಿ ಹಿಂದಿನ ಬೆಂಚುಗಳಲ್ಲಿ ಕೆಲವು ಜನ ಕುಳಿತಿರುತ್ತಾರೆ. ಸಭೆ ಅಂತ್ಯವಾಗುವಾಗ ನೋಡಿದಾಗ ಇವರ್ಯಾರೂ ನಿಮ್ಮ ಕಣ್ಣಿಗೆ ಬೀಳರು. ಇವರು ಮೊದಲೇ ಅಲ್ಲಿಂದ ಕಾಲು ಕಿತ್ತಿರುತ್ತಾರೆ. ಇವರು ಹಿಂದೆ ಕುಳಿತುಕೊಂಡಿರುವ ಉದ್ದೇಶ್ಯವೂ ಅದೇ ಅನ್ನಿ. ಅವರು ಕೊನೆಯ ವರೆಗೂ ಕುಳಿತುಕೊಂಡಿದ್ದರೂ ಹಿಂದಿನಿಂದ ಅವರದೇ ಆದ ಬೇರೆ ಸಭೆಯೊಂದು ನಡೆಯುತ್ತಿರುವುದು ನಿಮಗೆ ಗೋಚರಿಸದಿರದು. ಹೀಗೆ ಇಂತಹ ಸಭೆಗಳಿಗೆ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುವುದು ಸಾಮಾನ್ಯ ವಿಚಾರವಾಗಿದೆ.

ಸಭಾಸದರ ಸಂಖ್ಯಾಪೂರ್ತಿ ಕೂಡಾ ತಲೆನೋವಿಗೆ ಕಾರಣವಾಗುವಂತಹ ವಿಷಯ. ಈ ತಲೆನೋವನ್ನು ಗುಣಪಡಿಸಲು ಅನಾಸಿನ್, ಆಸ್ಪ್ರೋಗಳಾವುವೂ ಪ್ರಯೋಜನಕಾರಿಯಾಗವು ಎಂದರೆ ಆ ಮಾತ್ರೆಗಳ ಕಂಪೆನಿಯವರಿಗೆ ಸಿಟ್ಟು ಬರುವುದೋ ಏನೋ!

ಸಭಾಸದರ ಸಂಖ್ಯಾಪೂರ್ತಿಗೆ ಹಲಕೆಲವು ಸಾಧನಗಳಿವೆ. ಒಂದನೆಯದು ಚುರುಪು. “ಚುರುಪುಂ ಸರ್ವತ್ರ ಸಾಧನಂ” ಎಂಬುದು ನವೀನ ಯುಗದ ಗಾದೆ—ನವೀನ ಸಂಸ್ಕೃತದಲ್ಲಿ ಭಜನೆ, ಪುರಾಣ ಪ್ರವಚನ, ಮಕ್ಕಳ ಸಭೆ ಇವುಗಳಲ್ಲಿ ಚುರುಪು ಹಂಚುವುದು ಆಗಂತುಕರ ಹೆಚ್ಚಳಕ್ಕೆ ಸಹಕಾರಿಯಾಗುವುದು ನೋಡಿ, ನಿಮಗೆ ನಮ್ಮೂರ ಉದಾಹರಣೆಯನ್ನೇ ಹೇಳುತ್ತೇನೆ. ನಮ್ಮ ಹಳ್ಳಿಯಲ್ಲಿ “ಭಜನಾ ಪ್ರಿಯ”ರಿಗಿಂತ “ಚುರುಪು ಪ್ರಿಯ”ರೇ ಹೆಚ್ಚು. ನಮ್ಮ ಹಳ್ಳಿಯ ದೇಗುಲದಲ್ಲಿ ಪ್ರತಿ ಶನಿವಾರ ರಾತ್ರಿ ಒಂದೆರಡು ಗಂಟೆಗಳ ಭಜನೆಯಿದೆ. ಭಜನೆಯ ನಂತರ ಚುರುಪು ಹಂಚುವ ಕಾರ್ಯಕ್ರಮವಿದೆ. ಒಮ್ಮೊಮ್ಮೆ ಚುರುಪು ಹಂಚದಿರುವುದೂ ಇದೆ. ಚುರುಪು ಇಲ್ಲದ ವರ್ತಮಾನ ಮೊದಲೇ ದೊರೆತರೆ ಭಜನಾ ಮಂಡಳಿಯ ಕಾರ್ಯದರ್ಶಿಗಳೊಬ್ಬರೇ ಬಂದು ಬಲು ಬೇಗ ಭಜನೆ ಮುಗಿಸಿ ಹೋಗ ಬೇಕಾಗುತ್ತದೆ. ಚುರುಪು ಇರುವ ವರ್ತಮಾನ ದೊರೆತರೆ ದೇವಸ್ಥಾನದ ಪ್ರಾಂಗಣ ಇಡೀ ಜನರಿಂದ ಕಿಕ್ಕಿರಿಯುವುದು. ಗಂಡಸರು ಭಜನೆ ಮಾಡುತ್ತಿರುತ್ತಾರೆ. ಇತ್ತಲಾಗಿ ಹೆಂಗಸರದೇ ಆದ ಬೇರೆ ಸಭೆಯೊಂದು ನಡೆಯುತ್ತಿರುತ್ತದೆ.

“ನಾಗಮ್ಮ ನಿಮ್ಮ ಮನೆಯ ದನ ಎಷ್ಟು ಹಾಲು ಕೊಡುತ್ತದೆ” — “ಕಮಲಮ್ಮ, ನಿಮ್ಮ ಮಗಳು ಗಂಡು ಮಗು ಹೆತ್ತಳಂತೆ. ನಮ್ಮ ಬಾಯಿ ಸಿಹಿ ಮಾಡುವುದಿಲ್ಲವೇ?” “ವೆಂಕಮ್ಮ, ನಿಮ್ಮ ಮಗ ಇವತ್ತು ಭಜನೆಗೆ ಬರಲಿಲ್ಲವೇನು? ‘ಗೌರಮ್ಮ, ಕಾವೇರಿಯ ಗಂಡನ ಹುಚ್ಚು ಬಿಟ್ಟಿತೇ?” “ಸರಸಮ್ಮ, ಇವತ್ತು ಮಧ್ಯಾಹ್ನ ಊಟಕ್ಕೇನು. ಮೇಲೋಗರ ಮಾಡಿದ್ದೀರಿ?” ಎನ್ನುವ ಪ್ರಶ್ನೆ ಮತ್ತು ಅವುಗಳ ಉತ್ತರದಲ್ಲೇ ಹೆಂಗಸರು ಮುಳುಗಿಬಿಡುತ್ತಾರೆ. ಚುರುಪು ಹಂಚುವ ಸಮಯ ಬಂದಾಗಲೇ ಅವರ ಹರಟೆಗೆ ಕೊಂಚ ಭಂಗಬರುತ್ತದೆ.

ಮಕ್ಕಳು ಭಜನೆ ಆರಂಭವಾಗುವಾಗ ಉತ್ಸಾಹಿಗಳಾಗಿರುತ್ತಾರೆ. ಆದರೆ ರಾತ್ರಿ ಹೆಚ್ಚುತ್ತಾ ಹೋದಂತೆ ಅವರ ಉತ್ಸಾಹ ಮಾಯವಾಗಿ ಮೆಲ್ಲನೆ ಬೆಲ್ಲತೂಗಲು ತೊಡಗುತ್ತಾರೆ. ಮೆಲ್ಲನೆ ಕುಳಿತಲ್ಲೇ ಸ್ವಪ್ನ ನೋಡುತ್ತಾರೆ. ಚುರುಪು ಹಂಚುವಾಗ ಅವರನ್ನು ತಾಯಂದಿರು ಹೊಡೆದೆಬ್ಬಿಸುವರು. ಹೀಗೆ ಚುರುಪಿನ ಮಹಿಮೆಯಿಂದ ಭಜನೆಗೆ ಜನ ಸೇರುವರು. ಹಳ್ಳಿಯ ಪುರಾಣಪ್ರವಚನದ ಪಾಡೂ ಇದೇ. ಒಮ್ಮೆ ಒಂದೂರಲ್ಲಿ ನಡೆದ ಕತೆ ಹೇಳುತ್ತೇನೆ.

ಒಮ್ಮೆ ಒಂದು ದೇವಸ್ಥಾನದಲ್ಲಿ ವಿದ್ವಾಂಸರೊಬ್ಬರು ಭಗವದ್ಗೀತೆಯ ಮೇಲೆ ಪ್ರವಚನ ಮಾಡಲಾರಂಭಿಸಿದರು. ಪ್ರವಚನ ಆರಂಭವಾದಾಗ ಹಲ ಕೆಲವು ಜನ ಸೇರಿದ್ದರು. ಆದರೆ ಪ್ರವಚನ ಎಷ್ಟು ಹೊತ್ತಾದರೂ ಮುಗಿಯದೆ ಇದ್ದುದನ್ನು ಕಂಡು ಒಬ್ಬೊಬ್ಬರೇ ಎದ್ದು ಹೊರನಡೆದರು. ಪ್ರವಚನ ಮುಕ್ತಾಯವಾಗುವ ಹೊತ್ತಿಗೆ ಬರೀ ಒಬ್ಬಾತ ಮಾತ್ರ ಕುಳಿತುಕೊಂಡಿದ್ದನು. ವಿದ್ವಾಂಸರಿಗೆ ಅವನನ್ನು ನೋಡಿ ಬಹಳ ಆನಂದವಾಯಿತು. ಅವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ—“ತಮ್ಮಾ ನೀನೊಬ್ಬನೇ ನಿಜವಾದ ಧಾರ್ಮಿಕನು. ನೀನು ಇಷ್ಟು ಹೊತ್ತಿನ ವರೆಗೆ ನನ್ನ ಪ್ರವಚನವನ್ನು ಕೇಳುತ್ತಾ ಕುಳಿತುದುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು” ಎಂದಾಗ ಅವನು ತಟ್ಟನೆ, “ಸ್ವಾಮೀ, ನಿಮ್ಮ ಕಾಲು ಬುಡದಲ್ಲಿ ಹಾಸಿದ ಜಮಖಾನ ನನ್ನದು ಅದಕ್ಕಾಗಿ ಕಾದು ಕುಳಿತಿರುವೆ” ಎಂದನಂತೆ!

ಇನ್ನೊಂದು ಕಡೆ ಒಬ್ಬ ಪಂಡಿತರ ಭಾ

(೧೧ನೇ ಪುಟ ನೋಡಿರಿ

ಮಲೇರಿಯಾ ನಿಯಂತ್ರಣ ವಿಭಾಗದ ಕರ್ಮಚಾರರು ಮಲೆನಾಡಿನ ಗುಡಿಸಲೊಂದಕ್ಕೆ ಕ್ರಿಮಿನಾಶಕ ದ್ರವವನ್ನು ಎರಚುತಿದ್ದಾರೆ. ಮೇಲ್ಗಡೆಯಲ್ಲಿ ಮಲೇರಿಯಾ ಪ್ರಸಾರಕ ಅನೊಫೆಲೊಸ್ ನೊಣವೊಂದು ಚಡಪಡಿಸುತ್ತಿರುವುದನ್ನು ಗಮನಿಸಿರಿ.

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಗಳೂ
ಕಥೆಕಾದಂಬರಿ ಇತ್ಯಾದಿ ಪುಸ್ತಕಗಳೂ
ಸಿಗುತ್ತವೆ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ವಿವಿಧ ಸೈಜುಗಳಲ್ಲಿ
ದೊರೆಯುತ್ತವೆ.

ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಹರ್ಷ ಬಾಲಗ್ರಹ ತೈಲ
HARSHA BALAGRAHA TAILA
A Reputed Remedy for Fits.
ಬಾಲಗ್ರಹ ರೋಗಕ್ಕೆ
ಒಂದು ಖಾತ್ರಿಯಾದ ಮದ್ದು.
ಉಪಯೋಗದ ಕ್ರಮ ಸೀಸೆಯಲ್ಲಿದೆ.
ದ. ಕ. ಜಿಲ್ಲೆಯನ್ನು ಬಿಟ್ಟು ಉಳಿದ ಎಲ್ಲಾ
ಕಡೆಗಳಿಗೂ ಏಜಂಟರು ಬೇಕು.
ಬೆಲೆ: ತೊಲೆ ಬಾಟ್ಲಿ 0—6—0. ವ್ಯಾಪಾರಸ್ಥರಿಗೆ ಕಮಿಷನ್.
ಸ್ಟಾಕಿಸ್ಟರು:-- U. Venkatesh Jogappa Shanbhogue
& Sons, Udipi.
V. V. Shenoy & Sons, Karkala.

ಅಪರಾಧ ಕಲೆ

ಅಪರಾಧಿಗಳಿಗೂ ಒಂದೊಂದು ಹಾಬಿ ಇದೆ!

ಅಧಿಕ ಆತ್ಮವಿಶ್ವಾಸಿಗಳಾದ ಸುಪ್ರಸಿದ್ಧ ಚೋರರೂ ದರೋಡೆಗಾರರೂ ತಂತಮ್ಮ ಹಾಬಿಯ ಕಾರಣದಿಂದ ಸಿಕ್ಕಿಬೀಳುತ್ತಾರೆ. ಆದರೆ, ಇವರಿಗಿಂತಲೂ ಬುದ್ಧಿವಂತ ಪ್ರತಿಭಾ ಸಂಪನ್ನ ಚೋರರ ಸಂಖ್ಯೆ ಇದೀಗ ಬೆಳೆಯತೊಡಗಿದೆಯೆಂದರೆ ನೀವು ವಿಸ್ಮಯಪಡದಿರುವಿರಾ?

ಶ್ರೀ ಗೋರಾರಿಂದ ಸಂಗ್ರಹಿತ.

ತಪ್ಪು ಮಾಡುವುದು ಮಾನವ ಸಹಜ ಧರ್ಮ; ಆದರೆ, ಮಾಡಿದುದು ತಪ್ಪೆಂದು ತಿಳಿದ ನಂತರವಾದರೂ ಅದನ್ನು ತಿದ್ದಿಕೊಳ್ಳುವುದು ಬುದ್ಧಿವಂತರ ಧರ್ಮ ಎಂಬ ಮಾತನ್ನು ಹೆಚ್ಚಿನವರು ಅರಿತಿದ್ದಾರೆ. ಆದರೆ, ಈ ಧರ್ಮವನ್ನು ಪರಿಪಾಲಿಸಿಕೊಂಡು ಬರುವವರ ಸಂಖ್ಯೆ ಎಷ್ಟು? ಚಿತ್ರಕಾರರು ಅಭ್ಯಾಸ ಬಲದಿಂದ ಚಿತ್ರಕಲಾ ರಚನೆ ಮಾಡುವಂತೆ, ಮೂರ್ತಿಕಾರ ವಿಗ್ರಹ ಕೆತ್ತುವಂತೆ, ಲೇಖಕ ಲೇಖನ ಗೀಚುವಂತೆ ಅಪರಾಧಿಗಳೂ ಅಪರಾಧ ಮಾಡುವುದನ್ನೇ ತಮ್ಮ ಹವ್ಯಾಸವನ್ನಾಗಿ ಮಾಡಿಕೊಂಡಿರುವುದು ಹೆಚ್ಚು. ಪ್ರತಿಭಾ ಸಂಪನ್ನ ಕಲಾವಿದರು ಚಿತ್ರಕರು, ಲೇಖಕರು ಮೊದಲಾದವರು ಸ್ವಯಂ ಪದ್ಧತಿಯೊಂದನ್ನು ಇಟ್ಟುಕೊಂಡಿರುವಂತೆಯೇ ಈ ಅಪರಾಧಿಗಳೂ ತಮ್ಮ ಅಪರಾಧಗಳಿಗೊಂದು ಶೈಲಿ ಯಾನೆ ಕ್ರಮ ಅಥವಾ ಮಾದರಿಯನ್ನಿಟ್ಟುಕೊಂಡಿದ್ದಾರೆ. ಇಲ್ಲಿ ಕಲಾವಿದ ಮೊದಲಾದವರನ್ನೂ ಅಪರಾಧಿಗಳನ್ನೂ ತುಲನೆಮಾಡ ಹೊರಟುದನ್ನು ಕಂಡು ನಿಮಗೆ ವಿಸ್ಮಯವೆನಿಸಬಹುದು; ಆದರೆ, ಸುಪ್ರಸಿದ್ಧ ಕಲಾವಿದನ ಕೃತಿಯನ್ನು ಕಂಡೊಡನೆಯೇ ಇದು 'ಇಂತಹನ ಕೃತಿ' ಎಂದು ಬಲ್ಲವರು ಹೇಳುವಂತೆಯೇ ಒಬ್ಬ ಸುಪ್ರಸಿದ್ಧ ಅಪರಾಧಿಯಿಂದಾಗುವ ಅಪರಾಧವನ್ನೂ ಇಂತಹನದೆಂದು ಸುಲಭವಾಗಿ ಗುರುತಿಸಬಹುದು. ನಿಮ್ಮ ಬಗ್ಗೆ ದೋಷಾರೋಪಣೆಯನ್ನೊಬ್ಬ ಮಾಡಿದನೆಂದರೆ, ಆ ವ್ಯಕ್ತಿಯಾರಿರಬಹುದೆಂದು ನೀವು ಅನಾಯಾಸವಾಗಿಯೇ ತಿಳಿಯದಿರಲಾರಿರಿ. ನೀವು ನಿಮ್ಮ ಮಿತ್ರರನ್ನು—ಶತ್ರುಗಳನ್ನು; ಹಿತಸಾಧಕರನ್ನು—ಹಿತಬಾಧಕರನ್ನು ಸರಿಯಾಗಿ ತಿಳಿದುಕೊಂಡಿರುವಿರಾದರೆ, ನಿಮ್ಮ ಮೇಲಿನ ಪ್ರಶಂಸೆ—ತಿರಸ್ಕಾರಯುಕ್ತ ವಾಕ್ಯಗಳು ಯಾರ ಮುಖದಿಂದ ಯಾವ ರೀತಿಯಲ್ಲಿ ಬರಬಹುದೆಂದು ಸುಲಭದಲ್ಲಿ ಊಹಿಸಿಕೊಳ್ಳಬಲ್ಲಿರಿ; ನೂರಕ್ಕೆ ತೊಂಬತ್ತರಷ್ಟು ನಿಮ್ಮ ಊಹೆ ಸರಿಯಾಗಿಯೇ ಇರುವುದು.

ಒಬ್ಬ ಕಳ್ಳ ಬಹು ಬುದ್ಧಿವಂತಿಕೆಯನ್ನು ಉಪಯೋಗಿಸಿ ಒಂದು ಕಳ್ಳತನವನ್ನು ಮಾಡುತ್ತಾನೆ; ಆತ ಕೈದು ಆಗುವವರೆಗೆ ಪ್ರತಿ ಬಾರಿಯೂ ಇದೇ ಕ್ರಮವನ್ನು ಅನುಸರಿಸುತ್ತಿರುತ್ತಾನೆ. ಪ್ರತಿಯೊಮ್ಮೆಯೂ ಅನ್ಯಾನ್ಯ ಕ್ರಮವನ್ನು ಉಪಯೋಗಿಸುವ ಚೋರರು ಅತೀವ ವಿರಳರೆಂದೇ ಹೇಳಬಹುದು. ಚೋರತನದ ದಾಖಲೆಗಳ ಸಹಾಯದಿಂದ ಒಮ್ಮೆ ಸಿಕ್ಕಿಬಿದ್ದ ಕಳ್ಳರು ಮೊದಲು ಮಾಡಿದ ಕಳ್ಳತನಗಳನ್ನೂ ಪತ್ತೆ ಹಚ್ಚುವುದು ಸಾಧ್ಯವಾಗುವುದು.

ಅಮೇರಿಕೆಯಲ್ಲಿ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್, ಇಂಗ್ಲೆಂಡಿನಲ್ಲಿ ಸ್ಕಾಟ್ಲೆಂಡ್ ಯಾರ್ಡ್, ಫ್ರಾನ್ಸಿನ ಸುರೇಟ್ ಹಾಗೂ ಇನ್ನಿತರ ರಾಷ್ಟ್ರಗಳ ಪೋಲೀಸು ವಿಭಾಗಗಳಲ್ಲಿ ಬೇರೆ ಬೇರೆ ಅಪರಾಧಿಗಳ ಇಂಡೆಕ್ಸ್ ಕಾರ್ಡುಗಳನ್ನು, ಚೌರ್ಯ ಅಥವಾ ಹತ್ಯೆಗಳನ್ನೆಸಗಿದ ಅಪರಾಧಿಗಳ ಕ್ರಮವಿಧಾನಗಳನ್ನು ಸಂಪೂರ್ಣ ವಿವರದೊಡನೆ ಅಂಕಿಸಿರುತ್ತಾರೆ. ಅಮೇರಿಕೆಯ ಬೇಂಕು ಲೂಟಿಗೆ ಹೆಸರು ಪಡೆದಿದ್ದ ಚಿಕಾಗೋವಿನಲ್ಲಿ ನಾಲ್ಕು ಬಾರಿ ಕಳ್ಳತನವನ್ನು ಯಶಸ್ವಿಯಾಗಿ ನಿರ್ವಹಿಸಿದ ಒಬ್ಬ ಐದನೆಯ ಬಾರಿ ಸಿಕ್ಕಿಬಿದ್ದ. ಒಂದೇ ವಿಧಾನವನ್ನು ಎಲ್ಲ ಬಾರಿಯೂ ಆತ ಬಳಸಿಕೊಂಡುದೇ ಆತನ ಬಂಧನಕ್ಕೆ ಕಾರಣವಾಯಿತು. ಕಳ್ಳತನದ ವಸ್ತುಗಳನ್ನು ಈ ಕಳ್ಳನ ಪಂಗಡವು ಕಪ್ಪು ಬಣ್ಣದ ಬ್ಯೂಕ್ ಕಾರಿನಲ್ಲಿಯೇ ಒಯ್ಯುತ್ತಿತ್ತು. ಸಂದೇಹವಶದಿಂದ ಕೊನೆಯ ಸಲ ಸೆರೆಗೆ ಬಿತ್ತು.

ಒಬ್ಬ ಕಳ್ಳರ ನಾಯಕ ಬೇಂಕಿನ ಕೌಂಟರಿನಲ್ಲಿ ನಿಂತು ವಿನೋದವಾದಗಳಲ್ಲಿಯೇ ಕಾಲಹರಣ ಮಾಡುತ್ತಿದ್ದು ಅಲ್ಲಿನ ಕಾರಕೂನನ ಗಮನವನ್ನು ತನ್ನತ್ತ ಆಕರ್ಷಿಸುತ್ತಿದ್ದ. ಆಗ, ಆತನ ಸಂಗಡಿಗರು ಹಣವನ್ನು ದೋಚಿಕೊಳ್ಳುತ್ತಿದ್ದರು. ಆದರೆ, ಈ ಗುಟ್ಟು ಬಯಲಿಗೆ ಬರಲು ಬಹು ಕಾಲ ಹಿಡಿಯಿತು. ಅಂತ್ಯದಲ್ಲಿ ಈ ಬುದ್ಧಿವಂತ ಕಳ್ಳನು ಸಿಕ್ಕಿಬಿದ್ದು, ದೀರ್ಘ ತುರಂಗ ವಾಸವನ್ನನುಭವಿಸಬೇಕಾಯಿತು.

ಅಪರಾಧಿಗಳ ರುಚಿ—ಸುರುಚಿ ಹಾಗೂ 'ಹಾಬಿ'ಯನ್ನೂ ಪೋಲೀಸರು ಬರೆದಿಟ್ಟುಕೊಳ್ಳುತ್ತಾರೆ. ದುರ್ಭಾಗ್ಯವಶದಿಂದ ಇವರ ಅಭಿರುಚಿ ಜೂಜಾಡುವುದು—ತಂಬಾಕು ಕುಡಿಯುವುದರ ವರೆಗೆ ಮಾತ್ರ ಇರುತ್ತದೆ. ಆದರೂ ಕಲಾಪ್ರೇಮಿಗಳಾದ ಕಳ್ಳರೂ ಇಲ್ಲವೆಂದಿಲ್ಲ. ಒಬ್ಬ ಅಪರಾಧಿ ವೆಗ್ನರನ ಸಂಗೀತ ಪ್ರೇಮಿಯಾಗಿದ್ದ. ಆರು ಕೊಲೆ ಮಾಡಿದ ಅಪರಾಧದಿಂದಾಗಿ ಫ್ರೆಂಚ ಪೋಲೀಸರು ಇವನನ್ನು ಅರಸುತ್ತಿದ್ದರು. 'ಸುರೇಟ'ದಲ್ಲಿ ಈತನ ವಿವರಣೆಯೆಲ್ಲವೂ ಇದ್ದುವು. ವೆಗ್ನರನ ಸಂಗೀತ ಕಛೇರಿಯಾಗುವಲ್ಲೆಲ್ಲ ಗುಪ್ತಚಾರರನ್ನು ಇಟ್ಟು ಮೂರು ತಿಂಗಳ ನಂತರ ಈ ಮಹಾ ಕೊಲೆಗಾರನನ್ನು ಬಂಧಿಸಿದರು.

ಲಂಡನ್ನಿನ ಒಬ್ಬ ಅಪರಾಧಿ ದೊಡ್ಡ ಸಂಸ್ಥೆಯೊಂದರಿಂದ ಬಹು ಹಣವನ್ನು ದೋಚಿ ಓಡಿ ಹೋದ. ಈತನ ಪರಿಚಯ ಹೆಚ್ಚಿನವರಿಗಿರಲಿಲ್ಲ. ಆದರೂ ಆತನ ಆಸಕ್ತಿಯ ಬಗ್ಗೆ ಒಂದು ಕಾರ್ಡನ್ನು ಸ್ಕಾಟ್ಲೆಂಡ್ ಯಾರ್ಡಿನಲ್ಲಿ ತಯಾರಿಸಿದರು. ಬಾಕ್‌ನ ಸಂಗೀತವೆಂದರೆ ಆತನ ಬಾಯಿ ನೀರೂರಿಸುತ್ತಿತ್ತು. ಕೊನೆಗೆ, ಬಾಕನ ಹಾಡಿನ ರೆಕಾರ್ಡೊಂದನ್ನು ಕೊಂಡುಕೊಳ್ಳುವಾಗ, ಆತ ಬಂಧನಕ್ಕೆ ಗುರಿಯಾದ.

ಲಂಡನ್ನಿನ ರತ್ನಗಳ ಅಂಗಡಿಗಳಿಂದ ಕನ್ನಡಿಯ ಕಪಾಟನ್ನು ಕತ್ತರಿಸಿ ರತ್ನಾಪಹರಣವೆಸಗುವ ಮಹಾ ಬುದ್ಧಿವಂತ ಕಳ್ಳರಿದ್ದಾರೆ. ಇವರು ಗಾಜಿನ ಬಾಗಿಲು ಒಡೆಯುವಾಗ ಸದ್ದಾಗದಂತೆ ಒಂದು ತರದ ಅಂಟನ್ನು ಉಪಯೋಗಿಸುತ್ತಾರೆ. ಇದೇ ಈ ಕಳ್ಳರ 'ಟ್ರೇಡ್ ಮಾರ್ಕ್' ಆಗಿದ್ದು ಬಹುಸುಲಭದಲ್ಲಿಯೇ ಸಿಕ್ಕಿ ಬೀಳುತ್ತಾರೆ.

ಸಾಮಾನ್ಯವಾಗಿ, ಅಧಿಕ ಆತ್ಮ ವಿಶ್ವಾಸವಿರುವ ಅಪರಾಧಿಗಳು ತಮಗೆ ಹಲವು ಬಾರಿ ಜಯವನ್ನು ತಂದಿತ್ತ ಅದೇ ಒಂದು ಕಳ್ಳತನದ ಮಾದರಿಯನ್ನು ಅನುಸರಿಸುತ್ತಾರೆ; ಮತ್ತು ಈ ಆತ್ಮ ವಿಶ್ವಾಸದಿಂದಲೇ ಅವರು ಒಂದು ಬಾರಿ ವಂಚಿತರಾಗುತ್ತಾರೆ. ಆದರೆ, ಚಾಣಾಕ್ಷ ಚೋರ ಶಿಖಾಮಣಿಗಳು ಒಂದೊಂದು ಬಾರಿ ಒಂದೊಂದು ವಿಧಾನವನ್ನು ಅನುಸರಿಸುತ್ತ, ಪ್ರತಿ ಬಾರಿಯೂ ಜಯಶಾಲಿಯಾಗುತ್ತಾರೆ. ಈ ಅತಿ ಪ್ರತಿಭಾಸಂಪನ್ನ ಚೋರರನ್ನು ಪತ್ತೆಹಚ್ಚುವುದು ಪೋಲೀಸ್ ವಿಭಾಗಕ್ಕೆ ಇನ್ನೂ ಸಮಸ್ಯೆಯಾಗಿಯೇ ಉಳಿದಿದೆಯೆಂದರೆ ಅತಿಶಯೋಕ್ತಿಯಲ್ಲ.



ಆಕಾಶಯಾನದಲ್ಲಿ ತರಬೇತಿ ಹೊಂದುತ್ತಿರುವ ಅಮೇರಿಕದ ವೈಮಾನಿಕರು.

ಪುತ್ತೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ

R. E. P. 331/1960
in O S. 47/1959.

ರಾಮಯ ಬಲ್ಲಾಳ — ಅರ್ಜಿದಾರ, ವಾದಿ.
ಕೃಷ್ಣ ಭಟ್ಟ ಕೂಡಾ-ಎದ್ರಿರು, ಪ್ರತಿವಾದಿರು.

ಮೇಲಿನ ಅಮ್ಲಜ್ಯಾರಿಯ 4ನೇ ಎದ್ರಿ ಸರಸ್ವತಿ, ಬೇಳಿಂಜಡ್ಕ ಸುಬ್ರಾಯ ಭಟ್ಟರ ಮಗಳು ವ ಪಳ್ಳದ ಮನೆ ಸುಬ್ರಮಣ್ಯ ಭಟ್ಟನ ಹೆಂಡ್ತಿ, ಕಾಸರಗೋಡು ತಾಲ್ಲೂಕು, ಕುಂಬಡಾಜೆ ಗ್ರಾಮ, ಇವರೀಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ವಾದಿಯು ನಿಮ್ಮ ಮೇಲೆ ಕೂಡಾ ದಾಖಲ್ಲಿ ಮಾಡಿದ ಮೇಲ್ಕಂಡ ಡಿಕ್ರಿಯಲ್ಲಿ ನಿಮ್ಮ ಕುಟುಂಬದ ಬಾಬ್ತು ಮಾಣಿಲ ಗ್ರಾಮದ ಸ್ಥಿರಾಸ್ತಿಯನ್ನು ಜಪ್ತಿಪಡಿಸಿರುವುದಾಗಿಯೂ ಅದನ್ನು ನೀವು ಕೋರ್ಟಿನಿಂದ ಇನ್ನೊಂದು ಹುಕುಂ ಕೊಡುವ ತನಕ ಪರಾಧೀನ ವಗೈರೆ ಮಾಡಬಾರದಾಗಿ ಸಹಾ ನಿಮಗೆ ಈ ಮೂಲಕ ಪ್ರೊಹಿಬಿಟರಿ ಹುಕುಂ ಕೊಟ್ಟಿರುತ್ತದೆ. ಅಲ್ಲದೆ ಮೇಲ್ಕಂಡ ಅಮ್ಲಜ್ಯಾರಿ ವ್ಯವಹರಣೆಗೆ ನಿಮ್ಮ ಆಕ್ಷೇಪಣೆ ಇದ್ರೆ ತಾ. 7-11-60ಕ್ಕೆ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಃ ವ ವಕೀಲರ ದ್ವಾರಾ ಹಾಜರಾಗಿ ಉದ[illegible]ಸಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸಲಾಗಿದೆ.

(Sd.) C. S. Shastry,
Vakil for Petitioner.

ಪುತ್ತೂರು, ತಾ. 21.10.60.

ಬೆಚ್ಚನೆಯ ಮನೆ
ವೆಚ್ಚಕ್ಕೆ ಹಣ

ಬೇಕಾದಲ್ಲಿ
ಮುಂಚಿತವಾಗಿಯೇ ಒಂದು ಉಳಿತಾಯ
ಯೋಜನೆಯನ್ನು ತಯಾರಿಸಿ, ಅದರಂತೆ
ಕೊರ್ಪೊರೇಶನ್ ಬೇಂಕಿನಲ್ಲಿ
ಹಣವನ್ನು ಉಳಿಸುತ್ತಾ ಬನ್ನಿರಿ.

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ, ಮೈಸೂರು ರಾಜ್ಯ.
6 ರಾಜ್ಯಗಳಲ್ಲಿ ಒಟ್ಟು 60 ಶಾಖೆಗಳು

ಚಂದಾಹಣ—

ಬಾಕಿ ಇರುವ ಚಂದಾದಾರರಿಗೆ ಮುಂದಿನ ವಾರದ ಯಾ ಅನಂತರದ ಪತ್ರಿಕೆಯನ್ನು ವಿ. ಪಿ. ಮೂಲಕ ಕಳುಹಿಸುತ್ತೇವೆ. ಈ ಬಗ್ಗೆ ಯಾರೂ ದಯಮಾಡಿ ಅನ್ಯಥಾ ಭಾವಿಸದೆ ವಿ. ಪಿ. ಯನ್ನು ಪಡೆಕೊಂಡು ಸಹಕರಿಸಬೇಕಾಗಿ ವಿನಂತಿ.

—ಮೆನೇಜರ್

ಪಾಪವು ಅತಿ ಭಯಂಕರವಾದುದು; ಪಾಪಕ್ಕಿಂತ ಭಯಂಕರ ಪಾಪ ವಿಚಾರ; ಇದಕ್ಕಿಂತಲೂ ಭಯಂಕರ ಪಾಪ ಪ್ರಚೋದನೆ

ನವಯುಗ

ವರುಷ	ಉಡುಪಿ	ವಾರ
೪೦	೨೭..೧೦–'೬೦	೯

ಆದರ್ಶ ಪರಿಪಾಠ ಬೇಕು

ನಿಜವಾದ ರೋಗಿಯ ದೇಹವನ್ನು ಪರಿಶೀಲಿಸಿ ಆತನ ರೋಗ ಕಾರಣವನ್ನು ತಿಳಿದುಕೊಂಡು ಉಚಿತ ಚಿಕಿತ್ಸೆಯನ್ನು ಮಾಡಬಹುದು; ಆದರೆ ರೋಗದ ಸೋಂಕೂ ಇಲ್ಲದೆ ತಾನು ರೋಗಿಯೆಂದುಕೊಳ್ಳುವವನ ಚಿಕಿತ್ಸಾಕಾರ್ಯ ಹುಚ್ಚರಾಸ್ಪತ್ರೆಯ ವೈದ್ಯರಿಗೂ ಸುಲಭಸಾಧ್ಯವೆನಿಸದು. ಶಾಂತಿಯ ಹೆಸರನ್ನು ಪುನರುಚ್ಚರಿಸುತ್ತ ಒಳಗಿಂದೊಳಗೆ ಅಶಾಂತಿಯ ಬೆಂಕಿ ಕಿಡಿಯನ್ನು ಊದಿ ಉಲ್ಬಣಗೊಳಿಸುತ್ತಿರುವ ಕೆಲವೊಂದು ರಾಷ್ಟ್ರಗಳನ್ನು 'ರೋಗವಿಲ್ಲದ ರೋಗಿ'ಎಂದು ಕರೆಯುವುದು ಯುಕ್ತವಲ್ಲವಾದರೂ ಅಸಮಂಜಸವಾಗಲಾರದು. ಪ್ರಪಂಚದ ೯೯ ವಿವಿಧ ರಾಷ್ಟ್ರಗಳು ಸದಸ್ಯರಾಗಿರುವ ಸಂಯುಕ್ತ ರಾಷ್ಟ್ರಸಂಸ್ಥೆಯು ದುರ್ದೆಸೆಗೀಡಾಗಿರುವುದಾದರೆ ಇದಕ್ಕೆ ಶಾಂತಿಪ್ರಿಯ ಅಶಾಂತಿಪ್ರಚೋದಕರೇ ಮೂಲ ಕಾರಣರೆಂದು ನಿಸ್ಸಂದೇಹವಾಗಿ ಹೇಳಬಹುದು. ತೆರೆಯ ಮರೆಯಲ್ಲಿ ನಿಂತು ವಿಸ್ಫೋಟದ ಬಿರುಗಾಳಿ ಬೀಸಲು ಪ್ರೇರೇಪಿಸುವವರು ಕೆಲವರಾದರೆ, ತೆರೆಯ ಹೊರಗೇನೇ ಸಂಘಾಹ್ವಾನವೀಯುವವರೂ ಇಲ್ಲದಿಲ್ಲ. ಈ ಮುಖಂಡರಿಂದಲೇ ಸಂಯುಕ್ತ ರಾಷ್ಟ್ರ ಸಂಘವು ಇಂದು ತುಂಬ ದುರ್ಬಲತೆಗೆ ಗುರಿಯಾಗಿದೆ.

ಮೊದಲನೆ ಜಾಗತಿಕ ಯುದ್ಧಾನಂತರ ಯುದ್ಧದಿಂದಾದ ಹಾನಿ–ನಷ್ಟಗಳಿಂದ ಮನನೊಂದ ರಾಷ್ಟ್ರಗಳು ಜನಾಂಗ ಸಂಘವನ್ನು ಸ್ಥಾಪಿಸಿಕೊಂಡುದನ್ನೂ ಶಾಂತಿ ಸ್ಥಾಪನೆಯೇ ಇವರ ಉದ್ದೇಶವೆಂಬುದನ್ನೂ ಮುಂದೆ ಅದರಲ್ಲಿ ಬಿಕ್ಕಟ್ಟು ಹುಟ್ಟಿ ಸಂಘ ನಿರ್ನಾಮಗೊಂಡು ದ್ವಿತೀಯ ಲೋಕ ಸಮರವಾದುದನ್ನೂ ಯಾರೂ ಮರೆಯಲಾರರು. ಈ ಸಂಗ್ರಾಮಾನಂತರದಲ್ಲಿ ಅದೇ ಮಾದರಿಯ, ಆದರೆ, ಅದಕ್ಕಿಂತ ತುಸು ಆದರ್ಶ ಹಾಗೂ ಉದಾರವೆನಿಸಿದ ತತ್ತ್ವಗಳನ್ನಿಟ್ಟು ಯು. ನೋ. ದ ಸ್ಥಾಪನೆಯಾಯಿತು. ಆರಂಭದಿಂದ ಇಂದಿನ ವರೆಗೂ ಇದರ ಸದಸ್ಯ ಸಂಖ್ಯೆ ಹೆಚ್ಚುತ್ತ ಬಂದಿದೆ. ಇದರಿಂದ,ಇಂದು ಈ ಸಂಘದ ಮಹತ್ತ್ವಿಕೆಯನ್ನು ವಿಶ್ವವರಿದಿದೆಯೆಂದು ಹೇಳಬಹುದು. ಆದರೆ, ಸದಸ್ಯ ರಾಷ್ಟ್ರಗಳು ಪರಸ್ಪರ ಹೊಡೆದಾಡುವುದಕ್ಕೆ ಇದನ್ನೇ ಕೇಂದ್ರ ಸ್ಥಳವನ್ನಾಗಿ ಮಾಡಿಕೊಳ್ಳುತ್ತಿರುವುದನ್ನು ಕಾಣುವಾಗ ಮಾತ್ರ ಖೇದವೆನಿಸುತ್ತದೆ. ಸಂ. ರಾ. ಸಂಸ್ಥೆಯ ಜನ್ಮದಿನವನ್ನು ವಿಶ್ವದ ಹೆಚ್ಚಿನೆಡೆಯಲ್ಲಿ ಆಚರಿಸಲಾಯಿತು. ಸಂಸ್ಥೆಯ ಮಹೋದ್ದೇಶಗಳನ್ನು ಪುನರುಚ್ಚರಿಸಲಾಯಿತು; ಇಷ್ಟರಿಂದಲೇ ಅವು ಪೂರಯ್ಸಿದಂತಾಗಲಿಲ್ಲವೆಂಬುದನ್ನು ನಾವು ಮರೆಯಬಾರದು. ಸದಸ್ಯ ರಾಷ್ಟ್ರಗಳು ತಮ್ಮೊಳಗಿನ ಸಮಸ್ಯೆಗಳನ್ನು ಈ ಸಂಘದ ಮಧ್ಯಸ್ಥಿಕೆಯಿಂದ ಸೌಹಾರ್ದಮಯವಾಗಿ ತೀರ್ಮಾನಿಸಿಕೊಳ್ಳಲು ಆಶಿಸುತ್ತಿರುವುದು ಶುಭಪ್ರದವಾದರೂ ಈ ರೀತಿಯ ತೀರ್ಮಾನವೀಯಲು ಸಂಘವು ಮೀನಮೇಷ ಎಣಿಸುವುದು ನಮಗೆ ಗೊತ್ತಿರುವ ಸಂಗತಿ. ಇದರಿಂದಾಗಿಯೇ ನಿಷ್ಪಕ್ಷಪಾತಿಯಾಗಿರಬೇಕಾದ ಇದರ ಮೇಲೆ 'ಪಾಶ್ಚಾತ್ಯರ ಕೈಗೊಂಬೆ' ಎಂಬ ಅಪವಾದವನ್ನು ಹೊರಿಸುವಂತಾಗಿದೆ. 'ಸುಯೇಜ ಪ್ರಕರಣ'ವನ್ನು ಯಶಸ್ವಿಯಾಗಿ ಬಗೆಹರಿಸಿದ್ದ ಈ ಸಂಸ್ಥೆ ಇತ್ತೀಚೆಗೆ 'ಕಾಂಗೋ ಪ್ರಕರಣ'ದಿಂದ ಅಮೇರಿಕ–ರಶ್ಯ ವಿರಸ ಕಾಂಡವನ್ನು ನಾವು ನೋಡುವುದಾದರೆ, ಸಂ. ರಾ. ಸಂಘವು ಜೀವನ್ಮೃತವಾಗಿದೆಯೋ ಎಂಬ ಭ್ರಮೆಯುಂಟಾಗುವುದು.

ಸಂಯುಕ್ತ ರಾಷ್ಟ್ರಸಂಘವು ನಿರ್ದುಷ್ಟವಾದುದೆಂದು ಹೇಳುವಂತಿಲ್ಲ. ಇಂದು ಅದರ ತಾಮ್ರಪಟದಲ್ಲಿ ಬದಲಾವಣೆಯಾಗಬೇಕೆನ್ನುವ ರಶ್ಯದವಾದವನ್ನೂ ಸಮರ್ಥಿಸವಂತಿಲ್ಲ. ಆದರೂ ಸಂಘದ ಕಾರ್ಯಕ್ಷೇತ್ರ ಈಗ ವಿಸ್ತರಿಸಿದೆ; ಹಿಂದಿಗಿಂತ ಇಂದು ಸದಸ್ಯರ ಸಂಖ್ಯೆ ಇಮ್ಮಡಿಯಾಗಿದೆ; ಸಂಘದ ಉತ್ತರದಾಯಿತ್ವ ಅಧಿಕವಾಗಿದೆ. ವಿಶ್ವಶಾಂತಿ ಶಮನಕ್ಕಾಗಿ ನಿರ್ವಿಕಾರ ಮನಸ್ಸಿನಿಂದ ಕಾರ್ಯವೆಸಗಿತೆಂದರೆ, ಆಗ ಅದು ಸಫಲವಾಗುವುದು ಖಂಡಿತವೇ. ಈ ನಿರ್ವಿಕಾರ ಭಾವನೆಯಿಂದ ಎಷ್ಟು ಜನ ಸದಸ್ಯರಾಷ್ಟ್ರಗಳು ಕಾರ್ಯವೂಡುವವು? ತಮ್ಮ ಘೋಷಣೆಯಂತೆ ನಡೆಯಲು ಆತಂಕವೆನಿಸುವ ಸಂದರ್ಭದಲ್ಲಿ ಸಂಯುಕ್ತ ರಾಷ್ಟ್ರ ಸಂಘವನ್ನೇ ಅವಹೇಳನ ಮಾಡುವ ಮಹಾ ಮೇಧಾವಿಗಳು ಸದಸ್ಯ ರಾಷ್ಟ್ರಗಳಲ್ಲಿರುವಾಗ 'ಸಿಂಹದ ಪಾಲು' ಕೊಳ್ಳಲು ಮಾತ್ರ ಈ ಸಂಘಬೇಕು; ಉಳಿದೆಡೆ ಬೇಡವೆಂದು ಘೋಷಿಸುವವರಿರುವಾಗ, ವಿಶ್ವದಲ್ಲಿ ಐಕ್ಯ-ಸಾಮಂಜಸ್ಯ ಸ್ಥಾಪಿತವಾಗುವದಾದರೂ ಹೇಗೆ? ಕಂಕುಳಲ್ಲಿ ದಂಡ ಹಿಡಿದು ಬಾಯಲ್ಲಿ ಶರಣಾರ್ಥಿಯಾಗಿರುವವರು ಸರಿದಾರಿಗೆ ಬಾರದಿರುವ ವರೆಗೆ ಶಾಂತಿ ಮಂತ್ರ ಪಠಣದಲ್ಲಿ ಮಾತ್ರವುಳಿದೀತು. ಪಾಶ್ಚಾತ್ಯ ಹಾಗೂ ಪೌರ್ವಾತ್ಯ ರಾಷ್ಟ್ರ ಬಣಗಳ ನಡುವೆ ತಟಸ್ಥ ರಾಷ್ಟ್ರಗಳು ಅದೆಷ್ಟು ಸಾಮಂಜಸ್ಯವನ್ನುಂಟು ಮಾಡಲು ಶ್ರಮಿಸಿದರೂ 'ಪಂಚರ ಮುಖದಿಂದ ಪರಮೇಶ್ವರ ಮಾತಾಡುತ್ತಾನೆ'ಂದು ಆ ಮಾತನ್ನು ಗೌರವಿಸುವಷ್ಟು ಉದಾರತೆ ಉಭಯಬಣಗಳಲ್ಲಿಮೂಡಿ ಬರುವ ವರೆಗೆ, ಅವುಗಳಲ್ಲಿ ನಿಜವಾದ ಶಾಂತಿಯತ್ತ ಒಲವು ಹಾಗೂ ಅಭಿಲಾಷೆ ಜನಿಸುವ ವರೆಗೆ ಸಫಲವಾಗದು. ಇಂದು ಇದೇ ವಿಪನ್ನಾವಸ್ಥೆಯಿರುವುದರಿಂದ ಸಂಯುಕ್ತ ರಾಷ್ಟ್ರ ಸಂಸ್ಥೆಯು ಭೀಕರ ಹಾಗೂ ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದೆ. ಒಂದು ವಿಧದಲ್ಲಿ ಇದರ ಶಕ್ತಿ ಪರೀಕ್ಷೆಯಾಗುತ್ತಿದೆಯೆಂದರೂ ಅತಿಶಯೋಕ್ತಿಯಿಲ್ಲ. ಈ ಪರೀಕ್ಷೆಯಲ್ಲಿ ಅದು ಯಶಸ್ವಿಯಾಗಬೇಕು; ವಿಶ್ವದಲ್ಲಿನ ಪಂಗಡ ಮನೋವೃತ್ತಿಯನ್ನದು ನಿರ್ಮೂಲನ ಮಾಡಬೇಕು; ವಿಶ್ವಸಂತತಿಯೆಲ್ಲ ಒಂದೆ ಪುಜ್ಯೋದದ ಹಸುಗೂಸುಗಳೆಂಬ ಭಾವನೆಯನ್ನು ಮೂಡಿಸಲು ಅದು ಸಮರ್ಥವಾಗಬೇಕು. ಮತ್ತು ಈ ಬಗ್ಗೆ ಎಲ್ಲ ಸದಸ್ಯ ರಾಷ್ಟ್ರಗಳೂ ಪ್ರಯತ್ನಿಸಬೇಕು. ಮಾತಿನಂತೆ ಕೃತಿಯಲ್ಲೂ ನಡೆದುಕೊಳ್ಳುವ ಆದರ್ಶ ಪರಿಪಾಠ ರಾಷ್ಟ್ರಗಳಲ್ಲಿ ಮೂಡಿ ಬರಬೇಕು. ಇದಕ್ಕೆ ಭಾರತವು ಮಾದರಿಯಾಗಿದೆ; ಉಳಿದ ರಾಷ್ಟ್ರಗಳು ಭಾರತದಿಂದ ಪಾಠ ಕಲಿಯಬೇಕಾಗಿದೆ.

ಆಂಧ್ರದಿಂದ ಪಾಠ ಕಲಿಯಲಿ

ನಮ್ಮ ರಾಜ್ಯ ಸರಕಾರಕ್ಕೆ ಸ್ವತಂತ್ರ ಮನೋವೃತ್ತಿ ಹಾಗೂ ಸ್ಥಿರ ಚಿತ್ತತೆಗಳು ಅಭಾವವಾಗಿರುವುವೆಂದು ಅದು ಈಗಾಗಲೇ ಹಲವಾರು ನಿದರ್ಶನಗಳಿಂದ ತೋರಿಸಿ ಕೊಟ್ಟಿದೆ. ಬೇರೆ ರಾಜ್ಯಗಳಿಂದಲಾದರೂ ಅದು ಪಾಠ ಕಲಿಯುವುದು ಅವಶ್ಯ. ನಮ್ಮ ನೆರೆಯ ರಾಜ್ಯ ಆಂಧ್ರ ಪ್ರದೇಶವು ಆರ್ಥಿಕ ಅನುಕೂಲವಿಲ್ಲದ ಬುದ್ಧಿವಂತ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಶಿಕ್ಷಣ ಪಡೆಯುವುದಾದರೆ, ಅವರಿಗೆ ಒಂದು ವರ್ಷಕ್ಕೆ ಒಂದು ಸಾವಿರ ರೂಪಾಯಿಗಳ ವರೆಗಿನ ಶಿಷ್ಯ ವೃತ್ತಿಯನ್ನು ಸಾಲ ರೂಪದಲ್ಲಿ ನೀಡುವುದಕ್ಕೂ ಇದರ ಮೇಲೆ ಬಡ್ಡಿಯನ್ನು ಆಕರಿಸದಿರುವುದಕ್ಕೂ ನಿರ್ಧರಿಸಿದೆ. ಈ ಸಾಲದ ಹಣವನ್ನು ಮುಂದೆ ಕಂತು ಕಂತುಗಳಲ್ಲಿ ಮರಳಿಸಬೇಕಾಗಿದೆ. ಮೈಸೂರು ಸರಕಾರವು ಹಿಂದುಳಿದ ವರ್ಗಗಳಿಲ್ಲವುಗಳ ವಿದ್ಯಾರ್ಥಿಗಳಿಗೂ ಉಚಿತ ಶಿಷ್ಯವೃತ್ತಿಗಳನ್ನೀಯುತ್ತಿದೆ. ರಾಜ್ಯದಲ್ಲಿ ವೈದ್ಯರ ಮತ್ತು ತಂತ್ರಜ್ಞರ ಅಭಾವವಿರುವಾಗ, ಸಮರ್ಥ ಯೋಗ್ಯತಾಸಂಪನ್ನ ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ಪಡೆದು, ಅವರ ಸೇವೆ ರಾಜ್ಯಕ್ಕೆ ದೊರೆಯಬೇಕಾದುದು ಆವಶ್ಯವೆ; ಇದರಿಂದ ರಾಜ್ಯದ ಅಭಿವೃದ್ಧಿ ಸಾಗುವುದು. ಆದರೆ ಈ ಬಗ್ಗಿನ ಶಿಕ್ಷಣವು ವೆಚ್ಚಪ್ರದವಾದುದರಿಂದ ಆರ್ಥಿಕವಾಗಿ ಹಿಂದುಳಿದ ಪ್ರತಿಭಾಸಂಪನ್ನರು ದೂರದಿಂದಲೇ ಕೈ ಮುಗಿಯಬೇಕಾಗುವುದು. ಈ ಅನಪೇಕ್ಷಣೀಯ ಸಂದರ್ಭವನ್ನು ತಪ್ಪಿಸಲು ಆಂಧ್ರ ಸರಕಾರದಂತಹ ಯೋಜನೆಯೊಂದನ್ನು ನಮ್ಮ ರಾಜ್ಯ ಸರಕಾರವೂ ಘೋಷಿಸಿ, ಜಾತಿ–ಮತ ಭೇದವಿಲ್ಲದೆ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಸಾಲ ರೂಪದಲ್ಲಿ ಶಿಷ್ಯವೃತ್ತಿಯಿತ್ತು ಪ್ರೋತ್ಸಾಹಿಸಲಿ. ಈ ಮೊತ್ತವನ್ನು ನಿಬಡ್ಡಿಯಿಂದ ಮತ್ತು ಸುಲಭ ಕಂತುಗಳಲ್ಲಿ ಮರಳಿಸುವಂತೆ ಯೋಜಿಸಿ, ಆದಷ್ಟು ಹೆಚ್ಚು ಜನರಿಗೆ ಸಾಕಷ್ಟು ಶಿಷ್ಯವೃತ್ತಿ ಸಿಗುವಂತೆ ನೋಡಿಕೊಳ್ಳಲಿ. ಇದರಿಂದ ರಾಜ್ಯ ಸರಕಾರವು ಪ್ರತಿಭೆಗೆ ಮಾನ್ಯತೆಯಿತ್ತಂತಾಗುವುದು; ದರಿದ್ರ ಪ್ರತಿಭಾವಂತರಿಗೆ ಸಹಾಯ ಮಾಡಿದಂತಾಗುವುದು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ರಾಜ್ಯಕ್ಕೆ ಸಮರ್ಥ ವೈದ್ಯರನ್ನೂ ತಂತ್ರಜ್ಞರನ್ನೂ ಒದಗಿಸಿಕೊಟ್ಟಂತಾಗುವುದು.

ಜಿಲ್ಲಾ ಶೈಕ್ಷಣಿಕ ಸಮ್ಮೇಳನ

ದಕ್ಷಿಣಕನ್ನಡ ಜಿಲ್ಲೆಯ ಶೈಕ್ಷಣಿಕ ಸಮ್ಮೇಳನವು ಬಂಟವಾಳದಲ್ಲಿ ತಾ. ೨೨ ಮತ್ತು ೨೩ರಂದು ಜರಗಿತು. ಮೈಸೂರಿನ ವಿದ್ಯಾಂಗದ ಡೈರೆಕ್ಟರ ಶ್ರೀ ಎ. ಸಿ. ದೇವೇಗೌಡರು ಈ ಸಮ್ಮೇಳನವನ್ನು ಉದ್ಘಾಟಿಸಿದರು; ಶೈಕ್ಷಣಿಕ ಸಂಶೋಧನಾ ವಿಭಾಗದ ಸಹಾಯಕ ಡೈರೆಕ್ಟರ್ ಶ್ರೀ ಎಸ್. ಆರ್. ಹಿರೇಮಠರು ಅಧ್ಯಕ್ಷತೆ ವಹಿಸಿದ್ದರು. ಉದ್ಘಾಟಕರು ಮಾತನಾಡುತ್ತ "ತೃತೀಯ ಪಂಚವಾರ್ಷಿಕ ಯೋಜನೆಯೊಳಗೆ ೧೪ ವರ್ಷ ಪ್ರಾಯದ ಮಕ್ಕಳಿಗೆಲ್ಲ ಶಿಕ್ಷಣ ಸೌಕರ್ಯವನ್ನು ಒದಗಿಸುವ ಉದ್ದೇಶವಿದೆ; ಜತೆಗೆ ೬ರಿಂದ ೧೧ ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡುವ ಆಶಯವಿದೆ. ರಾಜ್ಯದಲ್ಲಿ ಇನ್ನೂ ೮-೧೦ ಲಕ್ಷ ಶಾಲಾಪ್ರಾಯದ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಿದ್ದಾರೆ. ಇವರನ್ನು ಅಕ್ಷರಸ್ಥರನ್ನಾಗಿ ಮಾಡುವಲ್ಲಿ ಸರಕಾರದೊಡನೆ ಸಾರ್ವಜನಿಕರೂ ಸಹಕರಿಸಬೇಕು." ಭಾರತದ ಮಾಧ್ಯಮಿಕ ಶಿಕ್ಷಣದಲ್ಲಿ ಅನುಭವಕ್ಕಿಂತ ಪುಸ್ತಕ ಪಠಣ ಹೆಚ್ಚೆಂಬ ಅಪವಾದವಿದೆ. ಈಗ ವಿವಿಧೋದ್ದೇಶ ಶಾಲೆಗಳ ಸ್ಥಾಪನೆಯ ಮಹತ್ವವನ್ನು ತಿಳಿದು ಈ ಬಗ್ಗೆ ಸರಕಾರ ಪ್ರಯತ್ನಿಸುತ್ತಿದೆ. ರಾಜ್ಯದ ೬೨೪ಳ ಹೈಸ್ಕೂಲುಗಳಲ್ಲಿ ಸುಮಾರು ಸೇ. ೫೦ರಷ್ಟನ್ನು ಹಾಯರ್ ಸೆಕೆಂಡರಿ ಶಾಲೆಗಳಾಗಿ ಪರಿವರ್ತಿಸುವ ಗುರಿಯಿದೆ. ಪಂಚಾಯತಗಳಿಗೆ ವಿಶೇಷ ಅಧಿಕಾರವೀಯುವ ಸರಕಾರದ ಘೋಷಣೆಯಿಂದಾಗಿ, ಪ್ರಾಥಮಿಕ ಶಾಲೆಗಳನ್ನು ಗ್ರಾಮ ಪಂಚಾಯತುಗಳಿಗೂ ಪ್ರೌಢ ಶಾಲೆಗಳನ್ನು ಜಿಲ್ಲಾ ಮಂಡಳಕ್ಕೂ ವಹಿಸಿಕೊಡುವ ಯೋಜನೆಯಿದೆ. ಖಾಸಗಿ ಶಾಲೆಗಳನ್ನು ಈಗಿರುವಂತೆಯೇ ಮುಂದುವರಿಸಲಾಗುವುದು. ಅಧ್ಯಾಪಕರ ಸಂಘಗಳು ತಮ್ಮ ಹಿತದೃಷ್ಟಿಯಿಂದ ದುಡಿದು ತಮ್ಮ ಅಭಿವೃದ್ಧಿಗಾಗಿ ಹೆಣಗುವಂತೆ ಶಿಕ್ಷಣದ ಉನ್ನತಿಗಾಗಿಯೂ ಪ್ರಯತ್ನಿಸಬೇಕು." ಎಂದು ಹೇಳಿದರು.

ಪ್ರಾರಂಭದಲ್ಲಿ ಸ್ವಾಗತ ಭಾಷಣ ಮಾಡುತ್ತ ಶ್ರೀ ಪಿ. ಲಕ್ಷ್ಮಣ ಪ್ರಭು ಅವರು, "ಶಿಕ್ಷಕ ಶಿಕ್ಷಕಿಯರು ನಿತ್ಯ ಜೀವನದ ಬಗ್ಗೆ ಚಿಂತಿಸದಿರುವಂತಾದರೆ, ಭಾವಿ ಜನಾಂಗದ ಭವಿಷ್ಯ ಉಜ್ವಲವಾದೀತು. ಎಸ್. ಎಸ್. ಎಲ್. ಸಿ. ಯ ವರೆಗೆ ಉಚಿತ ಶಿಕ್ಷಣ ಎಲ್ಲರಿಗೂ ಕೊಡಬೇಕು. ವಿದ್ಯಾಕ್ರಮಗಳನ್ನು ಬಹುಬೇಗನೆ ಬದಲಿಸಬಾರದು — ಎಂದು ತಿಳಿಸಿದರು.

ಅನಂತರ ಪ್ರಾಥಮಿಕ ಶಿಕ್ಷಣದ ಮೇಲೆ ವಿಚಾರಗೋಷ್ಠಿಯು ನಡೆಯಿತು. ಶ್ರೀ ಬಿ. ಸುಬ್ಬಣ್ಣ ಹೆಗ್ಗಡೆಯವರು ಪ್ರಾಥಮಿಕ ಶಿಕ್ಷಣದ ಸಮಸ್ಯಾ ಮಾಲೆಯೊಂದನ್ನು ಓದಿ ಹೇಳಿದರು. ಒಂದು ಶಾಲೆಯಲ್ಲಿ ಮೂರು ವಿಧವಾದ ಪಿರೇಡು ಪದ್ಧತಿಯ ಗೊಂದಲ, ಪಾಠಪಟ್ಟಿಯಲ್ಲಿ ಮಕ್ಕಳ ವಯೋಮಾನ, ಗ್ರಹಣಶಕ್ತಿ, ಧಾರಣಾಶಕ್ತಿಗಳತ್ತ ಅನಾಸಕ್ತಿ, ರಜಾ ದಿನಗಳ ಬಗ್ಗೆ ಕಟ್ಟುನಿಟ್ಟಿನ ನಿಯಮಗಳ ಹಾನಿಗಳನ್ನು ಅವರು ಮುಖ್ಯವಾಗಿ ಪ್ರಸ್ತಾಪಿಸಿದ್ದರು. ಇವಕ್ಕೆ ಉತ್ತರ ರೂಪವಾಗಿ ಶ್ರೀ ಹಿರೇಮಠರು ಭಾಷಣಮಾಡಿ, ಆಡಳಿತಾತ್ಮಕ ಸಮಸ್ಯೆಗಳನ್ನು ತಾನು ಉತ್ತರಿಸಲಾರೆ. ವಿದ್ಯಾಭ್ಯಾಸದಲ್ಲಿ ಪಾಠಪಟ್ಟಿಯು ಅಧ್ಯಾಪಕನಿಗೆ ಮಾರ್ಗದರ್ಶಕ ಮಾತ್ರ. ಅಧ್ಯಾಪಕ ಪ್ರಾಥಮಿಕ ಶಿಕ್ಷಣವೀಯುವಲ್ಲಿ ಸರ್ವಾಧಿಕಾರಿ ಎಂದುಮಾಡುಂತಾಗಿ ತಿಳಿ

ಅಲ್ಲಲ್ಲಿಯ ಸುದ್ದಿಸಾರ

ಎ. ಬಿ. ಶೆಟ್ಟಿ ಮೆಮೋರಿಯಲ್ ಹಾಸ್ಟೆಲ್ ಮೈಸೂರು—ಈ ವಿದ್ಯಾರ್ಥಿ ನಿಲಯದಲ್ಲಿ ತಾ. 19ರಂದು ಶ್ರೀ ಯು. ಎಲ್. ಶೆಟ್ಟಿಗಾರರ ಅಧ್ಯಕ್ಷತೆಯಲ್ಲಿ ದೀಪಾವಳಿ ಹಬ್ಬವನ್ನು ಆಚರಿಸಲಾಯಿತು. ಕಾರ್ಯದರ್ಶಿ ಶ್ರೀ ವೈ. ಸಂಜೀವ ರೈ ಅವರು ಸ್ವಾಗತಿಸಿದ ಬಳಿಕ ಸುಪ್ರಸಿದ್ಧ ಸಾಹಿತಿ ಶ್ರೀ ತ. ರಾ. ಸು.ರವರು ದೀಪಾವಳಿಯ ಮಹತ್ವದ ಕುರಿತು ಭಾಷಣ ಮಾಡಿದರು. ಶ್ರೀ ಎಚ್. ತಿಮ್ಮಪ್ಪ ಭಂಡಾರಿಯವರು ಧನ್ಯವಾದಗಳನ್ನಿತ್ತರು.

ಸಾರ್ವಜನಿಕ ಸಭೆ—ತಾ. 17ರಂದು ಕಾರ್ಕಳ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಶಾರದಾ ಕಲಾ ಮಂಡಲದ ನೇತೃತ್ವದಲ್ಲಿ ನೆರವೇರಿತು. ಇದೇ ಸಂದರ್ಭದಲ್ಲಿ ಉಡುಪಿ ತಾಲೂಕು ಬೋರ್ಡು ಮೆಂಬರರಾಗಿ ಚುನಾಯಿತರಾದ ಶ್ರೀ ಪಿ. ಶಿವಾಜಿ ಶೆಟ್ಟಿ ಮತ್ತು ಶ್ರೀ ಕೆ. ಮಂಜುನಾಥ ನಾಯಕ್ ಇವರನ್ನು ಸ್ವಾಗತಿಸಿ ಸತ್ಕರಿಸಲ್ಪಟ್ಟಿತು. ಆರಂಭದಲ್ಲಿ ಶ್ರೀಗಳಾದ ಕೆ. ಗುರುರಾಜ ಜ್ಯೋತಿಷ್ಯ, ಎ. ಮಂಜುನಾಥ ಶ್ಯಾನುಭಾಗ ಇವರು ಸ್ವಾಗತಿಸಿದರು. ಶ್ರೀ ರಾಜೀವ ಕೋಟ್ಯಾನರು ಸಭಿಕರ ಪರವಾಗಿ ಮಾತನಾಡಿದರು. ಶ್ರೀ ಕೆ. ಆನಂದ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ನಾಡಹಬ್ಬ— ತಾ. 21—10—60 ರಂದು ಅಂಬಲಪಾಡಿ ಕಿರಿಯ ಬುನಾದಿ ಶಾಲೆಯಲ್ಲಿ ನಾಡ ಹಬ್ಬ, ಹಾಗೂ ಶ್ರೀ ಸಿ. ಅಣ್ಣಾಜಿ ಬಲ್ಲಾಳರಿಂದ ದಾನವಾಗಿ ಕೊಡಲ್ಪಟ್ಟ, ದಿವಂಗತ ನಾರಾಯಣ ಬಲ್ಲಾಳರ ತೈಲಚಿತ್ರ ಅನಾವರಣೋತ್ಸವವು ಶ್ರೀ ರೋಕಿ ಫೆರ್ನಾಂಡಿಸ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಸ್ವಾಗತ ಭಾಷಣವನ್ನಿತ್ತ ತರುವಾಯ ಶ್ರೀ ಸಿ. ರಾಘವೇಂದ್ರ ಬಲ್ಲಾಳರು ತೈಲ ಚಿತ್ರದ ಅನಾವರಣವನ್ನು ನೆರವೇರಿಸಿದ್ದಲ್ಲದೆ, ಅವರ ವಿಷಯವಾಗಿ ಮಾತನಾಡಿದರು. ಶ್ರೀ ಸಿ. ರಾಮದಾಸ ಬಲ್ಲಾಳರು ಮತ್ತು ಶ್ರೀ ಎ. ಸುಬ್ರಾಯ ಆಚಾರ್ಯರು ನಾರಾಯಣ ಬಲ್ಲಾಳರ ವಿಷಯವಾಗಿ ಭಾಷಣವಿತ್ತರು. ಗುರುಗುಣ ಗೌರವ ಪ್ರಶಸ್ತಿ ಪತ್ರ ವಾಚನವಾದ ನಂತರ, ಅಧ್ಯಕ್ಷರು, ಆಂಗ್ಲ ಭಾಷೆಯಲ್ಲಿ ಭಾಷಣವಿತ್ತರು. ಶ್ರೀ ಸಿ. ಶ್ರೀಶ ಬಲ್ಲಾಳರು ಇದನ್ನು ಕನ್ನಡಿಸಿದರು. ಬಳಿಕ ಶಾಲಾ ಮಕ್ಕಳಿಂದ ಮನರಂಜನೆಯ ಕಾರ್ಯಕ್ರಮಗಳಾದುವು. ಶ್ರೀ ಎ. ರಾಘವೇಂದ್ರ ಉಪಾಧ್ಯಾಯರು ಧನ್ಯವಾದಗಳನ್ನಿತ್ತರು.

ಇದೇ ದಿನ ಬೆಳಿಗ್ಗೆ ಧ್ವಜಾರೋಹಣ, ಪ್ರಭಾತಪೇರಿ ನಡೆದು ಶ್ರೀ ಸಿ. ಅಣ್ಣಾಜಿ ಬಲ್ಲಾಳರ ಉದಾರಾಶ್ರಯದಿಂದ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

ಸಿದರು. ಶ್ರೀ ಮುಕುಂದರಾಯರು ಹೊಸತನ್ನು ಸರಿಯಾಗಿ ಅಧ್ಯಾಪಕರು ಆಚರಣೆಗೆ ತರಬೇಕೆಂದು ಹೇಳಿದರು.

ಮರುದಿನ ಮಾಧ್ಯಮಿಕ ಶಿಕ್ಷಣ ಹಾಗೂ ಶಿಕ್ಷಕರ ಸಮಸ್ಯೆಗಳ ಕುರಿತು ಚರ್ಚೆ ನಡೆಯಿತು. ಈ ಸಂಬಂಧದಲ್ಲಿ ಹಲವಾರು ಗೊತ್ತುವಳಿಗಳು ಮುಂದೆಬಂದುವು ಇವುಗಳಲ್ಲಿ ಹೆಚ್ಚಿನವು ಜಿಲ್ಲಾ ಕೌನ್ಸಿಲಿನ ನಿರ್ಧಾರಕ್ಕೆ ಒಪ್ಪಿಸಲ್ಪಟ್ಟುವು.

ಬಂಟ್ವಾಳದ ಎಸ್. ವಿ. ಟಿ. ಎಸ್. ಹಾಯರ್ ಸೆಕೆಂಡರಿ ಶಾಲೆಯಲ್ಲಿ ಜರಗಿದ ಈ ಸಮ್ಮೇಳನದಲ್ಲಿ ಜಿಲ್ಲೆಯ ವಿವಿಧ ಭಾಗಗಳ ಸುಮಾರು ೧,೦೦೦ ಅಧ್ಯಾಪಕ ಪ್ರತಿನಿಧಿಗಳು ಭಾಗವಹಿಸಿದ್ದರೆಂದೂ ಇವರೆಲ್ಲರಿಗೂ ಅಶನ—ವಸತಿಗಳ ಸೌಕರ್ಯ ಯಥಾಯೋಗ್ಯವಾಗಿ ಮಾಡಲಾಗಿತ್ತೆಂದೂ ತಿಳಿಯುತ್ತದೆ.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ—ಈ ಮಂಡಳಿಯ 57 ನೇ ವಾರ್ಷಿಕೋತ್ಸವವೂ, ಮೊಗವೀರ ಧರ್ಮಾರ್ಥ ರಾತ್ರಿ ಪ್ರೌಢ ಶಾಲೆಯ ಪಾರಿತೋಷಕ ವಿತರಣಾ ಸಮಾರಂಭವೂ ತಾರೀಕು 16—10—60ರಂದು ಸರ್ ಕವ್ವಾಸ್ಜಿ ಜಹಾಂಗೀರ ಹಾಲಿನಲ್ಲಿ ಪ್ರಖ್ಯಾತ ವ್ಯಾಪಾರೋದ್ಯಮಿಯಾದ ಶ್ರೀ ಹಿಮ್ಮತ್ ಸಿಂಹಜೀ, ಎಂ. ಎ. ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಮಂಡಳಿಯ ಅಧ್ಯಕ್ಷರಾದ ಶ್ರೀ ಡಿ. ಪಿ. ಕೋಟ್ಯಾನ್‌ರವರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟು ಮಂಡಳಿಯ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ಕೆ. ಪುತ್ರನ್‌ರು ರಾಷ್ಟ್ರಾಧ್ಯಕ್ಷರೇ ಮೊದಲಾದವರಿಂದ ಬಂದ ಸಂದೇಶಗಳನ್ನು ಓದಿದರು. ಅಧ್ಯಕ್ಷರ ಸಹಧರ್ಮಿಣಿಯವರು ಪಾರಿತೋಷಕ ವಿತರಣೆ ಮಾಡಿದರು.

ಸಭಿಕರ ಭಾಷಣವಾದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಂಡಳಿಯ ಕಾರ್ಯಕರ್ತರು 57 ವರ್ಷಗಳಿಂದ ನೀಡಿದ ಸೇವೆಯು ಅಮೋಘವಾಗಿದೆಯೆಂದೂ, ಮಂಡಳಿಯ ಕಾರ್ಯಗಳು ಸರಕಾರದ ಯೋಜನೆಗಳಿಗೆ ಸಹಕಾರಿಯಾಗಿವೆಯೆಂದೂ, ಇದರ ಸಂಸ್ಥಾಪಕರ ದೂರ ದೃಷ್ಟಿಯನ್ನು ಕೊಂಡಾಡಿದಲ್ಲದೆ, ಸರಕಾರವೂ ನಗರ ಸಭೆಯೂ ಇದಕ್ಕೆ ಹೆಚ್ಚೆಚ್ಚು ಧನ ಸಹಾಯವೀಯುವ ಆವಶ್ಯಕತೆ ಇದೆಯೆಂದೂ ಹೇಳಿದರು.

ಶ್ರೀ ಬಿ. ಎಸ್. ಸಾಲಿಯಾನರ ಧನ್ಯವಾದಾರ್ಪಣೆಯ ತರುವಾಯ, ಭರತ ನಾಟ್ಯ, ಸಂಗೀತ, "ಭಗ್ನ ಮಂದಿರ" ವೆಂಬ ನಾಟಕ ಇತ್ಯಾದಿ ಕಾರ್ಯಕ್ರಮಗಳಾದುವು.

ಡಾ| ಎಸ್. ಆರ್. ಪೈ ರಂಗಮಂಟಪದ ಪ್ರಾರಂಭೋತ್ಸವ— ಉಡುಪಿಯ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನ ಆವರಣದಲ್ಲಿ ಸಾರ್ವಜನಿಕ ಸಹಾಯದಿಂದ ನಿರ್ಮಿಸಲಾದ, ಕ್ಲಬ್ಬಿನ ಅಧ್ಯಕ್ಷರೂ ಸರ್ವ ಜನಾದರಣೀಯ ಗಣ್ಯ ವ್ಯಕ್ತಿಗಳೂ ಆಗಿದ್ದ ದಿ. ಡಾ| ಎಸ್. ಸುಂದರರಾಮ ಪೈ ಸ್ಮಾರಕ ರಂಗಮಂಟಪದ ಪ್ರಾರಂಭೋತ್ಸವವು ತಾ. 20ರಂದು ಪೂರ್ಣಪ್ರಜ್ಞ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ವಿ. ಎಮ್. ಇನಾಂದಾರ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು ಪ್ರಾರ್ಥನೆ, ವೇದಘೋಷ, ಕುಮಾರಿ ಮಾಲತಿ ಕಾರ್ನಾಡ್ ಇವರಿಂದ ಭಾವಗೀತೆ, ಕುಮಾರಿ ಸಂಧ್ಯಾ ಶೆಟ್ಟಿಯವರಿಂದ ಸಂಸ್ಕೃತ ಶ್ಲೋಕ, ಕುಮಾರಿಯರಾದ ಜೆನ್ನಿಬಾಯಿ ಕಾಮತ್ ಮತ್ತು ಲಲಿತಾ ಬಾಯಿ ಕಾಮತ್ ಇವರಿಂದ ಹಾಡುಗಳು, ಮಹಮ್ಮದೀಯ ಬಂಧುಗಳಿಂದ ಗಜಲ್ ನೆರವೇರಿದ ಬಳಿಕ ಕ್ಲಬ್ಬಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣ ಮಾಡುತ್ತ ದಿ. ಪೈಗಳು ಉಡುಪಿಗೆ ಸಲ್ಲಿಸಿದ ಸೇವೆಯ ಕುರಿತು ಮಾತನಾಡಿದರು. ಕಾರ್ಯದರ್ಶಿ ಶ್ರೀ ಎನ್. ವಿ. ಕಾಮತರು ವರದಿಯನ್ನೋದಿದರು. ಅಧ್ಯಕ್ಷ ಶ್ರೀ ಇನಾಂದಾರರು ಕಲೆ ಮತ್ತು ಸಾಹಿತ್ಯದ ಕುರಿತು ಮಾತನಾಡಿ ಕ್ಲಬ್ಬಿನ ಪ್ರಾರಂಭೋತ್ಸವವನ್ನು ಜರಗಿಸಿದರು. ಶ್ರೀ ಬಿಜ್ಜಲ್‌ಕಟ್ಟೆ ನಾರಾಯಣ ಶೆಟ್ಟಿ ಮತ್ತು ಮಂಗಳೂರಿನ ಶ್ರೀ ಬಾಲಗೋಪಾಲ ಇವರ ಹಾಸ್ಯ ಪ್ರದರ್ಶನವಾದ ಮೇಲೆ ಶ್ರೀ ಜೆ ವಿನ್ಸೆಂಟ್ ಇವರಿಂದ ಶಹನಾಯಿ ವಾದನ ನಡೆದು ವಿರಾಮದ ಬಳಿಕ ಹಂಗಾರಕಟ್ಟೆ ಕರ್ನಾಟಕ ಸಂಘದವರಿಂದ 'ಶಲ್ಯ ಸರ್ಪ' ಎಂಬ ಯಕ್ಷಗಾನ ಬಯಲಾಟವು ಜಯಶೀಲವಾಗಿ ಜರಗಿತು.

ಮರುದಿನ ಪ್ರೊ| ಕು ಶಿ ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿದಾಗ ಕ್ಲಬ್ಬಿನ ಉಪಾಧ್ಯಕ್ಷ ಡಾ| ಕೆ. ಎಲ್. ಪಿತ್ತಾಳರು ಸ್ವಾಗತಿಸಿದರು. ಶ್ರೀ ಬನ್ನಂಜೆ ಗೋವಿಂದಾಚಾರ್ಯರೂ, ಶ್ರೀ ಎ. ಜೆ. ಅಲ್ಸೆಯರೂ ಉಪನ್ಯಾಸಗಳನ್ನಿತ್ತರು. ಡಾ. ಪಿ. ಆರ್. ನಾಯಕರು ದಿ| ಕೊಟ್ಟಾರ್ ಪಾಂಡುರಂಗ ಪೈಗಳ ಭಾವಚಿತ್ರದ ಅನಾವರಣ ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಹಾಸ್ಯ ಪ್ರದರ್ಶನ, ರಾತ್ರಿ ಉಡುಪಿಯ ಕಲಾವೃಂದದ ಗೆಳೆಯರಿಂದ 'ಅಭಾಗಿನಿ' ನಾಟಕಾಭಿನಯಗಳಾದುವು.

ಲಯನ್ಸ್ ಕ್ಲಬ್ಬಿನ ಸಭೆ—ಉಡುಪಿ ಲಯನ್ಸ್ ಕ್ಲಬ್ಬಿನ ಸಭೆಯು ತಾ. 14ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಮೊದಲಿಗೆ ಗಣ್ಯವ್ಯಕ್ತಿಗಳಾದ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ನಿಧನಕ್ಕಾಗಿ ದುಃಖ ಸೂಚಿಸಲಾಯಿತು. ಪ್ರೊ. ಪಿ. ಗುರುರಾಜ ಭಟ್ಟರು ಭಾರತೀಯ ಸಂಸ್ಕೃತಿಯ ಕುರಿತು ಉಪನ್ಯಾಸವಿತ್ತ ಮೇಲೆ ಅಧ್ಯಕ್ಷರ ಭಾಷಣವಾಗಿ ಶ್ರೀ ಬಿ. ಜಗನ್ನಾಥ ಹೆಗ್ಡೆಯವರಿಂದ ಧನ್ಯವಾದಾರ್ಪಣೆಯಾಯಿತು.

ಮದ್ಯಪಾನ ನಿಷೇಧ ದಿನಾಚರಣೆಯು—ಉಡುಪಿ ತಾಲೂಕು ಕಛೇರಿಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ತಾ. 14ರಲ್ಲಿ ಜರಗಿತು. ತಹಸಿಲ್ದಾರ್ ಕೆ. ಕೊರಗಪ್ಪನವರು ಸ್ವಾಗತಿಸಿದ ಮೇಲೆ ಶ್ರೀಗಳಾದ ಎ. ಜೆ. ಅಲ್ಸೆ ರಫಿಯುದ್ದೀನ್ ಸಾಹೇಬರು ಮಾತಾಡಿದರು. ಅಧ್ಯಕ್ಷ ಶ್ರೀ ಪೈಗಳು ಮಾತಾಡುತ್ತಾ ಎಲ್ಲ ಧರ್ಮಗಳಲ್ಲಿಯೂ ಪಾನ ನಿಷೇಧಸಾರಲ್ಪಟ್ಟಿರುವುದೆಂದೂ ಪಾನ ನಿರೋಧ ಕಾಯಿದೆಯ ಯಶಸ್ಸು ಜನತೆಯ ಬೆಂಬಲವನ್ನು ಹೊಂದಿಕೊಂಡಿದೆಯೆಂದೂ ಹೇಳಿದರು. ಕೊನೆಗೆ ಮನರಂಜನೆಯ ಕಾರ್ಯಕ್ರಮಗಳಾದುವು.

ಬಂಟ್ವಾಳ—ಇದೇ ತಾ. 16ರಂದು ಸ್ಥಳೀಯ ಯುವಕ ಕಾಂಗ್ರೆಸಿನ ಉದ್ಘಾಟನೆಯನ್ನು ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ನೆರವೇರಿಸಿದರು. ಕೆ. ಸೂರ್ಯನಾರಾಯಣ ಅಡಿಗರು ಸಭಾಅಧ್ಯಕ್ಷತೆ ವಹಿಸಿದ್ದರು.

ಸತ್ಕಾರ ಸಮಾರಂಭ— ಉಡುಪಿ ತಾಲೂಕು ಬೋರ್ಡಿಗೆ ಚುನಾಯಿತರಾದ ಶ್ರೀ. ಬಿ. ಕಾಳಪ್ಪ ಶೆಟ್ಟಿ ಮತ್ತು ಶ್ರೀ ಕೆ. ಮುದ್ದು ಸುವರ್ಣ ಇವರನ್ನು ಸತ್ಕರಿಸಲು ಕುಕ್ಕಿಕಟ್ಟೆ ಶಾಲೆಯಲ್ಲಿ ಸ್ಥಳೀಯ ಮಹನೀಯರು ಸತ್ಕಾರ ಕೂಟವೊಂದನ್ನು ಶ್ರೀ ಟಿ ಎ. ಪೈಗಳ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಏರ್ಪಡಿಸಿದ್ದರು.

ವಿಮಾ ಏಜಂಟರ ಸಭೆ—ಫೀಲ್ಡ್ ಆಫೀಸರ್ ಶ್ರೀ ಟಿ. ಸಂಜೀವ ಪೈಗಳ ಯುನಿಟಿಗೆ ಸೇರಿದ ವಿಮಾಏಜಂಟರ ಸಭೆಯು. ಬೊಂಬೇ ಲೈಫ್ ಕಟ್ಟಡದಲ್ಲಿ ತಾ. 12ರಂದೂ ಶ್ರೀ ಬಿ. ಸಚ್ಚಿದಾನಂದ ಹೆಗ್ಡೆಯವರ ಯುನಿಟಿಗೆ ಸೇರಿದ ವಿಮಾ ಏಜಂಟರ ಸಭೆಯು ತಾ. 17 ರಂದೂ ಅಸಿಸ್ಟಂಟ್ ಬ್ರಾಂಚ್ ಮೆನೇಜರ್ ಶ್ರೀ ಟಿ. ಸಿ. ಎನ್. ಸಂದಿಯೂರರ ಅಧ್ಯಕ್ಷತೆಯಲ್ಲಿ ಜರಗಿ ವಿಮೋದ್ಯೋಗವನ್ನು ಹೆಚ್ಚಿಸುವ ಕುರಿತು ವಿಚಾರವಿನಿಮಯ ನಡೆಸಲಾಯಿತು.

ದೀಪಾವಳಿ ಆಚರಣೆ— ಕಡಿಯಾಳಿ ಕಿರಿಯ ಬುನಾದಿ ಶಾಲೆಯ ವಿವೇಕಾನಂದ ಸಮಾಜದ ಆಶ್ರಯದಲ್ಲಿ ತಾ. 19ರಂದು ದೀಪಾವಳಿ ಆಚರಣೆಯ ಸಮಾರಂಭವು ಶ್ರೀ ವಿ. ವಾಸುದೇವ ಭಟ್ ಬಿ.ಎ ಬಿ.ಟಿ ಇವರ ಅಧ್ಯಕ್ಷತೆಯಲಿ ನೆರವೇರಿತು ಪ್ರಾರ್ಥನೆ, ವರದಿ ವಾಚನವಾದ ಬಳಿಕ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಕನ್ನಡ, ತಮಿಳು ಹಾಗೂ ಇಂಗ್ಲಿಷ್ ಹಾಡುಗಳು ಹಾಡಲ್ಪಟ್ಟುವು. ಮನರಂಜನೆಯ ಅಂಗವಾಗಿ ನೃತ್ಯ, ಹಾಗೂ ಪ್ರಹಸನಗಳು ಅಭಿನಯಿಸಲ್ಪಟ್ಟುವು. ನಂತರ ದೀಪಾವಳಿ ಆಚರಣೆಯ ಕುರಿತು ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಅಧ್ಯಾಪಕರಲ್ಲಿ ಶ್ರೀಯುತ ರಾಮಕೃಷ್ಣ ಭಟ್ ಮತ್ತು ಶ್ರೀಯುತ ಕೆ. ವಾಸು ಸೇರಿಗಾರರೂ ಅಧ್ಯಕ್ಷರೂ ಮಾತನಾಡಿದರು.

ವರಿಷ್ಠರು ವಿರೋಧವಿಲ್ಲ?

ರಾಜ್ಯ ಮಂತ್ರಿಮಂಡಳಗಳಲ್ಲಿ ಬದಲಾವಣೆಯನ್ನು ಬಯಸಿ ದೆಹಲಿ ಯಾತ್ರೆ ಕೈಗೊಂಡ ಶ್ರೀ ಕೆಂಗಲ್ ಹನುಮಂತಯ್ಯ ಹಾಗೂ ಶ್ರೀ ರಾಮಕೃಷ್ಣ ಹೆಗ್ಗಡೆ ಮರಳಿಬಂದಿದ್ದಾರೆ. ಮಂತ್ರಿಮಂಡಳಿಯ ಪರವಾಗಿ ನಿರ್ಣಯವನ್ನು ವರಿಷ್ಠರು ಕೊಡದಿರುವುದರಿಂದ ಭಿನ್ನಾಭಿಪ್ರಾಯದ ಗುಂಪಿಗೆ ಅವರು ವಿರೋಧವಿಲ್ಲ ಎಂದು ಹನುಮಂತಯ್ಯನವರ ಅಂಬೋಣ. ರಾಯಪುರದ ಎ. ಐ. ಸಿ. ಸಿ. ಅಧಿವೇಶನದ ವೇಳೆ ಮುಂದಿನ ವಿಚಾರ ವಿನಿಮಯ ನಡೆದಾಗಲಾದರೂ ಶ್ರೀ ಹನುಮಂತಯ್ಯನವರಿಗೆ ತಮ್ಮ ರಾಯಭಾರ ಯಶಸ್ವಿಯಾಗುವುದೆಂಬ ಆತ್ಮವಿಶ್ವಾಸವಿದೆ ತನ್ನನ್ನು ಮುಖ್ಯಮಂತ್ರಿ ಪದವಿಯಿಂದ ಉರುಳಿಸಿದ ಆ ಆತ್ಮವಿಶ್ವಾಸವನ್ನೇ ಅವರು ಇಂದಿಗೂ ನೆಚ್ಚಿಕೊಂಡಿದ್ದಾರೆ; ಇದೇ ಶ್ರೀ ಕೆಂಗಲ್ಲರ ವಿಶೇಷತೆ!

ಹಿಂದುಳಿದ ವರ್ಗಗಳ ಕಲ್ಯಾಣ

ಹಿಂದುಳಿದ ಜನಾಂಗ ಹಾಗೂ ವರ್ಗಗಳ ಅಭಿವೃದ್ಧಿಯ ಬಗ್ಗೆ ಹೆಚ್ಚು ಹಣವನ್ನು ಪಂಚವಾರ್ಷಿಕ ಯೋಜನೆಯಲ್ಲಿ ಮೀಸಲಿಡಬೇಕೆಂದು ಗೃಹ ಮಂತ್ರಿ ಪಂತರ ಅಭಿಪ್ರಾಯ ಅದರೊಂದಿಗೇನೇ ಹಿಂದಿನ ವರ್ಷಗಳಲ್ಲಿ ಈ ಬಗ್ಗೆ ಮೀಸಲಾಗಿಟ್ಟಿದ್ದ ಹಣವು ಸಾಕಷ್ಟು ವೆಚ್ಚವಾಗದೆ ಉಳಿದಿದೆಯೆಂಬುದನ್ನು ಗಮನಿಸಿ, ಇವು ಸಂಪೂರ್ಣ ವೆಚ್ಚವಾಗುವಂತೆ ನೋಡಿಕೊಳ್ಳಬೇಕು ಎಂದವರ ಸಲಹೆ. ಪಂಡಿತ ಪಂತರು ಮೀಸಲಾದ ಹಣವನ್ನು ವೆಚ್ಚಮಾಡಬೇಕು; ಉಳಿಸಬಾರದು ಎಂದರೆ, ಯೋಗ್ಯ ರೀತಿಯಲ್ಲೇ ವಿನಿಯೋಗಿಸಬೇಕು ಎಂದು ಅರ್ಥ. ಆದರೆ, ರಾಜ್ಯ ಹಿಂದುಳಿದ ವರ್ಗಗಳ ಹಿತಸಾಧನಾ ಮಂತ್ರಿಗಳಿಗೆ ಈ ಅರ್ಥವನ್ನೂ ಹೇಳಿಕೊಡಬೇಕಾಗಬಹುದೋ ಏನೋ!

ಹಾರ್ಮೋನಿಯಮ್
ಬೋಧನ ಕ್ರಮ
ಎಂಬ ಶ್ರೀ. ಎ. ರಾಮಪ್ಪನವರಿಂದ ರಚಿತವಾದ
ಕನ್ನಡ ಸಂಗೀತ ಪುಸ್ತಕವು
ನಮ್ಮಲ್ಲಿ ದೊರೆಯುತ್ತದೆ.
ಬೆಲೆ ರೂ. 2. V. P. ಮಾಡುವುದಿಲ್ಲ.
ರೂ. 2=50 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.
ನವಭಾರತ ಬುಕ್ ಡಿಪೋ, ಉಡುಪಿ.

NAVAYUGA WEEKLY
(Estd in 1921)
ADVERTISEMENT RATES
Display Advertisements:— Rs. 2-8/ per column inch for contracts of 100" or more and Rs. 3/-per column inch for casual advertisements.
Classified Advertisements:— As. 8/- per line (minimum 8 lines)
For rates for advertising in colours and special positions please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ವಿನೋಬಾ ಹೇಳುತ್ತಾರೆ

ನವಮಾನವನ ಸೃಷ್ಟಿ ಆಗಬೇಕು

ಬಿದಿರಲ್ಲಿ ಕಬ್ಬಿನ ಸಿಹಿ ಕೂಡಿಕೊಂಡರೆ, ಅದು ಉಪಾದೇಯವೆನಿಸುವುದು; ಪ್ರಾಚೀನ ಹೃದಯದಲ್ಲಿ ನವೀನ ಬುದ್ಧಿಶಕ್ತಿಯು ಉದಯವಾಯಿತೆಂದರೆ, ನವಮಾನವನ ಸೃಷ್ಟಿಯಾಗಿ ಸಮಾಜ ಸುಸಂಮೃದ್ಧವಾಗುವುದು.

ನಮ್ಮಲ್ಲಿ ಸಾಹಿತ್ಯಿಕರು, ಶಾಸ್ತ್ರಕಾರರು, ಸಂತರು ಮತ್ತು ತಂತಮ್ಮ ಪರಂಪರೆಯ ಒಂದೊಂದು ಇತಿಹಾಸವನ್ನೇ ನಿರ್ಮಿಸಿಕೊಂಡಿದ್ದಾರೆ; ಈ ನಾಲ್ಕೂ ಪರಂಪರೆಗಳು ಭಾರತದ ಮೇಲೆ ಸಾಕಷ್ಟು ಪ್ರಭಾವ ಬೀರಿವೆ.

ಸಾಹಿತ್ಯಿಕರು ಬೀರಿದ ಪ್ರಭಾವವು ನಮ್ಮ ಮೇಲೆ ನಿರಂತರವಾಗಿ ಸಾಗಿ ಬರುತ್ತಿದೆ, ವಾಲ್ಮೀಕಿ, ವ್ಯಾಸ, ಕಾಲೀದಾಸ ಮೊದಲಾದ ಉದ್ದಾಮ ಕವಿಗಳನ್ನು ನಾವು ಮರೆಯುವುದಾದರೂ ಹೇಗೆ? ನಮ್ಮ ಭಾರತೀಯ ಸಾಹಿತ್ಯ ಬಹು ಗಂಭೀರವಾದುದು; ಜೀವನದ ಅಂತರಾಳವನ್ನು ಸ್ಪರ್ಶಿಸುವ ಶಕ್ತಿ ಅದಕ್ಕಿದೆ. ಹೃದಯ ಬಂಧನವನ್ನು ಶಿಥಿಲಗೊಳಿಸುವ ಸಾಮರ್ಥ್ಯ ಅದಕ್ಕಿದೆ. ಬಹು ಅನಾದಿಕಾಲದಿಂದ ವರ್ತಮಾನಕಾಲದ ವರೆಗೂ ಸಾಹಿತ್ಯವೆಂಬುದು ನಮ್ಮ ಜನಾಂಗದ ಮೇಲೆ ಅಚ್ಚಳಿಯದ ಪ್ರಭಾವ ಬೀರುತ್ತ ಬಂದಿದೆ.

ಶಾಸ್ತ್ರಕಾರರ ಇತಿಹಾಸವೂ ಇದರಿಂದ ಭಿನ್ನವಾಗಿಲ್ಲ. ಮನು, ಯಾಜ್ಞವಲ್ಕ್ಯ ಮತ್ತು ಪರಾಶರರ ಹೆಸರನ್ನು ಎಲ್ಲರೂ ತಿಳಿದಿರುವರು. ಅವರು ಹೇಳಿದ ನಿಯಮಗಳನ್ನು ಹೊಂದಿಕೊಂಡೇ ಭಾರತೀಯ ಸಮಾಜವು ಬೆಳೆದು ಬಂದಿದೆ; ಬೆಳೆಯು ಬರುತ್ತಿದೆ.

ಸಂತರು, ಋಷಿಗಳು ಮತ್ತು ಜ್ಞಾನಿಗಳ ಪರಂಪರೆಯು ಮೂರನೆಯ ಸ್ರೋತವಾಗಿದೆ. ಈ ಪ್ರವಾಹವಾದರೂ ಇಂದಿಗೂ ಹರಿಯುತ್ತಿದೆ. ಈ ಪರಂಪರೆಯು ಸಮಾಜಕ್ಕೆ ಸನ್ಮಾರ್ಗವನ್ನು ತೋರಿಸಿತು; ಸಮಾಜದಲ್ಲಿ ಕಲಿಗಳೆದ್ದು ತೋರಿದಾಗ ಜನರಿಗೆ ನೆರವಿತ್ತಿತು.

ಏರರು ತಮ್ಮ ಭವ್ಯವಾದ ಪರಂಪರೆಯೊಂದನ್ನು' ಹಿಂದಿನಿಂದಲೂ ರಕ್ಷಿಸಿಕೊಂಡು ಬಂದಿದ್ದಾರೆ.

ಆದರೆ, ಈ ಚತುರ್ವಿಧ ಪರಂಪರೆಯ ಮಹಾ ಪುರುಷರು ಸಂಸ್ಮರಣೆಯನ್ನು ಮಾಡಬೇಕೇಕೆ? ಇವರ ಸ್ಮರಣೆಯನ್ನು ನಾವು ಇವರ ಸ್ಥೂಲ ಚರಿತ್ರೆಗಾಗಿ ಅಲ್ಲ; ಗುಣಗಳಿಗಾಗಿ ಮಾಡಿಕೊಳ್ಳಬೇಕು.

ಉದಾಹರಣೆಗಾಗಿ, ಛತ್ರಪತಿ ಶಿವಾಜಿಯು ದುರ್ಗಗಳನ್ನು ಅಲ್ಲಲ್ಲಿ ಕಟ್ಟಿಸಿ, ಅವುಗಳ ಆಶ್ರಯದಲ್ಲಿ ರಾಜ್ಯ ರಕ್ಷಣೆ ಮಾಡಿದನು. ಆತನನ್ನು ಅನುಕರಿಸುತ್ತ ನಾವು ರಾಷ್ಟ್ರತುಂಬ ಉನ್ನತೋನ್ನತ ಕೋಟೆಗಳನ್ನು ಕಟ್ಟುತ್ತ ಹೋದರೆ, ಅದು ಶುದ್ಧ ಮೂರ್ಖತನವಾದೀತು; ನಮ್ಮ ಶತ್ರುಗಳು ಬಾಂಬುಗಳನ್ನು ಸ್ಫೋಟಗೊಳಿಸುವಾಗ ನಾವು ಈ ಕೋಟೆಗಳಿಂದ ಏನು ತಾನೇ ಮಾಡಬಲ್ಲೆವು? ಇದೇ ರೀತಿ ಸಾಧು ಸಂತರನ್ನೂ ನಾವು ಸ್ಥೂಲವಾಗಿ ಅನುಕರಣ ಮಾಡುವುದರಿಂದ ನಮ್ಮ ಶ್ರೇಯಸ್ಸನ್ನು ಸಾಧಿಸಿಕೊಳ್ಳಲಾರೆವು.

ನಾವು ಹೇಗಿರಬೇಕು ಎಂಬ ಪ್ರಶ್ನೆ ಆಗ ಸ್ವಾಭಾವಿಕವಾಗಿ ಏಳುತ್ತದೆ. ನಮ್ಮ ಹೃದಯ ಪ್ರಾಚೀನ ಕಾಲದೊಡನೆ ಸೇರಿಕೊಂಡಿರಬೇಕ.; ಆದರೆ, ಮೆದುಳು ಮಾತ್ರ ವರ್ತಮಾನದೊಡನೆ ಸಂಬಂಧವಿಟ್ಟುಕೊಳ್ಳಬೇಕು. ನಮ್ಮ ಹೃದಯ-ಮಸ್ತಿಷ್ಕವೆರಡೂ ಹಳೆಯ ಕಾಲದಲ್ಲೇ ವಿಹರಿಸುತ್ತಿದ್ದರೆ, ಆದು ಪುರಾಣಯುಗದ ಭಗ್ನಾವಶೇಷಗಳಿಗಿಂತ ಹೆಚ್ಚು ಮನೋರಮವಾಗಿರಲಾರದು. ಆದುದರಿಂದ, ನಾವು ನಮ್ಮ ಪೂರ್ವಜರನ್ನು ಇದ್ದಕ್ಕಿದ್ದಂತೆ ಸ್ಥೂಲವಾಗಿ ಅನುಕರಿಸಬಾರದು; ಆದರೆ, ಅವರಲ್ಲಿದ್ದ ಸೂಕ್ಷ್ಮ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವನ್ನು ಮಾತ್ರ ಅವಶ್ಯ ಮಾಡಬೇಕು.

ಇದಕ್ಕಾಗಿ ಇತಿಹಾಸದ ಇತಿ-ಮಿತಿಗಳನ್ನು ನಾವು ತಿಳಿದುಕೊಳ್ಳಬೇಕಾಗಿದೆ. ನಮ್ಮ ಮನಸ್ಸು ಇತಿಹಾಸಾಧ್ಯಯನದಲ್ಲೇ ತತ್ಪರವಾಗಿದ್ದರೆ, ಪ್ರಗತಿ ಮಾರ್ಗವು ಕುಂಠಿತವಾಗುವುದು; ಇತಿಹಾಸವು ಹೊರಲಾರದ ಭಾರದಂತೆ ಭಾಸವಾಗುವುದು. ಈ ಕಾರಣದಿಂದ ಗತಕಾಲದ ಸ್ಥೂಲರೂಪವನ್ನು ಮನನಮಾಡುವುದಕ್ಕಿಂತ ಅವುಗಳ ಸಾರಗ್ರಹಣ ಮಾಡುವುದು ಅತಿ ಉಚಿತವಾಗಿದೆ.

ಒಂದು ಮರದ ಶಕ್ತಿ ಮತ್ತು ಇನ್ನೊಂದರ ರಸಗಳನ್ನು ಒಟ್ಟು ಸೇರಿಸಿ ಹೊಸ ಮರವೊಂದನ್ನು ನಿರ್ಮಿಸುವ ಸಾಹಸ ಈಗ ನಡೆಯುತ್ತಿದೆ. ಬಿದಿರಿನ ಮೇಲೆ ಕಬ್ಬಿನ ಗುಣವನ್ನು ಆರೋಪಿಸಲಾಗುತ್ತಿದೆ. ಕಬ್ಬಿನ ಸಿಹಿ ಮತ್ತು ಬಿದಿರಿನ ವೈಶಾಲ್ಯಗಳ ಸಮ್ಮಿಳನದಿಂದ ತಯಾರಾದ ವೃಕ್ಷವೇ ಅತ್ಯುತ್ತಮವಾಗುವುದು.

ಇದೇ ರೀತಿ ನಲ್ಲಿ ಪ್ರಾಚೀನ ಕಾಲದ ಹೃದಯ ಮತ್ತು ಅರ್ವಾಚೀನ ಸಮಯದ ಬುದ್ಧಿಶಕ್ತಿಗಳು ಒಂದುಗೂಡಿದುವೆಂದರೆ, ಹಿಂದಿನ ದಿನಗಳ ಶಕ್ತಿ ಮತ್ತು ಇಂದಿನ ದಿನಗಳ ವಿಚಾರಗಳನ್ನು ಹೊರಗೆಡಹುವ ನವಮಾನವನು ತಯಾರಾಗುತ್ತಾನೆ. ನಾವು ಈ ಮಾದರಿಯವರಾಗಬೇಕು.

ಅಮೆರಿಕಾಧ್ಯಕ್ಷ ಐಸನ್ ಹೋವರರು ರಕ್ಷಣಾಧಿಕಾರಿಗಳೊಂದಿಗೆ ವಿಚಾರ ವಿನಿಮಯ ನಡೆಸುತ್ತಿರುವುದು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 368/60.

ಶೀಕೃಷ್ಣಾಪುರ ಮಠದ ಶ್ರೀಮದ್ವಿದ್ಯಾರತ್ನ ತೀರ್ಥ ಸ್ವಾಮೀರು —ವಾದಿಯು.

ಮತ್ತು

ಶ್ರೀ ಪುತ್ತಿಗೆ ಮಠದ ಶ್ರೀಮದ್ ಸುಜ್ಞಾನೇಂದ್ರ ತೀರ್ಥ ಸ್ವಾಮೀರು ಕೂಡಾ —ಪ್ರತಿವಾದಿಯು.

ಇವರೊಳಗೆ

ಸದ್ರಿ ವ್ಯಾಜ್ಯದ 3ನೇ ಪ್ರತಿವಾದಿಳು:— ಚಂದಮು ಸೆಟ್ಟಿ— ಪೋಂಟು ಸೆಟ್ಟಿರ ಮಗಳು—ವ-ಬೆರ್ಮಯ್ಯ ಸೆಟ್ರ ಹೆಂಡ್ತಿ, ಕಾರ್ಕಳ ತಾಲೂಕು ಕಡ್ತಲ ಗ್ರಾಮದ ಅಪ್ಪಾಜಿ ಬೆಟ್ಟನಲ್ಲಿರುವವಳು—ಇವರೀಗೆ ಈ ಮೂಲಕ ತಿಳಿಸುವುದೇನಂದ್ರೆ:—

ಉಡ್ಪಿ ಶ್ರೀಕೃಷ್ಣ ದೇವರ ಮಠದ ಒಳಗೆ ನೀವು ವಗೈರೇರು ಮೂಲಗೇಣಿಗೆ ಅನುಭವಿಸಿಕೊಂಡು ಬರುವ ಅಸ್ತಿಗಳ ಬಾಬ್ತು ವಾದಿರ ಪರ್ಯಾಯ ಕಾಲದ ಬಾಬ್ತು ವಾದಿರಿಗೆ ಬರತಕ್ಕ ಕಳದ ಹೇಸಿಳಂಬಿ ಮತ್ತು ವಿಳಂಬಿ ಸಂ|ರಗಳ ಮೂಲಗೇಣಿ, ಗೇಣಿ ಬಾಕಿಗೆ ವಾದಿರು ಮಾಡಿರುವ ಮೇಲ್ಕಂಡ ವ್ಯಾಜ್ಯವನ್ನು ತಾ. 5-11-1960ಕ್ಕೆ ಇಟ್ಟಿರುವುದ್ರಿಂದ ನಿಮಗೆ ಸದ್ರಿ ವ್ಯಾಜ್ಯದಲ್ಲಿ ಉದಹರಿಸುವುದಿದ್ದಲ್ಲಿ ಆ ದಿವ್ಸ ಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ಫೈಸಲು ಮಾಡಲ್ಪಡುವುದು.

P. V. Acharya,
Vakil for Plaintiff.

ಉಡುಪಿ, 19-10-60.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 39/1960.

1. ಕೃಷ್ಣ ತಂತ್ರಿ. 2. ಸುಬ್ರಹ್ಮಣ್ಯ ತಂತ್ರಿ. 3. ಅನಂತ ಪದ್ಮನಾಭ ತಂತ್ರಿ. 4. ಶಂಕರ ನಾರಾಯಣ ತಂತ್ರಿ. 5. ವನಜಾಕ್ಷಿ—ಮ್ಯಾನರರು ಇವರ ಕ್ಷೇಮಚಿಂತಕ ತಂದೆ ಶ್ರೀನಿವಾಸ ತಂತ್ರಿ —ಅರ್ಜಿದಾರ್ರು.

ಕಾರ್ಕಳ ತಾಲೂಕು ಪಾಂತ್ಯ ಗ್ರಾಮದಲ್ಲಿರುವವರು.

ಸರ್ವ ಜನರಿಗೂ ಈ ಮೂಲಕ ತಿಳಿಯಪಡಿಸುವುದು ಯೇನಂದ್ರೆ:—

ಕಾರ್ಕಳ ತಾಲೂಕು ಪಾಂತ್ಯ ಗ್ರಾಮದಲ್ಲಿದ್ದ ಹಾಲಿ ಮೃತಪಟ್ಟ ಬೆಳ್ಮಣ ಮಧ್ವರಾಯ ಭಟ್ರ ಮಗ ಕೃಷ್ಣ ಭಟ್ರ ಲೆಕ್ಕಕ್ಕೆ "ಡಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್. ಮೂಡುಬಿದ್ರಿ"ಯಲ್ಲಿ fixed ಡಿಪೋಜಿಟ್‌ನಲ್ಲಿರ್ವ ರೂ. 400 ಮತ್ತು ಅದ್ರ ಮೇಲಣ ಬಡ್ಡಿ ವಸೂಲು ಮಾಡುವರೆ ಅರ್ಜಿದಾರ್ರ ಬಗ್ಗೆ ಅರ್ಜಿದಾರರ ಕ್ಷೇಮ ಚಿಂತನೆಗೆ ವಾರೀಸು ಸರ್ಟಿಫಿಕೇಟ್ ಕೊಡಿಸಬೇಕಾಗಿ ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 8-11-1960ಕ್ಕೆ ಇಟ್ಟಿದೆ. ಆ ಕುರಿತು ಆಕ್ಷೇಪ ಉಳ್ಳವರು ಮೇಲ್ಕಂಡ ಕೋರ್ಟಿನಲ್ಲಿ ಗಂಟೆ 10ಕ್ಕೆ ಖುದ್ದಾಗಲೀ ವಕೀಲರ ಮೂಲಕವಾಗಲೀ ಹಾಜರ್ರಾಗಿ ಉದಾಹರಿಸ ತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

D. Venkatesh Bhat,
ಅರ್ಜಿದಾರ್ರ ಕ್ಷೇಮ ಚಿಂತಕನ ಕಡೆ ವಕೀಲ.

ಕಾರ್ಕಳ, 20-10-60.

ಕನ್ನಡ ಪುಸ್ತಕಗಳಿಗೆ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಚಿತ್ರ ಸತ್ಯ

ಅಪರಾಧವೃತ್ತಿ ಜನ್ಮಜಾತವಾಗಿದೆ!

ಮಾನವನು ಅಪರಾಧಗಳನ್ನೇಕೆ ಮಾಡುತ್ತಾನೆ? ಈ ಪ್ರಶ್ನೆಗೆ ಪರಿಸ್ಥಿತಿಗಳ ಒತ್ತಡದಿಂದ ಎಂಬ ಉತ್ತರ ಸಾಮಾನ್ಯವಾಗಿ ಬರುವುದು. ಆದರೆ, ವೈಜ್ಞಾನಿಕವಾಗಿ ಇದರ ಕಾರಣದ ಬಗ್ಗೆ ಪರಿಶೀಲಿಸಿದಾಗ ಇದು ಜನ್ಮಜಾತ ಗುಣವಾಗಿದೆಯೆಂದೂ ಅಪರಾಧ—ರೋಗಗಳೂ ಪೈತೃಕ ಸಂಪತ್ತಿಗಳಂತಿರುವುದೆಂದೂ ತಿಳಿದು ಬಂದಿದೆ!

ಮಾನವನಲ್ಲಿ ಅಪರಾಧ-ವೃತ್ತಿಯು ಜನ್ಮಜಾತವಾಗಿ ಬರುವುದೆ, ಅಥವಾ ಜೀವನದ ಕಟ್ಟನುಭವಗಳ ಕಾರಣದಿಂದ ಆತನಲ್ಲಿ ಈ ವೃತ್ತಿಯು ಜನಿಸುವುದೆ— ಎಂಬ ಪ್ರಶ್ನೆಯನ್ನು ಮಾನವ ಸ್ವಭಾವವನ್ನು ಅಧ್ಯಯನಿಸುವ ವೈಜ್ಞಾನಿಕರು ಉತ್ತರಿಸಿಕೊಳ್ಳಬೇಕಾಗುತ್ತದೆ. ಮ್ಯೂನಿಖ್ ವಿಶ್ವವಿದ್ಯಾಲಯದ ಅಪರಾಧ ವಿಜ್ಞಾನದ ಪ್ರಾಧ್ಯಾಪಕರಾದ ಡಾ| ಜೋಹಾನ್ಸ್ ಲೈಂಗ್‌ರವರ ಮುಂದೆಯೂ ಇದೇ ಪ್ರಶ್ನೆ ಬಂದು ನಿಂತಿತು. ಅವರು ಇದನ್ನು ತಥ್ಯ ಹಾಗೂ ಅಂಕೆಸಂಖ್ಯೆಗಳಿಂದ ಪುಷ್ಟೀಕೃತವೆನಿಸುವ ವೈಜ್ಞಾನಿಕ ವಿಧಾನಗಳಿಂದಲೇ ಉತ್ತರಿಸುವ ಯೋಜನೆಯೊಂದನ್ನು ಸಿದ್ಧಪಡಿಸಿದರು.

ಈ ಯೋಜನೆಯನ್ನು ಕಾರ್ಯಕೃತಗೊಳಿಸುವುದರಲ್ಲಿ ಬವೇರಿಯಾ ಪ್ರಾದೇಶಿಕ ಸರಕಾರವು ಡಾ| ಲೈಂಗರಿಗೆ ಸಕಲರೀತಿಯ ಸಹಾಯ ನೀಡಲು ಒಪ್ಪಿತು. ಇವರು ಬವೇರಿಯಾದಲ್ಲಿನ ಜೇಲುಗಳಿಗೆ ಹೋಗಿ ಅಲ್ಲಿನ ವಿವಿಧ ಕೈದಿಗಳೊಂದಿಗೆ ಭೆಟ್ಟಿಯಾಗಲು ಅನುಮತಿಯಿತ್ತಿತು. ಆದರೆ, ಸತ್ಯಸಂಗತಿ ಕೈದಿಗಳ ಮುಖದಿಂದ ಹೊರಪಡಬೇಕಾದರೆ, ಅವರಿಗೆ ಯಾವ ಪ್ರಶ್ನೆಗಳನ್ನು ಕೇಳಬೇಕು ಎಂಬ ಸಮಸ್ಯೆ ಆಗ ಮುಂದೆ ಎದ್ದು ಬಂತು. ಏಕೆಂದರೆ, ಕೈದಿಗಳೊಡನೆ, ನೀವು ಏಕೆ ಈ ದುರವಸ್ಥೆಗೆ ಗುರಿಯಾದಿರಿ ಎಂದು ಪ್ರಶ್ನಿಸುವುದು ನಿಷ್ಫಲ; ಅವರು ಎಂದೂ ಸತ್ಯ ವಿಚಾರವನ್ನು ಈ ಪ್ರಶ್ನೆಗೆ ಉತ್ತರವಾಗಿ ನೀಡುವುದು ಅಸಂಭವ.

ಆದುದರಿಂದ ಶ್ರೀ ಲೈಂಗರು ಒಂದು ಹೊಸ ಕ್ರಮವನ್ನು ಕಂಡುಹುಡುಕಿದರು. ಇದನ್ನು 'ಅವಳಿ ಪ್ರಣಾಲಿ' ಎನ್ನಬಹುದು. ಇದರ ಮುಖ್ಯ ಕ್ರಮವನ್ನು ತಿಳಿಯಬೇಕಾದರೆ, ಅವಳಿ ಜವಳಿ ಮಕ್ಕಳ ಕುರಿತಾಗಿ ನಾವು ತುಸು ತಿಳಿದುಕೊಳ್ಳುವುದು ಒಳ್ಳೆಯದು. ಅವಳಿ ಮಕ್ಕಳಲ್ಲಿ ಏಕ-ಅಂಡಕಗಳು ಮತ್ತು ದ್ವಿ-ಅಂಡಕಗಳು ಎಂದು ಎರಡು ಪ್ರಕಾರಗಳಿವೆ.

ಏಕ-ಅಂಡಕ ಅವಳಿ ಮಕ್ಕಳು ಒಂದೇ ಪುರುಷ ಪುದ್ಗಲದಿಂದ ಹಾಗೂ ಒಂದೇ ಸ್ತ್ರೀ ಪುದ್ಗಲದಿಂದ ಉತ್ಪನ್ನಗೊಳ್ಳುತ್ತವೆ. ಗರ್ಭಾದಾನದ ನಂತರ ಗರ್ಭಾಶಯದಲ್ಲಿ ಒಂದೇ ಅಂಡವು ಒಂದೇ ಮಗು ಜನಿಸುವುದೆಂಬಂತೆ ವಿಕಸಿತವಾಗುತ್ತ ಹೋಗುತ್ತದೆ. ಅನಂತರ ಕೆಲವು ಅಜ್ಞಾತ ಕಾರಣಗಳಿಂದ ಈ ಅಂಡವು ಎರಡು ಭಾಗಗಳಾಗಿ ಎರಡು ಮಕ್ಕಳು ಒಟ್ಟಿಗೆ ಆದರೆ ಸ್ವತಂತ್ರ ರೂಪದಲ್ಲಿ ಬೆಳೆದು ಬರುತ್ತವೆ. ಒಂದೇ ಅಂಡದಲ್ಲಿ ವಿಕಸಿತಗೊಂಡಿರುವುದರಿಂದ ಇವು ಏಕಪ್ರಕಾರವಾದ ಪೈತೃಕ ಗುಣಗಳನ್ನು ಉತ್ತರಾಧಿಕಾರಿಯಂತೆ ಪಡೆಯುತ್ತವೆ. ಸಾಮಾನ್ಯವಾಗಿ ಇವು ಎರಡೂ ಏಕ ಲಿಂಗದ ಮಕ್ಕಳಾಗಿರುತ್ತವೆ. ಇವುಗಳ ಸ್ವಭಾವವೂ ಏಕ ಸಮವಾಗಿರುತ್ತದೆ. ದೇಹ—ಆಕಾರವು ಅಶ್ವಿನೀ ದೇವತೆಗಳಂತೆ ಒಂದೇ ರೀತಿಯಿರುವುದರಿಂದ ನೋಡುವವರಿಗೆ ಭ್ರಮೆ ಹುಟ್ಟುತ್ತದೆ. ಇನ್ನು ಇವುಗಳ ನಡುವೆ ಕೆಲವೊಂದು ಅಂತರಗಳಿರಬಹುದಾದರೂ ಅವು ವಂಶಾನುಗತವಾಗಿರದೆ, ಪರಿಸ್ಥಿತಿ ಜನ್ಯವಾಗಿರುತ್ತವೆ.

ದ್ವಿ-ಅಂಡಕ ಅವಳಿ ಮಕ್ಕಳು ಎರಡು ಸ್ವತಂತ್ರ ಜೀವಗಳಾಗಿರುತ್ತವೆ. ಇವುಗಳ ಜೀವನವು ಪೃಥಕ್ ಅಂಡಗಳ ರೂಪದಲ್ಲಿಯೇ ಮೊದಲಾಗುತ್ತದೆ. ಯಾವುದೇ ಅವಸ್ಥೆಯಲ್ಲಿ ಇವು ಪರಸ್ಪರ ಸೇರಿಕೊಂಡಿರುವುದಿಲ್ಲ. ಇವುಗಳಲ್ಲಿ ಎರಡೂ ಏಕ ಲೈಂಗಿಕ ಅಥವಾ ಭಿನ್ನಲೈಂಗಿಕ ಶಿಶುಗಳಾಗಿರಬಹುದು. ಎರಡರ ತಾಯ್ತಂದೆಯರೂ ಒಬ್ಬರೇ ಆಗಿರುವುದರಿಂದ ಇವುಗಳಲ್ಲಿ ಕೆಲವೊಂದು (ಕೂದಲಿನ ಬಣ್ಣ ಇತ್ಯಾದಿ) ಸಮಾನ ಗುಣಗಳಿವೆ. ಆದರೆ, ಇವು ಪೂರ್ಣರೂಪದಲ್ಲಿ ಎಂದಿಗೂ ಸಮಾನವಾಗಲಾರವು.

ಈ ಎಲ್ಲ ಸರ್ವವಿದಿತ ತಥ್ಯಗಳನ್ನು ಡಾ. ಲೈಂಗರು ಗಮನಿಸಿದರು. ಇವುಗಳಿಂದ ಅವರು ಹೀಗೆ ಕಲ್ಪಿಸಿದರು: "ಅಪರಾಧವೃತ್ತಿ ವಂಶಾನುಗತಗುಣವಾಗಿದೆ; ಆದರೆ, 'ಏಕ ಅಂಡಕ ಅವಳಿ ಮಕ್ಕಳಲ್ಲಿ ಒಬ್ಬನು ಅಪರಾಧ ಪ್ರವೃತ್ತಿಯವನಾದರೆ, ಇನ್ನೊಬ್ಬನ ಪ್ರವೃತ್ತಿಯೂ ಅದೇ ಆಗಿರಬೇಕು." ಈ ಸಿದ್ಧಾಂತದ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಅವರು ತೊಡಗಿದರು. ಬವೇರಿಯಾದ ಜೇಲುಗಳಲ್ಲಿರುವ ೩೦ ಕೈದಿಗಳನ್ನು ಇವರು ಚುನಾಯಿಸಿದರು. ಇವರೆಲ್ಲರೂ ಅವಳಿಗಳಾಗಿಯೇ ಹುಟ್ಟಿದ್ದರು; ೧೩ ಏಕ-ಅಂಡಕರು ಮತ್ತುಳಿದವರು ದ್ವಿ-ಅಂಡಕರಾಗಿದ್ದರು.

ಡಾ. ಲೈಂಗರು ಈ ಮೂವತ್ತು ಕೈದಿಗಳ ಸೋದರ ಸೋದರಿಯರನ್ನು ಕಂಡುಹಿಡಿದರು; ಅವರ ಜೀವನವನ್ನು ವಿಮರ್ಶಿಸ ತೊಡಗಿದರು. ಈ ಪರಿಶೀಲನೆಯಿಂದ ಬಹು ಮಹತ್ವಪೂರ್ಣ ವಿಚಾರಗಳು ಪ್ರಕಟಗೊಂಡುವು. ಏಕ-ಅಂಡಕರಾದ ೧೩ ಕೈದಿಗಳ ೧೩ ಅವಳಿ ಸೋದರ ಸೋದರಿಯರಲ್ಲಿ ೧೦ ಜನರು ಆ ಮೊದಲೇ ಜೇಲು ಸೇರಿ ಮರಳಿದ್ದರು; ಆದರೆ, ದ್ವಿ-ಅಂಡಕ ೧೭ ಕೈದಿಗಳ ಅವಳಿ ಸೋದರ ಸೋದರಿಯರಲ್ಲಿ ಕೇವಲ ಇರ್ವರು ಮಾತ್ರ ಜೇಲಿನ ಗಾಳಿ ಉಸಿರಾಡಿದ್ದರು. ದ್ವಿ-ಅಂಡಕರು ಏಕಪ್ರಕಾರವಾದ ವಾತಾವರಣದಲ್ಲಿ ಬೆಳೆಸಲ್ಪಟ್ಟಿದ್ದರಾದರೂ ಇಬ್ಬರೂ ಅಪರಾಧಿಗಳಾದ ನಿದರ್ಶನ ದೊರೆತುದು ಕಡಿಮೆ. ಏಕ-ಅಂಡಕ ಅವಳಿ ಮಕ್ಕಳ ಬೆಳವಣಿಗೆಯೂ ಒಂದೇ ವಾತಾವರಣದಲ್ಲಿ ಆಗಿತ್ತು. ಇವುಗಳ ವಂಶಾನುಗುಣವೂ ಏಕಸಮವಾಗಿತ್ತು. ಇವರಲ್ಲಿ ೧೩ರಲ್ಲಿ ೧೦ ಜೋಡಿ ಅಪರಾಧಿಗಳಾಗಿದ್ದರು.

ತನ್ನ ಪರೀಕ್ಷೆಯಿಂದ ಡಾ| ಲೈಂಗರು "ಅಪರಾಧ ವೃತ್ತಿಯ ಮೂಲ ಕಾರಣಗಳ ಮೇಲೆ ಜನ್ಮಜಾತ ಪ್ರವೃತ್ತಿಗಳು ಬಹು ಪ್ರಭಾವ ಬೀರುತ್ತವೆ" ಎಂಬ ಸಿದ್ಧಾಂತವನ್ನು ಘೋಷಿಸಿದರು.

ಡಾ| ಲೈಂಗರ ಈ ಪ್ರಯೋಗವು ಯಾವ ಯಾವ ರೋಗಗಳು ವಂಶಾನುಗತ ಬರುತ್ತವೆಂದು ತಿಳಿಯುವುದಕ್ಕೂ ಸಹಾಯಕವಾಯಿತು. ಏಕ-ಅಂಡಕ ಅವಳಿಗಳಲ್ಲಿ ಒಂದರ ಕಾಲು ಅಟ್ಟೆಯಾಗಿದ್ದರೆ, ಸೇಕಡಾ ೩೩ ಸಂದರ್ಭಗಳಲ್ಲಿ ಇನ್ನೊಂದರದೂ ಅಟ್ಟೆಯಾಗಿರುತ್ತದೆ; ಆದರೆ, ದ್ವಿ-ಅಂಡಕಗಳಲ್ಲಿ ಇಂತಹ ಉದಾಹರಣೆಗಳು ಸೇಕಡಾ ೩ಕ್ಕೂ ಕಡಿಮೆಯಾಗಿದೆ. ಆದುದರಿಂದ ಜನ್ಮದಿಂದಲೇ ಅಟ್ಟೆಗಾಲಾಗಿರುವುದು ಒಂದು ಪೈತೃಕ ರೋಗವೆಂದು ತಿಳಿಯಬಹುದು. ಆದರೆ, ಕ್ಯಾನ್ಸರದ ವಿಷಯದಲ್ಲಿ ಮಾತ್ರ ವಿಪರೀತ ಪರಿಣಾಮವು ದೊರೆತಿದೆ.

'ಅವಳಿ ಪ್ರಣಾಳಿ'ಯಿಂದ ಪರಿಶೋಧನೆ ನಡೆಸಿದಾಗ, ಗುಪ್ತವ್ರಣವೂ ಪೈತೃಕವಾಗಿ ಬರುವ ರೋಗವೆಂದೂ ಮಧುಮೇಹ, ಪಿತ್ತಾಶಯದ ರೋಗ ಮೊದಲಾದುವು ಆಂಶಿಕಪೈತೃಕವೆಂದೂ ಗೊತ್ತಾಗಿದೆ. ಇದೇರೀತಿಯಲ್ಲಿ ಅನೇಕ ಮಾನಸಿಕ ರೋಗಗಳ ಬಗ್ಗೆಯೂ ಆಶ್ಚರ್ಯಕಾರಕ ಸತ್ಯ ಹೊರಬಂದಿದೆ. ಏಕ-ಅಂಡಕದಲ್ಲಿ ಒಬ್ಬರ ಮೆದುಳು ರೋಗಗ್ರಸ್ತವಾಗಿದ್ದರೆ, ಸೇಕಡಾ ೯೦ ಸಂದರ್ಭಗಳಲ್ಲಿ ಎರಡನೆಯವರದೂ ರೋಗಕ್ಕೆ ತುತ್ತಾಗಿರುತ್ತದೆ; ಆದರೆ, ದ್ವಿ-ಅಂಡಕರಲ್ಲಿ ಇದು ಸೇ. ೩೦ ಮಾತ್ರ. ಮಾನಸಿಕ ದುರ್ಬಲತೆ ಕೂಡ ಪೈತೃಕ ಸಂಪತ್ತಿ ಎಂದು ನಿಖರವಾಗಿ ಗೊತ್ತಾಗಿದೆ. ದುರ್ಬಲ ಮನಸ್ಕರಾದ ೧೬೨ ಜನರ ಅವಳಿ ಮಕ್ಕಳನ್ನು ಪರೀಕ್ಷಿಸಿದಾಗ ಇವುಗಳಲ್ಲಿ ಒಂದು ಅಥವಾ ಎರಡೂ ಈ ರೋಗಕ್ಕೆ ಗುರಿಯಾಗಿದ್ದುವು. ೨೫ ಏಕ-ಅಂಡಕ ಶಿಶುಗಳಲ್ಲಿ ಎಲ್ಲವೂ ಈ ವ್ಯಾಧಿಗೆ ಪಕ್ಕಾಗಿದ್ದರೆ, ೧೩೭ ದ್ವಿ-ಅಂಡಕಗಳಲ್ಲಿ ಎರಡು ಜೋಡಿಯಲ್ಲಿ ಮಾತ್ರ ಎರಡೂ, ಉಳಿದುದರಲ್ಲಿ ಒಂದೊಂದೂ ಮಾನಸಿಕವಾಗಿ ದುರ್ಬಲಗೊಂಡಿದ್ದುವು, ಉನ್ಮಾದವೇ ಮೊದಲಾದ ಇತರ ಹಲವಾರು ಮಾನಸಿಕ ರೋಗಗಳೂ ಪೈತೃಕವಾಗಿಯೇ ಬರುತ್ತವೆ.

ಮಾನವನ ಆಯುಷ್ಯಕೂಡ ಜನ್ಮದೊಡನೆಯೇ ನಿಶ್ಚಿತವಿರುವುದೇ ಎಂಬುದನ್ನು ಅಮೇರಿಕೆಯ ಡಾ: ಫ್ರಾನ್ಸ ಕಾಲಮಾನರು ತಿಳಿಯಲೆಳಸಿದರು. ಇದಕ್ಕಾಗಿ ಅವರು ೯೩ ವೃದ್ಧ ಅವಳಿ ಸಹೋದರರ ಜೀವನವನ್ನು ಅಧ್ಯಯನಿಸಿದರು ದ್ವಿ-ಅಂಡಕರಲ್ಲಿ ಅವಳಿಗಳು ಮೂರು ತಿಂಗಳ ಅಂತರದಲ್ಲಿ ಸಾಯುವರೆಂದೂ ಏಕ ಅಂಡಕರಲ್ಲಿ ಹೆಚ್ಚಿನವರು ಕೆಲವೇ ದಿನಗಳ ಅಂತರದಲ್ಲಿ ಮೃತ್ಯುಮುಖರಾಗುವರೆಂದೂ ತಿಳಿಯಿತು.

ಡಾ| ಕಾಲಮಾನರಿಗೆ ಇನ್ನೊಂದು ರೀತಿಯ ಅವಳಿ ಸಹೋದರಿಯರೂ ಸಿಕ್ಕಿದ್ದರು. ಇವರಲ್ಲಿ ಒಬ್ಬಳು ಕೃಷಿಕನೊಬ್ಬನನ್ನು ಮದುವೆಯಾಗಿ ಹಳ್ಳಿಯಲ್ಲಿರುತ್ತಿದ್ದಳು; ಇನ್ನೊಬ್ಬಳು ಆಜೀವ ಅವಿವಾಹಿತಳಾಗಿದ್ದು ಬಟ್ಟೆ ನೇಯ್ದು ಜೀವಿಸುತ್ತಿದ್ದಳು. ಈ ಇರ್ವರೂ ಸಹೋದರಿಯರಿಗೆ ನೇತ್ರ ರೋಗವು ಒಂದೇ ದಿನ ಅಂಟಿಕೊಂಡಿತ್ತು; ಒಬ್ಬಾಕೆ ಕುರುಡಿಯಾದ ಒಂದು ತಿಂಗಳಲ್ಲೇ ಇನ್ನೊಬ್ಬಳೂ ಅಂಧಿಯಾಗಿಬಿಟ್ಟಳು.

(ಕನುಲಾಶಾಂತರ ಲೇಖದಿಂದ)

ಬೇಕಾಗಿದ್ದಾರೆ

ಕನಿಷ್ಟ ಒಂದೆರಡು ವರ್ಷಗಳ ಮಾಹಿತಿ ಇರುವ ಕಂಪೋಸಿಟರ್ ಮತ್ತು ಬೈಂಡರರು ಬೇಕಾಗಿದ್ದಾರೆ,

ಅಲ್ಲದೆ ಕಂಪೋಸಿಂಗ್, ಬೈಂಡಿಂಗ್ ಮೊದಲಾದ ವಿಭಾಗಗಳಲ್ಲಿ ತರಬೇತಿ ಬಗ್ಗೆ ಕೆಲವು ಹುಡುಗರನ್ನೂ ಸೇರಿಸಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿ ಬಗ್ಗೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ.

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ



ಕುಮಾರಿ ಬಿಳ್ಳಿಗಳು

(Registered)

ಈ ದೇಶೀಯ ತಯಾರಿಕೆಯ ಗುಣಾಂಶವು ವರ್ಷಗಟ್ಟಲೆಯಿಂದ ವಿಖ್ಯಾತವಾಗಿದೆ ಮತ್ತು ಪ್ರಮುಖ ಕೆಮಿಸ್ಟರಿಂದ ಈ ಕೆಳಗಿನ ದರಗಳಲ್ಲಿ ವಿಕ್ರಯಿಸಲ್ಪಡುತ್ತದೆ. ಟ್ಯೂಬಿಗೆ ರೂ. 3=00 (ಸಾದಾ), ರೂ. 5=00 (ಸ್ಪೆಶ್ಯಲ್), ರೂ. 8=00 (ಎಕ್ಸ್ಟ್ರಾ ಸ್ಪೆಶ್ಯಲ್).

P. DEVEE & Co. (M. I.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 dated 2-12-1950 of the Director of public Instruction Madras.

ವಿದೇಶೀಯರ ದೃಷ್ಟಿಯಲ್ಲಿ ಪಂಡಿತ ನೆಹರು

(೬ನೇ ಪುಟದಿಂದ)

ಕಿವಿ ಗಡಚಿಕ್ಕುವಂತೆ ಉದ್ಗಾರಗಳು ಹೊರಟವು. ಅದಕ್ಕೂ ಹೆಚ್ಚಿನ ಪ್ರತಿಕ್ರಿಯೆಯು ನಿಮ್ಮ ಹೆಸರನ್ನು ಓದಿದ ಕೂಡಲೆ ಆಯಿತು. ಅಲ್ಲಿ ನೆರೆದ ಪ್ರತಿ ಒಬ್ಬನು ನಿಮ್ಮ ಸಂದೇಶದಿಂದ ಹರ್ಷಭರಿತನಾಗಿ ತನ್ನ ಮೆಚ್ಚುಗೆ ವ್ಯಕ್ತಪಡಿಸಿದನು. ಅಂತು ಅಂದಿನ ಸಭೆಯು ಯಶಸ್ವಿಯಾಗಿ ಕೊನೆಗೊಂಡಿತು. ಮಹತ್ವದ ರಾಜಕೀಯ ಪ್ರತಿಕ್ರಿಯೆಗಳನ್ನು ಆಶಿಸಬಹುದಾಗಿದೆ.

ಶುಭೇಚ್ಛೆಗಳು.

ತಮ್ಮ ಬಂಧು ಸಮಾನನಾದ,
ವಿ. ಗೊಲಾಂಝ.

೫) ಸರ್ ಸ್ಟ್ಯಾಫೋರ್ಡ್ ಕ್ರಿಪ್ಸ್

3–3–32

ಪ್ರಿಯ ನೆಹರು,

ವೇಳೆಯ ಅಭಾವವಿದ್ದಾಗ್ಯೂ ಸಮಯ ದೊರಕಿಸಿಕೊಂಡು ವಿವರವಾದ ಪತ್ರ ಬರೆದದ್ದಕ್ಕಾಗಿ ತುಂಬಾ ಆಭಾರಿ ಆಗಿದ್ದೇನೆ. ಅದನ್ನು "ದಿ ಟ್ರಿಬ್ಯೂನ" ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ನಿಮ್ಮ ಜನತೆಯಲ್ಲಿದ್ದ ಉತ್ಸಾಹವನ್ನು ನೋಡಿ ನನಗೆ ಎಷ್ಟೋ ಸಲ ಮತ್ಸರ ಉಂಟಾಗುವದು, ಹಾಗು ನಮ್ಮಲ್ಲಿಯೂ ಇಂಥ ಚಳುವಳಿಯಾಗಬಾರದೇ ಎಂಬ ವಿಚಾರ ಕೂಡ ಬರುವದು. ನೀವು ಗಳಿಸಿದ ಯಶಸ್ಸಿಗಾಗಿ ನಿಮಗೂ ಹಾಗು ಕಾಂಗ್ರೆಸ್ಸಿಗೂ ಈ ಮೂಲಕವಾಗಿ ನನ್ನ ಹಾರ್ದಿಕ ಅಭಿನಂದನೆಗಳನ್ನು ಕಳಿಸುತ್ತಿದ್ದೇನೆ. ನಿಮ್ಮ ಮುಂದಿನ ಧೋರಣೆಯನ್ನು ನಾವು ಕುತೂಹಲದಿಂದ ಕಾಯುತ್ತಿರುವೆವು.

ಸಾಮ್ರಾಜ್ಯ ವಾದದ ವಿರುದ್ಧ ನೀವು ನಿಮ್ಮ ವಿರೋಧವನ್ನು ಬಲಪಡಿಸುವಿರೆಂದು ನಂಬಿದ್ದೇನೆ. ಅಂಥ ಪ್ರಯತ್ನವನ್ನು ನಡೆಬಡಿಯಲೇಬೇಕು. ನಾವು ಈ ವಿಷಯದಲ್ಲಿ ಬಹಳಷ್ಟು ಸಹಾಯಕಾರಿಯಾಗಲಾರೆವು ಎಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ನಮ್ಮ ಪಕ್ಷವು ಸಾಮ್ರಾಜ್ಯ ವಾದದ ಒಳಿತು ಕೆಡುಕುಗಳನ್ನು ಅರಿತುಕೊಳ್ಳುವಷ್ಟು ಬಲಿತಿಲ್ಲ. ಆದಾಗ್ಯೂ ಅದರ ಬಗ್ಗೆ ಸಾಕಷ್ಟು ಪ್ರಚಾರ ಮಾಡದೇ ಇರಲಾರೆವು.

"ದಿ ಟ್ರಿಬ್ಯೂನ"ದಲ್ಲಿ ಹಿಂದುಸ್ಥಾನದ ಬಗ್ಗೆ ಹೆಚ್ಚು ಮಾಹಿತಿ ಕೊಡಲು ನೀವು ಆಗಾಗ್ಗೆ ಲೇಖನ-ಪತ್ರಗಳನ್ನು ಬರೆಯುತ್ತಿರಬೇಕು.

ಶುಭಾಶಯಗಳು.

ತಮ್ಮ ವಿಶ್ವಾಸಿ,
ಸ್ಟ್ಯಾಫೋರ್ಡ್ ಕ್ರಿಪ್ಸ್.

೬. ಕ್ರಿಶ್ಚ್ಯನ ಎಚ್.
ಸ್ಮರ್ಜಿಯೊನ್:—

೧೯—೯—೩೮.

ಪ್ರಿಯ ಡಾಕ್ಟರ ನೆಹರು,

"ಮ್ಯಾಂಚೆಸ್ಟರ ಗಾರ್ಡಿಯನ್" ವಾರ ಪತ್ರಿಕೆಯಲ್ಲಿ ನೀವು ಬರೆದ ಸುಂದರವಾದ ಓಲೆಗಾಗಿ ನಿಮ್ಮನ್ನು ಅಭಿನಂದಿಸಲೇಬೇಕು.

ನಿಮ್ಮ ಚಿತ್ರವು ಒಳ್ಳೇ ಬಿಚ್ಚುಮನಸ್ಸಿನದಿದ್ದು, ನಮ್ಮ ಸರಕಾರವು ನಡೆಸಿದ ದಬ್ಬಾಳಿಕೆಯನ್ನು ನೋಡಿ ವ್ಯಸನಗೊಂಡ ನನ್ನಂಥವರಿಂದ ನಿಮಗೆ ಈ ವಿಷಯವಾಗಿ ಇನ್ನೂ ಅನೇಕ ಕಾಗದ ಬರಬಹುದು.

ಹಾಗೆ ನೋಡಿದಲ್ಲಿ ನಾವೇನು ಪುಢಾರಿಗಳಲ್ಲದಿದ್ದರೂ, ಶಾಂತಿಪ್ರಿಯರೂ, ಸದ್ಗೃಹಸ್ಥರೂ ಆದ ಜನರಿದ್ದೇವೆ. ಇಷ್ಟೇ ನಮ್ಮಲ್ಲಿ ಸಾಂಘಿಕ ಶಕ್ತಿ ಇಲ್ಲ. ಒಂದಿಲ್ಲ ಒಂದು ದಿನ ನಾವುಕೂಡ ನಮ್ಮ ವಿಚಾರಗಳನ್ನು ಪ್ರಕಟಿಸದೇ ಇರೆವು. ನನ್ನಂತಹ ಇನ್ನೂ ಅನೇಕರು ನಿಮ್ಮೊಂದಿಗೆ ಇರುವರು ಎಂಬುದನ್ನು ನಿಮಗೆ ತಿಳಿಯಬಯಸುವೆನು. 'ಮ್ಯಾಂಚೆಸ್ಟರ ಗಾರ್ಡಿಯನ್' ಪತ್ರಿಕೆಯಲ್ಲಿ ನಿಮ್ಮ ಓಲೆಗೆ ಉತ್ತರರೂಪವಾಗಿ ಬರಬಹುದಾದರೂ ಅದಕ್ಕೂ ಎಷ್ಟೋ ಪಟ್ಟು ಜನ—ನಿರಕ್ಷರರಿದ್ದರೂ ಕೂಡ—ನಿಮ್ಮ ವಿಚಾರಸರಣಿಗೆ ಒಮ್ಮೆ ನಿಮಗೆ ಬೆಂಬಲಿಗರಾಗಿದ್ದಾರೆ. ಇಷ್ಟೇ ಅವರು ತಮ್ಮ ಭಾವನೆಗಳನ್ನು ಬರೆದು ವ್ಯಕ್ತಪಡಿಸಲಾರರು.

ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ನಡೆಸಿದ ನಿಮ್ಮ ಹೋರಾಟಕ್ಕೆ ಯಶಸ್ಸೊರೆಯಲೆಂದು ಹಾರೈಸುವೆ.

ನಿಮ್ಮ ಅತ್ಯಂತ ವಿಶ್ವಾಸಿ,
ಕ್ರಿಶ್ಚ್ಯನ ಎಚ್. ಸ್ಮರ್ಜಿಯನ್.

೭. ಗೆಸ್ಟ ಲೆವ್ರೊ

ಲಂಡನ್.
೨೯-೯-೪೦

ಮಾನ್ಯರೆ,

ನಿಮಗಿಂತ ಹಿರಿಯನಾದ ನಾನು ಅನೇಕ ಭಾಷೆಗಳಲ್ಲಿಯ ಅನೇಕ ಪುಸ್ತಕಗಳನ್ನು ಓದಿದ್ದೇನೆ. ಆದರೆ ಅವುಗಳಲ್ಲಿ ಯಾವದೇ ಪುಸ್ತಕವು ಅದರ ಲೇಖಕನ ಬಗ್ಗೆ ಮನಃಪೂರ್ವಕವಾದ ಆದರವನ್ನು ಉಂಟುಮಾಡಿಲ್ಲ. ಆದರೆ ಇಂದು ನಾಲ್ವತ್ತು ವರ್ಷಗಳ ನಂತರ ಶೇಕ್ಸಪಿಯರನ ವಾಕ್ಯವನ್ನು ಸ್ಮರಿಸುವಂತಾಯಿತು.

His life is noble and the clements so mixes in him that nature may stand up and say to all the world "This is a man."

ನಿಮ್ಮ ವಿಶ್ವಾಸಿಕ,
ಜಿ. ಗೆಸ್ಟಲೆವ್ರೊ.

೮) ಜಾರ್ಜ ಬರ್ನಾರ್ಡ ಶಾ.

ಲಂಡನ್,
೧೨—೧೧—೪೮.

ಪ್ರಿಯ ಪಂಡಿತ ನೆಹರು,

ನಿಮ್ಮ ಓಲೆಯಿಂದನನಗೆ ನಿರಾಶೆ ಆಗಲಿಲ್ಲ. ನೀವು ಲಂಡನದಲ್ಲಿದ್ದಾಗ ಇಡೀ ಒಪ್ಪತ್ತನ್ನು ಈ ಹಳ್ಳಿಯಲ್ಲಿ ಕಳೆಯಲು ನನಗೆ ಸಾಧ್ಯವಾಗಲಾರದು ಎಂಬುದ್ದು ನನಗೆ ತಿಳಿದಿತ್ತು. ಇಷ್ಟಾಗಿಯೂ ನೀವು ಬಂದಲ್ಲಿ ನಿಮಗೆ ಯಾವಾಗಲೂ ಸ್ವಾಗತವಿದೆ ಎಂಬುದನ್ನ ತಿಳಿಸಬೇಕಾಗಿದ್ದಿತು.

ಪರಿಷತ್ತಿನಲ್ಲಿ ನೀವು ಭಾಗವಹಿಸಿ ನೀವು ವೈಯಕ್ತಿಕವಾಗಿ ಯಶಸ್ಸನ್ನು ಪಡೆದಿರಿ. ಆದರಲ್ಲಿಯೂ ವಿಶೇಷವಾಗಿ ನಿಮ್ಮ ಆಕಾಶವಾಣಿಯ ಭಾಷಣವು ವೈಶಿಷ್ಟ್ಯಪೂರ್ಣವಾಗಿತ್ತು. ನಿಮ್ಮ ಇತರ ಭಾಷಣಗಳು ನೀವೊಬ್ಬರೇ ಅಖಂಡಏಶಿಯಾದಲ್ಲಿ ಸ್ಟಾಲಿನ್ನನ ಯೋಗ್ಯತೆಯವರು ಎಂಬುದನ್ನುತೋರಿಸಿಕೊಟ್ಟವು. ಸಮೀಪದಲ್ಲಿಯೇ ಯುದ್ಧವಾಗಲಾರದು ಎಂಬ ನಿಮ್ಮ ಆಶ್ವಾಸನವು ಅತ್ಯಂತ ಸಮರ್ಪಕವಾಗಿತ್ತು. ನಮ್ಮ ಮಂತ್ರಿಗಳು ಮೂರ್ಖರಿದ್ದು ತಾವು ಏನು ಆಡುತ್ತಿರುವೆವು ಎಂಬುದನ್ನು ಕೂಡ ಅರಿಯದವರಾಗಿದ್ದಾರೆ.

ಜಿ. ಬರ್ನಾರ್ಡ ಶಾ.

ಈ ಲೇಖದಲ್ಲಿ ಉದ್ಧರಿಸಿದ ಓಲೆಗಳು 'A bunch of old letters' ಎಂಬ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.
— ಲೇಖಕ.

The Moolky Bank, Ltd.
MULKI.
ಡಿಪೋಸಿಟು ಮೇಲಣ ಆಕರ್ಷಕ ಬಡ್ಡಿ ದರಗಳು—

1ರಿಂದ 4 ತಿಂಗಳ ವರೆಗೆ		4%
5 ,, 12	,,	4¼%
13 ,, 24	,,	4½%

ರೂ. 8,000/- ಮತ್ತು ಮೇಲಣ ಡಿಪೋಸಿಟಿಗೆ ¼% ಹೆಚ್ಚು
ಸೇವಿಂಗ್ಸ್ ಬೇಂಕ್ ಲೆಕ್ಕಕ್ಕೆ 2½%
ಚಾಲ್ತಿ ಠೇವಣಾತಿಗೆ ¼%
ಸುಲಭ ಬಡ್ಡಿ ದರದಲ್ಲಿ ಚಿನ್ನಾಭರಣಗಳ ಮೇಲೆ ಮತ್ತು ಇತರ ರೀತಿಯಲ್ಲಿ ಸಾಲಕೊಡಲಾಗುವುದು.
ಯಂ. ಆರ್. ಯಚ್. ಪೂಂಜ.
ಮೆನೇಜರ್,
ಮೂಲ್ಕಿ ಬೇಂಕ್ ಲಿ. ಮುಲ್ಕಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ
LETTER WRITING MADE EASY
ಸುಲಭದಲ್ಲಿ ಪತ್ರಲೇಖನ
ದಿನವಹಿ ಪತ್ರವ್ಯವಹಾರಕ್ಕೆಬೇಕಾಗಬಹುದಾದ 75 ಇಂಗ್ಲಿಷ್‌ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).
ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ
ಮನೆ ಮದ್ದು
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.
ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—
ಸುಲಭದಲ್ಲಿ ಇಂಗ್ಲಿಷ್
(ENGLISH MADE EASY)
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. 53/60.
R. E. P. 410/60.

ಬಿ. ವಿಠಲ ಸೆಟ್ಟಿ — ಅರ್ಜಿದಾರ.

ಮತ್ತು

ಚಂದಮ್ಮ ಸೆಡ್ತಿ ಕೂಡಾ — ಎದ್ರಿರು.

ಇವರೊಳಗೆ

2. ವಿಠಲ ಸೆಟ್ಟಿ, 3. ಮಹಾಬಲ ಸೆಟ್ಟಿ, ಚಂದಮ್ಮ ಸೆಡ್ತಿ ಮಗಂದಿರು — ಉಡ್ಪಿ ತಾಲ್ಕು, ಬೆಳ್ಳಂಪಳ್ಳಿ ಗ್ರಾಮದ, ಪುತ್ತೂರು,

2 ಮತ್ತು 3ನೇ ಎದ್ರಿರಿಗೆ ತಿಳಿಯಪಡಿಸುವುದೇನಂದರೆ:-

ಅರ್ಜಿದಾರರು ಸ್ಥಿರಾಸ್ತಿ ಜಪ್ತಿ ಕೇಳಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 29-10-60ಕ್ಕೆ ಈ ಕೋರ್ಟಿನಲ್ಲಿ ಇಟ್ಟಿರುವುದರಿಂದ ಜಪ್ತಿ ಕುರಿತು ಆಕ್ಷೇಪಣೆಯಿದ್ದಲ್ಲಿ ಸದ್ರಿ ತಾರೀಕು ಹಗಲು ಗಂಟೆ 11ಕ್ಕೆ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Y. C. S. Hegde,
Advocate for Petitioner.

Udipi, ತಾ. 18-10-60.

ಶುದ್ಧ ಹರಟೆ

(೮ನೇ ಪುಟದಿಂದ)

ಷಣವಿದ್ದಿತ್ತು. ಭಾಷಣವು ಬಲು ಉದ್ದವಾಗಿದ್ದುದರಿಂದ ಭಾಷಣದ ಅಂತ್ಯದಲ್ಲಿ ಬಂದವರಲ್ಲಿ ಒಬ್ಬನು ಮಾತ್ರ ಉಳಿದಿದ್ದನು. ಭಾಷಣಕಾರರು ಅವನ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದಾಗ ಅವನು, "ಸ್ವಾಮಿ, ನಿಮ್ಮ ನಂತರದ ಭಾಷಣ ನನ್ನದು" ಎಂದನಂತೆ!

ಸಭೆಗೆ ಜನಸಂಖ್ಯೆ ಹೆಚ್ಚಾಗುವಂತೆ ಇನ್ನೂ ಒಂದೆರಡು ಉಪಾಯಗಳನ್ನು ಮಾಡುತ್ತಾರೆ. ಸಭೆಯ ಕಾರ್ಯಕ್ರಮಗಳ ಮಧ್ಯೆ ವಿನೋದಾವಳಿ (ವಿನೋದ ಹಾವಳಿ?)ಗಳನ್ನು ತುರುಕಿಸುತ್ತಾರೆ. ಆದರೆ ಕಾರ್ಯಕರ್ತರಿಗಿಂತ ಪ್ರೇಕ್ಷಕರು ಬುದ್ಧಿವಂತರಾದಾಗ ವಿನೋದಾವಳಿಗಳು ಆರಂಭವಾದೊಡನೆ ಸಭೆಯೊಳಗೆ ಬಂದು ಭಾಷಣ ಆರಂಭವಾದೊಡನೆ ಸಭೆಯಿಂದ ಹೊರ ನಡೆಯುತ್ತಾರೆ. ಇಲ್ಲವೇ ಸಭೆಯಲ್ಲೇ ಕುಳಿತು ಗುಲ್ಲು ಮಾಡುತ್ತಾರೆ. ಸಭೆಗಳ ನಂತರ ನಾಟಕ, ಯಕ್ಷಗಾನಗಳ ಏರ್ಪಾಡು ಮಾಡಿದರೆ ಸಭೆಗೆ ೫೦ ಜನ ಬಂದರೆ ನಾಟಕ, ಯಕ್ಷಗಾನಗಳಿಗೆ ೫೦೦ಕ್ಕಿಂತಲೂ ಹೆಚ್ಚಿಗೆ ಜನ ಬರುತ್ತಾರೆ.

ಶಾಲೆಗಳಲ್ಲಿ ನಡೆಯುವ ಸಭೆಗಳ ಪಾಡು ಬಹಳ ಮೋಜಿನದ್ದಾಗಿರುತ್ತದೆ. ಒಮ್ಮೆ ನಮ್ಮೂರ ಶಾಲೆಯಲ್ಲಿ ಮಿತ ಸಂತಾನ ಯೋಜನೆಯ ಸಮರ್ಥನಾರ್ಥವಾಗಿ ಉತ್ಸಾಹೀ ಅಧ್ಯಾಪಕ ವೃಂದವು ಸಭೆಯೊಂದನ್ನು ಏರ್ಪಡಿಸಿತು. ೧½ ಡಜನ್ ಮಕ್ಕಳ ತಂದೆಯೊಬ್ಬರು ಮುಖ್ಯ ನಿಯೋಜಿತ ಭಾಷಣಕಾರರಾಗಿದ್ದರು. ಒಂದು ದೃಷ್ಟಿಯಿಂದ ಆ ವಿಷಯದಲ್ಲಿ ಅಧಿಕಾರಯುಕ್ತವಾಗಿ ಮಾತನಾಡಲು ಅವರಂತಹವರು ಇನ್ನಾರೂ ಇಲ್ಲವೆನ್ನಬಹುದು. ೧೮+೨+೧=೨೧ ಜನರಿರುವ ಸಂಸಾರವನ್ನು ಸಂಭಾಗಿಸಿಕೊಂಡು ಹೋಗುವ ಪಾಡನ್ನುಪಟ್ಟ, ಅವರು ಸ್ವಾನುಭವದ ಆಧಾರದ ಮೇಲೆ ಮಾತನಾಡಬಹುದಾಗಿತ್ತು. ಆದರೆ ಅವರ ಮಾತುಗಳು 'ಪರೋಪದೇಶ ಪಾಂಡಿತ್ಯ" ಎನ್ನಿಸಿದರೆ ....?ಇನ್ನು ಸಭೆಯ ಅಧ್ಯಕ್ಷರು ಶಾಲೆಯ ಮುಖ್ಯೋಪಾಧ್ಯಾಯರು—ಬರುವ ೮೫ ರೂಪಾಯಿ ಸಂಬಳದಲ್ಲಿ ೧೩ ಮಕ್ಕಳು ಮತ್ತು ಹೆಂಡತಿ ಕೂಡಾ ಹದಿನೈದು ಜನರ ದೊಡ್ಡ ಸಂಸಾರವನ್ನು ಸಲಹಲು ಒದ್ದಾಡುತ್ತಿರುವ—ಏಳೆಂಟೇ ದಿನಗಳಲ್ಲಿ ೧೪ ಮಕ್ಕಳ ತಂದೆಯಾಗಲಿರುವ ಬಡಜೀವಿ ಮುಂಚಿನ ದಿನ ನನ್ನೊಡನೆ ತಮ್ಮ ಪರಿವಾರದ ಕತೆಗಳನ್ನು ಹೇಳುತ್ತಿರುವಾಗ "ದೇವರು ಮಕ್ಕಳನ್ನು ಕೊಡುವಾಗ ಬೇಡವೆನ್ನಲಾಗುವುದೇ?" ಎಂದು ಹೇಳಿದ ವ್ಯಕ್ತಿ.

ಸಭೆಗೆ ಊರ ಮಹನೀಯರು ಮಾತ್ರ ಬರಲಿಲ್ಲ. ಇನ್ನು ಕರೆತಂದ ಅತಿಥಿಗಳ ಎದುರು ತಮ್ಮ ಮರ್ಯಾದೆ ಕಳೆದುಕೊಳ್ಳಬಾರದೆಂದು ಶಾಲೆಯ ಮಕ್ಕಳನ್ನು ಬಲಾತ್ಕಾರವಾಗಿ ತುಂಬಿಸಲಾಯಿತು. ಮಿತಸಂತಾನದ ಆವಶ್ಯಕತೆಯ ಮೇಲೆ ಭಾಷಣಕಾರರು ಸುದೀರ್ಘ ಭಾಷಣವಿತ್ತರು. ಅಧ್ಯಾಪಕರ ಬೆತ್ತದ ಬೆದರಿಕೆಯಿಂದ ಮಕ್ಕಳು ಭಾಷಣದ ಮಧ್ಯೆ ಮಾತನಾಡದೆ ತೆಪ್ಪಗೆ ಕುಳಿತಿದ್ದರು. ಆ ಎಳೆ ಮಕ್ಕಳು ಒಂದು ಕಿವಿಯಿಂದ ಕೇಳಿದುದನ್ನು ಇನ್ನೊಂದು ಕಿವಿಯಿಂದ ಬಿಟ್ಟು ಖಾಲಿಯಾದ ತಲೆಯಿಂದ ಮನೆಗೆ ಮರಳಿದರು. ಸಾಮಾನ್ಯವಾಗಿ ಎಲ್ಲಾ ಶಾಲೆಗಳಲ್ಲಿ ನಡೆಯುವ ಎಲ್ಲಾ ಸಭೆಗಳ ಪಾಡೂ ಇದೇ ಆಗಿರುತ್ತದೆ.

ಕಾಲೇಜುಗಳ ನಾನಾ "ಎಸೋಸಿಯೇಷನ್"ಗಳ ಸಭೆಗಳಲ್ಲಿಯೂ ಇದೇ ಪರಿಸ್ಥಿತಿ. ೨೦೦ ವಿದ್ಯಾರ್ಥಿಗಳ ಕಾಲೇಜಿನ ಒಂದು ಎಸೋಸಿಯೇಷನ್ನಿನ ಸಭೆಯಲ್ಲಿ ಏಳುಮಂದಿ ವಿದ್ಯಾರ್ಥಿಗಳು ಕೂಡಿದರೆ ಬಹಳ ಹೆಚ್ಚಾಯಿತು. ಸಂಘದ ಕಾರ್ಯದರ್ಶಿ, ಕಾಲೇಜಿನ ಪ್ರಿನ್ಸಿಪಾಲರು ಮತ್ತು ಇತರ ಪ್ರಾಧ್ಯಾಪಕರು ಹಾಗೂ ಅಂದಿನ ಅತಿಥಿಗಳೇ ಆ ಸಭೆಯ ಬೆಂಚು ಕುರ್ಚಿಗಳನ್ನು ಅಲಂಕರಿಸಬೇಕು. ಸಭೆಗೆ ಬರುವ ವಿದ್ಯಾರ್ಥಿಗಳು ಹಿಂದಿನ ಬೆಂಚುಗಳಲ್ಲಿ ಅದರಲ್ಲಿಯೂ ಬಾಗಿಲ ಬಳಿ ಇರುವ ಬೆಂಚುಗಳಲ್ಲೇ ಕುಳಿತಿರುತ್ತಾರೆ—ಭಾಷಣದ ಮಧ್ಯದಲ್ಲಿಯೇ ಎದ್ದು ಹೋಗಲು ಅನುಕೂಲವಾಗಲೆಂದು. ಇನ್ನು ಸೌಂದರ್ಯೋಪಾಸಕರಾದ ಕೆಲವು ವಿದ್ಯಾರ್ಥಿಗಳು ವರಾಂಡದಲ್ಲಿ ಕಿಟಕಿಯ ಬಳಿ ನಿಂತು ಸಭೆಯಲ್ಲಿ ಕುಳಿತಿರುವ ಒಬ್ಬಿಬ್ಬರು ಯುವತಿಯರ ಮೇಲೆ ನಿರ್ನಿಮೇಷ ದೃಷ್ಟಿ ಹಾಯಿಸುತ್ತಿರುವುದೂ ಇದೆಯೆನ್ನಿ.

ಹೀಗೆ ಇಂತಹ ಸಭೆಗಳಲ್ಲಿ ಪ್ರೇಕ್ಷಕರ ಸಂಖ್ಯಾಪೂರ್ತಿ ಸಭೆಯನ್ನು ಏರ್ಪಡಿಸಿದವರಿಗೆ ತಲೆನೋವಿಗೆ ಕಾರಣವಾಗುವುದು. ಕೋರಂ ಇಲ್ಲದೆ ಪಾರ್ಲಿಮೆಂಟ್ ಅಧಿವೇಶನಗಳು ಮುಂದುವರಿಯುವಂತೆ ಪ್ರೇಕ್ಷಕರಿಲ್ಲದೆ ಇಂತಹ ಸಭೆಗಳು ಮುಂದುವರಿಯುವುದೂ ಹೆಚ್ಚಿನ ಕಾಲೇಜುಗಳಲ್ಲಿ ವಾಡಿಕೆಯಾಗಿ ಬಿಟ್ಟಿದೆ. ಹೀಗಾಗಿ ಎಷ್ಟೋ ಎಸೋಸಿಯೇಷನ್‌ಗಳ ಆರಂಭಿಕ (Inagural) ಮತ್ತು ಮುಕ್ತಾಯ (Valedictory) ಸಭೆಗಳು ಒಂದೇ ಆಗಿ ಅವು "ನಭೂತೋ ನ ಭವಿಷ್ಯತಿ" ಎಂದೆನ್ನಿಸುತ್ತವೆ. ಅದೂ ಒಂದು ಮಹಾ ಭಾಗ್ಯವಲ್ಲವೇ?

ಕಾರಂತರ ಪುಸ್ತಕಗಳು

ಅಳಿದ ಮೇಲೆ (ಹೊಸ ಕಾದಂಬರಿ)	2_75
ಪಂಚಮುಖಿ (ಕಾದಂಬರಿ)	2_50
ನಮ್ಮ ಸುತ್ತಲಿನ ಕಡಲು	1_75
ಪರಮಾಣು—ಇಂದು—ನಾಳೆ	3_00

ಸಿಗುವ ಸ್ಥಳ:
ನವಭಾರತ ಬುಕ್ ಡಿಪೊ, ಉಡುಪಿ.

ಕಥಾವಿಹಾರ

(೨ನೇ ಪುಟದಿಂದ)

ವಿಧಿಪ್ರಕಾರ ಪೂಜೆಯನ್ನು ಮಾಡಿ ಮುಗಿಸಿ, ಎತ್ತಿದ ಮಂಗಳಾರತಿಯನ್ನು ನೆರೆದ ಭಕ್ತ ಬಂಧುಗಳಿಗೆ ಕೊಟ್ಟೆನು. ಅಷ್ಟರಲ್ಲಿ ನಮ್ಮ ಗೋಪು ಬಂದುಬಿಟ್ಟನು. ಅವನನ್ನು ನಾನು ನನ್ನ ಭಕ್ತ ಬಂಧುಗಳ ಬಳಗಕ್ಕೆ ಸೇರಿಸಿಕೊಂಡೆನು.

ಗೋಪುವಿನ ಕಾಲಲ್ಲೊಂದು ಬ್ಯಾಂಡೇಜ್ ಇರುವುದನ್ನು ನಾನು ಕಂಡು ಕೇಳಿದೆನು—"ಏನು ಗಾಯ ಇದು?" ಎಂದು.

"ದಾರಿಯಲ್ಲಿ ಬರುತ್ತಿರುವಾಗ ನಾನೊಬ್ಬನೆ ಈ ದಿನ ಬರುತ್ತಿದ್ದೆನು. ನಮ್ಮ ಸಂಗಡದಲ್ಲಿ ಟೋರ್ಚು ಹಿಡಿದುಕೊಂಡು ಬರುವ ರಾಮರಾಯರು ಇಂದು ಬಂದಿಲ್ಲ. ನಾನು ಬರುವಾಗ ಆಕಸ್ಮಾತ್ತಾಗಿ ಏನೊ ಒಂದು ಪ್ರಾಣಿ ಕಚ್ಚಿದಂತಾಯಿತು. ಕಗ್ಗತ್ತಲೆ ಕವಿದಿದ್ದುದರಿಂದ ಅದರ ಪತ್ತೆ ಹಚ್ಚಲಾಗಲಿಲ್ಲ. ಕೂಡಲೆ ಕರವಸ್ತ್ರವನ್ನು ತೆಗೆದು ಬ್ಯಾಂಡೇಜ್ ಕಟ್ಟಿದೆನು. ಈಗ ಉರಿಯಾಗಲಿ, ನೋವಾಗಲಿ ಇಲ್ಲವೆ ಇಲ್ಲ. ಆ ಸ್ಥಳದಲ್ಲಿ ಅಂತಹ ವಿಷ ಸರ್ಪಗಳೇನೂ ವಾಸಿಸುತ್ತಿಲ್ಲ. ಚಿಕ್ಕ ಚೇಳೊ ಅಥವಾ ಇನ್ನಾವುದಾದರೂ ವಿಷವಿಲ್ಲದ ಪ್ರಾಣಿ ಕಚ್ಚಿರಬಹುದು." ಎಂದು ಗೋಪು ಹೇಳಿದನು.

"ಹಬ್ಬದೂಟ ಮಾಡಲು ಅಡ್ಡಿಯೇನು ಇಲ್ಲವಲ್ಲ!" ಎಂದು ನಾನು ಪ್ರಶ್ನಿಸಿದೆನು.

"ನಾನು ಅದಕ್ಕಾಗಿಯೆ ಬಂದವನಷ್ಟೆ ನಿಮ್ಮಲ್ಲಿಗೆ." ಎಂದು ಉತ್ತರಿಸಿದನು ಗೋಪು.

ಸರಿ ಆತನು ತನಗೆ ಸಾಕೆನ್ನಿಸುವಷ್ಟು ಕಡುಬು ಇತ್ಯಾದಿಗಳನ್ನು ತಿಂದನು. ರಾತ್ರೆ ನಾವೆಲ್ಲರೂ ಊರಿನ ಚಿಲ್ಲ ಸಲ್ಲದ ಪಟ್ಟಾಂಗ ಮಾಡಿದೆವು. ಚೀನಿ ಸಾಮ್ರಾಜ್ಯವಾದ ಬಗ್ಗೆ ಕೂಗಾಡಿದೆವು. ಯುನೋ ಪನ ಟೀಕಿಸಿದೆವು. ಅಂತೂ ಸಮಯವನ್ನು ಯಶಸ್ವಿಯಾಗಿ ಕಳೆದೆವು. ಮತ್ತು ಕೊಪ್ಪಲಿಕ್ಕಾಗಲಾರದೆಂದಾದ ವೇಳೆ ನಿದ್ದೆ ಹೋದೆವು.

ಮರುದಿನ ಗೋಪು ಬೆಳಗ್ಗೆ ಎದ್ದಾಗ ಆತನು ಕುರೂಪಿಯಾಗಿದ್ದನು. ಫಕ್ಕನೆ ನನಗೆ ನಾಗನ ನೆನಪು ಬಂದಿತು. ನಾನು ಕಂಗಾಲಾದೆನು. ನನಗಿಂತಲೂ ಮಿಗಿಲಾಗಿ ಆತನ ಹೆಂಡತಿ ಕುಂತಳೆಯು ಗಾಬರಿಯಾಗಿದ್ದಳು. ಏನು ಮಾಡಬೇಕೆಂಬ ವಿಚಾರ ನನಗೆ ಹೊಳೆಯಲಿಲ್ಲ. ಗೋಪುವಿನ ಅಭಿಪ್ರಾಯದಂತೆ ನಾನು ಆತನನ್ನು ಧರ್ಮಾಸ್ಪತ್ರೆಗೆ ಸೇರಿಸಿದೆನು. ಸೇರಿಸಿದ ಅನಂತರ ನನ್ನ ಜವಾಬ್ದಾರಿ ಉಳಿಯಿತು. ಇನ್ನು ಡಾಕ್ಟರರು ಜವಾಬ್ದಾರಿ ಹೊತ್ತಿರುವರೆಂದು ನಾನು ಭಾವಿಸಿದೆನು.

ಗೋಪುವಿನ ಮಡದಿ ಕುಂತಳೆಯು ಆತನ ಆರೈಕೆಯನ್ನು ನೋಡುವುದಕ್ಕಾಗಿ ಆಸ್ಪತ್ರೆಗೆ ಹೋಗಿದ್ದಳೆಂಬ ವಿಚಾರ ಬೇರೆ ಹೇಳಬೇಕಾಗಿಲ್ಲವಷ್ಟೆ!

ಸಾಯಂಕಾಲ ನನ್ನನ್ನು ಕರೆಯಲೊಂದು ಜನ ಬಂತು. ಗೋಪುವಿನ ಪರಿಸ್ಥಿತಿ ತೀರಾ ಕೆಟ್ಟಿದೆಯೆಂದು ಆ ಮನುಷ್ಯನು ನನಗೆ ತಿಳಿಸಿದನು. ನಾನು ಆಸ್ಪತ್ರೆಗೆ ಧಾವಿಸಿ ಕುಂತಳೆಯನ್ನು ಪ್ರಶ್ನಿಸಿದೆನು. ಇದೇನೆಂದು ಆಕೆಯು ಹೇಳಿದಳು—"ಡಾಕ್ಟರರು ಇದು ತನಕ ಇಲ್ಲಿಗೆ ಬಂದು ಇವರನ್ನು ನೋಡಿಲ್ಲ, ಯಾರೂ ಇವರಿಗೆ ಮದ್ದು ಕೂಡಾ ಕೊಡಲಿಲ್ಲ"ಯೆಂದು ಹೇಳಿದಳು.

ಈ ಮಾತುಗಳು ನನ್ನನ್ನು ತುಂಬಾ ಕೆರಳಿಸಿದುವು. ನಾನು ನೆಟ್ಟಗೆ ಡಾಕ್ಟರರಿದ್ದಲ್ಲಿಗೆ ಹೋಗಿ ಕೇಳಿದೆನು. "ಸ್ವಾಮಿ ಡಾಕ್ಟರರೆ! ನಮ್ಮ ಗೋಪುವನ್ನೇನು ಮಾಡಿದ್ದಿರಿ?"

"ಮದ್ದು ಕೊಟ್ಟಿದ್ದೇನೆ ಕೆಲವೇ ದಿನಗಳಲ್ಲಿ ಗುಣವಾಗಬಹುದೆ"ಂದು ಹೇಳಿ ಹೊರಗೆ ಹೊರಟು ಹೋದರು. ಮತ್ತೆ ಮಾತನಾಡಲು ಅವರೊಪ್ಪಲಿಲ್ಲ.

ರಾತ್ರಿ ಗಂಟೆ ಎಂಟರ ಹೊತ್ತಿಗೆ ಗೋಪುವಿನ ಪ್ರಾಣಪಕ್ಷಿ ಹಾರಿಹೋಯಿತು.

ಕೆಲವು ದಿನಗಳ ಅನಂತರ ನಮ್ಮ ಇನ್ನೊಬ್ಬ ಮಿತ್ರರು "ಆಸ್ಪತ್ರೆ ಡಾಕ್ಟರರಿಗೆ ಹತ್ತು ರೂಪಾಯಿ ಕೊಟ್ಟಿದ್ದರೆ ಗೋಪುವಿನ ಪ್ರಾಣ ಉಳಿಯುತ್ತಿತ್ತು" ಎಂದಾಗ ನನಗಾದ ದುಃಖ ಅಪಾರ.

ಅನ್ನ ಬ್ರಹ್ಮನಕಾಟ ತಡೆಯಲಾರದೆ, ವಿಧಿಯ ಮಾಟಕ್ಕೆ ಬಲಿಬಿದ್ದವನ ಚರಿತ್ರೆ ಹಬ್ಬದ ದಿನದಂದು ನನಗೆ ನೆನಪರಿಕೆಯಾಗುತ್ತದೆ.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 511/1960: S. I. A. 177/1960

ಉಡುಪಿ ಶ್ರೀ ಪೇಜಾವರ ಮಠದ ಜನರಲ್ ಏಜಂಟ್— M. ನಾರಾಯಣಾಚಾರ್ಯ — ವಾದಿರು.

ಮತ್ತು

ನಾರಾಯಣಾಚಾರಿ ಕೂಡಾ— ಪ್ರತಿವಾದಿರು.

ಇವರೊಳಗೆ—

7ನೇ ಪ್ರತಿವಾದಿ:—

ಅಣ್ಣಯ್ಯಾಚಾರಿ — ರಾಮಪ್ಪಾಚಾರಿ ಮಗ — ಉಡ್ಪಿ ತಾಲೂಕು ಮಣಿಪುರ ಗ್ರಾಮದಲ್ಲಿರುವವ— ಇವರಿಗೆ—

ವಾದಿರು ನೀವು ವಗೈರೆರ ಮೇಲೆ ಮೂಲಗೇಣಿ ಬಾಕಿ ಬಗ್ಗೆ ಮೇಲ್ಕಂಡ ದಾವೆಯನ್ನು ದಾಖಲ್ಲು ಮಾಡಿದ್ದಾರೆ. ಮತ್ತು ನಿಮ್ಮ ಬಾಬ್ತು ಕೋರ್ಟು ಡಿಪೋಜಿಟಿನಲ್ಲಿರುವ ಹ್ಯಾವೇಜನ್ನು ಮೇಲ್ಕಂಡ S.I A-177/60ನೇ ಅರ್ಜಿ ಮೂಲಕ ಜಜ್ಮೆಂಟು ಮುಂಚೆ ಜಪ್ತಿ ಅಪೇಕ್ಷಿಸಿದ್ದಾರೆ. ಸದ್ರಿ ದಾವೆಯೂ ಅರ್ಜಿಯೂ ತಾರೀಕು 29 -10—1960ಕ್ಕೆ ಇಟ್ಟಿರುತ್ತದೆ. ಅವುಗಳ ಕುರಿತು ಉದಾಹರಿಸುವಂಥಾದ್ದು ಇದ್ದರೆ ಆ ದಿನ್ನ ಪೂರ್ವಾಹ್ನ 10 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Ramakrishna Rao,
Vakil for Plaintiff.

Udipi, Dated 21—10—1960.

ಮೆಟ್ರಿಕ್ ತೂಕ ಮತ್ತು ಅಳತೆಗಳು

ಇದಕ್ಕೆ ಸಂಬಂಧಪಟ್ಟ ಬೂಕ್ ಸಹ ಸಿಗುತ್ತದೆ.



ದೊರೆಯುವ ಸ್ಥಳ: ಲೈಸೆನ್ಸ್ ಡೀಲರ್ಸ್ ಲೈಸನ್ಸ್ ಮತ್ತು ರಿಪೇರರ್ಸ್ ಲೈಸನ್ಸ್ ಸಹ ಪಡೆದಿರುತ್ತೇವೆ.

ಕೆ. ಆರ್. ಗುಂಡು ನಾಯಕ್ & ಸನ್ಸ್

ಕಾರ್ ಸ್ಟ್ರೀಟ್, ಉಡುಪಿ (ಸೌ. ಕೆ.)

ಈಗತಾನೆ ಹೊಸತಾಗಿ ಮೆಟ್ರಿಕ್ ತೂಕ ಮತ್ತು ಚಿಮಿಣಿ ಎಣ್ಣೆ ಅಳೆಯುವ ಲಿಟರ್ಸ್ ಬಂದಿರುತ್ತವೆ.

1000 ಗ್ರಾಮ್ಸುದಿಂದ 2. ಕೆ. ಜಿ. ಸೆಟ್ಟು ೧ರ ರೂ. 12-00. ಹಿತ್ತಾಳಿ ಬುಲಿಯನ್ ಸೆಟ್ಟುಗಳನ್ನು ಬೆಂಗಳೂರು ದರಕ್ಕೇನೆ ಇಲ್ಲಿ ಪಡೆಯಬಹುದು.

NAVAYUGA
REGD. NO. M. 3619

UDIPI, THURSDAY
27-10-1960

LICENSE NO. 31
Licensed to Post without Prepayment

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಸ್ಥಿತಿಯಲ್ಲಿರುವ ಕೆಲವೊಂದು ಸ್ಥಳೀಯ ಸಂಸ್ಥೆಗಳ ಆಡಳಿತೆಯ ಖಾಲಿಗಳಿವೆಯೆಂಬುವನ್ನು ಮರೆಯಬಾರದು.

ಪಂಚವಾರ್ಷಿಕಯೋಜನೆಗಳನ್ನು ಕಾರ್ಯರೂಪಕ್ಕಿಳಿಸುವಲ್ಲಿ ತಾಲೂಕು ಬೋರ್ಡು ಹಾಗೂ ಗ್ರಾಮ ಪಂಚಾಯತುಗಳ ಪಾತ್ರ ಹಿರಿದೆಂದು ಹೇಳಲಾಗುತ್ತದೆ; ಸರಿಯೇ, ಇವು ಸಮರ್ಪಕರೀತಿಯಲ್ಲಿ ನಡೆಯುವೆಂದರೆ ತೊಂದರೆಯಿಲ್ಲ. ನಗರಸಭೆಗಳು ನಾಗರಿಕರಿಂದ ಪರ್ಯಾಪ್ತ ಪ್ರಮಾಣದಲ್ಲಿ ಕರವಸೂಲಿಮಾಡುತ್ತಿರುವುದಾದರೂ ಅನುಕೂಲತೆಗಳನ್ನು ಮಾಡಿಕೊಡಲು ಇಂದು ಅಸಮರ್ಥವಾಗಿರುವಾಗ, ಇನ್ನು ಪಂಚಾಯತ ರಾಜ್ಯದಲ್ಲಿ ಯೋಜನೆಗಳು ಹೇಗೆ ಕಾರ್ಯಕೃತವಾದಾವು, ಆದರೂ ಅವು ಅದೆಷ್ಟು ಸಫಲಗೊಂಡಾವು ಎಂಬ ಸಂದೇಹ ಹಲವರಲ್ಲಿದೆ. ಎಂದರೆ, ನಮ್ಮ ಜನತೆ—ಮುಖ್ಯವಾಗಿ ಗ್ರಾಮೀಣ ಜನತೆಯು ಆಡಳಿತೆಯನ್ನು ನಿಸ್ವಾರ್ಥ ಹಾಗೂ ನಿಷ್ಪಕ್ಷಪಾತತನದಿಂದ ಜವಾಬ್ದಾರಿಯುತವಾಗಿ ನಿರ್ವಹಿಸುವ ಶಕ್ತಿಯನ್ನು ಪಡೆಯುವುದಕ್ಕೆ ಮೊದಲೇ ಆದರ್ಶದ ಹೆಸರಿನಲ್ಲಿ ಅನ್ಯಾಯವಾಗುತ್ತಿದೆ ಎಂಬ ಅಪವಾದ ಇಂದು ಅಲ್ಲಲ್ಲಿ ಕೇಳಿಬರುತ್ತಿದೆ. ಇದನ್ನು ನಾವು ಸಂಪೂರ್ಣ ಅಲ್ಲಗಳೆಯುವುದು ಸಾಧ್ಯವಿಲ್ಲ. "ಮದುವೆಯಾಗದೆ ಹುಚ್ಚು ಬಿಡದು; ಹುಚ್ಚು ಬಿಡದೆ ಮದುವೆಯಾಗದು" ಎಂಬ ಮಾತು ನಮ್ಮ ಆದರ್ಶ ಮತ್ತು ಪಂಚಾಯತ ರಾಜ್ಯಗಳಿಗೆ ಅನ್ವಯಿಸಬಹುದು.

ಆದುದರಿಂದ ನಾವಿಲ್ಲಿ ಹೇಳಬೇಕಾದ ವಿಷಯವಿಷ್ಟೆ: ಸರಕಾರ ತನ್ನ ನಿರ್ಧಾರವನ್ನು ಸಾರಿದೆ; ತಾಲೂಕು ಬೋರ್ಡು, ಗ್ರಾಮ ಪಂಚಾಯತಿಗಳು ಕಾರ್ಯತತ್ಪರವಾಗುತ್ತಿವೆ; ಆಗಿವೆ. ಇವು ಪಂಚಾಯತ ರಾಜ್ಯದ ಮೂಲತತ್ವಗಳನ್ನು ಅಳವಡಿಸಿಕೊಂಡು ಕಾರ್ಯನಿಮಗ್ನವಾಗಿ, ಕೈಗೆ ದೊರೆತಿರುವ ಅಧಿಕಾರವನ್ನು ಬಹುಜನಹಿತಕ್ಕಾಗಿ ವಿನಿಯೋಗಿಸಿ ಆದರ್ಶವನ್ನು ಪ್ರದರ್ಶನಕ್ಕೆ ಮಾತ್ರವಿಟ್ಟುಕೊಳ್ಳದೆ ಕಾರ್ಯಕೃತಗೊಳಿಸಬೇಕು: ಜನತೆಯ ಒಂದು ಭಾಗದಲ್ಲಿ ಹುಟ್ಟಿರುವ ಸಂದೇಹ ಮನೋವೃತ್ತಿಯನ್ನು ನೀಗಿಸಬೇಕು. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಎಲ್ಲೆಡೆಯೂ ಕಾಂಗ್ರೆಸ್ಸು ಪ್ರಚಂಡ ಜಯಪಡೆದುದರಿಂದ ಕಾಂಗ್ರೆಸ್ಸು ಗುರುತರ ಉತ್ತರದಾಯಿತ್ವವನ್ನು ತಾನಾಗಿಯೇ ಕೈನೀಡಿ ಹೊತ್ತುಕೊಂಡಂತಾಗಿದೆ. ಇದನ್ನು ಸಕಲ ಜನಮೆಚ್ಚುವಂತೆ ನಿರ್ವಹಿಸುವುದು ಕಾಂಗ್ರೆಸ್ಸಿನ ಹಾಗೂ ಚುನಾಯಿತ ಕಾಂಗ್ರೆಸ್ ಪ್ರತಿನಿಧಿಗಳ ಭಾರವಾಗಿದೆ. ಪಂಚಾಯತ ರಾಜ್ಯದ ಯಶಸ್ವಿತೆಯ ಕೀಲಿಕೈ ಈಗ ಕಾಂಗ್ರೆಸ್ ಪ್ರತಿನಿಧಿಗಳ ಕೈಸೇರಿದೆ. ಇದರ ಸದುಪಯೋಗವಾಗಬೇಕು.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಪರಿಚಯ

ಐರಿಷ್ ವಿಶೇಷಜ್ಞ ಬೋಲಾಂಡೆ

ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯ ಅಧ್ಯಕ್ಷರಾಗಿ ಚುನಾಯಿತರಾದ ಐರಿಷ್ ಪ್ರತಿನಿಧಿ ಬೋಲಾಂಡೆಯವರು ಕೂಟನೀತಿಜ್ಞರೂ ಹಾಸ್ಯಪ್ರಿಯರೂ ಆಗಿದ್ದಾರೆ. ಪಾಶ್ಚಾತ್ಯರ ಕೈವಾರಿಯೆಂಬ ಉಪನಾಮಕ್ಕೆ ಗುರಿಯಾದುದು ಅವರ ದುರ್ದೈವವೇ ಎನ್ನಬೇಕು.

ಸಂಯುಕ್ತ ರಾಷ್ಟ್ರಸಂಘದ ೧೫ನೆಯ ಸಾಮಾನ್ಯಾಧಿವೇಶನವು ಅನೇಕ ದೃಷ್ಟಿಗಳಿಂದ ಮಹತ್ವಪೂರ್ಣವಾಗಿದೆ. ಈ ಬಾರಿ ಅನೇಕಾನೇಕ ಸದಸ್ಯ ರಾಷ್ಟ್ರಗಳ ಪ್ರಮುಖರೇ ಇದರಲ್ಲಿ ಭಾಗವಹಿಸಿ "ನಭೂತೋ ನ ಭವಿಷ್ಯತಿ" ಎಂಬ ದಾಖಲೆಯನ್ನುಂಟುಮಾಡಿದರು. ತಟಸ್ಥ ರಾಷ್ಟ್ರಗಳು ಶಾಂತಿಸ್ಥಾಪಿಸಲು ಬಹುಬಲವಿತ್ತುವು; ಪ್ರಯತ್ನಿಸಿದುವು. ಆದರೆ, ಅಧಿವೇಶನದ ಅಧ್ಯಕ್ಷರ ನಿರ್ಣಯದಿಂದ ಅನೇಕ ರಾಷ್ಟ್ರಗಳು ಅಸಂತುಷ್ಟಗೊಂಡುವು; ತಟಸ್ಥ ರಾಷ್ಟ್ರಗಳು ಕ್ಷುಬ್ಧಗೊಂಡುವು; ಸಭಾಸದನವು ಉತ್ತೇಜಿತ ವಾಕ್ಯಗಳಿಂದ ಪ್ರತಿಧ್ವನಿಸತೊಡಗಿತು.

ಐಯರ್ಲೆಂಡಿನ ಶ್ರೀ ಫೆಡರಿಕ್ ಎಚ್. ಬೋಲಾಂಡೆಯವರು ಸಾಮಾನ್ಯ ಸಭೆಯ ಅಧ್ಯಕ್ಷರಾಗಿ ಚುನಾಯಿತರಾದಾಗ, ಇಂತಹ ಪರಿಸ್ಥಿತಿಯೊಮ್ಮೆ ಉದ್ಭವಿಸೀತು ಎಂದು ಯಾರೂ ಕಲ್ಪಿಸಿರಲಿಲ್ಲ. ನಿಯಮಜ್ಞರಾದ ಬೋಲಾಂಡೆಯವರು ಇತ್ತ ನಿರ್ಣಯದ ಮೇಲೆ ವಾದ-ಪ್ರತಿವಾದಗಳು ಎದ್ದು ಹೀನ ಪರಿಸ್ಥಿತಿಯೊದಗೀತೆಂಬ ಕನಸೂ ಕಂಡಿರಲಿಲ್ಲ. ಆದರೆ, ಭಾರತವೂ ಸೇರಿಕೊಂಡು ಪಂಚರಾಷ್ಟ್ರಗಳು ಮಂಡಿಸಿದ ಗೊತ್ತುವಳಿಗೆ ಆರ್ಜೆಂಟೀನಾವು ತಿದ್ದುಪಡಿಯೊಂದನ್ನು ಸೂಚಿಸಿದಾಗ, ಅಧ್ಯಕ್ಷರು ಇದರ ಮೇಲಿತ್ತ ತೀರ್ಮಾನವು ಮಹಾಸಭೆಯಲ್ಲಿ ವಿಕ್ಷೋಭವನ್ನೇ ಎಬ್ಬಿಸಿತು. ಇದರಿಂದಾಗಿ ಗೊತ್ತುವಳಿಯನ್ನು ಮಂಡಿಸಿದ ರಾಷ್ಟ್ರಗಳು ಹಿಂತೆಗೆದುಕೊಳ್ಳಬೇಕಾಗಿ ಬಂತು. ಪಾಶ್ಚಾತ್ಯ ರಾಷ್ಟ್ರಗಳ ಕೈವಾರಿಯೆಂಬ ಉಪನಾಮಕ್ಕೂ ಅಧ್ಯಕ್ಷರು ಗುರಿಯಾಗಬೇಕಾಯಿತು. ರುಮೇನಿಯನ್ ಪ್ರತಿನಿಧಿ ಹಾಗೂ ಕ್ರುಶ್ಚೇವರ ಕೋಪಾಗ್ನಿಯೆದುರು ಬೋಲಾಂಡರು ಒಂದು ಬಾರಿ ಬಾಡಿಯಾದಂತಾದರು.

ಶ್ರೀ ಬೋಲಾಂಡರು ಐಯರ್ಲೆಂಡಿನ ಅನುಭವೀ ವಿದೇಶ ವಿಶೇಷಜ್ಞರೆಂದು ಕೀರ್ತಿವಂತರಾಗಿದ್ದಾರೆ. ಕೂಟನೀತಿಜ್ಞರಾಗಿರುವ ಇವರು ವಿದ್ವಾಂಸರೂ ಇರುತ್ತಾರೆ. ವ್ಯಂಗ್ಯ ವಿನೋದದಲ್ಲಿ ಇವರ ಸ್ಥಾನ ಅಗ್ರಗಣ್ಯವಾಗಿದೆ. ೧೯೩೦ರ ನಂತರ ಇವರು ಕೆಲಸಮಯ ಪೇರಿಸ್—ದೂತಾವಾಸದಲ್ಲಿದ್ದರು. ೧೯೩೮ರಲ್ಲಿ ತಮ್ಮ ದೇಶದ ವಿದೇಶ ಮಂತ್ರಿಶಾಖೆಯ ಸಚಿವರಾಗಿ ನೇಮಿತರಾದರು.

ದ್ವಿತೀಯ ಲೋಕಯುದ್ಧಾವಧಿಯಲ್ಲಿ ತಟಸ್ಥ ಮತ್ತು ಗುಂಪುಕಟ್ಟಿದ ರಾಷ್ಟ್ರಗಳ ಪ್ರತಿನಿಧಿಮಂಡಲಗಳೊಡನೆ ಸೇರಿಕೊಳ್ಳುವ ಅವಕಾಶ ದೊರೆಯಿತು. ೧೯೫೦ರಲ್ಲಿ ಲಂಡನ್ನಿನಲ್ಲಿರುವ ಐಯರಿಶ್ ರಾಜದೂತ ಪದವಿಯಿಂದ ಶ್ರೀ ಜಾನ್ ಡ್ಯೂಲೆಂಟಿಯವರು ನಿವೃತ್ತರಾದಾಗ ಶ್ರೀ ಬೋಲಾಂಡರು ಈ ಪದವಿಗೆ ನಿಯುಕ್ತರಾದರು. ಈ ನೇಮಕದ ಬಗ್ಗೆ ಹೆಚ್ಚಿನವರು ಅಸಂತುಷ್ಟರಾಗಿದ್ದರು; ಆದರೆ, ಇವರ ಸಂಪರ್ಕಪಡೆದವರೆಲ್ಲರೂ ಶ್ರೀ ಬೋಲಾಂಡರಲ್ಲಿ ವಿಶ್ವಾಸವನ್ನು ಇಡತೊಡಗಿದರು. ೧೯೫೬ರಲ್ಲಿ ಸಂಯುಕ್ತ ರಾಷ್ಟ್ರಸಂಘದಲ್ಲಿ ಐಯರ್ಲೆಂಡಿನ ಪ್ರತಿನಿಧಿಯಾಗಿ ನೇಮಿಸಲ್ಪಟ್ಟರು.

ಅಮೆರಿಕೆ ಬೋಲಾಂಡರ ಸಂಬಂಧ ಬಹು ಹಿಂದಿನದು. ಇಲ್ಲಿನ ಹಾರ್ವರ್ಡ್ ಮತ್ತು ಚಿಕಾಗೊ ವಿಶ್ವವಿದ್ಯಾಲಯಗಳಲ್ಲಿ ಇವರು ಶಿಕ್ಷಣ ಪಡೆದಿದ್ದರು. ಸಮಾಜ ಶಾಸ್ತ್ರದಲ್ಲಿ 'ರಾಕ್‌ಫೆಲರ್ ರಿಸರ್ಚ್ ಫೆಲೊ' ಆಗಿದ್ದರು. ಶ್ರೀ ಬೋಲಾಂಡರ ವಿದ್ಯಾರ್ಥಿ ಜೀವನವು ಗೌರವಪೂರ್ಣವಾಗಿಯೇ ಇತ್ತು. ಡಬ್ಲಿನ್‌ನ ಟ್ರಿನಿಟಿ ಕಾಲೇಜಿನಿಂದ ಇವರು ಸಾಹಿತ್ಯ ಮತ್ತು ಕಾನೂನುಗಳಲ್ಲಿ ವಿಶೇಷತೆಯನ್ನು ಪಡೆದು ಉತ್ತೀರ್ಣರಾದರು. ಉತ್ತಮ ವಾಗ್ಮಿಯಾಗಿದ್ದ ಇವರು ತಮ್ಮ ವಿದ್ಯಾರ್ಥಿದೆಸೆಯಲ್ಲಿಯೇ ಭಾಷಣದ ಬಗ್ಗೆ ಸುವರ್ಣ ಪದಕವನ್ನು ಗಳಿಸಿದ್ದರು.

ಫ್ರೆಂಚ್, ಜರ್ಮನ್ ಮತ್ತು ಐರಿಷ್ ಭಾಷೆಗಳಲ್ಲಿ ನಿರರ್ಗಳವಾಗಿ ಮಾತಾಡುವ ಶಕ್ತಿ ಬೋಲಾಂಡರಿಗಿದೆ. ಇವರ ಇಂಗ್ಲಿಷ್ ಉಚ್ಚಾರಣೆಯನ್ನು ಜಾರ್ಜ್ ಬರ್ನಾರ್ಡ್ ಶಾರವರು 'ಡಬ್ಲಿನ್ ಉಚ್ಚಾರಣೆ' ಎಂದು ಕರೆಯುತಿದ್ದರು. ೫೬ ವರ್ಷದ ಬೋಲಾಂಡರು ತಮ್ಮ ಮಿತ್ರರ ನಡುವೆ ಕೂತು ನಾಲಗೆ ಸಡಿಲು ಬಿಟ್ಟರೆಂದರೆ ವಿನೋದ ಲಹರಿ ಹರಿಯತೊಡಗುವುದು.

ಸಾಮಾಜಿಕ ಕಾರ್ಯಕರ್ತರಾಗಿಯೂ ಶ್ರೀ ಬೋಲಾಂಡರು ಸ್ವದೇಶದಲ್ಲಿ ಕೀರ್ತಿಗಳಿಸಿದ್ದಾರೆ. ಈ ಕಾರ್ಯದಲ್ಲಿವರ ಪತ್ನಿಯೂ ನಿರಂತರ ನೆರವು ನೀಡುತಿದ್ದರು. ಶ್ರೀಮತಿಬೋಲಾಂಡರು ಉತ್ತಮ ಕಲಾವಿದೆ. ಚಿತ್ರಬಿಡಿಸುವುದರಲ್ಲಿ ಎತ್ತಿದ ಕೈ ಇವರದು. ಲಂಡನ್ನಿನಲ್ಲಿ ಶ್ರೀ ಬೋಲಾಂಡರು ರಾಜ ಪ್ರತಿನಿಧಿಯಾಗಿದ್ದಾಗ, ಶ್ರೀಮತಿಯವರು ಕಾರ್ಯಾಲಯವನ್ನು ಸ್ವಹಸ್ತ ನಿರ್ಮಿತ ಚಿತ್ರಗಳಿಂದ ಅಲಂಕರಿಸಿದ್ದರು. ಅತಿಥಿ ಸತ್ಕಾರದಲ್ಲಿ ಬೋಲಾಂಡ ದಂಪತಿಯವರು ಅತಿ ನಿಪುಣರು. ಒಂದು ಬಾರಿ ಅವರಲ್ಲಿ ಹೋದವರು ಆಜೀವ ಆ ಸತ್ಕಾರವನ್ನು ಮರೆಯುವಂತಿಲ್ಲ.

ನಿಮಗೆ ಯಾವುದು?

ದಿನ....... ನಿಮ್ಮ ಸಂಪಾದನೆ ದಿನಂಪ್ರತಿ ನಿಮ್ಮ ಕೈಗೆ ಬರುವುದಾದರೆ.......ಪಿಗ್ಮಿ
'ಪಿಗ್ಮಿ' ನಿಮಗೆ ಅನುಕೂಲವಾಗಿದೆ, ಪಿಗ್ಮಿ ಸಂಗ್ರಾಹಕನು
ನಿಮ್ಮಲ್ಲಿಗೆ ಬಂದು ನಿಮ್ಮ ಚಿಲ್ಲರೆ ಕಾಸುಗಳನ್ನು
ಸಿಂಡಿಕೇಟ್ ಬೇಂಕಿನಲ್ಲಿ ನಿಮಗಾಗಿ ಸಂಗ್ರಹಿಸಿಡುವನು.

ತಿಂಗಳು.. ನೀವು ತಿಂಗಳು ತಿಂಗಳು ವೇತನ ಪಡೆಯುವವರಾದರೆ.. ಕ್ಯುಮುಲೇಟಿವ್
'ಕ್ಯುಮುಲೇಟಿವ್' ನಿಮಗೆ ತಕ್ಕುದಾಗಿದೆ. ಸಿಂಡಿಕೇಟ್ ಬೇಂಕಿನಲ್ಲಿ
ಹತ್ತೋ, ನೂರೋ ನೀವು ಉಳಿಸುತ್ತಿರಬಹುದು

ವರುಷ. ನಿಮ್ಮ ಆದಾಯ ವರುಷಂಪ್ರತಿ ಬರುವಂತಹುದಾದರೆ. ಇನ್ವೆಸ್ಟರ್ಸ್ ಏಜನ್ಸಿ
'ಇನ್ವೆಸ್ಟರ್ಸ್ ಏಜನ್ಸಿ' ನಿಮಗೆ ಯೋಗ್ಯವಾಗಿದೆ. ಸಿಂಡಿಕೇಟ್
ಬೇಂಕಿನ ಸಮರ್ಥ ಅಧಿಕಾರಿಗಳಿರುವ ಈ ವಿಭಾಗ ನಿಮ್ಮ
ಉಳಿತಾಯವನ್ನು ಅಭಿವೃದ್ಧಿಗೊಳಿಸಲು ನೆರವಾಗುತ್ತದೆ.

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್,
ಉಡುಪಿ.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R.E.P. 270/60. O.S. 19/42.

ಕಾವೇರಮ್ಮ — ಅರ್ಜಿದಾರಳು.

ವೆಂಕಟ್ರಮಣ ಮಂಡೆಚ್ಚ ಕೂಡಾ—ಎದ್ರಿರು

೨ನೇ ಎದ್ರಿ ದಾಮೋದರ ಮಂಡೆಚ್ಚ, ನಾರಾಯಣ ಮಂಡೆಚ್ಚರ ಮಗ, ಪುತ್ತೂರು ತಾಲೂಕು, ಕೊಡಿಯಾಲ ಗ್ರಾಮ—ಇವರಿಗೆ ತಿಳಿಸುವುದೇನೆಂದ್ರೆ—

ಡಿಕ್ರಿಗೆ ಜವಾಬ್ದಾರಿ ಇರುವ ಆಸ್ತಿ ಏಲಂ ಪಡಿಸಬೇಕೆಂತ ಅರ್ಜಿದಾರ ದಾಖಲು ಮಾಡಿದ ಈ ಅಮಲ್ದಾರಿ ಮತ್ತು ಏಲವಿಗೆ ನಿಲ್ಲುವರೆ ಪರ್ಕ್ಲಮೇಶನ್ ಕೊಡಿಸಬೇಕೆಂತ ವಗೈರೆ ದಾಖಲು ಮಾಡಿದ R.E.A. 464/60 ನೆ ಅರ್ಜಿ ಕೂಡಾ ತಾ. 10—11—60ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಹಾಜರಾಗಿ ಉದಪಡಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಾದೀತು.

B. Chidananda Rao.
Vakil for Petitioner.

ಪುತ್ತೂರು, ತಾ 16—10—60.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

Edited, Printed & Published by K. H. Shetty, at the Navayuga Press, Udipi, S. India.